# ಸಾ. ಶಿ. ಮ. ಗದ್ಯ ಸಾಹಿತ್ಯ
## ಸಂಪುಟ ೧

ಡಾ. ಸಾ.ಶಿ. ಮರುಳಯ್ಯ

ಸಪ್ನ ಬುಕ್ ಹೌಸ್
ತುಂಗಾ ಕಾಂಪ್ಲೆಕ್ಸ್, ಗಾಂಧಿನಗರ
ಬೆಂಗಳೂರು ೫೬೦ ೦೦೯
ದೂರವಾಣಿ : ೦೮೦-೨೨೬೬೦೮೮

SASAHIMA GADYA SAHITYA – by Dr. Sa. Shi Marulaih
Published by Smt. Bhanumati S. Shah on behalf of Sapna Book House, Gandhinagar, Bangalore 9 Tel. 2266088
ISBN : 81-280-0203-1
@ಲೇಖಕರು
ಪುಟ : X + 961
ಪ್ರಥಮ ಮುದ್ರಣ : ೨೦೦೪
ಪ್ರತಿಗಳಿಗಾಗಿ ಇಲ್ಲಿಯೂ ಸಂಪರ್ಕಿಸಬಹುದು :
ಬುಕ್ ಮಾರ್ಕ್
ಭಾಷ್ಯಂ ವೃತ್ತದ ಹತ್ತಿರ
ಸದಾಶಿವ ನಗರ, ಬೆಂಗಳೂರು – ೯
ದೂರವಾಣಿ : ೯೪೪೬೪೪೪, ೯೪೪೬೪೪೫
ಮುಖಪುಟ ಕಲಾವಿದರು : ಶ್ರೀಪಾದ
ಅಕ್ಷರ ಜೋಡಣೆ : ಮನ್‌ಆನಂದ್ ಗ್ರಾಫಿಕ್ಸ್, ಬೆಂಗಳೂರು
ಮುದ್ರಣ : ರವಿ ಗ್ರಾಫಿಕ್ಸ್, ಬೆಂಗಳೂರು

# ಮುನ್ನುಡಿ

ಸಂಸ್ಕೃತದ ಒಂದು ಸುಭಾಷಿತ ಹೀಗೆ ಹೇಳುತ್ತೆ: ಸಂಸಾರವೆಂಬ ವಿಷವೃಕ್ಷದಲ್ಲಿ ಅಮೃತ ಫಲಗಳು ಎರಡು : ಒಂದು ಕಾವ್ಯಾಲಾಪ, ಮತ್ತೊಂದು ಸಜ್ಜನ ಸಲಾಪ ಎಂದು.

ಓದು ನನ್ನ ಹವ್ಯಾಸವಾದ್ದರಿಂದ ಕಾವ್ಯಾಲಾಪ, ಹಿರಿಯ ಸಾಹಿತಿಗಳನ್ನೂ ಮಹಾಪುರಷರನ್ನೂ ಸಂದರ್ಶಿಸಿ ಸಂಪಾದಿಸಿದ್ದ ರಿಂದ ಸಜ್ಜನ ಸಲ್ಲಾಪ – ಈ ಎರಡೂ ಫಲಗಳನ್ನು ನಾನು ಸವಿದಿದ್ದೇನೆ, ಸವಿಯುತ್ತಾ ಬಂದಿದ್ದೇನೆ. ಆ ಸವಿಯನ್ನು ಹಂಚುವ ಪ್ರಯತ್ನ ನಡೆಸಿದ್ದೇನೆ ಈ ಕೃತಿ ಸಂಚಯದ ಮೂಲಕ.

ಸಾಮಾನ್ಯವಾಗಿ ವ್ಯಕ್ತಿ ಚಿತ್ರಣ, ಜೀವನ ಚರಿತ್ರೆ, ಆತ್ಮಕಥನಗಳು ಸೃಜನಾತ್ಮಕ ರಚನೆಗಳೇನಲ್ಲ, ಅವುಗಳಲ್ಲಿ ಕಲ್ಪನೆಗಿಂತ ವಾಸ್ತವ ಸತ್ಯ ಮುಖ್ಯವೆನಿಸುತ್ತದೆ. ವ್ಯಕ್ತಿಯ ಸಾಧನೆ, ಸಿದ್ಧಿ, ಅನುಭವ, ಆದರ್ಶ, ಸಂದೇಶ ಇವು ಮುಂದಿನವರಿಗೆ ದಾರಿದೀಪ ವಾಗಲಿ ಎಂಬ ಸದುದ್ದೇಶ ಅವುಗಳ ಗುರಿ. ಅದನ್ನು ಇಲ್ಲಿ ನಿಷ್ಠೆಯಿಂದ ನಿರ್ವಹಿಸಿದ್ದೇನೆ. ನನ್ನಾಯ್ಕೆಯ ವ್ಯಕ್ತಿಗಳು ನನಗೆ ಗಣ್ಯರು, ಮಾನ್ಯರು, ಪೂಜ್ಯರೂ ಕೂಡ. 'ಮಹಾತ್ಮರಂ ನೆನೆವುದೇ ಪುಣ್ಯಂ' ಅಲ್ಲವೆ ? ಅಂತೆಗೈದಿದ್ದೇನೆ. ಅವರನ್ನು ಮರೆತರೆ ದೇಶದ ಸಾಂಸ್ಕೃತಿಕ ಬದುಕನ್ನೇ ಮರೆತ ಹಾಗೆ. ಅವರ ನೆನಪು ಸದಾ ಸಹೃದಯರ ಎದೆಯ ಬದಿಯಲ್ಲಿ ಹಚ್ಚ ಹಸುರಾಗಿರಲಿ ಎಂಬ ಸದಾಶಯದಿಂದ ಇದನ್ನು ತಮ್ಮ ಮುಂದಿರಿಸುತ್ತಿದ್ದೇನೆ.

ನನ್ನ ನಿರಂತರ ಪಯಣಕ್ಕೆ ಪಾಥೇಯವನ್ನೊದಗಿಸಿದವರು ಆತ್ಮೀಯರೂ, ಸಪ್ನಾ ಬುಕ್ ಹೌಸ್ ಮಾಲೀಕರೂ ಆದ ಶ್ರೀ ನಿತಿನ್ ಷಾರವರು ಮತ್ತು ಶ್ರೀಮತಿ. ಭಾನುಮತಿಷಾರವರು. ಅವರಿಗೆ ಸೋದರ ಭಾವನೆಯ ಶ್ರೀ ದೊಡ್ಡೇಗೌಡರವರಿಗೆ, ಆತ್ಮೀಯ ರಾದ ಶ್ರೀ ಎ. ಎಸ್. ಭಟ್‌ರವರಿಗೆ, ವರ್ಣಶಿಲ್ಪಿ ಶ್ರೀಪಾದರವರಿಗೆ, ಅಕ್ಷರ ಜೋಡಣೆಗೈದ ಶ್ರೀಮತಿ ಮಂಜುಳ ಯೋಗಾ ನಂದ್‌ರವರಿಗೆ ನನ್ನ ಧನ್ಯವಾದಗಳು.

'ರಾಗಿಣಿ'
ಸ್ವಭಾನು 'ಯುಗಾದಿ'
ಬೆಂಗಳೂರು

**–ಸಾ. ಶಿ. ಮರುಳಯ್ಯ**

# ಪರಿವಿಡಿ


**ವಿಭೂತಿ ಪುರುಷರು** ೧

ಬುದ್ಧ ೩

ಸಾಕ್ರೆಟೀಸ್ ೩೨

ಯೇಸುಕ್ರಿಸ್ತ ೫೫

'ಯುಗದ ಉತ್ಸಾಹ' ಬಸವಣ್ಣ ೯೦

ಗಾಂಧಿ ೧೦೦

**ಹೂವ ತಂದವರು** ೧೪೧

ದಾನವಿನೋದೆ ಅತ್ತಿಮಬ್ಬೆ ೧೪೩

ನಾಟ್ಯಮಯೂರಿ ಶಾಂತಲೆ ೧೭೪

ಕ್ರಾಂತಿಕನ್ಯೆ ಅಕ್ಕಮಹಾದೇವಿ ೨೩೭

**ಭಾರತರತ್ನ** ೨೫೭

**ಕನ್ನಡಿ ಹೇಳಿದ ಕಥೆ** ೩೪೭

**ಅಪರೂಪದವರು** ೪೫೫

ವಜೀರ್–ಏ–ಆಜಮ್ ೪೫೭

ಮುದ್ದಣ ೪೮೯

ಬಿ. ಶಿವಮೂರ್ತಿಶಾಸ್ತ್ರಿಗಳು ೫೬೩

ದೇವುಡು ೬೦೭

ಹೀಗೊಬ್ಬ ಧರ್ಮರಾಯ ೬೮೧

**ಬಲ್ಲವರ ಒಡನಾಟ** ೭೨೯

ಮಲೆನಾಡಿನ ಕೋಗಿಲೆಯೆ ! ಬಯಲು ನಾಡ ಮಲ್ಲಿಗೆಯೆ! ! ೭೩೧

ನಮ್ಮ ಮೇಷ್ಟ್ರು ೭೩೮

ಮಾಸ್ತಿ ವೆಂಕಟೇಶ ಅಯ್ಯಂಗಾರ್ ೭೫೪

ಗೊರೂರು ರಾಮಸ್ವಾಮಿ ಅಯ್ಯಂಗಾರ್ ೭೬೪

ಕೊಡಗಿನ ಗೌರಮ್ಮ ೭೭೧

ತ್ರಿವೇಣಿ ೭೮೩

ಬೆನಗಲ್ ರಾಮರಾವ್ ೭೯೧

ಕನ್ನಡದ ದ್ರಾಕ್ಷಿ–ದಾಳಿಂಬೆ – ವಿ.ಸೀ. ೮೦೦

ಭವ್ಯಮಾನವ ಶಿಲ್ಪಿ ೮೦೪

ಛಂದೋವಿಕಾಸದ ಕಾವ್ಯವಿಲಾಸಿ ೮೩೪

ವೀರಣ್ಣ ಅಲ್ಲ ಧೀರಣ್ಣ ೮೬೦

ಕಾವ್ಯಾನಂದ ೮೬೬

ಸಾಹಿತ್ಯ ತಪಸ್ವಿ ೮೭೫

ಶರಣ ಸಾಹಿತಿ ೮೮೧

ಕನ್ನಡ ಪ್ರಜ್ಞೆಯ ಎತ್ತರದ ವ್ಯಕ್ತಿ ೮೮೯

ಅನಿಮಿತ್ತ ಬಂಧು ೯೦೦

ನೆನಪು ಅಮೃತಸ್ಯಂದಿ ೯೦೪

| | |
|---|---|
| ಮಾನವತಾವಾದಿ | ೯೧೨ |
| ನಾನು ಮತ್ತು ನಮ್ಮ ಭಟ್ಟರು | ೯೨೦ |
| ಚಿತ್ರಲೋಕದ ಚೈತ್ರ | ೯೨೫ |
| ನಗೆರಾಜ್ಯದ ನಾಡಿಗೇರ | ೯೩೦ |
| ಡಾ. ಎಂ. ಚಿದಾನಂದಮೂರ್ತಿ | ೯೩೪ |
| ನಿನ್ನ ಕೊಡುಗೆಯನ್ನಿತ್ತು ಹೊರಟು ಹೋಗು | ೯೪೦ |
| ರತ್ನತ್ರಯ ಸಾಧಕ | ೯೪೪ |
| ಯಾರಿವನು ? | ೯೪೮ |
| ಆತ್ಮೀಯ | ೯೫೧ |
| ದೊಡ್ಡಮನೆ ದೊಡ್ಡ ಗೌಡರು | ೯೫೫ |

# ವಿಭೂತಿ ಪುರುಷರು
# (೧೯೬೩)

## ಬುದ್ಧ

==========================================================

“ನಿಲ್ಲು. ಸವಣಾ ನಿಲ್ಲು ! ”

“ . . . . . . . . ‘

‘ನಿಲ್ಲು, ಸವಣಾ ನಿಲ್ಲು !!”

ಮತ್ತೆ ಅದೇ ಗರ್ಜನೆ !

ಶ್ರಾವಸ್ತಿಯ ಜೀತನವೆಲ್ಲಾ ಕಂಪಿಸಿತು ಆ ಹೂಂಕೃತಿಗೆ. ಮುಗಿಲ ಮರೆಯಲ್ಲಿ ಅಡಗಿದ್ದ ಆ ಪೆಡಂಭೂತ ಧುಮ್ಮಿಕಿತೋ ಏನೋ! ಅದರ ನೆಗೆತಕ್ಕೆ ಕಾಲ್ಕೆಳಗೆ ಸಿಕ್ಕ ಬಂಡೆ ನುಚ್ಚುನೂರು ! ಅದು ನುಗ್ಗಿ ಬಂದ ರಭಸಕ್ಕೆ ಭಯಂಕರ ಬಿರುಗಾಳಿ ಬೀಸಿದಂತಾಗಿ ಅಲ್ಲಿಯ ವೃಕ್ಷಗಳು ಬುಡಮೇಲಾದುವೆಷ್ಟೋ! ತಮ್ಮ ರೆಂಬೆಗಳನ್ನು ಕಳೆದುಕೊಂಡು ಮುಂಡ ಮಾತ್ರ ಉಳಿಸಿಕೊಂಡವೆಷ್ಟೋ! ಚೇತವನದ ಹೂ, ಗಿಡ, ಬಳ್ಳಿಗಳು ಸುಕೋಮಲ ತಳಿರು ಜೊಂಪುಗಳೆಲ್ಲಾ ಸೀಕುರಿಗೊಂಡು ಹೋದವು. ಆ ರಕ್ಕಸನು ಬಿಟ್ಟ ಬಿಸಿಯುಸಿರಿಗೆ! ಮೇಲೆ ತೇಲುತ್ತಿದ್ದ ಉಣ್ಣೆ ಮೋಡದ ಮಾಲೆ ಚಿಂದಿಚಿಂದಿ ! ಅತ್ಯದ್ಭುತವಾದ ಸಿಡಿಲೆರಗಿದಂತಾಗಿ ಪ್ರಕೃತಿಯೇ ಅಲ್ಲೋಲ ಕಲ್ಲೋಲ!

ಇಷ್ಟಾದರೂ ಅದೇ ಪಿಶಾಚದ ಕಡೆಗೆ ಬರುತ್ತಿದ್ದ ಮತ್ತೊಂದು ಮನೋಹರಾಕೃತಿ ಮಾತ್ರ ಒಂದಿನಿತೂ ವಿಚಲಿತವಾಗಲಿಲ್ಲ. ಧೀರ ಮಂದರದಂತೆ, ಗಂಭೀರಗತಿಯಲ್ಲಿ ಅತ್ತಲೇ ಸಾಗುತ್ತಿತ್ತು. ಅಳುಕಾಗಲೀ ಭೀತಿಯಾಗಲೀ ಯಾವುದೂ ಆ ಭವ್ಯಾಕೃತಿಯನ್ನು ಸೋಂಕಿದಂತೆ ಕಾಣುವುದಿಲ್ಲ. ತೃಪ್ತಿ ತೊರೆಗೊಂಡಿದ್ದ ಆ ತುಂಬು ಮುಖಮಂಡಲ, ಕರುಣೆಯೇ ಕಾಸಾರಗೊಂಡಂತಿದ್ದ ವಿಶಾಲ ನೇತ್ರಗಳು, ಬಿರಿದ ಮಲ್ಲಿಗೆಯಂತೆ ನಗುವನೇ ಸೂಸುತ್ತಿರುವ ತುಟಿಯ ತಟಿಗಳು, ನೀಳವಾದ ಮೂಗಿನ ಎರಡೂ ಬದಿಗಳಲ್ಲಿ ನೆತ್ತರೊಸರುವ ಕೆನ್ನೆಗಳು, ವಿಶಾಲವಾದ ಭಾಳಕ್ಕೆ ಸೌಂದರ್ಯ ಸೀಮಾರೇಖೆಗಳಂತಿದ್ದ ಹುಬ್ಬುಗಳು, ಮೋಹ, ಮದ, ಮಮಕಾರಾದಿ ದುಷ್ಟ ಕಾಮನೆಗಳನ್ನು ಹಿಡಿದು ಕಟ್ಟಿದೆಯೋ ಎನ್ನುವಂತಿರುವ ಜಟೆ, ಯೋಗ ವೈಭವದ ಹಿರಿಮೆಗೆತ್ತಿದ ಕಾಷಾಯ ವಸ್ತ್ರದುಡೆ, ಓಹ್ ! ನೆಲದಾಯಿಯ ಪುಣ್ಯವೇ ಪುರುಷಾಕಾರ ತಳೆದಂತಿದೆ! ಅಥವಾ ಬಾನವರ ಭವ್ಯತೆಯೇ ಈ ದಿವ್ಯ ರೂಪು ತಳೆಯಿತೋ ಏನೋ!

ಆ ವ್ಯಕ್ತಿಯನ್ನು ಕಂಡವರಿಗೆ ಹೀಗೆನ್ನಿಸುವುದು ಸಹಜವಿತ್ತು. ಆದರೆ ಅದೇ ನಿಟ್ಟಿನಲ್ಲಿ ಮುಂದೆ ತುಸುದೂರದಲ್ಲಿ ಉನ್ನತವಾದ ಸಾನುಪ್ರದೇಶದ ಉತ್ತುಂಗ ಶೃಂಗದಮೇಲೆ ನಿಂತಿದ್ದ ಮತ್ತೊಂದು ಪ್ರಾಣಿ ಅದು ಪ್ರಾಣಿಯಲ್ಲ ಪ್ರೇತ!! ಮುಂಗಾರ ಕಾರ್ಮೋಡವೇ ಕಳಚಿ ಬಿದ್ದಂತಿತ್ತು ಅದರ ದೇಹ! ಅದರ ಕೊರಳಲ್ಲಿ ತೊನೆಯುತ್ತಿತ್ತು ಅದೆಷ್ಟೋ ಪುರುಷರ ಕೈಬೆರಳುಗಳ ಮಾಲೆ. ತನ್ನ ಎಡಗೈಲಿದ್ದ ಎಲಬು, ಖಂಡಗಳನ್ನು ತುಂಡರಿಸುತ್ತಿದ್ದ ಆ ಪ್ರೇತ, ಮಧ್ಯೆ ಮಧ್ಯೆ ಬಲಗೈಯ ನರಕಪಾಲದಲ್ಲಿ ತುಂಬಿದ್ದ ರಕ್ತವನ್ನು ಕುಡಿ ಕುಡಿದು ಕೇಗುತ್ತಿತ್ತು. ಯಾರಿಗಾದರೂ ಕಾಣಿಸುತ್ತಿತ್ತು, ಅದರ ಸೊಂಟಕ್ಕೆ ಬಿಗಿದಿದ್ದ ಮನುಷ್ಯನ ಕರುಳ ಹಗ್ಗ! ಅದರ ಉರಿಗಣ್ಣ ಕೇಸರಿಯೊ! ಗೋರ್ಕಲ್ಲೆ ಮೊನೆಗೊಂಡಂತಿದ್ದ ಇಕ್ಕೆಲದ ದಾಡೆಗಳೊ! ಕರ್ಬೊಗೆಯ ಗೂಡಾದ ಟಗರು ತಲೆಯೊ! ಸಾಕು, ಆ ಪ್ರೇತವನ್ನು ನೆನೆದರೆ ಸಾಕು, ಎಷ್ಟೋ ಮಂದಿ ತಾಯಂದಿರಿಗೆ ಗರ್ಭಪಾತವಾಗಿದ್ದುದು ನಿಜವಂತೆ! ಅದೆಷ್ಟು ಮಂದಿ ರಾಜಾಧಿರಾಜರೂ ತಲೆಸುತ್ತಿ ಬಿದ್ದುದು ಸತ್ಯವಂತೆ! ಉಸಿರು ಮರೆತವರೆನಿತೊ, ಚೀರಿ ಸತ್ತವರೆನಿತೊ ಅದರ ಹೆಸರು ಕೇಳಿದ ಮಾತ್ರಕ್ಕೆ!

ಏನಿದೀ ವೈಚಿತ್ರ್ಯ! ಇಷ್ಟೆಲ್ಲಾ ಪೂರ್ವೇತಿಹಾಸವನ್ನು ತಿಳಿದಿದ್ದರೂ ಸಹ ಅದಾವ ಪುರುಷಸಿಂಹನೊ ಕಾಣೆ, ಆ ಪ್ರೇತದೆಡೆಗೇ ನಡೆಯುತ್ತಿದ್ದಾನೆ. ಮೃತ್ಯುಭೀತಿಯಾದರೂ ಬೇಡವೆ ಅವನಿಗೆ! ಅಥವಾ ಬಾಳು ಬೇಸರವಾಯಿತೊ ಏನೋ! . . .ಅಥವಾ.

. .ಮತ್ತಾವ ಕಾರಣವೊ. . .ಹುಂ. . .ಏನೇ ಇರಲಿ ಬೆಟ್ಟಗುಡ್ಡಗಳನ್ನೇರಿ ಇಳುಕಲನ್ನು ಹಾದು ವಿಶಾಲವಾದ ಬಯಲಿನಲ್ಲಿ ಆಗಮಿಸುತ್ತಿದ್ದ ಆತನನ್ನು ನೋಡಿದ ಪ್ರೇತ ಮತ್ತೆ ಅಬ್ಬರಿಸಿತು.

"ನಿಲ್ಲು, ಸವಣಾ ನಿಲ್ಲು!"

"ನಿಂತೆ ಇರುವೆನು ನಾನು ಮಂತ್ರಾಣಿತನಯ, ನೀನು ನಿಲ್ಲು!"

ಸ್ತಬ್ಧ! ಇದ್ದಕ್ಕಿದ್ದಂತೆಯೇ ಎಲ್ಲವೂ ಸ್ತಬ್ಧ!! ಆ ತುಂಬ ಕಂಠದ ನುಡಿಯನ್ನು ಆಲಿಸಿದ ಸುತ್ತಲಿನ ಪ್ರಕೃತಿ ಹಾಗೆಯೇ ಮಲಗಿ ನಿದ್ರೆಹೋಯಿತು. ಆವ ಮಂತ್ರ ಗಾರುಡಿಯೊ ಕಾಣೆ ಆ ವಾಣಿ ! ಅಂಗುಳೀಮಾಲನ ಜಂಘಾಬಲವನ್ನೇ ಉಡುಗಿಸಿತು. ಜಗಜ್ಜೇತನಾದ ತಾನು ಆ ತಪಸ್ವಿಯ ಕಡೆಗೆ ಒಂದು ಹೆಜ್ಜೆಯನ್ನೂ ಕಿತ್ತಿಡಲಾರದಷ್ಟೂ ನಿಃಶಕ್ತನಾದ!"ಏನಿದಾಶ್ಚರ್ಯ! ನನ್ನ ಜೀವನದಲ್ಲಿ ಎಂದೆಂದೂ ಆಗದಿದ್ದ ಹೊಚ್ಚ ಹೊಸ ಅನುಭವ!

. . .ಇಲ್ಲ ಹಿಂದೆಂದೂ ಯಾರೂ ಈ ರೀತಿ ಉತ್ತರಿಸಿದ್ದನ್ನು ನಾನು ಕಂಡಿಲ್ಲ, ಕೇಳಿಲ್ಲ, ಅಷ್ಟೇಕೆ, ನನ್ನ ದರ್ಶನ ಮಾತ್ರದಿಂದಲೇ ಅದೆಷ್ಟೋ ಜೀವಿಗಳು ನೆತ್ತರು ಕಾರಿ ಪ್ರಾಣಬಿಡುತ್ತಿದ್ದವು! ಹೀಗಿರುವಾಗ ಯಾರಿರಬಹುದು ಈ ತಲೆಕೆಟ್ಟ ಬೈರಾಗಿ? ದಿಟ್ಟತನದಿಂದ ನನಗೆ ಮಾರ್ನುಡಿದುದಷ್ಟೇ ಅಲ್ಲ, ಅದೇನೋ ಒಂದು ಒಗಟು ಬೇರೆ ಹೇಳಿದನು. ಬಂಡೆಯಂತಿರುವ ನಾನು ನಿಂತಿಲ್ಲವಂತೆ! ನಡೆಯುತ್ತಲೇ ಇರುವ ಅವನು ಮಾತ್ರ ನಿಂತಿರುವನಂತೆ! ಏನಿದರ ಅರ್ಥ? ಹೂಂ. . .?. . .?"

ಶತಸಹಸ್ರ ಆಲೋಚನೆಯ ವೀಚಿಗಳು ಹಾಯ್ದುಹೋದುವು ಅವನ ತಲೆಯಲ್ಲಿ, ತಲೆ ಕೆರೆದುಕೊಳ್ಳುತ್ತಲೇ ಒಂದು ಹಿಡಿ ಕೂದಲನ್ನು ಕಿತ್ತು ಚೀರಿದ. ಉಹು. . .ಏನಾದರೂ ಇಲ್ಲ. ಯಾವುದೂ ಹೊಳೆಯಲಿಲ್ಲ."ಇರಲಿ" ಎಂದವನೆ –

"ಓ ಮರುಳೆ, ನಿಂತಿರುವ ನನ್ನನ್ನು 'ನೀನಿಲ್ಲು' ಎಂದೆನುವೆ.
ನಡೆದು ಬರುತಿಹ ನೀನು"ನಿಂತಿರುವೆ" ಎಂದೊರೆವೆ.
ಏನಿದರ ಗೂಡಾರ್ಥ ? ಪೇಳು ಪೇಳೆಲೆ ತವಸಿ
ಕೈಬೆರಳು ತುಂಡಾಗಿ ಮಾಲೆಯಾಗುವ ಮುನ್ನ,
ಕರುಳ ಕಡಗವು ನನ್ನ ಕಾಲನಡರುವ ಮುನ್ನ,
ರಕ್ತದೋಕುಳಿಯಲ್ಲಿ ಮೈಯ ತೋಯಿಪ ಮುನ್ನ
ಪೇಳು ತವಸಿ, ಇಡಲಾರೆಯೊ ಹೆಜ್ಜೆ ಮುಂದೆ."

"ಬಾ, ಎನ್ನ ಸನಿಹಕ್ಕೆ ಬಿತ್ತರಿಸಿ ಹೇಳುವೆನು.
ಸರ್ವ ಭೂತಂಗಳಲಿ ದಂಡವಿಳಿಸಿದೆ ನಾನು,
ಸರ್ವ ಜೀವಿಗಳಲ್ಲಿ ದಯೆಯ ತುಂಬಿದೆ ನಾನು,
ಆದರಿಂದೆ 'ನಾನಿಂತೆ' ಸರ್ವರೆದೆ ಮಂದಿರದಿ !
ಇದು ನಾನು ನಿಂತಿರುವ ಅರ್ಥ
ದಂಡವಿಳಿಸದ ನೀನು ನೆಲೆಯ ಕಾಣೆಯೊ ತಮ್ಮ
ನೆಲೆಯಿಲ್ಲದಲೆಯುತಿಹ ನೀನಿನ್ನು ನಿಂತಿಲ್ಲ !
ಇದುವೆ ಮಾತಿನ; ಅರ್ಥ ಕವಡು ನುಡಿ ಇಲ್ಲಿಲ್ಲ !"

ಅಂಗುಳೀಮಾಲನ ಎದೆ ಢವಢವನೆ ಹೊಡೆದುಕೊಂಡಿತು. ಅವನ ಶರೀರ ಆದ್ಯಂತ ಕಂಪಿಸಿತು. ಮೂರ್ಛೆ ಬೀಳುವುದರಲ್ಲಿದ್ದ ಅವನು ಹೇಗೋ ಚೇತರಿಸಿಕೊಂಡು, ಆ ಬೈರಾಗಿಯ ಬಳಿಗೆ ಬಂದ. ಆ ಪುಣ್ಯಪುರುಷನ ಕಣ್ಣುಗಳಲ್ಲಿ ತನ್ನ ಕಣ್ಣು ಬೆರೆಸಿದ. ಏನೋ ಒಂದು ವಿಧವಾದ ನೂತನಾನುಭವವಾದಂತಾಯಿತು ! ಅವನ ಕ್ರೌರ್ಯವೆಲ್ಲವೂ ಮಾಯವಾದಂತೆ ಭಾಸವಾಯಿತು. ಹೊಸ ಮಿಂಚು ಮಿಂಚಿದಂತಾಗಿ ಆತನಿಗೆ ನಮಿಸಬೇಕೆನ್ನಿಸಿತು. ಮೊಣಕಾಲೂರಿ ಆತನ ತೊಡೆಗಳೆರಡನ್ನೂ ತಬ್ಬಿ –

''ಆರು ನೀನೆಲೆ ತವಸಿ? ನಿನ್ನ ಕಣ್ಣಿನ ತಡಿಯ
ಬೆಳಕಿನರುಣೋದಯದ ಹೊಂಬೊಗರು
ಎನ್ನೆದೆಯ ತಾವರೆಯ ತೆರಸುತಿಹುದು !

ಎಂದಿನಿಂದಲೊ ತುಂಬಿದೀ ಮನೆಯ ಕತ್ತಲನು
ಪರಿಹರಿಸಿ ಸ್ವಚ್ಛತೆಯ ಸೂಸುತಿಹುದು !"
"ಮೇಲೇಳು ಸೋದರನೆ, ನಾನೊಬ್ಬ ಬೈರಾಗಿ,
ಮಡದಿ ಮಗು ಮನೆಮಾರು ನೂರಾರು ಸೋದರರ
ರಾಜ್ಯಕೋಶಾದಿಗಳ ಮತ್ತೆನ್ನ ಪೆತ್ತವರ
ಒತ್ತರಿಸಿ ನಾ ಬಂದೆ ಸತ್ವದನ್ವೇಷಣೆಗೆ,
ಹುಟ್ಟು ಸಾವಿನ ನೈಜಬೆಲೆಯನರಿಯಲೆಂದು,
'ಜ್ಞಾನಿ'ನೆಂಬರು ನನ್ನ ನಿನ್ನಂಥ ಸೋದರರು".

ಅವನ ಹಸ್ತಸ್ಪರ್ಶದಿಂದ ಅಂಗುಳೀಮಾಲನಲ್ಲಿದ್ದ ಕಾಳಿಕೆ ಕಳೆದು ಹೋಯಿತು."ಬಾ, ಭಿಕ್ಷು" ಎಂದು ಕರೆದಾಗ ಅವನಲ್ಲಿ ಭಿಕ್ಷುಭಾವ ಮೂಡಿ ತಾನೂ ಒಬ್ಬ ಶ್ರೇಷ್ಠ ಭಿಕ್ಷುವಾದ, ಧನ್ಯತೆಗೆ ಪಾತ್ರನಾದ !

ಇಂಥವೆನಿತೋ ಅವನ ಬಾಳಿನಲ್ಲಿ, ಮಂತ್ರವೂ ಅಲ್ಲ, ಮಾಟವೂ ಅಲ್ಲ, ಆವ ಜಾತಿಯ ಪವಾಡವೂ ಅಲ್ಲ. ಮುಗ್ಧೆ ಕಿಸಾಗೋತಮಿಯಿಂದ ಜಾಣೆ ಸುಜಾತಳವರೆಗೆ, ಕಮ್ಮಾರ ಚುಂದನಿಂದ ಚಕ್ರವರ್ತಿ ಬಿಂಬಸಾರನವರೆಗೆ, ವೇಶ್ಯೆ ಅಂಬಾಪಾಲಿಯಿಂದ ಪತ್ನಿ ಯಶೋಧರೆವರೆಗೆ, ಪುತ್ರ ರಾಹುಲನಿಂದ ಸಕಲ ರಾಷ್ಟ್ರಗಳವರೆಗೆ ಅವನ ಪ್ರಭಾವ ವಿಸ್ತರಿಸಿಕೊಂಡಿತ್ತು. ಇಷ್ಟೊಂದು ವರ್ಚಸ್ವಿಯಾದ ಪ್ರಭಾಪುಂಜಿತ ತೇಜಸ್ವಿ ಯಾರು ? ದೈತ್ಯನನ್ನು ದೇವತೆಯನ್ನಾಗಿ ಮಾರ್ಪಡಿಸಬಲ್ಲ ಆ ವಿರಾಡ್ ಶಕ್ತಿ ಯಾರು ? ಅತೃಪ್ತಿ, ಅಶಾಂತಿ, ಅಂಧಶ್ರದ್ಧೆ, ಅಸಹಕಾರಗಳು ತುಂಬಿದ್ದ ನಾಡಿನಲ್ಲಿ ಶಾಂತಿ ಸೌಹಾರ್ದಗಳನ್ನು ನೆಲೆಗೊಳಿಸಲು ಆಗಮಿಸಿದ ಆ ದೇವದೂತನಾರು ? ಆಶಾಪಾಶದಲ್ಲಿ ಸಿಲುಕಿದ್ದ ಜಗತ್ತನ್ನು ಮುಕ್ತಗೊಳಿಸಲು ಶ್ರಮಿಸಿದ ಆ ದಿವ್ಯಪುರುಷರು ಯಾರು ? ಇಂದು ರಾಜವನದ ವೇಳುವನ, ನಾಳೆ ಶ್ರಾವಸ್ತಿಯ ಜೇತವನ, ನಾಡಿದ್ದು ಮಲ್ಲರ ಶಾಲವನ ! ದಿನಕ್ಕೊಂದು ಕಾಡು ವಾರಕ್ಕೊಂದು ನಾಡು– ಹೀಗೆ ಸಮಸ್ತ ಭಾರತವನ್ನೂ ಕಾಲ್ಗಟ್ಟಿ ಭಾರತೇತರ ರಾಷ್ಟ್ರಗಳಿಗೆ ಭಿಕ್ಷುಗಳನ್ನು ಕಳುಹಿಸಿ, ತನ್ನ ತತ್ವಬೋಧದಿಂದ ಜನತೆಯನ್ನು ಜಾಗೃತಗೊಳಿಸಿ, ಅವರಿಗೆ ತಿಳಿಯಹೇಳುತ್ತಿದ್ದ ತಂದೆ ಯಾರು? ಎಂದಿಗೂ ಚಿರಂತನಧಾರೆಯಾಗಿ, ವಿಶ್ವದ ಆಧ್ಯಾತ್ಮಭೂಮಿಕೆಯಲ್ಲಿ ಹರಿಹರಿದೂ ಎಲ್ಲರೆದೆಗೂ ಸುಧೆಯಾಗಿ ತವಿಣೀವ ಆ ಮಂಗಳಮೂರ್ತಿ ಯಾರು ? **ಭಗವಾನ್ ಬುದ್ಧದೇವ !**

೨

ಗರ್ಭಿಣಿಯಾಗಿ ಹತ್ತು ತಿಂಗಳಾಗಿದ್ದರೂ ಹೆರಿಗೆಯ ಸುಳಿವೇ ಕಾಣಿಸಲಿಲ್ಲ ಮಾಯಾದೇವಿಗೆ. ಅದಕ್ಕೆ ಬದಲು ಅವಳಿಗೊಂದು ಬಯಕೆ ! ಯಾವ ಬಯಕೆ ? ವನ್ಯಪ್ರದೇಶದಲ್ಲಿ ವಿಹರಿಸಿ ಹಚ್ಚಹಸುರಿನ ಪಚ್ಚೆಯ ವಿತಾನದಡಿಯಲ್ಲಿ ತಂಗಿದ್ದು, ಸ್ವೇಚ್ಛೆಯಿಂದ ಜುಳಜುಳನೆ ಹರಿವ ಹೊನಲಿನ ತಿಳಿನೀರನೀಂಟಿ, ಚಿಲಿಪಿಲಿಗುಟ್ಟುವ ಹಕ್ಕಿಗಳೊಡನೆ ಮಾತನಾಡಿಕೊಂಡು ಬರಬೇಕೆಂಬ ಹೆಬ್ಬಯಕೆ ! ಬಹುಶಃ ಗರ್ಭಸ್ಥವಾದ ಶಿಶುವಿನ ಹಂಬಲವೇ ಇರಬೇಕು. ಮುಂದೆ ಅರಣ್ಯದಲ್ಲಿಯೇ ಇದ್ದುಕೊಂಡು ಮಹಾಯೋಗಿಯಾಗಿ ಆಧ್ಯಾತ್ಮವನ್ನು ಅರಿಯಲಿರುವ ಆ ಪುರುಷಪುಂಗವನ ಅಂತರಂಗದ ಅಭೀಪ್ಸೆಯೇ ತಾಯಿಯ ಬಯಕೆ ರೂಪದಲ್ಲಿ ಪ್ರಕಟವಾಗಿದ್ದಿರಬಹುದು ! ಏನೇ ಇರಲಿ ಬಸುರಿಯ ಬಯಕೆಯನ್ನು ಪೂರ್ಣಗೊಳಿಸುವುದು ಪತಿ ಶುದ್ಧೋದನನ ಕರ್ತವ್ಯ ತಾನೆ, ಅದರಂತೆ ಕಪಿಲವಸ್ತುವಿಗೆ ಸಮೀಪವಿದ್ದ ಲುಂಬಿನೀವನದಲ್ಲಿ ಸಕಲ ಸಿದ್ಧತೆಗಳೂ ಆದವು. ಮೇನೆಯಲ್ಲಿ ಸಖಿಯರೊಡಗೂಡಿ ಲುಂಬಿನೀವನಕ್ಕೆ ಆಗಮಿಸಿದ ಮಹಾರಾಣಿ ಮಾಯಾದೇವಿ ಒಂದಿರುಳು ಕಳೆದಳು. ಮಾರನೆಯ ದಿನ ಅದು ಭರತ ಖಂಡದ ಭಾಗ್ಯೋದಯದ ದಿನ ! ವಿಶ್ವಚೇತನವಂದು ರೂಹಾಗಿ, ಶಿಶುರೂಪಿ ತಾನಾಗಿ ಇಳೆಗಿಳಿದು ಬಂದ ದಿನ ! ಆವುದೋ ಆನಂದದಿಂದ ಪುಲಕಗೊಂಡ ತರುರಾಜಿ ತೆಳುಗಾಳಿಯೊಡನೆ ಸರಸವಾಡುತ್ತಿತ್ತು. ಅಂದೇ ಹುಣ್ಣಿಮೆ. ಆ ರಾತ್ರಿ ನಟ್ಟಿರುಳು ದಾಟಿದೆ. ಪೂರ್ಣಚಂದ್ರಮನು ತನ್ನ ಚಂದ್ರಿಕೆಯ ಹೊದಿಕೆಯನ್ನು ಹೊದಿಸಿದ್ದಾನೆ ಆ ವನ್ಯಪ್ರದೇಶಕ್ಕೆಲ್ಲಾ. ಕಿಲಕಿಲನೆ ನಗುತ್ತ ಸಡ ಗರಿದಿಂದ ಸಾಗುತ್ತಿತ್ತು ಹತ್ತಿರದಲ್ಲಿದ್ದ ಪುಟ್ಟಹೊನಲು. ದೂರದಲ್ಲಿ ಮಿನುಗುತ್ತಿದ್ದ ತಾರೆಗಳು ಕೆಲವು ತುಸು ಮರೆಯಲ್ಲಿ ನಿಂತು ಬಿಟ್ಟ ಕಣ್ ಬಿಟ್ಟಂತೆ ಅತ್ಯಂತ ಕೌತುಕದಿಂದ ಇತ್ತಲೇ ನೋಡುತ್ತಿವೆ. ಹೌದು, ಇರಬೇಕು, ಏನೋ ಒಂದು ವಿಶಿಷ್ಟ ಘಟನೆಯೇ ಸಂಭವಿಸಲಿರಬೇಕು. ಇಲ್ಲದಿದ್ದರೆ ಪ್ರಕೃತಿಯಲ್ಲೇಕೆ ಅಷ್ಟೊಂದು ಉಲ್ಲಾಸ !

ಗಂಡುಮಗುವೊಂದಕ್ಕೆ ಜನ್ಮಕೊಟ್ಟ ಮಾಯಾ ಜಗನ್ಮಾತೆಯಾದಳು. ಮಂಗಳ ಮುಹೂರ್ತವೊಂದರಲ್ಲಿ ಧರೆಗಿಳಿದ ಶಿಶು ಬೆಳದಿಂಗಳ ಬೊಂಬೆಯಾಗಿದ್ದಿತು. ಆದರೇನು ? ಹಡೆದವಳ ಮಡಿಲಲ್ಲಿ ಪವಡಿಸಿ, ಅವಳೆದೆಯ ಮಧುವನ್ನು ಸವಿದು ಸುಖದಿಂದ ನಲಿಯುವ ಭಾಗ್ಯವನ್ನು ಮಾತ್ರ ತಂದಿರಲಿಲ್ಲ. ಮಗುವಿಗೆ ಹೆಸರಿಡುವ ಮುನ್ನವೇ ಮಾಯಾದೇವಿ ಸ್ವರ್ಗಸ್ಥಳಾದಳು. ಪ್ರಾಯಶಃ, ತನ್ನ ಪಾಲಿನ ಕೆಲಸ ಅಷ್ಟಕ್ಕೆ ಮುಗಿಯಿತೆಂದು ಭಾವಿಸಿದಳೋ ಏನೋ ! ಅಂದೇ ಲುಂಬಿನೀವನದಲ್ಲಿ ಪತ್ನಿಗೆ ಮಣ್ಣು ಕೊಟ್ಟ ಚಕ್ರವರ್ತಿ ಶುದ್ಧೋದನ ಆ ಶಿಶುವನ್ನು ಅಂಗೈಲಿಟ್ಟು ಸಾಕತೊಡಗಿದ. ಅದರ ಪಾಲನೆಗೆಂದು ಸಭ್ಯತೆಯೇ ಸಾಕಾರಗೊಂಡಂತಿದ್ದ ಮಹಾಪ್ರಜಾಪತಿ ಗೋತಮಿ ಎಂಬಾಕೆಯನ್ನು ಲಗ್ನವಾಗಿ ತನ್ನ ಕರ್ಣ ಬೆಳಕನ್ನು ಅವಳ ಮಡಿಲಿಗಿರಿಸಿದ. ಶಿಶುವಿಗೆ ಸಿದ್ಧಾರ್ಥನೆಂದು ನಾಮಕರಣವಾಯಿತು. ಸಿತಮುನಿಗಳೇ ಸಿದ್ಧಾರ್ಥನಿಗೆ ಪೂಜ್ಯಗುರುಗಳಾಗಿ ಕೆಲವೇ ವರ್ಷಗಳಲ್ಲಿ ಅವನನ್ನು ಸಕಲ ವಿದ್ಯಾಪಾರಂಗತನನ್ನಾಗಿ ಮಾಡಿದರು. ವೇದವೇದಾಂಗಗಳಲ್ಲೂ, ಶಾಸ್ತ್ರೇತಿಹಾಸ ಪುರಾಣ ವ್ಯಾಕರಣ ಮೀಮಾಂಸೆಗಳಲ್ಲೂ ಪೌರುಷ ಪ್ರತಾಪಗಳಲ್ಲೂ ಅವನು ಅದ್ವಿತೀಯನಾದ. ಖಡ್ಗಝಳುಪಿಸುವುದರಲ್ಲಿದ್ದ ಅವನ ಕರಕೌಶಲ, ಬಾಣ ಪ್ರಯೋಗದಲ್ಲಿದ್ದ ಅವನ ಚಾತುರ್ಯ, ಕುದುರೆ ಸವಾರಿಯಲ್ಲಿದ್ದ ಅವನ ಕುಶಲತೆ – ಇವೆಲ್ಲವನ್ನೂ ಅವನಲ್ಲಿಗೆ ಬೇರೊಬ್ಬರು ಬಂದು ಕಲಿಯಬೇಕಿತ್ತು. ಇವೆಲ್ಲಕ್ಕೂ ಮಿಗಿಲಾಗಿ ಆಧ್ಯಾತ್ಮ ವಿಚಾರಗಳಲ್ಲಿ ಮನತೆತ್ತರಂತೂ ಸಾಕ್ಷಾತ್ ಧರ್ಮದ ಸ್ವರೂಪವೇ ತಾನಾಗುತ್ತಿದ್ದ. ಕಂಡವರು ಹೇಳುತ್ತಿದ್ದರು ಅವನೊಬ್ಬ ದೇವರ್ಷಿಯಾಗುತ್ತಾನೆಂದು.

೩

ಅದೊಂದು ಸಂಜೆ ಪುಷ್ಪವಾಟಿಗೆ ತನ್ನ ಸೋದರಳಿಯ ಆನಂದನೊಡಗೂಡಿ ಬಂದ ಸಿದ್ಧಾರ್ಥ ಅಸ್ತಮಿಸುತ್ತಲಿದ್ದ ಸಂಧ್ಯಾಸೂರ್ಯನನ್ನೇ ಈಕ್ಷಿಸುತ್ತಾ ಆಲೋಚನಾಮಗ್ನನಾಗಿದ್ದ. ಶಾಂತಿ ನೆಲೆಗೊಂಡಿದ್ದ ಆ ತಾಣದಲ್ಲಿ ತಾನೊಬ್ಬನೇ ತುಸುದೂರ ಸಾಗಿದ. ಅಲ್ಲೊಂದು ಜೇಡ ಒಂದು ಗಿಡದಿಂದ ಮತ್ತೊಂದು ಗಿಡದವರೆಗೂ ತನ್ನ ಬಲೆ ಬೀಸಿಕೊಂಡು ಬೀಳಿಗಾಗಿ ಕಾಯುತ್ತಿತ್ತು. ಸಹಸ್ರೋಪಸಹಸ್ರ ತಂತುಗಳ ಬಲೆ ಕಲಾಪೂರ್ಣವಾಗಿಯೂ, ಅತಿಸೂಕ್ಷ್ಮವಾಗಿಯೂ ಇತ್ತು. ಆದರೇನು ಅಲ್ಲಲ್ಲಿ ನಾಲ್ಕಾರು ನೊಣಗಳ ಅಸ್ಥಿಗಳೂ ಅಲುಗುತ್ತಿದ್ದವು. ಅದೇ ಸಮಯಕ್ಕೆ ಮತ್ತೊಂದು ನೊಣ ಎಲ್ಲಿಂದಲೋ ಹಾರಿಬಂದು ಆ ಬಲೆಯಲ್ಲಿ ಸಿಕ್ಕಿಬಿತ್ತು, ಪಾಪ ! ಬಡಪ್ರಾಣಿ ತಂತುವಿನಲ್ಲಿ ತೊಡಕಿದ್ದ ಕಾಲುಗಳನ್ನು ಬಿಡಿಸಿಕೊಳ್ಳಲಾರದೆ ಚಡಬಡಿಸಿ ತನ್ನ ರೆಕ್ಕೆಗಳು ಸುತ್ತಿಕೊಂಡು ಸಂಪೂರ್ಣವಾಗಿ ಸೆರೆ ಸಿಕ್ಕಿತು. ತತ್‌ಕ್ಷಣವೇ ದೊಡ್ಡ ಶಿಕಾರಿಮಾಡಿದ ಬೇಟೆಗಾರನಂತೆ ಅತ್ತ ಧಾವಿಸಿ ಬಂದಿತು ಒಂದು ಮುದಿಜೇಡ. ಚಿತ್ರ ವಿಚಿತ್ರ ರೀತಿಯಲ್ಲಿ ಹಿಂಸಿಸಿ ಆ ನೊಣವನ್ನು ಅರೆಜೀವಮಾಡಿ ತನ್ನ ಬಳಗವನ್ನು ಕರೆತರ ಲಿಕ್ಕೋ ಏನೋ ಮತ್ತೆ ತನ್ನ ಅರಮನೆಯ ಕಡೆ ಸಾಗಿತು. ಆ ಜೇಡನ ಜಾಲವನ್ನೆಲ್ಲಾ ಈಕ್ಷಿಸಿದ ಸಿದ್ಧಾರ್ಥನಿಗೆ ಕರುಳು ಕತ್ತರಿಸಿ ದಂತಾಯಿತು. ಅಷ್ಟರಲ್ಲಿ ತನ್ನ ಸಮೀಪಕ್ಕೆ ಬಂದ ಸೋದರಳಿಯ ಆನಂದನೊಡನೆ ಕಾರಂಜಿಯ ಕಟ್ಟೆಯ ಮೇಲೆ ಒಂದು ಕಾಲೂರಿ ನಿಂತು,

"ಆನಂದ,"

"ಯುವರಾಜ."

"ಬಗೆಹರಿಯದೀ ಪ್ರಶ್ನೆ ಆನಂದ. ಜಟಿಲತೆಯ ಗೂಡಲ್ವೆ ಈ ನೆಲದ ಬಾಳು ! ಬಿಡಿಸಿದಷ್ಟೂ ತೊಡಕು, ತೊಡಕಿದಷ್ಟೂ ಗಂಟು ! ಅತ್ತ ನೋಡಾನಂದ, ಜೇಡಬಲೆಯೊಳು ಸಿಕ್ಕು ಸಾವ ಧೇನಿಸುತಿರುವ ಕೀಟದಾಟವ ನೋಡು ! ಬಡಜೀವಿ ತಾ . . ."

ಮಾತು ಮುಗಿದಿರಲಿಲ್ಲ. ಅಷ್ಟರಲ್ಲೇ ಮತ್ತೊಂದು ಘಟನೆ. ಗಗನಮಂಡಲದಲ್ಲಿ ವಿಹರಿಸುತ್ತಿದ್ದ ಹಂಸೆಯೊಂದು ಯಾರೋ ಬಿಟ್ಟ ಬಾಣಕ್ಕೆ ತುತ್ತಾಗಿ ಸಿದ್ಧಾರ್ಥನ ಸಮೀಪಕ್ಕೆ ದೊಪ್ಪನೆ ಕೆಡೆದುಬಿತ್ತು. ಅದನ್ನು ಕೈಗೆತ್ತಿಕೊಂಡು ನೆಟ್ಟಿದ್ದ ಬಾಣವನ್ನು ಬಹುಸೂಕ್ಷ್ಮವಾಗಿ ತೆಗೆದ. ಕೂಡಲೇ ಚಿಲ್ಲನೆ ಚಿಮ್ಮಿತು ರಕ್ತ. ತಾನು ಕಂಡಿದ್ದ ಗಿಡಮೂಲಿಕೆಯ ಔಷಧಿಯೊಂದನ್ನು ಆನಂದನಿಂದ ತರಿಸಿ ಆ ಹಂಸೆಯನ್ನು ಉಪಚರಿಸಿದ. ಅದರ ಅಳ್ಳೆಗಳು ಹೊಯ್ದುಕೊಳ್ಳುತ್ತಿದ್ದವು. ಸೊಟ್ಟ ಕತ್ತು ಹಾಕಿಕೊಂಡು ಬಾಯ್‌ಬಾಯ್ ಬಿಡುತ್ತಿತ್ತು ಪಾಪ, ಆ ಬಡಪ್ರಾಣಿ. ಸ್ವಲ್ಪ ನೀರು ಕುಡಿಸಿದ ಮೇಲೆ ಅದಕ್ಕೆ ಚೇತನ ಬಂದಂತಾಯಿತು. ಅಷ್ಟರಲ್ಲಿ ಆಗಮಿಸಿದ ಆ ಬೇಟೆಯ ಮಾಲೀಕ ದೇವದತ್ತ ! ಅವನು ಬೇರಾರೂ ಅಲ್ಲ, ಗೌತಮನ ದಾಯಾದಿಯೇ,

ನೇರವಾಗಿ ಬಂದವನೇ ಹಂಸೆಗೆ ಕೈ ಹಾಕಿದ. ಅವನನ್ನು ತಡೆದ ಸಿದ್ಧಾರ್ಥ –

"ಬಾ ಸಹೋದರ, ಏನಾದರೂ ಕೆಲಸವಿತ್ತೇನು ನನ್ನ ಬಳಿ ?"

"ಕೆಲಸ. . .ನಿನ್ನ ಬಳಿ ನನಗೆ ಕೆಲಸ !. . .ಹೂಂ. . .ಇತ್ತು. ಎಲ್ಲಿ ಆ ನನ್ನ ಹಂಸೆಯನ್ನು ಇತ್ತಕೊಡು."

"ಹಂಸೆ ! ಈ ಹಂಸೆ ನಿನ್ನದಲ್ಲ, ನಿನಗೆ ಸೇರತಕ್ಕದೂ ಅಲ್ಲ."

“ಅಂದರೆ ?
“ಅಂದರೆ, ಗಗನಮಂಡಲದಲ್ಲಿ ಸ್ವಚ್ಛಂದವಿಹಾರಿಯಾದ ಪಕ್ಷಿಯ ಮೇಲೆ ಯಾರ ಹಕ್ಕು ಅಧಿಕಾರ ಇರುವುದಿಲ್ಲ, ನಡೆಯುವುದೂ ಇಲ್ಲ.”
“ಭೇಷ್ ! ಚೆನ್ನಾಗಿದೆ ನೀನು ಹೇಳುವ ಮಾತು. ನನ್ನ ಬಾಣಕ್ಕೆ ಬಲಿಯಾದ ಬೇಟೆ ನನ್ನದಲ್ಲವೇನು ? ಹಾರುತ್ತಿರುವ ಹಕ್ಕಿಗೆ ಗುರಿ ಇಟ್ಟು ಹೊಡೆದ ಚದುರ ಬಿಲ್ಗಾರನಿಗೆ ಅದರ ಮೇಲೆ ಹಕ್ಕಿಲ್ಲವೇನು ?”
“ಇರಬಹುದಿತ್ತು ಅದು ಸತ್ತಿದ್ದರೆ, ನಿನಗೇ ಸೇರಬಹುದೆಂಬ ನ್ಯಾಯವೂ ಇತ್ತು. ಆದರೆ ಅದು ಬದುಕಿದೆ. ಅಷ್ಟೇ ಅಲ್ಲ. ಮುನ್ನಿನಂತೆ ಚೈತನ್ಯಪೂರ್ಣವಾಗಿ ಹಾರಿ ತನ್ನ ಬಳಗದೆಡೆಗೆ ಹೋಗಲೂಬಲ್ಲದು.”
“ಸಿದ್ಧಾರ್ಥ ಮೂರ್ಖನಂತೆ ವರ್ತಿಸಿ ಅಲ್ಪವಿಷಯಕ್ಕಾಗಿ ಅನಾಹುತದ ಅಡಿಗಲ್ಲು ಹಾಕಬೇಡ. ನನ್ನ ಬಾಣಕ್ಕೆ ಬಲಿಯಾದ ಬೇಟೆಯ ಮೇಲೆ ನನಗೆ ಪೂರ್ಣ ಹಕ್ಕಿದೆ ! ತಿಳಿಯಿತೆ ?”
“ದೇವದತ್ತಾ, ಈ ಪಕ್ಷಿಯ ಮೇಲೆ ಹಕ್ಕಿರುವುದು ನಿನಗಲ್ಲ, ನನಗೆ. ಪ್ರಾಣ ತೆಗೆದವನಿಗಿಂತ ಪ್ರಾಣ ಕೊಟ್ಟವನಿಗೆ ಆ ವಸ್ತು ವಿನ ಮೇಲೆ ಹೆಚ್ಚು ಅಧಿಕಾರ ಉಂಟು. ಆದುದರಿಂದ ವ್ಯರ್ಥ ಕಾಲಹರಣ ಬೇಡ ಹೊರಟು ಹೋಗು.”
“ಗೌತಮಾ, ಮತಿಹೀನನಾದ ನಿನ್ನೆದುರಿನಲ್ಲಿ ಮಾತಿಗೆ ಬೆಲೆಯಿಲ್ಲ. ನನ್ನ ಖಡ್ಗಧಾರೆಯ ಸವಿಯುಣಿಸಿ ಅನಂತರ ಕಾರ್ಯ ವನ್ನು ಸಾಧಿಸಿಕೊಳ್ಳಬೇಕಾಗುವುದು.”
“ಸಾಧ್ಯವಿಲ್ಲ ಸೋದರಾ, ಯಾರೇನೂ ಹೇಡಿಗಳಲ್ಲ ! ಶಾಕ್ಯಸಿಂಹ ಶುದ್ಧೋದನನ ಧರ್ಮಪತ್ನಿ ಹಡೆದದ್ದು ಕುನ್ನಿಯನ್ನೇನಲ್ಲ. ನನ್ನ ಧಮನಿಯಲ್ಲಿ ಹರಿಯುತ್ತಿರುವುದೂ ವೀರರಕ್ತವೇ, ನೀರಲ್ಲ ! ತಿಳಿಯಿತೇ ! ಖಡ್ಗಕ್ಕೆ ಖಡ್ಗವೇ ಉತ್ತರ ಹೇಳೀತು ಜೋಕೆ !”
“ಸಾಕು ನಿಲ್ಲಿಸು ಸಿದ್ಧಾರ್ಥ ನಿನ್ನ ಒಣ ಹರಟೆಯನ್ನು. ಈ ನಿನ್ನ ಸೊಕ್ಕು ನುಡಿಗಳಿಗೆ ಬೆದರುವಷ್ಟು ಹೇಡಿಯಲ್ಲ ನಾನು. ಈಗಾಗಲೇ ಯುವರಾಜ ಪಟ್ಟಕ್ಕೇರಿದ ನಿನಗೆ ಮುಂದೆ ಚಕ್ರವರ್ತಿ ಸಾರ್ವಭೌಮನಾಗುವೆನೆಂಬ ಅಮಲು ತಲೆಗೇರಿ ಬಿಟ್ಟಿದೆ. ಮೊದಲಿನಿಂದಲೂ ನನ್ನ ಹಾದಿಯಲ್ಲಿ ಮುಳ್ಳಾಗಿರುವ ನಿನ್ನನ್ನು ಒಂದಲ್ಲಾ ಒಂದು ದಿನ ಪರಿಹರಿಸಲೇಬೇಕಾಗುವುದು. ಇರಲಿ, ಪೌರುಷವಿದ್ದವನಿಗೆ ಪೃಥ್ವಿ, ಪ್ರತಾಪವಿದ್ದವನಿಗೆ ಪಟ್ಟಪದವಿ. ಗೌತಮ ತಡವೇಕೆ ಬಾ.”
“ಆಗಲಿ, ಸಹೋದರ, ನಿನ್ನ ಮೇಲೆ ಕತ್ತಿ ಎತ್ತುವ ಮನವಿಲ್ಲದಿದ್ದರೂ ಸದ್ಯದ ಆತ್ಮಗೌರವದ ರಕ್ಷಣೆಗಾಗಿಯಾದರೂ ಈ ನನ್ನ ಖಡ್ಗವನ್ನು ಒರೆಗಳಚಬೇಕಾಗಿದೆ. ಅದರ ಪ್ರದರ್ಶನವೂ ಆಗಿ ಮುಗಿಯಲಿ ಚಿಂತೆಯೇಕೆ.”

ಪಟುಭಟರ ಹೋರಾಟ ಸ್ವಲ್ಪ ಬಿರುಸಾಗಿಯೇ ಸಾಗಿತು. ಗೌತಮನು ಬೀಸಿಬಿಟ್ಟ ಬಲವಾದ ಹೊಡೆತಕ್ಕೆ ದೇವದತ್ತನ ಖಡ್ಗ ತುಂಡಾಗಿ ದೂರ ಚಿಮ್ಮಿ ಬಿದ್ದಿತು. ಅದರ ಹಿಡಿಮಾತ್ರ ಅವನ ಕೈಯಲ್ಲಿ ಉಳಿಯಿತು.
“ಮರ್ಯಾದೆಯಿಂದ ಇಲ್ಲಿಂದ ಹೊರಡು ದೇವದತ್ತ. ಈ ನಿನ್ನ ಖಡ್ಗದಂತೆಯೇ ನಿನ್ನ ಶಿರಸ್ಸನ್ನೂ ಗಗನಕ್ಕೆ ಚಿಮ್ಮಿಸಬಲ್ಲೆನಾದರೂ ನಿರಾಯುಧನ ಮೇಲೆ ಕೈಯೆತ್ತಬಾರದೆಂದು ತಿಳಿದು ಬಿಟ್ಟಿದ್ದೇನೆ. ಮೇಲಾಗಿ ನಮ್ಮ ವಂಶದ ಪವಿತ್ರ ರಕ್ತವನ್ನು ನಾನೇ ನನ್ನ ಕೈಯಾರ ಚೆಲ್ಲಾಡಲು ಇಷ್ಟವೂ ಇಲ್ಲ. ಇನ್ನಾದರೂ ಈ ದ್ವೇಷಾಸೂಯೆಗಳನ್ನು ದೂರಮಾಡಿ ನನ್ನ ನೆಚ್ಚಿನ ಸಹೋದರನಾಗಿ, ನನ್ನ ಬಲದೋಳಾಗಿ ಸಹಬಾಳು ಬಾಳು.”

ಪಾಪ ! ಎಲ್ಲಿ ಬರಬೇಕು ಆ ಸದ್ಬುದ್ಧಿ. ಹೀನಬುದ್ಧಿಯ ಹೀನವರ್ತನೆ ಕಡೆಯತನಕ ಹೋಗಲಿಲ್ಲ. ಅವನ ಮೇಲಿನ ಸೇಡಿನ ಕತ್ತಿ ಇನ್ನೂ ಹರಿತವಾಗುತ್ತಲೇ ಹೋಯಿತು ದೇವದತ್ತನ ಮನಸ್ಸಿನ ಮಸೆಗಲ್ಲಮೇಲೆ. ಆಕಾಶದಲ್ಲಿ ಹಾರುತ್ತಿದ್ದ ಹಂಸಪಕ್ಷಿಯಷ್ಟೇ ಅಲ್ಲ, ಜೀವನದಲ್ಲಿ ಪ್ರಣಯಪಕ್ಷಿಯೂ ಸಿದ್ಧಾರ್ಥನ ಪಾಲಾಯಿತು. ಬಹು ದಿನಗಳಿಂದಲೂ ಸುಪ್ರಬುದ್ಧನ ಪುತ್ರಿ ಯಶೋಧರೆಯನ್ನು ಲಗ್ನವಾಗಬೇಕೆಂಬ ಹಂಬಲ ಬಹಳವಿತ್ತು ದೇವದತ್ತನಿಗೆ. ಆದರೆ ಸದ್ಗುಣ ಸಂಪನ್ನೆಯಾದ ಯಶೋಧರೆಯನ್ನು ಮನಸಾ ಒಲಿದು ತನ್ನ ಧರ್ಮಪತ್ನಿಯನ್ನಾಗಿಸಿಕೊಂಡ ಸಿದ್ಧಾರ್ಥ. ಇದು ತಿಳಿದಮೇಲಂತೂ ದೇವದತ್ತನ ಹೊಟ್ಟೆಗೆ ಕೆಂಡವನ್ನು ಸುರಿದಂತಾಯಿತು. ರಾಜ್ಯದಲ್ಲಾದರೂ ಅಷ್ಟಿಷ್ಟು ಭಾಗವನ್ನು ಗಿಟ್ಟಿಸಬೇಕೆಂದಿದ್ದ ದೇವದತ್ತನಿಗೆ ಅದೂ ದೊರೆಯದಂತಾಯಿತು. ಮಹಾಮೇಧಾವಿಯಾದ ಸಿದ್ಧಾರ್ಥ, ಯುವರಾಜ ಪಟ್ಟವನ್ನು ಸ್ವೀಕರಿಸಿದ ಮೇಲೆ ಶುದ್ಧೋದನನಷ್ಟೇ ಸಮರ್ಥನೂ ಪ್ರಜಾನುರಾಗಿಯೂ ಆಗಿಬಿಟ್ಟನು. ಎಲ್ಲೂ ದೇವದತ್ತನಿಗೆ ಸ್ಥಳವಿಲ್ಲದಂತಾಯಿತು. ತನ್ನ ಆಶೋತ್ತರಗಳಿಗೆಲ್ಲಾ ಕಂಟಕಪ್ರಾಯನಾದ ಸಿದ್ಧಾರ್ಥನ ಮೇಲೆ ಮತ್ತೂ ರೋಷ ಹೆಚ್ಚಿತು. ಇದಕ್ಕೂ ಮಿಗಿಲಾಗಿ ಇತ್ತೀಚೆಗೆ ಬಾಳೇ ಬೇಸರವಾದಂತೆ ಕಂಡುಬಂದಿತು.

"ಇಲ್ಲ, ಇಲ್ಲಿ ಭಂಡತನದ ಬಾಳು ಬಾಳುವುದಕ್ಕಿಂತ ಪ್ರಾಣ ಬಿಡುವುದೇ ಲೇಸು: ಇಲ್ಲವೇ ಕಪಿಲವಸ್ತುವಿನಿಂದ ತೊಲಗಿ ಹೋಗಬೇಕು" ಎನಿಸಿತು ಅವನಿಗೆ.

'ಅದೇ ಸರಿ' ಎಂದು ಅಂದೇ ರಾತ್ರಿ ಎಲ್ಲ ಸಿದ್ಧತೆಗಳನ್ನು ಮಾಡಿಕೊಂಡು ಹೊರಟೇಬಿಟ್ಟ. ಎಲ್ಲಿಗೆ ಹೋದನೋ ಯಾರಿಗೂ ತಿಳಿಯದು.

ವಿಶ್ವಶಕ್ತಿಯ ಲೀಲೆಯೇ ಬೇರೆಯಾಗಿತ್ತು. ಕಾಲಗತಿಗನುಗುಣವಾಗಿ ಉರುಳುತ್ತಲೇ ಇದ್ದ ಸಿದ್ದಾರ್ಥನ ಬಾಳತೇರನ್ನು ಭೋಗದ ಕೆಸರಿನಲ್ಲಿ ಹೂತಿಡಲು ಇಷ್ಟಪಡಲಿಲ್ಲ ಆ ವಿರಾಟ್ ಶಕ್ತಿ. ಬಹುದಿನಗಳಿಂದಲೂ ಬಾಳಿನ ನಶ್ವರತೆಯನ್ನು ಅರಿತು ಅನುಭವವನ್ನು ಕಡೆಯುತ್ತಲೇ ಇದ್ದ ಆತನ ಚೇತನ ಶಾಶ್ವತೆಯನ್ನು ಅರಸುತ್ತಿತ್ತು. ಹುಟ್ಟು ಸಾವಿನ ವಿಚಿತ್ರಲೀಲೆ ಆತನನ್ನು ತುಂಬ ಅಚ್ಚರಿಗೊಳಿಸುತ್ತಿತ್ತು.

"ಎಷ್ಟೊಂದು ಜಟಿಲತೆಯ ಗೂಡು ಈ ಬಾಳು. ಇಂದು ಹುಟ್ಟು, ನಾಳೆ ಸಾವು ! ಇಂದು ನಗು, ನಾಳೆ ಅಳು ! ಹುಟ್ಟುವುದು ಸಾಯುವುದು ಇಷ್ಟೇನೆ ಈ ಜೀವನದ ಸಾಧನೆ ? ಸಾಯುವ ಮುನ್ನ ತಾನು ತನ್ನದು ಎಂಬ ಮಮಕಾರದಿಂದ ಬೇರೊಂದರೊಡನೆ ಹೋರಾಡುವುದು, ಅದೂ ಎಂತಹ ಹೋರಾಟ ? ಪ್ರಚಂಡ ಹೋರಾಟ. ಏತಕ್ಕಾಗಿ ? ಹೆಣ್ಣಿಗಾಗಿ ಹೋರಾಟ, ಸತಿಸುತರ ರಕ್ಷಣೆಗಾಗಿ ಹೋರಾಟ, ಪದವಿ ಗೌರವಗಳಿಗೆ ಹೋರಾಟ, ಕಡೆಯಲ್ಲಿ ಸಾವಿನೊಡನೆ ಹೋರಾಟ. ಈ ಸತತ ಹೋರಾಟದ ಅಂತ್ಯದಲ್ಲಿ ಸಿಕ್ಕುವುದಾದರೂ ಏನು ? ಒಂದು ಹಿಡಿ ಮಣ್ಣು. ಹಿಡಿಮಣ್ಣಿಗಾಗಿ ಮಾನವನು ಇಷ್ಟೊಂದು ಶ್ರಮಿಸಬೇಕೆ ? ಅಥವಾ ಇದಕ್ಕೆ ಪರಿಹಾರವೇ ಇಲ್ಲವೆ ? ಇದ್ದರೆ ಎಲ್ಲಿರಬಹುದು ? ಹೇಗಿರಬಹುದು ? ಅದನ್ನು ಹಿಡಿತರಲು ಸಾಧ್ಯವೆ ? ಬೇಡ ! ಈ ಸಾಧ್ಯಾಸಾಧ್ಯತೆಗಳ ಪ್ರಶ್ನೆ ಬೇಡ. ಆದರೆ, ಅದಕ್ಕಾಗಿ ಶ್ರಮಿಸುವುದು ನನ್ನ ಆದ್ಯ ಕರ್ತವ್ಯವಲ್ಲವೆ ? ನಾಳೆ ಪ್ರಜಾಪಾಲಕನಾಗಲಿರುವ ನಾನು ಇಂದಿನಿಂದಲೂ ಪ್ರಜಾಸೇವಕನಾಗಿಯೇ ದುಡಿಯಬೇಕಲ್ಲವೆ ? ಈ ಜಗತ್ತಿನ ದುಃಖಕೋಟಲೆಯನ್ನು ದೂರಮಾಡಲಿಕ್ಕಾಗಿ, ನಾನು ಸರ್ವಸ್ವವನ್ನೂ ತ್ಯಾಗಮಾಡಬೇಕು; ತ್ಯಾಗಮಾಡಲೇಬೇಕು ! ಅರಮನೆಯ ಅಂತಃಪುರದ ಹಂಸತೂಲಿಕಾತಲ್ಪದ ಮೇಲೆ ಸುಖದ ಸುಪ್ಪತ್ತಿಗೆಯಲ್ಲಿ ಸವಿಗನಸು ಕಾಣುತ್ತಾ ಕುಳಿತರೆ ಧರ್ಮದ ದಾರಿಯನ್ನು ಹುಡುಕಿ ತೋರುವವರಾರು ? ನೆಲಕ್ಕೆ ದಾಯಾದಿಗಳುಂಟು, ಸಂಪತ್ತು ಸೌಭಾಗ್ಯಗಳಿಗೆ ದಾಯಾದಿಗಳುಂಟು, ಸುಖ ಸಂತೋಷಗಳಿಗೆಲ್ಲಾ ದಾಯಾದಿಗಳು ಉಂಟೇ ಉಂಟು. ಆದರೆ ಧರ್ಮಕ್ಕೆ ದಾಯಾದಿಗಳೇ ಇಲ್ಲ. ಅದಕ್ಕಾಗಿ ಅಸೂಯೆಪಡುವವರೂ ಇಲ್ಲ, ಮತ್ಸರಿಸುವವರೂ ಇಲ್ಲ. ಅಂತಹ ದಾಯಾದ್ಯಭೀತಿ ಇಲ್ಲದ ಧರ್ಮಪಥದಲ್ಲಿ ನಾನು ನಡೆಯಬಾರದೆ ? ನಡೆದು ಇತರರನ್ನು ನಡೆಸಬಾರದೆ ?"

ಒಂದಲ್ಲ, ಎರಡಲ್ಲ, ನೂರಾರು ಪ್ರಶ್ನೆಗಳ ತುಮುಲ ! ತನಗೆ ಮಗ ಹುಟ್ಟಿದ್ದಾನೆ, ಪುತ್ರೋತ್ಸವದ ಸಮಾರಂಭದಲ್ಲಿ ಅರಮನೆಯಷ್ಟೇ ಏಕೆ, ಇಡೀ ಕಪಿಲವಸ್ತುವೆ ಭಾಗವಹಿಸಿದೆ. ಶೂದ್ದೋದನನ ಆನಂದಕ್ಕಂತೂ ಪಾರವೇ ಇಲ್ಲ. ದಾನ, ದಕ್ಷಿಣೆ, ಸಂತರ್ಪಣೆ, ಸಮಾರಂಭಗಳಿಂದ ತನ್ನ ಸಮಸ್ತ ಪ್ರಜೆಗಳನ್ನೂ ತೃಪ್ತಿಪಡಿಸುತ್ತಿದ್ದಾನೆ. ಎಲ್ಲರ ನಾಲಗೆಯ ಮೇಲೂ ನಲಿಯುತ್ತಿದೆ 'ರಾಹುಲ'ನೆಂಬ ಹೆಸರು. ಆದರೆ ಗೌತಮನ ಮನಸ್ಸು ಮಾತ್ರ ಬಹುದೂರದಲ್ಲಿ ವಿಹರಿಸುತ್ತಿತ್ತು. ರಾಹುಲನು ಜನಿಸಿದ ಸಂತೋಷಕ್ಕಿಂತ ನಿನ್ನೆ ತಾನೆ ಮಡಿದ ನನ್ನ ಮೆಚ್ಚಿನ ತಂಗಿ ವಾಸಂತಿ ಅವನ ಮನವನ್ನು ಕೊರೆಯುತ್ತಿದ್ದಳು. ವಾಸಂತಿ ! ತನ್ನ ಚಿಕ್ಕಪ್ಪನ ಮಗಳು ವಾಸಂತಿ ! ಸದಾ ಅಸೂಯಾಪರನಾಗಿ, ತನ್ನ ಬಗ್ಗೆ ವಿಷಕಾರುತ್ತಿದ್ದ ದೇವದತ್ತನ ಬೆನ್ನು ಹಿಂದೆ ಬಿದ್ದ ಆ ಸೋದರಿ ವಾಸಂತಿ ! ಆದರೆ ದೇವದತ್ತನಿಗೂ ವಾಸಂತಿಗೂ ಎಷ್ಟು ವ್ಯತ್ಯಾಸ ? ಒಂದೇ ವೃಕ್ಷದ ಎರಡು ಹಣ್ಣುಗಳಾದರೂ ರುಚಿಯಲ್ಲಿ ಎಷ್ಟು ಬದಲಾವಣೆ ! ವಾಸಂತಿ ದೇವದತ್ತನ ಪಾಲಿಗೆ ಕಾರ್ದಿಂಗಳಲ್ಲದಿದ್ದರೂ, ಗೌತಮನ ಭಾಗ್ಯಕ್ಕೆ ಅವಳು ಬೆಳದಿಂಗಳೇ. ತಾಯಿಯ ಎದೆಹಾಲಿಗಿಂತಲೂ ಅಣ್ಣನ ಅನುರಾಗದ ಹಾಲನ್ನು ಸವಿದು ಬೆಳೆದಿದ್ದಳು, ಆ ಪುಟ್ಟ ಬಾಲಿಕೆ. ಮಡದಿಗಿಂತಲೂ ಮಿಗಿಲಾದ ಮೋಹ, ತನ್ನ ರಾಜ್ಯಕ್ಕಿಂತಲೂ ಹಿರಿದಾದ ಪ್ರೇಮ ಸಿದ್ಧಾರ್ಥನಿಗೆ ತನ್ನ ನೆಚ್ಚಿನ ತಂಗಿ ವಾಸಂತಿಯಲ್ಲಿ. ಆದುದರಿಂದ ನಿನ್ನೆ ಸತ್ತ ತಂಗಿಗಾಗಿ ಅಳಬೇಕೊ, ಇಂದು ಹುಟ್ಟಿದ ಮಗನಿಗಾಗಿ ನಗಬೇಕೊ ತಿಳಿಯದಾಯಿತು.

"ಇಂದಿಗೆ ಇಪ್ಪತ್ತು ವರ್ಷಗಳ ಹಿಂದೆ ತನ್ನ ತಂದೆಗೂ ಇದೇ ಸ್ಥಿತಿ ಉಂಟಾಗಿರಲಿಲ್ಲವೆ ? ಲುಂಬಿನೀವನದ ಸಾಲವೃಕ್ಷದಡಿ ಯಲ್ಲಿ ತಾಯಿಯ ಪವಿತ್ರ ಮಡಿಲಲ್ಲಿ ಮಲಗಿದ್ದ ನನ್ನನ್ನು ನೋಡಿ ಹಿಗ್ಗಿದ ಆತನ ಕರುಣಾರ್ದ್ರ ಹೃದಯಕ್ಕೆ ಒಂದು ವಾರದೊಳಗೇ ನನ್ನ ಹೆತ್ತಮ್ಮನ ಮರಣದ ಸಿಡಿಲು ಬಡಿಯಲಿಲ್ಲವೆ ? ಇಂದು ಹುಟ್ಟಿದ ರಾಹುಲನಿಗೂ ಅದೇ ಗತಿಯಾದರೆ ? ಆದರೆ ಎನ್ನುವುದೇನು ? ಆಗಿಯೆ ಆಗುತ್ತದೆ .ತಪ್ಪಿಸಿಕೊಳ್ಳುವುದಕ್ಕೆ ಸಾಧ್ಯವೇ ಇಲ್ಲ. ನಿನ್ನೆ ತೀರಿದ ವಾಸಂತಿಯನ್ನು ಮರಳಿ ತಂದು

ಕೊಡುವವರೂ ಇಲ್ಲ ; ನಾಳೆ ಹೋಗುವ ನನ್ನನ್ನು ತಡೆಯುವವರೂ ಇಲ್ಲ. ಕೈಹಿಡಿದ ಸತಿಯಾಗಲಿ ಜನ್ಮಪಡೆದ ಸುತನಾಗಲಿ ಯಾರೂ ನನ್ನನ್ನು ಹಿಂಬಾಲಿಸರು."

ಇಂತೆಲ್ಲಾ ಚಿಂತಿಸುತ್ತಾ ಅಂದು ಸಂಜೆ ಲುಂಬಿನೀವನದೆಡೆಗೆ ತಾನೊಬ್ಬನೇ ನಡೆದ. ಸೊಂಪಾದ, ಸಾಲವೃಕ್ಷದಡಿಯಲ್ಲಿ ತಾಯಿಯ ಮತ್ತು ತಂಗಿಯರ ಎರಡು ಸಮಾಧಿಗಳು ಚಿರಶಾಂತಿಯ ಸುಖನಿದ್ರೆಯಲ್ಲಿದ್ದವು. ಒಂದಲ್ಲ ಒಂದು ದಿನ ಇಂತಾಗುವ ಈ ದೇಹದ ಮೇಲೆ ಎಷ್ಟೊಂದು ಮೋಹ !"ನಾನು" ಎಂಬ ಅತಿತ್ವದ ಪ್ರತಿಷ್ಠಾಪನೆಗಾಗಿ ಇಡಿಯ ಜೀವನವೇ ಮೀಸಲು ! ಛೆ! ಎಲ್ಲವೂ ಮುಂಜಾನೆಯ ಮಂಜು, ಹಡೆದ ತಾಯಿಯಾಗಲಿ ಪಡೆದ ವಾಸಂತಿಯಾಗಲಿ ಉಳಿಯಲಿಲ್ಲ. ಇರುವ ತಂದೆಯಾಗಲಿ ಕೂಡಿದ ಹೆಂಡತಿಯಾಗಲಿ, ಮೂಡಿದ ಪುತ್ರನಾಗಲಿ ಎಲ್ಲರಿಗೂ ಆ ಗತಿಯೇ ಕಾದಿದೆ. ಇದೆಲ್ಲವನ್ನೂ ತಿಳಿಯುವ ಮುನ್ನವೇ ನನ್ನ ಮಂದ ಬುದ್ಧಿ ಮಮತೆಯ ಸೋದರನನ್ನು ಧಿಕ್ಕರಿಸಿ ನುಡಿಯಿತು. ದೇವದತ್ತ – ನನ್ನ ಸೋದರ ದೇವದತ್ತ – ಈಗ ಎಲ್ಲಿರುವನೊ ಏನೊ. ಸೋದರನನ್ನು ರಾಜಭ್ರಷ್ಟನನ್ನಾಗಿಸಿದ ಈ ಸಂಪತ್ತಿಗೆ ಧಿಃಕ್ಕಾರ ! ಬೇರೊಬ್ಬನನ್ನು ನಾಶಪಡಿಸಿಯಾದರೂ ತಾನು ಉಳಿಯಬೇಕೆಂಬ ಈ ಹೇಯ ಬಾಳಿಗೆ ಧಿಃಕ್ಕಾರ ! ವಿಶ್ವದಲ್ಲಿನ ನಶ್ವರತೆಯನ್ನು ತಿಳಿದೂ ತಿಳಿದೂ ಅದಕ್ಕಾಗಿಯೇ ಕಾತರಿಸುತ್ತಿರುವ ಈ ತುಚ್ಛ ಕಾಮನೆಗೆ ಧಿಃಕ್ಕಾರ ! ಇಂದು ಹುಟ್ಟಿದ್ದಕ್ಕೆ ಹಬ್ಬ, ನಾಳೆ ಸತ್ತವನಿಗೆ ತಿಥಿ ! ಸಾಕು. ಇಂದಿಗೆ ಸಾಕುಮಾಡಬೇಕು ಈ ನೋವು ನಲಿವುಗಳ ಚೆಲ್ಲಾಟವನ್ನು. ಜರಾಮರಣ ನಾಶಾರ್ಥವಾಗಿ, ಜನತೆಯ ದುಃಖಕೋಟಲೆಯನ್ನು ದೂರಮಾಡಲಿಕ್ಕಾಗಿ, ಸರ್ವಸಂಗಪರಿತ್ಯಾಗಿಯಾಗಬೇಕು. ಉಗ್ರತಮ ತಪಸ್ಸಿನ ಮೂಲಕ ಸತ್ಯವನ್ನು ಸಾಧಿಸಿ ಜಗತ್ತಿಗೆ ಅದನ್ನು ಬಿತ್ತರಿಸಿ ಹೇಳಬೇಕು. ಅದಕ್ಕೆ ನಾಳೆ, ನಾಡಿದ್ದು ಎಂದು ದಿನಗಳನ್ನು ಎಣಿಸಿದರೆ ಆಗದು. ಹುಟ್ಟದಿರುವ ನಾಳೆ, ಸತ್ತಿರುವ ನಿನ್ನೆಯಷ್ಟೇ ನಿಷ್ಫಲ. ಆದ್ದರಿಂದ ಇಂದೇ ಈಗಲೇ ಹೊರಟುಬಿಡಬೇಕು. ದೂರ ! ದೂರ !! ಬಹುದೂರ ನಿರ್ಜನಪ್ರದೇಶದ ನಿಬಿಡಾರಣ್ಯದಲ್ಲಿ ಆತ್ಮಬಲದಿಂದ ಸೃಷ್ಟಿಯ ರಹಸ್ಯವನ್ನು ತಿಳಿದು, ಜನತೆಗೆ ತಿಳಿಯಹೇಳಿ ಅವರ ಉದ್ಧಾರ ಕಾರ್ಯದಲ್ಲಿ ನಿರತನಾಗಬೇಕು.

ನೂರಾರು ಭಾವಗಳು ಮೇಲಿಂದ ಮೇಲೆ ತೂರಿ ಬಂದು ಕಡೆಗೆ ಯೋಗಭೂಮಿಕೆಯ ದಂಡೆಗೆ ಅವನ ಬಾಳದೋಣಿಯನ್ನು ಕೊಂಡೊಯ್ದವು. ಅದೇ ರಾತ್ರಿ ಅಡವಿಗೆ ಹೊರಡಲೇಬೇಕೆಂದು ನಿರ್ಧರಿಸಿದ. ಈ ನಿರ್ಧಾರವನ್ನು ಯಾರೂ ಯಾವ ವಿಧದಿಂದಲೂ ಬದಲಿಸಲು ಶಕ್ತರಾಗಲಿಲ್ಲ. ಆದರೂ ಕಡೆಯದಾಗಿ ಸತಿಸುತರನ್ನು ಕಂಡು, ತನ್ನ ತಾಯ್ನಾಡಿಗೆ ಶರಣು ಹೇಳಿ, ತಂದೆ ತಾಯಂದಿರಿಗೂ ಪ್ರಣಾಮಗಳನ್ನು ಅರ್ಪಿಸಿ ತನ್ನ ಕರ್ತವ್ಯದ ಭಾಗವೆಂದು ತಿಳಿದು ಅರಮನೆಗೆ ಮರಳಿದ. ಎಳಮೆಯಿಂದಲೂ ತನ್ನನ್ನು ಎತ್ತಿ ಆಡಿಸಿದ ಸೇವಕ ಛಂದಕನನ್ನು ಕರೆದು 'ಬೆಳ್ಳಿ' ಮೂಡುವ ಹೊತ್ತಿಗೆ ಸರಿಯಾಗಿ ಎರಡು ಕುದುರೆಗಳನ್ನು ಸಿದ್ಧಗೊಳಿಸಬೇಕೆಂದು ಮಾತ್ರ ಆಜ್ಞೆ ಇತ್ತು ಅಂತಃಪುರದೆಡೆಗೆ ನಡೆದ.

ನಡುನಿಶೆಯ ಮಡಿಲಿನಿಂದ 'ಬೆಳ್ಳಿ' ಕಣ್ಣುತೆರೆಯುವುದು ಇನ್ನು ಸ್ವಲ್ಪ ಕಾಲಮಾತ್ರ ಉಳಿದಿತ್ತು. ಅಂತಃಪುರ, ನಗರ ಎಲ್ಲೆಡೆಯೂ ನಿದ್ರಾದೇವಿಯು ಮುದ್ರೆ ಒತ್ತಿದ್ದಳು. ಅದೇ ಸಮಯದ ನಿರೀಕ್ಷೆಯಲ್ಲಿದ್ದ ಸಿದ್ಧಾರ್ಥನು ಮೇಲೆದ್ದು ಸುತ್ತಲೂ ನೋಡಿದ. ಸೆಳೆಮಂಚದ ಸುಪ್ಪತಿಗೆಯ ಮೇಲೆ ತನ್ನ ಮೋಹದ ಮಡದಿ ಯಶೋಧರಾ ಗಾಢನಿದ್ರೆಯಲ್ಲಿದ್ದಾಳೆ. ಪಕ್ಕದ ರನ್ನದೊಟ್ಟಿಲಿನಲ್ಲಿ ಬರಿಗನಸು ಕಾಣುತ್ತಿದೆ ತನ್ನ ಕರುಳಕುಡಿ ! ನೆರೆಯ ಪ್ರಾಕಾರದಲ್ಲಿ ಪವಡಿಸಿದ್ದ ಸಖಿಯರು ಉಸಿರಾಡುವುದೂ ಚೆನ್ನಾಗಿ ಕೇಳಿಸುತ್ತಿತ್ತು. ನಿಧಾನವಾಗಿ ತೊಟ್ಟಿಲ ಬಳಿಗೆ ಬಂದ ನಿಸ್ವಾರ್ಥ. ಹತ್ತಿರದಲ್ಲೇ ಹಚ್ಚಿಟ್ಟಿದ್ದ ಹಣತೆ ತನ್ನ ಕುಡಿಯಲುಗಿಸದೆ ಎವೆಬಿಟ್ಟುಕೊಂಡೇ ಇವನನ್ನು ನೋಡುತ್ತಿತ್ತು. ಮುದ್ದುಕಂದನ ಮುದ್ದು ಕಪೋಲಕ್ಕೆ ಮುದ್ದಿಟ್ಟ. ಮಗು ತನ್ನ ಕೈಯನ್ನೊಮ್ಮೆ ಬೀಸಿ ಪಕ್ಕಕ್ಕೆ ಹೊರಳಿತು. ಕೂಡಲೇ ಸಿದ್ಧಾರ್ಥ ಬೆಚ್ಚಿಬಿದ್ದ ! ಉರಿಯುತ್ತಿದ್ದ ದೀಪದ ಕುಡಿಯೂ ಸ್ವಲ್ಪ ಅಲುಗಿತು. ! ಮತ್ತೆ ತನ್ನ ಮಡದಿಯ ಕಡೆ ನೋಡಿದ. ಓಹ್ ! ಸೆಳೆಮಿಂಚಿನ ಗೊಂಚಲಾಗಿ ಕಾಣುತ್ತಿದ್ದಾಳೆ ಯಶೋಧರೆ ! ಅವಳ ಮುಗ್ಧ ಮುಖಮಂಡಲದಲ್ಲಿ ಮೋಹಕತೆ ಸೂಸುತ್ತಿದೆ ! ಅವಳ ಚೆಲುವಿನ ಚೆಂದುಟಿಗಳು ಚುಂಬನದ ಸವಿಗಾಗಿ ಕಾತರಿಸಿ ಕುಳಿತಿವೆ ! ತೊಡೆಯವರೆಗೂ ತೇಲಿಬಿದ್ದಿರುವ ನಳಿದೋಳುಗಳು ಆಲಿಂಗನಕ್ಕೆ ಆಹ್ವಾನ ಕೊಟ್ಟಿವೆ ! ಅವಳ ನುಣ್ಣದಪಿನ ಕೆಂಪೊ ! ಹಾಲುಗಲ್ಲದ ಕಂಪೊ !! ಏರಿಳಿವ ಅವಳ ವಕ್ಷಸ್ಥಳದ ಬಿಣ್ಪೋ !!! ಛೇ ! ನೋಡಿನೋಡಿದಂತೆಲ್ಲಾ ಗೌತಮನ ಮನಸ್ಸು ಚಂಚಲಿತವಾಯಿತು. ಕೂಡಲೇ ಅವನ ಮನದ ಮೂಲೆಯಲ್ಲಿ ಅವಿತುಕೊಂಡಿದ್ದ ಆವುದೋ ಎರಡು ವಾಣಿಗಳ ವಾದ, ಪ್ರತಿವಾದ ಕೇಳಿಬಂತು !

"ಏನು ಚೆಲುವಿನ ಚಿಲುಮೆ ಈ ನಿನ್ನ ಮಡದಿ ! ಸೌಂದರ್ಯದ ರಾಶಿಯೇ ಇಲ್ಲಿ ಸೂರೆಯಾಗಿದೆ ! ನೋಡು, ಸಿದ್ಧಾರ್ಥ ಒಮ್ಮೆ ಚುಂಬಿಸಿ ನೋಡು ! ಸ್ವರ್ಗಸುಖವೂ ಇದರ ಮುಂದೆ ಸಪ್ಪಸಪ್ಪೆ ! ಒಂದೇ ಒಂದು ಹೆಜ್ಜೆ ಮುಂದಿಟ್ಟು ಮುಟ್ಟಿ ನೋಡು,

ನಿನಗಲ್ಲಿ ಸಿಕ್ಕುತ್ತದೆ ಜೀವನದ ಸಾರ ! ಅವಳೇ ನಿನ್ನ ಬಾಳಿನ ಸಂಜೀವಿನಿ ! ಅವಳೇ ನಿನ್ನ ಸೌಖ್ಯದ ಸ್ವರ್ಗ ! ಅವಳೇ ನಿನ್ನ ಸೋದೆಯ ಸೋನೆ ! ಅಂಜಿಕೆ ಏಕೆ ಸಿದ್ಧಾರ್ಥ ? ಮುಂದೆ ಬಾ, ಹೂಂ . . .ಬಾ . ."

"ನಿಲ್ಲು ಸಿದ್ಧಾರ್ಥ ! ಹೂವೆಂಬ ಭ್ರಮೆಯಿಂದ ಬೆಂಕಿಗೆ ಮುತ್ತಿಡಲು ಹೋದ ಪತಂಗದಂತಾಗಬೇಡ ! ನೀನು ಅವಳನ್ನು ಸ್ಪರ್ಶಿಸಿದ್ದಾದರೆ ನಿನ್ನೆದೆಯ ನಿಶ್ಚಯದ ಕೋಟೆ ಕ್ಷಣಮಾತ್ರದಲ್ಲಿ ನುಚ್ಚುನೂರಾಗುವುದು ಖಂಡಿತ. ನೀನು ಕಾಣಬೇಕೆಂದಿರುವ ಕನಸಿನ ಕಡಲು ಬತ್ತಿ ಬಯಲಾಗುವುದರಲ್ಲಿ ಸಂಶಯವೇ ಇಲ್ಲ. ಅವಳನ್ನು ಮುಟ್ಟಿದ ಮರುಘಳಿಗೆಯಲ್ಲೇ ಕರಗಿ ಹರಿದೀತು ನಿನ್ನ ಅಚಲ ನಿರ್ಧಾರದ ಹೈಮಾಚಲ. ಎಚ್ಚರಿಕೆ ! ಮತಿಹೀನ, ಏನಾಯಿತು ನಿನ್ನ ಪ್ರತಿಜ್ಞೆ ? ಸಮಾಧಿಸ್ಥರಾಗಿರುವ ನಿನ್ನ ತಾಯಿ ಮತ್ತು ತಂಗಿಯರ ಮುಂದೆ ನುಡಿದ ನುಡಿ ಏನಾಯಿತು ? ಹುಡಿಯಾಯಿತೆ ? ನನ್ನಿಯ ನುಡಿದ ನಾಲಗೆ ತುಂಡರಿಸಿಬಿತ್ತೆ ? ಹೂ. . .ಬಾಯಿಬಿಡು."

"ಗೌತಮ ಆತ್ಮವಂಚನೆ ಮಹಾಪಾಪ ! ನೋಡು ನಿನ್ನ ಅಂತರಂಗದಲ್ಲಿ ಇನ್ನೂ ಆಸೆ ಹಸಿಯಾಗಿದೆ ! ನಿನ್ನ ಕಣ್ಣುಗಳ ಲ್ಲಿನ್ನೂ ಅತೃಪ್ತಿ ಸುವ್ಯಕ್ತವಾಗಿದೆ. ಚುಂಬಿಸಿದ ನಿನ್ನ ತುಟಿಗಳ ತೇವವಿನ್ನೂ ಆರಿದಂತೆ ಕಾಣುತ್ತಿಲ್ಲ. ನಿನ್ನ ತೋಳುಗಳಲ್ಲಿನ್ನೂ ಅಪ್ಪು ಗೆಯ ನೆನಹು ಮಾಸಿದಂತಿಲ್ಲ. ವಂಚನೆಯೇಕೆ ಸಿದ್ಧಾರ್ಥ. . .? ಅಪ್ಪಿಕೊ. ಆಸೆಯನ್ನು ಪೂರ್ಣಗೊಳಿಸಿಕೊ. ಹೂಂ, ತ್ವರೆ ಮಾಡು. . .ಬೇಡವೆ? . . .ಬೇಡವೇ. . .?. . .ಹೋಗಲಿ ಬಿಡು ಸಿದ್ಧಾರ್ಥ. ನಿನ್ನ ಕರ್ತವ್ಯವನ್ನಾದರೂ ನೀನು ನೆರವೇರಿಸಬೇಕ ಲ್ಲವೆ ? ನಿನ್ನನ್ನು ದೈವವೆಂದೇ ಭಾವಿಸಿರುವ ನಿನ್ನ ಪ್ರಜರ ಬಗ್ಗೆ, ಕೈಹಿಡಿದ ಹೆಂಡತಿಯ ಬಗ್ಗೆ, ವಂಶದ ಸಂವರ್ಧನೆಯ ಹೊಣೆ ಹೊತ್ತ ನಿನ್ನ ಮಗನ ಬಗ್ಗೆ, ಅಂತಃಪುರ ಅರಮನೆಗಳ ಬಗ್ಗೆ – ಅಬ್ಬ ! ಎಷ್ಟು ಗುರುತರವಾದ ಹೊಣೆಗಾರಿಕೆ ಇದೆ ನಿನ್ನ ಮೇಲೆ ಅದನ್ನಾದರೂ ತಿಳಿದಿದ್ದೀಯಾ ? ಇಷ್ಟೂ ಕಾರ್ಯವನ್ನು ನೆರವೇರಿಸಿದ್ದರೆ ನೀನು ಅರಣ್ಯವಾಸಿಯಾಗಿದ್ದರೂ ಚಿಂತೆಯಿರಲಿಲ್ಲ. ಈಗ ಎಲ್ಲವನ್ನೂ ಮರೆತು ಕರ್ತವ್ಯ ಭ್ರಷ್ಟನಾಗುತ್ತಿರುವೆ. ಯೋಚಿಸಿ ನೋಡು, ಒಣವೈರಾಗ್ಯಕ್ಕೆ ಮನತೆತ್ತು ಕೊರಗಿ ಕೃಶನಾಗಬೇಡ. ಜೊತೆಗೆ ನಿನ್ನೊಬ್ಬನ ಅಗಲಿಕೆಯಿಂದ ಎಷ್ಟು ಮಂದಿ ಕಣ್ಣೀರಲ್ಲಿ ಕೈತೊಳೆಯಬೇಕಾಗಿರುವುದು, ಅದನ್ನಾದರೂ ಆಲೋಚಿಸಿರುವೆಯಾ ? ಹಡೆದೊಡಲುಗಳನ್ನು ಹುಡಿಗೈಯುವುದು ನ್ಯಾಯವೆ ? ಧರ್ಮವೆ ಸಿದ್ಧಾರ್ಥ ?"

"ಸತಿ, ಸುತ, ಪಿತರ ಸಲುವಾಗಿ ಶತಕೋಟಿ ಮಾನವರ ಬಲಿದಾನವೆ ಸಿದ್ಧಾರ್ಥ, ತನ್ನವರು, ತನ್ನದು ಎಂಬ ಅಳಿಯಾಸೆಗೆ ಸೆರೆಯಾಗಿ ನಿತ್ಯವೂ ಕೋಟಲೆಯ ಕೊಳಚೆಯಲ್ಲಿ ತೊಳಲಾಡುತ್ತಿರುವ ಮನುಜವರ್ಗದ ಹೊಣೆ ಹೊತ್ತಿರುವ ನೀನು ಅಲ್ಲಿ ಕರ್ತ ವ್ಯಭ್ರಷ್ಟನಾಗುವುದಿಲ್ಲವೆ ? ನಶ್ವರವೂ, ನಾಶ ಹೇತುವೂ ಆದ ವೈಯಾರದೈಸಿರಿಗೆ ಮಾರುಹೋಗಿ ಮಹೋನ್ನತ ಆಧ್ಯಾತ್ಮದ ಅಮೃ ತವೃಕ್ಷದ ಬುಡಕ್ಕೇ ಕೊಡಲಿಪೆಟ್ಟು ಹಾಕಹೋಗುವುದು ನ್ಯಾಯವೇ ? ಧರ್ಮವೇ ? . . .ಸಿದ್ಧಾರ್ಥ ಇದು ನಿನ್ನ ಜೀವಿತದ ಪರ್ವಕಾಲ; ನಿನ್ನ ಯೋಗ್ಯತಾ ಪರೀಕ್ಷೆಯ ಚರಮಘಟ್ಟ. ಇವರಿಬ್ಬರಲ್ಲಿ ನಿನಗೆ ಯಾರು ಬೇಕು ಆರಿಸಿಕೊ – ಇಲ್ಲಿ ಮಲಗಿರುವ ಸರ್ವಾಲಂಕಾರ ಶೋಭಿತೆಯಾದ ಕಾಮಿನಿಯೇ ಅಥವಾ ಅಲ್ಲಿ ನಿಂತಿರುವ ಕಾವಿವಸ್ತ್ರ ಧಾರಿಣಿಯಾದ ಮುಕ್ತಿ ವನಿತೆಯೇ ? ಬೇಗ ಹೇಳು ಗೌತಮ?"

ಸಂದಿಗ್ಧ ಸೇತುವೆಯ ಮೇಲೆ ತೂಗುಯ್ಯಾಲೆಯಾಯಿತು ಅವನ ಮನಸ್ಸು. ವಿಚಾರಮಥನದಿಂದ ಮೇಲೆದ್ದ ಬೊಬ್ಬುಳಿಕೆಗಳ ಶಮನಕ್ಕಾಗಿ ಅಂತಃಪುರದ ಹೊರವಲಯಕ್ಕೆ ಬಂದ. ಕಪ್ಪು ಮಸಿಯಿಂದ ತುಂಬಿಹೋಗಿತ್ತು ಜಗತ್ತು. ಆದರೂ ಮೇಲೆ ನಕ್ಷತ್ರಗಳು ಮಾತ್ರ ಎಂದಿಗಿಂತಲೂ ಮಿಗಿಲಾಗಿ ನಗುತ್ತಲೇ ಇದ್ದುವು.

"ಹೌದು, ಶಾಂತಿಯ ತವರು ನಿಸರ್ಗ, ನೆಮ್ಮದಿಯ ಮಡಿಲು ನಿಸರ್ಗ ! ಏನು ಬಂಧುರ ಶಾಂತಿ ತುಂಬಿದೆ ಆ ಪ್ರಕೃತಿ ಯಲ್ಲಿ ? ಅದರೆಡೆಗೆ ಹೊಗಬೇಕು. ಬಹುಬೇಗ ಹೋಗಬೇಕು. ಅರಿವು ಮರವಡುವ ಮುನ್ನ ಆ ಶಾಂತಿಯ ನೆಲೆವೀಡನ್ನು ನಾನು ಸೇರಲೇಬೇಕು. ಅದೋ ಆಗಲೇ ಕೇಳಿ ಬರುತ್ತಿದೆ ಸುಮಧುರ ಸುಶ್ರಾವ್ಯಗೀತ! ಅದನ್ನು ಕೇಳಿಯೂ ನಾನು ಕಿವಿ ಮುಚ್ಚಲಾರೆ. ಇದೋ ಬಂದೆ. . .ಇದೋ ಬಂದೆ. . .ಕಡೆಯದಾಗಿ. . .ಕಟ್ಟಕಡೆಯದಾಗಿ ಯಶೋಧರೆ ರಾಹುಲರಿಗೆ ನನ್ನ ಸಂದೇಶವನ್ನು ತಿಳಿಸಿ ಅವರ ಗಾಢಮೌನದ ಅನುಮತಿಯನ್ನು ಪಡೆದು, ಬೇಗ ಬಂದು ಬಿಡುತ್ತೇನೆ, ಬೇಗ ಬಂದು ಬಿಡುತ್ತೇನೆ."

ಹಾಗೆ ಅಂದುಕೊಳ್ಳುತ್ತಲೇ ಪುನಃ ಅಂತಃಪುರವನ್ನು ಪ್ರವೇಶಿಸಿದ. ದೀಪ ಢಾಳಾಗಿ ಉರಿಯುತ್ತಲೇ ಇತ್ತು. ತೊಟ್ಟಿಲನ್ನು ಸಮೀಪಿಸಿ ಮತ್ತೊಮ್ಮೆ ಮುದ್ದಿಟ್ಟ."ನಮ್ಮ ಬಳಗದ ಬಳ್ಳಿ, ಓ ಮುದ್ದು ರಾಹುಲ, ಇಂದು ನಿನ್ನ ತಂದೆ ಒಂದು ಮಹತ್ಕಾರ್ಯ ಸಾಧನೆಗಾಗಿ ಸರ್ವವನ್ನೂ ತ್ಯಜಿಸಿ ಹೊರಟಿದ್ದಾನೆ. ಅದಕ್ಕೆ ನಿನ್ನ ಸಮ್ಮತಿ ಬೇಕು. ಇದೋ ನಿನ್ನ ಅಜ್ಜನ ಅನುರಾಗಕ್ಕೆ ನೀನು ನೆರವಾಗಿ ಬಾಳಬೇಕು, ಮರೆಯಬೇಡ. ನಿನ್ನ ಭವಿಷ್ಯದ ಬಾಳು ಬೆಳಗಲಿ. . .ಯಶೋಧರಾ, ನನ್ನ ಮನದನ್ನೆ ಯಶೋಧರಾ,

ಮೋಹದ ಮದಿರೆ ನೀನಾಗಿದ್ದೆ ನನ್ನ ಬಾಳಿನಲ್ಲಿ. ಅನವರತ ಅನುರಾಗ ದೇವತೆಯಾಗಿ ಪ್ರತಿಷ್ಠಾಪಿತಳಾಗಿದ್ದೆ ನನ್ನೆದೆಯ ಮಂದಿರದಲ್ಲಿ. ಆದರೂ ಹಿರಿದಾದ ಕಾರ್ಯಸಾಧನೆಗಾಗಿ ನಿನ್ನನ್ನು ದೂರ ಮಾಡುತ್ತಿದ್ದೇನೆ. ಈಗ ನನ್ನನ್ನು ತಡೆಯಬೇಡ ಅನುಮತಿಯನ್ನಿತ್ತು ಅನುಗ್ರಹಿಸು . . .

"ನಿಜ, ಯಶೋಧರೆ, ನನ್ನಿಂದ ನಿನಗೆ ಸ್ವಲ್ಪ ಅನ್ಯಾಯವೆ ಆದಂತೆ ತೋರುತ್ತದೆ. ನನ್ನನ್ನೇ ಸಂಪೂರ್ಣವಾಗಿ ನಂಬಿದ್ದ ನಿನ್ನನ್ನು ಮರೆತು ಮಲಗಿದ ಸಮಯದಲ್ಲಿ ಕೈಬಿಟ್ಟು ಹೋಗುತ್ತಿದ್ದೇನೆ. ಅದಕ್ಕಾಗಿ ವಂಚಕನೆಂದು ಧಿಕ್ಕರಿಸಬೇಡ. ನಾನು ನಿಜಕ್ಕೂ ವಂಚಕನಲ್ಲ. ಬಹುಜನರ ಹಿತಕ್ಕಾಗಿ, ಬಹುಕಾಲದ ಭದ್ರತೆಗಾಗಿ ಸಮಸ್ತವನ್ನೂ ತ್ಯಜಿಸಲಿರುವ ನಿನ್ನ ಪತಿಯೊಡನೆ ಅವನ ಸಹ ಧರ್ಮಿಣಿಯಾದ ನೀನು ಒಂದೊಂದು ಐಹಿಕ ಸುಖವನ್ನು ತ್ಯಜಿಸಲಾರೆಯಾ ? ಯಶೋಧರಾ, ಇಂದಿನವರೆಗೂ ಮಡದಿಯಾಗಿ ಸೇವಿಸಿದ ನೀನು ಇನ್ನು ಮುಂದೆ ಮಹಾಮಾತೆ, ಜನನಿ. ಅನುಗ್ರಹಿಸಿ, ಆಶೀರ್ವದಿಸಿ ಕಳುಹು, ಜಗದೀಶ್ವರನು ನಿನಗೆ ಸರ್ವಶಕ್ತಿಯನ್ನೂ ಕರುಣಿಸಲಿ."

ಅರಮನೆಯ ಹೊರವಲಯಕ್ಕೆ ಬಂದಾಗ ಕುದುರೆಗಳು ಸಿದ್ಧವಾಗಿದ್ದವು. ಕವಿದ ಕತ್ತಲೆಯನ್ನು ತಿವಿದುಕೊಂಡು ಬರುತ್ತಿತ್ತು ಚಳಿಗಾಳಿ. ಸಿದ್ದಾರ್ಥನನ್ನು ಹೊತ್ತು ನಿಧಾನವಾಗಿ ಹೊರಟ ಕುದುರೆಯನ್ನು ಛಂದಕನ ಕುದುರೆಯೂ ಹಿಂಬಾಲಿಸಿತು. ನಗರದ ಕೋಟೆಯ ಮಹಾದ್ವಾರವನ್ನು ದಾಟಿದ ಮೇಲೆ ಸಿದ್ಧಾರ್ಥ ಮತ್ತೊಮ್ಮೆ ಹಿಂತಿರುಗಿ ನೋಡಿದ. ಬಹುದೂರದಲ್ಲಿ, ಮಿನುಗುವ ಬೆಳಕಿನಲ್ಲಿ, ಅಸ್ಪಷ್ಟವಾಗಿ ಗೋಚರಿಸುತ್ತಿತ್ತು ವೃದ್ಧ ಶುದ್ಧೋದನನ ಅರಮನೆ."ಓ ತಂದೆ, ಓ ತಾಯಿ, ಓ ನನ್ನ ಸಿರಿಯ ಕನ್ನಡಿ ಯಾದ ಕಪಿಲವಸ್ತುವೆ. ನಿಮಗಾಗಿ ನುಡಿಯುವುದಕ್ಕೆ ಪ್ರತ್ಯೇಕ ಶಬ್ದಗಳೇ ಇಲ್ಲ ನನ್ನಲ್ಲಿ. ನಿಮ್ಮ ಕೀರ್ತಿಯ ಕುಡಿಗೆ ಹೂವಾಗಿ ಮೂಡುವೆನು ! ಇದು ಸತ್ಯ, ಇದು ಸತ್ಯ. ನೀವೆಲ್ಲರೂ ಇಂದು ಒಮ್ಮನಸ್ಸಿನಿಂದ ಹರಸಿ ಅನುಮತಿಯನ್ನು ಕೊಡಿ. ನಾನು ಹೋಗಿ ಬರುತ್ತೇನೆ. ಮತ್ತೆ ಮರೆಯದೆ ಬರುತ್ತೇನೆ. ಮಾನವ ವರ್ಗಕ್ಕೆ ನನ್ನ ಅಲ್ಪಕಾಣಿಕೆಯನ್ನು ಅರ್ಪಿಸುವುದಕ್ಕಾಗಿ ಒಂದಲ್ಲ ಒಂದು ದಿನ ಬಂದೇ ಬರುತ್ತೇನೆ. ನಿಮ್ಮೆಲ್ಲರ ಆಶೀರ್ವಾದಗಳು ನನ್ನ ತಪಸ್ಸಿಗೆ ರಕ್ಷೆಯಾಗಿರಲಿ. ಇದೋ ನಿಮ್ಮೆಲ್ಲರಿಗೂ ನನ್ನ ದೀರ್ಘದಂಡ ಪ್ರಣಾಮಗಳು ! ".

ಅರುಣೋದಯದ ಸ್ವರ್ಣಚ್ಛಾಯೆ ಮೂಡಣ ದಿಗಂತದಲ್ಲಿನ್ನೂ ಸ್ವಲ್ಪ ಸ್ವಲ್ಪವೇ ಮೈದೋರುತ್ತಿದೆ. ಶಾಂತಿಯನ್ನು ಭೇದಿಸಿ ಕೊಂಡು ತಪೋಧನರ ಪರ್ಣಕುಟಿಗಳಿಂದ ವೇದಘೋಷ ಅಲೆಅಲೆಯಾಗಿ ತೇಲಿಬರುತ್ತಿದೆ. ಮತ್ತೆ ತುಸುದೂರದಲ್ಲಿ ಸಾನುಪ್ರದೇ ಶವನ್ನು ಹಾದು ಬರುತ್ತಿರುವ ಕುದುರೆಗಳ ಸಪ್ಪಳವೂ ಆಗಾಗ ಕೇಳಿಸುತ್ತಲೇ ಇದೆ. 'ಪಟಕ್ ! ' ಪಟಕ್ ! ' ಎಂಬ ಖುರಪುಟ ಧ್ವನಿಗೆ ಬೆಚ್ಚಿದ ಕೆಲವು ಹಕ್ಕಿಯ ಮರಿಗಳು ತಮ್ಮ ತಾಯಿಯ ರೆಕ್ಕೆಯೊಳಗಿಂದಲೇ ಶಿಳ್ಳೆ ಹಾಕುತ್ತಿವೆ. ಅಚ್ಚರಿಗೊಂಡ ತಾಯಿಹಕ್ಕಿ ಗಳೂ ಸಹ ತಮ್ಮ ಕೊಕ್ಕುಗಳನ್ನು ಮೇಲಕ್ಕೆತ್ತಿ 'ಕೊರ್ ಕೊರ್ ' ಎಂದು ಒಂದು ಬಗೆಯ ಶಬ್ದವನ್ನು ಮಾಡುತ್ತಿವೆ. ಮುಂಜಾನೆಯ ಮೆಲುಗಾಳಿಗೆ ತಲೆದೂಗುವ ಮರಗಿಡಗಳು ಕೈಬೀಸಿ ಕರೆಯುತ್ತಿವೆ. ಅಪರೂಪಕ್ಕೆ ಆಗಮಿಸಿದ ಆಗುಂತಕರಿಗೆ ಇಡೀ ವನವೇ ಆಹ್ವಾನ ಕೊಟ್ಟಿದೆ,

"ಚನ್ನಜ್ಜ, ತಪೋಧನರ ನೆಲೆವೀಡಾದ ಈ ಅರಣ್ಯದಲ್ಲಿ ಎಂತಹ ಮೌನ ತುಂಬಿದೆ. ಶಾಂತಿಯ ತವರು ಇದಲ್ಲವೆ ? ತಾತ, ಈ ನೆಮ್ಮದಿ ಆ ನಗರದಲ್ಲಿ, ಸಹಸ್ರಾರು ಸಮಸ್ಯೆಗಳ ಝುಂಝಾವಾತಕ್ಕೆ ಸಿಕ್ಕು ತೊಳಲಾಡುತ್ತಿರುವ ಆ ಗದ್ದಲದ ಗೂಡಾದ ಕಪಿಲವಸ್ತುವಿನಲ್ಲಿ ದೊರೆತೀತೆ ? ಓಹ್ ! ಈ ಪುಣ್ಯಭೂಮಿಯನ್ನು ಪ್ರವೇಶಿಸಿದ ನಾನೇ ಧನ್ಯ ! ಛಂದಜ್ಜ, ಅದೋ ನೋಡು ಅಲ್ಲಿ ಕಾಣುತ್ತಿರುವ ಪರ್ಣಕುಟಿಗಳೇ ಋಷ್ಯಾಶ್ರಮಗಳು. ಹೋಮಧೂಮದ ಲೀಲೆ ಸಂಕೇತ ಸೂಚಿಯಾಗಿದೆ. ಇದೋ ಇತ್ತ ಕಾಣುತ್ತಿರುವುದೇ ಭಾರ್ಗವಾಶ್ರಮ. ನನ್ನ ನೆಲೆಗೆ ನಾನು ಬಂದಿದ್ದೇನೆ. ದಯವಿಟ್ಟು ಈ ನನ್ನ ಕುದುರೆಯೊಂದಿಗೆ ಕಪಿಲವಸ್ತುವಿಗೆ ಹಿಂದಿರುಗು. . .ಅಳುತ್ತಿರುವೆ ಏಕಜ್ಜ ? ಮಹೋನ್ನತ ಕಾರ್ಯಸಾಧನೆಗೆ ಹೊರಟಿರುವ ಸಮಯದಲ್ಲಿ ಆತ್ಮೀಯನಾದ ನೀನು ಅಳುವುದೆ ?"

"ಗೌತಮಾ, ನಿನ್ನ, ಮುದ್ದಾದ ಮುಖಮಂಡಲವನ್ನು ಎಳಮೆಯಿಂದಲೂ ನೋಡಿ ನೋಡಿ ತೃಪ್ತಿಗೊಂಡಿದ್ದ ಕಣ್ಣುಗಳು, ಆಲಿಂಗಿಸಿಕೊಂಡು ಲಾಲಿಯಾಡಿಸಿದ ಈ ತೋಳುಗಳು, ಜೋಗುಳ ಆಡಿದ ಬಾಯಿ, ಮೇಲೆ ಕೂರಿಸಿಕೊಂಡು ಪುಳಕಗೊಂಡ ತೊಡೆಗಳು, ಕೋಮಲವಾದ ಪುಟ್ಟಪಾದಗಳ ಒದೆತದಿಂದ ಪುಟಗೊಂಡ ಈ ಎದೆ ಎಲ್ಲವೂ ತಮಗಾಗಿರುವ ನಷ್ಟವನ್ನು ನೆನೆದು ರೋದಿಸಿದವು. ಅದಕ್ಕಾಗಿ ಕಣ್ಣಿನಲ್ಲಿ ನೀರು ಮಿಡಿಯಿತು. ಬೇಡ, ಸಿದ್ಧಾರ್ಥ, ನಿನ್ನ ಈ ನಿರ್ಧಾರ ಎಂದಿಗೂ ಬೇಡ, ನೋಡು

ನನಗೇ ಇಷ್ಟು ಪರಿತಾಪ ಉಂಟಾಗುವಲ್ಲಿ ನಿನ್ನ ಹಡೆದವರ ಸಂಕಟ ಎಷ್ಟು ? ಕೈ ಹಿಡಿದ ಧರ್ಮಪತ್ನಿಯ ಒಡಲುರಿ ಎಷ್ಟು ? ಆಲೋಚಿಸು, ನನ್ನ ದೊರೆ. ಆತುರದಲ್ಲಿ ಕೈ ಹಾಕಿದ ಕೆಲಸದಿಂದ ಸಕಲವೂ ಅನಾಹುತಕ್ಕೀಡಾಗದಿರಲಿ."

"ತಾತ, ಎಲ್ಲದನ್ನೂ ಎಲ್ಲವನ್ನೂ ನನ್ನ ಮನಸ್ಸಿನಿಂದ ಕಿತ್ತೊಗೆದ ನಾನು ನಿನ್ನ ಹೃದಯದಲ್ಲಿ ಬಂಧಿತನಾಗಿದ್ದೇನೆ. ದುಃಖ ವನ್ನು ದೂರಮಾಡಲು ಹೊರಟಿರುವ ನನ್ನ ಬಗ್ಗೆ ನೀನು ದುಃಖಿಸುವುದು ಒಳಿತಲ್ಲ. ನಾನು ಹೊರಟಿರುವ ಕಾರ್ಯ ಎಂತಹ ಪವಿತ್ರವಾದದ್ದು. ನೀನೇ ಆಲೋಚಿಸಿ ನೋಡು. . .ಚನ್ನ, ಅದೋ ಆ ಮರದಲ್ಲಿ ಈಗ ತಾನೇ ಮೂಡುತ್ತಿರುವ ಆ ಚಿಗುರನ್ನು ನೋಡು, ಆ ಮರದೊಡನೆ ಸಹಜವಾಗಿ ಅಂಟಿಕೊಂಡೇ ಮೂಡಿರುವ ಆ ಚಿಗುರು ಬಲಿತು ಎಲೆಯಾಗಿ, ಎಲೆ ಹಣ್ಣಾದ ಮೇಲೆ ಅದು ಉದುರಿಯೇ ಉದರುತ್ತದಲ್ಲವೇ ? ಹಾಗೆ ಜೊತೆಯಲ್ಲೇ ಹುಟ್ಟಿ, ಜೊತೆಯಲ್ಲೇ ಅಂಟಿಕೊಂಡು ಬೆಳೆದ ಆ ಎಲೆಯೇ ಒಂದು ದಿನ ಬೇರಾಗುತ್ತದೆ ಎಂದ ಮೇಲೆ ಭಿನ್ನದೇಹಿಗಳಾದ ನಾವು ಬೇರ್ಪಡದೆ ಇರುತ್ತೇವೆಯೆ ? ಮುಂದೆ ಎಂದೋ ಒಂದು ದಿನ ಆಗಲೇ ಬೇಕಾದ ವಿಯೋಗ ಇಂದಾಗಿದೆ ಅಷ್ಟೆ.

"ಆದುದರಿಂದ ತಾತ, ಅರಮನೆಗೆ, ಅಂತಃಪುರಕ್ಕೆ ನನ್ನ ಮಾತಾಪಿರಿಗೆ, ಮೆಚ್ಚಿಗೆಯ ಕಪಿಲವಸ್ತುವಿಗೆ, ಈ ನನ್ನ ಸಂದೇಶ ವನ್ನು ತಿಳಿಸು 'ಯಾರೂ ಅವನಿಗಾಗಿ ಚಿಂತಿಸಕೂಡದು. ಬಹುಬೇಗ ಹುಟ್ಟು ಸಾವಿನ ಗುಟ್ಟನ್ನು ತಿಳಿದು ಎಲ್ಲರಿಗೂ ತಿಳಿಯಹೇ ಳಲು ಬರುತ್ತಾನೆ. ಅಲ್ಲಿಯವರೆಗೆ ಎಲ್ಲರೂ ಸಮಾಧಾನದಿಂದರಬೇಕು.' ಎಂದು ಛಂದ. . .ತೆಗೆದುಕೋ ಈ ರತ್ನಖಚಿತವಾದ ಮುಕುಟವನ್ನು, ಈ ರತ್ನಾಭರಣಗಳನ್ನು, ಈ ಪಟ್ಟೆ ಪೀತಾಂಬರಗಳನ್ನು ಅರಣ್ಯವಾಸಿಯಾದ ನನಗೆ ಈ ಕಾಷಾಯವಸ್ತ್ರಗಳು ಸಾಕು. ಇವುಗಳನ್ನು ನನ್ನ ತಂದೆಗೆ ಕೊಟ್ಟು ಸಮಾಧಾನ ಹೇಳು. ಬೇಗ ಬರುತ್ತಾನೆಂಬ ನಂಬಿಕೆ ಹುಟ್ಟುವಂತೆ ವಿಸ್ತರಿಸಿ ಹೇಳು. ಹೋಗಿ ಬಾ ಚನ್ನ. ಬಹಳ ದಿನಗಳಿಂದಲೂ ಸೇವಿಸಿದ ನಿನಗೆ ಈಗ ನಾನೇನನ್ನೂ ಕೊಡಲಾರದವನಾಗಿದ್ದೇನೆ. ಇದೋ ಈ ಪ್ರೇಮಪೂರಿತ ಬಾಷ್ಪಗಳನ್ನು ತೆಗೆದುಕೊ, ಹೋಗಿ ಬಾ. . .ನಿನಗೆ ಮಂಗಳವಾಗಲಿ" ಎಂದು ಹೇಳಿ ಗಿಡಗಳ ಮರೆಯಲ್ಲಿ ಸಿದ್ಧಾರ್ಥ ಮಾಯವಾದ. ಮರವಟ್ಟವನಂತೆ ನಿಂತಿದ್ದ ಛಂದಕನ ಕಣ್ಣುಗಳಲ್ಲಿ ನೀರು ಧಾರಾಕಾರವಾಗಿ ಹರಿಯುತ್ತಲೇ ಇತ್ತು. ರೆಪ್ಪೆಯನ್ನೂ ಬಡಿಯದ ಹಾಗೆಯೇ ನೋಡುತ್ತಾ ನಿಂತಿದ್ದ. ತನ್ನ ಸ್ವಾಮಿಯನ್ನು ಕಳೆದುಕೊಂಡ ದುಃಖದಿಂದಲೋ ಏನೊ ಅವನ ಕುದುರೆ 'ಕಂಥಕ' ಕಣ್ಣೀರು ಸುರಿಸುತ್ತಲೇ ಇತ್ತು !

೬

ಅದು ವೈಶಾಖ ಶುದ್ಧ ಪೌರ್ಣಿಮೆಯ ದಿನ. ಉರುವೇಲೆಯ ವನದ್ಯೆಸಿರಿ ಬೆರಗುಗೊಳಿಸುವಂತಿದೆ. ಚೆನ್ನಾಗಿ ತಳಿತಿದ್ದ ಒಂದು ಬೋಧಿವೃಕ್ಷದಡಿಯಲ್ಲಿ ಓರ್ವ ಬಡಕಲು ಯೋಗಿ ಯೋಗಮುದ್ರೆಯಲ್ಲಿ ಕುಳಿತಿದ್ದಾನೆ. ದೇಹ ಕೃಶವಾಗಿ ಹೋಗಿದೆ. ಬೀಳಲಾಗಿರುವ ಮುರುಕು ಮನೆಯ ಜಂತೆಗಳಂತೆ ಕಾಣುತ್ತಿವೆ ಅವನ ಪಕ್ಕೆಲಬುಗಳು. ಹೊಟ್ಟೆ ಬೆನ್ನಿನ ಹುರಿಗೆ ಹತ್ತಿಕೊಂಡಿದೆ. ಕಣ್ಣುಗಳು ಆಳವದ ಬಾವಿಯಲ್ಲಿ ಬಿದ್ದ ನಕ್ಷತ್ರದ ನೆರಳಿನಂತೆ ಗೋಚರಿಸುತ್ತಿವೆ. ತಲೆಯ ಮೇಲೆ ಕೈಯಾಡಿಸಿದರೆ ಗಳಿತ ಕೂದಲು ಹಾಗೆಯೇ ಉದುರಿ ಬೀಳುತ್ತಿವೆ. ಆದರೂ ಅವನ ಮುಖದಲ್ಲಿ ಆವುದೋ ತೇಜಸ್ಸು ಮಿರುಗುತ್ತಿತ್ತು. ಅಂದು ತನ್ನ ಗೆಳತಿಯೊಡಗೂಡಿ ಉಷೆಯ ನಸುಕಿಗೇ ಬಂದ ತರುಣಿಯೊಬ್ಬಳು ಆ ವೃಕ್ಷದಡಿಯಲ್ಲಿ ಮಂಡಿಸಿದ್ದ ಯೋಗಿಯನ್ನು ಕಂಡು ಭ್ರಾಂತಳಾದಳು !

"ಓ ದೈವವೇ, ಇಷ್ಟು ದಿವಸಗಳಿಗೆ ನನ್ನ ಮೇಲೆ ಕರುಣೆ ಬಂತೆ. ನನ್ನ ಇಷ್ಟಾರ್ಥವನ್ನು ನೆರವೇರಿಸಿದ ನಿನಗೆ ನಿತ್ಯವೂ ಪೂಜೆಗೈದುದಕ್ಕಾಗಿ ಇಂದು ನನಗೆ ದಯೆತೋರಿ ದರ್ಶನವನ್ನು ಕೊಟ್ಟೆಯಾ ? ತಂದೆ, ನಿನ್ನ ಆಶೀರ್ವಾದದಿಂದ ನನಗೆ ಗಂಡು ಮಗು ಆಗಿದೆ. ಇದೋ ನನ್ನ ಹರಕೆಯನ್ನು ಪೂರ್ಣಗೊಳಿಸುತ್ತೇನೆ. ಪರಿಶುದ್ಧವಾದ ಹಾಲಿನಲ್ಲಿ, ಪವಿತ್ರ ಭಾವನೆಯಿಂದ ಸಿದ್ಧ ಗೊಳಿಸಿರುವ ಈ ಪರಮಾನ್ನವನ್ನು ಕೃಪೆಮಾಡಿ ಸ್ವೀಕರಿಸಿ ನನ್ನನ್ನು ಉದ್ಧಾರಮಾಡು" ಎಂದು ಆ ಸ್ತ್ರೀ ಬಹಳ ದಿನಗಳಿಂದಲೂ ವನದೇವತೆಗೆ ಕೊಡಬೇಕಾದ ಹರಕೆಯನ್ನು ಅರ್ಪಿಸಿದಳು. ತುಟಿಯೆಡೆಗೆ ಹಿಡಿದ ಹೊಂಬಟ್ಟಲಿನ ಹಾಲನ್ನು ಆ ಬಡಜೀವಿ ಕಣ್ಣು ಮುಚ್ಚಿಕೊಂಡೇ ಗುಟುಕಿಸಿತು. ಒಂದಾದಮೇಲೊಂದು ಗುಟುಕಿನಂತೆ, ನಿಧಾನವಾಗಿ ಸುಧಾರಿಸಿ ಸುಧಾರಿಸಿಕೊಂಡು ಕುಡಿದು, ಕಡೆಗೆ ದೀರ್ಘವಾಗಿ ಉಸಿರುಬಿಟ್ಟು ಮರದ ಬುಡಕ್ಕೆ ಒರಗಿತು. ಎಷ್ಟೋ ದಿವಸಗಳಿಂದ ಅನ್ನ ನೀರಿಲ್ಲದೆ ಸೊರಗಿದ್ದ ಆ ಜೀವಕ್ಕೆ ಮತ್ತೆ ಚೇತನ ಮೂಡಿದಂತಾಗಿ ಸ್ವಲ್ಪ ಹೊತ್ತಾದ ಮೇಲೆ ಬಾಯಿ ತೆರೆಯಲು ಪ್ರಯತ್ನಿಸಿತು. ಅದರ ಆಶೀರ್ವಾದದ ಅಮೃತ ವಾಣಿಯನ್ನೇ ನಿರೀಕ್ಷಿಸುತ್ತಿದ್ದ ಆ ಯುವತಿ ಕುತೂಹಲಚಿತ್ತಳಾಗಿ ಬಿಟ್ಟ ಕಣ್ ತೆರೆದ ಬಾಯಾಗಿ ಆತನನ್ನೇ ನೋಡುತ್ತಿದ್ದಳು. ಕಣ್ಣು ಮುಚ್ಚಿಕೊಂಡೇ ಪ್ರಶ್ನಿಸಿದ,

“ನೀನಾರು ತಾಯಿ ?”

“ನಾನು ! ನಾನು ಸುಜಾತ ! ಇದೇನು ತಂದೆ, ಕೇವಲ ಒಂದು ವರ್ಷಕ್ಕೇ ನನ್ನ ನೆನಪು ಮಾಸಿಹೋಯಿತೆ ! ನಾನು ಹಿಂದೆ ಬಹಳ ವರ್ಷಗಳಿಂದಲೂ ನಿನ್ನ ಪೂಜೆಗೆ ಬರುತ್ತಿರಲಿಲ್ಲವೇ ?”

“ನನ್ನ ಪೂಜೆಗೆ ?”

“ಹೂಂ, ಅದೇ ಈ ಅಶ್ವತ್ಥವೃಕ್ಷದ ಪೂಜೆಗೆ ಅಥವಾ ವನದೇವತೆಯ ಆರಾಧನೆಗೆ”

“ಓ. . .ಇರಬಹುದು. !!”

“ಇರಬಹುದೇನು ಸ್ವಾಮಿ, ಇದ್ದದ್ದೇ. ನಿತ್ಯವೂ ಪೂಜೆಗೈದು ಪ್ರದಕ್ಷಿಣೆ ಬಂದು ಪ್ರಾರ್ಥಿಸುತ್ತಿರಲಿಲ್ಲವೆ ನನಗೆ ಒಂದು ಗಂಡು ಮಗುವಾದರೆ ನಿನಗೆ ಹಾಲುಖೀರು ನೈವೇದ್ಯ ಮಾಡುತ್ತೇನೆಂದು. ಹೌದು ತಂದೆ. ನಿನ್ನ ಆಶೀರ್ವಾದದಿಂದ ನನಗೆ ಗಂಡು ಮಗು ಆಗಿದೆ. ಬಹಳ ಚೆನ್ನಾಗಿದ್ದಾನೆ ನನ್ನ ಕಂದ. ಹರಕೆಯನ್ನು ಸ್ವೀಕರಿಸಿದ ನಿನಗೆ ತೃಪ್ತಿಯಾಯಿತೆ ಹೇಳು”

“ನಿಸ್ಸಂದೇಹವಾಗಿ”

“ನೀಡಿದ ಪರಮಾನ್ನ ಹೇಗಿತ್ತು ? ರುಚಿಯಾಗಿತ್ತೆ ?”

“ನನ್ನ ತಾಯಿಯ ಎದೆಯ ಸೊದೆಯ ಕುಡಿದಂತಿತ್ತು !”

“ಅದು ದೊಡ್ಡ ಮಾತು. . .ತಂದೆ, ಹಾಗಾದರೆ ನನ್ನನ್ನೂ ಮುದ್ದುಕಂದನನ್ನೂ ಆರ್ಶೀವದಿಸು.”

“ಹೋಗಿ ಬಾ ತಾಯಿ, ನಿನಗೂ, ನಿನ್ನ ಕಂದನಿಗೂ, ಎಲ್ಲರಿಗೂ ಶುಭವಾಗಲಿ.”

“ಮತ್ತೆ ನಿನ್ನ ದರ್ಶನ ?”

“ಸಮಯ ಬಂದಾಗ !”

ಸುಜಾತಳ ಜೊತೆಯಲ್ಲಿ ದೂರದಲ್ಲಿ ನಿಂತಿದ್ದ ಸಖಿಯರೂ ನಮಿಸಿದರು. ಎಲ್ಲರೂ ಆರ್ಶೀವಾದ ಪಡೆದ ಮೇಲೆ ಆನಂದ ದಿಂದ ಹಿಂತಿರುಗಿದರು.

ಎರಡು ಘಳಿಗೆಗಳು ಕಳೆದವು. ವೃಕ್ಷಮೂಲವನ್ನೊರಗಿದ್ದ ಬೈರಾಗಿ ಸರಿಯಾಗಿ ಎದ್ದು ಕುಳಿತ. ಕಣ್ತೆರೆದು ಸುತ್ತಲೂ ನೋಡಿದ. ಯಾರೂ ಇಲ್ಲ ! ಬೀಸುವ ಗಾಳಿಗೆ ಮರಗಳು ಮಾತ್ರ ಸುಯ್‌ಗುಡುತ್ತಿದ್ದುವು."ಅಯ್ಯೋ ! ಹುಚ್ಚು ಗೌತಮಾ, ದೇಹ ನಶ್ವರವೆಂದು ಹೇಳಿ ಅದನ್ನು ಈ ರೀತಿ ತಿರಸ್ಕಾರದಿಂದ ಕಂಡರೆ ಅವಿನಾಶಿಯಾದ ಆತ್ಮನಿಗೆ ಆಶ್ರಯವೆಲ್ಲಿ ? ಕಠೋರ ನಿರಶನವ್ರತಚಾರಿಯಾದ ನಿನಗೆ ಆತ್ಮಹತ್ಯೆಯ ಮಹಾಪಾಪ ಪ್ರಾಪ್ತವಾಗುತ್ತಿತ್ತು. ಆವ ಜನ್ಮದ ಪುಣ್ಯವೊ ಸುಜಾತ ಸ್ವಲ್ಪ ಆಹಾರವಿತ್ತು ಜೀವ ಉಳಿಸಿದಳು. ಬೇಡ, ಶುಷ್ಕವಾಗಿರುವ ಈ ದೇಹವನ್ನು ಇನ್ನೂ ನಶಿಸಿಹೋಗುವಂತೆ ಮಾಡುವ ಈ ಘೋರ ವ್ರತ ಬೇಡ. ಸತ್ಯಾನ್ವೇಷಣೆಯಲ್ಲಿ ತೊಡಗಬೇಕಾದರೆ ದೇಹಾರೋಗ್ಯವೂ ಇರಬೇಕು" ಎಂದು ತನಗೆ ತಾನೇ ಅಂದುಕೊಂಡು ಮೇಲೆದ್ದ ಗೌತಮ. ಗಯೆಯ ಹತ್ತಿರಕ್ಕೆ ಅಂದೇ ಸಂಜೆಗೆ ಹೋಗಿ ಅಲ್ಲೊಂದು ಅಶ್ವತ್ಥವೃಕ್ಷದಡಿಯಲ್ಲಿ ಕುಳಿತ.

ಅರ್ಧರಾತ್ರಿಗೆ ಮೀರಿದ ಸಮಯ, ಹಚ್ಚನೆಯ ಹಾಲ್ದಿಂಗಳು ತೆಳುಗಾಳಿಗೆ ಅಲುಗುವ ಮರಗಳೊಡನೆ ಕಣ್ಣುಮುಚ್ಚಾಲೆ ಆಡುತ್ತಿದೆ. ಮರದ ಕೊಂಬೆಗಳ ಸಂದುಗಳಿಂದ ತೂರಿಬಂದ ಬೆಳುದಿಂಗಳ ಬೆಳಕಿನ ಕೋಲು ಸಮಾಧಿಯಲ್ಲಿರುವ ಗೌತಮನ ಮುಖಮಂಡಲವನ್ನು ಮಾತ್ರ ಬೆಳಗಿಸಿದೆ. ಯೋಗಮುದ್ರೆಯಲ್ಲಿ ಮುದ್ರಿತನಾಗಿದ್ದ ಆತನಿಗೆ ಬೆಳದಿಂಗಳೇ ಜ್ಞಾನಜ್ಯೋತಿಯಾಗಿ ಮೆದುಳನ್ನು ಪ್ರವೇಶಿಸಿದಂತಾಯಿತು. ಸಮಾಧಿಯಿಂದ ಎಚ್ಚೆತ್ತು ಕಣ್ತೆರೆದು ನೋಡಿದ. ಅವನ ಮುಖದಲ್ಲಿ ಯಾವುದೋ ಅಪೂರ್ವ ತೇಜಸ್ಸು ಸೂಸುತ್ತಿತ್ತು. ಕಣ್ಣುಗಳಲ್ಲಿ ಕಾಂತಿಯೊಂದು ಮಿರುಗುತ್ತಿತ್ತು. ಅರೆಬಿರಿದ ಮಲ್ಲಿಗೆಯನ್ನು ಹೋಲುತ್ತಿತ್ತು ಅವನ ಮುಗುಳು ನಗೆಯ ಬಾಯಿ. ಏನೋ ಒಂದು ಬಗೆಯ ನೂತನ ಚೇತನವೊಂದು ಸಂಚರಿಸಿದಂತಾಗಿ ಛಂಗನೆ ಜಿಗಿದು ನಿಂತ."ನಾ ಕಂಡೆ !! ನಾ ಕಂಡೆ !! ಬಹುದಿನದ ಬಯಕೆ ಇಂದಿಗೆ ಪೂರ್ಣವಾಯಿತು." ಎಂದು ಕೂಗಿಕೊಳ್ಳುತ್ತಾ ಹೊರಟೇಬಿಟ್ಟ. ಅಂದು ಸಿದ್ಧಾರ್ಥನಿಗೆ ಜ್ಞಾನೋದಯವಾಗಿತ್ತು. ಅಂದೇ ಗೌತಮನು ಬೋಧಿಸತ್ವನಾದ, ಬುದ್ಧನಾದ.

೭

ಹಗಲಿಗೊಂದು ನಗರ, ಇರುಳಿಗೊಂದು ಹಳ್ಳಿ. ಈ ರೀತಿ ಸಾಗಿತ್ತು ಬುದ್ಧದೇವನ ಪ್ರವಾಸ. ಹೋದಡೆಯಲ್ಲೆಲ್ಲಾ ಧರ್ಮಬೋಧೆ ಮಾಡುವುದೇ ಅವನ ನಿತ್ಯಕಾಯಕ. ಅವನ ದಿವ್ಯಬೋಧಾಮೃತ ಪಾನಮಾಡಿದ ಎಷ್ಟೋಮಂದಿ ಅವನ ಅನು ಯಾಯಿಗಳಾದರು. ತನ್ನ ಧರ್ಮದಲ್ಲಿ ಶ್ರದ್ಧೆ ಭಕ್ತಿ ಇದ್ದು ಬಳಿಗೆ ಬಂದವರಿಗೆ ಬುದ್ಧದೇವ ಉಪದೇಶವಿತ್ತ. “ಭಿಕ್ಷು” ಎನ್ನುವ

ನೂತನ ನಾಮಕರಣ ಮಾಡುತ್ತಿದ್ದ. ಉಪದೇಶಿಸುತ್ತಲೇ ಅವರಿಗೆ ಸರಿಯಾದ ಶಿಕ್ಷಣ ಕೊಡುತ್ತಾ, ತನ್ನ ಅಮೃತವಾಣಿಯಿಂದ ಜನಪದದಲ್ಲಿ ನೆಮ್ಮದಿಗೊಳ್ಳುವಂತೆ ಮಾಡುತ್ತಾ, ಭಗವಾನ್ ಬುದ್ಧದೇವನು ಹತ್ತಾರು ಕಡೆ, ನೂರಾರು ಕಡೆ ಸಂಚರಿಸಿದ. ಹೀಗೆ ಪ್ರವಾಸದಲ್ಲಿ ನಿರತನಾಗಿದ್ದಾಗ ಒಂದು ದಿನ ಸಹಸ್ರಾರು ಕುರಿಗಳ ಹಿಂಡು ಹೋಗುತ್ತಿದ್ದುದನ್ನು ನೋಡಿ "ಅಷ್ಟು ಪ್ರಾಣಿಗಳು ಹೋಗುತ್ತಿರುವುದೆಲ್ಲಿಗೆ ? ಏತಕ್ಕೆ ?" ಎಂಬುದಾಗಿ ವಿಚಾರಿಸಿದ. ಶಸ್ತ್ರಸಜ್ಜಿತನಾದ ಓರ್ವ ಸರದಾರನಿಂದ ಉತ್ತರ ಬಂತು – ಅವು ಯಜ್ಞಕ್ಕೆ ಆಹುತಿಗಾಗಿ ಎಂದು. ಬುದ್ಧ ಅವರನ್ನೇ ಹಿಂಬಾಲಿಸಿ ಹೋದ. ನೇರವಾಗಿ ಎಲ್ಲರೂ ಮಗಧ ರಾಜ್ಯದ ಅರಸು, ಬಿಂಬಸಾರನ ಅರಮನೆಗೆ ಹೋದರು. ಅಲ್ಲಿ ಬುದ್ಧದೇವ ಬಿಂಬಸಾರನಿಗೆ ಹಿತೋಪದೇಶ ಮಾಡಿ ಅವನಿಗೆ ಅಹಿಂಸೆಯ ಮಾರ್ಗವನ್ನು ತೋರಿಸಿಕೊಟ್ಟ. ಹರ್ಷಗೊಂಡ ಬಿಂಬಸಾರನು ಪುನೀತನಾದೆನೆಂದು ಭಾವಿಸಿ, ಬುದ್ಧದೇವನಿಗೆ ನಮಸ್ಕರಿಸಿ, ತನ್ನ ರಾಜಧಾನಿಯಾದ ರಾಜಗೃಹದ ವೇಣುವನವನ್ನೆಲ್ಲಾ ಭಿಕ್ಷುಗಳ ವಿಹಾರಕ್ಕಾಗಿ ಬಿಟ್ಟುಕೊಟ್ಟ.

ಶ್ರವಣರ ಸಂಖ್ಯೆ ಬೆಳೆದಂತೆ ಅಲ್ಲಲ್ಲಿ ಭಿಕ್ಷುಗಳ ಸಂಘಗಳೂ ಸ್ಥಾಪಿತವಾಗುತ್ತಿದ್ದುವು. ವಿಶಾಖೆ ಎಂಬುವಳು 'ಪೂರ್ವಾರಾಮ' ಎಂಬ ದೊಡ್ಡ ಪ್ರಸಾದವನ್ನು ಭಿಕ್ಷುಗಳಿಗಾಗಿ ಕಟ್ಟಿಸಿಕೊಟ್ಟಳು. ಶ್ರಾವಸ್ತಿಯ ಜೇತವನವೆಂಬ ವಿಹಾರವನ್ನು ಅನಾಥ ಪಿಂಡಕ (ಸುದತ್ತ)ನೆಂಬುವನು ಬಿಟ್ಟುಕೊಟ್ಟನು. ಅಲ್ಲೇ ಬುದ್ಧದೇವನು ಅಂಗುಲೀಮಾಲನನ್ನು ಕಂಡು ತನ್ನ ಶಿಷ್ಯನನ್ನಾಗಿ ಮಾಡಿಕೊಂಡುದು. ಹಾವು ಕಡಿದು ಸತ್ತಿದ್ದ ತನ್ನ ಏಕಮಾತ್ರ ಪುತ್ರನನ್ನು ಬದುಕಿಸಿಕೊಡೆಂದು ಕೇಳಿದ ಮುಗ್ಧೆ ಕಿಸಾಗೋತಮಿಗೆ "ಸಾವು ಸುಳಿಯದ ಮನೆಯಿಂದ ಸಾಸಿವೆಯನ್ನು ತರಹೇಳಿ" ಅವಳಿಗೆ ಜ್ಞಾನೋದಯವಾಗುವಂತೆ ಮಾಡಿದ್ದು ಅಲ್ಲಿಯೇ. ಕೆಲವೇ ದಿನಗಳಲ್ಲಿ ತನ್ನ ಗಂಡನನ್ನೂ ಮಗುವನ್ನೂ ಕಳೆದುಕೊಂಡು ಬಂದ ಸುಜಾತಳಿಗೆ ಪ್ರವಜ್ಯೆಯನ್ನು ದಯಪಾಲಿಸಿದ್ದೂ ಅಲ್ಲಿಯೇ.

ಅನೇಕ ಕಡೆ ಸಂಚರಿಸಿಕೊಂಡು ಭಗವಂತನು ಒಮ್ಮೆ ಕಪಿಲವಸ್ತುವಿಗೆ ಆಗಮಿಸಿದ. ಬುದ್ಧದೇವನ ದರ್ಶನಾಶೀರ್ವಾದಗಳಿಗೆ ಇಡೀ ನಗರವೇ ಹೋಯಿತು. ಆದರೆ ನಗರಕ್ಕೆ ಆಗಮಿಸಿ ಎರಡು ದಿನಗಳಾಗಿದ್ದರೂ ಯಶೋಧರೆ ಮಾತ್ರ ದರ್ಶನವನ್ನು ಪಡೆಯಲು ಹೋಗಲಿಲ್ಲ. ಸಖಿಯೊಬ್ಬಳು ಕೇಳಿದಾಗ ಹೇಳಿದಳು :

"ತನ್ನದಾಗಿದ್ದ ಪ್ರೀತಿಯ ವಸ್ತುವೊಂದು ಇದೆ ಎಂದು ಭಾವಿಸಿದ್ದರೆ ಅವರೇ ಹುಡುಕಿಕೊಂಡು ನನ್ನ ಬಳಿ ಬರಲಿ" ಎಂದು.

ಬುದ್ಧ ಅದೇ ರೀತಿ ಹುಡುಕಿಕೊಂಡು ಹೋದ. ಹೋಗುವಾಗ ತನ್ನ ಪುಟ್ಟಕಂದ ರಾಹುಲನಿಗೂ ಪ್ರವಜ್ಯೆಯನ್ನಿತ್ತು ಕರೆತಂ ದಿದ್ದ. ಅರಮನೆಯ ಮುಂಭಾಗದಲ್ಲಿ ಭಿಕ್ಷಾಪಾತ್ರೆಯನ್ನು ಹಿಡಿದು ನಿಂತಿದ್ದ ಪತಿ, ಪುತ್ರರನ್ನು ಕಂಡು ಯಶೋಧರೆ ಕುಸಿದು ಬಿದ್ದಳು. ಶುದ್ಧೋಧನ ಮತ್ತು ಪ್ರಜಾಪತಿ ಗೋತಮಿಯರ ದುಃಖ ಹೇಳತೀರದಾಯಿತು. ಇಡೀ ಅರಮನೆಯೇ ಅಂದು ಕಣ್ಣೀರು ಕರೆಯಿತು. ಆದರೆ ಬುದ್ಧದೇವನು ಎಲ್ಲರಿಗೂ ಉಪದೇಶವಿತ್ತು ಸಮಧಾನಪಡಿಸಿದ. ರಾಜನ ರತ್ನಖಚಿತವಾದ ಕಿರೀಟಕ್ಕಿಂತಲೂ ಅವನ ಮುಕ್ತಿಯ ಮಕುಟ ಮಿಗಿಲಾಯಿತು. ಅಲ್ಲಿಯ ಪಟ್ಟೆ ಪೀತಾಂಬರಗಳಿಗಿಂತಲೂ ತನ್ನ ಕಾಷಾಯದುಡೆ ಹೆಚ್ಚು ಮೌಲ್ಯವನ್ನು ಪಡೆಯಿತು. ಯಶೋಧರೆ ಮತ್ತು ಪ್ರಜಾಪತಿ ಗೋತಮಿಯರೂ ಪ್ರವಜ್ಯೆಯನ್ನು ಸ್ವೀಕರಿಸಿದರು. ಭಿಕ್ಷುಣಿಯರ ಸಂಘವೂ ಸ್ಥಾಪಿತವಾಯಿತು. ಒಮ್ಮೆ ಬುದ್ಧಭಗವಂತನ ಭವಿಷ್ಯವಾಣಿ ಹೀಗೆ ನುಡಿಯಿತು :

"ಆನಂದ, ಸ್ತ್ರೀಯರಿಗೆ ಪ್ರವಜ್ಯೆ ದೊರೆಯದಿದ್ದಲ್ಲಿ ಈ ಧರ್ಮ ಬಹುಶಃ ಸಾವಿರ ವರ್ಷಗಳ ಕಾಲ ಉಳಿಯಬಹುದಿತ್ತು. ಆದರೆ ಇಂದು ಸ್ತ್ರೀಯರಿಗೂ ಸನ್ಯಾಸದ ಅಧಿಕಾರ ಕೊಟ್ಟಿದ್ದರಿಂದ ಈ ಸದ್ಧರ್ಮವು ಕೇವಲ ಐದು ನೂರು ವರ್ಷಗಳ ಕಾಲ ಉಳಿಯಬಹುದು."

ದುರ್ದೈವದಿಂದ ಈ ಮಾತು ಸತ್ಯವಾಯಿತು.

೮

ಧಿತ್ತೋಂ ಧಿತ್ತೋಂ ಧಿಗ್ಗಣ ಥೈ !
ಧಿಥೈ ಧಿಥೈ ಧಿದ್ದಿಥೈ !!
ಥೈತಕ ಥೈತಕ ಥೈ ಥೈ ಥೈ !!!
ಧಿಥೈತಕ ಧಿಥೈತಕ ಧಿಥೈತಕ ಥೈ !!!!

"ಭಲೇ ನರ್ತಕಿ ! ಭಲೇ ನಾಟ್ಯಮೋಹಿನಿ !! ಭಲೇ ! ಭಲೇ ! ಇಂದಿಗೆ ನೀನು ನಾಟ್ಯಕಲಾಕೋವಿದೆಯಾದೆ. ನನ್ನ ಶ್ರಮ ಸಾರ್ಥಕವಾಯಿತು. ನಿಜಕ್ಕೂ ನಿನ್ನಂಥ ಕಲಾಕೋವಿದೆಯನ್ನು ಪಡೆದ ನಾನೇ ಪುಣ್ಯಶಾಲಿ !"

"ಅಲ್ಲಲ್ಲ ಗುರುದೇವ, ತಮ್ಮಂಥವರ ಕರುಣೆಗೆ ಪಾತ್ರಳಾದ ನಾನೇ ಭಾಗ್ಯಶಾಲಿ. ಆವಜನ್ಮದ ಸುಕೃತವೊ ತಾವು ಲಭಿಸಿದಿರಿ, ತಮ್ಮ ಅನುಗ್ರಹ ಆಶೀರ್ವಾದಗಳಿಲ್ಲದಿದ್ದರೆ ಈ ಹಿರಿಮೆ ನನಗೆಲ್ಲಿ ದೊರೆಯುತ್ತಿತ್ತು ?"

"ಅಂಬಾಪಾಲಿ, ಅನುಗ್ರಹ ಆಶೀರ್ವಾದಗಳಿಂದಲೇ ಲಭಿಸುವುದಿಲ್ಲ ಕಲೆ. ಅದೂ ಒಂದು ತಪಸ್ಸು. ಸತತ ಸಾಧನೆಯ ಮೂಲಕ ಕಲೆಯನ್ನು ಸಿದ್ಧಿಸಿಕೊಳ್ಳಬೇಕು. ನಿನ್ನ ಅನುಷ್ಠಾನದ ಜೊತೆಗೆ ನಿರ್ಮಲವಾದ ಅಂತಃಕರಣದಲ್ಲಿ ತಲ್ಲೀನತೆ ತುಂಬಿಬರ ಬೇಕು. ಆಗಲೇ ಕಲೆ ವಶವರ್ತಿಯಾಗುವುದು."

"ಏನೋ ಅದೆಲ್ಲ ನನಗೆ ತಿಳಿಯದು ತಂದೆ. ದೈವದತ್ತವಾದ ಪ್ರತಿಭೆಯನ್ನು ತಾವು ಪ್ರಜ್ವಲಿಸುವಂತೆ ಮಾಡಿದಿರಿ, ಇಲ್ಲದಿದ್ದರೆ ಅದು ಮಿಂಚಿನಂತೆ ಮಿಂಚಿ ಮಾಯವಾಗುತ್ತಿತ್ತು ! ಇರಲಿ, ಗುರುದೇವ, ನಾನು ನರ್ತಿಸುವಾಗ  ತಿದ್ದಿಕೊಳ್ಳುವುದೇನಾದರೂ ಇದೆಯೇ ?"

"ಇದೆ – ಇಲ್ಲ. ಅಂಬಾ, ಕಲೆಯಲ್ಲಿ ಪರಿಪೂರ್ಣತೆ ಎನ್ನುವುದು ಸುಳ್ಳು. ಬಹು ಸೂಕ್ಷ್ಮವಾಗಿ ಹುಡುಕುತ್ತಾ ಹೋದರೆ ನಿನ್ನ ನಾಟ್ಯದಲ್ಲಿ ಏಕೆ, ಆ ನಾಟ್ಯದಧಿದೇವತೆಯಾದ ನಟರಾಜನಲ್ಲೂ ದೋಷ ಕಾಣಬಹುದು. ಆದರೆ ನೀನು ಹಾಡುವಾಗ ಹೇಗೆ 'ನಾದಬ್ರಹ್ಮಕ್ಕೆ' ಹೋಗುತ್ತೀಯೊ ಹಾಗೆ ಇಲ್ಲೂ ನರ್ತನದ ತುರಿಯಾವಸ್ಥೆಯಲ್ಲಿ ತನ್ಮಯತೆ ಮೂಡಿ ಬರಬೇಕು. ವಸಂತನರ್ತನ ದಲ್ಲಿ ನೀನು ಪಳಗಿದ ಕೈ. ಅಂಗವಿನ್ಯಾಸ, ಕರಕೌಶಲದಲ್ಲಿ ನೂತನ ಸ್ವರ್ಗವೇ ಮಿಂಚುತ್ತದೆ. ಆದರೆ ಭಕ್ತಿಯಭಾವವಿನ್ನೂ ನಿನ್ನ ಮುಖದಲ್ಲಿ ಅಷ್ಟಾಗಿ ಒಡೆದು ಮೂಡುತ್ತಿಲ್ಲ. ಮನಸ್ಸನ್ನು ಸಂಪೂರ್ಣವಾಗಿ ಮಾರುಗೊಡು. ನಿನ್ನ ಅರ್ಧನಿಮೀಲಿತ ನೇತ್ರಗಳಿಂದ ಭಾವ ಚಿಮ್ಮಿ, ಶಾಂತಿಯ ಸಮಾಧಿಯಲ್ಲಿ ಭಕ್ತಿರಸ ಹೊನಲ್ಹರಿಯಲಿ. . .ಅಂಬಾ, ನಡೆಬೇಗ, ನಟರಾಜನ ಪೂಜೆ ಮುಗಿಸು. ಅಷ್ಟರಲ್ಲಿ ನಾನು ಪ್ರವಚನ ಪೂರ್ಣಗೊಳಿಸಿ ಬರುತ್ತೇನೆ. ವೇಳೆಯಾಯಿತು. ಮಹಾರಾಜರು ನಮಗಾಗಿ ಕಾಯಬಾರದು. ಅವರ ಕಾತುರ ನಿನಗೆ ಗೊತ್ತೇ ಇದೆ."

ನಿತ್ಯದ ಕಾರ್ಯಕ್ರಮಗಳು ಮುಗಿದ ಮೇಲೆ ನಾಟ್ಯಾಚಾರ್ಯ ದೇವದತ್ತ ತನ್ನ ಶಿಷ್ಯೆ ಅಂಬಾಪಾಲಿಯೊಡನೆ ಅರಮನೆಗೆ ನಡೆದ. ಅವರ ಬರವನ್ನೇ ನಿರೀಕ್ಷಿಸುತ್ತಿದ್ದ ಅಜಾತಶತ್ರು ಭವ್ಯತಮ ಸ್ವಾಗತನೀಡಿ ಗುರುವನ್ನು ಉಚ್ಚಾಸನದಲ್ಲಿ ಕೂರಿಸಿ, ಅಂಬಾ ಪಾಲಿಯನ್ನು ಸನಿಹಕ್ಕೆ ಕರೆದ. ಭಕ್ತಿ ವಿಶ್ವಾಸಗಳಿಂದ ಭಾರವಾದ ಹೆಜ್ಜೆಗಳನ್ನಿಡುತ್ತಾ ಅಂಬಾ ನಿಧಾನವಾಗಿ ನಡೆದು, ಅವನ ಬದಿಯಲ್ಲಿ ಮಂಡಿಸಿದಳು. ತನ್ನ ತೋಳತೆಕ್ಕೆಯಲ್ಲಿ ಸೆರೆಹಿಡಿದ ಮಹಾರಾಜ. ಅವಳ ಕೋಮಲ ಕಪೋಲಗಳ ಮೇಲೆ ಕೈ ಆಡಿಸುತ್ತಾ ಕೇಳಿದ –

"ನರ್ತನದಲ್ಲಿ ಹೇಗಿದ್ದಾಳೆ ಗುರುದೇವ ನನ್ನ ಮಯೂರಿ ?"

"ಸಾಕಷ್ಟು ಪರಿಣಿತಳಿದ್ದಾಳೆ. . .ಆದರೆ ಸಾರ್ವಭೌಮ, ಕೇವಲ ಭೋಗದಲ್ಲಿ ಮೈಮರೆತು ಕುಳಿತುಕೊಳ್ಳುವ ಕಾಲ ಇದಲ್ಲ. ಪರರಾಷ್ಟ್ರಗಳ ಅಸೂಯೆಯ ಕಾಳ್ಗಿಚ್ಚು ಮಗಧದ ಸುತ್ತಲೂ ಹಬ್ಬುತ್ತಿದೆ ಎನ್ನುವುದು ನಿನ್ನ ಪರಿವೆಗೆ ಬಂದಂತೆ ಕಾಣುತ್ತಿಲ್ಲ. ರಾಜಗೃಹದ ವೈಭವ ಸಂಪತ್ತುಗಳು ಎಷ್ಟು ಜನ ಶತ್ರುರಾಜರ ಬಾಯಲ್ಲಿ ನೀರೂರಿಸಿದೆ ಗೊತ್ತೆ ? ಅಷ್ಟೇ ಅಲ್ಲದೆ ನೀನು ನಿನ್ನ ತಂದೆ ಬಿಂಬಸಾರನನ್ನು ಸೆರೆಯಲ್ಲಿರಿಸಿದಾಗಿನಿಂದ ರಾಜ್ಯದ ಒಳಾಡಳಿತದಲ್ಲಿ ಸ್ವಲ್ಪ ಬಿಗಿತಪ್ಪಿ ಅಲ್ಲಲ್ಲಿ ಅತೃಪ್ತಿ, ಅಶಾಂತಿ ತಲೆದೋ ರುತ್ತಿವೆ. ಎಷ್ಟೋ ಮಂದಿ ನಿನ್ನ ದಾಯಾದಿಗಳ ಕಣ್ಣು ಕೆಂಪಗೆ ಮಾಡಿಕೊಂಡು ಸಮಯ ಕಾಯುತ್ತಿದ್ದಾರೆ. ಅತ್ತಲೋ ಆ ಬುದ್ಧ ಮುಂತಾದ ಸಂನ್ಯಾಸಿಗಳ ಹಾವಳಿ ಬೇರೆ ಹೇಳತೀರದು. ಮುದುಕನಿಗೆ ಪ್ರವಜ್ಯೆ, ಮದುವೆಯ ಸಮಯದಲ್ಲಿ ತಾಳಿಕಟ್ಟುವವನಿಗೆ ಪ್ರವಜ್ಯೆ, ಹುಟ್ಟುವ ಮಗುವಿಗೂ ಪ್ರವಜ್ಯೆ ! ಹೀಗಾಗಿ ಅವರ ಕಾಟದಿಂದ ರಾಷ್ಟ್ರ ಏನಾಗುವುದೊ ಊಹಿಸಲಿಕ್ಕೂ ಸಾಧ್ಯವಾಗುತ್ತಿಲ್ಲ. ಇದಾವುದನ್ನೂ ಅರಿಯದೆ ಕೇವಲ ಭೋಗದಲ್ಲಿ ಲೋಲುಪ್ತನಾಗಿರುವೆ. ಇದು ಸರಿಯೆನಿಸದು ಅಜಾತ."

"ಗುರುದೇವ, ಬುದ್ಧದೇವ ಅವತಾರಪುರುಷನಂತೆ ! ಹಾಗೆಂದು ಪ್ರಜಾಕೋಟಿಯ ಅಭಿಪ್ರಾಯ. ಮೊನ್ನೆ ಮಂತ್ರಿಮಂಡಲ ದಲ್ಲೂ ಈ ಮಾತು ಬಂದು ಮಹಾತ್ಮ ಬುದ್ಧದೇವನು ಶಾಂತಿದೂತನೆಂದು ತಿಳಿಯಿತು."

"ಶಾಂತಿದೂತ ! ಶಾಂತಿದೂತ !! ಸಾಕು ನಿಲ್ಲಿಸು ಅಜಾತ. ಅದು ನಿನ್ನ ಮತ್ತು ನಿನ್ನಂತೆಯೇ ಆ ಬಡ ಜೋಗಿಯ ಮಾತಿಗೆ ಮರುಳಾದ ಹಲವರ ಮನದ ಭ್ರಾಂತಿ ! ಶಾಂತಿಯಂತೆ ಶಾಂತಿ ! ಕ್ರಾಂತಿ ಇಲ್ಲದೆ ಎಲ್ಲಿಹುದು ಶಾಂತಿ ? ಗುಡುಗು, ಮಿಂಚು, ಸಿಡಿಲು, ಗಾಳಿ, ಮಳೆ ಇವುಗಳ ಆರ್ಭಟವಿಲ್ಲದಿದ್ದರೆ ಹಚ್ಚ ಹಸುರಿನ ಪಚ್ಚೆಯ ಬಯಲಿನ ಚೆಲವು ಹೇಗೆ ದೊರಕೀತು ಹೇಳು

ಅಜಾತಶತ್ರು ? ಶಾಂತಿ ಎನ್ನುವುದು ಕೈಲಾಗದ ಹೇಡಿಗಳ ಒಂದು ಸೋಗು. ವಿಪತ್ತಿನಿಂದ ಪಾರಾಗುವುದಕ್ಕೆ ಅವರು ಮಾಡಿಕೊಂಡ ಸುಲಭ ಮಾರ್ಗ. ಅಂತಹ ಶಾಂತಿಯನ್ನು ಬೆಂಕಿಗೆ ಹಾಕಬೇಕು, ಅಷ್ಟೆ.'

"ಶಾಂತಿಯಿಂದಲೇ ವಿಶ್ವದ ಕಲ್ಯಾಣ ಸಾಧ್ಯ. ಅದೇ ಮಂತ್ರವು ಕೇವಲ ಒಲುಮೆಯಿಂದ ವಿಶ್ವವನ್ನೇ ಗೆಲ್ಲಬಹುದು ಎಂಬುದಾಗಿ ಹೇಳುವ ಮಾತಿನ ಅರ್ಥವೇನು ಗುರುವೆ ?"

"ಅಜಾತ, ನೀನಿನ್ನೂ ಏನೂ ಅರಿಯದ ಹಸುಳೆ. ಕೇಳು, ಆ ಮಾತು ಎಲ್ಲ ಕಾಲಕ್ಕೂ ಎಲ್ಲ ಜನರಿಗೂ ಅನ್ವಯಿಸುವುದಿಲ್ಲ. ಇದು ಚೆನ್ನಾಗಿ ನೆನಪಿನಲ್ಲಿಡು. ಅಲ್ಲದೆ 'ಶಾಂತಿ' ಎಂಬ ಪದವನ್ನೇ ಮರೆತು ನಡೆ ಎನ್ನುವುದು ನನ್ನ ಅಭಿಪ್ರಾಯವಲ್ಲ. ಶಾಂತಿ ಮಂತ್ರವನ್ನು ಪಠಿಸಬಲ್ಲ ನಾಲಗೆ ಕ್ರಾಂತಿ ಕಹಳೆಯನ್ನೂ ಊದುವುದನ್ನು ಮರೆಯದಿರಲಿ. ಸದಾ ಬೇರೆಯವರ ಮೇಲೆ ದುರಾಕ್ರಮಣ ನಡೆಸುತ್ತಾ ನೆತ್ತರಿನ ಕಡಲಿನಲ್ಲಿ ಓಲಾಡಬೇಕೆಂದಲ್ಲ, ಸಮಯ ಬಂದರೆ ಅದಕ್ಕೂ ನಾವು ಸಿದ್ಧವೆನ್ನುವುದನ್ನು ತೋರಿಸಿಕೊಡಬೇಕು. ಮೇಲೆ ಬಿದ್ದು ಹೊಡೆಯುವುದು ನಮ್ಮ ಅಭಿಮತವಲ್ಲದಿದ್ದರೂ, ಮೇಲೆ ಬಿದ್ದವರಿಗಂತೂ ಬುದ್ಧಿಕಲಿಸುತ್ತೇವೆಂಬ ಭೀತಿಯನ್ನಾದರೂ ಇಟ್ಟಿರಬೇಡವೆ ? ಇದು ನನ್ನ ಅಭಿಪ್ರಾಯ. ಅಲ್ಲದೆ ಕುಮಾರ, ಕ್ರಾಂತಿಯಾದರೇನೇ ದೇಶದಲ್ಲಿ ನಿಜವಾದ ಶಾಂತಿ ನೆಲೆಸುವುದು ಮತ್ತು ಶಾಂತಿಯ ಬೆಲೆ ಜನಕ್ಕೆ ಗೊತ್ತಾಗುವುದು. ಹೊಸ ಹೊಸ ಆವಿಷ್ಕಾರ, ಅವತಾರಗಳಿಗೆ ಅದೇ ಮುಖ್ಯ ಸಾಧನ. ಇಲ್ಲವಾದಲ್ಲಿ ಜನಮನ ಬರಡವಾಗಿ, ವಿಷಯಲಾಲಸೆ ಅಥವಾ ಬಾಳಿನ ಬಗ್ಗೆ ಜುಗುಪ್ಸೆ ಇತ್ಯಾದಿಗಳು ಹುಟ್ಟಿ ಇಂತಹ ಸಂಸ್ಥಾನದ ಸಪ್ಪೆ ಜೀವನದಲ್ಲಿ ವಿಶ್ವ ವ್ಯಾಪಾರವೇ ಕಡಿದು ಬೀಳಬಹುದು. ಆಗಬೇಕು ಚಕ್ರವರ್ತಿ, ಆಗಾಗ ಕ್ರಾಂತಿ ಆಗುತ್ತಿರಬೇಕು."

"ಇದ್ದಕ್ಕಿದ್ದಂತೆ ಈ ಶಾಂತಿಯ ಬಿರುಗಾಳಿ ಏಕೆ ಬೀಸಿತು, ನನ್ನ ಗುರುವರ್ಯನ ಮನೋಭೂಮಿಕೆಯಲ್ಲಿ ?"

"ಅಜಾತ, ನಿಜಕ್ಕೂ ನೀನು ಹಸುಳೆ, ಕಂಡರೂ ಕುರುಡನಂತೆ, ಕೇಳಿದರೂ ಕಿವುಡನಂತೆ ವರ್ತಿಸುತ್ತಿರುವೆ. ಅರಮನೆಯ ಅಂದಚೆಂದಗಳಿಗೆ, ರಾಜಭೋಗಾದಿ ಸುಖಸಂಪತ್ತುಗಳಿಗೆ ಬಾಯಿ ಬಾಯಿ ಬಿಡುತ್ತಿರುವ ಆ ಬಡಪಾಯಿ ಜೋಗಿಗಳ, ಆ ಬೌದ್ಧ ಭಿಕ್ಷುಗಳ, ದುರ್ನಡತೆ ನಿನಗೆ ಗೊತ್ತಿಲ್ಲವೆ ? ಸಿಕ್ಕ ಸಾಮಾನುಗಳನ್ನು ಕದಿಯುವುದು, ಅರಿಯದ ಜನಗಳನ್ನು ಮೋಸಗೊಳಿಸು ವುದು, ಅದು ಹೋಗಲಿ. ಆ ಭಿಕ್ಷು ಭಿಕ್ಷುಣಿಯರ ಸಂಘದಲ್ಲಿ ನಡೆಯುತ್ತಿರುವ ಅತ್ಯಾಚಾರ ಅನಾಚಾರಗಳನ್ನು ಕೇಳಿದರೆ ಮೈ ಉರಿದುಹೋಗುತ್ತದೆ. ಇಷ್ಟಾದರೂ ಮೌನದಿಂದಿರುವ ನಿನ್ನನ್ನು ನೋಡಿದರೆ ನಗಬೇಕೊ, ಅಳಬೇಕೊ ಒಂದೂ ತಿಳಿಯದಾಗಿದೆ."

"ಸಮಾಧಾನ, ಗುರುವೇ ಸಮಾಧಾನ. ಸಮಯ ಬರುವವರೆಗೂ ಕಾಯಬೇಕು. ದುಡುಕುವುದು ತರವಲ್ಲವೆಂದು ತಾವೇ ಉಪದೇಶಿಸುತ್ತಿದ್ದಿರಿ. ಈಗ ರಾಷ್ಟ್ರದ ಭದ್ರತೆಯ ಬಗ್ಗೆ ಗುರುಗಳು ಸ್ವಲ್ಪ ಸಮಾಧಾನಚಿತ್ತರಾಗಿ ಆಲೋಚಿಸುವುದಾಗಲಿ !"

"ಆಗಲಿ ಕುಮಾರ, ಎಲ್ಲಾ ಕಾಲದಲ್ಲೂ ಮೈಮರೆತಿರಬೇಡ. ನಿಜಕ್ಕೂ ನಿನ್ನ ಮೇಲಾಗಲಿ, ಅಂಬಾಪಾಲಿಯ ಮೇಲಾಗಲಿ ನನಗೆ ಎಳಷ್ಟೂ ಬೇಸರವಿಲ್ಲ. ಆದರೆ ಕಾರ್ಯ ಕೈಗೂಡದಿದ್ದರೆ ಮನಸ್ಸಿಗೆ ನೆಮ್ಮದಿ ಇರುವುದಿಲ್ಲ. ನಿನ್ನ ಮತ್ತು ರಾಷ್ಟ್ರದ ಹೊಣೆ ನನಗಿರಲಿ. ಪರನಾಡವರಿಗೆ ಮೊದಲು ಸ್ವಲ್ಪ ಬಿಸಿತೋರಿಸಿ ಬುದ್ಧಿ ಕಲಿಸಬೇಕು. ಅನಂತರ ಒಳಾಡಳಿತ ವ್ಯವಸ್ಥೆ."

"ಗುರುಚಿತ್ತ"

"ನಿಮಗೆ ಮಂಗಳವಾಗಲಿ. ನಾನು ಆಶ್ರಮಕ್ಕೆ ಹೋಗಿಬರುತ್ತೇನೆ."

ಅತ್ತ ಗುರುಗಳು ಕಾಲ್ತೆಗೆಯುತ್ತಲೆ ಇತ್ತ ಅಜಾತಶತ್ರು ಚಂಗನೆ ಜಿಗಿದು ನಿಂತ. ಅಂಬಾಪಾಲಿಯ ಸ್ವಯಂಹಸ್ತದಿಂದಲೇ ಕೊಡಲ್ಪಟ್ಟ ಸೋಮರಸವನ್ನು ಪಾನಮಾಡಿ, ಅವಳ ಚೆಂದುಟಿಯ ಚೆಂಜೇನಸವಿಯನ್ನು ಸವಿದು ಉನ್ಮತ್ತನಾಗಿ ಒರಗಿದ.

ಆದರೆ. . .

ದೇವದತ್ತ ಮಾತ್ರ ಮೈಮರೆತವನಲ್ಲ. ಮಗಧರಾಜ್ಯದ ಆಗುಹೋಗುಗಳೆಲ್ಲಾ ಅವನ ಕೈಯಲ್ಲಿದ್ದವು. ರಾಷ್ಟ್ರದ ಭದ್ರತೆಯ ಹೊಣೆಗಾರಿಕೆಯನ್ನು ಹೊತ್ತ ದೇವದತ್ತನ ಕ್ರೂರದೃಷ್ಟಿ ಮೊದಲು ಹರಿದುದು ತನ್ನ ಆಜನ್ಮ ಶತ್ರುವಾದ ಬುದ್ಧನ ಕಡೆ. ಬುದ್ಧನ ಗೌರವ ಪ್ರತಿಷ್ಠೆಗಳಿಗೆ ಧಕ್ಕೆ ತರಲು ತನ್ನ ಶಕ್ತಿಮೀರಿ ಶ್ರಮಿಸಿದ. ಅದಕ್ಕಾಗಿಯೇ ಅಜಾತಶತ್ರುವಿನಲ್ಲಿ ಅಷ್ಟೊಂದು ಅಭಿಮಾನ ಅವನಿಗೆ.

* * * * * *

ಅಂದು ಅಪಮಾನಿತನಾಗಿ, ಕಪಿಲವಸ್ತುವನ್ನು ಬಿಟ್ಟು ಹೊರಟಿದ್ದ ದೇವದತ್ತ ಆತ್ಮಹತ್ಯೆ ಮಾಡಿಕೊಳ್ಳುವಷ್ಟು ದೂರ ಹೋಗಿದ್ದ. ಆದರೆ ಅದು ಹೇಡಿತನವೆನ್ನಿಸಿ ಮಹಾಯೋಗಿಯಾಗಿ ವೈರಾಗ್ಯ ಜೀವನ ನಡೆಸಬೇಕೆಂದು ನಿಶ್ಚಯಿಸಿದ.

ತಪೋಮುದ್ರೆಯಲ್ಲಿ ಅರ ಣ್ಯಮಧ್ಯೆ ಒಂದು ವೃಕ್ಷದಡಿಯಲ್ಲಿ ಕುಳಿತಿದ್ದಾಗ ಬೇಟೆಗಾಗಿ ಬಂದಿದ್ದ ಅಜಾತಶತ್ರುವಿನ ಭೇಟಿ ಅಕಸ್ಮಾತ್ತಾಗಿ ಆಗಿ ಮಗಧ ಅರಮನೆ ಸೇರಬೇಕಾಗಿ ಬಂದಿತು. ಅರಮನೆಯಲ್ಲಿ ಪ್ರಸಿದ್ಧ ವೇಶ್ಯೆ ಅಂಬಾಪಾಲಿಗೆ ನಾಟ್ಯ, ಸಂಗೀತ ಇತ್ಯಾದಿ ಲಲಿತಕಲೆಗಳನ್ನು ಕಲಿಸುವ ಆಚಾರ್ಯನಾಗಿ ಅಜಾತಶತ್ರುವನ್ನು ಒಳಗುಮಾಡಿಕೊಂಡು, ಅವನ ತಂದೆಯಾದ ಬಿಂಬಸಾರನನ್ನು ಸೆರೆಯಲ್ಲಿರಿಸಿದ್ದಷ್ಟೇ ಅಲ್ಲದೆ ಅನೇಕ ಆಪಾದನೆಗಳ ಮೆಲೆ ಭಿಕ್ಷುಗಳನೇಕರನ್ನು ಕೊಲೆಮಾಡಿಸಿದ. ಹಲವು ಬೌದ್ಧವಿಹಾರಗಳಿಗೆ ಬೆಂಕಿ ಇಡಿಸಿದ. ಇಷ್ಟಕ್ಕೆಲ್ಲ ಬುದ್ಧನ ಮೇಲಿದ್ದ ಸೇಡೇ ಕಾರಣ. ಮೊದಲಿನಿಂದಲೂ ಬೆಳೆದುಬಂದಿದ್ದ ಆ ಹೀನ ಬುದ್ಧಿ ಕಡೆಯವರೆಗೂ ಹೋಗಲಿಲ್ಲ. ವಿದ್ಯೆಯಲ್ಲಿ, ಬುದ್ಧಿಯಲ್ಲಿ, ಶೌರ್ಯದಲ್ಲಿ, ಕಲೆಯಲ್ಲಿ, ಕಡೆಗೆ ವೈರಾಗ್ಯದಲ್ಲಿ – ಎಲ್ಲದರಲ್ಲೂ ಬುದ್ಧನಿಗೆ ಸರಿಗಟ್ಟುವ ವ್ಯಕ್ತಿಯಾ ಗಿದ್ದರೂ, ಇದೊಂದು ದೌರ್ಬಲ್ಯ ಅವನ ಇಡಿಯ ಜೀವನವನ್ನೇ ಹಾಳು ಮಾಡಿತು.

ವಿಶ್ವ ಮೈತ್ರಿಯನ್ನು ಸಾಧಿಸಬಯಸಿದ ಬುದ್ಧದೇವನ ಬಂಧುವಾದರೂ, ದೇವದತ್ತ ಅವನಲ್ಲಿ ಒಲವನ್ನು ಅರಸಲಿಲ್ಲ. ಪ್ರತಿಯಾಗಿ ದ್ವೇಷಾಸೂಯೆಗಳನ್ನೇ ಬಲಗೊಳಿಸಿದ. ಹಸುವಿನ ಕೆಚ್ಚಲಲ್ಲಿರುವ ಉಣ್ಣೆ ನೆತ್ತರನ್ನು ಹೀರೀತೇ ವಿನಾ ಹಾಲಿನ ಸವಿಯನ್ನು ಸವಿಯಲಿಲ್ಲ !

೬

ಒಂದು ದಿನ ಅರಮನೆಯ ಪ್ರಾಂಗಣದಲ್ಲಿ ತನ್ನ ಮೂರು ವರ್ಷದ ಹಸುಳೆಯನ್ನು ಆಡಿಸುತ್ತಿದ್ದ ಅಜಾತಶತ್ರು ಬಾಲಲೀಲೆಯಲ್ಲಿ ತಲ್ಲೀನನಾಗಿದ್ದ. ಇದೆಲ್ಲವನ್ನೂ ಈಕ್ಷಿಸುತ್ತಿದ್ದ ಅವನ ತಾಯಿಗೆ ಕಣ್ಣೀರು ಮಿಡಿಯಿತು. ನೀರು ಧಾರಾಕಾರವಾಗಿ ಹರಿಯತೊಡಗಿತು. ಬಿಕ್ಕಿ ಬಿಕ್ಕಿ ಅಳತೊಡಗಿದಳು. ಏಕೋ ಅತ್ತ ತಿರುಗಿದ ಅಜಾತ,

'ಏಕಮ್ಮ ಕಣ್ಣೀರು ?" ಎಂದು ಕೇಳಿದ.

"ಕುಮಾರ, ನೀನು ಮೂರು ವರ್ಷದ ಹಸುಳೆಯಾಗಿದ್ದಾಗ ನಿನ್ನ ತಂದೆಯವರು ಇಷ್ಟೇ ಅಕ್ಕರೆಯಿಂದ ಆಡಿಸಿದ ಆ ದಿನ ಇನ್ನೂ ನನ್ನ ಮನಸ್ಸಿನಲ್ಲಿ ಉಳಿದಿದೆ. ಆದರೆ. . .ಆದರೆ. . .ಮಗು. . .ತಪ್ಪಾಯ್ತು – ಚಕ್ರವರ್ತಿ, ಅಂತಹ ಮಾತೃವಾತ್ಸಲ್ಯಮೂ ರ್ತಿಯಾದ ತಂದೆಗೆ, ಮಗನು ಕೊಟ್ಟಿರುವ ಕಾಣಿಕೆ ಕೈಗೆ ಕಬ್ಬಿಣದ ಬಳೆಗಳು ! ಜನ್ಮಕೊಟ್ಟ ಪಿತನಿಗೆ ಕಾರಾಗೃಹದ ಘೋರ ಶಿಕ್ಷೆ ! ಧರ್ಮಪ್ರಭೋ, ಇದು ಧರ್ಮವೇ ? ವೃದ್ಯಾಪ್ಯದಲ್ಲಿ ಆತ್ಮಶಾಂತಿಯನ್ನು ನೀಗಿಕೊಂಡು ಹಂಬಲಿಸುವಂತೆ ಮಾಡುವುದು ನ್ಯಾಯವೇ ? ನ್ಯಾಮೂರ್ತಿ ?"

"ಇಲ್ಲಿ ನ್ಯಾಯವೂ ಇಲ್ಲ, ಧರ್ಮವೂ ಇಲ್ಲ. ನಾನು ದ್ರೋಹಿ., ನಾನು ಮಹಾದ್ರೋಹಿ. ಕುಹಕ ಕುತಂತ್ರಿಯೋರ್ವನ ಕುಟಿ ಲೋಪಾಯಗಳಿಗೆ ಬಲಿಯಾದ ನಾನು ಮಹಾಪಾತಕಿ. ಮೂರ್ಖ, ವಂಚಕ, ಹೇಡಿ. . .ಈಗ ನನ್ನ ತಂದೆಗಾದ ಗತಿಯೇ ನನಗೂ ಆದರೆ ? ಅಬ್ಬಾ ನೆನೆಯಲಿಕ್ಕೂ ಘೋರ ಅದು. ಅಯ್ಯೋ ! ಈ ಪಾಪಕ್ಕೆ ತಕ್ಕ ಪ್ರಾಯಶ್ಚಿತ್ತ ಯಾವುದು ? ಇರಲಿ, ಅದನ್ನು ಅನುಭವಿಸುವ ಮುನ್ನ ಕಾರ್ಪಣ್ಯದಲ್ಲಿ ಕೃಶನಾಗಿರುವ ತಂದೆಯನ್ನು ಮೊದಲು ಸಂತೈಸಬೇಕು, ಸಂತೈಸಿ ಅಪರಾಧಕ್ಕಾಗಿ ಕ್ಷಮೆ ಯಾಚಿಸಬೇಕು. ಇನ್ನು ತಡಮಾಡಬಾರದು, ತಡಮಾಡಬಾರದು." ಹೀಗೆ ಆಡಿಕೊಳ್ಳುತ್ತಾ ಚಾರನೊಬ್ಬನನ್ನು ಹುಚ್ಚನಂತೆ ಕೂಗಿ ಕರೆದ. ಬೇಗ ತನ್ನ ತಂದೆಯನ್ನು ಸೆರೆಯಿಂದ ಬಿಡುವಂತೆಯೂ ಅವರನ್ನು ಸ್ವಾಗತಿಸಲು ಸಕಲ ಸಿದ್ಧತೆಗಳೊಡನೆ ತಾನು ಬರುವು ದಾಗಿಯೂ ಹೇಳಿಕಳುಹಿಸಿದ. ಅಂತೆಯೇ ತಾನೂ ಹೊರಡಲು ಸಿದ್ಧನಾದ.

ಇತ್ತೀಚೆಗೆ ಅಜಾತಶತ್ರುವಿನ ಬುದ್ಧಿ ಬದಲಿಸಿತ್ತು. ತನ್ನ ಮೋಹದ ಪುತ್ಥಳಿ ಅಂಬಾಪಾಲಿ ಪ್ರವ್ರಜ್ಯೆಯನ್ನು ಸ್ವೀಕರಿಸಿ ಬುದ್ಧನ ಶಿಷ್ಯಳಾಗಿದ್ದಳು. ಬುದ್ಧ ಅಂತಹ ವೇಶ್ಯೆಯ ಮನೆಯಲ್ಲೂ ಭಿಕ್ಷೆಯನ್ನು ಸ್ವೀಕರಿಸಿ ಅವಳಿಗೂ ಪ್ರವಜ್ಯೆಯನ್ನಿತ್ತು ಆಶೀರ್ವದಿಸಿದ್ದ. ದೇವದತ್ತನೇ ಮೋಸದಿಂದ ಕುಜಾತಪಾಲಿ ಮತ್ತು ಚಂದರ ಸಹಾಯದಿಂದ ಬುದ್ಧನಿಗೆ ಮದ್ದಿಕ್ಕಿಸಿದ ವಿಚಾರವೂ ಅವನ ಕಿವಿಗೆ ಬಿದ್ದಿತ್ತು. ಅದರಿಂದಾಗಿ ದೇವದತ್ತನ ಬಗ್ಗೆ ರೋಷ ಭೀಷಣನಾದ ಅಜಾತಶತ್ರು ಅವನು ಸಿಕ್ಕಿದರೆ ಸೀಳಿಬಿಡಬೇಕೆಂದು ಆಲೋಚಿ ಸಿದ್ದ. ಆದರೆ ಇತ್ತೀಚೆಗೆ ದೇವದತ್ತನೂ ಕಾಣೆಯಾಗಿದ್ದ. ಕೆಲವೇ ದಿನಗಳಲ್ಲಿ ಅವನು ಆತ್ಮಹತ್ಯೆ ಮಾಡಿಕೊಂಡನೆಂಬ ವರ್ತಮಾನವು ತಿಳಿಯಿತು. ತಂದೆಯನ್ನಾದರೂ ಕರೆತಂದು ಸಂತೋಷದಿಂದ ತಾಯಿಗೆ ಒಪ್ಪಿಸಬೇಕೆಂದಿದ್ದ ಅವನ ಆಶಾಗೋಪು ರವೂ ಕೆಡೆದುಬಿತ್ತು. ಅಜಾತನು ಬರುವನೆಂಬ ಸುದ್ದಿ ತಿಳಿದು ಬಿಂಬಸಾರ ಉದ್ವಿಗ್ನನಾದನು. ತನ್ನನ್ನು ಕೊಲ್ಲಲಿಕ್ಕೇ ಬರುತ್ತಿರಬಹುದೆಂದು ಭಾವಿಸಿ ಆ ಪಾಪಿ ಮಗನ ಕೈಯಲ್ಲಿ ಹತನಾಗುವುದಕ್ಕಿಂತ ಸಾಯುವುದು ಮೇಲೆಂದು ಬಗೆದು ಮುಂದಿದ್ದ

ಕಲ್ಲುಕಂಬಕ್ಕೆ ಬಲವಾಗಿ ತನ್ನ ತಲೆಯನ್ನು ಹೊಡೆದುಕೊಂಡ. ತಲೆ ಇಬ್ಭಾಗವಾಗಿ ರಕ್ತ ಹರಿದು ಶರೀರ ಕುಸಿದುಬಿತ್ತು. ಈ ಭಯಂಕರ ದೃಶ್ಯವನ್ನು ಕಂಡಮೇಲಂತೂ ಅಜಾತಶತ್ರುವಿನ ಹೃದಯಕ್ರಿಯೆ ನಿಂತಂತಾಯಿತು !!

ಬಹುವಾಗಿ ಕಣ್ಣೀರು ಕರೆದು ಸಾಕಾಗಿ, ಬುದ್ಧದೇವನನ್ನು ಹುಡುಕಿಕೊಂಡು ವೇಳುವನಕ್ಕೆ ನಡೆದ. ಅಲ್ಲಿ ಬುದ್ಧನಿರಲಿಲ್ಲ. ತನ್ನ ಶಿಷ್ಯರೊಡಗೂಡಿ ವೈಶಾಲಿ, ಬೇಲುವ, ಹಸ್ತಿಗ್ರಾಮ, ಜಂಬುಗ್ರಾಮ, ಆಮ್ರಗ್ರಾಮ ಭೋಗನಗರಗಳಲ್ಲಿ ಸಂಚರಿಸಿ ಪಾವಾನಗರಗಳಲ್ಲಿ ಚಂದನ ಮನೆಯಲ್ಲಿ ಆತಿಥ್ಯವನ್ನು ಸ್ವೀಕರಿಸಿ ಅಸ್ವಸ್ಥತೆಯಿಂದ ಕುಸೀನಾರೆಯ ಮಲ್ಲರ ಶಾಲವನಕ್ಕೆ ಹೋಗಿರುವುದಾಗಿ ತಿಳಿದು ಬಂತು. ಮತಿವಿಕಳನಾದ ಅಜಾತಶತ್ರುವು ಅಲ್ಲಿಗೂ ಓಡಿದ. ಆದರೆ ಸಾಲವೃಕ್ಷದಡಿಯಲ್ಲಿ ಮಂಚ ಹಾಕಿಸಿಕೊಂಡು ಪವಡಿಸಿದ್ದ ಭಗವಂತನು ಪರಿನಿರ್ವಾಣದ ದೆಸೆಯಲ್ಲಿದ್ದ. ಅಜಾತಶತ್ರು ಅವನ ಪಾದಗಳನ್ನು ಕಣ್ಣೀರಿನಿಂದ ತೊಳೆದು ಕ್ಷಮಾಯಾಚನೆ ಮಾಡಿದ. ಅಲ್ಲಿ ಆನಂದನಿಂದ ದೇವದತ್ತನ ಕೃತ್ರಿಮದ ವಿಚಾರವೆಲ್ಲವೂ ತಿಳಿದುಬಂತು.

ಬುದ್ಧನ ಅಸ್ತಿತ್ವವನ್ನೇ ಅಳಿಸಿಬಿಡಬೇಕೆಂದು ಸಂಕಲ್ಪಿಸಿದ್ದ ದೇವದತ್ತ ಬೌದ್ಧಭಿಕ್ಷುಗಳಿಗೂ ಬುದ್ಧನಿಗೂ ಆಗಾಗ್ಗೆ ಕೊಡುತ್ತಿದ್ದ ತೊಂದರೆಗಳಿಗಿಂತ ಮತ್ತೊಂದು ಮಹಾ ಕ್ರೂರಕೃತ್ಯಕ್ಕೆ ಕೈಹಾಕಿದ್ದ. ವೇಶ್ಯೆ ಅಂಬಾಪಾಲಿಯ ಸಖಿಯಾದ ಕುಜಾತಪಾಲಿ ಮತ್ತು ತನ್ನ ನೆಚ್ಚಿನ ಶಿಷ್ಯ ಚುಂದ ಇವರನ್ನು ಒಳಗುಮಾಡಿಕೊಂಡು, ಆಸೆತೀರಿಸಿ, ಬುದ್ಧನಿಗೆ ಮದ್ದು ಹಾಕಿಸುವ ಏರ್ಪಾಟು ನಡೆಸಿದ. ಚಂದ ಭಕ್ತಿಯಿಂದ ಬುದ್ಧನನ್ನು ಭಿಕ್ಷೆಗೆ ಆಹ್ವಾನಿಸುವಂತೆ ಸಂಚುಮಾಡಿ, ಅವನ ಮನೆಯಲ್ಲಿ ಕುಜಾತಪಾಲಿ ಮೊದಲೇ ಸಿದ್ಧಪಡಿಸಿಟ್ಟಿದ್ದ "ಸೂಕರ ಮದ್ದವ" ಎಂಬ ಆಹಾರದಲ್ಲಿ ಮದ್ದನಿಟ್ಟು ಕೊಡುವಂತೆ ತಿಳಿಸಿದ. ಅದರಂತೆ ಕಾರ್ಯವೂ ನಡೆದೂ ಹೋಯಿತು.

ಮದ್ದು ತಿಂದ ತಕ್ಷಣ ಬುದ್ಧನಿಗೆ, ಗರಣೆಗರಣೆಯಾಗಿ ರಕ್ತವಾಂತಿಯಾಯಿತು. ಭಗವಂತನ ಅಸ್ವಸ್ಥತೆಗೆ ಭಿಕ್ಷುಗಳೆಲ್ಲರೂ ಭಯಚಕಿತರಾಗಿ ಅವನನ್ನು ಸೇವಿಸತೊಡಗಿದರು. ಆಹಾರದಲ್ಲಿ ಏನೋ ದ್ರೋಹ ನಡೆದಿದೆಯೆಂದು ತಿಳಿದು ಚಂದನ ಮೇಲೆ ಎಲ್ಲರೂ ರೇಗಿಬಿದ್ದರು. ಹಲವರು ಹೊಡೆಯುವುದಕ್ಕೆ ಹೋದರು. ಆದರೆ ಬುದ್ಧದೇವನು ಎಲ್ಲರನ್ನೂ ತಡೆದು ಹೇಳಿದ."ಆನಂದ, ಅವರೆಲ್ಲರಿಗೂ ಸಮಾಧಾನ ಹೇಳು. ಅನ್ಯಾಯವಾಗಿ ಆ ಬಡಪಾಯಿಯನ್ನು ತಪ್ಪು ತಿಳಿದುಕೊಂಡಿದ್ದಾರೆ ಪಾಪ ! ಒಂದು ವೇಳೆ ಮದ್ದು ಹಾಕಿದ್ದರೂ ತಪ್ಪು ಅವನದಲ್ಲ; ಬೇರೊಬ್ಬರದು. ಚಂದ ತಾನೊಬ್ಬನೇ ಇಷ್ಟು ದೂರ ಮುಂದುವರಿಯಲಾರನೆಂದು ನನ್ನೂಹೆ. ಇರಲಿ, ಆ ವಿಚಾರ ಬೇಡ. ಇಷ್ಟು ಮಾತ್ರ ತಿಳಿ – ಅಂದು ನನಗೆ ಬೋಧಿಜ್ಞಾನ ಪ್ರಾಪ್ತವಾದ ದಿನ ಅಂ ದರೆ ಸಿದ್ಧಾರ್ಥನು ಬುದ್ಧನಾದ ದಿನ ಸ್ವೀಕರಿಸಿದ ಸುಜಾತಳ ಪರಮಾನ್ನ ಮತ್ತು ಇಂದು ಈ ಪರಿನಿರ್ವಾಣದ ದಿನ ಚಂದನ ಮನೆಯ ಸ್ವೀಕರಿಸಿದ ಈ ಸೂಕರ ಮದ್ದವ – ಇವೆರಡೇ ನನ್ನ ಬಾಳಿನಲ್ಲಿ ನೆನಪಿಡಬೇಕಾದ ವಸ್ತುಗಳು, ಹಾಗೂ ನೀವು ನೆನಪಿನಲ್ಲಿಡಬೇಕಾದ ದಿನಗಳು. ಆದುದರಿಂದ ನನ್ನ ಬಿಡುಗಡೆಗೆ ಬಂದ ದೇವದೂತ ಈ ಚಂದ ! ಯಾರೂ ಇವನಿಗೆ ತೊಂದರೆ ಕೊಡಕೂಡದು. ಹಿಂದೊಮ್ಮೆ ಹೇಳಿದ್ದನ್ನು ನೆನೆಸಿಕೊ ಆನಂದ. "ಹಾಲೂ ಹಾಲಾಹಲವೂ ಎಲ್ಲವೂ ಆನಂದ !" ಎಂದು ಸಮಾಧಾನಪಡಿಸಿದ.

ಭಗವಂತನ ಊಟ ಅಂದಿಗೆ ಕಡೆಯಾಯಿತು. ಭಿಕ್ಷುಣಿಯರ ಕಣ್ಣೀರು ಕಾಲುವೆಯಾಗಿ ಹರಿಯಿತು ! ಚಂದ ಭಿಕಾರಿಯಾಗಿ ಪರದೇಶಿಯಾದನಂತೆ ! ಕುಜಾತಪಾಲಿ ಹುಚ್ಚಾಗಿ ಬೀದಿಬೀದಿ ಅಲೆಯುತ್ತಾ ಎಲ್ಲೋ ಹೋದಳಂತೆ !!

೧೦

ಸಾಲವನದ ವೃಕ್ಷದಡಿಯಲ್ಲಿ ಭಗವಂತನು ಪವಡಿಸಿದ್ದಾನೆ. ಅವನ ಸುತ್ತಲೂ ಭಿಕ್ಷುಗಳ ಮತ್ತು ಬೌದ್ಧಾಭಿಮಾನಿಗಳ ತಂಡ ನೆರೆದಿದೆ, ಮಲಗಿದ್ದಂತೆಯೇ ಭಗವಂತನು ತನ್ನ ಬೋಧನೆಯನ್ನು ವಿವರಿಸಿ ಹೇಳುತ್ತಿದ್ದಾನೆ. ಇದು ಇತ್ತೀಚೆಗೆ ನಿತ್ಯದ ಪರಿಪಾಠ ವಾಗಿತ್ತು. ಸಾಲವನದಲ್ಲಿ ದಿನೇ ದಿನೇ ಅವನ ದೇಹ ಕೃಶವಾಗುತ್ತಿದ್ದರೂ, ಅವನ ಕಂಠ ಮಾತ್ರ ಕ್ಷೀಣವಾಗುತ್ತಿರಲಿಲ್ಲ. ಮುಖಮಂ ಡಲದಲ್ಲಿ ತೇಜಸ್ಸು ತಾನೇತಾನಾಗಿ ವೃದ್ಧಿಯಾಗುತ್ತಲಿತ್ತು.

"ಓ ನನ್ನ ಪ್ರಿಯಬಂಧುಗಳೇ,

ಈ ಜಗತ್ತಿನ ಸಮಸ್ತ ದುಃಖಗಳಿಗೂ ಆಸೆಯೇ ಮುಖ್ಯ ಕಾರಣ. ಈ ಆಸೆಯಿಂದ ಯಾವನು ವಿಮುಕ್ತನೋ ಅವನೇ ಮುಕ್ತ. ಅವನೇ ಬುದ್ಧ. ಆದುದರಿಂದ ಬಾಳಿನ ಗೋಳಿಗೆ ಕಾರಣೀಭೂತನಾದ ಈ ಆಶಾವೃಕ್ಷವನ್ನು ಬೇರು ಸಹಿತ ಕಿತ್ತೊಗೆ ಯಲು ಸರ್ವರೂ ಶ್ರಮಿಸಬೇಕು. ಮೋಹ ಮದ ಮಮಕಾರಗಳು ದೂರವಾಗಿ, ಸತ್ಯ, ಧರ್ಮ, ಅಹಿಂಸೆಗಳು ಅಲ್ಲಿ ನೆಲೆಗೊಳ್ಳ ಬೇಕು. ಇದೇ ವಿಶ್ವಕಲ್ಯಾಣದ ಏಕೈಕ ಮಾರ್ಗ. ಮೇಲುಕೀಳೆಂಬ ದುರ್ಭಾವನೆಯನ್ನು ದೂರಮಾಡಿ ಎಲ್ಲರೂ ಒಂದು, ಮಾನವ

ಕುಲ ಒಂದು, ಮಾನವ ಧರ್ಮ ಒಂದು ಎಂಬ ಸದ್ಭಾವನೆಯಿಂದ ವರ್ತಿಸಬೇಕು. ಕ್ಷಮೆಯಿಂದ ಕ್ರೋಧವನ್ನೂ, ಸಾಧುತ್ವದಿಂದ ಅಸಾಧುತ್ವವನ್ನೂ, ದಾನದಿಂದ ಕೃಪಣತ್ವವನ್ನೂ, ಸತ್ಯದಿಂದ ಕಾಪಟ್ಯವನ್ನೂ ಗೆಲ್ಲಬೇಕು. ದ್ವೇಷ, ಅಸೂಯೆ, ಮತ್ಸರ ಮುಂತಾದುವನ್ನು ತೆಗೆದೊಗೆದು ಕೇವಲ ಒಲವೊಂದನ್ನು ನೆಲೆಗೊಳಿಸಿಕೊಂಡರೆ ಅದೇ ವಿಶ್ವಾತ್ಮನ ಸೇವೆ ಮಾಡಿದಂತೆ., ಅವನ ಕರುಣೆಗೆ ಪಾತ್ರರಾದಂತೆ. ತನ್ಮೂಲಕ ಲಭಿಸುವ ಪರಿನಿರ್ವಾಣ ಚಿರಂತನ ಕೀರ್ತಿಶ್ರೀ ಪರವಾದದ್ದು.

ಸೋದರರೇ, ಬಹಳ ಮಂದಿ ನನ್ನನ್ನು ಅರ್ಥಮಾಡಿಕೊಳ್ಳದೆ ತಪ್ಪು ತಿಳುವಳಿಕೆಗೆ ಆಸ್ಪದವಾದಂತಿದೆ. ನಾನು ನಾಸ್ತಿಕನಂತೆ ! ಹಾಗಂತೆ !! ಹೀಗಂತೆ !! ಅದೇನೇ ಇರಲಿ, ಇಂದು ನಿಷ್ಕಲ್ಮಷ ಮನೋಭಾವನೆಯಿಂದ ನನ್ನಲ್ಲಿ ಮೂಡಿದ ಅಂಶಗಳನ್ನು ನಿಮ್ಮ ಮುಂದಿಡಲು ಅಪೇಕ್ಷಿಸುತ್ತೇನೆ. ಇದರಿಂದ ನೀವೆಲ್ಲರೂ ಉಪಕೃತರಾದರೆ ನಾನು ಧನ್ಯ.

ಮನಸ್ಸು ಪ್ರಸನ್ನವಾಗಿದ್ದರೆ ಸುಖವು ನೆರಳಿನಂತೆ ಹಿಂಬಾಲಿಸಿ ಬರುತ್ತದೆ. ಆದ್ದರಿಂದ ಕೇವಲ ಸುಖಕ್ಕಾಗಿ ಸದಾ ಹಲುಬಬೇಡಿ.

ವೈರದಿಂದ ವೈರವು ಶಮನವಾಗದು. ಅದು ಪ್ರೇಮದಿಂದಲೇ ಸೋತು ಶಾಂತವಾಗುವುದು. ಈ ಪ್ರೇಮತ್ವವೇ ನಮ್ಮ ಸನಾತನ ಧರ್ಮ. ಇದನ್ನು ಅರಿತು ಆಚರಿಸಿ.

ದುಶ್ಛನ್ನವಾದ ಮನೆಯನ್ನು ಮಳೆಯ ನೀರು ಭೇದಿಸಿಕೊಂಡು ನುಗ್ಗುವಂತೆ ಅಭಾವಿತನ ಚಿತ್ತವನ್ನು ರಾಗವು ಭೇದಿಸಿಬಿಡುತ್ತದೆ. ಅಂತೆಯೇ ಸುಚ್ಛನ್ನವಾದ ಮನೆಗೆ ಮಳೆಯ ಭಯವಿಲ್ಲ, ಸುಭಾವಿತನ ಚಿತ್ತಕ್ಕೆ ರಾಗ ದ್ವೇಷಗಳ ಭಯವಿಲ್ಲ.

ಅಪ್ರಮಾದವು ಅಮೃತತತ್ವಕ್ಕೆ ಹಾದಿ ; ಪ್ರಮಾದವು ಮರಣದ ಹೆಬ್ಬಾಗಿಲು !

ನುಡಿದಂತೆ ನಡೆಯದವನ ಮಾತುಗಳು ಬಣ್ಣವಿದ್ದರೂ ವಾಸನೆಯಿಲ್ಲದ ಹೂವಿನಂತೆ. ಆದ್ದರಿಂದ ನಡೆ ಮತ್ತು ನುಡಿಯಲ್ಲಿ ಸದಾ ಮಡಿಯಾಗಿರಿ ಎಂಬುದೇ ನನ್ನ ಕೋರಿಕೆ.

ನಿನ್ನಂತೆಯೇ ಇತರ ಜೀವಿಗಳಿಗೂ ಜೀವದಾಸೆಯಿದೆ ಎಂಬುದನ್ನು ಮರೆಯಬೇಡ. ನೀನು ಇತರರಲ್ಲಿ ವರ್ತಿಸಿದಂತೆ ಇತರರು ನಿನ್ನ ಬಗ್ಗೆ ವರ್ತಿಸುತ್ತಾರೆ. ಆದ್ದರಿಂದ ನಿನ್ನ ವರ್ತನೆ ಆತ್ಮೀಯವಾಗಿರಲಿ.

ಅನಿಷ್ಕಷಾಯ ಮನಸ್ಸಿನವರು ಕಾಷಾಯವನ್ನು ಧರಿಸಿ ಫಲವಿಲ್ಲ. ಧರ್ಮವಿಲ್ಲದವನ ಮನಸ್ಸಿನಿಂದ ಕಾಷಾಯಕ್ಕೆ ಅವಮಾನ, ವಸ್ತ್ರಾಭರಣಗಳಿಂದ ದೇಹವನ್ನಲಂಕರಿಸಿಕೊಂಡಿದ್ದರೂ, ಶಾಂತನೂ, ದಾಂತನೂ ಆಗಿರುವವನು ಪರಿಶುದ್ಧನಾದ ತಪಸ್ವಿ. ಆದ್ದರಿಂದ ನಿಮ್ಮಲ್ಲಿ ಆಡಂಬರದ ಸನ್ಯಾಸ ಬೇಡ.

ಗೋಪಾಲಕನು ಗೋವುಗಳನ್ನು ಓಡಿಸಿಕೊಂಡು ಹೋಗುವಂತೆ ಜರಾ ಮರಣಗಳು ಆಯಸ್ಸನ್ನು ಓಡಿಸಿಕೊಂಡು ಹೋಗುತ್ತವೆ. ರಾಜರ ರಥಗಳೂ ಕಾಲವಶದಿಂದ ಜರ್ಝರಿತವಾಗುವುವು ; ಅದರಂತೆಯೇ ಯುವಕನ ಶರೀರವೂ ಮುಪ್ಪು ಚಪ್ಪರಿಸಿದಾಗ ಮುದುಡಿಹೋಗುವುದು : ಹಾಗೆ ಮುಪ್ಪಡಿಸಿ ಮುದುಡಿಕೊಳ್ಳದಿರುವುದು ಧರ್ಮವೊಂದೇ. ಅಂತಹ ಚಿರಂತನ ಧರ್ಮ ನಿಮ್ಮ ಪಾಲಿಗಿರಲಿ.

ತನ್ನ ಬಲೆಗೆ ಬಿದ್ದು ತಾನೇ ಪಾಡುಪಡುವ ಜೇಡನಂತೆ ದುರಾಶಾಗ್ರಸ್ತರು ತಮ್ಮ ದುಷ್ಕಾರ್ಯಗಳಿಂದ ತಾವೇ ಕಷ್ಟಕ್ಕೆ ಗುರಿಯಾಗುತ್ತಾರೆ. ನಿಮ್ಮ ಬಾಳಿನ ಹಲವು ನಿದರ್ಶನಗಳ ಮೂಲಕ ಇದರ ಸತ್ಯಾಂಶವನ್ನು ಕಾಣಬಹುದು.

ಹುಟ್ಟಿನಿಂದ ಯಾವನೂ ಬ್ರಾಹ್ಮಣನೆನಿಸಲಾರ ; ತನ್ನ ಆಚರಣೆಯಿಂದ ಬ್ರಾಹ್ಮಣನಾಗಬಲ್ಲ. ರಾಗದ್ವೇಷರಹಿತನಾಗಿ, ದುರಹಂಕಾರದಿಂದ ದೂರನಾದವನು ಬ್ರಾಹ್ಮಣ, ವಿರೋಧಿಗಳ ಮಧ್ಯದಲ್ಲಿದ್ದೂ ದ್ವೇಷರಹಿತನಾದವನು ಬ್ರಾಹ್ಮಣ. ಆಸೆಯನ್ನು ತೊರೆದು ಎಲ್ಲವೂ ಅನಿತ್ಯವೆಂದು ಯಾವನು ಭಾವಿಸಿರುವನೊ ಅವನು ಬ್ರಾಹ್ಮಣ, ಭೋಗವನ್ನು ತ್ಯಜಿಸಿ, ಧ್ಯಾನ ಮಗ್ನತೆಯನ್ನು ಅಪೇಕ್ಷಿಸುವವನು ಬ್ರಾಹ್ಮಣ, ಭೂತದಯೆಯಿಂದ ತುಂಬಿರುವವನು ಬ್ರಾಹ್ಮಣ, ದುಷ್ಕಾರ್ಯಗಳಿಗೆ ಮನಸ್ಸು ಕೊಡದೆ ತ್ರಿಕರಣ ಶುದ್ಧನಾಗಿರುವವನು ಬ್ರಾಹ್ಮಣ, ಅಕ್ರೋಧನೂ, ವ್ರತವಂತನೂ, ಶೀಲವಂತನೂ, ಶಾಂತನೂ ಆಗಿರುವವನೇ ನಿಜವಾದ ಬ್ರಾಹ್ಮಣ. ಇಂತಹ ಬ್ರಾಹ್ಮಣ್ಯ ನಿಮ್ಮಲ್ಲಿ ನೆಲೆಗೊಳ್ಳಲಿ.

ಪಾಪವಿಮುಖನಾಗಿರುವವನು ಬ್ರಾಹ್ಮಣ, ಶಾಂತಪ್ರಿಯನಾಗಿರುವವನು ಶ್ರಮಣ. ನಿಷ್ಕಲ್ಮಷಚಿತ್ತನಾಗಿರುವವನು ಪರಿವ್ರಾಜಕ – ಈ ಮೂರೂ ಮಹಾತ್ಮೆಗಳು ನಿಮ್ಮನ್ನು ಸೇರಲಿ."

ಇದೇ ರೀತಿ ನಿತ್ಯವೂ ಸಾಗುತ್ತಿತ್ತು ತತ್ವಬೋಧೆ. ಅಂದು ಪಾದದಡಿಯಲ್ಲಿ ಬಂದು ಬಿದ್ದಿದ್ದ ಅಜಾತಶತ್ರುವಿಗೂ ಅದು ಲಭಿಸಿತು.

* * * * * * *

ಅಂದೇಕೋ ಭಗವಂತನ ಸ್ಥಿತಿ ತೀರಾ ಹದಗೆಟ್ಟು ಹೋಗಿತ್ತು. ಇಡೀ ಸಾಲವನವೇ ಕಂಗೆಟ್ಟು ಗೋಳಿಡುತ್ತಿರುವಂತೆ ಭಾಸವಾಗುತ್ತಿತ್ತು. ಯಾರ ಮುಖದಲ್ಲೂ ಕಳೆಯಿರಲಿಲ್ಲ. ಆನಂದ ಮಾತ್ರ ಭಗವಂತನ ತಲೆದಿಂಬಿನ ಬಳಿ ಕುಳಿತು ಶುಶ್ರೂಷೆ ಮಾಡುತ್ತಲೇ ಇದ್ದ. ಏನೋ ನೆನಪಿಗೆ ಬಂದು ಅವನ ಕಣ್ಣುಗಳಲ್ಲಿ ನೀರು ಬಳಬಳನೆ ಸುರಿಯತೊಡಗಿತು. ತೊಟ್ಟಿಕ್ಕಿದ ಕಣ್ಣೀರು ಬುದ್ಧದೇವನ ಕಪಾಲವನ್ನು ತೋಯಿಸಿತು. ಸ್ವಲ್ಪ ನಿದ್ರಾವಸ್ಥೆಯಲ್ಲಿದ್ದ ಬುದ್ಧದೇವ ಕಣ್ತೆರೆದು ನೋಡಿದ. ನೆಚ್ಚಿನ ಶಿಷ್ಯ ಆನಂದ ಅಳುತ್ತಿದ್ದಾನೆ ! ಅವನಿಗೆ ನಗು ಬಂತು. ಆಗ ಎಳೆನಗೆಯ ಮಿಂಚೊಂದು ಅವನ ತುಟಿಯ ಮೇಲೆ ಸುಳಿಯಿತು. ತನ್ನ ಹಸ್ತದಿಂದ ನಿಧಾನವಾಗಿ ಆನಂದನ ಕಣ್ಣೀರು ಒರೆಸುತ್ತಾ, 'ಕಣ್ಣೀರಿಗೆ ಕಾರಣ ಏನು ಆನಂದ ? ನಾನು ತೀರಿಹೋಗುತ್ತೇನೆಂದೆ ? ಛೆ, ಅದಕ್ಕಾಗಿ ಕಣ್ಣೀರು ಕರೆಯಬಾರದು. ಇಷ್ಟು ದಿವಸ ಬೋಧನೆಯನ್ನು ಕೇಳಿದ ನೀನೂ ಸಹ ಈ ಮೋಹದಲ್ಲಿ ಬೀಳುವುದೆ ? ಬೇಡ ಆನಂದ, ವಿಶ್ವದ ಸಮಸ್ತ ವಸ್ತುವೂ ಒಂದಲ್ಲ ಒಂದು ದಿನ ಹೋಗಲೇಬೇಕಲ್ಲವೆ ? ಅದನ್ನು ತಿಳಿದೂ ಈ ರೀತಿ ವರ್ತಿಸುವುದು ಯುಕ್ತವಲ್ಲ. ನನಗೀಗಾಲೇ ಎಂಬತ್ತು ವರ್ಷಗಳು ತುಂಬಿವೆ. ಇಷ್ಟು ವರ್ಷಗಳು ಬದುಕಿದ್ದು, ಜೀರ್ಣವಾಗಿರುವ ಈ ದೇಹ ಇನ್ನೆಷ್ಟು ಕಾಲ ತಾನೆ ಇರಬಲ್ಲುದು ಆನಂದ? ಸಂಘದಲ್ಲಿ ಎಲ್ಲರೂ ವಿಶ್ವಾಸವಿಡಿ. ಧರ್ಮದಲ್ಲಿ ಎಲ್ಲರೂ ಶ್ರದ್ಧೆ ಇಡಿ. ಬುದ್ಧನಲ್ಲಿ ಎಲ್ಲರೂ ಭಕ್ತಿ ಇಡಿ. ನಿಮಗೆ ಮಂಗಳವಾಗಲಿ. ಅಜ್ಞಾನ ಅಳಿಯಲಿ, ಜಗತ್ತು ಬೆಳಗಲಿ. . .ಶಾಂತಿ. . ."

ಮಾತು ಮುಗಿಸುತ್ತಿರುವಂತೆಯೇ ಶಾಂತಿದೂತ ಚಿರಶಾಂತಿಯಲ್ಲಿ ಪವಡಿಸಿದ.

'ತಥಾಗತ' ನಾದ, ಅಂದರೆ ಹೇಗೆ ಬಂದನೊ ಹಾಗೆ ಹೋದವನಾದ !"

ಬುದ್ಧಂ ಶರಣಂ ಗಚ್ಛಾಮಿ
ಧರ್ಮಂ ಶರಣಂ ಗಚ್ಛಾಮಿ
ಸಂಘಂ ಶರಣಂ ಗಚ್ಛಾಮಿ

ಸಮೂಹ ಗಾಯನ

ಜಯ ಬುದ್ಧ ಗುರುದೇವ ಜಯ ಬುದ್ಧ ಗುರುದೇವ
ಜಯ ಸಿದ್ಧರಾದಿತ್ಯ ಜಯ ವಿಶ್ವವಂದ್ಯ !!

ಜಯ ಶುದ್ಧ ಚಾರಿತ್ರ್ಯ ಜಯ ಶುಭ್ರ ತೇಜ
ಜಯ ಜಯವು ಜಯ ಜಯವು ಜಯ ಮಂಗಳಾಂಗ
ಜಯ ಜಯವು ಜಯ ಜಯವು ಜಯಕರುಣಪಾಂಗ !!

ಜಯ ಜಯತು ಜಯ ಜಯತು ಜಯಶುದ್ಧ ಬುದ್ಧನೇ
ಜಯ ಜಯತು ಜಯ ಜಯತು ಜಯಶುದ್ಧ ಸಿದ್ಧನೇ !!

ಜಯ ವಿಭೂತಿಯೆ ನಮೋ
ಜಯ ಮನೀಷಿಯೆ ನಮೋ
ಜಯ ಮಾನವ ಪ್ರೇಮಿ ದಲಿತರುದ್ಧಾರಕ
ದೀನ ಬಂಧುವೆ ನಮೋ
ಮಾನವೋ ದಯದ ಹರಿಕಾರ ನಿನಗೆ
ನಮೋ ನಮೋ ನಮೋ ನಮಃ !!

**ಈ ಜಗತ್ತಿನ ದುಃಖಗಳಿಗೆಲ್ಲಾ ಆಸೆಯೇ ಮೂಲ ಕಾರಣ**

**– ಭಗವಾನ್ ಬುದ್ಧದೇವ**

# ಸಾಕ್ರೆಟೀಸ್

೧

**'ಹಾಡು ಹಾಡಲೆ ಹಕ್ಕಿ ಹಾರುತ್ತಲೇ ಹಾಡು**
**ಅರಿವಿನಾಳದ ಅಮರ ಗೀತವನ್ನು :**
**ಬರಿ ನೊರೆಯ ನೂರಾರು ತೆರೆ ಹಾಯ್ದಡೇನಂತೆ**
**ತೊಯ್ಸಲಾರವೊ ನಿನ್ನ ರೆಕ್ಕೆಯನ್ನು !'**

–ಹಾಡುತ್ತಲೇ ಸಾಗುತ್ತಿದ್ದ ಆ ವ್ಯಕ್ತಿ ದಾರಿಯುದ್ದಕ್ಕೂ ಮಂದಿ ಸಿಕ್ಕಾಗ ಮಾತು, ಮಾತಿಲ್ಲದಾಗ ಹಾಡು. ಯಾವಾಗಲೂ ಎಲ್ಲಿ ಹೋದರೂ ಅದೇ ಹಾಡು ಕೇಳಿ ಬರುತ್ತಿತ್ತು. ಅಥೆನ್ಸ್‌ನಗರದ ಅಂಗಡಿ ಬೀದಿಗಳಲ್ಲಿ, ಮಾರುಕಟ್ಟೆಯ ದಿಣ್ಣೆಯಲ್ಲಿ, ಚಿನಿ ವಾರರ ಪೇಟೆಯಲ್ಲಿ, ಕಾರ್ಮಿಕರ ಹಟ್ಟಿಯಲ್ಲಿ, ಎಲ್ಲಿ ನಿಂತರಲ್ಲಿ ಈ ಹಾಡಿನ ಗುಂಗು ಇದ್ದೇ ಇರುತ್ತಿತ್ತು. ಅದು ಇಲ್ಲದಿದ್ದ ಬಳಿ ಮಾತಿನ ಸುರಿಮಳೆ ತಪ್ಪಿದ್ದಲ್ಲ. ಅವನಲ್ಲಿ ಮಾತೆಂದರೆ ಮಾತು. ಆದರೆ ಮಾತಿನ ಮೋಡಿಗೆ ಎಲ್ಲರೂ ಮನಸೋತವರೆ. ಹುಡುಗ ಮೊದಲಾಗಿ ಮುದುಕ ಕಡೆಯಾಗಿ, ಮೇಧಾವಿಯಾಗಲಿ ಇಲ್ಲರೂ ಅವನಸುತ್ತ ಸದಾ ನೆರೆದಿರುತ್ತಿದ್ದರು.

ಅವನು ಹೋದೆಡೆಯೆಲ್ಲಾ ತನ್ನ ಹರಟೆಯ ಅಂಗಡಿಯನ್ನು ಬಿಚ್ಚಿ ಮಾತಿನ ಮುತ್ತುಗಳನ್ನೂ, ಹಾಸ್ಯ ಅಣಕಗಳ ನಾನಾ ರೀತಿಯ ಸರಕುಗಳನ್ನೂ ತೆಗೆಯುತ್ತಿದ್ದ. ಕೇಳಿದ ಅವನ ಪ್ರಶ್ನೆಗೆ ಉತ್ತರ ಕೊಡಲಿ ಬಿಡಲಿ ತಾನು ಮಾತ್ರ ಕೇಳಬೇಕಾದ್ದನ್ನು ಕೇಳಿಯೇ ಕೇಳುತ್ತಿದ್ದ. ಆಡುವ ಮಾತನ್ನು ನಿರ್ದಾಕ್ಷಿಣ್ಯದಿಂದ ಆಡಿಯೇ ಆಡುತ್ತಿದ್ದ. ಅವನು ಅಂಗಡಿಯ ಸಾಲಿಗೆ ಬಂದಾಗ ಒಬ್ಬ ವರ್ತಕನ ಬಳಿ ನಿಂತ. ಪದಾರ್ಥವನ್ನು ತೂಗುತ್ತಿದ್ದ ಆ ವರ್ತಕನನ್ನು ಕುರಿತು, 'ಏನು ಸ್ವಾಮಿ, ಹೇಗಿದೆ ವ್ಯಾಪಾರ' ಅಂದ. ಅದಕ್ಕೆ 'ಹೋಗೋ ಹುಚ್ಚ' ಎಂದು ಉತ್ತರ ಬಂತು. 'ಹುಚ್ಚ ! ಹೌದು ವರ್ತಕ ಮಹಾಶಯ ನಾನು ಹುಚ್ಚನೆ ? ಆದರೆ ನಿನ್ನ ತಕ್ಕಡಿ ಸ್ವಲ್ಪ ಸರಿಯಾಗಿರಲಿ. ತೂಕ ತಪ್ಪಿದ ತಕ್ಕಡಿತಟ್ಟೆ ಮೇಲೆ ಹೋಗ್ತಿದೆ. ಅದಕ್ಕೆ ಸ್ವಲ್ಪ ಷೇರು ಕಟ್ಟಿಕೊ, ಇಲ್ಲದಿದ್ದರೆ, ಬಹಳ ಕಷ್ಟ ಈ ಕಾಲದಲ್ಲಿ. ಈ ಮೂಢ 'ಹುಚ್ಚ' ಅನ್ನೋ ಪದಾರ್ಥವನ್ನು ತೆಗೆದುಕೊಂಡ ಅಂತಾ ಬೇರೊಬ್ಬ ತೆಗೆದುಕೊಳ್ಳಲಾರ ತಿಳಿಯಿತೇ ?' ಅಂದ ಆ ವ್ಯಕ್ತಿ.

ಆ ಮಾತಿನ ಅರ್ಥ ಹಲವರಿಗೆ ಆಯಿತು. ತಿಳಿಯದವರು ಸುಮ್ಮನೆ ನಕ್ಕರು.

ಮಾರಕಟ್ಟೆಯ ಮೂಲೆಯಲ್ಲಿ ಒಬ್ಬ ಮೋಚಿ ಕುಳಿತಿದ್ದ. ಅವನ ಮುಂದೆ ನುಣುಪಾದ ಕಲ್ಲು, ಚರ್ಮದ ಚೂರುಗಳು, ಮೇಣ, ಉಳಿ, ಸುತ್ತಿಗೆ, ಮೊಳೆ, ಪಕ್ಕದಲ್ಲಿ ಒಂದು ನೀರಿನ ಬಾನಿ, ಮಸೆಗಲ್ಲು, ಬಾನಿಯಲ್ಲಿ ಚರ್ಮದ ಪತ್ರವೊಂದು ನೆನೆಯುತ್ತಿತ್ತು. ಅದನ್ನು ನೋಡಿ, "ಹೌದು ತಮ್ಮ, ಅದು ಹದವಾಗಬೇಕು. ಹದವಾದರೇನೇ ಮತ್ತೆ ಬಡಿದ ಮೊಳೆ ಸುಲಭವಾಗಿ ನೆಡುವುದು. ಇಲ್ಲವಾದರೆ ಪಡೆದವನಿಗೆ ನಷ್ಟ. ಬಡಿದವನ ಶ್ರಮ ವ್ಯರ್ಥ" ಎಂದು ತನ್ನ ಎದೆ ಮುಟ್ಟಿಕೊಂಡು ಹೇಳಿದ. ಆ ವ್ಯಕ್ತಿಯನ್ನೇ ತೆರೆದ ಬಾಯಿ ತೆರೆದಂತೆ, ಬಿಟ್ಟ ಕಣ್ಣು ಬಿಟ್ಟಂತೆ ನೋಡುತ್ತಾ ಕುಳಿತ ಆ ಮೋಚಿ.

ರಥ ಮುಂದೆ ಸಾಗಿತು. ಸುತ್ತಲೂ ನೂರಾರು ಜನ ಯುವಕರು ಯಾವಾಗಲೂ ತುಂಬಿರುತ್ತಿದ್ದರು. ರಸ್ತೆಯ ಮಧ್ಯೆ ಮಧ್ಯೆ ಈ ಗುಂಪಿನಲ್ಲಿ ಹಲವರು ಬಂದು ಸೇರುತ್ತಿದ್ದರು. ಹಲವರು ಬಿಡಲಾರದ ಮನಸ್ಸಿನಿಂದ ಕಾರ್ಯನಿಮಿತ್ತದಿಂದ ಹೋಗುತ್ತಿದ್ದರು. ಆದರೂ ಬಂದು ಸೇರುವವರೇ ಬಹಳ ಮಂದಿ.

ಬಿಸಿಲು ಏರುವ ಹೊತ್ತಿಗೆ ಕುಂಬಾರಕೇರಿ ಸಿಕ್ಕಿತು. ಒಬ್ಬ ಕುಂಬಾರನ ಮನೆಯ ಮುಂದೆ ಮಡಕೆ ಕುಡಿಕೆಗಳು ನಾನಾ ರೀತಿಯ ಯೋಗಾಸನದಲ್ಲಿದ್ದವು ! ಎಲ್ಲವೂ ಹೆಚ್ಚಾಗಿ ಶಿರಸಾಸನದಲ್ಲಿ ಗಂಭೀರವಾಗಿದ್ದವು. ಅಂಗಳದಲ್ಲಿ ತಿರುಗುತ್ತಿದ್ದ ಚಕ್ರ ದಲ್ಲಿ ಹಲವು ನುಣ್ಣನೆಯ ಮಣ್ಣಿನ ಹಸಿಯ ಮಡಕೆಗಳು ಮೇಲೇಳುತ್ತಿದ್ದುವು. ಕುಂಬಾರ ತೆಗೆಯುತ್ತಿದ್ದ, ತೆಗೆದು ತಿರುವುತ್ತಿದ್ದ. ಪಕ್ಕದಲ್ಲಿದ್ದ ಮತ್ತೊಬ್ಬ ಅವುಗಳನ್ನು ತಟ್ಟಿತಟ್ಟಿ ಸರಿಪಡಿಸುತ್ತಿದ್ದ. ಇದೇ ರೀತಿ ಸಾಗುತ್ತಿತ್ತು ಅಲ್ಲಿಯ ವ್ಯಾಪಾರ. 'ಭೇಷ್ ! ನನ್ನ ದೊರೆ, ತಿರುಗುವ ಚಕ್ರದಲ್ಲಿ ಆಕೃತಿಗಳು ಮೂಡಬೇಕು. ಮೂಡಿದ ಆಕೃತಿವಿಶೇಷಗಳನ್ನು ತೆಗೆದಿಡುವ ನೀನೂ ಬೇಕು. ಅಂದ ಮಾಡಿಡಲು ಅವನೂ ಬೇಕು. ಆದರೆ ತಟ್ಟುವಾಗ ಎಚ್ಚರ ತಮ್ಮ, ಕೈತಪ್ಪಿ ಅನಾಹುತವಾದೀತು ! ' ಎನ್ನುತ್ತಲೇ ಮುಂದೆ ಸಾಗಿದ ಆ ವ್ಯಕ್ತಿ.

ಕೇರಿಯ ಜನವೆಲ್ಲಾ ಅವನನ್ನೇ ನಿಟ್ಟಿಸುತ್ತಿತ್ತು. ಮನೆಯೊಳಗೆ ತಮ್ಮ ತಮ್ಮ ಕೆಲಸಗಳಲ್ಲಿ ನಿರತರಾಗಿದ್ದ ಹೆಂಗಸರು ಬೀದಿಯಲ್ಲಿ ಇವನ ಹೆಸರು ಕೇಳಿದ ಕೂಡಲೇ ಅರ್ಧಕ್ಕೇ ನಿಲ್ಲಿಸಿ ಓಡಿಬರುತ್ತಿದ್ದರು. ಇವನೇನು ಚೆಲುವನೇ ನೋಡುವುದಕ್ಕೆ ? ಛೆ ! ಎಂದಿಗೂ ಅಲ್ಲ. ಅವನೋ ಅವನ ರೂಪೋ ! ಅವನನ್ನು ಸೃಷ್ಟಿಸಿದ ಬ್ರಹ್ಮನಿಗೇ ಪ್ರೀತಿ ! ದಪ್ಪಮೂಗಿನ, ಬೊಜ್ಜು ಹೊಟ್ಟೆಯ, ಉಬ್ಬುಗಣ್ಣಿನ, ಗಿಡ್ಡದೇಹದ ವಿಕಾರಮೂರ್ತಿ. ಬಾಯ ಕೆಳಗೆ ಇಳಿಯಬಿದ್ದಿದ್ದ ಜೋಲುತುಟಿ ಉಯ್ಯಾಲೆಯ ಮಣೆಯನ್ನು ಹೋಲುತ್ತಿತ್ತು. ಬಿರುಗಾಳಿಗೆ ಸಿಕ್ಕಿ ಮುರಿದುಬಿದ್ದ ಒಂದು ದಪ್ಪನಾದ ಜಾಲಿಮರದ ಬುಡದಂತೆ ಕಂಗೊಳಿಸುತ್ತಿತ್ತು ಅವನ ದೇಹ ಸೌಂದರ್ಯ. ಸೊಂಟಕ್ಕೆ ಬಿಗಿದಿದ್ದ ಒಂದು ತುಂಡು ದಟ್ಟಿಯೇ ಅವನ ಸರ್ವಸಂಪತ್ತು ! ಬಿಸಿಲು ಬಿದ್ದರೂ ಮಳೆ ಹೊಯ್ದರೂ ಅವನ ಬೆನ್ನು ಅರಿವೆಯನ್ನು ಕಂಡಿರಲಿಲ್ಲ. ಬಂತೆ ಬಂತೆಯಾದ ಅವನ ತಲೆ ಎಣ್ಣೆಯನ್ನು ಮುಟ್ಟಿರಲಿಲ್ಲ, ಅವನ ಕಾಲು ಮೆಟ್ಟುಗಳನ್ನು ಹರಿದಿರಲಿಲ್ಲ. ಬಿಸಿಲಲ್ಲಿ ಬೆವರಿದ ಮೈ ಎಣ್ಣೆ ಹಚ್ಚಿಕೊಂಡಂತೆ ಕಾಣುತ್ತಿತ್ತು. ಯಾವುದಾದರೂ ಒಂದು ಮರದಡಿಯಲ್ಲಿ ಅವನು ಕುಳಿತರೆ ಅವನ ಬೊಜ್ಜುಹೊಟ್ಟೆ ಅವನ ತೊಡೆಗಳ ಮೇಲೆ ಸ್ವಸ್ಥವಾಗಿ ಮಲಗಿರುತ್ತಿತ್ತು. ಅದರ ಮೇಲೆ ಕೈ ಆಡಿಸಿ ಒಮ್ಮೆ ತೀಡಿದರೆ ಬರುತ್ತಿತ್ತು ಒಂದು ಗಣಪತಿಯನ್ನು ಮಾಡುವಷ್ಟು ಮುದ್ದೆಮಣ್ಣು ! ಅವನ ಮಾತು ಕೇಳಲು ಬಲುಹಿತ. ಆದರೆ ಹತ್ತಿರದಲ್ಲಿದ್ದರೆ ಅಪಾಯ ! ಆಗಾಗ ಅವನ ಬಾಯಿಂದ ತೀರ್ಥ ಪ್ರೋಕ್ಷಣೆ ಆಗುತ್ತಿತ್ತು ! ಆ ದಿನ ಸಂಜೆ ವೇಶ್ಯೆಯರ ಕೇರಿಯಲ್ಲಿ ಅವನು ಬರುತ್ತಿದ್ದಾಗ, ಓರ್ವ ತುಂಬು ಹರೆಯದ ತರುಣಿ ಕೇಳಿದಳು :"ತತ್ವಜ್ಞಾನಿಗಳೇ ಸೌಂದರ್ಯ ಎಂದರೇನು ?"

'ಅದು ಮಾನವನ ಮನಸ್ಸಿನ ಭಾವನಾವಿಶೇಷ'

'ಹಾಗಾದರೆ ಪ್ರಪಂಚದಲ್ಲಿ ಸುಂದರ ವಸ್ತು ಯಾವುದು ?'

'ನಾನು !!'

ಎಲ್ಲರೂ ಘೊಳ್ಳನೆ ನಕ್ಕರು. ಅಷ್ಟಾವಕ್ರಪ್ರಾಣಿ ತಾನು ಸುಂದರವೆಂದು ಹೇಳಿಕೊಂಡದ್ದು ಎಲ್ಲರಿಗೂ ನಗೆಯನ್ನು ತಂದಿತು. ಆ ಸುಂದರ ಯುವತಿಯ ಜೊತೆಯಲ್ಲಿದ್ದ ಇನ್ನಿತರ ತರುಣ ಹಾಗೂ ಮುದಿ ವೇಶ್ಯೆಯರೂ ಬಿದ್ದು ಬಿದ್ದು ನಕ್ಕರು. ಆ ಯುವತಿಯ ಮುಖ ಪೆಚ್ಚಾಯಿತು. ಬಹುಶಃ, ಆಕೆ ಸೌಂದರ್ಯವನ್ನು ನೋಡಿ ಮೆಚ್ಚುವನೆಂದು ತಿಳಿದಿದ್ದಳೋ ಏನೊ. ನಗುವಿನ್ನೂ ಅಲೆಅಲೆಯಾಗಿ ಅಲ್ಲಲ್ಲಿ ತೇಲುತಿತ್ತು : ಮತ್ತೆ ಪ್ರಶ್ನಿಸಿದಳು ಆ ಯುವತಿ :

'ಸಾಕ್ರೆಟೀಸ್ ಅದು ಹೇಗೆ ? '

'ನೋಡು ಮಗು, ನನ್ನ ಮೂಗು, ನನ್ನ ಕಣ್ಣು, ನನ್ನ ಕೈಕಾಲು ಇತ್ಯಾದಿ ಎಲ್ಲ ಅಂಗಾಂಗಳೂ ತಮ್ಮ ತಮ್ಮ ಕೆಲಸಗಳನ್ನು ಚಾಚೂ ತಪ್ಪದೆ ಸರಿಯಾದ ರೀತಿಯಲ್ಲಿ ನಡೆಸಿಕೊಂಡು ಹೋಗುತ್ತಿದೆ. ಆದ್ದರಿಂದ ಅವು ಸುಂದರ. ಅದೇ ರೀತಿ ಯಾವ ವ್ಯಕ್ತಿ ತನ್ನ ಕರ್ತವ್ಯದಿಂದ ಚ್ಯುತನಾಗದೆ ನಡೆಸಿಕೊಂಡು ಹೋಗುತ್ತಾನೊ ಅವನೇ ಸುಂದರ ಪುರುಷ. ಅದಕ್ಕಾಗಿ ನಾನು ಸುಂದರನೆಂದೆ ! ಇದರಲ್ಲಿ ನಗುವ ವಿಷಯವೇನೂ ಇಲ್ಲ' ಎಂದು ತಾನೂ ನಕ್ಕ.

ಅಥೆನ್ಸಿನ ಜನರು ಬಹುವಾಗಿ ಯುವಕರು ಅವರನ್ನು ಹಿಂಬಾಲಿಸುತ್ತಿದ್ದುದು ಈ ಮಾತಿನ ಮಲ್ಲಿಗೆಗಳಿಗಾಗಿ. ಅವನ ಸೌಂದರ್ಯಕ್ಕಲ್ಲ, ಅಥವಾ ಅವನಲ್ಲಿದ್ದ ಸಿರಿಸಂಪತ್ತಿಗೂ ಅಲ್ಲ ! ಅವನು ಬಾಯಿ ತೆರೆದರೆ ಆವುದೋ ಒಂದು ವಿಶಿಷ್ಟಲೋಕದ ಮಹಾದ್ವಾರ ತೆರೆದಂತಾಗುತ್ತಿತ್ತು. ಮಾತಿಗೆ ಮೊದಲು ಮಾಡಿದರಂತೂ ಶ್ರೋತೃಗಳಿಗೆ ಆ ಭವ್ಯಲೋಕಕ್ಕೆ ಪ್ರವೇಶಿಸಿದಂತಾಗುತ್ತಿತ್ತು. ಅವರು ಅಲ್ಲಿ ಕಂಡದ್ದೆಲ್ಲವೂ ಕಾಮಧೇನು, ಮುಟ್ಟಿದ್ದೆಲ್ಲವೂ ಪರುಷಮಣಿ, ಕೇಳಿದ್ದೆಲ್ಲವೂ ಕಿನ್ನರಗೀತ ! ಹಸಿವು ನೀರಡಿಕೆಗಳೂ ಸಹ ಮರೆತುಹೋಗುತ್ತಿದ್ದವು. ಬಾಳಿನ ಕಷ್ಟ–ಸಂಕಷ್ಟಗಳಂತೂ ಅಲ್ಲಿ ಸುಳಿಯುತ್ತಲೇ ಇರಲಿಲ್ಲ. ಆ ಲೋಕವನ್ನು ಪ್ರವೇಶಿಸಿದವನು ನಿಜಕ್ಕೂ ಅಮೃತ ಕುಡಿದು ಅಮರನಾಗಿಯೇ ಹಿಂತಿರುಗುತ್ತಿದ್ದ.

ಬೈರಾಗಿಯಂತೆ ಕಂಡರೂ ಅವನು ಸನ್ಯಾಸಿಯಾಗಿರಲಿಲ್ಲ, ಸಂಸಾರಿಯಾಗಿದ್ದ. ಎಲ್ಲರಂತೆ ಅವನಿಗೂ ಒಂದು ಸಂಸಾರವಿತ್ತು. ಒಬ್ಬಳೇಕೆ ಇಬ್ಬರು ಹೆಂಡಂದಿರಿಗೆ ಅವನು ಗಂಡನಾಗಿದ್ದ ; ಮೂರು ಮಕ್ಕಳಿಗೆ ತಂದೆಯಾಗಿದ್ದ ; ಮುರುಕು ಮನೆಯೊಂದಕ್ಕೆ ಒಡೆಯನಾಗಿದ್ದ. ಆದರೂ ಇವುಗಳ ಪರಿವೆಯೇ ಇಲ್ಲ ಅವನಿಗೆ. ಬೇಜವಾಬ್ದಾರಿ ಮನುಷ್ಯನಾಗಿ ಬೀದಿ ಬೀದಿ ಅಲೆಯುತ್ತ ನಿತ್ಯಬೋಧನೆಯ ಕಾರ್ಯದಲ್ಲಿ ನಿರತನಾಗಿರುತ್ತಿದ್ದ. ಅವನು ಮಾಡಿದ್ದು ಅಲ್ಪ, ಆಡಿದ್ದು ಕಲ್ಪ ! ಎಲ್ಲಿ ಅಂದರೆ ಅಲ್ಲಿ, ಯಾರು ಅಂದರೆ ಅವರೊಡನೆ ಬೋಧೆ ಅಥವಾ ತತ್ವ ಜಿಜ್ಞಾಸೆಯಲ್ಲಿ ತೊಡಗಿರುತ್ತಿದ್ದ. ಇಂತಹ ಮಹಾಶಯನ ಮನೆಯನ್ನು ಬಿಟ್ಟು ಬಡತನ ಬೇರೆಲ್ಲಿ ಹೋದೀತು ಪಾಪ ! ಸದಾ ಅವನ ಮನೆಯಲ್ಲಿ ವಾಸವಿರುತ್ತಿತ್ತು ; ಹೆಂಡಿರು ಮಕ್ಕಳನ್ನು ಸದಾ ಕಾಡುತ್ತಿತ್ತು.

ಈ ಮಾತಿನಮಲ್ಲ ಅಥೆನ್ಸ್ ನಗರದಲ್ಲಿ ಯಾರಿಗೂ ಅಪರಿಚಿತನಲ್ಲ. ಒಂದು ಪುಟ್ಟ ಮಗುವೂ ಸಹ ಹೇಳುತ್ತಿತ್ತು. ಅವನ ತಲೆಯಲ್ಲಿ ಎಷ್ಟು ಕೂದಲುಗಳಿವೆಯೆಂದು ! ಅವನ ಮನೆಯ ಜಂತೆಗಳೆಷ್ಟೆಂದು ಒಬ್ಬ ತಿರುಕನಿಗೂ ಗೊತ್ತಿತ್ತು ! ಬಹಳ ಜನರು ಅರಿತಿದ್ದರು ಅವನ ಹೆಂಡತಿ ಮಕ್ಕಳು ವಾರಕ್ಕೆ ಎಷ್ಟು ದಿನ ಏಕಾದಶಿ ಮಾಡುತ್ತಾರೆಂದು ! ಥೀಬ್ಸ್ ನಗರದ ಕಡೆ ಇರುವ ಕಣಿವೆಯ ಬಳಿ ಹೋಗಿ ಗಿಡಮರಗಳನ್ನು ಕೇಳಿದರೂ ಹೇಳುತ್ತಿದ್ದುವು ಅವನ ಹೆಸರು 'ಸಾಕ್ರೆಟೀಸ್' ಎಂದು. ಅವನನ್ನು ಅರಿಯದ ಜನರೇ ಇರಲಿಲ್ಲ. ಅವನನ್ನು ನೋಡದ ಕಣ್ಣುಗಳಿರಲಿಲ್ಲ ; ತತ್ವವನ್ನು ಕೇಳದ ಕಿವಿಗಳಿರಲಿಲ್ಲ ; ನುಡಿಸದ ನಾಲಗೆಗಳಿರಲಿಲ್ಲ ಆ ಅಥೆನ್ಸ್ ನಗರದಲ್ಲಿ. ಅಷ್ಟೇಕೆ ಆ ನಗರವಲ್ಲದೆ ಬೇರೆ ಬೇರೆ ರಾಷ್ಟ್ರಗಳವರೆಗೂ ಅವನ ಕೀರ್ತಿ ಹಬ್ಬಿತ್ತು. ಥೀಬ್ಸ್, ಮೆಗಾರ, ಸೈರೆನೀ, ಈಲೀಸ್ ಇತ್ಯಾದಿ ರಾಷ್ಟ್ರಗಳಿಂದಲೂ ಜನ ಅಥೆನ್ಸಿಗೆ ಬರುತ್ತಿತ್ತು. ತತ್ವ, ಧರ್ಮ, ಸತ್ಯ ಮುಂತಾದ ವಿಚಾರಗಳಲ್ಲಿ ಜಿಜ್ಞಾಸೆ ನಡೆಸಿ ಸಾಕಷ್ಟು ತೃಪ್ತಿಗೊಂಡು ಹಿಂತಿರುಗುತ್ತಿತ್ತು.

ಇಂತಹ ಜನಾನುರಾಗಿಯಾದ ಮಹಾಮಹಿಮ ಸಾಕ್ರೆಟೀಸ್ ತನ್ನಲ್ಲಿದ್ದ ಅದ್ಭುತ ಪ್ರತಿಭಾಜ್ಯೋತಿಯ ದಿವ್ಯಪ್ರಭೆಯನ್ನು ಜಗತ್ತಿಗೆ ಬೀರಿ ಆ ಜ್ಯೋತಿರ್ವಲಯದಲ್ಲಿ ಲಯನಾಗಿದ್ದಾನೆ. ಮುಕ್ತಿಯ ಮಹೋನ್ನತ ಶಿಖರವನ್ನು ತಾನು ಏರಿ ಜಗದ ಜನತೆಯನ್ನು ತನ್ನತ್ತ ಸೆಳೆದು ಅಲ್ಲಿಗೆ ಕೊಂಡೊಯ್ವ ಮುನ್ನವೇ ಪರಂಧಾಮವನ್ನೈದಿದ್ದಾನೆ. ಆದರೂ ಅವನ ವಾಣಿ ಅಮರವಾಗಿ, ಅಮೃತಸೇಚನೆಯಾಗಿ ಆಧ್ಯಾತ್ಮ ಬಂಧುಗಳ ಅಂತರಂಗದಲ್ಲಿ ನಿತ್ಯನೂತನ ವಿರಾಜಮಾನವಾಗಿ ರಾರಾಜಿಸುತ್ತಿದೆ. ಆತನಲ್ಲಿದ್ದ ಆ ಅತ್ಯತ್ಭುತ ಅಲೌಕಿಕ ಪ್ರತಿಭೆ ಅವನಿಗೆ ಕೀರ್ತಿ ತಂದರೂ, ಅವನ ಧಾರ್ಮಿಕ ಧೋರಣೆ ಅಥವಾ ಅವನು ನಡೆದ ಸತ್ಯಧರ್ಮಗಳ ಮಾರ್ಗ ಅವನನ್ನು ಮರಣದೆಡೆಗೆ ಕರೆದೊಯ್ದಿದೆ. ವಿಚಾರಹೀನ ಜಗತ್ತಿಗೆ ವಿವೇಕ ಹೇಳಹೋದದ್ದೇ ಅವನು ಮಾಡಿದ ಮಹಾಪರಾಧ ! ಅದಕ್ಕಾಗಿ ಅಥೆನ್ಸ್ ನಗರ ಅವನ ತುಟಿಗೆ ವಿಷದ ಬಟ್ಟಲನ್ನಿತ್ತು ಅವನ ಬಾಳಿಗೆ ಅಮೃತದ ಕಳಶವನ್ನು ದಯಪಾಲಿಸಿತು !

೨

ಅಥೆನ್ಸ್ ನಗರದ ಆ ಚಿಕ್ಕ ಗಲ್ಲಿಯಲ್ಲಿ ಅಂದು ಸಂಭ್ರಮದ ಒಸಗೆ ! ಆ ಓಣಿಯ ಪಕ್ಕದ ಬೀದಿಯ ಜನವೆಲ್ಲ ಬಹಳ ಸಡಗರದಿಂದ ಓಡಾಡುತ್ತಾ ನಗರದ ಪ್ರಸಿದ್ಧ ಶಿಲ್ಪಿ ಸೊಫ್ರೊನಿಸ್ಕಸ್‌ನ ಮನೆಯ ಸುದ್ದಿಯನ್ನೇ ಮಾತಾಡುತ್ತಿತ್ತು. ತಮ್ಮೆಲ್ಲರ ಮನೆಗಳಲ್ಲೂ ಸುಖಕ್ಕಿಲ್ಲದಿದ್ದರೂ ಕಷ್ಟಕ್ಕೆ ಭಾಗಿಯಾಗುತ್ತಿದ್ದ, ಅಂದರೆ ತಮ್ಮ ಮನೆಗಳಲ್ಲಿ ಹೆರಿಗೆಯ ಸಮಯ ಬಂದಾಗ ಹಗಲಿರುಳೆನ್ನದೆ ಎರಡಲ್ಲ ನಾಲ್ಕು ದಿನಗಳಾದರೂ ಅಲ್ಲಿಯೇ ಇದ್ದುಕೊಂಡು ಹೆರಿಗೆ ಸುಸೂತ್ರವಾಗಿ ನಡೆಯುವಂತೆ ಸಹಾಯಕಳಾಗುತ್ತಿದ್ದ ಸೂಲಗಿತ್ತಿ ಸೊಫ್ರೊನಿಸ್ಕಸ್ಸನ ಧರ್ಮಪತ್ನಿ – ಫಿನಾರೆಟಿಗೆ ಹೆರಿಗೆಯಾಗಿದೆಯಂತೆ ! ಹುಟ್ಟಿದ ಗಂಡುಕೂಸು ನೋಡಲು ಅಂದವಾಗಿಲ್ಲದಿದ್ದರೂ ಗುಂಡುಕಲ್ಲಿನಂತೆ ಗಟ್ಟಿಯಾಗಿದೆಯಂತೆ ! ಹೆರಿಗೆಯ ಕೋಣೆಯಿಂದ ಈ ರೀತಿ ಗುಸುಗುಟ್ಟಿಕೊಂಡು ಬರುತ್ತಿದ್ದ ಹೆಂಗೆಳೆಯರ ಮಾತುಗಳನ್ನು ಕದ್ದು ಕೇಳಿದ ಹಲವು ಗಂಡಸರು ಈಚೆಕಡೆ ಜಗಲಿ ಮೇಲೆ ಕುಳಿತಿದ್ದ ಸೊಫ್ರೊನಿಸ್ಕಸ್‌ನನ್ನು ಗೇಲಿ ಮಾಡುತ್ತಿದ್ದರು. ಅವರ ಮಾತಿನಲ್ಲಿ ಹರ್ಷದ ನಗ ಇತ್ತೇ ಹೊರತು ಚುಚ್ಚು ನುಡಿಯ ಹೊಗೆ ಇರಲಿಲ್ಲ. ನಗರದ ದೇವಾಲಯಗಳಲ್ಲಿದ್ದ ಅನೇಕ ದೇವತಾ ವಿಗ್ರಹಗಳನ್ನೂ, ಅನೇಕ ಮಂದಿರಗಳ ಮಹಾದ್ವಾರಗಳನ್ನೂ ಕಡೆದು ಪ್ರಖ್ಯಾತನಾಗಿದ್ದ, ಅಥೆನ್ಸಿನ ಬಹು ಮುಖ್ಯವಾದ ಚೌಕವೊಂದರಲ್ಲಿ ಪ್ರೊಮೀಥಿಯಸ್ಸನ ಭವ್ಯವಿಗ್ರಹವನ್ನು ಕಡೆದು ನಿಲ್ಲಿಸಿ ನಗರದ ಅಂದವನ್ನೂ. ಕೀರ್ತಿಯನ್ನೂ ಹೆಚ್ಚಿಸಿದ್ದ ಸೊಫ್ರೊನಿಸ್ಕಸ್‌ನ ಬಗ್ಗೆ ಎಲ್ಲ ಅಥೇನಿಯನ್ನರಲ್ಲೂ ಗೌರವ ಸ್ವಾಭಾವಿಕವಾಗಿ ಹುಟ್ಟುತ್ತಿತ್ತು. ಸಕ್ಕರೆಯ ಉಂಡೆಗಳನ್ನು ಬಾಯಲ್ಲಿ ತುಂಬಿಕೊಂಡು ಎಲ್ಲರೂ ಹುಟ್ಟಿದ ಮಗುವನ್ನು ಹರಸಿ ಕರೆದರು 'ಸೊಕ್ರೆತೀಸ ! ಸೊಕ್ರೆತೀಸ !' ಎಂದು.

ಎಲ್ಲ ಹಿರಿಯರ ಆಶೀರ್ವಾದವೂ ಆ ಶಿಶುವಿನ ಮೇಲೆ ಅಗಾಧವಾಗಿತ್ತು. ಆದರೆ ಆ ಮಗು ಮಗನಾಗಿ, ತಂದೆಯಾಗಿ, ರಾಷ್ಟ್ರಕನಾಗಿ, ಬೆಳೆದು ಬಾಳುವಾಗ ಕೀರ್ತಿವಂತನಾದದ್ದು ತಂದೆಯ ಶಿಲ್ಪವೃತ್ತಿಯಿಂದಲ್ಲ, ತಾಯಿಯ ಸೂಲಗಿತ್ತಿತನದಿಂದಲ್ಲಲ್ಲ ವಿಶ್ವಾಂತರಾಳದಲ್ಲಿ ಗುಪ್ತಗಾಮಿನಿಯಾಗಿದ್ದ ಆ ಪರಾತ್ಪರ ಶಕ್ತಿಯ ಪೂರ್ವ ಪ್ರಕಾಶನಕ್ಕೆ ಪಾತ್ರನಾದ್ದರಿಂದ. ಕೇವಲ ವಿಚಾರ ಮಂಥನದಿಂದ ಜನತೆಯನ್ನು ಜ್ಯೋತಿಯೆಡೆಗೆ ಒಯ್ಯುವುದೇ ಅವನ ಬಾಳಿನ ಮುಖ್ಯ ಗುರಿಯಾಗಿತ್ತು.

ಬಾಲ್ಯ ಜೀವನ ಸಾಗಿತು. ಶಾಲೆಯ ಅಭ್ಯಾಸದಲ್ಲಿ ಚತುರನಲ್ಲದಿದ್ದರೂ ಅವನು ಶುಂಠನಾಗಿರಲಿಲ್ಲ. ಕಾವ್ಯ ಗಣಿತಾದಿಗಳಲ್ಲಿ ಅವನಿಗೆ ಅಷ್ಟಾಗಿ ಆಸಕ್ತಿ ಇಲ್ಲದಿದ್ದರೂ, ತರ್ಕ ಮೀಮಾಂಸೆಗಳಲ್ಲಿ ಬಹಳ ಅಭಿರುಚಿ ಇತ್ತು. ತಾನು ಶಾಲೆಯನ್ನು ಬಿಟ್ಟು ಗೃಹಸ್ಥನಾಗುವ ಹೊತ್ತಿಗೆ ಹೋಮರನ ಕಾವ್ಯಗಳನ್ನು ಕಂಠಪಾಠ ಮಾಡಿದ್ದ. ಥೆಸ್ಪೀಸ್, ಈಸ್ಕೈಲಸ್, ಸೊಫೊಕ್ಲೀಸ್ ಯೂರಿಪಿಡೀಸ್ ಮುಂತಾದವರ ರುದ್ರನಾಟಕಗಳನ್ನು ನಿರ್ದೇಶಿಸಿ ಡಯೋನಿಸಸ್ ದೇವತೆಯ ಜಾತ್ರೆಯ ಸಂದರ್ಭದಲ್ಲಿ ಪ್ರದರ್ಶಿಸುವಷ್ಟು ಶಕ್ತನಾ

ಗಿದ್ದ. ಆಗ ಗ್ರೀಸ್ ದೇಶ ಯಾವ ಒಬ್ಬ ವ್ಯಕ್ತಿಯ ಅಧೀನದಲ್ಲಿರಲಿಲ್ಲ. ಯಾವನೊಬ್ಬನ ದರ್ಪಿಷ್ಠ ಪ್ರಭುತ್ವಕ್ಕೂ ಒಳಗಾಗಿರಲಿಲ್ಲ. ಅಲ್ಲಿ ಪ್ರಭಾ ಎಂಬ ಭೇದವೇ ಅಳಿಸಿಹೋಗಿತ್ತು. ಅದೊಂದು ರೀತಿಯ ಪ್ರಜಾರಾಜ್ಯವಾಗಿತ್ತು. ಅಲ್ಲಿದ್ದ ಸುಮಾರು ಹದಿನೈದು ಸಾವಿರ ಪ್ರಜೆಗಳ ಮೇಲೂ ರಾಷ್ಟ್ರದ ಪೂರ್ಣ ಹೊಣೆಗಾರಿಕೆ ಇತ್ತು. ಅಂದ ಮೇಲೆ ಭವಿಷ್ಯತ್ತಿನಲ್ಲಿ ದೇಶದ ಭದ್ರತೆಗೆ ಕಾರಣ ರಾದ ಯುವಕರಿಗೆ ಯುದ್ಧ ವಿದ್ಯೆ ಅವಶ್ಯವಲ್ಲವೇ ? ಎಲ್ಲರಂತೆ ಸಾಕ್ರೆಟೀಸನಿಗೂ ಕಾವ್ಯಾಭ್ಯಾಸದ ಜೊತೆಗೆ ಶಸ್ತ್ರಾಭ್ಯಾಸವೂ ಆಯಿತು. ಯುದ್ಧವಿದ್ಯೆಯಲ್ಲಂತೂ ಸಾಕ್ರೆಟೀಸ್ ಮೊದಲಿಗನಾದ.

ವ್ಯಾಸಂಗ ಮುಗಿಸಿ ಮನೆಗೆ ಬರುವ ಹೊತ್ತಿಗೆ ಮಿರ್ತೇನ್ ಎಂಬ ಸಾಧ್ವಿಯೊಬ್ಬಳೊಡನೆ ಇವನ ವಿವಾಹ ನಿಶ್ಚಿಯವಾಗಿತ್ತು. ಲಗ್ನ ಮುಗಿಯಿತು. ಹೊಸ ಬಾಳು ಬೆಳಗಿತು. ಆದರೆ ಅವನ ಸುಂದರ ಸ್ವಪ್ನ ಬಹುಬೇಗ ಒಡೆಯಿತು. ಸಕಲ ಗುಣಸಂಪನ್ನೆ ಯಾದ ಮಿರ್ತೋನ್ ಎರಡು ಗಂಡು ಮಕ್ಕಳನ್ನು ಸಾಕ್ರೆಟೀಸನ ಮಡಿಲಲ್ಲಿ ಹಾಕಿ ಪರಲೋಕಕ್ಕೆ ಹೋದಳು. ಪತ್ನಿಯ ಮರಣದಿಂದ ಸಾಕ್ರೆಟೀಸನಿಗೆ ಜೀವನ ಬೇಸರವಾಯಿತು. ತನ್ನ ಪುಟ್ಟ ಕಂದಮ್ಮಗಳನ್ನು ತನ್ನ ತಂದೆತಾಯಿಯರ ರಕ್ಷಣೆಯಲ್ಲಿ ಬಿಟ್ಟು ಹುಚ್ಚನಂತೆ ಊರೂರುಗಳನ್ನು ತಿರುಗಿದನು. ಆದರೆ ಅಷ್ಟರಲ್ಲೇ ಒಂದು ಕರೆ ಬಂತು. ಯುದ್ಧ ಮಾರಿಯ ರಣಕಹಳೆ ಪೊಟೀ ಡಿಯಾ ಎಂಬಲ್ಲಿ ಮೊಳಗಿ ಗ್ರೀಸಿನ ಯುದ್ಧ ವೀರರನ್ನು ಸ್ವಾಗತಿಸಿತು !

ಈ ಸ್ವಾಗತ ಗ್ರೀಕರಿಗೇನು ಹೊಸದಲ್ಲ. ಕೆಲವೇ ವರ್ಷಗಳ ಹಿಂದೆ ಪಾರಸೀಕರನ್ನು ಬಡಿದೋಡಿಸಿ ಪೂರ್ಣ ಸ್ವಾತಂತ್ರ್ಯ ವನ್ನು ಸಂಪಾದಿಸಿಕೊಂಡಿದ್ದ ಗೀಕರಿಗೆ ಯುದ್ಧವೆಂದರೆ ಒಂದು ಕ್ರೀಡೆಯೇ ಆಗಿತ್ತು. ಅದರಲ್ಲೂ ಕೊಳುಗುಳದಂತಿದ್ದ ಅಥೆನ್ಸ್ ನಗರದ ಜನತೆಗೆ ಈ ರಣತುತ್ತೂರಿಯ ಮೊರೆತ ಚಿರಪರಿಚಿತವೂ, ರಣೋತ್ಸಾಹಹೇತುವೂ ಆಗಿತ್ತು. ಬಹುತೇಕ ಮಂದಿ ಯುವ ಕರು ಶಸ್ತ್ರಾಸ್ತ್ರಗಳೊಂದಿಗೆ ರಣರಂಗಕ್ಕೆ ಇಳಿದರು. ತನ್ನ ತಾಯ್ನಾಡಿನ ಸ್ವಾತಂತ್ರ್ಯ ರಕ್ಷಣೆಗಾಗಿ ಸಾಕ್ರೆಟೀಸನೂ ಯುದ್ಧರಂಗಕ್ಕೆ ಧುಮ್ಮಿಕ್ಕಿದ. ಸಹಸ್ರಾರು ಪಟುಭಟರೊಂದಿಗೆ ಭುಜಕ್ಕೆ ಭುಜಕೊಟ್ಟು ಹೋರಾಡಿದ.

ಮೊದಮೊದಲು ಅಥೆನ್ಸಿಗೆ ಸೋಲಾಗುವಂತೆ ಕಂಡುಬಂದಿತು. ಸೇನೆಯಲ್ಲಿ ಕಳವಳ ಆರಂಭವಾಗಿ ಹಲವರು ಕಾಲಿಗೆ ಬುದ್ಧಿ ಹೇಳುತ್ತಿದ್ದರು. ಮತ್ತೆ ಕೆಲವರು ಅರೆಮನಸ್ಸಿನಿಂದ ಹೋರಾಡುತ್ತಿದ್ದರು. ಇದಾವುದರ ಪರಿವೆಯೂ ಇಲ್ಲದೆ, ತನಗೆ ತಾನೇ ಉನ್ಮತ್ತನಾಗಿ, ರುದ್ರಭೀಷಣನಾಗಿ ಹೋರಾಡುತ್ತಿದ್ದ ಸಾಕ್ರೆಟೀಸನಿಗೆ ಇದ್ದಕ್ಕಿದ್ದಂತೆ ಒಂದು ಆರ್ತನಾದ ಕೇಳಿ ಬಂತು. ಖಣಿಖಟಿಲ್ ಎಂಬ ಖಡ್ಗಗಳ ಶಬ್ದವನ್ನೂ, ಬಾಣ ಮರುಬಾಣಗಳ ಸುಯ್ ಧ್ವನಿಯನ್ನೂ, ಸಾಯುವ ಸೋಲುವ ವೀರರುಗಳ ಚೀತ್ಕಾರವನ್ನೂ, ರಣ ಭೂಮಿಯ ಭಯಂಕರ ಕೋಲಾಹಲವನ್ನು ಭೇದಿಸಿಕೊಂಡು ಬಂದು ಅವನ ಎದೆಯನ್ನು ತಾಕಿತು. ಕೂಗು ಬಂದ ಕಡೆ ತಿರುಗಿ ನೋಡುತ್ತಾನೆ ತನ್ನ ನೆಚ್ಚಿನ ಗೆಳೆಯ ಅಲ್ಕಿಬಯಡಿಸ್ ಹತ್ತಾರು ಜನ ಶತ್ರುಗಳ ಮಧ್ಯೆ ಓರ್ವನೇ ಹೋರಾಡುತ್ತಿದ್ದಾನೆ ! ಗೆಲ್ಲುವೆ ನೆಂಬ ನಂಬುಗೆಯಿಲ್ಲದಿದ್ದರೂ ಹೇಡಿಯಾಗಿ ಮಣಿಯಬಾರದೆಂಬ ಛಲವೊಂದೇ ಅವನಿಗೆ ಸ್ಫೂರ್ತಿಯನ್ನು ದಯಪಾಲಿಸಿದೆ. ತಮ್ಮ ಕಡೆಯ ವೀರನಾಯಕನೊಬ್ಬನು ಶತ್ರುಗಳ ಪಾಲಾದನೆಂದು ಬೆದರಿದ ಸೇನೆ ಅಲ್ಕಿಬಯಡಿಸ್ಸನೊಬ್ಬನನ್ನೇ ಅಲ್ಲಿ ಬಿಟ್ಟು ದಿಕ್ಕಾ ಪಾಲಾಗಿ ಓಡತೊಡಗಿದೆ.

ಇದನ್ನು ನೋಡಿದ ಸಾಕ್ರೆಟೀಸ್ ಅತ್ತ ಧಾವಿಸಿದ. ಅಲ್ಕಿಬಯಡಿಸ್ಸನ ಮೇಲೆ ಕವಿದಿದ್ದ ಯೋಧರ ಗಮನವನ್ನು ತನ್ನ ಕಡೆಗೆ ಸೆಳೆದುಕೊಂಡ. ಅವರೊಡನೆ ಹೋರಾಡಿ ಜಯಗಳಿಸಿದ. ಅಲ್ಕಬಯಡಿಸ್ ಮೃತ್ಯುವಿನಿಂದ ಪಾರಾಗಿ ಸಾಕ್ರೆಟೀಸನಿಗೆ ತನ್ನ ಧನ್ಯ ವಾದಗಳನ್ನು ಅರ್ಪಿಸಿದ. ಆಗ ಸಾಕ್ರೆಟೀಸನಿಗೆ ಅದಾವುದರ ಪರಿವೆಯೂ ಇರಲಿಲ್ಲ. ಯುದ್ಧದಲ್ಲಿ ಉತ್ಸಾಹ, ತನ್ನ ತಾಯ್ನಾಡಿನ ಮೇಲಿನ ಮಮತೆ ಇವು ಒಂದು ಕಡೆ ಉಕ್ಕಿ ಉಕ್ಕಿ ಬರುತ್ತಿದ್ದರೆ, ಅತ್ತ ಓಡಿ ಹೋಗುತ್ತಿದ್ದ ಹೇಡಿಗಳಿಗಾಗಿ ಅವನೆದೆ ಮರುಗಿತು. ನಾಚಿ ಕುಸಿಯಿತು. ಆದರೂ ಧೈರ್ಯದಿಂದ ತನ್ನನ್ನು ತಾನೇ ಸಂತೈಸಿಕೊಂಡು ಸಾಕ್ರೆಟೀಸ್ ಯೋಧರಿಗೆ ಕರೆಕೊಟ್ಟ.

"ಓ ನನ್ನ ವೀರ ಬಂಧುಗಳೇ, ಶೂರನು ಸಾಯುವುದು ಒಂದೇ ಬಾರಿ. ಹೇಡಿಗಳು ಕ್ಷಣಕ್ಷಣಕ್ಕೂ ಮಡಿಯುತ್ತಾರೆ. ಮಡಿದು ಮಣ್ಣಾಗುವುದಕ್ಕಿಂತ ಕಾದಾಡಿ ಕೀರ್ತಿಶಾಲಿಗಳಾಗಿ, ಅಥೆನ್ಸ್ ಮಾತೆಯ ಪುಣ್ಯಗರ್ಭದಲ್ಲಿ ಜನಿಸಿದ ನೀವು ಈ ರೀತಿ ಕುನ್ನಿಗಳಾಗಿ ವರ್ತಿಸುವುದು ಹೀನಕರ. ಅಂತಹ ನಿಮ್ಮ ಬಾಳ್ವೆಗೆ ಧಿಕ್ಕಾರವಿರಲಿ. ಮಿತ್ರರೇ, ನೀವು ಅಥೆನ್ಸ್ ಮಾತೆಯ ಮಕ್ಕಳಾಗಿರುವುದು ಸತ್ಯವಾದಲ್ಲಿ, ನಿಮ್ಮ ಧಮನಿಯಲ್ಲಿ ಹರಿಯುತ್ತಿರುವುದು ಪವಿತ್ರ ಅಥೇನಿಯನ್ ರಕ್ತವೇ ಆಗಿದ್ದಲ್ಲಿ ಹಿಂತಿರುಗಿ ಬನ್ನಿ. . .ಬನ್ನಿ. . .ಓ ಬಂಧುಗಳೇ ಬನ್ನಿ !"

ಈ ಘೋಷಣೆಯಲ್ಲಿ ಆವುದೋ ಶಕ್ತಿ ತುಂಬಿತ್ತು. ಓಡುತ್ತಿದ್ದ ಯೋಧರ ಹೃದಯಗಳಲ್ಲಿ ಮತ್ತೆ ಧೈರ್ಯದ ತೊರೆ ಹರಿದಂತಾಗಿ ಎಲ್ಲರೂ ಒಟ್ಟಾಗಿ ರಣಭೂಮಿಗೆ ಬಂದರು. ಜೇನುಹುಳುಗಳಂತೆ ಝೇಂಕರಿಸುತ್ತಾ ವೀರಾವೇಶದಿಂದ ಕಾದಾಡಿ ಜಯಭೇರಿ ಬಾರಿಸಿದರು. ಆ ಕೀರ್ತಿಗೆ ಕಾರಣನಾದ ಸಾಕ್ರೆಟೀಸನನ್ನು ಕೊಂಡಾಡಿದರು.

ಕ್ರಿಪೂ. ೪೩೨ರಲ್ಲಿ ಆರಂಭವಾದ ಪೊಟೀಡಿಯಾ ಯುದ್ಧ ಕ್ರಿಪೂ.೪೨೯ರಲ್ಲಿ ಕೊನೆಗೊಂಡಿತು. ಸತತವಾಗಿ ಮೂರು ವರ್ಷಗಳ ಕಾಲ ಯುದ್ಧ ಭೂಮಿಯಲ್ಲೇ, ಯುದ್ಧೋತ್ಸಾಹದಲ್ಲೇ ಕಾಲ ಕಳೆದಿದ್ದ ಸಾಕ್ರೆಟೀಸನಿಗೆ ಎಲ್ಲ ಯೋಧರಿಗಾದಂತೆ ತನಗೂ ತನ್ನ ಮನೆಯ ನೆನಪಾಯಿತು. ಆದರೇನು ಮನೆಗೆ ಹೋದರೆ ಅದು ಶೂನ್ಯವೇ ಅಲ್ಲವೇ ಅವನ ಪಾಲಿಗೆ ? ಮನೆಯೊಡತಿ ಮಡಿದು ನಾಲ್ಕೈದು ವರ್ಷಗಳಾಗಿದ್ದವು. ಆದರೂ ಮಕ್ಕಳ ಮೇಲಿನ ಮಮತೆ, ತನ್ನ ತಂದೆತಾಯಂದಿರನ್ನು ಕಾಣಬೇಕೆಂಬ ಹಂಬಲ ಆತನ ಕಾಲುಗಳನ್ನು ಮನೆಯತ್ತ ನಡೆಸಿದವು. ಮನೆಗೆ ಜಯಶಾಲಿಯಾಗಿ ಬಂದ ಮಗನನ್ನು ಮನ ಸಾರೆ ಹರಸಿದ ತಾಯಿ ಆರತಿ ಮಾಡಿ ಆನಂದಿಸಿದಳು. ಸೊಫ್ರೊನಿಸ್ಕಸ್ ಮೊದಲೇ ತನ್ನಲ್ಲಿ ನಿಶ್ಚಯ ಮಾಡಿಕೊಂಡಿದ್ದಂತೆ ಜಾಂತಿಪೆ ಎಂಬುವಳನ್ನು ತಂದು ಲಗ್ನ ಮಾಡಬೇಕೆಂಬ ವಿಷಯವನ್ನು ತನ್ನ ಮಗ ಮತ್ತು ಹೆಂಡತಿಯರ ಮುಂದೆ ಪ್ರಸ್ತಾಪ ಮಾಡಿದ. ದ್ವಿತೀಯ ವಿವಾಹಕ್ಕೆ ಮನಸ್ಸಿಲ್ಲದಿದ್ದರೂ ಸಾಕ್ರೆಟೀಸ್ ತನ್ನ ತಾಯಿತಂದೆಯರ ಬಲವಂತಕ್ಕೆ ಒಪ್ಪಬೇಕಾಯಿತು. ಅಂತೂ ಸಾಕ್ರೆಟೀಸನ ವಿವಾಹ ಜಾಂತಿಪೆಯೊಡನೆ ನೆರವೇರಿತು.

ಮದುವಣಗಿತ್ತಿ ಇನ್ನೂ ಮನೆಗೆ ಬಂದಿರಲಿಲ್ಲ. ಆಗಲೇ ಮತ್ತೊಂದು ರಣಕಹಳೆಯ ಶಬ್ದ ಕೇಳಿಬಂತು. ಕ್ರಿ.ಪೂ. ೪೨೪ರಲ್ಲಿ ಡೇಲಿಯಂ ಎಂಬ ಬಳಿ ಯುದ್ಧ ಆರಂಭವಾಯಿತು. ರಾಷ್ಟ್ರದ ಸ್ವಾತಂತ್ರ್ಯ ರಕ್ಷಣೆಗಾಗಿ ಜೀವದ ಹಂಗು ತೊರೆದು ಸಾಕ್ರೆಟೀಸ್ ಹೋರಾಡಿ ಜಯಗಳಿಸಿದ. ಈ ಯುದ್ಧದ ಗಾಯಗಳಿನ್ನೂ ಮಾದಿರಲಿಲ್ಲ. ಮೈಮೇಲಿನ ನೆತ್ತರ ಕಲೆಗಳನ್ನಿನ್ನೂ ಅಳಿಸಿಕೊಂಡಿರಲಿಲ್ಲ, ಆಗಲೇ ಮತ್ತೊಂದು ಗೊಂದಲ ಪ್ರಾರಂಭವಾಯಿತು. ಆಂಫಿಪಾಲೀಸ್ ಎಂಬ ಸ್ಥಳದಲ್ಲಿ. ಇರಿದಿದ್ದ ಕತ್ತಿಗಳನ್ನು ಒರೆಗೆ ಉಂಬದೆ ಹಾಗೆಯೇ ಯೋಧರೆಲ್ಲಾ ಅಂಫಿಪಾಲೀಸ್‌ಗೆ ಓಡಿದರು, ಹೋರಿದರು. ಹಲವರು ಮಡಿದು, ಉಳಿದವರು ಜಯಶೀಲರಾಗಿ ಅಥೆನ್ಸಿಗೆ ಹಿಂತಿರುಗಿದರು.

ಸಾಕ್ರೆಟೀಸನ ಮನೆ ಸ್ಮಶಾನವಾಗಿತ್ತು. ಡೇಲಿಯಂ ಯುದ್ಧ ನಡೆಯುವಾಗಲೇ ಅವನ ಪ್ರೀತಿಯ ತಂದೆ ಮಡಿದನಂತೆ ! ಅಪ್ಪನನ್ನು ಕರೆತರುವುದಾಗಿ ಅಜ್ಜಿ, ಫಿನಾರೆಟಿಗೆ ಮಾತುಕೊಟ್ಟು ಅಂಫಿಪಾಲೀಸ್‌ಗೆ ಬಂದ ಅವನ ಇಬ್ಬರು ಮಕ್ಕಳಲ್ಲಿ ಒಬ್ಬನು ಎಲ್ಲೋ ದೇಶಾಂತರಗತನಾದನಂತೆ ! ಮತ್ತೊಬ್ಬನು ಶತ್ರುಗಳ ಸೆರೆಯಲ್ಲಿ ಹತನಾದನಂತೆ ! ಇದೇ ವ್ಯಸನದಲ್ಲಿ ಫಿನಾರೆಟಿ ಅನ್ನಹಾರಾದಿಗಳನ್ನು ಬಿಟ್ಟು ಅಸುವನ್ನು ನೀಗಿ ಬಹಳ ದಿನಗಳಾದವಂತೆ !! ಕೇಳ ಕೇಳುತ್ತಲೇ ಸಾಕ್ರೆಟೀಸ್ ತತ್ತರಿಸಿಹೋದ. ಸಹಸ್ರಾರು ಯೋಧರನ್ನು ಎದುರಿಸಿ ಹಿಮ್ಮೆಟ್ಟಿಸಿದ್ದ ಅವನ ಗುಂಡಿಗೆ ಚಣಕಾಲ ನಡುಗಿತು. ತನ್ನ ಕಾಲ್ಕೆಳಗಿದ್ದ ನೆಲವೇ ಕುಸಿದಂತೆ ಭಾಸವಾಯಿತು. ಆಕಾಶವೇ ಕಳಚಿ ತನ್ನ ಮೇಲೆ ಬೀಳಬಾರದೇ ಎನ್ನಿಸಿತು. "ಓ ದೈವವೇ, ನಿನ್ನ ಚಕ್ಕಂದಕ್ಕೆ ಕೊನೆ ಮೊದಲೇ ಇಲ್ಲವಾಯಿತೇ ! ' ಎಂದು ತಲೆಯ ಮೇಲೆ ಕೈ ಇಟ್ಟುಕೊಂಡು ಗಳಗಳನೆ ಅತ್ತ. ನೆರೆಹೊರೆಯವರು ಸಂತೈಸಿದರು. ಮಿಗಿಲಾಗಿ ತನ್ನ ಪತ್ನಿ ಜಾಂತಿಪೆ ಕಣ್ಣೀರು ಒರೆಸಿ ಸಮಾಧಾನಪಡಿಸಿದಳು.

ದಿನಗಳು ಕಳೆದವು. ಇತ್ತೀಚೆಗೆ ಸಾಕ್ರೆಟೀಸನ ನಡತೆಯೇ ವಿಚಿತ್ರವಾಗಿತ್ತು. ಯಾವ ವಸ್ತುವಿನ ಮೇಲೆಯೂ ಅವನಿಗೆ ಮಮತೆ ಇದ್ದಂತೆ ಕಾಣುತ್ತಿರಲಿಲ್ಲ. ಯಾರ ಬಗ್ಗೆಯೂ ಅವನಿಗೆ ಆಸಕ್ತಿ ಮೂಡಿದಂತೆ ತೋರುತ್ತಿರಲಿಲ್ಲ. ಊಟ ಉಪಚಾರಗಳ ವಿಚಾರದಲ್ಲೂ ಅಷ್ಟೆ. ಮನಸ್ಸಿಗೆ ತೋರಿದಾಗ ಅಷ್ಟು ತಿಂದು ಮರದಡಿಯಲ್ಲೋ ಯಾವುದಾದರೂ ಒಂದು ಮನೆಯ ಜಗುಲಿಯ ಮೇಲೋ ಹೋಗಿ ಮಲಗಿಬಿಡುತ್ತಿದ್ದ. ಜಾಂತಿಪೆಗಂತೂ ಅವನನ್ನು ಹುಡುಕಿ ಹಿಡಿದು ತಂದು ಮನೆಗೆ ಸೇರಿಸಿ, ಅಷ್ಟು ತಿನ್ನಲಿಕ್ಕೆ ಹಾಕಿ ಸುಧಾರಿಸುವುದೇ ನಿತ್ಯದ ಕಸುಬಾಗಿ ಹೋಗಿತ್ತು. ಎಳೆಯ ಮಗುವನ್ನು ನೊಡಿಕೊಳ್ಳುವಂತೆ ಈ ಬೆಳೆದ ಮಗುವನ್ನು ಹಿಡಿದು ಸಾಕುವುದು ಅವಳಿಗೂ ಸಾಕಾಗಿ ಹೋಗಿ ಕಡೆಕಡೆಗೆ ಅವನ ಗಮನವನ್ನೇ ಬಿಟ್ಟುಬಿಟ್ಟಳು.

ಅರೆ ಹುಚ್ಚನಂತೆ ಅಲೆಯುತ್ತಿದ್ದ ಸಾಕ್ರೆಟೀಸನ ಅಂತರಂಗವನ್ನು ಯಾರೂ ಅರಿಯಲಿಲ್ಲ. ಮೊದ ಮೊದಲು ಯಾರೂ ಅವನನ್ನು ಅಷ್ಟಾಗಿ ಗಮನಿಸುತ್ತಲೂ ಇರಲಿಲ್ಲ. ಆದರೆ ಸಾಕ್ರೆಟೀಸ್ ಸದಾ ಸತ್ಯದ ಅನ್ವೇಷಕನಾಗಿರುತ್ತಿದ್ದ. ನಿತ್ಯ ಸತ್ಯದ ಪೂರ್ಣ ಸಾಕ್ಷಾತ್ಕಾರಕ್ಕಾಗಿ ಅವನ ಮನ ತವಕಪಡುತ್ತಿತ್ತು. ಅದಕ್ಕಾಗಿ ಹಗಲಿರುಳೆನ್ನದೆ ಶ್ರಮಿಸತೊಡಗಿದ. ನೆಲದ ಮೇಲೆ ನಡೆಯುತ್ತಿದ್ದರೂ ಅವನ ದೃಷ್ಟಿ ಎಲ್ಲೋ ಬಹುದೂರದಲ್ಲಿ, ಶೂನ್ಯದಲ್ಲಿ ನೆಟ್ಟಿರುತ್ತಿತ್ತು. ಬಹುಶಃ, ಅವನ ಶ್ರಮ ಸಾರ್ಥಕವಾಗಿ ಜ್ಞಾನದ ಬೆಳಕು ಅವನ ಮೆದುಳನ್ನು ಪ್ರವೇಶಿಸುವ ದಿನ ಸನ್ನಿಹಿತವಾಯಿತೆಂದು ತೋರುತ್ತದೆ.

ಸಾಕ್ರೆಟೀಸ್ ಅದೊಂದು ಬೆಸಗೆಯ ದಿನದ ಪ್ರಾತಃಸಮಯದಲ್ಲಿ ಆಲೋಚನಾಮಗ್ನನಾಗಿ ನಿಂತಿದ್ದ. ಆವ ಸಮಸ್ಯೆಯೋ ಬಗೆಹರಿದಂತೆ ಕಾಣಲಿಲ್ಲ. ಆ ದಿನ ಮಧ್ಯಾಹ್ನ ಹಲವು ಸೈನಿಕರು ತಮ್ಮಲ್ಲಿಯೇ ಅಂದುಕೊಂಡರು. 'ಸಾಕ್ರೆಟೀಸ್' ಏನನ್ನೋ ಯೋಚಿಸುತ್ತಾ ನಿಂತಿದ್ದಾನೆ' ಎಂದು. ಅದೇ ರಾತ್ರಿ ಅಲ್ಲಿಯೇ ಮಲಗಿದ್ದ ಅಯೋನಿಯದವರು ಕೆಲವರು ಬೆಳಗಿನವರೆಗೂ ಹಾಗೆಯೇ ನಿಂತಿದ್ದ ಸಾಕ್ರೆಟೀಸನನ್ನು ನೋಡಿದರಂತೆ. ಪ್ರಾಯಶಃ ಬೆಳಕು ಹರಿದು ನೇಸರ ಮೂಡಿಬಂದಾಗ ಸಾಕ್ರೆಟೀಸನಿಗೂ ಜ್ಞಾನವು ಮೂಡಿ ಬಂದಿರಬೇಕು. ಆನಂದದಿಂದ ಅರಳಿದ ಮುಖವುಳ್ಳವನಾಗಿ, ಸೂರ್ಯ ದೇವನಿಗೆ ನಮಸ್ಕರಿಸಿ ಮೈಮರೆತು ಸ್ತೋತ್ರಗೀತೆಗಳನ್ನು ಹಾಡಿ ಮನೆಗೆ ಹಿಂದಿರುಗಿದನಂತೆ.

ಅಂದೇ ಸಾಕ್ರೆಟೀಸನಲ್ಲಿ ಬಹಳವಾದ ಮಾರ್ಪಾಟು ನಡೆದಿತ್ತು. ವಿಶ್ವಜಗತ್ತಿನ ಮಾನವಕೋಟಿಗೆ ಅಂದಿನಿಂದ ಬಂಧುವಾಗಿ, ಬೋಧಕನಾಗಿ, ತಂದೆಯಾಗಿ ಮೆರೆಯತೊಡಗಿದ. ತನ್ನ ತತ್ವಬೋಧನೆಯ ಮೂಲಕ ಮಲಗಿದ್ದ ಜಗತ್ತನ್ನು ಬಡಿದೆಬ್ಬಿಸಲು ಯತ್ನಿಸಿದ. ಮೌಢ್ಯವನ್ನು ಬದಿಗಿರಿಸಿ ವಿಚಾರ ಮಥನಕ್ಕೆ ಪೀಠಿಕೆ ಹಾಕಿದ.

೩

ಪ್ರತಿವರ್ಷದ ಪದ್ಧತಿಯಂತೆ ಆ ವರ್ಷದ ಮಾಗಿಯಲ್ಲಿ ವೈನೋದಿಕ ನಾಟಕಗಳ (Comedies) ಪ್ರದರ್ಶನ ಏರ್ಪಟ್ಟಿತ್ತು. ಗ್ರೀಕರ ಬಯಲ ರಂಗಭೂಮಿಯಲ್ಲಿ. ಸಹಸ್ರೋಪಸಹಸ್ರ ಮಂದಿ ಪ್ರೇಕ್ಷಕರು ಗುಡ್ಡದ ಗ್ಯಾಲರಿಯಲ್ಲಿ ನೆರೆದಿದ್ದರು. ಪ್ರಹಸನಗಳ ಪ್ರದರ್ಶನ ಒಂದೊಂದಾಗಿ ನಡೆಯತೊಡಗಿತು. ಆದರೆ ಕಪ್ಪೆಗಳು (The Frogs) ಎಂಬ ನಾಟಕದ ಮಧ್ಯೆ ಇದ್ದಕ್ಕಿದ್ದ ಹಾಗೆಯೇ ಗಲಭೆ ಎದ್ದಿತು. ಪ್ರೇಕ್ಷಕರ ನಡುವೆ ಗ್ಯಾಲರಿಯಲ್ಲಿ ಕುಳಿತಿದ್ದ ಒಬ್ಬ ಮಧ್ಯವಯಸ್ಸಿನ ವಿಚಿತ್ರ ಮನುಷ್ಯ ಎದ್ದು ನಿಂತು ನಾಟಕಕಾರನಾದ ಅರಿಸ್ಟೋಫೇನಸ್ಸನನ್ನು ಟೀಕಿಸುತ್ತಾ ಕೂಗಿಕೊಂಡನು. ನಾಟಕ ಅಲ್ಲಿಯೇ ನಿಂತುಹೋಯಿತು. ಹಾಗೆ ಕೂಗಿಕೊಂಡವನು ಸಾಕ್ರೆಟೀಸನೇ ಆಗಿದ್ದನು. ಜನರೆಲ್ಲರೂ 'ಓಹೋ! ' ಎಂದು ಗದ್ದಲವನ್ನೆಬ್ಬಿಸಿದರು.

ನಾಟಕದ ಮಧ್ಯೆ ರಸಭಾಸಮಾಡಿದನೆಂದು ಹಲವರು ಸಿಟ್ಟಿಗೆದ್ದು ಅವನನ್ನು 'ಹೊಡೆಯಿರಿ' 'ಬಡಿಯಿರಿ' ಎಂದು ಅರಚಿದರು. ಮತ್ತೆ ಕೆಲವರು ಸಮಾಧಾನ ಹೇಳುತ್ತಿದ್ದರು. ಅಷ್ಟರಲ್ಲಿ ರಂಗಭೂಮಿಯ ಮೇಲೆ ಬಂದು ನಿಂತ ಅರಿಸ್ಟೋಫೇನಸ್ ಪ್ರೇಕ್ಷಕರನ್ನು ಸಮಾಧಾನಪಡಿಸುತ್ತಾ, ಸಾಕ್ರೆಟೀಸನನ್ನು ವೇದಿಕೆಯ ಮೇಲೆ ಕರೆದ. ಅಲ್ಲಿ ಅವರಿಬ್ಬರಿಗೂ ಒಂದು ವಾಗ್ಯುದ್ಧವೇ ನಡೆಯಿತು. 'ಕಪ್ಪೆಗಳು' ಎಂಬ ತನ್ನ ನಾಟಕದಲ್ಲಿ ತಂದಿರುವ ಸನ್ನಿವೇಶ ಮತ್ತು ಪಾತ್ರಗಳ ವಿಮರ್ಶೆ ಸರಿಯೆಂದು ಅರಿಸ್ಟೋಫೇ ನಸ್ ವಾದಿಸಿದ. ಆದರೆ ಸಾಕ್ರೆಟೀಸ್ ಅವನನ್ನು ಪೂರ್ಣವಾಗಿ ವಿರೋಧಿಸಿದ. ಅವನ ವಾದ ಇಷ್ಟೆ – ಅತಿಮಾನುಷ ಪಾತ್ರಗಳಿಂದಲೂ, ಅಲೌಕಿಕ ವ್ಯಾಪಾರಗಳಿಂದಲೂ ಘಟಿತವಾದ ಈಸ್ಕೈಲಸ್ಸನ ನಾಟಕಗಳಲ್ಲಿ ಅಗ್ರಾಹ್ಯ ದೋಷವಿದ್ದರೂ ಸಹ ಅರಿಸ್ಟೋಫೇನಸ್ ಅವನಿಗೇ ಪ್ರಶಸ್ತಿ ಕೊಡಿಸಿ ಯೂರಿಪಿಡೀಸನನ್ನು ಅವಮಾನಗೊಳಿಸಿದ್ದಾನೆ. ಇದು ಶುದ್ಧ ಅನ್ಯಾಯ. ಯೂರಿಪಿಡೀಸನ ಮೇಲೆ ಕೇವಲ ವೈಯಕ್ತಿಕ ದ್ವೇಷವನ್ನಿಟ್ಟುಕೊಂಡು ಈ ರೀತಿ ಸಹಸ್ರಾರು ಜನರ ಮುಂದೆ ಅಪಮಾನಗೊಳಿಸುವುದು ಯುಕ್ತವಾಗಿ ತೋರಲಿಲ್ಲ. ಸೊಫೊಕ್ಲಿಸನ ಆದರ್ಶ ಚಿತ್ರಣಕ್ಕಿಂತಲೂ, ಈಸ್ಕೈಲಸನ ಅವಾಸ್ತವ ಚಿತ್ರಣಕ್ಕಿಂತಲೂ, ಯೂರಿಪಿಡಿಸ್‌ನ ವಾಸ್ತವಿಕ ಜಗತ್ತಿನ ಜೀವಂತ ಚಿತ್ರಣಗಳು ಹೆಚ್ಚು ಚಿತ್ತಾಕರ್ಷಕವೆಂದು ವಾದಿಸಿ ಎಲ್ಲ ರುದ್ರನಾಟಕಕಾರರಿಗಿಂತಲೂ ಯೂರಿಪಿಡಿಸ್ ಉತ್ತಮನೆಂದು ಘೋಷಿಸಿದನು. ಕುಪಿತನಾದ ಅರಿಸ್ಟೋಫೇನಸ್, 'ಇರಲಿ, ನಿನಗೆ ತಕ್ಕ ಶಾಸ್ತಿ ಮಾಡುತ್ತೇನೆ' ಎಂದು ಹೇಳಿ ರಂಗಭೂಮಿಯನ್ನು ಬಿಟ್ಟು ಕೆಳಗಿಳಿದು ಹೊರಟುಹೋದ. ನಾಟಕ ಅಲ್ಲಿಗೇ ನಿಂತು ಜನರೆಲ್ಲಾ ನಿರಾಶರಾಗಿ ಹಿಂತಿರುಗುದರು.

ಮಾರನೆಯ ವರ್ಷದ ಮಾಗಿ ಬಂತು. ಅಂದೂ ಅದೇ ರೀತಿ ಅದಕ್ಕಿಂತಲೂ ಹೆಚ್ಚಿನ ಜನ ಸೇರಿತ್ತು. ವೈನೋದಿಕ ಪ್ರಹಸನಗಳ ಪ್ರದರ್ಶನ ಪ್ರಾರಂಭವಯಿತು ಆ ವರ್ಷ. ಅರಿಸ್ಟೋಫೇನಸ್ಸನ 'ಮೋಡಗಳು' (The Clouds) ಎಂಬ ನಾಟಕ ಸಹ ಅಲ್ಲಿ ಪ್ರದರ್ಶಿತವಾಗುವುದರಲ್ಲಿತ್ತು. ಆವರೆಲ್ಲರೂ ಅವನ ಹಾಸ್ಯಪೂರ್ಣ ನಾಟಕವನ್ನು ನೋಡಲು ಕಾತರರಾಗಿದ್ದರು. ಸಾಕ್ರೆಟಿಸನೂ ಉಪಸ್ಥಿತನಿದ್ದನು.

ನಾಟಕ ಅರಂಭವಾಯಿತು.

ಈ ನಾಟಕದ ನಾಯಕ 'ಸಾಕ್ರೆಟೀಸ್' ಎಂಬ ಒಬ್ಬ ಗೊಡ್ಡು ತತ್ವಜ್ಞಾನಿ. ಸಾಧಾರಣ ಹಳ್ಳಿಮಾಸ್ತರ. ಓರ್ವನು ತನ್ನ ಮಗನನ್ನು ಅವನಲ್ಲಿಗೆ ವಿದ್ಯಾಭ್ಯಾಸಕ್ಕಾಗಿ ಕಳುಹಿಸಿರುತ್ತಾನೆ. ವಿದ್ಯೆ ಕಲಿತು ಮನೆಗೆ ಬಂದ ಮಗ ತಂದೆಗೆ ವಿರುದ್ಧನಾಗಿ ನಡೆಯುತ್ತಾನೆ.

ಮಗನು ಹಾಳಾದನೆಂಬ ದುಃಖದಿಂದ ಆ ತಂದೆ ಕೋಪಗೊಂಡು ಗುರು ಸಾಕ್ರಟೀಸನ ಮನೆಗೆ ಬೆಂಕಿಹಚ್ಚಿ ನಾಶಮಾಡುತ್ತಾನೆ. ಇದೇ ಆ ನಾಟಕದ ಕಥಾವಸ್ತು.

ನಾಟಕ ಮುಗಿಸುವ ಹೊತ್ತಿಗೆ ಸರಿಯಾಗಿ ಸಾಕ್ರೆಟೀಸ್ ರಂಗಭೂಮಿಯ ಮೇಲೆ ಬಂದು ನಿಂತು ನಗುಮುಖದಿಂದ, 'ನಾನೇ ಆ ಅರೆಹುಚ್ಚ ಸಾಕ್ರೆಟೀಸ್ ! ಅರಿಸ್ಟೋಫೇನಸ್ ಬೆಂಕಿ ಇಟ್ಟದ್ದು ನನ್ನ ಮನೆಗೆ ! ' ಎಂದು ಕೂಗಿ ಹೇಳಿದ. ಗಲಭೆ ಆರಂಭವಾಗಿ ಒಂದರೆಡು ಏಟುಗಳೂ ಬಿದ್ದುವು ಸಾಕ್ರೆಟೀಸನಿಗೆ.

ಸರಿ. ಸಾಕ್ರೆಟೀಸ್ ಒಬ್ಬ ಪ್ರಚಂಡ 'ಸೋಫಿಸ್ಟ್' ಎಂಬುದಾಗಿ ಅರಿಸ್ಟೋಫೇನಸ್ ಜನತೆಯಲ್ಲಿ ಅವನ ಬಗ್ಗೆ ಒಂದು ದುರ್ಭಾವನೆಯನ್ನು ಹುಟ್ಟಿಸಿ ನಿಜಕ್ಕೂ ಅವನ ಮನಸ್ಸಿಗೆ ಬೆಂಕಿ ಇಟ್ಟಿದ್ದ. ಇಲ್ಲಿನವರೆಗೂ ಸಾಕ್ರೆಟೀಸಿನ ಬಗ್ಗೆ ಒಳ್ಳೆಯ ಅಭಿ ಪ್ರಾಯಗಳನ್ನು ಇಟ್ಟುಕೊಂಡಿದ್ದವರೆಲ್ಲಾ ಅವನೊಬ್ಬ ಧೂರ್ತನೆಂದು ತಿಳಿದರು. ಆ ಕಾಲದಲ್ಲಿ ಸೋಫಿಸ್ಟ್ ಎಂಬ ನಾಸ್ತಿಕರ ಹಾವಳಿ ಮತ್ತು ಭೌತಶಾಸ್ತ್ರಜ್ಞರ ಕಾಟ ಬಹಳವಾಗಿತ್ತು ಗ್ರೀಸಿನಲ್ಲಿ. ಆದರೆ ಸಾಕ್ರೆಟೀಸ್ ಸೋಫಿಸ್ಟೂ ಆಗಿರಲಿಲ್ಲ, ಭೌತವಿಜ್ಞಾನಿಯೂ ಆಗಿರಲಿಲ್ಲ. ಭೌತಶಾಸ್ತ್ರದಲ್ಲಿ ಅವನಿಗೆ ಆಸಕ್ತಿಯೇ ಇರಲಿಲ್ಲ."ನಿಸರ್ಗದ ನಿಗೂಢ ಶಕ್ತಿಯನ್ನೂ, ವಿಶ್ವದ ಸತ್ ಸ್ವರೂಪವನ್ನೂ ತಿಳಿಯುವುದು ಅಂತಿರಲಿ, ನಿನ್ನನ್ನು ನೀನು ಮೊದಲು ತಿಳಿದುಕೊ" ಎಂದು ಹಾದಿಯಲ್ಲಿ ಸಿಕ್ಕ ಭೌತಶಾಸ್ತ್ರಜ್ಞನಿಗೆ ಹೇಳುತ್ತಿದ್ದನು.

ಸೋಫಿಸ್ಟರ ವಾದಕ್ಕೂ, ಸಾಕ್ರೆಟೀಸನ ಬೋಧೆಗೂ ಅಜಗಜಾಂತರ ವ್ಯತ್ಯಾಸ."ಪ್ರಪಂಚದ ಎಲ್ಲಾ ವಿಷಯಗಳಿಗೂ ಮಾನ ವನೇ ಒರೆಗಲ್ಲು, ಸತ್ಯಕ್ಕೆ ಪ್ರತಿಯೊಬ್ಬನೂ ಒರೆಗಲ್ಲು ! ನನಗೆ ಸತ್ಯವೆಂದು ತೋರಿದ್ದು ನನಗೆ ಸತ್ಯ. ನಿನಗೆ ಸತ್ಯವೆಂದು ತೋರಿದ್ದು ನಿನಗೆ ಸತ್ಯ. ಆದ್ದರಿಂದ ಲೋಕದಲ್ಲಿ ಅಸತ್ಯವೆನ್ನುವುದು ಇಲ್ಲವೇ ಇಲ್ಲ. ಒಟ್ಟಿನಲ್ಲಿ ಜ್ಞಾನವೆನ್ನುವುದು ಇಲ್ಲ. ಇದ್ದರೂ ಅದನ್ನು ತಿಳಿಯುವುದು ಸಾಧ್ಯವಿಲ್ಲ. ತಿಳಿಯುವುದು ಸಾಧ್ಯವಾದರೂ ಅದನ್ನು ಮತ್ತೊಬ್ಬರಿಗೆ ಬೋಧಿಸುವುದು ಸಾಧ್ಯವೇ ಇಲ್ಲ. ನೀತಿ ಯೆಂಬುದಕ್ಕೆ ಒಂದು ನೆಲೆ ಇಲ್ಲ ; ಪ್ರಪಂಚದಲ್ಲಿ ನ್ಯಾಯ, ಧರ್ಮ, ಇವಾವೂ ಇಲ್ಲ. ನನ್ನ ಮನಸ್ಸಿಗೆ ತೋರಿದ್ದೇ ನ್ಯಾಯ, ನನ್ನ ಆಚರಣೆಯೇ ಸದಾಚಾರ' ಇದು ಸೋಫಿಸ್ಟರ ವಾದ.

ಆದರೆ ಸಾಕ್ರೆಟೀಸ್ ಎಂದೂ ಜ್ಞಾನವನ್ನು ತಿರಸ್ಕರಿಸಿ ನುಡಿದವನಲ್ಲ. 'ಜ್ಞಾನವೇ ಮಾನವನಿಗೆ ಒಂದು ಕೈದೀವಿಗೆ, ಅದನ್ನು ಹಿಡಿದು ಮುಂದೆ ನಡೆದವನೇ ಮಹಾಜ್ಞಾನಿ' ಎಂದು ಸಾರಿ ಸಾರಿ ಹೇಳುತ್ತಿದ್ದ. ಗ್ರೀಕರ ಮೂಢ ಆಚರಣೆ, ಅಂಧಾನುಕರಣೆಗ ಳನ್ನು ಖಂಡಿಸಿದನೇ ವಿನಾ ದೇವನೇ ಇಲ್ಲ, ಸತ್ಯವೇ ಇಲ್ಲ, ನ್ಯಾಯವೇ ಇಲ್ಲ ಎಂದು ಯಾವಾಗಲೂ ಅವನು ಜೀವಂತನಾಗಿ ರುವ ತನಕ ಹೇಳಿದವನಲ್ಲ. ಇದರಿಂದ ಸೋಫಿಸ್ಟರ ಕೋಪಕ್ಕೂ ಸೋಫಿಸ್ಟರಲ್ಲದ ಆಸ್ತಿಕರ ಆಗ್ರಹಕ್ಕೂ ಸಾಕ್ರೆಟೀಸ್ ಪಕ್ಕಾದ.

ಸಾಕ್ರಟೀಸ್ ಖಂಡಿತವಾದಿ. ಯಾರ ಮುಖದಾಕ್ಷಿಣ್ಯವೂ ಇಲ್ಲದೆ ತನಗೆ ಸತ್ಯವೆಂದು ನ್ಯಾಯವೆಂದು ತೋರಿದ್ದನ್ನು ಖಡಾ ಖಂಡಿತವಾಗಿ ಆಡುತ್ತಿದ್ದ. 'ಖಂಡಿತವಾದಿ ಲೋಕವಿರೋಧಿ' ಎಂಬ ನಾಣ್ಣುಡಿಗೆ ಸಾಕ್ರೆಟೀಸನ ಜೀವನದ ಒಂದರೆಡು ಘಟನೆ ಗಳು ಉತ್ತಮ ನಿದರ್ಶನಗಳಾಗಿವೆ. ಆಗ ಗ್ರೀಕ್ ದೇಶದ ಹದಿನೈದು ಸಾವಿರ ಮಂದಿಗೂ ಒಂದಲ್ಲ ಒಂದು ದಿನ ನ್ಯಾಯಮಂ ಡಲಿಯ ಸದಸ್ಯನಾಗುವ ಅವಕಾಶವಿರುತ್ತಿತ್ತು. ಸರದಿಯ ಮೇರೆಗೆ ಸಾಕ್ರೆಟೀಸನಿಗೂ ತನ್ನ ೩೩ನೆಯ ವಯಸ್ಸಿನಲ್ಲಿ ಸೆನೆಟಿನ ಸಭಾ ಧ್ಯಕ್ಷನಾಗುವ ಯೋಗ ದೊರಕಿತ್ತು.

ಆ ದಿನ ಎಂಟು ಜನರಿಗೆ ಸಂಬಂಧಿಸಿದ ಒಂದು ನೌಕಾ ಸೈನ್ಯದ ವಿಚಾರಣೆ ಆಗಬೇಕಿತ್ತು. ಕ್ರಿ.ಪೂ. ೪೦೬ರಲ್ಲಿ ನಡೆದ ಅರ್ಲಿನ್ಯೂಸಿ ಎಂಬ ನೌಕಾಯುದ್ಧದಲ್ಲಿ ಅಥೆನ್ಸ್ ಜಯಗಳಿಸಿತ್ತು. ಆದರೆ ಆ ಎಂಟು ಮಂದಿ ಸೇನಾನಾಯಕರು ಯುದ್ಧದಲ್ಲಿ ಸತ್ತ ಯೋಧರ ಹೆಣಗಳನ್ನು ಪಟ್ಟಣಕ್ಕೆ ವಾಪಸ್ ತಂದಿರಲಿಲ್ಲ. ಅಥವಾ ಗ್ರೀಕರ ಪದ್ಧತಿಯ ಪ್ರಕಾರ ಹೆಣಗಳಿಗೆ 'ತನಿ'ಯೆರೆದು, ಅಂತ್ಯ ಸಂಸ್ಕಾರವನ್ನು ಮಾಡಿರಲಿಲ್ಲ. ಇದರಿಂದಾಗಿ ಕುಪಿತರಾದ ಅಥೆನ್ಸ್ ಜನತೆ ಆ ಎಂಟು ಮಂದಿ ಸೇನಾನಾಯಕರನ್ನು ವಿಚಾರಣೆಗೆ ಗುರಿಮಾಡಿತ್ತು. ಜನತೆಯ ಆಗ್ರಹಕ್ಕೆ ಇತರ ಸದಸ್ಯರೂ ಹೆದರಿದರೂ ಸಾಕ್ರಟೀಸ್ ಹೆದರಲಿಲ್ಲ. ಸತ್ತವರಿಗೆ ಸಂಸ್ಕಾರ, ಶವಕ್ಕೆ ಶೃಂಗಾರ ಮೊದಲಾದುವುಗಳಲ್ಲಿ ಅರ್ಥವಿಲ್ಲವೆಂದೂ, ಅಪರಾಧಿಗಳೆಂದು ಕರೆದು ತಂದಿದ್ದ ಎಂಟು ಮಂದಿ ನಾಯಕರೂ ಶಿಕ್ಷಾರ್ಹರಲ್ಲವೆಂದೂ ಅಧ್ಯಕ್ಷ ಸ್ಥಾನದಿಂದ ತೀರ್ಪನ್ನಿತ್ತ.

ಆದರೆ ಮಾರನೆಯ ದಿನದ ಅಧ್ಯಕ್ಷ ಬೇರೆಯವನಾಗಿ ಆ ಎಂಟು ಮಂದಿಗೂ ಮರಣದಂಡನೆ ವಿಧಿಸಿದ. ಜನತೆಯನ್ನು ಎದುರು ಹಾಕಿಕೊಂಡರೆ ಆ ವ್ಯಕ್ತಿಗೆ ಅಥೆನ್ಸ್‌ನಲ್ಲಿ ಉಳಿಗಾಲವಿಲ್ಲ, ಆದರೂ ಎದೆಗುಂದದೆ ಸತ್ಯ ಪಕ್ಷವನ್ನೇ ಹಿಡಿದ ಸಾಕ್ರಟೀಸ್ ವಾದಿಸಿದನೇ ಹೊರತು ಅಸತ್ಯವನ್ನಾಚರಿಸಲಿಲ್ಲ.

ಈ ಘಟನೆ ಆದ ಎರಡು ವರ್ಷಗಳಲ್ಲಿ ಮತ್ತೊಂದು ಘಟನೆ ನಡೆಯಿತು. ಆಗ ಅಥೆನ್ಸ್ ತನ್ನ ಪ್ರಜಾಪ್ರಭುತ್ವವನ್ನು ನೀಗಿ ಕೊಂಡು ಮೂವತ್ತು ಜನ ಪ್ರಚಂಡರ ಆಡಳಿತಕ್ಕೆ (The Aligarchy of the Thirty) ಒಳಪಟ್ಟಿತ್ತು. ದುರುಳ ಕ್ರಿಟಿಯಾಸನೇ ಅದರ ಮುಖ್ಯ ನಾಯಕನಾಗಿದ್ದ. ಈ ಸರ್ಕಾರವು ಲೆಯಾನ್ ಎಂಬುವನನ್ನು ದ್ವೇಷದಿಂದ ಕೊಂದುಹಾಕಬೇಕೆಂದು ಅಪೇಕ್ಷಿಸಿ ಸಲಾಮಿಸ್ಸಿನಲ್ಲಿದ್ದ ಅವನನ್ನು ಕರೆತಂದು ಒಪ್ಪಿಸುವಂತೆ ಸಾಕ್ರೆಟೀಸನಿಗೂ ಮತ್ತೆ ಮೂವರಿಗೂ ಆಜ್ಞೆ ವಿಧಿಸಿತು. ಆದರೆ ಸಾಕ್ರಟೀಸ್ ದ್ರೋಹಿಗಳ ಆಜ್ಞೆಯನ್ನು ಉಲ್ಲಂಘಿಸಿದ. ಸರ್ಕಾರ ಘೋರ ಶಿಕ್ಷೆ ವಿಧಿಸುವುದಾಗಿ ಬೆದರಿಸಿತು. 'ನಾನು ಸತ್ತರೂ ಚಿಂತೆಯಿಲ್ಲ ಅಧರ್ಮವನ್ನಾಚರಿಸಲಾರೆ' ಎಂದು ಧೈರ್ಯವಾಗಿ ನುಡಿದು, ಸಾಕ್ರಟೀಸ್ ತನ್ನ ಮನೆಯ ಕಡೆಗೆ ಹೊರಟೇ ಹೋದ. ಬಹು ಬೇಗ ಅಂದರೆ ಕೇವಲ ಎಂಟೇ ತಿಂಗಳಲ್ಲಿ ಕೊನೆಗೊಂಡ ಆ ಸರ್ಕಾರದಿಂದ ಸಾಕ್ರೆಟೀಸನಿಗೆ ಅಂತಹ ಕೇಡೇನೂ ಆಗಲಿಲ್ಲ. ಆದರೆ ಅದರಿಂದ ಬಹುತೇಕ ಜನತೆಯ ದ್ವೇಷಕಟ್ಟಿಕೊಳ್ಳಬೇಕಾಯಿತು. ಒಂದು ಕಡೆ ಅವನ ಶಿಷ್ಯಮಂಡಲಿ ಬೆಳೆದಂತೆ ಮತ್ತೊಂದು ಕಡೆ ಅವನ ಶತ್ರುಪಕ್ಷವೂ ವೃದ್ಧಿಯಾಗುತ್ತಲಿತ್ತು.

ಮುಂದಿನ ದಿನಗಳೆಲ್ಲವನ್ನೂ ಸಾಕ್ರೆಟೀಸ್ ಬರಿಯ ಮಾತಿನಲ್ಲಿ ಕಳೆದ. ಸಿಕ್ಕ ಸಿಕ್ಕವರೊಡನೆ ಸಂಭಾಷಿಸುವುದು, ಕೇಳಿದವರಿಗೆ ಉಪದೇಶ ಕೊಡುವುದು, ಅಪೇಕ್ಷಿಸಿದವರ ಸಂಗಡ ಆತ್ಮಜಿಜ್ಞಾಸೆ ಮಾಡುವುದು ಇದೇ ಅವನ ದಿನಚರಿಯಾಗಿ ಹೋಯಿತು. ಮನೆ ಮಠ, ಹೆಂಡಿರು ಮಕ್ಕಳು ಯಾವುದರ ಗೋಜಿಗೂ ಅವನು ಹೋಗುತ್ತಿರಲಿಲ್ಲ. ಮೊದಮೊದಲು ಅಂದು ಆಡಿ ನೋಡಿದ ಜಾಂತಿಪೆ ಕಡೆಗೆ ಕೈಸಾರಿಬಿಟ್ಟಳು. ಗಂಡ ದುಡಿದು ಹಾಕದಿದ್ದರೆ ಹೋಗಲಿ, ಏನಾದರೂ ಆಸರೆ ಇದೆಯೇ ? ಎಲ್ಲಾ ನಾಸ್ತಿ !

ಆ ಮನೆಗೆ ಅವನೇ ಒಂದು ಸಂಪತ್ತು. ಜಾಂತಿಪೆಯೇ ಒಂದು ಸೌಭಾಗ್ಯ, ಅಪರೂಪಕ್ಕೆ ಹುಟ್ಟಿದ ಒಂದು ಗಂಡು ಮಗು ಮತ್ತು ಮುರುಕಲು ಜೋಪಡಿ ಇವೇ ಅವನ ಚರಸ್ಥಿರ ಆಸ್ತಿ ವಗೈರೆ. ಇಷ್ಟಾಗಿ ಮುಗಿಯಿತು. ಕಡೆಗೆ ಅವನ ಹೆಂಡತಿ ಮಕ್ಕಳು ತಿರುಪೆ ಬೇಡುವ ಸ್ಥಿತಿಗೆ ಬಂದರು. ಇಷ್ಟಾದರೂ ಸಾಕ್ರೆಟೀಸನಿಗೆ ಅರಿವಾಗಲಿಲ್ಲ. ದೈವಕ್ಕೆ ದಯೆ ಬರಲಿಲ್ಲ.

ಳ

ಎತ್ತ ನೋಡಿದರತ್ತ ಶತ್ರುಗಳ ತಂಡವೇ ಕಣ್ಣಿಗೆ ಬೀಳುತ್ತಲಿತ್ತು. ಅಥೆನ್ಸ್ ನಗರದಲ್ಲಿ ಸಾಕ್ರೆಟೀಸನಿಗೆ ಬೀದಿಯಲ್ಲಿ ತಿರುಗು ವುದೇ ಕಷ್ಟವಾಗುತ್ತಾ ಬಂತು. ಅವನಿಂದ ಛೀಮಾರಿ ಮಾಡಿಸಿಕೊಂಡಿದ್ದ ವರ್ತಕರೂ, ದೈವಜ್ಞರೂ, ತತ್ವವೇತ್ತರೂ, ಹಲಕೆಲವು ತುಂಡು ಕವಿಗಳೂ, ಸಿದ್ಧಾಂತಿಗಳೂ ಎಲ್ಲರೂ ಒಮ್ಮೆಗೇ ಮುನಿದೆದ್ದರು. ಇಡೀ ನಗರದ ಶಾಂತಿಗೇ ಧಕ್ಕೆ ತಂದ ಆ ಮುದುಕ, ಆ ಗೊಡ್ಡು ತತ್ವಬೋಧಕನನ್ನು ಇಲ್ಲಗೈಯಬೇಕೆಂದು ಹಲವು ದಿನಗಳಿಂದ ಹವಣಿಸುತ್ತಲೇ ಇದ್ದರು.

ಆ ದಿನವೂ ಹತ್ತಿರ ಬಂದು, ಮೆಲೇಟಿಸ್ ಎಂಬ ಅಪ್ರಬುದ್ಧ ಕವಿಯೊಬ್ಬನು ಸಾಕ್ರೆಟೀಸನ ಮೇಲೆ ಎರಡು ಆಪಾದನೆಗಳನ್ನು ಹೊರಿಸಿ ಅವನನ್ನು ನ್ಯಾಯಸ್ಥಾನಕ್ಕೆ ಎಳೆದು ತಂದು ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿದನು. ಅವನಿಗೆ ಲೀಕಾನ್ ಮತ್ತು ಅನೀತಸ್ ಎಂಬುವರ ಬೆಂಬಲವೂ ಇತ್ತು. ಎಲ್ಲರೂ ಒಟ್ಟಿಗೆ ಸೇರಿ ಸಾಕ್ರೆಟೀಸನನ್ನು ತೀರಿಸಿಬಿಡಬೇಕೆಂದು ಆಲೋಚಿಸಿ ನೂರು ಮಂದಿ ನ್ಯಾಯಮೂರ್ತಿಗಳಿಂದ ಕೂಡಿದ್ದ ನ್ಯಾಯಾಲಯದ ಮುಂದೆ ತಂದು ನಿಲ್ಲಿಸಿದರು.

**ಆಪಾದನೆ** : ಸಾಕ್ರೆಟೀಸ್ ಎಂಬ ಓರ್ವ ತತ್ವಜ್ಞಾನಿ ತನ್ನದೇ ಆದ ನೂತನ ಕಲ್ಪನಾದೇವತೆಗಳನ್ನು ಸೃಷ್ಟಿಸಿಕೊಂಡು ಧಾರ್ಮಿಕ ಕ್ರಾಂತಿಯನ್ನೆಬ್ಬಿಸಿದ್ದಾನೆ. ಯುವಕರಿಗೆ ದುರ್ಬೋಧನೆ ಮಾಡುತ್ತಾ ಅವರನ್ನು ದುರ್ಮಾರ್ಗಕ್ಕೆಳೆಯುತ್ತಿದ್ದಾನೆ.

**ಸಮರ್ಥನೆ** : ತನ್ನದೇ ಆದ ಕಲ್ಪನೆಯ ದೇವತೆಗಳನ್ನು ಸೃಷ್ಟಿಸಿಕೊಂಡ ಮಾತ್ರಕ್ಕೇ ಪ್ರಾಚೀನ ಗ್ರೀಕ್ ದೇವತೆಗಳಲ್ಲಿ ತಿರಸ್ಕಾರ ಭಾವನೆ ಇದೆ ಎಂದು ಅರ್ಥವಲ್ಲ. ತಾನು ಆಸ್ತಿಕನೇ ಹೊರತು ನಾಸ್ತಿಕನಲ್ಲ, ಯುವಕರನ್ನು ತಿದ್ದುವ ಸನ್ಮಾರ್ಗಿ ಸಿಕ್ಕುವುದು ವಿರಳ, ಅಂತಹ ತಿದ್ದುವ ಶಕ್ತಿ ತನ್ನಲ್ಲಿಲ್ಲದಿರುವಾಗ ಆ ವಾದ ಸತ್ಯಕ್ಕೆ ದೂರ.

**ಅಭಿಪ್ರಾಯ** : ಅಪರಾಧಿ ಎನಿಸಿದ ಸಾಕ್ರೆಟೀಸನ ಸಮರ್ಥನವಾದ ಸತ್ಯ ಬಂಧುರವೂ, ಸತ್ವಪೂರ್ಣವೂ ಆಗಿದ್ದು ಒಂದು ವೇಳೆ ಆತನ ಆಚರಣೆ ಅಪರಾಧವೇ ಆಗಿದ್ದರೂ, ಮರಣದಂಡನೆಯ ಮಹಾಶಿಕ್ಷೆಯನ್ನು ವಿಧಿಸದೆ, ಮುಂದೆ ಆತನ ಕರ್ತವ್ಯದ ಬಗ್ಗೆ ಎಚ್ಚರಿಕೆಯನ್ನಿತ್ತು ಬಿಡುಗಡೆ ಮಾಡಬೇಕೆಂದು ನ್ಯಾಯಾಲಯ ನಿರ್ಧರಿಸಿತು. ಅದರ ಮೇರೆಗೆ ಮೂರು ನಿಬಂಧನೆಗಳನ್ನು ಸಾಕ್ರೆಟೀಸನ ಮುಂದಿರಿಸಿ ಕೇಳಲಾಯಿತು. ಒಂದು, ಸಾಕ್ರೆಟೀಸ್ ತನ್ನ ಹೆಂಡತಿ ಮಕ್ಕಳೊಡನೆ ನ್ಯಾಯಾಲಯದ ಸಮ್ಮುಖದಲ್ಲಿ ಕ್ಷಮಾಯಾಚನೆ ಮಾಡುವುದು ; ಎರಡು, ದೇಶಭ್ರಷ್ಟವೆನಿಸಿ ಅರಣ್ಯದಲ್ಲಿ ಅಜ್ಞಾತವಾಸಿಯಾಗಿ ತನ್ನ ಜೀವನದಾದ್ಯಂತ ಇರುವುದು; ಮೂರು, ಮುನ್ನೂರು ಮೈನೆಗಳ ದಂಡವನ್ನಿತ್ತು ಕ್ಷಮೆ ಯಾಚಿಸವುದು. ಆದರೆ ಈ ನಿಬಂಧನೆಗಳಿಗೆ ಬಂದ ಉತ್ತರ ಅಸಮ ರ್ಪಕ. ಕ್ರಮವಾಗಿ, ಕುಲೀನ ವೃತ್ತಿಯ ಸಭ್ಯಜೀವನ ನಡೆಸುವ ಹೆಂಡತಿ ಮಕ್ಕಳನ್ನು ಬೀದಿಗೆ ತರುವುದು ಸರ್ವಥಾ ಸಾಧ್ಯವಿಲ್ಲ,

ಅಜ್ಞಾತವಾಸಿಯಾಗಿ ಅರಣ್ಯದಲ್ಲಿ ಮೃಗಗಳಿಗೆ ತುತ್ತಾಗುವುದಕ್ಕಿಂತ ಜನ್ಮಭೂಮಿಯ ಕಾರಾಗೃಹದಲ್ಲಿ ಕೊಳೆತು ಸಾಯುವುದು ಮೇಲು, ದಂಡದ ರೂಪದಲ್ಲಿ ಮುನ್ನೂರಲ್ಲ, ಮೂರು ಮೈನೆಗಳನ್ನೂ ಸಹ ಕೊಡಲು ಸಿದ್ಧನಿಲ್ಲ. ಅಪರಾಧವೇ ಇಲ್ಲದಿರುವಾಗ ದಂಡ ಕೇಳುವುದರಲ್ಲಿ ಅರ್ಥವೇನಿದೆ ? ಮೇಲಾಗಿ ಅದು ಆತ್ಮಗೌರವದ ಪ್ರಶ್ನೆ ಇತ್ಯಾದಿ.

**" ಈ ರೀತಿಯಲ್ಲಿ ನ್ಯಾಯವಿಧಾಯಕ ನಿಬಂಧನೆಗಳನ್ನು ಉಲ್ಲಂಘಿಸಿದುದರ ಅಥವಾ ಪರಿಗ್ರಹಿಸದೇ ಇದ್ದುದರ ಕಾರಣವಾಗಿ, ಸನಾತನ ಸದ್ಧರ್ಮ ರಕ್ಷಣೆಗಾಗಿ, ಮುಂದೆ ದೇಶದಲ್ಲಿ ಪುಂಡುಪೋಕರಿಗಳು ಹುಟ್ಟಿಕೊಂಡು ಧರ್ಮನಾಶಕರಾಗದಂತೆ ಧರ್ಮವನ್ನೂ ದೇಶವನ್ನೂ ಕಾಪಿಡುವ ಸಲುವಾಗಿ ಬಹುಜನರ ಅಭಿಮತದಂತೆ ಇಂದು ಈ ನ್ಯಾಯಾಲಯವು ಸಾಕ್ರಟೀಸನಿಗೆ ಮರಣ ದಂಡನೆಯನ್ನು ವಿಧಿಸಿದೆ."**

"ಆದರೆ ಈ ಮಧ್ಯೆ ಮತ್ತೊಂದು ಸೂಚನೆ ಪ್ರತಿವರ್ಷದ ಪದ್ದತಿಗನುಗುಣುವಾಗಿ ನಿನ್ನೆ ಹಗಲು ನಮ್ಮ ಹಡಗು ಡಿಲೋಸಿಗೆ ಯಾತ್ರೆ ಹೋಗಿದೆ. ಅದು ಹಿಂದಿರುಗಿ ಬರುವವರೆಗೂ ಮರಣದಂಡನೆಗೆ ಗುರಿಯಾದ ಸಾಕ್ರೆಟೀಸನನ್ನು ಸೆರೆಮನೆಯಲ್ಲಿ ಸಂಕೋಲೆಗಳಿಂದ ಬಂಧಿಸಿ ಇಟ್ಟಿರತಕ್ಕುದೆಂದೂ, ಬಂದ ನಂತರದಲ್ಲಿ ಹನ್ನೊಂದು ಜನರಿಂದ ಕೂಡಿದ ಮರಣವಿಧೇಯಕ ಮಂಡಲಿಯು ಸಾಕ್ರೇಟೀಸನ ಮರಣದ ಮಾರ್ಗ ಅಥವಾ ವಿಧಾನವನ್ನು ತಿಳಿಸತಕ್ಕುದೆಂದೂ, ಅಪರಾಧಿಗೆ ಅವಶ್ಯಬಿದ್ದಾಗ – ಪ್ರಾಣಯಾಚನೆ ವಿನಾ ಇನ್ನಿತರ ಅಪೇಕ್ಷೆಗಳನ್ನು ಈಡೇರಿಸುವ ಹೊಣೆಗಾರಿಕೆಯನ್ನು ಸೆರೆಮನೆಯು ವಹಿಸಿಕೊಳ್ಳಬೇಕೆಂದೂ ತಿಳಿಸಲಾಯಿತು.

"ವಿದ್ವನ್ಮಣಿಗಳೇ, ಪ್ರಸ್ತುತ ಪ್ರಸಂಗದ ಸಮಾಲೋಚನೆಯಲ್ಲಿ ಸಾಕ್ರೆಟೀಸ್ ಅಪರಾಧಿ ಎಂದಾಗಲೀ, ನಿರಪರಾಧಿ ಎಂದಾಗಲೀ ಸಮರ್ಥಿಸಿ ಹೇಳಬಯಸುವುದಿಲ್ಲ. ಅವನನ್ನು ಬಲಿ ತೆಗೆದುಕೊಳ್ಳುವ ಬಯಕೆ ನಮ್ಮಲ್ಲಿ ಯಾರಿಗೂ ಇಲ್ಲ. ಆದರೂ ವಿಧಿಯಿಲ್ಲದೆ ಮರಣ ದಂಡನೆ ವಿಧಿಸಬೇಕಾಗಿದೆ. ಪ್ರಕೃತದ ವಿಷಯ ನಿರಪರಾಧಿಗೆ ಕೊಟ್ಟ ಶಿಕ್ಷೆ ಅಲ್ಲ. ನಿಬಂಧನೆಗಳ ಉಲ್ಲಂಘಕನಿಗೆ ವಿಧಿಸಿದ ದಂಡನೆ, ಹಾಗೂ ಅದೇ ಮಾರ್ಗದಲ್ಲಿ ನಡೆಯುವವರಿಗೆ ಕೊಟ್ಟ ಎಚ್ಚರಿಕೆ !

ಕಡೆಯದಾಗಿ, ಮಹಾಪ್ರಾಜ್ಞನಾದ ಸಾಕ್ರೆಟೀಸ್ ಮಹಾಶಯನ ಮರಣದ ಬಗ್ಗೆ ನಮ್ಮ ವಿಷಾದವನ್ನು ಈ ಮೂಲಕ ವ್ಯಕ್ತಪಡಿಸಿ ಬೇರೆ ಶಿಕ್ಷಾಮಾರ್ಗವನ್ನು ಕಾಣದೆ, ವಿಧಿಸಿದ ಮರಣದಂಡನೆಗೆ ನಿಮ್ಮೆಲ್ಲರ ಅನುಮತಿ ಇದೆ ಎಂದು ಭಾವಿಸಿ, ಐದು ನೂರು ಮಂದಿ ನ್ಯಾಯಮೂರ್ತಿಗಳ ಸಮ್ಮತಿಯನ್ನು"ತಥಾಸ್ತು" ಎನ್ನುವುದರ ಮುಲಕ ಸೂಚಿಸಬೇಕಾಗಿ ನ್ಯಾಯಾಲಯದ ಪರವಾಗಿ ಸಭಾಪತಿ ಪೀಠವು ಪ್ರಾರ್ಥಿಸುತ್ತದೆ."

ಎಲ್ಲರೂ : ತಥಾಸ್ತು !! ತಥಾಸ್ತು !!

**ಕ್ರೀಟೊ** : ಇಲ್ಲ, ಇದನ್ನು ಒಪ್ಪಲು ಸಾಧ್ಯವಿಲ್ಲ. ಇದಕ್ಕೆ ಎಂದಿಗೂ ನಮ್ಮ ಖಂಡನೆ ಸಿದ್ಧವಿದೆ. ನ್ಯಾಯದ ಆಲಯ, ಅನ್ಯಾಯದ ಗೂಡಾಗಿದೆ. ದ್ವೇಷ ಪಕ್ಷಪಾತಗಳಿಂದ ಕೂಡಿದ ಈ ಅಧರ್ಮದ ಸಂತೆಗೆ ಧಿಕ್ಕಾರ ! ಅಸೂಯೆ, ಅಸಹನೆಗಳಿಂದ ಧರ್ಮಪುರುಷನ ಬಲಿ ತೆಗೆದುಕೊಳ್ಳಲಿಚ್ಚಿಸುವ ಈ ರಾಕ್ಷಸ ತಾಂಡೆಗೆ ಧಿಃಕ್ಕಾರ !!

**ಸಾಕ್ರೆಟೀಸ್ :** ಶಾಂತನಾಗು ಕ್ರೀಟೊ. ನಾವು ಅಸೂಯೆ ದ್ವೇಷಗಳನ್ನು ದೂಷಿಸಬೇಕೇ ಹೊರತು ಧರ್ಮಾಧಿಕರಣವನ್ನಲ್ಲ. ಪಾಪ ! ಇಲ್ಲಿ ಯಾರದೂ ತಪ್ಪಿಲ್ಲ. ದ್ವೇಷಾಸೂಯೆಗಳು ಹಿಂದೆ ಎಷ್ಟೋ ಮಂದಿ ಸತ್ಪುರಷರನ್ನು ಬಲಿ ತೆಗೆದುಕೊಂಡಿವೆ, ಮುಂದೆಯೂ ಎಷ್ಟೋ ಮಂದಿ ಆಗಲಿದ್ದಾರೆ. ಈ ರೀತಿ ಜನತೆಯ ಕಿಚ್ಚಿಗೆ ತುತ್ತಾಗುವವರಲ್ಲಿ ನಾನೇ ಮೊದಲಿಗನೂ ಅಲ್ಲ, ಕೊನೆಯವನೂ ಅಲ್ಲ. ದಯವಿಟ್ಟು ಶಾಂತಿಯಿಂದ ಸತ್ಯವನ್ನು ಕಾಣು. ಇದು ನನ್ನ ಪ್ರಾರ್ಥನೆ.

ಬಂಧುಗಳೇ, ಇನ್ನು ನಾವು ನಮ್ಮ ನಮ್ಮ ಹಾದಿಗಳಲ್ಲಿ ಹೋಗೋಣ. ಸಾವಿನೆಡೆಗೆ ನಾನು ಹೊರಡುತ್ತೇನೆ, ಬದುಕಿನೆಡೆಗೆ ನೀವು ಹೊರಡಿರಿ. ಇವೆರಡರಲ್ಲಿ ಯಾವುದು ಉತ್ತಮವೋ ಅದನ್ನು ಈಶ್ವರನ ಪಾಲಿಗೆ ಬಿಡೋಣ !

ಅವನು ಸತ್ತು ಬದುಕಿದ, ಇವರು ಬದುಕಿ ಸತ್ತರು !

ꕥ

ಮೂರು ಜಾವಗಳ ಮಜಲು ಹತ್ತಿದ ರಜನಿ ನಾಲ್ಕನೆಯದಕ್ಕೆ ಕಾಲಿರಿಸಿತ್ತು. ಇನ್ನೇನು ಅರೆಗಳಿಗೆಯಲ್ಲಿ ಅರುಣೋದಯದ ಸ್ವರ್ಣಚ್ಛಾಯೆ ಮೂಡಣ ದಿಗಂತವನ್ನು ಬೆಳಗುವುದರಲ್ಲಿತ್ತು. ಮೂರು ವಾರಗಳಿಂದಲೂ ಚೆನ್ನಾಗಿ ನಿದ್ರಿಸುತ್ತಿದ್ದ ಅಥೆನ್ಸ್ ಅಂದು ಎಂದಿಗಿಂತ ಮಿಗಿಲಾದ ಗಾಢ ನಿದ್ರೆಯಲ್ಲಿತ್ತು. ಹಲವು ವೇಳೆ ಬಿಸಿಲು – ಬೆಳದಿಂಗಳುಗಳ ಲೀಲಾವಿನೋದದ ಕನಸು ಕಾಣುತ್ತಲಿತ್ತು. ಆದರೆ ಸೆರಮನೆಯ ಬಾಗಿಲಲ್ಲಿ ಕೆಂಡ ಕಣ್ಣು ಮಾಡಿಕೊಂಡು ಉರಿಯುತ್ತಿದ್ದ ದೀಪಕ್ಕೆ ಮಾತ್ರ ನಿದ್ದೆಯಾಗಲಿ, ಕನಸಾಗಲಿ

ಸುಳಿದಂತೆ ಕಾಣುತ್ತಿರಲಿಲ್ಲ. ಅದರಡಿಯಲ್ಲೇ ಅತ್ತಿತ್ತ ತಿರುಗುತ್ತಿದ್ದ ಬಿಚ್ಚುಗತ್ತಿಯ ಪಹರೆಯವನ ಮುಖದ ಮೇಲೆ ಕೆಂಪು – ಕಪ್ಪಿನ ಛಾಯೆ ಲಾಸ್ಯವಾಡುತ್ತಿತ್ತು.

ಅದೇ ಸಮಯಕ್ಕೆ ಎಲ್ಲಿಂದಲೋ ಆಗಮಿಸಿದ ಓರ್ವ ವ್ಯಕ್ತಿ ಮೈಯೆಲ್ಲವನ್ನೂ ಕಪ್ಪು ಬಟ್ಟೆಯ ನಿಲುವಂಗಿಯಿಂದ ಮುಚ್ಚಿ ಮರೆಮಾಡಿದ್ದಾನೆ. ತಲೆಯ ಮೇಲಿನ ಟೊಪ್ಪಿಗೆ ಹಣೆಯ ಅರ್ಧದವರೆಗೂ ಇಳಿದು ಮುಖವನ್ನು ಮರೆಸಿದೆ. ತನ್ನೆರಡೂ ಕೈ ಗಳಿಂದ ಅಂಗಿಯ ಅಂಚುಗಳನ್ನು ಬಿಗಿಹಿಡಿದು ಅಲ್ಲಿ ನುಸುಳಿ, ಇಲ್ಲಿ ಸುಳಿದು ಪಹರಿಯನ್ನು ಸಮೀಪಿಸಿದ. ಅದೇನೋ ಪಹ ರಿಯ ಕಿವಿಯಲ್ಲಿ ಪಿಸುಗುಟ್ಟಿದ ನಂತರ ಅವನಿಗೆ ಒಳ ಹೋಗಲು ರಹದಾರಿ ಸಿಕ್ಕಿತು. ಅತ್ತಿತ್ತ ತನ್ನ ಕಣ್ಣುಗಳನ್ನು ಹೊರಳಿಸಿ ನೋಡಿದ ಆ ವ್ಯಕ್ತಿ ಮೆಲ್ಲನೆ ಸೆರೆಮನೆಯ ದೊಡ್ಡ ಕೊಠಡಿಯೊಂದನ್ನು ಪ್ರವೇಶಿಸಿದ.

ಅಥೆನ್ಸಿನ ಎಲ್ಲ ಮೂಲೆಗಳಂತೆ ಆ ಕೊಠಡಿಯೂ ನಿದ್ದೆಹೋಗಿತ್ತು. ಕಿಂಡಿಯಿಂದ ತೂರಿಬರಲು ಪ್ರಯತ್ನಿಸುತ್ತಿದ್ದ ಮಬ್ಬುಬೆಳ ಕಿನಲ್ಲಿ ಒಳಗಿನ ವಸ್ತುಗಳು ಅಸ್ಪಷ್ಟವಾಗಿ ಗೋಚರಿಸುತ್ತಿದ್ದುವು. ಆ ಮಸುಕಿನಲ್ಲೇ ಅಡಿಯ ಮುಂದಿರಿಸಿ ಬಂದ ಆ ವ್ಯಕ್ತಿಗೆ ಕಲ್ಲು ಅಟ್ಟಣೆಯ ಮೇಲೆ ಬಿದ್ದಿದ್ದ ಒಂದು ಕವುದಿಯ ಮೂಟೆ ಕಾಣಿಸಿತು. ಅದನ್ನು ಸಮೀಪಿಸಿದ ಕೂಡಲೇ ತಿಳಿಯಿತು ಅದು ನಿರ್ಜೀ ವಿ ಕವುದಿಯಲ್ಲ ಅದೊಂದು ಜೀವವುಳ್ಳ ಪ್ರಾಣಿ, ಮಾನವ ಪ್ರಾಣಿಯೆಂದು. ಮುಖದ ತುಂಬಾ ಮುಸುಕೆಳೆದುಕೊಂಡು ತಾನು ಬಿಟ್ಟ ಉಸಿರನ್ನೇ ಮತ್ತೆ ಮತ್ತೆ ಸೇವಿಸುತ್ತಾ, 'ಡರೋ ಗೋರೋ' ಎಂದು ಗೊರಕೆ ಹೊಡೆಯುತ್ತಿತ್ತು. ಇದನ್ನು ನೋಡಿದ ಕೂಡಲೇ ಆಗುಂತಕನಿಗೆ ನಗೆ, ಕೋಪ ಎರಡೂ ಏಕಕಾಲದಲ್ಲಿ ಮೂಡಿ ಮಾಯವಾದುವು. ಬೆರಳನ್ನು ಬಾಯಲ್ಲಿ ಕಚ್ಚಿಕೊಂಡು ಚಣಕಾಲ ಚಿಂತಿಸಿದ. ಏನು ಹೊಳೆಯಿತೊ, ಏನು ಹೊಳೆಯಲಿಲ್ಲವೊ, ಸುಮ್ಮನೆ ಮಲಗಿದ್ದ ಪ್ರಾಣಿಯ ಕಾಲದಿಸೆಯಲ್ಲಿ ತಲೆದೂಗಿ ಬಾಗಿದ. ತತ್‌ಕ್ಷಣವೆ ಎಚ್ಚರವಾಯಿತು ಆ ಮಲಗಿದ್ದ ಪ್ರಾಣಿಗೆ. ಆದರೆ ಬೇಗ ಮೇಲೇಳಲು ಆಗುವಂತಿರಲಿಲ್ಲ. ಅವನ ಕೈಕಾಲು ಗಳಿಗೆ ಕಬ್ಬಿಣದ ಬಲವಾದ ಬಳೆಗಳನ್ನು ತೊಡಿಸಲಾಗಿತ್ತು. ಅವನ ಎದೆ ಸೊಂಟ ಕುತ್ತಿಗೆ ಮುಂತಾದ ಕಡೆಗಳಲ್ಲೂ ಸರಪಣಿ ಯನ್ನು ಸುತ್ತಿ ದೂರದಲ್ಲಿದ್ದ ಗೂಟಗಳಿಗೆ ಬಂಧಿಸಲಾಗಿತ್ತು. ಸಾವರಿಸಿಕೊಂಡು ಮೇಲೆದ್ದ ವ್ಯಕ್ತಿ ಒಮ್ಮೆ ಆಕಳಿಸಿ ದೇವರ ಸ್ಮರಣೆ ಮಾಡಿದ. ಕಣ್ಮುಚ್ಚಿಕೊಂಡು ಕತ್ತೆತ್ತುವಷ್ಟರಲ್ಲಿ ಕೇಳಿಸಿತು.

'ಸುಪ್ರಭಾತ ಸಾಕ್ರೆಟೀಸ್ !'

'ಸು–ಪ್ರ–ಭಾ–ತ. . .ಊಂ. . .ಯಾರು ? ಕ್ರೀಟೊ. ಏನು ಕ್ರೀಟೊ ಇಷ್ಟುಬೇಗ ಬಂದಿರುವೆಲ್ಲಾ ? ಈಗ ಹೊತ್ತೇನು ?'

'ಬೆಳಕು ಹರಿಯುವ ಸಮಯ'

'ಸಂತೋಷ. ಮಬ್ಬು ಮುಸುಕಿದ ನಾಡು ಮತ್ತೆ ಬೆಳಗುವುದೆಂದರೆ ತುಂಬಾ ಸಂತೋಷ. ಅದಿರಲಿ ನೀನು ಒಳಗೆ ಬಂದ ಬಗೆ ?'

'ದ್ವಾರದ ಮೂಲಕ, ಬೀಗ ತೆಗೆದುಕೊಂಡು ನೇರವಾಗಿ.'

'ಆಶ್ಚರ್ಯ ! ಕ್ರೀಟೊ ಈ ವೇಳೆಯಲ್ಲಿ ಪಹರಿ ನಿನ್ನನ್ನು ಒಳಗೆ ಬಿಟ್ಟದ್ದು ನಿಜಕ್ಕೂ ಆಶ್ಚರ್ಯ !'

'ಹಾಗೇನಿಲ್ಲ ಸಾಕ್ರೆಟೀಸ್ – ಆ ಪಹರಿ ಮೊದಲಿನಿಂದಲೂ ನನಗೆ ಗೊತ್ತು . ಬಹುವೇಳೆ ನನ್ನಿಂದ ಉಪಕಾರ ಪಡೆದಿರುವ ಅವನು ಕೃತಘ್ನನಾಗಲಾರ.'

'ಓ ! ಸರಿ ! ಅರ್ಥವಾಯಿತು. ಇನ್ನೂ ಈ ಲಂಚ ವಂಚನೆಗಳು ಅಳಿದಿಲ್ಲ ಈ ನಾಡಿನಲ್ಲಿ ?'

'ಇಲ್ಲ ಸಾಕ್ರೆಟೀಸ್ ಅಳಿದೂ ಇಲ್ಲ, ಅಳಿಯುವುದೂ ಇಲ್ಲ. ಇಲ್ಲೇನು ? ಇಂದೇನು ? ಎಲ್ಲೆಲ್ಲೂ ಎಂದೆಂದಿಗೂ ಇದು ಇದ್ದದ್ದೇ. ಇದು ಅಳಿದ ದಿನವೇ ಭೂಮಿ ಸ್ವರ್ಗವಾದೀತು. ಅಲ್ಲವೆ ತತ್ವಜ್ಞಾನಿ ?'

'ಆ ಮಾತು ಸತ್ಯ. . .ನೀನು ಬಂದು ಬಹಳ ಹೊತ್ತಾಯಿತೆ ?'

'ಸ್ವಲ್ಪ ಹೊತ್ತಾಯಿತು. ಅಷ್ಟೆ.'

'ಮತ್ತೇಕೆ ನನ್ನನ್ನು ಎಬ್ಬಿಸಲಿಲ್ಲ ?'

ದುಃಖ ಅಸಹನೆಗಳಿಂದ ಕೂಡಿದ ಮುಖದಿಂದ ಕ್ರೀಟೊ ಹೇಳಿದ.

'ನಿನ್ನ. . .ನಿನ್ನ ವರ್ತನೆಯೇ ನನಗೆ ಅರ್ಥವಾಗುತ್ತಿಲ್ಲ ಸಾಕ್ರೆಟೀಸ್. ಮೃತ್ಯು ಮನೆಯ ಬಾಗಿಲಲ್ಲಿ ಕಾದು ಕುಳಿತಿರುವ ಈ ದಿನದಲ್ಲೂ ನೀನು ನಿಶ್ಚಿಂತನಾಗಿ ನಿದ್ದೆ ಮಾಡುತ್ತಿರುವುದನ್ನು ನೋಡಿದರೆ ಆಶ್ಚರ್ಯ ಅನುತಾಪಗಳು ಒಮ್ಮೆಗೇ ಮೂಡುತ್ತವೆ. ನಿನ್ನಂತೆ ಮೈ ಮರೆತವನನ್ನು ನಾನೆಲ್ಲೂ ಕಾಣೆ. ಏನೋ ಒಂದೂ ತಿಳಿಯದಾಗಿದೆ ಸಾಕ್ರೆಟೀಸ್, ನಿನ್ನ ಬಾಳೇ ಒಂದು ಒಗಟು !'

‘ಎಂದಿಗೂ ಹಾಗಿರಲಾರದು ಕ್ರೀಟೊ. ನನ್ನ ಬಾಳು ಒಂದು ತೆರೆದ ಪುಸ್ತಕ. ಯಾರು ಬೇಕಾದರೂ ಅದರಲ್ಲಿ ಓದಿ ತಮ್ಮನ್ನು ತಾವು ತಿಳಿಯಬಹುದು ಅಲ್ಲವೇ . . .ಇರಲಿ. ಈ ವೇಳೆಯಲ್ಲಿ ನೀನು ಬಂದದ್ದಾರೂ ಏನು ?’

‘ನನಗೆ ಅದೇ ಮರೆತುಹೋಗಿತ್ತು ಸಾಕ್ರೆಟೀಸ್. ನಿನ್ನ ಈ ನಿಶ್ಚಿಂತತೆಯ ನಿದ್ರೆಯನ್ನು ಕಂಡು. (ಪಿಸುದನಿಯಲ್ಲಿ) ಸಾಕ್ರೆಟೀಸ್ ಬಂಧನದ ಸರಪಣಿಗಳನ್ನು ತೆಗೆಯುವ ಕೀಲಿ ನನ್ನಲ್ಲಿದೆ ಬೇಗ ತೆಗೆದುಬಿಡುತ್ತೇನೆ. ತೆಗೆದುಕೋ ಈ ಕಪ್ಪು ಉಡುಗೆಯನ್ನು, ಬೇಗ ತೊಡು, ಈ ಹರಿತವಾದ ಕಠಾರಿ ನಿನ್ನ ಕೈಯಲ್ಲಿರಲಿ. ಯಾರಾದರೂ ನಿನ್ನನ್ನು ಪತ್ತೆಹಚ್ಚಿ ಕೂಗುವುದಾಗಲಿ, ಹಿಡಿಯುವುದಾಗಲಿ ಮಾಡಿದರೆ ಅವರನ್ನು ಅಲ್ಲಿಯೇ, ಆಗಲೇ ಮುಗಿಸಿಬಿಡು. ಹೂಂ ತ್ವರೆ ಮಾಡು. ಸಮಯ ಮೀರುತ್ತಿದೆ. ಅಗಸೆಯ ಹತ್ತಿರದಲ್ಲಿ ಸೇವಕನೊಬ್ಬನು ಕುದರೆಯನ್ನು ಸಿದ್ಧಪಡಿಸಿಕೊಂಡು ನಿಂತಿದ್ದಾನೆ. ಬೇಗ ಹೊರಡು ಈ ಕುದುರೆಯನ್ನೇರಿ ಅಟ್ಲಾಸ್ ಪರ್ವತದ ಗುಹೆಯೊಂದರಲ್ಲಿ ಅಡಗಿರು. ನಾನು ಬಂದು ಕಾಣುತ್ತೇನೆ. ಥೆಸಲಿಯಲ್ಲಿ ನನಗೆ ಅನೇಕ ಮಂದಿ ಗೆಳೆಯರಿದ್ದಾರೆ. ಅವರಲ್ಲಿ ಕೆಲ ಕಾಲ ಸುಖವಾಗಿ ಇರುವೆಯಂತೆ. ಮುಂದಿನದ್ದನ್ನು ಅನಂತರ ಆಲೋಚಿಸೋಣ.

‘ಹು ಹ್ಹು ಹ್ಹು ! ಕ್ರೀಟೊ ಸಮಯ ಸನ್ನಿಹಿತವಾಗಿರುವಾಗ ಈ ಎಪ್ಪತ್ತರ ವಯಸ್ಸಿನಲ್ಲೂ ನಾನು ಸಾವಿಗಂಜಬೇಕೇ ? ಬೇಡಪ್ಪ ಎಂದಿಗೂ ಆ ಪ್ರಯತ್ನ ಬೇಡ. ನೋಡು, ಇದು ಅವನ ಕರೆ. ಆ ಕರೆಗೆ ಓಗೊಟ್ಟು ನಡೆಯಬೇಕಾದುದು ನಮ್ಮ ಧರ್ಮ ಅಲ್ಲವೇ ?’

‘ನಿನ್ನ ಧರ್ಮ – ಕರ್ಮಗಳಿಗೆ ಬೆಂಕಿ ಬೀಳಲಿ, ಮೊದಲು ಉಳಿದುಕೊಳ್ಳುವ ಮಾರ್ಗವನ್ನು ನೋಡಬೇಕು ಸಾಕ್ರೆಟೀಸ್. ದಯಮಾಡಿ ಸಿದ್ಧನಾಗು.’

‘ಕ್ಷಮಿಸು ಕ್ರೀಟೊ. ಅದೆಂದಿಗೂ ನನ್ನಿಂದಾಗದ ಕಾರ್ಯ. ನಿನ್ನ ಅಭಿಮಾನಕ್ಕೆ ನಾನು ಕೃತಜ್ಞನಾಗಿದ್ದೇನೆ. ಆದರೆ ಅಭಿಮಾನದ ಬಲೆಗೆ ಬಿದ್ದು, ಅಧರ್ಮವನ್ನು ಆಚರಿಸಲಾರೆ. ನ್ಯಾಯಾಲಯದಲ್ಲಿ ವಿಚಾರಣೆ ನಡೆಯುವಾಗ ನೀನೇ ಉಪಸ್ಥಿತನಿದ್ದೆ. ಅಲ್ಲಿ ನಡೆ ದದ್ದೆಲ್ಲವನ್ನೂ ಕಂಡಿದ್ದೀಯೆ, ಕೇಳಿದ್ದೀಯಯೆ. ಬಹುಶಃ, ನ್ಯಾಯಾಲಯದ ಒಂದೇ ಒಂದು ನಿಬಂಧನೆಗೆ ಒಪ್ಪಿದರೆ ನನಗೆ ಬಿಡುಗಡೆಯಾಗುತ್ತಿತ್ತು. ಆದರೆ ಅದು ನನಗೆ ಇಷ್ಟವಿಲ್ಲ. ಅಪರಾಧಿಯಲ್ಲದಿದ್ದರೂ, ‘ಅಪರಾಧಿ ನಾನು, ದಯಮಾಡಿ ಕ್ಷಮಿಸಿ’ ಎಂದು ತಲೆಬಾಗಲು ನನ್ನಿಂದಾಗಲಿಲ್ಲ. ಅಂದಮೇಲೆ ಈಗ ಕಳ್ಳನಂತೆ ತಲೆಮರೆಸಿಕೊಂಡು ಓಡಿಹೊಗಲೇ ? ಆಲೋಚಿಸಿ ನೋಡು, ಧರ್ಮಬಾಹಿರಾದ ಕೃತ್ಯವನ್ನಾಚರಿಸಿ ನಾನಾವ ನರಕಕ್ಕೆ ಹೋಗಲಿ. ವಿಪತ್ತು ಬಂದಿತೆಂದು ವಿಪರೀತ ಕಲ್ಪನೆಗೆ ಆಸ್ಪದ ವೀಯಬಾರದು. ದಯವಿಟ್ಟು ಆ ಯೋಚನೆ ಬಿಟ್ಟು ಬೇರೆ ಏನಿದ್ದರೂ ಮಾತನಾಡು.’

‘ಹೆಚ್ಚಿನದೇನಿದ್ದೀತು ಸಾಕ್ರೆಟೀಸ್. ಅಧರ್ಮಿಗಳಲ್ಲಿ ಧರ್ಮ ಜಾಗೃತಿಯನ್ನ ಅನ್ಯಾಯಶೀಲರಲ್ಲಿ ನ್ಯಾಯಶ್ರದ್ಧೆಯನ್ನ ಅರಸುವ ನಿನ್ನ ವರ್ತನೆ ಅತ್ಯಾಶ್ಚರ್ಯಕರವಾಗಿದೆ ! ‘

‘ಜನತೆ ಅರಿಯದೇ ಕೆಲವು ವೇಳೆ ದುಡುಕುವುದುಂಟು. ಕ್ರೀಟೋ ಅದಕ್ಕೆ ನಾವು ಮುಳಿದು ಸೇಡು ತೀರಿಸಿಕೊಳ್ಳಲು ಹವಣಿಸಬಾರದು. ಸೇಡುತೀರಿಸಿಕೊಳ್ಳುವ ಪ್ರಯತ್ನದಿಂದ ಎಂದಿಗೂ, ಯಾರಿಗೂ ಕ್ಷೇಮವೆನಿಸದು, ಲಾಭ ದೊರೆಯದು. ಪಾಪ ಫಲವನ್ನು ಅನುಭವಿಸುವುದು ತಿಳಿದಿದೆಯೇ ಹೊರತು ಪಾಪಕೃತ್ಯವನ್ನಾಚರಿಸುವುದು ನನಗೆ ಗೊತ್ತಿಲ್ಲ. ಈಗ ನಾನು ಶಾಸನಗಳಿಗೆ ಬಲಿಯಾಗಿಲ್ಲ, ದೈವಶಾಸನಕ್ಕೆ ಮಣಿದಿದ್ದೇನೆ, ಮಾನವ ಶಾಸನದ ದುರುಪಯೋಗಕ್ಕೆ ಬಲಿಯಾಗಿದ್ದೇನೆ ಅಷ್ಟೇ. ಹೆಚ್ಚು ಮಾತಿನಿಂದೇನು ಕ್ರೀಟೊ. ನನ್ನ ಅಂತರ್ವಾಣಿಗೆ ವಿರುದ್ಧವಾದ ಅಧರ್ಮ ಅಕೃತ್ಯವನ್ನೆಸಗಲಾರೆ. ನನ್ನ ಪ್ರಾಣಕ್ಕಿಂತಲೂ, ಮಡದಿ ಮಕ್ಕಳಿಗಿಂತಲೂ, ಮಿಗಿಲಾದದ್ದು ಧರ್ಮ. ಆ ಧರ್ಮದ ಸಂರಕ್ಷಣೆಯ ಭಾರ ನನ್ನ ಮೇಲೆ ಪೂರ್ಣ ಇದೆ. ಅದನ್ನು ತ್ಯಜಿಸಿ ನಾನು ಕರ್ತವ್ಯ ಭ್ರಷ್ಟನಾಗಲಾರೆ. ಅನ್ಯಥಾ ಭಾವಿಸಬೇಡ. ಪರಮಾತ್ಮನ ಇಚ್ಛೆಗೆ ಪ್ರತಿರೋಧಿಗಳಾಗಿ ನಡೆಯಲು ಯಾರಿಂದಲೂ ಸಾಧ್ಯವಿಲ್ಲ, ಅಂತಹ ಪ್ರಯತ್ನ ಸಾಧನವೂ ಅಲ್ಲ.’

‘ಕ್ಷಮಿಸು, ಮಹಾತ್ಮಾ, ನಿನ್ನ ಮಟ್ಟಕ್ಕೇರದ ಅಲ್ಪಜೀವಿಗಳು ನಾವು. ತಂದೆ, ಇದೇ ಸಮಯದಲ್ಲಿ ಮತ್ತೊಂದು ಕೆಟ್ಟ ಸುದ್ದಿಯನ್ನು ತಿಳಿಸಿಬಿಡುತ್ತೇನೆ – ಕೇಳು, ಡಿಲೋಸಿಗೆ ಹೋಗಿದ್ದ ಹಡಗು ಆಗಲೇ ಸೂನಿಯಮ್ಮಿಗೆ ಬಂದಿದೆಯಂತೆ – ಇಂದೇ ಸಂಜೆಯೊಳಗೆ ನಮ್ಮ ತೀರವನ್ನು ಸೇರಬಹುದು.’

‘ತುಂಬಾ ಸಂತೋಷ. ಅದು ಕೆಟ್ಟ ಸುದ್ದಿಯಲ್ಲ. ಸಂತೋಷದ ಸುದ್ದಿ. ಕ್ರೀಟೊ ನಾನೇನಾದರೂ ಈ ಸಮಯದಲ್ಲಿ ಮನೆಯಲ್ಲಿದ್ದಿದ್ದರೆ ನಿನ್ನ ಬಾಯಿ ತುಂಬ ಸಕ್ಕರೆ ತುಂಬುತ್ತಿದ್ದೆ ! ಹೆ ಹ್ಹೆ ಹ್ಹೆ ಹ್ಹೈ.’

ನಗೆಯ ಬುಗ್ಗೆ ಕೊಠಡಿಯನ್ನೆಲ್ಲಾ ತುಂಬಿತು. ಕೂಡಲೇ ಕತ್ತಲು ತೊಲಗಿ ಬೆಳಕು ಚೆನ್ನಾಗಿ ಹರಡಿತ್ತು. ಸೆರೆಮನೆಯ ಬದಿಯಲ್ಲಿದ್ದ ಸರೋವರದ ಮೇಲಿಂದ ತೀಡಿಬರುತ್ತಿದ್ದ ತಂಗಾಳಿಯೊಡನೆ ಸೂರ್ಯದೇವನ ಪ್ರಥಮ ಕಿರಣವು ಆ ಕೊಠಡಿ ಯನ್ನು ಪ್ರವೇಶಿಸಿ ಒಂದು ಸುವರ್ಣ ಶಲಾಕೆಯನ್ನು ಏರ್ಪಡಿಸಿತ್ತು !

೬

'ಸಾಕ್ರೆಟೀಸನಿಗೆ ಇಂದು ಮರಣದಂಡನೆಯಂತೆ ! '

'ನಿನ್ನೆ ಡಿಲೋಸಿಗೆ ಹೋಗಿದ್ದ ಹಡಗು ಬಂದಿತಂತೆ. ಆದರಿಂದ ಇಂದೇ ಸಂಜೆಯೊಳಗೆ ಸಾಕ್ರೆಟೀಸನ ಗತಿ ಮುಗಿಯ ಬೇಕಂತೆ ! '

'ಹೌದು, ಇಂದು ಬೆಳಿಗ್ಗೆ ಸೇರಿದ್ದ ಹನ್ನೊಂದು ಮಂದಿ ನ್ಯಾಯಮೂರ್ತಿಗಳು ತೀರ್ಪಿತ್ತಿದ್ದಾರೆ. ಸಾಕ್ರೆಟೀಸನಿಗೆ ಹೆಮ್ ಲಾಕ್ ಎಂಬ ವಿಷಪಾನ ಮಾಡಿಸಿ ಮುಗಿಸಬೇಕೆಂದು.'

'ಏಕೆ ? ನ್ಯಾಯಾಲಯ ಅಂದೇ ಮರಣದಂಡನೆಯ ತೀರ್ಪು ಕೊಟ್ಟಿರಲಿಲ್ಲವೇ ?'

'ಕೊಟ್ಟಿತ್ತು ನಿಜ. ಆದರೆ ದಂಡನೆಯ ವಿಧಾನವನ್ನು ತಿಳಿಸಿರಲಿಲ್ಲ. ಅಂದರೆ ಸಾಕ್ರೆಟೀಸನ ಶಿರಚ್ಛೇದನ ಮಾಡಿಸುವುದೇ, ಗಲ್ಲಿಗೇರಿಸುವುದೇ, ಚರ್ಮ ಸುಲಿಸುವುದೇ ಅಥವಾ ಅವನಿಗೆ ವಿಷಪಾನ ಮಾಡಿಸುವುದೇ ಇದಾವುದೂ ಇತ್ಯರ್ಥವಾಗಿರಲಿಲ್ಲ. ಅದು ಇಂದು ತೀರ್ಮಾನವಾಯಿತು.'

'ನಡೆಯಿರಿ ಸೆರೆಮನೆಗೆ ಹೋಗೋಣ. ಯುಗಪುರುಷನ ಅಂತ್ಯದರ್ಶನವನ್ನು ಪಡೆದು ಕೃತಾರ್ಥರಾಗೋಣ.'

ಅಥೆನ್ಸ್ ನಗರದ ಯಾವ ಮೂಲೆಗೆ ಹೋದರೂ ಇದೇ ಮಾತಿನ ಪ್ರತಿಧ್ವನಿ ಕೇಳಿಬರುತ್ತಿತ್ತು ಆ ದಿವಸ. ಸೆರೆಮನೆಯ ಮುಂಭಾಗದಲ್ಲಿ ಒಂದು ಭಾರೀ ಗುಂಪು ನೆರೆದಿತ್ತು ಸಾಕ್ರೆಟೀಸನ ಅಂತ್ಯದರ್ಶನಕ್ಕಾಗಿ, ಅವನ ಕಡೆಯ ಬೋಧನೆಯನ್ನು ಕೇಳು ವುದಕ್ಕಾಗಿ, ಎಲ್ಲರೂ ಕಾತರರಾಗಿದ್ದರು. ಸೆರೆಮನೆಯ ಒಳಗಡೆ ಹನ್ನೊಂದು ಮಂದಿ ನ್ಯಾಯಮೂರ್ತಿಗಳ ಅಪ್ಪಣೆಯ ಮೇರೆಗೆ ಸಾಕ್ರೆಟೀಸನ ಕೈಕಾಲುಗಳಿಗ ತಗುಲಿಸಿದ್ದ ಬಳೆ ಸರಪಳಿಗಳನ್ನು ಬಿಚ್ಚಲಾಗಿತ್ತು. ಇನ್ನೇನು ಸ್ವಲ್ಪ ಹೊತ್ತಿನಲ್ಲಿ ಸಾಕ್ರೆಟೀಸ್ ಹೊರಬರ ಬಹುದು ಎಂಬ ನಿರೀಕ್ಷೆ. ಅಷ್ಟರಲ್ಲಿ ಯಾರೋ ಒಬ್ಬ ಹೆಂಗಸು ಬೆಳೆದ ಮಗಳೊಡನೆ ಚೀರುತ್ತಾ ಓಡಿಬಂದಳು. ಜನರ ಗುಂ ಪನ್ನು ಸೀಳಿಕೊಂಡು ಮುಂದೆ ನುಗ್ಗಿ ಸೆರೆಮನೆಯನ್ನು ಪ್ರವೇಶಿಸಿದಳು.

'ಓ ನನ್ನ ದೈವವೇ ! ಓ ನನ್ನ ಜೀವವೇ !! ನಿನ್ನನ್ನುಳಿದು ನಾನು ಬದುಕುವುದಾದರೂ ಹೇಗೆ ? ನಿನ್ನ ದರ್ಶನ ಇಂದಿಗೆ ಕಡೆಯೇ ?'

"ಶಾಂತಳಾಗು ಜಾಂತಿಪೆ ಶಾಂತಳಾಗು. ಮತಿವಿಕಲಳಂತೆ ವರ್ತಿಸುವುದು ಯುಕ್ತವಲ್ಲ. ದಾಂಪತ್ಯ ಜೀವನದಲ್ಲಿ ಪತಿ–ಪತ್ನಿಯರು ಕಾಣುವ ದರ್ಶನ ಒಂದಿದೆ. ಅದು 'ಜೀವನದರ್ಶನ' ಅದಕ್ಕೆ ಆದಿಯೂ ಇಲ್ಲ, ಅಂತ್ಯವೂ ಇಲ್ಲ. ಆ ದರ್ಶನವನ್ನು ಸಂದರ್ಶಿಸಿದ ಸಾಧ್ವಿ ನೀನಾಗಿದ್ದರೆ ಈ ಆಕಸ್ಮಿಕ ಮರಣಕ್ಕಾಗಿ ಎಳ್ಳಷ್ಟೂ ಚಿಂತಿಸಬಾರದು. ನೋಡು, ಆತ್ಮನ ಬಿಡುಗಡೆಗೆ ಅನೇಕ ಮಾರ್ಗಗಳಿವೆ. ಅವುಗಳಲ್ಲಿ ಈ ಮರಣದಂಡನೆಯೂ ಒಂದು. ಇದು ಚೆನ್ನಾಗಿ ಅರ್ಥವಾಗಿದ್ದರೆ ಹೆಚ್ಚು ವಿವರಣೆ ಅವಶ್ಯವಿಲ್ಲ ವೆನಿಸುತ್ತದೆ ? ತಿಳಿದವಳಾದ ನೀನೇ ಈ ರೀತಿ ವರ್ತಿಸಿದರೆ ಹೇಗೆ ? ಎಲ್ಲಿ, ಮಗಳು ಅಳುತ್ತಿದ್ದಾಳೆ, ಅವಳನ್ನು ಸಂತೈಸು.'

'ಸ್ವಾಮಿ. . .ನನ್ನಸ್ವಾಮಿ, ನೀವಿಲ್ಲದ ಬಾಳು ಹಾಳು. ನೀವಿಲ್ಲದ ಮನೆ ಸ್ಮಶಾನ, ಜಗತ್ತು ಶೂನ್ಯ. . .ಇಲ್ಲ. . .ಇಲ್ಲ. . .ನಾನಿ ರಲಾರೆ. . . ಎಲ್ಲಿ ನನ್ನನ್ನು ಪರಿಗ್ರಹಿಸಿದ ಹಸ್ತದಿಂದಲೇ ನನಗೂ ವಿಷ ಕೊಟ್ಟು ಬಿಡಿ.'

'ಅದು ಎಂದಿಗೂ ಸಾಧ್ಯವಿಲ್ಲ ಪ್ರಿಯೆ. ಅದು ಧರ್ಮಬಾಹಿರ. ಅಲ್ಲದೆ ಅತ್ತ ನೋಡು ಆ ಬಾಲಕನಿಗೆ ದಿಕ್ಕು ಯಾರು ? ನಾನೂ ನೀನೂ ಇಬ್ಬರೂ ಹೋದ ಬಳಿಕ ಆ ಅನಾಥಶಿಶುವಿಗೆ ರಕ್ಷಕರು ಯಾರು ?'

'ದೇವರಿದ್ದಾನೆ ಸ್ವಾಮಿ. ನನ್ನನ್ನು ತಮ್ಮ ಜೊತೆಯಲ್ಲೇ ಕರೆದೊಯ್ಯಿರಿ.'

'ಮತ್ತೆ ಅದೇ ವ್ಯರ್ಥಾಲಾಪವೇ ? ಜಾಂತಿಪೆ, ಸುಖ ಬಂದಾಗ ಬೇಕೆಂದ ನೀನು ದುಃಖ ಬಂದಾಗ ಬೇಡವೆಂದರೆ ಹೇಗೆ? ನೋಡು ಸುಖದುಃಖಗಳು ಒಂದೇ ಶರೀರದ ಎರಡು ಮುಖಗಳು. ಒಂದು ಮೊದಲು ಕಂಡರೆ, ಮತ್ತೊಂದು ಅನಂತರದಲ್ಲಿ ಕಂಡೇ ಕಾಣುತ್ತದೆ. ಆದ್ದರಿಂದ ಸಮಾಧಾನಚಿತ್ತಳಾಗಿ ಹಿಂತಿರುಗು. ಈ ನನ್ನ ಮುದ್ದು ಕಣ್ಮಣಿಯನ್ನು ಸಂವರ್ಧಿಸುವ ಭಾರ ನಿನ್ನದು. ಇವಳ ಬಾಳು ಭವ್ಯವಾಗಲಿ. ನಿನಗೆ ಜಗದೀಶ್ವರನು ಸರ್ವಶಕ್ತಿಗಳನ್ನು ದಯಪಾಲಿಸಲಿ. . .ಕ್ರೀಟೊ, ದಯವಿಟ್ಟು ಯಾರಾದರೂ ಈಕೆಯನ್ನು ಮನೆಗೆ ಕರೆದುಕೊಂಡು ಹೋಗಿ,'

ಅವಳನ್ನು ಮನೆಗೆ ಕರೆದೊಯ್ದದ್ದೂ ಆಯಿತು. ಅಷ್ಟರಲ್ಲಿ ಸೆರೆಮನೆಯ ತುಂಬ ಜನ ತುಂಬಿದರು. ಭಾರವಾದ ಹೊರೆಯೊಂದನ್ನು ಕೆಳಗಿಳಿಸಿದವನಂತೆ ದೀರ್ಘವಾಗಿ ಉಸಿರುಬಿಡುತ್ತಾ, 'ಇನ್ನು ಭಯವಿಲ್ಲ. ಈ ಶರೀರವನ್ನು ಬಿಟ್ಟು ಹೋಗುವ ಪ್ರಾಣಕ್ಕೆ ಇನ್ನಾರ ಅಡಚಣೆಯೂ ಇರಲಾರದು. ಅಲ್ಲವೇ ಸೀಬೀಸ್. . .ಸೀಬೀಸ್ ! ಸಿಮ್ಮಿಯಾಸ್ !! ಅಪಾಲೊಡೋರಸ್ !!! ಏಕೆ ? ಮೌನದಿಂದಿರುವಿರಿ ? ಮಾತನಾಡಿ ? ನನ್ನ ಮೇಲೆ ಕೋಪವೆ ನಿಮಗೆ ?'

ಸಿಮ್ಮಿಯಾಸ್ ಹೇಳಿದ, 'ಇಲ್ಲ ಸಾಕ್ರೆಟೀಸ್. ನಮ್ಮ ಬಾಳಿಗೆ ಬೆಳಕಾಗಿದ್ದ ನೀನು ಇನ್ನು ಮುಂದೆ ಇಲ್ಲವಾಗುವೆಯಲ್ಲಾ ಎಂದು ಚಿಂತಿಸುತ್ತಿದ್ದೆವು ಅಷ್ಟೆ ! '

'ಅದೇ ನಿಮ್ಮ ತಪ್ಪು ಭಾವನೆ ಸಿಮ್ಮಿಯಾಸ್. 'ನಾನು' ಎಂದರೆ ಇಲ್ಲಿ ಯಾರು ? ಈ ಕೈ ನಾನೆ ? ಈ ಕಾಲು ನಾನೆ ? ಈ ಕಣ್ಣು ನಾನೆ ? ಈ ಶರೀರದ ಯಾವ ಅಂಗ ನಾನು. 'ನಾನು' ಅಂದರೆ ಯಾರು ? ಯಾವುದು ? ಇದಾವುದೂ ತಿಳಿಯದೆ ವರ್ತಿಸುತ್ತಿದ್ದೀರಿ. ಈ ದೇಹದ ಯಾವ ಭಾಗವೂ ನಾನಲ್ಲ, ನನ್ನವು ಅಷ್ಟೆ ! ಆದರೆ ಆ ನಾನು ಬೇರೆ ! ನಾನಲ್ಲದೆ ಈ ಮಣ್ಣಿನ ಬೊಂಬೆಗಾಗಿ ನೀವು ಚಿಂತಿಸಬಾರದು. ನಾನು ಸದಾ ನಿಮ್ಮ ಜೊತೆಯಲ್ಲಿಯೇ ಇರುತ್ತೇನೆ ತಿಳಿಯಿತೆ ! '

'ಅದೇನೊ ನಮಗೆ ತಿಳಿಯದು ಸಾಕ್ರೆಟೀಸ್. ಆದರೆ ನಿನಗೆ ಬಂದ ಸಾವು ನಮಗೆ ಬಹಳ ನೋವುಂಟು ಮಾಡಿದೆ.'

'ಏನು ? ಸಾವು ನೋವುಂಟು ಮಾಡುವ ವಸ್ತುವೆ ? ಛೆ ! ಎಂದಿಗೂ ಅಲ್ಲ. ಅದು ಶರೀರದಿಂದ ಆತ್ಮವು ಬೇರ್ಪಡುವ ವಿಧಾನ. ಬಂಧನದಿಂದ ಬಿಡುಗಡೆ ಹೊಂದಿ ವಿಶ್ವಾತ್ಮನಲ್ಲಿ ಲಯವಾಗಲು ಹೊರಡುವ ಮಧುರಯಾನ ! ಆದುದರಿಂದ ಅಂತಹ ಆತ್ಮನ ಅಪೂರ್ವಯಾತ್ರೆಗೆ ನಾವು ಪ್ರತಿರೋಧಿಗಳಾಗಬಾರದು. ಅಲ್ಲವೇ ಕ್ರೀಟೊ ! . . .ಕ್ರೀಟೊ. ಏನೋ ಆಲೋಚಿಸುತ್ತಿರುವಂತಿದೆ ? '

'ಆಲೋಚನೆ ಏನೂ ಇಲ್ಲ ಸಾಕ್ರೆಟೀಸ್. ವಿಷಕೊಡುವ ಜೈಲು ಅಧಿಕಾರಿ ಹೇಳಿದ ನೀನು ಹೆಚ್ಚು ಮಾತನಾಡಕೂಡದೆಂದು. ಬಹಳ ಮಾತನಾಡುತ್ತಿದ್ದರೆ ಶರೀರದಲ್ಲಿ ಶಾಖ ಹೆಚ್ಚಿ ವಿಷ ಸರಿಯಾಗಿ ವ್ಯಾಪಿಸುವುದಿಲ್ಲವಂತೆ ! '

'ಚಿಂತೆಯಿಲ್ಲ ಒಂದು ಬಟ್ಟಲಲ್ಲದಿದ್ದರೆ ನಾಲ್ಕು ಬಟ್ಟಲು ಕೊಡಲಿ. ವಿಷ ಕುಡಿಯುವ ನಾನೇ ಸಿದ್ಧನಿರುವಾಗ ಅವನಿಗೇನು ಚಿಂತೆ.'

ಅಂತೂ ಅವನ ಬಾಯಿಗೆ ಬೀಗ ಬೀಳಲಿಲ್ಲ. ಆತ್ಮದ ಬಗ್ಗೆ ಬಹಳ ಹೊತ್ತು ಜಿಜ್ಞಾಸೆ ನಡೆಯಿತು. ಸಾಕ್ರೆಟೀಸ್ ಮಾತಿನ ಮಧ್ಯೆ ಹಲವು ಹಾಸ್ಯದ ಪಟಾಕಿಗಳನ್ನು ಹಾರಿಸುತ್ತಿದ್ದ. ಅಲ್ಲಿದ್ದವರೆಲ್ಲರೂ ಕ್ಷಣಕಾಲ ಅವನೊಡನೆ ನಕ್ಕು, ಮತ್ತೆ ಅವನಿಗೆ ಕಾದಿರುವ ಮರಣಕ್ಕಾಗಿ ದುಃಖಿಸುತ್ತಿದ್ದರು. ಸೂರ್ಯನು ಮುಳುಗುವುದಕ್ಕೆ ಎಷ್ಟೋ ಕಾಲ ಇತ್ತು. ಅಷ್ಟರಲ್ಲೇ ಹೋಗಿ ಸಾಕ್ರೆಟೀಸ್ ಸ್ನಾನ ಮುಗಿಸಿಕೊಂಡು ಬಂದು ಅಧಿಕಾರಿಯಿಂದ ವಿಷದ ಬಟ್ಟಲನ್ನು ಸ್ವೀಕರಿಸಿದ. ಬಟ್ಟಲನ್ನು ಕೈಯಲ್ಲಿ ಹಿಡಿದು ನಿಂತಿದ್ದ ಸಾಕ್ರೆಟೀಸನನ್ನು ನೋಡಿ ಎಲ್ಲರೂ 'ಅಯ್ಯೋ' ಎಂದು ಒಂದೇ ಬಾರಿಗೆ ಚೀರಿದರು.

ತತ್‌ಕ್ಷಣವೇ ಸಾಕ್ರೆಟೀಸ್, 'ಸಾಕು ನಿಲ್ಲಿಸಿ. ಫೀಡೊ. ಇದಕ್ಕಾಗಿಯೇ ಅಲ್ಲವೇ ನನ್ನ ಹೆಂಡತಿಯನ್ನು ಮನೆಗೆ ಕಳುಹಿಸಿದ್ದು. ದಯಮಾಡಿ ಯಾರೂ ಅಳಬಾರದು. ಸಾಯುವಾಗ ಅಳುವುದು ಶ್ರೇಯಸ್ಕರವಲ್ಲ. ಶರೀರದಿಂದ ಅಗಲುವ ಆತ್ಮಕ್ಕೆ ಶಾಂತ ವಾತಾವರಣದ ಅವಶ್ಯಕತೆ ಬಹಳವಿದೆ. ಇಲ್ಲದಿದ್ದರೆ ಅದು ಗದ್ದಲಕ್ಕೆ ಘಾಸಿಯಾಗಿ ದಾರಿತಪ್ಪಿ ಓಡಬಹುದು ಅಥವಾ ಬೆದರಿ ಒಳಗೇ ಅವಿತುಕೊಳ್ಳಲೂಬಹುದು ! ಆದ್ದರಿಂದ ಎಲ್ಲರೂ ಶಾಂತರಾಗಿ ಸ್ವಲ್ಪ ಧೈರ್ಯ ತಂದುಕೊಳ್ಳಿ.'

ಅಳು ಮಾಯವಾಗಿ ನಗೆ ಚಿಮ್ಮಿತು !

'ತಾಳು ಸಾಕ್ರೆಟೀಸ್ ವಿಷ ಸ್ವಲ್ಪ ಜಾಸ್ತಿ ಇರುವಂತೆ ತೋರುತ್ತದೆ.'

'ಛೇ ! ಛೇ ! ಎಂದಿಗೂ ಇಲ್ಲ ಫೀಡೊ. ಒಬ್ಬನ ಪ್ರಾಣವನ್ನು ನಿರಾಯಾಸವಾಗಿ ತೆಗೆಯುವಷ್ಟು ಪ್ರಮಾಣದಲ್ಲಿದೆ. ದಯವಿಟ್ಟು ನೀವು ತೊಂದರೆ ತೆಗೆದುಕೊಳ್ಳಬೇಡಿ.'

ಸಾವು ಸನ್ನಿಹಿತವಾದ ವೇಳೆಯಲ್ಲೂ ಆ ನಗುಮುಖದ ವ್ಯಕ್ತಿಯ ವಿನೋದಕ್ಕೆ ಎಲ್ಲರೂ ನಗಬೇಕೆನಿಸುತ್ತಿತ್ತು. ಎಲ್ಲರೂ ಪರಮಾತ್ಮನ ಪ್ರಾರ್ಥನೆ ಮಾಡುವಂತೆ ಹೇಳಿ ತಾನೂ ದೇವರ ನಾಮಸ್ಮರಣೆ ಮಾಡುತ್ತಾ, ವಿಷದ ಬಟ್ಟಲನ್ನು ಬಾಯಿಗೆ ಎತ್ತಿ ಕುಡಿದುಬಿಟ್ಟನು. ಅಲ್ಲಿ ನೆರೆದಿದ್ದ ಯಾರ ಬಾಯಲ್ಲೂ ಒಂದು ಮಾತೂ ಬರುವಂತಿರಲಿಲ್ಲ. ಅವರ ಕಂಠಗಳು ಕಟ್ಟಿ ಬಂದಿದ್ದವು. ವಿಧಿಯಿಲ್ಲದೆ ತಮ್ಮ ಅಳುವನ್ನು ಅದುಮಿ ಹಿಡಿದು ಸಾಕ್ರೆಟೀಸನ ಜೊತೆಯಲ್ಲಿ ಆ ಸೆರೆಮನೆಯ ಒಳಗೆ ಅತ್ತಿತ್ತ ಅಡ್ಡಾಡಿದರು.

ವಿಷವೇರಿದಂತೆಲ್ಲಾ ಕೈಕಾಲುಗಳು ಭಾರವಾಗುತ್ತಾ ಬಂದುವು. ಚಲನಶಕ್ತಿ ನಿಂತು ಸಾಕ್ರೆಟೀಸ್ ಅಟ್ಟಣೆಯ ಮೇಲೆ ಒರಗಿದ. ಆಗಲೂ ಸಹ ಅವನು ಮಾತನಾಡುವುದನ್ನು ಬಿಟ್ಟಿರಲಿಲ್ಲ. ಇನ್ನೇನು ಅರೆಚಣದಲ್ಲಿ ಪ್ರಾಣಹೋಗಬೇಕು, ಅಷ್ಟರಲ್ಲಿ ಕಣ್ತೆರೆದ ಸಾಕ್ರೆಟೀಸ್, 'ಕ್ರೀಟೊ, ನಾನು ದೇವರಿಗೆ ಒಂದು ಕೋಳಿ ಕೊಡಬೇಕಾಗಿತ್ತು ಅದನ್ನು ಮರೆಯದೆ ಕೊಡು' ಎಂದು ಹೇಳಿ ಮತ್ತೆ ಮುಖಕ್ಕೆ ಮುಸುಕು ಎಳೆದುಕೊಂಡ. ಆಗ ಕ್ರೀಟೊ, 'ಆಗಲಿ ಕೊಡುತ್ತೇನೆ. ಮತ್ತೇನಾದರೂ ಹೇಳುವುದಿದೆಯ ?' ಎಂದು ಕೇಳಿದ. ಅದಕ್ಕೆ ಉತ್ತರ ಬರಲಿಲ್ಲ !

ಸಾಕ್ರೆಟೀಸನ ದೇಹವನ್ನು ಮಣ್ಣುಗೂಡಿಸಿದ ಮೇಲೆ ಅಥೆನ್ಸ್ ಬಹಳವಾಗಿ ಪರಿತಪಿಸಿತು. ಆಗ ಅದ್ಭುತವಾದ ಕ್ರಾಂತಿಯೇ ಆಗಿ ರಕ್ತಪ್ರವಾಹ ಅಥೆನ್ಸ್ ನಗರದ ಬೀದಿಗಳಲ್ಲಿ ಹರಿಯಿತೆಂದು ತಿಳಿದು ಬಂತು. ಅಂತೂ ಅವನು ಬದುಕಿದ್ದಾಗ ಬಹುವಾಗಿ ತೊಂದರೆಪಡಿಸಿದ್ದ ಜನತೆ ಅವನು ಸತ್ತ ಮೇಲೆ ಲಿಸಿಪ್ಪಸ್ ಎಂಬುವನಿಂದ ಒಂದು ಕಂಚಿನ ಪ್ರತಿಮೆಯನ್ನು ಮಾಡಿಸಿ ಗೌರವಿಸಿತು, ಅವನನ್ನು ನಾನಾ ರೀತಿಯಲ್ಲಿ ಹಾಡಿ ಹೊಗಳಿತು.

"ನಿಜಕ್ಕೂ ಸಾಕ್ರೆಟೀಸ್ ಗ್ರೀಸ್ ದೇಶವು ವಿಶ್ವಕ್ಕೆ ಕೊಟ್ಟ ಒಂದು ಅಮರಕಾಣಿಕೆ ! ಜನತೆಯ ಮೌಢ್ಯ ನಾಶಕ್ಕಾಗಿ ಅವತರಿಸಿದ ಮಹಾನ್ ವಿಭೂತಿ ! ನಾಡು ಮತ್ತು ನಾಡಿನ ಜನತೆಯ ಅಭ್ಯುದಯಕ್ಕಾಗಿ ತನ್ನ ಇಡಿಯ ಜೀವನವನ್ನೇ ಮೀಸಲಿರಿಸಿದ್ದ ಮಹಾತ್ಯಾಗಿ, ಬೀದಿಗಳ ಅಲೆತ, ಮಾರುಕಟ್ಟೆಯ ಸುತ್ತಾಟ, ಗರಡಿ ಮನೆಯ ಗಸ್ತಿ – ಇವು ತನ್ನ ದೈನಂದಿನ ಕರ್ಮಗಳಾಗಿದ್ದರೂ ಪ್ರತಿ ನಿಮಿಷದಲ್ಲೂ ನಿತ್ಯಸತ್ಯದ ಅನ್ವೇಷಣೆಯಲ್ಲಿದ್ದ ಓರ್ವ ಸತ್ಯಾನ್ವೇಷಕ ! ರಾಜಕೀಯ ಸಮುದ್ರದಲ್ಲಿ ತೇಲುತ್ತಿದ್ದ ರಾಷ್ಟ್ರ ನೌಕೆ ಯನ್ನು ಬಹುದೂರ ಸುರಕ್ಷಿತವಾಗಿ ಸಾಗಿಸಿದ ಪ್ರಸಿದ್ಧ ನಾವಿಕ ! ನಾಡಿಗೆ ಒದಗಿದ ಯುದ್ಧದ ಕುತ್ತನ್ನು ಪರಿಹರಿಸಲಿಕ್ಕಾಗಿ ಒಮ್ಮೆ ಅಲ್ಲ ಮೂರು ಬಾರಿ ಹೋರಾಡಿ ಖಡ್ಗವನ್ನು ಝಳುಪಿಸುತ್ತಲೇ ಜಯಭೇರಿ ಬಾರಿಸಿದ ಮಹಾವೀರ ! ತತ್ವನಂದನದಲ್ಲಿ ನಿತ್ಯವೂ ವಸಂತಕೂಜನವನ್ನು ಹಾಯಿಸಿ ವಿಶ್ವವನ್ನು ಎಚ್ಚರಿಸಿದ ಕೋಗಿಲೆ ! ಅಂದಿಗೂ ಇಂದಿಗೂ ಎಂದೆಂದಿಗೂ ಆತ್ಮಜ್ಞಾನಿಯ ಅಂತ ರಂಗದಲ್ಲಿ ಮಿರುಗುವ ಚಿತ್ ಪ್ರಕಾಶನದ ಧ್ರುವತಾರೆ !

ಧನ್ಯ, ಸಾಕ್ರೆಟೀಸ್ ಧನ್ಯ !

ನೀನು ಹುಟ್ಟಿದ ನಾಡು ಹೊನ್ನಾಯಿತು !!

**My advice to you is get married :**
**If you find a good wife**
**You'll be happy ; if not you'll**
**become a philosopher -Socrates**

ಳ೫

---

# ಯೇಸುಕ್ರಿಸ್ತ

–೧–

'ಟಮ ಟಮ ಟಮ ಟಮ ಟಂ ಟಂ !

ಕೇಳಿ ! ಕೇಳಿ !!

ಪ್ಯಾಲಸ್ಟೈನ್ ರಾಷ್ಟ್ರದ ಸಮಸ್ತರೂ ಕಿವಿಗೊಟ್ಟು ಕೇಳಿ !!!

ಈ ತಿಂಗಳ ಈ ವಾರದೊಳಗಾಗಿ ದೇಶದಲ್ಲಿ ಜನಗಣತಿಯಾಗಬೇಕಾಗಿರುವುದರಿಂದ ಯಾರು ಯಾರು ಯಾವ ಯಾವ ಊರಲ್ಲೇ ಇರಲಿ, ಅವರು ಕೂಡಲೇ ತಮ್ಮ ತಮ್ಮ ಪೂರ್ವಿಕರ ಜನ್ಮಸ್ಥಳಗಳಿಗೆ ಹೋಗಿ ತಮ್ಮ ವಂಶದ ಜನನ ಮರಣ ಲೆಕ್ಕವನ್ನು ಕೊಡತಕ್ಕದ್ದು. ಈ ಪ್ರಕಟಣೆಯನ್ನು ಉಲ್ಲಂಘಿಸಿ ನಡೆದವರಿಗೆ ಶಿಕ್ಷೆ, ಮರಣದಂಡನೆ ! ಇದು ರೋಮ್ ಮಹಾಸಾಮ್ರಾಜ್ಯದ ಏಕೈಕ ಚಕ್ರವರ್ತಿ ಭಯಂಕರ ಗಿಡುಗಧ್ವಜಧಾರಿ ಸೀಸರ್ ಮಹಾಶಯನ ಕಟ್ಟಾಜ್ಞೆ !"

ಈ ಕಠೋರಾಜ್ಞೆ ಹೊರಟಿತು ನಗರ ದುರ್ಗಗಳಲ್ಲಿ, ಬಯಲು ಬೆಟ್ಟಗಳಲ್ಲಿ, ರಾಷ್ಟ್ರದ ಮೂಲೆ ಮೂಲೆಗಳಲ್ಲಿ. ಗ್ರಾಮಾಂತರ ಪ್ರದೇಶಗಳಿಂದ ಅಂದಿನಿಂದ ಜನತೆ ಮಂದೆ ಮಂದೆಯಾಗಿ ತಮ್ಮ ತಮ್ಮ ಪೂರ್ವಿಕರ ಊರುಗಳಿಗೆ ಹೊರಟಿತು. ಕತ್ತೆ ಕುದುರೆ ಗಳ ಮೇಲೆ, ಎತ್ತು ಎಮ್ಮೆಗಳ ಮೇಲೆ, ಕುದುರೆ ಒಂಟೆಗಳ ಮೇಲೆ ಹೇರುಗಳನ್ನು ಹೇರಿಕೊಂಡು ಎಲ್ಲೆಲ್ಲಿಂದಲೊ ಜನಯಾತ್ರೆ ಹೊರಟಿತು. ಚಿಕ್ಕಪುಟ್ಟ ಬಂಡಿಗಳ ಮೇಲೆ ಹಲವು ಸಂಸಾರಗಳ ಮೆರವಣಿಗೆ ಸಾಗುತ್ತಿತ್ತು. ಹೇಸರುಗತ್ತೆಗಳ ಬೆನ್ನುಗಳಿಗೆ ಬಿದು ರಿನ ಬುಟ್ಟಿಗಳನ್ನು ಬಿಗಿದು ಅವುಗಳಲ್ಲಿ ಚಿಕ್ಕಚಿಕ್ಕ ಮಕ್ಕಳನ್ನು ಕೂರಿಸಲಾಗಿತ್ತು.

ಒಂದಲ್ಲ ಎರಡಲ್ಲ ಇಂತಹ ನೂರಾರು ಬುಟ್ಟಿಗಳ ದೋಣಿಗಳು ತೇಲುತ್ತಿದ್ದವು. ತಮ್ಮ ತಮ್ಮ ಆಟದ ಬೊಂಬೆಗಳೊಡನೆ ಆಡಿ ಮಾತಾಡಿ ನಗುತ್ತಿದ್ದವು. ಕೆಲವು ಬೇಸತ್ತು ಅಳುತ್ತಿದ್ದವು. ಕೆಲವು ಹಾಲಿನ ಬುಡ್ಡಿಯನ್ನು ಬಾಯಲ್ಲಿಟ್ಟುಕೊಂಡು ಚೀಪುತ್ತಾ, ಹಾದಿಯಲ್ಲಿ ಸಾಗುತ್ತಿದ್ದ ಹಲವಾರು ರೀತಿಯ ವೇಷಭೂಷಣಗಳ ಜನ ಜಾನುವಾರುಗಳನ್ನು ಕುತೂಹಲದ ದೃಷ್ಟಿಯಿಂದ ನೋಡುತ್ತಿದ್ದವು. ಮತ್ತೆ ಕೆಲವು ಅತ್ತ ದೊಡ್ಡ ದೊಡ್ಡ ಒಂಟೆಗಳ ಮೇಲೆ ಗೆಳೆಯರೂ, ಬಂಧುಗಳೂ ಹರಟೆ ಹೊಡೆಯುತ್ತಾ ಸಾಗುತ್ತಿದ್ದರೆ, ಇತ್ತ ಚಿಕ್ಕ ಚಿಕ್ಕ ಒಂಟೆಮರಿಗಳ ಮೇಲೆ ಎಳೆಯ ದಂಪತಿಗಳ ಪ್ರಣಯಯಾತ್ರೆ ಮುಂದುವರಿಯುತ್ತಿತ್ತು. ಬೋಳು ಬಂಡಿಗಳ ತುಂಬ ಬಟ್ಟೆ ಬರಗಳ ಮೂಟೆಗಳು ಕಾಳುಕಡಿ ಕಟ್ಟಿದ ಚೀಲಗಳು, ಕಟ್ಟಿಗೆ ಹೊರೆಗಳು ತುಂಬಲ್ಪಟ್ಟಿದ್ದವು.

ಗೂಡೆಗಾಡಿಗಳ ಒಳಗಡೆಯಲ್ಲಿ ಸಾಮಾನುಗಳ ಒಳಗಡೆಯಲ್ಲಿ ಸಾಮಾನುಗಳ ಸಂದಿಗಳಲ್ಲಿ ಮುದುಕ ಮುದುಕಿಯರ ದೃಷ್ಟಿಯಿಲ್ಲದ ಕಣ್ಣುಗಳನ್ನು ಬಿಟ್ಟುಕೊಂಡು ಏನನ್ನೋ ಮೆಲ್ಲುತ್ತಾ ಗತಕಾಲದ ನೆನಪುಗಳನ್ನು ಕುರುಕುತ್ತಿದ್ದರು. ಇಂತಹ ವೃದ್ಧ ಮಾತಾಪಿತೃಗಳು ಕುಳಿತಿದ್ದ ಬಂಡಿಗಳನ್ನು ಮಕ್ಕಳೇ ಎಳೆದುಕೊಂಡು ಹೋಗುತ್ತಿದ್ದರು. ಮತ್ತೆ ಕೆಲವಕ್ಕೆ ಎತ್ತುಗಳನ್ನು ಹೂಡಲಾ ಗಿತ್ತು. ಹೆಂಗಳೆಯರ ಭಾರಿ ಭಾರಿ ಗುಂಪುಗಳು ವಿನೋದ, ಚೇಷ್ಟೆ, ಹಾಗೂ ಜೊತೆಜೊತೆಯಲ್ಲೇ ಬರುತ್ತಿದ್ದ ಯುವಕರೊಡನೆ ಕುಚೋದ್ಯಗಳನ್ನು ನಡೆಸುತ್ತಾ ಬರೀ ಲಲ್ಲೆಯಲ್ಲೇ ಮುಂದುವರಿಯುತ್ತಿದ್ದುವು. ಹಾದಿಯ ಬೇಸರ ನೀಗುವುದಕ್ಕಾಗಿ ಹಲವರ ಹಾಡುಗಳು ಕೇಳಿಬರುತ್ತಿದ್ದುವು. ಒಂದು ಗುಂಪು ಇಳಕಲನ್ನು ಹಾಯುತ್ತಿರುವಾಗ ಅದಕ್ಕೆ ಸಂಬಂಧಪಟ್ಟ ಮತ್ತೊಂದು ಗುಂಪು ದಿಣ್ಣೆಯನ್ನೇರಿ"ಅಯ್ ! ಹೋ !! ಎನ್ನುತ್ತಿತ್ತು. ಕಣಿವೆಯಲ್ಲಿದ್ದ ಮಂದಿಗೆ ಅವರ ಪ್ರತಿಧ್ವನಿ ಮೂರು ನಾಲ್ಕು  ಬಾರಿ ಅಯ್ ! ಹೋ ! ಅಯ್ ! ಹೋ !! ಎಂದು ಕೇಳಿಸುತ್ತಿತ್ತು. ಮತ್ತೆ ಕಣಿವೆಯಿಂದಲೂ ಸಹ ಮಾರುತ್ತರ ಅದೇ ಧ್ವನಿಯಲ್ಲಿ ತೆರಳುತ್ತಿತ್ತು.

ಆ ಒಂದು ವಾರದಲ್ಲಿ ಹಗಲು ಇರಳುಗಳಿಗೂ ವ್ಯತ್ಯಾಸವೇ ಕಂಡುಬರುತ್ತಿರಲಿಲ್ಲ. ಹಲವರದು ಇರುಳು ಪ್ರಯಾಣ, ಹಗಲು ವಿಶ್ರಾಂತಿ, ಮತ್ತೆ ಕೆಲವರದು ಹಗಲು ಪ್ರಯಾಣ ಇರುಳು ವಿಶ್ರಾಂತಿ. ಉತ್ತರದಿಂದ ದಕ್ಷಿಣಕ್ಕೆ, ಪೂರ್ವದಿಂದ ಪಶ್ಚಿಮಕ್ಕೆ, ಒಂದು ದಿಕ್ಕಿನಿಂದ ಮತ್ತೊಂದು ದಿಕ್ಕಿಗೆ, ಒಂದು ಮೂಲೆಯಿಂದ ಮತ್ತೊಂದಕ್ಕೆ, ಹೀಗೆ ಸಾಲುಸಾಲಾಗಿ ಇರುವೆಯ ಸಾಲಿನಂತೆ ಸಾಗುತ್ತಿತ್ತು. ಹಾದಿಯ ಮಧ್ಯೆ ಅಲ್ಲಲ್ಲಿ ಸಿಕ್ಕ ವಿಶ್ರಾಂತಿ ಗೃಹಗಳಲ್ಲಿ ಹಲವರು ತಂಗಿದ್ದು ಉಪಹಾರಾದಿಗಳನ್ನು ಮುಗಿಸುತ್ತಿದ್ದರು. ಚಿಕ್ಕಪುಟ್ಟ ಹಳ್ಳಿಗಳಲ್ಲಿ ಅಲ್ಲಲ್ಲಿ ಒಂದು ರಾತ್ರಿ ಕಳೆಯುತ್ತಿದ್ದರು. ರಾತ್ರಿ ಪ್ರವಾಸಿಗರು ಕೈಯಲ್ಲಿ ಪಂಜುಗಳನ್ನು ಹಿಡಿದು ನಡೆಯುತ್ತಿ ದ್ದುದರಿಂದ ಕಗ್ಗತ್ತಲೆಯ ರಾತ್ರಿಯಲ್ಲಿ ಬೆಟ್ಟ ಬಯಲು, ಎಲ್ಲ ಪ್ರದೇಶವೂ ಕೊಳ್ಳಿ ದೆವ್ವಗಳಿಂದ ತುಂಬಿಹೋಗಿತ್ತು ; ಮಳೆಬಂದ ಇರುಳಿನಲ್ಲಿ ಮಿನುಗುವ ಮಿಂಚು ಹುಳಗಳಂತೆ ಕಾಣಿಸುತ್ತಿತ್ತು ಆ ಇರುಳ ನೋಟ.

ಹಾದಿಯಲ್ಲಿ ಪ್ರವಾಸಿಗಳ ಸಂಭಾಷಣೆಯೂ ಸಾಗುತ್ತಿತ್ತು. ಅದು ತಮ್ಮ ಜೊತೆಯ ಪ್ರವಾಸಿಗರೊಂದಿಗೆ ಹಾಗೂ ಇದುರಿಗೆ ಸಿಕ್ಕುವ ಪ್ರವಾಸಿಗರೊಂದಿಗೆ.

'ಹಾಗಾದರೆ ನೀವು ಸೀಸೆರೆಯಾವನ್ನು ನಿನ್ನೆ ಬಿಟ್ಟಿರಿ ಅಂತ ಕಾಣುತ್ತೆ'

'ಹೌದ್ರಿ ನಿನ್ನೆ ಸಂಜೆ ಬಿಟ್ಟೆವು. . .ನೀವು ಬಂದದ್ದು ?'

'ನಾವು ಅಬೆಲೈನ್ ಜಿಲ್ಲೆಯಿಂದ, ನಾಲ್ಕು ದಿವಸ ಆಯ್ತು ಹೊರಟು.'

'ಅಂತೂ ನಾಳೆ ಖಂಡಿತ ನಾವು ಸಮೇರಿಯ ತಲಪುತ್ತೇವಲ್ಲಾ ?'

'ಓಹೋ ಅದಕ್ಕೇನು ಖಂಡಿತ ತಲಪುತ್ತೇವೆ.' ಈ ಗುಂಪಿಗೆ ಎದುರಾಗಿ ಮತ್ತೊಂದು ಗುಂಪು ಬಂದಿತು. ಅದರಲ್ಲಿದ್ದ ವ್ಯಕ್ತಿಯೊಬ್ಬನನ್ನು ಗುರುತಿಸಿ ಈ ಗುಂಪಿನವ

'ಓ ಹಲೋ ! ಬಾಬಾ ಯಾವ ಊರಿಗೆ'

'ಹಲೋ ! ಇಟ್ರೂರಿಯಾ ಜಿಲ್ಲೆಗೆ'

'ಹ್ಞಾ, ಹೌದು. ನೀವು ? ಜೆರಿಕೋದಿಂದಲೋ ಬಂದಿದ್ದು?'

'ಇಲ್ಲೆ ಜೆರೂಸಲೆಮ್ಮಿಗೆ. ಮಗ್ದಲದಿಂದ ಬಂದೆವು !'

'ಏನೂ ಎಲ್ಲಾ ಆರೋಗ್ಯಾ ತಾನೆ ?'

'ಏನು ಆರೋಗ್ಯವೋ ಏನೊ ! ಅಂತೂ ಭಂಡಬಾಳು ಮುಂದುವರೀತಾ ಇದೆ.'

'ಏನು ಮಾಡುವುದು. ನಮ್ಮ ನಮ್ಮ ಕರ್ಮ. ಅನುಭವಿಸಬೇಕಲ್ಲ. ನಾವು ಯಹೂದಿಗಳಾಗಿ ಹುಟ್ಟಿದ್ದೇ ಮೊದಲ ತಪ್ಪು. ಇರಲಿ ಆಡಿ ಪ್ರಯೋಜನವಿಲ್ಲ ಹೊರಡಿ ಇನ್ನು ಹೊತ್ತಾಗುತ್ತೆ.'

ಇನ್ನೂ ಅನೇಕ ರೀತಿಯಲ್ಲಿ ಸಂಭಾಷಣೆ ಅಲ್ಲಲ್ಲಿ ಸಾಗಿ ಬರುತ್ತಿತ್ತು. ಗೆಲಿಲೀಯಿಂದ ದಕ್ಷಿಣಕ್ಕೆ ಜ್ಯೂಡಿಯಾದ ಕಡೆಗೆ ಹರಿಯುವ ಮಹಾಮಾರ್ಗದಲ್ಲಿ ಭಾರಿ ಗುಂಪೊಂದು ಬರುತ್ತಿತ್ತು. ಅದರ ವಿನೋದ, ಹಾಸ್ಯ, ಅಣಕ ಇತ್ಯಾದಿಗಳಿಗೆ ಪಾರವೇ ಇರಲಿಲ್ಲ. ಆ ಗುಂಪಿನಲ್ಲಿದ್ದ ಸುಮಾರು ಆರು ವರ್ಷದ ಹುಡುಗಿಯೊಂದು ಎಲ್ಲರ ಗಮನವನ್ನೂ ತನ್ನ ಕಡೆ ಸೆಳೆದಿದ್ದಳು. ಎಲ್ಲರೂ ಅವಳನ್ನು ಕೂಗಿ ಕೂಗಿ ಕರೆಯುವವರೇ, ಚೇಷ್ಟೆ ಮಾಡುವವರೇ. ಅವಳು ಒಮ್ಮೆ ಮಾತಾಡಿದರೆ ಸಾಕು ಘೊಳ್ಳನೆ ನಕ್ಕು ಗುಂಪು ನಗೆತುಂಬಿ ಬಿರಿಯುತ್ತಿತ್ತು. ಹುಡುಗಿ ನಿಜಕ್ಕೂ ಆ ಗುಂಪಿನ ಹಾಸ್ಯರಸದ ಊಟೆಯಾಗಿದ್ದಳು.

'ಲಿಲ್ಲೀ, ನಿಮ್ಮ ಅಜ್ಜಿ ನಡೆಯೋದು ಹೇಗಮ್ಮಾ' ಅಂದರೆ

'ಹೀಗೆ. . .ಹೀಗೆ. . .' ಎಂದು ಆ ಹುಡುಗಿ ಅವರ ಅಜ್ಜಿಯನ್ನು ಅಣಕಿಸಿ ನಡೆಯುತ್ತಿತ್ತು. ಅಜ್ಜಿ, 'ಬಂದೆ ನಿಲ್ಲು ಕತ್ತೆ' ಎಂದು ಅವಳ ಹಿಡಿಯಹೋದರೆ, ಆ ಹುಡುಗಿ ತನ್ನ ತಾಯಿಯ ಮರೆಗೋ, ತಂದೆಯ ಮರೆಗೋ ಓಡಿಹೋಗಿ ಅವಿತು ಕೊಳ್ಳುತ್ತಿದ್ದಳು.

'ಲಿಲ್ಲೀ, ಒಂದು ಡ್ಯಾನ್ಸ್ ಮಾಡಮ್ಮಾ' ಅಂದರೆ ತೀರಿತು, ಅವಳಿಗೆ ಬಹಳ ಖುಷಿ. ತತ್ಕ್ಷಣವೇ ಮೂಟೆಗಳನ್ನು ಬಟ್ಟೆ ಬರೆಗಳನ್ನೂ ತುಂಬಿದ್ದ ಬೋಳು ಬಂಡಿಯ ಮೇಲೆ ಹತ್ತಿ ಅದರ ಮಧ್ಯೆ ನಿಂತು ಹಾಡು ಹಾಡಿಕೊಂಡು ನರ್ತನ ಮಾಡಿ ಎಲ್ಲರನ್ನೂ ತಣಿಸುತ್ತಿದ್ದಳು. ನಾಟ್ಯ ಮುಗಿಯುವ ಹೊತ್ತಿಗೆ ಲಿಲ್ಲೀ ಒಂದು ವಿಚಿತ್ರ ಭಂಗಿಯಲ್ಲಿ ನಿಂತುಕೊಳ್ಳುತ್ತಿದ್ದಳು. ಇದನ್ನು ಕಂಡಾಗಲಂತೂ ಆ ಗುಂಪು ಶಿಳ್ಳೆ, ನಗೆ, ಚಪ್ಪಾಳೆಗಳೊಂದಿಗೆ ತಮ್ಮ ತಮ್ಮ ತೋಪಿ, ರುಮಾಲುಗಳನ್ನು ಮೇಲಕ್ಕೆಸೆದು ಹಾರಿ ಕುಣಿಯುತ್ತಿತ್ತು.

ಈ ಗುಂಪು ಕಾನಾ ನಗರವನ್ನು ಬಿಟ್ಟು ಐದುಮೈಲು ದೂರ ಬಂದಿರಬಹುದು. ಲಿಲ್ಲಿಯ ಅಣಕನಾಟ್ಯಗಳಲ್ಲಿ ಮೈಮರೆತು ನಗುತ್ತಿದ್ದ ಗುಂಪಿಗೆ ಇದ್ದಕ್ಕಿದ್ದ ಹಾಗೆಯೇ ಬ್ಯೂಗಲ್‌ನ 'ತುತ್ತುತ್ತೂ' ಎಂಬ ಭಯಂಕರ ನಾದ ಕೇಳಿ ಬಂತು. ಎಲ್ಲರೂ ಬೆಚ್ಚಿ ಬಿದ್ದರು. ಗದ್ದಲ ನಗೆ ಎಲ್ಲವೂ ಕ್ಷಣಾರ್ದದಲ್ಲಿ ನಿಂತುಹೋಗಿ ಕೆಂದೂಳು ಮೇಲೆದ್ದಿತು. 'ದಾರಿಬಿಡಿ ದಾರಿಬಿಡಿ ! ಎಂದು ಕೂಗಿ ಕೊಳ್ಳುತ್ತಾ ಜನ ಅವಸರ ಪಡುವಷ್ಟರಲ್ಲಿ ನಾಲ್ಕಾರು ರೋಮನ್ನರ ರಣ ರಥಗಳು ಧಾವಿಸಿ ಬಂದವು. ರಥಗಳು ತಮ್ಮನ್ನು ಸಮೀ ಪಿಸಿದ ಕೂಡಲೇ ಗುಂಪು ಎರಡು ಹೋಳಾಗಿ ಹಾದಿಬಿಟ್ಟಿತು. ಆದರೆ ಅವಸರದಲ್ಲಿ ಲಿಲ್ಲಿಯ ಅಜ್ಜಿಗೆ ಪಕ್ಕಕ್ಕೆ ಸರಿಯಲು ಆಗದೆ ರಥದ ರಭಸಕ್ಕೆ ತತ್ತರಿಸಿಬಿದ್ದಳು. ರಥದ ಚಕ್ರವೊಂದು ಅವಳ ಕಾಲಮೇಲೆ ಹರಿಯಿತು. ಕಾಲು ತುಂಡಾಯಿತು. ರಕ್ತ ಹರಿದು

ಮಡುಗಟ್ಟಿತು. ರಥವು ತತ್‌ಕ್ಷಣ ನಿಂತಿತು. 'ಥೂತ್ ಕಚ್ಡಾ ಮುದಕಿ, ಬೇಗ ಸರಿಯೋಕೆ ಏನಾಗಿತ್ತು ನಿನಗೆ ?' ಎಂದು ಮುಖ ಸಿಂಡರಿಸಿಕೊಂಡು ನುಡಿದು ತನ್ನ ಕೈಯಲ್ಲಿದ್ದ ಕೊರಡಿನಿಂದ ಒಂದು ಬಲವಾದ ಏಟುಕೊಟ್ಟ ರೋಮನ್ ಸಿಪಾಯಿ.

ಏಟನ್ನು ತಾಳಲಾರದೆ ಮುದುಕಿ ಸುತ್ತಿ ಬಿದ್ದಳು. 'ಅಯ್ಯೋ ! ಅಯ್ಯೋ !!' ಎಂದು ಚೀತ್ಕಾರ ಒಮ್ಮೆಲೆ ಎದ್ದಿತು ಆ ಗುಂಪಿನಲ್ಲಿ. 'ಮುಚ್ಚುಬಾಯ್ ಮುದಿಗೂಬೆ ! ಮತ್ತೊಮ್ಮೆ ಚೀರಿದ್ದಾದರೆ ಎಲ್ಲರ ಗಂಟಲುಗಳು ಹರಿದುಹೋದಾವು ಎಚ್ಚರಿಕೆ !' ಎಂದು ಮತ್ತೊಂದು ರಥದಲ್ಲಿದ್ದ ಸಿಪಾಯಿ ಅಬ್ಬರಿಸಿ ತನ್ನ ಚಾಟಿಯಿಂದ 'ಛಟೀರ್' ಎಂದು ಶಬ್ದಮಾಡಿದ.

ಜನವೆಲ್ಲಾ ಸಿಡಿಲು ಬಡಿದವರಂತೆ ಸ್ತಬ್ಧರಾಗಿ ನಿಂತರು. ಆದರೆ ಗಾಡಿಯ ಮೇಲಿದ್ದ ಲಿಲ್ಲಿಗೆ ಈ ದೃಶ್ಯವನ್ನು ನೋಡಿ ಸಹಿಸಲಾಗಲಿಲ್ಲ ! ಥೂ ! ನಿಮ್ಮ ಮುಖಕ್ಕೆ ಬೆಂಕಿಹಾಕ, ನಿಮಗೇನು ಬಂದು ಕೇಡು, ನೀವೇನು ಮನುಷ್ಯರೋ ? ಯೆಹೂದಿಗಳ ರಕ್ತವೆಂದರೆ ನಿಮಗೇನು ಅಷ್ಟೊಂದು ಸವಿಯೆ ?' ಎಂದು ಬೈದು ಪಕ್ಕದ ರಥದಲ್ಲಿದ್ದ ಸಿಪಾಯಿಯ ಮುಖಕ್ಕೆ ಉಗುಳಿದಳು. ಆ ಸಿಪಾಯಿಗೆ ಸಿಟ್ಟು ಬಂದು 'ಹ್ರೋ ! ಕುನ್ನೀ !!' ಎಂದು ಅರಚುತ್ತಾ ಬಲಗೈಯ ಚಬಕವನ್ನು ಬೀಸಿ ಎಡಗೈಯ ಲಗಾಮಿನ ಪಟ್ಟಣಿಯನ್ನು ಜಗ್ಗಿದನು. ಮುಂದಿನ ಕಾಲುಗಳನ್ನು ಮೇಲೆತ್ತಿ ಒಮ್ಮೆ ಕೆನೆದು ಕುದುರೆಗಳು ಮುಂದಕ್ಕೆ ಛಂಗನೆ ಹಾರಿದವು. ರಥ ಮುಂದೆ ಹೋದ ಮೇಲೆ ಲಿಲ್ಲಿಯ ಶರೀರ ಕೆಂಧೂಳಿಯಲ್ಲಿ ರಕ್ತಮಯವಾಗಿ ವಿಲಿವಿಲಿ ಒದ್ದಾಡುತ್ತಿತ್ತು. ಸಿಪಾಯಿಯ ಚಬಕು ಲಿಲ್ಲಿಯ ದೇಹವನ್ನು ಸುತ್ತಿ ರಥದ ಕೆಳಕ್ಕೆ ಎಳೆದಿತ್ತು. ಬಾಯಿಬಾಯಿ ಬಿಡುತ್ತಿದ್ದ ಮಗುವನ್ನು ತಾಯಿ ತೊಡೆಯಮೇಲೆ ಹಾಕಿಕೊಂಡು ನೆತ್ತರಿನ ಕೆಸರನ್ನು ಒರಸಿ ಕಣ್ಣೀರಿನಿಂದ ಅದರ ಮುಖ ತೊಳೆದಳು. ಬಾಯಿಗೆ ಸ್ವಲ್ಪ ನೀರು ಬಿಡಲಾಯಿತು. ಆದರೆ ಬಿಟ್ಟ ನೀರು ಹೊರಗೆ ಬಂತು ! ಅವರೆಲ್ಲರೂ ಹೆದರಿದರು. ಮುದ್ದಿನ ಲಿಲ್ಲಿ ಅಲ್ಲಿರಲಿಲ್ಲ. ಪಾಪ ! ಮುದುಕಿಯೂ ಸಹ ಅದೇ ಹಾದಿ ಹಿಡಿದಿದ್ದಳು. ತಮ್ಮ ರಥಗಳನ್ನು ಓಡಿಸುವ ಮುನ್ನ ಈ ದೃಶ್ಯವನ್ನು ಕಂಡು ಕೇಕೆ ಹಾಕಿ ನಕ್ಕಿದ್ದ ರೋಮನ್ ಸಿಪಾಯಿಗಳ ವಿಕಟ ನಗೆ ಇನ್ನೂ ಅಲ್ಲಿ ಅಲೆ ಅಲೆಯಾಗಿ ಸುಳಿಯುತ್ತಿತ್ತು !

ಆ ಗುಂಪಿನಲ್ಲೇ ಮೌನವಾಗಿ ಒಂದು ದಂಪತಿಗಳ ಜೋಡಿ ಬರುತ್ತಿತ್ತು ! ಈ ರಣಮೇಧವನ್ನು ಕಂಡ ಹೆಣ್ಣು ಜೀವ ತನ್ನ ಪತಿದೇವನನ್ನು ಬಿಗಿಯಾಗಿ ಅಪ್ಪಿಹಿಡಿದಿತ್ತು. ಪತಿ ಸಂತೈಸುತ್ತಾ ಅವಳ ಬೆನ್ನು ಸವರುತ್ತಾ, 'ಓ ದೇವರೇ ! ಓ ದೇವರೇ ! ನೀನಿರುವುದು ನಿಜವಾದಲ್ಲಿ ಈ ದೈತ್ಯತೆಯನ್ನು ತಡೆಯಲಾರೆಯಾ ? ಅಥವಾ ಇದೇ ನಿನ್ನ ಇಚ್ಛೆಯೇ ? ಮನುಷ್ಯ ಮನುಷ್ಯನಾಗಿ ಬಾಳುವುದನ್ನು ಮೊದಲು ಕಲಿಸು ತಂದೆ. ಮೊದಲು ಕಲಿಸು !' ಎಂದು ನುಡಿದ. ಎಲ್ಲರೂ ಚಣಕಾಲ ಮೊಣಕಾಲೂರಿ ಪ್ರಾರ್ಥನೆ ಸಲ್ಲಿಸಿ ಮುಂದೆ ನಡೆದರು. ಯಾರೋ ಆ ವ್ಯಕ್ತಿಯನ್ನು ಕೇಳಿದರು.

'ಯಾವ ಊರು ಸ್ವಾಮಿ ತಮ್ದು ?'

'ಹ್ಞಾ, ನಮ್ಮದು ನಜರೇತ್,'

'ಪ್ರಯಾಣ ?'

'ಇಲ್ಲೇ ಬೆತ್ಲೆಹೆಮ್‌ಗೆ'

'ಹೆಸರು'

'ಜೋಸೆಫ್'

'ಇವರು'

'ಈಕೆ ನನ್ನ ಹೆಂಡತಿ, ಹೆಸರು ಮೇರಿ'

'ನಮಸ್ತೆ'

'ನಮಸ್ತೆ'

'ಪಾಪ ಗರ್ಭಿಣಿ ಅಂತ ಕಾಣುತ್ತೆ, ಎಷ್ಟು ತಿಂಗಳೊ ?'

'ಒಂಬತ್ತು ತುಂಬುತ್ತಾ ಬಂತು ತಾಯಿ, ಇದೇ. . .! '

'ಚೊಚ್ಚಲು ಬಸಿರು ?. . .ಪಾಪ ! ಆ ರಾಕ್ಷಸರ ಆರ್ಭಟದಲ್ಲಿ ಗರ್ಭಸ್ರಾವವಾಗದೇ ಇದ್ದುದು ಹೆಚ್ಚು ! ಆ ಪಾಪಿ ರಕ್ಕಸರ ಸೊಲ್ಲು ಎಂದು ಅಡುಗುತ್ತೋ ಆ ಮತಿಗೆಟ್ಟ ದೇವರಿಗೇ ಗೊತ್ತು !'

'ಛೇ ಛೇ ! ಹಾಗೆಲ್ಲ ದೇವರನ್ನು ನಿಂದಿಸಬಾರದು. ಪರಮಾತ್ಮನಿಗೆ ಇದೂ ಒಂದು ಲೀಲೆಯಾಗಿ ಕಂಡಿರಬೇಕು. ಅದಕ್ಕೇ ಇದೆಲ್ಲಾ ನಡೆಯುತ್ತಿದೆ. ಇದು ಬೇಸರವಾದಾಗ ತಾನೇ ಬೇರೊಂದು ಆಟ ತೆಗೆದು ಆಡಿಯಾನು. ಆತ ಯಾವ ಘಳಿಗೆಯಲ್ಲಿ

ಯಾವ ರೂಪದಲ್ಲಿ ಬರುತ್ತಾನೋ ಯಾರಿಗೂ ತಿಳಿಯದು. ಅವನು ಬರುವ ತನಕ ಸಮಾಧಾನದಿಂದ ಕಾಯುತ್ತಿರಬೇಕು ಅಷ್ಟೆ' ಎಂದ.

ಯಾರಿಗೆ ಗೊತ್ತು ದುಃಖಿತ ಜಗತ್ತಿನ ದುಃಖಕೋಟಿಯನ್ನು ದೂರಮಾಡಬಲ್ಲ ದೇವಪುತ್ರನೇ ಮೇರಿಯ ಗರ್ಭದಲ್ಲಿ ವೃದ್ಧಿಯಾಗುತ್ತಿರುವನೆಂದು ! ಅವಳ ಬಾಳಿನ ಬಂಜರಿನಲ್ಲಿ ವಸಂತದ ಹೂ ಅರಳುವುದೆಂದು ಯಾರಿಗೆ ಗೊತ್ತು !! ಅವಳ ದಾರುಣ ಜೀವಿತದ ಬಿರುಬಿಸಲಿನಲ್ಲಿ ವಿಶ್ವಮಾನವ ಅವತಾರವಾಗುವುದೆಂದು ಯಾರಿಗೆ ಗೊತ್ತು !!!

೨

ಬೆತ್ಲೆಹೆಮ್ ಹಳ್ಳಿಯ ಬೀದಿಗಳೆಲ್ಲ ಜನಸಂದಣಿಯಿಂದ ಕಿಕ್ಕಿರಿದು ಹೋಗಿದ್ದುವು. ಹಳ್ಳಿಯ ಯಾವ ಮೂಲೆಯಲ್ಲೂ ಒಂದು ಅಂಗೈ ಅಗಲದಷ್ಟು ಬೆಚ್ಚಗಿನ ತಾಣ ಸಿಗುತ್ತಿರಲಿಲ್ಲ. ಗುಡಿಗುಡಾರಗಳಲ್ಲಿ ಜನ, ಅಂಗಡಿ ಮುಗ್ಗಟ್ಟುಗಳಲ್ಲಿ ಜನ, ಛತ್ರ ಧರ್ಮಶಾಲೆಗಳಲ್ಲಿ ಜನ, ಎಲ್ಲಿ ನೋಡಿದರಲ್ಲಿ ಜನರ ಜಂಗುಳಿಯೇ, ಮಕ್ಕಳುಮರಿ, ಹೆಂಗಸರು, ಮುದುಕರು ಚಳಿಯ ಕೊರೆತವನ್ನು ತಡೆಯಲಾರದ ಚೀತ್ಕಾರವೇ. 'ವಿಶ್ರಾಂತಿ ಸದನ', 'ಭೋಜನ ಭವನ', 'ಫಲಾಹಾರ ಮಂದಿರ' ಎಲ್ಲವೂ ಜನರ ತುಂಬಲಿಯಿಂದ ಬಿರಿತು ಹೋಗಿದ್ದವು.

ಜೋಸೆಫನಿಗೆ ಬಹಳ ಚಿಂತೆಗಿಟ್ಟುಕೊಂಡಿತು. ತನ್ನ ಮೋಹದ ಮಡದಿ ಮೇರಿ ಈಗ ತುಂಬಿದ ಬಸುರಿ. ನಾಲ್ಕಾರು ದಿವಸಗಳ ಪ್ರವಾಸದಿಂದ ಪ್ರಯಾಸಗೊಂಡಿದೆ ಆ ಬಡಜೀವ. ಅವಳಿಗಾದರೂ ಅಷ್ಟು ಸುರಕ್ಷಿತವಾದ ಸ್ಥಳ ಸಿಕ್ಕರೆ ಸಾಕೆಂದು ಪರದಾಡಿದ. ಆದರೆ ಎಲ್ಲೂ ಸ್ಥಳ ಸಿಗಲಿಲ್ಲ. ಕಡೆಗೆ ಒಬ್ಬ ರೈತನ ನೆರವು ದೊರಕಿತು. ಜೋಸೆಫನ ಸಂತೋಷಕ್ಕೆ ಪಾರವಿಲ್ಲವಾಯಿತು. ತನ್ನ ಪತ್ನಿ ಹಾಗೂ ನೆರಮನೆಯವರೇ ಆದ ಸುಸಾನಾ ಮತ್ತು ಮಾರ್ಥಾ ಎಂಬುವರನ್ನೂ ಕರೆದುಕೊಂಡು ಆ ರೈತನನ್ನು ಹಿಂಬಾಲಿಸಿ ಹೋದ. ಊರಿಗೆ ಆಚೆ ಬಹುದೂರದಲ್ಲಿ ಆ ಬಡರೈತನ ಒಂದೇ ಒಂದು ಜೋಪಡಿ. ಅವನ ಕುಟೀರದ ಪಕ್ಕದಲ್ಲೇ ದನಕರುಗಳನ್ನು ಕಟ್ಟುವುದಕ್ಕೂ, ಕುರಿ ಮೇಕೆಗಳನ್ನು ಕೂಡುವುದಕ್ಕೂ ಮಾಡಿಕೊಂಡಿದ್ದು ಒಂದು ರೊಪ್ಪ. ಆ ರೊಪ್ಪದ ಮೂಲೆಯೊಂದರಲ್ಲಿ ಈ ಅತಿಥಿಗಳಿಗೆ ತಂಗಲು ಅವಕಾಶಮಾಡಿ ಕೊಟ್ಟಾಯಿತು. ಬಸವಳಿದು ಬೆಂಡಾಗಿದ್ದ ಮೇರಿ ತಮ್ಮ ಚಿರವಾದ ಚಿರಾಸ್ತಿಯೆಂದು ಬಹು ಜೋಪಾನವಾಗಿ ಬಹಳ ದಿನಗಳಿಂದಲೂ ಬಚ್ಚಿಟ್ಟಿದ್ದ ಹೊದಿಕೆಯೊಂದನ್ನು ಬಿಚ್ಚಿ ಅರ್ಧಹಾಸಿ ಅರ್ಧಹೊದೆದು ಮಲಗಿದಳು. ಅವಳ ಜೊತೆಯಲ್ಲಿ ಅವಳ ಗೆಳತಿಯರೂ ಒರಗಿದರು. ಜೋಸೆಫ್ ಮಾತ್ರ ತಲೆಗೆ ಸುತ್ತಿದ್ದ ರುಮಾಲನ್ನೇ ಹೊದೆದುಕೊಂಡು ದನದ ಗೋದಲೆಯಲ್ಲಿ ತನ್ನ ಕೈಕಾಲುಗಳನ್ನು ಬಿಗಿಯಾಗಿ ಮುದುಡಿಕೊಂಡು ಹಾಗೇ ಕುಕ್ಕರಿಸಿದ.

ಸುಮಾರು ಸರಿರಾತ್ರಿ ಮೀರಿರಬಹುದು. ಗದ್ದಲದ ಗೂಡಾಗಿದ್ದ ಊರು ಆಗ ಮೌನದ ಮುದ್ದೆಯಾಗಿತ್ತು. ಅದರೂ ನೆರೆಹೊರೆಯ ರೊಪ್ಪಗಳಲ್ಲಿ ಜಾವ ಕಾಯುತ್ತಿದ್ದ ಕುರುಬರ ಮಾತುಗಳು. ಆಗೊಮ್ಮೆ ಈಗೊಮ್ಮೆ ಕೇಳಿಬರುತ್ತಿದ್ದವು. ಆಗಾಗ್ಗೆ ನಾಯಿಗಳು ಬಗಳುವುದೂ ಸಹ ಕೇಳಿಬರುತ್ತಿತ್ತು. ಆಗ ಮೇರಿ ಇದ್ದಕ್ಕಿದ್ದ ಹಾಗೆಯೇ ದಿಢೀರನೇ ಮೇಲೆದ್ದು ತಥಾಸ್ತು ! ತಥಾಸ್ತು !! ತಥಾಸ್ತು!!! ಎಂದು ಕೂಗಿಕೊಂಡಳು. ತತ್‌ಕ್ಷಣವೇ ಜೋಸೆಫ್, ಸುಸಾನಾ, ಮಾರ್ಥಾ ಅವರಿಗೂ ಎಚ್ಚರವಾಯಿತು. ಹಚ್ಚಿಟ್ಟಿದ್ದ ಮೇಣದ ಬತ್ತಿ ಉರಿಯುತ್ತಲೇ ಇತ್ತು. ಜೋಸೆಫ್ ಭೀತನಾಗಿ 'ಮೇರಿ, ಮೇರಿ, ಏನಾಯ್ತು ಮೇರಿ ? ಏಕೆ ? ಏತಕ್ಕಾಗಿ ಕನವರಿಸಿದೆ ಎಂದು ಕೇಳಿದ. ಚಣಕಾಲ ಸುಮ್ಮನೆ ಏನನ್ನೋ ಶೂನ್ಯದೃಷ್ಟಿಯಲ್ಲಿ ಈಕ್ಷಿಸಿದ ಮೇರಿ ನಸುನಕ್ಕು ನುಡಿದಳು. 'ಏನಿಲ್ಲ ಸ್ವಾಮಿ ಕನಸು, ಬಹು ಸುಂದರವಾದ ಕನಸು. ನನ್ನ ಜೀವಿತದಲ್ಲೇ ಪ್ರಪ್ರಥಮ ಬಾರಿಗೆ ಕಂಡ ಜೇನುಗನಸು !'

'ಹ್ಞಾ ! ಕನಸೇ ?'

'ಬರೀ ಕನಸಲ್ಲ ವಾಸ್ತವತೆಯ ಸುಂದರ ಸ್ವಪ್ನ ಸ್ವಾಮಿ. ಈಗ ಸ್ವಲ್ಪಹೊತ್ತಿಗೆ ಮುಂಚೆ ಬಾನು ಬಾಯ್ತೆರದಂತಾಗಿ ಅದರಿಂದ ಪ್ರಭಾಪುಂಜಿತ ತೇಜಸ್ಸೊಂದು ಅವತರಿಸಿದ್ದನ್ನು ಕಂಡೆ ! ಅದು ತೀರ ಸಮೀಪಿಸಿದಾಗ ಚಂದ್ರಿಕೆಯಿಂದ ನಿರ್ಮಿತವಾದ ಮಂಟಪಕ್ಕೆ ಮಿರುಗುವ ತಾರೆಗಳ ಬಳ್ಳಿಯನ್ನು ಸುತ್ತಿದ್ದನ್ನು ಕಂಡೆ. ಆ ಕುಟಿಯಲ್ಲಿ ಶ್ವೇತಪಕ್ಷಗಳನ್ನು ಪಡೆದು ಶ್ವೇತವಸ್ತ್ರಧಾರಿಯಾಗಿ ಶ್ವೇತ ದಂಡವೊಂದನ್ನು ಕೈಯಲ್ಲಿ ಹಿಡಿದಿದ್ದ ಓರ್ವ ದಿವ್ಯ ಪುರುಷನು ನನ್ನನ್ನು ಕುರಿತು, 'ಮೇರಿ, ಓ ಮೇರಿ, ನನ್ನನ್ನು ನೋಡಿ ಭಯಪಡಬೇಡ. ನಾನು ಗೇಬ್ರಿಯಲ್ ! ಪರಮಾತ್ಮನ ಮಾನಸಪುತ್ರ. ನಿನಗೆ ಒಂದು ದಿವ್ಯಸಂದೇಶವನ್ನು ತಿಳಿಸಿ ಹೋಗಲು ಆತನಿಂದ ಆಜ್ಞಪ್ತನಾಗಿ ಇಲ್ಲಿಗೆ ಬಂದಿದ್ದೇನೆ. ನಿನ್ನ ಉದರದಲ್ಲಿರುವ ಶಿಶು ಸಾಧಾರಣವಾದದ್ದೆಂದು ತಿಳಿಯಬೇಡ. ಪರಮಾತ್ಮನ ಅಂಶವೇ ಶಿಶುರೂಪಿಯಾಗಿ ನಿನ್ನ ಗರ್ಭದಲ್ಲಿ ಆವಿರ್ಭವಿಸಿದೆ. ಅದಕ್ಕೆ ನೀನು 'ಯೇಸು' ಎಂದು ಹೆಸರಿಡಬೇಕು. 'ಯೇಸು' ಅಂದರೆ

'ರಕ್ಷಕ' ಎಂದರ್ಥ. ಅವನು ಸರ್ವರ ರಕ್ಷಕನಾಗುತ್ತಾನೆ. ಯೆಹೂದಿಗಳ ಅರಸನೆಂದು ಖ್ಯಾತನಾಗಿ ಅಮರನಾಗುತ್ತಾನೆ. ನೀನು ಮಹಾ ಮಾತೆ. ನಿನ್ನ ಗರ್ಭ ಪುಣ್ಯಗರ್ಭ. ಇದೋ ಅದಕ್ಕೆ ನನ್ನ ಸಹಸ್ರ ಪ್ರಣಾಮಗಳು. ನಾನು ಬಂದ ಕಾರ್ಯ ಮುಗಿಯಿತು. ನಾನಿನ್ನು ಹೋಗಿ ಬರುತ್ತೇನೆ ತಾಯಿ' ಎಂದು ಹೇಳಿ ಮೇಲೇರಿ ಹೊರಟನು. ಆ ವೇಳೆಯಲ್ಲಿ ಅವನ ಕೈಯಲ್ಲಿದ್ದ ಬಿಳಿಯ ದಂಡದಿಂದ ಶುಭ್ರತಾರೆಯೊಂದು ಇಳಿದು ಬಂದು ನನ್ನ ಗರ್ಭವನ್ನು ಪ್ರವೇಶಿಸಿದಂತಾಯಿತು. ಆ ದೇವದೂತನ ಮಾತಿಗೆ ಉತ್ತರವಾಗಿ ನಾನು 'ತಥಾಸ್ತು' ಎಂದಿರಬೇಕು ಅಷ್ಟೆ !'

'ಅಬ್ಬಾ ! ಏನು ಕನಸು ಏನು ಕನಸು' ಎನ್ನುವಷ್ಟರಲ್ಲಿಯೇ ಮೇರಿಗೆ ಹೆರಿಗೆಯ ಸೂಚನೆ ಕಾಣಿಸಿಕೊಂಡಿತು. ಜೋಸೆಫ್ ಮೇಲೆದ್ದು ಹೊರಗೆ ಹೋಗಿ ಜೋಪಡಿಯ ಮೂಲೆಯಲ್ಲಿ ಗದಗದ ನಡುಗುತ್ತಾ ಮೊಣಕಾಲುಗಳ ಸಂದಿಯಲ್ಲಿ ತಲೆಯಿಟ್ಟು ಕೊಂಡು ಕುಗ್ಗಟ್ಟಿ ಕುಳಿತ. ಚಣಕಾಲದಲ್ಲಿ ಹೆರಿಗೆಯಾಯಿತು. ಮೇರಿಗೆ ಎಳ್ಳಷ್ಟೂ ನೋವು ತರಲಿಲ್ಲ. ಮೊದಲು ಜೋಸೆಫ್ ಮಲ ಗಿದ್ದ ದನದ ಗೋದಲೆಯಲ್ಲಿಯೇ ಚಿಂದಿಬಟ್ಟೆಯ ಸುಪ್ಪತ್ತಿಗೆ ಹಾಸಿ, ಹರಕುಸೀರೆಯ 'ರತ್ನಗಂಬಳಿ'ಯನ್ನು ಹೊದಿಸಿ ಶಿಶುವನ್ನು ಮಲಗಿಸಲಾಯಿತು.

ಮಾರ್ಥಾ ಜೋಸೆಫ್‌ನನ್ನು ಕೂಗಿ ಹೇಳಿದಳು. 'ಜೋಸೆಫ್ ಜೀಸಸ್' ಎಂದು. ಚಳಿಯ ಕೊರೆತವನ್ನೂ ಮರೆತು ಚಂಗನೆ ನೆಗೆದು ಜೋಸೆಫ್ 'ದೇವರು ದೊಡ್ಡವನು, ದೇವರು ದೊಡ್ಡವನು !!' ಎಂದು ಹೇಳಿಕೊಂಡು ಅಷ್ಟಗಲಕ್ಕೂ ಕುಣಿದಾಡಿದ. ಸುಸಾನಾ ಅವನ ಕುಣಿತದಲ್ಲಿ ಪಾಲ್ಗೊಳ್ಳಲು ತಾನೂ ಹೊರಗೆ ಓಡಿಬಂದು ಜೋರಾಗಿ ಕೂಗಿದಳು.

'ಜೋಸೆಫ್ ಮೇರಿ ಜೀಸಸ್ !'

'ಜೋಸೆಫ್ ಮೇರಿ ಜೀಸಸ್ !!'

೩

ನಲವತ್ತು ದಿನಗಳು ಕಳೆದವು. ಜ್ಯೂ ಜನಾಂಗದಲ್ಲಿದ್ದ ಅಂದಿನ ಪದ್ಧತಿಯಂತೆ, ಪ್ರಾಚೀನ ಪ್ರವಾದಿ ಮೋಸೆಸನ ಕಟ್ಟಳೆ ಯಂತೆ ಸೂತಕದ ದಿನಗಳು ಕಳೆದ ಮೇಲೆ ಜೋಸೆಫ್ ಮತ್ತು ಮೇರಿ ಮಗುವನ್ನು ಜೆರೊಸಲೆಮ್ಮಿನ ದೇವಾಲಯಕ್ಕೆ ಕೊಂಡೊ ಯ್ದರು. ಪರಮಾತ್ಮನ ಪದತಲದಲ್ಲಿ ಅವನ ಕಾರುಣ್ಯದ ಶಿಶುವನ್ನು ಅರ್ಪಿಸಲಾಯಿತು. ಅದೇ ಸಮಯಕ್ಕೆ ದೇವಾಲಯಕ್ಕೆ ಆಗ ಮಿಸಿದ ಧರ್ಮಜ್ಞ ಸಿಮೋಯಿನ್ ಶಿಶುವನ್ನು ಮೇಲೆತ್ತಿ ತಕ್ಕೆಸಿ, ಮುದ್ದಿಟ್ಟು 'ಜೋಸೆಫ್, ದೇವರ ಕರುಣೆ ಅಪಾರವಾದದ್ದು. ಈ ಮಗುವಿಗೆ ಉಜ್ವಲ ಭವಿಷ್ಯವಿದೆ. ಇದನ್ನು ಜೋಪಾನ ಮಾಡುವುದು ನಿಮ್ಮೀರ್ವರ ಕರ್ತವ್ಯ. ಬಹುದಿನಗಳಿಂದಲೂ ಹಂಬಲಿಸು ತ್ತಿದ್ದ ನನ್ನ ಕಣ್ಣುಗಳು ಕಾಣಬಹುದಾದ್ದನ್ನು ಕಂಡು ಸಾರ್ಥಕವಾದುವು. ನಾನೇ ಭಾಗ್ಯಶಾಲಿ ! ನೀವೇ ಧನ್ಯರು ! ಸರ್ವಶಕ್ತನು ಸರ್ವರಿಗೂ ಸನ್ಮಂಗಳವನ್ನೀಯಲಿ' ಎಂದು ಹಾರೈಸಿ, ಮೊಣಕಾಲೂರಿ ಪ್ರಾರ್ಥನೆ ಸಲ್ಲಿಸಿ ಆ ಶಿಶುವನ್ನು ಅವರ ಮಡಲಿಗಿರಿ ಸಿದರು.

ಜ್ಯೂ ಜನರ ಪರಿಸ್ಥಿತಿ ಆಗಿನ್ನೂ ಅಷ್ಟಾಗಿ ಸುಧಾರಿಸಿರಲಿಲ್ಲ. ಶಿಶುವನ್ನು ಸಂರಕ್ಷಿಸಿಕೊಂಡು ಸುರಕ್ಷಿತ ಜೀವನವನ್ನು ಸಾಗಿ ಸುವುದು ಜೋಸೆಫನ ಬಡ ಸಂಸಾರಕ್ಕೆ ಸಾಧ್ಯವಿರಲಿಲ್ಲ. ಬಡತನ ಒಂದುಕಡೆ ಕಿತ್ತು ತಿನ್ನುತ್ತಿದ್ದರೆ, ಮತ್ತೊಂದು ಕಡೆ, ಗೆಲಿಲೀ ರಾಷ್ಟ್ರದ ಉಪನಾಯಕ ಹೆರೋದನ ಕಠೋರಾಜ್ಞೆ ಸಿಡಿಯಿತು. ಗೇಬ್ರಿಯಲ್ ಕನಸಿನಲ್ಲಿ ಮೇರಿಗೆ ಹೇಳಿದ ವಾಕ್ಯಗಳನ್ನು ಯಾರೋ ಮತ್ತಾರಿಗೋ ತಿಳಿಸಿದರಂತೆ. ಅದು ಒಬ್ಬರ ಬಾಯಿಂದ ಮತ್ತೊಬ್ಬರ ಬಾಯಿಗೆ ಹಾದು ಹೆರೋದನ ಕಿವಿಗೂ ಬಿದ್ದಿ ತಂತೆ. 'ಯಾವುದೋ ಎಂದು ಬಡ ಕುಟುಂಬದಲ್ಲಿ ಯಹೂದಿಗಳ ಅರಸನು ಜನಿಸಿರುವನೆಂದೂ, ಗೇಬ್ರಿಯಲ್ ಕನಸಿನಲ್ಲಿ ತಿಳಿಸಿದನೆಂದೂ ವಿಚಾರ ತಿಳಿದ ಮೇಲೆ ಹೆರೋದನಿಗೆ ಸಿಡಿಲು ಬಡಿದಂತಾಯಿತು. 'ಸರ್ವಶ್ರೇಷ್ಠ ಸೀಸರನ ಆಳ್ವಿಕೆಗೆ ಒಳಗಾದ ಈ ರಾಷ್ಟ್ರದಲ್ಲಿ ನಾನು ಉತ್ತರಾಧಿಕಾರಿಯಾಗಿ ನಿಂತಿರಬೇಕಾದರೆ ಮತ್ತಾರೋ ಧೂರ್ತ ಜನಿಸಿರುವನಂತೆ. ಇರಲಿ, ಬಲಿಯುವ ಮುನ್ನವೇ ಆ ಮುಳ್ಳಿನ ಬಳಗವನ್ನೇ ನಿರ್ಮೂಲ ಮಾಡಬೇಕು !' ಎಂದು ತನಗೆ ತಾನೇ ಬಗೆದು ಎರಡು ವರ್ಷ ವಯಸ್ಸಿನ ಗಂಡುಮಕ್ಕಳೆಲ್ಲವನ್ನೂ ಹಿಡಿತರಿಸಿ ಕೊಲ್ಲಲು ಉದ್ಯುಕ್ತನಾದನು.

ಈ ಗಂಡಾಂತರದಿಂದ ಪಾರಾಗಲು ಜೋಸೆಫ್ ತನ್ನ ಹೆಂಡತಿ ಮಗುವಿನ ಸಂಗಡ ಈಜಿಪ್ಟ್ ದೇಶಕ್ಕೆ ಓಡಿಹೋಗಬೇಕಾ ಯಿತು. ಶಿಶುವಿನ ಸಂವರ್ಧನ ಕಾರ್ಯದಲ್ಲಿ ನಿರತನಾದ ಜೋಸೆಫ್ ತನ್ನ ಕುಲಕಸುಬಾದ ಬಡಗಿ ಕೆಲಸವನ್ನು ಮುಂದುವರಿಸಿ ಹೇಗೋ ಕೆಲವು ದಿನಗಳನ್ನು ಅಲ್ಲಿ ಕಳೆದ. ಅಷ್ಟರಲ್ಲಿ ಗೆಲಿಲಿಯ ಪರಿಸ್ಥಿತಿ ಸುಧಾರಿಸಿತೆಂಬುದನ್ನರಿತು ಪುನಃ ಆ ಕುಟುಂಬ ಕುಡಿಕೆ ಮಡಿಕೆಗಳೊಂದಿಗೆ ನಜರೇತ್ ಹಳ್ಳಿಯನ್ನು ಸೇರಿತು.

ಕಾಲಚಕ್ರ ಹನ್ನೆರಡು ಉರುಳು ಉರುಳಿತು. ವರ್ಚಸ್ವಿ ಬಾಲಕ ಕ್ರಿಸ್ತನ ಪ್ರಭಾವಮುದ್ರೆ ಬಹುತೇಕ ಮಂದಿಯ ಮನೋಮಂದಿರದಲ್ಲಿ ಸುಪ್ರತಿಷ್ಠಿತವಾಗಿತ್ತು. ಪ್ರೇಮವನ್ನು ಕೊಟ್ಟು ಪ್ರೇಮವನ್ನೇ ಕೊಳ್ಳುತ್ತಿದ್ದ ಈ ವಿಶ್ವಪ್ರೇಮಿಯ ಬಗ್ಗೆ ಎಲ್ಲರಿಗೂ ಆದರವೇ. ಎಲ್ಲರೂ ಅವನನ್ನು ಕರೆದು ಸತ್ಕರಿಸಿ, ಅಮೃತವಾಣಿಯನ್ನಾಲಿಸಿ ಕೇಳಿ ಕಳಿಹಿಸುವವರೇ. ಹೀಗಾಗಿ ಕ್ರಿಸ್ತನಿಗೆ ಬಡ ಜೋಸೆಫನ ಜೋಪಡಿ ಸಾಲದಾಯಿತು. ಮನೆಬಿಟ್ಟು ಹೊರಟ. ಅದೊಂದು ಮಧ್ಯಾಹ್ನ ಜೀಸಸ್ ದಕ್ಷಿಣದ ಬೆಟ್ಟವನ್ನಿಳಿದು ಜೋರ್ಡಾನ್ ನದಿಯ ಕಡೆಗೆ ಬರುತ್ತಿದ್ದ. ಅವನ ಆಗಮನವನ್ನು ಮರಳು ದಿಣ್ಣೆಯ ಮೇಲೆ ನಿಂತಿದ್ದ ಮತ್ತೊಬ್ಬ ಮಹಾಪುರುಷನು ದೂರದಿಂದಲೇ ಕಂಡು ಹರ್ಷ ಪುಲಕಿತನಾಗಿ ಅವನಿಗೆ ಸ್ವಾಗತ ಬಯಸಿದ.

"ಬಾ ನನ್ನ ದೊರೆ, ಬಾ ನನ್ನ ದೈವವೆ. ಬಹು ದಿನಗಳಿಂದಲೂ ನಿನಗಾಗಿ ಕಾದು ಕುಳಿತಿದ್ದೆ. ಈ ಮಹಾನದಿಯ ಪವಿತ್ರ ತೀರ್ಥದಲ್ಲಿ ಮಿಂದು ಮಂಗಳನಾಗು ಬಾ ; ನಮಗೆಲ್ಲ ಮಂಗಳವ ಕೋರು ಬಾ ; ನಮ್ಮೆದೆಗೆ ಸೊದೆ ಸುರಿಯೆ ಬಾ."

ಉದ್ದವಾದ ಕೋಲೊಂದನ್ನು ಎದೆಗೊರಗಿಸಿಕೊಂಡು ತನ್ನೆರಡೂ ಕೈಗಳನ್ನು ಮೇಲೆತ್ತಿ ಕರೆಯುತ್ತಿದ್ದ ಆ ಮಹಾವ್ಯಕ್ತಿ ಉಣ್ಣೆಯಿಂದ ಕೂಡಿದ ಕರಿಯ ಚರ್ಮದ ತುಂಡೊಂದನ್ನು ಉಟ್ಟಿದ್ದ. ಮತ್ತೊಂದು ತುಂಡನ್ನು ಅಡ್ಡ ಹೊದಿಕೆ ಹಾಕಿ ಕಟ್ಟಿದ್ದ. ಅವನ ಸುತ್ತಲೂ ಅನೇಕ ಮಂದಿ ಶಿಷ್ಯರು ನೆರೆದಿದ್ದರು. ಎಲ್ಲರೂ ಕುತೂಹಲಚಿತ್ತರಾಗಿ ಆಗಮಿಸಿ ಆಗಂತುಕ ಮಹಾಶಯನಿಗೆ ಹಾರ್ದಿಕ ಸ್ವಾಗತ ಕೋರಿದರು. ಬಹುಶಃ, ಯೇಸುವಿಗೆ ಆ ಮಧುರಮಿಲನದ ಸಂದರ್ಭ ಆಶ್ಚರ್ಯಗೊಳಿಸಿರಬೇಕು. ಬಂದವನೇ ಆ ಮಹಾಪ್ರವಾದಿಯ ಅನುಜ್ಞೆಯ ಮೇರೆ ಜೋರ್ಡಾನ್ ನದಿಯಲ್ಲಿ ಮಿಂದು, ಪುನೀತನಾದೆನೆಂಬ ಭಾವದಿಂದ ಮರಳಿನ ಮತ್ತೊಂದು ದಿಣ್ಣೆಯ ಮೇಲೆ ನಿಂತ. ಆ ಕೂಟಕ್ಕೆ ನೋಟ ಮಿಗಿಲಾಗಿತ್ತು ! ಮಂಜುಳ ಮಧುರಗೀತೆಯನ್ನು ಹಾಡುತ್ತಲೇ ಹರಿಯುತ್ತಿತ್ತು ಹೊನಲು. ಅಲೆಅಲೆಯಾಗಿ ಬಿದ್ದಿದ್ದ ಮರಳುರಾಶಿಯ ಮೇಲೆ ಬಿಸಿಲ ನೆರಳು ಸುಳಿಯುತ್ತಿತ್ತು. ಯೇಸುವಿನ ಮುಖದಿಂದ ವಾಣಿಯೊಂದು ಹೊರಬಿತ್ತು. 'ನೀನಾರು ತಂದೆ ? ಮಲಿನತೆಯ ಗೂಡಾದ ಈ ಮಂದಿರವನ್ನು ಮಂಗಳವನ್ನಾಗಿಸಿದ ಶ್ರೀಮೂರ್ತಿ ನೀನಾರು ? ಅಪರಿಚಿತನಾದ ನನ್ನನ್ನು ಚಿರಪರಿಚಿತನಂತೆ ಕಂಡು ಸ್ವಾಗತಿಸಿದ ಮಹಾನುಭಾವ ನೀನಾರು ? '

'ನಾನು, ಜಾನ್. ಜೀಸಸ್, ಜಕರಿ ಮತ್ತು ಎಲಜಿಬೆತ್ತರ ಪ್ರೇಮ ದಾಂಪತ್ಯದ ಫಲ. ಪ್ರವಾದಿಯೆಂದು ಕರೆಸಿಕೊಳ್ಳುವ ಹುಲುಮಾನವ. ನಿನ್ನನ್ನು ದರ್ಶಿಸಿದ ಈ ದಿನ ನನ್ನ ಬಾಳ ಇತಿಹಾಸದಲ್ಲಿ ಒಂದು ಸುವರ್ಣ ಸಂಪುಟ. ಬಹಿರ್ಮುಖದ ಬತ್ತಲೆಯ ಬಯಲಿಗೆ ನೀನು ಅಪರಿಚಿತನಾದರೂ ನನ್ನ ಅಂತರಂಗವೇದಿಯಿಂದ ನಿನ್ನಲ್ಲಿ ನಾನು **ಅವನನ್ನು ಕಂಡೆ** ! ಕಂಡು ಸ್ವಾಗತಿಸಿ ಧನ್ಯನಾದೆ.'

'ಸಂತೋಷ, ಸ್ನಾಪಕ ಮಹಾಶಯ. ನೀನು ಮಾಡಿಸಿದ ದೀಕ್ಷಾ ಸ್ನಾನದಿಂದ ನಾನು ತನುಮನಗಳಲ್ಲಿ ಮಡಿಯಾದೆ. ನಿಮ್ಮೆಲ್ಲರ ಆಶಯದಂತೆ ನಾನವನ ಮುಡಿಯ ಮಲ್ಲಿಗೆಯಾಗುತ್ತೇನೆ. ಭರವಸೆ ಇರಲಿ. ನಾನಿನ್ನು ಹೋಗಿಬರುತ್ತೇನೆ.' ಎಂದು ಹೇಳಿ ತನ್ನ ಹಾದಿ ಹಿಡಿದು ಹೊರಟ. ಜಾನ್ ಮಹಾಶಯ ತನ್ನ ಶಿಷ್ಯರೊಂದಿಗೆ ನಮಿಸಿ ಬೀಳ್ಕೊಟ್ಟ.

ಗೆಲಿಲಿಯ ಸರೋವರದ ಏರಿಯ ಮೇಲೆ ಒಂದು ಕಡೆ ಸೈಮನ್ ಪೀಟರ್ ಮತ್ತು ಅವನ ತಮ್ಮ ಆಂಡ್ರೂಸ್ ಗಾಳಗಳನ್ನು ಹಾಕಿ ಮೀನು ಹಿಡಿಯುತ್ತಿದ್ದರು. ಗಾಳಿ ಜೋರಾಗಿ ಅಲೆಯ ಏರಿಳಿತಗಳು ಹೆಚ್ಚಿದ್ದರಿಂದ ಮೀನುಗಳು ಬಹಳ ಪ್ರಮಾಣದಲ್ಲಿ ಅವರಿಗೆ ಸಿಕ್ಕಿರಲಿಲ್ಲ. ಸೋದರರಿಬ್ಬರೂ ಮೀನಿಗಾಗಿ ಪರದಾಡುತ್ತಿದ್ದಾಗ ಜೀಸಸ್ ಅತ್ತ ಸಾಗಿಬಂದ. ಮೀಂಗುಲಿಗರಿಬ್ಬರನ್ನೂ ತುಂಬು ದೃಷ್ಟಿಯಿಂದ ನೋಡಿದ. ಅವನ ಕಣ್ಣುಗಳಲ್ಲಿ ಕನಸೊಂದು ಸುಳಿಯುತ್ತಿತ್ತು. ಅವನ ಮಾತಿನಲ್ಲಿ ಮಿಂಚೊಂದು ಹೊಳೆಯುತ್ತಿತ್ತು. 'ಬನ್ನಿ ಸೋದರರೆ, ಬಡಪಾಯಿ ಮೀನುಗಳಿಗಾಗಿ ನಿಮ್ಮಾತ್ಮಶಕ್ತಿ ವ್ಯಯವಾಗಬಾರದು. ಎಲ್ಲಕ್ಕಿಂತ ಮಿಗಿಲಾದ ಮೀನುಗಳ ತಾಣವನ್ನು ತೋರಿಸುತ್ತೇನೆ. ನನ್ನೊಡನೆ ಬನ್ನಿ.' ಎಂದು ಗಂಭೀರ ಗತಿಯಲ್ಲಿ ಮುಂದುವರಿದ. ಆ ಮನೋಹರಾಕೃತಿಯನ್ನೇ ಹಿಂಬಾಲಿಸಿ ಸೂತ್ರದ ಬೊಂಬೆಗಳಂತೆ ಪೀಟರ್ ಮತ್ತು ಆಂಡ್ರೂಸ್ ಸಾಗಿದರು. ಜೀಸಸ್ ಅವರಿಬ್ಬರನ್ನೂ ಬಹು ದೂರ ಒಂದು ಬೆಟ್ಟದ ಶಿಖರದೆಡೆ ಕೊಂಡೊಯ್ದ. ಅಲ್ಲಿಯವರೆಗೂ ಮಾತು ಮೌನವನ್ನಾಶ್ರಯಿಸಿತು. ಕಲ್ಲು ಬಂಡೆಯ ಹಾಸಿಗೆ ಮೇಲೆ ಮೂವರೂ ಮಂಡಿಸಿದರು. ಪೀಟರ್ ಕೇಳಿದ, 'ಏನು ಮಹಾತ್ಮ, ಮೀನಿರುವುದು ನೀರಿನಲ್ಲಿ, ಬೆಟ್ಟದ ಬಂಡೆಗಳ ಮೇಲಲ್ಲ, ಅಥವಾ ಗಿಡಮರಗಳ ರೆಂಬೆಗಳಲ್ಲಲ್ಲ !'

'ಗೊತ್ತು ಪೀಟರ್, ನನಗೆ ಚೆನ್ನಾಗಿ ಗೊತ್ತು. ಆದರೆ ನೀವು ಕೇವಲ ನೀರಿನ ಮೀಂಗುಲಿಗರಾದರೆ ಸಾಲದು. ಜಗದ ಮುಗ್ಧ ಜನತೆಯನ್ನು ಬುದ್ಧರಾಗಿಸುವ ಬೆಸ್ತರಾಗಬೇಕಾಗಿದೆ. ನನ್ನೊಡನೆ ಬನ್ನಿ ಮಾರ್ಗ ತೋರಿಸುತ್ತೇನೆ. ಜಗದೀಶ್ವರನು ನಿಮಗೆ ಸರ್ವಶಕ್ತಿಗಳನ್ನೂ ದಯಪಾಲಿಸಲಿ.'

ಹೀಗೆಂದು ಹೇಳಿ ಅವರನ್ನು ಕರೆದೊಯ್ದ. ಅಂದು ಪೀಟರನ ಮನೆಯಲ್ಲಿ ಭೋಜನವಾದ ಮೇಲೆ ಅವನ ಹೆಂಡತಿ ಮಕ್ಕಳನ್ನು ಸಂತೈಸಿ, ಬಲೆಬೀಸಿ ಮೀನು ಹಿಡಿಯುತ್ತಿದ್ದ ಮೀಂಗುಲಿಗರನ್ನೇ ತನ್ನ ಪ್ರೇಮದ ಬಲೆಯಲ್ಲಿ ಸಿಕ್ಕಿಸಿ ಹಿಡಿದು ಹರ್ಷಚಿತ್ತನಾಗಿ ಮುನ್ನಡೆದ.

ಜೀಸಸ್ ಇದೇ ರೀತಿ ತನ್ನ ಶಿಷ್ಯಬಳಗವನ್ನು ವೃದ್ಧಿಮಾಡಿಕೊಂಡ. ಪ್ರಪ್ರಥಮವಾಗಿ ಸಿಕ್ಕ ಪೀಟರ್ ಮತ್ತು ಆಂಡ್ರೂಸರ ಜೊತೆಗೆ ಇನ್ನೂ ಜೊತೆಗೆ ಹತ್ತು ಮಂದಿ ಶ್ರೇಷ್ಠ ಶಿಷ್ಯರನ್ನು ಸಂಪಾದಿಸಿಕೊಂಡು ಹಳ್ಳಿ, ನಗರ, ಊರು ಕೇರಿಗಳನ್ನು ಸುತ್ತಿ, ಎಲ್ಲೆಡೆಯೂ ಕಂಡುಬಂದ ಅಜ್ಞಾನವನ್ನು ತನ್ನ ಅಮೃತವಾಣಿಯಿಂದ ಪರಿಹರಿಸಿ ಮುಂದುವರಿದ. ದೀನದಲಿತರ ದುಃಖವನ್ನು ತಾನೇ ಕಿವಿಯಾರ ಕೇಳಿ ಪರಿಹರಿಸಲು ಬಹಳವಾಗಿ ಶ್ರಮಿಸಿದ. ಬಡಜನರ ಭಾಗ್ಯ ದೇವತೆಯಾದ, ಹಸಿದವರಿಗೆ ಅನ್ನವಾದ, ಅಜ್ಞಾನಿಗಳಿಗೆ ಜ್ಞಾನದೀವಿಗೆಯಾದ.

ಅಂದು ಯೆಹೂದಿಗಳಲ್ಲಿ ಪ್ರಖ್ಯಾತವಾದ ಪಸ್ಕಹಬ್ಬ. ಜೀಸಸ್ ತನ್ನ ಶಿಷ್ಯಮಂಡಲಿಯೊಡನೆ ಜೆರೂಸಲೆಮಿಗೆ ಆಗಮಿಸಿದ. ನಗರದ ಬೀದಿ ಬೀದಿಗಳಲ್ಲೂ ಸ್ವಾಗತ ಇವನಿಗಾಗಿ ಕಾದಿತ್ತು. ಇದಾವುದರಲ್ಲೂ ಅಭಿರುಚಿ ಇರದಿದ್ದ ಜೀಸಸ್ ನೇರವಾಗಿ ಮಹಾ ಮಂದಿರವೊಂದಕ್ಕೆ ಹೋದ. ಆ ದೇವಾಲಯ ದೇವರ ನೆಲೆವೀಡಾಗಿರಲಿಲ್ಲ, ಭಕ್ತಿಯ ತೌರಾಗಿರಲಿಲ್ಲ, ಅದು ಚಿನಿವಾರರ ವ್ಯಾಪಾರ ಕೇಂದ್ರವಾಗಿತ್ತು. ಪಾರಿವಾಳಗಳ ಮಾರಾಟ ಭರದಿಂದ ಸಾಗಿತ್ತು. ಜೀಸಸ್‌ಗೆ ಇವೆಲ್ಲವನ್ನೂ ಕಂಡು ಮೈ ಉರಿಯಿತು. ಗರ್ಭಗುಡಿಯ ದ್ವಾರದಲ್ಲಿ ನಿಲ್ಲಿಸಿದ್ದ ಕುರಿಬಾರಿನ ಕೊರಡೆಯನ್ನು ಕೈಗೆ ತೆಗೆದುಕೊಂಡು ಅಲ್ಲಿದ್ದ ಮಾರಾಟಗಾರರ ಮೇಲೆ ಥಳಿಸುತ್ತಾ, ಮಾರಾಟದ ಮೇಜುಗಳನ್ನು ಬಲಿಗಾಗಿ ಮಾರಾಟಮಾಡುತ್ತಿದ್ದ ಪಾರಿವಾಳದ ಗೂಡುಗಳನ್ನು ಉರುಳಿಸಿ ಕಿತ್ತೊಗೆದ. 'ಪಾಪಿಗಳೇ, ಹೀನಕೃತ್ಯಕ್ಕೆ ಮೇರೆಯೇ ಇಲ್ಲವಾಯಿತೆ ! ಈ ಅನ್ಯಾಯ ಅಧರ್ಮಕಾರ್ಯಗಳಿಗಾಗಿ ಸ್ಥಾನಮಾನ ಬೇಡವೆ ? ತಂದೆಯ ಪವಿತ್ರಮಂದಿರವನ್ನು ಕಟುಕರ ಕಟ್ಟೆಯನ್ನಾಗಿಸುವಿರಾ ? ನಿಮ್ಮ ಹೀನ ಪ್ರವೃತ್ತಿಗೆ ಧಿಕ್ಕಾರವಿರಲಿ. ಸರ್ವಸ್ವತಂತ್ರವಾಗಿ ನಭೋಮಂಡಲದಲ್ಲಿ ಹಾರುತ್ತಾ ಅದನ್ನೇ ತಮ್ಮ ವಾಸಗೃಹವನ್ನಾಗಿಸಿಕೊಂಡಿರುವ ಆ ಬಡಜೀವಿ ಪಾರಿವಾಳಗಳನ್ನು ಸ್ವೇಚ್ಛೆ ಯಾಗಿ ಬಿಟ್ಟುಬಿಡಿ. ಅವುಗಳ ಪ್ರಾಣಹತ್ಯೆಯಿಂದ ನಿಮ್ಮ ದೇವರು ತೃಪ್ತನಾಗುವುದಿಲ್ಲ. ನಿಮಗೆ ಮುಕ್ತಿಯನ್ನು ದೊರಕಿಸಿಕೊಡುವು ದಿಲ್ಲ. ಏಳಿ, ಪ್ರಾರ್ಥನಾಲಯವನ್ನು ಬಿಟ್ಟು ತೊಲಗಿ' ಎಂದು ಸಿಂಹಗರ್ಜನೆ ಮಾಡಿ ಓಡಿಸಿದ. ಜನ ಕಂಗಾಲಾಗಿ ಓಡಿತು. ಶಾಂತವಾತಾವರಣವೇರ್ಪಟ್ಟ ಬಳಿಕ ಜೀಸಸ್ ತನ್ನ ಶಿಷ್ಯರೊಡನೆ ಆ ಪ್ರಾರ್ಥನಾಮಂದಿರದಲ್ಲಿ ಬಹಳಕಾಲ ಮಾನವನ ಮರುಜನ್ಮದ ಕಲ್ಪನೆ, ದೇವದೂತರ ಅವತಾರದ ರಹಸ್ಯ, ಮಾನವನ ಬಾಳಿನ ಬಹು ಮುಖ್ಯವಾದ ಗುರಿ ಇತ್ಯಾದಿಗಳ ಬಗ್ಗೆ ವಿಚಾರಪೂರಿತ ವ್ಯಾಖ್ಯಾನವನ್ನು ನೀಡಿದ.

ಅಷ್ಟರಲ್ಲಿ ಅವನ ಹನ್ನೆರಡು ಮಂದಿ ಪ್ರಮುಖ ಶಿಷ್ಯರಲ್ಲೊಬ್ಬನಾದ ಜೂಡಾಸ್ ಒಂದು ಕೆಟ್ಟ ಸುದ್ದಿಯನ್ನು ತಂದು 'ಜೀಸಸ್, ಬಹಳ ಸಂಕಟದಿಂದ ತಿಳಿಸಬೇಕಾಗಿದೆ. ಇಂದು ಬೆಳಗ್ಗೆ ನಿಮ್ಮ ತಂದೆ ಜೋಸೆಫ್ ಪರಂಧಾಮವನ್ನೈದಿದರಂತೆ !' ಈ ವಿಚಾರವನ್ನು ಕೇಳಿ ಸಭೆಯೇ ಸತ್ತಂತಾಯಿತು. ಆದರೆ ಜೀಸಸ್ ಮಾತ್ರ ಕಿಂಚಿತ್ತೂ ಚಿಂತೆಗೊಳಗಾಗಲಿಲ್ಲ. ನಗೆಯ ಮಿಂಚೊಂದು ಆತನ ತುಟಿಗಳ ಮೇಲೆ ಮಿಂಚಿತು. 'ಬಂಧುಗಳೇ, ಇಷ್ಟು ಹೊತ್ತು ನಾನು ಹೇಳಿದ ಜನನ ಮರಣದ ರಹಸ್ಯ ವನ್ನು ಕೇಳಿ ತಿಳಿದು ಈಗ ಮೂಕರಾಗಿ ಮರುಗುವುದರಲ್ಲಿ ಅರ್ಥವಿಲ್ಲ. ನನ್ನ ಈ ಇಪ್ಪತ್ತನೆಯ ವಯಸ್ಸಿನವರೆಗೆ ಮಾತ್ರ ಜೋಸೆ ಫನಿಗೆ ಮಗನ ಸೌಭಾಗ್ಯವನ್ನು ನೋಡುವ ಭಾಗ್ಯವಿತ್ತು. ಅದು ಇಂದಿಗೆ ಮುಗಿತು ಅಷ್ಟೆ. ಅದಕ್ಕಾಗಿ ಯಾರೂ ಚಿಂತಿಸಬಾರದು. ಆ ಚಿಂತೆಯಲ್ಲಿ ಅರ್ಥವೇ ಇಲ್ಲ. ನಾನೇನೂ ಅನಾಥನಲ್ಲ. ನನ್ನ ತಾಯಿ ಎಂದಿಗೂ ವಿಧವೆಯಲ್ಲ. ವಿಶ್ವದ ಜೀವಕೋಟಿಯ ಸಂರಕ್ಷಕನಾದ ತಂದೆ ಚಿರಾಯುವಾಗಿರುವಾಗ ಅವನ ಪ್ರೀತಿಯ ಪುತ್ರರಾದ ನಾವಾರೂ ಅನಾಥರಲ್ಲ.' ಇಷ್ಟು ಹೇಳಿ ಮುಗಿಸಿದ ಮೇಲೆ, ಎಲ್ಲರೂ ಮೊಣಕಾಲೂರಿ ಪ್ರಾರ್ಥನೆ ಸಲ್ಲಿಸಿ ಚಣಕಾಲ ಮೌನವನ್ನಾಚರಿಸಿ ಜೋಸೆಫನ ಆತ್ಮಕ್ಕೆ ಶಾಂತಿಯನ್ನು ಕೋರಿದರು.

೪

ಶ್ರಾವಣದ ದಿನವೊಂದರ ಪ್ರಭಾತ ಸಮಯ. ಅರುಣಕಾಂತಿ ಮಗ್ದಲದ ಹಾದಿಬೀದಿಗಳನ್ನೂ, ಉದ್ಯಾನ ಪ್ರಕೃತಿಯನ್ನೂ ವರ್ಣರಂಜಿತವನ್ನಾಗಿಸಿದೆ. ಸುಂದರ ಭವನವೊಂದರ ಕೈತೋಟದಲ್ಲಿ ಸೈಪ್ರೆಸ್ ಗಿಡದ ಬುಡದಲ್ಲಿ ಉಷೆಯ ಲಾಸ್ಯವನ್ನೇ ಮೈಯೆಲ್ಲಾ ಕಣ್ಣಾಗಿ ಈಕ್ಷಿಸುತ್ತಾ ಜೀಸಸ್ ಕುಳಿತಿದ್ದ. ಉಪ್ಪರಿಗೆಯ ಕಿಟಕಿಯಿಂದ ಈತನನ್ನು ಕಂಡ ಆ ಮನೆಯೊಡತಿ ಮಗ್ದಲದ ಮೇರಿ ಆನಂಭರಿತಳಾದಳು. ಯೌವನದ ಮೆರಗಿನಲ್ಲಿ ಸೌಂದರ್ಯದ ಪುತ್ಥಳಿಯಂತಿದ್ದ ಆತನನ್ನು ಕಂಡ ಅವಳ ಕಣ್ಣುಗಳಲ್ಲಿ

ಕಾಮಕಳೆಯೇರಿತು. ಮನದಲ್ಲಿ ಮೋಹ ಮೊಳೆದೋರಿತು. ಬಹುದಿನಗಳಿಂದಲೂ ಆತನ ಬಗ್ಗೆ ಅವರವರಿಂದ ಕೇಳಿದ್ದ ಆಕೆ ಅವನನ್ನೇ ಪ್ರತ್ಯಕ್ಷ ಕಂಡು ತನ್ನ ಮನೋಭೀಷ್ಟವನ್ನು ಈಡೇರಿಸಿಕೊಳ್ಳಬೇಕೆಂಬ ಹಂಬಲ ತೀವ್ರವಾಯಿತು. ಡಮಾಸ್ಕಸ್ ಬಟ್ಟೆಯನ್ನುಟ್ಟು ಚೆಲುವು ಗೆಲುವಿನ ಆಭರಣಗಳನ್ನು ತೊಟ್ಟು, ರೋಮ್ ಚಕ್ರವರ್ತಿಗಳ ಅರಸಿಯರು ತೊಡುವ ಪಾದರಕ್ಷೆಗಳನ್ನು ಹಾಕಿಕೊಂಡು ಅವನೆಡೆಗೆ ನಡೆದಳು.

'ಸುಪ್ರಭಾತ ಜೀಸಸ್'

'ಸುಪ್ರಭಾತ ತಾಯಿ !'

ಸ್ತಬ್ಧಳಾದಳು ಮೇರಿ. 'ಸುಪ್ರಭಾತ ತಾಯಿ !' ಮಾತಿನಲ್ಲಿ ಸಾಗರದ ನಿಸ್ವನ ತುಂಬಿತ್ತು. ಮಾರುತನು ಮರಗಳೊಡನಾಡುವ ಮರ್ಮರಧ್ವನಿ ಅಡಗಿತ್ತು. ಮಾರಾರಿ ಎದುರಿನಲ್ಲಿ ಮಾರ ಚರ್ಚಿಸುವಂತೆ 'ಓ ಜೀಸಸ್, ಓ ನನ್ನ ಆಗಸದಮಲ ಆಶಾ ಕಿರಣವೇ, ಆರ್ತರಾದವರಿಗೆ ಅಮೃತದ ಚಿಲುಮೆ ನೀನಂತೆ ! ಮಳೆಯಾಗಿ ಸುಳಿದು, ಹೊಳೆಯಾಗಿ ಹರಿದು, ನನ್ನೆದೆಯ ಬಂಜರನ್ನು ಹಚ್ಚಹಸುರಾಗಿಸು ! ನಾನಿನ್ನು ನಿನ್ನವಳು, ನೀನೆನಗೆ ನಾಥ !

'ಅಯ್ಯೋ ಅನಾಥಾ ! (ನಗುತ್ತಾ) ಮೇರಿ ಸಾಕುಮಾಡು, ನಿನ್ನ ವ್ಯರ್ಥಾಲಾಪ. ಈ ಸೈಪ್ರೆಸ್ ಗಿಡವು ನಿನ್ನದಾಗಿದ್ದರೆ ನಾನಲ್ಲಿರುವುದು ನಿನಗೆ ಇಷ್ಟವಿಲ್ಲವಾದರೆ ಇದೋ ಅಪ್ಪಣೆಕೊಡು ಹೊರಟೆ. ನನ್ನ ಈ ಅಕ್ರಮ ಪ್ರವೇಶಕ್ಕೆ ಕ್ಷಮೆಯಿರಲಿ.

'ಬೇಡಿ ಸ್ವಾಮಿ ಬೇಡಿ, ಅಪರಾಧವೆನಿಸಿದರೆ ಕ್ಷಮಿಸಿ. ನೀವು ನನ್ನ ಮನೆಗೆ ಬರುವುದಿಲ್ಲವೆ ?'

'ಈಗಾಗಲೇ ನಾನು ನಿನ್ನ ಮನೆಯೊಳಗಿಲ್ಲವೆ !'

'ಅರ್ಥವಾಗದು ಜೀಸಸ್ ನಿನ್ನ ಮಾತು. ಈ ದಿನ ನೀನೆನ್ನ ಅತಿಥಿ. ಅತ್ಯಂತ ಮಹತ್ವದ ಅತಿಥಿ ! ಯಾರಿಗೂ ಬಯಸದ ಸ್ವಾಗತ ನಿನಗಿಂದು ಕಾದಿದೆ. ಯಾರಿಗೂ ಬಡಿಸದ ಊಟ ನಿನಗಾಗಿ ಹಸಿದಿದೆ. ಯಾರೂ ಸವಿಯದ ಮಧು ನಿನಗಾಗಿ ದಾಹಗೊಂಡು ಬಳಲಿದೆ. ಬಾ ನನ್ನದೊರೆ, ಬಾ ನನ್ನಮನೆಗೆ. . .ಬೇಗೆದ್ದು ಬಾ. ನನ್ನ ಜೀವನದಲ್ಲಿ ಇಂದು ಬೇವು ಬೆಲ್ಲದ ದಿನ. ಇದನ್ನು ನಾನು ವ್ಯರ್ಥ ಮಾಡಿಕೊಳ್ಳಲಾರೆ. ಇಂದು ನನ್ನ ಸೌಂದರ್ಯ ಸಾಮರ್ಥ್ಯದ ಸೌಧಕ್ಕೆ ಸಾರ್ಥಕತೆಯ ಕಳಶವನ್ನಿಡುತ್ತೇನೆ. ನಾನು ಕಾಣುವ ನೆಲವೆಲ್ಲ ಹಸಿರು, ಬಾನೆಲ್ಲ ನೀಲಿ ! '

'ಮೇರಿ ಮಗ್ದಲ, ಸಾಕು ನಿನ್ನ ಭ್ರಮೆಯ ಆಲಾಪ. ನನಗೆ ಗೊತ್ತು ನಿನಗೆ ಅನೇಕ ಜನ ಪ್ರೆಮಿಗಳಿದ್ದಾರೆಂದು. ನಾನೂ ಒಬ್ಬ ನಿನ್ನ ಪ್ರೇಮಿಯೆ, ಆದರೆ ಆ ಪ್ರೇಮದ ಅಂತರದಲ್ಲಿ ಎರಡು ಧ್ರುವಗಳ ವ್ಯತ್ಯಾಸವಿದೆ. ಎಲ್ಲಾ ನಿನ್ನ ಪ್ರೇಮಿಗಳು ನಿನ್ನ ಸಾನ್ನಿಧ್ಯದಲ್ಲಿ ತಮ್ಮನ್ನು ತಾವೇ ಪ್ರೀತಿಸುತ್ತಾರೆ ! ಆದರೆ ಅದು ಅವರಿಗೂ ತಿಳಿಯದು, ನಿನಗೂ ತಿಳಿಯದು. ಕೇಳು, ನಾಯಿ ಮೂಳೆಯನ್ನು ಕಡಿಯುವಾಗ ತನ್ನ ಕಟವಾಯಿಯಲ್ಲಿ ಸುರಿಯುವ ತನ್ನ ಜೊಲ್ಲನ್ನೇ ಮತ್ತೆ ಮತ್ತೆ ಸವಿದು, ಆ ಸವಿ ಮೂಳೆಯದೆಂದು ಭಾವಿಸುತ್ತದೆ. ಅಂತಾಗಿದೆ ನಿಮ್ಮೆಲ್ಲರ ಕೂಟ. ಆದರೆ ನನ್ನ ಪ್ರೇಮದ ದೃಷ್ಟಿ ಬೇರೆ. ನಾನು ನಿನ್ನ ಅಂತರಂಗದಲ್ಲಿ ಪೀಠಸ್ಥವಾಗಿರುವ 'ನಿನ್ನನ್ನು' ಪ್ರೀತಿಸುತ್ತೇನೆ. ಜನ ವಯಸ್ಸಿಗೆ ಮುನ್ನವೇ ಅಳಿಸಿಹೋಗುವ ಚೆಲುವನ್ನು ನಿನ್ನಲ್ಲಿ ಕಂಡರೆ, ನಾನು ಎಂದೆಂದಿಗೂ ನಶಿಸದೆ ಇರುವ ಸೌಂದರ್ಯವೊಂದನ್ನು ದರ್ಶಿಸಿದ್ದೇನೆ. ಆ ಚೆಲುವು ನಿನಗೆ ಮುಪ್ಪಡಿಸಿದರೂ, ದೇಹ ಮಾಗಿ ಮಡಿದು ಮಣ್ಣಾದರೂ ಅದು ಅಮರವಾಗಿಯೇ ಇರುವುದು. ಯಾರೂ ಅದನ್ನು ನೋಡಿ ಅಂಜಲಾರರು, ಅಸಹ್ಯಪಡಲಾರರು. ಮೇರಿ ಮಗ್ದಲ, ಇದೇ ಪ್ರೇಮದ ಗುಟ್ಟು, ಒಂದು ವೇಳೆ ಅದು ಕೇವಲ ಶಾರೀರಿಕ ಅಂಶವಾಗಿದ್ದರೆ, ಅದನ್ನು ಕಾದ ಕಬ್ಬಿಣದ ಕುಳಗಳಿಂದ ಸುಟ್ಟು ಕಳೆಯಬಹುದಾಗಿತ್ತು. ಆದರೆ ಅದು ಸ್ಪರ್ಶನಾತೀತವಾದ ಆತ್ಮನಲ್ಲಿ ಅಂತರ್ಗತವಾಗಿದೆ. ಇದೇ ನಾನರಿತಿರುವ ಪ್ರೇಮದ ಸ್ವರೂಪ. ಮಗ್ದಲದ ಮೋಹಿನಿ, ಪ್ರೇಮದ ಅರ್ಥ ತಿಳಿಯದೆ ವರ್ತಿಸಿದರೆ ಅನಾಹುತಕ್ಕೀಡಾಗಬೇಕಾದೀತು ಎಚ್ಚರಿಕೆ?'

'ಗುರುವೇ, ದಿವ್ಯೋಪದೇಶವಿತ್ತ ಪರಮಗುರುವೇ, ನನಗಿದಾವುದರ ಅರ್ಥವೂ ತಿಳಿಯುತ್ತಿಲ್ಲ'

'ತಿಳಿಯುತ್ತದೆ ಅದಕ್ಕೆ ಸಾಕಷ್ಟು ಕಾಲಬೇಕು. ದಿನಗಳು ಬಲಿಯಬೇಕು ಅಷ್ಟೆ ! '

'ಕಡೆಯದಾಗಿ ನನ್ನ ಪ್ರಾರ್ಥನೆ. ದಯಮಾಡಿ ಮನ್ನಿಸು. ನನ್ನ ಮನೆಗಿಂದು ಬಾ ಸ್ವಾಮಿ. ನನ್ನೊಡನೆ ಸವಿನುಡಿಗಳನ್ನಾಡಿ, ನಾನು ಕೊಡುವ ಹೊಂಬಟ್ಟಲಿನ ಮಧುವನ್ನು ಸ್ವೀಕರಿಸಿ ಧನ್ಯಳನ್ನಾಗಿಸು. ಬಾ ನನ್ನ ದೊರೆ.'

'ಬರುತ್ತೇನೆ ತಾಯಿ. ಆದರೆ ಇಂದಲ್ಲ. ಸಮಯ ಸನ್ನಿಹಿತವಾದಾಗ ಕರೆಸಿಕೊಳ್ಳದೆ ಬರುತ್ತೇನೆ. ಆ ಸಮಯ ಬರಲಿ. . .ಆ ಸಮಯ ಬರಲಿ. . .' ಮಾತನಾಡುತ್ತಾ ಆಡುತ್ತಾ ಎದ್ದು ಹೊರಟೇಹೋದ. ಅವನ ನಡಿಗೆಯಲ್ಲಿ ಋತುಗಳ ಚಲನವಿತ್ತು ಮೇರುವಿನ ಗತಿಯಿತ್ತು.

ಅದು ವಸಂತ ಸಮಯ. ಹರ್ಷೋದಯದ ಆಕರ್ಷಕ ಸಮಯ. ತಿರೆಯರಸಿ ಮುಗಿಲೆರೆಯನಿಗೆ ಒಲವೆರೆದ ಸಮಯ. ಆಗ ಹಸಿರಪಚ್ಚೆಗೆ ಬಿಸಿಲು ತನ್ನ ಮೆರುಗು ಮೆತ್ತಿತ್ತು. ತೆಳುಗಾಳಿಯು ಮರಗಿಡಗಳ ಮರೆಯಲ್ಲಿ ಸಿಳ್ಳು ಹಾಕಿ ಸಾಗುತ್ತಿತ್ತು. ನಜರೆತ್‌ನ ಪಶ್ಚಿಮ ಸಾನುಪ್ರದೇಶದ ಮೇಲಿನ ಹಿಮವು ಹಳ್ಳಗಳೊಡನೆ ಹಾಡಲು ಬಯಸಿ, ಕಣಿವೆಯು ಕೊಳ್ಳಗಳಿಗಿಳಿಯತೊಡಗಿತ್ತು. ಎಲ್ಲೆಡೆಯೂ ಉಲಿವ ಹಕ್ಕಿಗಳ ಮಂಗಳಗೀತ ಮಧುರ ಸಂದೇಶವೊಂದನ್ನು ಜಗತ್ತಿಗೆ ಸಾರುವಂತಿತ್ತು. ಹೊಸ ಹರಯದ ವಸಂತಲಕ್ಷ್ಮಿ ಘಮಘಮಿಪ ಹೂವುಗಳನ್ನು ಮುಡಿದು ಚೆಂದಳಿರ ಚೆಂದುಟಿಯ ಚೆಲುವನ್ನು ಬೀರಿ ನರ್ತಿಸುತ್ತಿದ್ದಳು. ಪ್ರಕೃತಿಯ ಈ ಅಮೂಲ್ಯದೌತಣವನ್ನು ಸವಿದು ತೃಪ್ತರಾಗಬಯಸಿ, ಹೆಣ್ಣುಗಂಡು ಆದಿಯಾಗಿ ಸಹಸ್ರಾರು ಜನರು ಆ ಪರ್ವತಾಗ್ರಕ್ಕೆ ಬಂದು ಸೇರಿದರು. ಲಾರೆಲ್ ವೃಕ್ಷವಾಟಿಕೆಯನ್ನು ಸಮೀಪಿಸಿ ಕೂಡಲೇ ಆ ತಂಡದ ಮಧ್ಯೆ ಬರುತ್ತಿದ್ದ ಓರ್ವ ಮಹಾವ್ಯಕ್ತಿ ಅವರೆಲ್ಲರನ್ನೂ ತಡೆದು ನಿಲ್ಲಿಸಿದ.

'ನಿಲ್ಲಿ ಬಂಧುಗಳೇ, ಇಲ್ಲಿಯೇ ತಡೆದು ನಿಲ್ಲಿ. ನಿಮ್ಮ ವಿಶ್ರಾಂತಿಯನ್ನಿಲ್ಲಿ ನೀಗಿಕೊಳ್ಳಿ. ನಿಮ್ಮ ಮನವನ್ನೊಮ್ಮೆ ಶಾಂತಗೊಳಿಸಿಕೊಳ್ಳಿ, ಪ್ರಶಾಂತಗೊಳಿಸಿಕೊಳ್ಳಿ. ನಿಮ್ಮೆಲ್ಲರ ಹೃದಯ ವೀಣೆಯ ತಂತಿಗಳನ್ನು ಶೃತಿಮಾಡಿಕೊಳ್ಳಿ. ನಾನು ನಿಮಗಾಗಿ ಹಾಡುವ ಗಾನ ಅನಂತವಾಗಿದೆ' ಎಂದು ನುಡಿದ ಆ ಮಹಾಪುರುಷನು ಹಸಿರು ಹುಲ್ಲಿನ ಮೈದಾನದಲ್ಲಿದ್ದ ಗುಂಡುಕಲ್ಲೊಂದರ ಮೇಲೆ ಹತ್ತಿನಿಂತ. ಪ್ರಕೃತಿಯ ಸೊಬಗನ್ನು ಮತ್ತೊಮ್ಮೆ ಆಸ್ವಾದಿಸಿದ. ಅವನ ತೇಜೋಪೂರಿತ ಮುಖಮಂಡಲಕ್ಕೆ ಕರಿಯಗಡ್ಡ ಶೋಭೆ ತಂದಿತ್ತು. ತೊಟ್ಟ ನಿಲುವಂಗಿಯ ಮೇಲೆ ಉದ್ದವಾದ ಉತ್ತರೀಯವು ಮಡಿಕೆಯ ಮೆಟ್ಟಲುಗಳನ್ನು ಪಾದದಿಂದ ಶಿರದವರೆಗೂ ಕಟ್ಟಿತ್ತು. ಅವನು ಕಗ್ಗತ್ತಲ ರಾತ್ರಿಯಲ್ಲಿ ಪ್ರಜ್ವಲಿಸಿ ಉರಿಯುವ ಪರ್ವತದಂತಿದ್ದ. ಆದರೂ ಗಿರಿಯಾಚೆಗಿನ ಹೊಳೆವ ಬೆಳ್ಳಿಯ ಬೆಳಕಾಗಿದ್ದ . ಬಾನ್ ಬಟ್ಟೆಯ ಬಿರುಗಾಳಿಯಂತಿದ್ದ ; ಆದರೂ ಮುಂಬೆಳಗಿನ ಮಂಜಿನ ಮಂಜುಳಗಾನವಾಗಿದ್ದ. ಬೆಟ್ಟದಿಂದ ಬಯಲಿಗೆ ಧುಮ್ಮಿಕ್ಕಿ ಸಮಸ್ತವನ್ನೂ ಕೊಚ್ಚಿಕೊಂಡು ಹೋಗುವ ಪ್ರಚಂಡ ಪ್ರವಾಹದಂತಿದ್ದ. ಆದರೂ ಹಸುಗೂಸಿನ ತಿಳಿನಗೆಯು ಅವನಲ್ಲಿ ಮಿನುಗುತ್ತಿತ್ತು.

ಸಮೂಹದಲ್ಲಿ ಶಿಷ್ಯರಲ್ಲೊಬ್ಬ ಕೂಗಿ ಹೇಳಿದ, 'ಓ ತಂದೆ ಜೀಸಸ್, ಮನುಷ್ಯ ಕೋಟಿಗೆ ನಿನ್ನ ಒಸಗೆಯೇನು ?'

'ಅದನ್ನು ತಿಳಿಸಲೆಂದೇ ನಾನು ನಿಮ್ಮನಿಲ್ಲಿಗೆ ಕರೆದುತಂದದ್ದು. ಜಗದ ವೈಣಿಕ ಮಿಡಿದ ವೀಣೆಯಿಂಚರಗಾನ ಈ ನನ್ನ ವಾಣಿ. ಆಲಿಸಿರಿ – ಮನತೆರೆದು ಆಲಿಸಿರಿ.'

ಇಂತು ಕರೆಕೊಟ್ಟ ಮಹಾತ್ಮ ಅಮರಸಂದೇಶವನ್ನು ನಶ್ವರ ಜಗತ್ತಿಗೆ ಸಾರಿದ. ಅವನ ಅಮೃತಧಾರೆ ಆ ಗಿರಿಯ ಶಿಖರದಿಂದ ಧುಮ್ಮಿಕ್ಕಿ ಹೊನಲಾಗಿ ಹರಿಯಿತು. ತಾನು ಹರಿದೆಡೆಯಲ್ಲೆಲ್ಲಾ ಹಚ್ಚ ಹಸಿರಾಗಿಸಿತು. ಯೇಸುನಾಥನ ಈ ಸಂದೇಶವು **'ಮೇರುಬೋಧೆ'** (Sermon on the mount) ಎಂದು ಪ್ರಖ್ಯಾತಿ ಪಡೆಯಿತು.

'ಆತ್ಮಪ್ರಸನ್ನರು ಧನ್ಯರು ; ಕಾರಣ ಮುಕ್ತಿರಾಜ್ಯದ ಒಡೆತನ ಅವರದು.

'ಶಾಂತಿಪ್ರಿಯರು ಧನ್ಯರು ; ಕಾರಣ ಅವರ ಆತ್ಮವು ಸಮರಾತೀತತೆಯಲ್ಲಿ ವಾಸಿಸುವುದು ; ಹಾಗೂ ಅವರು ರುದ್ರಭೂಮಿಯನ್ನು ನಂದನವನವನ್ನಾಗಿ ಮಾರ್ಪಡಿಸಬಲ್ಲರು.

'ಶಿವ ಸತ್ಯ ಸೌಂದರ್ಯಗಳ ಹಸಿವುಳ್ಳವರು ಧನ್ಯರು ; ಕಾರಣ ಅವರ ಹಸಿವೆ ಅನ್ನವನ್ನು ತಣಿಸಬಲ್ಲದು, ಅವರ ನೀರಡಿಕೆ ನೀರನ್ನು ತಂಪುಗೊಳಿಸಬಲ್ಲುದು.

'ಕರುಣಾಮಯರು ಧನ್ಯರು, ಕಾರಣ ಕರುಣೆ ಅವರಲ್ಲಿ ಕಾಸಾರಗೊಂಡಿರುತ್ತದೆ.

'ನಿರ್ಮಲಚಿತ್ತರು ಧನ್ಯರು ; ಕಾರಣ ಅವರೇ ದೇವರಲ್ಲಿ ಐಕ್ಯತೆ ಪಡೆದವರು.

'ಲೌಕಿಕ ಭೋಗಕ್ಕೆ ಅಂಟಿಕೊಳ್ಳದವರು ಧನ್ಯರು ; ಕಾರಣ ಅವರೇ ಮುಕ್ತರು.

'ತಮ್ಮ ನೋವನ್ನು ನೆನೆಸಿಕೊಳ್ಳುವವರೂ ಧನ್ಯರು, ಹಾಗೂ ತಮ್ಮ ನೋವಿನಲ್ಲಿಯೇ ನೆಲವನ್ನೂ ಅರಸುವವರೂ ಧನ್ಯರೇ.

'ಉತ್ಸಾಹಪೂರಿತರಾಗಿರಿ, ಆನಂದತುಂದಿಲರಾಗಿರಿ. ನಿಮ್ಮ ಬಾಳಿಗೆ ಎಂದಿಗೂ ಬೆಲೆಯಿಲ್ಲದಿಲ್ಲ. ಆದರೆ ಅದಕ್ಕೆ ಇಷ್ಟು ಎಂದು ಬೆಲೆ ಕಟ್ಟಬೇಡಿ. ಅಲೌಕಿಕ ರಾಜ್ಯದ ಅಮರಗೀತವನ್ನು ಹಾಡಿದ ಅನೇಕ ಮಂದಿ ಪ್ರವಾದಿಗಳನ್ನೂ ನುಂಗಿ ನೊಣೆದಿದೆ ಈ ಜಗತ್ತು. ನಿಮ್ಮಲ್ಲಿ ಅನೇಕರಿಗೆ ಅದೇ ಗತಿ ಕಾದಿರಬಹುದು ಗೊಣಗಬೇಡಿ, ಸಂತೋಷದಿಂದ ಸ್ವಾಗತಿಸಿ ಅದರಲ್ಲಿಯೇ ನಿಮ್ಮ ಘನತೆ ಅಡಗಿರುವುದು.

'ನೀವು ನೆಲದ ಉಪ್ಪಾಗಿದ್ದೀರಿ. ಒಂದು ವೇಳೆ ಉಪ್ಪೇ ಸಪ್ಪೆಯಾದರೆ ಅದಕ್ಕೆ ಮತ್ತಾವುದರಿಂದ ಉಪ್ಪಿನ ರುಚಿ ಬಂದೀತು? ಮಾನವ ಹೃದಯ ಭೋಜ್ಯವು ಎಲ್ಲಿಂದ ರುಚಿಗೊಳ್ಳಬೇಕು ?

'ನೀವು ಈ ಲೋಕದ ಬೆಳಕಾಗಿದ್ದೀರಿ. ಆ ಬೆಳಕನ್ನು ಮುಟ್ಟಗುಹೆಯಲ್ಲಿ ಮುಚ್ಚಿಡಲು ಯತ್ನಿಸಬೇಡಿ ಅಥವಾ ಕೊಳದಲ್ಲಿ ಬಚ್ಚಿಡಲು ಹೋಗಬೇಡಿ. ಅದು ದೇವನಗರಿಯ ಪ್ರಯಾಣಕ್ಕೆ ಹಚ್ಚಿಕೊಟ್ಟ ಪಂಜಾಗಲಿ, ಮೋಸೆಸ್, ಎಲಿಯಾಸ್ ಮೊದಲಾದ ಪ್ರಾಚೀನ ಪ್ರವಾದಿಗಳ ವಚನಗಳನ್ನಾಗಲಿ, ಅವರ ಧರ್ಮಶಾಸ್ತ್ರವನ್ನಾಗಲಿ ಅಥವಾ ಫರಿಸಾಯರ ಸ್ವಯಂಕೃತ ನೀತಿನಿಯಮಗಳನ್ನು ನಾಶಪಡಿಸಲಾಗಲಿ ನಾನಿಲ್ಲಿ ಬಂದಿಲ್ಲ. ಅವರ ಹೇಳಿಕೆಯ ಹಿನ್ನಲೆಯ ಭಾವವನ್ನು ಅರಿವು ಮಾಡಿಕೊಟ್ಟು, ಅವರು ಎಳೆದುಬಿಟ್ಟು ಅಮೂಲ್ಯವಾದ ಧರ್ಮರಥವನ್ನು ಮತ್ತಷ್ಟು ದೂರ ಎಳೆಯಲು ಬಂದಿದ್ದೇನೆ. ಏಕೆಂದರೆ ನಿಮ್ಮೊಡನೆ ನಾನಿರುವ ದಿನಗಳು ಕೇವಲ ಸಂಖ್ಯಾಪರಿಮಿತವಾಗಿವೆ. ಅಧರ್ಮದ ಆಚರಣೆಗೆ ಕಾಲ ನನ್ನಲಿಲ್ಲ.

'ನೀವು ಹತ್ಯೆ ಮಾಡಕೂಡದೆಂದು ನೀತಿ ತಿಳಿಸಿದೆ. ಆದರೆ ನೀವು ವಿನಾಕಾರಣ ಸಿಟ್ಟಾಗಲೂಬಾರದೆಂದು ನಾನು ನಿಮಗೆ ಹೇಳುತ್ತೇನೆ, ಕರುವನ್ನೊ, ಕುರಿಯನ್ನೊ, ಪಾರಿವಾಳವನ್ನೊ ದೇವಾಲಯಕ್ಕೆ ತಂದು ಅಲ್ಲಿಯ ಬಲಿಪೀಠ ದಮೇಲೆ ಬಲಿಕೊಟ್ಟು, ಅವುಗಳ ಕೊಬ್ಬು ನೆಣಗಳ ನಾತದಿಂದ ದೇವರ ಮೂಗಿನ ಹೊರಳೆಗಳನ್ನು ತೃಪ್ತಿಗೊಳಿಸಿದರೆ, ನಿಮ್ಮ ಪಾಪಗಳು ಪ್ರಕ್ಷಾನಗೊಳ್ಳುವುವೆಂದು ನಿಮ್ಮ ಪುರಾತನರ ಪದ್ಧತಿ ಇದೆಯಷ್ಟೆ. ಆದರೆ ನಾನದಕ್ಕೆ ಮನ್ನಣೆ ಕೊಡಲಾರೆ. ಆದಿಯಿಂದಲೂ ಅವನದೇ ಆಗಿರು ವುದನ್ನು ಅವನಿಗೇ ಕೊಟ್ಟ ನೀವು ಅವನನ್ನು ತೃಪ್ತಪಡಿಸಬಲ್ಲಿರಾ ? ಅಥವಾ ಆ ರೀತಿ ಇತ್ತು ಯಾವನ ತೋಳುಗಳು ಈ ಅಖಂಡ ಬ್ರಹ್ಮಾಂಡವನ್ನೇ ಅಪ್ಪಬಲ್ಲವೊ ಅವನನ್ನು ಸಂತವಿಸಬಲ್ಲಿರಾ ?

'ಸಾಧ್ಯವಿಲ್ಲ, ಅಂತಹ ಪ್ರಯತ್ನ ಸಾಧುವೂ ಅಲ್ಲ. ಅದಕ್ಕಾಗಿಯೇ ದೇವಾಲಯಕ್ಕೆ ಹೋಗುವ ಬದಲು, ಒಬ್ಬ ಬಂಧುವನ್ನು ಕಂಡು ಅವನೊಡನೆ ಸಾಮರಸ್ಯವನ್ನು ಸಂಪಾದಿಸಿರಿ ; ನಿಮ್ಮ ನೆರೆಹೊರೆಯವರಿಗೆ ಪ್ರೇಮಧಾತೃಗಳಾಗಿರಿ. ಏಕೆಂದರೆ ಅಂತಹ ಆತ್ಮಗಳಲ್ಲಿಯೇ ಪರಮಾತ್ಮನ ಅವಿನಾಶ ದೇಗುಲವಡಗಿದೆ ಹಾಗೂ ಅಂಥವರ ಹೃದಯಗಳಲ್ಲಿಯೇ ಅವನು ತನ್ನ ಅಮರವೇದಿಕೆಯನ್ನು ನೆಲೆಗೊಳಿಸಿದ್ದಾನೆ !

'ವ್ಯಭಿಚಾರ ಕೂಡದೆಂದು ಹೇಳಿದೆಯಷ್ಟೆ. ನಾನು ಹೇಳುತ್ತೇನೆ – ಪರಸ್ತ್ರೀಯನ್ನು ನೋಡುವುದೂ ವ್ಯಭಿಚಾರವೇ. ಅದು ಮಾನಸಿಕ ವ್ಯಭಿಚಾರ.

'ಸುಳ್ಳು ಆಣೆಗಳನ್ನಿಡಬಾರದೆಂದು ದೊಡ್ಡವರ ಅಭಿಮತ. ಆದರೆ ಆಣೆಯನ್ನೇ ಇಡಬೇಡ ಎಂದು ನಾನು ಹೇಳುತ್ತೇನೆ. ಏಕೆಂದರೆ ಆಕಾಶದ ಮೇಲೆ ಆಣೆ ಇಟ್ಟರೆ ಅದು ದೇವರ ಸಿಂಹಾಸನ. ಭೂಮಿಯ ಮೇಲೆ ಆಣೆ ಇಟ್ಟರೆ ಅದು ಅವನ ಪಾದ ಪೀಠ. ನಿನ್ನ ಆತ್ಮದ ಮೇಲೆ ಆಣೆ ಇಟ್ಟರೆ ಅದು ಅವನ ಅಮೂಲ್ಯ ಕೊಡುಗೆ. ಅದರ ಮೇಲೆ ನಿನಗೆ ಅಧಿಕಾರವೇ ಇಲ್ಲ.

'ಕಣ್ಣಿಗೆ – ಕಣ್ಣು, ಹಲ್ಲಿಗೆ – ಹಲ್ಲು ಎಂಬ ಸೇಡಿನ ವಿಚಾರ ಪ್ರಚುರವಿದೆಯಷ್ಟೆ. ಆದರೆ ನಾನು ಹೇಳುತ್ತೇನೆ. ಪಾಪವನ್ನೂ ಪ್ರತಿರೋಧಿಸಬೇಡ. ಏಕೆಂದರೆ ಪ್ರತಿರೋಧವೇ ಅದಕ್ಕೆ ಆಧಾರವಾಗಿ ಅದು ಬಲಗೊಳ್ಳುತ್ತದೆ. ಒಬ್ಬನು ನಿನ್ನ ಬಲಗೆನ್ನೆಯ ಮೇಲೆ ಹೊಡೆದರೆ ಪ್ರತಿರೋಧಿಸದೆ ಎಡಗೆನ್ನೆಯನ್ನು ಒಡ್ಡು, ಕೇವಲ ಅಲ್ಪಜ್ಞಾನಿಗಳು ಸೇಡಿನ ಭಾವ ತಳೆಯುವರು. ಆತ್ಮಶಕ್ತರು ಕ್ಷಮಾಶೀಲರು ಅರಿಯದೆ ಆಚರಿಸಿದವರನ್ನು ಕ್ಷಮಿಸುವುದೆ ಮಾನವಂತಿಕೆ.

'ಆಹಾರಕ್ಕಾಗಿ ಫಲಭರಿತ ವೃಕ್ಷಗಳನ್ನೇ ಜನರು ಅಲುಗಾಡಿಸುವುದು ಹಾಗೂ ಕಲ್ಲುಗಳಿಂದ ಹೊಡೆಯುವುದು. ಈ ರೀತಿ ತೊಂದರೆಪಡಿಸುವರೆಂದು ಹೆದರಿ ವೃಕ್ಷ ಹಣ್ಣು ಬಿಡದಿರುವುದಕ್ಕಾಗುತ್ತದೆಯೆ ?

'ನಿಮ್ಮ ನೇಹಿಗನನ್ನು ಪ್ರೀತಿಸಿ, ವೈರಿಯನ್ನು ದ್ವೇಷಿಸಿ ಎಂಬುದು ನನ್ನ ಅಭಿಮತವಲ್ಲ. ನಿಮ್ಮ ವೈರಿಗಳನ್ನೂ ಪ್ರೀತಿಸಿರಿ. ಶಪಿಸುವವರನ್ನೂ ಹರಸಿ, ದ್ವೇಷಿಸುವವರಿಗೂ ಒಳ್ಳೆಯದನ್ನೆಣಿಸಿ. ನಿಮ್ಮನ್ನು ಹಿಂಸಿಸುವವರ ಪರವಾಗಿ ಪರಮಾತ್ಮನನ್ನು ಪ್ರಾರ್ಥಿಸಿ. ಇದರಿಂದ ನೀವು ಪರಲೋಕಪಿತನ ಮಕ್ಕಳಾಗಿದ್ದಕ್ಕೆ ಸಾರ್ಥಕ.

‘ದಾನಮಾಡುವಾಗ ಪ್ರತಿಫಲಾಕ್ಷಿಗಳಾಗಬೇಡಿ. ಬಲಗೈ ಕೊಟ್ಟಿದ್ದು ಎಡಗೈಗೂ ತಿಳಿಯದಿರಲಿ. ಏಕೆಂದರೆ ಪ್ರತಿದಾನಿಯೂ ಆ ಮಹಾದಾನಿಯಿಂದಲೇ ಸಮೃದ್ಧವಾಗಿ ಪಡೆದಿರುತ್ತಾನೆ. ಹಾಗೂ ಅವನನ್ನು ವಂಚಿಸಿ ಇವನು ನಡೆಯಲಾರ.

‘ಅವರವರ ಅವಶ್ಯಕತೆಗಳಿಗನುಸಾರವಾಗಿ ದಾನಕೊಡಿ. ಏಕೆಂದರೆ ದೇವರೂ ಸಹ ನೀರಡಿಸಿದವನಿಗೆ ಉಪ್ಪನ್ನೂ, ಹಸಿದವ ನಿಗೆ ಕಲ್ಲನ್ನೂ, ಹಲ್ಲು ಬಂದವನಿಗೆ ಎದೆಹಾಲನ್ನು ಕೊಡುವುದಿಲ್ಲ.

‘ಅಂತೆಯೇ ಪವಿತ್ರವಾದುದನ್ನು ನಾಯಿಗಳಿಗೆ ಕೊಡಬೇಡಿ. ಮಾಣಿಕ್ಯವನ್ನು ಹಂದಿಗೆ ಕೊಡಬೇಡಿ. ಏಕೆಂದರೆ ಇಂತಹ ಕೊಡುಗೆಗಳಿಂದ ನೀವು ಅವುಗಳನ್ನು ಅಣಕಿಸಿದಂತಾಗುತ್ತದೆ. ಅದರಿಂದ ಅವು ರೋಷಗೊಂಡು ನಿಮ್ಮನ್ನೇ ದ್ವೇಷಿಸಿ ನಾಶಪಡಿಸಲೆತ್ನಿಸಿಯಾವು. ಆ ಕಾರಣ ದಾನ ಧರ್ಮಗಳಲ್ಲಿ ಪಾತ್ರಾಪಾತ್ರ ವಿವೇಚನೆ ಇರಲಿ.

‘ಕಳ್ಳರು ಅಪಹರಿಸಬಲ್ಲ ಲೌಕಿಕ ಸಂಪತ್ತನ್ನು ಕಾಪಿಡಬೇಡಿರಿ. ಅದಕ್ಕೆ ಪ್ರತಿಯಾಗಿ ನುಸಿಹತ್ತದ, ಕಳವಾಗದ ಹಾಗೂ ಬಹಳ ಮಂದಿ ದಿಟ್ಟಿಸಿದಷ್ಟೂ ಕಳೆಯೇರುವ ಅಲೌಕಿಕ ಸಂಪತ್ತನ್ನು ವೃದ್ಧಿಪಡಿಸಿಕೊಳ್ಳಿ. ಅಲ್ಲಿ ಅದಕ್ಕೆ ಹಾನಿ ಇಲ್ಲ. ಏಕೆಂದರೆ ನಿಮ್ಮ ಸಂಪತ್ತಿರುವಲ್ಲಿಯೇ ನಿಮ್ಮ ಹೃದಯವೂ ಇದೆ.

‘ಯಾವೊಬ್ಬ ಸೇವಕನೂ ಇಬ್ಬರು ಯಜಮಾನರನ್ನು ಸೇವಿಸಲಾರ. ಅಂತೆಯೇ ನೀವು ದೇವರನ್ನೂ ಧನವನ್ನೂ ಒಟ್ಟಿಗೆ ಸೇವಿಸಲಾಗುವುದಿಲ್ಲ, ಪಡೆಯಲಾಗುವುದಿಲ್ಲ.

‘ನಿಮ್ಮ ಪ್ರಾಣಧಾರಣೆಗಾಗಿ ಹೊಟ್ಟೆಗೇನು, ಬಟ್ಟೆಗೇನು ಎಂದು ಪರಿತಪಿಸಬೇಡಿ. ಜೀವನವು ಆಹಾರಕ್ಕಿಂತ ಮುಖ್ಯ, ದೇಹವು ಉಡುಪಿಗಿಂತ ಪ್ರಧಾನ. ಆಕಾಶದಲ್ಲಿ ಹಾರಾಡುವ ಹಕ್ಕಿಗಳನ್ನು ನೋಡಿ, ಪರಲೋಕಪಿತನು ಅವನ್ನು ಸಾಕುವುದಿಲ್ಲವೆ ? ನೀವು ಅವುಗಳಿಗಿಂತ ಉತ್ತಮರಲ್ಲವೆ ? ಅಡವಿಯ ಹೂಗಳನ್ನು ನೋಡಿ, ಅದರ ವೈಭವವು ಯುವರಾಜನಲ್ಲೂ ಇಲ್ಲ ಎಂಬುದು ನನ್ನ ಭಾವನೆ. ಧರ್ಮಭಾಗಿಗಳಾಗಿ, ಧ್ಯೇಯವಾದಿಗಳಾಗಿ ನಿಮಗೆ ಅನ್ನವ್ಯಸನಗಳು ತಾವಾಗಿಯೇ ದೊರಕುತ್ತವೆ. ನಾಳೆಗಾಗಿ ಚಿಂತೆಬೇಡ, ಇಂದಿನದನ್ನು ಮಾತ್ರ ನೋಡಿಕೊಳ್ಳಿ. ಏಕೆಂದರೆ ಸದ್ಯದ ತೃಪ್ತಿಯಲ್ಲಿ ಭವಿಷ್ಯತ್ತಿನ ಪವಾಡ ಅಡಗಿದೆ.

‘ಕೊಲೆಗಾರರು ಖಡ್ಗಕ್ಕೆ, ಕಳ್ಳನು ಶೂಲಕ್ಕೆ, ಸೂಳೆಯು ಕಲ್ಲು ಹೊಡೆತಕ್ಕೆ ಆಹುತಿಯಾಗಬೇಕೆಂದು ಕಟ್ಟಳೆ ತಿಳಿಸುತ್ತದೆ. ಆದರೆ ನಾನು ಹೇಳುತ್ತೇನೆ – ನೀವು ಕೂಡ ಆ ಕೊಲೆಗಾರನ, ಆ ಕಳ್ಳನ, ಆ ಸೂಳೆಯ ತಪ್ಪು ಕೃತಿಗಳಿಂದ ಮುಕ್ತರಂದೇನೂ ಅಲ್ಲ. ಅವರ ಶರೀರವನ್ನು ನೀವು ಶಿಕ್ಷೆಗೊಳಪಡಿಸಿದಾಗ ನಿಮ್ಮ ಆತ್ಮವನ್ನು ನೀವು ಕತ್ತಲೆಗೊಳಿಸಿಕೊಳ್ಳುತ್ತೀರಿ.

‘ಸಾಮಾನ್ಯವಾಗಿ ಯಾವ ಅಪರಾಧವೂ ಕೇವಲ ಒಬ್ಬ ವ್ಯಕ್ತಿಯಿಂದ ಸಂಭವಿಸಲಾರದು. ಸಕಲ ಅಪರಾಧಗಳೂ ಸಕಲರಿಂ ದಲೂ ಘಟಿಸಲ್ಪಡುತ್ತವೆ. ಆದುದರಿಂದ ಪರರ ಬಗ್ಗೆ ತೀರ್ಪುಗೊಡಲು ಹೋಗಬೇಡಿ. ನೀವು ಅವರನ್ನು ಅಳೆಯುವ ಅಳತೆಗೋ ಲಿನಿಂದಲೇ ನಿಮ್ಮನ್ನೂ ಅಳೆಯಬೇಕಾಗುವುದು. ಮತ್ತೊಬ್ಬರ ಡೊಂಕು ತಿದ್ದುವ ಮುನ್ನ ನಿಮ್ಮನ್ನು ನೀವು ತಿದ್ದಿಕೊಳ್ಳಿ.

ಒಂದೇ ಸಮನೆ ಸಾಗಿತು ಯೇಸುವಿನ ಅಮೃತವಾಣಿಯ ಅಮರಸಂದೇಶ. ಶಿಷ್ಯ ಸಮುದಾಯ ಬಿಟ್ಟ ಕಣ್, ತೆರೆದ ಬಾಯ್, ಮುಗಿದ ಕೈ ನೆಟ್ಟ ಶಿಲಾಪ್ರತಿಮೆಯಾಗಿತ್ತು. ಯೇಸು ಮುಗಿಲಿಗೆತ್ತಿದ ಕೈಯನ್ನು ಕೆಳಗಿಳಿಸಿದ. ಆಗ ಜನ ಉಸಿರಾಡಿತು. ಪಟ್ಟಶಿಷ್ಯ ಮಾಥ್ಯೂ ಶಿರಬಾಗಿ ಅರಿಕೆಮಾಡಿಕೊಂಡ. ‘ಓ ದಿವ್ಯಪುರುಷ, ನನ್ನ ಮನಸ್ಸು ಮೂಕವಾಗಿದ್ದರೂ, ಮತಿ ಮೂರ್ಛೆ ಹೋಗಿದ್ದರೂ, ನಾಲಗೆ ಜಡವಾಗಿದ್ದರೂ, ಈ ಕ್ಷಣದಲ್ಲಿ ಪ್ರಾರ್ಥನೆಗೈಯುವ ಬಯಕೆಯಾಗಿದೆ. ಪ್ರಾರ್ಥನೆಯನ್ನು ಕಲಿಸು ದೇವಾ

‘ಪ್ರಾರ್ಥಿಸಬೇಕೆಂದು ಬಯಕೆಯಾದಾಗ ನಿನ್ನ ಆಕಾಂಕ್ಷೆಯೇ ಶಬ್ದಗಳನ್ನುಚ್ಚರಿಸುತ್ತದೆ. ಅದು ಬೇರೊಬ್ಬನನ್ನು ಬಯಸುವುದಿಲ್ಲ. ನನ್ನ ಅಂತರ್ವಾಣಿ ಹೀಗೆ ಪ್ರಾರ್ಥಿಸಲು ಅಪೇಕ್ಷಿಸುತ್ತದೆ.

**ಬುವಿ ಬಾನ ತುಂಬಿರುವ ಓ ಸರ್ವವ್ಯಾಪಿಯೆ**
**ನಿನ್ನ ನಾಮಾಮೃತವು ಪಾವನದ ಸರಸಿ**
**ವಿಶ್ವದಣು ಘನದಂತೆ ಸಿದ್ಧಸೊಗವೈತರಲಿ**
**ನಮ್ಮ ನಡೆನುಡಿಯಲ್ಲಿ ಮಡಿಯ ಕಲಿಸಿ**
**ದಿನವ ದಾಹವ ತವಿಸೆ ದಯೆದೋರು ಓ ಧೇನು !**
**ನಿನ್ನೆದೆಯ ಸೊದೆಯನ್ನು ಅನವರತವಾಗಿ**
**ನಿನ್ನ ಕರುಣಾಗಂಗೆ ನಮ್ಮ ಮನ ಮಲಿನತೆಯ**
**ತೊಳೆದು ಶುದ್ದವಗೈಯೆ ಬರಲಿ ಸಾಗಿ**

**ಕತ್ತಲಿನ ಕಡಲಿನಲಿ ರಿಕ್ತ ಭೂವಲಯದಲಿ**
**ಚುಕ್ಕಾಣಿ ನೀನಾಗಿ ದಾರಿತೋರು**
**ಸರ್ವಶಕ್ತಿಯು ನೀನೆ ಯತ್ನಸಿದ್ಧಿಯು ನೀನೆ**
**ವಿಶ್ವಗಾಯಕ ಹಾಡಿ ಆರಿವ ಬೀರು**
**ನಮ್ಮೆದೆಯ ಸುವರಳಿ ಕ್ಷಮೆಯ ಸೌರಭಸೂಸಿ**
**ನಿನ್ನಡಿಗೆ ಮುಡಿಸಲಿಕೆ ತೆರವು ನೀಡು**
**ನಿನ್ನದೇ ಈ ರಾಜ್ಯ ನಿನ್ನದೇ ಈ ಭೋಜ್ಯ**
**ನಿನ್ನದೀ ನಲವಾಡು ನಮ್ಮ ಪಾಡು**

ಸಂಜೆಯಾಯಿತು. ಯೇಸು ಗುಡ್ಡವಿಳಿದು ಹೊರಟ. ಎಲ್ಲರೂ ಅವನನ್ನು ಹಿಂಬಾಲಿಸಿ ನಡೆದರು. ಹಾಡು ಅಲೆಅಲೆಯಾಗಿ ಮರಗಳಿಂದ ಹಾರಿ ಕಲ್ಲು ಬಂಡೆಗಳಲ್ಲಿ ಚಿಮ್ಮಿ, ಮುಗಿಲುಮಲೆಗಳ ಮೇಲೆ ತೇಲಿತೇಲಿ ಹೋಗುತ್ತಿತ್ತು ; ಮತ್ತೆ ಮತ್ತೆ ಎಲ್ಲರೆದೆಯಲ್ಲೂ ಪ್ರತಿಧ್ವನಿತವಾಗುತ್ತಿತ್ತು.

೬

ಋತುಗಳು ತಿರುಗಿದುವು.

ಮಾಸಗಳು ಸತ್ತರೂ, ಜನಮನದ ಜಾಡ್ಯ ಬೇರೆ ಸತ್ತಂತೆ ಕಾಣಲಿಲ್ಲ. ಜಗದ ಜೀವಜ್ಯೋತಿಗಳು ನಿತ್ಯ ಬೆಳಗುತ್ತಿದ್ದರೂ ಅವುಗಳನ್ನು ತಮ್ಮ ಬಾಳ ಕೈದೀವಿಗೆಯಾಗಿಸುವ ಸಾಮರ್ಥ್ಯ ಪಡೆಯಲಿಲ್ಲ. ಅದಕ್ಕೆ ಬದಲು ಆ ದೀವಿಗೆಗಳನ್ನು ಒಡೆದು ಚೂರು ಗೈದು ತಮ್ಮ ಮೈಗೇ ಕಿಚ್ಚಿಟ್ಟುಕೊಂಡಿತು.

ಯೇಸುವಿನ ಬಾಳರಥ ಜೆರೂಸಲೆಮ್ಮಿನ ಕೆಸರಲ್ಲಿ ಹೂತು ಘೀಳಿಡುತ್ತಿತ್ತು. ದಿನದ ಪದ್ಧತಿಯಂತೆ ಊರಾಚೆಯ ಮಾರುಕಟ್ಟೆಯ ಮೇಲೆ ಯೇಸು ತನ್ನ ಶಿಷ್ಯಸಮೂಹದೊಡನೆ ನಿಂತಿದ್ದಾನೆ. ಅನುಭಾವಿಯ ಅಮೃತವಾಣಿಗಾಗಿ ಜನ ಕಾತರಿಸಿ ಕುಳಿತಿದೆ. ಆಗ ಅವನ ಬಾಯಿಂದ ಒಂದು ಪದವೂ ಹೊರಬರಲೊಲ್ಲದು. ಅಂದು ಆವುದೋ ಆಲೋಚನೆಯ ಮಡುವಿನಲ್ಲಿ ಅವನ ಮನ ತೊಳಲಾಡುತ್ತಿರುವಂತೆ ಕಾಣುತ್ತಿತ್ತು. ಮುಗಿಲೆಡೆಗೆ ಕೈಚಾಚಿ ಮೌನದಿಂದ ಏನನ್ನೋ ಕುರಿತು ಮೊರೆಯಿಡುತ್ತಿದ್ದ. ಹನಿ ತುಂಬಿದ ಕಣ್ಣುಗಳಿಂದ ಕುಳಿತಿದ್ದ ಜನರನ್ನು ಶೂನ್ಯದೃಷ್ಟಿಯಿಂದ ನೋಡುತ್ತಿದ್ದ. ಬಾಯಿ ಮಾತ್ರ ಅರ್ಥವಿಲ್ಲದ ಮಾತುಗಳನ್ನು ಅಸ್ಪಷ್ಟ ರೀತಿಯಲ್ಲಿ ಪಠಿಸುತ್ತಲೇ ಇತ್ತು. ಶಿಷ್ಯರೆಲ್ಲರೂ ಮೂಕರಾಗಿ ತಮ್ಮ ಸ್ವಾಮಿಯ ಅಸ್ವಸ್ಥತೆಗೆ ಕಾರಣ ತಿಳಿಯದವರಾಗಿ ದ್ದರು. ಅದನ್ನು ಕೇಳಿ ತಿಳಿಯುವ ಮುನ್ನವೇ ಯಾರಿಗೂ ಇದ್ದಂತೆ ಕಾಣಲಿಲ್ಲ. ಎಲ್ಲರೂ ಮೌನದಾಳದಲ್ಲಿ ಮುಳುಗಿ ಬರಿಗೈಯಿಂದ ಮೇಲೇಳುತ್ತಿದ್ದರು. ಅದೇ ಸಮಯಕ್ಕೆ ಯತಿವೇಷಧಾರಿಯೊಬ್ಬ ಚೀರಿಕೊಂಡು ಓಡಿ ಬಂದ. ಜನರ ಗುಂಪನ್ನು ಸೀಳಿಕೊಂಡು ಬಂದವನೇ ಕಟ್ಟೆಯ ಮೇಲಿದ್ದ ಯೇಸುವಿನ ಪಾದದಡಿಯಲ್ಲಿ ಬಿದ್ದ. ಯೇಸು ಅವನ ತಲೆಸವರಿ ಭುಜಹಿಡಿದು ಮೇಲೆತ್ತಿ ಮಾತನಾಡಿಸಿದ.

'ಏನಾಯ್ತು ಸ್ಟೀಫನ್, ಏನಾಯ್ತು ಹೇಳು ?'

'ಘಾತವಾಯ್ತು ತಂದೆ, ಘಾತವಾಯ್ತು. . .' ಮುಂದೆ ಮಾತೇ ಹೊರಡಲಿಲ್ಲ. ಬಹುದೂರದಿಂದ ಓಡೋಡಿ ಬಳಲಿದ್ದವನೆಂದು ತೋರುತ್ತದೆ. ಬಾಯಿಂದ ನೊರೆ ಹರಿದುಬರುತ್ತಿತ್ತು. ಬೆಟ್ಟಗುಡ್ಡಗಳನ್ನು ದಾಟಿ ಹಳುವ ಹಾದು ಬಂದಿದ್ದನೆಂದು ಕಾಣುತ್ತದೆ, ಮೈಯೆಲ್ಲಾ ಮುಳ್ಳುಕಡ್ಡಿಗಳಿಂದ ಗೀಚಿ ಹೋಗಿತ್ತು ನೆತ್ತರಿನ ರೇಖೆಗಳು ಮೇಲೆದ್ದು ಕಾಣುತ್ತಿದ್ದವು. ತನ್ನ ಉತ್ತರೀಯದಿಂದ ಅವನ ಮೇಲಿನ ಬೆವರು ಹನಿಗಳನ್ನು ಒರೆಸಿ ಬಾಯಿಗೆ ನೀರು ಬಿಟ್ಟು ಕ್ಷಣಕಾಲ ಸಂತೈಸಿದ ಯೇಸು. ಮೂರ್ಛೆ ತಿಳಿದಿದ್ದ ವ್ಯಕ್ತಿಯನ್ನು ಸಮಾಧಾನದಿಂದ ಕೇಳಿದ :

'ಏನಾಯ್ತು ? ಸುದ್ದಿಯೇನು ?'

'ಓ ತಂದೆ, ಇಂದು ನಮ್ಮ ಸ್ನಾಪಕ ಮಹಾಶಯ ಜಾನನ ಕೊಲೆಯಾಯಿತು !'

'ಹ್ಹಾ, ನಮ್ಮ ಯೇಸುವಿಗೆ ಮಂಗಳಸ್ನಾನ ಮಾಡಿಸಿದ ಸ್ನಾಪಕ ಮಹಾಶಯನ ಕೊಲೆಯೇ ? ಅಯ್ಯೋ ' ಎಂದು ಏಕ ಕಂಠವಾಗಿ ಗೋಳಿಟ್ಟಿತು ಅಲ್ಲಿ ನೆರೆದಿದ್ದ ಜನ. ಯೇಸು ಎಲ್ಲರನ್ನೂ ಶಾಂತಗೊಳಿಸುತ್ತಾ, 'ಶಾಂತಿ, ಕ್ಷೋಭೆಗೊಂಡ ಮನಕ್ಕೆ ಶಾಂತಿ. ಮುಗಿಲುಮನೆ ಸೇರಿರುವ ಜಾನನ ಆತ್ಮಕ್ಕೆ ಚಿರಶಾಂತಿ. ವಿಶ್ವಕ್ಕೆ ಶಾಂತಿ, ಶಾಂತಿ ?'

ಎಂದು ಶಾಂತಿಮಂತ್ರವನ್ನು ಪಠಿಸಿದ.

'ಶಾಂತರಾಗಿರಿ ಸೋದರರೆ, ಶಾಂತನಾಗು ಸ್ಟೀಫನ್, ಹೀಗಾಗುವುದೆಂದು ನನಗೆ ಮೊದಲೇ ಗೊತ್ತಿತ್ತು. ಏನಾಗಬೇಕೊ ಅದಾಗದಿರದು. ಇರಲಿ ಕೊಲೆಯ ಕೈ ಯಾರದು ? ವಿವರವಾದರೂ ಏನು ?'

'ಏನು ಹೇಳಲಿ ಸ್ವಾಮಿ, ಯಾರೆಂದು ತಿಳಿಸಲಿ ? ನಮ್ಮ ಉಪರಾಜ್ಯಾಧಿಕಾರಿ ಹೆರೋದ ಕೊಲೆಗೈಸಿದ ಪಾತಕಿ.'

'ಕಾರಣ ?'

'ದೇವಾ, ನಿನ್ನ ಮಹಾತ್ಮೆಯನ್ನು ತಿಳಿದು ಜಗತ್ತಿಗೆ ಸಾರಿಸಾರಿ ಹೇಳುತ್ತಿದ್ದ ಜಾನ್ ಮಹಾಶಯನನ್ನು ಹೆರೋದ ಮೊದಲಾದವರು ಹಿಡಿತರಿಸಿ ಸೆರೆಯಲ್ಲಿರಿಸಿ ಒಂದು ವರ್ಷ ಕಳೆಯುತ್ತಾ ಬಂತು.'

'ಸರಿ, ಅದು ತಿಳಿದ ವಿಷಯ. ಆಮೇಲೆ ?'

'ನಿನ್ನೆ ಆ ಪಾಪಿಷ್ಟ ಹೆರೋದನ ಹುಟ್ಟುಹಬ್ಬವಂತೆ. ಆಚರಣೆ ಅರಮನೆಯಲ್ಲಿ ಅದ್ಭುತವಾಗಿತ್ತಂತೆ. ಬಹುತೇಕ ಮಂದಿ ಪ್ರಮುಖರೂ, ಫರಿಸಾಯರೂ ರೋಮನರೂ ಸಭಾಭವನದಲ್ಲಿ ಉಪಸ್ಥಿತರಿದ್ದರಂತೆ. ಅಳತೆ ಮೀರಿ ತಿಂದು ಕುಡಿದು ಮೋಜಿನಲ್ಲಿ ಮೈಮರೆತಾಗ ಹೆರೋದನ ಉಪಪತ್ನಿ ಹೆರೋಡಿಯಸಳ ಪುತ್ರಿ ಸಲೋಮಿ ಉತ್ತಮ ರೀತಿಯಲ್ಲಿ ನರ್ತಿಸಿದಳಂತೆ. ಚಣಚಣಕ್ಕೂ ಅವಳ ನರ್ತನ ರೂಪ ಬದಲಿಸುತ್ತದ್ದಂತೆ. ಪತಂಗ ನರ್ತನದ ತರುವಾಯ ರೋಮನ್ ಮಾದರಿಯ ಕಾಮಪ್ರಚೋದಕ ನರ್ತನವನ್ನಂತೂ ಪರಮೋತ್ಕೃಟ ರೀತಿಯಲ್ಲಿ ಅಭಿನಯಿಸಿ ಪ್ರದರ್ಶಿಸಿದಳಂತೆ. ನೋಡುನೋಡುತ್ತಾ ಕುಡಿದು ಅಮಲೇರಿದ್ದ ರಾಜನಿಗೆ ಕಾಮ ಕೆರಳಿದಂತಾಗಿ ತನ್ನ ಪಕ್ಕದಲ್ಲಿದ್ದ ಹರೋಡಿಯಸಳನ್ನು ಬಾಚಿ ತಬ್ಬಿ ಎದೆಯ ಮೇಲೆಳೆದುಕೊಂಡು ಉರುಳಾಡಿದನಂತೆ. ಪ್ರೇಕ್ಷಕ ವೃಂದದ ಚಪ್ಪಾಳೆ, ಕೇಕೆ, ಕೋಲಾಹಲಗಳು ಮುಗಿಲಿಗೇರಿದ್ದುವಂತೆ. ನರ್ತನ ಮುಗಿಸಿ ರಾಜನ ಪಾದದಡಿಯಲ್ಲಿ ಬಂದು ತಲೆಬಾಗಿ ಕುಳಿತಿದ್ದ ಸಲೋಮಿಯನ್ನು ಮೇಲೆತ್ತಿ ಮುದ್ದಟ್ಟು, 'ಭೇಷ್ ಮುದ್ದುಕುವರಿ, ಭೇಷ್ ಮುದ್ದುಕುವರಿ, ಭೇಷ್ ನಾಟ್ಯ ರಾಣಿ, ನಿನಗೇನು ಬೇಕು ಕೇಳು. ಈ ಆನಂದದ ಮಧುವು ಮುಗಿಯುವ ಮೊದಲೇ ಕೇಳಿಕೊ. ಈ ಕ್ಷಣದಲ್ಲಿ ನೀನು ಕೇಳಿದ್ದನ್ನು ತರಿಸಿಕೊಡುತ್ತೇನೆ. ಏನು ಬೇಕು ಬೇಗ ಹೇಳು. ಸಂಕೋಚಪಡಬೇಡ.' ಎಂದನಂತೆ. ಮೊದಲೇ ತಾಯಿಯಿಂದ ಪ್ರೇರಿತಳಾದ ಆ ಹುಡುಗಿ ನಿರ್ಭೀತಳಾಗಿ ಸ್ನಾಪಕ ಜಾನನ ಶಿರಸ್ಸನ್ನು ಹೊನ್ನಹರಿವಾಣದಲ್ಲಿ ತರಿಸಿಕೊಡು ಅಂದಳಂತೆ. ಆ ಕ್ಷಣವೇ ಸೆರೆಮನೆಯಲ್ಲಿ ಸರಪಣಿಗಳ ಮಧ್ಯೆ ತೂಗಾಡುತ್ತಿದ್ದ ಜಾನ್ ಮಹಾಶಯನ ಕಳಶ ಹೊನ್ನಹರಿವಾಣದಲ್ಲಿ ನಗೆಸೂಸಿ ಬಂದು ಸಲೋಮಿಯ ಹಸ್ತದಲ್ಲಿ ಶೋಭಿಸಿತಂತೆ !

'ಅರ್ಥವಾಯ್ತು. ಅದಿರಲಿ ಎಲ್ಲವನ್ನೂ ಬಿಟ್ಟು ಜಾನನ ಶಿರವನ್ನೇ ಅವಳು ಬಯಸಿದ್ದಕ್ಕೆ ಕಾರಣ ?'

'ಮೊದಲೇ ಹೇಳಲಿಲ್ಲವೇ ? ತಾಯಿ ಹೆರೋಡಿಯಸಳ ಪ್ರೇರಣೆ.' 'ಅವಳಿಗಾದರೂ ಏಕೆ ಬೇಕಿತ್ತು. ಕಲ್ಪವೃಕ್ಷವನ್ನು ಕತ್ತರಿಸಿದ್ದರಿಂದ ಅವಳಿಗಾದ ಪುರುಷಾರ್ಥವಾದರೂ ಏನು ? . . .'

'ಕ್ಷಣಿಕ ತೃಪ್ತಿ, ದ್ವೇಷಸಾಧನೆಯ ಪರಮ ಸಾರ್ಥಕ್ಯ'

'ಸನ್ಯಾಸಿಯ ಮೇಲೇಕೆ ಅವಳಿಗೆ ಅಷ್ಟೊಂದು ದ್ವೇಷ ?'

'ಓ ತಂದೆ, ಅದೊಂದು ಇತಿಹಾಸ ! ಅವಳ ಕಥೆ ಬಹಳ ದೂರ, ಎರಡು ಮಾತಿನಲ್ಲಿ ತಿಳಿಸುತ್ತೇನೆ ಕೇಳು. ಹೆರೋದನ ಅಣ್ಣನ ಹೆಂಡತಿಯಾಗಿದ್ದ ಹೆರೋಡಿಯಸ್ ತನ್ನ ಪತಿಗೆ ವಿಷವನ್ನಿಟ್ಟು ಕೊಂದು ಈ ಹೆರೋದನಿಗೆ ಉಪಪತ್ನಿಯಾದಳು. ಇವನನ್ನು ಸೇರುವ ಮುನ್ನ ತನ್ನ ಮೊದಲನೇ ಪತಿಯಿಂದ ಪಡೆದಿದ್ದ ಸಲೋಮಿಯೆಂಬ ಪುತ್ರಿಯನ್ನು ಬಿಟ್ಟರೆ ಅವಳಿಗೆ ಮತ್ತೇನು ಸಂಪತ್ತಿರಲಿಲ್ಲ. ಆದರೆ ಗೆಲಿಲಾಯಿ ರಾಷ್ಟ್ರದ ಅರಮನೆಗೆ ಆಗಮಿಸಿದ ಮೇಲೆ ಪಟ್ಟದರಸಿ ತಾನೇ ಎಂದು ಹೇಳಿಕೊಂಡು ತಿರುಗಿದಳು. ಮಹಾರಾಜ ಮೊದಲಾಗಿ ದಾಸಿಯರು ಕಡೆಯಾಗಿ ಎಲ್ಲರನ್ನೂ ತನ್ನ ಮಾಯಾಜಾಲದಲ್ಲಿ ಸಿಕ್ಕಿಸಿಕೊಂಡು ಮೆರೆದಳು. ಅವಳ ಪೂರ್ವೇತಿಹಾಸವನ್ನೆಲ್ಲಾ ತಿಳಿದಿದ್ದ ಜಾನ್ ಅವಳ ಅವಿಚಾರ ಅಕೃತ್ಯಗಳನ್ನು ತಡೆಹಿಡಿಯಲು ಯತ್ನಿಸಿ ಅವಳಿಗೆ ಪ್ರಬಲ ವಿರೋಧಿ ಎನಿಸಿದನಂತೆ. ಪರಿಣಾಮವಾಗಿ, ಮೊದಲಿನಿಂದಲೂ ಮಚ್ಚರಿಸುತ್ತಿದ್ದ ಈ ಕಾಳಸರ್ಪಿಣಿ ಈ ಸನ್ನಿವೇಶದಲ್ಲಿ ಸೇಡು ತೀರಿಸಿಕೊಂಡಳಂತೆ. ಅಷ್ಟಕ್ಕೂ ತೃಪ್ತಳಾಗದೆ ಅವನ ಮುಂಡವನ್ನು ಕೋಟೆಯ ಹೆಬ್ಬಾಗಿಲಿನಲ್ಲಿ ಸಿಗಿದು ತೋರಣ ಕಟ್ಟಿಸಿ ಅವನ ರುಂಡವನ್ನು ಅದರ ಮಧ್ಯೆ ನೇತುಹಾಕಿಸಿ ನಾಲಗೆ ಇರಿದು ಮೊಳೆ ಜಡಿಸಬೇಕೆಂದಿದ್ದಳಂತೆ. ಇದನ್ನು ತಿಳಿದ ನಾನು ಮತ್ತು ನನ್ನ ಗೆಳೆಯರು ಮಹಾತ್ಮನ ಮೃತಭಾಗಗಳನ್ನು ಕದ್ದೊಯ್ದು ನಿನ್ನೆ ರಾತ್ರಿಯೇ ಗೋಪ್ಯವಾಗಿ ಸಮಾಧಿ ಮಾಡಿದೆವು. ಆದರೆ ಇದು ತಿಳಿದಮೇಲೆ ನಮಗೇನು ಗಂಡಾಂತರ ಕಾದಿದೆಯೊ ನಾ ಬೇರೆ ಕಾಣೆ.'

‘ಅಬ್ಬ, ಚೆನ್ನಾಗಿದೆ ಕಥೆ. ಸೋದರರೇ, ಬಳಲಿರುವ ಸ್ಟೀಫನನ್ನಿಗೆ ಪರಿಹಾರ ನೀಡಿ.’

ಇನ್ನೇನು ಮಾತು ಮುಗಿದು ಮೇಲೇಳಬೇಕು. ಅಷ್ಟರಲ್ಲಿ ನಾಲ್ಕಾರು ಕುದುರೆಗಳ ಸಪ್ಪಳ ಕೇಳಿಬಂತು. ಅತ್ತ ತಿರುಗುವುದರೊಳಗಾಗಿ ಅಶ್ವಾರೋಹಿಗಳಾದ ರೋಮನ್ ಸಿಪಾಯಿಗಳು ಅನೇಕರು ಚಬುಕಗಳಿಂದ ಅಲ್ಲಿ ನೆರೆದಿದ್ದ ಜನರನ್ನು ಬಡಿಯತೊಡ ಗಿದರು. ಜನ ಕಂಗೆಟ್ಟು ಚಲ್ಲಾಪಿಲ್ಲಿಯಾಗಿ ಓಡತೊಡಗಿತು. ಕುದುರೆಗಳು ವಾಯುವೇಗದಲ್ಲಿ ಚಲಿಸಿತ್ತದ್ದವು. ಚಬುಕುಗಳ ಏಟುಗಳು ಸಿಡಿಲಾಗಿ ಬಡಿಯುತ್ತಿದ್ದುವು. ಯಾರೂ ಆ ಆವರಣ ಬಿಟ್ಟು ದೂರ ಹೋಗಲಾಗಲಿಲ್ಲ. ರಕ್ತಸಿಕ್ತವಾದ ಶರೀರಗಳು ಮಣ್ಣಿನಲ್ಲಿ ಉರುಳಾಡಿದವು. ಚೀರಾಟ, ಬೋರಾಟ, ಹಾಹಾಕಾರಗಳ ನಡುವೆ ಎಲ್ಲಿ ? ಎಲ್ಲಿ ? ಆ ದ್ರೋಹಿ ಎಲ್ಲಿ ? ಎಂಬ ಕೂಗು ಕೇಳುತ್ತಿತ್ತು. ಯಾವನೋ ಒಬ್ಬ ಕೂಗಿದ : ‘ಇದೋ ಇಲ್ಲಿ ಈ ಮಾರುಕಟ್ಟೆಯ ಅಟ್ಟಣೆಯ ಮೇಲೆ ! ಯೇಸುವಿನ ಕಾಲಮೇಲೆ ಅವನು ಕೂಗಿಕೊಳ್ಳುತ್ತಾ ತನ್ನ ಕೈಯಲ್ಲಿದ್ದ ಉದ್ದವಾದ ಕೊರಡೆಯನ್ನು ಕಟ್ಟೆಯ ಮೇಲಕ್ಕೆ ಬೀಸಿದ, ಯೇಸುನಾಥನ ಪಾದದಡಿಯಲ್ಲಿದ್ದ ಸ್ಟೀಫನ್ ಕೆಳಗುರುಳಿದ. ಅಟ್ಟಹಾಸದ ನಗೆಯ ಜೊತೆಯಲ್ಲೆ ಆ ಕೊರಡೆ ಮತ್ತೊಮ್ಮೆ ಥಳಿಸಿತು. ಎರಡು ಮಾರುದ್ದದ ಉಕ್ಕಿನಪಟ್ಟಿಗೆ ಚರ್ಮದಿಂದ ಹಣೆದಿದ್ದ ಹಿಡಿಯಿತ್ತು. ಆ ಪಟ್ಟಿಯ ಮುಂದೆ ನಾಲ್ಕಂಗಲದ ಸರಪಣಿಯನ್ನು ಕೀಲಿಸಿ, ತುದಿಯಲ್ಲಿ ಒಂದು ಸೀಸದ ಗುಂಡನ್ನು ಅಂಟಿಸಲಾಗಿತ್ತು. ಬಹುಶಃ, ಆ ಗುಂಡು ಸ್ಟೀಫನ್ ಎದೆಗೆ ನೇರವಾಗಿ ಬಡಿದಿದ್ದಿತೆಂದು ತೋರುತ್ತದೆ, ಅದು ಕೊರೆದು ತೂತಾಗಿ ಅವನ ವಕ್ಷಸ್ಥಲದಲ್ಲಿ ರಕ್ತ ಬುಗ್ಗೆ ಬುಗ್ಗೆಯಾಗಿ ಚಿಮ್ಮಿತು.

‘ನೀನಿಟ್ಟ ಊಟವೇ ಅವನಿಗೆ ಸಾಕಲ್ಲವೆ ?’

ನಗುತ್ತಾ ಕೇಳಿದ ಸಿಪಾಯಿ.

‘ಉಹುಂ, ಸಾಲದು ನೀವೂ ಸ್ವಲ್ಪ ಬಡಿಸಿ ನೋಡಿ, ಪಾಪ ! ಯೇಸುಸ್ವಾಮಿಗೆ ಆಮಂತ್ರಣವನ್ನು ಕೊಡಲು ಬಂದ ಅತಿಥಿ ಬಹಳ ಹಸಿದಿದ್ದಾನೆ. ಹೂಂ ನೀಡಿ ತಿಂದು ತೃಪ್ತನಾಗಲಿ !’ ಅಂದ ಒಮ್ಮೆಲೇ ಸಿಪಾಯಿಗಳೆಲ್ಲರೂ ಸ್ಟೀಫನ್ನನ ಮೃತ ಶರೀರವನ್ನು ಚಚ್ಚಿ, ಚಚ್ಚಿ ಚಿಂದಿಮಾಡಿ ದಿಗ್ಬಲಿಕೊಟ್ಟು ಹೊರಟುಹೋದರು.

ಏಟುಗಳಿಂದ ಘಾಸಿಗೊಂಡ ಯೇಸುವಿನ ದೇಹ ನಿಧಾನವಾಗಿ ಕಟ್ಟೆಯ ಮೆಟ್ಟಲುಗಳನ್ನಿಳಿದು ಸಮೀಪದ ಬೆಟ್ಟದ ಕಡೆಗೆ ತಾನೊಂದೇ ಸಾಗಿತು. ತಮ್ಮನ್ನು ತಾವೇ ಸಂತವಿಸಿಕೊಂಡ ಜನ ರೋಸಿಹೋದ ಅವನ ಆತ್ಮಕ್ಕೆ ಶಾಂತಿ ಸಿಗಲೆಂದು ಹಾರೈಸಿ ಮನೆಗಳ ಕಡೆ ಮರಳಿತು.

ಸಂಜೆಯಾದರೂ ಬೆಟ್ಟದ ಬುಡದ ಕಲ್ಲೊಂದರ ಮೇಲೆ ಕುಳಿತಿದ್ದ ಯೇಸು ಮೌನಸಮಾಧಿಯಿಂದ ಮೇಲೆದ್ದಿರಲಿಲ್ಲ. ಯಾವುದೋ ಧ್ಯಾನ, ಯಾವುದೋ ಮರುಕ, ಕಡೆಯ ಕಾಮದ ಚಿಂತೆ ಕಡಲಾಗಿ ಮೊರೆಯುತ್ತಿತ್ತು. ಮನದ ಗಾಯವಿನ್ನೂ ಮಾದಿರಲಿಲ್ಲ. ಅದರ ಮೇಲೆ ಮತ್ತೊಂದು ಬರೆ ಬಿತ್ತು. ಹತ್ತಾರು ಫರಿಸಾಯರ ಮತ್ತು ಸಂಪ್ರದಾಯಸ್ಥರ ಗುಂಪು ಸ್ತ್ರೀಯೋರ್ವಳನ್ನು ಮುಂದೆಲೆ ಹಿಡಿದು ಎಳೆತಂದು ಯೇಸುವಿನ ಮುಂದೆ ಬಿಸಾಡಿತು. ಅವಳ ದೇಹ ಆ ರಾಕ್ಷಸರ ಬಡಿತದಿಂದ ಜರ್ಝರಿತವಾಗಿತ್ತು. ಉಟ್ಟಿದ್ದ ಬಟ್ಟೆ ಬರೆಗಳೆಲ್ಲಾ ಚಿಂದಿಚಿಂದಿಯಾಗಿ ಅಸ್ತವ್ಯಸ್ತ ಸ್ಥಿತಿಯಲ್ಲಿದ್ದವು. ತಲೆ ಕೆದರಿತ್ತು, ಮುಖ ಬಾಡಿತ್ತು. ಕಣ್ಣುಗಳಲ್ಲಿ ನೀರು ಧಾರಾಕಾರವಾಗಿ ಹರಿಯುತ್ತಿತ್ತು. ತನ್ನ ಕಾಲುಗಳೆರಡನ್ನೂ ಅಪ್ಪಿ ಹಿಡಿದಿದ್ದ ಅವಳ ಗಲ್ಲವಿಡಿದು ಯೇಸು ಮೇಲೆತ್ತಿದ್ದ.

ಅವಳ ನೀರ್ಗಣ್ಣುಗಳು ದೈನ್ಯತೆಯಿಂದ ಅವನನ್ನೇ ದಿಟ್ಟಿಸಿದುವು. ಹೆಬ್ಬುಲಿಯ ಹಿಡಿತದಲ್ಲಿ ಸಿಕ್ಕ ಕರು ತನ್ನ ತಾಯಿಯನ್ನು ನೋಡಿ ಒಮ್ಮೆ ‘ಅಂಬಾ, ಎಂದು ಹಂಬಲಿಸಿ ಬಡಬಡಿಸುವಂತೆ ‘ಓ ತಂದೆ !’ ಅಂದಳು. ಮುಂದೆ ಮಾತು ಬರಲಿಲ್ಲ. ಚಣ ಕಾಲ ಯೇಸು ಅಂತರ್ಮುಖಿಯಾದ. ಅವನ ಮನಸ್ಸು ಆಲೋಚನೆಯ ಸುಳಿಯಲ್ಲಿ ಸಿಕ್ಕು ತೊಳಲಾಡಿತು. ಈಕೆ ಯಾರು ? ಇವಳನ್ನು ನೋಡಿದ ನೆನಪಿದೆಯಲ್ಲಾ ? ಇವಳ ಧ್ವನಿ ಬಹಳ ಪರಿಚಿತವಿದೆ. . .ಹೂಂ . .ಯಾರಿರಬಹುದು ? . . .ಯಾ. . ರಿ. . .ರ. . .ಬ. . .ಹು. . .ದು ?

‘ಹ್ಞಾ ! ಹೌದು ಬಹಳ ದಿನಗಳ ಹಿಂದೆ ಇವಳನ್ನು ಮಗ್ದಲದ ಉಪವನದಲ್ಲಿ ನೋಡಿದ್ದೆ. ಪ್ರಭಾತ ಸಮಯಕ್ಕೇ ಬಂದು ನನ್ನನ್ನು ತನ್ನ ಮನೆಗೆ ಸ್ವಾಗತಿಸಿದ್ದ ಮೇರಿ . . ಓಹ್ ಅವಳೇ ಮಗ್ದಲದ ಮೇರಿ ! ಹೌದು ಸಮಯ ಬಂದಾಗ ನಾನೇ ಬರುವುದಾಗಿ ತಿಳಿಸಿದ್ದೆ. ಆದರೆ. . .ಆದರೆ ಈ . . ? ಈಗ ?’

ನೆನೆದಷ್ಟೂ ಅವನ ಮುಖ ಅಪ್ರಸನ್ನವಾಯಿತು. ಕಣ್ಣುಗಳಲ್ಲಿ ನೀರೂರಿದವು. ಶಾಂತಿಯೇ ಮೂರ್ತಿಮತ್ತಾಗಿ ಕುಳಿತಂತಿದ್ದ ಆತ ಅವಳ ತಲೆ ನೇವರಿಸುತ್ತಾ ಜನರ ಕಡೆ ತಿರುಗಿ, 'ಬನ್ನಿ ಬಂಧುಗಳೇ ನಿಮಗೆಲ್ಲಾ ಸ್ವಾಗತ, ನನ್ನ ಒಲುಮೆಯ ಸ್ವಾಗತ. . . ಈ ಅಬಲೆ ಆಚರಿಸಿದ ದ್ರೋಹವಾದರೂ ಏನು ? ಇವಳ ಈ ಸ್ಥಿತಿಗೆ ಕಾರಣ ?'

'ಕಾರಣ ? ವ್ಯಭಿಚಾರ ! ಯೇಸು ಇವಳು ವ್ಯಭಿಚಾರಗೈದಿದ್ದಾಳೆ' ಎಂದು ದೂರಿದ ಒಬ್ಬ ಫರಿಸಾಯಿ.

'ಹೌದೇ ? ಇದು ಮಹಾಪಾಪ !! ನಿಜ. ಆದರೆ ಈ ಪಾಪಕ್ಕೆ ಕಾರಣನಾದ ಗಂಡಸಿಗೆ ಯಾವ ಶಿಕ್ಷೆ ಕೊಡುತ್ತೀರಿ ಅಥವಾ ತೀರ್ಪು ಕೊಡುವುದಾದರೂ ಯಾರು ?'

'ಅದೆಲ್ಲಾ ನಿನಗೆ ಸಂಬಂಧಿಸಿದ್ದಲ್ಲ !'

'ಹೇಳಿದಷ್ಟು ಬಗುಳುವುದು ಸಭ್ಯತೆಯ ಚಿಹ್ನೆ 'ಲೊ ಮಾಯಾವಿ ! ನೀನೊಬ್ಬ ಗಾರುಡಿಗ ! ಮಾಟಮಂತ್ರಗಳಿಂದ ಜನರನ್ನು ದುರ್ಮಾಗಕ್ಕೆಳೆಯುತ್ತಿರುವ ಮಹಾವಂಚಕ. ಅಲ್ಲದೆ ಜೇಡಹುಳುವಿನ ಜಾಲಹೂಡಿ ಮಾತಿನ ಮೋಡಿಯಲ್ಲಿ ಹೆಣ್ಣುಗಳನ್ನು ಮರುಳುಮಾಡಿ ನಿನ್ನ ಬಲೆಯಲ್ಲಿ ಬೀಳಿಸಿಕೊಳ್ಳುತಿದ್ದೀಯೆ ! ಇಂತಹ ಬುದ್ಧಿಹೀನೆಯರೂ, ಚಂಚಲಚಿತ್ತೆಯರೂ ಇರದಿದ್ದಿದ್ದರೆ ಮಾನವನ ಸ್ಮತಿಪಟಲದಿಂದ ನಿನ್ನ ಹೆಸರು ಎಂದೋ ಅಳಿಸಿಹೋಗುತ್ತಿತ್ತು. ನಿನ್ನ ವ್ಯಂಗ್ಯ ಅಣಕಗಳು ಅಲ್ಲಿರಲಿ, ಹಿಂದೆಲ್ಲಾ ಎಷ್ಟೋ ಸಂದರ್ಭಗಳಲ್ಲಿ ನಮ್ಮನ್ನು ಹೀಯಾಳಿಸಿ ಕಳುಹಿಸಿದಂತೆ ಈ ಬಾರಿ ಕಳುಹಿಸುವುದು ನಿನಗೆ ಸಾಧ್ಯವೇ ಇಲ್ಲವೆಂದು ತಿಳಿ. ತಲೆಹರಟೆಯನ್ನು ಬಿಟ್ಟು ಮರ್ಯಾದೆಯಿಂದ ಸರಿಯಾದ ತೀರ್ಪು ಕೊಡು. ಇಲ್ಲವಾದರೆ ಪರಿಸ್ಥಿತಿ ಪಲ್ಲಟಸೀತು ಎಚ್ಚರಿಕೆ.'

'ಕ್ಯಾಪರ್‌ನಾಮ್‌ನ ಯುವಕ ಪೂಜಾರಿ ಎಂದ.

'ನಿನ್ನ ಮುನ್ನೆಚ್ಚರಿಕೆಗೆ ನನ್ನ ವಂದನೆಗಳು ಮಹಾಶಯ. ಅದರ ಬಗ್ಗೆ ನನಗೆ ಚಿಂತೆಯೂ ಇಲ್ಲ, ಭೀತಿಯೂ ಇಲ್ಲ. ಇರಲಿ, ಧರ್ಮಶಾಸ್ತ್ರಕ್ಕೆ ಬದ್ಧರಾಗಿ ನಾವು ನೀವು ನಡೆಯಬೇಕಾದದ್ದೇ. ಈಕೆ ಮಹಾಪರಾಧಮಾಡಿದ್ದಾಳೆ. ಅದಕ್ಕೆ ಶಿಕ್ಷೆ ಆಗಲೇಬೇಕು. ಇಲ್ಲವೆನ್ನಲಾಗುವುದಿಲ್ಲ. ಅಂತೆಯೇ ಈ ರೀತಿಯ ಪಾಪಕೃತ್ಯಕ್ಕೆ ಯಾವ ಶಿಕ್ಷೆ ವಿಧಿಸಬೇಕೆಂದು ನಿಮ್ಮ ಧರ್ಮಶಾಸ್ತ್ರಗಳು ಹೇಳುತ್ತವೆ ?'

'ನಡುರಸ್ತೆಯಲ್ಲಿ ನಿಲ್ಲಿಸಿ ಕಲ್ಲುಗಳಿಂದ ಹೊಡೆದೂ – ಹೊಡೆದೂ ಸಾಯಿಸಬೇಕೆಂದು. ನಾವು ಅದಕ್ಕೆ ಸಿದ್ಧರಾಗಿಯೇ ಬಂದಿದ್ದೇವೆ. ಯೇಸು, ನೋಡು ಎಲ್ಲರಲ್ಲಿಯೂ ಒಂದೊಂದು ಚೀಲ ಹಿಡಿಗಲ್ಲುಗಳು ತುಂಬಿವೆ.'

ಮತ್ತೊಬ್ಬ ಫರಿಸಾಯನೆಂದ.

'ಓಹೋ ! ಹಾಗೇನು, ಬಹಳ ಸಂತೋಷ. ಕಾರ್ಯತತ್ಪರತೆ ಅಂದರೆ ಹೀಗಿರಬೇಕು. ಆದರೆ ನಿಮ್ಮಲ್ಲಿ ನನ್ನದೊಂದು ವಿನಂತಿ ಬಿನ್ನವಿಸಬಹುದೇ ?'

'ಓ ಅದಕ್ಕೇನಂತೆ ಅಗತ್ಯವಾಗಿ, ಒಂದಲ್ಲದಿದ್ದರೆ ಎರಡಾಗಲಿ, ಅಂತೂ ಪಾಪಗೈದವಳ ಬಗ್ಗೆ ತೀರ್ಪು ಸರಿಯಾಗಿದ್ದರೆ ಸಾಕು.'

ವಯೋವೃದ್ಧನೊಬ್ಬನೆಂದ.

'ಅದರಲ್ಲಿ ಎಳ್ಳಷ್ಟೂ ಸಂದೇಹಬೇಡ. ಈಗ ನಿಮ್ಮ ಹೆಸರುಗಳನ್ನೆಲ್ಲಾ ಈ ನೆಲದ ಮೇಲೆ ಬರೆಯುತ್ತೇನೆ. ಕಡೆಯಲ್ಲಿ ಈ ಪತಿತೆ ಮಗ್ದಲದ ಮೇರಿಯ ಹೆಸರನ್ನೂ ಬರೆಯುತ್ತೇನೆ. ಅವಳ ಹೆಸರಿನ ಮುಂದೆ ಅವಳು ಮಾಡಿದ ಪಾಪವನ್ನೂ ಪಾಪಕ್ಕೆ ತಕ್ಕ ಶಿಕ್ಷೆಯನ್ನೂ ನಮೂದಿಸುತ್ತೇನೆ. ಅನಂತರ ನಿಮ್ಮ ನಿಮ್ಮ ಹೆಸರುಗಳನ್ನು ನಾನು ಓದಿ ಹೇಳಿ ಮುಗಿಸುವಷ್ಟರಲ್ಲಿ ಯಾರು ಪಾಪರಹಿತರೋ ಅಂದರೆ ಯಾರು ಹಿಂದೆಂದೂ ಯಾವ ಒಂದು ಪಾಪವನ್ನು ಮಾಡದಿರುವರೊ ಅವರು ಈಕೆಯ ಮೇಲೆ ಮೊದಲು ಕಲ್ಲೆಸೆಯಲಿ.'

ಗುಂಪು ಮೂಕವಾಯಿತು. ಒಬ್ಬರ ಮುಖವನ್ನೊಬ್ಬರು ನೋಡಿಕೊಂಡರು. ಯಾರ ಮುಖದಲ್ಲಿ ನೋಡಿದರೂ ಪ್ರಶ್ನಾರ್ಥಕ ಚಿಹ್ನೆಗಳೆ ! ಕೈಯಲ್ಲಿ ಹಿಡಿದಿದ್ದ ಕಲ್ಲುಗಳು ಹಾಗೆ ಹಾಗೆಯೇ ಜಾರಿಜಾರಿ ಬಿದ್ದುವು. ಮೇರಿ ಹಿಂತಿರುಗಿ ನೋಡಿದಾಗ ಜನರ ಗುಂಪು ಕರಗಿಹೋಗಿತ್ತು. ಒಂದು ಪಿಳ್ಳೆಯೂ ಅಲ್ಲಿರಲಿಲ್ಲ. ಕರುಣಾಮೂರ್ತಿಯ ಪಾದಗಳನ್ನು ತಬ್ಬಿ ಹಿಡಿದು ಬೇಡಿಕೊಂಡಳು. 'ಕ್ಷಮಿಸು ತಂದೆ, ನನ್ನ ಅಪರಾಧವನ್ನು ಮನ್ನಿಸು. ಅರಿಯದೇ ಆಚರಿಸಿದ ಹೀನಕೃತ್ಯಕ್ಕೆ ಕ್ಷಮೆಯಿರಲಿ ಸ್ವಾಮಿ, ಕ್ಷಮೆಯಿರಲಿ. ನಿನ್ನ ಕಾರುಣ್ಯದ ಶಿಶುವಾದ ನನಗೆ ಈ ನಿನ್ನ ಪವಿತ್ರ ಮಡಿಲೇ ಗತಿ. ಇಂದಿನಿಂದ ನಾನು ನಿನ್ನ ಚರಣದಾಸಿ. ಅನುಗ್ರಹಿಸು ತಂದೆ, ಅನಿಗ್ರಹಿಸು.'

'ಮೇಲೇಳು ಮೇರಿ, ಸಮಯವರಿತು ಆದ ಈ ಸಮಾಗಮದಿಂದಲಾದರೂ ಶಾಂತಿ ನೆಲೆಗೊಳ್ಳಲಿ. ನಿನ್ನ ನ್ಯಾಯ ನಿರ್ಣಯ ಮಾಡುವ ಅಧಿಕಾರ ಅವರಾರಿಗೂ ಇಲ್ಲ. ಯಾರೇ ಆಗಲಿ ಮೊದಲು ತಮ್ಮನ್ನು ತಾವು ನಿರ್ಣಯಿಸಿಕೊಳ್ಳದೆ ಅನ್ಯರನ್ನು ನಿರ್ಣಯಿಸಲು ಹೋಗಬಾರದು.' ಮೇರಿಯ ಬೆಂದ ಜೀವಕ್ಕೆ ಯೇಸುಸ್ವಾಮಿಯ ಉಪದೇಶ ತಂಪೆರೆಯಿತು. ನೊಂದ ಆತ್ಮ ಮೈಮೇಲಿನ ಗಾಯಗಳನ್ನೆಲ್ಲಾ ಮರೆತು ಆನಂದಭರಿತವಾಯಿತು. ತನಗೆ ಪರಿಶುದ್ಧಿಯಾಯಿತೆಂಬ ಭಾವ ಬೆಳೆಯಿತು.

೭

'ಅವನೊಬ್ಬ ಪವಾಡ ಪುರುಷನಂತೆ !'

'ಹೌದೇನು ?'

'ಹೂ, ಅನೇಕ ಪವಾಡಗಳಿಂದ ಜನರ ಕಷ್ಟಗಳನ್ನು ನಿವಾರಣೆ ಮಾಡಿರುವನಂತೆ. ಕಣ್ಣಿಲ್ಲದವರಿಗೆ ಕಣ್ಣುಗಳನ್ನು ಕೊಟ್ಟಿರುವನಂತೆ. ಮೈಯಿಂಡ ದೆವ್ವಗಳನ್ನು ಮತ್ತೆ ಬರದಂತೆ ಬಡಿದೋಡಿಸಿದನಂತೆ. ಅನೇಕ ಕುಷ್ಠ ರೋಗವನ್ನೂ, ಮೂರ್ಛೆರೋಗವನ್ನೂ ತನ್ನ ಅದ್ಭುತ ಪವಾಡಶಕ್ತಿಯಿಂದ ಕೇವಲ ಕೈಯಿಂದ ಮುಟ್ಟಿಯೇ ಗುಣಪಡಿಸಿದನಂತೆ. ಸತ್ತ ಹುಡುಗಿಯೊಬ್ಬಳನ್ನು ಬದು ಕಿಸಿರುವನಂತೆ. ಹಾಗಂತೆ ಹೀಗಂತೆ ಅಂತೆ ಕಂತೆಗಳಲ್ಲಿ ಮಾತು ಸಾಗಿತು ಜೆರೊಸಲೆಮ್ಮಿನ ಸುತ್ತಣ ಹಳ್ಳಿಯ ಜನರದು. ಬಹಳ ಮಂದಿ ಯೇಸುವಿನ ಉಪದೇಶ ಕೇಳಲೆಂದು ತಮ್ಮ ತಮ್ಮ ಸಾಂಸಾರಿಕ ಕಷ್ಟಗಳನ್ನು ನಿವಾರಣೆ ಮಾಡಿಕೊಳ್ಳಲೆಂದು ಗಾಡಿಗಳನ್ನು ಕಟ್ಟಿಕೊಂಡು ಮಾರುಕಟ್ಟೆಯ ಬಳಿಗೆ ಬಂದಿದ್ದರು. ಮೆಟ್ಟಿಲುಗಳ ಪಕ್ಕದಲ್ಲಿ ನಿಂತಿದ್ದ ಪುಂಡರ ತಂಡವೊಂದು ಈ ಭಕ್ತಮಂಡಲಿಯನ್ನು ಪ್ರತಿಭಟಿಸಿ ನುಡಿಯಿತು. ಅವರಲ್ಲೊಬ್ಬ ವೇದಿಕೆಯ ಮೇಲೆ ನಿಂತು ಒಂದು ಭಾಷಣವನ್ನೇ ಮಾಡಿದ. 'ಓ ಮೂರ್ಖಶಿ ಖಾಮಣಿಗಳೇ, ಮನುಜ ರೂಪದ ನೆರಳಿಗೆ ಪ್ರವಾದಿಯ ಪಟ್ಟ ಕಟ್ಟುತ್ತೀರಿ. ಮರಳುದಿಣ್ಣೆಯನ್ನೇ ಮಹೋನ್ನತ ಶಿಖರವೆನ್ನುತ್ತೀರಿ. ಹಾದಿಯ ಪಕ್ಕದಲ್ಲಿ ನಿಂತ ಮಳೆನೀರಿನಗುಂಡಿಯನ್ನು ಸರೋವರವೆನ್ನುತ್ತೀರಿ. ಮತಿಹೀನರೇ, ನಮ್ಮ ಪ್ರಾಚೀನ ಪ್ರವಾದಿಗಳಾದ ಡೇವಿಡ್, ಸಾಲೊಮನ್ ಮೊದಲಾದವರು ಆಡದ ಮತು, ಮಾಡದ ಕೆಲಸ, ನಡೆಸದ ಪವಾಡ ಯಾವುದನ್ನು ಈತ ಬೇರೆ ಯಾಗಿ ನಡೆಸಿದ್ದಾನೆ ತೋರಿಸಿ. ಹಿಂದಿನವರೆಲ್ಲಾ ಮಾಡಿಟ್ಟ ಅಡುಗೆಯನ್ನು ಈತ ಒಪ್ಪಿಸಿರಬಹುದು ಅಷ್ಟೆ. ಅಷ್ಟಕ್ಕೆ ಮರುಳಾಗಿ ಪಟ್ಟಪದವಿಗಳನ್ನು ಕೊಟ್ಟು ಗೌರವಿಸುವುದೆ ? ನಾನು ಕುಂಬಾರನ ಹಸ್ತ ಕೌಶಲಕ್ಕೆ ಬೆಲೆಕೊಡುವವನಲ್ಲದೆ ಮಡಕೆಗಳನ್ನು ಕೊಳ್ಳು ವ ಹಣವಂತನಿಗಲ್ಲ. ಮಗ್ಗದ ಮೇಲೆ ಕುಳಿತು ಎಳೆಗಳ ಜಾಲದಲ್ಲಿ ಕಳೆತುಂಬುವ ನೇಕಾರನಿಗೆ ಗೌರವ ಕೊಡುವವನಲ್ಲದೆ ಬಟ್ಟೆಯನ್ನು ಧರಿಸುವ ಶ್ರೀಮಂತನಿಗಲ್ಲ. ಕುರಿಗಳಂತೆ ತಲೆ ತಗ್ಗಿಸಿಕೊಂಡು ನಡೆಯಬೇಡಿ. ನಿಮ್ಮಲ್ಲಿಯೇ ನೀವು ಆಲೋಚಿಸಿ ನೋಡಿ.  ಈ ಯೇಸು ಮೊದಲು ಏನಾಗಿದ್ದ ? ಈಗ ಏನಾಗಿದ್ದಾನೆ ? ವಿಚಾರಮಾಡಿ ನೋಡಿ. ಸತ್ಯಾಂಶ ನಿಮಗೆ ವೇದ್ಯವಾಗು ತ್ತದೆ. ಸತ್ಯವಾಗಿ ಹೇಳಬೇಕೆಂದರೆ ಈತ ತನ್ನ ಮನಸ್ಸಾಕ್ಷಿಯಂತೆ ಬದುಕಲು ಭಯಪಟ್ಟ ಮಾನವ, ಆತ್ಮವಂಚಕ. ಇದನ್ನು ಸ್ಪಷ್ಟ ತಿಳಿದು ಎಚ್ಚೆತ್ತು ಬಾಳಿ.'

ಅಷ್ಟರಲ್ಲಿ ಯೇಸು ತನ್ನ ಪ್ರಮುಖ ಶಿಷ್ಯರೊಡಗೂಡಿ ಅಲ್ಲಿಗೆ ಆಗಮಿಸಿದ. ಜನರೆಲ್ಲಾ ಎದ್ದುನಿಂತು ಸ್ವಾಗತಿಸಿ ಹರ್ಷೋದ್ಗಾರ ಮಾಡಿದರು, 'ಬನ್ನಿ ಸೋದರರೆ, ಭಯಪಡದೆ ಬನ್ನಿ. ನನ್ನ ಕಾಲವಿನ್ನೂ ಸನ್ನಿಹಿತವಾಗಿಲ್ಲ. ಈ ಜಗದೆದುರು ನಾನು ಅಪರಾಧಿಯಾಗಿ ನಿಲ್ಲುವ ಮುನ್ನ ನಿಮಗೆ ಹೇಳಬೇಕಾದ ವಿಷಯಗಳು ಅನೇಕವಿವೆ. ಮಾಡಬೇಕಾದ ಕಾರ್ಯಗಳು ಬಹಳ ಇವೆ. ತನ್ನ ಶಿಷ್ಯರನ್ನು ಕೈಚಾಚಿ ಸ್ವಾಗತಿಸಿ ಕಟ್ಟೆಯ ಅಟ್ಟಣೆಯನ್ನೇರಿದ. ಆಗ ಪುಂಡರ ಗುಂಪಿನವನೊಬ್ಬ ಮೇಲೆದ್ದು ಕೇಳಿದ : 'ಯೇಸು ಈ ಜನ ಆಡಿಕೊಳ್ಳುತ್ತಿದ್ದರು ನೀನೊಬ್ಬ ಪವಾಡಪುರುಷನಂತೆ. ಅತ್ಯದ್ಭುತ ಕಾರ್ಯಗಳೇನಕವನ್ನು ಮಾಡಿರುವೆಯಂತೆ! ಎಲ್ಲಿ ಕಲ್ಲುಹಲಗೆಯನ್ನು ರೊಟ್ಟಿಯನ್ನಾಗಿ ಮಾಡಿ ತಿನ್ನು ನೋಡೋಣ.'

'ಮಾನವನ ಬಾಳಿನಲ್ಲಿ ರೊಟ್ಟಿಯೇ ಪ್ರಧಾನ ವಸ್ತುವಲ್ಲ.'

'ನಿನಗೆ ದೈವಶಕ್ತ ಇದೆಯಂತೆ. ಎಲ್ಲಿ ದೇವಾಲಯದ ಆ ಗೋಪುರದಿಂದ ಹಾರು, ನಿನ್ನ ದೈವಶಕ್ತಿ ಕಾಪಾಡುವುದೋ ಇಲ್ಲವೋ ನೋಡೋಣ.'

ಅದು ಯುಕ್ತವಲ್ಲ. ಆಯಸ್ಸು ಬಹಳವಿದೆಯೆಂದು ಎದೆಯ ಮೇಲೆ ಚಪ್ಪಡಿ ಎಳೆದುಕೊಳ್ಳುವ ಸಾಹಸ ಮಾಡಬಾರದು. ಅಲ್ಲದೆ ಸ್ವಾರ್ಥಕ್ಕಾಗಿ ದೇವರನ್ನು ಪರೀಕ್ಷಿಸಬಾರದು.'

'ಇಷ್ಟೇನೆ ನಿನ್ನ ಪವಾಡ ! ಅಯ್ಯೋ ಬಡುಕೋಬೇಕು ನಿನ್ನ ಯೋಗ್ಯತೆಗೆ !'

'ಪವಾಡ ! ಯಾರು ಹೇಳಿದ್ದು ಪವಾಡವೆಂದು ? ಅವರು ನಿಮ್ಮಂತಹ ತಿಳಿದ ಜ್ಞಾನಿಗಳಿರಲಾರರು. ಅರಿತುಕೊಳ್ಳುವ ಶಕ್ತಿ ಸಾಲದೆ ವಿಪರೀತ ಅರ್ಥಕಲ್ಪಿಸಿ ಹೇಳಿದ್ದಾರೆ. ಕೇಳಿ ಪವಾಡದ ಮಹಿಮೆ ಇಷ್ಟೇ : ಅಜ್ಞಾನಿಗಳಾದ ಹಲವು ಕುರುಡರಿಗೆ ನನ್ನ ನುಡಿಯಿಂದ ಸುಜ್ಞಾನದ ಕಣ್ಣು ಮೂಡಿದ್ದರೆ ಅದೂ ಒಂದು ಪವಾಡವೇ. ಜನಮನದ ಜಾಡ್ಯ ನಿವಾರಣೆಯು ಒಂದು ಪಕ್ಷ ಶ್ರಮದಿಂದ ಆಗಿದ್ದರೆ ಅದು ಅವರ ಮೈ ಉಂಡ ದೆವ್ವವನ್ನು ಓಡಿಸಿದಂತಲ್ಲವೇನು ? ಅಂತಾದಲ್ಲಿ ಅದೂ ಒಂದು ಪವಾಡವೇ. ಸೇವೆ, ಸ್ನೇಹ, ಸೌಹಾರ್ದ, ಪ್ರೇಮಗಳಿಂದ ಜನತೆಯ ದುಃಖ ನಿವಾರಣೆಯಾಗಿದ್ದರೆ ಅವರಿಗೆ ಬಂದ ಅನೇಕ ರೋಗಗಳನ್ನು ನಿವಾರಣೆ ಮಾಡಿದಂತೆಯೇ ! ಪವಾಡವೆಂದರೇನು ? ಸೋದರ, ಜನರ ಕಣ್ಣಿಗೆ ಮಣ್ಣೆರಚಿ ನಡೆಯುವುದೇ ? ಎಂದಿಗೂ ಅಲ್ಲ, ಅತ್ತ ನೋಡು, ಆ ಬಯಲಿನಲ್ಲಿ ಬೆಳೆದಿರುವ ಆಲದ ಸಸಿಯನ್ನು ನೋಡು. ಅದು ಹೋದ ಮಾಗಿಯಲ್ಲಿ ಮರದ ಹಣ್ಣಿನಿಂದ ಒಣಗಿ ಹೊರಬಂದ ನಿರ್ಜೀವ ಬೀಜವಾಗಿತ್ತು. ಆದರೆ ಈಗಿನ ವಸಂತದಲ್ಲಿ ಚೇತನ ತುಂಬಿ ಜೀವಂತ ಸಸ್ಯವಾಗಿದೆ. ಅಂದ ಬಳಿಕ ಇದನ್ನು ನೋಡಿದ ನಿಮಗೆ ಜಗತ್ತಿನ ಸೃಷ್ಟಿ ಸ್ಥಿತಿ ಲಯ ಕಾರಣನಾದ ಆ ಪವಾಡ ಪುರುಷನ ಮಹಾಪವಾಡವೆನಿಸುವುದಿಲ್ಲವೆ ? ಸೂರ್ಯೋದಯ, ಚಂದ್ರೋದಯಗಳು ವಿಶ್ವದ ಎಲ್ಲಾ ರಚನೆಗಳೂ ಆತನ ಪವಾಡವೇ ಅಲ್ಲವೆ ? ನಿರ್ಜೀವ ಬೀಜ ದಲ್ಲಿ ಕಳೆತುಂಬಿದ ಆ ಪರಮಾತ್ಮನು, ಜಡತೆಯೇ ಮೈವೆತ್ತು ಸತ್ತಂತಿದ್ದ ಮನುಜವರ್ಗಕ್ಕೆ ಜಾಗೃತಿಯ ಜೀವ ತುಂಬುವ ಶಕ್ತಿಯನ್ನು ನನ್ನಲ್ಲೂ ಇಟ್ಟಿದ್ದರೆ ಅದಕ್ಕೆ ಯಾರೂ ಆಶ್ಚರ್ಯಪಡಬೇಕಿಲ್ಲ.'

'ಓಹೋ ಹಾಗಾದರೆ ಆ ಪರಮಾತ್ಮನ ಅಂಶವೇ ನೀನು ?'

'ಏಕಾಗಬಾರದು ?'

'ಅಬ್ಬಾ ! ಇದು ಮೂರ್ಖತನದ ಪರಮಾವಧಿ ; ಅಹಂಕಾರದ ಅತಿರೇಕ.'

'ಹೊಗಲಿ, ಯೇಸು, ನಮ್ಮ ನಮ್ಮಲ್ಲಿ ದ್ವೇಷಭಾವನೆಗಳೇಕೆ ? ನೀನು ಸಮ್ಮತಿಸುವುದಾದರೆ ನಿನ್ನನ್ನೇ ನಾವು ನಮ್ಮ ರಾಜ ನೆಂದು ಸ್ವೀಕರಿಸಲು ಸಿದ್ಧರಿದ್ದೇವೆ. ನಮಗೆ ಪ್ರಬಲ ಶತ್ರುಗಳೆಂದರೆ ನಮ್ಮನ್ನು ನಾಯಿಗಿಂತಲೂ ಕಡೆಯಾಗಿ ಕಾಣುತ್ತಿರುವ ಆ ರೋಮನರು, ಅವರನ್ನು ಬಡಿದೋಡಿಸಿ ಸ್ವತಂತ್ರರಾಗೋಣ. ನೀನೇ ನಮಗೆಲ್ಲ ದೊರೆಯಾಗಿರು. ಒಪ್ಪಿಗೆಯೇ ?'

'ಹೌದು ಯೆಸು, ವಿಸ್ತಾರವದ ಈ ನಾಡು ಸ್ವಾತಂತ್ರ್ಯದ ಬೀಡಾದಿತು. ನಾವೆಲ್ಲರು ಖಡ್ಗಧಾರಿಗಳಾಗಿ ನಿನಗೆ ಬೆಂಬಲಕೊ ಡುತ್ತೇವೆ. ಘನಸಾಮ್ರಾಜ್ಯದ ಏಕೈಕ ಚಕ್ರವರ್ತಿ ನೀನಾಗುವೆಯಂತೆ.' ಎಂದು ಪಕ್ಕದಲ್ಲೇ ಇದ್ದ ಜುಡಾಸ್ ಹಿಂದಿನವರ ಹೇಳಿಕೆ ಯನ್ನು ಅನುಮೋದಿಸಿದ.

'ಬಾಯಿ ಮುಚ್ಚು ಜುಡಾಸ್, ಮೂರ್ಖನಂತೆ ವರ್ತಿಸಬೇಡ. ಅನೇಕ ಜನರ ಅಸ್ತಿಗಳ ಮೇಲೆ ನಿರ್ಮಿತವಾದ ಈ ಸಿಂಹಾಸನದ ಒಡೆತನ ನನಗೆ ಬೇಕಿಲ್ಲ. ಜಗದೀಶ್ವರನಿಂದ ಆಜ್ಞಪ್ತನಾಗಿ ಬಂದ ಈ ಸೇವಕ ಸರ್ವಾಧಿಕಾರಿಯಾಗಲು ಇಷ್ಟಪಡಲಾರ. ಅಂತಹ ಅಧಿಕಾರ ಇರುವುದಾದರೆ ಅದು ಇಲ್ಲಿಲ್ಲ. ಅಲ್ಲಿ ನಿಮಗೆ ಕಾಣದ, ತೋಳು ತಬ್ಬದ, ಮನಸ್ಸು ಭಾವಿಸದ, ಅತೀತದೆಡೆಯಲ್ಲಿ. ಅಲ್ಲಿ ನಾನು ಪ್ರಭುವಾಗಿ ವಿಭುವಾಗಿ ಮೆರೆಯುತ್ತೇನೆ. ಈ ಜಂಜಾಟದ ಗೂಡಿನ ಬಗ್ಗೆ ಮಮತೆಯೇ ಇಲ್ಲ.'

ಬೆಟ್ಟವೊಂದು ಬಯಲಿನೊಡನೆ ಮಾತಾಡಿದಂತಿತ್ತು ಆ ಸನ್ನಿವೇಶ !

ಇಂಥವೇ ನಾನಾರೂಪದ ಅತೃಪ್ತಿ ಅಸೂಯೆಗಳ ರುದ್ರತಾಂಡವ ಜನರ ಮನೋಭೂಮಿಕೆಯಲ್ಲಿ ನಡೆಯುತ್ತಿತ್ತು. ಮಿತ್ರರಿಗೆ ಮಿಗಿಲಾಗಿ ಶತ್ರುಗಳ ಗುಂಪು ದೇಶದಾದ್ಯಂತ ಬೆಳೆಯತೊಡಗಿತು. ಸಂಪ್ರದಾಯ ಶರಣರು ತಮ್ಮ ಮಡಿವಂತಿಕೆಯನ್ನು ಹಾಳು ಮಾಡಿದನೆಂದು ದೂಷಿಸಿದರೆ, ಸ್ವಾರ್ಥಸಾಧಕರಾದ ಫರಿಸಾಯರು ಸಮಾಜದಲ್ಲಿ ತಮ್ಮ ಗೌರವ ಕಡಿಮೆಯಾಯಿತೆಂದು ದ್ವೇಷಿಸಿದರು. ಅತ್ತ ರಾಜ್ಯದ ಉಪ ಆಡತಾಧಿಕಾರಿಯಾದ ಹೆರೋಡ ಮೊದಲಾದವರು ತಮ್ಮ ಸ್ವೇಚ್ಛಾಪ್ರವೃತ್ತಿಗೆ ಧಕ್ಕೆ ತಗುಲಿತೆಂದು ರೋಷಭೀಷಣರಾದರು. ಮತ್ತೊಂದು ಕಡೆ ಸರ್ವಾಧಿಕಾರಿಗಳಾದ ರೋಮನರು 'ಈ ಗದ್ದಲ ಗಲಾಟೆಗಳಿಗೆ ರೋಸಿಹೋಗಿ ಶಾಂತಿಧೂತರೆಂದು ಹೇಳಿಕೊಳ್ಳುವ ಈ ಪ್ರವಾದಿಗಳಿಂದಲೇ ರಾಷ್ಟ್ರದಲ್ಲಿ ಕ್ರಾಂತಿಯ ಬಿರುಗಾಳಿ ಬೀಸುವುದು, ಇವರು ಹುಟ್ಟದಿ ದ್ದರೆ ಒಳ್ಳೆಯದು, ಹುಟ್ಟಿದರೂ ಬೇಗ ಇವರ ಅಧ್ಯಾಯ ಮುಗಿದರೇ ದೇಶಕ್ಕೆ ಕ್ಷೇಮ' ಎಂದು ಬಗೆಬಗೆಯಾಗಿ ಆಲೋಚಿಸಿ, ಇಂಥವರ ಅಂತ್ಯಕ್ಕೆ ದಿನಗಳನ್ನು ಎಣಿಸುತ್ತಿದ್ದರು. ಇದೆಲ್ಲಕ್ಕೂ ಮಿಗಿಲಾಗಿ ಯೇಸುವಿನ ಶಿಷ್ಯರಲ್ಲೇ ಅವನ ಬಗ್ಗೆ ಅತೃಪ್ತಿ, ಅಸಮಾಧಾನಗಳು ತಲೆದೋರಿದವು. ಬಹುಶಃ ದ್ರೋಹಚಿಂತಕರು ಸಮಯ ಕಾಯುತ್ತಿದ್ದರೆಂದು ತೋರುತ್ತದೆ. ಅವರಲ್ಲಿ ಇಸ್ಕಾರಿ ಯಟದ ಜುಡಾಸನೇ ಅಗ್ರವ್ಯಕ್ತಿ. ಆಗಿನ ಪರಿಸ್ಥಿತಿ ನೋಡಿದರೆ ಬಹುಮಟ್ಟಿಗೆ ಏಸುವಿಗೆ ಉಳಿಗಾಲವಿದ್ದಂತೆ

ಕಾಣಬರುತ್ತಿರಲಿಲ್ಲ. ಅಂತೆಯೇ ಏಸುವೂ ಅದನ್ನು ಕುರಿತು ಚಿಂತಿಸುತ್ತಿರಲಿಲ್ಲ. ಪ್ರಾಯಶಃ, ಅಂತಹ ದಿನವನ್ನು ಆತ ಮೊದಲೇ ಊಹಿಸಿಕೊಂಡಿರಲೂ ಸಾಕು.

೮

ಅಂದು ಸ್ಕಸ್ಯ ಹಬ್ಬ. ಬಗೆಬಗೆಯಾದ ಔತಣ ವಿನೋದಗಳಿಂದ ಇಡೀ ನಗರವೇ ಆನಂದಭರಿತವಾಗಿದೆ. ಅಂದು ಸಂಜೆ ಒಂದು ದೊಡ್ಡ ಮನೆಯ ವಿಶಾಲವಾದ ಪ್ರಾಂಗಣದಲ್ಲಿ ಯೇಸು ತನ್ನ ಹನ್ನೆರಡು ಮಂದಿ ಶಿಷ್ಯರಿಗಾಗಿ ಪ್ರತ್ಯೇಕ ಔತಣಕೂಟವೊಂದನ್ನು ಏರ್ಪಡಿಸಿದ್ದ. ಅತಿಥಿಗಳೆಲ್ಲರೂ ಆಗಮಿಸಿದ ಮೇಲೆ ಯೇಸುವೇ ಮುಂದೆ ಬಂದು ಎಲ್ಲರಿಗೂ ಅರ್ಘಪಾದ್ಯಾದಿಗಳನ್ನು ಕೊಟ್ಟು ಮಹಡಿಯ ಮೇಲೆ ಹರಡಿದ್ದ ಊಟದ ಮೇಜುಗಳ ಮುಂದೆ ಎಲ್ಲರನ್ನೂ ಕರೆದು ಕೂರಿಸಿದ. ತಾನೇ ಎಲ್ಲರಿಗೂ ಬಡಿ ಸುತ್ತಾ 'ಬಂಧುಗಳೇ, ಈ ತಿನುಸಗಳೇ ನನ್ನ ದೇಹದ ಮಾಂಸಖಂಡ ; ತಿನ್ನಿ ಈ ಮಧುವೇ ನನ್ನ ದೇಹದ ರಕ್ತ ಕುಡಿಯಿರಿ ; ನಿಮ್ಮೊಡನೆ ಮಾಡುವ ಈ ಊಟವೇ ನನ್ನ ಕೊನೆಯ ಊಟವಾಗಬಹುದು, ಭೂಜಿಸಿ ತೃಪ್ತರಾಗಿರಿ, ನನ್ನಾತ್ಮಕ್ಕೂ ತೃಪ್ತಿಯೆನಿಸಲಿ' ಎಂದ. ಈ ಮಾತು ಕೇಳಿ ಎಲ್ಲರಿಗೂ ಆಶ್ಚರ್ಯವಾಯಿತು. ಚಣಕಾಲ ಯೇಸು ಮೌನದಿಂದಲೇ ಯಾಂತ್ರಿಕವಾಗಿ ಕೆಲಸ ಮಾಡಿದ. ಅವನ ಆಗಿನ ಮೌನದಲ್ಲಿ ಮರುಭೂಮಿಯ ರುದ್ರತೆಯಿತ್ತು.

ಹರಿಯುವ ನದಿಗೆ ಸೇರುವ ಸಾಗರದ ಎಚ್ಚರವಿದ್ದೇ ಇರುತ್ತದೆ. ಅರ್ಧ ಊಟ ಸಾಗಿರಬಹುದು. ತಲೆತಗ್ಗಿಸಿಕೊಂಡೇ ಯೇಸು ಮೆಲ್ಲಗೆ ಒಂದು ಮಾತು ಹೇಳಿದ : 'ಇಲ್ಲಿ ನೆರೆದಿರುವ ನಿಮ್ಮಲ್ಲಿಯೇ ಒಬ್ಬ ನನ್ನ ಮರಣಕ್ಕೆ ಕಾರಣನಾಗಬಹುದು.'

'ಯೇಸು, ಆ ವ್ಯಕ್ತಿ ನಾನಲ್ಲ !' ಎಂದು ಆ ತಕ್ಷಣವೇ ಜುಡಾಸ್ ತನ್ನ ಎಂಜಲುಗೈಯನ್ನು ಮೇಲೆತ್ತಿ ಕೂಗಾಡಿದ. ಆ ಸಂದರ್ಭದಲ್ಲಿ ಎಲ್ಲರಿಗೂ ಇದು ಆಶ್ಚರ್ಯ ತಂದಿತೇ ಹೊರತು ಯಾರಿಗೂ ಅದರ ರಹಸ್ಯ ಅರಿವಾಗಲಿಲ್ಲ.

ಊಟ ಮುಗಿದಮೇಲೆ ಎಲ್ಲರೂ ಗೆಥ್ಲೆಮೇನ್ ಎಂಬ ತೋಟಕ್ಕೆ ಹೊರಟರು. ಹಾದಿಯಲ್ಲಿ ನಗರದ ಮಹಾದ್ವಾರಕ್ಕೆ ಹೋದಾಗ ಜೂಡಾಸ್ ಆ ಗುಂಪಿನಲ್ಲಿರಲಿಲ್ಲ ! ತೋಟದ ಬಯಲಿನಲ್ಲಿ ಎಲ್ಲರೂ ಕುಳಿತರು. ಆದರೆ ಯೇಸು ಮಾತ್ರ ಕೂರದೆ ಸ್ವಲ್ಪ ಮುಂದೆ ನಡೆದ. ಹತ್ತಿರದ ಮರಗಿಡಗಳನ್ನು ಸುತ್ತುಹಾಕುತ್ತಿದ್ದ. ಆಗಾಗ ಮುಗಿಲೆಡೆಗೆ ಕತ್ತೆತ್ತಿ ಕೈಚಾಚಿ 'ತಂದೆಯೇ ! ತಂದೆಯೇ ! ' ಅನ್ನುತ್ತಿದ್ದ. ಒಮ್ಮೊಮ್ಮೆ ಇದ್ದಕ್ಕಿದ್ದಂತೆಯೇ ಸ್ತಬ್ಧನಾಗಿ ನಿಲ್ಲುತ್ತಿದ್ದ. ಮತ್ತೆ ನಾಲ್ಕು ಹೆಜ್ಜೆ ಮುಂದೆ ನಡೆಯುತ್ತಿದ್ದ. ಆ ಮೌನದ ವಾತಾವರಣ ಶಿಷ್ಯರ ಮನಸ್ಸಿನಲ್ಲಿ ಭೀತಿಯನ್ನು ತಂದಿತ್ತು. ಸುಮಾರು ಸರಿರಾತ್ರಿ ಮಿಂಚಿರಬಹುದು. ನಕ್ಷತ್ರಗಳು ಕಾಂತಿಹೀನವಾಗಿ ಮಿನುಗುತ್ತಿದ್ದುವು. ಯೇಸು ಸರಸರನೆ ತನ್ನ ಶಿಷ್ಯರೆಡೆಗೆ ಬಂದು ಎಲ್ಲರ ಗಲ್ಲಕ್ಕೂ ಮುತ್ತಿಟ್ಟು ಒಂದು ಮರದ ಬುಡವನ್ನೊರಗಿ ಕುಳಿತ. ಅಷ್ಟರಲ್ಲಿ ದೂರದಲ್ಲಿ ಜನರ ಗದ್ದಲ ಕೇಳಿ ಬಂತು. ಆದರೆ ಜುಡಾಸ್‌ನೊಬ್ಬನನ್ನು ಬಿಟ್ಟರೆ ಯಾರೂ ಕಣ್ಣಿಗೆ ಕಾಣುತ್ತಿರಲಿಲ್ಲ. ಯೇಸುವಿನ ಹತ್ತಿರ ಬಂದ ಜುಡಾಸ್, ಮೊಣಕಾಲೂರಿ ಮುತ್ತಿಟ್ಟ.

'ಬಹಳ ತಡವಾಗಿ ಬಂದೆ ಜುಡಾಸ್ ! ಎಷ್ಟು ಹೊತ್ತು ನಿನಗಾಗಿ ಕಾಯುವುದು! ' ಎಂದು ಯೇಸು ನುಡಿಯುವಷ್ಟರಲ್ಲಿ ಹತ್ತಾರು ಜನ ಭಟರು ಅವನನ್ನು ಹಿಡಿದು, ಸರಪಣಿಗಳಿಂದ ಬಂಧಿಸಿದರು. ಅವರ ಕೈಗಳಲ್ಲಿ ಭರ್ಜಿ, ಭಲ್ಲೆ, ಖಡ್ಗಗಳಿದ್ದವು. ಅವರ ಕೂಗು ಕೇಕೆಗಳಿಗೆ ಬೆದರಿ ಶಿಷ್ಯರೆಲ್ಲರೂ ದಿಕ್ಕಾಪಾಲಾಗಿ ಓಡಿದರು. ಆಗ ಅವರಿಗೆ ತಿಳಿಯಿತು ಜುಡಾಸನ ಕೃತ್ರಿಮ ಹಾಗೂ ಯೇಸುವಿನ ಮೌನದ ಮಥಿತಾರ್ಥ. ಆದರೆ ಯಾರೂ ಏನನ್ನೂ ಮಾಡುವಂತಿರಲಿಲ್ಲ. ನಿಸ್ಸಹಾಯಕರಾದ ಅವರೆಲ್ಲರೂ ಪ್ರಾಣಭೀತಿಯಿಂದ ಕಾಲಿಗೆ ಬುದ್ಧಿ ಹೇಳಿದರು.

ಆ ಕತ್ತಲೆಯಲ್ಲೇ ಓಡಿದ ಜುಡಾಸ್, ಕಲ್ಲುಮುಳ್ಳುಗಳನ್ನದೆ ತೋಟದ ಬೇಲಿಯನ್ನು ಹಾರಿ ತನ್ನ ಸ್ನೇಹಿತನೊಬ್ಬನ ಮನೆಯ ಹತ್ತಿರ ಓಡಿ ದಬದಬನೆ ಒಳಕ್ಕೆ ನುಗ್ಗಿ, ಬಾಗಿಲು ಮುಚ್ಚಿ ಅಗಳಿಹಾಕಿದ. ಅವನ ಮೈ ಬೆವರಿ ಬಟ್ಟೆಗಳೆಲ್ಲಾ ತೊಯ್ದು ಹೋಗಿದ್ದವು. ಮುಖ ವಿಕಾರವಾಗಿ ಪ್ರೇತಕಳೆ ತಾಂಡವವಾಡುತ್ತಿತ್ತು. ವಿಚಾರವೇನೂ ತಿಳಿಯದ ಆ ಮನೆಯ ಮಾಲೀಕ ಕೇಳಿದ, 'ಏನು ಜುಡಾಸ್, ಏನು ಸಮಾಚಾರ ? ಏಕಿಷ್ಟು ಗಾಬರಿ ?'

'ನಾನು ಯೇಸುವನ್ನು ಅವನ ವೈರಿಗಳಿಗೆ ಅಂದರೆ ನನ್ನ ವೈರಿಗಳಿಗೆ ಹಿಡಿದುಕೊಟ್ಟು ಬಂದೆ !'

'ಏಕೆ ? ಮಮತೆಯ ಸೋದರನೂ ಪ್ರೀತಿಯ ಶೀಷ್ಯನೂ ಆದ ನಿನ್ನ ಬಗ್ಗೆ ಅವನು ಮಾಡಿದ ದ್ರೋಹವಾದರೂ ಏನು?

'ಕೇಳು, ಯೇಸು ನನಗೆ ಮೋಸ ಮಾಡಿದ. ನಮ್ಮೆಲ್ಲರಿಗೂ ಒಂದು ಸರ್ವೋತ್ಕೃಷ್ಟ ಸಾಮ್ರಾಜ್ಯವನ್ನು ಕೊಡುವುದಾಗಿ ವಚನವಿತ್ತಿದ್ದ. ಅದನ್ನು ನಂಬಿ ಅಧಿಕಾರದ ಆಸೆಯಿಂದ ಅವನನ್ನು ಹಿಂಬಾಲಿಸಿದೆ. ಅವನ ಪ್ರೀತಿಯ ಸಹೋದರನಾಗಿದ್ದರೂ ಶಿಷ್ಯತ್ವದ ಪಟ್ಟ ಕಟ್ಟಿಸಿಕೊಂಡೆ. ಆದರೆ ಯೇಸು ಯೋಚಿಸಿದ್ದು ರಾಜ್ಯವೂ ಅಲ್ಲ, ರೋಮನರಿಂದ ನಮ್ಮ ಬಿಡುಗಡೆಯೂ ಅಲ್ಲ.

ಅವನ ರಾಜ್ಯ ಕೇವಲ 'ಹೃದಯರಾಜ್ಯ !' ಕೇವಲ ಪ್ರೀತಿ, ದಯೆ, ಕ್ಷಮೆಗಳೇ ಅಲ್ಲಿಯ ಭೋಗಭಾಗ್ಯಗಳಾಗಿದ್ದವು. ಇದು ನನಗೆ ಹಿಡಿಸದಾಯಿತು. ಅಂದೇ ನನ್ನಲ್ಲಿ ನೈರಾಶ್ಯ ತುಂಬಿ, ಆಸೆ ಮಸಿಯಾಯಿತು. ಆಗ ನನಗೆ ನಾನು ಹೇಳಿಕೊಂಡೆ. ನನ್ನ ಆಸೆಗಳನ್ನು ಕೊಲೆಮಾಡಿದವನೂ ಕೊಲೆಗೀಡಾಗಲೇ ಬೇಕೆಂದು. ಏಕೆಂದರೆ ಯಾರೊಬ್ಬನ ಬಾಳಿಗಿಂತಲೂ ನನ್ನ ಆಸೆ ಆಕಾಂಕ್ಷೆಗಳು ಹೆಚ್ಚು ಬೆಲೆಯುಳ್ಳವಾಗಿದ್ದುವು. . . ಅದಕ್ಕಾಗಿ ನಾನವನನ್ನು ಹಿಡಿದುಕೊಟ್ಟೆ. ನಾಳೆ ಎಲ್ಲರಂತೆ ಅವನು ಶಿಲುಬೆಯ ಮೇಲೆ ತನ್ನ ಅಂತ್ಯವನ್ನು ಕಾಣುತ್ತಾನೆ. ಅಂತಾದರೆ ಅದೇ ನನಗೆ ತೃಪ್ತಿ ! ಅದೇ ನನಗೆ ಸದ್ಯದ ತೃಪ್ತಿ !!'

'ನೀನು ಮಹಾಪರಾಧ ಮಾಡಿದೆ ಜೂಡಾಸ್ ಮಹಾಪರಾಧ ಮಾಡಿದೆ. ಬಹುಶಃ ಯೇಸು ಆ ಮರಣವನ್ನು ಸಂತೋಷ ದಿಂದಲೇ ಸ್ವಾಗತಿಸಬಹುದು. ಆದರೆ ನಿನ್ನದು ಮಾತ್ರ ಅಪರಾಧ. ಅಕ್ಷಮ್ಯ ಅಪರಾಧ.'

'ಇಲ್ಲ, ಎಂದಿಗೂ ಇಲ್ಲ. ಅದು ಅಪರಾಧವಲ್ಲ ಮೋಸಗಾರನಿಗೆ ತಕ್ಕ ಮೋಸ. ರಾಜಾಧಿರಾಜನಂತೆ ಮರಣವನ್ನು ಸ್ವಾಗತಿಸಬಲ್ಲ ವ್ಯಕ್ತಿ, ರಾಜಾಧಿರಾಜನಾಗಿ ಏಕೆ ಬಾಳಬಾರದಾಗಿತ್ತು ?'

'ಅದು ನಿನ್ನ ಅಲ್ಪಬುದ್ಧಿಗೆ ತೋಚದ ವಿಷಯ. ಮೂರ್ಖ, ಸ್ವಲ್ಪ ಆಲೋಚಿಸಿ ನೋಡು, ನಿನ್ನನ್ನೇ ಒಮ್ಮೆ ಪ್ರಶ್ನಿಸಿ ನೋಡು. ಅವನೇನೋ ರಾಜಾಧಿರಾಜನಂತೆ ಮರಣವನ್ನು ಸ್ವಾಗತಿಸಿದ. ಆದರೆ ಅಂತಹ ಮಹಾಪುರುಷನನ್ನು ಬಲಿಗೊಟ್ಟ ನೀನು ?. . .'

ಗಂಭೀರನಾದ ಜೂಡಾಸ್.

'ಅವನು ಅರಸನಾಗಿ ಅಸುವನ್ನು ನೀಗುತ್ತಾನೆ ? ಆದರೆ ನಾನು ?. . .ನಾನು ? ನಾನು ಮಹಾಪಾತಕಿಯಾಗಿ. . .ಇಲ್ಲ. . .ಇಲ್ಲ. . .ನಾನು ಪಾತಕಿಯಂತೆ ಮಡಿಯಲಾರೆ. . .ಅಯ್ಯೋ ದೇವರೇ, ನಾನು ಅನ್ಯಾಯ ಮಾಡಿದೆ. ದ್ರೋಹಗೈದೆ. . .ನಾನು ಪಾತಕಿ. . .ಪರಮಪಾತಕಿ. . .ಓ ದೇವರೇ, ಇದೇ ನಿಮಿಷದಲ್ಲಿ ನನ್ನ ಹೃದಯ ಒಡೆದಿದ್ದರೆ ಒಳಿತಾಗುತ್ತಿತ್ತು. . .ಹಾಲ್ಗಡಲನ್ನು ಹಾಲಾಹಲವನ್ನಾಗಿಸಿದ್ದೇನೆ. . .ಕ್ಷಮಿಸು ಮಹಾತ್ಮಾ. . .ನನ್ನನ್ನು ಕ್ಷಮಿಸು ತಂದೆ. ನಾಳೆ ನೀನು ಸೇರುವ ರಾಜ್ಯವನ್ನು ನಾನು ಇಂದೇ ನಿನಗೆ ಮುಂಚೆಯೇ ಸೇರಿ ನಿನಗಲ್ಲಿ ಸ್ವಾಗತ ಬಯಸಿ ನನ್ನ ಅಪರಾಧಕ್ಕೆ ಕ್ಷಮೆಯನ್ನು ಯಾಚಿಸುತ್ತೇನೆ. ಖಂಡಿತವಾಗಿಯೂ ನೀನು ನನ್ನನ್ನು ಕ್ಷಮಿಸುವೆಯೆಂಬ ನಂಬಿಕೆ ನನ್ನಲ್ಲಿದೆ. ಇದೋ ನಿನಗೆ ಮುಂಚೆಯೇ ಹೊರಟೆ ಅಲ್ಲಿ. . .ನಿನ್ನ ಸಂದರ್ಶನ, ಕ್ಷಮಾಯಾಚನೆ' ಎಂದು ದ್ರೋಹಿಯಾದ ಜುಡಾಸ್ ಚೀರಿಕೊಳ್ಳುತ್ತಾ ಮನೆಬಿಟ್ಟು ಓಡಿದ. ಮನೆಯವನು ಬಾಗಿಲ ಬಳಿ ಬಂದು ಕೂಗುವಷ್ಟರಲ್ಲಿ ಕತ್ತಲೆಯಲ್ಲಿ ಕರಗಿಹೋಗಿದ್ದ. ಅವನಿಗೆ ಮಾರನೆಯ ದಿನ ತಿಳಿಯಿತು, ಜುಡಾಸ್ ಪರ್ವತದ ಕೋಡುಗಲ್ಲಿನ ಮೇಲಿಂದ ಹಾರಿ ಆತ್ಮಹತ್ಯೆ ಮಾಡಿಕೊಂಡ ಎಂದು. ಬಹುಶಃ, ಅವನ ಮನಸ್ಸಿನಲ್ಲೇ ಅಂದುಕೊಂಡಿರಬಹುದು, 'ಪಾಪಕ್ಕೆ ತಕ್ಕ ಪ್ರಾಯಶ್ಚಿತ್ತ' ಎಂದು.

೯

ಮಾರನೆಯ ದಿನ ಬಂತು. ಸೂರ್ಯ ಮೂಡಿ ಅರೆಮಾರು ದೂರ ಬಂದಿರಲಿಲ್ಲ. ಆಗಲೇ ಜನಸಂದಣಿ ಪಾಂಟಿಯಸ್ ಪಾಯ್‌ಲೆಟಸ್‌ನ ಮನೆಯ ಮುಂದೆ ಕಿಕ್ಕಿರಿದು ನಿಂತಿತ್ತು. ರಾಜ್ಯಪಾಲಕನ ಸಭಾಭವನದಲ್ಲಿ ಬಹುಮಂದಿ ರಾಷ್ಟ್ರದ ಗಣ್ಯರೂ, ಧರ್ಮವಾದಿಗಳೂ, ಪ್ರಮುಖರೂ ಕುಳಿತಿದ್ದರು. ರಾಜ್ಯಪಾಲಕ ಪಾಯ್‌ಲೆಟಸ್ ನ್ಯಾಯಗದ್ದುಗೆಯ ಮೇಲೆ ಮಂಡಿಸಿದ್ದ. ಆ ಸಮ ಯದಲ್ಲಿ ಹಗ್ಗ ಸರಪಣಿಗಳಿಂದ ಬಂಧಿಸಿದ್ದ ಯೇಸುವನ್ನು ನಾಲ್ಕು ಜನ ಸೈನಿಕರ ರಕ್ಷಣೆಯಲ್ಲಿ ಕರೆತಂದು ಕಟಕಟೆಯ ಒಳಗೆ ನಿಲ್ಲಿಸಿದರು. ನ್ಯಾಯಮೂರ್ತಿ ಪಾಂಟಿಯಸ್ ಸ್ವಲ್ಪಹೊತ್ತು ಯೇಸುವನ್ನೇ ದೃಷ್ಟಿಸಿ ನೋಡಿದ. ಏನು ವಿಚಾರಣೆ ಮಾಡಬೇಕು ಎಂಬುದೇ ಅವನಿಗೆ ಹೊಳೆಯದಾಯಿತು. ಅಂತೂ ಬಲವಂತದಿಂದ ಬಾಯ್ತೆರೆದು ಮಾತನಾಡಿದ. ಆದರೆ ಉತ್ತರ ಬರಲಿಲ್ಲ. ಅಷ್ಟರಲ್ಲಿ ಹೊರಗಡೆ ಬಹಳ ಗದ್ದಲ ಕೇಳಿಬಂತು. ಪಾಂಟಿಯಸ್ ಸಭಾಭವನದ ಸೋಪಾನವೇರಿ ಎತ್ತರವಾದ ಹೊರವಲಯಕ್ಕೆ ಬಂದು ನಿಂತ. ತತ್‌ಕ್ಷಣವೇ ಸಹಸ್ರಾರು ಜನರ ಕೂಗಾಟ ಒಮ್ಮೆಲೆ ಒಡೆದು ಬಿರಿಯಿತು. ಎಲ್ಲರನ್ನೂ ಸಮಾಧಾನಪಡಿಸುತ್ತಾ ಕೇಳಿದ –

'ಮಹಾಜನಗಳೆ, ಯೇಸುವಿನ ಬಗ್ಗೆ ನಿಮ್ಮ ಅಭಿಪ್ರಾಯವೇನು ?'

'ನಾವವನನ್ನು ಶಿಲುಬೆಗೇರಿಸಬೇಕು.'

'ಕಾರಣ ?'

‘ಕಾರಣ ಅವನು ಧರ್ಮದ್ರೋಹಿ ! ನಮ್ಮ ಪ್ರಾಚೀನ ಧರ್ಮವನ್ನು ಧೂಳೀಪಟ ಮಾಡಿದ್ದಾನೆ. ಅವನು ನಮಗಷ್ಟೇ ವೈರಿ ಅಲ್ಲ. ರೋಮನರಾದ ನಿಮಗೂ ಪರಮವೈರಿ. ಈ ರಾಜ್ಯಾಧಿಕಾರವನ್ನು ಬಯಸಿದವನು ಅವನೇ ಅಲ್ಲವೆ ? ಮಹಾಪ್ರಭು ಸೀಸ ರನ್ನು ಬಿಟ್ಟು ಬೇರೆ ರಾಜರು ನಮಗಾರೂ ಬೇಕಿಲ್ಲ. ಎಲ್ಲಿ, ಆ ಯೇಸುವನ್ನು ನಮಗೆ ಬಿಟ್ಟು ಕೊಡಿ. . .ಬಿಟ್ಟು ಕೊಡಿ.’

ಪಾಯ್‌ಲೆಟಸ್ ಸಭಾಭವನಕ್ಕೆ ಮರಳಿದ. ಗದ್ದುಗೆಯ ಮೇಲೆ ಮಂಡಿಸಿದ ನಂತರ ಪುನಃ ಪ್ರಶ್ನಿಸಿದ. ‘ಏನು ಯೇಸು, ನೀನು ನಿಜವಾಗಿಯೂ ಯೆಹೂದಿಗಳ ಅರಸನೊ ?’

ಯೇಸು ತುಸು ನಕ್ಕು, ‘ಮಹಾಶಯ ಕೇಳು, ಈ ಜಗತ್ತನ್ನು ಸತ್ಯ ಮತ್ತು ಸತ್ವಗಳನ್ನುಳಿದು ಬೇರಾರೂ ಆಳಲಾರರು !’

‘ಹಾಗಾದರೆ ಆ ಸತ್ವ ನೀನೇನೋ ?’

‘ನಾನೊಬ್ಬನೇ ಅಲ್ಲ, ನೀನೂ ಆ ಸತ್ವದ ಅಂಶವೇ. ಆದರೆ ನಿನಗೆ ಅದರ ಅರಿವಿಲ್ಲ, ಅಷ್ಟೆ.’

‘ಹೌದು ಯೇಸು, ನನಗೆ ಅದರ ಅರಿವಿಲ್ಲ ಒಪ್ಪುತ್ತೇನೆ. ಆದರೆ ರಾಜ್ಯದ ಸಂಪತ್ತಿನ ಸಲುವಾಗಿ ತಮ್ಮ ಪ್ರಾಚೀನ ಧರ್ಮಗಳ ಅಂಧಾನುಕರಣೆಯ ಕಾರಣವಾಗಿ ಅಸೂಯಾಪರರಾದ ಈ ಜನ ನಿನ್ನನ್ನು ಬಲಿತೆಗೆದುಕೊಳ್ಳಲು ಅಪೇಕ್ಷಿಸುತ್ತಿದೆ. ದಯಮಾಢಿ ಕ್ಷಮಿಸು ಮಹಾತ್ಮಾ. ನಿರಪರಾಧಿಗೆ ದಂಡ ವಿಧಿಸುವುದು ಸತ್ಯಕ್ಕೆ ದೂರವಾದರೂ ಬಹುಜನರ ಪ್ರೇರಣೆಯಿಂದ ತೀರ್ಪುಕೊಡಬೇಕಾಗಿದೆ. ಯೇಸುನಾಥಾ, ದಯಮಾಡಿ ನನ್ನ ಹಿಂದೆ ಬರುವೆಯಾ ? ಈ ಹೊರಗಿನ ಜನರನ್ನು ನೋಡು ಬಾ. ಮತಿಗೆಟ್ಟ ಜನ ನಿನ್ನ ನೆತ್ತರಿಗಾಗಿ ದಾಹಗೊಂಡಂತಿದೆ. ಈಗ ನಾನು ನಿನ್ನನ್ನು ಉಳಿಸಬಹುದು. ಅದೇನು ನನ್ನ ಕೈಯಿಂದ ಆಗದ ಕಾರ್ಯವಲ್ಲ. ಆದರೆ ಅದು ಮಹಾಕ್ರಾಂತಿಗೆ ಅವಕಾಶವಾಗುತ್ತದೆ. ಅಲ್ಲದೆ ರೋಮನರಾದ ನಮ್ಮ ಅಧೀನದಲ್ಲಿರುವ ಯಾವ ಜನಾಂಗವೇ ಆಗಲಿ ಅದರ ಧಾರ್ಮಿಕ ವಿಪತ್ತುಗಳನ್ನು ನಿವಾರಿಸಲೇಬೇಕು. ಇಲ್ಲವಾದರೆ ಅದು ಸರ್ವಶ್ರೇಷ್ಠ ರೋಮನ್ ಚಕ್ರಾಧಿಪತ್ಯಕ್ಕೆ ಅಪಕಾರಿಯಾಗುತ್ತದೆ. ಈ ಒಂದು ರಾಜಕೀಯ ದೃಷ್ಟಿಯಲ್ಲಿ ನಾನೇ ನಿನ್ನನ್ನು ಮರಣದೆಡೆಗೆ ತಳ್ಳಬೇಕಾಗಿದೆ.’

ಮಾತು ಮುಗಿದ ಹೊತ್ತಿಗೆ ಅರಮನೆಯ ಹೊರವಲಯಕ್ಕೆ ಇಬ್ಬರು ಬಂದರು. ಜನರ ಕೂಗಾಟ, ಚೀರಾಟ ಇನ್ನೂ ಹೆಚ್ಚಾಗಿತ್ತು. ‘ಅವನನ್ನು ಶಿಲುಬೆಗೇರಿಸಿ, ಅವನನ್ನು ಶಿಲುಬೆಗೇರಿಸಿ’ ಎಂಬುದನ್ನುಳಿದು ಮತ್ತೇನೂ ಕೇಳಿಬರುತ್ತಿರಲಿಲ್ಲ. ಯಾವ ಫರಿಸಾಯರು, ಯೇಸುವನ್ನು ತಂದೊಪಿಸ್ಪಿದ್ದರೊ ಅವರ ಕೈಗೆ ಅವನನ್ನು ಒಪ್ಪಿಸಿ ‘ನಿಮ್ಮ ಇಷ್ಟಬಂದಂತೆ ಮಾಡಿಕೊಳ್ಳಿ, ಪಾಪವೊ, ಪುಣ್ಯವೊ ಎಲ್ಲಾ ನಿನಗೆ ಸಂಬಂಧಿಸಿದ್ದು. ನನ್ನಲೇನೂ ದೋಷವಿಲ್ಲ, ಎಂದು ಹೇಳಿ, ಒಂದು ಪಾತ್ರೆಯಲ್ಲಿ ನೀರು ತರಿಸಿ ತನ್ನ ಕೈ ತೊಳೆದುಕೊಂಡ.

೧೦

ಹಿಂಸೆಗೆ ಆರಂಭವಾಯಿತು. ಹಿಂದಿನ ವರುಷ ಸಿದ್ದಪಡಿಸಿಟ್ಟಿದ್ದ ಮುಳ್ಳಿನ ಕಿರೀಟವೊಂದನ್ನು ಯೇಸುವಿನ ತಲೆಯ ಮೇಲಿರಿಸಿ ಅದುಮಿದರು. ರಕ್ತ ಧಾರಾಕಾರವಾಗಿ ಹರಿಯತೊಡಗಿತು. ಜನರ ಗೇಲಿ, ಕೇಕೆಗಳಿಗೆ ಕೊನೆಮೊದಲಿರಲಿಲ್ಲ. ಅವನ ಸುತ್ತ ಬಹಳ ಜನರು ನೆರೆದು ಕುಣಿಯುತ್ತಿದ್ದರು. ಅವನನ್ನು ತಿವಿಯುವವರು ಹಲವರು, ತಳ್ಳುವವರು ಕೆಲವರು, ಕೈಗೆ ಸಿಕ್ಕ ವಸ್ತುಗಳಿಂದ ಹೊಡೆದು ಹಿಂಸಿಸುತ್ತಿದ್ದವರು ಮತ್ತೆ ಕೆಲವರು. ಯೇಸುವಿನ ಬರಿ ಮೈಗೆ ಪೆಟ್ಟುಗಳ ಮೇಲೆ ಪೆಟ್ಟುಗಳು ಬಿದ್ದುವು. ರಕ್ತ ಚಿಲಚಿಲನೆ ಹರಿದು ಮೈಯೆಲ್ಲಾ ಕೆಂಪು ನೀರಿನಲ್ಲಿ ತೊಯ್ದು ಹೋಗಿತ್ತು. ಅತ್ಯಂತ ಭಾರವಾದ ಶಿಲುಬೆಯನ್ನು ಹೊರಲಾರದೆ ಒಂದೆಡೆ ಮುಗ್ಗರಿಸಿ ಬಿದ್ದ ಕೂಡಲೇ, ಹತ್ತಾರು ಮಂದಿ ಧೂರ್ತರು ಗುಂಪು ಕೂಡಿ ತಮ್ಮ ಕಾಲುಗಳಿಂದ ಝಾಡಿಸಿ ಝಾಡಿಸಿ ಒದೆಯುತ್ತಾ, ಮೇಲೆತ್ತಿ ಮತ್ತೆ ಶಿಲುಬೆಯನ್ನು ಹೇರಿದರು.

‘ಪಾಪ, ಯೆಹೂದ್ಯರ ಅರಸರು ಮುಗ್ಗರಿಸಿದರು ಅಂತ ಕಾಣುತ್ತೆ.’

‘ಏನು ಬಿದ್ದರೇನು ?’

‘ಇಲ್ಲ, ಇಲ್ಲ ? ಮಹಾರಾಜರು ಎಲ್ಲಿಯಾದರೂ ಬೀಳುವುದುಂಟೆ ? ತಮ್ಮ ರಾಜ್ಯದ ರಸ್ತೆಯನ್ನು ಪರಿಶೀಲಿಸಲು ಕೆಳಗೆ ಬಗ್ಗಿದರು, ಅಷ್ಟೆ !’

‘ಛೆ ! ಛೆ ! ರಸ್ತೆ ಪರಿಶೀಲನೆಗೆ ಸಂಬಂಧಪಟ್ಟ ಅಧಿಕಾರಿಗಳಿಲ್ಲವೆ ? ಆ ಕೆಲಸ ಅವರು ಮಾಡುತ್ತಾರೆ, ಇವರು ತಮ್ಮ ಮಾತೃಭೂಮಿಯ ಅಭಿಮಾನವನ್ನು ವ್ಯಕ್ತಪಡಿಸಲು ಶಿರಬಾಗಿ ಒಮ್ಮೆ ಭೂದೇವಿಯನ್ನು ಚುಂಬಿಸಿದರು !’

‘ಚುಂಬಿಸಿದರೊ ಮಣ್ಣು ಮುಕ್ಕಿದರೊ !’

‘ಹೋ ಹೋ ಹೋ’ ಎಂದು ನಗು, ಹಾಸ್ಯ.

ಇದೇ ರೀತಿ ತುಸುದೂರ ಸಾಗಿತು.

ಹಾದಿಯ ಇಕ್ಕೆಲದಲ್ಲೂ ರೋಮನ್ ಸೈನಿಕರು ಕುದುರೆಗಳ ಮೇಲೆ ಭಲ್ಲೆಗಳನ್ನು ಹಿಡಿದುಕೊಂಡು ನಿಧಾನವಾಗಿ ನಡೆಯುತ್ತಿದ್ದರು. ಬಹುಶಃ, ಅವರಿಗೂ ಸಹ ಹಿಂಸೆಯ ದೃಶ್ಯ ವಿನೋದವಾಗಿ ಕಂಡಿರಬೇಕು. ಕುದುರೆಗಳ ಮೇಲೆ ಕುಳಿತುಕೊಂಡೇ ಅಲ್ಲಲ್ಲಿ ಕೇಕೆ ಹಾಕಿಕೊಂಡು ನಗುತ್ತಿದ್ದರು. ಆದರೆ ಜನಜಂಗುಳಿಯ ಹಿಂದೆ ಸಾಗಿಬರುತ್ತಿದ್ದ ರೋಮನ್ ದಳಪತಿ ಕ್ಲಾಡಿಯಸ್ ಮಾತ್ರ ಮೌನಮುದ್ರಿತನಾಗಿದ್ದ. ಅವನ ಪಕ್ಕದಲ್ಲೆ ಯೇಸುವಿನ ಅನೇಕ ಮಂದಿ ಶಿಷ್ಯರೂ ಬಂಧುಗಳೂ ತಮ್ಮ ತಲೆಗಳ ಮೇಲೆ ಕಪ್ಪು ಬಟ್ಟೆಯನ್ನು ಹಾಕಿಕೊಂಡು ಬರುತ್ತಿದ್ದರು.

ಮರಣೋತ್ತರದ ರಥ ಜೆರೊಸಲೆಮ್ ನಗರದ ಆಚೆ ಇದ್ದ ಗೋಲ್ಗೊಥ ಎಂಬ ಶಿಖರದ ಮೇಲಕ್ಕೆ ಉರುಳಿ ಬಂತು. ಗೊತ್ತಾದ ಸ್ಥಳದಲ್ಲಿ ಯೇಸುವಿನ ಶಿಲುಬೆಯನ್ನು ನೆಡಲಾಯಿತು. ಅದರ ಎರಡೂ ಪಕ್ಕಗಳಲ್ಲಿ ಮತ್ತಿಬ್ಬರು ಕೊಲೆಗಾರರ ಶಿಲುಬೆ ಗಳನ್ನು ನೆಟ್ಟರು. ಕಳ್ಳ, ಕೊಲೆಗಾರರ ಜೊತೆಯಲ್ಲಿ ಯೇಸುವಿನ ಕೈಕಾಲುಗಳಿಗೆ ಮೊಳೆ ಜಡಿದು, ಅವನ ಹಣೆಯ ಮೇಲ್ಭಾಗದಲ್ಲಿ 'ಜ್ಯೂ ಜನರ ಜನಪ, ಈ ನಜರೆತದ ಜೀಸಸ್ !' ಎಂದು ಬರೆದಿದ್ದ ಹಲಗೆಯೊಂದನ್ನು ತೂಗುಹಾಕಿದ್ದರು. ಉನ್ಮತ್ತ ಕುಡುಕ ರಂತೆ ಹಾಡು ಹಾಡಿಕೊಂಡು ಚಪ್ಪಾಳೆ ತಟ್ಟಿಕೊಂಡು ಸುತ್ತಲೂ ಕುಣಿದಾಡಿದರು.

ಜನರ ಗುಂಪಿನಿಂದ ಇಬ್ಬರು ಸ್ತ್ರೀಯರು ಚಿಮ್ಮಿ ಮುಂದೆ ಬಂದರು. ಒಬ್ಬಳು ಶಿಲುಬೆಯನ್ನು ನಿಕ್ಕುಳಿಸಿ ಅವನ ಪಾದಗ ಳನ್ನು ಹಿಡಿದು 'ಓ ತಂದೆ, ನಮ್ಮನ್ನು ಅನಾಥರನ್ನಾಗಿ ಮಾಡಿದೆಯಾ ? ನಮಗಿನ್ನಾರು ದಿಕ್ಕು ? ಇನ್ನಾರು ದಿಕ್ಕು ತಂದೆ ?' ಎಂದು ಗೋಳಿಟ್ಟಳು. ಶಿಲುಬೆಯ ಮೇಲಿಂದಲೆ, ಯೇಸು 'ಶಾಂತಳಾಗು, ಮೇರಿಮಗ್ದಲ, ಸಕಲರನ್ನೂ ಸಂರಕ್ಷಿಸುವವನೇ ನಿಮ್ಮನ್ನು, ಈ ನನ್ನ ತಾಯಿಯನ್ನು ಕಾಪಾಡುತ್ತಾನೆ. ವ್ಯರ್ಥವಾಗಿ ಕಣ್ಣೀರು ಕರೆದು ದೇಹವನ್ನು ಬಳಲಿಸಬಾರದು. ಶಾಂತಳಾಗು ತಾಯಿ, ಶಾಂತಳಾಗು' ಎಂದು ಸಮಾಧಾನಪಡಿಸಿದ. ಅವಳ ಪಕ್ಕದಲ್ಲಿ ಧೀರಗಂಭೀರಳಾಗಿ ತನ್ನನ್ನೇ ನೆಟ್ಟ ದೃಷ್ಟಿಯಿಂದ ನೋಡುತ್ತಾ ನಿಂತಿದ್ದ ತಾಯಿ ಮೇರಿಯನ್ನು ಕುರಿತು ನಗೆಮುಖದಿಂದ 'ಸಾರ್ಥಕವಾಯಿತು ಅಮ್ಮಾ, ನಿನ್ನ ಉದರದಿಂದ ಹುಟ್ಟಿ ಬಂದದಕ್ಕೆ ನನ್ನ ಜನ್ಮ ಸಾರ್ಥಕವಾಯಿತು ತಾಯಿ ! ಮೇರಿ ಮಗ್ದಲ, ಅತ್ತ ನೋಡು, ಆ ನನ್ನ ಜನ್ಮದಾತೆ ಮೇರಿಯನ್ನು ನೋಡು, ಅವಳ ಕಣ್ಣಲ್ಲಿ ಒಂದು ಹನಿಯೂ ನೀರಿಲ್ಲ. ನಾನೇ ಧನ್ಯ ! ನಾನೇ ಧನ್ಯ ! ಅಮ್ಮಾ ತಾಯಿಯ ಬಸಿರು ಯಾವಾಗಲೂ ಒಂದು ತೊಟ್ಟಿಲೇ ಹೊರತು ಗೋರಿಯಲ್ಲ. ಅದು ತೃಪ್ತಿಯ ತವರು, ಶಾಂತಿಯ ಬೀಡು. ಮೇರಿ ಮಾತಾ, ನಿನ್ನ ಮಗನ ಈ ಅವಸ್ಥೆಯನ್ನು ನೋಡಿದರೂ ನಿನ್ನ ಕಣ್ಣಲ್ಲಿ ಒಂದು ಹನಿ ನೀರು ಮಿಡಿಯದಿರಲಿ, ಈಗಿರುವ ಸ್ಥಿತಿಯಲ್ಲೇ ಸದಾ ಇರಬೇಕು. ಅಂತೆಯೇ ಅಮ್ಮಾ, ಅಳುತ್ತಿರುವ ಆ ಸ್ತ್ರೀಯರನ್ನು ಸಮಾಧಾನಪಡಿಸು. ಅವರು ಅತ್ತರೆ ನನಗೆ ದಾಹ ಬಹಳವಾಗುತ್ತದೆ. ಆ ದಾಹವನ್ನು ಅವರ ಕಣ್ಣೀರಿನಿಂದಲಾದರೂ ಅಣಗಿಸಿಕೊಳ್ಳೋಣವೆಂದರೆ ಅವರ ಕಂಬನಿಗಳು ಸೋಂಕದಷ್ಟು ಎತ್ತರಕ್ಕೆ ನನ್ನನ್ನು ಏರಿಸಿ ಬಿಟ್ಟಿದ್ದಾರೆ. ಸಂತೈಸು ತಾಯಿ, ಅವರೆಲ್ಲರನ್ನೂ ಸಂತೈಸು.'

ಮೇರಿಮಾತಾ ಗಂಭೀರಳಾಗಿಯೇ ಎವೆಯಿಕ್ಕದೆ ಅವನನ್ನೇ ನಿಟ್ಟಿಸುತ್ತಿದ್ದಳು. ತಾನೊಂದು ಮರವಾಗಿ, ಕಂಬವಾಗಿ, ಪ್ರತಿಮೆಯಾಗಿ.

ತನ್ನ ತೃಪ್ತ ನಯನಗಳಿಂದ ದೂರದ ದಿಗಂತವನ್ನು ನೋಡುತ್ತಾ ಯೇಸು 'ಎಲೀ ಎಲೀ ಲುಮ್ಮಾಸಬಖ್ತಾನಿ ? (ದೇವರೇ ! ದೇವರೇ ! ಯಾಕೆನ್ನ ಕೈಬಿಟ್ಟೆ) ಓ ತಂದೆ, ಅನವರತವೂ ನೆರವಿತ್ತು ಸಾಕಿ ಸಲುಹಿದ ತಂದೆ, ಇದೋ ನೀನಿತ್ತ ಆತ್ಮವನ್ನು ಮತ್ತೆ ನಿನಗೇ ಒಪ್ಪಿಸುತ್ತಿದ್ದೇನೆ. ಕೃಪೆ ಮಾಡಿ ಸ್ವೀಕರಿಸು. ಆದರೆ ಓ ದಯಾನಿಧಿ, ಈ ಜನತೆಯನ್ನು ಮಾತ್ರ ಕ್ಷಮಿಸಬೇಕು. ಏಕೆಂದರೆ ತಾವೇನು ಮಾಡುತ್ತೇವೆಂಬುದೇ ಇವರಿಗೆ ತಿಳಿದಿಲ್ಲ. ಕ್ಷಮೆಯಿರಲಿ ತಂದೆ, ನಿನ್ನ ದಯೆ ಇರಲಿ ' ತನ್ನ ಮನಸ್ಸಿನಲ್ಲಿಯೇ ಪರಮಾತ್ಮನನ್ನು ತನ್ನನ್ನು ಹಿಂಸಿಸುವವರ ಪರವಾಗಿ ಕ್ಷಮಾಯಾಚನೆ ಮಾಡಿದ ಯೇಸು. ಅಷ್ಟರಲ್ಲಿಯೆ ಅವನ ಕಣ್ಣುಗಳು ಮುಚ್ಚಿದುವು. ಮುಳ್ಳಿನ ಮುಕುಟ ಮುರಿದು ಬಿತ್ತು.

ಅಷ್ಟರವರೆಗೂ ಬಹು ಗಾಂಭೀರ್ಯದಿಂದ ಮೌನಳಾಗಿಯೇ ನಿಂತಿದ್ದ ಮೇರಿಮಾತಾ ಈ ರೀತಿ ನುಡಿದಳು :

'ಧನ್ಯ ಯೇಸು, ನೀನು ಧನ್ಯ. ಇದು ನಿನ್ನ ವಿಜಯ ! ಮೃತ್ಯು ಮುಖದಲ್ಲೂ ಸಹ ನಗುತ್ತಿದ್ದ ನಿನ್ನನ್ನು ನೋಡಿದರೆ ನೀನೇ ಗೆದ್ದೆಯೆಂದು ಅನಿಸುತ್ತದೆ. ಆದುದರಿಂದ ಇದು ವಿಶ್ವದರ್ಶನ ವಿಜಯ ! 'ಅಳಬೇಡ' ವೆಂದು ಮತ್ತೆ ಮತ್ತೆ ಹೇಳಿದೆ. ನಾನೇಕೆ ಅಳಲಿ. ನನ್ನ ಮನತೆರೆದು ಹಾಡುವ ಸಾಗರವನ್ನೂ ಮೈಮರೆತು ನಕ್ಕು ನಲಿಯುವ ಬೆಟ್ಟವನ್ನೂ ಕಂಡು ಯಾರಾ ದರೂ ಅಳುವರೆ ? ಇಲ್ಲ ಎಂದಿಗೂ ಇಲ್ಲ. 'ದೇವರೇ, ಇವರನ್ನು ಕ್ಷಮಿಸು. ಏಕೆಂದರೆ ಇವರಿಗೆ ತಾವೇನು

ಮಾಡುತ್ತರುವೆವೆಂಬುದೇ ತಿಳಿದಿಲ್ಲ ಎನ್ನುವ ನಿನ್ನ ಕಡೆಯ ನುಡಿಗಳನ್ನು ಜೀರ್ಣಿಸಿಕೊಳ್ಳುವುದರಲ್ಲಿ ಋತುಗಳು ದಣಿದಾವು, ಕಡೆಯದಾಗಿ ವರ್ಷಗಳು ಮುಪ್ಪಾದಾವು. ಯೇಸು, ಕಟ್ಟಕಡೆಯದಾಗಿ ಇದೋ ನಿನ್ನ ಕೈಗಳಿಂದ ಹರಿದು ಬರುತ್ತಿರುವ ಒಂದೊಂದು ನೆತ್ತರಿನ ಹನಿಯೂ ನಾಡಿನ ಕ್ಷೇಮ ಪ್ರವಾಹವಾಗಲಿ, ಪ್ರೇಮ ಪ್ರವಾಹವಾಗಲಿ, ಅನವರತ ವಿಶ್ವದಲ್ಲಿ ಪ್ರವಹಿಸಲಿ/ ಇದೇ ನನ್ನ ಪ್ರಾರ್ಥನೆ ಜಗದೀಶ್ವರನಲ್ಲಿ.’

ಕತ್ತಲಾಯಿತು. ಜನ ಮರಳಿತು. ಆದರೆ ನೆನಪು ಮಾತ್ರ ಉಳಿಯಿತು.

**‘Judge not, that ye**
**not be Judged’**
**- Jesus Christ**

# 'ಯುಗದ ಉತ್ಸಾಹ' ಬಸವಣ್ಣ

==========================================================================

೧

ಮಾಗಿಯ ಮಬ್ಬು ಎಲ್ಲೆಡೆಯೂ ಕವಿದಿತ್ತು. ನೆಲ, ಮುಗಿಲು, ಗಿರಿ ಶಿಖರ ಬೆಟ್ಟಕಂದರ, ನಾಡು, ಬೀಡು ಗುಡಿ ಗೋಪುರ ಎಲ್ಲೆಲ್ಲೂ ಮಬ್ಬೆ. ಮಂಜಿನ ಮುಸುಕಿನಲ್ಲಿ ಸಮಸ್ತ ಚೇತನಾಚೇತನಗಳ ಸುಪ್ತಜೀವನ ಸಾಗಿತ್ತು. ನೆರೆಯ ನೇಹಿಗನಲ್ಲ ತನಗೆ ತಾನೇ ಕಾಣಲಾರದಷ್ಟು ಮಬ್ಬು. ಮನೆಯ ಒಳಗೆ ಹೊರಗೆ ಕತ್ತಲು. ಅಂಗಳವೆಲ್ಲ ಕಸಕಡ್ಡಿ ಧೂಳುಮಯ. ತಲೆಬಾಗಿಲಲ್ಲೇ ರಾಜಕೀಯದ ಜೇಡ ಜಟಿಲಬಲೆ ಬೀಸಿತ್ತು. ಬಳಿಯಲ್ಲೇ ಜಾತಿಭೇದದ ದುರ್ಗಂಧ ಬಡಿತ. ಇತ್ತ ಕುಳಿಯಲ್ಲಿ ನಿಂತ ಕಾಮದ ಕೆಸರು, ಅತ್ತ ಉಚ್ಚ ನೀಚಭಾವದ ಕೊಚ್ಚೆ. ಎತ್ತನೋಡಿದರತ್ತ ಸತ್ತ ಕೃತ್ರಿಮಕೀಟಗಳ ದುರ್ನಾತ. ಹೆಜ್ಜೆ ಹೆಜ್ಜೆಗೂ ತಾಗುತ್ತಿತ್ತು ಕುಹಕ ಕುಟಿಲತೆಯ ಮುಳ್ಳು. ಮತ್ತೆ ಸುತ್ತುತ್ತಲಿತ್ತು ಸ್ವಾರ್ಥತೆಯ ಕಳ್ಳಿಬಳ್ಳಿ. ಹರಿದು ಮುಕ್ಕಾದ ನೆಲಕ್ಕೆ ಬಿರಿದ ಗೋಡೆಯ ಶಿಥಿಲ ಕೋಟೆ ! ಮೇಲೋ ಹಲ್ಲಿ ಚಿಲಿಪಿಲಿ ಬಿಟ್ಟ ಪ್ರೇತ ಸದೃಶ ಛಾವಣಿ. ಛೇ ! ಎಷ್ಟು ದಿನವಾಗಿತ್ತೋ ಕಾಣೆ ಈ ಮನೆಯ ಗುಡಿಸಿ. ಇಲ್ಲ, ಇಲ್ಲ, ಸತ್ತ ಶತಮಾನಗಳ ಹಿಂದಿನಿಂದಲೂ ಈ ಮನೆಯ ಹುಟ್ಟೇ ಇಷ್ಟು ; ಸದಾ ಹೊಲಸಿನಿಂದ ತುಂಬಿರುವುದೇ ಇದರ ಜಾಯಮಾನ. ಶತಸಹಸ್ರ ಜಲಗಾರರು ಗುಡಿಸಿದರೂ ಇದು ಮಾತ್ರ ಶುದ್ಧವಾಗಲಿಲ್ಲ, ಶುದ್ಧವಾಗುತ್ತಿಲ್ಲ. ಏನೋ ಅದರ ಕರ್ಮ ಎಂದು ಬಿಡುವಂತೆಯೂ ಇಲ್ಲ. ನೂರಾರು ಹಸ್ತಗಳು ಪೊರಕೆ ಹಿಡಿಯಲೇಬೇಕು, ಹಿಡಿದು ಗುಡಿಸಲೇಬೇಕು. ಗುಡಿಸಿದಷ್ಟೂ ಹೊಲಸು ತುಂಬಲೂಬೇಕು ! ನಮ್ಮ ಮನೆಯಾದರೇನು ಬೇರೆಯವರದಾದರೇನು ? ಎಲ್ಲರ ಮನೆಯ ಪ್ರಕೃತಿಯೂ ಒಂದೇ !

ಇಂತಹ ಮನೆಯಂಗಳವನ್ನು ಶುದ್ಧಗೈಯಲು ಓರ್ವ ಜಲಗಾರ ಬೇಕಿತ್ತು ಹನ್ನೆರಡರ ಶತಾಬ್ಧಿಯಲ್ಲಿ. ಮಂಜಿನ ಮುಸುಕನ್ನೂ ಬಡಿದೋಡಿಸುವ ಸುಪ್ರಭಾತದ ಸ್ವರ್ಣೋದಯ ಆಗಬೇಕಿತ್ತು ಆಗ ಕನ್ನಡನಾಡಿನ ಬಾಂದಳದಲ್ಲಿ. ಅವತಾರವೊ ಆವಿರ್ಭಾವವೊ ಯಾವುದೊ ಒಂದು ಹೆಸರ ಹಸುರು. ಬೆಂದೆದೆಯ ಬಂಜರಿಗೆ ಹಚ್ಚನೆಯ ಹರ್ಷವನ್ನೀಯಬೇಕಿತ್ತು. ಜಡತೆಯೇ ಮೈವೆತ್ತು ಜಾತೀಯತೆಯ ಮೊರಡಿಯಲ್ಲಿ ಮಲಗಿದ್ದ ಕಲ್ಲನ್ನು ಕಲೆಯಾಗಿಸಬಲ್ಲ ರೂವಾರಿ ಬೇಕಿತ್ತು. ರಾಷ್ಟ್ರದ ಅಸ್ತವ್ಯಸ್ತ ಚಿತ್ರಣಕ್ಕೆ ಸಪ್ತವರ್ಣಗಳನ್ನು ತುಂಬುವ ವರ್ಣಶಿಲ್ಪಿ ಬೇಕಿತ್ತು, ಅಳುವ ಕಂದನ ತುಟಿಯ ಹಾಲುಹನಿ ಬಯಸಿತ್ತು ! ಅದೇ ಸಮಯದಲ್ಲಿ ಕಲ್ಯಾಣವೆಂಬ ಮಣ್ಣಿನ ಹಣತೆಯಲ್ಲಿ ಬಸವಣ್ಣನೆಂಬ ಹೊನ್ನಿನ ಜ್ಯೋತಿ ಬೆಳಗಿ ಜಗತ್ತನ್ನು ಬೆಳಗಿಸಿ, ಕಡೆಗೆ ಬೆಳಗಿನೊಳಗಣ ಬೆಳಗು ಮಹಾಬೆಳಗಿನಲ್ಲಿ ಲಯವಾಯಿತು, ಭವ್ಯತೆಯಲ್ಲಿ ಬಯಲಾಯಿತು.

೨

ಇಂಗಳೇಶ್ವರದ ಬಾಗೇವಾಡಿಯ ಮಾದರಸನ ಅರಸಿ ಮಾದಲಾಂಬಿಕೆಯ ಪುಣ್ಯಗರ್ಭದಲ್ಲಿ ಈ ಜಗಜ್ಯೋತಿಯ ಅವತಾರವಾಯಿತು. ವಿಶ್ವಮೈತ್ರಿ, ವಿಶ್ವ ಬಾಂಧವ್ಯ, ವಿಶ್ವಪ್ರೇಮದ ಕಲ್ಪಲತೆಯು ಅಲ್ಲಿ ಕುಡಿಯೊಡೆದು ಗುಂಗುಡಿಯಿಟ್ಟು ನಾಡಿನಾದ್ಯಂತ ತನ್ನ ಪಚ್ಚೆಯ ವಿತಾನವನ್ನು ನಿರ್ಮಿಸಿ, ಶಾಂತಿ ಸೌಹಾರ್ದಗಳ ತಣ್ಣೆಳಲನ್ನು ನೀಡಿತು, ಪರಿಮಳಪೂರಿತ ಪುಷ್ಪಮಂಜರಿಯ ಸೌರಭವನ್ನು ಜಗತ್ತಿಗೆ ಬೀರಿತು. ಕುರುಡನಿಗೆ ಬೆಳಕಾಗಿ, ಕಿವುಡನಿಗೆ ಕಿವಿಯಾಗಿ, ಮೂಕನಿಗೆ ಮಾತಾಗಿ, ಹೆಳವನಿಗೆ ತೆಮರಾಗಿ, ದೀನನಿಗೆ ದಯೆಯಾಗಿ, ದಲಿತನಿಗೆ ತಾಯಾಗಿ, ನೊಂದೆದೆಗೆ ಸುಧೆಯಾಗಿ, ರಾಷ್ಟ್ರ ಹಿತಸಾಧನೆಯ ಹೊಂದೇರು ತಾನಾಗಿ ಸಾಗಿತು. ವಚನ ರಚನಾಮೃತದ ಮಳೆಗೆರೆದು ಕನ್ನಡಮ್ಮನ ಸಿರಿಯ ಸೀಮಂತ ಮಾಣಿಕ್ಯವಾಗಿ ಮೆರೆಯಿತು. ಕರ್ಣಾಟಕದ ಧವ ಳಕೀರ್ತಿಯ ವೈಜಯಂತಿಯನ್ನು ಗಗನಮಂಡಲದಲ್ಲಿ ಹಾರಬಿಟ್ಟು, ಆಧ್ಯಾತ್ಮದ ಅಡಿಪಾಯದ ಮೇಲೆ ಸತ್ಯದ ಸೌಧವನ್ನು ನಿರ್ಮಿಸಿ, ಅಹಿಂಸೆಯ ಗೋಪುರಕ್ಕೆ ಧರ್ಮದ ಕಲಶವನ್ನಿಟ್ಟು, ಅದಕ್ಕೆ ಮುಕ್ತಿಯ ಮೆರಗುಕೊಟ್ಟು, ಆಚಂದ್ರಾರ್ಕ ಚಿರಸ್ಥಾಯಿ ಯಾದ ಸತ್ಕೀರ್ತಿಗೆ ಭಾಗಿಯಾಯಿತು. ಕಲ್ಯಾಣದ ಸುವರ್ಣ ಸೋಪಾನಗಳ ಈ ಕಲ್ಯಾಣಿ, ನೀರಡಸಿದ ಜೀವಜಂತುಗಳಿಗೆ ಹಾಲಾಗಿ ಹರಿಯಿತು; ಕರ್ತಾರನ ಕಮ್ಮಟದಲ್ಲಿ ಹದ ತುಂಬಿದ ಆಯುಧವಾಗಿ ಇಲ್ಲಿಯೂ ಸಂದು ಅಲ್ಲಿಯೂ ಸಂದಿತು.

ಈ ಮಹಾನ್ ಚೇತನವೇ ಬಾಗೆವಾಡಿಯ ಭಾಗ್ಯದೇವತೆ ಬಸವಣ್ಣ. ವ್ಯೋಮ ಮೂರುತಿ ಅಲ್ಲಮ ಪ್ರಭುವಿನಿಂದ 'ಯುಗದ ಉತ್ಸಾಹ'ವೆಂಬ ಮುಕ್ತಕಂಠದ ಹೊಗಳಿಕೆಗೆ ಪಾತ್ರನಾದವನು. ಅದು ಬರಿಯ ಮೆಚ್ಚು ನುಡಿ ಅಲ್ಲ. ಅದರಲ್ಲಿ ಅಣ್ಣನ

ಭೂಮವ್ಯಕ್ತಿತ್ವ ಅಡಗಿದೆ. 'ಯುಗದ ಉತ್ಸಾಹ'ವೆಂದರೆ ಯುಗಮಾನದ ಸಾರ್ವತ್ರಿಕ ಆನಂದ. ಆ ಆನಂದ ಏಕಮುಖಿ ಅಲ್ಲ, ಅನಂತ ಮುಖ ಅನಂತಬಾಹು ಉಳ್ಳದ್ದು. ಅದು ಬಾಳಬಂಜರಿನಲ್ಲಿ ಹಸಿರು ಒಸರಿಸಿದ ಉಸಿರು, ಅದು ಕಲೆಯ ಬಲೆ ನೆಯ್ದು ಊರ್ಣನಾಭ. ಅದು ಕಿರಣದೊಳಗಣ ತೇಜ, ನೆಲದ ಬಸುರಿನ ಚಿಲುಮೆ. ಅದು ಇಹ–ಪರ, ದ್ಯಾವಾ–ಪೃಥ್ವಿ, ದೈವ–ಧರ್ಮ, ಸಂಸ್ಕೃತಿ–ನಾಗರಿಕತೆ, ಕಲೆ–ವಿಜ್ಞಾನ, ನೆಲ–ಜಲ ಎಲ್ಲ ಎಲ್ಲವುಗಳ ಸರ್ವತೋಮುಖ ಪ್ರಗತಿಗೆ ಕಾರಣವಾದ ಶಕ್ತಿ, ಅವ್ಯಾಹತ ಅದಮ್ಯ ಚೇತನ. ಅದು ಸಕಲ ಚೈತನ್ಯದ ಚಿಲುಮೆ ಎಂಬುದು ಅಲ್ಲಮನ ಅಭಿಮತ. ಅಷ್ಟೇ ಅಲ್ಲ.

**ಕಲ್ಯಾಣವೆಂಬ ಪ್ರಣುತೆಯಲ್ಲಿ ಭಕ್ತಿರಸವೆಂಬ ತೈಲವನೆರೆದು**
**ಆಚಾರವೆಂಬ ಬತ್ತಿಗೆ ಬಸವಣ್ಣನ ಜ್ಯೋತಿಯ ಮುಟ್ಟಿಸಲು**
**ತೊಳಗಿ ಬೆಳಗುತ್ತಿದ್ದಿತಯ್ಯಾ ಶಿವನಪ್ರಕಾಶ.**
**ಆ ಬೆಳಗಿನೊಳಗೆ ಒಪ್ಪುತ್ತಿರ್ದರಯ್ಯಾ ಅಸಂಖ್ಯಾತ ಶಿವಶರಣರು**
**ಶಿವಭಕ್ತನಿರ್ದ ಕ್ಷೇತ್ರ. ಶಿವಭಕ್ತ ದೇಶ**
**ಪಾವನವೆಂಬುದು ಹುಸಿಯೇ ಗುಹೇಶ್ವರಾ**

ಬಸವಣ್ಣ ಹುಟ್ಟಿದ ದೇಶಪಾವನ, ಅವನು ಮೆಟ್ಟಿದ ನೆಲ ಅವಿಮುಕ್ತ ಕ್ಷೇತ್ರ ಎಂದು ಎದೆ ತುಂಬಿ ಹಾಡಿದ್ದಾನೆ.

ಬಸವಣ್ಣನ ಬಾಳು ಸತತ ಸಾಧನೆಯ ಸೋಪಾನ. ಅವನ ವಿಕಾಸಶೀಲ ಹಾಗೂ ವಿಚಾರಶೀಲ ಮನಸ್ಸು ಸಮರ್ಥ ಗುರು ವನ್ನರುಸುತ್ತಾ ಕೃಷ್ಣಾ ಮಲಪ್ರಭೆಯರ ಸಂಗಮದೆಡೆಗೆ ಸಾಗಿತು. ಅಲ್ಲಿ ಸಂಗಮನಾಥ ಗುರುವರರ ಸಾನಿಧ್ಯದಲ್ಲಿ ಲೌಕಿಕ ಮತ್ತು ಪಾರಮಾರ್ಥ ಜ್ಞಾನಾರ್ಜನೆಗಾಗಿ ಶಿಷ್ಯತ್ವವನ್ನು ಸ್ವೀಕರಿಸಿತು. ಬಸವಣ್ಣನ ಮೇಧಾಶಕ್ತಿ, ಭಕ್ತಿಭಾವ, ಮಾನವೀಯತೆಯ ಕಳಕಳಿ, ಆಡಳಿತ ದಕ್ಷತೆ, ಪ್ರಾಮಾಣಿಕತೆ, ಆತ್ಮಶುದ್ಧಿ, ನಿಷ್ಠೆ, ತ್ಯಾಗ, ಶೌಚ, ಶೀಲ, ಸೌಹಾರ್ದ, ಸ್ವಾಭಿಮಾನ ಮೊದಲಾದ ಸದ್ಗುಣಗಳನ್ನು ಮನಸಾ ಮೆಚ್ಚಿದ ಗುರು ಸಂಗಮೇಶ್ವರರು ಅವನನ್ನು ಮಂಗಳವೇಡೆಯ ಮಾಂಡಲಿಕನಾಗಿದ್ದ ಬಿಜ್ಜಳನ ಬಳಿಗೆ ಕಳುಹಿಸುತ್ತಾರೆ – ಬಸವಣ್ಣ ಅವನಲ್ಲಿ ಕರಣಿಕನಾಗಿ ಕಾಯಕ ಆರಂಭಿಸುತ್ತಾನೆ. ಕೆಲವೇ ದಿನಗಳಲ್ಲಿ ಕಲ್ಯಾಣದ ಚಾಲುಕ್ಯರ ಅರಸುತನ ಮುಗಿದು, ಕಳಚೂರ್ಯ ಬಿಜ್ಜಳ ಚಕ್ರೇಶ್ವರನಾದ ಮೇಲೆ, ಬಸವಣ್ಣ ಕಲ್ಯಾಣ ರಾಜ್ಯದ ಮಹಾಮಂತ್ರಿಯಾಗುತ್ತಾನೆ. ಬಸವಣ್ಣ ತನ್ನ ಪ್ರಾಮಾಣಿಕತೆ ಮತ್ತು ಮುತ್ಸದ್ದಿತನಗಳಿಂದ ಕಲ್ಯಾಣದಲ್ಲಿ ಬಂಗಾರದ ಮಳೆಗರೆಸಿದ. ಅವನು ಮಹಾಮಂತ್ರಿ ಪದವಿ ಸ್ವೀಕರಿಸಿದ್ದು ಅಧಿಕಾರ ಲಾಲಸೆಯಿಂದಲ್ಲ. ಅದೊಂದು ಸೇವೆಗಿರುವ ಉತ್ತಮ ವೇದಿಕೆಯೆಂದು. ಅದರಂತೆ ತನ್ನ ಬಾಳನ್ನೇ ಸೇವೆಗೆ ಮೀಸಲಿಟ್ಟ. ಅಂದು ಸಮಾಜದಲ್ಲಿ ತಾಂಡವವಾಡುತ್ತಿದ್ದ ವರ್ಗಭೇದ, ವರ್ಣಭೇದ, ಗಂಡು ಹೆಣ್ಣು ಎಂಬ ತಾರತಮ್ಯ ಬುದ್ಧಿ, ಧನಿಕ ದರಿದ್ರ ಎಂಬ ಭಿನ್ನ ಭಾವ – ಇವೆಲ್ಲವನ್ನೂ ತೊಡೆದು ಹಾಕಿ, ಅಂತರಂಗ ಬಹಿರಂಗ ಶುದ್ಧಿ ಆಚರಿಸಿದ. ವ್ಯಷ್ಟಿ ಮತ್ತು ಸಮಷ್ಟಿಗಳ ಪೂರ್ಣವಿಕಾಸಕ್ಕೆ ಅನುವು ಮಾಡಿಕೊಟ್ಟ ತಮ್ಮ ಭವಿಷ್ಯದ ಕಲ್ಪನೆಯೇ ಇರದಿದ್ದ, ಶತಶತಮಾನಗಳಿಂದಲೂ ತುಳಿತಕ್ಕೆ ಸಿಕ್ಕಿ ನಲುಗಿದ್ದ ದಲಿತ ಮತ್ತು ಮಹಿಳೆ ಇವರಿಗೆ ಒಂದು ಬದುಕು ಕೊಟ್ಟ, ಭರವಸೆ ಹುಟ್ಟಿಸಿದ. ಶಿಷ್ಟ ಸಮಾಜದ ಶೋಷಣೆಗೆ ಒಳಗಾಗಿದ್ದವರು ದಲಿತರು ಅದರಲ್ಲೂ ಪಂಚಮರೆನಿಸಿಕೊಂಡ ಅಸ್ಪೃಶ್ಯರು. ಅವರನ್ನು ಸ್ಪೃಶ್ಯರನ್ನಾಗಿಸಿದ್ದು, ಸವರ್ಣೀಯರೊಡನೆ ಸಮಾನ ಸ್ಥಾನ ದೊರಕಿಸಿಕೊಟ್ಟದ್ದು ಅಣ್ಣನ ಬಹು ದೊಡ್ಡ ಸಾಧನೆಗಳಲ್ಲಿ ಒಂದು. ಹೊಲೆಯ ಹರಳಯ್ಯನ ಮಗ ಮತ್ತು ಹಾರುವ ಮಧುವರಸರ ಮಗಳು – ಇವರ ಮದುವೆ ಮಾಡಿಸುವ ಮೂಲಕ ಮಹಾಕ್ರಾಂತಿಗೆ ಕಾರಣನಾದ.

ಬಸವಣ್ಣನ ಯಾವ ಯೋಜನೆಯೂ ಅಸಮಾನ್ಯವಾದುದಾಗಿರಲಿಲ್ಲ. ಅದು ಮಣ್ಣಿಗಂಟಿದ್ದು, ಲೋಕಕ್ಕೆ ಬದುಕಿದ್ದು, ಮೂಲತಃ ಬಸವಣ್ಣ ಇಹದ ಬಾಳನಪ್ಪಿದವನು. ಕಣ್ಣಿಗೆ ಕಾಣದ ಕೈಗೆ ಸಿಗದ ಕಲ್ಪನಾ ಸ್ವರ್ಗಕ್ಕೆ ಕೈ ಚಾಚಿದವನಲ್ಲ. ಅಂತಹ ಭಾವನಾ ಸ್ವರ್ಗ ಎಂಬುದಿದ್ದರೆ ಅದು ಅವನ ದೃಷ್ಟಿಯಲ್ಲಿ ಕಿಗ್ಗಾಸಿನ ಕಿಮ್ಮತ್ತನ್ನೂ ಪಡೆಯದ್ದು. 'ಸತ್ತು ಬೆರೆಸಿಹನೆಂದರೆ ಕಬ್ಬಿನ ತುದಿಯ ಮೆಲಿದಂತೆ' ಎನ್ನುತ್ತಾನೆ ಬಸವಣ್ಣ. ಕಬ್ಬಿನ ರಸದ ಸವಿಯಿರುವುದು ಕಬ್ಬಿನ ಜಲ್ಲೆಯ ಬುಡದಲ್ಲಿ ಕಾಂಡದಲ್ಲಿ ; ತುದಿ ಯಲ್ಲಲ್ಲ. ತುದಿಯ ಭಾಗವನ್ನು ಯಾರೂ ಜಗಿಯುವುದಿಲ್ಲ. ಏಕೆಂದರೆ ಅಲ್ಲಿ ಸವಿಯಿಲ್ಲ ಇರುವುದು ಬರಿಯ ಸೌಳು ಸೌಳು ! ಅದರಂತೆ ನಮ್ಮ ಬಾಳಿನ ಸಾರ ಇರುವುದು ಇಹದಲ್ಲೇ, ಪರದಲ್ಲಲ್ಲ. ಇಹದ ಬದುಕು ಸುಂದರವಾಗಬೇಕು, ಸೈತಾಗಬೇಕು, ಋಜುವಾಗಬೇಕು, ಲಿಂಗ (ಆತ್ಮ) ಮೆಚ್ಚಿ ಅಹುದಹುದೆನುವಂತಾಗಬೇಕು' ವ್ಯಕ್ತಿ ಯಾವನೇ ಇರಲಿ, ಅವನು ಮಾನವತೆಯನ್ನು ಮೈಗೂಡಿಸಿಕೊಂಡು ಮೇಲೇರಬೇಕು. ಅರ್ಥಾತ್ ಅವನು ಮೊದಲು ಮಾನವನಾಗಬೇಕು. ತಾನು ಬದುಕಿ, ಅನ್ಯರಿಗೆ ಬದುಕು

ಕೊಡಬೇಕು. ತಾನು ಬೆಳಗಿ ಅನ್ಯರಿಗೆ ಬೆಳಕು ಕೊಡಬೇಕು. ಮಾನವ ಮಹಾದೇವನಾಗುವುದು ಬೇಡ, ಮನುಷ್ಯನಾದರೆ ಸಾಕು ! ಕಲ್ಯಾಣ ಕಲ್ಪನೆಯ ಕೈಲಾಸವಾಗುವುದು ಬೇಡ, ಲೋಕೋಪಕಾರಿ ಕಲ್ಯಾಣಿಯಾದರೆ ಸಾಕು ! ಅಂತಾಗಿಸಬೇಕಾದರೆ ಮಾನವ ಮೊದಲು 'ಇಲ್ಲಿ ಸಲ್ಲುವ ಕೆಲಸ ಮಾಡಬೇಕು. ಇಲ್ಲಿ ಸಂದರೆ ಅಲ್ಲಿ ಸಂದಂತೆಯೇ !

ಆನರಿಲ್ಲದ ಜಗತ್ತಿಲ್ಲ ; ಪ್ರಜರಿಲ್ಲದ ಪ್ರಭುತ್ವವಿಲ್ಲ. ಇರುವವರಲ್ಲಿ ನೂರಕ್ಕೆ ಎಂಬತ್ತರಷ್ಟು ಶೂದ್ರರು ಮತ್ತು ಪಂಚಮರು. ಉಳಿದ ಇಪ್ಪತ್ತು ಭಾಗ ಮಾತ್ರ ಶಿಷ್ಟರು, ಶ್ರೇಷ್ಠರೆನಿಸಿಕೊಂಡವರು. ಈ ವ್ಯವಸ್ಥೆಯಿಂದಾಗಿ ಸಮಾಜದಲ್ಲಿ ಉನ್ನತ ಸಂಸ್ಕೃತಿ (Gre-at culture) ಮತ್ತು ಕೀಳು ಸಂಸ್ಕೃತಿ (Little culture) ಎಂಬ ಎರಡು ವರ್ಗಗಳು ಸೃಷ್ಟಿಯಾದವು. ಇವೆರಡೂ ಮುಖ್ಯವಾಹಿನಿಯಲ್ಲಿ ಒಂದಾಗದೆ ಸಮಾನಾಂತರ ಪ್ರವಾಹಗಳಾಗಿ ಹರಿದವು. ಇವೆರಡನ್ನೂ ಒಡಬೆರೆಸುವ ಸಾಹಸಕ್ಕೆ ಬಸವಣ್ಣ ಕೈ ಹಾಕಿದ. ಆ ಕುರಿತು ಹೇಳುತ್ತಾನೆ.

**ಅರಿದರಿದು ಸಮಗಾಣಿಸಬಾರದು**
**ತ್ರಾಸಿನ ಕಟ್ಟಳೆಯಂತಿನಿತು ವೆಗ್ಗಳವಾದರೆ**
**ಈಶ್ವರನೊಡೆಯಿಕ್ಕದೆ ಮಾಣುವನೆ?**
**ಪಾತ್ರ ಅಪಾತ್ರವೆಂದು ಕಂಡರೆ ಶಿವನೆಂತು ಮೆಚ್ಚುವನು** ?
**ಜೀವ ಜೀವಾತ್ಮವ ಸರಿಯೆಂದು ಕಂಡರೆ**
**ಸಂವೇದಿಸದಿಪ್ಪನೆ ಶಿವನು** ?
**ತನ್ನ ಮನದಲ್ಲಿ 'ಯತ್ರ ಜೀವ ತತ್ರ' ಶಿವನೆಂದು**
**ಸರ್ವಜೀವ ದಯಾಪರಿಯಾದಲ್ಲಿ**
**ಕೂಡಲಸಂಗಮದೇವನು ಕೈಲಾಸದಿಂದ ಬಂದು**
**ಎತ್ತಿಕೊಳ್ಳದಿಪ್ಪನೆ !**

ಎಂದು.

ಒಂದು ಉತ್ತರ ಧ್ರುವ, ಮತ್ತೊಂದು ದಕ್ಷಿಣ ಧ್ರುವ – ಇವೆರಡನ್ನೂ ಒಂದುಗೂಡಿಸುವುದು ಸಾಧ್ಯವೇ ಇಲ್ಲ. ತಕ್ಕಡಿಯ ನಡುವಣ ತೂಕದ ಮುಳ್ಳು ಒಂದಿನಿತೂ ಹೆಚ್ಚು ಕಡಿಮೆ ಆಗದಂತೆ ನೋಡಿಕೊಳ್ಳಬೇಕು. ವ್ಯತ್ಯಾಸವಾದರೆ ಶಿವನ ಕೋಪಕ್ಕೆ ಪಕ್ಕಾಗಬೇಕಾಗುತ್ತದೆ. ಪಾತ್ರಾಪಾತ್ರವೆಂದು ತಾರತಮ್ಯ ತೋರೆದೆಡೆಯಲ್ಲಿ ಪರಶಿವನ ಒಲವಿಲ್ಲ. ಸರ್ವಜೀವಿಗಳೂ ಸಮಾನವಾದವುಗಳು. ಅವುಗಳಲ್ಲಿ ಭೇದವೆಣಿಸದೆ ಸಮತಾಭಾವದಿಂದ ನಡೆದುಕೊಂಡಿದ್ದಾದರೆ ಶಿವ ಪ್ರಸನ್ನನಾಗದಿರುತ್ತಾನೆಯೇ?' 'ಎಲ್ಲಿ ಜೀವವೋ ಅಲ್ಲಿ ಶಿವ! ಸದ್ಭಾವನೆಯಿಂದ ಸರ್ವವನ್ನೂ ಪ್ರೀತಿಸಿದ್ದಾದರೆ, ವ್ಯಕ್ತಿ ಪರಮಾತ್ಮನ ಕೃಪೆಗೆ ಪಾತ್ರನಾಗುತ್ತಾನೆ. ಶಿವನ ಚಿದಂಶವೇ ಜೀವ ; ಆ ಶಿವದಿಂದಲೇ ಬೇರಾಗಿ ಬಂದದ್ದು ಈ ಚೇತನ. ಈ ಸತ್ಯವನ್ನು ತಿಳಿದವನಲ್ಲಿ ಯಾವುದೇ ಭೇದಭಾವಕ್ಕೆಡೆಯಿರುವುದಿಲ್ಲ ಅಂಬುದು ಅಣ್ಣನ ಅಚಲವಾದ ನಂಬುಗೆ.

ಕಾರ್ಲ್ ಮಾರ್ಕ್ಸ್‌ನ ಕಾಲದಲ್ಲಿ ಅಲ್ಪಸಂಖ್ಯಾತ ಬಂಡವಾಳಶಾಹಿ ಸಿರಿವಂತವರ್ಗ (BOUGEOISIE) ಮತ್ತು ಬಹುಸಂಖ್ಯಾತ ಕಾರ್ಮಿಕವರ್ಗ (PROLETARIOT) ಗಳಿದ್ದಂತೆ. ಬಸವಣ್ಣನ ಕಾಲದಲ್ಲೂ 'ಉಳ್ಳವರು' 'ಇಲ್ಲದವರು' ಎಂಬ ಅಷ್ಟೇ ಪ್ರಮಾಣದ ಎರಡು ವರ್ಗಗಳಿದ್ದವು. ಇವೆರಡರ ನಡುವೆ ಬಹು ದೊಡ್ಡ ಕಂದರವೂ ಇತ್ತು. ಈ ಕಂದರವನ್ನು ತುಂಬುವ ಮನ ಮಾಡಿದ ಬಸವಣ್ಣ. ಅದು ಪೂರ್ಣಗೊಳ್ಳಬೇಕಿದ್ದರೆ ಮೊದಲು ಶ್ರೀಸಾಮಾನ್ಯನ ಆರ್ಥಿಕಪರಿಸ್ಥಿತಿ ಸುಧಾರಿಸಬೇಕು. ಎರಡನೆಯದಾಗಿ, ಶ್ರೀಮಂತನ ಮನೋಧರ್ಮ ಪರಿವರ್ತನಗೊಳ್ಳಬೇಕು. ಬಡವನನ್ನು ಮೇಲೆತ್ತುವುದು ಎಷ್ಟು ಕಷ್ಟವೊ, ಅಷ್ಟೇ ಕಷ್ಟ ಏಕೆ, ಅದಕ್ಕಿಂತಲೂ ಕಷ್ಟ ಸಿರಿವಂತನ ಮನಸ್ಸನ್ನು ತಿದ್ದುವುದು.

**ಹಾವು ತಿಂದವರ ನುಡಿಸಬಹದು**
**ಗರ ಹೊಡೆದವರ ನುಡಿಸಬಹುದು**
**ಸಿರಿಗರ ಹೊಡೆದವರ ನುಡಿಸಲು ಬಾರದು ನೋಡಯ್ಯಾ**

ಎಂಬ ಸತ್ಯದ ಅರಿವಿತ್ತು ಅಣ್ಣನಿಗೆ. ತಿಳಿದೂ ತಿಳಿದೂ ಇಂತಹ ಕಷ್ಟಸಾಧ್ಯ ಕಾರ್ಯಕ್ಕೆ ತನ್ನನ್ನು ತಾನು ತೊಡಗಿಸಿಕೊಂಡ. ಸಮಾಜ ಸ್ವಾಸ್ಥ್ಯಕ್ಕೆ ಕಾರಣವಾದ ಆರ್ಥಿಕ ಸಮಾನತೆಯ ಬಗ್ಗೆ ತನ್ನ ಚಿಂತನೆ ಹರಿಸಿದ. ಲೋಕ ಸಂಗ್ರಹ ಅಥವಾ ಜನಹಿತ

ಕಾರ್ಯಕ್ಕೆ ಮನಮಾಡಿದ. ಬಡವ, ಬಲ್ಲಿದ ಎಂಬ ವರ್ಗ, ವರ್ಣ ನಿವಾರಣೆಯಾಗಿ, ಸಮಾಜದಲ್ಲಿ ಸರ್ವತೋಮುಖ ಆರ್ಥಿಕಾಭಿವೃದ್ಧಿ ಸಾಧಿತವಾಗಬೇಕಾದರೆ 'ಕಾಯಕ' ಒಂದೇ ಮಾರ್ಗ. ಎಂಬುದನ್ನು ತನ್ನಲ್ಲಿಯೇ ನಿರ್ಧರಿಸಿಕೊಂಡ. ಕಾಯಕದಿಂದ ಅರ್ಥ, ಅರ್ಥದಿಂದ ಸ್ವಾಯುತ್ತತೆ, ಸ್ವಾಯುತ್ತತೆಯಿಂದ ಸ್ವಾಭಿಮನ, ಸ್ವಾಭಿಮಾನದಿಂದ ಸರ್ವಸಮಾನತೆ ವ್ಯಕ್ತಿಗೆ ಪ್ರಾಪ್ತವಾಗಿ, ಆತ ಸಮಾಜದಲ್ಲಿ ಗಣ್ಯನೆನಿಸುತ್ತಾನೆ. ಆಗ ಯಾರಿಗೆ ಯಾರೂ ಗುಲಾಮರೆನಿಸುವ ಅಗತ್ಯ ಬೀಳುವುದಿಲ್ಲ. ಅಂತಹ ಮಾನವೋದ್ಧಾರದ ಕಾರ್ಯಕ್ಕೆ ಕೈ ಹಾಕಿದ. ಮೂಲಭೂತವಾಗಿ, ವ್ಯಕ್ತಿಯ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಬಹುದಾದ, ಸರ್ವಸಮಾನತೆಯನ್ನು ಸಾಧಿಸಬಹುದಾದ 'ಕಾಯಕ–ದಾಸೋಹ' ಎಂಬ ಆರ್ಥಿಕ ಸಿದ್ಧಾಂತವನ್ನು ಆವಿಷ್ಕರಿಸಿದ. ಕಾಯಕ ದುಡಿಮೆಯ ದಾರಿ, ದಾಸೋಹ ಅದರ ವಿತರಣೆಯ ಹಾದಿ. ಕಾಯಕ ಎನ್ನುವುದು ವಿತ್ತಕ್ರೀಡೆ (Economic Sport) ಗಿರುವ ಬೇರೊಂದು ಹೆಸರು. ಮೈ ಬೆವರು ಸುರಿಸಿ ಹಳಿಸಿದ ದುಡಿಮೆಯಲ್ಲಿ ವ್ಯಕ್ತಿ ತನಗೆ ಅಗತ್ಯವಿದ್ದಷ್ಟನ್ನು ಮಾತ್ರ ಇಟ್ಟುಕೊಂಡು ಉಳಿದದ್ದನ್ನು ಸಮಾಜದ ಮಡಲಿಗೆ ಹಾಕಬೇಕು. ಇದು ದಾಸೋಹ ತತ್ವ. ಇದು ಬಸವಣ್ಣ ಪ್ರಸಿದ್ಧಿಸಿದ ಆರ್ಥಿಕ ನೀತಿ. ಕಾಯಕ ಪವಿತ್ರವಾದದ್ದು. ಪೂಜ್ಯನೀಯವಾದದ್ದು. ಅದಕ್ಕೆ ಜಾತಿ ಸೂತಕ ಇಲ್ಲ, ಮುಟ್ಟು ಮೈಲಿಗೆಗಳಿಲ್ಲ. ಪ್ರತಿಯೊಂದು ಕಾಯಕಕ್ಕೂ 'ವೃತ್ತಿಗೌರವ'(Dignity of Labour) ಉಂಟು. 'ದೇವ ಸಹಿತ ಭಕ್ತ ಮನೆಗೆ ಬಂದರೆ ಕಾಯಕವಾಗುವುದೆಂದು ಬೆಸಗೊಂಡರೆ ನಿಮ್ಮಾಣೆ ನಿಮ್ಮ ಪ್ರಮಥರಾಣೆ, ತಲೆದಂಡ ಕೂಡಲ ಸಂಗಮದೇವಾ !' ಎಂಬುದು ಬಸವಣ್ಣನ ಪ್ರತಿಜ್ಞೆ. ಇದರಿಂದಾಗಿ ವ್ಯಕ್ತಿ ಗೌರವದ ಸಂಪಾದನೆಯ ಸ್ವರೂಪಕ್ಕೂ ಆಧ್ಯಾತ್ಮದ ಅನುಸಂಧಾನಕ್ಕೂ ಕಾಯಕ ಬೆಸುಗೆಯಾಯಿತು. ಕಾಯಕ ಭಾವನೆ ಸಮಾನತೆಯ ಸೋಪಾನ, ದಾಸೋಹ ಶಿವಸಮಯದ ಮಹಾಮಜಲು. ಇವುಗಳ ಸಂಯೋಗದಿಂದ ಲೋಕವ್ಯವಹರಣೆಯಲ್ಲಿ ಆರ್ಥಿಕ ಸಿದ್ಧಾಂತಕ್ಕೊಂದು ಹೊಸ ಆಯಾಮ ದೊರೆತಂತಾಯಿತು.

**ಏಷವಾಂ ದ್ಯಾವಾ ಪೃಥಿವೀ ಉಪಾಸ್ಥೇಮಾ ಕ್ಷುಪನ್ಯಾತೃಷತ್ (ಅಥರ್ವಸಂಹಿತೆ. ೨೨ ೨೯–೪)**

–ಅಂದರೆ ಈ ಬಾನು ಭುವಿಗಳ ಮಡಿಲಲ್ಲಿ ಯಾವ ಜೀವಿಯೂ ಹಸಿವು ಬಾಯಾರಿಕೆಗಳಿಂದ ಬಳಲಬಾರದು' ಎಂಬ ಮಾನವೀಯ ಭಾವನೆ ಸ್ಥಿತವಾಯಿತು.

ಶತಶತಮಾನಗಳಿಂದಲೂ ಶಿಷ್ಟಸಮಾಜದ ಶೋಷಣೆಗೆ ಒಳಗಾದ ದಲಿತ, ಪಂಚಮ – ಅಂತ್ಯಜನಂತೆ ಪುರುಷ ಪ್ರಧಾನ ಸಮಾಜದ ದೌಷ್ಟ್ಯಕ್ಕೆ ಬಲಿಯಾಗಿದ್ದವಳು ಹೆಣ್ಣು. ಗಂಡುಕುಲ ಅವಳಿಗೆ ಸಾಮಾಜಿಕವಾಗಿಯಾಗಲಿ, ಧಾರ್ಮಿಕವಾಗಿಯಾಗಲಿ ಸಮಾನತೆಯನ್ನು ದಯಪಾಲಿಸಿಯೇ ಇಲ್ಲ ; ಅಂದಲ್ಲ ಇಂದು ಕೂಡ. ಮುಕ್ತಿ ಎಂಬುದು ಅವಳ ಪಾಲಿಗೆ ಮೊಲದ ಕೊಂಬು. ಸ್ವಾತಂತ್ರ್ಯ ಅವಳಿಗೆ ಕನಸಿನ ಗಂಟು, ಮನುಸ್ಮೃತಿಯ ಪ್ರಕಾರ ಮಹಿಳೆ ಶೂದ್ರವರ್ಗಕ್ಕೆ ಸೇರಿದವಳು. ಪುರುಷನ ಕಾಮಪ್ರಚೋದನೆಗೆ, ಅವನ ದುರಾಚಾರಗಳಿಗೆ ಮಹಿಳೆ ಕಾರಣಳು. ಅವಳು ಕೃತಘ್ನಳು. ಅವಳ ಬಗೆಗೆ ಪುರುಷ ಯಾವಾಗಲೂ ಜಾಗೃತವಾಗಿರಬೇಕು. ಹಗಲಿರುಳೂ ಅವಳ ಮೇಲೆ ಕಣ್ಣಿಟ್ಟಿರಬೇಕು. ಯಾವ ವಿಚಾರದಲ್ಲೂ ಅವಳಿಗೆ ಸ್ವಾತಂತ್ರ್ಯವಿರಬಾರದು. ಯಾವಾಗಲೂ ಅವಳು ಒಂಟಿಯಾಗಿಯೇ ಇರಬೇಕು. ಅವಳಿಗೆ ವಿವಾಹ ವಿಚ್ಛೇದನದ ಅಧಿಕಾರವಿಲ್ಲ. ಆಸ್ತಿಪಾಸ್ತಿಯ ಹಕ್ಕಿಲ್ಲ. ತಪ್ಪು ಮಾಡಿದರೆ ಅವಳನ್ನು ಹಗ್ಗ ಅಥವಾ ಬಿದಿರು ಬಡಿಗೆಯಿಂದ ಬಡಿಯಬೇಕು. ಅವಳಿಗೆ ಉಪನಯನದ ವೇದಮಂತ್ರಗಳನ್ನು ಪಠಿಸುವ ಅಧಿಕಾರವಿಲ್ಲ. ವೇದೋಕ್ತ ಯಜ್ಞಗಳನ್ನು ಆಚರಿಸಿದ್ದಾದರೆ ಅವಳಿಗೆ ನರಕ ಪ್ರಾಪ್ತವಾಗುತ್ತದೆ. ಅವಳಿಗೆ ಪತಿ–ವ್ರತವನ್ನು ಬಿಟ್ಟು ಬೇರಾವ ವ್ರತವನ್ನೂ ಆಚರಿಸುವ ಹಕ್ಕಿಲ್ಲ. ಸಂಸ್ಕೃತವನ್ನು ಅವಳು ಉಚ್ಚರಿಸಲೇ ಕೂಡದು. ಇಂಥವೆನಿತೋ ನೂರೆಂಟು ಬಂಧನಗಳು ಹೆಣ್ಣಿಗೆ.

ಇವುಗಳನ್ನು ಹರಿದೊಗೆದು ಹೆಣ್ಣಿಗೊಂದು ಸಕಲ ವಿಧದಲ್ಲೂ ಮುಕ್ತ ವಾತವರಣವನ್ನು ದೊರಕಿಸಿಕೊಟ್ಟವನು ಯುಗದ ಉತ್ಸಾಹಿ ಬಸವಣ್ಣ. ಪುರುಷ ಶರಣನೆನಿಸಿದರೆ, ಸ್ತ್ರೀ ಶರಣೆ. ಅವನು ಶಿವ ದೀಕ್ಷೆಗೆ ಪಾತ್ರನಾದಂತೆ ಇವಳೂ ಶಿವದೀಕ್ಷೆ ಲಿಂಗಧಾರಣೆಗೆ ಅರ್ಹಳು. ಅವನು ಲಿಂಗೈಕ್ಯನಾದಂತೆ ಇವಳೂ ಲಿಂಗೈಕ್ಯಳಾಗಲು ಸಮಾನ ಹಕ್ಕುಳ್ಳವಳು. ಹೀಗೆ, ಇಹಪರಗಳೆರಡರಲ್ಲೂ ಪೂಜ್ಯಸ್ಥಾನವಿತ್ತು 'ಹೆಣ್ಣು ಹೆಣ್ಣಲ್ಲ ಹೆಣ್ಣು ರಾಕ್ಷಸಿಯಲ್ಲ, ಹೆಣ್ಣು ಪ್ರತ್ಯಕ್ಷ ಕಪಿಲಸಿದ್ಧಮಲ್ಲಿಕಾರ್ಜುನ' ಎಂದು ಗುರುತಿಸಿ, ಗೌರವಿಸಿದ ಹೆಗ್ಗಳಿಕೆ ಶಿವಶರಣರದು. ಈ ದಿಸೆಯಲ್ಲಿ ಕ್ರಾಂತಿಯೋಗಿ ಬಸವಣ್ಣನ ಪಾತ್ರ ತುಂಬಾ ಮಹತ್ವದ್ದು.

ಭಾರತ ಮೌಢ್ಯದ ಮನೆ, ಕಂದಾಚಾರದ ಕೊಂಪೆ. ಕಲ್ಲುನಾಗರಿಗೆ ಹಾಲೆರೆವ, ಉಣ್ಣದ ಲಿಂಗಕ್ಕೆ ಬೋನ ಹಿಡಿವ, ನೀರ ಕಂಡಲ್ಲಿ ಮುಳುಗುವ, ಮರಸಿಕ್ಕಲ್ಲಿ ಸುತ್ತುವ, ಮಡಕೆ ದೈವ, ಮೊರ ದೈವ ಎಂದು ನೂರೆಂಟು ಗತಿಗೆಟ್ಟ ದೈವಂಗಳನು

ಪೂಜಿಸುವ, ಹೆಣ್ಣಿಗೊಂದು ಶಕುನಿ, ಬಿದ್ದರೊಂದು ಶಾಸ್ತ್ರ ಕೇಳುವ ಮೌಢ್ಯಕ್ಕೆ ಒಲಿದು, ಸಹಜತೆಯನ್ನು ಮರೆತವರೇ ಬಹಳ. ಇವರಿಗೆ ನಡೆನುಡಿಗಳಲ್ಲಿ ಮಡಿಯಾಗಿರುವುದನ್ನು ಕಲಿಸಿದ ಬಸವಣ್ಣ.

ಧರ್ಮ ಎಂಬುದು ಜೀವನ ವಿಧಾನ. ಬಸವಣ್ಣನಲ್ಲಿ ಶ್ರೇಷ್ಠ ಮಾನವತೆ ನಿಜವಾದ ಧರ್ಮ. ಅಂತಹ ಧರ್ಮವನ್ನು ಅಪ್ಪಿದ, ಜಾತಿಯತೆಯನ್ನು ದ್ವೇಷಿಸಿದ. ಅದೇ ರೀತಿ ದೈವದ ಅಸ್ತಿತ್ವವನ್ನು ಒಪ್ಪಿದ, ದೇವಾಲಯ ಸಂಸ್ಕೃತಿಯನ್ನು ತಿರಸ್ಕರಿಸಿದ. ಅವನು ದೇವರನ್ನು ಕಂಡದ್ದು ಕಲ್ಲಿನಲ್ಲಲ್ಲ, ಮಣ್ಣಿನಲ್ಲಲ್ಲ, ಪ್ರತಿಯೊಬ್ಬ ಮಾನವನ ಹೃದಯದಲ್ಲಿ ಪಕ್ಕದವನನ್ನು ಪ್ರೀತಿಸಿದರೆ ದೇವ ದೇವನನ್ನು ಪೂಜಿಸಿದಂತೆ ಎಂಬ ಸದ್ಭಾವನೆಯನ್ನು ಬಿತ್ತಿದ. ಮನುಷ್ಯ ಮನುಷ್ಯನ ನಡುವೆ ಸೌಹಾರ್ದದ ಸೂತ್ರವೇ ಹರಿದು ಹೋಗಿ ಪ್ರತಿಯೊಬ್ಬ ವ್ಯಕ್ತಿಯೂ ಒಂದೊಂದು ದ್ವೀಪವಾಗಿರುವ ಈ ದಿನಗಳಲ್ಲಿ ಬಸವಣ್ಣ ತುಂಬಾ ಪ್ರಸ್ತುತನಾಗುತ್ತಾನೆ. ಅವನ ವಿಶ್ವಪ್ರೇಮ ವಿಶ್ವಮೈತ್ರಿ ಅನಾದೃಶ್ಯವಾದವುಗಳು.

ಅನುಭಾವ ಕುರಿತಂತೆ ಅನ್ಯರ ಕಲ್ಪನೆಗಳಿಗೂ ಬಸವಣ್ಣನವರ ಪರಿಕಲ್ಪನೆಗಳಿಗೂ ಸ್ಥೂಲವ್ಯತ್ಯಾಸವಿದೆ. ಅನ್ಯರವು ಆತ್ಯಂತಿಕ ನೆಲೆಯನ್ನಷ್ಟೇ ಕುರಿತವುಗಳು. ಮತ್ತೊಂದು ಅರ್ಥದಲ್ಲಿ ಸರ್ವಾಧಾರಭೂತವಾದ ನೆಲವನ್ನು ಮರೆತವುಗಳು. ಆದರೆ ಬಸವಣ್ಣ ನವರ ಅನುಭಾವ ಪರವಸ್ತು ನನ್ನಷ್ಟೇ ಕುರಿತದ್ದಲ್ಲ, ಇಹದ ಬದುಕನ್ನೂ ಒಳಗೊಂಡದ್ದು, ಸಮಾಜಗತ ಲೋಕಹಿತ ಸಾಧನವೂ ಅಹುದು. ಅದು ಆತ್ಮ ಕಲ್ಯಾಣವನ್ನಷ್ಟೇ ಅಲ್ಲ, ಲೋಕ ಕಲ್ಯಾಣವನ್ನೂ ತನ್ನ ಕರ್ತವ್ಯವಾಗುಳ್ಳದ್ದು. ಸಮಾಜ ಕೇಂದ್ರಿತ ಸ್ತರದಲ್ಲಿ ಬಸವಣ್ಣನವರು ಅಭಿವ್ಯಕ್ತಿಸಿದ ಅನುಭಾವ, "ವಿಪ್ರ ಮೊದಲು ಅಂತ್ಯಜ ಕಡೆಯಾಗಿ ಶಿವಭಕ್ತರಾದವರನೆಲ್ಲರನೊಂದೆ ಎಂಬೆ" ಎಂ ಬುದು. ಸಮಾಜವನ್ನು ಮರೆತದ್ದು ಧರ್ಮ ಅಲ್ಲ, ಹಾಗೆಯೇ ಲೋಕವನ್ನು ತಿರಸ್ಕರಿಸಿದ್ದು ಆಧ್ಯಾತ್ಮವೂ ಅಲ್ಲ, ಅನುಭಾವ ಮೊದ ಲೇ ಅಲ್ಲ. ಅಣ್ಣನವರ ದೃಷ್ಟಿಯಲ್ಲಿ 'ದೇವ ಲೋಕ ಮರ್ತ್ಯಲೋಕ ಎಂಬುವು ಬೇರೆ ಇಲ್ಲ, ಇಹವೇ ಎಲ್ಲ ! ಅಲ್ಲದೆ, "ದೇವಲೋಕ ಮರ್ತ್ಯಲೋಕವೆಂಬ ಸೀಮೆಯುಳ್ಳನ್ನಕ್ಕ ಕೇವಲ ಶರಣನಾಗಲರಿಯ" ಎಂಬುದು ಅಣ್ಣನ ಮನೀಷೆ. ಆದ್ದರಿಂದ ಸಾಧಕನ ಚಿತ್ತ ಚೈತನ್ಯ ಸೀಮಾಬದ್ಧವಾಗಬಾರದು ; ಅಸೀಮವಾಗಬೇಕು. ಅನಿಕೇತನವಿಹಾರಿಯಾಗಬೇಕು. ಹಾಗಾಗದೆ ಅಲ್ಲಿಂದ ಇಲ್ಲಿಯವರೆಗೆ ಮರ್ತ್ಯಲೋಕ ಇಲ್ಲಿಂದ ಮುಂದಿನದು ದೇವಲೋಕ ಎಂಬ ಗಡಿ ನಿರ್ಮಾಣ ಬಸವಣ್ಣನದ್ದಲ್ಲ. ಅವನು ಇಹಪರಗಳನ್ನು ಏಕತ್ರ ಕಂಡವನು ; ಸವ್ಯಸಾಚಿಯಾದವನು, ಸಮತಾಭಾವದ ಸೀಮಂತಿಕೆಯನ್ನು ಪ್ರತಿಯೊಬ್ಬನೂ ತನ್ನಲ್ಲಿ ನೆಲೆಗೊಳಿಸಿಕೊಂಡಿರಬೇಕು. ಅವನ ದೃಷ್ಟಿಯಲ್ಲಿ 'ಅನುಭಾವ' ಎಂಬುದು 'ನೆಲದ ಮರೆಯ ವಿಧಾನ' ನಿಜ. ಆದರೆ ಮುಗಿಲ ಮರೆಯ ಮಿಂಚಲ್ಲ ! ಅಂದರೆ ಕಲ್ಪನೆಯ ಕಲಾಕುಸುಮ ಅಲ್ಲ. ಅದು ಭವಕ್ಕಂಟಿದ ಭಾವ. ಈ ಸಮನ್ವಯವೇ ಅನುಭಾವ ಮಾರ್ಗವು ಸಾಧಿಸಬುದಾದ ಮಹತ್ತರ ಸಿದ್ಧಿ.

ಇಂತಹ ಯಾವುದೇ ಅನುಭಾವವಿರಲಿ, ಆಧ್ಯಾತ್ಮವಿರಲಿ ಅದಕ್ಕೆ ಆಧಾರಭೂತವಾದದ್ದು ದೇಹ ; ದೇಹವನ್ನು ದೇವಾಲಯವಾಗಿ ಗುರುತಿಸಿದವರು ಶರಣರು. ಬಸವಣ್ಣ ಹೇಳುತ್ತಾನೆ. 'ಎನ್ನ ಕಾಲೇ ಕಂಬ ದೇಹವೇ ದೇಗುಲ, ಶಿರಹೊನ್ನ ಕಳಸ ವಯ್ಯಾ' ಎಂದು. ಈ ರೀತಿ ದೇಹದಲ್ಲಿ ದೇಗುಲವನ್ನು ತಂದಿರಿಸಿದ, ದೇಹವನ್ನೇ ಪವಿತ್ರತಮ ದೇವಾಲಯವನ್ನಾಗಿಸಿದ, ತನ್ಮೂಲಕ ದೇಗುಲದ ಸ್ಥಾವರಕ್ಕೆ ಜಂಗಮದ ಚಾಲನೆ ನೀಡಿ, ದೇಹವನ್ನು ಜಂಗಮ – ದೇವಾಲಯವಾಗಿಸಿದ ಅತ್ಯಂತ ಮಹ ತ್ವದ ಸಾಧನೆ ಬಸವಣ್ಣನದು.

ಮಾನವೇತಿಹಾಸದಲ್ಲೇ ಮಹಾಕ್ರಾಂತಿಯನ್ನೆಬ್ಬಿಸಿದ ಬಸವಣ್ಣ ಕೂಡಲ ಕ್ಷೇತ್ರಕ್ಕೆ ಮರಳಿ ಅಲ್ಲಿ ಬಯಲಾಗುತ್ತಾರೆ. ಅವರ ಪರಿಶುದ್ಧ ಅಂತರ್ ದೃಷ್ಟಿ, ಏಕೈಕ ನಿಷ್ಠೆ, ಅಚಲ ಶ್ರದ್ಧೆ, ಮಹತ್ತರವಾದುದರ ಮುಂದೆ ಸರ್ವಸಮರ್ಪಣೆ, ಮಾನವೀಯ ಅನು ಕಂಪೆ, ಬುದ್ಧಿ ಭಾವಗಳೆರಡರ ಸಮತೂಕವನ್ನು ಸಾಧಿಸಿದ ನಿಶಿತಮತಿ, ನಿರಂತರ ದುಡಿಮೆ, ಸ್ವತಂತ್ರ ವಿಚಾರಶೀಲತೆ – ಇವು ಗಳಲ್ಲಿ ಒಂದೊಂದೂ ನಮಗೆ ಇಂದು ಅತಿ ತುರ್ತಾದ ಅಗತ್ಯಗಳು."

ಕಲ್ಯಾಣದ ಕಥೆ ಮುಗಿಯಿತು. ಬಸವಣ್ಣನ ಕನಸಿನ ಕನ್ನಡಿ ಕಲ್ಯಾಣ ಒಡೆದು ಚೂರಾಗಿ ಹೋಯಿತು. ಕಲ್ಯಾಣನಗರಿಯಲ್ಲಿ ಕ್ರಾಂತಿಯಾಯಿತು ! ಎಂದಿಗೂ ಆಗಬಾರದಿದ್ದ ಮಹಾಕ್ರಾಂತಿಯಾಯಿತು ! ತಮ್ಮ ಜೀವನವನ್ನೆಲ್ಲಾ ಧಾರೆಯೆರೆದು ಬೆಳಸಿದ್ದ ಕಲ್ಯಾಣ ನುಚ್ಚುನೂರಾಯಿತು ಬಸವೇಶ್ವರನ ಕಣ್ಣೆದುರಿನಲ್ಲಿಯೇ. ಅಂತೆಯೇ ಅವನ ಹೃದಯವೂ ಚೂರಾಯಿತು. ಶೂನ್ಯವಾಯಿತು, ಸ್ಥಿರವಾಯಿತು.

'ಓ ನನ್ನ ಕಲ್ಯಾಣ ! ಓ ನನ್ನ ಜೀವದ ಜೀವ ಕಲ್ಯಾಣ ! ಓ ನನ್ನ ಬಾಳ್ ಬಟ್ಟೆಯ ಆಶಾದೀವಿಗೆಯಾದ ಕಲ್ಯಾಣ ! ನೀನಿಂದು ರುದ್ರಸ್ಮಶಾನ ! ಅಹಿಂಸೆಯ ಕ್ಷೇತ್ರ ಇಂದು ಕಟುಕರ ಕೇರಿಯಾಯಿತೇ ?. . .ಓ ಸಂಗ, ಓ ನನ್ನ ಕೂಡಲಸಂಗ, ಸಾಕುಮಾಡೋ ತಂದೆ ಲೋಕದಾಟವನಿನ್ನು ! ದಯೆದೋರು, ಓ ದಯಾಸಿಂಧು, ದಯೆದೋರು !'

**'ಅಕಟಕಟಾ ! ಶಿವ ನಿನಗಿನಿತು ಕರುಣವಿಲ್ಲ**
**ಅಕಟಕಟಾ ! ಶಿವ ನಿನಗಿನಿತು ಕೃಪೆಯಿಲ್ಲ**
**ಏಕೆ ಹುಟ್ಟಿಸಿದೆ ಇಹಲೋಕ ದುಃಖಿಯ. ಪರಲೋಕ ದೂರನ ?**
**ಏಕೆ ಹುಟ್ಟಿಸಿದೆ, ಕೂಡಲಸಂಗಮದೇವಾ ಕೇಳಯ್ಯ**
**ಎನಗಾಗಿ ಮತ್ತೊಂದು ತರುಮರನಿಲ್ಲವೇ ?'**

ನೊಂದೆದೆಯು ಚೀತ್ಕರಿಸಿತು. ಮೊರೆಗೇಳಿದ ಸಂಗಮನಾಥ ಕೋಟಿ ಪ್ರಭಾಪೂರ್ಣನಾಗಿ ಬಹುರೂಪದಲ್ಲಿ ಗೋಚರಿಸಿ, ಕೈಚಾಚಿ ಕರೆದಂತಾಯಿತು. ಮಧ್ಯೆ ಕೃಷ್ಣಾ ಮಲಪ್ರಭೆಯರ ಘೋರ ಪ್ರವಾಹ ಭೋರ್ಗರೆದು ಹರಿಯುತ್ತಿತ್ತು. ಅಲೆಯ ನಾಲಗೆ ಯನ್ನು ಸಹಸ್ರರೂಪದಲ್ಲಿ ಹೊರಹೊರಳಿಸುತ್ತಾ, ಬಸವೇಶ್ವರ ಹರನ ಕರೆಗೆ ಕೈ ನೀಡಿ, 'ಇದೋ ಬಂದೆ ! ಇದೋ ಬಂದೆ ! ಓ ತಂದೆ, ಇದೋ ಬಂದೆ !' ಎಂದು ಧಾವಿಸಿ ಪ್ರವಾಹದಲ್ಲಿ ಮುನ್ನುಗ್ಗಿದಾಗ, ಶುಕ್ರತಾರೆಯ ಶುಭ್ರಶಾಂತಿಯೊಂದು ಮಹಾಬೆಳಗಿನತ್ತ ಸಾಗಿತು. ಬೆಳಗು ಬೆಳಗು ಬೆರೆತು ಬಯಲಾಯಿತು. ಅದರ ನೆನಹು ಮಾತ್ರ ಭುವಿಯಲ್ಲುಳಿಯಿತು.

**ಜಯವಾಗಲಿ ಜಯವಾಗಲಿ ಬಸವಣ್ಣನ ವಾಣಿಗೆ**
**ಜಯವಾಗಲಿ ಜಯವಾಗಲಿ ಬಸವನ ನುಡಿಜೇನಿಗೆ ॥**

**ಕಾಯಕಕ್ಕೆ ಕಲಶವಿತ್ತು**
**ದಾಸೋಹದ ಅರ್ಥ ತಿಳುಹಿ**
**ದುಡಿಮೆಯೇ ದೇವರೆಂದ ಬಸವಣ್ಣನ ವಾಣಿಗೆ ॥ ೧ ॥**

**ಹೆಣ್ಣು ಕುಲಕೆ ಹೆಮ್ಮೆ ತಂದು**
**ಹೊನ್ನಿನಂಥ ಬಾಳುಕೊಟ್ಟು**
**ಬಾಳಿಗೊಂದು ಬೆಳಕನಿತ್ತ ಬಸವಣ್ಣನ ಮತಿಗೆ ॥ ೨ ॥**

**ಮಾತು ಜ್ಯೋತಿರ್ಲಿಂಗವೆನಿಸಿ**
**ಜಾತಿ ಸೂತಕವನು ನೀಗಿ**
**ಮನುಜಮತ ವಿಶ್ವಪಥ ಎಂದಣ್ಣನ ವಾಣಿಗೆ ॥ ೩ ॥**

ಬಸವಣ್ಣನವರು ಕುಳಿತು, ಕುರಿತು ಕಾವ್ಯವನ್ನು ಕೊರೆದವರಲ್ಲ, ಆದರೂ ಕನ್ನಡದ ಕ್ರಾಂತಿಕಾರಕ ಕವಿಯಾಗಿದ್ದಾರೆ ; ಕನ್ನಡದ "ಕಾರಣ ಪುರುಷ"ರಾಗಿದ್ದಾರೆ. ಧರ್ಮಸಂಸ್ಥಾಪಕರಲ್ಲದಿದ್ದರೂ ಧರ್ಮಧುರಂಧರರಾಗಿದ್ದಾರೆ. ದ್ಯುತಿವಡೆದ ಧರ್ಮಜ್ಯೋತಿಯಾಗಿದ್ದಾರೆ. ಜನಜಂಗುಳಿಯ ನಡುವೆ ಬದುಕು ಮಾಡಿದರೂ ಅನ್ಯಾಯದೊಡನೆ ರಾಜಿಮಾಡಿಕೊಳ್ಳದೆ ಬಾಳಿದವರಾಗಿದ್ದಾರೆ. ನಿಶಿತ ಮತಿಯಾಗಿದ್ದಾರೆ, ನಿರಂಕುಶ ವಿಚಾರವಾದಿಯಾಗಿದ್ದಾರೆ, ಪ್ರಗತಿಪರ ಚಿಂತಕರಾಗಿ ಜಗತ್ತಿಗೆ ಆದರ್ಶಪ್ರಾಯರಾಗಿದ್ದಾರೆ.

**ಯುಗದ ಉತ್ಸಾಹವಾಗಿದ್ದಾರೆ.**
**ಜಗದ ಪ್ರೋತ್ಸಾಹವೂ ಆಗಿದ್ದಾರೆ!**

*

**ನ್ಯಾಯನಿಷ್ಠುರ ದಾಕ್ಷಿಣ್ಯಪರಮ ನಾನಲ್ಲ ;**
**ಲೋಕ ವಿರೋಧಿ, ಶರಣನಾರಿಗಂಜುವನಲ್ಲ**
**ಕೂಡಲ ಸಂಗಮದೇವರ ರಾಜತೇಜದಲ್ಲಿಪ್ಪನಾಗಿ** —**ಬಸವಣ್ಣ**

# ಗಾಂಧಿ

'ಅವನೊಬ್ಬ ಬೈರಾಗಿ'

'ಹ್ಞಾ ! ಹೌದೆ ?'

'ಹೌದು, ಅದರಲ್ಲಿ ಸಂದೇಹವೇ ಇಲ್ಲ. ಬೋಳುತಲೆಯ, ಬಚ್ಚು ಬಾಯಿನ, ಹರಕಲು ಮೀಸೆಯ, ಮುರುಕು ಗಡ್ಡದ ಬಡಕಲು ಜೋಗಿ ಅವನು. ಆದರೂ ವಿಶ್ವದ ಸಂಪತ್ತೇ ಅವನಿಗೆ ಸದಾ ಮಣೀದಿರುತ್ತಿತ್ತು.'

ಅವನೊಬ್ಬ ಬ್ರಹ್ಮಚಾರಿ !

ಆದರೆ ಒಬ್ಬಳೇ ಹೆಂಡತಿ, ನಾಲ್ಕು ಮಂದಿ ಗಂಡುಮಕ್ಕಳು ಅವನಿಗೆ ! ಬ್ರಹ್ಮಚರ್ಯಕ್ಕೆ ಅವನದೇ ವಿಶಿಷ್ಟ ವ್ಯಾಖ್ಯಾನ. ಬ್ರಹ್ಮಚರ್ಯದ ನಿರ್ದಿಷ್ಟವಾದ ಪರಿಪೂರ್ಣಾರ್ಥ ಬ್ರಹ್ಮನನ್ನು ಅರಸುವುದು ಎಂದು. ಬ್ರಹ್ಮನು ಎಲ್ಲ ಜೀವಿಗಳಲ್ಲೂ ಅಡಗಿದ್ದಾನೆ. ಜೀವಿಗಳು ತಮ್ಮ ಅಂತರಾತ್ಮನ ಆಳಕ್ಕೆ ಹೋಗಿ ಅವನನ್ನರಿಯುವುದರ ಮೂಲಕ ಅವನನ್ನು ಅರಸಬಹುದು. ಇಂದ್ರಿಯ ನಿಗ್ರಹ ವಿಲ್ಲದೆ ಈ ಅರಿವು ಅಸಾಧ್ಯ. ಆದ್ದರಿಂದ ಬ್ರಹ್ಮಚರ್ಯವೆಂದರೆ ಎಲ್ಲ ಕಾಲಗಳಲ್ಲೂ ಎಲ್ಲ ಸ್ಥಳಗಳಲ್ಲೂ ಸಕಲೇಂದ್ರಿಯಗಳ ನಿಗ್ರಹ ಮತ್ತು ಮನೋ ವಾಕ್ಕಾಯಗಳ ನಿಯಂತ್ರಣ ಎಂಬ ಅರ್ಥ ಬರುತ್ತದೆ ಎನ್ನುತ್ತಾನೆ. ಅಂದರೆ ವಿಷಯಸುಖದ ಸಂಕುಚಿತಾರ್ಥ ಇದಕ್ಕೆ ಸಲ್ಲದು ಎಂಬುದೇ ಅವನ ಉದ್ದೇಶ. ಹಾಗಿದ್ದಲ್ಲಿ ಅವನು 'ಉಂಡು ಉಪವಾಸಿ, ಬಳಸಿ ಬ್ರಹ್ಮಚಾರಿ' ಎಂದು ಹಲವರು ಗೇಲಿಗೈದದ್ದೂ ಉಂಟು.

ಸನ್ಯಾಸಿಯಂತಿದ್ದರೂ ಅವನು ದೊಡ್ಡ ಸಂಸಾರಿ. ಅವನಿಗೆ ಮೊಳದುದ್ದ ಗಡ್ಡವಿಲ್ಲ, ಗೋಪುರದಂತಹ ಜಟೆ ಇಲ್ಲ, ಅಡ ವಿಯ ಗುಹೆಯಲ್ಲಿ ಅನಂತ ಕಾಲ ಮೂಗು ಹಿಡಿದು ತಪಸ್ಸು ಮಾಡಿದವನಲ್ಲ. ಅವನ ಆಶ್ರಮ ಸಬರಮತಿಯಲ್ಲಿ. ಇರುವುದು ಪರ್ಣಕುಟಿಯಾದರೂ ತಪಸ್ಸು ಜನತೆಯ ಜಂಗುಳಿ ಮಧ್ಯದಲ್ಲಿ. ಕೆಂಪು ಕಾವಿಗೆ ಬದಲು ಬಿಳಿಯ ಖಾದಿ ಅವನಿಗೆ ಬಹಳ ಪ್ರಿಯ. ಪ್ರಾಚೀನ ಋಷಿಮುನಿಗಳಂತೆ ನಿಯತವಾದ ಬಾಳು ಆತನದು. ಕಂದ ಮೂಲಗಳನ್ನು ಸೇವಿಸುತ್ತಾನೆ. ಮನಬಂದಾಗ ಉಗ್ರ ಉಪವಾಸ ಕೈಗೊಳ್ಳುತ್ತಾನೆ. ಅವೆಲ್ಲವೂ ತನ್ನ ಅಂತರಂಗ ಶುದ್ಧಿಗಾಗಿ ಎಂಬುದೇ ಅವನ ನಂಬಿಕೆ. ತನ್ನ ಸ್ನೇಹ, ಸಹನೆ, ಸತ್ಯ ಪ್ರೇಮಗಳಿಂದ ಜಗತ್ತನ್ನೇ ಜಯಿಸಿದ ಜ್ಯೋತಿಯಾಗಿದ್ದಾನೆ. ಅವನೇನು ಸಾಧಾರಣ ಸನ್ಯಾಸಿಯಲ್ಲ. ಜಗತ್ತೇ ಅವನ ಕುಟುಂಬ. ಜಗತ್ತಿನ ಮಾನವವರ್ಗವೇ ಆತನ ಬಂಧುಗಳು. ಜೀವಕೋಟಿಗಳೇ ಅವನ ನೆಚ್ಚಿನ ನೇಹಿಗರು. ಅವನಿಗೆ ಸತ್ಯವೇ ದೇವರು. ನಿಷ್ಠೆಯೇ ಪೂಜೆ. ಪ್ರೇಮವೇ ಪುಷ್ಪ. ಸೇವೆಯೇ ಮುಕ್ತಿ. ಅಹಿಂಸೆಯೇ ಅವನ ಜೀವನ ಗಾಯತ್ರಿ !

ಅವನೊಬ್ಬ ಮಹಾಸೇನಾನಿ !

ಆದರೆ ಅವನ ತಲೆಗೆ ಶೀರ್ಷಿಕೆಯಾಗಲೀ ಮೈಗೆ ಕವಚವಾಗಲೀ ಇದ್ದಿಲ್ಲ. ಅದರ ಬದಲು ಅವನ ಅರೆಬೆತ್ತಲೆಯ ದೇಹ ವನ್ನು ಒರಟು ಖಾದಿಯ ತುಂಡೊಂದು ಸದಾ ಮುಚ್ಚಿರುತ್ತಿತ್ತು. ಅವನ ಮೈ ಬಳಿದರೆ ಒಂದು ಪೌಂಡು ಮಾಂಸ ಸಿಗುತ್ತಿತ್ತೊ ಇಲ್ಲವೊ ? ಅವನ ಗೋಣು ಕಚ್ಚಿ ಹೀರಿದ್ದರೆ ಒಂದು ಸೆರೆ ರಕ್ತ ಹನಿಯುತ್ತಿತ್ತೊ ಇಲ್ಲವೊ ! ಆದರೂ ಅವನದು ಪ್ರಚಂಡವಾದ ಗುಂಡಿಗೆ. ಸಹಸ್ರ ಅಣುಬಾಂಬುಗಳು ಒಮ್ಮೆಲೇ ಸ್ಫೋಟಗೊಂಡರೂ ಅದು ಮಿಡುಕುತ್ತಿರಲಿಲ್ಲ. ಅವನು ಪ್ರಪಂಚದ ಯಾವುದೇ ಮೂಲೆಯಲ್ಲಿರಲಿ. ಒಮ್ಮೆ ಘರ್ಜಿಸಿದರೆ ಸಾಕು, ಇಡೀ ವಿಶ್ವವೇ ತಲ್ಲಣಿಸುತ್ತಿತ್ತು. ಅವನಲ್ಲಿ ಒಂದು ಅಸ್ತ್ರವಿತ್ತು. ಅದನ್ನು 'ಸತ್ಯಾಗ್ರಹ ಎಂದರೆ ಸತ್ಯದ ಬಗ್ಗೆ ಆಗ್ರಹ, ಸತ್ಯದ ಬಗ್ಗೆ ಹಟ. ಅದೇ ಅವನಲ್ಲಿದ್ದ ದಿವ್ಯಾಸ್ತ್ರ. ಅದನ್ನು ಮುಂದಿಟ್ಟುಕೊಂಡು ಸದಾ ತನ್ನ ಆತ್ಮನೊಂದಿಗೆ ಹೋರಾಡುತ್ತಲೇ ಇದ್ದ. ಅವನ ಸತ್ಯಾಗ್ರಹದ ಶಿಬಿರದ ಇನ್ನಿತರ ಸೈನಿಕರು ಈ ದಿವ್ಯಾಸ್ತ್ರವನ್ನು ಆಧಾರವಾಗಿಟ್ಟು ಕೊಂಡು ಸತ್ಯ, ಅಹಿಂಸೆ, ಬ್ರಹ್ಮಚರ್ಯ, ಆಸ್ತೇಯ, ಅಪರಿಗ್ರಹ, ಅಭಯ, ಅಸ್ಪ್ರಶ್ಯತಾ ನಿವಾರಣೆ, ಕಾಯಕ ಪರಿಶ್ರಮ, ಸರ್ವಧರ್ಮ ಸಮಭಾವ, ನಮ್ರತೆ, ಸ್ವದೇಶಿ – ಈ ಮೊದಲಾದ ಹನ್ನೊಂದು ವ್ರತಗಳ ಪಾಲನೆಯನ್ನು ಮಾಡಬೇಕಿತ್ತು. ಈ ಸತ್ಯಾಗ್ರಹ ಅಸ್ತ್ರವನ್ನು ಪ್ರಯೋಗಿಸುವ ವೇಳೆ ಒಂದು ಮಂತ್ರವನ್ನು ಪಠಿಸುತ್ತಿದ್ದ. ಅದೇ ಪ್ರೇಮ."ಪ್ರೇಮವೆಲ್ಲವನ್ನೂ ಗೆಲ್ಲುತ್ತದೆ. ದೇವರು ಸೃಷ್ಟಿಸಿದ ಯಾವುದಕ್ಕೂ ಮನುಷ್ಯ ಹೆದರಬಾರದು" ಎಂದು ಧೈರ್ಯಹೇಳಿ, ಪ್ರೇಮದ ಹಿರಿಮೆಯನ್ನು ಸಾರುತ್ತಿದ್ದ.

ಅವನೊಬ್ಬ ಹಟವಾದಿ !

ಯಾರು ಏನು ಹೇಳಿದರೂ ತನ್ನ ಮನಸ್ಸಿಗೆ ಸರಿ ಎಂದು ತೋರಿದ್ದನ್ನು ಮಾಡದೇ ಬಿಡುತ್ತಿರಲಿಲ್ಲ. . .ಅವನದೊಂದು ವೀರ ಹಟ. ತನ್ನ ಬಂಧುಗಳೆಲ್ಲರಿಗೂ ಮೈತುಂಬ ಬಟ್ಟೆ ಸಿಗುವಂತಾಗುವವರೆಗೂ ತಾನು ಅರೆಬೆತ್ತಲೆಯಲ್ಲೇ ಇರುತ್ತೇನೆ. ಎಲ್ಲ

ರಿಗೂ ಹೊಟ್ಟೆ ತುಂಬ ಅನ್ನ ಸಿಕ್ಕುವವರೆಗೂ ತಾನು ಅರೆಹೊಟ್ಟೆಯಲ್ಲೇ ಇರುತ್ತೇನೆ ಎಂಬ ಹಟ. ಅದಕ್ಕಾಗಿಯೇ ಆತನ ಊಟದಲ್ಲಿ ಮಿತಿ ಇರುತ್ತಿತ್ತು – ಒಂದು ಮುಷ್ಟಿ ನೆಲಗಡಲೆಯ ಜೊತೆಯಲ್ಲಿ ಒಂದು ಲೋಟ ಆಡಿನ ಹಾಲು, ಅಷ್ಟು ಬೇಯಿಸಿದ ಸೊಪ್ಪು ಉಪಯೋಗಿಸುತ್ತಿದ್ದ. 'ಅಲ್ಲದೆ ಭಾರತದಲ್ಲಿ ದಿನಕ್ಕೆ ಒಂದು ಊಟ – ಅದೂ ಒಂದು ಒಣ ರೊಟ್ಟಿ, ಒಂದು ಚಿಟಿಕೆ ಉಪ್ಪು – ಇಷ್ಟರಿಂದಲೇ ತೃಪ್ತಿಪಡಬೇಕಾದ ಕೋಟ್ಯಾಂತರ ಜನರಿದ್ದಾರೆ. ಈ ಜನಕ್ಕೆ ಅನ್ನ ಬಟ್ಟೆ ಸಾಕಷ್ಟು ಒದಗಿದ ಹೊರತು ನಾನೂ ನೀವೂ ಏನನ್ನೂ ತೆಗೆದುಕೊಳ್ಳಲು ಸಾಧ್ಯವಿಲ್ಲ. ಇದನ್ನು ಚೆನ್ನಾಗಿ ತಿಳಿದು ನಮ್ಮ ಆಸೆಗಳನ್ನು ಮಿತಗೊಳಿಸಕೊಳ್ಳಬೇಕು. ಆ ಜನತೆಯ ಉದರ ಪೋಷಣೆ, ಊಟಬಟ್ಟೆಗಳಿಗಾಗಿ ನಾವು ಸ್ವಇಚ್ಛೆಯಿಂದ ಅಭಾವವನ್ನು ಅಂಗೀಕರಿಸಬೇಕು' ಎಂದು ಸಿರಿವಂತರಲ್ಲಿ ಮನವಿ ಮಾಡಿಕೊಳ್ಳುತ್ತಾನೆ. "ನನಗೆ ರಾಜ್ಯಬೇಡ, ಸ್ವರ್ಗಬೇಡ, ಮೋಕ್ಷಬೇಡ, ದುಃಖಸಂತಪ್ತ ಜೀವನದ ಧ್ಯೇಯ ಒಂದಿದ್ದರೆ ಸಾಕು ಎಂದು ಕೈಯೆತ್ತಿ ಸಾರುತ್ತಾನೆ."*

ಈ ದರಿದ್ರ ನಾರಾಯಣನ ಪೂಜಾರಿಗೆ ದೈವಸಾಕ್ಷಾತ್ಕಾರದ ಹಂಬಲವಿತ್ತು. ಅವನು ಹೇಳುತ್ತಾನೆ. 'ಮಾನವನ ಅಂತಿಮ ಲಕ್ಷ್ಯ ದೈವಸಾಕ್ಷಾತ್ಕಾರ. ಅವನ ಚಟುವಟಿಕೆಗಳು – ಸಾಮಾಜಿಕ, ರಾಜಕೀಯ, ಆರ್ಥಿಕ ಈ ಎಲ್ಲವೂ ಅಂತಿಮ ಲಕ್ಷ್ಯವಾದ ದೈವ ಸಂಪ್ರಜ್ಞತೆಗೆ ಸಹಾಯವಾಗಬೇಕು. ಸುತ್ತಮುತ್ತಣ ಮಾನವಸೇವೆಯೇ ಈ ಕಾರ್ಯದ ಒಂದು ಭಾಗ. ದೈವದ ಸೃಷ್ಟಿಯಲ್ಲಿ ನಾವೂ ಒಬ್ಬರಾಗಿರುವುದರಿಂದ ಈ ಮೂಲಕ ಅವನನ್ನು ಕಾಣುವುದು ಸುಲಭ. ಸೇವೆಯಿಂದ ಇದು ಸಾಧ್ಯ. ಈ ಅಖಂಡದ ಒಂದು ಭಾಗ, ಒಂದು ಪುಟಿಕೆ ನಾನು. ಮಾನವವರ್ಗವನ್ನು ಬಿಟ್ಟು ಬೇರೆಲ್ಲಿಯೂ ನಾನು ಅವನನ್ನು ಕಾಣಲಾರೆ. ನನ್ನ ದೇಶದ ಜನ ನನಗೆ ಹತ್ತಿರದ ನೆರೆ, ಇವರು ತೀರಾ ನಿಸ್ಸಹಾಯಕರೂ, ನಿರಾಧಾರರೂ, ಅಜಾಗ್ರರರೂ ಆಗಿದ್ದಾರೆ. ಆದ್ದರಿಂದ ನನ್ನ ಸೇವೆ ಇಲ್ಲಿ ಕೇಂದ್ರೀಕೃತವಾಗಿದೆ. ಹಿಮಾಲಯದ ಗುಹೆಗಳಲ್ಲಿ ದೇವರನ್ನು ಕಾಣಬಹುದೆಂಬ ವಾರ್ತೆ ಬಂದರೆ ಕೂಡಲೆ ಅಲ್ಲಿಗೆ ಓಡುತ್ತೇನೆ. ಆದರೆ ಮಾನವನಿಂದ ಬಹುದೂರದಲ್ಲಿ ಅವನನ್ನು ಕಾಣಲಾರೆನೆಂಬ ನಂಬಿಕೆ." **

ಅವನೊಬ್ಬ ದಾನಶಿಖಾಮಣಿ !

ಆದರೂ ಅವನೊಬ್ಬ ಭಿಕಾರಿ. ಬಿಕ್ಕೆ ಬೇಡುವುದು ಅವನ ನಿತಯದ ಕಾಯಕ. ಎಲ್ಲಿ ಹೋಗಲಿ ಅಲ್ಲಿ ತನ್ನ ಎಡಗೈ ಜೋಳಿಗೆಯನ್ನು ಎತ್ತುತ್ತಾನೆ. ಆದರೆ ಅವನ ಬೇಡಿಕೆಯಲ್ಲಿ ಸ್ವಾರ್ಥವಿಲ್ಲ. ತಾನು ದುಡಿದಿದ್ದೆಲ್ಲಾ ಪರಾರ್ಥಕ್ಕಾಗಿ, ತಾನು ಬೇಡಿ ಪಡೆದುದ್ದೆಲ್ಲಾ ದೀನದಲಿತರ ದೈನಂದಿನ ಗಂಜಿಗಾಗಿ. ಎಡಗೈಯಲ್ಲಿ ಸ್ವೀಕರಿಸಿ ಬಲಗೈಯಲ್ಲಿ ಹಂಚುತ್ತಾನೆ. ಅಸವನು ಸ್ಮಶಾನವಾಸಿ ಶಿವನಂತೆ. ಜಗತ್ತಿಗೇ ಅನ್ನ ಕೊಡುವ ಸ್ವಾಮಿ ತಾನು ನರಕಪಾಲದ ಪಾತ್ರೆಯನ್ನು ಹಿಡಿದಿದ್ದಾನೆ. ದಿವ್ಯ ವಸ್ತ್ರಾಭರಣಗಳನ್ನು ಕೊಡುವ ತಂದೆ, ಗಜ ಚರ್ಮಾಂಬರಧಾರಿಯಾಗಿದ್ದಾನೆ. ಸಕಲರಿಗೂ ಭಾಷಣಗಳನ್ನಿತ್ತವನು, ತಾನು ಸರ್ಪಭೂಷಣನಾಗಿದ್ದಾನೆ. ವಿಶ್ವಕ್ಕೇ ಹಾಲನ್ನಿತ್ತು ತಾನು ಹಾಲಾಹಲಧಾರಿಯಾಗಿದ್ದಾನೆ.

---

*ಮಹಾತ್ಮಗಾಂಧಿ ೧೯೧೮ ಪುಟ ೧೮೯

**ಹರಿಜನ ೨೯–೮–೧೯೩೬

ಅವನ ಔದಾರ್ಯಕ್ಕೂ ಮೇರೆ ಇಲ್ಲ. ಅವನ ಮಿತವ್ಯಯಕ್ಕೂ ಮಿತಿ ಇಲ್ಲ. ಅವನು ಮಹಾಜಿಪುಣ. ತನಗೆ ನಿತ್ಯವೂ ಬರುವ ಕಾಗದಗಳನ್ನು ಬಹಳ ಜೋಪಾನವಾಗಿ ಬಿಚ್ಚಿ ಓದಿ ಹಾಗೆಯೇ ಓರಣಿಸಿ ಇಡುತ್ತಾನೆ. ಅವುಗಳನ್ನೇ ಹಲವು ವೇಳೆ ತಾನೇ ಲಕ್ಕೋಟೆಗಳನ್ನು ಮಾಡಿ ತನ್ನ ಪತ್ರಗಳನ್ನು ಕಳುಹಿಸಲು ಉಪಯೋಗಿಸುತ್ತಾನೆ. ಆಡಂಬರದ ಜೀವನ ಅವನಿಗೆ ಸಲ್ಲದು. ಸರಳತೆಯಲ್ಲಿಯೇ ಸತ್ಯವನ್ನು ಕಾಣುತ್ತಾನೆ. ಮಣಗಟ್ಟಲೆ ಬಂಗಾರವನ್ನು ಹೆಣ್ಣು ಹಾಕಿಕೊಂಡಿದ್ದರೆ ಅವನಿಗೆ ಸೇರದು. ಯಂತ್ರದಿಂದ ತಯಾರಿಸಿದ ಬಟ್ಟೆ ಕೊಟ್ಟರೆ ಅವನಿಗೆ ಹೊಟ್ಟೆಕಿಚ್ಚು. ಅಷ್ಟೇಕೆ ವಿದೇಶದ ಗಿಲೀಟು ಮಾಲುಗಳನ್ನು ಅವನು ಬಹಳವಾಗಿ ದ್ವೇಷಿಸುತ್ತಾನೆ. ಪ್ರತಿ ಭಾರತೀಯನೂ ಖಾದಿ ಧರಿಸುವುದರಿಂದ, ರಾಟೆ ಹಿಡಯುವುದರಿಂದ, ನಿರಾಡಂಬರ ಜೀವನ ನಡೆಸುವುದರಿಂದ, ತನ್ನ ಬಂಧುವಿಗೆ ಒಪ್ಪೊತ್ತಿನ ಕೂಳು ಸಿಕ್ಕೀತೆಂಬ ಹಂಬಲ ಆತನಿಗೆ. ವಿಶ್ವಕವಿ ರವೀಂದ್ರರಲ್ಲಿ ಒಮ್ಮೆ ವಾದಿಸಿದ್ದ – ಈ ಖಾದಿ ಬಗ್ಗೆ 'ಬಡತನದಲ್ಲಿ ಮುಳುಗಿ, ನಿರುದ್ಯೋಗದಲ್ಲಿ ನಶಿಸಿಹೋಗುತ್ತಿರುವ ಜನಕ್ಕೆ ದೇವರೇ ಪ್ರತ್ಯಕ್ಷವಾದರೂ ಅನ್ನಾವತಾರಮಾಡಿ ಬರಬೇಕು. ಬೇರೆ ರೀತಿಯಲ್ಲಿ ಬರಲು ಅವನಿಗೆ ಧೈರ್ಯ ಬರಲಾರದು. ದೇವರು ಮನುಷ್ಯನನ್ನು ಸೃಷ್ಟಿಸಿದಾಗ ಅವನಿಗೆ ದುಡಿಯಲು ಹೇಳಿದ. ದುಡಿಯದೆ ತಿನ್ನುವವರು ಕಳ್ಳರು ಎಂದು ಹೇಳಿದ. ಇಂದು ಕೋಟಿ

ಕೋಟಿ ಜನ ದನ ದಂತೆ ಸಾಯುತ್ತಿದ್ದಾರೆ. ಅವರ ಹಸಿವೇ ಹಿಂದೂಸ್ಥಾನಕ್ಕೆ ಕೋಟಿ ವಿದ್ಯೆಗಿಂತ ರಾಟಿ ವಿದ್ಯೆ ಲೇಸು ಎಂಬ ಹಾದಿಗೊಯ್ಯುತ್ತಿದೆ.*

ರಾಟೆ ಅವನ ದೃಷ್ಟಿಯಲ್ಲಿ – ಬಡವನ ಬಂಧು, ವಿಧವೆಯ ಗೆಳತಿ, ರೈತನ ನೇಹಿಗ, ಸೋಮಾರಿತನದ ಮದ್ದು. ಅದ ರಿಂದ ತೆಗೆದು ಮಾಡಿದ ಖಾದಿ ರಾಷ್ಟ್ರ ಪ್ರಗತಿಯ ಹಾದಿ.

ಅವನ ಜಿಪುಣತನಕ್ಕೊಂದು ಉದಾಹರಣೆ :

ಪ್ರಸಿದ್ಧ ಹಿಂದಿ ಲೇಖಕರಾದ ಕಾಕಾ ಕಾಲೇಲ್ಕರ್ ಆತನೊಡನಿದ್ದಾಗ, ಒಂದು ಸಣ್ಣ ಪೆನ್ಸಿಲ್‌ಗಾಗಿ ದೊಡ್ಡ ಪ್ರಕರಣ ನಡೆಯಿತಂತೆ. ಅವರು ಹೀಗೆ ಹೇಳುತ್ತಾರೆ -

"ಒಂದು ದಿನ ಅವರು ಕಳವಳಗೊಂಡು ಏನನ್ನೋ ಹುಡುಕುತ್ತಿರುವುದನ್ನು ಕಂಡೆ.

'ಬಾಪು, ಏನು ಹುಡುಕುತ್ತೀರಿ' ಎಂದು ಕೇಳಿದೆ.

'ಒಂದು ಪೆನ್ಸಿಲ್ಲು' ಎಂದು ಹೇಳಿದರು.

ಅವರಿಗೆ ಕೊಡಲು ನನ್ನ ಪೆಟ್ಟಿಗೆಯಿಂದ ಒಂದು ಪೆನ್ಸಿಲ್ಲನ್ನು ತೆಗೆದೆ.

'ಬೇಡ, ಬೇಡ, ನಾನು ಹುಡುಕುತ್ತಿರುವ ಚಿಕ್ಕ ಸೀಸದ ಕಡ್ಡಿಯೇ ಬೇಕು' ಎಂದರು ಬಾಪೂಜಿ.

'ಸದ್ಯಕ್ಕೆ ಇದನ್ನು ಉಪಯೋಗಿಸಿ ಬಾಪು. ಆಮೇಲೆ ನಾನು ಹುಡುಕಿ ಕೊಡುತ್ತೇನೆ' ಎಂದೆ.

'ಕಾಕಾ, ನಿಮಗೆ ಗೊತ್ತಿಲ್ಲ. ಅದು ಜಿ. ಎ. ನಟೇಶನ್ ಅವರ ಚಿಕ್ಕ ಮಗು ಮದ್ರಾಸಿನಲ್ಲಿ ನನಗೆ ಕೊಟ್ಟದ್ದು. ಆ ಪೆನ್ಸಿಲ್‌ನ್ನು ಕೊಟ್ಟದ್ದು. ಆ ಪೆನ್ಸಿಲ್ಲನ್ನು ನಾನು ಕಳೆಯಬಾರದು. ಎಷ್ಟು ಪ್ರೀತಿಯಿಂದ ಓಡಿಬಂದು ನನಗೆ ಅದನ್ನು ಕೊಟ್ಟಿತು ! ನಾನದನ್ನು ಕಳೆಯಲು ಸಾಧ್ಯವೇ ?' ಎಂದರು ಬಾಪೂಜಿ.

---

*ಪರ್ಣಕುಟಿ (ಧರ್ಮಸಾರಥಿ– ಪುಟ ೩೧) – ಲೇ. ಸಿದ್ಧವನಹಳ್ಳಿ ಕೃಷ್ಣಶರ್ಮ

ನಾವಿಬ್ಬರೂ ಆ ಹಾಳು ಸೀಸದಕಡ್ಡಿಗಾಗಿ ಹುಡುಕಿದೆವು. ಅದು ಸಿಕ್ಕ ಮೇಲೆಯೇ ಬಾಪುವಿಗೆ ಸಮಾಧಾನವಾಯ್ತು.*

ಆ ಪೆನ್ಸಿಲ್ಲು ಒಂದು ಅಂಗುಲ ಉದ್ದ ಸಹ ಇರಲಿಲ್ಲ. ! ಅವರ ದೃಷ್ಟಿಯಲ್ಲಿ ಯಾವುದೂ ಅಲ್ಪವಲ್ಲ, ಯಾವುದೂ ಹೀನವಲ್ಲ, ತುಚ್ಛವಲ್ಲ.

ಅವನು ನೋಡುವುದಕ್ಕೆ ಸಾಧುವಿನಂತೆ, ಆದರೂ ಅವನೊಬ್ಬ ವಿಚಿತ್ರ ಪುರುಷ. ಅವನ ವರ್ತನೆಯೇ ವಿಚಿತ್ರ. ಮನಸ್ಸಿಗೆ ಬಂದಾಗ ಮನಸ್ಸಿಗೆ ಬಂದಷ್ಟೇ ನಿದ್ದೆ ಹೋಗುತ್ತಾನೆ. ಸುತ್ತಲೂ ಕಾಂಗ್ರೆಸ್ಸಿನ ಗದ್ದಲ ಮೊಳಗುತ್ತಿರಲು ವೇದಿಕೆಯ ಮೇಲೆ ಕೂತೇ ಐದು – ಹತ್ತು ನಿಮಿಷಗಳ ಲೆಕ್ಕವಿಟ್ಟುಕೊಂಡು ನಿದ್ದೆ ಹೋಗಿದ್ದುಂಟು. 'ರೈಲಿನಲ್ಲಿ, ಕಾರಿನಲ್ಲಿ, ಒಂಟೆಯ ಮೇಲೆ ಕೂಡ ಮಲಗಿದ್ದೇನೆ' ಎನ್ನುತ್ತಾನೆ. ತನ್ನ ನಿತ್ಯದ ಎಲ್ಲ ಕಾರ್ಯಗಳಲ್ಲೂ ನಿಯಮವಿದ್ದಂತೆ ಅವನ ನಿದ್ದೆಯಲ್ಲೂ ನಿಯಮವಿತ್ತು.

ಪಂಡಿತ ಮೋತಿಲಾಲರು ತೀರಿಹೋದಾಗ, ಆತ ಅಹಮದಾಬಾದಿನಲ್ಲಿಯೇ ಇದ್ದ. ದಹನಕ್ರಿಯೆ ಮುಗಿಸಿ ಹಿಂತಿರುಗು ವಾಗ ಅದು ಅವನ ನಿದ್ದೆಯ ವೇಳೆಯಾದ್ದರಿಂದ ನಿಯಮಕ್ಕೆ ಸರಿಯಾಗಿ ನಿದ್ದೆಹೋಗಿದ್ದ. ಅಕಸ್ಮಾತ್ ಕಾರು 'ಢಂ' ಎಂದು ಮಗುಚಿಕೊಂಡಿತು. ಎಲ್ಲರೂ ಬಿದ್ದು ಮೈಕೊಡವಿಕೊಂಡು ಎದ್ದರು. ಆದರೆ ಆ ಪುಣ್ಯಾತ್ಮ ಮಾತ್ರ ರಸ್ತೆಯ ಮಗ್ಗುಲಲ್ಲಿ ಹಾಯಾ ಗಿ ಮಲಗಿ ನಿದ್ದೆಹೋಗಿದ್ದನಂತೆ. ಅವನು ನಿದ್ದೆ ಮುಗಿಸಿ ಎದ್ದಾಗ ಜವಹರಲಾಲ್ ನೆಹರು ಕೇಳಿದರಂತೆ 'ಏನು ಬಾಪೂಜಿ, ಕಾರು ಅಪಘಾತಕ್ಕೀಡಗಿದ್ದರೂ, ನಿಮಗೆ ಎಚ್ಚರವಾಗಬೇಡವೆ ?' ಎಂದು. ಅದಕ್ಕೆ 'ಇಲ್ಲ, ನನ್ನ ನಿದ್ದೆಯ ವೇಳೆ ಇನ್ನೂ ಮುಗಿದಿರ ಲಿಲ್ಲ' ಎಂದನಂತೆ ಆ ವಿಚಿತ್ರ ಮನುಷ್ಯ.

ಮತ್ತೊಮ್ಮೆ ಅಮೆರಿಕಾ ದೇಶದ ಸ್ತ್ರೀಯೊಬ್ಬಳು ಆತನ ಭೇಟಿಗಾಗಿ ಪರ್ಣಕುಟಿಗೆ ಬಂದಿದ್ದಾಗ, ಸ್ವಲ್ಪಕಾಲ ಮಾತ್ರ ಅವಕಾಶ ಕೊಟ್ಟನಂತೆ. ಆದರೆ ಆ ಹೆಣ್ಣು ಬಹಳ ಹೊತ್ತು ಮಾತನಾಡುತ್ತಾ ಕುಳಿತಳಂತೆ. ಆಗ ಆತ ನಗುತ್ತಾ" ಈ ದೇಶದಲ್ಲಿ ಬಹಳ ಮಹಾತ್ಮರಿದ್ದಾರೆ. ಆದರೆ ನಿಮ್ಮೆದುರಿಗಿರುವ ಮಹಾತ್ಮ ಎಲ್ಲರ ಹಾಗಲ್ಲ. ಇವರು ಎಲ್ಲ ಜನರ ಹಾಗೆ ಊಟ ಮಾಡುತ್ತಾರೆ, ಆಟ ಆಡುತ್ತಾರೆ, ನಿದ್ದೆಹೋಗುತ್ತಾರೆ. ಈಗ ನೋಡಿ ನಿಮ್ಮೆದುರಿಗೇ ನಿದ್ದೆ ಹೋಗುತ್ತಾರೆ ಎಂದು ಮಲಗಿ ನಿದ್ದೆ ಹೋದನಂತೆ.**

ಅವನ ಔಷಧಿಯೂ ಒಂದು ವಿಚಿತ್ರವಾದದ್ದೇ. ಖಾಯಿಲೆ ಬಂದರೆ ರಾಮನಾಮ ಸ್ಮರಣೆ ಅದಕ್ಕೆ ಸಿದ್ಧೌಷಧವಂತೆ ! ಎಷ್ಟೋ ಬಾರಿ ತನಗೆ ಕಾಯಿಲೆ ಬಂದಾಗ ಈ ಔಷಧಿ ಸೇವಿಸಿ ಗುಣಪಡೆದಿರುವನಂತೆ. ಎಲ್ಲ ಮಾತುಗಳನ್ನೂ ತನ್ನ

ಸ್ವಾನುಭವದಿಂದಲೇ ಆಡುವಂತೆ ಈ ಮಾತನ್ನು ಆಡುತ್ತಾನೆ. ಡಾಕ್ಟರಿಗೆ – ವಿದೇಶಿ ಔಷಧಿಗೆ ಹಣ ಸುರಿಯುವುದು ತಪ್ಪು ಎನ್ನುತ್ತಾನೆ. ಹೃದಯ ಶುದ್ಧಿ ಇರುವವರಿಗೆ, ಶುದ್ಧಿ ಪಡೆಯಬೇಕೆನ್ನುವವರಿಗೆ, ಶುದ್ಧರಾಗಿರುತ್ತೇವೆನ್ನುವವರಿಗೆ ಮಾತ್ರ ರಾಮನಾಮ. ತನ್ನ ಸ್ವಾರ್ಥತೃಪ್ತಿಗೆ ಅದೆಂದೂ ದಾರಿಯಲ್ಲ – ರಾಮನಾಮ ರೋಗವನ್ನು ಗುಣಪಡಿಸುವುದು ಜೊತೆಗೆ ದೇಹವನ್ನು ಶುದ್ಧಗೊಳಿಸುತ್ತದೆ. ಅದರಿಂದ ಉನ್ನತಿಗೂ ಸಾಧನವಾಗುತ್ತದೆ ಎಂದು ನುಡಿಯುತ್ತಾನೆ. ಇದನ್ನು ಕೇಳಿದ ಅನೇಕರು 'ಅವನೊಬ್ಬ ಅಳಲೇಕಾಯಿ ಪಂಡಿತ' ಎಂದರು. ಮತ್ತೆ ಕೆಲವರು 'ನಿಸರ್ಗ ವೈದ್ಯ' ಎಂದರು. ಏನಾದರೂ ಒಂದೇ. ಅವನೇ ಬೇರೆ. ಅವನ ಮತವೇ ಬೇರೆ !

ಆ ಬೈರಾಗಿಗೆ ಪ್ರಾರ್ಥನೆ ಎಂದರೆ ಪ್ರಾಣ. ನಿತ್ಯಪ್ರಾರ್ಥನೆ ಅವನ ಜೀವದ ಉಸಿರು. ಅನ್ನಾಹಾರಾದಿಗಳನ್ನು ಬಿಟ್ಟರೂ ಬಿಟ್ಟಾನು ಆತ ಪ್ರಾರ್ಥನೆಯನ್ನು ಬಿಡಲಾರ. ಪ್ರಾರ್ಥನೆಯ ದೆಸೆಯಿಂದಲೇ ಅವನಿಗೆ ಮೃತ್ಯು ಸಂಭವಿಸಿತು. ಆದರೂ ಸಂತೋಷದಿಂದಲೇ ಸ್ವಾಗತಿಸಿದ. 'ಹೇ ರಾಮ್, ಹೇ ರಾಮ್ ! ಎಂದು ಆನಂದದಿಂದ ಉದ್ಗರಿಸಿ ತನ್ನ ಜೀವನಯಾತ್ರೆಯನ್ನು ಮುಗಿಸಿದ.

ಪ್ರಾರ್ಥನೆ ಅರ್ಥ ಅವನ ದೃಷ್ಟಿಯಲ್ಲಿ ಹೀಗೆ–

---

*೧೯೧೫ – ಕಾಲೇಲ್ಕರ್, **ಪರ್ಣಕುಟಿ (ನಗೆಗಾರ ಗಾಂಧಿ, ಪು. ೯೦)

"ಅವನ (ದೇವರು) ಅಪ್ಪಣೆ ಇಲ್ಲದೆ ಏನೂ ನಡೆಯುವುದಿಲ್ಲ. ಹೃದಯ ಶುದ್ಧಿಗಾಗಿ ನಮ್ಮ ಪ್ರಾರ್ಥನೆ. ಅವನ ಸಹಾಯ ವಿಲ್ಲದಿದ್ದರೆ ನಾವು ಅಸಹಾಯರೆಂಬ ಜ್ಞಾಪಕಕ್ಕಾಗಿ ಪ್ರಾರ್ಥನೆ. ಪ್ರಾರ್ಥನೆ ಇಲ್ಲದೆ ಯಾವ ಕಾರ್ಯವಾದರೂ ಕೊನೆಗೊಳ್ಳುವುದಿಲ್ಲ. ದೇವರ ಅನುಗ್ರಹವಿಲ್ಲದಿದ್ದರೆ ಆತನ ಸ್ಪಷ್ಟವಾದ ಅನುಮತಿ ದೊರೆಯದಂತಾಗಿ ಮಾನವನ ಅತ್ಯುತ್ತಮ ಪ್ರಯತ್ನವೂ ಫಲಕಾರಿ ಯಾಗುವುದಿಲ್ಲ. ವಿನಯದ ಕರೆ ನಮ್ಮ ಪ್ರಾರ್ಥನೆ. ಆತ್ಮಶೋಧನೆಗೆ ಅಂತರಾತ್ಮನ ಪರಿಶೋಧನೆಗೆ ಇದು ಆಹ್ವಾನ."*

ಆದ್ದರಿಂದ 'ಪ್ರಾರ್ಥನೆ' ಎಂದರೆ ಬಯಸಿದ್ದನ್ನು ದೇವರಲ್ಲಿ ಬೇಡುವುದಲ್ಲ. ಅದು ಅಂತರಂಗ ಪರಿಶುದ್ಧಿ ಮತ್ತು ಪರಮಾತ್ಮನ ನೈಜತೆಯನ್ನು ಅರಿಯಲು ಇರುವ ಅವಶ್ಯ ಸಾಧನ. ನಿತ್ಯಪ್ರಾರ್ಥನೆ ಅವನ ಬಾಳಿಗೆ ಗಂಗೋತ್ರಿ.

ಈ ಬ್ರಹ್ಮಚಾರಿಗೆ ಹೆಣ್ಣು ಎಂದರೆ ವಿಶೇಷ ಗೌರವ. ಅವಳನ್ನು ಅವನು ಎಂದೂ ಕಾಮದೃಷ್ಟಿಯಿಂದಾಗಲೀ, ಹೀನದೃಷ್ಟಿಯಿಂದಾಗಲೀ ಕಂಡವನಲ್ಲ. ಹೆಣ್ಣು ಅಹಿಂಸೆಯ ಅವತಾರ. 'ಅಹಿಂಸೆ' ಎಂದರೆ ಕೊನೆಯಿಲ್ಲದ ಒಲವು, ಎಂದರೆ ಎಣೆಯಿಲ್ಲದ ದುಃಖ ಸಹನಶಕ್ತಿ. ಇದನ್ನು ಗಂಡಿನ ತಾಯಾದ ಹೆಣ್ಣಿಗಿಂತ ಹೆಚ್ಚಾಗಿ ತೋರಬಲ್ಲವರು ಯಾರು ? . . .ಕಲಹದಲ್ಲಿ ಮುಳುಗಿ ಶಾಂತಿಯ ಅಮೃತಕ್ಕಾಗಿ ಈ ಕ್ಷೇತ್ರ ಬಾಯಾರಿದೆ. ಇವರಿಗೆ ಶಾಂತಿಯ ಕಲೆಯನ್ನು ಕಲಿಸುವುದು ಆಕೆಗೇ ಸಂದ ಭಾಗ್ಯ ! ಎನ್ನುತ್ತಾನೆ.

ಅವನ ಬಾಳು ಭಾರತದ ಸ್ವಾತಂತ್ರ್ಯಕ್ಕಾಗಿ ಅರ್ಧ ಸವೆದಿದ್ದರೆ ಹರಿಜನರ ಉದ್ಧಾರಕ್ಕಾಗಿ ಮಿಕ್ಕೆಲ್ಲ ಮೀಸಲು. ಭರತಖಂಡದ ಸ್ವಾತಂತ್ರ್ಯ ಅವನ ಕಣ್ಣಿಗೆ ಕಟ್ಟಿತು ನಿಜ. ಆದರೆ ಅರ್ಥವಿಲ್ಲದ ಕೇವಲ ದೇಶಸ್ವಾತಂತ್ರ್ಯದಲ್ಲಿ ಅವನಿಗೆ ಹೆಚ್ಚು ಆಸಕ್ತಿಯಿರಲಿಲ್ಲ. ಪರಕೀಯರ ಕೈಯಿಂದ ಭಾರತವನ್ನು ಬಿಡಿಸುವುದಷ್ಟೇ ಅವನ ಉದ್ದೇಶವೂ ಆಗಿರಲಿಲ್ಲ. ಮನುಷ್ಯ ಮನುಷ್ಯನಾಗಿ ಬಾಳುವುದನ್ನು ಕಲಿಸುವುದೇ ಸ್ವಾತಂತ್ರ್ಯದ ಅರ್ಥ ಎಂದು ಅರಿತಿದ್ದ. ಬ್ರಿಟಿಷರ ಕೈಯಿಂದ ಭಾರತವನ್ನು ವಿಮುಕ್ತಗೊಳಿಸುವುದು ಸ್ವಾತಂತ್ರ್ಯವೆನಿ ಸುವುದಿಲ್ಲ. ಮಾನವನ ಅಂತರಂಗದ ಜಾಡ್ಯಗಳನ್ನು ದೂರಮಾಡುವುದೇ ಅದರ ಹಿರಿಯ ಅರ್ಥ. ಕೇವಲ ಭಾರತೀಯನನಲ್ಲ, ವಿಶ್ವ ಜಗತ್ತಿನ ಯಾವ ಮಾನವ ಪ್ರಾಣಿಯೇ ಆಗಲಿ, ತನ್ನ ಅಂತರಂಗದ ದೌರ್ಬಲ್ಯ ಶೃಂಖಲೆಗಳನ್ನು ಕಡಿದೊಗೆದು ಸ್ವತಂತ್ರನಾಗ ಬೇಕೆಂಬುದೇ ಅವನ ಹಿರಿಯಾಸೆ. ಅದಕ್ಕಾಗಿ ಆತ ಶ್ರಮಿಸಿದ. ತನ್ನ ಬಾಳನ್ನೇ ಬಲಿಗೊಟ್ಟ ಆ ಕಾರ್ಯಸಾಧನೆಯ ಯಜ್ಞಕುಂಡದಲ್ಲಿ.

ಅವನೊಬ್ಬ ಅವತಾರಪುರುಷ !

ಅವನ ಅವತಾರದಲ್ಲಿ ಪವಾಡವೂ ಆಗಿದೆ. ಅದು ಆಧುನಿಕ ಶಬರಿಯ ಜೀವನಕ್ಕೆ ಸಂಬಂಧಿಸಿದುದು. ಒಮ್ಮೆ ಆತ ಸಂಯುಕ್ತ ಪ್ರಾಂತದಲ್ಲಿ ಪ್ರವಾಸ ಕೈಕೊಂಡಿದ್ದನಂತೆ. ಅಲ್ಲಿಯ ಯಾವುದೋ ಒಂದು ಮುದುಕಿಗೆ ಆತನನ್ನು ನೋಡುವ ಹಂಬಲವಿತ್ತಂತೆ. ಆಕೆ ಯಾರನ್ನೋ ಕೇಳಿದಾಗ 'ಅಜ್ಜೀ ನೀನು ನೋಡಬೇಕೆನ್ನುವ ವ್ಯಕ್ತಿ ಈ ಹಾದಿಯಲ್ಲೇ ಹೋಗ್ತಾರೆ ಈ

ಹೊತ್ತು. ಬೇಕಾದರೆ ನೋಡು' ಎಂದರಂತೆ. ಪಾಪ ! ಮುದುಕಿ ಕಣ್ಣು ಅರಳಿಸಿಕೊಂಡು ಛತ್ರಿ ಹಿಡಿದುಕೊಂಡು, ಕೋಲು ಊರಿಕೊಂಡು, ಜಿನಿಜಿನಿ ಹನಿಯುತ್ತಿದ್ದ ಮಳೆಯಲ್ಲಿ ನಿಂತೇ ಇದ್ದಳಂತೆ ಸಂಜೆಯ ತನಕ. ನೂರಾರು ಕಾರುಗಳು ಬಂದು ಹೋಗುತ್ತಲೇ ಇದ್ದುವು. ಪಾಪ ! ಯಾರು ಕೇಳಬೇಕು ಆ ಮುದುಕಿಯನ್ನು ? ಆದರೆ ಒಂದು ಕಾರು ಟೈರು ಹರಿದು ಅವಳಿದ್ದಲ್ಲಿಗೇ ಬಂದು ನಿಂತಿತಂತೆ. ಮುದುಕಿ ಕೇಳಿದಳು – ಮಗು, ನಿಮ್ಮಲ್ಲಿ ಮಹಾತ್ಮಾ ಗಾಂಧಿ ಯಾರಪ್ಪ ? ' ಕಣ್ಣುಮುಚ್ಚಿ ಬೀಸಿದ್ದರೂ ಅಜ್ಜಿಯ ಕಲ್ಲು ಹಣ್ಣಿನ ತೊಟ್ಟಿಗೇ ತಾಗಿತ್ತು. ಆತ 'ಏಕೆ ತಾಯಿ, ಆತನನ್ನೇಕೆ ಹುಡುಕುತ್ತೀಯಮ್ಮ ? ' 'ಅಪ್ಪ ಆತ ಶ್ರೀ ರಾಮ ಕೃಷ್ಣನ ಅವತಾರವಂತೆ. ನನಗೆ ಈಗ ನೂರನಾಲ್ಕಾಯಿತು. ಬೇಕಾದಷ್ಟು ಪುಣ್ಯಕ್ಷೇತ್ರ ದರ್ಶನ ಮಾಡಿದ್ದೇನೆ. ದಾನ – ಧರ್ಮಗಳನ್ನು ಮಾಡಿದ್ದೇನೆ. ಆದರೆ ನನಗಿನ್ನೂ ಸಾವು ಸಮೀಪಿಸಿದಂತಿಲ್ಲ. ಆತನ ದರ್ಶನ ಮಾಡದಿದ್ದರೆ ನನ್ನ ಉಸಿರೇ ಹೋಗುವುದಿಲ್ಲವೋ ಏನೊ'. ಅಜ್ಜಿಯ ಮಾತಿಗೆ ಗಾಂಧೀಜಿ ಮುಗ್ಧರಾದರು. ಅವರ ಕಣ್ಣಲ್ಲಿ ಆನಂದ ಬಾಷ್ಪಗಳು ಉದುರಿದವು. ಅಜ್ಜಿಗೆ ಅವರೇ ಗಾಂಧಿ ಎಂದು ತಿಳಿಯಿತು. ಕುಸಿದು ಅವರ ಪಾದಧೂಳಿಯನ್ನು ನೆತ್ತಿಗೆ ಹಚ್ಚಿಕೊಂಡಳು.

ಭಾರತದ ಸಮಾಜದ ಕಣ್ಣಿಗೆ ತುಚ್ಛರಾಗಿ, ಅಶ್ಲೀಲರಾಗಿ, ಹೀನರಾಗಿ ಕಾಣುತ್ತಿದ್ದ ಪರಿಶಿಷ್ಟರನ್ನು ಉದ್ಧರಿಸಿದ್ದು ಆತನ ಜೀವನದ ಒಂದು ಪವಾಡ. ಆತನಿಗೆ ಚೆನ್ನಾಗಿ ತಿಳಿದಿತ್ತು ದೇವರ ದೃಷ್ಟಿಯಲ್ಲಿ ಎಲ್ಲರೂ ಸಮಾನರೆಂದು. ಆದರೆ ಆ ದೇವರು ಸೃಷ್ಟಿಸಿದ ಮಾನವ ಜಾತಿಮತಗಳನ್ನು ಸೃಷ್ಟಿಸಿಕೊಂಡು, ಮೇಲುಕೀಳೆಂದು ಹಾರಾಡಿ ತನ್ನ ಗೋರಿಯನ್ನು ತಾನೇ ಕೈಯಾರ ತೋಡಿಕೊಳ್ಳುತ್ತಿದ್ದಾನೆ. ಸ್ವಾತಂತ್ರ್ಯ ಬೇಕೆಂಬ ಭಾರತೀಯನಿಗೆ ಈ ಉಚ್ಚ ನೀಚ ಭಾವದ ಭೂತವನ್ನು ತೋರಿಸಿ ಅದನ್ನು ನಾಶಗೊಳಿಸದ ಹೊರತು ಸ್ವಾತಂತ್ರ್ಯಕ್ಕೆ ಅರ್ಥವಿಲ್ಲವೆಂದು ಸಾರಿದ. ದೀನದಲಿತರ ಉದ್ಧಾರವೇ ಅವನ ಬಾಳಿನ ಧ್ಯೇಯವಾಯಿತು. ಅವರ ಸೇವೆಯಲ್ಲೇ ದಿನಕಳೆದ. 'ದೇವರು ಸ್ವರ್ಗದಲ್ಲಾಗಲೀ ಪಾತಾಳದಲ್ಲಾಗಲೀ ಇಲ್ಲ. ಅವನು ಸರ್ವರ ಹೃದಯದಲ್ಲೂ ಇದ್ದಾನೆ ಎಂದು ನಾನು ತಿಳಿದಿರುವುದರಿಂದ ಮಾನವಸೇವೆಯ ಮೂಲಕ ಅವನನ್ನು ಕಾಣಲು ಯತ್ನಿಸಿದ್ದೇನೆ.' ಎಂದು ನುಡಿದು ಬಾಳುಗೆಟ್ಟವರಿಗೆ ಬದುಕುಗೊಟ್ಟ. ಜೀವವಿಲ್ಲದವರಿಗೆ ಜೀವದಾನ ಮಾಡಿದ. ಬಡವರ ಭಾಗ್ಯ ದೇವತೆ ಎನಿಸಿ ಮಹಾತ್ಮನಾದ.

ಅವನೊಬ್ಬ ಮಾಯಾವಿ !

ಕಳ್ಳನನ್ನು ಒಳ್ಳೆಯವನಾಗಿಸುವ, ಸುಳ್ಳನನ್ನು ಸತ್ಯವಂತನೆನಿಸುವ ಐಂದ್ರಜಾಲಿಕ ಶಕ್ತಿ ಅವನಲ್ಲಿತ್ತು. ದ್ವೇಷ ಅಸೂಯೆಗಳು ಅವನ ಬಳಿ ಸುಳಿಯುತ್ತಿರಲಿಲ್ಲ. ಪಾಪವನ್ನು ಖಂಡಿಸುತ್ತಿದ್ದ. ಪಾಪಿಯನ್ನು ಪ್ರೀತಿಸುತ್ತಿದ್ದ.

'ದುಷ್ಟ ಪದ್ಧತಿಗಳನ್ನೆಲ್ಲಾ ನಾವು ತೊಡೆದುಹಾಕಬೇಕು. ಅವುಗಳೊಡನೆ ಹೋರಾಟ ನಡೆಸಬೇಕು. ಅದೇ ನಮ್ಮ ನೈಜಧ್ಯೇಯ ಆದರೆ ಆ ದುಷ್ಟ ಪದ್ಧತಿಗಳನ್ನು ಪ್ರಚಾರ ಮಾಡುವವರನ್ನು ದ್ವೇಷಿಸಬಾರದು. ಅದು ಆತ್ಮದ್ವೇಷ. ನಾವೆಲ್ಲರೂ ಪರಮಾತ್ಮನ ಮಕ್ಕಳು. ನಮ್ಮೆಲ್ಲರಲ್ಲೂ ಅದೇ ಪರಮಾತ್ಮನು ವ್ಯಾಪ್ತನು. ಧರ್ಮಾತ್ಮನಲ್ಲಿದ್ದಂತೆ ಪಾಪಾತ್ಮನಲ್ಲೂ ಇದ್ದಾನೆ. ಆದ್ದರಿಂದ ಒಂದು ಜೀವಕ್ಕೆ ನೋವುಂಟುಮಾಡುವುದೆಂದರೆ ಅದು ಪರಮಾತ್ಮನನ್ನೇ ಅಪಮಾನಗೈದಂತೆ. ಇಡೀ ಸೃಷ್ಟಿಗೆ ಪೀಡೆಕೊಟ್ಟಂತೆ' ಎಂದು ಅಹಿಂಸಾತತ್ವ ಬೋಧೆ ಮಾಡುತ್ತಾನೆ.

ಅವನ ಕಣ್ಣುಗಳಲ್ಲಿ ಕರುಣೆಯ ಕಡಲುಗಳು ಉರುಳುತ್ತಿದ್ದವು. ಅವನ ನಗೆಯಲ್ಲಿ ಬೆಳದಿಂಗಳು ಸೂಸುತ್ತಲಿತ್ತು. ಅವನ ನುಡಿಯಲ್ಲಿ ಜೇನು ಹನಿಯುತ್ತಿತ್ತು. ಅವನು ಮಕ್ಕಳಿಗೆ ಕೋಲುತಾತ, ಆಧ್ಯಾತ್ಮಿಗಳ ಆತ್ಮಬಂಧು. ರಾಜಕಾರಣಿಗಳ ರಾಜ. ಅವನು ವಿಶ್ವದ ಮಹಾಸಾಹಿತಿಗಳಲ್ಲೊಬ್ಬ. ಅವನು ಕರ್ಮಯೋಗಿ. ಆದರೆ ಅನಾಸಕ್ತಿಪ್ರಚಾರಕ. ಅವನಿಗೆ ಕಾಯಕವೇ ಕೈಲಾಸ, ಚರಕವೇ ಕಲ್ಪವೃಕ್ಷ, ಗೀತೆಯೇ ಕಾಮಧೇನು !

'ಇವನು ಯಾರು ? '

ಇಂತಹ ಪರಸ್ಪರ ವಿರುದ್ಧ ಗುಣಗಳ ಸಮ್ಮಿಶ್ರಣವೇ – ಮಹಾತ್ಮ ಗಾಂಧೀ !

೨

ಕ್ರಿ.ಶ. ೧೮೬೯ನೆಯ ಅಕ್ಟೋಬರ್ ೨ನೆಯ ದಿನ ವಿಶ್ವೇತಿಹಾಸದಲ್ಲಿ ಸುವರ್ಣ ಶರೀರಿಯಾಯ್ತು. ಮಹಾಪುರುಷನ ಜನನಕ್ಕೆ ನೆರವು ನೀಡಿದ ಪೋರ್ ಬಂದರ್ ಪವಿತ್ರ ಯಾತ್ರಾಸ್ಥಳವೆನ್ನಿಸಿತು. ಮಹಾತ್ಮನಿಗೆ ಜನ್ಮವಿತ್ತ ಪುತಳೀಬಾಯಿ ಹಾಗೂ ಕರಮಚಂದರು ಲೋಕಪೂಜ್ಯತೆಯನ್ನು ಪಡೆದು ತಮ್ಮ ಬಾಳನ್ನು ಭವ್ಯಗೊಳಿಸಿಕೊಂಡರು. ಇಂತಹ ಸತ್ಪುತ್ರನನ್ನು ಜಗತ್ ಸೇವೆಗೆ ಕೊಟ್ಟು ಭಾರತಾಂಬೆ ವಿಶ್ವವಂದನೆಗೆ ಪಾತ್ರಳಾದಳು.

ಕಾಥೇವಾಡದ ಪೋರ್‌ಬಂದರ್ ನಗರದಂಚಿನ ಚಿಕ್ಕಕತ್ತಲೆ ಕೋಣೆಯೊಂದರಲ್ಲಿ ತಂದೆಯ ನಾಲ್ಕನೆಯ ಹೆಂಡತಿಯ ನಾಲ್ಕನೆಯ ಮಗನಾಗಿ ಮೋಹನ್‌ದಾಸ್ ಹುಟ್ಟಿದ. ಎಳಮೆಯಲ್ಲಿ ಈತನಿಗೆ ತಾಯಿಯ ಧರ್ಮರಕ್ಷೆ ಇತ್ತು. ಲಕ್ಷ್ಮೀದಾಸ್, ಕರ್ಜನ್ ದಾಸ್ ಎಂಬ ಸೋದರರ ಹಾಗೂ ರಲಿಯೆತ್ ಬೆನ್ ಎಂಬ ಸೋದರಿಯ ಮಮತೆಯ ಬೆಂಬಲವಿತ್ತು. ಆದ್ದರಿಂದ ಆಸೆ ಮೋಸಗಳು ಅವನ ಬಳಿ ಸುಳಿಯಲಿಲ್ಲ. ದ್ರೋಹ ವಂಚನೆಗಳು ಅವನ ಮೈ ಸೋಂಕಲಿಲ್ಲ. ಅವನಿಗೆ ಪುಸ್ತಕಗಳೇ ಪ್ರಾಣವೆನಿಸಿ, ಪಾಠಗಳೇ ನೇಹಿಗರಾದವು. ರಾಜಕೋಟೆಯ ಆಲ್‌ಫ್ರೆಡ್ ಹೈಸ್ಕೂಲಿನಲ್ಲಿ ಬ್ರಿಟಿಷ್ ವಿದ್ಯಾಧಿಕಾರಿ ಜೇಲ್ಸ್ ಎಂಬುವನು ವಿದ್ಯಾರ್ಥಿಗಳನ್ನು ಪರೀಕ್ಷೆಮಾಡಲು ಬಂದಾಗ ಈತ 'ಕೆಟಲ್' ಎಂಬ ಪದವನ್ನು ತಪ್ಪು ಬರೆದಿದ್ದನಂತೆ. ಉಪಾಧ್ಯಾಯರು ಪಕ್ಕದ ಹುಡುಗನ ಹಲಗೆ ನೋಡಿ ಕಾಪಿ ಹೊಡೆವಂತೆ ಸೂಚನೆ ಕೊಟ್ಟರೂ ಇವನು ನಿರಾಕರಿಸಿದನಂತೆ. ಎಲ್ಲ ವಿದ್ಯಾರ್ಥಿಗಳೂ ಸರಿಬರೆದು ಇವನೊಬ್ಬ ತಪ್ಪು ಬರೆದಿದ್ದನಂತೆ. ಆದರೂ ಅವನಿಗೆ ಅಪಮಾನವಲ್ಲ. ತನ್ನ ಗೌರವಕ್ಕೆ ಎಂದೂ ಕುಂದಲ್ಲ, ಏಕೆಂದರೆ ತಾನು ತಪ್ಪು ಬರೆದರೂ ಮತ್ತೊಬ್ಬನ ಎಂಜಲು ತಿನ್ನುವ ತಪ್ಪಿತಸ್ಥನಾಗಲಿಲ್ಲವೆಂಬ ತೃಪ್ತಿ ಅವನಲ್ಲಿತ್ತು.

ಬಾಲಕನ ಎಳೆಯ ಮನಸ್ಸಿನ ಮೇಲೆ ಭಾರತ ಸ್ವಾತಂತ್ರ್ಯದ ಬೃಹತ್ ಚಿತ್ರದ ಅಚ್ಚು ಉಳಿದಿತ್ತು. ಮಾಂಸ ತಿಂದರೆ ಬ್ರಿಟಿಷರನ್ನು ಓಡಿಸುವ ಶಕ್ತಿ ಬರುತ್ತದೆ. ಮೈಯಲ್ಲಿ ಗಾಯಗಳೇ ಏಳುವುದಿಲ್ಲ. ಆರೋಗ್ಯದಿಂದ ಧೃಢಕಾಯರಾಗಬಹುದು ಎಂಬ ದುರ್ಬೋಧನೆ ಮೋಹನ ದಾಸನ ಬಾಲ್ಯ ಸ್ನೇಹಿತ ಷೇಕ್ ಮೆಹ್ತಾಬನಿಂದಾಯ್ತು. ಗಾಂಧಿ ಅದರ ರುಚಿಯನ್ನು ಒಮ್ಮೆ ನೋಡಿದ. ಆದರೆ ರಾತ್ರಿ ಕನಸಿನಲ್ಲಿ ಹೊಟ್ಟೆಯಿಂದ ಜೀವಂತ ಮೇಕೆಯೊಂದು ಅರಚಿದಂತಾಯ್ತು. ಗಾಂಧಿ ಧೂಮಪಾನ ಕಲಿತ, ಹಿರಿಯರ ಜೇಬಿನಿಂದ ದುಡ್ಡು ಕದಿಯುವುದನ್ನೂ ಕಲಿತ. ಕಡೆಗೆ ಷೇಕನ ಸಹವಾಸದಲ್ಲಿ ಒಮ್ಮೆ ವೇಶ್ಯೆಯ ಮನೆಗೂ ಹೋದ. ಆದರೆ – 'ಈ ಪಾಪ ಕೂಪವನ್ನು ನೋಡಿ ನಾನು ಕುರುಡಾದೆ, ಮೂಕನಾದೆ, ಹೆಂಗಸಿನ ಬಳಿ ಕುಳಿತಿದ್ದರೂ ಮಾತನಾಡಲಾರದಾದೆ. ಆಕೆಗೆ ಬೇಸರವಾಗಿ ಬೈದು ಹೊರಗೆ ನೂಕಿದಳು. ನನ್ನ ಪ್ರಯತ್ನವಿಲ್ಲದೆಯೇ ಭಗವಂತ ನನ್ನನ್ನು ಕಾಪಾಡಿದ. ಪರಮಾತ್ಮನ ಇಚ್ಛೆ ಬೇರಾದುದರಿಂದ ನನ್ನನ್ನು ಪಾರುಮಾಡಿದ.' ಹೀಗೆ, ನಡೆವ ವ್ಯಕ್ತಿ ಅನೇಕ ಎಡೆಗಳಲ್ಲಿ ಎಡವಿದ. ಎಡವಿ ಎಚ್ಚೆತ್ತು ಸಾಗಿದ.

ಪೋರ್‌ಬಂದರಿನ ಶ್ರೇಷ್ಠ ವರ್ತಕ ಗೋಕುಲ್‌ದಾಸ್ ಮಕರಂಜಿಯವರ ಪ್ರೇಮದ ಪುತ್ರಿ ಕಸ್ತೂರಿಬಾಳೊಡನೆ ಈತನ ವಿವಾಹವಾಯ್ತು. ಆಗ ಕೇವಲ ಹದಿಮೂರು ವರ್ಷಗಳು ಅವನ ಮೇಲೆ ಉರುಳಿ ಹೋಗಿದ್ದವು ಅಷ್ಟೆ. ಅವನ ಪತ್ನಿಗೂ ಹೆಚ್ಚು ಕಡಿಮೆ ಅಷ್ಟೇ ವಯಸ್ಸಾಗಿತ್ತು. ಎಳೆಯ ದಾಂಪತ್ಯ ಜೀವನ ಕೇವಲ ಕಾಮಕೇಳಿಯಲ್ಲಿ ಕಳೆಯಿತು. ಅಷ್ಟರಲ್ಲಿ ಎಂದರೆ ೧೮೮೫ರಲ್ಲಿ ಕರಮಚಂದ್ ಗತಿಸಿದರು. ತಂದೆಯ ಮರಣ ತಾಯಿಮಕ್ಕಳನ್ನು ಅನಾಥರನ್ನಾಗಿಸಿತು. ಆದರೂ ದೈವ ಬೇರೊಂದು ರೂಪದಲ್ಲಿ ಬಂದು ಇವರನ್ನು ಸಂರಕ್ಷಿಸಿ ಸಲಹಿತು. ಇಲ್ಲದಿದ್ದರೆ ಮಹಾತ್ಮನನ್ನು ಲೋಕಕ್ಕೆ ಕೊಟ್ಟು ಅದಾದರೂ ಹೇಗೆ ಹಿರಿಮೆಯನ್ನು ಹೆಚ್ಚಿಸಿಕೊಳ್ಳುತ್ತಿತ್ತು ! ಅದಕ್ಕಾಗಿ ಬೇಚಾರ್ಜಿಸ್ವಾಮಿ ಎಂಬ ಜೈನಗುರುಗಳ ನೆರವನ್ನು ಅವರಿಗೆ ಅಣಿಮಾಡಿಕೊಟ್ಟು, ಮೋಹನದಾಸನ ವಿದ್ಯಾಭ್ಯಾಸ ಭಾವನಗರದ ಸಮಲ್‌ದಾಸ್ ಕಾಲೇಜಿನಲ್ಲಿ ಸುಸೂತ್ರವಾಗಿ ಸಾಗುವಂತೆ ಮಾಡಿತು. ಕಡೆಗೆ ಉಚ್ಚ ಶಿಕ್ಷಣಕ್ಕಾಗಿ ಇಂಗ್ಲೆಂಡಿಗೂ ಅವರನ್ನು ಕಳುಹಿಸಿಕೊಟ್ಟಿತು. ಆದರೆ ತಾಯಿ ಪುತಳೀಬಾಯಿ ಮಗನ ನಡತೆ ಕೆಡಬಹುದೆಂದು ಅನುಮಾನಿಸಿದಳು. ಗಾಂಧಿ ಮಾತೆಯ ಸಾನಿಧ್ಯದಲ್ಲಿ ಪ್ರಮಾಣವಚನ ಸ್ವೀಕರಿಸಿದ. 'ಮದ್ಯಪಾನ ಮಾಡುವುದಿಲ್ಲ, ಹೆಂಗಸರ ಸಹವಾಸ ಮಾಡುವುದಿಲ್ಲ, ಮಾಂಸಾಹಾರ ಸ್ವೀಕರಿಸುವುದಿಲ್ಲ.' ಪುತಳೀಬಾಯಿ ತನ್ನ ಸಮ್ಮತಿ ಸೂಚಿಸಿದಳು. ಮೋಹನದಾಸನ ಧ್ಯೇಯದ್ವಾರ ತಾನಾಗಿ ತೆರೆಯಿತು. ೧೮೮೮ ಸಪ್ಟೆಂಬರ್ ೪ನೇ ತಾರೀಖು ಆತನಿದ್ದ ಹಡಗು ಸಾಗರದಲ್ಲಿ ಇಂಗ್ಲೆಂಡಿನತ್ತ ಸಾಗಿತು.

ಇಂಗ್ಲೆಂಡಿನಲ್ಲಿ ಅವನ ಜೀವ ನಿರಾಡಂಬರವಾಗಿತ್ತು. ಆದರೂ ಸನ್ನಿವೇಶ ಪ್ರೇರಣೆಯಿಂದ ಆತ ಬೆಲೆಬಾಳುವ ಒಂದು ಹ್ಯಾಟ್ ಕೊಂಡಿದ್ದ. ಸಂಜೆಯ ಉಡುಪಿಗೆ ಹತ್ತು ಪೌಡು ಖರ್ಚುಮಾಡಿದ್ದ. ಟೈ ಕಟ್ಟುವುದು ಕಲಿತ. ಆದರೆ ತನ್ನ ತಾಯಿಗೆ ಕೊಟ್ಟ ಮಾತನ್ನು ಮಾತ್ರ ತಪ್ಪದೇ ಉಳಿಸಿಕೊಂಡ. ಕಾರ್ಪಣ್ಯದ ಸಸ್ಯಾಹಾರ ಆತನ ಹೊಟ್ಟೆಗೆ ಸಾಲುತ್ತಿರಲಿಲ್ಲ. ಆದರೂ ಮತ್ತಾವುದನ್ನೂ ತಿನ್ನಬಯಸಲಿಲ್ಲ. ಆತ್ಮಸಂಯಮಕ್ಕೆ ಅವನ ಮನ ಅನುವಾಯಿತು. ಶಾಲೆಯಲ್ಲಿ ಕಲಿತ ವಿದ್ಯೆ ಅವನನ್ನು ಬ್ಯಾರಿಸ್ಟರ್ ಎಂ. ಕೆ. ಗಾಂಧಿಯನ್ನಾಗಿ ಮಾಡಿತು. ಆದರೂ ಆಡಂಬರ ಜೀವನಕ್ಕೂ, ಆಧ್ಯಾತ್ಮ ಜೀವನಕ್ಕೂ ಇರುವ ವ್ಯತ್ಯಾಸವನ್ನು ಕಂಡರಿತ ಆತನ ಆತ್ಮ ಅವನನ್ನು ಮಹಾತ್ಮ ಗಾಂಧಿಯನ್ನಾಗಿ ಒಳಗೊಳಗೇ ರೂಪಿಸುತ್ತಿತ್ತು.

೧೮೯೧ರಲ್ಲಿ ಮೋಹನ್‌ದಾಸ್ ಭಾರತಕ್ಕೆ ಹಿಂತಿರುಗಿದಾಗ ಬೊಂಬಾಯಿನಲ್ಲಿ ಅವನಿಗಾಗಿ ಆನಂದದ ಸ್ವಾಗತ ಸಿದ್ಧವಾಗಿತ್ತು. ಆದರೆ ಅದರ ಜೊತೆಯಲ್ಲಿಯೇ ತಾಯಿ ಪುತಳೀಬಾಯಿ ಸ್ವರ್ಗಸ್ಥಳಾದಳೆಂಬ ಸುದ್ದಿಯೂ ಇಣುಕಿ ನೋಡುತ್ತಿತ್ತು. ಗಾಂಧಿಗೆ ವಾತ್ಸಲ್ಯಮಯಿಯಾದ ತಾಯಿಯನ್ನು ಕಳೆದುಕೊಂಡುದು ಅಪಾರ ನಷ್ಟವೇ ಆಗಿತ್ತು. ಇಂಗ್ಲೆಂಡಿನಿಂದ ಹೊರಟಂದಿನಿಂದ ತನ್ನ ತಾಯಿಯ ಸ್ಮರಣೆಯಲ್ಲಿ ನಿರತನಾಗಿ, ಅವಳಿಗೆ ಕೊಟ್ಟ ವಚನಗಳನ್ನೇ ಮೆಲಕುಹಾಕುತ್ತಾ ಹರ್ಷದ ಸುದ್ದಿ ತಿಳಿಸಿ ಆರ್ಶೀವಾದಿತನಾಗಬೇಕೆಂದು ಬಂದಿದ್ದ. ತಾಯಿಯ ಮಮತೆಯ ಮಡಿಲಲ್ಲಿ ಮತ್ತೆ ಶಿಶುವಾಗಿ ಮಲಗಿ ಮುದ್ದು ಪಡೆಯಬೇಕೆಂದಿದ್ದ. ಆದರೆ ಎಲ್ಲವೂ ಭಗ್ನವಾಗಿ ನಿರಾಸೆಯಾವರಿಸಿತು.

ವಿಲಾಯಿತಿಯಲ್ಲಿ ಕಲಿತು ಬಂದಿದ್ದರೂ ಜೀವನ ಮಾರ್ಗವನ್ನು ಕಲ್ಪಿಸಿಕೊಳ್ಳುವುದು ಕಷ್ಟವೇ ಆಯಿತು. ಆತನಿಗೆ ಲಜ್ಜಾ ಸ್ವಭಾವದ ಮೋಹನದಾಸನಿಗೆ. ಸಣ್ಣಪುಟ್ಟ ಮೊಕದ್ದಮೆಗಳಲ್ಲೂ ಧೈರ್ಯದಿಂದ ವಾದಿಸುವ ಛಾತಿ ಇರಲಿಲ್ಲ. ಅದರಿಂದಾಗಿ ಆತ ಒಬ್ಬ ಸಾಧಾರಣ ಲಾಯರ್ ಎನಿಸಿಕೊಂಡ. ಅಣ್ಣ ಲಕ್ಷ್ಮೀದಾಸನಿಗೆ ತಮ್ಮನ ಭವಿಷ್ಯದ ಬಗ್ಗೆ ಅಪಾರ ಚಿಂತೆ. ಹೇಗಾದರೂ ಮಾಡಿ ತಮ್ಮನನ್ನು ಮುಂದೆ ತರಬಯಸಿ ಒಮ್ಮೆ ಅವನನ್ನು ಪೋರ್‌ಬಂದರ್ ಸಂಸ್ಥಾನದ ಬಿಟಿಷ್ ಪ್ರತಿನಿಧಿಯ ಬಳಿಗೆ ತನ್ನ ಪರವಾಗಿ ವಾದಮಾಡಿ ಪ್ರತಿನಿಧಿಯನ್ನು ಸಮಾಧಾನಪಡಿಸಲು ಕಳಿಸಿದ. ಲಕ್ಷ್ಮೀದಾಸನಿಗೂ ಬ್ರಿಟಿಷ್ ಅಧಿಕಾರಿಗೂ ಯಾವುದೋ ಕಾರಣಕ್ಕೆ ಮನಸ್ಸು ಕೆಟ್ಟಿತ್ತು. ಗಾಂಧಿ ಪ್ರತಿನಿಧಿಯನ್ನು ಕಛೇರಿಯಲ್ಲಿ ಭೇಟಿಮಾಡಿದ. ಮಾತುಕತೆಗಳು ಸ್ವಲ್ಪ ಬೇಸರದಿಂದಲೇ, ಬಿರುಸಾಗಿಯೇ ನಡೆದವು. 'ಲಕ್ಷ್ಮೀದಾಸನಿಗೆ ಅನ್ಯಾಯವಾಗಿದ್ದರೆ ಬರವಣಿಗೆ ಮೂಲಕ ವಿನಂತಿ ಮಾಡಿಕೊಳ್ಳಲಿ. ವಕೀಲರ ನೆರವು ಅನಗತ್ಯ.' ಎಂದು ಹೇಳಿ ಬಾಗಿಲು ಕಾಯುತ್ತಿದ್ದ ಗುಲಾಮನಿಂದ ಆಚೆಗೆ ತಳ್ಳಿಸಿಯೇ ಬಿಟ್ಟ ಕೆಂಪು ಮೂತಿಯ ಸರದಾರ.

ಇದು ಗಾಂಧೀಜಿಯ ಜೀವನದಲ್ಲಿ ಮೊದಲನೆಯ ಮೆಟ್ಟಿಲು. ತನ್ನ ಆತ್ಮಕಥೆಯಲ್ಲಿ 'ಪ್ರತಿನಿಧಿಯೊಡನೆ ಆದ ವ್ಯಾಜ್ಯದ ಪೆಟ್ಟು ನನ್ನ ಜೀವನದ ಹಾದಿಯನ್ನೇ ಬದಲಾಯಿಸಿತು.' ಎಂದು ಬರೆದುಕೊಂಡಿದ್ದಾರೆ. ಅಂದೇ ಅವನ ಅರಿವಿಗೆ ಬಂತು ಭಾರತೀಯನ ದುರ್ಗತಿ ಹಾಗೂ ಭಾರತೀಯನ ದುಃಸ್ಥಿತಿ. ತನ್ನ ಸಂಪತ್ತನ್ನು ಪರರಿಗಿತ್ತು ಭಾರತಪುತ್ರ ತಾನು ದಾಸನಾಗಿದ್ದಾನೆ, ದೀನನಾಗಿದ್ದಾನೆ. ಇದರ ಬಿಡುಗಡೆ ಎಂತು ? ಹೇಗೆ ? ಪ್ರಯತ್ನಿಸಿದರೆ ಸಾಧ್ಯವೆ ? ಅನೇಕ ಪ್ರಶ್ನೆಗಳ ಬೃಹತ್ ರೂಪ ಅವನ ಕಣ್ಮುಂದೆ ಕುಣಿಯಿತು. ಉತ್ತರಕ್ಕಾಗಿ ಒಳಗೊಳಗೇ ಆತ್ಮನಲ್ಲಿ ಅನುವಾಗುತ್ತಿತ್ತು ಅವ್ಯಕ್ತ ಕೂಗು.

೩

ಉಳಿಯ ಹತ್ತು ಪೆಟ್ಟು ತಿಂದ ಒಂದು ಕಲ್ಲು ಕಲಾಪ್ರತಿಮೆಯಾಗುತ್ತದೆ. ಪುಣ್ಯಾಭಿಷೇಕಗಳಿಂದ ಪೂಜ್ಯತೆಯನ್ನು ಪಡೆದು ಭಕ್ತಸ್ತೋಮದ ನಿತ್ಯ ಪ್ರಾರ್ಥನೆಯ ಆರಾಧ್ಯಮೂರ್ತಿಯಾಗುತ್ತದೆ. ಅಂತೆಯೇ ಭಾರತದ ಶಿಲ್ಪಿ ಬಾಪು ತನ್ನನ್ನು ತಾನೇ ರೂಪಿಸಿಕೊಂಡ. ಮಣ್ಣಿನ ಬಾಳಿನಲ್ಲಿ ಹೊನ್ನಿನ ಕನಸು ಕಂಡ. ಮೊದಲು ತನ್ನನ್ನು ತಾನರಿತು, ಅರಿವಿಲ್ಲದ ಜನತೆಗೆ ಅರಿವು ಮಾಡಿಕೊಟ್ಟ. ತತ್ಪರಿಣಾಮವಾಗಿ ಅನೇಕ ರೀತಿಯ ದೈಹಿಕಶಿಕ್ಷೆ ಅವನಿಗಾಗಿ ಮೀಸಲಾಯಿತು. ತನ್ನ ಬಾಳನ್ನು ಪಣವಾಗಿಟ್ಟು ಧ್ಯೇಯಕ್ಕಾಗಿ ದೇಹವನ್ನೇ ಅರ್ಪಿಸಿ ಮಹಾತ್ಮನಾದ, ಲೋಕಪೂಜ್ಯನಾದ.

ದಕ್ಷಿಣ ಆಫ್ರಿಕೆಯಲ್ಲಿ ಆತನ ಬಾಳ ಕುಸುಮ ದಳವೇರಿತು. ಮಾನವೀಯತೆಯ ಸೌರಭವನ್ನು ಸೂಸುತ್ತಾ ಜೀವಿಗಳಿಗೆ ಸಂಜೀವಿನಿಯಾಯಿತು. ದಾದಾ ಅಬ್ದುಲ್ಲಾ ಶೇಠರ ಮೊಕದ್ದಮೆಯ ಕಾರಣವಾಗಿ ಗಾಂಧಿ ದಕ್ಷಿಣ ಆಫ್ರಿಕೆಗೆ ಪ್ರಯಾಣ ಬೆಳಸಬೇಕಾಗಿ ಬಂತು. ೧೮೯೩ ಮೇ ತಿಂಗಳಲ್ಲಿ ಡರ್ಬಾನಿನ ನೇಟಾಲಿನಲ್ಲಿಳಿದನು. ದೈತ್ಯತೆಯ ಪ್ರತಿಭಟನೆ ಸಿದ್ಧವಾಯ್ತು. ಕರಿಯ ಜನರ ತಾಯ್ನಾಡು ಬಿಳಿಯ ಜನರ ವಿಹಾರಕ್ಷೇತ್ರವಾಗಿತ್ತು. ಸಮಸ್ತ ಸೌಲಭ್ಯಗಳೂ ಬಿಳಿಯರಿಗಾಗಿಯೇ ಮೀಸಲಾಗಿದ್ದವು. ಅವರ ಸ್ವೇಚ್ಛಾಚಾರ ಪ್ರವೃತ್ತಿಯಿಂದಾಗಿ ಕಪ್ಪು ಜನ ಕಂಗಾಲಾಗಿದ್ದರು. ಬಿಳಿಯರ ಪಾದಸೇವೆಯಲ್ಲೇ ಸದಾ ನಿರತರಾದ ಗುಲಾಮರಾಗಿದ್ದರು. ಹಕ್ಕು ಬಾಧ್ಯತೆಗಳ ಪಾಲ್ದಾರಿಕೆ ಕರಿಯನಿಗಿರಲಿಲ್ಲ. ಉತ್ತಮ ಗೃಹಸೌಧಗಳು, ಉತ್ತಮ ಆಹಾರ, ಉತ್ತಮ ತರಗತಿಯ ಪ್ರಯಾಣ, ಉತ್ತಮಮಟ್ಟದ ಜೀವನ ಬಿಳಿಯನಿಗಾಗಿಯೇ ಕಾದಿರಿಸಲ್ಪಟ್ಟಿದ್ದುವು. ಇಂತಹ ದೌರ್ಭಾಗ್ಯದ ದುಃಸ್ಥಿತಿಯ ಸೆಲೆಯಲ್ಲಿ ಗಾಂಧಿಯ ಬಾಳು ತೊಳಲಾಡಿತು. ನ್ಯಾಯಾಲಯಕ್ಕೆ ಹೋದ ಮೊದಲ ದಿನವೇ ನ್ಯಾಯಾಧಿಪತಿ ಹೇಳಿದ : 'ಗಾಂಧಿ, ತಲೆಯ ಮೇಲಿನ ರುಮಾಲನ್ನು ತೆಗೆದು ನ್ಯಾಯಾಲಯಕ್ಕೆ ಪ್ರವೇಶಿಸಬೇಕು' ಎಂದು. ಗಾಂಧೀಜಿ ಅದನ್ನು ಪ್ರತಿಭಟಿಸಿದರು. ಕಡೆಗೆ ಬೇಸತ್ತು ನ್ಯಾಯಾಲಯವನ್ನು ಬಿಟ್ಟು ಹೊರಬಂದರು. ಪ್ರತಿಭಟನೆಯ ಮೊದಲ ಹಂತದಲ್ಲೇ ಮನಸ್ಸು ಹದವಾಗುತ್ತಾ ಬಂತು.

ಅಂದು ಗಾಂಧೀಜಿ ಮೊಕದ್ದಮೆಯ ಸಲುವಾಗಿ ಎಲ್ಲಾ ಪ್ರಿಟೋಟ್ರಾನ್ಸ್ ವಾಲಿನ ಮುಖ್ಯ ನಗರವಾದ ಪ್ರಿಟೋರಿಯಾಕ್ಕೆ ಹೋಗಬೇಕಾಗಿತ್ತು. ಡರ್ಬಾನಿನ ನಿಲ್ದಾಣದಲ್ಲಿ ಮೊದಲನೆಯ ತರಗತಿ ಟಿಕೆಟ್ ಪಡೆದು ಡಬ್ಬಿ ಹತ್ತಿದರು. ಆದರೆ ಮಾರ್ಗಮಧ್ಯ

ದಲ್ಲಿ ನೇಟಾಲಿನ ಮುಖ್ಯ ಪಟ್ಟಣವಾದ ಮೆರಿಟ್ಸ್‌ಬರ್ಗ್ ಸ್ಟೇಷನ್ನಿನಲ್ಲಿ ಒಬ್ಬ ಬಿಳಿಯ ಗಾಂಧಿ ಇದ್ದ ಡಬ್ಬಿಯನ್ನು ಹತ್ತಿದ. ಒಳಗೆ ಕುಳಿತಿದ್ದ, ಕಿವಿ ಅಗಲದ, ಉದ್ದ ಮೂಗಿನ, ಕಂದುಬಣ್ಣದ ವ್ಯಕ್ತಿಯನ್ನು ನೋಡಿ ಮುಖ ಕಿವುಚಿಕೊಂಡ. ಆದರೆ ಒಂದೂ ಮಾತಾಡಲಿಲ್ಲ. ತತ್‌ಕ್ಷಣ ಡಬ್ಬಿಯಿಂದ ಕೆಳಗಿಳಿದು ಇಬ್ಬರು ರೈಲ್ವೆ ಅಧಿಕಾರಿಗಳನ್ನು ಕರೆತಂದ. ಆ ಅಧಿಕಾರಿಗಳಲ್ಲೊಬ್ಬ –

"ರ್‍ರೀ. . .ಗಾಡಿ ಬಿಟ್ಟು ಕೆಳಕ್ಕೆ ಇಳೀರಿ."

'ನಾನು ಟಿಕೆಟ್ ತೆಗೆದುಕೊಂಡಿದ್ದೇನೆ.'

'ಇರಬಹುದು. ನೀವು ಮೂರನೆಯ ಡಬ್ಬಿಗೆ ಹೋಗಿ. ಇಲ್ಲಿ ಕೂರಲು ನಿಮಗೆ ಅವಕಾಶವಿಲ್ಲ.'

'ಏಕೆ ? ನಾನು ತೆಗೆದುಕೊಂಡಿರುವುದು ಮೊದಲ ತರಗತಿಯ ಟಿಕೆಟ್.'

'ಚಿಂತೆ ಇಲ್ಲ. ಆದರೂ ನೀವು ಇಳಿಯಬೇಕು.'

'ಸಾಧ್ಯವಿಲ್ಲ. ಹಣಕೊಟ್ಟು ಕೊಂಡ ಟಿಕೆಟ್ಟಿಗೆ ಬೆಲೆ ಇಲ್ಲವೆ ?'

'ಇಲ್ಲ. ನೀವು ಕೊಂಡಿರುವ ಟಿಕೆಟ್ಟಿಗೆ ಬೆಲೆ ಇಲ್ಲ !'

'ಹಾಗಾದರೆ ಟಿಕೆಟ್ ಮಾರಿದ ಇಲಾಖೆಗೂ ಬೆಲೆ ಇಲ್ಲ. ಅದಕ್ಕೆ ಆಶ್ರಯ ಕೊಟ್ಟಿರುವ ಸರ್ಕಾರಕ್ಕೂ ಬೆಲೆಯಿಲ್ಲ ಎಂದಂತಾಯ್ತು.'

'ಅಧಿಕಾರ, ಸರ್ಕಾರಗಳನ್ನು ಅಳೆಯುವ ಕಾರ್ಯ ಅಜ್ಞನಾದ ನಿನಗೆ ಸಂಬಂಧಿಸಿಲ್ಲ ತಿಳಿಯಿತೆ ? ನಿನ್ನ ಕೈಯಲ್ಲಿರುವ ಟಿಕೆಟಿಗೆ ಬೆಲೆ ಇಲ್ಲ. ಅದನ್ನು ಪಡೆದಿರುವ ನಿನಗೂ ಹೆಚ್ಚು ಬೆಲೆಯಿಲ್ಲ. ಮರ್ಯಾದೆಯಿಂದ ಮೊದಲು ಇಳಿ. ಹೆಚ್ಚು ಮಾತು ಬೇಡ.'

'ಇಳಿಯುವುದಿಲ್ಲ. ಅದರಿಂದ ಏನೇ ಆಗಲಿ ಸ್ಥಳ ಬಿಟ್ಟು ನಾನು ಕದಲುವುದಿಲ್ಲ.'

'ಮೂರ್ಖನಾದ ನಿನ್ನೆದುರಿನಲ್ಲಿ ಮಾತಿಗೆ ಬೆಲೆ ಇಲ್ಲ.'

'ಕಾನೂನುಬದ್ಧ ಅಧಿಕಾರಿಗಳೇ ತೂಕ ತಪ್ಪಿ ನಡೆಯುವಲ್ಲಿ, ತಾಳ ತಪ್ಪಿ ನಡೆಯುವಲ್ಲಿ, ನಾವೂ ನಮ್ಮ ಸ್ವಾಭಿಮಾನದ ಸಂರಕ್ಷಣೆಗಾಗಿ ಪ್ರತಿಭಟಿಸಲೇ ಬೇಕಾಗುತ್ತದೆ.'

'ನಿನ್ನಂತಹ ಕುರಿಯ ಕಣಿ ಕೇಳಲಲ್ಲ ನಾವು ಬಂದಿರುವುದು. . .ಪೊಲೀಸ್, ಎಳೆದುಹಾಕಿ ಆ ಮನುಷ್ಯನನ್ನು. ಅವನ ಸಾಮಾನುಗಳೆಲ್ಲ ಕಸ್ಟಡಿಯಲ್ಲಿರಲಿ. ಈ ರಾತ್ರಿ ಈ ಮೊಂಡ ಆತ್ಮಾಭಿಮಾನದ ರುಚಿ ನೋಡಲಿ ಪಾಪ !' ಪೊಲೀಸ್ ಆಜ್ಞೆಯನ್ನು ನೆರವೇರಿಸಿದ. ಗಾಂಧಿ ಒಬ್ಬರೇ ಪ್ಲಾಟ್‌ಫಾರಂ ಮೇಲೆ ನಿಂತರು. ರೈಲು ಜಯಭೇರಿ ಬಾರಿಸಿಕೊಂಡು ಹೊರಟೇ ಹೋಯಿತು. ಮೈಮೂಳೆಯನ್ನು ಹೊಕ್ಕು ಕೊರೆದು ಕಾಡುವ ಚಳಿಯಲ್ಲಿ ಗಾಂಧೀಜಿ ತೊಟ್ಟಿದ್ದ ಬಟ್ಟೆಯಲ್ಲೇ ಜಾಗರಣೆ ಮಾಡಬೇಕಾಯಿತು. ಆ ಕಾಳರಾತ್ರಿಯ ಕಠೋರ ಅನುಭವದಿಂದ ಮನಸ್ಸು ಬಹಳವಾಗಿ ನೊಂದುಕೊಂಡಿತು. ತನಗಾದ ದೈಹಿಕ ತೊಂದರೆಗಾಗಿಯಲ್ಲ – ಮಾನವನ ದರ್ಪ, ದೌರ್ಜನ್ಯಗಳ ಅಟ್ಟಹಾಸಕ್ಕಾಗಿ, ದೀನರ ದುಃಸ್ಥಿತಿಗಾಗಿ, ಅಂತೆಯೇ ಅವರ ಮನಸ್ಸು ಮತ್ತೂ ವೃದ್ಧಿಯಾಯಿತು. ಸಹನಾಶಕ್ತಿಯ ಸೌರವ್ಯೂಹ ಒಳಗೊಳಗೇ ರೂಪಿತವಾಗುತ್ತಿತ್ತು. ಅಂದಿನ ಅವರ ಪ್ರತಿಭಟನೆಗೆ ಸಾಕಷ್ಟು ಬೆಂಬಲವಿಲ್ಲದ್ದರಿಂದ ಹೇಗೋ ಪ್ರಿಟೋರಿಯಾವನ್ನು ಸೇರಿದರು.

ಮತ್ತೊಂದು ದಿನ–

ಚಾರಲ್ಸ್‌ಟನ್ನಿನಿಂದ ಜೋಹಾನ್ಸ್‌ಬರ್ಗ್‌ಗೆ ಗಾಂಧೀಜಿ ಯಾವುದೋ ಒಂದು ಅವಸರದ ಕಾರ್ಯ ನಿಮಿತ್ತ ಬಹಳ ಬೇಗ ಹೋಗಬೇಕಾಗಿತ್ತು. ಒಂದು ಕುದುರೆ ಗಾಡಿ ಹತ್ತಿದರು. ಆದರೆ ಪ್ರಯಾಣದ ನಾಯಕ ಗಾಂಧಿಯನ್ನು ಚಾಲಕನ ಪಕ್ಕದಲ್ಲಿ ಕೋಚಿನ ಹೊರಗಡೆ ಕೂರಿಸಿ ತಾನು ಒಳಗಡೆಯಲ್ಲೇ ಕುಳಿತ. ಕೋಚಿನ ಒಳಗಡೆ ಗಾಂಧಿ ಕೂರಲು ಎಡೆಯಿತ್ತು. ಆದರೆ ಪ್ರಯಾಣದ ನಾಯಕನಿಗೆ ಇಷ್ಟವಿರಲಿಲ್ಲವೆಂದು ಕಾಣುತ್ತದೆ. ಆದ್ದರಿಂದ ಗಾಂಧಿಜಿ ಚಾಲಕನ ಪಕ್ಕದಲ್ಲೇ ಕುಳಿತುಕೊಳ್ಳಬೇಕಾಯಿತು. ಅವಸರದ ಕಾರ್ಯಕ್ಕೆ ಬಹುಬೇಗ ಹೋಗಬೇಕಾಗಿದ್ದರಿಂದ ಗಾಂಧೀಜಿ ನಾಯಕನನ್ನು ವಿಚಾರಿಸಲು ಹೋಗಲಿಲ್ಲ. ಸ್ವಲ್ಪ ದೂರ ಹೋದ ಮೇಲೆ ಚಾಲಕನಿಗೆ ಸಿಗರೇಟ್ ಸೇದುವ ಚಟ ಬಂತು. ಆತ ತನ್ನ ಕಾಲ ಬಳಿ ಒಂದು ಗೋಣಿ ತಾಟು ಹಾಸಿ ಗಾಂಧಿಯನ್ನು ಅಲ್ಲಿ ಕುಳಿತುಕೊಳ್ಳುವಂತೆ ಹೇಳಿದ. ಗಾಂಧಿಗೆ ಮೈ ಉರಿದುಹೋಯ್ತು. 'ಸಾಧ್ಯವಿಲ್ಲ, ನಾನು ಇಲ್ಲಿಯೇ ಕುಳಿತುಕೊಳ್ಳುತ್ತೇನೆ' – ಜೋರಾಗಿ ಕೂಗಿ ಹೇಳಿದರು ಗಾಂಧೀಜಿ.

'ಹೇಳಿದಂತೆ ಕಾಲು ಕೆಳಗೆ ಕೂರುವೆಯೋ ಇಲ್ಲ ಒದೆಯಲೋ ?'

'ಅಷ್ಟು ಸುಲಭವಲ್ಲ ದೊರೆ. ಆಡಿದಷ್ಟು ಸುಲಭವಲ್ಲ ಕೈಲಿ ಮಾಡುವುದು, ಎಚ್ಚರ !'

'ಅದೂ ಒಂದು ಕೈ ನೋಡಿ ಬಿಡುತ್ತೇನೆ. ಗಾಡಿ ಬಿಟ್ಟು ಇಳಿ ಮೊದಲು. ನಿನಗೆ ನಮ್ಮಂತಹ ಗಣ್ಯವ್ಯಕ್ತಿಗಳ ಗಾಡಿಯಲ್ಲಿ ಕೂರಲು ಅವಕಾಶ ಕೊಟ್ಟಿದ್ದೇ ತಪ್ಪು. ಹೂಂ. . .ಇಳಿ. . .ಇಳಿ. ಇಳಿಯೋದಿಲ್ವೆ. ಅಯ್ಯೋ ಪಶುವೇ, ನಿನಗೆ ಒದೆತ ಬೇಕಾಗಿದೆ ತಾಳು' ಎಂದು ಬಲವಾಗಿ ಬೂಟುಕಾಲಿನಿಂದ ಒದೆದ. ಕೆಳಗೆ ಬೀಳಲಿದ್ದ ಗಾಂಧಿ, ಹೇಗೋ ಗಾಡಿಯ ಹಿತ್ತಾಳೆ ಕಂಬಿಯನ್ನು ಬಲವಾಗಿ ಹಿಡಿದುಕೊಂಡರು. ಅದೂ ಮೇಲಿಂದ ಮೇಲೆ ಏಟುಗಳು ಬೀಳುತ್ತಲೇ ಇದ್ದುವು. ಕೈ ಕಿತ್ತುಹೋಗುವಂತಾದರೂ ಹಿಡಿದ ಪಟ್ಟು ಬಿಡಲಿಲ್ಲ ಗಾಂಧಿ. ಆಗ ಗಾಡಿಯಲ್ಲಿದ್ದ ಯಾರೋ ಹೇಳಿದರು 'ಹೋಗಲಿ ಬಿಡಪ್ಪ ಬಡಪ್ರಾಣೀನ ! ಅದೇಕೆ ದನ ಚಚ್ಚಿದ ಹಾಗೆ ಚಚ್ಚುತ್ತೀಯಾ ? ಅವನು ಕೇಳಿದ್ದರಲ್ಲಿ ತಪ್ಪೇನೂ ಇಲ್ಲ. ಬಾಪ್ಪಾ ಒಳಕ್ಕೆ ಬಾ. ಚಿಂತೆಯಿಲ್ಲ ಕುಳಿತುಕೊ' ಎಂದರು. ಆಗ ಚಾಲಕ 'ಹೋಗು ಬದುಕಿಕೋ, ಅವರ ಮಾತಿಗೆ ಬೆಲೆಕೊಟ್ಟಿದ್ದೇನೆ. ಇಲ್ಲದಿದ್ದರೆ ಇಲ್ಲೇ ನಿನ್ನ ಗತಿ ಮುಗಿಸಿಬಿಡ್ತಿದ್ದೆ. ನಿನ್ನಂತಹ ಕೊಳಕನನ್ನು ಕೂರಿಸಿಕೊಂಡು ಬಂದು ನನ್ನ ಗಾಡಿ ಅಪವಿತ್ರವಾಯ್ತು. ನಗರದಲ್ಲಿ ಶುದ್ಧಮಾಡಿಕೊಳ್ತೇನೆ ಹೋಗು ಬದುಕಿಕೊ' ಎಂದ.

ಆ ಪ್ರಕರಣವನ್ನು ಗಾಂಧೀಜಿ ಅಷ್ಟಕ್ಕೆ ಬಿಡಲಿಲ್ಲ. ವಿಶದವಾಗಿ ಎಲ್ಲ ವಿಷಯಗಳನ್ನೂ ಕಂಪನಿಯ ಅವಗಾಹನೆಗೆ ಬರವಣಿಗೆಯ ಮೂಲಕ ಮಾರನೆಯ ದಿನ ತಂದರು. ಕಂಪೆನಿ ಅಂತಹ ದುರ್ಘಟನೆ ಇನ್ನು ಮುಂದೆ ನಡೆಯದಂತೆ ನೋಡಿ ಕೊಳ್ಳುವುದಾಗಿ ಭರವಸೆ ಇತ್ತಿತ್ತು.

ಜೋಹಾನ್ಸ್‌ಬರ್ಗ್‌ನ ಯಾವ ಹೋಟೆಲಿನಲ್ಲೂ ಗಾಂಧೀಜಿಗೆ ಸ್ಥಳ ದೊರಕುವುದು ಕಷ್ಟವಾಯತು. ಮಾರನೇ ದಿನವೆ ಪ್ರಿಟೋರಿಯಾಕ್ಕೆ ಪ್ರಯಾಣ ಬೆಳಸಲು ನಿರ್ಧರಿಸಿ ರೈಲ್ವೇ ಸ್ಟೇಷನ್ ಮಾಸ್ತರರಿಗೆ ಅಂದೇ ಒಂದು ಪತ್ರ ಬರೆದರು. ಅದರಲ್ಲಿ ತಾನೊಬ್ಬ ಬ್ಯಾರಿಸ್ಟರ್ ಎಂದೂ, ಯಾವಾಗಲೂ ತನಗೆ ಮೊದಲ ಗಾಡಿಯಲ್ಲಿ ಪ್ರಯಾಣಮಾಡಿ ಅಭ್ಯಾಸವೆಂದೂ ತಾನೇ ಟಿಕೆಟ್ ಕೊಳ್ಳಲು ಬರುವುದಾಗಿಯೂ ತಿಳಿಸಿದ್ದರು. ಸ್ಟೇಷನ್ ಮಾಸ್ತರು ಸೌಮ್ಯ ಸ್ವಭಾವದವ. ರೈಲ್ವೆ ಅಧಿಕಾರಿಗಳಾಗಲಿ, ಇತರ ಪ್ರಯಾ ಣಿಕರಾಗಲಿ ಮೊದಲನೇ ತರಗತಿಯಿಂದ ಹೊರಗೆ ದೂಡಿದರೆ ದಾವೆ ಮಾಡುವುದಿಲ್ಲವೆಂಬ ಭರವಸೆ ಪಡೆದು ಟಿಕೆಟ್ ಕೊಟ್ಟ. ಡಬ್ಬಿಯಲ್ಲಿ ಚೆಕ್ಕಿಂಗ್‌ಗೆ ಬಂದ ಅಧಿಕಾರಿ ಈತನನ್ನು ನೋಡಿ ಮೂರು ಬೆರಳು ತೋರಿಸಿದ. ಗಾಂಧಿ ಮೂರನೇ ಡಬ್ಬಿಗೆ ಹೋಗುವುದಿಲ್ಲವೆಂದು ಖಡಾಖಂಡಿತವಾಗಿ ಹೇಳಿಬಿಟ್ಟರು. ಅದೇ ಡಬ್ಬಿಯಲ್ಲಿದ್ದ ಒಬ್ಬನೇ ಇಂಗ್ಲಿಷ್ ಪ್ರಯಾಣಿಕ ರೈಲ್ವೆ ಅಧಿಕಾ ರಿಯನ್ನು ಗದರಿಸಿ ಗಾಂಧಿಗೆ ಆರಾಮವಾಗಿ ಕುಳಿತುಕೊಳ್ಳುವಂತೆ ಹೇಳಿದ. ಅಧಿಕಾರಿ 'ಕೂಲಿ ಆಳಿನ ಕೂಡ ನಿನಗೆ ಪ್ರಯಾಣ ಮಾಡಲು ನಿನಗೇ ಇಷ್ಟವಿದ್ದ ಮೇಲೆ ನನಗೇನು ?' ಎಂದು ಗೊಣಗುತ್ತಾ ಕೆಳಗಿಳಿದು ಹೋದ.

ಇಷ್ಟೇ ನಿದರ್ಶನಗಳು ಸಾಕಿತ್ತು ಬಿಳಿಯನ ಆಳ್ವಿಕೆಯಲ್ಲಿ ಕರಿಯನ ಕಾರ್ಪಣ್ಯ ಜೀವನ ಹೇಗೆ ಸಾಗಿತ್ತೆಂಬುದಕ್ಕೆ. ಆದರೆ ಗಾಂಧಿ ಮತ್ತೊಂದು ಅನುಭವವನ್ನು ಪಡೆದರು ಪ್ರಿಟೋರಿಯಾದಲ್ಲಿ. ನಗರದ ಯಾವ ಹೋಟೆಲಿನಲ್ಲಿಯೂ ಆತನಿಗೆ ಸ್ಥಳ ಸಿಕ್ಕುವ ಭರವಸೆ ತೋರಲಿಲ್ಲ. ಹೋಟೆಲಿಗಿಂತ ಬೇರೆ ಮನೆಯಲ್ಲಿರುವುದು ಹಿತವಾಗಿ ಕಂಡಿತು ಗಾಂಧಿಗೆ. ಏನಾದರೂ ಭಾರತೀಯ ರಿಗೆ ಬಿಳಿಯರು ಕೊಡುತ್ತಿದ್ದ ಹಿಂಸೆ ಗಾಂಧಿಗೆ ಸಹನವಾಗಲಿಲ್ಲ. ಈ ರೀತಿಯ ನಡವಳಿಕೆಯನ್ನು ಕಂಡಿದ್ದರೂ, ಅನುಭವಿಸಿದ್ದರೂ ಅರಿವಿಲ್ಲದಂತೆ ಇರುವ ಭಾರತೀಯರಿಗೆ ಎಚ್ಚರಕೊಡುವ ಸಲುವಾಗಿ ಗಾಂಧಿ ತಾವು ಪ್ರಿಟೋರಿಯಾ ಸೇರಿದ ಒಂದು ವಾರದೊಳಗಾಗಿ, ಸಮಸ್ತ ಭಾರತೀಯರಿಗೂ ಕರೆಕೊಟ್ಟರು. ಒಂದು ದೊಡ್ಡ ಸಭೆ ಸೇರಿಸಿದರು. ಸಭೆಗೆ ಹಿಂದೂ, ಮುಸ್ಲಿಂ, ಪಾರ್ಸಿ ಮೊದಲಾದ ಎಲ್ಲ ಕೋಮಿನವರೂ ಬಂದಿದ್ದರು. ಗಾಂಧೀಜಿ ತಮ್ಮ ಮೊದಲನೆಯ ಬಹಿರಂಗ ಭಾಷಣಮಾಡಿ ಜನರಿಗೆ ಜಾಗೃತಿಯ ಹಾದಿ ತೋರಿದರು. ಅದೇ ರೀತಿ ಭಾಷಣಗಳು ಅನೇಕಬಾರಿ ನಡೆದು ಪ್ರಿಟೋರಿಯಾದ ಭಾರತೀಯರೆಲ್ಲರೂ ಗಾಂಧಿಗೆ ಪರಿಚಿತರಾದರು. ಬಹಿರಂಗ ಸಭೆಗಳಲ್ಲಿ ಅನೇಕ ಧ್ಯೇಯಸಾಧನೆಗಳನ್ನು ಪ್ರಚುರಪಡಿಸಿ ಭಾರತೀಯ ಬಾಳಿನ ಒಂದು ವ್ಯವಸ್ಥಾ ಕ್ರಮವನ್ನು ಕೈಕೊಂಡರು. ರೈಲ್ವೆ ಅಧಿಕಾರಿಗಳೊಡನೆ ಪತ್ರವ್ಯವಹಾರ ನಡೆಸಿ ಶುಚಿಯಾಗಿ ಬಟ್ಟೆ ಬರೆಗಳನ್ನು ಧರಿಸಿದ್ದರೆ, ಅಂತಹವರಿಗೆ ಎರಡನೆಯ ತರಗತಿಯ ಡಬ್ಬಿಯಲ್ಲಿ ಪ್ರಯಾಣ ಮಾಡಬಹುದೆಂಬ ಒಪ್ಪಿಗೆ ಪಡೆದರು.

ಇಷ್ಟರಲ್ಲಿ ಅವರ ಕೋರ್ಟು ವ್ಯವಹಾರ ಮುಕ್ತಾಯಗೊಳ್ಳುವಂತೆ ಕಂಡು ಬಂದಿತು. ಗಾಂಧೀಜಿ ಮೊಕದ್ದಮೆಯನ್ನು ಮುಂ ದುವರೆಸಲು ಇಷ್ಟಪಡದೆ ತಮ್ಮ ಕಕ್ಷಿಗಾರ ಅಬ್ದುಲ್ಲಾ ಶೇಠರಿಗೂ ಹಾಗೂ ಆತನ ಬಂಧುವೂ, ಎದುರಾಳಿಯೂ ಆಗಿದ್ದ ತಾಯಬ್ ಶೇಠರಿಗೂ ರಾಜಿಮಾಡಿಸಿದರು. ಮೊಕದ್ದಮೆ ಮುಂದುವರಿದರೆ ಇಬ್ಬರೂ ಉಳಿಯುವುದಿಲ್ಲವೆಂದು ತಿಳಿದಿದ್ದರು ಗಾಂಧಿ.

ಆದುದರಿಂದ ಬಂಧುಗಳಿಬ್ಬರಲ್ಲೂ ರಾಜಿಮಾಡಿಸಿ, ಗಾಂಧೀಜಿ ಭಾರತಕ್ಕೆ ಹೊರಡಲು ಅನುವಾದರು. ಆದರೆ ದಕ್ಷಿಣ ಆಫ್ರಿಕದಿಂದ ಅವರ ಬಿಡುಗಡೆ ಅಷ್ಟು ಸುಲಭವಾಗಿ ಆಗುವಂತಿರಲಿಲ್ಲ. ಏಕೆಂದರೆ ಸಮಸ್ಯೆಗಳ ಮೇಲೆ ಸಮಸ್ಯೆಗಳು ಭೂತಾಕಾರವಾಗಿ ಎದ್ದು ನಿಂತವು. ಆ ದಿನಗಳಲ್ಲಿ ದಕ್ಷಿಣ ಆಫ್ರಿಕದ ಭಾರತೀಯರ ಸ್ಥಿತಿ ತುಂಬಾ ಚಿಂತಾಜನಕವಾಗಿತ್ತು. ಅವನೊಬ್ಬ ಮನುಷ್ಯನೆಂದೇ ಪರಿಗಣಿತವಾಗಿರಲಿಲ್ಲ. ಅದರಿಂದಾಗಿ ಅವನಿಗೆ ಯಾವ ಮಾನ್ಯತೆಯೂ ದೊರೆಯುತ್ತಿರಲಿಲ್ಲ. ದಕ್ಷಿಣ ಆಫ್ರಿಕದಲ್ಲಿದ್ದ ಭಾರತೀಯರು ವರ್ಷಗಳ ತನಕ ದಿನಗೂಲಿಯ ಆಳಾಗಿದ್ದು, ಅವಧಿಯ ಅನಂತರ ಭಾರತಕ್ಕೆ ಹಿಂತಿರುಗಬೇಕಿತ್ತು. ಇಲ್ಲವಾದರೆ ಅವನು ಸ್ವತಂತ್ರ ಕೂಲಿಯ ಆಳಾಗಿ ಬಾಳುವ ಹಕ್ಕಿರಲಿಲ್ಲ. ಗುಲಾಮನಾಗಿ ಬಿದ್ದಿರಬೇಕಿತ್ತು ಆಜೀವಪರ್ಯಂತ. ಸ್ವತಂತ್ರ ಕೆಲಸಗಾರನಾಗಿರಬೇಕಿದ್ದರೆ ವರ್ಷಕ್ಕೆ ಮೂರು ಪೌಂಡ್ ಎಂದರೆ ಒಬ್ಬ ಕೂಲಿಯ ಆರು ತಿಂಗಳ ಸಂಬಳವನ್ನು ತೆರಿಗೆಯಾಗಿ ಕೊಡಬೇಕಾಗಿತ್ತು. ನೇಟಾಲ್ ಸರ್ಕಾರದ ಹಲವು ಭಾರತೀಯರಿಗಿದ್ದ ಮತದಾನದ ಹಕ್ಕನ್ನು ಕಸಿದುಕೊಂಡಿತ್ತು. ರಾತ್ರಿ ೯ ಗಂಟೆಯ ಮೇಲೆ ರಸ್ತೆಯಲ್ಲಿ ತಿರುಗಾಡಲು ಪ್ರತಿಯೊಬ್ಬ ಭಾರತೀಯನೂ ಅಪ್ಪಣೆ ಚೀಟಿಯನ್ನು ಪಡೆಯಬೇಕಿತ್ತು. ಇಲ್ಲವಾದರೆ ಜೈಲುವಾಸ ಅವನಿಗಾಗಿ ಕಾದಿರುತ್ತಿತ್ತು. ಡಚ್ಚರಿಗೆ ಸೇರಿದ್ದ ಆರೆಂಜ್‌ಫ್ರೀ ಸ್ಟೇಟ್‌ನಲ್ಲಿ ಭಾರತೀಯರು ಆಸ್ತಿ ಪಡೆಯಲಾಗಲೀ, ವ್ಯಾಪಾರ ಮಾಡಲಾಗಲೀ, ವ್ಯವಸಾಯ ಮಾಡಲಾಗಲೀ ಅಪ್ಪಣೆ ಇರಲಿಲ್ಲ. ಟ್ರಾನ್ಸ್‌ವಾಲ್‌ನಲ್ಲೂ ಹೀಗೇ. ಅಲ್ಲಿ ವಾಸಿಸುವ ಭಾರತೀಯ ಮೂರು ಪೌಂಡ್ ತೆರಿಗೆ ಕೊಡಬೇಕಿತ್ತು. ಅವನ ವಸತಿಯೂ ಕೂಡ ರಾಜ ಬೀದಿಗಳಲ್ಲಿರಕೂಡದು. ಯಾವುದೋ ಒಂದು ಸಂದಿಗೊಂದಿಯಲ್ಲಿರಬಹುದಿತ್ತು. ಕೇಪ್ ಕಾಲೋನಿಯ ಕೆಲವು ಪೌರಸಭೆಗಳು ಪಾದಚಾರಿಗಳ ರಸ್ತೆಯಲ್ಲಿ ಭಾರತೀಯನು ನಡೆಯಲು ಅಪ್ಪಣೆ ಕೊಟ್ಟಿರಲಿಲ್ಲ. ಅತಿಕ್ರಮಿಸಿದರೆ ಬಲವಾದ ಏಟು ಬೀಳುತ್ತಿದ್ದವು. ಕಾನೂನಿನ ಪುಸ್ತಕದಲ್ಲಿ 'ಕಾಡು ಮನುಷ್ಯನಾದ ಏಷ್ಯದವನು' ಎಂದು ಬರೆದಿತ್ತು.

ಇವೆಲ್ಲವುಗಳ ವಿರುದ್ಧ ಗಾಂಧಿಯ ಪ್ರತಿಭಟನೆ ಸಿದ್ಧವಿತ್ತು. ಆದರೆ ಅದು ಹಿಂಸಾತ್ಮಕ ರೂಪದಲ್ಲಿರಲಿಲ್ಲ. ಕೇವಲ ಭಾರತೀಯನಿಗೆ ಸ್ಥಾನ ದೊರಕಿಸಿ ಕೊಡುವಷ್ಟೇ ಉದ್ದೇಶದಿಂದ ಅದು ಕೂಡಿರಲಿಲ್ಲ. ಅದಕ್ಕಿಂತಲೂ ತನ್ನ ದುರ್ಗತಿಯ ಹಾದಿ ಹಿಡಿಯುತ್ತಿದ್ದ ಬಿಳಿಯನನ್ನು ಎಚ್ಚರಿಸುವ ಸಲುವಾಗಿ ಚಳುವಳಿಯನ್ನು ಕೈಕೊಂಡರು. ಅಷ್ಟರಲ್ಲಿ ತನ್ನೂರಿಂದ ಕರೆ ಬಂತು. ಬಹುಜನರಿಗೆ ಪರಿಚಿತರೂ, ಬಹುಜನರಿಗೆ ಪ್ರಿಯರೂ, ಉತ್ಸಾಹಿಗಳೂ, ಪ್ರಾಮಾಣಿಕರೂ ಆಗಿದ್ದ ಗಾಂಧೀಜಿ ದಕ್ಷಿಣ ಆಫ್ರಿಕೆಯ ಬಂಧುಗಳನ್ನು ಸಂತೈಸಿ, ೬ ತಿಂಗಳ ರಜೆ ಪಡೆದು ತಾಯ್ನಾಡಿಗೆ ಹಿಂದಿರುಗಿದರು.

ಕೇವಲ ೨೭ ವರ್ಷಗಳ ಉತ್ಸಾಹಿ ತರುಣ ೧೮೯೬ರಲ್ಲಿ ಸ್ವದೇಶಕ್ಕೆ ಬಂದ ಮೇಲೆ ಸುಮ್ಮನೆ ಕೂರಲಿಲ್ಲ ಅಥವಾ ಹೆಂಡತಿ ಮಕ್ಕಳ ಪ್ರೇಮಜಾಲದಲ್ಲೇ ಸುಳಿಯಲಿಲ್ಲ. ಆತನ ಕರ್ತವ್ಯವೂ ಗುರುತರವಾಗಿತ್ತು. ಅದು ಕಣ್ಣಿಗೆ ಕಟ್ಟಿದ್ದರಿಂದ ಒಂದು ಹಸಿರು ರೊಟ್ಟಿನ ಪುಸ್ತಕವನ್ನು (ಆಗತಾನೆ ದಕ್ಷಿಣ ಆಫ್ರಿಕೆಯ ಸ್ಥಿತಿಗತಿಗಳನ್ನು ಕುರಿತು ಬರೆದದ್ದು) 'ಹಸಿರು ಪುಸ್ತಕ' ಎಂಬ ಶಿರೋನಾಮೆಯಲ್ಲಿ ಪ್ರಕಟಿಸಿ ಪ್ರಸಿದ್ಧರಾಗಿದ್ದರು ಗಾಂಧೀಜಿ. ಮುಂಬಯಿ, ಮದ್ರಾಸು, ಕಲ್ಕತ್ತಾ, ಮುಂತಾದ ಭಾರತದ ಪ್ರಮುಖ ನಗರಗಳನ್ನು ಸಂಚರಿಸಿ ಅಲ್ಲಿಯ ಪ್ರಮುಖ ವ್ಯಕ್ತಿಗಳ ಪರಿಚಯವನ್ನು ಮಾಡಿಕೊಂಡು, ಅವರೊಡನೆ ತನ್ನ ಧ್ಯೇಯ ಧೋರಣೆಗಳ ಸತ್ಯಸ್ವರೂಪವನ್ನು ತೋರಿ ಭಾಷಣಗಳ ಮುಖಾಂತರ ಭಾವೀ ಭಾರತೀಯನ ಆಗುಹೋಗುಗಳನ್ನು ರೂಪಿಸಿಕೊಟ್ಟರು. ಪೂನಾದಲ್ಲಿ ಗೋಖಲೆ ಮತ್ತು ತಿಲಕ್‌ರವರನ್ನು ಸಂದರ್ಶಿಸಿ ದಕ್ಷಿಣ ಆಫ್ರಿಕೆಯ ಅನೇಕ ಸಮಸ್ಯೆಯ ವಿವರಣೆ ಕೊಟ್ಟರು. ಈ ಮಧ್ಯೆ ಅವರಿಗೆ ದಕ್ಷಿಣ ಆಫ್ರಿಕೆಯಿಂದ ತಂತಿ ಬಂತು. ಗಾಂಧೀಜಿ ಅವಶ್ಯಕವಾಗಿ ಅಲ್ಲಿಗೆ ಹೋಗಲೇಬೇಕಾಗಿ ಬಂದದ್ದರಿಂದ ಕುಟುಂಬ ಸಮೇತ ರಾಗಿ ತಮ್ಮ ಕಕ್ಷಿಗಾರ ದಾದಾ ಅಬ್ದುಲ್ಲಾ ಶೇಠರ ಎಸ್. ಎಸ್. ಕೂರ್ಲಂಡಿ ಎಂಬ ಹಡಗನ್ನು ಹತ್ತಿದರು. ಈ ಹಡಗಿನ ಜೊತೆಯಲ್ಲೇ ಎಸ್. ಎಸ್. ನಾದೇರಿ ಎಂಬ ಹಡಗೂ ನೇಟಾಲಿಗೆ ಹೊರಟಿತು. ಎರಡು ಹಡಗುಗಳಿಂದ ಒಟ್ಟು ೮೦೦ ಮಂದಿ ಭಾರತೀಯ ಪಟುಗಳು ಹೊರಟಿದ್ದರು.

ದಕ್ಷಿಣ ಆಫ್ರಿಕದಲ್ಲಿ ಸುದ್ದಿ ಹತ್ತಿ ಉರಿಯಿತು. ಗಾಂಧಿ ಭಾರತದಿಂದ ಅನೇಕ ಮಂದಿ ಸ್ವಾತಂತ್ರ್ಯ ವೀರರನ್ನು ಕರೆತರುತ್ತಿದ್ದಾನೆ. ಇದರಿಂದ ತಮ್ಮ ಸ್ಥಾನಮಾನಗಳಿಗೆ ಧಕ್ಕೆ ತಗುಲಿ ಗಲಭೆಗೆ ಅವಕಾಶವಾದರೂ ಆಗಬಹುದೆಂದು ಅನೇಕ ಮಂದಿ ಬಿಳಿಯರು ಡರ್ಬಾನಿನಲ್ಲಿ ಸಭೆಸೇರಿ ಮಾತನಾಡಿದರು. ಗಾಂಧಿ ಮತ್ತು ಇತರ ಭಾರತೀಯರನ್ನು ಹಡಗಿನಿಂದ ಇಳಿಸಲೇಕೂಡದೆಂದು ತೀರ್ಮಾನಿಸಿ, ಬೊಂಬಾಯಿಯಲ್ಲಿ ಪ್ಲೇಗ್ ಇದ್ದುದ್ದರಿಂದ ತಕ್ಷಣ ಹಡಗು ಇಳಿಯಕೂಡದೆಂದು ತಿಳಿಸಿದರು. ಅನಂತರ ಶೇಠನಿಗೆ ಹಡಗುಗಳನ್ನು ಹಿಂದಕ್ಕೆ ಕಳುಹಿಸಬೇಕೆಂದೂ, ಆ ಮಾತಿಗೆ ತಪ್ಪಿದರೆ ಹಡಗನ್ನೇ ಕಳೆದುಕೊಳ್ಳಬೇಕಾದ ದುರ್ಭರ ಪ್ರಸಂಗ ಅಬ್ದುಲ್ಲಾನಿಗೆ ಬಂದರೂ ಬರಬಹುದೆಂದು ನಯ, ವಿನಯ, ಭಯಭೀತಿ ಎಲ್ಲವೂ ಇಟ್ಟು ತಿಳಿಸಿದರು. ಆದರೆ ಅಬ್ದುಲ್ಲಾ

ಶೇಠ್ ಹೆದರಲಿಲ್ಲ. ಕಡೆಗೆ ೧೮೯೭ರ ಜನವರಿ ೧೩ರಲ್ಲಿ – ಎಂದರೆ ೨೩ ದಿನ ತೀರದ ಆಚೆ ಸಮುದ್ರದಲ್ಲೇ ತೇಲುತ್ತಿದ್ದ ಹಡಗು ಬಂದರನ್ನು ತಲುಪಿತು.

***

ದಕ್ಷಿಣ ಆಫ್ರಿಕೆಯ ಈ ಆಗಮನ ಆತನ ಬಾಳಿನ ಮಹಾಸಂಪುಟ. ಬಂದರು ಇಳಿದು ಹೆಂಡತಿ ಮಕ್ಕಳನ್ನು ಸುರಕ್ಷಿತವಾಗಿ ರುಸ್ತುಂಜಿಯವರ ಮನೆಗೆ ಕಳುಹಿಸಿಯಾಯ್ತು. ದಾದಾ ಅಬ್ದುಲ್ಲಾ ಶೇಠರ ನ್ಯಾಯನಿರ್ದೇಶಕ ಎಸ್. ಎ. ಲಾಫ್ಟನ್ ಎಂಬ ಆಂಗ್ಲ ನೊಡನೆ ಗಾಂಧಿ ಕಾಲುನಡಿಗೆಯಲ್ಲಿ ನಗರದ ಕಡೆಗೆ ಹೊರಟರು. ಒಬ್ಬಿಬ್ಬರು ಇಂಗ್ಲಿಷ್ ಬಾಲಕರು ಗಾಂಧಿಯನ್ನು ಪತ್ತೆಹಚ್ಚಿ 'ಗಾಂಧಿ' ಎಂದು ಕೂಗಿದರು. ಬಹುದಿನಗಳಿಂದ ಗಾಂಧಿಯನ್ನು ತೀರಿಸಬೇಕೆಂದು ಒಳಗೊಳಗೇ ನಡೆದಿದ್ದ ಪಿತೂರಿಯನ್ನು ತಿಳಿದಿದ್ದ ಲಾಫ್ಟನ್ 'ಮಿ. ಗಾಂಧಿ ಪರಿಸ್ಥಿತಿ ಹೀಗೇ ಆಗುತ್ತದೆಂದು ಹೇಳಬರುವುದಿಲ್ಲ. ಬೇಗ ಆ ರಿಕ್ಷಾ ಹತ್ತಿ ಮನೆ ಸೇರೋಣ' ಎಂದು ಅಲ್ಲೇ ಕೈಯಲ್ಲಿ ರಿಕ್ಷಾ ಎಳೆಯುತ್ತಿದ್ದ ನೀಗ್ರೋ ಒಬ್ಬನನ್ನು ಕರೆದ. ಗಾಂಧೀಜಿ ಅವನನ್ನು ತಡೆದು 'ಬೇಡ. ನಾನು ಆ ರಿಕ್ಷಾದಲ್ಲಿ ಕೂರಲಾರೆ,' ಅಪಾಯದಿಂದ ಪಾರಾಗಲು ಇದೊಂದೇ ಮಾರ್ಗ ಗಾಂಧೀಜಿ. ತಡಮಾಡಿದರೆ ಪ್ರಾಣಕ್ಕೇ ಸಂಚಕಾರ ಬರಬಹುದು.' 'ಅದೂ ಆಗಿ ಮುಗಿಯಲಿ. ಮನುಷ್ಯ ಮತ್ತೊಬ್ಬರ ಬೆನ್ನ ಮೇಲೆ ಕೂತು ನಡೆಯುವುದು ನನ್ನ ಮನಸ್ಸಿಗೆ ತೀರ ವಿರುದ್ಧವಾದ ಅಂಶ. ಪ್ರಾಣ ಹೋದರೂ ಸರಿಯೆ. ನಾನು ಹತ್ತುವುದಿಲ್ಲ. ಅಲ್ಲದೆ ಆ ರೀತಿ ಕದ್ದು ಕಳ್ಳನಂತೆ ಓಡಿಹೋಗಿ ಬಚ್ಚಿಟ್ಟುಕೊಳ್ಳಲು ನಾನು ಮಾಡಿರುವ ಅಪರಾಧವಾದರೂ ಏನು ?' 'ಅದನ್ನೆಲ್ಲ ವಿಚಾರಿಸುವ ವಿವೇಚನೆ ಗುಂಪಿಗೆ ಇರುತ್ತದೆಯೇ ಗಾಂಧೀಜಿ ?' ಇರಲಿ ಬಿಡಲಿ. ನನ್ನಲ್ಲಿ ಸತ್ಯಧರ್ಮಗಳಿರುವಾಗ ನಾನೇಕೆ ಕಳ್ಳನ ಹಾಗೆ ಓಡಲಿ. ಅದೂ ಒಬ್ಬ ಬಂಧುವಿನ ಬೆನ್ನ ಮೂಳೆಯ ಮೇಲೆ ಕೂತು. ಅವನೇನು ಪಶುವೆ ? ಇಲ್ಲ, ಸಾಧ್ಯವಿಲ್ಲ. ಆ ಕಾರ್ಯಸಾಧುವೂ ಅಲ್ಲ.'

ಮಾತು ಮುಗಿದಿರಲಿಲ್ಲ. ಆಗಲೇ ಹತ್ತಾರು ಜನ ಬಿಳಿಯರು ಸೇರಿದರು. ಗಾಂಧೀ ನಾಲ್ಕು ಹೆಜ್ಜೆ ಇಡುವುದರಲ್ಲಿ ಕಲ್ಲುಗಳ ಸುರಿಮಳೆಯಾಯ್ತು. ತಿರುಗಿ ನೋಡಲೂ ಅವಕಾಶವಾಗದಂತೆ ನೂರಾರು ಮೊಟ್ಟೆಗಳು ಪಚ್ ಪಚ್ ಎಂದು ಬಡಿದು ಮುಖವನ್ನೆಲ್ಲ ಕೆಡಿಸಿದವು. ನಾಲ್ಕು ಜನ ಮುಂದೆ ನುಗ್ಗಿ ಅವನ ಪೇಟವನ್ನು ಕಿತ್ತು ಈಡಾಡಿದರು. ಯಾರೋ ಬೀಸಿಬಿಟ್ಟ ಕಲ್ಲು ಆತನ ತಲೆಗೆ ತಾಕಿ ಕಣ್ಣು ಸುತ್ತಿಬಂದವು. ತಲೆಯ ಮಿದುಳೆಲ್ಲ ಕಲಸಿದಂತಾಯತು. ಗಾಂಧಿ ನಿಲ್ಲಲು ಶಕ್ತಿ ಸಾಲದೆ ಪಕ್ಕದ ಕಂಬಿಯೊಂದನ್ನು ಹಿಡಿದು ನಿಂತರು. ಗಲಭೆ ಬಹಳ ಜೋರಾಯಿತು. ಜನ ಮೇಲಿಂದ ಮೇಲೆ ಸೇರಿ ಕೈಗೆ ಸಿಕ್ಕಿದ್ದರಲ್ಲಿ ಹೊಡೆಯಿತು. ತೊಟ್ಟ ಬಟ್ಟೆ ಚಿಂದಿಯಾಯ್ತು. ಪೆಟ್ಟು ತಿಂದ ದೇಹ ಜರ್ಝರಿತವಾಯ್ತು. ಇನ್ನು ಸ್ವಲ್ಪ ಹೊತ್ತು ಅದೇ ರೀತಿ ಪ್ರಕರಣ ಮುಂದುವರೆ ದಿದ್ದರೆ ಗಾಂಧೀಜಿಯ ಅಧ್ಯಾಯ ಅಲ್ಲಿಗೇ ಮುಗಿಯುತ್ತಿತ್ತು. ಅಷ್ಟರಲ್ಲಿ ದೈವವಶಾತ್ ಪೋಲೀಸ್ ಸೂಪರಿಂಡೆಂಟರ ಪತ್ನಿ ಶ್ರೀಮತಿ ಅಲೆಗ್ಸಾಂಡರ್ ಅವರ ರಕ್ಷಣೆಗೆ ಬಂದರು. ಗುಂಪನ್ನು ಸೀಳಿ ಮುಂದೆ ನುಗ್ಗಿ ಗಾಂಧಿಗೆ ಅಡ್ಡಲಾಗಿ ನಿಂತು, 'ಬೇಡಿ, ಬೇಡಿ, ದಯವಿಟ್ಟು ಹೊಡೆಯಬೇಡಿ, ನಿಮಗೆ ಕೈಮುಗಿದು ಬೇಡುತ್ತೇನೆ. ನನಗಾಗಿ ಆತನನ್ನು ಉಳಿಸಿ' ಎಂದು ಮಾರುಗೈ ಹಾಕಿ ನಿಂತರು. ಭಾರತೀಯ ಬಾಲಕನೊಬ್ಬನಿಂದ ವಿಷಯ ತಿಳಿದ ಪೋಲೀಸ್ ಅಷ್ಟರಲ್ಲಿ ಗಾಂಧೀಜಿಯ ರಕ್ಷಣೆಗೆ ಬಂತು. ಗುಂಪು ಚದುರಿತು. ಗಾಂಧೀಜಿ ಮೂರ್ಛೆ ಹೋಗಿದ್ದರು. ಶ್ರೀಮತಿ ಅಲೆಗ್ಸಾಂಡರಿಗೂ ಸಹ ಒಂದೆರಡು ಕಲ್ಲಿನ ಏಟುಗಳು ಬಿದ್ದಿದ್ದವು. ಗಾಂಧೀಜಿಯನ್ನು ರುಸ್ತುಂಜೀಯವರ ಮನೆಗೆ ಸಾಗಿಸಿದರು.

ಹರಿದು ಚಿಂದಿಯಾದ ಬಟ್ಟೆಗಳನ್ನು ಬದಲಿಸಿರಲಿಲ್ಲ. ಗಾಯವಾದ ಮೈ ಬಿಸಿನೀರಿನಲ್ಲಿ ತೊಳೆದು ಔಷಧಿ ಮುಟ್ಟಿಸಿರಲಿಲ್ಲ. ಅಷ್ಟರಲ್ಲಿ ಒಂದು ದೊಡ್ಡ ತಂಡ ರುಸ್ತುಂಜಿಯವರ ಮನೆಯ ಮುಂದೆ ಬಂತು. 'ಗಾಂಧಿಯನ್ನು ಈಚೆಗೆ ಬಿಡಿ.' ಅವನನ್ನು ನಮಗೆ ಕೊಡಿ.' 'ಕೊಂದು ಬಿಡುತ್ತೇವೆ, ತಿಂದು ಬಿಡುತ್ತೇವೆ', ಸುಟ್ಟು ಬಿಡುತ್ತೇವೆ, ಅವನನ್ನು ಬಿಡದಿದ್ದರೆ ನಿಮ್ಮ ಮನೆಗೇ ಬೆಂಕಿ ಇಡುತ್ತೇವೆ' ಏನೇನೋ ಅವಾಚ್ಯ ಶಬ್ದಗಳ ಸುರಿಮಳೆ ಸುರಿಸಿತು ಗುಂಪು. ಪೋಲೀಸ್ ಸೂಪರಿಂಡೆಂಟ್ ಅಲೆಗ್ಸಾಂಡರ್ ಜನರ ನ್ನು ಸಮಾಧಾನಪಡಿಸಲು ಯತ್ನಿಸಿ ವಿಫಲರಾದರು. ಕಡೆಗೆ ಗಾಂಧೀಜಿ ಗುಟ್ಟಾಗಿ ವೇಷಬದಲಿಸಿಕೊಂಡು ಪೋಲೀಸ್ ಠಾಣೆ ಸೇರಬೇಕೆಂದು ಸೂಚನೆ ಕೊಟ್ಟು ಜನರ ಜೊತೆಯಲ್ಲಿ ತಾವೂ ಬೆರೆತು ಕೂಗಲಾರಂಭಿಸಿದರು. ಗಾಂಧೀಜಿ ಪೋಲೀಸ್ ಉಡುಪನ್ನು ಧರಿಸಿದರು. ಇಬ್ಬರು ಸಿ.ಐ.ಡಿ.ಗಳು ಮುಖಕ್ಕೆ ಮಸಿ ಬಳಿದುಕೊಂಡು ಇಂಡಿಯನ್ನರಂತೆ ವೇಶಧರಿಸಿ ರುಸ್ತುಂಜಿಯವರ ಮನೆಯ ಹಿಂದಿನ ಬಾಗಿಲಿನಿಂದ ಸುರಕ್ಷಿತವಾಗಿ ಪೋಲೀಸ್ ಠಾಣೆ ಸೇರಿದರು. ಅನಂತರ ವಿಷಯ ತಿಳಿದ ಅಲೆಗ್ಸಾಂಡರ್ ಗುಂಪಿಗೆ ತಿಳಿಯ ಹೇಳಿ ಮರುದಿನ ಗಾಂಧಿಯನ್ನು ಪೋಲೀಸ್ ರಕ್ಷಣೆಯಲ್ಲಿಟ್ಟುಕೊಂಡರು.

ಗಾಂಧೀಜಿಯವರ ಮೇಲೆ ಹಲ್ಲೆ ನಡೆದ ವಿಚಾರವನ್ನು ತಿಳಿದ ಬ್ರಿಟಿಷ್ ವಸಾಹತುಗಳ ಕಾರ್ಯದರ್ಶಿ ಜೋಸೆಫ್ ಛೆಂಬರ್ಲೈನ್ ದಂಗೆಕೋರರಿಗೆ ಶಿಕ್ಷೆ ವಿಧಿಸಬೇಕೆಂದು ಲಂಡನ್ನಿನಿಂದ ಆಜ್ಞೆ ಕಳುಹಿಸಿದ. ಆದರೆ ಗಾಂಧೀಜಿ ತನ್ನಮೇಲೆ ಕೈಮಾಡಿದ ಹಲವರ ಪರಿಚಯವಿದ್ದರೂ ಯಾರ ಮೇಲೂ ಕ್ರಮ ತೆಗೆದುಕೊಳ್ಳುವುದು ಇಷ್ಟವಿರಲಿಲ್ಲ. ಅಲ್ಲದೆ ಹಲ್ಲೆಗೆ ಅವರು ಕಾರಣರಲ್ಲ, ಸಮಾಜ ಧುರೀಣರು ಕಾರಣ, ನೇಟಾಲ್ ಸರ್ಕಾರ ಕಾರಣ ಎಂದು ತಿಳಿಸಿ ದಂಗೆಕೋರರನ್ನು ಮನ್ನಿಸಿಬಿಟ್ಟರು. ೧೮೯೪ರಲ್ಲಿ ನೇಟಾಲ್ ಆಕ್ಟ್ ಜಾರಿಗೆ ಬಂದು ಗಾಂಧೀಜಿಗೆ ನೆಮ್ಮದಿ ತಂದಿತು. ಆ ಆಕ್ಟಿನ ಪ್ರಕಾರ ಎಲ್ಲರಿಗೂ ಸಮಾನ ಮತ ದಾನದ ಹಕ್ಕು ದೊರಕಿತ್ತು.

ಹೊರಗಡೆ ರಾಜಕೀಯ ಸಾಮಾಜಿಕ ವಿಚಾರಗಳಲ್ಲಿ ಸದಾ ಹೋರಾಡುತ್ತಿದ್ದ ಗಾಂಧೀಜಿ ಮನೆಯಲ್ಲೂ ಆಗಾಗ ಕುರುಕ್ಷೇತ್ರವನ್ನು ಪ್ರಾರಂಭಿಸುತ್ತಿದ್ದರು. ಗಂಡ ಹೆಂಡಿರು ಒಬ್ಬರನ್ನೊಬ್ಬರು ಅಷ್ಟಾಗಿ ಅರ್ಥಮಾಡಿಕೊಂಡಿರಲಿಲ್ಲ. ಗಾಂಧೀಗೆ ವರ್ಷಕ್ಕೆ ಐದು, ಆರು ಸಾವಿರ ಪೌಂಡುಗಳಷ್ಟು ವರಮಾನವಿದ್ದುದರಿಂದ ಸುಖಮಯವಾದ ಜೀವನವನ್ನು ಬಂಗಲೆಯಲ್ಲಿ ಸಾಗಿ ಸುತ್ತಿದ್ದರು. ಅನೇಕ ಜನ ಭಾರತೀಯ ಕೆಲಸಗಾರರು ಅವರ ಮನೆಯಲ್ಲಿ ಊಟ ವಸತಿಗಳನ್ನು ಪಡೆದಿದ್ದರು. ಕೆಲವರು ಹಣಕೊಡದೆ ಬಿಟ್ಟಿ ಊಟ ಹೊಡೆಯುತ್ತಿದ್ದರು. ಅಂಥವರಲ್ಲಿ ಗಾಂಧಿಯ ಎಳೆತನದ ಗೆಳೆಯ ಷೇಕ್ ಮೆಹ್ತಾಬ್ ಅಗ್ರಗಣ್ಯ. ಎರಡನೇ ಬಾರಿ ಗಾಂಧೀಜಿ ಆಫ್ರಿಕೆಗೆ ಬರುವಾಗ ಈತನೂ ಬಂದಿದ್ದ. ಗಾಂಧೀಜಿಯ ಮನೆಯಲ್ಲಿದ್ದ ತನ್ನ ಕೋಣೆಗೆ ಆಗಾಗ ವೇಶ್ಯೆಯರನ್ನು ಕರೆ ತರುತ್ತಿದ್ದ. ವಿಚಾರ ತಿಳಿದು ಗಾಂಧಿ ಅವನನ್ನು ಹೊರಹಾಕಿದರು. ಕಡೆಗೆ ಷೇಕ್ ದುರಾಚಾರವನ್ನು ಬಿಟ್ಟು ಮದುವೆಯಾಗಿ ಗಣ್ಯಜೀವನವನ್ನು ಸಾಗಿಸಿದ. ಅಲ್ಲದೆ ಗಾಂಧೀಜಿಗೆ ಅಸಹಕಾರ ಚಳುವಳಿಯಲ್ಲಿ ಗೀತೆಗಳನ್ನು ರಚಿಸಿ ಕೊಡುತ್ತಿದ್ದ ಒಮ್ಮೆ ತನ್ನ ಪತ್ನಿಯೊಡೆ ಸೆರೆಮನೆಯನ್ನೂ ಅನುಭವಿಸಿದ.

ಬಹಳ ಜನರಿದ್ದ ಮನೆಯಲ್ಲಿ ಅನುಕೂಲಕ್ಕಾಗಿ ಪ್ರತಿಯೊಬ್ಬನ ರೂಮಿನಲ್ಲೂ ಕಕ್ಕಸ್ ಪಾತ್ರೆಯನ್ನು ಇಡಲಾಗಿತ್ತು. ಗಾಂಧೀಜಿ ಆ ಪಾತ್ರೆಯನ್ನು ತೊಳೆಯಲು ಯಾರನ್ನೂ ನೇಮಿಸಿಕೊಂಡಿರಲಿಲ್ಲ. ಅದು ಅವರ ಇಷ್ಟಕ್ಕೆ ಪೂರ ವಿರುದ್ಧ. ಆದ್ದರಿಂದ ಮನೆಯ ಎಲ್ಲ ಕೆಲಸಗಳನ್ನು ಮಾಡುವಂತೆ, ಕಸ್ತೂರಿಬಾ ಆ ಪಾತ್ರೆಗಳನ್ನು ತೊಳೆದು ಶುದ್ಧಮಾಡುವಂತೆ ಹೇಳಿದರು. ಅಸ್ಪೃಶ್ಯನಾಗಿದ್ದ ಭಾರತೀಯನೊಬ್ಬ ಕ್ರೈಸ್ತಮತಕ್ಕೆ ಸೇರಿದ್ದ. ಅವನೂ ಅವರ ಮನೆಯ ಕೊಠಡಿಯೊಂದರಲ್ಲಿದ್ದ. ಸಂಪ್ರದಾಯಸ್ತೆಯಾಗಿದ್ದ ಬಾಗೆ ಕಕ್ಕಸ್ ಪಾತ್ರೆ ತೊಳೆಯುವುದು ಸರಿಬೀಳಲಿಲ್ಲ. ಮುಖ ಸಿಂಡರಿಸಿ ತೊಳೆಯುವುದಿಲ್ಲವೆಂದು ಗಾಂಧೀಜಿಗೆ ಉತ್ತರಕೊಟ್ಟಳು. ಗಾಂಧೀಜಿಗೆ ಕೋಪಬಂತು. 'ಮನೆಕೆಲಸಗಳನ್ನೆಲ್ಲ ಮಾಡುವುದಷ್ಟೇ ಅಲ್ಲ, ಮಾಡುವ ಕೆಲಸವನ್ನು ಹಸನ್ಮುಖದಿಂದ ಶ್ರದ್ಧೆಯಿಂದ ಮಾಡಬೇಕು. ಇಲ್ಲವಾದರೆ ಇದೆಲ್ಲ ನನ್ನ ಮನೆಯಲ್ಲಿ ನಡೆಯುವುದಿಲ್ಲ' ಎಂದರು. 'ನಿಮ್ಮ ಮನೆಯಲ್ಲಿ ನೀವೇ ಇದ್ದುಕೊಳ್ಳಿ. ಯಾರಿಗೇ ಬೇಕಾಗಿದೆ. ನನ್ನನ್ನು ಕಳಿಸಿಬಿಡಿ' ಎಂದು ಕೂಗಾಡಿದಳು.

ಗಾಂಧೀಜಿಗೆ ಸಿಟ್ಟು ತಡೆಯಲಾಗಲಿಲ್ಲ. ರಟ್ಟೆ ಹಿಡಿದೊಯ್ದು ಬಾಗಿಲಿನಿಂದಾಚೆ ತಳ್ಳುವುದರಲ್ಲಿದ್ದರು. ಅಷ್ಟರಲ್ಲಿ ಗೋಳಿಡುತ್ತ ಬಾ 'ನಿಮಗೆ ನಾಚಿಕೆಯಾಗುವುದಿಲ್ಲವೆ ? ನಾನೆಲ್ಲಿಗೆ ಹೋಗಬೇಕು. ಎಲ್ಲಿ ನನ್ನ ತಂದೆ-ತಾಯಿಯಾಗಲಿ, ಬಂಧು-ಬಳಗವಾಗಲಿ ಇದ್ದಾರೆಯೇ ? ದಯವಿಟ್ಟು ಪ್ರಜ್ಞೆ ತಂದುಕೊಂಡು ಬಾಗಿಲು ಮುಚ್ಚಿ, ನಿಮ್ಮ ಅವಾಂತರ ಒಳಗೇ ಇರಲಿ, ಬೀದಿಗೆ ಹೋಗುವುದು ಬೇಡ' ಎಂದಳು. ಗಾಂಧಿಗೆ ಕೋಪ ಇಳಿಯಿತು. ತನ್ನ ವರ್ತನೆಯಿಂದ ನಾಚಿಕೆಯಾಗಿರಬೇಕು. ಪತ್ನಿಯನ್ನು ಒಳಕ್ಕೆ ಕರೆದುಕೊಂಡರು.

ಮತ್ತೊಂದು ಪ್ರಕರಣ

೧೯೦೧ರಲ್ಲಿ ಗಾಂಧೀ ಭಾರತಕ್ಕೆ ಹೊರಡುವುದರಲ್ಲಿದ್ದರು. ಅದಕ್ಕಾಗಿ ದಕ್ಷಿಣ ಆಫ್ರಿಕದಲ್ಲಿದ್ದ ಅನೇಕಮಂದಿ ಭಾರತೀಯರು ಗಾಂಧೀಜಿಯವರನ್ನು ಆದರಿಸಿ, ಸತ್ಕರಿಸಿ, ಸಭೆ ಸಂಘಗಳಲ್ಲಿ ಬೇಕಾದಷ್ಟು ತಮ್ಮ ಮೆಚ್ಚುಗೆ ಕೊಟ್ಟರು. ಅದರಲ್ಲಿ ಬಹಳಮಟ್ಟಿಗೆ ಬಂಗಾರ, ವಜ್ರ ಮೊದಲಾದ ಒಡವು ತೊಡವುಗಳಿದ್ದವು. ಗಾಂಧೀ ಅಷ್ಟೂ ಮೂಟೆಕಟ್ಟಿ ಮನೆಗೆ ತಂದರು. ಆದರೆ ರಾತ್ರಿಯೆಲ್ಲಾ ನಿದ್ದೆ ಬರಲಿಲ್ಲ. ತನ್ನ ಮೇಲಿನ ಪ್ರೀತಿಗಾಗಿ ಕೊಟ್ಟ ವಸ್ತುಗಳನ್ನು ತನ್ನ ಸ್ವಾರ್ಥಕ್ಕಾಗಿ ಬಳಸಬಾರದೆಂದೇ ಅವರ ಧ್ಯೇಯ. ಅದಕ್ಕಾಗಿ ಒಡವೆ ಎಂದರೆ ಸ್ತ್ರೀ ಸಹಜವಾದ ಆಸೆ ಇದ್ದ 'ಬಾ' ರವರನ್ನು ಒಪ್ಪಿಸಿ ಅಷ್ಟನ್ನೂ ಪರಾರ್ಥಕ್ಕಾಗಿ ವಿನಿಯೋಗಿಸಬೇಕೆಂದು ಬಯಸಿದರು. ಬೆಳಗ್ಗೆ ತಮ್ಮ ಮಕ್ಕಳಾದ ಹೀರಾಲಾಲ್ – ಮಣಿಲಾಲ್‌ರನ್ನು ಉಪಾಯದಿಂದ ಒಳಗುಮಾಡಿಕೊಂಡು ಅವರ ಬಾಯಿಂದ ತಮಗೆ ಒಡವೆ ಬೇಡ ಎನ್ನಿಸಿಬಿಟ್ಟರು. ಗಾಂಧಿ ತಾವೇ ಅಡುಗೆಮನೆಗೆ ಹೋದರು.

ಯಾವುದೋ ಕೆಲಸದಲ್ಲಿ ತೊಡಗಿದ್ದರು ಬಾ. 'ಬಾ ಇಲ್ಲಿ ನೋಡು ನಿನಗೊಂದು ಹೊಸ ಸಂದೇಶ ತಂದಿದ್ದೇನೆ. ನಮ್ಮಿಬ್ಬರ ಹಿತದೃಷ್ಟಿಯಿಂದ ಹಿತವಾದದ್ದೆಂದು ನನ್ನ ಭಾವನೆ. ಅದಕ್ಕೆ ನಿನ್ನ ಒಪ್ಪಿಗೆ ಬೇಕು.'

'ಸರಿ, ಯಾವಾಗ ನನಗೆ ಆರಾಮ್ ಇರಲು ಬಿಟ್ಟಿದ್ದೀರಿ, ಅದೇನು ಅಪ್ಪಣೆಯಾಗಬೇಕು.'

'ಏನಿಲ್ಲ ನೋಡು, ಆ ಒಡವೆ. . .'

'ಹ್ಞಾಂ, ಒಡವೆಗಳೆಲ್ಲ ತುಂಬ ಚೆನ್ನಾಗಿವೆ. ಈಗ ನನ್ನ ಪೆಟ್ಟಿಗೆಯಲ್ಲಿ ಆರೋಗ್ಯವಾಗಿವೆ. ಏನಾಗಬೇಕಿತ್ತು ಅದರಿಂದ ?'

'ಏನಿಲ್ಲ ನೋಡು, ಅದೆಷ್ಟು ಜನ ಭಾರತೀಯರು ಒಪ್ಪತ್ತು ಗಂಜಿಗಿಲ್ಲದೇ ಸಾಯುತ್ತಿದ್ದಾರೆ. ಅಲ್ಲದೆ ನಾನು ಎಬ್ಬಿಸಿರುವ ಚಳವಳಿಯಿಂದ ಅದೆಷ್ಟು ಕಷ್ಟನಷ್ಟ ಉಂಟಾಗಿದೆಯೋ ಕಾಣೆ. ಅಂತಹ ವಿಪತ್ಕಾಲದಲ್ಲಿ ಸಂರಕ್ಷಿಸಲು ಯಾವುದಾದರೂ ಒಂದು ಆಶ್ರಯಬೇಕಲ್ಲವೆ ? ಅದಕ್ಕಾಗಿ, ನೋಡು, ಒಡವೆಗಳನ್ನು ಕೊಟ್ಟು ಬಿಡು, ಆಪತ್ಕಾಲದ ನಿಧಿಗೆ ನಿನ್ನದೇ ಮೊದಲ ಕಾಣಿಕೆಯಾಗಲಿ.'

'ಬೇಕಾಗಿಲ್ಲ, ನಾನು ಒಡವೆಗಳಲ್ಲಿ ಒಂದು ಚೂರನ್ನೂ ಕೊಡುವುದಿಲ್ಲ. ನಿಮಗೇನಂತೆ ? ಗಂಡಸರು ಒಡವೆ ಹಾಕುವವ ರಲ್ಲ, ನಿಮಗೆ ಬೇಕಿಲ್ಲ. ಮಕ್ಕಳನ್ನು ಒಪ್ಪಿಸುವುದು ಸುಲಭ. ನಿಮ್ಮ ತಾಳಕ್ಕೆ ತಕ್ಕಂತೆ ಕುಣಿಯುತ್ತವೆ. ನಾನೋ ನಿಮ್ಮ ಆಜ್ಞೆ ಆದ ದಿನವೇ ಒಡವೆ ಹಾಕುವುದನ್ನು ಬಿಟ್ಟಿದ್ದೇನೆ. ಒಡವೆ ಹಾಕುವ ಆಸೆ ಇದ್ದರೂ ನೀವು ಬೇರೆಯವರಿಗೆ ಅಷ್ಟು ಉಪದೇಶ ಮಾಡಿದ ಮೇಲೆ ನಿಮ್ಮ ಹೆಂಡತಿ ಅನ್ನಿಸಿಕೊಂಡ ನಾನು ತಾನೇ ಹೇಗೆ ಹಾಕಲಿ ? ಆದರೆ ಆ ಒಡವೆಗಳನ್ನೆಲ್ಲಾ ನನ್ನ ಸೊಸೆಯರಿಗೆಂದು ಭದ್ರಪಡಿಸಿದ್ದೇನೆ. ಮತ್ತೆ ಮತ್ತೆ ನನ್ನನ್ನು ಕಾಟಕೊಡಬೇಡಿ.'

'ಮಕ್ಕಳಿಗಿನ್ನೂ ಮದುವೆಯಾಗಿಲ್ಲ. ಅಲ್ಲದೆ ಚಿಕ್ಕಂದಿನಲ್ಲೇ ಅವರಿಗೆ ಮದುವೆ ಮಾಡಬಾರದೆದಿಂದ್ದೇನೆ. ಬೆಳೆದ ಮೇಲೆ ಅವರ ಹೊಣೆ ಅವರದು. ಅಲ್ಲದೆ ಒಡವೆಗೆ ಆಸೆಪಡುವ ಸೊಸೆಯರನ್ನಂತೂ ನಾನು ತರುವುದಿಲ್ಲ.'

'ಹಂಗಿಸಿ, ಹಂಗಿಸಿ, ಒಡವೆಗಳನ್ನು ಆಸೆಪಡುವ ಸೊಸೆಯರನ್ನು ತರುವುದಿಲ್ಲ. ಈಗ ನಿಮಗೆ ಒಡವೆಗಳ ಮೇಲೆ ಆಸೆಪಡುವ ಹೆಂಡತಿ ಇದ್ದಾಳೇನೋ ! ನನಗೆಲ್ಲ ಅರ್ಥವಾಗುತ್ತೆ. ನೋಡಿ ಇದೆಲ್ಲ ನಿಮಗೆ ತಿಳಿಯುವುದಿಲ್ಲ. ಚಿಕ್ಕ ಮಕ್ಕಳಿಗೆ ಸುಂದರ ವಸ್ತುಗಳ ಮೇಲೆ ಆಸೆ ಗೊತ್ತಾಯ್ತೆ ?'

'ಅವರಿಗೆ ಆಸೆಯಾದರೆ ಒಡವೆ ತರ್ಲೇಬೇಕಾದರೆ ನಾವಿರ್ತೀವಲ್ಲ ?'

'ಹ್ಞೂಂ. ನಿಮ್ಮನ್ನೇ ಕೇಳಬೇಕು ! ನಿಮ್ಮ ವಿಚಾರ ನನಗೀಗ ತಿಳಿದಿದೆ. ನನ್ನ ಒಡವೆಗಳನ್ನೆಲ್ಲ ತೆಗೆದುಕೊಂಡು ಹೋಗಿ ದಾನಮಾಡಿದ ಮೇಲೆ ನಿಮ್ಮ ಸೊಸೆಯರಿಗೆ ನೀವು ಒಡವೆ ತಂದ ಹಾಗೇ. ಹುಡುಗರನ್ನೇನು ಸಂನ್ಯಾಸಿಗಳನ್ನು ಮಾಡಬೇಕೆಂದಿ ರುವಿರಾ ? ಬೇಡ. ನಾನು ಒಡವೆಗಳನ್ನು ತೆಗೆಯುವುದಿಲ್ಲ. ಅಲ್ಲದೆ ಆ ಸರ ನನ್ನದು. ನನ್ನ ತಂದೆ ಮಾಡ್ಸಿ ಹಾಕಿದ್ದು. ಅದನ್ನು ಒಪ್ಪಿಸೋಕೆ ನಿಮಗೆ ಅಧಿಕಾರವಿಲ್ಲ.'

'ಒಪ್ಪಿಕೊಳ್ಳುತ್ತೇನೆ ಬಾ, ಒಪ್ಪುತ್ತೇನೆ. ಆದರೆ ಆ ಸರ ನಿಮ್ತಂದೆ ಕೊಟ್ಟದ್ದು ನಿನ್ನ ಅಲಂಕಾರಕ್ಕೋ ನನ್ನ ಸೇವೆಗೋ ?'

'ನಿಮಗೆ ಹೇಗಿದ್ದರೂ ಸೈರಣೆ ಇಲ್ಲ. ನಿಮಗೋಸ್ಕರ ನಾನು ಹಗಲಿರುಳೂ ದುಡೀತಾ ಇಲ್ವೆ ? ಅದು ಸೇವೆ ಅಲ್ವೆ ? ಸಿಕ್ಕ ಸಿಕ್ಕವರ್ನೆಲ್ಲಾ ಅತಿಥಿಗಳೂಂತ ಕರಕೊಂಡ್ಬರ್ತೀರಲ್ಲ, ಅವರ ಸೇವೆ ಮಾಡಿ ಮಾಡಿ ಸತ್ತಿಲ್ಲವೆ ?'

'ಅದೆಲ್ಲ ಸರಿ, ಒಪ್ಪಿಕೊಳ್ಳುತ್ತೇನೆ. ಆದರೆ ಬಾ ನನ್ನ ಕಣ್ಣ ಮುಂದೆ ಭಾರತಪುತ್ರನ ಭವಿಷ್ಯ ಸದಾ ಕುಣಿಯುತ್ತಿದೆ – ನನ್ನನ್ನು ಸರಿಯಾಗಿ ಅರ್ಥಮಾಡಿಕೊಳ್ಳದೆ ಸಾಧಾರಣ ಸ್ತ್ರೀಯಂತೆ ಬಣ್ಣಕ್ಕೆ ಬೆರಗಾಗಿದ್ದೀಯೆ. ನಾನೇನು ಹೇಳಲಿ ? ಹೇಗೆ ಹೇಳಿ ನಾನು ಹೇಳಿದಂತೆ ಕೇಳದಿದ್ದರೆ ನನ್ನ ನಿನ್ನ ದಾರಿ ಕವಲೊಡೆದಂತೆ !' ಬಾ ಹೆದರಿದರು. ಮನಸ್ಸಿಲ್ಲದ ಮನಸ್ಸಿನಲ್ಲಿ ಒಡವೆಗಳನ್ನೆಲ್ಲ ಒಪ್ಪಿಸಿಬಿಟ್ಟರು. ಆ ಹೊನ್ನು ಆಪತ್ಕಾಲದಲ್ಲಿ ಸಾವಿರಾರು ಜನರಿಗೆ ಅನ್ನವಾಯ್ತು. ಅದೇ ಮೊದಲುಗೊಂಡು ನಿಧಿ ಬಹು ದೊಡ್ಡ ಪ್ರಮಾಣದಲ್ಲಿ ಶೇಖರವಾಯ್ತು.

*******

'ಅವಶ್ಯಕತೆಯು ಆವಿಷ್ಕಾರದ ತಾಯಿ' ಎಂಬುದು ಗಾದೆಯ ಮಾತು. ಆದರೆ ಅದರ ಸತ್ಯವೆನಿಸಿದ್ದು ಗಾಂಧೀಜಿಯ ಜೀವನದಲ್ಲಿ. ಅಲ್ಲದೆ ಮಹಾತ್ಮನ ಬಾಳು ರೂಪಿತವಾಗಬೇಕಾದರೆ ನಿತ್ಯಜೀವನದ ಸಾಧಾರಣ ಅಂಶಗಳ ಅರಿವೂ ಅವನಿಗಿರಬೇಕು. ಎಲ್ಲ ರೀತಿಯ ಅನುಭವವಿಲ್ಲದವನ ಬಾಳು ಅಪೂರ್ಣವೆನಿಸುತ್ತದೆ. ಅದರಂತೆ, ಗಾಂಧೀಜಿ ಜೀವನದ ಪ್ರತಿಯೊಂದು ಹೆಜ್ಜೆಯನ್ನೂ ಎಚ್ಚರದಿಂದ ಇಟ್ಟಿದ್ದಾರೆ. ಅವರಿಟ್ಟ ಒಂದೊಂದು ಪಾದದ ಗುರುತೂ ಒಂದೊಂದು ಪದವಿಯಾಗಿ

ಪರಿಣಮಿಸಿ ವಿಶ್ವ ಮಾನವನ ಮುನ್ನಡೆಯ ಮಾರ್ಗದರ್ಶಕ ಕುರುಹುಗಳಾಗಿ ಉಳಿದಿವೆ. ನಡೆಯುವಾಗ ಮುಳ್ಳು ಹೊಕ್ಕರೆ ಅದು ತಪ್ಪೆಂದೇ ಅದರ ಭಾವನೆ. ಏಕೆಂದರೆ ಅಹಂಕಾರದಿಂದಲೊ, ಅಸಡ್ಡೆಯಿಂದಲೊ ತಾನು ನಡೆದದ್ದರಿಂದಲೇ ಆ ಮುಳ್ಳು ಹೊಕ್ಕದ್ದು. ಎಚ್ಚರಿಕೆಯಿಂದ ಎಲ್ಲೆಡೆ ದೃಷ್ಟಿ ಇಟ್ಟು ನಡೆದಿದ್ದರೆ ಆ ಮುಳ್ಳು ತಾಕುತ್ತಿರಲಿಲ್ಲವೆಂದೇ ಅವರ ಭಾವನೆ.

ಒಮ್ಮೆ ಗಾಂಧೀಜಿ ಒಬ್ಬ ಆಂಗ್ಲ ಕ್ಷೌರಿಕನ ಅಂಗಡಿಗೆ ಹೋದರು. ಅಂಗಡಿಯವ ಕ್ಷೌರಮಾಡಲು ನಿರಾಕರಿಸಿದ. ಗಾಂಧಿ, 'ಇದು ಒಳ್ಳೆಯದೇ ಆಯಿತು. ನಮ್ಮ ಕೆಲಸವನ್ನು ನಾವು ಮಾಡಿಕೊಳ್ಳುವುದರಿಂದ ಒಳಿತು. ಮಿತವ್ಯಯದ ಜೊತೆಗೆ 'ತೃಪ್ತಿ' ಎಂದುಕೊಂಡು ಕತ್ತಿ ಕತ್ತರಿಗಳನ್ನು ತಂದು ಮಕ್ಕಳ ಕೂದಲು ಕತ್ತರಿಸಿ ತಾವೂ ಕತ್ತರಿಸಿಕೊಂಡರು. ದಿನಕ್ರಮೇಣದಲ್ಲಿ ಒಳ್ಳೆ ಕ್ಷೌರಿಕರೇ ಆದರಂತೆ ! ಅದೇ ರೀತಿ ಅವನಿಗೆ ಬಟ್ಟೆಗಳನ್ನೂ ಕೊಡುತ್ತಿರಲಿಲ್ಲ. ಕಾರಣ ಅಗಸನ ಒಗೆತ ಗಾಂಧೀಗೆ ಪ್ರಿಯವಾಗುತ್ತಿರಲಿಲ್ಲ ಅವರೇ ತಮ್ಮ ಬಟ್ಟೆಗಳಿಗೆ ಗಂಜಿಹಾಕಿ, ಇಸ್ತ್ರಿಮಾಡಿ ತೊಟ್ಟುಕೊಳ್ಳುತ್ತಿದ್ದರಂತೆ. ಗಂಜೀವಿದಾನ ಮೊದಮೊದಲು ಅವರಿಗೆ ತಿಳಿದಿರಲಿಲ್ಲ. ಆದ್ದರಿಂದ ಕೋರ್ಟಿನಲ್ಲಿ ವಾದಮಾಡಲು ಎದ್ದಾಗ ಅಂಗಿಯ ಮೇಲೆ ಒಣಗಿ ಪೊರೆಗಟ್ಟಿದ್ದ ಗಂಜಿ ಪುಡಿಪುಡಿ ಯಾಗಿ ಬಿದ್ದು ಸಹ ವಕೀಲರ ಗೇಲಿಗೆ ಕಾರಣವಾಗಿತ್ತಂತೆ ! 'ಕಾಲಕ್ರಮೇಣ, ನಾನು ಒಳ್ಳೆಯ ಅಗಸನಾದೆ' ಎನ್ನುತ್ತಾರೆ ಗಾಂಧೀಜಿ.

ಅವರು ಉತ್ತಮ ದಾದಿಯೂ ಹೌದಂತೆ. ಕಸ್ತೂರಿಬಾ ದಕ್ಷಿಣ ಆಫ್ರಿಕೆಗೆ ಬಂದಾಗ ಪೂರ್ಣ ಗರ್ಭಿಣಿಯಾಗಿದ್ದಳು. ಹರಿ ಲಾಲ್, ಮಣಿಲಾಲ್ ಎಂಬ ಮಕ್ಕಳಿದ್ದರು. ಇಲ್ಲಿಗೆ ಬಂದಮೇಲೆ ರಾಮದಾಸ್, ದೇವದಾಸ್ ಎಂಬ ಮಕ್ಕಳು ಹುಟ್ಟಿದರು. ಯಾವ ಮಗುವಿನ ಬಾಣಂತನಕ್ಕೂ ಗಾಂಧಿ ಹೆಚ್ಚು ಹಣ ವ್ಯಯಮಾಡಲಿಲ್ಲವಂತೆ. ಅವಶ್ಯಕವಾದ ಕೆಲ ದಿನಗಳ ಮಟ್ಟಿಗೆ ಕೆಲಸ ದವಳನ್ನಿಟ್ಟುಕೊಂಡು ಕಡೆಗೆ ತಾವೇ ದಾದಿಯಾದರಂತೆ. ಒಟ್ಟಿನಲ್ಲಿ ಅವರಿಗೆ ಜೀವನದ ವಿವಿಧ ಕ್ಷೇತ್ರಗಳ ಅರಿವಿತ್ತು. ಪೂರ್ಣಾನು ಭವ ಇತ್ತು ಎಂದು ಹೇಳಬಹುದು.

ಗಾಂಧಿ ಬಿಡುವು ಮಾಡಿಕೊಂಡು ಗೀತೆಯನ್ನು ಓದಿದರು. ಅದರ ಸಾರಸರ್ವಸ್ವವನ್ನು ತಮ್ಮದಾಗಿಸಲು ಯತ್ನಿಸಿದರು. ತಮ್ಮ ಜೀವನದ ಎಲ್ಲ ಸಮಸ್ಯೆಗಳಿಗೆ ಗೀತೆ ಉತ್ತರವಾಯಿತು. ಅದನ್ನು ತುಂಬ ಆಸಕ್ತಿಯಿಂದ ಅಭ್ಯಸಿಸಿ ತಮ್ಮ ಜೀವನದಲ್ಲಿ ರೂಪಿಸಿಕೊಳ್ಳಬಯಸಿದರು. ಅದರಲ್ಲಿನ ಸ್ಥಿತಪ್ರಜ್ಞ ದರ್ಶನವಂತೂ ಅವರ ಹೃದಯವನ್ನು ಸೂರೆಗೊಂಡಿತು. ಗೀತೆ ನುಡಿದಂತೆ ತಾವು ನಡೆಯಬೇಕೆಂದು ದೃಢನಿಶ್ಚಯ ಮಾಡಿದರು. ಅದರಂತೆಯೇ ನಡೆದರು. ಅನೇಕರಿಗೆ ಕಲಿಸಿದರು. ಹರಿಶ್ಚಂದ್ರ ನಾಟಕವೂ ಅವರ ಬಾಳನ್ನು ಹದಗೊಳಿಸಿತು. ಸತ್ಯ ಹರಿಶ್ಚಂದ್ರನಂತೆ ನಾನೇಕೆ ಸತ್ಯ ಪರಿಪಾಲಕನಾಗಿ ಬಾಳಬಾರದು? ಕಾವು ಕೇವಲ ಒಮ್ಮೆ ಓದಿ ಬಿಸಾಡುವ ಹೀನವಸ್ತುವೆ? ಅದು ಗುರು, ದೈವ, ಮಾನವ ಜೀವನದ ಸರ್ವಸಾರ. ಅಲೌಕಿಕದ ಮಹಾಮಾರ್ಗದರ್ಶಿ ಅದ ಲ್ಲವೆ? ಇಂತಹ ಗ್ರಂಥಾಭ್ಯಾಸ ತನ್ನ ಜೀವನದಲ್ಲಿ ಪರಿಣಾಮಕಾರಿಯಾದ ವಸ್ತುವಾಗದಿದ್ದರೆ ಅದನ್ನು ಓದಿಯೂ ವ್ಯರ್ಥ ಎಂದು ಭಾವಿಸಿ, ಅದು ನುಡಿದಂತೆ ನಡೆದರು. ಹೆನ್ರಿ ಎಸ್. ಎಲ್. ಪೋಲಕ್ ಎಂಬ ಗಾಂಧೀಜಿಯ ಆತ್ಮೀಯ ವ್ಯಕ್ತಿ ರಸ್ಕಿನನ 'Unto this last' ಎಂಬ ಗ್ರಂಥವನ್ನು ಕೊಟ್ಟರು. ಗಾಂಧೀಜಿಗೆ ಇದು ಬಹಳ ಪ್ರಿಯವಾದ ಪುಸ್ತಕ. ಅದರಂತೆಯೇ ಟಾಲ್‌ಸ್ಟಾಯ್‌ರ ಅನೇಕ ಕೃತಿಗಳನ್ನು ಓದಿದರು. ಆಗಾಗ ಬೈಬಲ್, ಖೊರಾನ್‌ಗಳನ್ನು ತಿರುವಿಹಾಕಿದರು. ವೇದ, ಉಪನಿಷತ್ತುಗಳ ಸಾರವನ್ನು ಗ್ರಹಿಸಿದರು. ಎಲ್ಲ ಗ್ರಂಥಗಳೂ ಅವರ ಹೃದಯವನ್ನು ಕಟ್ಟಿದವು, ಅಲ್ಪತೆಯನ್ನು ಮೆಟ್ಟಿದವು.

'ದಿ ಇಂಡಿಯನ್ ಒಪಿನಿಯನ್' ಎಂಬ ಪತ್ರಿಕೆಯನ್ನು ಗಾಂಧಿ ಹೊರಡಿಸುತ್ತಿದ್ದರು. ಫೀನಿಕ್ಸ್ ಫಾರಂ ಕೊಂಡನಂತರ ತಮ್ಮ ಮುದ್ರಣಾಲಯವನ್ನೂ, ತಮ್ಮ ಕುಟುಂಬ ಪರಿವಾರವನ್ನೂ ಅಲ್ಲಿಗೆ ವರ್ಗಾಯಿಸಿದರು. ಪ್ರತಿಕೆಯ ಮುಖಾಂತರ ಭಾರತೀಯರ ಬೇಡಿಕೆಗಳನ್ನು ಪ್ರಕಟಿಸುತ್ತಲಿದ್ದರು. ಅಂದಿನ ಸ್ಥಿತಿಗತಿಗಳನ್ನು ಚಿತ್ರಿಸುತಿದ್ದರು. ಭಾರತೀಯರ ಬಗ್ಗೆ ಸರ್ಕಾರ ತಿಳಿಯಬಹುದಾದ್ದನ್ನು ನಿರ್ದೇಶಿಸುತ್ತಿದ್ದರು. ಹೀಗೆ ಸಾಗಿತು ಪತ್ರಿಕೋದ್ಯಮ.

ಗಾಂಧಿ ಇತ್ತೀಚೆಗೆ ಮಸಾಲೆಯನ್ನು ಉಪಯೋಗಿಸುತ್ತಿರಲಿಲ್ಲ. ಏಕೆಂದರೆ ಅದು ಕಾಮಕ್ರೋಧಗಳ ಉತ್ತೇಜಕ ವಸ್ತು ಎಂದು. ಹಾಗೆ ಸರಳ ಜೀವನ ಸಾಗಿಸಲೆತ್ನಿಸಿ ಕಂದಮೂಲಗಳಲ್ಲೇ ಕಾಲಹಾಕಿದರು. ಕಾಮಸಂಬಂಧವನ್ನು ದೂರಮಾಡಲು ನಿಶ್ಚಯಿಸಿ ಜುಲೂದಂಗೆ ಮುಗಿದನಂತರ ತಮ್ಮ ಪ್ರತಿಜ್ಞೆಯನ್ನು ಕಸ್ತೂರಿಬಾಗೆ ತಿಳಿಸಿದರು. ಗಾಂಧಿ ದಂಪತಿಗಳು ೧೯೦೬ರಂದು ಬ್ರಹ್ಮಚರ್ಯ ದೀಕ್ಷಾಪಟುಗಳಾದರು. ಆಜೀವಪರ್ಯಂತ ಅದನ್ನು ಪಾಲಿಸುತ್ತ ಬಂದರು.

ಹೀಗೆ ಹಲವು ಮುಖಗಳಾಗಿ ಹರಿಯಿತು ಅವರ ಬಾಳವಾಹಿನಿ. ಹರಿದಲ್ಲೆಲ್ಲ ಹಸಿರು ತುಂಬಿ, ಲೋಕದಚ್ಚರಿಯೆನಿಸಿತು.

********

ಅಂದು ಭಾರತೀಯರ ಒಂದು ಪ್ರಚಂಡ ಸಭೆ ಸೇರಿತ್ತು. ಜೋಹಾನ್ಸ್‌ಬರ್ಗಿನ ಇಂಪೀರಿಯಲ್ ಥಿಯೇಟರಿನಲ್ಲಿ ಬ್ರಿಟಿಷ್ ಇಂಡಿಯನ್ ಸಂಘದ ಅಧ್ಯಕ್ಷನೂ ದೊಡ್ಡ ವ್ಯಾಪಾರಿಯೂ ಆದ ಅಬ್ದುಲ್ ಘನಿ ಸಭಾಧ್ಯಕ್ಷ, ಸೇಠ್ ಹಾಜೀ ಹಬೀಬ್ ಮುಖ್ಯ ಭಾಷಣಕಾರ. ಆ ಸಭೆ ಸೇರಿಸಿದ ಚಾಲಕಶಕ್ತಿ ಗಾಂಧಿ ಸಹ ವೇದಿಕೆಯ ಮೇಲೆ ಉಪಸ್ಥಿತರಿದ್ದರು. ತಮಿಳು, ಹಿಂದಿ, ಇಂಗ್ಲಿಷ್ ಮೊದಲಾದ ಭಾಷೆಗಳಲ್ಲಿ ಭೀಕರ ಭಾಷಣಗಳಾದುವು. ಗಾಂಧೀಜಿ ದಕ್ಷಿಣ ಆಫ್ರಿಕೆಯ ಭಾರತೀಯರ ಸ್ಥಿತಿಗತಿಗಳನ್ನು ವಿವರಿಸಿ, ಹಕ್ಕು ಭಾಧ್ಯತೆಗಳಿಗೆ ಸರ್ವರೂ ಸದಾ ಸಿದ್ಧರಿರಬೇಕೆಂದು ಬೇಡಿಕೊಂಡರು. ಬಿಳಿಯರ ಸರ್ಕಾರ ಭಾರತೀಯರಿಗೆ ಸಂಬಂಧಿಸಿದಂತೆ ಒಂದು ಕಾನೂನು ತಂದಿತ್ತು. ಅದರಂತೆ ಪ್ರತಿ ಭಾರತೀಯ ಗಂಡು, ಹೆಣ್ಣು ೮ ವರ್ಷಕ್ಕೆ ಮೇಲ್ಪಟ್ಟವರು ತಮ್ಮ ಹೆಸರನ್ನು ಸರ್ಕಾರಕ್ಕೆ ತಿಳಿಸಿ, ಹೆಬ್ಬೆಟ್ಟಿನ ಗುರುತು ಒತ್ತಿ ಅಪ್ಪಣೆ ಪತ್ರ ಪಡೆಯಬೇಕಾಗಿತ್ತು. ಎಲ್ಲಿ ಕೇಳಿದರೆ ಆ ಚೀಟಿ ತೋರಿಸಬೇಕು. ಇಲ್ಲವಾದರೆ ಅವರಿಗೆ ಸೆರಮನೆ ಅಥವಾ ಗಡೀಪಾರು ಶಿಕ್ಷೆ ಕಾದಿರುತ್ತಿತ್ತು. ಇದಕ್ಕೆ ವಿರುದ್ಧದ ಅಂದಿನ ಸಭೆ ಪ್ರತಿಭಟನೆ ಸೂಚಿಸಿ ಠರಾವು ಮಾಡಿತು.

ಚಳವಳಿ ಪ್ರಾರಂಭವಾಯಿತು. ಆದರೆ ಅವರ ಚಳವಳಿ ಶಾಂತರೀತಿ ಕೂಡಿದ್ದಿರಬೇಕೆಂದು ಗಾಂಧೀಜಿ ತಿಳಿಸಿ, 'ಸತ್ಯಾಗ್ರಹ' ಎಂದು ಹೆಸರಿತ್ತರು. ಅಂದಿನ ಆ ಆಚರಣಾ ಪದ್ಧತಿಗೆ. ಸತ್ಯಾಗ್ರಹ ಬೇರೆಯವರಿಗೆ ನೋವನ್ನು ಉಂಟುಮಾಡಿ ಸತ್ಯವನ್ನು ಸ್ಥಾಪಿಸುವುದಲ್ಲ, ತಾನೇ ನೋವನ್ನು ಅನುಭವಿಸಿ ಸಿದ್ಧಾಂತಿಸುವುದು ಎಂದು ಸತ್ಯಾಗ್ರಹದ ಅರ್ಥವನ್ನು ಸಾರಿ ಹೇಳಿದರು. ಸತ್ಯಾಗ್ರಹದಲ್ಲಿ ಭಾಗವಹಿಸಿದ ಬಹಳ ಮಂದಿ ಸೆರೆಯಾಳುಗಳಾದರು. ಗಾಂಧೀಜಿಗೆ ೨ ತಿಂಗಳ ಶಿಕ್ಷೆ ವಿಧಿತವಾಯ್ತು. ಇದು ಅವರ ಸೆರೆಮನೆಯ ಮೊದಲ ಅನುಭವ.

ಕೆಲವು ದಿನಗಳ ನಂತರ ಜನರಲ್ ಸ್ಮಟ್ಸ್‌ಗೂ ಗಾಂಧಿಗೂ ಭೇಟಿಯಾಯಿತು. ಅದರ ಪ್ರಕಾರ ಗಾಂಧಿಗೂ ಅವರ ಅನುಯಾಯಿಗಳಿಗೂ ಬಿಡುಗಡೆಯಾಯಿತು. ಅಲ್ಲದೆ ರಿಜಿಸ್ಟ್ರೇಷನ್ ನಡೆಯುತ್ತಿರಬೇಕೆಂದೂ, ಇಷ್ಟರಲ್ಲಿಯೇ ಆ ಕಾನೂನನ್ನೂ ರದ್ದುಗೊಳಿಸುವುದಾಗಿ ಸ್ಮಟ್ಸ್ ಅವರನ್ನು ಮೋಸಗೊಳಿಸಿದ. ಇದರಿಂದ ಅನೇಕ ಭಾರತೀಯರು ತಪ್ಪು ತಿಳಿದುಕೊಂಡರು. ಗಾಂಧೀಜಿ ೧೫,೦೦೦ ಪೌಂಡ್ ಲಂಚ ಪಡೆದು, ಸಂಧಾನ ನಡೆಸಿ ಭಾರತೀಯರನ್ನೆಲ್ಲಾ ಬಲಿಕೊಟ್ಟರೆಂದು ಅಪಪ್ರಚಾರ ನಡೆಯಿತು.

ಫೆಬ್ರವರಿ ೧೦ರಂದು ಗಾಂಧಿ ತಮ್ಮ ಹೆಸರನ್ನು ದಾಖಲು ಮಾಡಲು ಹೊರಟರು. ತಮ್ಮ ಆಫೀಸಿನ ಹೊರಗಡೆ ಪಠಾಣರ ಗುಂಪೊಂದು ನಿಂತಿತ್ತು. ಅದರಲ್ಲಿ ಮೀರ್ ಆಲಂ ಎಂಬುವನು ಗಾಂಧೀ ಹೊರಕ್ಕೆ ಬರುತ್ತಲೇ, ಎಲ್ಲಿಗೆ ಹೋಗುತ್ತೀರಿ ?' ಎಂದು ಕೇಳಿದ. 'ನಾನು ದಾಖಲೆ ಪತ್ರ ಪಡೆ. . .'ಮಾತು ಮುಗಿಯುವುದರಲ್ಲಿ ತಲೆಗೊಂದು ಭಾರಿ ಪೆಟ್ಟು ಬಿದ್ದು ಗಾಂಧಿ ನೆಲಕ್ಕೊರಗಿದರು. ಪ್ರಜ್ಞೆ ತಪ್ಪಿ ಬಿದ್ದಿದ್ದರೂ ಹೊಡೆತ ತಪ್ಪಿರಲಿಲ್ಲ. ಆನ ಸೇರಿದರು ದಂಗೆಕೋರರನ್ನು ದಸ್ತಗಿರಿ ಮಾಡಿ ಗಾಂಧೀಜಿಯನ್ನು ಒಳಗೆ ಕರೆದೊಯ್ದರು. ಪ್ರಜ್ಞೆ ಬಂದಾಗ ಜೆ. ಡೋಕ್ ಎಂಬ ಪಾದ್ರಿ ಅಲ್ಲೇ ಇದ್ದರು. 'ಹೇಗಿದೆ?' ಎಂದರು. 'ಚೆನ್ನಾಗಿದೆ. ಹಲ್ಲು, ಪಕ್ಕೆ ಮಾತ್ರ ನೋಯುತ್ತಿದೆ. ಮೀರ್ ಆಲಂ ಎಲ್ಲಿ?' ಎಂದರು. 'ಅವನನ್ನೂ ಆ ಪಠಾಣರನ್ನೂ ದಸ್ತಗಿರಿ ಮಾಡಿದ್ದಾರೆ. 'ಛೆ, ಎಲ್ಲಾದರೂ ಉಂಟೆ? ಅವರನ್ನು ಬಿಡುಗಡೆ ಮಾಡಬೇಕು ತಾವು ಸರಿಯಾದ ಕೆಲಸಮಾಡುತಿದ್ದೇವೆಂಬುದೇ ಅವರ ಭಾವನೆ ಆದ್ದರಿಂದ ಅದರಲ್ಲಿ ತಪ್ಪು ಹುಡುಕುವುದು ಬೇಡ. ಅವರ ಮೇಲೆ ಮೊಕದ್ದಮೆ ಹೂಡಲು ನನಗಿಷ್ಟವಿಲ್ಲ.'

ಅವರ ಇಷ್ಟದಂತೆಯೇ ಆಯ್ತು. ಗಾಂಧೀಜಿ ಕೆಲದಿನಗಳವರೆಗೆ ರೆ. ಡೋಕ್ ಮನೆಯಲ್ಲೇ ವಿಶ್ರಾಂತಿ ಪಡೆದರು. ಎರಡು ಹಗಲು ಮುಗಿದು ಮೂರನೇ ಹಗಲು ಬಂದಿತ್ತು. ಅಂದು ಗಾಂಧೀಜಿ ಮನಸ್ಸಿಗೆ ಏಕೋ ಬೇಸರವಾಗಿತ್ತು. ಅದನ್ನು ಅಳಿಸಬೇಕಾದರೆ ಉತ್ತಮ ಗೀತೆಯೇ ಬೇಕೆನಿಸಿತು. ಅದರಿಂದಾಗಿ ಅವರು ಡೋಕ್‌ರ ಕುಮಾರಿ ಆಲಿವ್‌ಳನ್ನು ಕೂಗಿದರು. ಆಕೆ ಬಂದು 'ಏನು ಕೂಗಿದಿರಾ?'

'ಹೌದಮ್ಮ, ನಿನಗೆ ಹಾಡಲು ಬರುತ್ತದೆಯೆ?'

'ಓ! ಬಹಳ ಚೆನ್ನಾಗಿ, ಯಾವುದು ಹಾಡಲಿ?'

ಎಲ್ಲಿ. . ."Lead Kindly Light" - ಹಾಡು ಕೇಳೋಣ. ಹಾಡು ಆರಂಭವಾಯ್ತು–

**'ಕರುಣಾಳು ಬಾ ಬೆಳಕೆ ಮುಸಕಿದೀ ಮುಬ್ಬಿನಲಿ**
**ಕೈಹಿಡಿದು ನಡೆಸೆನ್ನನು**
**ಇರುಳು ಕತ್ತಲೆಯ ಗವಿ, ಮನೆ ದೂರ, ಕನಿಕರಿಸಿ**

**ಕೈ ಹಿಡಿದು ನಡೆಸೆನ್ನನು**
**ಹೇಳಿ ನನ್ನಡಿ ಇಡಿಸು. ಬಲು ದೂರ ನೋಟವನು**
**ಕೇಳೆನೊಡನೆಯೆ ಸಾಕು ನನಗೊಂದು ಹೆಜ್ಜೆ**
**ಮುನ್ನ ಇಂತಿರದಾದೆ ; ನಿನ್ನ ಬೇಡದೆ ಹೋದೆ**
**ಕೈಹಿಡಿದು ನಡೆಸು ಎನುತ**
**ನನ್ನ ದಾರಿಯ ನಾನು ನೋಡಿ ಹಿಡಿದೆನು. ಇನ್ನು**
**ಕೈ ಹಿಡಿದು ನಡೆಸು ನೀನು**
**ಮಿರುಗು ಬಣ್ಣಕೆ ಬೆರೆತು, ಭಯ ಮರೆತು ಕೊಬ್ಬಿದೆನು**
**ಮರೆದಾಯತು ನೆನೆಯದಿರು ಹಿಂದಿನದನೆಲ್ಲ**
**ಇಷ್ಟು ದಿನ ಸಲಹಿರುವ ಮೂರ್ಖನನು ಮುಂದೆಯೂ**
**ಕೈ ಹಿಡಿದು ನಡೆಸದಿಹೆಯಾ** ?
**ಕಷ್ಟದಡವಿಯ ಕಳೆದು, ಬೆಟ್ಟಹೊಳೆಗಳ ಹಾದು**
**ಇರುಳನ್ನು ನೂಕದಿಹೆಯಾ** ?
**ಬೆಳಗಾಗ ಹೊಳೆಯದೆ ಹಿಂದೊಮ್ಮೆ ನಾನೊಲಿದು**
**ಈ ನಡುವೆ ಕಳಗೊಂಡ ದಿವ್ಯಮುಖ ನಗುತ** **('ಶ್ರೀ' ಅವರ ಅನುವಾದ)**

ಅವಳ ರಾಗಾಲಾಪನೆಯ ಸೆಲೆಯಲ್ಲಿ ಗಾಂಧೀಜಿಯ ಮನಸ್ಸು ಮೂರ್ಛೆ ಹೋಯ್ತು. ಮೌನ ಆವರಿಸಿತು. ಆ ಕೊಠಡಿಯಲ್ಲಿ, ಆಗಾಗ ಕನವರಿಕೆಯಂತೆ ಮಲಗಿದ್ದಂತೆಯೇ ಗಾಂಧಿ ನುಡಿಗಳನ್ನು ಮೆಲಕುಹಾಕುತ್ತಿದ್ದರು.

'ಕರುಣಾಳು ಬಾ ಬೆಳಕೆ. . .ಇಷ್ಟು ದಿನ. . .ಮೂರ್ಖನನು. . .ಮುಂದೆ. . .ನಡೆಸದಿಹೆಯಾ ?

*********

ಸ್ಮಟ್ಸ್ ತನ್ನ ನಾಲಗೆಯನ್ನು ಉಳಿಸಿಕೊಳ್ಳಲಿಲ್ಲ. ಗಾಂಧೀಜಿಯ ನಂಬಿಕೆಯನ್ನು ಹಲವರು ಗೇಲಿ ಮಾಡಿದರು. ಆದರೂ ಗಾಂಧಿ ಎದೆಗುಂದಲಿಲ್ಲ. ಮತ್ತೆ ಅಸಹಕಾರ ಚಳವಳಿ ಆರಂಭಿಸಿದರು. ಈ ಮುಂಚೆ ಹರ್ಮನ್ ಕಾಲೇಜಿನ ಬಾಕ್ ಎಂಬುವನ ಪರಿಚಯವೂ ಗಾಂಧಿಗೆ ಆಗಿತ್ತು. ಆತ ಜೋಹಾನ್ಸ್‌ಬರ್ಗಿಗೆ ೨೧ ಮೈಲಿ ದೂರದಲ್ಲಿದ್ದ ೧೧೦೦ ಎಕರೆಯನ್ನು ಕೊಂಡು ಸತ್ಯಾಗ್ರಹಿಗಳಿಗೆ ಬಿಟ್ಟುಕೊಟ್ಟ. ಅದನ್ನು ಗಾಂಧಿ ಸ್ವೀಕರಿಸಿ 'ಟಾಲ್‌ಸ್ಟಾಯ್ ಫಾರಂ' ಎಂದು ಹೆಸರಿಟ್ಟರು. ರಷ್ಯಾದ ಮಹಾ ಸಾಹಿತಿ ಟಾಲ್‌ಸ್ಟಾಯ್‌ರ ಬಗ್ಗೆ ಗಾಂಧೀಜಿಗೆ ವಿಶೇಷ ಗೌರವವಿತ್ತು. ಅವರಿಗೂ ಸಹ ಗಾಂಧೀಜಿಯ ಬಗ್ಗೆ ತುಂಬಾ ಪ್ರೇಮವಿತ್ತು. ಗೌರವ ಪ್ರೇಮಗಳ ಸಾಕ್ಷಿಗಾಗಿ 'ಗಾಂಧಿ ಟಾಲ್‌ಸ್ಟಾಯ್ ಆಶ್ರಮ' ತೆರೆದರು. ಈ ಆಶ್ರಮದ ವಿವರವನ್ನು ಕಾಲೆನ್‌ಬಾಕ್ ಟಾಲ್‌ಸ್ಟಾಯ್ ಅವರಿಗೆ ವಿವರಿಸಿ ಪತ್ರ ಬರೆದಿದ್ದರು. ಸತ್ಯಾಗ್ರಹಿಗಳ ಶಿಸ್ತಿನ ಜೀವನ ಈ ಆಶ್ರಮದಲ್ಲಿ ಸಾಗುತ್ತಿತ್ತು. ಅಲ್ಲದೆ ಅವರು ಜೈಲುವಾಸ ಅನುಭವಿಸುವಾಗ ಅವರ ಕುಟುಂಬಕ್ಕೆ ತೊಂದರೆಯಾಗದಂತೆ ಕಾಪಾಡಿತು. ಅಲ್ಲಿ ಅನೇಕ ಬಗೆಯ ಹಣ್ಣು ತರಕಾರಿಗಳನ್ನು ಬೆಳೆದು ಉಪಯೋಗಿಸುತ್ತಿದ್ದರು.

ಗಾಂಧೀಜಿ ಮತು ಅವರ ಅನುಯಾಯಿಗಳು ಸುಮಾರು ೪೫ ಬಾರಿ ಸೆರಮನೆಯ ಸುಖವನ್ನು ಅನುಭವಿಸಿದರು. ಸತ್ಯಾಗ್ರಹಿಗಳ ಸತ್ವಪರೀಕ್ಷೆಯೇ ಅದಾಗಿತ್ತು. ಅನೇಕ ಜನ ಸತ್ಯಾಗ್ರಹಿಗಳು ಹೆದರಿ ಬಿಟ್ಟುಬಿಟ್ಟರು. ಸರ್ಕಾರ ಕೆಲವರ ಆಸ್ತಿಪಾಸ್ತಿಗಳನ್ನು ಕಿತುಕೊಂಡು ಭಾರತಕ್ಕೆ ಓಡಿಸಿತು. ಅನೇಕ ರೀತಿಯ ಚಿತ್ರವಿಚಿತ್ರ ಕ್ರೂರ ಹಿಂಸೆಗಳಿಗೆ ಗುರಿಯಾಗಿ ಪ್ರಾಣಗಳನ್ನು ನೀಗಿಕೊಳ್ಳಬೇಕಾಯ್ತು. ಟ್ರಾನ್ಸ್‌ವಾಲ್‌ನಲ್ಲಿದ್ದ ೧೩,೦೦೦ ಭಾರತೀಯರಲ್ಲಿ ೨೫೦೦ ಜನ ಸೆರೆಯಾಳಾದರು. ೬೦೦೦ ಜನ ಆ ಸಂಸ್ಥಾನವನ್ನು ಬಿಟ್ಟು ಓಡಿದರು. ಆದರೂ ದೃಢಮನಸ್ಕರಾದ ಕೆಲವರು ತಮ್ಮ ಗುರಿ ಮುಟ್ಟುವವರೆಗೂ ಹಿಂಜರಿಯಲಿಲ್ಲ.

ಕಡೆಗೂ ಧರ್ಮಕ್ಕೆ ಜಯ ದೊರಕಿತು. ಗಾಂಧೀಜಿಗೂ ಸ್ಮಟ್ಸ್‌ನಿಗೂ ಮಾತುಕತೆ ನಡೆದು ೧೯೧೪ರ ಜುಲೈ ತಿಂಗಳು 'ದಿ ಇಂಡಿಯನ್ ರಿಲೀಫ್ ಬಿಲ್' ಪಾಸ್ ಆಯ್ತು. ಅದರ ಪ್ರಕಾರ –

೧. ಹಿಂದೂ, ಮುಸ್ಲಿಂ, ಪಾರ್ಸಿ ಮದುವೆಗಳು ನ್ಯಾಯಬದ್ಧವಾದವು

೨. ನೇಟಾಲಿನಲ್ಲಿ ನಿಲ್ಲಲು ಇಷ್ಟಪಟ್ಟ ಕರಾರು ಕೂಲಿಗಳ ಮೇಲಿದ್ದ ಮೂರುವರೆ ಪೌಂಡ್ ತೆರಿಗೆ ತೆಗೆದುಹಾಕಲ್ಪಟ್ಟು, ಬಾಕಿಗಳು ರದ್ದುಗೊಳಿಸುವುದು

೩. ೧೯೨೦ರ ಹೊತ್ತಿಗೆ ಭಾರತದಿಂದ ಬರುತ್ತಿದ್ದ ಕರಾರು ಕೂಲಿಗಳನ್ನು ನಿಲ್ಲಿಸಬೇಕು,

೪. ಒಂದು ಸಂಸ್ಥಾನದಿಂದ ಇನ್ನೊಂದಕ್ಕೆ ಭಾರತೀಯರು ಪ್ರವೇಶಿಸಕೂಡದು. ಆದರೆ ದಕ್ಷಿಣ ಆಫ್ರಿಕೆಯಲ್ಲಿ ಹುಟ್ಟಿದ ಭಾರತೀಯರು ಕೇಪ್ ಕಾಲೋನಿಗೆ ಹೋಗಬಹುದು.

ಅಂದು ಗಾಂಧೀಜಿಯ ಆನಂದಕ್ಕೆ ಪಾರವಿಲ್ಲ, ಮಾನವನ ಹಕ್ಕು ಬಾಧ್ಯತೆಗಳನ್ನು ದೊರಕಿಸಿಕೊಂಡ ಆನಂದ ಒಂದು ಕಡೆ, ಅಹಿಂಸಾ ಸ್ವರೂಪದ ಸತ್ಯಾಗ್ರಹ ಪೂರ್ಣ ಯಶಸ್ವಿಯಾದ ಆನಂದ ಮತ್ತೊಂದು ಕಡೆ. ಇದರಿಂದ ಅವರ ಎದೆ ಹದವಾಯ್ತು. ಸತ್ಯಪ್ರೇಮಗಳಲ್ಲಿ ಧರ್ಮ–ದೇವರುಗಳಲ್ಲಿ ಅವರ ನಂಬಿಕೆ, ಭಕ್ತಿ, ಪೂಜ್ಯಭಾವ ವೃದ್ಧಿಯಾಗಿ ಜಗಚ್ಚೇತರನ್ನಾಗಿ ಮಾಡಿತು.

********

'ಸ್ವಾಗತ'

'ಭಾರತದ ಬಾಪುವಿಗೆ ಸ್ವಾಗತ. ದಯಮಾಡಿ, ಪವಿತ್ರಾತ್ಮನ ಪಾದಸ್ಪರ್ಶದಿಂದ 'ಶಾಂತಿನಿಕೇತನ' ಪಾವನ, ಸಮಸ್ತ ವಿಶ್ವಭಾರತಿಯೇ ಪುನೀತ. ಮೇಲೇರು. ಮಹಾತ್ಮನ ಗದ್ದುಗೆಯ ಮೇಲೇರು.'

'ಮಹಾತ್ಮ !. . .ಗುರುದೇವ್ ಆವುದೋ ಹೊಸ ನುಡಿಯೊಂದು ಕವಿಯ ಹೃದಯದಿಂದ ಸಿಡಿದಂತಾಯಿತಲ್ಲಾ!'

'ಸರಿಯಾಗಿ ಹೇಳಿದಿರಿ ಬಾಪು. ಹೌದು ! 'ಮಹಾತ್ಮ' ಎಂಬ ಪದವನ್ನು ನಾನು ಬಳಸಿದೆ ನಿಜ. ಆದರೆ ಅದು ನನಗರಿಯದೆ ಹೊರಬಿದ್ದ ಮುತ್ತು. ನಿಜಕ್ಕೂ ಅದು ನನ್ನ ಹೃದಯಾಂತರಾಳದಿಂದ ಸಿಡಿದೆದ್ದು, ನಾಲಗೆ ತುದಿಯಿಂದ ಜಾರಿದ್ದಲ್ಲ. ಅಲ್ಲದೆ ನಾನು ಬಳಸಿದ ಆ ಪದದಲ್ಲಿ ಔಚಿತ್ಯ ಇದೆ ಎಂದು ನನ್ನ ಭಾವನೆ.'

'ಗುರುದೇವ್, ಅಂತಹ ಮಹಾತ್ಮೆ ನನ್ನಲ್ಲೇನಿದೆ ? ಅಲ್ಪನಾದ ನನಗದು ಬೆಟ್ಟದ ಕಿರೀಟದಂತೆ'

'ನಿಮ್ಮ ಈ ಸದ್ಭಾನೆಯೇ ನಿನ್ನನ್ನು ಮಹಾತ್ಮನನ್ನಾಗಿಸಿದೆ ಬಾಪೂಜಿ. ಮೋಹನದಾಸನಲ್ಲಿ ಅಡಗಿರುವ ಮಹಾತ್ಮನನ್ನು ನಾನು ಕಂಡಿದ್ದೇನೆ, ಅದರಿಂದಲೇ ನನಗೆ ತಿಳಿಸದೆಯೇ ನನ್ನಾತ್ಮ, ಮಹಾತ್ಮನೆಂದು ಸಂಬೋಧಿಸಿದೆ !'

'ಏನೋ ಕವಿಗಳು ಕಲ್ಪನಾಜೀವಿಗಳು. ರವಿ ಕಾಣದ್ದನ್ನು ಕಂಡೆವೆನ್ನುವಿರಿ. ಕಸವನ್ನು ರಸವನ್ನಾಗಿಸುವ ಮೋಡಿ ಇದೆ ನಿಮ್ಮಲ್ಲಿ.'

'ಇಲ್ಲ ಮಹಾತ್ಮ, ಹಾಗಲ್ಲ. ಇದು ಕೇವಲ ಕಲ್ಪನೆಯ ಮಿಡಿತವಲ್ಲ. ಅಪ್ರಯತ್ನದಿಂದ ಬಂದ ಹೃದಯದ ಉದ್ಗಾರ. ಇದನ್ನು ನಾನು ಸತ್ಯವೆಂದೇ ನಂಬಿದ್ದೇನೆ. ಆ ವೈಶಿಷ್ಟ್ಯಪೂರ್ಣ ಶಕ್ತಿಯೇ ಒಮ್ಮೊಮ್ಮೆ ರೂಪತಾಳಿ ಹೊಮ್ಮಿರುವುದು ಅನೇಕ ಸಲದ ಅನುಭವ. ಆದ್ದರಿಂದ ಇದನ್ನು ನಾನು ಸತ್ಯವೆಂದೇ ಭಾವಿಸುತ್ತೇನೆ ಬಾಪು.'

'ರಸಋಷಿಗಳ ಪ್ರಿಯವಾಣಿಗೆ ಧನ್ಯವಾದಗಳು. ಗುರುವಿನ ದಿವ್ಯ ದರ್ಶನದಿಂದ ನನ್ನ ಜನ್ಮ ಸಾರ್ಥಕವೆಂದು ಭಾವಿಸುತ್ತೇನೆ. ಧನ್ಯ ! ಮಹಾಕವಿ ಧನ್ಯ !! ನಿನ್ನಂತಹ ಪುತ್ರನನ್ನು ಪಡೆದ ಭಾರತಾಂಬೆ ಧನ್ಯಳು !'

'ಬಾಪು, ರಾಷ್ಟ್ರದ ಪುಣ್ಯದ ಬೆಳಸು ನೀವು, ಭವ್ಯ ಭಾರತವಷ್ಟೇ ಏಕೆ, ಪ್ರಗತಿಯ ವಿಶ್ವವೇ ನಿಮ್ಮ ನಿರೀಕ್ಷೆಯಲ್ಲಿದೆ. ಅದು ನನಗೆ ಗೊತ್ತು.

'ಇರಲಾರದು ಗುರುದೇವ್, ನಾನೊಬ್ಬ ಹುಲುಮಾನವ. ನಿಮ್ಮಂತಹ ದಿವ್ಯನಲ್ಲ. ಕವಿಯ ಕೈಲೇಖಣಿ ಖಡ್ಗಕ್ಕಿಂತ ಹರಿತ, ಶಕ್ತಿಯುತ ಎಂದು ಕೇಳಿದ್ದೇನೆ. ಆದರೆ ನಾನು ಲೇಖಣಿ ಹಿಡಿದ ಕವಿಯೂ ಅಲ್ಲ, ಖಡ್ಗ ಹಿಡಿದ ಕಲಿಯೂ ಅಲ್ಲ.'

'ಅಲ್ಲದಿರಬಹುದು. ಆದರೆ ಹೌದು ಯಾವುದು ಎಂದು ನನಗೆ ತಿಳಿದಿದೆ ಮಹಾತ್ಮ. ಅಲ್ಲದೆ, ಬಾಪೂಜಿ ಬಹು ದಿನಗಳಿಂದ ಚಿತ್ರಣಗೊಳ್ಳುತ್ತಿರುವ ಒಂದು ಅಸ್ಪಷ್ಟ ಚಿತ್ರಣವಿದೆ ನನ್ನ ಮನಸ್ಸಿನಲ್ಲಿ. ಅದಕ್ಕೆ 'ಮುಕ್ತಧಾರ' ಎನ್ನಬೇಕೆಂದಿದ್ದೇನೆ.'

'ಮುಕ್ತಧಾರ. ಏನು ಗುರುದೇವ ? ಹೆಸರು ತುಂಬ ಚೆನ್ನಾಗಿದೆ !'

'ಹೆಸರಷ್ಟೇ ಚಂದವಲ್ಲ ಬಾಪೂ. ಅದರ ವಸ್ತುವೂ ಅಷ್ಟೇ ಚಂದ ಹಾಗೂ ಗಹನ ನೋಡಿ, ಬ್ರಿಟಿಷರ ದರ್ಪ ದೌರ್ಜನ್ಯದ ಏರಿ ಎಷ್ಟು ದಿನ ತಾನೇ ತಡೆದೀತು ಭಾರತ ಜನತೆಯ ಸ್ವಾತಂತ್ರ್ಯ ಪ್ರವಾಹವನ್ನು, ಒಂದಲ್ಲ ಒಂದು ದಿನ ಅದು ಹುಚ್ಚು

ಹೊಳೆಯಾಗಿ ಕೊಚ್ಚಿ ಹರಿಯದಿದ್ದೀತೆ ? ಹರಿದೇ ಹರಿಯುತ್ತೆ ಆದರೆ ಅನೇಕ ಬಲಿದಾನಗಳು ಬೇಕು ಅದರ ಉಪಶಾಂತಿಗೆ, ಅಲ್ಲವೆ ? '

'ಏನೋ ನನಗೊಂದೂ ಅರ್ಥವಾಗುತ್ತಿಲ್ಲ ಗುರುದೇವ್. ಕವಿಗಳೊಡನೆ ಹಾರೋಣವೆಂದರೆ ನಮಗೆ ಅಷ್ಟು ರೆಕ್ಕೆ ಬಲಿತಿಲ್ಲ. ಇಲ್ಲವೇ ರೆಕ್ಕೆಗಳೇ ಮೂಡಿಲ್ಲವೆಂದರೂ ಒಪ್ಪುತ್ತದೆ !'

'ದಿನ ಬರುತ್ತದೆ ಬಾಪೂಜಿ, ದಿನ ಬರುತ್ತದೆ. ನಿಂತು ಕಾಯಬೇಕು ಅಷ್ಟೆ. ಆದರೆ ಆ ಭಾಗ್ಯ, ಈ ಜೀವಕ್ಕೆ ಇದೆಯೋ ಇಲ್ಲವೋ ಕಾಣೆ. ಆದರೂ ವಿಶ್ವಶಕ್ತ ತನ್ನಿಚ್ಛೆಯನ್ನು ಅಮರವಾಗಿಸಿಕೊಳ್ಳಲೆಂಬುದೇ ನನ್ನ ಹಾರೈಕೆ.'

'ಆಶೀರ್ವದಿತನಾದೆ ಗುರುದೇವ್. ಪರಮಾಶೀರ್ವದಿತನಾದೆ.'

'ಬಹಳ ಹೊತ್ತಿನವರೆಗೆ ಮಾತು ಮುಂದುವರೆಯಿತು. ಅಂದಿನ ಆ ದಿವ್ಯ ಸಂದರ್ಶನದ ನೋಟವನ್ನು ನೋಡಿದವರ ಕಣ್ಣಿಗೆ ಹಬ್ಬ. ಕೇಳಿದ ಕಿವಿಗಳಿಗೆ ಅಮೃತದ ಊಟ. ಸೂರ್ಯಚಂದ್ರರ ಸಮಾಗಮ ಏಕಕಾಲದಲ್ಲಿ ನಡೆದಿತ್ತು ಶಾಂತಿನಿಕೇತನದಲ್ಲಿ ಒಂದು ಕಡೆ ವಿಶ್ವಕವಿ ರವೀಂದ್ರರು, ಮತ್ತೊಂದು ಕಡೆ ವಿಶ್ವವಿಭೂತಿ ಮಹಾತ್ಮಗಾಂಧಿ. ವಿಶ್ವಭಾರತಿಯಲ್ಲಿದ್ದ ಅನೇಕರು ಹೇಳುತ್ತಿದ್ದರು. ಅದೊಂದು ಅಮೃತ ಘಳಿಗೆ, ಅಮೂಲ್ಯ ಸಮಾಗಮ ಎಂದು. ಅದನ್ನು ಕಂಡು ಕೇಳಿದ ಅವರೇ ಧನ್ಯರು.

ದಕ್ಷಿಣ ಆಫ್ರಿಕೆಯಿಂದ ಇಂಗ್ಲೆಂಡ್ ಮಾರ್ಗವಾಗಿ ಬಂದ ಬಾಪುವಿಗೆ ಅದೇ ರೀತಿಯ ಸ್ವಾಗತ ಕಾದಿತ್ತು. ಭಾರತ ಮಹಾತ್ಮನಿಗೆ ಹಾರೈಸಿತ್ತೊ ಅಥವಾ ವಿಶ್ವ ಶಕ್ತಿಯೇ 'ಮಹಾತ್ಮ'ನ ಸ್ಥಾನವನ್ನು ಬಾಪುವಿಗೆ ಮೀಸಲಿಟ್ಟಿತ್ತೊ ? ಗೋಖಲೆಯವರ ಅಪೇಕ್ಷೆಯ ಮೇರೆಗೆ ಬಾಪೂಜಿ ದೇಶದ ಎಲ್ಲ ಭಾಗಗಳಲ್ಲಿ ಸುತ್ತಿದರು. ಅನೇಕ ಗಣ್ಯವ್ಯಕ್ತಿಗಳ ಪರಿಚಯ ಮಾಡಿಕೊಂಡರು. ವಾರಣಾಸಿಯಲ್ಲಿ ಶ್ರೀಮತಿ ಅನಿಬೆಸಂಟ್, ಶಾಂತಿನಿಕೇತನದಲ್ಲಿ ಠಾಕೂರ್, ಆಚಾರ್ಯ ಕೃಪಲಾನಿ, ಪಾಟ್ನಾ ನಗರದಲ್ಲಿ ಬಾಬು ರಾಜೇಂದ್ರ ಪ್ರಸಾದ್, ಅಲಹಾಬಾದ್‌ನಲ್ಲಿ ವಲ್ಲಭಾಯಿ ಪಟೇಲ್, ಮದ್ರಾಸಿನಲ್ಲಿ ಸಿ. ರಾಜಗೋಪಾಲಾಚಾರಿ, ಮೋತಿಲಾಲ್ ನೆಹರು, ಅವರ ನಂತರ ಅವರ ಜ್ಯೇಷ್ಠ ಪುತ್ರ ಜವಹರಲಾಲ್ ನೆಹರು, ಸಿ. ಆರ್ ದಾಸ್, ಆಂಡ್ರೂಸ್, ಲಾಲಾ ಲಜಪತ್ ರಾಯ್, ಆಪ್ತಕಾರ್ಯದರ್ಶಿ ಮಹದೇವ್ ದೇಸಾಯಿ, ಮೌಲಾನ ಅಬ್ದುಲ್ ಕಲಂ ಆಜಾದ್, ಮಹಮದ್ ಆಲಿ ಮತ್ತು ಷೌಖತ್ ಅಲಿ, ಅಸಫ್ ಅಲಿ ಸಹೋದದರರು ಇತ್ಯಾದಿಯಾಗಿ ನೂರಾರು, ಸಹಸ್ರಾರು ಮಂದಿ ಭಾರತದ ವೀರ ಪುತ್ರರತ್ನಗಳ ಪರಿಚಯವಾಯಿತು ಗಾಂಧೀಜಿಗೆ. ಇಷ್ಟಾದರೂ ಗಾಂಧೀ ಭಾರತಕ್ಕೆ ಬಂದಾಗ ಯಾವ ಫಲಾಪೇಕ್ಷೆಯನ್ನೂ ಇಟ್ಟುಕೊಂಡು ಬಂದಿರಲಿಲ್ಲ. ಅಂತೆಯೇ ಅವರು ಬಂದ ಕೆಲವೇ ದಿನಗಳಲ್ಲಿ ಸಬರಮತಿಯ ನದಿತೀರದಲ್ಲಿ ಒಂದು ಶಾಶ್ವತವಾದ ಆಶ್ರಮ ತೆರೆದರು. ಅಲ್ಲಿ ಪತ್ನೀ ಪುತ್ರರೊಡನೆ ಆಗಮಿಸಿದ್ದ ಅನೇಕ ದೇಶಬಾಂಧವರ ಸಂಗಡ ಸನ್ಯಾಸ ಜೀವನ ಸಾಗಿಸಿದರು.

ಆದರೆ !

ಗಾಂಧೀಜಿ ನಿರ್ಲಿಪ್ತ ಬಾಳುವೆಯನ್ನು ಸಾಗಿಸುವಂತಿರಲಿಲ್ಲ. ದೇಶದ ಒಳ ಹೊರಗೆ ಹತ್ತಿ ಹಬ್ಬುತ್ತಿದ್ದ ಪ್ರಚಂಡ ಬೇನೆಯ ಕಾವು ಅವರಿಗೂ ತಾಗಿತ್ತು. ರಾಷ್ಟ್ರದ ದುಃಸ್ಥಿತಿಯ ದಾರುಣಚಿತ್ರ ಅವರ ಮನಃಪಟಲದಲ್ಲಿ ಮೂಡಿ, ಮೂಡಿ ಕಾಡುತ್ತಿತ್ತು. ಭಾರತಕ್ಕೆ ಮುಖ್ಯವಾಗಿ ಸ್ವಾತಂತ್ರ್ಯಬೇಕು ನಿಜ. ಆದರೆ ಅದಕ್ಕೆ ಮುನ್ನ ಭಾರತೀಯನಿಗೆ ಸ್ವಾವಲಂಬಿಯಾಗಿರುವುದನ್ನು ಕಲಿಸಬೇಕು. ಕಲಿತು ಮರೆತಿರುವ ಕಲೆ, ಕೈಗಾರಿಕೆ, ಸಂಸ್ಕೃತಿಗಳ ಅರಿವು ಅವನಿಗಾಗಬೇಕು. ಇವೆಲ್ಲಕ್ಕೂ ಮೊದಲು ನಮ್ಮಲ್ಲಿರುವ ಮೇಲು, ಕೀಳು ಭಾವನೆಯನ್ನು ದೂರಮಾಡಬೇಕು. ಜೊತೆಜೊತೆಯಲ್ಲಿ ಹಿಂದೂ ಮುಸ್ಲಿಮರ ಐಕ್ಯತೆ ಏರ್ಪಡಬೇಕು. ಹೀಗಾಗದಿದ್ದರೆ, ಒಂದು ವೇಳೆ ರಾಜಕೀಯವಾಗಿ ಪಡೆದರೂ, ಅದು ನಿಜವಾದ ಸ್ವಾತಂತ್ರ್ಯವೆನಿಸಲಾರದು ಎಂಬುದನ್ನು ಮನಗಂಡರು. ಅವರ ಅನೇಕ ಭಾಷಣಗಳಲ್ಲಿ ತಮ್ಮ ಎಡಗೈ ಎತ್ತಿ ಒಂದೊಂದೇ ಬೆರಳನ್ನು ತೋರಿಸುತ್ತ; ಇದು ಅಸ್ಪೃಶ್ಯತಾ ನಿವಾರಣೆ, ಇದು ನೂಲುವುದು, ಇದು ಮದ್ಯಪಾನ ನಿಷೇಧ, ಇದು ಹಿಂದೂ ಮುಸ್ಲಿಂ ಐಕ್ಯ, ಇದು ಸ್ತ್ರೀಯ ಸಮಾನತೆ' ಈ ಐದು ಬೆರಳಿನ ಮೂಲವಾದ ಮಣಿಕಟ್ಟೇ ಅಹಿಂಸೆ. ಅಹಿಂಸೆಯಿಂದ ಕೂಡಿದ ಈ ಐದು ಸದ್ಗುಣಗಳೂ ಪ್ರತಿಯೊಬ್ಬನ ದೇಹಕ್ಕೂ ಸ್ವಾತಂತ್ರ್ಯ ಕೊಡುವುದರ ಮೂಲಕ ಭಾರತಕ್ಕೆ ಸುಲಭವಾಗಿ ಸ್ವಾತಂತ್ರ್ಯ ತರುವುದು' ಅನ್ನುತ್ತಿದ್ದರು.

ಗಾಂಧೀಯ ಮನಸ್ಸನ್ನು ಸರ್ವದಾ ಕೊರೆಯುತ್ತಿದ್ದುದು ಅಸ್ಪೃಶ್ಯತೆ. ಹೊಲೆಮಾದಿಗರೆನಿಸಿಕೊಳ್ಳುತ್ತಿದ್ದ ಜನರನ್ನು ದೇವರ ಮಕ್ಕಳೆಂದು ಕರೆದು 'ಹರಿಜನ'ರೆಂದು ನಾಮಕರಣ ಮಾಡಿ ಆಶ್ರಮದಲ್ಲಿ ಅನೇಕರಿಗೆ ಆಶ್ರಯವಿತ್ತರು. ಹರಿಜನರ ಹುಡುಗಿ ಲಕ್ಷ್ಮಿಯನ್ನು ತಮ್ಮ ಸಾಕುಮಗಳೆಂದು ಸಾರಿ ಹೇಳಿದರು. ಅನೇಕ ಮಡಿಜನರಿಗೆ ಇದು ಮೊದಮೊದಲು ಬೇಸರಿಕೆಯನ್ನು ತಂದಿತು. ಸರಳಜೀವನ ನಡೆಸಬೇಕೆಂದು ಬೋಧೆಮಾಡಿ ಎಲ್ಲರ ಕೈಗೆ ಚರಕವನ್ನು ಕೊಟ್ಟರು. ಐಶ್ವರ್ಯದ ಅಮಲಿನಲ್ಲಿ

ಅಟ್ಟಹಾಸದಿಂದ ಮೆರೆಯುತ್ತಿರುವ ಜನತೆಗೆ ಮಾರ್ಗ ತೋರಿಸಲು ಯತ್ನಿಸಿದರು. ಇದರ ಮಧ್ಯೆ, ಮಲಬಾರ್‌ನಲ್ಲಿ ಹಿಂದೂಗಳಿಗೂ ಮುಸಲ್ಮಾನ್ ಮಾಪಿಳ್ಳೆಗಳಿಗೂ ಘರ್ಷಣೆ ನಡೆದ ವರ್ತಮಾನ ಕೇಳಿ ಬಂದಿತು. ಆಗಾಗ ಅಲ್ಲಲ್ಲಿ ಕೇಳಿಬರುತ್ತಿದ್ದ ಕಾರ್ಮಿಕ ಮಾಲೀಕರ, ರೈತ ಜಮೀನ್ದಾರುಗಳ ಸಮಸ್ಯೆಗಳೂ ಗಾಂಧಿಯ ತಲೆ ತಿನ್ನುತ್ತಿದ್ದವು.

ಒಂದು ದಿನ ರಾತ್ರಿ ಇದ್ದಕ್ಕಿದ್ದ ಹಾಗೆ ಚಂಪಾರಣ್ಯದ ರೈತ, ರಾಜಕುಮಾರ್ ಶುಕ್ಲ ಎಂಬಾತ ಬಂದು ಗಾಂಧೀಜಿಯನ್ನು ಎಬ್ಬಿಸಿ ರೈತರ ಹೀನಸ್ಥಿತಿಯನ್ನು ವಿವರಿಸಿದ. ಗಾಂಧೀಜಿ ಒಮ್ಮೆ ಅಲ್ಲಿಗೆ ಬರುವುದಾಗಿ ಹೇಳಿ ಕಳುಹಿಸಿದರು. ಆಗ ಬಾಪು, ಬಾ, ದೇವದಾಸ್ ಎಲ್ಲರೂ ಜನಸೇವಾಕಾರ್ಯದಲ್ಲಿ ನಿರತರಾಗಿ ಹಳ್ಳಿ ಹಳ್ಳಿಗಳನ್ನು ಸುತ್ತಿದರು. ಬಾಪು ಕಲ್ಕತ್ತೆಗೆ ಹೋಗಿದ್ದವರು ಶುಕ್ಲನ ಅಪ್ಪಣೆಯಂತೆ ಚಂಪಾರಣ್ಯಕ್ಕೆ ಹೋಗಿ ಬ್ರಿಟಿಷ್ ಜಮೀನ್ದಾರ್‌ರ ಸಂಗಡ ಬಹಳ ದಿನಗಳ ತನಕ ಹೋರಾಡಿ, ಭಾರತದ ರೈತರಿಗೆ ಅನುಕೂಲ ಮಾಡಿಕೊಟ್ಟರು. ಮೊತ್ತೊಮ್ಮೆ ಅಲಹಾಬಾದಿನಲ್ಲಿ ಗಿರಿಣಿಯ ಕಾರ್ಮಿಕರು ಸಂಬಳದ ಹೆಚ್ಚುವರಿಗಾಗಿ ಮುಷ್ಕರ ಹೂಡುವುದಾಗಿ ಗಾಂಧೀಜಿಗೆ ತಿಳಿಸಿದರು. ಗಾಂಧೀಜಿ ತಮ್ಮ ಸತ್ಯಾಗ್ರಹ ಅಸ್ತ್ರವನ್ನು ಅಲ್ಲಿಯೂ ಪ್ರಯೋಗಮಾಡಿ, ಜಯಶೀಲರಾದರು. ಕಾರ್ಮಿಕರ ಕಾರ್ಪಣ್ಯಜೀವನ ಸುಧಾರಿಸಿತು ಮಹಾತ್ಮನ ಹೋರಾಟದಿಂದ.

ಇವೆಲ್ಲವೂ ಬಹುಶಃ ಸಂತೋಷದ ಕಷ್ಟಗಳೆನಿಸಿದರೂ, ಬಾಪುವಿಗೆ ಮತ್ತೊಂದು ನೋವು ಮನಸ್ಸಿನಲ್ಲಿತ್ತು. ಅವರಿಗಿಂತಲೂ ಕಸ್ತೂರಿಬಾರವರ ಹೃದಯವನ್ನು ಸದಾ ಕೊರೆಯುತ್ತಿತ್ತು. ಅದೇ ಅವರ ಹಿರಿಯ ಮಗ ಹೀರಾಲಾಲ್‌ನ ಚಿಂತೆ. ತನ್ನ ಪತ್ನಿ ತೀರಿ ಹೋದಮೇಲೆ ಎರಡನೇ ಲಗ್ನವಾಗಲು ಇಚ್ಚಿಸಿದ ಹೀರಾಲಾಲ್‌ಗೆ ಬಾಪು ಒಪ್ಪಿಗೆ ಕೊಟ್ಟಿರಲಿಲ್ಲ. ವಿಷಯಲಂಪಟನಾದ ಆತ ಕುಡುಕನಾಗಿ, ಅಪ್ಪನಿಗೆ ವಿರುದ್ಧ ಚಳವಳಿ ನಡೆಸಿದ. ಕಡೆಗೆ ಜಾತಿಭ್ರಷ್ಟನಾಗಿ 'ಅಬ್ದುಲ್ಲ' ಎಂಬ ಹೆಸರಿನಿಂದ ಮುಸಲ್ಮಾನನಾದ. ಮಗನು ಜಾತಿಭ್ರಷ್ಟನಾದನೆಂದಾಗಲಿ, ಹಾಳಾದನೆಂದಾಗಲಿ ಚಿಂತೆ ಅಲ್ಲ ಅವರಿಗಿದ್ದುದು, ಅವನ ಪತನಕ್ಕೆ ತಾವೇ ಕಾರಣರಾದೆವೆಂದು.

ಇಷ್ಟಾದರೂ ಗಾಂಧೀಜಿಯ ಮನಸ್ಸು ರಾಜಕೀಯದ ಕಡೆಗೆ ಹರಿದಿರಲಿಲ್ಲ. ಸದಾ ಸಮಾಜ ಸುಧಾರಣೆಯಲ್ಲಿ, ಆತ್ಮ ಶೋಧನೆಯಲ್ಲಿ ನಿರತವಾಗಿತ್ತು. ಆದರೆ ಜಲಿಯನ್‌ವಾಲಾಬಾಗಿನ ಘಟನೆಯೊಂದು ಅವರನ್ನು ರಾಜಕೀಯಕ್ಕೆ ಎಳೆತಂದಿತು.

ಸುಮಾರು ೧೮೮೮ರಲ್ಲಿ ಸ್ಥಾಪಿತವಾಗಿ ಮಿನುಗುತ್ತಿದ್ದ ಕಾಂಗ್ರೆಸ್ ಸಂಸ್ಥೆಯನ್ನು ಪುನರುಜ್ಜೀವನಗೊಳಿಸಿದರು ಗಾಂಧೀಜಿ. ಅದಕ್ಕೆ ಮೂಲತಃ ರಾಜಾರಾಮ ಮೋಹನರಾಯ್, ರಾಮಕೃಷ್ಣ ಪರಮಹಂಸ, ವಿವೇಕಾನಂದ, ಅರವಿಂದ ಘೋಷ್, ದಾದಾಭಾಯಿ ನವರೋಜಿ ಮುಂತಾದವರ ನೈತಿಕ ಹಾಗೂ ಧಾರ್ಮಿಕ ಸ್ತನ್ಯಪಾನ ಮಾಡಿ ಬೆಳೆದಿದ್ದ ಕಾಂಗ್ರೆಸ್ ಸಂಸ್ಥೆ ಗಾಂಧೀಜಿಯ ಕೈಯಲ್ಲಿ ಪರಿಪೋಷಿತವಾಯಿತು. ಬಹುಬೇಗ ಬೆಳವಣಿಗೆಯನ್ನು ಪಡೆಯಿತು.

೧೯೧೯ರಲ್ಲಿ ಬ್ರಿಟಿಷ್ ಸರ್ಕಾರ ಕಾಂಗ್ರೆಸ್ ಮುಖಂಡರಾಗಿದ್ದ ಡಾ. ಸೈಫುದ್ದೀನ್ ಕಿಚ್ಲು ಎಂಬುವರನ್ನೂ, ಡಾ. ಸತ್ಯಪಾಲ್ ಎಂಬುವರನ್ನೂ ಗಡೀಪಾರ್ ಮಾಡಿತ್ತು. ಸಿಟ್ಟಿಗೆದ್ದ ಜನ ಅನೇಕರನ್ನು ಬ್ರಿಟಿಷರು ಅಮೃತಸರದಲ್ಲಿ ಕೊಲೆಮಾಡಿದ್ದರು. ಇದಾದ ಎರಡು ತಿಂಗಳಲ್ಲಿ ಅದೇ ಅಮೃತಸರಕ್ಕೆ ಬ್ರಿಗೇಡಿಯರ್ ಜನರಲ್ ಆಗಿ, ಹ್ಯಾರಿ ಡೈಯರ್ ಎಂಬುವನು ಬಂದ. ಈತ ಒಬ್ಬ ಪಾಷಂಡಿ. ಹೃದಯಹೀನ ವ್ಯಕ್ತಿ. ಏಪ್ರಿಲ್ ೧೩ರಂದು ಜಲಿಯನ್‌ವಾಲಾಬಾಗಿನಲ್ಲಿ ಒಂದು ಮಹಾಸಭೆ ಸೇರಿತ್ತು. ಸುಮಾರು ೧೦ –೧೫ ಸಾವಿರ ಜನ ಆ ಕಾಂಪೌಡಿನಲ್ಲಿದ್ದರಿಬೇಕು. ಪಾಪಿ ಡೈಯರ್ ಅನೇಕ ಜನ ಬಂದೂಕುಧಾರಿಗಳನ್ನು ಕರೆತಂದು ಸಭೆಗೆ ಗುಂಡು ಹಾರಿಸುವಂತೆ ಆಜ್ಞೆ ಇತ್ತ. ಜನ ಕಂಗಾಲಾಗಿ ಓಡಲಾರಂಭಿಸಿತು. ಆದರೆ ಗುಂಪಿನ ಮಳೆ ಒಂದೇ ಸಮನೆ ವ್ಯಕ್ತಿಗಳನ್ನು ಉದ್ದೇಶಿಸಿ ಕರೆಯಿತು. ಅನೇಕರು ಸತ್ತರು. ಬಹಳ ಜನ ಗಾಯ ಹೊಂದಿ ಉರುಳಿದರು. ನೆತ್ತರಿನ ಹೊಳೆ ಹರಿಯಿತು. ಹೆಣಗಳ ರಾಶಿ ಬಿದ್ದುವು. ಪಶುಗಳಿಗೆ ಕಡೆಯಾಗಿ ಅಂದು ಅಲ್ಲಿ ನರಬಲಿ ನಡೆಯಿತು. ಸುಮಾರು ೧೦ ನಿಮಿಷಗಳಲ್ಲಿ ೧೬೫೦ ಗುಂಡುಗಳು ಹಾರಿದ್ದವು. ೩೭೯ ಜನರನ್ನು ತಿಂದು ೧೧೬೭ ಜನರನ್ನು ಗಾಯಗೊಳಿಸಿದ್ದವು.

ಈ ಹತ್ಯಾಕಾಂಡದಿಂದ ಡೈಯರನ ಆಸೆ ತಣಿಯಲಿಲ್ಲವೆಂದು ಕಾಣುತ್ತದೆ. ಆತ ತೀರ ಅಪಮಾನಕರವಾದ ಆಜ್ಞೆಯೊಂದನ್ನು ಹೊರಡಿಸಿದ. ಅಮೃತಸರದಲ್ಲಿ ತಿರುಗಾಡುವವರು, ವಾಸಿಸುವವರು ಅಂಬೆಗಾಲಿಟ್ಟುಕೊಂಡು ತಿರುಗಬೇಕೆಂದು. ಅದು ಅವನ ಪ್ರಚಂಡ ಆಜ್ಞೆ. ಇದನ್ನು ಕೇಳಿದಾಗಲಂತೂ ಗಾಂಧಿಗೆ ಸಹಿಸಲಾಗಲಿಲ್ಲ. ಜಲಿಯನ್‌ವಾಲಾಬಾಗ್‌ನ ಹತ್ಯಾಕಾಂಡ ಭಾರತದ ರಾಜಕೀಯತನವನ್ನು ಬಡಿದೆಬ್ಬಿಸಿತು. ಗಾಂಧೀಜಿ ರಾಜಕೀಯಕ್ಕೆ ಇಳಿಯಲೇ ಬೇಕಾಯಿತು.

ಅಸಹಕಾರ ಚಳವಳಿ ಭಾರತದಾದ್ಯಂತ ಆರಂಭವಾಯಿತು. ೧೯೩೦ ಜುಲೈ ೩೧ರಂದು ತಿಲಕರು ತೀರಿಕೊಂಡರು. ಗಾಂಧೀಜಿಯೇ ಈಗ ಎಲ್ಲ ಹೊಣೆಯನ್ನು ಹೊರಬೇಕಾಯ್ತು. ಮೊದಮೊದಲು ಜನರಲ್ಲಿ ಉತ್ಸಾಹ ಕಂಡುಬರಲಿಲ್ಲ.

ಸಹಕಾರವೂ ಅಷ್ಟಾಗಿ ಅವರಿಗೆ ದೊರೆಯಲಿಲ್ಲ. ಆದರೆ ಕ್ರಮೇಣ ಎಂದರೆ ನಾಗಪುರದ ಅಧಿವೇಶನದ ಹೊತ್ತಿಗೆ ಇಪ್ಪತ್ತು ಸಾವಿರಕ್ಕೂ ಮಿಕ್ಕು ಜನ ಕಾಂಗ್ರೆಸ್ಸಿಗೆ ಸೇರಿದರು. ಚಳವಳಿಗೆ ಬೆಂಬಲ ನೀಡಿದರು.

ಆದರೆ ಆಗಬಾರದ ಒಂದು ಘಟನೆ ಹಿಂದಿನ ವರ್ಷದ, ಎಂದರೆ ೧೯೨೧ ಫೆಬ್ರವರಿ ೫ನೇ ತಾರೀಖು ನಡೆಯಿತು. ಚೌರಿ ಚೌರ ಎಂಬ ಚಿಕ್ಕ ನಗರದಲ್ಲಿ ರೊಚ್ಚಿಗೆದ್ದ ಗುಂಪೊಂದು ಪೊಲೀಸ್ ಠಾಣೆಗೆ ಬೆಂಕಿ ಇಟ್ಟಿತು. ಬೆಂಕಿಯಿಂದ ಪಾರಾಗಲು ಈಚೆಗೆ ಬಂದ ಪೊಲೀಸರನ್ನು ತುಂಡಾಗಿ ಕತ್ತರಿಸಿ ಮತ್ತೆ ಬೆಂಕಿಗೇ ಎಸೆಯಿತು. ಈ ವಾರ್ತೆ ಗಾಂಧೀಜಿಗೆ ಫೆಬ್ರವರಿ ೮ನೇ ತಾರೀಖು, ಅವರು ಅಲ್ಲಿಗೆ ೮೦೦ ಮೈಲಿ ದೂರದಲ್ಲಿದ್ದ ಬಾರ್ಡೋಲಿಗೆ ತಲುಪಿತು. ಬಾಪು ಅಷ್ಟಕ್ಕೇ ಅಸಹಕಾರ ಚಳವಳಿಯನ್ನು ನಿಲ್ಲಿಸಿ, ಐದು ದಿನ ಉಪವಾಸ ಮಾಡಿದರು. ಅವರ ಮಾತುಗಳಂತೂ ಕೆಂಡದ ಉಂಡೆಗಳಾಗಿ ಹೊರಬಿದ್ದವು. 'ಶಿಕ್ಷಿಸುವುದಕ್ಕಿಂತ ಕ್ಷಮಿಸುವುದಕ್ಕೆ ಹೆಚ್ಚು ಶಕ್ತಿಬೇಕು. ಡಯರ್‌ಗಳ ಶಿಕ್ಷೆಗಿಂತ ಉತ್ತಮವಾದ ಕೆಲಸವನ್ನು, ಪ್ರಪಂಚದಲ್ಲೇ ಉತ್ತಮವಾದ ಕೆಲಸವನ್ನು ಭಾರತೀಯರು ಮಾಡಬೇಕು. ಕೀಳುಪ್ರಾಣಿಗೆ ಹಿಂಸೆ ಎಷ್ಟು ಸಹಜವೊ ಮಾನವನಿಗೆ ಅಹಿಂಸೆ ಅಷ್ಟು ಸಹಜ, ಈ ನುಡಿಗಳ ಮೆಲಕುಹಾಕುವುದರಲ್ಲಿ ಇಡೀ ಮಾನವ ಜನಾಂಗವೇ ಮುಪ್ಪಾಗಬಹುದು.

ಈ ಎಲ್ಲ ದುರ್ಘಟನೆಗಳ ಪರಿಣಾಮವಾಗಿ ನಾಗರಿಕರೆನಿಸಿದ ಗಾಂಧೀಗೆ ಸೆರಮನೆಯ ವಾಸ ಕಾದಿರುತ್ತಿತ್ತು. ಅನೇಕಬಾರಿ ಜೈಲುವಾಸ ಅನುಭವಿಸಿದರು. ಹಿಂದೂ – ಮುಸ್ಲಿಂ ಸೌಹಾರ್ದಕ್ಕಾಗಿ ೧೯೨೪ರ ಸಪ್ಟೆಂಬರ್ ೧೪ರಿಂದ ೨೧ದಿನ ಉಪವಾಸ ವ್ರತ ಕೈಗೊಂಡರು. ಆದರೂ ಅದರ ಪರಿಣಾಮ ಜನತೆಯ ಮೇಲೆ– ಹಿಂದೂಗಳಿಗಾಗಲಿ, ಮುಸ್ಲಿಮರಿಗಾಗಲಿ, ಬ್ರಿಟಿಷರ ಮೇಲಾಗಲೀ ಯಾರ ಮೇಲೂ – ಆಗಲೇ ಇಲ್ಲ. ಲಂಡನ್ನಿನಲ್ಲಿ ನಡೆದ ಎರಡನೇ ಚಕ್ರಗೋಷ್ಠಿಗೆ ಹೋಗಿಬರುವುದರೊಳಗಾಗಿ ಭಾರತದಲ್ಲಿ ಅನೇಕ ಅನಾಹುತಗಳು ನಡೆದಿದ್ದವು. ಅನೇಕರು ಲಾಠಿ ಗುಂಡುಗಳಿಗೆ ಬಲಿಯಾಗಿದ್ದರು. ಅನೇಕರು ಸೆರೆಮನೆಯನ್ನು ಸೇರಿದ್ದರು. ಹಿಂದೂ – ಮುಸಲ್ಮಾನರಲ್ಲಿ ಗೊಂದಲವೆದ್ದು ಹಿಂಸೆ ನಾಡಿನಾದ್ಯಂತ ರೌದ್ರ ತಾಂಡವವಾಡುತ್ತಿತ್ತು. ಕಾಂಗ್ರೆಸ್ ಮತ್ತೆ ೧೯೩೦ರಲ್ಲಿ ಸ್ವಾತಂತ್ರ್ಯ ಸಂಗ್ರಾಮವನ್ನು ಆರಂಭಿಸಿತು. ಗಾಂಧೀಜಿಯ ನೇತೃತ್ವದಲ್ಲಿ ಸತತವಾದ ಅಹಿಂಸಾ ಹೋರಾಟದ ಫಲವಾಗಿ ೧೯೩೭ರಲ್ಲಿ ತಾತ್ಕಾಲಿಕ ಜವಾಬ್ದಾರೀ ಸರ್ಕಾರ ರಚನೆಗೆ ಅವಕಾಶ ಕೊಡಲಾಯಿತು. ಏಳು ಪ್ರಾಂತಗಳು ಸ್ವಾತಂತ್ರ್ಯ ಸ್ವೀಕರಿಸಿ ಅಧಿಕಾರವನ್ನು ಕೈಯಲ್ಲಿ ಹಿಡಿದವು. ಆದರೆ ೧೯೩೯ರಲ್ಲಿ ಪ್ರಪಂಚದ ಎರಡನೇ ಮಹಾಯುದ್ಧ ಪ್ರಾರಂಭವಾಯಿತು. ದೇಶಿಯ ಸರ್ಕಾರದ ಅನುಮತಿ ಪಡೆಯದೆ ಬ್ರಿಟಿಷ್ ಸರ್ಕಾರ ಭಾರತವು ಯುದ್ಧದಲ್ಲಿ ಭಾಗಿಯಾಗಿದೆ ಎಂದು ಘೋಷಿಸಿತು. ಕಾಂಗ್ರೆಸ್ ತಾತ್ಕಾಲಿಕ ಸರ್ಕಾರದ ರಾಜೀನಾಮೆ ಕೊಟ್ಟು ಬ್ರಿಟಿಷರ ದಬ್ಬಾಳಿಕೆಯನ್ನು ಪ್ರತಿಭಟಿಸಿತು. ೧೯೪೨ರ ಆಗಸ್ಟ್ ೮ನೇ ತಾರೀಖು ಬೊಂಬಾಯಿನಲ್ಲಿ ನಡೆದ ಅಧಿವೇಶನದಲ್ಲಿ ಗಾಂಧೀಜಿ ವಚನಭ್ರಷ್ಟರಾದ ಬ್ರಿಟಿಷರ ಮೇಲೆ ಉಗ್ರಕೋಪಿಗಳಾಗಿ, 'ಚಲೇಜಾವ್' ಮಂತ್ರಘೋಷಣೆ ಮಾಡಿದರು. ಭಾರತೀಯ ಬಂಧುಗಳಿಗೆ 'ಮಾಡಿ ಇಲ್ಲವೆ ಮಡಿಯಿರಿ' ಎಂದು ತಿಳಿಸಿ, ತಮ್ಮ ಅಂತಿಮ ಹೋರಾಟವನ್ನು ನಿರ್ಧರಿಸಿದರು. ಬ್ರಿಟಿಷ್ ಸರ್ಕಾರ ಗಾಂಧೀಜಿಯ ಆದಿಯಾಗಿ ಅನೇಕ ನಾಯಕರನ್ನು ಸೆರೆಹಿಡಿಯಿತು. ಬಾಪು ಮತ್ತು ಬಾ ಪೂನಾದ ಆಗಾಖಾನ್ ಅರಮನೆಯಲ್ಲಿ ಬಂಧಿತರಾಗಿದ್ದರು. ಸೆರೆಮನೆಯಲ್ಲಿದ್ದಾಗಲೇ ಬಾ ತೀರಿಹೋದರು. ಪತಿಯೊಡನೆ ಧ್ಯೇಯಕ್ಕಾಗಿ ಶ್ರಮಿಸಿದ ಜೀವ ಚಿರಶಾಂತಿಯನ್ನು ಪಡೆಯಿತು – ಸೆರೆಮನೆಯಲ್ಲಿ.

ಬ್ರಿಟಿಷ್ ಸರ್ಕಾರ ಪರಿಸ್ಥಿತಿ ಹದಗೆಡಬಹುದೆಂದು ಹೆದರಿತು. ಸ್ವಾತಂತ್ರ್ಯವನ್ನು ದಯಪಾಲಿಸುವುದಾಗಿ ಹೇಳಿತು. ಆದರೆ ಒಡೆದು ಆಳುವ ಕುಟಿಲ ಸ್ವಭಾವದ ಬ್ರಿಟಿಷರು ತಿಳಿಗೇಡಿ ಮುಸಲ್ಮಾನರನೇಕರನ್ನು ಎತ್ತಿಕಟ್ಟಿ ಭಾರತವನ್ನು ಇಬ್ಭಾಗವಾಗುವಂತೆ ಮಾಡಿದರು. ಮಹಮ್ಮದಾಲಿ ಜಿನ್ನಾ ಪ್ರತ್ಯೇಕ ರಾಷ್ಟ್ರ ಮುಸಲ್ಮಾನರಿಗೆ ಮೀಸಲಾಗಬೇಕೆಂದು ಆಶಿಸಿ 'ಪಾಕಿಸ್ತಾನ್' ಎಂಬುದಾಗಿ ಹೆಸರಿಟ್ಟು ಭಾರತವನ್ನು ಇಬ್ಭಾಗಿಸಿದ.

ಭಾರತ ಸ್ವತಂತ್ರವಾಯಿತು. ೧೯೪೭ರ ಆಗಸ್ಟ್ ೧೫ರ ಶುಭದಿನದಲ್ಲಿ, ಶ್ರಾವಣದ ಪವಿತ್ರ ದಿನದಲ್ಲಿ ಭಾರತದ ಬಾನಿನಲ್ಲಿ ಸ್ವಾತಂತ್ರ ರವಿ ಮೂಡಿದ. ಆದರೆ ಆ ಸ್ವಾತಂತ್ರ್ಯದಿಂದ ಯಾರಿಗೂ ತೃಪ್ತಿಯಿದ್ದಂತೆ ಕಾಣಲಿಲ್ಲ. ಮಹಮದಾಲಿ ಜಿನ್ನಾ ಹಠವನ್ನು ಬಿಡಲಿಲ್ಲ. ಈ ಸಂದರ್ಭದಲ್ಲಿ ಹಿಂದೂ–ಮುಸ್ಲಿಂ ಐಕ್ಯತೆಯನ್ನು ಸಾಧಿಸುತ್ತೇನೆಂದು ಹೊರಟರೆ ಅದು ಅಸಾಧ್ಯವೆಂದು ತಿಳಿದ ಬಾಪು ಮುಸಲ್ಮಾನರ ಇಷ್ಟದಂತೆಯೇ ಪ್ರತ್ಯೇಕ ಭಾಗವನ್ನು ಕೊಡುವುದಾಗಿ ಒಪ್ಪಿದರು. ಭಾರತ ಹರಿದು ಹಂಚಾಯಿತು. ಪಶ್ಚಿಮ ಪಂಚಾಬಿನ ಹಲವು ಭಾಗ, ಪೂರ್ವ ಬಂಗಾಳದ ಹಲವು ಭಾಗ ಪಾಕಿಸ್ತಾನವೆನಿಸಿದವು. ಪಶ್ಚಿಮದ ಗೋವದಲ್ಲಿ ಪೋರ್ಚುಗೀಸರು ಕಿತ್ತು ತಿನ್ನುತ್ತ ಕುಳಿತರು. ಪೂರ್ವದ ಪಾಂಡಿಚೇರಿ ಡಚ್ಚರ ಬೀಡಾಯ್ತು. ಅನೇಕ ಪ್ರಾಂತ್ಯಗಳು ಡೊಮಿನಿಯನ್‌ಗೆ ಸೇರದೆ ತಾಟಸ್ಥ್ಯ ವಹಿಸಿದವು. ಇಷ್ಟು ಅನಾಹುತ, ಕಷ್ಟನಷ್ಟಗಳ ಜೊತೆಗೆ ಬಾಪು ೫೫ ಕೋಟಿ ರೂಪಾಯಿಗಳನ್ನು ಭಾರತ ಸರ್ಕಾರ

ದಿಂದ ಪಾಕಿಸ್ತಾನಕ್ಕೆ ಕೊಡಿಸಿದರು. ಕೇಳಿದ್ದಕ್ಕೆ ಅವರಿಗೆ ಆಸ್ತಿ ವಿಭಾಗ ಕಡಿಮೆ ಎಂದೂ, ಅದನ್ನು ಹಣದ ಮೂಲಕ ತುಂಬಬೇಕೆಂದು ತಮ್ಮ ಮನಸ್ಸಿಗೆ ತಿಳಿಯಿತೆಂದೂ ಹೇಳಿದರು.

ಸ್ವಾತಂತ್ರ್ಯಕ್ಕೆ ಮುನ್ನ ಪ್ರತಿ ಭಾರತೀಯನಿಗೂ ತನ್ನ ಕಣ್ಣೆದುರಿಗೆ ಇದ್ದುದು ಕೇವಲ ಸ್ವಾತಂತ್ರ್ಯದ ಭವ್ಯಚಿತ್ರಣ. ಆದರೆ ಸ್ವಾತಂತ್ರ್ಯ ಬಂದ ಮೇಲೆ ದೃಷ್ಟಿ ನೂರಾಯಿತು, ಸಹಸ್ರವಾಯಿತು. ಅವನ ಸ್ವಾರ್ಥದ ಸರ್ಪ ಭೋರಿಟ್ಟಿತು. ಇಡೀ ವಿಶ್ವವನ್ನೇ ನುಂಗಿ ನೊಣೆಯುವಂತೆ ಅಧಿಕಾರಲಾಲಸೆ, ಹಣದ ಹಸಿವೆ, ಹೆಸರಿನ ದಾಹ, ಮಾನವ ಹೃದಯವನ್ನೇ ಸ್ಮಶಾನವಾಗಿಸಿದವು. ಕೋಮುವಾರು, ಪ್ರಾಂತವಾರು, ಭಾಷಾವಾರು – ಒಂದಲ್ಲ ನೂರು ತರದಲ್ಲಿ ಸಣ್ಣತನ ಮನೆಮಾಡಿಕೊಂಡಿತು.

ಹಿಂದೂ – ಮುಸ್ಲಿಂ ಗಲಾಟೆ ಹೇಳತೀರದಾಯಿತು. ಪಾಕಿಸ್ತಾನದಿಂದ ದಿನದಿನಕ್ಕೆ ತಂಡೋಪತಂಡವಾಗಿ ಲಕ್ಷೋಪಲಕ್ಷ ಜನ ಬರಹತ್ತಿದರು. ಕಲ್ಕತ್ತ, ದೆಹಲಿ ಮೊದಲಾದ ನಗರದ ಬೀದಿ ಬೀದಿಗಳಲ್ಲಿ ನಿರಾಶ್ರಿತ ತಂಡ ಆಶ್ರಯ ಪಡೆಯಿತು. ಹೊಟ್ಟೆಗೆ ಕೂಳಿಲ್ಲದೆ, ತೊಡಲು ಬಟ್ಟೆ ಇಲ್ಲದೆ, ಜೀವದ ಮೇಲಿನ ಆಸೆಗಾಗಿ ಮಕ್ಕಳು, ಮರಿಗಳನ್ನು ಕಟ್ಟಿಕೊಂಡು ಬಂದ ನಿರಾಶ್ರಿತರ ಘೋರತಮ ದೃಶ್ಯವನ್ನು ನೋಡಿದರೆ ಕಣ್ಣು ಒಡೆಯುತ್ತಿತ್ತು. ಹಾಹಾಕಾರವಂತೂ ಶಿವನಿಗೆ ಮುಟ್ಟುತ್ತಿತ್ತು. ಪೂರ್ವ ಬಂಗಾಳದ ತ್ರಿಪುರ ಎಂಬ ಗ್ರಾಮವೆಲ್ಲ ಇಸ್ಲಾಂ ಧರ್ಮವನ್ನು ಸ್ವೀಕರಿಸಿತು. ದೌರ್ಜನ್ಯಕಾರರ ಬಲವಂತಕ್ಕೆ ಆ ಗ್ರಾಮದಲ್ಲಿ ಸುಮರು ೯೮೫ ಜನರು ಮುಸ್ಲಿಮರಾದರಂತೆ. ಅದರ ಹತ್ತಿರವಿದ್ದ ನೌಖಾಲಿಯೂ ಕೂಡ ಸಹಸ್ರಾರು ಹಿಂದೂಗಳ ನೆತ್ತರು ಕುಡಿದು ಹಿಗ್ಗಿತು. ಮತ್ತೆ ಅದೇ ವ್ಯಾಧಿ ಕಲ್ಕತ್ತೆಯಲ್ಲಿ ಹಬ್ಬಿ, ಸೋಡ ಸೀಸೆಗಳಿಂದ ಕೈ ಬಾಂಬುಗಳಿಂದ ಬಾಕು ಇತ್ಯಾದಿಗಳಿಂದ ಪುಂಡರು ಹೊಡೆದಾಡಿ ೫೨ ಜನ ಮಡಿದರು. ಪೂರ್ವಬಂಗಾಳದಲ್ಲಿದ್ದ ಅನೇಕ ಹಿಂದೂ ದೇವಾಲಯಗಳು ನೆಲಸಮವಾದವು. ಅವುಗಳ ಮೇಲೆ ಮಸೀದಿಗಳು ಎದ್ದುನಿಂತವು. ಹಿಂದೂ ಸ್ತ್ರೀಯರ ಮಾನಭಂಗ ಹೇಳಲಾರದಷ್ಟು ನಡೆಯಿತು. ತ್ರಿಪುರ ಮತ್ತು ನೌಖಾಲಿ ಈ ಎರಡು ಸ್ಥಳಗಳಲ್ಲಿ ಸುಮಾರು ಒಂದೂವರೆ ಲಕ್ಷ ಹಿಂದೂಗಳ ಮನೆಗಳು ನೆಲಸಮವಾದವು. ಅವುಗಳ ಮೇಲೆ ಮಸೀದಿಗಳು ಎದ್ದುನಿಂತವು. ಹಿಂದೂ ಸ್ತ್ರೀಯರ ಮಾನಭಂಗ ಹೇಳಲಾರದಷ್ಟು ನಡೆಯಿತು. ಹಿಂದೂ ಸ್ತ್ರೀಯರ ಬಳೆ ಕುಂಕುಮಗಳನ್ನು ಅಳಿಸಿ ಬತ್ತಲೆ ನಿಲ್ಲಿಸಿದರು. ಪತಿಗಳ ಎದುರಿಗೆ ಪತ್ನಿಯರ ಮಾನಭಂಗ, ತಂದೆ ತಾಯಿಗಳ ಎದುರಿನಲ್ಲಿ ಮಗಳ ಮಾನಭಂಗ, ಹೆತ್ತವರನ್ನು ಬತ್ತಲೆಯಾಗಿ ಕಂಬಕ್ಕೆ ಬಿಗಿದು ಅವರ ಶಿಶುಗಳನ್ನು ಗೋಡೆಗಿಟ್ಟು ಮೊಳೆಹೊಡೆದರು. ಅನೇಕ ಮಕ್ಕಳ ಕಾಲನ್ನು ಮೆಟ್ಟಿ ಸೀಳಿದರು. ಗೋವುಗಳನ್ನು ಕತ್ತರಿಸಿ, ಅವುಗಳ ಮಾಂಸವನ್ನು ಹಿಂದೂಗಳ ಬಾಯಿಗೆ ತುರುಕಿದರು. ಕಂಗೆಟ್ಟ ಸ್ತ್ರೀಯರು ಮಾನರಕ್ಷಣೆಗೆ ಓಡುತ್ತಿದ್ದರೆ, ಅವರನ್ನು ಅಟ್ಟಿಸಿಕೊಂಡು ಹೋಗಿ ಮಾನಭಂಗ ಮಾಡಿದರು. ಒಬ್ಬ ಮುಸಲ್ಮಾನ ನಾಲ್ಕು ಮಕ್ಕಳನ್ನು ಚೂರು ಚೂರಾಗುವಂತೆ ಒಂದೇ ಬಂಡೆಗೆ ಒಡೆದ. ಹಿಂದೂಗಳು, ಸಿಕ್ಕರೂ ಮುಸಲ್ಮಾನರ ಹಿಡಿತಕ್ಕೆ ಸಿಕ್ಕಿ ನಾಶವಾದರು. ಜಾತಿ ಭ್ರಷ್ಟರಾದರು, ನಿರಾಶ್ರಿತರಾದರು. ನಿರ್ಗತಿಕರಾದರು. ಒಂದು ಹಳ್ಳಿಯ ಬಾವಿಯ ಬಳಿ ಹೆಂಗಸು ಗುಂಪುಗೂಡಿದ್ದರು. ಅವರನ್ನು ಹಿಡಿದು ಭಂಗಿಸಲು ಒಂದು ಮುಸಲ್ಮಾನ್ ತಂಡ ಧಾವಿಸಿತು. ತಕ್ಷಣವೇ ಎಂದರೆ ನಾಲ್ಕು ನಿಮಿಷಗಳಲ್ಲಿ ೮೫ ಜನ ಬಾವಿ ನೀರಿನಲ್ಲಿ ಬಿದ್ದು ಭರ್ತಿಯಾದರು. ಈ ವಾರ್ತೆಗಳನ್ನು ನಿರಾಶ್ರಿತರಿಂದ ಕೇಳಿ ತಿಳಿದ ಬಿಹಾರದ ಜನ ರೊಚ್ಚಿಗೆದ್ದರು. 'ರಕ್ತಕ್ಕೆ ರಕ್ತ' ಎಂದು ಕೂಗಾಡಿದರು. ಅಂದು ಬಿಹಾರದಲ್ಲಿ ನಡೆದ ಮುಸ್ಲಿಂ ಗಲಭೆಯಲ್ಲಿ ೪೫೮೦ ಜನ ಕೊಲೆಯಾದರೆಂದು ಹೇಳುತ್ತಾರೆ. ಆದರೆ ಗಾಂಧಿ ೧೦ ಸಾವಿರಕ್ಕೆ ಕಡಿಮೆ ಇಲ್ಲವೆಂದು ಹೇಳುತ್ತಾರೆ. ಅವರಲ್ಲಿ ಬಹಳ ಜನ ಮುಸ್ಲಿಮರು, ಕೆಲವರು ಹಿಂದೂಗಳು.

ಪಾಕಿಸ್ತಾನದಿಂದ ಬಂದ ನಿರಾಶ್ರಿತರ ಸಮಸ್ಯೆ ಬೃಹದಾಕಾರವಾಗಿ ನಿಂತಿತು. ರಾಷ್ಟ್ರದ ನಾಯಕರುಗಳ ಎದುರಿಗೆ, ದೆಹಲಿಯ ದೇವಾಲಯಗಳಲ್ಲಿ, ಮಸೀದಿಗಳಲ್ಲಿ, ರಸ್ತೆಗಳಲ್ಲಿ ಜನಬಿದ್ದು ಹೊರಳಿತು. ಮುಸ್ಲಿಮರು ಬಾಪುವಿಗೆ ದೂರಿತ್ತರು. ಮಸೀದಿಗಳನ್ನು ಹಿಂದೂಗಳು ವಶಪಡಿಸಿಕೊಂಡರೆಂದು ಗಾಂಧೀಜಿ ತಕ್ಷಣವೇ ನಿರಾಶ್ರಿತರು ಮಸೀದಿಗಳನ್ನು ಬಿಡಬೇಕೆಂದರು. ಆದರೆ ಜನ ಪ್ರತಿಭಟಿಸಿತು. ಅವರು ಬಿಡದೆ ಮುಸಲ್ಮಾನರ ಮೇಲೆ ಕೈ ಮಾಡಿದ್ದೇ ಆದರೆ ತಾವು ಆಮರಣಾಂತ ಉಪವಾಸ ಕೈಕೊಳ್ಳುವುದಾಗಿ ಹಟ ಹಿಡಿದರು. ವಿಧಿ ಇಲ್ಲದೆ ಜನ ಬೀದಿಗೆ ಬರಬೇಕಾಯಿತು. ಈ ಎಲ್ಲ ವಿಚಾರಗಳೂ ಅನೇಕ ಭಾರತೀಯರ ಹೃದಯ ಸಾಗರದಲ್ಲಿ ಮಥನವಾಗುತ್ತಿದ್ದವು. ಅದು ಬಹುಮಟ್ಟಿಗೆ ಕ್ರಿಯಾರೂಪ ತಾಳಿದ್ದು ನಾಥೂರಾಮ್ ವಿನಾಯಕ ಗೋಡ್ಸೆಯಲ್ಲಿ. ಗೋಡ್ಸೆ ಕೆಂಪುಕೋಟೆಯಲ್ಲಿ ನಡೆದ ವಿಚಾರಣೆಯಲ್ಲಿ ತನ್ನ ಸಮರ್ಥನೆಯನ್ನು ಸುಧೀರ್ಘವಾಗಿ ಮೊದಲೇ ಬರೆದು ಸಿದ್ಧಪಡಿಸಿದ್ದ. ತನಗೆ ಮರಣದಂಡನೆಯನ್ನು ವಿಧಿಸಿದಾಗ ಅದನ್ನು ಓದಿ ಹೇಳಿದ :

'ಮೂವತ್ತು ಕೋಟಿ ಜನತೆಯ ಮಾನಸಂರಕ್ಷಣೆಯ ಸಲುವಾಗಿ ಒಬ್ಬನಿಗೆ ಗುಂಡಿಟ್ಟೆ. ನನ್ನ ಕಣ್ಣಿನಲ್ಲಿ ಕಟ್ಟಿದ್ದು ಕೇವಲ ಭಾರತ ಪ್ರಗತಿ ಹಾಗೂ ಹಿಂದೂವಿನ ಅಭ್ಯುದಯವೇ ಹೊರತು ಬೇರಾವ ಬರಿಗನಸೂ ಅಲ್ಲ. ಅದಕ್ಕಾಗಿ ಅಷ್ಟು ಜನರ

ಉಳಿವಿಗಾಗಿ ಒಬ್ಬನನ್ನು ಬಲಿ ತೆಗೆದುಕೊಂಡೆ. ಗಾಂಧೀಜಿ ಮರಳಿನಲ್ಲಿ ಎಣ್ಣೆ ಬಸಿಯಲು ಹೋದರು. ಮುಸಲ್ಮಾನರು ಅವರ ಒಳ್ಳೆಯತನವನ್ನು ದುರುಪಯೋಗಪಡಿಸಿಕೊಂಡರು. ಬಾಪೂಜಿಯ ಕರುಣೆಯ ಕೋಣೆಯಲ್ಲಿ ಸ್ವೇಚ್ಛಾವೃತ್ತಿಗೆ ಕೈಹಾಕಿದರು. ಅವರ ದೌರ್ಜನ್ಯಕ್ಕೆ ಇತಿಮಿತಿ ಇದ್ದಂತೆ ಕಾಣಲಿಲ್ಲ. ನೀವೆಲ್ಲರೂ ನಾನು ಕೊಲೆಗಡುಕನೆಂದೂ, ಪಾತಕಿ ಎಂದೂ ದೂರಬಹುದು. ನೀವು ಏನು ಬೇಕಾದರೂ ಅಂದುಕೊಳ್ಳಿ. ಇಡೀ ಜಗತ್ತು ನನ್ನನ್ನು ತುಚ್ಛಭಾವದಿಂದ ಕಂಡು ಧಿಕ್ಕರಿಸುವುದೆಂದು ನನಗೆ ಗೊತ್ತು. ಅಲ್ಲದೆ ನನ್ನ ಅಂತ್ಯವೂ ಈ ರೀತಿಯ ಮರಣದಂಡನೆಯ ರೂಪದಲ್ಲಿ ಆಗುತ್ತದೆಂದೂ ಗೊತ್ತು. ಆದರೂ ನನ್ನ ಕರ್ತವ್ಯದ ಹೊಣೆ ಅಪಾರವಾದ್ದರಿಂದ ಅವುಗಳಿಗೆಲ್ಲ ಲಕ್ಷ ಕೊಡಲಿಲ್ಲ. ಬಹುದಿನಗಳಿಂದಲೂ ಸಾಧಿಸಿ ಅಂದು ನನ್ನ ಭಾಗದ ಕಾರ್ಯವನ್ನು ನೆರವೇರಿಸಿಯೇ ಬಿಟ್ಟೆ.

ಬಾಪೂಜಿಯವರ ಬಗ್ಗೆ ನಿಮಗಾರಿಗೂ ಇಲ್ಲದಷ್ಟು ಭಕ್ತಿ ನನಗೆ ಇದೆ ಎಂದರೆ ನೀವು ನಂಬಬೇಕು. ಅದಕ್ಕಾಗಿಯೇ ನಾನು ಗುಂಡುಹಾಕುವ ಮುನ್ನ, ಅವರ ಶ್ರೀ ಚರಣಗಳಿಗೆ ಭಕ್ತಿಪೂರ್ವಕವಾಗಿ ವಂದಿಸಿದೆ. ಬಾಪೂಜಿಯವರ ಮೇಲೆ ನನಗಾವ ವೈಯಕ್ತಿಕ ದ್ವೇಷವೂ ಇಲ್ಲ. ಇದ್ದ ದ್ವೇಷ ಅದೊಂದೇ. ಅವರು ಮುಸಲ್ಮಾನರಿಗೆ ಕೊಟ್ಟ ಸಲಿಗೆ. ಅದರಿಂದುಟಾಗುತ್ತಿದ್ದ ಹಿಂದೂಗಳ ಪತನ. ನೀವೇ ಹೇಳಿ ಯಾರು ತಾನೇ ತನ್ನ ಪತ್ನಿಗೆ, ಪುತ್ರಿಗೆ ಮಾನಭಂಗವಾಗುತ್ತಿದ್ದರೆ, ಮಕ್ಕಳು ಮರಿಗಳನ್ನು ಸೀಳುತ್ತಿದ್ದರೆ ಕಣ್ಣಾರೆ ಕಂಡು ಸಹಿಸಬಲ್ಲರು ? ನಮಗೂ ಆತ್ಮವಿಲ್ಲವೆ ? ನಾವೂ ಮನುಷ್ಯರಲ್ಲವೆ ? ಬಾಪೂಜಿ ಹೇಳುತ್ತಲೇ ಬಂದರು ಒಂದು ಕೆನ್ನೆಗೆ ಹೊಡೆದವನಿಗೆ ಮತ್ತೊಂದನ್ನು ತೋರು ಎಂದು. ಆ ತತ್ವದ ಅರ್ಥವನ್ನು ಆ ಮೂರ್ಖರು ಅರಿತರೆ ? ಮಹಾತ್ಮರ ಅಮೃತವಾಕ್ ಕೇಳಿ ನಡೆದಿದ್ದರೆ ಇಷ್ಟು ಅನರ್ಥಕ್ಕೆ ಕೈ ಹಾಕುತ್ತಲೇ ಇರಲಿಲ್ಲ. ಮಹಾತ್ಮಾಜಿಯ ಮಾತಿಗೆ ಬೆಲೆಕೊಟ್ಟು ನೆಲದವರೆಗೂ ಬಾಗಿದೆವು. ಇನ್ನೂ ಬಗ್ಗಿ ನಡೆ ಎಂದರೆ ಭೂಮಿ ಕೊರೆದು ಬಾಗಬೇಕಷ್ಟೆ ! ಅದನ್ನು ಸೈರಿಸಲಾಗಲಿಲ್ಲ. ದೃಢ ನಿಶ್ಚಯ ಮಾಡಿದೆ. ಗುಂಡಿಟ್ಟೆ.

ಬಾಪುವಿನ ಕೆಲ ವರ್ತನೆಗಳಂತೂ ನನ್ನ ಮನಸ್ಸಿಗೆ ಹಿಡಿಸಲೇ ಇಲ್ಲ. ಮೊದಲನೆಯದು ಭಾರತವನ್ನು ಇಬ್ಭಾಗ ಮಾಡಿದ್ದು. ಮುಸಲ್ಮಾನರಿಗೆ ಹಿಂದೂವಿನ ತಾಯ್ನಾಡನ್ನು ಹಂಚಿಕೊಡುವ ಅಗತ್ಯವೇನಿತ್ತು ? ನಾಲ್ಕುದಿನ ನಮ್ಮೊಡನೆ ಬಾಳಿದನೆಂದೇ ? ಅಥವಾ ತಮ್ಮ ತಲೆ ಮೆಟ್ಟಿ ಹತ್ತು ವರ್ಷ ಆಳಿದನೆಂದೇ ? ಅಂದು ನಮ್ಮ ಅಯೋಗ್ಯತೆಯಿಂದ ಅರಿಯದೆ ತುಳಿಸಿಕೊಂಡೆವು. ಆದರೆ ಈಗ ಎಚ್ಚೆತ್ತ ನಾವು ಹಿಂದಿನಂತಿರಲಾಗುವುದಿಲ್ಲ. ಭಾರತದ ಮನೆಗೆ ಬಂದ ಅವನು ಅತಿಥಿಯೇ ಹೊರತು ಯಜಮಾನನಾಗುವುದು ಸಾಧ್ಯವಿಲ್ಲ. ಪಾಲ್ಗಾರಿಕೆಯಲ್ಲಿ ಅವನಿಗೆ ಹಕ್ಕಿಲ್ಲ. ಅದೇ ರೀತಿ ಲೆಕ್ಕ ಹಾಕಿದರೆ, ಪೋರ್ಚುಗೀಸರಿಗಿಷ್ಟು, ಡಚ್ಚರಿಗಿಷ್ಟು, ಇಂಗ್ಲಿಷರಿಗಿಷ್ಟು, ಫ್ರೆಂಚರಿಗಿಷ್ಟು ಹಂಚಿಬಿಟ್ಟರೆ ಭಾರತದ ಭೂಪಟವೇ ಅಳಿಸಿಹೋಗಬಹುದು. ಇಂತಹ ಸ್ವಾತಂತ್ರ್ಯ ಯಾರಿಗೆ ಬೇಕಿತ್ತು ? ನನಗಂತೂ ಇದನ್ನು ಕಾಣುವ ಇಷ್ಟವಿರಲಿಲ್ಲ. ಬಾಪೂಜಿ ಸಹ ಇದೇ ಭಾವಿಸಿದ್ದರು. ಹೋಗಲಿ, ಭಾರತದ ವಿಭಜನೆ ಅವರ ಕೈಯಲ್ಲಿರಲಿಲ್ಲವೆಂದು ಸಮಾಧಾನಪಟ್ಟುಕೊಳ್ಳೋಣ. ಆದರೆ ಗಾಂಧೀಜಿ ೫೫ ಕೋಟಿ ರೂಪಾಯಿಗಳನ್ನೇಕೆ ಪಾಕಿಸ್ತಾನಕ್ಕೆ ಕೊಡಬೇಕಿತ್ತು ? ಆ ಹಣ ಗಾಂಧೀಜಿಯ ಮನೆಯದಲ್ಲ. ಪ್ರತಿಯೊಂದು ಪೈಸೆಗೂ ಭಾರತೀಯರ ಹಕ್ಕಿದೆ. ಅದು ಹಿಂದೂಗಳ ಪವಿತ್ರ ರಕ್ತದ ಹನಿ. ಅಂದಮೇಲೆ ಪುಂಡರ ಪುಂಡತನಕ್ಕೆ ಸಹಾಯವಾಗಲೆಂದೋ ? ಪ್ರಬಲವಾದ ತಪ್ಪು ಗಾಂಧೀಜಿಯದು ಎಂದು ಮನಗಂಡೆ.

ನಾನು ಗಾಂಧೀಜಿಗೆ ಗುಂಡಿಟ್ಟ ಕೂಡಲೇ, ನಾನೂ ಹೊಡೆದುಕೊಳ್ಳಬಹುದಿತ್ತು. ಆದರೆ ಅದು ನನ್ನ ಇಷ್ಟವಾಗಿರಲಿಲ್ಲ. ಏಕೆಂದರೆ ಜಗತ್ತಿಗೆ ನನ್ನ ಅಭಿಪ್ರಾಯವನ್ನು ತಿಳಿಸಿ ಹೋಗಬೇಕೆಂಬುದೇ ನನ್ನ ಹಂಬಲವಾದ್ದರಿಂದ ಜೀವಸಹಿತ ಉಳಿದು ಎಲ್ಲ ಕಷ್ಟ ನಿಷ್ಠುರಗಳಿಗೂ ಗುರಿಯಾದೆ. ನನ್ನ ಜೀವದ ಮೇಲಿನ ಹಂಗನ್ನೆಂದೋ ನಾನು ತೊರೆದಿದ್ದೇನೆ. ಆದರೆ ಹಲವರ ಉದ್ಧಾರಕ್ಕಾಗಿ ಮಾಡಿದ ಕಾರ್ಯವು ನನಗೆ ಖಂಡಿತ ಒಳ್ಳೆಯದೇ ಎಂದು ಭಾವಿಸಿದ್ದೇನೆ. ತಪ್ಪಿದ್ದರೆ ಸ್ವರ್ಗದಲ್ಲಿರುವ ಬಾಪು ನನ್ನನ್ನು ಮನ್ನಿಸಲಿ. ವಂದನೆಗಳು.'

ಗೋಡ್ಸೆಯ ಈ ಮಾತುಗಳಲ್ಲಿ ಭಾರತದ ಹಲವರ ಅಭಿಪ್ರಾಯಗಳು ಬೆರೆತಿರುವುದನ್ನು ಕಾಣಬಹುದು.

**********

'ಆಭಾ, ಬೆಳಗ್ಗೆ ನೀನು ಕುಡಿಯಲು ಕೊಟ್ಟೆಯಲ್ಲ ಅದು ಎಂಥಾದ್ದು ?'

'ಯಾವುದು ಬಾಪೂಜಿ ? ಮೇಕೆ ಹಾಲೆ ?'

'ಅಲ್ಲಮ್ಮ. . .'

'ಹಸಿರತರಕಾರೀನೆ ?'

'ತರಕಾರಿ ಹೇಗಮ್ಮ ಕುಡಿಯುವುದು ?'

'ಹಾಗಾದರೆ ನೀರುಮಜ್ಜಿಗೆ ಇರಬೇಕು.'

'ಉಹ್ಹು, ಇನ್ನೊಂದು.'

'ಓ. ಅದೇ ! ಕೆಂಪು ಮೂಲಂಗಿರಸ, ರಸ ನಿಮಗೆ, ಹೋಳೆಲ್ಲ ದನಗಳಿಗೆ !'

'ಹ್ಹಾ ! ಹಾಗಾದರೆ ದನದ ಆಹಾರ ನನಗೆ ಕೊಡ್ತೀಯಾ ?'

'ಬಾಪು, ಅದನ್ನು ಬಾ, ಕುದುರೆ ತಿಂಡಿ ಎನ್ನುತ್ತಿದ್ದರು.'

'ಹೌದು ದನ ಕುದುರೆಗಳ ತಿಂಡಿ ಈ ಮನುಷ್ಯ ತಿನ್ನುವುದು. ಇರಲಿ ನೋಡು ಆಭಾ, ಯಾರಿಗೂ ಬೇಡವಾದ್ದೇ ನನಗೆ ರುಚಿ. ಒಂದು ತರಹ ವಿಚಿತ್ರ ಅಲ್ಲವೇ ನಾನು ?'

'ಅಲ್ಲ ಬಾಪೂಜಿ, ಯಾವ ವಸ್ತುವಿನಲ್ಲಿ ಯಾರೂ ರುಚಿಯನ್ನು ಕಾಣಲಾರರೋ ಅದೇ ನಿಮಗೆ ಪರಮ ರುಚಿ, ಅದೇ ನಿಮ್ಮ ವೈಶಿಷ್ಟ್ಯ !'

'ಹೋಗಲಿ, ಈ ದಿನ ಪ್ರಾರ್ಥನೆಗೆ ಹೊರಟಿದ್ದು ಸ್ವಲ್ಪ ತಡವಾಯ್ತು. ಅಲ್ಲವೆ ಮನು ? ಏಕೆ ಮನು ಮೌನ.'

'ಇಲ್ಲ ಬಾಪೂಜೀ, ಇಂದೇಕೋ ನನ್ನ ಮನಸ್ಸಿನಲ್ಲಿ ವಿಚಿತ್ರ ಕಳವಳ.'

'ಕಳವಳ. ಅದರ ಸುಳಿವೇ ನನ್ನಲಿಲ್ಲ. ಅಲ್ಲದೇ ಇಂದೇಕೋ ಒಂದು ರೀತಿಯ ಆನಂದ ! ಮೊನ್ನೆಯಿಂದ ಹಾಗೇ ನೋಡು. ಹಿಂದೂಗಳಿಗೂ ಮುಸಲ್ಮಾನರಿಗೂ ದೆಹಲಿಯಲ್ಲಿ 'ಹೃದಯ ಸಮ್ಮೇಳನ' ನಡೆಯಿತೆಂದರು. ಈ ವಾರ್ತೆಗಾಗಿ ನನ್ನ ಕಿವಿಗಳು ಕಾತರಿಸಿದ್ದವು. ಇಂದಂತೂ ಅವರ್ಣನೀಯ ಆನಂದ ! ತೃಪ್ತಿ !'

'ಬಾಪೂಜಿ, ಮನು ಹೇಳಿದಂತೆ ನನಗೂ ಅಷ್ಟೇ. ಆ ದ್ರೋಹಿ ಕೈಬಾಂಬು ಹಾಕಿದಾಗಿನಿಂದ ನನ್ನ ಜೀವವೇ ನಡುಗುತ್ತದೆ.'

'ಬಿಡಮ್ಮ, ಅದಕ್ಕೇಕಿಷ್ಟು ಕಳವಳ. ಹಲವು ವೇಳೆ ಸಾವಿನಲ್ಲೂ ಸತ್ಯವಿದೆ ಎಂಬುದನ್ನು ನಾವೆಲ್ಲ ಕಂಡಿದ್ದೇವೆ. ಅಂತಹ ಸತ್ವ ಪೂರ್ಣ ಸಾವಿಗೆ ಸದಾ ಸ್ವಾಗತವಿರಬೇಕು.

ಸಂಭಾಷಣೆ ಮುಗಿಯುವ ಹೊತ್ತಿಗಾಗಲೇ ಅವರು ಪ್ರಾರ್ಥನೆಯ ಭೂಮಿಯನ್ನು ತಲುಪಿದ್ದರು. ಜನ ಕಿಕ್ಕಿರಿದಿತ್ತು. ದೆಹಲಿಯ ಬಿರ್ಲಾ ಭವನದ ಪಕ್ಕದ ಮೈದಾನದಲ್ಲಿ. ಸುಮಾರು ೫೦೦ಕ್ಕೆ ಮಿಕ್ಕಿರಬಹುದು. ಆ ದಿನ ಬಾಪು ತಮ್ಮ ಮೊಮ್ಮಗನು ಗಾಂಧಿಯ ಪತ್ನಿ ಆಭಾ ಮತ್ತು ಮೊಮ್ಮಗಳು ಮನು ಇವರಿಬ್ಬರ ಹೆಗಲಮೇಲೆ ಕೈ ಊರಿಕೊಂಡು ಪ್ರಾರ್ಥನೆಯ ಭೂಮಿಗೆ ನಡೆದಿದ್ದರು. ಬಂದದ್ದೇ ತಡ, ಜನ ಜುಮ್ಮೆಂದು ಮೇಲೆದ್ದು ಮಹಾತ್ಮನಿಗೆ ಗೌರವ ಸೂಚಿಸಿತು. ಹಾದಿಬಿಟ್ಟಿತು. ಅನೇಕ ಶಿರಗಳು ನೆಲದವರೆಗೂ ಬಾಗಿದ್ದವು. ಅನೇಕ ಕೈಗಳು ಮಹಾತ್ಮನಿಟ್ಟು ತೆಗೆದ ಕಾಲುಗಳೆಡೆಯನ್ನು ಮುಟ್ಟಿ ಕಣ್ಣಿಗೊತ್ತಿಕೊಳ್ಳುತ್ತಿದ್ದವು.

ಮಹಾತ್ಮರ ಪ್ರಾರ್ಥನಾ ವೇದಿಕೆ – ಮರದಿಂದ ಮಾಡಿದುದು – ಸ್ವಲ್ಪ ದೂರದಲ್ಲಿತ್ತು ಅಷ್ಟೆ. ಜನ ಮೇಲೆ ನುಗ್ಗಿ ಬರುತ್ತಿತ್ತು. ಬಾಪೂಜಿ ತಮ್ಮ ಸಹಜವಾದ ಮೊಗದಿಂದ ಆಭಾ ಮತ್ತು ಮನು ಎರಡೂ ಊರುಗೋಲುಗಳ ಮೇಲೆ ಕೈ ಊರಿಕೊಂಡೇ ಜನತೆಗೆ ತಮ್ಮ ನಮಸ್ಕಾರ ಅರ್ಪಿಸುತ್ತಿದ್ದರು. ಜನರ ತಂಡವನ್ನು ತಡೆದು ಮನು 'ಸ್ವಲ್ಪ ದೂರ ಸರಿಯಿರಿ. ಬಾಪೂಜಿಯ ಪ್ರಾರ್ಥನೆಗೆ ಈ ದಿನ ತಡವಾಗಿದೆ. ಇನ್ನು ಹೆಚ್ಚು ತಡಮಾಡಬೇಡಿ' ಇಷ್ಟು ಹೇಳುವುದರೊಳಗಾಗಿ ನಮಸ್ಕರಿಸುವ ನೆಪದಲ್ಲಿ ಮುಂದೆ ಬಂದ ಒಬ್ಬ ವ್ಯಕ್ತಿ ಮನೂಳ ರಟ್ಟೆಗಳನ್ನು ಹಿಡಿದು ಹಿಂದಕ್ಕೆ ತಳ್ಳಿದ. ಮನು ಬಿದ್ದುಬಿಟ್ಟಳು. ಅಷ್ಟರಲ್ಲಿ ಮೂರು ಗುಂಡುಗಳು ಹಾರಿದವು.

'ಢಂ. . .ಢಂ. . .ಢಂ. . .'

'ಹೇ ರಾಮ್. . .ಎಂಬ ಅಂತಿಮ ಉದ್ಗಾರ ಒಂದು ಹೊರಬಿತ್ತು. ಕಾಲುಗಳು ಕುಸಿದವು. ಕನ್ನಡಕ ಕಳಚಿಬಿತ್ತು. ರಕ್ತಸಿಕ್ತವಾದ ಆ ದೇಹವನ್ನು ಬಿರ್ಲಾ ಭವನದ ಕೋಣೆಗೆ ಸಾಗಿಸಲಾಯ್ತು.

ಬಾಪೂಜಿಯ ಮರಣವಾರ್ತೆ ವಿಶ್ವವ್ಯಾಪಕವಾಯಿತು. ಇಡಿಯ ವಿಶ್ವವೇ ಅಂದು ಶೋಕಸಾಗರದಲ್ಲಿ ಮುಳುಗಿತು. ದುಃಖದ ತೀವ್ರತೆಯನ್ನು ವರ್ಣಿಸಲಸದಳ. ಪ್ರಾಯಶಃ ಮಾತುಗಳು ಸೋತು ಹೋಗಿತ್ತೆನ್ನಬಹುದು. ನಾಯಕಮಣಿ ನೆಹರು ಅಂದು ಆಕಾಶವಾಣಿಯ ಮೂಲಕ ಪ್ರಸಾರಮಾಡಿದ ಮಾತುಗಳು ಹೀಗಿದ್ದವು :

'ನಮ್ಮ ಬಾಳಿನ ಬೆಳಕು ನಂದಿ ಕತ್ತಲು ಆವರಿಸಿದೆ. ನಿಮಗೇನು ಹೇಳಬೇಕೋ ನನಗೊಂದೂ ತೋರುವುದಿಲ್ಲ. ನಮ್ಮ ನೆಚ್ಚಿನ ನಾಯಕ, ನಮ್ಮ ಬಾಪು ಎಲ್ಲ ಜನತೆಯ ತಂದೆ ಇನ್ನಿಲ್ಲ. ಹಾಗೆ ಹೇಳುವುದು ತಪ್ಪಿರಬಹುದು. ಆದರೆ ನಾವು ಇಷ್ಟು ವರ್ಷಗಳೂ ಕಂಡ ರೂಪದಲ್ಲಿ ಆತನನ್ನು ಪುನಃ ಕಾಣಲಾರೆವು. ಹಿತನುಡಿಗಳಿಗಾಗಿ, ಸಮಾಧಾನಕ್ಕಾಗಿ ನಾವು ಆತನ ಬಳಿಗೆ ಹೋಗುವಂತಿಲ್ಲ. ಇದು ನನಗೊಬ್ಬನಿಗೇ ಅಲ್ಲ, ದೇಶದ ಕೋಟ್ಯಾಂತರ ಜನತೆಗೆ ಮಹತ್ತರವಾದ ಪೆಟ್ಟು, ಈ ನೋವನ್ನು ಕಡಿಮೆ ಮಾಡಲು ನಾನಾಗಲಿ, ಬೇರೆ ಯಾರಾಗಲೀ ಯಾವ ಸಮಾಧಾನದ ನುಡಿಗಳನ್ನೂ ಹೇಳಲಾರೆವು.

'ಬೆಳಕು ನಂದಿತೆಂದು ಹೇಳಿದೆ. ಅದು ಯುಕ್ತವಲ್ಲ. ಏಕೆಂದರೆ ಈ ದೇಶದಲ್ಲಿ ಬೆಳಗುತ್ತಿದ್ದ ಜ್ಯೋತಿ ಸಾಧಾರಣವಾದುದಲ್ಲ. ಈ ದೇಶವನ್ನು ಬಹು ವರ್ಷಗಳಿಂದ ಬೆಳಗಿದ ಜ್ಯೋತಿಯೇ ಇನ್ನೂ ಅನೇಕ ವರ್ಷ ಬೆಳಗುತ್ತದೆ. ಜಗತ್ತು ಅದಕ್ಕೆ ಸಾಕ್ಷೀಭೂತ ವಾಗಿರುತ್ತದೆ. ಅನೇಕ ದುಃಖಸಂತಪ್ತ ಹೃದಯಗಳಿಗೆ ಅದು ಸಮಾಧಾನ ಕೊಡುತ್ತದೆ. ಏಕೆಂದರೆ ಆ ಬೆಳಕು ಜೀವಂತ ಸತ್ಯದ ರೂಪ. ಆ ವ್ಯಕ್ತಿ ತನ್ನ ಶಾಶ್ವತ ಸತ್ಯದೊಡನೆ ನಮ್ಮೊಡನಿದ್ದು ಸರಿಯಾದ ಮಾರ್ಗ ತೋರಿ, ತಪ್ಪು ದಾರಿಯಿಂದೆಳೆದು ಈ ಸನಾತನ ರಾಷ್ಟ್ರವನ್ನು ಸ್ವಾತಂತ್ರ್ಯಕ್ಕೊಯ್ದಿದ್ದಾನೆ.

'ಇದೆಲ್ಲ ಆದದ್ದು, ಆಗಬೇಕಾದ್ದು ಬಹಳಷ್ಟು ಉಳಿದಿದೆ. ಆತನ ಕೆಲಸ ಮುಗಿಯಿತೆಂದಾಗಲೀ, ಆತನ ಜೀವನ ಅನಗತ್ಯವೆಂದಾಗಲೀ ನಮಗೆಂದೂ ತೋರಿಲ್ಲ. ಅದರಲ್ಲೂ ಈಗ, ಇಷ್ಟು ತೊಂದರೆಗಳು, ನಮ್ಮನ್ನೆದುರಿಸುತ್ತಿರುವಾಗ, ಆತನಿಲ್ಲದಿರುವುದು, ಸಹಿಸಲಾರದ ಪೆಟ್ಟಾಗಿದೆ.

ಬಾಪು ೧೯೪೮ ಜನವರಿ ೩೦ನೇ ತಾರೀಖು ಶುಕ್ರವಾರ ಸಂಜೆ ಇಹದ ಬಾಳನ್ನು ತ್ಯಜಿಸಿದರು. ಅವರ ಮೃತದೇಹ ಮಾರನೆಯ ಸಂಜೆ ರಾಜಘಾಟಿನಲ್ಲಿ ಅಗ್ನಿಗೆ ಆಹುತಿಯಾಯಿತು. ಲಕ್ಷೋಪಲಕ್ಷ ಜನತೆ ಬಾಪೂಜಿಗೆ ಬಾಷ್ಪಾಂಜಲಿಯನ್ನರ್ಪಿಸಿತು.

**ರಘುಪತಿ ರಾಘವ ರಾಜಾರಾಂ**
**ಪತಿತ ಪಾವನ ಸೀತಾರಾಂ**
**ಈಶ್ವರ ಅಲ್ಲಾ ತೇರೇ ನಾಂ**
**ಸಬ್ ಕೋ ಸನ್ಮತಿ ದೇ ಭಗವಾನ್**
**ರಾಮ ರಾಮ ಜಯ ರಾಜಾರಾಂ**
**ರಾಮ ರಾಮ ಜಯ ಸೀತಾರಾಂ**

*

**ಶಿಕ್ಷಿಸುವುದಕ್ಕಿಂತ ಕ್ಷಮಿಸುವುದಕ್ಕೆ**
**ಹೆಚ್ಚು ಶಕ್ತಿ ಬೇಕು**
**– ಗಾಂಧೀಜಿ**

# ಹೂವತಂದವರು (೧೯೬೪)

# ದಾನವಿನೋದೆ ಅತ್ತಿಮಬ್ಬೆ

==========================================================================

ಅದು ಪೂರ್ವದಿಶಾ ವನಿತೆಯ ಪ್ರಭಾವದನದಲ್ಲಿ ಹೊಂಬೊಗರ ಹೊನಲು ಹೊಮ್ಮುವ ವೇಳೆ. ಮೊದಮೊದಲು ಕುಂಕುಮದ ಕೆಂಪಾಗಿ ಚಿಮು ಚಿಮು ಚಿಮ್ಮಿ, ಅನಂತರ ಹೊಂಬಣ್ಣದ ಹೊಗರೇರಿ ಬಿರಿಯುವ ಸುಪ್ರಭಾತದ ಸಮಯ. ಇನ್ನೇನು ತುಸು ಹೊತ್ತಿನಲ್ಲಿ ಮೂಡುವೆಟ್ಟಿನ ನೆತ್ತಿಯಿಂದ ಬೆಳು ಬೆಳಕಿನ ನಿರ್ಝರಣಿ ಇಳೆಯೆಡೆಗೆ ಬೆಳ್ಳಂಗೆಡೆಯಲನುವಾಗುತ್ತದೆ. ಆಗ ಜಗತ್ತೆಲ್ಲಾ ಆ ಬೆಳ್ ನೀರಿನಲ್ಲಿ ಮಿಂದು ಮಡಿಯುಡುತ್ತದೆ. ಹಸುರು ಹಾಸಿನ ಮೇಲೆ ಹೂಬಿಸಿಲು ಮುದ್ದಾಗಿ ಮಲಗಿದಾಗ, ಸುಳಿಗಾಳಿ ಗಿಡಬಳ್ಳಿ ಚಿಗುರೆಲೆಗಳಿಗೆ ಕಚಗುಳಿಯಿಟ್ಟು ನಲಿಸುತ್ತದೆ, ತರುಗುಲ್ಮಗಳ ಹೂ ಜಡೆ ಹಿಡಿದು ಎಳೆಯುತ್ತದೆ. ಮುಂಗೋಳಿ ಮೇಲೆದ್ದು ಕತ್ತ ನೆತ್ತಿಗೆ ತಂದು 'ನಮೋ ಜಗತ್ಕರ್ತೋss '(ಕೊಕ್ಕೊಕ್ಕೊಕ್ಕೋsss) ಎಂದು ಜಗತ್ ಕರ್ತನಿಗೆ ತನ್ನ ಮೊದಲ ವಂದನೆ ಸಲ್ಲಿಸುವಾಗ, ನಿದ್ದೆಯಿಂದೆಚ್ಚೆತ್ತ ತಾಯ ತುಪ್ಪಳದ ಮರಿ ಹಕ್ಕಿ 'ಚೀ ಪೀ' ಗುಟ್ಟುತ್ತದೆ. ಹಕ್ಕಿಗೊರಲಿನ ಗಾನ ತಾನತ್ತರಂಗಿಣಿಯು ತಂದನಿ ತಂದನಿ ತಾನ ಎದೆದುಂಬುವಾಗ ನಿದ್ದೆ ಮುಸುಕನ್ನು ಓಸರಿಸಿ ಎಚ್ಚರಗೊಂಡ ಜಗತ್ತು ಚೇತನಗೊಳ್ಳುತ್ತದೆ. ಕಳೆದಿರುಳ ಅಳಲನ್ನು ಹಗಲಿತ್ತ ಬೆಳಕಿನ ಹೊಳೆಯಲ್ಲಿ ತೊಳೆದು ಜಾಲಾಡಿ, ತನ್ನ ದೈನಂದಿನ ಚಟುವಟಿಕೆಗಳಲ್ಲಿ ತೊಡಗುತ್ತದೆ.

ಇದು ನಿಸರ್ಗದ ನಿತ್ಯ ವ್ಯಾಪಾರ !

ಆದರೆ ಅಂದಿನರಣೋದಯ ಎಂದಿನ ಸ್ವರ್ಣೋದಯವಾಗಿರಲಿಲ್ಲ. ಎಲ್ಲೆಲ್ಲೂ ಮಬ್ಬು, ಎಲ್ಲೆಡೆಯೂ ಹೆಸರಿರದ ಕಳ್ಳ ಕತ್ತಲು. ದಿನದ ದೇವನಾದ ಸೂರ್ಯನಿಗೂ ಸುಳಿಯಲು ಅಳುಕು. ಅಳುಕಿಗಿಂತಲೂ ಮಿಗಿಲಾಗಿ ಅವನಿಗೆ ತಾಳಲಾಗದ ದುಃಖ. ಅದು ಕಲ್ಯಾಣದ ಚಾಲುಕ್ಯ ಚಕ್ರವರ್ತಿ ಆಹವಮಲ್ಲ ನೂರ್ಮಡಿ ತೈಲಪನ ಭುಜಾದಂಡದಂತಿದ್ದ 'ಒರಟರಮಲ್ಲ'ನೆಂದೇ ಪ್ರಸಿದ್ಧನಾಗಿದ್ದ ದಲ್ಲ ಮಹಾಮಂತ್ರಿಯ ಮಗ ವಿಖ್ಯಾತ ದಳಪತಿ ನಾಗದೇವ ಹಿಂದಿನ ದಿನದ ತಾವರೆಘಟ್ಟ ಕಾಳೆಗದಲ್ಲಿ ಮಡಿದಿದ್ದ. ಅವನಿಗಾಗಿ ಅವನ ಸಾವಿಗಾಗಿ, ಅವನ ಮೋಹದ ಮಡದಿಯರಾದ ಅತ್ತಿಮಬ್ಬೆ ಮತ್ತು ಗುಂಡಮಬ್ಬೆಯರಿಗೆ ಎಳಮೆಯಲ್ಲೇ ಪ್ರಾಪ್ತವಾದ ವೈಧವ್ಯಕ್ಕಾಗಿ ಅತ್ತಿಮಬ್ಬೆಯ ಗರ್ಭಸಂಜಾತ ಶಿಶು ಹಾಲುಗಲ್ಲದ ಹಸುಳೆ ಅಣ್ಣಿಗನಿಗೆ ಅನಾಥತ್ವ ಪ್ರಾಪ್ತವಾದುದಕ್ಕಾಗಿ ಸೂರ್ಯನಿಗೆ ಅಳಲು, ಎಂದಿಲ್ಲದ ದುಃಖ. ಹಿಂದಿನಿರುಳೆಲ್ಲಾ ಅತ್ತೂ ಅತ್ತು ಅವನ ಕಣ್ಣುಗಳು ಕೆಂಡವಾಗಿದ್ದವೆಂದು ತೋರುತ್ತದೆ. ಅಂದು ಅವನು ರೆಪ್ಪೆ ತೆರೆದಾಗ ಕಾಣಿಸಿದ್ದು ರಕ್ತ ಚಿಮ್ಮುವಂತಿರುವ ಕೆಂಗಣ್ಣುಗಳು.

ಜಗಚ್ಚಕ್ಷುವಾದ ಸೂರ್ಯದೇವನಿಗೆ ಕಾಣದ ದೃಶ್ಯ ಯಾವುದಿದೆ ಈ ಜಗತ್ತಿನಲ್ಲಿ ! ಅವನು ಕಂಡು ತಿಳಿದಿದ್ದ ನಾಗದೇವನ ಮರಣವಾರ್ತೆ ಇನ್ನೂ ಅತ್ತಿಮಬ್ಬೆ ಗುಂಡಮಬ್ಬೆಯರಿಗೆ ಮುಟ್ಟಿರಲಿಲ್ಲ. ಆದ್ದರಿಂದಲೇ ಯುದ್ಧಭೂಮಿಯಿಂದ ಜಯಶಾಲಿಯಾಗಿ ಅಂದು ಆಗವಿಸುವನೆಂಬ ನಿರೀಕ್ಷಣೆಯಲ್ಲಿ ಅರುಣೋದಯಕ್ಕೆ ಮುನ್ನವೇ ಪೊಟ್ಟಲಗೆರೆಯ ಪೂರ್ವ ದಿಗ್ದೇಶದ ತಿಟ್ಟಿನ ನೆತ್ತಿಯೇರಿ ದಕ್ಷಿಣ ಚೋಳರ ರಾಜಧಾನಿಯ ಕಡೆಗೆ ದಿಟ್ಟಿಯಟ್ಟಿ ನೋಡುತ್ತಿದ್ದರು. ರಣಾಂಗಣದಲ್ಲಿ ಗೆಲವು ಗಳಿಸಿ ನೆತ್ತರುಡಗೆಯಲ್ಲಿ ಬರುವ ಗಂಡನಿಗೆ ಹಾರ ಹಾಕಿ ಆರತಿ ಮಾಡಿ ಸ್ವಾಗತಿಸಲೋಸುಗ ಅವನ ಇಬ್ಬರು ಪತ್ನಿಯರೂ ಪೊಟ್ಟಲಗೆರೆಯ ಮೂಡಣ ಮೊರಡಿಯೇರಿ ಪೂರ್ವ ದಿಗಂತವನ್ನೇ ಈಕ್ಷಿಸುತ್ತಿದ್ದರು.

'ನಮ್ಮ ಸ್ವಾಮಿ ಬಂದಾನು ! ಜಯವ ತಂದಾನು ! ಒಲವ ಕೊಟ್ಟಾನು! ನಾನವನೊಡನೆ ನಲಿದು ನರ್ತಿಸಿ ನಗರ ಪ್ರವೇಶ ಮಾಡಿಯೇವು ! ಶತ್ರುಗಳ ರಕ್ತದಿಂದ ಸಿಕ್ತವಾದ ಕರೆಗಟ್ಟಿದ ಕತ್ತಿಗಳನ್ನು ಮಂಗಳ ಮುಹೂರ್ತದಲ್ಲಿ ತೊಳೆಯಬೇಕು. ಅವನ ರಣ ದುಡುಗೆಗಳನ್ನು ಬಿಚ್ಚಿ ಮನೆಯಂಗಳದ ಎದರು ಗೋಡೆಯ ಮೇಲೆ ನೇತು ಹಾಕಿ, ನೋಡಿದವರಿಗೆ ರಣೋತ್ಸಾಹ ತುಂಬುವಂತೆ, ನಮ್ಮ ಪತಿದೇವನ ಬಗೆಗೆ ನಾಡಿಗರ ಅಭಿಮಾನ ಉಕ್ಕಿ ಉಕ್ಕಿ ಹರಿಯುವುವಂತೆ ಮಾಡಬೇಕು. ಅಂತಾಗಿಸಿದ ಮೇಲೆ ಸ್ವಾಮಿಯ ಮಜ್ಜನ ಕಾರ್ಯ, ಪನ್ನೀರಿನಲ್ಲಿ ಆತನ ಮೈತೊಳೆದು, ಯುದ್ಧದಿಂದ ಗಾಯಗಳಿಗೆ ಅರೆದ ಮದ್ದು ಹಚ್ಚಿ ಮೈ ನೋವು ಮರೆಯುವಂತೆ ಬಿಸಿ ನೀರಿನ ಕಾವು ಕೊಡಬೇಕು. ಆಗ ಊರಿಗೆ ಊರೇ ಬರುತ್ತದೆ. ಜಯಮಾಲಿಕೆಗಳು ರಾಶಿ ರಾಶಿ ನಮ್ಮ ಸ್ವಾಮಿಯ ಕೊರಳಲ್ಲಿ ಶೋಭಿಸುತ್ತವೆ. ಅಂದು ನಮ್ಮೂರ ಕೇರಿಗೆಲ್ಲಾ ಹಬ್ಬ, ಊರಿಗೆಲ್ಲಾ ಹಬ್ಬ. ಅರಮನೆಯಲ್ಲಂತೂ

ಸಂಭ್ರಮದ ಒಸಗೆ. ನಾವು ಮೂವರೂ ಒಟ್ಟಿಗೇ ಕುಳಿತು ಊಟ ಮಾಡುತ್ತೇವೆ. ಆಮೇಲೆ. . .ಆ ಮೇ ಲೆ. . .ಹುಹ್ಹುಹ್ಹುಹ್ಹು. . . ಮೇಲುಪ್ಪರಿಗೆಯ ಸಿರಿಮಂಚದಲ್ಲಿ ಹುಹ್ಹುಹ್ಹುಹ್ಹುಹ್ಹು. . .ಛಿ! ನಾಚಿಕೆ. . .ನಾನು ಹೇಳೊಲ್ಲಮ್ಮಾ!'

'ಅಯ್ಯೋ ಹುಚ್ಚಿ, ಮಾತಿಗೆ ಮೊದಲೇ ಮಂಚವನ್ನೇರುತ್ತಿರುವೆಯಲ್ಲೇ ಗುಂಡಿ, ನಮ್ಮ ಸ್ವಾಮಿಗೆ ಪ್ರೇಮದ ಪತ್ನಿಯರಿಗಿಂತ, ಅನ್ನವಿತ್ತು ಸಲಹಿದ ಪ್ರಭುಗಳ ಮೇಲೆ ಹೆಚ್ಚು ಪ್ರೇಮ, ಒಲವು. ಹೆತ್ತ ತಾಯಿಗಿಂತ ಹೊತ್ತ ನೆಲದ ಹಂಗು ವಿಪುಲ ಅವರಿಗೆ. ಅವರು ನಮ್ಮಾಸ್ತಿಯಲ್ಲಮ್ಮಾ ರಾಷ್ಟ್ರದ ಸ್ವತ್ತು. ಅವ ಮೊದಲ ದರ್ಶನ ಮಹಾರಾಜರು. ಅನಂತರ ನಾವು, ನಮ್ಮ ಮನೆ, ಪೊಟ್ಟಲಗೆರೆಯನ್ನು ಪ್ರವೇಶಿಸಿದ ಕೂಡಲೇ ಅರಮನೆಗೆ ಹೋಗಿ ಚಾಲುಕ್ಯ ಚಕ್ರವರ್ತಿ ಅಹವಮಲ್ಲ ನೂರ್ಮಡಿ ತೈಲರಿಗೆರಗಿ, ಅವರಿಂದ ಜಯಮಾಲೆ ಹಾಕಿಸಿಕೊಂಡು ಭುಜ ಬೆನ್ನು ತಟ್ಟಿಸಿಕೊಂಡು ಆಶೀರ್ವದಿತರಾಗಿ, ಆ ರಣದುಡುಗೆಯಲ್ಲೇ ನಮ್ಮ ಮನೆಗೆ ಬರುತ್ತಾರೆ. ಬಂದ ಮೇಲೆ ನನ್ನ ನಿನ್ನ ಸೇವೆ, ಅಲ್ಲವೆ ?'

'ಅಹುದು ಆರ್ತ್ಯಕ್ಕ. ಆದರೂ ಅವರನ್ನು ಕಂಡೇನೇ ಕೂಡೇನೇ ನುಡಿ ಸೇನೆ–ಸಲಸೀನೇ ಎಂಬ ಕಾತುರ ! ಆ ಭಾವದ ಭರದಲ್ಲಿ ಶಿಷ್ಟಾಚಾರ ಮರೆತೆ. ಏನೇ ಇರಲಿ, ಹೇಗೇ ಇರಲಿ ಅವರು ಇಂದು ವಿಜಯಶಾಲಿಗಳಾಗಿ ನಮ್ಮೆಡೆಗೆ ಓಡೋಡಿ ಬರು ತ್ತಾರೆ ಅಲ್ಲವೆ ಅಕ್ಕ ?'

'ಸಂದೇಹವೇ ಇಲ್ಲ, ವಜ್ರದೇಹಿಯಾದ ನಮ್ಮ ಪತಿ– ಅಲ್ಲ–ಚಮೂಪತಿ ನಾಗದೇವರನ್ನು ಎದುರಿಸಿ ಬದುಕಿದವರು ಯಾರಿದ್ದಾರೆ ಹೇಳು ! ಅಂದ ಮೇಲೆ ಆ ಪುಂಡ ಚೋಳರು ಇವರಿಗೆ ಯಾವ ಲೆಕ್ಕ ! ಬರುತ್ತಾರೆ, ಜಯಶಾಲಿಗಳಾಗಿ ಬರುತ್ತಾರೆ. ಮಗ ಅಣ್ಣಿಗನನ್ನು ಎತ್ತಿ ಮುದ್ದಾಡುತ್ತಾರೆ. ಅವನನ್ನು ಹೂವಿನ ಚೆಂಡು ಎಂದು ಮೇಲೆಸೆದು ಆಂತುಕೊಳ್ಳುತ್ತಾರೆ. ಮಗುವಿನ ಮೈಗೆಲ್ಲಾ ಮುತ್ತಿಟ್ಟು ಯುದ್ಧದ ನೋವು ಮರೆಯುತ್ತಾರೆ. ನಮ್ಮಿಬ್ಬರನ್ನೂ ತಮ್ಮೆರೆಡು ತೋಳುಗಳಲ್ಲಿ ಅಪ್ಪಿ ಆಲಂಗಿಸಿ, ನಮ್ಮೆ ದೆಗಳಿಗೆ ಹದ ತುಂಬಿದ ಮುದದ ಕಾವು ಕೊಟ್ಟು, ಮುತ್ತಿನ ಮಳೆಗರೆಯುತ್ತಾರೆ. ಓಹ್ ! ತಂಗಿ, ನನ್ನ ಮುದ್ದಿನ ತಂಗಿ ಗುಂಡ ಮಬ್ಬೆ, ಆ ರಸ ನಿಮಿಷಗಳನ್ನು ನಾವು ಮರೆಯಲಾಗುವುದೆ ? ಎಂದಿಗೂ ಇಲ್ಲ, ಅದೆಷ್ಟು ಮಧುರ, ಅದೆಷ್ಟು ಚೆನ್ನ !'

'ವರ್ಣನಾತೀತ ಅಕ್ಕಾಜಿ ! ಆ ಮಾಧುರ್ಯವನ್ನು ನೆನೆದರೇ ಸಾಕು ಮೈ ಜುಮ್ಮೆನ್ನುತ್ತದೆ, ಮನಸ್ಸು ಮುಲಮುಲಗುಟ್ಟು ತ್ತದೆ. ಎದೆ ಕಲಕಲ ನುಡಿಯುತ್ತದೆ. ಈಗ ಆ ಮಾಧುರ್ಯ ಮಂಜೂಷೆಯ ಮುದ್ರೆಯೊಡೆಯದಿರುವುದೇ ಲೇಸು ! ಮುಚ್ಚಿ ದಷ್ಟೂ ಅದರ ಸವಿ ಹೆಚ್ಚು. ಅವರಪ್ಪುಗೆಯಲ್ಲಿ ಎಂಥ ಹಿತ ಇರುತ್ತೆ ಗೊತ್ತಾ ಆರ್ತ್ಯಕ್ಕ ?'

'ಓಹೋ ಬಣ್ಣನೆ ಸಾಕು. ನಾನು ಅನುಭವಿಸಿಬಿಟ್ಟದ್ದನ್ನು ತಾನೆ ನೀನು ಅನುಭವಿಸುತ್ತಿರುವುದು. ಚಿಂತೆಯಿಲ್ಲ ಹೇಳು. ಆ ಹಿತದ ಜೊತೆಯ ಜೇನನ್ನು ನಿನಗಿಂತಲೂ ಹೆಚ್ಚು ಪ್ರಮಾಣದಲ್ಲಿ ಸವಿದವಳು ನಾನು, ಗೊತ್ತಾ ?'

'ಇಲ್ಲವೆನ್ನುವುದಿಲ್ಲ ಅಕ್ಕಾ, ಆದರೆ. . .'

'ಏನು ಆದರೆ. . .? ಹೇಳೆ ?'

'ಏನಿಲ್ಲ, ಆ ದಿನ ನೀನು ಅಣ್ಣಿಗನ ಬಾಣಂತಿಯಾಗಿ ಸೂತಿಕಾಗೃಹದಲ್ಲಿದ್ದಾಗ. . .'

'ಅಂತಃಪುರದಲ್ಲಿ ಹಂಸತೂಲಿಕಾ ಅಲ್ಪದ ಮೇಲೆ ನೀನು ಮತ್ತು ನಮ್ಮ ಸ್ವಾಮಿ ನಾಗಮಯ್ಯ ದೇವರು. . . ಇಬ್ಬರೂ. ..'

'ಅಲ್ಲಿ ಅಲ್ಲ ಅಕ್ಕ. ಇಲ್ಲಿ ಅದೇ ಈ ಶೈಲದ ತಿಟ್ಟಿನ ಮೇಲೆ. . .ಇಂಥದೇ ಪ್ರಭಾತ ಸಮಯದಲ್ಲಿ ಚೆಂಬೆಳಕಿನ ಆಗಮನ ವನ್ನು ವೀಕ್ಷಿಸಲು ನಾವಿಬ್ಬರೇ ಬಂದೆವು ಕಾಲು ನಡಿಗೆಯಲ್ಲಿ. ಇಲ್ಲಿ ಯಾರೂ ಇರಲಿಲ್ಲ. ನರ ಸಂಚಾರದ ಸುಳಿವೇ ಇರಲಿಲ್ಲ. ಮರಗಿಡಗಳು ಮಲಗಿದ್ದವು. ಹಕ್ಕಿಗಳು ಎಚ್ಚೆತ್ತಿರಲಿಲ್ಲ. ದುಂಬಿಗಳಿನ್ನೂ ಹೂವಿನ ಹೊಂಬಟ್ಟಲ ಮೇಲೆ ಕುಳಿತು ಹೂದುಟಿಗೆ ಮುತ್ತಿಟ್ಟು ಅದನ್ನು ಎಂಜಲಿಸಿರಲಿಲ್ಲ. ಆಗ ಮೆಲ್ಲನೆ ನಮ್ಮ ಸ್ವಾಮಿ ಹಾಡಿದ ಜಾನಪದ ಹಾಡು. . .'

'ಹೇಳು'

'ಕಗ್ಗಲ್ಲ ಕಣಿವೇಲಿ ಇಬ್ಬರೇ ಬರುವಾಗ
ತಬ್ಬಿದರೇ ಏನಾಗುತ್ತೇ ಎಲೆ ಜಾಣೆ
ಮುತ್ತಿಟ್ಟರೆ ಹ್ಯಾಂಗಿರುತ್ತೆ !'

'ಗುಂಡಿ, ಅವರ ರಸಿಕತೆಗೆ ಕೊನೆ ಮೊದಲಿಲ್ಲ ಕಣೆ. ರಣಭೂಮಿಯಲ್ಲಿ ಅವರೆಷ್ಟು ರಣವೀರರೂ, ಸ್ವಾಮಿನಿಷ್ಠೆಯಲ್ಲಿ ಅಷ್ಟೇ ಭಕ್ತರು, ಪತ್ನೀ ಪ್ರೇಮದಲ್ಲಿ ಕಣದಷ್ಟೂ ಕಡಿಮೆಯಿಲ್ಲದ ಕಾಮದೇವ ! ಅವರನ್ನು ಪತಿಯಾಗಿ ಪಡೆದ ನಾವೇ ಧನ್ಯರು, ನಾವು

ಮಾನ್ಯರು ! ಸೂರ್ಯನ ಆಗಮನವಾದರೂ ಚೋಳ ನಾಡಿನ ಕಡೆಯಿಂದ ಅವರ ಆಗಮನ ಆಗಲಿಲ್ಲವಲ್ಲ ! ಏನಾಯಿತೊ ಏನೊ ! ಅಶುಭ ನುಡಿವುದು ಬೇಡ. ಆದರೆ ವಾರ್ತೆಯಾದರೂ ಮುಟ್ಟಬೇಕಿತ್ತಲ್ಲ ಈ ವೇಳೆಗೆ ?'

'ಬರುತ್ತೆ ಬಿಡಕ್ಕ, ಬರ್ತಾರೆ ತಡೆಯಕ್ಕ. . .ನಿನಗಷ್ಟು ಕಾತರವೆ ? ಬೇಡಕ್ಕ, ಇಂದಿನದು ನನ್ನ ಪಾಲಿನ ಸೇವೆ ನನ್ನ ಸ್ವಾಮಿಗೆ ! ಆಗಬಹುದೆ ?'

'ಬೇಡವೆನ್ನುವನೆ, ನನ್ನ ಹಾಸಿಗೆಯಲ್ಲಿ ಅರ್ಧ ಬೇಡಿ ಬಂದವಳು ನೀನು. ಮೇಲಾಗಿ ನನ್ನ ನೇರ್‌ಗಿರಿಯವಳು. ಮದುವೆಯಾಗಿ ವರ್ಷ ಕೂಡ ಮುಗಿದಿಲ್ಲ. ಹರೆಯದ ದೇಹಕ್ಕೆ ಹಸಿವು ಬಹಳ ! ನಿಮ್ಮಿಬ್ಬರ ಭೋಗದಲ್ಲಿ ನಾನಿಂದು ಭಾಗ ಬಯಸುವುದಿಲ್ಲ. ಯೋಗಿಣಿಯಾಗಿ ಬೇರೆಡೆಯಲ್ಲಿದ್ದು ನಿರ್ಲಿಪ್ತ ಮನಸ್ಕಳಾಗಿ ಶುಭ ಹಾರೈಸುವೆ ಆಗಬಹುದೆ ?'

'ತ್ಯಾಗದ ತವರು ನನ್ನಬ್ಬೆ – ಅತ್ತಿಮಬ್ಬೆ ! ಅಕ್ಕಾಜಿ, ನಾವಿಬ್ಬರೂ ಸ್ವಾಮಿ ನಾಗಮಯ್ಯರ ಎರಡು ಕಣ್ಣುಗಳು ಅಲ್ಲವೆ ?'

'ಸತ್ಯವಾಗಿಯೂ ಕಣ್ಣೆರಡಾದರೂ ಕಾಣ್ಕೆ ಎರಡಲ್ಲ, ಕಿವಿ ಎರಡಾದರೂ ಕೇಳ್ಕೆ ಎರಡಲ್ಲ. ತಂಗಿ, ನಾವಿಬ್ಬರೂ ನಮ್ಮ ಸ್ವಾಮಿಯ ಹೃದಯ ಮತ್ತು ಶ್ವಾಸಕೋಶಗಳಿದ್ದ ಹಾಗೆ. ಅವು ಎರಡಿದ್ದರೂ ಪ್ರಕ್ರಿಯೆ ಎರಡಲ್ಲ. ಆದರೆ ನನಗಾಗಲೇ ವಯಸ್ಸು ಜಾರುತ್ತಾ ಬಂತು. ಕಾಮ ಕರಗಿ ಪ್ರೇಮ ಬಲಿತು ಅಣ್ಣಿಗದೇವನಂತಹ ಸತ್‌ಫಲ ಕೊಟ್ಟಿದೆ. ನೀನು ಹದಿಹರೆಯದವಳು. ನಿನಗೂ ನನ್ನಗಣ್ಣಿನಂಥ ಮಗ ಬೇಗ ಬರಲಿ. ಇಬ್ಬರಿಗೂ ಜೋಡಿ ತೊಟ್ಟಿಲು ಕಟ್ಟಿ ನಾಲಾಲಿಯಾಡುವೆ. ಸದ್ಯಕ್ಕೆ ನನ್ನಣ್ಣಿಗನ ತೊದಲು ಸೊಲ್ಲು, ಸುರಿವ ಜೊಲ್ಲು ನನಗಿರಲಿ. ಸ್ವಾಮಿ ನಾಗಮಯ್ಯರ ಅಕ್ಕರೆಯ ನುಡಿ, ಸಕ್ಕರೆಯ ತುಟಿ ನಿನ್ನ ಪಾಲಿಗಿರಲಿ. !'

'ನೋಡೋಣ, ಅವರು ಬಂದ ಮೇಲೆತಾನೇ ಪಾಲು ಪಕ್ಷಗಳ ಮಾತು! ಅಲ್ಲಿನವರೆಗೂ ಅಣ್ಣಿಗನನ್ನು ತೋಳ ತೊಟ್ಟಿಲಲ್ಲಿ ರಸಿ ಲಾಲಿ ಆಡೋಣ ನಡೆಯಕ್ಕಾ !'

ಹೆಜ್ಜೆಗಳು ಪಶ್ಚಿಮ ದಿಕ್ಕಿನ ಕಡೆ ಮುಖ ಮಾಡಿ ಪೊಟ್ಟಲಗೆರೆಯತ್ತ ನಡೆಯತೊಡಗಿದವು. ಅಷ್ಟರಲ್ಲಿ 'ಕ್ಲಿಪ್ ಕ್ಲಾಪ್ ಕ್ಲಿಪ್ ಕ್ಲಾಪ್ ಎಂಬ ಕುದುರೆಯ ಖರಪುಟ ಧ್ವನಿ ಕೇಳಿ ಬಂತು. ಸೋದರಿಯರಿಬ್ಬರೂ ವೀರಯೋಧ ನಾಗಮಯ್ಯನೇ ಬಂದನೆಂದು ಭಾವಿಸಿ ಥಟ್ಟನೆ ನಿಂತರು. ಆದರೆ ಆಗಮಿಸಿದ ಅಶ್ವಾರೋಹಿಗಳಿಬ್ಬರೂ ನಾಗಮಯ್ಯ ಮತ್ತು ಅವನ ಆಪ್ತ ಮೈಗಾವಲಾಗಿರಲಿಲ್ಲ. ಬಂದವರು ತಲಕಾಡಿನ ಗಂಗ ದಂಡಾಧೀಶ ಚಾವುಂಡರಾಯ ಮತ್ತು ಅವನಾಪ್ತ ಬೊಮ್ಮರಸ ಬಾಚರಸರಿದ್ದರು. ಚಾವುಂಡರಾಯರು ಕುದುರೆಯಿಂದಿಳಿವ ಮುನ್ನವೆ, ರಾಹುತರಿಬ್ಬರೂ ಕುದುರೆಗಳ ಬೆನ್ನಿನಿಂದಿಳಿದು ದೇವಿಯ ಬಳಿಗೆ ಬಂದರು. ಅವರ ಪಾದಗಳಡಿಯಲ್ಲಿ ಒರೆಯಿಂದ ಹೊರಗೆಳೆದ ಖಡ್ಗಗಳನ್ನು ಚಾಚಿ ವೀರವಂದನೆ ಸಲ್ಲಿಸಿದರು. ಆದರೆ ಅವರ ಬಾಯಲ್ಲಿ ವೀರಘೋಷ ಬರಲಿಲ್ಲ. ಜಯದ ಉತ್ಸಾಹವೂ ಕಾಣಿಸಲಿಲ್ಲ. ದಳಪತಿಯ ದಂಡಾಧೀಶರು ಕುದುರೆಯಿಂದಿಳಿದು ಪತ್ನಿಯರನ್ನು ಸಮೀಪಿಸಿದರು. ತುಟಿಗಳು ತೆರೆದುಕೊಂಡಿದ್ದರೂ ಚಾವುಂಡರಾಯರ ಬಾಯಲ್ಲಿ ನೀರಿಲ್ಲದ ಎರೆಭೂಮಿಯಾಗಿತ್ತು ! ಅವರ ಕಣ್ಣುಗಳಲ್ಲಿ ಏನೋ ದುಃಖ, ಏನೋ ಕಾತುರ, ಹೇಳಲಾಗದೆ ಯಾತನೆ ಇಣಕುತ್ತಿತ್ತು..

ಅತ್ತಿಮಬ್ಬೆ ಮತ್ತು ಗುಂಡುಮಬ್ಬೆಯರು ಹಾಗೆಯೇ ನಿಂತಿದ್ದರು. ಮೌನದ ಬೊಂಬೆಗಳಾಗಿ, ಯುದ್ಧ ಪರಿಣಾಮವನ್ನು ಊಹಿಸುವುದು ಅವರಿಗೆ ಕಷ್ಟವಾಗಲಿಲ್ಲ. ಆದರೆ ರಣರಂಗದಲ್ಲಿ ಬಲಿಯಾದವರ ಯದಿ ಊಹಾತೀತವಾಗಿತ್ತು. ಮೌನ ಮುರಿದು ಅಬ್ಬೆಯೇ ನುಡಿಸಿದಳು.

'ಗಂಗರಸರ ಗಂಡುಗಲಿಗಳೇ, ಸುದ್ದಿ ಏನು ?'

'ತಾಯೀ. . .'

'ಹೂಂ. . .ಹೇಳಿಬಿಡಿ'

'ತಾಯೀ, ನಾವೆಲ್ಲರೂ ಚಾಲುಕ್ಯೇಶ್ವರರ ಪರವಾಗಿ ಚೋಳರ ವಿರುದ್ಧ ನಡೆಸಿದ ತಾವರೆಘಟ್ಟದ ಯುದ್ಧ. . .ಛೇ. . .ಕ್ಷಮಿಸಿ ತಾಯಿ. . .ದುರ್ವಾರ್ತೆಯನ್ನು ಹೇಳಲು ಈ ನನ್ನ ನಾಲಗೆಯೇ ಏಳುತ್ತಿಲ್ಲ !'

'ಚಾವುಂಡರಾಯರೆ, ನೀವು ತಿಳಿದವರು. ಬದುಕನ್ನು ಬಲ್ಲವರು. ಏನಾಗಬೇಕೋ ಅದಾಗಿರುವುದಿಲ್ಲ. ಅಲ್ಲದೆ ಆಗುವುದನ್ನು ತಡೆಗಟ್ಟಲು ನಾವ್ಯಾರು? ಹೇಳಿ ಬಿಡಿ. ಅರ್ಧ ವರದಿಯಿಂದಾದ ಕಳವಳ ಪೂರ್ಣ ಕೇಳಿದ ಮೇಲೆ ತಣ್ಣಗಾದೀತು! ಹೇಳಿ ಚಾಲುಕ್ಯ ಚಕ್ರೇಶ್ವರಿಗೆ ಅಮಂಗಲವೆ ?'

'ಅಷ್ಟೇ ಅಲ್ಲ ತಾಯೀ. . .ನಮ್ಮ ಅಭಿಮಾನದ ಮೂರ್ತಿ, ನಮ್ಮೆಲ್ಲರ ಗೆಲುವಿನ ಗೊತ್ತು, ನಿಮ್ಮೊಲವಿನ ತುತ್ತು ನಾಗಮಯ್ಯನವರು ರಾಜೇಂದ್ರ ಚೋಳನ ಸೇನಾಧಿಪತಿ ಶ್ರುತಿಮಾರನನ್ನು ಬಲಿ ತೆಗೆದುಕೊಂಡು ಕಲ್ಯಾಣದ ಚಾಲುಕ್ಯೇಶ್ವರರ ವಿಜಯಕ್ಕೆ ಕಾರಣರಾದರು !'

'ಭೇಷ್, ಪೌರುಷ ಪ್ರಣಯಿ ನಮ್ಮ ನಾಗಮಯ್ಯ ದೇವರಿಗೆ ಇದಿರುಂಟೆ !'

'ಆದರೆ. . .'

'ಹೇಳಿ. . .ಏನಾಯಿತು'

'ನಾಗದೇವರು ರಣಾಂಗಣದಲ್ಲಿ ಹೋರಾಡುತ್ತಿದ್ದಾಗ ಅನಿರೀಕ್ಷಿತವಾಗಿ ಬಂದ ಕಳ್ಳನೊಬ್ಬನ ಬಾಣಕ್ಕೆ ಬಲಿಯಾದರಮ್ಮಾ.'

'ಹ್ಹಾ !!'

ಗಂಡನ ಮರಣವಾರ್ತೆ ಕಿವಿದೆರೆಗೆ ಬಿದ್ದಕೂಡಲೆ ಗುಂಡಮಬ್ಬೆ 'ಅಯ್ಯೋ' ಎಂದು ಚೀರಿ ದೊಪ್ಪನೆ ನೆಲದಲ್ಲುರಿದಳು. ನಿಶ್ಚೇಷ್ಟಿತಳಾಗಿ ಬಿದ್ದ ಅವಳು ಬಹಳ ಹೊತ್ತು ಮೇಲೇಳಲೇ ಇಲ್ಲ. ಅತ್ತಿಮಬ್ಬೆಯ ಮೈ ಮರವಾಯಿತು. ಕಡೆದು ನಿಲ್ಲಿಸಿದ ಕಲ್ಲು ಬೊಂಬೆಯಾದಳು. ಅಶ್ವಾರೋಹಿಗಳ ಬಾಯಿಯೂ ಕಟ್ಟಿತು. ಸುಳಿಯುತ್ತಿದ್ದ ಗಾಳಿಯೂ ಒಂದರಗಳಿಗೆ ಉಸಿರು ಹಿಡಿದು ನಿಂತಿತು. ಅತ್ತಿಮಬ್ಬೆ ಮೌನದ ಮುದ್ದೆಯಾಗಿದ್ದಳು. ಅವಳ ಬುದ್ಧಿ ಸಂಪೂರ್ಣವಾಗಿ ಸತ್ತು ಹೋಗಿತ್ತು. ಕಣ್ಣುಗಳನ್ನು ತೆರೆದುಕೊಂಡಿದ್ದರೂ ಮೊರಡಿಯಿಂದ ಕೆಳಗುರುಳುತ್ತಿದ್ದ ತಂಗಿಯನ್ನು ಹಿಡಿದುಕೊಳ್ಳಬೇಕು, ಮೂರ್ಛೆ ಹೋದವಳಿಗೆ ಶೈತ್ಯೋಪಚಾರವೆಸಗಬೇಕು ಎಂಬುದು ಹೊಳೆಯಲೇ ಇಲ್ಲ. ಗುಂಡುಮಬ್ಬೆ ನೆಲಕ್ಕುರುಳಿ ಬಿದ್ದಿದ್ದರೆ ಅತ್ತಿಮಬ್ಬೆ ನಿಂತಲ್ಲಿಯೇ ಜೀವ ಕಳೆದುಕೊಂಡವಳಂತೆ ನಿಂತಿದ್ದಳು.

'ಅಬ್ಬೆ, ದುರ್ವಾರ್ತೆಯನ್ನು ಮುಟ್ಟಿಸಿದ ಈ ಪಾಪಿಯ ಬಗ್ಗೆ ಕ್ಷಮೆ ಇರಲಿ.'

ಚಾವುಂಡರಾಯ ದೈನ್ಯದಿಂದ ಬೇಡಿದ.

'ಪಾಪಿ ನೀವಲ್ಲ ದಂಡಾಧೀಶರೆ. . .ನಾವು!. . .ಒಂದರ್ಥದಲ್ಲಿ ನೀವು ಕೂಡ. ಸಮಸ್ತ ಚಾಲುಕ್ಯ ಸಾಮ್ರಾಜ್ಯವೂ ಹೌದು. ನಮಗೆ ಪತಿದೇವನನ್ನು ಕಳೆದುಕೊಂಡ ವೈಯಕ್ತಿಕ ನಷ್ಟ. ಆದರೆ ರಾಷ್ಟ್ರಕ್ಕೆ ಮಹಾನ್ ಯೋಧನನ್ನು ನೀಗಿಕೊಂಡ ಅತೀವ ದುಃಖ, ತುಂಬಲಾಗದ ನಷ್ಟ.'

ಅತ್ತಿಮಬ್ಬೆ ಚಣಕಾಲ ಅಧೀರಳಾದರೂ ಧೈರ್ಯ ತಂದುಕೊಂಡು, ತನ್ನನ್ನು ತಾನು ಮೊದಲು ಸಂತೈಸಿಕೊಂಡಳು. ಚೋಳರ ವಿರುದ್ಧ ಚಾಲುಕ್ಯ ಚಕ್ರೇಶ್ವರರ ಪರವಾಗಿ ತಾವರೆಘಟ್ಟದ ಯುದ್ಧಕ್ಕೆ ಹೋಗಿದ್ದ ತಲಕಾಡನ್ನಾಳುತ್ತಿದ್ದ ಗಂಗದೊರೆ ರಕ್ಕಸ ಗಂಗನ ದಂಡಾಧೀಶ, ಧೈರ್ಯದ ಮೇರು, ಧರ್ಮದ ತೇರು ಶ್ರೀ ಚಾವುಂಡರಾಯರನ್ನು ಸಮಾಧಾನದ ನುಡಿಗಳಿಂದ ಸಾಂತ್ವನಗೊಳಿಸಿದಳು. ಅಷ್ಟರಲ್ಲಿ 'ಅಯ್ಯೋ ಸ್ವಾಮೀ. . .ಅಯ್ಯೋ ಸ್ವಾಮೀ. . .' ಎಂದು ನಿಟ್ಟಿಸಿರು ಬಿಡುತ್ತಾ ಪತಿಗಾಗಿ ಹಂಬಲಿಸುತ್ತಾ ಮೂರ್ಛೆಯಿಂದೆಚ್ಚೆತ್ತ ಗುಂಡಮಬ್ಬೆಯ ಆರ್ತನಾದ ಕೇಳಿಸಿತು. ಎಲ್ಲರ ಗಮನವೂ ಅವಳತ್ತ ಹರಿಯಿತು. ಅವಳ ಪ್ರಲಾಪ ಎದೆಯನ್ನು ಇರಿಯುವಂತಿತ್ತು. 'ಸ್ವಾಮಿ, ನನ್ನಾತ್ಮದಾತ್ಮವೆ, ಜೀವದ ಜೀವವೆ, ಕಣ್ಣಿನ ಕಣ್ಣೆ, ಉಸಿರಿನ ಉಸಿರೆ, ನೀನಿಲ್ಲದೆ ನಾನಿರಲಾರೆ ನೀನಿಲ್ಲದ ಬಾಳು ಹಾಳು! ನೀನಿಲ್ಲದೆ ನನಗೆ ಜೀವವಿಲ್ಲ, ಬದುಕೂ ಇಲ್ಲ. ನಾನೂ ಬರುತ್ತೇನೆ. . .ನಾನೂ ನಿನ್ನೆಡದೆ ಬಂದೇ ಬರುತ್ತೇನೆ' ಎಂದು ಒದರುತ್ತಾ, ತಲೆನವಿರ ಕಿತ್ತು ನೆಲಕ್ಕೆಸೆಯುತ್ತಿದ್ದಳು. ನೆಲದ ಧೂಳನ್ನು ನೆತ್ತಿಯ ಮೇಲೆ ಸುರಿದುಕೊಂಡು ಜಾರಿಬಿದ್ದ ಸೆರಗಿನ ಪರಿವೆಯೂ ಇಲ್ಲದೆ ಪ್ರಲಾಪಿಸತೊಡಗಿದಳು.

ಅತ್ತಿಮಬ್ಬೆ ಓಡಿಬಂದು ನೆಲದ ಮೇಲೆ ಹೊರಳಾಡುತ್ತಿದ್ದ ತಂಗಿಯನ್ನು ಬಾಚಿ ಬಳಿದು ತಬ್ಬಿದಳು. ಮಗುವನ್ನು ಮಲಗಿಸಿಕೊಳ್ಳುವಂತೆ ತನ್ನ ತೊಡೆಯ ಮೇಲೆ ಪಟ್ಟರಿಸಿಕೊಂಡು, ಸಮಾಧಾನಪಡಿಸಲು ಯತ್ನಿಸಿದಳು.

'ತಂಗೀ, ಏಳು ತಾಯಿ, ಏಳು, ಧೈರ್ಯ ತಂದುಕೋ ನನ್ನಮ್ಮಾ. ನನಗೆ ನೀನು, ನಿನಗೆ ನಾನು ಇಬ್ಬರೇ ಪರಸ್ಪರ ಸಂತೈಸಿಕೊಳ್ಳಬೇಕಿದೆಯಮ್ಮಾ. ನೀನು ಇಂತಾಡಿದರೆ ನನ್ನ ಗತಿ ಏನು ? ನಾನೂ ಅಣ್ಣಿಗನನ್ನು ಚಾಲುಕ್ಯೇಶ್ವರರ ಮಡಿಲಿಗಿಟ್ಟು ನಿನ್ನನ್ನೇ ಹಿಂಬಾಲಿಸುತ್ತೇನೆ. ನೀನಿಲ್ಲದ ಮೇಲೆ ನನಗೆಲ್ಲಿಯ ಬದುಕು ನನಗೆಲ್ಲಿಯ ಬೆಳಕು !'

ತಂಗಿಯ ಕಡೆಯಿಂದ ಒಂದು ಮಾತೂ ಹೊರಡಲಿಲ್ಲ. ಅವಳ ನರಳುವಿಕೆಯೂ ನಿಂತಿತ್ತು. ಪ್ರಾಣ ಹೋಗಿರಲೇಬೇಕೆಂದು ಭಾವಿಸಿ ಎದೆ ಮುಟ್ಟಿ ನೋಡಿದಳು. ಹೃದಯ ಬಡಿತ, ನಾಡಿ ಮಿಡಿತ ಇದ್ದವು. ಸಮಾಧಾನವಾಯಿತು. ಕೇಳಿಕೊಂಡಳು.

'ಮನಸ್ಸನ್ನು ಕಲ್ಲು ಮಾಡಿಕೋ ನನ್ನಮ್ಮಾ. ಒಂದು ಮಾತು. . .ಒಂದೇ ಒಂದು ಮಾತು ಹೇಳೆ ! ಭವಿಷ್ಯದ ಬಗೆಗೆ ನನಗೆ ಬೆಳಕು ತೋರೆ !'

ಇಲ್ಲ. ಗುಂಡಮಬ್ಬೆಗೆ ಎಚ್ಚರವೇ ಇರಲಿಲ್ಲ. ಅವಳು ಮತ್ತೊಮ್ಮೆ ಮೂರ್ಛೆ ಹೋಗಿದ್ದಳು. ಅವಳ ಹೃದಯದ ಮೇಲೆ ಬಹುದೊಡ್ಡ ಆಘಾತ ಆಗಿತ್ತು. ಆ ಪೆಟ್ಟನ್ನು ಸೈರಿಸಿಕೊಳ್ಳುವಷ್ಟು ಮನೋಬಲ ಅವಳಲ್ಲಿರಲಿಲ್ಲ. ಇನ್ನೆಷ್ಟು ಸಮಯದವರೆಗೆ ಅಲ್ಲಿರುವುದು. ಆಗಲೇ ಬಿಸಿಲೇರುತ್ತಾ ಬಂದಿತ್ತು. ಕೂಡಲೇ ತಮ್ಮ ಮನೆಗೆ ಹೊರಡುವ ಇಚ್ಛೆ ವ್ಯಕ್ತಪಡಿಸಿದಳು. ಪರರ ಇಂಗಿತವನ್ನು ಬಹುಬೇಗ ಅರ್ಥಮಾಡಿಕೊಳ್ಳಬಲ್ಲ ಚಾವುಂಡರಾಯ ಬೊಮ್ಮರಸ ಮತ್ತು ಬಾಚರಸರ ಕುದುರೆಗಳೆರಡನ್ನೂ ಪಕ್ಕ ಪಕ್ಕದಲ್ಲಿ ನಿಲ್ಲಿಸಿ, ಬಾರು ಪಟ್ಟಿಯಿಂದ ಬಿಗಿದು, ಮೇಲೆ ತಡಿ ಹಾಸಿ ವೇದಿಕೆ ಸಿದ್ಧಪಡಿಸಲು ಹೇಳಿದರು. ಆಜ್ಞೆಯಂತೆ ಕಾರ್ಯ ನೆರವೇರಿತು. ಅತ್ತಿಮಬ್ಬೆ ಕುದುರೆಗಳ ಬೆನ್ನೇರಿ ಕುಳಿತಳು. ಗಂಡುಮಬ್ಬೆಯನ್ನು ಅವಳ ಮುಂದಿರಿಸಲಾಯಿತು. ಕುದುರೆಗಳೆರಡೂ ನಿಧಾನವಾಗಿ ನಗರದ ಕಡೆ ಚಲಿಸತೊಡಗಿದವು. ಚಾವುಂಡರಾಯ ಮತ್ತು ಬಾಚರಸರಿಬ್ಬರೂ ಇಕ್ಕೆಲದಲ್ಲೂ ಒಂದೊಂದು ಕುದುರೆಯ ಬಾಯಿಬಳೆ ಹಿಡಿದು ನಡೆದರು.

ಅದನ್ನು ನೋಡಿ ಬೆಟ್ಟ ಬಿಮ್ಮನಿತ್ತು.

ಗಗನ ಬೆರಗುವಟ್ಟಿತ್ತು !

೨

ಹಗಲಿನಷ್ಟೇ ಚೆಲುವಿದೆ ಇರುಳಿಗೆ.

ಆದರೆ ಅದು ಷೋಡಶಕಳಾಪೂರ್ಣವಾದ ಚಂದ್ರಮನಿಂದ ಬೆಳ್ಳಂ ಬೆಳಗುವಾಗ, ಇಲ್ಲವೇ ಕಿಕ್ಕಿರಿದ ಚಿಕ್ಕೆಗಳಿಂದ ಮಿರಮಿರನೆ ಮಿರುಗುವಾಗ ಮಾತ್ರ ! ಕಗ್ಗತ್ತಲು ಕವಿದು ಚಿಕ್ಕೆಗಳಿಗೆ ತುಕ್ಕು ಹಿಡಿಸಿ ಭಯಾನಕ ದೃಶ್ಯವನ್ನೇರ್ಪಡಿಸಿದಾಗ ನೆಲವೆಲ್ಲ ನೀರವ, ಬದುಕೆಲ್ಲ ಭೈರವ! ಒಮ್ಮೆ ಪ್ರಕೃತಿ ಬನಶಂಕರಿ, ಮತ್ತೊಮ್ಮೆ ರಣಭಯಂಕರಿ. ಅಂತಹ ಬೆಳಕು ಕತ್ತಲೆಗಳ ತೂಗಾಟವನ್ನು ನಾಗಮಯ್ಯನ ಮೇಲುಪ್ಪರಿಗೆಯ ಉಯ್ಯಾಲೆಮಣೆ ಎಷ್ಟೋ ಬಾರಿ ಕಂಡಿತ್ತು. ಇಂದು ಅದೇ ಉಯ್ಯಾಲೆಮಣೆಯ ಮೇಲೆ ಕುಳಿತು ಅತ್ತಿಮಬ್ಬೆ ಮತ್ತು ಗುಂಡಮಬ್ಬೆಯರು ತಮ್ಮ ಭವಿಷ್ಯವನ್ನು ಬರೆಯತೊಡಗಿದ್ದರು.

'ಗುಂಡಿ, ಇದು ನಮ್ಮ ಬಾಳಿನ ಕರಾಳ ಸಂಜೆ. ತಾಳಲಾರದ ದುಃಖದ ದಾರುಣ ಸಂಜೆ. ನಮ್ಮ ಕಣ್ಣೀರು ಕಡಲಾದ ಸಂಜೆ. ಈ ನಿಷ್ಠುರ ಸಂಜೆಯಲ್ಲಿ ನಿನ್ನನ್ನು ಬೇಡಿಕೊಳ್ಳುತ್ತಿದ್ದೇನಮ್ಮಾ. . .'

'ಹಾಗೆನ್ನದಿರು ಅಕ್ಕಾಜಿ. . .' ಕೂಡಲೇ ಅವಳ ಬಾಯಿಗೆ ತನ್ನ ಕೈ ಅಡ್ಡತಂದು ನುಡಿದಳು ಗುಂಡುಮಬ್ಬೆ. 'ನೀನು ನನ್ನನ್ನು ಬೇಡುವುದೆ ? ಛೇ ! ಬೇಡಬಾರದು. ಹಿರಿಯಳೂ ಪೂಜ್ಯಳೂ ಆದ ನೀನು ತಾಯಿಯಿಲ್ಲದಿದ್ದ ನನಗೆ ಅಂದು ತಾಯಾಗಿ ನಿಂತವಳು. ಇಂದು ತನ್ನ ಗಂಡನಿಗೆ ತಂದುಕೊಂಡು ಸವತಿಯನ್ನಾಗಿಸದೆ ಸಹಪತ್ನಿ ಸೋದರಿಯನ್ನಾಗಿಸಿಕೊಂಡವಳು. ನೀನು ಬೇಡುವುದು ಶ್ರೇಯಸ್ಕರ ಅಲ್ಲ. ಆಜ್ಞೆ ಮಾಡು. . .ಸಾಧ್ಯವಾದರೆ ನಾನು ಖಂಡಿತ ನಡೆಸಿಕೊಡುವೆ.'

'ಹಾಗಾದರೆ 'ಸತಿ' ಆಗುವ ನಿನ್ನ ನಿರ್ಧಾರ ಕೈಬಿಡು.'

'ಅಕ್ಕಣ್ಣಿ, ಅಕ್ಕವ್ವೆ, ಅಕ್ಕಾಜಿ, ಅಕ್ಕರೆಯೆ, ಅದೊಂದು ಬಿಟ್ಟು ಬೇರೆ ಏನಾದರೂ ಇದ್ದರೆ ಹೇಳು, ಅಪ್ಪಣೆ ಕೊಡು ಖಂಡಿತ ನಾನು ಪೂರೈಸಿಕೊಡುತ್ತೇನೆ.'

'ನನಗೆ ಬೇರೇನೂ ಬೇಡ. ನನ್ನ ತಂಗಿ ನನ್ನೊಡನಿರಬೇಕು.'

'ಇರುತ್ತಾಳೆ ಯಾವಜ್ಜೀವವೂ ನಿನ್ನೊಡನೆ ಇರುತ್ತಾಳೆ. ಆದರೆ ದೇಹ ರೂಪದಲ್ಲಲ್ಲ ಚೇತನ ರೂಪದಲ್ಲಿ.'

'ನನಗದು ಬೇಡ. 'ಸತಿ' ಆಗುವ ಹಟ ತರವಲ್ಲ ಗುಂಡಿ. ಕೇಳು ನಾವು ಜೈನರು. ನಮಗೆ ಸಲ್ಲೇಖನ ಶ್ರೇಯಸ್ಕರವೇ ಹೊರತು ಸಹಗಮನ ಅಲ್ಲ. 'ಸತಿ' ಧರ್ಮ ಬಾಹಿರ. ಅದನ್ನು ನಾವು ಪಾಲಿಸಲೂಬಾರದು, ಆಲೋಚಿಸಲೂಬಾರದು.'

'ಇಲ್ಲಕ್ಕಾ ಅದು ಪತಿ ಪ್ರೀತಿಯನ್ನು ವ್ಯಕ್ತಪಡಿಸಲಿರುವ ಸರ್ವೋತ್ಕೃಷ್ಟ ಸಾಧನ.'

'ಛೇ ಛೇ ! ಎಂದಿಗೂ ಅಲ್ಲ. ಅದು ಸಾಯುವುದಕ್ಕೆ ಒಡ್ಡಿದ ನೆಪ. ಇಲ್ಲವೇ ಪುರುಷ ಸಮಾಜ ಸೃಷ್ಟಿಸಿಕೊಂಡ ಅಮಾಯಕ ಹೆಣ್ಣಿನ ಕಗ್ಗೊಲೆಯ ಕೃತಕ ಉಪಾಯ. ಧರ್ಮದ ಹೆಸರಿನಲ್ಲಿ ನೀತಿ ಸಂಹಿತೆಯ ಸೋಗಿನಲ್ಲಿ ಸಮಾಜ ನಡೆಸುತ್ತಿರುವ ಅತ್ಯಾಚಾರ!'

‘ಅಕ್ಕಾ ‘ಸತಿ’ ಏನು ‘ಸಲ್ಲೇಖನ’ ಏನು ? ಎರಡೂ ಒಂದೇ! ಸಹ ಮರಣಕ್ಕಿರುವ ಬೇರೆ ಬೇರೆ ಹೆಸರಿನ ಭಿನ್ನರೂಪಗಳು; ಇಲ್ಲವೆ ಪರ್ಯಾಯ ಪದಗಳು. ಅಕ್ಕಾಜಿ, ದೇಹದಲ್ಲಿ ಅಸುವಿರುವವರೆಗೂ ಅನ್ನಾಹಾರಾದಿಗಳನ್ನು ತೊರೆದು, ದೇಹ–ಜೀವರನ್ನು ಘೋರ ಸಂಕಟಕ್ಕೊಳಗುಮಾಡುವ ವ್ರತಕ್ಕಿಂತ ಚಿತೆಯೇರುವುದು ಸಹಸ್ರಪಾಲು ಲೇಸಲ್ಲವೆ? ನೀನು ಏನೇ ಹೇಳು ದುರ್ಮರಣಕ್ಕೆ ಧರ್ಮದ ಲೇಪ ಹಚ್ಚುವುದು ನನಗೆ ಹಿಡಿಸುವುದಿಲ್ಲ.’

‘ತಂಗಿ, ನೀನು ತಪ್ಪು ತಿಳಿದೆ. ಧರ್ಮ ಎಂಬುದು ನೀನು ಹೇಳುವಂತೆ ಅಂಗಡಿಯಲ್ಲಿ ಸಿಗುವ ಬಣ್ಣ ಅಲ್ಲ, ಅದನ್ನು ಕೊಂಡು ತಂದು ಬೇಕಾದ ವಸ್ತುವಿನ ಮೇಲೆ ಲೇಪನ ಮಾಡುವುದಕ್ಕೆ. ಅದಕ್ಕೆ ಅದರದಾದ ಒಂದು ವಿಶಿಷ್ಟ ಸಂಹಿತೆ ಇದೆ. ಅದು ಜೀವಕ್ಕೆ ಜಿನತ್ವಕ್ಕೆ ಸಂಬಂಧಿಸಿದ್ದು. ಅದರ ಬಗೆಗೆ ಏನೂ ಅರಿಯದ ನಮಗೆ ಅದನ್ನು ಪ್ರಶ್ನಿಸುವ ಅಧಿಕಾರ ಇಲ್ಲ. ಆದರೆ ಜೀವನಿಗೆ ಧರ್ಮದ ರಕ್ಷೆ ಏಕೆ ಬೇಕು ಎಂಬುದನ್ನು ಕುರಿತು ಒಂದು ಮಾತು ಹೇಳುತ್ತೇನೆ ಕೇಳು. ಸಾಮಾನ್ಯವಾಗಿ ಸಸ್ಯ ಸಾಕಷ್ಟು ಎತ್ತರ ಬೆಳೆಯುವವರೆಗೂ ತನ್ನ ಆತ್ಮ ರಕ್ಷಣೆಗಾಗಿ ಬೇಲಿಯನ್ನು ಬಯಸುತ್ತೆ. ಇಲ್ಲವಾದರೆ ತುಡುಗುಣಿಗಳು ತಿಂದು ಅದನ್ನು ಮೊಳಕೆಯಲ್ಲೇ ನಾಶ ಮಾಡುತ್ತವೆ. ಅದೇ ರೀತಿ ಅವನು ಅಡ್ಡ ದಾರಿ ಹಿಡಿಯದಂತೆ ತಡೆಗಟ್ಟಲು ಧರ್ಮ ನೆರವಾಗುತ್ತದೆ. ಮಾನವನ ಆತ್ಮಕಲ್ಯಾಣಕ್ಕೂ ಅದು ಸಾಧನ. ಮನುಜ ಸಹಜವಾದ ದೌರ್ಬಲ್ಯಗಳಿಗೆ ಸಿಗದಂತೆಸಗಲು ಅದು ಎಚ್ಚರದ ಗಂಟೆ ಕೂಡ.’

‘ಅಕ್ಕಾ, ಆ ದಿನದ ನೆನಪಿದೆಯೆ ನಿನಗೆ ?’

‘ಯಾವ ದಿನ ?’

‘ನನ್ನನ್ನು ವಿವಾಹವಾಗುವಂತೆ ನೀನು ಅವರನ್ನು ಮಧುವನದ ಮಧ್ಯದಲ್ಲಿರುವ ಸಮುದ್ರ ಗೃಹದಲ್ಲಿ ಒತ್ತಾಯಿಸಿದ ದಿನ! ಅವರು ‘ನಿನ್ನನ್ನಲ್ಲದೆ ಯಾವ ಸ್ತ್ರೀಯನ್ನೂ ಪತ್ನಿಯಾಗಿ ಸ್ವೀಕರಿಸುವುದಿಲ್ಲ. ನನ್ನ ಹೃದಯ ವೇದಿಕೆ ಅತ್ತಿಮಬ್ಬೆಗೆ ಮಾತ್ರ ಮೀಸಲು ಬೇರೊಬ್ಬಳು ಅಲ್ಲಿ ನಿಂತು ನರ್ತಿಸಲು ಅವಕಾಶ ಕೊಡುವುದಿಲ್ಲ. ಪ್ರೇಮ ಯಾವಾಗಲೂ ಏಕನಿಷ್ಠ. ಅದು ಹೆಣ್ಣುಗಳಲ್ಲಿ ಹಂಚಿಕೆಯಾಗಬಾರದು. ಮೇಲಾಗಿ ಯೋಧರಾದ ನಮಗೆ ರಣಭೂಮಿಯೇ ತಾಯ ಮಡಿಲು. ಆಳರಸನೇ ಗಂಡ. ವೀರಘೋಷವೇ ಪ್ರೇಮಗೀತೆ. ಒಂದು ವೇಳೆ ರಣರಂಗದಲ್ಲಿ ‘ನಾನು’ ಎಂಬ ಈ ನಾಗಮಯ್ಯ ಮಡಿದರೆ ಒಬ್ಬರಲ್ಲ ಇಬ್ಬರು ವಿಧವೆಯರಾಗಬೇಕಾಗುತ್ತದೆ. ಅದು ನನಗೆ ಇಷ್ಟವಿಲ್ಲ.’ ಎಂದಾಗ, ನೀನು ಏನು ಹೇಳಿದೆ ಹೇಳು ?’

‘ನೆನಪಿಲ್ಲ. . .ನೀನೇ ಹೇಳು.’

‘ಸ್ವಾಮಿ. ಜೈನಕುಲ ಸ್ತ್ರೀರತ್ನಕ್ಕೆ ‘ಸತಿ ಪರೋಕ್ಷ’ದಲ್ಲಿ ಅಂದರೆ ಗಂಡ ತೀರಿಕೊಂಡ ಮೇಲೆ ಇರುವುದು ಎರಡೇ ಮಾರ್ಗ ಗಳು. ಒಂದು ಜಿನ ದೀಕ್ಷಾಚರಣೆ. ಎರಡು ಶುಭ್ರ ಚಾರಿತ್ರ್ಯವುಳ್ಳವಳಾಗಿ ಸಹಮರಣ ಪಡೆಯುವುದು.’

‘ಆದರೆ, ‘ಸತಿ’ಯ ಅರ್ಥದಲ್ಲಿ ನಾನು ಈ ಮಾತು ಹೇಳಲಿಲ್ಲ. ನೆನಪಿರಲಿ.’

‘ಇರಬಹದು, ಒಪ್ಪುತ್ತೇನೆ. ಆಗ ನಾನು ಹೀಗೆ ನಿವೇದಿಸಿಕೊಂಡೆ – ಸ್ವಾಮಿ, ಒಂದು ವೇಳೆ ತಾವು ವೀರಮರಣವನ್ನಪ್ಪಿ ನಿಮ್ಮ ತಾಯ ತೊಡೆಯಾದ ರಣಭೂಮಿಯ ಮೇಲೆ ಮಲಗಿದರೆ, ವಯಸ್ಸಿನಲ್ಲಿ ಚಿಕ್ಕವಳಾದ, ಆಧ್ಯಾತ್ಮವನ್ನು ಅರಗಿಸಿಕೊಳ್ಳಲು ಶಕ್ತಳಾಗದ ನಾನು ನಿಮ್ಮ ಜೊತೆಯಲ್ಲೇ ಚಿತೆಯೇರಿ ಯಾವುದೇ ಕಲ್ಪ, ಯಾವುದೇ ಗೈವೆ, ಯಾವುದೇ ಸ್ವರ್ಗ, ಯಾವುದೇ ಲೋಕದಲ್ಲಿ ನೀವಿರಿ, ನಾನಲ್ಲಿಗೆ ಬಂದು ನಿಮ್ಮನ್ನು ಸೇರುತ್ತೇನೆ. ಅಕ್ಕ ಮಹಾಜ್ಞಾನಿ. ಜಿನಪದಭಕ್ತೆ ಜಿನಧರ್ಮ ಪರಾಯಣೆ, ಜಿನ ತೀರ್ಥಂಕರ ಪದಕಮಲ ಭೃಂಗ. ಅವಳು ಬೇಕಾದರೆ ಜಿನದೀಕ್ಷೆಯನ್ನು ಸ್ವೀಕರಿಸಿ ಶುದ್ಧಶ್ರಾವಕಿಯಾಗಿ ಜಗತ್ಕಲ್ಯಾಣ ಕಾರ್ಯ ದಲ್ಲಿ ತೊಡಗಲಿ.’ ಎಂದು.

‘ಹಾಗಾದರೆ. . .?’

‘ಹೌದು ನುಡಿದಂತೆ ನಡೆ ಇರಲಿ. ಆಡುವುದು ಬೇರೆ ಆಚರಣೆ ಬೇರೆ ಎಂಬ ಮಾತು ನಿನ್ನೆಡೆ ಇಲ್ಲ. ಕೇಳಕ್ಕ. ಅಂದು ನಾವಿಬ್ಬರೂ ನಮ್ಮ ಸ್ವಾಮಿಯೆದುರು ಪ್ರತಿಜ್ಞೆ ಸ್ವೀಕರಿಸಿದಂತೆ ಇಂದು ನಡೆದುಕೊಳ್ಳೋಣ. ಅಂದಿನ ನುಡಿ ಇಂದು ಅನುಷ್ಠಾನಕ್ಕೆ ಬರಲಿ. ನಾನು ನನ್ನ ಪತಿಯೊಡನೆ ಪರಲೋಕಕ್ಕೆ, ನೀನು ನಿನ್ನಣ್ಣಿಗನೊಡನೆ ಇಹ ಬಾಳುವೆಗೆ!’

‘ಬೇಡಮ್ಮಾ, ಈ ಶಿಕ್ಷೆ ಬೇಡ ತಾಯಿ’

‘ಇದು ಶಿಕ್ಷೆಯಲ್ಲ ಅಕ್ಕಾ ದೀಕ್ಷೆ, ಜಿನದೀಕ್ಷೆ ! ನೀನು ಶಾಸ್ತ್ರದಾನ, ವಸ್ತ್ರದಾನ ಜಿನಬಿಂಬ ಮಹಾದಾನ ಇತ್ಯಾದಿ ದಾನಗಳಿಂದ ‘ಜಿನಧರ್ಮ ದೀಪಿಕೆ’ ಎನಿಸುತ್ತೀಯೆ. ‘ದಾನವಿನೋದೆ’, ದಾನಚಿಂತಾಮಣಿ’ ಎಂಬೆಲ್ಲಾ ವಿಖ್ಯಾತಿಗೆ

ಪಾತ್ರಳಾಗುತ್ತೀಯೆ ನೀನು. ಹುಟ್ಟಿದ ಮನೆ ಸೇರಿದ ಮನೆಗಳೆರಡೂ ನಿನ್ನಿಂದ ಬೆಳಕಾಗುತ್ತವೆ. ವಿಶ್ವಾದರ್ಶ ನಿನ್ನ ಪಾಲಿನದಾಗುತ್ತದೆ.'

'ಗುಂಡಿ, ನೀನಾಡುವ ಪ್ರತಿಯೊಂದು ಮಾತೂ ಆದರ್ಶದ ಆಕಾಶದಲ್ಲಿ ವಿಹರಿಸುವ ಕಲ್ಪನಾ ಪಕ್ಷಿಯ ಪ್ರತಿರೂಪದಂತಿದೆ. ಕೇಳಲು ಚೆಂದ. ಆದರೆ ಆಚರಣೆ ?'

'ಪ್ರಯತ್ನಿಸಬೇಕು ಅಕ್ಕ. ಪ್ರಯತ್ನವಿಲ್ಲದೆ ಯಾವುದೂ ಸಿದ್ಧವೆನಿಸುವುದಿಲ್ಲ. ಅಲ್ಲವೆ ? ಹಲ್ಲು ಇದ್ದಾಗ ಕಲ್ಲನ್ನಾದರೂ ಕಡಿಯಬಹುದು. ಅದು ಬಿದ್ದು ಹೋದ ಮೇಲೆ ಕಡಲೆಯನ್ನೂ ಮೆಲ್ಲ ಬರುವುದಿಲ್ಲ. ಅದೇ ರೀತಿ ಈ ಮನುಷ್ಯ ಜೀವನ ಎಲ್ಲಾ ಕಾಲವೂ ಒಂದೇ ರೀತಿಯಲ್ಲಿರುವುದಿಲ್ಲ. ಅದರಲ್ಲಿ ಏರುಪೇರುಗಳು ಸಹಜ. ಹಗಲು–ಇರುಳು, ಬೇವು–ಬೆಲ್ಲ, ಸುಖ–ದುಃಖ ಇವು ತುಂಬಾ ಸಾಮಾನ್ಯ. ಬಂದದ್ದನ್ನು ಬಂದಂತೆ ಸ್ವೀಕರಿಸಬೇಕು. ಗಾದೆ ಹೇಳುವಂತೆ ಹೊತ್ತು ಬಂದ ಕಡೆ ಕೊಡೆ ಹಿಡಿಯ ಬೇಕು. ಮಿಂಚಿ ಹೋದುದಕ್ಕೆ ಚಿಂತಿಸುವುದು ಯುಕ್ತವಲ್ಲ. ಹಬ್ಬ ಹಬ್ಬಕ್ಕೂ ಒಬ್ಬಟ್ಟಲ್ಲ. ಬೆಲ್ಲದ ಜೊತೆಯಲ್ಲಿ ಬೇವೂ ಬೇಕು. ಆದರೆ ಅದನ್ನು ಯುಗಾದಿಗಾಗಿ ಮೀಸಲಿರಿಸಬೇಕು. ಒಟ್ಟಿನಲ್ಲಿ ಪರಿಸ್ಥಿತಿಗೆ ಪರಿಸರಕ್ಕೆ ಕಾಲಗತಿಗೆ ತಕ್ಕಂತೆ ಹೊಂದಿಕೊಂಡು ಮನುಷ್ಯ ಬದುಕು ಮಾಡುವುದನ್ನು ಕಲಿಯಬೇಕು. ಯಾವುದೇ ಸಂಪ್ರದಾಯಕ್ಕೆ ವಿರುದ್ಧವಾಗಿ ನಡೆಯುವುದು ಪ್ರವಾಹದ ವಿರುದ್ಧ ಈಜ ಹೊರಟಂತೆ! ಆದ್ದರಿಂದ ಬದುಕಿನೊಡನೆ ಸದಾ ರಾಜಿಮಾಡಿಕೊಂಡೇ ನಡೆಯುವುದು ಸರ್ವ ಸೂಕ್ತ. ಜನಸ್ವಾಮಿಯೇ ನಮ್ಮ ಸಕಲ ಸಾಧನ ಶಕ್ತಿ ಎಂಬುದನ್ನು ಮರೆಯಬಾರದು ಅಕ್ಕಾ.'

'ಗುಂಡಿ, ಅದು ನನಗೆ ಗೊತ್ತಿಲ್ಲವೇನೆ. ಜೀವನ ಎಂದಿಗೂ ಹೂವಿನ ಹಾಸಿಗೆ ಅಲ್ಲ, ಮುಳ್ಳಿನ ಮಂಚ. ಅಲ್ಲಿ ಕಾಲಿಡಲು ಸಂದು ಸ್ಥಳ ಇಲ್ಲ. ಕಳ್ಳ ಹೆಜ್ಜೆ ಇಟ್ಟರೂ ಮುಳ್ಳು ನಾಟಿಕೊಳ್ಳದೆ ಇಲ್ಲ, ಹೊರಳಿದೆಡೆಯನ್ನು ಚುಚ್ಚಿ ಚುಚ್ಚಿ ಹಿಂಸಿಸದಿರು. ಹಿಂಸೆ ಸಾಕು. ಸಾವು ಬೇಕು ಎನಿಸುತ್ತದೆ. ಅನೇಕ ವೇಳೆ ನಾವೆಷ್ಟೇ ತತ್ವ ಹೇಳಬಹುದು. ಆದರ್ಶ ಬೋಧಿಸಬಹುದು, ವೇದಾಂತ ಓದಬಹದು. ಆದರೆ ಅದರಂತೆ ನಡೆಯುವುದು ತುಂಬಾ ಕಷ್ಟ. ಸತ್ಯ ಯಾವಾಗಲೂ ಕಟು. ಅದರಲ್ಲೂ ವಾಸ್ತವ ಸತ್ಯ ಕಟುತರ. ಉದಾಹರಣೆಗೆ ಉಪ್ಪು ತಿಂದು ಬೆಳೆದ ದೇಹ ತೆಪ್ಪಗಿರಲು ಸಾಧ್ಯವೇ ? ತನ್ನ ಮದೋನ್ಮತ್ತತೆಯನ್ನು ಪ್ರದರ್ಶಿಸಿಯೇ ಪ್ರದರ್ಶಿಸುತ್ತದೆ. ಹದಿಹರೆಯದ ದಿನಗಳಲ್ಲಂತೂ 'ತಾನುಂಟೋ ಮೂರು ಲೋಕವುಂಟೋ' ಎಂಬ ಅಹಂ ಹಾರಾಡುತ್ತಿದ್ದರೆ, ಮುದಿತನ ದಲ್ಲೂ ಈ ಜೀವಿಗೆ ತನ್ನ ಮಿತಿಯ ಅರಿವಿರುವುದಿಲ್ಲ. ಹಾವಿನ ಬಾಯ ಕಪ್ಪೆ ಹಸಿದು ಹಾರುವ ನೊಣಕ್ಕೆ ಆಸೆ ಮೂಡುವಂತೆ ತಾನು ಸೂರ್ಯ ಚಂದ್ರ ತಾರಾ ನಿಹಾರಿಕೆಗಳಂತೆ ಶಾಶ್ವತನೆಂದು ಭ್ರಮಿಸಿ ಮುಪ್ಪು ಚಪ್ಪರಿಸಿದಾಗ ಉಂಟಾದ ತನ್ನ ಅಂದಗೆಟ್ಟ ದೇಹಾಕೃತಿಯಲ್ಲೂ ಚಂದವನ್ನೇ ಹುಡುಕುತ್ತಾ ಅಜ್ಞಾನದ ಅಂಧಕಾರದಲ್ಲಿ ಕಣ್ಣುಮುಚ್ಚಿ ಕುಳಿತಿರುತ್ತಾನೆ.'

'ಅಕ್ಕಾ, ತಪ್ಪು ತಿಳಿಯಬೇಡ, ನಾನು ನಿನ್ನ ಮುಂದೆ ಚಿಕ್ಕವಳು ವಯಸ್ಸಿನಲ್ಲಿ, ಅನುಭವದಲ್ಲಿ, ಜ್ಞಾನದಲ್ಲಿ. ಆದರೆ ಕೇಳು ಸಮಸ್ತ ಅರ್ಥಾನರ್ಥಗಳಿಗೆ ಮನಸ್ಸೇ ಕಾರಣ. ಅದನ್ನು ಅದರಿಚ್ಛೆಗೆ ಬಂದಂತೆ ಹರಿಯಬಿಡಬಾರದು. ಅದನ್ನು ಹತೋಟಿಯಲ್ಲಿಟ್ಟು ಕೊಳ್ಳಬೇಕಾದರೆ ಯೋಗಸಾಧನೆಯೂ ಅಗತ್ಯ. ಯೋಗ ಎಂದರೆ ಕೂಡುವಿಕೆ ಅಥವಾ ಸಂಯೋಗ. ಚಪಲ ಚಂಚಲಗಳಿಂದ ಕೂಡಿದ ಮನಸ್ಸನ್ನು ನಿಶ್ಚಲದ ನಿಲುವಿನಲ್ಲಿ ಸ್ಥಿತಗೊಳಿಸುವುದು. ಸಂಸಾರವೂ ಒಂದು ಯೋಗವಾದ್ದರಿಂದ ಬದುಕಿನಲ್ಲಿ ನಿರ್ಲಿಪ್ತತೆ ಇರಬೇಕಲ್ಲವೆ! ಮನುಷ್ಯ ಮರ್ತ್ಯಕ್ಕಂಟಿದ ಜೀವಿ. ಅನುಗಾಲವೂ ಚಿಂತೆ ಅವನಿಗೆ ಬದುಕಿರುವವರೆಗೂ ಲೋಕ ಮೋಹ ಬಿಟ್ಟಿದ್ದಲ್ಲ, ಜೀವನದಲ್ಲಿ ಸಿಕ್ಕ ಸೌಲತ್ತುಗಳನ್ನು ಸೂಕ್ತ ರೀತಿಯಲ್ಲಿ ದುಡಿಸಿಕೊಳ್ಳಬೇಕು. ದೊರೆತ ಸೌಲಭ್ಯಗಳನ್ನು ಸಾರ್ಥಕಪಡಿಸಿಕೊಳ್ಳಬೇಕು. ಹಿಂದಿನದನ್ನೇ ನೆನೆಯುತ್ತಾ ಇಂದಿನದನ್ನು ಮರೆಯುವುದು ಯುಕ್ತವಲ್ಲ. ಸುಖ ಬಂದಾಗ ದುಃಖವನ್ನೇ ಗುಣಿಸುತ್ತಾ ಕೂರಬಾರದು. ಇಲ್ಲದ್ದನ್ನು ಆಶಿಸದೆ, ಇದ್ದದನ್ನು ದ್ವೇಷಿಸದೆ ಬದುಕು ಮಾಡಬೇಕು.'

'ಗುಂಡಿ, ನನಗನಿಸಿದ್ದು ಇದು, ಮೊದಲು ನಿನ್ನಲ್ಲಿಯೇ ನಿನ್ನನ್ನು ಹುಡುಕಲು ಯತ್ನಿಸು. ಅದು ಬಿಟ್ಟು ಅಗ್ನಿಗಾಹುತಿಯಾಗುವ ಮೂಲಕ ಗಗನ ಕುಸುಮ ಕೈ ಚಾಚುವುದು ಸೂಕ್ತ ಅಲ್ಲ. ಅಲ್ಲದೆ, ನೀನು ಸತ್ತು ಸಾಧಿಸುವುದಾದರೂ ಏನು ? ಬದುಕಿ ಗೆಲ್ಲಬೇಕು. ಆ ದಿಸೆಯಲ್ಲಿ ತುಸು ಗಮನ ಹರಿಸಿ ನೋಡು. ನಿನ್ನ ನಿರ್ಧಾರಕ್ಕೆ ಬೇರೆ ದಾರಿ ಗೋಚರೀಸೀತು–

'ಅಕ್ಕಾ, ನನ್ನ ಸಿದ್ಧಾಂತಕ್ಕೆ ಅಪವಾದಗಳೇ ಇಲ್ಲ. ಆದ್ದರಿಂದ ನನ್ನಿಚ್ಛೆಗೆ ನನ್ನನ್ನು ಬಿಟ್ಟುಬಿಡು. ನಾನೀಗಾಗಲೇ ಒಂದು ಹೆಜ್ಜೆ ಹೊರಗಿಟ್ಟವಳು. ಸಾಯಲು ಸಿದ್ಧಳಾಗಿರುವವಳಿಗೆ ಬದುಕಿನ ಗೊಡವೆ ಬೇಡ. ನೀನು ಇನ್ನೂ ಬದುಕಬೇಕಾಗಿದೆ. ಆದರೆ ಒಂದು ಮಾತು, ದೀಪ ಉರಿಯಲು ಗಾಳಿ ಬೇಕು, ಆದರದು ಬಿರುಗಾಳಿಯಾಗಬಾರದು. ಹಾಗಾದಲ್ಲಿ ಹತ್ತಿಸಿಟ್ಟ ದೀಪ ಆರಿಹೋಗಿ ಕತ್ತಲಾವರಿಸುತ್ತದೆ, ದಿಕ್ಕು ಗೋಚರಿಸದಾಗುತ್ತದೆ. ಅದೇ ರೀತಿ ಲೋಕದಲ್ಲಿ ಬದುಕಿರುವವರೆಗೂ ತಮ್ಮ ತಮ್ಮ ಕರ್ತವ್ಯಗಳನ್ನರಿತು

ಆಚರಿಸಬೇಕು.ಅದನ್ನು ನೀನು ಖಂಡಿತ ನೆರವೇರಿಸುತ್ತೀಯೆಂಬ ಭರವಸೆ ನನಗಿದೆ. ನೀನು ಬೆಳಗುತ್ತೀಯೆ, ನಾಡನ್ನೂ ಬೆಳಗಿಸುತ್ತಿಯೆ. ಆದ್ದರಿಂದ ನೀನು ಬದುಕಬೇಕು. ಬಾಳು ಬರಿದಾಗಿರುವ ನನಗೆ ಸಾವೇ ಶರಣು!'

'ಏನೋ ತಾಯಿ ನಿನ್ನಷ್ಟು ತಿಳಿದವಳಲ್ಲ ನಾನು ಅನ್ನಿಸುತ್ತೆ.'

'ಹೌದು. ಅನ್ಯರ ರೂಪು ತೋರುವ ಕನ್ನಡಿ ತನ್ನ ರೂಪವನ್ನು ನೋಡಿಕೊಳ್ಳಲಾರದು. ಅನ್ಯರನ್ನು ನೋಡಬಲ್ಲ ಕಣ್ಣು ತನ್ನನ್ನು ತಾನು ನೋಡಿಕೊಳ್ಳಲಾರದು. ನೀನೊಂದು ಕನ್ನಡಿ ಅಕ್ಕಾ ಕನ್ನಡಿ ! ಕಣ್ಣು ಕಣೇ ಕಣ್ಣು!'

'ಏನೋ ಅಮ್ಮ. ಇಷ್ಟು ಚಿಕ್ಕ ವಯಸ್ಸಿನಲ್ಲಿ ನಿನ್ನಷ್ಟು ತಿಳಿದವರು ಬಹಳ ಅಪರೂಪ!'

'ನೀನೇ ಕಲಿಸಿದ ವಿದ್ಯೆಯನ್ನು ನಿನಗೊಪ್ಪಿಸುತ್ತಿದ್ದೇನೆ ಅಕ್ಕ. ಇದರಲ್ಲಿ ನನ್ನದೆಂಬುದೇನೂ ಇಲ್ಲ. ನೀನೇ ಎಲ್ಲ. ಆದರೆ ಒಂದು ಮಾತು. ಮನದ ಚಾಂಚಲ್ಯ ಕೆಲ ದಿನಗಳವರೆಗೆ ಮಾತ್ರ ಅನ್ನಿಸುತ್ತೆ. ಅನಂತರ ಕಾಮದೆಡೆಯನ್ನು ಪ್ರೇಮ ಆಕ್ರಮಿಸಿ ಸಾಕ್ಷಾತ್ ಸಮವಸರಣದ ಪರಿಪೂರ್ಣ ದರ್ಶನವನ್ನೇ ದೊರಕಿಸಿ ಕೊಡುತ್ತದೆ. ಕೇಳು, ಹೂವಿನ ಹೊಂಬಟ್ಟಲಿನ ಮಧು ಸಿಗುವ ತನಕ ದುಂಬಿಯ ರಾಗಾಲಾಪ, ನರ್ತನ ಭಂಗಿಯೂ ನೂರು ತರ. ದಳದೆರೆದ ಹೂವಿನೆದೆಯ ಬದಿಯಲ್ಲಿ ಬಗೆಯ ರಾಗ ರಾಗಿಣಿಗಳಲ್ಲಿ ಹಾಡಿ, ಕಡೆಗೆ ಮಧುವಿನ ಮಡು ಸಿಕ್ಕಿದಾಗ ಹಾಡನ್ನೇ ಮರೆಯುತ್ತದೆ. ಹಾಗೆ ನಿನ್ನೊಲವು ಆಧ್ಯಾತ್ಮದ ಕಡೆಗೆ, ಆನಂದದೆಡೆಗೆ ! ಅದೇ ನಿನ್ನ ಪಾಲಿಗಿಂದು ದೊರೆತಿರುವ ಭಾಗ್ಯ!'

ಅಯ್ಯೋ ನನ್ನ ಮೋಹದ ಮುದ್ದೇ! ನೀನಿಲ್ಲದ ಮೇಲೆ ಬೇರಾವ ಭಾಗ್ಯವಿದೆಯೇ ಗುಂಡಿ ಈ ನತದೃಷ್ಟಳಿಗೆ ! ನೀನೊಂದು ಕಣ್ಣು, ವೀರ ಮರಣವನ್ನಪ್ಪಿದ ನಮ್ಮ ಪತಿ ದೇವರೊಂದು ಕಣ್ಣು. ಈಗಾಗಲೇ ಒಂದು ಕಣ್ಣು ಒಡೆದು ಚೂರಾಗಿದೆ. ಇರುವ ನೀನೂ ಇಂಗಿ ಹೋದರೆ ನನಗಿನ್ನೆಲ್ಲಿ ಬದುಕು ಬೆಳಕು ಹೇಳು ?

ನಾನು ಯಾರಿಗಾಗಿ ಬದುಕಬೇಕು ಹೇಳು ?'

'ನಮ್ಮ ಕುಲದ ಕುಡಿ, ಎಳೆ ಹಸುಳೆ ಆ ಅಣ್ಣಿಗದೇವನಿಗಾಗಿ!'

'ಅಯ್ಯೋ ಹುಚ್ಚಿ, ಹುಟ್ಟಿಸಿದವನು ಹುಲ್ಲು ಮೇಯಿಸುವುದಿಲ್ಲ. ಮನುಷ್ಯ ಮಗುವಾಗಿ ಹುಟ್ಟುವ ಮೊದಲೇ ಅವನ ಅನ್ನ ತಾಯೆದೆಯಲ್ಲಿ ಹಾಲಾಗಿ ಹುಟ್ಟಿತ್ತು. ಅವನ ಉಸಿರಾಗಿ ಗಾಳಿ ಮೊದಲೇ ಹುಟ್ಟಿ ಬೀಸಿತ್ತು, ಬೆಚ್ಚಗಿರಿಸಲು ಬಿಸಿಲು ಹಿತವಾಗಿ ಬೆಳಗಿತ್ತು ಅವನವನ ಅನ್ನ ಅವನವನ ಮಡಿಲಲ್ಲಿ ಇರುತ್ತೆ. ಅದಕ್ಕಾಗಿ ಯಾರೂ ಧಾವಂತಗೊಳ್ಳುವ ಪ್ರಮೇಯವೇ ಇಲ್ಲ. ಪ್ರಥಮ ತೀರ್ಥಂಕರ ಪುರುದೇವನ ಮಕ್ಕಳು ನಾವು. ಅವನೇ ನಮ್ಮೆಲ್ಲರನ್ನೂ ಸಲಹುವ, ಕೈಹಿಡಿದು ನಡೆಸುವ ತಾಯಿ. ತಾಯಿಯಾದವಳಿಗೆ ಮಗುವಿನ ಅಗತ್ಯತೆಗಳು ತಿಳಿದಿವೆ. ಅವಳು ಅದನ್ನು ಮೊದಲೇ ಸಿದ್ಧಪಡಿಸಿ ಹುಟ್ಟುವ ಕಂದನ ಸೆರಗಿಗೆ ಕಟ್ಟಿ ಕಳಹಿಸಿರು ತ್ತಾಳೆ. ಆ ಗೊಡವೆ ನಿನಗೆ ಬೇಡ. ನನ್ನ ವಾತ್ಸಲ್ಯಕ್ಕೆ ಕೃತಜ್ಞಳಾಗುವುದನ್ನು ಮಾತ್ರ ಕಲಿ!'

'ನಿನ್ನ ವಾತ್ಸಲ್ಯವನ್ನು ಕಸದ ಬುಟ್ಟಿಗೆಸೆವ ಧಾರ್ಷ್ಟ್ಯ ನನಗಿಲ್ಲ ಅಕ್ಕಾಜಿ. ಆದರೆ ತಂದೆ ಇಲ್ಲ. ಹೆತ್ತ ತಾಯಿಯೂ ಇಲ್ಲವಾದರೆ ಆ ಮಗುವಿನ ಗತಿ?'

'ನಾನು ಮೊದಲೇ ಹೇಳಿದೆನಲ್ಲಾ, ಮಗುವಿನ ಬಗೆಗೆ ತಾಯಿಯಾದವಳಿಗೆ ವಿಶೇಷ ಕಾಳಜಿ ಎಂದು. ಅದು ಮಲಗಿದ್ದಾಗ ಮುದ್ದಿಸುತ್ತಾಳೆ. ಎದ್ದಾಗ ಆಟವಾಡಿಸುತ್ತಾಳೆ. ಹಸಿದು ಅತ್ತಾಗ ಹಾಲೂಡುತ್ತಾಳೆ. ಸುಮ್ಮನಿದ್ದಾಗ ಕಚಗುಳಿಯಿಟ್ಟು ನಗಿಸುತ್ತಾಳೆ. ನಿದ್ದೆ ಬರುವಂತಾದಾಗ ಬಿಸಿನೀರಿನ ಸ್ನಾನ ಮಾಡಿಸಿ, ಹಸನಾದ ಹಾಸಿಗೆ ಮೇಲೆ ಮಲಗಿಸಿ ಜೋಗುಳ ಹಾಡುತ್ತಾಳೆ. ಇದ್ದ ಬಟ್ಟೆಗಳನ್ನೇ ಹಾಕಿ ಅಲಂಕರಿಸುತ್ತಾಳೆ. ಅವಳ ದಿನಚರಿಯಲ್ಲಿ ಮಗುವಿನ ಲಾಲನೆ ಪಾಲನೆ ಬಹು ದೊಡ್ಡ ಸಂಪುಟ. ಅದರಲ್ಲೇ ಅವಳಿಗೆ ಹರ್ಷವಿದೆ, ಆನಂದವಿದೆ. ಅಷ್ಟೇಕೆ ಸ್ವರ್ಗವೇ ಇದೆ ! ತಾಯಿಯಾದವಳಿಗೆ ನಿಜಕ್ಕೂ ಅದೊಂದು ಭಾಗ್ಯ!'

'ಆ ಭಾಗ್ಯ ನನ್ನಕ್ಕರೆಯ ಅಕ್ಕನದಾಗಲಿ ಎಂಬುದು ನನ್ನ ಬಯಕೆ!'

'ಗುಂಡಿ ನಾನು ಹೇಳಿದ್ದು ಜಿನ–ಜಿವರ ವಾತ್ಸಲ್ಯದ ಕರುಳನ್ನು ನನ್ನ ಹಾಗೂ ನನ್ನ ಮುದ್ದು ಕುವರನ ಬಾಂಧವ್ಯವನ್ನಲ್ಲ.'

'ಎರಡೂ ಒಂದೇ! ಇಂದಿನ ಜೀವವೇ ನಾಳಿನ ದೇವ! ಅಕ್ಕಾಜಿ, ನಿನಗೆ ಜಗತ್ತಿಳಕನಾಗುವ ಓರ್ವ ಮಗನಿದ್ದಾನೆ. ಅವನಿಗಾಗಿಯಾದರೂ ನೀನು ಬದುಕಬೇಕು. ಅವನು ಪ್ರಬುದ್ಧಮಾನಕ್ಕೆ ಬರುವ ತನಕ. ಅವನೊಬ್ಬ ಮಹಾ ಮಾನವನಾಗಿ ಬೆಳಗುವ ತನಕ ನೀನಿರಲೇಬೇಕು.

'ಏನೋ ತಾಯಿ ನೀನಿಂದು ನನಗರ್ಥವಾಗದ ಬಿಡಿಸಲಾಗದ ಒಗಟೆಯಾಗಿ ಕಾಣಿಸುತ್ತಿದ್ದೀಯೆ! ಸಾಮಾನ್ಯವಾಗಿ ಸ್ವಾನುಭವದಿಂದ ಮನುಷ್ಯ ಮಹರ್ಷಿಯಾಗುತ್ತಾನೆ. ಅನರ್ಹನು ಅರ್ಹಂತನಾಗುತ್ತಾನೆ ಎಂದು ಕೇಳಿದ್ದೇನೆ. ಹತ್ತು ಉಳಿಯ

ಪೆಟ್ಟು ಬಿದ್ದರೇನೇ ಕಲ್ಲು ಕಲೆಯಾಗುತ್ತದೆ. ಅದೇ ರೀತಿ ಜೀವನದ ಆಘಾತ ಪ್ರತಿಘಾತಗಳಿಗೆ ಎದೆಯೊಡ್ಡಿದ ಮಾನವ ಹಲವು ಅನುಭವ ಗಳನ್ನು ತನ್ನ ಚಿತ್ತ ಭಿತ್ತಿಯ ಮೇಲೆ ಬರೆದಿಟ್ಟುಕೊಳ್ಳುತ್ತಾನೆ ಎಂದೂ ಅರಿತಿದ್ದೇನೆ. ಆದರೆ ಅದಾವುದೂ ಇಲ್ಲದ ದಿವ್ಯಜ್ಞಾನಿ ನೀನಾಗಿದ್ದೀಯೆ. ಸಾಕ್ಷಾತ್ ಪದ್ಮಾವತಿ ದೇವಿಯೇ ನಿನ್ನ ನಾಲಗೆಯ ಮೇಲೆ ನಿಂತು ಮಾತನಾಡಿಸುವಂತಿದೆ! ಹಾಗಲ್ಲದಿದ್ದರೆ ತುಂಬಾ ಚಿಕ್ಕವಳಾದ, ಬಾಳ ಹೊಸ್ತಿಲಲಿ, ಈಗ ತಾನೇ ಕಾಲಿರಿಸಿದ್ದ ನಿನಗೆ ಎಲ್ಲಿಂದ ಬರಬೇಕು ಈ ಅನುಭವದ ನುಡಿಗಳು.'

'ಅಕ್ಕಾ ಬದುಕು ಎಂಬ ಶಾಲೆ ಇಲ್ಲ ಪಾಠವನ್ನೂ ಕಲಿಸುತ್ತದೆ ನಿಜ. ಆದರೆ ಅಲ್ಲಿ ನಾನು ಕಲಿತಿದ್ದು ಸ್ವಲ್ಪ, ಅರಿತಿದ್ದು ಕಲ್ಪ. ನನ್ನ ಕಡೆಯ ಮಾತು ಕೇಳು. ಹುಟ್ಟು ಆಕಸ್ಮಿಕ ಮರಣ ಅನಿವಾರ್ಯ. ಬದುಕು ಇವೆರಡರ ನಡುವೆ ಸುಳಿದಾಡುವ ನೆರಳು! ಈಗ ನಮ್ಮಿಬ್ಬರ ಹಾದಿಗಳು ಕವಲೊಡೆದಿವೆ. ನೀನು ಬದುಕಿನೆಡೆಗೆ ನಾನು ಸಾವಿನೆಡೆಗೆ. ಇದೋ ನಿನಗೆ ನನ್ನ ಅಂತಿಮ ಹಾಗೂ ದೀರ್ಘದಂಡ ಪ್ರಣಾಮಗಳು!'

ಅಕ್ಕ ತಂಗಿಯರ ವಾಗ್ವಾದ ಸಂಕಲ್ಪ ಸ್ವೀಕರಣದೊಂದಿಗೆ ಮುಕ್ತಾಯವಾಯಿತು. ಇಬ್ಬರೂ ಹೆಜ್ಜೆ ಇಟ್ಟರು.

ಅತ್ತಿ ಬದುಕಿಗೆ !

ಗುಂಡಿ ಬೆಳಕಿಗೆ !!

೩

ಪೊಟ್ಟಲಗೆರೆ ರಾತ್ರಿಯಲ್ಲಾ ನಿದ್ದೆ ಮಾಡಿರಲಿಲ್ಲ. ಮಾರನೆಯ ದಿನದ 'ಮಹಾಸತಿ' ಆಗಲಿರುವ ಗುಂಡುಮಬ್ಬೆಯ ಉಚ್ಚಯಕ್ಕಾಗಿ ನಗರದ ಬೀದಿ ಬೀದಿಗಳೆಲ್ಲಾ ಸಾರಣೆ ಕಾರಣೆ ಮಾಡಿಕೊಂಡು ಅಲಂಕೃತವಾಗಿದ್ದವು. ಮನೆ ಮನೆಗಳ ಮೇಲೆ ಬಾವುಟಗಳು ಹಾರಾಡತೊಡಗಿದವು. 'ಸತಿ'ಯಾಗುವ ಗುಂಡುಮಬ್ಬೆ ಅಂದು ಸಾಕ್ಷಾತ್ ದೇವತೆಯೇ ಆಗಿದ್ದಳು ಮುತ್ತೈದೆಯರ ಪಾಲಿಗೆ. ಅವಳ ಪೂಜೆಗಾಗಿ, ಅವಳ ಮಡಿಲು ತುಂಬಿ ಮುಡಿಯ ಸಿಂಗರಿಸಿ ಹರಿದ್ರಾಕುಂಕುಮ ಶೋಭಿತೆಯನ್ನಾಗಿಸಿ ಆಕೆಯನ್ನು ಭಕ್ತಿಯಿಂದ ಬೀಳ್ಕೊಡುವ ಅವಳಿಂದ ಆಶೀರ್ವದಿತರಾಗುವ ಸಲುವಾಗಿ ಸಕಲ ಜಾತಿ ಜನಾಂಗದ ಸ್ತ್ರೀ ಕುಲವೇ ಅಣಿ ಮಾಡಿಕೊಂಡಿದ್ದಿತು.

ಹಿಂದಿನಿರುಳೇ ರಣಧೀರ ನಾಗದೇವನ ಪಾರ್ಥಿವ ಶರೀರ ನಗರಕ್ಕೆ ಬಂದಿತ್ತು. ಅರಮನೆಯ ಮುಂಭಾಗದಲ್ಲಿ ಅದಕ್ಕೆ ಪುಣ್ಯಸ್ನಾನ ಮಾಡಿಸಿ ನೂತನ ವಸ್ತ್ರಾಭರಣಗಳಿಂದಲಂಕರಿಸಿ, ಶಸ್ತ್ರಾಸ್ತ್ರಗಳನ್ನು ಬೆನ್ನಿಗೆ ಕಟ್ಟಿ, ಖಡ್ಗ ಗುರಾಣಿಗಳನ್ನು ಕೈಗೆ ಕಟ್ಟಿದರು. ಹಣೆಯಲ್ಲಿ ರಕ್ತರಂಜಿತ ಸಿಂಧೂರತಿಲಕ ತಲೆಗೆ ಉಕ್ಕಿನ ಶಿರಸ್ತ್ರಾಣ! ನೋಡಿದವರಿಗೆ ವೀರ ನಾಗಮಯ್ಯ ಎದ್ದು ಬರುತ್ತಾನೋ ಎನ್ನುವಂತಿತ್ತು ! ಶವವನ್ನು ತೆರೆದ ರಥದ ಮೇಲಿರಿಸಿ ಹೂವಿನ ಕುಚ್ಚುಗಳನ್ನು ಇಳಿಯಬಿಟ್ಟಿದ್ದರು. ಚಾಲುಕ್ಯ ಸಾಮ್ರಾಜ್ಯದ ಎಲ್ಲೆಡೆಯೂ ನಾಗಮಯ್ಯನ ವೀರಮರಣ ಮತ್ತು ಗುಂಡುಮಬ್ಬೆಯ 'ಸತಿ' ಸುದ್ದಿ ಹರಡಿ, ಲಕ್ಷೋಪಲಕ್ಷ ಜನ ತಂಡೋಪ ತಂಡವಾಗಿ ಪೊಟ್ಟಲಗೆರೆಗೆ ಬರುತ್ತಿತ್ತು. ಹಾದಿಯಲ್ಲಿ ಎಲ್ಲರ ಬಾಯಲ್ಲೂ ನಾಗಮಯ್ಯನ ಮನೆತನದ ಮಾತೇ !

'ಏನ್ರೀ ಅಪ್ಪಗಳೆ, ಈ ನಾಗಮಯ್ಯ ಯಾರು ? ಅತ್ತಿಮಬ್ಬೆ ಗುಂಡುಮಬ್ಬೆಯರು ಯಾರು? ಇವರಿಗೂ ನಾಗಮಯ್ಯ ಎಂಬುವರಿಗೂ ಏನು ಸಂಬಂಧ ?'

'ಅಷ್ಟೂ ಗೊತ್ತಿಲ್ಲವೆ ನಿಮಗೆ. ಸರಿ ಬಿಡಿ ಚಾಲುಕ್ಯ ಸಾಮ್ರಾಜ್ಯದ ಪ್ರಜೆಯಾಗಿ ಹುಟ್ಟಿದ್ದು ಸಾರ್ಥಕವಾಯಿತು. ಕೇಳಿ ಹೇಳ್ತೇನೆ:

ಚಾಲುಕ್ಯ ಚಕ್ರವರ್ತಿಗಳಾದ ಅಹಮಲ್ಲ ಸತ್ಯಾಶ್ರಯರಲ್ಲಿ ದಲ್ಲ ಎಂಬುವನು ಶ್ರೇಷ್ಠ ಸಚಿವ. ಆತನ ಮಗನೇ ರಣಧೀರ ನಾಗ ದೇವ. ಆತ ವೆಂಗಿ ಮಂಡಲದ ಕಮ್ಮೆನಾಡಿನ ಪುಂಗನೂರು ಗ್ರಾಮದ ಕೌಂಡಿನ್ಯ ಗೋತ್ರದ ಜೈನ ಬ್ರಾಹ್ಮಣ ನಾಗಮಯ್ಯನ ಮೊಮ್ಮಕ್ಕಳಾದ ಅತ್ತಿಮಬ್ಬೆ ಮತ್ತು ಗುಂಡುಮಬ್ಬೆ ಎಂಬಿಬ್ಬರು ಸೋದರಿಯರನ್ನು ಲಗ್ನವಾಗಿದ್ದ. ಪುಂಗನೂರಿನ ನಾಗಮಯ್ಯನಿಗೆ ಮಲ್ಲಪ್ಪಯ್ಯ ಮತ್ತು ಪೊನ್ನಮ್ಮಯ್ಯ ಎಂಬ ಇಬ್ಬರು ಮಕ್ಕಳು. ಇವರಲ್ಲಿ ಎರಡನೆಯವನು ಯುದ್ಧವೊಂದರಲ್ಲಿ ವೀರಮರಣವನ್ನಪ್ಪಿದ. ಹಿರಿಯ ಮಗನಾದ ಮಲ್ಲಪ್ಪಯ್ಯನಿಗೆ ಎಂಟು ಮಕ್ಕಳು. ಗುಂಡುಮಯ್ಯ, ಎಳಮಯ್ಯ, ಪೊನ್ನಮಯ್ಯ, ಅಹವಮಲ್ಲ, ವಲ್ಲ ಎಂಬ ಐದು ಗಂಡು, ನಾಗಿಯಬ್ಬೆ, ಅತ್ತಿಮಬ್ಬೆ ಮತ್ತು ಗುಂಡುಮಬ್ಬೆ ಎಂಬ ಮೂರು ಹೆಣ್ಣು. ಈ ಅತ್ತಿಮಬ್ಬೆ ಗುಂಡುಮಬ್ಬೆಯರ ಗಂಡ, ಚಾಲುಕ್ಯ ಚಮೂಪತಿ ನಾಗದೇವ ಮೊನ್ನೆ ನಡೆದ ದಕ್ಷಿಣ ಯುದ್ಧದಲ್ಲಿ ಮಡಿದ. ಅವನ ಇಬ್ಬರೂ ಹೆಂಡಿರು ವಿತಂತುಗಳಾದರು ಪಾಪ !'

'ಅದು ಸರಿ ಚಾಲುಕ್ಯರ ಪರವಾಗಿ ನಾಗದೇವ ಯುದ್ಧ ಮಾಡಿದ್ದು ಯಾರ ವಿರುದ್ಧ ? ಎಲ್ಲಿ ?'

'ಕೇಳಿ, ಬಾದಾಮಿ ಚಾಲುಕ್ಯರಿಗೆ ಕಾಂಚಿಯ ಪಲ್ಲವರು ಹೇಗೋ ಹಾಗೆ ಕಲ್ಯಾಣದ ಚಾಲುಕ್ಯರಿಗೆ ದಕ್ಷಿಣದ ಚೋಳರು ಪ್ರಚಂಡ ಶತ್ರುಗಳು. ಅವರಲ್ಲಿ ಉತ್ತಮ ಚೋಳನ ಮಗನಾದ ರಾಜರಾಜನು ಒಂಬತ್ತು ಲಕ್ಷ ಸೇನೆಯೊಡಗೂಡಿ ಬಂದು ಚಾಲುಕ್ಯ ಸಾಮ್ರಾಜ್ಯದ ಶಾಂತಲಿಗೆ, ಬನವಾಸಿ, ಕಡಂಬಾಳಿಗೆ, ಕೋಗಲಿ, ಉಣಕಲ್ಲು, ದೋನೂರು (ಧನವೂರು) ಮೊದಲಾದ ದುರ್ಗಗಳನ್ನು ವಶಪಡಿಸಿಕೊಂಡರೆ ಅವನ ಮಗ ರಾಜೇಂದ್ರಚೋಳನು ಎಡದೊರೆನಾಡು, ಕುಲಾಕ ನಾಡುಗಳನ್ನು ಗೆದ್ದುಕೊಂಡ. ರಾಜರಾಜನು ದೋನೂರಿನ ಪ್ರಾಂತ್ಯವನ್ನು ಕೊಳ್ಳೆ ಹೊಡೆದದ್ದಲ್ಲದೆ ಅನೇಕ ಜನ ಸ್ತ್ರೀಯರನ್ನು ಕೆಡಿಸಿ, ಎಳೆತಂದು ನಾನಾ ಜಾತಿಯವರಿಗೆ ಮದುವೆ ಮಾಡಿದ. ಇದರಿಂದ ರಚ್ಚುಗೊಂಡ ಅಹಮಲ್ಲ ಸತ್ಯಾಶ್ರಯ ಮಹಾರಾಜರು 'ಶಾವರೆಘಟ್ಟ'ದ ಯುದ್ಧದಲ್ಲಿ ರಾಜರಾಜನನ್ನು ಎದುರಿಸಿ, ವೀರಾವೇಶದಿಂದ ಹೋರಾಡಿದರು. ಚೋಳರ ಸೇನಾಪತಿ ಶ್ರುತಿಮಾನ್ ನಕ್ಕನ್ ಚಂದಿರನ್ ಎಂಬು ವನನ್ನು ನಮ್ಮ ರಣಧೀರ ನಾಗದೇವ ಕೊಂದು ಚಾಲುಕ್ಯ ಚಕ್ರೇಶ್ವರರ ಗೆಲುವಿಗೆ ಕಾರಣನಾಗಿದ್ದರು. ಆದರೆ ಯುದ್ಧ ಸಂದರ್ಭದಲ್ಲಿ ಆಗಬಾರದ್ದು ಆಗಿಹೋಯಿತು. ಮೋಸದೇಟಿಗೆ ನಿನ್ನೆ ಬಲಿಯಾದರು ನಾಗದೇವರು. ಅವನ ಇಬ್ಬರು ಪತ್ನಿಯರು ಅತ್ತಿ ಮಬ್ಬೆ ಗುಂಡುಮಬ್ಬೆಯರಿಗೆ ವೈಧವ್ಯ ಪ್ರಾಪ್ತವಾಯಿತು.'

'ಹ್ಞಾ! ಅಂದಹಾಗೆ ಅತ್ತಿಮಬ್ಬೆ! ಅಂದರೆ?'

'ನಿನ್ನ ತಲೆ, ಆ ತಾಯಿಯ ಹೆಸರು ಅತ್ತಿಮಬ್ಬೆ ಎಂದು. ಅಳ್ತಿ ಎಂದರೆ ಪ್ರೀತಿ, ಅಬ್ಬೆ ಅಂದರೆ ಅವ್ವೆ, ಅರ್ಥಾತ್ ಪ್ರೇಮವ್ವೆ! ಗೊತ್ತಾಯ್ತಾ? ರೂಢಿ ಮಾತಿನಲ್ಲಿ ಅತ್ತಿಮಬ್ಬೆ ಅಂತ ಆಗಿದ್ದಾಳೆ. ಅವಳ ತಂಗಿಯೇ ಗುಂಡಮಬ್ಬೆ. ಆಗಲೇ ಹೇಳಿದೇನೆ ಮತ್ತೆ ಮತ್ತೆ ಕೇಳಬೇಡ. ನಾಗಮಯ್ಯನ ಕಿರಿಯ ಹೆಂಡತಿ ಗೊತ್ತಲ್ಲ! ಅವಳು ಈ ದಿನ ಮಹಾಸತಿ ಆಗ್ತಿದಾಳೆ.'

ಹೀಗೆ ಮಾತನಾಡಿಕೊಳ್ಳುತ್ತಾ ಜನ ಜಾತ್ರೆ ನೆರೆಯುತ್ತಿತ್ತು. ಪೊಟ್ಟಲಗೆರೆಯ ಹೊರವಲಯದಲ್ಲಿ ಅಗಸೆಯ ಬಳಿ ಇದ್ದ ಕೋಟೆಯ ಕೆಳಭಾಗದಲ್ಲಿ ಬಹು ದೊಡ್ಡಪ್ರಮಾಣದ ಅಗ್ನಿಕುಂಡ ತಯಾರಾಗಿತ್ತು.

ಗುಂಡಮಬ್ಬೆ ಅಂದು ಪುಣ್ಯಸ್ನಾನ ಮಾಡಿ, ಪಟ್ಟೆ ಪೀತಾಂಬರ ಉಟ್ಟು, ಮೈತುಂಬ ಒಡವೆಗಳನ್ನು ತೊಟ್ಟು, ತಲೆಬಾಚಿ ಹೂ ಮುಡಿದು ಹರಿಸಿನ ಕುಂಕುಮ ಇಟ್ಟುಕೊಂಡು, ಕೈಯಲ್ಲೊಂದು ಕಲಶ ಹಿಡಿದು ಅರಮನೆಯ ಮುಂದಿನ ರಥದ ಬಳಿ ಬಂದಳು. ರಥಕ್ಕೆ ಅದರ ಮೇಲಿದ್ದ ತನ್ನ ಸ್ವಾಮಿ ನಾಗದೇವನ ಪಾರ್ಥಿವ ಶರೀರಕ್ಕೆ ಪೂಜೆ ಮಾಡಿ ರಥವೇರಿ, ಪತಿಯ ಶರೀರವನ್ನು ತನ್ನ ತೊಡೆಯ ಮೇಲಿರಿಸಿಕೊಂಡು ಗಂಭೀರ ವದನೆಯಾಗಿ ಕುಳಿತಳು. ದೇವತೆಯಾಗಲಿರುವ 'ಸತಿ'ಯ ಪೂಜೆ ಆರಂಭವಾಯಿತು.

ಮೊದಲ ಪೂಜೆ ಅಕ್ಕ ಅತ್ತಿಮಬ್ಬೆಯದು. ಅಬ್ಬೆ 'ಸತಿ'ಗೆ ಮಡಿಲು ತುಂಬಿ, ಕರಿಬಳೆ ತೊಡಿಸಿ, ಮುಡಿಗೆ ಹೂದಂಡೆ ಏರಿಸಿ, ಕೆನ್ನೆಗೆ ಹರಿಶಿಣ ತೊಡೆದು, ಹಣೆಗೆ ಕುಂಕುಮವಿಟ್ಟು ಪೂಜಿಸಿ ಸಕ್ಷತೆಯ ಸೇಸೆಯಿಟ್ಟು ಅವಳ ಪಾದಗಳಿಗೆ ದೀರ್ಘದಂಡ ನಮಸ್ಕಾರ ಮಾಡಿದಳು. ಗುಂಡಮಬ್ಬೆ ಕೈಯೆತ್ತಿ ಕೊಟ್ಟ ಹೂವೊಂದನ್ನು ಅನನ್ಯ ಭಕ್ತಿಯಿಂದ ಸ್ವೀಕರಿಸಿ, ಮತ್ತೆ ಅವಳ ಪಾದ ಮುಟ್ಟಿ ವಂದಿಸಿ ಅಟ್ಟಣೆಯಿಂದ ಕೆಳಗಿಳಿದಳು. ಅವಳಂತೆ ನೂರಾರು ಸಾವಿರಾರು ಜನ ಪೂಜೆ ಸಲ್ಲಿಸಿದರು.

ಪೂಜೆಗಳೆಲ್ಲ ಮುಗಿದ ಮೇಲೆ ರಥ ರಾಜಬೀದಿಯಲ್ಲಿ ನಿಧಾನವಾಗಿ ಹರಿಯತೊಡಗಿತು. ಹಾದಿಯುದ್ದಕ್ಕೂ ಜಯಕಾರ, ಪುಷ್ಪವೃಷ್ಟಿ, ಅಗಸೆಯ ಬಳಿಯ ಅಗ್ನಿ ಕುಂಡವನ್ನು ಸಮೀಪಿಸಿದಾಗ ಸಂಜೆಯಾಗುತ್ತಾ ಬಂದಿತ್ತು. ಅಲ್ಲಿ ಅಗ್ನಿದೇವನ ಪೂಜೆ ವಿಧ್ಯುಕ್ತವಾಗಿ ನೆರವೇರಿತು. ಜನರ ಜಯಘೋಷ ಗಗನಕ್ಕೇರಿತು. ವಾದ್ಯಗಳು ಮೊಳಗಿದವು. ಗುಂಡಮಬ್ಬೆ ಆವೇಶ ಬಂದವಳಂತೆ ಮೇಲೆದ್ದಳು. ಅಗ್ನಿಗೂ ಸೂರ್ಯದೇವನಿಗೂ ನಮಸ್ಕರಿಸಿದಳು. ನೆರೆದ ಲಕ್ಷೋಪಲಕ್ಷ ಜನತೆಯ ಕಡೆ ತಿರುಗಿ ಕೈ ಮುಗಿದಳು. ಮತ್ತೆ ಬಗ್ಗೆ ರಥದ ಮೇಲಿದ್ದ ತನ್ನ ಪತಿದೇವನ ಶವವನ್ನು ಎತ್ತಿ ಅಪ್ಪಿ ತನ್ನ ಹೆಗಲ ಮೇಲಿಟ್ಟುಕೊಂಡಳು. ಒಂದೇ ಮಾತು, ಒಂದೇ ಸಂದೇಶ ಅವಳ ಬಾಯಿಂದ ಹೊರಬಿದ್ದಿತು.

'ಬಂಧುಗಳೇ, ಭಗಿನಿಯರೇ, ಹೋಗಿ ಬರುತ್ತೇನೆ. ನಿಮಗೆಲ್ಲರಿಗೂ ನನ್ನೀ ಜನ್ಮದ ಅಂತಿಮ ನಮಸ್ಕಾರ. ದಯವಿಟ್ಟು ನನ್ನನ್ನು ಬೀಳ್ಕೊಡಿ. ಮತ್ತೆ ನಿಮ್ಮ ಮಗಳಾಗಿ ಇದೇ ನಾಡಿನಲ್ಲಿ ಹುಟ್ಟಿ ಬರುತ್ತೇನೆ. ನನಗೆ ಮರುಜನ್ಮದಲ್ಲಿ ನಂಬಿಕೆ ಇದೆ. ಇದೋ ಸರ್ವರೂ ಈ ಜನ್ಮದ ನನ್ನ ಅಂತಿಮ ಪ್ರಣಾಮಗಳನ್ನು ಸ್ವೀಕರಿಸಿ, ನನ್ನ ತಾಯ್ನಾಡಿಗೆ ಜಯವಾಗಲಿ, ನನ್ನಕ್ಕ ಅತ್ತಿಮಬ್ಬೆ ದಾನ ವಿನೋದೆ ಎಂದು ಖ್ಯಾತಳಾಗಲಿ, ಅಣುಗ ಅಣ್ಣಿಗದೇವ, 'ಪಡೆವಳತೈಲ'ನೆಂಬ ಕೀರ್ತಿಗೆ ಭಾಜನನಾಗಲಿ, ಜನ್ಮ ಜನ್ಮಕ್ಕೂ ನನ್ನ ಸ್ವಾಮಿ ನಾಗದೇವನೇ ನನ್ನ ಪತಿಯಾಗಲಿ. ಜಿನಧರ್ಮಕ್ಕೆ ಜಯವಾಗಲಿ, ವಿಶ್ವಮಾನವ ಧರ್ಮ ಜಿನಧರ್ಮಕ್ಕೆ ಜಯವಾಗಲಿ! ಜ..ಯ. . .!!

ಕಡೆಯ ನುಡಿ ಹೊರಡುವಷ್ಟರಲಿ ಪತಿದೇಹದೊಡನೆ ಅಗ್ನಿಕುಂಡಕ್ಕೆ ಹಾರಿದಳು. ಧಗಧಗಿಸುತ್ತಿದ್ದ ಅಗ್ನಿಯ ಕೆನ್ನಾಲಿಗೆಯ ಮೇಲೆ ಕ್ಷಣಾರ್ಧದಲ್ಲಿ ಕರಗಿಹೋದಳು ತಾಯಿ!

ಸಂಜೆಯಾಯಿತು !

ಕತ್ತಲಲ್ಲೇ ತತ್ತರಿಸುತ್ತಾ ಜನ ಮನೆಗೆ ಮರಳಿತು !

ಳ

ಹಗಲಿರುಳಿನಿಗ್ಗಾಲಿ ನೂರುರುಳು ಉರುಳಿತು.

ಅತ್ತಿಮಬ್ಬೆಯ ಪಾಲಿಗೆ ಆ ಮೂರು ಮಾಸಗಳು ನೂರು ವರ್ಷಗಳಷ್ಟು ದೀರ್ಘವಾಗಿದ್ದವು. ಗುಂಡಮಬ್ಬೆಯ ನೆನಪು, ಗುಂಡಮಬ್ಬೆಯ ಚಿತ್ರ ಕಣ್ಣೆದುರು ಧುತ್ತನೆ ಬಂದು ನಿಲ್ಲತೊಡಗಿದವು. ಗಂಡನ ನೆನಪು ಮಾಯವಾದರೂ ತಂಗಿಯ ನೆನಪು ಮಾಸಲಿಲ್ಲ. ಮರೆಯಲೆತ್ನಿಸಲೆಂದೇ ಪುಂಗನೂರು, ಶ್ರವಣಬೆಳಗೊಳ, ಕೊಪಣನಗರ, ಲೊಕ್ಕಿಗುಂಡಿ, ಮಾನ್ಯಖೇಟ ಮೊದಲಾದ ಪ್ರಸಿದ್ಧ ಜೈನ ಕ್ಷೇತ್ರಗಳಿಗೂ, ನರ್ಮದಾ, ಗೋದಾವರಿ ಮೊದಲಾದ ಪುಣ್ಯತೀರ್ಥಗಳಿಗೂ ಹೋಗಿ ಬಂದಳು. ಆದರೆ ಅಲ್ಲಿಯೂ ತಂಗಿಯ ನೆನಪು ಬಿಡಲಿಲ್ಲ. ಅವಳ ಸಾವಿನ ಗಾಯ ಮಾಯಲೇ ಇಲ್ಲ. ಕಾಲ ಮನಸ್ಸಿನ ಗಾಯವನ್ನು ಮಾಯಿಸುವ ಮುಲಾಮು ಎನ್ನುತ್ತಾರೆ. ಅದೂ ಫಲಕಾರಿಯಾಗಲಿಲ್ಲ ಅತ್ತಿಮಬ್ಬೆಯ ಬಾಳಿನ ಸಂದರ್ಭದಲ್ಲಿ.

'ಪೊಟ್ಟಲಗೆರೆಯಲ್ಲಿರುವವರೆಗೂ ಗುಂಡಿ ನನ್ನನ್ನು ಕಾಡದೇ ಬಿಡುವಂತಿಲ್ಲ, ಆದ್ದರಿಂದ ಊರನ್ನೇ ಬಿಟ್ಟು ಬಹುದೂರ ಹೋದರೆ? ಬಹುಶಃ ಅಲ್ಲಿನವರೆಗೂ ಅವಳು ಬರಲಾರಳು. ಸಾಕು, ಇನ್ನು ಸಾಕು ಈ ಊರಿನ ಅನ್ನ ನೀರಿನ ಋಣ. ಇಲ್ಲಿದ್ದಷ್ಟೂ ಬಾಧಿಸುತ್ತಾಳೆ ಗುಂಡುಮಬ್ಬೆ. . .ಬಿಡಬೇಕು. ಬೇಗ ಬಿಟ್ಟು ಬಿಡಬೇಕು ನಮ್ಮ ಮಹಾರಾಜರ ಮೂಲ ಸ್ಥಳವಾದ ಈ ಪೊಟ್ಟಲೆಗೆರೆಯನ್ನು, ಬಿಟ್ಟು ಲೊಕ್ಕಿಗುಂಡಿಗೆ ಹೋಗುವುದು ಲೇಸು. ಅಲ್ಲಿ ಪುರಾಣಶ್ರವಣ ಸಾಹಿತ್ಯ ಸಲ್ಲಾಪಗಳಲ್ಲಿ ನಿರತಳಾಗುವುದು ಸೂಕ್ತ ಎಂದು ನಿರ್ಧರಿಸಿ, ಪೊಟ್ಟಲಗೆರೆಯನ್ನು ತೊರೆದು ಲೊಕ್ಕಿಗುಂಡಿಗೆ ಪಯಣಿಸಿದಳು. ಅಲ್ಲಿ 'ತತ್ ಪುರವರ ಅಚಳ ಶೇಖರಂ ಎಂಬಿನಂ ದಿಶಾದನ್ತಿಯ ದನ್ತಕಾನ್ತಿ ನಿಜ ಸೌಧ ವಿಶಾಳ ವಿಲೋಳ ಭಿತ್ತಿಯೊಳ್ಸಂತತಮೊಪ್ಪುತ್ತಿರ್ಪಿನೆಗಂ' ಅಂದರೆ ಆ ಪಟ್ಟಣದಲ್ಲಿ ಸದಾ ದಿಗ್ಗಜದ ದಂತ ಕಾಂತಿಯಿಂದ ಸಾಕ್ಷಾತ್ ಸೂರ್ಯನೋಪಾದಿಯಲ್ಲಿ ಪ್ರಜ್ವಲಿಸುವ ಸೌಧದಲ್ಲಿ ನೆಲೆ ನಿಂತಳು ಆ ವೇಳೆಗೆ ಚಾಲುಕ್ಯ ಚಕ್ರವರ್ತಿಗಳ ರಾಜಧಾನಿಯೂ ಪೊಟ್ಟಲಗೆರೆಯಿಂದ ಕಲ್ಯಾಣಕ್ಕೆ ಸ್ಥಳಾಂತರಗೊಂಡಿತ್ತು.

ತಂಗಿ ತೀರಿಕೊಂಡ ಅಳಲು ಕ್ರಮೇಣ ಕರಗಿದರೂ ಸಂಸಾರಿಗೆ ಈತಿ ಬಾಧೆಗಳು ಕಾಡದೆ ಬಿಡಲಿಲ್ಲ. ಅತ್ತಿಮಬ್ಬೆ ಅಂದುಕೊಂಡಳು. 'ಉಪಸರ್ಗಗಳಿಗಿಂತ ಪರೀಷಹಗಳನ್ನು ಗೆಲ್ಲುವುದು ಕಠಿಣ ಎಂದು. ಮನೆಯೊಳಗಣ ಕಿಚ್ಚು ಮನೆಯ ಸುಡುತ್ತದೆ. ಆ ರೀತಿ ಮಾನಸಿಕ ಪೀಡನೆಗಳು ನಮ್ಮೊಳಗನ್ನು ತಿನ್ನುತ್ತವೆ ಎಂಬ ಮಾತು ಸತ್ಯ. ಸಮಾಧಿಸ್ಥರಾಧ ಜಿನಮುನಿಗಳನ್ನೂ ಇವು ಮೊದಮೊದಲು ಕಾಡದೆ ಬಿಟ್ಟಿಲ್ಲ. ಅಂದಮೇಲೆ ನಾನಾವ ಲೆಕ್ಕ. ಕ್ರಮ ಒಂದು ಅಪ್ರತಿಹತ ಶಕ್ತಿ. ಅದು ಎಂಥ ವ್ಯಕ್ತಿಯನ್ನೂ ಬಗ್ಗುಬಡಿಯುವ ಸರ್ಪ! ಏನು ಮಾಡಲಿ! ಇಂದ್ರಿಯಗಳನ್ನು ಹೇಗೆ ಸಂತವಿಸಿಕೊಳ್ಳಲಿ! ಗಂಡನೊಡನೆ ಅಗ್ನಿಕುಂಡವನ್ನು ಪ್ರವೇಶಿಸಿದ ನನ್ನ ತಂಗಿ ಗುಂಡಮಬ್ಬೆ ಅರೆಕ್ಷಣದಲ್ಲಿ ಎಲ್ಲ ನೋವನ್ನೂ ಮರೆತು ಮಾಯವಾದಳು. ಆದರೆ ನಾನು ಹುಟ್ಟಿನಿಂದ ಅವಳಿಗಿಂತ ಹಿರಿಯಳಾದ್ದರಿಂದ ನಿತ್ಯವೂ ಉರಿಯಿಲ್ಲದಗ್ನಿಯಲ್ಲಿ ಬೇಯುತ್ತಿದ್ದೇನೆ. ಕಾಮ ವಿಮುಖತೆ ಮತ್ತು ದೇಹದಂಡನೆಗಳೆಂಬ ಶತ್ರುಗಳೊಡನೆ ಹೋರಾಡಿ ಕೈ ಸೋತವಳಾಗಿದ್ದೇನೆ. . .ಇಂದ್ರಿಯ ನಿಗ್ರಹ ಇಂದ್ರನ ಆಗ್ರಹಕ್ಕೂ ಮಿಗಿಲು! ಜಿನರಾಗುವುದು ಸಾಮಾನ್ಯವಲ್ಲ ಎಂಬುದು ಈಗ ನನ್ನ ಅರಿವಿಗೆ ಬರುತ್ತಿದೆ.

'ದೈಹಿಕ ಕಾಮನೆಗಳು ಒಂದು ಕಡೆ. ಮಾನಸಿಕ ವೇದನೆಗಳು ಮತ್ತೊಂದು ಕಡೆ. ಯಾವುದನ್ನು ಬಿಡಲಿ, ಯಾವುದನ್ನು ಸಂತೈಸಲಿ. ಅದು ಬೇಕು ಇದು ಬೇಕು ಎಂಬ ಹಂಬಲ. ಈ ಬೇಕು ಬೇಡಗಳ ನಡುವೆ 'ನಾನು' ಕಳೆದು ಹೋಗಿದ್ದೇನೆ. ಕಳೆದು ಹೋದ ವಸ್ತುವನ್ನು ಅಂದಿನಿಂದಲೂ ಹುಡುಕುತ್ತಿದ್ದೇನೆ. ಸಿಗುವುದಾದರೂ ಹೇಗೆ ? ಬೀದಿಯಲ್ಲಿ ಬಿದ್ದ ಸೂಜಿಯನ್ನು ಮನೆಯಲ್ಲಿ ಹುಡುಕಿದರೆ ಸಿಗುತ್ತದೆಯೆ? ಬಿದ್ದಲ್ಲಿ ಹುಡುಕಬೇಕು. ಇದ್ದಲ್ಲಿ ದುಡಿಯಬೇಕು. ಹೌದು ನನ್ನೊಳಗೇ ಕಳೆದುಕೊಂಡಿರುವುದನ್ನು ಅಲ್ಲಿಯೇ ಹುಡುಕುತ್ತೇನೆ.

'ದೊಡ್ಡವರು ಹೇಳುವ ಮಾತು ಸಟೆಯಲ್ಲ. ಸಂಸಾರವೆಂಬ ಹಗೆ ಹೊಕ್ಕಲ್ಲಿ ಹೊಕ್ಕು ಸಿಕ್ಕಿದೆಡೆಯನ್ನು ಇರಿದು ಕೊಲ್ಲುತ್ತಾನೆ. ರೇಶ್ಮೆಹುಳು ತಾನು ಬಿಟ್ಟ ನೂಲಿನಲ್ಲಿ ತಾನೇ ಬಂಧಿಯಾಗಿ ಸಾವಪ್ಪುವಂತೆ ಮಾನವ ತಾನು ಸೃಷ್ಟಿಸಿಕೊಂಡ ಸಂಸಾರದ ಬಲೆಯಲ್ಲಿ ಸೆರೆಸಿಕ್ಕು ಸಾಯುತ್ತಾನೆ. ಯಾವ ಕಡೆ ನೋಡಿದರೂ ಬತ್ತಲೆಯ ಬಯಲು, ಕತ್ತಲೆಯ ಕಡಲು. ಈ

ಕತ್ತಲೆಯ ಮೊತ್ತ ವನ್ನು ಹೊತ್ತು ಕುಣಿಯುತ್ತಿದೆ ಮನವೆಂಬ ಕುದುರೆ. ಅದಕ್ಕೆ ಲಂಗಿಲ್ಲ, ಲಗಾಮಿಲ್ಲ, ಅಂಕೆ ಇಲ್ಲ ಸಂಕೆ ಇಲ್ಲ. ಒಡೆಯನಿದ್ದಾನೆಂಬ ಭಯವೂ ಇಲ್ಲ. ಒಂದು ಬಗೆಯ ಹುಚ್ಚು ಕುದುರೆ. ಅದಕ್ಕೆ ಕ್ಷಣ ಚಿತ್ತ ಕ್ಷಣ ಪಿತ್ಥ. ಬಣ್ಣನೆಗೂ ಮೀರಿದ ಚಪಲತೆ. ತಾನು ಅದಾ ಗಬೇಕು ಇದಾಗಬೇಕು ಎಂಬ ಬಯಕೆ. ಯಾವುದೂ ಈಡೇರಿದಾಗ ಅವಿವೇಕಕ್ಕೆ ಆಹ್ವಾನವಿತ್ತು ಅನಾಹುತಕ್ಕೆ ಅಡಿಗಲ್ಲು ಹಾಕು ತ್ತದೆ. ಇದರಿಂದ ತಾನೂ ಬದುಕುವುದಿಲ್ಲ, ಅನ್ಯರನ್ನೂ ಬದುಕಲು ಬಿಡುವುದಿಲ್ಲ. ಚಾಂಚಲ್ಯದ ಪರಿಣಾಮವಾಗಿ ಮೋಹಮಯ ಕಾಂತಾರವನ್ನು ಹೊಕ್ಕು ನಿವಾರಿಸಿಕೊಳ್ಳಲಾಗದ ಆಯಾಸದಿಂದ ಧುತ್ತನೆ ಎಲ್ಲಿಯೋ ಒಂದೆಡೆ ನಿಲ್ಲುತ್ತದೆ. ಹೊರಟ ನೆಲೆ ತುಳಿದ ಹಾದಿ ಯಾವುದರ ಪರಿವೆಯೂ ಅದಕ್ಕಿರುವುದಿಲ್ಲ. ಆದರೆ ಕಗ್ಗಾಡಿನಲ್ಲಿ ಕಾಲು ಸೋತು ನಿಂತಾಗ ನೆನೆಯುತ್ತದೆ ತಾನು ಏನಾದೆ ? ಏನಾಗಬೇ ಕಿತ್ತು ? ಎಂದು. ಅಷ್ಟರಲ್ಲಿ ಕೊಟ್ಟ ಅವಧಿ ಮುಗಿದೇ ಹೋಗಿರುತ್ತದೆ. ದಿಕ್ಕು ಕಾಣದ ಕುದುರೆ ಪದ ಕುಸಿದು ನೆಲ ಕಚ್ಚುತ್ತದೆ. ಆಗ ಕಣ್ಣೀರೊಂದೇ ಅದರ ಪಾಲಿಗೆ ಉಳಿದ ಭಾಗ್ಯ ! ಕೆಟ್ಟ ಮೇಲೆ ಬುದ್ಧಿ ಬಂತು ಅಟ್ಟ ಮೇಲೆ ಒಲೆ ಉರಿಯಿತು ! ಕೆಟ್ಟು ಕಲಿಯುವುದಕ್ಕಿಂತ ಬದುಕಿ ಬೆಳೆಯಬೇಕು. ರೋಗ ಬಂದ ಮೇಲೆ ಔಷಧ ಹುಡುಕುವುದಕ್ಕಿಂತ ರೋಗ ಬರದಂತೆ ನೋಡಿಕೊಳ್ಳು ವುದು ಜಾಣತನ.

ಹುಟ್ಟು ಆಕಸ್ಮಿಕ, ಸಾವು ಅನಿವಾರ್ಯ. ಮೂಡಿದ್ದು ಮಡಿಯಲೇಬೇಕು. ಮಡಿದು ಮಣ್ಣಾಗಬೇಕು. ಇಂದಿದ್ದು ನಾಳೆ ಹೇಳ ಹೆಸರಿಲ್ಲದಾಗುವ ಈ ದೇಹಕ್ಕೆ ಅದೆಷ್ಟು ಪೋಷಣೆ, ಅದೆಷ್ಟು ಪುರಸ್ಕಾರ ! ಬದುಕು ಎಂಬುದು ಮೊದಲ ಮತ್ತು ಕಡೆಯ ಹಾಳೆಗಳನ್ನು ಕಳೆದುಕೊಂಡ ಒಂದು ದೊಡ್ಡ ಪುಸ್ತಕ ಇದರ ಆರಂಭ ಹೇಗಾಯಿತು ? ಗೊತ್ತಿಲ್ಲ. ಹೇಗೆ ಮುಕ್ತಾಯವಾಗುತ್ತದೆ ತಿಳಿದಿಲ್ಲ. ಬರುವಾಗ ಬತ್ತಲೆ, ಹೋಗುವಾಗ ಕತ್ತಲೆ. ಆದರೆ ನಾಲ್ಕು ದಿನ ಈ ಬಣ್ಣದ ಬಾಳಿಗಾಗಿ ಮಾನವ ಭೂಮಿ ಆಕಾಶಗಳನ್ನು ಅಳೆಯುತ್ತಾನೆ. ಈ ಎಲ್ಲ ಆರ್ಭಟಗಳ ಅಂತ್ಯದಲ್ಲಿ ಅವನಿಗೆ ದೊರೆಯುವುದಾದರೂ ಏನು? ಒಂದು ಹಿಡಿ ಮಣ್ಣು! ಇಷ್ಟು ಪ್ರಮಾಣದ ಮಣ್ಣಿಗಾಗಿ ಮಾನವನ ಸತತ ಹೋರಾಟ! ಎಲ್ಲ ವ್ಯರ್ಥ ಶ್ರಮ. ಅಲ್ಲದೆ ಅಮಾಯಕ ಶಿಶುವಿನಲ್ಲಿ ಎಂತಹ ಮುಗ್ಧತೆ ಇರುತ್ತದೆ. ಅದರ ಪ್ರಾಂಜಲ ಮನವನ್ನರಿತೇ ತಿಳಿದವರು ಅದನ್ನು 'ದೇವರ ಸಮಾನ' ಎನ್ನುತ್ತಾರೆ. ಆದರೆ ಮಗು ಬೆಳೆದು ಮಗ ನಾದಾಗ ಅವನಿಗೆ ನಿಸರ್ಗದ ಸಹಜತೆಯನ್ನು ಕಂಡರಾಗುವುದೇ ಇಲ್ಲ. ಇದ್ದದ್ದನ್ನು ಇದ್ದ ಹಾಗೆ ಬಿಡುವುದು, ನೋಡುವುದು ಅವನ ಜಾಯಮಾನವಲ್ಲ. ಸ್ವಾರ್ಥಸಾಧನೆಗಾಗಿ ತಾನೆಲ್ಲ ಮಾಡಲು ಸಿದ್ಧನಾಗುತ್ತಾನೆ. ಬೇಕೆಂದಾಗ ಹೊಗಳುವುದು, ಬೇಡವಾ ದಾಗ ತೆಗಳುವುದು ಅವನ ಸಹಜ ಗುಣ. ಆದರೆ ಅಂತಹ ಯಾವುದೇ ಪ್ರಶಸ್ತಿಗೆ ಪಕ್ಷಕಾರನಾಗದೆ ಸಾಧಕ ಮುಕ್ತನಾಗಿರಬೇಕು. ನಿತ್ಯ ನಿರಂಜನದಲ್ಲಿ ಅವನ ಜೀವಸತಿ ರಮಿಸಿ ರಂಜನೆಗೊಳ್ಳಬೇಕು.

'ಹೌದು ಜೀವನದಲ್ಲಿ ಯಾರಿಗೆ ಯಾರೂ ಇಲ್ಲ, ಯಾರಿಗಾರೂ ಅನಿವಾರ್ಯವೂ ಅಲ್ಲ. ಇಂತಹ ಆಕಸ್ಮಿಕಗಳಿಗೆ ಅಚ್ಚರಿಪ ಡಬೇಕೇ ಹೊರತು ಅಂಟಿಕೊಳ್ಳಬಾರದು. ಗುಂಡಮಬ್ಬೆಗೂ ನನಗೂ, ನಾಗದೇವರಿಗೂ ನನಗೂ, ಹಸುಳೆ ಅಣ್ಣಿಗನಿಗೂ ನನಗೂ, ಈ ಮಣ್ಣಿನ ನೆಲಕ್ಕೂ ನನಗೂ ಏನೆಂತಹ ಸಂಬಂಧ. ಈ ಕೊಂಡಿಯನ್ನು ಕಲ್ಪಿಸಿದವನಾದರೂ ಯಾರು? ಏಕೆ? ಛೇ! ಎಲ್ಲ ಕೃತಕ. ಎಲ್ಲವೂ ಅರ್ಥಹೀನ. ಓ ಮನಸ್ಸೇ ಅರ್ಥಪೂರ್ಣವನ್ನು ಹುಡುಕು. ಸಕಲಾರ್ಥ ನೀನಾಗು ? ದೃಢವಾಗು ಮನವೇ ದೃಢವಾಗು!' ಎಂದೆಂದಿಗೂ ಕರಗದಿರಲಿ ನಿನ್ನ ಅಚಲ ನಿರ್ಧಾರದ ಹೈಮಾಚಲ!'

ಇಂತೆಲ್ಲ ಚಿಂತಿಸಿ ಅತ್ತಿಮಬ್ಬೆ ಚಿತ್ತ ನಿರೋಧಕ್ಕೆ ತನ್ನೆದೆಯನ್ನು ಅಣಿಮಾಡಿಕೊಂಡಳು. ಲೌಕಿಕ ವ್ಯಾಪಾರದಿಂದ ದೂರಳಾಗುತ್ತಾ ಆಧ್ಯಾತ್ಮದ ಕಡೆ ತನ್ನ ಒಲವನ್ನು ತೋರುತ್ತಾ ಬಂದಳು. 'ಮನದ ಚಾಂಚಲ್ಯವನ್ನು ದೂರಮಾಡಲು ಇರುವ ದಾರಿ ಒಂದೇ. ಅದು ಪುರಾಣ ಶ್ರವಣ ಮತ್ತು ಸತ್ಕಾವ್ಯ ಪಠಣ. ಹೌದು ನನ್ನ ತಂಗಿ ಗುಂಡುಮಬ್ಬೆ 'ಸತಿ'ಯಾಗುವ ಮುನ್ನ ಭವಿಷ್ಯವನ್ನು ನುಡಿದಿದ್ದಳು. – 'ಅಕ್ಕಾ, ನೀನು 'ಜಿನಧರ್ಮ ದೀಪಿಕೆ' ಎನಿಸಿಕೊಳ್ಳುತ್ತೀಯೆ ಎಂದು. ಅವಳಂದ ಮಟ್ಟಕ್ಕಲ್ಲದಿದ್ದರೂ ಕಿಂಚಿ ತ್ತಾದರೂ ನನ್ನಿಂದ ಧರ್ಮಕ್ಕೆ ಸೇವೆ ಸಲ್ಲಲಿ' ಎಂದು ನಿರ್ಧರಿಸಿಕೊಂಡಳು. ಬೆಳಗಾಗುತ್ತಲೇ ನಿತ್ಯಕರ್ಮಗಳನ್ನು ಮುಗಿಸಿ, ಮಿಂದು ಮಡಿಯುಟ್ಟು ಜಿನಮಂದಿರವನ್ನು ಪ್ರವೇಶಿಸುವುದು. ಅಲ್ಲಿ ಪಂಚಪರಮೇಷ್ಠಿಗಳಿಗೆ ವಂದನೆ ಸಲ್ಲಿಸಿ, ಅನಂತರ ಆದಿಜಿ ನೇಶ್ವರ ವೃಷಭಸ್ವಾಮಿಯ ಮುಂದೆ ಧ್ಯಾನಮಗ್ನಳಾಗಿ ಕುಳಿತು, ಭಾವಜ್ಞಳಾಗಿ ಪ್ರಾರ್ಥನೆ ಸಲ್ಲಿಸುವುದು. ಅವಳ ನಿತ್ಯದ ಪ್ರಾರ್ಥನೆ ಪಂಪಮಹಾಕವಿಯ ಆದಿಪುರಾಣದಿಂದ ಆಯ್ದುದಾಗಿತ್ತು.

ಸಮಸ್ತ ಸುರಕೋಟಿ ಹೇಮಘಟಕೋಟಿಯಂ ತೀವಿ ತಂ
ದಮೇಯ ಭುಜಕೋಟಿಯಂ ಮಿಸಿಸೆ ದುಗ್ಧಸಿಂಧುಪ್ಲವಂ

ಶ್ರಮಾಂಬುಲವಮೊಂದುಮಂ ನಿನಗೆ ಪುಟ್ಟಿಸಲ್ಕಾರ್ತುದಿ
ಲ್ಲಮಾನುಷಮನಂತವೀರ್ಯ್ಯ ಗುಣಮಾದಿ ತೀರ್ಥೇಶ್ವರಾ ॥
ವಿದಗ್ಧ ಸುರಸುಂದರೀ ನಯನ ಸುಂದರಂ ನಿನ್ನರೂ
ಪಿದೆತ್ತ ಕುಸುಮಾಸ್ತ್ರನಂ ತುಳಿದು ಗೆಲ್ದ ವಿಶ್ರಾಂತಯೆ
ತ್ರಿದಚ್ಚರಿ ದಲೆಂಬಿನಂ ನೆಗಳ್ದೆ ನೀಂ ತ್ರಿಲೋಕಂಗಳೊಳ್
ನ ದೇವಚರಿತಂ ಚರೇತ್ತೆನಿಸಿದೈ ತ್ರಿಲೋಕೇಶ್ವರಾ ॥
ಮರುಸ್ಥಳದ ಮಾಳದೊಳ್ ನಡುಪಗಲ್ವರಂ ಗ್ರೀಷ್ಮದೊಳ್
ಸುರುಳ್ವಿನಿಗಮಳ್ವೆ ಬೇವವರ್ಗೆ ಜೋಂಪಮಿಮ್ಮಾವುನಿ
ರ್ಜ್ಜರಾಂಬು ದೊರೆಕೊಳ್ವವೊಲ್ ಭವದವಾಗ್ನಿಯೊಳ್ ಬೇವಜೀ
ವರಾಶಿಗೆ ಭವದ್ವಚೋಮೃತಮೆ ಮರ್ದನಂಗಾಂತಕಾ
ಅನೇಕ ಭುಜನೇತ್ರ ಪಂಕ್ತಿರಸನಾದಿಗಳು ದೇವ ನಿ
ನ್ನನರ್ಚಿಸುವ ನೋಳ್ಪ ಬಣ್ಣಿಸುವ ಪೊತ್ತದೇಕಾಂಗದಿಂ
ದ್ರನಂತೆನಗೆಸಾಲವಿನ್ನೆರಡನೆ ಕೈಯ್ಯರಳ್ಕಣ್ಣಳೊಂ
ದೇ ನಾಲಗೆಯುಮೊಂದೆ ಚಿಂತಿಸುವೆನಾದಿಭಟ್ಟಾರಕಾ ॥
ಫಣಿಪ್ರಭುಗಮೆತ್ತಮತ್ತಳಗಮಲ್ತೆ ರೂಪಸ್ತವಂ
ಗುಣಸ್ತವಮುದಾತ್ತ ವೃತ್ತ ಭವದೀಯವಸ್ತುಸ್ತವಂ
ಗುಣಾಗುಣ ವಿವೇಕ ಮೂಕರತಿ ಮೂರ್ಖರೆಮ್ಮಂದಿಗರ್
ಪ್ರಣಾಮದೊಳೆ ಪುಣ್ಯಮಂ ಪಡೆವರಾದಿತೀರ್ಥೇಶ್ವರಾ ॥

ಆತ್ಮಾನಂದವಾಗುವವರೆಗೂ ಈ ಹಾಡು. ಅವಳ ಹಾಡಿನಲ್ಲಿ ಆನಂದವೂ ಇರುತ್ತಿತ್ತು. ಅಮೃತವೂ ಇರುತ್ತಿತ್ತು. ಪೂಜೆ ಪ್ರಾರ್ಥನೆಗಳಾದ ನಂತರ ಜಿನಮುನಿಗಳಿಗೆ ಅಕ್ಷಯ ದಾನ ಮಾಡಿ ಬಂದು ಮಿತಹಾರ ತೆಗೆದುಕೊಂಡು, ಮಧ್ಯಾಹ್ನವೆಲ್ಲಾ ಸಾಹಿತ್ಯ ಸಲ್ಲಾಪದಲ್ಲಿ ತೊಡಗುವುದು. ಸಂಜೆ ಮತ್ತೆ ಜಿನಮೂರ್ತಿಗೆ ಪೂಜೆ ಪ್ರಣಾಮಗಳು. ತದನಂತರ ಸೂರ್ಯಾಸ್ತಮಯವಾದ ಮೇಲೆ ಪುರಾಣಶ್ರವಣ ಕಾರ್ಯಕ್ರಮ. ಇದು ಅವಳ ದಿನಚರಿಯಾಗಿತ್ತು.

ಈ ವೈಧವ್ಯದ ಶ್ವೇತಾಂಬರಿ ಹಾಲು ಬಿಳಿಯ ಸೀರೆ ಕುಪ್ಪಸ ತೊಟ್ಟು ಜಿನಬಿಂಬದೆದುರು ಕೈ ಜೋಡಿಸಿ ಕುಳಿತಳೆಂದರೆ ಸಾಕ್ಷಾತ್ ಜಿನಜನನಿಯೇ ಮರುಭವ ತಳೆದಿದ್ದಾಳೆಯೋ ಎಂಬಂತಿದ್ದಳು. ಆಕೆಯ ಬೆಳ್ಳಗಿನ ದುಂಡು ಮುಖ, ತುಂಬುದೋಳು, ಗರಿವಡೆದ ಗಾಂಭೀರ್ಯ, ಶುಭ್ರ ಸ್ಫಟಿಕ ಧವಳದ ಮೈಮಾಟ – ಇವು ಎಂಥವರಲ್ಲೂ ಭಕ್ತಿ ಮೂಡಿಸುವಂತಿದ್ದವು. ಅಣ್ಣಿಗ ನನ್ನು ಬೆಳಸುವ, ಕಲಿಸುವ ಕಾರ್ಯವನ್ನು ಬೇರೆಯವರಿಗೆ ವಹಿಸಿಕೊಟ್ಟು ತಾನು ಪೂಜಾ ನಿರತಳಾದಳು. ಅದನ್ನು ಬಿಟ್ಟರೆ ಪುರಾಣ ಪಠಣ. ತನ್ಮೂಲಕ ಲೋಕ ಮೋಹ, ಲೋಕ ಶೋಕ ಎಲ್ಲವನ್ನೂ ಮರೆಯುತ್ತಾ ಬಂದಳು.

ಅವಳು ಶೀಲ, ಸದ್ಗುಣ, ಚಾರಿತ್ರ್ಯ, ದಾನಗುಣ ಮೊದಲಾದವುಗಳಲ್ಲಿ ಆದಿನಾಥನ ತಾಯಿ ಮರುದೇವಿ, ಶಂಭವನಾಥನ ತಾಯಿ ಸುಷೇಣೆ, ನೇಮಿನಾಥನ ತಾಯಿ ಶಿವದೇವಿ, ಚಂದ್ರನಾಥನ ತಾಯಿ ಲಕ್ಷ್ಮಣೆ, ಅಜಿತನಾಥನ ತಾಯಿ ಮಹಾವಿಜಯಸೇನೆ ಇವರನ್ನು ಹೋಲುತ್ತಿದ್ದಳು. ಅಂತೆಯೇ ಶ್ರೇಷ್ಠತೆಯಲ್ಲಿ ಪಾರ್ಶ್ವನಾಥ ತೀರ್ಥಂಕರನ ಸಾನಿಧ್ಯದಲ್ಲಿರುವ ಘಟಾಂತಿಕೆ ಅರ್ಥಾತ್ ಪದ್ಮಾವತೀ ಯಕ್ಷಿಗೆ ಸಮಾನಳಾಗಿದ್ದಳು. ಇವಳು ಸಂಸಾರಿಯಾದರೂ ಗೃಹತಪಸ್ವಿನಿಯಾಗಿ, ಶ್ರುತ ಶ್ರಾವಕಿಯಾಗಿ, ಬದುಕು ಮಾಡಿದ ಅನ್ಯಾದೃಶ ತೇಜಸ್ವಿನಿಯಾಗಿದ್ದಳು. ಅಷ್ಟೇ ಅಲ್ಲ,

ಬಿಳಿಯರಳೆಯಂತೆ, ಗಂಗಾ
ಜಳದಂತೆಸೆವಜಿತಸೇನಮುನಿಪತ್ತಿಯ ಗುಣಾ
ವಳಿಯಂತೆ ನೆಗಳ್ದ ಕೊಪಣಾ
ಚಳದಂತೆ ಪವಿತ್ರಮತ್ತಿಮಬ್ಬೆಯ ಚರಿತಂ

ಈ ರೀತಿಯ ಶುದ್ಧ ಸತ್ವಕ್ಕೆ ಸಾಕ್ಷಿಯಾದ ಧವಳ ಚಾರಿತ್ರೆ ಅತ್ತಿಮಬ್ಬೆ ಸಂಪೂರ್ಣವಾಗಿ ಅಹರ್ನಿಶೆಗಳನ್ನು ಅರ್ಹಂತನ ಪುಣ್ಯಸ್ಮರಣೆಗಾಗಿ ಮೀಸಲಿಟ್ಟಳು.

ಔ

ಅತ್ತಿಮಬ್ಬೆಯ ಮನೆ ಅತ್ಯಂತ ಪವಿತ್ರವಾದ ಜಿನಾಧಿವಾಸರೆ (ಬಸದಿ) ಆಯಿತು. ದಿನ ನಿತ್ಯವೂ ಶ್ರಾವಕಿಯರು, ಕಂತಿಯರು ಚಾರಣರು, ಸವಣರು ಭವ್ಯರು, ಕವಿ ಕಲಾವಿದರು ಗಮಕಿ ಗಂಧರ್ವರು ನೂರಾರು ಸಾವಿರಾರು ಜನ ಕರ್ಮಕ್ಷತಿಗಾಗಿ, ಆತ್ಮಜ್ಞಾನಾರ್ಥಿಗಳಾಗಿ ತಾಯಿಯ ಬಳಿ ಬರತೊಡಗಿದರು. ಅಬ್ಬೆ ನಿಜಕ್ಕೂ ಎಲ್ಲರಿಗೂ ಅಬ್ಬೆ ಆದಳು. ಅವಳೂ ಸಹ ನಿತ್ಯಾರ್ಚನೆ, ಧ್ಯಾನ ನಿಯಮ ಸ್ಯಾದ್ವಾದ ಕ್ರಿಯೆಗಳಲ್ಲಿ ತೊಡಗಿಸಿಕೊಂಡಳು. ಆತ್ಮಬಲ ವೃದ್ಧಿಗೊಂಡಿತು. ಔನ್ನತ್ಯದ ಕಡೆಗೆ ಅವಳಾತ್ಮವನ್ನು ಸೆಳೆಯತೊಡಗಿತು.

ಪ್ರತಿದಿನ ಸಂಜೆ ಅವಳ ಮನೆಯಂಗಳದಲ್ಲಿ ಸಾವಿರಾರು ಜನ ನೆರೆಯುತ್ತಿದ್ದರು. ಕಾರಣ ಪ್ರತಿದಿನವೂ ಪುರಾಣ, ಕಾವ್ಯ ಪಠಣ ಕಾರ್ಯಕ್ರಮವಿರುತ್ತಿತ್ತು. ಮೊದಲು ನಾಂದಿ ಹಾಡಿದವರು ಅವಳ ಬಾಲ್ಯದಲ್ಲಿ ಪುಂಗನೂರಿನಲ್ಲಿ ವಿದ್ಯಾಗುರುಗಳಾಗಿದ್ದ ಯಾಪನೀಯ ಗೋತ್ರದ ಜಿನಚಂದ್ರರು. ಇವರು ಪ್ರಾಚೀನನಾದ ಅಸಗ ಕವಿಯ ಸಂಸ್ಕೃತ ಮತ್ತು ಕನ್ನಡ ಶಾಂತೀಶ್ವರ ಪುರಾಣಗಳನ್ನು ಸಂಸ್ಕೃತದ ವರ್ಧಮಾನ ಪುರಾಣವನ್ನು ಓದಿ ವ್ಯಾಖ್ಯಾನಿಸಿದರು. ಅದು ಮುಗಿಯಲು ವರ್ಷಗಳೇ ಬೇಕಾದವು. ಅನಂತರ ತಾನು ಪೊಟ್ಟಳಗೆರೆಯಲ್ಲಿ ಚಮೂಪತಿಯ ಸತಿಯಾಗಿದ್ದಾಗ ಜಿನಧರ್ಮ ಬೋಧಕ ದೀಕ್ಷಾಗುರುಗಳೆನಿಸಿದ ಅಜಿತಸೇನಾಚಾರ್ಯರು ಅಸಗನಷ್ಟೇ ಪ್ರಾಚೀನರಾದ ಗುಣನಂದಿಯ ಕಾವ್ಯ ಪಠಣ ಮಾಡಿದರು. ತದನಂತರ ಸೂರಸ್ತಗಣದ ಕಾಣೂರ್ಗಣ ಕೌರೂರುಗಚ್ಛದ ಅರ್ಹನಂದಿ ಆಚಾರ್ಯರ ಸರದಿ ಬಂತು. ಇವರು ಸಹ ಅತ್ತಿಮಬ್ಬೆಯ ಆಧ್ಯಾತ್ಮ ಗುರುಗಳು. ಒಂದರ್ಥದಲ್ಲಿ ಮೋಕ್ಷ ಗುರುಗಳು. ಅಬ್ಬೆಯ ಅಪರ ವಯಸ್ಸಿನಲ್ಲಿ ಆತ್ಮಶಿಕ್ಷಣವನ್ನಿತ್ತ ಮಹಾನುಭಾವರು. ಪಂಪ ಪೂರ್ವದ ಪ್ರಸಿದ್ಧ ಕವಿ. ಇಹಕ್ಕೊಂದು ಪರಕ್ಕೊಂದು ಎಂದು ವಿಭಜಿಸಿಕೊಂಡು ಶೂದ್ರಕ ಎಂಬ ಲೌಕಿಕ ಕಾವ್ಯವನ್ನೂ, ಹರಿವಂಶ ಎಂಬ ಆಗಮಿಕ ಕಾವ್ಯವನ್ನು ರಚಿಸಿದ ಗುಣವರ್ಮನ ಹರಿವಂಶ ಪುರಾಣವನ್ನು ಪಠಣ ಮಾಡಿದರು. ಅವರ ವ್ಯಾಖ್ಯಾನ ಶುಷ್ಕವಾಗಿರದೆ ರಸಭರಿತವಾ ಗಿದ್ದುದರ ಪರಿಣಾಮವಾಗಿ ಆ ಕಾವ್ಯದ ನೇಮಿಜಿನೇಶನ ಬದುಕಿನ ದಿವ್ಯತೆ ಭವ್ಯತೆಗಳು ಎಲ್ಲರ ಹೃದಯಗಳಲ್ಲೂ ನೆಲೆ ನಿಂತವು.

ಅತ್ತಿಮಬ್ಬೆಗೆ ಶ್ರವಣಬೆಳಗೊಳದ ಪ್ರವಾಸ ಸಂದರ್ಭದಲ್ಲಿ ಓರ್ವ ಮಹಾಮುನಿಗಳ ಮತ್ತು ಕವಿಯೊಬ್ಬನ ಪರಿಚಯವಾ ಗಿತ್ತು. ಪರಿಚಯಿಸಿದ್ದವರು ಗಂಗ ದಂಡಾಧೀಶ ಚಾವುಂಡರಾಯರು. ಆ ಗುರುಗಳ ಹೆಸರು ನೇಮಿಚಂದ್ರಾಚಾರ್ಯರು ಎಂದು. ತರುಣ ತೇಜಸ್ವೀ ಕವಿಯ ಹೆಸರು ರನ್ನಮಯ್ಯ ಎಂದು. ಆಚಾರ್ಯರು ಶಿವಕೋಟ್ಯಾಚಾರ್ಯರ ವಡ್ಡಾರಾಧನೆ ಎಂಬ ಗದ್ಯ ಕೃತಿಯನ್ನು ಓದಿ ಅರ್ಥೈಸಿದರು. ಅಂತೆಯೇ ಅಲ್ಲಿ ಬರುವ ಉಪಸರ್ಗ ಕೇವಲಿಗಳ ಕಥೆಗಳ ಮೂಲಕ ಜಿನಧರ್ಮ, ಜಿನದೀಕ್ಷೆ, ಜಿನವ್ರತಗಳತ್ತ ಶ್ರೋತೃಗಳ ಮನಸ್ಸು ಒಲಿಯುವಂತೆ, ದೃಢಗೊಳ್ಳುವಂತೆ ಮಾಡಿದರು. ಅದು ಮುಗಿಯುತ್ತಿದ್ದಂತೆಯೇ ಪಂಪನ 'ಆದಿಪುರಾಣ' ಮಹಾಕಾವ್ಯವನ್ನು ಕೈಗೆತ್ತಿಕೊಂಡರು. ಅಬ್ಬೆಗೆ ಆ ಮಹಾಕೃತಿಯ ಬಗೆಗೆ ಅನನ್ಯ ಪ್ರೀತಿ, ಭಕ್ತಿ. ಓಲೆಕಟ್ಟೆಗೆ ಪೂಜೆ ಯಾಯಿತು. ಅದರ ಪಠಣವೂ ನಿರಂತರ ಸಾಗಿತು. ಪರಿನಿಷ್ಕ್ರಮಣ ಕಲ್ಯಾಣ ಸಂದರ್ಭದಲ್ಲಿ ನರ್ತಕಿ ನೀಲಾಂಜನೆ ಆಯುಸ್ಸು ಮುಗಿದು ರಂಗದ ಮೇಲೆ ನರ್ತಿಸುತ್ತಲೇ ಕರಗಿ ಹೋದದ್ದು. ಅದರಿಂದ ಪುರುದೇವನಲ್ಲಿ ಮೂಡಿದ ವೈರಾಗ್ಯ ಭಾವದ ವರ್ಣನೆ ಅಬ್ಬೆಗೆ ತುಂಬಾ ಹಿಡಿಸಿದವು. ಕೇಳುತ್ತಾ ಕೇಳುತ್ತಾ ಅವಳ ಕಣ್ಣುಗಳಲ್ಲಿ ನೀರು ಧಾರಾಕಾರವಾಗಿ ಹರಿಯತೊಡಗಿತು.

ಇಂತಹ ನಿತ್ಯ ಸಾಹಿತ್ಯಾರಾಧನೆ, ದಾನಧರ್ಮಾಚರಣೆ ಇವುಗಳಿಂದ ಪ್ರಭಾವಿತರಾದ ಜನ ಹೊಗಳಿದರು –

ಅಕಳಂಕ ಚರಿತೆ ಜಿನಚರ

ಣಕಂಜಕಿಂಜಲಪುಂಜ ರಂಜಿತ ತನು ಸ

ರ್ವಕಳಾವಿದೆ ಶೌಚಿ ಘಟಾಂ

ತಿಕೆ ದಾನ ವಿನೋದೆಯೆಂಬ ಬಿರುದಿಂ ನೆಗಳ್ದಳ್

ಎಂದು. ಇಂತಹ ದಾನವಿನೋದೆ, ದಾನ ಚಿಂತಾಮಣಿ ಮೊದಲಾದ ಬಿರುದುಗಳು ಅತ್ತಿಮಬ್ಬೆಯನ್ನು ಬಂದು ಸೇರಿದವು. ಅವು ಹಣ ಕೊಟ್ಟು ಕೊಂಡವಲ್ಲ. ಅವಳ ಔದಾರ್ಯಕ್ಕೆ ಆಸ್ತಿಕತೆಗೆ ಜನರಿತ್ತ ಗೌರವ, ಮರ್ಯಾದೆಯ ರೂಪದವು. ದೀನದಲಿತರಿಗೆ ಬಡಬಗ್ಗರಿಗೆ ಅನ್ನದಾನ ವಸ್ತ್ರದಾನ ಕೊಟ್ಟಳು. ಕವಿ ಕಲಾವಿದರನ್ನು ಪ್ರೋತ್ಸಾಹಿಸಿದಳು. ಅವಳ ತಂದೆ

ಮಲ್ಲಪ್ಪಯ್ಯ ಮತ್ತು ಚಿಕ್ಕ ತಂದೆ ಪೊನ್ನಮಯ್ಯರು ಪ್ರಸಿದ್ಧ ಕವಿ ಪೊನ್ನನಿಂದ ಶಂತಿಪುರಾಣ ಬರೆಸಿ ಪ್ರಸಿದ್ಧರಿದ್ದರು. ಅದರ ಒಂದು ಸಹಸ್ರ ಪ್ರತಿಗ ಳನ್ನು ಮಾಡಿಸಿ ಶಾಸ್ತ್ರ (ಗ್ರಂಥ)ದಾನ ಮಾಡಲು ಯೋಚಿಸಿದಳು ಅತ್ತಿಮಬ್ಬೆ. ಅದಕ್ಕಾಗಿ ಒಂದು ದಿನ ಕವಿವರ್ಯ ಪೊನ್ನಮಯ್ಯ ರನ್ನು ತನ್ನ ಮನೆಗೆ ಆಹ್ವಾನಿಸಿದಳು. ಅವರನ್ನು ಆದರದಿಂದ ಕಂಡು, ಸ್ವಾಗತಿಸಿ ಅವರ ಕೃತಿಗಳ ಬಗೆಗೆ ತನ್ನ ಮೆಚ್ಚುಗೆ ಸೂಚಿಸಿದಳು.

'ಪೊನ್ನಮಾರ್ಯರೆ ತಮ್ಮ 'ಜಿನಾಕ್ಷರಮಾಲೆ' ನನ್ನ ನಿತ್ಯ ಪ್ರಾರ್ಥನೆಯ ಹೊತ್ತಗೆ. ಅದರಲ್ಲಿನ ಮೂವತ್ತೊಂಬತ್ತು ಕನ್ನಡ ಕಂದ ಪದ್ಯಗಳೂ ಸಾಹಿತ್ಯ ಸರಸ್ವತಿಯ ಕೊರಳಿಗೆ ಹಾಕಿದ ಮೂವತ್ತೊಂಬತ್ತು ಮುತ್ತುಗಳ ಸರ. ಅಂತೆಯೇ ತಮ್ಮ ಸಂಸ್ಕೃತದ ಗತಪ್ರತ್ಯಾಗತ, ತಮ್ಮ ಭುವನೈಕರಾಮಾಭ್ಯುದಯ ಮತ್ತು ಶಾಂತಿಪುರಾಣಗಳು ನಿಜಕ್ಕೂ ನನಗೆ ಹರ್ಷ ತಂದಿವೆ. ಒಂದು ಲೌಕಿಕ ಮತ್ತೊಂದು ಪಾರಮಾರ್ಥ.

'ಅಂತಹ ವಿನ್ಯಾಸಕ್ಕೆ ನಮ್ಮ ಪೂರ್ವಜರಾದ ಕರ್ಣಾಟೇಶ್ವರ ಕಥಾ ಎಂಬ ಲೌಕಿಕ ಕಾವ್ಯ ಮತ್ತು ಹರಿವಂಶವೆಂಬ ಅಲೌ ಕಿಕ ಕಾವ್ಯವಿತ್ತ ಶ್ರೀ ವಿಜಯಕವೀಶ್ವರರು ಗುಣವರ್ಮರು. ವಿಕ್ರಮಾರ್ಜುನವಿಜಯ ಎಂಬ ಲೌಕಿಕ ಕುರಿತ, ಆದಿಪುರಾಣವೆಂಬ ಅಲೌಕಿಕ ಅಸ್ಥಾಪನೆಗೆ ಮೀಸಲಾದ ಕೃತಿಗಳು ನನಗೆ ಮಾರ್ಗದರ್ಶಿಗಳು ಆದಿಪುರುಷರು ತಾಯಿ. ಅವರು ತಮ್ಮ ಪ್ರಧಾತೃ ಗಂಗ ರಸರನ್ನು ಕಥಾನಾಯಕರನ್ನಾಗಿಸಿ ಮಾಡಿಕೊಂಡು ಶೂದ್ರಕ ಎಂಬ ಲೌಕಿಕ ಕಾವ್ಯವನ್ನೂ, ನೇಮಿಜಿನೇಶನ ಭವ್ಯೇತಿಹಾಸವನ್ನು ಬಿತ್ತರಿಸುವ ಸಲುವಾಗಿ ಹರಿವಂಶ ಎಂಬ ಆಗಮಿಕ ಕಾವ್ಯವನ್ನೂ ರಚಿಸಿಕೊಟ್ಟರು. ಆ ಹಾದಿಯಲ್ಲಿ ಯಶಸ್ವಿಯಾಗಿ ಶ್ರಮಿಸಿದರು. ತಮಗೆ ಗೊತ್ತಿದೆ ನಮ್ಮ ಪಂಪ ಮಹಾಕವಿಗಳು ಅವರ ವಿಕ್ರಮಾರ್ಜುನ ವಿಜಯ ಲೌಕಿಕ ಕಾವ್ಯವಾದರೆ ಆದಿಪುರಾಣ ಅಲೌಕಿಕ ಆಚಾರ್ಯ ಕೃತಿ. ಅವರು ಹೇಳಿದ 'ಬೆಳಗುವೆನಿಲ್ಲಿ ಲೌಕಿಕಮನ್ ಅಲ್ಲಿ ಜಿನಾಗಮಮ್ !' ಎಂಬ ನುಡಿಯ ಆದರ್ಶ ನನ್ನ ಕಣ್ಣ ಮುಂದಿದ್ದುದರಿಂದ ನಾನೂ ಸಹ ನನ್ನಾಶ್ರಯದಾತರಾದ ರಾಷ್ಟ್ರಕೂಟ ಕೃಷ್ಣರನ್ನು ಕಥಾನಾಯಕರನ್ನಾಗಿ ಮಾಡಿಕೊಂಡು, ಶ್ರೀ ರಾಮರೊಡನೆ ಸಮೀಕರಿಸಿ ರಾಮನ ಕಥೆಯನ್ನು ಕನ್ನಡದಲ್ಲಿ ಮರುಹಟ್ಟು ಪಡೆದಂತೆ ಮಾಡಿದ್ದೇನೆ. ಹದಿನಾರನೆಯ ತೀರ್ಥಂ ಕರರಾದ ಶಾಂತಿನಾಥರ ಹನ್ನೊಂದು ಭವಗಳು, ಐದು ಕಲ್ಯಾಣಗಳನ್ನೊಳಗೊಂಡ ಪ್ರಸಿದ್ಧ ಪುರಾಣದ ಸಾಹಿತ್ಯ ತೀರ್ಥವನ್ನು ಶಾಂತಿಪುರಾಣದಲ್ಲಿ ನೀಡಿದ್ದೇನೆ.'

'ಇವೆರಡರಲ್ಲಿ ತಮಗೆ ತೃಪ್ತಿ ತಂದ ಕೃತಿ ಯಾವುದು ?'

'ತಾಯಿ, ಕಾವ್ಯ ಎನ್ನುವುದು ಒಂದು ಬಗೆಯ ಸ್ವಾಹಾರಾಧನೆ ! ಆತ್ಮಸಂತೋಷಕ್ಕೊ, ಆತ್ಮಾನಂದಕ್ಕೊ, ಇಲ್ಲವೇ ಆತ್ಮಕಲ್ಯಾಣಕ್ಕೊ ಬರೆದುಕೊಳ್ಳುತ್ತಾನೆ ಕವಿ. ಅದು ಧಾರ್ಮಿಕ ವಸ್ತುವನ್ನಾಧರಿಸಿದ ಗ್ರಂಥವಾದರೆ ಮುಗಿದೇ ಹೋಯಿತು. ಅಂತಹ ಪ್ರಾಂಜ್ವಲ ಪಾರಾಯಣ ಕೃತಿ ನನ್ನ ಶಾಂತಿಪುರಾಣ ನನ್ನ ಪಾಲಿಗೆ.'

'ತಮಗಷ್ಟೇ ಏಕೆ ? ಎಲ್ಲ ಭವ್ಯರಿಗೂ ಅದು ಪೂಜ್ಯ ಹಾಗೂ ಜಿನಧರ್ಮದ ಪ್ರಮಾಣ ಗ್ರಂಥ.'

'ಇದು ನನ್ನ ದೃಷ್ಟಿಯಲ್ಲಿ 'ಪುರಾಣ ಚೂಡಾಮಣಿ'. ಭುವನೈಕ ರಾಮಾಭ್ಯುದಯವು ನನಗೆ ಕವಿ ಚಕ್ರವರ್ತಿ ಬಿರುದನ್ನು ದಯಪಾಲಿಸಿದ್ದರೆ, ಶಾಂತೀಶ್ವರ ಪುರಾಣವು 'ಕುರುಳ್ಗಳ ಸವಣ' ಎಂಬ ಖ್ಯಾತಿಯನ್ನು ತಂದುಕೊಟ್ಟಿದೆ. ತಾಯಿ, ಭುವನೈಕ ರಾಮಾಭ್ಯುದಯ ನನ್ನ ಜೀವಧ್ವನಿ, ಶಾಂತಿಪುರಾಣ ನನ್ನ ಪಾಲಿಗೆ ದೈನಧ್ವನಿ !' ಈ ಕಾವ್ಯ ಗುರುಜಿನಚಂದ್ರಮುನೀಂದ್ರರ ಕೃಪಾಶೀರ್ವಾದದ ಫಲ. ನನಗೂ ನಿಮ್ಮ ತಂದೆ ಮಲ್ಲಪ್ಪಯ್ಯ ಮತ್ತು ಚಿಕ್ಕಪ್ಪ ಪುನ್ನಮಯ್ಯರಿಗೂ ಚಿಕ್ಕಂದಿನಿಂದಲೂ ಸ್ನೇಹ. ನಾವು ಮೂವರೂ ಶ್ರೀ ಗುರುಜಿನಚಂದ್ರಮುನೀಂದ್ರರ ಸಾನಿಧ್ಯದಲ್ಲಿ ಕಲಿತ ಶಿಷ್ಯರು. ತಮ್ಮ ಬಾಲ್ಯದಲ್ಲಿ ತಮಗೂ ಅವರೇ ಗುರುಗಳಾಗಿದ್ದರು.'

'ಅಹುದಹುದು. ಅವರು ಮಹಾನುಭಾವರು. ಅಂತಹ ಮಹಾತ್ಮರನ್ನು ಕಾಣುವುದೇ ಭಾಗ್ಯ. ಶಿಕ್ಷಣ ಪಡೆದರೆ ಕೇಳಬೇಕೆ?'

'ಅಕ್ಷರಶಃ ಸತ್ಯ ತಾಯಿ. ಗುರುಗಳ ಆದೇಶ ನಿಮ್ಮ ತಂದೆಗಳ ಪ್ರೇರಣೆ ಈ ಕೃತಿ ರಚನೆಗೆ ಕಾರಣ.'

'ತುಂಬಾ ಸಂತೋಷ. ಈಗ ಶಾಂತಿಪುರಾಣದ ಕೃತಿಗಳು ಹೆಚ್ಚಾಗಿಲ್ಲ ಎಂದು ತಿಳಿದಿದ್ದೇನೆ. ತಾವು ಸಮ್ಮತಿಸುವುದಾದರೆ ನಮ್ಮ ಪೂಜ್ಯ ತೀರ್ಥರೂಪುಗಳವರು ಆರಂಭಿಸಿದ ಮಣಿಹವನ್ನು ನಾನು ಮುಂದಿವರಿಸಬೇಕೆಂದಿದ್ದೇನೆ. ಅಂದರೆ ತಮ್ಮ ಶಾಂತೀ ಶ್ವರ ಪುರಾಣವನ್ನು ಸಹಸ್ರ ಪ್ರತಿ ಮಾಡಿಸಿ ಶಾಸ್ತ್ರದಾನ ಮಾಡಬೇಕೆಂದಿದ್ದೇನೆ.'

'ಆನಂದ, ಮಹದಾನಂದ ತಾಯಿ, ಇದು ಕನ್ನಡಿಗರ ಪುಣ್ಯ. ನನ್ನ ಭಾಗ್ಯ. ಜಿನಧರ್ಮದ ಭಾಗ್ಯೋದಯ. ತಮ್ಮಿಚ್ಛೆ ಯಂತೆ ಆ ಪುಣ್ಯಕೃತಿ ಬಹುಬೇಗ ಎಲ್ಲ ಭವ್ಯರ ಕೈಸೇರುವಂತಾಗಲಿ.'

ಅಬ್ಬೆಯ ಆಸೆ ಎಂಬ ವೃಕ್ಷ ಚಿಗುರಿ ಚೆಲುವಾಯಿತು. ಅವಳ ಕರೆಗೆ ಓಗೊಟ್ಟು ನೂರಾರು ಜನ ಲಿಪಿಕಾರರು ಲೊಕ್ಕಿಗುಂಡಿಗೆ ಬರತೊಡಗಿದರು. ಅಬ್ಬೆ ತನ್ನರಮನೆಯಲ್ಲೇ ಎಲ್ಲರಿಗೂ ಊಟ ವಸತಿ ಏರ್ಪಡಿಸಿ ಶಾಂತಿಪುರಾಣವನ್ನು ಒಂದು ಸಾವಿರ ಸಂಖ್ಯೆಯಷ್ಟು ಪ್ರತಿ ಮಾಡಿಸಿದಳು. ಒಲೆಗರಿಯ ಕಟ್ಟುಗಳು ರಾಶಿ ರಾಶಿ ಬಿದ್ದವು. ಅವುಗಳನ್ನು ಭವ್ಯರಿಗೆ ದಾನವೀಯಲು ಒಂದು ವಿಶೇಷ ಕಾರ್ಯಕ್ರಮವನ್ನು ಏರ್ಪಡಿಸಿದಳು. ಅಂದು ಪ್ರತಿಯೊಬ್ಬನಿಗೂ ಒಂದೊಂದು ಕೃತಿ, ಒಂದು ಹೊನ್ನು ಮತ್ತು ಒಂದೊಂದು ಜಿನಪ್ರತಿಮೆಯನ್ನು ದಾನಕೊಟ್ಟಳು. ಜಿನಬಿಂಬ ವಿಶೇಷ ರೀತಿಯದು. ಪ್ರತಿಯೊಂದಕ್ಕೂ ಒಂದೊಂದು ಮಂದಾಸನ, ಪ್ರತಿ ಮಂದಾಸನಕ್ಕೂ ಬೆಳ್ಳಿಯ ಕಟ್ಟು, ಪೂಜಾ ವೇಳೆಯಲ್ಲಿ ಬಾಜಿಸಲು ಒಂದೊಂದು ಜಯಘಂಟೆ ಇವುಗಳನ್ನೊಳಗೊಂಡಿತ್ತು.

ಇಂತಹ 'ಶಾಸ್ತ್ರದಾನ' ಮಹೋತ್ಸವ ಒಂದು ವಾರದವರೆಗೆ ನಡೆದು ಲೊಕ್ಕಿಗುಂಡಿಗೆ ವಿಶೇಷ ಸಂಭ್ರಮ ನೀಡಿತ್ತು. ದಾನ ದಕ್ಷಿಣೆ ಪಡೆದ ಶ್ರೀಸಾಮಾನ್ಯರೂ ದಾನವಿನೋದೆ ಅತ್ತಿಮಬ್ಬೆಯನ್ನು ಬಾಯಿತುಂಬ ಹೊಗಳುವವರೆ. 'ಈ ತಾಯಿ ನಮ್ಮ ಕಾಲದಲ್ಲಿರುವ ಜೈನ ಸಮಾಜದ ಆಧಾರಸ್ತಂಭರಾದ ಅಣ್ಣ ಭೂತುಗ, ಪುಣಸೆಯ ಮರುಳ, ನೊಳಂಬಾಂತಕ ಮಾರಸಿಂಹ, ಭುವನೈಕ ರಾಮನೆಂಬ ಬಿರುದು ಪಡೆದಿರುವ ಸುಂದರ ಸ್ಫುರದ್ರೂಪಿ ಶಂಕರಗಂಡ, ಶ್ರವಣಬೆಳಗೊಳದ ಇಂದ್ರಗಿರಿಯಲ್ಲಿ ಬಾಹುಬಲಿ ಸ್ವಾಮಿಯನ್ನು ರೂಪಿಸಿ ಸಂಸ್ಥಾಪಿಸಿದ ಗಂಗದಂಡಾಧೀಶ ಚಾವುಂಡರಾಯ ಇವರೆಲ್ಲರಿಗೂ ಮಿಗಿಲಾದವಳಾಗಿದ್ದಾಳೆ ದಾನದಲ್ಲಿ, ಧರ್ಮಪರಿಪಾಲನೆ ಪ್ರಚಾರಗಳಲ್ಲಿ' ಎಂದು ಹೊಗಳಿತು.

ಮತ್ತೆ ಕೆಲವರು,"ಈ ಅಬ್ಬೆ, ಸಾಮಾನ್ಯ ಮನುಷ್ಯಳಲ್ಲಪ್ಪಾ, ಸಾಕ್ಷಾತ್ ದೇವತೆ. ಶ್ರವಣಬೆಳಗೊಳದಲ್ಲಿ ಉನ್ನತ ಕುಕ್ಕುಟೇಶ್ವರನನ್ನು ಕಾಣುವವರೆಗೂ ಆಹಾರ ತೊರೆದು ನಡೆದಳು. ಪಾಪ ! ದೊಡ್ಡ ಬೆಟ್ಟ ಹತ್ತುವಾಗ ತುಂಬಾ ಆಯಾಸದಿಂದ ಕುಸಿದಳಂತೆ! ಆಗ ಅವಳ ಬಳಲಿಕೆ ನೀಗುವುದಕ್ಕಾಗಿ ದೇವೇಂದ್ರ ಅಕಾಲ ವೃಷ್ಟಿ ಮಾಡಿದನಂತೆ !'

'ಹೌದು, ಒಂದು ದಿನ, ಅರಸನ ಪಟ್ಟದಾನೆಗೆ ಮದವೇರಿ ರಾಜಬೀದಿಯಲ್ಲಿ ನುಗ್ಗಿ, ಸಿಕ್ಕಿದ್ದನ್ನು ಸೊಂಡಿಲಿನಿಂದ ಸೆಳೆದು ಕಿತ್ತು ಮೇಲೆಸೆದು ಕಾಲಲ್ಲಿ ಒಸಗಿ ಹಾಕಿಕೊಂಡು ಬಂತಂತೆ. ತಾಯಿ ಅದರೆದುರು ಧೈರ್ಯದಿಂದ ನಿಂತು 'ಗಜರಾಜ ಶಾಂತನಾಗಪ್ಪಾ' ಅಂದ ಕೂಡಲೇ ಮದ ಕಳೆದುಕೊಂಡು ಅಬ್ಬೆಯವರ ಕಾಲಿಗೆರಗಿತಂತೆ !'

'ಹೌದು. ಕೇಳಿ ಮತ್ತೊಂದು ಘಟನೇನಾ ! ಒಮ್ಮೆ ಚಕ್ರವರ್ತಿಗಳ ಆದೇಶದಂತೆ ಅಬ್ಬೆ ತಮ್ಮ ತಲೆಯ ಮೇಲೆ ಜಿನಬಿಂಬ ಹೊತ್ತು ಗೋದಾವರಿ ನದಿ ಪ್ರವೇಶಿಸಿದಾಗ, ಗಂಗೆ ಹಾದಿ ಬಿಟ್ಟಳಂತೆ !'

'ಮತ್ತೊಂದು ಬಾರಿ ಏನಾಯ್ತು ಗೊತ್ತಾ. ತಾಯಿ ನರ್ಮದಾ ನದಿ ದಾಟುವಾಗ ಅವರ ನೆತ್ತಿಯ ಮೇಲಿದ್ದ ಜಿನಬಿಂಬ ನೀರಿನಲ್ಲಿ ಜಾರಿ ಬಿದ್ದು ಹೋಯಿತು. ಅಬ್ಬೆ ಅಲ್ಲೇ ನಿಂತು, ಆ ಜಿನಬಿಂಬ ತಾನೇ ಬಂದು ತನ್ನ ನೆತ್ತಿಯನ್ನೇರುವವರೆಗೂ ಆ ಸ್ಥಳದಿಂದ ಅಗಲುವುದಿಲ್ಲ ಎಂದು ನಿಂತರಂತೆ. ಜಿನಸ್ವಾಮಿ ತಾನೇ ಭಕ್ತಿಗೆ ಸೋತು ಬಂದು ಅವರ ನೆತ್ತಿಯ ಮೇಲೆ ಎಂದಿನಂತೆ ಸ್ಥಿತನಾದನಂತೆ !'

ಹಾಗಂತೆ ಹೀಗಂತೆ ಎಂಬ ಅಂತೆಕಂತೆಗಳ ಪವಾಡಗಳೂ ಅವಳ ವ್ಯಕ್ತಿತ್ವದ ಸುತ್ತೂ ಬೆಳೆದುಕೊಂಡವು. ಆದರೆ ಆಕೆ ಇದೆಲ್ಲಕ್ಕೂ ಅತೀತಳಾಗಿದ್ದಳು. ಹೊಗಳಿಕೆ ತೆಗಳಿಕೆಗಳಿಗೆ ಅವಳ ಕಿವಿಗಳು ಮುಚ್ಚಿದ್ದವು. ಅವಳಿಗಿದ್ದ ಬಾಳಿನ ಗುರಿ ಒಂದೇ. ಜಿನ ಧರ್ಮ ಪ್ರಕಾಶನಕ್ಕೆ ಒಂದು ಚೈತ್ಯಾಲಯವನ್ನು ನಿರ್ಮಿಸಬೇಕು ಎಂಬುದು.  ಅವಳ ಸಂಕಲ್ಪವೂ ಕಾರ್ಯರೂಪಕ್ಕೆ ಬಂದಿತು. ತನ್ನ ನಿವಾಸದ ಪಕ್ಕದಲ್ಲೇ ಆದಿನಾಥನ ಮಹಾಧೀವಾಸವನ್ನು ನಿರ್ಮಿಸತೊಡಗಿದಳು. ಶ್ರೇಷ್ಠ ಸ್ಥಪತಿಗಳು, ಸಹಸ್ರೋಪ ಸಹಸ್ರ ಶಿಲ್ಪಿಗಳು, ರೂವಾರಿಗಳು, ಕಲ್ಲುಕುಟಿಗರು, ವಡ್ಡರು, ಕಾಮಗಾರಿಗಳು, ನಿಯೋಜಿತರಾದರು. ಜಿನಾಲಯ ನಿರ್ಮಾಣ ಕೆಲಸ ಭರದಿಂದ ಸಾಗತೊಡಗಿತು. ಅಬ್ಬೆ, ಆದಿತೀರ್ಥಂಕರ ಜಿನಾಲಯದ ಸುತ್ತ ಪಾರ್ಶ್ವನಾಥ ಪದ್ಮಾವತಿ ಹಾಗೂ ಇತರ ಅರ್ಹಂತ ಪ್ರತಿಬದ್ಧ ದೇವಾಲಯಗಳನ್ನು ನಿರ್ಮಿಸಲು ಆದೇಶವಿತ್ತಳು. ಇವೆಲ್ಲ ಕಾರ್ಯಗಳನ್ನೂ ಕಂಡ ಜನ ಅವಳನ್ನು ವೈಭವೀಕರಿಸಿ ಹೇಳುತ್ತಿತ್ತು – ಜಿನತೀರ್ಥಂಕರರ ಪಂಚಕಲ್ಯಾಣಗಳನ್ನು ನೆರವೇರಿಸುವಲ್ಲಿ ತೋರುವ ಭಯಭಕ್ತಿಗಳನ್ನು ದೇವೇಂದ್ರನು ಅತ್ತಿಮಬ್ಬೆಯ ಬಗೆಗೆ ವ್ಯಕ್ತಪಡಿಸುತ್ತಿದ್ದನು ಎಂದು. ಅಂತೆಯೇ –

ಗುಣದ ಕಣಿ ದಾನ ಚಿಂತಾ
ಮಣಿ ವಿಮಳ ಚರಿತ್ರೆ ಜೈನ ಶಾಸನ ರಕ್ಷಾ

ಮಣಿ ಸಜ್ಜನೈಕ ಚೂಡಾ
ಮಣಿಯೆಂದತ್ತಿಮಬ್ಬೆಯಂ ಪೊಗಳದರಾರ್

ಎಂದು ಒಂದು ಸವಾಲನ್ನು ಕೂಡ ಹಾಕಿತು.

೬

ಸ್ವಸ್ತಿ,

ಸಮಸ್ತ ಭುವನಾಶ್ರಯ ಶ್ರೀ ಪೃಥ್ವೀ ವಲ್ಲಭ ಮಹಾರಾಜಾಧಿರಾಜ ರಾಜ ಪರಮೇಶ್ವರ ಪರಮ ಭಟ್ಟಾರಕ ಶ್ರೀ ಸತ್ಯಾಶ್ರಯ ಕುಳ ತಿಳಕ ಚಳುಕ್ಯಾಭರಣ ಶ್ರೀಮದಾಹವಮಲ್ಲದೇವರ ರಾಜ್ಯಮುತ್ತರೋತ್ತರಾಭಿವೃದ್ಧಿ ಪ್ರವರ್ಧಮಾನಂ ಆಚಂದ್ರರ್ಕತಾರಾಂಬರಂ ಸಲ್ಲುತಮಿರೆ -

ಸಮಸ್ತ ಪೃಥ್ವೀ ವಿಸ್ತಾರಿತ ಭವ್ಯರ್ಕರುಗಳೊಳ್ –

ಜಿನಪದ ಭಕ್ತೆ, ಜಿನ ಧರ್ಮಪತಾಕೆ, ಜಿನಧರ್ಮ ದೀಪಿಕೆ, ಜಿನಧರ್ಮ ವಿಭೂತಿ ವಿರಾಜಿತೆ, ದಾನವಿನೋದೆ, ದಾನಚಿಂತಾಮಣಿ, ದಾನ ಗುಣೈಕಾಂಬುಧಿ, ಭವ್ಯ ಮನೋರಥ ಜನ್ಮ ಭೂಮಿ, ಕವಿವರ ಕಾಮಧೇನು, ಮಹಾಸತೀ ಕುಲತಿಲಕೆ, ರತ್ನ ತ್ರಯಾಲಂಕೃತೆ, ದರ್ಶನ ವಿಶುದ್ಧೆ, ಬುಧಜನ ವಂದಿತೆ, ಚಕ್ರವರ್ತಿ ಪೂಜಿತೆ, ಜಿನಶಾಸನ ರುಚಿ, ಅಸನ್ನಭವ್ಯೆ -

ಎನಿಸಿ ನೆಗಳ್ದ ಅತ್ತಿಮಬ್ಬೆಯ ತನಯಣ್ಣಿಗದೇವಂ

ವಿನಯದಿಂದಟ್ಟಿದ ಅತ್ಯಾದರದ ಕರೆಯೋಲೆ : ಅಂದೆಂತೆಂದಡೆ –

ಶಕವರ್ಷ ೯೨೯ನೆಯ ಪ್ಲವಂಗನಾಮ ಸಂವತ್ಸರದ ನಂದೀಶ್ವರಾಷ್ಟಮಿಯ ಭೃಗುವಾರದಂದು ಲೊಕ್ಕಿಗುಂಡಿ ಮಹಾಪಟ್ಟಣಾಂತದಲ್ಲಿ ಜಗತ್ ಕಲ್ಯಾಣಾರ್ಥವಾಗಿ ನಮ್ಮಯ ಮಾತೃಶ್ರೀಯವರು ಜಿನಾದೇಶದಂತೆ ಆದಿತೀರ್ಥಂಕರ ಬಸದಿಯಂ ನಿರ್ಮಿಸಿ, ಭವ್ಯಕೋಟಿಗರ್ಪಿಸುವ ಸಂಕಲ್ಪ ಉಳ್ಳವರಾಗಿರುವ ಕಾರಣ ತಾವು ಆ ಶುಭ ದಿನದ ಮಂಗಲ ಮುಹೂರ್ತಕ್ಕೆ ಆಗಮಿಸಿ ಜಗತ್ ಸ್ವಾಮಿಯವರ ಕೃಪಾಶೀರ್ವಾದಂಗಳಿಗೆ ಪಾತ್ರರಾಗಬೇಕೆಂದು ಈ ಮೂಲಕ ವಿನಂತಿಸಿಕೊಳ್ಳುತ್ತಿರುವೆವು.

ಅಬ್ಬೆಯ ಅಣ್ಣಿಗ

ಪತ್ರಿಕೆಗಳು ರಾಜ್ಯದ ಮೂಲೆ ಮೂಲೆಗೂ ಮುಟ್ಟಿದವು. ನಿಗದಿತ ಮುಹೂರ್ತದಂದು ಲೊಕ್ಕಿಗುಂಡಿಗೆ ಜನ ಲಕ್ಷ ಲಕ್ಷ ಸಂಖ್ಯೆಯಲ್ಲಿ ಬಂದು ನೆರೆಯಿತು. ಅಂದು ಇಡೀ ನಗರವೇ ಅಲಂಕೃತವಾಗಿತ್ತು. ಬೀದಿ ಬೀದಿಗಳಲ್ಲಿ ತಳಿರು ತೋರಣಗಳು ಮೆರೆದವು. ಅಲ್ಲಲ್ಲಿ ಹಸಿರುವಾಣಿ ಚಪ್ಪರಗಳು. ಅಡ್ಡತೋರಣ ಮಕರ ತೋರಣಗಳು ಮೆರೆದವು. ಎಲ್ಲ ದೇವಾಲಯಗಳಲ್ಲಿ, ಜಿನಾಲಯಗಳಲ್ಲಿ ವಿಶೇಷ ಪೂಜೆ, ಅತ್ತಿಮಬ್ಬೆಯ ನಿವಾಸದಿಂದ ಹಿಡಿದು ಅವಳು ನಿರ್ಮಿಸಿದ್ದ ಜಿನಾಲಯದವರೆಗೆ ಹಾದಿಯುದ್ದಕ್ಕೂ ಲತಾವಿತಾನ ಹೂದಂಡೆಗಳ ಸರಪಣಿ. ಜಿನಾಲಯದ ಮುಂದೆ ಸುವಿಶಾಲ ಸಭಾಮಂಟಪ. ಅದರ ಕಂಬ ಕಂಬಕ್ಕೂ ಅಲಂಕಾರ. ಮೇಲೆ ಬಣ್ಣ ಬಣ್ಣದ ಪಟ್ಟೆಗಳು, ಹೂ ಕುಚ್ಚಗಳು, ಚೈತ್ಯಾಲಯದ ಒಳಗೆ ಹಾಲು ತುಂಬಿದ ಸಾವಿರ ಕುಂಭಗಳು. ಪಕ್ಕದಲ್ಲಿ ಬಂಡಿಗಟ್ಟಲೆ ಶ್ರೀಗಂಧ ಕರ್ದಮ, ಹಲವು ಹರಿವಾಣಗಳಲ್ಲಿ ಕುಂಕುಮ ಕೇಸರಿ, ರಾಶಿ ರಾಶಿ ಪುಷ್ಪ ಸಂಚಯ ಲಕ್ಷ ದೀಪಗಳಿಂದ ಜಿನಮಂದಿರ ಝಗ ಝಗಿಸುತ್ತಿತ್ತು. ಎಲ್ಲೆಡೆಯೂ ಮಂಗಳವಾದ್ಯಗಳು ಘಂಟಾನಾದ ಇಲ್ಲವೇ ಮಂತ್ರ ಪಠಣ ಕೇಳಿ ಬರುತ್ತಿದ್ದವು.

ಅಂದು ಅರುಣೋದಯದ ವೇಳೆಗೆ ಸರಿಯಾಗಿ ಮಹಾಮಾತೆ ಅತ್ತಿಮಬ್ಬೆಯರು ಆದಿತೀರ್ಥಂಕರ ಪಂಚಮೂರ್ತಿಯನ್ನು ನೆತ್ತಿಯಲ್ಲಿ ಹೊತ್ತು ಹೊರಟರು. ತಮ್ಮ ಗೃಹದಿಂದ ಜಿನಾಲಯದವರೆಗೆ ನಡೆಮುಡಿ ಹಾಸಲಾಗಿತ್ತು. ಹೂವು ಚೆಲ್ಲಿದ ಆ ಹಾದಿ ಯಲ್ಲಿ ಮುಂದೆ ಅಬ್ಬೆಯ ನಾಲ್ವರು ಗುರುಗಳಾದ ಜಿನಚಂದ್ರರು, ಅಜಿತಸೇನರು, ಅರ್ಹನಂದಿಗಳು ಮತ್ತು ನೇಮಿಚಂದ್ರರು ಅವರ ಹಿಂದೆ ಅಬ್ಬೆ ಆಕೆಯ ಬಲಗಡೆ ಚಾಲುಕ್ಯ ಚಕ್ರಾಧೀಶ ಅಹವಮಲ್ಲ, ಎಡಗಡೆ ಅಬ್ಬೆಯ ಏಕಮಾತ್ರ ಪುತ್ರ ಪಡೆವಳತೈಲನೆಂದು ಹೆಸರಾದ ಅಣ್ಣಿಗದೇವ. ಅವರುಗಳ ಹಿಂದೆ ಮಂಗಳದ್ರವ್ಯಗಳನ್ನು ಹಿಡಿದು ನಡೆದ ಸುವಾಸಿನಿಯರ ತಂಡ. ಎಲ್ಲರಿಗೂ ಮುಂದೆ ಪಂಚವಾದ್ಯಗಳು ಮೊಳಗುತ್ತಿದ್ದವು. ಮೆರವಣಿಗೆ ನಿಧಾನವಾಗಿ ಸಾಗಿತು. ಜಿನಾಲಯದ ಪಾವಟಿಗೆಯನ್ನೇರಿದ ಕೂಡಲೆ ಚತುರಾಚಾರ್ಯರ ಪಾದಗಳನ್ನು ಕರ್ಚಿ ಅರ್ಚಿಸಲಾಯಿತು. ಅನಂತರ ಜಿನಮೂರ್ತಿಯೊಂದಿಗೆ ಜಿನಾಲಯ ಪ್ರವೇಶ. ಅಲ್ಲಿ ಮೂಲ ಮೂರ್ತಿಗೆ ಧಾರಾಕಾರವಾಗಿ ಮಹಾ ಮಸ್ತಕಾಭಿಷೇಕ. ಸವಣರ ಶಾಸ್ತ್ರಿಗಳ ಸಿದ್ಧರ

ಉಪಾಧ್ಯಾಯರುಗಳ ಮಂತ್ರ ಪಠಣ, ಜನತೆಯ ಜಯಘೋಷ ಎಲ್ಲವೂ ಮುಗಿಲು ಮುಟ್ಟುತ್ತಿದ್ದವು. ಕುಂಭಗಳನ್ನೆತ್ತಿ ಕ್ಷೀರಾಭಿಷೇಕಗೈದವರೆಲ್ಲರೂ ಪುಷ್ಪಾಂಜಲಿ ಸಮ ರ್ಪಿಸಿ ಜಿನಮೂರ್ತಿಗೆ ನಮಸ್ಕರಿಸಿ ಹೋಗುತ್ತಿದ್ದರು. ಸಾಲು ಸಾಲಾಗಿ ಬಂದ ಭವ್ಯರಮಾಲೆ ಅಂದಿಗೇ ಮುಗಿಯುವುದಿಲ್ಲವೇನೋ ಎಂಬಂತಿತ್ತು. ಅಂತೂ ಸೂರ್ಯ ನೆತ್ತಿ ಬಿಟ್ಟು ನೆಲದೆಡೆಗೆ ವಾಲುವಷ್ಟರಲ್ಲಿ ಅರ್ಚನ ಭೋಜನಗಳು ಮುಗಿದವು.

ಅಬ್ಬೆ ಎಂದಿನ ಪುರಾಣ ಪಠಣಕ್ಕೆ ಧಕ್ಕೆ ತಗಲದಂತೆ ಎಚ್ಚರ ವಹಿಸಿದ್ದಳು. ಅದರಿಂದಾಗಿ ಅಂದು ಅವಳಾಜ್ಞೆಯ ಮೇರೆಗೆ ನೂತನವಾಗಿ ರಚಿಸಿ ತಂದ ತೇಜಸ್ವೀ ತರುಣ ಕವಿ ರನ್ನಮಯ್ಯನ ಅಜಿತ ತೀರ್ಥಂಕರ ಪುರಾಣ ತಿಲಕ ಮಹಾಕಾವ್ಯ ಪಠಣ. ಜಿನಾಲಯದ ಹೊರಗಿನ ವಿಶಾಲ ಮಂಟಪದಲ್ಲಿ ಎಲ್ಲರೂ ಬಂದು ನೆರೆದರು. ಅಬ್ಬೆ ದೇವಲೋಕದಿಂದಿಳಿದು ಬಂದ ಯಕ್ಷ ದೇವತೆಯಂತೆ ಒಂದು ಪೀಠದಲ್ಲಿ ಮಂಡಿಸಿದ್ದಳು. ಎಲ್ಲ ಗುರುಗಳು ಶಿಷ್ಯ ಪ್ರಶಿಷ್ಯರೂ ಉಪಸ್ಥಿತರಿದ್ದರು. ಮುದುವೊಳಲಿನ ಮಹಾಕವಿ ರನ್ನಮಯ್ಯ ಮಂಗಳಾಚರಣವನ್ನು ಹಾಡಿ ಸಕಲ ಭವ್ಯ ಕೋಟಿಯ ಮುಂದೆ ನಿವೇದಿಸಿಕೊಂಡ.

'ಉಪಸ್ಥಿತರಿರುವ ಜಿನಸ್ವರೂಪರೆ, ಇದು ಗುಣಭದ್ರಾಚಾರ್ಯರ ಉತ್ತರ ಪುರಾಣಾಂತರ್ಗತ ಎರಡನೆಯ ತೀರ್ಥಂಕರ ಶ್ರೀ ಅಜಿತ ಸ್ವಾಮಿಯ ಪುಣ್ಯದಾಕೃತಿ. ಇದರ ಕಥಾಭಿತ್ತಿ ತುಂಬ ತೆಳುವಾದ್ದರಿಂದ ವರ್ಣನೆಗೆ ಹೆಚ್ಚು ಮಹತ್ವ ಕೊಟ್ಟಿದ್ದೇನೆ. ಮತ್ತೆ ಜಿನತೀರ್ಥಂಕರ ಕಥೆಯ ಜೊತೆಯಲ್ಲಿ ಓರ್ವ ಚಕ್ರವರ್ತಿಯ ಕಡೆಯೂ ಬರುವುದು ಜೈನ ಪುರಾಣದ ಲಕ್ಷಣವಾದುದರಿಂದ ಎರಡನೆಯ ಚಕ್ರವರ್ತಿ ಸಗರವನ್ನು ಆಯ್ದುಕೊಂಡಿದ್ದೇನೆ. ಗುಣಭದ್ರರಲ್ಲಿಲ್ಲದ ಬುದ್ಧಿಸಾಗರ ಮತ್ತು ಮಣಿಕೇತು ಪ್ರಸಂಗವನ್ನು ಮನೋಜ್ಞವಾಗಿ ತಂದಿದ್ದೇನೆ. ನನ್ನ ಲೌಕಿಕ ರಚನೆಯಾದ ಸಾಹಸಭೀಮ ವಿಜಯದಲ್ಲಿ ಬರುವಂತೆ ಗಂಡುಶೈಲಿಯನ್ನಾಗಲಿ ನಾಟಕೀಯ ಗುಣವನ್ನಾಗಲಿ ಸಿಂಹಾವಲೋಕನ ತಂತ್ರವನ್ನಾಗಲಿ ಇಲ್ಲಿ ಬಳಸಲು ಹೋಗಿಲ್ಲ. ಒಟ್ಟಿನಲ್ಲಿ ಎಲ್ಲೂ ಪೂರ್ವಾಚಾರ್ಯರಿಗೆ ಅಪಚಾರವಾಗದಂತೆ ಎಚ್ಚರ ವಹಿಸಿದ್ದೇನೆ. ಈ ಕೃತಿಗೆ ಪ್ರೇರಣೆ ಪೋಷಣೆಗಳೆಲ್ಲವೂ ಮಹಾಮಾತೆ ದಾನವಿನೋದೆ ಅತ್ತಿಮಬ್ಬೆಯ ವರು. ಇಷ್ಟನ್ನು ಪೀಠಿಕಾ ರೂಪದಲ್ಲಿ ಹೇಳಿ ಪುರಾಣ ಕಾವ್ಯದ ಪಠಣ ಮಾಡುತ್ತೇನೆ ಎಂದು ವಿನಂತಿಸಿಕೊಂಡು ವರ್ಣನಗಳನ್ನು ಳಿದು ಕಥಾಭಾಗವಷ್ಟನ್ನೇ ಓದಿ ವ್ಯಾಖ್ಯಾನಿಸಿ ಮುಗಿಸಿದ.

ಸಂಜೆಯಾಗುತ್ತಾ ಬಂತು. ಎಲ್ಲರೂ ಮುಖ ಮಾರ್ಜನ ಮಾಡಿಕೊಂಡು ಮತ್ತೆ ಬಂದು ಅದೇ ಮಂಟಪದಲ್ಲಿ ನೆರೆದರು. ಅಬ್ಬೆಯ ಸಂದೇಶಕ್ಕಾಗಿ ಎಲ್ಲರೂ ಕಾತರರಾಗಿದ್ದರು. ಗುರುಗಳ ಆದೇಶವಾಯಿತು. ಅಬ್ಬೆ ಬಾಯಿ ತೆರೆದಳು.

'ನನ್ನ ಹೃನ್ಮಂದಿರದಲ್ಲಿ ಪ್ರತಿಷ್ಠಾಪಿತರಾಗಿರುವ ಸಕಲ ಪರಮೇಷ್ಠಿಗಳೆ, ನನಗಿಂದು ಅಮಿತಾನಂದವಾಗಿದೆ. ನಾನೆಂದುಕೊಂಡಿದ್ದ ಸಕಲ ಸಂಕಲ್ಪಗಳೂ ಇಂದು ಪೂರ್ಣಗೊಂಡಿವೆ. ನನ್ನೆಲ್ಲ ಕನಸುಗಳೂ ನನಸಾಗಿವೆ. ಮುಂದಿನದು ಜಿನಧರ್ಮ ಪ್ರದೀಪಕ ರಾದ ತಮಗೆ ಸೇರಿದ್ದು. ಆದರೆ ಒಂದು ಮಾತು – ಜೈನಧರ್ಮ ವಿಶ್ವಮಾನವಧರ್ಮ, ಸರ್ವರೂ ಇದರ ತತ್ವಗಳನ್ನು ಪರಿಪಾಲಿಸಿದ್ದಾದರೆ ಭೂಮಿ ಸ್ವರ್ಗವಾಗುತ್ತದೆ. ಮಾನವರೆಲ್ಲರೂ ದೇವರಾಗುತ್ತಾರೆ.

'ಇಂತಹ ಜಗನ್ಮಾನ್ಯವಾದ ವಿಶ್ವಮಾನವಧರ್ಮವು ಸರ್ವರ ಸ್ವತ್ತಾಗಬೇಕು. ವಿಶ್ವಕಲ್ಯಾಣ, ವಿಶ್ವಶಾಂತಿಗಳು ನೆಲೆಗೊಳ್ಳಬೇಕಾದರೆ ಸರ್ವೋತ್ಕೃಷ್ಟವಾದ ಜೈನಧರ್ಮದಿಂದ ಮಾತ್ರ ಸಾಧ್ಯ. ಅದರ ದರ್ಶನ ಸರ್ವರಿಗೂ ಇಹಪರಗಳ ಮಾರ್ಗದರ್ಶನ ! ಅಂ ತಹ ಜಿನಧರ್ಮಕ್ಕೆ ಜಯವಾಗಲಿ, ಜಿನಧರ್ಮ ದೀಪಕರೆಲ್ಲರಿಗೂ ಜಯವಾಗಲಿ !'

ಜೈ ತ್ರೈಲೋಕ್ಯನಾಥ ಜಿನಪ್ರಭೋ.

ಅಬ್ಬೆಯ ಅಮೃತೋಪಮವಾಣಿ ಎಲ್ಲರನ್ನೂ ತಣಿಸಿತು. ಎಲ್ಲರೂ ಚಪ್ಪಾಳೆ ತಟ್ಟುತ್ತಾ ಹರ್ಷೋದ್ಗಾರ ಮಾಡಿದರು. ಚತುರಾಚಾರ್ಯರ ಆಶೀರ್ವಚನ ಶುಭ ಸಂದೇಶಗಳೊಂದಿಗೆ ಅಂದಿನ ಸಭಾ ಕಾರ್ಯಕ್ರಮ ಮುಕ್ತಾಯವಾಯಿತು.

******

ಎಲ್ಲರೂ ತಮ್ಮ ತಮ್ಮ ಮನೆಗಳಿಗೆ ಊರುಗಳಿಗೆ ತೆರಳಿದರು. ಆದರೆ ಆನಂದ ತುಂದಿಲೆಯಾದ ಅತ್ತಿಮಬ್ಬೆ ಜಿನಾಲಯ ವನ್ನು ಪ್ರವೇಶಿಸಿ ಜಿನಸ್ವಾಮಿಯನ್ನೇ ದಿಟ್ಟಿಸುತ್ತಾ ಅವನ ಶ್ರೀಚರಣಗಳ ಬಳಿಯಲ್ಲೇ ಕುಳಿತಳು. ಕುಳಿತೆಡೆಯಲ್ಲೇ ಆಕೆಗೆ ನಿದ್ದೆ ಬಂದಿದೆ. ಅದನ್ನು ಯಾರೂ ಗಮನಿಸಲಿಲ್ಲ. ಸುಮಾರು ಸರಿರಾತ್ರಿಗೂ ಮೀರಿದ ಸಮಯವಾಗಿದ್ದಿರಬೇಕು. ಆಕೆಗೊಂದು ಕನಸು. ಕನಸಿನಲ್ಲಿ ಸಮವಸರಣ ಮಹಾ ಮಂಟಪ. ದರ್ಶನ !

ಆ ಮಹದ್ದರ್ಶನವನ್ನೇ ಮೆಲಕು ಹಾಕುತ್ತಾ ಅವಳಾತ್ಮ ಅಲ್ಲಿಯೇ ಉಳಿಯಿತು.

ಚಂದ್ರ ಪಶ್ಚಿಮ ಸಮುದ್ರದ ಕಡೆ ವಾಲಿದ್ದ. ಅರಮನೆಯಲ್ಲಿ ಮಲಗಿದ್ದ ಅಣ್ಣಿಗದೇವನಿಗೆ ಥಟ್ಟನೆ ಎಚ್ಚರವಾಯಿತು. ಮೇಲೆದ್ದು ಅಬ್ಬೆಯನ್ನು ಕಾಣದೆ ಜಿನಾಲಯದ ಕಡೆಗೆ ಓಡಿದ. ದ್ವಾರದಲ್ಲಿ ನಿಂತಕೂಡಲೇ ಮಹಾತೇಜಸ್ಸೊಂದು ಬೆಳಗಿ ಮಾಯವಾಯಿತು. ಅಣ್ಣಿಗನಿಗೆ ಅರ್ಥವಾಯಿತು. ಜಿನಮೂರ್ತಿಯ ಪಾದದಡಿ ತಲೆಯಿಟ್ಟು ಮಲಗಿದ್ದ ತಾಯಿಯನ್ನು 'ಅಬ್ಬೇ' ಎಂದು ಕೂಗಿದ.

ಜಿನಾಲಯ ಅಬ್ಬೇ ಅಬ್ಬೇ ಎಂದು ಪ್ರತಿಧ್ವನಿಗೊಟ್ಟಿತು.

********

ಅಬ್ಬೆ,
ನಾನೆಂಬ ಬೀಜ ಮೊಳೆತು ಸಸಿ
ಯಾದದ್ದು ನಿನ್ನ ವಾತ್ಸಲ್ಯ ವಕ್ಷದಲ್ಲ !
ನಿನ್ನೆದೆಯ ಪ್ರೇಮಮಧು ಪೀಯೂಷ
ಪಾನಗೈದೆ ನಿನ್ನಣುಗನಣ್ಣಿಗನಾಗಿ !
ಮತ್ತೆ
ಖ್ಯಾತಿವೆತ್ತವನಾದೆ ಪಡೆವಳ ತೈಲನೆಂದು !
ಅಂದು
ನನ್ನ ಆ ಹಸುಳೆತನದಲಿ ಕಂಡ ದೃಶ್ಯವನು
ನೆನೆದಾಗ
ನಿನ್ನಪ್ರತಿಮ ಪ್ರತಿಮೆಯೊಂದು
ಥುತ್ತನೆ ನನ್ನೆದುರು ಬಂದು ನಿಲ್ಲುತ್ತದೆ
ನಿನ್ನ ಸುಡಲೆತ್ನಿಸಿದ
ಅರಳಿ, ಆಲ, ಶ್ರೀಗಂಧ ಮೊದಲಾದ
ಕಟ್ಟಿಗೆಗಳ ಅಟ್ಟಣೆಯ ಮೇಲೆ
ನೀನು ನಿಂತಿದ್ದೆ !
ಅವುಗಳ ಜ್ವಾಲೆ
ಕೆನ್ನಾಲಗೆಯ ಚಾಚಿ ಸುತ್ತಿ ಬಳಸಿದರೂ ನೀ
ಕರಿಕಾಗಲಿಲ್ಲ, ಬೆಂದು ಬೂದಿಯೂ ಆಗಲಿಲ್ಲ !
ಬಿಳಿಸೀರೆ, ಬಿಳಿಯ ಕುಪ್ಪಸ, ಹೆರಳ ಬಿಚ್ಚಿದ
ಕರಿಯ ಸೋರ್ಮುಡಿಯ ಸೋಗೆ
ಧರಿಸಿ ನಿಂತೆ
ಧೀರ ಮಂದರದಂತೆ !
ಕಾಳ್ಗಿಚ್ಚು ಕಾಡ ಸುಟ್ಟಿತಲ್ಲದೆ ಬೆಟ್ಟವನಲ್ಲ !
ಅಬ್ಬೆ
ನನ್ನ ಅಪ್ರಬುದ್ಧಮಾನ ಸ್ಥಿತಿಯಲ್ಲಿ, ನಾನು
ಪ್ರಕ್ಷುಬ್ಧ ಸಾಗರದ ನಿಕ್ಷಿಪ್ತ ನವರತ್ನವಾಗಿದ್ದೆ.
ಮುದುವೊಳಲ ಕವಿರನ್ನ, ಕನ್ನಡದ ಕವಿ ರನ್ನ
ಎಂಬೆನಿತೊ ಹೊಗಳಿಕೆಗೆ ಪಾತ್ರನಾಗಿದ್ದೆ
ನಿನ್ನಕ್ಕರೆಯ ಸಕ್ಕರೆಯನುಂಡು !
ಅಜಿನಾಶೀರ್ವಾದ, ನಿನ್ನೊಲವು, ಚಾವುಂಡರಾಯನ ವಾತ್ಸಲ್ಯ

ಮುಪ್ಪರಿಗೊಂಡು ಚಪ್ಪರಿಸೆ,
ಬಂತು ಕನ್ನಡ ನುಡಿಗೆ ಕಸುವು ಕಳೆ, ಹಸಿರು ಬೆಳೆ
ವಾಗ್ದೇವಿಯ ಭಂಡಾರವನೊಡೆವ ಕೆಚ್ಚು ಧೀಮಂತತೆ!
ಸಾವಿರದ ಅಯ್ನೂರು ಜಿನರ ಹೆತ್ತುದರಿಂದೆ
ಜಿನಜನನಿ ನೀನಾದೆ !
ದೊರೆಕೊಂಡತ್ತು ಕನ್ನಡದ ಶ್ರೀಮಂತತೆ!
ದಾನವಿನೋದೆ,
ಪರಮನಿಗು ಸಂಪ್ರಾಪ್ತಿ ಸಾಹಿತ್ಯ ಸಂಸ್ಕೃತಿ
ನನಗೆ ಪ್ರಾಪ್ತಿಸಿಲೆಂದು ಕವಿಚಕ್ರವರ್ತಿ!
ಅಬ್ಬೆ,
ಅರುಹಂತನರ್ಹತೆ, ಸಿದ್ಧಪುರುಷನ ಸಿದ್ಧಿ
ಆಚಾರ್ಯನೌದಾರ್ಯ, ಉಪಾಧ್ಯಾಯನುಪದೇಶ
ಮತ್ತೆ ಮಿಗಿಲಾದ ಸರ್ವ ಸಾಧುವಿನ ಸಾಧುತ್ವ
ಸತ್ವಗುಣ
ನಿನ್ನಲ್ಲಿ ಸಮ್ಮಿಲಿಸಿದಮೃತಪ್ಯಂದಿ
ನೀನು ಚಿತ್ತ ಚೈತ್ಯಾಲಯದಲ್ಲಿ ಸಾವಿರದ ಕಂಬಗಳ
ಬಸದಿ !

# ನಾಟ್ಯಮಯೂರಿ ಶಾಂತಲೆ

================================================================

೧

ಥೈ ಥೈ ಥೈ !

ದಿಥೈ ದಿಥೈ ದಿದ್ದಿಥೈ !!

ಥೈ. . .ಥೈ. . .ಥೈ !!!

ಅದು ಹೆಜ್ಜೆಯ ಗೆಜ್ಜೆನುಡಿ.

ಇಬ್ಬರು ನರ್ತಕಿಯರು ಶಿವ–ಪಾರ್ವತಿಯರ ವೇಷ ಧರಿಸಿ ನರ್ತಿಸುತ್ತಿದ್ದಾರೆ. ಶಿವಗಂಗೆಯ ನಗರದೇವತೆ ಹೊನ್ನಮ್ಮ ಗುಡಿಯ ಮುಂಭಾಗದ ನವರಂಗದಲ್ಲಿ. ಆ ನುಡಿಗೆ ನೂರು ಮಡಿಯಷ್ಟು ಗುಡುಗುವ ವಾದ್ಯ ವಿಶೇಷಗಳು !

ತೋಂ ತೋಂ ತೋಂ – ನಾದದ ಮೃದಂಗ

ಢಂ ಢಂ ಢಂ – ಝೇಂಕಾರದ ಡಮರುಗ

ಟಣ ಟಣ ಟಣಗುಟ್ಟುವ ಸಣ್ಣಮೇಳ

ಶಂಖ, ಜಾಗಟೆ, ತಾಳ, ಝಲ್ಲರಿ – ಮೊದಲಾದವುಗಳು . ಸಹಸ್ರ ಸಂಖ್ಯೆಯಲ್ಲಿ ನೆರೆದಿದ್ದ ಪ್ರೇಕ್ಷಕರೆಲ್ಲರೂ ಬರೀ ಹೆಂಗಸರೆ ! ಸ್ತ್ರೀಯರೇ ನರ್ತಕಿಯರು, ಸ್ತ್ರೀಯರೇ ವಾದಕಿಯರು, ಸ್ತ್ರೀಯರೇ ಪ್ರೇಕ್ಷಕಿಯರು.

ಅಂದಿನ ಆರಂಭದ ನೃತ್ಯ ಶಿವನ ತಾಂಡವ. ಶಿವನ ಕಣ್ಣುಗಳು ಕೆಂಡದುಂಡಗಳನ್ನು ಉರುಳಿಸುತ್ತವೆ ; ಅವನ ಹಣೆಗಣ್ಣು ಜ್ವಾಲೆಯನ್ನು ಮುಕ್ಕಳಿಸುತ್ತದೆ. ಅವನ ಕುಣಿತಕ್ಕೆ ನೆಲ ನಡುಗುತ್ತಿದೆ ; ಬೀಸಿದ ತೋಳುಗಳ ಜೊತೆಯಲ್ಲಿ ಇಡೀ ಬ್ರಹ್ಮಾಂಡವೇ ಸುತ್ತುತ್ತಿದೆ !! ದಿಕ್ಕುಗಳು ದೂರ ಸರಿಯುತ್ತಿವೆ. ಭೂಮಿಯ ಬೆಸುಗೆಯನ್ನು ಕಳೆದುಕೊಂಡ ಬೆಟ್ಟಗಳೂ ಅವನೊಡನೆ ನರ್ತಿಸುತ್ತಿವೆ. ಕೆಂಡದಮಳೆ ಸುರಿದಂತೆ ನಕ್ಷತ್ರಗಳು ಪಳಪಳನೆ ಕಳಚಿ ಬೀಳುತ್ತವೆ. ಬಹಳ ಹೊತ್ತು ನಡೆದ ಆ ಭೀಕರ ತಾಂಡವದಿಂದಾಗಿ ಗಾಳಿಗೆ ಉಬ್ಬಸ ; ಬಿಸಿಲಿಗೆ ಸೆಕೆ ! ಅಂದಮೇಲೆ ನೆರೆದಿದ್ದ ಪ್ರೇಕ್ಷಕರ ಪಾಡೇನು ! ಆಗ ಇದ್ದಕ್ಕಿದ್ದಂತೆಯೆ ತಂಗಾಳಿ ತೀಡಿದಂತಾಗಿ ಶಿವ ಶಾಂತನಾಗುತ್ತಾನೆ. ಅವನೊಡನೆ ಬಂದು ಕೂಡುತ್ತಾಳೆ ಶಿವೆ. ಜಗನ್ಮಾತಾಪಿತರ ಲಾಸ್ಯ ಮತ್ತೆ ಆರಂಭವಾಗುತ್ತದೆ. ಅಲ್ಲಿನವರೆಗೂ ಬಿಗಿದುಕೊಂಡಿದ್ದ ಪ್ರೇಕ್ಷಕರ ಕೊರಳಿನ ನರಗಳು ಸಡಿಲವಾಗುತ್ತವೆ. ಅವರು ನಿರಾಳವಾಗಿ ಉಸಿರಾಡುತ್ತಾರೆ. ಶಿವ–ಶಿವೆಯರ ಲಾಸ್ಯವನ್ನು ಅವರು ಮೈಯೆಲ್ಲ ಕಣ್ಣಾಗಿ ನೋಡುತ್ತಾರೆ. ಸಂಗೀತವನ್ನು ಕಿವಿಯಾಗಿ ಕೇಳುತ್ತಾರೆ. ಅವರಿಗೆ ಅರಿವಿಲ್ಲದೆಯೆ ಅವರ ಕಾಲುಗಳು ಕುಟ್ಟುತ್ತವೆ ; ಅವರ ಮನಮಯೂರಗಳು ಶಿವ–ಶಿವೆಯರೊಡನೆ ನರ್ತಿಸುತ್ತವೆ.

ನೃತ್ಯ ಒಂದು ನೆಲೆಗೆ ಬಂದು ನಿಲ್ಲಬೇಕು ಅನ್ನುವಷ್ಟರಲ್ಲಿ, ಪ್ರಾಂಗಣದ ಹೊರಗಡೆಯಿಂದ 'ಕ್ಷಮಿಸಿ' ಎಂಬ ನುಡಿ ಕೇಳಿ ಬರುತ್ತದೆ. ಕೂಡಲೇ ನರ್ತಕಿಯರ, ವಾದಕಿಯರ, ಪ್ರೇಕ್ಷಕಿಯರ – ಎಲ್ಲರ ಕಣ್ಣುಗಳೂ ಅತ್ತ ತಿರುಗುತ್ತವೆ. ಅಲ್ಲಿ ಕಂಡದ್ದೇನು ? ಒಂದು ಕುದುರೆ, ಅದರ ಮುಂಭಾಗದಲ್ಲಿದ್ದ ಓರ್ವ ತರುಣ ಯೋಧ. ಆ ಯೋಧ ಯುದ್ಧಬೂಮಿಯಿಂದ ಆಗತಾನೆ ಬಂದವ ನಿರಬೇಕು. ಅವನ ಕಣ್ಣು ನಿದ್ದೆ ಕಂಡಿರಲಿಲ್ಲ ; ಅವನ ಮೈ ಸ್ನಾನ ಮುಟ್ಟಿರಲಿಲ್ಲ. ಹೊಟ್ಟೆಗೆ ಅನ್ನ ಕೊಡಬೇಕೆಂದಾಗಲಿ, ತೊಟ್ಟ ಬಟ್ಟೆ ಬದಲಿಸಬೇಕೆಂದಾಗಲಿ ಅವನಿಗೆ ಅನ್ನಿಸಿಯೇ ಇರಲಿಲ್ಲ. ಅವನ ಎಡತೋಳಿನಲ್ಲಿ ಹೆಪ್ಪು ಕಟ್ಟಿದ್ದ ರಕ್ತ ಹಾಗೆಯೇ ಇತ್ತು. ಸಹಸ್ರ ಸಂಖ್ಯೆಯ ಶತ್ರುಗಳ ನೆತ್ತರನ್ನು ಕುಡಿದು ಕರೆಗಟ್ಟಿದ್ದ ಅವನ ಖಡ್ಗ ಇರ್ನನೂ ಒರೆಯನ್ನು ಸೇರಿರಲಿಲ್ಲ.. ಆತ ಮತ್ತೆ ನುಡಿದ -

'ಕ್ಷಮಿಸಿ. . .ನಾನು ದೇವಿಯ ದರ್ಶನಕ್ಕಾಗಿ ಈ ದೇವಾಲಯಕ್ಕೆ ಬಂದೆ. ಆದರೆ ಇಲ್ಲಿ ನೃತ್ಯ ನಡೆಯುತ್ತಿದೆ ಎಂದು ನನಗೆ ತಿಳಿದಿರಲಿಲ್ಲ. ತಿಳಿದಿದ್ದಲ್ಲಿ ಬರುತ್ತಿರಲಿಲ್ಲವೊ ಏನೊ. . .'

ಕೂಡಲೆ ಪಾರ್ವತಿಯ ವೇಷ ಧರಿಸಿದ್ದ ನರ್ತಕಿ ನುಡಿದಳು. 'ಚಿಂತೆಯಿಲ್ಲ. . .ಆದರೆ ತಾವೂ. . .? ಅನ್ನುವಷ್ಟರಲ್ಲಿ.

'ಮಿತ್ರರು ಅಮ್ಮಾಜಿ, ಶತ್ರುಗಳಲ್ಲ. . .!' ದೂರದಿಂದಲೇ ಕೂಗಿ ಹೇಳಿದರು ಡಣಾಯಕ ಮಾರಸಿಂಗಮಯ್ಯ. ಎಲ್ಲರ ಗಮನವೂ ಯೋಧನನ್ನು ಮರೆತು, ಮಾರಸಿಂಗಮಯ್ಯನವರ ಕಡೆಗೆ ಹರಿಯಿತು.

'ಅಪ್ಪಾಜೀ. . .ಎಂದವಳೆ ಆ ನರ್ತಕಿ ದೇವಾಲಯದ ಮುಂಭಾಗದ ರಸ್ತೆಯಲ್ಲಿ ತುಸು ದೂರದಲ್ಲಿ ಬರುತ್ತಿದ್ದ ತನ್ನ ತಂದೆಯ ಕಡೆಗೆ ಜಿಂಕೆಯಂತೆ ಜಿಗಿದು ಹೋದಳು. ಅವನ ಕೊರಳಿಗೆ ತನ್ನ ಎರಡೂ ತೋಳುಗಳ ಮಾಲೆ ಹಾಕಿ,

'ಅಪ್ಪಾಜಿ. . .ಸುಖ ಪ್ರಯಾಣವೆ ? ಹೆಂಜೇರು ಯುದ್ಧಭೂಮಿಯಿಂದ ನೀವು ಕಳುಹಿಸಿದ ವಿಜಯದ ಸುದ್ದಿ ನಿನ್ನೆ ಸಂಜೆ ಮುಟ್ಟಿತು. ಆದರೆ ಸಂತೋಷಾರ್ಥವಾಗಿ ಹೊನ್ನಾದೇವಿಗೆ ವಿಶೇಷ ಪೂಜೆ, ವಿಶೇಷ ನರ್ತನ ಏರ್ಪಡಿಸಿದ್ದೆವು. ಅಷ್ಟರಲ್ಲಿ. . .'

'ತುಂಬಾ ಸಂತೋಷ. . .ಶಾಂತಲಾ. . .ಮೊದಲು ಇವರಿಗೆ ಅಭಿನಂದನೆಗಳನ್ನು ತಿಳಿಸು' ಎಂದು ಮಾರಸಿಂಗಮಯ್ಯ ದೇವಾಲಯದ ಎದುರಿನಲ್ಲಿ ಭಕ್ತಿಭರಿತನಾಗಿ ನಿಂತಿದ್ದ ತರುಣ ಯೋಧನ ಕಡೆಗೆ ಕರೆದೊಯ್ದರು. ಶಾಂತಲೆ ಆ ತೇಜಸ್ವೀ ಯೋಧನನ್ನು ಕುರಿತು 'ಶುಭಾಶಯಗಳು' ಎಂದಳು ಶಿರಬಾಗಿ. ಆತ ಅಷ್ಟೇ ನಮ್ರನಾಗಿ ನುಡಿದ 'ಒಳ್ಳೆಯದು' ಎಂದು. ಡಣಾಯಕ ಮಾರಸಿಂಗಮಯ್ಯ ಆ ಅಪರಿಚಿತ ವ್ಯಕ್ತಿಯ ಪರಿಚಯ ಮಾಡಿಕೊಟ್ಟರು.

'ಅಮ್ಮಾಜಿ. . .ಇವರು ಯಾರೆಂದು ತಿಳಿದೆ. ನಮ್ಮ ಯುವರಾಜ ಕುಮಾರರು. ವಿಷ್ಣುವರ್ಧನರು !. . ಭಾವೀ ಪ್ರಭುಗಳಮ್ಮಾ, ಹೊಯ್ಸಳೇಶ್ವರರು !'

ಹಾಗಂದ ಕೂಡಲೇ ನೆರೆದಿದ್ದ ಹೆಂಗಸರೆಲ್ಲರೂ ತಲೆಯ ಮೇಲೆ ಸೆರಗು ಎಳೆದುಕೊಂಡು ದೂರ ಸರಿದರು. ಮಾರಸಿಂಗಮಯ್ಯ ವಿಷ್ಣುವರ್ಧನರ ಬಳಿ ಸಾರಿ -

'ಯುವರಾಜಕುಮಾರರು ಮನ್ನಿಸಬೇಕು. ತಮ್ಮ ಅಪ್ಪಣೆ ಪಡೆಯದೆ ಯುದ್ಧ ಭೂಮಿಯಿಂದ ನಮ್ಮ ವಿಜಯದ ಸುದ್ದಿಯನ್ನು ಈ ಶಿವಗಂತೆ ನಾಡಿಗೂ, ದೋರಸಮುದ್ರಕ್ಕೂ ಕಳುಹಿಸಿದ್ದೆವು.' ಎಂದು ವಿನಯದಿಂದ ನುಡಿದ. 'ಒಳ್ಳೆಯದೆ ಆಯಿತು ಡಣಾಯಕರೆ. . . .ವಿಜಯೋತ್ಸವ ವೈಭವದಿಂದ ನಡೆಯಲಿ. . .ಈ ದೇವಿಯ ಮಹಾಮಂಗಳಾರತಿಯಾದ ನಂತರ ಹೊರಡಲು ಅನುಮತಿ ನೀಡುತ್ತೀರಾ?

'ಬಹು ದೊಡ್ಡ ಮಾತು. . . ನಾವು ಹೊಯ್ಸಳ ಸಿಂಹಾಸನದ ಸೇವಕರು. . .ಅಂತೆಯೇ ಭಾವೀ ಪ್ರಭುಗಳಾದ ತಮ್ಮ ಆಜ್ಞಾರಾಧಕರು. ಆಕಾರಣ ತಾವು ನಮ್ಮನ್ನು ಬೇಡಬಾರದು. ಆಜ್ಞೆ ಮಾಡಬೇಕು.'

'ಕ್ಷಮಿಸಿ ಡಣಾಯಕರೆ, ನಮ್ಮ ಅಣ್ಣಂದಿರಾದ ಬಲ್ಲಾಳ ಹೊಯ್ಸಳೇಶ್ವರರು ಪಟ್ಟಕ್ಕೆ ಬರುತ್ತಿದ್ದ ಹಾಗೆಯೇ ನನ್ನನ್ನು ಯುವ ರಾಜ ಪದವಿಗೆ ತಂದು ಕೂರಿಸಿದವರಾರು ? ತಾವು ತಾನೆ. ನಮ್ಮ ಅಣ್ಣ ಬಲ್ಲಾಳರು ಪಟ್ಟ ಕಟ್ಟಿಸಿಕೊಂಡು ಕೆಲವೇ ದಿನಗಳಲ್ಲಿ ಅಕಾಲ ಮೃತ್ಯುವಿಗೆ ತುತ್ತಾದ್ದರಿಂದ ಸಮಯ ಕಾಯುತ್ತಿದ್ದ ಅಕ್ಕಪಕ್ಕದ ರಾಜರುಗಳೂ, ಮಾಂಡಳಿಕರೂ ಹೊಯ್ಸಳ ಸಾಮ್ರಾಜ್ಯದ ಮೇಲೆ ದಂಡೆತ್ತಿ ಬಂದಾಗ ಅವರನ್ನು ಸದೆಬಡಿದು ರಾಜ್ಯವನ್ನು ನಿಷ್ಕಂಟವಾಗಿ ಮಾಡಿದವರು ತಾವಲ್ಲವೆ ? ಇಂದಿಗೆ ಹದಿನೈದು ದಿನಗಳಿಂದಲೂ ಒಂದೇ ಸಮನಾಗಿ ನಡೆದ ಹೆಂಜೇರು ಯುದ್ಧದಲ್ಲಿ ನೊಳಂಬವಾಡಿಯವರ್ನು ಸೋಲಿಸಿ ಓಡಿಸಿದ ಕೀರ್ತಿ ತಮ್ಮದಲ್ಲವೆ ? ಡಣಾಯಕರೆ, ತಾವು ವಯೋವೃದ್ಧರು, ಜ್ಞಾನವೃದ್ಧರು, ನನಗಂತೂ ಪಿತೃಸಮಾನರು. ಆದ್ದರಿಂ. . .'

'ಯುವರಾಜಕುಮಾರರೆ, ಈ ವಿನಯವೇ ತಮ್ಮನ್ನು ದೊಡ್ಡವರನ್ನಾಗಿ ಮಾಡಿದೆ. . .ಇರಲಿ ಈಗ ಜಗನ್ಮಾತೆ ಹೊನ್ನಾದೇವಿಗೆ ಮಹಾಮಂಗಳಾರತಿ ಆಗಬಹುದೆ ?'

'ಅಗತ್ಯವಾಗಿ'

'ಅದಕ್ಕೆ ಮುಂಚೆ ತಮ್ಮ ಸ್ನಾನ ?

'ಬೇಡಿ ಡಣ್ಣಾಯಕರೆ, ಅವ್ವೆ ನನಗಾಗಿ ಕಾಯುತ್ತಿದ್ದಾರೆ. ಆದಷ್ಟು ಬೇಗ ದೋರಸಮುದ್ರಕ್ಕೆ ಹೋಗಿ ಮೊದಲು ರಕ್ತಸಿಕ್ತ ವಾದ ಖಡ್ಗವನ್ನು ತೊಳೆದು ಅನಂತರ ನನ್ನ ಮೈತೊಳೆಯುವೆ. ಅಲ್ಲಿನವರೆಗೂ ಬೇಡ.'

ಅರ್ಚಕರು ದೇವಿಗೆ ಸಕಲಾಲಂಕಾರಗಳನ್ನೂ ಮಾಡಿದರು. ಮಹಾ ಮಂಗಳಾರತಿಗೆ ಸಿದ್ಧರಾದರು. ತಂದೆ ಮಾರಸಿಂಗ ಮಯ್ಯ ಮತ್ತು ತಾಯಿ ಮಾಚಿಕಬ್ಬೆಯವರ ಅಪ್ಪಣೆಯಂತೆ ಶಾಂತಲೆ ಹೊನ್ನಾದೇವಿಯ ಎದುರು ಮತ್ತೆ ನರ್ತನಕ್ಕೆ ನಿಂತಳು. ಆದರೆ ಅವಳ ಜೊತೆಯಲ್ಲಿ ಹಿಂದೆ ನರ್ತಿಸಿದ ಶಿವನ ವೇಷ ಧರಿಸಿದ್ದ ಲಕ್ಷ್ಮಿ ಈಗ ನಾಚಿ ಹಿಂದೆ ಸರಿದಳು. ಮಮ್ಮಲೆ, ಸೋಮಲೆ ಮೊದಲಾದವರು ವಾದ್ಯಗಳನ್ನು ನುಡಿಸುವ, ತಾಳ ಹಾಕುವ, ಹಿನ್ನೆಲೆಯ ಗಾಯನದ ಕಲಾವಿದೆಯರಾದರು. ಸಮಯಕ್ಕೆ ತಕ್ಕ ಂತೆ 'ಪೂಜಾ ನರ್ತನ' ಮತ್ತು 'ವಸಂತ ನರ್ತನ'ಗಳು ನಡೆಯುವುದೆಂದು ನಿರ್ಧಾರವಾಯಿತು.

ನರ್ತನ ಆರಂಭವಾಯಿತು. ಸೌಮ್ಯಗತಿಯಲ್ಲಿ ಸಾಗಿದ 'ಪೂಜಾನರ್ತನ' ವೈಭವದ 'ವಸಂತನರ್ತನಕ್ಕೆ' ಕಾಲಿರಿಸಿತು. ಚೆಲುವಿನ ಚಿಲುಮೆಯಂತಿದ್ದ ಶಾಂತಲೆ ಚಿಟ್ಟೆಯಾಗಿ ಹಾರಿದಳು, ದುಂಬಿಯಾಗಿ ಝೇಂಕರಿಸಿದಳು, ಹಕ್ಕಿಯಾಗಿ ಹಾಡಿದಳು, ಹೂವಾಗಿ ಅರಳಿ, ಚಿಗುರಿಯಾಗಿ ಜಿಗಿದಳು. ಇದ್ದಕ್ಕಿದ್ದಂತೆ ವಸಂತಕಾಲ ಪ್ರಾಪ್ತವಾದಂತೆ ಬಾಸವಾಯಿತು !

ಭಾವುಕನಾದ ವಿಷ್ಣುವರ್ಧನನ ಮನಸ್ಸನ್ನು ಸೂರೆಗೊಂಡದ್ದು ಶಾಂತಲೆಯ ವಸಂತನರ್ತನ. ಎರಕ ಹೊಯ್ದು ಮಾಡಿದ ಬಂಗಾರದ ಬೊಂಬೆಯಂತೆ ಇಲ್ಲವೆ ಕಡೆದು ನಿಲ್ಲಿಸಿ ಜೀವ ತುಂಬಿದ ಶಿಲಾಬಾಲಿಕೆಯಂತೆ ಸುಂದರ ಶರೀರಿಯಾದ ಶಾಂತಲೆ ಅಸಾಧಾರಣ ಕಲಾವಿದೆಯಾದ್ದರಿಂದ ಪ್ರೇಕ್ಷಕರನ್ನು, ಬಹುಶಃ ದೇವಿ ಹೊನ್ನಮ್ಮನನ್ನೂ ಯಾವುದೊ ಒಂದು ಯಕ್ಷಲೋಕಕ್ಕೆ ಕೊಂಡೊಯ್ದಳೆನ್ನಬೇಕು. ಅವಳ ಚೆಲುವು, ಚೆದುರು, ಹಾವ, ಭಾವ, ನಡೆಯ ಮೋಡಿ, ಕುಣಿತದ ಗತ್ತು, ಬಳಕುವ ನಡು, ಎಲ್ಲವೂ ಮೆಚ್ಚಾದುವು. ರಾಜಕುಮಾರನೂ ಸ್ವಯಂ ಕಲಾವಿದ. ಅದರಲ್ಲೂ ಚಿತ್ರಕಲೆಯಲ್ಲಿ ಪರಿಣಿತನಿದ್ದ. ಆ ಕಾರಣ ಶಾಂತಲೆಯ ನರ್ತನದ ಪ್ರತಿಯೊಂದು ಭಂಗಿಯನ್ನೂ ತುಂಬಾ ಗಮನವಿಟ್ಟು ವೀಕ್ಷಿಸಿದ. ನೋಡುತ್ತಿದ್ದಂತೆಯೇ ಅವನ ಮನಸ್ಸು ಏನನ್ನೋ ಧೇನಿಸುತ್ತಿತ್ತು.

ನರ್ತನ ಮುಗಿಯಿತು.

ಮಹಾಮಂಗಳಾರತಿಯೂ ಆಯಿತು.

ಘಂಟೆ, ಜಾಗಟೆ, ಶಂಖಗಳ ನಾದ ಮೇಳಗೊಂಡು ಓಂಕಾರಮಯವಾಯಿತು ದೇಗುಲ ! ಭಕ್ತಿಯೆಂಬ ಭಾವತೀರ್ಥದಲ್ಲಿ ಎಲ್ಲರೂ ಮಿಂದು ಮಡಿಯಾದರು.

ಅರ್ಚಕರು ದೇವಿಗೆ ಧರಿಸಿದ್ದ ತೋರಹಾರವನ್ನು ತೆಗೆದು ತಂದು ಡಣಾಯಕರ ಕೈಗಿತ್ತರು. ಡಣಾಯಕ ಮಾರಸಿಂಗಮಯ್ಯ ಹಾರವನ್ನು ತೆಗೆದು ಯುವರಾಜ ವಿಷ್ಣುವರ್ಧನನ ಕೊರಳಿಗೆ ಹಾಕಿದರು. ಸರ್ವರೂ 'ಹೊಯ್ಸಳೇಶ್ವರರಿಗೆ ಜಯವಾಗಲಿ' ಎಂದು ಜಯಘೋಷ ಮಾಡಿದರು.

ಲಕ್ಷ್ಮಿ, ಶಾಂತಲೆ ಮತ್ತು ಸೋಮಲೆಯರು ಉಪಾರತಿ ಎತ್ತಿದರು ರಾಜಕುಮಾರನಿಗೆ. ಎಲ್ಲವನ್ನೂ ಮಂತ್ರಮುಗ್ಧರನ್ನಾಗಿ ಸ್ವೀಕರಿಸಿದ ವಿಷ್ಣು ಅನಂತರ ಶಾಂತಲೆ ಅವನ ಹಣೆಗೆ ತಿಲಕವಿಟ್ಟಳು. ಇಡುವ ವೇಳೆಯಲ್ಲಿ ಅಕಸ್ಮಾತ್ ಅವನ ಕೆನ್ನೆಯನ್ನು ಸೋಂಕಿತು. ಕೂಡಲೇ ಇಬ್ಬರಲ್ಲೂ ವಿದ್ಯುತ್ ಸಂಚಾರವಾಯಿತು ! ಅತ್ಯಂತ ಸಮೀಪದಲ್ಲಿ ಶಾಂತಲೆ ಅವನನ್ನು ನೋಡಿದಳು. ವಿಷ್ಣುವೂ ಅವಳನ್ನು ಅಡಿಯಿಂದ ಮುಡಿಯವರೆಗೂ ನೋಡಿದ. ಇಬ್ಬರ ಕಣ್ಣುಗಳು ಏನನ್ನೊ ಮಾತನಾಡಿಕೊಂಡವು. ಹೃದಯ ಯಾವುದೊ ರಾಗವನ್ನು ಹಾಡತೊಡಗಿದವು. ಆದರೆ ಅದು ಕ್ಷಣಕಾಲ ಮಾತ್ರ. ಮೈಗಳು ಮರೆತಿದ್ದರೂ ಮನಸ್ಸುಗಳು ಎಚ್ಚರವಾಗಿದ್ದವು.

ಶಾಂತಲೆ ಆರತಿ ತಟ್ಟೆಯೊಡನೆ ಬಾಗಿದಳು. ಓಕುಳಿಯನ್ನು ಅವನ ಪಾದಗಳ ಪಕ್ಕದಲ್ಲಿ ಅತ್ತ ಇತ್ತ ಚೆಲ್ಲಿದಳು. ಸಖಿಯರು ಅವಳ ಕೈಲ್ಲಿದ್ದ ಆರತಿಯನ್ನು ತೆಗೆದುಕೊಂಡರು. ಶಾಂತಲೆ ದೂರ ಸರಿದು ಅವಳ ತಾಯಿ ಮಾಚಿಕಬ್ಬೆಯ ಬಳಿ ಬಂದು ನಿಂತಳು. ತೀರ್ಥ ಪ್ರಸಾದಗಳ ವಿನಿಯೋಗ ನಡೆಯಿತು. ಅಷ್ಟರಲ್ಲಿ ರಾಜಕುಮಾರನ ಬೆಂಗಾವಲಿನವರು ಬಂದು ಸೇರಿದರು. ಅವರು ಐವತ್ತರಿಂದ ನೂರು ಜನರಿದ್ದಿರಬೇಕು. ದೇವಾಲಯದ ಬಳಿ ಬಂದ ಕೂಡಲೇ ತಮ್ಮ ತಮ್ಮ ಕುದುರೆಗಳಿಂದ ಇಳಿದು ಮಂಡಿಯೂರಿ ತಮ್ಮ ತಮ್ಮ ಖಡ್ಗಗಳನ್ನು ಮುಂದೆ ಚಾಚಿ ವಿಷ್ಣುವರ್ಧನನಿಗೆ ವೀರವಂದನೆಗಳನ್ನು ಸಲ್ಲಿಸಿದರು.

ಎಲ್ಲರಿಗೂ ಹೊನ್ನಾದೇವಿಯ ತೀರ್ಥ ಪ್ರೋಕ್ಷಣೆಯಾಯಿತು. ಜೊತೆಯಲ್ಲಿ ರಾಜಾಜ್ಞೆಯೂ ಆಯಿತು. – ದೋರಸಮುದ್ರಕ್ಕೆ ಹೊರಡುವುದು ಎಂದು. ಕೂಡಲೇ ಎಲ್ಲ ಸವಾರರೂ ತಮ್ಮ ತಮ್ಮ ಕುದುರೆಗಳನ್ನು ಮತ್ತೆ ಏರಿದರು. ಯುದ್ಧಭೂಮಿಯಿಂದ ಆಗತಾನೆ ಬಂದಿದ್ದ ಕುದುರೆಗಳು ತಮ್ಮ ತವರಿಗೆ ಹಿಂತಿರುಗಲು ಕಾತರವಾಗಿದ್ದವು. ಅದಕ್ಕೆಂದೇ ಅವು ಕೆನೆಯತೊಡಗಿದವು.

ರಾಜಕುಮಾರನ ಕುದುರೆ 'ಕಲ್ಯಾಣಿ' ಅವನ ಮುಂದೆ ಬಂದು ನಿಂತಳು. ಯುವರಾಜ ಎಲ್ಲರಿಗೂ ವಂದನೆ ಸಲ್ಲಿಸಿದ. ಎಲ್ಲರೂ ಭಕ್ತಿಯಿಂದ ಪ್ರತಿಯಾಗಿ ವಂದನೆ ಸಲ್ಲಿಸಿದರು.

ವಿಷ್ಣುವರ್ಧನನ ಕಣ್ಣುಗಳು ಏನನ್ನೋ, ಯಾರನ್ನೋ ಹುಡುಕುತ್ತಿದ್ದವು. ಆದರೆ ಬಾಯಿ ನುಡಿಯಿತು. – ಡಣಾಯಕರೆ ಹಾಗೂ ಶಿವಗಂಗೆಯ ಪುಣ್ಯ ದೇವತೆಯರೆ. . .ನಾವಿನ್ನು ಬರಬಹುದೆ? ಆಗಲಿ. . . ದಾರಿ ಸುಗಮವಾಗಿ ಪ್ರಭುಗಳು ಚಿರಾಯುವಾಗಲಿ' ಎಂದು ಮುಂತಾದ ಹರಕೆಯ ನುಡಿಗಳು ಕೇಳಿ ಬಂದವು. ಯುವರಾಜ ಮತ್ತೆ ನುಡಿದ – 'ಬರಲೇ. . .ಲೇ'

ಎಂದು. ಅದು ಯಾರ ಅನುಮತಿಗಾಗಿಯೊ ತಿಳಿಯದು. ಬಹುಶಃ ಸಂಬಂಧಪಟ್ಟವರು ಅನುಮತಿ ನೀಡಿದರೊ ಏನೊ. . .ಅಂತೂ ಮನಸ್ಸಿಲ್ಲದ ಮನಸ್ಸಿನಿಂದ ಕಲ್ಯಾಣಿ ದೋರಸಮುದ್ರದ ಕಡೆ ತಿರುಗಿ, ಹೆಜ್ಜೆ ಇರಿಸತೊಡಗಿದಳು.

೨

ಕಣ್ಮರೆಯಾಗುವವರೆಗೂ ಕುದುರೆಗಳನ್ನು ನೋಡುತ್ತಲೆ ನಿಂತಿದ್ದರು. ಕ್ರಮೇಣ ಅವೂ ಕಾಣದಾದವು. ಬರಿಯ ಧೂಳು ಭೂಮಿ ಆಕಾಶಗಳ ಮಧ್ಯೆ ಒಂದು ಕೆಂಪು ಕೋಟೆಯನ್ನು ನಿರ್ಮಿಸಿತ್ತು.

ಜನರೆಲ್ಲಾ ಒಬ್ಬಬ್ಬರಾಗಿ ಸರಿದರು. ಶಾಂತಲೆ ಮಾತ್ರ ಗೋಡೆಯ ಮೇಲೆ ಬರೆದ ಚಿತ್ರದಂತೆ ನಿಂತಿದ್ದಳು. ಅವಳಿಗೆ ಕುದುರೆಗಳಾಗಲಿ ಅವುಗಳೆಬ್ಬಿಸಿದ ಧೂಳಿಯಾಗಲಿ ಕಾಣಿಸುತ್ತಿರಲಿಲ್ಲ. ಆ ಧೂಳಿನ ಮಧ್ಯದಲ್ಲಿ ವಿರಾಜಮಾನವಾಗಿ ಬೆಳಗುತ್ತಿದ್ದ ಮಹಾಮೂರ್ತಿಯೊಂದು ಗೋಚರಿಸುತ್ತಿತ್ತು. ಅದನ್ನೆ ಕಣ್ ತಣಿಯೆ, ಮನತಣಿಯೆ ನೋಡುತ್ತಿದ್ದಳು.

'ಇನ್ನು ಮನೆಗೆ ಹೋಗೋಣವೆ ಅಮ್ಮಾಜಿ. . .' ಎಂದು ಮಾರಸಿಂಗಮಯ್ಯ ನುಡಿಸಿದಾಗಲೇ ಅವಳಿಗೆ ಎಚ್ಚರ. ಬೆಚ್ಚಿಬಿದ್ದ ಶಾಂತಲೆ ನುಡಿದಳು. 'ಆಗಲಿ ಅಪ್ಪಾಜಿ. . .'ಕಾಲುಗಳು ಅರಮನೆಯ ಕಡೆಗೆ ತಿರುಗಿದವು. ಮುಂದೆ ಮಾಚಿಕಬ್ಬೆ, ಲಕ್ಷ್ಮಿ, ಸೋಮಲೆ ಮತ್ತು ಪರಿವಾರದವರೂ ನಡೆಯುತ್ತಿದ್ದರು. ಅವರ ಹಿಂದೆ ತುಸುದೂರದಲ್ಲಿ ಡಣಾಯಕ ಮಾರಸಿಂಗಮಯ್ಯ ಮತ್ತು ಮಗಳು ಶಾಂತಲೆ ನಡೆಯುತ್ತಿದ್ದರು. ಎಲ್ಲರೂ ನಾಲ್ಕು ಹೆಜ್ಜೆ ಇಟ್ಟಿರಲಿಲ್ಲ. ಅಷ್ಟರಲ್ಲಿ ಅರಮನೆಯ ಉಸ್ತುವಾರಿ ಬಾಚಿಮಯ್ಯ ಮಾರಸಿಂಗ ಮಯ್ಯನನ್ನು ಸಮೀಪಿಸಿ, 'ಮಹಾಸ್ವಾಮಿಯವರಿಗೆ ಜಯವಾಗಲಿ' ಎಂದು ಕೈ ಮುಗಿದುಕೊಂಡು.

'ಏನು ವಿಶೇಷ ಬಾಚಿಮಯ್ಯ?' ಪ್ರಶ್ನಿಸಿದರು ಡಣಾಯಕರು.

'ಏನಿಲ್ಲ ಮಹಾಸ್ವಾಮಿ. . .ಮೇನೆಗಳು ಸಿದ್ಧವಾಗಿವೆ'

'ಬೇಡ. . .ನಡದೇ ಬರುತ್ತೇವೆ.'

. . .ಆದರೆ ಚಿಕ್ಕಮ್ಮಾಜಿಯವರಿಗಾದರೂ ಒಂದು ಮೇನೆ.'

'ಅದರ ಅಗತ್ಯ ಇಲ್ಲ ಬಾಚಜ್ಜ' – ಕೂಡಲೇ ನುಡಿದಳು ಶಾಂತಲೆ. 'ಬಾಚಜ್ಜ ನಾವು ಬಂದದ್ದು ದೇವಾಲಯಕ್ಕೆ. ಹಿಂತಿರು ಗುತ್ತಿರುವುದೂ ಅಲ್ಲಿಂದಲೇ ಅಲ್ಲವೇ? ದೇವಾಲಯಕ್ಕೆ ಬರುವಾಗ ಕೇವಲ ಭಕ್ತಿಯೊಂದನ್ನು ಹೊತ್ತುಕೊಂಡು ಬರಿಗಾಲಲ್ಲಿ ನಡೆಯಬೇಕು. ಅದು ಬಿಟ್ಟು ಪಾದರಕ್ಷೆಗಳನ್ನು ಹಾಕಿ ನಮ್ಮ ಅಹಂಕಾರವನ್ನಾಗಲಿ, ರಥ ಮೇನೆಗಳಲ್ಲಿ ಕುಳಿತು ನಮ್ಮ ಹಣ, ಅಧಿಕಾರ ಅಂತಸ್ತುಗಳನ್ನಾಗಲಿ ಮೆರೆಯಬಾರದು. ಅದು ಸಭ್ಯತೆಯ ಲಕ್ಷಣವಲ್ಲ, ಸಂಸ್ಕೃತಿಯ ಕುರುಹೂ ಅಲ್ಲ, ಅದಕ್ಕಾಗಿ ಅಪ್ಪಾಜಿ ಮೇನೆ ಬೇಡ ಎಂದರು. ಅಲ್ಲವೇ ಅಪ್ಪಾಜಿ?'

'ಹೌದು ಮಗು. . .' ಮಾರಸಿಂಗಮಯ್ಯ ತಲೆ ಹಾಕಿದರು. ಬಾಚಿಮಯ್ಯ 'ಸುಜಾಣೆ ನಮ್ಮಮ್ಮ. . .' ಎಂದು ಪ್ರಶಂಸಿಸಿ ದೂರ ಸರಿದ.

ತಂದೆ ಮಗಳು ನಿಧಾನವಾಗಿ ಮೌನದಿಂದ ಸಾಗಿದರು. ಹಾದಿತುಳಿಯುವಾಗ ಶಾಂತಲೆ ಮೌನ ಮುರಿದು ನುಡಿದಳು.

'ಅಪ್ಪಾಜಿ. . .ಅವರು ನಿಜಕ್ಕೂ ದೈವಾಂಶ ಸಂಭೂತರು.'

'ಯಾರು ಅಮ್ಮಾಜಿ?' – ಯುವರಾಜ ವಿಷ್ಣುವರ್ಧನನ್ನು ಉದ್ದೇಶಿಸಿ ಬಡಿಯುತ್ತಿದ್ದಾಳೆಂದು ತಿಳಿದಿದ್ದರೂ ಬೇಕೆಂದೇ ಕೇಳಿದರು ಮಾರಸಿಂಗಮಯ್ಯ.

'ಅವರೇ. . .ಹೊಯ್ಸಳೇಶ್ವರರು ಅಪ್ಪಾಜಿ. . .'

'ಹೌದಮ್ಮ, ನಿನ್ನ ಮಾತುಗಳಲ್ಲಿ ಉತ್ಪ್ರೇಕ್ಷೆಯೇ ಇಲ್ಲ. ಶ್ರೀಮಾನ್ ಮಹಾವಿಷ್ಣುವೇ ವಿಷ್ಣುವರ್ಧನನಾಗಿ ಹುಟ್ಟಿದ್ದಾನೆನ್ನಬೇಕು. ಹಾಗಿದ್ದಾರೆ ನಮ್ಮ ಯಜಮಾನರು. ಅಮ್ಮಾಜಿ, ನಿನ್ನನ್ನು ಎತ್ತಿ ಆಡಿಸಿದ ಇವೇ ತೋಳುಗಳು ಯುವರಾಜ ವಿಷ್ಣುವರ್ಧನರನ್ನೂ ಆಡಿಸಿವೆ. ಅವರು ಚಿಕ್ಕವರಾಗಿದ್ದಾಗ ರಾಜಕಾರಣವನ್ನು ಕುರಿತು ಮಾತನಾಡಲು ದೋರಸಮುದ್ರಕ್ಕೆ ಹೋದಾಗಲೆಲ್ಲಾ ಅವರನ್ನು ತುಂಬ ಹೊತ್ತಿನವರೆಗೆ ಆಡಿಸಿ, ಪಾಡಿಸಿ ಬರುತ್ತಿದ್ದೆನಮ್ಮ. ಆಗ ಅವರ ಬಗ್ಗೆ ವಾತ್ಸಲ್ಯ, ಈಗ ಗೌರವ, ನಾಳೆ ಹೊಯ್ಸಳೇಶ್ವರೆನಿಸಿ ದಾಗ ಭಕ್ತಿ – ಸಹಜ ತಾನೆ ?

'ಸಹಜವೇ ಅಪ್ಪಾಜಿ. . .ಆದರೆ. . .'

'ಏನಮ್ಮ ಸಂದೇಹ ?'

'ಇವರಿನ್ನೂ ಚಕ್ರವರ್ತಿಗಳಾಗಿಲ್ಲವೆ ಅಪ್ಪಾಜಿ. . .'

'ಇಲ್ಲ. . .ಹಾಗಾದರೆ ನಿನಗೆ ವಿಚಾರ ತಿಳಿಯದು. ಏಕೆಂದರೆ ಚಿಕ್ಕಂದಿನಿಂದಲೂ ನೀನು ವಿದ್ಯೆ ಕಲಿಯುವುದಕ್ಕಾಗಿ ಬಳ್ಳಿಗಾವಿಯ ವಿದ್ಯಾಪೀಠದಲ್ಲೇ ನಿಂತುಬಿಟ್ಟೆ. ದೋರಸಮುದ್ರದ ಹೊಯ್ಸಳರ ಇತಿಹಾಸ ಸ್ಪಷ್ಟ ತಿಳಿದಿಲ್ಲ ಅನ್ನಿಸುತ್ತೆ.'

'ಇಲ್ಲ ಅಪ್ಪಾಜಿ. . .ಹೊಯ್ಸಳರ ಪ್ರಾಚೀನ ಇತಿಹಾಸ ಗೊತ್ತಿದೆ.'

'ಹಾಗಾದರೆ ಹೊಯ್ಸಳೇಶ್ವರ ಎರೆಯಂಗರನ್ನು ಕೇಳಿಬಲ್ಲೆಯಷ್ಟೆ ?'

'ಕೇಳಿದ್ದೇನೆ ಅಪ್ಪಾಜಿ.'

'ಅವರಿಗೆ ಬಲ್ಲಾಳ, ವಿಷ್ಣು ಮತ್ತು ಉದಯಾದಿತ್ಯರೆಂದು ಮೂವರು ಮಕ್ಕಳು.'

'ಅವರ ತಾಯಿ ಏಚಲಾದೇವಿ ಅಲ್ಲವೆ ಅಪ್ಪಾಜಿ ?'

'ಹೌದು ಅವರೇ ಈಗ ರಾಜಮಾತೆಯರು ದೋರಸಮುದ್ರದ ಅರಮನೆಯಲ್ಲಿದ್ದಾರೆ.'

'ಎರೆಯಂಗರು ಹೊಯ್ಸಳರಲ್ಲಿ ತುಂಬಾ ಪ್ರಸಿದ್ಧರೆಂದು ನನ್ನ ವಿದ್ಯಾ ಗುರುಗಳಾದ ಶ್ರೀ ಚಂದ್ರಕೀರ್ತಿ ಭಟ್ಟಾರಕರು ಹೇಳುತ್ತಿದ್ದರು. ಹೌದೆ ಅಪ್ಪಾಜಿ ?

'ಹೌದು ಅವರು ತುಂಬಾ ಸ್ವತಂತ್ರ ಮನೋವೃತ್ತಿಯ ವ್ಯಕ್ತಿ. ಒಂದೆರಡು ತಲೆಮಾರುಗಳಿಂದಲೂ ಕಲ್ಯಾಣಿ ಚಾಲುಕ್ಯರ ಅಧೀನರಾಗಿ, ಸಾಮಂತರಾಗಿ ಆಳಿಕೊಂಡು ಬಂದರು ಈ ಹೊಯ್ಸಳರು. ಆದರೆ ಎರೆಯಂಗರಿಗೆ ಅದು ಸರಿ ಬೀಳಲಿಲ್ಲ. ಸ್ವತಂತ್ರರಾಗಲು ಇಚ್ಚಿಸಿದರು. ಆದರೆ ಫಲ ಸಿಗಲಿಲ್ಲ. ಅನಂತರ ಅವರು ಹೆಚ್ಚುಕಾಲ ಬದುಕಲಿಲ್ಲ. ಅವರ ನಂತರ ಅವರ ಜ್ಯೇಷ್ಠಪುತ್ರರಾದ ಬಲ್ಲಾಳರು ಪಟ್ಟಾಧಿಕಾರಕ್ಕೆ ಬಂದರು.'

'ಹೌದು. ಅವರನ್ನು ನೋಡಿದ ನೆನಪಿದೆ ಅಪ್ಪಾಜಿ. . .ಒಮ್ಮೆ ಬಳ್ಳಿಗಾವಿಯ ವಿದ್ಯಾಪೀಠಕ್ಕೆ ದಯಮಾಡಿಸಿದ್ದರು. ನಮ್ಮ ಗುರುಗಳು ಅವರ ಪರಿಚಯ ಮಾಡಿಕೊಟ್ಟರು.'

'ಹೌದು ಅವರೇ. . .ಆದರೆ ಆ ಬಲ್ಲಾಳರೂ ಹೆಚ್ಚುಕಾಲ ಇರಲಿಲ್ಲ. ಚಿಕ್ಕಂದಿನಿಂದಲೂ ಅವರನ್ನು ಯಾವುದೋ ವಿಚಿತ್ರ ರೋಗ ಕಿತ್ತು ತಿನ್ನುತ್ತಿತ್ತು. ಸಿಂಹಾಸನವನ್ನೇರಿದ ಕೆಲವೇ ದಿನಗಳಲ್ಲಿ ಅಂದರೆ ಮೊನ್ನೆ ಮೊನ್ನೆ ತೀರಿಕೊಂಡರು. ತೆರವಾದ ಅವರ ಸ್ಥಾನವನ್ನು ಈಗ ಯುವರಾಜರಾಗಿರುವ ವಿಷ್ಣುವರ್ಧನ ತುಂಬಬೇಕಾಗಿದೆ. ಇರಲಿ. ಈ ಮಧ್ಯೆ ಸಮಯ ಕಾಯುತ್ತಿದ್ದ ಅಕ್ಕಪಕ್ಕದ ರಾಜರುಗಳು ದೋರಸಮುದ್ರದ ಮೇಲೆ ದಂಡೆತ್ತಿ ಬಂದರು. ಮುಖ್ಯವಾಗಿ ನಿನ್ನೆ ತಾನೆ ಬಿಡಿಸಿಕೊಂಡ ನೊಳಂಬವಾಡಿಯವರು. ನೋಡು ಮಗು, ಯುದ್ಧ ವಿದ್ಯೆಯನ್ನು ನಮ್ಮ ಯುವರಾಜ ವಿಷ್ಣುವರ್ಧನರಿಂದ ಕಲಿಯಬೇಕು. ಅವರಿಗೆ ಚಿಕ್ಕಂದಿನಿಂದಲೂ ಸಾಹಿತ್ಯ, ಸಂಗೀತ, ಚಿತ್ರ ಮೊದಲಾದ ಲಲಿತ ಕಲೆಗಳಲ್ಲಿ ಆಸಕ್ತಿ. ಆದರೆ ಯುದ್ಧ ವಿದ್ಯೆ ಅಷ್ಟರಮಟ್ಟಿಗೆ ಸಿದ್ಧಿಸಿದೆ ಎಂದು ನಾನು ತಿಳಿದಿರಲಿಲ್ಲ. ಈಗ ಹದಿನೈದು ದಿನಗಳಿಂದ ನೊಳಂಬವಾಡಿಯವರೊಡನೆ ಹೆಂಜೇರುವಿನಲ್ಲಿ ನಡೆದ ಯುದ್ಧದಲ್ಲಿ ಅಹೋ ರಾತ್ರಿ ನಮ್ಮೊಡನಿದ್ದು ಯುದ್ಧ ಮಾಡಿ ಸ್ಫೂರ್ತಿ ತುಂಬಿ ಗೆಲುವಿಗೆ ಕಾರಣರಾದರು. ಅವರ ಪರಾಕ್ರಮದಷ್ಟೇ ಹೆಸರಾದುದು ಅವರ ಔದಾರ್ಯ. ಅವರ ಪರಾಕ್ರಮ ಔದಾರ್ಯಗಳಿಗೆ ಮಾರುಹೋದ ನೊಳಂಬವಾಡಿಯ ಗಂಗನೊಳಂಬರು ತಮ್ಮ ಮಗಳು ರಾಜಲೆಯನ್ನು ಕೊಡಲು ಮುಂದೆ ಬಂದಿದ್ದಾರೆ. ಬಾಂಧವ್ಯದ ಮೂಲಕ ತಮ್ಮ ಸ್ನೇಹವನ್ನು ಹೆಚ್ಚಿಸಿಕೊಳ್ಳಲು ಇಚ್ಛಿಸುತ್ತಿದ್ದಾರೆ.

'ತುಂಬಾ ಸಂತೋಷ ಅಪ್ಪಾಜಿ. . .ರಾಜಸೂತ್ರವನ್ನು ಹಿಡಿದಿರುವ ವ್ಯಕ್ತಿ ಸಾಧಾರಣನಾದರೆ ಸಾಧ್ಯವಿಲ್ಲ. ಸರ್ವಜ್ಞ ಆಗಬೇಕು. . .ಅಂತಹ ಅರ್ಹತೆ ವಿಷ್ಣುವರ್ಧನರಿಗಿದೆ ಅನ್ನಿಸುತ್ತದೆ. ಆದರೆ ಉದಯಾದಿತ್ಯರು. . .?'

'ಅವರಿನ್ನೂ ಚಿಕ್ಕವರು ಅಮ್ಮಾಜಿ. . .ಈಗ ಅವರಿಗೆ ಸುಮಾರು ಏಳು ಎಂಟು ವರ್ಷಗಳಿದ್ದಿರಬೇಕು. ಅರಮನೆಯಲ್ಲೇ ಇದ್ದಾರೆ. ವಿದ್ಯಾವ್ಯಾಸಂಗ ಅಲ್ಲೇ ನಡೆಯುತ್ತಿದೆ.'

ಮಾತು ಬಿಸಿಲನ್ನೂ ದಾರಿಯನ್ನೂ ಮರೆಸಿತ್ತು. ಬಹು ಬೇಗ ಮನೆ ಸಿಕ್ಕಿದಂತೆ ಭಾಸವಾಯಿತು. ಹದಿನೈದು ದಿನಗಳ ಸತತ ಯುದ್ಧದಿಂದ ಆಯಾಸಗೊಂಡಿದ್ದ ಡಣಾಯಕ ಮಾರಸಿಂಗಮಯ್ಯನವರು ವಿಶ್ರಾಂತಿಗೆ ನಡೆದರು.

೩

ಅತ್ತ ದೋರಸಮುದ್ರದ ದಾರಿಯಲ್ಲಿ – ಯುವರಾಜ ವಿಷ್ಣುವಿಗೂ ಅವನ ಆತ್ಮೀಯ ಗೆಳೆಯ, ಸಹಪಾಟಿ ಬಪ್ಪರಸನಿಗೂ ಸಂಭಾಷಣೆ ನಡದೇ ಇತ್ತು.

'ಬಪ್ಪ, ಅವರದೆಷ್ಟು ಚೆಂದೊಳ್ಳೆಯವರು. . .'

'ಯಾರು ?

'ಅದೇ. . . ಆ ಡಣಾಯಕ. . .'

'ಮಾರಸಿಂಗಮಯ್ಯ ? ದಣಿ ಅವರ ವಿಚಾರ ಎಷ್ಟು ಹೇಳಿದರೂ ಕಡಿಮೆಯೆ. ಅವರ ಪೌರುಷ, ಪರಾಕ್ರಮ, ಸ್ವಾಮಿನಿಷ್ಠೆ, ರಾಷ್ಟ್ರಪ್ರೇಮ. . .ಅಬ್ಬಬ್ಬಾ !. . .ಅಸಾಧ್ಯ. . .ಅಸಾಧ್ಯ. . .ಅವರು ಹುಟ್ಟಿದ್ದು ಶಿವಕ್ಷೇತ್ರವೆನಿಸಿದ ಬಳ್ಳಿಗಾವೆಯಲ್ಲಿ. ವಿದ್ಯೆ ಕಲಿತಿದ್ದು ಅಲ್ಲಿನ ಕೋಡಿಮಠದಲ್ಲಿ. ದಣಿ, ಉಡುತಡಿ, ಬಳ್ಳಿಗಾವೆ, ಬನವಾಸಿ, ಸಿರಿಯಾಳಕೊಪ್ಪ, ತಾಳಗುಂದ, ಗೋಕರ್ಣ, ಚಂದ್ರಗುತ್ತಿ ಇವೆಲ್ಲಾ ಏನು ಸಾಧಾರಣವಾದ ಸ್ಥಳಗಳೇ ? ನಮ್ಮ ನಾಡಿನ ಪುಣ್ಯಕ್ಷೇತ್ರಗಳು. ಅವುಗಳಲ್ಲಿ ಬಳ್ಳಿಗಾವೆಯಂತೂ ಸರ್ವಧರ್ಮಗಳ ಸಮನ್ವಯ ಭೂಮಿ. ವೈದಿಕ, ಜೈನ, ಬೌದ್ಧ, ಶೈವ– ವೀರಶೈವ ಎಲ್ಲ ಧರ್ಮಗಳ ಆಗರ. ವಿಷ್ಣು ದೇವಾಲಯಗಳು, ಶಿವಾಲಯಗಳು ಜೈನ ಬಸದಿಗಳು, ಬೌದ್ಧ ವಿಹಾರಗಳು ಅಲ್ಲಿ ತುಂಬಿವೆ. ದಣಿ, ಬಳ್ಳಿಗಾವೆಯ ತಾರಾಭಗವತಿಯ ಮಂದಿರವನ್ನು ನೋಡಬೇಕು. ಆ ದೇವತಾಮೂರ್ತಿಯನ್ನು ನೋಡಬೇಕು. ಎರಡು ಕಣ್ಣುಗಳೂ ಸಾಲವು. ಅದಕ್ಕೆ ಕಾರಣರಾರು ಗೊತ್ತೆ ? ಅಲ್ಲಿನ ಶಿಲ್ಪಿಗಳು. ದಾಸೋಜ, ಮಲ್ಲೋಜ, ಧೀರೋಜ, ಓಹೋಹೋ ! ಒಬ್ಬರೇ ಇಬ್ಬರೇ ನೂರಾರು ಸಾವಿರಾರು ಜನ ವಿಶ್ವಶಿಲ್ಪಿಗಳಿಗೆ ಬಳ್ಳಿಗಾವೆ ತವರೂರು.

'ನಮ್ಮ ಮಾರಸಿಂಗಮಯ್ಯನವರು ಅಲ್ಲೇ ಹುಟ್ಟಿ ಬೆಳೆದು ವಿದ್ಯಾವಂತರಾಗಿ ನಿಮ್ಮ ಪೂಜ್ಯ ತಂದೆ ಶ್ರೀ ಎರೆಯಂಗರ ದೃಷ್ಟಿಗೆ ಬಿದ್ದು ಅಲ್ಲೇ ಸೇರ್ಪಡೆಯಾಗಿ ನಿಯಾಮಿತರಾದರು. ಅಕಸ್ಮಾತ್ ಒಂದು ದಿನ ಪ್ರಭುಗಳ ಸವಾರಿ ಬೆಳ್ಗೊಳದ ನಾಡಿಗೆ – ಅದೇ ಶ್ರವಣಬೆಳಗೊಳಕ್ಕೆ ದಯಮಾಡಿಸಿದಾಗ ಅಲ್ಲಿನ ಪೆರ್ಗಡೆಯ ಮಗಳು ಮಾಚಿಕಬ್ಬೆ ಮಾರಸಿಂಗಮಯ್ಯನವರ ಕಣ್ಣಿಗೆ ಬಿದ್ದಳು. ಮನಸ್ಸಾಯಿತು, ಮಾತಾಯಿತು – ಎರಯಂಗ ಪ್ರಭುಗಳೇ ಮುಂದೆ ನಿಂತು ಲಗ್ನವನ್ನು ನೆರವೇರಿಸಿದರು. ಲಗ್ನವಾದ ತರು ವಾಯ ಮಾರಸಿಂಗಮಯ್ಯನವರಿಗೆ ಶಿವಗಂಗೆ ನಾಡಿನ ಡಣಾಯಕ ಪದವಿ ದೊರೆಯಿತು. ಪತ್ನೀಸಮೇತರಾಗಿ ಶಿವಗಂಗಗೆ ಹೋದರು.'

'ಬಪ್ಪಾ. . .'ಬೇಸರದಿಂದಲೇ ಕೂಗಿಕೊಂಡ ವಿಷ್ಣು. ಕುದುರೆಗಳ ಸಪ್ಪಳದಿಂದಲೊ ಅಥವಾ ಕಥೆ ಹೇಳುವ ಗುಂಗಿನಲ್ಲಿದ್ದು ದರಿಂದಲೊ ವಿಷ್ಣು ಕೂಗಿದ್ದು ಬಪ್ಪರಸನಿಗೆ ಕೇಳಿಸಲೇ ಇಲ್ಲ. ಆತ ಮತ್ತೆ ಮುಂದುವರಿದ -

'ಕೇಳಿ ದಣಿ. . .ಕೇಳ್ತಾ ಇದ್ದೀರಿ ತಾನೆ ?'

ಈಗ ವಿಷ್ಣುವಿಗೆ ಸಿಟ್ಟು ತಡೆಯಲಾಗಲಿಲ್ಲ. ಕುದುರೆಯನ್ನು ಹೊಡೆಯುವ ಚಮ್ಮಟಿಗೆಯಿಂದ ಒಂದು ಏಟು ಕೊಟ್ಟ ಬಪ್ಪರ ಸನಿಗೆ.

'ಅಯ್ಯಯ್ಯಪ್ಪಾ. . .ಯಾಕೆ ದಣಿ. . .ನಾನು ಕುದುರೆ ಅಲ್ಲ. . .'

'ಕುದುರೆ ಅಲ್ಲ. . .ಕತ್ತೆ. ಅದಾದ್ರೆ ಎಷ್ಟೋ ವಾಸಿ. . .'

'ಯಾಕೆ ನನ್ನೊಡೆಯಾ ?'

'ಬಪ್ಪ. . .ಹಿಂದಿನ ಜನ್ಮದಲ್ಲಿ ಕಪ್ಪೆಗಿಪ್ಪೆ ಆಗಿ ಹುಟ್ಟಿದ್ದೆಯಾ ?'

'ನಂಗೊತ್ತಿಲ್ಲ ದಣಿ. . .'

'ಅಯ್ಯೋ ಬೆಪ್ಪ. . .ನೀರಸ ವಿಚಾರವನ್ನು ನಿರರ್ಗಳವಾಗಿ ಹೇಳ್ತಾನೆ. ಅಲ್ಲವಯ್ಯ ನಾನು ಕೇಳಿದ್ದು ಡಣಾಯಕರ ಜನ್ಮಲಗ್ನ ಕುಂಡಲಿ, ಜಾತಕಗಳನ್ನಲ್ಲ. . .'

'ಗೊತ್ತಾಯಿತು. . .ಅವರ ಮಗಳ ವಿಚಾರ ! ಅಲ್ಲವೆ ದಣಿ ?'

'ಅಷ್ಟೇ ಅಲ್ಲ. . .'

'ಇನ್ನೂ ಒಂದಿಷ್ಟು. . .ಅಂದರೆ ಅವರ ಮಗಳು ಶಾಂತಲೆ – ಅವಳ ಜೊತೆಗಿದ್ದ ಶೀವನ ವೇಷ ಧರಿಸಿದ್ದ ಲಕ್ಷ್ಮಿಯ ವಿಚಾರ. . .ಹೌದು ತಾನೆ?'

'ಈಗ ನೀನು ಜಾಣಮರಿ. . .ಹೇಳು ಮತ್ತೆ.'

'ಹೌದು ನಿಮಗೆ ಪ್ರಿಯವಾದದ್ದನ್ನು ಹೇಳಿದರೆ ಮಾತ್ರ ನಾನು ಜಾಣಮರಿ. ಇಲ್ಲದೇ ಇದ್ದರೆ ಕೋಣಮರಿ. ಕೇಳಿ, ಡಣಾಯಕರಿಗೆ ಲಗ್ನವಾಗಿ ಬಹಳ ದಿನಗಳಾದರೂ ತಂದೆಯಾಗುವ ಭಾಗ್ಯ ಲಭಿಸಲೇ ಇಲ್ಲ. ಶಿವಗಂಗೆಗೆ ಸಮೀಪದಲ್ಲಿರುವ ಐಗಂಡನ ಹಳ್ಳಿ ಧರ್ಮೇಶ್ವರನಿಗೆ ಹರಕೆ ಹೊತ್ತರು. ಶಿವಗಂಗೆಯ ಹೊನ್ನಾದೇವಿಗೆ ಕಾಣಿಕೆ ತೆತ್ತರು. ಭಕ್ತಿಯಿಂದ ಭಜಿಸಿ

ಪ್ರಾರ್ಥಿಸಿ ಹೆಣ್ಣು ಶಿಶುವನ್ನು ವರವಾಗಿ ಪಡೆದರು. ಅವಳೇ ಶಾಂತಲೆ. ಈಕೆ ಪರಶಿವನ ಅಂಶವನ್ನು ಹೊತ್ತು ಬನಶಂಕರಿಯ ಆಶೀರ್ವಾದ ಪಡೆ ದು ಜನಿಸಿದ್ದಾಳೆ. ನಿಜಕ್ಕೂ ಈಕೆ ಮಾನವಳಲ್ಲ – ದೈವಾಂಶಸಂಭೂತೆ. ಮಾರಸಿಂಗಮಯ್ಯ ಮತ್ತು ಮಾಚಿಕಬ್ಬೆಯವರಿಗೆ ಅವ ಳೊಬ್ಬಳೇ ಮಗಳು. ಅವಳನ್ನು ಅವರು ಗಂಡು ಹೆಣ್ಣು ಎರಡೂ ಆಗಿ ಸಾಕಿದ್ದಾರೆ. ಅವಳ ವಿದ್ಯಾಭ್ಯಾಸವನ್ನೆಲ್ಲಾ ಬಳ್ಳಿಗಾವಿಯಲ್ಲಿ ವೇದ, ಪುರಾಣ, ಆಗಮ, ಉಪನಿಷತ್ತು, ವ್ಯಾಕರಣ, ಛಂದಸ್ಸು, ಯುದ್ಧಕಲೆ, ಶಿಲ್ಪಕಲೆ, ಚಿತ್ರಕಲೆ. . .'

'ಒಟ್ಟಿನಲ್ಲಿ ಅರವತ್ನಾಲ್ಕು ಕಲೆ. . .'

'ಹೂಂ. . .ಎಲ್ಲಾ ತಿಳಿದಿದೆ. ಗುಣವತಿ, ರೂಪವತಿ. . .ನಾಟ್ಯಕ್ಕೆ ನಿಂತರೆ ಅಪ್ಸರೆಯರು ನಾಚಬೇಕು. ಹಾಡತೊಡಗಿದರೆ ಗಂಧರ್ವರು ತಲೆತಗ್ಗಿಸಬೇಕು. ವೀಣೆಯನ್ನು ಹಿಡಿದು ಮೇಳದ ಮೇಲೆ ಕೈ ಆಡಿಸುತ್ತಾ ಕುಳಿತಳೆಂದರೆ ಸಾಕ್ಷಾತ್ ಸರಸ್ವತಿ!. . ಕಿನ್ನರ ಕನ್ಯೆಯರೂ ಅವಳ ವಾದನ ಚಾತುರ್ಯಕ್ಕೆ ಬೆರಗಾಗಬೇಕು. . .ಇಲ್ಲಿ. . .ಗಂಡಸರೂ. . .'

'ಹೂಂ. . .ಇರಲಿ, ಅಯ್ಯಾ. . .ಭಟ್ಟಂಗಿ. . .'

'ನನಗ್ಯಾಕೆ ದಣಿ ಭಟ್ಟಂಗಿ ಪದವಿ. . .ಅರಮನೇನಲ್ಲಿ ಅದಕ್ಕೆ ಬೇರೆಯವರಿದ್ದಾರೆ ಪರಾಕು ಹೇಳಲಿಕ್ಕೆ. . .ನಾನು ತಮ್ಮ ಹೃದಯಮಿತ್ರ. . .ವಿದೂಷಕ ಶಿರೋಮಣಿ ಅಲ್ಲವಾ?'

'ಅಲ್ಲಾ ಅಂದರೆ ನೀನು ಬಿಡಬೇಕಲ್ಲಾ. . .ಇರಲಿ. . . ಇನ್ನೊಬ್ಬಳು?'

'ಅದೇ ಶಿವನ ವೇಷ ಹಾಕಿದವಳು. . . ಆಕೆ ಯದುಗಿರಿಯವಳು. ಅನಾಥ ಬಾಲಕಿ. ಮೂರು ದಿನದ ಹಸುಳೆಯೊಂ ದನ್ನು ಶ್ರೀರಾಮಾನುಜಾಚಾರ್ಯರ ಶ್ರೀಮಠಕ್ಕೆ ಯಾರೋ ತಂದು, ಶ್ರೀ ಶ್ರೀಗಳವರ ಪಾದಸಾನಿಧ್ಯದಲ್ಲಿ ಅರ್ಪಿಸಿ ಹೋದರಂತೆ. ಡಣಾಯಕ ಮಾರಸಿಂಗಮಯ್ಯನವರು ಎಂದೋ ಒಂದು ದಿನ ಮೇಲುಕೋಟೆಗೆ ಹೋಗಿದ್ದಾಗ ಶ್ರೀಮಠದಲ್ಲಿ ಆ ಶಿಶುವನ್ನು ಕಂಡು. ಗುರುಗಳ ಸಮ್ಮತಿಯಂತೆ ತಂದು ಸಾಕಿದರಂತೆ. ಅವಳ ಹೆಸರು ಲಕ್ಷ್ಮಿ ಎಂದು. ವಯಸ್ಸಿನಲ್ಲಿ ಶಾಂತಲೆಗೆ ಸ್ವಲ್ಪ ಕಿರಿಯಳು. ಡಣಾಯಕ ಡಣಾಯಕಿಯರು ಅವರಿಬ್ಬರಲ್ಲೂ ಭೇದವೆಣಿಸದೆ ತಮ್ಮ ಹೊಟ್ಟೆಯಲ್ಲಿ ಹುಟ್ಟಿದ ಮಗಳೆಂದೇ ಭಾವಿಸಿ ಬೆಳಸಿದ್ದಾರೆ. ವಿದ್ಯೆ ಕಲಿಸಿದ್ದಾರೆ. ಇಬ್ಬರೂ ಅಕ್ಕ ತಂಗಿಯರಲ್ಲಿ ಅನ್ಯೋನ್ಯತೆ ಬೆಳೆದಿದೆ. ಒಬ್ಬರನ್ನೊಬ್ಬರು ಅಗಲಿರಲಾರರು. ಬೆಳೆದದ್ದೂ ಜೊತೆಯಲ್ಲಿ, ಮದುವೆ ಆದರೂ ಜೊತೆಯಲ್ಲಿ ಚಿತೆ ಏರಿದರೂ ಜೊತೆಯಲ್ಲಿ ಎನ್ನುತ್ತಾರೆ. . .'

'ಅಯ್ಯೋ. . .ಅಮಂಗಳದ ಕಮಂಗಿ. .. .ಇಬ್ಬರೂ ಒಬ್ಬನನ್ನೇ ಲಗ್ನವಾಗುವುದು! ಅದು ಹೇಗೋ ಸಾಧ್ಯ?'

'ಎಲ್ಲಾ ಸಾಧ್ಯ ದಣಿ. ಮಾನವನಿಗೆ ಅಸಾಧ್ಯವಾದುದು ಯಾವುದಿದೆ ಹೇಳಿ ಜಗತ್ತಿನಲ್ಲಿ. . .ಬೀಸುವ ಗಾಳಿಯನ್ನು ಕಟ್ಟಿ ಹಾಕುತ್ತಾನೆ. ಹರಿಯುವ ನೀರನ್ನು ಸೆರೆಹಿಡಿಯುತ್ತಾನೆ. ಮಿಂಚನ್ನೂ ಬಂಧನದಲ್ಲಿಟ್ಟುಕೊಂಡು ಅದಕ್ಕೆ ಕಡಿವಾಣ ಹಾಕುತ್ತಾನೆ. ಪ್ರಯತ್ನಪಟ್ಟರೆ ಚಂದ್ರ ಲೋಕಕ್ಕೆ ಜೈತ್ರಯಾತ್ರೆ ಹೋಗ್ತಾನೆ. ಚಿಕ್ಕೆಗಳ ಕೂಡ ಚಕ್ಕಂದ ಆಡುತ್ತಾನೆ. .  .ಅಂಥವನಿಗೆ ಎರಡು ಹೆಣ್ಣು ಲಗ್ನವಾಗುವುದು ಕಷ್ಟವೇ. . .?'

'ಅದು ಸರಿಯಪ್ಪಾ. . .ಆದರೆ. . .'

'ಹೂಂ. . .ಸಂದೇಹ ಏಕೆ. . .ಹೇಳಿ. . . ಬಿಡಿ. . .ಏನು ಆದರೆ?'

'ಏನೂ. ಇಲ್ಲ. . .'

'ಇಲ್ಲದೇ ಉಂಟೇ. . .ಹೇಳಿ. . .ಹೇಳದೇ ಇದ್ದರೂ ಅರ್ಥವಾಗುತ್ತೆ ದಣೀ. . .'

'ಏನು ಹೇಳು ?'

'ಶಾಂತಲೆ ಚೆಂದೊಳ್ಳಿ ಚೆಲುವೆ. ಅವಳನ್ನು ಹೆಂಡತಿಯಾಗಿ ಪಡೆಯೋದು ಹೇಗೆ ಅಂತಾ. . .ಅಲ್ಲವೇ?'

'ನೀನು ಜಾಣ. . .ಬಪ್ಪ.. . .ದಯವಿಟ್ಟು ನನಗೆ ಮಾರ್ಗದರ್ಶನ ಮಾಡು.'

'ದಣೀ, ಇದಕ್ಯಾಕೆ ಇಷ್ಟು ವಯ್ಯಾರ. ಈ ದಿನವೇ ರಾಜಮಾತೆಯರ ಸಮಯ ಕೇಳಿ, ತಿಳಿದು, ಅಪ್ಪಣೆ ಪಡೆದು ಏಕಾಂತ ದಲ್ಲಿ ಅವರ ಸಂಗಡ ಮಾತನಾಡಿ ತಮ್ಮ ಮನೋಗತವನ್ನು ತಿಳಿಸಿಬಿಡ್ತೇನೆ.'

'ಬರೀ ತಿಳಿಸಿದರಾಗದು ಬಪ್ಪಾ. . .'

'ಇಲ್ಲ ದಣೀ, ಬರೀ ತಿಳಿಸುವುದಷ್ಟೇ ಅಲ್ಲ. . .ಕಾರ್ಯ ಕೈಗೂಡುವಂತೆ ಮಾಡಲು ಪ್ರಯತ್ನಿಸಿತ್ತೇನೆ.'

'ಅಷ್ಟು ಮಾಡಿದರೆ ನಿನಗೆ ಕೋಟಿ ಪುಣ್ಯ. . .'

‘ಇರಲಿ. ಅಲ್ಲಿ ನೋಡಿ, ರಾಜಧಾನಿ ಕಾಣಿಸ್ತಾ ಇದೆ. . .ಮಾತಿನಲ್ಲಿ ದಾರಿ ತುಳಿದದ್ದೇ ತಿಳಿಯಲಿಲ್ಲ.’

ಕುದುರೆಗಳು ದೋರಸಮುದ್ರದ ದ್ವಾರಕ್ಕೆ ಬಂದವು. ನೊಳಂಬವಾಡಿಯ ಮೇಲೆ ಜಯಗಳಿಸಿಕೊಂಡು ಬರುತ್ತಿರುವ ಸುದ್ದಿ ಮೊದಲೇ ತಿಳಿದಿದ್ದರಿಂದ ವಿಜಯಶಾಲಿಗಳಿಗೆ ಸ್ವಾಗತ ಕೋರಲು ರಾಜಧಾನಿ ಸಿದ್ಧವಾಗಿತ್ತು. ಯುವರಾಜ ವಿಷ್ಣುವರ್ಧನರನ್ನು ಜಯಘೋಷದೊಡನೆ ಸ್ವಾಗತಿಸಲಾಯಿತು. ಪುರಪ್ರವೇಶವಾದ ಮೇಲೆ ಅರಮನೆಯ ಮುಂಭಾಗದಲ್ಲಿ ಸುವಾಸಿನಿಯರು ಆರತಿ ಎತ್ತಿ ತಿಲಕವಿಟ್ಟು ಒಳ ಓವರಿಗೆ ಕರೆದೊಯ್ದರು. ರಾಜಮಾತೆಯರ ಪದತಲದಲ್ಲಿ ದೀರ್ಘದಂಡ ನಮಸ್ಕಾರ ಮಾಡಿದ ವಿಷ್ಣು. ಏಚಲದೇವಿ ಮಗನನ್ನು ಮೇಲೆತ್ತಿ ಮುದ್ದಿಟ್ಟರು. ಅಷ್ಟರಲ್ಲಿ ಬಂದ ಉದಯಾದಿತ್ಯನನ್ನು ವಿಷ್ಣು ಬಾಚಿ ತಬ್ಬಿಕೊಂಡು ಮುದ್ದಿಸಿದ. ಅಣ್ಣ ತಮ್ಮಂದಿರ ಆ ಅನುರಾಗದ ಬೆಸುಗೆ ಅಪರೂಪದ ನೋಟವಾಗಿತ್ತು.

ಅಂದೇ ರಾತ್ರಿ ರಹಸ್ಯಗೃಹದಲ್ಲಿ ಬಪ್ಪರಸ ರಾಜಮಾತೆಯರನ್ನು ಸಂದರ್ಶಿಸಿ ಯುವರಾಜ ವಿಷ್ಣುವರ್ಧನರ ಅಂತರಂಗದ ಅಪೇಕ್ಷೆಯನ್ನು ತಿಳಿಸಿದ. ಜೊತೆಗೆ ನೊಳಂಬವಾಡಿಯ ಗಂಗರಸರು ವಿಷ್ಣುವರ್ಧನರ ಪೌರುಷ, ಪ್ರತಾಪಗಳನ್ನು ಕಂಡು, ಮೆಚ್ಚಿ ತಮ್ಮ ಕುಮಾರಿ ರಾಜಲೆಯನ್ನು ವಿಜಯವಧುವಾಗಿ ಕೊಡಲು ಮುಂದೆ ಬಂದ ವಿಚಾರವನ್ನೂ ತಿಳಿಸಿದ. ಅದಕ್ಕೆ ರಾಜಮಾತೆ ಹೇಳಿದರು –

‘ಬಪ್ಪಾ. . .ಯುವರಾಜ ಚಿಕ್ಕಮಗುವೇನಲ್ಲ. ಅವನಿಗೆ ಇಷ್ಟಬಂದ ಹೆಣ್ಣನ್ನು ಅವನು ಮದುವೆಯಾಗಲಿ. . .ನನ್ನ ಅಭ್ಯಂತ ರವೇನೂ ಇಲ್ಲ. . .ಮುಖ್ಯ ಆತ ಸುಖವಾಗಿರಬೇಕು. ಅವನ ರೂಪಕ್ಕೆ ಅನುರೂಪವಾದ, ಅವನ ಗುಣಕ್ಕೆ ಅನುಗುಣವಾದ, ಅವನ ಮನೋಧರ್ಮವನ್ನು ಅರ್ಥಮಾಡಿಕೊಂಡು ನಡೆಯುವ ಹೆಣ್ಣು ದೊರೆತರೆ ಸಾಕು. ನಾಳೆ ನಾಡಿದ್ದರಲ್ಲಿ ಇಡೀ ಹೊಯ್ಸಳ ಸಾಮ್ರಾಜ್ಯಕ್ಕೆ ಒಡೆಯನಾಗಬಲ್ಲ ಆತನ ಬಗೆಗೆ ಇನ್ನೂ ನಾಲ್ಕಾರು ಅಭಿಮಾನೀ ಅರಸರ ಆಹ್ವಾನಗಳು ಬಂದಿವೆ. ಮುಖ್ಯವಾಗಿ ಪಲ್ಲವ ಚಕ್ರವರ್ತಿಗಳು ತಮ್ಮ ಮಗಳು ಬೊಮ್ಮಲೆಯನ್ನು ನಿಮ್ಮ ಮನೆಯ ಸೊಸೆಯನ್ನಾಗಿ ಸ್ವೀಕರಿಸಬೇಕೆಂದು ಓಲೆ ಕಳುಹಿಸಿದ್ದಾರೆ. ಬನವಾಸಿಯ ರಾಜಕುಮಾರಿ ಬಿಜ್ಜಲೆ ಬೇರೆ ದೋರಸಮುದ್ರಕ್ಕೆ ರಾಣಿಯಾಗಿ ಬರಲು ಕಾದಿದ್ದಾಳೆ. ಈಗ ನೀನು ಹೇಳಿದಂತೆ ನೊಳಂಬ ಕನ್ಯೆ, ವಿಷ್ಣುವರ್ಧನನೇ ಮೆಚ್ಚಿದ ಶಿವಗಂಗೆಯ ಡಣಾಯಕ ಪುತ್ರಿ ಶಾಂತಲೆ. . .ಹೀಗೇ. . .ಇನ್ನೂ ಯಾರ್‍ಯಾರಿದ್ದಾರೋ!’

‘ಇದ್ದಾರೆ ಮಾತಾಜೀ. . .ಇನ್ನೊಬ್ಬಳು ಅವಳ ಹೆಸರು ಲಕ್ಷ್ಮಿ ಎಂದು. ಆಕೆ ಶಾಂತಲೆಯ ತಂಗಿಯಂತೆಯೇ ಎನ್ನಬ ಹುದು. ಡಣಾಯಕ ಮಾರಸಿಂಗಮಯ್ಯನವರ ಸಾಕು ಮಗಳು. . .’

‘ಇರಲಿ, ಚಿಂತೆಯಿಲ್ಲ. ಶಾಂತಲೆಯನ್ನು ವಿಷ್ಣು ಮನಸಾ ಪ್ರೀತಿಸಿ ಲಗ್ನವಾಗಲು ಇಚ್ಛಿಸಿದರೆ ಉಳಿದವರು ರಾಜಕಾರಣಕ್ಕಾಗಿ ಬಾಂಧವ್ಯವನ್ನು ಬಯಸುತ್ತಿದ್ದಾರೆ. ವಿಖ್ಯಾತಪುರುಷನಾದ ವಿಷ್ಣುವನ್ನು ಮೆಚ್ಚಿ ಕನ್ಯಾಪಿತೃಗಳಾದ ರಾಜರುಗಳು ಬಾಂಧವ್ಯದ ಮೂಲಕ ಸ್ನೇಹವನ್ನು ಯಾಚಿಸುತ್ತಿದ್ದಾರೆ.’

‘ಒಳ್ಳೆಯದೇ ಆಯಿತಲ್ಲ ಮಾತಾಜೀ. . .ವಿವಾಹಕ್ಕೆ ತಮ್ಮ ಒಪ್ಪಿಗೆ ಸೂಚಿಸಿ, ಯುವರಾಜರಿಗೂ ಒಪ್ಪುವಂತೆ ಮಾಡಿ.’

‘ಬಪ್ಪರಸ, ವಿವಾಹದ ವಿಷಯದಲ್ಲಿ ಯಾರು ಯಾರನ್ನೂ ಬಲಾತ್ಕರಿಸಿಬಾರದು. ಆಜೀವ ಪರ್ಯಂತ ಕೂಡಿ ಬಾಳುವ ವರು ಅವರು. ಅವರ ಮನಸ್ಸಿಗೆ ಒಪ್ಪಿದವರನ್ನು ಲಗ್ನವಾಗಲಿ. . .’

‘ಹಾಗಾದರೆ ಶಾಂತಲೆಯ ಬಗೆಗೆ ತಾವು ಮಾತುಕತೆ ನಡೆಸುತ್ತೀರಾ ಮಾತಾಜೀ. . .’

‘ಆಗಲಿ. . .ಒಂದು ಕೆಲಸ ಮಾಡೋಣ. ಮುಂದಿನ ಸೋಮವಾರ ವಿಜಯೋತ್ಸವವನ್ನು ಏರ್ಪಡಿಸಿ. ನಮ್ಮ ರಾಜ್ಯದ ಎಲ್ಲ ಕಡೆಗೂ ಓಲೆ ಕಳುಹಿಸೋಣ. ಡಣಾಯಕ ಮಾರಸಿಂಗಯ್ಯನವರಿಗೆ ವಿಶೇಷ ಕರೆ – ಅವರು ಪತ್ನೀ ಪುತ್ರಿಯರ ಸಂಗಡ ಬರುವುದೆಂದು. . .ಅವರು ಇಲ್ಲಿಗೆ ಬಂದಾಗ ನಾನೂ ನೋಡಿದಂತಾಗುತ್ತದೆ. ಯುದ್ಧದ ವಿಜಯಕ್ಕೆ ಕಾರಣರಾದ ಅವರನ್ನು ಸನ್ಮಾನಿಸಿದಂತೆಯೂ ಆಗುತ್ತದೆ. ಸಮಯ ಸಿಕ್ಕರೆ ಮಾತನ್ನೂ ಆಡಿಬಿಡೋಣ. . ಆಗಬಹುದೇ ?’

‘ಆಗಲೀ ಮಾತಾಜೀ. . .ನಾನಿನ್ನು ಬರುವೆ,’

ವಿಷ್ಣುವನ್ನು ಕಂಡು ಈ ಬೆಲ್ಲದಂಥಾ ಸುದ್ದಿ ಮುಟ್ಟಿಸಲು ಕುಣಿಯುತ್ತಾ ನಡೆದ ಬಪ್ಪರಸ.

ಲ

ಡಣಾಯಕ ಮಾರಸಿಂಗಮಯ್ಯನವರಿಗೆ,

ದೋರಸಮುದ್ರದ ಅರಮನೆಯಿಂದ ಕಳುಹಿಸಲ್ಪಟ್ಟ ಸುವಾರ್ತೆ. ಅದಾಗಿ ತಮ್ಮೆಲ್ಲರ ಪ್ರಭುಶಕ್ತಿ ನೊಳಂಬವಾಡಿಯ ಯುದ್ಧದಲ್ಲಿ ಜಯ ತಂದಿದೆ ಎಂದು ತಿಳಿಸಲು ಹರ್ಷಿಸುತ್ತೇವೆ. ಅಂತೆಯೇ ಅದರ ಅಂಗವಾಗಿ ಮುಂದಿನ ತ್ರಯೋದಶೀ ಸೋಮವಾರ ವಿಜಯೋತ್ಸವ ಕಾರ್ಯವನ್ನು ರಾಜಧಾನಿಯಲ್ಲಿ ನಡೆಸುವುದೆಂದು ಗುರುಹಿರಿಯರು ನಿಶ್ಚಯಿಸಿದ್ದಾರೆ. ಅದೇ ವೇಳೆಯಲ್ಲಿ ಯುವರಾಜರ ಕಿರೀಟಧಾರಣಾ ಮಹೋತ್ಸವದ ವಿಷಯವಾಗಿಯೂ ಮಾತನಾಡಬೇಕಾಗಿದೆ. ಆ ಕಾರಣ ತಾವು– ಮರೆಯಬಾರದು – ಚಿ. ಸೌ. ಮಾಚಿಕಬ್ಬೆ ಮತ್ತು ಶಾಂತಲೆ, ಲಕ್ಷ್ಮಿ ಇವರನ್ನೂ ಕರೆದುಕೊಂಡು ಎರಡು ದಿವಸಗಳು ಮುಂಚೆಯೇ ಬರಬೇಕೆಂದು ಅಪೇಕ್ಷಿಸುತ್ತೇವೆ – ಅದಕ್ಕಾಗಿ ಡಣಾಯಕ ದಂಪತಿಗಳಿಗೆ ರಥವನ್ನೂ, ಪ್ರೇಮದ ಪುತ್ರಿಯರಿಗೆ ಮೇನೆಯನ್ನೂ ಕಳುಹಿಸಿದ್ದೇವೆ.

ನಿಮ್ಮ ನಿರೀಕ್ಷಣೆಯಲ್ಲಿ

ಇತಿ

–ಹೊಯ್ಸಳೇಶ್ವರ ರಾಜಮಾತೆ–

ಓಲೆಯನ್ನು ಓದುತ್ತಲೇ ಅರಮನೆಯೊಳಗೆ ಕಾಲಿರಿಸಿದರು ಮಾರಸಿಂಗಮಯ್ಯ. ಕೂಡಲೇ ಮಂಚವನ್ನು ಬಿಟ್ಟು ಮೇಲೆದ್ದಳು ಮಾಚಿಕಬ್ಬೆ.

'ಮಾಚಿ, ನಿನಗೊಂದು ಜೇನಿನಂತಹ ಸುದ್ದಿ!'

'ಅಪ್ಪಣೆಯಾಗಲಿ ಸ್ವಾಮಿ'

'ದೋರಸಮುದ್ರದ ಅರಮನೆಯಿಂದ ರಾಜಮಾತೆಯರು ನನ್ನನ್ನೂ ನಿನ್ನನ್ನೂ ಆಹ್ವಾನಿಸಿದ್ದಾರೆ. ಬರುತ್ತೀಯ ತಾನೆ?'

'ಸ್ವಾಮಿ ನಡೆಸಿಕೊಂಡಂತೆ ನಡೆಯುವವಳು ನಾನು. . .'

'ಕೇಳು, ಮುಂದಿನ ಸೋಮವಾರ ವಿಜಯೋತ್ಸವ ಸಮಾರಂಭವಂತೆ ರಾಜಧಾನಿಯಲ್ಲಿ. ಪಟ್ಟಾಭಿಷೇಕ ನಡೆಯಬೇಕಾಗಿದೆಯಂತೆ. ಅದಕ್ಕಾಗಿ ನಮಗೆ ವಿಶೇಷ ಆಹ್ವಾನ. ಮೇನೆ, ರಥಗಳು ಬೇರೆ.'

'ತುಂಬಾ ಸಂತೋಷ. ರಾಜಮಾತೆಯವರ ಕೃಪೆಗೆ ಪಾತ್ರರಾದ ನಾವು ಧನ್ಯರು.'

'ಅಷ್ಟೇ ಅಲ್ಲ ಮಾಚಿ. ಇಲ್ಲಿ ನೋಡು. ನಮ್ಮ ಶಾಂತಲೆ ಲಕ್ಷ್ಮಿಯರನ್ನು ಕರೆದು ತರಬೇಕೆಂದು ಆಗ್ರಹಪೂರ್ವಕವಾಗಿ ತಿಳಿಸಿದ್ದಾರೆ. . .ಬಹುಶಃ. . .'

'ಹೂಂ. . .ಹೇಳಿ. . .'

'ಬಹುಶಃ ರಾಜಮಾತೆಯವರಿಗೆ ನಮ್ಮ ಶಾಂತಲೆಯನ್ನು ಸೊಸೆಯನ್ನಾಗಿ ಮಾಡಿಕೊಳ್ಳುವ ಇಚ್ಛೆ ಇದ್ದರೂ ಇರಬಹುದು. ಯುವರಾಜರಂತೂ ಮನಸಾ ಮೆಚ್ಚಿದ್ದಾರೆ ಎಂದೇ ನನ್ನ ಭಾವನೆ.'

'ಅದಕ್ಕಿಂತ ಮಿಗಿಲಾದ ಭಾಗ್ಯ ಇನ್ನಾವುದು ಸ್ವಾಮಿ?'

'ಯಾವುದಕ್ಕಿಂತ?'

'ಹೊಯ್ಸಳೇಶ್ವರರ ಅತ್ತೆ ಮಾವಂದಿರಾಗುವುದಕ್ಕಿಂತ.'

'ಅದು ದಿಟ. ಸೋಮವಾರ ಹೆಚ್ಚು ದೂರವಿಲ್ಲ. ಎರಡು ದಿವಸ ಮುಂಚೆ ಬರಬೇಕೆಂದು ಅಪೇಕ್ಷಿಸಿದ್ದಾರೆ ರಾಜಮಾತೆಯರು. ದೂರದ ಪಯಣ. ನಡುವೆ ಒಪ್ಪತ್ತು ತಂಗಬೇಕಾಗಬಹುದು. ಆ ಕಾರಣ – ಈಗಿನಿಂದಲೇ ನಿನ್ನ ಪ್ರಯಾಣದ ಸಿದ್ಧತೆಗಳಾಗಲಿ. . .'

'ಅಗತ್ಯವಾಗಿ. . . ಸ್ವಾಮಿ. . .ಅದೇನು ಅಷ್ಟು ದೊಡ್ಡ ಕಟ್ಟು ತಮ್ಮ ಕೊಂಕುಳಲ್ಲಿ!'

'ಓಹ್! ಇದೇ ಮರೆತುಬಿಟ್ಟಿದ್ದೆ. . .ಇದು ಶಾಂತಲೆಗಾಗಿ ಬಂದ ಭಾರೀ ಉಡುಗೊರೆ ಇದ್ದಿರಬೇಕು. ಅವಳೇ ನೋಡಲಿ ನಾವು ಬಿಚ್ಚುವುದು ಬೇಡ.'

ಮಾತು ಮುಗಿಯುವಷ್ಟರಲ್ಲಿ ಲಕ್ಷ್ಮಿ, ಶಾಂತಲೆ ಇಬ್ಬರೂ ಮಹಡಿ ಇಳಿದು ಬಂದರು.

'ಅಪ್ಪಾಜಿ, ರಾಜಧಾನಿಯಿಂದ ಓಲೆ. ಅದರ ಜೊತೆಯಲ್ಲಿ ನನಗಾಗಿ ಒಂದು ಕಟ್ಟು ಬಂದಿದೆಯೆಂದು ಕೇಳಿದೆ.' ಶಾಂತಲೆ ಕೇಳಿದಳು.

'ತೆಗೆದುಕೊ ಅಮ್ಮಾಜಿ. . .ನೀವೇ ಒಡೆದು ನೋಡಿ' ಎಂದು ಅವರಿಬ್ಬರ ಕೈಗಿತ್ತರು ಆ ಕಟ್ಟನ್ನು. ಸಖಿಯರ ನೆರವಿನಿಂದ ಒಡೆದು ನೋಡಿದರು. ಅದರಲ್ಲಿ ನಾಟ್ಯದ ವಿವಿಧ ಭಂಗಿಗಳ ಹತ್ತಾರು ಚಿತ್ರಗಳು ನಗುತ್ತಿದ್ದವು. ಒಬ್ಬಳು ನಾಟ್ಯಮಯೂರಿ, ಇನ್ನೊಬ್ಬಳು ಶುಕಭಾಷಿಣಿ, ಮತ್ತೊಬ್ಬಳು ಮುಕುರಮುಗ್ಧೆ, ನೃತ್ಯಸರಸ್ವತಿ, ಲತಾನಟಿ, ಕಿರಾತಕನ್ಯೆ, ಗಂಭೀರೆ, ಹರಿಣನೇತ್ರೆ, ಮತ್ತಕಾಮಿನಿ, ಮಧುರಮೋಹಿನಿ, ಚಿತ್ತಚಕೋರಿ – ಓಹೋಹೋ! ಸಾಕು ಸಾಕು!! ಒಂದೇ ಎರಡೇ!!

ಡಣಾಯಕರ ಅಂತಃಪುರ ಬೆಕ್ಕಸಬೆರಗಾಯಿತು ಚಿತ್ರಪಟಗಳನ್ನು ನೋಡಿ. ಎಲ್ಲ ಚೆಲುವೆಯರ ಭಾವಭಂಗಿಗಳು ಬೇರೆ ಬೇರೆಯಾಗಿದ್ದರೂ ಮುಖದ ಛಾಯೆ, ಚರ್ಯೆ ಹೆಚ್ಚು ಕಡಿಮೆ ಒಂದೇ ರೀತಿಯಾಗಿತ್ತು. ಅದು ಶಾಂತಲೆಯ ಮುಖದ ಹೋಲಿಕೆಯನ್ನು ವಿಶೇಷವಾಗಿ ಪಡೆದಿತ್ತು. ಚಿತ್ರಗಳನ್ನು ಮೂಡಿಸಿದ್ದವರು ಸಾಕ್ಷಾತ್ ಯುವರಾಜರು. ಅದರಲ್ಲಿದ್ದ ಪತ್ರವೊಂದು ನಿವೇದಿಸಿಕೊಂಡಿತ್ತು –

'ನಾವು ವಿಜಯದ ಕುರುಹಾಗಿ ವೇಲಾಪುರಿಯಲ್ಲಿ ನಿರ್ಮಿಸಬೇಕೆಂದಿರುವ ವಿಜಯ ನಾರಾಯಣನ ದೇಗುಲದ ರೇಖಾ ಚಿತ್ರ. ಇದರಲ್ಲಿ ದ್ವಾರದಲ್ಲಿ ಅಲ್ಲಲ್ಲಿ ನಿರ್ಮಿಸಬೇಕೆಂದಿರುವ ಶಿಲಾಬಾಲಿಕೆಯರ ನರ್ತನದ ನಕುಲುಗಳು. ಶಿಲ್ಪಕಲೆಯಲ್ಲಿ ಪರಿಣತಿ ಉಳ್ಳವರು ತಮ್ಮ ಅಭಿಪ್ರಾಯ ಕೊಡಬಹುದು' ಎಂದಿದ್ದಿತು.

ಶಾಂತಲೆ ಚಿತ್ರಪಟಗಳನ್ನು ನೋಡಿದ ಮೇಲೆ ತುಸು ಕಾಲ ಗಂಭೀರೆಯಾಗಿ ಕುಳಿತಳು. ಎಲ್ಲರೂ ಕುತೂಹಲದಿಂದ ಅವಳನ್ನೇ ನೋಡುತ್ತಿದ್ದರು. ಆದರೆ ಶಾಂತಲೆ ಬಾಯಿ ಬಿಡಲೇ ಇಲ್ಲ.

'ಏನು ಅಮ್ಮಾಜಿ. . .ಮೌನ ತಾಳಿದೆ ಏಕೆ?. . .ಯುವರಾಜರು ನಿನ್ನ ಭಾವಚಿತ್ರಗಳನ್ನೇ ನಾಟ್ಯದ ವಿವಿಧ ಭಂಗಿಗಳಲ್ಲಿ ಬಿಡಿಸಿದ್ದಾರೆ ಎಂದು ಕೋಪವೆ?'

'ಅಲ್ಲಾ ಅಪ್ಪಾಜಿ. . ಈ ಓಲೆ ನೋಡಿದೆ. ಇದರಲ್ಲಿ ಶಿಲ್ಪಕಲೆಯನ್ನು ಬಲ್ಲವರು ಅಭಿಪ್ರಾಯ ಸೂಚಿಸಬಹುದು ಎಂದಿದೆ. ಅದನ್ನು ಕುರಿತು ಆಲೋಚಿಸುತ್ತಿದ್ದೆ.'

'ಏನು ನಿನ್ನ ಅಭಿಪ್ರಾಯ ಅಮ್ಮಾಜಿ.'

'ನೋಡಿ ಅಪ್ಪಾಜಿ, ಸಿಂಹಾಸನದ ಪಕ್ಕದಲ್ಲಿರುವ ಸಾಲಭಂಜಿಕೆಗಳಂತೆ ಈ ಶಿಲಾಬಾಲಿಕೆಯರನ್ನು ಸಾಲಾಗಿ ದೇಗುಲದ ಯಾವುದೋ ಒಂದು ಮೂಲೆಯಲ್ಲಿ ನಿಲ್ಲಿಸಿದರೆ ಅಷ್ಟು ಸೊಗಸೆನಿಸಲಾರದು. . .ಪ್ರಭುಗಳ ಅಭಿಪ್ರಾಯದಲ್ಲಿ ಏನಿದೆಯೊ ಕಾಣೆ. . .ಆದರೆ ನನಗೆ ತೋರಿದ್ದು ಇಷ್ಟು – ಈ ಶಿಲಾಬಾಲಿಕೆಯರನ್ನು ನಕ್ಷತ್ರಾಕಾರದ ಅಡಿಪಾಯವುಳ್ಳ ದೇವಾಲಯದ ಪ್ರತಿಯೊಂದು ಮೂಲೆಯಲ್ಲೂ ಮೇಲು ಮಚ್ಚಿಗೆಗೆ ಆಧಾರವಾಗಿ ನಿಲ್ಲಿಸಿದರೆ – ಕಟ್ಟಡಕ್ಕೆ ಆಧಾರವೂ ಆಯಿತು, ದೇಗುಲಕ್ಕೆ ಅಲಂಕಾರವೂ ಆಯಿತು. ಆದ್ದರಿಂದ ಈ ಎಲ್ಲ ಮದನಿಕಾ ವಿಗ್ರಹಗಳನ್ನೂ ನಿರ್ಮಾಣವಾಗಲಿರುವ ದೇವಾಲಯದ ಸುತ್ತೆಲ್ಲ ಪ್ರೇಕ್ಷಕರ ಕಣ್ಣು ಸೆಳೆಯುವಂತಹ ನೃತ್ಯ ಭಂಗಿಯಲ್ಲಿ ನಿಲ್ಲಿಸಿದರೆ ಒಳಿತು ಎಂದು ಸೂಚಿಸಿ. . .ಈ ದೇವಾಲಯದ ಚಿತ್ರಪಟದಲ್ಲಿ ಮದನಿಕಾ ವಿಗ್ರಹಗಳನ್ನು ಬಿಡಿಸಿ, ಚಿತ್ರಿಸಿ ಕಳಿಹಿಸೋಣ ಎನ್ನುತ್ತಿದ್ದೇನೆ.'

'ಹಾಗೇ ಮಾಡು. . .ಉತ್ತಮ ಸಲಹೆ. . .'

ತಂದೆ ತಾಯಿಯರ ಅನುಮತಿ ಸಿಕ್ಕ ಕೂಡಲೇ ಶಾಂತಲೆ ತನ್ನ ಉಪ್ಪರಿಗೆಯನ್ನೇರಿ ಬಣ್ಣದ ಪೆಟ್ಟಿಗೆ, ಕುಂಚಗಳನ್ನು ತೆಗೆದು ದೇವಾಲಯದ ನಕಲಿನ ಮೇಲೆ ಮದನಿಕಾ ವಿಗ್ರಹಗಳನ್ನು ಚಿತ್ರಿಸಿದಳು.

ತಿದ್ದುಪಡಿ ಪಡೆದ ದೇವಾಲಯದ ಚಿತ್ರ ದೋರಸಮುದ್ರವನ್ನು ತಲುಪಿತು. ಅರಮನೆಯಲ್ಲಂತೂ ಶಾಂತಲೆಯ ಚಿತ್ರವಿನ್ಯಾಸ – ಶಿಲ್ಪಕ್ಕೆ ಅಳವಡಿಸಬೇಕೆಂಬ ಅಭಿಪ್ರಾಯ ಹರ್ಷೋದ್ಗಾರದಿಂದ ಸ್ವಾಗತ ಪಡೆಯಿತು. ರಾಜಮಾತೆಯರಿಗಂತೂ ಇಂತಹ ಅಪೂರ್ವ ಕಲಾವಿದೆಯನ್ನು ಕಣ್ಣಾರೆ ಕಾಣಬೇಕು, ನುಡಿಸಬೇಕು ಎಂಬ ಕಾತುರ ಬಹಳವಾಯಿತು. ವಿಷ್ಣುವರ್ಧನನ ಸವಿಗನಸುಗಳಿಗೆ ಹಗಲು ರಾತ್ರಿ ಯಾವಗಳು ಸಾಲದಾದವು. ಭಾವೀಪತ್ನಿಯ ಬಗೆಗೆ ಏನೇನೋ ಕಲ್ಪನೆಗಳನ್ನು ಕಟ್ಟಿಕೊಂಡ.

ಙ

ದೋರಸಮುದ್ರದ ಆಹ್ವಾನಕ್ಕೆ ಓಗೊಟ್ಟು ದೇಶ – ವಿದೇಶಗಳಿಂದ ಸಹಸ್ರಾರು ಜನ ಅತಿಥಿಗಳು ಆಗಮಿಸಿದ್ದರು. ಅವರೆಲ್ಲ ರಿಗೂ ಪ್ರತ್ಯೇಕ ಬಿಡಾರದ ಏರ್ಪಾಟಾಗಿತ್ತು. ಆದರೆ ಶಿವಗಂಗೆಯವರಿಗೆ ಪ್ರತ್ಯೇಕ ಬಿಡಾರ ಕೊಟ್ಟಿರಲಿಲ್ಲ. ರಾಜಮಾತೆಯವರಿದ್ದ ರಾಜವಾಡೆಯಲ್ಲೇ ಅವರನ್ನು ಕರೆತಂದು ಇಳಿಸಲಾಗಿತ್ತು. ವಿಜಯೋತ್ಸವಕ್ಕೆ ಎರಡು ದಿವಸಗಳು ಮುಂಚೆಯೆ ಬಂದಿದ್ದ

ಮೇನೆಯನ್ನೂ, ಶಿವಗಂಗೆಯ ರಥವನ್ನೂ ಸ್ವಯಂ ರಾಜಮಾತೆಯವರೇ ಸ್ವಾಗತಿಸಿದ್ದರು. ಅವರಿಗೆ ತಮ್ಮ ಭಾವೀ ಸೊಸೆಯನ್ನು ನೋಡುವ ಕಾತರ.

ಮೊದಲು ಬಂದು ತಮ್ಮ ಪಾದಗಳಿಗೆ ಹಣೆಹಚ್ಚಿ ಪಾದಧೂಳಿಯನ್ನು ನೆತ್ತಿಯ ಮೇಲೆ ಪಡೆದ ಶಾಂತಲೆಯ ಸಂಸ್ಕೃತಿ ಸಜ್ಜನಿಕೆಗಳನ್ನು ಕಂಡ ರಾಜಮಾತೆಯವರಿಗೆ ಅಮಿತಾನಂದವಾಯಿತು. ಕೂಡಲೇ ಅವಳ ಎರಡೂ ತೋಳುಗಳನ್ನು ಹಿಡಿದು ಮೇಲೆತ್ತಿ ಆಲಂಗಿಸಿಕೊಂಡರು. ದಂತದ ಪುತ್ಥಳಿಯಂತೆ ಕಂಗೊಳಿಸುತ್ತಿದ್ದ ಶಾಂತಲೆಯನ್ನು ಕಣ್ತುಂಬ ನೋಡಿದರು. ಅವಳಲ್ಲಿ ಚೆಲುವಷ್ಟೇ ಇಲ್ಲ, ರಾಜಮನೆತನಕ್ಕೆ ಯೋಗ್ಯವಾದ ಸಾಮುದ್ರಿಕಾ ಲಕ್ಷಣಗಳೂ ಇದ್ದವು. ಅವರ ಮನಸ್ಸಿನಲ್ಲೇ ಅಂದುಕೊಂಡರು. 'ಇಂತಹ ಸುಲಕ್ಷಣ ಸಂಪನ್ನೆ ಮಹಾರಾಣಿಯಾಗುವುದು ನಾಡಿನ ಪುಣ್ಯ. ನಮ್ಮ ಮನೆಗೆ ಸೊಸೆಯಾಗಿ ಬರುವುದು ನಮ್ಮ ಭಾಗ್ಯ ವಿಶೇಷ' ಎಂದು.

ಅಂದೇ ರಾತ್ರಿ ರಾಜವಾಡೆಯಲ್ಲಿ ಸ್ತ್ರೀಯರಿಂದ ಸಂಗೀತಗೋಷ್ಠಿ ಏರ್ಪಾಟಾಗಿತ್ತು. ಲಕ್ಷ್ಮಿ ಶ್ರುತಿಗೂಡಿದ ತಂಬೂರವನ್ನು ಮೀಟುತ್ತಿದ್ದಳು. ಶಾಂತಲೆ ಸ್ವಲ್ಪ ಹೊತ್ತು ವೀಣೆಯನ್ನು ನುಡಿಸಿದಳು. ಶ್ರೋತೃಗಳಿಗೆ ಸಾಕ್ಷಾತ್ ಸರಸ್ವತಿಯೇ ವೀಣೆ ಹಿಡಿದು ನುಡಿಸುತ್ತಿದ್ದಾಳೆ ಎಂದು ಭಾಸವಾಯಿತು. ಅನಂತರ ವೀಣೆಯನ್ನು ಬಿಟ್ಟು ತಾನೇ ತಾಳ ಹಾಕಿಕೊಂಡು ಹಾಡತೊಡಗಿದಳು. ಅವಳ ಕಂಠಶ್ರೀಯಿಂದ ರಾಗಮಾಲಿಕೆಯೊಂದು ಹೊರಟಿತು. ಬೃಂದಾವನದ ವಕ್ಷಸ್ಥಲದಲ್ಲಿ ವರ್ತುಲಾಕಾರವಾಗಿ ಸುತ್ತುವರಿದು ನಿಂತಿದ್ದ ಗೋಪಿಕೆಯರ ಮಧ್ಯದಲ್ಲಿ ರಾಸಕ್ರೀಡೆಯಲ್ಲಿ ತಲ್ಲೀನನಾದ ಮುರಳೀ ಮೋಹನನ ಶೃಂಗಾರಗೀತೆ.

ಮೃದುಮಧುರಾಧರ ಚುಂಬನದಿಂಚರ
ಮುರಳಿಯ ಕೊರಲಿಂದಿಳಿಯುತಿದೆ
ಗೋಪಿಯೆರೆದೆಯಲಿ ತಾಪವ ತುಂಬಿಸಿ
ನಲ್ಲೇ. . .ನಿಲ್ಲೆಂದುಸುರುತಿದೆ !
ಮೋಹನ ಮುರಳೀ ನಾದಮೋದಕೆ
ಯಮುನಾ ತೀರವೆ ಅರಳುತಿದೆ
ರಾಧಾ ಮಾಧವರಾಲಿಂಗನಕೆ
ಬೃಂದಾವನ ಮೈ ಮರೆಯುತಿದೆ !
ಕುಸುಮ ಕಪೋಲಕೆ ಸುಷ್ಮ ಸುಗಲ್ಲಕೆ
ಮೆಲ್ಲನೆ ಹೂದುಟಿ ಚಾಚುತಿದೆ
ಪೀನ ಪಯೋಧರ ಭಾರಾಧಾರಕೆ
ಸುಸಿಲಿನ ಬಿಸಿಯುಸಿರಾಡುತಿದೆ !
ಲಲಿತ ಲವಂಗ ಲತಾ ಪರಿಶೀಲನ
ಕೋಮಲ ಮಲಯ ಸಮೀರೇ
ಮಧುಕರ ನಿಕರ ಕರಂಬಿತ ಕೋಕಿಲ
ಕೂಜಿತ ಕುಂಜ ಕುಟೀರ !
ಧೀರ ಸಮೀರೇ ಯಮುನಾ ತೀರೇ
ವಸತಿ ವನೇ ವನಮಾಲೀ
ಗೋಪಿ ಪೀನ ಪಯೋಧರ ಮರ್ದನ
ಚಂದನ ಕರಯುಗಶಾಲಿ !

ಅದು ಮುಗಿಯುವ ಮುನ್ನ ಸ್ವಲ್ಪ ಕಾಲದವರೆಗೆ ತನಿ ಬಿಡಲಾಯಿತು. ವೇಣು, ವೀಣೆ ಮೃದಂಗಗಳು ಗುಡುಗಾಡಿದುವು. ಅಲ್ಲಿಗೆ ಮೊದಲ ಶೃಂಗಾರ ಗೀತೆ ಮುಗಿದು ಎರಡನೆಯ ಭಕ್ತಿ ಗೀತೆ ಆರಂಭವಾಯಿತು. ಅದು ಜಗನ್ಮಾತೆಯಾದ ಆದಿಶಕ್ತಿಯನ್ನು ಕುರಿತದ್ದು. ಈ ವಿಶ್ವಸೃಷ್ಟಿಯ ಮುನ್ನವೇ ಇದ್ದ, ವಿಶ್ವಸೃಷ್ಟಿಗೆ ಕಾರಣವಾದ, ಇಂದು ಮುಂದು ಎಂದೆಂದೂ ಸಮಸ್ತ ವಿಶ್ವವ್ಯಾಪಾರಕ್ಕೂ ಕಾರಣೀಭೂತವಾದ ಶಕ್ತಿ ಆ ಆದಿಶಕ್ತಿ, ಪರಾತ್ಪರ ಶಕ್ತಿ ! ಯಾವ ಶಕ್ತಿ ನೀರಿನಲ್ಲಿ ತಂಪಾಗಿ, ಗಾಳಿಯಲ್ಲಿ

ವೇಗವಾಗಿ, ಸೂರ್ಯನಲ್ಲಿ ತೇಜಸ್ಸಾಗಿ, ಚಂದ್ರನಲ್ಲಿ ಕಾಂತಿಯಾಗಿ, ನಕ್ಷತ್ರದಲ್ಲಿ ನಗೆಯಾಗಿ, ಹೂವಿನಲ್ಲಿ ಪರಿಮಳವಾಗಿ, ಹಕ್ಕಿಯ ಕಂಠದಲ್ಲಿ ಹಾಡಾಗಿ, ಕಲ್ಲಿನಲ್ಲಿ ಘನೀಭೂತಶಕ್ತಿಯಾಗಿ ನೆಲೆ ನಿಂತಿದೆಯೊ ಅದೇ ಶಕ್ತಿ ಉಳಿಯಲ್ಲಿ ಸೇರಿ ಶಿಲ್ಪಿಯನ್ನು, ಕುಂಚದಲ್ಲಿ ಸೇರಿ ಚಿತ್ರಕಾರನನ್ನೂ, ಲೇಖಣಿಯಲ್ಲಿ ಅಡಗಿ ಕವಿಯನ್ನೂ, ನಾದದಲ್ಲಿ ಬೆರತು ಗಮಕಿಯನ್ನೂ, ಅಭಿನಯದಲ್ಲಿ ಕರಗಿ ನರ್ತಕಿಯನ್ನೂ, ಜ್ಞಾನದಲ್ಲಿ ಬೆಳಗಿ ವಿಜ್ಞಾನಿ, ವಿಶ್ವಜ್ಞಾನಿ, ತತ್ವಜ್ಞಾನಿ, ರಾಜಕಾರಿಣಿ, ಸಂತ, ಸಾಮ್ರಾಟವನ್ನೂ ಸೃಷ್ಟಿಸಿದೆ. ಅಣುರೇಣು ತೃಣಕಾಷ್ಟಗಳಲ್ಲೂ ಅದು ಅಡಗಿದೆ. ಅಂತಹ ವಿಶ್ವವ್ಯಾಪಾರದ ಚೈತನ್ಯವನ್ನು ಸ್ವ–ಸ್ವರೂಪ ಸೌಂದರ್ಯದಿಂದ ಮೆರೆಯುತ್ತಿರುವ ಆ ಮಹಾಶಕ್ತಿಯನ್ನು ಕುರಿತು ಹೃದಯ ತುಂಬಿ ಹಾಡಿದಳು ಶಾಂತಲೆ.

ಮೊದಲ ಚರಣವನ್ನು ಆಲಾಪನೆಯೊಂದಿಗೆ ಎತ್ತಿಕೊಂಡಳು. ಸುತ್ತಿ ಸುಳಿದು ಹೊರಟ ರಾಗ ಕ್ರಮೇಣ ಮೇಲೇರತೊಡಗಿತು –

ಬೃಂದಾವನ ಲೀಲೆ. . .
ಬೃಂದಾವನ ಲೀಲೇೀ. . .
ಸುಮಸುಂದರ ತರುಲತೆಗಳ ಬೃಂದಾವನ ಲೀಲೆ
ಸುಪ್ರಬೋಧ ಚಂದ್ರೋದಯ ರಾಗಾರುಣ ಜಾಲೆ
ಗಿರಿಸಿರಿ ಬನ ಸಂಚಾರಿಣಿ ತುಂಗಾಜಲ ನೀಲೆ
ದಲದಲದಲ ಮೆದುಹಾಸಲಿ ಗಾನ ಸುಪ್ತಲೋಲೆ
ಮಲೆನಾಡಿನ ಕೋಗಿಲೆಯೆ
ಬಯಲನಾಡ ಮಲ್ಲಿಗೆಯೆ
ವಂಗ ವಿಷಯ ಭೃಂಗವೆ
ಧವಳಗಿರಿಯ ಶೃಂಗವೇ
ಕಾವೇರಿ ಗೋದಾವರಿ ಗಂಗೆ ಯಮುನೆ ಸಿಂಧುವೆ
ಶತ ಶತ ಶತಮಾನಗಳ ಗುಪ್ತಗಾಮಿ ಚೇತನವೆ
ಋತುಋತುವಿಗು ಹೂವಾಗಿ ಫಲವಾಗುವ ತನಿರಸವೆ
ಚಿಲಿಮಿಲಿಯೆಂದಾಮೋದದಿ ನಲಿದುಲಿವಾ ಕೂಜನವೆ
ಮಧುತರ ಮಂದಾನಿಲ ಸೌಗಂಧದ ಸಿರಿ ಪರಿಮಳವೆ
ನಸುಹಸುರಿನ ಹಿಮಮಣಿಯೆ
ಎಳೆವಿಸಿಲಿನ ಮೇಲುದವೆ
ಬಿರಿದ ಮುಗುಳ ಬಿಂಕವೇ
ತೆರೆದ ಸೋಗೆ ನರ್ತನವೆ
ನಿರ್ಭರ ನಿರ್ಝರಣಿಯ ಜಲಪಾತದ ಗಿರಿ ಗರ್ಜನೆಯೆ
ನಡುನಿಶೆಯೊಳು ನರ್ತಿಸುವಾ ಜ್ವಲಿಸಿವ ನವತಾರಗೆಯೆ
ಕಾರ್ ಮೋಡವೆ ಕಣ್ ತೆರೆಯಿತೊ ! ಸೆಳೆಮಿಂಚಿನ ಸಂಚಳವೆ
ತಿರೆ ತಿಣ್ಣನೆ ತಣಿಯುತಲಿರೆ ತಂಗದಿರನ ಚುಂಬಿನಿಯೆ
ಮುಗಿಲು ಮಲೆ ಕಾನನ ಅಲೆ ಸಾಗರಲೋಲ್ಲಾಸಿಯೆ
ಮನದ ಬಯಕೆ ಧೇನುವೆ
ಮಿಡಿದ ವೀಣಾ ಕ್ವಣಿತವೆ
ಸ್ವರ್ಣ ಕುಂಚ ವರ್ಣವೆ
ಶಿಲ್ಪ ಕಲ್ಪ ತಲ್ಲವೇ
ಗಗನ ಗಂಗೆ ನವತರಂಗೆ ಶಿವಶೃಂಗೋತ್ಪ್ರಾಸಿಯೆ

ಅಣು ಅಣುವಲಿ ಜಲಕಣದಲಿ ಘನತರ ಸ್ವರೂಪಿಯೆ
ಕವಿ ಕಲಾವಿದಂತರಂಗದಾನಂದದ ಸ್ಫೂರ್ತಿಯೇ
ರವಿಗೆ ತೇಜ, ಶಶಿಗೆ ಕಾಂತಿ, ವಾಯುವೇಗದಾತೆಯೆ
ಓಂ ನಮೋ ಅನ್ನಪೂರ್ಣೆ ಸ್ವಸಂಪೂರ್ಣ ಕಾರಿಣೀ
ಓಂ ನಮೋ ರಸೋಲ್ಲಾಸ ರಾಗಪೂರ್ಣ ರಾಗಿಣೀ
ಓಂ ನಮೋ ಶಾಂತಿ ತುಷ್ಟಿ ದಯಾಪೂರ್ಣ ಧಾರಿಣೀ
ಓಂ ನಮೋ ಶಾಂತಿ
ನಮೋ ಶಾಂತಿ,
ನಮೋಕ್ಷಾಂತ ರೂಪಿಣೀ

ಹಾಡು ಶ್ರೋತೃಗಳನ್ನು ಮೋಹ ಮುಗ್ಧರನ್ನಾಗಿ ಮಾಡಿತು. ರಾಜವಾಡೆ ಸಂಪೂರ್ಣವಾಗಿ ಓಂಕಾರದ ಝೇಂಕಾರದ ಗೂಡಾಯಿತು. ಶ್ರೋತೃಗಳು ಭಕ್ತಿರಸದಲ್ಲಿ ಓಲಾಡಿ ಹೋದರು. ಹಾಡು ಮುಗಿತಾಯಕ್ಕೆ ಬಂದ ಕೂಡಲೇ ರಾಜಮಾತೆಯವರು ಓಡಿ ಬಂದು ತಮ್ಮ ಸೊಸೆಯನ್ನು ಅಪ್ಪಿ ಮುದ್ದಾಡಿದರು. ಸಭೆ ಚಪ್ಪಾಳೆ ತಟ್ಟಿ ಮುಕ್ತಕಂಠದಿಂದ ಗಾಯಕಿಯನ್ನು ಹೊಗಳಿತು. ಆದರೆ ಯಾರಿಗೂ ತಿಳಿದಿರಲಿಲ್ಲ ಹಾಡಿದವಳು ಹೊಯ್ಸಳ ಸಾಮ್ರಾಜ್ಯದ ಭಾವಿ ಮಹಾರಾಜ್ಞಿ ಎಂದು.

ಶಾಂತಲೆ ಅರಮನೆಗೆ ಬಹು ಬೇಗ ಹೊಂದಿಕೊಂಡಳು. ಅಲ್ಲಿಯವರು ಬೇರೆ ಎಂಬ ಭಾವನೆಯೇ ಅವಳಿಗೆ ಬರಲಿಲ್ಲ. ಎಲ್ಲರೂ ಅಪರಿಚಯಸ್ಥರೇ ಆಗಿದ್ದರೂ ತನಗೆ ಚಿರಪರಿಚಿತರೊ ಎನ್ನುವಂತೆ ಎಲ್ಲರೊಡನೆಯೂ ಕೂಡಿ ಮಾತನಾಡಿದಳು. ಅರ ಮನೆಯ ದಾಸದಾಸಿಯರಿಗೆ ಸಖೀಜನಕ್ಕೆ 'ಅಮ್ಮಾಜೀ' ಆಗಿಬಿಟ್ಟಳು. ಕೊಡುವ, ತೆಗೆದುಕೊಳ್ಳುವ ಜವಾಬ್ದಾರಿಯೂ ಅವಳ ಮೇಲೆ ಬಿದ್ದಿತು. ಅದರಿಂದಾಗಿ ರಾಜಮಾತೆಯವರ ಜೊತೆಯಲ್ಲಿದ್ದಾಗ ಅರಮನೆ ಅಂತಃಪುರ, ಅಗ್ರಹಾರಗಳಿಗೆ ಹೋಗಿಬರುತ್ತಿದ್ದಳು. ಯುವರಾಜರೂ ಕಾರ್ಯನಿಮಿತ್ತ ರಾಜವಾಡೆಗೆ ಬರುತ್ತಿದ್ದರು. ಇಬ್ಬರೂ ಮೊದಮೊದಲು ಯಾವುದೇ ಅಭಿಪ್ರಾಯ ತಿಳಿಸಬೇಕಾಗಿದ್ದರೂ ರಾಜಮಾತೆಯವರ ಮೂಲಕ ತಿಳಿಸುತ್ತಿದ್ದರು. ಕ್ರಮೇಣ ಸಲುಗೆ ಬೆಳೆದು ನೇರ ಸಂಭಾಷಣೆ ಆರಂಭವಾಯಿತು. ಸುಖಾಸನದ ಪಕ್ಕದಲ್ಲಿ ಎರಡೂ ಕಡೆ ವಿಷ್ಣುವನ್ನೂ, ಶಾಂತಲೆಯನ್ನೂ ಕೂರಿಸಿಕೊಂಡು ಏಚಲಾದೇವಿ ಆತ್ಮೀಯವಾಗಿ ನಾಲ್ಕು ಮಾತನಾಡಲಿಚ್ಛಿಸಿದರು. ಆ ಮಾತು ಈ ಮಾತು ಉರುಳಿ ಮಹಾರಾಜ ಪದವಿಯ ವಿಷಯ ಬಂತು. 'ಅಪ್ಪಾಜಿ ಹೊಯ್ಸಳ ಸಾಮ್ರಾಜ್ಯದ ನಿಷ್ಠಾವಂತ ಮಾಂಡಳಿಕರೂ, ಮನ್ನೆಯರೂ, ಡಣಾಯಕರೂ, ಹೆಗ್ಗಡೆಗಳೂ ನಿನ್ನನ್ನೇ ಸಿಂಹಾಸನಕ್ಕೆ ಆರಿಸಿ, ಕಿರೀಟ ಧಾರಣಾ ಮಹೋತ್ಸವಕ್ಕಾಗಿ ಶುಭದಿನವನ್ನು ಕಾಯುತ್ತಿದ್ದಾರೆ ಎಂದು ಶಾಂತಲೆಗೆ ಹೇಳಲಿಲ್ಲವೆ?'

'ಇಲ್ಲ ಅಮ್ಮಾಜಿ. . .ಅದನ್ನು ನಾನು ಹೇಳಬೇಕೇ ಡಣಾಯಕರ ಸುಪುತ್ರಿಗೆ ಸಾಮ್ರಾಜ್ಯದ ಭಾವೀ ಸಾಮ್ರಾಜ್ಞಿಗೆ ಅಷ್ಟೂ ರಾಜಕೀಯ ತಿಳಿದಿರುವುದಿಲ್ಲವೆ?. . .'

'ಆದರೂ ನಿನ್ನ ಬಾಯಿಂದ ಆ ಹರ್ಷದ ಸುದ್ಧಿ ಬಂದರೆ ತುಂಬಾ ಹಿತವಲ್ಲವೆ?'

'ಆಯಿತು. . .ಮಹಾರಾಣಿಯವರೆ. . .'ಎಂದು ಶಾಂತಲೆಯ ಕಡೆಗೆ ತಿರುಗಿದ. ಕೂಡಲೆ ಎದ್ದುನಿಂತು ಕೈಮುಗಿದು ಕೊಂಡು ವಿನಯದಿಂದ ನಿವೇದಿಸಿಕೊಂಡಳು ಶಾಂತಲಾ –

'ಕ್ಷಮಿಸಿ ಮಹಾಪ್ರಭು. . .ಕ್ಷಮಿಸಿ ಮಾತಾಜೀ. . .ನಾನು ಚಿಕ್ಕವಳು ಸೂರ್ಯನ ಎದುರಿನಲ್ಲಿ ಕಿರುಹಣತೆಗೇಕೆ ಪ್ರತಿಷ್ಠೆ?'

'ಸೂರ್ಯನ ಶ್ರೇಯಸ್ಸಿಗೆ ಜ್ಯೋತಿಯ ಹಾರೈಕೆ ಆರತಿಯ ರೂಪದಲ್ಲಿ ಅಭಿವ್ಯಕ್ತವಾಗಬೇಕು. . .ಶಾಂತಲಾ ನೀನು ನಮ್ಮ ಮನೆಯ ಜ್ಯೋತಿ. ಅಷ್ಟೇ ಅಲ್ಲ. ಈ ಸಾಮ್ರಾಜ್ಯದ ಸಕಲ ಸಂಪದಕ್ಕೂ ನೀನು ರಾಜಲಕ್ಷ್ಮಿ. ಇಂದಿನವರೆಗೂ ಕತ್ತಲಾಗಿದ್ದ ಅರ ಮನೆ ನಿನ್ನಿಂದ ಬೆಳಗಬೇಕಾಗಿದೆ. ಹೊಯ್ಸಳರು ಚಾಲುಕ್ಯರಿಂದ ಸಂಪೂರ್ಣ ಸ್ವತಂತ್ರರಾಗಿ ಸಾಮ್ರಾಟರೆನಿಸಿ ಬಾಳಬೇಕಾಗಿದೆ. ನಿನ್ನಂಥವಳು ನಮ್ಮ ಮನೆಗೆ ಸೊಸೆಯಾಗಿ ಬರುವುದರಿಂದ ಅದು ವೃದ್ಧಿಯಾದೀತು. ನೀನು ಶೀಲ, ಸದ್ಗುಣ, ಸೌಜನ್ಯಗಳಿಂದ ನಾಡಿನ ಆತ್ಮಬಲ ಹೆಚ್ಚೀತು. . .ಅಲ್ಲವೆ.'

'ಸತ್ಯವಾದ ಮಾತು ಮಾತಾಜೀ. . .ಅಂತಃಪುರದ ಪಾತಿವ್ರತ್ಯ, ಪ್ರಜಾಕೋಟಿಯ ಧಾರ್ಮಿಕ ವೃತ್ತಿ ಇವೇ ಆಳುವ ಪ್ರಭುಗಳಿಗೆ ವಜ್ರರಕ್ಷೆ. ರಾಷ್ಟ್ರದಲ್ಲಿ ನೀತಿ ನೆಲೆಗೊಂಡಿರಬೇಕು. ಧರ್ಮ ಸದಾ ವರ್ಧಿಸುತ್ತಿರಬೇಕು. ಇಲ್ಲವಾದರೆ ಪತನಕ್ಕೆ ನಾಂದಿ ಹಾಡಿದಂತಾಗುತ್ತದೆ. . .'

'ಒಪ್ಪಿದೆ ಶಾಂತಲಾ. . .'ವಿಷ್ಣು ನುಡಿದ – 'ಪ್ರಜೆಗಳನ್ನು, ಅರಮನೆ, ಅಂತಃಪುರಗಳನ್ನು ಕುರಿತು ಮಾತನಾಡಿದೆಯಲ್ಲಾ. ಈಗ. . .ಮಹಾರಾಜ ಅನ್ನಿಸಿಕೊಂಡವನು ಹೇಗಿರಬೇಕು ಹೇಳು ನೋಡೋಣ' ಎಂದ.

'ಪ್ರಭುಲಕ್ಷಣಕ್ಕೆ ನಾನು ಪೀಠಿಕೆ ಹೇಳಬೇಕಾಗಿಲ್ಲ. ಮಹಾಪ್ರಭು. .ನಮ್ಮ ಭಾರತೀಯ ಧರ್ಮವೇ ರಾಜಧರ್ಮವನ್ನು ಬೋಧಿಸಿದೆ. ರಾಜನಾದವನು ಪ್ರತ್ಯಕ್ಷ ದೇವತೆ. 'ನಾ ವಿಷ್ಣುಃ ಪೃಥಿವೀಪತಿಃ' ಆದಕಾರಣ ದೇವದೇವನಿಗೆ ತನ್ನ ಮಕ್ಕಳ ವಿಚಾರದಲ್ಲಿ ಹೇಗೆ ನಡೆದುಕೊಳ್ಳಬೇಕೆಂದು ತಿಳಿದಿರಬೇಕಲ್ಲವೆ?'

'ಕೆಲವು ಸಂದಿಗ್ಧಗಳು ರಾಜನಿಗೂ ಬಂದು ಒದಗಿದರೆ?'

'ಸೂಕ್ತ ಸಲಹೆ ನೀಡಲು ಸಹಧರ್ಮಿಣಿ ಇರುವುದಿಲ್ಲವೆ?'

'ಹ್ಞಾಂ. . .ಅದಕ್ಕಾಗಿಯೇ ಈ ಪ್ರಶ್ನೆ. . .ಈಗ ನೀನೆ ಉತ್ತರ ಕೊಡು. . .'

'ಮಹಾಪ್ರಭುಗಳಿಗೆ ಒದಗಿರುವ ಸಂದಿಗ್ಧವಾದರೂ ಏನು?'

'ಅವನು ಬೇಡ ನಾನು ತಿಳಿಸುತ್ತೇನೆ' ಎಂದು ಮಧ್ಯೆ ಪ್ರವೇಶಿಸಿದರು ರಾಜಮಾತೆ 'ಕೇಳು ಶಾಂತಿ. . .ನೀನು ನನ್ನ ಮಗನ ಮನಸ್ಸಿಗೆ ಬಂದ ಹೆಣ್ಣು. ಅರಮನೆಗೆ ಮೆಚ್ಚಾದ ಸೊಸೆ. ಇದರಲ್ಲಿ ಎಳ್ಳಷ್ಟೂ ಸಂದೇಹವಿಲ್ಲ. ಆದರೆ ರಾಜಕಾರಣದಿಂದಾಗಿ ಒಂದು ಕಡೆ ಪಲ್ಲವಾಧೀಶ ತನ್ನ ಮಗಳು ಬೊಮ್ಮಲೆಯನ್ನು ಮತ್ತೊಂದು ಕಡೆ ನೊಳಂಬವಾಡಿಯ ಅರಸು ಗಂಗನೊಳಂಬ ತನ್ನ ಮಗಳು ರಾಜಲೆಯನ್ನೂ, ಮಗದೊಂದು ಕಡೆ ಬನವಾಸಿಯರಸು ಬಿಜ್ಜಲೆಯನ್ನೂ ನಮ್ಮ ವಿಷ್ಣುವಿಗೆ ಧಾರೆಯೆರೆದು ಕೊಡಲು ಮುಂದೆ ಬಂದಿದ್ದಾರೆ. ಹೀಗಿರುವಲ್ಲಿ ಅರಸನಾಗಬೇಕಾದವನು ಯಾರನ್ನು ಲಗ್ನವಾಗಬೇಕು ಹೇಳು?'

'ಎಲ್ಲರನ್ನೂ.'

'ಭಲೇ. ಭೇಷ್ ಒಪ್ಪಿದೆ. . .ಅವ್ವೆ. ಇವಳು ಸವತಿಗಂಧವಾರಣೆ.'

'ಸದ್ಯದಲ್ಲಿ ಇವಳು ನನ್ನ ಸೊಸೆಯೂ ಅಲ್ಲ. ನಿನ್ನ ಹೆಂಡತಿಯೂ ಅಲ್ಲ. ಅಂದಮೇಲೆ ಸವತಿಗಂಧವಾರಣೆ ಹೇಗಾದಾಳು. ಇರಲಿ ತಾಳು ಅಪ್ಪಾಜಿ. . .ಈಗ ನಮ್ಮ ಮುಂದಿರುವುದು ಅತಿ ಗಹನವಾದ ಸಮಸ್ಯೆ. . .ಅದನ್ನು ಅವಳೇ ಬಿಡಿಸಲಿ.'

'ಈ ವಿಚಾರದಲ್ಲಿ ಹೆಚ್ಚು ಶ್ರಮ ತೆಗೆದುಕೊಳ್ಳುವುದು ಬೇಡ ಅನ್ನಿಸುತ್ತೆ ಮಾತಾಜೀ. . .' ಸಹಜವಾಗಿಯೇ ನುಡಿದಳು ಶಾಂತಲೆ.

'ಹೇಗಮ್ಮಾ ಸಾಧ್ಯ. . .ಒಬ್ಬನ ಸುಖ ಭೋಗಕ್ಕಾಗಿ ಹಲವು ಜೀವಗಳ ಆತ್ಮಾರ್ಪಣೆಯಾಗಬೇಕೆ?'

'ಅಲ್ಲ ತಾಯಿ. ಇಲ್ಲಿರುವುದು ಒಬ್ಬ ವ್ಯಕ್ತಿಯ ಸುಖದ ಭೋಗ್ಯದ ಭಾಗ್ಯದ ಪ್ರಶ್ನೆ ಅಲ್ಲ. . .ಒಂದು ರಾಷ್ಟ್ರದ ಪ್ರಗತಿಯ ಪ್ರಶ್ನೆ. ಅದಕ್ಕೆ ಎಲ್ಲರ ತ್ಯಾಗವೂ ಬೇಕು. ಸಮಯ ಬಂದರೆ ಬಲಿದಾನವೂ ಆಗಬೇಕು.'

'ಅಂದರೆ. . .ಪಟ್ಟದರಸಿಯಾಗಿರುವ ನೀನು ಬಹುಪತ್ನಿತ್ವವನ್ನು ಸಮ್ಮತಿಸಿದ ಹಾಗಾಯಿತು.'

'ಅವ್ವೆ, ನಾನೊಂದು ಹನಿ. . .ಸುವಿಶಾಲ ಸಾಗರದಲ್ಲಿ ಹನಿಯೊಂದಕ್ಕೆ ಸ್ವತಂತ್ರ ಅಸ್ತಿತ್ವವಿದ್ದರೂ, ಅದು ಸಾಗರದಿಂದ ಬೇರೆಯಾಗಿ ನಿಂತಾಗ ಅದರಲ್ಲಿ ಯಾವುದೇ ರೀತಿಯ ಶಕ್ತಿ ಸಾಮರ್ಥ್ಯಗಳಿರುವುದೂ ಅಸಂಭವ. . .ತಾನು ನಿಂತ ನೆಲವೇ ಅದನ್ನು ನುಂಗಿಬಿಡಬಹುದು. ಇಲ್ಲವೇ ಪ್ರಭಾಪೂರ್ಣವಾದ ಸೂರ್ಯದೇವನ ಕಿರಣವೊಂದು ಆಪೋಷಣೆ ತೆಗೆದುಕೊಂಡು ಬಿಡಬಹುದು. ಅಣಿಮುತ್ತಿನಂತೆ ನಗುತ್ತಿದ್ದ ಹನಿ ಕ್ಷಣಮಾತ್ರದಲ್ಲಿ ಆವಿಯಾಗಿ ಅಳಿದು ಹೋಗುತ್ತದೆ. ಆದರೆ ಅದೇ ಹನಿ ಸಾಗರವನ್ನು ಸೇರಿದಾಗ. . .? ಸಾಗರದ ಸಾಮರ್ಥ್ಯವನ್ನು ಪಡೆಯಬಲ್ಲದು. ಆದ್ದರಿಂದ ಕೂಡಿ ಬಾಳುವುದರಲ್ಲಿ ನನಗೆ ವಿಶೇಷ ಒಲವಿದೆ. . .ವಿಶ್ವಾಸವಿದೆ ತಾಯಿ. . .'

'ಅನ್ಯರಲ್ಲೂ ಅದೇ ಮಟ್ಟದ ವಿಶ್ವಾಸವನ್ನು ಅಪೇಕ್ಷಿಸುವುದು ಅನುಚಿತ. ಅಸಂಭವ ಅಲ್ಲವೆ ಅಮ್ಮಾಜೀ. . .'

'ಹೌದು ಅವ್ವೆಯವರೆ. ಆದರೆ 'ಲೋಕೋಭಿನ್ನರುಚಿಃ' ಅಲ್ಲವೆ? ನಮ್ಮ ಕೈ ಒಂದೇ ಆದರೂ, ನಮ್ಮದೇ ಆಗಿದ್ದರೂ ಅದರಲ್ಲಿರುವ ಎಲ್ಲ ಬೆರಳುಗಳೂ ಒಂದೇ ಸಮನಾಗಿಲ್ಲ ಅಲ್ಲವೆ? ಹಾಗೆಯೇ ಎಲ್ಲರ ಮನೋಧರ್ಮವೂ ಒಂದೇ ಆಗಿರುವುದಿಲ್ಲ ಆಗಿರುವುದು ಸಾಧುವೂ ಇಲ್ಲ. ಅನೇಕತೆಯಲ್ಲಿ ಏಕತೆಯನ್ನು ಅಡಗಿಸಿಟ್ಟಿರುವುದೇ ಸೃಷ್ಟಿಯ ರಹಸ್ಯ. . .ಅಂತೆಯೇ, ನಮ್ಮ ಶ್ರೇಷ್ಠ ದಾರ್ಶನಿಕರಾದ ಪ್ರಾಚೀನ ರಸಋಷಿಗಳೂ ಲೋಕ ಕಲ್ಯಾಣಕ್ಕಾಗಿ"ಓಂ ಸಹನಾವವತು ಸಹನೌಭುನಕ್ತು ಸಹವೀರ್ಯಂ ಕರವಾವಹೈ ತೇಜಸ್ವಿನಾವಧೀತಮಸ್ತು ಮಾ ವಿದ್ವಿಷಾವಹೈ. . .ಓಂ ಶಾಂತಿಃ ಶಾಂತಿಃ ಶಾಂತಿಃ' ಎಂದು ಶಾಂತಿಮಂತ್ರವನ್ನು ಪಠಿಸಿದರು. ಇದನ್ನೆಲ್ಲಾ ತಮ್ಮ ಮುಂದೆ ಹೇಳಲು ನಾನು ತುಂಬಾ ಚಿಕ್ಕವಳು ಅವ್ವೆಯವರೆ.'

‘ವಯಸ್ಸಿನಲ್ಲಿ ಚಿಕ್ಕವಳಾದರೇನಮ್ಮ. ಜ್ಞಾನಕ್ಕೆ ಹಿರಿದು ಕಿರಿದು ಎಂಬ ಭೇದವಿಲ್ಲ. ಬುದ್ಧಿ ಪ್ರತಿಭೆಗಳು ಯಾರೊಬ್ಬರ ಸ್ವತ್ತೂ ಅಲ್ಲ. . .ಅವು ದೈವದತ್ತ ಸಿದ್ಧಿಗಳು. . .ನಿನ್ನಿಂದ ತಿಳಿಯುವುದು ಬೇಕಾದಷ್ಟಿದೆ. . .ನೀನು ತಿಳಿಯುವುದೂ ಸಾಕಷ್ಟಿದೆ. . .ಇರಲಿ . . .ಅಮ್ಮಾಜೀ. . .ಕಡೆಯದಾಗಿ ನನ್ನ ಒಂದೇ ಒಂದು ಪ್ರಶ್ನೆ. . .ನನ್ನನ್ನು ನೀನು ತುಂಬು ಸ್ವಾರ್ಥಿ ಎಂದಂದುಕೊಂಡರೂ ಚಿಂತೆಯಿಲ್ಲ. . .ತಾಯಿಯಾದವಳ ಕರ್ತವ್ಯ ಎಂದು ತಿಳಿದು ಕೇಳುತ್ತಿದ್ದೇನೆ. . .ಕೇಳಲೆ?’

‘ಅಪ್ಪಣೆ ಕೊಡಿಸಿ ತಾಯಿ. . .’

‘ಬಹು ಪತ್ನಿತ್ವದಿಂದ ನನ್ನ ವಿಷ್ಣುವಿನ ಸಾಂಸಾರಿಕ ಜೀವನ ಸುಖಮಯವಾಗಿರಬಲ್ಲುದೆ’

‘ಏಕಿರಬಾರದು ಮಾತಾಜೀ. ‘ರಾಜಾನೋ ಬಹುವಲ್ಲಭಾಃ’ ಅರಸನೆಂದರೆ ಸಾಕು. ಅವನಿಗೆ ಪತ್ನಿಯರು ಹಲವರು, ಪದವಿ ಗೌರವಗಳು ನೂರಾರು. ಅಲ್ಲದೆ ಹೊಯ್ಸಳ ಸಾಮ್ರಾಜ್ಯದ ಅಕ್ಕಪಕ್ಕದ ಅರಸರೊಡನೆ ಬಾಂಧವ್ಯ ಬೆಳೆಸುವುದರಿಂದ ನಮ್ಮ ರಾಷ್ಟ್ರದ ರಾಜಕೀಯ ಸುಧಾರಿಸುತ್ತದೆ ಮಾತಾಜೀ. . .ಏಕೆಂದರೆ ನಮ್ಮ ಬಾಂಧವ್ಯ ಶತ್ರುಗಳಲ್ಲಿ ಭೀತಿ ಹುಟ್ಟಿಸುವುದಲ್ಲದೆ, ದೋರಸಮುದ್ರದ ಬಗೆಗೆ ಭಕ್ತಿಭಾವವನ್ನೂ ಬೆಳೆಸುತ್ತದೆ. ಆ ಮೂಲಕ ನಮ್ಮ ಸಾಮ್ರಾಜ್ಯ ಸುಭದ್ರವಾಗುತ್ತದೆ ಅಲ್ಲವೆ.’

‘ಏನೋ ಅಮ್ಮಾ. . .ಒಟ್ಟಿನಲ್ಲಿ ನನ್ನ ಅಪೇಕ್ಷೆ ಇಷ್ಟೆ. ರಾಜನಾಗುವವನಿಗೆ ರಾಷ್ಟ್ರಹಿತದ ಕಡೆಗೆ ವಿಶೇಷ ದೃಷ್ಟಿ ಇರಬೇಕು. ಅದಕ್ಕೆ ಅವನ ಸಾಂಸಾರಿಕ ಜೀವನ ಅಡ್ಡಿ ಬರಬಾರದು.’

‘ಬರಲಾರದು ಎಂದು ನಂಬಿದ್ದೇನೆ ಮಾತಾಜೀ. . .ಆದರೆ ಭವಿಷ್ಯದ ಆಗುಹೋಗುಗಳು ನಮ್ಮ ಕೈಯಲ್ಲಿರುತ್ತವೆಯೇ. . .ಯಾವುದಕ್ಕೂ ದೈವಯೋಗ ಒಂದಿದೆ. ಅವನಿಚ್ಛೆ ಇದ್ದಂತಾಗಲಿ.’

‘ಆಯಿತು ಅಮ್ಮಾಜೀ. . .ನನ್ನ ಮಾತುಗಳ ಹಿನ್ನೆಲೆಯಲ್ಲಿರುವ ತಾಯಿತನವನ್ನು ನೀನು ಗಮನಿಸಿದ್ದೀಯೆ ಎಂದು ತಿಳಿದಿದ್ದೇನೆ.’

‘ಖಂಡಿತ ಮಾತಾಜೀ. . .ಅಂತೆಯೆ ತಾಯಿಗೂ, ತಾಯಿತನಕ್ಕೂ ಇರುವ ಭೇದವನ್ನೂ ಅರಿತಿದ್ದೇನೆ. ತಾಯಿ ಸಾರ್ವಭೌಮರನ್ನು ಹೆತ್ತ ತಾಯಿಯವರೂ ಹೌದು. ನನ್ನಂತಹ ಸಾಧಾರಣಳನ್ನು ಅಕ್ಕರೆಯಿಂದ ಕಾಣುವ ತಾಯಿತನ ಉಳ್ಳವರೂ ಹೌದು. ಆ ಕಾರಣ ತಮ್ಮಲ್ಲಿ ಆ ಜಗನ್ಮಾತೆಯ ಪ್ರತಿರೂಪವನ್ನು ಕಾಣುತ್ತಿದ್ದೇನೆ ಅಷ್ಟೆ.’

‘ತುಂಬಾ ಸಂತೋಷ. . .ಅಮ್ಮಾಜಿ. . .ನನ್ನಿಷ್ಟೂ ಮಾತುಗಳು ನಿನಗೆ ಬೇಸರ ತರಲಿಲ್ಲವಷ್ಟೆ?’

‘ಬೇಸರ. . .ಛೇ, ಛೇ, ರಾಜಮಾತೆಯರ ಸನ್ನಿಧಿಯಲ್ಲಿ ಸಂಭಾಷಿಸುವುದಕ್ಕೂ ಪುಣ್ಯವಿರಬೇಕು. ಆ ಭಾಗ್ಯ ನನಗೆ ಲಭಿಸಿದೆ. ಅದಕ್ಕಾಗಿ ನನ್ನ ದೈವಕ್ಕೆ ಸಹಸ್ರ ಪ್ರಣಾಮಗಳನ್ನು ಅರ್ಪಿಸುತ್ತೇನೆ. . .’

‘ಶಾಂತಾ. . .ನಾನೂ ನಿನ್ನಂತೆಯೇ ಹೆಣ್ಣು. . .ಹೆಣ್ಣಿಗೆ ಹೆಣ್ಣಿನ ಹೃದಯ ಗೊತ್ತು. ಅದಕ್ಕಾಗಿ ಮುಂದೆ ಬರಬಹುದೆಂಬ ಸಂಶಯದಿಂದ ಇಂದು ಅವುಗಳಿಗೆ ನಿನ್ನಲ್ಲಿ ಪರಿಹಾರ ಕಾಣಲು ಯತ್ನಿಸಿದೆ ಅಷ್ಟೆ. . .’

‘ಒಳ್ಳೆಯದೇ ಆಯಿತು ಅವ್ವೆಯವರೆ. . . ನಾನೂ ಮನುಷ್ಯಳೆ. . .ಮಾನವ ಸಹಜವಾದ ಆಸೆ ಆಮಿಷಗಳಿಗೆ ಅಲ್ಪತೃಪ್ತಿಗೆ ಸಹಜ ಸ್ವಾರ್ಥಕ್ಕೆ ಬಲಿಬೀಳದಿರಲು ಇಂದು ತಾವು ಆಡಿದ ಮಾತುಗಳು ನನಗೆ ಸದಾ ಎಚ್ಚರಿಕೆ ನೀಡಲಿ.’

‘ನೋಡು ಮಗು, ಕನ್ನಡದಲ್ಲಿ ಒಂದು ಗಾದೆ ಇದೆ. ‘ಮನೆ ಗೆದ್ದು ಮಾರು ಗೆದೆ’ ಎಂದು ಮೊದಲು ನಮ್ಮನ್ನು ನಾವು ಗೆಲ್ಲಲು ಯತ್ನಿಸಬೇಕು. ಅದು ಸಾಧ್ಯವಾದರೆ ಜಗತ್ತನ್ನೇ ಜಯಿಸಬಹುದು. ಮನೆಯ ಹೆಂಡಿರನ್ನು ಆಳಲಾಗದವನು ಸಾಮ್ರಾಜ್ಯವನ್ನು ಆಳಲು ಶಕ್ತನಾದಾನೆಯೆ? ಆದ್ದರಿಂದ ನನ್ನ ವಿಷ್ಣುವಿಗೆ ಸಂಸಾರ ಭಾರವಾಗಬಾರದು ಎಂಬ ಸಂಕುಚಿತ ದೃಷ್ಟಿಯಿಂದಲೇ ನುಡಿದೆ.

‘ಮಾತಾಜಿ, ತಮ್ಮ ದೃಷ್ಟಿ ಯಾವಾಗಲೂ ಸಂಕುಚಿತವೆನಿಸದು. . .ಅದು ರಾಷ್ಟ್ರಹಿತ ಸಾಧನೆಗೆ ಸಹಕಾರಿ. . .ಆಗಲಿ ಮಾತಾಜಿ. . .ಈಗ ವೇಳೆ ಬಹಳವಾಗುತ್ತಿದೆ. . .ಅಪ್ಪಣೆ ಕೊಟ್ಟರೆ. . .’

‘ಹಾಹಾ. .. .ಸ್ವಲ್ಪ ತಾಳೀ. ಇಡೀ ನಾಟಕ ಅತ್ತೆ ಸೊಸೆಯರದೇ ಆದರೆ ಸಂಜೆಯಿಂದಲೂ ಬಣ್ಣ ಹಾಕಿಕೊಂಡು ಕಾಯು ತ್ತಿರುವ ನಮ್ಮಂತಹ ಸಣ್ಣಪುಟ್ಟ ಪಾತ್ರಧಾರಿಗಳ ಪಾಡೇನು?’

‘ಅಂತಹ ಅರಕೆ ಏನಾಗಿದೆ ಅಪ್ಪಾಜೀ?’

‘ಅಲ್ಲಾ ಮಾತಾಜೀ. . .ನನ್ನದೂ ಒಂದು ಪ್ರಶ್ನೆ ಇದೆ. . .ದೇವಿ ಉತ್ತರಿಸುವಳೇನು?’

‘ದೇವಿ ಉತ್ತರಿಸಲಾರಳು. . .ಆದರೆ ಈ ಚರಣದಾಸಿ ತಿಳಿದಷ್ಟನ್ನು ನಿವೇದಿಸಿಕೊಳ್ಳಬಲ್ಲಳು.’

ವಿಷ್ಣುವಿನ ಕಡೆ ತನ್ನ ಓರೆನೋಟ ಬೀರಿ ನಗುತ್ತಲೆ ನುಡಿದಳು ಶಾಂತಲೆ.

'ಈಗ ಒಂದು ಪ್ರಶ್ನೆ' ಮುಂದುವರಿದ ವಿಷ್ಣುವರ್ಧನ. 'ನಾನು ಸಿಂಹಾಸನವನ್ನೇರಿದ ಕೂಡಲೇ ರಾಜ್ಯದ ಮಹಾಮಂತ್ರಿ ಯಾರೆಂಬ ಪ್ರಶ್ನೆ ಬರುತ್ತದೆ. ಅದಕ್ಕೆ ಹಲವು ಮುತ್ಸದ್ದಿಗಳ ಸಲಹೆ ತೆಗೆದುಕೊಳ್ಳಬೇಕು. . .ಆದರೂ ಹೃದಯೇಶ್ವರಿಯ ಸಲಹೆ ಸೂಕ್ತ : ಇದು ನನ್ನ ಅನಿಸಿಕೆ. . .ಈಗ ಹೇಳು ಶಾಂತಾ. . .ನಿನ್ನ ಸಾಮ್ರಾಜ್ಯಕ್ಕೆ ಯಾರು ಮುಖ್ಯಮಂತ್ರಿಗಳಾಗಬೇಕು?

ಶಾಂತಲೆ ಚಣಕಾಲ ಮುಗ್ಧಳಂತೆ ಮೌನ ತಳೆದು ಕುಳಿತಳು. ಏನು ಹೇಳಬೇಕೋ ತೋಚಲಿಲ್ಲ. ಏನೂ ಉತ್ತರ ಬರದಿದ್ದನ್ನು ಕಂಡು ವಿಷ್ಣು ಮತ್ತೆ ಪ್ರಶ್ನಿಸಿದ.

'ಶಾಂತಿ ನಾನು ನಿನ್ನನ್ನು ಪರೀಕ್ಷಿಸುತ್ತಿದ್ದೇನೆಂದು ಭಾವಿಸಬೇಡ. . .'

'ಪರೀಕ್ಷೆ ಏನು ಬಂತು ಪ್ರಭು. . .ಇದು ತುಂಬಾ ಗಹನವಾದ ಪ್ರಶ್ನೆ. ನನ್ನ ಅಲ್ಪಮತಿಗೆ ಎಟುಕದೆಂಬುದೇ ನನ್ನ ಭಾವನೆ.'

'ಪ್ರಯತ್ನಿಸಿದರೆ ಅದು ಅಸಾಧ್ಯವಾದುದೇನೂ ಅಲ್ಲ ಶಾಂತಿ'

'ಹೋಗಲಿ. . .ರಾಷ್ಟ್ರಕ್ಕಾಗಿ ಈಗಿರುವ ಮಂತ್ರಿಮಂಡಲದಲ್ಲಿ ಹೆಚ್ಚು ಸೇವೆ ಯಾರಿಂದ ಸಂದಿದೆ ಪ್ರಭು. . .'

ಅದರಿಂದಾಗಿಯೆ ಈ ಪ್ರಶ್ನೆ ತಲೆದೋರಿರುವುದು. . .ಕೇಳು. ನಮ್ಮ ಪೂಜ್ಯ ತಂದೆಯವರೂ, ಅಣ್ಣನವರೂ ತೀರಿಕೊಂಡ ಕೂಡಲೇ ನಮ್ಮ ಹಿರಿಯರೂ ಪೂಜ್ಯರೂ ಆದ ಮಹಾಮಂತ್ರಿ ಪುಣಿಸಮಯ್ಯನವರು ಖಡ್ಗ ಸನ್ಯಾಸವನ್ನು ಸ್ವೀಕರಿಸಿ ಈ ರಾಜಕೀಯ ರಂಗದಿಂದ ನಿವೃತ್ತಿ ಹೊಂದಿದರು. ಈಗಿನವರ ಪೈಕಿ ಶಿವಗಂಗೆ ನಾಡಿನ ಡಣಾಯಕರಾದ ನಿಮ್ಮ ತಂದೆ ಮಾರಸಿಂಗಮಯ್ಯನವರು, ವೈಜಯಂತಿ ಮಂಡಲದ ನಿಮ್ಮ ಸೋದರಮಾವ ಸಿಂಗಿಮಯ್ಯನವರು ಹಿಂದಿನಿಂದಲೂ ಅರಮನೆಯವರೇ ಆಗಿರುವ ಗಂಗರಾಜರು. ಇವರು ಹಿರಿಯರು ಪ್ರಮುಖರು.

ಈ ಬಗ್ಗೆ ಏನು ಉತ್ತರ ನೀಡುವಳೊ ಎಂದು ತಾಯಿ ಮಗ ಇಬ್ಬರಿಗೂ ಕುತೂಹಲ. ಕಣ್ಣು, ಬಾಯಿ, ಕಿವಿಗಳನ್ನು ತೆರೆದು ಕುಳಿತಿದ್ದರು. ಚಣಕಾಲ ಚಿಂತಿಸಿ ಶಾಂತಲೆ ನುಡಿದಳು,

'ಈ ವಿಚಾರದಲ್ಲಿ ಪ್ರಭುಗಳೂ ರಾಜಮಾತೆಯವರೂ ಅನ್ಯಥಾ ಭಾವಿಸಬಾರದಾಗಿ ಪ್ರಾರ್ಥನೆ. . .ಮಹಾಪ್ರಭು, ಸಿಂಗಿಮಯ್ಯನವರು ತುಂಬು ಸೇವೆ ಸಲ್ಲಿಸಿದ ಮಹನೀಯರಾದರೂ ಅವರು ಇನ್ನೂ ಪೆರ್ಗಡೆ ಮಾತ್ರ. ನಮ್ಮ ತಂದೆ ಮಾರಸಿಂಗಮಯ್ಯನವರು ಪೆರ್ಗಡೆಯ ಸ್ಥಾನದಿಂದ 'ಡಣಾಯಕ' ಪದವಿಗೆ ಏರಿದವರು. ಆದರೆ ಗಂಗರಾಜರು ಹಿಂದಿನ ಮಂತ್ರಿ ಮಂಡಲದಲ್ಲಿದ್ದು ದುಡಿದವರು. ರಾಜ್ಯದ ಒಳಹೊರಗುಗಳನ್ನು ಅರಿತವರು. ಅವರೇ ಅಮಾತ್ಯ ಶಿರೋಮಣಿಗಳೆನಿಸುವುದು ಯೋಗ್ಯ ಎಂಬುದು ನನ್ನ ಭಾವನೆ'

'ಭೇಷ್ ! ಒಪ್ಪಿದೆ ಶಾಂತಿ. . .ನೀನು ಎಲ್ಲದರಲ್ಲೂ ಗೆದ್ದೆ. . .ನನ್ನ ಗೆಲುವಿಗೂ ಕಾರಣಳಾದೆ. . .ಇನ್ನು ನಿನ್ನಿಂದ ರಾಷ್ಟ್ರವೊಂದು ಜಯಗಳಿಸಿ ತನ್ನ ವೈಜಯಂತಿಯನ್ನು ಹಿಮಾಲಯದ ಉತ್ತುಂಗ ಶೃಂಗದ ಮೇಲೆ ಹಾರಿಸಬೇಕಾಗಿದೆ.'

'ಸಾಮ್ರಾಜ್ಯಲಕ್ಷ್ಮಿಯೇ ಸ್ತ್ರೀರೂಪ ಧರಿಸಿ ನಿನ್ನ ಕೈಹಿಡಿಯಲು ಮುಂದೆ ಬಂದಿರುವಾಗ ಜಯಲಕ್ಷ್ಮಿಯೂ ದಾಸಿಯಾಗಲಾರಳೇ ಅಪ್ಪಾಜೀ. . .' ಎಂದು ಶಾಂತಲೆಯನ್ನು ಬೆನ್ನು ತಟ್ಟುತ್ತಾ ನುಡಿದರು ರಾಜಮಾತೆ.

'ಮಾತಾಜಿ. ತಮ್ಮ ಕೃಪೆಗೆ ಪಾತ್ರಳಾದ ನಾನು ಧನ್ಯೆ ! ಪ್ರಭುಗಳ ಪ್ರೀತಿಗೆ ಪಾತ್ರಳಾದ ನಾನು ಮಾನ್ಯೆ ! ಅಂತೆಯೆ ತಮ್ಮ ಪಾದಸಾಕ್ಷಿ, ಎನ್ನ ಮನಸಾಕ್ಷಿ ತಾಯಿ. . .ನಿಮ್ಮ ತಲೆಗೆ ಹೂವ ತರುವೆನಲ್ಲದೆ ಹುಲ್ಲ ತಾರೆ. . .ನಿಮ್ಮ ಕರುಣೆಯ ಕಂದನನ್ನು ಹರಸಿ' ಶಿರಬಾಗಿ ಇಬ್ಬರಿಗೂ ವಂದಿಸಿದಳು.

ಆನಂದಬಾಷ್ಪಗಳು ಒಂದಾದ ಮೇಲೊಂದು ಉರುಳಿ ಶಾಂತಲೆಯ ನೆತ್ತಿಯನ್ನು ತಂಪು ಮಾಡಿದುವು.

೬

ಅಂದಿನದು ವಿವಾಹೋತ್ಸವ

ಮರುದಿನದ್ದು ಪಟ್ಟಾಭಿಷೇಕೋತ್ಸವ

ಮತ್ತಿನ ದಿನದ್ದು ಯುವರಾಜ ಪದವೀ ಪ್ರದಾನೋತ್ಸವ

ಹಮ್ಮಿಕೊಂಡ ಕಾರ್ಯವನ್ನು ಆಗುಮಾಡಲು ಹೊಯ್ಸಳ ಸಾಮ್ರಾಜ್ಯ ಸಿದ್ಧವಾಗಿತ್ತು. ದೇಶವಿದೇಶಗಳ ಎಲ್ಲ ದಾರಿಗಳೂ ಹೊಯ್ಸಳ ರಾಜಧಾನಿಯ ಕಡೆಗೇ ಬರುತ್ತಿದ್ದವು. ದೋರಸಮುದ್ರ ಅಂದು ಜನಜಂಗುಳಿಯಿಂದ ಕಿಕ್ಕಿರಿದು ಹೋಗಿತ್ತು. ತನ್ನನ್ನು ತಾನೇ ಅಲಂಕರಿಸಿಕೊಂಡು ಕಂಗೊಳಿಸುತ್ತಿತ್ತು. ಮನೆಗಳು ಸುಣ್ಣ ಬಣ್ಣಗಳನ್ನು ಬಳಿದುಕೊಂಡಿದ್ದರೆ, ಬೀದಿಗಳು, ಮುತ್ತಿನ ಸಾರಣೆ

ಕಾರಣೆಗಳಿಂದ ಶೋಭಿಸುತ್ತಿದ್ದವು. ಎಲ್ಲೆಡೆಯೂ ತಳಿರು ತೋರಣಗಳು. ಹಸಿರುವಾಣಿ ಚಪ್ಪರಗಳು. ಎಲ್ಲ ಬಸದಿ, ದೇವಾಲಯಗಳಲ್ಲೂ ಅಂದು ವಿಶೇಷ ಪೂಜೆಯ ಏರ್ಪಾಟಾಗಿತ್ತು.

ವಿವಾಹಕ್ಕೆ ಪೂರ್ವದಲ್ಲಿ ಮೂರು ದಿನಕ್ಕೆ ಮೊದಲೆ ನೆಂಟರಿಷ್ಟರು ಅರಮನೆಯನ್ನು ಸೇರಿದ್ದರು. ಆಮಂತ್ರಣಗಳನ್ನು ಕಂಡ ಕೂಡಲೇ ರಾಜರು, ಸಾಮಂತರು, ಮಾಂಡಳಿಕರು, ಮನ್ನೆಯರು ತಂಡೋಪತಂಡವಾಗಿ ದೋರಸಮುದ್ರಕ್ಕೆ ಆಗಮಿಸಿ, ಯೋಗ್ಯವಾದ ಬಿಡಾರಗಳಲ್ಲಿ ತಂಗಿದ್ದರು. ಜೊತೆಯಲ್ಲಿ ತಮ್ಮ ತಮ್ಮ ನಾಡಿನ ವೈಶಿಷ್ಟ್ಯಗಳನ್ನು ಬೆಳಗಿಸುವಂತಹ ಜಾನಪದ ಕಲೆಗಳನ್ನೂ, ಕಲಾವಿದರನ್ನೂ ಕರೆತಂದಿದ್ದರು. ಕವಿ, ಗಮಕಿ, ವಾದಿ, ವಾಗ್ಮಿಗಳೂ ಮಲ್ಲಯುದ್ಧ ನಿಪುಣರೂ, ಕತ್ತಿಕಾಳಗದ ಚತುರರೂ ಎಲ್ಲ ರೂ ಬಂದಿಳಿದಿದ್ದರು. ದೋರಸಮುದ್ರದ ದಿಗ್ವಲಯಗಳಲ್ಲಿ. ಅರಮನೆಯಲ್ಲಂತೂ ಕೇಳುವಂತಿರಲಿಲ್ಲ. ಸಂಭ್ರಮವೊ ಸಂಭ್ರಮ. ಗಿಡಗ ಬಡಿದ ಜೇನುಗೂಡವಾಗಿತ್ತು. ಅತ್ತ ಕಲ್ಯಾಣಮಂಟಪದಲ್ಲಿ ವಿವಾಹಕ್ಕಾಗಿ ಸಕಲ ಸಿದ್ಧತೆಗಳೂ ಆಗಿ ಮುಗಿದಿದ್ದವು. ಕಟ್ಟಿದ ಲಗ್ನಕ್ಕೆ, ಗೊತ್ತುಪಡಿಸಿದ ಮುಹೂರ್ತಕ್ಕೆ ಸರಿಯಾಗಿ ಮಾಂಗಲ್ಯಧಾರಣೆಯ ಕಾರ್ಯವನ್ನು ನೆರವೇರಿಸಬೇಕಾದ್ದರಿಂದ ಅರುಣೋದ ಯಕ್ಕೆ ಮುನ್ನವೇ ಎಲ್ಲವೂ ಅಣಿಯಾಗಿದ್ದವು. ರಾಜಪುರೋಹಿತರು ವಿಧ್ಯುಕ್ತವಾಗಿ ಅಗ್ನಿಯನ್ನು ಸ್ಥಾಪಿಸಿ, ಲಗ್ನಮಂಟಪಕ್ಕೆ ಸಮಸ್ತ ದೇವತೆಗಳನ್ನು ಆಹ್ವಾನಿಸಿದರು. ಪೂಜೆ ಪ್ರಾರ್ಥನೆಗಳಾದ ಮೇಲೆ ವರನಿಂದ ಈ ಮಂತ್ರಗಳನ್ನು ಹೇಳಿಸಿದರು.

'ಓ ಅಗ್ನಿದೇವನೆ, ಕಾಯೇನ ವಾಚಾ ಮನಸಾ ಪರಿಶುದ್ಧನಾಗಿ ಇಂದಿನವರೆಗೂ, ಬ್ರಹ್ಮಚರ್ಯವನ್ನು ಪಾಲಿಸಿಕೊಂಡು ಬಂದ ನಾನು ಇಂದು ಗೃಹಸ್ಥಾಶ್ರಮವನ್ನು ಸ್ವೀಕರಿಸುತ್ತಿದ್ದೇನೆ. ತೇಜೋವಂತನೂ, ಆಯುಷ್ಮಂತನೂ ಯಶೋವಂತನೂ ಆದ ಸತ್ ಪುತ್ರನನ್ನು ಅನುಗ್ರಹಿಸುವ ಮೂಲಕ ನನ್ನ ವಂಶದ ಕುಡಿ ದಾಂಗುಡಿಯಿಡುವಂತೆ ಆಶೀರ್ವದಿಸು.'

ಬೇಡಿಕೆಯ ನಂತರ ಕಾಂಡಪಟ ಸರಿಯಿತು. ಮಾಂಗಲ್ಯಧಾರಣೆಯಾಯಿತು. ಮೊದಲು ಶಾಂತಲೆಗೆ, ಅನಂತರದಲ್ಲಿ ಬೊಮ್ಮಲೆ, ರಾಜಲೆ, ಬಿಜ್ಜಲೆ, ಲಕ್ಷ್ಮಿ ಇವರಿಗೆ. ತೋರ ಹಾರಗಳು ಐವರ ಕೊರಳುಗಳಲ್ಲಿಯೂ ಶೋಭಿಸಿದವು. ಐವರೂ ಹಾಕಿದ ಹಾರಗಳು ಪ್ರಭುವಿನ ಕೊರಳನ್ನು ಜಗ್ಗುತ್ತಿದ್ದವು. ಪುರೋಹಿತರ ಆಶೀರ್ವಚನದ ಅಂತ್ಯದಲ್ಲಿ ನೆರೆದ ಜನತೆ ಸೇಸೆಯಿಟ್ಟು ಚಪ್ಪಾಳೆ ತಟ್ಟಿತು. ಅವರವರಿಗೆ ಬೇಕಾದ ಅರಸಿಯರ ಹೆಸರುಗಳ ಜೊತೆಗೆ ಅರಸನ ಹೆಸರನ್ನು ಸೇರಿಸಿ ಜೈಕಾರ ಮಾಡಿದರು. ಸಪ್ತಪದಿಯೊಂದಿಗೆ ವಿವಾಹ ಮಂಗಲ ಕಾರ್ಯ ಮುಗಿದು, ಭೋಜನಕ್ಕೆ ಏರ್ಪಾಟಾಯಿತು.

ಮಾರನೆಯ ದಿನ ಪಟ್ಟಾಭಿಷೇಕ ಮಹೋತ್ಸವ ! ವಿಷ್ಣುವರ್ಧನಿಗೆ ಪ್ರಭುಪಟ್ಟ, ಶಾಂತಲಾದೇವಿಗೆ ಪಟ್ಟದರಸಿಯ ಪದವಿ. ಅದಕ್ಕಾಗಿ ಪ್ರತ್ಯೇಕ ಸಿದ್ಧತೆ ಆಗಿತ್ತು ಅರಮನೆಯಲ್ಲಿ. ಗಂಗೆ, ಯಮುನೆ, ಕೃಷ್ಣೆ, ಕಾವೇರಿ, ತುಂಗಭದ್ರ ಮೊದಲಾದವುಗಳ ಪವಿತ್ರ ನದಿಗಳ ತೀರ್ಥವನ್ನು ತರಿಸಲಾಗಿತ್ತು. ಕಂಕಣಬದ್ಧರಾದ ಪ್ರಭುಗಳೂ, ಶಾಂತಲೆಯೂ ಸಿಂಹಾಸನವನ್ನು ಅನನ್ಯ ಭಕ್ತಿಯಿಂದ ಪೂಜಿಸಿ, ವಂದಿಸಿ ಪ್ರತಿಜ್ಞೆ ಸ್ವೀಕರಿಸಿದರು –

'ಸನಾತನ ಸಂಸ್ಕೃತಿಯನ್ನೂ ಸರ್ವಧರ್ಮವನ್ನೂ ಪಾಲಿಸಿಕೊಂಡು ಬಂದಿರುವ ಪವಿತ್ರವಾದ ಹೊಯ್ಸಳ ವಂಶದ ಅರಸರುಗಳಿಗೆ ಆಶ್ರಯವಿತ್ತು ಪೋಷಿಸಿ, ಪ್ರೋತ್ಸಾಹಿಸಿದ ಓ ಪವಿತ್ರತಮ ಪೀಠವೆ, ನಮಗೆ ನಿನ್ನ ಅನುಗ್ರಹ ಅನಂತವಾಗಿರಲಿ. ಸತ್ಯಕ್ಕೆ ಚ್ಯುತಿತರದೆ, ಧರ್ಮಕ್ಕೆ ದ್ರೋಹ ಬಗೆಯದೆ, ಪ್ರಜಾಸೇವೆಯೆ ಪರಮಾತ್ಮನ ಪೂಜೆ ಎಂದು ಭಾವಿಸಿ ಅಹರ್ನಿಶಿಯೂ ನಾಡಿನ ಒಳಿತಿಗಾಗಿ, ನಿನ್ನ ಪಾವಿತ್ರತೆಗಾಗಿ ದುಡಿಯುತ್ತೇವೆ. ಇದಕ್ಕೆ ನಮ್ಮ ಆತ್ಮಗಳೇ ಸಾಕ್ಷಿ. ವಿಶ್ವಾಂತರಾಳದ ಸಮಸ್ತ ಚೈತನ್ಯ ಗಳೂ ಸಾಕ್ಷಿ.

ಬೊಗಸೆಗಳಲ್ಲಿ ತುಂಬಿದ್ದ ಹೂಗಳನ್ನು ಸಿಂಹಾಸನದ ಮೇಲೆರಚಿ ವಿಷ್ಣು ಶಾಂತಲೆಯರು ಮೇಲೇರಿದರು. ಅವರಿಬ್ಬರ ತಲೆಗಳಲ್ಲೂ ಸ್ವರ್ಣ ಪಟ್ಟಿಕೆಗಳನ್ನು ಕಟ್ಟಲಾಗಿತ್ತು. ಅವು ಪಟ್ಟಾಭಿಷಿಕ್ತರಾದ ಸಾಮ್ರಾಟ, ಸಾಮ್ರಾಜ್ಞಿ ಇವರೆಂದು ಸಾರಿ ಹೇಳುವಂತಿದ್ದುವು. ರಾಜ ಪುರೋಹಿತರು ಮಂತ್ರಗಳನ್ನು ಪಠಿಸುತ್ತಲೇ ಪುಣ್ಯನದಿಗಳ ಪವಿತ್ರೋದಕವನ್ನು ಅವರ ಶಿರಗಳ ಮೇಲೆ ಎರೆಯುತ್ತಿದ್ದರು. ಕ್ಷೀರಾದಿ ಅಭಿಷೇಕಗಳಾದವು. ಬಹು ವಿಧದ ಪೂಜೆ, ದಾನ–ಧರ್ಮಗಳು ನಡೆದು, ಪೂಜ್ಯರುಗಳಿಂದ, ಗುರುಹಿರಿಯರುಗಳಿಂದ ಶುಭ ಆಶೀರ್ವಾದ, ಆಶಂಸನಗಳು ಆಗಿ ಮುಗಿದುವು.

ಪಟ್ಟಾಭಿಷೇಕದ ಪುಣ್ಯಜಲದಿಂದ ನೆನೆದಿದ್ದ ಬಟ್ಟೆಗಳನ್ನು ರಾಜ ರಾಣಿಯರು ಬದಲಿಸಿಕೊಂಡು ಪಟ್ಟೆ ಪೀತಾಂಬರಗಳನ್ನು ಉಟ್ಟು, ರತ್ನ ಖಚಿತವಾದ ಆಭರಣಗಳನ್ನು ತೊಟ್ಟು ಬಹು ವಿಸ್ತಾರವಾದ ಸಭಾಂಗಣಕ್ಕೆ ಬಂದು, ಎಲ್ಲರಿಗೂ ವಂದಿಸಿ ನಿಂತರು. ಸುಮಂಗಲಿಯರು ಆರತಿ ಮಾಡಿ ಹಾದಿಯುದ್ದಕ್ಕೂ ಹೂದಳಗಳ ನಡೆಮುಡಿ ಹಾಸಿದರು. ರಾಜರಾಣಿಯರು

ಸಿಂಹಾಸನವನ್ನೇರಿದ ಕೂಡಲೇ ಉಳಿದ ನಾಲ್ವರು ರಾಣಿಯರು ಸಿಂಹಾಸನದ ಹಿಂದಿನ ಪೀಠಗಳಲ್ಲಿ ಮಂಡಿಸಿದರು. ಪಂಚವಾದ್ಯಗಳು ಮೊಳಗಿದವು. ಜನಸ್ತೋಮ 'ಉಘೇ ಉಘೇ ! ಎಂದಿತು.

ಶ್ರೀ ಶ್ರೀ ವಿಷ್ಣುವರ್ಧನ ಮಹಾಪ್ರಭುಗಳಿಗೆ ಜಯವಾಗಲಿ !

ಹೊಯ್ಸಳೇಶ್ವರರಿಗೆ ಜಯವಾಗಲಿ !

ಮಹಾರಾಣಿ ಶಾಂತಲಾದೇವಿಯವರಿಗೆ ಜಯವಾಗಲಿ ಜಯವಾಗಲಿ !

ಎಂದು ಮುಗಿಲು ಮುಟ್ಟುವವರೆಗೂ ಘೋಷಣೆ ಮಾಡಿದರು.

ನೂತನ ಸಾಮ್ರಾಟ ಸಾಮ್ರಾಜ್ಞಿಯರಿಗೆ ರಾಜಗೌರವ ನೀಡಲಾಯಿತು. ಪ್ರಜಾಕೋಟಿ ಅವರಿಬ್ಬರನ್ನೂ ತಮ್ಮ ಪ್ರಭು– ಪಿರಿಯರಸಿ ಎಂಬುದಾಗಿ ಒಪ್ಪಿಕೊಂಡಿತು. ಸಿಂಹಾಸನಾರೂಢರಾದ ಅವರಿಗೆ ಕಿರೀಟಗಳನ್ನಿಟ್ಟು ಹೂಮಳೆಗರೆದರು. ಅನಂತರ ಒಬ್ಬೊಬ್ಬರಾಗಿ ಬಂದು, ದರ್ಶನ ಕಾಣಿಕೆಗಳನ್ನಿತ್ತು ತಮ್ಮ ತಮ್ಮ ಭಕ್ತಿ ಗೌರವಗಳನ್ನು ಆ ಮೂಲಕ ಸಮರ್ಪಿಸಿದರು.

ಅಂದಿನ ರಾತ್ರಿ ಎಂದಿನ ರಾತ್ರಿಯಾಗಿರಲಿಲ್ಲ. ಪಟ್ಟದಾನೆಯ ಮೇಲೆ ಸುವರ್ಣದ ಅಂಬಾರಿಯನ್ನಿರಿಸಿ, ಪ್ರಭು ಮತ್ತು ಪಟ್ಟ ದರಸಿಯರನ್ನು ಕೂರಿಸಲಾಗಿತ್ತು. ಅಮರಾವತಿಯ ಸುರೇಶ – ಶಚಿಯರನ್ನು ಹೊತ್ತ ಐರಾವತದಂತೆ ಪಟ್ಟದಾನೆ ರಾಜವೀಧಿಗ ಳಲ್ಲಿ ಮೆರವಣಿಗೆ ಹೊರಟಿತು. ಅಂದು ಹಾದಿಯುದ್ದಕ್ಕೂ ನಾನಾ ಬಗೆಯ ಕಲಾಪ್ರದರ್ಶನಗಳು. ದೂರದ ಬಯಲಿನಲ್ಲಿ ಬಣ್ಣ ಬಣ್ಣದ ಬಾಣ ಬಿರಸುಗಳು, ಮದ್ದು ಮತಾಪುಗಳು, ನಕ್ಷತ್ರದ ಕುಂಡಗಳು ಆಕಾಶ ಮಂಡಲವನ್ನು ಬೆಳಗಿದವು. ಬಹು ವಿಧದ ಜಾನಪದ ಮೇಳ, ಕೋಲಾಟ, ನರ್ತನ, ಗಾಯನಗಳು ನಗರವನ್ನು ತುಂಬಿದವು.

ಸಂಭ್ರಮದ ಮಾರನೆಯ ದಿನ.

ಬೆಳಗಾದ ಕೂಡಲೇ ಹಿಂದಿನ ದಿನಗಳಂತೆಯೇ ಸಿದ್ಧತೆಗಳು ನಡೆದಿದ್ದುವು. ಅದು ಉದಯಾದಿತ್ಯನಿಗೆ ಯುವರಾಜ ಪಟ್ಟ ಪದವಿಯನ್ನು ವಹಿಸಿಕೊಡುವ ದಿನ. ಪಟ್ಟಾಭಿಷೇಕಕ್ಕೆ ನಡೆದ ಸಿದ್ಧತೆಗಳು ಯುವರಾಜ್ಯಾಭಿಷೇಕಕ್ಕೂ ಮೀಸಲಾಗಿದ್ದವು. ರಾಜಪುರೋಹಿತರ ನಿರ್ದೇಶನದಂತೆ ಸಕಲವೂ ನಡೆದು, ರಾಜಾದೇಶದ ಓಲೆಯನ್ನು ಅವನ ಚಾಚಿದ ತೋಳುಗಳ ಮೇಲಿರಿಸಲಾಯಿತು. ಖಡ್ಗವನ್ನು ಮೊಣಕಾಲೂರಿ ಮಹಾಪ್ರಭುಗಳಿಂದ ಸ್ವೀಕರಿಸಿದ ಯುವರಾಜರು ಅದನ್ನು ತಮ್ಮೆರಡೂ ಕಣ್ಣುಗಳಿಗೂ ಒತ್ತಿಕೊಂಡು ಮೇಲೆದ್ದರು. ನಡುವಿಗೆ ಪಟ್ಟಿಯನ್ನು ಬಿಗಿದು ಕಟ್ಟಿ ವೀರಗಾಸೆ ಹಾಕಿ, ಒರೆಯಿಂದ ಖಡ್ಗವನ್ನು ಇರಿದು, ಅದರ ಅಲಗನ್ನು ತಮ್ಮ ಎಡಗೈ ಹೆಬ್ಬರಳಿಗೆ ತಾಕಿಸಿಕೊಂಡರು. ಕೂಡಲೆ ರಕ್ತ 'ಚಿಲ್' ಎಂದು ಚಿಮ್ಮಿತು. ಸುರಿಯುತ್ತಿದ್ದ ನೆತ್ತರನ್ನು ಪ್ರಭುಗಳ ಪಾದಗಳ ಮೇಲೆ ಧಾರೆಯೆರೆದು ಪ್ರಭುವಿಗೆ, ಪೀಠಕ್ಕೆ, ಪ್ರಜಾಕೋಟಿಗೆ ಈ ದೇಹ ಮುಡಿಪು' ಎಂದು ನುಡಿದು ಮೇಲೆದ್ದರು. ಪ್ರಭುಗಳು ಅದೇ ರಕ್ತತಿಲಕವನ್ನು ಯುವರಾಜರ ಹಣೆಗಿಟ್ಟು ಹರಸಿದರು.

'ಯುವರಾಜ ಉದಯಾದಿತ್ಯರಿಗೆ ಜಯವಾಗಲಿ' ಎಂಬ ಘೋಷಣೆ ನಡೆಯಿತು.

ಭಾರಿ ಭೋಜನ, ವಸ್ತ್ರದಾನ, ಹಿರಣ್ಯದಾನ, ಗೋದಾನಗಳೊಂದಿಗೆ ಸಕಲರನ್ನೂ ಸನ್ಮಾನಿಸಲಾಯಿತು.

೭

ಅಧಿಕಾರವೆನ್ನುವುದು ಸೇವೆಯ ಕರ್ಮಭೂಮಿ; ಸ್ವೇಚ್ಛಾಚಾರದ ವೇದಿಕೆಯಲ್ಲ, ಅದೊಂದು ಕಾಯಕದ ಕೇಂದ್ರಕಾರ್ಯಾಲಯ, ಕಟುಕನ ಕಟ್ಟೆಯಲ್ಲ. ಅದನ್ನು ಅಕ್ಷರಶಃ ಅರ್ಥಮಾಡಿಕೊಂಡಿದ್ದರು ಹೊಯ್ಸಳೇಶ್ವರ ವಿಷ್ಣುವರ್ಧನ ಮತ್ತು ಮಹಾರಾಜ್ಞಿ ಶಾಂತಲಾದೇವಿಯವರು. ಅದರಿಂದಾಗಿ ಅರಮನೆ ಅಂತಃಪುರಗಳಲ್ಲಿ ಕೇವಲ ಭೋಗಾಸಕ್ತರಾಗಿ ಅವರು ಕಾಲ ಕಳೆಯಲಿಲ್ಲ. ಸದಾ ತಮ್ಮ ಸಾಮ್ರಾಜ್ಯದ ಸುಕ್ಷೇಮಕ್ಕಾಗಿ ಶ್ರಮಿಸಹತ್ತಿದರು. ರಾಜರಾಣಿಯರಿಬ್ಬರೆ ಕಾಂಚನರಥಾರೂಢರಾಗಿ ದೇಶಪರ್ಯಟನದಲ್ಲಿ ನಿರತರಾದರು. ಮಿತ ಪರಿವಾರ. ತಮ್ಮ ಉಡುಪುಗಳಲ್ಲೂ ಅಷ್ಟೇ, ತುಂಬಾ ಸರಳ ಸಾಧಾರಣ, ಒಳನಾಡಿನ ನಾಲ್ಕೂ ದಿಕ್ಕು ಗಳನ್ನೂ ಮುಟ್ಟಿ ಬಂದುದಾಯಿತು. ಗಡಿಪ್ರದೇಶಗಳಲ್ಲಿ ತುಂಬಾ ಎಚ್ಚರಿಕೆ ನೀಡಲಾಯಿತು. ಹಾದಿಯಲ್ಲಿ ಸಿಕ್ಕ ಹಳ್ಳಿಗಳಲ್ಲಿ, ನಗರ ಗಳಲ್ಲಿ ಎಲ್ಲೆಡೆಯೂ ರಾಜರಾಣಿಯರಿಗೆ ಸ್ವಾಗತ ಕೋರಿ, ಶುಭ ಹಾರೈಸಲಾಗುತ್ತಿತ್ತು.

ಶಿವಗಂಗೆ, ಹೆಂಜೇರು, ಬನವಾಸಿಗಳನ್ನು ಬಳಸಿಕೊಂಡು ಬಂದ ಕುದುರೆಗಳು ಶಾಂತಲೆಯ ಜನ್ಮಸ್ಥಳವೂ, ವಿಶ್ವವಿದ್ಯಾನಿಲಯವೊಂದನ್ನು ಪಡೆದಿದ್ದ ವಿಖ್ಯಾತ ವಿದ್ಯಾಕೇಂದ್ರವು ಆದ ಬಳ್ಳಿಗಾವೆಗೆ ರಥವನ್ನು ಎಳೆದು ತಂದವು. ರಾಜದಂಪತಿಗಳಿಗೆ ಅಭೂ ತಪೂರ್ವ ಸ್ವಾಗತ ದೊರೆಯಿತು. ಮಾಂಡಲಿಕರೂ, ಆಡಳಿತ ವರ್ಗದವರೂ, ನಗರದ ವರ್ತಕರೂ

ವಿದ್ಯಾವಂತರೂ ಎಲ್ಲರೂ ಕೋಟೆಯ ದ್ವಾರದಲ್ಲೇ ನಿಂತಿದ್ದು ಸ್ವಾಗತಿಸಿದರು. ತಾರಾಭಗವತಿಯ ಮಂದಿರದ ಪಕ್ಕದಲ್ಲಿದ್ದ ಉಪ್ಪರಿಗೆಯು ರಾಜರಾಣಿಯರ ಬಿಡಾರವಾಯಿತು.

ಅಂದು ರಾತ್ರಿ –

ನಗರವೆಲ್ಲಾ ಮಲಗಿದ್ದರೂ, ರಾಜರಾಣಿಯರಿದ್ದ ಉಪ್ಪರಿಗೆ ಇನ್ನೂ ಎಚ್ಚರವಾಗಿತ್ತು. ರಾಜದಂಪತಿಗಳು ಸಂಭಾಷಣೆಯಲ್ಲಿ ತೊಡಗಿದ್ದರು.

'ಶಾಂತಿ, ನಿನ್ನ ಹುಟ್ಟೂರಿನಲ್ಲಿ ಅದೆಂತಹ ಶಾಂತಿ ನೆಲೆಸಿದೆಯೇ? ಅದೆಷ್ಟು ತೃಪ್ತಿ ತುಂಬಿದೆಯೆ? ನಿನ್ನ ಬಳ್ಳಿಗಾವೆ ಬಳ್ಳಿಯಂತೆ ಬೆಳೆಯುತ್ತಲೆ ಇದೆ ಅಲ್ಲವೆ?'

'ಬೆಳೆಯಲಿ ಬಿಡಿ ಪ್ರಭು. . .ನಾಡು ಬೆಳೆದರೆ ನುಡಿ ಬೆಳೆದರೆ ನಾವು ಬೆಳೆದಂತೆಯೆ ! ಹೊಯ್ಸಳೇಶ್ವರರ ಕೀರ್ತಿಯ ಕುಡಿ ದಾಂಗುಡಿಯಿಡಲಿ ಮಹಾಪ್ರಭು.'

'ಅದು ಸರಿ, ನಾಳಿನ ಕಾರ್ಯಕ್ರಮವೇನು ಚಿನ್ನೆ?'

'ನಾಳಿನದು ಹಾಗಿರಲಿ ನನ್ನ ದಣಿ, ಈಗಿನ ಕಾರ್ಯ ತುಂಬಾ ಮಹತ್ವದ್ದಿದೆ.'

'ಏನು?'

'ನನ್ನ ಶಿಲ್ಪಶಾಸ್ತ್ರದ ಗುರು ಒಬ್ಬರಿದ್ದಾರೆ ಎಂದು ಒಂದು ದಿನ ಹೇಳಿದ್ದೆ. ನೆನಪಿದೆಯೇ ಸ್ವಾಮಿ?'

'ಅದೇ. . .ಆತ ಒಂದು ತರಹೆಯ ವಿಚಿತ್ರ ಮನುಷ್ಯ. . .ಹೆಂಡತಿ ಮಕ್ಕಳನ್ನು ಬಿಟ್ಟು ಬಂದವನು.. .ಎಂದು ಮುಂತಾಗಿ ಹೇಳಿದ್ದೆ. . .ಆತ ತಾನೆ?'

'ಹೌದು ಆದರೆ. . .'

'ಬೇಡ ಶಾಂತಿ. . .ಆ ಮಹಾಶಯನ ಸಹವಾಸವೇ ನಮಗೆ ಬೇಡ'

'ಏಕೆ ಪ್ರಭು. . .ನನ್ನ ಗುರುವಿನ ಸಂದರ್ಶನ ನನ್ನ ಸ್ವಾಮಿಗೆ ಇಷ್ಟವಿಲ್ಲವೆ?'

'ಒಂರ್ಥದಲ್ಲಿ ಇಲ್ಲವೆಂದು ಹೇಳಿದರೆ ತಪ್ಪಾಗದು ಶಾಂತಿ. . .ಕೇಳು. . .ವೇಲಾಪುರಿಯಲ್ಲಿ ವಿಜಯನಾರಾಯಣನ ದೇವಾಲಯವನ್ನು ನಿರ್ಮಿಸಬೇಕೆಂದು ನಾನೊಂದು ನಕಲೊಂದನ್ನು ನಿನ್ನ ಬಳಿಗೆ ಕಳುಹಿಸಿದ್ದು ನೆನಪಿದೆಯಷ್ಟೆ?'

'ಇದೆ ಪ್ರಭು'.

'ಅದೇ ಪ್ರತಿ ಎಲ್ಲರ ಮೆಚ್ಚುಗೆಯನ್ನೂ ಪಡೆಯಿತು. ದೇಗುಲದ ಮೂಲೆ ಮೂಲೆಗಳಲ್ಲಿ ಮದನಿಕಾ ವಿಗ್ರಹಗಳನ್ನಿಡಬೇಕೆಂಬ ನಿನ್ನ ಸಲಹೆ ಸರ್ವರ ಪ್ರಶಂಸೆಗೆ ಪಾತ್ರವಾಯಿತು. ಭಿತ್ತಿಯ ಚಿತ್ರವನ್ನು ಕಲ್ಲಿನಲ್ಲಿ ಮೂಡಿಸಿ ಮಹಾದೇಗುಲವನ್ನು ಕಾಣಬೇಕೆಂದು ಹಂಬಲಿಸಿ ಸಹಸ್ರೋಪಸಹಸ್ರ ರೂವಾರಿಗಳನ್ನು ರಾಜಧಾನಿಗೆ ಬರಮಾಡಿಕೊಂಡೆ. ಆದರೆ ಅವರಲ್ಲಿ ಯಾರಲ್ಲೂ ಸ್ಥಪತಿಯಾಗುವ ಅರ್ಹತೆ ಕಾಣಿಸಲಿಲ್ಲ. . .ಅದಕ್ಕಾಗಿ ಹಲವು ಆತ್ಮೀಯರನ್ನು ಹಿತೈಷಿಗಳನ್ನು ಕೇಳಿದಾಗ ಜಕಣಾಚಾರಿಯ ಹೆಸರನ್ನೂ, ಅವನಿರುವ ಬಳ್ಳಿಗಾವಿಯ ವಿದ್ಯಾಪೀಠವನ್ನೂ ಸೂಚಿಸಿದರು. ಆ ಕೂಡಲೆ ದೇಗುಲದ ನಕುಲನ್ನು ರಾಜಮಾತೆಯವರ ಸ್ವಯಂ ಹಸ್ತಾಕ್ಷರಗಳಿಂದ ಕೂಡಿದ ರಾಜಮುದ್ರಾಂಕಿತ ಓಲೆಯನ್ನೂ, ಮುತ್ತು, ರತ್ನ, ಖಿಲ್ಲತ್ತುಗಳಿಂದ ತುಂಬಿದ ಹರಿವಾಣವನ್ನು ಕೊಟ್ಟು ಸಕಲ ರಾಜಮರ್ಯಾದೆಗಳೊಂದಿಗೆ ಕರೆತರಲು ಕಳುಹಿಸಿದೆ. . .ಹೂಂ. . .ತಿರಸ್ಕಾರದ ಉತ್ತರ ಕಳುಹಿಸಿದ ಆ ಅಹಂಭಾವದ ಮೊಟ್ಟೆ.'

'ವಸ್ತುಸ್ಥಿತಿ ಹಾಗಿರಲಾರದು ಮಹಾಪ್ರಭು. . .'

'ಏನು ಶಾಂತಿ! ಹಾಗಾದರೆ ನಾನು ಸುಳ್ಳು ಹೇಳುತ್ತಿದ್ದೇನೆಯೆ?'

'ಛೇ ಛೇ! ಶಾಂತಂ ಪಾಪಂ, ಶಾಂತಂ ಪಾಪಂ! ಮಹಾಪ್ರಭು, ಸೇವಕರಿಂದ ಏನಾದರೂ ಅಪಚಾರವಾಗಿರಬಹುದೆಂದು ಹಾಗಂದೆ ಅಷ್ಟೆ. . .'

'ಆಯಿತು. . .ಸೇವಕರಿಂದ ಅಪಚಾರವಾಗಿದ್ದರೂ ಇರಬಹುದು. ಆದರೆ ಅವನಿಂದ ನಿರಾಕರಣೆಯ ಉತ್ತರ ಬಂದ ಮರುದಿನವೆ ನಾನು ಬಳ್ಳಿಗಾವಿಗೆ ಹೋದೆ. . .ಪರಿಪರಿಯಾಗಿ ಬೇಡಿದೆ. . .ಆದರೂ ಒಪ್ಪಲಿಲ್ಲ ನಿನ್ನ ದುರಭಿಮಾನದ ಗುಗ್ಗುರು'

'ಪ್ರಭು. . .ನನ್ನ ಗುರು ನಿಂದೆಗೆ ಬದಲು ನನ್ನನ್ನೇ ನಿಂದಿಸಿ, ಚಿಂತೆಯಿಲ್ಲ. . .ಆದರೆ ಈ ಅಲ್ಪಳ ಪ್ರಾರ್ಥನೆಯನ್ನು ಲಾಲಿಸಬೇಕಾಗಿ ಪ್ರಾರ್ಥನೆ.'

‘ನೊಂದಕೊಳ್ಳಬೇಡ ಶಾಂತಾ. . .ಆತನ ಅಂದಿನ ವರ್ತನೆ ನನ್ನಲ್ಲಿ ಕೋಪವನ್ನು ಉಂಟುಮಾಡಿತು ಅಷ್ಟೆ. . .ನೋಡು ಶಾಂತಾ. . .ಆತನು ತಿರಸ್ಕರಿಸುವಷ್ಟು ಸಣ್ಣವರೆ ನಾವು?’

‘ಛೇ ಛೇ. . .ಮಹಾಪ್ರಭುಗಳು ಮನ್ನಿಸೋಣವಾಗಲಿ. . .ಅಂದು ಅವರು ನುಡಿದದ್ದಾದರೂ ಏನು?’

‘ರಾಜಾ. . .ನಿನ್ನ ತಾಯಿ, ಮಹಾಮಾತೆಯಾಗಿದ್ದರೆ ಅದು ನೇರವಾಗಿ ಅನ್ವಯಿಸುವುದು ಅರಮನೆಗೆ, ನೆರಮನೆಗೆ, ಗುರು ಮನೆಗಲ್ಲ. ಅವರ ಆಜ್ಞೆ ಪ್ರಜೆಯ ಮೇಲೆ, ಕಲಾದೇವತೆಯ ಮೇಲಲ್ಲ. ಒಲವು ಇದ್ದಲ್ಲಿ ಅವಳು ನೆಲೆ ನಿಲ್ಲುತ್ತಾಳೆ. . .ಯಾರ ಬಲಾತ್ಕಾರಕ್ಕೂ ಬಗ್ಗುವವಳಲ್ಲ. . .ದರ್ಪದೌರ್ಜನ್ಯಗಳಿಗೆ ಮಣಿಯುವವಳಲ್ಲ – ನಾನು ಅವಳ ಆರಾಧಕ. . .ನಿನ್ನಾಜ್ಞೆಗಿಂತ ಅವಳಾಜ್ಞೆ ದೊಡ್ಡದು. . .ಆ ಕಾರಣ ನಾನು ಬರಲಾರೆ. . .ಸುಮ್ಮನೆ ಹೊರಟು ಹೋಗು ಎಂದು ಬಿಟ್ಟ. . .’

ಹೌದು. . .ಪ್ರಭು ಮಹಾವಿದ್ವಾಂಸರಲ್ಲಿ ಅದು ದೋಷವೆಂದು ಭಾವಿಸಬಾರದು. . .ಅದು ಅವರ ಗುಣ. . ಸ್ವಾಭಿಮಾನದ ಶಿಶುಗಳು ಅವರು. . .ಅದಕ್ಕೆ ಪ್ರಭುಗಳು ಮೆಚ್ಚಬೇಕೇ ಹೊರತು ಕೋಪಿಸಿಕೊಳ್ಳಬಾರದು. . .’

‘ಅಷ್ಟೇ ಅಲ್ಲ ಶಾಂತಿ. . .ಮತ್ತೆ ಕೇಳಿದೆ. . .ಆಚಾರ್ಯ, ಇದೋ ಸಹಸ್ರ ಸಹಸ್ರ ಹೊನ್ನುಗಳನ್ನು ನಿನ್ನ ಸಮ್ಮುಖದಲ್ಲಿ ಭೂರಿ ಎರಚುತ್ತೇನೆ. ಎಷ್ಟಾದರೂ ಕೇಳು ಕೊಡಲು ಸಿದ್ಧ. ..ಬರುವ ಮನ ಮಾಡು ಎಂದೆ. . .ಅದಕ್ಕೆ. . .’

‘ಅದಕ್ಕೇ.? . .’

‘ರಾಜಾ. . .ಹೊನ್ನಿಗಾಗಿ ಮಾರಿಕೊಳ್ಳುವ ಕಲೆಯೇ? ಅಲ್ಲ, ಅದರ ಅಭಾಸ!. . .ಅಂಥವನ ಕೈಯಲ್ಲಿ ಕಲೆಯ ಕೊಲೆ ಆಗುವುದೆಂದೇ ನನ್ನ ಭಾವನೆ. . .ಸುಮ್ಮನೆ ಏಕೆ ವ್ಯರ್ಥವಾಗಿ ಕಾಳು ಚೆಲ್ಲುತ್ತಿರುವೆ?. . .ಈ ಪಕ್ಷಿ ನಿನ್ನ ಬಲೆಗೆ ಬೀಳದು’ – ಎಂದ.

‘ಅಷ್ಟಕ್ಕೂ ನಾನು ಬಿಡಲಿಲ್ಲ. ಶಿಲ್ಪಿವರ್ಯ, ನಿನಗೆ ಕೂಲಿಯ ರೂಪದಲ್ಲಿ ತೆಗೆದುಕೊಳ್ಳಲಾಗದಿದ್ದರೆ ಸಂಭಾವನೆಯ ರೂಪದಲ್ಲಿ ನೀಡುತ್ತೇನೆ. . .ನಾನು ಹೊಯ್ಸಳ ಸಾಮ್ರಾಜ್ಯದ ಚಕ್ರವರ್ತಿಯಾದಾಗ ನಿನ್ನನ್ನು ಆಸ್ಥಾನದ ಸ್ಥಪತಿಯೆಂದು ಗೌರವಿಸಿ ಹತ್ತು ಗ್ರಾಮಗಳನ್ನು ಉಂಬಳಿಯಾಗಿ ನೀಡುತ್ತೇನೆ ಎಂದೆ. ಆಗ ಏನು ಬಗುಳಿದ ಗೊತ್ತೆ?’ ಹೂಂ. . .ವಸಂತವನದಲ್ಲಿ ಕೂಗುವ ಕೋಗಿಲೆ ರಾಜನ ಬಿರುದಿಗಾಗಿ ಬಾಯಿ ತೆರೆದು ಕುಳಿತಿರುವುದಿಲ್ಲ, ಅದು ತನ್ನ ಆತ್ಮಾನಂದಕ್ಕಾಗಿ ಹಾಡಿಕೊಳ್ಳುತ್ತದೆ! ಬೀಸುವ ಗಾಳಿಯಾಗಲಿ, ಹರಿಯುವ ನದಿಯಾಗಲಿ, ಅರಳುವ ಹೂವಾಗಲಿ, ನಗುವ ನಕ್ಷತ್ರವಾಗಲಿ, ಉರಿಯುವ ಸೂರ್ಯನಾಗಲಿ, ತಂಪೆರೆವ ಚಂದ್ರನಾಗಲೀ, ಬತ್ತಲೆಯಾಗಿ ನಿಂತ ಈ ಬೆಟ್ಟ, ಬಯಲು, ಬೆಳೆದ ವೃಕ್ಷ, ಮೈಹಾಸಿ ಮಲಗಿರುವ ಈ ನಿಸರ್ಗ, ಯಾವುದೂ ಯಾರಿಗೂ ಮಣಿಯುವುದಿಲ್ಲ. . .ಹೋಗು. . .ದುಂಬಿಗೆ ಝೇಂಕಾರ ಏಕೆಂದು ಕೇಳುವ ಸಾಹಸಕ್ಕೆ ಕೈಹಾಕಬೇಡ– ಎಂದು ಸುದೀರ್ಘವಾದ ಭಾಷಣವನ್ನು ಬಿಗಿದೇಬಿಟ್ಟ.

‘ಆಮೇಲೆ?’

‘ಆಮೇಲೆ, ಅಧಿಕಾರ ಬಲವನ್ನು ಅವನ ಮುಂದಿಟ್ಟು ಹೇಳಿದೆ – ‘ಹೇ ರೂವಾರಿ, ಮರ್ಯಾದೆಯಿಂದ ಸಮ್ಮತಿಸು. ಇಲ್ಲವಾದರೆ ರಾಜದಂಡನೆಗೆ ಗುರಿಯಾಗಬೇಕಾಗುತ್ತದೆ – ಎಂದೆ. ‘ದಂಡನೆ ಏನು? ಶಿರಹರಿಸುವೆಯಾ? ಬದುಕು ಬೇಸರವಾಗಿ ಬಿಟ್ಟಿದೆ ರಾಜಾ, ಬೇಗ ಅದಕ್ಕೆ ಮುಕ್ತಿ ಕೊಡು. ರಾಜಭ್ರಷ್ಟನನ್ನಾಗಿ ಮಾಡಿ ಹೊರನಾಡಿಗೆ ತಳ್ಳುವೆಯಾ? ತಳ್ಳು, ಸಿಂಹಕ್ಕೆ ಯಾವ ಕಾಡಾದರೇನು? ಈ ಶಿಲ್ಪಿಗೆ ತೋಳಿನಲ್ಲಿ ಕಸುವು ತುಂಬಿರುವ ತನಕ, ಉಳಿಯಲ್ಲಿ ಹರಿತ, ಸುತ್ತಿಗೆಯಲ್ಲಿ ಗಡಸುತನ ಇರುವ ತನಕ ಎಲ್ಲಿಯಾದರೂ ಬದುಕಬಲ್ಲ. ಭೂಮಿ ವಿಶಾಲವಾಗಿದೆ, ಕಾಲ ಅನಂತವಾಗಿದೆ. ಅಂದುಬಿಟ್ಟ. . .’

‘ಹು ಹ್ಹು ಹ್ಹು ಹ್ಹು. . .! ಚೆನ್ನಾಗಿದೆ ಉತ್ತರ.’

‘ನಿನಗೆ ನಗು ತಂದಿತೇನು ನನ್ನ ಸ್ಥಿತಿ’

‘ಹಾಗಲ್ಲ ಪ್ರಭು.. .ಒಲವಿನಿಂದ ಕೇಳಿಕೊಂಡಿದ್ದರೆ ಆ ಕಾರ್ಯಸಾಧನೆ ಆಗುತ್ತಿತ್ತೊ ಏನೊ. . .ಅಹಂಕಾರವೆ ಉತ್ತರ ವಾಗಬೇಕು ಎಂದು ಭಾವಿಸಿಕೊಂಡಿರಬೇಕು.’

‘ಏನೇ ಭಾವಿಸಿಕೊಂಡಿರಲಿ. . .ಕಲಾವಿದನಾದ ಅವನಿಗೇಕೆ ಅಷ್ಟು ಸೊಕ್ಕು?’

‘ಸೊಕ್ಕು, , ,ನಿನ್ನ ಮಹಾಪ್ರಭು, ಸೊಕ್ಕು ಪಡೆವ ಹಕ್ಕು ಅವರಿಗಿದೆ. ಅವರು ಸರಸ್ವತಿಯವರ ಪುತ್ರರು. . .ಅವರ ವಿಚಾರದಲ್ಲಿ ನಾವು ವಿಧೇಯರಾಗಿ ನಡೆದುಕೊಳ್ಳುವುದು ಒಳಿತು ಅನ್ನಿಸುತ್ತದೆ.’

‘ಶಾಂತಿ. . .ನಿನ್ನ ಶಾಂತಿಮಂತ್ರ ಸಾಕು. . .ಅವನು ಸರಸ್ವತಿಯ ಮಗನಾದರೆ, ನಾವು ಲಕ್ಷ್ಮಿಯ ಸತ್ಪುತ್ರರು.’

'ಸತ್ಯ. ಅಕ್ಷರಶಃ ಸತ್ಯ. . .ಆದರೆ ಮಹಾಪ್ರಭು ತಾವು ಹೇಗೆ ಒಂದು ರಾಷ್ಟ್ರಕ್ಕೆ ಅಭಿಷಿಕ್ತ ಸಾಮ್ರಾಟರೊ ಹಾಗೆ ಅವರೂ ಒಂದು ಕಲಾಪ್ರಪಂಚದ ಅನಭಿಷಿಕ್ತ ಚಕ್ರವರ್ತಿಗಳು. ಅವರನ್ನು ಕೆಣಕುವುದು ಬೇಡ. . .ಅವರಲ್ಲಿ ನಮ್ಮ ವಿನಯವನ್ನು ಮೆರೆಯುವುದು ಯುಕ್ತ ಎನ್ನಿಸುತ್ತದೆ.'

'ನಿನ್ನಿಷ್ಟ. . .ನನಗಂತೂ ಮನಸ್ಸಿಲ್ಲ. . .ನಿನ್ನ ಬಲವಂತಕ್ಕಾಗಿ ಒಪ್ಪಬೇಕಾಗಿದೆ.'

'ಮಹಾಪ್ರಭುಗಳಿಗೆ ಅವಿನಯಸದಿದ್ದರೆ ಪ್ರಾರ್ಥನೆ. . .ಈಗ ಈ ಹಠದಿಂದ ಕಾರ್ಯ ಸಾಧನೆಯಾಗುವುದಿಲ್ಲ. . .ನನಗಾಗಿ ಅಲ್ಲವಾದರೂ ಕಲೆಗಾಗಿ, ಕಲೆಯ ನೆಲೆಗಾಗಿ, ಅದು ಹೊಯ್ಸಳ ಶೈಲಿ ಎಂದು ವಿಶ್ವವಿಖ್ಯಾತ ಕೀರ್ತಿಯನ್ನು ಗಳಿಸಿ ಶಾಶ್ವತವಾಗಿ ನಿಲ್ಲಬೇಕಾಗಿರುವುದರಿಂದ, ಅದರ ಸಲುವಾಗಿ ತಾವೀಗ ಸಮ್ಮತಿಸಿ ದಯಮಾಡಿಸಬೇಕೆಂದು ಅನನ್ಯ ಭಕ್ತಿಯಿಂದ ಬೇಡಿಕೊಳ್ಳುತ್ತೇನೆ. . .ಒಂದು ವೇಳೆ ತಮ್ಮ ಆತ್ಮಗೌರವಕ್ಕೆ ಧಕ್ಕೆ ಬರುವುದಾದರೆ ನನಗಾದರೂ ಅನುಮತಿ ನೀಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.'

'ಅಯ್ಯೋ ಹುಚ್ಚಿ. . .ಏನು ನೀನು ಹೇಳುತ್ತಿರುವುದು ಶಾಂತೀ. . .ನೀನು ಬೇರೆ ನಾನು ಬೇರೆಯೇ ? ಅವಮಾನ ಬಹುಮಾನ ನಮ್ಮಿಬ್ಬರಲ್ಲಿ ಯಾರಿಗಾದರೇನು? ಇಬ್ಬರಿಗೂ ಅದರಲ್ಲಿ ಪಾಲಿದೆ. ನೀನು ನನ್ನ ಅರ್ಧಾಂಗಿ. ನಾನು ಅರ್ಧನಾರೀಶ್ವರ!'

'ಅದರಲ್ಲಿ ನನಗೆ ಹೆಮ್ಮೆ ಇದೆ ಪ್ರಭು. ಆದರೆ ವಿಶಿಷ್ಟ ಕಲೆಯನ್ನು ಸ್ವಾಗತಿಸುವುದಕ್ಕಾಗಿ ನಮ್ಮ ನಮ್ಮ ಪದವಿ ಪ್ರತಿಷ್ಠೆಗಳನ್ನು ದೂರವಿರಿಸೋಣ. . .'

'ಅಪಾತ್ರದಲ್ಲಿ ಗೌರವ ತೋರುವುದೂ ಅಪಾಯವೇ. ಆ ಕಲ್ಲುಕುಟಿಗನಿಗೆ ನಿನ್ನ ಮರ್ಯಾದೆಯ ಅರ್ಥ ತಿಳಿದಿಲ್ಲ ಶಾಂತಿ.

'ಕ್ಷಮಿಸಿ ಮಹಾಪ್ರಭು - ಅಮರಶಿಲ್ಪಿ ಜಕಣಾಚಾರಿ ಸಾಧಾರಣ ಕಲ್ಲುಕುಟಿಗನಲ್ಲ, ಅವನು ಶಿವನಲ್ಲಿ ಒಂದು ಹೂ ಹೆಚ್ಚು ತಂದವನು. ನಾಟ್ಯಕ್ಕೆ ನಟರಾಜ ಹೇಗೋ ಹಾಗೆ ಶಿಲ್ಪಕ್ಕೆ ನನ್ನ ಗುರು ಅಧಿದೇವತೆ! ಶಿಲ್ಪಕಲೆ ಹುಟ್ಟಿದ್ದು ಅವನು ಹುಟ್ಟಿದ ಮೇಲೆಯೇ. 'ದಕ್ಷಿಣಾಚಾರ್ಯ' ಎಂಬ ಶಿಲ್ಪ ಸಂಪ್ರದಾಯಕ್ಕೆ ಆತ ಆಚಾರ್ಯ ಪುರುಷ.'

'ಗುರುವಿನ ಮೇಲಿನ ಅಭಿಮಾನ ನಿನ್ನ ವಿವೇಕದ ಕಣ್ಣುಗಳನ್ನು ಮುಚ್ಚಿದೆ ಶಾಂತಿ – ನಿನಗೆ ಲೌಕಿಕ ತಿಳಿಯುತ್ತಿಲ್ಲ.'

'ಮಹಾಪ್ರಭು – ಗುರುಭಕ್ತಿ ಅತಿಯಾಗಿ ದೋಷವೆನಿಸಿದೆ ಎಂದು ಭಾವಿಸಬಾರದಾಗಿ ಪ್ರಾರ್ಥನೆ. . .ಹೊಯ್ಸಳೇಶ್ವರ ವಿಷ್ಣುವರ್ಧನರ ಗೌರವವನ್ನು ಕಡಿಮೆ ಮಾಡಬೇಕೆಂಬುದು ನನ್ನಿಚ್ಛೆಯಲ್ಲ. ಅಷ್ಟೂ ಲೌಕಿಕ ನನಗೆ ತಿಳಿಯದೆ? – ಆದರೆ ನಮಗೂ, ತಮಗೂ ಎಲ್ಲರಿಗೂ ದೊಡ್ಡದು ಕಲೆ! ಬ್ರಹ್ಮ ಸೃಷ್ಟಿ ಅಳಿದರೂ, ಕಲಾಬ್ರಹ್ಮನ ಕಲಾಸೃಷ್ಟಿ ಅಚ್ಚಳಿಯದೆ ಹೊಚ್ಚ ಹೊಸದಾಗಿರುತ್ತದೆ ವಿಶ್ವವಿರುವ ತನಕ! ಅಂತಹ ಅಮರವಾದ, ಅಮೃತೋಪಮವಾದ ಕಲೆಯ ನೆಲೆವೀಡಾಗಬೇಕು ನಮ್ಮ ದೋರಸಮುದ್ರ. ಅದಕ್ಕಾಗಿ ಇಷ್ಟೆಲ್ಲಾ ಪ್ರಯತ್ನ.'

'ಇದೇ ಸಂದರ್ಭದಲ್ಲಿ ನನ್ನದೊಂದು ಪ್ರಾರ್ಥನೆ.'

'ಹೇಳು ನಾಟ್ಯಮಯೂರಿ!'

'ಏನಿಲ್ಲ, ತಾವು ವಿಜಯನಾರಾಯಣನ ದೇಗುಲವನ್ನು ವೇಲಾಪುರಿಯಲ್ಲಿ ನಿರ್ಮಿಸುವ ಸಂಕಲ್ಪ ಮಾಡಿದಂತೆ, ನಾನೂ ಒಂದು ಸತ್ ಸಂಕಲ್ಪ ಮಾಡಿಕೊಂಡಿದ್ದೇನೆ. ಭಗವಂತನ ಮುಂದೆ ಅರಿಕೆ ಹೊತ್ತಿದ್ದೇನೆ.

'ಏನೆಂದು?'

'ಚೆಲುವ ನಾರಾಯಣಸ್ವಾಮಿಯ ದೇಗುಲವೊಂದನ್ನು ನಿಮ್ಮ ಸಂಕಲ್ಪಿತ ದೇಗುಲದ ಬಳಿಯಲ್ಲಿ ನಿರ್ಮಿಸಲೆಂದು'

'ಒಳ್ಳೆಯ ಆಲೋಚನೆ, ಕಾರ್ಯಗತವಾಗಲಿ'

ಶಾಂತಲೆ ಹಿಗ್ಗಿದಳು. ವೀರನಾರಾಯಣನ ದೇವಾಲಯದ ಹಿಂಬದಿಯಲ್ಲಿ ಚೆಲುವ ನಾರಾಯಣನನ್ನು ಸ್ಥಾಪಿಸಲು ನಿರ್ಧರಿಸಿದಳು.

'ಹಾಗಾದರೆ ಈಗಲೇ ಹೊರಡೋಣ. ಪೂಜ್ಯ ಸ್ಥಪತಿಗಳನ್ನು ಕಾಣಲು ಆಗಬಹುದೇ?'

'ಅದು ಈಗಲೇ ಈ ವೇಳೆಯಲ್ಲಿ ಆಗಬೇಕೆ? ನಾಳೆ ಆಗದೆ?

'ಬೇಡಿ ಪ್ರಭು, ,  .ಬೆಳಗಾದರೆ ರಾಜಕೀಯದ ನಾನಾ ಮಾತುಕತೆಗಳು, ನಾನಾ ಮನೋಧರ್ಮದ ವ್ಯಕ್ತಿಗಳ ಸಂದರ್ಶನ. ಸಂಭಾಷಣೆ. . .ಆದ್ದರಿಂದ ಕೃಪೆ ಮಾಡಿ ಈಗಲೇ. . .'

'ಆಗಲಿ. . .ನಡೆ. . ಬೇಗ ಸಿದ್ಧಳಾಗು. . .'

'ಸಿದ್ಧತೆ ಏನು ಬೇಕು ಪ್ರಭು. . .ದೇವರ ದರ್ಶನಕ್ಕೆ, ಗುರುಗಳ ಸಂದರ್ಶನಕ್ಕೆ ಅಲಂಕಾರಗಳ ಅಗತ್ಯ ಇಲ್ಲ. ಅದು ಸಲ್ಲ. . .ಅಲ್ಲವೆ. . .ಆದ್ದರಿಂದ ಈಗ ಹೇಗಿದ್ದೇವೊ ಹಾಗೆಯೆ. . .ಆಗಬಹುದೆ?'

'ಓಹೋ! ಅಗತ್ಯವಾಗಿ. . .ಆದರೆ ನಾವಿಬ್ಬರೂ ಮೇಲುಹೊದಿಕೆಯನ್ನು ಹೊದೆದು ಬರಿಗಾಲಲ್ಲಿ ನಡೆದೇ ಹೋಗೋಣ. .'

'ಬರಿಗಾಲಲ್ಲಿ. . .ನಡೆದು.. .?'

'ಹೌದು ದೇವರದರ್ಶನಕ್ಕೆ. . .ದೇವರಂತಹ ಗುರುಗಳ ದರ್ಶನಕ್ಕೆ. . .!'

'ಅರ್ಥವಾಯಿತು.. . .ತಮಾಷೆ ಮಾಡಬೇಡಿ. . .'

ಕಾಲ್ನಡಿಗೆಯಲ್ಲೇ ನಗರ ದರ್ಶನವೂ ಆಯಿತು. ಶಿಲ್ಪಕಲಾಚಾರ್ಯ ಜಕ್ಕಣನ ಪುಣ್ಯಾಶ್ರಮವಿದ್ದುದು ತಾಳಗುಂದದ ಪ್ರಣವೇಶ್ವರ ದೇವಾಲಯದ ಬಳಿಯಲ್ಲಿ. ಅದು ಅವನ ಕಮ್ಮಟ. ಅದು ವಿದ್ಯಾಕೇಂದ್ರವೂ ಹೌದು. ನೂರಾರು, ಸಾವಿರಾರು ಜನ ಶಿಷ್ಯರು ಅವನ ಸೇವೆ ಮಾಡಿಕೊಂಡು ಶಿಲ್ಪ ಶಾಸ್ತ್ರವನ್ನೂ ಶಿಲ್ಪಕಲೆಯನ್ನೂ ಕಲಿಯುತ್ತಿದ್ದರು. ಸುಮಾರು ಒಂದು ಹಳ್ಳಿಯಷ್ಟು ವಿಸ್ತೀರ್ಣವುಳ್ಳ ಅವನ ಆಶ್ರಮ, ತನ್ನ ಸುತ್ತಲೂ ಹತ್ತಾರು ರೀತಿಯ ಕಲ್ಲುಗಳನ್ನು ರಾಶಿ ರಾಶಿಯಾಗಿ ಹಾಕಿಕೊಂಡಿತ್ತು. ಅಲ್ಲಲ್ಲಿ ಗೆಯ್ಮೆ ಪಡೆದ ನುಣುಪಾದ ಕಲ್ಲುಗಳು, ಪೀಠಗಳು, ಮೂರ್ತಿಗಳು, ಅರೆರೂಪಗೊಂಡ ವಿಗ್ರಹಗಳು, ಬಳ್ಳಿ, ಬಸವ, ಆನೆ, ಹಂಸ. ಏಂಥೆಂಥವೊ ಪ್ರತಿಮೆಗಳ ಪ್ರದರ್ಶನಶಾಲೆ ಅದಾಗಿತ್ತು. ವಿಷ್ಣು ಶಾಂತಲೆಯರು ಮೌನದಿಂದಲೇ ಅವುಗಳನ್ನು ನೋಡುತ್ತಾ ಗುರು ಜಕ್ಕಣನ ಪರ್ಣಕುಟಿಯತ್ತ ಸಾಗಿದರು. ದೂರದಲ್ಲಿದ್ದಾಗಲೇ ಪರ್ಣಕುಟಿಯಿಂದ 'ಕಟ್ ಕಟ್' ಶಬ್ದ ಕೇಳಿ ಬರುತ್ತಿತ್ತು.

'ಪ್ರಭು, ಗುರುಗಳು ಇನ್ನೂ ಎಚ್ಚರವಾಗಿರುವಂತಿದೆ. – ನಮ್ಮ ಪುಣ್ಯ' ಎಂದಳು. ಅವಳ ನುಡಿ ಕೇಳಿತೊ ಇಲ್ಲವೋ, ಬೇರೊಂದು ಕೆಲಸಕ್ಕಾಗಿಯೊ ತಿಳಿಯದು, ಅಂತೂ ಓರ್ವ ವಿದ್ಯಾರ್ಥಿ ಆ ಪರ್ಣಕುಟಿಯ ಹೊರ ಬಂದ. ತನ್ನ ಕಡೆಗೆ ಬರುತ್ತಿದ್ದ ಅವರನ್ನು ಕಂಡು ದಾಪಗಲು ಹಾಕಿ ಸಮೀಪಿಸಿ ಪಿಸುಮಾತಿನಲ್ಲಿ ಕೇಳಿದ.

'ಯಾರು? ಏತಕ್ಕಾಗಿ ಬಂದಿರಿ?'

'ನಾವು ಯಾತ್ರಿಕರು, ಗುರುದರ್ಶನಕ್ಕಾಗಿ'

'ಇದು ವೇಳೆಯಲ್ಲ'

'ಅಂದರೇ. . . .ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದಾರೇನು?'

'. . .ವಿಶ್ರಾಂತಿ!. . .ಹೂಂ. . .ಅವರಿಗೆಲ್ಲಿಯದು ವಿಶ್ರಾಂತಿ!. . .ಅವರೀಗ ಒಂದು ಮಹತ್ಕಾರ್ಯದಲ್ಲಿ ತೊಡಗಿದ್ದಾರೆ.'

'ಯಾವುದು?' ಶಾಂತಲೆ ಕೇಳಿದಳು.

'ಬಾಣಭಟ್ಟನ ಕಾದಂಬರಿಯನ್ನು ಕಂಡರಿಸುತ್ತಿದ್ದಾರೆ. ಈಗ ಅದರಲ್ಲಿ ಬೆಳ್ಳಿಬೆಟ್ಟದ ಮಡಿಲಲ್ಲಿ ಸುಶೋಭಿಸುತ್ತಿರುವ ಸಿದ್ಧಾಯತನ. ಅದರ ಗರ್ಭಗುಡಿಯಲ್ಲಿರುವ ಮೌಕ್ತಿಕ ಶಿಲಾಲಿಂಗ, ಅದರ ಮುಂದೆ ವೀಣಾಪಾಣಿಯಾಗಿ ಕುಳಿತಿರುವ ಮಹಾಶ್ವೇತೆ. . ಇವುಗಳನ್ನು ಬಿಡಿಸುತ್ತಿದ್ದಾರೆ. . .'

'ನಾವೀಗ ನೋಡಬೇಕಾಗಿದೆ. . .ಅಪ್ಪಣೆ ಕೊಟ್ಟರೆ. . .'

'ಕ್ಷಮಿಸಿ, ಅದೀಗ ಸಾಧ್ಯವಾಗದ ಮಾತು. . .ಯಾರೂ ಅವರ ಭಾವ ಸಮಾಧಿಗೆ ಭಂಗ ತರುವುದು ಯುಕ್ತವಲ್ಲ.'

'ಅದು ನಮಗೂ ಸಮ್ಮತವಲ್ಲ. . .ಆದರೂ ಶಿಲ್ಪರಚನೆ ಶಿಲೆಯ ಬಸುರಿಂದ, ಉಳಿಯ ಮೊನೆಯಿಂದ ಹೇಗೆ ಮೂಡುತ್ತದೆ ಎಂಬುದನ್ನು ನೋಡುವ ಹಂಬಲ ತೀವ್ರವಾಗಿದೆ. ಅದಕ್ಕಾಗಿ ತಮ್ಮಲ್ಲಿ ಇಷ್ಟು ಪ್ರಾರ್ಥನೆ.'

'ತಾಯಿ. ..ಗುರುಗಳು ಮಿಂದು ಮಡಿಯುಟ್ಟು ಅನನ್ಯ ಭಕ್ತಿಯಿಂದ ಶಿವಲಿಂಗವನ್ನು ರೂಪಿಸುತ್ತಿದ್ದಾರೆ. ನೋಡಿದವರಿಗೆ ಭಕ್ತಿ ಭಾವ ಸಂಚರಿಸಿ, ಅವರಲ್ಲಿ ವ್ಯಾಪಿಸಿಕೊಳ್ಳುವಂತಿರಬೇಕಾದರೆ ಆ ಮಹಾಶ್ವೇತೆಯ ಧ್ಯಾನ ಸಮಾಧಿ ಹೇಗಿರಬೇಕು ಹೇಳಿ.! ಅದರಿಂದಾಗಿ ಅವರಿಗೆ ಈ ಲೋಕದ ಪರಿವೆಯೆ ಇಲ್ಲವಾಗಿದೆ. ಇಡೀ ರಾತ್ರಿ ಅದೆಷ್ಟೆ ಸಮಯವಾದರೂ ಚಿಂತೆಯಿಲ್ಲ ಆ ಶಿಲ್ಪವನ್ನು ಪೂರ್ಣಗೊಳಿಸಲೇಬೇಕೆಂದು ನಿರ್ಧರಿಸಿ ನನ್ನನ್ನೂ ನನ್ನ ಗೆಳೆಯನೊಬ್ಬನನ್ನೂ ಸಹಾಯಕರಾಗಿರುವಂತೆ ನಿಯಮಿಸಿದ್ದಾರೆ.'

'ಗುರುಗಳು ಬೇಡಿದ ಉಪಕರಣಗಳನ್ನು ನೀಡುವುದೆ ನಿಮ್ಮ ಕೆಲಸ ಏನು?'

'ಅಲ್ಲ. . .ಅವರಿಗೆ ತಾಂಬೂಲವನ್ನು ಜಗಿಯುವ ಚಟ ಬಹಳ. ಸದಾ ಬಾಯಿತುಂಬಾ ತುಂಬಿಕೊಂಡು ಉಗುಳು ಹೆಚ್ಚಾದಾಗ ಪಕ್ಕದ ಪೀಕುದಾನಿಗೆ ಉಗುಳುತ್ತಿರುತ್ತಾರೆ. ನನ್ನ ಮಿತ್ರ ಸುಣ್ಣ ಬಳಿದ ಎಲೆ ಅಡಿಕೆ ಪಟ್ಟಿಗಳನ್ನು ಕಟ್ಟಿ ಕೊಡುತ್ತಾನೆ.

ನಾನು ಪೀಕುದಾನಿಯನ್ನು ಹಿಡಿದು, ಅವರು ಕತ್ತು ತಿರುಗಿಸಿದ ಕೂಡಲೇ ಸಮೀಪಕ್ಕೆ ಅದನ್ನು ಚಾಚುತ್ತೇನೆ. ಈಗ ಎರಡೂ ಕೆಲಸಗಳನ್ನು ನನ್ನ ಗೆಳೆಯನೇ ಮಾಡುತ್ತಿದ್ದಾನೆ.

'ಸ್ವಾಮೀ, ಈಗ ತಾವು ಒಂದು ಉಪಕಾರ ಮಾಡಬೇಕೆಂದು ಪ್ರಾರ್ಥನೆ' ಮಹಾರಾಜ ಅವನ ಕೈಗಳನ್ನು ತನ್ನ ಬೊಗಸೆಯಲ್ಲಿ ತುಂಬಿಕೊಂಡು ಕೇಳಿದ.

'ಏನು ಮಹಾಶಯರೆ?'

'ಏನಿಲ್ಲ – ತಾವು ಹಾಗೂ ತಮ್ಮ ಮಿತ್ರರೂ ಸಮ್ಮತಿಸುವುದಾದರೆ ಮಹಾಗುರುವಿಗೆ ನಡೆಸುವ ತಾಂಬೂಲದ ಕೈಂಕರ್ಯವನ್ನು ನಾನು ನನ್ನ ಹೆಂಡತಿ ಇಬ್ಬರೂ ನಡೆಸಿ ಧನ್ಯರಾಗುತ್ತೇವೆ.'

'ಆಗಬಹುದಿತ್ತು. ಆದರೆ. .'

'ಏಕೆ ಸಂದೇಹವೆ? ನಾವು ಗುರುಗಳ ಗಮನಕ್ಕೆ ಬರದಂತೆ ನೋಡಿಕೊಳ್ಳುತ್ತೇವೆ. ಅವರು ಭಾವಸಮಾಧಿಯಿಂದ ಎಚ್ಚೆತ್ತ ಮೇಲೆ ಆಶೀರ್ವದಿತರಾಗಿ ಹಿಂತಿರುಗುತ್ತೇವೆ. ಅವರೇನಾದರೂ ಸಿಟ್ಟಾದರೆ ನಾವು ನಿಮ್ಮ ಪರವಾಗಿ ಕ್ಷಮೆ ಯಾಚಿಸಿ, ಸಮಾಧಾನ ಪಡಿಸುತ್ತೇವೆ. ದಯಮಾಡಿ. . . . .

'ಆಗಲಿ ನೀವಿಬ್ಬರೂ ಸಿದ್ಧರಾಗಿ, ಬಳೆಗಳ, ಆಭರಣಗಳ ಶಬ್ಧವಾಗಬಾರದು – ಎಚ್ಚರ'

'ಆಗಲಿ'

'ನುಡಿದಂತೆ ಕೆಲಸವೂ ನಡೆದು ಹೋಯಿತು. ಅಮರಶಿಲ್ಪಿ ಜಕಣಾಚಾರಿ ತದೇಕಚಿತ್ತನಾಗಿ ಶಿಲೆಯಲ್ಲಿ ಹೂ ಬಿಡಿಸುತ್ತಿದ್ದ. ಆಗಾಗ ತನಗೆ ತಾನೆ ಗೊಣಗುತ್ತಿದ್ದ. ಮಧ್ಯೆ ಮಧ್ಯೆ ಸಂಸ್ಕೃತದ ಸಾಲುಗಳನ್ನೂ, ಕನ್ನಡದ ನಾಗವರ್ಮನ ಕಾದಂರಿಯ ವೃತ್ತಗಳನ್ನೂ ಕುರುಕುತ್ತಿದ್ದ. ಅವುಗಳಲ್ಲಿನ ಭಾವವನ್ನು ಗ್ರಹಿಸಿ, ಆ ಭಾವಗಳಿಗೆ ಒಂದು ಬಿಂಬವನ್ನು ರೂಪಿಸಲು ಯತ್ನಿಸುತ್ತಿದ್ದ. ಅವನ ಆ ತಪಸ್ ಸಮಾಧಿಗೆ ಭಂಗ ತಾರದ ರೀತಿಯಲ್ಲಿ ರಾಜರಾಣಿಯರು ಇಡೀ ರಾತ್ರಿ ನಡೆದುಕೊಂಡರು. ಮಹಾರಾಜ ತನ್ನ ಕೈ ಯಾರ ಮಡಿಸಿಕೊಟ್ಟ ತಾಂಬೂಲದ ಪಟ್ಟಿಗಳನ್ನು ನಿಧಾನವಾಗಿ ಮೆಲ್ಲುತ್ತಿದ್ದ. ಪಕ್ಕಕ್ಕೆ ತುಸು ಓರೆಯಾದರೆ ಸಾಕು ಮಹಾರಾಣಿ ಗಂಭೀರೆಯಾಗಿ ಪೀಕುದಾನಿಯನ್ನು ಮುಂದಕ್ಕೆ ಚಾಚುತ್ತಿದ್ದಳು. ಉಗುಳುವ ವೇಳೆಯಲ್ಲಿ ಎಂಜಲು ಅವಳ ಮುಂಗೈ ತೋಳುಗಳ ಮೇಲೂ ಚೆಲ್ಲಿದ್ದುಂಟು. ಅದು ದೇವದೇವನ ಪ್ರಸಾದವೆಂದೇ ಭಾವಿಸಿದಳು ಆಕೆ.'

ಅರುಣೋದಯದ ವೇಳೆಗೆ ಹಿಡಿದ ಕಾರ್ಯ ಮುಗಿಯುತ್ತಾ ಬಂದಿತ್ತು. ಮಹಾಶಿಲ್ಪದ ಕುಸುರಿ ಕೆಲಸ ಮುಗಿದು ಮುಂದಿನ ಪೋಷಜ ಭಾಗಗಳನ್ನು ಎತ್ತಿಕೊಳ್ಳಬೇಕಾಗಿತ್ತು. ಶಿಲ್ಪಿ ಚಣಕಾಲ ತನ್ನ ಕಲಾಕೃತಿಯನ್ನು ಧಾಳಾಗಿ ಉರಿಯುತ್ತಿದ್ದ ದೊಂದೆಯ ಬೆಳಕಿನಲ್ಲಿ ನೋಡಿ ಆನಂದವನ್ನು ಅಭಿವ್ಯಕ್ತಪಡಿಸಿದ. ತೃಪ್ತಿಯ ನಗೆಯೊಂದು ಅವನ ತುಟಿಗಳ ಮೇಲೆ ಮಿನುಗಿತು.

ಮುಂದಿನ ಭಾಗವನ್ನು ಮುಂದುವರಿಸಲು ಚಾಣವನ್ನು ಎತ್ತಿ ಕಲ್ಲನ್ನು ಆಯಕ್ಕೆ, ಆಳತೆಗೆ ತಕ್ಕ ಹಾಗೆ ಕತ್ತರಿಸಿಕೊಂಡ. ಅದರ ಮೇಲೆ ಉಳಿಯ ಮೂಳೆಯಿಂದ ಒಂದು ರೇಖಾಚಿತ್ರವನ್ನು ರೂಪಿಸಿಕೊಂಡು, ಅದನ್ನು ಕಲ್ಲಸೆರೆಯಿಂದ ಬಿಡಿಸಲು ಪ್ರಾರಂಭಿಸಿದ. ಸ್ವಲ್ಪ ವೇಳೆಯಲ್ಲಿ ನೂರಾರು ರೂಪದ ಗಿಡ, ಮರ, ಬಳ್ಳಿಗಳು ರೂಪುಗೊಂಡವು. ಅಚ್ಛೋದಸರಸ್ಸು ಚಿತ್ರದಲ್ಲಿ ನಿಜವಾದ ಕೊಳ ವೊ ಎನ್ನುವಂತೆ ಕಾಣತೊಡಗಿತು. ಕಲ್ಲು ಅವನ ಕೈಯಲ್ಲಿ ಕಠಿಣವಾಗಲಿಲ್ಲ. ಬೆಣ್ಣೆಯಾಯಿತು. ಬೆಳಕು ಚೆಲ್ಲಿತು, ಚೆಲುವು ಚಿಮ್ಮಿ ತು. ಶಿಲ್ಪಿಯ ಆನಂದಕ್ಕೆ ಪಾರವಿಲ್ಲವಾಯಿತು!

ಆದರೆ ಅವನಿಗೆ ವೇಳೆ ತಿಳಿದಿರಲಿಲ್ಲ. ಮೈ ಮಾತ್ರ ವಿಶ್ರಾಂತಿ ಬಯಸಿತು. ಮತ್ತೊಮ್ಮೆ ಎಲೆಯನ್ನು ಜಗಿದು, ಪೀಕುದಾನಿಯಲ್ಲಿ ಉಗುಳಿ, ಉಳಿ ಸುತ್ತಿಗೆಗಳನ್ನು ಪಕ್ಕದ ಪೀಠದಲ್ಲಿರಿಸಿ 'ಹಾಯ್. . .ಹಾಯ್' ಎಂದು ಮೈಮುರಿದು ತನ್ನ ಎರಡೂ ಕೈಗಳನ್ನು ಪಕ್ಕಕ್ಕೆ ಚಾಚಿ ಶರೀರವನ್ನು ಹಿಂಬದಿಗೆ ಮಲಗಿಸಿದ. ಅವನ ಎರಡೂ ತೋಳುಗಳು ಅಕ್ಕಪಕ್ಕದಲ್ಲಿದ್ದ ಇಬ್ಬರ ಹೆಗಲುಗಳ ಮೇಲೆ ಮಂಡಿಸಿದವು. ತನ್ನ ಶಿಷ್ಯರೆಂದೇ ಭಾವಿಸಿದ ಆ ಶಿಲ್ಪಿ ಜೋರಾಗಿ ಒತ್ತಿ ಮೈ ಮುರಿದುಕೊಂಡ. ತೋಳುಗಳನ್ನು ಹೊತ್ತ ಇಬ್ಬರೂ ಜಗ್ಗಲಿಲ್ಲ.

'ಓಹ್! ಬಹಳ ಹೊತ್ತಾದಂತಿದೆ – ಆಗಲೇ ಸೂರ್ಯೋದಯ ಆಗುತ್ತಿದೆ. . .ಚಾವಣ, ಧೀರೋಜ. . .ಏನ್ರಯ್ಯಾ, ನಿಮಗೆ ಆಯಾಸವಾಗಿರಬೇಕು ಅಲ್ಲವೆ – ಹೋಗಿ, ಸ್ನಾನ ಪೂಜೆ ಫಲಹಾರಗಳನ್ನು ಮುಗಿಸಿ ವಿಶ್ರಾಂತಿ ತೆಗೆದುಕೊಳ್ಳಿ. . .ನಾನೂ ನಿಮ್ಮ ಬೆನ್ನ ಹಿಂದೆಯೇ ಬಂದುಬಿಡುತ್ತೇನೆ' ಎಂದು ಹೇಳಿ, ಮುದ್ದಿಸಲು ತನ್ನ ಎರಡೂ ಕೈಗಳಿಂದ ಅವರ ಗಲ್ಲಗಳನ್ನು ಸವರಿದ. ಏನೋ ಒಂದು ವಿಧದ ಅನುಭವ ಅನುಮಾನ ಏಕಕಾಲದಲ್ಲಿ ಆದವು. ದಿಢೀರನೆ ಎದ್ದ. . .ಕಣ್ತೆರೆದು ನೋಡಿದ. .

.ಭಯ, ದುಃಖ ಒಮ್ಮೆಲೆ ಮೂಡಿದವು. . .! ಕ್ಷಣಾರ್ಧದಲ್ಲಿ ಅವನ ಮೈ ಬೆವರಿನ ಸ್ನಾನ ಮಾಡಿತು. ಕಣ್ಣುಗಳಲ್ಲಿ ನೀರು ಕೋಡಿ ಹರಿ ಯಿತು. ಎರಡೂ ಕೈಗಳು ತಮಗೆ ತಾವೇ ಜೋಡಿಸಿಕೊಂಡವು.

'ಪಾಪೀ!. . .ಅಯ್ಯೋ ಪಾಪಿ!!. . .ಮಹಾಪ್ರಭು. . .ಮಹಾಪ್ರಭೋ. . . .ಮಹಾಲಕ್ಷ್ಮೀ. . .! ಮಹಾತಾಯಿ' ಎಂದವನೇ ಧೊಪ್ಪನೇ ಅವರಿಬ್ಬರ ಪಾದಗಳ ಬಳಿ ಬಿದ್ದುಬಿಟ್ಟ. . .ಪ್ರಜ್ಞೆ ತಪ್ಪಿ ಹೋಗಿತ್ತು. ಆ ಶಬ್ದ ಕೇಳಿ ಓಡಿಬಂದ ಶಿಷ್ಯರು ಕಮಂಡಲುವಿನಿಂದ ನೀರು ತಂದು ತಟ್ಟಿದರು. ರಾಜ ತನ್ನ ತೊಡೆಯ ಮೇಲೆ ಮಹಾಶಿಲ್ಪಿಯ ಶಿರಸ್ಸನ್ನಿಟ್ಟುಕೊಂಡು ನೀರು ಕುಡಿಸಿದ. ಮಹಾ ರಾಣಿ ಶಾಂತಲೆ ತನ್ನ ಸೆರಗಿನಿಂದ ಗಾಳಿ ಹಾಕುತ್ತಿದ್ದಳು.

ಪ್ರಜ್ಞೆ ತಿಳಿಯಿತು. ಎದ್ದು ಕುಳಿತ ಶಿಲ್ಪಿ. . .ಕೈ ಮುಗಿದು, ಅವರ ಪಾದಗಳನ್ನು ಹಿಡಿಯ ಹೋದ. . .ಕೂಡಲೇ ಹೊಯ್ಸಳೇಶ್ವರ ವಿಷ್ಣುವರ್ಧನರು ಅವನನ್ನು ಬಾಚಿ ತಬ್ಬಿಕೊಂಡರು. . .ಅದೆಷ್ಟು ಕಾಲ ಹಾಗಿದ್ದರೊ ತಿಳಿಯದು. ಆವೇಶ ಕುಗ್ಗಿ, ಅಮರ ಶಿಲ್ಪಿಯಲ್ಲಿ ಮಾತನಾಡುವಷ್ಟು ಶಕ್ತಿ ಬಂದಿತ್ತು ಆ ವೇಳೆಗೆ. ಆತ ಮಗುವಿನಂತೆ ಅತ್ತುಬಿಟ್ಟ.

'ಮಹಾಪ್ರಭುಗಳು ಈ ದಾಸನ ಅಪಚಾರವನ್ನು ಮನ್ನಿಸಬೇಕು. . .ಮಹಾರಾಣಿಯವರು ಈ ಕಂದನ ಉದ್ಧಟತನವನ್ನು ಕ್ಷಮಿಸಬೇಕು.'

'ಇಲ್ಲಿ ಕ್ಷಮಿಸಬೇಕಾದ ಪ್ರಮೇಯವೇ ಇಲ್ಲ ಮಹಾಶಿಲ್ಪಿಗಳೆ. ಇಲ್ಲಿ ಯಾವ ಅಪಚಾರವೂ ಆಗಿಲ್ಲ. . .ಅಂದಮೇಲೆ. . '

'ಆದರೆ. . .ಮಹಾಪ್ರಭು. . .ಲೋಕರಕ್ಷಕನಾದ ಶ್ರೀಮನ್ನಾರಾಯಣನ ಪ್ರತಿರೂಪಿಗಳಾದ ತಮ್ಮಿಂದ ನನಗೆ ಸೇವೆಯೆ!. . .ಸಾಕ್ಷಾತ್ ಶ್ರೀದೇವಿಯಂತೆ ಕಂಗೊಳಿಸುತ್ತಿರುವ ಮಹಾತಾಯಿ ಶಾಂತಲಾದೇವಿಯರಿಂದ ಎಂಜಲು ಬಟ್ಟಲನ್ನು ಹಿಡಿಸಿದ ಈ ಮಹಾಪಾತಕಿಗೆ ಶಿಕ್ಷೆ ಯಾವುದು ಎಂಬುದೇ ತಿಳಿಯದಾಗಿದೆ. ಮಹಾಪ್ರಭು. . .ತಿಳಿಯದಾಗಿದೆ. . .ಅಮ್ಮಾಜೀ. . .ಮನ್ನಿಸಿಬಿಡು ಮನ್ನಿಸಿಬಿಡು ನನ್ನವ್ವ.'

'ಆರ್ಯ, ಎಷ್ಟಾದರೂ ನಾನು ತಮ್ಮ ಶಿಷ್ಯಳಲ್ಲವೆ? ಗುರುಸೇವೆಗಿಂತ ಮಿಗಿಲಾದ ಭಾಗ್ಯ ಬೇರೊಂದಿದೆಯೆ. . .ನನಗಾಗಿ ದೇವದೇವನೆ ಆ ಅರ್ಹತ್ ಸ್ವಾಮಿಯೆ ಇಂತಹ ಕೈಂಕರ್ಯದ ಸದವಕಾಶವನ್ನು ದಯಪಾಲಿಸಿದ್ದಾನೆಂದು ಆನಂದಭರಿತಳಾಗಿದ್ದೇನೆ... ಅದಕ್ಕಾಗಿ. . .'

'ಹಾಗಲ್ಲ ನನ್ನಮ್ಮಾ. . .ನೀನು ಹಿಂದೆ ನಿನ್ನ ಪೂರ್ವಾಶ್ರಮದಲ್ಲಿ ಶಿಷ್ಯಳಾಗಿದ್ದೆ ನಿಜ. ಆದರೆ ಇಂದು ನನ್ನಂತಹ ಸಾಮಾನ್ಯ ಪ್ರಜೆಯ ತಾಯಿಯಾಗಿದ್ದೀಯೆ. ಒಂದು ಮಹಾ ಸಾಮ್ರಾಜ್ಯದ ಪುಣ್ಯದೇವತೆಯಾಗಿದ್ದೀಯೆ. . .ಅಂತಹ ರಾಜ್ಯಲಕ್ಷ್ಮಿಯ ಕೈಯಲ್ಲಿ ಎಂಜಲು ಪಾತ್ರೆ ಹಿಡಿಸಿದ್ದು. . .ಅಯ್ಯೋ. . .ಅಯ್ಯೋ. . .'

'ಆರ್ಯ, ಮತ್ತೆ ಉದ್ವೇಗಕ್ಕೆ ಎಡೆಗೊಡಬೇಡಿ. ಪ್ರಾಜ್ಞರಾದ ತಾವೇ ಹೀಗಾದರೆ ಸಮಾಧಾನ ಹೇಳುವವರಾರು? ಈಗಲಾದರೂ ಸಮಾಧಾನ ತಂದುಕೊಳ್ಳಿ. . .'

'ಆಗಲಿ ತಾಯಿ. . .ನಿನ್ನ ಆಶೀರ್ವಾದವಿರಲಿ. . .ಈಗ ಹೇಳಿ. .ನನ್ನಿಂದಾದ ಈ ಪಾಪಕ್ಕೆ ಪ್ರಾಯಶ್ಚಿತ್ತವೇನು? ಹೇಳಿ ಬಿಡು ತಾಯಿ. . .ಮಾಡಿ ಮುಗಿಸಿ ಪುನೀತನಾಗುತ್ತೇನೆ.'

'ಆರ್ಯ. . .ನನ್ನದೊಂದು ಬಹುದಿನದ ಹಂಬಲ ಇದೆ. ಅದನ್ನು ಹಣ್ಣಾಗಿಸುತ್ತೀರಾ?'

'ಹೇಳಿ ತಾಯಿ. . .ಈ ಶಿರಸ್ಸನ್ನೇ ನಿನ್ನ ಪದತಲದಲ್ಲಿಡಬೇಕೆಂದರೂ ಸಿದ್ಧ ನಾನು. . .ಹೇಳು ನನ್ನಮ್ಮಾ.'

'ಏನಿಲ್ಲ. . .ವೇಲಾಪುರಿಯಲ್ಲಿ ವಿಜಯನಾರಾಯಣನ ದೇಗುಲದ ಮಹಾಮಣಿಹಕ್ಕೆ ಸಿದ್ಧತೆಗಳು ನಡೆದಿವೆ. ಅದು ತಮಗೆ ತಿಳಿದ ವಿಷಯವೆ. ಹಿಂದೊಮ್ಮೆ ಮಹಾಪ್ರಭುಗಳು ತಮ್ಮಲ್ಲಿಗೆ ಬಂದು ನಿರಾಕರಣೆಯ ಉತ್ತರವನ್ನು ಪಡೆದು ಹಿಂತಿರುಗಿದ್ದಾರೆ. . ಈಗ ನಮ್ಮ ಪ್ರಾರ್ಥನೆಗೆ ತಮ್ಮಲ್ಲಿ ಮನ್ನಣೆ ದೊರೆತರೆ ನಾವು ಧನ್ಯರು.'

ಸ್ವಲ್ಪ ಹೊತ್ತು ಸುಮ್ಮನೆ ಕುಳಿತಿದ್ದ ಜಕಣಾಚಾರಿ ಹೇಳಿದ–

'ಆಗಲಿ ತಾಯಿ. . .ಕಲಾಸೇವೆಯ ನೆಪದಲ್ಲಿ ನಿಮ್ಮ ಸೇವೆಯನ್ನು ಸಲ್ಲಿಸಿ ನನ್ನ ಪಾಪದ ಕೊಳೆಯನ್ನು ತೊಳೆದುಕೊಂಡು ಬಿಡುತ್ತೇನೆ.'

'ಓಹೋ. . .ಆನಂದ. . .ಬ್ರಹ್ಮಾನಂದ!. . .ಮಹದಾನಂದ! 'ಅಮರಶಿಲ್ಪಿಗೆ ಜಯವಾಗಲಿ. . .ಅಮರಶಿಲ್ಪಿಗೆ ಜಯವಾ ಗಲಿ!' – ಎಂದು ರಾಜ ರಾಣಿಯರಿಬ್ಬರೂ ಘೋಷಣೆ ಮಾಡಿ ಕುಣಿದಾಡಿದರು.

ಕೈ ಮುಗಿದುಕೊಂಡೇ ಮತ್ತೊಮ್ಮೆ ವಿಜ್ಞಾಪಿಸಿಕೊಂಡ ಶಿಲ್ಪಿ -

'ಮಹಾಪ್ರಭು ಮಹಾತಾಯಿ. . .ತಾವಿಬ್ಬರೂ ನನ್ನದೊಂದು ಪ್ರಾರ್ಥನೆಯನ್ನು ಮನ್ನಿಸಬೇಕೆಂದು ಬೇಡಿಕೊಳ್ಳುತ್ತೇನೆ.'

'ಏನಿದು ಆರ್ಯ?'

'ಅಮ್ಮಾಜೀ. . .ನನ್ನ ವೃತ್ತಾಂತವನ್ನು ಮಾತ್ರ ತಾವು ಯಾರಿಗೂ ತಿಳಿಸಕೂಡದು. . .ನನ್ನ ಹೆಸರು ಯಾರಿಗೂ ಗೊತ್ತಾಗ ಕೂಡದು. . .ಎಲ್ಲೂ ನನ್ನ ಹೆಸರನ್ನು ಕೆತ್ತಬೇಕೆಂದು ತಾವು ಬಲಾತ್ಕರಿಸಕೂಡದು. . .ಕನಸಿನಲ್ಲಾದರೂ ಜಕಣಾಚಾರಿ ಎಂದು ತಾವು ಉಚ್ಚರಿಸಕೂಡದು. ಹೀಗೆಂದು ನನಗೆ ಮಾತುಕೊಡಬೇಕು.'

'ಆಯಿತು. . .ಇದೋ ಪ್ರಮಾಣ ಮಾಡಿಕೊಡುತ್ತೇವೆ.'

'ಮಹಾಪ್ರಭು. . .ಎಂದಾದರೂ ವಿಷಯ ಹೊರಬಿದ್ದರೆ ನಾನು ಅಂದೇ ಸ್ವತಂತ್ರ. . .ರಾಜಧಾನಿಯನ್ನು ಬಿಟ್ಟು ಎಲ್ಲಿಯಾದರೂ ಹೋಗುವವನು. ಬಲಾತ್ಕರಿಸಿದರೆ ಆತ್ಮಹತ್ಯೆಗೂ ಹೇಸುವವನಲ್ಲ.'

'ಅಷ್ಟು ದೂರ ಹೋಗುವುದು ಬೇಡ ಸ್ಥಪತಿಗಳೆ. . .ನಿಮ್ಮದೇ ಆದ ಅರಮನೆಯಲ್ಲಿ. ಸಾಮ್ರಾಜ್ಯದಲ್ಲಿ, ಸರ್ವ ಸ್ವಾತಂತ್ರ್ಯವೂ ಉಂಟು. . .ನಾವು ನಿಮ್ಮನ್ನು 'ಅಮರಶಿಲ್ಪಿ' ಎಂದಷ್ಟೇ ಕರೆಯುತ್ತೇವೆ, ಆಗಬಹುದೆ?'

'ಆಗಬಹುದು. . .'

'ಅಂತೆಯೆ ತಾವು ನಾಳೆ ನಮ್ಮೊಡನೆ ಬರುವಿರಾ?'

'ಪ್ರಭುವಾಜ್ಞೆ'

ಬೇಡಬೇಡವೆಂದರೂ ರಾಜರಾಣಿಯರ ರಥದ ಸಾರಥಿಯಾದ ಜಕಣಾಚಾರಿ, ಪ್ರಭುಗಳ ಪ್ರಾರ್ಥನೆಗೆ ಮನ್ನಣೆಯಿತ್ತು ಯಾರೊಡನೆಯೂ ಬಾಯಿ ಬಿಡದಿದ್ದ ಜಕ್ಕಣ ಅಂದು ತನ್ನ ಆತ್ಮಚರಿತ್ರೆಯನ್ನು ಹಾದಿಯುದ್ದಕ್ಕೂ ವಿವರಿಸಿದ -

ಅದೊಂದು ದಾರುಣವಾದ ಕಥೆ, ದುರಂತವೆಂದರೂ ಒಪ್ಪುತ್ತದೆ. ನನ್ನ ಹೆಂಡತಿ ಕಾಳಲಾಂಬೆ ನನ್ನ ಭಾಗ್ಯಕ್ಕೆ ಮಹಾಕಾಳಿಯೇ ಆಗಿಬಿಟ್ಟಳು. ವಿವಾಹದ ಮೊದಲ ದಿನಗಳಲ್ಲಿ ಇದ್ದ ಪ್ರೇಮ, ಪ್ರೇಮವಲ್ಲ ಅದು ಬರಿಯ ಕಾಮ ಎಂಬುದು ಬಹುಬೇಗ ನನ್ನರಿವಿಗೆ ಬಂದು ಹೋಯಿತು. ಭಾವುಕನೂ, ಕಲೌಪಾಸಕನೂ ಆದ ನನಗೆ ಲೌಕಿಕ ಫಲಾಪೇಕ್ಷೆಗಳು ಹೆಚ್ಚಾಗಿಲ್ಲದಿದುದ್ದರಿಂದ ಬಡತನ ಆಯಾಚಿತವಾಗಿ ಕಾಲಿರಿಸಿತ್ತು. ಗಂಡೊಂದು ಹುಟ್ಟಿ, ಅದು ಬೆಳೆಯುವ ದಿನಗಳಲ್ಲಿ ಒಂದು ಕುಡಿಕೆ ಹಾಲಿಗೂ ಗತಿಯಿಲ್ಲವಾಯಿತು. ಹೆಂಡತಿ ಮೊದಮೊದಲು ತನ್ನನ್ನು ಅರ್ಥಮಾಡಿಕೊಂಡಾನೆಂದು ಭಾವಿಸಿದಳು. ಆದರೆ ಅದು ತಪ್ಪಾಯಿತು. ನಾನು ಭಾವನಾ ಪ್ರಪಂಚದಲ್ಲೇ ಉಳಿದುಕೊಂಡೆ. ಕಿತ್ತು ತಿನ್ನುವ ಬಡತನ. ನನ್ನವಳಿಗೆ ಸಹಿಸಲಾಗಲಿಲ್ಲ. ನನ್ನ ಧೋರಣೆ ಸರಿಬೀಳದೆ ಜಗಳ ಪ್ರಾರಂಭಿಸಿದಳು. ನಿತ್ಯವೂ ಮನೆಯಲ್ಲೊಂದು ಕುರುಕ್ಷೇತ್ರವಾಯಿತು. ನೆಮ್ಮದಿ ಇಲ್ಲವಾಯಿತು. ಸಂತುಷ್ಟಿ ಎಂಬುದು ಸತ್ತೇ ಹೋಯಿತು. ಕಡೆಗೆ ಚಿಕ್ಕ ಮಗುವನ್ನು ಕಂಕುಳಲ್ಲಿರಿಸಿಕೊಂಡು ತೌರ ಹಾದಿ ಹಿಡಿದಳು. ಅನೇಕ ದಿನಗಳು ಬರಲೇ ಇಲ್ಲ. ಜನದ ಬಾಯಿಗೆ ಬೀಗವಿಲ್ಲದಾಯಿತು. ಸಲ್ಲದ ನುಡಿಗಳ ಸುರಿಮಳೆ ಕರೆದರು. ಬದುಕು ಬೇಸರವಾಯಿತು. ತಲೆ ಮರೆಸಿಕೊಂಡು ಎಲ್ಲಿಯಾದರೂ ಹೋಗಬೇಕೆಂಬ ಸಿದ್ಧತೆಯಲ್ಲಿದ್ದೆ. ಅಷ್ಟರಲ್ಲಿ ನನ್ನ ಕಾಳಿಕಾದೇವಿ ಮನೆಗೆ ಕಾಲಿರಿಸಿದಳು. ಒಂದು ದಿನವೂ ನಿಲ್ಲಲಾರದಾದೆ. ನನಗೆ ಏನಾಯಿತೊ ತಿಳಿಯದು., ಅಂತೂ ಮನೆಯಿಂದ ಕಾಲ್ತೆಗೆದೆ. ದೇಶ ವಿದೇಶಗಳನ್ನು ತಿರುಗಿ ಕಡೆಗೆ ಇಲ್ಲಿಗೆ ಬಂದು ಸೇರಿಕೊಂಡೆ. ಒಂದು ಆಶ್ರಮ ಕಟ್ಟಿ, ಅನೇಕ ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡತೊಡಗಿದೆ. ಊರು ಬಿಟ್ಟು ಅನೇಕ ವರ್ಷಗಳಾದವು. ನನ್ನ ಗುರುತು ಯಾರಿಗೂ ಇಂದು ಹತ್ತುವ ಸ್ಥಿತಿಯಲ್ಲಿಲ್ಲ. ಅಷ್ಟು ಮಾರ್ಪಾಟು ನನ್ನ ಮುಖದಲ್ಲಾಗಿದೆ.'

'ಅದು ಸರಿ. . .ಅಮರಶಿಲ್ಪಿಗಳೆ ತಮ್ಮ ಜನ್ಮಸ್ಥಳ?'

'ನನ್ನದು ತೆಂಗಿನಸೀಮೆ ಕೈದಾಳ ನಾಡು'

'ಈಗ ನಿಮ್ಮ ಪತ್ನಿ ಇದ್ದಾರೆಯೆ?'

'ಇರಬಹುದು. . .ನನಗೆ ಏನೂ ತಿಳಿದಿಲ್ಲ. . .'

'ಒಂದು ವೇಳೆ ಅವರು ಬದುಕಿದ್ದು ನಿಮ್ಮಲ್ಲಿಗೆ ಬಂದರೆ ಮತ್ತೆ ಪತ್ನಿಯಾಗಿ ಸ್ವೀಕರಿಸುತ್ತೀರಾ?'

'ಆ ವಿಚಾರ ಈಗ ಬೇಡಿ. . .ಅಮ್ಮಾಜೀ. . .ಅದನ್ನು ಅಲ್ಲಿಗೆ ಬಿಟ್ಟು ಬಿಡಿ. . .ಮುಂದಿನ ಕಾರ್ಯವೇನು ಅಪ್ಪಣೆಯಾಗಲಿ.'

'ನಾನು ಹೇಳುತ್ತೇನೆ ಅಮರಶಿಲ್ಪಿಗಳೆ' ಮಹಾರಾಜ ಮಧ್ಯೆ ಬಾಯಿ ಹಾಕಿದ.

'ನಿಮ್ಮ ಶಿಷ್ಯೆಯ ಇಚ್ಛೆಯನ್ನು ಪೂರ್ಣಗೊಳಿಸುವ ಸಲುವಾಗಿಯೆ ನಾನು ತಮ್ಮನ್ನು ದೋರಸಮುದ್ರಕ್ಕೆ ಕರೆದೊಯ್ಯುತ್ತಿದ್ದೇನೆ. ಅವಳ ವಿವಿಧ ನಾಟ್ಯ ಭಂಗಿಗಳನ್ನು ನಾನು ಚಿತ್ರಿಸಿದ್ದೇನೆ. ತಾವು ಅಪೇಕ್ಷಿಸಿದರೆ ಕೊಡುತ್ತೇನೆ. ಅವುಗಳನ್ನು ಶಿಲೆಯಲ್ಲಿ ಮೂಡಿಸಿ, ಲೋಕ ವಿಖ್ಯಾತವಾದ ದೇವಾಲಯವನ್ನು ನಿರ್ಮಿಸಿ, ಹೊಯ್ಸಳ ಸಾಮ್ರಾಜ್ಯದ ಕೀರ್ತಿ ಗೌರವಗಳನ್ನು ಹೆಚ್ಚಿಸಬೇಕಾಗಿ ಪ್ರಾರ್ಥನೆ. ತಮ್ಮ ಸಹಾಯಕ್ಕಾಗಿ ಸಹಸ್ರ ಶಿಲ್ಪಿಗಳು, ರೂವಾರಿಗಳು. ಅವರ ನಡುವೆ ತಾವು ಸ್ಥಪತಿಗಳು!. . .ಮಹಾಸ್ಥಪತಿಗಳು!'

'ಆಗಲಿ ಪ್ರಭು. . .ಈ ಸೇವೆಯನ್ನು ನಾನು ನಿಷ್ಠೆಯಿಂದ ನೆರವೇರಿಸುತ್ತೇನೆ. ಅದು ಪೂರ್ಣಗೊಳ್ಳುವಂತೆ ಆ ಜಗನ್ಮಾತೆಯು ಆಶೀರ್ವದಿಸಲಿ.'

ರಾಜಧಾನಿಗೆ ಬಂದದ್ದಾಯಿತು. ಸ್ಥಪತಿಯ ಮಾರ್ಗದರ್ಶನದಲ್ಲಿ ಸಹಸ್ರಾರು ಜನ ಶಿಲ್ಪಿಗಳು ಮಹತ್ಕಾರ್ಯವನ್ನು ಕೈಗೆತ್ತಿಕೊಂಡರು. ನಾಲ್ಕೈದು ವರ್ಷಗಳಲ್ಲಿ ನೂತನ ದೇವಾಲಯವೊಂದು ಸಿದ್ಧವಾಗಿ ನಿಂತಿತು ವೇಲಾಪುರಿಯಲ್ಲಿ.

ಅದೊಂದು ಅಪೂರ್ವ ವಾಸ್ತುಶಿಲ್ಪ! ಅದೊಂದು ಅಮರಕಲೆಯ ವಿದ್ಯಾಲಯ!! ಶಿಲ್ಪದಲ್ಲೇ ಶಾಶ್ವತಗೊಳಿಸಿದ ನೃತ್ಯಕಲೆಯ ಒಂದು ಸಾಕಾರ ವಿಶ್ವವಿದ್ಯಾನಿಲಯ !!!

ಅದರ ಜೊತೆಯಲ್ಲಿಯೆ ಮತ್ತೊಂದು ಸಣ್ಣ ದೇವಾಲಯ. . .ಅದೂ ಸಿದ್ಧವಾಯಿತು. ನಿರ್ಮಾಣಗೊಂಡ ನಂತರದಲ್ಲಿ ಶಕ ವರ್ಷ ೧೦೩೯ನೆಯ ಚೈತ್ರ ಶುದ್ಧ ಪಂಚಮಿಯ ದಿನ ರಾಜರಾಣಿಯರಿಬ್ಬರೂ ವಿಜಯನಾರಾಯಣ ಮಹಾಮೂರ್ತಿಯನ್ನು ಪ್ರತಿಷ್ಠಾಪಿಸಿದರು. ದೇವದೇವನ ನಿತ್ಯ ನೈಮಿತ್ತಿಕ ದಿವ್ಯಾಂಗ ಭೋಗ ತ್ರಿಕಾಲ ನೈವೇಧ್ಯ ಇತ್ಯಾದಿಗಳಿಗಾಗಿ ಹಲವು ಗ್ರಾಮಗಳನ್ನು ದತ್ತಿಯಾಗಿ ನೀಡಿದರು. ಶಿಲ್ಪ ವೈಭವದ ಜೊತೆಯಲ್ಲಿ ಭಕ್ತಿ, ಸಂಸ್ಕೃತಿ ಇವೂ ಸಾಕಾರಗೊಂಡವು ಅಲ್ಲಿ.

ವಿಜಯ ನಾರಾಯಣನ ದೇಗುಲ ಕಾರ್ಯಮುಗಿದ ಕೂಡಲೇ ಜಕ್ಕಣ ಶಾಂತಲೆಯರ ಅಭಿಲಾಷೆಯಂತೆ ಚೆಲುವ ನಾರಾಯಣನ ದೇಗುಲ ಕಾರ್ಯವನ್ನು ಕೈಗೆತ್ತಿಕೊಂಡ. ಕಾರ್ಯ ಭರದಿಂದ ನಡೆಯತೊಡಗಿತು.

ಆದರೆ -

೮

ಹೊಯ್ಸಳ ಸಾಮ್ರಾಜ್ಯದ ಪ್ರಗತಿಯನ್ನು ಕಂಡ ಪರರಾಜರ ಕಣ್ಣುಗಳು ಕಿಸುರಾದವು. ದಿನೇ ದಿನೇ ಪ್ರವರ್ಧಮಾನಕ್ಕೆ ಬರುತ್ತಿರುವ ವಿಷ್ಣುವರ್ಧನ ಭೂಪಾಲನನ್ನು ಬಡಿಯಬೇಕೆಂದು ಹವಣಿಸುತ್ತಿದ್ದರು – ಶತ್ರುರಾಜರುಗಳನೇಕರು. ಅವರಲ್ಲಿ ಚೋಳ ಮಂಡಲದ ಕುಲೋತ್ತುಂಗ ಚೋಳ ಪ್ರಮುಖನಾದವನು. ಗಂಗರ ತಲಕಾಡು ಅವನ ಸ್ವಾಧೀನದಲ್ಲಿತ್ತು. ಅಲ್ಲಿ ಆದಿಯಮ ಎಂಬುವನನ್ನು ರಾಜಪ್ರತಿನಿಧಿಯಾಗಿ ನಿಯಮಿಸಿದ್ದನು. ಕುಲೋತ್ತುಂಗ ಪ್ರಚಂಡ ಆಶಾವಾದಿ. ಅಖಂಡ ಭರತಖಂಡದ ಒಡೆತನವನ್ನು ಬಯಸುತ್ತಿದ್ದ ದುರಾಶಾ ಪಿಶಾಚಿ. ಗಂಗಸಾಮ್ರಾಜ್ಯವನ್ನು ಸ್ವಾಧೀನಪಡಿಸಿಕೊಂಡಂತೆ ಹೊಯ್ಸಳ ಸಾಮ್ರಾಜ್ಯವನ್ನು ತನ್ನ ವಶಮಾಡಿಕೊಳ್ಳಲೆಂದು ಆಶಿಸಿ, ಆದಿಯಮನನ್ನು ಪ್ರಚೋದಿಸಿ ದೋರಸಮುದ್ರದ ಮೇಲೆ ಕಳುಹಿಸಿದ. ಆದಿಯಮ ಮೊದ ಮೊದಲು ಗಡಿನಾಡುಗಳಲ್ಲಿ ಚಿಕ್ಕಪುಟ್ಟ ದಾಳಿಗಳನ್ನು ನಡೆಸುತ್ತಿದ್ದವನು ಒಂದು ದೊಡ್ಡ ದಂಡೆಯಾತ್ರೆಯನ್ನು ಕೈಕೊಂಡ. ಗುಪ್ತಚಾರರಿಂದ ತಿಳಿದ ಹೊಯ್ಸಳೇಶ್ವರನು ಸಕಲ ಸೇನಾ ಸಮೇತನಾಗಿ ಯುದ್ಧಕ್ಕೆ ಸನ್ನದ್ಧನಾಗಲೇ ಬೇಕಾಯಿತು.

ಶಕವರ್ಷ ಒಂದು ಸಾವಿರದ ಮೂವತ್ತೆಂಟನೆಯ ದುರ್ಮುಖಿನಾಮ ಸಂವತ್ಸರದ ಆಶ್ವಯುಜ ಶುದ್ಧ ದಶಮಿಯಂದು ದೋರಸಮುದ್ರದ ಸೇನೆ ತಲಕಾಡಿನ ಕಡೆಗೆ ಜೈತ್ರಯಾತ್ರೆ ಹೊರಟಿತು. ಮಳವಳ್ಳಿ, ಮುಡುಕು ತೊರೆಗಳ ಬಳಿಯಲ್ಲಿ ಘನಘೋರ ಯುದ್ಧ ನಡೆದು ಹೊಯ್ಸಳರ ಕೈ ಮೇಲಾಗಿ ಚೋಳಸೇನೆ ಕಂಗಾಲಾಯಿತು. ಆದಿಯಮ ಯುದ್ಧದಲ್ಲಿ ಮಡಿದ. ಅವನ ಸತ್ತ ಸುದ್ದಿ ತಿಳಿಯುತ್ತಲೆ ಚೋಳ ಸೇನೆ ದಿಕ್ಕಾಪಾಲಾಗಿ ಓಡಿತು. ತಲಕಾಡ ಕೋಟೆ ಸುಲಭವಾಗಿ ವಿಷ್ಣುವರ್ಧನ ಭೂಪಾಲನ ಕೈವಶವಾಯಿತು. ಸಮಸ್ತಸೇನೆಯು 'ತಲಕಾಡುಗೊಂಡನಿಗೆ ಜಯವಾಗಲಿ' ಎಂದು ಜೈಕಾರ ಹಾಕಿತು.

ಹಲವರು ತಲಕಾಡು ನಗರವನ್ನು ಲೂಟಿ ಮಾಡಬೇಕೆಂದು ಇಚ್ಛಿಸಿದರು. ಆದರೆ ವಿಷ್ಣುವರ್ಧನ ಭೂಪಾಲ ಅದಕ್ಕೆ ಆಸ್ಪದ ಕೊಡಲಿಲ್ಲ. 'ಕೆಚ್ಚೆದೆಯ ಕಟ್ಟಾಳುಗಳೇ, ಇದು ನಮ್ಮ ವಿಜಯದ ದಿನವೆಂದು ತಿಳಿದು ಮೈಮರೆತು ಮೆರೆಯಬಾರದು. ಇದು ನಮ್ಮ ಸತ್ವ ಪರಿಕ್ಷೆಯ ಸಮಯವೂ ಹೌದು. ಆದ್ದರಿಂದ ಎಷ್ಟೇ ಸ್ಥಾನಮಾನ ಪದವಿ ಪ್ರಶಸ್ತಿಗಳು ಲಭಿಸಲಿ, ಮಾನವ ತನ್ನ ಮಾನವೀಯ ಗುಣಗಳನ್ನು ಮಾತ್ರ ತೂರಿಬಿಡಬಾರದು. ಸೆರೆ ಸಿಕ್ಕ ಸೈನಿಕರ ಮೇಲೆ ದೌರ್ಜನ್ಯ ನಡೆಸುವುದು ಯೋಧ ಧರ್ಮ ಅಲ್ಲ. ಸೋತ ಸಾಮ್ರಾಜ್ಯವನ್ನು ಲೂಟಿ ಮಾಡುವುದು ರಾಜಧರ್ಮವಲ್ಲ. ಆ ಕಾರಣ ನೀವೆಲ್ಲರೂ ತಲಕಾಡವರನ್ನು

ತಮ್ಮವರೆಂದೇ ತಿಳಿದು ನಡೆಸಿಕೊಳ್ಳಿ. ಅವರ ಮನೋಭೀತಿಯನ್ನು ದೂರಮಾಡಿ ಶಾಂತಿ ಸ್ಥಾಪನೆ ಮಾಡಿ. ನಾಲ್ಕು ದಿನಗಳಾದ ಮೇಲೆ ರಾಜಧಾನಿಗೆ ಹಿಂದಿರುಗೋಣ.'

ಪ್ರಜಾಪಾಲಕನಾದ ವಿಷ್ಣುವರ್ಧನ ಭೂಪಾಲನ ಮಾತು ಎಲ್ಲರಿಗೂ ಹಿಡಿಸಿತು. ಅವನ ಇಚ್ಛೆಯನ್ನು ಮಹಾಮಂತ್ರಿ ಗಂಗರಾಜರೂ, ದಂಡಾಧೀಶ ತುಂಗದೇವರೂ ಅನುಮೋದಿಸಿದರು.

ಇತ್ತ ರಾಜಧಾನಿಯಲ್ಲಿ ಸಂರಕ್ಷಕಳಾಗಿ ನಿಂತಿದ್ದ ದೇವತೆ ಎಂದರೆ ಮಹಾರಾಣಿ ಶಾಂತಲಾದೇವಿ. ಅವಳಿಗೆ ನೆರವು ನೀಡಲು ನಿಯಮಿತನಾಗಿದ್ದವನು ಯುವರಾಜ ಕುಮಾರ ಉದಯಾದಿತ್ಯ. ಯುದ್ಧಕ್ಕಾಗಿ ಸಮಸ್ತ ಸೇನೆಯೂ ರಾಜ್ಯದಿಂದ, ರಾಜ ಧಾನಿಯಿಂದ ದೂರ ಹೋದಾಗ ಪಕ್ಕದ ಪಾಳೇಗಾರರೂ, ದುಷ್ಟರೂ ದೊಂಬಿ ಏಳುವುದು ಸಹಜ. ಆದರೆ ಮಹಾರಾಣಿಯವರು ದಂಡವನ್ನು ಹಿಡಿದು ಕುಳಿತಿರುವುದನ್ನು ಕೇಳಿದ ಕೂಡಲೇ ಯಾವ ಗದ್ದಲವೂ ಕೇಳಬರದಾಯಿತು. ಮಹಾರಾಣಿ ಪರಿಸ್ಥಿತಿಯನ್ನು ಗೂಢಚಾರರಿಂದ ತಿಳಿಯುತ್ತಿದ್ದಳು. ಆಗಾಗ ತಾನೂ ವೇಷ ಧರಿಸಿಕೊಂಡು ದೇಶದ ಒಳ ಭಾಗಗಳಲ್ಲಿ ಸಂಚರಿಸಿ ಬರುತ್ತಿದ್ದಳು.

ಒಮ್ಮೆ -

ತಾನು ಗಂಡುಡೆಗೆಯನ್ನುಟ್ಟು ಯುವರಾಜ ಕುಮಾರನನ್ನು ಜೊತೆಯಲ್ಲಿ ಕರೆದುಕೊಂಡು ಸರಿರಾತ್ರಿಯಲ್ಲಿ ಕುದುರೆಯನ್ನೇರಿ ದ್ವಾರಸಮುದ್ರದ ದ್ವಾರದಿಂದ ಹೊರಟಳು. ರಾಜ್ಯದ ದಕ್ಷಿಣ ವಿಭಾಗವನ್ನು ವೀಕ್ಷಿಸುವ ಸಲುವಾಗಿ ಬೆಳ್ಗೊಳ, ಬಾಣಾವರ ನಾಡುಗಳನ್ನು ದಾಟಿ ತೆಂಗಿನ ಸೀಮೆಯೊಂದರ ಹಳ್ಳಿಯೊಂದರ ಬಳಿ ಬಂದರು. ಅದರ ಹೆಸರು ಬನದಮ್ಮನಹಳ್ಳಿ. ಊರ ಆಚೆ ಬನಶಂಕರಿಯ ದೇವಾಲಯ ಭವ್ಯವಾಗಿ ಬೆಳಗುತ್ತಿತ್ತು. ಅಲ್ಲಿ ಹೋಗಿ ದೇವಿಗೆ ನಮಸ್ಕರಿಸಿ ಪಯಣವನ್ನು ಮುಂದುವರಿಸುವುದೆಂದು ಆ ಲೋಚಿಸಿ ಅಲ್ಲಿಗೆ ನಡೆದಳು. ಆದರೆ ಬನಶಂಕರಿಯ ದೇವಾಲಯದ ಮುಂಭಾಗ ಕಟ್ಟೆಯ ಮೇಲೆ ನೂರಾರು ಜನರ ಒಂದು ಪಂಚಾಯಿತಿ ನೆರೆದಿದ್ದುದು ಕಂಡು ಬಂತು. ಯಾವುದೋ ಹಳ್ಳಿ ಜಗಳ ಇರಬೇಕೆಂದು ಅಂದುಕೊಂಡಳು ಶಾಂತಲೆ. ಆದರೆ ಅದು ಜಗಳವಾಗಿರಲಿಲ್ಲ. ಏನೋ ಒಂದು ಹೊಸ ಬಗೆಯ ನ್ಯಾಯವನ್ನು ಬೇಡಲಾಗುತ್ತಿತ್ತು.

ಪಂಚಾಯತಿಯ ಜನಸಮೂಹಕ್ಕೆ ಕಾಣಿಸದಂತೆ ದೂರದ ಇಪ್ಪೆಯ ಮರದ ಮರೆಯಲ್ಲಿ ನಿಂತು ಶಾಂತಲೆ ಮತ್ತು ಉದ ಯಾದಿತ್ಯರು ಅಲ್ಲಿ ನಡೆಯುತ್ತಿದ್ದ ನ್ಯಾಯ ವಿಚಾರಣೆಯನ್ನು ಆಲಿಸುತ್ತಿದ್ದರು.

'ಏನಪ್ಪಾ. . .ದೈವದವರು ಏನು ಃಏಳ್ತೀರಾ ಃಏಳ್ರಿ. . .' ಗಾದಿಯ ಮೇಲೆ ಕುಳಿತಿದ್ದ ದಪ್ಪ ಮೀಸೆಯ ಗಾವುಂಡ ಕೇತಮಲ್ಲ ನಾಯಕ ಅದೇ ಕಟ್ಟೆಯ ಮೇಲೆ ಕುಳಿತಿದ್ದ ಹತ್ತೂ ಜನರನ್ನು ಕೇಳಿದ. ಎಲ್ಲರೂ ಮುಂಡಾಸುಗಳನ್ನು ಸುತ್ತಿಕೊಂಡಿದ್ದರು.

';ಏನು ತಾತಾ. . .ಈವೊತ್ತಿನ ಇಚಾರಾ' ಎಂದ ಒಬ್ಬ.

ಕೇತಮಲ್ಲನಾಯಕ ವಿಷಯವನ್ನು ವಿವರಿಸಿದ -

'ನೋಡಿ ಬೀರಣ್ಣ ತನ್ನ ಮೂಡಲ ದಿಕ್ಕಿಗಿರೊ ಹಳ್ಳಿ ಹೊಲಾನ ಈರಣ್ಣನಿಗೆ ನೂರಾ ಎಂಟು ಹೊನ್ನಿಗೆ ಕೊಟ್ಟಿದ್ದ ಎರಡು ವರ್ಷಗಳ ಹಿಂದೆ. ಕ್ರಯಕ್ಕೆ ತಕ್ಕೊಂಡ ಹೊಲದಾಗೆ ಉಳುಮೆ ಮಾಡುವಾಗ ನಿನ್ನೆ ದಿನ ಒಂದು ಕೊಪ್ಪರಿಗೆ ಬಂಗಾರ ಸಿಕ್ತು. ಇಗಾ ಇಲ್ಲಯತೆ ನೋಡ್ರಿ.' ಹೊನ್ನು ತುಂಬಿದ ಕೊಪ್ಪರಿಗೆಯನ್ನು ತೋರಿದ ಆ ನಾಯಕ. 'ಇದನ್ನು ಈರಣ್ಣ ಪೂಜೆ ಮಾಡಿ ಬೀರಣ್ಣನ ಮನೆಗೆ ಕೊಂಡುಹೋಗಿ 'ತಕ್ಕಳಪ್ಪ ಇದು ನೀನು ಕೊಟ್ಟ ಹೊಲದಾಗ ಸಿಕ್ಕಿತು. . .ಯಾರೊ ನಿನ್ನ ಪೂರ್ವಿಕರು ನಿನಗಾಗಿ ಇಟ್ಟಿದ್ರು ಅಂತಾ ಕಾಣುತ್ತೆ ತಕ್ಕೋ.' – ಅಂದ.

'ಬೀರಣ್ಣ ಒಪ್ಪಲಿಲ್ಲ. ಅಲ್ಲವೇನಪ್ಪಾ ಬೀರಣ್ಣಾ? ಕೇಳಿದ ಕೇತಮಲ್ಲ. 'ಹೌದು ಗವುಡಪ್ಪಾ. ಹೊಲ ಮಾರಿದ ಮ್ಯಾಗೆ, ಹಣ ಕೊಟ್ಟ ಮ್ಯಾಗೆ, ಆ ನೆಲದ ಮೇಲೆ ನನಗೇನೈತೆ ಹಕ್ಕು. . .ಅದರಾಗೆ ಸಿಕ್ಕಿದ್ದೆಲ್ಲಾ ಹೊಲ ಕೊಂಡ ಒಡೆಯಂದು ತಾನೆ?'

'ಆದರೆ ಅದಕ್ಕೆ ನಾನೊಪ್ಪಲ್ಲ ಗೌಡಪ್ಪಾ. . .' ಈರಣ್ಣ ಹೇಳಿದ. 'ನಾನು ಹಣ ಕೊಟ್ಟದ್ದು ಮಣ್ಣಿಗೇ ಹೊರತು ಅದರಲ್ಲಿ ಸಿಕ್ಕೊ ಹೊನ್ನಿಗಲ್ಲ. . .ಈ ಹೊನ್ನು ಬೀರಣ್ಣಂದೆ. . .ಯಾಕೆ ಅಂತಿರೋ ಆ ಹೊಲ ಇವನ ಪಿತ್ರಾರ್ಜಿತ ಆಸ್ತಿ. ಏನೋ ಕಷ್ಟ ಬಂತು ಅಂತ ನನಗೆ ಮಾರಿದ. ಮಾರೋವಾಗ ಅದರಾಗಿನ ಹೊನ್ನು ನಿಂದೇ ಅಂತಾ ಹೇಳಿರಲಿಲ್ಲ. ಅಂದಮ್ಯಾಲೆ ಹೊನ್ನು ಅವನ್ದೇ. . .ನಂದಲ್ಲ"

'ಅದೆಂಗಾದಾತು. . .! ತಂಬುಲ ಉಗದ ಮ್ಯಾಲೆ ಮತ್ತೆ ಎತ್ತಿ ಬಾಯಿಗೆಗಾಕ್ಕೊಳ್ಳೋ ಕೆಟ್ಟತನ ಬ್ಯಾಡಾ. . .ಹೊನ್ನು ಹೊಲ ಕೊಂಡಕೊಂಡ ಈರಣ್ಣಂದೇ, ,ಅವನು ತಗಳ್ಳೊ ಹಂಗ ಮಾಡಿ ಉಪಕಾರ ಮಾಡಬೇಕು ದೈವದವರು' ಎಂದು ಬೇಡಿದ ಬೀರಣ್ಣ -

ಕಟ್ಟೆಯ ಮೇಲಿದ್ದ ದೈವದವರಿಗೆ ಏನೂ ತೋಚಲಿಲ್ಲ. . .ಕಡೆಗೆ ಮುಖ್ಯಸ್ಥನಾದ ಕೇತಮಲ್ಲ ಹೇಳಿದ –

'ಹೋಗಲಿ ಬಿಡಿ. . .ಇಬ್ಬರಿಗೂ ಬ್ಯಾಡವಾದ ಹೊನ್ನು ರಾಜ್ಯದ ಬೊಕ್ಕಸಾ ಸೇರಲಿ. . .' ಅಂದ.

ಕೂಡಲೆ ಮರೆಯಲ್ಲಿದ್ದ ಶಾಂತಲೆ ಮುಂದೆ ಬಂದು 'ಕೂಡದು. . .ಕೂಡದು. . .' ಎಂದು ಕೂಗಿದಳು. ಎಲ್ಲರೂ ಅತ್ತ ಕಣ್ಣು ಹಾಯಿಸಿದರು. ಗಂಡುವೇಷದ ಶಾಂತಲೆ ಮತ್ತು ಉದಿಯಾದಿತ್ಯರು ಪಂಚಾಯಿತರ ಕಡೆಗೇ ಬರುತ್ತಿದ್ದುದು ಕಾಣಿಸಿತು. ಗಂಡುಡುಗೆಯನ್ನು ಉಟ್ಟಿದ್ದ ಶಾಂತಲೆಯನ್ನು ಅವರು ಗಂಡಸೆಂದೇ ಭಾವಿಸಿದರು. ಅವಳ ದೇಹ ಸೌಂದರ್ಯವನ್ನು ನೋಡಿ ಎಲ್ಲರಿಗೂ ಸಂತಸವಾಯಿತು. ಅವರನ್ನು ಮಾತನಾಡಬೇಕು ಎನ್ನಿಸಿತು. ಕೇತಮಲ್ಲ ಕೇಳಿದ –

'ನೀವು ಯಾರೇ ಆಗಿರಿ. . .ಆದರೆ. . .ನೀನು. . .ಈ ಹೊನ್ನು ರಾಜ್ಯದ ಬೊಕ್ಕಸಕ್ಕೆ ಸೇರಬಾರದು ಅಂದೆಯಲ್ಲಾ ಯಾಕೆ?'

'ತಾತ, ಬೊಕ್ಕಸಕ್ಕೆ ಸೇರಲು ಅದು ಸಾಮ್ರಾಟನ ದುಡಿಮೆಯಲ್ಲ. .ಅವನ ಬೆವರಿನ ಫಲ ಅಲ್ಲ. . .ಅದು ಪ್ರಜರ ಸೊಮ್ಮು.'

'ಹೌದು ಈ ಸೊಮ್ಮು ಪ್ರಜೆಗಳದು. ಹಾಗಾದರೆ ಪ್ರಜೆಗಳು ಯಾರವರು?' ಎಂದು ಪ್ರಶ್ನೆ ಹಾಕಿದ. ಶಾಂತಲೆ ಉತ್ತರಿಸದಾದಳು. ಕೇತಮಲ್ಲನೇ ಮುಂದುವರಿದ –

'ಹೇಳು ನನ್ನಪ್ಪಾ. . .ನಾವೆಲ್ಲಾ ಹೊಯ್ಸಳೇಶ್ವರರ ಮಕ್ಕಳಲ್ಲವೇನಪ್ಪಾ ಮಕ್ಕಳ ದುಡಿಮೆ ತಂದೆಯದಲ್ಲವೆ?'

'ಹೋಗಲಿ. ನಿಮ್ಮ ಊರಿನ ಹಣ ನಿಮ್ಮೂರಿನ ಏಳಿಗೆಗಾಗಿಯೇ ವಿನಿಯೋಗವಾಗಲಿ.'

'ಅಷ್ಟು ಸ್ವಾರ್ಥ ಯಾಕೊ ನನ್ನಪ್ಪಾ. . .ನಾರಾಯಣನಂತಹ ಮಹಾರಾಜರು, ಲಕ್ಷ್ಮಿಯಂತಹ ಮಹಾರಾಣಿ ಇರೋವಾಗ ನಮಗೆ ಹಣಕ್ಕೆ ಕೊರತೆಯೇ. . .ನಮ್ಮೂರಿಗೆ ಯಾವುದೂ ಬೇಡ. . .ನಾವು ಒಂದರ್ಥದಲ್ಲಿ ತೃಪ್ತರು. ಏನಾದರೂ ಊರಿಗೆ ಬೇಕಾದರೆ ನಾವೆ ಮಾಡಿಕೊಳ್ತೀವಿ. ಇದು ದೊರೆಯ ಹಣ. ಧರೆಯ ಕ್ಷೇಮಕ್ಕೆ ಮೀಸಲು.'

ಕೇತಮಲ್ಲನ ಮಾತು ಕೇಳಿ,

'ಅಣ್ಣಗಳಿರಾ, ನಿಮ್ಮಂತಹ ಪುಣ್ಯವಂತ ಪ್ರಜೆಗಳನ್ನು ಪಡೆದ ರಾಜ ಅದೆಷ್ಟು ಭಾಗ್ಯವಂತನೊ. . .! ಅಂದಳು ಶಾಂತಲೆ.

'ಇರಬಹುದು. . .ಅಂಥಾ ರಾಜ ರಾಣಿಯರನ್ನು ಪಡೆದ ನಾವು ಪುಣ್ಯವಂತರು' ಅಂದ ಕೇತಮಲ್ಲ.

'ನಿಮ್ಮ ಸಮಾಗಮದ ಸೌಭಾಗ್ಯವನ್ನು ಕಂಡ ನಾನು ಪುಣ್ಯವಂತ!' ಎಂದು ಮುಂದೆ ಬಂದ ಉದಯಾದಿತ್ಯ ಎಲ್ಲರೂ ಅಚ್ಚರಿಗೊಳ್ಳುವಂತೆ ನುಡಿದ -

'ಅಣ್ಣಗಳಿರಾ. . .ಇವರು ಯಾರೆಂದು ತಿಳಿದಿರಿ. ಇವರೇ ನಿಮ್ಮ ನಮ್ಮ ಭಾಗ್ಯದೇವತೆ ಶಾಂತಲಾದೇವಿಯವರು. ಗಂಡುಡೆಯಲ್ಲಿದ್ದುದರಿಂದ ನಿಮಗೆ ಗುರುತಿಸಲಾಗಲಿಲ್ಲ ನೋಡಿ' ಎಂದು ಶಾಂತಲೆಯ ತಲೆಯ ಮೇಲಿನ ಮುಮುಡಾಸು ತೆಗೆದ. ಅಂಟಿಸಿಕೊಂಡಿದ್ದ ಮೀಸೆಯನ್ನು ತೆಗೆದಳು ಶಾಂತಲೆ. . .!

ಆ ಬನದಮ್ಮನ ಹಳ್ಳಿಯ ಜನರಿಗೆ ಸ್ವರ್ಗ ಒಂದೇ ಮೆಟ್ಟಿಲಲ್ಲಿ ಉಳಿಯಿತು. ಅವರ ಆನಂದಕ್ಕೆ ಪಾರವೇ ಇಲ್ಲವಾಯಿತು. ಎಲ್ಲರೂ ಕಟ್ಟೆಯಿಂದ ಧುಮುಕಿ ಉದ್ದಕ್ಕೆ ನೆಲದಮೇಲೆ ಅಡ್ಡಬಿದ್ದರು. ದೇವಾಲಯದ ಒಳಭಾಗದಲ್ಲಿ ಪಂಚಾಯಿತಿ ನೋಡಲು ಬಂದಿದ್ದ ಹೆಂಗೆಳೆಯರು ಓಡಿ ಬಂದು ಶಾಂತಲೆಯನ್ನು ಸುತ್ತುಗಟ್ಟಿದರು. ಅವಳನ್ನು ಮುಟ್ಟಿ ಮಾತನಾಡಿಸಿ ಮುಕ್ತಿ ಪಡೆದಷ್ಟು ಸಂತುಷ್ಟರಾದರು. ಅವಳ ಪಾದಗಳನ್ನು ಮುಟ್ಟಿ ಮುಟ್ಟಿ ಕಣ್ಣುಗಳಿಗೆ ಒತ್ತಿಕೊಂಡರು. ಅವಳು ಹೆಜ್ಜೆ ಇಟ್ಟ ಸ್ಥಳದ ಧೂಳನ್ನು ತೆಗೆದು ನೆತ್ತಿಯಲ್ಲಿ ಧರಿಸಿದರು. ಶಾಂತಲೆ ಎಷ್ಟು ತಡೆದರೂ ಅವರ ಭಕ್ತಿಯ ಪ್ರದರ್ಶನ ನಿಲ್ಲಲೇ ಇಲ್ಲ. ಕಡೆಗೆ ಉದಯಾದಿತ್ಯ ಬಹು ಪ್ರಯಾದಿಂದ ತಡೆಯಬೇಕಾಯಿತು. ಎಲ್ಲ ದೈವದವರೂ ಆ ಹೊನ್ನನ್ನು ಬೊಕ್ಕಸಕ್ಕೆಂದು ಒಪ್ಪಿಸಿಕೊಳ್ಳುವ ಹೊರತು ಮಹಾರಾಣಿಯವರ ಮತ್ತು ಯುವರಾಜರ ಪಾದಗಳನ್ನು ಬಿಡುವುದಿಲ್ಲ ಎಂದು ಹಠ ಮಾಡಲು, ಶಾಂತಲೆ,

'ಅಣ್ಣಂದಿರಾ, ತಾಯಂದಿರೆ, ಇದೋ ಈ ಹೊನ್ನನ್ನು ನೇರವಾಗಿ ನಾನು ರಾಜ್ಯದ ಕೋಶಕ್ಕೆ ಸೇರಿಸುವುದಿಲ್ಲ. . .ಇದು ದೈವದ ದುಡ್ಡು. ದೇವಕಾರ್ಯಕ್ಕೆ ವಿನಿಯೋಗವಾಗಬೇಕಾದ್ದು ಧರ್ಮ. . .ಕೇಳಿ. ನನಗೆ ಬಹಳ ದಿನಗಳಿಂದಲೂ ಒಂದು ಆಸೆ ಇದೆ. ನಮ್ಮ ಸಂಸ್ಕೃತಿಯ ಶ್ರೀಮಂತಿಕೆಗೆ ಸಾಕ್ಷಿಯಾಗಿ ಒಂದು ಕಲಾದೇಗುಲವನ್ನು ರಾಜಧಾನಿಯಲ್ಲಿ ನಿರ್ಮಿಸಬೇಕು ಎಂದು. ಅವಳಿ ದೇಗುಲಗಳ ಶಿಲ್ಪಕಲೆ ಹೊಯ್ಸಳರ ಶೈಲಿಗೆ ಮಾದರಿಯಾಗಬೇಕು. ವೇಲಾಪುರಿಯ ಚೆನ್ನಕೇಶವ ದೇವಾಲಯದಲ್ಲಿ ಲಾಲಿತ್ಯವಿದ್ದರೆ, ದೋರಸಮುದ್ರದ ದೇಗುಲದಲ್ಲಿ ಭವ್ಯತೆ ನೆಲೆಗೊಂಡಿರಬೇಕು. ಅಂತಹ ಒಂದು ಕಲಾಪೂರ್ಣ ದೇವಾಲಯಕ್ಕೆ ಈ ಹೊನ್ನು ವಿನಿಯೋಗವಾಗಲಿ. . .ಆದರೆ ಒಂದು ಮಾತು.'

'ಏನು ತಾಯಿ?'

'ಕೇತಮಲ್ಲ ನಾಯಕರು ನಮಗೆಲ್ಲರಿಗೂ ಹಿರಿಯರು, ಪಿತೃಸಮಾನರು, ಮುಂದೇ ದೋರಸಮುದ್ರದಲ್ಲಿ ನಿರ್ಮಾಣವಾಗುವ ಅವಳಿ ದೇವಾಲಯಗಳು ಅವರ ಹೆಸರಿನಲ್ಲಿಯೆ ನಿರ್ಮಾಣವಾಗಲಿ! ಶ್ರೀ ಕೇತಮಲ್ಲನಾಯಕರ ಹೆಸರಿನಲ್ಲೇ ಒಂದು ಶಿಲಾಶಾಸನ ಸ್ಥಾಪಿತವಾಗಲಿ !

ಕೇತಮಲ್ಲನಾಯಕ ಏನೋ ಹೇಳಹೊರಟ. ಆದರೆ ಬನದಮ್ಮನ ಹಳ್ಳಿಯ ಜನ ಬಿಡಲಿಲ್ಲ. 'ಮಹಾತಾಯಿ ಹಾಗೆಯೇ ಅಗಲಿ. . .ಕೇತಮಲ್ಲಪ್ಪನ ಹೆಸರಿನಲ್ಲೇ ಕಟ್ಟೋಣವಾಗಲಿ' ಎಂದು ಒಕ್ಕೊರಲಲ್ಲಿ ಕೂಗಿದರು.

ಜೊತೆಯಲ್ಲಿ ಮತ್ತೊಂದು ಕೂಗು - 'ಕಟ್ಟುವ ದೇವಾಲಯಗಳು ಹೊಯ್ಸಳೇಶ್ವರ, ಶಾಂತಲೇಶ್ವರ' ಎಂದಿತು.

'ಹೌದು. . .ಹೊಯ್ಸಳೇಶ್ವರ ಶಾಂತಲೇಶ್ವರರಿಗೆ ಜಯವಾಗಲಿ' ಎಂದು ಘೋಷಿಸಿತು ಬನದಮ್ಮನಹಳ್ಳಿಯ ಭಾಗ್ಯವಂತ ಜನತೆ.

ಅತ್ತಿಗೆ ಮೈದುನರು ತಮ್ಮ ತಮ್ಮ ಕುದುರೆಗಳನ್ನೇರಿದರು. ಬನದಮ್ಮನ ಹಳ್ಳಿಯ ಜನತೆ,

'ಮಹಾರಾಣಿಯವರಿಗೆ ಜಯವಾಗಲಿ'

'ಯುವರಾಜತಿಗೆ ಜಯವಾಗಲಿ. . .'

'ಹೊಯ್ಸಳೇಶ್ವರರಿಗೆ ಜಯವಾಗಲಿ. . .'

ಎಂದು ಹರ್ಷಘೋಷ ಮಾಡಿತು.

೯

ಹೊಯ್ಸಳೇಶ್ವರ – ಶಾಂತಲೇಶ್ವರ ! ಅವಳಿ ದೇಗುಲಗಳ ನಿರ್ಮಾಣ ನಿರ್ಧಾರವಾಯಿತು. ಸಾದೋಜ ಮುಖ್ಯ ಸ್ಥಪತಿ. ಮಲ್ಲಿ ಮತ್ತು ಹಾಲೋಜರು ರೂವಾರಿಗಳು. ಸುಮಾರು ಮೂರು ಸಾವಿರ ಮಂದಿ ಶಿಲ್ಪಿಗಳು, ಗೆಯ್ಮೆಕಾರರು, ಶಿವಗಂಗೆಯ ನಾಡಿನಿಂದಲೇ ವಿಶೇಷವಾಗಿ ಕಲ್ಲುಗಳನ್ನು ತರಿಸಲಾಗುತ್ತಿತ್ತು. ದೋರಸಮುದ್ರದ ಆಗ್ನೇಯ ದಿಕ್ಕಿನ ವಿಶಾಲ ಮೈದಾನದಲ್ಲಿ ಶಂಕುಸ್ಥಾಪನೆಯ ಕಾರ್ಯವು ಆಗಿ ಮುಗಿದಿತ್ತು. ಆದರೆ ಬಹು ದೊಡ್ಡ ಯೋಜನೆಯಾದ್ದರಿಂದ ಬನದಮ್ಮನಹಳ್ಳಿಯ ಹೊನ್ನು, ಶಿಲ್ಪಕ್ಕೆ ಯೋಗಯವಾದ ಕಲ್ಲನ್ನು ದೋರಸಮುದ್ರಕ್ಕೆ ಸಾಗಿಸುವುದಕ್ಕೆ ಮಾತ್ರ ಸಾಕಾಯಿತು. ಬೊಕ್ಕಸದಿಂದಲೂ ಹಣ ನೀರಿನಂತೆ ಹರಿಯಿತು. ಎಷ್ಟೇ ವೆಚ್ಚವಾದರೂ ವಿಶಿಷ್ಟವೂ ವಿನೂತನವೂ ಆದ ದೇವಾಲಯವನ್ನು ಕಾಣುವ ಹಂಬಲ ಮಹಾರಾಣಿಯವರದಾಗಿತ್ತು. ಆಳು ಪ್ರಮಾಣದ ಶಿವಲಿಂಗಗಳೆರಡನ್ನು ಪ್ರತಿಷ್ಠಿಸಿದರೆ, ಅವುಗಳಿಗೆ ಎದುರಾಗಿ ಎರಡು ಬೃಹದಾಕಾರದ ನಂದಿಗಳನ್ನು ನೆಲೆಗೊಳಿಸಬೇಕೆಂದು ಶಾಂತಲಾದೇವಿ ತಿಳಿಸಿದ್ದಳು. ಸೂರ್ಯೋದಯವಾದ ಕೂಡಲೆ ಸೂರ್ಯನ ಪ್ರಥಮ ಕಿರಣ ಆ ನಂದಿಗಳ ಕೊಂಬುಗಳ ಮಧ್ಯದಲ್ಲಿ ಹಾಯ್ದು ಗರ್ಭಗುಡಿಯ ಶಿವಲಿಂಗಗಳ ಮೇಲೆ ಪ್ರಕಾಶಿಸುವಂತೆ ವೈಜ್ಞಾನಿಕ ವಿನ್ಯಾಸವನ್ನು ಅಳವಡಿಸಲಾಗಿತ್ತು.

ದೇಗುಲಗಳ ನಿರ್ಮಾಣಕಾರ್ಯ ಭರದಿಂದಲೇ ಸಾಗುತ್ತಿತ್ತು. ಅದಕ್ಕಾಗಿ ಬೊಕ್ಕಸದ ಹಣ ಬರಿದಾಗಿತ್ತು. ತಲಕಾಡು ಯುದ್ಧ ದ ಹೊಡೆತದಿಂದ ಜನ ಇನ್ನೂ ಚೇತರಿಸಿಕೊಂಡಿರಲಿಲ್ಲ. ಅಷ್ಟರಲ್ಲೇ ಮತ್ತೊಂದು ವಿಪತ್ತು ಅವರಿಗಾಗಿ ಕಾದಿತ್ತು. ಮೊದಲಿನಿಂ ದಲೂ ಹೊಯ್ಸಳರನ್ನು ತಮ್ಮ ಸಾಮಂತರನ್ನಾಗಿ ಮಾಡಿಕೊಂಡು ಆಳುತ್ತಿದ್ದ ಕಲ್ಯಾಣದ ಚಾಲುಕ್ಯರು, ಸ್ವತಂತ್ರ ಸಾಮ್ರಾಟನೆನಿಸಿದ ಹೊಯ್ಸಳೇಶ್ವರ ವಿಷ್ಣುವರ್ಧನನ್ನು ಸೋಲಿಸಿ, ಮತ್ತೆ ತಮ್ಮ ಸಾಮಂತನನ್ನಾಗಿ ಮಾಡಿಕೊಳ್ಳಲಿಚ್ಚಿಸಿ ದೋರಸಮುದ್ರದ ಮೇಲೆ ದಾಳಿಯೊಂದನ್ನು ಘೋಷಿಸಿದರು. ಚಾಲುಕ್ಯರ ಆರನೆಯ ವಿಕ್ರಮಾದಿತ್ಯನು ತನ್ನ ಹನ್ನೆರಡು ಮಂದಿ ಸಾಮಂತರ ಸೇನೆಗಳನ್ನು ಒಟ್ಟುಗೂಡಿಸಿ ದೋರಸಮುದ್ರದ ಮೇಲೆ ದಂಡೆತ್ತಿ ಹೋಗುವಂತೆ ಆಜ್ಞೆ ಮಾಡಿದನು.

ದೋರಸಮುದ್ರಕ್ಕೆ ಸುದ್ದಿ ಮುಟ್ಟಿತು. ಚಿಂ ತೆಯ ಕಾರ್ಮೋಡವೇ ಕವಿದಂತಾಯಿತು. ರಾಜರಾಣಿಯರೂ ಸಚಿವ ಸಂಪುಟವೂ ತುಂಬಾ ಚಿಂತೆಗೊಳಗಾಗಬೇಕಾಯಿತು. ಕಾರಣ ಹಣದ ಅಭಾವ. ರಹಸ್ಯ ಸಭೆಯಲ್ಲಿ ರಾಜ ಪರಿಸ್ಥಿತಿಯನ್ನು ವಿವರಿಸಿದ. ವಿಶೇಷ ತೆರಿಗೆಯನ್ನು ಹಾಕಿ ಯುದ್ಧದ ವೆಚ್ಚವನ್ನು ಸರಿದೂಗಿಸಬೇಕೆಂದು ಕೆಲವರು ಅಭಿಪ್ರಾಯಪಟ್ಟರು. ಆದರೆ ಮಹಾರಾಣೀ ಶಾಂತಲಾದೇವಿಯವರು ಎದ್ದು ನಿಂತು - 'ಮಹಾಪ್ರಭುಗಳವರ ದಿವ್ಯಸಾನಿಧ್ಯದಲ್ಲಿ, ಹಿರಿಯರೇ ಮತ್ತು ಅಭಿಮಾನಿಗಳೇ – ಕ್ಷಾಮಡಾಮರಗಳಿಂದಲೊ, ನಿಸರ್ಗದ ಕೋಪದಿಂದಲೊ ಇಲ್ಲವೆ ಯುದ್ಧ ಮೊದಲಾದ ಮಾನವ ನಿರ್ಮಿತ ಪಿಡುಗುಗಳಿಂದಲೊ ದೇಶದಲ್ಲಿ ಅಭಾವವೇರ್ಪಟ್ಟರೆ ಅದಕ್ಕೆ ಪ್ರಜಾ ಸಮುದಾಯದ ಶೋಷಣೆ ಮಾಡುವುದು ಯುಕ್ತವಲ್ಲ ಅನ್ನಿಸುತ್ತದೆ. ತಲಕಾಡ ಯುದ್ಧದಿಂದ, ದೇವಾಲಯಗಳ ನಿರ್ಮಾಣ ಯೋಜನೆಯಿಂದ ಬೊಕ್ಕಸ ಬರಿದಾಗಿದೆ ನಿಜ. ಆದರೆ ಅದನ್ನು ಪ್ರಜೆಗಳ ನೆತ್ತರಿನಿಂದ ತುಂಬಬೇಕಾಗಿಲ್ಲ. ನಮ್ಮಲ್ಲಿ ಸಾಕಷ್ಟು ಹೊನ್ನು, ಒಡವೆಗಳಿವೆ. ಅವುಗಳನ್ನೇ ಈಗ ಯುದ್ಧದ ವೆಚ್ಚಕ್ಕಾಗಿ ವಿಕ್ರಯ ಮಾಡಿ ಬಿಡೋಣ. ಇದಕ್ಕೆ ಪ್ರಭುಗಳ ಅನುಮತಿ ಬೇಕು, ನಿಮ್ಮೆಲ್ಲರ ಸಮ್ಮತಿ ಬೇಕು, ಎಂದು ಸುಧೀರ್ಘ ಭಾಷಣ ಮಾಡಿದರು.

'ಅಂತಃಪುರಕ್ಕೆ ಸಂಬಂಧಿಸಿದ ಒಡವೆ ವಸ್ತ್ರಗಳ ಮೇಲೆ ಸಿಂಹಾಸನದ ಅಧಿಕಾರವೇನೂ ಇಲ್ಲ. ಅದನ್ನು ಮಹಾರಾಣಿಯವರು ಇಷ್ಟಬಂದಂತೆ ಬಳಸಿಕೊಳ್ಳಬಹುದು. ನಮ್ಮ ಅನುಮತಿಯ ಅಗತ್ಯವಿಲ್ಲ.' ಎಂದರು ವಿಷ್ಣುಪ್ರಭು.

ಹಲವರು ಮಹಾರಾಣಿಯವರ ಸಲಹೆಗೆ ಸಮ್ಮತಿಸಲಿಲ್ಲ. 'ಮಹಾತಾಯಿಯವರು ಮನ್ನಿಸಬೇಕು. ಅಂತಃಪುರದ ಹೊನ್ನು ಆನುವಂಶಿಕವಾಗಿ ಹೊಯ್ಸಳ ಸಾಮ್ರಾಜ್ಞಿಯವರಿಗೆ ಬಂದ ಬಂಗಾರ. ಎರಡನೆಯದಾಗಿ ತಾಯಿಯವರ ತೌರಿನ ಒಡವೆ, ಅದು ಮುತ್ತೈದೆಯ ಮಂಗಲ ದ್ರವ್ಯ. ಅದನ್ನು ನಮ್ಮ ಭಂಗ ಬಡತನಗಳಿಗಾಗಿ ಮಾರಿಕೊಳ್ಳಬಾರದು ಅನ್ನಿಸುತ್ತದೆ.' ಎಂದರು ಗಂಗರಾಜರು. ಅಂದಿನ ಮಂತ್ರಾಲೋಚನೆಯಲ್ಲಿ ಭಾಗವಹಿಸಿದ ಎಲ್ಲ ಸದಸ್ಯರೂ ಗಂಗರಾಜರ ಅಭಿಪ್ರಾಯವನ್ನೇ ಅನುಮೋದಿಸಿದರು. ಎಷ್ಟೇ ಕಷ್ಟ ಬರಲಿ, ಬೇರೆಡೆಯಿಂದ ಸಾಲ ಪಡೆದರೂ ಚಿಂತೆಯಿಲ್ಲ. ರಾಣಿ ವಾಸದ ಹೊನ್ನು ಮಾರುಕಟ್ಟೆಯಲ್ಲಿ ವಿಕ್ರಯವಾಗುವುದು ಬೇಡ ಎಂಬ ಒಮ್ಮತದ ಅಭಿಪ್ರಾಯ ಪ್ರಕಟವಾಯಿತು.

ಮಹಾರಾಣಿ ಶಾಂತಲಾದೇವಿಯವರೆ ಅವರಿಗೆ ಸೂಕ್ತ ರೀತಿಯಲ್ಲಿ ಸಮಾಧಾನ ಹೇಳಬೇಕಾಗಿ ಬಂದಿತು. ಮತ್ತೆ ಎದ್ದು ನಿಂತರು.

'ಹೊಯ್ಸಳ ಸಿಂಹಾಸನದ ಅಭಿಮಾನಿಗಳೆ, ಹೆಣ್ಣಿಗೆ ತೌರಿನವರಾಗಲಿ, ಗಂಡನ ಮನೆಯವರಾಗಲಿ ಕೊಡುವ ಬಂಗಾರ ಭೂಷಣವಸ್ತುವಾಗಿರಲಿ ಎಂದಲ್ಲ, ಸಂಕಷ್ಟ ಸಂದರ್ಭಗಳಲ್ಲಿ ಸಹಾಯಕವಾಗಲಿ ಎಂದು. ಆ ಸಂಪತ್ತು ನಮ್ಮ ನಮ್ಮ ವಿಪತ್ತುಗಳಲ್ಲಿ ನೆರವಾಗಬೇಕು. . .ಕೇಳಿ, ಹೊನ್ನು ಒಡವೆಗಳು ಸುಭಿಕ್ಷ ಕಾಲದಲ್ಲಿ ಶೃಂಗಾರದ ವಸ್ತುಗಳು, ಅವುಗಳೇ ಯುದ್ಧದ ವೇಳೆಯಲ್ಲಿ ರಾಷ್ಟ್ರ ರಕ್ಷಣೆಯ ಆಯುಧಗಳು. . .ಆದ್ದರಿಂದ ವೃಥಾ ಚರ್ಚೆಗೆ ಅವಕಾಶ ನೀಡದೆ ಆತ್ಮ ಸಂತೋಷದಿಂದ ಒಪ್ಪಿಸುತ್ತಿರುವ ಅಂತಃಪುರದ ಹೊನ್ನನ್ನು ತೆಗೆದುಕೊಂಡು ಯುದ್ಧದ ಯಶಸ್ಸಿಗೆ ಕಾರಣರಾಗಬೇಕೆಂದು ಬೇಡುತ್ತೇನೆ.' ಎಂದರು.

ವಿಧಿಯಿಲ್ಲದೆ ಎಲ್ಲರೂ ಒಪ್ಪಲೇಬೇಕಾಯಿತು. ಮಹಾರಾಣಿಯವರು ಮಹಾತ್ಯಾಗದಿಂದ ಯುದ್ಧ ಸಂದರ್ಭದ ಆರ್ಥಿಕ ಮುಗ್ಗಟ್ಟು ರಾಷ್ಟ್ರಕ್ಕೆ ಅಷ್ಟಾಗಿ ಗೋಚರಿಸಲೇ ಇಲ್ಲ. ನಿಡುವಳ್ಳಿಯ ಬಳಿಯಲ್ಲಿ ಚಾಲುಕ್ಯರ ಸೇನೆಗೂ ಹೊಯ್ಸಳ ಸೇನೆಗೂ ಘೋರ ಸಂಗ್ರಾಮ ನಡೆಯಿತು. ಕೇವಲ ಹೊಟ್ಟೆಪಾಡಿಗಾಗಿ ಹೋರಾಡುವ ಚಾಲುಕ್ಯ ಸೇನೆ ರಾಷ್ಟ್ರ ನಿಷ್ಠೆಯ ಹೊಯ್ಸಳ ಸೇನೆಯ ಎದುರು ನಿಲ್ಲದಾಯಿತು. ಕೆಲವೇ ದಿನಗಳಲ್ಲಿ ಚಾಲುಕ್ಯ ಸೇನೆ ನುಚ್ಚು ನೂರಾಯಿತು. ಗೆಲುವು ದೋರಸಮುದ್ರದ್ದಾಯಿತು. ಸುಮಾರು ಮೂರು ಶತಮಾನಗಳ ಕಾಲ ಚಾಲುಕ್ಯರ ದಾಸ್ಯದಲ್ಲಿ ನೊಂದಿದ್ದ ಹೊಯ್ಸಳ ಸಾಮ್ರಾಜ್ಯ ಅಂದು ಸ್ವತಂತ್ರ ಸಾಮ್ರಾಜ್ಯವಾಗಿ ಅಂದು ಮೆರೆಯಿತು.

೧೦

ಜೀವನ ಎಂಬುದು ವಿರುದ್ಧ ಗುಣಗಳ ವಿಶಿಷ್ಟ ಸಮ್ಮಿಶ್ರಣ. ಬೇವು ಬೆಲ್ಲ, ಹಗಲು–ಇರಳುಗಳಂತೆ ನೋವೂ ಇದೆ. ಆದರೆ ಬದುಕೆಲ್ಲಾ ಬರಿಯ ಬೇವೂ ಅಲ್ಲ. ಬರಿಯ ಬೆಲ್ಲವೂ ಅಲ್ಲ. ಅವೆರಡರ ಸಮನ್ವಯ ಸ್ಥಿತಿ. ಇಪ್ಪತ್ತನಾಲ್ಕು ಗಂಟೆಯೇ ಹಗಲೇ ಇದ್ದರೆ ಹಗಲಿಗೆ ಬೆಲೆಯೇ ಇರುವುದಿಲ್ಲ. ಹನ್ನೆರಡು ಗಂಟೆಗಳ ಕಾಲ ಇರುಳಿರುವುದರಿಂದ ಹನ್ನೆರಡು ಗಂಟೆಗಳ ಕಾಲ ಸೌಂದರ್ಯ ಹೆಚ್ಚುವುದು. ಅದೇ ರೀತಿ ಜೀವನವಿಡೀ ಸುಖ ಸಂತೋಷದಿಂದರಲು ಸಾಧ್ಯವೂ ಇಲ್ಲ. ಇದ್ದರೆ ಅದಕ್ಕೆ ಗೌರವವೂ ಇಲ್ಲ. ತುಂಬಾ ಹಸಿವಾದಾಗ ಊಟ ಮಾಡಿದರೆ ಊಟದ ಸವಿ ಹೆಚ್ಚುತ್ತದೆ. ಕಟ್ಟರೆಯಾದಾಗ ಉಣಬಡಿಸಿದರೆ ಅದರಲ್ಲಿ

ರುಚಿಯೇ ಇರುವುದಿಲ್ಲ. ಹಾಗೆಯೇ ಜೀವನದಲ್ಲಿ ಸುಖ ದುಃಖ. ದುಃಖದ ಮರೆಯಲ್ಲಿ ಸುಖ ಇಣುಕಿದರೆ ಸೌಂದರ್ಯ ವರ್ಣನಾತೀತ. ಆದ್ದರಿಂದ ನಿಜವಾದ ಜೀವನ ಯಾವುದು ಎಂದರೆ ಸುಖ–ದುಃಖ ಸಮ್ಮಿಶ್ರವಾದದ್ದು.

ಶಾಂತಲೆಯ ಬಾಳಿನಲ್ಲಿ ಅಂತಹ ನೆರಳು – ಬೆಳಕುಗಳ ಚೆಲ್ಲಾಟ ಸಾಗಿತ್ತು. ಅವಳ ಇಚ್ಛೆಯಂತೆ ಶ್ರವಣಬೆಳಗೊಳದಲ್ಲಿ ಶಾಂತಿನಾಥ ಬಸದಿಯನ್ನು ಕಟ್ಟಿಸಲಾಯಿತು. ಪ್ರವೇಶೋತ್ಸವದ ದಿನದಂದೆ ಯುವರಾಜ ಉದಯಾದಿತ್ಯನಿಗೆ ಯೋಗ್ಯ ಕನ್ಯೆಯನ್ನು ತಂದು ವಿವಾಹ ಮಾಡಲಾಗಿತ್ತು. ಅಂತೆಯೆ ಅವನನ್ನು ಕೆಲ್ಲವತ್ತಿಯಲ್ಲಿ ಮಾಂಡಳಿಕನಾಗಿ ನೇಮಿಸಲಾಗಿತ್ತು. ಅದರಲ್ಲಿ ಶಾಂತಲೆ ಆನಂದದಿಂದ ಪಾಲ್ಗೊಂಡಿದ್ದಳು. ಆದರೆ ಅದೇ ದಿನಗಳಲ್ಲಿ ರಾಜಮಾತೆಯವರ ಮರಣವಾರ್ತೆಯು ದೋರಸಮುದ್ರದ ಅರಮನೆಯನ್ನು ಮುಟ್ಟಿತು. ರಾಜಮಾತೆ ಏಚಲದೇವಿಯವರು ಚೆನ್ನಕೇಶವನ ದೇವಾಲಯ ನಿರ್ಮಾಣವಾದ ಮೇಲೆ ವೇಲಾಪುರಿಯ ಅರಮನೆಯಲ್ಲಿ ಯುವರಾಜ ಉದಯಾದಿತ್ಯನೊಡನೆ ಇರುತ್ತಿದ್ದರು. ಅವನು ವಿವಾಹವಾಗಿ ಕೆಲ್ಲವತ್ತಿಗೆ ಹೋದಮೇಲೆ ತಾವೊಬ್ಬರೇ ಇದ್ದರು. ಆದರೆ ಅದೇನು ಆಕಸ್ಮಿಕವೊ ! ರಾತ್ರಿ ವಿಜಯನಾರಾಯಣನ ಧ್ಯಾನ ಮಾಡಿ ಮಲಗಿದವರು ಬೆಳಗಾ ದರೂ ಮೇಲೆದ್ದಿರಲಿಲ್ಲ, ಏಳಲೂ ಇಲ್ಲ. ಇದು ಶಾಂತಲೆಯ ಮನಸ್ಸಿಗೆ ನೋವು ತಂದಿತ್ತು. (ತನಗೊಂದು ಗಂಡುಮಗುವಾಯಿತು. ತೇಜಸ್ವೀ ಬಾಲಕನಿಗೆ ಬಲ್ಲಾಳನೆಂದು ನಾಮಕರಣ ಮಾಡಿದರು ಅರಮನೆಯ ಪುರೋಹಿತರು. ಆದರೆ ಕೆಲವೇ ದಿನಗ ಳಲ್ಲಿ ಅದು ಪರಲೋಕಯಾತ್ರೆ ಮಾಡಿತು), ತಾಯಿ ಮಾಚಿಕಬ್ಬೆ ಮುತ್ತೈದೆಯಾಗಿಯೆ ಅರ್ಹಂತನೆಡೆಗೆ ಸಾಗಿದಳು. ತನ್ನ ಅಚ್ಚುಮೆಚ್ಚಿನ ಕೆಳದಿ ಸೋಮಲೆ ಲಗ್ನವಾದ ಮೂರು ತಿಂಗಳಲ್ಲೇ ವಿಧವೆಯಾಗಿ ಶಿವಗಂಗೆಯನ್ನು ಸೇರಿದಳು. ಅವಳ ಗಂಡ ದೇವಣ ಅವಳ ಕೊರಳಿಗೆ ತಾಳಿ ಕಟ್ಟಿದ ಮೂರೇ ತಿಂಗಳಲ್ಲಿ ಶಿವನ ಪಾದ ಸೇರಿದ್ದ.

ಧೀರಮತಿಯಾದ ಶಾಂತಲೆ ಇವೆಲ್ಲವನ್ನೂ ಹೇಗೋ ಸಹಿಸಿಕೊಂಡಳು. ಆದರೆ ತಾನೇ ಕಣ್ಣಾರೆ ಕಂಡ ಘೋರ ದೃಶ್ಯವೊಂದು ಅವಳ ಮನಸ್ಸಿನಿಂದ ದೂರವಾಗಲೇ ಇಲ್ಲ. ಅದು ಅವಳ ಮನಃಶಾಂತಿಯನ್ನು ಸಂಪೂರ್ಣವಾಗಿ ಕಸಿದುಕೊಂಡಿತ್ತು. ಅದೇ ಉದಯಾದಿತ್ಯನ ಏಕೈಕ ಪುತ್ರ, ಹತ್ತು ವರ್ಷ ವಯಸ್ಸಿನ ಬಾಲಕ ಎರೆಯಂಗ ಕುದುರೆಯ ಕಾಲಿಗೆ ಸಿಕ್ಕಿ ಚಿಂದಿಚಿಂದಿಯಾಗಿದ್ದ. ಬೊಳ್ಗೊಳದ ವಿದ್ಯಾಪೀಠದಲ್ಲಿ ಅಭ್ಯಾಸಮಾಡುತ್ತಿದ್ದ ಆ ಮಗುವನ್ನು ಅವನ ಹುಟ್ಟುಹಬ್ಬದ ಸಲುವಾಗಿ ದೋರಸಮುದ್ರಕ್ಕೆ ಕಳುಹಿಸಲಾಗಿತ್ತು. ಅಂದೇ ಯುವರಾಜ ಉದಯಾದಿತ್ಯನು ಪತ್ನೀ ಸಮೇತನಾಗಿ ಬಂದಿದ್ದ. ಅನೇಕ ಜನ ನೆಂಟರಿಷ್ಟರು ಅರಮನೆ ಯಲ್ಲಿ ನೆರೆದಿದ್ದರು. ಅಂದು ಬೆಳಗ್ಗೆ ಮಗುವಿಗೆ ಅಭ್ಯಂಜನ ಸ್ನಾನ ಮಾಡಿಸಿ, ಮಂಗಲ ವಾಚನದೊಂದಿಗೆ ಹಲವು ರೀತಿಯ ಪೂಜೆ ಹಾಗೂ ದಾನಾದಿಗಳನ್ನು ಅವನ ಕೈಯಿಂದಲೇ ನೆರವೇರಿಸಲಾಗಿತ್ತು. ಅಂದು ಸಂಜೆ ರಾಜಧಾನಿಯ ಮುತ್ತೈದೆಯರೆಲ್ಲಾ ಸೇರಿ ವಿಶೇಷ ಆರತಿ ಮಾಡುವುದೆಂದು ಗೊತ್ತುಪಡಿಸಿ, ಶಾಂತಲೆ ತಾನೇ ಮನೆ ಮನೆಗೆ ಹೋಗಿ ಆಹ್ವಾನವಿತ್ತು ಬಂದಿದ್ದಳು. ಬಣ್ಣ ಬಣ್ಣದ ದೀಪಗಳಿಂದ ಅರಮನೆ ಅಲಂಕೃತವಾಗಿತ್ತು. ಆದರೆ ಎರೆಯಂಗನು ತನ್ನ ಸಮವಯಸ್ಸಿನ ಜೊತೆಗಾರರೊಡನೆ ಸವಾರಿ ಮಾಡಲೆಂದು ವಿನೋದಕ್ಕಾಗಿ ಕುದುರೆ ಏರಿ ಚಮ್ಮಟಿಗೆಯಿಂದ ಹೊಡೆದ ಕೂಡಲೆ ಹುಚ್ಚೆದ್ದು ಓಡಿತು ಕುದುರೆ. ಆ ವೇಗಕ್ಕೆ ಸಿದ್ಧನಿಲ್ಲದ ಕುಮಾರ ಎರೆಯಂಗ ಆಯತಪ್ಪಿ ಕೆಳಗೆಬಿದ್ದ. ಹಿಂದಿನಿಂದ ಅದೇ ನಾಗಾಲೋಟದಲ್ಲಿ ಬರುತ್ತಿದ್ದ ಬೇರೊಂ ದು ಕುದುರೆ ಅವನ ಹೊಟ್ಟೆಯ ಮೇಲೆ ಕಾಲಿಟ್ಟು ಕರುಳು ಇಳೆಗೆ ಬರುವಂತೆ ಮಾಡಿತು. ಆಹಾ ! ಎನ್ನುವಷ್ಟರಲ್ಲಿ ದುರಂತ ಘಟನೆ ಸಂಭವಿಸಿ, ಸುದ್ದಿ ಶಾಂತಲಾ ದೇವಿಗೆ ಸಿಡಿಲನಂತೆ ತಾಕಿತು. ಹರಿದ ದೇಹವನ್ನು ರೇಷ್ಮೆಯ ಬಟ್ಟೆಯಲ್ಲಿ ಮುಚ್ಚಿದ್ದರೂ ಮುಖ ಮಾತ್ರ ನಗುತ್ತಲೇ ಇತ್ತು. ಇದನ್ನು ಕಣ್ಣಾರೆ ಕಂಡ ಶಾಂತಲೆ ಹುಚ್ಚಿಯಂತಾದಳು. ತನ್ನ ಮಗು ಬಲ್ಲಾಳ ತೀರಿಕೊಂಡ ಮೇಲೆ ಎರೆಯಂಗನೆ ಅವಳ ಮಗುವಾಗಿದ್ದ. ಅದು ತನ್ನ ಹುಟ್ಟು ಹಬ್ಬದಂದು, ತನ್ನ ಕಣ್ಣೆದುರಿನಲ್ಲೇ ಮಡಿದದ್ದು., ಮಡಿದ ರೀತಿ, ಆ ಘೋರ ನೋಟ ಇವೆಲ್ಲವೂ ಶಾಂತಲೆಯ ಮನಶಾಂತಿಯನ್ನು ನಾಶಪಡಿಸಿದ್ದವು.

ಹುಟ್ಟಿದ ಹಬ್ಬದ ಆರತಿಗೆ ಬದಲಾಗಿ ಸತ್ತ ಹೆಣಕ್ಕೆ ಸಂಸ್ಕಾರ ಮಾಡಬೇಕಾಗಿ ಬಂದಿತ್ತು.

ಗಾಯದ ಮೇಲೆ ಬರೆ ಎಳೆದಂತೆ ಮತ್ತೊಂದು ಘಟನೆ ನಡೆಯಿತು ಅರಮನೆಯಲ್ಲಿ. ಮಗ ಮಡಿದು ಮೂರು ತಿಂಗಳುಗಳಲ್ಲಿ ಅರಮನೆಯಲ್ಲಿ ಮಾತ್ಸರ್ಯ, ಕಾಳ್ಗಿಚ್ಚು ಹತ್ತಿ ಉರಿಯತೊಡಗಿತು. ಲಕ್ಷ್ಮಲೆ, ಬೊಮ್ಮಲೆ, ರಾಜಲೆ, ಬಿಜ್ಜಲೆಯರು ಶಾಂತಲೆಯ ಮೇಲೆ ದ್ವೇಷ ಸಾಧಿಸಲು ಸನ್ನಾಹ ನಡೆಸುತ್ತಿದ್ದರು. ಶಾಂತಲೆ ಬಂಜೆ. ಪಟ್ಟಕ್ಕೆ ಸದ್ಯದಲ್ಲಿ ನನ್ನ ಮಗ ವಿಜಯನಾರಸಿಂಹ ನನ್ನ ಬಿಟ್ಟರೆ ಬೇರೆ ವಾರಸದಾರರೂ ಇಲ್ಲ. ಆದರೆ ಮುಂದೆ ಹುಟ್ಟಿಕೊಳ್ಳುವುದಿಲ್ಲ ಎಂದು ಹೇಳಬರುವುದಿಲ್ಲ. ಆದ್ದರಿಂದ ಶಾಂತಲೆಯನ್ನು ಅರಮನೆಯಿಂದ ದೂರಮಾಡಿ, ಪಟ್ಟದರಸಿ ಪದವಿಯಿಂದ ಕೆಳಗಿಸಿ, ತಾನು ಪಟ್ಟಮಹಿಷಿಯಾಗ

ಬಯಸಿದಳು. ಪಟ್ಟಮಹಿಷಿಯ ಮಗನೇ ಸಿಂಹಾಸನವನ್ನೇರಬೇಕು ಎಂದು ಧರ್ಮಶಾಸ್ತ್ರ ಹೇಳುವುದರಿಂದ ತಾನು ಪಟ್ಟದರಸಿಯಾಗಬೇಕು. ತನ್ನ ಮಗ ಸಿಂಹಾಸನವನ್ನೇರಲು ಅರ್ಹನಾಗುತ್ತಾನೆ ಎಂದೆಲ್ಲಾ ಆಲೋಚಿಸಿದಳು. ಉರಿಯುವ ಜ್ವಾಲೆಗೆ ಉಳಿದ ಮೂವರು ರಾಣಿಯರು ತುಪ್ಪ ಹೊಯ್ದರು. ಅವರ ಸನ್ನಾಹ ಕಾರ್ಯರೂಪಕ್ಕೆ ಬರುವ ದಿನ ಸನ್ನಿಹಿತವಾಯಿತು. ಅಮರಶಿಲ್ಪಿ ಜಕಣಾಚಾರಿ ನಿರ್ಮಿ ಸಿದ್ದ ವಿಜಯನಾರಾಯಣನ ದೇಗುಲದ ಹಿಂಬದಿಯ 'ಚೆಲುವ ನಾರಾಯಣ' ದೇಗುಲದ ಕಾರ್ಯಮುಗಿದು ಶ್ರೀ ಚೆನ್ನಕೇಶವ ಮಂಗಳಮೂರ್ತಿಯೂ ಪೂರ್ಣಗೊಂಡಿತ್ತು. ಆದರೆ ಆ ಶ್ರೀ ಶಿಲ್ಪಕ್ಕೆ ದೃಷ್ಟಿ ಕೊಟ್ಟಿರಲಿಲ್ಲ ಶಿಲ್ಪಿ. ಅದರ ಪ್ರತಿಷ್ಠಾಪನೆಗೆ ಪೀಠವನ್ನು ಸಿದ್ಧಪಡಿಸುತ್ತಿದ್ದ. ಆ ವೇಳೆಗೆ ಬೊಮ್ಮಲೆ, ರಾಜಲೆ, ಬಿಜ್ಜಲೆಯರೊಡನೆ ಆಗಮಿಸಿದ ಲಕ್ಷ್ಮಿ ಮೂರ್ತಿ ಶಿಲ್ಪದಲ್ಲಿ ದೋಷ ಹುಡುಕಲು ಯತ್ನಿಸಿದಳು. ದೋಷವಾವುದೂ ಗೋಚರಿಸಲಿಲ್ಲ. ಆದರೆ ಸ್ವಾಮಿಯ ಪೀಠದಡಿಯಲ್ಲಿ ಕಪ್ಪು ಶಿಲಾ ಪಟ್ಟಿಕೆಯ ಮೇಲೆ ಕಡೆದಿದ್ದ ಶಾಸನವನ್ನು ಓದಿ ಕೆಂಡಾಮಂಡಲವಾದಳು. ಶಿಲ್ಪಿಯ ಕೈತಡೆದು ಪ್ರಶ್ನಿಸತೊಡಗಿದಳು.

ಬೊಮ್ಮಲೆ : 'ಜಕ್ಕಣರೆ, ನಿಮ್ಮ ಸೌಮ್ಯಕೇಶವನ ಪಾದದಡಿ ಇಹುದೇನು ?

ಜಕ್ಕಣ ; ಪೀಠ ! ಎತ್ತರದ ಬಿತ್ತರದ ಭದ್ರಮಂಗಲ ಪೀಠ

ಬೊಮ್ಮಲೆ : ಅದು ಗೊತ್ತು; ಪೀಠದೊತ್ತಿನಲಹುದು, ಅದು ಏನು ಫಲಕ ?

ಜಕ್ಕಣ : ಅಕ್ಷರದ ರೂಪದಲ್ಲಿ ಕರೆದಿರುವುದೇನು ? ಅದು ಕವಿ ಕೊಟ್ಟ ಅರ್ಪಣ ಶ್ಲೋಕ.

ಬೊಮ್ಮಲೆ : ತುಸು ಓದೋಣವಾಗಲಿ !

ಜಕ್ಕಣ : ರಾಣಿ, ಮಹಾರಾಣಿ, ಶ್ರೀ ಪಟ್ಟದರಸಿ ಶಾಂತಲಾ ದೇವಿಯರು, ಶ್ರೀವಿಷ್ಣುವರ್ಧನರ ಮನೋರಾಗ ಸಾಗರದ ವರ್ಧಿಸುವ ಚಂದ್ರಲೇಖೆ, ಭರತಾಗದ ತಿರುಳು, ಮಂಗಳಾಭ್ಯುದಯಕರ ಲಕ್ಷಣಗಳಭಿರಾಮೆ, ವಿನಯದಿಂ ನಮಿಸುತಿಹ ರಾಜಪತ್ನೀ ಜನರ ಲಂಬ ನೀಲಾಳ ಕಾಳಂಬಿ ಪದನಖ ಕಿರಣೆ ಸವತಿಗಂಧವಾರಣೆ. . .

ಬೊಮ್ಮಲೆ : ಸಾಕು ನಿಲ್ಲಿಸು ಸ್ಥಪತಿ. . .! 'ಸವತಿಗಂಧವಾರಣೆ!, ಏನಿಹುದು ಅದರರ್ಥ ?

ಜಕ್ಕಣ : ತಾವು ತಿಳಿದವರು. ಆದರೂ ಬೆಸಸಿದಿರಿ ಹೇಳುವೆನು. ಸವತಿಯರು ಸೊಕ್ಕಿದರೆ. . .ಅವರಿಗೆ ಹಿರಿಯರಸಿ ಮದ್ದಾನೆ ! ಅಂತೆನೆ. . .

ಬೊಮ್ಮಲೆ : ಮುಂದಿನದು ಬೇಕಿಲ್ಲ ಸ್ಥಪತಿ, ಮಹಾರಾಣಿಯರು ಮದ್ದಾನೆಯಾದರೆ ಅದರ ಕುಂಭಸ್ಥಳವ ಬಗೆದು ಇಬ್ಬಗಿ ಮಾಡಿ ರತ್ನಗಳ ಸೂರೆಗೊಳ್ಳುವ ಹಸಿದ ಸಿಂಹಗಳಾವು ! ತಿಳಿಯಿತೆ ? ಇರಲಿ; ಅಕ್ಕಾಜಿ, ಅರ್ಥವಾಯಿತು ಶ್ಲೋಕ ! ಹೆಚ್ಚೇನು ಬೇಕು ?

ಲಕ್ಷ್ಮಲೆ : ಬೇಕಿಲ್ಲ, ಕೈಯಲ್ಲಿಹ ಹುಣ್ಣಿಗೆ ಕನ್ನಡಿಯ ನೆರವೇಕೆ ? .(ಆವೇಶ ಭರಿತವಾಗಿ) ಎಲಾ ಸೊಕ್ಕೆ ! ಎನಿತುಗ್ರವಾಗಿಹುದು ನಿನ್ನತುಳ ಸಾಮರ್ಥ್ಯ ! ಹೂಂ ! ಇವಳೊಬ್ಬಳೇ ವಿಷ್ಣುವರ್ಧನ ಮನೋರಾಗ ಸಾಗರವನಭಿವರ್ಧಿಸುವ ಚಂದ್ರಲೇಖೆಯೆ ? ಇವಳೊಬ್ಬಳೇ ಮಂಗಳಾಭ್ಯುದಯಕರ ಲಕ್ಷಣಗಳಭಿರಾಮೆಯೆ ? ಇವಳೊಬ್ಬಳೇ ಸರ್ವಮಂಗಳಸ್ಥಿತಿಯುತೆಯೆ ! ಹಾಗಾದರೆ ನಾವು ?

ಬೊಮ್ಮಲೆ : ಬಳಿದೊತ್ತುಗಳು ! ಪಟ್ಟ ಮಹಿಷಿಯ ಕೈಗೆ ಕಾದು ಕೊಳುಣುವವರು ! ಹೆಸರಿಗಷ್ಟೇ ರಾಣಿಯರು ನಾವು !

ಲಕ್ಷ್ಮಲೆ : ಇದು ಸಹಿಸಲಳವಲ್ಲ ! ಈ ಬಾಳು ಬೇಕಿಲ್ಲ !

ಜಕ್ಕಣ : ಸನ್ನಿಧಾನವು ನನಗೆ ಅಪ್ಪಣೆಯನೀಯುವರೆ, ಒಂದು ಮಾತಿನ ಅರಕೆ ಮುಂದಿಡಲು ಬಯಸುವೆನು !

ಇಬ್ಬರೂ : ಏನದು ?

ಜಕ್ಕಣ : ತಾಯಿಯರಿರಾ, ಶ್ಲೋಕವನ್ನು ಕೊಟ್ಟವನು ಓರ್ವ ಕವಿ. ರಚನೆಯಲ್ಲಿ ಉತ್ಪ್ರೇಕ್ಷೆ ಇರಬಹುದು. ಇದು ಶಾಂತಲಾ ದೇವಿಯರಿಗರಿಯದು.

ಲಕ್ಷ್ಮಲೆ : ಅರಿಯದಿದ್ದರೆ ಏನು ? ಮರೆಯಲಾಗದ ಪೆಟ್ಟು ! ಸ್ಥಪತಿ, ಸೀಂಟಿ ಕಳೆಯಿರಿ ಆ ಫಲಕದಾ ಮೇಲಿರುವ ಶ್ಲೋಕವನು.

ಬೊಮ್ಮಲೆ : ಉಹುಂ. . .ಅದು ಬೇಡ ಜಕ್ಕಣಾ, ಶಾಂತಲೆ ಎಂಬಲ್ಲಿ ಲಕ್ಷ್ಮಲೆ ಎಂದಿರಲಿ, ಅಷ್ಟೆ ಸಾಕು. ಗಂಡುಮಗು ಉಳ್ಳವರು, ಇವರೆ ಪಟ್ಟದ ರಾಣಿ ! ಭವಿತವದ ರಾಜಮಾತೆಯರಿವರು.

ಜಕ್ಕಣ : ಮಾತೆಯರ ಅಡಿಗಳಲಿ ಮನ್ನಣೆಯ ಬೇಡುವೆನು! ಸನ್ನಿಧಿಯ ಆಜ್ಞೆಯಿದು ನನಗೆ ಮಾನ್ಯ. ಅಂತೆಯೇ ಪಟ್ಟದರಸಿಯರೊಂದೆ ಹೆಸರಲ್ಲಿ ಸಂಕಲ್ಪ ಕೊಂಡಿಹೆನು. ಓಂಕಾರ ನುಡಿದಿಹೆನು ಕಡೆದಿಹೆನು. ಈ ಮೀಸಲಿನ ಶಿಲ್ಪಕ್ಕೆ ಹೇಸಿಗೆಯನೆಸಗಲಾರೆ!

ಲಕ್ಷ್ಮಲೆ : ಸ್ಥಪತಿ, ನಮ್ಮಾಜ್ಞೆ ಹೇಸಿಗೆಯೆ ?

ಶಾಂತಲೆ : (ಆ ವೇಳೆಗೆ ಸರಿಯಾಗಿ ಶಾಂತಲೆ ರಾಜಕುಮಾರ ವಿಜಯನಾರಸಿಂಹನೊಡನೆ ಪ್ರವೇಶಿಸಿ) ದೇವ ದೇವನ ಶ್ರೀಚೆನ್ನಕೇಶವನ ಗರ್ಭಗುಡಿ ಇದಿರಲ್ಲಿ ಹೇಸಿಕೆ ಎಂಬ ಅಪಶಬ್ಧ ಬಂತೇಕೆ ? ಹೇಳಿ ಸೋದರಿಯರೆ

ಬೊಮ್ಮಲೆ : ಹ್ಹ ಹ್ಹ ಹ್ಹ ಹ್ಹಾ! ಇದು ಭಾಗ್ಯ ಇದು ಭಾಗ್ಯ! ಸವತಿಯರು ಸೋದರಿಯರಾದೆವಲ್ಲಾ! ಇದೆ ನಮ್ಮ ಭಾಗ್ಯ !!

ಲಕ್ಷ್ಮಲೆ : (ತನ್ನ ಮಗ ನರಸಿಂಹನನ್ನು ತನ್ನತ್ತ ಸೆಳೆಯುತ್ತಾ) ನರಸಿಂಹ ಇತ್ತ ಬಾ ಕಂದ, ಮದ್ದಾನೆ ತುಳಿದೀತು !

ಶಾಂತಲೆ : ಏನಿದೀ ವೈಚಿತ್ರ್ಯ ! ನನಗೊಂದೂ ತಿಳಿಯದಿದೆ! ತಂಗಿ, ಎಲ್ಲಿಹುದು ಮದ್ದಾನೆ? ತುಳಿವುದೇತಕೆ ಹೇಳು?

ಲಕ್ಷ್ಮಲೆ : ಸ್ಥಪತಿವರ್ಯರು ಇದಕ್ಕೆ ಉತ್ತರವನೀಯುವರು.

ಶಾಂತಲೆ : ಜಕ್ಕಣಾಚಾರ್ಯರೆ. . .

ಜಕ್ಕಣ : ಮಾತೆಯರೆ, ಬಿನ್ನಹ, ಓರ್ವ ಪ್ರತಿಭಾಶಾಲಿ ಕವಿವರ್ಯ, ತಮ್ಮ ವ್ಯಕ್ತಿತ್ವವನು ಸ್ಪಷ್ಟ ಅರಿತವನು, ತಮ್ಮನ್ನು 'ಸವತಿ ಗಂಧ ಹಸ್ತಿ' ಎಂದು ಶ್ಲೋಕಿಸಿದ್ದಾನೆ. ಅದು. . .

ಶಾಂತಲೆ : ಅರ್ಥವಾಯಿತು! ಅಷ್ಟೆತಾನೆ, ಸ್ಥಪತಿಗಳೆ 'ಶಾಂತೆಯಾ' ಎಂಬೆಡೆ, ಲಕ್ಷ್ಮಯಾ, ಎಂದು ತಿದ್ದಿ ಶಾಸನವ ರಚಿಸಿ ! ಮಂಗಳ ಮುಹೂರ್ತದಲಿ ಮನಸು ಮುರಿವುದು ಬೇಡ.

ಜಕ್ಕಣ : ಮಹಾಮಾತೆಯವರು, ಕ್ಷಮಿಸೋಣವಾಗಲಿ, ತಮ್ಮ ಹೆಸರಲಿ ಸಂಕಲ್ಪ ಸ್ವೀಕರಿಸಿ ಮೂರ್ತಿ ಶಿಲ್ಪಕೆ ನಾನು ಓಂಕಾರ ಬರೆದೆ. ಈಗದು ಬದಲಿಸಲು ಶಿಲ್ಪ ಶಾಸ್ತ್ರವು ತಾನು ಒಪ್ಪದಿಹುದು.

ಬೊಮ್ಮಲೆ : ಜೋಯಿಸನ ಇಚ್ಚೆಯೊಲು ನವಗ್ರಹಗಳೇ ಅವನ ಕೈಯಲ್ಲಿ ಮನೆಯಿಂದ ಮನೆಗೆ ಸುತ್ತುತ್ತವಂತೆ! ಕಲಾವಿದನ ಕೈಯ ಉಳಿ ಕವಿಯ ಶಬ್ದವನೊಂದ ತಿದ್ದುವುದು ಅಸಾಧ್ಯವೆ?

ಜಕ್ಕಣ : ಅಸಾಧ್ಯ ಅಸಾಧ್ಯ ! ಅಸಾಧ್ಯ ಒಬ್ಬ ತಾಯಿಯು ಗರ್ಭಧರಿಸಿ ಶಿಶುವ ಜನನವಾಗುವ ವೇಳೆ ಬೇರೊಬ್ಬ ತಾಯ ಗರ್ಭದೊಳಿರಿಸೆ ಸಾಧ್ಯವಪುದೆ ಜನನಿ?

ಬೊಮ್ಮಲೆ : ಇದಕಿಂತ ಮಿಗಿಲಾದ ಆಶ್ಚರ್ಯ ಬೇರೊಂದಿಲ್ಲ ಜಗದಲ್ಲಿ ! (ನಗುತ್ತಾ) ಕಲ್ಲುಬೊಂಬೆ ಶಿಶುರೂಪು ತಳೆವುದಂತೆ ಸ್ತ್ರೀಯ ಗರ್ಭದಲದುವೆ ಬೆಳವುದಂತೆ ಶಿಶುವಿನೋಪಾದಿಯಲಿ'

ಜಕ್ಕಣ : ಪಟ್ಟಮಹದೇವಿಯರೆ, ಕಲ್ಲಿನಲಿ ಕೊಡೆಯುತಿಹ ಈ ಮೂರ್ತಿ ಉಳಿದವರಿಗೇನೊ ಕಲ್ಲೆ! ಆದರಿದು ನನಗೆ ಕಲ್ಲಲ್ಲ ! ಜ್ಯೋತಿರಸವೇ ಘನಿಸಿ ಕೈಕಾಲು ಖಂಡ ನರ ಬಾಯ್ಮೂಗು ಕಣ್ಣು ಕಣ್ಣೆಮೆಯಾಗಿ ರೂಪನ್ನೆ ಧರಿಸಿಹುದು. ನಿಮ್ಮ ಪಾವನ ಗರ್ಭದಲ್ಲಿ ಬೆಳೆಯ ಒಂದೊಂದು ಹಸುಳೆ ಇದು. ಗರ್ಭದಲಿ ವಿಶ್ವಕರ್ಮನ ಅಂಶ ಕುಳ್ಳಿರುತ, ಹಗಲೆಲ್ಲ ಇರುಳೆಲ್ಲ ನವಮಾಸ ಹಸುಳೆಯನು ತಿದ್ದುವಂದದಿ ನಾನು ತಿದ್ದಿಹೆನು. ಕರ್ಮಶಾಲೆಯನು ತಾಯವರ ಪ್ರಾಂಜಲದ ಗರ್ಭವೆಂದೇ ತಿಳಿದು ಅದರೊಳಗೆ ರಚಿಸುತಿಹ ವಿಶ್ವಕರ್ಮ ನಾನಾಗಿ ಮೂರ್ತಿಯನು ತಿದ್ದಿದೆನು. ಅದರಿಂದ ಯಾವುದೇ ನಿಷ್ಠುರದ ನುಡಿ ಇರಲಿ, ಕಷ್ಟವೇ ಬರಲಿ, ಗರ್ಭದಲಿ ಎಡೆಗೊಟ್ಟ ಮಾತೆಯರ, ತಾವೆ ಶಿಶುಗೆ ಜನ್ಮವನಿತ್ತು ಹಸುಳೆಯನು ಉಳಿಸಿ.

ಶಾಂತಲೆ : ಲಕ್ಷ್ಮಲಾ ದೇವಿಯರ ಹೆಸರಿನಕ್ಕರವ ಆ ಪೀಠದಲಿ ಕೆತ್ತಿದರೆ ಈ ಮೂರ್ತಿ ಉಳಿಯದೆ!

ಜಕ್ಕಣ : ಎಂದಿಗೂ ಉಳಿಯದೌ ಜನನಿ! ಇದು ಸಾಮಾನ್ಯ ಶಿಲ್ಪವಲ್ಲವ್ವ! ಗರ್ಭಾವತರಣ ಸಮಯದಲಿ ತೀರ್ಥಂಕರತ್ಮವದು ದೇವಿಯವರ ಮುಖದ ಮೂಲಕ ಗರ್ಭಕವತರಿಸುವಂತೆ ಜಗನ್ನಾಟಕ ಸೂತ್ರಧಾರಿ ಶ್ರೀ ಚೆನ್ನಕೇಶವನ ಚೈತನ್ಯವೇ ಮೈತಳೆದು ನಿಂದಿಹುದು ಮೂರ್ತಿಯಲಿ! ತಮ್ಮ ಪುಣ್ಯನಾಮದಲಂದು ಉಳಿಯ ಮೇಲೆತ್ತಿದೆನು. ಬಸುರಿಗೂ ಹೆಸರಿಗೂ ಸಂಬಂಧ ಸೂತ್ರವಿದೆ ಹೊಕ್ಕುಳ ಬಳ್ಳಿ ಬೆಳೆದಂತೆ ! ಅದ ಹರಿಯಬಾರದು ತಾಯಿ! ಭ್ರೂಣಹತ್ಯೆಯು ಪಾಪ!

ಲಕ್ಷ್ಮಲೆ : ಎಲ್ಲ ಗೊಡ್ಡು ಪುರಾಣ ! ಮೌಢ್ಯಕ್ಕೆ ಮತಿಯಿಲ್ಲ !

ಬೊಮ್ಮಲೆ : ಅಕ್ಕಾಜಿ, ಸ್ಥಪತಿಗಳ ಕಲ್ಪನೆಯು ಶಿಲ್ಪಕಷ್ಟೇ ಮೀಸಲೆಂದು ತಿಳಿದಿದ್ದೆ! ರಾಜಕಾರಣದಲ್ಲೂ ಅವರು ಪರಿಣಿತ ರೆಂದು ಈಗ ತಿಳಿದೆ.

ಜಕ್ಕಣ : ಇದರಲ್ಲಿ ರಾಜಕೀಯವೇನಿದೆ ತಾಯಿ! ಇದ್ದರೆ ಯಾರ ಸ್ವಾರ್ಥಕ್ಕಾಗಿ? ಅದನ್ನಾದರೂ ಅರಹಬಹುದಲ್ಲ!
ಬೊಮ್ಮಲೆ : ಶಾಂತಲಾದೇವಿಯವರ ಹೆಸರನ್ನು ಆಕಲ್ಪಾಂತ ಚಿರಸ್ಥಾಯಿಗೊಳಿಸುವುದು! ಅದಕ್ಕಿಂತ ಬೇಕೇನು ಬೇರೆ ಸ್ವಾರ್ಥ?
ಜಕ್ಕಣ : ಅಲ್ಲಲ್ಲ, ಭಗವದ್ ಭಕ್ತಿಯನು ಸಾಕಾರಗೊಳಿಸಬೇಕೆಂಬ ಹಿರಿ ಆಸೆ ತಾಯಿಯದು. ಇದರಲ್ಲಿ ಸ್ವಾರ್ಥ ಎಳ್ಳಷ್ಟೂ ಇಲ್ಲ ದೇವಿಯರೆ.
ಲಕ್ಷ್ಮಲೆ : ಸ್ಪಷ್ಟ ತಿಳಿದಿದೆ ಸ್ಥಪತಿ, ಧರ್ಮಕಾರಣದ ಹಿಂದೆ ಅಡಗಿರುವ ನಿಮ್ಮ ರಾಜಕಾರಣ! ಬೆಕ್ಕು ಕಣ್ಮುಚ್ಚು ಹಾಲು ಕುಡಿವಾಗ ತನ್ನನ್ನಾರೂ ನೋಡರೆಂಬುದಂತೆ ಅಂತಾಯ್ತು ನಿಮ್ಮೀರ್ವರೊಳಸಂಚು!
ಶಾಂತಲೆ : ಅಯ್ಯೋ ದೈವವೇ! ಕಲ್ಪನೆಗೆ ಇಷ್ಟು ಬಣ್ಣಗಳು ಇಹುವೆಂದು ನಾನು ತಿಳಿದಿರಲಿಲ್ಲ!
ಬೊಮ್ಮಲೆ : (ಅಣಕಿಸುತ್ತಾ) ನಟನೆ, ನಾಟ್ಯಕ್ಕೆ ಮೀಸಲಿರಬೇಕು. ವಾಸ್ತವಕ್ಕಲ್ಲ! ಅಲ್ಲವೆ ಅಕ್ಕ! ದಳದೆರೆದ ಹೂವಡಿಯ ಮಿಡಿ ನಾಗರಂತೆ! ಗೋಮುಖ ವ್ಯಾಘ್ರತನ!!

'ಗೋಮುಖವ್ಯಾಘ್ರತನ' ಎಂಬ ಶಬ್ದ ಬಿದ್ದ ಕೂಡಲೇ ಶಾಂತಲೆಯ ಮೈ ಕಂಪಿಸಿತು, ಕಣ್ಣು ಕೆಂಪಾದವು, ಹುಬ್ಬುಗಳು ಗಂಟಿಕ್ಕಿದವು. ತೋಳುಗಳೆರಡೂ ಅಗಲವಾಗಿ ತೆರೆದುಕೊಂಡವು. ಜೋರಾಗಿ ಗರ್ಜಿಸಿದಳು.

ಶಾಂತಲೆ : ಸ್ಥಪತಿಗಳೇ, ನನ್ನಾಜ್ಞೆ, ಪಟ್ಟಮಹಾದೇವಿಯವರ ಕಟ್ಟಾಜ್ಞೆ, ಶಿಲ್ಪ ಸೌಂದರ್ಯದಲ್ಲಿ ಲಕ್ಷ್ಮಲಾ ದೇವಿಯವರ ಹೆಸರು ಹಸುರಾಗಲಿ, ಅಂತೆಸಗಬೇಕಿಹುದು.
ಜಕ್ಕಣ : ಶಾಂತವಾಗಲಿ ಕಡಲು ! ಶಾಂತವಾಗಲಿ ಮಡಿಲು ! ನನ್ನ ತಾಯೊಡಲು ! ಕಾಲಲ್ಲಿ ತೋರಿದುದ ಶಿರದಲಾಗುವ ನಾನು ಪಡಿನುಡಿದುದುಂಟೆ ? ಪುಟ್ಟವಿಷಯಕ್ಕೇಕೆ ಬೆಟ್ಟದೆತ್ತರ ಚಿಂತೆ ?
ಶಾಂತಲೆ : ಜಕ್ಕಣರೆ, ಕಿಡಿಸಣ್ಣದಾದರೂ ಕಾಡೆಲ್ಲವನು ಸುಟ್ಟು ಬೂದಿಗೈವಂತೆ, ದೇವನಡಿ ಬರೆದಿರುವ ಅರ್ಪಣದ ಬರಹ ಮನಗಳನು ಒಡೆದಿಹುದು ನಾಳೆ ಮನೆಯನ್ನು ಒಡೆಯಬಲ್ಲುದು, ಈ ಬೆಳವಣಿಗೆ ಸಾಮ್ರಾಜ್ಯಕ್ಕೇ ಕುತ್ತು !
ಜಕ್ಕಣ : ಶಾಂತಂ ಪಾಪಂ ! ಶಾಂತಂ ಪಾಪಂ (ಎರಡೂ ಕಿವಿಗಳನ್ನು ಮುಚ್ಚಿಕೊಳ್ಳುವನು)
ಶಾಂತಲೆ : ಅಪ್ಪಾಜೀ, ಕೃಪೆಯಿಟ್ಟು ಲಾಲಿಸಿ. . .ಅಹುದು ನಾನಿಲ್ಲಿರಲು ಉಭಯ ಸಂಕಟ ನಿಮಗೆ. ಇದೋ, ಇಂದೆ ನಾ ತೆರಳುವೆನು ನನ್ನ ತವರಿನ ತಾಣ ಶಿವಗಂಗೆಗೆ ! (ಲಕ್ಷ್ಮಲೆ ಬೊಮ್ಮಲೆಯರ ಕೈಹಿಡಿದು) ಸೋದರಿಯರೆ, ನಾನು ಕೆಲಕಾಲ ಶಿವಗಂಗೆಯಲಿ ಗುರುಗಳನು ಪೂಜಿಸುವ ಸಲುವಾಗಿ ಹೊರಡಲನುವಾಗಿಹೆನು. ಪ್ರಭುಗಳನು ಬೇಡಿ ಅಪ್ಪಣೆಯ ಪಡೆಯುವೆನು. ಚೆನ್ನಕೇಶವ ಮೂರ್ತಿ ಸಿದ್ಧವಾಗಿದೆ. ಅದಕ್ಕೆ, ಲಕ್ಷ್ಮಲಾ ನಿನ್ನ ಹೆಸರನು ಬರೆದು ಮುಗಿಸಿಕೊಡಿರೆಂದು ಆಚಾರ್ಯರನು ಬೇಡಿಹೆನು. ಅದನು ನಿನ್ನ ಹೆಸರಲಿ ನಿಲಿಸಿ ಶುಭ ದಿವಸ ಮೂರ್ತಿ ಪ್ರತಿಷ್ಠೆ ನೆರವೇರಿಸು. ನಿಮ್ಮೀರ್ವರಿಗೂ ಮಂಗಳವಾಗಲಿ. ನಮ್ಮ ವಂಶದ ಬೆಳಸು, ಈ ಪುಟ್ಟ ನರಸಿಂಹ, ರಾಜನೆನಿಸಿ ಯಶೋಭಾಗಿಯಾಗಲಿ. ನಾನಿನ್ನು ಬರುವೆ ! ನರಸಿಂಹ. . .
ಭಾರವಾದ ಹೃದಯದಿಂದ ಹೊರಹೋಗುವಳು. ಆಗ
ಜಕ್ಕಣ : ಅಮ್ಮಾ. . .ಅಮ್ಮಾ. . .ಶಿಶುವ ತಿಪ್ಪೆಗೆ ಎಸೆದು ಹೋಗಿಬಿಟ್ಟೆಯ ತಾಯಿ. . .ಅನಾಥನನ್ನಾಗಿಸಿದೆ ನನ್ನಮ್ಮ ! ಇನ್ನೇಕೆ ಶಿಲ್ಪಕೃತಿ. . .ಇನ್ನೇಕೆ ಶಿಲ್ಪಕಲೆ ! ಎಲ್ಲವಕು ಇಂದೆ ನಾ ನೀಡುವೆ ತಿಲಾಂಜಲಿ ! ಓ ದೇವರೇ, ನನ್ನನ್ನು ಕ್ಷಮಿಸು !. . .ತಾಯಿ ಇಲ್ಲದ ಈ ಮಗುವು ಬದುಕಿ ಉಳಿಯುವುದೆಂತು ?
ಬೊಮ್ಮಲೆ : ಸ್ಥಪತಿಗಳೆ, ಈಗಲಾದರೂ ಮಹಾರಾಣಿಯವರ ಆಜ್ಞೆಯನು ನೆರವೇರಿಸಿ.
ಜಕ್ಕಣ : (ಆವೇಶಭರಿತನಾಗಿ) ಓ ಕ್ರೌರ್ಯವೆ ನೈಚ್ಯತೆಯ ನೇಣುಗಳೇ ದೂರ ಸರಿಯಿರಿ. . .ತೊಲಗಾಚೆ, ಸ್ವಾರ್ಥವೇ ತೊಲಗಾಚೆ

ಓ ಕನಸೇ ಸಿಡಿದೊಡೆದು ಚೂರಾದೆಯಾ !

(ಇದ್ದಕ್ಕಿದ್ದಂತೆ ಭಯಂಕರ ಸ್ಫೋಟವಾಗುವುದು ದೀಪಗಳು ಕಣ್ಣು ಮುಚ್ಚಾಲೆಯಾಡುವುವು. ಭೇರಿ, ಚಂಡೆ ಮೊದಲಾದ ರಣವಾದ್ಯಗಳು ಮೊಳಗುವುವು).
ಭಯಂಕರ ತಾಂಡವ ನೃತ್ಯ ಆರಂಭವಾಗುವುದು
–ಜಕ್ಕಣ ಒಂದು ಕೈಯಲ್ಲಿ ಉಳಿ ಮತ್ತೊಂದರಲ್ಲಿ ಸುತ್ತಿಗೆ ಹಿಡಿದು ತಾಂಡವ ನಡೆಸುವನು -

ಅಯ್ಯಯ್ಯೋ –
ಭಗ್ನವಾಯಿತೆ ನನ್ನ ಸ್ವಪ್ನಸುಂದರ ಸಗ್ಗ !
ಓ ಬನ್ನಿ. ನಕ್ಷತ್ರ ನೀಹಾರಿಕಾ ವಲಯ ಜ್ಯೋತಿಗಳೆ ಬನ್ನಿ !
ತಾಯಿ ಇಲ್ಲದ ಶಿಶುವ, ಈ ಶಿಲ್ಪ ಕಂದನನು
ಸುಟ್ಟುರುಹಿ ನಿಂದಲ್ಲೆ ಬೂದಿಗೈಯಲು ಬನ್ನಿ !
ಇಲ್ಲವಾಗಲಿ ಮುಂದೆ ಶ್ರೀಶಿಲ್ಪ ಚಾತುರ್ಯ !
ನಗ್ನವಾಗಲಿ ನನ್ನ ಸದ್ಭಾವ ಸಜ್ಜನಿಕೆ !
ಓ ಶಿಲ್ಪ ಕಲ್ಪದ ಶಿಶುವೆ, ಗರ್ಭದಲಿ ಧರಿಸಿದ್ದ
ತಾಯಿ, ಕರುಳನೆ ಕಿತ್ತು, ಪಿಂಡವನು ಹೊರಗೆಸೆದು
ದೂರಹೋದಳು ನಿನ್ನ. ನೀ ಅನಾಥ, ತಾಯಿಯ ಕಾಣದಿಹ
ತಬ್ಬಲಿಯು, ಇನ್ನೆಲ್ಲಿ ಈ ಶಿಶುಗೆ ಜೀವಕಳೆ, ಬಾಳ್ವನೆಲೆ !
ಓ ನನ್ನ ಕೈಯಲಿಹ ಉಕ್ಕಿನಾ ಕರಣವೇ, ಹೋಗು,
ಹೊಕ್ಕಳಿನ ಬಳ್ಳಿಯನು ಕುಕ್ಕಿ ತುಂಡರಿಸು !
ತಾಯಿ ಮಗುವಿನ ಕರುಳು ಹರಿದು ಬೇರಾಗಿಹುದು ! ಹೋಗು,
ತಾಯಿ ಹಡೆಯುವ ಮೊದಲೆ ಬಸಿರ ಹಸಿರನು ಕಿತ್ತು
ಹುಡಿಗೈದಳೆಂಬುದನು ಜಗಕೆ ಸಾರುವ ರೀತಿ ನುಚ್ಚುನುರಿ ಮಾಡು !
ಭಗ್ನವಾಗಲಿ ನನ್ನ ಕನಸಿನೀ ಕನ್ನಡಿಯು
ಭಿನ್ನವಾಗಲಿ ನ್ನ ಶ್ರೀಶಿಲ್ಪದೈಸಿರಿಯು !
ಓಂ ನಮೋ ಕೇಶವಾಯ. . .ಓ ನಮೋ ಕೇ. . .
ಶವಾಯ. . .ಶ. . .ವಾ. . .ಯ
ಮುಕ್ತಾದ ಪೂಜಾಹನವಲ್ಲ, ಅಲ್ಲಿಗೇ ಕಾರ್ಯ ನಿಂತಿತು. ಅರಿಯದವರು ಪ್ರಾಣಪ್ರತಿಷ್ಠೆ ಪಡೆಯದೆ, ಪೂಜೆಯಿಲ್ಲದೆ ನೆಟ್ಟನೆ ನಿಂತ ಮೂರ್ತಿಯನ್ನು 'ಕಪ್ಪೆ ಚೆನ್ನಿಗರಾಯ' ಎಂದು ಕರೆದರು .

@ @ @ @

ಚೆನ್ನಕೇಶವ ಮೂರ್ತಿ ಭಿನ್ನವಾದಂತೆ ಶಾಂತಲೆಯ ಹೃದಯವೂ ಭಗ್ನಗೊಂಡಿತ್ತು. ಭಾವನೆಗಳ ತುಮುಲ ಯುದ್ಧ ಅವಳ ಹೃದಯ ಕ್ಷೇತ್ರದಲ್ಲಿ ಮೂರು ದಿನಗಳ ಕಾಲ ನಿದ್ದೆ ಹತ್ತಲಿಲ್ಲ ಕಣ್ಣಿಗೆ. ದುರಂತಕ್ಕೀಡಾದ ಮಗುವಿನ ನೆನಪು ಅವಳನ್ನು ಕಾಡುತ್ತಿರಬಹುದು. ಕಾಲ ಎಂಬ ಮುಲಾಮು ಮನಸ್ಸಿನ ಗಾಯವನ್ನು ಮಾಯಿಸುತ್ತದೆ ಎಂದುಕೊಂಡಿದ್ದ ವಿಷ್ಣುವರ್ಧನ ಒಂದೆರಡು ದಿನ ಸುಮ್ಮನಿದ್ದ. ಅವಳ ಗಾಢ ಮೌನವೇ ಭಯ, ಬೇಸರ ತಂದಿತು. ಅದೊಂದು ರಾತ್ರಿ ಅವಳ ಅಂತಃಪುರದ ರತ್ನಮಂಚವನ್ನೇರಿ ಪತ್ನಿಯನ್ನು ಪಕ್ಕದಲ್ಲಿ ಕೂರಿಸಿಕೊಂಡು ತಲೆ ನೇವರಿಸುತ್ತಾ, ಸಮಾಧಾನದ ಮಾತುಗಳನ್ನಾಡತೊಡಗಿದ.

'ಶಾಂತಾ. . .ಹುಟ್ಟು ಸಾವುಗಳು ನಾಣ್ಯದ ಎರಡು ಮುಖಗಳಿದ್ದ ಹಾಗೆ. . .ಇಂದು ಹುಟ್ಟಿದ್ದು ನಾಳೆ ಮಡಿಯಲೇ ಬೇಕು. . .ಮನುಷ್ಯನೇ ಮೊದಲಾದ ಪ್ರಾಣಿಗಳೂ ಅಷ್ಟೇ, ರಾಜ್ಯ ಸಾಮ್ರಾಜ್ಯಗಳಿಗೂ ಅಷ್ಟೆ.'

'ಛೇ ಛೇ ! ಅಮಂಗಲವನ್ನಾಡದಿರಿ ಪ್ರಭು. . .ಸಾಮ್ರಾಜ್ಯದ ಬಗೆಗೆ ತಾವು. . .ಅಮಂಗಲದ ನುಡಿಗಳನ್ನಾಡದಿರಿ ನನ್ನ ದೇವರೆ. . .' ಎಂದು ತನ್ನ ಕೈಯಿಂದ ಅವನ ಬಾಯಿ ಮುಚ್ಚಿದಳು ಶಾಂತಲೆ. ವಿಷ್ಣು ಹೇಳಿದ –

'ಶಾಂತಿ. . .ಅದೇಕಷ್ಟು ಉದ್ವಿಗ್ನಳಾಗುತ್ತಿದ್ದೀಯೆ. . .ನಾನೇನು ಆಡಬಾರದ್ದನ್ನು ಆಡಿಲ್ಲ. ಲೋಕದಲ್ಲಿ ನಡೆಯುವುದನ್ನೇ ನುಡಿದಿದ್ದೇನೆ. . .ಒಂದು ವೇಳೆ ನಾವಿಬ್ಬರೂ ಪ್ರಯತ್ನಿಸಿದರೆ ತಾನೆ ನಿಲ್ಲುತ್ತದೆಯೆ ? ಅದು ನಿಸರ್ಗ ನಿಯಮ. ಏನಾಗಬೇಕೊ ಅದು ಆಗಿಯೇ ತೀರುತ್ತದೆ.'

'ಪ್ರಭು ನನ್ನದೊಂದು ಬಿನ್ನಹ.'

'ಹೇಳು ಶಾಂತಿ.'

‘ನಡೆಸಿಕೊಡುತ್ತೇವೆಂದು ಭರವಸೆ ನೀಡಬೇಕು. . .ಇಲ್ಲವೆನ್ನಲಾಗದು.’

‘ಇಷ್ಟೇಕೆ ಪೀಠಿಕೆ ಚಿನ್ನೆ. . .ಎಂದಾದರೂ ನಿನ್ನ ಅಭೀಷ್ಟಕ್ಕೆ ಅಡ್ಡಿಯಾಗಿದೆಯೆ?

‘ಇಲ್ಲ ಆವಿಚಾರದಲ್ಲಿ ನಾನು ಭಾಗ್ಯವಂತೆ.’

‘ಅದೊಂದೆ ಅಲ್ಲ. . .ಎಲ್ಲ ವಿಚಾರದಲ್ಲೂ ಅನ್ನು. .ಹೇಳು.’

‘ಖಂಡಿತವಾಗಿ ನಡೆಸಿಕೊಡುತ್ತೀರಾ?’

‘ನೀನೆಲ್ಲೋ ಶುದ್ದ ಹುಚ್ಚಿ. . .ಹೇಳು. . .ಹೆಚ್ಚು ಒರೆ ಹಚ್ಚುವುದು ಬೇಡ’

‘ನಾನು. . .ನಾನು. . .’

‘ಹೂಂ. . .’

‘ಬಿಡುಗಡೆಯನ್ನು ಬಯಸುತ್ತಿದ್ದೇನೆ.’

‘ಏನೂ. . .ಬಿಡುಗಡೆಯೇ?’

‘ಹೌದು.. .ನಾನೀ ಬಂಧನದಿಂದ ಬಿಡುಗಡೆಯನ್ನು ಬಯಸುತ್ತಿದ್ದೇನೆ.’

‘ಏನು ನೀನು ಹೇಳುತ್ತಿರುವುದು ಶಾಂತೀ. . .ನನ್ನನ್ನು ಬಿಟ್ಟು ಹೋಗಬೇಕೆಂಬ ಇಚ್ಛೆಯೆ ?’

‘ಅದಲ್ಲ ಪ್ರಭು. . .ಈ ಪಟ್ಟದರಸಿಯ ಪದವಿಯಿಂದ ಬಿಡುಗಡೆ.’

‘ಪಟ್ಟದರಸಿಯ ಪದವಿ ! ಅದರಿಂದ ಬಿಡುಗಡೆ !. . .ಶಾಂತಿ, ಅದು ಹೇಗೆ ಸಾಧ್ಯ ?’

‘ಏಕೆ ಸಾಧ್ಯವಿಲ್ಲ ಪ್ರಭು. . .ತಾವು ಮನಸ್ಸು ಮಾಡಿದರೆ ಯಾವುದೂ ಅಸಾಧ್ಯವಲ್ಲ. ಪಟ್ಟದರಸಿಯ ಪದವಿಯನ್ನು ಯಾರಾದರೂ ರಾಣಿಯರಿಗೆ ಒಪ್ಪಿಸಿ ನನಗೆ ವಿಶ್ರಾಂತಿಯನ್ನು ದಯಪಾಲಿಸಬೇಕಾಗಿ ಪ್ರಾರ್ಥಿಸುತ್ತೇನೆ.’

‘ಶಾಂತಲೆ, ನೀನು ಸಾಮ್ರಾಜ್ಞಿಯಾಗಿ ಮಾತನಾಡುತ್ತಿಲ್ಲ. ಸಾಧಾರಣ ಸ್ತ್ರೀಯಂತೆ ನುಡಿಯುತ್ತಿರುವಿ. ಮಹಾರಾಣಿ ಪಟ್ಟವೆನ್ನುವುದು ಒಡವೆಯಲ್ಲ, ವಸ್ತುವಲ್ಲ ಬೇರೆಯವರಿಗೆ ಒಪ್ಪಿಸುವುದಕ್ಕೆ. . .ಅಲ್ಲದೆ ಆ ವಿಚಾರದಲ್ಲಿ ನಾವಿಬ್ಬರೆ ನಮಗೆ ಇಷ್ಟ ಬಂದ ರೀತಿಯಲ್ಲಿ ನಿರ್ಣಯವನ್ನು ಕೈಗೊಳ್ಳುವಂತೆಯೂ ಇಲ್ಲ. ಏಕೆಂದರೆ ರಾಜರಾಣಿಯವರು ರಾಷ್ಟ್ರದ ಸ್ವತ್ತು, ಪ್ರಜೆಗಳಿಗೆ ಸೇರಿದ ಆಸ್ತಿ. ಪಡೆಯುವ ಬಿಡುವ ಅಧಿಕಾರ ಪ್ರಜೆಗಳಿಗಿದೆಯೇ ಹೊರತು ನನಗೆ ನಿನಗೆ ಇಲ್ಲ. ನಾನು ಹೊಯ್ಸಳ ಸಾಮ್ರಾಜ್ಯದ ಚಕ್ರವರ್ತಿಯಾದದ್ದೂ, ನೀನು ಸಾಮ್ರಾಜ್ಞಿಯಾದದ್ದೂ ಅವರ ಒಲವು, ವಿಶ್ವಾಸ, ನಿಷ್ಠೆ, ತ್ಯಾಗಗಳಿಂದ. ಅಂದಮೇಲೆ. . .’

‘ಮಹಾಪ್ರಭುಗಳು ನನ್ನನ್ನು ಒಬ್ಬಳು ಪ್ರಜೆ ಎಂದೇ ಪರಿಗಣಿಸಿ ಕೋರಿಕೆಯನ್ನು ಮನ್ನಿಸಬೇಕಾಗಿ ಪ್ರಾರ್ಥಿಸುತ್ತೇನೆ.’

‘ಅದು ಯುಕ್ತವಲ್ಲ, ಧರ್ಮವೂ ಅಲ್ಲ. ಶಾಂತಿ, ಪ್ರಾಜ್ಞಳಾದ ನಿನಗೆ ನಾನು ಹೇಳಬೇಕಾದ ಅಗತ್ಯವಿಲ್ಲ. . .ನೋಡು ಮಹಾರಾಣಿ ಪದವಿ’ಯನ್ನು ನಿನಗೆ ನೀಡಿದವನು ನಾನಲ್ಲ. . .ಅದನ್ನು ಮೊದಲೇ ಹೇಳಿದ್ದೇನೆ, ಎರಡನೆಯದಾಗಿ, ಅದು ನನ್ನ ನಿನ್ನ ನಡುವೆ ನಡೆದ ಒಪ್ಪಂದವಲ್ಲ. ಅದು ಭರತಖಂಡದ ರಾಜ ಧರ್ಮವೇ ಆಗಿದೆ. ನಿನ್ನ ಪಟ್ಟವನ್ನು ಕಿತ್ತು ಬೇರೆಯವರಿಗೆ ಕಟ್ಟುವುದು ಆ ಧರ್ಮಕ್ಕೆ ವಿರುದ್ದ. . .’

‘ಸಾಯುವವರೆಗೂ ನಾನೊಬ್ಬಳೇ ಪಟ್ಟಮಹಿಷಿಯಾಗಿ ಮೆರೆಯುವುದು ಸವತಿ ಧರ್ಮಕ್ಕೆ ವಿರುದ್ಧವಲ್ಲವೆ ಪ್ರಭು?. . .’

‘ಅಲ್ಲ. . .ಶಾಂತಿ. . .ನೀನು ಸವತಿಗಂಧವಾರಣೆ. . .ಇರಲಿ, ಯಾರಾದರೂ ನಿನ್ನ ತಂಗಿಯರು ಅರಸಿ ಪದವಿಯನ್ನು ಬಯಸಿದರೇನು ?’

‘ಛೇ ಛೇ ಎಂದಿಗೂ ಇಲ್ಲ. . .ಹಾಗೆ ಅಧಿಕಾರ ಅಂತಸ್ತಿಗಾಗಿ ಆಸೆ ಪಡುವವರು ಧರ್ಮಪ್ರಭು ಹೊಯ್ಸಳೇಶ್ವರ ವಿಷ್ಣುವರ್ಧನರ ಧರ್ಮಪತ್ನಿಯರೇ ಅಲ್ಲ !’

‘ಹಾಗಾದರೆ. . .ಪಟ್ಟ ಬಿಡುವ ಮಾತೇಕೆ ?’

‘ಮಹಾಪ್ರಭುಗಳ ದಿವ್ಯ ಚಿತ್ತಕ್ಕೆ ಅದರ ಸೂಕ್ಷ್ಮ ಸ್ವಯಂವೇದ್ಯ.’

‘ಸ್ವಲ್ಪ ವಿವರಣೆ ಕೊಡು ಶಾಂತಿ.’

‘ಮಹಾಪ್ರಭು ಅನೇಕ ವಸಂತಗಳು ಉರುಳಿ ಹೋಗಿವೆ. ಈ ದೇಹದ ಮೇಲೆ ಮುಪ್ಪು ಆಗಲೇ ಚಪ್ಪರಿಸತೊಡಗಿದೆ. ಇನ್ನು ಮಕ್ಕಳಾಗುವ ಮಾತು ಬಹು ದೂರ ಉಳಿಯಿತು. ಇದ್ದ ಒಂದು ಮಗುವನ್ನು ದೇವರು ಒಂದು ಕೈಯಲ್ಲಿ ಕೊಟ್ಟು

ಮತ್ತೊಂದು ಕೈಯಿಂದ ಕಿತ್ತುಕೊಂಡ. ಇದರಿಂದ ಮುಂದೆ ಸಾಮ್ರಾಜ್ಯದ ಒಡೆತನದ ಮೇಲೆ ಸಂಭವಿಸಬಹುದಾದ ತೊಡಕುಗಳನ್ನು ಕುರಿತು ಆಲೋಚಿಸಿ ಈ ನಿರ್ಧಾರಕ್ಕೆ ಬಂದಿದ್ದೇನೆ ಪ್ರಭು.'

'ಏನು ತೊಡಕು ಹೇಳು ?'

'ಮಹಾಪ್ರಭು, ಪಟ್ಟದರಸಿಯಾದ ನನಗೆ ಇನ್ನು ಸಂತಾನವಿಲ್ಲ. ಅನ್ಯ ಪತ್ನಿಯರು ಪಟ್ಟದರಸಿಯರಲ್ಲ. ಅವರ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳಿಗೆ ಪಟ್ಟ ಕಟ್ಟಬೇಕೆಂದರೆ ಅದಕ್ಕೆ ಮುಂದೆ ಏನೇನು ವಿಘ್ನಗಳು ಒದಗುತ್ತವೆಯೊ ಹೇಳಬರುವುದಿಲ್ಲ. ಜಲರಾಶಿಯಲ್ಲಿ ಮೀನಿನ ಹೆಜ್ಜೆಯನ್ನು ಗುರುತಿಸಬಹುದು. ಆದರೆ ಮಾನವನ ಮನಸ್ಸಿನ ಆಳ ಅಂತರಾಳಗಳನ್ನು ಅರಿಯುವುದು ಆ ಸೃಷ್ಟಿಕರ್ತನಿಂದಲೂ ಸಾಧ್ಯವಿಲ್ಲ. ಆದ್ದರಿಂದ ಸಂಭವಿಸಬಹುದಾದ ಕೇಡಿಗೆ ಇಂದೇ ಪರಿಹಾರ ಹುಡುಕುವುದು ಹೆಚ್ಚು ಸೂಕ್ತ. ರೋಗ ಕ್ಕೆ ಔಷಧಿ ಕೊಡುವುದಕ್ಕಿಂತ ರೋಗ ಬರದಂತೆ ನೋಡಿಕೊಳ್ಳುವುದು ಹೆಚ್ಚು ಜಾಣತನ. ಹೋಗಲಿ, ಯುವರಾಜ ಉದಯಾದಿತ್ಯರ ಹೊಟ್ಟೆಯಲ್ಲಿ ಹುಟ್ಟಿದ ಎರೆಯಂಗನಿದ್ದಾನೆ ಎನ್ನಲು, ಅವನೂ ಅಣ್ಣ ಬಲ್ಲಾಳನ ಹಾದಿಯನ್ನೇ ಹಿಡಿದ. ಅವರ ಮುಂದಿನ ಸಂತಾನದ ಬಗೆಗೆ ಹಕ್ಕು ಅರ್ಹತೆಯ ಪ್ರಶ್ನೆಗಳು ಬರುತ್ತವೆ. ಪಟ್ಟಮಹಿಷಿ ಅಲ್ಲದವಳ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳೆಂದರೆ ಸಿಂಹಾಸನದ ಒಡೆತನದ ಹಕ್ಕು ದಕ್ಕುವುದಿಲ್ಲ. ಇದರಿಂದಾಗಿ ಅರಮನೆಯಲ್ಲೇ ಅಂತಃಕಲಹಗಳು ಆರಂಭವಾಗಬಹುದು. ಒಳಗಿನ ಕಿಡಿ ಹೊರಗಿನ ದಳ್ಳುರಿಗಿಂತ ಹೆಚ್ಚು ಅಪಾಯಕಾರಿ. ಆದ್ದರಿಂದ ನಾಳೆ ಜ್ಞಾತಿ ಕಲಹ, ಯಾದವೀ ಕಲಹಗಳುಂಟಾಗಿ, ಹೊಯ್ಸಳ ಸಾಮ್ರಾಜ್ಯ ಅನ್ಯಾಕ್ರಾಂತವಾಗಬಾರದು. ಅದಕ್ಕಾಗಿ ಇಷ್ಟೆಲ್ಲಾ ಯೋಚಿಸಬೇಕಾಗಿ ಬಂತು. . .ಮಹಾಪ್ರಭುಗಳವರು, ಈ ಚರಣದಾ ಸಿಯ ಇದೊಂದು ಬೇಡಿಕೆಯನ್ನು ನೆರವೇರಿಸಿಕೊಡಬೇಕಾಗಿ ಅತ್ಯಂತ ಕಳಕಳಿಯಿಂದ ಪ್ರಾರ್ಥಿಸುತ್ತೇನೆ.'

'ನಿನ್ನ ಕಲ್ಪನೆಯ ಕುದುರೆಗೆ ಕಡಿವಾಣವೇ ಇಲ್ಲವಾಗಿದೆ ಶಾಂತಿ. . .ನೋಡು ನನಗೆ ನಿದ್ರೆ ಬರುತ್ತಿದೆ. . .ವಿಶ್ರಾಂತಿಗೆ ಭಂಗ ತರಬೇಡ. . .ಸುಮ್ಮನೆ ಮಲಗು.'

'ಇಲ್ಲ. ನನ್ನ ಸ್ವಾಮಿಗೆ ನಿದ್ರಾಭಂಗವಾದರೂ ಚಿಂತೆಯಿಲ್ಲ. . .ಈ ನನ್ನ ಅಭಿಮತವನ್ನು ಅಂಗೀಕರಿಸಲೇಬೇಕು.'

'ಸಾಧ್ಯವಿಲ್ಲ. . .ಸಾಧ್ಯವಿಲ್ಲ. . .ಸಾಧ್ಯವಿಲ್ಲ. . .ನೀನೇರಿದ ಮಹಿಷಿ ಪಟ್ಟವನ್ನು ಬೇರೆಯವರು ಏರಲು ಎಂದಿಗೂ ಸಾಧ್ಯ ವಿಲ್ಲ.'

'ಸ್ವಲ್ಪ ಸಾಧ್ಯ ಮಾಡಿಕೊಂಡರೆ ನನಗೊದಗಬಹುದಾದ ಅಪವಾದ ದೂರವಾಗುತ್ತದೆ ಮಹಾಪ್ರಭು.'

'ನಿನ್ನೊಬ್ಬಳ ಅಪವಾದ ನಿವಾರಣೆಗಾಗಿ ನಾನು ಧರ್ಮಕ್ಕೆ ದ್ರೋಹ ಬಗೆಯಲಾರೆ ಶಾಂತಿ. . .'

'ನನ್ನ ಮಾತಿನಲ್ಲಿ ದ್ರೋಹವೂ ಇಲ್ಲ. ಪ್ರಭುಗಳ ಮಾತಿನಲ್ಲಿ ಧರ್ಮವೂ ಇಲ್ಲ. . .'

'ಅಧರ್ಮೀಯನ ಬಳಿಯಲ್ಲಿ ಧರ್ಮಾತ್ಮಳಾದ ನಿನಗೇಕೆ ವಾದ. . .ಹೋಗು ನಿನ್ನಿಚ್ಛೆ ಬಂದಂತೆ ಮಾಡಿಕೊ. . .ಆದರೆ ಇಷ್ಟು ಮಾತ್ರ ಸತ್ಯ, ನೀನು ಬದುಕಿರುವವರೆಗೂ ಮಹಾಮಹಿಷಿ ಪಟ್ಟ ಯಾರಿಗೂ, ಯಾವ ಕಾರಣಕ್ಕೂ ದಕ್ಕಲಾರದು. . .'ಇಷ್ಟು ಹೇಳಿ ಕಣ್ಣು ಮುಚ್ಚಿ ನಿದ್ದೆ ಹೋದ.

ಇರುಳನ್ನೆಲ್ಲಾ ಕುಳಿತೇ ಕಳೆದಳು ಶಾಂತಲೆ.

ತಲೆಯಲ್ಲಿ ಕೊರೆಯತೊಡಗಿತ್ತು – 'ನಾನು ಬದುಕಿರುವವರೆಗೂ ಮಹಾ ಮಹಿಷಿ ಪಟ್ಟ ಯಾರಿಗೂ ಯಾವ ಕಾರಣಕ್ಕೂ ದಕ್ಕಲಾರದು. . .ಹೌದು. ನಾನು ಬದುಕಿರುವವರೆಗೂ ದಕ್ಕಲಾರದು. . .ನಾನು ಬದುಕಿರುವವರೆಗೂ. . .ಮಹಿಷಿಪಟ್ಟ. . .ಅನ್ಯರಿಗೆ ಮೊಲದಕೊಂಬು. . .! ಹಾಗಾದರೆ. . .ನಾನು ಬದುಕಿರುವವರೆಗೂ ಅಯ್ಯೋ, ಪರಮಾತ್ಮಾ, ನಾನವ ಸೌಭಾಗ್ಯಕ್ಕಾಗಿ ಬದುಕಿರಬೇಕು ಇನ್ನು. . .ಬೇಡ. . .ಬೇಡ.

ಮಾರನೆಯ ದಿನವೆ ಮಹಾರಾಣಿಗೆ ಅನುಮತಿ ದೊರೆಯಿತು ಶಿವಗಂಗೆ ನಾಡಿಗೆ, ತನ್ನ ತೌರಿಗೆ ಹೋಗಿ ಬರಲು. ಮೇನೆ ಸಿದ್ಧವಾಯಿತು. ಅವಳ ಕುಂಕುಮ ಸೌಭಾಗ್ಯದ ಸಮಸ್ತವೂ ರಥಗಳಲ್ಲಿ ಸಾಗಿತು. ತವರೂರಿನಲ್ಲಿ ಎಂದಿನ ಸ್ವಾಗತವೇ ಲಭಿಸಿತು. ಆದರೆ ತಾಯಿಯಿದ್ದ ದಿನದ ತುಂಬು ಕಳೆ ಇಂದು ಕಾಣದಾಯಿತು. ತಬ್ಬಲಿಯಾದ ಮಗುವಿನಂತೆ ತಳಮಳಗೊಂಡಳು ಶಾಂತಲೆ. ಅದು ಕೇವಲ ಎರಡು ದಿನಗಳು ಅಷ್ಟೇ. ಅನಂತರ ಅವಳ ಮನಸ್ಸು ಸ್ಥಿರವಾಗುತ್ತಾ ಬಂತು. ಐದು ದಿನಗಳತನಕ ಹೊನ್ನಾದೇವಿ ಗುಡಿಯಲ್ಲಿ ನಿರಂತರವಾದ ಅರ್ಚನೆ, ಆರಾಧನೆ. . .ಅನಂತರ ಅಲ್ಲೇ ಬಿಡಾರವೂ ಆಯಿತು. ರಾಜಕಾರಣದ ನಿಮಿತ್ತ ಮಾರಸಿಂಗಮಯ್ಯನವರು ರಾಜ್ಯದ ಗಡಿಪ್ರದೇಶಗಳಲ್ಲಿಯೇ ಸಂಚರಿಸುತ್ತಿದ್ದುದರಿಂದ ಶಿವಗಂಗೆಗೆ ಬರಲಾಗಲಿಲ್ಲ. ಶಾಂತಲೆ ಕಡೆಗೆ

ಗಮನಹರಿಸಲಾಗಲಿಲ್ಲ. . .ಹೇಳುವವರೂ ಕೇಳುವವರೂ ಯಾರೂ ಇಲ್ಲವಾದರು ಅರಮನೆಯಲ್ಲಿ. ಇದ್ದವರಿಗೂ ಅವಳ ಮನೋನಿರ್ಧಾರದ ಅರಿವಾಗಲಿಲ್ಲ. ವಿಧವೆ ಸೋಮಲೆ ಅವಳ ಸೇವೆಗೆ ನಿಂತಳು. ದೇವಿಯ ಗುಡಿಯ ಮುಂಭಾಗದ ಬಂಡೆಯ ಮೇಲೆ ಅನ್ನಾಹಾರಾದಿಗಳನ್ನು ತೊರೆದು, ಹಗಲಿರುಳೆನ್ನದೆ, ಮಳೆಬಿಸಿಲುಗಳೆನ್ನದೆ ಘೋರ ವ್ರತವನ್ನಾಚರಿಸುತ್ತಾ ಕಲ್ಲಿನಲ್ಲಿ ಕಡೆದ ಪ್ರತಿಮೆಯಂತೆ ಕುಳಿತೇಬಿಟ್ಟಳು ಶಾಂತಲೆ.

ಇಪ್ಪತ್ತೊಂದನೆಯ ದಿನ ಉತ್ತರದ ಗಡಿಯನ್ನು ಭದ್ರಪಡಿಸಿ, ಮಹಾಪ್ರಭುಗಳೂ ಡಣ್ಣಾಯಕ ಮಾರಸಿಂಗಮಯ್ಯನವರೂ ಶಿವಗಂಗೆ ಬಂದರು. ಬಂದ ಕೂಡಲೆ ಅಮ್ಮಾಜಿ ಅರಮನೆಯಲ್ಲಿಲ್ಲದೆ, ಹೊನ್ನಮ್ಮನ ಗುಡಿಯ ಮುಂದಿನ ಬಂಡೆಯೇರಿ ತಪೋ ಮಗ್ನಳಾಗಿ ಕುಳಿತಿರುವ ಸುದ್ದಿ ತಿಳಿದು ತುಂಬಾ ಭಯಭೀತರಾಗಿ ಓಡಿದರು. ನೋಡಿದರೆ ಶಾಂತಲೆ ತನ್ನ ಕಡೆಯ ಘಳಿಗೆಗಳನ್ನು ಎಣಿಸುತ್ತಿದ್ದಳು. ಅವಳ ಸ್ವರ ಕ್ಷೀಣಿಸುತ್ತಿತ್ತು. ನಾಡಿಗಳು ಮಡಿಯುತ್ತಿದ್ದವು. ಓಡಿ ಬಂದವರೆ ಇಬ್ಬರೂ 'ಶಾಂತೀ. . .ಶಾಂತಲೇ' ಎಂದು ಕೂಗಿ ತಬ್ಬಿಕೊಂಡರು. ಗಳಗಳನೆ ಕಣ್ಣೀರು ಕರೆದರು ಶಾಂತಲೆ ತುಂಬಾ ಪ್ರಯಾಸದಿಂದಲೇ ಕಣ್ಣು ತೆರೆದಳು.

'ಅಪ್ಪಾಜಿ. . .ಬಂದಿರಾ. . .ಓಹ್, ನನ್ನ ಸ್ವಾಮಿ ತಾವೂ ದಯಮಾಡಿಸಿದಿರಾ ! ನಾನೇ ಧನ್ಯೆ. . .ನಾನೇ ಧನ್ಯೆ. . ಅಪ್ಪಾಜಿ, ಪ್ರಭು ಕ್ಷಮಿಸಿ. ನಿಮಗೆ ತಿಳಿಸದೆ ನಾನು ಸಲ್ಲೇಖನವನ್ನು ಸ್ವೀಕರಿಸಿಬಿಟ್ಟೆ. ವ್ರತಕ್ಕೆ ಭಂಗ ಬಾರದಿರಲಿ.'

'ವ್ರತಕ್ಕೆ ಭಂಗ ತರುವ ಪಾಪಕಾರ್ಯವನ್ನು ನಾನು ಮಾಡುವುದಿಲ್ಲ ಶಾಂತಿ. . .ಆದರೂ ನನ್ನನ್ನು ಬಿಟ್ಟು ಹೋಗಲು ನಿನಗೆ ಮನಸ್ಸಾದರೂ ಹೇಗೆ ಬಂತು ! ನಾನು ನಿನಗೆ ಮಾಡಿದ ಅನ್ಯಾಯವಾದರೂ ಏನು ?. . .ಹೇಳು ಶಾಂತಿ. . .ನನಗೂ ನಿನ್ನನ್ನೇ ಹಿಂಬಾಲಿಸಲು ಅನುಮತಿ ಕೊಟ್ಟುಬಿಡು.'

'ಬೇಡಿ ನನ್ನ ಸ್ವಾಮಿ. . .ಬೇಡಿ ನನ್ನ ದೊರೆ. . .ನಾನು ಹೋದರೇನು ನಷ್ಟವಿಲ್ಲ. . .ಆದರೆ ನಾಡಾಳುವ ದಣಿ ಅಳಿದರೆ ಸಾಮ್ರಾಜ್ಯ ಅನಾಥವಾಗುತ್ತದೆ. . .ಬೇಡಿ. . .ಯಾವುದೇ ಕೆಟ್ಟ ಸಾಹಸಕ್ಕೆ ಕೈ ಹಾಕಬೇಡಿ. . .ನನ್ನನ್ನು ಮರೆತುಬಿಡಿ. ..'

'ಅಯ್ಯಯ್ಯೋ ಮರೆತುಬಿಡುವುದು ಅಷ್ಟು ಸುಲಭವೇ ಶಾಂತಿ. . .ಏಳೇಳು ಜನ್ಮಗಳು ತಪಸ್ಸನ್ನಾಚರಿಸಿದರೂ ನಿನ್ನಂತಹ ಅಮೂಲ್ಯ ಸ್ತ್ರೀರತ್ನ ದೊರಕಲಾರದು ಚಿಣ್ಣೀ. . .ನೀನು ನನಗೆ ಪತ್ನಿಯಾಗಲ್ಲ. . .ತಾಯಿಯಾಗಿದ್ದೆ. . .ಇಂದು ನಾನು ಅನಾಥ. . .ತಬ್ಬಲಿ. . .'

'ಬಿಡ್ತು ಅನ್ನಿ ದಣಿ. . .ತಮ್ಮನ್ನು ಪತಿಯಾಗಿ ಪಡೆದ ನನ್ನಂತಹ ಭಾಗ್ಯಶಾಲಿ ಯಾರೂ ಇಲ್ಲ. . .ನನಗೆ ಬದುಕಿನಲ್ಲಿ ಸಾಕಷ್ಟು ತೃಪ್ತಿ ಲಭಿಸಿದೆ ಪ್ರಭು. . .ಸುಮಾರು ಇಪ್ಪತ್ತೈದು ವರ್ಷಗಳ ದಾಂಪತ್ಯ ಜೀವನವನ್ನು ಸುಖವಾಗಿ ಸುಂದರವಾಗಿ ಸಾಗಿಸಿದ್ದೇನೆ. ನನ್ನ ಕೈಗೆ ಸ್ವರ್ಗವನ್ನು ತಂದಿರಿಸಿದ್ದೀರಿ. ಹೂವಿನ ಸಹವಾಸದಿಂದ ನಾರೂ ಸ್ವರ್ಗಕ್ಕೆ ಸೇರಿದಂತೆ. ತಮ್ಮ ಪುಣ್ಯ ಬಾಂಧವ್ಯದಿಂದ ನಾನು ಧನ್ಯಳಾದೆ ಮಾನ್ಯಳಾದೆ. ನನಗೊಂದು ಬದುಕು ಕೊಟ್ಟು ಬೆಳೆಸಿದಿರಿ. ನನ್ನ ಆಂತರ್ಯದಲ್ಲಿ ತುಂಬಿದ್ದ ಭಾವನೆಗಳಿಗೆ ಒಂದು ಶಾಶ್ವತ ರೂಪುಕೊಟ್ಟಿರಿ. ನಮ್ಮ ಜೀವನ ಒಂದು ಭವ್ಯ ಭಾವಗೀತೆಯೇ ಆಯಿತು. ಅದಕ್ಕೆ ಇನ್ನು ಪೂರ್ಣ ವಿರಾಮ ಕೊಡಬೇಕು. ಅತಿಯಾದದ್ದು ಅಮೃತವಾದರೂ ವಿಷವೆನಿಸುತ್ತದೆ. . .ಅಲ್ಲವೆ ಪ್ರಭು. . .? ಈಗ ಶುಕ್ಲಧ್ಯಾನದಲ್ಲಿ ಅಸು ನೀಗಲು ಅನುಮತಿ ಕೊಡಿ. ಅಪ್ಪಾಜಿ. . .ಪಂಚಪರಮೇಷ್ಠಿಗಳ ಧ್ಯಾನಮಂತ್ರವನ್ನು ಉಪದೇಶಿಸಿ.'

'ಆಗಲಿ ಅಮ್ಮಾಜಿ. . .ನಿನ್ನಿಚ್ಛೆ' ಎಂದರು ಮಾರಸಿಂಗಮಯ್ಯ.

ಹೊಯ್ಸಳೇಶ್ವರ ವಿಷ್ಣುವರ್ಧನ ಮಹಾಪ್ರಭುಗಳು ಶಾಂತಲೆಯ ಶಿರಸ್ಸನ್ನು ತಮ್ಮ ತೊಡೆಯ ಮೇಲಿರಿಸಿಕೊಂಡು ತಮ್ಮ ಬೊಗಸೆಯಲ್ಲಿ ಅವಳ ಮುಖವನ್ನು ತುಂಬಿಕೊಂಡಿದ್ದರು. ಅದು ಶಕ ವರ್ಷ ೧೦೫೩ನೆಯ ವಿರೋಧಿಕೃತ ಸಂವತ್ಸರದ ಚೈತ್ರ ಶುದ್ಧ ಪಂಚಮೀ ಸೋಮವಾರ, ಮಾರಸಿಂಗಮಯ್ಯ ಆ ಪವಿತ್ರತಾ ದಿನದಂದು ಪ್ರಾರಂಭಿಸಿದರು ಮಂತ್ರ ಪಠಣವನ್ನು,

**ಣಮೋ ಅರಿಹಂತಾಣಂ**

**ಣಮೋ ಸಿದ್ಧಾಣಾಂ,**

**ಣಮೋ ಆಯಿರಿಯಾಣಂ**

**ಣಮೋ ಉದಜ್ಝಾಯಾಣಂ**

**ಣಮೋ ಲೋವ ಸವ್ವ ಸಾವೂಣಂ**

ಮಂತ್ರ ಮುಗಿಯುವಷ್ಟರಲ್ಲಿ ಶಾಂತಲೆಯ ಆತ್ಮಜ್ಯೋತಿಯು ಆರಿ ಹೋಗಿತ್ತು.––

*

# ಕ್ರಾಂತಿಕನ್ಯೆ ಅಕ್ಕಮಹಾದೇವಿ

==============================================================

೧

ಅಕ್ಕ ಹೆಣ್ಣು ಕುಲದ ಹೆಮ್ಮೆ. ವ್ಯಕ್ತಿತ್ವದಲ್ಲಿ ಅವಳದು ಅತಿ ಎತ್ತರದ ನಿಲವು. ಗಿರಿಧರ ಗೋಪಾಲನನ್ನು ಮೆಚ್ಚಿ ಮಡದಿಯಾದ, ಮೇವಾಡದ ಮೀರಾ ಇವಳ ತಂಗಿ ; 'ಚೂಡಿ ಕಂಡೆತ್ತ ನಾಚಿಯಾರ್' (ಹೂವನ್ನು – ಮುಡಿದುಕೊಟ್ಟ ನಾಯಕಿ) ಎಂದು ಪ್ರಸಿದ್ಧಳಾದ ತಮಿಳುನಾಡಿನ ಶ್ರೀರಂಗನ ಸದ್ ಭಕ್ತೆ ಆಂಡಾಳ್ (ಗೋದಾದೇವಿ) ಇವಳ ಇನ್ನೊಬ್ಬ ಮಲಸಹೋದರಿ. ಅನುಭವಿಕ ಸಾಹಿತ್ಯದ ಶ್ರೀಮಂತಿಕೆ, ಅನುಭಾವದ ಆಧ್ಯಾತ್ಮಿಕ ಔನ್ನತ್ಯ ಮತ್ತು ನಿಸರ್ಗ ಜನ್ಯ ವೀರವೈರಾಗ್ಯ ಇವು ಮೂರಲ್ಲೂ ಮುಪ್ಪರಿಗೊಂಡು ವಿಶ್ವೇತಿಹಾಸದ ಮಹಿಳಾಸಂಪುಟದಲ್ಲಿ ಸುವರ್ಣಾಧ್ಯಾಯವನ್ನು ತೆರೆದಿವೆ. ಪರ್ಷಿಯಾ ದೇಶದ ರಬಿಯಾ ಆಗಲಿ, ಆರ್ಕಿನ ಜೋನಾಳಾಗಲಿ ಇವರಿಗೆ ಸರಿಗಟ್ಟಲಾರರು. ಭಕ್ತಿ ಪಂಥದಲ್ಲಿ ಇವರದು ವೀರವ್ಯಕ್ತಿತ್ವ ; ದಿಟ್ಟ ಸಾಹಸ. ಆದರೆ ಆಂಡಾಳಿಗೆ ವೀರಶೈವ ಚಳವಳಿಯಂತೆ ವೈಷ್ಣವ ಚಳವಳಿ ಇದ್ದರೂ ಅನುಭವ ಮಂಟಪದ ಹಿನ್ನಲೆ ಇಲ್ಲ. ಮೀರಾಳಿಗೆ ಅಕ್ಕನಿಗಿದ್ದಂತೆ ಅರಮನೆಯ ಪ್ರತಿರೋಧವಿದ್ದರೂ ಭಕ್ತಿ ಚಳವಳಿಯ ಸಾಮೂಹಿಕ ಬೆಂಬಲ ಇಲ್ಲ. ಇವೆರಡೂ ಇದ್ದು ಎದ್ದು ಕಾಣುವ ವ್ಯಕ್ತಿತ್ವವುಳ್ಳವಳೆಂದರೆ ಅಕ್ಕ ಒಬ್ಬಳೇ. ಎಣೆಯಿಲ್ಲದ ಲೌಕಿಕ ಸುಖ, ಸಂಪತ್ತು, ಭೋಗ, ಭಾಗ್ಯಗಳು ಕಾಲಕೆಳಗೆ ಎದೆತೆರೆದು ಬಿದ್ದಿದ್ದರೂ ಅವುಗಳನ್ನು ಕಣ್ಣೆತ್ತಿಯೂ ನೋಡದಿದ್ದರಿಂದಾಗಲಿ, ಅಥವಾ ಶ್ರೀಗಿರಿಯ ಮಲ್ಲಿಕಾರ್ಜುನನ್ನು ಮನಸಾ ಮೆಚ್ಚಿ ಅವನನ್ನರಸಿ ಹೋದದ್ದರಿಂದಾಗಲಿ ಅಥವಾ ಕಮನೀಯ ಕಾವ್ಯ ರಚನೆ ಮಾಡಿದ್ದರಿಂದಾಗಲಿ ಮಹಾದೇವಿ ಹಿರಿಯಕ್ಕನಾಗಲಿಲ್ಲ. ಆ ಕೆಲಸಗಳನ್ನು ಅನ್ಯರೂ ಮಾಡಿದ್ದಾರೆ. ಆದರೆ ಅಕ್ಕ ಅವರಾರೂ ಮಾಡಲಾಗದ ಕ್ರಾಂತಿ ಮಾಡಿ 'ಕ್ರಾಂತಿಕನ್ಯೆ' ಎನಿಸಿಕೊಂಡಿದ್ದಾಳೆ. ಸ್ತ್ರೀ ಶೋಷಣೆಯ ಇರುದ್ಧ ಸಿಡಿದೆದ್ದು ತಿಳಿಗೇಡಿ ಸಮಾಜಕ್ಕೊಂದು ಸವಾಲಾಗಿದ್ದಾಳೆ. ಪುರುಷ ಪ್ರಧಾನ ಸಮಾಜದ ದ್ರೋಹ ದಬ್ಬಾಳಿಕೆಗಳನ್ನು ಖಂಡಿಸಿ, ಸರ್ವ ಸಮಾನತೆಯ ನವ ಸಮಾಜ ನಿರ್ಮಾಣಕ್ಕೆ ನಾಂದಿ ಹಾಡಿದ್ದಾಳೆ. ಅಂತೆಯೇ ಹೆಣ್ಣಿಗೊಂದು ಸ್ಥಾನ ಮಾನ ಘನತೆ ಗೌರವಗಳನ್ನು ದೊರಕಿಸಿ ಕೊಡುವ ಸಲುವಾಗಿ ಹೊಸಿಲು ದಾಟಿ ಹೊರಬಂದ ಮೊದಲ ಹೆಣ್ಣು ಅವಳಾಗಿ ದ್ದಾಳೆ. ಇಬ್ಸನನ 'ಡಾಲ್ಸ್‌ಹೌಸ್ 'ನ ನಾಟಕದಲ್ಲಷ್ಟೇ ಕಾಣುತ್ತೇವೆ ನಾಟಕದ ನಾಯಕಿ ನೋರಾ ಹೆಲ್ಮರ್ ಗಂಡನ ಹಿಂಸೆಯನ್ನು ತಾಳಲಾರದೆ ಮನೆ ಬಾಗಿಲನ್ನು ಭಡ್ ಎಂದು ಬೀಸಿ ಬಡಿದು ಹೊರಬಂದುದನ್ನು. ಅದು ಕಲಾರಂಗದ ಪಾತ್ರಾಚರಣೆ, ಅಕ್ಕನದು ವಾಸ್ತವಿಕ ಜಗತ್ತಿನಲ್ಲಿ ನಡೆದ ನೈಜ ಘಟನೆ. ಮೀರಾ ಇದನ್ನು ಮಾಡಿ ತೋರಿದಳಾದರೂ ಮಹಾದೇವಿಯಂತೆ 'ಗಂಡ ಮನೆಗೆ ಒಡೆಯನಲ್ಲ' ಎಂಬ ಘಟ್ಟಿ ಘೋಷಣೆಗೆ ಕೊರಳೆತ್ತಿದವಳಲ್ಲ. ಅಕ್ಕ ಘೋಷಣೆಯಲ್ಲಷ್ಟೇ ಅಲ್ಲ ಆಚರಣೆಯಲ್ಲೂ ಅದ್ವಿತೀಯಳು. ಅವಳು ಆಡಿ ಸೋತಿಲ್ಲ, ಮಾಡಿ ಗೆದ್ದಿದ್ದಾಳೆ. "ಆಳುತನದ ಮಾತನೇರಿಸಿ ನುಡಿದಂತೆ ಅಗಳೆ ಕಟ್ಟಿದೆನು ಗಂಡುಡುಗೆಯನು ತಿಗು ರನೇರಿಸಿ ತಿಲಕವಿಟ್ಟು ಕೈದುವಕೊಂಡು ಕಳನೇರಿದ ಬಳಿಕ ಕಟ್ಟಿದ ನಿರಿ ಸಡಲಿದರೆ ಇನ್ನು ನಿಮ್ಮಾಣೆ ಕಾಣಾ ಚೆನ್ನಮಲ್ಲಿಕಾರ್ಜುನ! ಇಂತಹ ವೀರ ಪ್ರತಿಜ್ಞೆ ಅವಳದು. ಅದರ ಯಶಸ್ಸಿಗಾಗಿ ಹೋರಾಡಿದಳು. ತನ್ನ ಸ್ತುತ್ಯ ಪ್ರಯತ್ನದಲ್ಲಿ ಅವಳೆಂದಿಗೂ ಸೋತವಳಲ್ಲ. ಅವಳೇಂದೆಂದಿಗೂ ಆದರ್ಶದ ಅನಂತಾಕಾಶದಲ್ಲಿ ಅವಿಸ್ಮರಣೀಯ ಧ್ರುವತಾರೆಯಾಗಿ ಬೆಳಗಿದವಳು. ಅವಳೊಂದು ಮಹಿಳಾರತ್ನ, ಮಾನವೀಯ ಮೌಲ್ಯಗಳನ್ನು ಗರ್ಭೀಕರಿಸಿಕೊಂಡು, ಅವುಗಳ ಪ್ರಕಾಶಕ್ಕಾಗಿ ದುಡಿದ ಮಹಾಮಾನವಳು, ವಿಶ್ವಮಾನವಳೂ ಕೂಡ.

೨

ಅಕ್ಕನ ತಂದೆ ತಾಯಿಯರು ಯಾರು ? ಅವಳೆಲ್ಲಿಯವಳು ? ಹೇಗಾದಳು ? ಏನಾದಳು ? ಯಾವುದಕ್ಕೂ ಯಾರಿಂದಲೂ ಉತ್ತರ ಇಲ್ಲ. ಚರಿತ್ರೆಯದು ಈ ದಿಸೆಯಲ್ಲಿ ತುಂಬು ಮೌನ. ಆದರೆ ಹರಿಹರಾದಿಗಳು ಹೇಳುವಂತೆ 'ನಿರ್ಮಲ ಶೆಟ್ಟಿ ಮತ್ತು ಸುಮತಿ' ಎಂಬುವರು ಐತಿಹಾಸಿಕ ವ್ಯಕ್ತಿಗಳೇ ಅಥವಾ ಕವಿಕಲ್ಪಿತಗಳೇ ತಿಳಿಯದು. ಈಗಿನ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನ 'ಉಡುಗಣಿ' ಅಂದಿನ ಉಡುತಡಿ. ಅದು ರಾಜಧಾನಿಯಾಗಿತ್ತು ಎಂಬುದೂ ಊಹೆಯ ಮಾತು.

ಕೌಶಿಕ ಎಂಬ ರಾಜನಿದ್ದ ಎಂಬುದೂ ಕವಿಯ ಸ್ವಕಪೋಲ ಕಲ್ಪಿತ. ಕರ್ನಾಟಕದ ಇತಿಹಾಸದಲ್ಲಿ ಪಂಜು ಹಿಡಿದು ಹುಡುಕಿ ದರೂ ಎಲ್ಲೂ ಕೌಶಿಕರಾಜ, ಉಡುತಡಿ ರಾಜಧಾನಿ ಸಿಕ್ಕುವುದಿಲ್ಲ. ಕನಿಷ್ಟ ಪಕ್ಷ ಆ ಸಂಬಂಧದ ಒಂದು ಶಾಸನವಾದರೂ ದೊರೆತಿ ದ್ದರೆ ಕಲ್ಪನೆಗೆ ಕೈಯಿ, ಕಾಲುಗಳು ದೊರೆಯುತ್ತಿದ್ದವು. ಆದರೂ ಅದರಲ್ಲಿ ಸ್ವಲ್ಪ ಸತ್ಯಾಂಶ ಇದೆ. ಬಹುಶಃ ಕೌಶಿಕನು ಒಂದು ರಾಜ್ಯದ ರಾಜನಲ್ಲದಿದ್ದರೂ ಮಾಂಡಲಿಕನೊ, ಮನ್ನೆಯನೊ ಆಗಿದ್ದಿರಬಹುದು. ರಾಜ್ಯಭೋಗ ಸಿರಿ ಸಂಪತ್ತುಗಳೂ ಇದ್ದಿರ ಬಹುದು. ಅವನು ಅಕ್ಕನನ್ನು ಬಲಾತ್ಕಾರದಿಂದ ಲಗ್ನವಾಗಿರುವ ಸಾಧ್ಯತೆಗಳಿವೆ, ಸುಳಿವುಗಳೂ ಇವೆ. ಅವಳು ಮದುವೆಯಾಗಿರಲಿಲ್ಲ ಎಂಬ ಒಂದು ವಾದ ಇದೆ. ಆ ವಾದಕ್ಕೆ ಸಮರ್ಥನೆ ಸಾಲದು. ವೀರಶೈವಕ್ಕೆ ಮದುವೆ ಮೈಲಿಗೆ ಅಲ್ಲ. 'ಸತಿಪತಿಗಳೊಂ ದಾದ ಭಕ್ತಿ ಹಿತವಪ್ಪುದು ಶಿವಗಂಗೆ' ಎಂಬುದು ಆ ಧರ್ಮದ ಶಿಷ್ಟ ಸಂಹಿತೆ. ವಿಧವಾ ವಿವಾಹವನ್ನೂ ಸ್ವಾಗತಿಸುವಂಥ ಹೃದಯ ವೈಶಾಲ್ಯವುಳ್ಳ ವೀರಶೈವಕ್ಕೆ ಕನ್ಯೆಯೋರ್ವಳ ವಿವಾಹ ಮೈಲಿಗೆ ಅನ್ನಿಸುವ ಮಡಿತನ ಸಲ್ಲ. ಇವೆಲ್ಲ ಇತ್ತೀಚಿನ ಕೃತಕ ವ್ಯವಸ್ಥೆಗಳು ಅನ್ನಿಸುತ್ತದೆ. ಇವು ಏನೇ ಇರಲಿ. ಅಕ್ಕನಿಗೆ ಬಲಾತ್ಕಾರದ ಮದುವೆ ಆಗಿದ್ದುದು ನಿಜ. ಅದಕ್ಕೆ ಸಾಕ್ಷಿಯಾಗಿ

**ಸಾವಿರ ಹೊನ್ನಿಂಗೆ ಸಾದಕೊಂಡು ಸುಣ್ಣವ ಬೆರಸಿದಂತೆ ಮಾಡಿದೆಯಯ್ಯಾ**
**ನೂರು ಲಕ್ಷದ ಬೆಲೆಗೆ ರತ್ನವಕೊಂಡು ಮಡುವಿನಲ್ಲಿ ಇಟ್ಟಂತೆ**
**ಮಾಡಿದೆಯಯ್ಯಾ ಚೆನ್ನಮಲ್ಲಿಕಾರ್ಜುನಯ್ಯಾ ಎನ್ನಮುಟ್ಟಿ**
**ಪಾವನವ ಮಾಡಿ ಕಷ್ಟ ಸಂಸಾರಿಗೊಪ್ಪಿಸುವಂತೆ ಮಾಡಿದೆಯಯ್ಯಾ**

ಈ ವಚನ ಇದೆ. ಇದರಲ್ಲಿ ಮದುವೆ ಆಗಿತ್ತೆಂಬ ಧ್ವನಿ ಇದೆ. ಆದರದು ಒತ್ತಾಯದ ಮದುವೆ. ಪರಿಸ್ಥಿತಿಯ ಒತ್ತಡಕ್ಕೆ ಸಿಕ್ಕಿ ಆದ ಮದುವೆ. ಆದ್ದರಿಂದಲೇ ಆಕೆ 'ಕಿಚ್ಚಿಲ್ಲದ ಬೇಗೆಯಲ್ಲಿ ಬೆಂದಳು.' ಆ ಬೇಗೆಯ ಬಣ್ಣನೆಯನ್ನು ಅವಳ ಬಾಯಿಯಿಂದಲೇ ಕೇಳಿ ತಿಳಿಯಬೇಕು. ಅವಳ ಕಿರಿಯ ಸಮಕಾಲೀನನಾದ ಹರಿಹರನಾಗಲಿ ಅನಂತರ ಬಂದ ವೀರಶೈವ ಕವಿಗಳಾಗಲಿ ಇತಿಹಾಸ ಬಲ್ಲವರಲ್ಲ. ಆ ಕಾರಣ ಅಕ್ಕನೇ ಅಭಿವ್ಯಕ್ತಿಸಬೇಕು. ತನ್ನನುಭವದ ಸಿಹಿ–ಕಹಿಗಳನ್ನು 'ತೆರಣಿಹುಳು ತನ್ನ ಸ್ನೇಹದಲ್ಲಿ ಮನೆಯ ಮಾಡಿ ತನ್ನ ನೂಲು ಸುತ್ತಿ ಸಾವ ತೆರನಂತಾಯ್ತು' ಅವಳ ಬಾಳುವೆ.

**ಗಂಡ ನೀನು ಹೆಂಡತಿಯಾನು ಮತ್ತೊಬ್ಬರಿಲ್ಲವಯ್ಯಾ**
**ನಿನ್ನ ಬೆಂಬಳಿಯಲಾನು ಮೆಚ್ಚಿ ಬಂದೆ**
**ಕಂಡ ಕಂಡವರೆಲ್ಲ ಬಲುಹಿಂದ ಕೈಹಿಡಿದರೆ**
**ಗಂಡಾ, ನಿನಗೆ ಸೈರಣೆಯೆಂತಾಯಿತ್ತು ಹೇಳಾ** ?
**ಚೆನ್ನಮಲ್ಲಿಕಾರ್ಜುನಯ್ಯಾ ನಿನ್ನ ತೋಳಮೇಲಣವಳ**
**ಅನ್ಯರೆಳೆದೊಯ್ಯುವರೆ ನೋಡುತಿಹುದುಚಿತವೆ ಕರುಣೆಗಳರಸಾ**

ಈ ಆರ್ತತೆಯಲ್ಲಿ ಅವಳ ಅಸಹಾಯಕತೆ ಇದೆ. 'ವಿಟಕ್ಕೊಬ್ಬ ಗಂಡ, ಸಟೆಗೊಬ್ಬ ಗಂಡ'ನೆ ಎಂದು ಪ್ರತಿಭಟಿಸಿದರೂ ಪ್ರಯೋಜನವಾಗಲಿಲ್ಲ. ಮದುವೆ ನಡೆದೇ ಹೋಯಿತು. ಅದೂ ಓರ್ವ ಜೈನನೊಡನೆ ಶಿವಭಕ್ತೆಯ ಲಗ್ನ ಇನ್ನುತ್ತವೆ ಕಾವ್ಯಗಳು. ಬಹುಶಃ ಇದು ಹದಿಮೂರನೆಯ ಶತಮಾನದ ಮತೀಯ ಸಂಘರ್ಷ ಹಾಗೂ ಜೈನ, ವೀರಶೈವ ಮತ್ತು ವೈದಿಕ – ಈ ಪ್ರಬಲ ಧರ್ಮಗಳ ತೀವ್ರ ಸ್ಪರ್ಧೆಗಳ ಹಿನ್ನೆಲೆಯಲ್ಲಿ ಸೃಷ್ಟಿಯಾದ ಕಾಲ್ಪನಿಕ ಅಂಶ ಇದ್ದಿರಬೇಕು. ಏನೇ ಇರಲಿ, ವಿವೇಕಪರಳೂ ತುಂಬು ವಿಚಾರವಾದಿನಿಯೂ ಆದ ಅಕ್ಕನ ಬದುಕು ಆಧ್ಯಾತ್ಮಕ್ಕಾಗಿ, ಕಾವ್ಯಾಭಿವ್ಯಕ್ತಿಗಾಗಿ ಬದುಕಿದೆ. ವೀರ ವಿರಾಗಿಣಿಯಾಗಿ ಅವಳು ಬಾಳಿದ್ದಾಳೆ ಹೆಣ್ಣಿನಲ್ಲಿ ಸ್ವಾಭಿಮಾನ, ಸ್ವಾವಲಂಬನೆ, ಸಂಯಮಗಳನ್ನು ಬಿತ್ತಲು. ಅಕ್ಕನ ಈ ಮೂರು ಬುದ್ಧಿವಾದಗಳನ್ನು ಅರಿತು ಆಚರಿಸುವವರೆಗೂ ಹೆಣ್ಣಿನ ಬದುಕು ಬಂಗಾರವಾಗುವುದಿಲ್ಲ ಎಂಬುದು ಸತ್ಯ.

ಅಕ್ಕ ಕರ್ನಾಟಕದಲ್ಲಿ ಬಹುಶಃ ಉಡುತಡಿಯಲ್ಲಿ ಹುಟ್ಟಿ, ಕಲ್ಯಾಣದಲ್ಲಿ ಬೆಳೆದು ಶ್ರೀಶೈಲದಲ್ಲಿ 'ಶಿವ' ಆದವಳು. ಬಾಲ್ಯದಲ್ಲಿ ಅವಳಿಗೆ ಉತ್ತಮ ಶಿಕ್ಷಣ ದೊರೆತಿರಬಹುದು. ತುಂಬು ಸುಂದರಿಯೂ ಆಗಿದ್ದಿರಬಹುದು. ಹರೆಯ ಇಣುಕಿದಾಗ ಗಂಡು ಕಣ್ಣುಗಳು ಮೈಪರಚಿಕೊಂಡಿರಬೇಕು. ಅಂಥವುಗಳಲ್ಲಿ ಕೌಶಿಕನವೂ ಸೇರಿದ್ದರೆ ಆಶ್ಚರ್ಯವಿಲ್ಲ. ಆದರೆ ಅಕ್ಕ ಕೌಶಿಕನಲ್ಲಿ ತನ್ನ ಅನುರಾಗ ವ್ಯಕ್ತಪಡಿಸಲಿಲ್ಲ. ಅಷ್ಟೇಕೆ ಯಾವ ಗಂಡಸಿನ ಬಗೆಗೂ ಅವಳಿಗೆ ಒಲವಿಲ್ಲ. ಅವಳು ಪರಶಿವನ ಒಲವನ್ನುಳಿದು ಬೇರಾವ ಲೋಕ ಸುಖವನ್ನೂ ಬಯಸಿದವಳಲ್ಲ. ಬದುಕಿನ ಎಲ್ಲ ಆಗುಹೋಗುಗಳನ್ನೂ ತನ್ನ ಆರಾಧ್ಯ ದೈವ

ಚೆನ್ನಮಲ್ಲಿಕಾರ್ಜುನನಿಗೆ ಅರ್ಪಿಸಿದಳು. 'ಚೆನ್ನಮಲ್ಲಿಕಾರ್ಜುನಾ ನೀನೊಲಿದೊಡೆ ಸುಖಿಯಾಗಿಪ್ಪೆ. ನೀನೊಲ್ಲದಿರೆ ದುಃಖಿಯಾಗಪ್ಪೆನಯ್ಯಾ' ಎಂದು ನಿವೇದಿಸಿಕೊಂಡಳು. ಇಂದ್ರಿಯ ನಿಗ್ರಹಕ್ಕೆ ಆಧ್ಯಾತ್ಮ ಚಿಂತನೆ, ದೇವೋಪಾಸನೆ ಉತ್ತಮ ಸಾಧನ ಇವು ಎಂಬುದನ್ನು ಮನಗಂಡಳು. ಅವಳ ವ್ಯಕ್ತಿತ್ವ ರೂಪಿತವಾಗಿರುವುದೇ ಆಧ್ಯಾತ್ಮವೆಂಬ ಲೋಹರಸದಲ್ಲಿ. ಅವಳಿಗೆ ಯಾವ ಬಗೆಯ ಲೌಕಿಕ ಫಲಾಪೇಕ್ಷೆಗಳೂ ಇರಲಿಲ್ಲ. ಎಲ್ಲದಕ್ಕೂ ಮನಸ್ಸು ಮುಖ್ಯ. ಮನವೆಂಬುದೊಂದು ಮರ್ಕಟ. ಕಾಮ–ಮೋಹಗಳೆಂಬ ರೆಂಬೆ ಕೊಂಬೆಗಳಿಗೆ ಸದಾ ಜಿಗಿಯುವುದೇ ಅದರ ಜಾಯಮಾನ. ಆದ್ದರಿಂದ ಮನಸ್ಸನ್ನು ಕಾಮದ ಕೈಗೆ ಕೊಡಬಾರದು, ಕೋಪದ ಕೈಗೆ ಕೊಡಬಾರದು, ಲೋಕ ನಿಂದೆ ವಂದನೆಗಳ ಕೈಗೆ ಕೊಡಬಾರದು, ನನ್ನವರು ತನ್ನವರು ಎಮಬ ಮಮಕಾರಗಳಿಗೆ ಮಣಿಯಬಾರದು. 'ಲೋಕದ ಚೇಷ್ಟೆಗೆ ರವಿ ಬೀಜವಾದಂತೆ ಕರಣಂಗಳ ಚೇಷ್ಟೆಗೆ ಮನವೇ ಬೀಜ' ಅಂದರೆ ಸೂರ್ಯ ಉದಯವಾದ ಮೇಲೆ ಜೀವ ಜಗತ್ತಿನ ಚಟುವಟಿಕೆಗಳ ಆರಂಭ. ಅಲ್ಲಿನವರೆಗೂ ಉಸಿರಾಡದಂತೆ ಮುಸುಕು ಹಾಕಿಕೊಂಡು ಮಲಗಿದ್ದ ಲೋಕ ಸೂರ್ಯನನ್ನು ಕಂಡೊಡನೆಯೆ ತನ್ನ ನಿತ್ಯ ವ್ಯಾಪಾರದಲ್ಲಿ ತೊಡಗುತ್ತದೆ. ಅದರಂತೆ ಪಂಚೇಂದ್ರಿಯಗಳ ಚೇಷ್ಟೆಗೆ ಮನವೇ ಮೂಲ. ಅದನ್ನು ಅವನಲ್ಲಿ ನಿಕ್ಷೇಪಗೊಳಿಸಿದ್ದಾಳೆ. ತಾನು 'ನೀರ ತಾವರೆಯಂತೆ' ನಿಂತಿದ್ದಾಳೆ.

ನಾವೀಗಾಗಲೇ ಗುರುತಿಸಿರುವಂತೆ ಅಕ್ಕ ಚೆನ್ನಮಲ್ಲಿಕಾರ್ಜುನರದು ಆಧ್ಯಾತ್ಮಿಕ ಸಂಬಂಧ; ಆತ್ಮಾನುಸಂಧಾನ ಸ್ವರೂಪಿ ವಿವಾಹ. ಆದರೆ ಆಧ್ಯಾತ್ಮ ವಿವಾಹ ಲೌಕಿಕ ವಿವಾಹದಂತೆ ಗಂಡು ಹೆಣ್ಣಿನ ಲೈಂಗಿಕ ಸಂಬಂಧವುಳ್ಳದ್ದಲ್ಲ. ಅದು ವ್ಯಷ್ಟಿ ಸಮೃಷ್ಟಿಯಲ್ಲಿ ಬೆರೆದು ಒಂದಾಗುವುದು (The real unification of individual soul into the universal) ಎಳಮೆಯಿಂದಲೂ ಅಕ್ಕನ ಅಂತರಾತ್ಮದ ಅಭೀಪ್ಸೆ ಅದಾಗಿದ್ದುದರಿಂದ–

**ಅರಿಸಿನವನೆ ಮಿಂದು, ಹೊಂದೊಡಿಗೆಯನೆ ತೊಟ್ಟು**
**ದೇವಾಂಗವನುಟ್ಟೆನೆಲೆ ಪುರುಷ ಬಾರಾ**
**ಪುರುಷ ರತ್ನವೆ ಬಾರಾ,**
**ನಿನ್ನ ಬರವೆನ್ನ ಅಸುವಿನ ಬರವಾದುದೀಗ**
**ಬಾರಯ್ಯಾ ಚೆನ್ನಮಲ್ಲಿಕಾರ್ಜುನಯ್ಯಾ**
**ನೀನು ಬಂದಹನೆಂದು ಬಟ್ಟೆಯ ನೋಡಿ ಬಾಯಾರುತಿರ್ದೆನು**

ಇವಳನ್ನು ಅರ್ಥಮಾಡಿಕೊಳ್ಳುವ ಚೈತನ್ಯ ಕೌಶಿಕನಿಗಿರಲಿಲ್ಲ. ಅವಳು ಗಗನದಲ್ಲಿ ಇವನು ನೆಲದಮೇಲೆ. ಅವನಿಗೆ ಮಾಂಸಲದ ಮೋಹ, ಅವಳಿಗೆ ಅತೀತದಲ್ಲಿ ಪ್ರಾಂಜಲವಾದ ಪ್ರೇಮ. ಕಾಮುಕನ ಹಿಂಸೆ ಅತಿಯಾಯಿತೆಂದು ತೋರುತ್ತದೆ. ಅದಕ್ಕೇ ನುಡಿದಳು :

**ಎಮ್ಮೆಗೊಂದು ಚಿಂತೆ. ಸಮ್ಮಗಾರಗೊಂದು ಚಿಂತೆ**
**ಧರ್ಮಿಗೊಂದು ಚಿಂತೆ. ಕರ್ಮಿಗೊಂದು ಚಿಂತೆ**
**ಎನಗೆ ಎನ್ನ ಚಿಂತೆ. ತನಗೆ ತನ್ನ ಕಾಮದ ಚಿಂತೆ**
**ಒಲ್ಲೆ ಹೋಗು ಸೆರಗ ಬಿಡು ಮರುಳೆ**
**ಎನಗೆ ಚೆನ್ನಮಲ್ಲಿಕಾರ್ಜುನ ದೇವರು**
**ಒಲಿವರೊ ಒಲಿಯರೊ ಎಂಬ ಚಿಂತೆ**

ಎಂದು.

ಆ ಚಿಂತೆಯಲ್ಲಿದ್ದವಳಿಗೆ ಲೋಕದ ಗಂಡನಗೊಡವೆ ಬೇಡವಾಯಿತು. ಅವನನ್ನು ನೆನೆಯಲೂ ಇಷ್ಟಪಡಲಿಲ್ಲ.

**ಎರದ ಮುಳ್ಳಿನಂತೆ ಪರಗಂಡರೆನಗವ್ವಾ**
**ಸೋಂಕಲಮ್ಮೆ, ಸುಳಿಯಲಮ್ಮೆ,**
**ನಂಬಿ ನಚ್ಚಿ ಮಾತಾಡಲಮ್ಮೆನವ್ವಾ**
**ಚೆನ್ನಮಲ್ಲಿಕಾರ್ಜುನನಲ್ಲದ ಗಂಡರಿಗೆ**
**ಊರದಲ್ಲಿ ಮುಳ್ಳುಂಟೆಂದು ನಾನಪ್ಪಲಮ್ಮೆನವ್ವಾ**

ಇದಕ್ಕಿಂತಲೂ ಕಟುವಾಗಿ ನುಡಿಯಲು ಅಕ್ಕನಿಗೆ ಬಾರದು. ನಿತ್ಯನಿರಂತರ ಹಿಂಸೆಗೆ ತೊಡಗಿದ ಗಂಡನಿಗೆ ಎಷ್ಟು ಹೇಳಿದರೂ ಪ್ರಯೋಜನವಾಗಲಿಲ್ಲ. ಕಾಮ ಪಿಪಾಸೆಯನ್ನು ಈಡೇರಿಸಿಕೊಳ್ಳಬಯಸುವ ಆತನು ತನ್ನನ್ನು ಬಿಟ್ಟು ಬೇರೊಬ್ಬಳನ್ನು ಲಗ್ನವಾಗಿ ಸುಖವಾಗಿರಲು ಸಲಹೆ ಮಾಡುತ್ತಾಳೆ. 'ಹೊನ್ನಿನ ಒಡವೆ ಮುರಿದರೆ ಅದಕ್ಕೆ ಬೆಸುಗೆ ಹಾಕಿಸಬಹುದು. ಆದರೆ ಮುತ್ತು ಒಡೆದರೆ ಬೆಸುಗೆ ಹಾಕಿಸಲು ಬರುತ್ತದೆಯೆ ? ಮನಸ್ಸು ಮುರಿದರೆ ಮನಕ್ಕೊಬ್ಬರು ಒಡೆಯರುಂಟೆ ? ಚೆನ್ನಮಲ್ಲಿಕಾರ್ಜುನ ಸಾಕ್ಷಿಯಾಗಿ ಬೇಟವುಳ್ಳಲ್ಲಿ ಬೆರೆಸಿ ಘನನೀನನುಭವಿಸುಹೋಗು' ಎಂದಳು. ಮತ್ತೆ 'ಮನಸ್ಸನ್ನು ಹರಿದತ್ತ ಹರಿಯ ಬಿಡಬೇಡ, ಶರಣ ಸಂಗದಿಂದ ಶ್ರೇಷ್ಠತೆಯನ್ನು ಪಡೆದುಕೊ.

**ಆಯುಷ್ಯ ಹೋಗುತ್ತಿದೆ ಭಾಷೆ ತೊಲಗುತ್ತಿದೆ**
**ಕೂಡಿರ್ದ ಸತಿ ಸುತರು ತಮ ತಮಗೆ ಹರಿದು ಹೋಗುತ್ತೈದಾರೆ**
**ಬೇಡ ಬೇಡ ದಿನ ಬಂಜೆಯಾಗಿ ಕೆಡಬೇಡ ಬಯಲಿಂಗೆ ಮನವೆ**
**ಚೆನ್ನಮಲ್ಲಿಕಾರ್ಜುನನ ಶರಣರ ಸಂಗದಲ್ಲಿ**
**ಹೊಣೆ ಹೊಕ್ಕು ಬದುಕು ಕಂಡಾ ಮನವೆ**

ಸಂಸಾರದ ಗೋದಲೆಯಲ್ಲಿ ದನವಾಗಲಿದ್ದ ಅಕ್ಕ ವಸಂತ ವನದಲ್ಲಿ ವಿಹರಿಸುವ ಪಕ್ಷಿಯಾದಳು. ಅವಳ ಗುರಿ ಕಲ್ಯಾಣವಾಗಿತ್ತು. ಅಣ್ಣನಿಂದಾಗಿ ಕಲ್ಯಾಣ ಜಗದ್ವಿಖ್ಯಾತವಾಗಿತ್ತು. ಅದು ಭಕ್ತಿಯ ಸೆಲೆ, ಮುಕ್ತಿಯ ನೆಲೆ ಅಲ್ಲಿಗೆ ಹೊರಡಲನುವಾದಳು. ಮೊದಲೇ ಚೆಲುವೆ, ಹರೆಯದವಳು ಬೇರೆ, ಕೇಳಬೇಕೆ ! ಕೆಟ್ಟ ಕಣ್ಣುಗಳು ಮಿಟಕಿಸದಿರುತ್ತವೆಯೆ ? ಒಡಕು ಬಾಯಿಗಳು ಬಡ ಬಡಿಸದಿರುತ್ತವೆಯೆ ? ಕೆಣಕಿದವು, ಕೇಳಿದವು, ನುಡಿದು ಗುಡುಗಾಡಿದವು ಅಂದುಕೊಂಡಳು ಅಕ್ಕ :

**ಕಲ್ಲ ಹೊಕ್ಕಡೆ ಕಲ್ಲ ಬರಿಸಿದೆ**
**ಗಿರಿಯ ಹೊಕ್ಕಡೆ ಗಿರಿಯ ಬರಿಸಿದೆ**
**ಭಾಪು ಸಂಸಾರವೆ ! ಬೆನ್ನಿಂದ ಬೆನ್ನು ಹತ್ತಿ ಬಂದೆ**
**ಚೆನ್ನಮಲ್ಲಿಕಾರ್ಜುನಯ್ಯಾ ಇನ್ನೇವೆನಿನ್ನೇವೆ.**

ಲೋಕ ಚಾಪಲ್ಯಗಳ ಕಂಡು ಅಚ್ಚರಿಗೊಂಡಳು. ಸಾಮಾನ್ಯವಾಗಿ ಒಳ್ಳೆಯವರಿಗೇ ಹಿಂಸೆಗಳು ಹೆಚ್ಚು. ಈ ಲೋಕದಲ್ಲಿ ಬೆದರುವ ವನ ಮೇಲೆ ಕಪ್ಪೆ ಎಸೆಯುವುದು ಈ ಜಗತ್ತಿನ ಜಾಯಮಾನ. ಅಂತಹ ಸಂದರ್ಭಗಳಲ್ಲಿ ವ್ಯಕ್ತಿ ವಿಚಲಿತನಾಗಬಾರದು, ಆತ್ಮಸಾಂತ್ವನಗೈದುಕೊಳ್ಳಬೇಕು ಎಂಬುದು ಅಕ್ಕನ ವಿವೇಕದ ಮಾತು, ಹೇಳುತ್ತಾಳೆ :

**ಹೆದರದಿರು ಮನವೆ, ಬೆದರದಿರು ತನುವೆ**
**ನಿಜವನರಿತು ನಿಶ್ಚಂತವಾಗಿರು**
**ಫಲವಾದ ಮರನ ಕಲ್ಲಲಿ ಇಡುವುದೊಂದು ಕೋಟಿ**
**ಎಲವದ ಮರನ ಇಡುವರೊಬ್ಬರ ಕಾಣೆ**
**ಭಕ್ತಿಯುಳ್ಳವರ ಬೈರರೊಂದು ಕೋಟಿ**
**ಭಕ್ತಿಯಿಲ್ಲದವರ ಬೈವರೊಬ್ಬರ ಕಾಣೆ**
**ನಿಮ್ಮ ಶರಣರ ನುಡಿಯೆ ಎನಗೆ ಗತಿ, ಸೋಪಾನ**
**ಚೆನ್ನಮಲ್ಲಿಕಾರ್ಜುನಾ**

ಎಂದು.

ಇಳೇ ಮುಳುಗಿದವಳಿಗೆ ಚಳಿಯೇನು ? ಮಳೆಯೇನು ? ಹಾಗಾಗಿದೆ ಅಕ್ಕನ ಸ್ಥಿತಿ. ಅದರಿಂದಲೆ –

**ಕಿಡಿ ಕಿಡಿ ಕೆದರಿದಡೆ ಎನಗೆ ಹಸಿವು ತೃಷೆಯಡಗಿತ್ತೆಂಬೆನು**
**ಮುಗಿಲು ಹರಿದು ಬಿದ್ದಡೆ ಎನಗೆ ಮಜ್ಜನಕ್ಕೆರೆದರೆಂಬೆನು**
**ಗಿರಿ ಮೇಲೆ ಬಿದ್ದೆಡೆ ಎನಗೆ ಪುಷ್ಪವೆಂಬೆನು**
**ಚೆನ್ನಮಲ್ಲಿಕಾರ್ಜುನಯ್ಯಾ**
**ಶಿರ ಹರಿದು ಬಿದ್ದೆಡೆ ಪ್ರಾಣ ನಿಮಗರ್ಪಿತವೆಂಬೆನು.**

ಎಂಬ ಆತ್ಮಸ್ಥೈರ್ಯ ಬೆಳಸಿಕೊಂಡಳು. ಪರೀಕ್ಷೆಗೊಳಗಾದಂತೆಲ್ಲಾ ಆತ್ಮಕ್ಕೆ ಬಲ ಬಂತು, ನಿಷ್ಠೆಗಟ್ಟಿಗೊಳ್ಳುತ್ತಾ ಬಂತು.

**ಅಯ್ಯಾ ನೀನು ಕೇಳಿದೆಡೆ ಕೇಳು ಕೇಳದಡೆ ಮಾಣು**
**ಅನು ನಿನ್ನ ಹಾಡಿದಲ್ಲದೆ ಸೈರಿಸಲಾರೆನಯ್ಯಾ**
**ಅಯ್ಯಾ ನೀನು ನೋಡಿದಡೆ ನೋಡು ನೋಡದಡೆ ಮಾಣು**
**ಅನು ನಿನ್ನ ನೋಡಿ ಹಿಗ್ಗಿ ಹಾರೈಸಿದಲ್ಲದೆ ಸೈರಿಸಲಾರೆನಯ್ಯಾ**
**ಅಯ್ಯಾ ನೀನು ಮಚ್ಚಿದೆಡೆ ಮಚ್ಚ, ಮಚ್ಚದಡೆ ಮಾಣು**
**ಅನು ನಿನ್ನನಪ್ಪಿದಲ್ಲದೆ ಸೈರಿಸಲಾರೆನಯ್ಯಾ**
**ಅಯ್ಯಾ ನೀನು ಒಲೆದೆಡೆ ಒಲಿ, ಒಲಿಯದಡೆ ಮಾಣು**
**ಅನು ನಿನ್ನ ಪೂಜಿಸಿದಲ್ಲದೆ ಸೈರಿಸಲಾರೆನಯ್ಯಾ**
**ಚೆನ್ನಮಲ್ಲಿಕಾರ್ಜುನಯ್ಯಾ**
**ಅನು ನಿಮ್ಮನರ್ಚಿಸಿ ಪೂಜಿಸಿ ಹರುಷದೊಳೋಲಾಡುವೆನಯ್ಯಾ**

ಎಂಬ ದೃಢನಿರ್ಧಾರಕ್ಕೆ ಬಂದಳು. ಇದು ಒಂದು ಬಗೆಯ ದಿವ್ಯನಿರ್ಲಕ್ಷ್ಯವೂ ಹೌದು.

**ಹಸಿವಾದೆಡೆ ಊರೊಳಗೆ ಭಿಕ್ಷಾನ್ನವುಂಟು**
**ತೃಷೆಯಾದಡೆ ಕೆರೆ ಹಳ್ಳ ಬಾವಿಗಳುಂಟು**
**ಅಂಗಶೀತಕ್ಕೆ ಬೀಸಾಟ ಅರಿವೆಗಳುಂಟು**
**ಶಯನಕ್ಕೆ ಹಾಳು ದೇಗುಲಗಳುಂಟು**
**ಚೆನ್ನಮಲ್ಲಿಕಾರ್ಜುನಯ್ಯಾ**
**ಆತ್ಮ ಸಂಗಾತಕ್ಕೆ ನೀನೆನಗುಂಟು**

ಎಂದು ನಂಬಿದಳು.

೩

ಕಾಡು ಮೇಡುಗಳನ್ನು ತುಳಿದು, ಊರು ಕೇರಿಗಳನ್ನು ದಾಟಿ, ಕಡೆಗೂ ತಾನು ಬಯಸಿದ್ದ ಕಲ್ಯಾಣಕ್ಕೆ ಬಂದಳು. ಅನುಭವಮಂಟಪಕ್ಕೆ ನಡೆದಳು. ಆದರೆ ಅಲ್ಲಿ ಸರಾಗ ಸ್ವಾಗತ ಸಿದ್ಧವಿರಲಿಲ್ಲ. ಪರೀಕ್ಷೆಗೊಳಗಾಗಲೇಬೇಕಾಯಿತು. ಶೂನ್ಯಪೀಠಾಧಿಪತಿ ಪ್ರಭು ಪ್ರಶ್ನಿಸಿ ನುಡಿದ,

**ಈ ಉದಮದ ಯೌವನವನೊಳಕೊಂಡು**
**ಸತಿ ನೀನು ಇತ್ತಲೇಕೆ ಬಂದೆಯವ್ವಾ**
**ಸತಿ ಎಂದರೆ ಮುನಿವರು ನಮ್ಮ ಶರಣರು**
**ನಿನ್ನ ಪತಿಯ ಕುರುಹ ಹೇಳುವೊಡೆ ಬಂದು ಕುಳ್ಳಿರು**
**ಅಲ್ಲದಿರೆ ತೊಲಗುತಾಯಿ**

ಎಂದು,

ಈ ನಿಷ್ಠುರ ನುಡಿಗಳ ಹಿನ್ನೆಲೆಯಲ್ಲಿ ಕಠೋರ ಸತ್ಯ ಅಡಗಿದೆ. ಲೋಕಾಪವಾದಕ್ಕೆ ಯಾರೂ ಗುರಿಯಾಗಬಾರದು. ಮಹಾದೇವಿ ಅವಿವಾಹಿತ ಕನ್ಯೆಯಾಗಿದ್ದರೆ ಇಲ್ಲವೇ ವಿಧವೆಯಾಗಿದ್ದರೆ ಇಲ್ಲವೇ ಗಂಡನುಳ್ಳ ಮುದುಕಿಯಾಗಿದ್ದರೆ ಅನುಭವಮಂಟಪಕ್ಕೆ ನಿರ್ಭೀತಳಾಗಿ ಪ್ರವೇಶಿಸಬಹುದಾಗಿತ್ತು. ಆದರೆ ಅವಳ ಮೈಮೇಲಿನ ಹದಿನೆಂಟು ಇಪ್ಪತ್ತರ ಹರೆಯ. ಅವಳು 'ಸತಿ' ಬೇರೆ. ಅಂ ದರೆ ಗಂಡನುಳ್ಳ ಗರತಿ ! ಅಂಥವಳು ಕಟ್ಟಿಕೊಂಡ ಗಂಡನನ್ನು ಬಿಟ್ಟು ಬಂದು ಅನುಭವಮಂಟಪದಲ್ಲಿ ಆಶ್ರಯ ಪಡೆದಿದ್ದಾಳೆಂ ದರೆ ಸಲ್ಲದ ನಾಲಿಗೆಗಳು ಅಲ್ಲದ ನುಡಿ ನುಡಿದಾವು. ಅದರಿಂದಾಗಿ ಪ್ರಭು ಮೊದಲು ಅವಳ ಪ್ರವೇಶವನ್ನು ನಿರಾಕರಿಸಿದ. ಅಂತೆ ಯೇ ಅವಳಲ್ಲಿನ ಆಧ್ಯಾತ್ಮದ ಆಳ ಎಷ್ಟು ಎಂಬ ಕಲ್ಪನೆ ಅವನಿಗಿರಲಿಲ್ಲ. ಅದನ್ನು ಪರಿಶೀಲಿಸಿ ಒರೆಹಚ್ಚಿ ನೋಡಿ ನೈಜ ವೈರಾಗ್ಯ ವಿದ್ದಲ್ಲಿ, ಅವಳಾತ್ಮ ಔನ್ನತ್ಯದ ಮಜಲು ಮುಟ್ಟಿದ್ದಲ್ಲಿ ಶಿವಾದ್ವೈತವನ್ನು ಮೈಗೂಡಿಸಿಕೊಂಡಿದ್ದಲ್ಲಿ ಮಾತ್ರ ಬರಮಾಡಿಕೊಳ್ಳಬಹುದೆಂದು ಬಗೆದು ಆ ರೀತಿ ನುಡಿದ. ಅಕ್ಕ ತನ್ನನ್ನು ತಾನು

ಸಮರ್ಥಿಸಿಕೊಂಡಳು. ಹೌದು, ನಾನು ಒಂದರ್ಥದಲ್ಲಿ 'ಸತಿ'. ಆದರೆ ನನ್ನ ಗಂಡ ಲೋಕದ ಗಂಡನಲ್ಲ. ಅಲೌಕಿಕ ಅಜ್ಞಾತ ಶಕ್ತಿಯಾದ ಜಗತ್ ಚೇತನವಾದ ಚೆನ್ನಮಲ್ಲಿಕಾರ್ಜುನ.

**ಹರನೇ ನೀನೇ ನನಗೆ ಗಂಡನಾಗಬೇಕೆಂದು ಅನಂತಕಾಲ ತಪಸಿದ್ದೆ ನೋಡಾ**
**ಹಸೆಯ ಮೇಲಣ ಮಾತ ಬೆಸಗೊಳ್ಳಲಟ್ಟಿದರೆ**
**ಶಶಿಧರನ ಬಳಿಗೆ ಕಳುಹಿದರೆಮ್ಮವರು**
**ಭಸ್ಮವನೆ ಪೂಸಿ. ಕಂಕಣವನೆ ಕಟ್ಟಿದರು**
**ಚೆನ್ನಮಲ್ಲಿಕಾರ್ಜುನಂಗೆ ನಾನಾಗಬೇಕೆಂದು**
ಮತ್ತೆ
**ಪಚ್ಚೆಯ ನೆಲೆಗಟ್ಟು ಕನಕದ ತೋರಣ, ವಜ್ರದ ಕಂಬ**
**ಪವಳದ ಚಪ್ಪರವಿಕ್ಕಿ ಮುತ್ತು ಮಾಣಿಕದ ಮೇಲುಕಟ್ಟು ಕಟ್ಟಿ**
**ಮದುವೆಯ ಮಾಡಿದರು. ಎಮ್ಮವರೆನ್ನ ಮದುವೆಯ ಮಾಡಿದರು**
**ಕಂಕಣ ಕೈಧಾರೆ ಸ್ಥಿರಸೇಸೆಯನಿಕ್ಕಿ**
**ಚೆನ್ನಮಲ್ಲಿಕಾರ್ಜುನನೆಂಬ ಗಂಡಂಗೆನ್ನ ಮದುವೆಯ ಮಾಡಿದರು**

ಆದರೂ ಶರಣ ಸಂದೋಹಕ್ಕೆ ಇಷ್ಟರಿಂದಲೇ ನಂಬಿಕೆ ಬರಲಿಲ್ಲ. ಒಲವು ತೋರಲಿಲ್ಲ, ಒಪ್ಪಿಗೆ ಸೂಚಿಸಲಿಲ್ಲ. 'ಪುರುಷನೊಬ್ಬ ನನ್ನು ಮದುವೆಯಾಗಿದ್ದು ನಿಜವೆ ? ಅವನನ್ನು ಬಿಟ್ಟು ಬಂದದ್ದು ತರವೆ ? ಹೇಳು. ಉತ್ತರಿಸಿದಳು :

೧೮೪

**ಗುರುವೆ ತೆತ್ತಿಗನಾದ.**
**ಲಿಂಗವೆ ಮದುವಣಿಗನಾದ ನಾನೆ ಮದುವಳಿಗೆಯಾದೆನು**
**ಈ ಭುವನವೆಲ್ಲವರಿಯಲು ಅಸಂಖ್ಯಾತರೆನಗೆ ತಾಯಿ ತಂದೆಗಳು.**
**ಕೊಟ್ಟರು ಸಾದೃಶ್ಯವಪ್ಪ ವರನ ನೋಡಿ.**
**ಇದು ಕಾರಣ ಚೆನ್ನಮಲ್ಲಿಕಾರ್ಜುನ ಗಂಡನೆನಗೆ**
**ಮಿಕ್ಕಿನ ಲೋಕದವರೆನಗೆ ಸಂಬಂಧವಿಲ್ಲವಯ್ಯಾ ಪ್ರಭುವೆ.**

ಮದುವೆ ಎಂಬುದು ಬೊಂಬೆ ಆಟ ಅಲ್ಲ. ಅದು ಆಧ್ಯಾತ್ಮಗಳ ಬೆಸುಗೆ. ಅಲ್ಲಿ ಒಲವು ಎಂಬುದು ಸೂತ್ರ. ಆ ಸೂತ್ರವೇ ಇಲ್ಲದಾಗ ಪಾತ್ರಗಳಿದ್ದರೇನು ಹೇಳಿ ? ಒಪ್ಪಿಗೆ ಇಲ್ಲದೆ ಅದು ಬಲಾತ್ಕಾರದ ಮದುವೆ ಮದುವೆಯೆ ? ಅಲ್ಲ, ಒಲವಿದ್ದಲ್ಲಿ ಕಟ್ಟಿದ ತಾಳಿ ನೇಣಾಗುತ್ತೆ, ತೊಡಿಸಿದ ಬಳೆ ಬೇಡಿಯಾಗುತ್ತೆ. ಅದಕ್ಕೆ ನನ್ನಲ್ಲಿ ಚಿಕ್ಕಾಸಿನ ಕಿಮ್ಮತ್ತೂ ಇಲ್ಲ. ಹೆಣ್ಣಿನ ಮೇಲೆ ಗಂಡು ನಡೆಸುತ್ತಿರುವ ದಬ್ಬಾಳಿಕೆ, ದೌಷ್ಟ್ಯ ಹೀನವರ್ತನೆಗಳು ನನಗೆ ಸಂಸಾರದಲ್ಲಿ ಬೇಸರ ತಂದಿವೆ. ನಾನು ಅನೇಕ ಸೋದರಿಯರ ಬಾಳು ಹಾಳಾದ್ದನ್ನು ಕಂಡಿದ್ದೇನೆ. ಕಣ್ಣೀರಲ್ಲಿ ಕೈ ತೊಳೆದವರೆಷ್ಟೊ, ಕೆರೆ ಬಾವಿ ನೋಡಿಕೊಂಡವರೆಷ್ಟೊ, ಕೊಳ್ಳಿಯಲ್ಲಿ ಸುಡಿಸಿಕೊಂಡವರೆಷ್ಟೊ, ಸಾಕು ಬೇಕಾಗಿದೆ ಈ ಸಂಸಾರ. ಅದನ್ನರಿತೇ ನಾನು ಎಳಮೆಯಿಂದಲೂ ಒಲಿದದ್ದು ನನ್ನ ಆರಾಧ್ಯ ಮೂರ್ತಿ ಚೆನ್ನ ಮಲ್ಲಿಕಾರ್ಜುನನನ್ನು. ಅವನೇ ನನ್ನ ಗಂಡ, ಅವನೊಲವೇ ನನ್ನ ಬಾಳು, ಬೆಳಕು. ಅವನನ್ನುಳಿದ ಗಂಡಸರಿಗೂ ನನಗೂ ಸೋದರ / ಸೋದರಿ ಸಂಬಂಧವೇ ಹೊರತು ಪತಿ–ಪತ್ನಿ ಬಾಂಧವ್ಯ ಅಲ್ಲ. ಆದ್ದರಿಂದ ತಮ್ಮಗಳಲ್ಲಿ ನನ್ನ ಪ್ರಾರ್ಥನೆ ಇದು : ಕೇಳಿ

**ಒಡಲಿಲ್ಲದ ನುಡಿಯಿಲ್ಲದ ಕಡೆಯಿಲ್ಲದ**
**ನಲ್ಲನ ಒಡಗೂಡಿ ಸುಖಿಯಾದೆ ಕೇಳಿರಯ್ಯಾ**
**ಭಾಷೆ ಪೈಸರವಿಲ್ಲ. ಓಸರಿಸೆನಯಕ್ಕೆ**
**ಆಸೆ ಮಾಡೆನು ಮತ್ತೆ ಭಿನ್ನ ಸುಖಕ್ಕೆ**
**ಆರಳಿದು ಮೂರಾಗಿ, ಮೂರಳಿದು ಎರಡಾಗಿ**
**ಎರಡಳಿದು ಒಂದಾಗಿ ನಿಂದೆನಯ್ಯಾ**

**ಬಸವಣ್ಣ ಮೊದಲಾದ ಶರಣರಿಗೆ ಶರಣಾರ್ಥಿ,**

**ಅಲ್ಲಮ ಪ್ರಭುವಿನಿಂದ ಕೃತ ಕೃತ್ಯಳಾದೆನು ನಾನು**

**ಮರೆಯಲಾಗದು. ನಿಮ್ಮ ಶಿಶುವೆಂದು ಎನ್ನನು**

**ಚೆನ್ನಮಲ್ಲಿಕಾರ್ಜುನ ಬೆರಸೆಂದು ಹರಸುತ್ತಿಹುದು.**

ಅಕ್ಕನ ಮೊರೆಯನ್ನು ಕಿವುಡುಗೇಳಿದ ಅನುಭವಮಂಟಪ ಅವಳ ಆಧ್ಯಾತ್ಮ ಬಲವನ್ನು ಪ್ರಶ್ನಿಸಿತು. ಅಕ್ಕ ಬಡಗಿನಲ್ಲಿ ಉತ್ತರಿಸಿದಳು:

**ಜಲದ ಮಂಟಪದ ಮೇಲೆ ಉರಿಯ ಚಪ್ಪರವಿಕ್ಕಿ**

**ಆಲಿಕಲ್ಲ ಹಸೆಯ ಹಾಸಿ ಬಾಸಿಗವ ಕಟ್ಟಿ**

**ಕಾಲಿಲ್ಲದ ಹೆಂಡತಿಗೆ ತಲೆಯಿಲ್ಲದ ಗಂಡ ಬಂದು ಮದುವೆಯಾದನು**

**ಎಂದೆಂದಿಗೂ ಬಿಡದ ಬಾಳುವೆಗೆ ಕೊಟ್ಟರೆನ್ನ**

**ಚೆನ್ನಮಲ್ಲಿಕಾರ್ಜುನನೆಂಬ ಗಂಡಂಗೆನ್ನ**

**ಮದುವೆ ಮಾಡಿದರೆಲೆಯವ್ವೆಗಳಿರಾ !**

ಎಂದು.

ಅಂದರೆ ಜಲದ–ಜಡ ಅಥವಾ ಚಂಚಲ ಅಥವಾ ನಶ್ವರವಾದ ಸಂಸಾರವೆಂಬ ಆಸರೆಯಲ್ಲಿ, ಉರಿಯ – ಜ್ಞಾನವೆಂಬ (ಅಗ್ನಿ ಜ್ಞಾನದ ಸಂಕೇತ) ಚಪ್ಪರವಿಕ್ಕಿ ಅಂದರೆ ತುಂಬಾ ಜ್ಞಾನಿಗಳಾಗಿ, ಆಲಿಕಲ್ಲ ಹಸೆಯ ಹಾಸಿ – ತೃಪ್ತಿಯನ್ನು ತುಂಬಿ, (ಆಲಿಕಲ್ಲು ತೃಪ್ತಿಗೆ ಸಂಕೇತ) ಅನುಭವದ ತೃಪ್ತಿ ಪಡೆದು ಸೌಹಾರ್ದ, ಸದ್ಭಾವ ಮೊದಲಾದ ಸುಗಂಧಪೂರಿತ ಹೂವುಗಳಿಂದ ಕಟ್ಟಿದ ಬಾಸಿಗ ಅಂದರೆ ಹೂಮಾಲೆ ರಚಿಸಿ, ಕಾಲಿಲ್ಲದ ಹೆಂಡತಿಗೆ ಸಂಸಾರವೆಂಬ ಕೆಸರಿನಲ್ಲಿ ಕಾಲೂರದಿರುವ ಜೀವಾತ್ಮ (ಅಂಗ) ಎಂಬ ಹೆಣ್ಣಿಗೆ, ತಲೆಯಿಲ್ಲದ ಗಂಡ–ರೂಪವಿಲ್ಲದ ನಿರ್ಗುಣ, ನಿರಾಕಾರನಾದ ಪರಶಿವ (ಲಿಂಗ) ಎಂಬ ಗಂಡು ಬಂದು, ಮದುವೆಯಾದನು – ಐಕ್ಯಾನುಸಂಧಾನಗೈದನು, ಐಕ್ಯಸ್ಥಿತಿ, ಎಂದೆಂದಿಗೂ ಬಿಡದ ಬಾಳುವೆ ಅಂದರೆ ಎಂದೆಂದಿಗೂ ಅಗಲದ ಶಾಶ್ವತವಾದ ಶಿವ ಅಥವಾ ಶೂನ್ಯ ತಾನಾಗುವ ನಿಜದ ನೆಲೆಯ ಸಹಜ ಸ್ಥಿತಿ.

ಈ ಸ್ತರಕ್ಕೇರಿದಳು, ಷಟ್ ಸ್ಥಲಗಳಾಚೆಗಿನ 'ಶೂನ್ಯ' ಸ್ಥಲಕ್ಕೇರಿ 'ಶಿವ' ಆದವಳು ಅಕ್ಕ. ಇದು ಅವಳೇರಿದ ಎತ್ತರದ ಬಿತ್ತರದ ನೆಲೆಯ ನಿಲವು. ಅಂತೆಯೇ ವ್ಯಷ್ಟಿ ಮತ್ತು ಸಮಷ್ಟಿಗಳು ಒಡವರೆದು 'ಶಿವ' ಅಥವಾ 'ಶೂನ್ಯ' ಅದಾಗಿನ ನಿಜಸ್ಥಿತಿ. ವಿವರಿಸುತ್ತಾಳೆ :

**ಅಂಗದೊಳಗೆ ಅಂಗವಾಗಿ ಅಂಗವ ಲಿಂಗೈಕ್ಯವ ಮಾಡಿದೆ**

**ಮನದೊಳಗೆ ಮನವಾಗಿ ಮನವ ಲಿಂಗೈಕ್ಯವ ಮಾಡಿದೆ**

**ಭಾವದೊಳಗೆ ಭಾವವಾಗಿ ಭಾವವ ಲಿಂಗೈಕ್ಯವ ಮಾಡಿದೆ.**

**ಅರಿವಿನೊಳಗೆ ಅರಿವಾಗಿ ಅರಿವ ಲಿಂಗೈಕ್ಯವ ಮಾಡಿದೆ.**

**ಜ್ಞಾನದೊಳಗೆ ಜ್ಞಾನವಾಗಿ ಜ್ಞಾನವ ಲಿಂಗೈಕ್ಯವ ಮಾಡಿದೆ**

**ಕ್ರೀಗಳೆಲ್ಲವ ನಿಲಿಸಿ ಕ್ರಿಯಾತೀತವಾಗಿ ನಿಃಪತಿ ಲಿಂಗೈಕ್ಯವ ಮಾಡಿದೆ**

**ನಾನೆಂಬುದ ನಿಲಿಸಿ ನೀನೆಂಬುದ ಕೆಡಿಸಿ ಉಭಯವ ಲಿಂಗೈಕ್ಯವ ಮಾಡಿದೆ**

**ಚೆನ್ನಮಲ್ಲಿಕಾರ್ಜುನಯ್ಯನೊಳಗೆ ನಾನಳಿದೆನಾಗಿ**

**ಲಿಂಗವೆಂಬ ಘನವು ಎನ್ನಲ್ಲಿ ಅಳಿಯಿತ್ತಲ್ಲ ಕಾಣಾ ಸಂಗನ ಬಸವಣ್ಣ**

ಎಂದು.

ಅಕ್ಕನ ಈ ನಿಲುವು ಎಲ್ಲರಿಗೂ ಅಚ್ಚರಿ ತಂದಿತು. ಅಂಗ, ಅರಿವು, ಮನ, ಭಾವ, ಜ್ಞಾನ, ಕ್ರಿಯೆಗಳೆಲ್ಲವನ್ನೂ ಲಿಂಗದಲ್ಲಿ ಲಯ ಗೊಳಿಸಿದ್ದಾಳೆ – ಅವುಗಳನ್ನೊಳಗೊಂಡ ಲಿಂಗವಾದರೂ ಇದೆಯೇ ? ಇಲ್ಲ. ಅದು ಆ ಘನವೆಂಬ ಪರವಸ್ತು ಇವಳಲ್ಲಿ ಲಯ ವಾಗಿದೆ. ಇದೇ ಶಿವಾದ್ವೈತದ ಸಿದ್ಧಿ ! ಅಂಗಲಿಂಗಗಳು ಈ ಬಗೆಯಲ್ಲಿ ಕೂಡಿ ಮೂರನೆಯ 'ಶಿವ' ಅಥವಾ 'ಶೂನ್ಯ' ಎಂಬ ಪರಿಣಾಮ ಪಡೆಯುವ ದರ್ಶನವೂ ಅದೇ ಆಗಿದೆ.

ಅಂತಹ ಅನುಭಾವದ ತುರೀಯಸ್ತರದಲ್ಲಿ ಐಕ್ಯನ ಮಾನಸಿಕ ಸ್ಥಿತಿ ಹೇಗಿರುತ್ತದೆಂಬುದು ವರ್ಣನೆಗೆ ಮೀರಿದ್ದು, ವ್ಯಾಖ್ಯಾನಕ್ಕೆ ನಿಲಕದ್ದು. ಬಹುಶಃ ಅಲ್ಲಿ ಮಾತು ಮೈಲಿಗೆ ಎನಿಸಬಹುದು. ಆದರೂ ಅಕ್ಕ ಅವಳ ಸರಳ ಸುಂದರ ಮಾತುಗಳಲ್ಲೇ ಅಭಿವ್ಯಕ್ತಿಸಿದಳು :

**ಲಿಂಗವೆನ್ನೆ ಲಿಂಗೈಕ್ಯವೆನ್ನೆ,**
**ಸಂಗವೆನ್ನೆ ನಿಸ್ಸಂಗವೆನ್ನೆ**
**ಆಯಿತ್ತೆನ್ನೆ ಆಗದೆನ್ನೆ**
**ನೀನೆನ್ನೆ ನಾನೆನ್ನೆ**
**ಚೆನ್ನಮಲ್ಲಿಕಾರ್ಜುನನಲ್ಲಿ ಲಿಂಗೈಕ್ಯನಾದ ಬಳಿಕ**
**ಏನೆನ್ನೆನು**

ಎಂದು.

ಇದು ಅನುಭಾವದ ಅಮೃತಗೀತ. ಇಲ್ಲಿನದು ಶಬ್ದಮುಗ್ದವಾಗುವ ಸ್ಥಿತಿ. ಅದು ಅಂಗದ ಹಂಗಿಲ್ಲದ, ಲಿಂಗದ ಮೋಹವಿಲ್ಲದ, ಆದರೆ ಅವೆರಡೂ ಕೂಡಿ ಆದ ಮೂರನೆಯ 'ಸಮರಸ' ಸ್ಥಿತಿ. ಅಲ್ಲಿ ರವಿಯ ತಾಪವೂ ಇಲ್ಲ, ಶಶಿಯ ಶೈತ್ಯವೂ ಇಲ್ಲ. ಅವೆರಡನ್ನೂ ಗರ್ಭೀಕರಿಸಿ ಕೊಂಡ ತೇಜೋರೂಪವೊಂದುಂಟು. ಅದೇ 'ಶೂನ್ಯ' ಅಥವಾ ಶಿವ. ಅದೇ ನಿಜದ ನೆಲೆ, ಶಿವಸಮಯದ ಮಹಾಮಜಲು, ಮಹಾಬಯಲು. ಅದರ ಪೂರ್ಣದರ್ಶನ ಮಾಡಿಸಿದ್ದಾಳೆ ಇಲ್ಲಿ ಅಕ್ಕ.

ೞ

ಅಕ್ಕ ಬಹಳ ದಿನಗಳವರೆಗೆ ಕಲ್ಯಾಣದಲ್ಲಿ ನಿಂತಳು. ಅನುಭವಮಂಟಪದ ಜ್ಞಾನದಾಸೋಹದಲ್ಲಿ ಶರಣ ಶರಣೆಯರ ಅನುಭವದ ಹಾಲೂ ಹಾಗೂ ಅವರಕ್ಕರೆಯ ಸಕ್ಕರೆ ಉಂಡು ಬೆಳೆದಳು. ಕಡೆಗೆ ಶ್ರೀಶೈಲದೆಡೆಗೆ ಹೊರಡುವ ಮನವಾಯಿತು. ತನ್ನ ಅಣ್ಣ ಚೆನ್ನಮಲ್ಲಿಕಾರ್ಜುನನನ್ನು ಕಾಣುವ ಬಯಕೆ ಬಲವತ್ತರವಾಯಿತು. ಅನುಭವಮಂಟಪದ ಅನುಮತಿ ಬೇಡಿದಳು. ಅಣ್ಣನಾದಿಯಾಗಿ ಎಲ್ಲರೂ ಆಕೆಯನ್ನು ಆನಂದದಿಂದ ಹರಸಿ ಬೀಳ್ಕೊಟ್ಟರು. ಹೊರಡುವ ಮುನ್ನ 'ನಿಮ್ಮ ತಲೆಗೆ ಹೂವತಹೆನಲ್ಲದೆ ಹುಲ್ಲತಾರೆ' ಎಂದು ಸರ್ವರಿಗೂ ಭರವಸೆ ಇತ್ತಳು. ಗಂಡನ ಮನೆಗೆ ಹೊರಟು ನಿಂತ ಮನೆಯ ಮಗಳಂತೆ.

ಬಹು ದಿನಗಳವರೆಗಿನ ಶ್ರೀಶೈಲದ ಹಾದಿ ಸಮೆಯಿತು. ಅಕ್ಕ ಅಗಾಧವಾದ, ಅಟನಕಸದಳವಾದ ದಟ್ಟಕಾನನದ ಬೆಟ್ಟವನ್ನೇರಿದಳು. ಅಲ್ಲಿ – 'ವನವೆಲ್ಲ ನೀನೆ, ವನದೊಳಗಣ ದೇವತರುವೆಲ್ಲ ನೀನೆ. ತರುವಿನೊಳಗಾಡುವ ಖಗಮೃಗವೆಲ್ಲ ನೀನೆ. ಚೆನ್ನ ಮಲ್ಲಿಕಾರ್ಜುನನೇ, ಸರ್ವಭರಿತನಾದ ನೀನು ಎನಗೇಕೆ ಮುಖದೋರೆ ?' ಎಂದು ಬೇಡಿದಳು. ಮತ್ತು ಅವನನ್ನೇ ಕುರಿತು ಪ್ರಾರ್ಥಿಸಿದಳು ದೈನ್ಯದಿಂದ. ಅಂಗೈ ಬಟ್ಟಲ ಲಿಂಗಮೂರ್ತಿಯನ್ನು ನೆಟ್ಟ ದೃಷ್ಟಿಯಿಂದ ವೀಕ್ಷಿಸುತ್ತಾ ಪ್ರತಿದಿನವೂ ಅವನಲ್ಲಿ ತಾನು ಕರಗಿ, ತನ್ನಲ್ಲಿ ಅವನನ್ನೇ ಪೂರ್ಣ ಪ್ರಮಾಣದಲ್ಲಿ ಒಡವೆರಸಿಕೊಂಡು, ಸಮರಸದ ಆತ್ಮಾನಂದದಲ್ಲಿ ಓಲಾಡಿದಳು.

ಅಂದು ಶ್ರೀಶೈಲದ ಯಾತ್ರೆಗೆಂದು ಬಂದ ಯಾತ್ರಿಕರ ಸ್ತೋಮ ಬೆಳಗಿನ ಪೂಜೆಯಾದ ಮೇಲೆ ಮಧ್ಯಾಹ್ನದ ಪ್ರಸಾದ ಸ್ವೀಕರಿಸಿ ತಮ್ಮ ತಮ್ಮ ಊರುಗಳಿಗೆ ಹಿಂತಿರುಗಿತು. ಗಿರಿ ಮಲ್ಲಯ್ಯನ ದೇಗುಲದಲ್ಲಿ ಅಕ್ಕನ ಆತ್ಮನುಸಂಧಾನಕ್ಕೆ ಚೆನ್ನಮಲ್ಲಿಕಾರ್ಜುನನ ಹೊರತು ಬೇರಾರೂ ಇರಲಿಲ್ಲ. ಅಕ್ಕ ಸ್ವಾಮಿಯ ಸಾನಿಧ್ಯದಲ್ಲಿ ಅಭಿಮುಖಿಯಾಗಿ ಕುಳಿತಳು. ಮಿಂದು ಮಡಿಯುಟ್ಟು ಬಂದ ಅವಳ ಮನ ಅಷ್ಟೇ ಪರಿಶುದ್ಧವಾಗಿತ್ತು. ಎಡಗೈ ಬಟ್ಟಲಲ್ಲಿ ಇಷ್ಟ ಲಿಂಗವನ್ನಿರಿಸಿಕೊಂಡಳು. ಅವನನ್ನು ದೃಷ್ಟಿಯೋಗದಿಂದ ಒಮ್ಮೆ ವೀಕ್ಷಿಸಿ, ಇದಿರಲ್ಲಿದ್ದ ಶ್ರೀಶೈಲ ಮಲ್ಲಿಕಾರ್ಜುನನ ಮೂರ್ತಿಯನ್ನೊಮ್ಮೆ ನೋಡಿದಳು. ಏನೋ ಒಂದು ಸುನಾದ ! ಏನೋ ಒಂದು ಆತ್ಮೀಯ ಕರೆ 'ಬಾ ಮಗಳೆ ಬಾ, ನೀನು ಭೂಮಿಗೆ ಬಂದ ಉದ್ದೇಶ ಪೂರ್ಣವಾಯಿತು. ನಿನ್ನ ಕರ್ತವ್ಯವನ್ನು, ನಿಷ್ಠೆ ಯಿಂದ ನಿರ್ವಹಿಸಿದ್ದೀಯೆ. ಸಾಕು ಮಾಡು ಈ ಲೋಕದಾಟವನ್ನು ಎಂದು ಯಾವುದೋ ಒಂದು ಅವ್ಯಕ್ತ ತೇಜಸ್ಸು ತನ್ನೆರಡೂ ತೋಳುಗಳನ್ನು ಚಾಚಿ ಕರೆದಂತಾಯಿತು. ಅಕ್ಕ ತನ್ನ ಕಂಗಳ ಕಾಂತಿಯಿಂದ ಆ ದೇಗುಲವನ್ನೆಲ್ಲ ಬೆಳಗಿಸಿದಳು. ಆ ದಿವ್ಯದರ್ಶನ ದಿಂದ ಧನ್ಯತೆಪಡೆದು, ತನ್ನ ಅಂಗೈಮೂರ್ತಿಯನ್ನು ದರ್ಶಿಸುತ್ತಲೇ ಇಲ್ಲವಾದಳು – ಅಲ್ಲ – ಎಲ್ಲವಾದಳು !

ಙ

ಅಣ್ಣ ಕನ್ನಡದ ಕಾರಣ ಪುರುಷನಾದರೆ, ಅಕ್ಕ ಕನ್ನಡದ ಕಾರಣ ಕನ್ಯೆ. ಕನ್ನಡದ ಅಷ್ಟೇಕೆ ಜಗತ್ತಿನ ಮೊತ್ತ ಮೊದಲ ಅಗ್ರಮಾನ್ಯ ಕವಯಿತ್ರಿ. ಅವಳ ಅನೇಕ ವಚನಗಳು ಬಂಧುರ ಭಾವಗೀತಗಳು. ಅವುಗಳಲ್ಲಿ ಭಾವದ ಕಾವು ಇದೆ, ನಾದದ ಮೋದ ಇದೆ. ಅನುಭಾವಗೀತೆಗಳಿಗೂ ಆಕೆ ಭಾವಗೀತಾತ್ಮಕ ಚಾಲನೆ ಕೊಟ್ಟಿದ್ದಾಳೆ. ಭಾವ ಸ್ಫಟಿಕದಂತೆ ಪಾರದರ್ಶಕ, ಗುರುತಿಸುವಷ್ಟು ಸ್ಪಷ್ಟ ಕೋಮಲ, ಶೈಲಿ ನೀರು ಹರಿದಂತೆ ಸುಭಗ, ಸುಂದರ, ಕಾವ್ಯಸೃಷ್ಟಿ ಸೃಜನಶೀಲ ಹಾಗೂ ಸದ್ಯೋಜಾತ, ಭಾಷೆ ಪರ ರೊಡ್ಡವವಕೊಳ್ಳದ, ಅನ್ಯಾಶ್ರಯ ನಿರಪೇಕ್ಷಿತ. ಅಕ್ಕನಲ್ಲಿ ಭಾವ ಭಾಷೆಗಳ ಸಂಲಗ್ನವೇರ್ಪಟ್ಟಂತೆ, ಶೈಲಿ ಶಿಲ್ಪಗಳಲ್ಲಿ ಸಹಜ ಸಹ ಯೋಗವಿದೆ. ಔಚಿತ್ಯವರಿತು ಪ್ರಯೋಗಗೊಂಡಿರುವ ಅಲಂಕಾರಗಳಂತೂ ಕಾವ್ಯಾಭಿವ್ಯಕ್ತಿಯ ಕುಸುರುಗಳಾಗಿವೆ. ಅಂಥವುಗಳಲ್ಲಿ ಒಂದೆರಡನ್ನು ಇಲ್ಲಿ ಅವಲೋಕಿಸಬಹುದು.

**ಚಿಲಿ ಮಿಲಿಯೆಂದು ಓದುವ ಗಿಳಿಗಳಿರಾ ನೀವು ಕಾಣಿರೆ ನೀವು ಕಾಣಿರೆ**
**ಸರವೆತ್ತಿ ಹಾಡುವ ಕೋಗಿಲೆಗಳಿರಾ ನೀವು ಕಾಣಿರೆ ನೀವು ಕಾಣಿರೆ**
**ಎಱಗಿ ಬಂದಾಡುವ ತುಂಬಿಗಳಿರಾ ನೀವು ಕಾಣಿರೆ ನೀವು ಕಾಣಿರೆ**
**ಸರವರದೊಳಗಾಡುವ ಹಂಸೆಗಳಿರಾ ನೀವು ಕಾಣಿರೆ ನೀವು ಕಾಣಿರೆ**
**ಗಿರಗಹ್ವರದೊಳಗಾಡುವ ನವಿಲುಗಳಿರಾ ನೀವು ಕಾಣಿರೆ ನೀವು ಕಾಣಿರೆ**
**ಚೆನ್ನಮಲ್ಲಿಕಾರ್ಜುನನೆಲ್ಲಿರ್ದಹನೆಂದು ಹೇಳಿರೆ**
**ಅಳಿ ಸಂಕುಳಮೇ ಮಾಮರಮೇ ಬೆಳುದಿಂಗುಳೇ ಕೋಗಿಲೆಯೇ**
**ನಿಮ್ಮೆಲ್ಲರನು ಒಂದ ಬೇಡುವೆನು**
**ಎನ್ನೊಡೆಯ ಚೆನ್ನಮಲ್ಲಿಕಾರ್ಜುನ ದೇವರ ಕಂಡರೆ ಕರೆದು ತೋರಿರೇ**

ಭಾವ ಪುಷ್ಟಿಯ ಪೂರ್ಣಾಭಿವ್ಯಕ್ತಿಗೆ ಪ್ರಕೃತಿ ಬಳಕೆಯಾಗಿರುವುದು ತುಂಬು ಸೊಗಸು. ಓದುವ ಗಿಳಿ, ಹಾಡುವ ಕೋಗಿಲೆ, ಆಡುವ ದುಂಬಿ, ನಡೆದಾಡುವ ಹಂಸೆ, ನರ್ತಿಸುವ ನವಿಲು, ಚಿಗರಿ ಚೆಲುವಾದ ಮಾವು, ಚೆಲ್ಲಿ ಸೂಸಿರುವ ಹಾಲ್ದಿಂಗಳು - ಇವೇ ಮೊದಲಾದ ನಿಸರ್ಗ ಚೇತನಗಳನ್ನು ಕೂಗಿ ಕೇಳುತ್ತಾಳೆ ತನ್ನೊಡೆಯನನ್ನು ಕಂಡಿದ್ದರೆ, ಕರೆದು ತೋರಿರೇ ಎಂದು. ಇಂಥೆಡೆಗಳಲ್ಲಿ ಭಾವ ತೀವ್ರ, ಭಾಷೆ ಬಂಧುರ, ಪ್ರಕೃತಿಯ ಪ್ರತಿ ವಸ್ತುವನ್ನು ಕುರಿತ ಈ ಆರ್ತಭಾವದ ಪ್ರಾರ್ಥನಾಗೀತ ಆಧುನಿಕಾರ್ಥದಲ್ಲೂ ಒಂದು ಅತ್ಯುತ್ತಮ ಭಾವಗೀತ.

**ಅಕ್ಕ ಕೇಳಕ್ಕ, ನಾನೊಂದು ಕನಸ ಕಂಡೆ**
**ಚಿಕ್ಕ ಚಿಕ್ಕ ಕೆಂಜೆಡೆಗಳ ಸುಲಿಪಲ್ಲ ಗೊರವನು**
**ಬಂದೆನ್ನ ನೆರೆದ ನೋಡವ್ವ**
**ಆತನನ್ನಪ್ಪಿಕೊಂಡು ತಳವೆಳಗಾದೆನು ಚೆನ್ನಮಲ್ಲಿಕಾರ್ಜುನನ**
**ಕಣ್ಣ ಮುಚ್ಚಿ ತಳೆದು ತಳವೆಳಗಾದೆನು** **(ವ. ೩೭)**

ಕನಸಿನ ಕಲ್ಪನೆಯ ಕುಸುರು, ಭಾವದ ನವುರು ಅಕ್ಕ. ಚಿಕ್ಕ, ಜೆಡೆ, ಕೆಂಜೆಡೆ, ಗೊರವ, ನೆರೆದ ಮೊದಲಾದ ಪರಿಣಾಮ ಕಾರೀ ಪದಗಳ ಪ್ರಯೋಗ – ಇವು ಕವನಕ್ಕೊಂದು ಮೆರಗುಕೊಟ್ಟಿದೆ. ದೈವ ಸಾಕ್ಷಾತ್ಕಾರದ ಬಣ್ಣನೆಯಲ್ಲಿ ಕಾವ್ಯ ಸಾಕ್ಷಾತ್ಕಾರವೂ ಇದೆ. ಅಕ್ಕನ ಆತ್ಮ ಸಾಕ್ಷಾತ್ಕಾರವೂ ಇದೆ. ಭಾವೈಕ್ಯ ಮಿಗಿಲು ಅನುಭಾವ. ಅನುಭಾವಕ್ಕೂ ಮಿಗಿಲು ಆತ್ಮೋನ್ನತಿ. ಅದು ಇಲ್ಲಿ ಸುಸ್ಪಷ್ಟ. ಈ ಬಗೆಯ ಸ್ವಾತ್ಮಪರ ಆನಂದ ಪರಿಣಾಮ ಪಡೆದಿರುವುದು ಆನಂದಗಳ ಆನಂದ ಬ್ರಹ್ಮಾನಂದ ಮಹಾನಂದದಲ್ಲಿ.

**ತನು ಕರಗದವರಲ್ಲಿ ಮಜ್ಜನವನೊಲ್ಲೆಯಯ್ಯಾ ನೀನು.**
**ಮನ ಕರಗದವರಲ್ಲಿ ಪುಷ್ಪವನೊಲ್ಲೆಯಯ್ಯಾ ನೀನು**
**ಹದುಳಿಗರಲ್ಲದವರಲ್ಲಿ ಗಂಧಾಕ್ಷತೆಯನೊಲ್ಲೆಯಯ್ಯಾ ನೀನು**
**ಅರಿವು ಕಂದರೆಯದವರಲ್ಲಿ ಆರತಿಯನೊಲ್ಲೆಯಯ್ಯಾ ನೀನು**
**ಭಾವ ಶುದ್ಧವಿಲ್ಲದವರಲ್ಲಿ ಧೂಪವನೊಲ್ಲೆಯಯ್ಯಾ ನೀನು**
**ಪರಿಣಾಮವಿಲ್ಲದವರಲ್ಲಿ ನೈವೇದ್ಯವನೊಲ್ಲೆಯಯ್ಯಾ ನೀನು**
**ಭಾವ ಜ್ಞಾನ ಕ್ರೀ ಅಳವಡದವರಲ್ಲಿ ವೀಳೆಯನೊಲ್ಲೆಯಯ್ಯಾ ನೀನು**

**ಹೃದಯ ಕಮಲ ಅರಳದವರಲ್ಲಿ ಇರಲೊಲ್ಲೆಯಯ್ಯಾ ನೀನು**
**ಎನ್ನಲ್ಲಿ ಏನುಂಟೆಂದು ಕರಸ್ಥಲವನಿಂಬುಗೊಂಡೆ. ಹೇಳಾ ಚೆನ್ನಮಲ್ಲಿಕಾರ್ಜುನಾ**

ಇದೊಂದು ಪ್ರೇಮಗೀತೆ. ಭಕ್ತಿ ಗೀತೆಯೂ ಹೌದು. ಸರ್ವ ಸಮರ್ಪಣವಿಲ್ಲದೆ ಸಾಕ್ಷಾತ್ಕಾರವಿಲ್ಲ ಎಂಬುದನ್ನು ಅಭಿವ್ಯಕ್ತಿಸುವ ಈ ಗೀತದಲ್ಲಿ ಗರಿಗರಿಯಾಗಿ ಬಿರಿಗೊಂಡು ತಲೆದೂಗುವ ಹೊಂಬಾಳೆಯ ಹೊಗರು ವೈಭವಗಳಿವೆ. ತನು, ಮನ, ಭಾವ, ಜ್ಞಾನ, ಅರಿವು, ಹದುಳ ಮೊದಲಾದ ಅಚ್ಚಗನ್ನಡದ ಮೆಚ್ಚು ನುಡಿಗಳ ಪ್ರಯೋಗ. ಅವು ಲಾಳಿಯಾಡುವಾಗಿನ ಮನತಣಿಸುವ ಕವನ ವಸ್ತ್ರಜಾಲ – ಇವು ಅಕ್ಕನ ಅಸಮಾನ ಅಭಿವ್ಯಕ್ತಿಗೆ ನಿಂತ ಸಾಕ್ಷಿಗಳು. 'ಎನ್ನಲ್ಲಿ ಏನುಂಟೆಂದು ಕರಸ್ಥಲವನಿಂಬುಗೊಂಡೆ' ಎಂಬಲ್ಲಿನ ವಿಸ್ಮಯ 'ಅರಿಸಿನವನೆ ಮಿಂದು ಹೊಂದೊಡಿಗೆಯ ತೊಟ್ಟೆನೆಲೆ ಪುರುಷ ಬಾರಾ, ಪುರುಷ ರತ್ನವೆ ಬಾರಾ, ನಿಮ್ಮ ಬರವೆನಗೆ ಪ್ರಾಣದ ಬರವಾಗಿದೆ. ಚೆನ್ನಮಲ್ಲಿಕಾರ್ಜುನಯ್ಯ ನೀ ಬಂದಹನೆಂದು ಬಟ್ಟೆಯನೆ ನೋಡಿ ಬಾಯಾರುತ್ತಿದ್ದೇನೆ' ಎಂಬಲ್ಲಿನ ದೈನ್ಯತೆ, 'ನೀ ಕೇಳಿದರೆ ಕೇಳು ಕೇಳದಿರ್ದಡೆ ಮಾಣು ನಾ ನಿಮ್ಮ ಹಾಡಿದಲ್ಲದೆ ನಿಲಲಾರೆನು, ನೀ ಒಲಿದೆಡೆ ಒಲಿ ಒಲಿಯದಿರ್ದಡೆ ಮಾಣು ನಿಮ್ಮ ಪೂಜಿಸಿದಲ್ಲದೆ ಸೈರಿಸಲಾರೆನು, ನೀ ಮೆಚ್ಚಿದೆಡೆ ಮೆಚ್ಚು ಮೆಚ್ಚದಿರ್ದಡೆ ಮಾಣು ನಿನ್ನಪ್ಪಿದಲ್ಲದೆ ಸೈರಿಸಲಾರೆನು, ನೀ ನೋಡಿದಡೆ ನೋಡು ನೋಡದಿರ್ದಡೆ ಮಾಣು ನಿಮ್ಮ ನೋಡಿ ಹಿಗ್ಗಿ ಹಾರೈಸಿದಲ್ಲದೆ ಸೈರಿಸಲಾರೆನಯ್ಯಾ ಚೆನ್ನಮಲ್ಲಿಕಾರ್ಜುನಾ, ನಿಮ್ಮನರ್ಚಿಸಿ ಪೂಜಿಸಿ ಹರುಷದೊಳೋಲಾಡುವೆ' ಎಂಬಲ್ಲಿನ ದೃಢತೆ, 'ಆಯುಷ್ಯ ಹೋಗುತ್ತಿದೆ ಭಾಷೆ ತೊಲಗುತ್ತಿದೆ, ಕೂಡಿರ್ದ ಸತಿ ಸುತರು ತಮ ತಮಗೆ ಹರಿದು ಹೋಗುತ್ತೈದ್ದಾರೆ, ಬೇಡ ಬೇಡ ದಿನಬಂಜೆಯಾಗಿ ಕೆಡಬೇಡ ಬಯಲಿಂಗೆ ಮನವೆ, ಚೆನ್ನಮಲ್ಲಿಕಾರ್ಜುನನ ಶರಣರ ಸಂಗದಲ್ಲಿ ಹೊಣೆಹೊಕ್ಕು ಬದುಕು ಕಂಡಾ ಮನವೇ', ಎಂಬಲ್ಲಿನ ಆತ್ಮ ಸಾಂತ್ವನ, ಬಂಜೆ ಬೇನೆಯನರಿಯಳು, ಮಲತಾಯಿ ಮುದ್ದ ಬಲ್ಲಳೆ ? ನೊಂದವರ ನೋವ ನೊಂದವರೆ ಬಲ್ಲರಲ್ಲದ ನೋಯದವರೆತ್ತ ಬಲ್ಲರು ? ಚೆನ್ನಮಲ್ಲಿಕಾರ್ಜುನನಿರಿದಲಗು ಒಡಲಲ್ಲಿ ಮುರಿದು ಹೊರಳುವ ನೋವ ನೀವೆತ್ತ ಬಲ್ಲಿರಿ ಎಲೆ ತಾಯಿಗಳಿರಾ – ಎಂಬಲ್ಲಿನ ಸ್ವಾನುಭವ ಇವು ಅಕ್ಕನ ಭಾವಿಕತೆಗೆ ನಿದರ್ಶನಗಳು. ಅವಳು ಭಕ್ತೆಯೂ ಹೌದು, ಭಾವುಕಿಯೂ ಹೌದು. ಭಾವಗೀತಾತ್ಮಕ ಭಕ್ತಿಗೀತಗಳಲ್ಲಿ ಅವಳ ಕವಿ ಹೃದಯ ಸ್ಪಷ್ಟಗೋಚರ.

ಭಾವಾಭಿವ್ಯಕ್ತಿಗೆ ಅಲಂಕಾರಗಳು ಅನಿವಾರ್ಯ. ಅವು 'ಕಾವ್ಯ ಶೋಭಾಕಾರವಾದ ಧರ್ಮ'ಗಳು. ಅಂದರೆ ಕಾವ್ಯದ ಕಾಂತಿಯನ್ನು ಹೆಚ್ಚಿಸುವ ಅಂಶಗಳು. ಆವಿಲ್ಲದೆ ಭಾವ ಸ್ಫುಟಗೊಳ್ಳದು. ಅಭಿವ್ಯಕ್ತಿ ಪರಿಣಾಮಕಾರಿಯೆನಿಸದು. ಕಾವ್ಯದ ಕಮನೀಯತೆಯನ್ನು ಹೊಮ್ಮಿಸುವ ಹಲವು ಅಲಂಕಾರಗಳು ಅಕ್ಕನ ವಚನಗಳಲ್ಲಿ ಆಶ್ರಯಪಡೆದಿವೆ. ಒಂದು ದೃಷ್ಟಾಂತ -

**ಹೊನ್ನು ಮುರಿದಡೆ ಬೆಸಸಬಹುದಲ್ಲದೆ**
**ಮುತ್ತು ಒಡೆದಡೆ ಬೆಸಸಬಹುದೆ** ?
**ಮನ ಮುರಿದಡೆ ಮನಕೊಬ್ಬರೊಡೆಯರುಂಟೆ** ?
**ಚೆನ್ನಮಲ್ಲಿಕಾರ್ಜುನ ಸಾಕ್ಷಿಯಾಗಿ ಬೇಟವುಳ್ಳಲ್ಲಿ ಬೆರೆಸೆ ಘನ**

ಚಿನ್ನದ ಒಡವೆ ಮುರಿದರೆ ಬೆಸುಗೆ ಹಾಕಿಸಬಹುದು. ಆದರೆ ಮುತ್ತು ಒಡೆದರೆ ? ಮನಸ್ಸು ಮುತ್ತು ಇದ್ದಂತೆ. ಆದರಲ್ಲಿ ಚೆಲುವಿದೆ, ತೇಜಸ್ಸಿದೆ. ಅದು ಒಡೆದರೆ ಬೆಸೆಯಲು ಬರುವುದಿಲ್ಲ. ಅದೇರೀತಿ ತಿಳಿ ಮನಸ್ಸನ್ನು ಕದಡಬಾರದು ಎಂಬ ಭಾವ ಇಲ್ಲಿನದು. ಅದು ಸ್ಫುಟಗೊಳ್ಳಲು ಹೊನ್ನು ಮುತ್ತುಗಳ ವಿಶಿಷ್ಟ ಪ್ರತಿಮೆಯನ್ನು ದೃಷ್ಟಾಂತವಾಗಿ ಕೊಟ್ಟಿದ್ದಾಳೆ. ಇದಕ್ಕೆ 'ಬೇಟವುಳ್ಳಲ್ಲಿ ಬೆರಸೆ ಘನ' ಎಂಬ ಲೋಕೋಕ್ತಿಯೊಂದು ವಚನಾಂತ್ಯದಲ್ಲಿ ಬೆರೆದು, ಭಾವಾಂಶಕ್ಕೊಂದು ಚಿಂತನಾಂಶವನ್ನೊದಗಿಸಿ, ಕವನದ ಸಮಗ್ರ ಶಿಲ್ಪಕ್ಕೊಂದು ಕಳೆ ತಂದಿದೆ.

**ಪಂಚೇಂದ್ರಿಯ ಗುಣಂಗಳೊಳಗೆ ಒಂದಕ್ಕೆ ಪ್ರೀತನಾದಡೆ ಸಾಲದೆ** ?
**ಸಪ್ತವ್ಯಸನಂಗಳೊಳಗೆ ಒಂದಕ್ಕೆ ಪ್ರೀತನಾದಡೆ ಸಾಲದೆ** ?
**ರತ್ನದ ಸಂಕಲೆಯಾದಡೇನು ಬಂಧನ ಬಿಡುವುದೆ ಚೆನ್ನಮಲ್ಲಿಕಾರ್ಜುನ**

ಪಂಚೇಂದ್ರಿಯಗಳಲ್ಲಿ ಅಥವಾ ಸಪ್ತವ್ಯಸನಗಳಲ್ಲಿ ಎಲ್ಲವೂ ಬೇಡ ಒಂದಕ್ಕೆ ವಶನಾದರೆ ಸಾಕು ಮನುಷ್ಯ ಹಾಳಾಗುತ್ತಾನೆ – ಎಂಬಂಶ ಸಮರ್ಥನೆಗೆ 'ರತ್ನದ ಸಂಕೋಲೆಯಾದಡೇನು ಬಂಧನ ಬಿಡುವುದೆ?' ಎಂಬ ಉಕ್ತಿಯಲ್ಲಿ ಅರ್ಥಪೂರ್ಣ ಅರ್ಥಾಂತರನ್ಯಾಸ ಅಲಂಕಾರ ಅಡಗಿದೆ. ಈ ಅಲಂಕಾರ ಕವಿಯಿತ್ರಿಯ ಭಾವಕ್ಕೆ ಸಾಕಷ್ಟು ಪುಷ್ಟಿಕೊಟ್ಟಿದೆ ಎಂಬುದು ಸ್ಪಷ್ಟ. ಉಪಮೆಗೆನಿತೆನಿತೋ ಜ್ವಲಂತ ನಿದರ್ಶನಗಳಿವೆ. ಅಕ್ಕನಲ್ಲಿ ನೋಡಿ :

**ನೆಲದ ಮರೆಯ ನಿಧಾನದಂತೆ ತಿಲದ ಮರೆಯ ತೈಲದಂತೆ**
**ಶಿಲೆಯ ಮರೆಯ ಕನಕದಂತೆ ಮರದ ಮರೆಯ ತೇಜದಂತೆ**
**ಭಾವದ ಮರೆಯ ಬ್ರಹ್ಮವಾಗಿಪ್ಪ**
**ಚೆನ್ನಮಲ್ಲಿಕಾರ್ಜುನನ ನಿಲವನರಿಯಬಾರದು**

ದೈವ ಎಂಬುದೊಂದು ನಂಬಿಕೆಯ ವಸ್ತು. ಅದಕ್ಕೆ ಆಕಾರ ಸಾಕಾರಗಳಾವೂ ಇಲ್ಲ. ಅಂತಹ ನಿರಾಕಾರವನ್ನು ಅರ್ಥೈಸುವಲ್ಲಿ ಉಪಮೆ ಪೂರ್ಣ ಸಹಕಾರಿ. ಭಾವದ ಮರೆಯ ಬ್ರಹ್ಮನಾಗಿಪ್ಪ ಚೆನ್ನಮಲ್ಲಿಕಾರ್ಜುನ ನೆಲದ ಮರೆಯ ನಿಧಾನದ ಹಾಗೆ, ತಿಲದ ಮರೆಯ ತೈಲದ ಹಾಗೆ, ಶಿಲೆಯ ಮರೆಯ ಚಿನ್ನದ ಹಾಗೆ, ಮರದ ಮರೆಯ ಅಗ್ನಿಯ ಹಾಗೆ. ಅದು ಸ್ಥೂಲ ದೃಷ್ಟಿಗೆ ಅಗೋಚರವಾದರೂ ಸೂಕ್ಷ್ಮಕ್ಕೆ ಗ್ರಾಹ್ಯ. ಆ ಸೂಕ್ಷ್ಮತೆಯ ಸೆರಗಿಗೆ ನಮ್ಮನ್ನು ಕೊಂಡೊಯ್ಯುತ್ತದೆ ಉಪಮೆ. ಮತ್ತೊಂದು ಉದಾಹರಣೆ :

**ಅರಲುಗೊಂಡ ಕೆರೆಗೆ ತೊರೆ ಬಂದು ಹಾಯಿದಂತೆ**
**ಬರಲುಗೊಂಡ ಸಸಿಗೆ ಮಳೆ ಸುರಿದಂತಾಯಿತ್ತು ನೋಡಾ ಇಂದೆನಗೆ**
**ಇಹದ ಸುಖ ಪರದ ಗತಿಯೊಂದಾದಂತಾಯಿತ್ತೆನಗೆ**
**ಚೆನ್ನಮಲ್ಲಿಕಾರ್ಜುನ ಗುರುಪಾದವ  ಕಂಡು ಧನ್ಯಳಾದೆನು –**

ನೀರಿಲ್ಲದೆ ಒಣಗಿ ಬಿರಿಬಿರಿ ಬಿಟ್ಟು ಹೆಂಟೆಗಳೆದ್ದು ಬಾಯ್ದೆರೆದು ಬಾಯಾರಿ ಬಿದ್ದಿರುವ ಕೆರೆಗೆ ತೊರೆ ಬಂದು ತುಂಬಿದರೆ ಎಂಥ ಆನಂದ ! ಒಣಗೆ ಕಡ್ಡಿ ಕಡ್ಡಿಯಾಗಿ ಬರಲುಗೊಂಡ ಗಿಡಕ್ಕೆ ಮಳೆ ಸುರಿದರೆ ಏನೆಂಥ ನಳನಳಿಕೆ ! ಅಂತಹ ಅಂದ ಆನಂದಗಳಾದದ್ದು ಚೆನ್ನಮಲಿಕಾರ್ಜುನನ ಶ್ರೀ ಚರಣಗಳನ್ನು ದರ್ಶಿಸಿದಾಗ. ಇದು ಉಪಮೆಯ ಸಾರ್ಥಕ್ಯ.

ಇದೇ ರೀತಿ 'ತೆರಣಿಯ ಹುಳು ತನ್ನ ಸ್ನೇಹದಲ್ಲಿ ಮನೆಯ ಮಾಡಿ ತನ್ನ ನೂಲು ತನ್ನ ಸುತ್ತಿ ಸಾವ ತೆರನಂತೆ,' 'ಮರೆದು ಬೀಸುವ ಗಾಳಿ ಪರಿಮಳವನುಂಡಂತೆ'. 'ಮೊಸರ ಹೊಸೆದು ಬೆಣ್ಣೆಯ ತೆಗೆವಂತೆ' 'ತಾಯಿ ನೊಂದಡೆ ಒಡಲ ಶಿಶು ನೋವಂತೆ' ಈ ಬಗೆಯ ಔಚಿತ್ಯಭರಿತ ಉಪಮಾಲಂಕಾರಗಳು ನೂರಾರು ಸಿಗುತ್ತವೆ ಅಕ್ಕನ ವಚನಗಳಲ್ಲಿ.

ವಕ್ರೋಕ್ತಿ ಕುಂತಕನ ಅತ್ಯಪೂರ್ವ ಆವಿಷ್ಕಾರಗಳಲ್ಲಿ ಒಂದು. ವಕ್ರೋಕ್ತಿಯ ವ್ಯಾಖ್ಯೆ ಸೊಟ್ಟ ಮಾತು. 'ಸುತ್ತೀ ಬಳಸಿ' ಆಡಿದ ಮಾತು ಎಂದಷ್ಟೇ ಅಲ್ಲ, ಕಾವ್ಯ ಸಂದರ್ಭದಲ್ಲಿ ಅದೊಂದು ಸುಂದರೋಕ್ತಿ. ಅಂತಹ ಉಕ್ತಿ ಸೌಂದರ್ಯಕ್ಕೆ –

**ಉರಕ್ಕೆ ಜವ್ವನಗಳು ಬಾರದ ಮುನ್ನ, ಮನಕ್ಕೆ ನಾಚಿಕೆಗಳು ತೋರದ ಮುನ್ನ**
**ನಮ್ಮವರಂದೆ ಮದುವೆಯ ಮಾಡಿದರು ಸಿರಿಶೈಲ ಚೆನ್ನಮಲ್ಲಿಕಾರ್ಜುಜನಂಗೆ !**
**ಹೆಂಗೂಸೆಂಬ ಭಾವ ತೋರದ ಮುನ್ನ ನಮ್ಮವರಂದೆ ಮದುವೆಯ ಮಾಡಿದರು**

ಈ ವಚನದ ಮೊದಲೆರಡು ನುಡಿಗಳು ಸಾಕು. ಮೈನೆರೆದ ಹುಡುಗಿ ಸೊಬಗು ಸೂಸುವ ಬೆಡಗಿ ! ಅವಳ ಮೈಮೇಲೆ ಹರಯ ಹರಿದಾಗ ಮೈ ಮನಗಳೆರಡರಲ್ಲೂ ಬದಲಾವಣೆ ಕಾಣಿಸಿಕೊಳ್ಳುವುದು ಸಹಜ. ವಕ್ಷಸ್ಥಲದಲ್ಲಿ ಮೊಲೆಗಳು ಮೂಡುತ್ತವೆ. ಮನಸ್ಸಿನಲ್ಲಿ ತಾನು 'ಹೆಣ್ಣು' ಎಂಬ ಅರಿವು ಜಾಗೃತವಾಗಿ, ಸ್ತ್ರೀ ಸಹಜ ನಾಚಿಕೆ ಮೈದೋರುತ್ತದೆ. ಅದನ್ನು ಅಕ್ಕ ಅಲಂಕಾರಿಕವಾಗಿ 'ಉರಕ್ಕೆ ಜವ್ವನಗಳು ಬಾರದ ಮುನ್ನ, ಮನಕ್ಕೆ ನಾಚಿಕೆಗಳು ತೋರದ ಮುನ್ನ' ಎಂಬ ವಕ್ರೋಕ್ತಿಯ ಮೂಲಕ ಅಭಿ ವ್ಯಕ್ತಿಸಿದ್ದಾಳೆ. ವಕ್ರೋಕ್ತಿಯಂತೆ ಅಕ್ಕನಲ್ಲಿ ಸ್ವಭಾವೋಕ್ತಿಯೂ ಪರಿಣಾಮಕಾರಿ.

**ಹುಟ್ಟಿದೆ ಶ್ರೀ ಗುರುವಿನ ಹಸ್ತದಲ್ಲಿ ಬೆಳೆದನು ಅಸಂಖ್ಯಾತರ ಕರುಣದೊಳಗೆ**
**ಭಾವವೆಂಬ ಹಾಲು, ಸುಜ್ಞಾನವೆಂಬ ತುಪ್ಪ**
**ಪರಮಾರ್ಥವೆಂಬ ಸಕ್ಕರೆಯನಿಕ್ಕಿದರು ನೋಡಾ**
**ಇಂತಪ್ಪ ತ್ರಿವಿಧಾಮೃತವನು ದಣಿಯಲೆರೆದು ಸಲಹಿದರೆನ್ನ**
**ವಿವಾಹವ ಮಾಡಿದಿರಿ ಸಯವಪ್ಪ ಗಂಡಂಗೆ ಕೊಟ್ಟಿರಿ**
**ಕೊಟ್ಟ ಮನೆಗೆ ಕಳುಹಲೆಂದು ಅಸಂಖ್ಯಾತರೆಲ್ಲರೂ ನೆರೆದು ಬಂದಿರಿ**
**ಬಸವಣ್ಣ ಮೆಚ್ಚಲು ಒಗೆತನವ ಮಾಡುವೆ**
**ಚೆನ್ನಮಲ್ಲಿಕಾರ್ಜುನನ ಕೈವಿಡಿದು**

**ನಿಮ್ಮ ತಲೆಗೆ ಹೂವ ತಹೆನಲ್ಲದೆ ಹುಲ್ಲ ತಾರೆನು**

**ಅವಧರಿಸಿ ನಿಮ್ಮಡಿಗಳೆಲ್ಲರೂ ಮರಳಿ ಬಿಜಯಂಗೈವುದು ಶರಣು ಶರಣಾರ್ಥಿ**

ಅಕ್ಕನ ಈ ವಚನದಲ್ಲಿ ಭಾವರೂಪುಗೊಂಡಾದ 'ತ್ರಿವಿಧಾಮೃತ' ರೂಪಕವನ್ನು ಗಮನಿಸಬಹುದು. ಅದಕ್ಕಿಂತಲೂ ಮಿಗಿಲಾದದ್ದು, ವಚನವಲಯದಲ್ಲಿ ಎದ್ದು ಕಾಣುವಂಥದು ಇಲ್ಲಿನ ಸ್ವಭಾವೋಕ್ತಿ. ಮದುವೆ, ದಿಬ್ಬಣ, ಬೀಳ್ಕೊಡಿಗೆ, ಬೀಳ್ಕೊಡಿಗೆಯ ಸಂದರ್ಭದ 'ಮಧುರಯಾತನೆ' ಮೊದಲಾದ ಕ್ರಿಯಾತ್ಮಕ ಸಹಜ ಚಿತ್ರಣ. ಇದರ ಜೊತೆಗೆ ನಿಮ್ಮ 'ತಲೆಗೆ ಹೂವ ತಹೆನಲ್ಲದೆ ಹುಲ್ಲತಾರೆನು' ಎಂಬ ಬೆರೆತು ಕವನದ ಕಮನೀಯತೆಯನ್ನು ಹೆಚ್ಚಿಸಿವೆ. ಸ್ವಭಾವೋಕ್ತಿ ಒಂದು ಅಲಂಕಾರ ಅದಕ್ಕೂ ಒಂದು ಸೌಂದರ್ಯಾಭಿವ್ಯಕ್ತಿ ಸಾಮರ್ಥ್ಯ ಇದೆ ಎಂಬುದಕ್ಕೆ ಅಕ್ಕನ ಮೇಲಿನ ವಚನ ಅಚ್ಚ ನಿದರ್ಶನ. ಅಂತೆಯೇ

**ಬೆಟ್ಟದ ಮೇಲೊಂದು ಮನೆಯ ಮಾಡಿ ಮೃಗಗಳಿಂಜಿದಡೆಂತಯ್ಯಾ**

**ಸಮುದ್ರದ ತಡಿಯಲೊಂದು ಮನೆಯ ಮಾಡಿ ನೊರೆ ತೆರೆಗಳಿಗಂಜಿದೊಡೆಂತಯ್ಯಾ**

**ಸಂತೆಯೊಳಗೊಂದು ಮನೆಯ ಮಾಡಿ ಶಬ್ದಕ್ಕೆ ನಾಚಿದೊಡೆಂತಯ್ಯಾ**

**ಚೆನ್ನ ಮಲ್ಲಿಕಾರ್ಜುನದೇವ ಕೇಳಯ್ಯಾ**

**ಲೋಕದೊಳಗೆ ಹುಟ್ಟಿದ ಬಳಿಕ ಸ್ತುತಿ ನಿಂದೆಗಳು**

**ಬಂದೆಡೆ ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು**

ಎಂಬಲ್ಲಿ ಲೋಕ ಸಹಜ ಪ್ರವೃತ್ತಿ, ಪ್ರತಿಕ್ರಿಯಗಳಿವೆ. ಆದರೆ ಅವೆಲ್ಲವೂ ಮಾತನಾಡಿದಂತಹ ಸ್ವಾಭಾವಿಕ ಅಭಿವ್ಯಕ್ತಿ ಸಾಧಿಸಿವೆ. ಇಲ್ಲಿ ಉಕ್ತಿ ವಕ್ರತೆಗಿಂತಲೂ ಭಾವವಕ್ರತೆ. ಅದರಿಂದ ರೂಪಗೊಂಡ ಆತ್ಮಸಾಂತ್ವನ, ಭಾವಭಣಿತೆ, ಮಡಿಕೆ ಮಡಿಕೆಯಾಗಿ ಬರುವ ನಿದರ್ಶನಗಳ ಚೆದುರು ಪದರು, ಕವನ ಶಿಲ್ಪದ ಭಂಗಿ ಬಡಗು – ಇವು ಮನೋಜ್ಞವಾದವುಗಳು.

**ಆವ ವಿದ್ಯೆಯ ಕಲಿತಡೇನು ? ಸಾವ ವಿದ್ಯೆ ಬೆನ್ನ ಬಿಡದು**

**ಅಶನವ ಶಸದ ತೋರೆದಡೇನು ? ವ್ಯಸನವ ಮರೆದಡೇನು ?**

**ಉಸುರ ಹಿಡಿದಡೇನು ? ಬಸುರ ಕಟ್ಟಿದಡೇನು ?**

**ಚೆನ್ನಮಲ್ಲಿಕಾರ್ಜುನದೇವಯ್ಯಾ**

**ನೆಲ ತಳವಾರನಾದಡೆ ಕಳ್ಳನೆಲ್ಲಿಗೆ ಹೋಹನು**

ಸಾವು ಶತಸಿದ್ಧ, ಅನಿವಾರ್ಯ ಎಂಬ ನಿತ್ಯ ಹಾಗೂ ಕಟು ಸತ್ಯವನ್ನು ಕೈ ಎತ್ತಿ ಸಾರುವ ಈ ವಚನದಲ್ಲಿ, 'ಆವ ವಿದ್ಯೆ – ಸಾವವಿದ್ಯೆ, ಅಶನ – ವ್ಯಸನ' ಉಸುರ ಹಿಡಿ – ಬಸುರ ಕಟ್ಟು' ಮೊದಲಾದ ಉಕ್ತಿ ವೈಚಿತ್ರ್ಯಗಳ ಪ್ರಯೋಗದೊಂದಿಗೆ ಬೆರೆದ 'ನೆಲ ತಳವಾರನಾದಡೆ ಕಳ್ಳನೆಲ್ಲಿಗೆ ಹೋಗಬೇಕು' ಎಂಬ ರೂಪಕ ಚಿನ್ನದ ಚಿಪ್ಪಿನಲ್ಲಿ ರನ್ನವನ್ನು ಅದ್ದಂತಿದೆ. ಓಹ್ ! ಕಾವ್ಯಕ್ಕೆ ಅದೆಂಥ ಚೆಲುವು ! ಎಂಥ ಚೆನ್ನ ! ಮೃತ್ಯುವಿನ ಅನಿವಾರ್ಯತೆಯನ್ನು ಇದಕ್ಕಿಂತಲೂ ಪರಿಣಾಮಕಾರಿಯಾಗಿ ಅಭಿವ್ಯಕ್ತಿಸಲು ಸಾಧ್ಯವಿಲ್ಲ ಎನಿಸುತ್ತದೆ.

ವಸ್ತುವೊಂದನ್ನು ಹೋಲಿಸಿದಾಗ ಉಪಮೆ, ಆರೋಪಿಸಿದಾಗ ರೂಪಕ, ಅನ್ವಯಿಸಿದಾಗ ಪ್ರತಿಮೆ ಎನಿಸುತ್ತದೆ. ಆದರೆ ಒಂದರ್ಥದಲ್ಲಿ ಅಲಂಕಾರಗಳೆಲ್ಲವೂ ಕಾವ್ಯಪ್ರತಿಮೆಗಳೇ. ಅವು ಮಾತಿನ ಮೂರ್ತಿಗಳು* ಅಂತೆಯೇ, ಅವ್ಯಕ್ತವೆನಿಸಿದ ನಿತ್ಯ ಸತ್ಯಕ್ಕೊಡ್ಡಿದ ಪ್ರತ್ಯಕ್ಷ ರೂಪಗಳು. ಅಕ್ಕನ ವಚನಗಳು ಕಾವ್ಯಪ್ರತಿಮೆಗಳ (Poetic Image) ಆಡುಂಬೊಲ :

**ಹೊಳೆವ ಕೆಂಜೆಡೆಗಳ ಮಣಿಮಕುಟ ಒಪ್ಪುವ, ಸುಲಿಪಲ್ಲ,**

**ನಗೆಮೊಗದ ಕಂಗಳಕಾಂತಿಯ ಈರೇಳು ಭೂವನವ ಬೆಳಗುವ**

**ದಿವ್ಯ ಸ್ವರೂಪನ ಕಂಡೆ ನಾನು. ಕಂಡೆನ್ನ ಕಂಗಳ ಬರ ಹಿಂಗಿತ್ತಿಂದು**

**ಗಂಡ ಗಂಡರೆಲ್ಲರ ಹೆಂಡ ಹೆಂಡಿರಾಗಿ ಆಳುವ ಗರುವನ ಕಂಡೆ ನಾನು**

**ಜಗದಾದಿ ಶಕ್ತಿಯೊಳು ಬೆರಸಿ ಮಾತನಾಡುವ ಪರಮಗುರು**

**ಚೆನ್ನಮಲ್ಲಿಕಾರ್ಜುನನ ನಿಲವ ಕಂಡು ಬದುಕಿದೆನು**

ಶೃಂಗಾರಗೊಂಡ ತೇಜಸ್ಸೊಂದು ಧುತ್ತನೆ ನಮ್ಮ ಕಣ್ಣೆದುರು ಬಂದು ನಿಂತಂತೆ ಭಾಸವಾಗುತ್ತದೆ ! ಇದು ಸಾಮಾನ್ಯಾರ್ಥದ ಕಾವ್ಯಪ್ರತಿಮೆ. ಅದನ್ನು ಕಂಡ ಅವಳ ಕಂಗಳ ಬರ ಹಿಂಗಿದಂತೆ ಓದುಗರ ಕಿವಿಗಳ ಬರವೂ ಹಿಂಗುತ್ತದೆ.

ಗಂಡ ಗಂಡರೆಲ್ಲರನ್ನು ಹೆಂಡ ಹೆಂಡಿರಾಗಿ ಆಳಿದ, ಆ ಜಗದಾ ಶಕ್ತಿಯಲ್ಲಿ ಒಡವೆರೆದು ನುಡಿದ ಆ ಪರಾತ್ಪರ ತೇಜಸ್ಸಿನ ನಿಲವು ನಮಗೂ ವೇದ್ಯ. ಮತ್ತೆರಡು ವಚನಗಳು

**ಅಮೇಧ್ಯದ ಹಡಿಕೆಯ ಮೂತ್ರದ ಕುಡಿಕೆಯ ಎಲುವಿನ ತಡಿಕೆಯ**
**ಕೀವಿನ ಹಡಿಕೆಯ ಸುಡಲೀ ದೇಹವ ಬಿಡು ಬಿಡು ವಿಷಯದ ಸಂಗವ**
**ಒಡಲುವಿಡಿದು ಕೆಡದಿರು ಚೆನ್ನಮಲ್ಲಿಕಾರ್ಜುನನರಿಯದ ಮರುಳೆ**

ಮತ್ತು

**ಮೊಲೆ ಬಿದ್ದು ಮುಡಿ ಸಡಿಲಿ ಗಲ್ಲ ಬತ್ತಿ ತೋಳು ಕಂದಿದವಳ**
**ಎನ್ನನೇಕೆ ನೋಡುವಿರಿ ಎಲೆ ಅಣ್ಣಗಳಿರಾ** ?

ಇಂತಹ ಬೀಭತ್ಸವನ್ನು ನಿಷ್ಪನ್ನಗೊಳಿಸುವ ಪರಿಣಾಮಕಾರೀ ಪ್ರತಿಮೆಗಳನ್ನು ಕಾಣಬಹುದು ಅಕ್ಕನಲ್ಲಿ.

ಅಕ್ಕನದು ಹೋರಾಟದ ಬದುಕು. ಆ ಹೋರಾಟದ ಅಭಿವ್ಯಕ್ತಿಗಾಗಿ 'ಯುದ್ಧ ಪ್ರತಿಮೆ'ಗಳು ಅಲ್ಲಲ್ಲಿ ಸಹಜವಾಗಿ ಪ್ರಯೋ

---

*a picture made out of words – C. Day Lewis

The Poetic Image, P. 18

೧೯೨

ಗಗೊಂಡಿವೆ : ಚೆನ್ನಮಲ್ಲಿಕಾರ್ಜುನನಿಜೆದಲಗು ಒಡಲಲ್ಲಿ ಮುಜಿದು ಹೊರಳುವ ನೋವ ನೀವೆತ್ತ ಬಲ್ಲಿರಿ ; ಸುಖವಿಲ್ಲ ಹಂದೆಗೆ ಎಂತು ಮುಱುಗಿದಡೆಯೂ ; ಕಲಿಗೆ ಭಯವಿಲ್ಲ, ಎತ್ತೆತ್ತ ಹೋದಡೆಯೂ ; ಆಳುತನದ ಮಾತನೇಜೆಸಿ ನುಡಿದಡೆ ಅಗಳೆ ಕಟ್ಟಿದೆನು ಗಂಡುಡಿಗೆಯನು, ತಿಗುರನೇರಿಸಿ ತಿಲಕವಿಟ್ಟು ಕೈದುವಕೊಂಡು ಕಳನೇಜೆದ ಬಳಿಕ ನಿಜೆ ಸಡಿಲಿದರೆ ಇನ್ನು ನಿಮ್ಮಾಣೆ ಕಾಣಾ ಚೆನ್ನಮಲ್ಲಿಕಾರ್ಜುನಾವಾರುವ ಮುಗ್ಗಿದಡೆ ಮಿಣಿಯ ಹಱಿಕೆಯ ಹೊಯಿದವರುಂಟೆ ? ಮುಗ್ಗಿದ ಭಂಗವ ಮುಂದೆ ರಣದಲ್ಲಿ ಕಳಿವುದು, ನಿನ್ನ ನೀ ಸೈರಿಸಿ ಕೈದುವ ಕೊಳ್ಳಿರಣ್ಣಾ ಚೆನ್ನಮಲ್ಲಿಕಾರ್ಜುನನೆಂಬ ಹಗೆಗೆ ಬೆಂಗೊಡದಿರಣ್ಣಾ ನೀ ದಂಡು ಮಂಡಲವ ಮಾಡಿಹನೆಂದು ಸುಮ್ಮನಿರ್ದೆ ; ನೀ ದಂಡು ಮಂಡಲಕ್ಕೆ ; ಹೋದಹವನೆಂದು ಪರಿಣಾಮಿಸುವೆ.

ಅಕ್ಕ ಬೆಳಗಿದ ಕಾವ್ಯಾಂಶಗಳನ್ನು ಅವಲೋಕಿಸಿದಾಗ ಇದಕ್ಕಿಂತಲೂ ಕವಿಯಿತ್ರಿಯಲ್ಲಿ ಹೆಚ್ಚು ಏನನ್ನೂ ನಿರೀಕ್ಷಿಸಲು ಸಾಧ್ಯ ಎಂಬ ನಿಬ್ಬೆರಗು ಹುಬ್ಬೇರುತ್ತದೆ ಓದುಗನಲ್ಲಿ !

ಕಡೆಯದಾಗಿ ಅವಳಿಗೊಂದು ನುಡಿ ನಮನ :

**ಓ ತಾಯೆ, ನಿನಗಿದೋ ಕನ್ನಡದ ಕುಲಕೋಟಿ**
**ಕೊರಲೆತ್ತಿ ಕೂಗುತಿದೆ ಮತ್ತೊಮ್ಮೆ ಅವತರಿಸಿ**
**ಕನ್ನಡದ ನುಡಿವಾಲ ವಚನ ರೂಪದಿ ಉಣಿಸಿ**
**ಜನಮನದೊಳಡಗಿರುವ ಮಲಿನತೆಯನುರೆ ಮೀಟಿ**
**ದಿವ್ಯ ಚೇತನವಿತ್ತು ಉದ್ಧರಿಸು ಬಾ' ಎನುತೆ**
**ಹೇ ಶರಣೆ, ಶಿವಸತಿಯೆ ಸದ್ಭಕ್ತಿ ಸಂಜಾತೆ**
**ಮಾಯೆ ಮೋಹದ ಗೆಲಿದೆ ಪರಮಪೂಜಿತೆ ವನಿತೆ ;**
**ಮಹದೇವಿ, ಮಹತಾಯಿ, ಸರ್ವಜನ ಸಂಪ್ರೀತೆ**
**ಉಡುತಡಿಯ ಮಡಿಲಲ್ಲಿ ಆಡೊಮ್ಮೆ ನೀ ಬಂದು**
**ಬಾಡುತಿಹ ನಾಡಿಂಗೆ ಬಲುಹುಗೊಂಡು ನೀನಿಂದೆ**
**ಅಕ್ಕರೆಯ ಸಕ್ಕರೆಯನೂಡು ಬಾ ಒಲವಿಂದೆ.**
**ಶರಣ ಶರಧಿಯ ರತ್ನ ! ನಿನ್ನ ದೀಪ್ತಿಯೆನಿಂದು**
**ತಿರೆಗೊರೆದು ಕನ್ನಡಿಗರೆದೆಗೊಳದಿ ಪ್ರತಿಬಿಂಬ**
**ಕಾಂಬಂತೆ ಕನಿಕರಿಸು ಬಾ, ಓ ಜಗದಂಬಾ !**

# ಸಾಶಿಮ ಗದ್ಯ ಸಾಹಿತ್ಯ

## ಭಾರತರತ್ನ

**(ಜವಹರಲಾಲ್ ನೆಹರೂರವರ ಜೀವನಚಿತ್ರ)**

**(೧೯೬೫)**

### ನೆನಪು

ಸುಮಾರು ದಿನಗಳ ಹಿಂದಿನ ಮಾತು.

ನಾನು ಆಗತಾನೇ ಶೆಟ್ಟೀಕೆರೆ ಮಾಧ್ಯಮಿಕ ಶಾಲೆಗೆ ಕಾಲಿರಿಸಿದ್ದೆ. ಆ ನನ್ನ ಎಳೆಯ ದಿನಗಳಲ್ಲಿ ಕೇಳುತ್ತಿದ್ದುದು 'ಭಾರತದಿಂದ ತೊಲಗಿರಿ' ಎಂಬ ಘೋಷಣೆ. ಪೂಜ್ಯ ಬಾಪೂಜಿಯವರು ಮುಂಬಯಿನಲ್ಲಿ ೧೯೪೨ರಲ್ಲಿ ಘರ್ಜಿಸಿದ 'ಕ್ವಿಟ್ ಇಂಡಿಯಾ' ಘೋಷಣೆ ಭಾರತದ ಮೂಲೆ ಮೂಲೆಗಳಿಂದಲೂ ಪ್ರತಿಧ್ವನಿತವಾಗಿ ಮೊಳಗುತ್ತಿತ್ತು. ಆಗ ನನಗೆ ಭಾಸವಾಗುತ್ತಿತ್ತು ಗಾಂಧಿ, ನೆಹರು, ಸುಭಾಸ್ ಮೊದಲಾದವರು ಅವ್ಯಕ್ತ ಲೋಕದ ಗಂಧರ್ವ ಪುರುಷರು ಎಂದು ! ಚಳವಳಿ ಮುಂದುವರಿದಂತೆಲ್ಲಾ ನನ್ನರಿವಿಗೆ ಬಂತು ಅವರೆಲ್ಲರೂ ನಮ್ಮ ರಾಷ್ಟ್ರದ ಗಣ್ಯವ್ಯಕ್ತಿಗಳು, ನಮ್ಮ ಮಾರ್ಗದರ್ಶನದ ಜೀವಜ್ಯೋತಿಗಳು ಎಂದು. ಕೆಲವೇ ದಿನಗಳಲ್ಲಿ ಪತ್ರಿಕೆಗಳಲ್ಲಿ ವಿಷಯ ಸಂಗ್ರಹಿಸುವ ಶಾಲೆ ಬಿಟ್ಟು ಚಳವಳಿ ನಡೆಸುವ, ಹರಕು ಮುರುಕು ಭಾಷಣ ಬಿಗಿಯುವ ಅಭ್ಯಾಸ ನಮಗೂ ಆಗಿಹೋಯಿತು. ಪಡಖಾನೆಗೆ ಬೆಂಕಿಯಿಟ್ಟು, ಹೆಂಡ ತುಂಬಿದ ಪೀಪಾಯಿ ಒಡೆದಾಗ ನಮಗಾದ ಆನಂದ ಅಷ್ಟಿಷ್ಟಲ್ಲ. ಅದೇ ರೀತಿ, ವಿದೇಶೀ ವಸ್ತ್ರ ಬಹಿಷ್ಕಾರವೂ ನಮ್ಮಲ್ಲಿ ಆಯಿತು.

ತಿಳಿದೋ ತಿಳಿಯದೆಯೋ ಈ ರೀತಿಯ ಚಳವಳಿಯನ್ನು ನಮ್ಮ ಹಳ್ಳಿಗಳಲ್ಲಿ ಮುಂದುವರೆಸಿದೆವು. ಅದೊಂದು ದಿನ"ಆಲೂರು ಎಂ. ಟಪ್ಪಾಲ್"ರವರ ಅಧ್ಯಕ್ಷತೆಯಲ್ಲಿ ನಮ್ಮೂರ ಬನಶಂಕರಿ ದೇವಾಲಯದ ಮುಂದೆ ಸುಮಾರು ೫೦–೬೦ ಹುಡುಗರ ಭಾರೀ ಸಭೆ ಸೇರಿತ್ತು. ಬಹಳ ಹುಡುಗರು ದೇವಸ್ಥಾನದಲ್ಲಿ ಪನಿವಾರ ನಡೆಯುತ್ತದೆಂದು ಬಂದಂತೆ ಕಂಡಿತು. ಭಾಷಣ ಮಾಡಲು ಪ್ರಾರಂಭಿಸಿದಾಗ 'ಲೋ ಪಲ್ಲಾರ ಇಲ್ಲ, ಏನೂ ಇಲ್ಲ ನಡಿಯೋ' ಅಂತ ಹೇಳಿಕೊಂಡು ಕೆಲವು ಹುಡುಗರು ಹೋದದ್ದೂ ಉಂಟು.

ಇಷ್ಟೆಲ್ಲವನ್ನೂ ನೆನೆಯುವುದರ ಉದ್ದಿಶ್ಯ ಇಷ್ಟೆ. ನನ್ನ ಹಾಗೂ ನನ್ನಂತಹ ಎಳೆಯರ ಮನಸ್ಸಿನ ಮೇಲೆ ಆ ದಿನಗಳು ಮಾಡಿದ ಪರಿಣಾಮವನ್ನು ಸೂಚಿಸುವುದು, ನನಗಂತೂ ಪೂಜ್ಯ ಬಾಪು, ನೆಹರೂ, ಸುಭಾಸ್ ಇವರನ್ನು ಒಮ್ಮೆಯಾದರೂ ನೋಡಬೇಕು, ನುಡಿಸಬೇಕು ಎಂಬ ಹಂಬಲ ಬೇರೂರಿತು. ಸುಯೋಗದಿಂದ ಒಂದು ಅವಕಾಶ ಸಿಕ್ಕಿತು. ಒಬ್ಬರು ಸಾಹುಕಾರರು ತೀರ್ಥಯಾತ್ರೆ ಕೈಗೊಂಡಿದ್ದರು. ಅವರಿಗೆ ಶಿವದೀಕ್ಷೆ ಆದ ಬಾಲಬ್ರಹ್ಮಚಾರಿ ಜಂಗಮಮೂರ್ತಿ ಬೇಕಾಗಿತ್ತು. ನಾನು ಅವರ ಎಲ್ಲಾ ನಿಬಂಧನೆಗಳಿಗೂ ಯೋಗ್ಯನಾದ್ದರಿಂದ ಜೊತೆಯಲ್ಲಿ ಕರೆದೊಯ್ದರು. ಕಾಶಿ ಮೊದಲಾದ ಭಾಗಗಳನ್ನು ನೋಡಿಕೊಂಡು ಹಿಂತಿರುಗಿ ಬರುವಾಗ ಮಾರ್ಗದಲ್ಲಿ ವಾರ್ಧಾಕ್ಕೂ ಭೇಟಿಕೊಟ್ಟೆವು. ಅಲ್ಲಿ ಆಶ್ರಮದ ಪುಣ್ಯತಾಣದಲ್ಲಿ ರಾಷ್ಟ್ರಪಿತ ಪೂಜ್ಯ ಬಾಪೂಜಿಯವರ ಸನಿಹದಲ್ಲಿ ಕುಳಿತು, ಅವರ ಮಾತು ಕೇಳುವ ಸುಕೃತ ಲಭಿಸಿತು. ನನಗೆ ಆಗ ಕನ್ನಡ ಬಿಟ್ಟು ಬೇರೆ ಯಾವ ಭಾಷೆಯೂ ಬರುತ್ತಿರಲಿಲ್ಲ. ಅವರಾಡಿದ

ಮಾತು ಗೊತ್ತಾಗಲಿಲ್ಲ. ಆದರೂ ಸಂದರ್ಶಿಸಿದ ಕಣ್ಣು ಮನಗಳು ತಣಿದುವು. ದೀರ್ಘದಂಡ ನಮಸ್ಕಾರ ಮಾಡಿ ಪೂಜ್ಯ ಪಿತನ ಆಶೀರ್ವಾದ ಪಡೆದು ಹಿಂತಿರುಗಿದೆವು.

ತಿಪಟೂರು ಹೈಸ್ಕೂಲಿನಲ್ಲಿ ವ್ಯಾಸಂಗ ಮಾಡುತ್ತಿದ್ದಾಗ, ಸ್ವತಂತ್ರ ಭಾರತದ ಮಹಾಪ್ರಧಾನಿ ಪಂಡಿತ್ ಜವಹರಲಾಲ್ ನೆಹರೂರವರು ಮೈಸೂರಿಗೆ ಮೊದಲಬಾರಿಗೆ ದಯಮಾಡಿಸುವರೆಂದು ಸುದ್ದಿ ಬಂತು. ನಾನು ನನ್ನ ಆತ್ಮೀಯ ಗೆಳೆಯ ಎಸ್. ಎಂ. ಸೋಮಶೇಖರಪ್ಪ ಎಂಟು ದಿನ ಮುಂಚೆಯೇ ಗಂಟುಮೂಟೆ ಕಟ್ಟಿದೆವು. ಮೈಸೂರು ನಗರ ಚೆನ್ನಾಗಿ ಅಲಂಕರಿಸಿಕೊಂಡಿತ್ತು. ಅದೇ ಮೊದಲು ನಾನು ಮೈಸೂರು ನೋಡಿದ್ದು, 'ದಸರಾ ದಿನಗಳಂತೆ ಶೋಭಿಸುತ್ತಿದೆ' ಎಂದ ನನ್ನ ಗೆಳೆಯ !

ಅಂದು ತೆರೆದ ಕಾರಿನಲ್ಲಿ ತೇಜೋಮೂರ್ತಿ ಕಾಣಿಸಿತು ! ತುಂಬು ಹೃದಯದಿಂದ ಜಯಘೋಷ ಮಾಡುತ್ತಿದ್ದ ಲಕ್ಷೋಪಲಕ್ಷ ಜನಸ್ತೋಮಕ್ಕೆ ತನ್ನ ಹಸನ್ಮುಖದ ಕಿರುನಗೆ ಬೀರುತ್ತ, ತೋಳಮೇಲೆತ್ತಿ, ಕೈತೊನೆಯುತ್ತಾ, ಹಾರತುರಾಯಿಗಳನ್ನು ಸ್ವೀಕರಿಸುತ್ತಾ, ನಿಧಾನವಾಗಿ ಸಾಗಿದರು ನಮ್ಮ ನೆಚ್ಚಿನ ನಾಯಕ ಪಂಡಿತ್ ಜವಹರಲಾಲ್ ನೆಹರು. ಟೌನ್‌ಹಾಲ್ ಮಹಡಿಯ ಮೇಲ್ ಮಚ್ಚಿನಲ್ಲಿ ನಿಂತು ಅವರು ಮಾಡಿದ ಭಾಷಣವನ್ನು ಕೆಳಗೆ ನಿಂತೇ ಕೇಳಿದೆವು. ಮಧ್ಯಾಹ್ನದ ಉರಿಬಿಸಿಲು ಅವರ ಮುಖಕ್ಕೆ ತಾಕುತ್ತಿತ್ತು. ಅದನ್ನು ತಪ್ಪಿಸಲು ಯಾರೋ ಒಬ್ಬರು ಒಂದು ಕೊಡೆ ಹಿಡಿಯಹೋದರು. ನೆಹರೂಜಿ ಆ ಕೊಡೆಯನ್ನು ತೆಗೆದುಕೊಂಡು, ನಿಧಾನವಾಗಿ ಮಡಿಸಿ ಕೈಯಲ್ಲಿ ಹಿಡಿದುಕೊಂಡೇ ಭಾಷಣ ಮಾಡಿದರು ! ಮತ್ತೆ ಮಾರನೆಯ ದಿನ ಬೆಳಗ್ಗೆ ಶ್ರೀ ಚಾಮರಾಜೇಂದ್ರ ವಸ್ತು ಸಂಗ್ರಹ ಶಾಲೆಯ ಬಳಿಯಲ್ಲಿ ಅವರ ದರ್ಶನ ಪಡೆದೆವು. ಆದರೆ ಅವರ ಅತ್ಯಂತ ಸಾಮೀಪ್ಯದರ್ಶನ ಲಭಿಸಿದ್ದು ಬೇಲೂರಿನಲ್ಲಿ. ನಾನಾಗ ಕಾಲೇಜಿನಲ್ಲಿ ಓದುತ್ತಿದ್ದೆ. ನಮ್ಮ ತಂದೆ ಬೇಲೂರಿಗೆ ನಮ್ಮ ಸೋದರಮಾವನವರ ನಂಟರ ಮನೆಗೆ ಜೊತೆಯಲ್ಲಿ ಕರೆದುಕೊಂಡು ಹೋಗಿದ್ದರು. ಅಂದೇ ನೆಹರೂರವರ ಆಗಮನವಿತ್ತು ಬೇಲೂರಿಗೆ ! ನಮ್ಮ ತಂದೆ ಬೇಲೂರಿಗೆ ನಮ್ಮ ಮಾಮಾಜಿ ಶ್ರೀ ಚೆನ್ನಕೇಶವ ಸ್ವಾಮಿ ದೇವಾಲಯದ ಹತ್ತಿರ ಕರೆದೊಯ್ದರು."ಪಾಪು !" (ಇಪ್ಪತ್ತು ವರ್ಷದ ವಯಸ್ಕನಾಗಿದ್ದರೂ ನನ್ನ ತಂದೆಯ ದೃಷ್ಟಿಯಲ್ಲಿ ನಾನು ಪಾಪುವೇ ! ಯಾವಾಗಲೂ ಅದೇರೀತಿ ಸಂಬೋಧಿಸುತ್ತಿದ್ದರು. ನೆಹರೂಜಿಯವರಿಗೆ ಗುಲಾಬಿ ಎಂದರೆ ಬಹಳ ಪ್ರೇಮ) ತಗೋ ಅವರಿಗೆ ಸಮಯ ನೋಡಿ ಕೊಡು" ಎಂದು ಹೇಳಿದರು. ದೇವಸ್ಥಾನದ ಹೊರಾಂಗಣದಲ್ಲಿ ಬರೀ ಹುಡುಗರ ಮಂದೆ, ಮಧ್ಯದಲ್ಲಿ 'ಚಾಚ' ಚುಕ್ಕೆಗಳ ಚಂದ್ರಮನಂತೆ ! ನಮ್ಮ ತಂದೆ ಗುಲಾಬಿ ಕೊಟ್ಟು ಮುಂದು ಮುಂದಕ್ಕೆ ನಮ್ಮನ್ನು ತಳ್ಳುತ್ತಿದ್ದರು. ಬಹುಶಃ ನೆಹರೂ ಚಾಚ ನೋಡಿದರೆಂದು ತೋರುತ್ತೆ, ನಿಧಾನವಾಗಿ ನಮ್ಮ ಬಳಿ ಬಂದು 'Come on Rose !' ಅಂದರು. ನನಗೆ 'Get me the Rose' ಎಂದಂತೆ ಕೇಳಿತು ! ಏನೂ ಮಾತು ಬರಲಿಲ್ಲ. ಸುಮ್ಮನೆ ಕೈ ಮುಂದೆ ಚಾಚಿದೆ. ಕೆನ್ನೆ ಹಿಡಿದು ಹಿಂಡುತ್ತಾ ಏನೋ ಅಂದರು. ಆಗ ನನಗೆ ಏನೂ ಕೇಳಲೂ ಇಲ್ಲ, ಕಾಣಲೂ ಇಲ್ಲ. ಮಂತ್ರಮುಗ್ಧನಾಗಿ ಅವರ ಕೋಟಿಗೆ ಒಂದು ಹೂ ಸಿಕ್ಕಿಸಿದೆ !

ಈ ಮಹಾಮಾನವನ ಬಗೆ ನನ್ನಲ್ಲಿ ಮೂಡಿದ ಪೂಜ್ಯ ಭಾವನೆಗೆ ರೂಪು ಕೊಡಲು ಅಂದಿನಿಂದಲೂ ಯತ್ನಿಸಿದೆ. ಅವರ ಜೀವನಕ್ಕೆ ಸಂಬಂಧಿಸಿದ ಹಲವು ಗ್ರಂಥಗಳನ್ನೂ, ಅವರ ಭಾಷಣಗಳನ್ನೂ ಓದಿದೆ. ಆದರೆ ಅಂದಿನ ಆಶಾಂಕುರ ಚಿಗುರಿ, ಚೆಲುವಾಗಿ ಹೂ ಬಿಟ್ಟಿದ್ದು ಅವರು ಅಮರವಾದ ಮೇಲೆ, ಅದನ್ನು ಮಾಲೆ ಕಟ್ಟಿ ಅರ್ಪಿಸಬಂದವರು ಗೆಳೆಯ ಶ್ರೀ ತಾ.ರಾ. ನಾಗರಾಜ್ ಮತ್ತು ಶ್ರೀಮತಿ ಶಕುಂತಲ ನಾಗರಾಜ್ ಇವರು. ಇವರಿಗೆ ನನ್ನ ಹೃತ್ಪೂರ್ವಕ ವಂದನೆಗಳು.

**ಶಿವಮೊಗ್ಗ ೧೫-೮-೧೯೬೪** **– ಸಾ.ಶಿ. ಮರುಳಯ್ಯ**

**ನಾವು ಭಾರತೀಯರು, ಭಾರತರಾಷ್ಟ್ರ ನಮ್ಮದು**

"ನಾವು ಹೇಗೊ ನಮ್ಮ ದೇಶ ಹಾಗೆ. ನಮ್ಮ ಚಿಂತನೆಗಳು, ನಮ್ಮ ನಡಾವಳಿಕೆಗಳು – ಇವೇ ಅದನ್ನು ರೂಪಿಸುವ ಶಕ್ತಿಗಳು. ಭಾರತಾಂಬೆಯ ಪುಣ್ಯಗರ್ಭದಲ್ಲಿ ಜನಿಸಿದ ನಾವೆಲ್ಲರೂ ಆಕೆಯ ಅಕ್ಕರೆಯ ಮಕ್ಕಳು. ಇಂದಿನ ಅಂದ ಚೆಂದದ ಕಂದಗಳೇ ನಾಳಿನ ಭಾರತದ ತಂದೆ ತಾಯಿಗಳು. ನಾವು ದೊಡ್ಡವರಾದರೆ ನಮ್ಮ ನಾಡೂ ದೊಡ್ಡದಾಗುತ್ತದೆ. ಹಾಗಲ್ಲದೆ ನಾವು ಸಣ್ಣತನದ, ಸಂಕುಚಿತ ಮನೋಭಾವದವರಾದರೆ ನಮ್ಮ ಭಾರತವೂ ಕನಿಷ್ಠ ರಾಷ್ಟ್ರವೆನಿಸುತ್ತದೆ.

ಸ್ವಾತಂತ್ರ್ಯದ ಪ್ರಥಮ ವಾರ್ಷಿಕ ದಿನಾಚರಣೆಯ ಸಂದರ್ಭದಲ್ಲಿ ನಾಯಕಮಣಿ ನೆಹರೂರವರು ಆಡಿದ ಮಾತುಗಳಿವು. ಈಗ ಅವರಾಡಿದ ಮಾತುಗಳನ್ನು ಅರಗಿಸಿಕೊಳ್ಳಲು ನಮಗೆ ಶಕ್ತಿ ಬೇಕು ! ವ್ಯಕ್ತಿ ಸುಧಾರಣೆ ಮೊದಲು ಆಗಬೇಕು ಎಂಬುದೇ ಅವರ ಇಚ್ಛೆ. ವ್ಯಕ್ತಿಯಲ್ಲಿ ದೊಡ್ಡತನ ಬೆಳೆದರೆ ದೇಶವೂ ಉನ್ನತಿಗೇರುತ್ತದೆ, ಸರ್ವತೋಮುಖ ಪ್ರಗತಿಯನ್ನು ಪಡೆಯುತ್ತದೆ ಎಂಬುದೇ ಅವರ ಅಭಿಪ್ರಾಯ.

ಒಂದು ದೇಶದ ಉದ್ಧಾರವಾಗಲೀ, ಅಥವಾ ಅವನತಿಯಾಗಲೀ ಆ ದೇಶದ ಜನತೆಯನ್ನು ಅವಲಂಬಿಸಿರುತ್ತದೆ. ಯಾರಿಗೇ ಅಗಲಿ ರಾಷ್ಟ್ರಕ್ಕಾಗಿ ತಾನೇ ಹೊರತು ತನಗಾಗಿ ರಾಷ್ಟ್ರ ಎಂಬ ದುರ್ಬುದ್ಧಿ ಬರಬಾರದು. ರಾಷ್ಟ್ರದ ಅಭ್ಯುದಯ ಕೇವಲ ಆಳುವವರ ಕೈಯಲಿಲ್ಲ. ನಮ್ಮೆಲ್ಲರ ಮೇಲೂ ಬಿದ್ದ ಭಾರ ಎಂದು ತಿಳಿಯಬೇಕು."ಇದು ನನ್ನ ದೇಶ, ನನ್ನ ನೆಲ, ಇದರ ಆಗುಹೋಗುಗಳಲ್ಲಿ ನನಗೂ ಪಾಲಿದೆ. ನಾನೊಬ್ಬ ಐಶ್ವರ್ಯವಂತನಾದರೆ, ಬುದ್ಧಿವಂತನಾದರೆ ಸಾಲದು. ನನ್ನ ರಾಷ್ಟ್ರ ಸಂಪದ್ಭರಿತವಾಗಬೇಕು. ಇಲ್ಲವೇ ಆಗುವಂತೆ ಮಾಡಬೇಕು. ಇಲ್ಲದಿದ್ದರೆ ಈ ಪ್ರಗತಿಪರ ವಿಶ್ವದಲ್ಲಿ ನಮಗಾವ ನೆಲೆಯೂ ಸಿಕ್ಕುವುದಿಲ್ಲ. ಏನೇ ಆಗಲಿ, ಪ್ರಪಂಚದ ಇತರ ರಾಷ್ಟ್ರಗಳಂತೆ ನನ್ನ ನಾಡನ್ನು ಗಣ್ಯವನ್ನಾಗಿ ಮಾಡಬೇಕು" ಎಂಬ ಸದ್ಭಾವನೆ ಬೆಳೆಯಬೇಕು. ಧನಿಕ–ದರಿದ್ರ ಎಂಬ ಭೇದಭಾವನೆ ದೂರವಾಗಬೇಕು. 'ಏಷ್ಟಾದರೂ ಸರಿ ಹೇಗಾದರೂ ಸರಿ, ಊರು ಸತ್ತರೇನು, ದೇಶ ಹಾಳಾದರೇನು, ನಾನೊಬ್ಬನು ದೊಡ್ಡವನಾದರೆ ಸಾಕು, ಐಶ್ವರ್ಯವಂತನಾದರೆ ಸಾಕು ಎಂಬ ಸ್ವಾರ್ಥ ಮನೋಭಾವ, ತನ್ನೊಬ್ಬನ ಸುಖಕ್ಕಾಗಿ ದೇಶವನ್ನೇ ಹಾಳುಮಾಡಲಿಚ್ಛಿಸುವ ದುಷ್ಟಬುದ್ಧಿ ಮೊದಲು ತೊಲಗಬೇಕು. ಆಗಲೇ ಭರತಖಂಡದ ಭಾಗ್ಯೋದಯ ! ಆಗಲೇ ನಾವು ಸ್ವಾತಂತ್ರ್ಯ ಪಡೆದುದರ ಸತ್ಫಲವನ್ನು ಕಾಣುವುದು.

"ನಾವು ದೊಡ್ಡ ರಾಷ್ಟ್ರದವರು ! ಆದರೆ ಆಕಾರದಲ್ಲಿ ದೊಡ್ಡವರಾದಾಕ್ಷಣಕ್ಕೆ ನಮಗೆ ದೊಡ್ಡತನ ಬರುವುದಿಲ್ಲ. ನಾವು ಬೌದ್ಧಿಕವಾಗಿ ದೊಡ್ಡವರಾಗಬೇಕು; ಮಾನಸಿಕವಾಗಿ ದೊಡ್ಡವರಾಗಬೇಕು; ಸಹನೆ, ಸೌಹಾರ್ದಗಳಲ್ಲಿ ದೊಡ್ಡವರಾಗಬೆಕು; ನಮ್ಮ ಆಚರಣೆಯಲ್ಲಿ ದೊಡ್ಡವರಾಗಬೇಕು"

ಪ್ರತಿನಿಧಿ ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ನೆಹರು ಹಾಗೆ ಹೇಳಿದರು. ಈ ಪುರುಷ ಪುಂಗವನ, ಈ ಮುತ್ತಿನಂತಾ ಮಾತುಗಳು ಸವೆಯುವುದಿಲ್ಲ. ಆತನಿಲ್ಲದ ಈವೇಳೆಯಲ್ಲಿ ಅವುಗಳನ್ನು ವ್ಯರ್ಥಮಾಡಿ ಆತನಿಗೆ ಅಪಚಾರ ಮಾಡಬಾರದು. ಎಂದೆಂದಿಗೂ ಆತನ ಮಾತುಗಳು ಆದರ್ಶಮಯವಾಗಿ ನಮ್ಮ ಕಣ್ಣೆದುರಿನಲ್ಲಿ ನಿಂತಿರಲಿ !

ಈ ಅಭಿಮಾನವನ್ನೇ ರಾಷ್ಟ್ರೀಯ ಭಾವನೆ ಎನ್ನುವುದು. ಆದರೆ ಈ ಭಾವನೆ ನಮ್ಮಲ್ಲಿ ಅಂದರೆ ಭಾರತೀಯರಲ್ಲಿ ಏಕೋ, ಏನೋ, ಬಹಳ ವರ್ಷಗಳವರೆಗೆ ಮೂಡಿಯೇ ಇರಲಿಲ್ಲ. ಇದು ಸ್ವಲ್ಪ ಮಟ್ಟಿಗೆ ಜಾಗ್ರತವಾದದ್ದು ಹತ್ತೊಂಬತ್ತನೆಯ ಶತಮಾನದ ಕಡೆಯ ಭಾಗದಲ್ಲಿ ಎನ್ನಬಹುದು. ಅದಕ್ಕಿಂತ ಹಿಂದೆ ಎಷ್ಟೋ ಶತಮಾನಗಳು ಉರುಳಿದ್ದರೂ, ನಮ್ಮವರಲ್ಲಿ "ನಾವು ಭಾರತೀಯರು ಭಾರತ ರಾಷ್ಟ್ರ ನಮ್ಮದು" ಎಂಬ ರಾಷ್ಟ್ರೀಯ ಮನೋಭಾವ ಮೂಡಿಯೇ ಇರಲಿಲ್ಲ. ಇದಕ್ಕೆ ಪ್ರಬಲವಾದ ಕಾರಣ ನಮ್ಮಲ್ಲಿದ್ದ ಅನೈಕಮತ್ಯ, ದೇಷ, ಅಸೂಯೆ, ನಮ್ಮವರೆಲ್ಲರೂ ಪ್ರತ್ಯೇಕ ಪಂಗಡಿಗರಾಗಿ – ನಾನು ಮೈಸೂರಿನವನು – ನಾನು ಬಂಗಾಳಿ – ನಾನು ಮದರಾಸಿ – ನಾನು ಪಂಜಾಬಿ ಎಂದು ಬಾಳಿದರೇ ವಿನಹ ನಾವೆಲ್ಲರೂ ಅಣ್ಣ ತಮ್ಮಂದಿರು, ನಮ್ಮ ಜನ್ಮಭೂಮಿ ಭಾರತ, ನಾವು ಭಾರತೀಯರು ಎಂದು ಬದುಕಲಿಲ್ಲ. ದಿನಬೆಳಗಾದರೆ ಒಬ್ಬರಿಗೊಬ್ಬರಿಗೆ ಕಚ್ಚಾಟ, ಬಡಿದಾಟ, ಯಾವಾಗಲೂ ಯುದ್ಧ. ಹೀಗಾಗಿ ನಮ್ಮಲ್ಲಿ ಒಗ್ಗಟ್ಟಿಲ್ಲದೆ, ದೇಶ ಹಾಳಾಗಿ ಪರಕೀಯರ ಕೈಗೆ ಸೇರುವಂತಾಯಿತು.

ನಮ್ಮಲ್ಲಿ ರಾಷ್ಟ್ರೀಯ ಭಾವನೆ ಮೂಡದಿರುವುದಕ್ಕೆ ಮತ್ತೊಂದು ಕಾರಣ ನಾವು ಸದಾ ಗುಲಾಮರಾದದ್ದು. ನಮ್ಮ ಭರತಖಂಡದ ಮೇಲೆ ಹಿಂದಿನಿಂದಲೂ ವಿದೇಶಿಯರ ದಾಳಿ ನಡೆದಿದೆ. ಇಂದಿಗೂ ನಡೆಯುತ್ತಿದೆ. ಈಗ ಚೀಣಿಯರು ನಮ್ಮ ಮೇಲೆ ದುರಾಕ್ರಮಣ ಮಾಡಲು ಬರುತ್ತಿಲ್ಲವೇ ಹಾಗೆ ಮೊಗಲರು, ಪಠಾಣರು, ಇಂಗ್ಲಿಷರು, ಫ್ರೆಂಚರು, ಡಚ್ಚರು, ಪೋಚುಗೀಸರು ಹೀಗೆ ಒಬ್ಬರಲ್ಲ ಇಬ್ಬರಲ್ಲ, ಹಲವಾರು ಮಂದಿ ನಮ್ಮ ದೇಶದ ಮೇಲೆ ನುಗ್ಗಿ ಬಂದು ಸಂಪತ್ತನ್ನೆಲ್ಲಾ ಕೊಳ್ಳೆಹೊಡೆದುಕೊಂಡು ಹೋಗಿದ್ದಾರೆ. ಇದರ ಪರಿಣಾಮವಾಗಿ ನಮ್ಮ ಪೂರ್ವಿಕರು ದಾಳಿ ಬಂದವರ ತೊತ್ತುಗಳಾದರೇ ವಿನಹ ತಮ್ಮನ್ನು ತಾವು ಆಳಿಕೊಳ್ಳುವ ಚೈತನ್ಯವನ್ನಾಗಲೀ, ಸಮಯವನ್ನಾಗಲೀ, ಸಹಕಾರವನ್ನಾಗಲೀ ಪಡೆಯಲೇ ಇಲ್ಲ. ಹೀಗಾಗಿ ನಮ್ಮವರಲ್ಲಿ ಈ ರಾಷ್ಟ್ರೀಯ ಭಾವನೆ ಮೂಡಲು ಅವಕಾಶವಾಗಲಿಲ್ಲ.

ಆದರೆ ಕತ್ತಲೆಯಲ್ಲಿನ ರಾತ್ರಿಯಲ್ಲಿ ಮಿನುಗುವ ಮಿಂಚುಹುಳುಗಳಂತೆ ಅಲ್ಲೊಬ್ಬ ಇಲ್ಲೊಬ್ಬ ಸ್ವಾತಂತ್ರ್ಯಪ್ರೇಮಿ ಹುಟ್ಟಿಕೊಂಡು ಜನತೆಯ ಕಣ್ಣು ತೆರೆಸಿರುವುದನ್ನು ಕಾಣಬಹುದು. ನಮ್ಮ ಭರತಖಂಡದ ಇತಿಹಾಸ ಪುಸ್ತಕದ ಹಾಳೆಗಳನ್ನು ತೆರೆದರೆ ಮೊಗಲರೊಡನೆ ಹೋರಾಡಿದ ರಾಣಾ ಪ್ರತಾಪಸಿಂಹ, ಛತ್ರಪತಿ ಶಿವಾಜಿ, ಇಂಗ್ಲಿಷರ ವಿರುದ್ಧ ಸೆಣಸಾಡಿದ ರಾಜಾರಾಮ ಮೋಹನರಾಯ, ಕಿತ್ತೂರರಾಣಿ ಚೆನ್ನಮ್ಮ, ಝಾನ್ಸಿರಾಣಿ ಲಕ್ಷ್ಮಿಬಾಯಿ ಈ ಕೆಲವರು ಬೆರಳಲ್ಲಿ ಎಣಿಸುವಷ್ಟು ಜನ ನಮಗೆ ಸಿಕ್ಕುತ್ತಾರೆ. ಆದರೆ ಬಹು ಪ್ರಮಾಣದಲ್ಲಿ ನಮಗೆ ಇಂತಹ ಸ್ವಾತಂತ್ರ್ಯ ವೀರರು ಸಿಕ್ಕುವುದು ೧೯ನೆಯ ಶತಮಾನದಲ್ಲಿ.

ಕ್ರಿ.ಶ. ೧೯ನೆಯ ಶತಮಾನದ ಕಡೆಯ ಭಾಗ ಮತ್ತು ೨೦ನೆಯ ಶತಮಾನದ ಮೊದಲನೆಯ ಭಾಗ ಭಾರತದ ಚರಿತ್ರೆಯಲ್ಲಿ ಬಂಗಾರದ ಅಕ್ಷರಗಳಲ್ಲಿ ಬರೆದಿಡಬಹುದಾದ ಕಾಲ. ಏಕೆಂದರೆ ಈ ಅವಧಿಯಲ್ಲಿ ಸುಮಾರು ನೂರಾರು ಜನ ಲೋಕವೀರರನ್ನೂ, ತ್ಯಾಗಮಹಿಮರನ್ನೂ, ಮಹರ್ಷಿಗಳನ್ನೂ, ಮಹಾತ್ಮರನ್ನೂ ಕಾಣುತ್ತೇವೆ. ಹಿಂದೆಂದೂ ಇಂತಹ ಕೂಟ ಭರತಖಂಡದಲ್ಲಿ ಆಗಿರಲಿಲ್ಲ, ಮುಂದೆ ಆಗಬಹುದೆಂಬ ಭರವಸೆಯೂ ಇಲ್ಲ.

ದೇವರನ್ನು ಕಂಡು ಮಾತನಾಡಿದ ಮಹಾಯೋಗಿಗಳಿದ್ದರು. ಅವರೇ ರಮಣಮಹರ್ಷಿಗಳು, ಪೂರ್ಣಯೋಗಿ ಅರವಿಂದ ಘೋಷರು, ಶ್ರೀ ರಾಮಕೃಷ್ಣ ಪರಮಹಂಸರು, ಅವರ ಪಟ್ಟದ ಶಿಷ್ಯರೂ, ವಿಶ್ವವಿಖ್ಯಾತರೂ ಆದ ಶ್ರೀ ಸ್ವಾಮಿ ವಿವೇಕಾನಂದರು. ಈ ಅಧ್ಯಾತ್ಮ ಪುರುಷರೊಡನೆ ಲೌಕಿಕವನ್ನು ಬೆರೆಸಿ ಬಾಳಿದ ಮಹಾಪುರುಷರು ಕೆಲವರು – ಪೂಜ್ಯ ಗಾಂಧೀಜಿ, ಸಾವರ್ಕರ್, ರವೀಂದ್ರನಾಥ ಠಾಗೋರ್, ವಿನೋಬಾಭಾವೆ ಮುಂತಾದವರು.

ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪೂಜ್ಯ ಬಾಪೂಜಿಯವರ ಕೂಡ ಧುಮುಕಿದ ದೇಶಪ್ರೇಮಿಗಳು ಸಾವಿರಾರು ಮಂದಿ. ಲೋಕಮಾನ್ಯ ಬಾಲಗಂಗಾಧರ ತಿಲಕ್, ಲಾಲಾಲಜಪತರಾಯ್, ಪುರುಷಸಿಂಹ ಸುಭಾಸ್ ಚಂದ್ರಬೋಸ್, ಗೋಪಾಲಕೃಷ್ಣ ಗೋಖಲೆ, ಬಾಬು ರಾಜೇಂದ್ರ ಪ್ರಸಾದ್, ಪಂಡಿತ ಮೋತಿಲಾಲ್ ನೆಹರು, ಅವರ ಸತ್ಪುತ್ರರಾದ ಭಾರತರತ್ನ ಪಂಡಿತ್ ಜವಹರಲಾಲ್ ನೆಹರು, ಭಾರತದ ಕೋಗಿಲೆ ಸರೋಜಿನಿ ನಾಯಿಡು, ಉಕ್ಕಿನ ಮನುಷ್ಯ ಸರ್ದಾರ್ ವಲ್ಲಭಬಾಯಿ ಪಟೇಲ್, ಜಯಪ್ರಕಾಶ ನಾರಾಯಣ್ ಮೊದಲಾದವರು.

ಈ ಪುಣ್ಯ ಪುರುಷರ ತ್ಯಾಗ, ಸೇವೆ, ಬಲಿದಾನ ಮೊದಲಾದವುಗಳ ಪರಿಣಾಮವಾಗಿ ನಾವು ಇಂದು ಸ್ವಾತಂತ್ರ್ಯವನ್ನು ಕಂಡಿದ್ದೇವೆ. ಅನೇಕ ಮಹನೀಯರ ಅಸ್ಥಿಪಂಜರದ ಮೇಲೆ ಭವ್ಯ ಭಾರತದ ನಿರ್ಮಾಣ ಮಾಡಿದ್ದೇವೆ. ಸ್ವತಂತ್ರ ಭಾರತದ ಹಿನ್ನೆಲೆಯಲ್ಲಿ ಅನೇಕ ಮಂದಿ ತ್ಯಾಗವೀರರ ರಕ್ತದ ಕಾಲುವೆ, ಬೆವರಿನ ಹಳ್ಳ ಹರಿದಿದೆ ಎನ್ನುವುದನ್ನು ಮರೆಯಬಾರದು.

**ನಾವು ಭಾರತರು !**

ಅಂದರೆ ಭಾ = ಜ್ಯೋತಿಯಲ್ಲಿ, ರತ= ಅನುರಕ್ತರಾದವರು. ಕೀರ್ತಿಕಾಮಿಗಳಲ್ಲ. ನಾವು ಜ್ಯೋತಿಪ್ರೇಮಿಗಳು. ಜ್ಯೋತಿ ಜ್ಞಾನದ ಸಂಕೇತ (Symbol of Knowledge) ಅಂತಹ ಜ್ಞಾನಾಕಾಂಕ್ಷಿಗಳು ನಾವು. ಅಜ್ಞಾನದ ಕತ್ತಲು, ಕಾಮದ ಕೆಸರು, ಸ್ವಾರ್ಥದ ಸೊಗಡು, ಜಾತಿಯ ಜಾಡ್ಯ ಇವೆಲ್ಲಾ ನಮಗೆ ಬಹು ದೂರ. ಇವು ಸುಳಿಯುವುದಕ್ಕೂ ನಾವು ಎಡೆಗೊಡಬಾರದು. ಎಂದಿನವರೆಗೆ ಇದನ್ನು ನಾವು ಮರೆತಿರುತ್ತೇವೆಯೋ ಅಲ್ಲಿನವರೆಗೆ ನಮ್ಮ ಅಭ್ಯುದಯ ಸಾಧ್ಯವಿಲ್ಲ.

ನಾವು ಭಾರತರು !

ಇಂತಹ ಧರ್ಮ ಜಾಗೃತಿಯನ್ನುಂಟು ಮಾಡಿ, ನಮ್ಮಲ್ಲಿ ರಾಷ್ಟ್ರೀಯ ಭಾವನೆಯನ್ನು ಬೆಳಸಲು ಈ ಮಹನೀಯರ ಜೀವನ ಚರಿತ್ರೆಗಳು ಅವಶ್ಯಕ. ಈ ಪುಣ್ಯಜೀವಿಗಳ ಬಾಳೇ ಒಂದೊಂದು ಮಹಾಕಾವ್ಯ. ಅದರ ಅಭ್ಯಾಸದಿಂದ ಸ್ಫೂರ್ತಿ ದೊರೆಯುತ್ತದೆ, ಚೈತನ್ಯ ತುಂಬುತ್ತದೆ.

ಅವರ ಆದರ್ಶ ನಮಗೆ ದಾರಿ ದೀಪ !

**ಕಾಶ್ಮೀರಿಗಳು**

ಕಾಶ್ಮೀರ ಪ್ರಪಂಚದಲ್ಲೆಲ್ಲಾ ಅತ್ಯಂತ ಪ್ರಸಿದ್ಧವಾದ ದೇಶ. ಪ್ರಕೃತಿ ಸೌಂದರ್ಯದ ಬೀಡು. ಎತ್ತ ನೋಡಿದರೂ ಅಚ್ಚ ಹಸುರಿನ ಮರಗಳ ಪಚೆ ಬಯಲು, ತೋಪು, ಬಣ್ಣಬಣ್ಣದ ಹೂವಿನ ಉದ್ಯಾನವನ. ಭಾರತದ ಉತ್ತರದಲ್ಲಿ ಹಿಮಾಲಯದ ನೆತ್ತಿಯ ಮೇಲೆ ಕಾಶ್ಮೀರ ಶೋಭಿಸುತ್ತದೆ.

ನೆಹರೂ ವಂಶೀಕರು ಈ ಕಾಶ್ಮೀರದವರು. ಕಾಶ್ಮೀಈ ಬ್ರಾಹ್ಮಣರು ಬ್ರಾಹ್ಮಣರಾದರೂ ಮಾಂಸ ತಿನ್ನುವುದು ಇವರಲ್ಲಿ ಪದ್ಧತಿ. ಇವರದು ವಿದ್ಯಾವಂತ ಮನೆತನ. ಸಾಧಾರಣವಾಗಿ ಅವರ ವಂಶಿಕರೆಲ್ಲರೂ ಸಂಸ್ಕೃತ ಮತ್ತು ಪಾರ್ಸಿ ಭಾಷೆಗಳಲ್ಲಿ ಹೆಚ್ಚಿನ ಪಾಂಡಿತ್ಯವನ್ನು ಪಡೆದಿರುತ್ತಿದ್ದರು. ಆದ್ದರಿಂದಲೇ ಈ ವಂಶದವರಿಗೆ 'ಪಂಡಿತ್' ಎಂದು ಕರೆಯುವುದು  ವಾಡಿಕೆಯಾಯಿತು. ಆದರೂ ಅವರಲ್ಲಿ ವಿದ್ಯಾವಂತರೇ ಹೆಚ್ಚು.

ಒಮ್ಮೆ ಮೊಗಲ್ ಬಾದಷಹನೊಬ್ಬನು ಕಾಶ್ಮೀರಕ್ಕೆ ಅಡ್ಡಾಡಲು ಹೋಗಿದ್ದನಂತೆ. ಆಗ ಅಲ್ಲಿದ್ದ ಒಬ್ಬ ಸಂಸ್ಕೃತ, ಫಾರಸೀ ಭಾಷೆಗಳಲ್ಲಿ ಹೆಚ್ಚು ಜ್ಞಾನಿಯಾದ ಬ್ರಾಹ್ಮಣನೊಬ್ಬನನ್ನು ನೋಡಿದನಂತೆ. ಬಾದಷಹನಿಗೆ ಮೆಚ್ಚಿಗೆಯಾಗಿ ಅವನನ್ನು ಜೊತೆಯಲ್ಲಿ ಕರೆದುಕೊಂಡು ಬಂದು, ತನ್ನ ಆಸ್ಥಾನ ವಿದ್ವಾಂಸನನ್ನಾಗಿ ಮಾಡಿಕೊಂಡನಂತೆ. ಆ ಬ್ರಾಹ್ಮಣ ಪಂಡಿತನಿಗೆ ಬಾದಷಹನಿಂದ ಹಲವು ಜಹಗೀರಿಗಳು ದೊರೆತುವಂತೆ. ಈತನ ಮನೆ 'ನಹರ್' ಅಂದರೆ ಕಾಲುವೆಯ ಪಕ್ಕದಲ್ಲಿತ್ತಂತೆ. ಆದ್ದರಿಂದ ಇವರಿಗೆ ಕಾಲುವೆಯ ಮನೆಯವರು 'ನಹರ್' ಅಥವಾ 'ನೆಹರು' ಎಂಬ ಹೆಸರೇ ರೂಢಿಯಾಯಿತಂತೆ !

ಅಂದಿನಿಂದ ಇವರ ವಂಶದಲ್ಲಿ ಯಾರೇ ಹುಟ್ಟಲಿ, ಅವರ ಹೆಸರಿನ ಹಿಂದೆ 'ಪಂಡಿತ್' ಎಂದೂ, ಹೆಸರಿನ ಮುಂದೆ ನೆಹರು ಎಂದೂ ಪದಗಳು ಅಂಟಿಕೊಂಡೇ ಬಂದವು.

ಭಾರತದಲ್ಲಿ ಮೊಗಲರ ಆಳ್ವಿಕೆ ಆದಮೇಲೆ ಇಂಗ್ಲಿಷರು ಬಂದರು. ಮೊಗಲರಿಂದ ಬಂದ ಜಹಗೀರಿಗಳೂ ನೆಹರು ವಂಶದವರಿಗೆ ಇಲ್ಲವಾದವು. ಆಗ ಇವರ ವಂಶದ ಪೂರ್ವಿಕ, ಇಂಗ್ಲಿಷರ "ಈಸ್ಟ್ ಇಂಡಿಯಾ ಕಂಪನಿ"ಯ ಪರವಾಗಿ ಪುಟ್ಟ ವಕೀಲನಾಗಿ ಕೆಲಸ ಮಾಡುತ್ತಿದ್ದ. ಈತನ ಮಗ 'ಪಂಡಿತ ಗಂಗಾಧರ ನೆಹರು' ಈತನೂ ದಿಲ್ಲಿಯಲ್ಲಿ ಅಧಿಕಾರಿಯಾಗಿದ್ದ. ಆದರೆ ಅಲ್ಲಿ ನಡೆದ ಗಲಭೆಯ ಪರಿಣಾಮವಾಗಿ 'ಗಂಗಾಧರ ನೆಹರು' ದಿಲ್ಲಿಯನ್ನು ಬಿಟ್ಟು ತನ್ನ ಹೆಂಡತಿ ಮಕ್ಕಳೊಡನೆ ಬಂದು ಆಗ್ರಾ ಪಟ್ಟಣದಲ್ಲಿ ನೆಲೆಸಿದ.

ಪಂಡಿತ ಗಂಗಾಧರ ನೆಹರೂರವರಿಗೆ ಮೂವರು ಗಂಡು ಮಕ್ಕಳು. ಈತ ತೀರಿಕೊಂಡ ಮೇಲೆ ಈತನ ಹಿರಿಯ ಮಗ 'ಪಂಡಿತ್ ವಂಶೀಧರ ನೆಹರು' ನೌಕರಿಯಲ್ಲಿದ್ದುಕೊಂಡು ತನ್ನ ಮನೆಯವರನ್ನೆಲ್ಲಾ ಕಾಪಾಡುತ್ತಿದ್ದ. ಎರಡನೆಯ ಮಗನಾದ 'ಪಂಡಿತ ನಂದಲಾಲ್ ನೆಹರು' ಸಹ ಆಗ್ರಾದಲ್ಲಿ ವಕೀಲನಾಗಿದ್ದ. ಕೆಲವು ವರ್ಷಗಳ ನಂತರ ಹೈಕೋರ್ಟನ್ನು ಆಗ್ರಾದಿಂದ ಅಲಹಾಬಾದಿಗೆ ವರ್ಗಾಯಿಸಿದ್ದರಿಂದ ನಂದಲಾಲ್ ಸಂಸಾರಸಮೇತನಾಗಿ ಅಲಹಾಬಾದಿಗೆ ಬಂದು ನೆಲೆಸಿದ.

ಗಂಗಾಧರ ನೆಹರೂರವರ ಕಿರಿಯ ಮಗನೇ 'ಪಂಡಿತ ಮೋತಿಲಾಲ್ ನೆಹರು'. ಇವರು ೧೮೭೧ರಲ್ಲಿ ಹುಟ್ಟಿದರು. ಇವರಿನ್ನೂ ತಾಯಿಯ ಗರ್ಭದಲ್ಲಿದ್ದಾಗಲೇ ಇವರ ತಂದೆ ತೀರಿಕೊಂಡಿದ್ದರು. ನಂದಲಾಲರ ಪೋಷಣೆಯಲ್ಲಿಯೇ ಬೆಳೆದರು. ಇವರ ವಿದ್ಯಾಭ್ಯಾಸ ಬಿ.ಎ.ವರೆಗೂ ಹಾಗೂ ಹೀಗೂ ನಡೆಯಿತು. ಅಲಹಾಬಾದಿನಲ್ಲೇ ಒಂದು ಕಾಲೇಜಿನಲ್ಲಿ ಓದುತ್ತಿದ್ದರು. ಮೋತಿಲಾಲರು ಚಿಕ್ಕಂದಿನಲ್ಲಿ ಮಹಾ ತುಂಟರು. ಆದರೂ ಮಹಾ ಬುದ್ಧಿಶಾಲಿ. ಇವರು ಪರೀಕ್ಷೆಗೆ ಕೂಡದಿದ್ದುದರಿಂದ ಬಿ.ಎ. ಪಾಸು ಮಾಡಲಾಗಲಿಲ್ಲ. ಅದನ್ನು ಮತ್ತೆ ಕಟ್ಟದೆ 'ಲಾ' ಓದಿದರು. ೧೮೮೨ರಲ್ಲಿ ಸ್ವರೂಪರಾಣಿ ಎಂಬುವರನ್ನು ಲಗ್ನವಾದರು. ೧೮೮೩ರಲ್ಲಿ ನಾಗಪುರದಲ್ಲಿ ವಕೀಲರಾದರು. ಅಷ್ಟರಲ್ಲಿ

ನಂದಲಾಲರೂ ತೀರಿಕೊಂಡಿದ್ದರಿಂದ ಮೋತಿಲಾಲರೇ ಸಂಸಾರದ ಹೊರೆ ಹೊರಬೇಕಾಗಿ ಬಂತು. ೧೮೮೬ರಲ್ಲಿ ಅಲಹಾಬಾದಿಗೆ ಬಂದರು.

ಮೋತಿಲಾಲ್ ಒಳ್ಳೆ ಎತ್ತರದ ಆಳು. ತುಂಬಿದ ಮೈಕಟ್ಟು ಅವರದು. ಅವರ ನಡಿಗೆಯಲ್ಲಿ ರಾಜಠೀವಿ ತುಂಬಿತ್ತು. ಕುಸ್ತಿ ಎಂದರೆ ಇವರಿಗೆ ಪಂಚಪ್ರಾಣ. ಅವರ ಮಾತಿನಲ್ಲಿ ಸಿಂಹಘರ್ಜನೆ ಅಡಗಿತ್ತು. ಒಳ್ಳೆಯ ಮಾತಾಳಿಗಳು. ವಾದದಲ್ಲಿ ಯಾರೂ ಇವರನ್ನು ಗೆಲ್ಲಲಾಗುತ್ತಿರಲಿಲ್ಲ. ಇದರಿಂದಾಗಿ ಬಹುಬೇಗ ಪ್ರಸಿದ್ಧರಾದರು. ವಕೀಲಿ ವೃತ್ತಿ ಬಹಳ ಚೆನ್ನಾಗಿ ನಡೆದು ಕೆಲವೇ ವರ್ಷಗಳಲ್ಲಿ ಲಕ್ಷಾಂತರ ರೂಪಾಯಿಗಳನ್ನು ಸಂಪಾದಿಸುವಂತಾದರು. ಇಂದ್ರನ ಭೋಗ, ಕುಬೇರನ ಸಂಪತ್ತು ಇವರಲ್ಲಿ ಮೆರೆಯುತ್ತಿತ್ತು.

ಮೋತಿಲಾಲರು ಕಾಂಗ್ರೆಸ್ಸಿಗೆ ಕಾಲಿಟ್ಟದ್ದು ೧೮೮೮ರಲ್ಲಿ. ಆ ವರ್ಷ ಕಾಂಗ್ರೆಸ್‌ನ ನಾಲ್ಕನೇ ಅಧಿವೇಶನ ಅಲಹಾಬಾದಿನಲ್ಲೇ ನಡೆಯಿತು. ಅಂದಿನಿಂದಲೇ ಮೋತಿಲಾಲರು ಕಾಂಗ್ರೆಸ್ಸಿಗರಾದರು. ಮಹಾತ್ಮ ಗಾಂಧಿಯವರ ಪ್ರಭಾವಕ್ಕೆ ಸಿಕ್ಕಿ ಇವರ ಜೀವನ ಮಾರ್ಗವೇ ಬದಲಾಯಿತು. ದೇಶಪ್ರೇಮ ಆಗ ಅವರಲ್ಲಿ ಮೊಳೆಯಿತು. 'ಲೀಡರ್' ಎಂಬ ಪತ್ರಿಕೆಯ ಸಂಪಾದಕರಾಗಿ ದೇಶದ ಬೇಡಿಕೆಗಳನ್ನು ಬ್ರಿಟಿಷರ ಮುಂದಿಡತೊಡಗಿದರು.

ಅವರಲ್ಲಿದ್ದ ಶ್ರೀಮದ್ ಗಾಂಭೀರ್ಯ ಕ್ರಮೇಣ ಕಡಿಮೆಯಾಯಿತು. ಆಂಗ್ಲ ರೀತಿಯಲ್ಲಿ ಅತ್ಯಂತ ಅಟ್ಟಹಾಸದಿಂದ ಮೆರೆಯುತ್ತಿದ್ದ ಅವರ ಜೀವನ ಸರಳವಾಗುತ್ತಾ ಬಂತು. ಕ್ರಮೇಣ ಅವರಲ್ಲಿ 'ನಾನು ಭಾರತೀಯ' ಎಂಬ ರಾಷ್ಟ್ರೀಯ ಭಾವನೆ ಜಾಗೃತವಾಗತೊಡಗಿತು. ಕಾಂಗ್ರೆಸ್ಸಿನ ಸದಸ್ಯರಾಗಿ, ಅಧಿವೇಶನದ ಅಧ್ಯಕ್ಷರಾಗಿ, ಗಾಂಧೀಜಿಯವರ ಬಲಭುಜವಾಗಿ ದುಡಿದರು. ತಮ್ಮ ಮಗನೊಂದಿಗೆ, ಮನೆಯವರೊಂದಿಗೆ ಸಮಸ್ತವನ್ನೂ ದೇಶಕ್ಕಾಗಿ ಅರ್ಪಿಸಿ ತ್ಯಾಗಮೂರ್ತಿಗಳೆಂದು ಪ್ರಖ್ಯಾತರಾದರು. ಭಾರತ ಸ್ವಾತಂತ್ರ್ಯದ ಕನಸನ್ನು ಸದಾಕಾಲ ಕಾಣುತ್ತಿದ್ದರು ಮೋತಿಲಾಲ್.

"ನಾನು ರೋಗದೊಡನೆ ಹೋರಾಡುವೆ, ಮರಣದೊಡನೆ ಹೋರಾಡುವೆ, ದಾಸ್ಯರೂಪೀ ದಾನವರೊಡನೆಯೂ ಹೋರಾಡುವೆ. . . ಭಾರತಮಾತೆಯ ಬಿಡುಗಡೆಯ ಸನ್ಮಾನ ಸಮಾರಂಭದಲ್ಲಿ ನನಗೂ ಪಾಲು ದೊರೆಯಲಿ. ನನಗೆ ಮರಣ ಬಂದರೂ ಸ್ವತಂತ್ರ ಭಾರತದಲ್ಲಿಯೇ ಬರಲಿ". ಅವರು ಸಾಯುವ ವೇಳೆಯಲ್ಲಿ ಆಡಿದ ಮಾತುಗಳಿವು. ಇಂಥಹ ಉಜ್ವಲ ರಾಷ್ಟ್ರಪ್ರೇಮಿ ಸತ್ಪುತ್ರನೇ ಪಂಡಿತ್ ಜವಹರಲಾಲ್ ನೆಹರು.

**ಭಾರತದ ಭಾಗ್ಯೋದಯ**

೧೮೮೯ನೆಯ ನವೆಂಬರ್ ೧೪ನೆಯ ದಿನ ಭಾರತದ ಭಾಗ್ಯೋದಯದ ದಿನ. ವಿಶ್ವದ ಕಣ್ಮಣಿಯೊಬ್ಬನನ್ನು ಜಗತ್ತಿಗೆ ಕಾಣಿಕೆಯಾಗಿ ಕೊಟ್ಟ ಪುಣ್ಯ ದಿನ ಅದು. ಅಂದು ಅಲಹಾಬಾದಿನಲ್ಲಿ ಹೆಚ್ಚಿನ ಸಡಗರ. ಪಂಡಿತ ಮೋತಿಲಾಲ್ ಮತ್ತು ಸ್ವರೂಪರಾಣಿಯರಿಗೆ ಅಪರೂಪಕ್ಕೆ ಅಂದರೆ ಮದುವೆಯಾದ ಏಳು ವರ್ಷಗಳ ತರುವಾಯ ಒಂದು ಮಗು ಹುಟ್ಟಿದೆ. ಅದೂ ಗಂಡು ಮಗು ! ಕೇಳಬೇಕೆ ? ಎಲ್ಲರ ಬಾಯಲ್ಲೂ ಸಕ್ಕರೆ ತುಂಬಿದರು."ಜವಹರಲಾಲ್" "ಜವಹರಲಾಲ್" ಎಂಬ ಹೆಸರು ಎಲ್ಲರ ನಾಲಿಗೆಯ ಮೇಲೂ ನಲಿಯಿತು.

"ತಂದೆತಾಯಿಗಳು ಐಶ್ವರ್ಯವಂತರಾಗಿದ್ದು, ಒಬ್ಬನೇ ಮಗನಿದ್ದರೆ ಬಹಳಮಟ್ಟಿಗೆ ಆ ಮಗ ಕೆಟ್ಟುಹೋಗುತ್ತಾನೆ. ಅದರಲ್ಲೂ ನಮ್ಮ ಭಾರತದಲ್ಲಿ ಇದು ಇನ್ನೂ ಹೆಚ್ಚು. ಹತ್ತು, ಹನ್ನೊಂದು ವರ್ಷಗಳವರೆಗೂ ತನ್ನ ತಂದೆತಾಯಿಯರಿಗೆ ಒಬ್ಬನೇ ಮಗನಾದರಂತೂ ಮುಗಿದೇಹೋಯಿತು. ಅವರ ಪ್ರೀತಿ ಹೆಚ್ಚಾಗಿ ಅವರು ಬುದ್ಧಿವಂತನಾಗಿ ಬಾಳುವ ಭರವಸೆಯೇ ಇಲ್ಲವಾಗುತ್ತದೆ."

ಇದು ಜವಹರಲಾಲ್ ನೆಹರೂ ಅವರು ತಮ್ಮ ಆತ್ಮಕಥೆಯಲ್ಲಿ ಹೇಳಿರುವ ಮಾತು. ಆದರೆ ಈ ಮಾತು ಮಾತ್ರ ಜವಹರಲಾಲರಿಗೆ ಎಳ್ಳಷ್ಟೂ ಅನ್ವಯಿಸುವುದಿಲ್ಲ. ಆ ಮಹಾಪುರುಷನ ಜೀವನವನ್ನು ನೋಡಿದರೆ ತಂದೆಗೆ ತಕ್ಕ ಮಗನಾಗಿ, ತಂದೆಗಿಂತಲೂ ಕೀರ್ತಿಶಾಲಿಯಾಗಿ, ತನ್ನನ್ನು ಹಡೆದವರಿಗೂ, ಪಡೆದ ರಾಷ್ಟ್ರಕ್ಕೂ ಹೆಸರು ತಂದಿದ್ದಾರೆಂಬುದು ಗೊತ್ತಾಗುತ್ತದೆ. "ಬಾಳೆಗೊಂದು ಗೊನೆ, ಬಾಳಿಗೊಬ್ಬ ಮಗ"! ಅಂತಹ ಅಪರೂಪದ ಮಗ ಜವಾಹರ್."ಹತ್ತು ಕಟ್ಟುವ ಬಳಿ ಒಂದು ಮುತ್ತು ಕಟ್ಟು" ಎಂದು ಹೇಳುವ ಹಾಗೆ ಈತ ನಿಜಕ್ಕೂ ಒಂದು ಮುತ್ತು ! ಭಾರತರತ್ನ !! ಜಗತ್ತಿನ ಬೆಳಕು !!!

ಮಕ್ಕಳ ಬೆಳವಣಿಗೆಗೆ ಅವರ ಸುತ್ತಮುತ್ತಲ ವಾತಾವರಣ ಚೆನ್ನಾಗಿರಬೇಕು. ಹುಟ್ಟುತ್ತಲೇ ತಮ್ಮಲ್ಲಿರುವ ನೈಜಗುಣಗಳ ಮೇಲೆ ಅವರು ಬೆಳೆಯುವ ಪ್ರದೇಶದ ಪ್ರಭಾವ ಬಹಳ ಮಟ್ಟಿಗೆ ಕಾರಣವಾಗುತ್ತದೆ. ಜವಹರಲಾಲರು ಚಿಕ್ಕವರಿದ್ದಾಗ ಒಂದು ವಿಧವಾದ ಸುಂದರ ವಾತಾವರಣ ಅವರ ಸುತ್ತ ತುಂಬಿತ್ತು.

ಜವಾಹರ್ ಒಬ್ಬನೇ ಮಗನಾದರೂ ಒಂಟಿಯಾಗಿರುವಂತಿರಲಿಲ್ಲ. ಅವನ ಚಿಕ್ಕಪ್ಪಂದಿರ ಮಕ್ಕಳು, ಚಿಕ್ಕಮ್ಮ ಎಲ್ಲಾ ಇರುತ್ತಿದ್ದರು. ಆದರೂ ಅವರೆಲ್ಲಾ ಈತನಿಗಿಂತ ದೊಡ್ಡವರು. ಆದ್ದರಿಂದ ಈತ ಹೆಚ್ಚಾಗಿ ತಾನೊಬ್ಬನೇ ಆಟಪಾಠಗಳಲ್ಲಿ ಕಾಲಕಳೆಯುತ್ತಿದ್ದನು. ಈತನ ಚಿಕ್ಕಪ್ಪನ ಮಕ್ಕಳು ಆಗಾಗ ಭರತಖಂಡದ ಸ್ಥಿತಿಗತಿಗಳನ್ನು ಕುರಿತು ಮಾತನಾಡುತ್ತಿದ್ದರು. ಆಗ ಭಾರತದೇಶ ಇಂಗ್ಲಿಷರ ಅಧೀನದಲ್ಲಿದ್ದು ತುಂಬಾ ನಾಚಿಕೆಗೇಡಿನ ಸ್ಥಿತಿಯಲ್ಲಿತ್ತು. ರೈಲಿನಲ್ಲೂ, ಪಬ್ಲಿಕ್ ಪಾರ್ಕುಗಳಲ್ಲೂ ಕೆಂಪುಮೂತಿಯವರಿಗೆ ಸ್ಥಳಗಳು ಮೀಸಲಾಗಿರುತ್ತಿದ್ದವು. ಮೊದಲನೇ ತರಗತಿಯ ಡಬ್ಬಿಯಲ್ಲಿ ಕೂರಿಸುತ್ತಿರಲಿಲ್ಲ. ಆ ಪರಂಗಿಯವರ ಹತ್ತಿರ ನಾವಾರೂ ಸುಳಿಯುವಂತಿರಲಿಲ್ಲ. ಇದನ್ನು ಕಂಡು ಶಾಲಾ ಕಾಲೇಜುಗಳಲ್ಲಿ ಓದುತ್ತಿದ್ದ ಜವಾಹರ ಬಂಧುಗಳು ಇಂಗ್ಲಿಷ್ ಹುಡುಗರಿಗೆ ಆಗಾಗ ಕೀಟಲೆ ಮಾಡುತ್ತಿದ್ದರಂತೆ. ಇದನ್ನೆಲ್ಲಾ ಮನೆಯಲ್ಲಿ ಆಗಾಗ ಹೇಳುತ್ತಿದ್ದರು. ಪುಟ್ಟ ಬಾಲಕ ಜವಾಹರ್ ಕೇಳೀ ಕೇಳಿ ತನ್ನ ಮನಸ್ಸಿನಲ್ಲೇ ಆ ಕೆಂಪುಮೂತಿಯವರ ಬಗ್ಗೆ ವಿಶೇಷ ಕೋಪ ತಾಳುತ್ತಿದ್ದ. ಭಾರತೀಯರ ದುಸ್ಥಿತಿಯನ್ನು ನೆನೆದು ಅವರಿಗಾಗಿ ಮರುಗುತ್ತಿದ್ದ.

ಮದುವೆ ಮುಂಜಿಗಳೆಂದರೆ, ಹಬ್ಬ ಹರಿದಿನಗಳೆಂದರೆ ಜವಾಹರನಿಗೆ ಬಹಳ ಸಡಗರ. ಮದುವೆಯ ದಿಬ್ಬಣ ಹೋಗುವುದೆಂದರೆ ಬಹಳ ಇಷ್ಟ. ಏಕೆಂದರೆ ಅಲ್ಲಿ ಅವನ ವಯಸ್ಸಿನ ಹುಡುಗರು ಜೊತೆ ಸಿಕ್ಕುತ್ತಿದ್ದರು. ಸ್ವೇಚ್ಛೆಯಿಂದ ಕುಣಿದಾಡಬಹುದಾಗಿತ್ತು.

ಎಲ್ಲ ಹಬ್ಬಗಳಿಗಿಂತಲೂ ಆತನ ಹುಟ್ಟುಹಬ್ಬವೆಂದರೆ ಜವಾಹರನಿಗೆ ತುಂಬಾ ಪ್ರೀತಿ. ಪ್ರತಿವರ್ಷ ನವೆಂಬರ್ ೧೪ರಂದು ಬೆಳಗ್ಗೆ ಈತನಿಗೆ ಸ್ನಾನ ಮಾಡಿಸಿ, ಹೊಸ ಬಟ್ಟೆ ತೊಡಿಸಿ, ಒಂದು ತಕ್ಕಡಿಯಲ್ಲಿ ಇವನನ್ನೂ, ಗೋಧಿಯನ್ನೂ ತೂಕಮಾಡಿ ಇವನ ತೂಕದಷ್ಟು ಗೋಧಿಯನ್ನು ಬಡಬಗ್ಗರಿಗೆ ದಾನ ಮಾಡುತ್ತಿದ್ದರು. ಸಂಜೆ ಈತನಿಗೆ ಆರತಿ ಕಾರ್ಯಕ್ರಮ ನಡೆಯುತ್ತಿತ್ತು. ಅಂದು ವಿಶೇಷ ಭೋಜನಕ್ಕೆ ನೆಂಟರಿಷ್ಟರು, ಮಿತ್ರವರ್ಗದವರು ಬರುತ್ತಿದ್ದರು. ಕೋಟ್ಯಾಧೀಶನ ಮಗನ ಹುಟ್ಟು ಹಬ್ಬ ಒಂದು ಮದುವೆಯಷ್ಟೇ ಸಂಭ್ರಮದಿಂದ ನಡೆಯುತ್ತಿತ್ತು.

ಜವಾಹರನಿಗೆ ಹತ್ತು ವರ್ಷ ತುಂಬಿದಾಗ ಮನೆಯ ವರ್ಗಾವಣೆ ನಡೆಯಿತು. ಈತನ ತಂದೆ ಹೊಸ ಮನೆಯೊಂದನ್ನು ಕಟ್ಟಿಸಿದ್ದರು. ಸದಾ ಆನಂದ ತುಂಬಿರಬೇಕೆಂದು ಬಯಸಿ ಅದಕ್ಕೆ 'ಆನಂದಭವನ' ಎಂದು ಹೆಸರಿಟ್ಟರು. ಅದರ ಸುತ್ತಲೂ ದೊಡ್ಡ ಕಾಂಪೌಂಡ್ ಇತ್ತು. ಒಂದು ಕೈತೋಟ, ಆ ತೋಟದಲ್ಲಿ ಒಂದು ಈಜುವ ಕೊಳ. ಆ ಕೊಳದಲ್ಲಿ ಈಜುವುದನ್ನು ಕಲಿತ ಜವಾಹರ್. ಈಜುವುದೆಂದರೆ ಕುದುರೆ ಸವಾರಿಯಷ್ಟೇ ಪ್ರಿಯವಾಗಿತ್ತು ಅವನಿಗೆ.

ಮೋತಿಲಾಲರು ಯಾವುದೋ ಕೆಲಸಕ್ಕಾಗಿ ಯುರೋಪಿಗೆ ಹೋಗಿದ್ದರು. ಆಗ ಹನ್ನೊಂದು ವರ್ಷ ತುಂಬಿತ್ತು ಜವಾಹರನಿಗೆ. ಮನೆ ದೊಡ್ಡದು. ಬೇಸರವೂ ಅಷ್ಟೇ ದೊಡ್ಡದಾಗಿತ್ತು. ತನ್ನ ತಂದೆಯವರು ಮನೆಯಲ್ಲಿಲ್ಲದ್ದು ಒಂದು ಬೇಸರವಾದರೆ ಎಲ್ಲರಂತೆ ತನಗೆ ತಮ್ಮನಾಗಲೀ, ತಂಗಿಯಾಗಲೀ ಒಬ್ಬರೂ ಇಲ್ಲ ಎಂಬ ಕೊರತೆ ಮತ್ತೊಂದು. ಆದರೆ ಆ ದಿನ ಆತನ ಈ ಎರಡನೆಯ ಕೊರತೆ ಮಾಯವಾಗುವುದರಲ್ಲಿತ್ತು. ತಂಗಿಯೋ ತಮ್ಮನೋ ಅಂದು ಹುಟ್ಟುವವನಿದ್ದ. ಜವಾಹರನ ಆನಂದಕ್ಕೆ ಪಾರವೇ ಇರಲಿಲ್ಲ. ಮನೆಯಲ್ಲೆಲ್ಲಾ ಕೇಕೆ ಹಾಕಿಕೊಂಡು ನೆಗೆದಾಡತೊಡಗಿದ. ಎಲ್ಲರಿಗಿಂತಲೂ ಮೊದಲು ಸುದ್ದಿ ತಿಳಿಯಬೇಕೆಂದು ಹೆರಿಗೆ ಕೋಣೆಯ ಬಾಗಿಲಲ್ಲೇ ಕಾಯುತ್ತಾ ಕುಳಿತ. ಸ್ವಲ್ಪ ಹೊತ್ತಿನ ಮೇಲೆ ಡಾಕ್ಟರೊಬ್ಬರು ಈಚೆಗೆ ಬಂದು ನಗುತ್ತ ಈತನನ್ನು ತಮಾಷೆ ಮಾಡಿ ಹೇಳಿದರು – "ಸಂತೋಷದ ಸುದ್ದಿ ಜವಾಹರ್. ನಿನಗೆ ಪಾಲು ಕೇಳುವ ತಮ್ಮ ಹುಟ್ಟಲಿಲ್ಲ ; ಪ್ರೀತಿ ತುಂಬುವ ತಂಗಿ ಹುಟ್ಟಿದಳು" ಎಂದು.

ಈ ಮಾತು ಕೇಳಿದ ಕೂಡಲೇ ಜವಾಹರನಿಗೆ ಬಹಳ ಕಿರಿಕಿರಿಯಾಯಿತು. 'ಡಾಕ್ಟರ್ ಭಾವಿಸಿರುವಂತೆ ತಮ್ಮನಿಗೆ ಪಾಲು ಕೊಡಲಾರದಷ್ಟು ಲೋಭಿಯೆ ? ಅಂತಹ ಸ್ವಾರ್ಥಿಯೇ ತಾನು ?' ಎಂದು ತನ್ನಲ್ಲೇ ಪ್ರಶ್ನಿಸಿಕೊಂಡ. ತಂಗಿಯಾಗಲಿ, ತಮ್ಮನಾಗಲಿ ಜೊತೆಗೊಂದು ಜೀವ ಬಂತಲ್ಲ ಎಂಬ ಹಿಗ್ಗು ಅವನಿಗೆ.

**ಮನೆಯೇ ಮಕ್ಕಳ ಶಾಲೆ**

ಮಕ್ಕಳ ಶಾಲೆ ಮನೆಯಲ್ಲಲ್ಲವೇ? ಅಂತೆಯೇ ಬಾಲಕ ಜವಾಹರನ ಅಭ್ಯಾಸ ಮನೆಯಲ್ಲೇ ಆರಂಭವಾಯಿತು. ತನ್ನ ತಾಯಿಯ ಮಡಿಲಿನ ಶಾಲೆಯಲ್ಲಿ. ಅವನ ತಾಯಿಯೂ ಚಿಕ್ಕಮ್ಮರಿಬ್ಬರೂ ರಾಮಾಯಣ ಮಹಾಭಾರತ ಮತ್ತು ಇತರ ಪುರಾಣಗಳ ಕಥೆಗಳನ್ನು ಬಹಳ ಸ್ವಾರಸ್ಯವಾಗಿ ಹೇಳುತ್ತಿದ್ದರು. ಅಲ್ಲಿ ಬರುವ ವೀರರುಗಳ ಬಗ್ಗೆ ಈ ಬಾಲಕನಿಗೆ ಆಸಕ್ತಿ ಹೆಚ್ಚಿ ತನ್ನ ಭವಿಷ್ಯದ ವಿಚಾರದಲ್ಲಿ ಒಳ್ಳೆಯ ಕಲ್ಪನೆಯನ್ನು ತಳೆಯುತ್ತಿದ್ದ.

ತನ್ನ ತಾಯಿ ಮತ್ತು ಚಿಕ್ಕಮ್ಮ ಇವರನ್ನು ಬಿಟ್ಟರೆ ಈತನಿಗೆ ಕಥೆಗಳನ್ನು ಹೇಳುವ ಬೇರೊಬ್ಬ ವ್ಯಕ್ತಿ ಇದ್ದ ಅವರ ಮನೆಯಲ್ಲಿ. ಅವನೇ ಅವರ ತಂದೆಯವರ ಗುಮಾಸ್ತ "ಮುನ್ಷಿ ಮುಬಾರಕ್ ಅಲಿ". ಈತ ಚಾರಿತ್ರಿಕ ಅಂಶಗಳನ್ನು ಕಥೆಗಳ ರೂಪದಲ್ಲಿ ಹೇಳುತ್ತಿದ್ದ. ಈತನ ಪೂರ್ವಿಕರು ಬಹಳ ಐಶ್ವರ್ಯವಂತರಂತೆ. ಆದರೆ ೧೮೫೭ರಲ್ಲಿ ನಡೆದ ಭಾರತದ ಮೊದಲನೇ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಇವರ ವಂಶ ನಿರ್ವಂಶವಾಯಿತಂತೆ ! ಇಂಗ್ಲಿಷರು ಇವರ ವಂಶಿಕರನ್ನು ಸಿಕ್ಕಾಪಟ್ಟೆ ಕೊಂದು ಸಂಪತ್ತನ್ನೆಲ್ಲಾ ಹಾಳುಮಾಡಿದರಂತೆ. ಮುಬಾರಕ್ ಅಲಿ ತನ್ನ ವಂಶದ ಚರಿತ್ರೆಯನ್ನೇ ಕಥೆಯ ರೂಪದಲ್ಲಿ ಬಹಳ ಸ್ವಾರಸ್ಯವಾಗಿ ಹೇಳುತ್ತಿದ್ದ. ಹೀಗೆ ಹೇಳುತ್ತ ಅವನ ಕಣ್ಣುಗಳಲ್ಲಿ ನೀರು ತುಂಬುತ್ತಿತ್ತು. ದೇಶಪ್ರೇಮದ ಮಾತುಗಳು ಅವನ  ಬಾಯಿಯಿಂದ ಬರುತ್ತಿದ್ದುವು. ಈತನ ಮಾತುಗಳೂ, ತಾಯಿಯು ಹೇಳುತ್ತಿದ್ದ ಕಥೆಗಳೂ ಪುಟ್ಟ ಬಾಲಕ ಜವಾಹರನ ಮೇಲೆ ಹೆಚ್ಚು ಪ್ರಭಾವ ಬೀರಿದವು.

ಜವಾಹರನಿಗೆ ತನ್ನ ತಂದೆ ತಾಯಿಯರಲ್ಲಿ ವಿಶೇಷವಾದ ಭಕ್ತಿ, ಪ್ರೀತಿ. ತಾಯಿಯ ಬಳಿ ಈತನ ಸಲಿಗೆ ಹೆಚ್ಚು. ಭಯವೇ ಇರುತ್ತಿರಲಿಲ್ಲ. ಆದರೆ ತಂದೆಯವರ ಹತ್ತಿರ ಮಾತ್ರ ಬೆಕ್ಕು ಕಂಡ ಇಲಿಯಂತೆ ! ಮೊದಲೇ ಹೇಳಿದಂತೆ ಮೋತಿಲಾಲರದು ಸ್ಥೂಲಕಾಯ. ದಪ್ಪನಾದ ಮೀಸೆ ಬಿಟ್ಟಿದ್ದರು. ಪ್ರತಿನಿತ್ಯವೂ ಹಲವು ಸ್ನೇಹಿತರು ಮೋತಿಲಾಲರೊಡನೆ ಮಾತನಾಡಲು ಬರುತ್ತಿದ್ದರಂತೆ. ಯಾವುದಾದರೂ ಮಾತು ಬಂದರೆ ಬಹಳ ಜೋರಾಗಿ ನಗುತ್ತಿದ್ದರಂತೆ. ಅವರ ನಗೆ ಮನೆಯನ್ನೆಲ್ಲಾ ತುಂಬುತ್ತಿತ್ತಂತೆ ! ಇದನ್ನೆಲ್ಲಾ ಚಿಕ್ಕವನಾದ ಜವಾಹರ ಭಯದಿಂದ ಕೇಳುತ್ತಿದ್ದನಂತೆ ! ಆದರೆ ಅವನ ತಂದೆಯವರೇ ಪ್ರೀತಿಯಿಂದ ಅವನನ್ನು ಹತ್ತಿರ ಕರೆದುಕೊಂಡು ತೊಡೆಯ ಮೇಲೆ ಕೂರಿಸಿಕೊಳ್ಳುತ್ತಿದ್ದರಂತೆ. ಆದರೂ ಹುಡುಗನಿಗೆ ಅಂಜಿಕೆ ಇತ್ತು.

ಮೋತಿಲಾಲರು ಎಷ್ಟು ಜೋರಾಗಿ ನಗುತ್ತಿದ್ದರೊ ಅಷ್ಟೆ ಭಯಂಕರವಾಗಿ ಕೋಪಿಸಿಕೊಳ್ಳುತ್ತಿದ್ದರು. ಜವಾಹರರು ಚಿಕ್ಕಂದಿನಲ್ಲಿ ನಡೆದ ಒಂದು ಘಟನೆ ಮೋತಿಲಾಲರ ಕೋಪಕ್ಕೊಂದು ನಿದರ್ಶನ.

ಆಗ ಜವಾಹರ್ ಸುಮಾರು ಐದು ಅಥವಾ ಆರು ವರ್ಷದ ಹುಡುಗನಿದ್ದಿರಬೇಕು. ಒಂದು ದಿನ ಮೋತಿಲಾಲರು ಎಲ್ಲಿಯೋ ಹೋಗಿದ್ದರು. ಬಾಲಕ ಜವಾಹರನು ಮೆಲ್ಲಗೆ ಅವರ ಕೊಠಡಿಗೆ ಹೋದ. ಮೇಜಿನ ಮೇಲೆ ಎರಡು ಪೆನ್ನುಗಳಿದ್ದವು. ಒಂದನ್ನು ತೆಗೆದುಕೊಳ್ಳಬೇಕೆಂದು ಆಸೆಯಾಯಿತು. ತಂದೆಯವರಿಗೆ ಎರಡು ಪೆನ್ನುಗಳೇಕೆ ಬೇಕು ? ಎಂದು ತನ್ನಲ್ಲೇ ಚರ್ಚೆ ಮಾಡಿಕೊಂಡು, ಮೆಲ್ಲಗೆ ಒಂದನ್ನೆತ್ತಿ ಜೇಬಿನಲ್ಲಿ ಹಾಕಿಕೊಂಡು ಬಿಟ್ಟ. ಮೋತಿಲಾಲರು ಮನೆಗೆ ಬಂದರು. ಕೊಠಡಿಗೆ ಹೋಗಿ ಕುರ್ಚಿಯ ಮೇಲೆ ಕುಳಿತರು. ಮೇಜಿನ ಮೇಲೆ ಮಡಗಿದ್ದ ಒಂದು ಪೆನ್ನು ಅವರ ಕಣ್ಣಿಗೆ ಬಿತ್ತು. ಮತ್ತೊಂದು ಕಾಣದಿದ್ದುದಕ್ಕಾಗಿ ಕೊಠಡಿಯನ್ನೆಲ್ಲಾ ಹುಡುಕಿದರು, ಪೆನ್ನು ಸಿಕ್ಕಲಿಲ್ಲ. ಮನೆಯವರನ್ನೆಲ್ಲಾ ವಿಚಾರಣೆ ಮಾಡಿದರು. ಪ್ರಯೋಜನವಾಗಲಿಲ್ಲ. ಪೆನ್ನನ್ನು ಎತ್ತಿ ಮಡಗಿಕೊಂಡಿದ್ದ ಜವಾಹರ ಸುಮ್ಮನೆ ನಿಂತಿದ್ದ. ಕಡೆಗೆ ಜೇಬುಗಳ ಜಪ್ತಿಯಾಯಿತು. ಪೆನ್ನು ಸಿಕ್ಕಿತು. ಮೋತಿಲಾಲರ ಕೋಪಕ್ಕೆ ಆಗ ಮಿತಿಯೇ ಇರಲಿಲ್ಲ. ಗೂಟದಲ್ಲಿ ಜೋಲಾಡುತ್ತಿದ್ದ ಚಾಟಿಯನ್ನು ತೆಗೆದುಕೊಂಡು ಚೆನ್ನಾಗಿ ಬಿಗಿದರು. ಏಟು ತಿಂದ ಬಾಲಕ ಅಮ್ಮನ ತೊಡೆಯ ಮೇಲೆ ಮಲಗಿಕೊಂಡನಂತೆ. ಅಮ್ಮ ಔಷಧಿ ಹಾಕಿ ಮೈನೋವು ಕಳೆದರಂತೆ !

ಇಷ್ಟು ಹೊಡೆದರೂ ಜವಾಹರನಿಗೆ ತಂದೆಯವರ ಮೇಲೆ ಕೋಪ ಬರಲಿಲ್ಲ. ಮನಸ್ಸಿನಲ್ಲಿಯೂ ಸಹ ಅವರನ್ನು ಬಯ್ದುಕೊಳ್ಳಲಿಲ್ಲ. ತಾನು ಮಾಡಿದ ಕೆಲಸಕ್ಕೆ ತನಗೇ ನಾಚಿಕೆಯಾಗಿ ಅಂತಹ ಕೆಲಸಗಳನ್ನು ಎಂದೂ ಮಾಡಬಾರದು ಎಂದುಕೊಂಡ. ಅಲ್ಲದೆ ತನ್ನ ತಂದೆಯ ಆದರ್ಶ ತನಗೆ ಮಾರ್ಗದರ್ಶಕವಾಗಲೆಂದು ಆಶಿಸಿದ.

"ತಂದೆಯವರೆಂದರೆ ತನಗೆ ವಿಶೇಷ ಗೌರವ. ಅವರು ಶಕ್ತಿ, ಸಾಹಸ ಮತ್ತು ಜಾಣ್ಮೆ ಇವುಗಳ ಪ್ರತೀಕ ಎಂದು ಭಾವಿಸಿದ್ದೆ. ಬೇರೆ ಎಲ್ಲರಿಗಿಂತಲೂ ನನ್ನ ತಂದೆ ಶ್ರೇಷ್ಠರೆಂದೇ ನನ್ನ ನಂಬಿಕೆ. ದೊಡ್ಡವನಾದ ಮೇಲೆ ನಾನು

ತಂದೆಯವರಂತಾಗಬೇಕು ಎಂದು ಅಂದುಕೊಳ್ಳುತ್ತಿದ್ದೆ." ಜವಾಹರಲಾಲರು ತಮ್ಮ ಆತ್ಮಕಥೆಯಲ್ಲಿ ಹಾಗೆಂದು ಹೇಳಿದ್ದಾರೆ, ಮಕ್ಕಳ ಮನಸ್ಸಿನ ಬೆಳವಣಿಗೆಗೆ ತಂದೆತಾಯಿಗಳು, ಬಂಧುಬಳಗ, ಸುತ್ತಲ ವಾತಾವರಣ ಬಹುಮಟ್ಟಿಗೆ ಇವು ಪ್ರಭಾವಶಾಲಿಗಳು ಎಂಬುದು ತಿಳಿಯುತ್ತದೆ.

ಜವಾಹರನಿಗೆ ತಂದೆ ಎಂದರೆ ಬಹಳ ಭಕ್ತಿ, ಪ್ರೀತಿ, ಅವರಿಗೂ ಅಷ್ಟೇ. ಮಗನೆಂದರೆ ಪಂಚಪ್ರಾಣ. ಅವರು ಕೇಳಿದ್ದನ್ನೆಲ್ಲಾ ತಂದುಕೊಡುತ್ತಿದ್ದರು. ಜವಾಹರನಿಗೆ ಕುದುರೆಸವಾರಿ ಎಂದರೆ ಬಹಳ ಇಷ್ಟ.

ಒಂದು ದಿನ ಜವಾಹರನು ಕುದುರೆಯ ಮೇಲೆ ಕುಳಿತು ತಾನೊಬ್ಬನೇ ಸವಾರಿ ಹೋದ. ಅಕಸ್ಮಾತ್ ಕುದುರೆಯಿಂದ ಬಿದ್ದುಬಿಟ್ಟ. ಕುದುರೆ ಒಂದೇ ಮನೆಗೆ ಹಿಂತಿರುಗಿ ಬಂತು. ಮೋತಿಲಾಲರಿಗೂ, ಸ್ವರೂಪ ರಾಣಿಯರಿಗೂ ಜೀವವೇ ಹಾರಿಹೋದಂತಾಯಿತು. ತತ್‌ಕ್ಷಣವೇ ಮೋತಿಲಾಲರು ಟೆನ್ನಿಸ್ ಆಟವನ್ನು ಬಿಟ್ಟು ಪುಟ್ಟ ಕಾರಿನಲ್ಲಿ ಕುಳಿತು, ಬೇಗಬೇಗ ಬಂದರು. ಆಗ ಜವಾಹರನು ಮೇಲೆದ್ದು ಕೈಕೊಡವಿಕೊಂಡು ರಸ್ತೆಯಲ್ಲಿ ನಡೆದು ಬರುತ್ತಿದ್ದ. ಆತನನ್ನು ಅತ್ಯಂತ ಪ್ರೀತಿಯಿಂದ ಬಾಚಿ ತಬ್ಬಿಕೊಂಡು ಮೋತಿಲಾಲ್ ಮನೆಗೆ ಕರೆತಂದರು. ಅವರು ಕರೆತಂದ ದೃಶ್ಯ ಯುದ್ಧದಲ್ಲಿ ಗೆದ್ದು ಬಂದ ವೀರನಿಗೆ ಕೊಟ್ಟ ಸ್ವಾಗತ ಸನ್ಮಾನದಂತಿತ್ತಂತೆ !

**ಪುರುಷಸಿಂಹನ ಕನಸು**

ಹತ್ತು ಉಳಿಯ ಪೆಟ್ಟು ತಿಂದು ಒಂದು ಕಲ್ಲು ಕಲೆಯಾಗುತ್ತದೆ. ಪೂಜಾರ್ಹವಾದ ಮೂರ್ತಿಯಾಗುತ್ತದೆ. ಅಂತೆಯೇ ಜವಾಹರರ ವ್ಯಕ್ತಿತ್ವವನ್ನು ರೂಪಿಸಿದ ಗುರು–ಶಿಲ್ಪಿಗಳು ಹಲವರು. ಆಗರ್ಭ ಶ್ರೀಮಂತನ ಪುತ್ರ ಜವಾಹರನಿಗೆ ಮನೆಯಲ್ಲೇ ವಿದ್ಯಾಭ್ಯಾಸ ನಡೆಯುತ್ತಿತ್ತು. ಯಾವ ಶಾಲೆಗೂ ಸೇರಿಸಿರಲಿಲ್ಲ. ಚಿಕ್ಕಂದಿನಲ್ಲಿ ಒಬ್ಬ ಸಂಸ್ಕೃತ ಪಂಡಿತರು ಪಾಠ ಹೇಳಿಕೊಡುತ್ತಿದ್ದರು. ಅನಂತರ ಗೋರ್ಡನ್ ಎಂಬುವರು ಬಂದರು. ಅದಾದ ಮೇಲೆ ಜವಾಹರನ ಹನ್ನೊಂದನೆಯ ವಯಸ್ಸಿನಲ್ಲಿ ಎಫ್.ಟಿ. ಬ್ರೂಕ್ಸ್ (F.T. Brooks) ಎಂಬುವರು ಪಾಠ ಹೇಳಲು ಬಂದರು. ಇವರು ಇಂಗ್ಲಿಷರು. ಒಳ್ಳೆಯ ಮಾಸ್ತರು, ಮಾಂಸಾಹಾರಿಗಳಲ್ಲ. ಅಲ್ಲದೆ ಭಾರತದಲ್ಲಿ ಆಗ ಪ್ರಸಿದ್ಧವಿದ್ದ ಬ್ರಹ್ಮವಿದ್ಯಾಸಮಾಜದ ವಿಷಯದಲ್ಲಿ ಹೆಚ್ಚು ಆಸಕ್ತಿ ಉಳ್ಳವರಾಗಿದ್ದರು. ಈ ಬ್ರೂಕ್ಸ್ ಪ್ರಭಾವ ಈತನಿಗೆ ಪುಸ್ತಕಾಭ್ಯಾಸವಲ್ಲದೆ ಅನೇಕ ತಾತ್ವಿಕ ವಿಚಾರಗಳನ್ನೂ, ವಿಜ್ಞಾನದ ರಹಸ್ಯಗಳನ್ನೂ ತಿಳಿಸುತ್ತಿದ್ದರು. ಮಾಂಸಾಹಾರ ಪಾಪಕರವಾದುದೆಂದು ಒಂದು ದಿನ ಬ್ರೂಕ್ಸ್ ಮಾಸ್ತರರು ಹೇಳಿದರಂತೆ. ಅಂದಿನಿಂದಲೇ ಜವಾಹರ್ ಮಾಂಸ ಸೇವಿಸುವುದನ್ನು ಬಿಟ್ಟುಬಿಟ್ಟನಲ್ಲದೆ, ಸುಮಾರು ಹದಿಮೂರು ವರ್ಷದ ಬಾಲಕನಿದ್ದಾಗಲೇ ಧರ್ಮ, ತತ್ವ ಮುಂತಾದುವುಗಳಲ್ಲಿ ಶ್ರದ್ಧೆ ಭಕ್ತಿ ಹುಟ್ಟಿ ಕಾಶಿಯಲ್ಲಿ ಸ್ಥಾಪಿತವಾಗಿದ್ದ ಬ್ರಹ್ಮವಿದ್ಯಾಸಮಾಜದ ಸದಸ್ಯನಾದನಂತೆ. ಇದಕ್ಕೆಲ್ಲಾ ಮುಖ್ಯ ಕಾರಣಕರ್ತರೆಂದರೆ ಅವನ ಆದರ್ಶ ಗುರು ಎಫ್. ಟಿ. ಬ್ರೂಕ್ಸ್.

ಆದರೆ ಪಂಡಿತ ಮೋತಿಲಾಲರಿಗೆ ಇದು ಇಷ್ಟವಿಲ್ಲ. ತಮ್ಮ ಮಗ ಇಂಗ್ಲಿಷರಂತೆ ನಾಗರಿಕನಾಗಿ ಬಾಳಬೇಕು. ತನ್ನ ಮಾತು, ಊಟ, ಉಡಿಗೆ, ನಡಿಗೆ ಎಲ್ಲದರಲ್ಲಿಯೂ ಇಂಗ್ಲಿಷರನ್ನು ನಾಚಿಸುವಷ್ಟರಮಟ್ಟಿಗೆ ಬೆಳೆಯಬೇಕು. ಅವರಿಗೆ ಭಾರತೀಯರ ಕಂದಾಚಾರ ನಡೆ, ನುಡಿ ಹಿಡಿಸುತ್ತಿರಲಿಲ್ಲ. ಆಂಗ್ಲರ ನಾಗರಿಕತೆ ಅವರ ಕಣ್ಣಿನಲ್ಲಿ ಕಟ್ಟಿತ್ತು. ಅವರ ಮನೆ ಮಕ್ಕಳು, ಆಚಾರ ವಿಚಾರಗಳನ್ನು ನೋಡಿದರೆ ಅವರು ಭಾರತಿಯರೇ ಅಲ್ಲ, ಇಂಗ್ಲಿಷರೆಂದೇ ಭಾಸವಾಗುತ್ತಿತ್ತು. ಇದರಿಂದಾಗಿ ತಮ್ಮ ಮಗನ ವಿದ್ಯಾಭ್ಯಾಸಕ್ಕೆ ಯೋಗ್ಯವಾದ ಶಾಲಾ ಕಾಲೇಜು ಭಾರತದಲ್ಲಿಲ್ಲವಾಯಿತು. ಅವನನ್ನು ಇಂಗ್ಲೆಂಡಿಗೆ ಕರೆದುಕೊಂಡು ಹೊರಟರು.

ಈ ಮಧ್ಯೆ ಮತ್ತೊಂದು ಘಟನೆ ಜವಾಹರನ ಮೇಲೆ ಹೆಚ್ಚು ಪರಿಣಾಮ ಬೀರಿತು. ಅದೇ ರಷ್ಯಾ ಮತ್ತು ಜಪಾನಿನ ಯುದ್ಧ. ಆಗ ಈ ಎರಡು ದೇಶಗಳಿಗೂ ಯುದ್ಧ ನಡೆದು ಜಪಾನ್ ಜಯಗಳಿಸಿತ್ತು, ತನ್ನ ದೇಶ ಸ್ವಾತಂತ್ರ್ಯವನ್ನು ಉಳಿಸಿಕೊಂಡಿತ್ತು. ತಾನೇ ಬಹು ದೊಡ್ಡ ದೇಶವೆಂದು ಜಂಭ ಕೊಚ್ಚಿಕೊಳ್ಳುತ್ತಿದ್ದ ರಷ್ಯದ ಸೊಕ್ಕು ಮುರಿದಿತ್ತು.

ಜವಾಹರ್ ಜಪಾನಿನ ಸ್ವತಂತ್ರ ಮನೋಭಾವವನ್ನು ಪೂರಾ ಮೆಚ್ಚಿದ. ಆ ದೇಶದ ಚರಿತ್ರೆಗೆ ಸಂಬಂಧಿಸಿದ ಪುಸ್ತಕಗಳನ್ನು ತರಿಸಿ ಓದಿದ. ಜಪಾನಿಗಳ ದೇಶಪ್ರೇಮ ತುಂಬಾ ಹಿಡಿಸಿತು. ಅಂತೆಯೇ ತನ್ನಲ್ಲಿಯೂ ರಾಷ್ಟ್ರೀಯ ಭಾವನೆ ಜಾಗೃತವಾಗತೊಡಗಿತು.

"ರಾಷ್ಟ್ರೀಯ ಭಾವನೆಗಳು ತನ್ನ ಹೃದಯದಲ್ಲಿ ತುಂಬಿಕೊಂಡವು. ಯೂರೋಪಿನ ಹಿಡಿತದಿಂದ ಭಾರತ ಹಾಗೂ ಇಡೀ ಏಷ್ಯಾಖಂಡವನ್ನೇ ಬಿಡಿಸಬೇಕೆಂದು ಆಲೋಚಿಸುತ್ತಿದ್ದೆ. ಖಡ್ಗಧಾರಿಯಾಗಿ ನಿಂತು ಭಾರತದ ಬಂಧ ವಿಮೋಚನೆಗಾಗಿ ಹೋರಾಡಬೇಕೆಂಬುದರ ಬಗ್ಗೆ ಅನೇಕ ದೊಡ್ಡ ಗಗನ ಗೋಪುರಗಳನ್ನು ಕಟ್ಟಿಕೊಳ್ಳುತ್ತಿದ್ದೆ" ಎಂದು ಆತ್ಮಕಥೆಯಲ್ಲಿ ಹೇಳಿದ್ದಾರೆ ಜವಾಹರ್.

ಈ ಪುರುಷಸಿಂಹನ ಕನಸು ಬಹುಬೇಗ ನನಸಾಯಿತು. ಆತನ ಆಶಾಗೋಪುರ ಗಾಳಿಗೋಪುರವಾಗಲಿಲ್ಲ, ಫಲಕಾರಿಯಾಯಿತು, ಸತ್ಫಲವನ್ನಿತ್ತು ಸರ್ವಮಾನ್ಯವಾಯಿತು.

**ಇಂಗ್ಲೆಂಡಿನಲ್ಲಿ**

೧೯೦೫ನೇ ಇಸವಿ ಮೇ ತಿಂಗಳು. ಆಗ ಜವಾಹರನಿಗೆ ಹದಿನೈದು ವರ್ಷ ತುಂಬಿತ್ತು. ಮೋತಿಲಾಲರು ತಮ್ಮ ಹೆಂಡತಿ, ಮಗಳು ಮತ್ತು ಜವಾಹರ್ ಇವರೊಂದಿಗೆ ಇಂಗ್ಲೆಂಡಿಗೆ ಪ್ರಯಾಣ ಬೆಳೆಸಿದರು. ಅಲ್ಲಿ ಯಾವುದಾದರೂ ಒಂದು ದೊಡ್ಡ ಶಾಲೆಯಲ್ಲಿ ಮಗನನ್ನು ಓದಲು ಬಿಟ್ಟು ಬರಬೇಕೆಂಬುದೇ ಅವರ ಉದ್ದಿಶ್ಯವಾಗಿತ್ತು.

ಮೇ ತಿಂಗಳ ಕಡೆಯ ಹೊತ್ತಿಗೆ ಲಂಡನ್ ತಲುಪಿದರು. ಮೋತಿಲಾಲರು ತಮ್ಮ ಮಗನ ವಿದ್ಯಾಭ್ಯಾಸಕ್ಕೆ ಯಾವ ಶಾಲೆ ಉತ್ತಮವೆಂದು ಆಲೋಚಿಸಿ ಕಡೆಗೆ 'ಹ್ಯಾರೋ' ಶಾಲೆಗೆ ಸೇರಿಸಿದರು. ಅದು ಅತ್ಯಂತ ಪ್ರಸಿದ್ಧವಾದ ಶಾಲೆಯಾಗಿತ್ತು. ಮಗನನ್ನು ಶಾಲೆಗೆ ಸೇರಿಸಿದ ಮೇಲೆ ಆತನನ್ನು ಅಲ್ಲಿಯೇ ಬಿಟ್ಟು ತಮ್ಮ ಕುಟುಂಬದೊಡನೆ ಯೂರೋಪಿನ ಹಲವು ಭಾಗಗಳನ್ನು ನೋಡಿಕೊಂಡು ಭಾರತಕ್ಕೆ ಹಿಂತಿರುಗಿದರು.

ಒಂಟಿ ಬಾಲಕನಾದ ಜವಾಹರನಿಗೆ ಮೊದಮೊದಲು ಬಹಳ ಬೇಸರವಾಯಿತು. ಜನಸಂದಣಿಯಿಂದ ಕೂಡಿರುವ ಲಂಡನ್ ನಗರವೂ ಆತನಿಗೆ ಬಹಳ ಬೇಸರ ತಂದಿತು. ಏಕೆಂದರೆ ಹೊಸ ಜಾಗ ಹೊಸ ಮುಖಗಳು. ಯಾರ ಪರಿಚಯವೂ ಇರಲಿಲ್ಲ. ಮೇಲಾಗಿ ತಾನು ಬೇರೆ ನಾಡಿನವನು ಇದು ತನ್ನ ತಾಯ್ ನೆಲವಲ್ಲ ಎಂಬ ಅಳುಕು. ಹೀಗಾಗಿ ಮೊದಮೊದಲು ದಿನ ಕಳೆಯುವುದು ಕಷ್ಟಕರವಾಗಿಯೇ ಇತ್ತು.

ಆದರೆ ಹೊಸ ಸ್ಥಳವಾದರೂ ಜವಾಹರ್ ಬೇಗ ಹೊಂದಿಕೊಂಡು ಬಿಟ್ಟ. ಬಹಳ ಚುರುಕು ಬುದ್ಧಿ ಈತನದು. ನಿತ್ಯವೂ ತಪ್ಪದೆ ದಿನಪತ್ರಿಕೆಗಳನ್ನು ಓದುತ್ತಿದ್ದು, ಪ್ರಪಂಚದ ಸ್ಥಿತಿಗತಿಗಳನ್ನೆಲ್ಲಾ ಚೆನ್ನಾಗಿ ತಿಳಿಯುತ್ತಿದ್ದ. ಪಠ್ಯಪುಸ್ತಕಗಳನ್ನೇ ಅಲ್ಲದೆ ಹೊಸಹೊಸ ಪುಸ್ತಕಗಳನ್ನು ಬಹಳ ಓದುತ್ತಿದ್ದ. ಆತ ಹೆಚ್ಚು ಕಡಿಮೆ ಪುಸ್ತಕಭಂಡಾರದ ಪುಸ್ತಕಗಳನ್ನೆಲ್ಲಾ ಓದಿ ಮುಗಿಸಿದ್ದ. ಈತನಲ್ಲಿ ಪ್ರಪಂಚದ ಸ್ಥಾನ ಚೆನ್ನಾಗಿದ್ದುದರಿಂದ ತನ್ನ ಉಪಾಧ್ಯಾಯರಿಗೆ ಅಚ್ಚುಮೆಚ್ಚಿನವನಾದ. ಲ್ಯಾಟಿನ್ ಭಾಷೆಯೊಂದನ್ನು ಬಿಟ್ಟು ಮಿಕ್ಕ ಎಲ್ಲಾ ವಿಷಯಗಳಲ್ಲೂ, ಜವಹರ್ ಶಾಲೆಗೆ ಒಂದವನೆಯನಾಗಿದ್ದ.

ಈತನಿಗೆ ಶಾಲೆಯಲ್ಲಿ ಒಂದು ಪುಸ್ತಕ ಬಹುಮಾನವಾಗಿ ಬಂದಿತ್ತು. ಅದು ಇಟಲಿಯ ದೇಶಭಕ್ತನಾದ 'ಗೆರಿಬಾಲ್ಡಿ' ಎಂಬ ಮಹಾಪುರುಷನ ಜೀವನಕ್ಕೆ ಸಂಬಂಧಿಸಿದ್ದು. ಆ ಪುಸ್ತಕ ಬಾಲಕ ಜವಾಹರನಿಗೆ ಬಹಳ ಹಿಡಿಸಿತು. ದೇಶಪ್ರೇಮ 'ಗೆರಿಬಾಲ್ಡಿ'ಗೆ ಸಂಬಂಧಿಸಿದಂತೆ ಬರೆದಿದ್ದ ಇತರ ಪುಸ್ತಕಗಳನ್ನು ಕೊಂಡು ಓದಿದ. ಓದಿದಂತೆಲ್ಲಾ 'ಗೆರಿಬಾಲ್ಡಿ'ಯ ಚಿತ್ರ ಈತನ ಮನಸ್ಸಿನಲ್ಲಿ ಸಂಪೂರ್ಣವಾಗಿ ನೆಲೆ ನಿಂತಿತು. ರಾಷ್ಟ್ರೀಯ ಭಾವನೆಯಿಂದ ಅವನ ಹೃದಯ ತುಂಬಿ ತುಳುಕಿತು. ಇಟಲಿಯಂತೆಯೇ ಭಾರತವೂ ಸಹ ದಾಸ್ಯದ ಬೀಡಾಗಿದೆ. ತಾಯ್ನಾಡಿನ ಸ್ವಾತಂತ್ರ್ಯಕ್ಕಾಗಿ ಹೋರಾಡಿದ 'ಗೆರಿಬಾಲ್ಡಿ'ಯಂತೆ ತಾನೂ ರಾಷ್ಟ್ರಭಕ್ತನಾಗಬೇಕು. ತನ್ನ ಜನ್ಮಭೂಮಿ ಭಾರತವನ್ನು ಬ್ರಿಟಿಷರ ದಾಸ್ಯದಿಂದ ಬಿಡುಗಡೆ ಮಾಡಬೇಕು, ಅದಕ್ಕಾಗಿ ಬಹು ಪೌರುಷದಿಂದ ಹೋರಾಡಬೇಕು' ಎಂದು ಮುಂತಾಗಿ ಕನಸು ಕಾಣುತ್ತಿದ್ದ.

ಹ್ಯಾರೋದಲ್ಲಿದ್ದುದು ಕೇವಲ ಎರಡು ವರ್ಷಗಳು ಮಾತ್ರ. ಅನಂತರ ೧೯೦೭ರಲ್ಲಿ ಅಕ್ಟೋಬರ್ ತಿಂಗಳಲ್ಲಿ ಕೇಂಬ್ರಿಡ್ಜ್‌ನ ಬ್ರಿಟಿಷ್ ಕಾಲೇಜಿಗೆ ಸೇರಿದ ಜವಹರ್. ಅಲ್ಲಿ ರಸಾಯನ ಶಾಸ್ತ್ರ ಮತ್ತು ಭೂಗರ್ಭ ಶಾಸ್ತ್ರ ಇವುಗಳನ್ನು ಐಚ್ಛಿಕ ವಿಷಯಗಳಾಗಿ ತೆಗೆದುಕೊಂಡು ಮೂರು ವರ್ಷ ಅಭ್ಯಾಸ ಮಾಡಿ ಉತ್ತಮ ದರ್ಜೆಯಲ್ಲಿ ತೇರ್ಗಡೆಯಾದ.

ತಾನು ಡಿಗ್ರಿ ಪಡೆದ ಮೇಲೆ ೧೯೧೦ರಲ್ಲಿ ಜವಹರ್ 'ಇನ್ನರ್ ಟೆಂಪಲ್' ಎಂಬಲ್ಲಿ ಬ್ಯಾರಿಸ್ಟರ್ ಪರೀಕ್ಷೆಗೆ ಕುಳಿತ. ತೇರ್ಗಡೆಯಾದ. ಬ್ಯಾರಿಸ್ಟರ್ ಜವಹರಲಾಲ್ ಎಂದೆನಿಸಿದ ! ಈತನ ಮೇಧಾಶಕ್ತಿಗೆ ಮೆಚ್ಚಿ ಕೇಂಬ್ರಿಡ್ಜ್ ವಿಶ್ವವಿದ್ಯಾನಿಲಯ ಈತನಿಗೆ ಎಂ.ಎ. ಪದವಿಯನ್ನೂ ಸಹ ಗೌರವಪೂರ್ವಕವಾಗಿ ಕೊಟ್ಟಿತು.

ಈತ ಬ್ಯಾರಿಸ್ಟರ್ ಪರೀಕ್ಷೆಗೆ ಓದುವುದಕ್ಕೆ ಸೇರುವುದಕ್ಕೆ ಮುಂಚೆಯೇ ಯೂರೋಪಿನ ಹಲವು ಭಾಗಗಳಿಗೆ ಹೋಗಿದ್ದ ತನ್ನ ಗೆಳೆಯನೊಂದಿಗೆ. ಆಗ ಒಂದು ದುರ್ಘಟನೆ ನಡೆಯಿತು.

ಇವರು ಹೋಗಿದ್ದುದು ನಾರ್ವೆ ದೇಶ. ಅದು ಬಹಳ ಬೆಟ್ಟಗುಡ್ಡಗಳ ನಾಡು. ಬೆಟ್ಟ ಹತ್ತಿ ಸಾಗಿ ಪುಟ್ಟ ಹೋಟೆಲ್ ಒಂದರಲ್ಲಿ ಇಳಿದುಕೊಂಡಿದ್ದರು. ಆಗ ಸೆಕೆ ಬಹಳವಾಗಿದ್ದುದರಿಂದ ಸ್ನಾನ ಮಾಡಬೇಕೆನ್ನಿಸಿತು. ಹೋಟೆಲಿನಲ್ಲಿ ಸ್ನಾನದ ವ್ಯವಸ್ಥೆ ಇರಲಿಲ್ಲ. ಆದ್ದರಿಂದ ಹತ್ತಿರದಲ್ಲೇ ಇದ್ದ ಒಂದು ನದಿಯಲ್ಲಿ ಸ್ನಾನ ಮಾಡಿಕೊಂಡು ಬರಲು ಹೊರಟರು. ಜವಹರ್ ಮತ್ತು ಆತನ ಇಂಗ್ಲೀಷ್ ಸ್ನೇಹಿತ ಇಬ್ಬರೇ ನದಿಗೆ ಹೋದರು. ಇಲ್ಲಿ ಹಿಮ ಸರೋವರದಿಂದ ಹೊರಟ ಹಿಮಧಾರೆ ಬಹಳ ಶಬ್ದ ಮಾಡುತ್ತಿತ್ತು. ಅಲ್ಲಿ ಸ್ನಾನ ಮಾಡಬೇಕೆಂದು ಆಸೆಯಾಗಿ ಜವಹರ್ ಮೊದಲು ನೀರಿನಲ್ಲಿಳಿದ. ಅದು ಆಳವಿಲ್ಲದಿದ್ದರೂ ಬಹಳ ತಣ್ಣಗೆ ಕೊರೆಯುತ್ತಿತ್ತು. ಕಾಲಿಟ್ಟ ಕೂಡಲೇ ಕಾಲು ಸೆಟೆದುಕೊಂಡು ಮೇಲೆ ಎತ್ತಿಡಲಿಕ್ಕೂ ಶಕ್ತಿ ಇಲ್ಲವಾಯಿತು. ಜವಹರ್ ತೂರಾಡಿಕೊಂಡು ನೀರಿನಲ್ಲಿ ಬಿದ್ದುಬಿಟ್ಟ. ಆ ಹಿಮ ನೀರಿನಲ್ಲಿ ಕೈ ಕಾಲು ಮೈಯೆಲ್ಲ ಸೆಟೆದುಕೊಂಡು ಕೊರಡಿನಂತಾದ. ಹರಿಯುವ ನೀರು ಈತನನ್ನು ಕೊಚ್ಚಿಕೊಂಡು ಹೊರಟಿತು. ಈತನು ತೇಲಿಕೊಂಡು ಹೊರಟಂತೆಯೇ ದಂಡೆಯಲ್ಲಿ ನಿಂತಿದ್ದ ಈತನ ಇಂಗ್ಲೀಷ್ ಸ್ನೇಹಿತ ಓಡಿಓಡಿ ಕಡೆಗೆ ಒಂದೆಡೆಯಲ್ಲಿ ಈತನ ಕಾಲುಗಳನ್ನು ಬಲವಾಗಿ ಹಿಡಿದು ದಡಕ್ಕೆ ಎಳೆದು ಹಾಕಿದ. ಇಲ್ಲದಿದ್ದರೆ ಜವಹರನ ಆಯುಷ್ಯ ಮುಗಿದುಹೋಗುತ್ತಿತ್ತು. ಸ್ವಲ್ಪ ಹೊತ್ತಿನ ಮೇಲೆ ಜವಹರ್ ಚೇತರಿಸಿಕೊಂಡು, ದೈವಕೃಪೆಯಿಂದ ಬದುಕಿಕೊಂಡೆನೆಂದು ಹೋಟೆಲಿಗೆ ವಾಪಸ್ಸಾಗಲು ಸಿದ್ಧನಾದ. ಆಗ ಸ್ವಲ್ಪ ಮುಂದೆ, ಅಂದರೆ ಸುಮಾರು ಇನ್ನೂರು ಮುನ್ನೂರು ಗಜ ಮುಂದೆ ಹೋಗಿ ನೋಡುತ್ತಾರೆ. ಆ ಹೊಳೆ ಒಂದು ದೊಡ್ಡ ಬಂಡೆಗಲ್ಲಿನಿಂದ ಕೆಳಕ್ಕೆ ಧುಮುಕುತ್ತಿತ್ತು. ಒಂದು ವೇಳೆ ಜವಹರನು ಅಲ್ಲಿಯವರೆಗೂ ತೇಲಿಕೊಂಡು ಹೋಗಿದ್ದರೆ ಆ ಜಲಪಾತದಲ್ಲಿ ಬಿದ್ದು ಹೇಳಹೆಸರಿಲ್ಲವಾಗುತ್ತಿದ್ದ.

ಮುಂದೆ ಅವನನ್ನು ಮಹಾಪುರುಷನನ್ನಾಗಿ ಮಾಡಬೇಕಾಗಿತ್ತು ದೈವಶಕ್ತಿ. ಅದಕ್ಕಾಗಿಯೇ ಉಳಿಸಿ ಉದ್ಧರಿಸಿತು.

**ಮರಳಿ ಮನೆಗೆ**

ತೌರಿಗೆ ಬಂದ ತರುಣನಿಗೆ ದೇಶದ ಸ್ಥಿತಿ ಉತ್ಸಾಹದಾಯಕವಾಗಿರಲಿಲ್ಲ. ಎಲ್ಲೆಲ್ಲೂ ನಿರಾಶೆಯ ನೆರಳು ಹರಡಿತ್ತು. ದೇಶದ ಸ್ಥಿತಿ ಆಶಾದಾಯಕವಾಗಿರಲಿಲ್ಲ. ತನ್ನ ರಾಷ್ಟ್ರದ ಭವಿಷ್ಯದ ಬಗ್ಗೆ ಏನೇನೋ ಕನಸು ಕಂಡಿದ್ದ ಭಾರತವನ್ನು ಬಹು ಬೇಗ ಸ್ವತಂತ್ರಗೊಳಿಸಬೇಕು; ಆ ಸ್ವಾತಂತ್ರ್ಯ ಸಂಪಾದನೆಗೆ ದೊಡ್ಡ ಚಳವವಳಿಯನ್ನೇ ಹೂಡಬೇಕು; ದೇಶಪ್ರೇಮಿಗಳನ್ನೆಲ್ಲಾ ಸೇರಿಸಿ ಭಾರಿ ಬಂಡು ಎಬ್ಬಿಸಿ ಬ್ರಿಟಿಷರನ್ನು ಭಾರತದಿಂದ ಓಡಿಸಬೇಕು ಎಂದು ಮುಂತಾಗಿ ಮನಸ್ಸಿನಲ್ಲೇ ಮಂಡಿಗೆ ತಿಂದಿದ್ದ. ಆದರೆ ಆ ಉತ್ಸಾಹೀ ತರುಣನ ಮನಸ್ಸಿನ ಕುದುರೆಗೆ ಭಾರತದಲ್ಲಿ ಮೈದಾನ ಸಿದ್ಧವಾಗಿರಲಿಲ್ಲ.

೧೯೧೨, ಅಂದರೆ ಜವಹರಲಾಲ್ ಬ್ಯಾರಿಸ್ಟರ್ ಆಗಿ ಭಾರತಕ್ಕೆ ಬಂದ ವರ್ಷ. ದೇಶದ ರಾಜಕೀಯರಂಗ ತುಂಬಾ ನಿರುತ್ಸಾಹದಿಂದ ತುಂಬಿತ್ತು. ಆಗ ದೇಶ ಸ್ವಾತಂತ್ರ್ಯಕ್ಕಾಗಿ ಹೋರಾಡಬಲ್ಲ ಒಂದೇ ಒಂದು ಸಂಸ್ಥೆ ಎಂದರೆ ಕಾಂಗ್ರೆಸ್. ಅದರಲ್ಲೂ ಉಗ್ರಗಾಮಿ ಪಕ್ಷ, ಮಂದ ಪಕ್ಷ ಎಂದು ಎರಡಾಗಿ ತನ್ನ ಶಕ್ತಿಯನ್ನು ಬಹುಮಟ್ಟಿಗೆ ನೀಗಿಕೊಂಡಿತ್ತು. ಪ್ರಮುಖ ವ್ಯಕ್ತಿಗಳಾದ ಬಾಲಗಂಗಾಧರ ತಿಲಕರು ಜೈಲಿನಲ್ಲಿದ್ದರು. ಗೋಪಾಲಕೃಷ್ಣ ಗೋಖಲೆಯವರು ಮಹಾತ್ಮ ಗಾಂಧೀಯವರ ಕಾರ್ಯಾಚರಣೆಯನ್ನು ನೋಡಿಕೊಂಡು ಬರಲು ದಕ್ಷಿಣ ಆಫ್ರಿಕೆಗೆ ತೆರಳಿದವರು ಆಗತಾನೇ ಭಾರತಕ್ಕೆ ಬಂದಿದ್ದರು. ದೇಶದಲ್ಲಿಯೇ ಅಗಲಿ, ಕಾಂಗ್ರೆಸ್ ಸಂಸ್ಥೆಯಲ್ಲಾಗಲೀ ಮುಖಂಡರಿಲ್ಲದೆ ಉತ್ಸಾಹಿಗಳನೇಕರು ದಾರಿಕಾಣದೆ ಕುಳಿತಿದ್ದರು. ಅಲ್ಲದೆ ಕಾಂಗ್ರೆಸ್ ಆಡಳಿತ ಮಂದಗಾಮಿ ಪಕ್ಷದವರ ವಶದಲ್ಲಿದ್ದುದರಿಂದ ಯಾವುದರಲ್ಲಿಯೂ ಹೆಚ್ಚು ಚಟುವಟಿಕೆಯೇ ಕಂಡುಬರುತ್ತಿರಲಿಲ್ಲ.

ಆದರೂ ಅದೇ ವರ್ಷ ಬಾಂಕಿಪುರದಲ್ಲಿ ರಘುನಾಥ ನರಸಿಂಹ ಮುಧೋಳಕರ್ ಎಂಬುವರ ಅಧ್ಯಕ್ಷತೆಯಲ್ಲಿ ಜರುಗಿದ ಕಾಂಗ್ರೆಸ್ ಅಧಿವೇಶನ ಹೆಚ್ಚು ಸ್ಫೂರ್ತಿದಾಯಕವಾಗಿತ್ತು. ದಕ್ಷಿಣ ಆಫ್ರಿಕೆಯಿಂದ ಗೋಖಲೆಯವರು ಆಗ ತಾನೆ ಬಂದಿದ್ದರು. ಅಧಿವೇಶನಕ್ಕೆ ಪಂಡಿತ್ ಜವಹರ್‌ಲಾಲ್ ನೆಹರೂ ಸಹ ಪ್ರತಿನಿಧಿಯಾಗಿ ಹೋಗಿದ್ದರು.

ಗೋಪಾಲಕೃಷ್ಣ ಗೋಖಲೆಯವರ ಸ್ಫೂರ್ತಿದಾಯಕವಾದ ಭಾಷಣ ನೆಹರೂರವರ ಮನಸ್ಸಿನ ಮೇಲೆ ಪ್ರಬಲವಾದ ಪರಿಣಾಮವನ್ನುಂಟುಮಾಡಿತು.

ಬ್ಯಾರಿಸ್ಟರ್ ನೆಹರು ಅಲಹಾಬಾದಿನ ಹೈಕೋರ್ಟಿನಲ್ಲಿ ವಕೀಲರಾದರು. ವೃತ್ತಿ ಚೆನ್ನಾಗಿದ್ದರೂ, ಉತ್ಪತ್ತಿ ಹೇರಳವಾಗಿದ್ದರೂ ಅದರಲ್ಲಿ ಅವರಿಗೆ ಆಸಕ್ತಿ ಇರಲಿಲ್ಲ. ದೇಶದ ದುಃಸ್ಥಿತಿ ಸದಾ ಅವರನ್ನು ಕಾಡುತ್ತಿತ್ತು. ಅದರಿಂದಾಗಿ ತಾವು ಮೊದಲು ಕಾಂಗ್ರೆಸ್ಸಿಗೆ ಸೇರಿ, ಸಂಸ್ಥೆಯನ್ನು ಬಲಪಡಿಸುವ ಕಾರ್ಯದಲ್ಲಿ ನಿರತರಾದರು.

ಅನೇಕ ಸಾರ್ವಜನಿಕ ಸಭೆಗಳಲ್ಲಿ ಇವರು ಭಾಗವಹಿಸಿದ್ದರೂ ಎಲ್ಲರೆದುರು ಎದ್ದು ನಿಂತು ಮಾತನಾಡುವ ಧೈರ್ಯ ಇರಲಿಲ್ಲ. ತುಂಬಾ ಭಯ ಬರುತ್ತಿತ್ತು. ಆದರೆ ೧೯೧೫ರಲ್ಲಿ ಒಂದು ದಿನ ಅಲಹಾಬಾದಿನಲ್ಲಿ ಸಾರ್ವಜನಿಕ ಸಭೆ ನಡೆಯಿತು. ಅದು ಆಗತಾನೆ ಬ್ರಿಟಿಷ್ ಸರ್ಕಾರ ಹೊರಡಿಸಿದ್ದ ಪತ್ರಿಕೆ ಕಾಯಿದೆಯ ವಿರುದ್ಧ ಮಾತುಕತೆ ನಡೆದಿತ್ತು. ಹಲವರ ಒತ್ತಾಯದ ಮೇರೆಗೆ ನೆಹರೂ ಕೆಲವೇ ನಿಮಿಷಗಳ ಕಾಲ ಇಂಗ್ಲಿಷಿನಲ್ಲಿ ಮಾತನಾಡಿದರು. ಅದೇ ಅವರ ಸಾರ್ವಜನಿಕ ಸಭೆಯಲ್ಲಿ ಮಾಡಿದ ಮೊದಲ ಭಾಷಣ !

ಭಾಷಣ ಮಾಡಿ ವೇದಿಕೆಯಿಂದ ಇಳಿಯುವಷ್ಟರಲ್ಲಿಯೇ ಅವರ ತಂದೆಯವರ ಆತ್ಮೀಯ ಗೆಳೆಯರಾದ ಡಾ. ತೇಜಬಹದಾರ್ ಸಪ್ರೂರವರು ಓಡಿ ಬಂದು ನೆಹರೂರವರನ್ನು ಬಾಚಿ ತಬ್ಬಿಕೊಂಡು ಮುತ್ತಿಟ್ಟರಂತೆ ! ರಾಷ್ಟ್ರಸೇವಾ ಕಾರ್ಯಕ್ಕೆ ಸಮರ್ಥ ಸೈನಿಕನೊಬ್ಬ ದೊರೆತನೆಂದು ಹಿಗ್ಗಿದರಂತೆ !

ಏನಾದರೂ ಮೋತಿಲಾಲರಿಗೆ ಜವಹರಲಾಲರ ನಡವಳಿಕೆ ಪ್ರಿಯವಾಗಲಿಲ್ಲ. ತಂದೆ ಮಕ್ಕಳಲ್ಲಿ ಬಹಳ ದಿನಗಳ ತನಕ ಅಭಿಪ್ರಾಯ ಭೇದವಿತ್ತು. ಕಾಂಗ್ರೆಸ್ಸಿನ ಕಾರ್ಯಾಚರಣೆಯ ಜವಹರ್ ಉಗ್ರಗಾಮಿಗಳು, ಮೋತಿಲಾಲ್ ಮಂದಗಾಮಿ ಪಕ್ಷದವರು. ಹೀಗಾಗಿ ಇಬ್ಬರಲ್ಲೂ ಆಗಾಗ ವಿಚಾರ ತರ್ಕಗಳಾಗುತ್ತಿದ್ದವು. ಮೊದಮೊದಲು ತಮ್ಮ ಮಗನ ಅಭಿಪ್ರಾಯಗಳು ಕೋಪ ತರುವಂತಾಗಿದ್ದರೂ ಕಡೆಯಲ್ಲಿ ಅದೇ ಸರಿಯೆಂದು ತಮಗೆ ತಾವೇ ಒಪ್ಪಿಕೊಂಡರು. ತಮ್ಮ ಇಂಗ್ಲಿಷ್ ಮಾದರಿಯ ಉಡುಗೆಯನ್ನೂ, ಇಂಗ್ಲಿಷ್ ರೀತಿಯ ಕೃತಕ ಜೀವನವನ್ನೂ ತೊರೆದು ನೈಜ ಭಾರತೀಯರಾದರು. ವಕೀಲಿಯನ್ನು ಬಿಟ್ಟು ಬಾಪೂಜಿಯವರು ಆರಂಭಿಸಿದ್ದ ಹೊಸ ಆಂದೋಲನದಲ್ಲಿ ಧುಮುಕಿದರು.

ಜವಹರಲಾಲ್ ನೆಹರೂರವರು ಮೊಟ್ಟಮೊದಲಬಾರಿಗೆ ಬಾಪೂಜಿಯವರ ದರ್ಶನ ಪಡೆದಿದ್ದು ೧೯೧೯ರಲ್ಲಿ. ಲಕ್ನೋ ನಗರದಲ್ಲಿ ಅಂದು ಕಾಂಗ್ರೆಸ್ಸಿನ ೩೧ನೆಯ ಅಧಿವೇಶನ. ಶ್ರೀಅಂಬಿಕಾಚರಣ ಮುಜುಮದಾರರ ಅಧ್ಯಕ್ಷತೆಯಲ್ಲಿ ನಡೆದಿತ್ತು. ಪೂಜ್ಯ ಬಾಪೂಜಿಯವರನ್ನು ಕಾಣುವ ಮುನ್ನವೇ ಅವರ ಬಗ್ಗೆ ಜವಹರ್‌ಗೆ ಬಹಳ ಗೌರವವಿತ್ತು. ಗಾಂಧೀಜಿಯವರು ದಕ್ಷಿಣ ಆಫ್ರಿಕೆಯಲ್ಲಿ ಮಾಡಿದ ಸಾಹಸಪೂರ್ಣ ಕಾರ್ಯಕ್ರಮಗಳು ತರುಣ ನೆಹರೂರವರಲ್ಲಿ ಸ್ಫೂರ್ತಿಯನ್ನೂ ಭಕ್ತಿಯನ್ನೂ ಉಂಟುಮಾಡಿದ್ದವು. ಅಲ್ಲದೆ ಗಾಂಧೀಜಿಯವರು ದಕ್ಷಿಣ ಆಫ್ರಿಕೆಯಲ್ಲಿ ನಡೆಸಿದಂತಹ ಚಳವಳಿಯೊಂದನ್ನು ಭಾರತದಲ್ಲಿಯೂ ಪ್ರಾರಂಭಿಸಿದರು. ಅದು ಚಂಪಾರಣ್ಯ ಎಂಬಲ್ಲಿನ ನೀಲಿತೋಟದ ಭಾರತೀಯ ಕೆಲಸಗಾರರಿಗೂ, ತೋಟದ ಮಾಲೀಕರೆನಿಸಿದ್ದ ಬಿಳಿಯರಿಗೂ ನಡೆದ ಸಂಘರ್ಷಣೆಯಲ್ಲಿ ಕೂಲಿಗಾರರ ಪರವಾಗಿ ಗಾಂಧೀಜಿ ಹೋರಾಡಿ ಸತ್ಯಾಗ್ರಹ ಹೂಡಿ, ನ್ಯಾಯವಾದ ಅವರ ಬೇಡಿಕೆಗಳನ್ನು ಈಡೇರಿಸಿ ಕೊಟ್ಟಿದ್ದರು. ಈ ಜಯದ ಪರಿಣಾಮವಾಗಿ ನೆಹರೂ ಮೊದಲಾದವರಿಗೆ ವಿಶೇಷ ಅಭಿಮಾನ ಹುಟ್ಟಿದ್ದವು. ಜೊತೆಗೆ ಅಲಹಾಬಾದಿನಲ್ಲಿ ಶ್ರೀಮತಿ ಸರೋಜಿನಿ ನಾಯ್ಡು ಅವರು ಕೊಟ್ಟ ಭಾಷಣ ಜವಹರರ ಹೃದಯದಲ್ಲಿ ದೇಶಪ್ರೇಮವನ್ನು ಉಕ್ಕಿಸಿ ಹರಿಸಿತ್ತು.

**ಹಿಮಗರ್ಭದಲ್ಲಿ**

ಅದು ವಸಂತ ಪಂಚಮಿಯ ದಿನ. ೧೯೧೬ನೆಯ ಇಸವಿ. ದೆಹಲಿಯ ರಾಜಬೀದಿಗಳಲ್ಲಿ ವೈಭವದ ಮೆರವಣಿಗೆ ಹೊರಟಿತ್ತು. ಅಲಂಕೃತವಾದ ವಾಹನದಲ್ಲಿ ಗಂಧರ್ವ ಪುರುಷನಂತೆ ಪಂಡಿತ ಜವಹರಲಾಲ್ ನೆಹರೂ ಅವರು, ಯಕ್ಷ ಕನ್ನಿಕೆಯಂತೆ ಶ್ರೀಮತಿ ಕಮಲಾದೇವಿಯವರೂ ಕುಳಿತಿದ್ದಾರೆ. ಅತ್ಯಂತ ಸಂಭ್ರಮದಿಂದ ವಿವಾಹ ಕಾರ್ಯ ನೆರವೇರಿತು.

ಮದುವೆಯ ಅನಂತರ ಆ ಬೇಸಗೆಯನ್ನು ಎಲ್ಲರೂ ಕಾಶ್ಮೀರದಲ್ಲಿ ಕಳೆದರು. ಕಾಶ್ಮೀರ ನೂತನ ದಂಪತಿಗಳಿಗೆ ಬಹು ಮೋಜಾಗಿ ಕಾಣಿಸಿತ್ತು. ಜವಹರ್ ಮತ್ತು ಕಮಲಾ ದಾಂಪತ್ಯದ ಸವಿಯನ್ನು ಚೆನ್ನಾಗಿ ಸವಿದರು. ಆದರೆ ಜವಹರರಿಗೆ ಹಿಮಾಲಯದ ಪ್ರತಿಭಾಗವನ್ನೂ ನೋಡಬೇಕೆಂಬ ಆಸೆ. ಆದ್ದರಿಂದ ತಮ್ಮ ಪರಿವಾರವನ್ನು ಶ್ರೀನಗರದ ಬಳಿ ಬಿಟ್ಟು, ಅವರ ಚಿಕ್ಕಪ್ಪನ ಮಗನೊಡನೆ ಲಡ್ಡಾಕ್ ರಸ್ತೆಯವರೆಗೂ ಹೋಗಿದ್ದರಂತೆ. ಅಲ್ಲಿನ ಹಿಮದಿಂದ ಮುಚ್ಚಿದ್ದ ಬೆಟ್ಟದ ಶಿಖರಗಳು ದೇವತೆಗಳ ಮಕುಟಗಳಂತೆ ಶೋಭಿಸುತ್ತಿದ್ದವಂತೆ ! ಅಲ್ಲಿ ಹೊಳೆಯುತ್ತಿದ್ದ ಹಿಮ ಸರೋವರಗಳು ದೇವಲೋಕವನ್ನು ನೆನಪಿಗೆ ತರುತ್ತಿದ್ದವಂತೆ.

ತಾವಿರುವ ಬಳಿಗೆ ಅಮರನಾಥನ ಗುಹೆ ಕೇವಲ ಎಂಟು ಮೈಲಿ ಇದೆ ಎಂದು ತಿಳಿದ ನೆಹರೂ ತಮ್ಮದೇ ಆದ ಒಂದು ಚಿಕ್ಕ ಗುಂಪು ಕಟ್ಟಿಕೊಂಡು ಅದನ್ನು ನೋಡಲು ಹೊರಟರು. ಜೊತೆಗೊಬ್ಬ ಮಾರ್ಗದರ್ಶಕನೂ ಇದ್ದ. ಆಗ ಅವರಲ್ಲಿ ಉತ್ಸಾಹವಿತ್ತು. ಆದರೆ ಅನುಭವ ಸಾಲದು. ಹಿಮಪ್ರದೇಶದಲ್ಲಿ ಬಹು ಜಾಗರೂಕತೆಯಿಂದ ಪ್ರಯಾಣ ಮಾಡಬೇಕಿತ್ತು. ಅದರಲ್ಲೂ ಆಗ ವಿಶೇಷ ಹಿಮ ಸುರಿಯುತ್ತಿದ್ದುದರಿಂದ ಅಲ್ಲಿ ನಡೆಯುವುದೇ ದುಸ್ಸಾಧ್ಯವಾಗಿತ್ತು. ಸ್ವಲ್ಪ ದೂರ ಬೆಟ್ಟವನ್ನು ಹತ್ತಿ ನಡೆದ ಮೇಲೆ ಉಸಿರಾಡುವುದೇ ಕಷ್ಟವಾಯಿತು. ಹಲವರ ಮೂಗುಗಳಲ್ಲಿ ರಕ್ತವು ಹರಿಯತೊಡಗಿತು. ಆದರೆ ಎದೆಗೆಡದೆ ಒಬ್ಬರಿಗೊಬ್ಬರು ಹಗ್ಗವನ್ನು ಕಟ್ಟಿಕೊಂಡು ಹತ್ತತೊಡಗಿದರು. ಮೇಲೆ ಬಂದಾಗ ಒಂದು ವಿಶಾಲವಾದ ಬಯಲು ಪ್ರದೇಶ ಕಾಣಿಸಿಕೊಂಡಿತು. ಅಲ್ಲೇ ಇತ್ತು ಒಂದು ಹಿಮ ಸರೋವರ. ಅದನ್ನು ದಾಟಿ ಕೆಳಗೆ ಇಳಿದರೆ ಅಮರನಾಥನ ಗುಹೆ. ಅವರಿದ್ದ ಬಳಿಗೂ ಗುಹೆಗೂ ಕೇವಲ ಅರ್ಧ ಮೈಲಿ ದೂರ. ಎಲ್ಲರೂ ಉತ್ಸಾಹದಿಂದ ಹೊರಟರು. ಆದರೆ ಹಾದಿಯ ಮಧ್ಯದಲ್ಲಿ ದೊಡ್ಡದೊಡ್ಡ ಹಿಮದ ಗಂಡಾಂತರಕಾರಿ ಗುಂಡಿಗಳಿದ್ದುದರಿಂದ ಮುಂದುವರಿಯಲಾಗಲಿಲ್ಲ. ಒಂದು ಹಿಮಬಂಡೆಯ ಮೇಲೆ ಜವಹರರು ಕಾಲಿಟ್ಟರು. ತಕ್ಷಣವೇ ಅದು ಪಾತಾಳಕ್ಕೆ ಹೋಯಿತು. ನೆಹರೂರವರೂ ಸಹ ಆ ಹಿಮಬಿಲದೊಳಗೇ ಸೇರಿಹೋದರು. ಆದರೆ ಅವರ ಸೊಂಟದ ಹಗ್ಗ  ಬಿಗಿಯಾಗಿತ್ತು. ಅಲ್ಲದೆ ಹಿಮಗುಂಡಿಯ ದಂಡೆಯನ್ನೂ ಸಹ ಅವರು ಒಂದು ಕೈಯಲ್ಲಿ ಬಿಗಿಯಾಗಿ ಹಿಡಿದಿದ್ದರು. ಸ್ವಲ್ಪ ವ್ಯತ್ಯಾಸವಾಗಿದ್ದರೆ ನೆಹರೂಜಿಯವರನ್ನು ಎಲ್ಲರೂ ಮರೆತುಕೊಳ್ಳಬೇಕಾಗಿತ್ತು. ಅದರಿಂದ ಬಹು ಭಯಗೊಂಡವರಾಗಿ ಅಮರನಾಥನ ದರ್ಶನ ಪಡೆಯದೇ ಹಿಂತಿರುಗಿದರಂತೆ !

ಜವಹರರು ಎಷ್ಟು ಸಾಹಸಿಯೋ ಅಷ್ಟೇ ದಯಾಮೂರ್ತಿ. ಅವರ ದಯೆಗೊಂದು ನಿದರ್ಶನ.

ಆಗಿನ್ನೂ ನೆಹರೂಜಿಗೆ ಮದುವೆಯಾಗಿರಲಿಲ್ಲ. ಇಂಗ್ಲೆಂಡಿನಿಂದ ಬಂದ ಹೊಸದು. ವಕೀಲರಾಗಿದ್ದರೂ ಮನಸ್ಸಿಗೆ ಬೇಸರ ಬರುತ್ತಿತ್ತು. ಅದರ ನಿವಾರಣೆಗಾಗಿ ಆಗಾಗ ಬೇಟೆಗೆ ಹೋಗುತ್ತಿದ್ದರು. ತಮ್ಮ ಮಿತ್ರರೊಡನೆ ಒಂದು ಕರಡಿಯನ್ನು ಹೊಡೆದಿದ್ದರಂತೆ. ವಿಚಿತ್ರವೇನೆಂದರೆ ನೆಹರೂಜಿಗೆ ಷಿಕಾರಿ ಎಂದರೆ ತುಂಬಾ ಇಷ್ಟ. ಆದರೆ ಪ್ರಾಣಿಗಳನ್ನು ಕೊಲ್ಲಲು ಸ್ವಲ್ಪವೂ ಮನಸ್ಸು ಬಾರದು.

ಒಂದು ದಿನ ಜಿಂಕೆಯನ್ನು ಷಿಕಾರಿ ಮಾಡಿದರಂತೆ. ಅವರು ಬಿಟ್ಟ ಗುಂಡಿನ ಹೊಡೆತಕ್ಕೆ ಆ ಬಡ ಪ್ರಾಣಿ ತತ್ತರಿಸಿ ಬಂದು ಇವರ ಕಾಲ ಬಳಿಯಲ್ಲೇ ಬಿತ್ತಂತೆ. ಪ್ರಾಣ ಹೋಗುವ ಸಮಯದಲ್ಲಿ ಯಾತನೆಯನ್ನು ತಾಳಲಾರದೆ ಕಣ್ಣುಗಳಲ್ಲಿ ನೀರು ತುಂಬಿಕೊಂಡು ಮತ್ತೆ ಮತ್ತೆ ಇವರನ್ನೇ ದೃಷ್ಟಿಸಿ ನೋಡಿ ಕಡೆಗೆ ಕಣ್ಣು ಮುಚ್ಚಿಕೊಂಡಿತಂತೆ. ಆ ನೋಟ ಆ ಕರುಣಾಜನಕ ದೃಶ್ಯ ಈ ದಯಾಮೂರ್ತಿಯ ಹೃದಯಸಾಗರವನ್ನು ಕಲಕಿತು. ಎಂದೆಂದಿಗೂ ಪ್ರಾಣಿಹಿಂಸೆ ಮಾಡಬಾರದೆಂದು ನಿಶ್ಚಯಿಸಿಕೊಂಡರು. “ಎಲ್ಲಿ ಹೋದರೂ, ಎಷ್ಟು ದಿನವಾದರೂ ಆ ಜಿಂಕೆಯ ನೋಟ ನನ್ನ ಕಣ್ಣಿನಲ್ಲಿ ಕಟ್ಟಿದೆ” ಎಂದು ಸ್ಮರಿಸಿಕೊಳ್ಳುತ್ತಾರೆ ನೆಹರೂಜಿ.

**ಜಲಿಯನ್ ವಾಲಾಬಾಗ್**

ಪ್ರಪಂಚದ ಮೊದಲನೇ ಮಹಾಯುದ್ಧದ ಕೆಟ್ಟ ಪರಿಣಾಮ ಹೇಳತೀರದಾಗಿತ್ತು. ಅದರಲ್ಲೂ ಭಾರತದ ಮೂಲೆ ಮೂಲೆಯಲ್ಲೂ ಅದು ವಿಷ ಗಾಳಿ ಬೀಸಿತ್ತು. ಅನ್ನದ ಹಾಹಾಕಾರ ಕೆಲವೆಡೆಗಳಲ್ಲಾದರೆ, ಬ್ರಿಟಿಷರ ದಬ್ಬಾಳಿಕೆಯಿಂದಾಗಿ ಹಲವು ಐಶ್ವರ್ಯವಂತರ ಸುಲಿಗೆಯಾಗಿತ್ತು. ಯುದ್ಧಕ್ಕಾಗಿ ಪಂಜಾಬ್ ಪ್ರಾಂತದಲ್ಲಿ ಯುವಕರನ್ನು ಬಲಾತ್ಕಾರದಿಂದ ಸೇನೆಗೆ ಸೇರಿಸಿಕೊಳ್ಳಲಾಗಿತ್ತು. ಮಕ್ಕಳನ್ನು ಕಳೆದುಕೊಂಡ ತಂದೆತಾಯಿಗಳ ಹಾಗೂ ಗಂಡಂದಿರನ್ನು ನೀಗಿಕೊಂಡ ಸ್ತ್ರೀಯರ ಗೋಳು ಮುಗಿಲಿಗೇ ಮುಟ್ಟಿತ್ತು.

ಇದೇ ಸಮಯದಲ್ಲಿ ಬ್ರಿಟಿಷ್ ಸರ್ಕಾರ ಹಲವು ಕಠಿಣವಾದ ಕಾಯಿದೆಗಳನ್ನು ಜಾರಿಗೆ ತರಲು ಸಿದ್ಧವಿತ್ತು. ಗಾಂಧೀಜಿಯವರು ಹೊಸ ಕಾಯಿದೆ ಕಾನೂನುಗಳು ಬೇಡವೆಂದೂ, ಭಾರತೀಯರಿಗಷ್ಟೇ ಅಲ್ಲ ಅದು ಬ್ರಿಟಿಷರ ದೃಷ್ಟಿಯಲ್ಲೂ ಒಳ್ಳೆಯದಲ್ಲವೆಂದೂ ಪ್ರಾರ್ಥನಾಪತ್ರವನ್ನು ವೈಸ್‌ರಾಯರಿಗೆ ಕಳುಹಿಸಿದ್ದರು. ಆದರೂ ಹಲವು ಕಾಯಿದೆ ಕಟ್ಟಳೆಗಳು ಜಾರಿಯಾದವು. ಗಾಂಧೀಜಿ ಆಗ ತಾನೇ ಹಾಸಿಗೆಯಿಂದ ಎದ್ದಿದ್ದರು. ಒಂದು ಭಯಂಕರ ರೋಗ ಬಹಳ ದಿನದಿಂದಲೂ ಅವರನ್ನು ಕಾಡಿಸಿ ಪೀಡಿಸಿತ್ತು. ಖಾಯಿಲೆಯಿಂದ ಚೇತರಿಸಿಕೊಂಡಿರದಿದ್ದರೂ ಗಾಂಧೀಜಿ ಭಾರತಾದ್ಯಂತ ಸತ್ಯಾಗ್ರಹ ಚಳವಳಿ ನಡೆಯಬೇಕೆಂದು ಘೋಷಿಸಿದರು.

ಈ ಸುದ್ದಿ ತಿಳಿದ ಕೂಡಲೇ ಜವಹರಲಾಲ್ ಮನಮಯೂರ ಕೇಕೆ ಹಾಕಿಕೊಂಡು ಜಾಗರವಾಡಿತು. ಅಂತೂ ಚಳವಳಿಯಲ್ಲಿ ಭಾಗವಹಿಸಲು ಅವಕಾಶ ದೊರೆಯಿತೆಂದು ಹಿಗ್ಗಿದರು. ಆದರೆ ಅವರ ಈ ಆಸೆಯು ಅಷ್ಟು ಸುಲಭದಲ್ಲಿ ನೆರವೇರುವಂತಿರಲಿಲ್ಲ. ಏಕೆಂದರೆ ಚಳವಳಿಯಲ್ಲಿ ಮಗ ಸೇರುವುದು ಮೋತಿಲಾಲರಿಗೆ ಬೇಕಾಗಿರಲಿಲ್ಲ. ಲಾಠಿ ಏಟು ತಿಂದು ಗಾಯಗೊಂಡರಾಗಲಿ, ಗುಂಡಿನೇಟಿಗೆ ಸತ್ತರಾಗಲಿ, ಇಲ್ಲವೆ ದಸ್ತಗಿರಿಯಾಗಿ ಜೈಲು ಸೇರಿದರಾಗಲೀ ಯಾವುದೇ ಪ್ರಯೋಜನ ಆಗುವುದಿಲ್ಲ. ನ್ಯಾಯರೀತ್ಯಾ ಹೋರಾಡಬೇಕೆಂದು ಬೋಧಿಸಹತ್ತಿದರು. ಈ ಬೋಧನೆಗೆ ಬಹುಮುಖ್ಯ ಕಾರಣ ಅವರಿಗೆ ತಮ್ಮ ಮಗನ ಮೇಲಿದ್ದ ಮಮತೆ. ವಂಶಕ್ಕಿರುವವನು ಒಬ್ಬನೇ ಮಗ. ಆತನೂ ಅಕಸ್ಮಾತ್ ಹೋದರೆ ! ಅಲ್ಲದೆ ಅಷ್ಟೈಶ್ವರ್ಯದ ತೊಟ್ಟಿಲಲ್ಲಿ ಬೆಳೆದವನು ಜೈಲುವಾಸದ ಕಷ್ಟನಷ್ಟಗಳನ್ನು ಸಹಿಸಬಲ್ಲನೇ ಎಂಬ ಭೀತಿ.

ತಂದೆ ಮಕ್ಕಳಿಬ್ಬರಿಗೂ ಒಳಗೊಳಗೇ ಮನಸ್ತಾಪ ಪ್ರಾರಂಭವಾಯಿತು. ಜವಹರಲಾಲರು ಸತ್ಯಾಗ್ರಹ ಸಭೆಯಲ್ಲಿ ಭಾಗವಹಿಸಬೇಕೆಂದು ದೃಢ ನಿರ್ಧಾರ ಮಾಡಿಕೊಂಡರು. ಅದಕ್ಕೆ ಅಷ್ಟೇ ಪ್ರಬಲವಾದ ಪ್ರತಿಭಟನೆ ಮೋತಿಲಾಲರದಾಗಿತ್ತು. ತತ್ಪರಿಣಾಮವಾಗಿ ನೆಹರೂ ಮನೆಯಲ್ಲಿ ಒಂದು ದೊಡ್ಡ ಆಂತರಿಕ ಯುದ್ಧ ನಡೆಯುತ್ತಿತ್ತು. ಮೋತಿಲಾಲರು ಮಗನಿಗೆ ಹೇಳಿ, ಕೇಳಿ ಸೋತು, ಕಡೆಗೆ ಒಮ್ಮೆ ಗಾಂಧೀಜಿಯವರನ್ನೇ ತಮ್ಮಲ್ಲಿಗೆ ಕರೆಸಿದರು. ಗಾಂಧೀಜಿ ಅಲಹಾಬಾದಿಗೆ ಮೋತಿಲಾಲರ ಮನೆಗೆ ಬಂದರು. ಮೋತಿಲಾಲರೂ ಗಾಂಧೀಜಿಯವರೂ ಇಬ್ಬರೂ ಒಟ್ಟಾಗಿ ಕೂಡಿ ಕೋಣೆಯಲ್ಲಿ ಮಾತನಾಡಿಕೊಂಡರು. ಅವರು ಏನು ಮಾತನಾಡಿಕೊಂಡರೆಂದು ತಿಳಿಯದು. ಆದರೆ ಗಾಂಧೀಜಿ ನೆಹರೂಜೀಗೆ ಬುದ್ಧಿವಾದ ಹೇಳಿದರು. 'ಜವಹರಾ ದುಡುಕುವುದು ತರವಲ್ಲ. ತಂದೆಯ ಅಭಿಪ್ರಾಯಕ್ಕೆ ವಿರುದ್ಧವಾಗಿ ನಡೆಯುವುದು ಯೋಗ್ಯವಲ್ಲ' ಎಂದಷ್ಟೇ ಹೇಳಿ ಹೊರಟುಹೋದರು.

ಸತ್ಯಾಗ್ರಹದ ದಿವಸ ಘೋರ ಹತ್ಯಾಕಾಂಡವೇ ನಡೆದುಹೋಯಿತು. ಭಾರತದಲ್ಲಿ, ಎಂದೆಂದೂ ಕಾಣದ ಕೇಳದ ದುರ್ಘಟನೆ ನಡೆಯಿತು. ಅಂದು ಭರತಖಂಡದಲ್ಲಿ ರಕ್ತದ ಕೋಡಿ ಹರಿಯಿತು. ಅದರಲ್ಲೂ ಅಮೃತಸರದಲ್ಲಿ ನಡೆದ ಘಟನೆ ಕಣ್ಣೊಡೆಯುವಂಥದು, ಎದೆ ಬಿರಿಯುವಂಥದು. ಅದೇ ಜಲಿಯನ್ ವಾಲಾಬಾಗ್‌ನ ಪ್ರಕರಣ.

೧೯೧೬ರಲ್ಲಿ ಬ್ರಿಟಿಷ್ ಸರ್ಕಾರ ಕಾಂಗ್ರೆಸ್ ಮುಖಂಡರಾಗಿದ್ದ ಡಾ. ಸೈಫುದ್ದೀನ್ ಕಿಚ್ಲು ಎಂಬುವರನ್ನೂ, ಡಾ. ಸತ್ಯಪಾಲ್ ಎಂಬುವರನ್ನೂ ಗಡೀಪಾರು ಮಾಡಿತ್ತು. ಸಿಟ್ಟಿಗೆದ್ದ ಜನ ಅನೇಕರು ಬ್ರಿಟಿಷರನ್ನು ಅಮೃತಸರ ಮತ್ತು ಅಲಹಾಬಾದ್‌ಗಳಲ್ಲಿ ಕೊಲೆ ಮಾಡಿದ್ದರು. ಇದಾದ ಎರಡು ತಿಂಗಳಲ್ಲೇ ಅದೇ ಅಮೃತಸರಕ್ಕೆ ಬ್ರಿಗೇಡಿಯರ್ ಜನರಲ್ ಆಗಿ ಹ್ಯಾರಿ ಡಯರ್ ಎಂಬುವನು ಬಂದ. ಹ್ಯಾರಿ ಓರ್ವ ಪಾಷಂಡಿ. ಹೃದಯಹೀನ ವ್ಯಕ್ತಿ. ಏಪ್ರಿಲ್ ೧೩ರಂದು ಜಲಿಯನ್ ವಾಲಾಬಾಗಿನಲ್ಲಿ ಒಂದು ಮಹಾಸಭೆ ಸೇರಿತ್ತು. ಸುಮಾರು ೧೦–೧೫ ಸಾವಿರ ಜನ ಆ ಕಾಂಪೌಂಡಿನಲ್ಲಿದ್ದಿರಬೇಕು. ಪಾಪಿ ಡಯರ್ ಮಿಷನ್ ಗನ್ನನ್ನು ಆ ಚಿಕ್ಕ ಕಾಂಪೌಂಡಿನ ಬಾಗಿಲಿಗೆ ಅಡ್ಡ ನಿಲ್ಲಿಸಿ ಗುಂಡು ಹಾರಿಸತೊಡಗಿದ. ಗುಂಡುಗಳು ಹಾರಿದವು. ಜನ ಕಂಗಾಲಾಗಿ ಓಡಲಾರಂಭಿಸಿದರು. ಆದರೆ ಗುಂಡಿನ ಮಳೆ ಒಂದೇ ಸಮನೆ ವ್ಯಕ್ತಿಗಳ ಮೇಲೆ ಕರೆಯಿತು. ಅನೇಕರು ಸತ್ತರು. ಬಹಳ ಜನ ಗಾಯಗೊಂಡು ಉರುಳಿದರು. ಪ್ರಾಣಭಯದಿಂದ ಕೆಲವರು ಆ ಕಾಂಪೌಂಡಿನಲ್ಲಿದ್ದ ಹಾಳುಭಾವಿಗೆ ಧುಮುಕಿದರು. ಧುಮುಕಿದವರು ಬದುಕಿ ಮೇಲೆ ಬರಲೇ ಇಲ್ಲ, ಹೆಂಗಸರು, ಮಕ್ಕಳು 'ಹೋ' ಎಂದು ಒರಲಿದರು. ಕೇಳುವವರಿಲ್ಲದೆ ಸತ್ತರು ! ನೆತ್ತರಿನ ಹೊಳೆ ಹರಿಯಿತು. ಹೆಣಗಳು ರಾಶಿರಾಶಿ ಬಿದ್ದವು. ಪಶುಗಳಿಗೆ ಕಡೆಯಾಗಿ ಅಂದು ಅಲ್ಲಿ ನರಬಲಿ ನಡೆಯಿತು. ಸುಮಾರು ೧೦ ನಿಮಿಷಗಳಲ್ಲಿ ೧೬೫೦ ಗುಂಡುಗಳು ಹಾರಿದ್ದವು. ೩೭೯ ಜನರನ್ನು ತಿಂದು ೧೧೩೭ ಜನರನ್ನು

ಗಾಯಗೊಳಿಸಿದ್ದವು. ಎಂಥ ಹೃದಯವಿದ್ರಾವಕ ಘಟನೆ ! ಆದರೆ ಈ ಘಟನೆಯ ಸಂಪೂರ್ಣ ವರದಿ ಹೊರಬರುವಂತಿರಲಿಲ್ಲ. ಪಂಜಾಬ್ ಪ್ರಾಂತ ಭಾರತದ ಎಲ್ಲಾ ಪ್ರಾಂತಗಳ ಸಂಪರ್ಕವನ್ನೂ ಕಳೆದುಕೊಂಡಿತ್ತು. ಅದರಿಂದ ಹೊರಕ್ಕೆ ಬರುವುದಕ್ಕಾಗಲಿ, ಹೊರಗಿನಿಂದ ಅದರೊಳಕ್ಕೆ ಪ್ರವೇಶಿಸುವುದಕ್ಕಾಗಲಿ ಅಪ್ಪಣೆ ಇಲ್ಲದಾಗಿತ್ತು. ತೀರ ಅಪಮಾನಕರವಾದ ಅಮೃತಸರದ ಒಂದು ರಸ್ತೆಯಲ್ಲಿ ತಿರುಗಾಡುವವರೂ, ವಾಸಿಸುವವರೂ ಅಂಬೆಗಾಲಿಟ್ಟುಕೊಂಡು ಹೋಗಬೇಕಾಗಿತ್ತು.

ಕೆಲವು ದಿನಗಳ ಮೇಲೆ ಪಂಜಾಬ್ ಪ್ರಾಂತದೊಳಕ್ಕೆ ಪ್ರವೇಶಿಸಲು ಇದ್ದ ನಿಷೇಧಾಜ್ಞೆಯನ್ನು ಸರ್ಕಾರ ಹಿಂತೆಗೆದುಕೊಂಡಿತು. ಆಗ ಅಮೃತಸರದಲ್ಲಿದ್ದ ದುರ್ಘಟನೆ ಎಲ್ಲರಿಗೂ ತಿಳಿಯಿತು. ಗಾಂಧೀಜಿ ಡಯರ್‌ನ ವರ್ತನೆಗೆ ಸಿಟ್ಟಿಗೆದ್ದರು. ಅವರನ್ನು ಸಮಾಧಾನಪಡಿಸಲು ಒಂದು "ಹಂಟರ್ ಕಮಿಟಿ" ಎಂಬ ವಿಚಾರಣಾ ಸಮಿತಿಯನ್ನು ನೇಮಿಸಿತು. ಆದರೂ ಆ ಸಮಿತಿ ಕಳ್ಳರ ಸಂತೆ. ಸರಿಯಾದ ನ್ಯಾಯ ಭಾರತೀಯರಿಗೆಲ್ಲಿ ಸಿಗಬೇಕು ! ಅಲ್ಲದೆ ಡಯರ್‌ನನ್ನು ಎಂತಹ ಶಿಕ್ಷೆಗೆ ಗುರಿ ಮಾಡಿದರೂ ಮಡಿದ ೩೭೯ ಜೀವಗಳನ್ನು ತರಲಾಗುತ್ತದೆಯೆ ? ನೆಲದಲ್ಲಿ ಹರಿದು ಕೆಸರಾದ ರಕ್ತವನ್ನು ಮತ್ತೆ ಮೈಗಳಿಗೆ ತುಂಬಲಾಗುತ್ತದೆಯೆ ? ಅಂತು ಹಂಟರ್ ಕಮಿಟಿ ಕಣ್ಣೊರೆಸುವ ಕೆಲಸ ಮಾಡಿತು.

ಈ ಹತ್ಯಾಕಾಂಡದಲ್ಲಿ ನೊಂದು ಬೆಂದವರಿಗೆ ಪರಿಹಾರ, ನೆರವು ನೀಡುವುದಕ್ಕಾಗಿ ಕಾಂಗ್ರೆಸ್ ಮುಂದಾಳುಗಳೆಲ್ಲರೂ ಪಂಜಾಬ್ ಪ್ರಾಂತಕ್ಕೆ ನುಗ್ಗಿದರು. ದ್ರೋಹಪೀಡಿತರಿಗೆ ಸಹಾಯ ಮಾಡಲು ಮದನಮೋಹನ ಮಾಳವೀಯ ಮತ್ತು ಸ್ವಾಮಿ ಶ್ರದ್ಧಾನಂದರು ಮುಖಂಡರಾಗಿ ಕೆಲವರಿಗೆ ಕೆಲವು ಕಾರ್ಯಕ್ರಮಗಳನ್ನು ಹಂಚಿಕೊಟ್ಟರು. ಅಮೃತಸರದ ಭಾಗಕ್ಕೆ ದೇಶಬಂಧು ಚಿತ್ತರಂಜನದಾಸರು ಮೇಲ್ವಿಚಾರಕರಾಗಿದ್ದರು. ಆಗ ದಾಸರು ತಮ್ಮ ನೆರವಿಗೆ ಪಂಡಿತ ಜವಹರಲಾಲರನ್ನು ತೆಗೆದುಕೊಂಡರು. ಜವಹರರಿಗೆ ಒಂದು ವಿಧದಲ್ಲಿ ಸಂತೋಷವೇ ಆಯಿತು. ದೇಶಬಂಧು ದಾಸರ ಕೈಕೆಳಗೆ ಕೆಲಸ ಮಾಡುವುದು, ಅದರಲ್ಲೂ ರಾಷ್ಟ್ರದ ಸಂತಪ್ತ ಜನತೆಯ ಸೇವೆ ಮಾಡುವ ಸದವಕಾಶ ದೊರೆತಿದ್ದು ತನ್ನ ಪುಣ್ಯವೆಂದು ಭಾವಿಸಿ ಅಮೃತಸರದಲ್ಲೆಲ್ಲಾ ಓಡಾಡಿಕೊಂಡು ಪರಿಹಾರ ಕಾರ್ಯವನ್ನು ಸಂಪೂರ್ಣವಾಗಿ ನೆರವೇರಿಸಿದರು.

ತಮ್ಮ ಪಾಲಿನ ಸೇವೆಯನ್ನು ಸಲ್ಲಿಸಿದ ಮೇಲೆ ಜವಹರಲಾಲರು ಒಂದು ದಿನ ರಾತ್ರಿ ಗಾಡಿಗೆ ಹೊರಟರು. ಅಮೃತಸರದಿಂದ ಅಲಹಾಬಾದಿಗೆ ಒಂದು ಡಬ್ಬಿಯಲ್ಲಿ ಅಪ್ಪರ್ ಬರ್ಥನಲ್ಲಿ ಮಲಗಿದ್ದರು. ಕೆಳಗೆ ಕೆಲವು ಮಿಲಿಟರಿ ಅಧಿಕಾರಿಗಳಿದ್ದರು. ಅವರಲ್ಲಿ ಒಬ್ಬನಂತೂ ಇಡೀ ರಾತ್ರಿಯೆಲ್ಲಾ ಮಾತನಾಡಿದ. ತನ್ನ ಜೊತೆಯಲ್ಲಿದ್ದವರೊಬ್ಬರಿಗೂ ನಿದ್ದೆ ಕೊಡಲಿಲ್ಲ. ಅಲ್ಲದೆ ಅವನ ಅಹಂಕಾರದ ಮಾತುಗಳು, ಚಲಾಯಿಸಿದ ಆಜ್ಞೆ, ಗುಂಡಿಟ್ಟು ಹೊಡೆಸಿದ ರೀತಿ, ಅದನ್ನು ಕಂಡು ತನಗಾದ ಆನಂದ ಇವೆಲ್ಲವನ್ನೂ ಬಹಳ ಅಟ್ಟಹಾಸದಿಂದ ಕೊಚ್ಚಿಕೊಳ್ಳುತ್ತಿದ್ದ. ಅದನ್ನು ಕೇಳಿದ ಕೂಡಲೇ ಜವಾಹರರಿಗೆ ಅವನೇ ಹ್ಯಾರಿ ಡಯರ್ ಎಂದು ತಿಳಿದುಕೊಳ್ಳಲು ಹೆಚ್ಚು ಕಾಲ ಹಿಡಿಯಲಿಲ್ಲ. ಡಯರ್ ಹಂಟರ್ ಕಮಿಟಿಗೆ ತನ್ನ ಹೇಳಿಕೆಯಿತ್ತು ಲಾಹೋರಿನಿಂದ ಹಿಂತಿರುಗುತ್ತಿದ್ದ. ಬೆಳಗಾದ ಮೇಲೆ ದೆಹಲಿಯ ಸ್ಟೇಷನ್ನಿನಲ್ಲಿ ಜವಹರ್ ಆ ಪಾತಕಿಯ ದರ್ಶನ ಮಾಡಿಕೊಂಡರು.

ಆತನ ದುರಾಚರಣೆಯನ್ನು ಕಂಡು ಮರುಗಿದ್ದ ಭಾರತಪುತ್ರನಿಗೆ ಮೈ ಬಿಸಿಯೇರಿತು. ಆತನನ್ನು ಪ್ರತ್ಯಕ್ಷ ಕಂಡ ಕೂಡಲೆ ಸುಟ್ಟುಬಿಡಬೇಕೆಂಬ ರೋಷ ಬಂತು. ಆದರೆ ಆಗ ಜವಹರರು ಅಶಕ್ತರಿದ್ದರು, ಅಸಹಾಯಕರಿದ್ದರು.

ಅದೇ ವರ್ಷ ಕಾಂಗ್ರೆಸ್ಸಿನ ೨೪ನೆಯ ಅಧಿವೇಶನ ಅಮೃತಸರದಲ್ಲಿಯೇ ನಡೆಯಿತು. ಪಂಡಿತ್ ಮೋತಿಲಾಲರು ಅದರ ಅಧ್ಯಕ್ಷರಾಗಿದ್ದರು. ಅಂದಿನ ಅಧ್ಯಕ್ಷ ಪೀಠದಿಂದ ಅವರು ನುಡಿದರು - "ಅತ್ಯಾಚಾರ ಹಾಗೂ ದಬ್ಬಾಳಿಕೆಗಳೆರಡೂ ರಾಷ್ಟ್ರದ ಆಸೆ ಆಕಾಂಕ್ಷೆಗಳನ್ನು ಕೊಲ್ಲಲಾರವು".

"ಸರ್ಕಾರದ ಒಣ ಸುಧಾರಣೆಗಳಿಂದ ಯಾವ ಪ್ರಯೋಜನವೂ ಭಾರತೀಯನಿಗಿಲ್ಲ. ನಾಗರಿಕ ಹಕ್ಕು ಬಾಧ್ಯತೆಗಳಿಲ್ಲದ ಘಟನಾತ್ಮಕ ಸುಧಾರಣೆಗಳು ಹೆಣದ ಮೇಲಿನ ಬಹು ಬೆಲೆಬಾಳುವ ಬಟ್ಟೆಗಳಿದ್ದಂತೆ.

"ಸತ್ಯದ ಮಾರ್ಗದರ್ಶನದಲ್ಲಿ ನಾವೆಲ್ಲರೂ ಧೈರ್ಯದಿಂದ ಮುಂದೆ ನಡೆಯೋಣ !"

ಈ ಸಿಂಹಘರ್ಜನೆ ವಿಶ್ವದಾದ್ಯಂತ ಮೊಳಗಿತು. ಅವರ ಹೂಂಕೃತಿಗೆ ಬ್ರಿಟಿಷರ ಎದೆ ಬೆಚ್ಚಿತು.

ಗಾಂಧೀಜಿಯವರೂ, ರಾಜಕೀಯದಿಂದ ದೂರವಿದ್ದವರೂ ರಂಗಕ್ಕಿಳಿದರು. ಜನತೆ ಎಚ್ಚೆತ್ತುಕೊಂಡಿತು. ಬ್ರಿಟಿಷರ ಬುಡವೇ ನಡುಗುವ ಸ್ಥಿತಿ ಬಂದಿತು. ಇದಕ್ಕೆಲ್ಲಾ ಮೂಲ ಕಾರಣವಾದದ್ದು ಜಲಿಯನ್ ವಾಲಾಬಾಗಿನ ಪ್ರಕರಣ. ಅಲ್ಲಿನವರೆಗೆ ಸುಖವಾಗಿ ನಿದ್ರಿಸುತ್ತಿದ್ದ ಭಾರತದ ರಾಜಕೀಯತನವನ್ನು ಈ ಹತ್ಯಾಕಾಂಡ ಬಡಿದೆಬ್ಬಿಸಿತು.

ಅಂದೇ ಕಾಂಗ್ರೆಸ್ಸಿನಲ್ಲಿ ಒಗ್ಗಟ್ಟೇರ್ಪಟ್ಟಿತು.

ಭಿನ್ನಾಭಿಪ್ರಾಯಗಳು ಬಹಳ ಮಟ್ಟಿಗೆ ದೂರವಾಗಿ ಗಾಂಧೀಜಿಯವರ ಮಾತಿನಂತೆ ಎಲ್ಲರೂ ನಡೆಯಲು ಸಿದ್ಧರಾದರು. ಗಾಂಧೀಜಿ ಅಂದರೂ ಒಂದೇ, ಕಾಂಗ್ರೆಸ್ ಸಂಸ್ಥೆ ಅಂದರೂ ಒಂದೇ ಎಂಬ ಭಾವನೆ ಬೆಳೆಯಿತು.

ಗಾಂಧೀಜಿ ಅಸಹಕಾರ ಚಳವಳಿಯನ್ನು ಮುಂದುವರಿಸಬೇಕೆಂದೂ, ಅಹಿಂಸಾತತ್ವವನ್ನು ಪ್ರತಿಯೊಬ್ಬನೂ ಅಕ್ಷರಶಃ ಪಾಲಿಸಬೇಕೆಂದೂ, ವಿದೇಶಿ ವಸ್ತ್ರದ ಬಹಿಷ್ಕಾರ ನಡೆಸಬೇಕೆಂದೂ ಕರೆಕೊಟ್ಟರು. ಅದೇ ರೀತಿ ಬದಲಾವಣೆಯಾಗಿ, ಕಾರ್ಯರೂಪಕ್ಕೆ ತಂದಿತು ಕಾಂಗ್ರೆಸ್. ೧೯೨೦ರಲ್ಲಿ ಕಾಂಗ್ರೆಸ್ಸಿನ ವಿಶೇಷಾಧಿವೇಶನವನ್ನು ಇದಕ್ಕಾಗಿಯೇ ಕಲ್ಕತ್ತಾದಲ್ಲಿ ಕರೆದರು. ಲಾಲಾಲಜಪತರಾಯರು ಅಂದಿನ ಅಧ್ಯಕ್ಷರಾಗಿದ್ದರು. ಪಂಡಿತ ಮೋತಿಲಾಲರಾದಿಯಾಗಿ ಎಲ್ಲರೂ ಖಾದಿಧಾರಿಗಳಾಗಿ ನೆಲದ ಮೇಲೆ ಕುಳಿತು ಅಧಿವೇಶನ ನಡೆಸಿದರು. ನೋಡಿದವರಿಗೆ ಅವರ ಖಾದಿವಸ್ತ್ರ ವಿಚಿತ್ರ ರೂಪದಂತೆ ಕಂಡಿತಾದರೂ ಅದು ಪವಿತ್ರವೆಂದೂ, ಭಾರತದ ಬಂಧುವಿಗೆ ಅನ್ನಕೊಡುವ ರೂಪವೆಂದೂ ಅನಂತರದಲ್ಲಿ ತಿಳಿಯಿತು. ಅಲ್ಲದೆ ಮಹಾತ್ಮಾಜಿಯವರಿಗೆ ಪ್ರಿಯವಾದ ಖಾದಿಯೇ ಭಾರತದ ಸ್ವಾತಂತ್ರ್ಯದ ಹಾದಿ ಎಂಬ ಅರಿವಾಯಿತು.

**ಸೆರೆಮನೆಯ ಸವಿ**

೧೯೨೦ರ ಅನಂತರದಲ್ಲಿ ಭಾರತದ ರಾಜಕೀಯ ರಂಗದಲ್ಲಿ ಒಂದು ವಿಶೇಷ ಕ್ರಾಂತಿಯೇ ನಡೆಯಿತೆನ್ನಬೇಕು. ಅಸಹಕಾರ ಚಳವಳಿಯಂತೂ ಅಸಾಧಾರಣವಾದ ಪರಿಣಾಮವನ್ನುಂಟುಮಾಡಿತು. ಜನತೆಯಲ್ಲಿ ದೇಶಪ್ರೇಮ, ಸ್ವಾತಂತ್ರಾಭಿಮಾನಗಳು ಹೆಚ್ಚಿದಂತೆಲ್ಲಾ ಬ್ರಿಟಿಷ್ ಸರ್ಕಾರದೊಡನೆ ಅಸಹಕಾರ ಮನೋಭಾವನೆಯು ಹೆಚ್ಚತೊಡಗಿತು. ಅಸಹಕಾರ ಅಹಿಂಸಾ ರೂಪದ್ದು, ಬ್ರಿಟಿಷರ ಕಲ್ಪನೆಗೇ ಅದು ಬಂದಿರಲಿಲ್ಲ. ಕಛೇರಿಯ ಕಾರಕೂನ ಕಛೇರಿಗೆ ಹೋದರೂ ತನ್ನ ಕೆಲಸವನ್ನು ಮಾಡದೆ ಸರಕಾರದೊಡನೆ ತನ್ನ ಅಸಹಕಾರವನ್ನು ವ್ಯಕ್ತಪಡಿಸಿದರು. ವಿದ್ಯಾರ್ಥಿ ಶಾಲಾ ಕಾಲೇಜುಗಳನ್ನು ತೊರೆದು ಸರ್ಕಾರದ ನೀತಿ ರೀತಿಗಳನ್ನು ಪ್ರತಿಭಟಿಸಿದರು. ವರ್ತಕರೂ, ರೈತರೂ, ಕಾರ್ಮಿಕರಾದಿಯಾಗಿ ಎಲ್ಲರೂ ತಮ್ಮ ಅಸಹಕಾರವನ್ನು ವ್ಯಕ್ತಪಡಿಸಿದರು. ಒಂದು ಸಣ್ಣ ನಿದರ್ಶನ : ಅಲಹಾಬಾದಿನ ಚುನಾವಣೆ. ಅಲಹಾಬಾದಿನಲ್ಲಿ ಚುನಾವಣೆ ನಡೆಯಲು ಯಾವುದೋ ಒಂದು ದಿನ ಗೊತ್ತಾಗಿತ್ತು. ಆ ದಿನ ಒಂದು ಪಿಳ್ಳೆಯೂ ಸಹ ಓಟು ಮಾಡಲಿಲ್ಲ. ಇದಂತೂ ಬ್ರಿಟಿಷರಿಗೆ ದಿಗ್ಭ್ರಮೆ ಹಿಡಿಸಿತು. ಸರ್ಕಾರವನ್ನು ನಡೆಸುವುದೇ ಕಷ್ಟಕ್ಕಿಟ್ಟುಕೊಂಡಿತು.

ಅಲ್ಲದೆ ದೇಶದಾದ್ಯಂತ ಸ್ವಯಂಸೇವಕ ದಳಗಳು ಸ್ಥಾಪಿತವಾದುವು. ದೇಶಸೇವೆಗಾಗಿ ತಮ್ಮ ಸರ್ವಸ್ವವನ್ನೂ ತ್ಯಾಗಮಾಡಬಲ್ಲ ವ್ಯಕ್ತಿಗಳು ತಮ್ಮತಮ್ಮ ಹೆಸರುಗಳನ್ನು ಬರೆಸಿ ಸಹಿ ಮಾಡಿ ಕಾಂಗ್ರೆಸ್ ಕಛೇರಿಗೆ ಕಳುಹಿಸಿದರು. ಅಸಹಕಾರ ಆಂದೋಲನದ ವ್ಯವಸ್ಥೆ ದೇಶಿಯ ವ್ಯಕ್ತಿಗಳಲ್ಲಿ ಬಹಳ ಜೋರಾಗಿ ನಡೆದಿತ್ತು.

ದೇಶದ ದೃಷ್ಟಿಯಿಂದ ಗಮನಿಸಿದರೆ ಅಸಹಕಾರ ಚಳವಳಿ ಮಹೋಪಕಾರವನ್ನೇ ಮಾಡಿತು. ಆದರೆ ನೆಹರೂ ಮನೆತನಕ್ಕೆ ಅನೇಕ ರೀತಿಯ ಕಷ್ಟನಷ್ಟಗಳುಂಟಾದವು. ತಂದೆ ಮಕ್ಕಳಿಬ್ಬರೂ ಚಳವಳಿಗೆ ಸೇರಿ ಸ್ವಯಂಸೇವಕರಾದ ಮೇಲೆ ವಕೀಲಿಗೆ ತಿಲಾಂಜಲಿಯನ್ನು ಕೊಟ್ಟರು. ಆದಾಯ ಇಲ್ಲವಾಯಿತು. ಖರ್ಚನ್ನು ಕಡಿಮೆ ಮಾಡಲು ಯತ್ನಿಸಬೇಕಾಯಿತು. ತಾವು ತಮ್ಮ ಕುಟುಂಬದವರೆಲ್ಲರೂ ದೇಶದ ಮಕ್ಕಳಾಗಿಬಿಟ್ಟರು. ತಮ್ಮ ಸಮಸ್ತವನ್ನೂ ಕಾಂಗ್ರೆಸ್ ಸಂಸ್ಥೆಗಾಗಿ, ದೇಶದ ಶ್ರೇಯಸ್ಸಿಗಾಗಿ ಧಾರೆಯೆರೆದರು.

ಜವಹರಲಾಲರಂತೂ ಮನೆ ಸೇರುವುದು ತಿಂಗಳುಗಳಾಗುತ್ತಿದ್ದವು. ಅವರಿಗೆ ದಿನದ ಇಪ್ಪತ್ತು ನಾಲ್ಕು ಗಂಟೆಗಳೂ ಸಾಲದೇ ಬರುತ್ತಿದ್ದವು. ಈ ಗಳಿಗೆ ಇಲ್ಲಿದ್ದರೆ ಮತ್ತೊಂದು ಗಳಿಗೆಯಲ್ಲಿ ಬೇರೆಲ್ಲೋ ಯಾವುದೋ ಕಾರ್ಯದಲ್ಲಿ ತೊಡಗಿರುತ್ತಿದ್ದರು. ಈ ದಿನ ಕಾರ್ಮಿಕರನ್ನು ಉದ್ದೇಶಿಸಿ ಭಾಷಣ, ನಾಳೆ ಹಳ್ಳಿಯ ರೈತರ ಪರವಾಗಿ ಪಂಚಾಯಿತಿ, ನಾಡಿದ್ದು ವಿದೇಶೀ ವಸ್ತ್ರದ ಬಹಿಷ್ಕಾರ, ಚಳವಳಿ, ವಿದ್ಯಾಥಿಗಳಿಗೆ ಕರೆ ಇತ್ಯಾದಿ. ಸಾಲದ್ದಕ್ಕೆ ಕಾಂಗ್ರೆಸ್

ಕಛೇರಿ ಕೆಲಸ ಬೇರೆ. ಹೀಗಾಗಿ ನೆಹರೂಜಿ ಹಳ್ಳಿ ಹಳ್ಳಿಗಳನ್ನೂ, ಊರು ಊರುಗಳನ್ನೂ ಹಗಲೆನ್ನದೆ, ಇರುಳೆನ್ನದೆ, ಮಳೆಯೆನ್ನದೆ, ಬಿಸಿಲೆನ್ನದೆ ಕಲ್ಲು ಮುಳ್ಳುಗಳಿರಲಿ, ಬೆಟ್ಟಗುಡ್ಡಗಳಿರಲಿ ಹತ್ತಿ ಇಳಿದು ಸಾಗಿದರು, ತಿರುಗಿದರು.

ಆಗಾಗ ಅವರಿಗೆ ತಮ್ಮ ಮನೆಯ ನೆನಪಾಗದಿರುತ್ತಿರಲಿಲ್ಲ. ತಮ್ಮ ಮೋಹದ ಮಡದಿ ಕಮಲಾ ತನ್ನ ಪ್ರೇಮಭರಿತ ನೇತ್ರಗಳಿಂದಲೇ ಕರೆಯುತ್ತಿದ್ದಳು. ತಮ್ಮ ಮಮತೆಯ ಮುದ್ದು ಇಂದಿರೆ ತೊದಲು ನುಡಿಯ ಆಹ್ವಾನ ಕೊಡುತ್ತಿದ್ದಳು. ಕರುಣೆಯೇ ಮೂರ್ತಿವೆತ್ತಂತಿದ್ದ ತಮ್ಮ ತಾಯಿ, ಗಾಂಭೀರ್ಯದ ತಂದೆ, ಅಕ್ಕರೆಯ ತಂಗಿಯರಾದ ವಿಜಯಲಕ್ಷ್ಮೀ ಮತ್ತು ಕೃಷ್ಣಕುಮಾರಿ ಎಲ್ಲರೂ ಕಣ್ಣೆದುರಿಗೆ ಬಂದು ನಿಲ್ಲುತ್ತಿದ್ದರು. ಆದರೂ ಅವರೊಡನೆ ನಿಂತು ಮಾತನಾಡುವಷ್ಟು ಸಮಯ ನೆಹರೂಜಿಯವರ ಕೈಯಲ್ಲಿರಲಿಲ್ಲ. ಈ ಕೌಟುಂಬಿಕ ಮೋಹಕ್ಕಿಂತಲೂ ಅವರಿಗೆ ರಾಷ್ಟ್ರಪ್ರೇಮದ ಸೆಳೆತ ಬಹಳವಾಗಿತ್ತು. ತಮ್ಮ ದೈಹಿಕವಾದ ಸಮಸ್ತ ಸುಖವನ್ನೂ ತೊರೆದು ಅಕ್ಷರಶಃ ಸ್ವಯಂಸೇವಕರಾಗಿ ದೇಶಸೇವೆಗೆ ನಿಂತರು.

೧೯೨೧ರಲ್ಲಿ ಬ್ರಿಟಿಷ್ ಯುವರಾಜನು ಭಾರತಕ್ಕೆ ಭೇಟಿಕೊಡುವನೆಂದು ಗೊತ್ತಾಗಿತ್ತು. ಆತನನ್ನು ಸ್ವಾಗತಿಸಲು ಸರ್ಕಾರ ಅನೇಕ ಸಿದ್ಧತೆಗಳನ್ನು ಮಾಡಿತ್ತು. ಆದರೆ ಕಾಂಗ್ರೆಸ್ಸಿಗರ ಅಸಹಕಾರ ಅಷ್ಟೇ ಪ್ರಮಾಣದಲ್ಲಿ ಸಿದ್ಧವಾಯಿತು. ಬ್ರಿಟಿಷ್ ಯುವರಾಜನ ಮೆರವಣಿಗೆ, ಉತ್ಸವಾದಿಗಳನ್ನು ತಪ್ಪಿಸಬೇಕೆಂದೂ ಎಲ್ಲೆಡೆಯೂ ಬಹಿಷ್ಕರಿಸಬೆಕೆಂದೂ ನಿರ್ಧರಿಸಿದರು. ಸ್ವಯಂ ಸೇವಕ ದಳಗಳು ಇದಕ್ಕೆ ಮುಂದೆ ನಿಂತವು. ಈ ಚಳವಳಿಯನ್ನು ತಡೆಗಟ್ಟಬೇಕೆಂದು ಸರ್ಕಾರ ಭಾರೀ ಪ್ರಯತ್ನ ನಡೆಸಿ ಬಹಳೇ ಮಂದಿ ಕಾಂಗ್ರೆಸ್ ಕಾರ್ಯಕರ್ತರನ್ನು ಜೈಲಿಗೆ ಹಾಕಿತು.

ಜೈಲುವಾಸ ಬಹಳ ಜನಕ್ಕೆ ಹೊಸದು. ಅದರಲ್ಲೂ ನೆಹರೂಜಿಯವರಿಗಂತೂ ಹೊಚ್ಚಹೊಸ ಅನುಭವ. ಕನಸಿನಲ್ಲೂ ಸಹ ಜೈಲು ಹೀಗೆ, ಅದರ ವಾಸ ಹೀಗೆ ಎಂದು ಅವರು ಕಂಡಿರಲಿಲ್ಲ. ಈಗ ಕಾಣಬೇಕಾದ ಪ್ರಸಂಗ ಬಂತು.

ಆ ದಿನ ಅಲಹಾಬಾದಿನಲ್ಲೂ ಬಹಳ ಜನರ ದಸ್ತಗಿರಿಗಳಾದವು. ಕಾಂಗ್ರೆಸ್ ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದ ನೆಹರೂಜಿಯವರಿಗೆ ವಿಷಯವೆಲ್ಲಾ ತಿಳಿಯುತ್ತಿತ್ತು. ಅಂತೆಯೇ ತಮ್ಮನ್ನು ದಸ್ತಗಿರಿ ಮಾಡುವರೆಂಬುದರಲ್ಲಿ ಅವರಿಗೆ ಸಂದೇಹವೇ ಉಳಿದಿರಲಿಲ್ಲ. ಅದರಿಂದಾಗಿ ಅವರಿಗೆ ಸ್ವಲ್ಪ ಭಯವೆನಿಸಿತ್ತು. ದಸ್ತಗಿರಿಯಾಗುವುದು, ಜೈಲಿಗೆ ಹೋಗುವುದು ಎಂದರೆ ಅವರ ಊಹೆಗೂ ಸಿಲುಕದ ಹೊಸ ಅನುಭವ.

ಆ ದಿನ ಸಂಜೆ ಕಾಂಗ್ರೆಸ್ ಕಛೇರಿಯ ಕಾರ್ಯಕಲಾಪಗಳನ್ನು ಮುಗಿಸಿಕೊಂಡು ನೆಹರೂಜಿ ಮನಗೆ ಹೊರಟರು. ಮನೆಯ ಹತ್ತಿರ ಬರುತ್ತಿದ್ದಂತೆ ಅನೇಕ ಜನ ಪೊಲೀಸರು ನಿಂತಿರುವುದು ಕಂಡು ಬಂತು. ಒಬ್ಬ ಅಧಿಕಾರಿ ಒಂದು ವಾರಂಟ್ ಕೊಟ್ಟು ಪಂಡಿತ ಮೋತಿಲಾಲರನ್ನೂ, ಜವಹರರನ್ನೂ ದಸ್ತಗಿರಿ ಮಾಡಿ ಕರೆದೊಯ್ದ. ತಂದೆ ಮಕ್ಕಳಿಬ್ಬರಿಗೂ ಆರು ತಿಂಗಳ ಶಿಕ್ಷೆ ವಿಧಿಸಲಾಯಿತು.

ಇವರಿಬ್ಬರ ಮೇಲಿನ ಮೊಕದ್ದಮೆಗಳು ಬಹಳ ವಿಚಿತ್ರವಾಗಿದ್ದವು. ಮೋತಿಲಾಲರು ಸರ್ಕಾರದ ಕಾನೂನಿಗೆ ವಿರುದ್ಧವಾಗಿ ಸ್ವಯಂಸೇವಕರಾಗಿದ್ದರೆಂದು ಆಪಾದಿಸಲಾಗಿತ್ತು. ಅದರ ವಿಚಾರಣೆಯಂತೂ ನೆಹರೂಜಿಗೆ ನಗೆ ತಂದಿತು. ಏಕೆಂದರೆ ಮೋತಿಲಾಲರು ಸ್ವಯಂಸೇವಕರೆಂದು ಒಪ್ಪಿ, ಹಿಂದಿಯಲ್ಲಿ ಸಹಿ ಮಾಡಿದ್ದರಂತೆ. ಆ ಸಹಿ ಅವರದ್ದೇ ಎಂದು ಗುರುತಿಸಲು ಒಬ್ಬ ಹುಂಬನನ್ನು ಪೊಲೀಸ್ ಅಧಿಕಾರಿಗಳು ದುಡ್ಡುಕೊಟ್ಟು ಕೋರ್ಟಿಗೆ ಕರೆತಂದಿದ್ದರಂತೆ. ಆದರೆ ಆತ ಸಾಕ್ಷಿ ಹೇಳಲು ನಿಂತಾಗ ಮೋತಿಲಾಲರ ಸಹಿಪತ್ರವನ್ನು ತಲೆಕೆಳಗಾಗಿ ಹಿಡಿದುಕೊಂಡಿದ್ದನಂತೆ. ಅಂದರೆ ಅವನಿಗೆ ಅಕ್ಷರಜ್ಞಾನವೇ ಇರಲಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಇಂತಹ ಅನ್ಯಾಯದ ನ್ಯಾಯಾಲಯ, ಮೋತಿಲಾಲರಿಗೆ ಆರು ತಿಂಗಳ ಶಿಕ್ಷೆ ವಿಧಿಸಿತು.

ಜವಹರಲಾಲರು ಹರತಾಳಕ್ಕೆ ಸಂಬಂಧಿಸಿದ ಹಸ್ತಪ್ರತಿಗಳನ್ನು ಹಂಚಿದರೆಂದು ಆರೋಪಿಸಲಾಗಿತ್ತು. ಇವರಿಗೂ ಆರು ತಿಂಗಳ ಶಿಕ್ಷೆ ಆಯಿತು. ಆದರೆ ಮೂರು ತಿಂಗಳ ನಂತರದಲ್ಲಿ ಶಿಕ್ಷೆ ಕಾನೂನು ವಿರುದ್ಧವೆಂದು ಹೇಳಿ ಅವರನ್ನು ಹೊರಕ್ಕೆ ಬಿಟ್ಟುಬಿಟ್ಟರು.

ಸೆರೆಯಿಂದ ಹೊರಬಂದ ನೆಹರೂಜಿ ಗಾಂಧೀಜಿಯನ್ನು ಕಾಣುವ ಹಂಬಲದಿಂದ ಅಲಹಾಬಾದಿಗೆ ಬಂದರು. ಆದರೆ ಗಾಂಧೀಜಿ ಅಲ್ಲಿರಲಿಲ್ಲ. ಅವರನ್ನು ಸರ್ಕಾರ ದಸ್ತಗಿರಿ ಮಾಡಿ ಜೀವಾವಧಿ ಶಿಕ್ಷೆ ವಿಧಿಸಿ ಸಾಬರಮತಿ ಜೈಲಿನಲ್ಲಿ ಬಂಧನದಲ್ಲಿಟ್ಟಿತು.

ಈ ಮಧ್ಯೆ ೧೯೨೧ರ ಫೆಬ್ರವರಿ ೫ನೇ ತಾರೀಕು ಮತ್ತೊಂದು ಆಗಬಾರದ ಕೃತ್ಯ ನಡೆದುಹೋಗಿತ್ತು. ಅಮೃತಸರದ ಜಲಿಯನ್ ವಾಲಾಬಾಗಿನಲ್ಲಿ ನಡೆದ ಡಯರ್‌ನ ಪ್ರಕರಣದಿಂದ ರೊಚ್ಚಿಗೆದ್ದ ಜನ ಸಮಯ ಕಾದು ಚೌರಿಚೌರ ಎಂಬ ಚಿಕ್ಕ ನಗರದ ಪೊಲೀಸ್ ಠಾಣೆಗೆ ಬೆಂಕಿ ಹಚ್ಚಿ ಕಗ್ಗೊಲೆ ಮಾಡಿತ್ತು. ಬೆಂಕಿಯಿಂದ ಪಾರಗಲು ಈಚೆಗೆ ಬಂದ ಪೊಲೀಸರನ್ನು ತುಂಡುತುಂಡಾಗಿ ಕತ್ತರಿಸಿ ಮತ್ತೆ ಬೆಂಕಿಗೆ ಎಸೆದಿತ್ತು.

"ಈ ವಾರ್ತೆ ಗಾಂಧೀಜಿಗೆ ಫೆಬ್ರವರಿ ೮ನೇ ತಾರೀಖು ಅಲ್ಲಿಗೆ ೮೦೦ ಮೈಲಿ ದೂರದಲ್ಲಿದ್ದ ಬರ್ಡೋಲಿಗೆ ತಲುಪಿತು. ಬಾಪು ಅಷ್ಟಕ್ಕೇ ಅಸಹಕಾರ ಚಳವಳಿಯನ್ನು ನಿಲ್ಲಿಸಿ ಐದು ದಿನ ಉಪವಾಸ ಮಾಡಿದರು. ಅಂದು ಅವರ ಮಾತುಗಳಂತೂ ಕೆಂಡದ ಉಂಡೆಗಳಾಗಿ ಹೊರಟ್ಟಿದ್ದವು. "ಶಿಕ್ಷಿಸುವುದಕ್ಕಿಂತ ಕ್ಷಮಿಸುವುದಕ್ಕೆ ಹೆಚ್ಚು ಶಕ್ತಿ ಬೇಕು. ಡಯರ್‌ಗಳ ಶಿಕ್ಷೆಗಳಿಗಿಂತ ಉತ್ತಮವಾದ ಕೆಲಸವನ್ನು ತನ್ನ ಭಾರತೀಯರು ಮಾಡಿತೋರಬೇಕು. ಕೀಳು ಪ್ರಾಣಿಗೆ ಎಷ್ಟು ಸಹಜವೊ ಮಾನವನಿಗೆ ಅಹಿಂಸೆ ಅಷ್ಟು ಸಹಜ."

ಈ ಘೋಷಣೆ ಎಲ್ಲರ ಹೃದಯ ಕವಾಟಗಳನ್ನೂ ತೆರೆದು ನುಗ್ಗಿತು. ಕಾಂಗ್ರೆಸ್ ಮುಖಂಡರೆಲ್ಲಾ ಜೈಲುಗಳೊಳಗೆ ಕತ್ತಲ ಮನೆಯಲ್ಲಿ ಕೊಳೆಯಹತ್ತಿದರು. ಹೊರಬಂದ ನೆಹರೂಜಿಗೆ ಬಹಳ ಬೇಸರವಾಯಿತು. ಎಲ್ಲರೂ ಜೈಲಿನಲ್ಲಿ ತಾನು ಮಾತ್ರ ಹೊರಗಡೆಯಲ್ಲಿ ! ಈ ಒಂಟಿ ಜೀವನ ನೆಹರೂಜಿಗೆ ಬಹಳ ಜಿಗುಪ್ಸೆ ಹುಟ್ಟಿಸಿತು.

ಆದರೂ ಸುಮ್ಮನಿರುವ ಚೇತನವಲ್ಲ ಅದು. ಬಿರುಕು ಬಿಟ್ಟಿದ್ದ ಕಾಂಗ್ರೆಸ್ ಸಂಸ್ಥೆಯನ್ನು ಒಂದುಗೂಡಿಸುವ ಯತ್ನ ಮಾಡಿದರು. ವಿದೇಶೀ ವಸ್ತ್ರದ ಬಹಿಷ್ಕಾರ ಚಳವಳಿಯನ್ನು ಬಲಗೊಳಿಸಿದರು. ಈ ಸಂಬಂಧವಾಗಿ ರಾಜದ್ರೋಹದಿಂದ ಕೂಡಿದ ಭಾಷಣಗಳನ್ನು ಮಾಡಿದರೆಂದು ಆಪಾದಿಸಿ ಸರ್ಕಾರ ಒಂದುವರ್ಷ ಒಂಬತ್ತು ತಿಂಗಳು ಶಿಕ್ಷೆ ವಿಧಿಸಿತು. ಜೈಲಿನಿಂದ ಹೊರಬಂದ ಒಂದೇ ವಾರದಲ್ಲಿ ಮತ್ತೆ ಎರಡನೆಯ ಬಾರಿ ಜೈಲು ವಾಸ.

ಈ ಬಾರಿಯ ಜೈಲಿನ ಜೀವನ ಮೊದಲಿನಂತಿರಲಿಲ್ಲ. ಬಹಳ ಕಾರ್ಪಣ್ಯದಿಂದ ಕೂಡಿತ್ತು. ಮೊದಲು ಜೈಲು ವಾಸದಲ್ಲಿ ಒಂದು ಸಂತೋಷ, ಹಿತ ಇತ್ತು. ಆಗ ನೆಹರೂಜಿಯವರ ತಂದೆಯವರೂ, ಅವರ ಇಬ್ಬರು ಬಂಧುಗಳೂ ಜೊತೆಗಿದ್ದರು. ಬಟ್ಟೆ ಒಗೆಯುವುದು, ನೂಲುವುದು, ಓದುವುದು, ಬೇಸರವಾದಾಗ ವಾಲಿಬಾಲ್ ಆಡುವುದು. ಹೀಗೆ ಕಳೆದುಹೋಗುತ್ತಿತ್ತು.

ಆದರೆ ಈಗಿನ ಜೈಲುವಾಸ ತುಂಬಾ ಕಠಿಣವಾಗಿತ್ತು. ಮೋತಿಲಾಲರನ್ನು ನೈನಿತಾಲ ಜೈಲಿಗೆ ವರ್ಗಾಯಿಸಿದ್ದರು. ಅಲ್ಲಿ ರಾಜಕೀಯ ಕೈದಿಗಳಿಗೆ ವಿಶೇಷ ಹಿಂಸೆಗಳಿದ್ದವು. ಒಂದು ಪುಟ್ಟ ಕತ್ತಲೆ ಕೋಣೆಯಲ್ಲಿ ಇವರನ್ನು ತುರುಕಲಾಗಿತ್ತು. ಅದು ಜೈಲಿನೊಳಗೆ ಜೈಲು ಇದ್ದಂತೆ ! ತಿಂಗಳಿಗೊಮ್ಮೆ ಮಾತ್ರ ಹೊರಗಿನವರನ್ನು ಕಾಣಬಹುದಾಗಿತ್ತು. ಅಲ್ಲದೆ ತಿಂಗಳಿಗೊಂದು ಸಾರಿಯೇ ಅವರಿಗೆ ಹೊರಗೆ ಏನಾಗಿದೆ ಎಂಬ ವಿಚಾರ ತಿಳಿಯುತ್ತಿದ್ದುದು. ದಿನಬೆಳಗಾದರೆ ದಪ್ಪ ಕೊಡಗಳಲ್ಲಿ ಬಾವಿಯಿಂದ ನೀರು ಸೇದಿ ಗಿಡಗಳಿಗೆರೆದು ತರಕಾರಿ ಬೆಳೆಯಬೆಕಿತ್ತು. ಅಲ್ಲಿ ಕೊಡುತ್ತಿದ್ದ ಆಹಾರವೋ ಭಗವಂತನಿಗೇ ಪ್ರೀತಿ !

ಅದನ್ನು ತಿನ್ನಲಾರದೆ ಎಷ್ಟೋ ದಿನ ನೆಹರೂಜಿ ಉಪವಾಸ ಮಾಡಿದ್ದುಂಟು. ತಮ್ಮ ದುಃಖವನ್ನು ತಾವೇ ನುಂಗಿಕೊಂಡರು. ಅಲ್ಲದೇ ಈ ರಾಜಕೀಯ ಖೈದಿಗಳಿಂದ ಲಂಚವೇನೂ ಸಿಕ್ಕದಿದ್ದುದರಿಂದ ಜೈಲು ಅಧಿಕಾರಿಗಳು ಇವರ ಮೇಲೆ ಗುರ್ ಅನ್ನುತ್ತಿದ್ದರು. ಯಾವುದಾದರೂ ಜೈಲಿನ ನಿಯಮಕ್ಕೆ ವಿರುದ್ಧ ನಡೆದರೆ ಘೋರ ಶಿಕ್ಷೆ ಅವರಿಗಾಗಿ ಕಾದಿರುತ್ತಿತ್ತು.

ಒಂದು ದಿನ ಇಂಥಾ ಘಟನೆ ನಡೆಯಿತು. ಒಬ್ಬ ಹದಿನೈದು ಹದಿನಾರು ವರ್ಷದ ಯುವಕ. ಆಜಾದ್ ಎಂಬ ಹೆಸರಿಟ್ಟುಕೊಂಡಿದ್ದ. ಆತ ಜೈಲಿನ ನಿಯಮ ಮುರಿದನೆಂದು ಅಧಿಕಾರಿಗಳು ಶಿಕ್ಷೆ ವಿಧಿಸಿದರು. ಅವನನ್ನು ಬೆತ್ತಲೆ ಮಾಡಿ ಒಂದು ಕಂಬಕ್ಕೆ ಕಟ್ಟಿ ಬೆತ್ತದಿಂದ ಮೈ ಬಾರೇಳುವಂತೆ ಹೊಡೆದರು. ಒಂದೊಂದು ಏಟಿಗೂ ಚರ್ಮ ಕಿತ್ತು

ಬರುತ್ತಿತ್ತು. ಹಾಗಿದ್ದಾಗ್ಯೂ ಆ ಹುಡುಗ 'ಮಹಾತ್ಮಾ ಗಾಂಧೀಕೀ ಜೈ' ಅನ್ನುತ್ತಲೇ ಇದ್ದ. ಕಡೆಗೆ ಆತ ಮೂರ್ಛೆ ಹೋಗುವವರೆಗೂ ಹೊಡೆದರಂತೆ.

– ಹೀಗೆ ಜೈಲಿನ ಪರಿಸ್ಥಿತಿ ಬಹಳವಾಗಿ ಪಲ್ಲಟಿಸಿ ರಾಜಕೀಯ ಖೈದಿಗಳು ಇತರ ಖೂನಿ ಖೈದಿಗಳಿಗಿಂತ ಹೆಚ್ಚಿನ ಶಿಕ್ಷೆಯನ್ನನುಭವಿಸಬೇಕಿತ್ತು.

ಅದೃಷ್ಟವಶಾತ್ ೧೯೨೩ರ ಜನವರಿಯಲ್ಲಿ ರಾಜಕೀಯ ಖೈದಿಗಳನ್ನೆಲ್ಲಾ ಬಿಟ್ಟುಬಿಟ್ಟರು. ಹೊರಗಿನ ಪ್ರಪಂಚವನ್ನು ನೋಡಿ ನೆಹರೂಜಿಯವರ ಮನಸ್ಸು ಆನಂದದಿಂದ ನಲಿಯಿತು. ಮನೆಗೆ ಬಂದವರೇ ತಮ್ಮ ನಿತ್ಯದ ಕಾಯಕದಲ್ಲಿ ಅಂದರೆ ಸಂಯುಕ್ತ ಪ್ರಾಂತದ ಕಾಂಗ್ರೆಸ್ ಕಾರ್ಯದರ್ಶಿಯಾಗಿ ಕೆಲಸ ಮಾಡತೊಡಗಿದರು. ಬಹಳ ವರ್ಷಗಳ ತನಕ ಅವರೇ ಕಾರ್ಯದರ್ಶಿಗಳಾಗಿದ್ದರು. ಜೊತೆಗೆ ಅಲಹಾಬಾದಿನ ಮುನಿಸಿಪಲ್ ಪ್ರೆಸಿಡೆಂಟರಾಗಿ ಜನ ಆರಿಸಿದ್ದರು. ಆದರೆ ನೆಹರೂಜಿಯವರಿಗೆ ಬಿಡುವಿಲ್ಲದೆ ದುಡಿಯುವಂತಾದ್ದರಿಂದ ಸ್ವಲ್ಪ ದಿವಸಗಳ ನಂತರ ಮುನಿಸಿಪಲ್ ಅಧ್ಯಕ್ಷ ಪಟ್ಟಕ್ಕೆ ರಾಜೀನಾಮೆ ಸಲ್ಲಿಸಿ, ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಗಳಾಗಿಯೇ ಮುಂದುವರೆದರು.

**ಜೈತೋಯಾತ್ರೆ**

ಜೈತೋ ಸಿಕ್ಖರ ಪವಿತ್ರ ಯಾತ್ರಾಸ್ಥಳ. ಅದಿರುವುದು ನಾಭ ಪ್ರಾಂತದಲ್ಲಿ. ೧೯೨೩ರಲ್ಲಿ ಪಾಟಿಯಾಲದವರಿಗೂ, ನಾಭದವರಿಗೂ ಸ್ವಲ್ಪ ಕಿತ್ತಾಟವಾಗಿತ್ತು. ನಾಭ ಸಂಸ್ಥಾನದ ಮಹಾರಾಜನನ್ನು ಬ್ರಿಟಿಷ್ ಸರ್ಕಾರ ಸಿಂಹಾಸನದಿಂದ ತಳ್ಳಿ ತಾನೇ ನೇರ ಆಳ್ವಿಕೆಗೆ ನಿಂತಿತ್ತು. ಅಲ್ಲದೇ ಆ ಪ್ರಾಂತದಲ್ಲಿ ನಿಯಮಿತನಾಗಿದ್ದ ಬ್ರಿಟಿಷ್ ಅಧಿಕಾರಿ ಜೈತೋದಲ್ಲಿ ಯಾವುದೇ ವಿಧವಾದ ಉತ್ಸವಾದಿಗಳನ್ನು ನಡೆಸಕೂಡದೆಂದು ನಿಷೇಧಾಜ್ಞೆ ಹೊರಡಿಸಿದ್ದ. ಆದರೆ ಭಕ್ತರಾದ ಸಿಕ್ಖರು ಮಾತ್ರ ತಮ್ಮ ಯಾತ್ರೆಯನ್ನು ಬಿಡಲಿಲ್ಲ. ತಂಡತಂಡವಾಗಿ ನಡೆದರು. ಆಜ್ಞೆ ಮುರಿದು ಮುನ್ನುಗ್ಗಿದರು. ಅದರಿಂದಾಗಿ ಪೊಲೀಸರು ಅವರ ಮೇಲೆ ಏನೆಲ್ಲಾ ಮಾಡಿದರು. ಆದರೂ ಅಹಿಂಸಾವ್ರತವನ್ನು ಬಾಪೂಜಿಯವರಿಂದ ಸ್ವೀಕರಿಸಿದ್ದ ಈ ಸಿಕ್ಖರು ಕಷ್ಟ ಸಹಿಸಿಕೊಂಡರೇ ವಿನಾ ಪೊಲೀಸರ ಮೇಲಾಗಲೀ, ಅಧಿಕಾರಿಗಳ ಮೇಲಾಗಲೀ ಕೈ ಎತ್ತಲಿಲ್ಲ.

ಇದೇ ಸಮಯದಲ್ಲಿ ಜವಹರಲಾಲರೂ, ಗಿಡ್ವಾನಿಯವರೂ ಮತ್ತು ಮದ್ರಾಸಿನ ಸಂತಾನಮ್‌ರವರೂ ಅಲ್ಲಿಗೆ ಬಂದಿದ್ದರು. ಯಾತ್ರಿಕರನ್ನು ತಡೆದಂತೆ ಇವರನ್ನೂ ತಡೆದು ಪೊಲೀಸ್ ಅಧಿಕಾರಿ ಒಂದು ನೋಟೀಸ್ ಕೊಟ್ಟ. ಅದರಲ್ಲಿ ಯಾರೂ ನಾಭ ಗಡಿಯನ್ನು ಪ್ರವೇಶಿಸಕೂಡದೆಂದೂ ಒಂದು ವೇಳೆ ಪ್ರವೇಶಿಸಿದ್ದರೆ ತತ್‌ಕ್ಷಣವೇ ಬಿಟ್ಟು ಹೊರಡಬೇಕೆಂದೂ ಆಜ್ಞೆ ಮಾಡಲಾಗಿತ್ತು. ಇದನ್ನೇ ಕಾಯುತ್ತಿದ್ದ ನೆಹರೂ ಮತ್ತು ಗೆಳೆಯರು ಆ ಸಮಯಕ್ಕಾಗಲೇ ಸಂಸ್ಥಾನದೊಳಗಿದ್ದುದರಿಂದ ಸ್ವಲ್ಪ ಮೊಂಡಾಟ ಮಾಡಿದರು. ಆದರೆ ಪೊಲೀಸ್ ಅಧಿಕಾರಿ ದಸ್ತಗಿರಿ ಮಾಡಿ ಸರಪಣಿ ಹಾಕಿಕೊಂಡು ನಾಯಿಗಳನ್ನು ಹಿಡಿದುಕೊಂಡು ಹೋಗುವಂತೆ ಇವರನ್ನು ಎಳೆದೊಯ್ದ. ನಾಭ ಜೈಲು ಒಂದು ಗೂಬೆಯ ಗೂಡು. ಜೌಗು ತುಂಬಿದ ನೆಲ. ಸೊಳ್ಳೆಯ ಸಂಗೀತ, ಸುಂಡಿಲಿಗಳ ಕುಣಿತ, ನೆಹರೂಜಿಯವರಿಗೆ 'ಅದು ನಿಜಕ್ಕೂ ನರಕ' ವಾಸವೆನಿಸಿತು.

ವಿಚಾರಣೆ ಆರಂಭವಾಯಿತು. ಇವರನ್ನು ಪಿತೂರಿಕಾರರೆಂದು ಆಪಾದಿಸಿ ಎರಡೂವರೆ ವರ್ಷ ಶಿಕ್ಷೆ ವಿಧಿಸಿತು ಅಲ್ಲಿಯ ನ್ಯಾಯಸ್ಥಾನ. ಯಾವ ಪ್ರದೇಶದ ವಕೀಲನಿಗೂ ಅಲ್ಲಿ ಅವಕಾಶ ಕೊಡುವುದಿಲ್ಲವೆಂದರು. ನೆಹರೂಜಿಯವರ ಸಮರ್ಥನೆಯನ್ನೇ ಸ್ವೀಕರಿಸದೆ ನ್ಯಾಯಾಧೀಶ ತೀರ್ಪು ಕೊಟ್ಟುಬಿಟ್ಟ. ಏಕೆಂದರೆ ಆ ನ್ಯಾಯಮೂರ್ತಿಗೆ ಪೊಲೀಸರೆಂದರೆ ಪೂರಾ ಭಯ. ಪೊಲೀಸರಿಗಾದರೋ ಆ ನ್ಯಾಯಾಧೀಶ ಲೆಕ್ಕಕ್ಕೇ ಇರಲಿಲ್ಲ. ಹೀಗಾಗಿ ಅನ್ಯಾಯದ ಶಿಕ್ಷೆ ಆಯಿತು. ಇವರ ಬಿಡುಗಡೆಗಾಗಿ ಪಂಡಿತ ಮೋತಿಲಾಲರು ಬಹಳ ಯತ್ನಿಸಿದರು. ಆದರೆ ಫಲಕಾರಿಯಾಗಲಿಲ್ಲ.

ಅದೃಷ್ಟವಶಾತ್ ನಾಭ ಸಂಸ್ಥಾನಾಧಿಕಾರಿ ಕೋರ್ಟಿನ ತೀರ್ಪನ್ನು ದೂರವಿರಿಸಿ, ಒಂದು ಹೊಸ ಆಜ್ಞೆಯನ್ನು ವಿಧಿಸಿದ್ದ. ಆದರ ಪ್ರಕಾರ ಕೂಡಲೇ ಜವಹರಾದಿಗಳು ನಾಭ ಬಿಡಬೇಕಾಯಿತು. ಅಂದೇ ರಾತ್ರಿ ನಾಡಿಗೆ ಹತ್ತಿ ಅಲಹಾಬಾದಿಗೆ ಬಂದರು.

ಊರಿಗೆ ಬಂದ ಕೂಡಲೇ ಮೂವರು ಹಾಸಿಗೆ ಹಿಡಿದು ಮಲಗಿದರು. ಟಾಫಾಯಿಡ್ ಖಾಯಿಲೆಗೆ ಮೂವರೂ ತುತ್ತಾದರು. ಈ ರೀತಿ ಖಾಯಿಲೆಯಿಂದ ನರಳುತ್ತಾ ಮಲಗುವುದು ನೆಹರೂಜಿಗೆ ಹೊಸ ಅನುಭವ. ಆದರೂ ಬೇಗ ಮಾತ್ರ ಗುಣಮುಖರಾದರು. ಗಿದ್ವಾನಿ ಮತ್ತು ಸಂತಾನಮ್ ಬಹಳ ದಿವಸ ಹಾಸಿಗೆಯ ಮೇಲೆ ನರಳಿದರಂತೆ !

**ತ್ರಿವೇಣಿಯ ತೀರದಲ್ಲಿ**

ಗಂಗಾ, ಯಮುನಾ ಮತ್ತು ಸರಸ್ವತಿ ಈ ಮೂರು ನದಿಗಳ ಸಂಗಮಸ್ಥಾನವೇ ತ್ರಿವೇಣಿ. ಹಿಂದೂಗಳಿಗೆ ಇದು ಪವಿತ್ರ ಕ್ಷೇತ್ರವೂ ಹೌದು.

೧೯೨೪ರಲ್ಲಿ ನೆಹರೂಜಿಯವರಿಗೆ ಇಲ್ಲಿ ಒಂದು ಹೊಸ ಅನುಭವವಾಯಿತಂತೆ ! ಪ್ರತಿ ವರ್ಷದ ಪದ್ಧತಿಯಂತೆ ಆ ವರ್ಷವೂ ಅರ್ಧ ಕುಂಭದ ಪರ್ವದ ದಿನ. ಲಕ್ಷಾಂತರ ಜನ ಯಾತ್ರಿಕರು ಸಂಗಮ ಸ್ನಾನಕ್ಕೆ ಬರುತ್ತಿದ್ದರು. ಸ್ನಾನಾದಿಗಳನ್ನು ಮುಗಿಸಿಕೊಂಡು ಮಡಿಯಿಂದ ಹಿಂತಿರುಗುತ್ತಿದ್ದರು. ಹೀಗೆ ಮಾಡುವುದರಿಂದ ತಾವು ಪವಿತ್ರರಾದೆವೆಂಬ ಭಾವನೆ ಅವರದ್ದು. ಅದೊಂದು ಪದ್ಧತಿಯಾಗಿತ್ತು.

ಅದರೆ ಅಲ್ಲಿನ ಪ್ರಾಂತೀಯ ಆಜ್ಞೆಯೊಂದನ್ನು ಹೊರಡಿಸಿ ಸಂಗಮದಲ್ಲಿ ಆ ವರ್ಷ ಯಾರೂ ಸ್ನಾನ ಮಾಡಕೂಡದೆಂದು ಪ್ರತಿಬಂಧನ ಮಾಡಿತ್ತು. ಇದನ್ನು ಕೇಳಿ ಸಿಟ್ಟಿಗೆದ್ದ ಮದನಮೋಹನ ಮಾಳವೀಯರು ಪತ್ರಿಕೆಗಳಲ್ಲಿ ಗಲಾಟೆ ಎಬ್ಬಿಸಿ, ಮ್ಯಾಜಿಸ್ಟ್ರೇಟರಿಗೆ ವಿನಯದಿಂದ ಒಂದು ಪತ್ರ ಬರೆದು, ಆ ದಿನ ಸ್ನಾನಕ್ಕೆ ಅನುಮತಿ ನೀಡಬೇಕೆಂದು ಬೇಡಿದ್ದರು. ಮ್ಯಾಜಿಸ್ಟ್ರೇಟರಿಂದ ಅನುಮತಿ ಸಿಕ್ಕಲಿಲ್ಲ.

ಪರ್ವದ ದಿನ ಬಂತು. ಮಾಳವೀಯರು ಹಲವು ಸತ್ಯಾಗ್ರಹಿಗಳೊಡನೆ ತ್ರಿವೇಣಿಯ ತೀರದೆಡೆಗೆ ನಡೆದರು. ಸ್ನಾನ ಘಟ್ಟಗಳು ಸ್ವಲ್ಪ ದೂರವಿದ್ದ ಹಾಗೆಯೇ ಮರದ ತುಂಡುಗಳಿಂದ ಒಂದು ಭದ್ರವಾದ ಬೇಲಿ ಹಾಕಿದ್ದರು. ಬೇಲಿಯ ಪಕ್ಕದಲ್ಲಿ ಅಶ್ವಾರೋಹಿ ಪೋಲೀಸರು ಸರ್ಪಕಾವಲಿದ್ದರು. ಯಾರೂ ನೀರಿನ ಬಳಿಗೆ ಹೋಗಲವಕಾಶವಿರಲಿಲ್ಲ. ಮಾಳವೀಯರು ಬೆಳಗಿನ ಜಾವಕ್ಕೆ ಹೋದವರು ಮಧ್ಯಾಹ್ನ ಬಿಸಿಲೇರುವವರೆಗೂ ತಮ್ಮ ಜೊತೆಯ ಸತ್ಯಾಗ್ರಹಿಗಳೊಡನೆ ಕುಳಿತೇ ಇದ್ದರು.

ನೆಹರೂಜಿಯವರಿಗೆ ಸತ್ಯಾಗ್ರಹದಲ್ಲಿ ಭಾಗವಹಿಸಲು ಖುಷಿ. ಆದ್ದರಿಂದ ತಾವೂ ಅಲ್ಲಿ ಮಾಳವೀಯರೊಡನೆ ಸತ್ಯಾಗ್ರಹಿಗಳಾಗಿ ಕುಳಿತರು. ಬಿಸಿಲೇರಿದಂತೆ ಎಲ್ಲರಿಗೂ ಕೋಪವೇರುತ್ತಾ ಬಂತು. ಅದರಲ್ಲೂ ನೆಹರೂಜಿಯವರಿಗೆ ಒಮ್ಮೆಲೇ ಸ್ಫೂರ್ತಿ ಬಂದಂತಾಗಿ ಮೇಲೆದ್ದು ಬೇಲಿಯನ್ನು ಹತ್ತಿದರು. ಯಾರೋ ಅವರ ಕೈಗೆ ರಾಷ್ಟ್ರಧ್ವಜ ಕೊಟ್ಟರಂತೆ! ಅದನ್ನು ಮೇಲೆತ್ತಿ ಹಿಡಿದು "ಬೋಲೋ ಭಾರತ್ ಮಾತಾಕೀ ಜೈ" ಎಂದು ಘೋಷ ಮಾಡಿ ಬೇಲಿಯನ್ನು ಮುರಿದು ದಾರಿ ಮಾಡಿದರು. ಜನ ತಂಡತಂಡವಾಗಿ ನುಗ್ಗಿತು. ನೆಹರೂಜಿ ಸ್ನಾನ ಮಾಡಿಕೊಂಡು ಬಂದೇ ಬಿಟ್ಟರು. ಆದರೆ ಮಾಳವೀಯರು ಹಾಗೆಯೇ ಕುಳಿತಿದ್ದರು. ಕುದುರೆಯ ಪಡೆಯವರು ಅವರನ್ನು ಅಡ್ಡಗಟ್ಟಿದರು. ನೆಹರೂಜಿಯವರು ಅವರನ್ನು ಸಮೀಪಿಸುತ್ತಲೇ ಹಣ್ಣು ಹಣ್ಣು ಮುದುಕರಾಗಿದ್ದ ಮಾಳವೀಯರಿಗೆ ಹರೆಯದ ಹುರುಪು ಬಂದು ಮೇಲೆದ್ದು ದಢದಢನೆ ಮುನ್ನುಗ್ಗಿ ನಡೆದರು. ಕುದುರೆಗಳು ಸುಮ್ಮನೆ ದಾರಿ ಬಿಟ್ಟವು. ಮತ್ತೆ ನೆಹರೂಜಿ ಮಾಳವೀಯರೊಡನೆ ತ್ರಿವೇಣಿಯ ಸ್ನಾನಘಟ್ಟದಲ್ಲಿ ಮಿಂದರು. ಬಹಳ ಹೊತ್ತಿನ ಬಿಸಿಲಿನ ಬೇಗೆಯನ್ನು ತಂಪಾದ ನೀರಿನಿಂದ ನಿವಾರಿಸಿಕೊಂಡರು !

ಹೀಗೆ ನೆಹರೂಜಿಯವರ ಸಮಯಸ್ಫೂರ್ತಿ ಅವರಿಗೆ ಹಲವು ವೇಳೆ ಜಯವನ್ನು ತಂದಿದೆ. ದೈವವಶಾತ್ ಯಾವುದೇ ವಿಧವಾದ ಅನಾಹುತವೂ ಆಗದಿರುವುದು ಪುಣ್ಯವೇ ಸರಿ !

ಸರ್ಕಾರದ ವಿಧಿಯನ್ನು ಮುರಿದದ್ದಕ್ಕಾಗಿ ಏನಾದರೂ ಶಿಕ್ಷೆ ವಿಧಿಸಬಹುದೆಂದು ಭಾವಿಸಿದ್ದರು. ಆದರೆ ಮಾಳವೀಯರಂತಹ ಮಹಾಮೂರ್ತಿಯ ವಿರುದ್ಧ ಕೈಯೆತ್ತುವ ಧೈರ್ಯ ಬ್ರಿಟಿಷ್ ಸರ್ಕಾರಕ್ಕಿರಲಿಲ್ಲ. ಆದ್ದರಿಂದ ಯಾರಿಗೇನೂ ತೊಂದರೆಯಾಗಲಿಲ್ಲ.

**ಲಾಲಾಜಿ**

೧೯೨೪ರಲ್ಲಿ ಗಾಂಧೀಜಿ ಖಾಯಿಲೆ ಬಿದ್ದರು. ಆಗಿನ್ನೂ ಅವರಿಗೆ ಜೈಲಿನಿಂದ ಬಿಡುಗಡೆಯಾಗಿರಲಿಲ್ಲ. ಆದ್ದರಿಂದ ಪೊಲೀಸರ ರಕ್ಷಣೆಯಲ್ಲಿ ಅವರನ್ನು ಆಸ್ಪತ್ರೆಗೆ ಸಾಗಿಸಲಾಯಿತು. ಆಪರೇಷನ್ ಕೂಡ ಆಯಿತು. ಅವರು ತುಂಬಾ ನಿಶ್ಯಕ್ತರಾದ್ದರಿಂದ ಮತ್ತೆ ಜೈಲಿಗೆ ಹೋಗಲಿಲ್ಲ. ಸರ್ಕಾರ ಅವರ ಮುಂದಿನ ಶಿಕ್ಷೆಯನ್ನು ವಾಪಸ್ಸು ತೆಗೆದುಕೊಂಡು, ಬಿಡುಗಡೆ ಮಾಡಿತ್ತು. ಬಾಪೂ ಬೊಂಬಾಯಿನ ಬಳಿ ಜುಹೂ ತೀರದಲ್ಲಿ ವಿಶ್ರಾಂತಿ ಪಡೆಯುತ್ತಿದ್ದರು.

೧೯೨೫ರಲ್ಲಿ ಪಂಡಿತ ಮೋತಿಲಾಲರು ಖಾಯಿಲೆ ಮಲಗಿದರು. ಅದರ ನಿವಾರಣೆಗಾಗಿ ಡಾಲ್‌ಹೌಸಿಗೆ ಪ್ರಯಾಣ ಮಾಡಿದರು. ಇತ್ತ ದೇಶಬಂಧು ಚಿತ್ತರಂಜನದಾಸರು ದೈವಾಧೀನರಾದರು. ಅತ್ತ ಹಿಂದೂ ಮುಸ್ಲಿಂ ಗಲಭೆ ನಡೆದು ತುಂಬಾ ಅನಾಹುತಗಳಾಗಿದ್ದವು. ಗಾಂಧೀಜಿ ದೆಹಲಿಯಲ್ಲಿ ೨೧ ದಿನಗಳ ಉಪವಾಸ ಮಾಡಿದರು. ೧೯೨೪ರ ಡಿಸೆಂಬರಿನಲ್ಲಿ ಗಾಂಧೀಜಿಯವರ ಅಧ್ಯಕ್ಷತೆಯಲ್ಲಿ ಬೆಳಗಾವಿಯಲ್ಲಿ ನಡೆದ ಕಾಂಗ್ರೆಸ್ ಸಮ್ಮೇಳನದಲ್ಲಿ ನೆಹರೂರವರೇ ಕಾಂಗ್ರೆಸ್ ಕಾರ್ಯದರ್ಶಿಗಳಾಗಿ ಮುಂದುವರಿದಿದ್ದರು. ಅಲ್ಲದೆ ಈ ಕಾರ್ಯದರ್ಶಿ ಪಟ್ಟ ಅವರಿಗೇ ಖಾಯಂ ಆಗುವಂತೆ ಕಂಡುಬಂದಿತು.

ಈ ಮಧ್ಯೆ ಕಮಲಾ ಖಾಯಿಲೆ ಬಿದ್ದಳು. ಸದಾ ಸುಖದ ಸುಪ್ಪತ್ತಿಗೆಯಲ್ಲಿದ್ದಾಕೆ ಅಸಹಕಾರ ಚಳವಳಿಯ ಕಾರಣದಿಂದಾಗಿ ದೇಹ ಸೌಖ್ಯವಾಗಲಿ ತನ್ನ ಪತಿಯ ಸಾನ್ನಿಧ್ಯವಾಗಲಿ ದೊರೆಯದಾಯಿತು. ಲಕ್ನೋ ಆಸ್ಪತ್ರೆಯಲ್ಲಿ ಮಲಗಿದಳು. ಆಕೆಯನ್ನು ನೋಡಿಕೊಂಡು ಬರಲು ವಿರಾಮವಿರಲಿಲ್ಲ ನೆಹರೂಜಿಗೆ. ಆದರೆ ತಮ್ಮ ಪತ್ನಿಯನ್ನು ಬೇರೆ ಕಡೆಗೆ ಕರೆದೊಯ್ಯಬೇಕಾಗಿತ್ತು. ಇಲ್ಲದಿದ್ದರೆ ಕಮಲಾ ಉಳಿಯುವ ಸ್ಥಿತಿಯಲ್ಲಿರಲಿಲ್ಲ. ಆದ್ದರಿಂದ ನೆಹರೂರವರು ೧೯೨೬ರ ಮೇ ತಿಂಗಳಲ್ಲಿ ತಮ್ಮ ಪತ್ನಿ ಕಮಲಾ ಹಾಗೂ ತಮ್ಮ ತಂಗಿ ವಿಜಯಲಕ್ಷ್ಮಿ, ಆಕೆಯ ಗಂಡ ರನಜಿತ್ ಸೀತಾರಾಂ ಪಂಡಿತ್ ಇವರೊಡನೆ ವೆನಿಸ್ಸಿಗೆ ಹೊರಟರು.

ಸ್ವಿಡ್ಜರ್ಲೆಂಡಿನ ಜಿನೀವಾದಲ್ಲಿ ಇವರು ಉಳಿದುಕೊಂಡರು. ಅಲ್ಲಿದ್ದ ಸುಭಾಸ್‌ಚಂದ್ರ ಬೋಸರ ಸೇವೆಯಿಂದಾಗಿ ಕಮಲಾದೇವಿಯ ಖಾಯಿಲೆ ಗುಣಮುಖವಾಗುತ್ತಾ ಬಂತು.

೧೯೨೭ರಲ್ಲಿ ಬ್ರುಸೆಲ್ಸ್ ಎಂಬ ಪಟ್ಟಣದಲ್ಲಿ ಪ್ರಪಂಚದ ಹಿಂದುಳಿದ ರಾಷ್ಟ್ರಗಳ ಸಮ್ಮೇಳನ ನಡೆಯುವುದಿದ್ದಿತು. ಅದರಲ್ಲಿ ಜಾವ, ಹಿಂದೂಚೀನ, ಪಾಲೆಸ್ಟೈನ್, ಸಿರಿಯಾ, ಈಜಿಪ್ಟ್, ಉತ್ತರ ಆಫ್ರಿಕಾದ ಅರಬ್ ಮತ್ತು ಆಫ್ರಿಕಾದ ಹಬ್ಶೀ ಜನರ ರಾಷ್ಟ್ರೀಯ ಸಂಸ್ಥೆಗಳ ಪ್ರತಿನಿಧಿಗಳು, ಕೂಲಿಗಾರ ಉಗ್ರದಳದ ಮುಖಂಡರೂ ಜರ್ಮನಿಯ ಪ್ರಖ್ಯಾತ ತತ್ವಜ್ಞಾನಿ ಆಲ್ಬರ್ಟ್ ಐನ್‌ಸ್ಟೀನ್, ಸುಪ್ರಸಿದ್ಧ ಫ್ರೆಂಚ್ ಸಾಹಿತಿ, ದಾರ್ಶನಿಕ ರೂಮೈನ್ ರೊಲಾ ಮೊದಲಾದ ಮಹಾಪುರುಷರು ಆ ಸಮ್ಮೇಳನವನ್ನು ಪ್ರೋತ್ಸಾಹಿಸಿದ್ದರು. ಭಾರತ ರಾಷ್ಟ್ರೀಯ ಕಾಂಗ್ರೆಸ್ ತನ್ನ ಪ್ರತಿನಿಧಿಯಾಗಿ ಸಮ್ಮೇಳನಕ್ಕೆ ಜವಹರರೇ ಭಾಗವಹಿಸುವಂತೆ ತಿಳಿಸಿತು.

ಈ ಸಮ್ಮೇಳನ ಮುಗಿಯುವುದರಲ್ಲಿ, ಮೋತಿಲಾಲರು ತಮ್ಮ ಪರಿವಾರದೊಡನೆ ಯೂರೋಪಿಗೆ ಬಂದು ನೆಹರೂಜಿಯವರನ್ನು ಕೂಡಿಕೊಂಡರು. ಎಲ್ಲರೂ ಒಟ್ಟಾಗಿ ಮಾಸ್ಕೋವಿಗೆ ಹೋಗಿ ಅಲ್ಲಿಂದ ತಾಯ್ನಾಡಿಗೆ ಹಿಂತಿರುಗಿದರು.

ಭಾರತಕ್ಕೆ ಬಂದ ಕೂಡಲೇ ಮದ್ರಾಸಿನಲ್ಲಿ ನಡೆಯಬಹುದಾಗಿದ್ದ ಕಾಂಗ್ರೆಸ್ಸಿನ ೪೨ನೆಯ ಸಮ್ಮೇಳನಕ್ಕೆ ನಡೆದರು. ಮುಕ್ತಾರ್ ಅಹಮದ್ ಅನ್ಸಾರಿಯವರು ಅಧಿವೇಶನದ ಅಧ್ಯಕ್ಷರು. ನೆಹರೂಜಿ ಹಲವು ಗೊತ್ತುವಳಿಗಳನ್ನು ಮಂಡಿಸಿದರು. ಎಲ್ಲವೂ ಅಂದಿನ ಅಧಿವೇಶನದಲ್ಲಿ ಸ್ವೀಕೃತವಾದವು. ಅಲ್ಲದೆ ನೆಹರೂರವರೇ ಮತ್ತೆ ಕಾಂಗ್ರೆಸ್ ಕಾರ್ಯದರ್ಶಿಯಾಗಿ ಆಯ್ಕೆಯಾದರು. ೧೯೨೮ರಲ್ಲಿ ಭಾರತದ ಜನತೆ ಪೂರ ಎಚ್ಚೆತ್ತುಕೊಂಡಿತ್ತೆಂದು ಹೇಳಬಹುದು. ಸರ್ ಜಾನ್ ಸಾಯ್‌ಮನ್ ಎಂಬುವನ ಮುಖಂಡತ್ವದಲ್ಲಿ ಒಂದು ಕಮೀಶನ್ ಭಾರತದಾದ್ಯಂತ ಪ್ರವಾಸದಲ್ಲಿತ್ತು. ಅದಕ್ಕೆ ಸಾಯಮನ್ ಕಮೀಶನ್ ಎಂದೇ ಹೆಸರು. ಸುಮಾರು ಎಂಟು ಮಂದಿ ಸದಸ್ಯತ್ವದಿಂದ ಕೂಡಿದ ಒಂದು ಕೂಟ. ಬ್ರಿಟಿಷ್ ಸರ್ಕಾರ ಅದನ್ನು ನಿಯೋಜಿಸಿ ಕಳುಹಿಸಿತ್ತು. ಈ ಕಮೀಶನನ್ನು ಬಹಿಷ್ಕರಿಸಲು ಕಾಂಗ್ರೆಸ್ ಸಂಸ್ಥೆ ನಿರ್ಧರಿಸಿತು. ಭಾರತಾದ್ಯಂತ ಈ ಕಮೀಶನ್ ಯಾವುದೇ ನಗರಕ್ಕೆ ಹೋಗಲಿ ಅದನ್ನು ಬಾಯ್ಕಾಟ್ ಮಾಡಬೇಕೆಂದೂ, ಕಪ್ಪು ಬಾವುಟ ಪ್ರದರ್ಶಿಸಬೇಕೆಂದೂ ತೀರ್ಮಾನಿಸಿಕೊಂಡು ಕಾಂಗ್ರೆಸ್ ಮುಖಂಡರುಗಳೂ, ಸ್ವಯಂಸೇವಕರುಗಳೂ ಸಿದ್ಧರಾದರು. ಬೊಂಬಾಯಿಯಲ್ಲಿ ಮೊದಲು, ಅನಂತರ ದೆಹಲಿಯಲ್ಲಿ, ಎಲ್ಲಿ ಹೋದರಲ್ಲಿ ಈ

ಕಮೀಶನನ್ನು ಬಾಯ್‌ಕಾಟ್ ಮಾಡಿದರು. ಕಪ್ಪು ಬಾವುಟ ಹಿಡಿದು 'ಸಾಯ್‌ಮನ್ ಗೋ ಬ್ಯಾಕ್" ಎಂದು ಕೂಗುತ್ತಿದ್ದರು. ಈ ಎಲ್ಲಾ ಕಡೆಗಳಲ್ಲಿಯೂ ಪೊಲೀಸರಿಂದ ಚಿಕ್ಕಪುಟ್ಟ ಏಟುಗಳು ದಸ್ತಗಿರಿ ಆದುವು. ಆದರೆ ಲಾಹೋರಿನಲ್ಲಿ ಭಾರೀ ಅನಾಹುತ ನಡೆಯಿತು.

ಸಾಯ್‌ಮನ್ ಕಮಿಶನ್ ಲಾಹೋರಿಗೆ ಬರುತ್ತಿದ್ದಂತೆಯೇ ಲಾಲ ಲಜಪತ್‌ರಾಯರ ಮುಖಂಡತ್ವದಲ್ಲಿ ಸಹಸ್ರಾರು ಜನರು ರಸ್ತೆಯಲ್ಲಿ ಸೇರಿ ಬಾಯ್‌ಕಾಟ್ ಶುರು ಮಾಡಿದರು. ಲಾಠಿಛಾರ್ಜ್ ಆಯಿತು. ಪೊಲೀಸರು ಸಿಕ್ಕಾಬಟ್ಟೆ ಚಚ್ಚಿದರು. ಪೊಲೀಸಿನವನೊಬ್ಬ ನೇರವಾಗಿ ಲಾಲಾಜಿಯವರ ಹತ್ತಿರಕ್ಕೆ ನುಗ್ಗಿ ಅವರ ಎದೆಗೆ ಜೋರಾಗಿ ಲಾಠಿಯಿಂದ ಬೀಸಿ ಹೊಡೆದ. ಲಾಲಾಜಿ ಆ ಏಟಿಗೆ ತತ್ತರಿಸಿ ಕೆಳಕ್ಕೆ ಬಿದ್ದರು. ಬಿದ್ದವರು ಮತ್ತೆ ಮೇಲೇಳಲಿಲ್ಲ ! ಡಾಕ್ಟರ್‌ಗಳ ಯತ್ನ ವಿಫಲವಾಯಿತು. ಲಾಲಾಜಿ ಇಲ್ಲವಾದರು. ಅಂದಿನ ಲಾಠಿ ಚಾರ್ಜಿನಲ್ಲಿ ಬಹಳ ಜನ ಕೈಕಾಲುಗಳನ್ನು ಮುರಿದುಕೊಂಡಿದ್ದರು. ತಲೆಗಳನ್ನು ಒಡೆದುಕೊಂಡಿದ್ದರು.

ಲಾಲಾಜಿಯವರು ತೀರಿಕೊಂಡ ಸುದ್ದಿ ಕೇಳಿ ದೇಶೀಯ ವ್ಯಕ್ತಿಗಳು ರೋಷಭೀಷಣರಾದರು. ಸಾಯ್‌ಮನ್ ಕಮೀಶನ್ ಲಕ್ನೋವಿಗೆ ಬರುವುದಿತ್ತು. ಆದರೆ ಇಲ್ಲಿ ಹಿಂದಿನ ಸಂಜೆಯೇ ವಿಶೇಷ ರೀತಿಯ ಪ್ರತಿಭಟನೆ ನಡೆಯಬೇಕೆಂದು ನೆಹರೂಜಿಯವರಾದಿಯಾಗಿ ಎಲ್ಲಾ ಕಾಂಗ್ರೆಸ್ಸಿಗರೂ, ದೇಶಭಕ್ತರೂ ನಿರ್ಧರಿಸಿಕೊಂಡಿದ್ದರು. ಆದರೆ ನಗರದ ಬೀದಿಗಳಲ್ಲಿ ಗುಂಪು ಕಟ್ಟಿಕೊಂಡು ಪ್ರದರ್ಶನ ರೂಪದಲ್ಲಿ ಬರಕೂಡದೆಂದು ಸರ್ಕಾರೀ ಆಜ್ಞೆ ಹೊರಟಿದ್ದರಿಂದ ಎಲ್ಲರೂ ಹದಿನಾರು ಹದಿನಾರು ಜನರಂತೆ ಸಾಯ್‌ಮನ್ ಸಭೆ ಸೇರುವ ಸ್ಥಳಕ್ಕೆ ನಡೆದರು.

ಅಂದಿನ ಪ್ರಕರಣವನ್ನು ನೆಹರೂಜಿ ತಮ್ಮ ಆತ್ಮ ಕಥೆಯಲ್ಲಿ ಈ ರೀತಿ ಚಿತ್ರಿಸಿದ್ದಾರೆ.

"ಹದಿನಾರು ಜನರ ನಮ್ಮದೊಂದು ಗುಂಪು ಇದ್ದರೆ, ಹಿಂದೆ ಗೋವಿಂದ ವಲ್ಲಭಪಂತರದ್ದು ಒಂದು ಹದಿನಾರರ ಗುಂಪು. ರಸ್ತೆಯಲ್ಲಿ ಯಾರೂ ಇರಲಿಲ್ಲ. ನಾವು ನಾವೇ ಸುಮಾರು ಇನ್ನೂರು ಗಜ ಮುಂದೆ ಹೋಗಿರಬಹುದು. ಅಷ್ಟರಲ್ಲಿ ನಮ್ಮ ಹಿಂದೆ ಕುದುರೆ ಕಾಲು ಸಪ್ಪಳವಾಯಿತು. ಹಿಂತಿರುಗಿ ನೋಡಿದಾಗ ಅಶ್ವಾರೋಹಿಗಳಾದ ಎರಡು ಮೂರು ಡಜನ್ ಸಿಪಾಯಿಗಳು ನಮ್ಮ ಮೇಲೆ ಏರಿ ಬಂದರು. ಅವರ ನುಗ್ಗಲಿಗೆ ನಮ್ಮ ಚಿಕ್ಕ ಗುಂಪು ಚದುರಿತು. ಅನಂತರ ಅಶ್ವಾರೋಹಿಗಳು ಉದ್ದವಾದ ದೊಣ್ಣೆಗಳಿಂದ ಸ್ವಯಂ ಸೇವಕರನ್ನು ಬಡಿಯತೊಡಗಿದರು. ಏಟು ತಾಳಲಾರದೆ ಹಲವು ಸ್ವಯಂ ಸೇವಕರು ಪಕ್ಕದ ಅಂಗಡಿಗಳಲ್ಲಿ ಓಡಿಹೋಗಿ ಅವಿತುಕೊಂಡರು. ಆದರೆ ಕುದುರೆ ಸವಾರರು ಅವರನ್ನು ಅಟ್ಟಿಸಿಕೊಂಡು ಹೋಗಿ ಹೊಡೆದು ಕೆಡವಿದರು. ಕುದುರೆಗಳು ಮೇಲೇರಿದಾಗ ನನ್ನನ್ನು ನಾನು ರಕ್ಷಿಸಿಕೊಳ್ಳಬೇಕೆಂದು ಮನಸ್ಸಾಯಿತು. ಅಲ್ಲದೆ ಅದು ಧೈರ್ಯಗುಂದಿಸುವ ಸನ್ನಿವೇಶವೂ ಆಗಿತ್ತು. ಆದರೆ ಮರುಗಳಿಗೆಯಲ್ಲಿಯೇ ಅದು ಮಾಯವಾಗಿ ನಾನು ಅಲ್ಲಿಯೇ ನಿಂತುಬಿಟ್ಟೆ. ಅವರ ದಾಳಿಯನ್ನು ಹೇಗೊ ಸಹಿಸಿಕೊಂಡೆ. ರಸ್ತೆ ಮಧ್ಯದಲ್ಲಿ ನಾನೊಬ್ಬನೇ. ಸುತ್ತಲೂ ಸವಾರರು ಸ್ವಯಂಸೇವಕರನ್ನು ಬಡಿಯುತ್ತಿದ್ದರು. ನಾನಾಗಿಯೇ ನಾನು ಮರೆಯಾಗಬೇಕೆಂದು ಇಚ್ಛಿಸಿ ರಸ್ತೆಯ ಮತ್ತೊಂದು ಬದಿಗೆ ನಿಧಾನವಾಗಿ ಕಾಲಿಡತೊಡಗಿದೆ. ಆದರೆ ಅದು ನನ್ನ ನೀತಿಯಲ್ಲವೆಂದು ತಿಳಿದು ಹಾಗೆಯೇ ನಿಂತೆ. ನನ್ನ ಸ್ವಾಭಿಮಾನಿ ಮನಸ್ಸು ಇಂತಹ ಹೇಡಿತನದ ಕಾರ್ಯಕ್ಕೆ ಒಪ್ಪಲಿಲ್ಲ. ಓರ್ವ ಅಶ್ವಾರೋಹಿ ದೊಣ್ಣೆಯನ್ನು ತಿರುವುತ್ತಾ ನನ್ನ ಕಡೆಗೇ ನುಗ್ಗಿ ಬಂದ. ಆಗ ನಾನು ಏನಾದರೂ ಮಾಡಿಕೊ ಎಂದು ಮುಖ ತಿರುಗಿಸಿಕೊಂಡೆ. ತಲೆಯನ್ನು ಮುಖವನ್ನು ರಕ್ಷಿಸಿಕೊಳ್ಳಬೇಕೆಂಬ ಪ್ರವೃತ್ತಿ ನನ್ನನ್ನು ಹಾಗೆ ಮಡಿತು. ಅವನು ನನ್ನ ಬೆನ್ನ ಮೇಲೆ ಭಡಾ ಭಡಾ ಹೊಡೆದ. ನನಗೆ ಮೂರ್ಛೆ ಬರುವಂತಾಯಿತು. ನನ್ನ ಶರೀರವೆಲ್ಲಾ ಗಡ ಗಡ ನಡುಗತೊಡಗಿತು. ಆದರೂ ನಾನು ಹಾಗೆಯೇ ನಿಂತುಕೊಂಡೆ. ಅದರಿಂದ ನನಗೆ ಆಶ್ಚರ್ಯವೂ ಆಯಿತು, ಸಂತೋಷವೂ ಆಯಿತು. ಕೂಡಲೇ ಪೋಲೀಸ್ ದಳವು ಹಿಂದೆ ತೆಗೆದುಕೊಳ್ಳಲ್ಪಟ್ಟಿತು. ಮತ್ತೆ ಸ್ವಯಂಸೇವಕರು ಒಂದುಗೂಡಿದರು. ಅವರಲ್ಲಿ ಕೆಲವರ ಶರೀರದಿಂದ ರಕ್ತ ಹರಿಯುತ್ತಿತ್ತು. ಮತ್ತೆ ಕೆಲವರಿಗೆ ತಲೆಬುರುಡೆಗಳು ಜಜ್ಜಿ ಹೋಗಿದ್ದವು. ಚೆನ್ನಾಗಿ ಏಟು ತಿಂದಿದ್ದ ಪಂತರೂ ನಮ್ಮೊಡನೆ ಬಂದು ಸೇರಿಕೊಂಡರು".

ಇದು ನೆಹರೂಜಿಯವರು ಮೊದಲು ಕಂಡ ಲಾಠಿ ಸವಿ. ತಮ್ಮಲ್ಲಿ ಏಟು ತಿನ್ನುವ ಶಕ್ತಿ ಇದೆಯಲ್ಲಾ ಎಂದು ಏಟು ತಿನ್ನುವಾಗ ಹಿಗ್ಗಿದರಂತೆ ! ಅಂದು ಸಂಜೆ ಪೊಲೀಸರ ಮುಂದೆ ಹಾಗೆಯೇ ರಸ್ತೆಯಲ್ಲಿ ನಿಂತಿದ್ದು

ರಾತ್ರಿಯಾಗುತ್ತಲೇ ವಾಪಸ್ಸು ಮನೆಗಳಿಗೆ ಸ್ವಯಂಸೇವಕರು, ಪೊಲೀಸರೂ ಹೋದರಂತೆ. ಮನೆಗೆ ಹಿಂತಿರುಗಿದ ಕೂಡಲೇ ಅಲಹಾಬಾದಿಗೆ ನೆಹರೂಜಿ ತಮ್ಮ ತಂದೆಗೆ ಗಾಬರಿಯಾಗದಿರಲೆಂದು ತಂತಿ ಕಳುಹಿಸಿದರಂತೆ.

ಮಾರನೆಯ ದಿನ ಸಾಯ್‌ಮನ್ ಕಮೀಶನ್ ಲಕ್ನೋಗೆ ಬರುವ ದಿನ. ಅಲ್ಲಿಯ ರೈಲ್ವೇ ಸ್ಟೇಷನ್‌ನಲ್ಲಿ ಲಕ್ಷಾಂತರ ಜನ ಗುಂಪು ಸೇರಿ ನಿಂತಿತು, ಕಮೀಷನ್ನಿಗೆ ಬಹಿಷ್ಕಾರ ಜೋರಾನಿಂದ ಇತ್ತು. ಆದರೆ ಇದ್ದಕ್ಕಿದ್ದಂತೆಯೇ ಅಶ್ವಾರೋಹಿಗಳು, ಪೊಲೀಸ್ ಕಾಲಾಳುಗಳು, ಮಿಲಿಟರಿಯವರೂ ಒಟ್ಟಿಗೆ ಸೇರಿಕೊಂಡು ಜನರ ಮೇಲೆ ನುಗ್ಗಿದರು. ಪ್ರೇಕ್ಷಕರಾಗಿ ನಿಂತಿದ್ದ ಹಲವರು ಕುದುರೆಗಳ ಗೊರಸಿಗೆ ಸಿಕ್ಕು ನುಚ್ಚುನೂರಾದರು. ಏಟುಗಳ ಮೇಲೆ ಏಟು ಬಿದ್ದು ಸಾವು ನೋವು ಹೇಳ ತೀರದಾಯಿತು. ಲಕ್ನೋ ಸ್ಟೇಷನ್ ಗೋಳಿನ ಬೀಡಾಯಿತು.

ನೆಹರೂರವರಿಗೂ ವಿಶೇಷ ಏಟು ಬಿದ್ದುವು. ತಲೆಯ ಮೇಲೊಂದು ಏಟು ಬೀಳುತ್ತಲೇ ಅವರಿಗೆ ಸಿಟ್ಟು ನೆತ್ತಿಗೇರಿ ಹಿಂತಿರುಗಿ ನಾಲ್ಕು ಬಿಡಬೇಕೆನ್ನಿಸಿತು. ಆದರೆ ಅದು ಕಾಂಗ್ರೆಸ್ ನೀತಿ ಮತ್ತು ಬಾಪೂಜಿಯವರ ಅಹಿಂಸಾವಾದಕ್ಕೆ ತೀರ ವಿರುದ್ಧವಾದುದೆಂದು ಸುಮ್ಮನಾದರು. ಮತ್ತೆ ಏಟು ಬಿತ್ತು. ನೆಹರೂರವರು ತತ್ತರಿಸಿದರು. ಅಷ್ಟರಲ್ಲಿ ಯಾರೋ ಬಂದು ಅವರನ್ನು ಹೊತ್ತುಕೊಂಡು ಹೋದರು ಪ್ರಾಣ ಉಳಿಸಲಿಕ್ಕಾಗಿ. ಕಡೆಗೂ ನೆಹರೂಜಿಯವರು ಬೇಸರಗೊಂಡು ತಮ್ಮ ತಂದೆಯವರನ್ನು ಕಂಡು ಮಾತನಾಡಿದರು. ಏಟೇನೋ ಸಾಕಷ್ಟು ಬಿದ್ದಿದ್ದವು. ಮೈ ಸ್ವಲ್ಪ ಹಣ್ಣಾಗಿತ್ತು !

ಮುಂದೆ ೧೯೨೮ರಲ್ಲಿ ಕಲ್ಕತ್ತಾದಲ್ಲಿ ನಡೆದ ೪೩ನೆಯ ಸಮ್ಮೇಳನಕ್ಕೆ ಪಂಡಿತ ಮೋತಿಲಾಲರು ಅಧ್ಯಕ್ಷರಾಗಿದ್ದರು. ನೆಹರೂಜಿಯವರೇ ಕಾರ್ಯದರ್ಶಿಗಳಾಗಿದ್ದರು. ಅನಂತರ ಅದೇ ವರುಷ ಲಾಹೋರಿನಲ್ಲಿ ನಡೆದ ೪೪ನೆಯ ಕಾಂಗ್ರೆಸ್ ಸಮ್ಮೇಳನಕ್ಕೆ ಪಂಡಿತ್ ನೆಹರೂರವರೆ ಅಧ್ಯಕ್ಷರಾದರು. ಆಗ ಅವರಿಗೆ ನಾಲ್ವತ್ತು ವರ್ಷ ವಯಸ್ಸಾಗಿತ್ತು.

ಹೀಗೆ ಪ್ರಗತಿಯ ಪಥದಲ್ಲಿ ಜವಹರ್ ಸಾಗಿದರು. ಸೇವೆ ಸಲ್ಲಿಸಿ ಮಹಾಪುರುಷರಾದರು.

**ಆನಂದಭವನ – ಅಲ್ಲ – ಸ್ವರಾಜ್ ಭವನ**

ಲಾಹೋರಿನ ಅಧಿವೇಶನ ಸ್ವಾತಂತ್ರ್ಯ ಹೋರಾಟದ ದೀಕ್ಷೆಯನ್ನು ಸ್ವೀಕರಿಸಿತ್ತು. ೧೯೩೦ರ ಜನವರಿ ೨೬ನೇ ತಾರೀಖು ಸ್ವಾತಂತ್ರ್ಯದ ದಿನವೆಂದು ಘೋಷಿಸಬೇಕೆಂದು ನಿರ್ಧಾರವಾಗಿ ಅಂದು ಭಾರತಾದ್ಯಂತ ಧ್ವಜವಂದನೆ, ಕಾಯಿದೆಯ ಭಂಗ, ವಿದೇಶೀ ಆಳ್ವಿಕೆಯ ಬಹಿಷ್ಕಾರ ನಡೆಸಬೇಕೆಂದು ಎಲ್ಲರೂ ಒಪ್ಪಲಾಗಿತ್ತು. ಗಾಂಧೀಜಿಯವರೂ ಈ ಸ್ವಾತಂತ್ರ್ಯ ಘೋಷಣೆಗೆ ತಮ್ಮ ಸಮ್ಮತಿಯನ್ನಿತ್ತಿದ್ದರು. ಕೇಳಬೇಕೆ ? ರಾಷ್ಟ್ರಾದ್ಯಂತ ಸಿದ್ಧತೆಗಳು ನಡೆಯಹತ್ತಿದುವು.

ಮೋತಿಲಾಲರು ಮೊದಲು ಒಂದು ಹೇಳಿಕೆಯಿತ್ತು, ಸದ್ಯದಲ್ಲಿ ಅಸೆಂಬ್ಲಿಯಲ್ಲಿ ಸದಸ್ಯರಾಗಿರುವ ಕಾಂಗ್ರೆಸ್ಸಿಗರೆಲ್ಲಾ ರಾಜೀನಾಮೆ ಕೊಡಬೇಕೆಂದು ತಿಳಿಸಿದರು. ಆ ಕೂಡಲೇ ಸುಮಾರು ೨೭ ಮಂದಿ ರಾಜೀನಾಮೆ ಬರೆದು ಕೊಟ್ಟರು. ಫೆಬ್ರವರಿಯ ವೇಳೆಗೆ ೧೨೭ ಜನ ಶಾಸನಸಭಾ ಸದಸ್ಯರು ರಾಜೀನಾಮೆ ಕೊಟ್ಟಿದ್ದರಂತೆ ! ಸ್ವಾತಂತ್ರ್ಯ ದಿನಾಚರಣೆಯ ಚಳವಳಿ ಕಾರ್ಯಕ್ರಮ ಸ್ವಲ್ಪ ಯಶಸ್ವಿಯಾಗಿಯೇ ನಡೆಯಿತು. ದೇಶದ ನಾನಾ ಭಾಗಗಳಲ್ಲಿ ಅಂದು ಮೆರವಣಿಗೆ, ಸಭಾ ಕಾರ್ಯಕ್ರಮಗಳು ನಡೆದು ಜನತೆ ಶಾಂತಿಯಿಂದ ಸ್ವಾತಂತ್ರ್ಯದ ಪ್ರತಿಜ್ಞೆಯನ್ನು ಸ್ವೀಕರಿಸಿತು. ಅಂದರೆ "ನಾವು ಸ್ವಾತಂತ್ರ್ಯವನ್ನು ಪಡೆದೇ ಪಡೆಯುತ್ತೇವೆ" ಎಂಬ ದೀಕ್ಷೆಯನ್ನು ಕೈಕೊಳ್ಳಲಾಯಿತು.

ಫೆಬ್ರವರಿಯಲ್ಲಿ ಸಾಬರ್ಮತಿಯಲ್ಲಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸೇರಿ Civil Disobedience ಅಥವಾ ವಿನಯಪೂರ್ವಕ ಅವಿಧೇಯತೆಯ ಕ್ರಮವನ್ನು ಕೈಕೊಳ್ಳಬೇಕೆಂದು ಗೊತ್ತುಪಡಿಸಿತು. ಗಾಂಧೀಜಿ ಇದಕ್ಕೆ ಒಂದು ಉಪಾಯ ಹೇಳಿದರು. ಬಹುಬೇಗ ಜನಜನಿತವಾಗಬಲ್ಲ ರೀತಿಯಲ್ಲಿ ಕಾಯಿದೆಯ ಭಂಗಮಾಡಬೇಕಾದರೆ "ಉಪ್ಪಿನ ಸತ್ಯಾಗ್ರಹ" ಆರಂಭಿಸಬೇಕೆಂದರು.

ಉಪ್ಪಿನ ಮೇಲೆ ಆಗ ಸರ್ಕಾರ ತೆರಿಗೆ ವಿಧಿಸಿತ್ತು. ಅದನ್ನು ಮುರಿಯುವ ಯೋಜನೆ ಗಾಂಧೀಜಿಯದು. ಇದನ್ನು ವರ್ಕಿಂಗ್ ಕಮಿಟಿಯಲ್ಲಿ ಹೇಳಿದ ಕೂಡಲೇ ನೆಹರೂಜಿಯವರಾದಿಯಾಗಿ ಎಲ್ಲರಿಗೂ ನಗೆ ಬಂತು. ಆದರೆ ಗಾಂಧೀಜಿಯವರ ಹಿಡಿದ ಕಾರ್ಯ ನೋಡಲು ಚಿಕ್ಕದಾಗಿ ಕಂಡರೂ ಅತ್ಯಂತ ಮಹತ್ವದ್ದೆಂದು ಅನಂತರ ಅವರಿಗೆ ತಿಳಿಯಿತು.

ಮಾರ್ಚ್ ತಿಂಗಳು ಗಾಂಧೀಜಿ ವೈಸ್‌ರಾಯರಿಗೆ ಒಂದು ಪತ್ರ ಬರೆದರು. ಅದರೆ ಅದಕ್ಕೆ ಸರಿಯಾದ ಉತ್ತರ ಬರಲಿಲ್ಲ. ಆದ್ದರಿಂದ ಹನ್ನೆರಡನೆಯ ದಿನ ಸುಮಾರು ೭೯ ಜನರೊಡನೆ ಪಾದಯಾತ್ರೆ ಹೊರಟರು ದಾಂಡಿ ಎಂಬಲ್ಲಿಗೆ. ಅದು "ದಾಂಡಿ ಯಾತ್ರೆ" ಎಂದು ಪ್ರಸಿದ್ಧವಾಯಿತು.

ಈ ಸತ್ಯಾಗ್ರಹ ಸಮರದಲ್ಲಿ ಮುಂದೆ ಹೋಗಿ ಎಲ್ಲ ಸಿದ್ಧತೆಗಳನ್ನು ಮಾಡುತ್ತಲಿದ್ದ ಸರ್ದಾರ್ ವಲ್ಲಭಬಾಯಿ ಪಟೇಲರು ಮೊದಲು ದಸ್ತಗಿರಿ ಆದರು. ಅನೇಕ ಮಂದಿ ಪಟೇಲರುಗಳು ಸರ್ಕಾರಕ್ಕೆ ತಮ್ಮ ರಾಜೀನಾಮೆಗಳನ್ನು ಸಲ್ಲಿಸಿದರು. ಅಂದೇ ಜವಹರಲಾಲರು ಅಹಮದಾಬಾದಿನಲ್ಲಿ ಕಾಂಗ್ರೆಸ್ ಕಮಿಟಿ ಕರೆದು ಮುಂದಿನ ಕಾರ್ಯಾಚರಣೆಗಳನ್ನು ನಿಯೋಜಿಸಿಕೊಟ್ಟರು.

ಇದಾದ ಮೇಲೆ ಮೋತಿಲಾಲರು, ಜವಹರರು ಗಂಧೀಜಿಯವರನ್ನು ಕಾಣಲು ಜಂಬೂಸರಕ್ಕೆ ಹೋದರು. ಗಂಧೀಜಿಯವರು ಧಾಂಡೀಯಾತ್ರೆಯ ಇತರ ಪಾದಚಾರಿಗಳೊಡನೆ ಜಂಬೂಸರದಲ್ಲಿದ್ದರು. ಮೋತಿಲಾಲ್ ಮತ್ತು ಗಾಂಧೀಜಿ ತಮ್ಮ ತಮ್ಮಲ್ಲೇ ಏನೇನೋ ಮಾತನಾಡಿಕೊಂಡರಂತೆ ! ಅದರ ನೈಜಾಂಶ ಆಮೇಲೆ ಹೊರಬಿದ್ದಿತ್ತಂತೆ ! ಅದೇ ಅಲಹಾಬಾದಿನಲ್ಲಿರುವ ತಮ್ಮ ಮನೆ 'ಆನಂದಭವನ'ವನ್ನು ಕಾಂಗ್ರೆಸ್ ಸಂಸ್ಥೆಗೆ ಅರ್ಪಿಸುವುದಾಗಿ ಪಂಡಿತ ಮೋತಿಲಾಲರು ಬಾಪೂಜಿಗೆ ಭಾಷೆ ಕೊಟ್ಟಿದ್ದರಂತೆ ! ಅಲಹಾಬಾದಿಗೆ ಹಿಂತಿರುಗುತ್ತಲೆ ಮೋತಿಲಾಲರು ತಮ್ಮ ಮನೆಯನ್ನು ಕಾಂಗ್ರೆಸ್ ಸಂಸ್ಥೆಗೆ ಒಪ್ಪಿಸಿಕೊಟ್ಟರು. ಆಗ ಕಾಂಗ್ರೆಸ್ ಅಧ್ಯಕ್ಷ ಪಂಡಿತ ಜವಹರಲಾಲ್ ನೆಹರು ! ತಂದೆ ಮಗನಿಗೆ ಮನೆ ಒಪ್ಪಿಸಲಿಲ್ಲ. ಕಾಂಗ್ರೆಸ್ ಭಕ್ತ ಕಾಂಗ್ರೆಸ್ ಅಧ್ಯಕ್ಷರಿಗೆ ಒಪ್ಪಿಸಿಕೊಟ್ಟ ! ಅದು ಒಂದು ಅಪರೂಪದ ಆನಂದದ ಸನ್ನಿವೇಶ.

ನೆಹರೂಜಿಯವರು, ಅವರ ತಂಗಿಯವರು, ಮಗಳು ಹುಟ್ಟಿ ಬೆಳೆದು, ಆಡಿ ಆನಂದಿಸಿದ 'ಆನಂದಭವನ' ಅಂದಿನಿಂದ 'ಸ್ವರಾಜ್ಯಭವನ'ವಾಯಿತು. ಅದರ ಬಹುಭಾಗ ದೀನದಲಿತರಿಗೆ ನೆರವಾಗುವ ಸರ್ವಶ್ರೇಷ್ಠ ಆಸ್ಪತ್ರೆಯಾಯಿತು. ಅದರ ಪಕ್ಕದಲ್ಲೇ ಇದ್ದ ಒಂದು ಚಿಕ್ಕ ಮನೆ, "ಅನಂದ ಕುಟೀರ" ಅದು ನೆಹರು ಮನೆತನದವರ ಬಿಡಾರವೆನಿಸಿತು.

ಉಪ್ಪಿನ ಸತ್ಯಾಗ್ರಹ ಬಹಳ ಯಶಸ್ವಿಯಾಯಿತು. ಅದೇ ರೀತಿ ಬಹಳ ಮಂದಿ ಸೆರೆಮನೆ ಸೇರಿದರು. ನೆಹರೂಜಿಯವರನ್ನು ಏಪ್ರಿಲ್ ೧೪ರಂದು ದಸ್ತಗಿರಿ ಮಾಡಿ ಉಪ್ಪಿನ ಕಾಯಿದೆಯನ್ನು ಮುರಿದರೆಂಬ ಆಪಾದನೆಯ ಮೇಲೆ ೬ ತಿಂಗಳು ಸಜಾ ವಿಧಿಸಿದರು. ನೆಹರೂ ಜೈಲಿಗೆ ಹೋದರು. ಆದರೆ ಹೊರಗಡೆಯಿಂದ ದಿನ ಬೆಳಗಾದರೆ ಒಂದೊಂದು ಎದೆ ಬೆಚ್ಚಿಸುವಂಥಹ ಕೆಟ್ಟ ಕೆಟ್ಟ ಸುದ್ದಿಗಳು ಕೇಳಿಬರುತ್ತಿದ್ದುವು. ಇಂದು ಇಲ್ಲಿ ಲಾಠಿ ಪ್ರಹಾರವಾಯಿತು, ನಾಳೆ ಅಲ್ಲಿ ಗುಂಡು ಹಾರಿಸಲಾಯಿತು, ಅನೇಕರು ಬಂಧಿತರಾದರು ಇತ್ಯಾದಿಯಾಗಿ ವಾರ್ತೆ ಬರುತ್ತಿತ್ತು.

ಇದೇ ಸಂದರ್ಭದಲ್ಲಿ ಮತ್ತೊಂದು ಆಶ್ಚರ್ಯಕರವಾದ ಸಂಗತಿಯೆಂದರೆ ಸ್ತ್ರೀಯರು ಸ್ವಾತಂತ್ರ್ಯ ಸಮರದಲ್ಲಿ ಮುಂದೆ ನುಗ್ಗಿದುದು. ಶ್ರೀಮತಿ ಸ್ವರೂಪ ರಾಣಿಯವರು, ಸೊಸೆ ಕಮಲಾ ಮತ್ತು ಪುತ್ರಿಯರಾದ ವಿಜಯಲಕ್ಷ್ಮಿ ಮತ್ತು ಕೃಷ್ಣಕುಮಾರಿಯರೊಡನೆ ಗುಂಪು ಕಟ್ಟಿಕೊಂಡು ವಿದೇಶೀ ವಸ್ತ್ರದ ಬಹಿಷ್ಕಾರ ಚಳವಳಿಯನ್ನು ಆರಂಭಿಸಿಬಿಟ್ಟರು. ಮುಪ್ಪಿನ ತಾಯಿ ಸ್ವರೂಪರಾಣಿಗೆ ಹರೆ ಬಂದಂತಾಗಿತ್ತು. ಹಳ್ಳಿ, ನಗರ, ಜಿಲ್ಲೆಗಳನ್ನೆಲ್ಲ ಸುತ್ತಿ ವಿದೇಶೀ ವಸ್ತ್ರ ಮಾರಾಟದ ಅಂಗಡಿಯ ಮುಂದೆ ನಿಂತು ಪಿಕೆಟಿಂಗ್ ನಡೆಸಹತ್ತಿದರು.

ಸ್ತ್ರೀಯರ ತಂಡ ಹೆಚ್ಚಿತು. ರಾಷ್ಟ್ರದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅವರದೇ ಪ್ರಮುಖ ಪಾತ್ರವಾಗುತ್ತ ಬಂತು. ಮದ್ಯದಂಗಡಿಗಳ ಮುಂದೆ ಪಿಕೆಟಿಂಗ್ ನಡೆಸಿ ಕುಡಿಯುವುದನ್ನು ನಿಲ್ಲಿಸಬೇಕೆಂದು ದೇಶೀಯ ಬಾಂಧವರಲ್ಲಿ ಕೈ ಮುಗಿದು ಕೇಳಿಕೊಂಡರು. ದೊಡ್ಡ ದೊಡ್ಡ ಮೆರವಣಿಗೆ ಹೊರಟು ಸಭೆ ಸೇರಿ ಪುರುಷರನ್ನು ಸ್ವಾತಂತ್ರ್ಯ ಸಂಗ್ರಾಮದ ಬಗ್ಗೆ ಹುರಿದುಂಬಿಸುತ್ತಿದ್ದರು.

ಮೇ ೫ರಂದು ಗಾಂಧೀಜಿಯವರನ್ನು ಬಂಧಿಸಲಾಯಿತು. ಜೂನ್ ೩೦ರಂದು ಮೋತಿಲಾಲರು ಬಂಧಿತರಾದರು ಸಯ್ಯದ್ ಮಹಮ್ಮದರೊಡನೆ.

ಗಾಂಧೀಜಿಯನ್ನು ಯರವಡಾ ಜೈಲಿನಲ್ಲಿಟ್ಟರು. ಮೋತಿಲಾಲರು ನೈನಿ ಜೈಲಿಗೆ ಜವಹರರ ಬಳಿಗೇ ಬಂದರು. ಆಗ ಅವರ ಸ್ಥಿತಿ ಚೆನ್ನಾಗಿರಲಿಲ್ಲ. ಆದರೂ ಕರ್ತವ್ಯದ ಜೈಲುವಾಸವನ್ನು ಅನುಭವಿಸಬೇಕಾಗಿತ್ತು. ನೆಹರೂಜಿಯವರೇ ತಮ್ಮ ತಂದೆಯವರ ಶುಶ್ರೂಷೆಗೆ ನಿಂತರು.

ಅವರಿದ್ದುದು ಒಂದು ಚಿಕ್ಕ ಕೋಣೆ. ನಾಲ್ಕು ಜನ ಅದರಲ್ಲಿ ವಾಸ ಮಾಡಬೇಕಾಗಿತ್ತು. ಆ ನೈನೀ ಜೈಲಿನವರು ಅದಕ್ಕೆ ಕುತ್ತಾ ಘರ್ (ನಾಯಿ ಮನೆ) ಎಂಬ ಹೆಸರಿಟ್ಟದ್ದರಂತೆ. ಅಂತಹ ನಾಯಿ ಮನೆಯಲ್ಲಿ ನೆಹರೂಜಿ ಇರಬೇಕಾಯಿತು! ನೆನೆದ ನೆಲ ಆರುತ್ತಿರಲಿಲ್ಲ. ಮಳೆ ಬಂದರಂತೂ 'ತೊಟಕಪ್ಪ' ತಪ್ಪುತ್ತಿರಲಿಲ್ಲ ! ಇಂತಹ ಪ್ರದೇಶದಲ್ಲಿ ಮೋತಿಲಾಲರ ಆರೋಗ್ಯ ಸುಧಾರಿಸುವುದಾದರೂ ಹೇಗೆ ? ದಿನೇ ದಿನೇ ಹದಗೆಡುತ್ತಲೇ ಇತ್ತು. ಜ್ವರ ಇಳಿಮುಖವಾಗಲೇ ಇಲ್ಲ.

ಈ ಮಧ್ಯೆ ಸಪ್ರೂ ಮತ್ತು ಜಯಕರ್ ಎಂಬುವರು ಸರ್ಕಾರ ಮತ್ತು ಕಾಂಗ್ರೆಸ್ ಸಂಸ್ಥೆಗಳ ಮಧ್ಯೆ ಕಾಜಿನ್ಯಾಯ ಮಾಡಲು ಬಂದರು. ಜೈಲಿನಲ್ಲಿ ಮೋತಿಲಾಲರಿಗೆ ಏನೇನೋ ಹೇಳಿದರು. ಮೋತಿಲಾಲರು ಗಾಂಧೀಜಿಯವರನ್ನಾಗಲಿ ಅಥವಾ ಕಾಂಗ್ರೆಸ್ ವರ್ಕಿಂಗ್ ಕಮಿಟಿಯನ್ನಾಗಲಿ ತಿಳಿಯದೆ ತಾವು ಏನೂ ಹೇಳುವುದಿಲ್ಲವೆಂದು ಖಡಾಖಂಡಿತವಾಗಿ ನುಡಿದುಬಿಟ್ಟರು. ಅದರಿಂದಾಗಿ ಸಪ್ರೂ, ಜಯಕರ್ ವೈಸ್‌ರಾಯರಿಂದ ಅನುಮತಿ ಪತ್ರ ತಂದರು. ಅದರ ಪ್ರಕಾರ ಮೋತಿಲಾಲರು, ಜವಹರರು, ಮಹಮ್ಮದರು ಗಾಂಧೀಜಿಯವರ ಸಂಗಡ ಮಾತನಾಡಬಹುದೆಂದು ಗೊತ್ತಾಯಿತು. ಆಗಸ್ಟ್ ೧೦ರಂದು ಮೂವರೂ ಸ್ಪೆಷಲ್ ಟ್ರೈನ್‌ನಲ್ಲಿ ನೈನಿಯಿಂದ ಪೂನಾಕ್ಕೆ ಹೊರಟು ೧೧ನೇ ತಾರೀಖು ಸ್ಟೇಷನ್ನಿನಲ್ಲಿಳಿದರು. ತತ್‌ಕ್ಷಣವೇ ತಮ್ಮನ್ನು ಯರವಡಾ ಜೈಲಿನ ಬಳಿಗೆ ಕರೆದೊಯ್ದು ಮಹಾತ್ಮಾಜಿಯ ದರ್ಶನ ಮಾಡಿಸುತ್ತಾರೆಂಬ ಆಶಾಭಾವನೆ. ಆದರೆ ಅದು ಅಷ್ಟು ಸುಲಭವಿರಲಿಲ್ಲ. ಸಪ್ರೂ ಮತ್ತು ಜಯಕರರ ಎದುರಿನಲ್ಲೇ ಬಾಪೂಜಿಯವರು ಮೋತಿಲಾಲರು ಮಾತಾಡಬೇಕೆಂದು ತಿಳಿಸಲಾಗಿತ್ತು. ಆಗಸ್ಟ್ ೧೩, ೧೪, ೧೫ ಈ ಮೂರು ದಿನಗಳು ಅವರ ಸಮ್ಮುಖದಲ್ಲಿ ಮಾತುಗಳು ನಡೆದುವು. ೧೯ರಂದು ನೈನಿಗೆ ವಾಪಸಾದದರು.

ಮೋತಿಲಾಲರ ಅನಾರೋಗ್ಯ ಉಲ್ಬಣವಾಗುತ್ತ ಬಂತು. ಅದನ್ನು ಕಂಡು ನೆಹರೂಜಿಯವರಿಗೆ ಬಹಳ ಭಯವಾಯಿತು. ಜೈಲಿನ ಹೊರಗೆ ಇಡೀ ಜನತೆ ಚಿಂತೆ ಮಾಡುತ್ತಿತ್ತು. ಅಲ್ಲದೆ ಯಾರೋ ಮಿತ್ರರು ಪತ್ರಿಕೆಯಲ್ಲಿ ಒಂದು ಲೇಖನ ಬರೆದು ಸರ್ಕಾರ ಮೋತಿಲಾಲರನ್ನು ಬೇಗ ಬಂಧಮುಕ್ತರಾಗಿ ಮಾಡಿ ಅವರ ಆರೋಗ್ಯಕ್ಕೆ ಅನುವಾಗಬೇಕೆಂದು ತಿಳಿಸಿದ್ದರು. ಇದನ್ನು ಕೇಳಿ ಮೋತಿಲಾಲರಿಗೆ ಬಹಳ ಸಿಟ್ಟು ಬಂತು. ಧ್ಯೇಯಕ್ಕಾಗಿ ಹೋರಾಡುವುದೇ ತಮ್ಮ ಧರ್ಮವೆಂದು, ದೇಹದ ಮೇಲಿನ ಮಮತೆಯಿಂದ ಕರ್ತವ್ಯಭ್ರಷ್ಟರಾಗುವುದಿಲ್ಲವೆಂದು ನುಡಿದು "ಅಂತಹ ದಯೆಯ ಮುಕ್ತಿ ನನಗೆ ಬೇಡ"ವೆಂದು ಲಾರ್ಡ ಇರ್ವಿನ್ನರಿಗೆ ತಂತಿ ಕಳಿಸಿದರು. ಆದರೂ ಸೆಪ್ಟೆಂಬರ್ ೮ರಂದು ೧೦ ವಾರಗಳ ಶಿಕ್ಷೆಯ ನಂತರ ಅವರು ಮಾತ್ರ ಬಿಡುಗಡೆಯಾದರು.

ಮೋತಿಲಾಲರು ತಮ್ಮ ಪತ್ನಿ ಮತ್ತು ಪುತ್ರಿಯರೊಡನೆ ಮಸ್ಸೂರಿಯಲ್ಲಿದ್ದರು. ಜವಹರರು ಕಮಲಾದೇವಿಯೊಡನೆ ತಮ್ಮ ತಂದೆಯವರನ್ನು ಕಾಣಲು ಹೊರಟರು. ಒಂದೆರಡು ದಿನಗಳು ಬಹಳ ಸಂತೋಷದಲ್ಲಿ ಕಳೆದವು. ಮೋತಿಲಾಲರಿಗೆ ಮೊಮ್ಮಗಳ ಆಟಪಾಠಗಳು ಆನಂದ ತಂದವು. ಆದರೆ ಅದು ಕೇವಲ ಮೂರು ದಿನಗಳು ಮಾತ್ರ.

೧೯ನೇ ತಾರೀಖು ರೈತ ಸಮ್ಮೇಳನಕ್ಕೆ ನೆಹರೂಜಿ ಹೋಗಬೇಕಾಗಿತ್ತು. ಆದರೆ ಸರ್ಕಾರದ ಆಜ್ಞೆ ಹೊರಟಿತ್ತು ಎಲ್ಲೂ ಸಾರ್ವಜನಿಕ ಸಭೆಗಳಲ್ಲಿ ಭಾಷಣ ಮಾಡಕೂಡದೆಂದು. ಮುಂಚೆಯೇ ಸರ್ವಸಿದ್ಧತೆಗಳಿಂದ ಕೂಡಿದ ಸಮ್ಮೇಳನವನ್ನು ಬಿಡಲಾಗಲಿಲ್ಲ. ಅದನ್ನು ಮುಗಿಸಿಕೊಂಡ ಮಾರನೇ ದಿನ ತಂದೆಯವರು ರೈಲಿನಲ್ಲಿ ಬರುವವರಿದ್ದುದರಿಂದ ಅವರನ್ನು ಸ್ವಾಗತಿಸಲು ಸ್ಟೇಷನ್ನಿಗೆ ಹೋದರು. ಅವರನ್ನು ಕಂಡು ಮನೆಗೆ ಕಳುಹಿಸಿ ತಾವು ಕಮಲಾದೇವಿಯೊಡನೆ, ಯಾವುದೋ ಒಂದು ಸಭೆಯಲ್ಲಿ ಭಾಗವಹಿಸಿ ರಾತ್ರಿ ೮ ಗಂಟೆಗೆ ಮನೆ ಸೇರಿದರು. ಬಾಗಿಲಿಗೆ ಬರುತ್ತಿದ್ದಂತೆಯೇ ಕಾರು ನಿಲ್ಲಿಸಿ ಪೊಲೀಸರು ನೆಹರೂಜಿಯವರನ್ನು ದಸ್ತಗಿರಿ ಮಾಡಿದರು. ಕೇವಲ ಎಂಟೇ ಎಂಟು ದಿನಗಳ ತರುವಾಯ ಪುನಃ ಜೈಲನ್ನು ಸೇರಿದರು. ಅಲ್ಲಿ ಸೈಯದ್ ಮಹಮ್ಮದ್, ನರ್ಮದಾ ಪ್ರಸಾದ್ ಮತ್ತು ಅವರ

ಭಾವಂದಿರಾದ ರಣಜಿತ್ ಸೀತಾರಾಂ ಪಂಡಿತರು ಇವರಿಗಾಗಿ ಕಾಯುತ್ತಿದ್ದರು. ನಾಲ್ವರೂ ಹಿಂದಿನ ಕೋಣೆಯಲ್ಲಿ ರಾಷ್ಟ್ರ ಭವಿಷ್ಯದ ಕನಸು ಕಾಣತೊಡಗಿದರು.

**ಚಿತೆಯಲ್ಲ ; ಯಜ್ಞಕುಂಡ**

ಸಂಯುಕ್ತ ಪ್ರಾಂತದಲ್ಲೆಲ್ಲಾ ಕಂದಾಯ ಕೊಡಕೂಡದೆಂದು ಒಂದು ಚಳವಳಿ ಹುಟ್ಟಿಕೊಂಡಿತು. ಕಾಂಗ್ರೆಸ್ ಮುಖಂಡರ ಪ್ರಾರ್ಥನೆಯ ಮೇರೆಗೆ ರೈತರೆಲ್ಲರೂ ಒಗ್ಗಟ್ಟಾಗಿ ಕಂದಾಯ ಕೊಡದೆ ಮುಷ್ಕರ ಹೂಡಿಬಿಟ್ಟರು. ಇದರಿಂದಾಗಿ ಅನೇಕ ಘರ್ಷಣೆಗಳು ನಡೆದು ಬಹಳ ಜನ ರೈತರು ತೊಂದರೆಗೀಡಾದರು. ಜೈಲುವಾಸ ಹಲವರಿಗೆ, ಜೈಲಿನಲ್ಲೂ ಬೆತ್ತದ ಏಟು ಕೊಡುವ ಶಿಕ್ಷೆ, ಇದೆಲ್ಲಾ ಹೇಳತೀರದಾಗಿತ್ತು. ನೆಹರೂಜಿಯವರು ಈ ವಿಚಾರ ತಿಳಿದು ಜೈಲಿನಲ್ಲೇ ೭೨ ಗಂಟೆಗಳು ಉಪವಾಸ ಮಾಡಿದರು.

೧೯೩೨ನೇ ಜನವರಿ ೧ನೇ ತಾರೀಖು ಚಳವಳಿಕಾರ್ತಿಯೆಂದು ಕಮಲಾದೇವಿಯನ್ನು ದಸ್ತಗಿರಿ ಮಾಡಲಾಯಿತು. ಅಂದು ನೆಹರೂಜಿಯವರ ಆನಂದಕ್ಕೆ ಪಾರವೇ ಇರಲಿಲ್ಲವಂತೆ ! ದೇಶಸೇವೆಯಲ್ಲಿ ತನ್ನಂತೆಯೇ ಭಾಗಿಯಾಗಲು ತನ್ನಾಕೆಗೂ ಅವಕಾಶ ಸಿಕ್ಕಿತೆಂದು ಹಿಗ್ಗಿದರಂತೆ !! ಅಂತೆಯೇ ಆಕೆಯೂ ಸಂತುಷ್ಟಳಾಗಿದ್ದಳು. ಪತ್ರಿಕಾ ಪ್ರತಿನಿಧಿಯೊಬ್ಬನಿಗೆ ತಾನು ದಸ್ತಗಿರಿಯಾದ ಕೂಡಲೇ ಈ ರೀತಿ ಹೇಳಿಕೆ ಕೊಟ್ಟಳು :

"ನನಗೆ ಇಂದು ಅತೀವ ಆನಂದವಾಗಿದೆ. ನಾನು ಇಂದು ನನ್ನ ಪತಿಯ ಹೆಜ್ಜೆಗಳ ಮೇಲೆ ಹೆಜ್ಜೆಯಿಟ್ಟು ನಡೆಯಲು ಸಮರ್ಥಳಾದೆ. ಇದೇ ನನಗೆ ಹೆಮ್ಮೆಯ ಸಂಗತಿ. ನೀವೆಲ್ಲರೂ ಈ ಎತ್ತರದ ಬಾವುಟವನ್ನು ಎಂದೂ ಬಾಗಲು ಅವಕಾಶ ಕೊಡುವುದಿಲ್ಲವೆಂದು ನಂಬಿದ್ದೇನೆ" ಭಾರತದ ಆದರ್ಶ ಮಹಿಳೆಯ ಅಮೃತವಾಣಿ ಇದು.

ಕಮಲಾದೇವಿಯವರ ಬಂಧನದ ಸುದ್ದಿ ಕಲ್ಕತ್ತೆಯಲ್ಲಿದ್ದ ಮೋತಿಲಾಲ್‌ಜೀಯವರಿಗೆ ಮುಟ್ಟಿತು. ಅವರ ಹೃದಯಕ್ಕೆ ಮತ್ತಷ್ಟು ಆಘಾತ ಉಂಟಾಯಿತು. ಮೊದಲೇ ಅವರ ದೇಹಸ್ಥಿತಿ ಕೆಟ್ಟು, ದಿನೇ ದಿನೇ ಚಿಂತಾಜನಕವಾಗುತ್ತಿತ್ತು. ಅದರ ಮೇಲೆ ಮಗ ಮತ್ತು ಸೊಸೆಯರ ದಸ್ತಗಿರಿ ವಾರ್ತೆ ಬರೆ ಹಾಕಿತು. ಅಲಹಾಬಾದಿಗೆ ಬೇಗ ಹೊರಡಬೇಕೆಂದು ನಿರ್ಧರಿಸಿಕೊಂಡು ಮುಂದೆ ಕೃಷ್ಣೆಯನ್ನು ಕಳುಹಿಸಿ ತಾವು ನೈನಿ ಜೈಲಿಗೆ ಮಗನನ್ನು ನೋಡಲು ಹೋದರು. ನೈನಿಯಲ್ಲಿ ನೆಹರೂಜಿ ತಮ್ಮ ಪಿತನ ದರ್ಶನ ಪಡೆದರು. ಆದರೆ ಸ್ಥಿತಿ ತುಂಬಾ ನಿರಾಶಾದಾಯಕವಾಗಿತ್ತು. ಮೋತಿಲಾಲರ ಮುಖ ಊದಿಕೊಂಡು ರೂಪವೇ ಬದಲಾದಂತಿತ್ತು ! ಮೋತಿಲಾಲರು ಮಗನನ್ನು ಕಂಡು ಮಾತನಾಡಿ ಅಲಹಾಬಾದಿಗೆ ಬಂದರು.

ಜನವರಿ ೨೬ ಸಮೀಪಿಸಿತ್ತು. ಜೈಲಿನಲ್ಲೇ ನೆಹರೂಜಿ ಮೊದಲಾದವರು ಸ್ವಾತಂತ್ರ್ಯ ಪ್ರತಿಜ್ಞೆಯನ್ನು ಸ್ವೀಕರಿಸಿದ ದಿನ ಅದು. ವಾರ್ಷಿಕ ಸಮಾರಂಭ ದೇಶಾದ್ಯಂತ ಬಹಳ ಬಿರುಸಿನಿಂದ ಹೋದ ವರ್ಷಕ್ಕಿಂತ ಚೆನ್ನಾಗಿ ನಡೆಯಬಹುದೆಂದು ಭಾವಿಸಿದ್ದರು. ದಿನ ಬೆಳಗಾದರೆ ಅದೇ ವಿಚಾರವನ್ನು ಕುರಿತು ಚಪ್ಪರಿಸುತ್ತಿದ್ದರು. ಆದರೆ ಅಂದೇ ಮೋತಿಲಾಲರ ಸ್ಥಿತಿ ಚಿಂತಾಜನಕವೆಂದು ದುರ್ವಾರ್ತೆ ಬಂತು. ಅಂದು ಬಹಳ ಜನ ಬಿಡುಗಡೆಯಾದರು. ಗಾಂಧೀಜಿಯವರೂ ಯರವಡಾ ಜೈಲಿನಿಂದ ಬಿಡುಗಡೆಯಾದರು. ಅಂದೇ ಲಕ್ನೋ ಜೈಲಿನಿಂದ ಕಮಲಾದೇವಿಯವರನ್ನೂ ಬಿಟ್ಟಿದ್ದರು.

ನೈನಿ ಜೈಲಿನಿಂದ ಹೊರಬರುತ್ತಲೇ ನೆಹರೂಜಿ ತಮ್ಮ ತಂದೆಯವರನ್ನು ಕಾಣಲು ಆತುರಾತುರವಾಗಿ ಅಲಹಾಬಾದಿಗೆ ಬಂದರು. ಬಾಪೂ ಕಮಲಾ ಎಲ್ಲಾ ಸೇರಿದರು. ಅನೇಕ ಜನ ಮಿತ್ರರೂ ಬಂದು ಮಾತನಾಡಿಸಿಕೊಂಡು ಹೋದರು. ಈ ಮಿಲನ ಮೋತಿಲಾಲರಿಗೆ ಸ್ವಲ್ಪ ಸಂತೋಷವನ್ನುಂಟು ಮಾಡಿತು.

ಮೋತಿಲಾಲ್‌ಜೀ ಮಹಾತ್ಮಾಜಿಯವರ ಕೈಗಳನ್ನು ತಮ್ಮ ಬೊಗಸೆಯಲ್ಲಿ ತುಂಬಿಕೊಂಡು, 'ಬಾಪೂಜಿ, ನಾನು ಬೇಗ ಹೊರಡುವವನಿದ್ದೇನೆ. ಸ್ವರಾಜ್ಯವನ್ನು ನೋಡುವ ಪುಣ್ಯ ನನಗಿಲ್ಲ. ಆದರೆ ನೀವು ಸ್ವರಾಜ್ಯವನ್ನು ವಶಪಡಿಸಿಕೊಂಡಿದ್ದೀರಿ. ಅಲ್ಲದೆ ಅದೂ ನಿಮ್ಮ ಕೈ ಸೇರುವುದು ತಡವಿಲ್ಲ, ಎಂದು ತುಂಬುಕಂಠದಿಂದ ಹೇಳಿದರು.

ಫೆಬ್ರವರಿ ೪ರಂದು ಎಕ್ಸ್‌ರೇ ಚಿಕಿತ್ಸೆಗಾಗಿ ಲಕ್ನೋವಿಗೆ ಮೋತಿಲಾಲರನ್ನು ಕರೆದೊಯ್ಯಲಾಯಿತು. ಗಾಂಧೀಜಿಯವರೂ ಜೊತೆಯಲ್ಲಿದ್ದರು. ಆದರೆ ಎಲ್ಲರ ಪ್ರಯತ್ನವೂ ವಿಫಲವಾಯಿತು.

ಸ್ವರೂಪರಾಣಿ ಒಂದು ಕಡೆ, ಜವಹರರು ಮತ್ತೊಂದು ಕಡೆ ಕುಳಿತಿದ್ದರು. ಅತ್ತಿತ್ತ ಹೊರಳಾಡಿದ ಮೋತಿಲಾಲರ ದೇಹ ಸ್ತಬ್ಧವಾಗಿ ಮಲಗಿತು. ನೆಹರೂಜಿಯವರು ಅಂದುಕೊಂಡರು ತೀರ್ಥರೂಪುಗಳಿಗೆ ನಿದ್ದೆ ಹತ್ತಿದೆಯೆಂದು. ಆದರೆ ಅದು ಚಣದ ನಿದ್ದೆಯಾಗಿರಲಿಲ್ಲ. ಎಂದೆಂದೂ ಏಳದ ಚಿರನಿದ್ರೆಯಾಗಿತ್ತು. ಇದನ್ನರಿತ ಸ್ವರೂಪರಾಣಿಯವರು ಚಿಟ್ಟನೆ ಚೀರಿದರು. ೬ನೇ ತಾರೀಖು ಬೆಳಗ್ಗೆ ಮೋತಿಲಾಲ್‍ಜೀಯವರ ಆತ್ಮ ಪರಮಾತ್ಮನಲ್ಲಿ ಸೇರಿಹೋಯಿತು.

ಬಾಪೂಜಿ ಸ್ವರೂಪರಾಣಿಯವರನ್ನು ಸಂತೈಸಿದರು. ಎಲ್ಲರೂ ಮೋತಿಲಾಲರ ಶವದೊಡನೆ ಅಲಹಾಬಾದಿಗೆ ಬಂದರು. ಅಲಹಾಬಾದಿನಲ್ಲಿ ದಹನಕ್ರಿಯೆ ನಡೆಯಿತು. ಸಹಸ್ರೋಪಸಹಸ್ರ ಜನ ಭಾರತಪುತ್ರನಿಗೆ ತಮ್ಮ ಶ್ರದ್ಧಾಂಜಲಿಯನ್ನರ್ಪಿಸಿದರು. ಆಗ ಗಾಂಧೀಜಿ ಎರಡು ಮಾತು ಹೇಳಿದರು.

"ಇದು ಮೋತಿಲಾಲರ ಚಿತೆಯಲ್ಲ ; ರಾಷ್ಟ್ರಹೋಮಕ್ಕಾಗಿ ಮೊದಲಿಟ್ಟ ಯಜ್ಞಕುಂಡ ! ಮೋತಿಲಾಲರು ಸಮಸ್ತವನ್ನೂ ಅರ್ಪಿಸಿದಂತೆ ತಾವೂ, ತಮ್ಮ ತನು, ಮನ, ಧನಗಳನ್ನು ಅರ್ಪಿಸಬೇಕೆಂಬ ಭಾವನೆ ಹುಟ್ಟಬೇಕು. ಕಡೆಯವರೆಗೂ ರಾಷ್ಟ್ರದ ಚಿಂತನೆಯಲ್ಲೇ ಉಸಿರೆಳೆದ ಮಹಾಪುರುಷ ಮೋತಿಲಾಲ್ ನೆಹರು. ನಮ್ಮೆಲ್ಲರ ಹಿತಕ್ಕಾಗಿ ಶ್ರಮಿಸಿ, ದೇಹತ್ಯಾಗ ಮಾಡಿದ ಈ ಮಹಾನುಭಾವ 'ನಮ್ಮವನು'ಎಂದು ಹೆಮ್ಮೆಪಡುವ ಭಾಗ್ಯ ನಮ್ಮೆಲ್ಲರದಾಗಲಿ ! ಆತ ಮಾಡಿದಷ್ಟು ತ್ಯಾಗವನ್ನು ನಾವು ಮಾಡಲಾರೆವಾದರೂ ಆತನ ಇಚ್ಛೆ ನೆರವೇರುವಂತೆ ಮಾಡುವುದೇ ಹುತಾತ್ಮನಿಗೆ ನಾವು ಸಲ್ಲಿಸಬೇಕಾದ ಋಣ !!!"

ಧನ್ಯ ಮೋತಿಲಾಲ್ ! ನೀನೇ ಧನ್ಯ !!

**ನೆರಳು–ಬೆಳಕು**

ಮನಸ್ಸು ಕೋಭೆಗೊಂಡಿತ್ತು. ತಂದೆಯ ಮರಣ, ತಾಯಿಯ ವೈಧವ್ಯ. ಪತ್ನಿಯ ಅಸ್ವಸ್ಥತೆ, ಬಗೆಹರಿಯದ ರಾಜಕೀಯ – ಒಂದಲ್ಲ ಎರಡಲ್ಲ ನೂರಾರು ಚಿಂತೆಯ ಕಂತೆಗಳು ಸುರುಳಿ ಸುರುಳಿ ಸುರುಳಿಯಾಗಿ ಉರುಳುತ್ತಿದ್ದವು ನೆಹರೂಜಿಯ ತಲೆಯಲ್ಲಿ. ಇದರ ಜೊತೆಗೆ ದೇಹಾಲಸ್ಯ ಬೇರೆ ! ಜೈಲುವಾಸದ ಕಾರಣದಿಂದಾಗಿ ತಮ್ಮ ಶರೀರಕ್ಕೂ ಆರೋಗ್ಯವಿರಲಿಲ್ಲ. ಹೀಗೆ ಮೈಮನಗಳೆರಡೂ ಬೇಸತ್ತಾಗ ಶಾಂತಿಯ ಅವಶ್ಯಕತೆ ಇತ್ತು. ಅದಕ್ಕಾಗಿ ನೆಹರೂಜಿ ಸಿಂಹಳದ ಪ್ರವಾಸ ಕೈಗೊಂಡರು. ಪತ್ನಿ ಕಮಲಾದೇವಿ, ಪುತ್ರಿ ಇಂದಿರಾ ಪ್ರಿಯದರ್ಶಿನಿ ಇವರೊಡನೆ ಹೊರಟು 'ನುವಾರ ಎಲಿಯಾ' ಎಂಬಲ್ಲಿ ಕೆಲವು ದಿನಗಳು ವಿಶ್ರಾಂತಿ ಪಡೆದರು.

ಈತನ ಖ್ಯಾತಿ ವಿಶ್ವವಿಖ್ಯಾತವಾದ್ದರಿಂದ ಈತನ ಆಗಮನದ ಸುದ್ದಿ ಕೇಳಿ ಸಿಲೋನಿಗಳು ನಿತ್ಯವೂ ತಂಡತಂಡವಾಗಿ ಬರಹತ್ತಿದರು. ತಮ್ಮ ಪ್ರೀತಿಯ ಕಾಣಿಕೆಗಳನ್ನಿತ್ತು ಧನ್ಯರಾದೆವೆಂದು ಭಾವಿಸಿ ಹಿಂತಿರುಗುತ್ತಿದ್ದರು.

ಎರಡು ವಾರಗಳ ನಂತರ ನೆಹರು ಕುಟುಂಬ ಬೌದ್ಧಮಠಗಳಿಗೂ, ವಿಹಾರಗಳಿಗೂ ಭೇಟಿಕೊಟ್ಟಿತು. ಅನೂರಾಧಪುರದಲ್ಲಿ ಧ್ಯಾನಮಗ್ನನಾಗಿರುವ ಬುದ್ಧದೇವನ ಮಂಗಲಮೂರ್ತಿಯೊಂದಿದೆ. ಅದನ್ನು ಸಂದರ್ಶಿಸಿ ಮನಶ್ಶಾಂತಿಯನ್ನು ತುಂಬಿಕೊಂಡರು. ಆತನ ಶಾಂತಮುಖಭಾವ ನೆಹರೂಜಿಯವರ ಮುಖ ಕಮಲವನ್ನು ಅರಳಿಸಿ ಹೃದಯಕ್ಕೆ ಶಾಂತಿಯ ಸುಧೆಯನ್ನು ತುಂಬಿತು. ಕೆಲವು ದಿನಗಳ ತನಕ ಅಲ್ಲೆಲ್ಲಾ ಸುತ್ತಾಡಿಕೊಂಡು ಭಾರತಕ್ಕೆ ಹಿಂತಿರುಗಿದರು.

* * *

ದಿನಗಳು ಉರುಳಿದುವು.

ಭಾರತ ಪರಿಸ್ಥಿತಿ ಬಹಳ ಬದಲಾವಣೆಗಳನ್ನು ಪಡೆದಿತ್ತು. ನೆಹರೂಜಿ ಕರ್ನಾಟಕ ಪ್ರವಾಸವನ್ನು ಕೈಗೊಂಡಿದ್ದರು. ಏಕೆಂದರೆ ಹುಬ್ಬಳ್ಳಿಯಲ್ಲಿ ಭಾರತ ಸೇವಾದಳವನ್ನು ಸ್ಥಾಪಿಸಿ ಅದರ ಚಾಲಕಶಕ್ತಿಯಾಗಿ ಕೆಲಸ ಮಾಡುತ್ತಿದ್ದ ಡಾ. ನಾ.ಸು. ಹರ್ಡೀಕರರಿಗೆ ಒಮ್ಮೆ ಬರುವುದಾಗಿ ಮಾತು ಕೊಟ್ಟಿದ್ದರಂತೆ. ಅದರ ಮೇರೆಗೆ ಕರ್ನಾಟಕದಲ್ಲೆಲ್ಲ ಸಂಚರಿಸಿಕೊಂಡು ಬೊಂಬಾಯಿಗೆ ಹೋಗುವುದೆಂದು ಆಲೋಚಿಸಿಕೊಂಡರು. ಬೊಂಬಾಯಿಯಲ್ಲಿ ಎರಡು ಕೆಲಸಗಳು ನೆರವೇರುವುದಿದ್ದಿತ್ತು ; ಒಂದು, ಅವರ ಪತ್ನಿ ಕಮಲಾದೇವಿ ಆಸ್ಪತ್ರೆಯಲ್ಲಿದ್ದರು; ಅವರನ್ನು

ನೋಡಿಕೊಳ್ಳುವುದು; ಮತ್ತೊಂದು' ದುಂಡು ಮೇಜಿನ ಪರಿಷತ್ತಿನಲ್ಲಿ ಭಾಗವಹಿಸಲು ಬಾಪೂಜಿ ಯೂರೋಪಿಗೆ ಹೋಗಿದ್ದರು. ಅವರನ್ನು ಬೊಂಬಾಯಿ ಬಂದರಿನಲ್ಲಿ ಎದುರುಗಾಣುವುದು. ಇದಕ್ಕಾಗಿ ತಸ್ದುಕ್ ಅಹಮ್ಮದ್ ಖಾನ್ ಶೇರವಾನಿಯವರೂ, ಇವರೂ ರೈಲಿನಲ್ಲಿ ಹೊರಟರು.

ಸರ್ಕಾರ ಇವರ ಮೇಲೆ ಒಂದು ಕಠೋರ ಆಜ್ಞೆ ಹೊರಡಿಸಿತ್ತು ! 'ಯಾವುದೇ ಸಾರ್ವಜನಿಕ ಸಭೆ ಅಥವಾ ಸಮಾರಂಭಗಳಲ್ಲಿ ಭಾಗವಹಿಸಕೂಡದು, ಯಾವ ಸಭೆಯಲ್ಲೂ ಭಾಷಣ ಮಾಡಲಾಗದು ಮತ್ತು ಯಾವುದೇ ಪತ್ರಿಕೆಯಲ್ಲಿ ಲೇಖನಗಳನ್ನು ಬರೆದು ಪ್ರಕಟಿಸಕೂಡದು' ಎಂದು.

ಸಿಟ್ಟಿಗೆದ್ದ ನೆಹರೂಜಿ, ಮಾರನೆಯ ದಿನವೇ, ಆಜ್ಞೆ ಹೊರಡಿಸಿದ ಅಲಹಾಬಾದಿನ ಜಿಲ್ಲಾ ಮ್ಯಾಜಿಸ್ಟ್ರೇಟರಿಗೆ ಪ್ರತಿಭಟನಾ ಪತ್ರ ಬರೆದು, ಅದರಲ್ಲಿ – "ನಾನು ಏನೇನು ಮಾಡಬೇಕು, ಏನೇನು ಮಾಡಬಾರದು ಎಂಬ ವಿಷಯದ ಬಗ್ಗೆ ನಿಮ್ಮಿಂದ ಅಪ್ಪಣೆ ಪಡೆಯುವ ಅವಶ್ಯಕತೆ ಇಲ್ಲ. ನಾನು ನನ್ನ ಕರ್ತವ್ಯವನ್ನು ಎಂದಿನಂತೆಯೇ ಸಹಜ ರೀತಿಯಲ್ಲಿ ಮಾಡುವೆ. ಅಲ್ಲದೆ ನಾನು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಕಾರ್ಯದರ್ಶಿಯಾಗಿದ್ದುದರಿಂದ ಗಾಂಧೀಜಿಯವರನ್ನು ಭೇಟಿಯಾಗುವುದಕ್ಕೂ ಅವರೊಡನೆ ಸಭೆಗಳಲ್ಲಿ ಭಾಗವಹಿಸುವುದಕ್ಕೂ ನಾನು ಮುಂಬಯಿಗೆ ಹೋಗುವವನಿದ್ದೇನೆ. ಇದು ನನ್ನ ಕರ್ತವ್ಯ" ಎಂದು ತಿಳಿಸಿದರು.

ಅಲಹಾಬಾದಿನಿಂದ ರೈಲು ಹೊರಟಿತು. ಅಷ್ಟರಲ್ಲೇ ಗಡಿನಾಡಿನ ಗಾಂಧಿ ಅಬ್ದುಲ್ ಗಫಾರಖಾನರ ಬಂಧನವಾಯಿತೆಂದು ಸುದ್ದಿ ಮುಟ್ಟಿತು. ಮಾರ್ಗದಲ್ಲಿ ಯಾವುದೊ ಒಂದು ಚಿಕ್ಕ ಸ್ಟೇಷನ್ನಿನಲ್ಲಿ ರೈಲು ನಿಂತಿತು. ಪೊಲೀಸರು ನೆಹರೂಜಿ ಮತ್ತು ಶೇರವಾನಿ ಕುಳಿತಿದ್ದ ಡಬ್ಬಿಗೆ ಹತ್ತಿ ದಸ್ತಗಿರಿ ಮಾಡಿ ಬೇರೆ "ಬ್ಲಾಕ್ ಮ್ಯಾರಿಯಾ" (ಜೈಲಮೋಟಾರು) ದಲ್ಲಿ ಕುಳ್ಳಿರಿಸಿಕೊಂಡು ನೈನೀ ಜೈಲಿಗೆ ಕರೆದೊಯ್ದರು. ಶೇರವಾನಿಯವರಿಗೆ ೬ ತಿಂಗಳು ಕಠಿಣಶಿಕ್ಷೆ ಮತ್ತು ೧೫೦ ರೂಪಾಯಿ ದಂಡ, ನೆಹರೂಜಿಯವರಿಗೆ ಎರಡು ವರ್ಷ ಕಠಿಣಶಿಕ್ಷೆ, ೫೦೦ ರೂಪಾಯಿ ದಂಡ ವಿಧಿಸಿತು ನ್ಯಾಯಾಲಯ !

ಸರ್ಕಾರ ಕಾಂಗ್ರೆಸ್ ಸಂಸ್ಥೆಯನ್ನು ತುಳಿದುಬಿಡುವ ಯೋಜನೆಯಲ್ಲಿತ್ತು. ಆದರೆ ಅದು ಅಷ್ಟು ಸುಲಭದ ಕಾರ್ಯವಾಗಿರಲಿಲ್ಲ. ಬಾಪೂಜಿಯವರು ವಿನಯಪೂರ್ವಕ ಕಾನೂನುಭಂಗದ (Civil Disobedience) ಗೊತ್ತುವಳಿಯನ್ನು ಸ್ವೀಕರಿಸಿ ತಮ್ಮ ಕಾರ್ಯವನ್ನು ಮುಂದುವರಿಸಿದರು. ಅಲ್ಲದೆ ವೈಸ್‌ರಾಯ್ ಸಂಗಡ ಈ ಬಗ್ಗೆ ಮಾತುಕತೆಯಾಡಲು ಅವಕಾಶ ಕೊಡಬೇಕೆಂದು ಕೇಳಿದರು. ಅದಕ್ಕೆ ಸರ್ಕಾರ ಬಾಪೂಜಿ ಮತ್ತು ಕಾಂಗ್ರೆಸ್ ಅಧ್ಯಕ್ಷ ಸರ್ದಾರ ವಲ್ಲಭಬಾಯಿ ಪಟೇಲ್ ಇವರನ್ನು ದಸ್ತಗಿರಿ ರೂಪದಲ್ಲಿ ಉತ್ತರ ಕೊಟ್ಟಿತು. ಪರಿಣಾಮವಾಗಿ ಬಹಳ ದಂಗೆಗಳಾದವು. ಜನತೆಗೂ, ಪೊಲೀಸಿಗೂ ಘರ್ಷಣೆ ನಡೆದು ತುಂಬಾ ಸಾವುನೋವುಗಳಾದವು. ಬಲಿ ಹೆಚ್ಚಿದಷ್ಟೂ ಭಾರತೀಯರಲ್ಲಿ ಬಲವೂ ಹೆಚ್ಚುತ್ತಾ ಬಂದು ಸ್ತ್ರೀಯರು ಈ ಅಸಹನೆ ಚಳವಳಿಯಲ್ಲಿ ಬಹಳ ಮುಂದೆ ಬಂದು ಹೋರಾಡಿದರು. ಕಮಲಾ ಹಾಸಿಗೆ ಹಿಡಿದು ಮಲಗಿದ್ದಳು. ಮುಂಬಯಿನಲ್ಲಿ ಸ್ವರೂಪರಾಣಿ ಮತ್ತು ಆಕೆಯ ಇಬ್ಬರು ಪುತ್ರಿಯರು ವಿಜಯಲಕ್ಷ್ಮಿ ಮತ್ತು ಕೃಷ್ಣಕುಮಾರಿ ಆಂದೋಲನದಲ್ಲಿ ಧುಮುಕಿದರು. ಅವರನ್ನು ದಸ್ತಗಿರಿ ಮಾಡಿ ತಲಾ ಒಂದೊಂದು ವರ್ಷ ಜೈಲು ಶಿಕ್ಷೆ ವಿಧಿಸಿತು ಸರ್ಕಾರ.

ನೈನೀ ಜೈಲಿನಲ್ಲಿ ನೆಹರೂಜಿಯವರ ಆರೋಗ್ಯ ಸುಧಾರಿಸಲಿಲ್ಲ. ದಿನೇ ದಿನೇ ಹೆಚ್ಚುತ್ತಾ ಬಂತು. ಅದರಿಂದಾಗಿ ಬರೇಲಿ ಎಂಬ ಜೈಲಿಗೆ ನಾಲ್ಕು ತಿಂಗಳ ಮಟ್ಟಿಗೆ ವರ್ಗಾಯಿಸಿ ಮತ್ತೆ ನೈನೀಗೆ ಕರೆತಂದರು. ಆದರೆ ಅದು ಅತಿ ಬೇಸಗೆಯ ದಿನವಾದ್ದರಿಂದ ಮತ್ತೆ ಹಿಮಾಲಯದ ಮಡಿಲಲ್ಲಿ ಮಲಗಿರುವ ಡೆಹರಾಡೂನಿಗೆ ಕರೆದೊಯ್ಯಲಾಯಿತು. ನೆಹರೂಜಿ ಸುಮಾರು ಹದಿನಾಲ್ಕುವರೆ ತಿಂಗಳು ತಮ್ಮ ಎರಡು ವರ್ಷಗಳ ಶಿಕ್ಷೆಯ ಅವಧಿ ಮುಗಿಯುವವರೆಗೂ ಅಲ್ಲಿಯೇ ಇದ್ದರು. ಆ ಜಾಗ ಬಹಳ ಹಿಡಿಸಿತು ಅವರಿಗೆ.

ಬಿಡುಗಡೆಯಾಯಿತು, ಮತ್ತೆ ಬಂಧನವಾಯಿತು. ಬರೇಲಿಯಿಂದ ಮತ್ತೆ ಡೆಹರಾಡೂನಿಗೆ ವರ್ಗಾಯಿಸಿದರು. ಈ ಬಾರಿ ಗೋವಿಂದವಲ್ಲಭ ಪಂತರು ಜೊತೆಯಲ್ಲಿದ್ದರು. ಆದರೆ ಅವರೂ ಬಿಡುಗಡೆ ಆದ ಮೇಲೆ ೮ ತಿಂಗಳ ಕಾಲ ತಾವೊಬ್ಬರೇ ಡೆಹರಾಡೂನಿನಲ್ಲಿದ್ದರು ನೆಹರೂಜಿ.

ಡೆಹರಾಡೂನ್ ನಿಸರ್ಗ ಸೌದರ್ಯದ ನೆಲೆವೀಡು. ಅದನ್ನು ದೇವೇಂದ್ರನ ಲೀಲಾಭೂಮಿ ಎನ್ನುತ್ತಾರೆ ನೆಹರೂಜಿ ! ಹಿಮಾಲಯದ ಭವ್ಯತೆ, ಪ್ರಕೃತಿಯ ರಮ್ಯತೆ ಇವುಗಳು ಸಹಜ ರಸಿಕರಾದ ನೆಹರೂರವರನ್ನು ಮಂತ್ರಮುಗ್ಧರನ್ನಾಗಿ ಮಾಡಿದುವು. ವಸಂತ ಕಾಲದಲ್ಲಿ ಜೀವಕಳೆ ತುಂಬುತ್ತಿತ್ತು. ಇತರ ಋತುಗಳಲ್ಲೂ ಅಷ್ಟೇ. ಅಲ್ಲಿಯ ಚೆಲುವು ಮಾಸುತ್ತಿರಲಿಲ್ಲ. ನಿತ್ಯವೂ ಈ ಪ್ರಕೃತಿಯೇ ಸಹಪಾಟಿಯಾಯಿತು ನೆಹರೂಜಿಯವರಿಗೆ.

ಇದರ ಜೊತೆಗೆ ಹಲವು ಪ್ರಾಣಿ, ಪಕ್ಷಿ, ಕ್ರಿಮಿಕೀಟಗಳು ಇವರ ಒಡನಾಡಿಗಳಾಗಿದ್ದವು. ಆದರೆ ತಿಗಣೆ, ಸೊಳ್ಳೆ ಮತ್ತು ನೊಣಗಳೊಡನೆ ಇವರು ಸದಾ ಹೋರಾಡುತ್ತಿದ್ದರು. ಕಣ್ಣು ಕಪಟಗಳೆಂದರೆ ಭಯ. ಅಳಿಲುಗಳೆಂದರೆ ಪಂಚಪ್ರಾಣ ! ಹಲ್ಲಿಗಳ ಬೇಟೆಯಂತೂ ತುಂಬಾ ನಯನ ಮನೋಹರವಾಗಿರುತ್ತಿತ್ತು !

ಆಗಾಗ ಚೇಳು ಹಾವುಗಳೂ ಇವರ ಕೊಠಡಿಯಲ್ಲಿ ಬಂದು ಸೇರಿಕೊಳ್ಳುತ್ತಿದ್ದವು. ಒಂದು ದಪ್ಪನಾದ ಕರಿಚೇಳನ್ನು ಹಿಡಿದು ಒಂದು ಬಾಟಲಿಯಲ್ಲಿ ಹಾಕಿ, ಅದಕ್ಕೆ ನೊಣಗಳನ್ನು ಆಹಾರವಾಗಿ ಕೊಡುತ್ತಿದ್ದರಂತೆ. ಆದರೆ ಕೆಲವು ದಿನಗಳ ನಂತರ ಆ ಚೇಳು ಮಾಯವಾಗಿ ಕೊಠಡಿಯಲ್ಲಿ ಎಲ್ಲಿ ಹುಡುಕಿದರೂ ಸಿಕ್ಕಲಿಲ್ಲವಂತೆ !

ಜೈಲುಗಳಲ್ಲಿ ನಾಯಿಗಳನ್ನು ಸಾಕಲು ಅನುಮತಿ ಇಲ್ಲದಿದ್ದರೂ ನಾಯಿ ಸಹವಾಸ ಹೇಗೋ ನೆಹರೂಜಿಯವರಿಗೆ ಲಭಿಸಿತಂತೆ ! ಒಬ್ಬ ಜೈಲಧಿಕಾರಿ ವರ್ಗವಾಗಿ ಹೋಗುವಾಗ ತನ್ನಲ್ಲಿದ್ದ ಹೆಣ್ಣು ನಾಯಿಯನ್ನು ಅಲ್ಲಿಯೇ ಬಿಟ್ಟು ಹೋಗಿದ್ದ. ಆ ಬಡಪಾಯಿ ಅಲ್ಲಿ ಇಲ್ಲಿ ಚೂರು ಪಾರು ತಿಂದು, ಜೀವನ ಮಾಡುತ್ತಿತ್ತು. ಪ್ರತಿದಿನವೂ ನೆಹರೂಜಿಯವರ ಹತ್ತಿರ ರೊಟ್ಟಿಗೆ ಬರುತ್ತಿತ್ತು. ಅದಕ್ಕೆ ರೊಟ್ಟಿ ಕೊಟ್ಟು ಸಾಕಿದರು. ಕೆಲವು ದಿನಗಳಲ್ಲಿ ಅದು ಮರಿ ಹಾಕಿತು. ಕೆಲವರು ತಮಗೆ ಬೇಕಾದ ಮರಿಗಳನ್ನು ತೆಗೆದುಕೊಂಡು ಮೂರು ಮರಿಗಳನ್ನು ಮಾತ್ರ ತಾಯಿ ನಾಯಿಗೆ ಬಿಟ್ಟರು. ಒಂದು ಮರಿಗೆ ಖಾಯಿಲೆಯಾಯಿತು. ಅದರ ಕಷ್ಟ ಹೇಳತೀರದಾಗಿತ್ತು. ನೆಹರೂಜಿ ಅದನ್ನು ಉಪಚರಿಸಿ ಉಳಿಸಿದರು. ಅದು ಆರೋಗ್ಯಗೊಂಡ ಮೇಲೆ ಅವರ ಆನಂದಕ್ಕೆ ಪಾರವೇ ಇರಲಿಲ್ಲ !

ಪ್ರಕೃತಿಯೊಡನೆ ಸಂಭಾಷಣೆ, ಪ್ರಾಣಿಗಳೊಡನೆ ಆಟ, ವಿನೋದ, ಸ್ವಲ್ಪ ಕಾಲ ವ್ಯಾಯಾಮ ಇಷ್ಟು ಬಿಟ್ಟರೆ ಮಿಕ್ಕ ಕಾಲವನ್ನೆಲ್ಲ ನೆಹರೂಜಿ ಓದುವುದರಲ್ಲಿ, ಬರೆಯುವುದರಲ್ಲಿ ಕಳೆಯುತ್ತಿದ್ದರು. ಓದುವುದು ಬಹಳ ಹಿತವೆನಿಸಿತು. ಅತ್ಯಂತ ಗಹನವಾದ, ಪ್ರಪಂಚದಲ್ಲೇ ಪ್ರಸಿದ್ಧವಿರುವ ಪುಸ್ತಕಗಳನ್ನು ತರಿಸಿಕೊಂಡು ಓದಿದಿರು. ಆದರೆ ಕೆಲವು ಪುಸ್ತಕಗಳ ಮೇಲೆ ಬಹಿಷ್ಕಾರ ಇತ್ತು. ಆದ್ದರಿಂದ ಅಂಥವನ್ನು ಓದಲು ಕೊಡುತ್ತಿರಲಿಲ್ಲ. ಕಾದಂಬರಿಗಳು ಇಷ್ಟವಿಲ್ಲದ್ದರಿಂದ ತುಂಬಾ ಗಹನವೂ, ವಿಚಾರಪೂರ್ವಕವಾದವೂ ಆದ ಗ್ರಂಥಗಳನ್ನೂ, ಹಲವು ಸಾಹಸಿಗಳ ಪ್ರವಾಸ ಕಥನಗಳನ್ನು ಅಭ್ಯಾಸ ಮಾಡಿದರು. "ಐತಿಹಾಸಿಕ ಪತ್ರಮಾಲೆ" ಎಂಬ ಶಿರೋನಾಮೆಯಲ್ಲಿ ಜೈಲಿನಿಂದಲೇ ಇತಿಹಾಸಕ್ಕೆ ಸಂಬಂಧಿಸಿದಂತೆ ಅನೇಕ ವಿಷಯಗಳನ್ನು ಬರೆದು ತಮ್ಮ ಕುಮಾರಿ ಇಂದಿರೆಗೆ ಕಳುಹಿಸುತ್ತಿದ್ದರು. ಅದೇ ಇಂದು 'ಡಿಸ್ಕವರಿ ಆಫ್ ಇಂಡಿಯಾ' ಎಂಬಭಿಧಾನದ ಅಮೂಲ್ಯ ಗ್ರಂಥವಾಗಿದೆ.

ಈ ರೀತಿಯ ಓದುವ, ಬರೆಯುವ ಅಭ್ಯಾಸ ಜೈಲಿನ ಜೀವನದ ಕಷ್ಟಗಳನ್ನೇ ಮರೆಸಿತಂತೆ !

ಆದರೆ ಜೈಲು ಜೈಲೇ, ಅರಮನೆಯಾಗಲಾರದು ! ನೆಹರೂಜಿ ಹೇಗೋ ಜಗತ್ತನ್ನು ಮರೆಯಲೆತ್ನಿಸಿ ಬಿಡುಗಡೆಯ ದಿನಗಳನ್ನು ನಿರೀಕ್ಷಿಸುತ್ತಿದ್ದರು.

ಜೈಲಿನಲ್ಲಿದ್ದಂತೆಯೇ ಮತ್ತೊಂದು ವಾರ್ತೆ ಬಂತು. ಬ್ರಿಟಿಷರು ಹರಿಜನರನ್ನು ಚುನಾವಣೆಯಲ್ಲಿ ಇತರ ಹಿಂದೂಗಳೊಡನೆ ಸಮಾನ ರೀತಿಯಲ್ಲಿ ನೋಡಿಕೊಳ್ಳಲಿಲ್ಲವೆಂದು ಬೇಸರಗೊಂಡ ಗಾಂಧೀಜಿ ಆಮರಣಾಂತ ಉಪವಾಸ ಕೈಗೊಂಡರು ! ದೇಶಭಕ್ತರೆಲ್ಲರಿಗೂ ಭಯವಾಯಿತು. ನೆಹರೂಜಿಯವರಿಗಂತೂ ಜೀವವೇ ಹಾರಿಹೋದಂತಾಯಿತು. ತಮ್ಮ ತಂದೆ ತೀರಿಕೊಂಡ ಮೇಲೆ ಬಾಪು ತಂದೆಯಂತಿದ್ದರು. ಅವರು ಭಾರತದ ಬಾಪು (ತಂದೆ). ಭಾರತೀಯರೆಲ್ಲರೂ ಸರ್ಕಾರವನ್ನು ಎಚ್ಚರಿಸಿದರು. ಕೂಡಲೇ ಸರ್ಕಾರ ತನ್ನ ತಪ್ಪನ್ನು ತಿದ್ದಿಕೊಂಡು ಹರಿಜನರಿಗೂ ಸಮಾನ ಸ್ಥಾನ ಕಲ್ಪಿಸಿತು. ಬಾಪು ಉಪವಾಸ ನಿಲ್ಲಿಸಿದರು.

ಅಸಹಯೋಗ ಆಂದೋಲನದಿಂದಾಗಿ ಒಂದೆರಡು ಬಾರಿ ಬಾಪೂಜಿಯವರಿಗೆ ದಸ್ತಗಿರಿ ಬಿಡುಗಡೆಗಳಾಗಿದ್ದುವು. ಬಂಗಾಳದ ನಾಯಕರಾದ ಸೇನಗುಪ್ತರು ತೀರಿಕೊಂಡರು. ನೇತಾಜಿ ಸುಭಾಷ್ ಚಂದ್ರ ಬೋಸರು ಜೈಲುವಾಸದಿಂದ ಆರೋಗ್ಯ ನೀಗಿಕೊಂಡಿದ್ದರು. ಸ್ವರೂಪರಾಣಿಯವರಿಗೆ ಖಾಯಿಲೆ ಬಹಳವಾಗಿ ಆಸ್ಪತ್ರೆ

ಸೇರಿಸಲಾಗಿತ್ತು. ಈ ಸುದ್ದಿ ತಿಳಿದ ಕೂಡಲೇ ಜವಹರರ ಬಿಡುಗಡೆಯಾಯಿತು. ನೆಹರೂಜಿ ಲಕ್ನೋ ಆಸ್ಪತ್ರೆಗೆ ಬಂದರು.

* * *

ಸ್ವರೂಪರಾಣಿಯವರ ಆರೋಗ್ಯ ಸುಧಾರಿಸಿತು. ಅಕ್ಟೋಬರ್ ೨೩ನೆಯ ತಾರೀಖು ನೆಹರೂಜಿಯವರ ಚಿಕ್ಕ ತಂಗಿ ಕೃಷ್ಣಮಾಜಿಯ ವಿವಾಹ ನಿಶ್ಚಯವಾಯಿತು. ಜೈಲುವಾಸ ಯಾವಾಗ ಬರುತ್ತದೋ ಅಷ್ಟರಲ್ಲಿ ಶುಭಕಾರ್ಯ ಮಾಡಿ ಮುಗಿಸಬೇಕೆಂದು ನೆಹರೂ ತಂಗಿಯ ಮದುವೆ ಮಾಡಿದರು.

**ಬಿಹಾರದ ಭೂಕಂಪ**

೧೯೩೪ರ ಜನವರಿ ೧೫ರ ದಿನ.

ಕಮಲಾದೇವಿಯೊಡನೆ ಕಲ್ಕತ್ತೆಗೆ ಹೊರಟರು ನೆಹರೂಜಿ. ಅಂದೇ ಬಿಹಾರ ಪ್ರಾಂತದಲ್ಲಿ ಭಾರಿ ಭೂಕಂಪ. ೧೬ರಂದು ಕಲ್ಕತ್ತ ತಲುಪಿದಾಗ ವರ್ತಮಾನ ಬಂತು. ಆದರೆ ಎರಡು ಮೂರು ದಿನಗಳ ತನಕ ಯಾರೂ ಅಲ್ಲಿ ಪ್ರವೇಶಿಸುವಂತಿರಲಿಲ್ಲ. ಅದರಿಂದಾಗಿ ಕಮಲಾದೇವಿಯನ್ನು ಶಾಂತಿನಿಕೇತನಕ್ಕೆ ಕರೆದುಕೊಂಡು ಹೋಗಿ ವಿಶ್ವಕವಿ ರವೀಂದ್ರನಾಥ ಠಾಕೂರರ ದರ್ಶನ ಮಾಡಿಸಿ, ನಾಲ್ಕಾರು ಸಭೆಗಳಲ್ಲಿ ಭಾಗವಹಿಸಿ ಭೂಕಂಪ ಪೀಡಿತರಿಗೆ ನೆರವಾಗಲು ಪಾಟ್ನಾಕ್ಕೆ ನಡೆದರು. ಅಲ್ಲಿ ಬಾಬು ರಾಜೇಂದ್ರ ಪ್ರಸಾದರನ್ನು ಭೇಟಿಯಾಗಬೇಕೆಂದಿದ್ದರು. ಆದರೆ ಪ್ರಸಾದರು ಮೊದಲೇ ಈ ಸೇವಾಕಾರ್ಯದಲ್ಲಿ ತೊಡಗಿ ಬಿಹಾರದ ಭಾಗದಲ್ಲಿದ್ದರು.

ನೆಹರೂಜಿಯವರು ಕಮಲಾದೇವಿಯ ಅಣ್ಣನ ಮನೆಯಲ್ಲಿಳಿಯಬೇಕೆಂದು ಹೋದರು. ಆದರೆ ಭೂಕಂಪದಿಂದಾಗಿ ಅವರ ಮನೆ ನೆಲಸಮವಾಗಿತ್ತು. ಅಂದು ಎಲ್ಲರಂತೆ ಇವರೂ ಬಯಲಿನಲ್ಲಿರಬೇಕಾಯಿತು.

ಭೂಕಂಪವಾಗಿ ಏಳು ದಿನಗಳಾದರೂ ಸರ್ಕಾರ ಮುರಿದು ಬಿದ್ದ ಸ್ಥಳಗಳಲ್ಲಿ ಪರಿಹಾರ ಕಾರ್ಯ ನಡೆಸಿರಲಿಲ್ಲ. ಮುಜಫ್ಫರಪುರಕ್ಕೆ ನೆಹರೂಜಿಯವರು ಬಂದು ರಸ್ತೆಗಳನ್ನು ಸ್ವಚ್ಛಮಾಡಲು ಆರಂಭಿಸಿದರು. ಅಲ್ಲಿ ನೂರಾರು ಹೆಣಗಳು ಭಯಂಕರರೂಪದಲ್ಲಿ ಬಿದ್ದಿದ್ದುವಂತೆ ! ಲಕ್ಷಾಂತರ ಮನೆಗಳು ಮುರಿದು ಹೋಗಿ ಸುಮಾರು ೨೦ ಸಾವಿರ ಜನ ಬಲಿಯಾಗಿದ್ದರು. ಈ ಸನ್ನಿವೇಶದಲ್ಲಿ ಬಾಬು ರಾಜೇಂದ್ರ ಪ್ರಸಾದರಿದ್ದುದು ಬಿಹಾರದ ಭಾಗ್ಯ ! ಆಗತಾನೆ ಬಿಡುಗಡೆಯಾಗಿ ಬಂದಿದ್ದ ರಾಜೆನ್‌ಬಾಬು ಹಗಲಿರುಳೆನ್ನದೆ ಭೂಕಂಪ ಪೀಡಿತರಿಗೆ ನೆರವಾದರು. ನೆಹರೂಜಿ ಅವರಿಗೆ ಬೆಂಬಲವಾಗಿ ನಿಂತರು. ಅಲಹಾಬಾದಿನಲ್ಲಿ ಒಂದು ಕಮಿಟಿ ಮಾಡಿ ದ್ರವ್ಯ ಸಹಾಯ ಮಾಡಲು ನಿಧಿ ಶೇಖರಿಸತೊಡಗಿದರು. ಭೂಕಂಪದ ಪ್ರದೇಶಗಳಿಗೆ ನೆಹರೂಜಿಯವರನ್ನು ಕಮಿಟಿ ಕಳುಹಿಸಿತು.

ಭೂಕಂಪದ ಅನಾಹುತ ಹೇಳಿದರೆ ಮುಗಿಯದು. ಎತ್ತ ನೋಡಿದರೂ ಸ್ಮಶಾನ ಸದೃಶವಾದ ದೃಶ್ಯ ! ರಾಶಿರಾಶಿ ಹೆಣಗಳು. ಕಣ್ಣೊಡೆಯುತ್ತಿತ್ತು, ಎದೆ ಮಿಡಿಯುತ್ತಿತ್ತು.

ಮುಜಫ್ಫರಪುರದಲ್ಲಿ ೧ ವರ್ಷದ ಹುಡುಗ ಹತ್ತು ದಿನಗಳ ಅನಂತರವೂ ಬದುಕಿ ಹೊರಬಂದನಂತೆ. ಮುಂದೆ ಮುಂಗೇರ ಎಂಬ ನಗರದ ಶೋಧನೆಯಲ್ಲಿ ತೊಡಗಿದರು. ಮುಂಗೇರದಲ್ಲಿ ಮೊದಲು ಯಾರೂ ಮಣ್ಣು ತೆಗೆಯಲು ಮುಂದೆ ಬರಲಿಲ್ಲ. ನೆಹರೂಜಿ ಮೊದಲು ಸಲಿಕೆ ಬುಟ್ಟಿ ತೆಗೆದುಕೊಂಡು ಹೊರಟರಂತೆ ! ಆಗ ಜನ ತಾವೇ ತಾವಾಗಿ ಬಂದು ನೆರವಾದರಂತೆ ; ಆ ಇಡೀ ದಿನ ಅಗೆದು ಅನೇಕ ಹೆಣಗಳನ್ನು ಹೊರತೆಗೆದರಂತೆ !

ಇದನ್ನೆಲ್ಲಾ ಮುಗಿಸಿಕೊಂಡು ಫೆಬ್ರವರಿ ೧೨ರಂದು ಅಲಹಾಬಾದಿಗೆ ಬಂದರು ನೆಹರು. ಆಗ ಅವರ ಮುಖ ನೋಡಬೇಕಿತ್ತು ! ಯಾರೂ ಬೇಗ ಅವರನ್ನು ನೆಹರೂಜಿ ಎಂದು ಪತ್ತೆ ಹಚ್ಚುವಂತಿರಲಿಲ್ಲ. ಹತ್ತು ಹನ್ನೆರಡು ದಿನಗಳ ಸತತ ಶ್ರಮದಿಂದಾಗಿ ಅವರ ರೂಪ ಬಣ್ಣಗಳೇ ಬದಲಾಗಿದ್ದುವು !

ಮಾರನೆಯ ದಿನ ಪುರುಷೋತ್ತಮದಾಸ ಠಾಂಡನ್‌ರವರ ಜೊತೆಯಲ್ಲಿ ಅಲಹಾಬಾದಿನ ತಮ್ಮ ಆನಂದಕುಟೀರದಲ್ಲಿ ನೆಹರೂ ದಂಪತಿಗಳು ಚಹಾ ಕುಡಿಯುತ್ತಾ ಕುಳಿತಿದ್ದರು. ಆಗ ಇದ್ದಕ್ಕಿದ್ದ ಹಾಗೆ ಪೋಲೀಸ್ ವ್ಯಾನ್ ಬಂತು ! ನೆಹರೂಜಿಯವರ ದಸ್ತಗಿರಿಯಾಯಿತು ! ಪೋಲೀಸ್ ಅಧಿಕಾರಿಯನ್ನು ಕಾಣುತ್ತಲೇ ನೆಹರೂಜಿ ನಗುತ್ತಲೇ ಅಂದರು – "ಬಹಳ ದಿನಗಳಿಂದ ನಿಮ್ಮ ದಾರಿ ಕಾಯುತ್ತಿದ್ದೆ !" ಎಂದು. ನೆಹರೂಜಿಯವರು ಕಲ್ಕತ್ತೆಯಲ್ಲಿ

ಸಾರ್ವಜನಿಕ ಸಭೆಯಲ್ಲಿ ಮಾಡಿದ ತಪ್ಪಿಗಾಗಿ ದಸ್ತಗಿರಿ ಆಗಿತ್ತು. ಐದು ತಿಂಗಳು ಹದಿಮೂರು ದಿನಗಳ ನಂತರ ಮತ್ತೆ ಜೈಲಿಗೆ ಹೊರಟರು !

ಕಲ್ಕತ್ತ ಪ್ರೆಸಿಡೆನ್ಸಿ ಕೋರ್ಟಿನಲ್ಲಿ ವಿಚಾರಣೆ ಆಗಿ ಎರಡು ವರ್ಷ ಸಜಾ ಆಯಿತು. ಅದು ಎಂಟನೆಯ ಸಲ ಜೈಲುಮನೆಯ ವಾಸ ಅವರ ಪಾಲಿಗೆ !

ಅಲೀಪುರದ ಸೆಂಟ್ರಲ್ ಜೈಲಿನಲ್ಲಿ ಕೆಲವು ದಿವಸ ಇದ್ದರು. ಅನಂತರ ಅವರ ಆರೋಗ್ಯ ಕೆಟ್ಟದ್ದರಿಂದ ಡೆಹರಾಡೂನ್ ಜೈಲಿಗೆ ವರ್ಗಾಯಿಸಿದರು. ಆದರೆ ಅಲ್ಲೂ ಮನಸ್ಸಿಗೆ ನೆಮ್ಮದಿ ಇರಲಿಲ್ಲ. ಎರಡು ಬಾಧೆಗಳು ಅವರ ಹೃದಯವನ್ನು ಸದಾ ಇರಿಯುತ್ತಿದ್ದವು. ರೋಗಗ್ರಸ್ಥಳಾಗಿದ್ದ ಪತ್ನಿಯ ಸ್ಥಿತಿ ಮತ್ತು ಭಾರತದ ರಾಜಕೀಯ ಪರಿಸ್ಥಿತಿ ಇವು ಹಗಲಿರುಳೂ ಕಾಡುತ್ತಿದ್ದುವು.

೧೯೩೪ರ ಜೂನ್ ತಿಂಗಳಲ್ಲಿ ತಮ್ಮ ಆತ್ಮಕಥೆಯನ್ನು ಬರೆಯಲು ಆರಂಭಿಸಿದರು. ಡೆಹರಾಡೂನ್ ಜೈಲಿನಲ್ಲಿ !

ಅದು ಮುಗಿದಿರಲಿಲ್ಲ !

ಮುಗಿಯುವಂತೆಯೂ ಇರಲಿಲ್ಲ !!

ವಾರ್ತೆ ಬಂತು, ಕಮಲಾದೇವಿಯವರಿಗೆ ಖಾಯಿಲೆ ತುಂಬಾ ಉಲ್ಬಣಗೊಂಡಿದೆ ಎಂದು. ಪತ್ನಿಯ ದರ್ಶನಕ್ಕಾಗಿ ಕೆಲವು ದಿನಗಳ ಮಟ್ಟಿಗೆ ಪೊಲೀಸ್ ಬಂದೋಬಸ್ತಿನಲ್ಲಿ ಮನೆಗೆ ಕಳುಹಿಸಲಾಯಿತು.

ಅಲಹಾಬಾದಿಗೆ ಬಂದರು. ಮಂಚದ ಮೇಲೆ ಕುಳಿತು ಪತ್ನಿಯನ್ನು ಮಾತನಾಡಿಸಿದರು. ಕಮಲಾದೇವಿಗೆ ಜೀವ ಬಂದಂತಾಯಿತು ! ಖಾಯಿಲೆಯೇನೋ ಗುಣವಾದಂತಾಯಿತು ! ತನ್ನ ಪತಿದೇವನ ಸಾನ್ನಿಧ್ಯದಲ್ಲಿ ಓದುತ್ತಿದ್ದ ಮಗಳು ಇಂದಿರಾ ಕೂಡ ಶಾಂತಿನಿಕೇತನದಿಂದ ಬಂದಿದ್ದಳು. ಎರಡು ದಿನ ಮನೆ ಸಂತೋಷದ ಉಸಿರಾಡಿತು !

ಆದರೆ ಆಗಸ್ಟ್ ೨೩ ಬಂತು. ಅದು ನೆಹರೂಜಿಯವರು ಬಿಡುಗಡೆಯಾದ ಹನ್ನೊಂದನೆಯ ದಿನ. ಪೊಲೀಸ್ ಮೋಟಾರು ಬಂದಿತು. ಪೊಲೀಸ್ ಅಧಿಕಾರಿ ನೆಹರೂಜಿ ಹತ್ತಿರ ಬಂದು ಅವಧಿ ಮುಗಿಯಿತೆಂದೂ ಜೈಲಿಗೆ ಹೊರಡಬೇಕೆಂದೂ ಹೇಳಿದ. ಜವಹರರು ಎಲ್ಲರಿಗೂ ತಮ್ಮ ವಂದನೆಗಳನ್ನು ಸಲ್ಲಿಸಿ ಪತ್ನಿಗೆ ಸಮಾಧಾನ ಹೇಳಿ ಹೊರಟರು. ಮೋಟಾರು ಹತ್ತಬೇಕು. ಅಷ್ಟರಲ್ಲಿ ಖಾಯಿಲೆಯಿಂದ ನರಳುತ್ತಿದ್ದ ಅವರ ತಾಯಿ ತನ್ನೆರಡೂ ತೋಳುಗಳನ್ನು ಚಾಚಿ ಓಡಿ ಬಂದು ಮಗನನ್ನು ಅಪ್ಪಿ ಮುದ್ದಾಡಿದರು. ಈ ಎಲ್ಲಾ ದುಃಖಗಳನ್ನು ಸಹಿಸಬೇಕಾಗಿತ್ತು ರಾಷ್ಟ್ರದ ಹಿತಕ್ಕಾಗಿ ! ನೆಹರೂಜಿ ಗಟ್ಟಿ ಮನಸ್ಸು ಮಾಡಿ ಹೊರಟೇಬಿಟ್ಟರು ಸೆರೆಮನೆಯ ಸುಖಕ್ಕೆ !

ನೈನೀ ಜೈಲು ನರಕದಂತೆ ಭಾಸವಾಯಿತು ನೆಹರೂಜಿಯವರಿಗೆ ! ಆದರೂ ಅನುಭವಿಸಬೇಕಾಗಿತ್ತು. ಬೇರೆ ಮಾರ್ಗವೇ ಇರಲಿಲ್ಲ. ಆದರೆ ಒಂದು ಅನುಕೂಲ ದೊರೆಯಿತು. ಅಲ್ಲಿಗೆ ಬಂದ ಒಂದು ತಿಂಗಳಲ್ಲೇ ತಮ್ಮ ಪತ್ನಿಯನ್ನು ನೋಡಿಕೊಂಡು ಬರುವ ಸುಯೋಗ ಲಭಿಸಿತು. ಪ್ರತಿ ವಾರವೂ ಎರಡು ಸಲ ತಮ್ಮ ಪತ್ನಿಯನ್ನು ಭೇಟಿಯಾಗಿ ಮತ್ತೆ ಜೈಲಿಗೆ ಬರುವುದೆಂದು ಸರ್ಕಾರ ಅನುಮತಿ ಕೊಟ್ಟಿತ್ತು. ಇದರಿಂದಾಗಿ ಅವರ ಮನಸ್ಸಿಗೆ ಸಮಾಧಾನ ಉಂಟಾಗಿತ್ತು.

ಇಷ್ಟಾದರೂ ಕಮಲಾದೇವಿಯ ಖಾಯಿಲೆ ಗುಣಮುಖವಾಗಲಿಲ್ಲ. ಕಮಲಾದೇವಿಗೆ ಸದಾ ತನ್ನ ಪತಿಯ ಸಾನ್ನಿಧ್ಯ ಬೇಕಿತ್ತು. ನೆಹರೂಜಿಯವರಿಗೂ ಅಷ್ಟೇ. ಆಕೆಯ ಬಳಿಯಲ್ಲೇ ಇದ್ದರೆ ಒಳ್ಳೆಯದೆಂಬ ಭಾವನೆ. ಆದರೆ ಸರ್ಕಾರ ತುಂಬಾ ಅಡ್ಡಿಪಡಿಸಿತ್ತು. ಇಂತಹ ಕಠಿಣ ಪರಿಸ್ಥಿತಿಯಲ್ಲಿದ್ದ ನೆಹರೂಜಿ 'ರಾಷ್ಟ್ರದ ರಾಜಕೀಯದಲ್ಲಿ ಭಾಗವಹಿಸುವುದಿಲ್ಲ ಎಂದಿಷ್ಟೇ ಬರೆದುಕೊಟ್ಟಿದ್ದರೆ ಸರ್ಕಾರ ಅವರನ್ನು ಸಂಪೂರ್ಣ ಬಿಡುಗಡೆ ಮಾಡುತ್ತಿತ್ತು. ಆದರೆ ನೆಹರೂಜಿಯವರಿಗೆ ಅಂಥಹ ಹೀನ ಬುದ್ಧಿ ಇರಲಿಲ್ಲ. ಒಂದು ವೇಳೆ ಬಂದಿದ್ದರೆ ಆತ ಮಹಾಪುರಷನಾಗುತ್ತಿರಲಿಲ್ಲ. ಪತ್ನಿಗಿಂತಲೂ ತಮಗೆ ಪ್ರಿಯವಾದದ್ದು ಆತ್ಮಗೌರವ, ದೇಶಸ್ವಾತಂತ್ರ್ಯ ! ಅವುಗಳಿಗಾಗಿ ಸ್ವಸುಖವನ್ನೇ ತ್ಯಾಗ ಮಾಡಿದರು !

ಇದರಲ್ಲಿ ಕಮಲಾದೇವಿಯ ಪಾತ್ರ ಬಹಳವಾಗಿದೆ. ಎಷ್ಟೇ ಆಗಲಿ ಪುರುಷಸಿಂಹನ ಪತ್ನಿ. ಅನ್ಯತವನ್ನಾಡಿಯಾಳೇ ? ತಾನಳಿದರೂ ಚಿಂತೆಯಿಲ್ಲ. ತನ್ನ ಪತಿ ಧ್ಯೇಯದ್ರೋಹಿಯಾಗಬಾರದು, ರಾಷ್ಟ್ರದ್ರೋಹಿಯಾಗಬಾರದು ಎಂದು ಆಶಿಸಿದಳು. ಪತಿಯನ್ನು ಆ ವಿಚಾರದಲ್ಲಿ ಪ್ರೋತ್ಸಾಹಿಸಿದಳು. ಜವಹರ್ ಈ ರೀತಿ ಬರೆದಿರುತ್ತಾರೆ–

"ಅಕ್ಟೋಬರ್ ಪ್ರಾರಂಭದಲ್ಲಿ ಪುನಃ ಆಕೆಯನ್ನು ಭೇಟಿಯಾಗಲು ನನ್ನನ್ನು ಕರೆದೊಯ್ಯಲಾಯಿತು. ಆಕೆ ಅಸ್ತವ್ಯಸ್ತವಾಗಿ ಬಿದ್ದುಕೊಂಡಿದ್ದಳು. ಜ್ವರ ಬಹಳ ತೀಕ್ಷ್ಣವಾಗಿತ್ತು. ತನ್ನ ಬಳಿಯಲ್ಲಿ ನನ್ನನ್ನು ಇಟ್ಟುಕೊಳ್ಳಬೇಕೆಂಬ ಬಯಕೆ ಆಕೆಯಲ್ಲಿ ಬಹಳವಾಗಿತ್ತು. ಆದರೆ ನಾನು ಮತ್ತೆ ಜೈಲಿಗೆ ಹೊರಡಲು ಸಿದ್ಧನಾಗಿ ಆಕೆಯಿಂದ ಬೀಳ್ಕೊಂಡಾಗ ಬಹಳ ಪ್ರಯಾಸದಿಂದ ನಕ್ಕು ನನ್ನ ಕಡೆ ನೋಡಿದಳು. ತನ್ನ ಕಡೆ ಬಾಗುವಂತೆ ನನಗೆ ಸಂಜ್ಞೆ ಮಾಡಿದಳು. ನಾನು ಆಕೆಯ ಹತ್ತಿರ ಹೋಗಿ ಬಾಗಿದೆ. ನನ್ನ ಕಿವಿಯಲ್ಲಿ ಪಿಸುಗುಟ್ಟಿ ಕೇಳಿದಳು. . . . "ಸರ್ಕಾರಕ್ಕೆ ಆಶ್ವಾಸನೆ ಕೊಡುವ ಆಲೋಚನೆ ಏನಾದರೂ ನಿಮ್ಮಲ್ಲಿ ಇದೆಯೇ? ದಯವಿಟ್ಟು ಹಾಗೆಂದೂ ಮಾಡಬೇಡಿ" ಎಂದು. ಎಂತಹ ಮಾತು ! ಪತ್ನಿಯ ಗೋಳು ನೋಡಲಾರದೆ ಅವಳ ಸಮೀಪದಲ್ಲೇ ಇರಬಯಸಿ ಸರ್ಕಾರಕ್ಕೆ ಪತ್ರ ಬರೆದು ತಿಳಿಸುವನೋ ಎಂಬ ಭಯದಿಂದ ಆ ವೀರನಾರಿ ಆ ಮಾತು ಕೇಳಿದಳು. ಆಕೆಯ ಪ್ರೋತ್ಸಾಹ ಸಾವಿರಾಳಿನ ಶಕ್ತಿ ತುಂಬುತ್ತದೆ ಜವಹರರ ಹೃದಯದಲ್ಲಿ !

ಕಮಲಾದೇವಿಯನ್ನು ವಿಶ್ರಾಂತಿಗಾಗಿ ಹಿಮಪ್ರದೇಶವಾದ ಭುವಾಲಿ ಎಂಬಲ್ಲಿಗೆ ಕಳುಹಿಸಿದಾಗ ಆಕೆಯ ಭೇಟಿಗೆ ಅನುಕೂಲವಾಗಲೆಂದು ಅವರ ಸಮೀಪದಲ್ಲೇ ಇದ್ದ ಅಲ್ಮೋರ ಜಿಲ್ಲಾ ಜೈಲಿಗೆ ನೆಹರೂಜಿಯವರನ್ನು ಸ್ಥಳಾಂತರಿಸಲಾಯಿತು. ಆದರೆ ಕಾಯಿಲೆ ಗುಣವಾಗದಿರಲು ಕಮಲಾದೇವಿಯನ್ನು ಜರ್ಮನಿಗೆ ಚಿಕಿತ್ಸೆಗೆ ಕಳುಹಿಸಲಾಯಿತು. ೧೯೩೫ರ ಮೇ ತಿಂಗಳಲ್ಲಿ. ಅದೇ ನವಂಬರ್ ೪ರಂದು ಇದ್ದಕ್ಕಿದ್ದಂತೆಯೇ ನೆಹರೂಜಿಯವರನ್ನು ಜೈಲಿನಿಂದ ಬಿಟ್ಟರು. ಕಾರಣ ಅವರ ಪತ್ನಿಗೆ ಬಹಳ ಸುಸ್ತಾಗಿದೆ ಎಂಬ ವಾರ್ತೆ ಬಂದಿತ್ತು. ಜೈಲಿನಿಂದ ಹೊರಬಂದ ಕೂಡಲೇ ವಿಮಾನವೇರಿ ಜರ್ಮನಿಗೆ ಹೊರಟರು ನೆಹರೂಜಿ.

ಜರ್ಮನಿಯ ಸ್ವಾರ್ಟ್ಸ್ ವಾಲ್ಡ್ ಪ್ರಾಂತದ ಬಾಡೆರ್ನ್‌ವೀಲರ್ ಎಂಬ ಪಟ್ಟಣದಲ್ಲಿದ್ದರು ಕಮಲಾ. ನೆಹರೂಜಿ ಅಲ್ಲಿಗೆ ನಡೆದರು. ವಿದ್ಯಾಭ್ಯಾಸದಲ್ಲಿದ್ದ ಇಂದಿರಾ ಕೂಡ ಅಲ್ಲಿಗೆ ಬಂದಳು. ಪತಿ ಮತ್ತು ಪುತ್ರಿಯರನ್ನು ಕಂಡು ಕಮಲಾದೇವಿಗೆ ತುಂಬಾ ಹರ್ಷವಾಯಿತು.

**ನಾನು ಒಬ್ಬೊಂಟಿಗನಾದೆ !**

ನೆಹರೂಜಿಯವರಿಗೆ ಕಮಲಾದೇವಿಯ ಮೇಲೆ ವಿಶೇಷ ಪ್ರೇಮ. ಆದರೆ ರಾಷ್ಟ್ರಪ್ರೇಮ ಪತ್ನೀ ಪ್ರೇಮವನ್ನು ತುಳಿದಿತ್ತು. ಲಗ್ನವಾದ ಸುಮಾರು ಹತ್ತೊಂಬತ್ತು ವರ್ಷಗಳಲ್ಲಿ ಪ್ರಾಯಶಃ ಹತ್ತೊಂಬತ್ತು ದಿನವೂ ತಮ್ಮ ಪತ್ನಿಯೊಡನೆ ಸರಸದಿಂದಿರಲಾಗಲಿಲ್ಲ. ಕಮಲಾದೇವಿಯ ತ್ಯಾಗವೂ ಅಮೂಲ್ಯವಾದದ್ದೇ. ತಮ್ಮ ದೈಹಿಕ ಸುಖಭೋಗಗಳನ್ನೆಲ್ಲಾ ಬದಿಗಿರಿಸಿ ರಾಷ್ಟ್ರಕ್ಕಾಗಿ ದುಡಿದರು. ತಮ್ಮ ಪತಿಯೊಂದಿಗೆ ಅತ್ತೆ ಮಾವಂದಿರೊಂದಿಗೆ. ತನ್ನ ಸಮಸ್ತ ಸುಖವನ್ನೂ ತ್ಯಾಗಮಾಡಿ ರಾಷ್ಟ್ರದ ಪ್ರಗತಿಗೆ ಕಾರಣರಾದರು.

ಡೆಹರಾಡೂನ್ ಜೈಲಿನಿಂದ ತಮ್ಮ ಪತ್ನಿಯನ್ನು ನೋಡಲು ನೆಹರೂಜಿಗೆ ಹನ್ನೊಂದು ದಿನ ಬಿಡುಗಡೆ ಮಾಡಿದ್ದರಷ್ಟೆ. ಆಗ ಕಮಲಾ ಅಲಹಾಬಾದಿನಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಅವರನ್ನು ಕಾಣಲು ಪೋಲೀಸ್ ಕಾವಲಿನೊಡನೆ ನೆಹರೂಜಿ ರೈಲಿನಲ್ಲಿ ಬಂದಿಳಿದರು. ಆ ಸಮಯದಲ್ಲಿ ತಮ್ಮ ಪತ್ನಿಯನ್ನು ಕಂಡಾಗ ಅವರ ಮನಸ್ಸಿನಲ್ಲುಂಟಾದ ಭಾವನೆಗಳನ್ನು ತಮ್ಮ ವೈವಾಹಿಕ ಜೀವನದ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ವಿವರಿಸಿದ್ದಾರೆ. ನೆನಪಿನ ಸುರುಳಿ ನಿಧಾನವಾಗಿಬಿಟ್ಟಿತು. ತಾರುಣ್ಯದ ಸವಿದಿನಗಳು ಮೂಡಿ ಮೂಡಿ ಮಾಯವಾದುವು.

" . . . ಮದುವೆಯ ಕಾಲಕ್ಕೆ ನಾನು ಇಪ್ಪತ್ತಾರು ವರ್ಷದವನಿದ್ದೆ. ಆಕೆಗೆ ಸುಮಾರು ಹದಿನೇಳಿದ್ದಿರಬೇಕು. ಪ್ರಾಪಂಚಿಕ ವಿಚಾರಗಳಲ್ಲಿ ಅವಳಿಗೆ ಏನೇನೂ ಗೊತ್ತಿರದ ಮುಗ್ಧೆಯಾಗಿದ್ದಳು. ನಮ್ಮ ವಯಸ್ಸಿನಲ್ಲಿ ಎಷ್ಟು ವರ್ಷಗಳ ಅಂತರವಿತ್ತೋ ನಮ್ಮ ಮಾನಸಿಕ ದೃಷ್ಟಿಯಲ್ಲೂ ಅಷ್ಟೇ ಅಂತರವಿತ್ತು. ಮೇಲುನೋಟಕ್ಕೆ ನಾನು ಗಂಭೀರವಾಗಿ ಕಂಡರೂ ನನ್ನಲ್ಲಿ ಹುಡುಗು ಬುದ್ಧಿ ಬಹಳವಿತ್ತು. ನಾವು ಒಬ್ಬರಿಗೊಬ್ಬರು ಆಕರ್ಷಿಸಲ್ಪಟ್ಟು ಬೆರೆತುಹೋದೆವು. ಆದರೆ ನಮ್ಮ ನಮ್ಮ ದೃಷ್ಟಿಕೋನಗಳು ಬೇರೆಬೇರೆಯಾಗಿಯೇ ಇದ್ದುವು.

ಇದರ ಪರಿಣಾಮವಾಗಿ ಆಗಾಗ ನಮ್ಮಲ್ಲಿ ಜಗಳವೂ ಬಂದುಬಿಡುತ್ತಿತ್ತು. ಎಷ್ಟೋ ಸಾರಿ ಚಿಕ್ಕ ಪುಟ್ಟ ವಿಷಯಗಳಿಗಾಗಿ ಮಕ್ಕಳಂತೆ ಕಿತ್ತಾಡಿದ್ದೇವೆ; ಮತ್ತೆ ಮರುಕ್ಷಣದಲ್ಲೇ ಮಕ್ಕಳಂತೆ ಒಂದಾಗಿದ್ದೇವೆ. ನಾವಿಬ್ಬರೂ ಶೀಘ್ರ ಕೋಪಿಗಳು; ಇಬ್ಬರೂ ಹಟಗಾರರು; ಹೀಗಿದ್ದರೂ ನಮ್ಮಲ್ಲಿ ಪ್ರೇಮವು ಬಹಳ ಆಳವಾಗಿತ್ತು. . . . ನಮ್ಮ ಮದುವೆಯಾದ ಇಪ್ಪತ್ತೊಂದು ತಿಂಗಳ ಮೇಲೆ ಒಬ್ಬ ಮಗಳು – ನಮ್ಮ ಏಕಮಾತ್ರ ಸಂತಾನ ಇಂದಿರಾ ಹುಟ್ಟಿದಳು.

ನಮ್ಮ ಮದುವೆಯ ಜೊತೆಯಲ್ಲೇ ದೇಶದ ರಾಜನೀತಿಯಲ್ಲಿ ಅನೇಕ ಹೊಸ ಘಟನೆಗಳು ಜರುಗಿದವು. ಅಲ್ಲದೆ ನನ್ನ ಒಲವು ಅವುಗಳ ಕಡೆಯೇ ಹೆಚ್ಚುತ್ತಾ ಹೋಯಿತು. ಸಾರ್ವಜನಿಕ ಕಾರ್ಯಕ್ರಮಗಳ ಝುಂಝಾವಾತದಲ್ಲಿ ನಾನು ಹೆಚ್ಚು ಹೆಚ್ಚಾಗಿ ಸಿಕ್ಕುತ್ತಾ ಹೋದೆ. ಹೀಗೆ ಬೇರೆ ಕಾರ್ಯಗಳಲ್ಲಿ ಸಿಕ್ಕು ಆಕೆಯ ಕಡೆ ಅಲಕ್ಷದಿಂದಲೇ ಇದ್ದೆ. ಆದರೆ ನನ್ನ ಪ್ರೀತಿ ಎಂದಿಗೂ ಕುಂದಲಿಲ್ಲ. ಇನ್ನೂ ವೃದ್ಧಿಯಾಗುತ್ತಲೇ ಇತ್ತು. ಆಕೆ ನನಗೆ ಸದಾ ಬೆಂಬಲಿಗಳಾಗಿ ನನ್ನ ಬೆನ್ನ ಹಿಂದೆಯೇ ಇರುವಳೆಂಬುದನ್ನು ನಾನು ತಿಳಿದು ಸಮಾಧಾನಪಟ್ಟುಕೊಂಡೆ. ಆಕೆ ನನಗೆ ಬಲ ಕೊಟ್ಟಳು. ಆದರೆ

ಆಕೆಯ ಕಾರ್ಯದಲ್ಲಿ ನೆರವಾಗದಿದ್ದುದರಿಂದ ಅವಳಿಗೆ ಬೇಸರವಾಗಿರಬಹುದು. ಅಷ್ಟರಮಟ್ಟಿಗೆ ಸಂಪೂರ್ಣವಾಗಿ ಮರೆತವನಂತೆ ಇರುವುದಕ್ಕಿಂತ ನಾನೇನಾದರೂ ಅಂದಿದ್ದರೆ ಎಷ್ಟೋ ಸಂತೋಷಪಡುತ್ತಿದ್ದಳು.

ಅನಂತರದಲ್ಲಿ ಆರಂಭವಾಯಿತು ಆಕೆ ರೋಗ, ಸುತ್ತಾಟ. ಅಸಹಕಾರದ ಆಂದೋಲನವು ಕಮಲೆಗೆ ಸೇನಾನಿಯೆನಿಸಲು ಅವಕಾಶ ಮಾಡಿಕೊಟ್ಟಿತು. ಅಲ್ಲದೆ ತಾನೂ ಜೈಲಿಗೆ ಹೋದಾಗ ತುಂಬಾ ಹರ್ಷಗೊಂಡಳು. ನಮ್ಮಿಬ್ಬರ ಒಲವು ಹೆಚ್ಚು ಬೆಳೆಯತೊಡಗಿತು. ಆಗಾಗ ನಮ್ಮಿಬ್ಬರಿಗೂ ಆಗುತ್ತಿದ್ದ ಭೇಟಿಗಳು ಅತ್ಯಮೂಲ್ಯವಾಗುತ್ತಾ ಬಂದುವು. ನಾವು ಅಂತಹ ದಿನಗಳಿಗಾಗಿ ಕಾದಿರುತ್ತಿದ್ದೆವು. ಇಂತಹ ಜೈಲಿನ ಭೇಟಿಗಳಲ್ಲಿ ಒಬ್ಬರಿಗೊಬ್ಬರು ಎಂದೂ ಬೇಸರಗೊಳ್ಳುತ್ತಿರಲಿಲ್ಲ. ನಮ್ಮ ಮಾತುಗಳೂ ನೀರಸವಾಗುತ್ತಿರಲಿಲ್ಲ. ಏಕೆಂದರೆ ನಮ್ಮ ಭೇಟಿ ಕೇವಲ ಸ್ವಲ್ಪಕಾಲದ್ದಾಗಿದ್ದಿತ್ತು. ಒಬ್ಬರಲ್ಲೊಬ್ಬರು ಹೊಸಹೊಸ ಅಂಶಗಳನ್ನು ಗುರುತಿಸುತ್ತಿದ್ದೆವು. ಆದರೂ ನಮ್ಮಲ್ಲಿ ಹುಡುಗಾಟ ಹೋಗಿರಲಿಲ್ಲ.

ಹದಿನೆಂಟು ವರ್ಷ ಸಂಸಾರ ಮಾಡಿದರೂ ಆಕೆಯ ಮುಖದ ಮೇಲೆ ಹಿಂದಿನ ಮುಗ್ಧತೆ ಅಳಿದಿರಲಿಲ್ಲ. ನಮ್ಮ ಮನೆಗೆ ಬಂದಾಗ ಹೇಗಿದ್ದಳೋ ಈಗಲೂ ಹಾಗೆಯೇ ಮೊದಲಗಿತ್ತಿಯಾಗಿದ್ದಳು. ಆದರೆ ಅನುಭವ ಪಡೆದ ತಾಯಿಯಂತೆ ಅವಳೆಂದೂ ಕಾಣುವುದಿಲ್ಲ. ಇಂದಿರೆಯೊಡನಿದ್ದಾಗ ಅವಳ ಅಕ್ಕನಂತೆಯೇ ಕಾಣುತ್ತಿದ್ದಳು.

ವೈವಾಹಿಕ ಜೀವನದ ಹದಿನೆಂಟು ವರ್ಷಗಳು ! ಆದರೆ ಅವುಗಳಲ್ಲಿ ಎಷ್ಟು ವರ್ಷಗಳನ್ನು ನಾನು ಜೈಲಿನಲ್ಲಿ ಕಳೆದೆ ಅಷ್ಟು ವರ್ಷಗಳನ್ನು ಕಮಲಾ ಆಸ್ಪತ್ರೆಗಳಲ್ಲಿ ಸ್ಯಾನಿಟೋರಿಯಮ್‌ಗಳಲ್ಲೂ ಕಳೆದಳು !!

ಆದರೇನೂ ಇನ್ನೂ ಆಕೆ ಆರೋಗ್ಯಕ್ಕಾಗಿ ಹಂಬಲಿಸುತ್ತಿದ್ದಾಳೆ; ನಾನು ಬಂಧಿಯಾಗಿಯೇ ಕೆಲವು ದಿನದ ಮಟ್ಟಿಗೆ ಹೊರಬಂದವನಾಗಿದ್ದೇನೆ. ತನ್ನ ಆರೋಗ್ಯದ ಕಡೆ ಹೆಚ್ಚು ಗಮನ ಕೊಡುವುದಿಲ್ಲವೆಂದು ನನಗೆ ಅವಳ ಬಗ್ಗೆ ಸ್ವಲ್ಪ ಕೋಪವೂ ಬಂದಿತ್ತು. ಆದರೆ ಹೇಗೆ ತಾನೇ ಆಕ್ಷೇಪಿಸಲಿ ? ಉತ್ಸಾಹಭರಿತಳಾದವಳಿಗೆ ಸುಮ್ಮನೆ ಕೂತಿರಲು ಸಾಧ್ಯವೇ ? ರಾಷ್ಟ್ರೀಯ ಸಂಗ್ರಾಮದಲ್ಲಿ ಮನಃಪೂರ್ತಿಯಾಗಿ ಶ್ರಮಿಸಲು ಅವಳಲ್ಲಿ ಶರೀರ ಸಾಮರ್ಥ್ಯವಿರಲಿಲ್ಲ. ಹೀಗಾಗಿ ಅತ್ತ ರಾಜಕೀಯ ಕ್ರಿಯೆಗಳನ್ನು ಪೂರ್ಣಗೊಳಿಸಲಾಗಲಿಲ್ಲ, ಇತ್ತ ಸರಿಯಾಗಿ ಚಿಕಿತ್ಸೆಯನ್ನು ಪಡೆಯಲಾಗಲಿಲ್ಲ. ಇದರ ಪರಿಣಾಮವಾಗಿ ಒಳಗೊಳಗೆ ಹೊತ್ತಿ ಹೊಗೆಯಾಡುತ್ತಿದ್ದ ಬೆಂಕಿ ಆಕೆಯ ಶರೀರವನ್ನೇ ನುಂಗಿಬಿಟ್ಟಿತು.

ಆಕೆ ನನಗೆ ಬೇಕಾದವಳು. ಈಗ ನನ್ನನ್ನು ಬಿಟ್ಟು ಹೋಗಲಾರಳಲ್ಲವೇ ? ಈಗ ತಾನೇ ನಾವಿಬ್ಬರೂ ಒಬ್ಬರನ್ನೊಬ್ಬರು ಚೆನ್ನಾಗಿ ಗುರುತಿಸಿ ಅರ್ಥಮಾಡಿಕೊಂಡಿದ್ದೆವು. ತುಂಬು ಜೀವನದ ಮೇಲೆ ನಮ್ಮಿಬ್ಬರಿಗೂ ಭರವಸೆ ಮೂಡಿದೆ. ನಾವಿಬ್ಬರೂ ಒಬ್ಬರಿಗೊಬ್ಬರು ಅನ್ಯೋನ್ಯವಾಗಿ ಕೂಡಿ ಮಾಡುವ ಕೆಲಸ ಅದೆಷ್ಟಿದೆ !!"

ಹೃದಯ ಹೃದಯಗಳು ಅರಿತಿದ್ದುವು. ಆದರೆ ಅರಿತು ಬಾಳುವ ವೇಳೆಯಲ್ಲೇ ಜ್ಯೋತಿಯೊಂದು ನಂದಿತು.

೧೯೩೬ರ ಫೆಬ್ರವರಿ ೨೮ರ ದಿನ ಕಮಲಾ ಹಾಸಿಗೆಯ ಮೇಲೆ ಪವಡಿಸಿದ್ದರು. ಅವರ ಇಕ್ಕೆಲದಲ್ಲಿ ನೆಹರೂಜಿ ಮತ್ತು ಇಂದಿರಾ ಕುಳಿತಿದ್ದರು. ಮನದಲ್ಲಿ ಏನು ನೆನೆದರೋ, ಆಕೆಯ ಕಣ್ಣಿನಿಂದ ಎರಡು ಹನಿ ಮುತ್ತಿನಂತೆ ಕಪೋಲದ ಮೇಲೆ ಉರುಳಿದುವು. ಬಹುಶಃ ಭಾರತ ಸ್ವಾತಂತ್ರ್ಯವನ್ನು ಕಾಣುವ ಪುಣ್ಯ ತನಗಿಲ್ಲವಾಯಿತೆಂದೋ ಅಥವಾ ತನ್ನ ತಾಯ್ನೆಲದಲ್ಲಿ ಕಡೆಯುಸಿರೆಳೆಯಲು ಅವಕಾಶವಿಲ್ಲದೆ ಬೇರೊಂದು ನಾಡಿನಲ್ಲಿ – ಜರ್ಮನಿಯ ಒಂದು ನಗರದಲ್ಲಿ – ತನ್ನ ಬಾಳನ್ನು ಮುಗಿಸಬೇಕಾಯಿತೆಂದೋ, ಅಥವಾ ಪತಿಗಾಗಿಯೋ, ಪುತ್ರಿಗಾಗಿಯೋ ಎರಡು ಹನಿ ತುಳುಕಿದ್ದುಂಟು. ತಮ್ಮೆರಡೂ ಕೈಗಳಿಂದ ತಮ್ಮ ಪತಿದೇವರನ್ನೂ, ಪುತ್ರಿಯನ್ನೂ ಮುಟ್ಟಿದರು. ಏನೋ ತೃಪ್ತಿ ! ಏನೋ ನೆಮ್ಮದಿ !!

'ತಾನೇನಾದರೂ ಆಗಲಿ, ಭಾರತದ ಸೇವೆಗೆ ಪತಿಯಿದ್ದಾರೆ, ಪುತ್ರಿಯಿದ್ದಾಳೆ. ಇದು ನನ್ನ ಕಾಣಿಕೆ. ನನ್ನ ತಾಯಿ ಭಾರತಾಂಬೆಗೆ ಇದೇ ನನ್ನ ಅಮೂಲ್ಯ ಕೊಡುಗೆ ! ಇದಕ್ಕಿಂತ ನಾನು ಏನು ಮಾಡಬಲ್ಲೆ !' ಎಂಬ ಸಮಾಧಾನವಿದ್ದಿರಬೇಕು ಆಕೆಗೆ.

ತಮ್ಮ ಪತಿ ಮತ್ತು ಪುತ್ರಿಯರನ್ನು ಮತ್ತೊಮ್ಮೆ ಕಣ್ಣು ತುಂಬ ನೋಡಿದರು. ಕಣ್ಣುಗಳು ಮುಚ್ಚಿಕೊಂಡುವು. ಮುಚ್ಚಿದ ಕಣ್ಣುಗಳು ಮತ್ತೆ ತೆರೆಯಲಿಲ್ಲ. ತಮ್ಮ ಜೀವನ ಸಂಗಾತಿ ಇನ್ನಿಲ್ಲ. ತನ್ನ ಕಾರ್ಯದ ಸ್ಫೂರ್ತಿ ಇನ್ನಿಲ್ಲ. ಬಾಳ ಬೆಳಕು ಮತ್ತೆಂದಿಗೂ ಇಲ್ಲ. ಕಮಲಾ ನೆಹರೂಜಿಯವರೊಬ್ಬರನ್ನೇ ಮಾಡಿ ಬಾರದ ಹಾದಿಗೆ ಹೊರಟುಹೋದರು !

ತಂದೆ ಮತ್ತು ಮಗಳ ದುಃಖ ವರ್ಣನಾತೀತ.

ಮುಂಬಯಿಯಲ್ಲಿ ಜಹಜು ಹತ್ತುವ ಮುನ್ನ ಕಮಲಾ ತನ್ನ ಮುದ್ದಿನ ನಾದಿನಿ ಕೃಷ್ಣಾಳಿಗೆ ಹೇಳಿದ್ದಳು : 'ನಾನು ವಾಪಸ್ ಬರುವುದರಲ್ಲಿ ನಿನ್ನ ಮಗು ಆರೋಗ್ಯದಿಂದ ತುಂಬಿಕೊಂಡಿರಬೇಕು. ಇಲ್ಲದಿದ್ದರೆ ನಾನೇ ನಿನ್ನನ್ನು ಶಿಕ್ಷಿಸುತ್ತೇನೆ' ಎಂದು. ಆಗ ಕೃಷ್ಣೆಯ ಗಂಡ ಹತೀಸಿಂಗ್ ಕೂಡ ನಕ್ಕಿದ್ದ. ಆದರೆ ಅಳಿಯನ ಕ್ಷೇಮ ವಿಚಾರಿಸಲು ಆಕೆ

ಬರಲಿಲ್ಲ. ಆಕೆಯ ಅಸ್ಥಿ ಬಂದಿತು. ಭಾರತಾಂಬೆಯ ಸತ್ಪುತ್ರಿಯ ಮೃತ ಶರೀರವನ್ನು ಅಗ್ನಿದೇವನಿಗೆ ಆಹುತಿ ಕೊಟ್ಟು ಬೂದಿ ತುಂಬಿದ ಪಾತ್ರೆಯೊಡನೆ, ಭಾರವಾದ ಹೃದಯ ಹೊತ್ತು ಜವಹರ್ ಮಾರ್ಚ್ ತಿಂಗಳು ಭಾರತಕ್ಕೆ ಬಂದರು.

ಏಪ್ರಿಲ್‌ನಲ್ಲಿ ಲಕ್ನೋವಿನಲ್ಲಿ ಕಾಂಗ್ರೆಸ್‌ನ ೪೯ನೆಯ ಅಧಿವೇಶನ. ಅದಕ್ಕೆ ನೆಹರೂಜಿಯವರೇ ಅಧ್ಯಕ್ಷರೆಂದು ಮೊದಲೇ ತೀರ್ಮಾನಿಸಲಾಗಿತ್ತು. ಆದ್ದರಿಂದ ಪತ್ನಿಯ ವಿಯೋಗದ ದುಃಖವನ್ನು ಬದಿಗಿರಿಸಿ, ಕರ್ತವ್ಯಭ್ರಷ್ಟರಾಗದೆ ನೆಹರೂಜಿ ಕಾಂಗ್ರೆಸ್ ಅಧಿವೇಶನದ ಕಾರ್ಯಕಲಾಪಗಳನ್ನು ನೆರವೇರಿಸಿಕೊಟ್ಟರು. ಆಗಲೂ ಅಧ್ಯಕ್ಷ ಪೀಠದಿಂದ ತಮ್ಮ ಪತ್ನಿಯ ಬಗ್ಗೆ ತಮ್ಮ ಬಾಷ್ಪಾಂಜಲಿಯನ್ನರ್ಪಿಸಿದರು.

"ನಿಮ್ಮೆಲ್ಲರ ಪ್ರೀತಿ ವಿಶ್ವಾಸಗಳಿಂದ ನನಗೆಷ್ಟೋ ಸಮಾಧಾನವೂ, ಧೈರ್ಯವೂ ಅಗುತ್ತಿದೆ. ಈ ದೊಡ್ಡ ಸಭೆಯಲ್ಲಿ 'ನಾನು ಒಬ್ಬಂಟಿಗನಾದೆ' ಎಂಬ ಭಾವನೆ ಇದ್ದೇ ಇದೆ. ಆದರೂ ನಾವು ವಿಶ್ರಾಂತಿ ಬಯಸಲಾರೆವು. ಅಂತಹ ಬಯಕೆ ದ್ರೋಹವಾದೀತು ! ಈ ಲೋಕವನ್ನು ಬಿಟ್ಟು ಹೊರಟವರೆಲ್ಲಾ ನಮ್ಮ ಮೇಲೆ ಕರ್ತವ್ಯದ ಹೊರೆ ಹೊರಿಸಿ ಹೋದವರಲ್ಲವೇ?

ಆದ್ದರಿಂದ ಈಗ ನಾವು ವಿಶ್ರಾಂತರಾಗುವುದೆಂದರೆ ಅವರೆಲ್ಲರಿಗೂ ದ್ರೋಹ ಬಗೆದಂತೆ. ಅಂತೆಯೇ ನಮ್ಮ ಧರ್ಮಕ್ಕೆ ಚ್ಯುತಿ ತಂದುಕೊಂಡಂತೆ ! ನಾವು ವಚನಭ್ರಷ್ಟರಾದಂತೆ ! ನಮ್ಮನ್ನೇ ನಂಬಿ ಆಜೀವ ಪರ್ಯಂತ ವಿಶ್ರಾಂತಿಯನ್ನೇ ಕಾಣದೆ ದುಡಿಯುತ್ತಿರುವ ಕೋಟ್ಯಾಂತರ ಬಡಪಾಯಿ ಸೋದರರನ್ನು ವಂಚಿಸಿದಂತೆ ! . . . ."

ಕಡೆಯಲ್ಲಿ ಭಾರತದ ನಾಲ್ವತ್ತು ಕೋಟಿ ಜನತೆಯ ಪ್ರೇಮಾದರಗಳು ತಮ್ಮನ್ನು ವಾಪಸ್ಸು ಕರೆತಂದುವೆಂದು ಆತ್ಮೀಯತೆಯಿಂದ ಹೇಳಿಕೊಂಡರು. ಇದು ಭಾರತಪುತ್ರನ ಬಾಳಿನ ಪ್ರಥಮಾಧ್ಯಾಯ !

**ಭಾರತದಿಂದ ತೊಲಗಿರಿ !**

ಜವಹರಲಾಲರ ಕಾರ್ಯಕ್ಷೇತ್ರ ವಿಸ್ತಾರವಾಯಿತು. ಪತ್ನಿ ತೀರಿಕೊಂಡ ಮೇಲೆ ಅವರ ಶಕ್ತಿ, ಸಮಯ, ಚಿಂತನೆ ಎಲ್ಲವೂ ಕಾಂಗ್ರೆಸ್ ಸಂಸ್ಥೆಗಾಗಿ, ದೇಶದ ಪ್ರಗತಿಗಾಗಿ ಮೀಸಲಾದುವು.

೧೯೩೭ರ ಆರಂಭದಲ್ಲೇ ಭಾರತಾದ್ಯಂತ ಪ್ರತಿ ಪ್ರಾಂತದಲ್ಲೂ ಶಾಸನ ಸಭಾ ಚುನಾವಣೆಗಳು ನಡೆಯಬೇಕೆಂದು ಗೊತ್ತಾಗಿತ್ತು. ಆಗಂತೂ ನೆಹರೂಜಿಯವರಿಗೆ ಬಿಡುವೇ ದೊರೆಯಲಿಲ್ಲ. ಭಾರತದ ಪ್ರತಿ ಮೂಲೆಯಲ್ಲೂ ಓಡಾಡಿದರು. ಆ ದಿನಗಳಲ್ಲಿ ಓಟು ಮಾಡಲು ಕೆಲವರಿಗೆ ಮಾತ್ರ ಹಕ್ಕಿದ್ದಿತು. ದಿನಕ್ಕೆ ಸುಮಾರು ಹನ್ನೆರಡು ಬಹಿರಂಗ ಸಭೆಗಳಲ್ಲಿ ಮಾತನಾಡುತ್ತಿದ್ದರು. ಅವರ ದಿನಗೆಲಸದ ಕಾಲದ ಮಿತಿ ದಿನಕ್ಕೆ ಇಪ್ಪತ್ತು ಗಂಟೆಗಳವರೆಗಿತ್ತು ! ಸುಮಾರು ೧೩೦ ದಿನಗಳಲ್ಲಿ ೬೫ ಸಾವಿರ ಮೈಲಿಗಳಷ್ಟು ಸುತ್ತಿದ್ದರು. ಎತ್ತಿನ ಗಾಡಿಯಿಂದ ಹಿಡಿದು ವಿಮಾನದವರೆಗೆ ಹಳ್ಳಿಯಿಂದ ದಿಲ್ಲಿಯವರೆಗೆ ಅವರ ಪ್ರವಾಸ ಸತತವಾಗಿ ನಡೆದಿತ್ತು. 'ಭಾರತದರ್ಶನ' ಮಾಡಿದರು ನೆಹರು.

ಪಂಜಾಬಿನ ಒಂದು ಹಳ್ಳಿಯಲ್ಲಿ ನಡೆದ ಸಂಗತಿ ; ಹಲವರು ಹಳ್ಳಿಗರು ನೆಹರೂಜಿಯವರನ್ನು ಸುತ್ತುಗಟ್ಟಿ 'ಭಾರತಮಾತಾಕೀ ಜೈ !' ಎಂದು ಕೂಗಿದರು.

"ಹಾಗಂದರೇನು ಹೇಳಿ ?" ನೆಹರು ಕೇಳಿದರು.

ಯಾರಿಗೂ ಗೊತ್ತಿರಲಿಲ್ಲ.

'ನೀವು ವಂದಿಸಿದ ಈ ತಾಯಿ ಯಾರು ?'

ಅರ್ಥ ಸ್ಪಷ್ಟ ಮಾಡಲು ನೆಹರೂಜಿ ಮತ್ತೆ ಪ್ರಶ್ನಿಸಿದರು.

'ಭೂದೇವಿ'! ಎಂದ ಒಬ್ಬ ರೈತ.

'ಯಾರು ಭೂದೇವಿ ? ನಿಮ್ಮ ಹಳ್ಳಿಯ ಭೂದೇವಿಯೇ ? ನಿಮ್ಮ ಪ್ರಾಂತದವಳೇ ? ಭಾರತದವಳೇ ? ಈ ಪ್ರಪಂಚದ ಭೂದೇವಿಯೇ ?'

ನೆಹರೂಜಿಯ ಪ್ರಶ್ನೆಗಳಿಗೆ ಉತ್ತರ ಕೊಡಲಾಗಲಿಲ್ಲ ಆ ರೈತರು. ಆಗ ಇವರೇ ವಿವರಿಸಿ ಹೇಳಿದರು.

'ಭಾರತಮಾತಾ ಎಂದರೆ ನಮ್ಮ ತಾಯಿ ಇದ್ದಂತೆ. ನಾವೆಲ್ಲರೂ ಅವಳ ಮಕ್ಕಳು. ಭಾರತದ ಯಾವುದೇ ಮೂಲೆಯಲ್ಲಿ ನಿಂತು 'ಭಾರತಮಾತೆಗೆ ಜಯವಾಗಲಿ' ಎಂದು ಘೋಷಿಸಿದರೆ ಭಾರತದ ಎಲ್ಲೆಡೆಯೂ ಇರುವ ಆಕೆಯ ಮಕ್ಕಳಾದ ನಮ್ಮೆಲ್ಲರಿಗೂ ಹಿಂದೂಸ್ಥಾನದ ಎಲ್ಲ ಸೋದರ ಸೋದರಿಯರಿಗೂ ಶುಭ ಕೋರಿಕೊಂಡಂತೆ ! ನಿಮಗೂ ಜಯ ಕೋರಿಕೊಂಡಂತೆ ! ಇದನ್ನು ನೆನಪಿನಲ್ಲಿಡಿ. ಭಾರತಮಾತೆ ಅಂದರೆ ನೀವೇ. 'ಜಯ'ವೆಂದರೆ ಅದು ನಿಮ್ಮ ಜಯ !'

ಆ ಹಳ್ಳಿಗರಲ್ಲಿ ಆದ ಆನಂದ ಅಷ್ಟಿಷ್ಟಲ್ಲ. ತಮ್ಮ ಪ್ರೀತಿಯ ಕಾಣಿಕೆಯನ್ನಿತ್ತು ಜವಹರ್‌ರನ್ನು ಮುದಗೊಳಿಸಿದರು.

ನೆಹರೂಜಿಯವರ ಸತತ ಶ್ರಮದ ಫಲವಾಗಿ ಚುನಾವಣೆಗಳಲ್ಲಿ ಎಲ್ಲೆಲ್ಲೂ ಕಾಂಗ್ರೆಸ್‌ಗೆ ಗೆಲುವು ದೊರೆಯಿತು. ನೆಹರೂಜಿಯವರು ಹಿಂದಿನ ಲಕ್ನೋ ಸಮ್ಮೇಳನದಲ್ಲಿ "ಅಧಿಕಾರವಿಲ್ಲದೆ ಜವಾಬ್ದಾರಿ ಸ್ವೀಕರಿಸುವುದು ಯಾವಾಗಲೂ ಅಪಾಯಕಾರಿ" ಎಂದು ಕಾಂಗ್ರೆಸ್ಸಿಗರಿಗೆ ತಿಳಿಸಿದ್ದರು. ಶಾಸನ ಸಭೆಗಳಿಗೆ ಚುನಾಯಿತರಾದರೂ ಮಂತ್ರಿಗಳಾಗಿ ಆಡಳಿತ ವಹಿಸುವುದು ಬೇಡ ಎಂಬ ಅಭಿಪ್ರಾಯ ಸೂಚಿಸಿದ್ದರು. ಆದರೆ ಅಗ ವೈಸ್‌ರಾಯ್ ಆಗಿ ಬಂದಿದ್ದ ಲಾರ್ಡ್ ಲೀನ್ ಲಿತ್ ಗೊ ಮಾತಿನ ಮೇರೆಗೆ ಭಾರತದ ಆರು ಪ್ರಾಂತಗಳಲ್ಲಿ ಜವಾಬ್ದಾರಿ ಸರ್ಕಾರ ಹಾಗೂ ಕಾಂಗ್ರೆಸ್ ಮಂತ್ರಿಮಂಡಲ ಸ್ಥಾಪಿತವಾಯಿತು. ಬೊಂಬಾಯಿ, ಮದ್ರಾಸ್, ಸಂಯುಕ್ತ ಪ್ರಾಂತಗಳು, ಬಿಹಾರ, ಮಧ್ಯಪ್ರದೇಶಗಳು ಮತ್ತು ಒರಿಸ್ಸಾ ಈ ಆರು ಪ್ರಾಂತಗಳಲ್ಲಿ ಆರಂಭವಾಗಿ ಅನಂತರ ಅಸ್ಸಾಂ ಮತ್ತು ಗಡಿ ಪ್ರದೇಶಗಳಲ್ಲಿ ಇಡೀ ಮಂತ್ರಿಮಂಡಲ ವಿಸ್ತಾರವಾಯಿತು.

ಪ್ರಪಂಚದ ಎರಡನೆಯ ಮಹಾಯುದ್ಧದ ಕರಾಳ ಛಾಯೆ ಎಲ್ಲೆಡೆಯೂ ಹರಡಲು ಆರಂಭವಾಯಿತು. ಬ್ರಿಟಿಷ್ ಸರ್ಕಾರ ತನ್ನ ಅಧೀನದಲ್ಲಿದ್ದ ಭಾರತವನ್ನು ಯಾವ ಮುಖಂಡರ ಒಪ್ಪಿಗೆಯೂ ಇಲ್ಲದೆ ಈ ಯುದ್ಧದಲ್ಲಿ ಸೇರಿಸಿಬಿಟ್ಟಿತ್ತು. ಇದನ್ನು ಒಪ್ಪುವುದು ನೆಹರೂ ಮೊದಲಾದವರಿಗೆ ಬೇಕಿರಲಿಲ್ಲ.

ಆಹ್ವಾನದ ಮೇರೆಗೆ ಸ್ಪೆಯಿನ್, ಚೀನಾ ಮೊದಲಾದ ಭಾಗಗಳಲ್ಲಿ ನೆಹರೂಜಿಯವರು ಪ್ರವಾಸ ಕೈಗೊಂಡಿದ್ದರು. ಈ ಬಗ್ಗೆ ಅಲ್ಲಿಂದಲೇ ಒಂದು ಪತ್ರದ ಮುಖೇನ ಹೇಳಿಕೆ ಕೊಟ್ಟಿದ್ದರು :

". . . .ಯುದ್ಧದಲ್ಲಿ ಭಾಗವಹಿಸಬೇಕೇ ಬೇಡವೇ ಎಂಬ ವಿಚಾರದಲ್ಲಿ ಭಾರತದ ಜನತೆ ಎಂದಿಗೂ ವಿದೇಶಿಯರ ನಿರ್ದೇಶನದಂತೆ ನಡೆಯಬೇಕೆಂದಿಲ್ಲ. ಭಾರತೀಯರು ತಮ್ಮಲ್ಲಿ ತಾವೇ ಆಲೋಚಿಸಿ ತೀರ್ಮಾನಿಸಿಕೊಳ್ಳಬಲ್ಲರು. ಈಗ ಅಪನಂಬಿಕೆಗೆ ಪಾತ್ರವಾಗಿರುವ ಬ್ರಿಟಿಷ್ ಸರ್ಕಾರದ ನಿರ್ದೇಶನದಂತೆ ನಡೆಯಲು ಭಾರತ ಎಂದೆಂದಿಗೂ ಒಪ್ಪಲಾರದು. ಈ ಮಾತು ಸತ್ಯ ಭಾರತದ ಬಲವೆಲ್ಲಾ ಪೂರ್ಣವಾಗಿ ಪ್ರಜಾಸತ್ತೆ ಮತ್ತು ಸ್ವಾತಂತ್ರ್ಯದ ಕಡೆಗೇ. ಆದರೆ ಆ ಮಾತುಗಳನ್ನು ಸುಮಾರು ಇಪ್ಪತ್ತು ವರ್ಷಗಳಿಂದಲೂ ಕೇಳುತ್ತಲೇ ಇದ್ದೇವೆ. ಸರ್ವ ಸ್ವಾತಂತ್ರ್ಯ ಪಡೆದ ಪ್ರಜಾಸತ್ತಾತ್ಮಕ ರಾಷ್ಟ್ರಗಳು ಮಾತ್ರ ಸ್ವಾತಂತ್ರ್ಯ ಮತ್ತು ಪ್ರಜಾಸತ್ತೆಗೆ ನೆರವು ನೀಡಬಲ್ಲವು. ಈಗ ಬ್ರಿಟನ್ ಪ್ರಜಾಸತ್ತೆಯ ಕಡೆಗಿರುವುದೇ ಸತ್ಯವಾಗಿದ್ದರೆ, ಭಾರತದಲ್ಲಿರುವ ತನ್ನ ಆಡಳಿತವನ್ನು ಬೇಗ ಹಿಂತೆಗೆದುಕೊಳ್ಳುವುದು ಅದರ ಮೊದಲ ಕರ್ತವ್ಯವಾಗಿದೆ. ಇದೇ ಭಾರತದ ದೀರ್ಘ ಕಾಲದ ದೃಷ್ಟಿ ಕೂಡ."

ಆದರೆ ಗಾಂಧೀಜಿ ಮಾತ್ರ ಮತ್ತೊಬ್ಬರಿಗೆ ಸಹಾಯ ಮಾಡುವ ಹೊತ್ತಿನಲ್ಲಿ ನಾವು ಯಾವುದೇ ನಿಬಂಧನೆಯನ್ನೂ ಹಾಕಕೂಡದೆಂದು ಹೇಳಿದರು. ಈ ಅಭಿಪ್ರಾಯ ವಿರೋಧವೇ ದೇಶದಲ್ಲಿ ಭಾರಿ ಗೊಂದಲ ಎಬ್ಬಿಸಿತು. ನೆಹರೂ ಮತ್ತು ಗಾಂಧೀಜಿ ಇವರಿಗೆ ಬದ್ಧ ದ್ವೇಷ ಇದೆ, ಹಾಗೆ ಹೀಗೆ ಎಂದು ಸಲ್ಲದ ಸುದ್ದಿ ಹರಡಿದರು ಆಗದ ಅವಿವೇಕಿಗಳು. ಗಾಂಧೀಜಿ ತಾವು ನಡೆಸುತ್ತಿದ್ದ 'ಹರಿಜನ' ಎಂಬ ಪತ್ರಿಕೆಯಲ್ಲಿ ಬಹಿರಂಗವಾಗಿ ತಮಗೂ ನೆಹರೂಜಿಯವರಿಗೂ ಇರುವ ಬಾಂಧವ್ಯವನ್ನು ವಿವರಿಸಿ ತಪ್ಪು ಕಲ್ಪನೆಗೆ ಜನತೆ ಅವಕಾಶ ಕೊಡಕೂಡದೆಂದು ತಿಳಿಸಿದರು.

ಲಾರ್ಡ್ ಲಿನ್‌ಲಿತ್‌ಗೊನ ಮಾತುಗಳು ಕೇವಲ ಬಣ್ಣದ ಮಾತುಗಳೇ ಅಗಿ ಉಳಿದುವು. ಆತ ಸೆಪ್ಟೆಂಬರ್ ಕಡೇ ವಾರದಲ್ಲಿ ಗಾಂಧೀಜಿ, ನೆಹರೂ, ಸರ್ದಾರ್ ಪಟೇಲ್ ಮೊದಲಾದ ಐವತ್ತು ಮಂದಿ ರಾಜಕೀಯ ಮುಖಂಡರನ್ನು ನಿರ್ವಂಚನೆಯಿಂದ ಚರ್ಚೆ ನಡೆಸಲು ಆಹ್ವಾನಿಸಿದ್ದ. ನೆಹರೂಜಿ ಈ ಮೊದಲೇ ತಿಳಿಸಿದ್ದರು – "ನಮ್ಮ ಯಾವುದೇ ಬೇಡಿಕೆಯನ್ನು ನಾವು ಮಾರುಕಟ್ಟೆಯ ಮೇಲೆ ತಂದಿರಿಸಿ ಯಾರನ್ನೂ ಬೇಡುತ್ತಿಲ್ಲ. . . . . ಸ್ವಾತಂತ್ರ್ಯ ಭೂಮಿಕೆಯ ಮೇಲೆ ನಿಂತಾಗಲೇ ನಮಗೆ ತೃಪ್ತಿ, ಭಾರತವನ್ನು ಅಂತಹ ಭೂಮಿಕೆಯ ಮೇಲೆ ನಾವು ಕಾಣಬೇಕು. ಆಗ ಮಾತ್ರ ನಮಗೆ ಯುದ್ಧದ ಅರ್ಥ ತಿಳಿಯುವುದು. ನಮ್ಮ ಮನಃಪೂರ್ತಿಯಾಗಿ ನಾವು ಆಗ ಹೋರಾಡುತ್ತೇವೆ. ಇದು ಕೇವಲ ಭಾರತೀಯರಾದ ನಮಗೆ ಮಾತ್ರವೇ ಅಲ್ಲ, ಪ್ರಪಂಚದ ಎಲ್ಲಾ ಜನಾಂಗಕ್ಕೆ ಇದು ಹಿತಕರವಾದದ್ದು. ಏಕೆಂದರೆ ನಮ್ಮಂತೆಯೇ ಬಹಳ ಮಂದಿ ಬ್ರಿಟಿಷರೂ ಈ ವಿಶ್ವಮಾನ್ಯ ಆದರ್ಶವನ್ನು ಅರಿತಿದ್ದಾರೆ. ಈ ಆದರ್ಶವನ್ನು ಅವರೆಲ್ಲರೂ ತಿಳಿದಾಗ ಅವರೊಡನೆ ನಮ್ಮ ಸಹಕಾರ ಸಿದ್ಧವಿರುತ್ತದೆ. ಆದರೆ ಈ ಆದರ್ಶಗಳು ಅವರಲ್ಲಿ ಮೂಡದಿದ್ದರೆ ನಾವು ಏತಕ್ಕಾಗಿ ಹೋರಾಡಬೇಕು ? ಸ್ವತಂತ್ರ ಭಾರತಕ್ಕೆ ಮಾತ್ರ ಆದರ್ಶಗಳಿಗೆ ತೂಕ ತುಂಬುವ ಶಕ್ತಿ ಬರುವುದು"

ಇತ್ಯಾದಿಯಾಗಿ ತಿಳಿಸಿದರು.

ಕಾಂಗ್ರೆಸ್ ಸಂಸ್ಥೆ ಬೇಸರಗೊಂಡು ೧೯೩೯ ನವೆಂಬರಿನಲ್ಲಿ ತನ್ನ ಮಂತ್ರಿಮಂಡಲವನ್ನು ಹಿಂತೆಗೆದುಕೊಂಡಿತು. ಇದೇ ಸಮಯವನ್ನು ಕಾಯುತ್ತಿದ್ದ ಜಿನ್ನಾ ಹೆಣದ ಖಂಡ ಮಾಂಸ ಮಜ್ಜೆಗಳಿಗೆ ಕೊಕ್ಕು ತೆರೆದು ನುಗ್ಗಿ ಬರುವ ರಣಹದ್ದಿನಂತೆ ಕಾಂಗ್ರೆಸ್ ಮಂತ್ರಿಮಂಡಲ ಬಿಟ್ಟ ಸ್ಥಳಗಳಿಗೆ ತಾನು ನುಗ್ಗಿದ.

ಸಮಸ್ತ ಮುಸಲ್ಮಾನರನ್ನೂ, ಕಾಂಗ್ರೆಸ್ ವಿರೋಧಿಗಳನ್ನೂ ಕರೆದು, ಕಾಂಗ್ರೆಸ್ ತನ್ನ ಮಂತ್ರಿಮಂಡಲವನ್ನು ಹಿಂತಿರುಗಿಸಿದ ದಿನವನ್ನು 'ಬಿಡುಗಡೆಯ ದಿನ' (Day of Deliverance) ಎಂಬುದಾಗಿ ಆಚರಿಸಬೇಕೆಂದು ಹೇಳಿ, ಡಿಸೆಂಬರ್ ೨೨ನೆಯ ತಾರೀಖು ಆ ದಿನಾಚರಣೆಯ ಸಮಾರಂಭದ ದಿನವೆಂದು ಗೊತ್ತುಪಡಿಸಿದ. ಅವನ ಹಿಂಬಾಲಕರಾಗಿದ್ದ ಮಂದಮತಿಗಳಾದ ಕೆಲವು ಮುಸ್ಲಿಮರು ಇದಕ್ಕೆ ಓಗೊಟ್ಟರು. "ಭಾರತದಲ್ಲಿ ಪ್ರಜಾಸತ್ತೆ ಅಂದರೆ ಹಿಂದೂ ರಾಜ್ಯ ಎಂದರ್ಥ !" ಎಂದು ಒತ್ತಿ ಹೇಳಿ,

"ಕೆನಡದವನ ಉಣ್ಣೆಯ ಕೋಟು ಸಂಕ್ರಾಂತಿ ವೃತ್ತದ ಬಳಿ ಇರುವ ಭಾರತದವನಿಗೇನೂ ಉಪಕಾರ ಮಾಡಲಾರದು" ಎಂಬ ಲಾರ್ಡ್ ಮಾರ್ಲೆ ಎಂಬುವನ ತತ್ವವನ್ನು ಹೇಳಿ, "ಭಾರತ ಸ್ವತಂತ್ರವಾಗುವುದರಿಂದ ಹಿಂದುಗಳಿಗೆ ಒಳಿತೇ ವಿನಾ ಮುಸ್ಲಿಮರಿಗಲ್ಲ" ಎಂದು ಘೋಷಿಸಿ ಸೋದರರಂತಿದ್ದ ಮುಸಲ್ಮಾನರ ಮನಸ್ಸನ್ನು ಕೆಡಿಸಿದ. ಬ್ರಿಟಿಷರಿಂದ ಮೊದಲೇ ಪ್ರೇರಿತನಾಗಿದ್ದ ಈ ಖ್ವಾಜಾ ಮುಸಲ್ಮಾನನಿಗೆ ಪ್ರತ್ಯೇಕ ಸಾಮ್ರಾಜ್ಯದ ಕನಸು ಮೂಡಿತ್ತು. 'ಮುಸ್ಲಿಂ ಲೀಗ್' ಎಂಬ ಸಂಸ್ಥೆಯನ್ನು ಸ್ಥಾಪಿಸಿ, ಆದರೆ ತಾನೇ ಅಧ್ಯಕ್ಷನಾಗಿ ಭಾರತವನ್ನು ಭಾರತೀಯರ ಮನವನ್ನೂ ಒಡೆದು ಚೂರು ಮಾಡಲು ಒಳಗೆ ಮಸಲತ್ತು ನಡೆಸಿದ್ದ.

ಚುನಾವಣೆಗಳಾದ ಮರುದಿನದಲ್ಲೇ ನೆಹರೂಜಿ ಹೇಳಿದರು. "ಭಾರತದಲ್ಲಿರುವುದು ಕೇವಲ ಎರಡೇ ಪಕ್ಷಗಳು. ಒಂದು ಕಾಂಗ್ರೆಸ್ ಮತ್ತೊಂದು ಬ್ರಿಟಿಷ್" ಎಂದು.

ಆದರೆ ಜಿನ್ನಾ ?

'ಎಂದೆಂದಿಗೂ ಅಲ್ಲ – ಮೂರನೆಯ ಪಾರ್ಟಿ ಇದೆ ! ಅದೇ ಮುಸ್ಲಿಂ ಲೀಗ್ !!' ಎಂದು ಕಿರುಚಿದ.

ಒಳಗೊಳಗೆ ಬ್ರಿಟಿಷರ ಕೈವಾಡ ನಡೆದಿತ್ತು. ಭಾರತದ ಅನೇಕ ರಾಜರುಗಳನ್ನೂ, ಜಿನ್ನಾ ಸಾಬಿಯನ್ನೂ, ಬ್ರಿಟಿಷ್ ಸರ್ಕಾರ ಕಾಂಗ್ರೆಸ್ ವಿರುದ್ಧ ಎತ್ತಿ ಕಟ್ಟಿತು. ಹೆಂಡ ಕುಡಿದ ಮಂಗನಂತೆ ಜಿನ್ನಾ ಕುಣಿಯಹತ್ತಿದ. ೧೯೩೭ರ ಅಕ್ಟೋಬರಿನಲ್ಲಿ ಲಕ್ನೋವಿನಲ್ಲಿ ಮಾತನಾಡುತ್ತಾ, ". . . . ಬಹುಮತವುಳ್ಳ ಜನಾಂಗ ಈಗಾಗಲೇ ತೋರಿಸಿಕೊಟ್ಟಿದೆ, ಹಿಂದೂಸ್ಥಾನ ಕೇವಲ ಹಿಂದೂಗಳಿಗಾಗಿಯೇ ಎಂದು". ಇದರ ಅರ್ಥ ಭಾರತ ಹಿಂದೂಗಳಿಗೆ, ಮುಸ್ಲಿಮರಿಗಲ್ಲ ಎಂಬುದು ಸ್ಪಷ್ಟ."

ಜಿನ್ನಾನಿಗೇ ಬಹಳೇ ಹೇಳಿದರು, ಬೇಡಿಕೊಂಡರು ನೆಹರೂಜಿ. ದೇಶ ಸ್ವತಂತ್ರವಾದರೆ ಜಿನ್ನಾನಿಗೇ ಮುಖ್ಯಸ್ಥಾನ, ಮುಸ್ಲಿಮರಿಗೆ ಇತರ ಭಾರತೀಯನಂತೆ ಸಮಾನ ಸ್ಥಾನ ಮೀಸಲಿಡುವುದಾಗಿ ಬಹಳೇ ಹೇಳಿಕೊಂಡರು. ಆದರೂ ಪ್ರಯೋಜನವಾಗಲಿಲ್ಲ. ಜಿನ್ನಾ ತನ್ನ ಮೊಂಡುತನ ಬಿಡಲಿಲ್ಲ. ೧೯೪೦ನಲ್ಲಿ ಲಾಹೋರಿನಲ್ಲಿ ಒಂದು ಲೀಗ್ ಸಮ್ಮೇಳನ ಕರೆದ. ತಾನೇ ಅಧ್ಯಕ್ಷನಾಗಿ ತನ್ನ ಭಾಷಣದಲ್ಲಿ ಭಾರತದ ಇಬ್ಭಾಗ ಮಾಡುವ ತನ್ನ ನೀತಿಯನ್ನು ತಿಳಿಸಿದ.

"ವಿಶ್ವದ ಯಾವುದೇ ಶಕ್ತಿಯೂ ಪಾಕೀಸ್ತಾನವಾಗುವುದನ್ನು ತಡೆಯಲಾರದು" ಎಂದು ಘೋಷಿಸಿದ. ಮುಸ್ಲಿಂ ಲೀಗು ಅಂದೇ ಪಾಕೀಸ್ತಾನ್ ಬಾವುಟಗಳನ್ನು ಹಾರಿಸಿತು ಲಾಹೋರಿನಲ್ಲಿ.

೧೯೪೨ರಲ್ಲಿ ಬಾಪೂಜಿ "ಭಾರತದಿಂದ ತೊಲಗಿರಿ" (Quit India) ಎಂದು ಘೋಷಿಸಿದರೆ, ಜಿನ್ನಾ 'ವಿಭಜಿಸಿ ತೊಲಗಿರಿ'(Divide and Quit) ಎಂದು ಅರಚಿದ.

ಬ್ರಿಟಿಷ್ ಮತ್ತು ಜಿನ್ನಾ ಒಂದು ಕೈಯಾಗಿ ಕಾಂಗ್ರೆಸ್‌ನ ಬಲ ಮುರಿಯಲು ಯತ್ನಿಸಿದರು. ಇಷ್ಟು ಶಕ್ತಿ ಈ ಖ್ವಾಜಾ ಮುಸಲ್ಮಾನನಿಗೆ ಬಂದದ್ದು ಮಹಾವಂಚಕರಾದ ಬ್ರಿಟಿಷರಿಂದ.

ಈ ತೊಂದರೆಗಳೇ ಸಾಕಾಗಿತ್ತು. ಜೊತೆಗೆ ಕಾಂಗ್ರೆಸ್‌ನಲ್ಲಿ ಒಡಕು ಹುಟ್ಟಿ ಮತ್ತಷ್ಟು ಕಷ್ಟ ನಷ್ಟಗಳುಂಟಾದವು. ಸರ್ದಾರ್ ಪಟೇಲ್ ಮತ್ತು ನೆಹರೂಜಿಯವರಲ್ಲಿ ಕಿಂಚಿತ್ ಭಿನ್ನಾಭಿಪ್ರಾಯವಿತ್ತು. ಅದನ್ನು ಬಾಪೂಜಿಯವರೇ ನಿವಾರಿಸಿದರು. ಆದರೆ ನೇತಾಜಿ ಸುಭಾಸ್ ಚಂದ್ರ ಬೋಸರನ್ನು ಯಾರೂ ಹಿಡಿದು ನಿಲ್ಲಿಸಲಾಗಲಿಲ್ಲ. ೧೯೩೮ರಲ್ಲಿ ಹರಿಪುರ ಮತ್ತು ೧೯೩೯ರಲ್ಲಿ ನಡೆದ ತ್ರಿಪುರಿ ಕಾಂಗ್ರೆಸ್ ೫೧ ಮತ್ತು ೫೨ನೆಯ ಸಮ್ಮೇಳನಗಳೆರಡರಲ್ಲೂ ಸುಭಾಸ್ ಆಧ್ಯಕ್ಷರಾಗಿದ್ದರು. ಆದರೆ ಕಾಂಗ್ರೆಸ್ ಕಾರ್ಯಕಾರಿ ಸಮಿತಿಗೂ ಅಧ್ಯಕ್ಷರಿಗೂ ಅಭಿಪ್ರಾಯಭೇದ ಬಂದು ಸುಭಾಸ್ ಕಾಂಗ್ರೆಸ್ ಬಿಟ್ಟುಬಿಟ್ಟರು. ಐ. ಎನ್.ಎ. (ಇಂಡಿಯನ್ ನ್ಯಾಷನಲ್ ಆರ್ಮಿ) ಎಂಬ ಸೇನೆಯನ್ನು ಕಟ್ಟಿ ತಾವು ನೇತಾ ಅಥವಾ ನಾಯಕರಾದರು. ನೇತಾಜಿಯವರದು ಅಗಾಧವಾದ ದೇಶಪ್ರೇಮ. ಅಂತೆಯೇ ಅವರ ಕೃತಿಯಲ್ಲಿ ಆತುರವೂ ಇತ್ತು. ಜಪಾನೀ ಮತ್ತು ನಾಜಿಗಳ ಸೇನೆ ಸಂಘಟಿಸಲು ಭಾರತವನ್ನು ಬಿಟ್ಟು ಬರ್ಲಿನ್ ಮತ್ತು ಸಿಂಗಪುರ್ ಮೊದಲಾದೆಡೆಗೆ ಹೋದರು. ೧೫ ಆಗಸ್ಟ್ ೧೯೪೫ರಂದು ಹಿರೋಷಿಮಾ ಮತ್ತು ನಾಗಾಸಾಕಿಗಳ ಮೇಲೆ ಆಟಂಬಾಂಬ್ ಬಿದ್ದು ಭಸ್ಮೀಭೂತವನ್ನಾಗಿಸಿತು. ಜಪಾನ್ ಸಂಪೂರ್ಣ ಶರಣಾಗತವಾಯಿತು. ಪ್ರಪಂಚದ ಎರಡನೆಯ ಮಹಾಯುದ್ಧವು ಮುಗಿಯಿತು. ತೈವಾನ್ ಬಳಿ ವಿಮಾನಾಪಘಾತದಿಂದ ನೇತಾಜಿ ಬೋಸರು ಮೃತರಾದರೆಂದು ವರ್ತಮಾನವೂ ಬಂತು.

ಶಾಂತಿದೂತ ಬಾಪೂಜಿಯ ಹಾದಿಗೂ, ಕ್ರಾಂತಿಕೇಸರಿ ನೇತಾಜಿಯವರ ಹಾದಿಗೂ ಅಜಗಜಾಂತರ ವ್ಯತ್ಯಾಸವುಂಟಾಗಿತ್ತು. ಇಷ್ಟಾದರೂ ಕಾಂಗ್ರೆಸ್ ಸಂಸ್ಥೆಯ ಸಂಘಟನಾ ಕಾರ್ಯ ಬಹು ಚುರುಕಿನಿಂದಲೇ ಸಾಗಿತ್ತು.

೧೯೩೮ರ ಮಾರ್ಚಿಯಲ್ಲಿ ಹಿಟ್ಲರ್ ಆಸ್ಟ್ರಿಯಾವನ್ನು ಆಕ್ರಮಿಸಿಕೊಂಡ. ನಿಷ್ಠುರವಾದಿಯಾದ ಮೃತ್ಯು ನೆಹರೂಜಿಯವರ ತಾಯಿಯನ್ನು ನುಂಗಿ ನೊಣೆದ ಅದೇ ವರ್ಷ, ಸ್ವರೂಪರಾಣಿಯವರಿಗೆ ಎರಡು ಬಾರಿ ಲಕ್ವ ಹೊಡೆದಿತ್ತು. ಜೈಲಿನಿಂದ ಹೊರಬಂದ ಮೇಲೆ ಬಹುದಿನಗಳಿಂದಲೂ ಹಾಸಿಗೆ ಹಿಡಿದಿದ್ದರು. ಆದರೂ ಆಕೆಯ ಮನಸ್ಸು ರಾಷ್ಟ್ರದ ಏಳಿಗೆಯ ಕಡೆಗಿತ್ತು. ತನ್ನ ಕಷ್ಟಗಳಾವುವೂ ಕಾಣಿಸಲಿಲ್ಲ. ಮೂರನೆಯ ಬಾರಿ ಮತ್ತೆ ಹಾಳು ಲಕ್ವ ಬಡಿಯಿತು. ಅಂದು ಆಕೆಯ ಇಬ್ಬರು ಪುತ್ರಿಯರೂ ಪಕ್ಕದಲ್ಲಿದ್ದರು. ನೆಹರೂಜಿ ಇದ್ದರು. ಆ ರಾತ್ರಿ ತೃಪ್ತಿ ತೋರಿತು ಅವರ ಮುಖದಲ್ಲಿ. ಬೆಳಗ್ಗೆ ಶಾಂತ ಮುಖಮುದ್ರೆಯಿಂದ ಅಸು ನೀಗಿದರು. ನೆಹರೂಜಿ ನೋಡಿ 'ಅಮ್ಮನೂ ಹೋದರು' ಎಂದು ತಂಗಿಯರ ಕಿವಿಯಲ್ಲಿ ಮೆಲ್ಲನೆ ಉಸುರಿದರು.

ಜರ್ಮನಿಗೆ ಭೇಟಿ ಕೊಡಲು ನಾಜಿ ಸರ್ಕಾರದಿಂದ ಕರೆ ಬಂದಿತ್ತು. ಆದರೆ ನೆಹರೂಜಿಯವರಿಗೆ ನಾಜಿಯಿಸಮ್ ಎಂದರೆ ಆಗುತ್ತಿರಲಿಲ್ಲ. ಆದ್ದರಿಂದ ಜೆಕೋಸ್ಲವಾಕಿಯ, ಸ್ಪೈಯಿನ್ ಮತ್ತು ಬ್ರಿಟನ್‌ಗಳ ಪ್ರವಾಸ ಕೈಗೊಂಡರು. ೧೯೩೮ರ ಜೂನ್‌ನಲ್ಲಿ ಬಾರ್ಸಲೋನದಲ್ಲಿ ಬಂದಿಳಿದರು. ಶ್ರೀಯುತ ಕೃಷ್ಣಮೆನನ್‌ರೂ ನೆಹರೂಜಿಯವರ ಜೊತೆಯಲ್ಲಿದ್ದರು. ಅಲ್ಲಿ ಅನೇಕ ಪ್ರಭೃತಿಗಳ ದರ್ಶನ ಆಯಿತು. ಬಾರ್ಸಲೋನದಲ್ಲಿ ವಿದೇಶಾಂಗ ಸಚಿವರಾದ ಡೆಲ್ ವಾಯೊ ಎಂಬುವರನ್ನು ಸಂದರ್ಶಿಸಿದರು.

ಸ್ಪೈಯಿನ್, ಪ್ರಜಾಸತ್ತಾತ್ಮಕವಾದ ಸ್ಪೈಯಿನ್ ನೆಹರೂಜಿಯವರಿಗೆ ನವ ಸ್ಫೂರ್ತಿಯನ್ನೂ, ದೃಢಚಿತ್ತವನ್ನೂ ದಯಪಾಲಿಸಿತು. ಲಂಡನ್ ಮತ್ತು ಪ್ಯಾರಿಸ್ ನಗರಗಳಲ್ಲಿ ರಿಪಬ್ಲಿಕ್ ಸ್ಪೈಯಿನ್ ಪರವಾಗಿ ಮಾತು ಕೂಡ ಆಡಿದರು ವಿಶೇಷ ಆಸ್ಥೆಯಿಂದ. ನವೆಂಬರ್‌ನಲ್ಲಿ ಭಾರತಕ್ಕೆ ಹಿಂತಿರುಗಿದರು.

೧೯೩೮ರ ಅಂತ್ಯದಲ್ಲಿ ರಾಷ್ಟ್ರೀಯ ಯೋಜನಾ ಸಮಿತಿಯೊಂದು ಕಾಂಗ್ರೆಸ್ ಸಂಸ್ಥೆಯವರಿಂದ ನಿರ್ಮಾಣವಾಯಿತು. ಅದಕ್ಕೆ ಜವಹರರು ಅಧ್ಯಕ್ಷರು. ಆ ಸಮಿತಿಗೆ ಭಾರತದ ಪ್ರಾಂತೀಯ ಸರ್ಕಾರಗಳಿಂದ ಬಂದ ಪ್ರತಿನಿಧಿಗಳು, ಕೆಲವು ರಾಜಮಹಾರಾಜರುಗಳು, ಆಳ್ವಿಕೆಯ ಪ್ರದೇಶಗಳಿಂದ ಬಂದ ಪ್ರತಿನಿಧಿಗಳು, ಕೆಲವರು ಕೈಗಾರಿಕೋದ್ಯಮಿಗಳು, ಕಾರ್ಮಿಕರ ಸಂಘಗಳ ಮುಖಂಡರುಗಳು ಹಾಗೂ ಕೆಲವು ವ್ಯಾಪಾರೋದ್ಯಮಿಗಳು – ಇವರೆಲ್ಲರೂ ಸದಸ್ಯರಾದರು. ಈ ಸಮಿತಿ ಹತ್ತು ವರ್ಷದ ಯೋಜನೆಯನ್ನಿಟ್ಟುಕೊಂಡಿತು. ವ್ಯವಸಾಯ ಮತ್ತು ಕೈಗಾರಿಕೆಗಳ ಮೂಲಕ ದೇಶದ ಉತ್ಪತ್ತಿಯನ್ನು ಹೆಚ್ಚಿಸುವುದು, ಜನತೆಯ ಜೀವನಮಟ್ಟವನ್ನು ಆದಷ್ಟು ಸುಧಾರಿಸುವಂತೆ ಮಾಡುವುದು, ಇದೇ ಇವರ ಮುಖ್ಯಗುರಿಯಾಗಿತ್ತು. ಆದರೆ ಈ ಯೋಜನೆ ಪರಿಪೂರ್ಣವಾಗಲಿಲ್ಲ. ಅನೇಕ ಉಪಸಮಿತಿಗಳಿಂದ ವರದಿ ಬರುವಷ್ಟರಲ್ಲೇ ಅಕ್ಟೋಬರ್ ೧೯೪೦ರಂದು ನೆಹರೂಜಿಯವರು ದಸ್ತಗಿರಿಯಾದರು. ೧೯೪೧ ಡಿಸೆಂಬರ್ ೪ರಂದು ಮತ್ತೆ ದಸ್ತಗಿರಿಯಾದರು. ೧೯೪೫ ಜೂನ್ ೧೫ರವರೆಗೂ ಜೈಲುವಾಸ ಅನುಭವಿಸಿದರು. ಇದೇ ಅವರ ಕಡೆಯ ಸೆರೆಮನೆಯ ವಾಸ.

ಆ ವರ್ಷದ ಅಂತ್ಯದಲ್ಲಿ ನೆಹರೂ ಆದಿಯಾಗಿ ಕಾಂಗ್ರೆಸ್ ವರ್ಕಿಂಗ್ ಕಮಿಟಿ ೧೧ ಮಂದಿ ಸದಸ್ಯರೂ, ೨೬೭ ಮಂದಿ ಅಖಿಲ ಭಾರತ ಕಾಂಗ್ರೆಸ್ ಸಂಸ್ಥೆಯ ಸದಸ್ಯರೂ, ೨೯ ಮಂದಿ ಹಿಂದಿನ ಮಂತ್ರಿಗಳೂ, ಸುಮಾರು ೪೦೦ ಮಂದಿ ಪ್ರಾಂತೀಯ ಶಾಸನಸಭಾ ಸದಸ್ಯರುಗಳೂ ಜೈಲು ಸೇರಿದರು. ಮೌಲಾನಾ ಅಬುಲ್ ಕಲಾಮ್ ಆಜಾದರನ್ನು ಹೊಸ ವರ್ಷದ ಆರಂಭದಲ್ಲೇ ದಸ್ತಗಿರಿ ಮಾಡಿ ಹದಿನೆಂಟು ತಿಂಗಳು ಶಿಕ್ಷೆ ವಿಧಿಸಲಾಯಿತು.

೧೯೪೦ ಅಕ್ಟೋಬರ್ ೧೭ರಂದು ಆಚಾರ್ಯ ವಿನೋಬಾ ಭಾವೆಯವರು ವೈಯುಕ್ತಿಕ ಸತ್ಯಾಗ್ರಹವನ್ನು ಆರಂಭಿಸಿ ಸೆರೆಮನೆ ಸೇರಿ ಮೂರು ತಿಂಗಳ ಶಿಕ್ಷೆ ಅನುಭವಿಸಿದರು. ಈ ಸತ್ಯಾಗ್ರಹ ಚಳವಳಿ ಯಶಸ್ವಿಯಾಗಿ ಮುಂದುವರಿದು ಸುಮಾರು ಮೂವತ್ತು ಸಾವಿರ ಜನ ಜೈಲು ಸೇರಿದರು.

ಜೈಲಿನಲ್ಲಿದ್ದಾಗಲೇ ರಣಜಿತ್ ಸಿಂಗ್ (ವಿಜಯಲಕ್ಷ್ಮಿಯ ಪತಿ) ೧೪ ಜನವರಿ ೧೯೪೪ ರಂದು ತೀರಿಕೊಂಡರು. ಸೋದರಮಾವನ ಸಾವು ತುಂಬಾ ನೋವುಂಟುಮಾಡಿತು ನೆಹರೂಜಿಯವರಿಗೆ. ರಣಜಿತ್‌ರ 'ಕಾಳೀ' ಎಸ್ಟೇಟಿನಲ್ಲಿ ತಾವು ಕಳೆದ ಸವಿದಿನಗಳು ಮತ್ತೆ ಮತ್ತೆ ನೆನಪಿಗೆ ಬಂದು ಇನ್ನೂ ಹೆಚ್ಚಿನ ಸಂಕಟವನ್ನುಂಟು ಮಾಡಿದುವು.

ಕುರುವಿನ ಮೇಲೆ ಬರೆ ಬಿತ್ತು.

೧೯೪೪ ಫೆಬ್ರವರಿ ೨೨ರಂದು ಕಸ್ತೂರಿಬಾ ಇಹಲೋಕವನ್ನು ತ್ಯಜಿಸಿದರು. ಆಗ ತಮ್ಮ ಪತಿ ಮಹಾತ್ಮಾ ಗಾಂಧಿಯವರೊಡನೆ ಇವರೂ ಜೈಲಿನಲ್ಲಿದ್ದರು. ಬಾಪೂ ಮತ್ತು ಬಾ ಇವರ ಅರವತ್ತೆರಡು ವರ್ಷಗಳ ಸಾಂಸಾರಿಕ ಜೀವನ ಮುಕ್ತಾಯವಾಯಿತು. ಇವರಿಬ್ಬರೂ ಹರೆಯದಲ್ಲೇ ಬ್ರಹ್ಮಚರ್ಯ ಸ್ವೀಕರಿಸಿದ್ದರು. ಆದರೂ ಅವರಲ್ಲಿ ಕಾಮ ಕರಗಿ ಪ್ರೇಮ ಫಲಿಸಿತ್ತು. ಅಂತಹ ಅಪರೂಪ ದಾಂಪತ್ಯ ಬಾಪೂ ಮತ್ತು ಬಾ ಅವರದ್ದು.

ನೆಹರೂಜಿಯವರಿಗೆ ಬಾ ಹೋದದ್ದು ತಾಯಿ ಹೋದಂತಾಯಿತು. ತಬ್ಬಲಿಯಂತಾದರು. ಮಹಾ ಸಂಯಮಿಗಳೂ, ಜ್ಞಾನಿಗಳೂ ಆದ ಬಾಪೂಜಿ ಮಡಿದ ಪತ್ನಿಗಾಗಿ ಕಣ್ಣೀರು ಕರೆಯಲಿಲ್ಲ ಸಾಧಾರಣರಂತೆ. ದೇಶ ಹಿತಕ್ಕಾಗಿ ಜೈಲಿನಲ್ಲಿ ಪ್ರಾಣವನ್ನರ್ಪಿಸಿದ ಪತ್ನಿಯನ್ನು ನೆನೆದು ಹರ್ಷಗೊಂಡರು.

ನೆಹರೂಜಿಯವರಿಗೆ ಸೆರೆಮನೆಯ ವಾಸ ಬಹಳೇ ಬೇಸರ ತಂದಿತು. ಈ ಬಾರಿಯಂತೂ ವಿಧಿಯಿಲ್ಲದೆ ಇರಬೇಕಾಗಿತ್ತು ; ಇದ್ದರು. ಆದರೆ ಬೇಸರ ನೀಗಲು ಅವರಿಗಿದ್ದ ಒಂದೇ ಮಾರ್ಗ ಓದುವುದು ಇಲ್ಲವೇ ಬರೆಯುವುದು. ನೆಹರೂ ಬರೆದರು – ಅಲ್ಲ ಕಂಡರು ; 'ಭಾರತದ ದರ್ಶನ ಮಾಡಿದರು. (The Discovery of India) 'ಭಾರತ ದರ್ಶನ ಕಣ್ ತುಂಬಿ, ಎದೆ ತುಂಬಿ, ಮೈತುಂಬಿ ಬಂತು. ೧೯೪೪ ಏಪ್ರಿಲ್ ೧೩ರಂದು ಆರಂಭಿಸಿ ಕೇವಲ ಐದೇ ತಿಂಗಳುಗಳಲ್ಲಿ ಬರೆದು ಮುಗಿಸಿದರು.

**ದ್ರೋಹ ದುಂದುಭಿ**

ಸೆರೆಮನೆಗೆ ಹೋದ ಮೇಲೆ ರಾಜಕೀಯದಲ್ಲೂ ಅಲ್ಪ ಸ್ವಲ್ಪ ಬದಲಾವಣೆಗಳಾಗಿದ್ದುವು. ಸಾಮಾಜಿಕ ಜೀವನದಲ್ಲಂತೂ ಒಂದು ಭಯಂಕರ ಪರಿಸ್ಥಿತಿಯೇ ತಲೆ ಹಾಕಿತ್ತೆನ್ನಬೇಕು. ವೈಸ್‌ರಾಯ್ ಆಗಿ ಭಾರತದಲ್ಲಿ ಏಳೂವರೆ ವರ್ಷಗಳ ತನ್ನ ಸೇವೆ ಸಲ್ಲಿಸಿದ್ದ ಲಾರ್ಡ್ ಲಿನ್‌ಲಿತ್‌ಗೊ ೧೯೪೩ರ ಸೆಪ್ಟೆಂಬರ್‌ನಲ್ಲಿ ಇಂಗ್ಲೆಂಡಿಗೆ ವಾಪಸ್ ಹೋದ. ಆತನ ಸ್ಥಾನಕ್ಕೆ ಲಾರ್ಡ್ ವೇವೆಲ್ ಬಂದ. ಆಗ ಜನತೆಯ ಪರಿಸ್ಥಿತಿ ತುಂಬಾ ಚಿಂತಾಜನಕವಾಗಿತ್ತು. ಸದರಲ್ಲೂ ಬಂಗಾಳದ ಕ್ಷಾಮ ಭೀಕರ ರೂಪ ತಾಳಿತ್ತು. ವೇವೆಲ್ ಬಂಗಾಳದ ಕ್ಷಾಮ ಪೀಡಿತ ಪ್ರದೇಶಗಳಿಗೆ ಮೊದಲು ಭೇಟಿ ಕೊಟ್ಟ. ಸೆರೆಮನೆಯಲ್ಲೇ ಇದ್ದು ಎಲ್ಲಾ ತಿಳಿಯುತ್ತಿದ್ದರು ನೆಹರೂಜಿ. ಅವರ ಅರಿವಿಗೆ ಬಂತು ಬಂಗಾಳದ ಕ್ಷಾಮ ದೈವ ನಿರ್ಮಿತವಲ್ಲ, ಮಾನವ ಸೃಷ್ಟಿ ಎಂದು. ಏಕೆಂದರೆ ಬಂಗಾಳದ ಪ್ರಾಂತೀಯ ಸರ್ಕಾರ ಹಾಗೂ ಹಲವು ಕಾಳಸಂತೆಯ ಖದೀಮರುಗಳು ಅಂತಹ ಬರಗಾಲವನ್ನು ತಂದೊಡ್ಡಿದ್ದರು. ಜನತೆ 'ಅನ್ನ ಅನ್ನ' ಎಂದು ಹಾಹಾಕಾರಪಡುತ್ತಾ ರಸ್ತೆ ಚರಂಡಿಗಳಲ್ಲೆಲ್ಲಾ ಹೆಣಗಳಾಗಿ ಬಿದ್ದರು. ಬಂಗಾಳದ ಬೀದಿಗಳೆಲ್ಲಾ ಶ್ಮಶಾನ ಸದೃಶವಾದುವು. ನೆಹರೂಜಿ ಈ ವಾರ್ತೆ ಕೇಳಿ ಕಿವಿ ಮುಚ್ಚಿದರು. ರಕ್ತ ಕುದಿಯಿತು. ಜೈಲಿನಿಂದಲೇ ಒಮ್ಮೆ ಸಿಂಹಗರ್ಜನೆ ಮಾಡಿದರು. "ಸ್ವತಂತ್ರ ಭಾರತದಲ್ಲಿ ಇಂತಹ ಕಳ್ಳ ಸಂತೆಯ ಚೋರರೇನಾದರೂ ಬದುಕಿದ್ದರೆ, ಅವರನ್ನು ರಸ್ತೆಯ ಬದಿಯ ದೀಪದ ಕಂಬಗಳಿಗೆ ನೇಣು ಹಾಕಿಸುತ್ತೇನೆ" ಎಂದು. ಆಗ ಅನ್ನದ ಅಭಾವ ಬಂಗಾಳದಲ್ಲೇ ಅಲ್ಲ, ಭಾರತದ ಎಲ್ಲೆಡೆಯೂ ಅತಿಯಾಗಿತ್ತು.

ಇತ್ತ ಭಾರತವನ್ನು ಇಬ್ಭಾಗ ಮಾಡುವುದೆಂದರೆ ತನ್ನನ್ನೇ ಎರಡು ಹೋಳಾಗಿ ಸೀಳಿದಂತೆ ಎಂದು ಭಾವಿಸಿದ ಬಾಪು ಜಿನ್ನಾ ಸಾಹೇಬರನ್ನು ಸಮಾಧಾನಗೊಳಿಸಲು ತುಂಬಾ ಶ್ರಮಿಸಿದರು. ಸೆಪ್ಟೆಂಬರ್ ೯ರಂದು ತಾವೇ ಜಿನ್ನಾ ಮನೆಗೆ ಬೊಂಬಾಯಿಗೆ ಹೋಗಿ ೨೬ನೇ ತಾರೀಖಿನ ತನಕ ಅಂದರೆ ೧೮ ದಿನಗಳು ಒಂದೇ ಸಮನೆ ಮಾತುಕತೆಗಳನ್ನಾಡಿ ಜಿನ್ನಾ ಸಾಹೇಬರನ್ನು ಬೇಡಿದರು. ಮೊಂಡ ಮನಸ್ಸಿನ ಜಿನ್ನಾ ತನ್ನ ಕಪಿಮುಷ್ಠಿ ಬಿಡಲಿಲ್ಲ. ಬಾಪೂಜಿ ಮಹಾತ್ಮರಾದಂತೆ ತಾನೂ ಒಂದು ಪ್ರತ್ಯೇಕ ರಾಷ್ಟ್ರಕಟ್ಟಿ ಅಲ್ಲಿ ಮಹಾತ್ಮ ಅನ್ನಿಸಿಕೊಳ್ಳಬೇಕೆಂಬ ಹುಚ್ಚು ಆತನಿಗೆ ಬಹಳವಿತ್ತು. ಆದ್ದರಿಂದಲೇ ಖ್ವಾಯಿದ್ – ಏ – ಅಜಮ್ (ಜನತೆಯ ರಕ್ಷಕ) ಎಂದು ತನ್ನನ್ನು ತಾನೇ ಕರೆದುಕೊಂಡು ತನ್ನ ಹಿಂಬಾಲಕರಾದ ಕುರಿ, ಕುನ್ನಿಗಳಿಗೂ ಆ ರೀತಿ ಅರಚುವಂತೆ ಹೇಳಿದ. ಗಾಂಧೀಜಿ ಜಿನ್ನಾ ಸಾಹೇಬನ ಕಾಲು ಹಿಡಿದು ಬೇಡಿದರೂ ಪ್ರಯೋಜನವಾಗಲಿಲ್ಲ. ಕಡೆಗೆ ತಾವೇ ಸೋತು, "ನಮ್ಮ ನಮ್ಮ ಮಾತುಗಳು ಸಮಾನಾಂತರ ಸರಳರೇಖೆಗಳಿದ್ದಂತೆ; ಅವು ಒಂದನ್ನೊಂದು ಸಂಧಿಸುವ ಸಂಭವವೇ ಕಾಣುತ್ತಿಲ್ಲ" ಎಂದು ನುಡಿದರು. ಅವರ ಹೂವಿನಂತಹ ಮನಸ್ಸು ಅದೆಷ್ಟು ನೊಂದುಕೊಂಡಿತೋ ಹೇಳಲು ಸಾಧ್ಯವಿಲ್ಲ.

೧೦೪೧ ದಿನಗಳ ದೀರ್ಘ ಕಾಲದ ಬಂಧನದ ನಂತರ ನೆಹರೂಜಿಯವರಿಗೆ ೧೯೪೫ ಜೂನ್ ೧೫ರಂದು ಅಲ್ಮೋರ ಜೈಲಿನಿಂದ ಬಿಡುಗಡೆಯಾಯಿತು. ಬಿಡುಗಡೆಯಾದ ಸ್ವಲ್ಪ ದಿನಗಳಲ್ಲೇ ಅಂದರೆ ಅಕ್ಟೋಬರ್ ತಿಂಗಳಲ್ಲಿ ಅಪರೂಪಕ್ಕೆ ಸುಮಾರು ಮೂವತ್ತು ವರ್ಷಗಳ ನಂತರ ಬ್ಯಾರಿಸ್ಟರ್ ಗೌನ್ ಹಾಕಿ ವಕಾಲತ್ ಸ್ವೀಕರಿಸಬೇಕಾಯಿತು ನೆಹರೂಜಿ. ದೆಹಲಿಯ ಕೆಂಪು ಕೋಟೆಯಲ್ಲಿ ನೇತಾಜಿಯವರ ಸೇವೆ (ಇಂಡಿಯನ್ ನ್ಯಾಷನಲ್ ಆರ್ಮಿ)ಯಲ್ಲಿದ್ದ ಮೂವರು ನೌಕರರನ್ನು ವಿಚಾರಣೆಗೆ ಗುರಿಪಡಿಸಲಾಗಿತ್ತು. ಆ ಮೂವರಲ್ಲಿ ಒಬ್ಬ ಹಿಂದೂ, ಇನ್ನೊಬ್ಬ ಮುಸ್ಲಿಂ, ಮತ್ತೊಬ್ಬ ಸಿಖ್. ನೆಹರೂಜಿಯವರು ಬಹಳ ಜೋರಾಗಿ ವಾದಿಸಿದರು. ಡಿಫೆನ್ಸ್ ಕೌನ್ಸಿಲ್‌ನ ಮುಖ್ಯಸ್ಥರಾಗಿ ಭೂಲಾಭೈ ದೇಸಾಯಿ ಅವರಿದ್ದರು. ಮೊಕದ್ದಮೆ ಯಶಸ್ವಿಯಾಗಿ ಮುಗಿಯಿತು. ಐ.ಯನ್.ಎ.ದ ಮೂವರು ನೌಕರರಿಗೂ ಬಿಡುಗಡೆಯಾಯಿತು.

ಸ್ವಾತಂತ್ರ್ಯಕ್ಕಾಗಿ ಬ್ರಿಟಿಷರೊಡನೆ ಸತತವಾದ ಹೋರಾಟ, ಸೌಹಾರ್ದಕ್ಕಾಗಿ ಮುಸ್ಲಿಮರೊಡನೆ ಬಡಿದಾಟ, ಸಾಲದ್ದಕ್ಕೆ ಹಲವು ಹಾದಿ ನ್ಯಾಯಗಳ ಹೋರಾಟ ಎಲ್ಲವೂ ಮೇಲೆ ಬಂದು ಬಿದ್ದುವು. ಬಾಪೂ, ನೆಹರೂ, ಪಟೇಲ್

ಮೊದಲಾದ ಮುಖಂಡರಿಗೆ. ೧೯೪೬ ಫಬ್ರವರಿ ೧೯ರಂದು 'ರಾಯಲ್ ಇಂಡಿಯನ್ ನೇವಿ'ಯ ನೌಕರರು ತಮ್ಮ ಸಂಬಳಗಳ ಬಡ್ತಿ ಮೊದಲಾದುವಕ್ಕಾಗಿ ದೊಡ್ಡ ದಂಗೆ ಎದ್ದರು. ಸರ್ಕಾರವನ್ನು ಬಗ್ಗಿಸುವುದಕ್ಕೆ ಇದೇ ಸುಸಮಯವಾಗಿತ್ತು ಅವರಿಗೆ. ಸರಿ, ಬೊಂಬಾಯಿನ ಬೀದಿ ಬೀದಿಗಳಲ್ಲಿ ಇವರ ಮೆರವಣಿಗೆ ಭಾರಿಯಾಗಿ ನಡೆಯಿತು. 'ಭಾರತದಿಂದ ತೊಲಗಿರಿ' ! 'ಜೈ ಹಿಂದ್' ಇವೇ ಅವರ ಘೋಷಣೆಗಳಾಗಿದ್ದುವು. ಕಾಂಗ್ರೆಸ್, ಲೀಗ್ ಮತ್ತು ಕಮ್ಯುನಿಸ್ಟ್ ಬಾವುಟಗಳು ನೌಕಾದಳದವರ ಲಾರಿಗಳ ಮೇಲೆ ಹಾರಾಡಿದುವು. ಕರಾಚಿ, ಕಲ್ಕತ್ತಾ, ಮದ್ರಾಸ್, ದೆಹಲಿಗಳಲ್ಲೂ ಇದರ ಬಿಸಿ ತಟ್ಟಿತು. ನೌಕಾದಳದವರೊಡನೆ ಅನೇಕ ಪುಂಡರು ಸೇರಿಕೊಂಡು ದೊಂಬಿ ಪ್ರಾರಂಭಿಸಿದರು. ಬ್ರಿಟಿಷ್ ಮಿಲಿಟರಿ ಗುಂಡು ಹಾರಿಸಿದರೆ ಇವರು ಕೈ ಬಾಂಬುಗಳನ್ನು ಸುರಿದರು ಅವರ ಮೇಲೆ.

ಸರ್ದಾರ್ ಪಟೇಲರೊಡನೆ ನೆಹರೂ ಬೊಂಬಾಯಿಯಲ್ಲಿ ಬಂದಿಳಿದರು. ಅಲ್ಲೆಲ್ಲಾ ತಿರುಗಾಡಿ, ಕ್ರಾಂತಿಯನ್ನು ಶಮನಗೊಳಿಸಲು ಯತ್ನಿಸಿದರು. ಅನೇಕ ಕಡೆ ಭಾಷಣಗಳಾದುವು. "ಬೊಂಬಾಯಿನಲ್ಲಿ ನಡೆದ ಘಟನೆ ಸ್ಪಷ್ಟವಾಗಿ ಹೇಳುತ್ತದೆ ದುರ್ಮಾರ್ಗಿಗಳ ದುಷ್ಕೃತ್ಯ ಎಂದು. ನ್ಯಾಯಕ್ಕಾಗಿ ನೌಕಾದಳದವರು ಹೋರಾಡಿದರೆ ಅನ್ಯಾಯದಿಂದ ಹತಗೈದಿದ್ದಾರೆ. ಹಲಕೆಲವು ಅವಿವೇಕಿಗಳು, ಇದು ಅಸ್ವತಂತ್ರ ರಾಷ್ಟ್ರಗಳಲ್ಲಿ ಸರ್ವೆಸಾಧಾರಣ. ಆದರೆ ನಮ್ಮ ದೇಶದಲ್ಲಿ ಸದ್ಯದ ಪರಿಸ್ಥಿತಿಯಲ್ಲಿ ಅಂದರೆ ಸ್ವಾತಂತ್ರ್ಯಕ್ಕಾಗಿ ಶ್ರಮಿಸುವ ವೇಳೆಯಲ್ಲಿ ಇಂಥವೆಲ್ಲಾ ಒಳ್ಳೆಯವೆನಿಸಲಾರವು. ಅನೇಕ ರಚನಾತ್ಮಕ ಕಾರ್ಯಗಳಾಗಿ ನಮ್ಮ ಶಕ್ತಿಯನ್ನು ಒಮ್ಮುಖದಲ್ಲಿ ಹರಿಸುವ ಕಾಲ ಬಂದಿದೆ. ಆದರೆ ಈಗ ಬೊಂಬಾಯಿನಲ್ಲಿ ಅಂತಹ ರಚನಾತ್ಮಕ ಕ್ರಿಯೆ ಅಳಿದು ವಿನಾಶಾತ್ಮಕ ರೂಪ ತಾಳಿದ್ದು ತುಂಬಾ ವಿಷಾದನೀಯ . . . .

"ಕಳೆದ ಇಪ್ಪತ್ತೆರಡು ವರ್ಷಗಳಿಂದಲೂ ಭಾರತೀಯರು ದೇಶ ಸ್ವಾತಂತ್ರ್ಯಕ್ಕಾಗಿ ಅಮೋಘ ತ್ಯಾಗ ಮಾಡಿದ್ದಾರೆ. ಇಂದು ಅಂತಹ ಸ್ವಾತಂತ್ರ್ಯ ನಮ್ಮ ಹಸ್ತಗತವಾಗಲಿರುವ ದಿನ ಸಮೀಪಿಸಿದೆ. ನಮ್ಮಲ್ಲಿ ಸ್ವಾತಂತ್ರ್ಯ ಸಂಪಾದಿಸಬಲ್ಲ ಮೇಧಾಶಕ್ತಿ ಇದೆ, ಆದರೆ ವಿಷಾದದಿಂದ ಹೇಳಬೇಕಾಗಿದೆ – ಸ್ವತಂತ್ರ ರಾಷ್ಟ್ರದಲ್ಲಿ ಅತ್ಯಗತ್ಯವಾಗಿರಬೇಕಾದ ಶಿಸ್ತು, ಸಂಯಮಗಳೇ ಇಲ್ಲ."

ಚಳವಳಿಕಾರರು ತಲೆ ತಗ್ಗಿಸಿದರು :

ಪುಂಡರು ಉಸಿರು ಕಟ್ಟಿದರು ಈ ಮಾತು ಕೇಳಿ.

ಕಾಂಗ್ರೆಸ್ ಮತ್ತು ಲೀಗ್‌ಗಳಲ್ಲಿ ಸಂಧಾನ ಸಮೀಕ್ಷೆ ನಡೆಯಿತು. ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಮೌಲಾನಾ ಅಬ್ದುಲ್ ಕಲಂ ಆಜಾದರು ನೆಹರು, ಸರ್ದಾರ್ ಪಟೇಲ್ ಮತ್ತು ಖಾನ್ ಅಬ್ದುಲ್ ಗಫಾರ್ ಖಾನರನ್ನು ಕಾಂಗ್ರೆಸ್ ಸಂಸ್ಥೆಯ ಪರವಾಗಿ ಕರೆದುಕೊಂಡು ಬಂದರು. ಜಿನ್ನಾ ಸಾಹೇಬರು, ಲಿಯಾಖತ್ ಆಲಿಖಾನ್, ನವಾಬ್ ಮೊಹಮ್ಮದ್ ಇಸ್ಮಾಯಿಲ್, ಖಾನ್ ಅಬ್ದುಲ್ ರಬ್ ನಿಶ್ತಾರ್ ಇವರೊಡನೆ ಆಗಮಿಸಿದರು. ವೈಸ್‌ರಾಯ್‌ರ ನೇತೃತ್ವದಲ್ಲಿ ಮೇ ೫ರಂದು ಸಿಮ್ಲಾದಲ್ಲಿ ಈ ಉಭಯ ಪಕ್ಷಗಳ ನಾಯಕರ ಸಭೆ ಸೇರಿತು. ಆದರೆ ಯಾವ ಇತ್ಯರ್ಥಕ್ಕೂ ಬರದೆ ಮೇ ೧೨ರಂದು ಮುಕ್ತಾಯವಾಯಿತು.

ಮುಂದಿನ ಮಾತುಕತೆಗಳಿಗೆ ದೆಹಲಿಯನ್ನು ಗೊತ್ತು ಮಾಡಲಾಯಿತು. ಈ ಮಧ್ಯೆ ಎರಡು ಪಕ್ಷಗಳೂ ತಮ್ಮ ನಿವೇದನಾ ಪತ್ರಗಳನ್ನೊಪ್ಪಿಸುವಂತೆ ತಿಳಿಸಲಾಗಿತ್ತು. ಲೀಗ್ ತನಗೆ ಬೇಕಾದ ಅಂದರೆ ಮುಸ್ಲಿಮರ ಬಹುಮತವುಳ್ಳ ಆರು ಪ್ರಾಂತಗಳು – ಪಂಜಾಬ್, ವಾಯುವ್ಯ ವಿಭಾಗ, ಬಲೂಚಿಸ್ಥಾನ, ಸಿಂಧ್, ಬಂಗಾಳ ಮತ್ತು ಅಸ್ಸಾಂಗಳನ್ನು ಕೇಳಿತ್ತು ಪಾಕೀಸ್ತಾನ ಮಾಡಿಕೊಳ್ಳಲು. ಆದರೆ ಕಾಂಗ್ರೆಸ್‌ನ ಬೇಡಿಕೆಗಳು ಬಹು ಸಮ್ಮತಿಯಿಂದ ಕೂಡಿದುವು.

ದೊಂಬಿ ಆರಂಭವಾಯಿತು. ಜಿನ್ನಾ ಸಾಹೇಬನ ಅಪಪ್ರಚಾರ ಅಗಾಧವಾಯಿತು. ಬೊಂಬಾಯಿನಲ್ಲಿ ಮುಸ್ಲಿಂರನ್ನು ಉದ್ದೇಶಿಸಿ ಉದ್ರೇಕಪೂರಿತ ಭಾಷಣ ಕೊಟ್ಟ. ಖ್ವಾಯಿದ್ – ಎ – ಅಜಾಮ್ 'ಜನತೆಯ ರಕ್ಷಕ' ಜನತೆಯ ಹಂತಕನಾದ !

"ಕಾನೂನು ಕಾನೂನು ಎಂದಂದುಕೊಂಡೇ ಲೀಗ್ ಬೆತ್ತಲೆಯಾಗಿದೆ. ಈಗಿರುವ ದಾರಿ ಒಂದೇ, ಅದು ಕ್ರಾಂತಿ ! ಇಂದೇ ಈ ಕಾನೂನು ರೀತಿಯ ಬೇಡಿಕೆಗೆ ಶರಣು ಹೊಡೆದು ಮುನ್ನುಗ್ಗಿರಿ. ಕಗ್ಗೊಲೆಯಾಗಲಿ, ರಕ್ತದ ಕಾಲುವೆ ಹರಿಯಲಿ" ಎಂದು ಜಿನ್ನಾ ಸಾಹೇಬ ರಣಕಹಳೆ ಊದಿದ.

ಮಾರನೆಯ ದಿನವೇ ಆರಂಭವಾಯಿತು ಹಿಂದೂ ಮುಸ್ಲಿಂ ಕಚ್ಚಾಟ, ಕಡಿದಾಟ. ಕಲ್ಕತ್ತೆಯಲ್ಲಿ ಭಾರೀ ಕೊಲೆಗಳಾದುವು. ರಕ್ತದ ಸ್ನಾನವೇ ಆಗಿಹೋಯಿತು ನಗರಕ್ಕೆ. ಬಿಹಾರ, ಅಸ್ಸಾಂ ಹಾಗೂ ನೌಖಾಲಿ (ಬಂಗಾಳದ ದಕ್ಷಿಣ ಭಾಗ) ಗಳಲ್ಲಂತೂ ಕೊಲೆಗೆ ಕೊನೆ ಮೊದಲಿಲ್ಲವಾಯಿತು.

ಇದಾದ ಎರಡನೇ ದಿನಕ್ಕೆ ನೆಹರೂಜಿಯವರು ಲಾರ್ಡ್ ವೇವಲ್ಲನನ್ನು ಕಂಡು ತಾತ್ಕಾಲಿಕ ಸರ್ಕಾರದ ಮಂತ್ರಿಮಂಡಲ ರಚನೆಗೆ ತಮ್ಮ ಪಟ್ಟಿ ಸಲ್ಲಿಸಿದರು. ನೆಹರು, ಪಟೇಲ್, ರಾಜಗೋಪಾಲಚಾರಿ, ಅಸಫ ಆಲಿ, ಡಾ॥ ಜಾನ್ ಮಥಾಯ್, ಜಗಜ್ಜೀವನರಾಮ್, ಶರತ್ ಚಂದ್ರಬೋಸ್ (ಸುಭಾಸರ ಅಣ್ಣ) ಇಷ್ಟೂ ಜನರ ಹೆಸರುಗಳಿದ್ದುವು ಆ ಪಟ್ಟಿಯಲ್ಲಿ.

ಆದರೆ ಜಿನ್ನಾ ಬಾಯ್‌ಕಾಟ್ ಬೆದರಿಕೆ ಹಾಕಿದ. 'ಪತನಹೇತುವಾದ ಯಾದವೇ ಕಲಹದ ಹೊಸ್ತಿಲಲ್ಲಿ ಭಾರತ ಹೆಜ್ಜೆ ಇಡುತ್ತಿದೆ' ಎಂದು ಗುಡುಗಿದ. ಲಿಯಾಖತ್ ಆಲಿಖಾನ್‌ನಂತೂ ಸೆಪ್ಟೆಂಬರ್ ೩ನೇ ತಾರೀಖು 'Black Day' ಆಗಿ ಆಚರಿಸಬೇಕೆಂದು ಭಾರತದ ಮುಸ್ಲಿಮರೆಲ್ಲರಿಗೂ ಕರೆ ಕೊಟ್ಟ. ಅಂದು ಎಲ್ಲರ ಮನೆಗಳ ಮೇಲೂ ಕಪ್ಪು ಬಾವುಟಗಳನ್ನು ಪ್ರದರ್ಶಿಸುವಂತೆ ತಿಳಿಸಿದ. ಕಾಂಗ್ರೆಸ್ ತಾತ್ಕಾಲಿಕ ಸರ್ಕಾರ ಸ್ವೀಕರಿಸುತ್ತಿದೆಯೆಂಬ ಹೊಟ್ಟೆ ಉರಿಯಿಂದಾಗಿ ಇಂತೆಲ್ಲಾ ಮಾಡಿದರು.

ಮಾರನೆಯ ದಿನವೇ ಬೊಂಬಾಯಿ, ಡಾಕಾಗಳಲ್ಲಿ ವಿಶೇಷ ಗಲಭೆ. ಜಿನ್ನಾ, ಲಿಯಾಖತ್ ಇಟ್ಟ ಕಿಚ್ಚು ಸೋದರರಂತೆ ಅನ್ಯೋನ್ಯವಾಗಿ ಬಾಳಿ ಬದುಕುತ್ತಿದ್ದ ಹಿಂದೂ ಮುಸ್ಲಿಂ ಬಾಂಧವರನ್ನೆಲ್ಲಾ ಸುಟ್ಟು ಭಸ್ಮಮಾಡಿತು. ಇಂತಹ ಗಲಭೆಗಳು ನಿಲ್ಲಬೇಕೆಂದರೆ 'ಪಾಕೀಸ್ತಾನ್ ಎಂದಾಗಬೇಕು' ಎಂದು ಒತ್ತಿ ಒತ್ತಿ ಒದರಿದ ಜಿನ್ನಾ.

ಬ್ರಿಟಿಷ್ ಸರ್ಕಾರ ತನ್ನ ವೈಸ್‌ರಾಯ್ ಲಾರ್ಡ್ ವೇವಲ್‌ನನ್ನು ಲಂಡನ್ನಿಗೆ ಕರೆಸಿಕೊಂಡಿತು. ನೆಹರು, ಜಿನ್ನಾ, ಲಿಯಾಖತ್ ಆಲಿಖಾನ್, ಸರ್ದಾರ್ ಬಲದೇವ್ ಸಿಂಗ್ (ಸಿಖ್ ಪ್ರತಿನಿಧಿ) ಇಷ್ಟು ಜನರು ವೈಸ್‌ರಾಯ್ ಜೊತೆಯಲ್ಲಿ ಇಂಗ್ಲೆಂಡಿಗೆ ತೆರಳಿದರು. ಡಿಸೆಂಬರ್ ೩ನೇ ತಾರೀಖು ಭಾರತ ಬಿಟ್ಟರು.

ಭಾರತ ಒಡೆದು ಹಿಂದೂಸ್ತಾನ, ಪಾಕೀಸ್ತಾನ ಎಂದು ಇಬ್ಭಾಗವಾಯಿತು.

**ಸ್ವಾತಂತ್ರ್ಯ ಬಂತು**

ಭಾರತಕ್ಕೆ ಹೊಸ ವೈಸ್‌ರಾಯ್ ಬಂದರು !

ಲಾರ್ಡ್ ಮೌಂಟ್ ಬ್ಯಾಟನ್

೧೯೪೭ ಮಾರ್ಚಿ ೨೨ರಂದು ತಮ್ಮ ಧರ್ಮಪತ್ನಿ ಎಡ್ವಿನ್ ಮೌಂಟ್ ಬ್ಯಾಟನ್‌ರೊಂದಿಗೆ ದೆಹಲಿಗೆ ಬಂದಿಳಿದರು.

ನೆಹರೂಜಿ ಮೊದಲು ಸ್ವಾಗತಿಸಿದರು ಈ ಅತಿಥಿ ದಂಪತಿಗಳನ್ನು. ಉಭಯತ್ರರಲ್ಲೂ ಕ್ಷೇಮ ಸಮಾಚಾರದ ಮಾತುಕತೆಗಳು ವಿಶೇಷ ಆತ್ಮೀಯತೆಯಿಂದ ನಡೆದವು. ಈ ಆತ್ಮೀಯತೆ ಇವರಿಗೆ ಹಿಂದೆಯೇ ಅಂದರೆ, ಒಂದು ವರ್ಷಕ್ಕೆ ಮುಂಚೆಯೇ ಬೆಳೆದಿತ್ತು. ನೆಹರೂಜಿ ಸಿಂಗಪುರದಲ್ಲಿ ಯಾವುದೋ ಕಾರ್ಯಾರ್ಥವಾಗಿ ಹೋಗಿದ್ದವರು ಈ ದಂಪತಿಗಳ ಪರಿಚಯ ಮಾಡಿಕೊಂಡಿದ್ದರು. ಮಲಯ್ ಭಾಗಗಳಲ್ಲಿ ಜೊತೆಯಲ್ಲೇ ಕೆಲವು ದಿನ ತಿರುಗಾಡಿಕೊಂಡು ಬಂದಿದ್ದರು. ಅಂದಿನ ಪರಿಚಯ ಇಂದು ವಿಶೇಷ ರೀತಿಯ ಸ್ನೇಹವಾಗಿ ಪರಿಣಮಿಸಿ, ಆತ್ಮೀಯತೆ ವೃದ್ಧಿಗೊಳ್ಳಲು ಎಡೆಮಾಡಿಕೊಟ್ಟಿತ್ತು.

ಮೌಂಟ್ ಬ್ಯಾಟನ್ ದಂಪತಿಗಳಿಗೆ ಪೂಜ್ಯ ಬಾಪೂಜಿಯವರ ಸಂದರ್ಶನವೂ ಆಯಿತು.

ಜಿನ್ನಾ ಸಾಹೇಬರೊಂದಿಗೆ ಇವರ ಸಂಪರ್ಕ ಕಡಿಮೆಯೇ. ಒಮ್ಮೆ ಜಿನ್ನಾ ಲಾರ್ಡ್ ಮೌಂಟ್ ಬ್ಯಾಟನ್‌ನರನ್ನು ಕಂಡು, "ನಾನು ಕೆಲವು ನಿಬಂಧನೆಗಳ ಮೇಲೆ ನಿಮ್ಮೊಡನೆ ಚರ್ಚಿಸಲು ಬಂದಿದ್ದೇನೆ" ಅಂದ.

"ಹಾ ಹಾ ಹಾ ! ಸ್ವಲ್ಪ ತಾಳಿ ಸಾಹೇಬರೇ. ನಾನಿನ್ನು ಬಂದು ಎರಡು ದಿನವಾಗಿಲ್ಲ. ನೀವೇನು ನಿಮ್ಮ ಯೋಗ್ಯತೆಯೇನು ಎಂದು ತಿಳಿಯದೆ ನಿಬಂಧನೆಯ ರೀತ್ಯ ಮಾತನಾಡಲೇನು ?" ಎಂದು ಮುಖಕ್ಕೆ ಹೊಡೆದು ಕಳುಹಿಸಿದರು. ತೆಳ್ಳಗೆ ಉದ್ದಕ್ಕೆ ಬಡಕಲು ಹಾವಿನಂತಿದ್ದ ಜಿನ್ನಾ "ಅಬ್ಬಾ" ಎಂದು ನಿಟ್ಟುಸಿರು ಬಿಟ್ಟ; ಕೆಟ್ಟಮುಖ ಹಾಕಿಕೊಂಡು ಹಿಂತಿರುಗಿದ. ಆಗವನ ಮುಖದಲ್ಲಿ ಪ್ರೇತಕಳೆ ತುಂಬಿತ್ತು; ಕಣ್ಣುಗಳಲ್ಲಂತೂ ವಿಷ ಸಿಡಿಯುತ್ತಿತ್ತು.

ಮೌಂಟ್ ಬ್ಯಾಟನ್ ಸದ್ಗುಣ ಸಂಪನ್ನ, ಮಹಾಮೇಧಾವಿ. ಜನಮನವನ್ನು ಬಹುಬೇಗ ಅರ್ಥ ಮಾಡಿಕೊಳ್ಳುತ್ತಿದ್ದ. ಅಂತೆಯೇ ಅರಿತು ಅವರೊಡನೆ ವ್ಯವಹರಿಸುತ್ತಿದ್ದ. ಒಂದು ವೇಳೆ ಯಾರಾದರೂ ತಪ್ಪಿ ನಡೆದರೆ ಅವರಿಗೆ ಸರಿಯಾದ ರೀತಿಯಲ್ಲಿ ನಡೆಸುವುದನ್ನು ತಾನು ಕಲಿತಿದ್ದ. ೧೯೨೧ರಲ್ಲಿ ಭಾರತಕ್ಕೆ ಪ್ರವಾಸ ಬಂದಿದ್ದಾಗ ಎಡ್ವಿನ್ ಮತ್ತು ಮೌಂಟ್ ಬ್ಯಾಟನ್ನರು ಒಬ್ಬರಿಗೊಬ್ಬರು ಪ್ರೇಮಿಸಿದರು. ಮಾರನೆಯ ವರ್ಷವೇ ಅಂದರೆ ೧೯೨೨ರಲ್ಲಿ ಇಂಗ್ಲೆಂಡಿನಲ್ಲಿ ಬಹು ವೈಭವದಿಂದ ಲಗ್ನವಾದರು. ಭಾರತಕ್ಕೆ ಆಗ ವೈಸ್‌ರಾಯ್ ಆಗಿಬಂದಾಗ ೨೬ ವರ್ಷಗಳಾಗಿದ್ದವು. ದೆಹಲಿಯಲ್ಲಿ ಈ ದಂಪತಿಗಳು ತಮ್ಮ ವಿವಾಹದ ಬೆಳ್ಳಿಹಬ್ಬವನ್ನು ೧೯೪೭ ಜುಲೈ ೧೮ರಂದು ಆಚರಿಸಿದರು.

ಎಡ್ವಿನ್ ಮೌಂಟ್ ಬ್ಯಾಟನ್ನಳಿಗೆ ಭಾರತಕ್ಕೆ ಬರುವ ಮುನ್ನ ಹಲವರ ಪರಿಚಯವಿತ್ತು. ಎಲ್ಲರಿಗಿಂತಲೂ ಹೆಚ್ಚಾಗಿ ಶ್ರೀಮತಿ ಸರೋಜಿನಿ ನಾಯ್ಡುರವರನ್ನು ಕಂಡರೆ ಆಕೆಗೆ ತುಂಬಾ ಇಷ್ಟ. ನೆಹರೂರವರ ಬಗ್ಗೆ ಆಕೆಗಿದ್ದ ಆಸಕ್ತಿ ಹೇಳಿದರೆ ತೀರದಷ್ಟು !

ವೈಸ್‌ರಾಯ್ ಆಗಿ ಅಧಿಕಾರ ಸ್ವೀಕರಿಸಿದ ದಿನವೇ ಲಾರ್ಡ್ ಮೌಂಟ್‌ಬ್ಯಾಟನ್ ಕೇಳಿದ ಸುದ್ದಿ ಕೊಲೆ. ಪಂಜಾಬಿನಲ್ಲಿ ಹಿಂದೂ ಮುಸ್ಲಿಂ ಗಲಭೆಯಿಂದ ೨೦೪೯ ಜನರು ಸತ್ತು ೧೦೦೦ ಜನ ಪೆಟ್ಟು ತಿಂದರು. ಎರಡು

ದಿನಗಳ ನಂತರ, ಮಾರ್ಚ್ ೨೬ರಂದು ಕಲ್ಕತ್ತೆ ಕೊಲೆ, ಬೊಂಬಾಯಿ ಗಲಭೆ, ಜಿನ್ನಾ ಹೋರಾಟ ಚೀರಾಟಗಳು ಕೇಳಿ ಬಂದವು.

ಮೌಂಟ್ ಬ್ಯಾಟನ್ ದಂಪತಿಗಳು ಕಾರ್ಯಾರ್ಥವಾಗಿ ಮೇ ತಿಂಗಳ ೮ರಲ್ಲಿ ಲಂಡನ್ನಿಗೆ ಹೋಗಿ ಮೇ ೩೧ಕ್ಕೆ ದೆಹಲಿಗೆ ಬಂದರು. ಕೂಡಲೇ ತಾವು ತಂದಿದ್ದ ಭಾರತ, ಪಾಕೀಸ್ತಾನಗಳ ವಿಭಜನೆಗೆ ಸಂಬಂಧಿಸಿದ ನಕಾಸು ತೋರಿಸಿ ಕಾಂಗ್ರೆಸ್ ಮತ್ತು ಲೀಗ್‌ಗಳ ಅಭಿಪ್ರಾಯ ಕೇಳಿದರು.

ಭಾರತ ಎರಡಾಗಲೇ ಬೇಕಾಯಿತು. ಬಾಪು, ನೆಹರು, ಪಟೇಲ್ ಬಹಳ ವ್ಯಥೆಪಟ್ಟುಕೊಂಡರು. ಪ್ರತ್ಯೇಕ ರಾಷ್ಟ್ರವಾದರೆ ಜಿನ್ನಾ ಸಾಹೇಬನ ಕಾಟ ತಪ್ಪಬಹುದಲ್ಲವೇ ? ಎಂದಂದುಕೊಂಡರು. ಆದರೆ ನೆಹರೂಜಿ ಹೇಳಿದರು. "ಹೌದು, ತಲೆಯನ್ನೇ ತೆಗೆದು ಹಾಕಿದರೆ ತಲೆನೋವೆ ಬರುವುದಿಲ್ಲ" ಎಂದು. ವಿಧಿಯಿಲ್ಲದೆ ವಿಭಜನೆಗೆ ಒಪ್ಪಿದರು.

ಜೂನ್ ೩ರಂದು ಮೌಂಟ್ ಬ್ಯಾಟನ್, ನೆಹರು, ಜಿನ್ನಾ ಮತ್ತು ಸಿಖ್ಖರ ಮುಖಂಡ ಬಲದೇವ್ ಸಿಂಗ್ ಇವರುಗಳು ತಮ್ಮ ಸಮ್ಮತಿಯನ್ನು ದೇಶಕ್ಕೆಲ್ಲಾ ಆಕಾಶವಾಣಿಯ ಮೂಲಕ ತಿಳಿಸಿದರು.

ಸ್ವಾತಂತ್ರ್ಯದ ದಿನ ಕೇವಲ ಮೂರು ತಿಂಗಳು ಮಾತ್ರ ಉಳಿದಿತ್ತು. ದೆಹಲಿಯಲ್ಲಿ ಎರಡೂ ಪಕ್ಷಗಳವರೂ ಪಾಲಿಗೆ ಕುಳಿತರು. ಮಿಲಿಟರಿ, ಪೋಲೀಸ್, ವಿಮಾನ, ಕಾರ್ಖಾನೆಗಳು, ಹಡಗು, ಬಂದೂಕಗಳು, ಹಣ, ಮೇಜು, ಕುರ್ಚಿ, ಟೈಪ್‌ರೈಟರ್‌ಗಳು ಎಲ್ಲಾ ಪಾಲಾಗಬೇಕಾಯಿತು. ಬಾಪೂಜಿ ಕಣ್ಣೀರು ಕರೆದರು. ಭಾರತ, ಪಾಕೀಸ್ತಾನಗಳ ಗಡಿ ನಿರ್ಧರಿಸಲು ಒಂದು 'ಬೌಂಡರಿ ಕಮಿಶನ್' ಗೊತ್ತಾಯಿತು.

ಭಾರತ, ಪಾಕೀಸ್ತಾನಗಳಾದರೂ ಮೌಂಟ್ ಬ್ಯಾಟನ್ ಉಭಯ ರಾಷ್ಟ್ರಗಳ ಗೌರ್ನರ್ ಜನರಲ್ ಆಗಿ ಮುಂದುವರೆಯುವರೆಂಬ ಸುದ್ದಿ ಮೊದಲೇ ಜಿನ್ನಾಗೆ ತಿಳಿದಿತ್ತು. ಆದ್ದರಿಂದ ಅದನ್ನು ತಪ್ಪಿಸಲಿಕ್ಕಾಗಿ ಆಗಸ್ಟ್ ೭ರಂದು ದೆಹಲಿಯಿಂದ ಕರಾಚಿಗೆ ಹಾರಿದ. ಆಗಸ್ಟ್ ೧೫ ಬಂತು. ತಾನೇ ಪಾಕೀಸ್ತಾನದ ಪ್ರಪ್ರಥಮ ಗೌರ್‍ನರ್ ಜನರಲ್ ಎಂದು ತನಗೆ ತಾನೇ ಘೋಷಿಸಿಕೊಂಡ. ಭಾರತ ಮೌಂಟ್ ಬ್ಯಾಟನ್‌ರನ್ನು ಕೆಲದಿನಗಳ ಮಟ್ಟಿಗೆ ಗೌರ್ನರ್ ಜನರಲ್ ಆಗಿ ಉಳಿಯಬೇಕೆಂದು ಕೇಳಿಕೊಂಡಿತು. ಮೌಂಟ್ ಬ್ಯಾಟನ್ ಭಾರತದ ಗೌರ್ನರ್ ಜನರಲ್ ಆಗಿ ಕೆಲ ದಿನ ಉಳಿದರು.

ದೇಶಕ್ಕೆ ಸ್ವಾತಂತ್ರ ! ೧೯೪೭ ಆಗಸ್ಟ್ ೧೫ ರಂದು ಬಂತು. ಬಹುದಿನ ಬಯಕೆ ಫಲಿಸಿತ್ತು.

ಭಾರತ ಸಿಂಗಾರವಾಯಿತು. ರಾಷ್ಟ್ರದ ಪ್ರತಿ ಮೂಲೆಯೂ ತಳಿರು ತೋರಣಗಳಿಂದ ಅಲಂಕೃತವಾಯಿತು.

೧೯೪೭ ಆಗಸ್ಟ್ ೧೫ರಂದು, ಶ್ರಾವಣದ ಶುಭದಿನದಂದು, ಆದ ಸಮಾರಂಭಗಳೆಷ್ಟು, ಸಭೆ ಸತ್ಕಾರಗಳೆಷ್ಟು, ದೀನದಲಿತರಿಗಿತ್ತ ದಾನ ಧರ್ಮಗಳೆಷ್ಟು ! ಒಂದೇ, ಎರಡೇ. ಇಡೀ ಭರತಖಂಡವೇ ಸ್ವಾತಂತ್ರ್ಯದ ಹಬ್ಬ ಆಚರಿಸಿ ಆನಂದದಿಂದ ನಲಿಯಿತು.

ಭಾರತಾಂಬೆಯ ಬಹು ದೊಡ್ಡ ಪ್ರತಿಮೆಯ ಅಕ್ಕಪಕ್ಕದಲ್ಲಿ ಬಾಪೂಜಿ, ನೆಹರು, ಪಟೇಲ್, ಬಾಬುರಾಜೇಂದ್ರಪ್ರಸಾದ್ ಮುಂತಾದ ಗಣ್ಯ ನಾಯಕರ ಹಾಗೂ ಹುತಾತ್ಮರುಗಳ ಭಾವಚಿತ್ರಗಳು, ದಾರಿಯುದ್ದಕ್ಕೂ ಅಲಂಕೃತ ವಾಹನಗಳಲ್ಲಿ ವಿಶೇಷ ರೀತಿಯ ಮೂಕ ದೃಶ್ಯಗಳು, ಅಲ್ಲಲ್ಲಿ ಕುಣಿತಗಳು. ಮಧ್ಯೆ ಮಧ್ಯೆ ನಾನಾ ವಿಧದ ಮೇಳಗಳು, ಕಣ್ಣೆರಡೂ ಸಾಲವು ! ಅಂತೂ ಭಾರತದ ಪ್ರತಿ ವ್ಯಕ್ತಿಯ ಹೃದಯದ ಆನಂದವನ್ನು ಅಳೆಯಲು ಸಾಧ್ಯವೇ ಇರಲಿಲ್ಲ. ದೇಶಕ್ಕೆ ದೇಶವೇ ನಲಿಯಿತು. ಸ್ವಾತಂತ್ರ್ಯ ಬಂತಲ್ಲ ! ಕಂಡೆವಲ್ಲಾ ! ನಾವೇ ಭಾಗ್ಯಶಾಲಿಗಳು ಎಂದು ಜನತೆ ತನಗೆ ತಾನೇ ಅಂದುಕೊಂಡು ಹಿಗ್ಗಿತು !

ಆದರೆ ಸ್ವಾತಂತ್ರ್ಯ ತಂದುಕೊಟ್ಟ ದೇವತೆ, ಅವನು ಸ್ಮಶಾನವಾಸಿ ಶಿವನಿದ್ದಂತೆ ! ಎಲ್ಲರಿಗೂ ಅಂದಚೆಂದದ ಮನೆಮಠಗಳನ್ನು ಕೊಟ್ಟ ತಾನು ಸ್ಮಶಾನವಾಸಿಯಾಗಿದ್ದಾನೆ. ಎಲ್ಲರಿಗೂ ವಜ್ರ ವೈಢೂರ್ಯಾದಿ ಆಭರಣಗಳನಿತ್ತು ತಾನು ಸರ್ಪಭೂಷಣನಾಗಿದ್ದಾನೆ. ಎಲ್ಲರಿಗೂ ಪಟ್ಟೆ ಪೀತಾಂಬರಗಳನ್ನು ಉಡಲು ಕೊಟ್ಟು ತಾನು ಗಜಚರ್ಮಾಂಬರಧಾರಿಯಾಗಿದ್ದಾನೆ. ಎಲ್ಲರ ಹೊಟ್ಟೆಗೆ ಅನ್ನ, ಅವನ ಕೈಯಲ್ಲಿ ಭಿಕ್ಷಾ ಪಾತ್ರೆ ! ಇಂತಹ ಸನ್ಯಾಸಿ ಶಿವನ ಸ್ಥಿತಿಯೇ ಆಗಿತ್ತು ಸ್ವಾತಂತ್ರ್ಯ ಶಿಲ್ಪಿ ಗಾಂಧೀಜಿಗೆ !

ಆಗಸ್ಟ್ ೭ರಂದೇ ಗಾಂಧೀಜಿ ದೆಹಲಿಯನ್ನು ಬಿಟ್ಟಿದ್ದರು. ಕರಾಚಿಗೆ ಹೋಗಿ ಅನಂತರ ನೌಖಾಲಿಗೆ ನಡೆದರು. ಸಾತಂತ್ರ್ಯ ಬಂದ ದಿನ ಬಾಪೂಜಿ ದೆಹಲಿಯಲ್ಲಿರಲಿಲ್ಲ. ದೀನದಲಿತರ ನಿರಾಶ್ರಿತರ ಮಧ್ಯೆ ಅವರ ಕ್ಷೇಮ ಚಿಂತನೆಯಲ್ಲಿದ್ದರು. ಯಾರು ರಾಜ್ಯವನ್ನಾಳಿದರೂ ತಮಗೆ ದ್ವೇಷವಿಲ್ಲ. ತಾವು ಆಳಬೇಕೆಂಬ ಅಧಿಕಾರ ಲಾಲಸೆಯೂ ಇಲ್ಲ. ನಿರ್ಲಿಪ್ತ ಚೇತನ ಅವರದ್ದು. ದರಿದ್ರ ನಾರಾಯಣನ ಸೇವೆಗಿಂತ ಅವರಿಗೆ ಬೇರೆ ಪುಣ್ಯಕಾರ್ಯವೇ ಇರಲಿಲ್ಲ. ನೌಖಾಲಿಯಲ್ಲಿ ನಡೆದ ಹಿಂದೂ ಮುಸ್ಲಿಮರ ಗಲಭೆಯನ್ನು ತಡೆದು ಅಲ್ಲಿಯ ಜನತೆಯಲ್ಲಿ ಸೌಹಾರ್ದ ಮೂಡಿಸಲು ಅಲ್ಲಿಗೆ ನಡೆದಿದ್ದರು.

ಶಾಸನ ಸಭಾಧ್ಯಕ್ಷರಾದ ಬಾಬೂರಾಜೇಂದ್ರ ಪ್ರಸಾದರು ಬಾಪೂಜಿಯವರ ಬಗ್ಗೆ ತಮ್ಮ ಗೌರವವನ್ನು ವ್ಯಕ್ತಪಡಿಸಿ ನುಡಿದರು :

"ಕಳೆದ ಮೂವತ್ತು ವರ್ಷಗಳಿಂದಲೂ ನಮ್ಮ ಕಣ್ಣಿಗೆ ಬೆಳಕು ನೀಡಿದ, ನಮಗೆಲ್ಲಾ ಸನ್ಮಾರ್ಗದರ್ಶಿಯಾದ, ತತ್ವವೇತ್ತ ಬಾಪೂಜಿಯವರಿಗೆ ಇಂದು ನಮ್ಮ ಪ್ರಥಮ ಗೌರವ ಸಲ್ಲಬೇಕಾಗಿದೆ" ಎಂದು.

ನೆಹರೂಜಿ ಕೂಡ ರಾಷ್ಟ್ರಕ್ಕಿಂತ ತಮ್ಮ ಸಂದೇಶದಲ್ಲಿ ರಾಷ್ಟ್ರಪಿತನಿಗೆ ತಮ್ಮ ಭಕ್ತಿ ಗೌರವಗಳ ಕಾಣಿಕೆ ಸಲ್ಲಿಸಿದರು.

"ಈ ಪುಣ್ಯ ದಿನದಲ್ಲಿ ನಾವು ಪ್ರಥಮತಃ ನೆನೆಯಬೇಕಾದ್ದು ನಮ್ಮ ಸ್ವಾತಂತ್ರ್ಯ ಶಿಲ್ಪಿಯನ್ನು, ರಾಷ್ಟ್ರದ ತಂದೆಯನ್ನು. ಭಾರತದ ಆತ್ಮಶಕ್ತಿಯೇ ತಾನಾದ ಈತ ನಮ್ಮನ್ನೆಲ್ಲಾ ಆವರಿಸಿದ್ದ ಕಗ್ಗತ್ತಲನ್ನು ಪರಿಹರಿಸಲು ಸ್ವಾತಂತ್ರ್ಯದ ದೀವಿಗೆಯಾಗಿ ಬಂದ. ತಾನೇ ಜ್ಯೋತಿಯಾಗಿ ಬೆಳಗಿದ. ನಾವೆಷ್ಟೋ ಬಾರಿ ಅವನ ಮನಸ್ಸಿಗೆ ವಿರುದ್ಧವಾಗಿ ವರ್ತಿಸಿ, ಆತನಿಗೆ ನೋವುಂಟು ಮಾಡಿದ್ದೇವೆ. ಕೆಲವು ವೇಳೆ ಅವನ ಅನುಯಾಯಿಗಳಾಗಲು ನಾವು ಅರ್ಹರಲ್ಲವೇನೋ ಎಂದೆನಿಸುತ್ತದೆ. ಆದರೆ ಸತ್ಯ, ಸತ್ವ, ಸ್ಥೈರ್ಯ, ಸಹನೆಗಳ ಮೂರ್ತಿಯೆನಿಸಿದ ಬಾಪೂ ಎಂದೆಂದಿಗೂ ಪ್ರತಿಯೊಬ್ಬನ ಹೃದಯದಲ್ಲೂ ಶಾಶ್ವತವಾಗಿ ನೆಲೆಗೊಂಡಿದ್ದಾರೆ. ಅದೆಷ್ಟೇ ಪ್ರಚಂಡ ಬಿರುಗಾಳಿ ಬೀಸಿದರೂ ಈ ಸ್ವಾತಂತ್ರ್ಯ ಜ್ಯೋತಿ ಆರದಂತೆ ನಾವೆಲ್ಲರೂ ನೋಡಿಕೊಳ್ಳೋಣ !"

ಆದರೆ ಈ ಸಾತಂತ್ರ್ಯ ಜ್ಯೋತಿಯನ್ನು ನಂದಿಸಲು ಬಿರುಗಾಳಿ ಬರಲಿಲ್ಲ; ಬೆರಳೆರಡೇ ಸಾಕಾದುವು !

ಸಾತಂತ್ರ್ಯ ಬಂತು !

ಆದರೆ ರಾಕ್ಷಸರದ ಹೃದಯದಲ್ಲಿ ಮನುಷ್ಯತ್ವ ಮೂಡಿತೇ ? ಇಲ್ಲ ! ಕೊಲೆ, ಸುಲಿಗೆ, ರಕ್ತಪಾತಗಳು ನಿಂತು ದೇಶದಲ್ಲಿ ಶಾಂತಿ ಸೌಹಾರ್ದಗಳು ಏರ್ಪಟ್ಟವೇ ? ಇಲ್ಲ !

ಧರ್ಮದ ಹೆಸರಿನಲ್ಲಿ ದಹಿಸುತ್ತಿದ್ದ ದ್ರೋಹ ಶಮನವಾಯಿತೇ ? ಇಲ್ಲ !

ಮತ್ತಷ್ಟು ಹೆಚ್ಚಿತು.

ಬಾಪೂ ಸ್ವಾತಂತ್ರ್ಯದ ದಿನ ನೌಖಾಲಿಯಲ್ಲಿದ್ದರು. ಆದರೆ ದೆಹಲಿಯಲ್ಲಿ ಲಕ್ಷಾಂತರ ಜನ ಪಾಕೀಸ್ತಾನದಿಂದ ಬಂದ ನಿರಾಶ್ರಿತರು ತುಂಬಿಕೊಂಡಿದ್ದರು. ಬಾಪೂಜಿ, ಕರಾಚಿ ಮೊದಲಾದೆಡೆಗಳಲ್ಲಿ ಹಿಂದೂ ಮುಸ್ಲಿಮರನ್ನು ಕರೆದು ಹಿತೋಪದೇಶ ಮಾಡುತ್ತಲೇ ಇದ್ದರು. ಇತ್ತ ದಂಗೆಗಳಾಗಿ ಹಿಂದುಗಳು ಜಾತಿಭ್ರಷ್ಟರಾಗಿ ಇಲ್ಲವೇ ಮಾನ ಮಾರಿಕೊಂಡು ಪ್ರಾಣಮಾತ್ರರಾಗಿ ದೆಹಲಿಗೆ ಬಂದು ಬೀದಿಗಳಲ್ಲಿ ಉರುಳಿದರು. ದೆಹಲಿ ಅನಾಥ ಶಿಶುಗಳ, ವಿಧವೆಯರ, ಗಾಯಗೊಂಡವರ ಹಾಹಾಕಾರದಿಂದ ತುಂಬಿಹೋಯಿತು. ಮನೆ ಮಠ, ಮಡದಿ, ಮಕ್ಕಳು, ಸಂಪತ್ತು, ಸೌಭಾಗ್ಯ ಯಾವುದೂ ಇಲ್ಲದೆ ಬೀದಿಯ ಭಿಕಾರಿಗಳಾದರು. ಪಂಜಾಬಿನಲ್ಲಿ ಭಾರತೀಯರ ಮನೆ ಮಾರುಗಳೆಲ್ಲಾ ದುರಾಕ್ರಮಣವಾದುವು. ಹಿಂದೂ ದೇವಾಲಯಗಳು, ಸಿಕ್ಕರ ಗುರುದ್ವಾರಗಳು ಮಸೀದಿಗಳಾದವು, ಇಲ್ಲವೇ ಪುಂಡರ ಭೋಗಭವನಗಳಾದುವು.

ಸ್ವಾತಂತ್ರ್ಯ ಬಂದ ಎರಡೇ ದಿನಗಳಲ್ಲಿ ನೆಹರೂ ಪಾಕೀಸ್ತಾನದ ಪ್ರಧಾನಿ ಲಿಯಾಖಿತ್ ಆಲಿಖಾನನೊಡನೆ ಅಂಬಾಲ ಮತ್ತು ಅಮೃತಸರಗಳಿಗೆ ಭೇಟಿಕೊಟ್ಟರು. ಅಲ್ಲಿ ಮುಸ್ಲಿಂ ಮತ್ತು ಸಿಖ್ಖರಲ್ಲಿ ಹೊಡೆದಾಟವಾಗಿ ಅನೇಕರು ಮಡಿದು ಮಣ್ಣಾಗಿದ್ದರು. ಲಾಹೋರ್, ಕರಾಚಿ, ಕ್ವೆಟ್ಟ, ನವಾಬ್ ಷಾ, ಬನ್ನೂ ಮತ್ತು ಪೆಷಾವರ್‌ಗಳಲ್ಲಿ ಗಲಭೆ ನಡೆದು ಹಿಂದೂ ಮತ್ತು ಸಿಖ್ ನಿರಾಶ್ರಿತರು ದೆಹಲಿಗೆ ಬಂದಿಳಿದರು. ನೆಹರೂಜಿ ಗಾಂಧೀಜಿಯವರಂತೆ ಈ ನಿರಾಶ್ರಿತರ ಆಶ್ರಮಕ್ಕೆ ಭೇಟಿ ಕೊಟ್ಟು ಅವರ ಕಷ್ಟ ಸುಖಗಳನ್ನು ಬಹಳ ಆತ್ಮೀಯತೆಯಿಂದ ವಿಚಾರಿಸಿಕೊಂಡರು.

ಬಾಪೂಜಿ, ನೆಹರೂಜಿ, ಪಟೇಲ್‌ಜಿ ಮೊದಲಾದವರಿಗೆ ಸ್ವಾತಂತ್ರ್ಯ ಪೂರ್ವದಲ್ಲಿ ಚಿಂತೇ ಒಂದೇ ಆಗಿತ್ತು. ಆದರೆ ಸ್ವಾತಂತ್ರ್ಯದ ಅನಂತರದಲ್ಲಿ ಎಣಿಕೆಗೆ ಸಿಗದಷ್ಟು ಊಹೆಗೂ ಸಿಲುಕದಷ್ಟು ಆಯಿತು. ಬಹುಶಃ ಅಳ್ಳೆದೆಯವರಾಗಿದ್ದರೆ ಎಂದೋ ಅವರ ಹೃದಯಕ್ರಿಯೆ ನಿಂತುಬಿಡುತ್ತಿತ್ತು !

**ದೀಪ ನಂದಿತು**

**ವೈಷ್ಣವ ಜನತೋ**
**ತೇನೇ ಕಹಿಯೇ**
**ಪರದುಃಖೇ ಉಪಕಾರೇ ಜಾಣೇರೇ**
**ವೈಷ್ಣವ ಜನತೋ**
**ತೇನೇ ಕಹಿಯೇ**
**ತೇ... ನೇ... ಕ..ಹಿ...ಯೇ...**

ಪ್ರಾರ್ಥನೆ ಇನ್ನೂ ಪೂರ್ಣವಾಗಿರಲಿಲ್ಲ.

ದೆಹಲಿಯ ಬಿರ್ಲಾ ಭವನದ ಮಗ್ಗುಲಿನ ಬಯಲಿನಲ್ಲಿ ನೆರೆದಿದ್ದ ನೂರಾರು ಜನ ಬಾಪೂಜಿಯವರ ದಿವ್ಯ ಸಂದೇಶವನ್ನು ಕೇಳಿಯೇ ಇರಲಿಲ್ಲ. ಮಹಾತ್ಮಾಜಿ ಮೌನವನ್ನಾಚರಿಸಿ, ಪರಮಾತ್ಮನನ್ನು

ಸಾಕ್ಷಾತ್ಕಾರಗೊಳಿಸಿಕೊಳ್ಳುವುದಿನ್ನು ಉಳಿದಿತ್ತು. ಅಷ್ಟರಲ್ಲೇ ಕೇಳಿಸಿತು ಕಿವಿಯೊಡೆಯುವಂತಾ ಶಬ್ದ ! ಕೈಬಾಂಬಿನ ಸ್ಫೋಟನ ಎಲ್ಲರನ್ನೂ ತಲ್ಲಣಗೊಳಿಸಿತು !

ಘಾಸಿಯಾದ ಜನ ಅತ್ತಿತ್ತ ನೋಡಿ ಅಲ್ಲೇ ನಿಂತಿದ್ದವನನ್ನು ಹಿಡಿದು ಪರಿಶೀಲಿಸಿದರು. ಆತನ ಜೇಬಿನಲ್ಲಿ ಇನ್ನೂ ಒಂದು ಕೈಬಾಂಬು ಇತ್ತು !

ಇದೆಲ್ಲಾ ಆದದ್ದು ೧೯೪೮ ಜನವರಿ ೨೦ರಂದು ; ಪಶ್ಚಿಮ ಪಂಜಾಬಿನಿಂದ ಬಂದ ನಿರಾಶ್ರಿತ ಮದನಲಾಲ್ ಎಂಬ ಹಿಂದೂ ಯುವಕನೇ ಕೈ ಬಾಂಬು ಎಸೆದವನು. ಎಸೆದದ್ದು ವಿನೋದಕ್ಕಾಗಿ ಅಲ್ಲ, ಉದ್ದೇಶದಿಂದಲೇ ! ಬಾಪೂಜಿಯವರನ್ನು ಇಲ್ಲದಂತೆ ಮಾಡಬೇಕೆಂಬುದೇ ಅವನಿಚ್ಛೆಯಾಗಿತ್ತು ! ಏಕೆಂದರೆ ಬಾಪೂ ಹಿಂದೂಗಳಿಗೆ ಬುದ್ಧಿ ಹೇಳುತ್ತಾ, ಮುಸಲ್ಮಾನರ ಪುಂಡಾಟಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆಂಬುದೆ ಅವನ ಭಾವನೆ ! ಬಾಪೂಜಿ “ಶಾಂತಿ ಶಾಂತಿ” ಎಂದು ನಮ್ಮನ್ನೆಲ್ಲಾ ಹಾಳುಮಾಡಿದರು ಎಂಬುದೇ ಅವನ ಎಣಿಕೆ ! ಗಾಂಧೀಜಿಯ ಒಳ್ಳೆಯತನವನ್ನು ಆ ಪಾಪಿಗಳು ದುರುಪಯೋಗಪಡಿಸಿಕೊಂಡು ಹಿಂದೂಗಳನ್ನು ಹಿಂಸಿಸುತ್ತಿದ್ದಾರೆ. ಇಷ್ಟಾದರೂ ಬಾಪೂ ಅವರ ಮೇಲೆ ಕೈಮಾಡಬೇಡಿ ಎಂದು ತಡೆಯುತ್ತಿದ್ದಾರೆ. ಹೆಂಡತಿ, ಮಕ್ಕಳು, ಮನೆ ಮಾರು ನೀಗಿಕೊಂಡು ಅನಾಥರಾದೆವು. ಇಷ್ಟಕ್ಕೆಲ್ಲಾ ಕಾರಣ ಗಾಂಧೀಜಿಯ ಕರುಣೆ, ಅಹಿಂಸಾ ತತ್ತ್ವ! ಆದ್ದರಿಂದ ಅವರನ್ನೇ ಮುಗಿಸಿಬಿಟ್ಟರೆ ನಮಗೆ ಹೇಳುವ ಕೇಳುವ ತಡೆಗಟ್ಟುವ ತಿಳುವಳಿಕೆ ಕೊಡುವ ವ್ಯಕ್ತಿಯೇ ಇಲ್ಲವಾಗುತ್ತೆ. ಆಗ ‘ಆಡಿದ್ದೇ ಆಟ ಹೂಡಿದ್ದೇ ಲಗ್ಗೆ’ ಎಂದು ಭಾವಿಸಿದ ಆತ.

ಆದರೆ ದೈವವಶಾತ್ ಆ ಬಾಂಬು ಗಾಂಧೀಜಿಯವರಿಗೆ ತಾಕದೆ ಬಿದ್ದು ಸ್ಫೋಟಗೊಂಡಿತು. ಸ್ವಲ್ಪ ದೂರದಲ್ಲಿ ಬಾಪು ವಿಪತ್ತಿನಿಂದ ಪಾರಾದರು !

ಈ ಕೈಬಾಂಬಿನ ಪ್ರಕರಣ ಎಲ್ಲರಿಗೂ ಭಯವನ್ನುಂಟು ಮಾಡಿತು. ನೆಹರೂ, ಪಟೇಲ್, ಪೊಲೀಸರ್ ರಕ್ಷಣೆ ಕಳುಹಿಸುವುದಾಗಿ ಬಾಪೂಜಿಯವರಿಗೆ ಕೇಳಿದರು. ಬಾಪೂಜಿ ಅದಕ್ಕೆ ಒಪ್ಪಲಿಲ್ಲ.

ಬಾಪೂಜಿಯ ಪ್ರಿಯಭಕ್ತೆ ರಾಜಕುಮಾರ್ ಅಮೃತಕೌರ್ ಜನವರಿ ೨೮ರಂದು”ಬಾಪೂ, ಈ ದಿನವೇನಾದರೂ ಗದ್ದಲವಿತ್ತೇ ನಿಮ್ಮ ಪ್ರಾರ್ಥನೆಯ ವೇಳೆ ?” ಎಂದು ಕೇಳಿದರು. ‘ಇಲ್ಲ ಮಗು’ ಎಂದರು ಗಾಂಧೀಜಿ. ಮುಂದುವರಿದು ‘ಅದು ಸರಿ, ನೀನು ಪ್ರಶ್ನೆ ಕೇಳುವ ಧಾಟಿ ನೋಡಿದರೆ ನನಗಾಗಿ ಚಿಂತಿಸುವಂತೆ ತೋರುತ್ತದೆ ! ಅಷ್ಟು ಭೀತರಾಗಬೇಡಿ, ಒಂದು ವೇಳೆ ಓರ್ವ ಹುಚ್ಚನಿಂದ ಗುಂಡಿನೇಟು ತಿನ್ನುವ ಪ್ರಸಂಗ ಬಂದರೂ ಅದನ್ನು ನಗುತ್ತಾ ಸ್ವಾಗತಿಸುತ್ತೇನೆ. ನನ್ನಲ್ಲಿ ಕೋಪವೆಂಬುದೇ ಬರದಿರಲಿ, ಪರಮಾತ್ಮನು ಸದಾ ನನ್ನ ಹೃದಯ ಮತ್ತು ನಾಲಿಗೆಯಲ್ಲಿ ನಲಿಯುತ್ತಿರಲಿ. ಅಷ್ಟೇ ನನ್ನ ಕೋರಿಕೆ !!’ ಎಂದರು.

ಅದಾದ ಎರಡನೆಯ ದಿನ ಬಂತು !

೧೯೪೮ ಜನವರಿ ೩೦ನೇ ತಾರೀಖಿನ ದಿನ ಬಂತು !! ಪುಷ್ಯ ಬಹುಳ ಪಂಚಮಿ ಶುಕ್ರವಾರ ಅದು. ಬಾಪೂಜಿ ಸಂಜೆ ಪ್ರಾರ್ಥನೆಗೆ ಬಿರ್ಲಾ ಭವನದ ಪಕ್ಕದ ಪ್ರಾರ್ಥನಾ ಬಯಲಿಗೆ ಎಂದಿನಂತೆ ನಡೆದರು. ಆದರೆ ಅಂದು ಸ್ವಲ್ಪ ತಡವಾಗಿತ್ತು. ಬಾಪೂ ತಮ್ಮ ಮೊಮ್ಮಗ ಕನುಗಾಂಧಿಯ ಹೆಂಡತಿ ಆಭಾ ಮತ್ತು ತಮ್ಮ ಮೊಮ್ಮಗಳು ಮನು ಇವರಿಬ್ಬರ ಹೆಗಲಮೇಲೆ ಕೈ ಊರಿಕೊಂಡು ಪ್ರಾರ್ಥನಾಭೂಮಿಯ ಕಡೆ ಬಂದರು. ಬಂದುದೇ ತಡ ಜನಸಮೂಹ ಜುಮ್ಮೆಂದು ಮೇಲೆದ್ದು ಮಹಾತ್ಮನಿಗೆ ಗೌರವ ಸೂಚಿಸಿತು. ಬಾಪೂಜಿಗೆ ಹಾದಿ ಬಿಡಲಾಯಿತು. ಅನೇಕ ಶಿರಗಳು ನೆಲದವರೆಗೂ ಬಾಗಿದ್ದವು ! ಅನೇಕ ಕೂಗಳು ಮಹಾತ್ಮರಿಟ್ಟು ತೆಗೆದ ಪಾದಗಳೆಡೆಯನ್ನು ಮುಟ್ಟಿ ಮುಟ್ಟಿ ಕಣ್ಣಿಗೊತ್ತಿಕೊಳ್ಳುತ್ತಿದ್ದವು !

ಮಹಾತ್ಮರ ವೇದಿಕೆ ಮರದಿಂದ ಮಾಡಿದುದು ಸ್ವಲ್ಪ ದೂರದಲ್ಲಿತ್ತು ಅಷ್ಟೆ. ಜನ ಮೇಲೆ ಮೇಲೆ ದರ್ಶನಕ್ಕಾಗಿ ನುಗ್ಗಿ ನುಗ್ಗಿ ಬರುತ್ತಿದ್ದರು.

ಬಾಪೂಜಿ ತಮ್ಮ ಸಹಜವಾದ ನಗೆಮೊಗದಿಂದ ಆ ಎರಡೂ ಊರುಗೋಲುಗಳ (ಆಭಾ ಮತ್ತು ಮನು) ಮೇಲೆ ತೋಳು ಊರಿಕೊಂಡೇ ಜನತೆಗೆ ತಮ್ಮ ನಮಸ್ಕಾರ ಅರ್ಪಿಸುತ್ತಿದ್ದರು. ಜನರ ತಂಡವನ್ನು ತಡೆದು ಮನು, “ಸ್ವಲ್ಪ ದೂರ ಸರಿಯಿರಿ, ಬಾಪೂಜಿಯ ಪ್ರಾರ್ಥನೆಗೆ ಈ ದಿನ ತಡವಾಗಿದೆ. ಇನ್ನೂ ಹೆಚು ತಡಮಾಡಬೇಡಿ, ಎಂದಿಷ್ಟು ಹೇಳುವುದರೊಳಗಾಗಿ ನಮಸ್ಕರಿಸುವ ನೆಪದಲ್ಲಿ ಮುಂದೆ ಬಂದ ಒಬ್ಬ ವ್ಯಕ್ತಿ ಮನೂಳ ರಟ್ಟೆಗಳನ್ನು ಹಿಡಿದು ಹಿಂದಕ್ಕೆ ತಳ್ಳಿದ. ಮನು ಬಿದ್ದಳು. ಅಷ್ಟರಲ್ಲಿ ಮೂರು ಗುಂಡುಗಳು ಹಾರಿದುವು !

‘ಢಂ.....ಢಂ.....ಢಂ.....”

“ಹೇ ರಾಮ್ !’

ಎಂಬ ಅಂತಿಮ ಉದ್ಗಾರವೊಂದು ಹೊರಬಿತ್ತು. ಕಾಲುಗಳು ಕುಸಿದುವು. ಕನ್ನಡಕ ಕಳಚಿಬಿತ್ತು. ರಕ್ತಸಿಕ್ತವಾದ ಆ ದೇಹವನ್ನು ಬಿರ್ಲಾಭವನದ ಕೋಣೆಗೆ ಸಾಗಿಸಲಾಯಿತು. ಬಾಪೂಜಿಯ ಮರಣವಾರ್ತೆ ವಿಶ್ವವ್ಯಾಪಕವಾಯಿತು. ಇಡೀ ವಿಶ್ವವೇ ಅಂದು ಶೋಕಸಾಗರದಲ್ಲಿ ಮುಳುಗಿತು.

ನೆಹರು, ಪಟೇಲ್ ಆದಿಯಾಗಿ ಬಹಳ ಜನ ಬಿರ್ಲಾಭವನಕ್ಕೆ ಓಡೋಡಿ ಬಂದರು. ನೆಹರೂಜಿ ಬಾಪುವಿನ ಮೃತ ಶರೀರ ಕಂಡು ಗಳಗಳನೆ ಅತ್ತರು. ಬಾಪೂಜಿಯ ಪಾದಗಳಿಗೆ ನಮಿಸುತ್ತಾ ಕಣ್ಣೀರಿಂದಲೇ ಅವರ ಪಾದಗಳನ್ನು ತೊಳೆದರು. ಅವರ ದುಃಖದ ತೀವ್ರತೆ ವರ್ಣಿಸಲಸಾಧ್ಯವಾಗಿತ್ತು. ಅಂದೇ ಆಕಾಶವಾಣಿಯ ಪ್ರಸಾರದಲ್ಲಿ ದುಃಖವನ್ನು ತೋಡಿಕೊಂಡರು.

'ನಮ್ಮ ಬಾಳಿನ ಬೆಳಕು ನಂದಿ ಕತ್ತಲು ಆವರಿಸಿದೆ.

ನಿಮಗೇನು ಹೇಳಬೇಕೋ ನನಗೊಂದೂ ತೋರುತ್ತಿಲ್ಲ. ನಮ್ಮ ನೆಚ್ಚಿನ ನಾಯಕ, ನಮ್ಮ ಬಾಪು, ಎಲ್ಲ ಜನತೆಯ ತಂದೆ ಇನ್ನಿಲ್ಲ. ಹಾಗೆ ಹೇಳುವುದು ತಪ್ಪಿರಬಹುದು, ಆದರೆ ನಾವು ಇಷಟು ವರ್ಷಗಳೂ ಕಂಡ ರೂಪದಲ್ಲಿ ಆತನನ್ನು ಪುನಃ ಕಾಣಲಾರೆವು. ಹಿತನುಡಿಗಳಿಗಾಗಿ, ಸಮಾಧಾನಕ್ಕಾಗಿ ನಾವು ಆತನ ಬಳಿಗೆ ಇನ್ನು ಹೋಗುವಂತಿಲ್ಲ. ಇದು ನನಗೊಬ್ಬನಿಗೇ ಅಲ್ಲ, ದೇಶದ ಕೋಟ್ಯಾಂತರ ಜನತೆಗೆ ಮಹತ್ತರವಾದ ಪೆಟ್ಟು. ಈ ನೋವನ್ನು ಕಡಿಮೆ ಮಾಡಲು ನಾನಾಗಲಿ ಬೇರೆಯವರಾಗಲಿ ಯಾವ ಸಮಾಧಾನದ ನುಡಿಗಳನ್ನೂ ಹೇಳಲಾರೆವು.

ಬೆಳಕು ನಂದಿತು ಎಂದು ಹೇಳಿದೆ. ಅದು ಯುಕ್ತವಲ್ಲ. ಏಕೆಂದರೆ ಈ ದೇಶದಲ್ಲಿ ಬೆಳಗುತ್ತಿದ್ದ ಜ್ಯೋತಿ ಸಾಧಾರಣವಾದುದಲ್ಲ. ಈ ದೇಶವನ್ನು ಬಹು ವರ್ಷಗಳಿಂದ ಬೆಳಗಿದ ಜ್ಯೋತಿಯೇ ಇನ್ನೂ ಅನೇಕ ವರ್ಷ ಬೆಳಗುತ್ತದೆ. ಜಗತ್ತು ಅದಕ್ಕೆ ಸಾಕ್ಷಿಭೂತವಾಗಿರುತ್ತದೆ. ಅನೇಕ ದುಃಖ ಸಂತೃಪ್ತ ಹೃದಯಗಳಿಗೆ ಅದು ಸಮಾಧಾನ ಕೊಡುತ್ತದೆ. ಏಕೆಂದರೆ ಆ ಬೆಳಕು ಜೀವಂತ ಸತ್ಯದ ರೂಪ ! ಆ ವ್ಯಕ್ತಿ ತನ್ನ ಶಾಶ್ವತ ಸತ್ಯದೊಡನೆ ನಮ್ಮೊಡನಿದ್ದು ಸರಿಯಾದ ಮಾರ್ಗ ತೋರಿ ತಪ್ಪು ದಾರಿಯಿಂದೆಳೆದು ಈ ಸನಾತನ ರಾಷ್ಟ್ರವನ್ನು ಸ್ವಾತಂತ್ರ್ಯಕ್ಕೊಯ್ದಿದ್ದಾನೆ.

ಇದೆಲ್ಲಾ ಆದದ್ದು. ಆಗಬೇಕಾದದ್ದು ಬಹಳಷ್ಟು ಉಳಿದಿದೆ. ಆತನ ಕೆಲಸ ಮುಗಿಯಿತೆಂದಾಗಲಿ, ಆತನ ಜೀವ ಅನಗತ್ಯವೆಂದಾಗಲಿ ನಮಗೆಂದೂ ಅನ್ನಿಸಿಲ್ಲ. ಅದರಲ್ಲೂ ಈಗ ಇಷ್ಟು ತೊಂದರೆಗಳು ನಮ್ಮನ್ನೆದುರಿಸುತ್ತಿರುವಾಗ ಆತನಿಲ್ಲದಿರುವುದು ಸಹಿಸಲಾರದ ಪೆಟ್ಟಾಗಿದೆ.

ಮಾರನೆಯ ದಿನ ಮಧ್ಯಾಹ್ನ ತೆರೆದ ವಾಹನವೊಂದರ ಮೇಲೆ ಮಹಾತ್ಮಾಜಿಯವರ ಅಂತಿಮ ಯಾತ್ರೆ ಹೊರಟಿತು. ಬಿರ್ಲಾಭವನದಿಂದ ಯುಮುನಾ ನದಿಯ ದಂಡೆಯ ತನಕ ಲಕ್ಷಾಂತರ ಜನ ಕಾದು ನಿಂತಿದ್ದು ರಾಷ್ಟ್ರಪಿತನ ಅಂತಿಮ ದರ್ಶನ ಪಡೆದರು. ಅದೇ ವಾಹನದ ಮೇಲೆ ನೆಹರು, ಪಟೇಲ್ ಮೊದಲಾದವರು ತಲೆ ತಗ್ಗಿಸಿಕೊಂಡು ಕುಳಿತಿದ್ದರು. ನಿಜಕ್ಕೂ ಭಾರತ ತಬ್ಬಲಿಯಾಯಿತು ಎನ್ನುವಂತಿತ್ತು ಆಗಿನ ನೋಟ.

ನಿಧಾನವಾಗಿ ಉರುಳಿಕೊಂಡೇ ಬಂತು ವಾಹನ ರಾಜಘಾಟಿಗೆ ಯಮುನೆಯ ತಡಿಗೆ. ಅಲ್ಲಿ ಸುಮಾರು ಏಳು ಲಕ್ಷಕ್ಕೂ ಮಿಗಿಲಾಗಿ ಜನ ದರ್ಶನಾಕಾಂಕ್ಷಿಗಳಾಗಿ ನಿಂತಿದ್ದರು. ಎತ್ತರವಾದ ಶ್ರೀಗಂಧದ ಕೊರಡುಗಳ ರಾಶಿಯ ಮೇಲೆ ಬಾಪೂಜಿಯವರ ಮೃತ ದೇಹವನ್ನಿಡಲಾಯಿತು. ಅವರ ಮಗ ದೇವದಾಸ್ ಗಾಂಧಿ ಅದಕ್ಕೆ ಅಗ್ನಿಸ್ಪರ್ಶ ಮಾಡಿದ. ಚಿತೆ ಧಗಧಗಿಸುತ್ತಾ ಉರಿಯಿತು. ಅದು ೧೯೪೮ ಜನವರಿ ೩೧ರ ಶನಿವಾರ ಸಂಜೆ. ಸೂರ್ಯದೇವ ಅತ್ತ ಪಶ್ಚಿಮ ದಿಸೆಯಲ್ಲಿ ಅಸ್ತಂಗತನಾದ ! ಇತ್ತ ಭಾರತದ ಹೃದಯಾಕಾಶದಲ್ಲಿ ಬೆಳಗುತ್ತಿದ್ದ ರವಿಯೂ ಅಸ್ತಂಗತನಾದ !

ಮರುದಿನದ ಬೆಳಗ್ಗೆ ಅಸ್ಥಿ ಸಂಚಯನಕ್ಕಾಗಿ ನೆಹರೂಜಿ ರಾಜಘಾಟಿಗೆ ಬಂದರು. ತಮ್ಮ ಕೈತುಂಬ ಹಿಡಿದಿದ್ದ ಹೂವುಗಳನ್ನು ಅಲ್ಲೆಲ್ಲ ಹರಡಿದ್ದ ಚಿತಾಭಸ್ಮದ ಮೇಲೆ ಚೆಲ್ಲಿ,

'ಬಾಪೂಜಿ, ಇದೋ ಇಲ್ಲಿವೆ ನೋಡು ಈ ಕೋಮಲ ಪುಷ್ಪಗಳು. ಇಂದು ನಿಮ್ಮ ಅಸ್ಥಿಗಾದರೂ ಅರ್ಪಿಸುತ್ತಿದ್ದೇನೆ; ಅಷ್ಟು ಅವಕಾಶವಿದೆ. ಆದರೆ ನಾಳೆ ಯಾರಿಗೆ ಅರ್ಪಿಸಲಿ ? ಎಲ್ಲಿ ಅರ್ಪಿಸಲಿ ಬಾಪೂಜಿ !' ಕಣ್ಣೀರು ಧಾರೆಯಾಗಿ ಹರಿಯಿತು. ಮಗುವಿನಂತೆ ನಾಯಕಮಣಿ ನೆಹರೂ ಗಳಗಳನೆ ಅತ್ತರು. ಪ್ರಜಾಪ್ರತಿನಿಧಿ ಸಭೆಯನ್ನು ಉದ್ದೇಶಿಸಿ ಫೆಬ್ರವರಿ ೨ರಂದು ನೆಹರೂಜಿ ಮಾತನಾಡುತ್ತಾ ಹೀಗೆ ಹೇಳಿದರು –

"ನಾವು ಅಳಬೇಕು. ಆತನಿಗಾಗಿ ಯಾವಾಗಲೂ ಅಳಬೇಕು. ಏಕೆಂದರೆ ನಾವು ಮಾನವರು, ಆ ಮಹಾ ಗುರುವನ್ನು ನಾವು ಎಂದೆಂದಿಗೂ ಮರೆಯಲಾರೆವು. ಈ ರೀತಿ ತನಗಾಗಿ ಅಳುವುದನ್ನು ಬಾಪು ಒಪ್ಪುವುದಿಲ್ಲ ಎಂದು ನನಗೆ ಗೊತ್ತು. ಆತನ ಪ್ರೀತಿಯ ವಸ್ತು, ಪ್ರೇಮದ ಮಡದಿ (ಕಸ್ತೂರಬಾ) ತೀರಿಕೊಂಡಾಗ ಅವರ ಕಣ್ಣುಗಳು ಕಿಂಚಿತ್ತೂ ಒದ್ದೆಯಾದುದನ್ನು ನಾನು ಕಾಣೆ. ಆತನ ಆದರ್ಶ ಸಾಧನೆಗೆ ನಾವೆಲ್ಲರೂ ಇಂದು ಕಂಕಣಬದ್ಧರಾಗಿರಬೇಕು. ಆದ್ದರಿಂದ ಬರಿಯ ಕಣ್ಣೀರು ಕರೆದರೆ ಬಾಪೂಜಿ ಸಿಟ್ಟು ಮಾಡಿಕೊಳ್ಳುತ್ತಾರೆ. ಅದು ಆತನಿಗೆ ಅರ್ಪಿಸುವ ಅತ್ಯಂತ ಸಾಧಾರಣವಾದ ಕಾಣಿಕೆ. ಆತ ನಡೆದ ಹಾದಿಯಲ್ಲಿ ನಾವು ನಡೆಯುತ್ತೇವೆಯೆಂದು ಪ್ರತಿಜ್ಞೆಮಾಡಿ ಆತನಿತ್ತ ಆದರ್ಶಗಳನ್ನು ಅನುಷ್ಠಾನಕ್ಕೆ ತರುವುದೇ ನಮ್ಮ ಪಾಲಿಗಿರುವ ಏಕೈಕ ಮಾರ್ಗ. ಆದ್ದರಿಂದ ನಾವು

ಕಾರ್ಯೋನ್ಮುಖರಾಗೋಣ. ದುಡಿಯೋಣ, ಸಮಸ್ತವನ್ನೂ ಅರ್ಪಿಸೋಣ. ತನ್ಮೂಲಕ ಆ ಮಹಾಪುರುಷನ ಅನುಯಾಯಿಗಳೆಂಬುದನ್ನು ಸ್ವಲ್ಪಮಟ್ಟಿಗಾದರೂ ತೋರ್ಪಡಿಸಿಕೊಳ್ಳೋಣ.

**ರಾಕ್ಷಸರ ಮಂದೆಯಲ್ಲಿ**

ಒಡೆದು ಆಳುವ ನೀತಿ ಬ್ರಿಟಿಷರದು. ಅವರು ಭಾರತಕ್ಕೆ ಕಾಲಿಟ್ಟ ದಿನದಿಂದ ಸ್ವತಂತ್ರಗೊಳ್ಳುವವರೆಗೂ ಆ ನೀತಿಯನ್ನು ಅವರು ಕೈಬಿಡಲಿಲ್ಲ. ಬಹುಶಃ ಅವರ ಆ ಕುಟಿಲನೀತಿಯ ವಿಷವೃಕ್ಷ ಹೂವಾಗಿ, ಕಾಯಾಗಿ, ಹಣ್ಣಾದದ್ದು ಭಾರತದಲ್ಲೇ ಎಂದು ತೋರುತ್ತದೆ. ಏಕೆಂದರೆ ಅಣ್ಣತಮ್ಮಂದಿರು ಇಬ್ಬರಿದ್ದರೆ ಅವರಿಗೆ ತಂದು ಹಾಕಿ ಇಬ್ಬರಿಂದಲೂ ಮೆಚ್ಚುಗೆ ಪಡೆಯುವುದು, ಜಾತೀಯವಾದದಿಂದ ಜಗಳ ಹುಟ್ಟಿಸಿ ಮಧ್ಯಸ್ಥಿಕೆ ಮಾಡುವುದು, ತಂದೆ ಮಗನಿಗೆ ವಿರೋಧ ಹುಟ್ಟಿಸಿ, ಬೇರೆಬೇರೆ ರಾಜ್ಯಗಳನ್ನು ಹಂಚಿಕೊಟ್ಟು ಅವರಿಬ್ಬರನ್ನೂ ತಾವು ಆಳುವುದು – ಇವೆಲ್ಲಾ ಅವರ ಸ್ವಾಭಾವಿಕ ಗುಣಗಳಾಗಿದ್ದುವು.

ಇವರ ತಾಳಕ್ಕೆ ಸರಿಯಾಗಿ ಕುಣಿಯುವ ಮಂದಮತಿಗಳೂ ಆಗಿದ್ದರು ನಮ್ಮವರು. ದೇಶ ಛಿದ್ರವಿಛಿದ್ರವಾಗಿ ಹೋಗಿತ್ತು. ಹೆಜ್ಜೆಗೊಂದು ರಾಜ್ಯ, ಮಾತಿಗೊಬ್ಬ ರಾಜ ಸಿಕ್ಕುತ್ತಿದ್ದರು. ಇದರಿಂದ ರಾಷ್ಟ್ರದ ಭದ್ರತೆ ಸಾಧ್ಯವಾಗುತ್ತಿರಲಿಲ್ಲ. ಪ್ರಗತಿಯಂತೂ ಕನಸಿನ ಮಾತಾಗಿತ್ತು. ಅಂತೆಯೇ ಐಕ್ಯತೆಯ ದೃಷ್ಟಿಯಿಂದ ಭಾರತದ ಸಂಘಟನಾ ಕಾರ್ಯ ಮೊದಲು ಆಗಬೇಕಿತ್ತು. ಅದನ್ನು ಆಗಗೊಳಿಸಿದರು ಸರ್ದಾರ್ ಪಟೇಲ್. ನೆಹರೂಜಿ ಅಪೇಕ್ಷೆಯೂ ಅದಾಗಿತ್ತು. ಈ ಎರಡು ಶಕ್ತಿಗಳು ಒಂದಾಗಿ ದೇಶವನ್ನು ಒಂದುಮಾಡಲು ಯತ್ನಿಸಿದುವು. ಕೆಲಸಕ್ಕೆ ಬಾರದ ಸಣ್ಣಮಟ್ಟ ಕಿರೀಟ ಪತಿಗಳನ್ನು ಸಿಂಹಾಸನಗಳಿಂದ ಕೆಳಗಿಳಿಸಿ ಹರಿದು ಹಂಚಾಗಿದ್ದ ಭಾಗಗಳನ್ನು ಭೌಗೋಳಿಕ, ಸಾಂಸ್ಕೃತಿಕ, ಆರ್ಥಿಕ ಹಾಗೂ ಭಾಷಾವಾರು ರೀತ್ಯಾ ಕೂಡಿಸುತ್ತಾ ಬಂದರು.

ಪಟೇಲ್‌ಜೀಯವರು ದೇಶಾದ್ಯಂತ ಸುತ್ತಾಡಿದರು. ಎಲ್ಲಾ ರಾಜರುಗಳನ್ನು ಕಂಡು ಅವರಿಗೆ ತಿಳಿಯ ಹೇಳಿ ಒಪ್ಪಿಸಿದರು. ಅನೇಕ ರಾಜರುಗಳು ತಮ್ಮ ಒಪ್ಪಿಗೆಯನ್ನು ಸೂಚಿಸಿ ಒಪ್ಪಿಗೆಯ ಪತ್ರಕ್ಕೆ ಸಹಿ ಹಾಕಿಕೊಟ್ಟರು. ಆ ಒಪ್ಪಿಗೆಯ ಪತ್ರದ ಪ್ರಕಾರ ಪ್ರಾಂತ ಸರ್ಕಾರ ರಕ್ಷಣೆ, ವಿದೇಶಾಂಗ ವಿಚಾರ, ಮತ್ತು ಸಾರಿಗೆ ವ್ಯವಸ್ಥೆ ಈ ಮೊದಲಾದ ಕೆಲವು ಅಂಶಗಳಲ್ಲಿ ಕೇಂದ್ರ ಸರ್ಕಾರಕ್ಕೆ ಅಧೀನವಾಗಿರಬೇಕೆಂದು ಮಾತ್ರ ತಿಳಿಸಿತ್ತು. ಅಂತೆಯೇ ಪ್ರಜರ ನೆತ್ತರಿನಿಂದಲೇ ತಮ್ಮ ಬೊಜ್ಜು ಬೆಳೆಸಿದ್ದ ಕೆಲವರು ಖದೀಮರು ಬ್ರಿಟಿಷರ ಪ್ರಶಸ್ತಿ, ಪ್ರಶಂಸೆಗಳಿಗಾಗಿ ಬಾಯಿ ತೆರೆದುಕೊಂಡು ತಮ್ಮ ರಾಷ್ಟ್ರ, ತಮ್ಮ ಸಂಸ್ಕೃತಿ ಹಾಗೂ ತಮ್ಮ ತನುವನ್ನೇ ಮರೆತು ವರ್ತಿಸುತ್ತಿದ್ದ ಮತಿಹೀನರು ಹೇಳಹೆಸರಿಲ್ಲದಂತಾದರು.

ಬ್ರಿಟಿಷ್ ಆಳ್ವಿಕೆಯಲ್ಲಿ ಸುಮಾರು ೫೬೨ ರಾಜ್ಯಗಳೂ, ಹದಿನೆಂಟು ನೇರ ಆಳ್ವಿಕೆಯ ವಿಭಾಗಗಳೂ ಇದ್ದುವು. ಸ್ವಾತಂತ್ರ್ಯ ಬಂದ ವರುಷವೇ ಕೇವಲ ೨೬ ಪ್ರಾಂತಗಳಾದುವು. ೧೯೫೫ ಸೆಪ್ಟೆಂಬರ್‌ನ 'ಪ್ರಾಂತ ಪುನರ್ವಿಂಗಡಣಾ ಸಮಿತಿ' ಪ್ರಾಂತಗಳ ಸಂಖ್ಯೆಯನ್ನು ಹದಿನಾರಕ್ಕಿಳಿಸಿತು. ಮತ್ತು ಮೂರು ಪ್ರತ್ಯೇಕ ಜಿಲ್ಲೆಗಳು ಕೇಂದ್ರದಿಂದ ನೇರ ಆಡಳಿತಕ್ಕೊಳಗಾದುವು. ಆದರೆ ಕೆಲವು ಕಾರಣಗಳಿಂದಾಗಿ ಅನೇಕ ಸಮಸ್ಯೆಗಳು ಭೂತಾಕಾರ ತಾಳಿದುವು. ಉದಾಹರಣೆಗೆ : ಕಾಶ್ಮೀರ, ಹೈದರಾಬಾದ್ ಮತ್ತು ಜುನಾಘಡ್ ಭಾರತದ ಭೌಗೋಳಿಕ ವಲಯದಲ್ಲಿದ್ದರೂ ಇವು ಭಾರತದ ಪ್ರಭುತ್ವಕ್ಕೆ (ಭಾರತ ರಿಪಬ್ಲಿಕ್ ಆಗುವ ಮುನ್ನ ಪ್ರಭುತ್ವ ಅಥವಾ ಡೊಮಿಯನ್ ಸರ್ಕಾರ ಆಗಿತ್ತು) ಸೇರದೆ ತಟಸ್ಥವಾದುವು. ಮಿಕ್ಕೆಲ್ಲಾ ರಾಜ್ಯಗಳೂ ಡೊಮಿನಿಯನ್ನಿಗೆ ಸೇರಿದುವು. ಈ ತಟಸ್ಥ ರಾಜ್ಯಗಳೇ ಭಾರೀ ಗೊಂದಲ ನಡೆಸಿದುವು ಭರತಖಂಡದಲ್ಲಿ.

ಕಾಶ್ಮೀರ ಹೇಗೆ ನೆಹರೂರವರ ತೌರೂರೋ, ಜುನಾಘಡ್ ಸರ್ದಾರ್ ಪಟೇಲರ ತಂದೆಯ ಮನೆ ! ಹೇಗೆ ಕಾಶ್ಮೀರದಲ್ಲಿ ಹಿಂದೂ ರಾಜನಿದ್ದು ಮುಸಲ್ಮಾನರೇ ಹೆಚ್ಚು ಪ್ರಜೆಗಳಿದ್ದರೋ ಹಾಗೆ ಹೈದರಾಬಾದು ಮತ್ತು ಜುನಾಘಡಗಳಲ್ಲಿ ಮುಸಲ್ಮಾನ ಸುಲ್ತಾನರು, ಹೆಚ್ಚು ಪ್ರಜೆಗಳು ಹಿಂದೂಗಳು. ಆದರೆ ಸುಲ್ತಾನರ ದೌಲತ್ತು ಬಣ್ಣನೆಗೆ ಮೀರಿದ್ದು. ಜುನಾಘಡದ ನವಾಬ ಪ್ರಜೆಗಳ ಅನುಮತಿಯನ್ನು ಕೇಳದೆ ತನ್ನ ರಾಜ್ಯವನ್ನು ಪಾಕೀಸ್ತಾನಕ್ಕೆ ಸೇರಿಸಲು ಯತ್ನಮಾಡಿದ. ಅದಿರುವುದೂ ಕೇವಲ ನಾಲ್ಕು ಸಾವಿರ ಚದರ ಮೈಲಿಗಳು. ಆದರೆ ಅಲ್ಲಿಯ ಜನತೆಯ ಆತ್ಮರಕ್ಷಣೆಯಲ್ಲಿ ಭಾರತಕ್ಕೂ ಹಕ್ಕುಂಟು. ಆದ್ದರಿಂದ ಭಾರತ ತನ್ನ ಸೇನೆ ಕಳುಹಿಸಿತು. ಜುನಾಘಡದ ನವಾಬ ಆಡಳಿತವನ್ನೆಲ್ಲಾ ತನ್ನ ದಿವಾನನ ವಶಕ್ಕೆ ಕೊಟ್ಟು ಪಾಕಿಸ್ತಾನಕ್ಕೆ ಓಡಿದ. ದಿವಾನ ಭಾರತ ಸರ್ಕಾರಕ್ಕೆ ಎಲ್ಲ ರಾಜ್ಯಗಳನ್ನು ಒಪ್ಪಿಸಿಕೊಟ್ಟ.

ಆದರೆ ಈ ಸಣ್ಣ ಪ್ರಾಂತದ ಜಗಳ ಬಹಳೇ ದೊಡ್ಡದಾಗಿ ಭಾರತ ಪಾಕಿಸ್ತಾನಗಳಿಗೆ ದೇಷ ಹೆಚ್ಚಿಸಿತು. "ಒಪ್ಪಿಗೆಯ ವಿಚಾರವಾಗಿ ಎಲ್ಲಿ ಅಭಿಪ್ರಾಯ ಭೇದವಿರುತ್ತದೋ ಅಂತಹ ಕಡೆಯಲ್ಲಿ ಬಹು ಜನಾಭಿಪ್ರಾಯವೇ ಅಂತಿಮವಾದದ್ದು" ಎಂಬ ನಿಯಮವನ್ನು ಲಾರ್ಡ್ ಮೌಂಟ್ ಬ್ಯಾಟನ್‌ರವರು ತಿಳಿಸಿದ್ದರು. ಅದರ ಮೇರೆಗೆ ನೆಹರೂ ಮೊದಲಾದವರು ಒಪ್ಪಿ ಜುನಾಘಡದಲ್ಲಿ ಚುನಾವಣೆಗಿಟ್ಟರು. ೧೯೪೦ ಜನವರಿ ೧೨ರಿಂದ ೧೮ರವರೆಗೂ

ನಡೆದು ೧೯೦೮೭೦ ಓಟುಗಳಲ್ಲಿ ಭಾರತಕ್ಕೆ ೧೯೦೭೭೯ ಓಟುಗಳು ಬಂದಿದ್ದವು. ಜುನಾಘಡ್ ಭಾರತಕ್ಕೆ ಸೇರಿದಂತಾಯಿತು.

ಹೈದರಾಬಾದಿನದು ಜುನಾಘಡಕ್ಕಿಂತ ವಿಚಿತ್ರವಾದ ಸಮಸ್ಯೆಯಾಗಿತ್ತು. ಪ್ರಜಾಸಂಖ್ಯೆ ೧ ಕೋಟಿ ೭೦ ಲಕ್ಷ. ವಿಸ್ತೀರ್ಣ ೮೩ ಸಾವಿರ ಚದರ ಮೈಲಿಗಳು. ಫ್ರಾನ್ಸಿನಷ್ಟು ವಿಸ್ತಾರವಾದ, ಭಾರತದ ಹೃದಯದಲ್ಲಿರುವ ಈ ಪ್ರಾಂತ ಪಾಷಂಡಿಯ ಸ್ವೇಚ್ಛಾಚಾರಕ್ಕೆ ಸಿಕ್ಕಿ ಬಲಿಯಾಗಿತ್ತು. ತುಂಬಾ ಹಿಂದೂಗಳೇ, ಆದರಡೆ ಆಳುವವನು ಮುಸಲ್ಮಾನ ನಿಜಾಮ್ – ಉಲ್ – ಮುಲ್ಕ್ (Regulator of the State). ಈತನಿಗೆ ಭಾರತದ ಅನ್ನ ಬೇಕು, ಹೊನ್ನು ಬೇಕು, ಇಲ್ಲಿನ ನೆಲ, ನೀರು ಎಲ್ಲಾ ಬೇಕು. ಆದರೆ ಭಾರತೀಯರೊಡನೆ ಕೂಡಿ ಬಾಳುವುದು ಮಾತ್ರ ಬೇಡ. ಈತನ ವಿಲಾಸಕ್ಕೆ ಇನ್ನೂರು ಜನ ಹೆಂಡತಿಯರು (ಜಾತಿಕೆಟ್ಟ ಹಿಂದೂ ಸ್ತ್ರೀಯರೆಷ್ಟು ಜನವೋ!) ಎಂಬತ್ತು ಜನ ಮಕ್ಕಳು, ಕೋಟಿ ಕ್ವಿಂಟಾಲು ಬಂಗಾರ, ಲೆಕ್ಕವಿಲ್ಲದಷ್ಟು ವಜ್ರ, ವೈಢೂರ್ಯ, ಲಕ್ಷಾಂತರ ಮನೆ ಇವೆಲ್ಲಾ ಸಾಲದೆ ಬಂದುವು. ನಮ್ಮ ಜನರ ರಕ್ತ ಹೀರಿ ಕೊಬ್ಬಿದ ಈ ಪ್ರಾಣಿ ಮೋಸದಿಂದ ಹೈದರಾಬಾದನ್ನು ಪಾಕಿಸ್ತಾನಕ್ಕೆ ಸೇರಿಸಲು ಯತ್ನ ನಡೆಸಿದ. ಹೈದರಾಬಾದಿನಲ್ಲಿ ರಜಾಕರು ಎಂಬ ಪುಂಡರ ಗುಂಪೊಂದಿತ್ತು. ಅದಕ್ಕೆ ಒಳಗಿಂದೊಳಗೆ ನೆರವು ನೀಡಿ ಪುಂಡರು ದಂಗೆ ಏಳಲು ಅವಕಾಶ ಮಾಡಿಕೊಟ್ಟ. ಆ ಪಾಪಿಗಳು ಮಾಡದ ಪಾಪವಿಲ್ಲ ! ಹೆಂಗಸರ ಮಾನಭಂಗ, ಮಕ್ಕಳ ಪ್ರಾಣಹರಣ, ಹಿರಿಯರ ಅಪಮಾನ ಹೀಗೆಲ್ಲಾ ನಡೆಸಿದರು.

ಭಾರತ ಸರ್ಕಾರ ಎಷ್ಟೇ ಬಾರಿ ಎಚ್ಚರಿಕೆ ಕೊಟ್ಟರೂ ನಿಜಾಮ ಅರಿತುಕೊಳ್ಳಲಿಲ್ಲ. ಸಿಕಂದರಾಬಾದಿನ ಅರಮನೆಯಲ್ಲಿ ಪಾಕಿಸ್ಥಾನದ ಕನಸು ಕಾಣುತ್ತಿದ್ದ ! ಅಲ್ಲದೆ ಗುಟ್ಟಾಗಿ ತನ್ನ ಪ್ರಧಾನಿ ಮೀರ್ ಲಾಯಿಖ್ ಆಲಿಯನ್ನು 'ಜಿಯಾರತ್'ನಲ್ಲಿ ಸಾಯುತ್ತಾ ಬಿದ್ದಿದ್ದ ಜಿನ್ನಾನ ಬಳಿಗೆ ಕಳುಹಿಸಿ ಯಾವುದೋ ಗುಪ್ತಾಕಾರಾಸ್ತಾನ ನಡೆಸಿದ.

ರಜಾಕರ ಹಾವಳಿ ಹೆಚ್ಚಾಯಿತು. ಅವರ ಮೇಲೆ ಕ್ರಮ ಕೈಗೊಳ್ಳಬೇಕಾಯಿತು. ಆದರೆ ನೆಹರೂ ಹಿಂಜರಿದರು. ಸರ್ದಾರ್ ಬಿಡಲಿಲ್ಲ. ಸಪ್ಟೆಂಬರ್ ೧೩ರಂದು ಭಾರತದ ಸೇನೆ ಹೈದರಾಬಾದು ಮುತ್ತಿತು. ದಾರಿ ಕಾಣದೆ ನಿಜಾಮ ಶರಣಾಗತನಾದ. ೧೭ರ ಬೆಳಗ್ಗೆ ಹೈದರಾಬಾದು ರೇಡಿಯೋ ಶರಣಾಗತಿಯ ವಿಚಾರವನ್ನು ತಿಳಿಸಿತು. ೧೯೪೯ ನವೆಂಬರ್ ೨೩ರಂದು ನಿಜಾಮ ಕೆಲವು ವೈಯಕ್ತಿಕ ಬೇಡಿಕೆಗಳನ್ನು ಭಾರತ ಸರ್ಕಾರದ ಮುಂದಿಟ್ಟು ಭಾರತದೊಂದಿಗೆ ಬೆರೆಯಲು ತನ್ನ ಒಪ್ಪಿಗೆ ಕೊಟ್ಟ. ತನ್ನ ಪಾಕಿಸ್ತಾನದ ಕನಸಿನ ಗೋಪುರ ಎಲ್ಲೋ ಗಾಳಿಯಲ್ಲಿ ತೂರಿಹೋಯಿತು. ಕೆಲವು ದಿನ ರಾಜಪ್ರಮುಖ ಅಥವಾ ಗೌರ್ನರಾಗಿ ಮುಂದುವರಿದ.

ಕಾಶ್ಮೀರದ್ದಂತೂ ಬಿಡಿಸಲಾಗದ ಒಗಟೆ, ಇಂದಿಗೂ ಬಗೆ ಹರಿಯದಿದೆ. ಆ ಘಳಿಗೆ ಬರುವುದೆಂದೋ ಅದೂ ಸಹ ತಿಳಿಯದಾಗಿದೆ. ಕಾಶ್ಮೀರದ್ದು ಸಮಸ್ಯೆಯೇ ಇಲ್ಲ ಎಂದು ಹೇಳಿದರೂ ಅದು ಹೇಳಲಸಾಧ್ಯವಾದ ಸಮಸ್ಯೆಯಾಗಿ ನಿಂತಿದೆ.

ನೆಹರೂಜಿಯವರಿಗೆ ಕಾಶ್ಮೀರವೆಂದರೆ ಪಂಚಪ್ರಾಣ. ಅವರ ಪೂರ್ವಜನರ ಜನ್ಮಸ್ಥಳ ಅಂತಲ್ಲ, ಅದರ ಪ್ರಾಕೃತಿಕ ಸೌಂದರ್ಯ ! ಚೆಲುವಿನಾಗರವಾದ ಕಾಶ್ಮೀರ ಅವರನ್ನು ಆಗಾಗ ಕೈ ಬೀಸಿ ಕರೆದು ನಲಿಸಿ ತಣಿಸುತ್ತಿತ್ತು. ಅದರಿಂದಾಗಿ ಅವರಿಗೆ ಒಲವು ಹೆಚ್ಚು.

ಕಾಶ್ಮೀರದ ವಿಸ್ತೀರ್ಣ ೮೪,೪೭೧ ಚದರಮೈಲಿಗಳು. ಸುಮಾರು ೪೫ ಲಕ್ಷ ಪ್ರಜಾಸಂಖ್ಯೆ. ಅದರಲ್ಲಿ ಶೇಕಡ ೭೭.೧೧ ಭಾಗ ಮುಸ್ಲಿಮರು, ಶೇಕಡ ೨೦ ಭಾಗ ಹಿಂದೂಗಳು, ೨% ಸಿಕ್ಕರು, ೫೦ ಸಾವಿರ ಲಡ್ಡಾಕ್ ಭಾಗದಲ್ಲಿ ಬೌದ್ಧರು, ಇದರ ಗಡಿ U.S.S.R. ಚೈನ, ಆಫ್ಘಾನಿಸ್ತಾನ, ಪಾಕಿಸ್ತಾನ ಮತ್ತು ಇಂಡಿಯ. ಇಷ್ಟು ವಿಸ್ತಾರ ರಾಜ್ಯ ನಿರಕ್ಷಕರ ನೆಲೆಬೀಡು. ಸುಮಾರು ಶೇಕಡ ೯೦ ಜನ ಅವಿದ್ಯಾವಂತರು. ಕೆಲವರು ವಿದ್ಯಾವಂತರೆನಿಸಿಕೊಂಡರೂ ಬುದ್ಧಿವಂತರೆನಿಸಿಕೊಳ್ಳುವುದು ಕಷ್ಟ. ಹೀಗಿದೆ ಅಲ್ಲಿಯ ಪರಿಸ್ಥಿತಿ. ಆಳುವವನು ಹಿಂದೂ ರಾಜ ಹರೀಸಿಂಗ್. ಆದರೆ ಆತ ಅಸಮರ್ಥ. ದಕ್ಷತೆ ಸಾಲದು. ಸ್ವಬುದ್ಧಿಯೂ ಅಷ್ಟಕ್ಕಷ್ಟೆ. ಸ್ಥಿರಬುದ್ಧಿಯಿಂದ ಒಂದು ನಿಲುವನ್ನು ಆತ ಆಶ್ರಯಿಸದೆ ಭಾರತ, ಪಾಕಿಸ್ತಾನಗಳ ನಡುವೆ ಗೊಂದಲಕ್ಕೆ ಕಾರಣನಾದ.

ಇದಲ್ಲದೆ ಷೇಕ್ ಮೊಹಮ್ಮದ್ ಅಬ್ದುಲ್ಲನ ಅವಾಂತರ ಹೇಳತೀರದು. ಕೆಲಸವಿಲ್ಲದೆ ಅಲ್ಲೆಲ್ಲಾ ಅಲೆದಾಡಿಕೊಂಡಿದ್ದ ಆತ "ಕಾಶ್ಮೀರದ ಸಿಂಹ" (ಷೇರ್ – ಏ – ಕಾಶ್ಮೀರ್) ಆದ. ಆಗಿನ್ನೂ ೨೫ರ ವರ್ಷದ ಯುವಕ. ೧೯೩೨ರಲ್ಲಿ ಮುಸಲ್ಮಾನರನ್ನೆಲ್ಲಾ ಸೇರಿಸಿಕೊಂಡು 'ಸಮಸ್ತ ಜಮ್ಮು ಮತ್ತು ಕಾಶ್ಮೀರ ಮುಸ್ಲಿಮರ ಕಾನ್ಫೆರೆನ್ಸ್ (All Jammu & Kashmir Muslim Conference) ಎಂಬ ಸಂಸ್ಥೆಯನ್ನು ಸ್ಥಾಪಿಸಿ, ತಾನೇ ಅದರ ಚಾಲಕ ಅಧ್ಯಕ್ಷನಾದ. ಮೊದಮೊದಲು ಈತನಿಗೆ ಜಾತ್ಯಾತೀತ ರಾಜಕೀಯದಲ್ಲಿ ಹೆಚ್ಚು ಆಸಕ್ತಿ ಇತ್ತು. ಅದರಿಂದಾಗಿ ರಾಷ್ಟ್ರೀಯ ಕಾಂಗ್ರೆಸ್ಸಿನ ರೀತಿನೀತಿಗಳು ಹಿಡಿಸಿದವು. ಸ್ವಾತಂತ್ರ್ಯ ಪೂರ್ವದಲ್ಲೇ ನೆಹರೂಜಿಯವರೊಡನೆ ವಿಶೇಷ ಪ್ರೀತಿ ವಿಶ್ವಾಸಗಳನ್ನು ಬೆಳೆಸಿದ. ನೆಹರೂ ಸಹ ಅವನಲ್ಲಿ ಬಹಳೇ ವಿಶ್ವಾಸವಿಟ್ಟಿದ್ದರು. ೧೯೩೯ ಜೂನ್‌ನಲ್ಲಿ All Jammu and Kashmir

Muslim Conference ಎಂಬ ಹೆಸರನ್ನು ಬದಲಿಸಿ All Jammu and Kashmir National Confefrence ಎಂದು ಕರೆದ. 'ಮುಸ್ಲಿಂ' ಎಂಬ ಮತೀಯ ಪಟ್ಟಿಯನ್ನು ಕಿತ್ತುಹಾಕಿ ತನ್ನ ವಿಶಾಲ ಮನೋಭಾವವನ್ನು ವ್ಯಕ್ತಪಡಿಸಿದ. ಆದರೆ ಇವನ ಒಡನಾಡಿಯೇ ಆದ ಚೌಧರಿ ಗುಲಾಮ್‌ಬ್ಬಾಸ್ ಎಂಬುವನು ಮುಸ್ಲಿಂ ಕಾನ್ಫರೆನ್ಸ್‌ನನ್ನೇ ಮುಂದುವರಿಸಿ, ಪಾಕಿಸ್ತಾನದ ಮುಸ್ಲಿಂ ಲೀಗಿಗೆ ಸಮೀಪವರ್ತಿಯಾಗುತ್ತಾ ಬಂದ; ಷೇಕ್ ಕಾಂಗ್ರೆಸ್‌ಗೆ ಹತ್ತಿರವಾಗುತ್ತಾ ಬಂದ.

೧೯೪೬ರ ಮೇನಲ್ಲಿ ಅಬ್ದುಲ್ಲ 'ಕಾಶ್ಮೀರದಿಂದ ತೊಲಗಿರಿ' ಎಂದು ಅಲ್ಲಿನ ಮಹಾರಾಜನ ವಿರುದ್ಧ ಚಳವಳಿ ನಡೆಸಿದ. ಪರಿಣಾಮವಾಗಿ ಆತನಿಗೆ ಒಂಬತ್ತು ವರ್ಷಗಳ ಸೆರೆಮನೆ ವಾಸ ಲಭಿಸಿತು. ಆದರೆ ನೆಹರೂಜಿ ತಮ್ಮ ಗೆಳೆಯನ ಬಿಡುಗಡೆಗಾಗಿ ಬಹಳ ಶ್ರಮಿಸಿದರು. ಕಾಶ್ಮೀರಕ್ಕೆ ಕಾಲಿಟ್ಟು ತಾವೂ ದಸ್ತಗಿರಿಯಾದರು. ಕೆಲವು ಗಂಟೆಗಳು ಜೈಲಿನಲ್ಲಿದ್ದು ಬರಬೇಕಾಯಿತು. ಅಬ್ದುಲ್ಲ ೧೯೪೭ರ ಸೆಪ್ಟೆಂಬರ್‌ವರೆಗೆ ಜೈಲಿನಲ್ಲಿದ್ದ.

ಭಾರತ ಇಬ್ಭಾಗವಾದ ಮೇಲೆ ಪಾಕಿಸ್ತಾನಕ್ಕೋ ಭಾರತಕ್ಕೋ ಸೇರಿಬಿಡಿ ಎಂದು ಮೌಂಟ್ ಬ್ಯಾಟನ್ನರು ಕಾಶ್ಮೀರದ ಮಹಾರಾಜನನ್ನು ಪ್ರಜೆಗಳನ್ನು ಬಹು ಒತ್ತಾಯಪಡಿಸಿ ಕೇಳಿದರು. ಆದರೆ ಅವರು ಯಾವ ಒಂದು ನಿರ್ಧಾರಕ್ಕೂ ಬರಲಿಲ್ಲ. ಆಗ ಮೌಂಟ್ ಬ್ಯಾಟನ್ ಸ್ಪಷ್ಟವಾಗಿ ತಿಳಿಸಿಬಿಟ್ಟ :

ಕಾಶ್ಮೀರ ಸೇರುವುದು ಬಿಡುವುದು ಅದರ ಜನತೆಗೆ ಸಂಬಂಧಿಸಿದ್ದು. ಒಂದು ವೇಳೆ ಪಾಕಿಸ್ತಾನಕ್ಕೆ ಸೇರಿದರೂ ಭಾರತ ಅದರಲ್ಲಿ ಪಾಲು ಕೇಳಬಾರದು ಎಂದು.

"ಆಗಸ್ಟ್ ೧೪ರೊಳಗಾಗಿ ಆತ ಪಾಕಿಸ್ತಾನಕ್ಕೆ ಸೇರುವುದಾಗಿ ಹೇಳಿದ್ದಿದ್ದರೆ ಭಾರತದ ಯಾವುದೇ ತಕರಾರು ಅಥವಾ ದೂರು ಅವನ ಮೇಲೆ ಬರುತ್ತಿರಲಿಲ್ಲ. ಆ ಭರವಸೆಯನ್ನು ನಾನು ಕೊಡುತ್ತಿದ್ದೆ. ಅಥವಾ ಆಗಸ್ಟ್ ೧೪ರೊಳಗೆ ಭಾರತಕ್ಕೆ ಸೇರಲು ಒಪ್ಪಿದ್ದರೂ ಪಾಕಿಸ್ತಾನ ಅಲ್ಲಿ ಕಾಲಿಡುತ್ತಿರಲಿಲ್ಲ, ಮತ್ತೆ ಯಾವುದೇ ವಿಚಾರಕ್ಕೂ ತಲೆ ಹಾಕುತ್ತಿರಲಿಲ್ಲ. ಆದರೆ ತೊಂದರೆ ಹುಟ್ಟಿದ್ದು ಯಾವೆಡೆಗೂ ಅದು ಸೇರದಿದ್ದುದೇ. ಕಾಶ್ಮೀರದ ಈ ದುರದೃಷ್ಟಕ್ಕೆ ಮುಖ್ಯ ಕಾರಣ ಅಲ್ಲಿನ ಮಹಾರಾಜ" ಎಂದರು ಮೌಂಟ್ ಬ್ಯಾಟನ್.

ಇಷ್ಟಲ್ಲದೆ ಭಾರತಕ್ಕೂ ಒಂದು ವಿವೇಕದ ಮಾತು ಹೇಳಿದರು.....

ಅನಂತರ ಕಾಶ್ಮೀರ ಎರಡು ದೋಣಿಗಳಲ್ಲೂ ಕಾಲಿಟ್ಟುಕೊಂಡು ಸಾಗಲು ಯತ್ನಿಸಿತು. ತನ್ನ ಅಭದ್ರವಾದ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳಲು ಅತ್ತ ಪಾಕಿಸ್ತಾನಕ್ಕೂ ಇತ್ತ ಭಾರತಕ್ಕೂ ಒಂದೊಂದು ಕೈನೀಡಿತು ನೆರವಿಗಾಗಿ. ಆಗಸ್ಟ್ ೧೪ರಂದು ಪಾಕಿಸ್ತಾನ್ ಸರ್ಕಾರದ ನೆರವು ಬೇಡಿ ಕಾಶ್ಮೀರದೊಡನೆ ಒಪ್ಪಂದ ಪತ್ರಕ್ಕೆ ಸಹಿಹಾಕಿತು. ಪೋಸ್ಟ್ ಟೆಲಿಗ್ರಾಫ್ ಮತ್ತು ಸಂಚಾರ ಸಾರಿಗೆಗಳ ಬಗ್ಗೆ ನೆರವು ಪಡೆಯಿತು. ಅದೇ ರೀತಿ ಒಪ್ಪಿಗೆ ಕೊಡುವುದು ಭಾರತಕ್ಕೆ ಬೇಕಿರಲಿಲ್ಲ. ನೆಹರೂಜಿ ಹೇಳಿಬಿಟ್ಟರು 'ಕಾಶ್ಮೀರ ಯಾವುದಾದರೂ ಕಡೆಗೆ ಬರಲಿ. ಅದರ ಸ್ವಾತಂತ್ರ್ಯ ಭದ್ರಗೊಳ್ಳುತ್ತದೆ. ಆದರೆ ಈ ರೀತಿಯ ಇಬ್ಬಂದಿಯಿಂದ ಅದಕ್ಕೆಂದಿಗೂ ಕ್ಷೇಮವಾಗದು' ಎಂದು.

೧೯೪೭ರಲ್ಲಿ ಬಹು ದೊಡ್ಡ ಸಭೆ ನಡೆಯಿತು ಕಾಶ್ಮೀರದಲ್ಲಿ. ಪೂಂಚ್ ಭಾಗದಲ್ಲಿ ತೆರಿಗೆ ಕೊಡುವುದಿಲ್ಲವೆಂದು ಜನ ವಿರೋಧಿಸಿದರು. ಆದರೆ ಕಟುಕ ರಾಜ ಅನೇಕರನ್ನು ಗುಂಡಿಟ್ಟು ಹೊಡೆಸಿದ. ಆಗ ಹಿಂದೂ, ಸಿಖ್ ಮತ್ತು ಮುಸ್ಲಿಮರಲ್ಲಿ ಗೊಂದಲವೆದ್ದಿತು. ಈ ಮಧ್ಯೆ ಪಾಕಿಸ್ತಾನದಿಂದ ಬಂದ ನಿರಾಶ್ರಿತರು ಜಮ್ಮು, ಚೆನಾನೂ ಮತ್ತು ಪೂಂಚ್ ಭಾಗಗಳಲ್ಲಿ ಸೇರಿದರು. ಇಲ್ಲಿನ ಮುಸ್ಲಿಂ ರೈತರಿಗೂ ಇವರಿಗೂ ಕಿತ್ತಾಟ ಪ್ರಾರಂಭವಾದುವು. ಗುಡ್ಡಗಾಡಿನ ಪಠಾಣರನೇಕರು ಕಾಶ್ಮೀರದೊಳಕ್ಕೆ ನುಗ್ಗಿ ಹಿಂದೂ, ಮುಸ್ಲಿಂ, ಸಿಖ್ ಎನ್ನದೆ ಬೇಕಾದಷ್ಟು ಜನರ ಸಂಪತ್ತನ್ನು ಲೂಟಿ ಮಾಡಹತ್ತಿದರು. ಪ್ರಸಿದ್ಧ ದೋಗ್ರಾಗಳು ದಂಗೆ ಎದ್ದರು.

ಅತ್ತ ಗಡಿನಾಡಿನ ಗಾಂಧಿ ಖಾನ್ ಅಬ್ದುಲ್ ಗಫಾರ್ ಖಾನರು ಪಠಾಣರಿಗೇ ಮೀಸಲಾದ "ಫಖ್ತೂನಿಸ್ತಾನ್' ಕೇಳಹತ್ತಿದರು. ಜಾತೀಯ ಗಲಭೆಯಲ್ಲಿ ಸಾಮೂಹಿಕ ಕೊಲೆಗಳು ನಡೆದು, ರಕ್ತ ಕೋಡಿ ಹರಿಯಿತು. ಅಕ್ಟೋಬರ್ ಮಧ್ಯದ ಹೊತ್ತಿಗೆ ಈ ಕಾಡು ದಂಗೆಕೋರರು ಸಿಕ್ಕಾಪಟ್ಟೆ ಲೂಟಿ ಮಾಡಿದರು. ಕಾಶ್ಮೀರದ ರಾಜಧಾನಿ ಶ್ರೀನಗರದ ಕಣಿವೆ ಮಾರ್ಗವಾಗಿ ನುಗ್ಗಿ ಬಂದು ಕೇವಲ ನಾಲ್ಕೇ ದಿನಗಳಲ್ಲಿ 'ಊರಿ' ಎಂಬಲ್ಲಿ ಕಗ್ಗೊಲೆ ನಡೆಸಿದರು. ಅಲ್ಲೆಲ್ಲಾ ಸರ್ವನಾಶ ಮಾಡಿ ಅಕ್ಟೋಬರ್ ೨೬ರಂದು ಈ ಕಾಡರು ಶ್ರೀನಗರಕ್ಕೆ ೩೫ ಮೈಲಿ ಮಾತ್ರ ದೂರವಿದ್ದ ಬರಾಮುಲ ಎಂಬಲ್ಲಿಗೆ ನುಗ್ಗಿದರು. ಕೇವಲ ಕೆಲವೇ ಗಂಟೆಗಳಲ್ಲಿ ಬರಾಮುಲ ರಕ್ತಸ್ನಾನ ಮಾಡಿತು. ೧೪ ಸಾವಿರ ಜನರಲ್ಲಿ ೩ ಸಾವಿರ ಮಾತ್ರ ಉಳಿದಿದ್ದರು.

ಮಹಾರಾಜ ಹರೀಸಿಂಗ್‌ನಿಗೆ ಆಸನಕಂಪವಾಗತೊಡಗಿತು. ಅಕ್ಟೋಬರ್ ೨೪ರಂದು, ಯಾವ ಖಚಿತ ನಿರ್ಧಾರಕ್ಕೂ ಬರದೆ ಭಯಭ್ರಾಂತನಾಗಿ ಭಾರತದ ನೆರವು ಕೋರಿ ಪತ್ರ ಕಳುಹಿಸಿದ. ಅದರಲ್ಲಿ ಭಾರತಕ್ಕೆ ಕಾಶ್ಮೀರ ಸೇರುವುದಾಗಿ ಒಪ್ಪಿಗೆ ಕೊಟ್ಟಿದ್ದ. ೨೪ರಂದು ದೆಹಲಿಯಲ್ಲಿ ಸೇರಿದ ರಕ್ಷಣಾ ಸಮಿತಿ ಆತನ ಕೋರಿಕೆಯನ್ನು ಪರಿಶೀಲಿಸಿತು. ಅದಕ್ಕೆ ಷೇಕ್ ಅಬ್ದುಲ್ಲಾರವರೂ ರಾಜನ ಪರವಾಗಿ ನೆರವು ನೀಡಲು ಪ್ರಾರ್ಥಿಸಿದರು. ಆದರೆ ಮೌಂಟ್

ಬ್ಯಾಟನ್ ಒಂದು ಅಭಿಪ್ರಾಯ ಸೂಚಿಸಿದರು. 'ಕಾಶ್ಮೀರ ಭಾರತದೊಂದಿಗೆ ಸೇರದ ಹೊರತು ಅದಕ್ಕೆ ಮಿಲಿಟರಿ ನೆರವು ನೀಡುವುದು ಕಾನೂನು ರೀತ್ಯಾ ತಪ್ಪಾಗುತ್ತದೆ. ಆದ್ದರಿಂದ ಮೊದಲು ಕಾಶ್ಮೀರ ಭಾರತದಲ್ಲಿ ಸೇರಿಕೊಳ್ಳಲಿ' ಎಂದರು.

ಇದರ ವಿಚಾರವಾಗಿ ಮಾತುಕತೆ ನಡೆಸಲು ವಲ್ಲಭಭಾಯಿಯವರ ಬಲಭುಜದಂತಿದ್ದ State Secretary V.P.ಮೆನನ್ ರಾಯಭಾರ ಹೊತ್ತು ದೆಹಲಿಯಿಂದ ಶ್ರೀನಗರಕ್ಕೆ ನಡೆದರು. ಮಹಾರಾಜನನ್ನು ಕಂಡು ಮಾತನಾಡಿ, ಅವನಿಗೆ ಧೈರ್ಯ ತುಂಬಿ ಹೇಳಿದರು. ನೀವು ಭಾರತದೊಂದಿಗೆ ಸೇರದ ಹೊರತು, ಭಾರತ ಸೈನ್ಯ ಕಳುಹಿಸಲು ಸಾಧ್ಯವಿಲ್ಲ. ಮೊದಲು ನೀವು ಸೇರುವ ವಿಚಾರ ತಿಳಿಸಿ ಎಂದು ಹೇಳಿದರು.

ಅಕ್ಟೋಬರ್ ೨೬ರಂದು ಮೌಂಟ್ ಬ್ಯಾಟನ್ನರಿಗೆ ಬರೆದುಕೊಂಡ ಪತ್ರದಲ್ಲಿ ಮಹಾರಾಜ ಭಾರತದೊಂದಿಗೆ ಸೇರಲು ತನ್ನ ಒಪ್ಪಿಗೆಯನ್ನು ಸೂಚಿಸಿ ಸಹಿ ಮಾಡಿ ಕಳುಹಿಸಿದ. ಈ ತೀರ್ಮಾನಕ್ಕೆ ಅಬ್ದುಲ್ಲನ ನ್ಯಾಷನಲ್ ಕಾನ್ಫರೆನ್ಸ್ ಕೂಡ ಸಮ್ಮತಿಸಿತ್ತು. ಈ ಒಪ್ಪಂದದ ಮೇರೆಗೆ ಭಾರತ ಕಾಶ್ಮೀರದ ರಕ್ಷಣೆಗೆ ಸೇನೆ ಕಳುಹಿಸಿತು ಲೆಫ್ಟಿನೆಂಟ್ ಕಲೋನಲ್ ಡಿ. ಆರ್. ರಾಯ್ ಅವರ ಮುಖಂಡತ್ವದಲ್ಲಿ.

ಭಾರತ ಸೇನೆ ಕಾಶ್ಮೀರಕ್ಕೆ ಬಂದಿಳಿತೆಯೆಂಬ ವಿಚಾರ ತಿಳಿದು ಕುತಂತ್ರಿಗಳಾದ ಪಾಕಿಸ್ತಾನಿಗಳು ಗುಪ್ತವಾಗಿ ಕಾಡುಜನರಿಗೆ ಸಹಾಯ ನೀಡುವುದಾಗಿ ತಿಳಿಸಿ, ತಮ್ಮ ದಂಗೆಯನ್ನು ಮುಂದುವರಿಸುವಂತೆ ಹೇಳಿದರು. ಅವರಿಗೆ ಬೇಕಾದ ಆಹಾರ, ಮಿಷನ್‌ಗನ್‌ಗಳು, ಮದ್ದುಗುಂಡುಗಳು ಎಲ್ಲಾ ಒದಗಿಸಿದರು. ಜಿನ್ನಾ ಸಾಹೇಬರು ಸಾಯುತ್ತಿದ್ದರೂ ಕರಾಚಿ ಲಾಹೋರ್‌ಗಳಿಗಾಗಿ ಓಡಾಡಿದರು. ಭಾರತದ ಸೇನಾಬಲದಿಂದ ಕಾಶ್ಮೀರದ ರಕ್ಷಣೆಯೇನೋ ಆಯಿತು. ಆದರೆ ಪಾಕಿಸ್ತಾನದ ಕುತಂತ್ರ ಕುನ್ನಿಗಳು ಬೊಗಳುವುದು ಬಿಡಲಿಲ್ಲ.

ಹಿಂದಿನ ಒಪ್ಪಿಗೆಯ ಪ್ರಕಾರ ಶಾಂತಿ ಸ್ಥಾಪನೆಯದ ಮೇಲೆ ಜನತೆಯ ಒಪ್ಪಿಗೆಯನ್ನು ಪಡೆಯಬೇಕೆಂದು ಮಾತಾಗಿತ್ತು. ಅದೇ ಪಟ್ಟು ಹಿಡಿದು ಪಾಕಿಸ್ತಾನದ ಮತದಾನದ ಮೂಲಕ ಕಾಶ್ಮೀರ ತನ್ನ ನಿಲುವನ್ನು ಸೂಚಿಸಲಿ ಎಂದು ಬಂದರು. ಕಾಶ್ಮೀರ ಭಾರತಕ್ಕೆ ಸೇರಿ ಆಗಿತ್ತು. ಭಾರತದ ಒಂದು ಭಾಗವಾಗಿ ಕಾಶ್ಮೀರ ಬೆರೆತು ಹೋಗಿತ್ತು. ಅದರ ಬಗ್ಗೆ ಮಾತೇ ಎತ್ತುವಂತಿರಲಿಲ್ಲ. ಆದರೂ ಜಗಳಗಂಟಿಗಳು ಕಾಲ್ಕೆರೆದು ಮುಂದೆ ಬಂದರು. ಭಾರತ U.N.O.ದ ಸೆಕ್ಯುರಿಟಿ ಕೌನ್ಸಿಲ್ಲಿಗೆ ಈ ವಿಷಯ ತಂದಿತು.

ನ್ಯಾಯ ದೊರೆಯಬೇಕಾಗಿರುವುದು ಭಾರತಕ್ಕೆ. ಅದು ನೀತಿಯ ನೆಲೆಯಲ್ಲಿ ನಿಂತಿದೆ. ಪಾಕಿಸ್ತಾನದಂತೆ ಅನ್ಯಾಯ, ಅಕೃತ್ಯ, ಅಯೋಗ್ಯತನದ ಹೀನಮಟ್ಟಕ್ಕಿಳಿದಿಲ್ಲ. ನೆಹರೂ ಖಡಾಖಂಡಿತವಾಗಿ ತಿಳಿಸಿದರು – 'ಯುದ್ಧ ನಡೆದದ್ದು ಭಾರತದ ಎಲ್ಲೆಯಲ್ಲಿ. ಆದ್ದರಿಂದ ಭಾರತಕ್ಕೆ ಕಾಲಿಡುವ ಯಾರೇ ದಂಗೆಕೋರರಾಗಲಿ ಅವರನ್ನು ಬಡಿದೋಡಿಸುವುದು ಭಾರತ ಸರ್ಕಾರದ ಆದ್ಯ ಕರ್ತವ್ಯ' ಎಂದು. ದಂಗೆಕೋರರು ಕಾಡುಜನರಾಗಲೀ, ಪಾಕಿಸ್ತಾನಿಗಳಾಗಲೀ ಭಾರತ ಅವಿಭಾಜ್ಯ ಅಂಗವಾದ ಕಾಶ್ಮೀರದ ಮೇಲೆ ಹಕ್ಕಿಲ್ಲ. ಯಾರೇ ಬರಲಿ ಅವರಿಗೆ ತಕ್ಕ ಶಾಸ್ತಿ ಮಾಡುವುದು ಭಾರತದ ಆದ್ಯ ಕರ್ತವ್ಯ. ಅದು ನ್ಯಾಯಬದ್ಧವಾದುದೂ ಆಗಿತ್ತು.

ಹೀಗಿದ್ದರೂ ನ್ಯಾಯ ಧರ್ಮ ಭಾರತದೆಡೆಗಿದ್ದರೂ ಸೆಕ್ಯೂರಿಟಿ ಕೌನ್ಸಿಲ್ ಮೀನ ಮೇಷ ಎಣಿಸಿತು. ನ್ಯಾಯ ತೀರ್ಮಾನ ಅದ ಪಕ್ಷಪಾತ ಬುದ್ಧಿಯನ್ನು ವ್ಯಕ್ತಪಡಿಸಿತು ಕೂಡ.

ಈ ಮಧ್ಯೆ 'ಕಾಶ್ಮೀರದ ಸಿಂಹ' ಗುಹೆಯಿಂದ ಮೇಲೆದ್ದಿತು. ಮೊದಮೊದಲು ಕಾಶ್ಮೀರ ರಾಜನಿಗೆ ವಿರೋಧಿಯಾಗಿದ್ದವನು, ಅವನ ಆಡಳಿತದಲ್ಲಿಯೇ ಮಂತ್ರಿಯಾಗಿ, ಭಾರತ ಬಂಧುವಿನಂತಿದ್ದು ಕಡೆಗೆ ಕಾಶ್ಮೀರದ ಕಷ್ಟಕಾರ್ಪಣ್ಯಗಳು ಹರಿದ ಮೆಲೆ ಅಜಾದ್ ಕಾಶ್ಮೀರದ ಗಲಾಟೆ ತಂದು ಈ ಸಂಚುಗಾರ ಷೇಕ್ ಸೆರೆಮನೆಯಲ್ಲಿದ್ದು ಈಗ ಬಿಡುಗಡೆ ಹೊಂದಿ ಹೊರಗೆ ಬಂದು ತನ್ನ ಕುಟಿಲ ಕಾರಸ್ತಾನವನ್ನು ಪಾಕಿಸ್ತಾನರೊಡನೆ ನಡೆಸುತ್ತಲೇ ಇದ್ದಾನೆ.

ಇದು ಅತೃಪ್ತಿಕರ ಇತಿಹಾಸ ಕಾಶ್ಮೀರದ್ದು.

**ಅವರು ಕಟ್ಟಿದ ನಾಡು**

೧೯೫೦ ಜನವರಿ ೨೬ರಂದು ಕಾಮನ್‌ವೆಲ್ತ್‌ಗೆ ಒಳಪಟ್ಟು ಭಾರತ ರಿಪಬ್ಲಿಕ್ (ಪ್ರಜಾಸತ್ತಾತ್ಮಕ ಗಣರಾಜ್ಯ) ಆಯಿತು. ಸಂಯುಕ್ತ ಸಂಸ್ಥಾನ, ಕೆನಡ, ಬ್ರಿಟನ್, ಫ್ರಾನ್ಸ್ ಮತ್ತು ಸ್ವಿಟ್ಜರ್‌ಲ್ಯಾಂಡಿನ ಮಾದರಿಯಲ್ಲಿ ಭಾರತವೂ ರಿಪಬ್ಲಿಕ್ ತತ್ವಗಳನ್ನು ಪಾಲಿಸಿ ತಾನೂ ಒಂದು ಸ್ವತಂತ್ರ ರಾಷ್ಟ್ರವೆಂದು ಗಣ್ಯತೆ ಪಡೆಯಿತು. ಅಸ್ಪೃಶ್ಯತೆ ತೊಲಗಿತು. ಮೇಲು ಕೀಳುಗಳೆಂಬ ಭಾವನೆ ದೂರವಾಯಿತು. ಸರ್ವರೂ ಸಮಾನರು, ನಾವೆಲ್ಲರೂ ಭಾರತಾಂಬೆಯ ಮಕ್ಕಳು ಎಂಬ ಭಾವನೆ ಬೆಳೆಯಿತು. ಪ್ರತಿ ಭಾರತೀಯನೂ ರಾಷ್ಟ್ರಸಂಬಂಧದಲ್ಲಿ ಸಮಾನ ಹಕ್ಕುದಾರನೆನಿಸಿದ ಸಾರ್ವಜನಿಕ ಮತದಾನ ಪದ್ಧತಿ ಬಂತು. ಇಪ್ಪತ್ತೊಂದು ವರ್ಷ ವಯಸ್ಸಿನ ಪ್ರತಿ ಪ್ರಜೆಯೂ ಹೆಣ್ಣು, ಗಂಡೆಂಬ ಭೇದವಿಲ್ಲದೆ ಓಟು ಮಾಡುವ ಹಕ್ಕು ಪಡೆದರು. ೧೯೫೨ರ ಜನವರಿಯಲ್ಲಿ ನಡೆದ ಪ್ರಪ್ರಥಮ ಸಾರ್ವಜನಿಕ ಚುನಾವಣೆಯಲ್ಲಿ ಸುಮಾರು ೧೭೬,೬೦೦,೦೦೦ ಮತಗಳಲ್ಲಿ ಸುಮಾರು ೧೬೦,೦೦೦,೦೦೦ ಮತಗಳು ಚಲಾಯಿಸಲ್ಪಟ್ಟಿದ್ದವು.

ಸ್ಥಿರತೆ ಹಾಗೂ ಐಕ್ಯತೆಗಳು ಆಗತಾನೇ ಸ್ವಾತಂತ್ರ್ಯ ಪಡೆದ ಭಾರತ ರಾಷ್ಟ್ರಕ್ಕೆ ಅತ್ಯಗತ್ಯವಾಗಿತ್ತು. ಇದು ನೆಹರೂಜಿಯವರ ಹಗಲಿರುಳಿನ ಹಂಬಲವಾಗಿತ್ತು. ಆದ್ದರಿಂದಲೇ ರಿಪಬ್ಲಿಕ್ ಇಂಡಿಯಾ ಬ್ರಿಟಿಷ್ ಕಾಮನ್‌ವೆಲ್ತ್‌ನೊಡನೆ ಸಂಬಂಧವಿಟ್ಟುಕೊಳ್ಳುವ ಯೋಜನೆ ನಡೆಸಿ ಹಾಗೆಯೇ ಮುಂದುವರೆಸಿದರು. ಆದರೆ ಹಲವು ಕಾಂಗ್ರೆಸ್ಸಿಗರಿಗೆ ಇದು ಸರಿಬರಲಿಲ್ಲ. ಅನೇಕರು ವಿರೋಧಿಸಿದರು. ನೆಹರೂಜಿ ಎಲ್ಲರನ್ನೂ ಸಾಂತ್ವನಗೊಳಿಸಿದರು. "ಅನೇಕ ವಿಚಾರಗಳನ್ನು ಭಾರತವು ಕಲಿಯಿಯುವುದಿದೆ. ಅನೇಕ ಅಂಶಗಳನ್ನು ತಿಳಿಯುವುದಿದೆ. ಅನೇಕ ವಿಧದಲ್ಲಿ ತನ್ನನ್ನು ತಾನು ಕಟ್ಟಿಕೊಳ್ಳಬೇಕಾಗಿದೆ. ಅಲ್ಲದೆ ಬ್ರಿಟಿಷ್ ಕಾಮನ್‌ವೆಲ್ತ್‌ನೊಡನೆ ಸಂಪರ್ಕವಿಟ್ಟುಕೊಂಡಾಕ್ಷಣಕ್ಕೇ ಭಾರತ ತನ್ನ ಸ್ವಾತಂತ್ರ್ಯವನ್ನೇನೂ ನೀಗಿಕೊಂಡಂತಾಗುವುದಿಲ್ಲ. ಕಾಮನ್‌ವೆಲ್ತ್‌ನಲ್ಲಿ ಪ್ರತಿರಾಷ್ಟ್ರವೂ ಸರ್ವತಂತ್ರ ಸ್ವತಂತ್ರವಾದುದ್ದು. ಒಂದು ವೇಳೆ ಕಾಮನ್‌ವೆಲ್ತ್ ತಪ್ಪಿ ನಡೆದರೆ ಅದನ್ನು ತಿದ್ದುವ ಹಕ್ಕು ಪ್ರತಿ ರಾಷ್ಟ್ರಕ್ಕೂ ಇದ್ದೇ ಇದೆ" ಎಂದು ತಿಳಿಸಿದರು.

ಒಮ್ಮೆ ತಮ್ಮ ಭಾಷಣದಲ್ಲಿ ಇದೇ ಅಂಶವನ್ನು ಮತ್ತೂ ಸ್ಪಷ್ಟಪಡಿಸಿ ಹಲವರ ಅನುಮಾನವನ್ನು ದೂರಮಾಡಿದರು.

"ಭಾರತ ತನ್ನ ಆತ್ಮವಿಶ್ವಾಸವನ್ನು ಹಾಳುಮಾಡಿಕೊಂಡಿಲ್ಲ. ತನ್ನ ಘನತೆ, ಗೌರವಗಳಿಗೂ ಕುಂದು ತಂದುಕೊಳ್ಳದೆ ಸ್ವಾತಂತ್ರ್ಯಕ್ಕೆ ಧಕ್ಕೆಯನ್ನುಂಟು ಮಾಡಿಕೊಳ್ಳದೆ ತಾನು ಯಾರೊಡನೆ ಬಹು ಹಿಂದಿನಿಂದಲೂ ಹೋರಾಡಿತೊ ಅವರೊಡನೆ ಕೂಡಿ ಬಾಳಲು ಸಿದ್ಧವಿದೆ ಎಂಬುದನ್ನು ಜಗತ್ತಿಗೆ ತೋರಿಸಿಕೊಡಬೇಕೆಂಬುದೇ ನನ್ನ ಮಹದಿಚ್ಛೆಯಾಗಿದೆ. ಈ ನಮ್ಮ ತತ್ವ ಕೇವಲ ನಮ್ಮನ್ನಷ್ಟೇ ಅಲ್ಲ, ಸಮಸ್ತ ವಿಶ್ವವನ್ನೇ ಮಂಗಳದ ಕಡೆಗೆ ಕೊಂಡೊಯ್ಯಬಲ್ಲದೆಂದು ನಾನು ತಿಳಿದಿದ್ದೇನೆ.

ಹಲವರಿಗೆ ಈ ಮಾತು ಹಿಡಿಸಿತು. ಕೃಷ್ಣ ಮೆನನ್, ಸರ್ದಾರ್ ಪಟೇಲ್ ಮೊದಲಾದವರು ಒಪ್ಪಿದರು. ಕಾಂಗ್ರೆಸ್ಸಿನಲ್ಲಿ ಕೆಲವರು ಸ್ವಲ್ಪ ವಿರೋಧಿಸಿದರು. ಎಲ್ಲರಿಗೂ ಹೆಚ್ಚಾಗಿ ಭಾರತ ಕಮ್ಯುನಿಸ್ಟರು, ಬ್ರಿಟಿಷ್ ಕಾಮನ್‌ವೆಲ್ತ್‌ನೊಡನೆ ಮುಂದುವರೆಯಕೂಡದೆಂದು ನಿಷ್ಠುರ ತೆಗೆದರು. ಕ್ರಾಂತಿಗೆ ಕೈ ಹಚ್ಚಿದರು. ನೆಹರೂ ಹೇಳಿದರು, "ಭಾರತದ ಕಮ್ಯೂನಿಸ್ಟ್ ಪಕ್ಷದಂತಹ ಮೂರ್ಖ ಪಕ್ಷ ಪ್ರಪಂಚದಲ್ಲಿ ಇನ್ನಾವುದೂ ಇರಲಾರದು" ಎಂದು.

ವಿದೇಶ ವ್ಯವಹಾರಕ್ಕಿಂತ ದೇಶ ಸುಧಾರಣೆ ಬಹಳ ಕಷ್ಟವೆಂದು ತೋರುತ್ತಿತ್ತು. ಬಾಪೂ ಬದುಕಿದ್ದ ದಿನಕ್ಕಿಂತಲೂ, ಅವರು ತೀರಿದ ಮೇಲೆ ದಿನಗಳು ಬಿಗಿಯಾಗುತ್ತಾ ಬಂದವು. ನೆಹರೂಜಿಯವರ ನೆರವಿಗೆ ವಜ್ರಕಾಯ ಸರ್ದಾರ್ ಪಟೇಲರು ಇದ್ದರು. ಬಾಪೂಜಿಯವರಂತೆಯೇ ಹಿರಿಯರೂ, ಶಾಂತಮೂರ್ತಿಗಳೂ, ಗಣ್ಯರೂ ಆದ ಬಾಬು ರಾಜೇಂದ್ರ ಪ್ರಸಾದರಿದ್ದರು. ಕೃಷ್ಣಮೆನನ್, ಗೋವಿಂದ ವಲ್ಲಭಪಂತ್ ಮೊದಲಾದವರಿದ್ದರು. ದೇಶಕಾರ್ಯ ಹೇಗೋ ಸಾಗುತ್ತಿತ್ತು. ೧೯೪೮ರ ಜೂನ್ ತಿಂಗಳ ಹೊತ್ತಿಗೆ ಸುಮಾರು '೮೦' ಲಕ್ಷ ಜನ ನಿರಾಶ್ರಿತರು ಭಾರತಕ್ಕೆ ಬಂದು ನುಗ್ಗಿದ್ದರು. ೫೦ ಲಕ್ಷ ಪಶ್ಚಿಮ ಪಾಕಿಸ್ತಾನದಿಂದ, ೩೦ ಲಕ್ಷ ಪೂರ್ವ ಪಾಕಿಸ್ತಾನದಿಂದ ಮನೆಯಿಲ್ಲದೆ, ದಿಕ್ಕಿಲ್ಲದೆ, ಅನ್ನಕ್ಕಾಗಿ ಹಾಹಾಕಾರ ಪಡುವ ಈ ನಿರಾಶ್ರಿತ ಬಂಧುಗಳಿಗೆ ಸಹಕಾರ ನೀಡುವುದು ಒಂದು ಮಹಾ ಸಮಸ್ಯೆಯಾಯಿತು ಭಾರತ ಸರ್ಕಾರಕ್ಕೆ.

ಭಾರತ ಸ್ವತಂತ್ರವಾದರೂ ಕೆಲವು ತಲೆನೋವು, ಕಾಲುನೋವುಗಳಿದ್ದವು. ಬ್ರಿಟಿಷರಿಂದಲ್ಲದೆ ಬೇರೆಯವರಿಂದಲೂ ಅಂತಹ ಹಲವು ಯಾತನೆಗಳು ಬಂದೊದಗುತ್ತಿದ್ದವು. ಭಾರತದ ಪೂರ್ವ ತೀರದಲ್ಲಿ ಪಾಂಡಿಚೆರಿ ಫ್ರೆಂಚರ ಅಧೀನದಲ್ಲಿತ್ತು. ಪೂರ್ಣಯೋಗಿ ಅರವಿಂದರು ಅಮರರಾದ ಮಂಗಳದ ಬೀಡು ಅದು. ಅದನ್ನು ತುಳಿದು ನಿಂತಿದ್ದರು ಫ್ರೆಂಚರು. ಇತ್ತ ಪಶ್ಚಿಮ ತೀರದಲ್ಲಿ ಗೋವಾ, ಡಯು, ಡಾಮನ್‌ಗಳು ಬೇರೆ ಪೋರ್ಚುಗೀಸರ ವಶದಲ್ಲಿದ್ದುವು. ಕೊಲೆ, ರಕ್ತಪಾತ ಇವುಗಳೆಲ್ಲಾ ಆಗಿ ಭಾರತಕ್ಕೆ ಕೊಡಬಾರದ ಕಷ್ಟಗಳನ್ನೆಲ್ಲಾ ಕೊಟ್ಟು ಪೋರ್ಚುಗೀಸರು ಭಾರತವನ್ನು ಬಿಟ್ಟು ತೊಲಗಿದರು. ಇದೆಲ್ಲಾ ಸಮಸ್ಯೆಗಳ ಜೊತೆಗೆ ಭಾಷಾವಾರು ಪ್ರಾಂತರಚನೆ, ಗಡಿ ಪ್ರದೇಶಗಳಲ್ಲಿ ಕಿತ್ತಾಟ, ಯಾದವೀ ಕಲಹಗಳು ಇತ್ಯಾದಿ. ಇವೆಲ್ಲವನ್ನೂ ಸುಧಾರಿಸಿಕೊಂಡು ನೆಹರು ರಾಷ್ಟ್ರ ಕಟ್ಟಿದರು. ಪಂಚಶೀಲಗಳು ಪ್ರಪಂಚವನ್ನೇ ಅಚ್ಚರಿಗೊಳಿಸಿದುವು. ಐದು ಆದರ್ಶಗಳಿಂದ ಜಗತ್ತಿಗೇ ಹೊಸ ಬೆಳಕು ಬೀರಿದರು. ವಿಶ್ವದ ಅನೇಕ ರಾಷ್ಟ್ರಗಳು ನೆಹರೂಜಿಯವರ 'ಪಂಚಶೀಲ' ತತ್ವಕ್ಕೆ ಒಪ್ಪಿ ತಮ್ಮ ಸಮ್ಮತಿ ಸೂಚಿಸಿದುವು. ಅಂತೆಯೇ ನೆಹರೂಜಿಯವರ ವಿದೇಶಾಂಗ ನೀತಿಯೂ ಬಹಳ ಉನ್ನತ ನೀತಿಯದಿದ್ದಿತು. ಹಲವರು ವಿರೋಧಿಸಿದರು. ಭಾರತದ ಹಿತದೃಷ್ಟಿಯಿಂದ ನೆಹರೂಜಿಯವರ ವಿದೇಶಾಂಗ ನೀತಿ ಮಾನ್ಯವಾಯಿತು.

'ಪಂಚಶೀಲ'ಗಳು ವಿಶ್ವಶಾಂತಿಗೆ, ಪಂಚವಾರ್ಷಿಕ ಯೋಜನೆಗಳು ಭಾರತದ ಪ್ರಗತಿಗೆ. ನೆಹರೂಜಿಯವರು ಬಹಳ ಆಲೋಚಿಸಿ ಪಂಚವಾರ್ಷಿಕ ಯೋಜನೆಗಳನ್ನು ಪ್ರಯೋಗಕ್ಕಿಟ್ಟರು. ಮೊದಲ ವರ್ಷದ ಯೋಜನೆ ಭಾರತದ ಭದ್ರತೆಗೆ ಅದು ನೆಲೆ ನಿಲ್ಲಲಿಕ್ಕೆ. ಎರಡನೆಯ ವರ್ಷದ್ದು ಅದರ ಅಭಿವೃದ್ಧಿಗೆ. ಹೀಗೆ ನೆಹರೂಜಿಯವರು ಮೊದಲ ಪಂಚವಾರ್ಷಿಕ ಯೋಜನೆಯಲ್ಲಿ ಅನ್ನದ ಹಾಹಾಕಾರ ತಪ್ಪಿಸಲು ಕೇವಲ ಕೃಷಿ, ನೀರಾವರಿ, ಕಾಮಗಾರಿಕೆಗಳಿಗಾಗಿ

ಮೀಸಲಿಟ್ಟರು. ಭಾಕ್ರಾನಂಗಲ್, ದಾಮೋದರವ್ಯಾಲಿ ಮೊದಲಾದ ನೂರಾರು ಅಣೆಕಟ್ಟುಗಳಾದವು. ಚಾನೆಲ್‌ಗಳು ನಿರ್ಮಿತವಾಗಿ ನೀರಿನ ಆಸರೆ ಹೆಚ್ಚಿ ದೇಶದ ಆಹಾರೋತ್ಪಾದನೆ ಕ್ರಮೇಣ ವೃದ್ಧಿಯಾಗುತ್ತಾ ಬಂದು ಆಹಾರ ಕೊರತೆ ತುಂಬುತ್ತಾ ಬಂತು.

ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಕೈಗಾರಿಕೆ, ಯಂತ್ರೋಪಕರಣಗಳ ಪ್ರಗತಿಯಾಯಿತು. ಭಾರತ ಕೇವಲ ವ್ಯವಸಾಯದಿಂದಲೇ ಮುಂದುವರೆಯಲು ಸಾಧ್ಯವಿಲ್ಲ. ಅದು ಕೈಗಾರಿಕೆಯಲ್ಲೂ ಪ್ರಗತಿ ಸಾಧಿಸಬೇಕಿತ್ತು. ಅದರಿಂದಾಗಿ ಅನೇಕಾನೇಕ ಕೈಗಾರಿಕಾ ಕೇಂದ್ರಗಳೂ, ವಿದ್ಯುಚ್ಛಕ್ತಿ ಉತ್ಪಾದನಾ ಕೇಂದ್ರಗಳು ಜನ್ಮ ತಾಳಿದವು.

ರಾಷ್ಟ್ರೀಯ ವಿಸ್ತರಣಾ ಯೋಜನೆಯ ಅವತಾರವಾಯಿತು. ಗ್ರಾಮಗಳ ಉದ್ಧಾರಕಾರ್ಯ ತಕ್ಕಮಟ್ಟಿಗೆ ಇದರಿಂದಾಗತೊಡಗಿತು.

ಹೀಗೆ ನೆಹರೂಜಿಯವರು ರಾಷ್ಟ್ರದ ಭದ್ರತೆಗಾಗಿ, ಅದರ ಏಳಿಗೆಗಾಗಿ ಹಗಲಿರುಳೂ ದುಡಿದರು. ತಮ್ಮ ಬೆವರು ಹರಿಸಿ ಸುಖೀರಾಜ್ಯ ಸ್ಥಾಪನೆ ಮಾಡಲು ವಿಶೇಷವಾಗಿ ಹೆಣಗಿದರು.

೧೯೫೦ ಡಿಸೆಂಬರ್‌ನಲ್ಲಿ ಸರ್ದಾರ್ ವಲ್ಲಭಬಾಯಿ ಪಟೇಲರು ತೀರಿಕೊಂಡರು. ನೆಹರೂಜಿಯವರ ಬಲದೋಳು ಹೋದಂತಾಯಿತು. ಸರ್ದಾರ್ ಪಟೇಲರು ಮಾಡಲು ಇನ್ನೂ ಕೆಲಸವಿತ್ತು. ಅದನ್ನು ಪೂರ್ಣಗೊಳಿಸದೇ ಅವರು ಹೋಗಿಬಿಟ್ಟರು.

ಕಾಂಗ್ರೆಸ್ಸಿಗರಲ್ಲಿ ವಿಶೇಷ ರಾಜಕೀಯ, ಸ್ವಾರ್ಥ, ಸಣ್ಣತನಗಳು ಬೆಳೆಯಹತ್ತಿದವು. ನೆಹರೂಜಿಯವರಿಗೆ ಇವನ್ನೆಲ್ಲಾ ಕಂಡರೆ ಆಗುತ್ತಿರಲಿಲ್ಲ. ಸಿಟ್ಟು ಸಿಡಿದೇಳುತ್ತಿತ್ತು. ಅನೇಕರು ಅವರ ಮನಸ್ಸನ್ನು ತಿಳಿಯದೆ ನೆಹರೂರವರ ಮೇಲೆ ದೋಷಾರೋಪಗಳನ್ನು ಮಾಡಿದವರೂ ಇದ್ದಾರೆ. ಸ್ವಪ್ರತಿಷ್ಠೆಗಾಗಿಯೋ ಅಥವಾ ಸಂಸ್ಥೆಯಲ್ಲಿ ಅತೃಪ್ತಿ ಹೊಂದಿಯೋ ಅನೇಕರು ಕಾಂಗ್ರೆಸ್ ಸಂಸ್ಥೆ ಬಿಟ್ಟು ಹೋದರು. ತಮತಮಗೆ ಇಷ್ಟ ಬಂದ ರೀತಿಯಲ್ಲಿ ಹಲವು ಪಾರ್ಟಿಗಳನ್ನು ಕಟ್ಟಿಕೊಂಡು ಕುಣಿದರು. ಕೆಲವರು ವಿರೋಧ ಪಕ್ಷವೊಂದು ಇಲ್ಲದಿದ್ದರೆ ರಾಜ್ಯಾಡಳಿತ ಒಳಿತಲ್ಲವೆಂದು ತಿಳಿದು ಬೇರೆಬೇರೆ ಪಕ್ಷಗಳಿಗೆ ಸೇರಿದರು. ಮತ್ತೆ ಕೆಲವರು ಸಾಮೂಹಿಕ ವ್ಯವಸಾಯ ಪದ್ಧತಿ ಬೇಸರ ತಂದು ಕಾಂಗ್ರೆಸ್‌ನಿಂದ ಹೊರಬಂದರು. ಕಾಂಗ್ರೆಸ್ ಟಿಕೆಟ್ ಸಿಕ್ಕಲಿಲ್ಲವೆಂದು ಬಿಟ್ಟವರು ಕೆಲವರು, ಟಿಕೆಟ್ ಸಿಕ್ಕ ಚುನಾಯಿತರಾದರೂ ಮಂತ್ರಿಮಂಡಲದಲ್ಲಿ ಸ್ಥಳ ಸಿಕ್ಕಲಿಲ್ಲವೆಂದು ಬಿಟ್ಟವರು ಇನ್ನು ಕೆಲವರು. ಬಿಟ್ಟವರು ಬಿಟ್ಟರು. ಬಹಳ ಜನ ಸೇರಿದರು. ಇವೆಲ್ಲವನ್ನೂ ಸರಿಮಾಡಿಕೊಂಡು ಹೋಗುವುದು ನಾಯಕನ ಜವಾಬ್ದಾರಿ. ಇದರ ಜೊತೆಯಲ್ಲಿ ದೇಶದ ಸರ್ವತೋಮುಖ ಪ್ರಗತಿಯೂ ನಡೆಯಬೇಕು. ಇದು ತುಂಬಾ ಕಷ್ಟದ ಕೆಲಸ. ಎಲ್ಲಿನವರೆಗೆ ಜನ ತಮ್ಮ ಹೊಣೆಗಾರಿಕೆಯನ್ನರಿತು ಜಾಗೃತರಾಗುವುದಿಲ್ಲವೋ ಅಲ್ಲಿನವರೆಗೂ ಮುಖಂಡರಿಗೂ ತಲೆನೋವು, ದೇಶಕ್ಕೂ ಕ್ಷೇಮವಿಲ್ಲ.

ವಿಶ್ವಶಾಂತಿ, ವಿಶ್ವಸೌಹಾರ್ದ, ವಿಶ್ವಬಾಂಧವ್ಯಕ್ಕೆ ನಾಂದಿ ಹಾಡಿದ ರಾಷ್ಟ್ರ ಭಾರತ. ಪೂಜ್ಯ ಬಾಪೂಜಿಯವರ ತತ್ವಗಳನ್ನು ನೆಹರೂ ಜಗತ್ತಿನ ಮುಂದಿಟ್ಟರು. ಪರಿಹಾರ ಕಾರ್ಯಗಳನ್ನು ಸೂಚಿಸಿ ಜಗತ್ತಿನ ಅಶಾಂತಿಯನ್ನು ತಡೆಗಟ್ಟಲು ಯತ್ನಿಸಿದರು. ಅತ್ತ ಕೊರಿಯಾ ಗಲಾಟೆ, ಇತ್ತ ಈಜಿಪ್ಟಿನಲ್ಲಿ ಪರಿಸ್ಥಿತಿ ತುಂಬಾ ಬಿಗಡಾಯಿಸಿತು. ಇನ್ನೇನು ಪ್ರಪಂಚದ ಮೂರನೆಯ ಮಹಾಯುದ್ಧ ಸಂಘಟಿಸುವುದರಲ್ಲಿ ಅನುಮಾನವೇ ಇಲ್ಲ ಎನ್ನುವ ಸಂದಿಗ್ಧ ಸಮಯದಲ್ಲಿ ಭಾರತ ತನ್ನ ಶಾಂತಿ ಮಂತ್ರವನ್ನು ಘೋಷಿಸಿತು. ಪ್ರಪಂಚದ ಬಲಿಷ್ಠ ರಾಷ್ಟ್ರಗಳಾದ ಅಮೇರಿಕಾ ಮತ್ತು ರಷ್ಯಾಗಳಿಗೆ ನ್ಯಾಯ ನೀಡಲು, ನೀತಿ ಬೋಧಿಸಲು ಭಾರತ ಪ್ರವೇಶಿಸಬೇಕಾಯಿತು.

ನೆಹರೂ ಕೇವಲ ಸಣ್ಣ ರಾಜಕಾರಣ ಪಟುವಾಗಿ, ಅಧಿಕಾರಲಾಲಸೆಯ ಗೊಂಬೆಯಾಗಿ ಭಾರತದಲ್ಲಿ ಉಳಿಯಲಿಲ್ಲ. ಆತ ವಿಶ್ವಮಾನವ ಅಂತಾರಾಷ್ಟ್ರೀಯ ವ್ಯಕ್ತಿ. ಆತನ ಮಹಾನುಭಾವತ್ವವೇ ಭಾರತದ ಕೀರ್ತಿಗೆ ಕಾರಣವಾಯಿತು.

ಸ್ವತಂತ್ರವಾದ ಮೇಲೆ ಭಾರತ ಎಲ್ಲಾ ರಾಷ್ಟ್ರಗಳೊಡನೆಯೂ ವಿಶ್ವಾಸ, ಮೈತ್ರಿ ಬೆಳೆಸಬೇಕಾಗಿತ್ತು. ಹಿಂದುಳಿದ ರಾಷ್ಟ್ರ ಆರ್ಥಿಕವಾಗಿ ಪ್ರಗತಿಯಾಗಬೇಕಾಗಿದ್ದರೆ ಮತ್ತೊಂದು ರಾಷ್ಟ್ರದ ನೆರವು ಕೇಳಬೇಕಾಗಿತ್ತು. ಆದ್ದರಿಂದ ನೆಹರೂ ೧೯೪೯ ಅಕ್ಟೋಬರ್‌ನಲ್ಲಿ ಅಮೇರಿಕಾಕ್ಕೆ ಹೋಗಿದ್ದರು, ಚೈನಾಕ್ಕೆ ಹೋಗಿದ್ದರು. ೧೯೫೫ ಜುಲೈನಲ್ಲಿ ಸೋವಿಯಟ್ ರಷ್ಯಾಕ್ಕೆ ಹೋಗಿದ್ದರು. ಸೋವಿಯಟ್ ಮುಖಂಡರಾದ ಕೃಶ್ಚೈವ್, ಬುಲ್ಗಾನಿನ್‌ರನ್ನು ಭಾರತಕ್ಕೆ ಕರೆಸಿ ಸನ್ಮಾನಿಸಿದರು. ಯುಗೋಸ್ಲೋವಿಯಾದ ಪ್ರತಿಭಾವಂತ ವ್ಯಕ್ತಿ ಅಧ್ಯಕ್ಷ 'ಟೀಟೊ'ವಿನೊಡನೆ ಮೈತ್ರಿ ಬೆಳೆಸಿದರು. ಅತ್ತ ಅಮೇರಿಕೆಯ ಅಧ್ಯಕ್ಷರಾಗಿದ್ದ ಐಸೆನ್ ಹೂವರ್ ಮತ್ತು ಅನಂತರ ಅಧ್ಯಕ್ಷರಾಗಿ ದುರ್ಮರಣಕ್ಕೀಡಾದ ಜಾನ್ ಕೆನಡಿ ಮೊದಲಾದವರಲ್ಲೂ, ಈಜಿಪ್ಟಿನ ಮಹಾಪುರುಷ ನಾಸೆರ್‌ರವರೊಡನೆಯೂ ಮೈತ್ರಿ ಬೆಳೆಸಿದರು. ಪ್ರಪಂಚದ ಚಿಕ್ಕಮಟ್ಟ ರಾಜ್ಯಗಳಿಂದ ಹಿಡಿದು ದೊಡ್ಡದೊಡ್ಡ ರಾಷ್ಟ್ರಗಳವರೆಗೆ ಎಲ್ಲವೂ ಭಾರತದ ಮೈತ್ರಿ ಬಯಸಿದುವು.

ಇದರೊಳಗೆ ಹಲವರ ಕುಟಿಲ ಬುದ್ಧಿಯೂ ಅಡಗಿತ್ತು. ಭಾರತ ಪ್ರವಾಸ ಕೈಗೊಂಡ, ಕೇವಲ ಅತಿಥಿಯಾಗಿ ಆಗಮಿಸಿದ್ದ ಚೀಣಾದ ಚೌ ಎನ್ ಲಾಯ್ ಭಾರತದ ಆಂತರಿಕ ಶಕ್ತಿಯನ್ನು ಸೂಕ್ಷ್ಮವಾಗಿ ತಿಳಿಯಲಿಚ್ಛಿಸಿದ. ತನ್ನ ದೇಶಕ್ಕೆ ಹಿಂತಿರುಗಿದ ಮೇಲೆ ದಲಾಯಿ ಲಾಮನ ಪ್ರಶ್ನೆಯ ನೆಪಮಾಡಿಕೊಂಡು ಭಾರತದ ಮೇಲೆ ದುರಾಕ್ರಮಣ ಮಾಡಿದ. ಸಾತಂತ್ರ್ಯ ಕಂಡು ಚೇತರಿಸಿಕೊಳ್ಳುತ್ತಿದ್ದ ಭಾರತಕ್ಕೆ ಈ ಯುದ್ಧದ ಹೊಡೆತ ಬೇರೆ ಬಿತ್ತು. ಇಂತಹ ಕಾಲದಲ್ಲಿ ನಮ್ಮ ಆಸ್ತಿಯಲ್ಲಿ ಪಾಲು ಕೇಳಿ ಪಡೆದು ಮೆರೆಯುತ್ತಿರುವ ಪಾಕಿಸ್ತಾನಗಳು ನೆರವಿಗೆ ಬರಲಿಲ್ಲ. ಮತ್ತಷ್ಟು ದ್ವೇಷ ಸಾಧಿಸಿದರು. ತಿಂದ ಮನೆಗೆ ಎರಡು ಬಗೆಯುವ ದ್ರೋಹಬುದ್ಧಿ ಕೇವಲ ಜನತಾ ಚೀಣಾ ಮತ್ತು ಪಾಕಿಸ್ತಾನಗಳಿಗೆ ಮಾತ್ರ ಮೀಸಲೆಂದು ಹೇಳಬಹುದು.

**ಬಾಷ್ಪಾಂಜಲಿ**

ಅದು ಬುದ್ಧಪೂರ್ಣಿಮೆಯ ಮಾರನೆಯ ದಿನ !

ಅಂದು ಬುಧವಾರ ! ೧೯೬೪ರ ಮೇ ತಿಂಗಳು ೨೭ನೆಯ ತಾರೀಖು !

ಭಾರತದ ಇತಿಹಾಸದಲ್ಲೇ ಅದೊಂದು ದುರ್ದಿನ ಎನ್ನಬೇಕು. ಏಕೆಂದರೆ ಭಾರತ ತನ್ನೊಂದು ಮಕುಟಮಣಿಯನ್ನು ಅಂದು ಕಳೆದುಕೊಂಡಿತು. ಭಾರತಾಂಬೆಯ ಹೃದಯದೇಗುಲದಲ್ಲಿ ಪ್ರಜ್ವಲಿಸುತ್ತಿದ್ದ ಜ್ಯೋತಿಯೊಂದು ನಂದಿ, ಕಾರ್ಗತ್ತಲು ಕವಿದಿತ್ತು. ಎತ್ತ ನೋಡಿದರೂ ನಿರಾಶೆಯ ನೆಳಲೇ ಸುಳಿಯುತ್ತಿತ್ತು. ಅಂದು, ಮೇಘಾಚ್ಛಾದಿತ ಬಾನು ಜೂಗಳಿಸುತ್ತಲೇ ಇತ್ತು. ಮಧ್ಯಾಹ್ನದುರಿಬಿಸಿಲಿನಲ್ಲಿ ಪ್ರಖರತೆಯೇ ಇರಲಿಲ್ಲ !

ಬಾನೆಲ್ಲ ಬತ್ತಲೆ !

ನೆಲವೆಲ್ಲ ಕತ್ತಲೆ !

ಅಂದು ಭಾರತಮಾತೆ ತನ್ನ ಸತ್ಪುತ್ರನನ್ನು ಕಳೆದುಕೊಂಡಿದ್ದಳು.

ಭಾರತ ಜನತೆ ತಮ್ಮ ನಾಯಕಮಣಿಯನ್ನು ನೀಗಿಕೊಂಡಿದ್ದರು ; ಭಾರತದ ಮುದ್ದು ಮಕ್ಕಳು ತಮ್ಮ ಅಚ್ಚುಮೆಚ್ಚಿನ 'ಚಾಚಾ'ನನ್ನು ಎಂದೆಂದಿಗೂ ಕಾಣದಾಗಿದ್ದರು.

ರಾಷ್ಟ್ರದ ನೆಚ್ಚಿನ ನಾಯಕ, ಸ್ವಾತಂತ್ರ್ಯ ಶಿಲ್ಪಿ, ನಮ್ಮ ಮಹಾ ಪ್ರಧಾನಿ ಪಂಡಿತ ಜವಹರಲಾಲ್ ನೆಹರು, ಅಂದು ನಮ್ಮೆಲ್ಲರನ್ನೂ ಅನಾಥರನ್ನಾಗಿಸಿ ಸ್ವರ್ಗಸ್ಥರಾದರು !

ಅದೇ ವರ್ಷದ ಜನವರಿಯಲ್ಲಿ ಭುವನೇಶ್ವರದ ಕಾಂಗ್ರೆಸ್ ಅಧಿವೇಶನದಲ್ಲಿ ಭಾಗವಹಿಸಲು ಹೋಗಿದ್ದ ನೆಹರೂಜಿಯವರ ಹೃದಯಕ್ಕೆ ಕೇವಲ ಎರಡೇ ದಿನಗಳಲ್ಲಿ ಅಂದರೆ ಜನವರಿ ೭ರಂದು ಸ್ವಲ್ಪ ಪ್ರಮಾಣದ ಆಘಾತವಾಯಿತು. ಆದರೆ ಜನವರಿ ೧೨ರಷ್ಟರಲ್ಲಿ ಸ್ಥಿತಿ ಸುಧಾರಿಸಿತು. ದೆಹಲಿಗೆ ಹಿಂತಿರುಗಿದರು. ವಿಶ್ರಾಂತಿ ಅಗತ್ಯ ಎಂದರು ವೈದ್ಯರು. ಆದರೆ ವಿಶ್ರಾಂತಿ ಎಲ್ಲಿ ಬರಬೇಕು ಆತನ ಜೀವನದಲ್ಲಿ ?

ಕೆಲವೇ ದಿನಗಳ ಹಿಂದೆ ಅಸ್ವಸ್ಥತೆಯ ನಿಮಿತ್ತ ನೆಹರೂಜಿ ವಿಶ್ರಾಂತಿಗಾಗಿ ಹಿಮಾಲಯ ಪ್ರದೇಶಗಳಿಗೆ ಅಂದರೆ ಡೆಹರಾಡೂನಿಗೆ ಹೋಗಿದ್ದರು. ಹಿಂತಿರುಗಿದರು ದೆಹಲಿಗೆ.

ಆಗಲೇ ರಾಜಕೀಯದ ಬೇತಾಳ ಅವರ ಬೆನ್ನು ಹಿಂದೆಯೇ ನಿಂತು ಮುಂದೆ ದೂಡುತ್ತಿತ್ತು !

ಬಿಡುವೆನ್ನುವುದೇ ಇಲ್ಲ ! ರಾತ್ರಿಯೆಲ್ಲಾ ಕುಳಿತು ಸರ್ಕಾರಿ ಫೈಲುಗಳನ್ನು, ಕಾಗದಪತ್ರಗಳನ್ನು ನೋಡಿಯಾಯಿತು. ಅವುಗಳಿಗೆಲ್ಲಾ ಸಮಂಜಸವಾಗಿ ಉತ್ತರಿಸಿಯೂ ಆಯಿತು. ಉಳಿದದ್ದು ಒಂದೇ ವಿಶ್ರಾಂತಿ !

ಆದರೆ ವಿಶ್ರಾಂತಿ ಎಲ್ಲಿ ಬರಬೇಕು ಪಾಪ ! ಸದಾ ರಾಷ್ಟ್ರದ ಚಿಂತೆಯನ್ನೇ ಕುರಿತು ಚಿಂತಿಸುವ ವ್ಯಕ್ತಿಗೆ ವಿಶ್ರಾಂತಿಯೆಲ್ಲಿಯದು ! ಅದು ಅಳಿದು ಅದೆಷ್ಟು ವರ್ಷಗಳಾದುವೋ ! ಅಥವಾ ಆ ವ್ಯಕ್ತಿಯ ಜಾಯಮಾನದಲ್ಲೇ ಆ ವಿಶ್ರಾಂತಿಗೆ ಪ್ರವೇಶಿಸಲು ರಹದಾರಿ ಸಿಕ್ಕಿರಲಿಕ್ಕಿಲ್ಲ.

ಬೆಳಗಾದರೆ ಸಂಸತ್ತಿನಲ್ಲಿ ಹಲವು ವಿದೇಶಾಂಗ ವ್ಯವಹಾರಗಳ ಮೇಲಿನ ಪ್ರಶ್ನೆಗಳಿಗೆ ಪ್ರಧಾನಿ ಪೀಠದಿಂದ ನೆಹರೂಜಿ ಉತ್ತರಿಸಬೇಕಾಗಿತ್ತು. ಅದಕ್ಕೆ ಉತ್ತರವೂ ಸಿದ್ಧವಿತ್ತು. ಆದರೆ ನೆಹರೂಜಿಗೆ ಬದಲು ಉಪಮಂತ್ರಿ ದಿನೇಶ್ ಸಿಂಗ್ ಉತ್ತರಿಸಬೇಕಾಯಿತು. ಕಾರಣ ಉತ್ತರಿಸುವ ವ್ಯಕ್ತಿಗೆ ಸ್ವಸ್ಥವಿರಲಿಲ್ಲ. ಹಿಂದಿನ ರಾತ್ರಿ ಊಟ ಮುಗಿಸಿ ಮಲಗುವಾಗ ಆರೋಗ್ಯ ಚೆನ್ನಾಗಿತ್ತು ! ಮಾರನೆಯ ದಿನ ಬೆಳಗ್ಗೆ ೬.೩೦ರಲ್ಲಿ ಹೃದಯ ಬೇನೆ ಎಂದಷ್ಟು ಮಾತ್ರ ನೆಹರೂಜಿ ತಿಳಿಸಿದರು.

ಮಲಗಿದರು.

ಮಲಗಿಯೇ ಬಿಟ್ಟರು !

ಸುಮಾರು ೧೧-೩೦ರ ಸಮಯಕ್ಕೆ ಪರಿಸ್ಥಿತಿ ತೀರ ಉಲ್ಬಣಿಸಿ ಮಧ್ಯಾಹ್ನ ೨ ಗಂಟೆಗೆ ನೆಹರೂಜಿ ಸ್ವರ್ಗಸ್ಥರಾದರು.

ಆಕಾಶವಾಣಿ ಸುದ್ದಿ ಹರಡಿತು ದೇಶಾದ್ಯಂತ, ವಿಶ್ವಾದ್ಯಂತ.

ಕೂಡಲೇ ವಿಶ್ವದ ನಾಡಿ ಚಣ ನಿಂತಂತಾಯಿತು. ಯಾರಿಗೂ ನಂಬಲಾಗಲಿಲ್ಲ. ಯಾರೂ ನಂಬುವ ಸ್ಥಿತಿಯಲ್ಲಿರಲಿಲ್ಲ.

ಆ ದುರ್ವಾರ್ತೆ ಯಾರಿಗೂ ಬೇಕಾಗಿರಲಿಲ್ಲ. ಆದ್ದರಿಂದ ಎಲ್ಲರೂ ಅಂದುಕೊಂಡರು – ಆ ವಾರ್ತೆ ಸುಳ್ಳಾಗಲಿ ; ನಗೆಮೊಗದ ಸಿರಿನಗೆಯ ನೆಹರು ನೂರ್ಕಾಲ ಬದುಕಿ ನಮ್ಮ ಬಂಧುವಾಗಿ, ತಂದೆಯಾಗಿ ನಡೆಸಲಿ ಎಂದು ಹೃದಯ ತುಂಬಿ ಹಾರೈಸಿದರು ಕೂಡ.

ಆದರೆ– ದೈವದ ಅಪ್ರತಿಹತಶಕ್ತಿ ತನ್ನ ಕರಾಳ ಹಸ್ತವನ್ನಿರಿಸಿ, ತನ್ನ ಕ್ರೂರ ಕಾರ್ಯವನ್ನು ಪೂರ್ಣಗೊಳಿಸಿಯೇ ಬಿಟ್ಟಿತ್ತು !

ನಾಯಕಮಣಿ ನೆಹರೂ ಇನ್ನಿಲ್ಲ !

ಮಕ್ಕಳ ಚಾಚಾ ಇನ್ನಿಲ್ಲ !!

ಇಡೀ ವಿಶ್ವವೇ ಕಣ್ಣೀರಿನ ಕಾಲುವೆ ಹರಿಸಿತು. ಮಹಾಪುರುಷನನ್ನು ಕಳೆದುಕೊಂಡಿದ್ದರಿಂದ ಭಾರತಕ್ಕೊಂದೇ ನಷ್ಟವಲ್ಲ, ಅದು ಇಡೀ ವಿಶ್ವಕ್ಕೆ ಆದ ಅನ್ಯಾಯವಾಗಿತ್ತು. ಅದು ಎಂದೆಂದಿಗೂ ತುಂಬಲಾರದ ಕೊರತೆಯಾಗಿಯೇ ಉಳಿದಿತ್ತು. ಯುಗಪುರುಷನ ಅಳಿವಿನಿಂದ ಅನಾಥರಂತೆ ಅತ್ತರು ವಿಶ್ವದ ಜನತೆ.

ಮಾರನೆಯ ದಿನ ಮಧ್ಯಾಹ್ನ ೧.೧೦ಕ್ಕೆ ಪ್ರಧಾನಿ ಭವನದಿಂದ ಭಾರತರತ್ನ ನೆಹರೂಜಿಯವರ ಅಂತಿಮ ಯಾತ್ರೆ ಹೊರಡಬೇಕೆಂದು ನಿಗದಿಯಾಗಿತ್ತು. ಆದರೆ ಅದಕ್ಕೆ ಮುಂಚೆ ಜಗತ್ತಿನ ಜನತೆಗೆ ಆ ಪುಣ್ಯ ಪುರುಷನ ಕಟ್ಟಕಡೆಯ ಸಂದರ್ಶನ ಬೇಡವೇ ?

ಅದಕ್ಕಾಗಿ ಪ್ರಧಾನಿ ಭವನದ ಮೊದಲನೇ ಅಂತಸ್ತಿನಲ್ಲಿ ಅವರ ಪಾರ್ಥಿವ ಶರೀರವನ್ನಿಟ್ಟು ದರ್ಶನಾಪೇಕ್ಷಿಗಳಿಗೆ ಸಜ್ಜುಗೊಳಿಸಲಾಗಿತ್ತು.

ಜನ ಬಂದರು, ಜಗತ್ತಿನ ಮೂಲೆ ಮೂಲೆಗಳಿಂದ ಬಂದರು.

ಒಬ್ಬರೇ ಇಬ್ಬರೇ !

ಇಲ್ಲ, ಲಕ್ಷೋಪಲಕ್ಷ ! ಕೋಟ್ಯಾನುಕೋಟಿ !!

೧೯೬೪ಳ ಮೇ ೨೭ರ ಮಧ್ಯಾಹ್ನದಿಂದ ಹಿಡಿದು ೨೮ರ ಅರುಣೋದಯದವರೆಗೆ ಇಡೀ ರಾತ್ರಿಯೆಲ್ಲಾ ಅವಿಶ್ರಾಂತ ಪ್ರವಾಸಿ ತಂಡ ಅನವರತ ಸಾಗಿತ್ತು. ಅಂದು ಅವರೆಲ್ಲರ ಗೋಳು ಹೇಳತೀರದು.

ಆ ರಾತ್ರಿ ಇಡೀ ಭಗವದ್ಗೀತೆ, ಖುರಾನು, ಗ್ರಂಥಸಾಹೀಬಾ ಮೊದಲಾದ ಪವಿತ್ರ ಗ್ರಂಥಗಳ ಪಠಣ ಅವಿಚ್ಛಿನ್ನವಾಗಿ ಸಾಗಿತ್ತು.

ಕಡೆಯ ಘಳಿಗೆಯಲ್ಲಿ ಬಳಿಯಲ್ಲೇ ಕುಳಿತಿದ್ದರು ಇಂದಿರಾ ಗಾಂಧಿ. ಅವರೊಡನೆ ಲಾಲ್ ಬಹದ್ದೂರ್ ಶಾಸ್ತ್ರಿ, ಟಿ.ಟಿ. ಕೃಷ್ಣಮಾಚಾರಿ ಮೊದಲದವರಿದ್ದರು.

ವಾರ್ತೆ ತಿಳಿದ ವಿಜಯಲಕ್ಷ್ಮಿ ಪಂಡಿತ್ ಧಾವಿಸಿ ಬಂದರು. ಇಂದಿರಾ ದೇವಿಯನ್ನು ಬಾಚಿ ತಬ್ಬಿಕೊಂಡು ಗೋಳಾಡಿದರು. ಅಕ್ಕರೆಯ ಅಣ್ಣನ ಮುಖವನ್ನು ತಮ್ಮ ಬೊಗಸೆಯಲ್ಲಿ ತುಂಬಿ ಹತ್ತಾರು ಮುತ್ತಿಟ್ಟು ಮುಂಡಾಡಿದರು. ಕಣ್ಣೀರಿನಿಂದಲೇ ನೆಹರೂಜಿಯ ಮುಖ ಮೈ ತೊಳೆದರು.

ಅದೊಂದು ಕರುಣಾಜನಕ ದೃಶ್ಯ.

ಕಟ್ಟದ ಕಂಠಗಳಿರಲಿಲ್ಲ. ತುಂಬದ ಹೃದಯಗಳಿರಲಿಲ್ಲ.

ನೀರು ಮಿಡಿಯದ ಕಣ್ಣುಗಳಿರಲಿಲ್ಲ !

ಬ್ರಿಟಿಷ್ ಪ್ರಧಾನಿ ಸರ್ ಅಲೆಕ್ ಡಗ್ಲಾಸ್ ಹ್ಯೂಂ, ಎಲಿಜಬೆತ್ ರಾಣಿ ಪರ ಬಂದಿರುವ ಅರ್ಲ್ ಮೌಂಟ್ ಬ್ಯಾಟನ್, ಸಿಂಹಳ ಪ್ರಧಾನಿ ಶ್ರೀಮತಿ ಸಿರಿಮಾವೋ ಬಂಡಾರನಾಯಕೆ, ಸೋವಿಯೆತ್ ಪ್ರಥಮ ಉಪಪ್ರಧಾನಿ ಅಲೆಕ್ಸಿ ಕೊಸಿಜಿನ್, ನೇಪಾಳದ ಪ್ರಧಾನಿ ಡಾ. ತುಳಸೀಗಿರಿ, ಅಮೇರಿಕಾದ ವಿದೇಶಾಂಗ ಸಚಿವ ಡೀನ್ ರಸ್ಕ್, ಸಂಯುಕ್ತ ಅರಬ್ ಗಣರಾಜ್ಯದ ಉಪಾಧ್ಯಕ್ಷ ಹುಸೇನ್ ಷಫೀ, ಯುಗೋಸ್ಲಾವ್ ಪ್ರಧಾನಿ ಸ್ವಂಬೋಲಿಚ್, ಪಾಕೀಸ್ತಾನದ ವಿದೇಶಾಂಗ ಸಚಿವ ಭುಟ್ಟೋ, ಇರಾನ್ ಒಳಾಡಳಿತ ಸಚಿವರು ಹಾಗೂ ಫ್ರೆಂಚ್ ಸಚಿವರೊಬ್ಬರು ಇದ್ದರು. ಷೇಕ್ ಅಬ್ದುಲ್ಲಾ ಕೂಡ ತನ್ನ ಆಪ್ತಮಿತ್ರರ ಅಂತ್ಯವನ್ನು ಕಂಡು ಮಗುವಿನಂತೆ ಅತ್ತುಬಿಟ್ಟ.

ಶಾಸ್ತ್ರೋಕ್ತವಾಗಿ ಸಂಸ್ಕಾರ ಕ್ರಿಯೆಗಳು ಮುಗಿದ ಮೇಲೆ ಅಮರರಾದ ನೆಹರೂಜಿಯವರ ಅಂತಿಮ ಯಾತ್ರೆ ೨೮ರ ಮಧ್ಯಾಹ್ನ ೧–೧೦ಕ್ಕೆ ಸರಿಯಾಗಿ ಪ್ರಧಾನಿ ಭವನದಿಮದ ಹೊರಟಿತು. ರಾಷ್ಟ್ರಧ್ವಜದಿಂದ ಹೊದಿಸಲ್ಪಟ್ಟ ಶ್ರೀ ನೆಹರೂರವರ ಪಾರ್ಥಿವ ಶರೀರವನ್ನು ಫಿರಂಗಿ ಗಾಡಿಯ ಮೇಲೆ (ತೋಪು– ವಾಹನ) ತಂದಿರಿಸಿದರು. ಪುಷ್ಪಪ್ರೇಮಿಗೆ ಹೂವಿನ ಹಾಸಿಗೆ ಹಾಸಲಾಗಿತ್ತು.

ಸುಮಾರು ೬೦ ಮಂದಿ ಭೂ, ವಾಯು, ನೌಕಾಪಡೆಯ ಸೈನಿಕರು ಆ ತೋಪು ವಾಹನವನ್ನೆಳೆದುಕೊಂಡು ಹೊರಟರು. ಅದರ ಹಿಂದೆ ಶ್ರೀಮತಿ ಇಂದಿರಾ ಗಾಂಧಿ ಮತ್ತು ಆಕೆಯ ಕಿರಿಯ ಮಗ ಸಂಜಯ ತೆರೆದ ಕಾರಿನಲ್ಲಿ ಬರುತ್ತಿದ್ದರು. ನೆಹರೂಜಿಯವರ ಕುಟುಂಬಕ್ಕೆ ಸಂಬಂಧಿಸಿದವರು ವಿಜಯಲಕ್ಷ್ಮಿ ಪಂಡಿತ್. ಶ್ರೀಮತಿ ಕೃಷ್ಣಾ ಹತೀಸಿಂಗ್ ಮೊದಲಾದವರು, ಕೇಂದ್ರ ಸಚಿವರುಗಳು, ಅನಂತರ ನೆಹರೂಜಿಯವರ ಅಂತಿಮಯಾತ್ರೆಯ ದರ್ಶನಕ್ಕಾಗಿಯೇ ದೇಶವಿದೇಶಗಳಿಂದ ಬಂದ ಮಹನೀಯರುಗಳು ಇದ್ದರು.

ಆಗಾಗ 'ಜವಹರಲಾಲ್ ನೆಹರು ಅಮರ್ ಹೋ !' ಎಂಬ ಘೋಷಣೆದ ಕೇಳಿ ಬರುತ್ತಿತ್ತು.

ಹಾದಿಯುದ್ದಕ್ಕೂ 'ರಘುಪತಿ ರಾಘವ ರಾಜಾರಾಮ್' ಭಜನೆ ಸಾಗುತ್ತಿತ್ತು !

ಸುಮಾರು ಒಂದು ಕೋಟಿ ಜನ ದರ್ಶನ ಪಡೆದಿತ್ತು.

ಮಕ್ಕಳು 'ಚಾಚಾ ನೆಹರೂ, ಚಾಚಾ ನೆಹರೂ" ಎಂದು ಕೂಗಿ ಕಣ್ಣೀರು ಕರೆಯುತ್ತಿದ್ದವು.

ವಿಜಯ ಚೌಕದ ಹತ್ತಿರವೇ ಸುಮಾರು ಹತ್ತು ಲಕ್ಷ ಜನ ಇತ್ತು. ತಿಲಕ್ ಮಾರ್ಗವಾಗಿ ಇಂದ್ರಪ್ರಸ್ಥವನ್ನು ಹಾದು ರಿಂಗ್ ರೋಡನ್ನು ದಾಟಿ ಮೆರವಣಿಗೆ ರಾಜಘಾಟಿನ ಕಡೆಗೆ ತಿರುಗಿತು. ಯಮುನಾ ನದಿಯ ದಂಡೆಯ ಮೇಲಿದ್ದ ಹಾದಿಯುದ್ದಕ್ಕೆ ಸುಮಾರು ಆರು ಮೈಲಿಗಳು ಜನ ಕಿಕ್ಕಿರಿದು ನಿಂತಿತ್ತು.

ರಾಜಘಾಟಿನಲ್ಲಿ, ಪೂಜ್ಯ ಬಾಪೂಜಿಯವರ ಸಮಾಧಿಯ ೩೦೦ ಗಜಗಳ ದೂರದಲ್ಲಿ ೨೫೬ ಚದರಡಿ ವಿಸ್ತಾರವಾದ ವೇದಿಕೆಯನ್ನು ರಚಿಸಲಾಗಿತ್ತು. ಅಲ್ಲಿಗೆ ಬರುವ ಹೊತ್ತಿಗೆ ಸಂಜೆ ೪.೦೫ ಗಂಟೆಯಾಗಿತ್ತು.

ವೇದಿಕೆಯ ಮೇಲೆ ರಾಶಿ ಹಾಕಿದ್ದ ಸುಮಾರು ಹತ್ತು ಮಣದಷ್ಟು ಶ್ರೀಗಂಧದ ತುಂಡಿನ ಮೇಲೆ ನೆಹರೂಜಿಯವರ ಮೃತದೇಹವನ್ನು ಮಲಗಿಸಲಾಯಿತು. ಹೆಲಿಕ್ಯಾಪ್ಟರುಗಳು ನೆಹರೂಜಿಯವರ ಪ್ರೀತಿಯ ಪುಷ್ಪಗಳಾದ ಗುಲಾಬಿಗಳನ್ನು ಸುರಿಸುತ್ತಲೇ ಇದ್ದುವು !

ಜನ ಸಾಗರವಾಗಿ ನಿಂತಿತ್ತು ಆ ರಾಜಘಾಟಿನ ರುದ್ರಭೂಮಿಯಲ್ಲಿ. ಸುಮಾರು ೩೦ ಲಕ್ಷಕ್ಕೂ ಮಿಕ್ಕು ಸೇರಿತ್ತು ಅಲ್ಲಿ.

ಮಹಾಪುರುಷನ ಅಂತಿಮ ಶರೀರವನ್ನು ಅಗ್ನಿದೇವನಿಗೆ ಆಹುತಿ ಕೊಡುವ ಮುನ್ನ ಇಂದಿರಾ ಐದಡಿಯ ಆ ವೇದಿಕೆಯನ್ನು ಬಿಟ್ಟು ಕೆಳಗಿಳಿದು ಬಂದು, ಅತಿ ವೇದನೆಯನ್ನು ತಾಳಲಾರದೆ, ಗಳಗಳನೆ ಅಳುತ್ತ ಕುಳಿತು ಬಿಟ್ಟಳು. ಅವಳನ್ನು ಸಂತೈಸುವ ಶಕ್ತಿ ಯಾರಿಗೂ ಇರಲಿಲ್ಲ.

ನೆಹರೂಜಿಯವರ ಹಿರಿಯ ಮೊಮ್ಮಗ ರಾಜೀವ್ ಬರಬೇಕಾಗಿತ್ತು. ಆತ ಲಂಡನ್‌ನಲ್ಲಿದ್ದುದರಿಂದ ವಾರ್ತೆ ಸಿಗದೆ ಬರುವುದು ಮೂರು ದಿನ ತಡವಾಯಿತು. ಕಿರಿಯ ಮೊಮ್ಮಗ ಸಂಜಯ್ ಚಿತೆಗೆ ಅಗ್ನಿಸ್ಪರ್ಶ ಮಾಡಿದ. ಮೂರು ಸುತ್ತು ಸಣ್ಣ ಪ್ರಮಾಣದ ಗುಂಡುಗಳನ್ನು ಹಾರಿಸಲಾಯಿತು.

ಹದಿನಾರು ವರ್ಷಗಳ ಹಿಂದೆ ಪೂಜ್ಯ ಬಾಪೂಜಿಯವರ ಅಂತ್ಯಸಂಸ್ಕಾರ ನಡೆದ ಸ್ಥಳದಿಂದ ೩೦೦ ಗಜ ದೂರದಲ್ಲೇ ನೆಹರೂಜಿಯವರ ಅಂತ್ಯಕ್ರಿಯೆಗಳಾದುವು.

ಸಮಾಧಿಯ ಪಕ್ಕದಲ್ಲಿ ಮತ್ತೊಂದು ಸಮಾಧಿ ನಿಂತಿತು ! ಬಾಪೂ (ತಂದೆ) ಬಳಿ ಮಗ ಮಲಗಿದರು ! ಅದಷ್ಟೇ ತೃಪ್ತಿ !!

ನೆಹರೂಜಿಯವರು ಅಂತ್ಯವಾದ ಹನ್ನೆರಡನೆಯ ದಿನದಂದು ಅವರ ಅಸ್ಥಿಸಂಚಯನ ಕಾರ್ಯ ನಡೆಯಿತು. ಭಾರತದ ಎಲ್ಲಾ ನದಿಗಳಲ್ಲೂ, ತೀರ್ಥಗಳಲ್ಲೂ ಆ ಮಹಾಪುರುಷನ ಅಸ್ಥಿ ಬೆರೆಯಿತು. ವಿಮಾನಗಳು ಅಸ್ಥಿಯನ್ನು ಹೊತ್ತು ಭಾರತದ ಎಲ್ಲೆಡೆಗೂ ಚೆಲ್ಲಿದವು. ನೆಹರೂಜಿಯವರ ಪ್ರೀತಿಯ ಬೀಡು, ಕಾಶ್ಮೀರದ ಗಿರಿ ಕಂದರಗಳೆಲ್ಲಾ ಆ ಪುಣ್ಯಪುರುಷನ ಅಸ್ಥಿಯನ್ನು ಹೊತ್ತು ಮೆರೆದುವು.

ನೆಹರೂಜಿಯವರ ಆಶಯವೇ ಅದಾಗಿತ್ತು. ಭಾರತದ ಕಣಕಣಗಳಲ್ಲೂ ನನ್ನಣುವು ಸೇರಬೇಕೆಂದು ಆಶಿಸಿದರು. ಅದರಂತೆಯೇ ಆಯಿತು. ಜಗತ್ತೇ ಆ ಮಹಾಪುರುಷನ ಅಂತಿಮವನ್ನು ಗೌರವಿಸಿತು. ಲಕ್ಷಾಂತರ ಶೋಕ ಸೂಚಕ ಪತ್ರಗಳು ಇಂದಿರಾ ಪ್ರಿಯದರ್ಶಿನಿಗೆ ಬಂದು ಮುಟ್ಟಿದುವು. ವಾರ್ಧಾ ಜಿಲ್ಲೆಯ ಮಾಣಿಕವಾಡದಲ್ಲಿದ್ದ ಪೂಜ್ಯ ವಿನೋಬಭಾವೆಯವರು, 'ನೆಹರೂರವರ ನಿಧನದಿಂದ ಜಗತ್ತು ಮಾನವೀಯತೆಯ ಆರಾಧಕನೊಬ್ಬನನ್ನು ಕಳೆದುಕೊಂಡಿತು. ಹಾಗೂ ನಮ್ಮ ರಾಷ್ಟ್ರ ಅಸಮಾನ ನಾಯಕನೊಬ್ಬನನ್ನು ನೀಗಿಕೊಂಡಿತು. ರಾಷ್ಟ್ರದ ಗಂಡಾಂತರ ಕಾಲದಲ್ಲಿ ನೆಹರೂ ನಮ್ಮನ್ನಗಲಿದ್ದಾರೆ. ಅವರಂತಹ, ದ್ವೇಷ – ಮತ್ಸರ – ರಹಿತ ರಾಜಕಾರಣಿಯನ್ನು ನಾನು ಕಾಣೆ. ಅವರ ಆತ್ಮಕ್ಕೆ ನನ್ನ ನಮನ' ಎಂದು ನುಡಿದಿದ್ದಾರೆ.

ಡಾ॥ ನ.ಸು. ಹರ್ಡೀಕರ್‌ರವರು 'ಗಾಂಧೀಜಿಯವರ ನಿಧನದಿಂದ ಭಾರತದ ಆತ್ಮ ನಷ್ಟವಾಯಿತು. ನೆಹರೂರವರ ನಿಧನದಿಂದ ಭಾರತದ ಉಸಿರೇ ಹೋದಂತಾಗಿದೆ' ಎಂದು ಕಣ್ಣೀರು ಕರೆದಿದ್ದಾರೆ.

ಭಾರತದ ರಾಷ್ಟ್ರಪತಿ ಡಾ॥ ಸರ್ವಪಲ್ಲಿ ರಾಧಾಕೃಷ್ಣನ್‌ರವರು ಮಹಾಪುರುಷ ನೆಹರೂರವರಿಗೆ ತಮ್ಮ ಕಣ್ಣೀರಿನ ಕಾಣಿಕೆ ಕೊಡುತ್ತಾ ಹೀಗೆ ನುಡಿದಿದ್ದಾರೆ –

'ದುಃಖಭರಿತವಾದ ಈ ಸಂದರ್ಭದಲ್ಲಿ ನಾನು ಹೆಚ್ಚೇನನ್ನೂ ಹೇಳ ಬಯಸುವುದಿಲ್ಲ, ಅದರ ಅಗತ್ಯವೂ ಇಲ್ಲ. ಗಂಡಾಗಲಿ, ಹೆಣ್ಣಾಗಲಿ, ಮಗುವಾಗಲಿ, ನಮ್ಮಲ್ಲಿ ಪ್ರತಿಯೊಬ್ಬರೂ ನಮ್ಮ ಭಾವೋದ್ರೇಕಗಳನ್ನು ಹಿಡಿತದಲ್ಲಿಟ್ಟುಕೊಂಡು ಅಮೋಘಸೇವೆ ಮತ್ತು ನಿಷ್ಠಾವಂತ ಜೀವನ ನಡೆಸಿದ ವ್ಯಕ್ತಿಗೆ ಶ್ರದ್ಧಾಭಕ್ತಿಗಳಿಂದ ಗೌರವ ಸಲ್ಲಿಸುವ ಸಂದರ್ಭ ಇದು.

'ಜವಹರಲಾಲ್ ನೆಹರೂರವರು ನಮ್ಮ ಪೀಳಿಗೆಯ ಅತ್ಯಂತ ದೊಡ್ಡ ವ್ಯಕ್ತಿ ಮತ್ತು ಮಹೋನ್ನತ ಮುತ್ಸದ್ದಿಯಾಗಿದ್ದರು. ಮಾನವ ಸ್ವಾತಂತ್ರ್ಯಕ್ಕೆ ಅವರು ಎಸಗಿದ ಸೇವೆ ಅವಿಸ್ಮರಣೀಯ. ಸ್ವಾತಂತ್ರ್ಯ ಯೋಧರೆಂದು ಅವರು ಕೀರ್ತಿವಂತರಾದರು. ಆಧುನಿಕ ಭಾರತದ ನಿರ್ಮಾಪಕರಾಗಿ ಅವರು ಸಲ್ಲಿಸಿದ ಸೇವೆ ಅಸದೃಶ್ಯ. ಅವರ ಜೀವನ ಕಾರ್ಯಗಳು ನಮ್ಮ ಮಾನಸಿಕ ರಚನೆ, ಸಾಮಾಜಿಕ ಚೌಕಟ್ಟು ಮತ್ತು ಬೌದ್ಧಿಕ ಬೆಳವಣಿಗೆ ಇವುಗಳ ಮೇಲೆ ಅಪಾರ ಪ್ರಭಾವ ಬೀರಿದೆ. ನೆಹರೂರವರ ಕ್ರಿಯಾಶೀಲ ಮತ್ತು ಅವರ ಸಮಗ್ರ ನಾಯಕತ್ವವಿಲ್ಲದ ಭಾರತದ ಚಿತ್ರವನ್ನೇ ನಾವು ಊಹಿಸಿಕೊಳ್ಳುವುದು ಕಷ್ಟ. ನಮ್ಮ ರಾಷ್ಟ್ರದ ಇತಿಹಾಸದಲ್ಲಿ ಒಂದು ಯುಗ ಮುಕ್ತಾಯವಾಯಿತು.

'.....ಅವರನ್ನು ಕಳೆದುಕೊಂಡು ದುಃಖಿತರಾಗಿರುವ ನಾವು ಅವರು ಅಮೂಲ್ಯವೆಂದು ನಂಬಿದ್ದ ಧ್ಯೇಯಗಳಿಗಾಗಿ ದುಡಿಯುವುದಕ್ಕಿಂತ ಉತ್ತಮವಾದ ಕಾರ್ಯ ಇನ್ನೊಂದಿಲ್ಲ. ಇದೇ ನಮ್ಮ ದಿವಂಗತ ನಾಯಕರಿಗೆ ನಾವು ಸಲ್ಲಿಸಬಹುದಾದ ಅತ್ಯುತ್ತಮ ಶ್ರದ್ಧಾಂಜಲಿ.

* * *

ಆ ಮಂಗಳಮೂರ್ತಿಯ ಮಹೋನ್ನತ ಆದರ್ಶಗಳಲ್ಲಿ ಒಂದೆರಡನ್ನಾದರೂ ಸಾಧಿಸಿ ಸ್ವರ್ಗಸ್ಥರಾಗಿರುವ ಆತನ ಆತ್ಮಕ್ಕೆ ತೃಪ್ತಿ ತುಂಬೋಣ !

ಅಂತೆಯೇ ಪ್ರತಿ ವರ್ಷದ ನವೆಂಬರ್ ೧೪ರಂದು ಭಾರತದ, ಏಕೆ ? ವಿಶ್ವದ ಮಕ್ಕಳೆಲ್ಲಾ ನೆನೆಯಬೇಕು ಒಕ್ಕೊರಲಿನಿಂದ ಕೂಗಿ ಕರೆಯಬೇಕು ತಮ್ಮ ಅಚ್ಚುಮೆಚ್ಚಿನ ಚಾಚಾ ನೆಹರೂರವರನ್ನು.

' ಚಾ ಚಾ ನೆಹರೂ' 'ಚಾ ಚಾ ನೆಹರೂ ಜಿಂದಾಬಾದ್' !

ಮಂಗಲಂ

# ಕನ್ನಡಿ ಹೇಳಿದ ಕಥೆ

## (ನೇತಾಜಿ ಸುಭಾಷ್‌ಚಂದ್ರ ಬೋಸ್ ಅವರ ಸಾಹಸಗಾಥಾ ಚರಿತ್ರೆ)

(೨೦೦೦)

When a great scorer comes to unite against
Your name, he writes not that you won or
lost, but how you played the game.
- An English Writer

೧೯೬೦ ಡಿಸೆಂಬರ್ ೧೨ರ ದಿನ.

ಅದು ಮಾಗಿಯ ಮಧ್ಯಾಹ್ನವಾದ್ದರಿಂದ ಬಿಸಿಲೂ ಹಿತವಾಗಿತ್ತು. ಚಳಿಯ ಕುಪ್ಪಸವನ್ನು ಭೇದಿಸಿಕೊಂಡು ಸೂರ್ಯನ ಕಿರಣಗಳು ಒಳಹೊಕ್ಕಾಗ ಮೈಗೆ ಮುದ, ಮನಸ್ಸಿಗೆ ಹಿತ. ಕಲ್ಕತ್ತದ ಡಂಡಂ ವಿಮಾನ ನಿಲ್ದಾಣದಲ್ಲಿ ಮಹತ್ವದ ಅತಿಥಿಗಾಗಿ ಕಾಯುತ್ತಿದ್ದ ಸಹಸ್ರ ಸಂಖ್ಯೆಯ ಜನಸ್ತೋಮಕ್ಕೆ ಮಾಗಿ ಬಿಸಲಿನ ಅನುಭವ ಆಗಿತ್ತು. ನಿಗದಿತ ವೇಳೆಗೆ ಸರಿಯಾಗಿ ಕಾಂಟೂಸ್ ಬೋಯಿಂಗ್ ೭೦೭ ವಿಮಾನ ಗಗನ ವಿಹಾರ ಮುಗಿಸಿ ಭೂ ಸ್ಪರ್ಶ ಮಾಡಿತು. ಏಣಿ ಜೋಡಣೆಯ ನಂತರ ವಿಮಾನದ ಮಹಾದ್ವಾರ ತೆರೆಯಿತು. ಗಗನ ಸಖಿಯರುಗಳ ವಂದನೆ ಸ್ವೀಕರಿಸಿ ತುಂಬು ಹರೆಯದ ನವ ತರುಣಿಯೊಬ್ಬಳು ಮೆಟ್ಟಿಲ ಮೇಲೆ ದ್ವಾರದ ಬಳಿ ಕಾಣಿಸಿಕೊಂಡಳು. ಹದಿನಾರು ಕಲೆಗಳಿಂದ ಕೂಡಿದ ಚಂದ್ರಬಿಂಬದಂತಹ ಮುಖಮಂಡಲ. ಅದಕ್ಕೆ ಕರಿಮೋಡದ ಹಿನ್ನೆಲೆಯ ಬಾಬ್‌ಕಟ್ಟಿನ ಕೇಶವಿನ್ಯಾಸ, ವಿಶಾಲವಾದ ಹಣೆ, ಚೆಂಗುಲಾಬಿಯ ಚೆಲುವು ತುಂಬಿದ ಕೆನ್ನೆಗಳು, ತಿದ್ದಿ ಬರೆದಂತಿದ್ದ ಹುಬ್ಬು, ಮೊಂಡವಿದ್ದರೂ ದುಂಡುಮಲ್ಲಿಗೆಯ ಮೂಗು, ಮೃದುಗಲ್ಲ, ರಕ್ತ ಮುಕ್ಕುಳಿಸುವ ತುಟಿಗಳು, ಆ ತುಟಿಯ ತಟಿಯಲ್ಲೇ ಮೊಲ್ಲೆ ಮೊಗ್ಗೆಯಂತೆ ಅರೆಬಿರೆದ ಹಲ್ಲುಗಳ ಮಗುತನದ ಮುಗ್ಧನಗೆ. ಓಹ್ ! ವರ್ಣನೆ ಸಾಕು ! ಎಂಥವರಿಗೂ ಆ ಮುದ್ದು ಮಗಳನ್ನು ನೋಡಿದಾಗ ಮೊದಲ ಬಾರಿಗೆ ತವರಿಗೆ ಬಂದ ಮನೆಯ ಮಗಳನ್ನು ಬರಮಾಡಿಕೊಳ್ಳುವ ಉತ್ಸಾಹ ತುಂಬಿ ಹರಿಯುತ್ತಿತ್ತು. ಅವರ ಕಾತರದ ಕಡಲಿನಲ್ಲಿ ತೇಲಿ ಬಂದಳು ನೇತಾಜಿ ಸುಭಾಸ್ ಚಂದ್ರಬೋಸರ ಏಕಮಾತ್ರ ಪುತ್ರಿ, ಅವರ ಪಡಿಯಚ್ಚಿನ ಪುತ್ಥಳಿ ಅನಿತಾ ಶೆಂಕ್ಲ್‌ಬೋಸ್ !

ಜನಸ್ತೋಮ ಒಮ್ಮೆಲೇ ಘೋಷಿಸಿತು : ನೇತಾಜಿ ಸುಭಾಸ್ ಚಂದ್ರಬೋಸ್–ಕಿ–ಜೈ ಎಂದು.

ಅನಿತಳೂ ದನಿಗೈದಳು 'ಜೈಹಿಂದ್' ಎಂದು.

ಜಯಘೋಷ ಮುಗಿಲು ಮುಟ್ಟಿತು.

ಅನಿತಾ ನಗುನಗುತ್ತಲೆ ಆನಂದದಿಂದ ತನ್ನೆರಡೂ ಕೈಗಳನ್ನು ಮೇಲೆತ್ತಿ ಮುಗಿದಳು. ಅವಳ ಎಡತೋಳಿನ ಮೇಲೆ ಮಲಗಿದ್ದ ನಿಲುವಂಗಿ ಜಾರಿಬಿತ್ತು. ಅದನ್ನೆತ್ತಿಕೊಂಡು ಏಣಿಯ ಮೆಟ್ಟಿಲಿಳಿಯತೊಡಗಿದಳು. ಶುದ್ಧ ಭಾರತೀಯಳಂತೆ ಅವಳುಟ್ಟಿದ್ದ ಗರಿಮುರಿಯದ, ಆದರೆ ಹಸಿರು ಮುರಿಯುವ ರನ್ನಗೆಂಪಿನ ದಡಿಯ ಸೀರೆ ತನ್ನ ನೆರಿಗೆಗಳನ್ನು ಚೆಲ್ಲಿ ಚೆಲ್ಲಿ ಉಲ್ಲಾಸ, ಉತ್ಸಾಹಗಳಿಂದ ಗಗನದಿಂದಿಳಿವ ದೇವಗಂಗೆಯ ನೆನಪು ತರುತ್ತಿತ್ತು. ಅವಳು ತೊಟ್ಟಿದ್ದ ಅರೆತೋಳಿನ ಸಮವರ್ಣದ ಕುಪ್ಪಸ ಆಹ್ಲಾದ ವ್ಯಕ್ತಪಡಿಸಿದರೆ, ಅವಳ ಹುಬ್ಬೆರಡರ ನಡುವಿನ ಚುಕ್ಕೆಯಂತಿದ್ದ ಕುಂಕುಮ ಕುತೂಹಲದಿಂದ ಸಮಸ್ತರನ್ನೂ ವೀಕ್ಷಿಸುತ್ತಿತ್ತು !

ಅಂದು ಕಲ್ಕತ್ತೆಯ ನಗರಕ್ಕೆ ಎಂದಿಲ್ಲದ ಸಂಭ್ರಮ, ಎಂದಿಲ್ಲದ ಆನಂದ ! ಅನಿತಳಿಗೂ ಅಷ್ಟೆ, ತನ್ನ ತಂದೆಯ ನೆಲವನ್ನು ಸ್ಪರ್ಶಿಸಿ ಹರ್ಷ ಪುಳಕಿತಳಾದ ಅನುಭವ. ತನ್ನ ಪಾದಗಳು ನೆಲ ಮೆಟ್ಟಿದ ಕೂಡಲೇ ಅಲ್ಲಿನ ಧೂಳನ್ನೆತ್ತಿ ತನ್ನ ನೆತ್ತಿ ಮತ್ತು ಹಣೆಗಳಿಗೆ ಒತ್ತಿಕೊಂಡಳು.

'ನಾನು ಧನ್ಯಳಾದೆ ! ಜನ್ಮ ಸಾರ್ಥಕವಾಯಿತು !'

ಎಂದು ಆನಂದದ ಉದ್ಗಾರ ತೆಗೆದಳು. ಸ್ವಾಗತಿಸಲು ಬಂದಿದ್ದ ಅವಳ ದೊಡ್ಡಪ್ಪಂದಿರ ಮಕ್ಕಳು ಅರವಿಂದ ಬೋಸ್ ಮತ್ತು ಶಿಶಿರಕಾಂತ ಬೋಸ್ ಹಾರ್ದಿಕವಾಗಿ ಅವಳನ್ನು ಬರಮಾಡಿಕೊಂಡರು. ಆನಂದ ತುಂದಿಲರಾದ

ಬೋಸ್ ಕುಟುಂಬದ ಹಾಗೂ ಮನೆತನದ ಅಭಿಮಾನಿಗಳ ತಂಡ ಜೇನುಹುಳುವಿನಂತೆ ಅವಳನ್ನು ಮುತ್ತಿಕೊಂಡಿತು. ಹಾರಗಳ ಮೇಲೆ ಹಾರಗಳು ಅನಿತಳ ಕೊರಳೇರಿದವು. ಕೈಕುಲಿಕದವರೆಷ್ಟೋ, ಅಪ್ಪಿ ಮುದ್ದಿಸಿದವರೆಷ್ಟೋ ! ವಿಮಾನ ನಿಲ್ದಾಣದ ಆವರಣದಲ್ಲಿ ಹೂವಿನ ನಡೆದಮುಡಿ ಹಾಸಿದ್ದರು ಮುದ್ದಿನ ಮಗಳ ಕೋಮಲ ಪಾದಗಳು ನೋಯದಿರಲಿ ಎಂದು. ಅನಿತಾ ನಿಧಾನವಾಗಿ, ಹೆಜ್ಜೆ ಹೆಜ್ಜೆಗೂ ಆನಂದ ಪುಳಕಿತಳಾಗಿ ನಡೆದು, ತನ್ನ ದೊಡ್ಡಮ್ಮ ಶ್ರೀಮತಿ ಲಲಿತಾ ಬೋಸ್‌ರನ್ನು 'ದೀದೀ' ಎಂದು ವಂಗಭಾಷೆಯಲ್ಲಿ ಸಂಬೋಧಿಸಿ, ಅವರ ಪಾದ ಮುಟ್ಟಿ ನಮಸ್ಕರಿಸಿದಳು. ಲಲಿತಾ ಬೋಸ್‌ರ ಆನಂದಬಾಷ್ಪಗಳು ಅನಿತಾಳ ನೆತ್ತಿಯನ್ನು ನೆನೆಸಿದವು. ಬಾಗಿದ್ದ ಅವಳನ್ನು ಮೇಲೆತ್ತಿ ಅಪ್ಪಿಕೊಂಡಾಗ ಅವರಿಬ್ಬರಿಗೂ ಆದದ್ದು ಅವರ್ಣನೀಯ ಆನಂದಾನುಭವ ! ಲಲಿತಾ ಬೋಸ್ ಅನಿತಾಳ ಕೊರಳಿಗೆ ಬಂಗಾರದ ಹಾರವೊಂದನ್ನು ಹಾಕಿ ಮತ್ತೆ ಮತ್ತೆ ಅಪ್ಪಿ ಮುತ್ತಿಟ್ಟರು. ತುಸು ದೂರದಲ್ಲಿ ನಿಂತಿದ್ದ ನೇತಾಜಿಯವರ ಸೋದರಮಾವ ಸತ್ಯೇಂದ್ರನಾಥದತ್ತರು 'ಅನಿತಾ....' ಎಂದಷ್ಟೇ ಕೂಗಿದರು. ಮುಂದೆ ಅವರಿಗೆ ಮಾತು ಬರಲಿಲ್ಲ. ಆನಂದದ ಆಧಿಕ್ಯದಲ್ಲಿ ಮಾತು ಸೋತು ಕಣ್ಣೀರಾಗಿ ಕರಗಿ ಹರಿಯಿತು. ತಾತನ ಕೂಗು ಕೇಳಿದ ಕೂಡಲೇ ಅನಿತಾ ಜಿಂಕೆಯಂತೆ ಜಿಗಿದು ಸತ್ಯೇಂದ್ರರ ತೊಡೆಯ ಮೇಲೆ ಕುಳಿತಳು ; ಅವರ ಚರಣಗಳಿಗೆ ಶಿರಬಾಗಿ ನಮಿಸಿದಳು; ಆಶೀರ್ವದಿತಳಾದಳು ಕೂಡ. ಸತ್ಯೇಂದ್ರರು ಮೊಮ್ಮಗಳನ್ನು ತೆರೆದ ತೋಳುಗಳಿಂದ ಆಲಿಂಗಿಸಿಕೊಂಡರು. ಅವರ ವಾತ್ಸಲ್ಯದ ವಕ್ಷದಲ್ಲಿ ಅನಿತಾ ಮತ್ತೊಮ್ಮೆ ಮಗುವಾದಳು !

ತುಸು ಹೊತ್ತು ಮಾತು ಬಿಗಿ ಹಿಡಿದ ಮೌನ !

ಅನಂತರ ಎಲ್ಲರ ಪರಿಚಯ ಆರಂಭವಾಯಿತು. ಅಲ್ಲಿಗೆ ಅಮಿಯಾ ಬೋಸ್ ಮತ್ತು ಹರಿದಾಸ ಮೈತ್ರಾ ಬಂದಿದ್ದರು. ಅವರೆಲ್ಲರ ಪರಿಚಯ ಮತ್ತು ಆಶೀರ್ವಾದಗಳನ್ನು ಪಡೆಯುವ ಭಾಗ್ಯ ತನ್ನ ಪಾಲಿಗಾಯಿತೆಂಬ ಧನ್ಯತೆ ಅನಿತಳದು.

ಮಹಾಪುರುಷನ ಮಗಳಾದರೂ ಅವನು ನಡೆದಾಡಿದ ನೆಲದಲ್ಲಿ ನಾನು ಅಂಬೆಗಾಲಿಡುವ ಭಾಗ್ಯ ಪಡೆಯಲಿಲ್ಲ ; ತೊದಲು ನುಡಿಗಳನ್ನು ಬಂಗಾಳಿ ಭಾಷೆಯಲ್ಲಿ ಕೇಳಿಸುವ ಪುಣ್ಯ ನನ್ನ ಭಾಗಕ್ಕಿರಲಿಲ್ಲ. ಆದರೂ ಇಂದು ಬಂದಿದ್ದೇನೆ ; ಬೆಳೆದು ನಿಂತಿದ್ದೇನೆ. ನನ್ನ ಪೂಜ್ಯ ತಂದೆಗೆ ಜನ್ಮವಿತ್ತ ಈ ಪುಣ್ಯಭೂಮಿ ಭಾರತದ ಮಣ್ಣಿನ ಹುಡಿಯನ್ನು ನನ್ನ ಮುಡಿಯಲ್ಲಿ ಮುಡಿದು ಧನ್ಯಳಾಗಿದ್ದೇನೆ. ನಿಮ್ಮೆಲ್ಲರ ದರ್ಶನಾಶೀರ್ವಾದಗಳು, ಕೋಟಿ ಕೋಟಿ ಭಾರತೀಯರ ಶುಭಕಾಮನೆಗಳು ನನಗೆ ಶ್ರೀರಕ್ಷೆ, ವಜ್ರರಕ್ಷೆ, ತಮ್ಮೆಲ್ಲರ ಅಭಿಮಾನಕ್ಕೆ ನಾನು ಚಿರಋಣಿ. ಭಾವನೆಗಳು ಬಿತ್ತರಿಸಲು ನನ್ನಲ್ಲಿ ಮಾತುಗಳೇ ಇಲ್ಲ, ನನ್ನ ಹೃದಯಸ್ಥ ಭಾವನೆಗಳನ್ನು ನನ್ನ ತೆರೆದ ಕಣ್ಣು, ಬಿರಿದ ನಗೆ, ಮುಗಿದ ಕೈಗಳ ಮೂಲಕ ಅಭಿವ್ಯಕ್ತಿಸುತ್ತಿದ್ದೇನೆ. ನಿಮ್ಮ ಮನೆಯ ಮಗಳು, ನಿಮ್ಮ ಮಡಿಲ ಕೂಸು ಬಂದಿದ್ದೇನೆ. ಶುಭಕೋರಿ ಎಲ್ಲರೂ ಆಶೀರ್ವದಿಸಿ, ನಿಮಗಿದೋ ನನ್ನ ಸಹಸ್ರ ಸಹಸ್ರ ಪ್ರಣಾಮಗಳು.

ಎನ್ನುತ್ತಲೇ ಅನಿತಾ ಘೋಷಿಸಿದಳು : 'ಜೈ ಹಿಂದ್' ಎಂದು.

ಕಿಕ್ಕಿರಿದು ನೆರೆದಿದ್ದ ಜನಸಮೂಹವೂ ಮಾರ್ದನಿಗೊಟ್ಟಿತು 'ಜೈ ಹಿಂದ್' ಎಂದು. ಧ್ವನಿಗೆ ಧ್ವನಿ ಕೂಡಿ ಅನಂತದಲ್ಲಿ ಲೀನವಾಯಿತು !

* * *

ವಿಮಾನ ನಿಲ್ದಾಣದಿಂದ ನೇತಾಜಿಭವನಕ್ಕೆ ತೆರೆದ ಕಾರಿನಲ್ಲಿ ಮೆರವಣಿಗೆ ಹೊರಟಿತು. ಕಲ್ಕತ್ತೆಯ ರಾಜಬೀದಿಯ ಇಕ್ಕೆಲದಲ್ಲೂ ಜನಸಂದಣಿ. ಹಿಂದೆ ವಯಸ್ಕರು ಮುಂದೆ ಮಕ್ಕಳು. ಹಿರಿಯರು ಅಂದುಕೊಳ್ಳುತ್ತಿದ್ದರು.

'ಥೇಟ್ ನೇತಾಜೀನೇ ! ಅದೇ ರೂಪ, ಅದೇ ಮೈಮಾಟ ! ಇವಳಿಗೆ ಮಿಲಿಟರಿ ಉಡುಪು ತೊಡಿಸಿ, ಕಡ್ಡಿ ಕನ್ನಡಕ ಹಾಕಿದರೆ ನೇತಾಜಿಯೇ ಎದ್ದುಬಂದಂತೆ ಕಾಣಿಸ್ತಾಳೆ !'

– ಎಂದು. ನೇತಾಜಿಯವರನ್ನು ಕಂಡಿದ್ದವರು ನುಡಿದು ಮತ್ತೆ ಸುಭಾಸರ ನೆನಪು ತಂದುಕೊಳ್ಳುತ್ತಿದ್ದರು. ಮುಂದೆ ಸಾಲಾಗಿ ಬಣ್ಣ ಬಣ್ಣದ ಬಟ್ಟೆಗಳನ್ನು ತೊಟ್ಟು ನಿಂತಿದ್ದ ಮಕ್ಕಳು 'ಅನಿತಾ ಅಕ್ಕನಿಗೆ ಜಯವಾಗಲಿ' ಎಂದು ಘೋಷಿಸುತ್ತಾ ಕೈ ಬೀಸಿ ಹಾರ್ದಿಕವಾಗಿ ಸ್ವಾಗತಿಸುತ್ತಿದ್ದವು.

ಆ ಸಂಭ್ರಮದಲ್ಲಿ ದಾರಿ ಸಾಗಿ ನೇತಾಜಿ ಭವನ ಮುಟ್ಟಲು ಮೂರು ಗಂಟೆಗಳ ಕಾಲ ಹಿಡಿಯಿತು !

ಭವನ ಪ್ರವೇಶಿಸುತ್ತಲೇ ಅಲ್ಲಿನ ಕಿಟಕಿ, ಬಾಗಿಲು, ಗೋಡೆ ಮತ್ತು ಅಲ್ಲಿದ್ದ ಅಲಂಕರಣ ವಸ್ತುಗಳು, ಗೃಹೋಪಕರಣಗಳು ಎಲ್ಲವೂ ಅನಿತಳಿಗೆ ನೇತಾಜಿಯವರ ಕಥೆ ಹೇಳಿದವು. ಅವರು ಆ ಕೊಠಡಿಯಿಂದ ತಪ್ಪಿಸಿಕೊಂಡ ಗುಟ್ಟಿನ ವಿಷಯವನ್ನೂ ಗುನುಗಿದವು ! ಅನಿತಾ ನೇತಾಜೀ ಸ್ಮಾರಕ ಶಿಲಾಫಲಕದ ಮೇಲೆ ಪುಷ್ಪಗುಚ್ಛವನ್ನಿರಿಸಿ, ಸುತ್ತ ಕಣ್ಣಾಡಿಸಿದಳು. ಅಂದುಕೊಂಡಳು :

'ಇದು ಅಪ್ಪಾಜಿ ಬ್ರಿಟಿಷರ ಕಣ್ಣುತಪ್ಪಿಸಿ ಹೋದ ಕೋಣೆ ! ಇಲ್ಲಿನ್ನೂ ಅವರ ಉಸಿರು ಹಸಿರಾಗಿದೆ. ಈ ಮೂಲೆಯಲ್ಲಿ ದಳದೆರೆದು ಕುಳಿತಿರುವ ಹಸುರೆಲೆಯ ಕುಂಡದಲ್ಲಿ !'

ಅನಿತಾ ಲಗುಬಗೆಯಲ್ಲಿ ಕೋಣೆಯಲ್ಲೆಲ್ಲಾ ಅಡ್ಡಾಡಿದಳು. ದೀರ್ಘವಾಗಿ ಉಸಿರೆಳೆದುಕೊಂಡಳು. ಕುಣಿದಾಡಿದಳು ಮಗುವಿನಂತೆ. ಹೆಜ್ಜೆಹೆಜ್ಜೆಗೂ ಅವಳ ಮೈ ಪುಳಕಗೊಳ್ಳುತ್ತಿತ್ತು ! ಕೊಠಡಿಯ ಗೋಡೆಗಳನ್ನು ಮುಟ್ಟಿಮುಟ್ಟಿ ಮಾತಾಡಿಸಿದಳು!

ಮರುಕ್ಷಣದಲ್ಲಿ ತುಂಬು ಗಾಂಭೀರ್ಯ ಅವಳ ಮುಖಮಂಡಲವನ್ನಾವರಿಸಿತು. ಒಂದೂ ನುಡಿ ನುಡಿಯದೆ ಪಕ್ಕದ ಕೋಣೆಗೆ ಹೋದಳು. ಅದು ತನ್ನ ಅಜ್ಜಿ, ಸುಭಾಸರ ತಾಯಿ ಪ್ರಭಾವತಿದೇವಿಯವರು ಮಲಗುತ್ತಿದ್ದ ಕೋಣೆ. ಅದರ ತುಂಬ ಅನೇಕ ಚಿತ್ರಪಟಗಳು. ನೇತಾಜಿಯವರ ಬಗೆಬಗೆಯ ಭಂಗಿಯ ಭಾವಚಿತ್ರಗಳು. ಇವೆಲ್ಲವೂ ಅನಿತಾಳನ್ನೇ ನಿಟ್ಟಿಸುವಂತಿದ್ದವು. ಅನುಕ್ತ ಅವರ್ಣನೀಯ ಭಾಷೆಯಲ್ಲಿ ಅನಿತಾ ಅವುಗಳೊಡನೆ ಸಂಭಾಷಿಸಿದಳು. ಅವು ಹೇಳಿದ ಗತ ಇತಿಹಾಸದ ಘಟನೆಗಳನ್ನು ಮೆಲುಕು ಹಾಕುತ್ತಾ ಮುಂದೆ ಸಾಗಿದಳು.

ಮುಂದೊಂದು ಹಜಾರದಲ್ಲಿ ತನ್ನ ತಂದೆ ಕುಳಿತುಕೊಳ್ಳುತ್ತಿದ್ದ ಕುರ್ಚಿ. ಅದರಲ್ಲಿ ಹರಡಿದ್ದ ಮಕಮಲ್ಲಿನ ಮೆತ್ತೆಯ ಮೇಲೆ ಅವಲ ತಂದೆಯ ಭಾವಚಿತ್ರ. ಅನಿತಾ ತಂದೆಯ ಮುಂದೆ ನಿಂತಳು ! ನೇತಾಜಿಯವರ ಅಗಲವಾದ ಹಣೆ, ತೀಕ್ಷ್ಣ ದೃಷ್ಟಿಯ ಕಣ್ಣುಗಳು, ಸುದೀರ್ಘ ಹಾಗೂ ದಷ್ಟಪುಷ್ಟ ಬಾಹುದ್ವಯಗಳು ಇಂಡೋ–ಯುರೋಪಿಯನ್ ದೇಹಲಕ್ಷಣದ ಆ ಮಹಾಮೂರ್ತಿಯನ್ನು ಕಂಡು ತನ್ನ ಬೆನ್ನನ್ನು ತಾನೇ ಚಪ್ಪರಿಸಿಕೊಂಡಳು ! ಅನಂತರ ಆ ಭಾವಚಿತ್ರದ ಮುಂದೆ ಹಣತೆ ಹತ್ತಿಸಿದಳು. ಮೊಣಕಾಲೂರಿ ಮೌನದಲ್ಲೇ ಪ್ರಾರ್ಥನೆ ಸಲ್ಲಿಸಿ, ಆ ಪವಿತ್ರಾತ್ಮಕ್ಕೆ ಶಾಂತಿ ಕೋರಿ ಭಾವಪರವಶಳಾದಳು. ಅದೆಷ್ಟು ಹೊತ್ತು ಹಾಗೆ ಕುಳಿತಿದ್ದಳೊ ತಿಳಿಯದು. ಭಾವತುಂಬಿ ಭಾರವಾಗಿದ್ದ ಹೃದಯ ಹಗುರವಾಯಿತೆಂದು ತೋರುತ್ತದೆ. ಎಲ್ಲರ ಕ್ಷಮೆ ಕೋರಿ ಮೇಲೆದ್ದು, ತನ್ನ ಕಡೆಯ ಎರಡು ಮೂರು ಪುಟಾಣಿಗಳನ್ನು ಕರೆದುಕೊಂಡು, ತನ್ನ ದೊಡ್ಡಪ್ಪ ಸುಭಾಸ್ ಚಂದ್ರರ ಅಣ್ಣ ಶರತ್ ಚಂದ್ರಬೋಸರ ನಿವಾಸದೆಡೆಗೆ ನಡೆದಳು. ಹೊರಗಡೆ ಅವಳಿಗಾಗಿ ಕಾಯುತ್ತಿದ್ದ ಜನ ಅವಳನ್ನು ಹಿಂಬಾಲಿಸಿತು. ಗೃಹವನ್ನು ಪ್ರವೇಶಿಸುವ ಮುನ್ನ ಜನಸಮೂಹವನ್ನುದ್ದೇಶಿಸಿ ಮನವಿ ಮಾಡಿದಳು.

'ನನ್ನ ಭರತ ವರ್ಷದ ಅಕ್ಕತಂಗಿಯರೆ, ಅಣ್ಣ ತಮ್ಮಂದಿರೆ,

ನಾನು ಇನ್ನೂ ಮೂರು ತಿಂಗಳ ಕಾಲ ನನ್ನ ತಂದೆಯ ಜನ್ಮಭೂಮಿಯಾದ ಈ ನೆಲದಲ್ಲಿ ಇರುವವಳಿದ್ದೇನೆ. ಕೆಲವು ದಿನಗಳು ಮಾತ್ರ ಸ್ವತಂತ್ರ ಭಾರತದ ಮಹಾ ಪ್ರಧಾನಿ ಜವಹರಲಾಲ್ ನೆಹರೂರವರ ಅತಿಥಿಯಾಗಿರುತ್ತೇನೆ ದೆಹಲಿಯಲ್ಲಿ. ಉಳಿದೆಲ್ಲ ದಿನಗಳನ್ನೂ ನಿಮ್ಮೊಡನೆ ಕಳೆಯುತ್ತೇನೆ. ನೀವು ಬೆಳಗಿನಿಂದಲೂ ನನ್ನೊಡನಿದ್ದು ದಣಿದಿದ್ದೀರಿ. ದಯವಿಟ್ಟು ನಿಮ್ಮ ನಿಮ್ಮ ಮನೆಗಳಿಗೆ ಹಿಂತಿರುಗಿ ವಿಶ್ರಾಂತಿ ಪಡೆಯಿರಿ. ಮತ್ತೆ ಸಮಯ ಸಿಕ್ಕಾಗ ಭೇಟಿಯಾಗೋಣ. ನಾನು ನನ್ನ ತಾಯಿ ಎಮಿಲಿ ಶೆಂಕ್ಲ್‌ಬೋಸ್‌ರವರಿರುವ ಜರ್ಮನಿಗೆ ವಾಪಸಾಗುವ ಮುನ್ನ ನಿಮ್ಮೆಲ್ಲರ ದರ್ಶನ ಪಡೆಯುತ್ತೇನೆ. ಭಾರತದಲ್ಲಿ ಅಲ್ಲಲ್ಲಿ ಅಡ್ಡಾಡಿ ನನಗೆ ಬೇಕಾದ, ನನ್ನ ಪೂಜ್ಯ ತಂದೆಯವರಿಗೆ ಸಂಬಂಧಿಸಿದ ಕೆಲವು ವಸ್ತುಗಳನ್ನು ಸಂಗ್ರಹಿಸಿ, ಸ್ಥಳಗಳನ್ನು ಭೇಟಿ ಮಾಡಿ, ಆ ನೆನಪಿನ ಬುತ್ತಿಯನ್ನು ಹೊತ್ತು ನಮ್ಮಮ್ಮನಿಗೆ ಒಪ್ಪಿಸುತ್ತೇನೆ. ಕೃಪೆಮಾಡಿ ಹಿಂತಿರುಗಿ, ಜೈ ಹಿಂದ್ !'

'ಜೈ ಹಿಂದ್.... ಜೈ ಹಿಂದ್ !'

ನನ್ನ ತಾಯಿ ನುಡಿಯಾದ ಜರ್ಮನ್ ಭಾಷೆಯಲ್ಲದೆ, ಅನಿತಳಿಗೆ ಇಂಗ್ಲಿಷ್ ಕೂಡ ಚೆನ್ನಾಗಿ ಮಾತನಾಡಲು ಬರುತ್ತಿತ್ತು. ಇಂಗ್ಲಿಷ್‌ನಲ್ಲಿ ಮಧುರವಾಣಿಯಲ್ಲಿ ನುಡಿದಳು. ಜನಸಮೂಹ ಕರಗಿತು !

* * *

ಸಂಜೆಯಾಯಿತು.

ಅಂದು ರಾತ್ರಿ ಅನಿತಳ ಗೌರವಾರ್ಥ ಅವಳ ತಂದೆಯ ಮನೆಯಲ್ಲಿ ಔತಣಕೂಟವೇರ್ಪಟ್ಟಿತ್ತು. ಬಂಧು–ಬಳಗ, ಇಷ್ಟ–ಮಿತ್ರರು ಅಸಂಖ್ಯಾತರು ನೆರೆದಿದ್ದರು. ಹರ್ಷಾನಂದಗಳು ತುಂಬಿದ್ದವು ಆ ಮನೆಯಲ್ಲಿ. ಭೋಜನಾನಂತರ ಎಲ್ಲರೂ ಅನಿತಳಿಗೆ ಹಾರ್ದಿಕ ಶುಭಾಶಯ ಹೇಳಿ ತೆರಳಿದರು.

ಅನಿತ ಆ ದಿನ ತನ್ನ ತಂದೆಯ ಕೊಠಡಿಯಲ್ಲೇ ಮಲಗಲಿಚ್ಛಿಸಿದಳು. ಸೂಕ್ತ ಸಿದ್ಧತೆಗಳಾದವು. ಆದರೆ ಬಹಳ ಹೊತ್ತು ಅವಳಿಗೆ ಅವಳಿಗೆ ನಿದ್ದೆ ಬರಲಿಲ್ಲ. ಅಂಗಾಲ ಮಲಗಿ ಮೇಲೆ ತಾರಸಿ ನೋಡಿದಳು ; ಬೋರಲಾಗಿ ಮಲಗಿ ನೆಲ ನೋಡಿದಳು ; ಮತ್ತೆ ಎಡಕ್ಕೆ ಹೊರಳಿದಾಗ ಗೋಡೆ ಮತ್ತು ಅದರ ಮೇಲೆ ಸಣ್ಣಗೆ ಉರಿಯುತ್ತಿದ್ದ ವಿದ್ಯುತ್ ದೀಪ ಕಾಣಿಸಿದವು. ಗಡಿಯಾರದ ಮುಳ್ಳು ಗೆರೆಯಿಂದ ಗೆರೆಗೆ ದಾಟುತ್ತಿತ್ತು. ಆದರೆ ನಿದ್ದೆ ಮಾತ್ರ ಬಾರದಿತ್ತು. ಏನೋ ಆಲೋಚನೆ, ಏನೋ ಚಿಂತನೆ !

'ಅಲ್ಲಾ, ಎಂತಹ ದುಃಸ್ಥಿತಿ ಈ ಭರತಖಂಡದ್ದು. ನೂರಿನ್ನೂರು ವರ್ಷಗಳ ಗುಲಾಮಗಿರಿ ! ತನ್ನದಾದ ಸ್ವಾತಂತ್ರ್ಯವನ್ನು ತಾನೇ ಕಯ್ಯಾರ ಕಳೆದುಕೊಂಡು ಅನಂತರ ಹುಡುಕಾಟದಲ್ಲಿ ತೊಡಗಬೇಕಾಯಿತೆ ! ಹದಿನೆಂಟನೆಯ

ಶತಮಾನದ ಅಂಚಿನಲ್ಲಿ ಮೈಸೂರಿನ ಟಿಪ್ಪು, ಅನಂತರ ಅವನ ಸೇನಾನಿ ಧೋಂಡಿಯಾ ವಾಘ, ೧೮೨೪ರಲ್ಲಿ ಕಿತ್ತೂರು ಚೆನ್ನಮ್ಮ, ೧೮೪೮ರಲ್ಲಿ ಝಾನ್ಸಿರಾಣಿ ಲಕ್ಷ್ಮೀಬಾಯಿ ಮತ್ತೆ ೧೮೫೭ರಲ್ಲಿ ಮೊಗಲ್ ಬಾದಷಹ ಬಹದ್ದೂರ್ ಷಹಾನ ಅಂತಿಮ ಸಾಹಸ ಎಲ್ಲವೂ ವ್ಯರ್ಥವಾದವು. ನನ್ನ ತಂದೆಯೂ ಸೋಲಿನ ಸವಿಯನ್ನು ಚೆನ್ನಾಗಿ ಉಂಡರು. ಇದಕ್ಕೆಲ್ಲಾ ಕಾರಣ ಭಾರತೀಯರ ಅನೈಕಮತ್ಯವೆ ಅಥವಾ ಬ್ರಿಟಿಷರ ಚಾಣಾಕ್ಷತನವೆ ?'

'ಎರಡೂ ಅಲ್ಲ ಅಥವಾ ಎರಡೂ ಹೌದು !'

ವಾಣಿಯೊಂದು ಅವಳ ಬೆನ್ನ ಹಿಂದೆ ಪುಟಿಯಿತು. ಕೂಡಲೇ ಬಲಭಾಗಕ್ಕೆ ಹೊರಳಿ ನೋಡಿದಳು. ಅಲ್ಲಿ ನಿಲವುಗನ್ನಡಿಯೊಂದ್ನನು ಬಿಟ್ಟು ಬೇರೆ ಯಾರೂ ಕಾಣಿಸಲಿಲ್ಲ. ಅಚ್ಚರಿ ಕುತೂಹಲಗಳಿಂದ ಕೂಡಿದ ಅನಿತಾ ಪ್ರಶ್ನಿಸಿದಳು:

'ಯಾರು ?'

'ನಾನು ನಿನ್ನ ಅಂತರಾತ್ಮ ಮಗಳೆ – ಇದೋ ಈ ಕನ್ನಡಿಯ ಒಡಲಿನಿಂದ ನುಡಿಯುತ್ತಿದ್ದೇನೆ. ನಿನ್ನಲ್ಲಿಯೇ ನೀನು ಹಾಕಿಕೊಂಡ ಪ್ರಶ್ನೆಯನ್ನು ನಾನು ಕದ್ದು ಕೇಳಿದೆ. ಅದಕ್ಕೆ 'ಎರಡೂ ಅಲ್ಲ, ಎರಡೂ ಹೌದು' ಎಂದು ತಪ್ಪುತ್ತರ ಕೊಟ್ಟೆ. ಈಗ ಹೇಳುತ್ತೇನೆ ಕೇಳು ; ಅಲೆಗ್ಸಾಂಡರ್ ಬಂದು ಹೋದ, ಮೊಗಲರು ಬಂದು ಆಳಿದರು. ಬ್ರಿಟಿಷ್, ಫ್ರೆಂಚ್, ಪೋರ್ಚುಗೀಸ್ ಎಲ್ಲರೂ ಬಂದರು. ಇದರ ಸಾರಾಂಶ ಇಷ್ಟೆ ; ಭಾರತವನ್ನು ಯಾರೂ ಗೆಲ್ಲಲಿಲ್ಲ ; ಭಾರತೀಯರು ತಮಗೆ ತಾವೇ ಸೋತರು ! ಯಾವುದರಿಂದ ? ತಮ್ಮ ಅಸೂಯೆ, ಅಸಹನೆ, ಅನೈಕಮತ್ಯಗಳಿಂದ !'

'ಅದು ಆಗಿ ಮುಗಿದ ಕಥೆ ಕನ್ನಡಿ. ಈಗ ನೀನು ಬಂದದ್ದು ಏಕೆ ?

ನಿನ್ನ ತಂದೆಯ ವ್ಯಥೆಯ ಕಥೆ ಬಿತ್ತರಿಸಲು.'

'ಒಳ್ಳೆಯದು. ಸವಿಸ್ತಾರವಾಗಿ ಹೇಳು. ನಾನು ರಾತ್ರಿಯೆಲ್ಲಾ ಕೇಳಲು ಸಿದ್ಧಳಿರುವೆ.' ಅನಿತಾ ಮತ್ತು ಕನ್ನಡಿ ಮುಖಾಮುಖಿಯಾದರು.

'ಮುದ್ದಿನ ಅನಿತಾ, ನಿನ್ನ ಪೂಜ್ಯ ತಂದೆ ನೇತಾಜಿ ಸುಭಾಸ್‌ಚಂದ್ರ ಬೋಸ್. ಆ ನಾಮ ಸ್ಮರಣೆಯಲ್ಲಿ ನಿನಗೆ ಧನ್ಯತೆ ಇದೆ. ಆತ ಶೂರ, ಸಾಹಸಿ, ಜಗತ್ತಿನ ಇತಿಹಾಸ ಪ್ರಸಿದ್ಧ ಸ್ವಾತಂತ್ರ್ಯಪ್ರೇಮಿ, ಅಸಾಧಾರಣ ಹೋರಾಟಗಾರ ; ಅವನು ನಿಜಕ್ಕೂ ಮನುಕುಲದ ಹೆಮ್ಮೆ. ಅವನನ್ನು ತಂದೆಯಾಗಿ ಪಡೆದ ನೀನು ಧನ್ಯೆ !'

'ಸತ್ಯ ನುಡಿದೆ ಕತೆಗಾರ ಕನ್ನಡಿ. ಆದರೆ ನನ್ನ ತಂದೆಯ ದುರಂತ ನನಗೆ ನೋವು ತಂದಿದೆ.'

'ಮಗು, ಚಿಂತೆ ಬೇಡ, ಕೇಳು, ಹುಟ್ಟು ಆಕಸ್ಮಿಕ, ಸಾವು ಅನಿವಾರ್ಯ ! ಆ ಮಾತು ಬಿಡು. ಈಗ ನಿನ್ನ ತಂದೆಯ ಸಾಹಸೇತಿಹಾಸದ ಸಂಪುಟದ ಪುಟಗಳನ್ನು ನಿನ್ನ ಮುಂದೆ ತೆರೆದಿಡುತ್ತೇನೆ. ಓದಿಕೊ. ಆದರೆ ಭಾವುಕತೆಗೆ ಮಾತ್ರ ಬಲಿಯಾಗಬೇಡ. ಉದ್ವಿಗ್ನತೆಯನ್ನು ಬದಿಗಿರಿಸಿ, ಸಮಧಾನದಿಂದ ಕೇಳು :

'ನಿಮ್ಮದು ಸುಸಂಸ್ಕೃತ ಗೌರವಸ್ಥ ಮನೆತನ. ಸುಮರು ಇಪ್ಪತ್ತೇಳು ತಲೆಮಾರುಗಳಿಂದಲೂ ಗುರುತಿಸಲು ದಾಖಲೆಗಳಿವೆ, ಮೂಲಪುರುಷ ದಶರಥ ಬೋಸ್. ಅವರು ಕಲ್ಕತ್ತೆಯ ದಕ್ಷಿಣ ಭಾಗದ ಮಹೀಪುರದಲ್ಲಿದ್ದರು. ಅವರಾದ ಮೇಲೆ ಮುಂದಿನ ಹನ್ನೊಂದನೆಯ ತಲೆಮಾರಿನ ಮಹೀಪತಿಬೋಸರು ಬಂಗಾಳದ ನವಾಬನ ಬಳಿ ಹಣಕಾಸು ಮತ್ತು ರಕ್ಷಣಾಖಾತೆಯ ಸಚಿವರಾಗಿದ್ದರು. ಅವರಿಗೆ ಕೆಲಭಾಗ ಭೂಮಿಯನ್ನು ನವಾಬ ಜಹಗೀರಾಗಿ ಕೊಟ್ಟಿದ್ದ ಮತ್ತು 'ಸುಬುದ್ಧಿಖಾನ್' ಎಂಬ ಬಿರುದಿನೊಂದಿಗೆ ಗೌರವಿಸಿದ್ದ ಕೂಡ. ಆ ಜಹಗೀರು ಸ್ಥಳ ಇಂದು 'ಸಬುದ್ಧಿಪುರ'ಎಂಬ ಊರಾಗಿದೆ. ಮಹೀಪತಿ ಬೋಸರ ಮರಿಮಗನ ಮಗ ಗೋಪಿನಾಥ ಬೋಸರು ಹದಿನೈದನೆಯ ಶತಮಾನದ ಕೊನೆಯ ಭಾಗದಲ್ಲಿ ಆಳುತ್ತಿದ್ದ ಸುಲ್ತಾನ್ ಹುಸೇನ್ ಷಹಾನ ಅರ್ಥ ಸಚಿವ ಹಾಗೂ ನೌಕರಾಧಿಕಾರಿಯಾಗಿದ್ದರು. ಅವರಿಗೂ ಜಹಗೀರು ಮತ್ತು 'ಪುರಂದರ ಖಾನ್' ಎಂದು ಬಿರುದು ಬಂದಿದ್ದವು. ಆ ಜಹಗೀರ್ ಭಾಗ ಇಂದು 'ಪುರಂದರಪುರ' ಎಂದು ಕರೆಸಿಕೊಳ್ಳುತ್ತಿದೆ. ಗೋಪಿನಾಥ ಬೋಸರು ಶುದ್ಧ ಮಾನವತಾವಾದಿ. ಜನಜಾನುವಾರುಗಳ ಸೌಕರ್ಯಕ್ಕಾಗಿ ಒಂದು ಕೆರೆ ಕಟ್ಟಿಸಿದ್ದರು. ಅದನ್ನು ಕಟ್ಟುವಾಗ ಮಹೀನಗರದ ಹತ್ತಿರದ ಒಂದೆಡೆಯಲ್ಲಿ ಕೊಡಲಿಗಳನ್ನು ರಾಶಿ ಹಾಕುತ್ತಿದ್ದರಂತೆ. ಆ ಕೊಡಲಿ ಮೊದಲಾದ ಉಪಕರಣಗಳನ್ನು ಹಾಕುತ್ತಿದ್ದ ಸ್ಥಳ 'ಕೊಡಲ್' ಎಂಬ ಹೆಸರಿನ ಊರಾಯಿತು. ಅದೇ ನಿಮ್ಮ ತಾತ ಜಾನಕೀನಾಥ ಬೋಸರು ಹುಟ್ಟಿದ ಊರು. ಹುಟ್ಟೂರಿನ ಬಗೆಗೆ ಜಾನಕೀನಾಥರಿಗೆ ವಿಶೇಷ ಪ್ರೀತಿ. ಅಲ್ಲಿ ಅನೇಕ ಜನೋಪಕಾರಿ ಕೆಲಸ ಮಾಡಿದ್ದಾರಲ್ಲದೆ, ಪ್ರತಿ ವರ್ಷವೂ ತಪ್ಪದೆ ನವರಾತ್ರಿಯಲ್ಲಿ ಅಲ್ಲಿಗೆ ಹೋಗಿ ದುರ್ಗಾಪೂಜೆ ನೆರವೇರಿಸಿ ಸಂತರ್ಪಣೆ ವ್ಯವಸ್ಥೆ ಮಾಡುತ್ತಿದ್ದರು. ಊರು ನಿಮ್ಮ ತಾತನವರಿಗಲ್ಲದೆ ಅನೇಕ ಜನ ಕ್ರಾಂತಿಕಾರಿ ರಾಷ್ಟ್ರಪ್ರೇಮಿಗಳಿಗೆ ಜನ್ಮ ಕೊಟ್ಟಿತ್ತು. ಅಂಥವರಲ್ಲಿ ಎಂ. ಎನ್. ರಾಯ್ ಒಬ್ಬರು.

ಹೀಗೆ ನಿಮ್ಮ ಪೂರ್ವಜರು ಲೋಕಸಂಗ್ರಹ ಕಾರ್ಯದಲ್ಲಿ ನಿರತರಾಗಿದ್ದ ಧಾರ್ಮಿಕ ವ್ಯಕ್ತಿಗಳು, ದೈವಭಕ್ತರು, ಅಷ್ಟೇ ಪ್ರಮಾಣದ ರಾಷ್ಟ್ರಪ್ರೇಮಿಗಳು ಕೂಡ. ಅವರು ಸಾಹಸ, ಯುದ್ಧ, ಶಾಂತಿ, ಸಂಧಾನ, ದಕ್ಷತೆ ಮತ್ತು ಮುತ್ಸದ್ಧಿತನದಲ್ಲಿ ಹೆಸರಾದವರು. ಈ ಎಲ್ಲ ಗುಣಗಳೂ ಮೈತಳೆದು ನಿಂತಿದ್ದವು. ನಿಮ್ಮ ತಂದೆ ಸುಭಾಸ್‌ಚಂದ್ರ ಬೋಸರಲ್ಲಿ !'

ನಮ್ಮ ತಾತ ಜಾನಕೀನಾಥ ಬೋಸರೂ ದಿವಾನರಾಗಿದ್ದರೇನು ಬಂಗಾಳದ ನವಾಬರ ಬಳಿ ?'

'ಇಲ್ಲ, ಅವರು ಕಟಕ್‌ನಲ್ಲಿ ಸುಪ್ರಸಿದ್ಧ ವಕೀಲರಾಗಿದ್ದರು. ಕೆಲಕಾಲ ನಗರಸಭೆಯ ಅಧ್ಯಕ್ಷರೂ ಆಗಿದ್ದರು. ಅನಿತಾ, ಅವರ ಮಾನವಪ್ರೇಮ, ಧರ್ಮಶ್ರದ್ಧೆ, ರಾಷ್ಟ್ರಭಕ್ತಿಗಳು ಅನನ್ಯ, ಅಸಾಧಾರಣ ! ಅವರು ಸದಾ ಖಾದಿ ಧರಿಸುತ್ತಿದ್ದರಲ್ಲದೆ, ಸ್ವದೇಶೀ ವಸ್ತುಗಳನ್ನೇ ಬಳಸಬೇಕೆಂಬ ನಿಯಮ ಇಟ್ಟುಕೊಂಡಿದ್ದರು. ಅವರು ತುಂಬಾ ಸ್ವಾಭಿಮಾನದ ಶಿಶು. ಅದಕ್ಕೊಂದು ನಿದರ್ಶನ :

೧೯೩೦ರಲ್ಲಿ ಗಾಂಧೀಜಿ ವಿನಮ್ರ ಕಾನೂನುಭಂಗ ಚಳವಳಿ ಆರಂಭಿಸಿದಾಗ, ಅದನ್ನು ಮಟ್ಟ ಹಾಕಲು ಬ್ರಿಟಿಷ್ ಸರ್ಕಾರ ದಮನಕಾರಿ ಕಾರ್ಯಾಚರಣೆಗೆ ತೊಡಗಿತು. ಆಗ ಜಾನಕೀನಾಥ ಬೋಸರು ತಮಗೆ ಬ್ರಿಟಿಷರು ಕೊಡಮಾಡಿದ್ದ 'ರಾಯ್ ಬಹದ್ದೂರ್' ಬಿರುದನ್ನು ಪ್ರತಿಭಟನೆಯ ಮೂಲಕ ಹಿಂತಿರುಗಿಸಿದರು. ಅಷ್ಟೇ ಅಲ್ಲ, ತಮ್ಮ ಇಬ್ಬರು ಮಕ್ಕಳಾದ ಶರತ್ ಮತ್ತು ಸುಭಾಸ್ ರಾಷ್ಟ್ರಕ್ಕಾಗಿ ತಮ್ಮ ಬದುಕನ್ನು ಮೀಸಲಿಟ್ಟಾಗ ಜಾನಕೀನಾಥ್ ಹರ್ಷೋದ್ಗಾರ ಮಾಡಿದರು. ಅಂತಹ ರಾಷ್ಟ್ರಪ್ರೇಮಿ ನಿಮ್ಮ ತಾತ.'

'ತಾತ ; ನಮ್ಮ ಅಜ್ಜಿ ?'

ನಿಮ್ಮ ಅಜ್ಜಿ ಪ್ರಭಾವತೀ ದೇವಿಯವರು. ಅವರು ಉತ್ತರ ಕಲ್ಕತ್ತೆಯ ಹಟ್‌ಖೋಲದ ಸಂಪ್ರದಾಯಸ್ಥ ದತ್ ಮನೆತನಕ್ಕೆ ಸೇರಿದವರು. ಎಂಟು ಗಂಡು, ಆರು ಹೆಣ್ಣು ಮಕ್ಕಳ ತಾಯಿ. ನಿಮ್ಮ ತಂದೆ ಸುಭಾಸ್ ಒಂಬತ್ತನೆಯವರು. ನಿಮ್ಮ ಅಜ್ಜಿ ಪ್ರಭಾವತಿ ದೇವಿಯವರು ಸಂಕಲ್ಪ ಶಕ್ತಿಯಿದ್ದ ತೀಕ್ಷ್ಣ ಬುದ್ಧಿಮತಿ ಮತ್ತು ಶುದ್ಧ ವಾಸ್ತವಿಕ ವ್ಯವಹಾರ ತಜ್ಞೆ, ಪತಿಗೆ ತಕ್ಕ ಸತಿಯಾಗಿ, ಗಂಡನಷ್ಟೇ ಜ್ವಲಂತ ರಾಷ್ಟ್ರಪ್ರೇಮಿಯಾಗಿದ್ದರು.

ಇಂತಹ ಪುಣ್ಯ ದಂಪತಿಯ ಸುಪುತ್ರನಾಗಿ ನಿನ್ನ ತಂದೆ ಸುಭಾಸ್‌ಚಂದ್ರ ಬೋಸ್ ೧೮೯೭ ಜನವರಿ ೨೩ರಂದು ಒರಿಸ್ಸಾದ ಕಟಕ್‌ನಲ್ಲಿ ಜನಿಸಿದರು. ಐದು ವರ್ಷದ ಬಾಲಕ ಸುಭಾಸನನ್ನು ಕಟಕ್‌ನ ಇಂಗ್ಲಿಷ್ ಮಿಷನರಿ ಶಾಲೆಗೆ ಸೇರಿಸಿದರು ನಿಮ್ಮ ತಾತ. ಆ ಶಾಲೆ ಅಷ್ಟಾಗಿ ಅವನಿಗೆ ಹಿಡಿಸಲಿಲ್ಲ. ಆದರೆ ಅದನ್ನು ಬದಲಾಯಿಸುವಷ್ಟು ಶಕ್ತಿಯಾಗಲಿ ಸ್ವಾತಂತ್ರ್ಯವಾಗಲಿ ಆ ಬಾಲಕನಿಗಿರಲಿಲ್ಲ. ಆದ್ದರಿಂದ ಹೇಗೋ ಅಲ್ಲಿಯೇ ಆರು ವರ್ಷ ತಳ್ಳಿದ. ಅಲ್ಲಿ ನಮ್ಮ ದೇಶೀಯ ಸಾಹಿತ್ಯ ಸಂಸ್ಕೃತಿಗಳು ಪ್ರತಿಬಿಂಬಿತವಾಗುವ ಪಠ್ಯಗಳೇ ಇರಲಿಲ್ಲ. ಸಂಸ್ಕೃತದ 'ಗಜಃ–ಗಜೌ–ಗಜಾಃ' ಕ್ಕೆ ಬದಲು, ಲ್ಯಾಟಿನ್ನಿನ 'ಬೋನಸ್–ಬೋನಾ– ಬೋನಂ' ಅಭ್ಯಸಿಸಬೇಕಾಗಿತ್ತು. ಸಂಗೀತಕ್ಕೆ ಸಂಬಂಧಿಸಿದಂತೆ 'ಸ–ರಿ–ಗ–ಮ–ಪ–ದ–ನಿ–ಗಳಿಗೆ ಬದಲು, ಪಾಶ್ಚಾತ್ಯ ಸಂಗೀತದ 'ದೋ–ರೇ–ಮೀ–ಫಾ' ಕಲಿಯಬೇಕಿತ್ತು. ಅಲ್ಲದೆ ಭಾರತೀಯ ಭಾಷಾ ಸಾಹಿತ್ಯದ ಯಾವ ಕೃತಿಯ ಮೇಲಿನ ಗಾಳಿಯೂ ಅಲ್ಲಿ ಸುಳಿಯುತ್ತಿರಲಿಲ್ಲ. 'ಇಂತಹ ಶಾಲೆಗಳಿಗೆ ಭಾರತೀಯ ಮಕ್ಕಳನ್ನು ಓದಲು ಕಳುಹಿಸಬಾರದು ಎಂಬುದು ನನ್ನ ಖಚಿತ ಅಭಿಪ್ರಾಯ. ಎಳೆಯ ಮನಸ್ಸುಗಳ ಮೇಲೆ, ಇಂತಹ ಪರಿಸರದಲ್ಲಿ ಹಲವು ವಿಕೃತಿಗಳು ನೆಲೆಸಿಬಿಡುತ್ತವೆ. ಸಂವೇದನಾಶೀಲ ಮಕ್ಕಳು ನಿಜಕ್ಕೂ ಇಲ್ಲಿನ ವಾತಾವರಣದಿಂದ ಅಸಂತುಷ್ಟರಾಗುತ್ತಾರೆ' – ಎಂದು ನಿಮ್ಮ ತಂದೆಯೇ ನಮ್ಮ ನಲವತ್ತನೆಯ ವಯಸ್ಸಿನಲ್ಲಿ ಹೇಳಿದ್ದಾರೆ.'

'ಆದರೆ ಆ ಶಾಲೆಯಲ್ಲಿ ಶಿಸ್ತು, ಸದ್ವರ್ತನೆ, ಸಮಯಪಾಲನೆ, ಕಾಯಕನಿಷ್ಠೆ ಮೊದಲಾದ ಗುಣಗಳು ಇದ್ದುವೆಂದು ಕೇಳಿದ್ದೇನೆ.'

'ಸತ್ಯವಾಗಿ. ಅದನ್ನು ಸುಭಾಸ್ ಕೂಡ ಒಪ್ಪುತ್ತಿದ್ದರು. ಬ್ರಿಟಿಷರು ನಮ್ಮ ಸ್ವಾತಂತ್ರ್ಯವನ್ನು ಕಸಿದುಕೊಂಡಿದ್ದರು, ನಮ್ಮನ್ನು ತಮ್ಮ ಗುಲಾಮರನ್ನಾಗಿ ಮಾಡಿಕೊಂಡು ಆಳಿದರು ಎಂಬುದನ್ನು ಬಿಟ್ಟರೆ, ಉಳಿದಂತೆ ಅವರಿಂದ ಅನೇಕ ಪ್ರಯೋಜನಗಳಾಗಿವೆ ಎನ್ನುತ್ತಿದ್ದರು. ಮುಖ್ಯವಾಗಿ ಭಾರತ ತಾನು ಹುಟ್ಟಿ ಅಸ್ತಿತ್ವಕ್ಕೆ ಬಂದಾಗಿನಿಂದ ಎಂದೂ ಒಗ್ಗಟ್ಟಿನಿಂದ ಬದುಕು ಮಾಡಿರಲಿಲ್ಲ. ಭಾರತ ಒಂದು ಅಖಂಡ ರಾಷ್ಟ್ರ ಎಂಬ ಕಲ್ಪನೆಯೂ ನಮ್ಮ ಪ್ರಾಚೀನ ಭಾರತೀಯರಿಗಿರಲಿಲ್ಲ. ಎಲ್ಲರೂ ಒಂದೊಂದು ದ್ವೀಪವಾಗಿಯೇ ಜೀವನ ಸಾಗಿಸುತ್ತಿದ್ದರು. ಬ್ರಿಟಿಷರು ಬಂದ ಮೇಲೆ ನಾವು ಭಾರತೀಯರು ; ನಾವೆಲ್ಲರೂ ಒಂದು ಎಂಬ ಭಾವನೆಯೊಂದಿಗೆ 'ಭಾರತ ಒಕ್ಕೂಟ' ಸ್ಥಿತವಾಗಲು ಕಾರಣವಾಯಿತು. ಅದೇರೀತಿ ಶಾಲೆಯಲ್ಲಿ ಮಕ್ಕಳಿಗೆ ಕಲಿಸುತ್ತಿದ್ದ ಶಿಸ್ತು ಮೊದಲಾದವುಗಳೂ ಮುಖ್ಯ. ಅವು ಜೀವನ ಮೌಲ್ಯಗಳಾಗಿ ಭಾರತೀಯರಲ್ಲಿ ಬೆಳಗಬೇಕು ಎನ್ನುತ್ತಿದ್ದರು.'

'ಒಳ್ಳೆಯದು. ಮುಂದೆ.... ?

'ಮುಂದೆ ಹನ್ನೊಂದು ತುಂಬಿತು ಸುಭಾಸನಿಗೆ. ಕಟಕ್‌ನಲ್ಲೇ ಇದ್ದದ 'ರ್‍ಯಾವೆನ್ ಷಾ ಕೊಲಿಜಿಯೇಟ್' ಎಂಬ ಭಾರತೀಯ ಪರಿಸರವುಳ್ಳ ಶಾಲೆಗೆ ಸೇರಿಸಿದರು. ಆದು ತುಂಬಾ ಮೆಚ್ಚಾಯಿತು. ಸುಭಾಸನಿಗೆ ಅಲ್ಲಿನ ಪರಿಸರ ತುಂಬಾ ಹಿಡಿಸಿತು. ಅಲ್ಲಿ ಅವನ ಮೇಲೆ ಹೆಚ್ಚು ಪ್ರಭಾವ ಬೀರಿದವರು ಶಾಲೆಯ ಮುಖ್ಯೋಪಾಧ್ಯಾಯರಾದ ಬೇ(ವೇ)ಣಿ ಮಾಧವದಾಸ್ ಎಂಬುವರು. ದಾಸರದು ನೋಡಿದವರಲ್ಲಿ ಗೌರವ ಮೂಡಿಸುವಂತಹ ವ್ಯಕ್ತಿತ್ವ, ಸಜ್ಜನಿಕೆ, ಸಾತ್ವಿಕತೆಗಳು ಮೈ ತಳೆದಂತಿದ್ದ ವ್ಯಕ್ತಿ. ಅವರು ಮಕ್ಕಳ ವಿಕಾಸಶೀಲ ಮನಸ್ಸಿಗೆ ಒಂದು ಸುಂದರ ವಾತಾವರಣ ನಿರ್ಮಿಸುತ್ತಿದ್ದರು. ಮಕ್ಕಳ ಅಭಿಪ್ರಾಯ ಸ್ವಾತಂತ್ರ್ಯಕ್ಕೆ ಕಡಿವಾಣ ಹಾಕುತ್ತಿರಲಿಲ್ಲ ಮತ್ತು ಅವರ ಸ್ವೋಪಜ್ಞತೆಗೆ ವಿಶೇಷ ಪ್ರೋತ್ಸಾಹ ಕೊಡುತ್ತಿದ್ದರು. ಅಂತೆಯೇ ಮಾನವ ಮತ್ತು ನಿಸರ್ಗ ಈ ಸಂಬಂಧವಾಗಿ ಬಹಳ ಹೇಳುತ್ತಿದ್ದರು.'

'ಪ್ರಕೃತಿ ಅಥವಾ ನಿಸರ್ಗ ಮಾನವನಿಗೆ ತಾಯಿ ಇದ್ದಂತೆ. ಅದರ ಒಂದೊಂದು ಮರಗಿಡವೂ ಅದರ ಒಂದೊಂದು ಅಂಗ. ಅದನ್ನು ಕತ್ತರಿಸಿದರೆ ಹೆತ್ತ ತಾಯಿಯನ್ನೇ ಕೊಲೆಗೈದಂತೆ ! ಪ್ರಕೃತಿ ನಾಶ ಮಾನವ ಕೋಟಿಯ ವಿನಾಶ ! ಅಂತಾಗದಿರಲಿ, ಪ್ರಕೃತಿಯೊಡನೆ ನಿಮ್ಮ ಅವ್ಯಾಜಪ್ರೇಮ ಬೆಳೆಯಲಿ. ಅದು ನಮ್ಮಂತೆಯೇ ಮಾತನಾಡುತ್ತದೆ, ನಗುತ್ತದೆ, ನಲಿಯುತ್ತದೆ. ಆ ನಲಿವು ಎಂದೆಂದಿಗೂ ಅದರ ನೋವೆನಿಸದಿರಲಿ !'

ಬೇಣಿ ಮಾಧವದಾಸರ ಇಂತಹ ಮಾತುಗಳು ಬಾಲಕರನ್ನು ಒಲಿಸಿ ಒಗ್ಗಿಸಿಕೊಳ್ಳುತ್ತಿದ್ದವು. ಆ ಶಾಲೆಯಲ್ಲಿ ಒರಿಸ್ಸಾದವರ ಕೂಡ ಬಂಗಾಳಿಗಳೂ ಇದ್ದರು. ಹಿಂದೂ, ಮುಸ್ಲಿಂ, ಕ್ರೈಸ್ತ ಮಕ್ಕಳು ಅಲ್ಲಿ ಆ ಸೌಹಾರ್ದಯುತ ವಾತಾವರಣದಲ್ಲಿ ಹರ್ಷದಿಂದ ಕಲಿಯುತ್ತಿದ್ದುದುಂಟು. ಈ ಮಾನವ ಪ್ರೇಮ, ಸಹಬಾಳ್ವೆ ಬಾಲಕ ಸುಭಾಸನ ಮನಸ್ಸಿನ ಮೇಲೆ ಒಳ್ಳೆಯ ಪರಿಣಾಮ ಉಂಟುಮಾಡಿತು. ಅದೇ ದಿನಗಳಲ್ಲಿ ಶ್ರೀರಾಮಕೃಷ್ಣ ಪರಮಹಂಸ ಮತ್ತು ಸ್ವಾಮಿ ವಿವೇಕಾನಂದ – ಇವರ ಸಾಹಿತ್ಯ ಕೃತಿಗಳು ಸಿಕ್ಕಿದವು. ಎಲ್ಲವನ್ನೂ ಬಾಲಕ ಸುಭಾಸ್ ತುಂಬು ಆಸ್ತೆಯಿಂದ ಓದಿದ ; ಆ ಮೂಲಕ ತನ್ನಾತ್ಮವನ್ನು ತುಂಬಿಕೊಂಡ. ಸ್ವಾಮಿ ವಿವೇಕಾನಂದರ ಪ್ರವೇಶದಿಂದಾಗಿ ಅವರ ಬದುಕಿಗೆ ಹೊಸ ತಿರುವು ಬಂತು. ಬದುಕಿಗೊಂದು ಅರ್ಥ ಇದೆ, ಅದನ್ನು ವ್ಯರ್ಥಗೊಳಿಸಬಾರದು ಎಂಬ ಅರಿವಾಯಿತು. ಸೋದರಿ ನಿವೇದಿತಾರವರ ಪರಿಚಯದಿಂದ ಮನುಕುಲದ ಸೇವೆಯಲ್ಲಿ ದೇಶಸೇವೆಯೂ ಬೆರೆತಿದೆ ಎಂಬ ಬೋಧೆ ದೊರೆಯಿತು. ಅಂತೆಯೇ ಭಾರತೀಯರಲ್ಲಿ ಬೇರು ಬಿಟ್ಟಿರುವ ಮೂಢನಂಬಿಕೆಗಳು ನಾಶವಾಗಿ, ಎಲ್ಲ ಕ್ಷೇತ್ರದಲ್ಲೂ ಅವರು ವೈಜ್ಞಾನಿಕ ಮನೋಭಾವ ಬೆಳೆಸಿಕೊಳ್ಳಬೇಕು ಎಂಬ ಅಂಶ ಸುಭಾಸನಿಗೆ ತುಂಬಾ ಮೆಚ್ಚಾಯಿತು. ಶ್ರೀ ರಾಮಕೃಷ್ಣ ಪರಮಹಂಸರ ಆಧ್ಯಾತ್ಮ ತತ್ವವನ್ನು ಅವನ ಮನಸ್ಸು ಸ್ವಾಗತಿಸಿತು. 'ತ್ಯಾಗದಿಂದ ಭಗವಂತನ ಸಾಕ್ಷಾತ್ಕಾರ ಸಾಧ್ಯ' ಎಂಬುದನ್ನು ಮನಗಂಡ !

ಸುಭಾಸ್ ನಿತ್ಯ ಯೋಗಾಭ್ಯಾಸದ ಮೂಲಕ ತನ್ನಲ್ಲಿನ ಸ್ಥಿತಪ್ರಜ್ಞತೆಯನ್ನು ವೃದ್ಧಿಸಿಕೊಂಡ. ಅವನಿಗೆ ಬರಿ ನೆಲದ ಮೇಲೆ ಮಲಗುವುದು ಅಭ್ಯಾಸವಾಗಿ ಹೋಯಿತು. ಅವನ ತಾಯಿ ಮಂಚದ ಮೇಲೆ, ಹಾಸಿಗೆಯ ಮೇಲೆ ಮಲಗಿಸಲು ಎಷ್ಟೆಷ್ಟೋ ಪ್ರಯತ್ನಪಟ್ಟರೂ ಫಲಕಾರಿಯಾಗಲಿಲ್ಲ. ಅಮ್ಮನಿಗೇ ಆಧ್ಯಾತ್ಮ ಬೋಧಿಸಲು ತೊಡಗಿದ.

'ಅಮ್ಮಾ, ಈ ಕೆಟ್ಟ ಶರೀರಕ್ಕೆ ಸುಖ ಸೌಲಭ್ಯಗಳನ್ನು ಕೊಟ್ಟಷ್ಟೂ ಅದು ಸೋಮಾರಿಯಾಗಿಬಿಡುತ್ತೆ. ಮತ್ತೆ ಮತ್ತೆ ಅದೇ ಸುಖ ಬಯಸುತ್ತೆ. ಎಂದಾದರೂ ಒಂದು ದಿನ ಕಿಂಚಿತ್ ಕಡಿಮೆಯಾದರೆ ಸಾಕು ಮನಸ್ಸನ್ನು ತುಂಬಾ ಹಿಂಸೆಗೆ ಗುರಿಪಡಿಸುತ್ತೆ. ಹೇಗೆ ದುಂಬಿ ಮಧುವನ್ನು ಹೀರುವಾಗ ಹೂವನ್ನು ನೋಯಿಸುವುದಿಲ್ಲವೊ ಹಾಗೆ ಶರೀರ ಮನಸ್ಸನ್ನು ನೋಯಿಸದೆ ಬುದ್ಧಿ ಕಲಿಯಬೇಕು. ಈ ಗುಟ್ಟು ತಿಳಿದಿದ್ದ ನಮ್ಮ ಪ್ರಾಚೀನ ಋಷಿಮುನಿಗಳು ಸದಾ ನೆಲದ ಮೇಲೇ ಮಲಗುತ್ತಿದ್ದರು. ಅದು ನಿನಗೆ ಗೊತ್ತು ಅಲ್ಲವೆ ಅಮ್ಮ, ಎಂದು ಭಾಷಣ ಬಿಗಿದು ಅಮ್ಮನ ಬಾಯಿ ಮುಚ್ಚಿಸುತ್ತಿದ್ದ.

ಕಟಕ್‌ನ ಶಾಲಾ ಶಿಕ್ಷಣ ಮುಗಿಯಿತು. ಸುಭಾಸ್ ೧೯೧೩ರಲ್ಲಿ ಕಲ್ಕತ್ತೆಗೆ ಕಾಲೇಜು ಶಿಕ್ಷಣಕ್ಕಾಗಿ ಹೊರಟ. ಕಲ್ಕತ್ತ ವಿಶ್ವವಿದ್ಯಾಲಯದ ಪ್ರಮುಖ ಹಾಗೂ ಸುಪ್ರಸಿದ್ಧ ಪ್ರಸಿಡೆನ್ಸಿ ಕಾಲೇಜು ಸೇರಿದ. ಕಲ್ಕತ್ತ ನಗರ ದೈಹಿಕವಾಗಿ, ಮಾನಸಿಕವಾಗಿ ಕೆಟ್ಟುಹೋಗಿತ್ತೆಂದು ತಿಳಿದಿದ್ದರೂ ಸುಭಾಸ್ ಅಲ್ಲಿ ತನ್ನ ಹಾದಿಯನ್ನು ತಾನು ಗುರುತಿಸಿಕೊಂಡ. ಅಲ್ಲಿದ್ದ ಕ್ರಾಂತಿಕಾರಿಗಳ ತಂಡವೊಂದನ್ನು ತನ್ನತ್ತ ಸೆಳೆದುಕೊಂಡು ರಾಷ್ಟ್ರೀಯ ಭಾವನೆಯ ಶ್ರೇಷ್ಠ ಕಲ್ಪನೆಯನ್ನು ಅದರ ತಲೆಗೆ ತುಂಬಲು ಯತ್ನಿಸಿದ. ಅಂತೆಯೇ ಬದುಕನ್ನು ಕುರಿತು ಗಂಭೀರವಾಗಿ ಚಿಂತಿಸತೊಡಗಿದ.

ಬದುಕಿಗೊಂದು ಅರ್ಥ ಇದೆ ; ಅದಕ್ಕೊಂದು ಗುರಿಯೂ ಇದೆ. ಆ ಗುರಿ ನಿರ್ದಿಷ್ಟವಾಗಿರಬೇಕು. ಹಾದಿ ಎಷ್ಟೇ ದುರ್ಗಮವಾಗಿದ್ದರೂ ಅದನ್ನು ನಡೆದೇ ತೀರುತ್ತೇನೆಂಬ ಆತ್ಮವಿಶ್ವಾಸವಿರಬೇಕು. ಧ್ಯೇಯಕ್ಕಾಗಿ ದೇಹ ಸಮರ್ಪಿತವಾದರೂ ಚಿಂತೆಯಿಲ್ಲ ; ಗುರಿ ಮುಟ್ಟುವುದು ಮುಖ್ಯ ಎಂಬ ದೃಢ ವಿಶ್ವಾಸ ವ್ಯಕ್ತಿಯಲ್ಲಿರಬೇಕು. ಇದಕ್ಕೆಲ್ಲ ಆತ್ಮಬಲ ಮುಖ್ಯ. ಆತ್ಮಬಲಕ್ಕೆ ಅಧ್ಯಾತ್ಮ ಸ್ಥಾಯಿ ; ಅದನ್ನು ಮೊದಲು ಆರ್ಜಿಸಿಕೊಳ್ಳಬೇಕು.'

ಹೀಗೆಂದುಕೊಂಡಾಗಲೆಲ್ಲ ಸ್ವಾಮಿ ವಿವೇಕಾನಂದರ ಭವ್ಯತಮ ಮೂರ್ತಿ ಅವನ ಕಣ್ಣೆದುರು ಧುತ್ತನೆ ಬಂದು ನಿಲ್ಲುತ್ತಿತ್ತು. 'ಪಾಂಡಿಚೇರಿಯ ಪೂರ್ಣಯೋಗಿ ಅರವಿಂದರ ಅಮೃತೋಪಮ 'ಪೂರ್ಣದರ್ಶನವೂ ಅವನ ಒಳಗನ್ನು ಎಚ್ಚರಿಸುತ್ತಿತ್ತು. ಯೋಗ, ತ್ಯಾಗಗಳಿಲ್ಲದ ಜೀವನ ಜೀವನವಲ್ಲ. ತ್ಯಾಗ ಮನುಷ್ಯನನ್ನು ಮಹಾತ್ಮನನ್ನಾಗಿಸಿದರೆ, ಯೋಗ

ಸಾಕ್ಷಾತ್ ಯೋಗೀಶ್ವರನ ಸ್ಥಾನಕ್ಕೇರಿಸುತ್ತದೆ. ಈ ಕೀರ್ತಿಕಾಮನೆಗಾಗಿಯೇ ವ್ಯಕ್ತಿಯ ದುಡಿಮೆ ಎಂದು ಭಾವಿಸಬಾರದು. ಮನುಷ್ಯನಾಗಿ ಹುಟ್ಟಿದ ಮೇಲೆ ಅದು ತನ್ನ ಕರ್ತವ್ಯವೆಂದು ತಿಳಿದು ಆಚರಿಸಬೇಕು. ಸೇವೆ ಎಂಬುದು ತ್ಯಾಗದ ಒಂದು ಅವಿಭಾಜ್ಯ ಅಂಗ. ಅದು ಸಾರ್ಥಕವಾಗುವುದು ರಾಷ್ಟ್ರದ ಪುನರ್ನಿರ್ಮಾಣ ಕಾರ್ಯದಲ್ಲಿ ನಿರತರಾದಾಗ ಮಾತ್ರ. ಆದ್ದರಿಂದ ರಾಷ್ಟ್ರ ಕಲ್ಪನೆಯೂ ತನ್ನ ಶೈಕ್ಷಣಿಕ ಜೀವನದ ಧ್ಯೇಯವಾಗಲಿ'

ವ್ಯಕ್ತಿ ಸ್ವಯಂಸಾಧನೆಯ ಮೂಲಕ ಹೇಗೆ ಮಹೋನ್ನತಿಯ ಮಜಲು ಮುಟ್ಟಬಹುದು ಎಂಬುದನ್ನು ಸ್ವಾನುಭವದಿಂದ ಅರಿತ. ಅಂತೆಯೇ ಸನಾತನ ಸಂಸ್ಕೃತಿಯ ತವರಾದ ಭರತಖಂಡದ ತುಸು ಪರಿಚಯ ಮಾಡಿಕೊಳ್ಳಲು ಯಾತ್ರೆ ಕೈಕೊಂಡ ತನ್ನ ಹದಿನೇಳನೆಯ ವಯಸ್ಸಿನಲ್ಲಿ. ಹೃಷಿಕೇಶ, ಹರದ್ವಾರ, ಮಥುರಾ, ವೃಂದಾವನ, ವಾರಣಾಸಿ, ಗಯಾ ಮೊದಲಾದೆಡೆಗಳಲ್ಲಿ ಅಡ್ಡಾಡಿ ಬಂದ. ಹೃಷಿಕೇಶದ ನದಿಯ ಪಾತ್ರದ ಪ್ರಶಾಂತತೆ, ಹರದ್ವಾರದ ಬಿಲ್ಲಿನಿಂದ ತಪ್ಪಿಸಿಕೊಂಡ ಬಾಣ ಗುರಿಯತ್ತ ಸಾಗುವಂತೆ ಓಡುವ ನದಿಯ ತೀವ್ರ ವೇಗ – ಇವು ಸುಭಾಸನನ್ನು ಅಚ್ಚರಿಗೊಳಿಸಿದವು. ಹೃಷಿಕೇಶದ ಗುಹೆ ಗುಂಡಾರಗಳಲ್ಲಿದ್ದ, ಆತ್ಮರತರಾಗಿ ತಪೋಮಗ್ನರಾಗಿದ್ದ, ಧ್ಯಾನಶೀಲರಾಗಿದ್ದ, ನಿತ್ಯಾನುಷ್ಠಾನ ನಿರತರಾಗಿದ್ದ ಅನೇಕ ಋಷಿಪುಂಗವರನ್ನು ದರ್ಶಿಸಿ ಧನ್ಯ ತಾನೆಂದುಕೊಂಡ. ಹರದ್ವಾರ ಹಿಮವತ್ ಕೇದಾರದ ಮೊದಲ ಮಹಾದ್ವಾರ. ಅಲ್ಲಿಗೆ ಹೋದರೆ ಪರಶಿವನ ದರ್ಶನ ಪಡೆಯಬಹುದು. ಇರಲಿ, ಮತ್ತೊಮ್ಮೆ ಬಂದರಾಯಿತು ಎಂದಂದುಕೊಂಡು ಮಥುರಾಕ್ಕೆ ಬಂದ. ಅಲ್ಲಿ ಶ್ರೀಕೃಷ್ಣನ ದರ್ಶನವಾಯಿತು. ಅನಂತರ ಯಮುನೆಯ ತಡಿ ದಾಟಿ ಅವಳ ಮರಳರಾಶಿಯ ತೊಡೆಯ ಮೇಲೆ ಉರುಳಾಡಿದ. ಬೃಂದಾವನದ ವಕ್ಷಸ್ಥಲದಲ್ಲಿ ರಾಸಕ್ರೀಡೆಯಾಡಿದ ಕೃಷ್ಣಪರಮಾತ್ಮನ ಲೀಲಾವಿನೋದವನ್ನು ಪ್ರತ್ಯಕ್ಷ ಕಂಡ ಅನುಭವ ಅವನಿಗಾಯಿತು.

ಸುಭಾಸನ ಪಯಣ ವಾರಣಾಸಿಯತ್ತ ಸಾಗಿತು. ಗಂಗಾನದಿಯಲ್ಲಿ ಮಿಂದು ಬಂದು ಕಾಶಿ ವಿಶ್ವನಾಥನ ದರ್ಶನ ಪಡೆದ. ನದಿ ದಾಟಿ ಹೋಗಿ ತಾಯಿ ವಿಶಾಲಾಕ್ಷಿಯ ದರ್ಶನಾಶೀರ್ವಾದಗಳನ್ನು ಪಡೆದು ಬಂದ. ಬಂದವನೆ ನೇರವಾಗಿ ವಾರಣಾಸಿಯ ರಾಮಕೃಷ್ಣಾಶ್ರಮದ ಸ್ವಾಮಿ ಬ್ರಹ್ಮಾನಂದರನ್ನು ಭೇಟಿ ಮಾಡಿದ. ಅವರ ಮುಂದೆ ಭಾರತದ ದುಃಸ್ಥಿತಿ, ಮಾನವತೆಯ ಅಭಾವ, ಮೌಲ್ಯಗಳ ಅಪವ್ಯಯ, ನೈತಿಕ ಪತನ, ಸಂಸ್ಕೃತಿಯ ಅವನತಿ ಇವೇ ಮೊದಲಾದ ನಿತ್ಯ ಬಿಕರಿಯ ಸರಕುಗಳನ್ನು ಹರಹಿದ. ಸ್ವಾಮೀಜಿ ಹೇಳಿದರು :

'ಮಗು, ನಿನ್ನ ವಯೋಧರ್ಮಕ್ಕನುಗುಣವಾಗಿ ನಿನ್ನ ಆಸ್ತೀಕ ಹೃದಯದಲ್ಲಿ ಈ ಭಾವನೆಗಳು ಮೊಳೆಯುತ್ತಿರುವುದು ಸಹಜ. ಆದರೆ ಕೇಳು, ಮಗುವಾಗಿದ್ದಾಗಿನ ಮುಗ್ಧತೆ, ಯೌವನದ ಆಕರ್ಷಣೆ, ಮುಪ್ಪು ಚಪ್ಪರಿಸಿದಾಗಿನ ಅಬಲತೆ ಇವೆಲ್ಲ ವ್ಯಕ್ತಿಯ ವಿಕಾಸದ ಕಾಲಖಂಡಗಳು, ಹಾಗೆಯೇ ರಾಷ್ಟ್ರ ಜೀವನದಲ್ಲೂ ಒಂದು ಬೆಳವಣಿಗೆ ಎಂಬುದಿದೆ. ಬದಲಾವಣೆಯೇ ಅದರ ಬೆಳವಣಿಗೆ. ಯಾವಜ್ಜೀವವೂ ಅದು ಒಂದೇ ರೂಪದಲ್ಲಿರಬಯಸುವುದಿಲ್ಲ. ನವನವೋನ್ಮೇಷಶಾಲಿನಿ ಎಂಬ ತತ್ತ್ವ ಅದಕ್ಕೂ ಅನ್ವಯಿಸುತ್ತದೆ. ಅದರ ಬದುಕಿನ ವಿಕಾಸ ಸ್ತರದಲ್ಲಿ ಸ್ಥಿತ್ಯಂತರತೆ ಅನಿವಾರ್ಯ.'

'ಒಪ್ಪುತ್ತೇನೆ ಸ್ವಾಮೀಜಿ. ನಮ್ಮ ಜನರ ಅಜ್ಞಾನ ಅವಜ್ಞತೆಗಳಿಗೆ ಔಷಧಿಯೇ ಇಲ್ಲವಾಗಿದೆ.' 'ಎಲ್ಲದಕ್ಕೂ ಕಾಲ ಕೂಡಿ ಬರಬೇಕು ; ದೇಶದ ಮನಸ್ಸೂ ಮಾಗಬೇಕು. ರಾಷ್ಟ್ರ ಕುಂಡಲಿನೀ ಶಕ್ತಿ ಜಾಗೃತವಾಗುವವರೆಗೂ ಕಾಯಬೇಕು. ಸುಭಾಸ್, ಸ್ವೀಕೃತ ಮೌಲ್ಯಗಳನ್ನು ನಿನ್ನ ಒರೆಗಲ್ಲಿಗೆ ಒಡ್ಡಿ ಪುನರ್‌ಪರೀಕ್ಷೆ ಮತ್ತು ವಿಮರ್ಶೆಗಳಿಗೆ ಒಳಗುಮಾಡು. ನಿನ್ನಲ್ಲಿ ಆ ಶಕ್ತಿ ಇದೆ. ಇದು ಮುಖಸ್ತುತಿಯ ಮಾತಲ್ಲ ; ನಾನು ಕಂಡ ದರ್ಶನ ! ಅದನ್ನು ಚೆನ್ನಾಗಿ ದುಡಿಸಿಕೊಳ್ಳುವ ಪ್ರಯತ್ನ ಮಾಡು !'

'ಸ್ವಾಮೀಜಿ, ಸ್ವಾತಂತ್ರ್ಯ ಸಂಪಾದನೆ ಎಷ್ಟು ಮುಖ್ಯವೋ, ಅದರ ರಕ್ಷಣೆಗಾಗಿ ಸುಸ್ಜಜಿತ ಸೇನೆಯನ್ನು ಸಂಘಟಿಸುವುದು ಅಷ್ಟೇ ಮುಖ್ಯ. ಆದ್ದರಿಂದ ಆರಂಭದ ದಿನಗಳಿಂದಲೂ ಜನಮನದಲ್ಲಿ ರಾಷ್ಟ್ರೀಯ ಭಾವನೆಯ ಬೀಜಗಳನ್ನು ಬಿತ್ತಬೇಕಾಗಿದೆ !'

'ನಿನ್ನ ಉತ್ಸಾಹಕ್ಕೆ ನಾನು ತಣ್ಣೀರೆರಚುವುದಿಲ್ಲ ಸುಭಾಸ್. ತರುಣ ತೇಜಸ್ವಿಯಾದ ನೀನು ಯಾವ ಘಳಿಗೆಯಲ್ಲೂ ಯಾವ ಕಾರಣಕ್ಕೂ ನಿನ್ನ ಚಿತ್ತಸ್ವಾಸ್ಥ್ಯವನ್ನು ನೀಗಿಕೊಳ್ಳಬೇಡ. ಆತ್ಮಪ್ರಜ್ಞೆ (Self awareness) ಮತ್ತು ಆತ್ಮ ಪ್ರತ್ಯಯ (Self Confidence) ಗಳು ಸದಾ ನಿನ್ನ ಜೊತೆಗಿರಲಿ.'

ಆಶೀರ್ವಾದಿತನಾದೆ ಸ್ವಾಮೀಜಿ. ಅಪ್ಪಣೆ ಕೊಟ್ಟರೆ ಹೋಗಿಬರುವೆ.'

'ಹೋಗಿ ಬಾ. ಶುಭವಾಗಲಿ.'

* * *

ವಾರಣಾಸಿಯಿಂದ ಬೀಳ್ಕೊಂಡ ಸುಭಾಸ್ ಬುದ್ಧಗಯೆಗೆ ತನ್ನ ಯಾತ್ರೆ ಬೆಳೆಸಿದ. 'ವಿಕಸಿತ ಸಹಸ್ರದಲ ಪದ್ಮಪೀಠ ಮೇಲೆ ಮಂಡಿಸಿಹ ಧವಲಿಮಾ ಧ್ಯಾನಸ್ತಿಮಿತ ಮೂರ್ತಿ' ಬುದ್ಧದೇವನ ತಪೋಮುದ್ರಿತ

ಮುಖಮಂಡಲವನ್ನು ಕಂಡು ಹರ್ಷಿತನಾಗಿ, ಅವನ ಶಾಂತ ಮುಖಮುದ್ರೆಯ ಹಿನ್ನೆಲೆಯಲ್ಲಿನ ಕ್ರಾಂತಿಗಳನ್ನು ಗುರುತಿಸಿದ. ಅಷ್ಟೇ ಪ್ರಮಾಣದಲ್ಲಿ ಹಾದಿಬದಿಯ ಹಳ್ಳಿಗಳ ಮೂಲಕ ಭಾರತದ ನಗ್ನ ದರ್ಶನವೂ ಆವನಿಗಾಯಿತು. ಅಕ್ಕಿ ಅನ್ನವಾಗಿದೆ ಎಂಬುದನ್ನು ತಿಳಿಯಲು ಒಂದಗುಳು ಹಿಸುಕಿದರೆ ಸಾಕು. ಒಂದು ಹಳ್ಳಿಯ ಬದುಕು ಇನ್ನೊಂದರಿಂದ ಭಿನ್ನ ಅಲ್ಲ. ದಾರಿದ್ರ್ಯ, ದಾಸ್ಯಗಳ ದಾರುಣತೆ ಅವನ ಗಮನ ಸೆಳೆಯಿತು. ಅದಕ್ಕೆ ಹೊಂದಿಕೊಂಡೇ ಭಾರತದ ಸನಾತನ ಸಂಸ್ಕೃತಿಯ ಭವ್ಯತಮ ಚಿತ್ರವೂ ಅವನ ಕಣ್ಣೆದುರು ಸುಳಿಯಿತು.

ಓಹ್ ! ಏನೆಂತಹ ಹಿರಿಯ ಸಂಸ್ಕೃತಿ ನಮ್ಮದು ! ಕೆಸರಿನಲ್ಲಿ ಕಮಲವನ್ನು, ಮಣ್ಣಿನಲ್ಲಿ ಮಾಣಿಕ್ಯವನ್ನು, ಕತ್ತಲೆಯಲ್ಲಿ ಬೆಳಕನ್ನು, ಮರಣದಲ್ಲಿ ಅಮೃತತ್ವವನ್ನು ಬೆಳೆದಿದೆ ನಮ್ಮ ಸಂಸ್ಕೃತಿಯ ವೃಕ್ಷ. ನಾವು ಭಾರತರು ! ಭಾಃ = ಜ್ಯೋತಿಯಲ್ಲಿ, ರತ = ಆಸಕ್ತರಾದವರು. ನಾವು ಅರ್ಥಕಾಮಿಗಳಲ್ಲ, ಮೋಕ್ಷಕಾಮಿಗಳೂ ಅಲ್ಲ ; ನಾವು ಜ್ಯೋತಿಕಾಮಿಗಳು ! ಜ್ಯೋತಿ ಜ್ಞಾನದ ಸಂಕೇತ. ಅಂತಹ ಜ್ಞಾನದಾಹ ನಮ್ಮದು !

ಬಾ ಬೆಳಕೆ ಬಾ',
ಸ್ವರ್ಣ ವರ್ಣೋದಯದ ಅರುನ ಜೀರ್ಕೊಳವಿಯಲಿ
ಬಿಳುಪನ್ನೆ ಮುಕ್ಕುಳಿಸಿ ಬೆಳಬೆಳಗಿ ಬಾ !
ಸಪ್ತ ಸಾಗರದೆದೆಯ ಕುದಿಕುದಿಯ ತಾಂಡವದಿ
ಲಾಸ್ಯಗೈಯುತ ಬಾ !
ಬತ್ತಲೆಯ ಬಯಲಿಂಗೆ ಶಕ್ತಿ ಸಂಕ್ರಮಿಸುತ್ತ
ಭಾರತೀಯನ ಎದೆಗೆ ಸೊದೆ ತುಂಬು ಬಾ !
ಮಸಣಮೌನದ ರುಂದ್ರ ಮರಭೂಮಿ ಎಡೆಯೊಳಿಹ
ಸಾರಶೂನ್ಯವ ಸೂಸಿ,
ಭರತಪುತ್ರನಲಿಂದು ನಿರ್ದಯವ ಬಿತ್ತು ಬಾ !
ಧೀರಮಂದರದಂತೆ ಅಚಲನಾಗಿ ಇಂದು
ಉತ್ತುಂಗ ಶೃಂಗದೊಲು ಅವನತನ ಮೆರೆಯಲಿ
ಹರಿವೊನಲ ನೈರ್ಮಲ್ಯ ಅವನ ಧಮನಿಯಲಿರಲಿ –
ಅವನ ನಾಡಿಯಲೆಂದೂ ಮಿಡಿಯುತ್ತಲಿರಲಿ–
'ನಾ ಭಾರತೀಯ ನಾ ಭಾರತೀಯ'
ಎಂದೆಂಬ ತಾರಕಮಂತ್ರ !
ಓ ವಿಶ್ವ ಚೇತನಗಳೆ,
ನೀವೆಲ್ಲ ಬನ್ನಿ
ಒಮ್ಮೆಲೇ ಬಂದಿಲ್ಲಿ
ಭಾರತೀಯನಲಿಲ್ಲೆ ಆವಿರ್ಭವಿಸ ಬನ್ನಿ !

ಅವನೊಳಗಿನೊಳಗಣ ಯಾವುದೋ ಶಕ್ತಿ ಕರೆಕೊಟ್ಟಿತು. ಹೌದು, ಇದು ನನ್ನ ಮಾನಸಿಕ ಭ್ರಮೆಯಲ್ಲ, ವಾಸ್ತವಿಕ ದರ್ಶನ ! ಈ ತಾರಕಮಂತ್ರ ಭಾರತೀಯರೆಲ್ಲರ ಧಮನಿಧಮನಿಯಲ್ಲೂ ಜೀವರಸವಾಗಿ ಹರಿಯುವಂತಾಗಬೇಕು. ಹಾಗೆ ಮಾಡಬೇಕು ; ಹಾಗೇ ಮಾಡಬೇಕು. ಅಂದೇ ಭಾರತಕ್ಕೆ ಮುಕ್ತಿ ! ಅಂದೇ ಭಾರತಕ್ಕೆ ಮುಕ್ತಿ !'

ಈ ಆತ್ಮವಿಶ್ವಾಸದ ಆತ್ಮ ಸಾಂತ್ವನದ ಮಂತ್ರ ಪಠಿಸುತ್ತ ತನ್ನೂರಿನ ಕಡೆಗೆ ಕಾಲು ತೆಗೆದ.

ಹಾದಿಯುದ್ದಕ್ಕೂ ಆಲೋಚನೆಯ ಅಲೆಗಳು ಮೇಲಿಂದ ಮೇಲೆ ಎದ್ದುವು ಅವನ ಮಾನಸ ಸರೋವರದಲ್ಲಿ.

ಬಡತನಕ್ಕೆ ಬೆನ್ನೆಲ್ಲಾ ಹೊಟ್ಟೆಯಂತೆ ! ನಮ್ಮ ಹಳ್ಳಿಯ ಜನರಿಗೆ ದಿನನಿತ್ಯವೂ ಹೊಟ್ಟೆಯದೇ ಚಿಂತೆ. ಹೊಟ್ಟೆಯ ಚಿಂತೆ ಬೆಟ್ಟದಷ್ಟಿರುವಾಗ ಅವರಿಗೆ ಬೌದ್ಧಿಕ ವಿಕಾಸದ ಹಾದಿಯೇ ಕಾಣಿಸುವುದಿಲ್ಲ, ಪಾಪ ! ಅದು ಸರಿ, ಇದೆಂತಹ ವಿಪರ್ಯಾಸ ನನ್ನ ತಾಯ್ನಾಡಿನಲ್ಲಿ. ಅನ್ನ ಅನ್ನ ಎಂಬ ಜನದ ಹಾಹಾಕಾರ ಒಂದೆಡೆ, ತಿಂದದ್ದು ಅರಗಲಿಲ್ಲವಲ್ಲಾ ಎಂಬ ಸಿರಿವಂತರ ಅಜೀರ್ಣ ರೋಗ ಮತ್ತೊಂದೆಡೆ ! ಸೊಪ್ಪಿಗೆ ಉಪ್ಪಿಲ್ಲ ಎಂಬ ಕೂಗು ಒಂದೆಡೆ, ನಮ್ಮ ಹಾಲಿಗೆ ಸಕ್ಕರೆ ಸಾಲದು ಎಂಬ ವಿಮರ್ಶೆ ಮತ್ತೊಂದೆಡೆ. ಅನಕ್ಷರತೆ ದೇಶಕ್ಕೊಂದು ಶಾಪ ; ಬಡತನ ಒಂದು ಮಹಾರೋಗ ! ಇವುಗಳ ಮೂಲೋತ್ಪಾಟನ ಆಗದೆ ಭಾರತದ ಉದ್ಧಾರ ಇಲ್ಲ. ಅಂತಾಗಬೇಕಾದರೆ ಭಾರತೀಯರಾದ ನಾವು ಸ್ವತಂತ್ರವಾಗಿ ಬದುಕು ಮಾಡುವಂತಾಗಬೇಕು. ದಾಸ್ಯದಿಂದ ತುಂಬಿದ ದೇಶಕ್ಕೆ ಪ್ರಗತಿ ಎಂಬುದು ಕೇವಲ ಮೊಲದ ಕೊಂಬು. ಒಂದು ವಾರದ ಪಯಣ ನನ್ನ ಕಣ್ಣುಗಳೆದುರು ಅನುಭವದ ಒಂದು ಹೊಸ ಲೋಕವನ್ನೇ

ತೆರೆಯಿತು. ಹಳ್ಳಿಗಳಿಂದ ಕೂಡಿದ ಭಾರತದಲ್ಲಿ ಬಡತನ ಬೆನ್ನು ಹತ್ತಿದ ಬೇತಾಳವಾಗಿದೆ. ಜೊತೆಗೆ ಕಾಲರಾ ಮೊದಲಾದ ರೋಗರುಜಿನಗಳು ಬೇರೆ ಬಡಜನರನ್ನು ಕಿತ್ತು ತಿನ್ನುತ್ತಿವೆ. ಕಳೆದ ಬೇಸಿಗೆಯಲ್ಲಿ ನಾನು ನನ್ನ ಮಿತ್ರರು ಕಾಲರ ಪೀಡಿತ ಪ್ರದೇಶಗಳಿಗೆ ಹೋಗಿ ಅದೆಷ್ಟು ಕಷ್ಟಪಟ್ಟೆವು. ಆದರೂ ಅದು ತಾತ್ಕಾಲಿಕ ಪರಿಹಾರ, ಬಡತನ ಹೋಗಲಿಲ್ಲ, ಸ್ವಚ್ಛತೆ ಬರಲಿಲ್ಲ. ನಮ್ಮ ಜನ ಅನ್ನವಿಲ್ಲದೆ, ಆರೋಗ್ಯವಿಲ್ಲದೆ ನೊಣಗಳಂತೆ ಸಾಯುತ್ತಿದ್ದಾರೆ. ಎಲ್ಲೆಡೆಯಲ್ಲಿಯೂ ಅನಕ್ಷರತೆಯ ರುದ್ರತಾಂಡವ ! ಇವೆಲ್ಲವನ್ನೂ ಸರಿಪಡಿಸುವ ಹೊಣೆಗಾರಿಕೆ ನಮ್ಮದು, ಈ ನಮ್ಮ ಯುವ ಪೀಳಿಗೆಯದು. ನಾವೆಲ್ಲರೂ ಒಬ್ಬ ತಾಯಮಕ್ಕಳು. ನಾವೆಲ್ಲರೂ ಒಂದಾಗಿ ಬಾಳಬಾರದೇಕೆ ! ಇಲ್ಲ, ಬಾಳಲಿಲ್ಲ, ಅದಕ್ಕಾಗಿಯೇ ಭಾರತ ದಾಸ್ಯದ ಬಹು ದೊಡ್ಡ ಬೆಲೆ ತೆತ್ತದ್ದು ! ಸ್ವಾರ್ಥತ್ಯಾಗ, ಸೇವಾ ಮನೋಭಾವ ಹಾಗೂ ಕಷ್ಟ ಸಹಿಷ್ಣುತೆಗಳು ನಮ್ಮಲ್ಲಿ ಮೂಡದಿದ್ದರೆ, 'ನಾ ಭಾರತೀಯ ನ ಭಾರತೀಯ' ಎಂದೆಂಬ ತಾರಕಮಂತ್ರ ನಮ್ಮ ನಾಡಿನಾಡಿಯಲ್ಲೂ ಮಿಡಿಯದಿದ್ದರೆ ಭಾರತೀಯರಾದ ನಾವು ಅದಕ್ಕಿಂತಲೂ ಬಹು ದೊಡ್ಡ ದಂಡ ತೆರಬೇಕಾಗುತ್ತದೆ ! ನಾವು ಒಂದಾಗಬೇಕು ; ಹೋರಾಡಬೇಕು ಸತ್ಯಕ್ಕಾಗಿ, ಸ್ವಾತಂತ್ರ್ಯಕ್ಕಾಗಿ, ಕೇವಲ ಸ್ವಾರ್ಥಕ್ಕಾಗಿ ನಮ್ಮನ್ನು ನಾವು ಮಾರಿಕೊಂಡರೆ ಸ್ವಾತಂತ್ರ್ಯ ಸಂಪದ ನಮ್ಮ ಹತ್ತಿರ ಸುಳಿಯಲೂ ಹಿಂಜರಿಯುತ್ತದೆ. ಆದ್ದರಿಂದ ಭಾರತೀಯರಾದ ನಾವು ಮೊದಲು ಒಂದಾಗಬೇಕು !! 'ವೇಷ ಬೇರೆ, ಭಾಷೆ ಬೇರೆ, ದೇಶವೊಂದೆ ಭಾರತ' ಎಂಬ ಕವಿವಾಣಿಯನ್ನು ಸತ್ಯವಾಗಿಸಬೇಕು'

ಇಂತೆಲ್ಲಾ ಆಲೋಚಿಸುತ್ತಾ, ಹೆಜ್ಜೆಗೊಂಡು ಸತ್‌ಚಿಂತನೆಯನ್ನು ಪುಟಿಸುತ್ತಾ ಕಟಕ್ ಕಡೆ ಸಾಗಿದ.

* * *

ದೇಶಾಂತರ ಹೋಗಿದ್ದ ಮಗ ಮರಳಿ ಮನೆಗೆ ಬಂದದ್ದು ಮನೆಯವರಿಗೆಲ್ಲಾ ಹರ್ಷ ತಂದಿತು ! ತನ್ನ ಮೇಲೆ ಆನಂದಬಾಷ್ಪ ಸುರಿಸಿದ ತಾಯಿ ತಂದೆಯರಿಗೆ ತಾನು ಶಿಕ್ಷಣ ಮುಂದುವರಿಸಿವುದಾಗಿ ಭರವಸೆ ನೀಡಿದ. ಅದೇ ರೀತಿ ಬೇಸಗೆ ರಜ ಮುಗಿದು ತರಗತಿಗಳು ಆರಂಭವಾದಾಗ ಕಲ್ಕತ್ತೆಗೆ ಹೋಗಿ ತನ್ನ ಮೊದಲ ಕಾಲೇಜಿನಲ್ಲೇ ಶಿಕ್ಷಣ ಮುಂದುವರಿಸಿದ.

ಒಂದು ದಿನ ಒಂದು ಘಟನೆ ನಡೆಯಿತು.

ಕಾಲೇಜಿಗೆ ಹೋಗುವ ಹಾದಿಯಲ್ಲಿ ಒಂದು ದಾರುಣ ದೃಶ್ಯ ಕಂಡ. ಒಂದು ಹಣ್ಣು ಹಣ್ಣು ಮುದುಕಿ ಹಾದಿಬದಿಯಲ್ಲಿ ನಿಂತು ಹಾದಿಹೋಕರಲ್ಲಿ ಭಿಕ್ಷೆ ಬೇಡುತ್ತಿದ್ದಳು. ಅವಳ ಆ ಬಡಕಲು ದೇಹವನ್ನು ಜೀರ್ಣವಸ್ತ್ರ ಮುಚ್ಚಲು ಯತ್ನಿಸಿ ವಿಫಲವಾಗಿತ್ತು. ಮಾನ ಮುಚ್ಚುವಷ್ಟೂ ಬಟ್ಟೆ ಇಲ್ಲ. ಹೊಟ್ಟೆ ತುಂಬುವಷ್ಟು ಅನ್ನ ಇಲ್ಲ. ಉಟ್ಟ ಚಿಂದಿಯ ಮರೆಯಲ್ಲಿ ಅವಳ ಮೈ ಪ್ರಪಂಚವನ್ನು ಇಣಇಣುಕಿ ನೋಡುತ್ತಿತ್ತು ! ನೋಡಿದ ಕೂಡಲೇ ಸುಭಾಸ್ ತುಸುಕಾಲ ಅಲ್ಲಿಯೇ ಅವಳನ್ನೇ ನೋಡುತ್ತಾ ನಿಂತ. ಆ ದೃಶ್ಯ ಅವನ ಕರುಳು ಹಿಂಡಿತು ; ಕಣ್ಣಲ್ಲಿ ನೀರು ಧಾರಾಕಾರವಾಗಿ ಹರಿಯತೊಡಗಿತು. ದರಿದ್ರ ಭಾರತದ ದೈನ್ಯದರ್ಶನ ಅವನಿಗಾಯಿತು ! ಕೂಡಲೇ ಟ್ರಾಂನಲ್ಲಿ ಹೋಗಲು ಟಿಕೆಟ್ ತೆಗೆದುಕೊಳ್ಳಲು ಮೀಸಲಿಟ್ಟಿದ್ದ ಹಣವನ್ನು ತೆಗೆದು ಆ ಮುದುಕಿಯ ಕೈಗೆ ಹಾಕಿ, ತಾನು ನಡೆದೇ ಕಾಲೇಜಿಗೆ ಹೋದ. ಅಂದಿನಿಂದ ಪ್ರತಿದಿನವೂ ಕಾಲೇಜಿಗೆ ನಡೆದೇ ಹೋಗತೊಡಗಿದ. ಅವನ ವಾಹನಭತ್ಯೆ, ಭಿಕ್ಷೆ ಬೇಡುತ್ತಿದ್ದ ಮುದುಕಿಯ ನಿತ್ಯಭತ್ಯೆಯಾಯಿತು !

ನಿತ್ಯವೂ ಆ ಮುದುಕಿ ಇದ್ದೆಡೆಗೆ ಬಂದಾಗ ಸುಭಾಸನಿಗೆ ಪಾಠ ಪ್ರವಚನಗಳು ಮರೆತುಹೋಗಿ, ಭಾರತದ ಭವಿಷ್ಯದ ಚಿಂತನೆ ತಲೆ ಎತ್ತುತ್ತಿತ್ತು.

'ಛೇ ! ನನ್ನ ತಾಯಿ, ನನ್ನ ಅಜ್ಜಿ ಹೀಗೆ ಅರೆಬತ್ತಲೆಯಲ್ಲಿ, ಅರೆ ಹೊಟ್ಟೆಯಲ್ಲಿ ಅಂಗಲಾಚುವುದನ್ನು ನಾನು ನೋಡಲಾರೆ ! ಹಾಗಾದರೆ ಇದಕ್ಕಿರುವ ಪರಿಹಾರ ? ಪರಿಹಾರ ಅದೊಂದೇ ದೇಶ ಸ್ವಾತಂತ್ರ್ಯ ! ಭಾರತ ಸ್ವತಂತ್ರವಾದರೆ ಸಾಕು ರಾಷ್ಟ್ರ ಸುಭಿಕ್ಷವಾಗಿ ಬಿಡುತ್ತದೆ. ಅನ್ನಕ್ಕಾಗಿ ಹಾಹಾಕಾರ ಪಡುವ ಪ್ರಮೇಯವೇ ಇರುವುದಿಲ್ಲ. ಎಲ್ಲ ಭಾರತೀಯರೂ ಹಂಚಿ ತಿನ್ನುವಂತಾದಾಗ ದೇಶದಲ್ಲಿ ಭಿಕ್ಷುಕರೇ ಇಲ್ಲದಂತಾಗುತ್ತಾರೆ ! .... ಮುಂದಿನದೇನೇ ಇರಲಿ, ಇಂದಿನ ಈ ನಮ್ಮಜ್ಜಿಯ ಪಾಡೇನು ? ಇವಳ ಈ ದಾರಿದ್ರ್ಯದ ದೈನ್ಯಾವಸ್ಥೆಯ ಪಕ್ಕದಲ್ಲಿ ಭೋಗಜೀವನ ನಡೆಸಲು ನನಗೆ ಯಾವ ಅಧಿಕಾರವಿದೆ ? ನನ್ನಂತೆ ಇವಳಿಗೂ ಬದುಕುವ ಹಕ್ಕಿಲ್ಲವೆ ? ಅಗುಳನ್ನ ಕಂಡರೆ ತನ್ನ ಬಳಗವನ್ನೆಲ್ಲಾ ಕರೆದು ಹಂಚಿ ತಿನ್ನುವ ಕಾಗೆ ಕೋಳಿಗಿಂತಲೂ ಮನುಷ್ಯ ಕಡೆಯೇ ? ಇದರ ಪರಿಹಾರಕ್ಕೆ ನಾನು ನನ್ನ ಬದುಕನ್ನು ಮೀಸಲಿಡಲೇ ಬೇಕು !'

ಇಂತೆಲ್ಲ ಚಿಂತನೆಯ ಆಂತ್ಯದಲ್ಲಿ ಅವನಿಗೆ ದೊರೆತದ್ದು ತಾನಿತ್ತ ಕಾಣಿಕೆಯಿಂದ ಲಭಿಸಿದ ತಾತ್ಕಾಲಿಕ ತೃಪ್ತಿ.

'ಅನಿತಾ, ಮಹಾತ್ಮರ ಮನಸ್ಸು ಕಷ್ಟ ಸಂಕಷ್ಟಗಳನ್ನು ಕಂಡಾಗ ಹೇಗೆ ಕರಗುತ್ತೆ ಅನ್ನೋದಕ್ಕೆ ಗಾಂಧೀಜಿಯವರ ಜೀವನದ ಒಂದು ಘಟನೆ ಹೇಳ್ತೀನೆ ಕೇಳು :

ಗಾಂಧೀಜಿಯವರು ದಕ್ಷಿಣ ಆಫ್ರಿಕೆಯಿಂದ ಭಾರತಕ್ಕೆ ಬಂದ ಮೇಲೆ ಒಂದು ದಿನ ಗೋಪಾಲಕೃಷ್ಣ ಗೋಖಲೆಯವರನ್ನು ಭೇಟಿ ಮಾಡಿ, ಭಾರತದ ಬಗೆಗೆ ತಾವು ಓದಿದ ಕೇಳಿದ ವಿಷಯದ ಬಗೆಗೆ ಕೆಲವು ಅಂಶಗಳನ್ನು ಅವರ ಮುಂದಿಟ್ಟರಂತೆ. ಅದಕ್ಕೆ ಗೋಖಲೆಯವರು, –

'ಮೋಹನ್‌ದಾಸ್, ತಿಂದ ಅನ್ನ ರಕ್ತವಾದಂತೆ ಓದಿದ ಓದು ಜ್ಞಾನವಾಗಬೇಕು. ಜ್ಞಾನ ವಿದ್ಯುತ್ ಇದ್ದ ಹಾಗೆ. ಅದು ಕಾರ್ಯರೂಪಕ್ಕೆ ಬರಬೇಕಾದರೆ ಸ್ವಾನುಭವ ಬೇಕು. ಬೋಧನೆ ಮಾಡ್ತಿದ್ದೇನೆ ಅಂತ ದಯವಿಟ್ಟು ತಿಳಿಕೋಬೇಡಿ. ಓದು, ಸಿದ್ಧಾಂತ, ಸ್ವಾನುಭವ, ಅದರ ಪ್ರಯೋಗ ಫಲ ! ಆದ್ದರಿಂದ ದಯವಿಟ್ಟು ನೀವು ಒಂದು ಬಾರಿ ಇಡೀ ಭರತಖಂಡವನ್ನು ಕಣ್ತುಂಬ ನೋಡಿ ಬನ್ನಿ. ಆಗ ನಿಮಗೆ ಅದರ ನೈಜ ಸ್ಥಿತಿ ಅರ್ಥವಾಗುತ್ತೆ. ಅನ್ಯರ ಮಾತು ಕಟ್ಟಿಕೊಟ್ಟ ಬುತ್ತಿಯಂತೆ ; ಬಹುಬೇಗ ಹಳಸುತ್ತೆ. ಸ್ವಾನುಭವದ ಮುಂದೆ ಬೇರಾವ ಬೋಧೆಯೂ ಸಲ್ಲ !'

ಗೋಖಲೆಯವರ ಸಲಹೆಯಂತೆ ಗಾಂಧೀಜಿ ಮೂರನೇ ದರ್ಜೆಯ ರೈಲುಡಬ್ಬಿಯಲ್ಲಿ ಕುಳಿತು ಪ್ರಯಾಣ ಕೈಕೊಂಡರು. ಏಕೆಂದರೆ ಆ ದಿನಗಳಲ್ಲಿ ಪ್ರಥಮ ದರ್ಜೆಯ ರೈಲು ಪ್ರಯಾಣದ ಹಕ್ಕು ಅಧಿಕಾರ ಭಾರತೀಯನಿಗಿರಲಿಲ್ಲ – ಭರತಖಂಡವನ್ನೆಲ್ಲಾ ಒಮ್ಮೆ ಅಡ್ಡಾಡಿ ಬಂದರು. ಅವರ ಪ್ರಯಾಣ ಸಂದರ್ಭದಲ್ಲಿ ಒಂದು ಪುಟ್ಟ ಘಟನೆ.... ಏನು ಕೇಳ್ತಾ ಇದ್ದೀಯಾ ಅನಿತಾ ?'

'ನಿದ್ದೆ ಮಾಡ್ತಾ ಇಲ್ಲ.... ಹೇಳು.'

'ಗಾಂಧೀಜಿ ಆಗ ತಮ್ಮ ಗುಜರಾತಿ ಉಡುಪು ಧರಿಸಿದ್ದರು. ಅಂದರೆ ಕಚ್ಚೆ ಪಂಚೆ, ಕಸೆಅಂಗಿ, ಹತ್ತು ಮಾರುದ್ದದ ಒಂದು ಭರ್ಜರಿ ರುಮಾಲು ತಲೆ ಮೇಲೆ. ಈ ಉಡುಪು ಧರಿಸಿ ದಕ್ಷಿಣಭಾರತದ ಕಡೆ ಬಂದರು. ಅಲ್ಲಿ ಒಂದು ನದಿ ದಡದಲ್ಲಿ ಕುಳಿತು ನೀರಿನ ಹರಿತ ಮೊರೆತಗಳನ್ನು ವೀಕ್ಷಿಸುತ್ತಾ, ಅವರ ವಿವಿಧ ವಿನ್ಯಾಸ ಭಂಗಿಗಳಲ್ಲೇ ಮಗ್ನರಾಗಿದ್ದಾಗ, ಅಲ್ಲೊಬ್ಬ ಹೆಣ್ಣುಮಗಳು, ಕಡು ಬಡವಿ ಬಟ್ಟೆ ತೊಳೆಯಲು ಬಂದಳು. ಉಟ್ಟ ಸೀರೆ ಬಿಟ್ಟರೆ ಬೇರೆ ಯಾವ ಅರಿವೆಯೂ ಅವಳಲ್ಲಿರಲಿಲ್ಲ. ತಾನು ಉಟ್ಟ ಸೀರೆಯ ಅರ್ಧಭಾಗವನ್ನು ನೀರಲ್ಲಿ ನೆನೆಸಿ ಮಡಿಮಾಡಿ, ಅನಂತರ ಅದು ಅರೆಬರೆ ಆರಿದ ಮೇಲೆ ಅದನ್ನು ಮೈಗೆ ಸುತ್ತಿಕೊಂಡು, ಉಳಿದ ಅರ್ಧಭಾಗವನ್ನು ನೀರಲ್ಲಿ ನೆನೆಸಿ ತೊಳೆಯತೊಡಗಿದಳು. ಆ ಸೀರೆಯೂ ಅಷ್ಟೇನೂ ಉತ್ತಮ ಸ್ಥಿತಿಯಲ್ಲಿರಲಿಲ್ಲ. ಅಲ್ಲಿ ಇಲ್ಲಿ ಬೆಳಕಿಂಡಿಗಳನ್ನು ಹೊಂದಿತ್ತು ! ಗಾಂಧೀಜಿಯವರ ಕಣ್ಣಿಗೆ ನದಿಯ ವಿನ್ಯಾಸ ಕಾಣಿಸಲಿಲ್ಲ. ಆ ಬಡವಿಯ ಭಾಗ್ಯಹೀನ ಸ್ಥಿತಿ ಕಣ್ತುಂಬಿತು. ಆ ದೃಶ್ಯವನ್ನು ನೋಡಿಯೇ ನೋಡಿದರು. ಅವರಿಗೆ ಕರುಳು ಕಿತ್ತುಬಂತು. ಕೂಡಲೇ ತಮ್ಮ ತಲೆಯ ಮೇಲಿನ ರುಮಾಲು ತೆಗೆದರು. 'ಈ ರುಮಾಲು ನಮ್ಮ ಸಂಪ್ರದಾಯದ ಹೆಗ್ಗುರುತು ಮತ್ತು ಅಲಂಕಾರಗಳ ಆರೋಗ್ಯಗಳ ಸಾಧನವೂ ಹೌದು ! ಆದರೆ ಇದರ ಉದ್ದ ಒಬ್ಬಳಲ್ಲ ನಾಲ್ಕು ಜನ ಭಾರತದ ಬಡ ಮಹಿಳೆಯರ ಮಾನ ಮುಚ್ಚಬಲ್ಲದು. ಆದ್ದರಿಂದ ಈ ಕ್ಷಣದಲ್ಲಿಯೇ ಇದಕ್ಕೆ ವಿದಾಯ ಹೇಳಿಬಿಡುತ್ತೇನೆ !'

ಎಂದಂದುಕೊಂಡು ತಮ್ಮ ತಲೆಯ ಮೇಲಿನ ರುಮಾಲನ್ನು ಅವಳೆಡೆಗೆ ತೇಲಿಬಿಟ್ಟರು.

ಇಂಥದೇ ಅನುಭವ ಬಾಲಕ ಸುಭಾಸನಿಗಾಯಿತು. ಅವನ ವಿದ್ಯಾರ್ಥಿ ಜೀವನದಲ್ಲಿ ನಡೆದ ಮತ್ತೊಂದು ಘಟನೆ, ಕೇಳು ಅನಿತಾ -

ಪುಸ್ತಕ ಪ್ರೇಮಿ ಸುಭಾಸ್ ಒಮ್ಮೆ ಒಂದು ಪುಸ್ತಕದಂಗಡಿಯಲ್ಲಿ ಒಂದು ಅಪೂರ್ವ ಅಧ್ಯಾತ್ಮ ಗ್ರಂಥ ನೋಡಿದ. ಕೂಡಲೇ ಅದನ್ನು ಕೊಂಡುಕೊಳ್ಳಬೇಕೆಂಬ ಮನಸ್ಸಾಯಿತು. ಆದರೆ ಅವನ ಜೇಬು ಅವನೊಡನೆ ಸಹಕರಿಸಲು ಸಿದ್ಧವಿರಲಿಲ್ಲ ! ತನ್ನಲ್ಲಿದ್ದಷ್ಟೂ ಹಣವನ್ನು ಪುಸ್ತಕದಂಗಡಿಯವನ ಕೈಗಿತ್ತು,

'ಆ ಪುಸ್ತಕ ಕೊಡಿ. ಉಳಿದ ಹಣವನ್ನು ನಾಳೆ ತಂದುಕೊಡುತ್ತೇನೆ' ಎಂದ. ಅಂಗಡಿ ಮಾಲಿಕ'

'ಪೂರಾ ದುಡ್ಡು ಬಡಿದು ಪುಸ್ತಕ ತೆಗೆದುಕೊಂಡು ಹೋಗು' ಅಂದ. ಆ ಮಾತು ಕಾದ ಸರಳಿನಂತೆ ಸುಭಾಸನ ಕಿವಿಗಳನ್ನು ಇರಿಯಿತು.

'ಛೇ ! ಎಷ್ಟರ ಮಟ್ಟಿಗೆ ಮನುಷ್ಯ ಸಂಬಂಧಗಳು ಕೆಟ್ಟು ಹಾಳಾಗಿವೆ ! ನಂಬಿಕೆ, ವಿಶ್ವಾಸಗಳು ಸತ್ತು ಸುಣ್ಣವಾಗಿವೆಯಲ್ಲಾ ಈ ದೇಶದಲ್ಲಿ ! ದಿವ್ಯ ದಾರ್ಶನಿಕರು, ದ್ರಷ್ಟಾರರು, ಋಷಿಗಳು, ತಪೋಧನರು, ರಾಜಋಷಿಗಳು ಕಟ್ಟಿದ ನಾಡು ಅಪನಂಬಿಕೆಯ ಬೀಡಾಗಿದೆಯಲ್ಲಾ ! ಇದೇನು ವಿಚಿತ್ರ ! ಸತ್ಯ ಹರಿಶ್ಚಂದ್ರನ ನಾಡಿನಲ್ಲಿ.... ಛೆ ! ಛೆ !

ಸುಭಾಸನ ಮನಸ್ಸು ಕೋಳಿ ಕೆದಕಿದ ತಿಪ್ಪೆಯಾಗಿತ್ತು. ಆದರೂ ತನಗೆ ತಾನೇ ಸಮಾಧಾನ ಹೇಳಿಕೊಂಡು ಮಾರನೆಯ ದಿನ ಪೂರಾ ಹಣ ಕೊಟ್ಟು ಅದೇ ಪುಸ್ತಕವನ್ನು ಕೊಂಡೊಯ್ದು ಆದ್ಯಂತ ಓದಿ ಆನಂದಪಟ್ಟ !

ಸುಭಾಸ್ ಒಂದು ಕಾರ್ಯವನ್ನು ಕೈಗೆತ್ತಿಕೊಂಡರೆ ಅದು ಪೂರ್ಣವಾಗುವರೆಗೂ ಬೇರೊಂದಕ್ಕೆ ಕೈ ಹಾಕುತ್ತಿರಲಿಲ್ಲ. ಚಿಂತನೆಯಲ್ಲೂ ಅಷ್ಟೆ, ಒಂದು ವಿಷಯ ತಲೆಹೊಕ್ಕರೆ ಅದರ ಬೇರುಬುಡಗಳನ್ನು ಪರಿಶೀಲಿಸದೆ ಬಿಡುತ್ತಿರಲಿಲ್ಲ. ಕ್ಷಣಕ್ಕೊಂದು ಕ್ಷೇತ್ರಕ್ಕೆ ಹಾರುವ ಚಪಲಚಿತ್ತ ಅವನದಾಗಿರಲಿಲ್ಲ. ಆದ್ದರಿಂದ ದೇಶದ ಬಗೆಗೆ ಚಿಂತನೆ

ನಡೆಸಿದಾಗ ಅದೇ ಗುಂಗು, ದೇವರನ್ನು ಕುರಿತು ಧ್ಯಾನಿಸುವಾಗ ಅದೇ ಸಮಾಧಿ ಸ್ಥಿತಿ, ವಿದ್ಯಾಭ್ಯಾಸದಲ್ಲಿ ತೊಡಗಿದಾಗ ಅದೇ ತನ್ಮಯತೆ. ಹೀಗಾದ್ದರಿಂದಲೇ ಆತ ತನ್ನ ಇಂಟರ್ ಮೀಡೀಯೇಟ್ ಪರೀಕ್ಷೆಯನ್ನು ೧೯೧೫ರಲ್ಲಿ ಪ್ರಥಮ ಶ್ರೇಣಿಯಲ್ಲೇ ಪಾಸು ಮಾಡಿದ್ದು. ಹೆತ್ತವರಿಗೆ ಹಿಡಿಸಲಾರದಷ್ಟು ಆನಂದವಾಯಿತು. ಅದೇ ಕಾಲೇಜಿನ ಡಿಗ್ರಿ ತರಗತಿಗೆ ಸೇರಿಸಿದರು.

ಆಡುವುದು, ಮಾಡುವುದು ನಮ್ಮಿಚ್ಛೆ. ಆಗುವುದು ಹೋಗುವುದು ದೈವೇಚ್ಛೆ ! ಅದಕ್ಕೊಂದು ನಿದರ್ಶನವಾಯಿತು ಸುಭಾಸನ ಬದುಕಿನ ಘಟನೆ. ಪ್ರೆಸಿಡೆನ್ಸಿ ಕಾಲೇಜಿನಲ್ಲಿ ತನ್ನ ಡಿಗ್ರಿ ವ್ಯಾಸಂಗವನ್ನು ಮುಂದುವರಿಸುತ್ತಿದ್ದ ಮೊದಲ ವರ್ಷದಲ್ಲಿ ಅಲ್ಲಿದ್ದ ಇಂಗ್ಲಿಷ್ ಪ್ರಾಧ್ಯಾಪಕ ಇ. ಎಫ್. ಓಟನ್ ಎಂಬುವನಿಗೂ ವಿದ್ಯಾರ್ಥಿಗಳಿಗೂ ಘರ್ಷಣೆ ಆಯಿತು. ಓಟನ್ ಒಬ್ಬ ವಿದ್ಯಾರ್ಥಿಯನ್ನು ಥಳಿಸಿದ. ಕಾಲೇಜಿನ ವಿದ್ಯಾರ್ಥಿಗಳು ಮುಷ್ಕರ ಹೂಡಿದರು. ಅದು ಎಲ್ಲಿ ವಿಕೋಪಕ್ಕೆ ಹೋಗಿಬಿಡುತ್ತದೊ ಎಂಬ ಭೀತಿಯಿಂದ ಪ್ರಾಧ್ಯಾಪಕರೇ ಮುಂದೆ ಬಂದು ರಾಜೀ ಮಾಡಿಕೊಂಡರು. ಆದರೆ ಮುಂದಿನ ತಿಂಗಳೇ ಇ. ಎಫ್. ಓಟನ್ ವಿನಾಕಾರಣ ಬೇರೊಬ್ಬ ವಿದ್ಯಾರ್ಥಿಗೆ ಬಲವಾಗಿ ಬಿಗಿದ. ವಿದ್ಯಾರ್ಥಿಗಳ ಸಹನೆ ಸಮಾಧಿಯಾಯಿತು. ದಂಗೆ ಎದ್ದರು. ಕಾಲೇಜು ಮುಚ್ಚಿತು. ತನಿಖಾ ಸಮಿತಿಯೊಂದು ರಚಿತವಾಯಿತು. ಪ್ರಿನ್ಸಿಪಾಲ್ ತನ್ನವರನ್ನು ಸಮರ್ಥಿಸಿಕೊಳ್ಳಲು ಅಸಮರ್ಥನಾದ. ಅವನನ್ನು ಪ್ರಿನ್ಸಿಪಾಲ್‌ಗಿರಿಯಿಂದ ಕೆಳಗಿಳಿಸಲು ಸರ್ಕಾರ ಆದೇಶ ನೀಡಿತು. ಆಗುವ ಅನಿಷ್ಟಗಳಿಗೆಲ್ಲಾ ಶನೀಶ್ವರ ಕಾರಣ ಎಂಬಂತೆ, ಸುಭಾಸನಿಂದಲೇ ಅಷ್ಟೆಲ್ಲಾ ಆಯಿತೆಂದು ಭಾವಿಸಿ ಪ್ರಿನ್ಸಿಪಾಲ್ ತನ್ನ ಅಧಿಕಾರವನ್ನು ಬಿಟ್ಟುಕೊಡುವ ಮುನ್ನ ಸುಭಾಸನನ್ನು ಕರೆಸಿ,

'ಬೋಸ್, ಈ ಕಾಲೇಜಿನಲ್ಲಿ ತುಂಬಾ ತೊಂದರೆ ಕೊಡುತ್ತಿರುವ ಹುಡುಗನೆಂದರೆ ನೀನೇ. ನಿನ್ನನ್ನು ಕಾಲೇಜಿನಿಂದ ಹೊರ ಹಾಕಿದ್ದೇನೆ' ಎಂದ.

ಸುಭಾಸ್ ಹೇಳಿದ್ದು ಒಂದೇ ಮಾತು 'ಥ್ಯಾಂಕ್ಸ್ !'

ಪ್ರಿನ್ಸಿಪಾಲನ ಆಜ್ಞೆಯನ್ನು ಅನುಮೋದಿಸಿದ ಕಾಲೇಜು ಆಡಳಿತ ಮಂಡಳಿ ಸುಭಾಸನನ್ನು ಕಾಲೇಜಿನಿಂದ ಉಚ್ಚಾಟಿಸಿತು. ಅಷ್ಟೇ ಅಲ್ಲ, ಕಲ್ಕತ್ತ ವಿಶ್ವವಿದ್ಯಾಲಯದ ಆಡಳಿತ ವ್ಯಾಪ್ತಿಗೆ ಬರುವ ಯಾವ ಕಾಲೇಜಿನಲ್ಲೂ ಪ್ರವೇಶಾವಕಾಶ ಕೊಡಕೂಡದೆಂದು ಇಲಾಖೆ ಆದೇಶ ಹೊರಡಿಸಿತು.

'ಏನಾಗಬೇಕೊ ಅದು ಆಗದೆ ಇರುವುದಿಲ್ಲ. ಆದದ್ದೆಲ್ಲ ಒಳಿತೇ ಆಯಿತು' – ಎಂದುಕೊಂಡ ಸುಭಾಸ್. ಆತನ ಮನಸ್ಸು ಕಟ್ಟಿಕೊಳ್ಳುತ್ತಿದ್ದ ಸ್ವಾತಂತ್ರ್ಯ ಸಿದ್ಧತೆಗಳು ರೂಪುಗೊಳ್ಳಲು ಅದು ತಾನಾಗಿಯೇ ಒದಗಿ ಬಂದ ಸದವಕಾಶ ಆಯಿತು. ಯುವಶಕ್ತಿಯ ಸಂಘಟನೆ, ಅಸ್ಪೃಶ್ಯತಾ ನಿವಾರಣೆ, ಅನಕ್ಷರತೆಯ ಮೂಲೋತ್ಪಾಟನೆ ಇವೇ ಮೊದಲಾದ ಲೋಕಸಂಗ್ರಹ ಕಾರ್ಯಗಳು ಅವನಲ್ಲಿ ಸಂಕ್ರಮಣಗೊಂಡವು. ತನ್ನ ಶಿಕ್ಷಣದ ಭವಿಷ್ಯ ತುಂಬಾ ಮಸುಕಾಗೇ ಇದ್ದುದರಿಂದ ಸುಭಾಸ್ ಸೇವೆಯ ಬೆಳಕಿನತ್ತ ತಿರುಗಿದ. ಕಟಕ್‌ನಲ್ಲೊಬ್ಬ ಸಂತಾಲ (ಅಸ್ಪೃಶ್ಯ) ಕುಲದ ರೋಗಸ್ಥ. ಅವನ ಚಿಕಿತ್ಸೆಗೆ ಯಾವ ಸವರ್ಣೀಯ ವೈದ್ಯನೂ ಮುಂದೆ ಬರಲಿಲ್ಲ. ಶುಶ್ರೂಷೆಯಂತೂ ಬಹು ದೂರವೇ ಉಳಿಯಿತು ! ಅಂತಹ ಸಂಕಷ್ಟ ಸಂದರ್ಭದಲ್ಲಿ ತನ್ನ ತಾಯಿ ಪ್ರಭಾವತಿ ದೇವಿಯವರೊಡನೆ ಸುಭಾಸ್ ರೋಗಿ ಇದ್ದ ಹಟ್ಟಿಗೆ ಹೋಗಿ ಔಷಧೋಪಚಾರ ಮಾಡಿ, ಅವನ ಪ್ರಾಣ ಉಳಿಸಿದ. ಪ್ರಭಾವತಿಯವರಿಗೂ ತಮ್ಮ ಮಗನ ಮಾನವೀಯ ಗುಣ ಮೆಚ್ಚಾಯಿತು.

ಒಂದು ವರ್ಷ ಕಳೆಯಿತು.

ತಾಯಿಯ ಅಪೇಕ್ಷೆಯ ಮೇರೆಗೆ ಸುಭಾಸ್ ಕಟಕ್‌ನಿಂದ ಕಲ್ಕತ್ತೆಗೆ ಬಂದ. ಶಿಕ್ಷಣಾವಕಾಶಕ್ಕೆ ಪ್ರಯತ್ನ ನಡೆಸಿದ. ಅದು ತುಸು ಆಶಾದಾಯಕವಾಗಿ ಕಂಡಿತು. ಆದರೆ ವಿಶ್ವವಿದ್ಯಾಲಯದ ಅನುಮತಿ ಬರಲು ಇನ್ನೂ ಕೆಲವು ದಿನಗಳು ಬೇಕಾಗಿತ್ತು. ಆ ಅವಧಿಯನ್ನು ವ್ಯರ್ಥಗೊಳಿಸಬಾರದೆಂದು ೪೯ನೆಯ ಬಂಗಾಳ ರೆಜಿಮೆಂಟಿಗೆ ಸೇರಲು ಅರ್ಜಿ ಸಲ್ಲಿಸಿದ. ಆದರೆ ಅವನ ಕಣ್ಣಿನಲ್ಲಿ ದೋಷವಿದೆ ಎಂದು ಆಯ್ಕೆ ಸಮಿತಿ ತಿರಸ್ಕರಿಸಿತು. ಅಷ್ಟರಲ್ಲಿ ಕಲ್ಕತ್ತ ವಿಶ್ವವಿದ್ಯಾಲಯದಿಂದ ಪ್ರೆಸಿಡೆನ್ಸಿ ಕಾಲೇಜು ಬಿಟ್ಟು ಬೇರೆ ಯಾವುದಾದರೂ ಕಾಲೇಜಿಗೆ ಸೇರಿಕೊಳ್ಳಲು ಅನುಮತಿ ಸಿಕ್ಕಿತು. ಸುಭಾಸ್ ಅನುಮತಿ ಪತ್ರ ತೆಗೆದುಕೊಂಡು ನೇರವಾಗಿ ಸ್ಕಾಟಿಷ್ ಚರ್ಚ್ ಕಾಲೇಜಿನ ಪ್ರಿನ್ಸಿಪಾಲ್ ಡಾ॥ ಉರ್ಕುಹರ್ಟ್ ಬಳಿ ಹೋದ. ತತ್ತ್ವಶಾಸ್ತ್ರದಲ್ಲಿ ಬಿ.ಎ. ಆನರ್ಸ್ ಓದುವ ಇಚ್ಛೆ ವ್ಯಕ್ತಪಡಿಸಿದ. ಡಾ॥ ಹರ್ಟ್‌ರವರಿಗೆ ಸಂತೋಷವೇನೊ ಆಯಿತು, ಆದರೆ ಪ್ರೆಸಿಡೆನ್ಸಿ ಕಾಲೇಜು ಪ್ರಿನ್ಸಿಪಾಲರಿಂದ ಒಂದು ಔಪಚಾರಿಕ ಅನುಮತಿ ಪತ್ರ ತರಲು ತಿಳಿಸಿದರು. ಅಲ್ಲಿಂದಲೂ ಸುಭಾಸನಿಗೆ ಅನುಮತಿ ಸಿಕ್ಕಿತು. ೧೯೧೭ ಜುಲೈನಲ್ಲಿ ಸ್ಕಾಟಿಷ್ ಚರ್ಚ್ ಕಾಲೇಜಿಗೆ ವಿದ್ಯಾರ್ಥಿಯಾಗಿ ಸೇರಿದ.

ತೇಜಸ್ವೀ ತರುಣ ಸುಭಾಸನಿಗೆ ಓದು ಹವ್ಯಾಸವಾಗಿತ್ತು. ಅದೇ ರೀತಿ ಸೈನಿಕ ಶಿಕ್ಷಣವನ್ನು ವೃತ್ತಿಯಾಗಿಸಿಕೊಳ್ಳುವ ಹಂಬಲವೂ ಇತ್ತು. ಅವನ ಅದೃಷ್ಟಕ್ಕೆ ವಿಶ್ವವಿದ್ಯಾಲಯವು ವಿದ್ಯಾರ್ಥಿಗಳಿಗೆ ಸೈನಿಕ ಶಿಕ್ಷಣ ನೀಡುವ ವ್ಯವಸ್ಥೆ ಮಾಡಿತ್ತು.

ಅಲ್ಲಿ ಸೇನಾಪಡೆಯ ಆಯ್ಕೆಯ ಸಂದರ್ಭದ ದೈಹಿಕ ಪರೀಕ್ಷೆಗಳು ಇರಲಿಲ್ಲವಾದ್ದರಿಂದ ಸುಭಾಸ್ ಸುಲಭವಾಗಿ ಆಯ್ಕೆಯಾದ. ಪೋರ್ಟ್‌ವಿಲಿಯಂ ಕಾಲೇಜಿನಲ್ಲಿ ನಡೆದ ನಾಲ್ಕು ತಿಂಗಳ ಶಿಬಿರ ಶಿಕ್ಷಣ ಸುಭಾಸನ ಹಂಬಲ ಹಣ್ಣಾಗಲು ನೆರವಾಯಿತು. ೧೯೧೯ರಲ್ಲಿ ಬಿ. ಎ. ಆನರ್ಸ್ ಪದವಿಯೂ ಪ್ರಥಮ ಶ್ರೇಣಿಯಲ್ಲಿ ದೊರೆಯಿತು. ಮುಂದೆ ಪ್ರಾಯೋಗಿಕ ಮನೋವಿಜ್ಞಾನ ವಿಷಯದಲ್ಲಿ ಎಂ.ಎ. ತೆಗೆದುಕೊಳ್ಳಲಿಚ್ಛಿಸಿ ಸ್ನಾತಕೋತ್ತರ ಕೇಂದ್ರದಲ್ಲಿ ಸೇರಿಕೊಂಡದ್ದೂ ಆಯಿತು.

ಆದರೆ ಜಾನಕೀನಾಥ ಬೋಸರಿಗೆ ಅದು ಇಷ್ಟವಾಗಲಿಲ್ಲ. ಹೇಗಾದರೂ ಮಾಡಿ ಮೇಧಾವಿ ಮಗನನ್ನು ಇಂಗ್ಲೆಂಡಿಗೆ ಕಳುಹಿಸಿ ಅಲ್ಲಿ ಐ.ಸಿ.ಎಸ್.(ಇಂಡಿಯನ್ ಸಿವಿಲ್ ಸರ್ವಿಸ್) ಮಾಡಿಸಬೇಕೆಂಬ ಅಪೇಕ್ಷೆ. ತಮ್ಮ ಅಭಿಮತವನ್ನು ಮಗನಿಗೆ ತಿಳಿಸಿದರು. ಆದರೆ ಸುಭಾಸ್ ಒಪ್ಪಲಿಲ್ಲ. ಐ.ಸಿ.ಎಸ್. ಬಿಟಿಷರ ಗುಲಾಮತ್ವಕ್ಕೆ ಹಾಕಿಕೊಂಡ ಮೊದಲ ಅರ್ಜಿ ಎಂಬುದಾಗಿ ಹೇಳಿ, ಅದನ್ನು ನಿರಾಕರಿಸಿದ. ಜಾನಕೀನಾಥ್ ಅಷ್ಟಕ್ಕೇ ಬಿಡಲಿಲ್ಲ. ಕಾರ್ಯಾರ್ಥವಾಗಿ ಕಲ್ಕತ್ತೆಗೆ ಹೋಗಿದ್ದಾಗ ತಾವು ಇಳಿದುಕೊಂಡಿದ್ದ ಲಾಡ್ಜ್‌ಗೆ ಮಗನನ್ನು ಕರೆಸಿದರು. ತಮ್ಮ ಪತ್ನಿ ಪ್ರಭಾವತಿದೇವಿ ಮತ್ತು ಮಗ ಶರತ್‌ಚಂದ್ರಬೋಸ್ ಜೊತೆಗಿದ್ದರು. ಎಲ್ಲರೆದುರಿನಲ್ಲಿ ಮಾತುಕತೆ ನಡೆಯಿತು. ಜಾನಕೀನಾಥ್ ವಿಷಯ ಪ್ರಸ್ತಾಪ ಮಾಡಿದ ಕೂಡಲೇ ಸುಭಾಸ್ ಹಾರಾಡಿದ.

'ಐ.ಪಿ.ಎಸ್. ಪಾಸುಮಾಡಿ ಬ್ರಿಟಿಷರ ಗುಲಾಮನಾಗಿ ಬದುಕುವುದು ನನಗೆ ಇಷ್ಟವಿಲ್ಲ ಅಪ್ಪಾಜಿ'

'ಪಾಸು ಮಾಡಿದಾಕ್ಷಣಕ್ಕೆ ಕೆಲಸಕ್ಕೆ ಸೇರಬೇಕೆಂಬ ಬಲವಂತ ಇಲ್ಲ.'

ಇಲ್ಲ, ನೀವು ಈಗ ಹೇಗೋ ನಾಳೆಯೂ ಇಕ್ಕಟ್ಟಿನಲ್ಲಿ ಸಿಕ್ಕಿಸುವರೆ ! ನನ್ನಿಚ್ಛೆಗೆ ನನ್ನನ್ನು ಬಿಟ್ಟುಬಿಡಿ'

'ಬಿಡಬಹುದಿತ್ತು ಸುಭಾಸ್, ಆದರೆ ಮಕ್ಕಳು ಬೆಳೆದು ತಮ್ಮ ಕಾಲ ಮೇಲೆ ತಾವು ನಿಂತುಕೊಳ್ಳುವಂತಾಗುವ ತನಕ ಅವರ ಪ್ರಗತಿಯ ಬಗೆಗೆ ತಂದೆ ತಾಯಿಯರಿಗೆ ಕಾಳಜಿ ಇರುತ್ತದಪ್ಪಾ'

'ಈಗೇನು ನಾನು ಸಣ್ಣ ಮಗುವೆ ?'

'ಅಲ್ಲ, ಬೆಳೆದ ಮಗು !'

ಎಲ್ಲರೂ ನಕ್ಕರು.

ಸುಭಾಸ್ ಕೂಡ ನಗೆಯಲ್ಲಿ ಜತೆಗೂಡಿದ !

'ನೋಡಿ ಅಪ್ಪಾಜಿ, ನನಗೆ ಐ.ಸಿ.ಎಸ್. ಇಷ್ಟವಿಲ್ಲ.'

'ಇಷ್ಟವಿಲ್ಲವೊ ಅಥವಾ ಅದನ್ನು ಪಾಸು ಮಾಡುವುದು ಕಷ್ಟ ಅಂತಲೋ ?'

'ಏನಪ್ಪಾಜಿ, ಓದಿನ ವಿಚಾರದಲ್ಲಿ ನನಗೆ ಯಾವುದೂ ಕಷ್ಟ ಇಲ್ಲ. ಪಾಸು ಮಾಡುವ ಬಗ್ಗೆ ಸಂದೇಹವೂ ಇಲ್ಲ. ಈಗ ನನಗೆ ೨೨ ತುಂಬ್ತಾ ಬಂತು. ಐ.ಸಿ.ಎಸ್.ನ ವಯೋಮಿತಿ ಸಮೀಪಿಸ್ತಾ ಇದೆ. ಕೇವಲ ಎಂಟು ತಿಂಗಳಲ್ಲಿ ಐ.ಸಿ.ಎಸ್. ಪರೀಕ್ಷೆ ಪಾಸು ಮಾಡ್ತೇನೆ ಅನ್ನೋ ಭರವಸೆಯೂ ನನಗಿದೆ. ಆದರೆ....'

'ಆದರೆ, ಗೀದರೆ ಬೇಡ. ಆ ಭರವಸೆಯನ್ನು ನಿಜ ಮಾಡು. ನನಗೆ ಐ.ಸಿ.ಎಸ್. ಪದವೀಧರನ ತಂದೆ ಅನ್ನೋ ಹೆಮ್ಮೆ ತಂದುಕೊಡು.'

'ಅಪ್ಪಾಜಿಯವರ ಇಚ್ಛೆ ಪೂರೈಸೋದು ಅವರ ಮಕ್ಕಳಾದ ನಮ್ಮ ಕರ್ತವ್ಯ ಅಲ್ಲವೇನೊ ?'

– ಅಣ್ಣ ಶರತ್ ಹೇಳಿದರು.

ಸುಭಾಸನಿಗೆ ಸಮಾಧಾನ ತರಲಿಲ್ಲ ಆ ಮಾತು.

'ಅಂದರೆ ಅವರ ಇಚ್ಛೆಯ ಪೂರೈಕೆಗಾಗಿ ತನ್ನ ಆದರ್ಶಗಳನ್ನು ಬಲಿಕೊಡಬೇಕೇನು ?'

'ಏನಪ್ಪ ಅಂಥಾ ಲೋಕೋದ್ಧಾರ ಮಾಡೋ ಆದರ್ಶ ನಿನ್ನದು !'

'ಲೋಕೋದ್ಧಾರವಲ್ಲದಿದ್ದರೂ ಆತ್ಮೋದ್ಧಾರವಾದರೂ ಆಗಬೇಕಲ್ಲವೆ ಅಣ್ಣ. ಕನಿಷ್ಠ ಪಕ್ಷ ನಮ್ಮ ದೇಶದ ಬಗೆಗಾದರೂ ನಾವು ಚಿಂತಿಸಬೇಡವೆ ?'

'ನೋಡು ಸುಭಾಸ್,' ಮಧ್ಯೆ ಬಾಯಿ ಹಾಕಿದರು ಜಾನಕೀನಾಥ್, 'ನೀನಿನ್ನೂ ವಿದ್ಯಾರ್ಥಿ, ವಿದ್ಯಾರ್ಥಿಯಾದವನು ತನ್ನ ಅವಧಿ ಮುಗಿಯುವ ತನಕ ವಿದ್ಯಾರ್ಥಿಯಾಗಿಯೇ ಇರಬೇಕು. ಅವನು ಅಲ್ಲಸಲ್ಲದ ರಾಜಕೀಯ ವಿಷಯಗಳನ್ನು ತಲೆಗೆ ಹಚ್ಚಿಕೊಳ್ಳುವುದು ನನಗೆ ಇಷ್ಟವಿಲ್ಲ.'

'ಅಲ್ಲಸಲ್ಲದ ರಾಜಕೀಯ ಬೇಡ ಅಪ್ಪಾಜಿ. ಆದರೆ ಇತ್ತೀಚಿನ ಜಲಿಯನ್ ವಾಲಾಬಾಗ್ ಹತ್ಯಾಕಾಂಡದ ಬಗ್ಗೆ ಭಾರತೀಯರಾದ ರೈತ, ಕಾರ್ಮಿಕ, ವಿದ್ಯಾರ್ಥಿ, ವ್ಯಾಪಾರಿ ಎಲ್ಲರೂ ಚಿಂತಿಸಬೇಕಲ್ಲವೆ ?'

ಹಾಗಂದ ಕೂಡಲೇ ಜಾನಕೀನಾಥರ ಮುಖ ಗಂಭೀರವಾಯಿತು ! ಅವರ ಕಣ್ಣುಗಳು ತಾವಿದ್ದ ಕೊಠಡಿಯಾಚೆ ಹರಿದವು. ಪಂಜಾಬಿನ ಅಮೃತಸರದೆಡೆಗೆ ಧಾವಿಸಿದವು. ಅಲ್ಲಿ ಕಂಡದ್ದೇನು" ನರಮೇಧದ ನಗ್ನ ದೃಶ್ಯ !

'ಅನಿತಾ, ಜಲಿಯನ್ ವಾಲಾಬಾಗ್ ಹತ್ಯಾಕಾಂಡ ನೆನೆದರೆ ಸಾಕು ಮೈ ಝುಮ್ಮೆನ್ನುತ್ತದೆ ! ಭಾರತೀಯ ಎದೆಯಲ್ಲಿ ರಕ್ತ ಕುದಿದೇಳುತ್ತೆ ! ಕೇಳು, ಕಿವಿಗೊಟ್ಟು ಕೇಳು, ಆ ವರ್ಷ ಅಂದರೆ ೧೯೧೯ರಲ್ಲಿ ಬ್ರಿಟಿಷ್ ಸರ್ಕಾರ ಕಾಂಗ್ರೆಸ್ ಮುಖಂಡರಾಗಿದ್ದ ಸೈಫುದ್ದೀನ್ ಕಿಚ್ಲು ಮತ್ತು ಡಾ ॥ ಸತ್ಯಪಾಲ್ ಎಂಬುವರನ್ನು ಗಡೀಪಾರು ಮಾಡಿತ್ತು. ಸಿಟ್ಟಿಗೆದ್ದ ಕೆಲವರು ಪರಂಗಿಗಳನ್ನು ಹಿಡಿದು ಅಮೃತಸರದಲ್ಲಿ ಕೊಂದುಹಾಕಿದರು. ಆ ಘಟನೆ ನಡೆದ ಎರಡು ತಿಂಗಳುಗಳಲ್ಲಿ ಅದೇ ಅಮೃತಸರಕ್ಕೆ ಬ್ರಿಗೇಡಿಯರ್ ಆಗಿ ಹ್ಯಾರಿ ಡಯರ್ ಎಂಬುವನು ಬಂದ. ಡಯರ್ ಪಾಷಂಡಿ, ಹೃದಯಹೀನ ವ್ಯಕ್ತಿ. ಅಮೃತಸರದ ಸಿಖ್ಖರ ದೇವಾಲಯವಿರುವ ಸುವರ್ಣಮಹಲ್‌ನ ಸಮೀಪ ನಾಲ್ಕೂ ಕಡೆ ಎತ್ತರವಾದ ಗೋಡೆಗಳಿಂದಾವೃತವಾದ ಮೈದಾನ ಜಲಿಯನ್ ವಾಲಾಬಾಗ್. ಆ ಮೈದಾನಕ್ಕಿರುವ ಪ್ರವೇಶ ದ್ವಾರ ಒಂದೇ ಒಂದು. ಅದು ತುಂಬಾ ಚಿಕ್ಕದು ಕೂಡ. ಏಪ್ರಿಲ್ ೧೩, ೧೯೧೯ ರಂದು ಜಲಿಯನ್ ವಾಲಾಬಾಗ್ ಮೈದಾನದಲ್ಲಿ ರಾಷ್ಟ್ರಪ್ರೇಮಿಗಳ ಒಂದು ಮಹಾಸಭೆ ಸೇರಿತ್ತು. ಸುಮಾರು ೧೦-೧೫ ಸಾವಿರ ಜನ ಆ ಕಾಂಪೌಂಡಿನಲ್ಲಿದ್ದಿರಬೇಕು. ಅಧಿಕಾರ ಸ್ವೀಕರಿಸಿದ ತರುಣದಲ್ಲೇ ಡಯರ್ ಒಂದು ತುಕಡಿ ಸಮೇತ ಅಲ್ಲಿಗೆ ಹೋದ. ಕಿರುದ್ವಾರದ ಮುಂದೆ ಮಿಷನ್‌ಗನ್ ನಿಲ್ಲಿಸಿ ಗುಂಡಿನ ಮಳೆಗರೆದ. ಸಭೆ ಕಂಗಾಲಾಯಿತು. ಪ್ರಾಣಭಯದಿಂದ ಮನಬಂದ ಕಡೆ ಓಡಲಾರಂಭಿಸಿತು. ಡಯರ್‌ನ ಗುಂಡುಗಳು ಜನ ಓಡಿದ ಕಡೆ ಓಡಿಸಿಕೊಂಡು ಹೋಗಿ ಬೇಟೆಯಾಡಿದವು ! ಕೆಲವರು ಕಾಂಪೌಂಡ್ ಹತ್ತಲು ಯತ್ನಿಸಿ ವಿಫಲರಾದರು. ಹತ್ತುವ ವೇಳೆಯಲ್ಲಿ ಹಲವರಿಗೆ ಗುಂಡುಗಳು ಗುರಿತಪ್ಪದೆ ತಾಕಿದವು. ಮತ್ತೆ ಕೆಲವರು ಓಡಿಹೋಗಿ ಆ ಮೈದಾನದಲ್ಲಿರುವ ನೀರಿಲ್ಲದ ಹಾಳು ಬಾವಿಗೆ ದಬದಬ ಬಿದ್ದು ಸತ್ತರು. ಮೈದಾನದಲ್ಲಿ ಹೆಣಗಳು ಉರುಳು ಬಿದ್ದವು. ಪಶುಗಳಿಗೆ ಕಡೆಯಾಗಿ ಅಂದು ನರಮೇಧ ನಡೆಯಿತು. ಹತ್ತು ನಿಮಿಷಗಳಲ್ಲಿ ೧೬೫೦ ಗುಂಡುಗಳು ಹಾರಿದ್ದವು ; ೩೭೯ ಜನರನ್ನು ತಿಂದು ೧೧೩೭ ಜನರನ್ನು ಗಾಯಗೊಳಿಸಿದ್ದವು.

ಈ ಹತ್ಯಾಕಾಂಡದಿಂದ ಡಯರ್‌ನ ಮನಸ್ಸು ತೃಪ್ತಿಗೊಳ್ಳಲಿಲ್ಲ. ಭಾರತೀಯರ ಮೇಲಿನ ಸೇಡಿಗಾಗಿ ಆಜ್ಞೆಯೊಂದನ್ನು ಹೊರಡಿಸಿದ. ಅಮೃತಸರದ ಆ ರಾಜಬೀದಿಗೆ ಭಾರತೀಯನು ಯಾವನೇ ಬರಲಿ, ಎಲ್ಲಿಂದಲೇ ಬರಲಿ, ಅಲ್ಲಿಗೆ ಬಂದ ಕೂಡಲೇ ತಲೆತಗ್ಗಿಸಿಕೊಂಡು ಮೊಣಕಾಲೂರಿ ಮಗುವಿನಂತೆ ಅಂಬೆಗಾಲಲ್ಲಿ ನಡೆಯಬೇಕು. ಅಂಬೆಗಾಲು ಬಿಟ್ಟು ನೇರವಾಗಿ ನಡೆದದ್ದಾದರೆ, ಅಂಥವನ ಕಾಲುಗಳು ತುಂಡಾಗುತ್ತಿದ್ದವು. ತಲೆ ಎತ್ತಿ ನಡೆದರೆ ಶಿರ ಹರಿದು ಬೀಳುತ್ತಿತ್ತು ! ಭಾರತೀಯನಿಗೆ ತನ್ನ ತಾಯ್ನೆಲದಲಿ ತಲೆ ಎತ್ತಿ ನಡೆಯುವ ಅಧಿಕಾರವೂ ಇಲ್ಲವಾಗಿತ್ತು.

ಇಷ್ಟೆಲ್ಲ ಅನ್ಯಾಯ ಅನಾಹುತಗಳಿಗೆ ಕಾರಣನಾದ ಡಯರ್‌ಗೆ ಬ್ರಿಟಿಷ್ ಸರ್ಕಾರ ಕೊಟ್ಟ ಶಿಕ್ಷೆ ಏನು ? ಅವನ ಆಡಳಿತಾಧಿಕಾರದಲ್ಲಿ ವಿಶೇಷ ಬಡ್ತಿ. ಕೊಲೆಗಡುಕನನ್ನು ಪುರಸ್ಕರಿಸುವ ಬ್ರಿಟಿಷ್ ಸರ್ಕಾರಕ್ಕೆ ಭಾರತ ಧಿಕ್ಕಾರ ಹಾಕಿತು.

ಜಲಿಯನ್ ವಾಲಾಬಾಗಿನ ಈ ಭೀಕರ ಕೊಲೆ ಜಾನಕೀನಾಥ ಬೋಸರ ಕಣ್ಣು ಮುಂದೆ ತೆರೆತೆರೆಯಾಗಿ ತೆರೆದುಕೊಂಡಿತು. ಮಗನ ಮಾತಿನ ಸತ್ಯಾಂಶ ಅವರಿಗೆ ಅರ್ಥವಾಗಿ –

'ಅಹುದು, ಭಾರತೀಯರಾದ ನಾವು ಹೇಡಿಗಳಾಗುತ್ತಿದ್ದೇವೆ. ಮಕ್ಕಳಲ್ಲಿ ಎಳಮೆಯಿಂದಲೂ ಭಾರತೀಯತ್ವ ಮೊಳೆಯುವಂತೆ ಮಾಡುವ ಅಗತ್ಯತೆ ಇದೆ' ಎಂದುಕೊಂಡು, 'ಸುಭಾಸ್, ನಿನ್ನಂತಹ ಮಗನನ್ನು ಪಡೆದ ಪುಣ್ಯ ನಮ್ಮದು. ನಿನ್ನಿಚ್ಛೆಗೆ ನಾವು ಅಡ್ಡಿ ಬರುವುದಿಲ್ಲ' ಎಂದರು.

ಸುಭಾಸ್ ವಿನಮ್ರನಾಗಿ ತಾಯಿತಂದೆಯರಿಗೆ ನಮಸ್ಕರಿಸಿ, 'ಅಮ್ಮಾ, ಅಪ್ಪಾಜಿ, ನಿಮ್ಮ ಪವಿತ್ರ ರಕ್ತ ನನ್ನ ಧಮನಿಯಲ್ಲಿ ಹರಿಯುತ್ತಿದೆ. ಅದನ್ನೆಂದಿಗೂ ಅಪವಿತ್ರಗೊಳಿಸುವುದಿಲ್ಲ. ನಾನು ನಿಮ್ಮಿಚ್ಛಾಪೂರ್ತಿಗಾಗಿ ನಾಳೆಯೇ ಇಂಗ್ಲೆಂಡಿಗೆ ಹೊರಡುತ್ತೇನೆ. ನನಗುಳಿದಿರುವುದು ಕೇವಲ ಎಂಟೇ ಎಂಟು ತಿಂಗಳು. ಅಷ್ಟರಲ್ಲಿ ನಾನು ಚೆನ್ನಾಗಿ ಓದಿ, ಐ.ಸಿ.ಎಸ್. ಪರೀಕ್ಷೆ ಪಾಸುಮಾಡಿ, ಭಾರತಕ್ಕೆ ಬಂದು ನಿಮ್ಮ ಆಶೀರ್ವಾದ ಪಡೆಯುತ್ತೇನೆ. ನನ್ನನ್ನು ಆನಂದದಿಂದ ಬೀಳ್ಕೊಡಿ.'

– ಎಂದು ಕೇಳಿಕೊಂಡ.

೧೯೧೯ ಸೆಪ್ಟೆಂಬರ್ ೧೫ರಂದು ಸುಭಾಸ್ ಹಡಗು ಹತ್ತಿದ. ಎಲ್ಲರೂ ಸಂತೋಷದಿಂದ ಹಾಗೂ ಆಶಾಭಾವನೆಯಿಂದ ಸುಖಪ್ರಯಾಣ ಕೋರಿ ಸುಭಾಸನನ್ನು ಬೀಳ್ಕೊಟ್ಟರು.

*　　*　　*

ತನ್ನ ಸುದೀರ್ಘ ನೌಕಾಯಾನ ಮುಗಿಸಿದ ಸುಭಾಸ್ ನೇರವಾಗಿ ಕೇಂಬ್ರಿಡ್ಜ್‌ಗೆ ಹೋದ. ಅಲ್ಲಿ ಫಿಟ್ಜ ವಿಲಿಯಂ ಹಾಲ್‌ನ ಮೇಲ್ವಿಚಾರಣಾಧಿಕಾರಿಯನ್ನು ಕಂಡು ಐ.ಪಿ.ಎಸ್. ಪರೀಕ್ಷೆಗೆ ಪ್ರವೇಶ ದೊರಕಿಸಿಕೊಂಡ. ಕಾಲಾವಧಿ ಕಡಮೆ ಇದ್ದುದರಿಂದ 'ಮೆಂಟಲ್ ಅಂಡ್ ಮಾರಲ್ ಸೈನ್ಸಸ್ ಟ್ರಿಪಾಸ್' ಪರೀಕ್ಷೆಗೆ ಸಂಬಂಧಿಸಿದ ಕೆಲವೇ ಉಪನ್ಯಾಸಗಳಿಗೆ

ಹಾಜರಾದ. ಉಳಿದಂತೆ ಯಾರ ಮಾರ್ಗದರ್ಶನವೂ ಇಲ್ಲದೆ ಸ್ವಾಧ್ಯಾಯ ನಿರತನಾದ. ಭಾರತವನ್ನು ಬಿಟ್ಟು ಬರುವಾಗ ತನ್ನ ತಂದೆತಾಯಿಯರಿಗೆ ಕೊಟ್ಟ ಮಾತನ್ನು ಅವನು ಮರೆಯಲಿಲ್ಲ. ಎಂಟೇ ತಿಂಗಳ ಅವಧಿ ಇದ್ದುದರಿಂದ ಕಷ್ಟಪಟ್ಟು ಓದಿದ, ಅಷ್ಟೇ ಖುಷಿಯಿಂದ ಪರೀಕ್ಷೆ ತೆಗೆದುಕೊಂಡ. ಇಂಡಿಯನ್ ಸಿವಿಲ್ ಸರ್ವೀಸ್ ಪರೀಕ್ಷೆಗೆ ಅನೇಕ ವಿಷಯಗಳ ಕುರಿತ ಅಧ್ಯಯನ ನಡೆಸಬೇಕಾಗಿತ್ತು. ದೇಶದ ಆಡಳಿತ ಸೂತ್ರ ಹಿಡಿಯುವ ವ್ಯಕ್ತಿಯ ಜಾಣ್ಮೆ, ದಕ್ಷತೆ, ಮುತ್ಸದ್ದಿತನ ಮೊದಲಾದ ಲೌಕಿಕಾನುಭವಗಳ ಪರೀಕ್ಷೆ ಅದಾಗಿತ್ತು. ಇತಿಹಾಸ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ, ಇಂಗ್ಲಿಷ್ ಮೊದಲಾದ ವಿಷಯಗಳ ಒಂಬತ್ತು ಪತ್ರಿಕೆಗಳಿದ್ದವು. ಪರೀಕ್ಷೆ ೧೯೨೦ ಜುಲೈನಲ್ಲಿ ಆರಂಭವಾಗಿ ಅಂದಿಗೆ ಒಂದು ತಿಂಗಳಲ್ಲಿ ಮುಗಿಯಿತು. ಸೆಪ್ಟೆಂಬರ್ ತಿಂಗಳ ಮಧ್ಯದಲ್ಲಿ ಒಂದು ಸರಿರಾತ್ರಿಯಲ್ಲಿ ಅವನ ಸ್ನೇಹಿತನೊಬ್ಬನಿಂದ ಹಾರ್ದಿಕ ಶುಭಾಶಯ ಕೋರಿ ಟೆಲಿಗ್ರಾಂ ಬಂತು. ಸುಭಾಸ್ ಇಂಡಿಯನ್ ಸಿವಿಲ್ ಸರ್ವೀಸ್ ಪರೀಕ್ಷೆಯ ಅರ್ಹತಾಶ್ರೇಣಿಯಲ್ಲಿ ನಾಲ್ಕನೆಯವನಾಗಿ ಉತ್ತೀರ್ಣನಾಗಿದ್ದ. ಇಂಗ್ಲಿಷ್ ಪ್ರಬಂಧ ರಚನೆಯಲ್ಲಿ ಈತನದು ಪ್ರಥಮ ಸ್ಥಾನ !

ರಾಷ್ಟ್ರದಲ್ಲೇ ಅತಿ ಶ್ರೇಷ್ಠ ಪದವಿ ಸುಭಾಸನ ವಶವಾಗಿತ್ತು. ಅದರಿಂದ ಅವನಿಗೆ ಎಣೆಯಿಲ್ಲದ ಆನಂದ. ಅದು ಐ.ಸಿ.ಎಸ್. ಪದವಿ ಪಡೆದೆ ಎಂಬುದಕ್ಕಲ್ಲ, ತನ್ನ ಮಾತಾಪಿತೃಗಳಿಗೆ ಕೊಟ್ಟ ಮಾತನ್ನು ಸತ್ಯವಾಗಿಸಿಕೊಂಡದ್ದಕ್ಕೆ ! ಪ್ರಾಪ್ತವಾದ ಪದವಿ ಅವನನ್ನು ಸಂದಿಗ್ಧತೆಗೆ ಸಿಲುಕಿಸಿತು. ಅವನ ಆಂತರಿಕ ಹೋರಾಟ ನಿದ್ದೆ ಕೊಡಲಿಲ್ಲ. ತನ್ನಲ್ಲೇ ಅಂದುಕೊಂಡ :

'ಛೇ' ಎಂತಹ ಜಟಿಲತೆಯ ಗೂಡು ಈ ಬಾಳು. ಒಂದು ಸಮಸ್ಯೆ ಪರಿಹಾರ ಕಂಡರೆ ಅದರ ಹಿಂದೆ ಹತ್ತು ಪ್ರಶ್ನೆಗಳು ತಲೆ ಎತ್ತಿ ನಿಲ್ಲುತ್ತವೆ. ಬಾಲ್ಯ ಹೇಗೋ ಕಳೆಯುತ್ತೆ. ಆದರೆ ಯೌವನ ಹಾಗೆ ಜಾರುವುದಿಲ್ಲ. ಬದುಕು ರೂಪುಗೊಳ್ಳುವ ತನಕ ವ್ಯಕ್ತಿಯನ್ನು ಅದು ಕಾಡುತ್ತಲೇ ಇರುತ್ತೆ. ಈಗ ನಾನೇನು ಮಾಡಲಿ ? ಐಹಿಕ ಸುಖಭೋಗದ ಹೂವಿನ ಹಾಸಿಗೆ ಏರಲೆ ? ಅಥವಾ ಸೇವೆ, ತ್ಯಾಗ, ಹೋರಾಟಗಳ ಮುಳ್ಳಿನ ಹಾದಿ ತುಳಿಯಲೆ ? ವಿದೇಶೀ ನಿರಂಕುಶಾಧಿಕಾರಕ್ಕೆ ಮಣಿಯುವ ಮೂಲಕ ನನ್ನನ್ನು ಮಾರಿಕೊಳ್ಳಲೆ ? ಛೇ, ಹಾಗೆ ಮಾಡಿದ್ದಾದರೆ ಭಾರತವನ್ನು ಬಲಿಕೊಟ್ಟ ಪಾತಕ ತಟ್ಟುವುದಿಲ್ಲವೆ ? ಮುಂದಿನ ಪೀಳಿಗೆ ನಮಗೆಲ್ಲ ಶಾಪ ಹಾಕುವುದಿಲ್ಲವೆ ? ಮೊನ್ನೆ ತಾನೆ ಕೇಂಬ್ರಿಡ್ಜ್‌ನಲ್ಲಿರುವ ಭಾರತೀಯರಾದ ನಮ್ಮನ್ನೆಲ್ಲರನ್ನು ಉದ್ದೇಶಿಸಿ ಮಾಡಿದ ಡಾ। ಸರೋಜಿನಿ ನಾಯ್ಡುರವರ ಭಾಷನ ನಮ್ಮ ಆಲಸ್ಯವನ್ನು ದೂರಮಾಡಿ, ನಮ್ಮಲ್ಲಿ ಸ್ಫೂರ್ತಿಯ ಚಿಲುಮೆ ಚಿಮ್ಮಿಸಲಿಲ್ಲವೆ ? ಅವರ ಮಾತು ಮಾತಾಗದೆ ಮಂತ್ರವಾಗಿತ್ತಲ್ಲವೆ ?'

ಕ್ಷಣಕಾಲ ನೆನೆದ. ಆಗಾಗ ಇಂಗ್ಲೆಂಡಿಗೆ ಕಾರ್ಯಾರ್ಥವಾಗಿ ಬರುತ್ತಿದ್ದ ಭಾರತದ ಗಣ್ಯವ್ಯಕ್ತಿಗಳನ್ನೂ ಸಂದರ್ಶಕ ಉಪನ್ಯಾಸಕರನ್ನೂ ಆಹ್ವಾನಿಸಿ ಭಾರತೀಯ ಸಂಸ್ಕೃತಿ, ಸಾಹಿತ್ಯ ಮತ್ತು ವಿಶ್ವವಿದ್ಯಾಲಯಗಳ ಸ್ಥಿತಿಗತಿ ಕುರಿತು ವಿಶೇಷೋಪನ್ಯಾಸಗಳನ್ನು ಏರ್ಪಡಿಸುತ್ತಿದ್ದ. ಆ ವೇಳೆಯಲ್ಲಿ ಆತನ ಮನಸ್ಸಿನ ಮೇಲೆ ತುಂಬಾ ಪ್ರಭಾವ ಬೀರಿದ ಭಾಷಣ ಭಾರತದ ಕೋಗಿಲೆ (Nightingale) ಎಂದೇ ಪ್ರಸಿದ್ಧರಾಗಿದ್ದ ಕವಯಿತ್ರಿ ಡಾ॥ ಸರೋಜಿನಿ ನಾಯ್ಡುರವರದು. ಶ್ರೀಮತಿ ನಾಯ್ಡುರವರು ಇಂಗ್ಲೆಂಡಿನ ಭಾರತೀಯ ವಿದ್ಯಾರ್ಥಿಗಳನ್ನು ಉದ್ದೇಶಿಸಿ ವಿಚಾರ ಪ್ರಚೋದಕ ಭಾಷಣ ಮಾಡಿದರು.

'ನನ್ನ ಆಶಾಜ್ಯೋತಿಗಳೆ,

ನಿಮಗೆ, ಮುಖ್ಯವಾಗಿ ವ್ಯವಸ್ಥಾಪಕ ಸುಭಾಸ್‌ಚಂದ್ರ ಬೋಸರಿಗೆ ನನ್ನ ಹಾರ್ದಿಕ ಅಭಿನಂದನೆಗಳು.

ನೀವೆಲ್ಲರೂ ಇಲ್ಲಿಗೆ ವಿಶೇಷ ಶಿಕ್ಷಣಕ್ಕಾಗಿ ಆಗಮಿಸಿದ್ದೀರಿ. ನಿಮ್ಮ ಶಿಕ್ಷಣದ ಸಾರ್ಥಕ್ಯ ನಿಮ್ಮ ಭಾವೀ ಸೇವೆಯನ್ನು ಸಂಪೂರ್ಣ ಅವಲಂಬಿಸಿದೆ. ! 'ಸೇವೆ' ಎಂಬುದು ದಾಸ್ಯಕ್ಕಿರುವ ಪರ್ಯಾಯ ಪದ ಅಲ್ಲ. ಅದು ನಿಷ್ಕಾಮಕರ್ಮ. ಅದು ದೀನದಲಿತರಿಗಾಗಿ, ರಾಷ್ಟ್ರಕ್ಕಾಗಿ, ಅಸ್ವಾತಂತ್ರ್ಯದ ವಿನಾಶಕ್ಕಾಗಿ ದುಡಿದ ನಿರಂತರ ಕರ್ಮ ! ಓರ್ವ ಆಂಗ್ಲ ವಿದ್ವಾಂಸ ಹೇಳುವಂತೆ :

You act with your heart
to help people in need
You act with your mind
to find creative solutions to problems which
at first seemed insurmountable.
And you act with your hands
to build dreams for those who have lost hope,

ಬಾಳ ಕಣದಲ್ಲಿ ಸೋತು ಸೊರಗಿದವರ ಮನಸ್ಸಿನಲ್ಲಿ ಸುಂದರ ಸ್ವಪ್ನಗಳನ್ನು ಸೃಷ್ಟಿಸಬೇಕು ! ಅವರಲ್ಲಿ ಕೆಲವು ಆಶಾಕಿರಣಗಳನ್ನು ಮೂಡಿಸಬೇಕು. ಅದು ನಿಜವಾದ ಸೇವೆ, ವೈಯಕ್ತಿಕತೆಯಿಂದ ದೂರವಾಗಿ ವೈಶಾಲ್ಯದೆಡೆಗೆ

ಸಾಗುವುದೇ ಸೇವೆಯ ನೈಜಾರ್ಥ ! ಅಂತೆಯೇ ಸೇವೆಗೈಯುವವನಲ್ಲಿ 'ಅಹಂ' ಮೂಡಬಹುದು. ಲೋಕೋದ್ಧಾರ ಮಾಡುತ್ತಿದ್ದೇನೆಂಬ ಭ್ರಮೆ ಹುಟ್ಟಬಹುದು. ಆದರೆ ಅದು ಸಲ್ಲ. ಶ್ರೀರಾಮಕೃಷ್ಣ ಪರಮಹಂಸರು ಕೇಶವಚಂದ್ರಸೇನನಿಗೆ ಒಮ್ಮೆ ಹೇಳಿದ ಮಾತುಗಳು ಹೀಗಿವೆ :

'ದೇವರ ಸೇವೆ ಎಂದು ಲೋಕಸೇವೆ ಮಾಡು. ಲೋಕೋದ್ಧಾರ ನಿನ್ನಂಥ ಕೋಟಿ ಕೋಟಿ ಜನರು ಜನ್ಮವೆತ್ತಿ ಬಂದರೂ ಆಗದು.'

ಸ್ಪ್ರಿಂಕ್ಲರ್‌ನಲ್ಲಿ ಪರಿಮಿತ ಪ್ರದೇಶ ನೆನೆಸಬಹುದು, ಭೂಮಂಡಲವನ್ನೆಲ್ಲಾ ಅಲ್ಲ ! ಅದು ಮಳೆ ಬಂದಾಗ ಮಾತ್ರ ಸಾಧ್ಯ !

– ಈ ಸಂದೇಶ ಸದಾ ನಿಮ್ಮ ನೆನಪಿನಲ್ಲಿರಲಿ.

ಅಂತೆಯೇ ನೀವು ಸ್ವಾಭಿಮಾನದ ಶಿಶುಗಳೂ ಆಗಬೇಕು. ಸ್ವಾಭಿಮಾನ, ಆತ್ಮಗೌರವ ಹಾಗೂ ಅನಿರ್ಬಾಧಿತ ಸ್ವಾತಂತ್ರ್ಯ – ಇವು ವಿದ್ಯಾರ್ಥಿ ಸಮುದಾಯದ ಮೇಲೆ ಆರೋಗ್ಯಕರ ಪರಿಣಾಮ ಬೀರುತ್ತವೆ. ಇದಕ್ಕೆ ಇಲ್ಲಿನ ಆಂಗ್ಲ ವಿದ್ಯಾರ್ಥಿಗಳೇ ಸಾಕ್ಷಿ. ಅವರಿಗೆ ಶಿಕ್ಷಣದ ಬಗೆಗೆ ಎಂತಹ ಮುಕ್ತ ವಾತಾವರಣ ಇದೆ, ಅದನ್ನು ಗಮನಿಸಿ, ಕೇಂಬ್ರಿಡ್ಜ್ ಯೂನಿಯನ್ ಸೊಸೈಟಿಯಲ್ಲಿ ನಡೆಯುವ ಚರ್ಚೆಗಳಲ್ಲಿ ಇಂಗ್ಲೆಂಡಿನ ಅನೇಕ ವಿದ್ಯಾರ್ಥಿಗಳು ಭಾಗವಹಿಸುತ್ತಾರೆ. ಯಾವನೇ ಸಂಸತ್ ಸದಸ್ಯ ಅಥವಾ ಮಂತ್ರಿ ಹಾಜರಿದ್ದ ಅಲ್ಲಿನ ಸಭೆಗಳಲ್ಲಿ ವಿದ್ಯಾರ್ಥಿಗಳು ನಿರ್ಭೀತರಾಗಿ, ಯಾವುದೇ ಒತ್ತಡವಿಲ್ಲದೆ ತಮ್ಮ ಅಭಿಪ್ರಾಯಗಳನ್ನು ಅಭಿವ್ಯಕ್ತಿಸುತ್ತಾರೆ. ಅಂತಹ ಸ್ವಾತಂತ್ರ್ಯ ಭಾರತೀಯರಾದ ನಿಮಗಿದೆಯೆ ? ಅಲ್ಲಿ ನಿಮ್ಮನ್ನು ಎಲ್ಲರೂ ಸಂಶಯ ದೃಷ್ಟಿಯಿಂದ ನೋಡುತ್ತಾರೆ. ವಿದ್ಯಾರ್ಥಿ ತಮಗೆ ನುಂಗಲಾರದ ತುತ್ತಾಗಿದ್ದಾನೆ ಎಂಬ ಸಿದ್ಧಾಂತ ಸ್ಥಾಪಿಸಿಕೊಂಡಿದ್ದಾರೆ. ಸಮಯ ಸಿಕ್ಕರೆ ಪೊಲೀಸರಿಂದ ಬೇಟೆಯಾಡಿಸಲೂ ತಯಾರಿದ್ದಾರೆ. ಈ ಭಾವನೆಗಳನ್ನು ಬದಲಾಯಿಸಲು ಶ್ರಮಿಸಬೇಕು. ಸ್ವಾಭಿಮಾನವಿಲ್ಲದವನು ಸತ್ತ ಹಾಗೆಯೇ ಸರಿ. ಇಲ್ಲಿನವರು ಎಂತಹ ಸ್ವಾಭಿಮಾನಿಗಳು ಎಂಬುದಕ್ಕೆ ಒಂದು ನಿದರ್ಶನ.

ಇಂಗ್ಲೆಂಡಿನ ಚಕ್ರವರ್ತಿ ಜಾರ್ಜ್ ಲಂಡನ್ನಿನ ಕಿಂಗ್ ಸ್ಕೂಲಿನ ವಿದ್ಯಾರ್ಥಿಯಾಗಿದ್ದ. ಚಕ್ರವರ್ತಿ ಪದವಿ ಸ್ವೀಕರಿಸಿದ ಕೆಲವೇ ದಿನಗಳಲ್ಲಿ ತನ್ನ ಶಿಕ್ಷಣದ ಮಾತೃಸಂಸ್ಥೆಯಾದ ಕಿಂಗ್ ಸ್ಕೂಲಿಗೆ ಭೇಟಿ ಕೊಟ್ಟ. ಶಾಲಾ ಆವರಣವನ್ನು ಪ್ರವೇಶಿಸುತ್ತಿದ್ದಂತೆಯೇ ಶಾಲೆಯ ಮುಖ್ಯೋಪಾಧ್ಯಾಯ ರಗ್ಬೆ ಇಂಗ್ಲೆಂಡಿನ ಶಿಷ್ಟಾಚಾರದ ಪ್ರಕಾರ ತನ್ನ ತಲೆಯ ಮೇಲಿನ ಹ್ಯಾಟನ್ನು ತೆಗೆದು ಗೌರವ ಸೂಚಿಸಬೇಕಾಗಿತ್ತು. ಆದರೆ ಆತ ಹಾಗೆ ಮಾಡಲಿಲ್ಲ. ಜಾರ್ಜ್ ಚಕ್ರವರ್ತಿಯ ಮನಸ್ಸಿಗೆ ಅದು ಬೇಸರ ತಂದಿತು. ಅಲ್ಲೇನೂ ಆತ ಮಾತನಾಡಲಿಲ್ಲ. ತನ್ನರಮನೆಗೆ ಹಿಂತಿರುಗಿದ ಮೇಲೆ ಒಂದು ದಿನವನ್ನು ಗೊತ್ತುಮಾಡಿ ರಾಜ್ಯದ ಹಿರಿಯರ ಕೂಟ ಕರೆದ. ತನ್ನನ್ನೂ ಆಹ್ವಾನಿಸಿದ್ದರಿಂದ ಕಿಂಗ್ ಶಾಲೆಯ ಮುಖ್ಯೋಪಾಧ್ಯಾಯ ರಗ್ಬೆ ಕೂಡ ಹೋಗಿದ್ದ. ಅರಮನೆಯೊಳಗೆ ಕಾಲಿರಿಸುತ್ತಲೇ ರಗ್ಬೆ ತನ್ನ ತಲೆಯ ಮೇಲಿನ ಹ್ಯಾಟ್‌ನ್ನು ತೆಗೆದು, ಶಿರಬಾಗಿ ವಂದಿಸಿ, ಚಕ್ರವರ್ತಿಯನ್ನು ಮುಕ್ತಕಂಠದಿಂದ ಹೊಗಳತೊಡಗಿದ. ಚಕ್ರವರ್ತಿಗೆ ಅವನ ವರ್ತನೆ ಪರಮಾಶ್ಚರ್ಯ ಉಂಟುಮಾಡಿತು. ಮುಖದಲ್ಲೇ ಅರಸನ ಮನಸ್ಸನ್ನು ಓದಿದ ರಗ್ಬೆ,

'ಮಹಾಪ್ರಭುಗಳು ನನ್ನ ಶಾಲೆಗೆ ದಯಮಾಡಿಸಿದ್ದಾಗ ನಾನು ನನ್ನ ತಲೆಯ ಮೇಲಿನ ಹ್ಯಾಟ್ ತೆಗೆಯಲಿಲ್ಲ. ಆದರೆ ಇಲ್ಲಿ ತಮ್ಮ ಅರಮನೆಯಲ್ಲಿ ತಮ್ಮ ಸಮ್ಮುಖದಲ್ಲಿ ತೆಗೆದು ತಮಗೆ ಶಿರಬಾಗಿ ವಂದಿಸುತ್ತಲೂ ಇದ್ದೇನೆ. ಇದು ತಮಗೆ ಅಚ್ಚರಿ ಉಂಟುಮಾಡಿರಬಹುದು. ಅಂದಿನ ವರ್ತನೆ ಪ್ರಭುಚಿತ್ತಕ್ಕೆ ಅಸಮಾಧಾನ ತಂದಿರಬಹುದು. ಆದರೆ....'

'ಸಮರ್ಥನೆಯ ಅಗತ್ಯವಿಲ್ಲ. ಅಂದಿನ ನಿಮ್ಮ ವರ್ತನೆ ನಿಜಕ್ಕೂ ನಿಮ್ಮ ಸಾರ್ವಭೌಮವನ್ನು ಅವಮಾನಿಸುವಂಥಾದ್ದಾಗಿದ್ದಿತು ! ಅಲ್ಲವೆ ?'

ಅಲ್ಲ, ಖಂಡಿತಾ ಅಲ್ಲ, ತನ್ನ ಪ್ರಭುವನ್ನು ಅವಹೇಳನಗೊಳಿಸುವ ಹೀನಬುದ್ಧಿ ಅವರ ಪ್ರೀತಿಯ ಪ್ರಜೆಯಾದ ನನ್ನದಲ್ಲ. ಮೂಲತಃ ನಾನು ಶಿಕ್ಷಕ. ಅದರಲ್ಲೂ ಶಾಲೆಯ ನನ್ನ ವ್ಯಕ್ತಿತ್ವದ ಪ್ರಭಾವವಿದ್ದ ಮುಖ್ಯೋಪಾಧ್ಯಾಯ. ತಾವು ದಯಮಾಡಿಸಿದ್ದು ನನ್ನ ಶಾಲೆಯ ಪವಿತ್ರ ಸಾರಸ್ವತ ಆವರಣಕ್ಕೆ. ಒಂದು ವೇಳೆ ತಮ್ಮನ್ನು ಕಂಡಕೂಡಲೇ ನಾನು ಹ್ಯಾಟ್ ತೆಗೆದಿದ್ದರೆ ಅಲ್ಲಿನ ಅಮಾಯಕ ಮಕ್ಕಳ ಮನಸ್ಸಿನಲ್ಲಿ ಅಧ್ಯಾಪಕ ಅರಸನಿಗಿಂತಲೂ ಕೀಳು ಎಂಬ ಭಾವನೆ ಮೂಡುತ್ತಿತ್ತು. ಅದಾಗಬಾರದು ಎಂಬುದು ತನ್ನ ಹಾಗೂ ನನ್ನಂತೆಯೇ ಇರುವ ಅಧ್ಯಾಪಕರುಗಳ ಅನಿಸಿಕೆ. ಎಳಮೆಯಲ್ಲೇ ಶಿಕ್ಷಕರ ಬಗ್ಗೆ ಮಕ್ಕಳಿಗೆ ಕೀಳು ಭಾವನೆ ಮೂಡಿದ್ದಾದರೆ, ಅವರು ನಾಳೆ ಗುರುವನ್ನು ತಿರಸ್ಕರಿಸಿ, ಪುಂಡು ರಾಜಕಾರಣಿಯ ಬೆನ್ನುಹತ್ತಿ, ರಾಷ್ಟ್ರಕ್ಕೆ ಪ್ರಚಂಡಪೀಡ ಆಗುತ್ತಾರೆ. ಆದ್ದರಿಂದ ಅಲ್ಲಿ ನಾನು ಹ್ಯಾಟ್ ತೆಗೆಯಲಿಲ್ಲ. ಈಗ ನಾನು ತಮ್ಮ ಅರಮನೆಯಲ್ಲಿದ್ದೇನೆ, ನಾನು ನಿಮ್ಮ ಪ್ರಜೆಯಾಗಿ ತಮ್ಮ ಪದತಲದಲ್ಲಿ ಶಿರಬಾಗಿ ನಮಿಸುತ್ತೇನೆ.'

ಈ ಘಟನೆಯಿಂದ ನಾವರಿಯಬೇಕಾದದ್ದು ಸ್ವಾಭಿಮಾನ ಮತ್ತು ಸ್ವಾಮಿಭಕ್ತಿಗಳ ಸ್ವಾಭಿಮಾನವನ್ನು. ಸ್ವಾಮಿಭಕ್ತಿಯನ್ನು ಪ್ರದರ್ಶಿಸುವಾಗಲೂ ಒಂದು ಔಚಿತ್ಯ ಇದೆ. ಅದು ಆತ್ಮಾಭಿಮಾನಕ್ಕೆ ಧಕ್ಕೆ ತರದ ರೀತಿಯ ಮಾನ ! ಮಾನ ಎಂಬುದು ವ್ಯಕ್ತಿಯನ್ನು ತೂಗುವ ಅಥವಾ ಅಳೆಯಲಿರುವ ಮಾಪನ ! ಅವಾಭಿಮಾನದ ಅರ್ಥ ತನ್ನನ್ನು ತಾನು ಅಳೆದುಕೊಳ್ಳುವುದು, ಇಲ್ಲವೇ ತನ್ನ ಯೋಗ್ಯತೆಯನ್ನು ನಿಷ್ಕರ್ಷಿಸಿಕೊಳ್ಳುವುದು. ಅಭಿಮಾನವೆಂದಾಗ ಅನ್ಯರ ಬಗೆಗೆ ವ್ಯಕ್ತಿ ತಳೆಯುವ ಪ್ರೀತಿ ಅಥವಾ ಗೌರವ ಎಂದರ್ಥ. ರಗ್ವೆ ನಡೆದುಕೊಂಡದ್ದು ಅಭಿಮಾನ ಮತ್ತು ಸ್ವಾಭಿಮಾನಗಳಿಗೆ ನಿಂತ ಪ್ರತಿಮೆ !

ಸೃಷ್ಟಿಕರ್ತನ ದೃಷ್ಟಿಯಲ್ಲಿ ಯಾವುದೂ ಶ್ರೇಷವಲ್ಲ, ಯಾವುದೂ ಕನಿಷ್ಠವಲ್ಲ, ಪ್ರತಿ ವಸ್ತುವಿಗೂ ಅದರದೇ ಆದ ಮರ್ಯಾದೆ ಇದೆ. ನೆಲದ ಮೇಲಿನ ಧೂಳು ಕಾಲಿಂದ ಮೆಟ್ಟಿಸಿಕೊಂಡ ಕೂಡಲೆ, ಕಾಲ ಬೆರಳುಗಳ ಸಂದಿಯಿಂದಲೇ ಬುಸ್ ಎಂದು ಮೇಲೆದ್ದು , ಮೆಟ್ಟಿದವನ ತಲೆಯ ಮೇಲೇರಿ ತನ್ನ ಸ್ವಾಭಿಮಾನವನ್ನು ಪ್ರದರ್ಶಿಸುತ್ತದೆ. ಉಸಿರು ತುಂಬಿದ ಚೆಂಡನ್ನು ನೀರಿನಲ್ಲಿ ಬಲವಂತವಾಗಿ ಅದುಮಿ ಇಡಹೋದರೆ, ಅದು ಪ್ರತಿಭಟಿಸಿ ತನ್ನೆಲ್ಲ ಬಲವನ್ನೂ ಕ್ರೋಢೀಕರಿಸಿ ಮೇಲೆಗರುತ್ತದೆ. ನಿರ್ಜೀವಿ ವಸ್ತುಗಳಲ್ಲೂ ಎಂತಹ ಸ್ವಾಭಿಮಾನ ! ವಸ್ತುಸ್ಥಿತಿ ಹೀಗಿರುವಾಗ ಒಂದೆರಡು ಶತಮಾನಗಳಿಂದಲೂ ತುಳಿಸಿಕೊಂಡಿರುವ ಸಜೀವ ಚೇತನಗಳು ತೆಪ್ಪಗಿರಲು ಸಾಧ್ಯವೆ ? ಆಲೋಚಿಸಿ !

ಮನುಷ್ಯನಿಗಿರುವಂತೆ ರಾಷ್ಟ್ರಕ್ಕೂ ಮನಸ್ಸು ಎನ್ನುವುದೊಂದಿದೆ. ಅದು ಸಮಷ್ಟಿ ಚಿತ್ ! ಆ ಚೇತನದಲ್ಲಿ ಆತ್ಮಪ್ರತ್ಯಯ ಅಭಾವವಾದರೆ ರಾಷ್ಟ್ರದ ಅವನತಿ ಕಟ್ಟಿಟ್ಟ ಬುತ್ತಿ. ರಾಷ್ಟ್ರ ಎಂದರೆ ಕಲ್ಲು, ಮಣ್ಣು, ಬೆಟ್ಟ, ಗುಡ್ಡ, ನದಿ, ನದಿ, ಅಡವಿ, ಮನೆ, ಅರಮನೆಗಳಷ್ಟೇ ಅಲ್ಲ, ಅವೆಲ್ಲವನ್ನೂ ಮೈಗೂಡಿಸಿಕೊಂಡು ಬೆಳೆದ ಸಾಂಸ್ಕೃತಿಕ ಹಿನ್ನೆಲೆಯುಳ್ಳ ಭವ್ಯವಾದ ಬದುಕು. ಭಾರತಕ್ಕೆ ಅಂತಹ ಬದುಕಿನ ಸಾಂಸ್ಕೃತಿಕ ಪರಂಪರೆ ಇದೆ. ಆ ಪರಂಪರೆಗೆ ಯಾರೂ ಕಿಚ್ಚು ಹಚ್ಚುವ ಹೇಯ ಕಾರ್ಯಕ್ಕೆ ಕೈ ಹಾಕಬಾರದು. ಅಷ್ಟೇ ಅಲ್ಲ, ಅಂತಹ ಸಂಸ್ಕೃತಿ ಭೂಯಿಷ್ಠ ಬದುಕಿನ ಹಿನ್ನೆಲೆಯನ್ನು ಮರೆತರೆ, ಕೇವಲ ಪಾಶ್ಚಾತ್ಯ ನಾಗರಿಕತೆಯ ಬಂಗಾರದ ಜಿಂಕೆಯ ಬೆನ್ನು ಹತ್ತಿದರೆ ಭಾರತ ಆತ್ಮವಿಕ್ರಯ ಮಾಡಿಕೊಂಡಂತೆ ! ಅಂತಾಗದಿರಲು ಭಾರತೀಯರಾದ ನೀವು ಇಂದೇ ಸಂಕಲ್ಪ ಸ್ವೀಕರಿಸಿ, ಕಂಕಣ ಕಟ್ಟಿ ನಿಲ್ಲಿ. ನಾಳೆ ನಾಳೇ ಎಂದು ಮುಂದೂಡಬೇಡಿ. ಹುಟ್ಟದಿರುವ ನಾಳೆ ಸತ್ತಿರುವ ನಿನ್ನೆಯಷ್ಟೇ ನಿಷ್ಫಲ !

ಭಾರತ ಮಾತೆಗೆ ಜಯವಾಗಲಿ !!

* * *

ಕೇವಲ ಎರಡು ತಿಂಗಳ ಹಿಂದೆ ಸ್ಫೋಟಿಸಿದ ಶ್ರೀಮತಿ ನಾಯ್ಡುರವರ ನುಡಿಬಾಂಬುಗಳು ಸುಭಾಸನನ್ನು ಬಡಿದೆಬ್ಬಿಸಿದವು. ಕ್ಷಣಿಕ ಭೋಗಜೀವನಕ್ಕಾಗಿ ಶಾಶ್ವತವೂ, ಬಹುಮೌಲಿಕವೂ ಆದ ಆತ್ಮಾಭಿಮಾನವನ್ನು ಬಲಿಗೊಡಲು ಅವನ ಸ್ವಾಭಿಮಾನೀ ಮನ ಒಪ್ಪಲಿಲ್ಲ. ಅವನಲ್ಲಿ ಹೋರಾಟದ ಒಲವು ಬಲಿಯಿತು. ತನ್ನಲ್ಲಿ ತಾನೇ ನಿರ್ಧರಿಸಿಕೊಂಡ.

'ಬೇಡ,.. ಬೇಡ ! ಗುಲಾಮಗಿರಿ ಎಂದೆಂದಿಗೂ ಬೇಡ. ಹಾಲು ಹಣ್ಣು ಸೇವಿಸಿ ಪಂಜರದ ಗಿಣಿಯಾಗಿ ಬದುಕುವುದಕ್ಕಿಂತ, ವಿಶಾಲ ವನ್ಯಪ್ರದೇಶದಲ್ಲಿ ಕಾಳು ಕಡಿ ತಿಂದು ಸ್ವತಂತ್ರವಾಗಿ ಬದುಕುವುದು ಲೇಸು. ನಾನು ಅರವಿಂದರ ಹಾದಿ ಹಿಡಿಯುತ್ತೇನೆ. ದೇಶ ವಿಮುಕ್ತಿಗಾಗಿ ಹೋರಾಡುತ್ತೇನೆ. 'ಭಾರತದಲ್ಲಿ ಕುದುರೆಗಳಿಗೆ ತಿನ್ನಿಸುವ ಆಹಾರವನ್ನು ಮನುಷ್ಯರೂ ತಿನ್ನುತ್ತಾರೆ' ಎಂಬ ಅವಹೇಳನಕಾರಿ ಸುದ್ದಿಯನ್ನು ಪ್ರಚಾರ ಮಾಡುತ್ತಿರುವ ಕ್ಷುದ್ರ ಬ್ರಿಟಿಷರಿಗೆ ಮಣ್ಣು ಮುಕ್ಕಿಸದಿದ್ದರೆ ನಾನು ಭಾರತಾಂಬೆಯ ಮಗನಲ್ಲ !'

ನುಡಿ ನಿರ್ಧಾರದೊಂದಿಗೆ ಮನೋನಿರ್ಧಾರವೂ ಆಯಿತು. ೧೯೨೧ ಏಪ್ರಿಲ್ ೨೨ರಂದು ಸೆಕ್ರೆಟರಿ ಸ್ಟೇಟ್ ಫಾರ್ ಇಂಡಿಯಾ ಆಗಿದ್ದ ಇ. ಎಸ್. ಮಾಂಟೆಗ್ಯೂರವರಿಗೆ ಐ.ಸಿ.ಎಸ್. ಪರೀಕ್ಷೆಯಲ್ಲಿ ಆಯ್ಕೆಯಾಗಿರುವವರ ಪಟ್ಟಿಯಿಂದ ತನ್ನ ಹೆಸರನ್ನು ತೆಗೆದುಹಾಕಬೇಕೆಂದು ಪತ್ರ ಕಳುಹಿಸಿ, ಆ ಬಗೆಗಿನ ಮಾನಸಿಕ ತೊಳಲಾಟದಿಂದ ಮುಕ್ತನಾದ ಸುಭಾಸ್.

ಕೂಡಲೇ ಮೂರು ಪತ್ರಗಳು ಸಿದ್ಧವಾದವು. ಎರಡು ಆ ವೇಳೆಗಾಗಲೇ ಪ್ರಪಂಚದ ಮನೆಮಾತಾಗಿದ್ದ ದೇಶಬಂಧು ಚಿತ್ತರಂಜನ ದಾಸರವರಿಗೆ, ಮತ್ತೊಂದು ಅಣ್ಣ ಶರತ್‌ಚಂದ್ರನಿಗೆ. ದೇಶಬಂಧುರವರಿಗೆ ಬರೆದ ಪತ್ರದಲ್ಲಿ ತಾನು ಭಾರತಕ್ಕೆ ಬಂದ ಮೇಲೆ ಅವರು ಆರಂಭಿಸಿದ್ದ ಕಾಲೇಜಿನಲ್ಲಿ ಬೋಧನೆ, ಅವರು ನಡೆಸುತ್ತಿದ್ದ 'ಸ್ವರಾಜ್' ಪತ್ರಿಕೆಯ ಇಂಗ್ಲಿಷ್ ಆವೃತ್ತಿಯ ಕಾರ್ಯ ನಿರ್ವಹಣೆ ಮತ್ತು ಕಾಂಗ್ರೆಸ್ ಸಂಘಟನೆ ಈ ಮೂರು ಕಾರ್ಯಗಳನ್ನು ನಿಷ್ಠೆಯಿಂದ ನಿರ್ವಹಿಸುವುದಾಗಿ ತಿಳಿಸಿದರು. ಅಣ್ಣನಿಗೆ ಬರೆದ ಪತ್ರದಲ್ಲಿ –

'ಎಷ್ಟು ಜನರ ಹೃದಯದ ನೋವಿಗೆ ನಾನು ಕಾರಣನಾದೆ ; ಎಷ್ಟು ಮಂದಿ ಮೇಲಧಿಕಾರಿಗಳಿಗೆ ನಾನು ಅವಿಧೇಯನಾದೆ ಎಂಬುದು ನನಗೆ ತಿಳಿದಿದೆ. ಆದರೆ ಅಪಾಯಕಾರಿ ಹೊಣೆಗಾರಿಕೆಯನ್ನು ವಹಿಸಿಕೊಳ್ಳುವ ಮೊದಲೇ ಸೂಕ್ತ ಮಾರ್ಗ ಕಂಡುಕೊಂಡೆ. ನನ್ನ ಭಾರತ ದೊಡ್ಡದು. ಅದಕ್ಕೆ ಜಯವಾಗಲಿ !'

ಪತ್ರಗಳನ್ನು ಟಪಾಲು ಪೆಟ್ಟಿಗೆಗೆ ಹಾಕಿ, ೧೯೨೧ ಜೂನ್ ತಿಂಗಳು ಇಂಗ್ಲೆಂಡಿಗೆ ವಿದಾಯ ಹೇಳಿ ಭಾರತಕ್ಕೆ ಮರಳಿದ ಆ ಮಹಾನುಭಾವ.

* * *

'೧೯೧೪ ಆಗಸ್ಟ್ ೪ರಂದು ಆರಂಭವಾದ ಪ್ರಪಂಚದ ಮೊದಲನೆಯ ಮಹಾಯುದ್ಧ ಮುಕ್ತಾಯಗೊಂಡದ್ದು ಯಾವಾಗ ಗೊತ್ತಾ ಅನಿತಾ ?'

'ಗೊತ್ತು. ೧೯೧೯ ಜೂನ್ ೨೮'

'ಸರಿಯಾಗಿ ಹೇಳಿದೆ. ಅತ್ತ ಪ್ರಪಂಚದ ಮಹಾಯುದ್ಧ ಮುಗಿಯಿತು. ಇತ್ತ ಭಾರತದಲ್ಲಿ ದೇಶೀಯ ಯುದ್ಧ ಆರಂಭವಾಯಿತು. ಅದಕ್ಕೆ ನೋವಿನ ಕಾವು ಆರದೇ ಇದ್ದ ಜಲಿಯನ್ ವಾಲಾಬಾಗ್ ಹತ್ಯಾಕಾಂಡ ಮೂಲ ಪ್ರೇರಕಾಂಶವಾಗಿತ್ತು. ಬ್ರಿಟಿಷರ ದಬ್ಬಾಳಿಕೆ, ದೌಷ್ಟ್ಯಗಳನ್ನು ಹತ್ತಿಕ್ಕಲು ಇರುವ ಒಂದೇ ಮಾರ್ಗ ಹೋರಾಟ.' ಆ ಹೋರಾಟದ ನಾಯಕತ್ವವನ್ನು, ಅಂದಿನ ಏಕೈಕ ರಾಷ್ಟ್ರೀಯ ಸಂಸ್ಥೆಯಾಗಿದ್ದ ಕಾಂಗ್ರೆಸ್ ವಹಿಸಿಕೊಂಡಿತ್ತು. ಸುಮಾರು ೧೮೮೫ರಲ್ಲಿ ರಾಜಾರಾಮ ಮೋಹನರಾಯ್ ಮತ್ತು ಅವರ ಅನುಚರರಿಂದ ಸ್ಥಾಪಿತವಾದ ಕಾಂಗ್ರೆಸ್, ಶ್ರೀರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದ, ಅರವಿಂದ ಘೋಷ್, ದಾದಾಬಾಯಿ ನವರೋಜಿ ಮೊದಲಾದ ಪುಣ್ಯಪುರುಷರ ಧಾರ್ಮಿಕ ಹಾಗೂ ನೈತಿಕ ಸ್ತನ್ಯಪಾನ ಮಾಡಿ ಸಾಕಷ್ಟು ಪ್ರಬುದ್ಧಮಾನಕ್ಕೆ ಬಂದಿತ್ತು. ಗೋಪಾಲಕೃಷ್ಣ ಗೋಖಲೆ, ಲಾಲಾಲಜಪತರಾಯ್, ಲೋಕಮಾನ್ಯ ಬಾಲಗಂಗಾಧರ ತಿಲಕ್, ಮಹಾತ್ಮ ಗಾಂಧಿ, ದೇಶಬಂಧು ಚಿತ್ತರಂಜನ ದಾಸ್, ಮೌಲಾನಾ ಮಹಮ್ಮದ್ ಆಲಿ ಮೊದಲಾದವರ ಮಾರ್ಗದರ್ಶನದಲ್ಲಿ ತನ್ನ ಮುನ್ನಡೆ ಸಾಧಿಸಿತ್ತು. ಪ್ರಧಾನವಾಗಿ ಅಂದು ಅದರ ಚುಕ್ಕಾಣಿ ಹಿಡಿದಿದ್ದವರು ಮೋಹನದಾಸ ಕರಮಚಂದ ಗಾಂಧಿ. ೧೯೩೦ ಜುಲೈ ೩೧ರಂದು ಕಾಂಗ್ರೆಸ್ಸಿನ ಬೆನ್ನೆಲುಬಾಗಿದ್ದ ಲೋಕಮಾನ್ಯ ತಿಲಕರು ದಿವಂಗತರಾದ್ದರಿಂದ, ಅವರ ತೆರವಾದ ಸ್ಥಾನವನ್ನು ಗಾಂಧೀಜಿ ತುಂಬಿದರು. ಅಂತಹ ತುಂಬಿ ಬರುತ್ತಿದ್ದ ಸ್ವಾತಂತ್ರ್ಯ ಸಂಗ್ರಾಮವಾಹಿನಿಗೆ ಸುಭಾಸ್‌ಚಂದ್ರ ಬೋಸ್ ಎಂಬ ಪ್ರಚಂಡ ಪ್ರಚಂಡ ಪ್ರವಾಹವೂ ಬಂದು ಸೇರಿತು !'

'ಅಂದರೆ ನಮ್ಮಪ್ಪಾಜಿ, ತಮ್ಮನ್ನು ತಾವು ಹುಟ್ಟು ಹೋರಾಟಗಾರರೆಂದು ಗುರುತಿಸಿಕೊಂಡರೇನು ?'

'ಅಹುದು, ಗುಲಾಮಗಿರಿಯ ಸಂಕೇತವಾಗಿದ್ದ ಐ.ಸಿ.ಎಸ್. ಪದವಿಯನ್ನು ಯಾವತ್ತು ಬ್ರಿಟಿಷರ ಮುಖದ ಮೇಲೆ ಬಿಸಾಡಿದರೋ ಅಂದೇ ಅವರು ಮಹಾನ್ ದೇಶಪ್ರೇಮಿ ಎಂದು ಸಾಬೀತಾಗಿದ್ದರು. ಆದರೂ ಸ್ವಾತಂತ್ರ್ಯಸಾಧನೆ ಮತ್ತು ನವಭಾರತದ ನಿರ್ಮಾಣ ಇವು ಅವರ ಹೂವು ಹಂಬಲಗಳಾಗಿದ್ದುವು. ಅವು ಹಣ್ಣಾಗಬೇಕಾದರೆ ಯುದ್ಧ ಅಥವಾ ಹೋರಾಟ ಅನಿವಾರ್ಯ ಎಂಬಂಶವೂ ಅವರ ತಲೆಯಲ್ಲಿತ್ತು. ಇಂಗ್ಲೆಂಡಿನಿಂದ ಭಾರತಕ್ಕೆ ಬರುವಾಗ ಸಮುದ್ರಯಾನದುದ್ದಕ್ಕೂ ಅದೇ ಗುಂಗಿನಲ್ಲಿದ್ದರು. ಭಾರತವನ್ನು ಬ್ರಿಟಿಷರಿಂದ ಬಿಡಿಸಿಕೊಳ್ಳಬೇಕಾದಲ್ಲಿ ಇರುವುದೊಂದೇ ಮಾರ್ಗ, ಅದು ಹೋರಾಟ ! ಮಂತ್ರಕ್ಕೆ ಮಾವಿನಕಾಯಿ ಬೀಳುವುದಿಲ್ಲ. ಕಲ್ಲು ಹೊಡೆದರೆ, ದೊಣ್ಣೆ ಬೀಸಿದರೆ ಮಾತ್ರ ಅದು ಉದುರುತ್ತದೆ. ಬೆಟ್ಟದ ಬಂಡೆಗಳಂತಿರುವ ಬ್ರಿಟಿಷರ ಹೃದಯಗಳನ್ನು ಡೈನಮೈಟ್ ಹಾಕಿಯೇ ಸಿಡಿಸಬೇಕು. ಅನಂತರ ಸ್ವತಂತ್ರ ಭಾರತದಲ್ಲಿ ಎಲ್ಲರೂ ಸ್ವಚ್ಛಂದವಾಗಿ ಉಸಿರಾಡಬಹುದು. ದಾಸ್ಯ ನಿರ್ಮೂಲನದಿಂದ ದೇಶದ ಬಡತನ ದೂರವಾಗುತ್ತೆ ; ಬಡತನ ದೂರವಾದರೆ ಜನರು ವಿಚಾರವಂತರಾಗುತ್ತಾರೆ, ತನ್ಮೂಲಕ ರಾಷ್ಟ್ರಪ್ರಗತಿ ಸಾಧಿತವಾಗುತ್ತದೆ. ನಮ್ಮ ದೇಶಕ್ಕಂಟಿರುವ ಪಿಡುಗುಗಳೆಂದರೆ ಅಸ್ಪೃಶ್ಯತೆ, ಅನಕ್ಷರತೆ ಮತ್ತು ದಾರಿದ್ರ್ಯ. ಸ್ವಾತಂತ್ರ್ಯ ಬಂದಮೇಲೆ ಇವು ಖಂಡಿತ ನಿರ್ಮೂಲವಾಗಿ, ದೇಶದಲ್ಲಿ 'ಸರ್ವೇ ಜನಾಃ ಸುಖೀನೋ ಭವಂತು' ಎಂಬ ಅಮೃತವಾಣಿ ಸ್ಥಿತವಾಗುತ್ತದೆ. ಆ ದಿವನ್ನು ಕಾಣಲು ನಾನು ನಾಡಿನ ನುಡಿಯನ್ನು ಮಿಡಿಯಬೇಕು. ನನ್ನ ಅಭಿಮತವನ್ನು ಬಂಧುಗಳ ಮುಂದಿಟ್ಟು ಕಾರ್ಯೋನ್ಮುಖನಾಗಬೇಕು. ಎಲ್ಲ ಶಕ್ತಿಗಳಿಗೂ ಮಿಗಿಲಾದ ಶಕ್ತಿ ಯುವಶಕ್ತಿ ! ಯುವಶಕ್ತಿಯ ಮುಂದೆ ಯಾವ ಅಣುಶಕ್ತಿಯೂ ನಿಲ್ಲದು. ಅದನ್ನು ಮೊದಲು ಸಂಘಟಿಸಬೇಕು. ಬ್ರಿಟಿಷರ ವಿರುದ್ಧ ಯುದ್ಧವನ್ನು ಘೋಷಿಸಿ ಜನಜಾಗೃತಿ ಉಂಟುಮಾಡಬೇಕು. ದೇಶವನ್ನು ಬಂಧನದಿಂದ ವಿಮುಕ್ತಗೊಳಿಸಬೇಕು.

ಇಂಥವೆನಿತೋ ಕನಸುಗಳನ್ನು ಹೊತ್ತುಕೊಂಡು ಭಾಸಮಹಾಕವಿಯ ಪ್ರತಿಮಾ ನಾಟಕದ ಭರತನಂತೆ ಸುಭಾಸ್ ಚಂದ್ರಬೋಸ್ ೧೯೨೧ ಜುಲೈ ೧೬ರಂದು ಮುಂಬಯಿ ಬಂದರಿನಲ್ಲಿ ಬಂದಿಳಿದರು. ಅಂದೇ ಅಪರಾಹ್ನ ಲ್ಯಾಬರ್‌ನಂ ರಸ್ತೆಯಲ್ಲಿದ್ದ ಮಣಿಭವನಕ್ಕೂ ಹೋದರು. ಅಲ್ಲಿ ಗಾಂಧೀಜಿ ಇದ್ದರು. ಅವರನ್ನು ಭೇಟಿ ಮಾಡಿದರು. ಅದು ಸುಭಾಸರ ಮೊತ್ತಮೊದಲ ಭಾರತೀಯ ನೇತಾರರ ಸೌಹಾರ್ದಯುತ ಭೇಟಿಯಾಗಿತ್ತು. ಭಾರತದ ನೆಲ ಮೆಟ್ಟಿದ ಕೂಡಲೆ ಮೊದಲು ಮಹಾತ್ಮರ ದರ್ಶನ ಪಡೆದೆನೆಂಬ ಹರ್ಷ ಸುಭಾಸರಿಗೆ, ಅದೇ ರೀತಿ, ಐ.ಸಿ.ಎಸ್. ತಿರಸ್ಕರಿಸಿ, ದೇಶವಿಮುಕ್ತಿಗಾಗಿ ತನ್ನನ್ನು ತಾನು ಅರ್ಪಿಸಿಕೊಂಡ ಮಹಾತ್ಯಾಗಿ ಯುವಕನನ್ನು ಕಂಡ ಹರ್ಷ ಗಾಂಧೀಜಿಯರಿಗೆ !

'ಬಾಪೂಜಿಯವರಿಗೆ ಪ್ರಣಾಮಗಳು'

'ಓಹ್ ! ಸುಭಾಸ್ ! ... ಬನ್ನಿ ಸುಭಾಸ್‌ಜೀ... ಏನಿದು ನಾನು ಕೇಳುತ್ತಿರುವ ಹೊಸ ಸಂಬೋಧನೆ !'

'ಹೊಸದೇನು ಬಂತು ಬಾಪೂಜಿ ? ನೀವು ರಾಷ್ಟ್ರಪಿತರು. ಇಡೀ ರಾಷ್ಟ್ರವೇ ನಿಮ್ಮನ್ನು ತಂದೆಯ ಸ್ಥಾನದಲ್ಲಿಟ್ಟು ಪೂಜಿಸುತ್ತಿದೆ.'

'ಅದು ಅವರ ಅಭಿಮಾನ'

'ಇದೂ ಅಷ್ಟೇ. ನಿಮ್ಮ ಬಗೆಗಿನ ನನ್ನ ಅಂತರಂಗದ ಅಭಿಮಾನಕ್ಕಿರುವ ಬಾಹ್ಯ ವಾಗ್ರೂಪ !'

'..................'

'ಅಂತೆಯೇ ತಮ್ಮಲ್ಲಿ ನನ್ನದೊಂದು ಕ್ಷಮಾಯಾಚನೆ !'

'ಏನಿಲ್ಲ ?'

'ಏನು ಉಡುಗೆ ವಿದೇಶಿ ; ಅದಕ್ಕಾಗಿ....'

'ಚಿಂತೆಯಿಲ್ಲ, ಇಂದಿನ ವಿದೇಶ ನಾಳೆ ಸ್ವದೇಶವಾದರೆ ಸಾಕು'

'ಆಗಿಯೇ ಆಗುತ್ತೆ ಬಾಪೂಜಿ !'

'ಸಂತೋಷ.... ನಿಮ್ಮ ಬಗೆಗೆ, ನೀವು ಇಂಗ್ಲೆಂಡಿನಲ್ಲಿದ್ದಾಗ ತಳೆದ ಧೋರಣೆ ಬಗೆಗೆ ನಾನು ಸಾಕಷ್ಟು ಕೇಳಿ ತಿಳಿದಿದ್ದೇನೆ. ನಿಮ್ಮಂತಹ ತೇಜಸ್ವೀ ತರುಣರ ಅಗತ್ಯತೆ ಇದೆ ಭಾರತಕ್ಕೆ. ಹೇಳಿ ಭಾರತ ಸ್ವಾತಂತ್ರ್ಯಕ್ಕೆ ಸಂಬಂಧಿಸಿದಂತೆ ನಿಮ್ಮ ಹಂಚಿಕೆಗಳೇನು ?'

'ನಾನು ಚಿಕ್ಕವನು ಬಾಪೂಜಿ, ತಮ್ಮಂತಹ ಹಿರಿಯರ ಪೂಜ್ಯರ ಮಾರ್ಗದರ್ಶನವನ್ನು ಅರಸಿ ಬಂದವನು.'

ನೋಡಿ ಸುಭಾಸ್, ನಾನು ಯುದ್ಧವಿರೋಧಿ, ಅಹಿಂಸಾವಾದಿ. ದ್ವೇಷದಿಂದ ಸಾಧಿಸಲಾಗದ್ದನ್ನು ಪ್ರೀತಿಯಿಂದ ಗೆಲ್ಲಬಹುದು ಎಂಬ ದೃಢವಿಶ್ವಾಸ ಉಳ್ಳವನು. ಇದನ್ನು ಹೋದ ವರ್ಷ ಡಿಸೆಂಬರ್‌ನಲ್ಲಿ ನಡೆದ ನಾಗಪುರ ಅಧಿವೇಶನದಲ್ಲಿ ಹೇಳಿದ್ದೇನೆ. ಶಾಂತಿ, ಪ್ರೀತಿ, ಸೌಹಾರ್ದಯುತ ಭಾವನೆಗಳಿಂದ ಸ್ವಾತಂತ್ರ್ಯವನ್ನು ಸಾಧಿಸೋಣ. ಅಂದರೆ ಕ್ರಿಯಾಶೂನ್ಯರಾಗಿ ಕೂರುವುದು ಎಂದರ್ಥವಲ್ಲ. ಕರ ನಿರಾಕರಣೆ, ಅಸಹಕಾರ, ಸರ್ಕಾರ ನೀಡುತ್ತಿರುವ ಪ್ರಶಸ್ತಿಗಳ ತಿರಸ್ಕಾರ, ಸದ್ಯದಲ್ಲಿ ಬ್ರಿಟಿಷರ ಕರುಣೆಯ ಕೂಸಾಗಿ ಬದುಕುತ್ತಿರುವ ವಿಧಾನಮಂಡಲಗಳ (ಲೆಜಿಸ್ಲೇಟಿವ್ ಕೌನ್ಸಿಲ್) ಬಹಿಷ್ಕಾರ ಮತ್ತು ಖಾದಿ ಪ್ರಚಾರ – ಈ ಐದೂ ಅಂಶಗಳು ಅನುಷ್ಠಾನಕ್ಕೆ ಬರಬೇಕೆಂಬುದು ನನ್ನಿಚ್ಛೆ. ಇವು ಕಾರ್ಯರೂಪಕ್ಕೆ ಬಂದಲ್ಲಿ ಕೇವಲ ಒಂದೇ ವರ್ಷದಲ್ಲಿ ಭಾರತ ಸ್ವಾತಂತ್ರ್ಯ ನಮ್ಮ ಕೈಗತ !'

'ಒಂದೇ ಒಂದು ವರ್ಷದಲ್ಲಿ.... ಭಾರತಕ್ಕೆ.... ಸ್ವಾತಂತ್ರ್ಯ.... !! ಬಾಪೂ, ತಪ್ಪು ತಿಳಿಯದಿದ್ದರೆ ಒಂದು ವಿನಂತಿ ; ನಿಜಕ್ಕೂ ತಮ್ಮದು ಭಾವನಾತ್ಮಕ ಘೋಷಣೆ !'

'ಹಾಗಾದರೆ ನಿಮ್ಮ ಚಿಂತನಾತ್ಮಕ ಸಲಹೆ ಏನು ?'

'ಹೋರಾಟ !'

'ಸೂರ್ಯ ಮುಳುಗದ ಸಾಮ್ರಾಜ್ಯ ಉಳ್ಳವರು ಬ್ರಿಟಿಷರು ಸುಭಾಸ್ ! ಭಾರತೀಯ ಬರಿಗೈಭಂಟರು ಅವರನ್ನು ಹೋರಾಟದ ಮೂಲಕ ಎದುರಿಸುವುದು ಸಾಧ್ಯವಿಲ್ಲ ; ಸಾಧುವೂ ಅಲ್ಲ ! ಬಾಂಬ್ ಬಂದೂಕ ಬಾಯ್ನೆಟ್ಗಳ ತುದಿಯಲ್ಲಿ ಸ್ವಾತಂತ್ರ್ಯ ಪ್ರಾಪ್ತಿ ಕಷ್ಟ. ಆದ್ದರಿಂದ ಆಗದವರನ್ನು ಒಲಿಸಿಕೊಂಡೇ ಗೆಲ್ಲಬೇಕು.'

'ಬಾಪೂಜಿ, ತಾವು ಗುಲಾಬಿ ದಳದಲ್ಲಿ ಕಲ್ಲುಬಂಡೆಯನ್ನು ಸೀಳಲು ಯತ್ನಿಸುತ್ತಿದ್ದೀರಿ. ಬ್ರಿಟಿಷರು ಪಾಷಂಡಿಗಳು, ಅವರಿಗೆ ನಿಮ್ಮ ಪ್ರೇಮದ ಅರ್ಥವಾಗಲಿ, ಅಹಿಂಸೆಯ ತಾತ್ಪರ್ಯವಾಗಲಿ ತಿಳಿದಿಲ್ಲ.'

'ತಿಳಿಸಲು ಯತ್ನಿಸೋಣ. ಅದು ನಮ್ಮ ಕರ್ತವ್ಯವಲ್ಲವೆ ?'

'ಅದು ನಿಮ್ಮಂಥವರಿಗೆ, ನಿಮ್ಮಂಥವರ ಜಾಯಮಾನಕ್ಕೆ ಒಗ್ಗಿದ್ದು. ನನ್ನಂಥವನಿಗಲ್ಲ !'

'ಹಾಗಾದರೆ ನಿಮ್ಮ ಅಭಿಪ್ರಾಯವೇನು ?'

'ಬಾಪೂ, 'ಧ್ರಾಂ ಧ್ರೀಂ ಧ್ರೂಂ' ಎಂದು ಮಂತ್ರ ಪಠಿಸಿದರೆ ಮನೆಗೆ ಬಂದಿರುವ ಮಾರಿ ಮಾಯವಾಗುವುದಿಲ್ಲ ! ಅಸ್ತ್ರಕ್ಕೆ ಪ್ರತಿಅಸ್ತ್ರ ಸಿದ್ಧವಾಗಲೇಬೇಕು. ತಾವು ಹೇಳಿದ ಕರ ನಿರಾಕರಣೆ, ಅಸಹಕಾರ ಮೊದಲಾದವು ಅವರ ದರ್ಪ ದೌರ್ಜನ್ಯಗಳ ಮುಂದೆ ನಿಲ್ಲಲಾರದಷ್ಟು ಬಲಹೀನವಾದವುಗಳು ಎಂಬುದು ನನ್ನ ಅನಿಸಿಕೆ. ಅಲ್ಲದೆ ಅವುಗಳನ್ನು ೧೯೦೫ರಲ್ಲೇ ಬಿಪಿನ ಚಂದ್ರಪಾಲರು ಆಚರಣೆಗೆ ತಂದಿದ್ದರು ; ತಂದು ಸೋತಿದ್ದರು. ಬ್ರಿಟಿಷ್ ನ್ಯಾಯಾಲಯವನ್ನು ತಾವು ಮಾಡುವುದಿಲ್ಲವೆಂದು ಘೋಷಿಸಿ, ಅದೇ ರೀತಿ ನಡೆದುಕೊಂಡಿದ್ದಾರೆ. ನೀವು ಹೇಳಿದವುಗಳಲ್ಲಿ ಹೊಸದೇನಿದೆ ಹೇಳಿ ? ಹೋಗಲಿ, ನಿಮ್ಮಿಚ್ಛೆಯಂತೆ ಮತ್ತೆ ನಾವು ಕಾರ್ಯತಃ ಪಾಲಿಸೋಣ. ಆದರೆ ವಿಧಾನಮಂಡಲಗಳ ಬಹಿಷ್ಕಾರ ಸರ್ವಥಾ ಒಪ್ಪಿತ ಅಲ್ಲ !'

'ಏಕೆ ?'

'ನೋಡಿ ಬಾಪೂಜಿ, ಭಾರತೀಯರು ಬ್ರಿಟಿಷರ ವಿರುದ್ಧ ಆತ್ಮವಿಶ್ವಾಸದಿಂದ ಹೋರಾಡಲಿರುವ ಒಂದೇ ಒಂದು ವೇದಿಕೆ ವಿಧಾನಮಂಡಲ. ನಮ್ಮ ಸುಖ–ದುಃಖಗಳು, ಸಂಘಟನೆ–ಪ್ರತಿಭಟನೆಗಳು ಮೊದಲಾದವುಗಳನ್ನು ಬಹಿರಂಗಪಡಿಸಿ ದಬ್ಬಾಳಿಕೆಯ ವಿರುದ್ಧ ದನಿಯೆತ್ತಲಿರುವ ಏಕೈಕ ವೇದಿಕೆ ಅದು. ಅದನ್ನು ಸಾಕಷ್ಟು ಸತ್ವಯುತವಾಗಿ ಬೆಳೆಸಿ, ಬಳಸಿಕೊಳ್ಳುವ ಮೂಲಕ ಬ್ರಿಟಿಷ್ ಸರ್ಕಾರದ ಮೇಲೆ ಒತ್ತಡ ತರಲು ನಮಗಿರುವ ಸಾಧನ. ಅಂತಹ ಹೋರಾಟ ಸಾಧನವನ್ನೇ ಬೇಡವೆಂದರೆ ಬ್ರಿಟಿಷರಿಗೆ ಬಿಸಿ ಮುಟ್ಟಿಸಲು ದಾರಿಯಾದರೂ ಎಲ್ಲಿದೆ ಹೇಳಿ ?'

'ನನ್ನ ಅಭಿಪ್ರಾಯ ತಿಳಿಸಿದೆ. ಮತ್ತೊಬ್ಬರನ್ನು ಮೆಚ್ಚಿಸಲೆಂದೇ ಮಾತನಾಡುವ ದಾಕ್ಷಿಣ್ಯಪರವ್ಯಕ್ತಿ ನಾನಲ್ಲ. ಅಂತೆಯೇ ಸಾಂದರ್ಭಿಕವಾಗಿ ಮಾತು ಬದಲಿಸುವ ಬುದ್ಧಿ ನನಗಿಲ್ಲ. ಡಾ। ಪರಾಂಜಪೆ, ಡಾ। ಕೇಶವ ಬಲಿರಾಮ ಹೆಗಡೆವಾರ್ ಮೊದಲಾದವರೂ ನನ್ನ ಅಭಿಪ್ರಾಯವನ್ನು ವಿರೋಧಿಸಿದರು. ಚಿತ್ತರಂಜನ್‌ದಾಸ್ ಮತ್ತು ಮೋತಿಲಾಲ್ ನೆಹರೂರವರೂ ವಿಧಾನಮಂಡಲಗಳನ್ನು ಬಹಿಷ್ಕರಿಸಬೇಕೆಂಬ ನನ್ನ ನಿಲುವನ್ನು ಒಪ್ಪಲಿಲ್ಲ !'

'ನಾನೂ ಅದೇ ಅಭಿಪ್ರಾಯವುಳ್ಳವನು !'

'ಹಾಗಿದ್ದಲ್ಲಿ ತಾವು ಚಿತ್ತರಂಜನ್‌ದಾಸ್ ಬಳಿ ಹೋಗಿ ಅವರಲ್ಲಿ ತಮಗೆ ಸಮಾಧಾನಕರ ಉತ್ತರ ಸಿಗಬಹುದು.'

'ಆಗಲಿ, ಬರುವೆ, ನಮಸ್ಕಾರ.'

* * *

ಬಾಪೂಜಿಯವರ ಮಾತುಗಳಿಂದ ಸುಭಾಸ್‌ಚಂದ್ರ ಬೋಸರ ಹಸಿವು ಹಿಂಗಲಿಲ್ಲ ; ದಾಹ ತಣಿಯಲಿಲ್ಲ. ಅವರು ನೇರವಾಗಿ ಕಲ್ಕತ್ತೆಗೆ ಹೋದರು ದೇಶಬಂಧು ಚಿತ್ತರಂಜನದಾಸರನ್ನು ಕಾಣಲು. ಆದರೆ ದಾಸ್ ಕಲ್ಕತ್ತೆಯಲ್ಲಿರಲಿಲ್ಲ, ಪ್ರವಾಸದಲ್ಲಿದ್ದರು. ಅವರ ಆಗಮನ ಕೇವಲ ಎರಡೇ ದಿನಗಳಿದ್ದುದರಿಂದ ಸುಭಾಸ್ ಅವರಿಗಾಗಿ ಕಾಯುತ್ತ ಕುಳಿತರು.

'ಕಥೆ ಹೇಳೊ ಕನ್ನಡಿ, ಒಂದು ಪ್ರೀತಿಯ ಮಾತು ಕೇಳಲಾ ?'

'ಕೇಳು'

'ನಮ್ಮ ಅಪ್ಪಾಜಿಯವರಿಗೆ ತಂದೆ, ಗುರು, ಮಾರ್ಗದರ್ಶಕ ಎಲ್ಲ ಆಗಿದ್ದ ದೇಶಬಂಧು ಚಿತ್ತರಂಜನದಾಸರ ಪೂರ್ವೇತಿಹಾಸ ತಿಳಿಯುವ ಆಸೆ ; ಸ್ವಲ್ಪ ತಿಳಿಸ್ತೀಯಾ ?'

'ಅಗತ್ಯವಾಗಿ ; ಕೇಳು.'

ಚಿತ್ತರಂಜನದಾಸ್ ಪದ್ಮಾನದಿಯ ದಡದಲ್ಲಿರುವ ವಿಕ್ರಮಪುರದಲ್ಲಿ (ಇದು ಈಗ ಬಾಂಗ್ಲಾದೇಶಕ್ಕೆ ಸೇರಿಹೋಗಿದೆ) ೧೮೭೦ ನವೆಂಬರ್ ೫ರಲ್ಲಿ ಜನಿಸಿದರು. ಇವರ ತಾತ ಕಾಶೀಶ್ವರದಾಸ್. ಇವರು ಬಾರಿಸಾಲ್‌ನಲ್ಲಿ ಸರ್ಕಾರಿ ಪ್ಲೀಡರ್ ಆಗಿದ್ದರು. ಇವರ ಮಕ್ಕಳು–ಕಾಲೀಮೋಹನ್, ದುರ್ಗಾಮೋಹನ್ ಮತ್ತು ಭುವನಮೋಹನ್ – ಈ ಮೂವರೂ ವಕೀಲರು. ಮೂವರೂ ಸಮಾಜದಲ್ಲಿ ಗಣ್ಯ ಗೌರವ ಹಾಗೂ ಪ್ರತಿಷ್ಠಿತ ವ್ಯಕ್ತಿಗಳಾಗಿದ್ದರು. ಕಾಲೀಮೋಹನ್ ನಿರ್ಭಿಡೆಯ ನಿರ್ದಾಕ್ಷಿಣ್ಯ ಪರವ್ಯಕ್ತಿ. ನ್ಯಾಯನಿಷ್ಠುರಿಯೂ ಅಹುದು. ಒಮ್ಮೆ ಅವರು ಆಂಗ್ಲ ನ್ಯಾಯಾಧೀಶ ಲೂಯಿ ಜ್ಯಾಕ್ಸನ್ ಎಂಬವನಿಗೆ ಕಾನೂನಿನ ಅಂತರಾರ್ಥವನ್ನು ವಿವರಿಸುತ್ತಾ 'Iam surprised that a district judge like you is not able to understand what even a student of law can understand' ಎಂದು ದಟ್ಟಿಸಿ ನುಡಿದರು. ಬ್ರಿಟಿಷರ ದಬ್ಬಾಳಿಕೆ ಇದ್ದ ಕಾಲದಲ್ಲಿ ಈ ರೀತಿ ಆಂಗ್ಲ ನ್ಯಾಯಾಧೀಶನಿಗೆ ಸ್ಪಷ್ಟೀಕರಣ ನೀಡುವ ಎದೆಗಾರಿಕೆ ಕಾಲೀಮೋಹನ ದಾಸರಿಗಲ್ಲದೆ ಬೇರಾರಿಗೂ ಇರಲು ಸಾಧ್ಯವಿರಲಿಲ್ಲ .

ದುರ್ಗಾಮೋಹನದಾಸ್ ಶ್ರೇಷ್ಠ ಸಮಾಜ ಸುಧಾರಕರಾಗಿದ್ದರು. ಬಾಲ್ಯವಿವಾಹ, ಘರದಾ ಪದ್ಧತಿಗಳ ವಿರುದ್ಧ ಹೋರಾಡಿದವರು. ಅವರ ತಮ್ಮ ಭುವನ ಮೋಹನ್ ; ಚಿತ್ತರಂಜನರ ತಂದೆ. ಸುಪ್ರಸಿದ್ಧ ವಕೀಲರು. ಅಣ್ಣ ಕಾಲೀ ಮೋಹನರಂತೆ ನಿಷ್ಠುರವಾದಿಗಳು. ಅವರು ಮತ್ತು ಪತ್ನಿ ನಿಸ್ತಾರಿಣೀ ದೇವಿಯವರ ಎಂಟು ಜನ ಮಕ್ಕಳಲ್ಲಿ ಚಿತ್ತರಂಜನ್ ಎರಡನೆಯವರು. ಚಿತ್ತರಂಜನ್ ಮಹಾಮೇಧಾವಿಯಿದ್ದರೂ ಐ.ಸಿ.ಎಸ್. ಪರೀಕ್ಷೆಯಲ್ಲಿ ಉತ್ತೀರ್ಣರಾಗಲಿಲ್ಲ. ಇಂಗ್ಲೆಂಡಿನಿಂದ ಬಂದವರೆ ೧೮೯೩ರಲ್ಲಿ ಕಲ್ಕತ್ತ ಉಚ್ಚನ್ಯಾಯಾಲಯದಲ್ಲಿ ವಕೀಲರಾಗಿ ತಮ್ಮ ಹೆಸರನ್ನು ನೋಂದಾಯಿಸಿಕೊಂಡರು.

ಹೀಗೆ ತಂದೆ ಮಗ ಇಬ್ಬರೂ ವಕೀಲಿ ವೃತ್ತಿಯಲ್ಲಿದ್ದರೂ ಸಾಲದ ಹೊರೆ ಹೊರಲಾರದೆ 'ಇನ್‌ಸಾಲ್‌ವೆಂಟ್' ಆಗಬೇಕಾಯಿತು. ಸಾಲ ಅವರಿಗಾಗಿ ಮಾಡಿದ್ದಲ್ಲ. ಯಾವನೊ ಒಬ್ಬ ವ್ಯಕ್ತಿ ಮಾಡಿದ್ದ ಮೂವತ್ತು ಸಾವಿರ ರೂಪಾಯಿ

ಸಾಲಕ್ಕೆ ಭುವನಮೋಹನದಾಸರು ಜಾಮೀನು ನಿಂತರು. ಸಾಲ ಪಡೆದವನು ತಲೆ ತಪ್ಪಿಸಿಕೊಂಡು ಓಡಿಹೋದ. ತಂದೆ ಮಗ ಇಬ್ಬರ ಮೇಲೂ ಸಮನ್ ಜಾರಿಯಾಯಿತು. ಇಬ್ಬರೂ ೧೮೯೬ ಜೂನ್ ತಿಂಗಳಲ್ಲಿ ನ್ಯಾಯಾಲಯದ ಘೋಷಣೆಯ ಮೂಲಕ 'ಇನ್‌ಸಾಲ್‌ವೆಂಟ್'ಗಳೆಂಬ ಬಿರುದು ಪಡೆಯಬೇಕಾಯಿತು ! ಆದರೂ ಚಿತ್ತರಂಜನದಾಸ್ ಸಿವಿಲ್ ಮತ್ತು ಕ್ರಿಮಿನಲ್ ಕೇಸುಗಳನ್ನು ಯಶಸ್ವಿಯಾಗಿ ನಡೆಸಿ, ವಿಜಯದೊಡನೆ ಹಣವನ್ನು ಗಳಿಸಿದರು. ಹಣ ಸಿಕ್ಕಾಗಲೆಲ್ಲ ಹಿಂದಿನ ಸಾಲ ಕೊಟ್ಟವರನ್ನು ಹುಡುಕಿಕೊಂಡು ಹೋಗಿ ಹಣ ಪಾವತಿ ಮಾಡಿ, 'ಪಾಪರ್' ಎಂಬ ಶಾಪದಿಂದ ಮುಕ್ತರಾದರು.

'ಇನ್‌ಸಾಲ್‌ವೆಂಟ್ ಎಂದು ಘೋಷಿಸಲ್ಪಟ್ಟಿದ್ದ ವ್ಯಕ್ತಿ ಇಷ್ಟು ದೀರ್ಘಕಾಲದ ಮೇಲೆ ತಮ್ಮ ಸಾಲದ ಜವಾಬ್ದಾರಿ ಹೊತ್ತು ತೀರಿಸಿರುವುದು ಬ್ರಿಟಿಷ್ ನ್ಯಾಯಾಲಯಗಳ ಇತಿಹಾಸದಲ್ಲಿಯೇ ಹಿಂದೆಂದೂ ನಡೆಯದ ಘಟನೆ' – ಎಂಬುದಾಗಿ ಅಂದಿನ ನ್ಯಾಯಮೂರ್ತಿ ಫ್ಲೆಚ್ ದಾಖಲೆ ಮಾಡಿದ್ದಾನೆ.

ಚಿತ್ತರಂಜನರು ಖಾಸಗೀ ಕೇಸುಗಳಿಗಿಂತ ಹೆಚ್ಚಾಗಿ ಸ್ವಾತಂತ್ರ್ಯ ಹೋರಾಟಗಾರರ ಮೊಕದ್ದಮೆಗಳನ್ನು ಸ್ವೀಕರಿಸತೊಡಗಿದರು. ಅವುಗಳಿಂದ ಅವರಿಗೆ ಫೀ ಬರುತ್ತಿರಲಿಲ್ಲ. ಆದರೂ ರಾಷ್ಟ್ರಕ್ಕಾಗಿ, ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ದುಡಿದವರಿಗೆ ಸಲ್ಲಿಸುವ ಕಿರುಸೇವೆ ತಮ್ಮದು ಎಂದು ಭಾವಿಸಿದರು. ಆ ಮೇರೆಗೆ ರಾಜದ್ರೋಹದ ಆಪಾದನೆಗೆ ಗುರಿಯಾಗಿದ್ದ ಬಿಪಿನ ಚಂದ್ರಪಾಲರ ಪರವಾಗಿ, ಅಲಿಪುರ ಬಾಂಬ್ ಪಿತೂರಿಯ ಪ್ರಮುಖ ಆಪಾದಿತರೆಂದು ಘೋಷಿಸಲಾಗಿದ್ದ ಅರವಿಂದ ಘೋಷರ ಪರವಾಗಿ, ಢಾಕಾ ಪಿತೂರಿಗೆ (೧೯೧೦) ಕಾರಣರೆಂದು ಆಪಾದಿಸಲ್ಪಟ್ಟ ಅನುಶೀಲನ ಸಮಿತಿಯ ಪುಲಿನ ಬಿಹಾರಿದಾಸ್ ಮತ್ತಿತರ ಆಪಾದಿತರ ಪರವಾಗಿ ನ್ಯಾಯಾಲಯದಲ್ಲಿ ವಾದಿಸಿ ಗೆದ್ದರು. ಮತ್ತೆ ವೈಸ್‌ರಾಯ್ ಹಾರ್ಡಿಂಗ್ ಕೊಲೆ ಪ್ರಯತ್ನದ 'ದೆಹಲಿ ಪಿತೂರಿ ಮೊಕದ್ದಮೆ' (೧೯೧೨) 'ಆಲಿಪುರ ಟ್ರಂಕ್ ಮೊಕದ್ದಮೆ' (೧೯೧೮) ಮೊದಲಾದವುಗಳಲ್ಲಿ ವಕಾಲತ್ತು ನಡೆಸಿದರು. ಇವುಗಳಲ್ಲಿ ದಾಸ್‌ರವರಿಗೆ ರಾಷ್ಟ್ರವ್ಯಾಪಿ ಕೀರ್ತಿಯನ್ನು ತಂದುಕೊಟ್ಟದ್ದು ಆಲಿಪುರ ಬಾಂಬ್ ಪಿತೂರಿ ಮೊಕದ್ದಮೆ. ಅದರದೊಂದು ದೊಡ್ಡ ಇತಿಹಾಸ !'

'ಕಲ್ಕತ್ತಾ ಕ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟ್ ಆಗಿದ್ದ ಕಿಂಗ್ಸ್‌ಫರ್ಡ್ ಮಹಾಪಾಷಂಡ ಹೃದಯಿ. ಸಣ್ಣಪುಟ್ಟ ಅಪರಾಧಗಳಿಗೂ ಘೋರ ಶಿಕ್ಷೆ ವಿಧಿಸುತ್ತಿದ್ದ. ಉದಾಹರಣೆಗೆ : ಕೇವಲ ಹದಿನೈದು ವರ್ಷದ ಬಾಲಕನನ್ನು ಅಪರಾಧಿ ಎಂದು ತೀರ್ಮಾನಿಸಿ ಛಡಿಯೇಟಿನ ಶಿಕ್ಷೆ ವಿಧಿಸಿದ್ದ. ಈ ಹೃದಯಹೀನ ವ್ಯಕ್ತಿಯ ವರ್ತನೆಯ ವಿರುದ್ಧ ಅಂದಿನ ಬ್ರಿಟಿಷ್ ಸರ್ಕಾರದ ಗೃಹಮಂತ್ರಿ ಲಾರ್ಡ್ ಮಾರ್ಲೆ ಮತ್ತು ವೈಸ್‌ರಾಯ್ ಲಾರ್ಡ್ ಮಿಂಟೋರವರೆಗೂ ದೂರುಗಳು ಹೋಗಿದ್ದವು. ಆದರೆ ಪ್ರಯತ್ನಗಳು ಫಲಕಾರಿಯಾಗದಿರಲು, ಕ್ರಾಂತಿಕಾರಿಗಳು ಕಿಂಗ್ಸ್‌ಫರ್ಡ್‌ನ ಕೊಲೆಗೆ ಪ್ರಯತ್ನಿಸಿ ವಿಫಲರಾದರು. ಎರಡನೆಯ ಬಾರಿ ಖುದಿರಾಮ್ ಬೋಸ್ ಮತ್ತು ಪ್ರಫುಲ್ಲ ಚಾಕಿ ಎಂಬುವರು ಕೈಬಾಂಬ್ ಎಸೆದು ಅವರೂ ವಿಫಲರಾದರು. ಈ ಪಿತೂರಿಗಳ ಹಿನ್ನೆಲೆಯಲ್ಲಿ ಅರವಿಂದರ ಕೈವಾಡವಿದೆ ಎಂದು ತಪ್ಪು ಭಾವಿಸಿ ಸರ್ಕಾರ ಅವರನ್ನು ಬಂಧಿಸಿತು. ಅನೇಕ ಅಂಶಗಳಿಂದ ಕೂಡಿದ ಒಂದು ಛಾರ್ಜ್‌ಷೀಟ್ ಸಿದ್ಧವಾಯಿತು. ಮುಖ್ಯವಾಗಿ –

೧. ವಂಗ ವಿಭಜನೆಯಾದ ನಂತರ (೧೯೦೫) ಅರವಿಂದರು ತಮ್ಮ 'ಜುಗಾಂತರ' ವಾರಪತ್ರಿಕೆಯ ಮೂಲಕ ರಾಜದ್ರೋಹವನ್ನು ವ್ಯಾಪಕವಾಗಿ ಹರಡುತ್ತಿದ್ದಾರೆ ;
೨. ಸರ್ಕಾರಿ ಅಧಿಕಾರಿಗಳನ್ನು ತುಂಬಾ ಅಲಕ್ಷಿಸುತ್ತಾರೆ ;
೩. ಬಾಂಬ್ ತಯಾರಿಸುತ್ತಾರೆ ;
೪. ಲೆಫ್ಟಿನೆಂಟ್ ಗವರ್ನರ್ ಆ್ಯಂಡ್ರೂ ಫ್ರೇಸರ್ ಪ್ರಯಾಣಿಸುತ್ತಿದ್ದ ರೈಲನ್ನು ಸ್ಫೋಟಿಸಲು ಪ್ರಯತ್ನಿಸಿದ್ದಾರೆ ;
೫. ಚಂದ್ರಾನಾಗೋರಿನ ಮೇಯರ್‌ನ ಮನೆ ಮೇಲೆ ಬಾಂಬ್ ಎಸೆದಿದ್ದಾರೆ ;
೬. ಕಿಂಗ್ಸ್‌ಫರ್ಡ್‌ನನ್ನು ಕೊಲ್ಲಲು ಖುದಿರಾಮ್ ಬೋಸ್ ಮತ್ತು ಪ್ರಫುಲ್ಲ ಚಾಕಿಯವರನ್ನು ಕಳುಹಿಸಿದ್ದಾರೆ ; ಇತ್ಯಾದಿ.

ಅರವಿಂದರ ನ್ಯಾಯಾಲಯ ವಿಚಾರಣೆ ೧೯೦೮ ಅಕ್ಟೋಬರ್ ೧೯ರಂದು ಆರಂಭವಾಯಿತು. ಈ ಐತಿಹಾಸಿಕ ಮೊಕದ್ದಮೆ ೧೨೬ ದಿವಸಗಳಷ್ಟು ಕಾಲ ನಡೆಯಿತು. ವಿಚಾರಣೆ ಮುಗಿದ ಮೇಲೆ ಚಿತ್ತರಂಜನದಾಸರು ತಮ್ಮ ಸಮಾರೋಪವಾದದ ಮಂಡನೆಗೆ ಒಂಬತ್ತು ದಿನಗಳನ್ನು ತೆಗೆದುಕೊಂಡರು ! ಅವರ ವಾದದಲ್ಲಿ ಮಿಂಚಿನ ಹೊಳಪಿತ್ತು, ಮಸೆದ ಬಾಣದ ಮೊನಚಿತ್ತು ! ಆಪಾದಿತ ಅರವಿಂದರ ಬಗೆಗೆ ದಾಸ್ ತಮ್ಮ ಮಂಡನೆಯಲ್ಲಿ ಆಡಿದ ಮಾತುಗಳು ಕಾನೂನಿನ ಇತಿಹಾಸದಲ್ಲೇ ಒಂದು ವಿನೂತನ ದಾಖಲೆಯನ್ನು ಸ್ಥಾಪಿಸಿವೆ. ಅವರು ಹೇಳಿದರು :

'ಯಾವ ವ್ಯಕ್ತಿಯನ್ನು ಆಪಾದಿತನೆಂದು ಹೇಳಿ ವಿಚಾರಣೆಗೆ ಗುರಿ ಮಾಡಲಾಗಿದೆಯೋ, ಅವರು ಈಗ ನಿಂತಿರುವುದು ಈ ನ್ಯಾಯಾಲಯದ ಮುಂದಲ್ಲ, ಇತಿಹಾಸದ ಉಚ್ಚ ನ್ಯಾಯಾಲಯದ ಮುಂದೆ ಎಂಬುದನ್ನು ನಿಮ್ಮ ಗಮನಕ್ಕೆ ತರುತ್ತಿದ್ದೇನೆ. ನನ್ನ ವಿನಂತಿ ಇಷ್ಟೆ : ಇಂದಿನ ಈ ವಾದಗಳೆಲ್ಲ ಶಮನಗೊಂಡ ಮೇಲೂ ಈ ಅಶಾಂತಿ

ಆಂದೋಲನಗಳು ಮುಗಿದ ಎಷ್ಟೋ ವರ್ಷಗಳ ನಂತರವೂ ಈ ಆಪಾದಿತರು ನಿಧನರಾದ ಮೇಲೂ ಇವರನ್ನು ರಾಷ್ಟ್ರಪ್ರೇಮಿ ಕವಿಪುಂಗವರೆಂದೂ ರಾಷ್ಟ್ರೀಯತೆಯ ಪ್ರವಾದಿ ಎಂದೂ ಅಸಿಮ ಮಾನವ ಪ್ರೇಮಿ ಎಂದೂ ಈ ಜಗತ್ತು ತುಂಬು ಗೌರವದಿಂದ ನೋಡದಿರದು. ಇವರು ಗತಿಸಿದ ನಂತರವೂ ಇವರಾಡಿದ ಮಾತುಗಳು ಭರತಖಂಡದಲ್ಲಷ್ಟೇ ಅಲ್ಲ, ಸಾಗರಗಳಾಚೆಗಿನ ದೂರದೇಶಗಳಲ್ಲೂ ಮತೆಮತ್ತೆ ಪ್ರತಿಧ್ವನಿಸುತ್ತಾ ಮೊಳಗುತ್ತಿರುತ್ತವೆ. ಆದ್ದರಿಂದಲೇ ನಾನು ಹೇಳಿದೆ – ಇವರು ಈ ನ್ಯಾಯಾಲಯದ ಮುಂದಷ್ಟೇ ನಿಂತಿಲ್ಲ. ಇತಿಹಾಸದ ಉಚ್ಚ ನ್ಯಾಯಾಲಯದ ಮುಂದೆ ಎಂದು ! *

ವಾದ ಪ್ರತಿಭೆಗೆ ಹೆಸರಾಗಿದ್ದ ಚಿತ್ತರಂಜನದಾಸರ ವಾಗ್ವೈಖರಿ, ಸತ್ಯ ಸಮರ್ಥನೆಯ ಪ್ರಾಂಜಲ ಶೈಲಿ ನ್ಯಾಯಾಧೀಶ ಬೀಚ್ ಕ್ರಾಫ್ಟ್‌ನ ತಲೆದೂಗಿಸಿದವು. ಆತ ಸತ್ಯವನ್ನು ಎತ್ತಿ ಹಿಡಿದು ೧೯೦೯ ಮೇ ೬ರಂದು ಅರವಿಂದರು ನಿರಪರಾಧಿ ಎಂದು ಘೋಷಿಸಿ ತೀರ್ಪು ನೀಡಿದ. ಆದರೆ ಸಹ ಆಪಾದಿತರಾಗಿದ್ದ ಅರವಿಂದರ ಸೋದರ ಬಾರೀಂದ್ರ ಕುಮಾರ ಘೋಷ್ ಮತ್ತು ಉಲ್ಲಾಸಕರ ದತ್ತ ಎಂಬುವರಿಗೆ ಮರಣದಂಡನೆ ವಿಧಿಸಿದ. ಇವರ ಪರವಾಗಿ ದಾಸ್ ಮತ್ತೊಮ್ಮೆ ನಲವತ್ತೆಂಟು ದಿನಗಳವರೆಗೆ ಹೋರಾಡಿ ಮರಣದಂಡನೆಯನ್ನು ತಪ್ಪಿಸಿದರು. ಆದರೆ ಅವರಿಬ್ಬರಿಗೂ ನ್ಯಾಯಾಲಯ ಗಡಿಪಾರು ಶಿಕ್ಷೆ ವಿಧಿಸಿತು.

ಪ್ರತಿಕೂಲ ಪರಿಸರದ ನಡುವೆಯೂ ತಮ್ಮತನವನ್ನು ಮೆರೆದು ವಿಜಯಿಗಳಾದ ಚಿತ್ತರಂಜನದಾಸರು ಭಾರತೀಯ ಸ್ವಾತಂತ್ರ್ಯ ಪ್ರೇಮಿಗಳ ಬಾಯಲ್ಲಿ 'ದೇಶಬಂಧು' ಆದರು. ಅವರ ಕಣ್ಣು ಮನ ಭಾವಗಳಲ್ಲಿ ದೈವವೇ ತಾವಾದರು.

---

* My appeal to you, therefore, is that a man like this, who is being charged with the offence with which he has been charged, stands not only before the Bar of this court, but before the Bar of the High Court of History. My appeal to you is this ; that long after this controversy will be hushed in silence, long after this turmoil, this agitation will have ceased, long after he is dead and gone, he will be looked upon as the poet of patriotism, as the prophet of nationalism and lover of humanity. Long after he is dead and gone, his words wlii be enhoed and re-echoed not only in India but across distant seas and lands. Therefore I say that the man is not only standing before the Bar of this court, but before the Bar of the High court of History.

-- ಶ್ರೀಎಸ್. ಆರ್. ಆರ್.ರವರ 'ದೇಶಬಂಧು ಚಿತ್ತರಂಜನದಾಸ್' ಲೇಖನ, ಉತ್ಥಾನ, ಜುಲೈ ೧೯೭೮, ಪುಟ ೫೨.

---

ಹೀಗೆ ಸ್ವಾತಂತ್ರ್ಯ ಹೋರಾಟಗಾರರ ಮೊಕದ್ದಮೆಗಳಲ್ಲಿ ಹೆಚ್ಚಾಗಿ ತಮ್ಮನ್ನು ತಾವು ತೊಡಗಿಸಿಕೊಂಡ ದೇಶಬಂಧು ದಾಸ್ ರಾಜಕೀಯ ವಲಯದಿಂದ ದೂರವಾದರು. ೧೯೦೭ರಲ್ಲಿ ಸೂರತ್ ಅಧಿವೇಶನದಲ್ಲಿ ಕಾಂಗ್ರೆಸ್‌ನಲ್ಲಿ ಬಿರುಕುಂಟಾಗಿ, ಮಂದಗಾಮಿಗಳದ್ದೇ ಮೇಲುಗೈ ಆದದ್ದೂ ಇದಕ್ಕೆ ಕಾರಣವಾಗಿತ್ತು. ಆದರೆ ಒಂದು ದಶಕದ ನಂತರವಾದರೂ ಇವರನ್ನು ಕಾಂಗ್ರೆಸ್‌ನೊಡನೆ ಮತ್ತೆ ಬೆಸೆಯಲು ಯತ್ನಿಸಿ ಸುರೇಂದ್ರನಾಥ್ ಬ್ಯಾನರ್ಜಿಯವರು ಯಶಸ್ವಿಯಾದರು. ದಾಸ್ ಮತ್ತೆ ಕಾಂಗ್ರೆಸ್‌ನಲ್ಲಿ ಸಕ್ರಿಯ ಪಾತ್ರ ವಹಿಸಿ, ೧೯೧೭ ಡಿಸೆಂಬರ್‌ನಲ್ಲಿ ಕಲ್ಕತ್ತೆಯಲ್ಲಿ ನಡೆದ ಅಧಿವೇಶನಕ್ಕೆ ಶ್ರೀಮತಿ ಆ್ಯನಿಬೆಸೆಂಟರನ್ನು ಅಧ್ಯಕ್ಷರನ್ನಾಗಿಸಲು ಕಾರಣವಾದರು. ಅಂತೆಯೇ ಆ್ಯನಿಬೆಸೆಂಟರ ಹೋಮ್‌ರೂಲ್ ಲೀಗ್ ಸೇರಿ ಲೋಕಮಾನ್ಯ ಬಾಲಗಂಗಾಧರ ತಿಲಕರೊಡನೆ ಚಳವಳಿಗೆ ಚಾಲನೆ ಕೊಟ್ಟರು. ಇವರ ಆಗಮನದಿಂದಾಗಿ ಸ್ವರಾಜ್ಯಾಂದೋಲನದಲ್ಲಿ ಚೇತರಿಕೆ ಉಂಟಾಯಿತು.

'ಕತೆಗಾರ ಕನ್ನಡಿ....ಒಂದು ಪ್ರಶ್ನೆ ?'

'ಕೇಳು'

'ಚಿತ್ತರಂಜನದಾಸ್ ಮೋಹನದಾಸ್ ಗಾಂಧಿಯವರಷ್ಟು ದೊಡ್ಡವರೆ ?'

ಹೋಲಿಕೆ ಸಾಧುವಲ್ಲ. ಆದರೂ ಮಹಾಪುರುಷರ ಹೋಲಿಕೆ ಸಮುದ್ರವನ್ನು ಸಮುದ್ರದೊಡನೆ ಹೋಲಿಸಿದಂತೆ ! ಇಬ್ಬರೂ ದೊಡ್ಡವರು. ಅವರು ಮಹಾತ್ಮ, ಇವರು ದೇಶಬಂಧು !'

'ಅವರಿಬ್ಬರಲ್ಲೂ ಪರಸ್ಪರ ಭಿನ್ನಾಭಿಪ್ರಾಯಗಳಿದ್ದುವೆಂದು ಕೇಳಿದ್ದೆ !'

'ಸತ್ಯ, ಆದರೆ ಅಭಿಪ್ರಾಯ ಭೇದ ವಿದ್ವೇಷಹೇತುವಲ್ಲ. ಅದು ಅಭಿಪ್ರಾಯ ಸ್ಪಷ್ಟತೆಯ ಸಾಧನೆ. ಒಂದು ಉದಾಹರಣೆ : ೧೯೧೯ ಡಿಸೆಂಬರ್ ೨೪ರಲ್ಲಿ ಮಾಂಟೆಗು–ಚೆಮ್ಸ್‌ಫರ್ಡ್ಸ್ ಸುಧಾರಣೆಗಳ ಘೋಷಣೆ ಆಯಿತು. ಅದನ್ನು ಸ್ವಾಗತಿಸಿ, ಸರ್ಕಾರಕ್ಕೆ ವಂದನೆ ಸಲ್ಲಿಸುವ ಗೊತ್ತುವಳಿಯನ್ನು ಅಮೃತಸರ ಕಾಂಗ್ರೆಸ್ ಅಧಿವೇಶನದಲ್ಲಿ ಮಂಡಿಸಲಾಯಿತು. ಗಾಂಧೀಜಿ ಆ ನಿಲುವಳಿಯ ಮುಖ್ಯಚಾಲಕರಾಗಿದ್ದರು. ಆದರೆ ದಾಸ್ ತೀವ್ರ ವಿರೋಧಿಸಿದರು. ತಿಲಕ್, ಬಿಪಿನ್ ಚಂದ್ರಪಾಲರು ದಾಸರನ್ನು ಅನುಮೋದಿಸಿದರು. ಮೊದಲು ತಮ್ಮ ಅಭಿಮತವನ್ನು ಸಮರ್ಥಿಸಿಕೊಂಡರೂ, ಅದು ಭ್ರಮಾಜನ್ಯವಾಗಿತ್ತೆಂದು ಗಾಂಧೀಜಿಯವರೇ ತಿಳಿದುಕೊಂಡು ಸಮಾಧಾನಚಿತ್ತರಾದರು.

ಇಂಥದೇ ಅಭಿಪ್ರಾಯಭೇದ ವಿಧಾನ ಮಂಡಲ (Legislative Council) ಬಹಿಷ್ಕಾರದ ಬಗೆಗೂ ಇತ್ತು. ನಿಮ್ಮ ತಂದೆ ಸುಭಾಸ್, ಗಾಂಧೀಜಿಯವರ ಸಂಗಡ ಸಂಭಾಷಿಸುವಾಗ ಹೇಗೆ ಒಪ್ಪಲಿಲ್ಲವೊ ಹಾಗೆ ಆ ಹಿಂದೆಯೇ ಅಂದರೆ ಲಾಲಾಜಿ

(ಲಾಲಾ ಲಜಪತರಾಯ್)ಅವರ ಅಧ್ಯಕ್ಷತೆಯಲ್ಲಿ ಕರೆಯಲಾದ ಕಾಂಗ್ರೆಸ್ ವಿಶೇಷಾಧಿವೇಶನದಲ್ಲೂ ಚಿತ್ತರಂಜನದಾಸರು ವಿರೋಧಿಸಿದ್ದರು. ಕೇಳು -

'ವಿಧಾನ ಮಂಡಲ ಮೊದಲಾದವು ಬ್ರಿಟಿಷರು ನಮಗೆ ಕೊಟ್ಟ ಉಡುಗೊರೆಗಳೇನಲ್ಲ. ಸಣ್ಣಪುಟ್ಟ ಸುಧಾರಣೆಯನ್ನೂ ನಾವು ಅವರಿಂದ ಕಷ್ಟಪಟ್ಟು ಕಿತ್ತುಕೊಳ್ಳಬೇಕಾಗಿದೆ. ಆದ್ದರಿಂದ ವಿಧಾನಮಂಡಲಗಳು ನಮ್ಮ ಸ್ವರಾಜ್ಯಗಳಿಕೆಯ ಸಾಧನ ಎಂದು ಭಾವಿಸಿ ದುಡಿಸಿಕೊಳ್ಳಬೇಕು. ಕಳೆದ ಮೂವತ್ತೈದು ವರ್ಷಗಳಿಂದಲೂ ಹೋರಾಡಿ ಗಳಿಸಿಕೊಂಡಿರುವ ಸವಲತ್ತುಗಳನ್ನು ಈಗ ಕೈಬಿಡುವುದರಲ್ಲಿ ಅರ್ಥವಿಲ್ಲ.

ದಾಸರ ಈ ಅಭಿಪ್ರಾಯ ಗಾಂಧೀಜಿಯವರಿಗೆ, ಅವರ ಅನುಯಾಯಿಗಳಿಗೆ ಒಪ್ಪಿಗೆಯಾಗಲಿಲ್ಲ. ಆದರೆ ಸರ್ಕಾರದೊಂದಿಗಿನ ಅಸಹಕಾರ ನಿರ್ಣಯ ಅಂಗೀಕೃತವಾಯಿತು. ಗಾಂಧೀಜಿ ಮತ್ತು ಚಿತ್ತರಂಜನ್ ಈ ವಿಷಯದಲ್ಲಿ ಒಂದಾಗಿಯೇ ದುಡಿದರು. ಸಮ್ಮೇಳನದ ನಿರ್ಣಯದಂತೆ ವಕೀಲರುಗಳು ನ್ಯಾಯಾಲಯಗಳ ಪ್ರವೇಶ ಬಹಿಷ್ಕರಿಸಿದರು, ವಿದ್ಯಾರ್ಥಿಗಳು ಶಾಲಾಕಾಲೇಜುಗಳಿಗೆ ಹೋಗುವುದನ್ನು ಬಿಟ್ಟರು. ಎಲ್ಲರೂ ಅಸಹಕಾರ ಆಂದೋಲನದಲ್ಲಿ ಧುಮುಕಿದರು. ಹಾಗೆ ಮೊದಲು ನ್ಯಾಯಾಲಯ ಪ್ರವೇಶವನ್ನು ಬಹಿಷ್ಕರಿಸಿ ಹೊರಬಂದವರು ಚಿತ್ತರಂಜನದಾಸರು. ಅವರ ಮೇಲ್ಪಂಕ್ತಿಯನ್ನನುಸರಿಸಿ ಬಂದವರು ಪ್ರೊ. ಧೀರೇಶ ಚಂದ್ರ ಚಕ್ರವರ್ತಿ, ಡಾ. ಪಿ.ಸಿ.ಘೋಷ್ ಮೊದಲಾದವರು ; ಜೊತೆಗೆ ಸುಮಾರು ಮೂವತ್ತಾರು ಸಾವಿರ ವಿದ್ಯಾರ್ಥಿ ವಿದ್ಯಾರ್ಥಿನಿಯರ ಪ್ರಚಂಡ ತಂಡ. ಅಸಹಕಾರ ಆಂದೋಲನದ ಗೊತ್ತುವಳಿ ಮಂಡಿತವಾದದ್ದು ೧೯೨೧ ಮಾರ್ಚ್‌ನಲ್ಲಿ ಬಿಪಿನ ಚಂದ್ರಪಾಲರ ಅಧ್ಯಕ್ಷತೆಯಲ್ಲಿ. ಬಾರಿಸಾಲ್‌ನಲ್ಲಿ ನಡೆದ ಕಾಂಗ್ರೆಸ್ಸಿನ ಪ್ರಾದೇಶಿಕ ಸಮ್ಮೇಳನದಲ್ಲಿ ಚಿತ್ತರಂಜನರಿತ್ತ ಅಂದಿನ ಭಾಷಣ ಅಮೋಘ, ಅವಿಸ್ಮರಣೀಯ. ಕೇಳು :

ಇಂದಿನದು ನಮ್ಮ ಸಾವು ಬದುಕಿನ ಸಂಗ್ರಾಮ. ಇದರಲ್ಲಿ ನಾವು ಸೋತರೆ ನಮ್ಮ ರಾಷ್ಟ್ರದ ಸರ್ವನಾಶ. ಈಗ ನಮಗಿರುವುದು ಅಹಿಂಸಾತ್ಮಕ ಹೋರಾಟದ ಅಸ್ತ್ರ ಮಾತ್ರ. ಈ ದಿಸೆಯಲ್ಲಿ ನಾವು ಸ್ವರಾಜ್ಯ ಗಳಿಸಿದಲ್ಲಿ ಭಾರತದ ಹೆಸರು ಇತಿಹಾಸದಲ್ಲಿ ಚಿರಸ್ಥಾಯಿಯಾಗುತ್ತದೆ. ಪಾಶ್ಚಾತ್ಯ ಸಾಂಸ್ಕೃತಿಕ ದಾಳಿಯ ವಿರುದ್ಧ ನಮ್ಮ ದಿಟ್ಟ ನಿಲುವನ್ನು ತೋರಿ, ಕಳೆದುಕೊಂಡಿರುವ ನಮ್ಮತನವನ್ನು ನಾವು ಮತ್ತೆ ಗಳಿಸಿಕೊಳ್ಳಬೇಕು. ಆ ಗುರಿಯ ಸಾಧನೆಗಾಗಿ ನಮ್ಮೆಲ್ಲ ಶಕ್ತಿಯನ್ನು ಅದರಲ್ಲಿ ತೊಡಗಿಸಬೇಕು. ಹಾಗೆ ಮಾಡದಿದ್ದಲ್ಲಿ ನಾವು ದೇವರ ಮುಂದೆ ಅಪರಾಧಿಗಳಾಗುತ್ತೇವೆ. ಸ್ವರಾಜ್ಯ ಸಾಧನೆಗಾಗಿ ಸರ್ವಪ್ರಯತ್ನವನ್ನೂ ಮಾಡಿದೆವಾದರೆ ದೇವರು ಖಂಡಿತ ನಮ್ಮ ಕೊರಳಿಗೆ ಜಯಮಾಲೆ ಹಾಕುತ್ತಾನೆ.*

* "The present is a fight for our very life. If we fail in our attempt . We shall die as a nation. Non-violent war is our only weapon and if we win swaraj through it, India's name would be come an undying heritage to posteriry. We must make a bold stand against western cultural conquest and recover our old self. We must do all that lies in power to achieve these ends . If we do not, we shall be guilty before God, and if we do everything possible to win Swaraj, God will crown our efforts with victory" – Dos. hg' 56.m

ಚಿತ್ತರಂಜನದಾಸರ ಇಂತಹ ಮಾತುಗಳು ಗಾಂಧೀಜಿಯವರಿಗೆ ತುಂಬಾ ಹಿಡಿಸಿದವು. ಅಸಹಕಾರ ಚಳವಳಿಯಲ್ಲಿ ತಾವೂ ಭಾಗಿಗಳಾಗಿ, ಚಿತ್ತರಂಜನರನ್ನು ರಂಜಿಸಿದರು ಗಾಂಧೀಜಿ.

ಹೀಗೆ ಅವರಿಬ್ಬರಲ್ಲಿ ಅನ್ಯೋನ್ಯತೆ ಇತ್ತು. ವೈಯಕ್ತಿಕವಾಗಿ ಪರಸ್ಪರ ಗೌರವಾದರಗಳಿದ್ದವು. ಒಂದು ನಿದರ್ಶನ. ೧೯೨೫ ಮೇ ಮೊದಲ ವಾರದಲ್ಲಿ ಫರೀದ್‌ಪುರದಲ್ಲಿ ನಡೆದ ಬಂಗಾಳ ಪ್ರಾಂತೀಯ ಅಧಿವೇಶನದ ನಂತರ ಅಂದರೆ ಅದೇ ಮೇ ೧೧ ರಂದು ಚಿತ್ತರಂಜನದಾಸರು ತಮ್ಮ ದೇಹಾರೋಗ್ಯ ತುಂಬಾ ಕೆಟ್ಟದ್ದರಿಂದ ಹವಾ ಬದಲಾವಣೆಗಾಗಿ ತಮ್ಮ ಪತ್ನಿ ಬಸಂತೀದೇವಿಯವರೊಂದಿಗೆ ಡಾರ್ಜಿಲಿಂಗಿಗೆ ಪ್ರಯಾಣ ಬೆಳೆಸಿದರು. ಅಲ್ಲಿಯೂ ಆರೋಗ್ಯ ಸುಧಾರಿಸದಿದ್ದಾಗ ಗಾಂಧೀಜಿಯವರನ್ನು ನೋಡಲು ಆಸೆಯಾಯಿತು. ಅವರನ್ನು ಡಾರ್ಜಿಲಿಂಗಿಗೆ ಕರೆಸಿಕೊಂಡರು. ಇಬ್ಬರೂ ಆತ್ಮೀಯವಾಗಿ ಮಾತನಾಡಿದರು. ದೇಶ ಭವಿಷ್ಯದ ಬಗೆಗೆ ಚಿಂತನೆ ನಡೆಸಿದರು. ಒಬ್ಬರ ಸಲಹೆ ಇನ್ನೊಬ್ಬರಿಗೆ ಒಪ್ಪಿಗೆಯಾಯಿತು. ಎರಡು ದಿನ ತಂಗಿದ್ದು ಗಾಂಧೀಜಿ ಹಿಂತಿರುಗುದರು.

ದೇಶಬಂಧು ಚಿತ್ತರಂಜನದಾಸ್ ೧೯೨೫ ಜೂನ್ ೧೬ರಂದು ತಮ್ಮ ಕಡೆಯುಸಿರೆಳೆದರು. ಮಾರನೆಯ ದಿನ ಅವರ ಪಾರ್ಥಿವ ಶರೀರವನ್ನು ರೈಲಿನಲ್ಲಿ ಕಲ್ಕತ್ತೆಗೆ ತರಲಾಯಿತು. ಅಂತ್ಯಸಂಸ್ಕಾರ ನಡೆಸಲಾಯಿತು. ಅಂದಿನ ಸಂತಾಪಸೂಚಕ ಸಭೆಯ ಮುಖ್ಯ ಭಾಷಣಕಾರರು ಗಾಂಧೀಜಿಯವರೇ ಆಗಿದ್ದರು. ಅವರು ಹೇಳಿದರು :

"The body that held Deshsabandhu has perished., but his soul will never perish. Not only the soul, even the name of him whom has served and sacrificed so much will remain immortal. His service and sacrifice were matchless."

ತಮ್ಮ ಹೃದಯ ತುಂಬಿದ ಈ ಮಾತುಗಳ ಮೂಲಕ ರಾಷ್ಟ್ರದ ಪರವಾಗಿ ಶ್ರದ್ಧಾಂಜಲಿ ಅರ್ಪಿಸಿದರು ಅಂದಿನ ಬೃಹತ್ ಸಾರ್ವಜನಿಕ ಸಭೆಯಲ್ಲಿ, ಆದರೆ ಅವರು ಕೊಟ್ಟ ಕೊಡುಗೆ ಎಷ್ಟು ಸಹಸ್ರಮಾನಗಳು ಕಳೆದರೂ ಉಳಿಯುವಂಥದು. ಅನಿತಾ, ಅವರಿದ್ದಿದ್ದರೆ ಭಾರತ ಇಬ್ಭಾಗವಾಗುತ್ತಿರಲಿಲ್ಲ ಎಂಬುದು ನನ್ನ ಅಂಬೋಣ !'

'ಏನಾಗಬೇಕೋ ಅದು ಆಗಿಯೇ ತೀರುತ್ತೆ!....'

'ಹೌದು, ಏನಾಗಬೇಕೋ ಅದು ಆಗದಿರುವುದಿಲ್ಲ... ಅದು ಸರಿ, ನಿನ್ನ ಕಣ್ಣುಗಳೇಕೆ ಒದ್ದೆಯಾಗಿವೆ. ನೀನು ಅಳಬಾರದು. ನಿನ್ನ ಕಣ್ಣ ತಾವರೆ ತೊಯ್ಯದಿರಲಿ. ಒರೆಸಿಕೊ. ಇನ್ನು ಮುಂದೆ ಕಣ್ಣೀರಿಗೆ ಬದಲು ನೆತ್ತರು ಕರೆಯಬೇಕಾಗುತ್ತದೆ. ನಿಮ್ಮ ತಂದೆ ನಮ್ಮ ಚಿತ್ತರಂಜನರ ಭೇಟಿ ಮುಂದುವರಿಸುತ್ತೇನೆ. ಸ್ವಲ್ಪ ನೀರು ಕುಡಿ. ಸಿದ್ಧಳಾಗು.'

* * *

ದಾಸ್ ಮತ್ತು ಬೋಸರ ಪ್ರಥಮ ಭೇಟಿ ಮೇರು ಮಂದರಗಳ ಸಮಾವೇಶದಂತಿತ್ತು. ಒಬ್ಬರು ಮತ್ತೊಬ್ಬರನ್ನು ಆಕರ್ಷಿಸಿದರು. ಸಂದರ್ಭ ಎರಡು ಅಭಿಮುಖೀ ನಿಲುವುಗನ್ನಡಿಗಳನ್ನು ನಿಲ್ಲಿಸಿದ್ದರ ನೆನಪು ತರುತ್ತಿತ್ತು ! ಒಬ್ಬರ ಮನಸ್ಸು ಮತ್ತೊಬ್ಬರು ಓದಿಕೊಂಡರು ! ಮನೋಧರ್ಮ ಇಬ್ಬರದೂ ಒಂದೇ ಆಗಿತ್ತು. ಒಂದೇ ಪುಕ್ಕದ ಎರಡು ಹಕ್ಕಿಗಳು ಸ್ವಾತಂತ್ರ್ಯ ದಿಗಂತದತ್ತ ಹಾರಲು, ಗೀತೆ ಹಾಡಲು ಯತ್ನಿಸಿದವು. ಇಬ್ಬರ ಬಾಯಲ್ಲೂ ಮಾತು ಮೌನ ತಾಳಿದವು. ಬಹಳ ಹೊತ್ತಾದ ಮೇಲೆ ಸುಭಾಸ್ ಮೌನ ಮುರಿದು,

'ದೇಶಬಂಧುಜೀ, ನಾನು ಕೇಂಬ್ರಿಡ್ಜ್‌ನಿಂದ ಎರಡು ಪತ್ರ ಬರೆದಿದ್ದೆ ...'

'ಬಂದಿವೆ. ಫೆಬ್ರವರಿ ಮತ್ತು ಮಾರ್ಚ್ ತಿಂಗಳುಗಳ ಎರಡೂ ಪತ್ರಗಳು ಬಂದಿವೆ. ಅವುಗಳ ಮುಖಾಂತರ ನಿಮ್ಮನ್ನು ಕಂಡೆ ! ಓಟನ್ ವಿಷಯ ಬರೆದಿದ್ದೀರಿ. ಅನಂತರ ನಿಮ್ಮ ಐ.ಸಿ.ಎಸ್. ಪದತ್ಯಾಗದ ವಿಷಯವೂ ಬಂತು. ಹೇಳಿ ಈಗ ನಿಮ್ಮ ಮುಂದಿನ ಯೋಜನೆಗಳೇನು ?'

'ತಮ್ಮ ಸಲಹೆ, ಸಹಕಾರ ಮತ್ತು ಮಾರ್ಗದರ್ಶನಗಳಂತೆ'

'ಅವು ಇದ್ದೇ ಇವೆ. ಆದರೆ ನಿಮ್ಮ ನಿರ್ಧಾರ, ನಿಮ್ಮ ಗುರಿಗಳನ್ನು ದಯವಿಟ್ಟು ತಿಳಿಸಿ.' 'ದಾಸ್ ಮಹಾಶಯರೆ, ನನ್ನದೇ ಆದ ಕೆಲವು ಕಲ್ಪನೆಗಳಿವೆ ; ಯೋಜನೆಗಳೂ ಇವೆ. ಅವುಗಳನ್ನು ತಮ್ಮ ಮುಂದಿಡುವ ಮುನ್ನ, ನಾನು ರಾಷ್ಟ್ರಹಿತಸಾಧಕನಾಗಿ ತಮ್ಮೊಡನೆ ಜೀವವಿರುವವರೆಗೂ ಜೊತೆಗೂಡಿರುತ್ತೇನೆ – ಎಂದು ಪ್ರತಿಜ್ಞೆ ಸ್ವೀಕರಿಸುತ್ತೇನೆ.'

'ತುಂಬಾ ಸಂತೋಷ. ನಿಮ್ಮಂತಹ ಉತ್ಸಾಹೀ ತರುಣರ ಅಗತ್ಯತೆ ಇದೆ ಇಂದು ಭಾರತಕ್ಕೆ.'

'ನನ್ನ ಎರಡನೆಯ ಪತ್ರದಲ್ಲಿ ಪ್ರಸ್ತಾಪಿಸಿರುವಂತೆ ರಾಷ್ಟ್ರೀಯ ಕಾಂಗ್ರೆಸ್ ಸಂಘಟನೆ ಹಾಗೂ ಕಾರ್ಯಾಚರಣೆಗಳ ಬಗೆಗೆ ಸ್ಪಷ್ಟೀಕರಣ ಬೇಕು. ಅದು ಒಂದು. ಎರಡನೆಯದಾಗಿ ಕಾಂಗ್ರೆಸ್ ತನ್ನದಾದ ಭವನ ಪಡೆದುಕೊಳ್ಳಬೇಕು. ಮೂರನೆಯದಾಗಿ, ಅದು ವಿವಿಧ ರಾಷ್ಟ್ರೀಯ ಸಮಸ್ಯೆಗಳ ಕುರಿತ ಸಂಶೋಧನೆ ನಡೆಸುವ ಸಂಶೋಧನಾ ವಿದ್ಯಾರ್ಥಿಗಳ ತಂಡ ಹೊಂದಿರಬೇಕು. ನಾಲ್ಕನೆಯದಾಗಿ, ಹಣಕಾಸಿನ ವ್ಯವಸ್ಥೆ ಕುರಿತ ಕಾಂಗ್ರೆಸ್ ಶ್ವೇತಪತ್ರ ಬೇಕು. ಐದನೆಯದಾಗಿ, ದೇಶೀಯ ಸಂಸ್ಥಾನಗಳ ಬಗ್ಗೆ ತನ್ನ ಮೂಲಭೂತ ಮನೋಭೀಷ್ಟವನ್ನು ಬಹಿರಂಗವಾಗಿ ಪ್ರಕಟಿಸಬೇಕು. ಆರನೆಯದಾಗಿ, ಸ್ತ್ರೀಪುರುಷರ ವಿಶ್ವ ಪೌರತ್ವಕ್ಕೆ ತನ್ನ ನಿಲುವೇನೆಂಬುದನ್ನು ಖಚಿತಪಡಿಸಬೇಕು. ಏಳನೆಯದಾಗಿ, ದುರ್ಬಲ ವರ್ಗಗಳ ಏಳಿಗೆಗಾಗಿ ತಾನು ಕೈಗೊಳ್ಳಲಿರುವ ಕಾರ್ಯಯೋಜನೆಗಳನ್ನು ಮೊದಲು ಘೋಷಿಸಬೇಕು. ಎಂಟನೆಯದಾಗಿ, ಎಲ್ಲಾ ಕಾರ್ಯಗಳು ನೆರವೇರುವಂತಾಗಲು ಕಾಂಗ್ರೆಸ್ ಒಂದು ಖಾಯಂ ಸಿಬ್ಬಂದಿ ವರ್ಗವನ್ನಿಟ್ಟುಕೊಳ್ಳಬೇಕು. ಒಂಬತ್ತನೆಯದಾಗಿ, ಸಮಾಚಾರ ಸಂಗ್ರಹ ಮತ್ತು ಪ್ರಚಾರ ವಿಭಾಗಗಳನ್ನು ತೆರೆಯಬೇಕು. ಹತ್ತನೆಯದಾಗಿ, ಹಾಗೂ ಕಡೆಯದಾಗಿ, ರಾಷ್ಟ್ರಜೀವನಕ್ಕೆ ಸಂಬಂಧಿಸಿದ ಎಲ್ಲ ಪ್ರಶ್ನೆಗಳ ಕುರಿತ ಎಲ್ಲ ಭಾರತೀಯ ಭಾಷೆಗಳಲ್ಲೂ ಕಿರು ಹೊತ್ತಗೆಗಳನ್ನು ನಿರಂತರ ಹೊರತರಬೇಕು.

– ಇವು ನನ್ನ ಅನಿಸಿಕೆಗಳಲ್ಲಿ ಕೆಲವು. ಈ ಬಗ್ಗೆ ತಮ್ಮ ಸಲಹೆ ಬೇಡುವೆ. 'ಸುಭಾಷ್ಜೀ' ಎಲ್ಲವೂ ಸಮಂಜಸವಾಗಿದೆ. ನಾನೇ ನಿಮ್ಮ ಬಾಯಲ್ಲಿ ಆಡಿದಂತಿದೆ. ಅವೆಲ್ಲಕ್ಕೂ 'ಅಸ್ತು' ಅನ್ನುತ್ತೇನೆ. ಪ್ರಸ್ತುತದಲ್ಲಿ ನೀವು ಮೂರು ಕ್ಷೇತ್ರಗಳಲ್ಲಿ ಕಾರ್ಯೋನ್ಮುಖರಾಗಬೇಕು. ಮೊದಲನೆಯದು ನಾನು ಆರಂಭಿಸಿರುವ ಕಾಲೇಜಿನಲ್ಲಿ ನೀವು ಅಧ್ಯಾಪಕರಾಗಿ ಬೋಧನೆ ಮಾಡುವುದು. ಎರಡನೆಯದು, ನಮ್ಮ 'ಸ್ವರಾಜ್' ಪತ್ರಿಕೆಯ ಇಂಗ್ಲಿಷ್ ಆವೃತ್ತಿಯ ಕಾರ್ಯ ನಿರ್ವಹಣೆ. ಮೂರನೆಯದು ಕಾಂಗ್ರೆಸ್ ಸಂಘಟನೆಗಾಗಿ ಶ್ರಮಿಸುವುದು.'

ಮೂರು ನಿಬಂಧನೆಗಳಿಗೂ ಸುಭಾಸ್ ಸಮ್ಮತಿಸಿದರು. ಅವರ ಸೌಹಾರ್ದಯುತ ಭೇಟಿ ಇಬ್ಬರನ್ನೂ ಅನ್ಯೋನ್ಯವಾಗಿ ಬೆಸೆಯಿತು. ಇಬ್ಬರೂ ಜೊತೆಗೂಡಿ ಹೋರಾಟದ ಕಣಕ್ಕಿಳಿದರು. ದಾಸರಿಗೆ ಸ್ಫೂರ್ತಿಯ ಸೆಲೆಯಾಗಿ ನಿಂತು ಸದಾ ಒತ್ತಾಸೆ ತರುತ್ತಿದ್ದವರು ಅವರ ಪತ್ನಿ ಶ್ರೀಮತಿ ಬಸಂತೀದೇವಿಯವರು. ಸುಭಾಸ್ ಶ್ರೀಮತಿ ದಾಸ್‌ರವರಲ್ಲಿ ಹೆತ್ತ ತಾಯಿಗೂ ಮಿಗಿಲಾದ ಭಕ್ತಿ ತಳೆದರು.

೧೯೨೧ರ ಮಧ್ಯದ ವೇಳೆಗೆ ಭಾರತದ ಎಲ್ಲೆಡೆಯೂ ಪ್ರಕ್ಷುಬ್ದ ವಾತಾವರಣ ನಿರ್ಮಾಣವಾಗಿತ್ತು. ಎಲ್ಲಿ ನೋಡಿದರಲ್ಲಿ ಅಶಾಂತಿ, ಅತೃಪ್ತಿ, ಹಾಹಾಕಾರಗಳ ಮೊಳಗು.

ಅಸಹಕಾರ ಚಳವಳಿಯ ಬಿರುಗಾಳಿ ಸ್ವಾತಂತ್ರ್ಯಾಪೇಕ್ಷೆಯ ಕಿಚ್ಚನ್ನು ಪ್ರಜ್ವಲಿಸುವಂತೆ ಸಾಗುತ್ತಿತ್ತು. ಬ್ರಿಟಿಷ್ ಆಡಳಿತ ಯಂತ್ರ ಚಲಿಸುವುದೇ ಕಷ್ಟವಾಗಿತ್ತು. ಬಂಗಾಳದ ಮಿಡ್ನಾಪುರದಲ್ಲಿ ಕರನಿರಾಕರಣ ಚಳವಳಿ, ಪಂಜಾಬಿನಲ್ಲಿ ಅಕಾಲಿ ಚಳವಳಿ, ಮಲಬಾರಿನಲ್ಲಿ ಮೋಪ್ಲಾ ಕ್ರಾಂತಿ, ಕಲ್ಕತ್ತವಂತೂ ಆಕ್ರೋಶದ ಅಗ್ನಿಕುಂಡ ! ಅದೇ ವೇಳೆಯಲ್ಲಿ ಹೊಸದಾಗಿ ಭಾರತಕ್ಕೆ ವೈಸ್‌ರಾಯ್ ಆಗಿ ಬಂದಿದ್ದ ಲಾರ್ಡ್ ರೀಡಿಂಗ್‌ಗೆ ಗಾಂಧೀಜಿಯವರು ಪತ್ರ ಬರೆದು, ಆಡಳಿತಗಾರರ ಹೃದಯ ಪರಿವರ್ತನ ಆಗದಿದ್ದರೆ ದೇಶಾದ್ಯಂತ ಅಸಹಕಾರ ಆಂದೋಲನ ನಡೆಸುವುದಾಗಿ ಎಚ್ಚರಿಕೆ ನೀಡಿದ್ದರು. ಯುದ್ಧದ ರಣಭೇರಿ ಗರ್ಜಿಸುವ ಕಾಲ ದೂರವಿಲ್ಲವೆಂದರಿತ ಲಾರ್ಡ್ ರೀಡಿಂಗ್ ಪಂಡಿತ ಮದನ ಮೋಹನಮಾಳವೀಯರನ್ನು ಶಾಂತಿ ಸ್ಥಾಪಕರಾಗಿ ಸಂಧಾನ ನಡೆಸುವಂತೆ ಕೇಳಿಕೊಂಡ. ಆ ಮೇರೆಗೆ ಮಾಳವೀಯರು ಕಲ್ಕತ್ತೆಗೆ ಬಂದರು. ದೇಶಬಂಧು ಚಿತ್ತರಂಜನದಾಸ್, ಸುಭಾಸ್, ಮೌಲಾನಾ ಮೊಹಮ್ಮದ್ ಆಲಿ ಮತ್ತಿತರ ಧುರೀಣರೊಡನೆ ಚರ್ಚೆ ನಡೆಸಿ, ಸೂಚಿನ ಕೆಲವು ಷರತ್ತುಗಳನ್ನು ಒಪ್ಪಿಗೆಗಾಗಿ ಗಾಂಧೀಜಿಯವರಿಗೆ ಸಬರಮತಿ ಆಶ್ರಮಕ್ಕೆ ಟೆಲಿಗ್ರಾಂ ಮೂಲಕ ಕಳುಹಿಸಿದರು. ಆದರೆ ಬ್ರಿಟಿಷರೊಡನೆ ಕಾಂಗ್ರೆಸ್ ಮಾಡಿಕೊಳ್ಳಲಿದ್ದ ಒಪ್ಪಂದದ ಎಲ್ಲ ಷರತ್ತುಗಳೂ ಗಾಧೀಜಿಯವರಿಗೆ ಒಪ್ಪಿಗೆಯಾಗಲಿಲ್ಲ. ಅವರು ತಮ್ಮ ಅಸಮಾಧಾನ ಸೂಚಿಸಿದರು.

* * *

೧೯೨೧ರ ಅಂತ್ಯದಲ್ಲಿ ಇಂಗ್ಲೆಂಡಿನಿಂದ ರಾಜಕುಮಾರ ಭಾರತಕ್ಕೆ ಭೇಟಿ ಕೊಡುವವನಿದ್ದ. ಹಿಂದೆ ಆಗಿದ್ದ ಮಾಂಟೆಗೊ ಚೆಮ್ಸ್‌ಫರ್ಡ್ ವರದಿಯ ಶಿಫಾರಸಿಗನುಗುಣವಾಗಿ ಸಂವಿಧಾನಾತ್ಮಕ ಸುಧಾರಣೆಗೆ ಭಾರತದ ಜನಾಭಿಪ್ರಾಯ ತಿಳಿಯಲು ಬರುವವನಿದ್ದ. ಅವನ ಆಗಮನವನ್ನು ಕಾಂಗ್ರೆಸ್ ಬಹಿಷ್ಕರಿಸಿತು. ಸುಭಾಸ್ ಮೊದಲಾದ ತರುಣರು ಬಹಿಷ್ಕಾರವನ್ನು ಬೆಂಬಲಿಸಿದರು. ಆ ಸುದ್ದಿ ಬಂಗಾಳದಲ್ಲೆಲ್ಲಾ ವ್ಯಾಪಿಸಿಕೊಂಡಿತು. ಪರಿಣಾಮವಾಗಿ ಎಲ್ಲರೂ ಸೆರೆಮನೆ ಸೇರಿದರು. ಚಳವಳಿಯಲ್ಲಿ ಜೈಕಾರ ಹಾಕಿದರೆಂಬ ಆಪಾದನೆಯ ಮೇರೆಗೆ ದೇಶಬಂಧು ದಂಪತಿಗಳೂ ದಸ್ತಗಿರಿಯಾದರು. ಇಂತಿಂಥವರು ಬಂಧನಕ್ಕೊಳಗಾಗಿದ್ದಾರೆ ಆರು ತಿಂಗಳ ಸಜೆ ಎಂದು ಮ್ಯಾಜಿಸ್ಟ್ರೇಟ್ ಘೋಷಿಸಿದಾಗ ಸುಭಾಸ್‌ಚಂದ್ರ ಬೋಸರು ನ್ಯಾಯಲಯದ ಅಂಗಳದಲ್ಲೇ "ಆರು ತಿಂಗಳು ! ಅಷ್ಟೇನಾ ? ಅಷ್ಟು ದಿನದ ಸೆರೆಮನೆ ಶಿಕ್ಷೆಗೆ ನಾವೇನು ಕೋಳಿ ಕದ್ದ ಕಳ್ಳರಲ್ಲವಲ್ಲ" ಎಂದು ವ್ಯಂಗ್ಯ ನುಡಿದು ಜೈಲಿಗೆ ನಡೆದರು.

ಆರು ತಿಂಗಳ ಸೆರೆಮನೆ ವಾಸ ತುಂಬಾ ಲಾಭದಾಯಕವಾಯಿತು ಸುಭಾಸರಿಗೆ. ಮುಖ್ಯವಾಗಿ ಚಿತ್ತರಂಜನರ ಸ್ಫಟಿಕೋಪಮ ಪಾರದರ್ಶಿಕ ವ್ಯಕ್ತಿತ್ವದ ಪರಿಚಯವಾಯಿತು. ಮುಖ ನೋಡಿ ಮಣೆ ಹಾಕದ ಅವರ ಸಮನ್ವಯ ಮನೋಭಾವ ತುಂಬಾ ಹಿಡಿಸಿತು. ಅವರಲ್ಲಿದ್ದ ಅನ್ಯಾದೃಶ ಸಂಘಟನಾ ಸಾಮರ್ಥ್ಯ ವ್ಯಕ್ತಿಸ್ವಾತಂತ್ರ್ಯಕ್ಕೆ ಅವರು ಕೊಡುತ್ತಿದ್ದ ಮಾನ್ಯತೆ, ಯುವಶಕ್ತಿಯ ಮೇಲೆ ಅವರಿಟ್ಟಿದ್ದ ಭರವಸೆ – ಇವೆಲ್ಲವೂ ಸುಭಾಸರ ಮನಸ್ಸನ್ನು ಸೂರೆಗೊಂಡವು. ಅಂತೆಯೇ ಬದುಕನ್ನು ಕುರಿತ ದೇಶ ಬಂಧುರವರ ಮುತ್ತಿನಂಥ ಮಾತುಗಳು ಸುಭಾಸರ ಕಿವಿಯಲ್ಲಿ ಸದಾ ಪ್ರತಿಧ್ವನಿಗೊಡುತ್ತಿದ್ದವು, ದಾಸ್ ಒಮ್ಮೆ ಹೇಳಿದರು –

'ಸುಭಾಸ್, ಎಲ್ಲ ಕಲೆಗಳ ಕಲೆ ರಾಜಕಲೆ ಅಂದರೆ ಜೀವನ ಕಲೆ. ಜೀವನ ರಾಜಕೀಯಕ್ಕಿಂತ ಎಲ್ಲ ಕಲೆಗಳಿಗಿಂತ ದೊಡ್ಡದು. ಅದು ಹಸನಾಗಬೇಕು, ಋಜುವಾಗಬೇಕು, ಸೈತಾಗಬೇಕು. ನಾವು ಎಷ್ಟು ದಿನ ಬದುಕಿದೆವೆಂಬುದು ಮುಖ್ಯ ಅಲ್ಲ, ಹೇಗೆ ಬದುಕಿದೆವೆಂಬುದು ಮುಖ್ಯ. ಆದ್ದರಿಂದ ಬದುಕು ಬಂಗಾರವಾಗಲಿ' ಎಂದು. ಸೆರೆಮನೆಯಲ್ಲಿದ್ದಾಗ ದಾಸರಿಗೆ ಜೈಲ್ ಅಧಿಕಾರಿಗಳು ಯುರೋಪಿಯನ್ ಬಂಧಿಗಳಿಗೆ ಸಲ್ಲುತ್ತಿದ್ದ ವಿಶೇಷ ಸವಲತ್ತುಗಳನ್ನು ನೀಡುವುದಾಗಿ ಹೇಳಿದರು. ದಾಸ್ ಆ ಕೋರಿಕೆಯನ್ನು ನಿರಾಕರಿಸಿ,

'ಇತರ ಬಂಧಿಗಳಂತೆಯೇ ನನ್ನನ್ನು ಪರಿಗಣಿಸಿ' ಎಂದು ಹೇಳಿ, ಸಾಮಾನ್ಯ ಖೈದಿಗಳಾಗಿಯೇ ಉಳಿದುಕೊಂಡರು. ಇದು ದೇಶಬಂಧುರವರ ಬಗೆಗಿದ್ದ ಸುಭಾಸರ ಸದ್ಭಾವನೆಗಳು ಮತ್ತಷ್ಟು ಪ್ರಜ್ವಲಿಸುವಂತೆ ಮಾಡಿತು. ರಾಷ್ಟ್ರಹಿತಚಿಂತನೆಯ ಜೊತೆಯಲ್ಲಿ ಅವರೊಡನೆ ಅನೇಕ ವೈನೋದಿಕ ಕ್ಷಣಗಳನ್ನು ಕಳೆದರು. ಜೈಲಿನಲ್ಲಿಯೇ ನಾಟಕ ಬರೆದು ಖೈದಿಗಳೊಡನೆ ಅಭಿನಯಿಸುವಂತೆಸಗಿದ್ದೂ ಉಂಟು.'

ಒಮ್ಮೆ ಹೀಗಾಯಿತು :

ಚಿತ್ತರಂಜನದಾಸರ ಸೌಹಾರ್ದ ಭೇಟಿಗಾಗಿ ಅವರ ಮಿತ್ರರನೇಕರು ಬಂಧೀಖಾನೆಗೆ ಬರುತ್ತಿದ್ದರು. ಅವರಲ್ಲೊಬ್ಬರು,

'ದಾಸ್ ಹೇಗಿದ್ದೀರಿ ?' ಅಂದರು. ಕೂಡಲೇ ದಾಸ್, ಸುಖವಾಗಿದ್ದೇನೆ. ಸುಭಾಸರ ಕಡೆ ದೃಷ್ಟಿಹರಿಸಿ,"ಏಕೆಂದರೆ, ನನಗೊಬ್ಬ ಐ.ಸಿ.ಎಸ್. ಪದವೀಧರ ಅಡುಗೆ ಭಟ್ಟನಾಗಿ ಸಿಕ್ಕಿದ್ದಾನೆ. ಐ.ಸಿ.ಎಸ್. ಅಂದರೆ ಇಂಡಿಯನ್ ಸಿವಿಲ್ ಸರ್ವಿಸ್ ಅಲ್ಲ. ಇಂಡಿಯನ್ ಕುಕಿಂಗ್ ಸರ್ವಿಸ್' ಎಂದು ವ್ಯಾಖ್ಯಾನಿಸಿದರು. ಸುಭಾಸರಾದಿಯಾಗಿ ಎಲ್ಲರೂ ಘೊಳ್ಳೆಂದು ನಗುತ್ತಾ ಅಂದಿನ ಆ ವಿನೋದದಲ್ಲಿ ಭಾಗಿಗಳಾದರು.

ದೇಶಬಂಧು ಮತ್ತು ಸುಭಾಸ್ ಜೈಲಿನಲ್ಲಿದ್ದಾಗ ಹೊರಗಡೆ ಒಂದು ದೊಡ್ಡ ಅನಾಹುತ ನಡೆಯಿತು. ೧೯೨೨ ಫೆಬ್ರವರಿ ೫ರಂದು ಅಂದಿನ ಸಂಯುಕ್ತ ಪ್ರಾಂತದ ಚೌರಿಚೌರಾದಲ್ಲಿ ಬ್ರಿಟಿಷರ ದಬ್ಬಾಳಿಕೆಗೆ ರೋಸಿ ಹೋಗಿದ್ದ ಜನತೆ ಪೊಲೀಸ್ ಠಾಣೆಗೆ ಬೆಂಕಿ ಹಚ್ಚಿತು. ತಡೆಗಟ್ಟಲು ಬಂದ ಕೆಲವು ಪೊಲೀಸರನ್ನು ಉರಿವ ಬೆಂಕಿಗೆ ಹಾಕಿ ಸುಟ್ಟಿತು. ಇದನ್ನು ಕೇಳಿದ ಕೂಡಲೇ ಗಾಂಧೀಜಿ ತಮ್ಮ ಅಸಹಕಾರ ಚಳವಳಿಯನ್ನು ನಿಲ್ಲಿಸಿಬಿಟ್ಟರು. ಹೋರಾಟ ಸ್ಥಗಿತಗೊಂಡಿದ್ದನ್ನು ಕೇಳಿ ಸೆರೆಮನೆಯಲ್ಲಿದ್ದ ದಾಸ್ ಮತ್ತು ಬೋಸರು ತುಂಬಾ ಕಳವಳ ವ್ಯಕ್ತಪಡಿಸಿದರು. ಗಾಂಧೀಜಿ ಚೌರಿಚೌರಾದ ಕೊಲೆ ಪ್ರಕರಣವನ್ನು ಖಂಡಿಸಿದರು, ಸ್ವಾತಂತ್ರ್ಯ ಪ್ರೇಮಿಗಳು ಗ್ರಾಮೀಣ ಜನತೆಗೆ ಮಾಡಿದ ಕಾರ್ಯ ಸರಿಯಾಗಿಯೇ ಇತ್ತು ಎಂದು ವಾದಿಸಿದರು. ಇದರಿಂದಾಗಿ ಕಾಂಗ್ರೆಸ್ಸಿನಲ್ಲಿ ಬಿರುಕು ಕಾಣಿಸಿಕೊಂಡಿತು. ಕಾಂಗ್ರೆಸ್ ಸದಸ್ಯರ ಸಮಪ್ರಮಾಣದ ಎರಡು ಬಣಗಳು ಹುಟ್ಟಿಕೊಂಡವು. ಗಾಂಧೀಜಿ ಅನುಯಾಯಿಗಳು ಒಂದು ಪಕ್ಷ, ದಾಸ್ ಮತ್ತು ಬೋಸರದು ಒಂದು ಪಕ್ಷ. ಅದು ಬಲಪಂಥ, ಇದು ಎಡಪಂಥ. ಹೀಗಾಗಿ ಚಿತ್ತರಂಜನ ದಾಸ್, ಮೋತಿಲಾಲ್ ನೆಹರು, ಸುಭಾಸ್ ಚಂದ್ರಬೋಸ್ ಇವರೇ ಮೊದಲಾದವರಿಂದ ೧೯೨೩ರಲ್ಲಿ 'ಸ್ವರಾಜ್ ಪಕ್ಷ' ನಿರ್ಮಾಣವಾಯಿತು. ಈ ಪಕ್ಷ ನಿರ್ಮಿತಿಗೆ ಮತ್ತೊಂದು ಕಾರಣ ೧೯೨೨ರ ಡಿಸೆಂಬರ್‌ನಲ್ಲಿ ಗಯಾದಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ದಾಸ್‌ರ ಪ್ರಸ್ತಾವಗಳಿಗೆ ಸ್ವೀಕಾರ ಸಿಗದಿದ್ದುದು ಮತ್ತು ಅಧ್ಯಕ್ಷ ಪದವಿಗೆ ಅವರಿತ್ತ ರಾಜೀನಾಮೆ. ಈ ಬಗೆಯ ಭಿನ್ನತೆ ಇದ್ದರೂ ಸ್ವಾತಂತ್ರ್ಯ ಹೋರಾಟ ಆಲಸ್ಯಗೊಂಡಿರಲಿಲ್ಲ. ಅದಕ್ಕಾಗಿ ಎಲ್ಲರೂ ಒಂದಾಗಿ ಹೋರಾಡತೊಡಗಿದರು. ಸುಭಾಸರ ಸಾಹಸ ಮತ್ತು ಸಾಹಚರ್ಯದಿಂದಾಗಿ ಬಂಗಾಳದಲ್ಲಿ ಕಾಂಗ್ರೆಸ್ ಮುನ್ನಡೆ ಸಾಧಿಸಿತು. ೧೯೨೧ರ ಉತ್ತರಾರ್ಧದಲ್ಲಿ ಗಾಂಧೀಜಿ ಪಕ್ಷಕ್ಕೊಂದು ತ್ರಿವರ್ಣ ಧ್ವಜ ನೀಡಿದರು. ಅದು ಸರ್ವಾನುಮತದಿಂದ ಅಂಗೀಕೃತವಾಯಿತು. ಖಾದಿ ರಾಷ್ಟ್ರೀಯ ಸಮವಸ್ತ್ರವಾಯಿತು. ಅಂತೆಯೇ ಖಾದಿ ಸಮವಸ್ತ್ರಧಾರೀ ರಾಷ್ಟ್ರೀಯ ಸ್ವಯಂಸೇವಕ ದಳ ಅಸ್ತಿತ್ವಕ್ಕೆ ಬಂತು. ಸುಭಾಸರ ಕಾರ್ಯತತ್ಪರತೆಯನ್ನು ಗುರುತಿಸುವ ಒಂದು ಸಮಯ ಬಂತು. ೧೯೨೨ ಸೆಪ್ಟೆಂಬರ್‌ನಲ್ಲಿ ಬಂಗಾಳದ ಉತ್ತರ ಜಿಲ್ಲೆಗಳು ಪ್ರವಾಹಕ್ಕೆ ಸಿಕ್ಕು ರಂಗಪುರ, ಭೋಗ್ರಾ, ಪಲ್ನಾ ಮೊದಲಾದ ಜಿಲ್ಲೆಗಳ ಹಳ್ಳಿಗಳು ಕೊಚ್ಚಿಹೋದವು. ಸುಭಾಸ್‌ಚಂದ್ರ ಬೋಸ್ ತಮ್ಮ ಅನುಚರರ ಜೊತೆ ಟೊಂಕಕಟ್ಟಿ ನಿಂತರು. ಸಂತ್ರಸ್ತರ ಸಂಕಷ್ಟ ನಿವಾರಣೆಗೆ ನೆರವಾದರು. ಇಂತಹ ಅನೇಕ ಪ್ರಜಾಹಿತ ಕಾರ್ಯ ಮಾಡಿದ್ದರಿಂದ ಸುಭಾಸ್ ಬಹುಬೇಗ ಜನಪ್ರಿಯರಾದರು. ಅವರು ಸ್ವರಾಜ್ ಪಕ್ಷದ ಕಾರ್ಯ ಚಟುವಟಿಕೆಗಳಲ್ಲಿ ಪ್ರಧಾನ ಪಾತ್ರ ವಹಿಸುತ್ತಿದ್ದುದಲ್ಲದೆ, ಯುವಶಕ್ತಿಯ ಸಂಘಟನೆಗಾಗಿ ತುಂಬಾ ಶ್ರಮಿಸಿದರು. ನವಭಾರತದ ನಿರ್ಮಾಣ ಆಗಬೇಕಿದ್ದರೆ ಯುವಸಂಘಟನೆಯಿಂದ ಮಾತ್ರ ಸಾಧ್ಯ ಎಂಬ ಅಚಲ ವಿಶ್ವಾಸ ಅವರದಾಗಿದ್ದಿತು. ಅದರಿಂದಾಗಿ ಅವರು ಯುವಶಕ್ತಿಯನ್ನು ಸಂಘಟಿಸಿ, ಅನೇಕ ತರುಣ ತಂಡಗಳನ್ನು ರಚಿಸಿದರು. ೧೯೨೩ರ ಅಂತ್ಯದಲ್ಲಿ ಸುಭಾಸ್ ಬಂಗಾಳ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಪ್ರಧಾನ ಕಾರ್ಯದರ್ಶಿಯಾದರು. ೧೯೨೪ರಲ್ಲಿ ನಡೆದ ನಗರಸಭಾ ಚುನಾವಣೆಯಲ್ಲಿ ಸ್ವರಾಜ್ ಪಕ್ಷವು ಅಧಿಕ ಮತಗಳ ಜಯ ಗಳಿಸಿ, ಚಿತ್ತರಂಜನರು ಕಲ್ಕತ್ತಾ ನಗರದ ಮೇಯರ್ ಆಗಿಯೂ, ಶಬೀದ್ ಸುಹ್ರವರ್ದಿ ಎಂಬವರು ಉಪಮೇಯರ್ ಆಗಿಯೂ ಆಯ್ಕೆಯಾದರು. ದೇಶಬಂಧುರವರ ಸೂಚನೆಯ ಮೇರೆಗೆ ಇಪ್ಪತ್ತೈದು ವರ್ಷ ವಯಸ್ಸಿನ ಸುಭಾಸ್‌ಚಂದ್ರ ಬೋಸರು ಕಲ್ಕತ್ತಾ ನಗರಸಭೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿ ನೇಮಕಗೊಂಡರು. ಆ ಮುಂಚೆ ಚಿತ್ತರಂಜನರಿಗೆ ಗವರ್ನರ್ ಲಿಟ್ಟನ್‌ನಿಂದ ಆಹ್ವಾನ ಬಂದಿತ್ತು – ಶ್ರೀಯುತರು ಬಂಗಾಳದ ಮುಖ್ಯಮಂತ್ರಿ ಪದವಿಯನ್ನು ಅಲಂಕರಿಸಬೇಕೆಂದು. ಆದರೆ ದಾಸರು ಅದನ್ನು ತಣ್ಣಗೆ ತಳ್ಳಿಹಾಕಿ, ಬಹುಜನರ ಬಯಕೆಯ ನಗರ ಸಭಾಧ್ಯಕ್ಷ ಸ್ಥಾನವನ್ನು ಸ್ವೀಕರಿಸಿದರು.

ದೇಶಬಂಧು ಚಿತ್ತರಂಜನ ದಾಸರು ಕಲ್ಕತ್ತೆಯ ಮಹಾಪೌರರಾಗಿ ಬಂದ ಮೇಲೆ, ಮಹಾಪ್ರಾಜ್ಞ ಸುಭಾಸ್ ಚಂದ್ರಬೋಸರು ನಗರಸಭೆಯ ಮುಖ್ಯಸ್ಥರಾಗಿ ನೇಮಕಗೊಂಡ ಮೇಲೆ ಭಾರತದ ಪೌರಪ್ರಗತಿ, ಪೌರಸ್ವಾತಂತ್ರ್ಯ ಇವೇ ಮೊದಲಾದ ಪೌರನೀತಿಗೆ ಸಂಬಂಧಿಸಿದ ಮೇಯರ್ ದಾಸರ ಉಪನ್ಯಾಸಗಳು ಶಾಸನರೂಪ ತಳೆದವು. ಅವರ ಸಿದ್ಧಾಂತಗಳನ್ನು ಅನುಷ್ಠಾನಕ್ಕೆ ತರುವುದು, ಅಂದರೆ ಕಾರ್ಯಗತಗೊಳಿಸುವುದು ಸುಭಾಸರ ಪಾಲಿಗೆ ಬಂತು. ಸುಭಾಸ್ ಅತ್ಯಂತ ದಕ್ಷತೆಯಿಂದ, ಆತ್ಮವಿಶ್ವಾಸದಿಂದ ಅನುಷ್ಠಾನಗೊಳಿಸಿದರು. ಅದರಿಂದಾಗಿ, ಖಾದಿ ಪೌರನೌಕರರ ಅಧಿಕೃತ ಸಮವಸ್ತ್ರವಾಯಿತು ; ಇಂಗ್ಲಿಷ್‌ನವರ ಹೆಸರುಗಳನ್ನು ಅಂಟಿಸಿಕೊಂಡಿದ್ದ ರಸ್ತೆಗಳು ಮತ್ತು ಉದ್ಯಾನವನಗಳು ಭಾರತದ ಮಹಾನ್ ವ್ಯಕ್ತಿಗಳ ಪುಣ್ಯನಾಮಗಳನ್ನು ಧರಿಸಿ ನಿಂತವು. ಮೊತ್ತಮೊದಲ ಬಾರಿಗೆ ಮಹಾನಗರ ಪಾಲಿಕೆಯಲ್ಲಿ ಶಿಕ್ಷಣಾಧಿಕಾರಿಯೊಬ್ಬನ ನೇತೃತ್ವದಲ್ಲಿ ಶಿಕ್ಷಣ ಇಲಾಖೆಯೊಂದು ಸ್ಥಾಪಿತವಾಯಿತು. ಮಕ್ಕಳಿಗೆ ಉಚಿತ ಶಿಕ್ಷಣ ನೀಡುವ ವ್ಯವಸ್ಥೆಯುಳ್ಳ ಪ್ರಾಥಮಿಕ ಶಾಲೆಗಳು ನಗರದಾದ್ಯಂತ ಪ್ರಾರಂಭವಾದವು. ಬಡಜನರಿಗಾಗಿ ಉಚಿತ ವೈದ್ಯಕೀಯ ಚಿಕಿತ್ಸಾಲಯಗಳು ನಗರದ ಎಲ್ಲ ಬಡಾವಣೆಗಳಲ್ಲೂ ನಿರ್ಮಾಣಗೊಂಡವು. ಅಗತ್ಯ ಕಂಡೆಡೆಗಳಲ್ಲಿ ಮಕ್ಕಳಿಗೆ ಹಾಲೂ ಸರಬರಾಜಾಗತೊಡಗಿತು ; ಪೌರರಲ್ಲಿ ನಾಗರಿಕಪ್ರಜ್ಞೆ ಮೂಡುವಂತೆ ಮಾಡಲು 'ಕಲ್ಕತ್ತ ಮ್ಯುನಿಸಿಪಲ್ ಗೆಜೆಟ್' ಎಂಬ ಸಾಪ್ತಾಹಿಕ ಪತ್ರಿಕೆ ಪ್ರಾರಂಭವಾಯಿತು. ಮಾರುಕಟ್ಟೆಗಳಲ್ಲಿ ಸ್ವದೇಶಿ ಉತ್ಪನ್ನಗಳಿಗೆ ಪ್ರೋತ್ಸಾಹ ದೊರೆಯಿತು ; ಬ್ರಿಟಿಷ್ ಅಧಿಕಾರಿಗಳಿಗೆ ಹಿಂದಿನಿಂದ ನಡೆದುಕೊಂಡು ಬರುತ್ತಿದ್ದ ಪೌರಸ್ವಾಗತ ಸಂಪ್ರದಾಯ ನಿಂತುಹೋಯಿತು. ಅದಕ್ಕೆ ಬದಲು ಬಾಪೂಜಿ, ಲಾಲಾಜಿ, ಮೋತಿಲಾಲ್, ಮಾಳವೀಯ, ತಿಲಕ್ ಮೊದಲಾದ ರಾಷ್ಟ್ರನಾಯಕರಿಗೆ ನಾಗರಿಕರ

ಪರವಾದ ಅಭಿನಂದನೆಗಳು ಸಿಗುವಂತಾದವು ; (ಅಂದಿನ ತನಕ ಬ್ರಿಟಿಷ್ ವೈಸ್‌ರಾಯ್ ಅಥವಾ ಗವರ್ನರ್ ಬಿಟ್ಟರೆ ಬೇರಾರಿಗೂ ಸಾರ್ವಜನಿಕ ಮನ್ನಣೆಗೆ ಅವಕಾಶವಿರಲಿಲ್ಲ.)

ಸ್ವರಾಜ್ ವಾದಿಗಳತ್ತ ಈ ಬಗೆಯ ಸುಧಾರಣೆಗಳಿಂದ ಕಲ್ಕತ್ತ ನಗರಸಭೆ ಆನಂದದ ಅದ್ದೂರಿಯ ದಿನಗಳನ್ನು ಕಂಡಿತು. ದಾಸ್ ಮತ್ತು ಬೋಸರ ಅವಿಶ್ರಾಂತ ಶ್ರಮದಿಂದಾಗಿ ಬಂಗಾಳದ ಹೂಗ್ಲಿ ಜಿಲ್ಲೆಯಲ್ಲಿರುವ ತಾರಕೇಶ್ವರ ದೇವಾಲಯದ ಆಡಳಿತವನ್ನು ಸ್ವಾಯತ್ತಗೊಳಿಸುವ ಚಳವಳಿಗೂ ಚಾಲನೆ ಸಿಕ್ಕಿತು. ೧೯೨೪ರಲ್ಲಿ ಬರಾಜ್ ಗಂಜ್‌ನಲ್ಲಿ ನಡೆದ ಬಂಗಾಳ ಕಾಂಗ್ರೆಸ್ ಅಧಿವೇಶನದಲ್ಲಿ ಚಿತ್ತರಂಜನರು ಮಂಡಿಸಿದ 'ಬಂಗಾಳ ಒಪ್ಪಂದ' ಎಂಬ ಪ್ರಸ್ತಾವ ಮನ್ನಣೆ ಪಡೆದು ಹಿಂದೂ ಮುಸ್ಲಿಂ ಬಾಂಧವ್ಯ ಭದ್ರಗೊಳ್ಳಲು ನೆರವಾಯಿತು. ಅದೇ ಅಧಿವೇಶನದಲ್ಲಿ ಕ್ರಾಂತಿಕಾರಿ ತರುಣ ಗೋಪೀನಾಥ ಸಹಾ, ಪೊಲೀಸ್ ಕಮೀಷನರ್ ಮೇಲೆ ಹಲ್ಲೆ ನಡೆಸಿದನೆಂಬ ಆಪಾದನೆಯ ಮೇರೆಗೆ, ಅವನನ್ನು ಚಿತ್ರ ವಿಚಿತ್ರ ರೀತಿಯ ಹಿಂಸೆಗೊಳಗುಮಾಡಿ, ಅವನ ದುರಂತಕ್ಕೆ ಕಾರಣವಾದ ಪೊಲೀಸ್ ದಬ್ಬಾಳಿಕೆ ಕುರಿತ ಪ್ರತಿಭಟನೆಯೂ ಆ ಪ್ರಸ್ತಾವದಲ್ಲಿ ಸೇರಿ ಅಂಗೀಕೃತವಾಯಿತು. ಇದರಿಂದಾಗಿ, ಯುವಶಕ್ತಿ ಪ್ರಚಂಡ ಪರಮಾಣು ಶಕ್ತಿಯಾಗಿ ರೂಪುಗೊಂಡು ಕ್ರಾಂತಿಕಾರರ ಚಟುವಟಿಕೆಗಳಲ್ಲಿ ಪ್ರವೃತವಾಯಿತು. ಇಂತಹ ಕ್ರಾಂತಿಗೆ ಪ್ರೇರಕ ಹಾಗೂ ಪ್ರಚೋದನಾಶಕ್ತಿ ಸುಭಾಸ್ ಚಂದ್ರಬೋಸರೆಂದು ನಿರ್ಧರಿಸಿ, ಸರ್ಕಾರ ೧೯೨೪ ಅಕ್ಟೋಬರ್ ೨೫ರಂದು ಅವರನ್ನು ದಸ್ತಗಿರಿ ಮಾಡಿತು. ಅಂದು ಬೆಳಗಿನ ಜಾವವೇ ಕಲ್ಕತ್ತ ಡೆಪ್ಯುಟಿ ಕಮೀಷನರ್ ಆಫ್ ಪೊಲೀಸ್ ಬಂದು, 'Mr. Bose, I have warrant for your arrest under the regulation thread of 1818' ಎಂದು ಹೇಳಿ ಬಂಧಿಸಿ ಕರೆದೊಯ್ದು. ಇದನ್ನು ಕಂಡು ದಾಸ್ ಕೆಂಡಾಮಂಡಲವಾದರು.

'ರಾಷ್ಟ್ರಪ್ರೇಮ ಅಪರಾಧವೆಂದು ಭಾವಿಸುವುದರಲ್ಲಿ ನಾನು ಮಹಾಪರಾಧಿ. ನಗರಸಭೆಯ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಮಾತ್ರವಲ್ಲ, ಅದರ ಮೇಯರ್ ಕೂಡ ಅಪರಾಧಿಯೇ ! ನಿಮಗೆ ತಾಖತ್ ಇದ್ದರೆ ನನ್ನನ್ನೂ ದಸ್ತಗಿರಿ ಮಾಡಿ' ಎಂದು ಸವಾಲೆಸೆದರು. ಪರಿಣಾಮ ಸೊನ್ನೆ. ಆದರೆ ಅವರ ಆಗ್ರಹದಿಂದಾಗಿ ಸುಭಾಸ್‌ರವರಿಗೆ ಒಬ್ಬ ಪೊಲೀಸ್ ಅಧಿಕಾರಿ ಮತ್ತು ಒಬ್ಬ ಸೆರೆಮನೆ ಅಧಿಕಾರಿ ಇಬ್ಬರ ಜೊತೆಯಲ್ಲಿ ನಗರಸಭಾ ಕಚೇರಿಯ ಕೆಲಸಕ್ಕೆ ಹಾಜರಾಗಲು ಅನುಮತಿ ಸಿಕ್ಕಿತು. ಸುಮಾರು ಆರು ವಾರಗಳ ಕಾಲ ಹೀಗೇ ನಡೆಯಿತು. ಅದರೆ ಆ ಅಧಿಕಾರಿದ್ವಯರ ಅಸಭ್ಯ ವರ್ತನೆಗೆ ಬೇಸತ್ತು ಸುಭಾಸ್ ಗಂಭೀರವಾಗಿ ತರಾಟೆಗೆ ತೆಗೆದುಕೊಳ್ಳುತ್ತಿದ್ದರು. ಅದರ ಪರಿಣಾಮ ಕಲ್ಕತ್ತದಿಂದ ಬರ್ಹಾಮ್ ಸೆರೆಮನೆಗೆ ವರ್ಗಾವಣೆ. ಅಲ್ಲಿ ಎರಡು ತಿಂಗಳು ಕಳೆದವು.

ಇದ್ದಕ್ಕಿದ್ದಂತೆ ಒಂದುದಿನ ಅವರನ್ನು ಕಲ್ಕತ್ತೆಗೆ ಕರೆತಂದು ಲಾಲ್ ಬಜಾರ್ ಪೊಲೀಸ್ ಲಾಕಪ್ಪಿನಲ್ಲಿಡಲಾಯಿತು. ಅಲ್ಲಿದ್ದದ್ದು ಕೆಲವೇ ದಿನಗಳು. ಮತ್ತೆ ಅಲ್ಲಿಂದ ಬರ್ಮಾಕ್ಕೆ ಗಡೀಪಾರು. ನಾಲ್ಕು ದಿನಗಳವರೆಗಿನ ಸಮುದ್ರ ಪ್ರಯಾಣ. ಶಸ್ತ್ರ ಸಜ್ಜಿತ ಪೊಲೀಸ್ ಪಹರೆಯಲ್ಲಿ ರಂಗೂನಿನಲ್ಲಿ ಸುಭಾಸ್ ಮತ್ತು ಅವರೊಡನಿದ್ದ ಏಳು ಜನ ಇತರ ಕೈದಿಗಳನ್ನೂ ಇಳಿಸಲಾಯಿತು. ಅನಂತರ ಒಂದು ಹಗಲಿನ ಪ್ರಯಾಣ ಪೂರೈಸಿ ಮಾಂಡಲೇ ಮುಟ್ಟಲಾಯಿತು. ಮಾಂಡಲೇ ಜೈಲ್ ಅಂದ ಕೂಡಲೆ ಸುಭಾಸ್ ತುಂಬಾ ಹೆಮ್ಮೆಪಟ್ಟುಕೊಂಡರು. ಏಕೆಂದರೆ ಲೋಕಮಾನ್ಯ ತಿಲಕ್ ಆರು ವರ್ಷ, ಲಾಲಾ ಲಜಪತರಾಯರು ಒಂದು ವರ್ಷ ಸೆರೆಯಾಳಾಗಿದ್ದುದ್ದು ಅದೇ ಜೈಲಿನಲ್ಲಿ ! ಯಾವುದೇ ಇರಲಿ, ಯಾರೇ ಇದ್ದಿರಲಿ ಜೈಲು ಜೈಲೇ. ಸುಭಾಸ್ ನರಕಯಾತನೆ ಅನುಭವಿಸಿದರು. ಕಾಯಿಲೆ ಬಿದ್ದರು. ಬಂದ ಜ್ವರ ನ್ಯುಮೋನಿಯಾಕ್ಕೆ ತಿರುಗಿತು. ಆರೋಗ್ಯ ಪರೀಕ್ಷೆಗಾಗಿ ರಂಗೂನಿಗೆ ಕರೆದುಕೊಂಡು ಹೋಗಲಾಯಿತು. ಜೈಲಿನಿಂದ ಕೂಡಲೇ ಬಿಡುಗಡೆ ಮಾಡುವಂತೆ ಅಲ್ಲಿನ ವೈದ್ಯಕೀಯ ಮಂಡಳಿ ಶಿಫಾರಸು ಮಾಡಿತು. ಆದರೆ ಬಿಡುಗಡೆ ಮಾಡಲಿಲ್ಲ. ಅವರನ್ನು ಇನ್ ಸೆಯಿನ್ ಸೆರೆಮನೆಗೆ ಸ್ಥಳಾಂತರಿಸಲಾಯಿತು. ಸುಭಾಸರ ಆರೋಗ್ಯ ತುಂಬಾ ಗಂಭೀರ ರೂಪ ತಾಳಿದ್ದರಿಂದ ಅಲ್ಲಿನ ಜೈಲ್ ಸೂಪರಿಂಟೆಂಡೆಂಟ್ ಸರ್ಕಾರಕ್ಕೆ ವರದಿ ಕಳುಹಿಸಿದರು. ಪ್ರಯೋಜನವಾಗಲಿಲ್ಲ. ಹೊರದೇಶದಲ್ಲಿ ಚಿಕಿತ್ಸೆ ಮಾಡಿಸುವುದಾದರೆ ಸುಭಾಸ್‌ರಿರುವ ಹಡಗು ಭಾರತದ ಕರಾವಳಿಯನ್ನು ಸ್ಪರ್ಶಿಸದೆ ಹೋಗಲಿ. ಅದಕ್ಕೊಪ್ಪಿದರೆ ಮಾತ್ರ ಸುಭಾಸರ ಬಿಡುಗಡೆ ಸಾಧ್ಯ ಎಂದು ಅಲ್ಲಿನ ಸರ್ಕಾರ ತಿಳಿಸಿತು. ಅದನ್ನು ಕೇಳಿದ ಕೂಡಲೇ ಸುಭಾಸ್ ಬರ್ಮಾದ ಇನ್ಸ್‌ಪೆಕ್ಟರ್ ಜನರಲ್‌ಗೆ ಪತ್ರ ಬರೆದು – 'ನನ್ನ ಪ್ರಾಣಕ್ಕಿಂತಲೂ ಅಮೂಲ್ಯವಾದದ್ದು ನನ್ನ ಆತ್ಮಗೌರವ. ಅದನ್ನೂ ಮತ್ತು ಭರತಖಂಡದ ರಾಜಕೀಯ ಭವಿಷ್ಯತ್ತನ್ನೂ, ಪವಿತ್ರ ಹಾಗೂ ಅವ್ಯಕ್ತ ಹಕ್ಕುಗಳನ್ನು ಕೇವಲ ನನ್ನ ಪ್ರಾಣದುಳಿವಿಗಾಗಿ ಮಾರಿಕೊಳ್ಳಲಾರೆ !' ಎಂದು ತಿಳಿಸಿದರು. ಬ್ರಿಟಿಷ್ ದಬ್ಬಾಳಿಕೆಗೆ ಸೊಪ್ಪುಹಾಕದ ಸುಭಾಸರನ್ನು ಅಂದಿನ ಸಂಯುಕ್ತ ಪ್ರಾಂತದ ಅಲ್ಮೋರ ಜೈಲಿಗೆ ವರ್ಗಾಯಿಸುವಂತೆ ಸರ್ಕಾರ ಆದೇಶಿಸಿತು. ಮಹಾಮಾನವನನ್ನು ಹೊತ್ತು ರಂಗೂನ್ ಬಿಟ್ಟು ಹೊರಟ ಪುಟ್ಟ ಹಡಗು ನಾಲ್ಕು ದಿನಗಳ ಮೇಲೆ ಹೂಗ್ಲಿ ನದಿಮುಖದಲ್ಲಿರುವ ಡೈಮಂಡ್ ಹಾರ್ಬರನ್ನು ತಲುಪಿತು. ಅಲ್ಲಿಂದ ದೋಣಿಯೊಂದರಲ್ಲಿ ಸುಭಾಸರನ್ನು ಕಲ್ಕತ್ತೆಗೆ ಕೊಂಡೊಯ್ದರು. ಅಲ್ಲಿ ಡಾ॥ ನೀಲರತನ್ ಸರ್ಕಾರ್, ಡಾ॥ ಬಿ.ಸಿ. ರಾಯ್ ಮತ್ತು ರಾಜ್ಯಪಾಲರ ವೈದ್ಯರನ್ನೊಳಗೊಂಡ ವೈದ್ಯಕೀಯ ಮಂಡಳಿ ಅವರನ್ನು ಪರೀಕ್ಷಿಸಿತು. ಅನಂತರ ೧೯೨೭ರ ಮೇ ತಿಂಗಳಲ್ಲಿ ಸುಭಾಸರನ್ನು ಬಿಡುಗಡೆ ಮಾಡಲಾಯಿತು.

*   *   *

ಸುಭಾಸ್ ಚಂದ್ರಬೋಸರ ಕರ್ತೃತ್ವಶಕ್ತಿ, ಚಾಣಾಕ್ಷತನ, ಸಂಘಟನಾ ಚತುತರೆಗಳು ಮುಂದುವರಿಯುತ್ತಿರುವಾಗಲೆ ಅವರ ಎಲ್ಲ ಕಾರ್ಯಗಳ ಮೂಲಶಕ್ತಿ ಸ್ವರೂಪರಾಗಿದ್ದ ದೇಶಬಂಧು ಚಿತ್ತರಂಜನದಾಸ್‌ರವರು ೧೯೨೫ ಜೂನ್ ೧೬ರಂದು ನಿಧನರಾದರು. ಅಂದಿಗೆ ಆರು ತಿಂಗಲ ಹಿಂದೆಯಷ್ಟೇ ಕರ್ನಾಟಕದ ಬೆಳಗಾವಿಯಲ್ಲಿ, ಗಾಂಧೀಜಿಯವರ ಅಧ್ಯಕ್ಷತೆಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ದಾಸರು ತುಂಬಾ ಆಶಾವಾದಿಗಳಾಗಿ ನುಡಿದು, ಭರವಸೆ ಮೂಡಿಸಿದ್ದರು. ಅಂತಹ ಮಹಾನುಭಾವರ ಮರಣದಿಂದಾಗಿ ಬೋಸರಿಗೆ ತಮ್ಮ ಬೆನ್ನೆಲುಬೇ ಮುರಿದಂತಾಗಿತ್ತು. ಆದರೂ ಸ್ವಾತಂತ್ರ್ಯ ಹೋರಾಟದ ಕೆಚ್ಚು ಕರಗಲಿಲ್ಲ. ಅದು ಮತ್ತಷ್ಟು ವಿರಾಟ್ ಸ್ವರೂಪ ತಾಳಿತು. ರಾಷ್ಟ್ರೀಯ ಕಾಂಗ್ರೆಸ್‌ನಲ್ಲಿ ಒಗ್ಗಟ್ಟು ಮೂಡಿ ಸಂಘಟನೆ ಯಶಸ್ವಿಯಾಯಿತು. ಅದಕ್ಕೆ ಪುಟಕೊಟ್ಟದ್ದು ಅಂದಿನ ವೈಸ್‌ರಾಯ್ ಲಾರ್ಡ್ ಇರ್ವಿನ್ ನೇಮಿಸಿದ ಸೈಮನ್ ಆಯೋಗ. ಸರ್ ಜಾನ್ ಸೈಮನ್ ನೇತೃತ್ವದ ಈ ಆಯೋಗದ ಮುಖ್ಯ ಕಾರ್ಯ ಭಾರತದ ರಾಜಕೀಯ ಸ್ಥಿತಿಗತಿಗಳನ್ನು ಪರಿಶೀಲಿಸಿ, ಅಗತ್ಯವಾದ ಸಂವಿಧಾನಾತ್ಮಕ ಸುಧಾರಣೆಗಳನ್ನು ಶಿಫಾರಸು ಮಾಡುವುದು. ಭಾರತದ ರಾಷ್ಟ್ರೀಯ ಕಾಂಗ್ರೆಸ್‌ಗೆ ಇದು ಒಪ್ಪಿತವಾಗಲಿಲ್ಲ.. ಕೂಡಲೇ ಅದು ಪ್ರತಿಕ್ರಿಯಿಸಿ, ಭಾರತದ ಭವಿಷ್ಯವನ್ನು ನಿರ್ಧರಿಸುವ ಹಕ್ಕು ಬ್ರಿಟನ್ನಿನ ಸಂಸತ್ತಿಗಿಲ್ಲ ಎಂದು ಸಾರಿ, ಸೈಮನ್ ಆಯೋಗವನ್ನು ಬಹಿಷ್ಕರಿಸುವುದಾಗಿ ಘೋಷಿಸಿತು. ಆ ಪ್ರಕಾರ ೧೯೨೮ರ ಫೆಬ್ರವರಿಯಲ್ಲಿ ಸೈಮನ್ ಆಯೋಗ ನಿಷೇಧಿಸಿ ಅಖಿಲ ಭಾರತ ಮಟ್ಟದಲ್ಲಿ ಹರತಾಳ ನಡೆಸಿತು. ಮಹಿಳೆಯರು, ಯುವಕರು, ವಿದ್ಯಾರ್ಥಿಗಳು ಸೇರಿ 'ಇಂಡಿಪೆಂಡೆನ್ಸ್ ಆಫ್ ಇಂಡಿಯಾ ಲೀಗ್' ಎಂಬ ವೇದಿಕೆಯನ್ನು ಸ್ಥಾಪಿಸಿ ನೆಹರೂ ಮತ್ತು ಸುಭಾಸ್‌ರವರ ಜಂಟಿ ನಾಯಕತ್ವದಲ್ಲಿ ಭಾರತಾದ್ಯಂತ ಶಾಖೆಗಳನ್ನು ತೆರೆದರು. ವೇದಿಕೆಯ ಮೂಲ ಉದ್ದೇಶ ಸಂಪೂರ್ಣ ಸ್ವಾತಂತ್ರ್ಯಕ್ಕಾಗಿ ಒತ್ತಡ ತರುವುದೇ ಆಗಿತ್ತು. ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಗಳೂ ಆಗಿದ್ದ ನೆಹರೂ ಮತ್ತು ಸುಭಾಸ್‌ರವರು ನೇತಾರರುಗಳಾದ ಮೇಲೆ ಯುವ ವೇದಿಕೆಗೆ ಸಾವಿರಾಳ ಬಲ ಬಂತು. ಅಶ್ವಿನೀ ದೇವತೆಗಳಂತಿದ್ದ ಅವರಿಬ್ಬರೂ ಸ್ತ್ರೀ, ಕಾರ್ಮಿಕ, ವಿದ್ಯಾರ್ಥಿ ಮೊದಲಾದ ಯುವ ಸಂಘಟನೆಗಳಿಗೆ ಪ್ರಾಣವಾಯುವಾದರು. ಆ ಮುಂದೆ ನಾಡಿನ ನಾಡಿ ನಾಡಿಯಲ್ಲೂ ಸ್ವಾತಂತ್ರ್ಯದ ನೆತ್ತರು ಹರಿದಾಡುವಂತೆ ಮಾಡಿದರು.

೧೯೨೮ರ ಆಗಸ್ಟ್‌ನಲ್ಲಿ ಕಲ್ಕತ್ತದಲ್ಲಿ ಮೋತಿಲಾಲ್ ನೆಹರೂರವರ ಅಧ್ಯಕ್ಷತೆಯಲ್ಲಿ ನಡೆದ ಅಖಿಲ ಭಾರತ ಯುವ ಕಾಂಗ್ರೆಸ್ ಸಮ್ಮೇಳನದಲ್ಲಿ ಸಮ್ಮೇಳನದ ಸ್ವಾಗತಾಧ್ಯಕ್ಷರಾಗಿ ಸುಭಾಸ್ ಮಾಡಿದ ಪ್ರಾಸ್ತಾವಿಕ ಭಾಷಣ ಜನಮನವನ್ನು ಬಡಿದೆಬ್ಬಿಸಿತು. ತರುಣ ಚೇತನಗಳಿಗೆ ನವಚೈತನ್ಯ ತುಂಬಿತು.

ಬಂಧುಗಳೇ,

ನನ್ನ ಕಣ್ಣಲ್ಲಿ ಸದಾ ಕಟ್ಟಿರುವ ಕನಸು ಒಂದೇ. ಅದು ಪೂರ್ಣ ಸ್ವಾತಂತ್ರ್ಯ, ದೇಶಸ್ವಾತಂತ್ರ್ಯ ತಪಸ್ಸಿನಿಂದ ಪ್ರಾಪ್ತವಾಗುವುದಲ್ಲ. ಅದು ಹೋರಾಟದಿಂದ ಲಭಿಸುವಂಥದು. ಸ್ವಾತಂತ್ರ್ಯಲಕ್ಷ್ಮಿ ಹೇಡಿಗಳಿಗೆಂದಿಗೂ ಜಯಮಾಲೆ ಹಾಕುವುದಿಲ್ಲ. ಇಂದು ಭಾರತಕ್ಕೆ ಬೇಕಾಗಿರುವುದು ನಿಷ್ಕ್ರಿಯಾರೂಪಿ ತತ್ವ ಜಿಜ್ಞಾಸೆಯಲ್ಲ. ತೀಕ್ಷ್ಣ ಕಾರ್ಯೋನ್ಮುಖತೆ. ಪ್ರತಿಯೊಬ್ಬನೂ ಪರಿಸ್ಥಿತಿಗೆ ಸ್ಪಂದಿಸಬೇಕು. ನಮ್ಮ ಪುಣ್ಯಭೂಮಿಯಲ್ಲಿ ಭಾರತದಲ್ಲಿ ಆಶ್ರಮಗಳಿಗೆ ಕೊರತೆಯಿಲ್ಲ. ತಪಸ್ವಿಗಳಿಗೆ ಅಭಾವವಿಲ್ಲ. ಅಂತಹ ತಪೋಧನರನ್ನು ನಾವು ಅಂದೂ ಪೂಜಿಸಿದ್ದೇವೆ, ಇಂದೂ ಗೌರವಿಸುತ್ತಲೇ ಇದ್ದೇವೆ. ಆದರೆ ಭಾರತವನ್ನು ಈಗಿನ ಕಷ್ಟಕೋಟಲೆಗಳಿಂದ ದೂರಮಾಡಲು, ಅದರ ನಿರ್ಮಾಣಗೈಯಲು ತಪಸ್ಸಷ್ಟೇ ಸಾಕಾಗುವುದಿಲ್ಲ. ಅದೂ ಬೇಕು, ಆದರೆ ಅದಕ್ಕೂ ಮಿಗಿಲಾಗಿ ಬೇಕಾಗಿರುವುದು ಕ್ರಿಯಾಶೀಲ ದಕ್ಷ ಆಡಳಿತ, ವ್ಯಕ್ತಿತ್ವದ ದೃಢ ಮನಸ್ಸು. ನೀವು ಬ್ರಿಟಿಷ್ ಸರ್ಕಾರಕ್ಕೆ ಹನ್ನೆರಡು ತಿಂಗಳ ಅವಕಾಶ ಕೊಟ್ಟಿದ್ದೀರಿ ದೇಶ ಬಿಟ್ಟುಕೊಡಲು. ಮಾತಿನಲ್ಲಿ ಮಾತಿಲ್ಲದ ಜಾತಿ ಡೊಂಬರಾದ ಬ್ರಿಟಿಷರನ್ನು ಇನ್ನೂ ನೀವು ನಂಬುವಿರಾ ? ತಿಳಿದೂ ತಿಳಿದು ನಾವೇಕೆ ಹನ್ನೆರಡು ತಿಂಗಳುಗಳ ಕಾಲ ನಮ್ಮ ಧ್ಯೇಯಧ್ವಜವನ್ನು ಕೆಳಗಿಳಿಸಿ ಕೂರಬೇಕು ? ಆ ಸರ್ಕಾರದ ನೀತಿಯ ಬಗೆಗೆ ಈಗ ನಮ್ಮಲ್ಲಿ ವಿಶ್ವಾಸ ಉಳಿದಿಲ್ಲ. ಇದನ್ನೇಕೆ ಬ್ರಿಟಿಷ್ ಸರ್ಕಾರದ ಮುಖಕ್ಕೆ ಹೊಡೆದು ಹೇಳಬಾರದು ?'

ಸುಭಾಸ್ ಆಡಿ ಸೋಲುವವರಲ್ಲ, ಮಾಡಿ ಗೆಲ್ಲುವವರು. ಹಿಡಿದ ಕಾರ್ಯ ಇಲ್ಲವೆ ಮಾಡಿದ ಪ್ರತಿಜ್ಞೆ ಈಡೇರುವವರೆಗೂ ಪಟ್ಟುಬಿಡದೆ ಮುಂದೆ ಸಾಗುವ ಮಹಾನ್ ಸಾಹಸಿ, ನರ ಹರಿಯಲಿ, ಶಿರಬೀಳಲಿ ಗುರಿ ಮುಟ್ಟುವುದು ಅವರ ಮುಖ್ಯ ಧ್ಯೇಯ. ಆ ಧ್ಯೇಯಕ್ಕಾಗಿ ದೇಹ ಸಮರ್ಪಿಸಲೂ ಅವರು ಸಿದ್ಧ. ಅದರಿಂದಾಗಿ ಅವರಿತ್ತ ಪ್ರಚೋದನೆ ಪ್ರೇರಣೆಗಳು ಯುವ ಜನತೆಯನ್ನು ಎಂತೋ ಅಂತು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯನ್ನೂ ಪ್ರಚೋದಿಸಿದವು. ಕಾರ್ಯಕಾರಿ ಸಮಿತಿ ೧೯೩೦ ಜನವರಿ ೨೬ನೆಯ ದಿನವನ್ನು ರಾಷ್ಟ್ರಾದ್ಯಂತ ಸ್ವಾತಂತ್ರ್ಯ ದಿನವಾಗಿ ಆಚರಿಸಬೇಕೆಂದು ಕರೆನೀಡಿತು ಮತ್ತು ಭಾರತ ಸ್ವಾತಂತ್ರ್ಯ ಕುರಿತ ಪ್ರತಿಜ್ಞಾ ವಚನವನ್ನು ಸ್ವೀಕರಿಸಿತು. ಇದು ರಾಷ್ಟ್ರಕ್ಕೆ ಹೊಸ ಸ್ಫೂರ್ತಿ ಕೊಟ್ಟಿತು. ಗಾಂಧೀಜಿಯವರೂ ತಮ್ಮ ಉಪ್ಪಿನ ಸತ್ಯಾಗ್ರಹ ಆರಂಭಿಸಿದರು. ಅಹಮದಾಬಾದಿನಿಂದ ಸಮುದ್ರ ತೀರದಲ್ಲಿದ್ದ ದಂಡಿಯವರೆಗೆ ತಮ್ಮ ಮೂರು ವಾರಗಳ ಚಾರಿತ್ರಿಕ ಮಹತ್ವದ ಪಾದಯಾತ್ರೆಯನ್ನು ಕೈಕೊಂಡರು. ದಂಡಿಯಲ್ಲಿ ಉಪ್ಪಿನ ಹರಳು ಎತ್ತುವ ಮೂಲಕ ತಮ್ಮ ಚಳವಳಿ ಆರಂಭಿಸಿದರು. ಸವಿನಯ ಕಾನೂನುಭಂಗ, ಬ್ರಿಟಿಷ್ ಸರಕುಗಳ ಬಹಿಷ್ಕಾರ, ಪ್ರಜಾಕ್ಷೋಭೆಗೆ ಕಾರಣವಾಗುವ ಶಾಸನಗಳನ್ನು ಮುರಿಯುವುದು ಮತ್ತು ಹೆಂಡದಂಗಡಿಗಳ ಮುಂದೆ ಪಿಕೆಟಿಂಗ್ ನಡೆಸುವುದು – ಮೊದಲಾದವು ಚಳವಳಿ ರೂಪುತಾಳಿ ಸಮಗ್ರ ಆಂದೋಲನಕ್ಕೆ ನಾಂದಿಹಾಡಿದವು. ಇದನ್ನು ಹತ್ತಿಕ್ಕಲು ಬ್ರಿಟಿಷ್ ಸರ್ಕಾರ ಬಹು ಕ್ರೂರ ಹಾಗೂ ಕಠಿಣ ಕ್ರಮ ತೆಗೆದುಕೊಂಡಿತು. ಸಿಕ್ಕಸಿಕ್ಕವರನ್ನು

ಗುಂಡಿಟ್ಟು ಕೊಂದಿತು. ಬಾಯ್‌ನೆಟ್‌ಗಳಿಂದ ತಿವಿದು ಸಾಯಿಸಿತು. ಲಾಠಿಗಳಿಂದ ಬಡಿದು ಹೆಣವಾಗಿಸಿತು. ಆದರೂ ಭಾರತೀಯರ ಸ್ಫೂರ್ತಿಯ ಚಿಲುಮೆ ಬತ್ತಲಿಲ್ಲ. ಅವರೂ ಮರುಹೋರಾಟಕ್ಕೆ ನಿಂತರು. ಚಿತ್ತಗಾಂಗ್‌ನಲ್ಲಿ ಸೂರ್ಯಸೇನ ಎಂಬ ರಾಷ್ಟ್ರಭಕ್ತನ ನಾಯಕತ್ವದಲ್ಲಿ ತರುಣ ತೇಜಸ್ವಿಗಳ ತಂಡವೊಂದು ನಿರ್ಮಾಣವಾಯಿತು. ಆಯುಧಾಗಾರ ಲೂಟಿ ಮಾಡಿ, ಅಲ್ಲಿನ ಅನೇಕಾನೇಕ ಶಸ್ತ್ರಾಸ್ತ್ರಗಳನ್ನು ಅಪಹರಿಸಿಕೊಂಡು ಸನಿಹದ ಬೆಟ್ಟ ಸೇರಿಕೊಂಡಿತು. ಬೆಟ್ಟದ ಮೇಲಿಂದಲೆ ಪೊಲೀಸರೊಡನೆ ಗೆರಿಲ್ಲ ಮಾದರಿಯ ಯುದ್ಧಮಾಡಿ ತಾತ್ಕಾಲಿಕ ಜಯಪಡೆಯಿತು. ರಾಷ್ಟ್ರಾದ್ಯಂತ ಭುಗಿಲೆದ್ದ ಈ ಕ್ರಾಂತಿಕಾರಕ ಚಟುವಟಿಕೆಗಳನ್ನು ಹತ್ತಿಕ್ಕಲು ಸರ್ಕಾರ ಗಾಂಧೀಜಿ, ಸುಭಾಸ್, ಜೆ. ಎಂ. ಸೇನಗುಪ್ತ ಮೊದಲಾದವರನ್ನು ದಸ್ತಗಿರಿ ಮಾಡಿತು. ಸುಭಾಸ್, ಜೆ. ಎಂ. ಸೇನಗುಪ್ತರನ್ನು ಸಹಕೈದಿಗಳೊಂದಿಗೆ ಹಿಡಿದು ಲಾಠಿಯಿಂದ ಸಿಕ್ಕಾಪಟ್ಟೆ ಥಳಿಸಿತು. ಇಷ್ಟಾದರೂ ಸುಭಾಸ್ ಸೆರೆಮನೆಯಲ್ಲಿದ್ದೇ ಕಲ್ಕತ್ತದ ಮೇಯರ್ ಆಗಿ ಆಯ್ಕೆಯಾಗಿ ಆ ವರ್ಷದ ಕಡೆಯಲ್ಲಿ ಬಿಡುಗಡೆಯಾದರು.

೧೯೩೧ ಜನವರಿ ೨೬ ಬಂತು. ಅದು ಸ್ವಾತಂತ್ರ್ಯಪ್ರೇಮಿಗಳ ಎರಡನೆಯ ಸ್ವಾತಂತ್ರ್ಯ ದಿನಾಚರಣೆಯ ಶುಭದಿನ. ಅಂದು ಕಲ್ಕತ್ತದ ಮಹಾಪೌರ ಸುಭಾಸ್ ಚಂದ್ರಬೋಸ್ ಅನೇಕ ಜನ ಹಿರಿಯ ಅಧಿಕಾರಿಗಳು ಅಭಿಮನಿಗಳು ಹಾಗೂ ಕ್ರಾಂತಿಕಾರರ ಜೊತೆ ಕಲ್ಕತ್ತ ನಗರದ ರಾಜಬೀದಿಯಲ್ಲಿ ಭಾರಿ ಮೆರವಣಿಗೆ ಹೊರಟರು. ಸಭೆ, ಮೆರವಣಿಗೆಗಳನ್ನು ಪೊಲೀಸ್ ನಿಷೇಧಿಸಿತ್ತು. ಆದರೂ ಅದನ್ನು ಉಲ್ಲಂಘಿಸಿ ಮೆರವಣಿಗೆ ಮ್ಯುನಿಸಿಪಲ್ ಕಾರ್ಪೊರೇಷನ್ ಕಟ್ಟಡದಿಂದ ಮೈದಾನದವರೆಗೆ ಮುಂದುವರಿಯಿತು. ಮೆರವಣಿಗೆ ಕೋಟೆ ಮೈದಾನ ದಾಟಿ ಮುಂದೆ ಸಾಗುತ್ತಿದ್ದಂತೆಯೇ ಒಂದು ಪ್ರಬಲ ಅಶ್ವಾರೋಹಿದಳ ಅದರ ಮೇಲೆರಗಿ ಮುಖಮೂತಿ ನೋಡದೆ ಬಡಿಯಿತು. ಅನೇಕರಿಗೆ ಕೈಕಾಲುಗಳು ಮುರಿದುವು, ತಲೆ ಒಡೆದು ರಕ್ತ ಕೋಡಿ ಹರಿಯಿತು. ಸುಭಾಸ್ ಚಂದ್ರಬೋಸರಿಗೂ ತೀವ್ರ ಗಾಯಗಳಾದವು. ಅವರನ್ನು ಬಂಧಿಸಿ ಸೆರೆಮನೆಗೊಯ್ದರು. ಅಲ್ಲಿ ಚಿತ್ರವಿಚಿತ್ರ ಹಿಂಸೆ ! ಅವರ ಹನ್ನೊಂದು ಸೆರೆಮನೆವಾಸಗಳಲ್ಲಿ ಇದು ಅತಿಕ್ರೂರ ಹಾಗೂ ಅಮಾನುಷ ರೂಪದ್ದಾಗಿತ್ತು. ಅವರು ತುಂಬಾ ನೊಂದರು, ಬೆಂದರು. ರಕ್ತಸಿಕ್ತವಾದ ಅವರ ಬಟ್ಟೆಗಳನ್ನು ಮಾರನೆಯ ದಿನ ಸಾರ್ವಜನಿಕ ಸಭೆಯಲ್ಲಿ ಪ್ರದರ್ಶಿಸಿದ್ದು ಜನತೆಯನ್ನು ಕೆರಳಿಸಿತು.

ಸುಭಾಸರೊಡನೆ ಪಶುಗಳಿಗೂ ಕಡೆಯಾಗಿ ನಡೆದುಕೊಂಡ ಸರ್ಕಾರದ ವಿರುದ್ಧ ಯುವಜನತೆ ಅಗ್ನಿಕುಂಡವಾಯಿತು. ರಕ್ತಕ್ಕೆ ರಕ್ತ ಎಂಬ ಪ್ರತಿಜ್ಞೆ ಸ್ವೀಕರಿಸಿ ಬ್ರಿಟಿಷರಿಗೆ, ಬ್ರಿಟಿಷ್ ಸರ್ಕಾರದ ಅಧಿಕಾರಿಗಳಿಗೆ ಹಿಂಸೆ ಕೊಡಲು ತೊಡಗಿತು. ಪಂಜಾಬಿನ ಸರ್ದಾರ್ ಭಗತ್ ಸಿಂಗ್ ಪಂಜಾಬಿನ ಯುವಚಳವಳಿಯ ನೇತರನಾಗಿ 'ನವ್ ಜವಾನ್ ಭಾರತ್ ಸಭಾ' ಎಂಬ ಸಂಸ್ಥೆಯ ಸಂಸ್ಥಾಪಕನಾದ. ಆತನ ಕಾರ್ಯಚಟುವಟಿಕೆಗಳನ್ನು ಕಣ್ಣಾರ ಕಂಡ ಸುಭಾಸ್ ಸರ್ವವಿಧದಿಂದಲೂ ಭಗತ್‌ಸಿಂಗನನ್ನು ಪ್ರೋತ್ಸಾಹಿಸಿದರು. ತುಂಬು ಉತ್ಸಾಹಿ ಭಗತ್‌ಸಿಂಗ್ ತನ್ನ ಆತ್ಮೀಯ ಗೆಳೆಯ ಬತುಕೇಶ್ವರನೊಡನೆ ಸೇರಿ ಕೇಂದ್ರದ ಶಾಸನ ಸಭೆಯಲ್ಲಿ ಬಾಂಬ್ ಸಿಡಿಸಿದನು. ಅವರಿಬ್ಬರ ಮೇಲೆ ಕ್ರಿಮಿನಲ್ ಮೊಕದ್ದಮೆ ಸಿದ್ಧವಾಯಿತು. ಅಂತೆಯೇ ಲಾಲಾ ಲಜಪತರಾಯರನ್ನು ಲಾಹೋರಿನ ನಡುಬೀದಿಯಲ್ಲಿ ಪೊಲೀಸರು ಲಾಠಿಯಲ್ಲಿ ಹೊಡೆದು ಹೆಣವಾಗಿಸಿದರು. ಲಾಲಾಜಿ ನೆತ್ತರುಕಾರಿ ಬಿದ್ದುದನ್ನು ಕಂಡ ಜನರ ಸೈರಣೆ ಸತ್ತು ಸಮಾಧಿಯಾಯಿತು. ಲಾಲಾಜಿಯವರ ಮರಣಕ್ಕೆ ಕಾರಣನಾದ ಬ್ರಿಟಿಷ್ ಪೊಲೀಸ್ ಅಧಿಕಾರಿ ಸ್ಕಾಟ್‌ಗೆ ಬದಲು ಸ್ಯಾಂಡರ್‌ಸನ್ ಎಂಬುವನನ್ನು ಹಿಡಿದು ಕೊಲೆ ಮಾಡಿತು. ಇದನ್ನು 'ಲಾಹೋರ್ ಒಳಸಂಚು' ಎಂದು ಕರೆದು, ಮೊಕದ್ದಮೆ ಹೂಡಿತು ಸರ್ಕಾರ. ಈ ಪ್ರಕರಣದ ಆಪಾದಿತರಲ್ಲಿ ಯತೀಂದ್ರನಾಥದಾಸ್ ಎಂಬ ಓರ್ವ ಬಂಗಾಳಿ ಯುವಕನೂ ಸೇರಿದ್ದ. ಆತನು ರಾಜಕೀಯ ಕೈದಿಗಳಂತೆಯೇ ಕ್ರಾಂತಿಕಾರಿಗಳನ್ನೂ ಕಾಣಬೇಕೆಂದು ಒತ್ತಾಯಿಸಿ ಆಮರಣಾಂತ ಉಪವಾಸ ಸತ್ಯಾಗ್ರಹ ಆರಂಭಿಸಿದ. ಆತನ ಬೇಡಿಕೆ ಈಡೇರಲಿಲ್ಲ. ೧೯೨೯ ಸೆಪ್ಟೆಂಬರ್ ೧೩ರಂದು ಸೆರೆಮನೆಯಲ್ಲೇ ಯತೀಂದ್ರನಾಥ್ ಅಸು ನೀಗಿದ.

ಯತೀಂದ್ರನಾಥನ ಆತ್ಮಾಹುತಿಯು ಭಾರತೀಯ ಯುವಜನತೆಯಲ್ಲಿ ತಡೆಯಲಾಗದಷ್ಟು ರೋಷ ಚಿಮ್ಮಿಸಿತು. ಜ್ವಾಲಾಮುಖಿಯನ್ನು ಹತ್ತಿಕ್ಕಲು ಹವಣಿಸಿದ ಸರ್ಕಾರ ಸರ್ದಾರ್ ಭಗತ್‌ಸಿಂಗ್, ಶಿವರಾಮ ರಾಜಗುರು ಮತ್ತು ಸುಖದೇವ್ ಇವರುಗಳನ್ನು ಗುಟ್ಟಾಗಿ ಗಲ್ಲಿಗೇರಿಸಲು ನ್ಯಾಯಾಲಯ ಆಜ್ಞೆ ಮಾಡಿಸಿತು. ಅದರಂತೆ ೧೯೩೧ ಮಾರ್ಚ್ ೨೪ರಂದು ಆ ಮೂವರನ್ನೂ ಗಲ್ಲಿಗೇರಿಸಲಾಯಿತು. ಜೈಲಿಗೆ ಜೈಲೇ ಅಂದು ಕಣ್ಣೀರಿನ ಕೋಡಿ ಹರಿಸಿತು. ಅದರ ಗೋಳು ಗಗನಕ್ಕೆ ಮುಟ್ಟಿತು. ದಯಾಹೀನ ಜಂತುಗಳ ಹೃದಯಕ್ಕೆ ಆ ಗೋಳ್ಕರೆ ಮುಟ್ಟಲಿಲ್ಲ. ಆಗ ತನ್ನನ್ನು ತಾನು ಸಮರ್ಥಿಸಿಕೊಳ್ಳುತ್ತಾ ಕೈದಿಬಂಧುಗಳೆಲ್ಲರಿಗೂ ಸಮಾಧಾನ ಹೇಳಿದ ಭಗತ್‌ಸಿಂಗ್,

Friends, the bomb was necessary to awaken England from her dreams. We dropped bombs on the floor of the Assembly Chamber to register our protest on behalf of those who had no other means left, to give expression to their heart –rending agony. Our sole purpose was to make the deal to give the heedless timely warning....

Conspiracy cases trumpeted up and incarceration of all young who cherish the vision of greater ideal cannot check the march of revolution. But timely warning if not unheeded, can help to prevent loss of life and general suffering. We took it upon ourselves to provide this warning and our duty is done !....

Friends the blood calls for blood !

That is the path of freedom !!

ಇಂತೆಲ್ಲ ಆರ್ಭಟಿಸಿದ ಆ ಸಿಡಿಲಚಕ್ಕೆ ಕ್ರಾಂತಿಸೇನಾನಿ ಚಂದ್ರಶೇಖರ ಆಜಾದ್, ಭಗವತೀ ಚರಣ್ ಮೊದಲಾದವರಿಗೆ ನಿಲ್ಲದ ಹೋರಾಟಕ್ಕೆ ಆದೇಶವಿತ್ತು ಗಲ್ಲುಗಂಬದ ಬಳಿ ಬಂದ. ಅಲ್ಲಿ ಮೂವರ ಮುಖಗಳಿಗೂ ಕಪ್ಪು ಬಟ್ಟೆ ಹೊದಿಸಿದರು. ಭಗತ್ ಕೊನೆಯ ನುಡಿ ನುಡಿದ.

'ನಾನು ಸಾಯಲು ಅಂಜುವುದಿಲ್ಲ ಸೋದರರೆ, ನಾನು ಬಹುಬೇಗ ಸತ್ತು, ಸ್ವತಂತ್ರಭಾರತದಲ್ಲಿ ಸ್ವತಂತ್ರಪುತ್ರನಾಗಿ ಹುಟ್ಟುತ್ತೇನೆ !' ಎಂದು.

ಹೀಗೆ ಹೇಳಿ ನಗುನಗುತ್ತಲೇ ಗಲ್ಲಿಗೇರಿದ !

ಈ ಹುತಾತ್ಮತ್ರಯರ ಅರ್ಧ ಸುಟ್ಟ ಹೆಣಗಳನ್ನು ಸಟ್ಲೆಜ್ ನದಿಗೆ ಎಸೆದರು. ಅವು ಅಲ್ಲಿ ಜಲಚರಗಳಿಗೆ ಆಹಾರವಾದವು.

ಸರ್ದಾರ್ ಭಗತ್ ಸಿಂಗನ ಮಾತುಗಳು ಕೌರ್ಯಕ್ರೋಧಗಳ ತರಂಗಗಳನ್ನೆಬ್ಬಿಸಿದವು. ಸುಭಾಸ್ ಚಂದ್ರಬೋಸರ ಹೃದಯ ಮಾನಸದಲ್ಲಿ. ತರುಣ ಪೀಳಿಗೆಗೆ ಅವರು ಕರೆ ಕೊಟ್ಟರು. ಪಂಜಾಬಿ ವಿದ್ಯಾರ್ಥಿ ಸಮ್ಮೇಳನದ ಪ್ರಥಮ ಅಧಿವೇಶನ, ಮಧ್ಯಪ್ರಾಂತದ ಯುವಜನ ಸಮ್ಮೇಳನ, ಬಿಹಾರದ ವಿದ್ಯಾರ್ಥಿ ಸಮ್ಮೇಳನ ಮೊದಲಾದವುಗಳಲ್ಲಿ ತಾವೇ ಅಧ್ಯಕ್ಷರಾಗಿದ್ದುಕೊಂಡು ಭಾಷಣ ಮಾಡಿದರು. ಅವರ ಜೊತೆಯಲ್ಲಿ ಜವಹರಲಾಲ್ ನೆಹರು, ಕಮಲಾದೇವಿ ಚಟ್ಟೋಪಾಧ್ಯಾಯ, ಸರೋಜಿನಿ ನಾಯ್ಡು, ಮದನಮೋಹನ ಮಾಳವೀಯ ಮೊದಲಾದ ರಾಷ್ಟ್ರನಾಯಕರೂ ಪಾಲ್ಗೊಂಡಿದ್ದರು. ಭಗತ್ ಸಿಂಗ್ ಮೊದಲಾದವರು ಹುತಾತ್ಮರಾದ ಒಂದೆರಡು ದಿನಗಳಲ್ಲಿ ನಡೆದ ಒಂದು ಬೃಹತ್ ಸಭೆಯಲ್ಲಿ ಸುಭಾಸ್ ರಾಷ್ಟ್ರಪ್ರೇಮ, ಏಕತೆ, ಸ್ವಾರ್ಥತ್ಯಾಗ, ಸಾಹಸ ಹಾಗೂ ಸ್ವಾತಂತ್ರ್ಯೋದ್ದೇಶ ಸಾಧನೆ – ಇವುಗಳಿಗೆ ಹೆಚ್ಚು ಮಹತ್ವ ನೀಡಬೇಕೆಂದು ನುಡಿದರು. ಅವರ ಅಂದಿನ ಭಾಷಣ ಹೀಗಿತ್ತು.

'ಬಂಧುಗಳೇ,'

ಭಗತ್ ಸಿಂಗ್, ರಾಜಗುರು, ಸುಖದೇವ್ ಇವರುಗಳನ್ನು ಗಲ್ಲಿಗೇರಿಸಿ ಇಂದಿಗೆ ನಾಲ್ಕು ದಿವಸಗಳಾದವು. ಐದನೆಯ ದಿನವಾದ ಇಂದು ನಾವು ಇಲ್ಲಿ ಸಮಾವೇಶಗೊಂಡಿದ್ದೇವೆ. ಇಡೀ ರಾಷ್ಟ್ರದ ಸ್ವಾತಂತ್ರ್ಯಾಕಾಂಕ್ಷೆಯ ಪ್ರತೀಕವಾಗಿದ್ದಾತ ನಮ್ಮ ಭಗತ್ ಸಿಂಗ್ ! ಅವನೊಂದು ಅದಮ್ಯ ಚೇತನ. ಅದನ್ನೂ ಅದರ ಜೊತೆಯಲ್ಲಿ ಮತ್ತೆರಡು ಮಹಾನ್ ಶಕ್ತಿಗಳನ್ನೂ ಕಳೆದುಕೊಂಡ ದೌರ್ಭಾಗ್ಯ ನಮ್ಮದು. ಇಷ್ಟೇ ಅಲ್ಲ, ಸ್ವಾತಂತ್ರ್ಯಪ್ರಾಪ್ತಿಗಾಗಿ ಇಂಥ ಇನ್ನೂ ಅನೇಕ ಸುಪುತ್ರರನ್ನು ಭಾರತಾಂಬೆ ಕಳೆದುಕೊಳ್ಳಬೇಕಾಗಬಹುದು. ಆಳುವ ಸರ್ಕಾರದ ಮನಃಸ್ಥಿತಿಯಲ್ಲಿ ಸ್ವಲ್ಪವೂ ಬದಲಾವಣೆ ಆಗಿಲ್ಲವೆಂಬುದನ್ನು ಇತ್ತೀಚೆಗಿನ ಮರಣದಂಡನೆಗಳೇ ಸಾಬೀತುಪಡಿಸುತ್ತಿವೆ. ಆದರೂ ಹುತಾತ್ಮ ತ್ರಯರು ಹತ್ತಿಸಿಕೊಟ್ಟ ಹೋರಾಟದ ಪಂಜು ಎಂದಿಗೂ ಆರದಿರದು. ಅದು ನಮಗೆ ದಾರಿದೀಪವಾಗಲಿ. ದಾಸ್ಯದ ಸವಿಯನ್ನು ನಾವು ಸವಿದಿದ್ದೇವೆ. ನಾವಿನ್ನು ದಾಸರಾಗಿ ಉಳಿಯಲಾರೆವು. ವಿದೇಶೀಯ ಆಕ್ರಮಣಕಾರರಿಂದ ಮಾತೃಭೂಮಿಯನ್ನು ಉಳಿಸುವುದಕ್ಕಾಗಿ ಜಗತ್ತಿನಲ್ಲಿಯೇ ಹೆಚ್ಚು ಬಲಶಾಲಿಯಾದ ಸೇನೆಯನ್ನು ಸಂಘಟಿಸುವುದು ನಮ್ಮ ಕರ್ತವ್ಯವಾಗಿದೆ. ಅರ್ಹತೆ ಮತ್ತು ಸಾಮರ್ಥ್ಯಗಳು ಜೊತೆಯಾಗಿರುವವರೆಗೂ ಭಾರತೀಯ ಯೋಧರು ಯಾರಿಗೂ ಹಿಂದಿಲ್ಲವೆಂಬುದನ್ನು ಮತ್ತು ಅವರನ್ನು ಯಾವ ಲೋಹದಿಂದ ನಿರ್ಮಿಸಲಾಗಿದೆ ಎಂಬುದನ್ನು ನಾವಿಂದು ಜಗತ್ತಿಗೆ ತೋರಿಸಿಕೊಡಬೇಕಾಗಿದೆ. ಒಂದಾಗಿ ಬನ್ನಿ, ಹೋರಾಡ ಬನ್ನಿ, ಆದರೆ ನೆನಪಿಡಿ ಭಗತ್ ಸಿಂಗ್ ಹೇಳಿದಂತೆ ಸ್ವಾತಂತ್ರ್ಯ ಎನ್ನುವುದು ದಾನದಿಂದ ಪಡೆಯುವ ವಸ್ತುವಲ್ಲ. ಅದನ್ನು ನೆತ್ತರಿನ ಬೆಲೆಕೊಟ್ಟು ಕೊಂಡುಕೊಳ್ಳಬೇಕು. ಅದಕ್ಕೆ ಸಿದ್ಧರಾಗಿ, ರಕ್ತಹರಿಸಬನ್ನಿ ದೇಶಸೇವೆಗೆ, ರಾಷ್ಟ್ರರಕ್ಷಣೆಗೆ !'

ಸುಭಾಸ್ ಚಂದ್ರಬೋಸರ ಈ ಮಾತಿನ ಸಿಡಿಲು ಸ್ಫೋಟಗೊಂಡದ್ದು ೧೯೩೧ ಮಾರ್ಚ್ ೨೯ರಂದು ಕರಾಚಿಯಲ್ಲಿ 'ಉಕ್ಕಿನ ಮನುಷ್ಯ' ಎಂದೇ ಪ್ರಸಿದ್ಧರಾದ ಸರ್ದಾರ್ ವಲ್ಲಭಭಾಯಿಪಟೇಲರ ಅಧ್ಯಕ್ಷತೆಯಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದಲ್ಲಿ. ಅಂದಿನ ಅಧಿವೇಶನದ ತುಂಬೆಲ್ಲ ಹುತಾತ್ಮತ್ರಯರ ದುಃಖದ ನೆರಳು ತುಂಬಿತ್ತು. ಕರಾಚಿ ಅಧಿವೇಶನದ ಜೊತೆಜೊತೆಯಲ್ಲೇ ಸರ್ದಾರ್ ಭಗತ್ ಸಿಂಗ್ ಸ್ಥಾಪಿಸಿದ್ದ ಅಖಿಲ ಭಾರತ ನವ್ ಜವಾನ್ ಭಾರತ ಸಭಾ ಅಧಿವೇಶನ ಸುಭಾಸ್ ಚಂದ್ರ ಬೋಸರ ಅಧ್ಯಕ್ಷತೆಯಲ್ಲಿ ನಡೆಯಿತು. ಸುಭಾಸ್ ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಗಾಂಧಿ– ಇರ್ವಿನ್ ಒಪ್ಪಂದವನ್ನು ತೀವ್ರವಾಗಿ ಖಂಡಿಸುವ ನೇರನುಡಿ ನುಡಿದರು.

ಗಾಂಧಿ - ಇರ್ವಿನ್ ಒಪ್ಪಂದವು ತುಂಬಾ ಅತೃಪ್ತಿಕರ ಮತ್ತು ನಿರಾಶಾದಾಯಕ. ಬ್ರಿಟಿಷರಿಗೆ ಬುದ್ಧಿ ಹೇಳುವುದು ಕಟುಕರ ಮುಂದೆ ಬಸವನ ಪುರಾಣ ಹೇಳಿದಂತೆಯೇ ಸರಿ. ನ್ಯಾಯ, ಸಮಾನತೆ, ಸ್ವಾತಂತ್ರ್ಯ, ಶಿಸ್ತು ಮತ್ತು ಪ್ರೇಮ – ಇವು ನಮ್ಮ ಸಾಮಾಜಿಕ ಜೀವನದ ಆಧಾರವನ್ನು ರೂಪಿಸಿವ ಸಿದ್ಧಾಂತಗಳು. ಸಮಾನತೆಯನ್ನು ಸುರಕ್ಷಿತವಾಗಿಸಲು ನಾವು ಸಾಮಾಜಿಕ, ಆರ್ಥಿಕ, ರಾಜಕೀಯ ಮೊದಲಾದ ಎಲ್ಲ ಬಗೆಯ ಬಂಧನಗಳನ್ನು ಕಡಿದೊಗೆಯಬೇಕು... ಭಾರತವು ಸಮಜವಾದಿ ಗಣರಾಜ್ಯವಾಗಬೇಕೆಂಬುದು ನನ್ನ ಹಸಿವು, ಹಂಬಲ. ತೀವ್ರ ಸುಧಾರಣೆಯ ಹಾಗೂ ಕ್ರಾಂತಿಕಾರಕ ಅಂಶಗಳ ಒತ್ತಡ ನಮ್ಮಲ್ಲಿ ಮೂಡುವವರೆಗೆ ನಾವು ಸ್ವಾತಂತ್ರ್ಯ ಪಡೆದುಕೊಳ್ಳಲಾರೆವು. ಹೊಸ ಸಂದೇಶದ ಮೂಲಕ ಜನತೆಯಲ್ಲಿ ಸ್ಫೂರ್ತಿ ಮತ್ತು ಭರವಸೆಗಳನ್ನು ತುಂಬದಿದ್ದರೆ ಕ್ರಾಂತಿಕಾರಕ ಅಂಶಗಳನ್ನು ಅವರಲ್ಲಿ ಪ್ರೇರೇಪಿಸುವುದು ನಮಗೆ ಸಾಧ್ಯವಾಗದೆ ಹೋದೀತು.

ಮಿತ್ರರೇ,

ಸೂರ್ಯ ಮುಳುಗದ ಸಾಮ್ರಾಜ್ಯದ ಸಾಮ್ರಾಟರೆನಿಸಿದ ಬ್ರಿಟಿಷರ ಸೊಕ್ಕಡಗಿಸುವುದಕ್ಕೆ, ಅವರ ಸಾಮ್ರಾಜ್ಯ ಶಾಶ್ವತವಾಗಿ ಅಸ್ತಂಗತವಾಗುವಂತೆ ಮಾಡುವುದಕ್ಕೆ ಇಡೀ ಈ ವಿಶ್ವಜಗತ್ತಿನಲ್ಲಿ ಭಾರತಕ್ಕೆ ಮಾತ್ರ ಸಾಧ್ಯ. ಸ್ವತಂತ್ರ ಭಾರತವು ಆ ಕಾರ್ಯವನ್ನು ಮಾಡಿಯೇ ಮಾಡುತ್ತದೆ ! ಇದು ನನ್ನ ದೃಢವಾದ ನಂಬಿಕೆ, ದೃಢವಾದ ನಿಲುವು ಕೂಡ !'

ಸಭೆಗೆ ಸಭೆಯೇ ಕರತಾಡನದ ಮೂಲಕ ಸುಭಾಸರ ಆಶಾದಾಯಕ ನುಡಿಗಳನ್ನು ಸ್ವಾಗತಿಸಿತು.

*        *        *

ಅಭಿಪ್ರಾಯ ಭೇದವಿದ್ದರೂ ಗಾಂಧೀಜಿ ಮತ್ತು ಸುಭಾಸ್ ಅತ್ಯಂತ ಆತ್ಮೀಯ ಸ್ನೇಹಿತರಾಗಿದ್ದರು. ಕರಾಚಿಯ ಎರಡೂ ಅಧಿವೇಶನಗಳು ಮುಗಿದ ಕೂಡಲೇ ಇಬ್ಬರೂ ಜೊತೆಗೂಡಿ ದೇಶಾದ್ಯಂತ ಪ್ರವಾಸ ಕೈಗೊಂಡರು. ಆ ಸಂದರ್ಭದಲ್ಲಿ ಲಂಡನ್‌ನಲ್ಲಿ ನಡೆಯಲಿದ್ದ ದುಂಡು ಮೇಜಿನ ಸಭೆಯ ವಿಷಯ ಬಂತು. ಸುಭಾಸ್ ಹೇಳಿದರು.

'ಬಾಪೂಜಿ, ಇದು ಬ್ರಿಟಿಷರ ಕುತಂತ್ರ. ದುಂಡುಮೇಜಿನ ಸಭೆಯಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಕೊಡುವ ಪ್ರಸ್ತಾಪ ಬರುವುದೇ ಇಲ್ಲ. ಆ ಖದೀಮರು ಹಿಂದೂ– ಮುಸ್ಲಿಂ ಜಗಳ ಮುಂದೊಡ್ಡಿ ಆ ಬಗ್ಗೆ ದೀರ್ಘ ಕಾಲ ಚರ್ಚೆ ನಡೆಸಿ, ದೇಶ ಸ್ವಾತಂತ್ರ್ಯದ ವಿಷಯವನ್ನು ಗೌಣಗೊಳಿಸುತ್ತಾರೆ. ದಯವಿಟ್ಟು ಈ ಕಡೆ ಹೆಚ್ಚು ಗಮನಹರಿಸಬೇಕಗಿ ವಿನಂತಿ.'

ಎಂದು ವಿನಯಪೂರ್ವಕವಾಗಿ ನಿವೇದಿಸಿದರು. ಗಾಂಧೀಜಿಯವರೂ ಅದಕ್ಕೆ ತಮ್ಮ ಒಪ್ಪಿಗೆ ಸೂಚಿಸಿದರು. ಆದರೆ ಸುಭಾಸ್ ಊಹಿಸಿದಂತೆಯೇ ಅಲ್ಲಿ ಕಾರ್ಯಕಲಾಪ ನಡೆಯಿತು. ಈ ಮಧ್ಯೆ ವೈಸ್‌ರಾಯ್‌ಗಳ ಬದಲಾವಣೆ ಆಯಿತು. ಲಾರ್ಡ್ ಇರ್ವಿನ್‌ನ ಸ್ಥಾನಕ್ಕೆ ಲಾರ್ಡ್ ವಿಲ್ಲಿಂಗ್ಡನ್ ವೈಸ್‌ರಾಯ್ ಆಗಿ ಬಂದ. ಆತ ಕಟ್ಟಾ ಸಾಮ್ರಾಜ್ಯಶಾಹಿ, ನಿಷ್ಠುರವಾದಿ ಕೂಡ. ಗಾಂಧೀಜಿ ದುಂಡು ಮೇಜಿನ ಸಭೆ ಮುಗಿಸಿಕೊಂಡು ೧೯೩೧ ಡಿಸೆಂಬರ್ ೩೧ರಂದು ಭಾರತಕ್ಕೆ ಬಂದರು. ನಿರಾಸೆಯ ನೆರಳು ಅವರ ಮುಖ ಮನಸ್ಸುಗಳಲ್ಲಿ ಸುಳಿದಾಡುತ್ತಿತ್ತು. ಆದರೂ ತಮ್ಮ ನಿಲುವನ್ನು ಸ್ಪಷ್ಟಪಡಿಸಲೋಸುಗ ಲಾರ್ಡ್ ವಿಲ್ಲಿಂಗ್ಡನ್ನನಿಗೆ ಪತ್ರ ಬರೆದರು. ವೈಸ್‌ರಾಯ್ ಗಾಂಧೀಜಿಯವರ ಭೇಟಿಯನ್ನು ಕೂಡ ನಿರಾಕರಿಸಿದ. ಅದು ಎಲ್ಲ ಸ್ವಾತಂತ್ರ್ಯಪ್ರೇಮಿಗಳಿಗೂ ಅತೃಪ್ತಿ, ಆಕ್ರೋಶಗಳನ್ನು ತಂದಿತು.

ರಾಷ್ಟ್ರದಾದ್ಯಂತ ಕಾನೂನು ಭಂಗ ಚಳವಳಿ ಮುಂತಾದ ಹೋರಾಟಗಳು ಆರಂಭವಾದವು. ಅದೇ ಪ್ರಮಾಣದಲ್ಲಿ ಬ್ರಿಟಿಷರ ದಮನ ಶಕ್ತಿಯೂ ಕೆಲಸ ಮಾಡಿತು. ಹಲವು ಜನ ಕ್ರಾಂತಿಕಾರಿಗಳನ್ನು ಮರಣದಂಡನೆಗೆ ಗುರಿಪಡಿಸಿ, ಗಲ್ಲಿಗೇರಿಸಿತು. ವಾಯುವ್ಯ ಸರಹದ್ದು ಪ್ರದೇಶದಲ್ಲಿ ಗಡಿನಾಡ ಗಾಂಧೀ ಎಂಬ ಕೀರ್ತಿಗೆ ಪಾತ್ರರಾದ ಖಾನ್ ಅಬ್ದುಲ್ ಗಫಾರ್ ಖಾನ್‌ರವರ ನಾಯಕತ್ವದ 'ಖುದಾಯಿ ಖಿದ್ ಮದ್' ಗಾರರು (ಕೆಂಪು ಅಂಗಿಯ ಸ್ವಯಂ ಸೇವಕರು) ಎಂಬ ವೀರ ತರುಣರ ಮೇಲೆ ಭಾರೀ ಹಲ್ಲೆ ನಡೆಸಿ ಸಿಕ್ಕ ಸಿಕ್ಕವರನ್ನು ಕೊಚ್ಚಿ ಬಿಸಾಡಿತು. ಅದೇ ರೀತಿ ಬಂಗಾಳದಲ್ಲಿ ರಾಜಕೀಯ ಕೈದಿಗಳ ಬಗೆಗೆ ಬ್ರಿಟಿಷ್ ಸರ್ಕಾರ ತುಂಬಾ ಕ್ರೂರವಾಗಿ ನಡೆದುಕೊಂಡಿತು. ಮಿದ್ನಾಪುರದಲ್ಲಿ ಕರನಿರಾಕರಣೆ ಆಂದೋಲನದ ಕಾರ್ಯಕರ್ತರ ಮೇಲೆ ಅಮಾನುಷವಾಗಿ ನಡೆದುಕೊಂಡಿತು. ಕಲ್ಕತ್ತಕ್ಕೆ ಸುಮರು ಒಂದು ನೂರು ಕಿಲೋಮೀಟರ್ ದೂರದಲ್ಲಿದ್ದ ಹಿಜಲಿ ಕ್ಯಾಂಪಿನಲ್ಲಿ ಪಹರೆಯವರು ರಾಜಕೀಯ ಕೈದಿಗಳ ಮೇಲೆ ವಿನಾಕಾರಣ ಗುಂಡಿನ ಮಳೆಗರೆದು ಅನೇಕರ ಸಾವಿಗೆ ಕಾರಣರಾದರು. ಇದೆಲ್ಲವನ್ನೂ ಕಂಡು ಕೇಳಿದ ಜನತೆ ರಚ್ಚೆಗೆದ್ದು, ಕೆಲವರು ಬ್ರಿಟಿಷ್ ಮ್ಯಾಜಿಸ್ಟ್ರೇಟರುಗಳನ್ನು ಹಿಡಿದು ಕೊಲೆಮಾಡಿತು. ಆ ಕಾರಣವಾಗಿ ಊರಿನ ಸಭ್ಯರ ಮನೆಗಳೆಲ್ಲಾ ಪೊಲೀಸರಿಂದ ಲೂಟಿಗೊಂಡವು. ಅನೇಕ ಮನೆಗಳು ಮುರಿದು ಧ್ವಂಸವಾದವು. ಸಮಿತಿಯ ಸದಸ್ಯರಾಗಿ ನೇಮಿತರಾದ ಸುಭಾಸ್ ಚಂದ್ರರಿಗೆ ಸರ್ಕಾರ ಢಾಕಾ ಪಟ್ಟಣಕ್ಕೆ ಪ್ರವೇಶಾವಕಾಶ ನೀಡಲಿಲ್ಲ. ಆದರೆ ಬೇರೊಂದು ಮಾರ್ಗದಿಂದ ಢಾಕಾದ ತೇಜಗಾಂವ್ ತಲುಪಿದ ಬೋಸರನ್ನು ಬಂಧಿಸಿ, ಅನಂತರ ನವೆಂಬರ್ ೧೪ರಂದು ಬಿಡುಗಡೆ ಮಡಿತು. ತದನಂತರ ಅವರ ಬಂಧನ ಮೇಲಿಂದ ಮೇಲೆ ಆಗತೊಡಗಿತು. ಸಿಂಹದ ಮರಿಯ ಆ ಬಂಧನಗಳು ಬ್ರಿಟಿಷರಿಗೆ ಅನಿವಾರ್ಯವೂ ಆಗಿದ್ದವು !

೧೯೩೨ ಜನವರಿ ೨ರಂದು ಸುಭಾಸರನ್ನು ಬಂಧಿಸಿ, ಮಧ್ಯಪ್ರಾಂತದ ಸಿಯೋನಿಯಲ್ಲಿನ ಒಂದು ಸಣ್ಣ ಸೆರೆಮನೆಯಲ್ಲಿ ಹಾಕಿದರು. ಅಲ್ಲಿಗೆ ಅವರು ಸೆರೆಯಳಾಗಿ ಹೋದ ಕೆಲವೇ ದಿನಗಳಲ್ಲಿ ಅವರ ಅಣ್ಣ ಶರತ್ ಚಂದ್ರಬೋಸ್ ಮೂರು ನಾಲ್ಕು ಜನ ಮಿತ್ರರೊಡನೆ ದಸ್ತಗಿರಿ ಆಗಿ ಅದೇ ಜೈಲಿಗೆ ಬಂದರು. ದೇಶಕ್ಕಾಗಿ ಸಮಸ್ತವನ್ನೂ ಅರ್ಪಿಸಿಕೊಂಡ ತ್ಯಾಗವೀರ ಸೋದರರ ಜೋಡಿ ಭಾರತದ ಸ್ವಾತಂತ್ರ್ಯೇತಿಹಾಸದಲ್ಲಿ ಒಂದು ಅಪೂರ್ವ ಅಧ್ಯಾಯವೆನ್ನಬಹುದು.

ಕೆಲವು ದಿನಗಳು ಉರುಳಿದವು.

ಬೋಸ್ ಸೋದರರಿಬ್ಬರೂ ಸಿಯೋನಿ ಜೈಲಿನಲ್ಲಿ ಕಾಯಿಲೆ ಮಲಗಿದರು. ಹದಗೆಟ್ಟ ಆರೋಗ್ಯಕ್ಕೆ ಜಬ್ಬಲ್‌ಪುರದ ಸೆರೆಮನೆ ಉತ್ತಮವೆಂದು ಭಾವಿಸಿ ಅವರಿಬ್ಬರನ್ನೂ ಅಲ್ಲಿಗೆ ವರ್ಗಾಯಿಸಲಾಯಿತು. ಚಿಕಿತ್ಸೆಯ ನೆಪ ಹೇಳಿ ಸುಭಾಸರನ್ನು ಜಬ್ಬಲ್‌ಪುರ ಜೈಲಿನಿಂದ ಮದರಾಸ್ (ಇಂದಿನ ಚೆನ್ನೈ) ಜೈಲಿಗೆ ಕರೆತರಲಾಯಿತು. ಈ ಜಂಜಾಟ, ಓಡಾಟ, ಸ್ಥಳಾಂತರದ ಹಿಂಸೆ – ಇವುಗಳಿಂದಾಗಿ ಬೋಸರ ಆರೋಗ್ಯ ತುಂಬಾ ಕೆಟ್ಟಿತು. ಅವರ ಪಿತ್ತಕೋಶ ತೀರಾ ದುರ್ಬಲವಾಗತೊಡಗಿತು. ಚಿಕಿತ್ಸೆಯ

ದೃಷ್ಟಿಯಿಂದ ಅವರನ್ನು ಸ್ಥಳಾಂತರಿಸಲು ವೈದ್ಯಕೀಯ ತಂಡ ಸಲಹೆ ಮಾಡಿತು. ಆ ಮೇರೆಗೆ ಸುಭಾಸರನ್ನು ಅಕ್ಟೋಬರ್ ತಿಂಗಳು ಉತ್ತರ ಪ್ರದೇಶದ ಭೂಪಾಲ್‌ಗೆ ವರ್ಗಾಯಿಸಲಾಯಿತು. ಅಲ್ಲಿಯೂ ಅವರ ಆರೋಗ್ಯ ಸುಧಾರಿಸಲಿಲ್ಲ. ಅಲ್ಲಿಂದ ಲಕ್ನೋಗೆ ಸ್ಥಳಾಂತರಿಸಲಾಯಿತು. ಎಲ್ಲಿಯೂ ರೋಗ ಪರೀಕ್ಷೆ ಸರಿಯಾಗಿ ನಡೆಯಲಿಲ್ಲ. ಉಪಯುಕ್ತ ಚಿಕಿತ್ಸೆಯೂ ದೊರೆಯಲಿಲ್ಲ. ಸುಭಾಸ್ ಕೇವಲ ಅಸ್ತಿಪಂಜರ ಆಗಿಬಿಟ್ಟರು. ಇದನ್ನು ನೋಡಿ ಸಹಿಸಲಾಗದೆ ಅವರ ಅತ್ತಿಗೆ ಶರತ್ ಚಂದ್ರರ ಪತ್ನಿ ಶ್ರೀಮತಿ ವಿಭಾವತಿಯವರು ದೆಹಲಿಯಲ್ಲಿ ನಿಂತು ಸರ್ಕಾರದೊಡನೆ ಚಿಕಿತ್ಸೆಗಾಗಿ ಕಳುಹಿಸಿ ಕೊಡುವ ಅನುಮತಿ ಪಡೆಯಲು ಯಶಸ್ವಿಯಾದರು. ಯೂರೋಪಿಗೆ ಕಳುಹಿಸಬಹುದೆಂಬ ಸಲಹೆ ಬಂತು. ವೈದ್ಯಕೀಯ ಮಂಡಲಿಯಿಂದ. ಸುಭಾಸ್ ತಮ್ಮ ಸ್ವಂತ ಖರ್ಚಿನಲ್ಲಿ ಬೇಕಾದರೆ ಯುರೋಪಿಗೆ ಚಿಕಿತ್ಸೆಗೆ ಹೋಗಲು ಸಮ್ಮತಿಸಿತು ಸರ್ಕಾರ. ಆದರೆ ಹೋಗುವ ಮುನ್ನ ಯಾವ ಕಾರಣದಿಂದಲೂ ಅವರು ತನ್ನ ವೃದ್ಧ ತಂದೆ ಜಾನಕಿನಾಥ ಬೋಸ್ ಮತ್ತು ತಾಯಿ ಪ್ರಭಾವತಿದೇವಿಯವರನ್ನು ಭೇಟಿ ಮಾಡಲು ಅವಕಾಶ ಕೊಡುವುದಿಲ್ಲವಾಗಿ ತಿಳಿಸಿ, ಸುಭಾಸರನ್ನು ಮತ್ತೆ ಜಬ್ಬಲ್‌ಪುರ ಜೈಲಿಗೆ ವಾಪಸ್ ಕಳುಹಿಸಿತು. ಬಾಬಾ ಸಾಹೇಬ ಬಿ. ಆರ್. ಅಂಬೇಡ್ಕರ್, ಜವಹರಲಾಲ್ ನೆಹರು, ಕಮಲಾದೇವಿ ಚಟ್ಟೋಪಾಧ್ಯಾಯ, ಅರವಿಂದ ಘೋಷ್, ಅಣ್ಣ ಶರತ್ ಚಂದ್ರಬೋಸ್, ಸರೋಜಿನಿ ನಾಯ್ಡು, ಮದನ ಮೋಹನ ಮಾಳವೀಯ, ಚಿತ್ತರಂಜನ ದಾಸರ ವಿಧವೆ ಬಸಂತಿ ದೇವಿ ಮೊದಲಾದ ಗಣ್ಯರು ಸುಭಾಸರ ಯೂರೋಪ್ ಪ್ರವಾಸವನ್ನು ಅನುಮೋದಿಸಿದರು. ಚಿಕಿತ್ಸೆಯ ವೆಚ್ಚವನ್ನು ಭರಿಸಲು ಅವರ ಹಿತೈಷಿಗಳಾದ ಸರ್ ನೃಪೇಂದ್ರ ಸರ್ಕಾರ್, ಕುಮಾರ್ ದೇಬೇಂದ್ರಲಾಲ್ ಮೊದಲಾದವರು ಮುಂದೆ ಬಂದರು. ಸುಭಾಸ್ ಹಡಗನ್ನೇರಲು ಮುಂಬಯಿಗೆ ಹೊರಟರು. ಅವರ ಸುತ್ತ ಪೊಲೀಸ್ ಪಡೆಯ ಬಿಗಿ ಕಾವಲು ಇತ್ತು. ಅಂತಹ ಬಂದೋಬಸ್ತಿನಲ್ಲಿ ಹೆಜ್ಜೆ ಇಡತೊಡಗಿದಾಗ ಎಲ್ಲ ಬಂಧುಮಿತ್ರರು (ಅವರ ತಂದೆತಾಯಿಯರ ಹೊರತು) ಎಲ್ಲರೂ ಸುಖ ಪ್ರಯಾಣ ಕೋರಿದರು. ಸುಭಾಸ್ ಚಂದ್ರ ಬೋಸರು ೧೯೩೩ ಫೆಬ್ರವರಿ ೧೩ ರಂದು ಎಸ್. ಎಸ್. ಗಾಂಗೆ (S.S. GANGES) ಎಂಬ ಇಟಲಿಯ ಹಡಗನ್ನೇರಿ ಯುರೋಪಿನತ್ತ ತಮ್ಮ ಪ್ರಯಾಣ ಬೆಳೆಸಿದರು.

* * *

ಸುಭಾಸರನ್ನು ಹೊತ್ತ ಹಡಗು ಸಮುದ್ರ ಒಡಲನ್ನು ಸೀಳಿಕೊಂಡು 'ಲೊಳ್ ಲೊಳ್' ಎಂದು ತನ್ನ ಹಿಂಬದಿಯ ನೀರನ್ನು ಮರಳಿಸಿ ಮುಂದೆ ಸಾಗಿ ಮಾರ್ಚ್ ೬ ರಂದು ಇಟಲಿಯ ವೆನಿಸ್ ರೇವು ಮುಟ್ಟಿತು. ಐದು ದಿನಗಳವರೆಗೆ ವೆನಿಸ್ ನಗರದ 'ರೋಯಾಲ್ ಡೇನಿ' ಹೋಟಲ್‌ನಲ್ಲಿ ವಾಸ್ತವ್ಯ ಮಾಡಿ, ಅನಂತರ ೧೯೩೩ ಮಾರ್ಚ್ ೧೧ ರಂದು ವಿಯನ್ನಾ ನಗರದ ಫುರ್ತ್ ಎಂಬವರ ಚಿಕಿತ್ಸಾಲಯ ಸೇರಿದರು. ಅಲ್ಲಿ ಅನೇಕರು ಯೋಗ್ಯ ಅನುಭವೀ ವೈದ್ಯರುಗಳಿದ್ದರು. ಅವರ ಕೈಯಿಂದ ಉತ್ತಮ ಚಿಕಿತ್ಸೆ ದೊರೆತು ಸುಭಾಸ್ ಎಂದಿನ ಮನುಷ್ಯರೇ ಆದರು. ಆರೋಗ್ಯ ಸುಧಾರಿಸಿದ್ದೇ ತಡ ಅವರು ಯುರೋಪಿನ ರಾಜಕಾರಣದಲ್ಲಿ ಸಕ್ರಿಯ ಆಸಕ್ತಿ ತೋರಿಸಿ, ಭಾರತದ ಸ್ವಾತಂತ್ರ್ಯ ಸಾಧನೆಯ ಕಡೆಗೆ ಅಲ್ಲಿನ ಅಧಿಕಾರಿಗಳ ಗಮನಸೆಳೆಯಲು ಪ್ರಯತ್ನಿಸಿದರು. ಅದರಿಂದಾಗಿ ಚಿಕಿತ್ಸಾಲಯದಿಂದ ಹೊರಬಿದ್ದು 'ಹೋಟಲ್ ದ – ಫ್ರಾನ್ಸ್'ನಲ್ಲಿ ವಸತಿ ಏರ್ಪಡಿಸಿಕೊಂಡರು ಮತ್ತು ಅದು ಅವರ ಮುಖ್ಯ ಕಾರ್ಯಾಲಯವೂ ಆಯಿತು.

ಕಾಂಗ್ರೆಸ್‌ನ ಹಿರಿಯ ಮುತ್ಸದ್ದಿ ವಿಠಲಭಾಯಿ ಪಟೇಲರು ತಮ್ಮ ಅಮೇರಿಕಾ ಪ್ರವಾಸ ಮುಗಿಸಿ ಸುಭಾಸರ ಜೊತೆ ಸೇರಿದರು. ಬೋಸರ ಕಾರ್ಯ ಚಟುವಟಿಕೆಗೆ ಸಾವಿರ ಕೈ, ಸಾವಿರ ತೋಳು ಬಂದಂತಾಯಿತು. ಭಾರತದ ರಾಷ್ಟ್ರೀಯ ವಾದಿಗಳ ಆಕಾಂಕ್ಷೆಗಳಿಗೆ ಅರತರಾಷ್ಟ್ರೀಯ ಬೆಂಬಲ ಪಡೆಯುವ ಬಗೆಗೆ ಸುಭಾಸರಿಗಿದ್ದಷ್ಟೇ ಆಸಕ್ತಿ ಪಟೇಲರಿಗೂ ಇತ್ತು. ಸಮಾನ ಮನಸ್ಸು ಮತ್ತು ಧ್ಯೇಯಗಳನ್ನು ತುಂಬಿಕೊಂಡಿದ್ದ ಇಬ್ಬರೂ ತಮ್ಮ ಗುರಿಯತ್ತ ಸಾಗಲು ಯತ್ನಿಸಿದರು. ಆದರೆ ಅತ್ತ ಭಾರತದಲ್ಲಿ ಚಳವಳಿ ತಣ್ಣಗಾಗುವ ಸ್ಥಿತಿ ಒದಗಿತು. ಅದಕ್ಕೆ ಮೂಲ ಕಾರಣ ಬ್ರಿಟಿಷ್ ಸರ್ಕಾರ ಮಾರ್ಚ್‌ನಲ್ಲಿ ಹೊರಡಿಸಿದ ಶ್ವೇತಪತ್ರ. ಎರಡನೆಯದು, ಏಪ್ರಿಲ್ ತಿಂಗಳಲ್ಲಿ ಮದನ ಮೋಹನ ಮಾಳವೀಯರ ಅಧ್ಯಕ್ಷತೆಯಲ್ಲಿ ಕಲ್ಕತ್ತದಲ್ಲಿ ನಡೆಯಬೇಕಿದ್ದ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷರಾದಿಯಾಗಿ ಎಲ್ಲ ಪ್ರಮುಖ ಕಾಂಗ್ರೆಸ್ಸಿಗರನ್ನು ಬಂಧಿಸಿದ್ದು. ಮೂರನೆಯದಾಗಿ, ಗಾಂಧೀಜಿ ಮೇ ತಿಂಗಳಲ್ಲಿ ಇದ್ದಕ್ಕಿದ್ದಂತೆ ಸವಿನಯ ಕಾನೂನುಭಂಗ ಚಳವಳಿಯನ್ನು ನಿಲ್ಲಿಸುವಂತೆ ದೇಶಕ್ಕೆ ಕರೆಕೊಟ್ಟದ್ದು. ಇಂತಿದ್ದರೂ ಬ್ರಿಟಿಷ್ ಸರ್ಕಾರದ ದಬ್ಬಾಳಿಕೆ ನಿಲ್ಲಲಿಲ್ಲ. ದಮನಕಾರಿ ಶಾಸನಗಳನ್ನು ಹಿಂತೆಗೆದುಕೊಳ್ಳುವುದಾಗಲಿ, ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡುವುದಾಗಲಿ ಅದು ಒಪ್ಪಲಿಲ್ಲ. ಸುಭಾಸ್ ಮತ್ತು ವಿಠಲಭಾಯಿ ಪಟೇಲರು ವಿಯನ್ನಾದಿಂದಲೇ ಗುಡುಗಿದರು. 'ದೇಶ ಸ್ವಾತಂತ್ರ್ಯಕ್ಕಿಂತ ಮಿಗಿಲಾದ ಗುರಿ ನನ್ನ ಬಾಳಿಗಿಲ್ಲ ; ಅದರ ಮುಂದೆ ಯಾರೂ ನನ್ನ ದೃಷ್ಟಿಯಲ್ಲಿ ದೊಡ್ಡವರಲ್ಲ. ಗಾಂಧೀಜಿಯವರ ಉಪವಾಸ ಸತ್ಯಾಗ್ರಹವಾಗಲಿ ಇತರ ನಾಯಕರ ತಾಟಸ್ಥ್ಯ ನೀತಿಯಾಗಲಿ ರಾಷ್ಟ್ರದ ಪ್ರಗತಿಕಾರಕವಲ್ಲ' ಎಂದು ಖಾರವಾಗಿ ಜಂಟಿ ಹೇಳಿಕೆ ಕೊಟ್ಟು ಎಚ್ಚರಿಸಿದರು. ಅದೇ ಗುಂಗಿನಲ್ಲಿದ್ದಾಗ ಓರ್ವ ಪತ್ರಕರ್ತ ಇವರಿಬ್ಬರನ್ನೂ ಭೇಟಿ ಮಾಡಿ,

'ಗಾಂಧೀಜಿ ಚಕ್ರಗೋಷ್ಠಿಯಲ್ಲಿ ನಡೆಸಿದ ಸಂಧಾನಗಳು ತುಂಬಾ ಫಲಕಾರಿಗಳು' ಎಂದು ತನ್ನ ಅಭಿಮತ ಸೂಚಿಸಿದ. ಅದು ಸಮ್ಮತವಾಗದ್ದರಿಂದ ಸುಭಾಸ್ ರೇಗಿ ನುಡಿದರು :

'ಕ್ಷಮಿಸಿ, ಕೇವಲ ಮಾತುಕತೆಗಳಿಂದ ಇತಿಹಾಸದಲ್ಲಿ ಯಾವ ದೊಡ್ಡ ಬದಲಾವಣೆಯೂ ಎಂದೂ ಆಗಿಲ್ಲ. ಆಗುವುದೂ ಇಲ್ಲ !'

'ಹಾಗಾದರೆ ಹಿಂಸೆ, ಕ್ರಾಂತಿ, ಯುದ್ಧಗಳೇ ಅವುಗಳಿಗೆ ಪರ್ಯಾಯಗಳೆಂದು ನಿಮ್ಮ ಅಭಿಮತವೆ ?

'ಸತ್ಯವಾಗಿ ಕೇಳಿ, ಸ್ವಾತಂತ್ರ್ಯಕ್ಕಾಗಿ ಭಾರತ ಎಷ್ಟು ರಕ್ತವನ್ನು ಬೇಕಾದರೂ ಬಸಿಯಲು ಸಿದ್ಧವಿದೆ. ಖಡ್ಗಧಾರೆಯ ಮೇಲೆ ನಾವು ಸ್ವಾತಂತ್ರ್ಯವನ್ನು ಪಡೆಯುತ್ತೇವೆ, ಭಿಕ್ಷೆ ಬೇಡಿಯಲ್ಲ ಅಥವಾ ಹೇಡಿತನದ ಹೆಗ್ಗುರುತಾದ ಸಂಧಾನದಿಂದಲೂ ಅಲ್ಲ. ಅದಕ್ಕಾಗಿ ನಲವತ್ತು ಕೋಟಿ ಜೀವಗಳು ಕಾದು ನಿಂತಿವೆ ಎಂಬುದನ್ನು ನೆನಪಿನಲ್ಲಿಡಿ !'

ವಿಠಲಭಾಯಿಯವರು ನಕ್ಕು, 'ಮಿಸ್ಟರ್ ಜರ್ನಲಿಸ್ಟ್, ಸುಭಾಸರ ಈ ಮಾತು ತರುಣ ಭಾರತದ ಅಂತರ್ವಾಣಿ ಎಂದು ತಿಳಿಯಿರಿ' ಎಂದರು.

ಹೀಗೆ ಬಹು ದೊಡ್ಡ ಸಮುದಾಯವೊಂದರ ಶ್ರೀಕಂಠವಾಣಿಯಾದ ಸುಭಾಸ್‌ಚಂದ್ರ ಬೋಸರಿಗೆ ಲಂಡನ್‌ನಲ್ಲಿ ನಡೆಯಲಿದ್ದ ರಾಜಕೀಯ ಸಮಾವೇಶದಲ್ಲಿ ಅಧ್ಯಕ್ಷರಾಗಲು ಕರೆ ಬಂತು. ಆದರೆ ಬ್ರಿಟಿಷ್ ಸರ್ಕಾರ ಲಂಡನ್‌ಗೆ ಪ್ರವೇಶಾನುಮತಿ ಕೊಡಲಿಲ್ಲ ಮತ್ತು ಸುಭಾಸ್ ಐರೋಪ್ಯ ರಾಷ್ಟ್ರಗಳಲ್ಲಿ ಕೇವಲ ಇಟಲಿ ಮತ್ತು ಆಸ್ಟ್ರಿಯಾಗಳನ್ನು ಪ್ರವೇಶಿಸಲು ಅವರ ಪಾಸ್‌ಪೋರ್ಟಿಗೆ ಸಹಿ ಹಾಕಿ ಕಳುಹಿಸಿತು. ಅದರಿಂದಾಗಿ ಸುಭಾಸ್ ತಮ್ಮ ಅಧ್ಯಕ್ಷ ಭಾಷಣವನ್ನು ಬರೆದು ಕಳುಹಿಸಿದರು. ಅದನ್ನು ಅಲ್ಲಿನ ಸಮಾವೇಶದಲ್ಲಿ ಓದಲಾಯಿತು. ಅದರ ಕೆಲವು ಸಾಲುಗಳು ಹೀಗಿವೆ :

'........ಹದಿನೇಳನೆಯ ಶತಮಾನದಲ್ಲಿ ತನ್ನ ಸಂವಿಧಾನಾತ್ಮಕ ಹಾಗೂ ಪ್ರಜಾಪ್ರಭುತ್ವ ಮಾದರಿಯ ಸರ್ಕಾರವನ್ನು ಕುರಿತ ಭಾವನೆಯ ಮೂಲಕ ವಿಶ್ವನಾಗರಿಕತೆ ಗಮನಾರ್ಹ ಕೊಡುಗೆಯನ್ನು ಇಂಗ್ಲೆಂಡ್ ಕೊಟ್ಟಿದೆ. ಅದೇ ರೀತಿ ಹದಿನೆಂಟನೆಯ ಶತಮಾನದಲ್ಲಿ ಸ್ವಾತಂತ್ರ್ಯ, ಸಮಾನತೆ ಮತ್ತು ಸಹೋದರತೆ ಎಂಬ ಭಾವನೆಗಳ ಮೂಲಕ ಜಾಗತಿಕ ಸಂಸ್ಕೃತಿಗೆ ಅತ್ಯಾಶ್ಚರ್ಯಕರವಾದ ಕೊಡುಗೆಯನ್ನು ಕೊಟ್ಟಿದೆ. ಹತ್ತೊಂಬತ್ತನೆಯ ಶತಮಾನದಲ್ಲಿ ರಷ್ಯಾ ಕಾರ್ಮಿಕ ಕ್ರಾಂತಿ, ಕಾರ್ಮಿಕ ಸರ್ಕಾರ ಮತ್ತು ಕಾರ್ಮಿಕ ಸಂಸ್ಕೃತಿಗಳ ಮೂಲಕ ವಿಶ್ವದ ಸಂಸ್ಕೃತಿ ಹಾಗೂ ನಾಗರಿಕತೆಗಳನ್ನು ಶ್ರೀಮಂತಗೊಳಿಸಿದೆ. ವಿಶ್ವದ ಸಂಸ್ಕೃತಿ ಮತ್ತು ನಾಗರಿಕತೆಗಳಿಗೆ ಮುಂದಿನ ಗಮನಾರ್ಹ ಕೊಡುಗೆಯನ್ನು ನೀಡುವಂತೆ ನಾನೀಗ ಭಾರತಕ್ಕೆ ಕರೆಕೊಡುತ್ತಿದ್ದೇನೆ !'

* * *

'ಆದದ್ದೆಲ್ಲಾ ಒಳಿತೇ ಆಯಿತು' ಎಂಬ ಪುರಂದರದಾಸರ ಸ್ವಾನುಭವದ ಮಾತು ಸಾರ್ವಕಾಲಿಕ ಸತ್ಯ ಅನ್ನಿಸುತ್ತೆ. ಸುಭಾಸ್ ಚಂದ್ರಬೋಸರಿಗೆ ಯುರೋಪಿಗೆ ಹೋಗಲು ವಿಧಿಸಿದ ಗಡೀಪಾರು ಶಿಕ್ಷೆ ಒಂದರ್ಥದಲ್ಲಿ ಅನುಗ್ರಹವೇ ಆಯಿತು ಅವರ ಪಾಲಿಗೆ. Blessing in disguise ಅರ್ಥಾತ್ ಮರೆಯ ಆಶೀರ್ವಾದ ಆಯಿತು. ಮುಂದಿನ ಬ್ರಿಟಿಷರ ವಿರುದ್ಧದ ಹೋರಾಟಕ್ಕೆ ಜನ ಬೆಂಬಲ, ನೆರ ರಾಷ್ಟ್ರಗಳ ಸಹಕಾರ ಮತ್ತು ಸಹಾನುಭೂತಿ ಮೊದಲಾದವನ್ನು ಪಡೆಯಲು ನೆರವಾಯಿತು. ಅವರು ಆಸ್ಟ್ರಿಯಾವನ್ನು ತಮ್ಮ ಕಾರ್ಯಚಟುವಟಿಕೆಗಳ ಕೇಂದ್ರವಾಗಿಟ್ಟುಕೊಂಡು ಯುರೋಪಿನ ಇತರ ದೇಶಗಳಾದ ಪೋಲೆಂಡ್, ಜೆಕೊಸ್ಲವಾಕಿಯ, ಹಂಗೇರಿ, ಇಟಲಿ, ಸ್ವಿಡ್ಜರ್‌ಲ್ಯಾಂಡ್, ಜರ್ಮನಿ, ಫ್ರಾನ್ಸ್ ಮೊದಲಾದ ದೇಶಗಳೊಡನೆ ಸಂಪರ್ಕ ಕಲ್ಪಿಸಿಕೊಂಡರು. ಆ ದೇಶಗಳಲ್ಲಿ ಅನಿವಾಸಿ ಭಾರತೀಯರು ಸಾಕಷ್ಟು ಸಂಖ್ಯೆಯಲ್ಲಿದ್ದರು. ಆದರೆ ಇಂಗ್ಲೆಂಡ್ ಮತ್ತು ಜರ್ಮನಿಗಳಲ್ಲಿ ಅವರ ಸಂಖ್ಯೆ ಅಧಿಕವಾಗಿತ್ತು. ಅಲ್ಲಿಗೆ ಸುಭಾಸ್ ಕೈಚಾಚದಂತೆ ಬ್ರಿಟಿಷ್ ಸರ್ಕಾರ ಎಚ್ಚರವಹಿಸಿತು. ಆದರೂ ಅಲ್ಲಿನ ವಿದ್ಯಾರ್ಥಿ ತರುಣರಲ್ಲಿ ಭಾರತೀಯತ್ವ ತಲೆದೋರುವಂತೆ ಸುಭಾಸ್ ತಮ್ಮ ಭಾಷಣಗಳು, ಲೇಖನಗಳು, ಪತ್ರವ್ಯವಹಾರಗಳ ಮೂಲಕ ಮಾಡಿದರು. ಅವರಲ್ಲಿ ಸಂಘಟನೆ ಮೊದಲು ಆಗಬೇಕಿದ್ದ ಮುಖ್ಯ ಕಾರ್ಯ ; ಅದನ್ನೂ ಮಾಡಿದರು. ನೆರೆ ರಾಷ್ಟ್ರಗಳವರಲ್ಲಿ ಬ್ರಿಟಿಷ್ ಸಾಮ್ರಾಜ್ಯವಾದದ ವಿರುದ್ಧ ಭಾರತದ ಹೋರಾಟಕ್ಕೆ ನೈತಿಕ ಬೆಂಬಲ ಪಡೆಯಲು ಪ್ರಯತ್ನಿಸಿ ಸಾಕಷ್ಟು ಯಶಸ್ವಿಯಾದರು. ಅದರ ಫಲವಾಗಿ ವಿಯನ್ನಾದಲ್ಲಿ ಆಸ್ಟ್ರಿಯಾ–ಇಂಡಿಯಾ ಸಂಘ ಸ್ಥಾಪಿಸಿದರು. ಜಕೊಸ್ಲವಾಕಿಯದಲ್ಲಿ 'ಜೆಕೊಸ್ಲವಾಕ್ – ಇಂಡಿಯನ್' ಸಂಘ ಸ್ಥಾಪಿಸಿ. ೧೯೩೩ರಲ್ಲಿ ಅದನ್ನೂ ತಾವೇ ಉದ್ಘಾಟಿಸಿದರು. ಪೋಲೆಂಡ್ ತನ್ನ ಪೂರ್ಣ ಸಹಕಾರ ನೀಡುವಂತೆ ಒಲಿಸಿಕೊಂಡರು. ಜರ್ಮನಿಯಲ್ಲಿ ಪ್ರಭುತ್ವ ನಡೆಸುತ್ತಿದ್ದ ಅಡಾಲ್ಫ್ ಹಿಟ್ಲರ್ ಮತ್ತು ಅಷ್ಟೇ ಪ್ರಭಾವಶಾಲಿಯಾಗಿ ದಕ್ಷಿಣಭಾಗದಲ್ಲಿ ಆಳ್ವಿಕೆಯ ನೇತಾರನಾಗಿದ್ದ ಇಟಲಿಯ ಬೆನೆಟೊ ಮುಸ್ಸೋಲಿನಿ ಇವರಿಬ್ಬರನ್ನೂ ಸಂಪರ್ಕಿಸಿ ಮನವೊಲಿಸಲು ಯತ್ನಿಸಿ ಅರ್ಧ ಯಶಸ್ವಿಯಾದರು. ಹಿಟ್ಲರ್ ಸುಭಾಸರ ಕೋರಿಕೆಯನ್ನು ಮಾನ್ಯ ಮಾಡಲಿಲ್ಲ. ಅದಕ್ಕೆ ಕಾರಣ ಬ್ರಿಟನ್ ಬಗೆಗೆ ಅವನಿಗಿದ್ದ ಅರೆಮನಸ್ಸಿನ ಒಲವು ಮತ್ತು ವಸಾಹತು ಹಾಗೂ ಅಧೀನ ರಾಷ್ಟ್ರಗಳು ತಲೆ ಎತ್ತಬಾರದು, ಅವು ತುಳಿಸಿಕೊಂಡೇ ಬದುಕು ಮಾಡಬೇಕು ಎಂಬ ಅವನ ಕೆಟ್ಟ ನೀತಿ. ಹೀಗಾಗಿ ಅವನು ಸುಭಾಸರ ಕೂಗಿಗೆ ಓಗೊಡಲೇ ಇಲ್ಲ. ಆದರೆ ಜರ್ಮನಿಯಲ್ಲಿದ್ದ ಭಿನ್ನಮತೀಯರು ಸುಭಾಸರನ್ನು ಬೆಂಬಲಿಸಿದರು. ಬರ್ಲಿನ್‌ನಲ್ಲಿದ್ದ ಇಂಡೋ–ಜರ್ಮನ್ ಸಂಘವು ಸುಭಾಸ್ ವಿದೇಶೀ ಕಚೇರಿಯ ಅಧಿಕಾರಿಗಳೊಡನೆ ಮಾತುಕತೆಗೆ ಏರ್ಪಾಡು ಮಾಡಿತು.

ಸುಭಾಸ್ ಜರ್ಮನಿಯಲ್ಲಿ ಕೆಲಸ ಮಾಡುತ್ತಿದ್ದ ಅನೇಕ ಭಾರತೀಯರನ್ನೂ ವಿದ್ಯಾರ್ಥಿಗಳನ್ನೂ ಸಂಪರ್ಕಿಸಿ ಅವರಲ್ಲಿ ವಿಶೇಷ ಸಂಘಟನೆ ಸ್ಥಾಪಿತವಾಗುವಂತೆ ಮಾಡಿದರು. ಅಲ್ಲಿನ ಯುವ ವಿದ್ಯಾರ್ಥಿ ಗುಂಪಿನ ನಾಯಕತ್ವವನ್ನು ಎ.ಸಿ.ಎನ್. ನಂಬಿಯಾರರು ವಹಿಸಿಕೊಂಡರು. ಮ್ಯೂನಿಚ್‌ನಲ್ಲಿದ್ದ ಜರ್ಮನ್ ಅಕಾಡೆಮಿಯ ನಿರ್ದೇಶಕ ಫ್ರಾಂಚ್ ಥಿಯರ್ ಫೆಲ್ಡರ್ ಬೋಸರ ಅತ್ಯಂತ ಆತ್ಮೀಯ ಗೆಳೆಯರಾದರು. ಇಂಥೆಲ್ಲ ವ್ಯಕ್ತಿಗಳ ಹಾಗೂ ರಾಷ್ಟ್ರಗಳ ನೈತಿಕ ಬೆಂಬಲ, ಪ್ರೇರಣೆ, ಪ್ರೋತ್ಸಾಹಗಳಿಂದ ಸುಭಾಸ್ ಉತ್ತೇಜಿತರಾದರು.

ಇಟಲಿ ಸುಭಾಸರ ನೆಚ್ಚಿನ ನೆಲೆಯಾಯಿತು. ಹಡೆದ ತಾಯಿ ಭಾರತವಾದರೆ, ಪಡೆದ ತಾಯಿ ಇಟಲಿ ಎನ್ನುತ್ತಿದ್ದರು. ಅಲ್ಲಿನ ಜನ ಸುಭಾಸರನ್ನು ತ್ರಿಕರಣ ಪೂರ್ವಕ ಮೆಚ್ಚಿದರು. ಅದಕ್ಕೆ ಮುಖ್ಯ ಕಾರಣ ಇಟಲಿಯ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ತರುಣ ಮಜನಿಯನ್ನು ಸುಭಾಸ್ ತುಂಬಾ ಹೋಲುತ್ತಿದ್ದರು. ಮಜನಿಯಂತೆಯೇ ಏಕತೆ ಮತ್ತು ಸ್ವಾತಂತ್ರ್ಯಗಳನ್ನು ಸಾಧಿಸುವ ಧ್ಯೇಯ ಉಳ್ಳವರಾಗಿದ್ದರು ಮತ್ತು ಅವನಂತೆ ಯುವ ಜನತೆಯಲ್ಲಿ ತುಂಬಾ ಭರವಸೆ ಇಟ್ಟುಕೊಂಡಿದ್ದವರು. ಈ ಬಗೆಯ ಹಲವು ಸಾಮಾನ್ಯ ಗುಣಗಳಿದ್ದುದರಿಂದ ಇಟಲಿಯವರಿಗೆ ಸುಭಾಸ್ ಮೆಚ್ಚಾದರು. ಮುಸ್ಸೋಲಿನಿಯವರನ್ನು ಭೇಟಿ ಮಾಡಿದಾಗ, ಮುಸ್ಸೋಲಿನಿ ಪ್ರಶ್ನಿಸಿದರು.

'ಮಿಸ್ಟರ್ ಬೋಸ್, ನಿಜವಾಗಿ, ನಿಸ್ಸಂದೇಹವಾಗಿ ಭಾರತವು ಬಹುಬೇಗ ಸ್ವಾತಂತ್ರ್ಯ ಪಡೆಯಬಲ್ಲುದು ಎಂಬ ನಂಬಿಕೆ ನಿಮಗಿದೆಯೆ ?'

'ಇದೆ. ನಿಮ್ಮೊಡನೆ ಮಾತನಾಡುತ್ತಿರುವಷ್ಟೇ ಸತ್ಯವಾಗಿದೆ !'

'ಅದಕ್ಕೆ ಮೂಲಾಧಾರ ಮತ್ತು ವಿಶ್ವಾಸ ?'

'ಯುವಶಕ್ತಿ ಅಣುಶಕ್ತಿಗೂ ಮಿಗಿಲಾದ ಪ್ರಾಂಜಲಮನಸ್ಸಿನ ನಮ್ಮ ತರುಣ ತೇಜಸ್ವಿಗಳು. ಸ್ವಾತಂತ್ರ್ಯ ಸಮರದಲ್ಲಿ ಧುಮುಕಿ, ತಮ್ಮ ಪ್ರಾಣವನ್ನು ಪಣವಾಗಿಟ್ಟು ಹೋರಾಡುವ ತರುಣ ತಂಡ ! ಇದು ನನ್ನ ಭರವಸೆಯ ಕೇಂದ್ರಬಿಂದು'

ಮತ್ತೊಂದು ಮುಂದುವರಿದ ಪ್ರಶ್ನೆ ; ಸ್ವಾತಂತ್ರ್ಯ ಸಂಪಾದನೆ ಸಂಧಾನ ಸುಧಾರಣೆಗಳಿಂದ ಸಾಧ್ಯವೊ ಅಥವಾ ಕ್ರಾಂತಿರೂಪಿ ಹೋರಾಟದಿಂದಲೊ ?'

'ಕ್ರಾಂತಿರೂಪೀ ಹೋರಾಟದಿಂದ ! ಮುಸ್ಸೋಲಿನಿಯವರೆ, ಕಷ್ಟಪಟ್ಟು ಪಡೆದದ್ದಕ್ಕೆ ಬೆಲೆ ಇರುತ್ತೆ. ದಾನದಿಂದ ಪಡೆದದ್ದು ದಾರಿದ್ರ್ಯ ತರುತ್ತೆ. ಸ್ವಾತಂತ್ರ್ಯದ ಬೆಲೆ ಮುಂದಿನ ಪೀಳಿಗೆಗೆ ಗೊತ್ತಾಗುವುದು ಹಿಂದಿನವರ ತ್ಯಾಗ ಬಲಿದಾನಗಳಿಂದ ಎಂಬುದು ತಿಳಿದಾಗ ಮಾತ್ರ. ಸುಲಭದಲ್ಲಿ ದೊರೆತದ್ದಕ್ಕೆ ಬೆಲೆ ಇರುವುದಿಲ್ಲ. ರಕ್ತಕೊಟ್ಟು ಸ್ವಾತಂತ್ರ್ಯ ಪಡೆಯಬೇಕು ! ಇದು ನನ್ನ ಅಭಿಮತ.'

'ಭೇಷ್ ! ನಿಮಗೆ ನಿಜವಾಗಿಯೂ ಉತ್ತಮ ಭವಿಷ್ಯವಿದೆ. ಒಳ್ಳೆಯದಾಗಲಿ.'

ಇಂಥದೇ ಮನೋಧರ್ಮದ ನೆರವು ಸುಭಾಸರಿಗೆ ತುರ್ಕಿಯ ನಾಯಕ ಮುಸ್ತಾಫ ಕೆಮಲ್ ಅತಾತುರ್ಕ್‌ನಿಂದ ಲಭಿಸಿತು. ಆತ ತುರ್ಕಿಯಲ್ಲಿ ಸಂಯುಕ್ತ ರಾಷ್ಟ್ರ ಸ್ಥಾಪನೆಮಾಡಿ ಯಶಸ್ಸು ಗಳಿಸಿದ್ದ ವ್ಯಕ್ತಿ. ಭಾರತ ಮತ್ತು ತುರ್ಕಿಗಳ ಸ್ನೇಹ ಸೌಹಾರ್ದಗಳ ಬೆಸುಗೆಗೆ ಆ ಎರಡೂ ರಾಷ್ಟ್ರಗಳಲ್ಲಿದ್ದ ಸಮಾನ ಸಮಸ್ಯೆಗಳು ಕಾರಣವಾಗಿದ್ದವು. ಎರಡರಲ್ಲೂ ಮೊದಲು ಸಾಮಾಜಿಕ, ಸಾಂಸ್ಕೃತಿಕ ಮತ್ತು ಆಡಳಿತಾತ್ಮಕ ಸುಧಾರಣೆಗಳ ಅನಿವಾರ್ಯತೆ ಇತ್ತು. ಜೊತೆಗೆ ತುರ್ಕಿಯಲ್ಲಿ ಹತ್ತಾರು ಸ್ಥಳೀಯ ಭಾಷೆಗಳಿದ್ದು ಅವುಗಳಿಗೆ ಏಕರೂಪದ ಲಿಪಿ ಇಲ್ಲದೆ ತೊಂದರೆಯಾಗಿತ್ತು. ಸುಭಾಸರ ಸಲಹೆಯಂತೆ ಆ ರಾಜ್ಯದಲ್ಲಿ ಎಲ್ಲ ಭಾಷೆಯವರೂ ರೋಮನ್ ಲಿಪಿಯನ್ನು ಅಳವಡಿಸಿಕೊಂಡರು. ಅದರಿಂದಾಗಿ ಅಲ್ಲಿನ ಜನರಲ್ಲಿ ಭಾವೈಕ್ಯತೆ ಮೂಡಲು ಕಾರಣವಾಯಿತು. ಕೆಮಲ್ ಅತಾತುರ್ಕ್ ಸುಭಾಸರ ಅಚ್ಚುಮೆಚ್ಚಿನ ನೇಹಿಗರಾದರು.

ಒಳ್ಳೆಯ ಕೆಲಸಕ್ಕೆ ವಿಘ್ನಗಳು ಬಹಳ. ಅದು ಸುಭಾಸರ ವಿಷಯದಲ್ಲಿ ಸತ್ಯವಾಯಿತು. ಅವರ ಭುಜಬಲದಂತಿದ್ದ ವಿಠಲಬಾಯಿ ಪಟೇಲರು ೧೯೩೩ ಅಕ್ಟೋಬರ್ ೨೨ ರಂದು ನಿಧನರಾದರು. ಅದೊಂದು ದೊಡ್ಡ ಆಘಾತ. ಆದರೂ ಸುಭಾಸ್ ಎದೆಗುಂದಲಿಲ್ಲ. ಸಂಘಟನಾ ಕಾರ್ಯವನ್ನು ತಪ್ಪದೆ ಮುಂದುವರಿಸಿದರು. ಅದರ ಜೊತೆಗೆ ಭಾರತ ಕುರಿತ ಅವಹೇಳನಕಾರಿ ಚಿತ್ರಗಳಾದ 'ಇಂಡಿಯಾ ಸ್ಪೀಕ್ಸ್' ಮತ್ತು ಬೆಂಗಾಲೀ' ಎಂಬ ಎರಡೂ ಚಿತ್ರಗಳನ್ನು ಬರ್ಲಿನ್‌ನಲ್ಲಿ ನಡೆಯಲಿದ್ದ ಅಂತರರಾಷ್ಟ್ರೀಯ ಚಲನಚಿತ್ರ ಪ್ರದರ್ಶನದಲ್ಲಿ ಪ್ರದರ್ಶಿತವಾಗದಂತೆ ತಡೆದರು. ಚಟುವಟಿಕೆಗಳು ಇನ್ನೂ ಚುರುಕುಗೊಳ್ಳುತ್ತಿದ್ದವು. ಅಷ್ಟರಲ್ಲಿ,

ತಂದೆ ಜಾನಕೀನಾಥ ಬೋಸರು ಮೃತ್ಯುಶಯ್ಯೆಯಲ್ಲಿದ್ದಾರೆ ಬೇಗ ಬರಬೇಕು' ಎಂಬ ವಾರ್ತೆ ಬರಸಿಡಿಲಂತೆ ಬಂದೆರಗಿತು. ತರಾತುರಿಯಿಂದ ಹೊರಟರೂ ಸುಭಾಸ್ ಸಕಾಲಕ್ಕೆ ಬರಲಾಗಲಿಲ್ಲ. ಜಾನಕೀನಾಥರ ಅಂತ್ಯಕ್ರಿಯೆ ಮುಗಿದ ಮಾರನೆಯ ದಿನ ಅಂದರೆ ೧೯೩೪ ಡಿಸೆಂಬರ್ ೩ರಂದು ಬಂದರು. ಬಂದಕೂಡಲೇ ಅರೆಸ್ಟ್ ಆದರು. ಕಲ್ಕತ್ತದ ಎಲ್ಗಿನ್ ರಸ್ತೆಯಲ್ಲಿರುವ ಅವರ ಮನೆಯಲ್ಲಿಯೇ ಬಂಧಿಯಾಗಿರಿಸಿತು ಸರ್ಕಾರ. ಅಲ್ಲಿ ಸುಮಾರು ಒಂದು ತಿಂಗಳ ಕಾಲ ಗೃಹಬಂಧನದಲ್ಲಿದ್ದರು. ಅಲ್ಲಿಂದಲೇ ತಮ್ಮ ತಂದೆಯ ಪವಿತ್ರಾತ್ಮಕ್ಕೆ ಕಣ್ಣೀರ ತರ್ಪಣ ಕೊಟ್ಟು, ತಮ್ಮ ವೈದ್ಯಕೀಯ ಚಿಕಿತ್ಸೆಗಾಗಿ ೧೯೩೫ ಜನವರಿ ೧೦ರಂದು ಮರಳಿ ಯುರೋಪಿಗೆ ನಡೆದರು.

* * *

ಸುಭಾಸ್‌ಚಂದ್ರ ಬೋಸರ ಸ್ಥಿತಪ್ರಜ್ಞತೆಯು ಯಾರನ್ನಾದರೂ ಮೆಚ್ಚಿಸುವಂಥದು. ಒಂದು ಕಡೆ ಭಾರತದ ಸ್ಥಿತಿಗತಿ ಏನಾಯಿತು ಎಂಬ ಚಿಂತೆ. ಮತ್ತೊಂದು ಕಡೆ ವಿದೇಶಗಳಲ್ಲಿರುವ ಸ್ವದೇಶಿಯರ ಸಂಘಟನೆಯ ಆಲೋಚನೆ, ಮಗದೊಂದು ಕಡೆ ಸ್ವಾತಂತ್ರ್ಯದ ಹಾದಿಯ ಅನ್ವೇಷಣೆ. ಇಂತೆಲ್ಲ ಗೊಂದಲಗಳ ನಡುವೆಯೂ ಚಿತ್ತೈಕಾಗ್ರತೆಗೆ ಸ್ಥಾನ ಕೊಟ್ಟಿದ್ದರು. ರೋಗ ಆಗಾಗ ಕೆಣಕುತ್ತಿದ್ದರೂ ಅದರ ಕಡೆ ತಮ್ಮ ಲಕ್ಷ್ಯ ಹರಿಸದೆ ತಮ್ಮ ಅನುಭವಗಳಿಗೆ ರೂಪ ಕೊಡಲು ಯತ್ನಿಸಿದರು. ಅದು 'ದಿ ಇಂಡಿಯನ್ ಸ್ಟ್ರಗಲ್' ಎಂಬ ಕೃತಿ ರೂಪದಲ್ಲಿ ಹೊರಬಂದು.

'ದಿ ಇಂಡಿಯನ್ ಸ್ಟ್ರಗಲ್' ಅವರ ಚೊಚ್ಚಲ ಹಾಗೂ ಮಹತ್ವದ ಕೃತಿ. ಅದು ಭಾರತದ ಹೋರಾಟದ ಪೂರ್ವಾರ್ಧದ ಚಿತ್ರಣ. ಅದನ್ನು ರೋಗ ಚಿಕಿತ್ಸೆ ಪಡೆಯುತ್ತಿದ್ದ ಮಂಚದ ಮೇಲೆ ಕುಳಿತೇ ರಚಿಸಿದರು. ಅದು ಸುಮಾರು ಒಂದು ವರ್ಷ ತೆಗೆದುಕೊಂಡಿತು. ೧೯೩೫ರಲ್ಲಿ ಲಂಡನ್‌ನಲ್ಲಿ ಆ ಪುಸ್ತಕ ಪ್ರಕಟವಾಯಿತು. ೧೯೩೭ರಲ್ಲಿ 'ಆನ್ ಇಂಡಿಯನ್ ಪಿಲಿಗ್ರಿಮ್' ಎಂಬ ತಮ್ಮ ಅಪೂರ್ಣ ಆತ್ಮಚರಿತ್ರೆಯನ್ನು ಬರೆದರು. ಕಾರ್ಯ ಒತ್ತಡದಿಂದ ಅದನ್ನು ಅವರು ಪೂರ್ಣಗೊಳಿಸಲಾಗಲೇ ಇಲ್ಲ. ಅವರು ಐ.ಸಿ.ಎಸ್. ಪರೀಕ್ಷೆ ತೆಗೆದುಕೊಂಡಂದಿನಿಂದ, ಆ ಪದವಿಯನ್ನು ಹಿಂತಿರುಗಿಸಿದವರೆಗಿನ ಅನುಭವಗಳ ಅಭಿವ್ಯಕ್ತಿ ಮಾತ್ರವಾಗಿತ್ತು. ಆದರೆ ಅಷ್ಟೇ ಅಂಶ ಹತ್ತು ಅಧ್ಯಾಯಗಳ ವ್ಯಾಪ್ತಿ ಪಡೆದಿತ್ತು. ಒಳ್ಳೆಯ ಶೈಲಿ, ಒಳ್ಳೆಯ ಬರವಣಿಗೆ.

'ದಿ ಇಂಡಿಯನ್ ಸ್ಟ್ರಗಲ್' ಸುಭಾಸರ ಆಚಾರ್ಯ ಕೃತಿ (Master Piece) ಅದನ್ನು ಅನೇಕ ಪ್ರಸಿದ್ಧ ಪತ್ರಿಕೆಗಳು ಹಾಗೂ ಹಿರಿಯರು ಮುಕ್ತಕಂಠದಿಂದ ಪ್ರಶಂಸಿಸಿದರೂ ಭಾರತದಲ್ಲಿದ್ದ ಬ್ರಿಟಿಷ್ ಸರ್ಕಾರ ಬಹಿಷ್ಕರಿಸಿತ್ತು. ಆದರೆ ಬ್ರಿಟಿಷ್ ಪತ್ರಿಕೆಗಳು ಯುರೋಪಿನ ರಾಜಕೀಯ ಮತ್ತು ಸಾಂಸ್ಕೃತಿಕ ವಲಯಗಳು ಆ ಪುಸ್ತಕವನ್ನು ಆತ್ಮೀಯವಾಗಿ ಸ್ವಾಗತಿಸಿದವು. ಇಂಗ್ಲೆಂಡಿನ 'ಮ್ಯಾಂಚೆಸ್ಟರ್ ಗಾರ್ಡಿಯನ್' – 'ಭಾರತದ ರಾಜಕಾರಣವನ್ನು ಕುರಿತಂತೆ, ಭಾರತದ ಓರ್ವ ರಾಜಕಾರಣಿಯೇ ಬರೆದ ಈ ಕೃತಿ ಅತ್ಯಂತ ಸ್ವಾರಸ್ಯಪೂರ್ಣವಾದುದು' ಎಂತಲೂ, 'ದಿ ಸಂಡೇ ಟೈಮ್ಸ್' – 'ದಿ ಇಂಡಿಯನ್ ಸ್ಟ್ರಗಲ್ ಸಾರ್ವಜನಿಕ ಅಭಿಪ್ರಾಯಗಳನ್ನು ಪ್ರಕಟಪಡಿಸುವ ಒಂದು ಅಮೂಲ್ಯ ಕೃತಿ' ಎಂತಲೂ, 'ದಿ ಡೈಲಿ ಹೆರಾಲ್ಡ್ – ಇದು ನಲವತ್ತು ವರ್ಷ ತುಂಬದ ತರುಣನೊಬ್ಬನ ತೀಕ್ಷ್ಣವೂ ವಿಚಾರಶೀಲವೂ ಆದ ರಚನಾತ್ಮಕ ಮನಸ್ಸನ್ನು ಪ್ರತಿಬಿಂಬಿಸುತ್ತದೆ – ಇಂತಹ ತರುಣನು ಯಾವುದೇ ದೇಶದ ರಾಜಕೀಯ ಜೀವನಕ್ಕೆ ಅಮೂಲ್ಯ ಆಸ್ತಿ ಹಾಗೂ ಭೂಷಣ ಆಗಬಲ್ಲ' ಎಂತಲೂ, 'ದಿ ನ್ಯೂಸ್ ಕ್ರಾನಿಕಲ್ – ಕ್ರಾಂತಿಕಾರರಿಗಿರಬೇಕಾದ ಸೂಕ್ಷ್ಮ ವಿಚಾರಶಕ್ತಿ ಈ ಕೃತಿಯ ಲೇಖಕರಿಗಿದೆ. ತುಂಬ ಸ್ಫುಟವೂ ಯಥಾರ್ಥವೂ ಆಗಿರುವಂಥ ಸಾಕ್ಷ್ಯಗಳಿಂದ ತಿಳಿದು ಬರುವ ವಿಚಾರಗಳಿಗೆ ಲೇಖಕರು ನೀಡಿರುವ ನಿದರ್ಶನದಿಂದ ಕೃತಿಗೆ ಬಹುಮಹತ್ವ ದೊರೆತಿದೆ.' ಎಂತಲೂ ಪ್ರಶಂಸಿಸಿದವು. ಬ್ರಿಟಿಷ್ ರಾಜಕಾರಣಿ ಲ್ಯಾನ್ಸ್ ಬರಿ ಎಂಬಾತ ಕೂಡ ಸುಭಾಸರನ್ನು ಅಭಿನಂದಿಸುತ್ತಾ,

'ಈ ಗ್ರಂಥವನ್ನು ಓದುತ್ತಾ ಓದುತ್ತಾ ನಾನು ಬಹಳಷ್ಟು ವಿಷಯಗಳನ್ನು ಕಲಿಯುತ್ತಿದ್ದೇನೆ' ಎಂದು ಬರೆದ. ಐರ್ಲೆಂಡಿನ ಅಧ್ಯಕ್ಷ ಏಮನ್. ಡಿ.ವಲೇರಾ ಬಾಯಿತುಂಬಾ ಹೊಗಳಿದರು. ಸುಭಾಸ್ ಚಂದ್ರರೇ ಖುದ್ದಾಗಿ ತಮ್ಮ ಕೃತಿಯ ಒಂದು ಪ್ರತಿಯನ್ನು ಕೊಟ್ಟಾಗ ಮುಸ್ಸೋಲಿನಿಯವರು ಮೆಚ್ಚಿ.

'ಭಾರತದ ಸ್ವಾತಂತ್ರ್ಯಕ್ಕೆ ಇದು ನಾಂದಿಯಾಗಲಿ' ಎಂದು ಹರಸಿದರು. ಸುಭಾಸ್‌ಚಂದ್ರ ಬೋಸರ ಅಚ್ಚುಮೆಚ್ಚಿನ ಆತ್ಮೀಯರೂ ಜಗದ್ವಿಖ್ಯಾತ ವಿದ್ವಾಂಸರೂ ಆದ ಫ್ರಾನ್ಸಿನ ಮಹಾಲೇಖಕ ರೊಮೈನ್ ರೊಲಾರವರು, 'ಈಗಷ್ಟೇ ಪ್ರಕಟವಾಗಿರುವ ಈ ಮಹತ್ವದ ಕೃತಿ ಸುಭಾಸ್ ಚಂದ್ರಬೋಸರ ಹೃದಯಾಂತರಾಳವನ್ನೇ ತೆರೆದಿಟ್ಟಿದೆ' ಎಂದು ಮುಂತಾಗಿ ತಮ್ಮ ದಿನಚರಿಯಲ್ಲಿ ಬರೆದಿದ್ದಾರೆ.

ಸುಭಾಸ್ ಚಂದ್ರರ ಬಗೆಗೆ ಅವರ ಕೃತಿರತ್ನದ ಬಗೆಗೆ ಅನೇಕರು ಹರ್ಷ ವ್ಯಕ್ತಪಡಿಸಿದರು. ಆದರೆ ಸುಭಾಸರಲ್ಲಿಯೇ ಇದ್ದ ರೋಗಕ್ಕೆ ಮಾತ್ರ ಕರುಣೆ ಬರಲೇ ಇಲ್ಲ. ಅದು ಉಲ್ಬಣಗೊಂಡಿತು. ಪಿತ್ತಕೋಶವನ್ನು ತೆಗೆದುಹಾಕಲೇಬೇಕಾದ ಅನಿವಾರ್ಯತೆಯನ್ನು ವೈದ್ಯರು ತಿಳಿಸಿದರು. ಸುಭಾಸ್ ಅದಕ್ಕೆ ಒಪ್ಪಿ, ಆಪರೇಷನ್ ಯಶಸ್ವಿಯಾಗದೆ, ಪ್ರಾಣಕ್ಕೆ ಅಪಾಯ ಉಂಟಾದರೆ, ಅದಕ್ಕೆ ತಾವೇ ಜವಾಬ್ದಾರರೆಂದು ಒಂದು ಪತ್ರ ಕೂಡ ಬರೆದುಕೊಟ್ಟರು. ಸುದೀರ್ಘವಾದದ್ದೇನೂ ಅಲ್ಲ. ಒಂದು ಚಿಕ್ಕ ಚೀಟಿ – ಅದರಲ್ಲಿ 'ನನ್ನ ಆಸ್ತಿಪಾಸ್ತಿಗಳೆಲ್ಲ ದೇಶದ ಜನತೆಗೆ, ಸಾಲಸೋಲಗಳೆಲ್ಲ ಅಣ್ಣ ಶರತ್‌ಗೆ' – ಎಂದಷ್ಟೇ ಬರೆದಿದ್ದರು. ೧೯೩೫ರಲ್ಲಿ ಶಸ್ತ್ರಚಿಕಿತ್ಸೆ ನಡೆಸಿ ಅವರ ಪಿತ್ತಕೋಶವನ್ನು ತೆಗೆದುಹಾಕಲಾಯಿತು.

'ದುಃಖಿಗೆ ನೆರಂ ದುಃಖಿ' ಮಹರ್ಷಿ ವಾಲ್ಮೀಕಿಯ ಸತ್ಯಸೂಕ್ತಿಯಂತೆ ರೋಗಿಗೆ ನೆರಂ ರೋಗಿಯಾದರು ಸುಭಾಸ್ ! ಶಸ್ತ್ರಚಿಕಿತ್ಸೆಗಾಗಿ ವಿಯನ್ನಾಕ್ಕೆ ಬಂದ ಶ್ರೀಮತಿ ಕಮಲಾ ನೆಹರೂರವರನ್ನು ತಾಯಿಯಂತೆ, ತಂಗಿಯಂತೆ ನೋಡಿಕೊಂಡರು. ಹಗಲಿರುಳೂ ಅವರ ಶುಶ್ರೂಷೆ ಮಾಡಿದರು. ಪತ್ನಿಯನ್ನು ನೋಡಲು ಅಲ್ಲಿಗೆ ಬಂದಿದ್ದ ಮಿತ್ರ ಜವಹರಲಾಲ್ ನೆಹರೂರವರು ಸುಭಾಸ್ ಚಂದ್ರರ ಸೇವೆಗೆ ತಮ್ಮ ಕೃತಜ್ಞತೆ ಸೂಚಿಸಿದರು. ಕಮಲಾ ನೆಹರೂರವರ ದೇಹಸ್ಥಿತಿ ಸುಧಾರಿಸಿದ ಮೇಲೆ ಸುಭಾಸ್ ಭಾರತಕ್ಕೆ ಮರಳುವ ಇಚ್ಛೆಯನ್ನು ವ್ಯಕ್ತಪಡಿಸಿದರು. ಅದಕ್ಕೆ ಮುಖ್ಯ ಆಕರ್ಷಣೆ ೧೯೩೬ರಲ್ಲಿ ಜವಹರಲಾಲ್ ನೆಹರೂರವರ ಅಧ್ಯಕ್ಷತೆಯಲ್ಲಿ ಲಕ್ನೋದಲ್ಲಿ ನಡೆಯಲಿದ್ದ ಕಾಂಗ್ರೆಸ್ ಅಧಿವೇಶನ. ಇದರ ಸುಳಿವು ತಿಳಿದ ಬ್ರಿಟಿಷ್ ಅಧಿಕಾರಿಗಳು ಎಚ್ಚರಿಸಿದರು. ವಿಯನ್ನಾದಲ್ಲಿದ್ದ ತಮ್ಮ ರಾಯಭಾರಿಗಳ ಮೂಲಕ ಲಿಖಿತ ಪತ್ರ ಕಳುಹಿಸಿ, ಒಂದು ವೇಳೆ ಸುಭಾಸ್ ಭಾರತಕ್ಕೆ

ಹಿಂತಿರುಗಿದ್ದಾದರೆ ಅಲ್ಲಿ ಅವರು ಸ್ವತಂತ್ರರಾಗಿರಲು ಸಾಧ್ಯವಿಲ್ಲ ಎಂದು ತಿಳಿಸಿದ್ದರು. ಆದರೆ ಈ ಬೆದರಿಕೆಗೆ ಬೆಲೆ ಕೊಡದೆ ಸುಭಾಸ್ ೧೯೩೬ ಮಾರ್ಚ್‌ನಲ್ಲಿ ಹಡಗನ್ನೇರಿ ಮುಂಬಯಿ ಬಂದರಿಗೆ ಬಂದರು. ಬಂದಕೂಡಲೇ ಬಂಧನಕ್ಕೊಳಗಾದರು.

ಸೆರೆಮನೆಯ ಸೇವೆಯಿಂದಾಗಿ ಸುಭಾಸರ ಆರೋಗ್ಯ ಹಾಳಾಯಿತು. ಅವರು ಬದುಕುವುದೇ ಕಷ್ಟ ಎಂಬಂತಾಯಿತು. ಇದನ್ನರಿತ ಭಾರತೀಯರು ಭಾರತಾದ್ಯಂತ ಪ್ರತಿಭಟನೆ ಮತ್ತು ಹರತಾಳಗಳನ್ನು ಆಚರಿಸಿದರು. ಭೀತಿಗೊಂಡ ಸರ್ಕಾರ ೧೯೩೭ ಮಾರ್ಚ್‌ನಲ್ಲಿ ಅಂದರೆ ಒಂದು ವರ್ಷದ ಅನಂತರದಲ್ಲಿ ಸುಭಾಸರನ್ನು ಬೇಷರತ್ ಬಿಡುಗಡೆ ಮಾಡಿತು. ವೈದ್ಯರ ಸಲಹೆಯಂತೆ ಕೆಲವು ದಿನಗಳು ಡಾಲ್ ಹೌಸಿ ಆರೋಗ್ಯಧಾಮದಲ್ಲಿ ಡಾ. ಧರ್ಮವೀರ ಮತ್ತು ಶ್ರೀಮತಿ ಧರ್ಮವೀರರ ಆತಿಥ್ಯ ಪಡೆದರು. ಆರೋಗ್ಯ ಸುಧಾರಿಸಿದ ಮೇಲೆ ಅಲ್ಪಕಾಲದ ಭೇಟಿಗಾಗಿ ಯುರೋಪಿಗೆ ತೆರಳಿ ಆಸ್ಟ್ರಿಯಾದಲ್ಲಿ ಹತ್ತು ದಿನಗಳಿದ್ದರು. ಆ ಹತ್ತು ದಿನಗಳಲ್ಲೇ ಅವರು 'ಆನ್ ಇಂಡಿಯನ್ ಪಿಲಿಗ್ರಿಮ್' ಎಂಬ ಅಪೂರ್ಣ ಆತ್ಮಚರಿತ್ರೆ ಬರೆದಿದ್ದರು.

* * *

'ಅನಿತಾ'

'ಹೂಂ'

'ಬಾಳೆಲ್ಲಾ ಬೇವಲ್ಲ, ಬೆಲ್ಲವೂ ಅಲ್ಲ. ಅವೆರಡರ ಸಮ್ಮಿಶ್ರಣ ಅಲ್ಲವೆ ?'

'ಕ್ಷಮಿಸು ದರ್ಪಣ ಸುಂದರಿ, ನಾನಷ್ಟು ಬದುಕು ಕಂಡವಳಲ್ಲ ! ಸಿದ್ಧಾಂತಗಳು ಅನುಭವ ಜನ್ಯಗಳು ಅಲ್ಲವೆ ?'

'ನನ್ನ ಪಾಠವನ್ನು ನನಗೇ ಒಪ್ಪಿಸಿದೆ. ಇರಲಿ ತಾಯಿ, ಒಂದು ಸಂತೋಷದ ಸುದ್ದಿ ಹೇಳ್ತೇನೆ ಕೇಳು.'

'ಸುದ್ದಿ ಹಳೇದೊ ? ಹೊಸದೊ ?'

'ಏಕೆ'

'ಹಳೇದಾದರೆ ಸ್ವಾರಸ್ಯಕರವಾಗಿರುತ್ತೆ. ಹೊಸದಾದರೆ ಕುತೂಹಲಕಾರಿಯಾಗಿರುತ್ತೆ. ಅದಕ್ಕೆ !'

'ಹಳೇದು.... ಎರಡೂವರೆ ದಶಕಕ್ಕೂ ಹಿಂದಿನದು'

'ಹಾಗಾದರೆ ಹೇಳು'

'ಬೇರೇನೂ ಅಲ್ಲ, ಜೀವನದುದ್ದಕ್ಕೂ ನೋವುಂಡ ಸುಭಾಸರ ಜೀವನದಲ್ಲಿ ಸಂತೋಷದ ಸೆಲೆ ಒಮ್ಮೆ ಪುಟಿಯಿತು ! ಅದಕ್ಕೆ ಜವಹರಲಾಲ್ ನೆಹರೂರವರು ಕಾರಣರು !'

'ನಮ್ಮ ಚಾಚಾ ನೆಹರೂ... ಏನು ಮಾಡಿದರು ?'

'ಸುಭಾಸರಿಗೆ ಯುರೋಪ್ ಪ್ರವಾಸದಲ್ಲಿ, ಅಲ್ಲಿ ಇಲ್ಲಿನ ಪ್ರಯಾಸದಲ್ಲಿ ಅವರ ಬದುಕು ಬರಹಗಳಲ್ಲಿ ನಿರಂತರ ನೆರವಾಗುತ್ತಿದ್ದವರು ಅವರ ಆಪ್ತ ಕಾರ್ಯದರ್ಶಿ ಶ್ರೀಮತಿ ಎಮಿಲೀ ಶೆಂಕ್ಲ್ ಎಂಬ ಜರ್ಮನ್ ಮಹಿಳೆ...'

'ದರ್ಪಣ ಸುಂದರಿ, ಏಕಮ್ಮಾ ವಕ್ರೋಕ್ತಿ ಆರಂಭಿಸಿಬಿಟ್ಟೆ ? ಅವರು ನನ್ನಮ್ಮ !!'

'ಅಹುದು, ಕೇಳು, ಅವರ ಚುರುಕು ಬುದ್ಧಿ, ಚಟುವಟಿಕೆ ಜಾಣ್ಮೆ, ಮತ್ತು ಫ್ರೆಂಚ್, ಜರ್ಮನ್, ಇಂಗ್ಲಿಷ್ – ಈ ಭಾಷೆಗಳ ಮೇಲಿದ್ದ ಪ್ರಭುತ್ವ...'

'ನನಗೆ ಇಂಗ್ಲಿಷ್ ಕಲಿಸಿದವರು ಅವರೇ !'

'ಮಿಗಿಲಾಗಿ ಸುಭಾಸ್‌ಚಂದ್ರ ಬೋಸರ ಆರೋಗ್ಯದ ಬಗೆಗೆ ಅವರಿಗಿದ್ದ ಕಾಳಜಿ – ಇವೆಲ್ಲವನ್ನೂ ಗಮನಿಸಿದ ಜವಹರಲಾಲ್ ಸುಭಾಸರಿಗೆ ಸಲಹೆ ಮಾಡಿದರು...'

'ನೀವೇಕೆ ಇವರನ್ನು ಲಗ್ನವಾಗಬಾರದು ! ಎಂದು.... ?'

'ಅಹುದು ! ಚೆನ್ನಾಗಿ ಊಹಿಸಿದೆ. ಸಲಹೆ ಸಾರ್ಥಕವಾಯಿತು.' ಸುಭಾಸ್‌ಚಂದ್ರ ಬೋಸ್ ೧೯೩೭ ಡಿಸೆಂಬರ್ ೨೬ರಂದು ಎಮಿಲೀ ಶೆಂಕ್ಲ್‌ರವರನ್ನು ವಿಧ್ಯುಕ್ತವಾಗಿ ಲಗ್ನವಾದರು. ವಾನ್ ಟ್ರಾಟ್ (Baron Von Trott) ಎಂಬ ಜರ್ಮನ್ ವಿದೇಶಾಂಗ ಖಾತೆಯ ವಿಭಾಗಾಧಿಕಾರಿ ಸುಭಾಸ್ ಮತ್ತು ಎಮಿಲೀ ಶೆಂಕ್ಲ್‌ರವರ ವಿವಾಹ ಸಾಕ್ಷಿಯಾಗಿ ಸಹಿ ಹಾಕಿದ. ಅವನು ಸುಭಾಸರಿಗೆ ತುಂಬಾ ಆತ್ಮೀಯನಾಗಿದ್ದ. ದುರಂತ ಏನಪ್ಪಾ ಅಂದರೆ, ಹಿಟ್ಲರನ ವಾನ್‌ಟ್ರಾಟ್‌ನನ್ನು ಕೊಲೆಯ ಪಿತೂರಿ ನಡೆಸಿದನೆಂದು ಆಪಾದಿಸಿ ನಾಝಿ ಸರ್ಕಾರ ಗಲ್ಲಿಗೇರಿಸಿತು. ಅದಿರಲಿ, ಅಂದಿನಿಂದ ನಿಮ್ಮಮ್ಮ ಎಮಿಲೀ ಶೆಂಕ್ಲ್ ಬೋಸ್ ಆದರು. ಸುಭಾಸ್ ವಿಯನ್ನಾದಲ್ಲಿದ್ದಾಗಲೇ ಅಂದರೆ ೨೪–೧೧–೧೯೪೨ ರಂದು ನೀನು ಅವತರಿಸಿದೆ.'

'ತಪ್ಪಾಯ್ತೇನು ?'

'ತಪ್ಪೆಂಥದು ತಂಗಿ, ಒಪ್ಪೇ ಆಯಿತು, ತಂದೆಯ ಪ್ರತಿರೂಪವೇ ಆಗಿದ್ದ ನೀನು ಸುಭಾಸ್ ಮತ್ತು ಎಮಿಲೀ ಬೋಸರ ನಡುವಣ ಪ್ರೇಮತಂತುವಾದದ್ದಷ್ಟೇ ಅಲ್ಲ, ಭಾರತ ಮತ್ತು ಜರ್ಮನಿಗಳ ನಡುವಣ ಸೌಹಾರ್ದ ಸೇತುವೂ ಆದೆ !'

'ನಾನೇ ಧನ್ಯೆ !'

'ಸತ್ಯವಾಗಿ....ಅಂತಹ ಮಹಾಪುರುಷನನ್ನು ತಂದೆಯಾಗಿ ಪಡೆದ ನೀನು ನಿಜಕ್ಕೂ ಧನ್ಯಳು. ಮುಂದಿನ ಕತೆ ಕೇಳು.'

೧೯೩೮ರ ಫೆಬ್ರವರಿಯಲ್ಲಿ ಗುಜರಾತಿನ ಹರಿಹರಪುರದಲ್ಲಿ ಎಂದಿಲ್ಲದ ಸಂಭ್ರಮ. ಅದಕ್ಕೆ ಕಾರಣ ಅಲ್ಲಿ ನಡೆಯಲಿದ್ದ ಅಖಿಲ ಭಾರತ ಕಾಂಗ್ರೆಸ್ ಸಂಸ್ಥೆಯ ಐವತ್ತೊಂದನೆಯ ಮಹಾಧಿವೇಶನ. ಸರ್ವಾನುಮತದಿಂದ ಆಯ್ಕೆಯಾದ ಅಧ್ಯಕ್ಷರು ಸುಭಾಸ್ ಚಂದ್ರಬೋಸರವರು. ಅಂದು ಹರಿಹರಪುರ ಪಟ್ಟಣಕ್ಕೆ ಪಟ್ಟಣವೇ ಸರ್ವಾಲಂಕೃತವಾಗಿತ್ತು. ಬೀದಿಬೀದಿಗಳು ಸಾರಣೆ ಕಾರಣೆಗೊಂಡಿದ್ದವು. ಅಲ್ಲಲ್ಲಿ ಹಸಿರುವಾಣಿ ಚಪ್ಪರಗಳು, ತಳಿರು ತೋರಣಗಳು, ಮನೆಮನೆಗಳ ಮೇಲೆ ಕಾಂಗ್ರೆಸ್ ಬಾವುಟಗಳು ಹಾರಾಡುತ್ತಿದ್ದವು. ಸಮ್ಮೇಳನಾಧ್ಯಕ್ಷರು ಆಗಮಿಸುತ್ತಲೇ ನಗರದ ಹೊರವಲಯದಿಂದಲೇ ಅಭೂತಪೂರ್ವ ಸ್ವಾಗತ ಕೋರಲಾಯಿತು. ಅಲ್ಲಿನ ವಿಶಾಲವಾದ ಬಯಲಿನಲ್ಲಿ ನಿರ್ಮಿಸಿದ್ದ ಬೃಹತ್ ಪ್ರಮಾಣದ ಚಪ್ಪರದಡಿಯಲ್ಲಿ. ಸರ್ವಾಲಂಕೃತವಾದ ರಥ. ರಥಕ್ಕೆ ಐವತ್ತೊಂದನೆಯ ಸಮ್ಮೇಳನದ ಕುರುಹಾಗಿ ಐವತ್ತೊಂದು ಜೊತೆ ಅಚ್ಚ ಬಿಳಿಯ ತುಂಬು ಹರೆಯದ ಹೋರಿಗಳನ್ನು ಹೂಡಲಾಗಿತ್ತು. ಮೆರವಣಿಗೆ ಹರಿಹರಪುರದ ರಾಜಬೀದಿಯಲ್ಲಿ ಹೊರಟಾಗ ಹಾದಿಯುದ್ದಕ್ಕೂ ನೂರಾರು ಬಗೆಯ ಮಂಗಳವಾದ್ಯಗಳ ಮೊಳಗು, ನೂರಾರು ಜಾನಪದ ಮೇಳಗಳು, ಭಾರತೀಯ ಸಂಸ್ಕೃತಿ ಮತ್ತು ಭಾರತದ ಸ್ವಾತಂತ್ರ್ಯ ಹೋರಾಟವನ್ನು ಪ್ರತಿಬಿಂಬಿಸುವ ಸ್ತಬ್ಧ ಚಿತ್ರಗಳು. ನಿಧಾನವಾಗಿ ಮೆರವಣಿಗೆ ಸಾಗುತ್ತಿತ್ತು. ಲಕ್ಷಲಕ್ಷ ಕಂಠಗಳ ಜೈಕಾರ ಮುಗಿಲು ಮುಟ್ಟುತ್ತಿತ್ತು. ಮನೆಗಳ ಮೇಲುಪ್ಪರಿಗೆಯಿಂದ ಸುವಾಸಿನಿಯರು ಸಮ್ಮೇಳನಾಧ್ಯಕ್ಷರ ಮೇಲೆ ಹೂಮಳೆ ಕರೆಯುತ್ತಿದ್ದರು. ಹಾದಿಯುದ್ದಕ್ಕೂ ಹರಡಿತ್ತು ಹೂವಿನ ನಡೆಮುಡಿ ! ಅಲ್ಲಲ್ಲಿ ರಸ್ತೆಯಲ್ಲಿ ಚಪ್ಪರಗಳ ಕೆಳಗೆ ಸುಭಾಸರಿಗೆ ಶುಭದ ಆರತಿ ಹರಕೆಗಳು ! ಹಳ್ಳಿಯಿಂದ ಗ್ರಾಮೀಣ ಬಂಧುಗಳು ಸುಭಾಸರಿಗೆ ತೋರಹಾರ ಹಾಕಿ ಪಾದಮುಟ್ಟಿ ನಮಸ್ಕರಿಸುತ್ತಿದ್ದರು. ನಮಗೆ ಬದುಕು ಕೊಡಲು ಬಂದ ಮಹಾನುಭಾವ, ನಮ್ಮ ಭಾಗ್ಯದೇವತೆ, ನಮ್ಮ ಅಭಿಮಾನದ ರಾಷ್ಟ್ರಪತಿ ಎಂದೆಲ್ಲ ಹೊಗಳಿ ಹಾಡಿದರು.

ತೇಜಃಪುಂಜ ಮುಖಮಂಡಲದ ಮಹಾಬಾಹು ಮಹಾಪುರುಷನನ್ನು ಹೊತ್ತ ರಥ ಸಮ್ಮೇಳನದ ಸಭಾಂಗಣಕ್ಕೆ ಬರುತ್ತಲೆ ಕೋಟಿಕೋಟಿ ಕಂಠಗಳು ಜೈಕಾರ ಹಾಕಿದವು ; ಮಂಗಳವಾದ್ಯಗಳು ಕಿವಿಗಡಚಿಕ್ಕುವಂತೆ ಮೊಳಗಿದವು. ಹಿರಿಕಿರಿಯ ರಾಷ್ಟ್ರನಾಯಕರು ಮುಂದೆ ಬಂದು ಸಮ್ಮೇಳನಾಧ್ಯಕ್ಷರನ್ನು ರಥದಿಂದಿಳಿಸಿಕೊಂಡರು. ಹಾರ್ದಿಕವಾಗಿ ಸ್ವಾಗತ ಬಯಸಿದರು. ವಿಶಾಲ ವೇದಿಕೆಯತ್ತ ನಿಧಾನವಾಗಿ ಅಧ್ಯಕ್ಷರು ನಡೆಯುವಾಗ ಜನಸ್ತೋಮ ಶಿರಬಾಗಿತು. ಆನಂದಬಾಷ್ಪ ಸುರಿಸಿತು. ವೇದಿಕೆಯನ್ನೇರಿ ಉನ್ನತಪೀಠವನ್ನು ಅಲಂಕರಿಸಿದ ಕೂಡಲೇ ಲಕ್ಷಲಕ್ಷ ಹಾರಗಳು ಅಧ್ಯಕ್ಷರ ಕೊರಳನ್ನೇರಿದವು. ಬಹುಶಃ ಅಂತಹ ಅಭೂತಪೂರ್ವ ಸ್ವಾಗತ ಮುಂದೆ ಅಸಂಭವ ಎನ್ನುವಷ್ಟರಮಟ್ಟಿಗಿತ್ತು.

ಪಟ್ಟಿಯ ಪ್ರಕಾರ ಕಾರ್ಯಕ್ರಮಗಳು ನಡೆದು ಮಹಾಧಿವೇಶನದ ಅಧ್ಯಕ್ಷರ ಸರದಿ ಬಂತು. ಸುಭಾಸ್ ಚಂದ್ರಬೋಸರು ಅರೆನೋವಿನ ಹಸನ್ಮುಖಿಗಳಾಗಿ ಎದ್ದು ನಿಂತು ತಮ್ಮ ಅಧ್ಯಕ್ಷೀಯ ಭಾಷಣ ಓದಿದರು. ಆ ಭಾಷಣ ಅವರು ವಿಯನ್ನಾದಿಂದ ಕಲ್ಕತ್ತೆಗೆ ಬಂದಾಗ ತಮ್ಮ ತಂದೆಯ ಮನೆಯಲ್ಲಿ ಕುಳಿತು ಕೇವಲ ಎರಡೇ ದಿನಗಳ ಹಿಂದೆ ಸಿದ್ಧಪಡಿಸಿದ್ದು. ಕಿರು ಅವಧಿಯಲ್ಲಿ ಬರೆದದ್ದಾದರೂ ಇಡೀ ಜಗತ್ತಿನ ಮಹಾಮಹಾಭಾಷಣಗಳ ಅಗ್ರಮಾಲಿಕೆಯಲ್ಲಿ ಸಲ್ಲಬಲ್ಲ ಸತ್ವವುಳ್ಳದ್ದಾಗಿತ್ತು.

ಸೋದರ ಸೋದರಿಯರೆ,

ಈ ಮಹಾಧಿವೇಶನದ ಅಧ್ಯಕ್ಷನನ್ನಾಗಿ ಆರಿಸಿ ನನ್ನ ಗೌರವವನ್ನು ಹೆಚ್ಚಿಸಿದ್ದೀರಿ. ಅದಕ್ಕಾಗಿ ನಲವತ್ತು ಕೋಟಿ ಭಾರತೀಯರಿಗೆ ನನ್ನ ಕೃತಜ್ಞತಾ ಪೂರ್ವಕ ಪ್ರಣಾಮಗಳು. ಇಂದಿನ ಈ ಸಮಾವೇಶ ಅತ್ಯಂತ ಮಹತ್ವಪೂರ್ಣವಾದದ್ದು. ಸಾಮ್ರಾಜ್ಯವಾದಿಗಳ ದ್ರೋಹದುರ್ಗಕ್ಕೆ ಲಗ್ಗೆಯಿಟ್ಟು ಅವರ ದುರಾಡಳಿತವನ್ನು ತೋರಿಸಿಕೊಡುವ ಮೂಲಕ ಸಮಾಜವಾದಿ ರಾಜ್ಯ ನಿರ್ಮಾಣದ ಮಹಾಪಾಠವನ್ನು ಕಲಿಸುವುದು ಇದರ ಮುಖ್ಯ ಉದ್ದೇಶ. ಇಂದಿನವರೆಗೆ ಅಂದರೆ ಸುಮಾರು ಒಂದೂವರೆ ಶತಮಾನಗಳ ಕಾಲ ನಾವು ದಾಸ್ಯದ ಸವಿ ಸವಿದಿದ್ದೇವೆ. ಇನ್ನೂ ದಾಸರಾಗಿ ಮುಂದುವರಿಯಲಾರೆವು. ಭಾರತವನ್ನು ಹೆಚ್ಚು ಕಾಲ ಗುಲಾಮಗಿರಿಯಲ್ಲಿರಿಸುವ ಸಾಮರ್ಥ್ಯ ಜಗತ್ತಿನ ಯಾವ ಶಕ್ತಿಗೂ ಇಲ್ಲ. ಆದ್ದರಿಂದ ಒಂದಾಗಿ ಬನ್ನಿ. ದೇಶ ಬಿಡುಗಡೆಗಾಗಿ ಹೋರಾಡುವ ಬನ್ನಿ. ಈ ಹೋರಾಟದ ಮುಖ್ಯ ಗುರಿ ಭಾರತದ ಬಿಡುಗಡೆಗಷ್ಟೇ ಸೀಮಿತ ಅಲ್ಲ, ಇದರಂತಹ ಗುಲಾಮ ರಾಷ್ಟ್ರಗಳ ಹಿತ ಸೇರಿದೆ ; ಸ್ವತಃ ಬ್ರಿಟನ್ನಿನ ಹಿತವೂ ಅಡಗಿದೆ. ಮನುಷ್ಯ ತಾನು ಬದುಕಿ ಅನ್ಯರಿಗೆ ಬದುಕು ಕೊಡಬೇಕು ; ತಾನು ಬೆಳಗಿ ಅನ್ಯರಿಗೆ ಬೆಳಕು ನೀಡಬೇಕು ; ತಾನು ಸ್ವತಂತ್ರನಾಗಿ ಬಾಳಿ, ಅನ್ಯರ ಸ್ವಾತಂತ್ರ್ಯವನ್ನು ಸ್ವಾಗತಿಸಬೇಕು. ಅದಕ್ಕೆ ವಿರುದ್ಧವಾಗಿ ನಡೆದವನು ಒಂದಲ್ಲ ಒಂದು ದಿನ ತನ್ನ ಪಾಪದ ವರದಿಯನ್ನು ಸತ್ಯದೇವತೆಯೆದುರು ಒಪ್ಪಿಸಲೇಬೇಕಾಗುತ್ತದೆ. ಈ ಎಚ್ಚರಿಕೆ ನೀಡಿ ಬ್ರಿಟನ್ನನ್ನು ಬದುಕಿಸಬೇಕಾಗಿದೆ ಪಾಪ !

ಬಂಧುಗಳೇ,

ಬಹಳ ದಿನಗಳ ಹಿಂದೆಯೇ ರಷ್ಯಾ ದೇಶದ ಮಹಾನಾಯಕ ಲೆನಿನ್ ಸಾರಿಸಾರಿ ಹೇಳಿದ ಮಾತುಗಳನ್ನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ಅವರು ಹೇಳಿದರು : 'ಬ್ರಿಟನ್ನಿನ ಸೊಕ್ಕು ಬಲಗೊಂಡದ್ದು ಅದರ ದಾಸ್ಯದಲ್ಲಿರುವ ರಾಷ್ಟ್ರಗಳಿಂದ' ಎಂದು. ಅಂತಹ ಅವಹೇಳನಕ್ಕೆ ಭಾರತ ಗುರಿಯಾಗದಿರಲಿ ಎಂಬುದು ನನ್ನ ಇಚ್ಛೆ.

ಬ್ರಿಟಿಷ್ ಸಾಮ್ರಾಜ್ಯವಾದಿಗಳಿಗೆ ಒಡೆದು ಆಳುವ ನೀತಿ ಅವರ ಹುಟ್ಟಿನಿಂದಲೇ ಬಂದದ್ದು. ಒಂದನ್ನು ಎರಡು ಮಾಡಿ, ಎರಡನ್ನು ಎಪ್ಪತ್ತು ತುಂಡು ಮಾಡಿ ಆಳುವುದು ಅವರ ಕುಟಿಲ ನೀತಿ. ಈಗ ನೋಡಿ, ಒಂದು ಕಡೆ ಅಲ್ಪಸಂಖ್ಯಾತ

ಸಮುದಾಯಗಳನ್ನು ಮತ್ತೊಂದು ಕಡೆ ನಿರಂಕುಶಾಧಿಕಾರಿ ರಾಜಮಹಾರಾಜರುಗಳನ್ನು ಸಮಾಜವಾದಿಗಳ ವಿರುದ್ಧ ಎತ್ತಿ ಕಟ್ಟುತ್ತಿದ್ದಾರೆ. ಇದು ಬೇರುಬಿಟ್ಟು ಬೆಳೆದದ್ದಾದರೆ ಭಾರತಕ್ಕೆ ಮುಂದೆ ಗಂಡಾಂತರ ತಪ್ಪಿದ್ದಲ್ಲ. ಆದ್ದರಿಂದ ಇಂದು ಭಾರತ ತನ್ನ ಭಾವೈಕ್ಯತೆಯನ್ನು ಸಾಧಿಸಿ ತೋರಿಸುವ ಅನಿವಾರ್ಯತೆ ಇದೆ. ಕುಹಕಿ ಬ್ರಿಟಿಷರ ಚಿತಾವಣೆಗೆ ಒಳಗಾಗದೆ ಭಾರತೀಯರು ನಾವೆಲ್ಲ ಒಂದೇ ಎಂದು ಹೃದಯಪೂರ್ವಕವಾಗಿ ಘೋಷಿಸಬೇಕು ಮತ್ತು 'ಬಾಳು ಮತ್ತು ಬಾಳಲು ಬಿಡು' (Live and let live) ತತ್ವ ನಮ್ಮ ಬಾಳಿನ ಗಾಯತ್ರಿಯಾಗಬೇಕು ; ಅದು ಅನುಷ್ಠಾನಕ್ಕೂ ಬರಬೇಕು. ಭಾರತ ಒಂದು ಮಿನಿ ಪ್ರಪಂಚ. ಇಲ್ಲಿ ಬಹುಧರ್ಮಗಳು ಬೆಳಗುತ್ತಿವೆ, ಬಹುಭಾಷೆಗಳು ಬೆಳೆಯುತ್ತಿವೆ. ಆದರೆ ಎಲ್ಲವುಗಳ ಆಂತರ್ಯದಲ್ಲೂ ಹರಿಯುವ ಸೂತ್ರ ಒಂದೇ. 'ನಾ ಭಾರತೀಯ ನ ಭಾರತೀಯ' ಎಂಬ ಸದ್ಭಾವನೆ. ಅನೇಕತೆಯಲ್ಲಿ ಏಕತೆಯನ್ನು ಸಾಧಿಸಿ ತೋರಿಸಿದ ಹಿರಿಮೆ ಭಾರತಕ್ಕೆ ಮತ್ರ ಮೀಸಲು. ಆದ್ದರಿಂದ ಯಾರೂ ಯಾವ ಭಾಷೆ ಬಗೆಗಾಗಲಿ, ಧರ್ಮ, ಸಂಸ್ಕೃತಿಗಳ ಬಗೆಗಾಗಲಿ, ಅನಗತ್ಯ ಪ್ರವೇಶ ಮಾಡದೆ, ತಮ್ಮಂತೆ ಪರರನ್ನು ಕಾಣುವ ದೊಡ್ಡಬುದ್ಧಿ ಬೆಳೆಸಿಕೊಳ್ಳಬೇಕು ಮತ್ತು ಸ್ವಾರ್ಥ ತ್ಯಾಗಕ್ಕಾಗಿ ನಮ್ಮ ದೇಶದ ಜನತೆಯನ್ನು ಮೊದಲು ಸಿದ್ಧಗೊಳಿಸಬೇಕು.

ರೈತ ನಮ್ಮ ಅನ್ನದಾತ. ಆದರೆ ಆತ ಇಂದು ಎಲ್ಲರ ಅವಜ್ಞತೆ ಮತ್ತು ಅವಹೇಳನಗಳ ವಸ್ತುವಾಗಿದ್ದಾನೆ. ಅವನ ಸ್ಥಾನಮಾನಗಳು ಹೆಚ್ಚಬೇಕು. ಸಮಾನ ಗೌರವ ಸರ್ವವಿಧದಿಂದಲೂ  ಅವನಿಗೆ ದೊರಕಬೇಕು. ಅದಕ್ಕಾಗಿ ಮೊದಲು ಇಂದಿನ ಭೂ ಪದ್ಧತಿಯಲ್ಲಿ ಮೂಲಭೂತ ಸುಧಾರಣೆ, ಕೃಷಿಸಾಲ ಅಗ್ಗದ ಬಡ್ಡಿದರದಲ್ಲಿ ಸಿಗುವಿಕೆ, ಸಹಕಾರ ಚಳವಳಿಯ ವಿಸ್ತರಣೆ ಮತ್ತು ಕೃಷಿ ಪದ್ಧತಿಯ ಆಧುನೀಕರಣ – ಇವು ಆಗಬೇಕು. ಅವನಲ್ಲಿನ ಅನಕ್ಷರತೆಯ ನಿರ್ಮೂಲನಕ್ಕೆ ಆದ್ಯತೆ ನೀಡಬೇಕು. ಇವೆಲ್ಲ ಕನಸುಗಳು ನನಸಾಗಬೇಕಾದರೆ ದೇಶಸ್ವಾತಂತ್ರ್ಯ ಮೊದಲ ಹೆಜ್ಜೆ.

ಅತ್ಮೀಯರೆ, ಇಂದು ಬ್ರಿಟಿಷ್ ಸಾಮ್ರಾಜ್ಯ ಸುಭದ್ರವಾಗೇನೂ ಇಲ್ಲ. ಕಾಳ್ಗಿಚ್ಚಿನ ನಡುವೆ ಸಿಕ್ಕ ಕಾಡುಮೃಗವಾಗಿದೆ. ಭಾರತ, ಐರ್‌ಲ್ಯಾಂಡ್, ಈಜಿಪ್ಟ್, ಪ್ಯಾಲೆಸ್ಟೈನ್, ಇರಾಕ್ ಮೊದಲಾದ ರಾಷ್ಟ್ರಗಳಿಗೆ ಉತ್ತರ ಹೇಳುವಷ್ಟು ಶಕ್ತಿ ಅದಕ್ಕಿಲ್ಲ. ಬ್ರಿಟನ್ ಬಹುಕಾಲ ಸಾಗರ ಸಾಮ್ರಾಜ್ಞಿಯಾಗಿ ಬದುಕು ಮಾಡಲಾರದು. ಇಟಲಿ, ಜಪಾನ್, ರಷ್ಯಾ ಮೊದಲಾದ ರಾಷ್ಟ್ರಗಳು ಅದರ ಪ್ರಗತಿಗೆ ಅಡ್ಡಗಾಲು ಹಾಕಿವೆ. ಆದ್ದರಿಂದ ಸಾಮ್ರಾಜ್ಯಶಾಹಿಯನ್ನು ಸದೆಬಡಿಯಲು ಕಾಲ ಸನ್ನಿಹಿತವಾಗಿದೆ. ಇದರ ಸಾರ್ಥಕ್ಯ ನಮ್ಮ ಒಗ್ಗಟ್ಟಿನ ಮೇಲೆ ನಿಂತಿದೆ. ಭಾರತ ಒಂದು ದೇಶವಾಗಬೇಕು. ನಾನು ಮೊದಲೇ ನಿವೇದಿಸಿಕೊಂಡಂತೆ, ನಮ್ಮ ಹೋರಾಟ ಕೇವಲ ಬ್ರಿಟಿಷ್ ಸಾಮ್ರಾಜ್ಯದ ವಿರುದ್ಧದ ಹೋರಾಟ ಮತ್ರವಲ್ಲ, ವಿಶ್ವ ಸಾಮ್ರಾಜ್ಯವಾದದ ವಿರುದ್ಧದ ಹೋರಾಟ ಕೂಡ ಆಗಿದೆ. ಆದ್ದರಿಂದ ನಾವು ಭಾರತದ ಸ್ವಾತಂತ್ರ್ಯಕ್ಕಾಗಿಯೇ ಅಲ್ಲ, ಸಮಗ್ರ ಮಾನವ ಜನಾಂಗದ ಬಿಡುಗಡೆಗಾಗಿ ಹೋರಾಟ ನಡೆಸುತ್ತಿದ್ದೇವೆ. ಭಾರತವನ್ನು ಸ್ವತಂತ್ರಗೊಳಿಸಿದರೆ ಮಾನವತೆಯನ್ನೇ ಸಂರಕ್ಷಿಸಿದಂತೆ !'

ಇಂತಹ ಪ್ರಸ್ತುತವೂ ವಿಚಾರ ಪ್ರಚೋದಕವೂ ಆದ ಭಾಷಣದಿಂದ ಜನಜಾಗೃತಿಯನ್ನುಂಟು ಮಾಡಿದರು. ಭಾರತೀಯರ ನರನಾಡಿಗಳಲ್ಲಿ ಶಕ್ತಿಸಂಚಾರ ಆಯಿತು. ಕಾಂಗ್ರೆಸ್ ಮಹಾ ಸಂಸ್ಥೆಯ ಅಧ್ಯಕ್ಷರಾದ್ದರಿಂದ ತಮ್ಮ ಕರ್ತವ್ಯವೆಂದೇ ತಿಳಿದು ದೇಶಾದ್ಯಂತ ಪ್ರವಾಸ ಕೈಗೊಂಡರು. ರಾಷ್ಟ್ರೀಯ ಭಾವನೆ ಮೂಡುವಂತೆ ಜನಮನವನ್ನು ಅಣಿಗೊಳಿಸಿದರು. ೧೯೩೮ರ ಮಧ್ಯದಲ್ಲಿ ಕಾಂಗ್ರೆಸ್‌ನ ಆಶ್ರಯದಲ್ಲಿ ಒಂದು ರಾಷ್ಟ್ರೀಯ ಯೋಜನಾ ಸಮಿತಿಯನ್ನು ರಚಿಸಿ, ಜವಹರಲಾಲ್ ನೆಹರೂರವರನ್ನು ಅದರ ಅಧ್ಯಕ್ಷರನ್ನಾಗಿ ಮಾಡಿ, ಅವರಿಗೆ ಸಲಹೆ ಸೂಚನೆಗಳನ್ನೀಯಲು ಭಾರತದ ಖ್ಯಾತ ವಿಜ್ಞಾನಿಗಳು, ಅರ್ಥಶಾಸ್ತ್ರಜ್ಞರು ಮೊದಲಾದ ಗಣ್ಯರನ್ನು ಸದಸ್ಯರಾಗಿ ಮಾಡಿದರು. ಅಂತೆಯೇ ಮುಂಬಯಿಯಲ್ಲಿ ಆ ಯೋಜನಾ ಸಮಿತಿಯ ಔಪಚಾರಿಕ ಉದ್ಘಾಟನೆಯನ್ನೂ ನೆರವೇರಿಸಿದರು.

* * *

ಸುಭಾಸ್ ಎಲ್ಲರ ಆಶಾಜ್ಯೋತಿಯಾದರು. ಅವರೇ ಭಾರತ ಭಾಗ್ಯವಿಧಾತ ಎಂಬ ಭಾವನೆ ಮೂಡಿತು. ಎಲ್ಲೆಡೆಯೂ ಅವರಿಗೆ ಗೌರವಗಳು ಸಂದವು. ಅಂಥವುಗಳಲ್ಲಿ ಶಾಂತಿನಿಕೇತನದ ಆದರಾತಿಥ್ಯ ಗಣನೀಯವಾದದ್ದು. ವಿಶ್ವಕವಿ ರವೀಂದ್ರನಾಥ ಠಾಗೋರರು ಸುಭಾಸ್‌ಚಂದ್ರ ಬೋಸರನ್ನು ಅತ್ಯಂತ ಗೌರವಾದಾರಗಳ ಮೂಲಕ ಬರಮಾಡಿಕೊಂಡು ತಮ್ಮ 'ವಿಶ್ವಭಾರತಿ' ವಿಶ್ವವಿದ್ಯಾಯಲದಲ್ಲಿ ಅದ್ದೂರಿಯ ಕಾರ್ಯಕ್ರಮವನ್ನೇರ್ಪಡಿಸಿದರು. ಜನವರಿ ೧೯೩೯ರಂದು ಸುಭಾಸ್‌ಚಂದ್ರ ಬೋಸರನ್ನು ಠಾಗೋರರು ವಿಶಾಲ ವೇದಿಕೆಯ ಮೇಲೆ ಕೂರಿಸಿ, 'ರಾಷ್ಟ್ರನಾಯಕ' ಎಂಬ ಬಿರುದಿತ್ತು ಗೌರವಿಸಿದರು. ಇಂಥದೇ ಗೌರವ ಕೆಲವೇ ವರ್ಷಗಳ ಹಿಂದೆ ಮೋಹನದಾಸ ಕರಮಚಂದ್ ಗಾಂಧಿಯವರಿಗೆ ಶಾಂತಿನಿಕೇತನದಲ್ಲಿ ಸಂದಿತ್ತು. ಅವರನ್ನು ರವೀಂದ್ರರು 'ಮಹಾತ್ಮ' ಎಂದು ಸಂಬೋಧಿಸಿದ್ದರು. ಗಾಂಧೀಜಿ ಠಾಗೋರರನ್ನು 'ಗುರುದೇವ್' ಎಂದು ಸಂಬೋಧಿಸಿದ್ದರು. ಆ ಮಹಾಪುರುಷರ ಬಾಯಿಗಳಿಂದ ಬಂದ ಶಬ್ದಗಳೇ ಮುಂದೆ ಅವರ ಹೆಸರುಗಳಿಗೆ ಪರ್ಯಾಯಪದಗಳಾಗಿ ಬಳಕೆಯಾದವು. ಹಾಗೆ ಇಂದು ಠಾಗೋರರಿಂದ ಸುಭಾಸ್ 'ರಾಷ್ಟ್ರನಾಯಕ' ಎಂಬ ಕೀರ್ತಿಗೆ ಭಾಜನರಾದರು.

ಸಮಾರಂಭದಲ್ಲಿ ರವೀಂದ್ರರು ಮಾಡಿದ ಉಪನ್ಯಾಸ ಸುಭಾಸರ ವ್ಯಕಿತ್ವಕ್ಕೆ ಹಿಡಿದ ಕನ್ನಡಿಯಾಗಿತ್ತು.

'....ನಿಮ್ಮ ರಾಜಕೀಯ ಸಾಧನೆಯ ಪ್ರಾರಂಭ ಸೂಚಿಸುವ ಮುಂಜಾವನ್ನು ನಾನು ಹಿಂದೆಯೇ ವೀಕ್ಷಿಸಿದ್ದೆ. ಆದರೆ ಆ ಮಬ್ಬು ಬೆಳಕಿನಲ್ಲಿ ನನ್ನಲ್ಲಿ ಕೆಲವು ಶಂಕೆಗಳು ಉಳಿದಿದ್ದವು....ಇಂದು ನೀವು ಮಧ್ಯಾಹ್ನದ ಪ್ರಖರ ಸೂರ್ಯನ ಪ್ರಕಾಶದಲ್ಲಿ ಕಾಣಿಸಿಕೊಳ್ಳುತ್ತಿದ್ದೀರಿ. ಈ ವರ್ಷಗಳಲ್ಲಿ ನೀವು ಹಲವು ಅನುಭವಗಳನ್ನು ಪಡೆದಿದ್ದೀರಿ. ಈಗ ಕೈಯಲ್ಲಿರುವ ಕೆಲಸಗಳನ್ನು ನೆರವೇರಿಸಲು ಅಗತ್ಯವಾಗಿರುವ ಪರಿಪಕ್ವ ಮನಸ್ಸನ್ನೂ ಅದಮ್ಯ ಶಕ್ತಿ ಚೈತನ್ಯಗಳನ್ನೂ ನೀವು ಹೊಂದಿದ್ದೀರಿ. ಬಂಧನ, ಗಡೀಪಾರು ಮತ್ತು ರೋಗರುಜಿನಗಳಿಂದ ನಿಮ್ಮ ಶಕ್ತಿ ಶಿಥಿಲಗೊಂಡಿರಬಹುದು. ಆದರೆ ಇವು ನಿಮ್ಮಲ್ಲಿ ಸಹಾನುಭೂತಿಪರ ಮನೋಭಾವ ಬೆಳೆಸುವಲ್ಲಿ ಸಹಾಯಕವಾಗಿವೆ. ಅಷ್ಟೇ ಅಲ್ಲ, ನಿಮ್ಮ ದೃಷ್ಟಿಯನ್ನು ಎಷ್ಟು ವಿಶಾಲಗೊಳಿಸಿವೆಯೆಂದರೆ, ಪ್ರಾಂತೀಯ ಸಂಕುಚಿತ ಸೀಮೆಯನ್ನು ಮರೆತು ನೀವು ಇಡೀ ವಿಶ್ವದ ಇತಿಹಾಸದ ಬೃಹತ್ ನೋಟಗಳನ್ನು ಗ್ರಹಿಸಬಲ್ಲವರಾಗಿದ್ದೀರಿ.... ನಿಮ್ಮ ತಾಯ್ನಾಡಿನ ಜನತೆಯ ಆಶಾಭಾವನೆಯ ಹೊಸ ಬೆಳಕೊಂದರ ಆಗಮನವನ್ನು ಸಾರುವ ಹರಿಕಾರರು ನೀವಾಗಿದ್ದೀರಿ.... ಮಾನ್ಯತೆಯ ಪೂರ್ಣ ಪ್ರಕಾಶಕ್ಕೆ ಬಂದ ವ್ಯಕ್ತಿಯೊಬ್ಬನನ್ನು ಸಂಬೋಧಿಸಿ ನಾನು ಈ ಸಭೆಯಲ್ಲಿ ಮಾತನಾಡುತ್ತಿದ್ದೇನೆ.... ಬರಲಿರುವ ಕದನದಲ್ಲಿ ನಾನು ನಿಮ್ಮ ಜೊತೆ ಸೇರದೆ ಇರಬಹುದು. ನಾನು ನಿಮ್ಮನ್ನು ಕೇವಲ ಆಶೀರ್ವದಿಸಿ ಬೀಳ್ಕೊಡುತ್ತೇನೆ. ದೇಶದ ಜನತೆಯ ಅಪಾರ ಯಾತನೆಯನ್ನು ನಿಮ್ಮದನ್ನಾಗಿ ಮಾಡಿಕೊಂಡ ನಿಮಗೆ ಅಂತಿಮ ಫಲವಾದ ರಾಷ್ಟ್ರದ ಸ್ವಾತಂತ್ರ್ಯ ಬಹುಬೇಗ ಸಿಗುತ್ತದೆ ಎಂಬ ನಂಬಿಕೆ ನನಗಿದೆ.'

ಇಂತಹ ವಿಶ್ವಕವಿಯ ಆಶೀರ್ವಾದಕ್ಕೆ ಪಾತ್ರರಾದ ಸುಭಾಸ್ ನಿಜಕ್ಕೂ ಧನ್ಯರು !

* * *

ಹರಪುರದ ಅಧಿವೇಶನ ಅದ್ದೂರಿಯಿಂದ ನಡೆಯಿತು. ಅಧ್ಯಕ್ಷರ ಭಾಷಣವೂ ಅಮೋಘವಾಗಿತ್ತು. ೧೯೩೯ನೆಯ ಇಸವಿ ಕಾಲಿರಿಸುತ್ತಿದ್ದಂತೆಯೇ ಯುರೋಪಿನಲ್ಲಿ ಮಹಾಯುದ್ಧ ಪ್ರಾರಂಭವಾಗುವ ಸೂಚನೆಗಳು ಕಂಡು ಬಂದವು. ಇದರ ವಾಸನೆ ಹಿಡಿದ ಸುಭಾಸ್ ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಮಹಾಯುದ್ಧ ಸಹಕಾರಿ ಎಂದು ಭಾವಿಸಿ, ಯಾವುದೇ ರಾಜಿಗೆ ಒಪ್ಪದ ತಮ್ಮಂತಹ ಕ್ರಾಂತಿಕಾರಿ ಕಾಂಗ್ರೆಸ್ ಅಧ್ಯಕ್ಷರಾಗುವುದು ಸೂಕ್ತ ಎಂದು ಭಾವಿಸಿ ಎರಡನೆಯ ಬಾರಿ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದರು. ಜಯಪ್ರಕಾಶ್ ನಾರಾಯಣ್, ಪಟವರ್ಧನ್, ಕಮಲಾದೇವಿ ಚಟ್ಟೋಪಾಧ್ಯಾಯ, ಅಶೋಕ ಮೆಹತಾ, ಲೋಹಿಯಾ, ನರೇಂದ್ರರಾವ್ - ಈ ತರುಣರು ಸುಭಾಸ್ ಬಾಬುರವರನ್ನು ಬೆಂಬಲಿಸಿದರು. ಆದರೆ ಅನೇಕರು ಅದನ್ನು ವಿರೋಧಿಸಿದರು. ತಮ್ಮ ಸ್ಪರ್ಧೆ ಖಂಡಿತ ವೈಯುಕ್ತಿಕ ಅಲ್ಲ. ಭಾರತಕ್ಕೆ ಇದರಿಂದ ಒಳ್ಳೆಯದಾಗುತ್ತೆ. ರಾಷ್ಟ್ರದ ಹಿತದೃಷ್ಟಿಯಿಂದ ತಾವೇ ಸ್ಪರ್ಧಿಸಿರುವುದಾಗಿ ಹೇಳಿದರೂ ಹಲವರು ಒಪ್ಪಲಿಲ್ಲ. ಚುನಾವಣೆ ಅನಿವಾರ್ಯವಾಯಿತು. ಕಾಂಗ್ರೆಸ್‌ನ ಒಂದು ಪಂಥದವರು ಪಟ್ಟಾಭಿಸೀತಾರಾಮಯ್ಯನವರನ್ನು ಗಾಂಧೀಜಿಯವರ ಆಶೀರ್ವಾದದೊಂದಿಗೆ ಸುಭಾಸ್‌ಚಂದ್ರ ಬೋಸರ ವಿರುದ್ಧ ಕಣಕ್ಕಿಳಿಸಿದರು. ೧೯೩೯ರ ಆರಂಭದಲ್ಲಿ ಅಧ್ಯಕ್ಷ ಚುನಾವಣೆ ನಡೆದು ಸುಭಾಸರಿಗೆ ೧೫೮೦ ಮತಗಳೂ ಡಾ. ಪಟ್ಟಾಭಿ ಸೀತಾರಾಮಯ್ಯನವರಿಗೆ ೧೩೭೫ ಮತಗಳೂ ಬಂದು ಸುಭಾಸ್ ಜಯಗಳಿಸಿದರು.

ಗಾಂಧೀಜಿಯವರಿಗೆ ಈ ಫಲಿತಾಂಶ ಸಮಾಧಾನ ತರಲಿಲ್ಲ. ಅವರು ಪಟ್ಟಾಬಿ ಸೀತಾರಾಮಯ್ಯನವರ ಸೋಲು ತಮ್ಮ ಸೋಲು ಎಂದು ಭಾವಿಸಿದರು. ಅವರ ಅಸಮಾಧಾನವನ್ನು ಬೆಂಬಲಿಸಿದ ಅನೇಕ ಜನ ಕಾಂಗ್ರೆಸ್ ಮುಖಂಡರು ಜವಹರಲಾಲ್ ನೆಹರೂ ಅದಿಯಾಗಿ ಎಲ್ಲರೂ ತಮ್ಮ ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದರು. ಸಮಿತಿಯಲ್ಲಿ ಸುಭಾಸರ ಅಣ್ಣ ಶರತ್ ಮಾತ್ರ ಸದಸ್ಯರಾಗಿ ಉಳಿದರು. ತಮ್ಮ ಸ್ಪರ್ಧೆಯ ಮತ್ತು ಗೆಲುವಿನ ವಿಷಯದ ಬಗೆಗೆ ಚರ್ಚಿಸಲು ಸುಭಾಸ್ ವಾರ್ಧಾ ಆಶ್ರಮಕ್ಕೆ ಹೋಗಿ ಗಾಂಧೀಜಿಯವರನ್ನು ಭೇಟಿ ಮಾಡಿದರು. ಆದರೆ ಅದರಿಂದ ಯಾವ ಪ್ರಯೋಜನವೂ ಆಗಲಿಲ್ಲ. ಇಂಥೆಲ್ಲ ಒತ್ತಡಗಳ ಪರಿಣಾಮವಾಗಿ ಸುಭಾಸರ ಆರೋಗ್ಯ ಕೆಟ್ಟಿತು. ಅವರ ಶ್ವಾಸಕೋಶಗಳಲ್ಲಿ ನ್ಯೂಮೋನಿಯಾ ಕಾಣಿಸಿಕೊಂಡಿತು. ಆ ಪರಿಸ್ಥಿತಿಯಲ್ಲೇ ೧೯೩೯ ಮಾರ್ಚ್‌ನಲ್ಲಿ ಜಬ್ಬಲ್‌ಪುರದ ಸಮೀಪದ ತ್ರಿಪುರದಲ್ಲಿ ನಡೆಯಲಿದ್ದ ಕಾಂಗ್ರೆಸ್ ಅಧಿವೇಶನಕ್ಕೆ ಹಟ ಕಟ್ಟಿ ಹೋದರು. ಆದರೆ ವೇದಿಕೆ ಏರಿ ಭಾಷಣ ಮಾಡುವ ಸ್ಥಿತಿಯಲ್ಲಿರಲಿಲ್ಲ. ತಮ್ಮ ಭಾಷಣವನ್ನು ಅಣ್ಣ ಶರತ್ ಓದಿದಿರು. ಆದರೆ ತ್ರಿಪುರ ಸಮಾವೇಶ ಮತ್ತಷ್ಟು ನೋವು ತಂದಿತು ಸುಭಾಸರಿಗೆ. ಕಾಯಿಲೆಯೂ ಉಲ್ಬಣಗೊಂಡಿತು. ವೈದ್ಯರ ಸಲಹೆಯಂತೆ ಅವರು ಧನ್‌ಬಾದ್ ಸಮೀಪದ ಜಮದೋಬ ಎಂಬಲ್ಲಿಗೆ ಹೋದರು. ಜಮದೋಬ ಏಕಾಂತ ಪ್ರಶಾಂತ ಸ್ಥಳವಾದರೂ ಸುಭಾಸರ ಮನಸ್ಸಿಗೆ ಅದು ನೆಮ್ಮದಿ ತರಲಿಲ್ಲ. ಅವರು ತಮ್ಮ ಅಸಂತುಷ್ಟಿಯನ್ನು ಹೇಳಿಕೆಯ ಮೂಲಕ ಹೊರಹಾಕಿದರು. ಅದು ಹೀಗಿತ್ತು :

'ನೈತಿಕವಾಗಿ ಶಿಥಿಲಗೊಳ್ಳುತ್ತಿರುವ ತ್ರಿಪುರದ ವಾತಾವರಣದಿಂದಾಗಿ ನನಗೆ ತುಂಬಾ ಜಿಗುಪ್ಸೆ ಉಂಟಾಯಿತು. ಕಳೆದ ಹತ್ತೊಂಬತ್ತು ವರ್ಷಗಳ ಅವಧಿಯ ನನ್ನ ರಾಜಕೀಯ ಜೀವನದಲ್ಲಿ ಇಂತಹ ಬೇಸರ ಎಂದೂ ಉಂಟಾಗಿರಲಿಲ್ಲ. ಕತ್ತಲು ಕವಿದ ನನ್ನ ಮನಸ್ಸಿಗೆ ಬೆಳಕು ನೀಡುವಂತೆ ನಾನು ಭಗವಂತನನ್ನು ಕುರಿತು ಪ್ರಾರ್ಥಿಸಿಕೊಂಡೆ. ನಿಧಾನವಾಗಿ ನನಗೆ ಹೊಸ ಆಲೋಚನೆಯೊಂದು ಹೊಳೆಯಿತು. ಅದರಿಂದಾಗಿ ನಾನು ನನ್ನ ಮಾನಸಿಕ ಸಮತೋಲನವನ್ನೂ ನನ್ನ ದೇಶದ ಜನತೆಯಲ್ಲಿ

ನನಗಿದ್ದ ಶ್ರದ್ಧೆಯನ್ನೂ ಮರಳಿ ಪಡೆಯಲು ಪ್ರಾರಂಭಿಸಿದೆ. ತ್ರಿಪುರದಲ್ಲಿ ನನಗೆ ಅಂತಹ ನಿರಾಶಾದಾಯಕ ಅನುಭವ ಉಂಟಾದ ಮಾತ್ರಕ್ಕೆ, ಮಾನವರಲ್ಲಿ ನನಗಿರುವ ಮೂಲಭೂತ ವಿಶ್ವಾಸವನ್ನು ನಾನೇಕೆ ಕಳೆದುಕೊಳ್ಳಬೇಕು ? ಮಾನವನಲ್ಲಿ ಅವಿಶ್ವಾಸವಿರುವುದೆಂದರೆ ಅವನಲ್ಲಿನ ದೈವಿಕತೆಯಲ್ಲಿ ಹಾಗೂ ಆ ದೈವದ ಅಸ್ತಿತ್ವದಲ್ಲಿಯೇ ಅವಿಶ್ವಾಸವಿರಿಸಿದಂತೆ ಎಂದು ಭಾವಿಸಿದೆ –ಈ ರೀತಿಯ ತಮ್ಮ ಮಾನಸಿಕ ಒತ್ತಡವನ್ನು ೧೯೩೯ರ ಏಪ್ರಿಲ್ ೨೯ರಂದು ಕಲ್ಕತ್ತ ಸಮೀಪದ ಸೋದೆಪುರದಲ್ಲಿ ಸೇರಿದ ಅಖಿಲ ಭಾರತ ಕಾಂಗ್ರೆಸ್ ಸಮಿತಿ ಸಭೆಯಲ್ಲಿ ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಕೊಡುವ ಮೂಲಕ ಹಗುರ ಮಾಡಿಕೊಂಡರು.

'.... ಈ ಹಂತದಲ್ಲಿ ನಾನು ಅಧ್ಯಕ್ಷನಾಗಿ ಮುಂದುವರಿಯುವುದು ಪಕ್ಷಕ್ಕೆ ತೊಡರಾದೀತು ಎಂದು ನನಗನಿಸಿದೆ. ಹೊಸ ಒಮ್ಮತ ಪಡೆದ ಅಧ್ಯಕ್ಷರು ಬಂದರೆ ಎಲ್ಲವೂ ಸುಗಮಗೊಳ್ಳಬಹುದು. ಆ ಕಾರಣ ಈ ಸಂದರ್ಭದಲ್ಲಿ ನನ್ನ ಪೂರ್ಣ ಸಹಕಾರದ ಆಶ್ವಾಸನೆಯೊಂದಿಗೆ ನನ್ನ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡುತ್ತಿದ್ದೇನೆ ಎಂದು ಘೋಷಿಸಿ, ಬಾಬು ರಾಜೇಂದ್ರ ಪ್ರಸಾದ್‌ರವರಿಗೆ ತಮ್ಮ ಸ್ಥಾನವನ್ನು ಬಿಟ್ಟುಕೊಟ್ಟರು.

ಸುದ್ದಿ ತಿಳಿದ ಕೂಡಲೇ ರವೀಂದ್ರನಾಥ್ ಠಾಗೋರರು 'ಅತಿ ಉದ್ವಿಗ್ನಪೂರ್ಣ ಸನ್ನಿವೇಶದಲ್ಲಿ ನೀವು ತೋರಿದ ಸಹನೆ ನನಗೆ ಮೆಚ್ಚಾಗಿದೆ. ನಿಮ್ಮ ನಾಯಕತ್ವದಲ್ಲಿ ನನಗೆ ಭರವಸೆ ಇದೆ. ಆತ್ಮಗೌರವಕ್ಕಾಗಿ ಮತ್ತು ಆ ಮೂಲಕ ನಿಮ್ಮ ಸೋಲನ್ನು ಶಾಶ್ವತ ಗೆಲುವಾಗಿ ಪರಿವರ್ತಿಸಲು ಸಹಾಯ ಮಾಡಲಿಕ್ಕಾಗಿ ಪರಿಪೂರ್ಣ ಸಭ್ಯಾಚಾರವನ್ನು ಬಂಗಾಳ ಕಾಪಾಡಿಕೊಂಡು ಬರಬೇಕಾಗಿದೆ' ಎಂಬ ಸಂದೇಶ ಕಳುಹಿಸಿದರು.

ಅನಂತರ ಕಾಂಗ್ರೆಸ್ ಪಕ್ಷದ ಹಿತ ಮತ್ತು ಪ್ರಗತಿಗಳನ್ನು ಬಯಸುತ್ತಲೇ ತಮ್ಮದಾದ 'ಫಾರ್ವರ್ಡ್ ಬ್ಲಾಕ್' ಎಂಬ ಪುಟ್ಟ ಪಕ್ಷವನ್ನು ತೆರೆದರು. ಈ ಹೊಸ ಪಕ್ಷಕ್ಕೆ ರಾಷ್ಟ್ರಾದ್ಯಂತ ಮನ್ನಣೆ ಮತ್ತು ಪ್ರೋತ್ಸಾಹಗಳು ಸಿಕ್ಕಿದವು. ಸಹಸ್ರಾರು ಜನ ಭಾರತೀಯರು ಅದರ ಸದಸ್ಯತ್ವ ಸ್ವೀಕರಿಸಿದರು. ಆ ದಿಸೆಯಲ್ಲಿ ಕರ್ನಾಟಕ ಹಿಂದೆ ಬೀಳಲಿಲ್ಲ. ಅಂದಿನ ರಾಜಕೀಯ ಮುಖಂಡರಾಗಿದ್ದ ಹಾವೇರಿಯ ಹೊಸಮನಿ ಸಿದ್ಧಪ್ಪನವರು ೧೯೩೯ರ ಜುಲೈನಲ್ಲಿ ಸುಭಾಸ್‌ಚಂದ್ರ ಬೋಸರನ್ನು ಕರ್ನಾಟಕಕ್ಕೆ ಬರಮಾಡಿಕೊಂಡು ಕರ್ನಾಟಕ ವಿಭಾಗದ ಫಾರ್ವರ್ಡ್ ಬ್ಲಾಕನ್ನು ಅವರಿಂದಲೇ ಉದ್ಘಾಟಿಸಿದರು. ಸಿದ್ದಪ್ಪನವರು ಬ್ಲಾಕಿನ ಅಧ್ಯಕ್ಷರಾದರೆ, ಬೆಳಗಾವಿಯ ವಕೀಲ ಅನಂತರಾವ್ ಮಂಡಗಿಯವರು ಕಾರ್ಯದರ್ಶಿಗಳಾದರು. ಅಂದು ಕೆ.ಎಫ್. ಪಾಟೀಲ್, ವಿ.ಜಿ. ಕುಂಬಿ ಮೊದಲಾದವರು ಸದಸ್ಯರಾದರು. ೧೯೩೯ ಜುಲೈ ೧೩ರಂದು ಹಾವೇರಿಯಲ್ಲಿ ನೆರೆದಿದ್ದ ಭಾರಿ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಸುಭಾಸ್ ಭಾಷಣ ಮಾಡಿ, 'ಫಾರ್ವರ್ಡ್ ಬ್ಲಾಕ್' ಕಾಂಗ್ರೆಸ್‌ನ ಪರ್ಯಾಯ ಸಂಸ್ಥೆಯಲ್ಲ. ಅದರ ಒಂದು ಅಂಗ ; ಸ್ವಾತಂತ್ರ್ಯ ಕಹಳೆ ಎಲ್ಲ ದಿಕ್ಕುಗಳಲ್ಲೂ ಎಲ್ಲ ರೂಪಗಳಲ್ಲೂ ಮೊಳಗಲಿ ಎಂಬ ಸದ್ಭಾವನೆಯಿಂದ ಇದನ್ನು ಅಸ್ತಿತ್ವಕ್ಕೆ ತರಲಾಗಿದೆ' ಎಂದು ಘೋಷಿಸಿದರು. ಅನಂತರ ಧಾರವಾಡಕ್ಕೆ ತೆರಳಿ ಅಲ್ಲಿನ ಸಾರಸ್ವತಪುರದಲ್ಲಿ ಆ ರಾತ್ರಿ ತಂಗಿದ್ದರು. ಆ ಭಾಗದ ಬ್ಲಾಕಿನ ಕಾರ್ಯದರ್ಶಿ ಡಿ.ಡಿ. ಇಡಗುಂಜಿಯವರು ಮಾರನೆಯ ದಿನ ಕಡಪಾ ಮೈದಾನದಲ್ಲಿ ಸುಭಾಸರ ಭಾಷಣ ಕಾರ್ಯಕ್ರಮ ಏರ್ಪಡಿಸಿದರು. ವ್ಯಾಪಾರಸ್ಥರ ಅಪೇಕ್ಷೆಯಂತೆ ವಿಜಯಾ ಟಾಕೀಸ್ ಮುಂದೆಯೂ ಸುಭಾಸ್ ಭಾಷಣ ಮಾಡಿದರು. ಅನಂತರ ೧೯೩೯ ಜುಲೈ ೧೪ರ ಸಂಜೆ ಬೆಳಗಾವಿಯಲ್ಲಿ ಬೃಹತ್ ಸಭೆಯನ್ನುದ್ದೇಶಿಸಿ ಭಾಷಣ ಮಾಡಿ,"ಈಗ ಕಬ್ಬಿಣ ಕಾದಿದೆ'. ಬ್ರಿಟನ್ ಮತ್ತು ಜರ್ಮನಿಗಳ ನಡುವೆ ಯುದ್ಧ ಪ್ರಾರಂಭವಾಗುವ ಸೂಚನೆಗಳು ಕಂಡು ಬರುತ್ತಿವೆ. ಇದು ಭಾರತೀಯರಿಗೆ ಸಿಗುತ್ತಿರುವ ಸುವರ್ಣಾವಕಾಶ. ಭಾರತೀಯರಾದ ನಾವು ಪತನದ ಅಂಚಿನಲ್ಲಿರುವ ಬ್ರಿಟಿಷರಿಂದ ಭಾರತವನ್ನು ಕಿತ್ತುಕೊಳ್ಳಬೇಕು – ಎಂದು ಹರ್ಷೋದ್ಗಾರದ ಮಧ್ಯದಲ್ಲಿ ಉದ್ಘೋಷಿಸಿದರು.

ಅನಂತರ ಕಲ್ಕತ್ತೆಗೆ ಹಿಂತಿರುಗಿದರು.

* * *

ರಾಷ್ಟ್ರನಾಯಕ ಸುಭಾಸ್‌ಚಂದ್ರ ಬೋಸರ ಊಹೆ ಸತ್ಯವಾಗಲು ಹೆಚ್ಚು ದಿನಗಳು ಬೇಕಾಗಲಿಲ್ಲ. ೧೯೩೯ ಸೆಪ್ಟೆಂಬರ್‌ನಲ್ಲಿ ಪ್ರಪಂಚದ ಎರಡನೆಯ ಮಹಾಯುದ್ಧ ಸ್ಫೋಟಗೊಂಡಿತು. ಹಿಟ್ಲರ್ ಪೋಲೆಂಡನ್ನು ಆಕ್ರಮಿಸಿದ. ಬ್ರಿಟನ್ ಪ್ರತಿಭಟನೆಗೆ ಸಿದ್ಧವಾಗತೊಡಗಿತು. ಆ ಸಂದರ್ಭದಲ್ಲಿ ಸೌಜನ್ಯಕ್ಕಾದರೂ ಭಾರತದ ನಾಯಕರೊಡನಾಗಲಿ ಅಥವಾ ಭಾರತೀಯ ಜನತೆಯೊಡನಾಗಲಿ ಸಮಾಲೋಚನೆ ನಡೆಸದೆ 'ಭಾರತವು ಬ್ರಿಟನ್ ಪರವಾಗಿ ಮಹಾಯುದ್ಧದಲ್ಲಿ ಭಾಗವಹಿಸುತ್ತದೆ' ಎಂದು ಅಂದಿನ ಬ್ರಿಟಿಷ್ ವೈಸ್‌ರಾಯ್ ಲಿನ್ ಲಿತ್ ಗೋ ಘೋಷಿಸಿಬಿಟ್ಟ. ಅನಂತರ ವೈಸ್‌ರಾಯ್‌ನನ್ನು ಭೇಟಿ ಮಾಡಿ ಮಹಾತ್ಮಾ ಗಾಂಧಿಯವರು ಸ್ವಾತಂತ್ರ್ಯ ಕುರಿತ ಭಿನ್ನಾಭಿಪ್ರಾಯಗಳೇನೇ ಇರಲಿ ಬ್ರಿಟನ್ ಅಪಾಯದಲ್ಲಿರುವಾಗ ಅದಕ್ಕೆ ಸಹಕಾರ ನೀಡುವುದು ಸೂಕ್ತ ಎಂದು ಒಪ್ಪಿಗೆ ಸೂಚಿಸಿದರು. ಸುಭಾಸರಿಗೆ ಇದು ಸಮ್ಮತವಾಗಲಿಲ್ಲ. ಜೂನ್ ೧೯೪೦ರಲ್ಲಿ ನಾಗಪುರದಲ್ಲಿ ನಡೆದ ಫಾರ್ವರ್ಡ್ ಬ್ಲಾಕ್‌ನ ಎರಡನೇ ಸಮ್ಮೇಳನವನ್ನು ಮುಗಿಸಿ (ಇದರ ಮೊದಲ ಅಖಿಲ ಭಾರತ ಸಮಾವೇಶವು ೧೯೩೯ ಜೂನ್ ೨೨ರಂದು ಮುಂಬಯಿಯಲ್ಲಿ ನಡೆದಿತ್ತು). ಕಲ್ಕತ್ತಕ್ಕೆ ಹಿಂತಿರುಗುವ ದಾರಿಯಲ್ಲಿ ಸೇವಾಗ್ರಾಮಕ್ಕೆ ಹೋಗಿ ಸುಭಾಸ್

ಮಹಾತ್ಮ ಗಾಂಧಿಯವರನ್ನು ಭೇಟಿಮಾಡಿದರು. ಇಬ್ಬರು ಮಹಾನಾಯಕರ ಮಾತುಕತೆಗಳಲ್ಲಿ ಹೊಂದಾಣಿಕೆ ಬರಲಿಲ್ಲ. ಕಡೆಗೆ ಗಾಂಧೀಜಿ 'ನಿಮ್ಮ ಮನಸ್ಸಾಕ್ಷಿಯಂತೆ ಮುಂದುವರಿಯಿರಿ. ಪೂರ್ವ ಪಶ್ಚಿಮಗಳು ಒಂದೆಡೆ ಸೇರುವುದು ಸಾಧ್ಯವಿಲ್ಲ. ನೀವು ಸಮರ್ಥಿಸಿಕೊಳ್ಳುತ್ತಿರುವ ಕ್ರಾಂತಿಕಾರಕ ವಿಧಾನದಿಂದಲೇ ದೇಶಸ್ವಾತಂತ್ರ್ಯವನ್ನು ಸಂಪಾದಿಸಿಕೊಡುವಲ್ಲಿ ಯಶಸ್ವಿಗಳಾದರೆ ನಿಮ್ಮನ್ನು ಅಭಿನಂದಿಸುವ ಮೊದಲನೆಯ ವ್ಯಕ್ತಿ ನಾನಾಗುತ್ತೇನೆ. ಈ ಮಾತನ್ನು ಸದ್ಭಾವನೆಯಿಂದ ಹೇಳುತ್ತಿದ್ದೇನೆ. ಹೋಗಿ ಬನ್ನಿ' ಎಂದರು.

ಅದೇ ಅವರಿಬ್ಬರ ಕಡೆಯ ಭೇಟಿಯಾಯಿತು !

*  *  *

ಪ್ರಪಂಚದ ದ್ವಿತೀಯ ಮಹಾಯುದ್ಧ ಬಹು ಬಿರುಸಿನಿಂದಲೇ ಸಾಗಿತು. ಎಲ್ಲರೂ ಇಂಗ್ಲೆಂಡ್ ಸೋಲುವುದೆಂದು ಭಾವಿಸಿದ್ದರು. ಸುಭಾಸ್‌ಚಂದ್ರ ಬೋಸರೂ ಹಾಗೇ ತಿಳಿದಿದ್ದರು. ಆದರೆ ಅವರ ಮನಸ್ಸಿನಲ್ಲೊಂದು ಅಳುಕಿತ್ತು. ಬ್ರಿಟನ್ ಗೆದ್ದರೆ ಭಾರತಕ್ಕೆ ಸ್ವಾತಂತ್ರ್ಯವೆಂಬುದು ಮೊಲದ ಕೊಂಬು ; ಹಿಟ್ಲರ್ ಗೆದ್ದರೆ ಲೋಕಕಂಟಕನಾದ ಅವನಿಂದ ಜಗತ್ತಿಗೇ ಒಳ್ಳೆಯದಾಗುವುದಿಲ್ಲ. ಈ ಸಂದಿಗ್ಧದಲ್ಲಿ ಅವರ ಮನಸ್ಸು ಹೇಳಿತು. ಹಿಟ್ಲರ್ ಗೆಲ್ಲುತ್ತಾನೆ ಎಂದು. ಆದರೆ ಅದು ಸುಳ್ಳಾಯಿತು. ವಿನ್‌ಸ್ಟನ್ ಚರ್ಚಿಲನ ಚಾಣಾಕ್ಷತನದಿಂದ ಇಂಗ್ಲೆಂಡ್ ಗೆಲುವಿನ ಹಾದಿ ಹಿಡಿಯಿತು. ಈಗ ಸುಭಾಸರಿಗೆ ಇನ್ನೂ ಇಕ್ಕಟ್ಟಿನ ಪರಿಸ್ಥಿತಿ ಪ್ರಾಪ್ತವಾಯಿತು. ಅತ್ತ ಹೊರಗೆ ಬ್ರಿಟಿಷರ ವಿಶ್ವಾಸವಿಲ್ಲ. ಇತ್ತ ಒಳಗೆ ಕಾಂಗ್ರೆಸ್‌ನ ಸಹಕಾರವಿಲ್ಲ. ಆದರೆ ಸುಭಾಸರದು ಪ್ರಚಂಡವಾದ ಧೈರ್ಯ. ಬ್ರಿಟಿಷರನ್ನು ಬಯಲಿಗೆಳೆಯಲು ಒಂದು ತಂತ್ರ ಹೂಡಿದರು. ೧೯೪೦ ಮೇ ೨೫ರಂದು ನಡೆದ ಬಂಗಾಳದ ಪ್ರಾಂತೀಯ ಕಾಂಗ್ರೆಸ್ ಅಧಿವೇಶನದಲ್ಲಿ ಗುಲಾಮಗಿರಿಯ ಸಂಕೇತಗಳಂತಿರುವ ಬ್ರಿಟಿಷ್ ಸ್ಮಾರಕಗಳನ್ನೆಲ್ಲಾ ಕೆಡವಿ ಪುಡಿಪುಡಿ ಮಾಡಬೇಕು ಎಂಬ ಗೊತ್ತುವಳಿಯನ್ನು ಮುಂದಿಟ್ಟು, ಒಪ್ಪಿಗೆ ಪಡೆದರು. ಒಪ್ಪಿಗೆ ಸಿಕ್ಕಿದ್ದೇ ತಡ ಕಲ್ಕತ್ತದಲ್ಲಿದ್ದ ೧೫೦ ವರ್ಷಗಳಷ್ಟು ಹಳೆಯ ಹಾಲ್ ವೆಲ್ ಸ್ಮಾರಕವನ್ನು ಅಗೆದು ಉರುಳಿಸಲು ಫಾರ್ವರ್ಡ್ ಬ್ಲಾಕಿಗೆ ಆದೇಶವಿತ್ತರು. ಅದರೆ ಹೇಗೋ ಇದರ ಸುಳಿವು ಹಿಡಿದ ಸರ್ಕಾರ ಅದರ ಹಿಂದಿನ ದಿನವೇ ಮುಂಬೈನ ಹೆಚ್. ವಿ. ಕಾಮತ್, ಸೇನಾಪತಿ, ಬಾಪಟ್, ರೈತಮುಖಂಡ ಭುಸ್ಕುಟೆ, ಮದರಾಸಿನ ಪ್ರೊ. ಎನ್.ಜಿ.ರಂಗ, ಆಂಧ್ರದ ಅನ್ನಪೂರ್ಣಯ್ಯ, ಬಂಗಾಳದ ಸತ್ಯರಂಜನ ಭಕ್ಷಿ, ಅಶರಾಫ್– ಉ– ದ್ದೀನ್ ಚೌಧುರಿ ಮೊದಲಾದವರನ್ನು ದಸ್ತಗಿರಿ ಮಾಡಿ ಚಳವಳಿಯ ಚಾಲನೆಗೆ ಅಡ್ಡಿ ತಂದೊಡ್ಡಿತು. ಭಾರತದ ರಕ್ಷಣಾ ಕಾಯಿದೆಯ ಅನ್ವಯ ಸುಭಾಸರನ್ನು ಕಲ್ಕತ್ತದ ಪ್ರೆಸಿಡೆನ್ಸಿ ಜೈಲಿನಲ್ಲಿ ಸೆರೆಹಾಕಲಾಯಿತು. ಅವರ ವಿರುದ್ಧ ರಾಜದ್ರೋಹದ ಆಪಾದನೆಯ ಎರಡು ಮೊಕದ್ದಮೆಗಳನ್ನು ಹೂಡಲಾಯಿತು.

ಸೆರೆಯಲ್ಲಿದ್ದ ಸುಭಾಸರಿಗೆ ದಿಕ್ಕು ತೋಚದಾಯಿತು. ತಲೆಯ ಮೇಲೆ ಕೈಹೊತ್ತು ಕುಳಿತರು. ಆದರೆ ಅಂತಹ ವಿಷಮ ಸನ್ನಿವೇಶದಲ್ಲಿ ಸ್ವಾತಂತ್ರ್ಯವೀರ ವಿನಾಯಕ ದಾಮೋದರ ಸಾವರ್ಕರ್‌ರವರ ಸಮಯೋಚಿತ ನೈತಿಕ ಬೆಂಬಲ ದೊರೆಯಿತು. ವೀರ ಸಾವರ್ಕರ್ ಮಹಾ ರಾಷ್ಟ್ರಪ್ರೇಮಿ. ಅವರು ಸುಭಾಸರಿಗೆ ಸೂಕ್ತ ರೀತಿಯಲ್ಲಿ ಸಲಹೆ ನೀಡಿದರು :

'ಬೋಸ್‌ಜಿ, ಇಂಗ್ಲೆಂಡ್ ಮಹಾಯುದ್ಧದ ಆತಂಕವನ್ನು ಎದುರಿಸುತ್ತಾ ಕುಸಿದಿರುವಾಗ, ನಿಮ್ಮಂಥ ಮೇಧಾವಿ ನಾಯಕರು ಹಳೆಯ ಬ್ರಿಟಿಷ್ ಸ್ಮಾರಕಗಳನ್ನು ಕೆಡಹುವಂಥ ಸಣ್ಣ ಕೆಲಸಕ್ಕೆ ಕೈಹಾಕಿ ಜೈಲು ಸೇರಬಾರದು. ಸತ್ತವರ ಪ್ರತಿಮೆಗಳ ನಾಶಕ್ಕಿಂತ ಬದುಕಿರುವ ಉನ್ಮತ್ತ ಕತ್ತೆಗಳನ್ನು ಸದೆಬಡಿಯುವುದು ಹೆಚ್ಚು ಸೂಕ್ತ. ಮೊದಲು ಕಂಟಕಪ್ರಾಯರಾಗಿರುವ ಬ್ರಿಟಿಷರನ್ನು ಕೊಚ್ಚಿ ಹಾಕಿ. ಅದು ಬಿಟ್ಟು ಸಣ್ಣಪುಟ್ಟ ಚಳವಳಿ ಮಾಡಿಕೊಂಡು ಅಗ್ರನಾಯಕರಾದ ನೀವು ಸೆರೆಮನೆಗಳಲ್ಲಿ ಕುಳಿತರೆ ಏನು ಪ್ರಯೋಜನ ? ಬ್ರಿಟಿಷ್ ಸರ್ಕಾರ ಇಂದು ಬಯಸುತ್ತಿರುವುದೂ ಅದನ್ನೇ ಅಲ್ಲವೆ ? ಸೆರೆಮನೆಯಲ್ಲಿ ಇರಬೇಕಾದವರು ಬ್ರಿಟಿಷರೇ ಹೊರತು ಭಾರತೀಯರಲ್ಲ ! ದಯವಿಟ್ಟು ನನ್ನ ಮಾತು ಲಾಲಿಸಿ, ಸಶಸ್ತ್ರ ಬಂಡಾಯ ಅಸಾಧ್ಯವಲ್ಲ. ತರುಣರು ಹೆಚ್ಚು ಸಂಖ್ಯೆಯಲ್ಲಿ ಸೇನೆಗೆ ಸೇರಬೇಕು, ಬ್ರಿಟಿಷರ ವಿರುದ್ಧ ಹೋರಾಡಬೇಕು, ಹೊಡೆದೋಡಿಸಬೇಕು. ಇಂದಿನ ಈ ಮಹಾಯುದ್ಧದಿಂದಾಗಿ ಬ್ರಿಟಿಷರ ಗಮನ ಅನ್ಯತ್ರ ಹರಿದಿದೆ. ಇದು ಸುಸಮಯ, ಜರ್ಮನಿ ಮತ್ತು ಜಪಾನ್ ದೇಶಗಳು ನಿಮ್ಮ ಬೆಂಬಲಕ್ಕಿವೆ. ಮುನ್ನುಗ್ಗಿ, ಜರ್ಮನಿ ಮತ್ತು ಇಟಲಿಯವರ ವಶದಲ್ಲಿರುವ ಯುದ್ಧ ಕೈದಿಗಳನ್ನು ಬಂಧನದಿಂದ ಮೊದಲು ಬಿಡಿಸಿಕೊಳ್ಳಿ. ಎರಡೂ ಸರ್ಕಾರಗಳೂ ನಿಮ್ಮ ಮಾತನ್ನು ತೆಗೆದು ಹಾಕುವುದಿಲ್ಲ. ಆ ಕೈದಿಗಳು ನಿಮಗೆ ಆತ್ಮೀಯ ಬಂಧುಗಳಾಗುತ್ತಾರೆ. ಅವರಲ್ಲಿ ರಾಷ್ಟ್ರೀಯ ಭಾವನೆ ಮೂಡುವಂತೆ ಮಾಡಿ, ಬ್ರಿಟಿಷರಿಂದಾಗುತ್ತಿರುವ ಅನ್ಯಾಯ ಪರಂಪರೆಗಳನ್ನು ಬಿತ್ತರಿಸಿ ಆ ಬ್ರಿಟಿಷ್ ಗುಲಾಮಯೋಧರನ್ನು ಸ್ವಾತಂತ್ರ್ಯಯೋಧರನ್ನಾಗಿ ಮಾರ್ಪಡಿಸಿ, ನಿಮ್ಮ ಕೆಲಸ ಸುಲಭವಾಗುತ್ತದೆ. ಜಪಾನ್ ಬ್ರಿಟನ್ ವಿರುದ್ಧ ಯುದ್ಧ ಘೋಷಿಸಿದ ಕೂಡಲೇ ನೀವು ಬರ್ಮಾ ಗಡಿಯಿಂದಲೊ ಅಥವಾ ಬಂಗಾಳಕೊಲ್ಲಿಯ ಕಡೆಯಿಂದಲೊ ಭಾರತದ ಮೇಲೆ ಆಕ್ರಮಣ ನಡೆಸಿ, ಸ್ವಾತಂತ್ರ್ಯವನ್ನು ಘೋಷಿಸಿ. ಇಂತಹ ಸಾಹಸವನ್ನೆಸಗದೆ ಜಪಮಣಿ ಹಿಡಿದು ಮಂತ್ರವನ್ನೆಸಗುತ್ತ ಕುಳಿತರೆ ಭಾರತ ಎಂದೆಂದಿಗೂ ಸ್ವಾತಂತ್ರ್ಯದ ಕನಸನ್ನು ನನಸಾಗಿಸಿಕೊಳ್ಳಲಾರದು. ನೀವು ನಮ್ಮ ಆಶಾಜ್ಯೋತಿ ! ದಯವಿಟ್ಟು ಮುಂದಡಿ ಇಡಿ' ಎಂದು. ವಾನರಸೇನೆ ಅಂಜನಾಸುತನನ್ನು ಲಂಕೆಗೆ ಹಾರಲು ಸಮುದ್ರತೀರದಲ್ಲಿ ಪ್ರಚೋದಿಸಿದಂತೆ ಪ್ರೇರಣೆ ನೀಡಿದರು.

ವೀರಸಾವರ್ಕರರ ಮಾತುಗಳು ಸಾವಿರಾಳು ಶಕ್ತಿ ತುಂಬಿದವು ಸುಭಾಸರಲ್ಲಿ. ಆದರೆ ವಿನಕಾರಣ ಪ್ರೆಸಿಡೆನ್ಸಿ ಸೆರೆಮನೆಯಲ್ಲಿ ಸೆರೆಯಾಳಾಗಿರುವ ತಮಗೆ ಕೈ ಕಾಲುಗಳನ್ನು ಆಡಿಸದಂತಾಗಿತ್ತು. ಸದಾ ತಮ್ಮಲ್ಲಿಯೇ ಚಿಂತಿಸಿಕೊಳ್ಳುತ್ತಿದ್ದರು.

ಇಂದು ಭಾರತ ರಾಜಕೀಯ ಕ್ಷೇತ್ರದಲ್ಲಿ ಸಕ್ರಿಯವಾಗಿ ಪ್ರವೇಶಿಸದಿದ್ದರೆ ಅದು ಸ್ವಾತಂತ್ರ್ಯ ಗಳಿಸುವುದು ಕನಸಿನ ಮಾತಾಗುತ್ತದೆ. ಪ್ರಪಂಚದ ಬೇರೆ ಕಡೆಗಳಲ್ಲಿ ಇತಿಹಾಸ ನಿರ್ಮಾಣವಾಗುತ್ತಿರುವಾಗ ನಾವು ನಿಷ್ಕ್ರಿಯವಾಗಿ ಸೆರೆಮನೆಯಲ್ಲಿ ಕುಳಿತು ಕಾಲ ಕಳೆಯುತ್ತಿರುವುದು ಭಾರೀ ರಾಜಕೀಯ ದುರಂತ ! ಕಾನೂನುರೀತ್ಯಾ ನನ್ನನ್ನು ಬಿಡುಗಡೆ ಮಾಡಬರುವುದಿಲ್ಲ. ಅದಕ್ಕೆ ಬೇರೆ ಮಾರ್ಗ ಹುಡುಕಲೇ ಬೇಕು' ಎಂದು ಆಲೋಚಿಸಿ, ಮಾರ್ಗದ ಅನ್ವೇಷಣೆಗೆ ತೊಡಗಿದರು. ಉಪಾಯ ಹೊಳೆಯಿತು. ತಾವು ಸೆರೆಮನೆಯಲ್ಲಿಯೇ ಆಮರಣಾಂತ ಉಪವಾಸ ಸತ್ಯಾಗ್ರಹವನ್ನು ಕೈಗೊಳ್ಳುವುದಾಗಿ ತಿಳಿಸಿ ಬಂಗಾಳದ ಗವರ್ನರ್ ಹಾಗೂ ಮುಖ್ಯಮಂತ್ರಿ - ಇವರಿಗೆ ಪತ್ರ ಬರೆದರು. ಪತ್ರ ಹೀಗಿತ್ತು :

'.... ಈಗಿನ ಪರಿಸ್ಥಿತಿಯಲ್ಲಿ ನನಗೆ ಜೀವನ ಅಸಹ್ಯವಾಗಿದೆ. ಅನ್ಯಾಯದೊಡನೆ ರಾಜಿಮಾಡಿಕೊಂಡು ನನ್ನ ವ್ಯಕ್ತಿತ್ವವನ್ನು ಸರ್ಕಾರಕ್ಕೆ ಮಾರಿಕೊಳ್ಳುವುದು ನನ್ನ ಜಾಯಮಾನವಲ್ಲ. ಅಂಥ ಬೆಲೆಯನ್ನು ತೆರುವುದಕ್ಕಿಂತ ಸಾಯುವುದು ಮೇಲು ! ಸರ್ಕಾರವಾದರೊ ನನ್ನನ್ನು ಪಾಶವೀ ಬಲದಿಂದ ಬಂಧಿಸಿ ತನ್ನ ಹಟವನ್ನೇ ಮುಂದುವರಿಸಲು ನಿರ್ಧರಿಸಿದೆ. ಅದಕ್ಕೆ ನಾನೀಗ ಉತ್ತರಿಸುತ್ತಿದ್ದೇನೆ. ನನ್ನನ್ನು ಬಿಡುಗಡೆ ಮಾಡಿ, ಇಲ್ಲವೆ ನನ್ನನ್ನು ಸಾಯಲು ಬಿಡಿ ! ಬದುಕುವ ಅಥವಾ ಸಾಯುವ ಸ್ವಾತಂತ್ರ್ಯವಾದರೂ ನನಗಿದೆಯಷ್ಟೆ ? ನನ್ನ ಸಾವಿನಿಂದ ದಿಢೀರನೆ ಯಾವ ನಷ್ಟವೂ ಆಗುವುದಿಲ್ಲ ; ನಿಜ. ಆದರೆ ಯಾವ ತ್ಯಾಗವೂ ಎಂದಿಗೂ ವ್ಯರ್ಥವಾಗದು. ಯಾವುದೇ ಉದಾತ್ತ ಧ್ಯೇಯ ಕೈಗೂಡುವುದು ನೋವು ಮತ್ತು ತ್ಯಾಗಗಳ ಮೂಲಕವೆ ! ಇದು ಸಾರ್ವಕಾಲಿಕ ಹಾಗೂ ಸಾರ್ವದೇಶಿಕ ಸತ್ಯ.

'ಈ ನಶ್ವರ ಜಗತ್ತಿನಲ್ಲಿ ಎಲ್ಲವೂ ಅಳಿಯುತ್ತವೆ ; ಆದರೆ ಅಳಿಯದೆ ಉಳಿಯುವ ಭಾವನೆಗಳು, ಧ್ಯೇಯಗಳು ಮತ್ತು ಕನಸುಗಳು ಮಾತ್ರ. ಒಂದು ಭಾವನೆಯ ಸಾಕ್ಷಾತ್ಕಾರಕ್ಕಾಗಿ ಒಬ್ಬ ವ್ಯಕ್ತಿ ಸತ್ತರೂ ಅವನು ಬಿತ್ತಿದ ಭಾವನೆಯ ಬೀಜಗಳು ಸಾಯುವುದಿಲ್ಲ. ಅವು ಅವನನಂತರ ಅಸಂಖ್ಯವಾಗಿ ಪುನರವತಾರಗೊಳ್ಳುತ್ತವೆ. ವಿಕಾಸಚಕ್ರ ಚಲಿಸುವುದೇ ಹೀಗೆ !

'ಒಂದು ಪೀಳಿಗೆಯ ಭಾವನೆ, ಗುರಿ, ಕನಸುಗಳು, ಮುಂದಿನ ಪೀಳಿಗೆಗೆ ವಾರಸಿಕೆಗಳಾಗುತ್ತವೆ. ನಾನು ಮುಗಿಸಲಾಗದ ಕಾರ್ಯವನ್ನು ನಾಳಿನವರು ಮುಗಿಸಿಯಾರು ! ಈ ಭರವಸೆಗಿಂತ ಹೆಚ್ಚಿನ ಪ್ರತಿಫಲ ಯಾವುದಿದೆ ? ಆಲೋಚಿಸಿ.

'ಈ ಜನ್ಮದ ನಷ್ಟಗಳನ್ನು ಲೋಕಾಂತರದ ಅಮೃತತ್ವವು ನೂರುಪಟ್ಟು ತುಂಬಿಕೊಡುತ್ತದೆ. ಇದು ಆತ್ಮನ ಪಯಣ ವಿಧಾನ. ದೇಶ ಬದುಕಲೆಂದು ವ್ಯಕ್ತಿ ಸಾಯಬೇಕಾಗುತ್ತದೆ. ಭಾರತ ಬದುಕಿ ಸ್ವಾತಂತ್ರ್ಯವನ್ನೂ ಧನ್ಯತೆಯನ್ನೂ ಗಳಿಸಲೆಂದು ಇಂದು ನಾನು ಸಾಯಲು ಸಿದ್ಧನಿದ್ದೇನೆ. ಒಂದು ಘನೋದ್ದೇಶ ಸಾಧನೆಗಾಗಿ ಬಲಿಪೀಠಕ್ಕೆ ಶಾಂತವಾಗಿ ಶರೀರವನ್ನು ಸಮರ್ಪಿಸಿಕೊಳ್ಳುವುದಕ್ಕಿಂತ ಮಿಗಿಲಾದ ಧ್ಯೇಯ ಸಾಧನೆ ಬೇರಾವುದಿದೆ ?

'ನನ್ನ ದೇಶಬಾಂಧವರಿಗೆ ನಾನು ಹೇಳುವುದು ಇಷ್ಟೆ.

ಜಗತ್ತಿನಲ್ಲಿ ಗುಲಾಮಗಿರಿಗಿಂತ ದೊಡ್ಡ ಶಾಪ ಬೇರೊಂದಿಲ್ಲ. ಅನ್ಯಾಯದೊಡನೆ ರಾಜಿಮಾಡಿಕೊಳ್ಳುವುದಕ್ಕಿಂತ ದೊಡ್ಡ ಅಪರಾಧ ಇನ್ನೊಂದಿಲ್ಲ. ಜೀವನವನ್ನು ಪಡೆಯಲು ಜೀವನವನ್ನೇ ಕೊಡಬೇಕು. ಎಷ್ಟೇ ಕ್ಲೇಶರಾದರೂ ಅನ್ಯಾಯದ ವಿರುದ್ಧ ಹೋರಾಡುವುದ್ಕಕಿಂತ ಉತ್ತಮ ಉದಾತ್ತಗುಣ ಬೇರೊಂದಿಲ್ಲ.'

ಆಮರಣಾಂತ ಉಪವಾಸ ಪ್ರತಿಜ್ಞೆ, ಪವಿತ್ರ ಕಾಳಿಕಾದೇವಿ ಪೂಜೆಯ ಪವಿತ್ರ ಪ್ರಸ್ಥಾನ ದಿನದಂದು ಅಂದರೆ ೧೯೪೦ ನವೆಂಬರ್ ೨೬ರಂದು ಘೋಷಿತವಾಯಿತು.

ಆರಂಭದ ಒಂದು ವಾರದ ತನಕ ಪ್ರತಿಜ್ಞಾ ಪತ್ರ ಸರ್ಕಾರದ ಮನಸ್ಸಿನ ಮೇಲೆ ಯಾವ ಪರಿಣಾಮವನ್ನೂ ಉಂಟು ಮಾಡಲಿಲ್ಲ. ಸುಭಾಸರ ಪತ್ರಕ್ಕೆ ಉತ್ತರ ಕೊಡುವಷ್ಟು ಸೌಜನ್ಯವನ್ನೂ ತೋರಲಿಲ್ಲ. ಉಪವಾಸ ತೀವ್ರವಾಯಿತು. ಸೆರೆಮನೆಯಲ್ಲೇ ಸುಭಾಸರು ಸಾಯಬಹುದೆಂದು ಹೆದರಿ, ಅವರ ಆರೋಗ್ಯ ಸುಧಾರಿಸಿದ ಮೇಲೆ ಮತ್ತೆ ದಸ್ತಗಿರಿ ಮಾಡುವ ಉದ್ದೇಶವನ್ನಿಟ್ಟುಕೊಂಡು, ಅವರನ್ನು ಕೂಡಲೇ ಬಿಡುಗಡೆ ಮಾಡುವುದು ಸೂಕ್ತವೆಂದು ಆಲೋಚಿಸಿ, ಉನ್ನತಾಧಿಕಾರಿಗಳ ರಹಸ್ಯ ಸಭೆ ಅದನ್ನು ಕಾರ್ಯಗತ ಮಾಡಿತು. ಸುಭಾಸರನ್ನು ಡಿಸೆಂಬರ್ ೫ರಂದು ಸೆರೆಮನೆಯಿಂದ ಬಿಡುಗಡೆ ಮಾಡಿತು. ಆದರೆ ಅವರ ಮೇಲಿನ 'ರಾಜದ್ರೋಹ'ದ ಮೊಕದ್ದಮೆಗಳನ್ನು ಹಿಂತೆಗೆದುಕೊಳ್ಳಲಿಲ್ಲ. ವಿಚಾರಣೆಗಾಗಿ ೧೯೪೧ರ ಜನವರಿ ೨೬ರಂದು ನ್ಯಾಯಾಲಯದಲ್ಲಿ ಹಾಜರಾಗಲು ಸುಭಾಸರಿಗೆ ಆದೇಶ ನೀಡಿತು.

* * *

ಬಿಡುಗಡೆ ಪಡೆದ ಕೂಡಲೇ ಪಲಾಯನದ ಯೋಜನೆ ಹಾಕಿಕೊಂಡರು ಸುಭಾಸ್. ಮನೆಯಿಂದ ಹೊರಗೆ, ದೇಶದಿಂದ ವಿದೇಶಕ್ಕೆ ಹೋಗಿ ಅಲ್ಲಿ ಹಲವರ ನೆರವು ಪಡೆದು ದೇಶೀಯ ಸೇನೆಯನ್ನು ಸಜ್ಜುಗೊಳಿಸಿ ಬ್ರಿಟಿಷರ ವಿರುದ್ಧ ಆಕ್ರಮಣ ನಡೆಸಿ, ಭಾರತವನ್ನು ಸ್ವಾಧೀನಪಡಿಸಿಕೊಳ್ಳಬೇಕು. ಈ ಉದ್ದೇಶ ಸಫಲವಾಗಬೇಕಿದ್ದರೆ ತಾವೊಂದು ನಾಟಕ ಆರಂಭಿಸುವುದು ಉತ್ತಮ ಎಂದು ಭಾವಿಸಿ, ಕಲ್ಕತ್ತೆಯ ಎಲ್ಗಿನ್ ರಸ್ತೆಯಲ್ಲಿದ್ದ ತಮ್ಮ ಮನೆಯಲ್ಲಿ, ತಮ್ಮದಾದ ಕೋಣೆಯಲ್ಲಿ ಏಕಾಂತವಾಗಿ ಧ್ಯಾನಸಮಾಧಿಯಲ್ಲಿರುವವರಂತೆ ಸೋಗು ಹಾಕಿದರು. ತಮ್ಮ ಕೊಠಡಿಯಲ್ಲಿ ಶ್ರೀ ರಾಮಕೃಷ್ಣ ಪರಮಹಂಸ ಹಾಗೂ ಸ್ವಾಮಿ

ವಿವೇಕಾನಂದರ ಭಾವಚಿತ್ರಗಳನ್ನಿಟ್ಟುಕೊಂಡು ಭಗವದ್ಗೀತೆಯ ಪಾರಾಯಣ ನಡೆಸುತ್ತ ತಪಸ್ವಿಯಂತೆ ಗಡ್ಡಮೀಸೆ ಬೆಳೆಸಿಕೊಂಡು ಕುಳಿತುಬಿಟ್ಟರು. ಅಲ್ಲಿ ಯಾರ ಭೇಟಿಗೂ ಪ್ರವೇಶಕ್ಕೂ ಅವಕಾಶವಿರಲಿಲ್ಲ. ಕುಟುಂಬದ ಸದಸ್ಯರೂ ಸಹ ಮಾತುಕತೆ ಇಲ್ಲದೆ ಒಂದಿಷ್ಟು ಆಹಾರವಿಟ್ಟು ತೆಪ್ಪಗೆ ಹೊರಟು ಹೋಗಬೇಕಿತ್ತು. ಆದರೆ ಅಣ್ಣ ಶರತ್ ಮತ್ತು ಅವರ ಮಗ ಶಿಶಿರ್ – ಇಬ್ಬರಿಗೆ ಮಾತ್ರ ಪ್ರವೇಶಾವಕಾಶವಿತ್ತು.

ಆ ಏಕಾಂತದಲ್ಲಿ ಅನೇಕಾಂತ ದರ್ಶನ ಸುಭಾಸರ ಮನಃಪಟಲದ ಮೇಲೆ ಮೂಡುತ್ತಿತ್ತು. ಆದರೆ ಅದು ಯಾರಿಗೂ ಕಾಣದ ಸುಪ್ತಾವಸ್ಥೆಯಲ್ಲಿತ್ತು. ಆ ಜ್ಯೋತಿಯನ್ನು ಜ್ವಾಲೆಯನ್ನಾಗಿಸಲು ಸುಭಾಸ್ ೧೯೪೧ ಜನವರಿ ೧೬ರ ರಾತ್ರಿ ಸಕಲ ಸಿದ್ಧತೆಗಳನ್ನು ಮಾಡಿಕೊಂಡು ಹೊರನಾಡಿಗೆ ಹಕ್ಕಿಯಂತೆ ಹಾರಿದರು !

'ಸುಭಾಸ್ ಕಾಣೆಯಾಗಿದ್ದಾರೆ' ಎಂಬ ಸುದ್ದಿ ಜಗತ್ತಿಗೆ ತಿಳಿದದ್ದು ಅವರು ಹಾರಿದ ಹತ್ತು ದಿನಗಳ ಮೇಲೆ, ಅಂದರೆ ಜನವರಿ ೨೬ರಂದು. ಅದರ ಮಾರನೆಯ ದಿನವೇ ಅಂದರೆ ಜನವರಿ ೨೭ರಂದು ಸುಭಾಸರ ಮೇಲೆ ರಾಜದ್ರೋಹದ ಮೊಕದ್ದಮೆ ವಿಚಾರಣೆ ಇತ್ತು !

* * *

ಅಂದು ರಾತ್ರಿ ಕಲ್ಕತ್ತೆಯಲ್ಲಿ ಕಾಳಿಪೂಜೆ !

ಅಂದಿನದು ವಿಶೇಷ ಪೂಜೆ. ಪೂಜೆಗೆದ ತಕ್ಕ ವಿಶೇಷ ವಾದ್ಯಗಳು ಮೊಳಗುತ್ತಿದ್ದವು. ಬಾಣಬಿರುಸುಗಳು ಗಗನದಲ್ಲಿ ಬೆಳಕಿನ ಗೆರೆ ಬರೆಯುತ್ತಿದ್ದವು. ಕಲ್ಕತ್ತದ ಎಲ್ಗಿನ್ ರಸ್ತೆಯ ಬೋಸರ ಮನೆಯ ಸುತ್ತ ಹಗಲಿರುಳೂ ಪಹರೆ ಇರುತ್ತಿದ್ದ ಪುಟ್ಟ ಪೊಲೀಸ್ ರೆಜಿಮೆಂಟಿಗೆ ದೇವೀಪ್ರಸಾದ ಸ್ವೀಕರಿಸಲು ಆಸೆಯಾಯಿತು. ಅವರು ಅತ್ತ ಸರಿದ ಕೂಡಲೇ ಅಣ್ಣ ಶರಶ್ಚಂದ್ರರ ಮಗ ಶಿಶಿರಕಾಂತ ಬೋಸ್ ಕಾರನ್ನು ತಂದು ಮನೆಯ ಹಿಂದೆ ನಿಲ್ಲಿಸಿಕೊಂಡ. ಸುಭಾಸ್ ಚಂದ್ರರು ವಿಮಾ ಕಂಪನಿಯೊಂದರ ಪ್ರವಾಸಿ ಇನ್ಸ್‌ಪೆಕ್ಟರ್ ವೇಷದಲ್ಲಿ 'ಮೊಹಮ್ಮದ್ ಜಿಯಾವುದ್ದೀನ್' ಎಂಬ ಗುಪ್ತ ಹೆಸರಿನಲ್ಲಿ ಮನೆಯ ಮೆಟ್ಟಿಲಿಳಿದು ಮೆಲ್ಲಗೆ ಕಳ್ಳಹೆಜ್ಜೆ ಹಾಕುತ್ತಾ ಬಂದರು. ಬಡಾವಣೆಯಲ್ಲಿ ಸದ್ದಡಗಿತ್ತು. ರಾತ್ರಿ ಅರ್ಧ ಕಳೆದು ಉಳಿದರ್ಧಕ್ಕೆ ಕಾಲಿರಿಸುತ್ತಿತ್ತು. ಅದು ಕಲ್ಲು ನೀರು ಕರಗೋ ಹೊತ್ತು ! ಅಂಥ ಕಗ್ಗತ್ತಲಲ್ಲಿ ಕಾರು ಚಲಿಸತೊಡಗಿತು. ಸುಭಾಸರ ಕಿರಿಯ ಸೋದರಸೊಸೆ ಇಳಾ ಎಂಥದೋ ಒಂದು ಪುಟ್ಟ ಗಂಟು ಕೈಗಿರಿಸಿದಳು. ಅವಳ ಕಣ್ಣು ಒದ್ದೆಯಾಗಿದ್ದವು. ಆದರೆ ಅದು ಯಾರಿಗೂ ಕಾಣಿಸುತ್ತಿರಲಿಲ್ಲ. ಕಾರು ನಿಧಾನವಾಗಿ ಚಲಿಸಿ, ಗ್ರಾಂಡ್ ಟ್ರಂಕ್ ಮಾರ್ಗ ಮುಟ್ಟಿದ ಕೂಡಲೇ ಜೋರಾಗಿ ಓಡತೊಡಗಿತು. ಹಾಲ್ದಿಂಗಳು ಆಪ್ಯಾಯಮಾನವಾಗಿತ್ತು. ಮುಂಜಾವಿನ ವೇಳೆಗೆ ಅಸನ್ ಸಾಲ್ ಮುಟ್ಟಿತ್ತು. ಅಲ್ಲಿ ಕಾರಿಗೆ ಪೆಟ್ರೋಲ್ ತುಂಬಿಸಿಕೊಂಡು ೧೯೪೧ ಜನವರಿ ೧೭ರ ಬೆಳಗಿನ ಒಂಬತ್ತು ಗಂಟೆಯ ಹೊತ್ತಿಗೆ ಧನಬಾದ್ ನಗರ ಪ್ರವೇಶಿಸಿದರು. ಅಲ್ಲಿ ಅಣ್ಣ ಶರಶ್ಚಂದ್ರರ ಹಿರಿಯ ಮಗ ಅಶೋಕ್ ಕುಟುಂಬ ಸಮೇತ ಬಂದು ಸ್ವಾಗತಿಸಿ, ಸತ್ಕರಿಸಿದ. ವಿಮಾ ಏಜೆಂಟ್ 'ಮೊಹಮದ್ ಜಿಯಾವುದ್ದೀನ್'ರ ನಾಟಕ ನೋಡಿ ನಗೆ ಬಂತು ! ಅಂದು ಸಂಜೆಯವರೆಗೂ ಅಲ್ಲಿದ್ದು, ರಾತ್ರಿ ಅಶೋಕ್, ಅವನ ಹೆಂಡತಿ, ಶಿಶಿರ ಮತ್ತೆ ಸುಭಾಸ್ ಕಾರನ್ನೇರಿ ಗೋಮಾ ರೈಲ್ವೇ ಸ್ಟೇಷನ್ನಿಗೆ ಬಂದರು. ಅರ್ಧ ರಾತ್ರಿಗೆ ಬಿಟ್ಟ ರೈಲಿನಲ್ಲಿ ಸುಭಾಸ್ ಒಬ್ಬರೇ ಪೆಷಾವರ್‌ಗೆ ಪಯಣಿಸಿದರು.

ಜನವರಿ ೧೯ರಂದು ಪೆಷಾವರ್ ತಲುಪಿದ ಕೂಡಲೇ ಮಾಡಬೇಕಾದ ಎಲ್ಲ ರಹಸ್ಯ ಸಿದ್ಧತೆಗಳೂ ನಡೆದಿದ್ದವು. ಅಲ್ಲಿನ ಫಾರ್ವರ್ಡ್ ಬ್ಲಾಕ್‌ನ ನೇತಾರ ಅಕ್ಬರ್ ಷಾಹ್ 'ಜಿಯಾವುದ್ದೀನ್'ರನ್ನು ಗುರುತಿಸಿ, ಗುಟ್ಟಾಗಿ ಟಾಂಗಾ ಹತ್ತಿಸಿ ತಾಜಮಹಲ್ ಹೋಟೆಲಿಗೆ ಕಳುಹಿಸಿದ. ಅಂದು ರಾತ್ರಿ ಅಕ್ಬರ್ ತನ್ನ ಆತ್ಮೀಯ ಸ್ನೇಹಿತ ಅಬದ್ ಖಾನನ ಮನೆಗೆ ಸುಭಾಸರನ್ನು ಸ್ಥಳಾಂತರಿಸಲು ಕಾಲ್ನಡಿಗೆಯಲ್ಲಿ ಕರೆದೊಯ್ದ. ಸರಿರಾತ್ರಿಯಲ್ಲಿ ಮುಸಲ್ಮಾನ್ ವೇಷ ಧರಿಸಿ ಬಂದ ಸುಭಾಸರನ್ನು ಅಬದ್ ಸ್ವಾಗತಿಸಿ, ಯಾಲ್ಲಾ ! ಎಂತಹ ಭಾಗ್ಯ ನನ್ನದು ! ಸುಭಾಸರೆ, ತಾವು ಈ ಬಡವನ ಮನೆಗೆ ಬಂದಿದ್ದು ಭರತಖಂಡವೇ ನನ್ನ ಮನೆಗೆ ಬಂದಂತಾಯಿತು ! ಇದಕ್ಕಿಂತ ಮಿಗಿಲಾದ ಭಾಗ್ಯ ಬೇರೆ ಏನಿದೆ !' ಎಂದ.

ಎಲ್ಲರೂ ಆನಂದವನ್ನು ಹಂಚಿಕೊಂಡರು.

ಅಂತೆಯೇ ಗೂಢಚಾರರು ಹೊರಗಡೆ ಹೊಂಚು ಹಾಕುತ್ತಿರುವುದರ ಬಗೆಗೆ ಶಂಕೆಪಟ್ಟರು. ಸುಭಾಸ್ ಮತ್ತೆ ವೇಷ ಬದಲಿಸಿದರು. ರುಮಾಲ್ ಸುತ್ತಿ ಪಠಾಣ್ ವೇಷಭೂಷಣ ಧರಿಸಿದರು. ಅಲ್ಲಿ ತಮ್ಮ ಬೆಂಗಾವಲಾಗಿ ಬರುತ್ತಿದ್ದ ಅಕ್ಬರ್ ಷಾಹಾನ ಗೆಳೆಯ ಭಗವತ್ ರಾಮ ತಲವಾರ್‌ನ ಅಣ್ಣ ಆದರು. ಅಷ್ಟೇ ಅಲ್ಲ, ಅವರೀಗ ಕಿವುಡ– ಮೂಕರಾಗಿ ನಟಿಸತೊಡಗಿದರು. ಯಾರೇ ಮಾತನಾಡಿಸಿದರೂ ಸುಭಾಸ್ ಕಿವುಡನಂತೆ ಸುಮ್ಮನಿದ್ದು, ಮೂಕನಂತೆ ಕೈಸನ್ನೆ ಮಾಡುತ್ತಿದ್ದರು. ಅವರನ್ನು ಭಗತ್ ಕಾಬೂಲಿಗೆ ಚಿಕಿತ್ಸೆಗಾಗಿ ಕರೆತಂದಿರುವನೆಂದು ನಟಿಸಿದರು.

೧೯೪೧ದ ಜನವರಿ ೨೬ರಂದು ಸುಭಾಸರು, ಭಗತ್ ರಾಮ್, ಮೊಹಮ್ಮದ್ ಷಾಹ್ ಮತ್ತು ಓರ್ವ ಮಾರ್ಗದರ್ಶಕ – ಇವರ ಜೊತೆ ಆಫ್ರಿಡಿ ಬುಡಕಟ್ಟು ಪ್ರದೇಶಗಳ ಸರಹದ್ದು ಪ್ರಾಂತದತ್ತ ನಡೆದರು. ಅಲ್ಲಿನ ಹಾದಿ ದುರ್ಗಮವಾಗಿತ್ತು. ಹಿಮಾವೃತವಾದ್ದರಿಂದ ಸುಭಾಸರನ್ನು ಹೇಸರಗತ್ತೆಯ ಮೇಲೆ ಕೂರಿಸಲಾಯಿತು. ಪಾಪಕ್ಕೆ ಆ ಕತ್ತೆಯೂ ಎತ್ತಿಹಾಕಬೇಕೆ !

ನೋವನ್ನು ನುಂಗಿಕೊಂಡು ಹೇಗೋ ಪೆಷಾವರ್ –ಕಾಬೂಲ್ ಹೆದ್ದಾರಿಯ ಗಾರ್ಡಿ ಗ್ರಾಮ ಮುಟ್ಟಿದರು. ಆಫ್ಘಾನಿಸ್ಥಾನ ಮುಟ್ಟಿದ ಮೇಲೆ ತಮಗೇನೂ ಭಯವಿಲ್ಲವೆಂದು ಹೇಳಿ ಮೊಹಮ್ಮದ್ ಷಾಹ್‌ನನ್ನೂ ಮಾರ್ಗದರ್ಶಕನನ್ನೂ ಹಿಂದಕ್ಕೆ ಕಳುಹಿಸಿ ಭಗತ್ ಮತ್ತು ಸುಭಾಸ್ ತಮ್ಮ ಪಯಣ ಮುಂದುವರಿಸಿದರು. ಟೀ ಸೊಪ್ಪಿನ ಪೆಟ್ಟಿಗೆಯನ್ನು ತುಂಬಿದ್ದ ಟ್ರಕ್‌ನಲ್ಲಿ ಕುಳಿತು ಜನವರಿ ೨೮ರ ರಾತ್ರಿ ೧೦ಗಂಟೆಗೆ ಜಲಲಾಬಾದ್ ಮುಟ್ಟಿದರು. ಅಲ್ಲಿ ಎರಡು ದಿನ ತಂಗಿದ್ದು ಜನವರಿ ೩೧ರಂದು ಕಾಬೂಲ್ ಸೇರಿದರು. ಅಲ್ಲಿನ ಲಾಹೋರಿ ಗೇಟ್ ಸಮೀಪದ ಛತ್ರದಲ್ಲಿ ತಮ್ಮ ಕಿವುಡ–ಮೂಕ ಅಭಿನಯ ಮುಂದುವರಿಸಿದರು. ಆದರೆ ಅದರ ಬಗೆಗೆ ಅನುಮಾನಪಟ್ಟ ಅಫಘಾನ್ ಪೊಲೀಸನೊಬ್ಬ ಅವರಿಬ್ಬರ ಬೆನ್ನು ಹತ್ತಿದ. ಸುಭಾಸರಿಗೆ ಭಯ ಆಯಿತು. ವಸ್ತುಸ್ಥಿತಿ ಬಹಿರಂಗವಾದರೆ ಮತ್ತೆ ತಾನು ಸೆರೆಯಾಳು ! ಆಶಾಭಂಗ !! ಕೂಡಲೆ ತಮ್ಮ ಕೈಯಲ್ಲಿದ್ದ ಚಿನ್ನದ ಗಡಿಯಾರವನ್ನು ಆ ಪೊಲೀಸ್ ಪೇದೆಗೆ ತೆಗೆದುಕೊಟ್ಟರು. ಆ ಛತ್ರದಲ್ಲಿ ಅಪಾಯ ತಪ್ಪಿದ್ದಲ್ಲ ಎಂದರಿತ ಭಗತ್ ರಾಮ್ ಪೆಷಾವರ್‌ನಲ್ಲಿದ್ದ ತನ್ನ ಹಳೆಯ ಸ್ನೇಹಿತ ಉತ್ತಮ ಚಂದ್ ಮಲ್ಹೋತ್ರರನ್ನು ಪತ್ತೆಹಚ್ಚಿ, ಅವರ ನಿವಾಸದಲ್ಲಿ ಅಡಗಿದರು. ಮಲ್ಹೋತ್ರರ ನೆರವಿನಿಂದ ಇಟಲಿಯ ಸಚಿವ ಆಲ್ಬರ್ಟೋ ಖುರಾನಿ ಪರಿಚಯ ಆದ. ಅವರೊಡನೆ ಸುಭಾಸ್ ಮನತೆರೆದು ಮಾತನಾಡಿದರು. ಜರ್ಮನಿ ಮತು ಇಟಲಿ ಸೆರೆಮನೆಗಳಲ್ಲಿರುವ ಭಾರತೀಯ ಯುದ್ಧ ಕೈದಿಗಳಿಂದ ಒಂದು ಭಾರತೀಯ ವಿಮೋಚನಾ ಪಡೆಯನ್ನು ನಿರ್ಮಿಸುವ ತಮ್ಮ ಯೋಜನೆಯನ್ನು ಸುಭಾಸ್ ಖುರೋನಿಯವರ ಮುಂದಿಟ್ಟರು. ಕೇಳಿ ಹರ್ಷಿತರಾದ ಖುರೋನಿ ಅನುಕೂಲಕರ ವರದಿಯೊಂದನ್ನು ರೋಮಿಗೆ ಕಳುಹಿಸಿದರು. ಆ ಮೂಲಕ ಜರ್ಮನಿ ಮತ್ತು ಇಟಲಿಗಳ ನೆರವು ಸ್ಥಿರವಾಯಿತು.

ಸೋವಿಯತ್ ರಷ್ಯಾ ತಡವಾಗಿಯಾದರೂ ಸುಭಾಸರಿಗೆ ನೆರವಾಗಲು ಸಮ್ಮತಿಸಿತು. ತದನಂತರ ಸುಭಾಸ್ ಮೂಕ ಕಿವುಡ ಪಠಾಣ ವೇಷ ಬದಲಿಸಿ ಓರ್ವ ರಾಯಭಾರಿ ವೇಷ ಹಾಕಿಕೊಂಡು, ಇಟಲಿ ಸರ್ಕಾರದ ಒಂದು ಪಾಸ್‌ಪೋರ್ಟ್ ಬಳಸಿಕೊಂಡು, ಇಟಲಿಯ ಪ್ರತಿನಿಧಿ ಮಂಡಲಿಯ ಅರ್ಲಾಂಡೊ ಮಸ್ಸೊಟ್ಟಾ (Orland, Mazzotta) ಎಂಬ ಹೆಸರಿನ ಅಧಿಕಾರಿ ವೇಷಧರಿಸಿ ರಷ್ಯಾಕ್ಕೆ ಪ್ರಯಾಣಿಸಲು ವ್ಯವಸ್ಥೆ ಮಾಡಿಕೊಂಡರು. ಶ್ರೀಮತಿ ಖುರೋನಿಯವರು ಪಾಸ್‌ಪೋರ್ಟ್‌ನಲ್ಲಿದ್ದ ಮಸ್ಸೋಟ್ಟಾ ಭಾವಚಿತ್ರ ತೆಗೆದು ಸುಭಾಸರ ಭಾವಚಿತ್ರವನ್ನು ಅಂಟಿಸಿಕೊಟ್ಟರು. ಹೀಗೆ ಹಲವು ವೇಷಗಳನ್ನು ಧರಿಸಿ ಸುಭಾಸ್ ಮೂವರು ಜರ್ಮನರೊಂದಿಗೆ ಒಂದು ಕಾರಿನಲ್ಲಿ ಕುಳಿತು ಪ್ರಯಾಣಿಸಿದರು. ಮಾಸ್ಕೊ ಮಾರ್ಗವಾಗಿ ಮುಂದುವರಿಸಿ ೧೯೪೧ ಏಪ್ರಿಲ್ ೩ರಂದು ಬರ್ಲಿನ್ ತಲುಪಿದರು.

* * *

ಸಿಂಹ ಹೇಗೋ ಬೋನಿನಿಂದ ತಪ್ಪಿಸಿಕೊಂಡು ಬಂದದ್ದಾಯಿತು ! ಬಂದದ್ದು, ೧೯೪೧ದ ಜನವರಿ ೨೭ರಂದು ನಡೆಯಲಿದ್ದ ಕೋರ್ಟ್ ಮೊಕದ್ದಮೆಯಿಂದ ಪಾರಗಿ ತಲೆ ಮರೆಸಿಕೊಳ್ಳಲಲ್ಲ. ಇಟಲಿ, ಜರ್ಮನಿ, ಜಪಾನ್ ಮೊದಲಾದ ರಾಷ್ಟ್ರಗಳ ನೆರವು ಪಡೆಯಲು, ಸೂಕ್ತ ಸಂಧಾನ ಸಹಕಾರಗಳ ಮೂಲಕ ಸೇನೆ ಕಟ್ಟಲು ; ಕಟ್ಟಿದ ಸೇನೆಗೆ ಆಜ್ಞೆಯಿತ್ತು ನಲವತ್ತು ಕೋಟಿ ಭಾರತೀಯರನ್ನಾಳುತ್ತಿದ್ದ ಕೇವಲ ಇಪ್ಪತ್ತೈದು ಲಕ್ಷ ಬ್ರಿಟಿಷರನ್ನು ಸದೆಬಡಿದು ಭಾರತದಿಂದ ಒದ್ದೋಡಿಸಲು ! ಆದರೆ ಆ ಕಾರ್ಯ ಅಂದುಕೊಂಡಷ್ಟು ಸುಲಭವಾಗಿರಲಿಲ್ಲ. ಮುಖ್ಯವಾಗಿ ಅಂದಿನ ಪ್ರಪಂಚದ ಪ್ರಚಂಡ ಶಕ್ತಿಯಾಗಿದ್ದ ಜರ್ಮನಿಯ ಮನವೊಲಿಸಿವುದು ಬಹುಕಷ್ಟದ ಕೆಲಸವೇ ಆಗಿತ್ತು. ಹಿಟ್ಲರನಿಗೆ ಭಾರತೀಯ ಸ್ವಾತಂತ್ರ್ಯದ ಬಗೆಗೆ ಅನಾಸಕ್ತಿ ತುಂಬಿದ್ದರೆ, ನಾಝೀ ಧೋರಣೆಯ ಅವನ ಅಧಿಕಾರಿಗಳಲ್ಲಿ ಭಾರತದ ಜನಾಂಗೀಯ ಅಶ್ರದ್ಧೆ ಮನೆಮಾಡಿಕೊಂಡಿತ್ತು. ಪರಿಸ್ಥಿತಿ ಇಂತಿದ್ದರೂ, ಸುಭಾಸ್‌ಚಂದ್ರ ಬೋಸರ ಸಂಕಲ್ಪಶಕ್ತಿ, ದೃಢತೆ, ನ್ಯಾಯನಿಷ್ಠುರತೆ, ಪ್ರಾಮಾಣಿಕತೆ ಹಾಗೂ ಅವರ ಸ್ಫಟಿಕ ಪಾರದರ್ಶೀ ವ್ಯಕ್ತಿತ್ವ ಇವು ವಿಶೇಷ ಪ್ರಭಾವ ಬೀರಿದವು ಜರ್ಮನರಲ್ಲಿ, ಅದರಿಂದಾಗಿ ಸುಭಾಸರ ಆಸೆ ಹಣ್ಣಾಗಲು ಅವಕಾಶವಾಯಿತು. ಅವರಿಗೆ ಆ ದಿಸೆಯಲ್ಲಿ ನೆರವಾದವರು ಜರ್ಮನ್ ಸರ್ಕಾರದ ವಿದೇಶಾಂಗ ವಿಭಾಗದ ನಿರ್ದೇಶಕ ಆಡಮ್ ವಾನ್ ಟ್ರಾಟ್ (Adam Von Trott) ಮತ್ತು ಅವರ ಸಹಾಯಾಧಿಕಾರಿ ಅಲೆಗ್ಸಾಂಡರ್ ವರ್ತ್ (Alexander Werth). ಇವರಿಬ್ಬರೂ ಇಂಗ್ಲೆಂಡಿನಲ್ಲಿ ಉನ್ನತ ಶಿಕ್ಷಣ ಪಡೆದವರು. ಆ ದಿನಗಳಲ್ಲೇ ಬ್ರಿಟಿಷರ ಹಾಗೂ ಭಾರತೀಯರ ಮನೋಧರ್ಮವನ್ನು ಚೆನ್ನಾಗಿ ಅರಿತಿದ್ದವರು. ಅವರು ಸುಭಾಸರ ನೆಚ್ಚಿನ ನೇಹಿಗರಾದದ್ದಲ್ಲದೆ, ಜರ್ಮನ್ ಸರ್ಕಾರದಿಂದ ಹಲವು ಅನುಮತಿಗಳನ್ನು ಕೊಡಿಸಿದರು. ಮೊದಲನೆಯದಾಗಿ, ಹಿಂದೆ ಬ್ರಿಟಿಷರ ಪರವಾಗಿ ಯುದ್ಧಮಾಡಿ ಸೋತು, ಜರ್ಮನರಿಗೆ ಸೆರೆಯಾಳುಗಳಾಗಿದ್ದ ಸಹಸ್ರಾರು ಮಂದಿ ಭಾರತೀಯ ಕೈದಿಗಳು ಮತ್ತು ಉತ್ತರ ಆಫ್ರಿಕಾ ಮೊದಲಾದೆಡೆಗಳಿಂದ ಜರ್ಮನಿಗೆ ಬಂದು ಆಶ್ರಯ ಪಡೆದಿದ್ದ ಯುದ್ಧ ಕೈದಿಗಳು ಹಲವರು ಇವರೆಲ್ಲರನ್ನು ಬಂಧನದಿಂದ ಬಿಡುಗಡೆ ಮಾಡಿಸಿ ಸುಭಾಸ್ ನೂತನವಾಗಿ ನಿರ್ಮಿಸಬಯಸಿದ 'ಇಂಡಿಯನ್ ಲೀಜನ್' ಎಂಬ ಸೇನೆಯಲ್ಲಿ ಸೇರಿಸಲು ಸರ್ಕಾರವನ್ನು ಒಪ್ಪಿಸಿದ್ದು, ಎರಡನೆಯದಾಗಿ, ಯುರೋಪಿನ ಮೂರು ಕಡೆಗಳಲ್ಲಿ ಅಂದರೆ ಜರ್ಮನಿಯ ಮುಖ್ಯ ಪಟ್ಟಣ ಬರ್ಲಿನ್, ಇಟಲಿಯ ರೋಮ್ ಮತ್ತು ಫ್ರಾನ್ಸಿನ ಪ್ಯಾರಿಸ್ ನಗರಗಳಲ್ಲಿ ಸ್ಥಾಪಿತವಾಗಲಿದ್ದ ಸ್ವತಂತ್ರ ಭಾರತ ಕೇಂದ್ರ (Free India Centre) ನ ಖರ್ಚು ವೆಚ್ಚಗಳಿಗಾಗಿ ಅನುದಾನ ರೂಪದಲ್ಲಿ ಹಣ ಕೊಡಿಸುವ ವ್ಯವಸ್ಥೆ ಮಾಡಿಸಿದ್ದು. ಆದರೆ ಸುಭಾಸರಿಗೆ ಜರ್ಮನಿಯ ಭಿಕ್ಷೆ ಬೇಕಾಗಲಿಲ್ಲ. ಸಾಲವಾಗಿ ಪಡೆದರು, ಪಡೆದ

ಸಾಲವನ್ನು ಎರಡು ವರ್ಷಗಳ ನಂತರ ಅಂದರೆ ೧೯೪೪ರಲ್ಲಿ ದಕ್ಷಿಣ ಮತ್ತು ಆಗ್ನೇಯ ಏಷ್ಯಾದಲ್ಲಿದ್ದ ಭಾರತೀಯರು ಸಂಗ್ರಹಿಸಿಕೊಟ್ಟ ಐದುಲಕ್ಷ ಯೆನ್‌ಗಳ ಪೂರಾ ಮೊತ್ತವನ್ನು ಜರ್ಮನ್ ಸರ್ಕಾರಕ್ಕೆ ಪಾವತಿ ಮಾಡಿದರು.

ಈ ವಿವರಗಳೊಂದಿಗೆ ತಾವು ಬರ್ಲಿನ್‌ಗೆ ಬಂದ ಒಂದು ವಾರದಲ್ಲಿ ಅಂದರೆ ೧೯೪೧ ಏಪ್ರಿಲ್ ೯ರಲ್ಲಿ ಸುಭಾಸ್ ಜರ್ಮನ್ ಸರ್ಕಾರಕ್ಕೆ ಮನವಿ ಸಲ್ಲಿಸಿದರು. ಅದರಲ್ಲಿ ಭಾರತ–ಜರ್ಮನಿ ಸಹಕಾರ ನಿಬಂಧನೆಗಳನ್ನು ತಿಳಿಸಲಾಗಿತ್ತು. ಸ್ವತಂತ್ರ ಭಾರತ ಕೇಂದ್ರದ ಪರವಾಗಿ ಜರ್ಮನಿಯಲ್ಲಿ ಭಾರತದ ಒಂದು ಪ್ರತಿನಿಧಿ ಕಚೇರಿಯ ಸ್ಥಾಪನೆ, ಆಫಘಾನಿಸ್ತಾನ್ ಗಡಿಗಳಲ್ಲಿ ಮತ್ತಿತರ ದೇಶಗಳಲ್ಲಿ ಬ್ರಿಟಿಷರ ವಿರುದ್ಧ ನಡೆಯುವ ಹೋರಾಟಗಳಿಗೆ ಪ್ರೋತ್ಸಾಹ, ಭಾರತದ ಜನತೆಗೆ ಕಾಲಕಾಲಕ್ಕೆ ತಮ್ಮ ಸಂದೇಶ ಮುಟ್ಟಿಸಲು ರೇಡಿಯೊ ಬಳಕೆ – ಇವೇ ಮೊದಲಾದ ಅಂಶಗಳನ್ನು ಒಳಗೊಂಡಿತ್ತು ಆ ಮನವಿ. ಅದಕ್ಕೆ ಶೀಘ್ರ ಉತ್ತರ ಬರದಿರಲು ಮತ್ತೆ ಮೇ ೩ರಂದು ಮೊದಲ ಪತ್ರಕ್ಕೆ ಅನುಬಂಧವಾಗಿ ಮತ್ತೊಂದು ಪತ್ರ ಬರೆದರು.

ಸಮಸ್ತಕ್ಕೂ 'ಅಸ್ತು' ಎಂದಿತು ಜರ್ಮನ್ ಸರ್ಕಾರ. ಆ ಕೂಡಲೇ ಸುಭಾಸ್ ಕಾರ್ಯೋನ್ಮುಖರಾದರು, ಸಂಘಟನೆಗೆ ತೊಡಗಿದರು. ಸಮಾನ ಮನೋಧರ್ಮದ, ಸಮರ್ಪಣ ತ್ಯಾಗಬುದ್ಧಿಯ ಎನ್. ಜಿ, ಗಣಪುಲೆ, ಹಬೀಬ್–ಉರ್–ರಹಮಾನ್, ಎನ್. ಜಿ. ಸ್ವಾಮಿ, ಎಂ. ಆರ್. ವ್ಯಾಸ್, ಗಿರಿಜಾಮುಖರ್ಜಿ ಮೊದಲಾದ ಸ್ವಾತಂತ್ರ್ಯ ಪ್ರೇಮಿಗಳನ್ನು ಸಮಾವೇಶಗೊಳಿಸಿ, ಬರ್ಲಿನ್‌ನಲ್ಲಿ ಸ್ವತಂತ್ರ ಭಾರತ ಕೇಂದ್ರವನ್ನು ಅಧಿಕೃತವಾಗಿ ಸ್ಥಾಪಿಸಿದರು. ಜರ್ಮನಿಯಲ್ಲಿದ್ದ ಲಕ್ಷೋಪಲಕ್ಷ ಮಂದಿ ಭಾರತೀಯ ಕೈದಿಗಳನ್ನು ಅಲ್ಲಲ್ಲಿಗೆ ಹೋಗಿ ಭೇಟಿಮಾಡಿ, ಅವರ ಮನಸ್ಸನ್ನು ಒಲಿಸಿಕೊಂಡು ಅವರ ಹೃದಯದಲ್ಲಿ 'ನಾ ಭಾರತೀಯ ನಾ ಭಾರತೀಯ' ಎಂದೆಂಬ ತಾರಕಮಂತ್ರ ಸದಾ ಪ್ರತಿಧ್ವನಿಸುವಂತೆ ಮಾಡಿದರು. ಫ್ರಾನ್ಸ್, ಇಟಲಿ, ಬಲ್ಗೇರಿಯಾ, ಬೆಲ್ಜಿಯಂ, ಆಸ್ಟ್ರಿಯಾ, ಹಂಗೇರಿ, ಜೆಕೊಸ್ಲವಾಕಿಯಾ ಮೊದಲಾದೆಡೆಗಳಿಗೆ ಹೋಗಿ ಅಲ್ಲಿನ ಪ್ರಧಾನಿಗಳನ್ನೂ ಜರ್ಮನ್ ರಾಯಭಾರಿಗಳನ್ನೂ ಭೇಟಿಮಾಡಿ, ತಮ್ಮ ಭಾವೀ ಯುದ್ಧ ಯೋಜನೆಗೆ ಸೂಕ್ತ ಸಿದ್ಧತೆಗಳನ್ನೂ ಮಾಡಿಕೊಂಡರು. ಪ್ರಪಂಚದಲ್ಲಿ ಅತ್ಯಂತ ದಕ್ಷವೆನಿಸಿದ್ದ ಜರ್ಮನ್ ಸೇನಾ ಕೇಂದ್ರಗಳಲ್ಲಿ ಭಾರತೀಯ ಸೈನಿಕರಿಗೆ ಬೇಹುಗಾರಿಕೆ, ಪ್ಯಾರಾಶೂಟ್ ಬಳಕೆ ಮೊದಲಾದ ಸಮರತಂತ್ರ ಶಿಕ್ಷಣವೂ ಲಭಿಸಿತು. ಇವು ಸುಭಾಸರಿಗೆ ತಮ್ಮ ಕಾರ್ಯ ಯಶಸ್ಸಿನ ಭರವಸೆ ಮತ್ತು ತಮ್ಮ ದೇಶಪ್ರೇಮಿ ಸೈನಿಕರ ಬಗೆಗೆ ಆತ್ಮವಿಶ್ವಾಸ ಮೂಡಿಸಿದವು. 'ಅಜಾದ್ ಹಿಂದ್ ಸೇನೆ' ರೂಪುಗೊಂಡಿತು. !

೧೯೪೧ ನವೆಂಬರ್ ೨ರಂದು ಸ್ವತಂತ್ರ ಭಾರತ ಕೇಂದ್ರವು (Free India Centre) ಜರ್ಮನಿಯ ಮುಖ್ಯ ಪಟ್ಟಣ ಬರ್ಲಿನ್‌ನಲ್ಲಿ ಉದ್ಘಾಟಿತವಾಯಿತು. ಅಂದು ಅದರದೇ ಆದ ತ್ರಿವರ್ಣದ ರಾಷ್ಟ್ರಧ್ವಜ ಪಡೆಯಿತು. ಆ ತ್ರಿವರ್ಣ ಧ್ವಜದ ಮಧ್ಯದಲ್ಲಿ ನೆಗೆಯಲು ಸಿದ್ಧವಿರುವ ಹುಲಿಯ ಚಿತ್ರ ಸಮಾವೇಶಗೊಂಡಿತು. ವಂದನಾ ಸಂಕೇತವೆನಿಸಿದ 'ಜೈಹಿಂದ್'ನ ಆವಿಷ್ಕಾರವಾಯಿತು. ಅದು ಸ್ವತಂತ್ರ ಭಾರತ ಕೇಂದ್ರದ ಸಕಲ ಸದಸ್ಯರ ಶುಭಕಾಮನೆಯ ಸಂಕೇತವೂ ತಾರಕ ಮಂತ್ರ ಸ್ವರೂಪಿಯೂ ಆಯಿತು. 'ನಾಯಕವಾಣಿ ಸುಭಾಸ್ ಚಂದ್ರಬೋಸ್'ರಿಗೆ 'ನೇತಾಜಿ' ಎಂಬ ಅಭಿದಾನ ದೊರೆಯಿತು. ತಮ್ಮ ಸುಸಂಘಟಿತ ಕೇಂದ್ರ ಮತ್ತು ಸೇನೆಗಳಿಗಾಗಿ ವಿಶ್ವಕವಿ ರವೀಂದ್ರನಾಥ ಠಾಗೋರರ ರಚನೆ ರಾಷ್ಟ್ರಗೀತವಾಗಿ ಸ್ವೀಕೃತವಾಯಿತು. ಆ ಗೀತ ಹೀಗಿತ್ತು :

ಶುಭಸುಖ ಜೈನಕ ಬರಖಾ ಬರಸೇ ಭಾರತ ಭಾಗ ಹೈ ಜಾಗಾ
ಪಂಜಾಬ ಸಿಂಧು ಗುಜರಾತ ಮರಾಠಾ ದ್ರಾವಿಡ ಉತ್ಕಲ ವಂಗಾ
ಚಂಚಲ ಸಾಗರ ವಿಂಧ್ಯ ಹಿಮಾಚಲ ನೀಲಾ ಜಮುನಾ ಗಂಗಾ
ತೇರೇ ನಿತ ಗುಣ ಗಾಯೇ ತುಝುಸೇ ಜೀವನ ಪಾಯೇ
ಸಬತನ ಪಾಯೇ ಆಶಾ ॥
ಸೂರಜ್ ಬನಕರ್ ಜಗಪರ್ ಚಮಕೇ ಭಾರತ ನಾಮ ಶುಭಗಾ
ಜಯಹೋ ಜಯ ಹೋ ಜಯ ಹೋ, ಜಯಜಯ ಜಯ ಜಯ ಹೋ
ಭಾರತ ನಾಮ ಶುಭಗಾ ॥ ೧ ॥
ಸಬಕೇ ದಿಲಮೇ ಪ್ರೀತ ಬಸಾವೇ ತೇರೀ ಮೀಠೀ ವಾಣೀ
ಹರ ಸೂಬೇಕೇ ರಹನೇವಾಲೇ ಹರ್ ಮಜಹಬ್ ಕೇ ಪ್ರಾಣೀ
ಸಬ್ ಭೇದ ವ ಫರಕ್ ಮಿಟಾಕೇ ಸಬ್ ಗೋದಮೆ ತೇರೀ ಆಕೇ
ಗೂಂಥೇ ಪ್ರೇಮಕೀ ಮಾಲಾ
ಸೂರಜ್ ಬನಕರ್ ಜಗಪರ್ ಚಮಕೇ ಭಾರತ ನಾಮ ಶುಭಗಾ
ಜಯಹೋ ಜಯಹೋ ಜಯಹೋ ಜಯ ಜಯ ಜಯ ಜಯ ಹೋ
ಭಾರತ ನಾಮ ಶುಭಗಾ ॥ ೨ ॥
ಸುಬಹ್ ಸವೇರೇ ಪಂಖ ಮಖೇರೂ ತೇರೇ ಹೀ ಗುಣ ಗಾಯೇ

ಬಾಸ ಭರೀ ಭರಪೂರ್ ಹೋ ಅಯೇಂ ಜೀವನಮೇ ಋತು ಲಾಯೇ
ಸಬ್ ಮಿಲಕರ್ ಹಿಂದ್ ಪುಕಾರೇ ಜಯ ಆಜಾದ್ ಹಿಂದ್ ಕೇ ನಾರೇ
ಪ್ಯಾರಾ ದೇಶ ಹಮರಾ ॥
ಸೂರಜ್ ಬನಕರ್ ಜಗಪರ್ ಚಮಕೇ ಭಾರತ ನಾಮ ಶುಭಗಾ
ಜಯಹೋ ಜಯಹೋ ಜಯಹೋ, ಜಯ ಜಯ ಜಯ ಜಯ ಹೋ
ಭಾರತ ನಾಮ ಶುಭಗಾ ॥ ೩ ॥

* * *

ದ್ವಿತೀಯ ಜಾಗತಿಕ ಸಂಗ್ರಾಮವೆಂಬ ಭೀಕರ ಬಿರುಗಾಳಿ ಬೀಸುತ್ತಿದ್ದ ಕಾಲ ಅದು. ಅದು ನೇತಾಜಿಯವರ ಕಾರ್ಯಯೋಜನಾ ಹಡಗಿಗೆ ಪ್ರತಿಕೂಲವಾಗಲಿಲ್ಲ, ಅನುಕೂಲ ಪವನವೇ ಆಯಿತು. ಮೊದಲನೆಯ ಮಹಾಯುದ್ಧದಲ್ಲಿ ಸೋತು ವರ್ಸೇಲ್ಸ್ ಒಪ್ಪಂದಕ್ಕೆ ಸಹಿ ಹಾಕಿದ್ದ ಜರ್ಮನಿ ತನ್ನ ಅಪಮಾನದ ಸೇಡು ತೀರಿಸಿಕೊಳ್ಳಲು ಒಪ್ಪಂದವನ್ನು ಗಾಳಿಗೆ ತೂರಿಬಿಟ್ಟು, ೧೯೩೯ ಸೆಪ್ಟೆಂಬರ್ ೩ರಂದು ಇಂಗ್ಲೆಂಡ್ ಮತ್ತು ಫ್ರಾನ್ಸ್ ದೇಶಗಳ ವಿರುದ್ಧ ಯುದ್ಧ ಘೋಷಿಸಿತು. ಮೊದಲನೆಯ ಮಹಾಯುದ್ಧದಲ್ಲಿ ತಮಗೆ ಸರಿಯಾದ ಪ್ರತಿಫಲ ಸಿಗಲಿಲ್ಲವೆಂದು ಅತೃಪ್ತಿಗೊಂಡಿದ್ದ ಇಟಲಿ ಮತ್ತು ಜಪಾನ್ ದೇಶಗಳು ಜರ್ಮನಿಯ ಪಕ್ಷ ಸೇರಿ ಬ್ರಿಟನ್ನಿನ ವಿರುದ್ಧ ಹೋರಾಟಕ್ಕೆ ನಿಂತವು. ಮೊದಲ ಮಹಾಯುದ್ಧದಲ್ಲಿ ಇವೆರಡೂ ದೇಶಗಳು ಬ್ರಿಟನ್ನಿನ ಮಿತ್ರರಾಷ್ಟ್ರಗಳಾಗಿದ್ದವು, ಈಗ ಶತ್ರುರಾಷ್ಟ್ರಗಳಾದವು. ಆದರೆ ಮಹಾಮೇಧಾವಿ ಬ್ರಿಟನ್ನಿನ ಪ್ರಧಾನಿ ವಿನ್ಸಟನ್ ಚರ್ಚಿಲ್ ಜಾಣ್ಮೆಯಿಂದ ಅಮೇರಿಕೆಯ ಅಧ್ಯಕ್ಷ ರೂಸ್‌ವೆಲ್ಟ್‌ನ ನೆರವು ಪಡೆದ. ಅದೇ ವೇಳೆಗೆ ಸರಿಯಾಗಿ, ತಾತ್ಕಾಲಿಕವಾಗಿ ತಟಸ್ಥವಾಗಿದ್ದ ಅಂದಿಗೆ ಅಷ್ಟೇನೂ ಬಲಿಷ್ಠ ರಾಷ್ಟ್ರವೆನಿಸಿರದಿದ್ದ ಅಮೇರಿಕೆಯನ್ನು ಜಪಾನ್ ಕೆಣಕಿತು. ೧೯೪೧ ಡಿಸೆಂಬರ್ ೭ರಂದು ಅಮೇರಿಕೆಯ ಫೆಸಿಫಿಕ್ ನೌಕಾನೆಲೆಯಾಗಿದ್ದ ಹವಾಯ್ ದ್ವೀಪದ ಪರ್ಲ ಹಾರ್ಬರ್ ಮೇಲೆ ಜಪಾನ್ ಬಾಂಬ್ ದಾಳಿ ನಡೆಸಿತು. ಅದಾದ ಕೆಲವೇ ದಿನಗಳಲ್ಲಿ ಯುದ್ಧಾಗ್ನಿ ಕಾಳ್ಗಿಚ್ಚಿನಂತೆ ಹಬ್ಬಿ ಪ್ರಪಂಚವನ್ನೆಲ್ಲಾ ವ್ಯಾಪಿಸಿಕೊಂಡಿತು. ಒಂದಲ್ಲ ಒಂದು ಕಾರಣದಿಂದ ಪ್ರಪಂಚದ ರಾಷ್ಟ್ರಗಳು ತಮಗೆ ಮೆಚ್ಚಾದ ರಾಷ್ಟ್ರಗಳೊಂದಿಗೆ ಸೇರಿ ಯುದ್ಧ ಘೋಷಿಸಿದವು. ಇಂಗ್ಲೆಂಡ್, ಫ್ರಾನ್ಸ್, ರಷ್ಯಾ, ಅಮೇರಿಕಾ ಸಂಯುಕ್ತ ಸಂಸ್ಥಾನ, ಚೀನಾ, ಆಸ್ಟ್ರೇಲಿಯಾ ಮೊದಲಾದ ಇಪ್ಪತ್ತೆರಡಕ್ಕೂ ಹೆಚ್ಚು ಮಿತ್ರರಾಷ್ಟ್ರಗಳಿಗೂ, ಜರ್ಮನಿ, ಜಪಾನ್, ಇಟಲಿ ಮೊದಲಾದ ಅಕ್ಷ ರಾಷ್ಟ್ರಗಳಿಗೂ ಘೋರ ಸಂಗ್ರಾಮ ನಡೆಯತೊಡಗಿತು. ತುಂಬು ಮಹತ್ವಾಕಾಂಕ್ಷಿಗಳೂ ರಕ್ತಪಿಪಾಸುಗಳೂ ಆದ ಜರ್ಮನಿಯ ಹಿಟ್ಲರ್ ಮತ್ತು ಇಟಲಿಯ ಮುಸ್ಸೋಲಿನಿ ಇಬ್ಬರೂ ಅನುಕ್ರಮವಾಗಿ ತಮ್ಮ ನಾಝಿ ಮತ್ತು ಫಾಸಿಸ್ಟ್ ಪಡೆಗಳಿಗೆ ಹೋರಾಟಕ್ಕೆ ಆಜ್ಞೆ ಇತ್ತರು. ಮಿತ್ರರಾಷ್ಟ್ರಗಳೂ ಅದೇ ಪ್ರಮಾಣದಲ್ಲಿ ಸಜ್ಜಾದವು. ಜಪಾನ್ ಡಿಸೆಂಬರ್ ೧೯೪೧ರಂದು ಇಂಗ್ಲೆಂಡ್ ಮತ್ತು ಅಮೇರಿಕೆಗಳ ವಿರುದ್ಧ ನೇರವಾಗಿ ಯುದ್ಧ ಘೋಷಿಸಿ, ೧೯೪೨ ಫೆಬ್ರವರಿ ೧೫ರಂದು ಸಿಂಗಪುರವನ್ನು ಬ್ರಿಟಿಷರ ಕೈಯಿಂದ ಕಿತ್ತುಕೊಂಡಿತು ! ತೈವಾನ್, ಮಂಚೂರಿಯಾ, ಕೊರಿಯಾ ಹಾಗೂ ಚೀನಾದ ಬಹುಭಾಗಗಳನ್ನು ತನ್ನ ಅಧೀನಕ್ಕೆ ತೆಗೆದುಕೊಂಡಿತು. ಬ್ರಿಟಿಷರ ಹೆಮ್ಮೆಯ ನೌಕಾಪಡೆಗಳಾದ 'ಪ್ರಿನ್ಸ್ ಆಫ್ ವೇಲ್ಸ್' ಮತ್ತು 'ರಿಪಲ್ಸ್'ಗಳೂ ಮತ್ತು ಅವುಗಳಲ್ಲಿದ್ದ ಮೂರು ಸಾವಿರ ನೌಕಾಪಡೆಯವರೂ ಜಪಾನೀಯರ ವಿಮಾನ ದಾಳಿಯಿಂದಾಗಿ ಜಲಸಮಾಧಿಯಾದರು. 'ಪ್ರಿನ್ಸ್ ಆಫ್ ವೇಲ್ಸ್' ನಾಶಪಡಿಸಲು ಜಪಾನೀ 'ಆತ್ಮಾರ್ಪಣ ಪಡೆ'ಯವರ ಕೈಚಳಕ ಮತ್ತು ಸಾಹಸಗಳು ಮೆಚ್ಚುವಂಥವು. ಅವರು ಬಾಂಬ್ ತುಂಬಿದ್ದ ವಿಮಾನಗಳನ್ನು ಹಡಗಿನ ಹೊಗೆ ಕೊಳವಿಗಳೊಳಗೆ ನುಗ್ಗಿಸಿ ಹಡಗನ್ನು ಸ್ಫೋಟಿಸಿಬಿಟ್ಟರು ! ಫ್ರಾನ್ಸಿನ ಆಡಳಿತಕ್ಕೊಳಪಟ್ಟಿದ್ದ ಇಂಡೋಚೈನಾದ (ವಿಯೆಟ್ನಾಂ, ಲಾವೋಸ್ ಮತ್ತು ಕಾಂಬೋಡಿಯಾ ರಾಜ್ಯಗಳನ್ನು ಒಳಗೊಂಡ ಪ್ರದೇಶ) ಫ್ರೆಂಚ್ ಮತ್ತು ಡಚ್ಚರಿಗೆ ಸೇರಿದ್ದ ನೆದರ್‌ಲ್ಯಾಂಡ್ಸ್, ಈಸ್ಟ್ ಇಂಡೀಸ್‌ನ (ಈಗಿನ ಇಂಡೋನೇಷಿಯಾ ಪ್ರದೇಶ) ಡಚ್ ಸೇನೆಗಳೂ ಜಪಾನ್ ದಳಕ್ಕೆ ಶರಣಾದವು. ಮಲಯದ ರಾಜಧಾನಿ ಸಿಂಗಪುರದ ಕಟ್ಟಡಗಳ ಮೇಲೂ ಜಪಾನಿನ 'ಉದಯ ಸೂರ್ಯ' ಧ್ವಜ ಹಾರಾಡಿತು. ಬ್ರಿಟಿಷರ ಯೂನಿಯನ್ ಜಾಕ್ ಕೆಳಗಿಳಿದು ಹೇಳಹೆಸರಿಲ್ಲವಾಯಿತು ! ಅಲ್ಲಿ ಬ್ರಿಟಿಷರ ಪರವಾಗಿ ಜಪಾನ್ ವಿರುದ್ಧ ಯುದ್ಧಮಾಡಲು ಬಂದಿದ್ದ ಇಪ್ಪತ್ತುಸಾವಿರ ಭಾರತೀಯ ಸೈನಿಕರೂ ಯುದ್ಧಕೈದಿಗಳೂ ಜಪಾನಿನ ನಿಯಂತ್ರಣಕ್ಕೊಳಗಾದರು. ೧೯೪೨ ಫೆಬ್ರವರಿ ೧೭ರಂದು ಬ್ರಿಟಿಷ್ ಸರ್ಕಾರದ ಪ್ರತಿನಿಧಿ ಲೆಫ್ಟಿನೆಂಟ್ ಕರ್ನಲ್ ಹಂಟ್ ಭಾರತೀಯ ಯುದ್ಧಕೈದಿಗಳನ್ನು ಜಪಾನ್ ಸರ್ಕಾರದ ಪ್ರತಿನಿಧಿ ಮೇಜರ್ ಫುಜಿವಾರಾನಿಗೆ ಒಪ್ಪಿಸಿದ. ಫುಜಿವಾರಾ ಬ್ರಿಟಿಷ್ ಇಂಡಿಯನ್ ಬೆಟಾಲಿಯನ್ನಿನಲ್ಲಿ ಒಂದು ತುಕಡಿಯ ಕಮಾಂಡರ್ ಆಗಿದ್ದ. ಕ್ಯಾಪ್ಟನ್ ಮೋಹನ್ ಸಿಂಗ್‌ರವರ ವಶಕ್ಕೆ ಆ ಸೇನೆಯನ್ನು ಕೊಟ್ಟ. ಕ್ಯಾಪ್ಟನ್ ಸಿಂಗ್ ಬ್ರಿಟಿಷರ ಸೇನೆಯಲ್ಲಿದ್ದರೂ ತುಂಬು ರಾಷ್ಟ್ರಾಭಿಮಾನಿ ಮತ್ತು ಮಾನಸಿಕವಾಗಿ ಸ್ವಾತಂತ್ರ್ಯಪ್ರೇಮಿ. ಸೇನೆಯನ್ನು ತಮ್ಮ ವಶಕ್ಕೆ ತೆಗೆದುಕೊಂಡ ಕೂಡಲೇ ಹಿಂದಿಯಲ್ಲಿ ಭಾಷಣಮಾಡಿ, ಎಲ್ಲ ಸೈನಿಕರೂ ದಯಮಾಡಿ ಆಜಾದ್ ಹಿಂದ್ ಸೇನೆಗೆ ಬರಬೇಕೆಂದು ಮನವಿ ಮಾಡಿಕೊಂಡರು. ಸೇನೆ ಸಮ್ಮತಿಸಿತು.

ಸಿಂಗಪುರ ಜಪಾನಿಗಳ ಕೈವಶವಾದದ್ದು ಕೇಳಿ ನೇತಾಜಿಯವರಿಗೆ ಬಳ್ಳ ಹಾಲು ಕುಡಿದಷ್ಟು ಸಂತೋಷವಾಯಿತು. ಇನ್ನು ಯಾರಿಗೂ ಹೆದರುವ ಕಾರಣವಿಲ್ಲ ಎಂದಂದುಕೊಂಡು, ಅಂದಿನವರೆಗೂ ಆರ್ಲೆಂಡೊ ಮೆಟ್ಸುಟ್ಟಾ ಎಂಬ ಗುಪ್ತನಾಮದಲ್ಲಿ ಮೈಮರೆಸಿಕೊಂಡಿದ್ದ ಸುಭಾಸ್‌ಚಂದ್ರ ಬೋಸ್ ಪ್ರಪಂಚದೆದುರು ತಮ್ಮನ್ನು ತಾವು ಪ್ರಕಟಿಸಿಕೊಂಡರು. ೧೯೪೨ ಫೆಬ್ರವರಿ

೧೯ರಂದು ಬರ್ಲಿನ್‌ನಲ್ಲಿ ಸ್ಥಾಪಿಸಿಕೊಂಡಿದ್ದ ತಮ್ಮ ಆಜಾದ್ ಹಿಂದ್ ಆಕಾಶವಾಣಿಯ ಮೂಲಕ ತಮ್ಮ ಮೊತ್ತಮೊದಲ ಭಾಷಣ ಮಾಡಿದರು :

'ಮಿತ್ರರೇ,

ನಾನು, ನಾನು ನಿಮ್ಮ ನೆಚ್ಚಿನ ಸುಭಾಸ್‌ಚಂದ್ರ ಬೋಸ್ ! ಆಜಾದ್ ಹಿಂದ್ ರೇಡಿಯೊ ಮೂಲಕ ಮಾತನಾಡುತ್ತಿದ್ದೇನೆ.... ಕಳೆದ ಒಂದು ವರ್ಷದಿಂದ ಪ್ರಪಂಚದ ವಿದ್ಯಮಾನಗಳೆಲ್ಲವನ್ನೂ ಮೌನದಿಂದಲೇ ವೀಕ್ಷಿಸುತ್ತಿದ್ದ ನಾನು ಇಂದು ಮನತೆರೆದು ಮಾತನಾಡುತ್ತಿದ್ದೇನೆ. ಬ್ರಿಟಿಷ್ ದಮನಶಾಹಿಯಿಂದ ಸಿಂಗಪುರ ಬಿಡುಗಡೆ ಪಡೆದದ್ದು ಸಾಮ್ರಾಜ್ಯಶಾಹಿಯ ಅಂತ್ಯವನ್ನೂ ಭಾರತ ಇತಿಹಾಸದ ಹೊಸಯುಗದ ಉಷಃಕಾಲವನ್ನೂ ಸಾಂಕೇತಿಸುತ್ತದೆ ... ಭಾರತ ಮುಕ್ತವಾಗುವವರೆಗೆ ಬ್ರಿಟಿಷ್ ಸಾಮ್ರಾಜ್ಯದ ವಿರುದ್ಧ ನಾನು ಹೋರಾಡುತ್ತೇನೆ ಎಂಬ ಭರವಸೆಯನ್ನು ನಿಮಗೆ ಕೊಡುತ್ತಿದ್ದೇನೆ... ನಮ್ಮಂತೆಯೇ ಬ್ರಿಟಿಷರ ತುಳಿತಕ್ಕೆ ಸಿಕ್ಕಿ ನಜ್ಜುಗುಜ್ಜಾಗಿರುವ ಇತರ ದೇಶಗಳೊಡನೆ ನಾವು ಬ್ರಿಟಿಷ್ ಸಾಮ್ರಾಜ್ಯದ ವಿಸರ್ಜನೆಗೆ ಹಾರ್ದಿಕವಾಗಿ ಸಹಕರಿಸುತ್ತೇವೆ.'

– ಎಂದು ಅರ್ಥಪೂರ್ಣ ಭಾಷಣ ಮಾಡಿದರು.

ಬಹಳ ದಿನಗಳವರೆಗೆ ಸುಭಾಸರ ಸುಳಿವನ್ನೇ ತಿಳಿಯದಿದ್ದ, ಬಹುಶಃ ಅವರು ಸತ್ತೇಹೋದರೆಂದು ಭಾವಿಸಿದ್ದ ಬ್ರಿಟಿಷರಿಗೆ ಅಚ್ಚರಿ, ಆಕ್ರೋಶ ಎರಡೂ ಏಕಕಾಲದಲ್ಲಿ ಮೂಡಿದವು.

ಇಡೀ ಜರ್ಮನಿಯ ಭವಿಷ್ಯವನ್ನು ತನ್ನ ಹೆಗಲಮೇಲಿಟ್ಟುಕೊಂಡು ಬ್ರಿಟಿಷ್ ಮಿತ್ರರಾಷ್ಟ್ರಗಳೊಡನೆ ಹೋರಾಟಕ್ಕೆ ಸಡ್ಡುಹೊಡೆದು ನಿಂತ ಅಡಾಲ್ಫ್ ಹಿಟ್ಲರನ (Adolf Hitler) ಬಾಯಿಂದ ಭಾರತ ಸ್ವಾತಂತ್ರ್ಯಘೋಷಣೆ ಮಾಡಿಸುವ ಉದ್ದೇಶದಿಂದ ನೇತಾಜಿ ೨೬ ಮೇ ೧೯೪೨ರಂದು ಅವನನ್ನು ಭೇಟಿಮಾಡಿದರು. ಜರ್ಮನಿಯಿಂದ ಆರ್ಥಿಕ ಸಹಾಯಕ್ಕೆ ಮಿಗಿಲಾಗಿ ನೈತಿಕ ನೆರವು ನಿರೀಕ್ಷಿಸುತ್ತಿದ್ದ ನೇತಾಜಿ ತಮ್ಮ ಮನೋಗತವನ್ನು ಹಿಟ್ಲರನ ಮುಂದಿಟ್ಟಾಗ, ಅವನ ಪ್ರತಿಕ್ರಿಯೆ ಅಷ್ಟು ಆಶಾದಯಕವಾಗಿರಲಿಲ್ಲ.

'ನೋಡಿ ಸುಭಾಸ್, ಭಾರತ ಸ್ವಾತಂತ್ರ್ಯಕ್ಕೆ ದಿನಗಳು ಇನ್ನೂ ಬಲಿಯಬೇಕಾಗಿದೆ. ಕನಿಷ್ಠಪಕ್ಷ ನೂರೈವತ್ತು ವರ್ಷಗಳಾದರೂ ಬೇಕಾಗಬಹುದು !'

'ಕ್ಷಮಿಸಿ, ಭಾರತ ಕುರಿತ ವಿಮರ್ಶೆ, ವಿಶ್ಲೇಷಣೆ ನನಗೆ ಪ್ರಸ್ತುತ ಅಲ್ಲ. ನಾನು ತುಂಬು ಆಶಾವಾದಿ. ಈಗಿನ ಮಹಾಯುದ್ಧ ಮುಗಿದ ಮೇಲಾದರೂ ಜರ್ಮನಿಯು ಸ್ವಾತಂತ್ರ್ಯದ ಪರವಾಗಿ ನಿಲುವು ತಳೆಯುವುದೆಂದು ಇಂದು ಘೋಷಿಸಲು ಸಾಧ್ಯವೆ ?'

'ಅದು ಹೇಗೆ ಸಾಧ್ಯ ? ದಯವಿಟ್ಟು ಅಲ್ಲಿರುವ ಪ್ರಪಂಚದ ಭೂಪಟ ನೋಡಿ ! ಅಬ್ಬಾ, ಜರ್ಮನಿಯಿಂದ ಭಾರತ ಎಷ್ಟು ದೂರ ಇದೆ ! ಇಷ್ಟು ಅಂತರವಿರುವ ಭಾರತದ ಸ್ವಾತಂತ್ರ್ಯಾರ್ಹತೆಯ ಬಗೆಗೆ ಹೋಲಿಕೆ ಕೊಡುವುದರಲ್ಲಿ ಅರ್ಥವಿಲ್ಲ !'

'ಹೋಗಲಿ, ಆ ವಿಚಾರದಲ್ಲಿ ನಾನು ಬಲವಂತ ಮಾಡುವುದಿಲ್ಲ. ಆದರೆ ನಾನೀಗ ಪೂರ್ವ ಏಷ್ಯಾಕ್ಕೆ ಹೋಗಿ, ಅಲ್ಲಿ ಈಗಾಗಲೇ ರಾಸ್ ಬಿಹಾರಿಬೋಸ್, ಕ್ಯಾಪ್ಟನ್ ಮೋಹನ್ ಸಿಂಗ್ ಮೊದಲಾದ ಸ್ವಾತಂತ್ರ್ಯಪ್ರೇಮಿಗಳ ಸಂಘಟನೆಗಳಿಗೆ ಚಾಲನೆ ಕೊಡಬೇಕೆಂದಿದ್ದೇನೆ. ಇದರ ಬಗೆಗೆ ತಮ್ಮ ಅಭಿಪ್ರಾಯ ?'

'ಸ್ವಾಗತಾರ್ಹ, ಆಲೋಚನೆ ಅರ್ಥಪೂರ್ಣವಾದದ್ದು. ದಯವಿಟ್ಟು ಕಾರ್ಯೋನ್ಮುಖರಾಗಿ, ಜರ್ಮನಿ ತನ್ನಿಂದಾಗಬಹುದಾದ ಎಲ್ಲ ನೆರವನ್ನೂ ನೀಡಲು ಸಿದ್ಧವಿದೆ.'

ನೇತಾಜಿಯವರಿಗೆ ಇಷ್ಟು ಭರವಸೆ ಸಾಕಾಗಿತ್ತು. ಪಶ್ಚಿಮದಿಂದ ಪೂರ್ವಕ್ಕೆ ಅಂದರೆ ಜರ್ಮನಿಯಿಂದ ಜಪಾನಿಗೆ ಪಯಣ ಬೆಳೆಸಲು ಜರ್ಮನಿಯ ಸಹಾಯ ಸಹಕಾರಗಳು ಅನಿವಾರ್ಯವಾಗಿದ್ದವು ಸುಭಾಸರಿಗೆ. ಅವರು ತಮ್ಮ ಪಯಣವನ್ನು ಗುಟ್ಟಾಗಿ ನಡೆಸಬೇಕಾಗಿತ್ತು. ಎಲ್ಲಾದರೂ ಸುಳಿವು ಸಿಕ್ಕಿದ್ದಾದರೆ ಬ್ರಿಟಿಷರ ಬೋನಿಗೆ ಮತ್ತೆ ಬೀಳಬೇಕಾಗುತ್ತಿತ್ತು. ಅದರಿಂದಾಗಿ ಅವರು ಜರ್ಮನ್ ಜಲಾಂತರ್ಗಾಮಿ ನೌಕೆ (Submarine)ಯಲ್ಲಿ ಕುಳಿತು ಸಮುದ್ರದಲ್ಲಿ ಮುಳುಗಿ ಮುಂದುವರಿಯಬೇಕಿತ್ತು. ಹಗಲೆಲ್ಲಾ ಸಮುದ್ರಗರ್ಭದಲ್ಲೇ ಪಯಣಿಸಿ, ರಾತ್ರಿವೇಳೆ ಮಾತ್ರ ಸಮುದ್ರದ ಮೇಲ್ಭಾಗಕ್ಕೆ ಬಂದು ಇಂಧನ ತುಂಬಿಸಿಕೊಂಡು ಮತ್ತೆ ಮುಳುಗಿ ಪಯಣ ಮುಂದುವರಿಸಬೇಕಿತ್ತು. ಆ ವೇಳೆಯಲ್ಲಿ ಜರ್ಮನಿಯ ನಿಯಂತ್ರಣದಲ್ಲಿರುವ ಜಲಭಾಗದಲ್ಲಿ ಯಾವ ಅಪಾಯವೂ ಇರದು. ಆದರೆ ಅದನ್ನು ದಾಟಿ ಮುಂದುವರಿದಾಗ ರಕ್ಷಣೆಯ ಭರವಸೆ ಇಲ್ಲ. ಯಾವಾಗ ಬೇಕಾದರೂ ಅದು ಶತ್ರುಗಳ ನೌಕಾಸೈನ್ಯ ಅಥವಾ ವಾಯುಸೇನೆಗಳ ಕೈಗೆ ಸಿಕ್ಕು ಹತವಾಗುವ ಅಪಾಯವಿತ್ತು. ಇಂತಹ ಸಾಹಸಯಾತ್ರೆಯನ್ನು ಸ್ವೀಕರಿಸಿದರು ನೇತಾಜಿ. ೧೯೪೩ ಫೆಬ್ರವರಿ ೮ರಂದು ಅಬೀಬ್ ಹಸನ್ ಜೊತೆ ಜರ್ಮನಿಯ ಕೀಲ್ ಬಂದರಿಗೆ ಬಂದರು. ಅಲ್ಲಿ ಅವರನ್ನು ವಿದೇಶೀ ಕಚೇರಿಯ ಕಾರ್ಯದರ್ಶಿ ಕೆಪ್ಲರ್, ನಂಬಿಯಾರ್ ಮತ್ತು ವರ್ತ್‌ರವರು ಸ್ವಾಗತಿಸಿದರು.

ಅಜ್ಞಾತರೂಪದ ತಮ್ಮ ಎರಡನೆಯ ಸಾಹಸಯಾತ್ರೆಯನ್ನು ಕೈಕೊಂಡ ನೇತಾಜಿಯವರು ಹಸನ್ ಜೊತೆ ಫೆಬ್ರವರಿ ೯ರಂದು ನಸುಕಿನಲ್ಲೇ ಜಲಾಂತರ್ಗಾಮಿ ನೌಕೆಯನ್ನು ಪ್ರವೇಶಿಸಿದರು. ಪ್ರವೇಶಿಸಿದ ಕೂಡಲೇ ನೌಕೆಯ ಬಾಗಿಲು ಮುಚ್ಚಿಕೊಂಡಿತು. ಅನಂತರ ನೌಕೆ ಸಮುದ್ರಗರ್ಭದಲ್ಲಿಳಿದು ಅದೃಶ್ಯವಾಯಿತು. ಡೇನಿಷ್ ಸಮುದ್ರ, ನಾರ್ವೇಜಿಯನ್ ಕರಾವಳಿ ಹಾಗೂ ಉತ್ತರ ಸಮುದ್ರವನ್ನು ದಾಟಿ ಅಟ್ಲಾಂಟಿಕ್ ಸಾಗರವನ್ನು ಸೇರಿತು. ಅಲ್ಲಿಂದ ಮುಂದಿನ ಪಯಣ ತುಂಬಾ

ಅಪಾಯಕಾರಿಯಗಿತ್ತು. ಒಂದು ದಿನ ನೌಕೆಯ ಕಂಟ್ರೋಲ್ ವಿಭಾಗದ ಕೆಲಸದವನು ಮಾಡಿದ ತಪ್ಪಿನಿಂದಾಗಿ ನೌಕೆ ಸಮುದ್ರದ ಮೇಲೆ ಬರಬೇಕಾಯಿತು, ಬಂತು. ಆಗ ಶತ್ರುಪಕ್ಷದ ಒಂದು ಹಡಗಿನ ಕ್ಯಾಪ್ಟನ್ ಅದನ್ನು ನೋಡಿದ. ಕೂಡಲೇ ಆ ಪುಟ್ಟನೌಕೆಯ ಮೇಲೆ ಹಲ್ಲೆ ನಡೆಸಲು ತನ್ನವರಿಗೆ ಆಜ್ಞೆಮಾಡಿದ. ರಭಸದಿಂದ ಹಡಗು ಆ ಕಡೆಗೆ ಧಾವಿಸಿ ಬರತೊಡಗಿತು. ಇನ್ನೇನು ಡಿಕ್ಕಿ ಹೊಡೆಯಿತು ಎನ್ನುವಷ್ಟರಲ್ಲಿ ನೇತಾಜಿಯವರ ಜಲಾಂತರ್ಗಾಮಿ ನೌಕೆ ಹಡಗನ್ನು ನೂಕಿ ಸಮುದ್ರಗರ್ಭ ಸೇರಿತು.

ಇಂತಹ ಸಾಹಸಯಾತ್ರೆ ಅಟ್ಲಾಂಟಿಕ್ ಸಾಗರದಲ್ಲಿ ಮುಂದುವರಿದು ಗುಡ್‌ಹೋಪ್ ಭೂಶಿರವನ್ನು ಸುತ್ತಿಕೊಂಡು ಏಪ್ರಿಲ್ ತಿಂಗಳ ಎರಡನೆಯ ವಾರದಲ್ಲಿ ಹಿಂದೂಮಹಾಸಾಗರ ಸೇರಿತು. ಮೊದಲೇ ಗೊತ್ತುಪಡಿಸಿದ್ದಂತೆ ಮಡಗಾಸ್ಕರ್‌ನಿಂದ ನಾಲ್ಕು ನೂರು 'ಸಾಗರ ಮೈಲಿಗಳ' ದೂರದಲ್ಲಿದ್ದ ಮೊಜಾಂಬಿಕ್ ಕಾಲುವೆಯಲ್ಲಿನ ಸಂಕೇತ ಸ್ಥಳ ಮುಟ್ಟಿತು. ಅಲ್ಲಿ ಇವರಿಗಾಗಿ ಕಾಯುತ್ತಿದ್ದ ಜಪಾನೀ ನೌಕೆ ೧–೨೯ ಪೆನಾಂಗ್‌ನಿಂದ ಬಂದು ನಿಂತಿತ್ತು. ಆದರೆ ಕತ್ತಲು ದಟ್ಟವಾಗಿದ್ದುದರಿಂದಲೂ ಸಮುದ್ರವು ತುಂಬಾ ಸಂಕ್ಷುಬ್ಧಗೊಂಡಿದ್ದರಿಂದಲೂ ಎರಡೂ ನೌಕೆಗಳು ಪರಸ್ಪರ ಸಮೀಪಿಸಲು ಸಾಧ್ಯವಾಗಲಿಲ್ಲ. ಬೆಳಗಾದಾಗಲೂ ಸಮುದ್ರದ ಕೋಪ ಇಳಿದಿರಲಿಲ್ಲ. ಆ ವೇಳೆಯಲ್ಲಿ ಇಬ್ಬರು ವ್ಯಕ್ತಿಗಳು ಧೈರ್ಯಮಾಡಿ ಜರ್ಮನ್ ನೌಕೆಯಿಂದ ಸಮುದ್ರಕ್ಕೆ ಹಾರಿ ಜಪಾನ್ ನೌಕೆಯತ್ತ ಈಜಿ, ರಬ್ಬರ್ ತೆಪ್ಪದ ಮೇಲೆ ಕುಳಿತು, ಹಗ್ಗವನ್ನು ನೌಕೆಯ ಮೇಲೆಸೆದು ಸುಭಾಸ್ ಮತ್ತು ಹಸನ್‌ರಿಬ್ಬರೂ ಆ ಹಗ್ಗವನ್ನು ಹಿಡಿದು ಜೋತಾಡುತ್ತಲೇ ತೆಪ್ಪದೆಡೆಗೆ ಸಾಗಲು ನಿರ್ದೇಶಿಸಿದರು. ನಿರ್ದೇಶನದಂತೆ ಅವರಿಬ್ಬರೂ ಸರ್ಕಸ್ ಮಾಡುತ್ತಾ, ರುದ್ರತಾಂಡವ ನಡೆಸುತ್ತಿದ್ದ ಸಮುದ್ರದ ನರ್ತನವನ್ನು ವೀಕ್ಷಿಸುತ್ತಾ, ಬಹು ಪ್ರಯಾಸದಿಂದ ಆ ಅಪಾಯಕಾರಿ ನೂಲುಹಾದಿ ಮುಗಿಸಿ ಜಪಾನ್ ನೌಕೆ ಸೇರಿದರು.

ರಕ್ಷೆಯ ನೌಕೆಯಾದರೂ ಸಮದ್ರಯಾನ ಸುರಕ್ಷಿತವಾಗಿರಲಿಲ್ಲ. ಮಾರ್ಗಮಧ್ಯದಲ್ಲಿ ಯಾವ ಘಳಿಗೆಯಲ್ಲಾದರೂ ಶತ್ರುಗಳಿಗೆ ಸೆರೆಯಾಳಾಗುವ ಅಪಾಯವಿತ್ತು. ಆದ್ದರಿಂದಲೇ ನೇತಾಜಿ ಮತ್ತೆ ತಮ್ಮ ವೇಷ ಬದಲಿಸಿಕೊಂಡು, 'ಮತ್ಸುದಾ' ಎಂಬ ಮಾರುಹೆಸರಿನಲ್ಲಿ ಯಾನ ಮುಂದುವರಿಸಿದರು. ಕೆಲವು ದಿನಗಳಲ್ಲಿ ಸಬಾನಾ ದ್ವೀಪವನ್ನು ಮುಟ್ಟಿದರು. ಅಲ್ಲಿ ಅವರನ್ನು, ಹಿಂದೆ ಬರ್ಲಿನ್‌ನಲ್ಲಿದ್ದ ಜಪಾನೀ ರಾಯಭಾರ ಪ್ರತಿನಿಧಿ ಕರ್ನಲ್ ಸತೋಶಿ ಯಮಮೋಟೋ (Satoshi Yamamoto) ಸ್ವಾಗತಿಸಿ ಗೌರವಿಸಿದರು. ನೇತಾಜಿ ಮೇ೧೧ರಂದು ವಿಮಾನವೇರಿ ಪೆನಾಂಗ್, ಸೈಗನ್, ಮನಿಲಾ, ಟಾಯ್ ಪೆ, ಹಮಮತ್ಸು ಮಾರ್ಗವಾಗಿ ಮೇ ೧೬ರಂದು ಟೋಕಿಯೋ ಸೇರಿದರು. ಅಲ್ಲಿ ಅವರಿಗಾಗಿ ಕಾಯ್ದಿರಿಸಿದ್ದ ಜಗತ್ಪ್ರಸಿದ್ಧ ಇಂಪೀರಿಯಲ್ ಹೋಟೆಲ್‌ನಲ್ಲಿ ತಂಗಿದರು.

ಟೋಕಿಯೋದಲ್ಲಿ ಬೋಸ್‌ದ್ವಯರ ಪರಸ್ಪರ ಭೇಟಿಯಾಯಿತು. ಒಬ್ಬರು ಸುಭಾಸ್ ಚಂದ್ರಬೋಸ್ ಮತ್ತೊಬ್ಬರು ರಾಸ್ ಬಿಹಾರಿಬೋಸ್. ಒಬ್ಬರು ಜರ್ಮನಿಯಲ್ಲಿದ್ದುಕೊಂಡು ಹಲವು ರಾಷ್ಟ್ರಗಳ ಒಲವು ಬೆಂಬಲಗಳನ್ನು ಪಡೆದುಕೊಂಡು ಸ್ವಾತಂತ್ರ್ಯಾಪೇಕ್ಷಿಗಳ ಹೃದಯಗಳನ್ನು ಕಟ್ಟಿದವರು, ಇನ್ನೊಬ್ಬರು ಜಪಾನಿನಲ್ಲಿದ್ದುಕೊಂಡು ಇಂಡಿಯನ್ ಇಂಡಿಪೆಂಡೆನ್ಸ್ ಲೀಗ್‌ನ ಸಂಸ್ಥಾಪಕರಾಗಿ, ಕ್ಯಾಪ್ಟನ್ ಮೋಹನ್ ಸಿಂಗ್‌ರವರ ಜೊತೆಯಲ್ಲಿ ಆಜಾದ್ ಹಿಂದ್ ಸೇನೆ ಅಥವಾ ಐ.ಎನ್.ಎ. (ಇಂಡಿಯನ್ ನ್ಯಾಷನಲ್ ಆರ್ಮಿ)ಯ ಸಂಘಟಕರಾಗಿದ್ದವರು. ಇಬ್ಬರೂ ತಾಯ್ನಾಡಿನ ವಿಮೋಚನೆಯನ್ನೇ ತಮ್ಮ ಬಾಲ್ಯದ ದಿನಗಳಿಂದಲೂ ತಲೆಗೆ ಹಚ್ಚಿಕೊಂಡಿದ್ದರು. ತಮ್ಮ ಜೀವಿತವನ್ನೇ ಅದಕ್ಕಾಗಿ ಮುಡುಪಾಗಿಟ್ಟಿದ್ದವರು. ಇಬ್ಬರೂ ಟೋಕಿಯೋದ ಇಂಪೀರಿಯಲ್ ಹೋಟೆಲ್‌ನಲ್ಲಿ ಭೇಟಿಯಾದರು. ಭಾವಪರವಶರಾಗಿ ಇಬ್ಬರೂ ಪರಸ್ಪರ ಆಲಂಗಿಸಿಕೊಂಡರು. ಅದು ಎರಡು ಕುಲಪರ್ವತಗಳು ಸಂಧಿಸಿದಂತಿತ್ತು ! ಭಾವಾವೇಶದಿಂದ ಇಬ್ಬರ ಕಂಠಗಳೂ ಕಟ್ಟಿ ಮಾತು ಬರಲಿಲ್ಲ. ಇಬ್ಬರ ಕಣ್ಣುಗಳಲ್ಲೂ ಆನಂದಬಾಷ್ಪವಷ್ಟೇ ಸುರಿಯುತ್ತಿತ್ತು. ತುಸು ಕಾಲ ಕಳೆದ ಮೇಲೆ ಮೌನ ಮಾತಾಡಿತು. ಇಬ್ಬರೂ ತಮ್ಮ ಮಾತೃಭಾಷೆ ಬಂಗಾಳಿಯಲ್ಲಿ ಬಹಳ ಹೊತ್ತು ಮಾತನಾಡಿದರು.

ಯಮಮೋಟೋ ರಾಸ್ ಬಿಹಾರಿ ಬೋಸರ ಪೂರ್ವಾಶ್ರಮದ ಕಿರುಪರಿಚಯ ಮಾಡಿಕೊಟ್ಟರು ಸುಭಾಸರಿಗೆ. ರಾಸ್ ಬಿಹಾರಿಯವರು ನೇತಾಜಿಯವರಂತೆ ಪ್ರಚಂಡ ಸಾಹಸಿ, ಅಸಾಧಾರಣ ರಾಷ್ಟ್ರಪ್ರೇಮಿ, ಸ್ವಾತಂತ್ರ್ಯಾಭಿಲಾಷಿ ಕೂಡ. ೧೯೧೨ರಲ್ಲಿ ದೆಹಲಿಯ ಚಾಂದನಿ ಚೌಕ್ ಬಳಿ ಬರುತ್ತಿದ್ದ ವೈಸ್‌ರಾಯ್ ಹಾರ್ಡಿಂಗ್‌ನ ಮೆರವಣಿಗೆ ಮೇಲೆ ಕೈಬಾಂಬ್ ಎಸೆದು, ಪೊಲೀಸರಿಗೆ ಚಳ್ಳೆಹಣ್ಣು ತಿನ್ನಿಸಿದ್ದರು. ಮೊದಲನೆಯ ಮಹಾಯುದ್ಧ ಸಂದರ್ಭದಲ್ಲಿ ಸರ್ಕಾರದ ವಿರುದ್ಧ ಭಾರತೀಯ ಸೇನೆಯಲ್ಲಿ ಬಂಡಾಯವನ್ನೆಬ್ಬಿಸಲು ಯತ್ನಿಸಿದ್ದವರು. ಸ್ವಾತಂತ್ರ್ಯ ಹೋರಾಟಕ್ಕಾಗಿ ಜರ್ಮನಿಯಿಂದ ಶಸ್ತ್ರಾಸ್ತ್ರಗಳನ್ನು ತರಿಸಿಕೊಂಡವರು. ಆದರೆ ಹೇಗೋ ಗುಟ್ಟು ರಟ್ಟಾಗಿ ಹಡಗು ಬ್ರಿಟಿಷರ ವಶವಾಯಿತು. ಅದರಿಂದಾಗಿ 'ಠಾಕೂರ್' ಎಂಬ ಗುಪ್ತ ಹೆಸರನ್ನಿಟ್ಟುಕೊಂಡು ಮಾರುವೇಷದಲ್ಲಿ ಜಪಾನಿಗೆ ಬಂದು ನೆಲೆಸಿದವರು. ಅಲ್ಲಿಯೂ ಜಪಾನಿನ ಪೌರತ್ವ ಸಿಗುವವರೆಗೂ ತಲೆಮರೆಸಿಕೊಂಡೇ ಇದ್ದವರು. ಎರಡನೆಯ ಮಹಾಯುದ್ಧವು ಉಪಕ್ರಮವಾದೊಡನೆಯೇ ಬ್ರಿಟಿಷರ ವಿರುದ್ಧ ಹೋರಾಟ ನಡೆಸಲು ಆಗ್ನೇಯ ಏಷ್ಯಾದೇಶಗಳಲ್ಲಿದ್ದ ಭಾರತೀಯರನ್ನು ಸಂಪರ್ಕಿಸಿ, ಅವರನ್ನು ಸಂಘಟಿಸತೊಡಗಿದರು. ತಮ್ಮ ಜೊತೆ ಬಾಬಾ ಅಮರಸಿಂಗ್, ಗ್ಯಾನಿ ಪ್ರೀತಮ್ ಸಿಂಗ್ ಮೊದಲಾದ ದೇಶಪ್ರೇಮಿಗಳನ್ನು ಸೇರಿಸಿಕೊಂಡು ಬಾಂಕಾಕ್‌ನಲ್ಲಿ ೧೯೪೧

ಡಿಸೆಂಬರ್ ೯ರಂದು 'ಇಂಡಿಯನ್ ಇಂಡಿಪೆಂಡೆನ್ಸ್ ಲೀಗ್' ಅನ್ನು ಸ್ಥಾಪಿಸಿದವರು ಮತ್ತು ೧೫. ೫. ೧೯೪೨ರಲ್ಲಿ ಲೀಗ್‌ನ ಸಮಾವೇಶದ ಅಧ್ಯಕ್ಷರೂ ಆಗಿದ್ದವರು.

ಮುಂದಿನ ಕಾರ್ಯಯೋಜನೆಗಳ ಬಗೆಗೆ ಚರ್ಚೆ, ಅಭಿಪ್ರಾಯ ವಿನಿಮಯಗಳು ಮುಂದುವರಿದವು. ಆ ಮಧ್ಯೆ ಕರ್ನಲ್ ಇವಕುರೊ (Col. Iwakuro) ರವರು ಎದ್ದು ನಿಂತು,

'ಇದೇ ಸಂದರ್ಭದಲ್ಲಿ ನಾನೊಂದು ಅಭಿಪ್ರಾಯವನ್ನು ತಮ್ಮ ಮುಂದಿಡಲು ಇಚ್ಛಿಸುತ್ತೇನೆ. ದಯವಿಟ್ಟು ಯಾರೂ ಅನ್ಯಥಾ ಭಾವಿಸಬಾರದಾಗಿ ವಿನಂತಿ' ಎಂದು ಪೀಠಿಕೆ ಹಾಕಿ, 'ಬೇರೇನೂ ಅಲ್ಲ, ರಾಸ್ ಬಿಹಾರಿಯವರು ಸುಮಾರು ವರ್ಷಗಳಿಂದ ಜಪಾನಿನಲ್ಲೇ ನೆಲೆಸಿರುವವರು. ಭಾರತದ ಯುವಪೀಳಿಗೆಗೆ ಇವರ ಪರಿಚಯ ಅಷ್ಟಾಗಿ ಇರಲಾರದು. ಆದರೆ ಸುಭಾಸ್‌ಚಂದ್ರ ಬೋಸರು ಜಗತ್ತೇ ಅರಿತ ವಿಶ್ವಮಾನವರಾಗಿದ್ದಾರೆ. ಆದ್ದರಿಂದ ನೇತಾಜಿಯವರು ನಮ್ಮ ನಾಯಕರಾಗಿ, ನಮ್ಮ ಸಮಗ್ರ ಹೋರಾಟದ ಚುಕ್ಕಾಣಿ ಹಿಡಿದರೆ ಒಳ್ಳೆಯದು ಎಂಬುದು ನನ್ನ ಅಭಿಪ್ರಾಯ' ಎಂದರು.

ಕೂಡಲೇ ರಾಸ್ ಬಿಹಾರಿ ಬೋಸ್‌ರವರು ಚಪ್ಪಾಳೆ ತಟ್ಟಿ ಅತ್ಯಂತ ಹರ್ಷದಿಂದ ನುಡಿದರು ;

'ತುಂಬಾ ಒಳ್ಳೆಯ ಸಲಹೆ. ಸುಭಾಸ್ ಜನ್ಮಜಾತ ನಾಯಕ. ಈತನ ನಾಯಕತ್ವವನ್ನು ನಾನು ಸಂತೋಷದಿಂದ ಸ್ವಾಗತಿಸುತ್ತೇನೆ. ಇಂದು ಈ ಘಳಿಗೆಯಲ್ಲೇ ಲೀಗ್‌ನ ಸಮಸ್ತ ಒಡೆತನವನ್ನೂ ಸುಭಾಸರಿಗೆ ವಹಿಸಿಕೊಟ್ಟು ಇವರ ನಿರ್ದೇಶನದಂತೆ ಸಕಲವೂ ನಡೆಯಲಿ ಎಂದು ಆಶಿಸುತ್ತೇನೆ. ಇವರು ಕೈಗೆತ್ತಿಕೊಂಡ ಭಾರತ ಸ್ವಾತಂತ್ರ್ಯೋದ್ಯಮದಲ್ಲಿ ನಾನು ಮತ್ತು ನನ್ನಂತೆ ಎಲ್ಲರೂ ಸಮಭಾಗಿಗಳು. ನೇತಾಜಿ ಐ.ಎನ್.ಎ. ನಾಯಕರಷ್ಟೇ ಅಲ್ಲ, ಇಡೀ ಪೂರ್ವ ಏಷ್ಯಾದ ಜನತೆಯ ಉದ್ಧಾರಕ. ಇವರು ಪವಿತ್ರ ಮಾತೃಭೂಮಿಯ ಅತ್ಯಮೋಘಶಕ್ತಿ. ಇವರು ನಮಗೆ ದಾರಿ ತೋರಲಿ.'

ಸಭೆಗೆ ಸಭೆಯೇ ಹರ್ಷೋದ್ಗಾರ ಮಾಡಿತು.

ಅನಂತರ ನೇತಾಜಿಯವರು ಎದ್ದು ನಿಂತು, ಸಭೆಗೆ ತಮ್ಮ ಹೃತ್ಪೂರ್ವಕ ವಂದನೆಗಳನ್ನು ಹೇಳಿ, ರಾಸ್ ಬಿಹಾರಿಯವರ ತ್ಯಾಗ, ಸೇವೆ, ಸಾಹಸ, ಧೈರ್ಯೋತ್ಸಾಹಗಳನ್ನು ಕೊಂಡಾಡಿ, ಪಕ್ವಾನುಭವಿಗಳಾದ ಅವರ ಮಾರ್ಗದರ್ಶನ ನಿರಂತರವಾಗಿ ತಮಗೆಲ್ಲರಿಗೂ ಇರಬೇಕೆಂದು ಆಶಿಸಿ, ಸುದೀರ್ಘವಾದ ಭಾಷಣ ಮಾಡಿದರು.

ಮಿತ್ರರೆ, ನೀವು ನನ್ನಲ್ಲಿ ಇಟ್ಟಿರುವ ನಂಬಿಕೆ, ವಿಶ್ವಾಸ, ಭರವಸೆಗಳಿಗಾಗಿ ನಾನು ನಿಮ್ಮನ್ನು ಆತ್ಮೀಯವಾಗಿ ಅಭಿನಂದಿಸುತ್ತೇನೆ. ನಮ್ಮ ನಿಜವಾದ ಕಾರ್ಯ ಇಂದಿನಿಂದ ಆರಂಭವಾಗಬೇಕಾಗಿದೆ. ದೇಶಸ್ವಾತಂತ್ರ್ಯವೆಂಬ ಮಹೋದ್ದೇಶಕ್ಕಾಗಿ ನಮ್ಮ ರಕ್ತ ಚೆಲ್ಲಿದಾಗ ಮಾತ್ರ ನಾವು ಸ್ವಾತಂತ್ರ್ಯದ ಬೆಲೆ ತೆತ್ತಂತಾಗುತ್ತದೆ. ಸ್ವಪ್ರಯತ್ನ ಹಾಗೂ ತ್ಯಾಗ ಬಲಿದಾನಗಳಿಂದ ಗಳಿಸಿದ ಸ್ವಾತಂತ್ರ್ಯ ಚಿರಾಯುವಾಗುತ್ತದೆ. ಇದೇ ಸಂದರ್ಭದಲ್ಲಿ ನಾವೊಂದು ಎಚ್ಚರಿಕೆಯನ್ನು ತಳೆಯಬೇಕಾಗುತ್ತದೆ. ಯಾವ ಕಾರಣಕ್ಕೂ ನಾವು ಶತ್ರುವನ್ನು ಕಡೆಗಣಿಸಬಾರದು. ಕಿಡಿ ಸಣ್ಣದಿದ್ದರೂ ಗಾಳಿಯ ಸಹಾಯ ಸಿಕ್ಕರೆ ಅದು ಕಾಡನ್ನೆಲ್ಲಾ ದಹಿಸಿಬಿಡುತ್ತದೆ. ಆದ್ದರಿಂದ ನಮ್ಮ ಎಚ್ಚರಿಕೆ ನಮ್ಮ ಕೈಯಲ್ಲಿರಲಿ. ಕಠಿಣ ಹೋರಾಟ ನಮಗಾಗಿ ಕಾದಿದೆ. ಈ ಅಂತಿಮ ಹೋರಾಟದಲ್ಲಿ ಹಸಿವು, ತೃಷೆ, ಕಷ್ಟ, ನಷ್ಟ, ಸಾವು, ನೋವು ಎಲ್ಲವನ್ನೂ ಧೈರ್ಯದಿಂದ ಕ್ರೀಡಾ ಮನೋಭಾವದಿಂದ ಎದುರಿಸೋಣ. ಹಾಗೆಂದು ಪಣತೊಡಿ. ಪರೀಕ್ಷೆಯಲ್ಲಿ ತೇರ್ಗಡೆಯಾದಲ್ಲಿ ಮಾತ್ರ ನಮಗೆ ಸ್ವಾತಂತ್ರ್ಯ ಲಭ್ಯ. ದಾಸ್ಯ ದಾರಿದ್ರ್ಯಗಳಲ್ಲಿ ತೊಳಲುತ್ತಿರುವ ನಾಡಿಗೆ ಸ್ವಾತಂತ್ರ್ಯ ತರುತ್ತೀರಿ ಎಂಬ ವಿಶ್ವಾಸ ನನಗಿದೆ. ನನ್ನ ನಂಬಿಕೆ ಸತ್ಯವಾಗಲಿ.'

'ಜೈಹಿಂದ್'

'ಜೈಹಿಂದ್'

* * *

ಜಪಾನಿನ ಪ್ರಧಾನಿ ಹಿಡೆಕಾಯ್ ಟೋಜೋ ಮತ್ತು ನೇತಾಜಿಯವರಿಂದೊಡಗೂಡಿದ ಒಂದು ಶೃಂಗಸಭೆ ಏರ್ಪಾಡಾಯಿತು. ಅದಕ್ಕೆ ಪೂರ್ವಭಾವಿಯಾಗಿ, ಟೋಕಿಯೋ ನಗರ ಮುಟ್ಟಿದ ದಿನದಿಂದಲೇ ನೇತಾಜಿಯವರು ಒಂದು ತಿಂಗಳ ಕಾಲ ಅದಕ್ಕಾಗಿ ಶ್ರಮಿಸಿದರು. ಜಪಾನಿನ ಶಸ್ತ್ರಸಜ್ಜಿತ ಸೇನಾಶಾಖೆಗಳ ಗಣ್ಯ ಅಧಿಕಾರಿಗಳು, ಪ್ರಮುಖ ರಾಜಕೀಯ ಮುತ್ಸದ್ದಿಗಳು, ಬುದ್ಧಿಜೀವಿಗಳು, ಪ್ರತಿಷ್ಠಿತ ವ್ಯಕ್ತಿಗಳು ಎಲ್ಲರನ್ನೂ ಭೇಟಿ ಮಾಡಿ, ತಮ್ಮ ಅಭಿಮತವನ್ನು ಅವರ ಮುಂದಿರಿಸಿದರು. ೧೯೪೨ರ ಜೂನ್‌ನಲ್ಲಿ ಸಭೆ ಸಮಾವೇಶಗೊಂಡು ನೇತಾಜಿಯವರ ಬಹುತೇಕ ಬೇಡಿಕೆಗಳನ್ನು ಪೂರೈಸಲು ಪ್ರಧಾನಿ ಟೋಜೋ ಒಪ್ಪಿದರು. ಅದಾದ ನಂತರ ಜೂನ್ ೧೬ರಂದು ಟೋಜೋರವರು ಸುಭಾಸ್ ಚಂದ್ರಬೋಸರನ್ನು ಜಪಾನಿನ ಸಂಸತ್ತಿಗೆ ಆಹ್ವಾನಿಸಿ, ಎಲ್ಲ ಸಂಸತ್ ಸದಸ್ಯರಿಗೂ ಅವರನ್ನು ಪರಿಚಯಿಸಿದರು. ಅಂತೆಯೇ ಸಂಸತ್ ಸಮ್ಮುಖದಲ್ಲಿಯೇ ಭಾರತದ ಸ್ವಾತಂತ್ರ್ಯಕ್ಕಾಗಿ ನೇತಾಜಿಯವರು ನಡೆಸಲಿರುವ ಹೋರಾಟಕ್ಕೆ ಸಂಪೂರ್ಣ ಬೆಂಬಲ ನೀಡುವುದಾಗಿ ಅಧಿಕೃತ ಘೋಷಣೆ ಮಾಡಿದರು.

ಈ ಬಗೆಯ ಭೀಮಬಲ ಪಡೆದ ನೇತಾಜಿ ತಮ್ಮ ನಲವತ್ತೆರಡು ದಿನಗಳ ಜಪಾನೀ ವಾಸ್ತವ್ಯವನ್ನು ಮುಗಿಸಿ, ರಾಸ ಬಿಹಾರಿಯರ ಜೊತೆಗೂಡಿ ೧೯೪೩ ಜುಲೈ ೩ರಂದು ಸಿಂಗಪುರಕ್ಕೆ ಪಯಣಿಸಿದರು. ಟೋಕಿಯೋ ಬಿಡುವ ಮುನ್ನ ತಮ್ಮ ಚಿಂತನೆಯ ಚೈತ್ಯಾಲಯವಾಗಿದ್ದ 'ಸ್ವತಂತ್ರ ಭಾರತದ ಹಂಗಾಮಿ ಸರ್ಕಾರದ ರೂಪುರೇಷೆಗಳನ್ನು ಅಲ್ಲಿನ ಪ್ರಮುಖರ ಮುಂದಿಟ್ಟು, ಅವರ ಸಮ್ಮತಿಯನ್ನು ಪಡೆದುಕೊಂಡರು.

ಸಿಂಗಪುರದಲ್ಲಿ ಇಂಡಿಯನ್ ಇಂಡಿಪೆಂಡೆನ್ಸ್ ಲೀಗ್, ಐ.ಎನ್.ಎ ಹಾಗೂ ಜಪಾನೀ ಸೇನೆಯ ಪ್ರತಿನಿಧಿಗಳಿಂದ, ಗಣ್ಯರಿಂದ ನೇತಾಜಿ ಮತ್ತು ರಾಸ್ ಬಿಹಾರಿಯವರಿಗೆ ಭವ್ಯತಮ ಸ್ವಾಗತ ದೊರೆಯಿತು. ಅಂದು ಅಂದರೆ ಜುಲೈ ೪ರಂದು ಸಿಂಗಪುರದ ಟೌನ್‌ಹಾಲ್ ಮುಂಭಾಗದಲ್ಲಿ ಬೃಹತ್ ಸೇನೆ ಸಮಾವೇಶಗೊಂಡಿತ್ತು. ಅದನ್ನುದ್ದೇಶಿಸಿ ಮಾತನಾಡುತ್ತಾ ರಾಸ್ ಬಿಹಾರಿಯವರು, ನೇತಾಜಿ ಸುಭಾಸ್‌ಚಂದ್ರ ಬೋಸರು 'ಇಂಡಿಯನ್ ಇಂಡಿಪೆಂಡೆನ್ಸ್ ಲೀಗ್' ನ ನೂತನ ಅಧ್ಯಕ್ಷರೆಂದು ಅಧಿಕೃತವಾಗಿ ಘೋಷಿಸಿದರು. ದೀರ್ಘ ಹರ್ಷೋದ್ಗಾರಗಳೊಡನೆ ಘೋಷಣೆ ಸ್ವೀಕೃತವಾಯಿತು. ನೇತಾಜಿ ಉರಿಬಿಸಿಲಿನಲ್ಲಿ ಧ್ವಜಸ್ತಂಭದಂತೆ ಅಚಲವಾಗಿ ನಿಂತು ಸುದೀರ್ಘ ಭಾಷಣ ಮಾಡಿದರು.

'ಬಂಧುಗಳೇ, ಅಧೀನ ರಾಷ್ಟ್ರದ ಪ್ರಜೆಯೊಬ್ಬನಿಗೆ ವಿಮುಕ್ತಿ ಸೇನೆಯ ಪ್ರಪ್ರಥಮ ಸೈನಿಕನಾಗುವುದಕ್ಕಿಂತ ಮಿಗಿಲಾದ ಹೆಮ್ಮೆಯಾಗಲಿ, ಗೌರವವಾಗಲಿ ಯಾವುದೂ ಇರಲಾರದು. ನನಗೆ ನೀವಿತ್ತಿರುವ ಈ ಮನ್ನಣೆಯ ಜೊತೆಯಲ್ಲಿ ದೊಡ್ಡ ಹೊಣೆಗಾರಿಕೆಯೂ ಇದೆಯೆಂದು ನಾನು ಚೆನ್ನಾಗಿ ಬಲ್ಲೆ. ಬಿಸಿಲಿರಲಿ–ಮಳೆಯಿರಲಿ, ದುಃಖವಿರಲಿ–ಸುಖವಿರಲಿ, ಸೋಲಿರಲಿ–ವಿಜಯವಿರಲಿ ನಾನು ನಿಮ್ಮೊಡನೆ ಸದಾ ಇರುತ್ತೇನೆ ಎಂಬ ಭರವಸೆ ಕೊಡುತ್ತೇನೆ. ಪ್ರಸ್ತುತದಲ್ಲಿ ನಾನು ನಿಮಗೆ ನೀಡುತ್ತಿರುವುದು ಹಸಿವು, ಬಾಯಾರಿಕೆ, ರಿಕ್ತಹಸ್ತ, ಬಲಾತ್ಕಾರಯುತ ಪದಚಲನೆ, ಹೆಚ್ಚೆಂದರೆ ಮರಣ – ಅಷ್ಟು ಮಾತ್ರ. ಆದರೆ ಬದುಕಿನಲ್ಲಿಯೂ ಸಾವಿನಲ್ಲಿಯೂ ನೀವು ನನ್ನೊಡನಿರಲು ಸಂಕಲ್ಪಿಸಿದರೆ ನಿಮ್ಮನ್ನು ನಾನು ವಿಜಯದೆಡೆಗೆ, ಸ್ವಾತಂತ್ರ್ಯದೆಡೆಗೆ ಕೊಂಡೊಯ್ಯುತ್ತೇನೆ. ಭಾರತ ಮುಕ್ತಗೊಳ್ಳುವುದೊಂದೇ ನಮ್ಮ ಮುಂದಿರುವ ಗುರಿ. ಅದಕ್ಕಾಗಿ ನಮ್ಮ ಸರ್ವಸ್ವವನ್ನೂ ಧಾರೆಯೆರೆಯೋಣ. ಜಗದೀಶ್ವರನು ನಮ್ಮ ಸೇನೆಯನ್ನು ಹರಸಿ, ಮುಂದಿನ ಸಮರದಲ್ಲಿ ನಮಗೆ ಜಯವನ್ನು ಕರುಣಿಸಲಿ.'

'ಇಂಕಿಲಾಬ್ ಜಿಂದಾಬಾದ್ !

'ಆಜಾದ್ ಹಿಂದ್ ಜಿಂದಾಬಾದ್ !!'

* * *

ಸ್ವತಂತ್ರ ಭಾರತದ ಹಂಗಾಮಿ ಸರ್ಕಾರದ ನೀಲನಕ್ಷೆ ಸುಭಾಸರಿಗೆ ತಾವು ಬರ್ಲಿನ್‌ನಲ್ಲಿದ್ದಾಗಲೇ ಮೂಡಿತ್ತು. ಅದಕ್ಕೆ ಜಪಾನಿನ ಸಮ್ಮತಿಯ ಮುದ್ರೆಯೂ ಲಭಿಸಿತ್ತು. ೧೯೪೩ ಅಕ್ಟೋಬರ್ ೨೧ರಂದು ಸಿಂಗಪುರದಲ್ಲಿ, ಕ್ಯಾಥೇ ಸಿನೇಮಾ ಭವನದಲ್ಲಿ ಸಮಾವೇಶಗೊಂಡಿದ್ದ ಜಪಾನ್, ಥಾಯ್ಲೆಂಡ್, ಬರ್ಮ, ಬೋರ್ನಿಯಾ ಮೊದಲಾದ ದೇಶಗಳ ರಾಜಕೀಯ ಧುರೀಣರ ಸಮ್ಮುಖದಲ್ಲಿ 'ಸ್ವತಂತ್ರ ಭಾರತದ ಹಂಗಾಮಿ ಸರ್ಕಾರ' (ಆರ್ಜೀ ಹಕುಮತ್–ಎ– ಆಜಾದ್ ಹಿಂದ್) ಜನ್ಮ ತಾಳಿತು. ಅಂದೇ ಆ ಸರ್ಕಾರದ ಪ್ರಧಾನಿಯಾಗಿ ಸುಭಾಸ್‌ಚಂದ್ರ ಬೋಸರು ಪ್ರಮಾಣವಚನ ಸ್ವೀಕರಿಸಿದರು. ಅವರ ಜೊತೆಯಲ್ಲಿ ಅವರ ಸಚಿವ ಸಂಪುಟವೂ ಪ್ರಮಾಣವಚನ ಸ್ವೀಕರಿಸಿತು.

ಸುಭಾಸ್ ಚಂದ್ರಬೋಸ್ : ಸರಕಾರದ ಮುಖ್ಯಸ್ಥರು, ಪ್ರಧಾನಿ, ವಿದೇಶಾಂಗ ಸಚಿವರು ಮತ್ತು ಐ.ಎನ್.ಎ.ಯ ಸರ್ವೋಚ್ಚ ಸೇನಾಧಿಕಾರಿ.

ಕ್ಯಾ. ಲಕ್ಷ್ಮೀ : ಮಹಿಳಾ ಸಂಘಟನೆಯ ಸಚಿವೆ

ಲೆ.ಕ. ಎ.ಸಿ. ಚಟರ್ಜಿ : ಅರ್ಥ ಸಚಿವರು

ಎಸ್. ಎ. ಅಯ್ಯರ್ : ಪ್ರಕಟಣೆ ಮತ್ತು ಪ್ರಚಾರ ಸಚಿವರು

**ಸಶಸ್ತ್ರ ಪಡೆಗಳ ಮುಖಂಡರು**

ಲೆ.ಕ. ಅಜೀಜ್ ಅಹಮ್ಮದ್ : ಲೆ.ಕ. ಎನ್.ಎಸ್. ಭಗತ್

ಲೆ.ಕ. ಜೆ.ಕೆ. ಭೋಂಸ್ಲೆ : ಲೆ. ಕ. ಗುಲ್ಜಾರ್ ಸಿಂಗ್

ಲೆ.ಕ. ಎಂ. ಜಡ್. ಕಿಯಾನಿ : ಲೆ. ಕ. ಎ.ಜಿ. ಲೋಗನಾಥನ್

ಲೆ. ಕ. ಇಶಾನ್ ಖಾದಿರ್ : ಲೆ. ಕ. ಷಾ ನವಾಜ್ ಖಾನ್

ಎ. ಎಸ್. ಸಾಹಾಯ್

ಸಚಿವ ಸಂಪುಟದ ಕಾರ್ಯದರ್ಶಿ (ಸಚಿವ ಸಮಾನ ಹುದ್ದೆ)

ರಾಸ್ ಬಿಹಾರಿ ಬೋಸ್

(ಸರ್ವೋಚ್ಚ ಸಲಹೆಗಾರರು)

ಸಲಹೆಗಾರರು

ಕರೀಂಘನಿ ದೇವನಾಥ ದಾಸ್
ಡಿ.ಎಂ. ಖಾನ್ ಎ. ಯಲ್ಲಪ್ಪ
ಜೆ. ಥಿವಿ ಸರದಾರ್ ಇಶಾರ್ ಸಿಂಗ್
ಎ. ಎನ್. ಸರ್ಕಾರ್
ಕಾನೂನು ಸಲಹೆಗಾರರು

ನೂತನ ಸರ್ಕಾರ ಅಸ್ತಿತ್ವಕ್ಕೆ ಬಂದ ಕೂಡಲೇ ನೇತಾಜಿಯವರು ಇಂಡಿಯನ್ ನ್ಯಾಷನಲ್ ಆರ್ಮಿ (ಐ.ಎನ್.ಎ.)ಯ ದಂಡನಾಯಕ (Commander-in-chief) ಆದರು. ಸಂವಿಧಾನಾತ್ಮಕವಾಗಿ, ಕಮೀಷನರುಗಳ ನೇಮಕ, ಸರ್ಕಾರದ ವಿವಿಧ ಖಾತೆಗಳ ಆಡಳಿತ ಹಂದರದ ವಿನ್ಯಾಸ, ಹಣಕಾಸು ವ್ಯವಹರಣೆಗಾಗಿ ಸ್ವತಂತ್ರ ಆಜಾದ್ ಹಿಂದ್ ಬ್ಯಾಂಕ್ ಸ್ಥಾಪನೆ, ಸರ್ಕಾರದ ಪರವಾದ ಹೊಸ ಕರೆನ್ಸಿ, ಅಂಚೆಚೀಟಿ ಮುಂತಾದವು ರೂಪುಗೊಂಡವು. ಜಪಾನ್ ಸರ್ಕಾರ ೧೯೪೩ ಅಕ್ಟೋಬರ್ ೨೩ರಂದು ನೇತಾಜಿ ಸುಭಾಸ್‌ಚಂದ್ರ ಬೋಸರ ನೂತನ ಸರ್ಕಾರಕ್ಕೆ ಅಧಿಕೃತ ಮನ್ನಣೆ ನೀಡಿತು. ಕೆಲವೇ ದಿವಸಗಳಲ್ಲಿ ಜರ್ಮನಿ, ಜಪಾನ್, ಇಟಲಿ – ಈ ಮೂರು ಶಕ್ತಿಗಳೂ ಸೇರಿದಂತೆ ಕ್ರೊವೇಶಿಯಾ, ಫಿಲಿಫೈನ್ಸ್, ನ್ಯಾಮ್ ಕಿಂಗ್, ಮಂಚುಕೊ ಮೊದಲಾದ ಒಂಬತ್ತು ರಾಷ್ಟ್ರಗಳು ನೇತಾಜಿ ಸರ್ಕಾರವನ್ನು ಸ್ವಾಗತಿಸಿ ಮನ್ನಿಸಿದವು.

ಇಷ್ಟೆಲ್ಲ ವ್ಯವಸ್ಥೆಗಳೂ ಆದ ಕೂಡಲೇ ಆಜಾದ್ ಹಿಂದ್ ಹಂಗಾಮಿ ಸರ್ಕಾರದ ಅಧ್ಯಕ್ಷರಾಗಿ ನೇತಾಜಿ ಸುಭಾಸ್‌ಚಂದ್ರ ಬೋಸ್ ಅಕ್ಟೋಬರ್ ೨೪ರಂದು ಇಂಗ್ಲೆಂಡ್ ಮತ್ತು ಅಮೇರಿಕಾ ದೇಶಗಳ ವಿರುದ್ಧ ಯುದ್ಧ ಘೋಷಿಸಿದರು. ೧೯೪೩ ನವೆಂಬರ್ ೫ರಂದು ಟೋಕಿಯೋದಲ್ಲಿ ಪ್ರೀಮಿಯರ್ ಟೋಜೋ ನಿವಾಸದಲ್ಲಿ ಸಮಾವೇಶಗೊಂಡಿದ್ದ ಪೂರ್ವ ಏಷ್ಯಾದ ಹಲವು ರಾಷ್ಟ್ರಗಳು ನೇತಾಜಿಯವರ ನಿಲುವನ್ನು ಅನುಮೋದಿಸಿದವು. ಬರ್ಮಾ ಪ್ರಧಾನಿ ಬಾ–ಮಾ (Be-Maw)ರವರು ಮಂಡಿಸಿದ ಭಾರತದ ವಿಮೋಚನೆಯಾಗದೆ ಏಷ್ಯಾದ ನವನಿರ್ಮಾಣ ಸಾಧ್ಯವಾಗದು. ಆದ್ದರಿಂದ ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ನಾವು ಬೇಷರತ್ ಬೆಂಬಲ ನೀಡುತ್ತೇವೆ ಎಂಬ ನಿರ್ಣಯ ಸರ್ವಾನುಮತದಿಂದ ಅಂಗೀಕೃತವಾಯಿತು. ಚೀಣಾದ ಅಧ್ಯಕ್ಷ ವೋಸಿಯ್ಯೆ (Oseiei),ಫಿಲಿಫೈನ್ಸ್ ಅಧ್ಯಕ್ಷ ಲಾರೆಲ್ (Laurel), ಥಾಯ್ಲೆಂಡಿನ ಪ್ರಿನ್ಸ್ ವೋನ್ ವೈ (Wonwai) ಮೊದಲಾದವರೆಲ್ಲರೂ ಠರಾವಿನ ಅನುಮೋದನೆಯೊಂದಿಗೆ ಸಮಾವೇಶವನ್ನು ಯಶಸ್ವಿಗೊಳಿಸಿದರು. ಇಂತಾಗಿ ನೇತಾಜಿಯವರ ಸಮರೋದ್ಯೋಗಕ್ಕೆ ಪೂರ್ವ ಏಷ್ಯಾದ ಹೆಚ್ಚು ಕಡಮೆ ಎಲ್ಲ ರಾಷ್ಟ್ರಗಳ ಬೆಂಬಲ ಸಿಕ್ಕಿತು.

ಜಪಾನಿನ ಸಹಕಾರದ ಸಂಕೇತವಾಗಿ ತಮ್ಮ ವಶದಲ್ಲಿದ್ದ ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳನ್ನು ಸುಭಾಸರ ಆಜಾದ್ ಹಿಂದ್ ಹಂಗಾಮಿ ಸರ್ಕಾರದ ವಶಕ್ಕೆ ಕೊಟ್ಟರು. ಪ್ರೀಮಿಯರ್ ಟೋಜೊ ೧೯೪೩ ಡಿಸೆಂಬರ್ ೨೯ ರಂದು ಅಜಾದ್ ಹಿಂದ್ ಹಂಗಾಮಿ ಸರ್ಕಾರದ ಆಡಳಿತಕ್ಕೆ ಸೇರಿದ ಪ್ರಾಂತದ ಮೊದಲನೆಯ ಅಧಿಕಾರವನ್ನು ವಹಿಸಿಕೊಳ್ಳಲು ಸುಭಾಸ್‌ಚಂದ್ರ ಬೋಸರು ಅಂಡಮಾನ್‌ಗೆ ಹೋದರು. ಅಲ್ಲಿನ ಜಮಖಾನಾ ಮೈದಾನದಲ್ಲಿ ನೆರೆದ ಬೃಹತ್ ಜನಸ್ತೋಮದ ಸಮ್ಮುಖದಲ್ಲಿ ರಾಷ್ಟ್ರಧ್ವಜವನ್ನು ಅನಾವರಣಗೊಳಿಸಿದರು. ಅಂಡಮಾನ್ ದ್ವೀಪಗಳಿಗೆ 'ಶಹೀದ್' ದ್ವೀಪಗಳೆಂದೂ ನಿಕೋಬಾರ್ ದ್ವೀಪಗಳಿಗೆ 'ಸ್ವರಾಜ್' ದ್ವೀಪಗಳೆಂದೂ ಮರುನಾಮಕರಣ ಮಾಡಿದರು.

ಸಿಂಗಪುರದಲ್ಲಿನ ಅವರ ಮೊದಲ ಠಾಣ್ಯ ಅಂಡಮಾನ್ ನಿಕೋಬಾರ್ ದ್ವೀಪಗಳವರೆಗೂ ವಿಸ್ತರಿಸಿತು.

* * *––

'.................'

'ಕಥೆಯ ರಥ ನಿಂತಿತೇಕೆ ಕನ್ನಡಿ ?'

'ಮುಂದಿನದು ಟ್ರಾಜಿಡಿ, ಅನಿತಾ !'

'ಟ್ರಾಜಿಡಿಯಾಗಲಿ ಕಾಮಿಡಿಯಾಗಲಿ ಕಥೆ ಮುಕ್ತಾಯ ಕಾಣಬೇಕಲ್ಲವೆ ?'

'ಖಂಡಿತ. ಆದರೆ ಆ ಮುಕ್ತಾಯ ಅಥವಾ ಮುಂದುವರಿಕೆಯನ್ನು ಬೇರೊಬ್ಬರ ಪಾಲಿಗೆ ಬಿಡೋಣ ಅಂತಾ.'

'ಹಾಗಾದರೆ ನೀನು ಅಸಮರ್ಥಳೆ ದರ್ಪಣಸುಂದರಿ ?'

'ಹಾಗೇನಿಲ್ಲ, ವಸ್ತುನಿಷ್ಠ ನಿರೂಪಣೆಗಿಂತ ವ್ಯಕ್ತಿನಿಷ್ಠ ನಿವೇದನೆ ಸತ್ಯಕ್ಕೆ ಹೆಚ್ಚು ಹತ್ತಿರ. ಅದಕ್ಕೆ'

'ಅಂದರೆ ?'

ಅಂದರೆ ಮೂರನೆಯವಳಾಗಿ ನಾನು ಹೇಳುವುದಕ್ಕಿಂತ, ಐ.ಎನ್.ಎ.ನಲ್ಲೇ ಇದ್ದ ಒಬ್ಬ ಯೋಧ ತನ್ನ ಅನುಭವವನ್ನು ಹೇಳುವುದು ಹೆಚ್ಚು ಸ್ವಾರಸ್ಯಕರ ಮತ್ತು ಸತ್ಯಕ್ಕೆ ಹತ್ತಿರ ಅಂತಾ.'

'ಅಂತಹ ಸ್ವಾನುಭವಿ ಸ್ವಾಮಿನಿಷ್ಠಯೋಧ ಯಾರಿದ್ದರೆ ?'

'ಇದೋ ಇಲ್ಲೇ ಇದ್ದಾರೆ ನೋಡು ನನ್ನ ಪಕ್ಕದಲ್ಲಿ ! ಅನಿತಾ, ಇವರ ಹೆಸರು ರಾಮರಾವ್ ಎಂದು. ಇವರು ಐ.ಎನ್.ಎ.ನಲ್ಲಿ ಯೋಧರಾಗಿದ್ದವರು. ಇಂದಿಗೂ ಇವರು ಐ.ಎನ್.ಎ. ರಾಮರಾವ್ ಎಂದೇ ಪ್ರಸಿದ್ಧರಾಗಿದ್ದಾರೆ.'

‘ಓಹ್ ! ನನ್ನ ಪೂಜ್ಯ ತಂದೆಯವರ ಸಹಚರರು ! ರಾಮರಾಯರಿಗೆ ನಮಸ್ಕಾರ.’

‘ನಮಸ್ಕಾರ ಮಗು.’

‘ರಾಮರಾಯರೆ, ನಿಮ್ಮನ್ನು ಕಂಡದ್ದು ನನ್ನ ತಂದೆಯವರನ್ನೇ ಕಂಡಷ್ಟು ಸಂತೋಷ ಆಗಿದೆ !’

‘ನಾನು ಪುಣ್ಯವಂತ !’

‘ಅನಿತಾ, ರಾಮರಾಯರ ಕಿರು ಪರಿಚಯ ಕೇಳು : ಇವರ ಪೂರ್ವಜರು ಕರ್ನಾಟಕದ ಚಾಮರಾಜನಗರ ತಾಲೂಕಿನ ಒಂದು ಹಳ್ಳಿಯವರು. ಆದರೆ ಇವರು ಹುಟ್ಟಿದ್ದು ತಾಳವಾಡಿಯಲ್ಲಿ. ಇವರದು ಒಂದು ಪುರೋಹಿತನ ಮನೆತನ. ತಂದೆ ಲಕ್ಷ್ಮೀನಾರಾಯಣಪ್ಪ, ತಾಯಿ ಸೀತಮ್ಮ. ರಂಗಮ್ಮ, ಚಂದ್ರಶೇಖರಯ್ಯ, ರಾಮರಾಯ, ರಂಗನಾಥ ಅಂತಾ ನಾಲ್ಕು ಜನ ಮಕ್ಕಳು. ಮೂರನೆಯವರಾದ ಇವರ ಪ್ರಾಥಮಿಕ ಶಿಕ್ಷಣ ತೆರಕಣಾಂಬಿ ಗ್ರಾಮದಲ್ಲಿ. ಅನಂತರ ಚಾಮರಾಜನಗರದಲ್ಲಿ. ಶಾಲೆಯಲ್ಲಿ ರೆಡ್ ಕ್ರಾಸ್ ಸಂಸ್ಥೆಯ ಒಂದು ತರಬೇತಿ ಕೇಂದ್ರ ಇತ್ತು. ಇವರು ಸ್ವಇಚ್ಛೆಯಿಂದ ಅದಕ್ಕೆ ಸೇರಿದರು. ಅಂದಿನಿಂದಲೂ ಸೇನಾನಿಯಾಗಬೇಕೆಂಬ ಹಂಬಲ. ಅದು ಹಣ್ಣಾದದ್ದು ಹದಿನೆಂಟು ವರ್ಷ ತುಂಬಿದ ಮೇಲೆ, ಮೈಸೂರು ಮಿಲಿಟರಿಗೆ ಸೇರಿ IIIನೆಯ ಮೈಸೂರ್ ಇನ್‌ಫೆಂಟ್ರಿಯ ಸಿಪಾಯಿ ಆದರು.

‘ರಾಯರು, ಬ್ರಿಟಿಷರ ಅಧೀನದಲ್ಲಿದ್ದವರು ಐ.ಎನ್.ಎ. ಸೇರಿದ್ದು ಹೇಗೆ ?’

‘ನಾನು ಹೇಳ್ತೇನೆ ಕೇಳು ಮಗಳೆ, ಎರಡನೇ ಮಹಾಯುದ್ಧ ಆರಂಭವಾದಾಗ ಭಾರತದಂತೆ ಗುಲಾಮಗಿರಿಯಲ್ಲಿದ್ದ ಮಲಯ, ಅಂಡಮಾನ್, ನಿಕೋಬಾರ್ ಮೊದಲಾದ ದೇಶಗಳ ಮೇಲೆ ಜಪಾನ್ ದಾಳಿ ಮಾಡುವುದೆಂದು ತಿಳಿದು, ಭಾರತದಿಂದ ನಾನೂ ಸೇರಿದಂತೆ ಒಂದು ಲಕ್ಷ ಸೇನೆಯನ್ನು ರಕ್ಷಣೆಗಾಗಿ ಸಿಂಗಪುರಕ್ಕೆ ಕಳುಹಿಸಿದರು. ಹೋರಾಟ ಶುರುವಾಯ್ತು. ಜಪಾನಿಗಳ ಪ್ರಚಂಡ ಸಾಹಸ ಹಾಗೂ ಯುದ್ಧ ಕೌಶಲ್ಯಗಳ ಮುಂದೆ ನಮ್ಮ ಬೇಳೆ ಬೇಯಲಿಲ್ಲ. ೧೯೪೨ ಫೆಬ್ರವರಿ ೧೫ರಂದು ಅವರಿಗೆ ನಮ್ಮ ಸೇನೆ ಶರಣಾಯಿತು. ಯುದ್ಧಕೈದಿಗಳಾದ ನಮ್ಮನ್ನು ಜಪಾನಿ ಸೈನಿಕರು ಮೊದಮೊದಲು ಕೆಟ್ಟದಾಗಿ ನಡೆಸಿಕೊಂಡರು. ಅನಂತರ ಭಾರತದ ಭಾಗ್ಯವಿಧಾತರಾಗಿ ಬಂದ ಸುಭಾಸ್‌ಚಂದ್ರ ಬೋಸರ ವಶಕ್ಕೆ ನಮ್ಮನ್ನು ಒಪ್ಪಿಸಿದಾಗ ನಮ್ಮಲ್ಲಿ ನೈಜ ಭಾರತೀಯತೆ ಜಾಗ್ರತ ಆಯಿತು. ಹಿಂದೆ ರಬ್ಬರ್ ತೋಟಗಳಲ್ಲಿ ಕೆಲಸ ಮಾಡಲಿಕ್ಕೊ, ವ್ಯಾಪಾರಕ್ಕೊ ಹೋಗಿದ್ದ ಭಾರತೀಯರು ಸುಮಾರು ೪೦–೫೦ ಲಕ್ಷ ಜನ ಹಾಂಕಾಂಗ್, ಫ್ರೆಂಚ್, ಚೀಣಾ, ಥಾಯ್ಲೆಂಡ್, ಮಲೇಷ್ಯಾ, ಇಂಡೋನೇಷ್ಯಾ ಮೊದಲಾದ ದೇಶಗಳಲ್ಲಿ ನೆಲೆಸಿದ್ದರು. ನೇತಾಜಿ ಅವರೆಲ್ಲರನ್ನೂ ಸಂಘಟಿಸಿದರು. ಅವರಲ್ಲಿ ರಾಷ್ಟ್ರೀಯ ಭಾವನೆ, ಸ್ವಾತಂತ್ರ್ಯಪ್ರೇಮ ಮೊಳೆಯುವಂತೆ ಮಾಡಿದರು. ಆಗ ಆಜಾದ್ ಹಿಂದ್ ಫೌಜ್ ಜನ್ಮ ತಾಳಿತು. ನಾವೆಲ್ಲರೂ ಅದರಲ್ಲಿ ಸೇರಿದೆವು. ಅದು ಮುಂದೆ ಐ.ಎನ್.ಎ. ಅರ್ಥಾತ್ ಇಂಡಿಯನ್ ನ್ಯಾಷನಲ್ ಆರ್ಮಿ ಎಂದೇ ತನ್ನನ್ನು ಗುರುತಿಸಿಕೊಂಡಿತು. ಯುದ್ಧಕೈದಿಗಳಾಗಿದ್ದ ನಾವೆಲ್ಲರೂ ಆ ಸೇನೆ ಸೇರಿದೆವು. ಅದರಲ್ಲಿ ಮೂರು ಭಾಗ ಇತ್ತು :’

೧. ಯುವಸೇನೆ (Boys Battallion)

೨. ಮಹಿಳಾ ಸೇನೆ (ಝಾನ್ಸಿರಾಣಿ ಲಕ್ಷ್ಮೀಬಾಯಿ ರೆಜಿಮೆಂಟ್)

೩. ಮಹಾಯೋಧ ಸೇನೆ.

ಇದರಲ್ಲಿ ಬಹುಶಃ, ಯುವಸೇನೆಯ ಹತ್ತು ಹದಿನಾರರ ತರುಣರು, ಮಹಿಳಾಸೇನೆಯ ಹದಿಹರೆಯದ ಯುವತಿಯರು ಸೇನೆಗೆ ಸೇರಿ ಹೋರಾಟ ನಡೆಸಿದ್ದು ಜಗತ್ತಿನ ಇತಿಹಾಸದಲ್ಲಿ ಇದೇ ಮೊದಲು ಎನ್ನಿಸುತ್ತದೆ. ಝಾನ್ಸಿರಾಣಿ ರೆಜಿಮೆಂಟಿನ ಕಮಾಂಡೆಂಟ್ ಡಾ. (ಶ್ರೀಮತಿ)ಲಕ್ಷ್ಮೀ ಸ್ವಾಮಿನಾಥನ್. ಅವರು ಕ್ಯಾಪ್ಟನ್ ಲಕ್ಷ್ಮೀ ಎಂದೇ ಜನಪ್ರಿಯರಾದ ಮಹಾನ್ ನಾಯಕಿ. ಅವರು ಮದರಾಸು ಮೆಡಿಕಲ್ ಕಾಲೇಜಿನ ಪದವೀಧರೆ. ಅವರದು ದೇಶಭಕ್ತರ ಮನೆತನ. ಆ ರಾಷ್ಟ್ರಪ್ರೇಮವೇ ಅವರನ್ನು ಸೇನೆಗೆ ಸೆಳೆದು ತಂದಿತು. ಐ.ಎನ್.ಎ. ಸೇರಿದ ಅವರು ಸಹಸ್ರಾರು ಜನ ಯುವಮಹಿಳೆಯರಿಗೆ ಯುದ್ಧ ತರಬೇತಿ ನೀಡಿ ಸಶಕ್ತರಾಗಿಸಿದರು. ಅವರಲ್ಲಿ ಸೌಂದರ್ಯ, ಸಾಮರ್ಥ್ಯ, ರಾಷ್ಟ್ರಪ್ರೇಮ ಹಾಗೂ ನಾಯಕತ್ವದ ಹಿರಿತನ ಮೂರ್ತಿಮತ್ತಾಗಿದ್ದವು. ಸ್ವಸಾಮರ್ಥ್ಯದಿಂದ ಕ್ಯಾಪ್ಟನ್ ಪದವಿಯಿಂದ ಕರ್ನಲ್ ಪದವಿಗೇರಿದವರು. ಒಂದು ಮಾತಿನಲ್ಲಿ ಹೇಳುವುದಾದರೆ ಕ್ಯಾ.ಲಕ್ಷ್ಮೀಯವರು ಯುವಕ ತಂಡದ ತಾಯಿ, ಝಾನ್ಸಿರಾಣಿ ರೆಜಿಮೆಂಟಿನ ಯುವತಿಯರ ಅಕ್ಕ, ಐ.ಎನ್.ಎ. ಯೋಧರ ತಂಗಿ ಆಗಿದ್ದರು. ಯುದ್ಧಾನಂತರ, ಐ.ಎನ್.ಎ. ವಿಸರ್ಜಿತವಾದ ಮೇಲೆ ಲಕ್ಷ್ಮೀಯವರು ತಮ್ಮ ಮೂವತ್ತೆರಡನೆಯ ವಯಸ್ಸಿನಲ್ಲಿ ಕರ್ನಲ್ ಸೆಹಗಾಲ್ ಅವರನ್ನು ವಿವಾಹವಾದರು.

ಐ.ಎನ್.ಎ.ದ ಮೂರನೆಯ ಭಾಗ ವೀರಯೋಧರ ಪ್ರಚಂಡಸೇನೆ. ಬ್ರಿಟಿಷರ ಅಧೀನದ ಸೇನೆಗೆ ಜಾತಿಸೂತಕ ಅಂಟಿಕೊಂಡಿತ್ತು. ಡೊಗ್ರಾ ರೆಜಿಮೆಂಟ್, ಸಿಖ್ ರೆಜಿಮೆಂಟ್, ರಜಪುಟ್ ರೈಫಲ್ಸ್, ಬಲೂಚ್ ಕ್ಯಾವಲಿ, ಮದರಾಸ್ ಸ್ಯಾಪರ್ಸ್ ಅಂಡ್ ಮೈನರ್ಸ್, ಪಠಾಣ್ ಆರ್ಟಿಲರಿ ಎಂದೆಲ್ಲಾ ನಾಮಕರಣ ಮಾಡಲಾಗಿತ್ತು. ಈಗ ಐ.ಎನ್.ಎ.ನಲ್ಲಿ ಅವೆಲ್ಲ ಮಾಯವಾಗಿ ಸುಭಾಸ್ ಬ್ರಿಗೇಡ್, ಗಾಂಧಿ ಬ್ರಿಗೇಡ್, ಆಜಾದ್ ಬ್ರಿಗೇಡ್, ನೆಹರೂ ಬ್ರಿಗೇಡ್ ಎಂಬ ಭಾವೈಕ್ಯತೆಯನ್ನು ಮೂಡಿಸುವ ಹೆಸರುಗಳಷ್ಟೇ ಉಳಿದವು. ನಮ್ಮೆಲ್ಲರ ಆಶಾಜ್ಯೋತಿ ನೇತಾಜಿ ಈ ಪ್ರಪಂಚ ಕಂಡ

ಅಪರೂಪದ ವ್ಯಕ್ತಿ. ಅವರ ವ್ಯಕ್ತಿತ್ವ ಅನಾದೃಶ, ಅಪ್ರಮೇಯ. ಅವರು ಪದ್ಮಾಸನಾಸೀನರಾಗಿ ಧ್ಯಾನಸಮಾಧಿಯಲ್ಲಿದ್ದಾಗ ವೇದಋಷಿಗಳಂತೆ ನಮಗೆ ಕಾಣಿಸುತ್ತಿದ್ದರು. ದೈವೀಶಕ್ತಿ ಅವರಲ್ಲಿದ್ದುದನ್ನು ನಾವು ಗುರುತಿಸಿದ್ದೆವು. ಆಗ ಅಂದುಕೊಳ್ಳುತ್ತಿದ್ದೆವು ಆತ ಅಧ್ಯಾತ್ಮ ಪಟುವೂ ಹೌದು, ವೀರಯೋಧನೂ ಹೌದು ಎಂದು.

ನನಗೆ ನೇತಾಜಿಯವರ ಬೆಂಗಾವಲಿವನಾಗಿರುವ ಭಾಗ್ಯ ಸಿಕ್ಕಿತ್ತು. ಅವರ ನಿಕಟ ಸಂಪರ್ಕ ನನಗಿರುವುದರಿಂದ ಅವರ ವ್ಯಕ್ತಿತ್ವವನ್ನು ನಾನು ಚೆನ್ನಾಗಿ ಬಲ್ಲೆ. ಅವರು ನಿಃಸ್ವಾರ್ಥಪರಜೀವಿ. ಮಾನವತೆಯ ಮಹಾಮೂರ್ತಿ. ಅವರು ಸುಖದುಃಖಗಳನ್ನು ಎಲ್ಲರೊಡನೆಯೂ ಸಮಾನವಾಗಿ ಹಂಚಿಕೊಳ್ಳುತ್ತಿದ್ದರು. ಒಂದು ದಿನ ರಂಗೂನ್‌ನಲ್ಲಿ ಬರ್ಮಾ ಸರ್ಕಾರ ನೇತಾಜಿಯವರ ಗೌರವಾರ್ಥ ಔತಣಕೂಟ ಏರ್ಪಡಿಸಿತ್ತು. ವ್ಯವಸ್ಥಾಪಕರನ್ನು ನೇತಾಜಿ ಕೇಳಿದರು :

'ಎಲ್ಲ ಯೋಧ ಬಂಧುಗಳಿಗೂ ಈ ಊಟ ಬಡಿಸುವಿರಾ' – ಎಂದು.

'ಇಲ್ಲ' ಎಂಬ ಉತ್ತರ ಬಂತು.

'ಹಾಗಾದರೆ ಈ ಭಾರಿ ಭೋಜನ ನನಗೂ ಬೇಡ. ನನ್ನವರಿಗಿಲ್ಲದ್ದು ನನಗೂ ಬೇಡ. ಅವರಿಗೆ ಕೊಡುವ ಆಹಾರವನ್ನು ನನಗೂ ಕೊಡಬೇಕು. ಬೇರೆ ಬಳಸಿದರೆ ಅದು ಅಸಭ್ಯತೆ ಎನಿಸಿಕೊಳ್ಳುತ್ತದೆ' ಎಂದರು. ಅವರು ಅಷ್ಟು ಎತ್ತರ ಬೆಳೆದಿದ್ದರು. ಒಮ್ಮೆ ಹಿಟ್ಲರ್ ಹೇಳಿದನಂತೆ :

'ನಾನು ಕೇವಲ ಒಂದು ಕೋಟಿ ಜರ್ಮನರ ನಾಯಕನಾದರೆ, ಸನ್ಮಾನ್ಯ (ಹಿಸ್ ಎಕ್ಸಲೆನ್ಸಿ) ನೇತಾಜಿ ಸುಭಾಸ್‌ಚಂದ್ರ ಬೋಸರು ನಲವತ್ತು ಕೋಟಿ ಭಾರತೀಯರ ನಾಯಕರಾಗಿದ್ದಾರೆ. ಎಲ್ಲ ದೃಷ್ಟಿಯಿಂದಲೂ ಅವರು ನನಗಿಂತ ಉತ್ತಮ ಮುಖಂಡರು ಮತ್ತು ಸೇನಾಧಿಕಾರಿಗಳು. ಅವರಿಗೆ ನನ್ನ ಹಾಗೂ ಜರ್ಮನಿಯ ಅಭಿವಂದನೆಗಳು' ಎಂದು.

ಅನಿತಾ, ಹಿಟ್ಲರನ ಹೊಗಳಿಕೆಯಿಂದ ನೇತಾಜಿ ದೊಡ್ಡವರಾಗಲಿಲ್ಲ. ಸ್ವಯಂಶಕ್ತಿ ಮತ್ತು ಭೂಮವ್ಯಕ್ತಿತ್ವದಿಂದ ಅವರು ಮಹಾನುಭಾವರೆನಿಸಿದ್ದರು. ಇಂತಹ ಮಹಾಮಾನವನನ್ನು ನಾಯಕನನ್ನಾಗಿ ಪಡೆದ ನಾವು ನಿಜಕ್ಕೂ ಭಾಗ್ಯಶಾಲಿಗಳು. ಅವರ ಜೊತೆಗೂಡಿ ಹೋರಾಡುವುದು ನಮ್ಮ ಪೂರ್ವಜನ್ಮದ ಪುಣ್ಯ. ನೇತಾಜಿ ಸಿಪಾಯಿ ಜೊತೆ ಸಿಪಾಯಿಯಾಗಿ, ಕರ್ನಲ್ ಜೊತೆ ಕರ್ನಲ್ ಆಗಿ ಯಾವುದೇ ಮೇಲರಿಮೆ ಇಲ್ಲದ ಒಡನಾಡಿಯಾಗುತ್ತಿದ್ದರು. ತಮ್ಮ ಸೈನಿಕರ ಪ್ರಾಣ ತಮ್ಮ ಪ್ರಾಣವೆಂದೇ ಭಾವಿಸುತ್ತಿದ್ದರು. ಸೆರೆಸಿಕ್ಕ ಸೈನಿಕನ ಬಗೆಗೂ ಅವರ ಕರುಣೆ ಮೀಸಲಿರುತ್ತಿತ್ತು. ದ್ವೇಷ ರೋಷಗಳಿರುವುದು ತಮ್ಮ ಶತ್ರುವಿನ ಮೇಲೇ ಹೊರತು, ಅವನ ಆಜ್ಞಾಧಾರಕನಾದ ಸೇನಾನಿಯ ಮೇಲಲ್ಲ. ಅವನೂ ನಮ್ಮಂತೆಯೇ ಮನುಷ್ಯ ಎನ್ನುತ್ತಿದ್ದರು. ಅಂತಹ ವಿಶ್ವಮಾನವನನ್ನು ಜಗತ್ತು ಹಿಂದೆ ಕಂಡಿಲ್ಲ, ಮುಂದೆ ಕಾಣುವುದೆಂಬ ಭರವಸೆ ಇಲ್ಲ. ನೇತಾಜಿಯವರ ಸಿಬ್ಬಂದಿಯವರಲ್ಲಿ ಒಬ್ಬಾಕೆ ಬಿ. ಮಮತಾ ಅಂತ. ಆಕೆ ಹೇಳ್ತಾರೆ ಕೇಳು :

'ಅವನೊಬ್ಬ ಯುಗಪುರುಷ. ಈ ಯುಗವು ಕಂಡ ಅಪರೂಪದ ವ್ಯಕ್ತಿ. ಅವನ ಧೈರ್ಯ, ಸಾಹಸ, ದೇಶಪ್ರೇಮ, ಸಮರ್ಪಣಭಾವ ಮೊದಲದವುಗಳಿಗೆ ಸರಿಗಟ್ಟುವ ವ್ಯಕ್ತಿ ಬೇರೊಬ್ಬನಿಲ್ಲ. ಧ್ಯೇಯಕ್ಕಾಗಿ ದೇಹವನ್ನರ್ಪಿಸಿದ ಮಹಾನುಭಾವ ಆತ.'

ಮಮತಾ ಹೆಸರು ಹೇಳ್ತಿದ್ದ ಹಾಗೇ ನಮ್ಮ ಕಾರ್ಯಾಲಯದಲ್ಲಿ ನಡೆದ ಒಂದು ಪುಟ್ಟ, ಆದರೆ ಸ್ವಾರಸ್ಯಕರ ಘಟನೆ ನೆನಪಿಗೆ ಬಂತು ಕೇಳು ; ಈ ಪ್ರಸಂಗ 'ನಮ್ಮ ಆರಾಧ್ಯ ದೈವ, ಆ ನಿನ್ನ ಪೂಜ್ಯ ತಂದೆಯ ಭೂಮವ್ಯಕ್ತಿತ್ವಕ್ಕೊಡ್ಡಿದ ಪ್ರತಿಮೆ ಎನಿಸುತ್ತದೆ.

ಮಮತಾ ಐ.ಎನ್.ಎ. ಕಾರ್ಯಾಲಯ ದ್ವಾರದಲ್ಲಿದ್ದಳು. ನಿರ್ದಿಷ್ಟ 'ಸಂಕೇತ ಲಾಂಛನ' (ಪಾಸ್ ವರ್ಡ್) ಇಲ್ಲದೆ ಸುಪ್ರೀಂ ಕಮಾಂಡರ್ ನೇತಾಜಿ ಸುಭಾಸ್ ಚಂದ್ರಬೋಸ್ ಬಂದರು. ಮಮತಾ ಪಾಸ್‌ವರ್ಡ್ ಕೇಳಿದಳು. ನೇತಾಜಿ ಜೇಬು ತಡಕಾಡಿದರು. ಸಿಗಲಿಲ್ಲ, ಅದನ್ನು ಬೇರೆಡೆ ಬಿಟ್ಟು ಬಂದಿದ್ದರು. 'ನಾಳೆ ತರುತ್ತೇನೆ. ಈಗ ಒಳಗೆ ಬಿಡಿ' ಅಂದರು. ಅದಕ್ಕೆ ಮಮತಾ:

ಕ್ಷಮಿಸಿ ಮಹಾಶಯರೆ, ಗುರುತಿನ ಲಾಂಛನವಿಲ್ಲದ ತಮ್ಮನ್ನು ಒಳಗೆ ಬಿಡಲಾರೆ' ಎಂದು ತಣ್ಣನೆ ಹೇಳಿ, ಹಿಂದಕ್ಕೆ ಕಳುಹಿಸಿದಳು. ಹೇಳು ಪುಟಾಣಿ, ನೇತಾಜಿಯವರ ಜಾಗದಲ್ಲಿ ಬೇರೆಯವರಿದ್ದಿದ್ದರೆ ಅವಳಿಗೆ ಯಾವ ಗತಿಯಾಗುತ್ತಿತ್ತು ; ಆ ಸಂದರ್ಭ ಯಾವ ರೂಪ ತಳೆಯುತ್ತಿತ್ತು. ತನ್ನ ಕೈಕೆಳಗಿನ ಅಧಿಕಾರಿಯಿಂದ ಸರ್ವಾಧಿಕಾರಿಗೆ ಅಪಮಾನ ! ಆದರೆ ನೇತಾಜಿ ಮಹಾಮಾನವ, ಮಮತಾಳ ಕರ್ತವ್ಯ ಪಾಲನೆಗೆ ಮೆಚ್ಚಿ ಹೇಳಿದರು :

'ಭೇಷ್, ಇಂತಹ ಖಂಡಿತವಾದಿಗಳು ನನಗೆ ಬೇಕು ; ನಮ್ಮ ಸೇನೆಗೆ ಬೇಕು, ದೇಶ ಸ್ವಾತಂತ್ರ್ಯಕ್ಕೆ ಬೇಕು. ನಮ್ಮೆಲ್ಲ ಸಹಚರರೂ ಇಂತಹ ನಿಷ್ಠಾವರ್ತಿಗಳಾಗಬೇಕು. ಇದೇ ನನ್ನ ಆಸೆ ಕೂಡ' ಎಂದು.

ಅಂತಹ ಮಹಾಮಾನವನ ಮಗಳಾದ ನೀನು ನಮ್ಮೆಲ್ಲರ ಪ್ರೀತಿಯ, ಅಷ್ಟೇ ಅಲ್ಲ, ಗೌರವದ ವ್ಯಕ್ತಿ ಕೂಡ. ಆ ಮಹಾನುಭಾವನ ವ್ಯಕ್ತಿತ್ವದ ಬಣ್ಣನೆಗೆ ಮಾತು ಸೋಲುತ್ತವೆ ! ಋತುಗಳು ಬಳಲುತ್ತವೆ !

ಇರಲಿ, ಮುಂದಿನ ಪ್ರಸಂಗ ಕೇಳು :

ನೇತಾಜಿಯವರ ಗುರಿ ದೆಹಲಿ. ಅದನ್ನು ಆಕ್ರಮಿಸಲು ತಮ್ಮ ಸೇನೆಗೊಂದು ಭಾರತದ ಗಡಿ ಸಮೀಪದಲ್ಲಿ ಸುರಕ್ಷಿತ ತಂಗುದಾಣ ಬೇಕಿತ್ತು. ಭಾರತ ಸಮೀಪದ ಗಡಿದೇಶ ಅಂದರೆ ಬರ್ಮಾ. ಅದು ಮನಸ್ಸು ಮಾಡಿದರೆ ಐ.ಎನ್.ಎ. ಮತ್ತು ಜಪಾನೀ ಸೇನೆಗಳು ಸುರಕ್ಷಿತವಾಗಿ ಸಜ್ಜುಗೊಳ್ಳಬಹುದು ಎಂದು ಆಲೋಚಿಸಿ, ನೇತಾಜಿ ಬರ್ಮಾ ಸರ್ಕಾರದೊಡನೆ ಸಮಾಲೋಚಿಸಿದರು. ಬರ್ಮಾ ಒಪ್ಪಿತು. ಅದರ ಹಿಂದೆಯೇ ನಮಗೂ ಆದೇಶ ಬಂತು ಮಲಯಾದಿಂದ ಬರ್ಮಾಕ್ಕೆ ಹೊರಡುವುದು ಎಂದು. ಕೂಡಲೇ ಒಂದು ಲಕ್ಷ ಐ.ಎನ್.ಎ. ಸೇನೆ ಸಮವಸ್ತ್ರ ಧರಿಸಿತು. ಎದೆಯ ಮೇಲೆ 'ಸ್ವತಂತ್ರ ಭಾರತ' ಎಂಬ ಘೋಷವಾಕ್ಯದ ಬ್ಯಾಡ್ಜ್ ಅಂಟಿಸಿಕೊಂಡಿತು. ಅದು ಅಕ್ಟೋಬರ್ ಕೊನೆಯ ವಾರ. ನಾವೆಲ್ಲ ಹಡಗನ್ನು ಏರಿದೆವು. ನಮ್ಮೊಡನೆ ಜಪಾನೀ ಬೆಟಾಲಿನಿಯನ್‌ಗಳೂ ಇದ್ದುವು. ನಾಲ್ಕು ದಿನಗಳು ನೀರಮೇಲೆ ನಲಿಯುತ್ತಾ, ಹಾಡುತ್ತಾ, ತೇಲುತ್ತಾ ಸಾಗಿದೆವು. ಕಿಶೋರಪಡೆಯ ತರುಣತಂಡ -

ಕರ್‌ವಟೇ ಕರ್‌ವಟೇ ಬದಲ್ ರಹಾ ಹೈ ಆಜು ಸಬ್ ಜಹಾ
ಆಜು ಸಬ್ ಜಹಾ ॥ ಕರ್ ॥
ರಂಗ್ ಬದಲ್ತೆ ಜಾ ರಹಾ ಧರ್ತಿಯಾ ಸುಮಾ
ಧರ್ತಿಯಾ ಸುಮಾ ॥ ಕರ್॥

– ಎಂಬ ಕ್ರಾಂತಿ ಗೀತವನ್ನೂ,

ಝಾನ್ಸಿರಾಣಿ ಲಕ್ಷ್ಮೀಬಾಯಿ ರೆಜಿಮೆಂಟಿನ ಯೋಧ ಸೋದರಿಯರು –

ಹಮ್ ಹಿಂದ್ ಕೆ ನಾರಿಯಾ ಜಲತೀ ಸಿಂಗಾರಿಯಾ
ಸಮಜೋನಾ ಕೋಯಿ ಹಮೇ ಪೂಲೋಂಕಿ ಕ್ಯಾರಿಯಾ
ಕದಂ ಕದಂ ಬಢಾಯೇ ಜಾ ಖುಷೀ ಕಾ ಗೀತ್ ಗಾಯೇ ಜಾ
ಯಹ್ ಜಿಂದಗೀ ಹೈ ಕಾಮ್ ಕೀ ತೂ ಕಮ್ ಪೇ ಲುಟಾಯೆಗಾ ಲುಟಯೇಗಾ

– ಎಂಬ ಉತ್ಸಾಹಗೀತಗಳನ್ನೂ,

ವೀರಯೋಧರು,

ಏಕ್ ದೋ ತೀನ್ ಚಾರ್ ಪಾಂಚ್ ದೆಹ್ಲಿ ಚಲೋ
ಪೀಚೇ ನಾ ಹಟೋ ಆಗೇ ಕೋ ಬಡೋ

ಎಂಬ ವೀರಗೀತೆಗಳನ್ನೂ ಹಾಡುತ್ತಾ ರಂಗೂನ್ ಮುಟ್ಟಿದೆವು. ಅಲ್ಲಿ ಎಲ್. ಎನ್. ಮಿಶ್ರಾ (ಲಕ್ಷ್ಮಣ್ ಸ್ವರೂಪ್ ಮಿಶ್ರಾ)ರವರ ಉಸ್ತುವಾರಿಯಲ್ಲಿ ಸೇನೆಗೆ ಸೂಕ್ತ ಊಟ, ವಸತಿ ವ್ಯವಸ್ಥೆಯಾಗಿತ್ತು.

೧೯೪೪ ಜನವರಿ ೨ರಂದು ನೇತಾಜಿ ತಮ್ಮ ಪ್ರಧಾನ ಕಚೇರಿಯನ್ನು ಸಿಂಗಪುರದಿಂದ ರಂಗೂನ್‌ಗೆ ಸ್ಥಳಾಂತರಿಸಿದರು. ಬ್ರಿಟನ್, ಇಟಲಿ, ಜರ್ಮನಿ, ಫ್ರಾನ್ಸ್, ಅಮೇರಿಕ, ರಷ್ಯಾ ಇವೆಲ್ಲ ರಾಷ್ಟ್ರಗಳಿಗಿಂತಲೂ ಪ್ರಬಲಶಕ್ತಿ ಎನಿಸಿದ್ದ ಜಪಾನ್ ಬೆಂಬಲದಲ್ಲಿರುವಾಗ ನಮಗೆ ಸೋಲಿನ ಭೀತಿ ಇರಲಿಲ್ಲ. ನೇತಾಜಿಯವರ ನಾಯಕತ್ವ, ಅವರ ಯುದ್ಧ ಕೌಶಲ್ಯ ಹಾಗೂ ಅವರಲ್ಲಿದ್ದ ವಾತ್ಸಲ್ಯಾಭಿಮಾನಗಳು ನಮಗೆ ಸ್ಫೂರ್ತಿಯ ಸೆಲೆಯಾಗಿದ್ದವು. ಇದು ಭಾರತದಿಂದ ಬ್ರಿಟಿಷರನ್ನು ಬಡಿದೋಡಿಸಬಲ್ಲೆವೆಂಬ ಆತ್ಮವಿಶ್ವಾಸವನ್ನು ಮೂಡಿಸಿತ್ತು. ನಮ್ಮ ಕಾಲುಗಳು ಕಡಿಯುತ್ತಿದ್ದವು, ತೋಳುಗಳು ಮಿಡಿಯುತ್ತಿದ್ದವು. ನೇತಾಜಿಯವರ ಹಸಿರು ಬಾವುಟ ಹಾರುವುದನ್ನೇ ಕಾಯುತ್ತಾ ನಿಂತೆವು.

ಈ ನಿರೀಕ್ಷೆಯಲ್ಲಿ ನಾವು ಒಂದು ಲಕ್ಷ ಜನ ಸೈನಿಕರು ಆರು ತಿಂಗಳ ಕಾಲ ರಂಗೂನ್‌ನಲ್ಲಿ ತಂಗಿದ್ದೆವು. ಆದರೆ ವ್ಯರ್ಥ ಕಾಲಹರಣ ಮಾಡುತ್ತಲ್ಲ. ವಿಶೇಷ ಯುದ್ಧಶಿಕ್ಷಣ ಪಡೆಯುತ್ತ. ಆ ದಿನ ಬಂತು. ನಾವು ನಮ್ಮ ಮೇಜರ್ ಕಮಾಂಡರುಗಳ ಮುಂದಾಳತ್ವದಲ್ಲಿ ಭಾರತಾಭಿಮುಖಿಗಳಾಗಿ ಬೆಟ್ಟಗಳನ್ನೇರತೊಡಗಿದೆವು. ಭಾರತದ ಗಡಿರೇಖೆಗಳಂತಿದ್ದ ಅಲ್ಲಿನ ಬೆಟ್ಟಗಳು ನಮ್ಮ ಪಾಲಿಗೆ ದುರ್ಗಮ ದುರ್ಗಗಳಾಗಿದ್ದವು. ಪರ್ವತಶ್ರೇಣಿ, ದಟ್ಟವಾದ ಕಾಡು, ಭಯಂಕರ ಕಾಡುಮೃಗಗಳ ಬೀಡೂ ಆಗಿತ್ತು. ಒಂದು ಸೊಳ್ಳೆ ಸುಮಾರು ಒಂದು ಜೇನುನೊಣದ ಗಾತ್ರ ಇರುತ್ತಿತ್ತು. ಅವುಗಳ ಕಡಿತಕ್ಕೆ ನಮ್ಮ ಮುಖ ಮೈಗಳು ಊದಿಕೊಳ್ಳುತ್ತಿದ್ದವು. ದಾರಿಯಿಲ್ಲದ ಆ ಅಡವಿಯಲ್ಲಿ ಗಗನಚುಂಬಿ ಭೀಮವೃಕ್ಷಗಳು. ಅವುಗಳನ್ನು ಭೇದಿಸಿಕೊಂಡು ಆ ದಟ್ಟ ಕಾನನದ ನೆಲವನ್ನು ಸೂರ್ಯ ನೋಡಿಯೇ ಇರಲಿಲ್ಲ. ಅವನ ಕಿರಣಗಳು ಅಲ್ಲಿಗೆ ಪ್ರವೇಶಿಸಲೂ ಅಂಜುತ್ತಿದ್ದವು. ಇದು ಉತ್ಪ್ರೇಕ್ಷೆ ಅಲ್ಲ ಅನಿತಾ, ಸತ್ಯಾನುಭವದ ಮಾತು.'

'ಯುದ್ಧ ಅನ್ನೋದು ಹೇಗಿರುತ್ತೆ ?'

ಫುಟ್‌ಬಾಲ್, ಬ್ಯಾಸ್ಕೆಟ್‌ಬಾಲ್ ಅಥವಾ ಕಬಡ್ಡಿ ಆಟದ ಹಾಗಿರುತ್ತೆ ! ಅದೊಂದು ಕ್ರೀಡೆ. ನಮ್ಮ ನಮ್ಮ ಪಾಲಿಗೆ ಕಮಾಂಡರ್ ನಿರ್ದೇಶನದಂತೆ ನಿಯಮ ತಪ್ಪದೆ ಮುನ್ನುಗ್ಗಬೇಕು. ಶತ್ರುವನ್ನು ಸದೆಬಡಿಯಬೇಕು. ಅಪ್ಪ ಅಮ್ಮ ಯಾರೂ ಆಗ ನೆನಪಿಗೆ ಬರಬಾರದು. ಸಾಯ್ತೇವೆ ಬದುಕ್ತೇವೆ ಅನ್ನೋದಾಗಲಿ, ಹಗಲು, ರಾತ್ರಿ ಅಂತಾಗಲಿ, ಯಾವುದರ ಪರಿವೆಯೂ ಆಗ ನಮಗಿರುವುದಿಲ್ಲ. ಎಲ್ಲಿ ಸಿಕ್ಕಿತೋ ಅಲ್ಲಿ ಊಟ ತಿಂಡಿ, ಸಿಗದ ಕಡೆ ನಮ್ಮ ಬೆನ್ನುಗಳಿಗೆ ಕಟ್ಟಿಕೊಂಡ ಅಕ್ಕಿ, ಉಪ್ಪು, ಒಣ ಹಾರ. ಅದು ಇದೆ ಅನ್ನೋ ಖುಷಿ ಇಲ್ಲ ; ಮುಗಿಯಿತು ಅನ್ನೋ ದುಃಖ ಇಲ್ಲ. ಒಮ್ಮೆ ನಮ್ಮ ತುಕಡಿಗೆ ಕುಡಿಯೋಕೆ ನೀರೇ ಇಲ್ಲದ ಹಾಗಾಯ್ತು. ಒಂದು ಲೋಟ ನೀರಿನಲ್ಲಿ ನಾವು ಇಪ್ಪತ್ತು ಇಪ್ಪತ್ತೈದು ಜನ ತುಟಿಗಳನ್ನು ಮಾತ್ರ ತೇವ ಮಾಡಿಕೊಂಡು ಮುಂದೆ ನುಗ್ಗಿದೆವು. ವಿಶ್ರಾಂತಿ ನಮ್ಮ ಪಾಲಿಗೆ ಕನಸು ! ಕೋಳಿ ನಿದ್ದೆ, ಇಲ್ಲವೇ ನಾಯಿ ನಿದ್ದೆ. ಇಲ್ಲಿ ಯಾವಾಗ ಹೋರಾಟದ ತೀವ್ರತೆ ಇರಲ್ವೋ ಅಲ್ಲಿ ಆಗ ನಮ್ಮ ಬೆನ್ನ ಹಿಂದಿನ ಮದ್ದುಗುಂಡು, ಒಣ ಆಹಾರಾದಿಗಳು ತುಂಬಿದ ಕಿಟ್‌ಗಳನ್ನು ಒರಗಿಕೊಂಡು ಚಣಕಾಲ ಜೊಂಪು. ಮತ್ತೆ ಓಟ. ಎಡಗಡೆ ಜೇಬಿನಲ್ಲಿ ರಾಷ್ಟ್ರಧ್ವಜ ಇರ್ತಿತ್ತು. ಬಾಂಬಿನ ಮಳೆಯಲ್ಲಿ ನಾವು ಗುಂಡಿನ ಕಾಳಗ ನಡೆಸ್ತಾ ಮುಂದೆ ಹೋಗ್ತಿದ್ದೆವು. ಯುದ್ಧ ಅರಂಭವಾದ ದಿನ ತೊಟ್ಟ ಬಟ್ಟೆ ; ಅದನ್ನು ಬಿಚ್ಚಿದ್ದು ನಾವು ಗೆದ್ದು ಜಯಭೇರಿ ಬಾರಿಸಿದ ದಿನವೇ. ಈ ಮೊದಲ ಯುದ್ಧ ಸುಮಾರು ನಾಲ್ಕು ತಿಂಗಳು ನಡೆಯಿತು. ನಮ್ಮ ನಮ್ಮ ಬೂಟುಗಳೆಲ್ಲಾ ಹಣ್ಣಾಗಿದ್ದವು. ಕಾಲ ಬೆರಳುಗಳಂತೂ ಹುಣ್ಣಾಗಿ ಊದಿಕೊಂಡಿದ್ದವು. ಗುಂಡುಗಳು ಹಾಕಿದ ಕೈ ಮೈಗಳನ್ನು ನಾವೇ ತಾತ್ಕಾಲಿಕವಾಗಿ ದುರಸ್ತಿ ಮಾಡಿಕೊಳ್ಳುತ್ತಿದ್ದೆವು.

ಅನಿತಾ, ಯುದ್ಧವನ್ನು ನಾನು ಕ್ರೀಡೆಗೆ ಹೋಲಿಸಿದೆ. ಅದು ಒಂದೊಂದು ಬಾರಿ ನಮ್ಮ ಪಾಲಿಗೆ ಮನೋರಂಜನೆಯೂ ಹೌದು. ಒಂದು ನಿದರ್ಶನ ಕೊಡ್ತೇನೆ, ಕೇಳು. ಆಕಾಶದ ತುಂಬ ಕಾರ್ಮೋಡಗಳು ಕವಿದ ಹಾಗೆ ಬ್ರಿಟನ್ ಮತ್ತು ಅಮೇರಿಕಾ ಬಾಂಬರ್ ವಿಮಾನಗಳು. ಕೆಳಗಡೆ ನಾಗಾ, ಗಾರೋ, ಖಾಸೀ ಬೆಟ್ಟಗಳ ಮಡಿಲಲ್ಲಿ ನಾವು, ಮೇಲಿಂದ ಬಾಂಬ್ ಸುರಿಮಳೆ, ನಮ್ಮಿಂದ ಮಿಷನ್‌ಗನ್‌ಗಳಿಂದ ಉತ್ತರ. ಅನೇಕ ಬಾಂಬ್‌ಗಳನ್ನೂ, ಪ್ಯಾರಾಶೂಟ್ ಗಳನ್ನೂ ಹೊಡೆದು ಉರುಳಿಸಿದೆವು. ನಾವೂ ಸಾವಿರಾರು ಜನ ಸತ್ತೆವು. ರಕ್ಷಣೆಗಾಗಿ ನಾವೇ ನಿರ್ಮಿಸಿಕೊಂಡ ನೆಲಮಾಳಿಗೆ ಸೇರಿಕೊಳ್ಳುತ್ತಿದ್ದೆವು. ಹೊರಬಂದ ಕೂಡಲೇ ಹಸಿದ ಹೆಬ್ಬುಲಿಗಳಂತೆ ಹೋರಾಟ ! ನಾವು ಹೆಚ್ಚಾಗಿ ಭೂಸೇನೆಯನ್ನು ತಡೆಗಟ್ಟುತ್ತಿದ್ದೆವು. ಜಪಾನ್ ಸೇನೆ ವಾಯುಮಂಡಲ ನೋಡಿಕೊಳ್ಳುತ್ತಿತ್ತು. ಒಂದು ದಿನ ಎಂಥಾ ಸುಂದರ ದೃಶ್ಯ ನಮ್ಮ ಕಣ್ಣೆದುರು ಮೆರೆಯಿತು ಅಂತೀಯಾ ಅನಿತಾ ! ನೋಡೋದಕ್ಕೆ ಎರಡು ಕಣ್ಣು ಸಾಲವು ! ಸಂಕಷ್ಟದಲ್ಲೂ ಸೌಂದರ್ಯ ಕಾಣಬಹುದು ಅನ್ನೋದಕ್ಕೆ ಅದು ಒಳ್ಳೆಯ ನಿದರ್ಶನ :

ಮಾಂಡಲೆ ಪಕ್ಕದಲ್ಲಿದ್ದ ಮೆಮ್ಯು ಅನ್ನೋ ಊರಲ್ಲಿ ಐ.ಎನ್.ಎ.ಕ್ಯಾಂಪ್. ಆ ದಿನ ನೇತಾಜಿ ನಮ್ಮ ಜೊತೆಯಲ್ಲೇ ಯುದ್ಧಭೂಮಿಯಲ್ಲಿದ್ದರು. ಅವರಿರುವುದು ಗೂಢಚಾರರಿಂದ ತಿಳಿದುಬಿಟ್ಟಿತು ನಮ್ಮ ಶತ್ರುಗಳಿಗೆ. ತಿಳಿದುಕೊಳ್ಳಬೇಕಾದ ಮುಖ್ಯ ವಿಷಯ ಅಂದರೆ ಯುದ್ಧ ಸಂದರ್ಭದಲ್ಲಿ ಶೇಕಡ ೫೦ ಭಾಗವನ್ನು ಯೋಧರು ಹೋರಾಡಿ ಗೆದ್ದರೆ, ಉಳಿದ ೫೦ ಭಾಗವನ್ನು ಗೂಢಚಾರರು ಗೆಲ್ತಾರೆ ! ಗುಪ್ತದಳದವರು ಹೇಗೋ ಭೇದಿಸಿಕೊಂಡು ಶತ್ರುಪಾಳೆಯ ಸಂಗತಿಗಳನ್ನು ಸಂಗ್ರಹಿಸಿಕೊಂಡು ಬರ್ತಾರೆ. ಮುಂದಿನ ಯುದ್ಧ ಸನ್ನಾಹಕ್ಕೆ ಅದು ತುಂಬಾ ಸಹಕಾರಿ. ಆ ಕೆಲಸವನ್ನು ಬ್ರಿಟಿಷ್ ಗುಪ್ತದಳದವರು ಮಾಡಿದ್ದರು. ಸರಿರಾತ್ರಿ ಸರಿದಿದೆ. ಇದ್ದಕ್ಕಿದ್ದ ಹಾಗೆ ಬ್ರಿಟನ್ ಬಾಂಬರ್‌ಗಳ ಹಾರಾಟ ಶುರುವಾಯ್ತು ಆಕಾಶದಲ್ಲಿ. ನಮ್ಮ ಸುತ್ತಮುತ್ತ ಬಾಂಬ್ ಸಿಡಿಯಲಿಕ್ಕೆ ಹತ್ತಿದ್ದವು. ನಮ್ಮ ಮೇಜರ್ ಜನರಲ್ ಶ್ರೀನಿವಾಸ್ ಪ್ಯಾರಾಶೂಟ್‌ಗಳನ್ನು ವಾಯುಮಂಡಲದಲ್ಲೇ ಚಿಂದಿಚಿಂದಿಮಾಡಿ ಉರುಳಿಸಹತ್ತಿದರು. ಆಪಾನ್ ವಾಯುಸೇನೆ ಸರ್ಚ್‌ಲೈಟ್‌ಗಳನ್ನು ಹಾಕಿಕೊಂಡು ಮೇಲಿನ ವಿಮಾನಗಳನ್ನು ಸುತ್ತುಗಟ್ಟಿ, ಫೈಟರ್‌ಗಳೊಡನೆ ಪಟಾಪಟಿ ನಡೆಸತೊಡಗಿತು. ಕೆಳಗೆ ನಿಂತು ನೋಡುವ ನಮಗೆ ಅದು ಪಟಾಕಿ ಹಬ್ಬದ ಚಿತ್ರಣವಾಗಿ ಕಂಡು ಬರ್ತಾ ಇತ್ತು ! ಬಾಣ ಬಿರುಸುಗಳ ಹಾರಾಟ ತೂರಾಟ ಪಟಾಕಿ ಪಟಪಟ ಇವೆಲ್ಲಾ ದೀಪಾವಳಿಯಲ್ಲಿ ಮದ್ದು ಸುಡ್ತಿದ್ದಾರೆ ಅನ್ನಿಸುತ್ತಿತ್ತು ! ನೇತಾಜಿಯವರಿಗೂ ಆ ದೃಶ್ಯ ನೋಡಲು ಕುತೂಹಲ ! ನೆಲಮಾಳಿಗೆ ಬಿಟ್ಟು ಹೊರಬಂದರು ನೋಡೋಕೆ ! ಸೊಂಟದ ಮೇಲೆ ಕೈ ಇಟ್ಟುಕೊಂಡು ಖುಷಿಯಿಂದ ನೋಡ್ತಾ ಇದಾರೆ. ಆದರೆ ಅದು ನಿಯಮ ಬಾಹಿರ. ಯಾವಾಗಲೂ ನಾಯಕಶ್ರೇಷ್ಠನಿಗೆ ಹಾಗೆಲ್ಲಾ ಅವಕಾಶ ಮಾಡಿಕೊಡುವುದಿಲ್ಲ ನಾವು, ಆದ್ದರಿಂದ 'ನೇತಾಜಿ ಆಪ್ ಬಹರ್ ನಹೀ ಆನಾ... ಅಂದರ್ ಚಲೀಯೆ' ಎಂದು 'ಆಜ್ಞೆ' ಮಾಡಿದೆವು. 'ಆಜ್ಞೆ'ಗೆ ಮಣಿದು ನೇತಜಿ ನೆಲಮಾಳಿಗೆ ಸೇರಿದರು.

ಮತ್ತೊಂದು ಸ್ವಾರಸ್ಯಕರ ನೋಟ ಅಂದರೆ ನಮ್ಮ ಕಿಶೋರಸೇನೆಯದು. ನಮ್ಮಲ್ಲಿ ಒಂದು ಬ್ರಿಗೇಡ್ ಇರುತ್ತೆ. ಅದು 'ಆತ್ಮಾರ್ಪಣಾ ಸ್ಕ್ವಾಡ್'. ಅದಕ್ಕೆ ಸೇರಿದ ಸುಮಾರು ೧೬–೧೮ರ ಹರೆಯದ ತರುಣರು ತಮ್ಮ ಬೆನ್ನುಗಳಿಗೆ ಲ್ಯಾಂಡ್ ಮೈನ್, ಸಿಡಿಮದ್ದು ಹಾಗೂ ಬಾಂಬ್‌ಗಳನ್ನು ಕಟ್ಟಿಕೊಂಡು ಶತ್ರುಗಳ ಟ್ಯಾಂಕ್‌ಗಳ ಮೇಲೆ ಹಾರಿಬಿದ್ದು, ಬಾಂಬ್ ಸಿಡಿಸಿ, ಟ್ಯಾಂಕ್‌ಗಳನ್ನು ಪುಡಿಪುಡಿ ಮಾಡುತ್ತಿದ್ದರು ; ತಾವೂ ಚಿಂದಿಚಿಂದಿಯಾಗುತ್ತಿದ್ದರು. ಆ ವೇಳೆಯಲ್ಲಿ

ಅವರಲ್ಲಿದ್ದ ಹುಮ್ಮಸ್ಸು, ಜಯೋತ್ಸಾಹಗಳು ಅವಿಸ್ಮರಣೀಯ. ಅಂತೆಯೇ ನಮ್ಮ ಝಾನ್ಸಿರಾಣಿ ಲಕ್ಷ್ಮೀಬಾಯಿ ರೆಜಿಮೆಂಟಿನ ಸಹೋದರಿಯರು. ಕ್ಯಾಪ್ಟನ್ ಲಕ್ಷ್ಮಿ ಆದಿಯಾಗಿ ಎಲ್ಲರೂ ಸದಾಕಾಲವೂ ಸೇವಾನಿರತರಾಗಿರುತ್ತಿದ್ದರು. ಯುದ್ಧ ಗಾಯಾಳುಗಳನ್ನು ತುಂಬಾ ಎಚ್ಚರಿಕೆಯಿಂದ, ಆತ್ಮೀಯತೆಯಿಂದ ನೋಡಿಕೊಳ್ಳುತ್ತಿದ್ದರು. ಕೈ ಮೈ ಹೊಕ್ಕ ಗುಂಡುಗಳನ್ನು ತೆಗೆದು ಪಟ್ಟಿ ಕಟ್ಟುತ್ತಿದ್ದರು. ನೋವಿನಿಂದ ನರಳುತ್ತಿದ್ದರೆ ಆತ್ಮೀಯ ಸಾಂತ್ವನ ಹೇಳಿ ನೋವು ಮರೆಸುತ್ತಿದ್ದರು. ಗಾಯಗೊಂಡ ನಮ್ಮ ಕೈಗಳಿಗೆ ಪಟ್ಟಿ ಕಟ್ಟುವಾಗಲೆಲ್ಲ ನನಗೆ ನನ್ನ ಅಕ್ಕತಂಗಿಯರು 'ರಾಕೀ' ಕಟ್ಟುತ್ತಿದ್ದ ನೆನಪು ಬರುತ್ತಿತ್ತು. ಒಂದು ವೇಳೆ ನಾವು ಯಾರಾದರೂ ಮಡಿದರೆ ಹೆಣಕ್ಕೆ ಮಣ್ಣು ಕೊಡುವ, ಬೆಂಕಿ ಕೊಡುವ ಕೆಲಸವೂ ಅವರದಾಗಿತ್ತು. ಮುಕ್ತ ಆತ್ಮಕ್ಕೆ ಶಾಂತಿ ಕೋರುವ ಬಂಧುಭಗಿನಿಯರೂ ಅವರಾಗಿರುತ್ತಿದ್ದರು.

ಒಮ್ಮೊಮ್ಮೆ ಕ್ಯಾಪ್ಟನ್ ಲಕ್ಷ್ಮಿಯವರ ನಾಯಕತ್ವದ ಝಾನ್ಸಿರಾಣಿ ರೆಜಿಮೆಂಟ್ ಪುರುಷರಷ್ಟೇ ಸಮಾನವಾಗಿ ಯುದ್ಧದಲ್ಲೂ ಪಾಲ್ಗೊಳ್ಳುತ್ತಿತ್ತು. ಒಬ್ಬೊಬ್ಬ ಯೋಧಳೂ ನನ್ನ ಕಣ್ಣಿಗೆ ಒಬ್ಬೊಬ್ಬ ಝಾನ್ಸಿರಾಣಿ ಲಕ್ಷ್ಮೀಬಾಯಿ, ಕಿತ್ತೂರ ರಾಣಿ ಚೆನ್ನಮ್ಮ, ಕೆಳದಿಯ ಸಾಮ್ರಾಜ್ಞಿ ಚೆನ್ನಮ್ಮಾಜಿ, ಬೆಳವಡಿ ಮಲ್ಲಮ್ಮ, ರಾಣಿ ಅಬ್ಬಕ್ಕ ದೇವಿಯರಾಗಿ ಕಾಣಿಸುತ್ತಿದ್ದರು ! ಅಂತಹ ಕ್ಷಾತ್ರ ತೇಜ ಮೆರೆದ ದಿನವನ್ನು ನಾವೆಂದೂ ಕಾಣಲಾರೆವು !

ಅನಿತಾ, ನಮ್ಮೆಲ್ಲರ ಶ್ರಮ ಸಾರ್ಥಕವಾಗುವ ದಿನ ಬಂತು. ಮಾರ್ಚ್ ೧೮ ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸದಲ್ಲಿ ಸುವರ್ಣಾಕ್ಷರದ ದಿನ. ಅಂದು ಐ.ಎನ್.ಎ. ಸೇನೆ ಕೊಹಿಮಾ–ಮಣಿಪುರ ವಿಭಾಗದಲ್ಲಿದ್ದ ಬ್ರಿಟಿಷ್ ಪಡೆಗಳನ್ನು ಹಿಮ್ಮೆಟ್ಟಿಸಿ ಭಾರತದ ಗಡಿಯೊಳಕ್ಕೆ ಕಾಲಿರಿಸಿತು. ಅಂದು ನಮಗಾದ ಆನಂದ ಅಷ್ಟಿಷ್ಟಲ್ಲ. ಎಲ್ಲರೂ ಮಾತೃಭೂಮಿಗೆ ಮುತ್ತಿಟ್ಟು ನೆಲದ ಮಣ್ಣನ್ನು ನೆತ್ತಿಮೇಲಿಟ್ಟು ಕುಣಿದಾಡಿದೆವು. ಅದು ನಮ್ಮ ಪಾಲಿಗೆ ಮಣ್ಣಾಗಿರಲಿಲ್ಲ, ಹೊನ್ನಾಗಿತ್ತು ! ನೆಲದ ಮೇಲೆ ಉರುಳಾಡಿದೆವು. ನಮ್ಮ ತಾಯ ತೊಡೆಯ ಮೇಲೆ, ಅವಳ ಮಡಿಲಲ್ಲಿ ಮಲಗಿ, ಲಾಲಿಯಾಡಿದಂತಹ ಆನಂದ ನಮಗಾಯಿತು !

ಮೇ ತಿಂಗಳವರೆಗೆ ಭೀಕರ ಹೋರಾಟ ನಡೆಸಿದ ಐ.ಎನ್.ಎ. ಆ ತಿಂಗಳ ಕಡೆಯಲ್ಲಿ ಕೊಹಿಮಾ ಮತ್ತುಅದರ ಸುತ್ತಮುತ್ತಲ ಹಳ್ಳಿಗಳನ್ನೂ, ದಕ್ಷಿಣದಲ್ಲಿ ಉಖ್ರುಲ್ ಮತ್ತು ಹನ್‌ಘಡ್ ನಡುವಿನ ಪ್ರದೇಶವನ್ನೂ ವಶಪಡಿಸಿಕೊಂಡಿತು. ಜಪಾನೀ ಸೇನೆ ಬುತೀಡಂಗ್ ಗ್ರಾಮವನ್ನು ತನ್ನ ಅಧೀನಕ್ಕೆ ತೆಗೆದುಕೊಂಡು, ಅದನ್ನು ತನ್ನ ಠಾಣ್ಯವನ್ನಾಗಿಸಿಕೊಂಡಿತು. ಮುಂಗಾರು ಆರಂಭವಾಗುವುದರೊಳಗೆ ಅರಕಾನ್, ಹಾಕಾ ವಿಭಾಗಗಳಲ್ಲಿ ಶತ್ರುವನ್ನು ತಡೆಗಟ್ಟಿ ನಿಲ್ಲಿಸಿದೆವು. ಕಾಲಾದನ್ ಮತ್ತು ಟೆಡ್ಡಿಂ ವಿಭಾಗಗಳಲ್ಲಿ ಅವನ್ನು ಸದೆಬಡಿದಿದ್ದೆವು.

ಈ ರೀತಿ ನಮ್ಮ ವಶವಾದ ಪ್ರದೇಶಗಳಿಗೆ ನೇತಾಜಿಯವರು ಲೆಫ್ಟಿನೆಂಟ್ ಕರ್ನಲ್ ಎ.ಸಿ.ಚಟರ್ಜಿಯವರನ್ನು ರಾಜ್ಯಪಾಲರನ್ನಾಗಿ ನೇಮಿಸಿದರು.

* * *

ಗೆಲುವಿನ ಹಿಗ್ಗಿನಲ್ಲಿ ನಾವು ಮೈಮರೆಯಲಿಲ್ಲ. ನಮ್ಮ ಎಚ್ಚರಿಕೆ ನಮ್ಮ ಕೈಯಲ್ಲಿತ್ತು. ಆದರೆ ಮಾನವ ಪ್ರಯತ್ನದ ಹಿಂದೆ ಒಂದು ಅಗೋಚರ ಶಕ್ತಿ ಕೆಲಸ ಮಾಡಿರುತ್ತೆ ಅನ್ನೋ ಮಾತು ಸತ್ಯವಾಯಿತು ನಮ್ಮ ಹೋರಾಟದಲ್ಲಿ. ಮುಂಗಾರು ಆರಂಭವಾಯಿತು. ಭಯಂಕರ ಕೋಟಿ ಮೋಡಗಳು ಮುಗಿಲು ಮುಚ್ಚಿದವು. ಮಳೆ, ಗುಡುಗು, ಸಿಡಿಲುಗಳ ಆರ್ಭಟ. 'ನೋವಾಸ್ ಆರ್ಕ್'ನ ಪುನರಾವತಾರ ! ಮಳೆ ! ಮಳೆ ! ಮಳೆ! ಕುಂಭದ್ರೋಣ ಮಳೆ ! ಪ್ರಪಂಚ ಪ್ರಳಯವಾಗುತ್ತೇನೋ ಅನ್ನುವಂಥಾ ಧೋ ಧೋ ಮಳೆ ! ಇದರ ಮೇಲೆ ಬ್ರಿಟಿಷ್ ಸೇನೆಯ ಬಾಂಬಿನ ಸುರಿಮಳೆ. ಆಂಗ್ಲೊ–ಅಮೇರಿಕನ್ನರಲ್ಲಿ ವಾಯುದಳ, ಕಾಲ್ದಳ, ನೌಕಾದಳ ಸಾಕಷ್ಟಿದ್ದವು ; ಸಮರ್ಥವಿದ್ದವು ಕೂಡ. ಅವರಲ್ಲಿದ್ದ ಆಧುನಿಕ ಶಸ್ತ್ರಾಸ್ತ್ರಗಳ ಆರ್ಭಟ ಆಸ್ಫೋಟಗಳ ಮುಂದೆ ನಮ್ಮ ಬರಿಗೈ ಹೋರಾಟ ಏನೇನೂ ಪ್ರಯೋಜನಕಾರಿ ಆಗಲಿಲ್ಲ. ಐ.ಎನ್.ಎ. ಕಾಲ್ದಳ ಬಲವಾಗಿಯೇ ಇತ್ತು. ನಮ್ಮಲ್ಲೂ ಬ್ರೆನ್‌ಗನ್, ಸ್ಟೆನ್‌ಗನ್, ಟಾಮಿಗನ್, ಗ್ರೆನೇಡ್, ಪಿಸ್ತೂಲ್, ರೈಫಲ್ ಎಲ್ಲವೂ ಇದ್ದವು. ಅವೆಲ್ಲಕ್ಕೂ ಮಿಗಿಲಾಗಿ ನೇತಾಜಿಯವರ ಆಶಾದಾಯಕ ನುಡಿಗಳು, ಪ್ರೋತ್ಸಾಹದ ಮಾತುಗಳು ನಮಗೆ ಸ್ಫೂರ್ತಿಯ ಸೆಲೆಯಾಗಿದ್ದವು. ಅದರಿಂದಾಗಿ ನಮ್ಮ ರಕ್ಷಣಾ ತಂಡ ತನ್ನ ಧಮನಿಯಲ್ಲಿ ಹನಿ ರಕ್ತವಿರುವವರೆಗೂ ಹೋರಾಡಿತು. ಇರ್ರಾವಡಿ ನದಿಯ ದಂಡೆಯಲ್ಲಿ ಬೀಡುಬಿಟ್ಟಿದ್ದ ಬ್ರಿಟಿಷ್ ಸೇನೆಯನ್ನು ಸದೆಬಡಿದು ಹಿಂದಕ್ಕೋಡಿಸಿತು. ಆದರೂ ಅವರ ಸೈನ್ಯದ ೧೪ನೇ ಟ್ಯಾಂಕ್ ಪಡೆಗಳು ಮುಂಚೂಣಿಯಲ್ಲಿದ್ದವು. ಅವರ ಪ್ರಚಂಡ ಪ್ರಮಾಣದ ಆಕ್ರಮಣ ನಮ್ಮನ್ನು ತತ್ತರಿಸುವಂತೆ ಮಾಡಿತು. ಅವರ ಯಾಂತ್ರೀಕೃತ ಪಡೆಗಳ ಪ್ರತಾಪವನ್ನು ಸಾಧನ ಸಲಕರಣೆಗಳ ಕೊರತೆಯಿದ್ದ ಐ.ಎನ್.ಎ. ಕಾಲ್ದಳಗಳು ತಡೆಗಟ್ಟಲು ಶಕ್ತವಾಗಲೇ ಇಲ್ಲ. ನಮ್ಮ ಹಿಂದೆ ಮುಂದೆ ಶತ್ರು ಎತ್ತಿ ಬರುತ್ತಿದ್ದ. ಎಡಭಾಗವಂತೂ ಅವನ ವಶವಾಗಿತ್ತು. ಉಳಿದ ಬಲಭಾಗದಲ್ಲಿ ತಳಕಾಣದ ಪಾತಾಳ ಪ್ರಪಾತ. ಇಂತಹ ಪ್ರಕೃತಿ ಕೋಪ, ಮಾನವ ಸೇಡುಗಳ ಜೊತೆಗೆ ಆಹಾರದ ಕೊರತೆಯೂ ಸೇರಿತು. ಕೊಹಿಮಾ ಪ್ರದೇಶದಲ್ಲಿದ್ದ ಜಪಾನೀ ಲೆಫ್ಟಿನೆಂಟ್ ಜನರಲ್ ಕೊಟಕು ಸಾಟೋ (Kotaku Sato) ನಾಯಕತ್ವದ ಸೇನೆಗೆ ಆಹಾರ ಸಕಾಲದಲ್ಲಿ ಸರಬರಾಜಾಗದೆ ಅದು ರಣಾಂಗಣದಿಂದ ಹಿಂದೆ ಸರಿಯತೊಡಗಿತು. ನಮ್ಮ ಬೆಟಾಲಿಯನ್‌ನಲ್ಲೂ ಆಹಾರ ಇಲ್ಲವಾಯಿತು. ಒಂದು ವಾರಕ್ಕೆ ಒಬ್ಬ

ಸೈನಿಕನಿಗೆ ಒಂದು ಅಂಗೈಯಗಲ ರೊಟ್ಟಿ ಸಿಗದಂತಾಯಿತು. ಅಸ್ಸಾಂ ಘಟ್ಟಗಳಲ್ಲಿ ಸೆರೆಸಿಕ್ಕಿದ್ದ ನಾವು ಅಲ್ಲಿ ಬೆಳೆದಿದ್ದ ಕಡು ಬಾಳೆದಿಂಡನ್ನು ಕಿತ್ತು ತಿನ್ನತೊಡಗಿದೆವು. ಹಸಿ ಬಾಳೆದಿಂಡು ತಿಂದರೆ ಹೊಟ್ಟೆ ತಡೆಯುತ್ತಾ ! ಹೊಟ್ಟೆನುಲಿ, ಹೊಟ್ಟೆನೋವು ತಡೆಯಲಾರದೆ ತಿಂದ ಸೈನಿಕರೆಲ್ಲಾ ಬಂಡೆ ಕೆಳಗೊ ಮರದ ಬುಡದಲ್ಲೊ ಹೊಟ್ಟೆ ಹಿಡಿದುಕೊಂಡು ಹೊರಳಾಡ ಹತ್ತಿದೆವು. ಆ ವೇಳೆಗೆ ನೇತಾಜಿ ಬಂದರು. ನಮ್ಮ ದುಃಸ್ಥಿತಿ ನೋಡಿದರು. ಪರಿಸ್ಥಿತಿ ಅರ್ಥವಾಯಿತು. ಮನಸ್ಸು ನೊಂದಿರಬೇಕು. ಆದರೆ ಅದನ್ನು ಆ ಸಮಯದಲ್ಲಿ ತೋರಗೊಡದೆ, ತಮ್ಮ ಭಾವುಕತೆಯನ್ನು ಹತ್ತಿಕ್ಕಿ, ಬಾಯಿ ಜೋರುಮಾಡಿ ಗರ್ಜಿಸಿದರು.

'ಏನಿದು ಹುಡುಗಾಟ ! ನೀವು ತಿನ್ನಲಿಕ್ಕೆ ಬದುಕಿದ್ದೀರೊ ಅಥವಾ ರಾಷ್ಟ್ರಕ್ಕಾಗಿ ಬದುಕಿದ್ದೀರೊ ? ನೋಡಿ ನಮ್ಮನ್ನು ದೆಹಲಿ ಕೈ ಬೀಸಿ ಕರೆಯುತ್ತಿದೆ ! ಅಲ್ಲಿ, ಆ ನದಿಯ ಆಚೆ, ಆ ಅರಣ್ಯಗಳ ಆಚೆ, ಆ ಬೆಟ್ಟಗುಡ್ಡಗಳಾಚೆ, ಸುಖಸಂತೋಷಗಳ ಸ್ವರ್ಗವಿದೆ ! ಆ ಮಣ್ಣಿನಲ್ಲಿ ನಾವು ಜನ್ಮವೆತ್ತಿದ್ದೇವೆ. ಆ ಮಣ್ಣಿಗೆ ನಾವೀಗ ಮರಳುತ್ತಿದ್ದೇವೆ. ಭಾರತಾಂಬೆ ಪುಣ್ಯಗರ್ಭ. ಅವಳ ಮಕ್ಕಳಾದ ನಾವು ಅವಳ ಮಡಿಲಲ್ಲಿ ಪವಡಿಸೋಣ, ನಡೆಯಿರಿ. ರಕ್ತಕ್ಕೆ ರಕ್ತ ಕರೆಕೊಡುತ್ತಿದೆ. ಏಳಿ, ಎದ್ದೇಳಿ. ಶತ್ರುನಿರ್ಮಿತ ವ್ಯೂಹವನ್ನು ಭೇದಿಸಿ ಜಯಗಳಿಸೋಣ. ಒಂದು ವೇಳೆ ಇವರಿಗೆ ಸಾವು ಸಂಪ್ರಾಪ್ತವಾಗಲಿ ಎಂದು ದೇವದೇವನು ಇಚ್ಛಿಸಿದರೆ ಮರಣವನ್ನಪ್ಪಿ ಹುತಾತ್ಮರಾಗೋಣ. ಆದರೆ ಇದಿಷ್ಟು ಸತ್ಯ : ನಮ್ಮ ಅಂತಿಮ ನಿದ್ರೆಯಲ್ಲಿ ನಾವು ನಮ್ಮ ದೆಹಲಿಯ ದಾರಿಯನ್ನು ಚುಂಬಿಸುತ್ತೇವೆ. ದೆಹಲಿಯ ದಾರಿಯೇ ಸ್ವಾತಂತ್ರ್ಯದ ಹಾದಿ ! ಚಲೋ ದೆಹಲಿ !'

ಆತ್ಮವಿಶ್ವಾಸದಿಂದ ಹೀಗೆ ನುಡಿಯುವಾಗ ನೇತಾಜಿಯವರ ಕಣ್ಣುಗಳಲ್ಲಿ ಯಾವುದೋ ಒಂದು ದಿವ್ಯ ತೇಜಸ್ಸು ಮಿಂಚುತ್ತಿತ್ತು. ನಮ್ಮ ಧಮನಿಗಳಲ್ಲೂ ಆ ಮಿಂಚು ಸಂಚಳಿಸಿತು. ನನಗೆ ಕೂಡಲೇ ಕನ್ನಡ ಕವಿ ಕುವೆಂಪುರವರ 'ಪಾಂಚಜನ್ಯ'ದ ಒಂದು ಪದ್ಯದ ಎರಡು ಸಾಲುಗಳು ನೆನಪಿಗೆ ಬಂದವು :

ನಡೆಮುಂದೆ ನಡೆಮುಂದೆ ನುಗ್ಗಿ ನಡೆ ಮುಂದೆ
ಜಗ್ಗದೆಯೆ ಕುಗ್ಗದೆಯೆ ಹಿಗ್ಗಿ ನಡೆ ಮುಂದೆ
ನಾನಳಿವೆ ನೀನಳಿವೆ ನಮ್ಮೆಲುಬುಗಳ ಮೇಲೆ
ಮೂಡುವುದು ಮೂಡುವುದು ನವಭಾರತದ ಲೀಲೆ !

ಈ ಕ್ರಾಂತಿಗೀತದ ವ್ಯಾಖ್ಯಾನವೊ ಎನ್ನುವಂತೆ ನೇತಾಜಿ ನುಡಿದರು -

'ಬಂಧುಗಳೇ, ನಾನು ಸತ್ತರೂ ಚಿಂತೆಯಿಲ್ಲ, ನೀವು ಸತ್ತರೂ ಚಿಂತೆಯಿಲ್ಲ, ನಮ್ಮೆಲ್ಲರ ಅಸ್ಥಿಪಂಜರದ ಮೇಲೆ ಭವ್ಯ ಭಾರತದ ನಿರ್ಮಾಣ ಆಗಬೇಕು. ನಾವಂತೂ ತೊತ್ತಿನ ಮಕ್ಕಳಾದೆವು. ನಮ್ಮ ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳು ಭಾರತಮಾತೆಯ ಪುಣ್ಯಸಂತಾನ ಸ್ವತಂತ್ರ ಭಾರತದಲ್ಲಿ ಗರಿಗೆದರಿದ ಪಕ್ಷಿಗಳಂತೆ, ಸ್ವಚ್ಛಂದವಾಗಿ ವಿಹರಿಸುವ ಪುಣ್ಯಾವಕಾಶವನ್ನು ಕಲ್ಪಿಸಿಕೊಡುವುದಕ್ಕಾಗಿ ನಾವಿಂದು ತ್ಯಾಗ, ಬಲಿದಾನಗಳಿಗೆ ಸಿದ್ಧರಾಗೋಣ. ಕೇಳಿ, ಸ್ವಾಮಿ ವಿವೇಕಾನಂದರ ಸಿಂಹವಾಣಿ. ಉತ್ತಿಷ್ಠಿತ ಜಾಗ್ರತ ಪ್ರಾಪ್ಯವರಾನ್ನಿಬೋಧತ !'

ಆ ಯೋಧ್ಯವಾಣಿ ಕೇಳಿ, ಭಯ, ಭೀತಿ, ಹಸಿವು, ಬಾಯಾರಿಕೆ, ನಿದ್ದೆ ನೆನಪು ಎಲ್ಲ ಮರೆತೆವು. ನಮ್ಮ ಕಣ್ಣೆದುರಿನಲ್ಲಿ ದಿಲ್ಲಿ ಧುತ್ತನೆ ಬಂದು ನಿಂತಿತು. ಧಮನಿ ಧಮನಿಯಲ್ಲೂ ಹೊಸ ಜೀವರಸ ಹರಿದಾಡಿದಂತಾಯಿತು. ಒಕ್ಕೊರಲಲ್ಲಿ ಎಲ್ಲರೂ ಕೂಗಿದೆವು.

'ನೇತಾಜೀ, ನಡೆಯಿರಿ. ದೆಹಲಿ ಹಿಡಿಯೋಣ. ಭಾರತದಲ್ಲಿ ಒಂದು ಬ್ರಿಟಿಷ್ ಪಿಳ್ಳೆಯೂ ಇಲ್ಲದಂತೆ ಮಾಡೋಣ!' ಎಂದು.

ಮಗಳೆ, ನಮ್ಮಲ್ಲೆಷ್ಟೇ ಹುರುಪು, ಉತ್ಸಾಹಗಳಿದ್ದರೂ ಆತ್ಮಬಲ ದೇಶಾಭಿಮಾನಗಳಿದ್ದರೂ ಹೊಟ್ಟೆಯ ಸಿಟ್ಟು ರಟ್ಟೆಯಲ್ಲಿರಲಿಲ್ಲ. ಆಗಲೇ ಹೇಳಿದಂತೆ ಶತ್ರುಗಳ ಬಳಿ ಇದ್ದ ಯುದ್ಧ ಸಂಪನ್ಮೂಲಗಳು ನಮ್ಮಲ್ಲಿರಲಿಲ್ಲ. ಅವರಿಗೆ ನಿತ್ಯವೂ ಐ.ಎ.ಎಫ್. ವಿಮಾನಗಳಿಂದ ಶಸ್ತ್ರಾಸ್ತ್ರಗಳೂ ಆಹಾರ ಸಾಮಗ್ರಿಗಳೂ ಉದುರುತ್ತಿದ್ದುವು. ನಮಗೋ ಹೊಟ್ಟೆಯ ಕಾಟ, ಶಸ್ತ್ರಾಸ್ತ್ರಗಳ ಕೊರತೆ. ಇದರಿಂದಾಗಿ ನಾವು ಸೋಲೊಪ್ಪಬೇಕಾಯಿತು. ಇಂಫಾಲಿನ ಸುತ್ತ ಬೇಲಿಕಟ್ಟಿ ನಿಂತಿದ್ದ ಬ್ರಿಟಿಷರ ವಿಮಾನದಾಳಿ ಮತ್ತು ಬಾಂಬ್ ಸುರಿಮಳೆಯಿಂದಾಗಿ ಐ.ಎನ್.ಎ. ತಣ್ಣಗಾಗಬೇಕಾಯಿತು. ನಾವೆದಲ್ಲರೂ ನಮ್ಮ ತಾಯಿನೆಲದ ಮೇಲೆ ಪ್ರಾಣಬಿಡಲು ಸಿದ್ಧರಾದೆವು. ಜಪಾನಿಗಳನೇಕರು 'ಹರಕಿರು' (ಹರ=ಹೊಟ್ಟೆ, ಕಿರು=ಹರಿದುಕೊಳ್ಳುವುದು) ಮಾಡಿಕೊಂಡಿದ್ದರು. ಆದರೆ ನೇತಾಜಿ ಅಂತಾಗಲು ನಮ್ಮನ್ನು ಬಿಡಲಿಲ್ಲ. 'ಮನುಷ್ಯನಿಗೆ ಸಾವೇ ಶ್ರೇಷ್ಠವಲ್ಲ. ಭವ್ಯ ಭಾರತದ ಇತಿಹಾಸ ನಮ್ಮ ಸಾವಿನಿಂದಲೇ ಮುಕ್ತಾಯಗೊಳ್ಳುವುದಿಲ್ಲ. ಭಾರತದ ಭವಿಷ್ಯ ರೂಪಿಸುವ ಶಿಲ್ಪಿ ಇನ್ನೂ ಹುಟ್ಟಿಲ್ಲ. ಮೊದಲು ನಾವು ಇತಿಹಾಸ ನಿರ್ಮಾಣಮಾಡೋಣ, ಮುಂದೆ ಯಾರಾದರೂ ಆ ಇತಿಹಾಸವನ್ನು ಬರೆಯುತ್ತಾರೆ. ಇತಿಹಾಸವನ್ನೇ ನಿರ್ಮಿಸಿಕೊಡದೆ ನಾವಿಂದು ಕ್ಷಣಿಕ ಸೋಲಿನಿಂದಾಗಿ ಮಣ್ಣೋ, ಬೂದಿಯೋ ಆದರೆ ಭವಿಷ್ಯತ್ತು ಎಂಬ ದೇವತೆ 'ಹೇಡಿ' ಎಂಬ ಬಿರುದನ್ನು ನಮ್ಮ ಬೆನ್ನುಗಳ ಮೇಲೆ ಬರೆಯುತ್ತಾಳೆ. ಅಂತಹ ಅವಹೇಳನಕ್ಕೆ, ಭಾರತದ ಸ್ವಾತಂತ್ರೇತಿಹಾಸದ ಸುವರ್ಣ ಸಂಪುಟದಲ್ಲಿ ಕಪ್ಪು ಚುಕ್ಕೆಯಗಲು ಇಷ್ಟಪಡುವಿರಾ ?

'ಇಲ್ಲಾ.. ಇಲ್ಲಾ. ಇಲ್ಲಾ!'

'ನಾನು ನಾಳೆ ಮಾತುಕತೆಗಾಗಿ ಜಪಾನಿಗೆ ಹೋಗಿ ಬರುತ್ತೇನೆ. ಬಂದಮೇಲೆ ಮುಂದಿನ ಹಾದಿ ಹುಡುಕೋಣ. ಸದ್ಯಕ್ಕೆ ಐ.ಎನ್.ಎ. ಹೋರಾಟದ ಕಣದಿಂದ ಹಿಂದೆ ಸರಿಯಲಿ.'

ಆಜ್ಞೆ ಅನುಷ್ಠಾನಕ್ಕೆ ಬಂದಿತು.

ನೇತಾಜಿ ೧೯೪೪ರ ನವೆಂಬರ್ ಮೊದಲ ವಾರದಲ್ಲಿ ಟೋಕಿಯೋಕ್ಕೆ ಹೋಗಿ ಜಪಾನಿ ಸರ್ಕಾರದ ಸಚಿವ ಸಂಪುಟದೊಡನೆ ಸಮಾಲೋಚನೆ ನಡೆಸಿ, ಅದೇ ತಿಂಗಳ ಕಡೆಯ ವಾರದಲ್ಲಿ ರಂಗೂನಿಗೆ ಬಂದರು. ಅಷ್ಟರಲ್ಲಿ ಏನೆಲ್ಲ ಅನರ್ಥಗಳಾಗಿ ಹೋಗಿದ್ದವು. ಆಂಗ್ಲೋ-ಅಮೇರಿಕನ್ ವಿಮಾನಗಳೂ ಯುದ್ಧನೌಕೆಗಳೂ ಹಗಲಿರುಳೂ ಬಾಂಬ್ ಮಳೆ ಸುರಿಸಿ ಯಾರ ಹಾಗೂ ಯಾವ ವಿಧದ ಪ್ರತಿಭಟನೆಯೂ ಇಲ್ಲದೆ ನಿರ್ಭೀತವಾಗಿ ಅಪಹೃತ ಪ್ರದೇಶಗಳನ್ನು ಸ್ವಾಧೀನಪಡಿಸಿಕೊಂಡಿದ್ದವು. ಬರ್ಮಾ, ಮಲಯಾ, ಸಿಂಗಪುರಗಳ ಮೇಲೂ ತನ್ನ ಹದ್ದಿನ ಕಣ್ಣು ಹಾಯಿಸಿದ್ದವು. ಜಪಾನಿಗೆ ಸೇರಿದ್ದ ಫೆಸಿಫಿಕ್ ಸಾಗರದ ಅನೇಕ ದ್ವೀಪಗಳು ಬ್ರಿಟಿಷರ ಕೈಗತವಾಗಿದ್ದವು. ಜಪಾನ್ ಇಂಫಾಲದ ಯೋಚನೆಯನ್ನೇ ಸಂಪೂರ್ಣವಾಗಿ ಕೈಬಿಟ್ಟಿತ್ತು. ಬ್ರಿಟನ್ ಸೇನೆ ಐ.ಎನ್.ಎ.ಯನ್ನು ತಳ್ಳಿಕೊಂಡು ಬಂದು ಅಕ್ಯಾಬ್ ಬಂದರು ಮತ್ತು ಚಿತ್ತಗಾಂಗ್‌ಗಳನ್ನು ಸ್ವಾಧೀನಪಡಿಸಿಕೊಂಡಿತ್ತು.

* * *

೧೯೪೫ರ ವರ್ಷಾರಂಭ.

ಎರಡನೆಯ ಹಾಗೂ ಕಡೆಯ ಸುತ್ತಿನ ಹೋರಾಟಕ್ಕೆ ಐ.ಎನ್.ಎ. ಸಿದ್ಧವಾಯಿತು. ರಣರಂಗಕ್ಕೆ ಹೊರಟು ನಿಂತ ಐ.ಎನ್.ಎ. ಯೋಧರನ್ನು ಉದ್ದೇಶಿಸಿ ನೇತಾಜಿ ಎರಡು ಮಾತು ಹೇಳಿದರು :

'ಮಿತ್ರರೇ, ನಮ್ಮದು ಕ್ರಾಂತಿಕಾರಕ ಸೇನೆ ಎಂಬುದು ನೆನಪಿರಲಿ. ನಮ್ಮ ಹೋರಾಟದ ಸವಿಯನ್ನು ಶತ್ರುವಿಗೆ ಪರಿಚಯಿಸುವುದು ನಿಮ್ಮ ಆದ್ಯ ಕರ್ತವ್ಯವಾಗಲಿ. ಈ ವರ್ಷ ನಿರ್ಣಾಯಕ ವರ್ಷ. ಭಾರತದ ಸ್ವಾತಂತ್ರ್ಯದ ಪ್ರಶ್ನೆಯು ಇಂಫಾಲಿನ ಬೆಟ್ಟಗಳಲ್ಲಿ, ಚಿತ್ತಗಾಂಗಿನ ಬಯಲುಗಳಲ್ಲಿ ಇತ್ಯರ್ಥವಾಗಲಿದೆ. ನೆನಪಿರಲಿ, 'ನೀವು ನಿಮ್ಮ ರಕ್ತ ಕೊಡಿ. ನಾನು ನಿಮಗೆ ಸ್ವಾತಂತ್ರ್ಯ ಕೊಡುತ್ತೇನೆ' ಎನ್ನುತ್ತಿದ್ದಾಳೆ ಸ್ವಾತಂತ್ರ್ಯದೇವಿ. ಆದ್ದರಿಂದ 'ರಕ್ತ ! ರಕ್ತ ! ರಕ್ತ ! ಎಂಬುದೇ ನಮ್ಮ ಈ ಬಾರಿಯ ಘೋಷಣೆ !'

ಸೇನೆಯ ಉತ್ಸಾಹಕ್ಕೆ ಕೊನೆ ಮೊದಲಿರಲಿಲ್ಲ. ಸಕಲ ಸಿದ್ಧತೆಗಳನ್ನೂ ಮಾಡಿಕೊಂಡು ಕಣಕ್ಕಿಳಿಯಿತು. ಒಂದೆಡೆ ಮೇಜರ್ ಜನರಲ್ ಷಾ ನವಾಜ್ ಖಾನನ ಸೆನೆಯ ಗೆರಿಲ್ಲಾ ರೆಜಿಮೆಂಟ್ ಪುನಾ ಎಂಬಲ್ಲಿ ಕಾರ್ಯಾಚರಣೆಗೆ ತೊಡಗಿತ್ತು. ಮತ್ತೊಂದೆಡೆ, ಇರಾವಡಿ ನದಿಯನ್ನು ದಾಟಲೆಳಸುತ್ತಿದ್ದ ಬ್ರಿಟಿಷ್ ಸೇನೆಗೂ ಜಪಾನೀ ಸೇನೆಗೂ ತೀವ್ರ ಹೋರಾಟ ಆರಂಭವಾಗಿತ್ತು. ಐ.ಎನ್.ಎ.ಯ ಎರಡು ತುಕಡಿಗಳು ಮೈಕ್‌ಟಿಲಾ (Meiktila) ಸಮೀಪದಲ್ಲಿ ಹರಣದ ಹಂಗುದೊರೆದು ಯುದ್ಧ ಮಾಡುತ್ತಿದ್ದವು. ಇದೇ ವೇಳೆಯಲ್ಲಿ ಝಾನ್ಸಿರಾಣಿ ಲಕ್ಷ್ಮೀಬಾಯಿ ರೆಜಿಮೆಂಟ್ ಯುದ್ಧದಲ್ಲಿ ಸಕ್ರಿಯವಾಗಿ ಭಾಗವಹಿಸಿತ್ತು. ಪುರುಷರಷ್ಟೇ ಪ್ರಮಾಣದಲ್ಲಿ ವೀರಾವೇಶದಿಂದ ಹೋರಾಡಿದ ಮಹಿಳಾಯೋಧರು ಮೌಲ್ವಿನ್ ಎಂಬ ಪಟ್ಟಣದ ಬಳಿಯಲ್ಲಿ ಪ್ರಚಂಡ ಬ್ರಿಟಿಷ್ ಸೇನೆಯನ್ನು ಹದಿನಾರು ಗಂಟೆಗಳ ಕಾಲ ತಡೆದು ನಿಲ್ಲಿಸಿದ್ದರು. ಇನ್ನು ನಮ್ಮ ಕಿಶೋರಸೇನೆಯ ಕಾರ್ಯಾಚರಣೆ ವರ್ಣನಾತೀತ ! ಅನೇಕರನ್ನು ಕೊಂದರು, ಅನೇಕರು ಸತ್ತರು, ಹುತಾತ್ಮರಾದರು.

ಎಷ್ಟೇ ಸಾಹಸ ಪ್ರದರ್ಶಿತವಾದರೂ ಜಯ ನಮ್ಮದಾಗಲಿಲ್ಲ. ಮೇ ೧೪ರಂದು ಬರ್ಮಾ ಶತ್ರುವಿನ ವಶವಾಯಿತು.

ಆ ವೇಳೆಗಾಗಲೇ ಜರ್ಮನಿ ನೆಲ ಕಚ್ಚಿತ್ತು. ಇತ್ತ ಬ್ರಿಟಿಷ್ ಸೇನೆ ಫಿಲಿಫೈನ್ಸ್ ಮೊದಲಾದ ದ್ವೀಪಗಳನ್ನು ಜಪಾನಿಗಳ ಕೈಯಿಂದ ಕಿತ್ತುಕೊಂಡಿತ್ತು. ಮತ್ತೊಂದು ಕಡೆ ರಷ್ಯವು ಜರ್ಮನಿಯ ಮೇಲೆರಗಿ ಫಿನ್ಲೆಂಡ್, ರೊಮೇನಿಯಾ, ಬಲ್ಗೇರಿಯಾ, ಹಂಗೇರಿ, ಯುಗೋಸ್ಲಾವಿಯಾಗಳಲ್ಲಿ ತನ್ನ ಪ್ರಭುತ್ವವನ್ನು ಸ್ಥಾಪಿಸಿತ್ತು. ರಷ್ಯನ್ ಸೇನೆ ಬರ್ಲಿನ್ ಪ್ರವೇಶಿಸುತ್ತಿದ್ದಂತೆಯೇ ಜ್ಯೂ ರಕ್ತಪಿಪಾಸು ಅಡಾಲ್ಫ್ ಹಿಟ್ಲರ್ ಮೇ ೧ರಂದು ಆತ್ಮಹತ್ಯೆ ಮಾಡಿಕೊಂಡ. ಮತ್ತೊಬ್ಬ ದರ್ಪಿಷ್ಟ ಪ್ರಭು ಇಟಲಿಯ ಮುಸ್ಸೋಲಿನಿ ಮತ್ತು ಅವನ ಹೆಂಡತಿ ಇಬ್ಬರನ್ನೂ ೧೯೪೫ ಏಪ್ರಿಲ್ ೨೮ರಂದು ಇಟಲಿಯ ಮಿಲಾನ್ ನಗರದಲ್ಲಿ ಅಲ್ಲಿನ ಜನತೆ ಗುಂಡಿಟ್ಟು ಕೊಂದು, ಅವರಿಬ್ಬರ ಹೆಣಗಳನ್ನು ನಗರದ ಜನಭರಿತ ಚೌಕದಲ್ಲಿ ತಲೆಕೆಳಗಾಗಿ ನೇತುಹಾಕಿತು.

ಇಟಲಿ, ಜರ್ಮನಿಗಳಂತೆ ಜಪಾನ್ ಕೂಡ ಎರಡನೇ ಮಹಾಯುದ್ಧದಲ್ಲಿ ಬಹುದೊಡ್ಡ ಬೆಲೆ ತೆರಬೇಕಾಯಿತು. ೧೯೪೫ ಆಗಸ್ಟ್ ೬ರ ಬೆಳಗ್ಗೆ ೮.೧೫ಕ್ಕೆ ಸರಿಯಾಗಿ ಅಮೇರಿಕಾ ಸಂಯುಕ್ತ ಸಂಸ್ಥಾನವು ಅಧ್ಯಕ್ಷ ಹ್ಯಾರಿ ಟ್ರೂಮನ್ ನಿರ್ಧಾರದಂತೆ ಪ್ರಥಮ ಪರಮಾಣು ಬಾಂಬನ್ನು ಹಿರೋಷಿಮಾದ ಮೇಲೆ ಹಾಕಿತು. ಅದಾದ ಮೂರು ದಿನಗಳಲ್ಲಿ ಅಂದರೆ ಆಗಸ್ಟ್ ೯ನೆಯ ತಾರೀಖು ಬೆಳಗ್ಗೆ ೧೧ಕ್ಕೆ ಸರಿಯಾಗಿ ನಾಗಾಸಾಕಿಯ ಮೇಲೂ ಅಣುಬಾಂಬ್ ಎಸೆಯಿತು. ಜಪಾನಿನ ಉಸಿರಡಗಿ ಹೋಯಿತು. ಆಗಸ್ಟ್ ೧೪ರಂದು ಬ್ರಿಟನ್ ಮತ್ತು ಅಮೇರಿಕಾಗಳಿಗೆ ಜಪಾನ್ ಶರಣಾಗತವಾಯಿತು. ಶರಣಾಗದಿದ್ದರೆ ಟೋಕಿಯೋ ನಗರದ ಮೇಲೆ ಮೂರನೆಯ ಅಣುಬಾಂಬು ಬೀಳುವುದೆಂಬ ಬೆದರಿಕೆ ಹಬ್ಬಿತ್ತು.

ಜಪಾನ್ ಶರಣಾಗತವಾದ ಸುದ್ದಿ ಮುಟ್ಟಿದ ಮೇಲೆ ನೇತಾಜಿ ತಮ್ಮ ಸರ್ಕಾರದ ಸಿವಿಲಿಯನ್ ನೌಕರರನ್ನೂ ಸುಮಾರು ಅಳಿದುಳಿದ ಇಪ್ಪತ್ತು ಸಾವಿರ ಜನ ಐ.ಎನ್.ಎ. ಸೈನಿಕರನ್ನೂ ಎಂಬತ್ತು ಜನ ಝಾನ್ಸಿರಾಣಿ ರೆಜಿಮೆಂಟಿನ ವೀರಮಹಿಳೆಯರನ್ನೂ ಕರೆದು ಅವರಿಗೆ ಸಲ್ಲಬೇಕಾದ ಸಂಬಳವಿತ್ತು ವಿಸರ್ಜಿಸಿದರು.

ಬರ್ಮಾ ಅಪಾಯದ ಸ್ಥಳವಾದ್ದರಿಂದ ನೇತಾಜಿಯವರ ಹಿತೈಷಿಗಳು ಅವರ ಆಡಳಿತ ಕೇಂದ್ರವನ್ನು ಬ್ಯಾಂಕಾಕ್‌ಗೆ ವರ್ಗಾಯಿಸಲು ಸಲಹೆ ಮಾಡಿದರು. ಅವರ ಒತ್ತಾಯಕ್ಕೆ ಮಣಿದು ಬ್ಯಾಂಕಾಕ್‌ಗೆ ನಡೆದರು ತಮ್ಮ ಸರ್ಕಾರದ ಸಮೇತ.

* * *

ಬ್ಯಾಂಕಾಕ್ ಮುಟ್ಟಲು ನೇತಾಜಿಯವರಿಗೆ ಮೂರು ವಾರಗಳು ಹಿಡಿದವು. ಅಲ್ಲಿಯೂ ಅವರ ಸಿಂಹಗರ್ಜನೆ ನಿಲ್ಲಲಿಲ್ಲ. ಘೋಷಿಸಿದರು, 'ನಾವು ಕಾಳಗದಲ್ಲಿ ಸೋತಿರಬಹುದು, ಆದರೆ ಯುದ್ಧದಲ್ಲಿ ಗೆದ್ದೇ ಗೆಲ್ಲುತ್ತೇವೆ' ಎಂದು.

ಈ ದೃಢಪ್ರತಿಜ್ಞೆ ಪೂರ್ಣಗೊಳ್ಳಬೇಕಾದರೆ ಪ್ರಪಂಚದ ಯಾವುದಾದರೊಂದು ಬಲಿಷ್ಠ ರಾಷ್ಟ್ರದ ನೆರವು ಬೇಕಾಗಿತ್ತು. ಆಗ ತಾನೇ ಬಲಿಷ್ಠತ್ವ ಪಡೆದಿದ್ದ, ಬ್ರಿಟನ್ ಪಕ್ಷವಹಿಸಿ ನೇತಾಜಿಯವರ ಪರಮಶತ್ರು ಅನಿಸಿಕೊಂಡ ಅಮೇರಿಕಾ ಬಿಟ್ಟರೆ, ಪ್ರಬುದ್ಧತೆಯ ಪ್ರಸ್ಥಾನವೇರಿದ್ದ ದೇಶವೆಂದರೆ ರಷ್ಯಾ. ನೆಮ್ಮಿಕೊಂಡ ಜಪಾನ್ ಪತನಪದವಿ ಪಡೆದ ಮೇಲೆ ರಷ್ಯ ಒಂದೇ ತಮ್ಮ ಭರವಸೆಯ ರಾಷ್ಟ್ರವೆನಿಸಿತು ನೇತಾಜಿಯವರಿಗೆ. ಆ ಸಂಬಂಧವಾಗಿ ಮಂಚೂರಿಯಾಕ್ಕೆ ಹೋಗಲು ಸಕಲ ಸಿದ್ಧತೆಗಳನ್ನು ಮಾಡಲು ಫೀಲ್ಡ್ ಮಾರ್ಷಲ್ ತೆರಉಚಿ (Terauchi)ಯವರಿಗೆ ಆದೇಶವಿತ್ತರು. ತೆರಉಚಿ ಒಂದು ವಿಶೇಷ ವಿಮಾನವನ್ನು ಸಜ್ಜುಗೊಳಿಸಿದರು. ಅದು ಮೊದಲು ಸೈಗಾನ್‌ನಿಂದ (ಈಗಿನ ಹೊಚಿಮಿನ್ ಸಿಟಿ) ಫಾರ್ಮೋಸಾ (ಈಗಿನ ಟೈವಾನ್)ದ ಟಯ್‌ಪೈ (Taipei) ಮಾರ್ಗವಾಗಿ ಮಂಚೂರಿಯದ ಡಾಯಿರೇನ್‌ಗೆ ಹೋಗುವುದೆಂದು ಯೋಚಿಸಲಾಗಿತ್ತು. ನೇತಾಜಿಯವರು ತಮ್ಮೊಡನೆ ತಮ್ಮ ಸಚಿವ ಸಂಪುಟವನ್ನು ರಷ್ಯಾಕ್ಕೆ ಕರೆದೊಯ್ಯುವ ಇಚ್ಛೆ ವ್ಯಕ್ತಪಡಿಸಿದರು. ಆದರೆ ಆ ವಿಮಾನ ತುಂಬಾ ಚಿಕ್ಕದಿದ್ದುದರಿಂದ ಅವರಿಗೆ ಬೇರೆಯದರಲ್ಲಿ ವ್ಯವಸ್ಥೆಗೊಳಿಸಲಾಯಿತು. ಆ ಪುಟ್ಟ ಬಾಂಬರ್ ವಿಮಾನದಲ್ಲಿ ನೇತಾಜಿಯವರೊಡನೆ ಬರ್ಮೀ ಸೇನಾಧಿಕಾರಿ ಲೆಫ್ಟಿನೆಂಟ್ ಜನರಲ್ ಶಿಡಾ ಇ ಮತ್ತು ನೇತಾಜಿಯವರ ಮಿಲಿಟರಿ ಸಹಾಯಕ (ಅಡ್ ಜುಡೆಂಟ್) ಕರ್ನಲ್ ಹಬಿ–ಬುರ್–ರಹಮಾನ್ ಸೇರಿದಂತೆ ಹತ್ತು ಮಂದಿ ಇದ್ದರು.

ವಾಯುಯಾನವು ವಿಯಟ್ನಾಂನ ಸೈಗಾನನ್ನು ೧೯೪೫ ಆಗಸ್ಟ್ ೧೭ರಂದು ಬಿಟ್ಟು ಆ ರಾತ್ರಿ ಟುರೇನ್‌ನಲ್ಲಿ ಇಳಿಯಿತು. ಅಂದು ಅಲ್ಲಿ ತಂಗಿದ್ದು, ಮಾರನೆಯ ದಿನ ಅಂದರೆ ೧೮ರಂದು ಬೆಳಗಿನ ಜಾವ ೫ ಗಂಟೆಗೆ ಅಲ್ಲಿಂದ ಹೊರಟು ಮಧ್ಯಾಹ್ನ ಟಯ್‌ಪೈ ತಲುಪಿತು. ಅಲ್ಲಿ ಊಟ ಮುಗಿಸಿಹೊರಟು, ಚೀಣಾದ ಈಶಾನ್ಯ ಭಾಗದ ಮಂಚೂರಿಯದ ಡಾಯಿರೇನ್ ಸೇರಲು ಮಾರ್ಗವ್ಯವಸ್ಥೆ ಆಗಿತ್ತು.

ವಿಮಾನ ಚಲಿಸುವ ಮುನ್ನ ಇಂಜಿನ್ ಮೊದಲಾದುವನ್ನು ಚಾಲಕ ಮೇಜರ್ ಕೋನೋ ಮತ್ತು ಸ್ಥಳೀಯ ವಿಮಾನ ನಿಲ್ದಾಣಾಧಿಕಾರಿ ಇಬ್ಬರೂ ಪರಿಶೀಲಿಸಿದರು. ಸಹಾಯಕ ಚಾಲಕ ಜರ್ ತಕಿಜಾವಾ ಕೂಡ ವಿಮಾನ ಸುಸ್ಥಿತಿಯಲ್ಲಿದೆಯೆಂದು ಪ್ರಮಾಣೀಕರಿಸಿದ. ಎಲ್ಲರೂ ವಿಮಾನವೇರಿದರು. ವಿಮಾನವು ೯೮೦ ಮೀಟರ್ ಉದ್ದ ರನ್‌ವೇಯ ತುದಿ ತಲುಪುವುದಕ್ಕೆ ಮೊದಲೇ ಮೇಲೆ ಹಾರಿತು. ಏನಾಯಿತೋ ಏನೊ ಕ್ಷಣಾರ್ಧದಲ್ಲಿ ಎಡಬದಿಗೆ ಉರುಳಿಬಿತ್ತು. ಅದರ ಪ್ರೊಪೆಲ್ಲರ್ ಮತ್ತು ಎಡಭಾಗದ ಎಂಜಿನ್‌ಗಳು ವಿಮಾನದಿಂದ ಬೇರ್ಪಟ್ಟು ಹೊರಗೆ ಬಿದ್ದಿದ್ದವು. ನೇತಾಜಿಯವರು ತೊಟ್ಟಿದ್ದ ಬಟ್ಟೆ ಹತ್ತಿ ಉರಿಯುತ್ತಿತ್ತು. ರಹಮಾನ್ ಆರಿಸಲು ಪ್ರಯತ್ನಿಸಿ ವಿಫಲನಾದ. ಆದರೆ ಅವರನ್ನು ಕಷ್ಟಪಟ್ಟು ನೆಲಕ್ಕಪ್ಪಳಿಸಿದ್ದ ವಿಮಾನದಿಂದ ಹೊರಕ್ಕೆಳೆದು ತರಲು ಸಫಲನಾದ. ಅಷ್ಟರಲ್ಲಿ ನೇತಾಜಿಯವರ ಮೈ ಬಹು ಪ್ರಮಾಣದಷ್ಟು ಸುಟ್ಟುಹೋಗಿತ್ತು. ಕೂಡಲೇ ಟಯ್‌ಪೈಯ ಮಿಲಿಟರಿ ಆಸ್ಪತ್ರೆಗೆ ಕೊಂಡೊಯ್ಯಲಾಯಿತು. ರಕ್ತಕೊಟ್ಟು ಚಿಕಿತ್ಸೆ ನಡೆಸಲಾಯಿತು. ಆದರೂ ನೇತಾಜಿ ಸುಭಾಸ್ ಚಂದ್ರಬೋಸ್ ೧೯೪೫ ಆಗಸ್ಟ್ ೧೮ರ ರಾತ್ರಿ ೮ಗಂಟೆಯ ವೇಳೆಗೆ ಇಹಲೋಕ ತ್ಯಜಿಸಿದರು. ಶಿಡಾ ಇ ಮತ್ತು ತಕಿಜಾವಾ ಅಪಘಾತದ ಸ್ಥಳದಲ್ಲೇ ಮೃತಪಟ್ಟಿದ್ದರು.

ನೇತಾಜಿಯವರ ಮೈ ಸುಟ್ಟು ಸೊಪ್ಪಾಗಿದ್ದರೂ ಮುಖದಲ್ಲಿ ಕಳೆಯಿತ್ತು. ಕಣ್ಣಿನಲ್ಲಿ ಕಾಂತಿಯಿತ್ತು. ತುಂಬಿದುತ್ಸಾಹದಿಂದಲೇ ಬಾಯಿ ತೆರೆದರು. ಬಹಳ ಪ್ರಯಾಸದಿಂದಲೇ ಬಾಯಿ ತೆರೆದರು. ವಿರಳ ನುಡಿಗಳು ಹೊರಬಿದ್ದವು.

ರಹಮಾನ್, ಐ.ಎನ್.ಎ.ಗೆ ಜಯವಾಗಲಿ !

ಭಾರತ ಮಾತೆ ಮುಕ್ತಳಾಗಲಿ !!

ಎಲ್ಲರಿಗೂ

ಜೈ ಹಿಂ... !

ಮಡಿದ ಮಹಾಪುರುಷನಿಗಾಗಿ ಜಪಾನೀ ಅಧಿಕಾರಿಗಳು ಅಶ್ರುತರ್ಪಣ ನೀಡಿದರು. ಜಪಾನೀ ಪದ್ಧತಿಯಂತೆ ಸ್ವಚ್ಛ ಬಿಳಿಯ ವಸ್ತ್ರವನ್ನು ಹೊದಿಸಿ, ಹೂಗುಚ್ಛಗಳನ್ನೂ ದೀಪಗಳನ್ನೂ ಪಕ್ಕದಲ್ಲಿರಿಸಿ, ಹಬೀ–ಬುರ್–ರಹಮಾನ್ ಮತ್ತು ಫಾರ್ಮೋಸಾ

ಸೈನ್ಯಾಧಿಕಾರಿ, ಹಾಗೂ ನೇತಾಜಿಯವರ ಪೂರ್ವ ಪರಿಚಿತ ವ್ಯಕ್ತಿ ಜ್ಯೂಚಿನಕ ಮುರಾರವರು ಓರ್ವ ಬೌದ್ಧ ಸನ್ಯಾಸಿಯ ಸಮ್ಮುಖದಲ್ಲಿ ದಹನಕ್ರಿಯೆ ನಡೆಸಿದರು. ಅನಂತರ ನೇತಾಜಿಯವರ ಚಿತಾಭಸ್ಮವನ್ನು ಸೆಪ್ಟೆಂಬರ್ ೬ರಂದು ಟೋಕಿಯೋದ ಉಪನಗರವೊಂದರಲ್ಲಿದ್ದ ರೆಂಕೊಚಿ ಎಂಬ ದೇಗುಲದಲ್ಲಿ ಇರಿಸಲಾಯಿತು.

* * *

'ಅನಿತಾ, ಯಾಕಮ್ಮಾ ಸುಮ್ಮನಾದೆ ?'

'ಅಂಕದ ಪರದೆ ಬಿದ್ದಮೇಲೆ ಆಟ ಮುಗಿಯಿತು ಅಲ್ಲವೆ, ದರ್ಪಣಸುಂದರಿ ?'

'ಇಲ್ಲ, ಇತಿಹಾಸಕ್ಕೆ ಇನ್ನೂ ತೆರೆ ಎಳೆದಿಲ್ಲವಮ್ಮ ! ಭಾರತದ ಸ್ವಾತಂತ್ರ್ಯೇತಿಹಾಸದಲ್ಲಿ ನಿನ್ನ ತಂದೆಯ ಸಾಹಸ ಗಾಥೆ ಒಂದು ಸುವರ್ಣ ಸಂಪುಟ ತಾಯಿ !'

'ಸತ್ಯ, ನೂರಕ್ಕೆ ನೂರು ಸತ್ಯ. ಅಂತೆಯೇ ದರ್ಪಣಸುಂದರಿ, ಇತಿಹಾಸವಾದರು ನೇತಾಜಿ. ಅಲ್ಲವೆ ?'

•

# ಅಪರೂಪದವರು

## ವಜೀರ್ –ಏ – ಆಜಮ್

You act with your heart to help people in need,
You act with your mind to find creative solutions,
Insurmountable to problems which at first seemed.
And you act with your hands to build dreams for those
who have lost hope.

-An English writer

೧

ಬಿದರೆಯ ನಗೀನಾ ಮಂಜಿಲ್‌ನಲ್ಲಿ ಧಾರ್ಮಿಕ ವಿದ್ವತ್ ಗೋಷ್ಠಿ. ಭಾಗವಹಿಸಿದ್ದವರು ವಿಶ್ವನಾಥ ಘನಪಾಟಿಗಳು, ಗಣಪತಿ ಭಟ್ಟರು, ವಿಲೋಚನ ಶರ್ಮರು, ವಿಶ್ವಂಬರಾಚಾರ್ಯರು, ಆಲಿಜಾಹ್ ಮೌಲ್ವಿಗಳು, ನಾಗಿದೇವ ಜೈನರು, ನಾಗಾರ್ಜುನ ಪ್ರಭೃತಿಗಳು ಇನ್ನೂ ಅನೇಕ ಪ್ರತಿಷ್ಠಿತ ಧರ್ಮಧುರಂಧರರು. ಹಜಾರದ ಮಧ್ಯದಲ್ಲಿ ಹರಡಿದ್ದ ವಿಶಾಲ ಗಾದಿ. ಅದರ ಮೇಲೆ ವರ್ತುಲಾಕಾರದ ಕಸೂತಿ ಹಸು. ಎದುರಿಗಿದ್ದ ಸುಲ್ತಾನನ ಸಿಂಹಾಸನದ ದಿಕ್ಕನ್ನು ಬಿಟ್ಟು ಉಳಿದ ಮೂರು ದಿಕ್ಕುಗಳಿಗೆ ಗೋಡೆ ಕಟ್ಟಿದಂತೆ ಕುದುರೆ. ಅಲ್ಲೇ ಆಕಾರದಲ್ಲಿ ದಪ್ಪ ದಪ್ಪ ಒರಗುದಿಂಬುಗಳು. ಆ ದಿಂಬುಗಳ ಗೌಸುಗಳ ಮೇಲೂ ಬಣ್ಣ ಬಣ್ಣದ ಕಸೂತಗಿ ಚಿತ್ರಗಳು. ಆ ದಿಂಬುಗಳನ್ನೊರಗಿ ಆಸೀನರಾಗಿದ್ದವರು ಆಹ್ವಾನಿತ ಧಾರ್ಮಿಕ ಪ್ರತಿನಿಧಿಗಳು. ಅವರ ಎದುರಿನಲ್ಲಿ ಉನ್ನತಾಸನದ ಮೇಲೆ ಸುಲ್ತಾನ್ – ಏ – ಆಜಮ್ ಎಂದು ಪ್ರಸಿದ್ಧನಾದ ಬೀದರ್‌ನ ಬಾದಷಹ ಅಲ್ಲಾವುದ್ದೀನ್ ಮಂಡಿತನಾಗಿದ್ದ. ಅವನ ಬಲಬದಿಯಲ್ಲಿ ಕೀರ್ಮಾನಿ ಎಂಬ ಸುಪ್ರಸಿದ್ಧ ಸೂಫಿ ಸಂತ ಮತ್ತು ಕೆಲವರು ಧಾರ್ಮಿಕ ಗುರುಗಳು, ಎಡಬದಿಯಲ್ಲಿ ವಜೀರರು, ವಜೀರ್–ಏ–ಆಜಮ್‌ಗಳು, ಅಮೀರ್ – ಉಮ್ರಾವ್‌ಗಳು ಮಂಡಿಸಿದ್ದರು. ಹಜಾರದ ಗೋಡೆಗಳೆಡೆಯಲ್ಲಿ ಸುತ್ತಲೂ ರಾಜ್ಯದ ಹಲವರು ಗಣ್ಯಮಣ್ಯ ನಾಗರಿಕರು. ಹಜಾರದ ಮೇಲ್ಮಹಡಿಯ ಕೈಸಾಲೆಯಲ್ಲಿ ಸುಲ್ತಾನನ ಜನಾನ ಜಮಖಾಯಿಸಿತ್ತು. ತಲೆಯೆತ್ತಿ ನಿಂತಿದ್ದ ಸ್ತಂಭಗಳ ನೆತ್ತಿ ಮೇಲೆ ಉರಿಯುತ್ತಿದ್ದ ಲಾಂದ್ರಗಳ ಚೆಂಬೆಳಕಿಗೆ ಪರದೆಯೊಳಗಿನ ಹೆಂಗೆಳೆಯರ ಕಣ್ಣುಗಳು ಪಿಳಿಪಿಳಿಗುಟ್ಟುತ್ತಿರುವುದು ಗೋಚರಿಸುತ್ತಿದ್ದುದೂ ಉಂಟು. ಹಜಾರಕ್ಕೆ ಹಜಾರವೇ ಅಂದು ಅಲಂಕರಿಸಿಕೊಂಡು ತತ್ವಜಿಜ್ಞಾಸೆ, ಧರ್ಮಬೋಧೆ ತಿಳಿಯಲು ಕಾತರದಿಂದ ಕುಳಿತಿತ್ತು.

ಪ್ರಚಾರ ಪ್ರತಿನಿಧಿಗಳು ಪ್ರಸ್ತುತಪಡಿಸಿದ ತಮ್ಮ ತಮ್ಮ ಧರ್ಮದರ್ಶನಗಳ ರೂಪ ಸ್ವರೂಪ, ಅವು ರೂಪಿಸಿಕೊಟ್ಟ ಸಿದ್ಧಾಂತಾನುಷ್ಠಾನಗಳು, ಧಾರ್ಮಿಕ ಪ್ರಕ್ರಿಯೆ ಮತ್ತು ಪ್ರಭಾವಗಳು ಮಾನವನ ಬದುಕನ್ನು ಹಸನುಗೈಯಲು ಅವು ತಳೆದ ಪಾತ್ರ, ಆದ್ಯತನ ಜೀವನಕ್ಕಿರುವ ಅವುಗಳ ಹೊಣೆಗಾರಿಕೆ ಇತ್ಯಾದಿ ಇತ್ಯಾದಿ ಹಲವು ಹತ್ತೆಂಟು ವಿಷಯಗಳ ಪ್ರತಿಪಾದನೆ ನಡೆಯಿತು. ವಾದ, ವಿವಾದ, ಸಂವಾದಗಳಿಗೆ ಅಲ್ಲಿ ಎಡೆ ಇರಲಿಲ್ಲವಾದ್ದರಿಂದ ಧರ್ಮ ಪ್ರತಿಪಾದಿತ ಸತ್ಯವೊಂದೇ ಎತ್ತಿಹಿಡಿಯಲ್ಪಟ್ಟಿತು. ಆದರೆ ವಿಶ್ವಧರ್ಮ ಯಾವುದಾಗಬಹುದು ಎಂಬ ಪ್ರಶ್ನೆ ಬಂದಾಗ ಮಾತ್ರ ತತ್ವವೇತ್ತರಲ್ಲಿ ಜಿಜ್ಞಾಸೆ ಆರಂಭವಾಯಿತು. ಸಂಖ್ಯಾಬಲದ ಮೇಲೆ ವಿಶ್ವಧರ್ಮವನ್ನು ನಿರ್ಧರಿಸಲು ಸಾಧ್ಯ ಎಂದೊಬ್ಬ ದಾರ್ಶನಿಕರು ಸೈದ್ಧಾಂತಿಸಿ ನುಡಿದ ಕೂಡಲೆ,

'ಅದು ಸಾಧುವಲ್ಲ, ಸರ್ವಥಾ ಸಾಧುವಲ್ಲ !'

ಎಂಬ ಪ್ರತಿರೋಧ ಬಂತು ಶ್ರೋತೃವರ್ಗದಿಂದ, ಎಲ್ಲ ಕಣ್ಣುಗಳೂ ಅತ್ತ ಹಾದುವು ; ಎಲ್ಲ ಹುಬ್ಬುಗಳೂ ಪ್ರಶ್ನೆ ಕೇಳಿದುವು !

ಪ್ರತಿರೋಧಗೈದ ವ್ಯಕ್ತಿ ಎದ್ದು ನಿಂತ. ಅವನ ನಿಲುವಿನಲ್ಲಿ ಮಂದರದ ಗಾಂಭೀರ್ಯವಿತ್ತು, ಮುಖದಲ್ಲಿ ಪೂರ್ಣಚಂದ್ರಮನ ಕಮನೀಯ ಶಾಂತಿಯಿತ್ತು. ಅವನ ಕಣ್ಣುಗಳಲ್ಲಿ ಕಾರುಣ್ಯದ ಕಡಲುಗಳು ಉರುಳುತ್ತಿದ್ದವು. ಅವನ ತುಟಿಗಳಲ್ಲಿ ನಗೆಮಲ್ಲಿಗೆಯ ಮುಗುಳು ಅರಳುತ್ತಿತ್ತು. ಪಡುಗಡಲಿಗಿಳಿದ ಇರುಳ ಮಾಲೆಯಂತಹ ಅವನ ತಲೆಗೂದಲು ಹೆಗ್ಗತ್ತಿನಲ್ಲಿ ತೂಗುಯ್ಯಾಲೆಯಾಡುತ್ತಿತ್ತು. ಅವನದು ಎತ್ತರದ ದೇಹ, ಬಿತ್ತರದ ವೃಕ್ಷ, ತಾಳವೃಕ್ಷದ ತೋಳು, ಶಂಖಸದೃಶ ಕಂಬುಗ್ರೀವ. ನೋಡಿದ ಕೂಡಲೇ ಅವನಿಗೆ ನಮಿಸಬೇಕು ಎಂಬ ಭಾವನೆ ಮೂಡುತ್ತಿತ್ತು. ಶುದ್ಧ ಶುಭ್ರ ಶ್ವೇತ ವಸನಧಾರಿಯಾದ ಆತ ಬೆಳದಿಂಗಳುಡೆಯುಟ್ಟ ಹಿಮಶಿಖರದಂತೆ ಕಾಣುತ್ತಿದ್ದ. ಆ ತೇಜಸ್ವೀ ತರುಣನನ್ನು ನೋಡುತ್ತಲೇ ಅವಾಕ್ಕಾಗಿ ಕುಳಿತ ಅಲ್ಲಾವುದ್ದೀನ್ ಬಾದಷಹ. ಅವನ ಕಣ್ಣುಗಳು ಪ್ರಶ್ನೆಗಳನ್ನು ಮುಕ್ಕಳಿಸಲೆಂದು ಬಾಯ್ತೆರೆದವು. ಅಷ್ಟರಲ್ಲಿ ತಾನು ನಿಂತಲ್ಲಿಂದಲೆ ಶಿರಬಾಗಿ ಮುಜುರೆ ಸಲ್ಲಿಸಿ ನುಡಿದ.

'ಮಾಫ್ ಕೀಜೀಯೆ ಹುಜೂರ್, ಅಧಿಕೃತ ಆಹ್ವಾನವಿಲ್ಲದೆ ಆಸ್ಥಾನವನ್ನು ಪ್ರವೇಶಿಸಿ, ಧಾರ್ಮಿಕ ಜಿಜ್ಞಾಸೆಯ ಮಧ್ಯೆ ಬಾಯಿ ಹಾಕಿ ಸಭಾ ಮರ್ಯಾದೆಗೆ, ಗಾಂಭಿರ್ಯಕ್ಕೆ ಭಂಗ ತಂದದ್ದಕ್ಕಾಗಿ ಮೊದಲು ಈ ವಿದ್ವತ್ ಸಭೆಯಲ್ಲಿ ಕ್ಷಮೆಯಾಚಿಸುತ್ತೇನೆ. ನಾನು ....'

ಅಷ್ಟರಲ್ಲಿ ಬಾದಶಹನ ಬಳಿ ಆಸೀನರಾಗಿದ್ದ ಸೈಯದ್ ಕಿರ್ಮಾನಿ 'ಅಲ್ಲಾಹ್ ಕೀ ಖಸಂ ! ಮಹೋದಯ್, ಇವರು ಮಹಾ ಮೇಧಾವಿ ಮಹಮೂದ್ ಗಾವಾನರು. ಪರ್ಷಿಯಾ ದೇಶದ ಪ್ರಸಿದ್ಧ ವ್ಯಾಪಾರಿ ಮನೆತನದಲ್ಲಿ ಕ್ರಿ. ಶ. ೧೪೧೧ರಲ್ಲಿ ಹುಟ್ಟಿದವರು. ಅರೇಬಿಕ್ ಮತ್ತು ಪರ್ಷಿಯನ್ ಭಾಷೆಗಳಲ್ಲಿ ಯೋಗ್ಯ ಶಿಕ್ಷಣ ಪಡೆದ ಇವರು 'ರೌಜಿತ್-ಉಲ್-ಇನ್ಸಾ' ಎಂಬ ಪತ್ರಸಂಗ್ರಹವನ್ನೂ , 'ದಿವಾನ್-ಇ-ಆಪ್ರ್' ಎಂಬ ಬರಹ ಸಂಕಲನವನ್ನೂ ಪರ್ಷಿಯನ್ ಭಾಷೆಯಲ್ಲಿ ರಚಿಸಿದ್ದಾರೆ. ಇವರು ಪ್ರಪಂಚ ಪರ್ಯಟನ ಕಾರ್ಯವನ್ನು ಕೈಗೊಂಡು ನಮ್ಮಲ್ಲಿಗೂ ಬಂದರು. ಇವರು ಮನೆತನದ ಕಸುಬಾದ ವ್ಯಾಪಾರವನ್ನು ಕೈಬಿಟ್ಟವರಲ್ಲ. ಆದರೆ ಇವರದು ಲೌಕಿಕವಾದ ವಸ್ತು ಒಡವೆಗಳ ವ್ಯಾಪಾರವಷ್ಟೇ ಅಲ್ಲ, ಆಧ್ಯಾತ್ಮದ ಅಮೀರ್ ಬೇಪಾರಿಗಳೂ ಹೌದು. ಇವರು ಭಾರತಕ್ಕೆ ಬಂದು ಇಂದಿಗೆ ಐದು ವರ್ಷಗಳಾದವು. ಅಪರೋಕ್ಷ ಜ್ಞಾನ, ಆಧ್ಯಾತ್ಮದ ನಿಲವು, ವ್ಯಾಪಾರದಲ್ಲಿನ ಆಸಕ್ತಿ, ವ್ಯವಹಾರಜ್ಞಾನ ಪರಿಣತಿ, ಜ್ಞಾನದಾಹ, ಧರ್ಮ ಭೀರುತ್ವ, ದಯಾಪರತೆ, ದೀನದಲಿತರ ಅಬಲೆಯರ ಅನಾಥರ ಶೋಷಕರ ದರಿದ್ರರ ಬಗೆಗಿನ ನೈಜ ಕಳಕಳಿ. ಒಟ್ಟಿನಲ್ಲಿ ಮಾನವೀಯ ಮೌಲ್ಯಗಳ ಗಣಿ ಈ ಮಹಮೂದ್ ಗಾವಾನರು !' ಎಂದು ಪರಿಚಯಿಸಿದರು.

'ಭೇಷ್ ! ಹಾಗಾದರೆ ಇವರು ಅಪರೂಪದ ವ್ಯಕ್ತಿ ! ಏನು ಗಾವಾನರೆ, ಪೂಜ್ಯ ಗುರುಗಳ ಮುಕ್ತಕಂಠದಿಂದ ಹೊಗಳಿಸಿಕೊಂಡ ನೀವು ನಿಜಕ್ಕೂ ಧನ್ಯರು, ಮಾನ್ಯರು !

'ಖಾವಂದ್, ಎಲ್ಲ ಗೌರವಗಳೂ ಅವರಿಗೇ ಸಲ್ಲುವಂಥವು. ಶಿಷ್ಯನ ಪ್ರಗತಿ ಗುರುವಿನ ಘನತೆ ಅಲ್ಲವೆ, ನಾನವರ ಪಾದಧೂಳು ! ನಾನೊಂದು ಹನಿ, ಅವರೊಂದು ಸಾಗರ !'

'ಅಹುದು ಬಾದಶಹರೆ' ಮಧ್ಯೆ ಬಾಯಿ ಹಾಕಿದರು ಕಿರ್ಮಾನಿ, 'ಅವರು ಒಂದು ಸಿಹಿನೀರಿನ ಕೊಳದ ಹನಿ, ನಾನು ಉಪ್ಪು ನೀರಿನ ಸಾಗರ, ಸಮುದ್ರ ! ಅಲ್ಲವೆ ಗಾವಾನ್ ?'

ಸಭೆಗೆ ಸಭೆಯೇ ಘೊಳ್ ಎಂದು ನಕ್ಕಿತು. 'ನೋಡಿ, ಗಾವನರೆ, ಮರ ಅದರ ಫಲದಿಂದ ಗುರುತಿಸಲ್ಪಡುತ್ತದೆ, ಗುರು ಅವನ ಶಿಷ್ಯನಿಂದ ಗುರುತಿಸಲ್ಪಡುತ್ತಾನೆ.'

ಗಾವಾನ್ ಮತ್ತೂ ನಾಚಿ ತಲೆಬಾಗಿದ. 'ಜಹಾಪನಾ, ತಮ್ಮ ನುಡಿಗಳು ನನಗೆ ಆಶೀರ್ವಾದವಿದ್ದಂತೆ, ಶಿರಸಾ ಮನ್ನಿಸುತ್ತೇನೆ. ಅಂತೆಯೇ ಪೂಜ್ಯ ಗುರುಗಳು ಹೇಳಿದ್ದು ಈ ಗಾವಾನ್ ಎಲ್ಲವೂ ಆಗಿದ್ದಾನೆ ಎಂದಲ್ಲ, ಅಗಬೇಕಾಗಿದೆ ಎಂಬುದರ ಸೂಚನೆ ! ಏನೇ ಇರಲಿ, ಅವರ ಕರುಣೆಯ ಕಂದ ನಾನು, ಅವರ ವಾತ್ಸಲ್ಯದ ವಕ್ಷದಲ್ಲಿ ಆಧ್ಯಾತ್ಮದ ಅಮೃತಪಾನ ಮಾಡಿ ಆನಂದಿಸಿದ್ದೇನೆ. ಪರ್ಷಿಯಾ ದೇಶದಲ್ಲಿದ್ದಾಗಲೇ ಅವರ ಆಧ್ಯಾತ್ಮ ಭೂಯಿಷ್ಠ ಧವಳ ಕೀತಿ ದಶದಿಕ್ಕುಗಳಲ್ಲೂ ವ್ಯಾಪಿಸಿಕೊಂಡಿತ್ತು. 'ಸಲ್ಲಲ್ಲಾ ಹು ಅಲೈಹಿ ವ ಸಲ್ಲಮ್' ಪ್ರವಾದಿ ಮುಹಮ್ಮದ್ ಮಹೋದಯರ ಪಾವನಮಯ ಜೀವನವನ್ನು ಸಾಮಾನ್ಯರಿಗೂ ಅರ್ಥವಾಗುವಂತಹ ಸರಳವಾದ ಭಾಷೆಯಲ್ಲಿ ಭಾರತೀಯ ಬಂಧುಗಳ ಮನೆ ಮನಗಳಿಗೆ ಮುಟ್ಟಿಸಿದ ಮಹನೀಯರು. ಸಪ್ತ ಆಸ್ಮಾನ್‌ಗಳ ಆಚೆಯಿಂದ ಜೀಬ್ರಿಲನ ಮೂಲಕ ಅಲ್ಲಾಹ್‌ನಿಂದ ಅವತೀರ್ಣಗೊಂಡ ದಿವ್ಯಸಂದೇಶಗಳ ಸದ್ಗ್ರಂಥವೆನಿಸಿದ ಪವಿತ್ರ ಕುರ್‌ಆನ್‌ನ ಸಂದೇಶಗಳನ್ನು ಪ್ರವಾದಿ ಮುಹಮ್ಮದ್ (ಸ)ರವರು ಜಗತ್ತಿಗೆ ಬಿತ್ತರಿಸಿದಂತೆ, ಪೂಜ್ಯ ಪರಮೇಷ್ಠಿ ಸ್ವರೂಪರಾದ ಗುರುವರ್ಯ ಕಿರ್ಮಾನಿ ಮಹೋದಯರು ಬೋಧಿಸುತ್ತಾ, ಸಂದೇಶಗಳನ್ನು ತಮ್ಮ ಜೀವನದಲ್ಲೂ ಅನುಷ್ಠಾನಕ್ಕೆ ತರುತ್ತಾ ನಡೆಗಲಿತು, ನಡೆಗಲಿಸುತ್ತಿರುವ ಸಂದೇಶ ಸಂವಾಹಕರು, ಪೂಜ್ಯರು ಕುರ್‌ಆನ್ ಬದುಕಿದವರು ! ಇವರ ಖ್ಯಾತಿ ಕೇಳಿ, ಇವರ ಪಾದ ಸಾನ್ನಿಧ್ಯದಲ್ಲಿ ಶಿಷ್ಯನಾಗಿ ಕುಳಿತು ಇಸ್ಲಾಂ ಧರ್ಮದ ಅಂತರಾತ್ಮವರಿಯುವ ಹಂಬಲದಿಂದ ಪರ್ಷಿಯದಿಂದ ಭಾರತಕ್ಕೆ ಬಂದೆ. ಭಾರತದ ಈ ಕರ್ನಾಟಕಕ್ಕೆ ಬಂದೆ. ಪೂಜ್ಯರು ಅಪ್ಪಣೆ ಕೊಡಿಸಿದಂತೆ ನಾನು ವೃತ್ತಿಯಲ್ಲಿ ವ್ಯಾಪಾರಿ. ಇಲ್ಲಿ ನನ್ನ ವ್ಯಾಪಾರ ಚೆನ್ನಾಗಿ ಕುದುರಿತು. ಬಹು ಲಾಭ ಗಳಿಸಿತು ! ನಾನು ನಿಜಕ್ಕೂ ಶ್ರೀಮಂತನಾದೆ ; ಹೃದಯ ಶ್ರೀಮಂತನಾದೆ. ಮುಹಮ್ಮದ್ (ಸ)ರವರ ಸದಾಶಯದಂತೆ ನಾನಿಲ್ಲಿ ಮನುಷ್ಯನಾದೆ ಕಿರ್ಮಾನಿ ಗುರುಗಳ ಕೃಪೆಯಿಂದ.

'ತುಂಬಾ ಸಂತೋಷ ಗಾವಾನರೆ. ತಮಗೆ ಬಿದರೆಯ ಸುಲ್ತಾನತ್ ಶುಭಾಶಯ ಕೋರುತ್ತದೆ ಮತ್ತು ಹಾರ್ದಿಕವಾಗಿ ಈ ದರ್ಬಾರಿಗೆ ಸ್ವಾಗತಿಸುತ್ತದೆ'

'ಕೃತಾರ್ಥನಾದೆ ಖಾವಂದ್ !'

ಅದಿರಲಿ. ವಿದ್ವತ್ ಗೋಷ್ಠಿಯ ಚರ್ಚೆಯೆಡೆಯಲ್ಲಿ 'ಅದು ಸಾಧುವಲ್ಲ'ವೆಂದು ಘೋಷಿಸಿದಿರಿ. ಯಾವುದು ಸಾಧು ? ಯಾವುದು ಅಸಾಧು ? ವಿವರಿಸಬಲ್ಲಿರಾ ?

'ಪ್ರಭು ಆಜ್ಞೆ, ಪೀಠದ ಅನುಮತಿ ಪಡೆದು, ಶ್ರೀಗುರು ಸಾನ್ನಿಧ್ಯದಲ್ಲಿ, ಆತ್ಮೀಯ ಬಂಧುಗಳೆ, ಈ ಕ್ಷಣದ ಹಿಂದೆ ವಿದ್ವನ್ಮಂಡಲಿ ವಿಶ್ವಧರ್ಮವು ಸಂಖ್ಯಾಬಲದ ಮೇಲೆ ನಿರ್ಣೀತವಾಗತಕ್ಕದ್ದು ಎಂಬ ಅಭಿಪ್ರಾಯಕ್ಕೆ ಬಂತು. ನಾನು ಅದನ್ನು ಒಪ್ಪುವುದಿಲ್ಲ. ಏಕೆಂದರೆ ಸಂಖ್ಯಾಬಲದ ಮೇಲೆ ಧರ್ಮದ ಸ್ಥಾನ ನಿರ್ಧರಿಸ ಹೊರಟರೆ ಧರ್ಮಕ್ಕೆ ಸತ್ಯದ ಹೊಣೆಗಾರಿಕೆ ಇಲ್ಲ

ಎಂದಂತಾಗುತ್ತದೆ. ಸತ್ಯ ನಿಂತಿರುವುದು ಧರ್ಮದೆದೆಯ ಮೇಲೆ, ಅಲ್ಪಸಂಖ್ಯಾತರಿಗೊಂದು ಧರ್ಮ, ಬಹುಸಂಖ್ಯಾತರಿಗೊಂದು ಧರ್ಮ, ಧನಿಕರಿಗೊಂದು ಧರ್ಮ, ದರಿದ್ರರಿಗೊಂದು ಧರ್ಮ, ಹೆಣ್ಣಿಗೊಂದು ಧರ್ಮ, ಗಂಡಿಗೊಂದು ಧರ್ಮ ಎಂದಿಲ್ಲ ಜಗತ್ತಿನಲ್ಲಿ. ಧರ್ಮ ಒಂದೆ, ಜಾತಿ ಮತ ಪಂಥಗಳು ಬೇರೆ ಬೇರೆ. ಮರ ಒಂದು ಎಲೆ ಹಲವು, ಕೆರೆ ಒಂದು ತೆರೆ ಹಲವು. ಸಹಸ್ರ ಕಿರಣಗಳಿದ್ದರೂ ಸೂರ್ಯ ಒಬ್ಬನೆ. ಧರ್ಮ ಅಂಥದು. ನೋಡಿ, ಸಿಹಿ ತಿನಿಸುಗಳು ನೂರಾರು ರೂಪದವು. ಒಂದು ಜಿಲೇಬಿ, ಮತ್ತೊಂದು ಜಾಮೂನ್, ಇನ್ನೊಂದು ಹಲ್ವ, ಮಗದೊಂದು ಮಿಠಾಯಿ. ರುಚಿ, ಸಿಹಿ, ಕಹಿ ಅಲ್ಲ, ಖಾರ ಅಲ್ಲ, ಹುಳಿ ಒಗರು ಅಲ್ಲ. ಆದರೆ ತಿನಿಸುಗಳ ಹೆಸರುಗಳು ಬೇರೆ ; ಆಕಾರಗಳೂ ಬೇರೆ ಬೇರೆ. ಹಾಗೆ ಎಲ್ಲ ತಿಂಡಿಗಳಲ್ಲೂ ಅಂತರ್ಗತವಾಗಿರುವ ಸಿಹಿಯಂತೆ ಎಲ್ಲ ಜಾತಿಗಳ ಗರ್ಭದಲ್ಲೂ ಅಡಗಿರುವುದು ಒಂದೇ ಧರ್ಮ. ಅದು ಸಕ್ಕರೆಯಂತೆ ಒಂದೇ, ಬೇರೆ ಅಲ್ಲ. ಅದನ್ನೇ ಭಾರತೀಯ ದಾರ್ಶನಿಕರು 'ಏಕಂ ಸತ್ ವಿಪ್ರಾ ಬಹುಧಾ ವದಂತಿ' ಅಂದರು. ಇಸ್ಲಾಂ ಅಲ್ಲಾಹ್‌ನನ್ನು ಅವ್ಯಕ್ತ ಅಗೋಚರ ಅತ್ಯದ್ಭುತ ದಿವ್ಯಪ್ರಭೆ ಎಂದು ಗುರುತಿಸಿತು. ಅದನ್ನೇ ಬೌದ್ಧ ಧರ್ಮ ಅನಾತ್ಮ ಬೋಧೆಯನ್ನು ಎತ್ತಿಹಿಡಿದು ಅದೊಂದು ಚೈತನ್ಯ ಎಂದು ಹೇಳಿತು. ಆತ್ಮತತ್ವ ಪ್ರತಿಪಾದನೆಗೈದ ಅದ್ವೈತ 'ಅಹಂಬ್ರಹ್ಮಾಸ್ಮಿ' ಎಂದು ಜೀವಾತ್ಮ ಪರಮಾತ್ಮರು ಅಭಿನ್ನರು, ಒಂದೇ ವಸ್ತುವಿನ ಎರಡು ತತ್ವಗಳು ಎಂದಿತು. ಆ ಅದ್ವೈತದಿಂದ ಟಿಸಿಲೊಡೆದ ದ್ವೈತ ಜೀವಾತ್ಮ ಬೇರೆ, ಪರಮಾತ್ಮ ಬೇರೆ ಎಂದು ದ್ವೈಧಿಭಾವವನ್ನು ಸಾರಿತು. ವಿಶಿಷ್ಟಾದ್ವೈತ ಅದ್ವೈತದೊಳಗಣ ಈಶ್ವರ ಪಾರಮ್ಯವನ್ನು ಪ್ರತಿಪಾದಿಸಿತು. ಶಕ್ತಿ ವಿಶಿಷ್ಟಾದ್ವೈತ ಅಥವಾ ಶಿವಾದ್ವೈತವು ಶಿವಜೀವರಿಬ್ಬರ ಸೃಷ್ಟಿಗೂ ಕಾರಣವಾದ ಮೂಲ ಶಕ್ತಿ ಒಂದಿದೆ, ಆ ಶಕ್ತಿಯ ವೈಶಿಷ್ಟ್ಯವನ್ನು ಪ್ರತಿಪಾದಿಸುವುದರಿಂದ ಅದು ಶಕ್ತಿ–ವಿಶಿಷ್ಟ–ಅದ್ವೈತ ಎನ್ನಿಸಿಕೊಂಡಿತು. ಸಾಂಖ್ಯ, ಯೋಗ, ವೈಶೇಷಿಕ, ನ್ಯಾಯ, ಪೂರ್ವಮೀಮಾಂಸಾ ಮತ್ತು ಉತ್ತರ ಮೀಮಾಂಸಾ ಎಂಬ ಷಡ್ದರ್ಶನಗಳ ಸಾರವೂ ಇದೇ ಆಗಿದೆ.'

'ಗಾವನ್ ಜಿ, ಧರ್ಮ ದರ್ಶನಗಳು ಎಂದೆಂದಿಗೂ ಸ್ಪಷ್ಟವಾಗಿಯೇ ಇವೆಯಲ್ಲವೆ ?'

'ಅಹುದು ಪ್ರಭು, ಅವುಗಳಲ್ಲಿ ಮುಚ್ಚುಮರೆ ಎಂಬುದೇ ಇಲ್ಲ. ಅವು ತೆರೆದ ಪುಸ್ತಕಗಳು'

'ವಸ್ತುಸ್ಥಿತಿ ಹೀಗಿದ್ದರೂ ಅವುಗಳನ್ನು ಕುರಿತ ಜಿಜ್ಞಾಸೆ ಏಕೆ ?'

'ಏಕೆ ಅಂದರೆ, ಸತ್ಯಾನ್ವೇಷಣೆ ಎಂದೆಂದಿಗೂ ಮುಗಿಯದ ಕಥೆಯಾದ್ದರಿಂದ' 'ಮುಕ್ತಾಯ ಇಲ್ಲವೆ ?' 'ಮುಕ್ತಾಯ ಹೇಗೆ ಸಾಧ್ಯ ಪ್ರಭು ? ಆರಂಭವೇ ತಿಳಿಯದಿರುವಾಗ ಮುಕ್ತಾಯವೆಲ್ಲಿಯದು ಹೇಳಿ ?'

'ಅಂದರೆ....!'

'ಅಂದರೆ ಜಹಾಂಪನಾ, ನಮ್ಮ ಪರ್ಷಿಯಾ ದೇಶದ ಓರ್ವ ದಾರ್ಶನಿಕ ಕವಿಯ ನುಡಿ ಕೇಳೋಣವಾಗಲಿ.

ಮಾ ಜಿ ಅಫಜ್ ಓ ಜಿ

ಅಂಗಾಮಿ ಜಹಾನ್ ಬಿ–ಖಬರ್ – ಈಮಾ

ಅವ್ವಾಲ್ – ಓ – ಚಿಖರೀ ಇನ್

ಕುಹ್ನಾ ಕಿತಾಬ್ ಉಸ್ತಾದ್ ಅಸ್ತ್

ಅಂದರೆ,

ಮೊದಲ ಮತ್ತು ಕಡೆಯ ಹಾಳೆಗಳನ್ನು ಕಳೆದುಕೊಂಡ ಪುಸ್ತಕ ಈ ವಿಶ್ವ. ಈ ಪುಸ್ತಕ ಹೇಗೆ ಆರಂಭವಾಯಿತು ಗೊತ್ತಿಲ್ಲ ; ಹೇಗೆ ಮುಕ್ತಾಯಗೊಂಡಿದೆ ತಿಳಿದಿಲ್ಲ. ಮನುಷ್ಯ ತನಗೆ ಬುದ್ಧಿ ಬಂದಂದಿನಿಂದಲೂ ಕಳೆದುಹೋದ ಆ ಹಾಳೆಗಳನ್ನು ಹುಡುಕುತ್ತಿದ್ದಾನೆ. ಆ ಹುಡುಕುವಿಕೆ ಮತ್ತು ಅದರ ಪರಿಣಾಮವನ್ನೇ"ತತ್ವಜಿಜ್ಞಾಸೆ" ಎಂದು ಕರೆಯುವುದು.

'ತತ್ವಾನ್ವೇಷಣೆಯ ನಿರಂತರತೆಯನ್ನು ಕುರಿತ ಈ ರೂಪಕ ತುಂಬಾ ಚೆನ್ನಾಗಿದೆ. ಅಂತೆಯೇ ತುಸು ವಿವರಣೆ ನೀಡುವಿರಾ ಗಾವಾನ್‌ಜಿ ?'

'ಹುಜೂರರ ಇಚ್ಛೆಯಂತೆ, ಕೃಪೆಮಾಡಿ ಲಾಲಿಸೋಣವಾಗಲಿ, ಮಹಾಪ್ರಭು, ಪುಸ್ತಕ ಪ್ರತಿಮೆಯ ಮೂಲಕ ವಿಶ್ವರಹಸ್ಯವನ್ನು ಅರ್ಥೈಸಲು ನಡೆಸಿರುವ ಈ ಯತ್ನದಲ್ಲಿ ಮೂರು ಅಂಶಗಳು ಸ್ಪಷ್ಟ. ಒಂದು, ಈ ವಿಶ್ವ ಎಂತಹ ನಿಗೂಢ ವಸ್ತು ಎಂಬ ವಿಸ್ಮಯಕಾರಕ ಚಿಂತನೆ ; ಎರಡು, ಮಾನವನ ಸಾಹಸ ಮತ್ತು ಅವನ ನಿರಂತರ ಅನ್ವೇಷಣೆಯ ಪ್ರಶಂಸೆ ; ಮೂರು, ಈ ಸೃಷ್ಟಿ ಕೇವಲ ತರ್ಕದಿಂದ ನಿರ್ಧರಿತವಾಗುವ ವಸ್ತುವಲ್ಲ ಎಂಬ ಕಟು ಸತ್ಯ ! ಈ ಅಂಶಗಳನ್ನು ಗರ್ಭೀಕರಿಸಿಕೊಂಡಿರುವ ಈ ಕಾವ್ಯಖಂಡದ ಅಂತಃಸತ್ವವನ್ನು ಮೆಲುಕು ಹಾಕಹೊರಟಾಗ ನಮ್ಮೆದುರಿನಲ್ಲಿ ಒಂದು ಹೊಸ ಪ್ರಪಂಚವೇ ತೆರೆದುಕೊಳ್ಳುತ್ತದೆ. ನಾವದನ್ನು ಕಂಡು ವಿಸ್ಮಿತರಾಗುತ್ತೇವೆ. ಅಲ್ಲಿ ಮಾತು ಸೋತು ಮೌನ ಮಾತಾಡುತ್ತದೆ. ವಿಶ್ವ ಎಂದರೆ ಕೇವಲ ಕಣ್ಣಿಗೆ ಭೂಮಿಯಷ್ಟೇ ಅಲ್ಲ, ಸೂರ್ಯ ಚಂದ್ರ ತಾರಾ ನೀಹಾರಿಕೆಗಳ ಜ್ಯೋತಿರ್ವಲಯ ಕೂಡ. ಇದರ ಉಗಮ ಊಹಾತೀತ. ಶೂನ್ಯದಿಂದ ಸೃಷ್ಟಿಯಾಯಿತೆಂದಾದರೂ ಅದರ ಪರಿಣಾಮ ಪ್ರಕ್ರಿಯೆ ಪ್ರಶ್ನಾತೀತ. ಅದು ಎಷ್ಟು ವಿಶಿಷ್ಟವೊ ಎಷ್ಟು ವೈವಿಧ್ಯವೊ ಅಷ್ಟು ವಿಚಿತ್ರ ಕೂಡ. ಎಣ್ಣೆ ಇದ್ದು ಎಳ್ಳು ನೆನೆಯದ, ಬೆಂಕಿ ಇದ್ದು ಕಲ್ಲು ಸಿಡಿಯದ, ಬೀಜದಲ್ಲಿನ ಭ್ರೂಣ ನವಭೂಜದ ಕನಸು ಕಾಣುವ, ಶರಧಿಯ ಮೇಲಣ ಧರೆ ಕರಗದಂತಹ ಅಂಬರಕ್ಕೆ ಗದ್ದುಗೆ ಬೋದಗೆಗಳು

ಇಲ್ಲದಂತಿರಿಸಿರುವ, ಆತ್ಮವಿದ್ದೂ ಅಗೋಚರವಾಗಿರುವಂತೆ ಬೈಚಿಟ್ಟಿರುವ, ಆಕಾಶಕ್ಕೆ ನೀಲಿ, ಬಳಿದು, ಅರಣ್ಯದ ವೃಕ್ಷರಾಜಿಗೆ ಹಸಿರು ಮೆತ್ತಿದ, ಹೂವು ಹೂವಿಗೆ ಭಿನ್ನ ಭಿನ್ನ ಬಣ್ಣ ಬಂಡುಗಳನ್ನು ತುಂಬಿ, ಹಕ್ಕಿಗೆ ಹಾಡು ಕಲಿಸಿರುವ ಪವಾಡ ವರ್ಣನಾತೀತ. ಸ್ಪಷ್ಟ–ದೃಷ್ಟ, ಆಕಾಶ–ಪ್ರಕಾಶ ಎಲ್ಲವೂ ಆಶ್ಚರ್ಯಜನಿತಗಳೇ. ಸೃಷ್ಟಿಯ ರಹಸ್ಯವನ್ನು ಭೇದಿಸಹೊರಟ ಉಪನಿಷತ್ತು, ಬ್ರಾಹ್ಮಣ, ಅರಣ್ಯಕಗಳು ಆ ಪರವಸ್ತುವನ್ನು ಅಚಿಂತ್ಯ, ಅನೂಹ್ಯ ಎಂದು ಸಾರಿದವು. ಯಾವ ಶಿಷ್ಟ ಸಿದ್ಧಾಂತವೂ ಆ ಪರತತ್ವದ ದ್ವಾರವನ್ನು ತಲುಪಲಾಗಲಿಲ್ಲ. ಹಾಗೆಂದು ಹೇಳಿ ಕೈಚೆಲ್ಲಿ ಕೂರುವಂತೆಯೂ ಇಲ್ಲ. ಅನ್ವೇಷಣೆ ನಿರಂತರ ಸಾಗಿದೆ ಆತ್ಮ–ಆಧ್ಯಾತ್ಮ, ಜ್ಞಾನ–ವಿಜ್ಞಾನ, ಕಲೆ–ಕಲ್ಪನೆಗಳಲ್ಲಿ. ನಮಗೆ ಹುಟ್ಟಿನ ಮೂಲ ಗೊತ್ತಿಲ್ಲ, ಸಾವಿನಾಚೆಯ ನೆಲೆಯೂ ಗೊತ್ತಿಲ್ಲ. ದೃಷ್ಟವನ್ನಷ್ಟೇ ಮಾನ್ಯ ಮಾಡಿ ಭೂಮಿ ಆಕಾಶ ಅಳೆಯುತ್ತೇವೆ. ವಿಶ್ವಜಗತ್ತಿನ ಮಾತು ಹಾಗಿರಲಿ, 'ನಾನು ಯಾರು ?' ಎಂಬ ಸಣ್ಣ ಪ್ರಶ್ನೆಗೆ ಉತ್ತರ ದೊರಕುವುದು ಕಷ್ಟ. ವಿಜ್ಞಾನ ಎಷ್ಟೇ ದುಡಿದರೂ ಸಿದ್ಧಾಂತದ ಮೇಲೆ ಸಿದ್ಧಾಂತಗಳು ಸ್ಥಾಪಿತವಾದುವೇ ಹೊರತು ಸೃಷ್ಟಿಯ ಮೂಲ ಚೂಲಗಳನ್ನರಿಯಲಾಗಲಿಲ್ಲ. ಕಲೆಯು ವಿಶ್ವವನ್ನು ಸಂಯೋಜಕ ದೃಷ್ಟಿಯಿಂದ ನೋಡಿತು. ಆದರೂ ಅದಕ್ಕೆ ಸೃಷ್ಟಿ ರಹಸ್ಯದ ಸೆರಗು ಸಿಕ್ಕಲಿಲ್ಲ.

ಆಧ್ಯಾತ್ಮ, ಕಲೆ, ವಿಜ್ಞಾನ ಎಲ್ಲ ಕ್ಷೇತ್ರಗಳೂ ಶ್ರೇಣಿಗಳೇ ಹೊರತು ವೇದಿಕೆಗಳಲ್ಲ. ವೇದಿಕೆ ಆಗಿದ್ದಿದ್ದರೆ ಒಂದಲ್ಲ ಒಂದು ದಿನ ಅದರ ಅಂತ್ಯ ಸಿಕ್ಕಿಬಿಡುತ್ತಿತ್ತು. ಶ್ರೇಣಿಯಾದ್ದರಿಂದ ಕ್ಷಿತಿಜದವರೆಗೆ ಹತ್ತಿದರೂ ಅದು ಮೇಲೇರುತ್ತಲೇ ಹೋಗುತ್ತದೆ. ಅಲ್ಲದೆ, ನೆಲೆ ಸಿಕ್ಕಿದ್ದರೆ ಅದಕ್ಕೆ ಬೆಲೆಯೇ ಇರುತ್ತಿರಲಿಲ್ಲ ಅನ್ನಿಸುತ್ತೆ. ಆದ್ದರಿಂದ, ಪ್ರಭು, ಪರವಸ್ತು ಚಪ್ಪರಿಸಿದಂತೆಲ್ಲಾ ಕರಗುವ ಕಲ್ಲುಸಕ್ಕರೆ ಅಲ್ಲ, ಮುಟ್ಟಿದಂತೆಲ್ಲಾ ಭೂಮಿಯಿಂದ ಭೂಮದವರೆಗೆ ಬೆಳೆಯುತ್ತಾ ಹೋಗುವ ಗೋಕರ್ಣದ ಆತ್ಮಲಿಂಗ ! ಆದ್ದರಿಂದಲೇ ಅದು ಮೊದಲ ಹಾಗೂ ಕಡೆಯ ಹಾಳೆಗಳನ್ನು ಕಳೆದುಕೊಂಡಿರುವ ವಿಶ್ವಶಾಲೆಯ ಪಠ್ಯಪುಸ್ತಕ !'

ಸಭೆ ಉಸಿರಾಡದೆ ಬಿಟ್ಟ ಕಣ್ ತೆರೆದ ಬಾಯ್ ಆಗಿ ಕುಳಿತಿತ್ತು. ಗಾವಾನ್ ಅದಕ್ಕೆ ಮಾತುಕೊಡುವ ನೆಪದಲ್ಲಿ 'ಜಹಾಂಪನಾ ಸಮ್ಮುಖದಲ್ಲಿ ವಿಜ್ಞಾಪನೆಗೆ ಬದಲು ಭಾಷಣವಾಯಿತು. ಕ್ಷಮಿಸೋಣವಾಗಲಿ.'

'ಹಾಗೇನಿಲ್ಲ ಗಾವಾನ್ ಜಿ, ನಿಮ್ಮ ಮಾತುಗಳಲ್ಲಿ ಚುಂಬಕ ಶಕ್ತಿ ಇದೆ. ಮೋಹಕತೆಯ ಮೂಲಕ ಮೋಡಿ ಹಾಕುತ್ತೀರಿ.'

'ಎಲ್ಲದೂ ಅಲ್ಲಾಹ್‌ನ ಕರುಣೆಯ ಪ್ರಸಾದ ಜಹಾಂಪಾನಾ !'

'ಸತ್ಯವಾಗಿ, ಆ ಕಾರಣದಿಂದಲೇ ವಾಗ್ದೇವಿ ನಿಮ್ಮ ನಾಲಗೆಯ ಮೇಲೆ ನರ್ತಿಸುತ್ತಿರುವುದು, ಗಾವಾನ್‌ಜಿ. ತಾವು ಭಾರತಕ್ಕೆ ಬಂದು ನಾಲ್ಕೈದು ವರ್ಷಗಳಾಗುತ್ತಾ ಬಂದವು. ಈ ಅವಧಿಯಲ್ಲಿ ಈ ರಾಷ್ಟ್ರದ ಬಗೆಗೆ ನಿಮ್ಮ ಅನಿಸಿಕೆಗಳೇನು ? ದಯವಿಟ್ಟು ಹೇಳುವಿರಾ'.

ಅಪ್ಪಣೆಯಾದಂತೆ, ಕೃಪೆಯಿಟ್ಟು ಲಾಲಿಸೋಣವಾಗಲಿ. ಭಾರತ ಧರ್ಮಭೂಯಿಷ್ಠ ರಾಷ್ಟ್ರ. ಇಲ್ಲಿ ಎಲ್ಲರೂ ಸೌಹಾರ್ದದಿಂದ ಮಾನವರಾಗಿ ಬದುಕು ಮಾಡುತ್ತಿದ್ದಾರೆ. ಬದುಕಿನ ಬಹುಮೌಲಿಕವಾದ ಶಾಂತಿ ಸಿಕ್ಕುವುದು ಭಾರತದಲ್ಲಿ ಮಾತ್ರ. ಅನೇಕತೆಯಲ್ಲಿ ಏಕತೆಯನ್ನು ಅಡಗಿಸಿಟ್ಟಿರುವುದು ಸೃಷ್ಟಿಯ ರಹಸ್ಯ. ಅದರ ಪ್ರತ್ಯಕ್ಷ ಪ್ರಾಯೋಗಿಕ ಕ್ಷೇತ್ರ ಈ ಪುಣ್ಯಭೂಮಿ. ಇಸ್ಲಾಂ ಅಂದರೆ ಶಾಂತಿ, ಮುಸ್ಲಿಂ ಎಂದರೆ ವಿಧೇಯ. ಈ ಎರಡೂ ಗುಣಗಳಿಗೆ ಭರತಖಂಡ ಆಡುಂಬೊಲವಾಗಿದೆ. ನಾನು ನೂರಾರು ರಾಷ್ಟ್ರಗಳನ್ನು ಕಾಲ್ಗಟ್ಟಿ ಬಂದಿದ್ದೇನೆ. ಈ ನಾಡಿನ ಶಾಂತಿ–ಸೌಹಾರ್ದತೆ, ಪ್ರೀತಿ–ವಿಶ್ವಾಸ, ಸ್ನೇಹ–ಸಹಬಾಳ್ವೆಗಳು ಎಲ್ಲೂ ಇಲ್ಲ. ಇದು ಈ ನೆಲದ ಗುಣ, ಇಲ್ಲಿನ ನೀರಿನ ಮಹತ್ವ. ಅಂತೆಯೇ 'ಭಾರತ' ಎಂಬ ಶಬ್ದಕ್ಕೆ ಒಂದು ವಿಶಿಷ್ಟಾರ್ಥವೂ ಇದೆ. ಭಾಃ = ಜ್ಯೋತಿಯಲ್ಲಿ, ರತ = ಆಸಕ್ತರಾದವರು. ಅಂದರೆ ಭಾರತೀಯರು ಜ್ಯೋತಿಕಾಮಿಗಳು. ಅರ್ಥಕಾಮಿಗಳಲ್ಲ, ಕೀರ್ತಿಕಾಮಿಗಳೂ ಅಲ್ಲ. ಅವರು ಜ್ಞಾನಾಪೇಕ್ಷಿಗಳು. ಜ್ಯೋತಿ ಜ್ಞಾನದ ಸಂಕೇತ.

'ಇಂತಹ ಭವ್ಯ ಭಾವನೆ ಬೆಳೆದಿದ್ದರೂ ಭಾರತೀಯರಲ್ಲಿ ಬಹಳ ಕಾಲದವರೆಗೆ ಆ ಎಚ್ಚರವೇ ಇರಲಿಲ್ಲ. ಒಂದರ್ಥದಲ್ಲಿ ಇಂದೂ ಇಲ್ಲ ಏಕೆ ?'

'ಪರ್ಷಿಯಾ ದೇಶದಲ್ಲಿ ಪ್ರಚಲಿತವಿರುವ ಒಂದು ಕನ್ನಡಿ ಕತೆ ಇದೆ ಹೇಳಲೆ ?'

'ಅವಶ್ಯವಾಗಿ.'

'ಕನ್ನಡಿಯ ಹೆಸರನ್ನೇ ಕೇಳದಿದ್ದ ಪರ್ಷಿಯಾ ದೇಶದ ಒಂದು ಹಳ್ಳಿ. ಅಲ್ಲಿ ಒಂದು ಚಿಕ್ಕ, ಚೊಕ್ಕ ಸಂಸಾರ. ಗಂಡ ಅಬ್ದುಲ್ಲ, ಹೆಂಡತಿ ಆಯಿಷಾ. ಅವರದು ಹಾಲು ನೀರಿನಂತಹ ಅನ್ಯೋನ್ಯ ದಾಂಪತ್ಯ. ಆ ಹಳ್ಳಿಗೇ ಮಾದರಿ ಕುಟುಂಬ. ನೋಡಿದವರು ಹೊಟ್ಟೆಕಿಚ್ಚುಪಟ್ಟುಕೊಳ್ಳುವಂಥಾ ಪ್ರೀತಿಪೂರ್ಣ ಗ್ರಾಹಸ್ಥ ಜೀವನ ಅವರದು. ಒಮ್ಮೆ ಆ ಸಂಸಾರದಲ್ಲಿ ವಿರಸ ಉಂಟಾಯಿತು. ಅದಕ್ಕೆ ಕಾರಣ ಮನೆಯ ಯಜಮಾನನಿಗೆ ಒಂದು ಚಿಕ್ಕ ಕನ್ನಡಿ. (ಅಂದಿನವರೆಗೂ ಆ ಊರಿನವರು ಕನ್ನಡಿಯನ್ನೇ ನೋಡಿರಲಿಲ್ಲ.) ಅದನ್ನೆತ್ತಿ ತನ್ನ ಮುಖದ ಮುಂದೆ ಹಿಡಿದುಕೊಂಡ. ಅದರಲ್ಲಿ ಅವನ ಪ್ರತಿಬಿಂಬ ಕಾಣಿಸಿತು. ಅದು ತನ್ನದೇ ಮುಖದ ಬಿಂಬ ಎಂದು ತಿಳಿಯುವಷ್ಟು ಆತ್ಮಜ್ಞಾನ ಅವನಿಗಿರಲಿಲ್ಲ. ಆತ ತೀರಿಹೋದ ತನ್ನ ಅಜ್ಜನನ್ನು ನೋಡಿದ್ದ ಹುಡುಗನಾಗಿದ್ದಾಗ. ಅದು ಅವನ ಭಾವಚಿತ್ರವೆಂದು ಭಾವಿಸಿದ. ಅಜ್ಜನ ಪ್ರೀತಿ ನೆನಪಿಗೆ ಬಂದು ದುಃಖವಾಯಿತು ಅಬ್ದುಲ್ಲನಿಗೆ. ತಾತನ ಬಗೆಗೆ ಭಕ್ತಿಯೂ ಮೂಡಿತು. ಕನ್ನಡಿಯ ಆ ಬಿಂಬವನ್ನು ಬಲಗೈಯಿಂದ ಮುಟ್ಟಿ ಕಣ್ಣಿಗೊತ್ತಿಕೊಂಡ. ಅದೇ ರೀತಿ ತನ್ನ ತಾತನ ನೆನಪಾದಾಗಲೆಲ್ಲಾ ಆತ ಕನ್ನಡಿಯನ್ನು ತನ್ನ ಕಿಸೆಯಿಂದ ತೆಗೆಯುವುದು, ನೋಡುವದು,

ಕಣ್ಣಿಗೊತ್ತಿಕೊಳ್ಳುವುದು, ತನ್ಮೂಲಕ ತನ್ನ ಭಕ್ತಿಪೂರ್ವಕ ಪ್ರಣಾಮಗಳನ್ನು ಅಜ್ಜನಿಗೆ ಅರ್ಪಿಸುವುದು. ಮತ್ತೆ ಕಿಸೆಯಲ್ಲಿ ಭದ್ರಪಡಿಸುವುದು. ಹೀಗೆಯೇ ನಡೆಯಿತು ಅವನ ಪಿತೃಭಕ್ತಿ ಕ್ರಿಯೆ.

ಯಜಮಾನರ ಈ ವರ್ತನೆ ಹೆಂಡತಿಯಲ್ಲಿ ಸಂದೇಹ ಹುಟ್ಟಿಸಿತು ಸಹಜವಾಗಿ. ಅವಳು ಗಂಡನಿಲ್ಲದ ವೇಳೆಯಲ್ಲಿ ಗೂಟಕ್ಕೆ ತಗಲು ಹಾಕಿದ್ದ ಅಂಗಿಯ ಜೇಬಿನಿಂದ ಆ ಕಿರು ಕನ್ನಡಿಯನ್ನು ತೆಗೆದು ಅದರಲ್ಲೇನಿದೆಯೆಂದು ಕುತೂಹಲದಿಂದ ತನ್ನ ಮುಖದ ಮುಂದೆ ಹಿಡಿದು ನೋಡಿದಳು. ಅದರಲ್ಲಿ ಅವಳ ಮುಖ ಕಾಣಿಸಿತು. ಅವಳಿಗೂ ಆತ್ಮಪ್ರಜ್ಞೆ ಇರಲಿಲ್ಲವಾದ್ದರಿಂದ ತನ್ನ ಮುಖದ ಬಿಂಬ ಎಂಬ ಅರಿವು ಆಗಲಿಲ್ಲ. ಯಾವಳೊ ಒಬ್ಬ ಯುವತಿಯ ಚಿತ್ರ ಎಂದು ಭಾವಿಸಿದಳು. 'ಓಹೋ! ನನ್ನ ಗಂಡ ಯಾವಳನ್ನೋ ಪ್ರೇಮಿಸಿ, ನನಗೆ ಮೋಸ ಮಾಡುತ್ತಿದ್ದಾನೆ. ಅವಳ ಭಾವಚಿತ್ರವನ್ನು ತನ್ನ ಕಿಸೆಯಲ್ಲಿಟ್ಟುಕೊಂಡು ನೆನಪಾದಾಗಲೆಲ್ಲಾ ತೆಗೆತೆಗೆದು ನೋಡಿ ಮುತ್ತಿಟ್ಟು ಬಚ್ಚಿಡುತ್ತಿದ್ದಾನೆ ಎಂದು ಊಹಿಸಿದಳು.

ಸರಿ, ಗೃಹಿಣಿಗೆ ಗಂಡನ ಬಗೆಗೆ ಸಂಶಯ ಬಂದರೆ ಗೃಹದಲ್ಲಿ ಶಾಂತಿ ಇರಲು ಸಾಧ್ಯವೆ ? ಆ ಸದ್ಗೃಹಸ್ಥನ ಮನೆ ಕುರುಕ್ಷೇತ್ರವಾಯಿತು. ಮನೆಯಲ್ಲಿನ ತಟ್ಟೆ ತಂಬಿಗೆ ಲೋಟ ಸೌಟು ಎಲ್ಲಾ ಮಾತಾಡತೊಡಗಿದವು. ಹಾಲಿನಂತಿದ್ದ ಆ ಸಂಸಾರ ಒಡೆದು ಚೂರಾಗುವ ಮಟ್ಟಕ್ಕೂ ಹೋಯಿತು. ಸುದ್ದಿ ಹೇಗೋ ಆ ಊರಿನಲ್ಲಿದ್ದ ಧರ್ಮಗುರುಗಳ ಕಿವಿಗೂ ಬಿತ್ತು. ಗುರುಗಳು ಅಬ್ದುಲ್ಲನ ಮನೆಗೆ ಬಂದರು. ಬಂದು, ಗಂಡಹೆಂಡಿರಿಬ್ಬರನ್ನೂ ಕೂರಿಸಿಕೊಂಡು ವಿಚಾರಣೆ ನಡೆಸಿದರು. ಆಯಿಷಾ ಮೊದಲು ಆಪಾದಿಸಿದಳು. ಆಪಾದನೆಯನ್ನು ನಿರಾಕರಿಸಿದ ಅಬ್ದುಲ್ಲ ; ಅದು ತನ್ನಜ್ಜನ ಭಾವಚಿತ್ರವೆಂದು ಸಮರ್ಥಿಸಿಕೊಂಡ. ಸಮಾಧಾನದಿಂದ ಇಬ್ಬರ ಅಹವಾಲುಗಳನ್ನು ಕೇಳಿದ ಗುರು ಆ ಕನ್ನಡಿಯನ್ನು ಈಸಿಕೊಂಡು ನೋಡಿದರು. ಅದರಲ್ಲಿ ತಮ್ಮ ಬಿಂಬ ಕಾಣಿಸಿತು. ಕೂಡಲೇ ಅಚ್ಚರಿಗೊಂಡವರಾಗಿ, ಆ ದಂಪತಿಗಳ ದಡ್ಡತನಕ್ಕೆ ನಕ್ಕು ಕೇಳಿದರು. 'ಕೇಳಿ ಇದು ಭಾವಚಿತ್ರ. ನಿಜ. ಆದರೆ ನೀನು ಹೇಳಿದಂತೆ ನಿನ್ನ ಅಜ್ಜನದೂ ಅಲ್ಲ. ಇವಳು ಹೇಳಿದಂತೆ ಒಬ್ಬ ತರುಣೀಮಣಿಯದೂ ಅಲ್ಲ. ಇದು ಓರ್ವ ಧರ್ಮಗುರುವಿನದು' ಎಂದರು. ಅವರಿಗೂ ಅದು ತಮ್ಮ ಪ್ರತಿಬಿಂಬವೆಂಬ ಪರಿಜ್ಞಾನವಿರಲಿಲ್ಲ.

ಈ ದೇಶದ ಸ್ಥಿತಿ ಆತ್ಮಜ್ಞಾನವಿಲ್ಲದ ಆ ಮೂವರ ಸ್ಥಿತಿಯಂತಿದೆ. ಕಥೆಯ ಪ್ರತಿಮೆಯಲ್ಲಿ ಪ್ರತಿಪಾದಿತವಾದಂತೆ ಧರ್ಮದ ಹೆಸರಿನಲ್ಲಿ ಜಾತಿಯನ್ನು ಜೋಪಾನ ಮಾಡುತ್ತಿದ್ದ ಧರ್ಮ ಗುರುಗಳು, ತಮ್ಮ ಆಮೋದ ಪ್ರಮೋದಗಳಲ್ಲಿ ಮುಳುಗಿಹೋಗಿದ್ದ ರಾಜ ಮಹಾರಾಜರುಗಳು, ಮುಗ್ಧ ಮನಸ್ಕರಾದ ಜನಸಾಮಾನ್ಯರು – ಈ ಮೂವರಲ್ಲೂ ಆತ್ಮಜ್ಞಾನವಿಲ್ಲ. ಅಂದಮೇಲೆ ರಥ ಸಾಗುವುದಾದರೂ ಹೇಗೆ ?

ಮಹಾಪ್ರಭು, ಮನುಷ್ಯನಿಗಿರುವಂತೆ ರಾಷ್ಟ್ರಕ್ಕೂ ಒಂದು ಮನಸ್ಸೆಂಬುದಿದೆ. ಅದು ಸಮಷ್ಟಿ ಚಿತ್. ಅದರಲ್ಲಿ ಆತ್ಮಜ್ಞಾನ ಮತ್ತು ಆತ್ಮಪ್ರತ್ಯಯ ಅಭಾವವಾದರೆ ರಾಷ್ಟ್ರದ ಅವನತಿ ಕಟ್ಟಿಟ್ಟ ಬುತ್ತಿ. ರಾಷ್ಟ್ರ ಎಂದರೆ ಕಲ್ಲು, ಮಣ್ಣು, ಬೆಟ್ಟ, ಗುಡ್ಡ, ಮರ, ಮೊರಡಿ, ನದಿ, ನದ, ಅಡವಿ, ಅರಮನೆಗಳಷ್ಟೇ ಅಲ್ಲ, ಅವೆಲ್ಲವನ್ನೂ ಮೈಗೂಡಿಸಿಕೊಂಡು ಬೆಳೆದ ಸಾಂಸ್ಕೃತಿಕ ಹಿನ್ನೆಲೆಯಾಗುಳ್ಳ ಭವ್ಯ ಬದುಕು.'

'ತಮ್ಮ ಮುತ್ತಿನಂಥಾ ಮಾತುಗಳಿಂದ ನಾನು ತುಂಬಾ ಪ್ರಭಾವಿತನಾಗಿದ್ದೇನೆ ಗಾವಾನ್‌ಜಿ. ಅಂತೆಯೇ ನನ್ನದೊಂದು ಕೋರಿಕೆ.'

'ಅಪ್ಪಣೆಯಾಗಲಿ ಖಾವಂದ್'

'ತಾವು ಬಿದರೆಯ ರಾಜ್ಯದಲ್ಲೇ ನೆಲೆ ನಿಲ್ಲಬೇಕು. ನಮಗೆ ಸೂಕ್ತ ಸಲಹೆಗಾರರಾಗಿ ಮಾರ್ಗದರ್ಶನ ಮಾಡಬೇಕು.'

'ಮಾರ್ಗದರ್ಶನ ಎಂಬ ಮಾತು ನನ್ನ ಅರ್ಹತೆಗೆ ಮೀರಿದ್ದು. ಖಾವಂದರು ಸೂಕ್ತ ರೀತಿಯಲ್ಲಿ ನಡೆಸಿಕೊಳ್ಳುವುದಾದರೆ ಈ ಸೇವಕ ಸೇವೆಗೆ ಸಿದ್ಧನಿದ್ದಾನೆ ಎಂದಷ್ಟೇ ಅರಿಕೆ ಮಾಡಿಕೊಳ್ಳಬಲ್ಲೆ, ಇದಕ್ಕೆ ನನ್ನ ಪೂಜ್ಯ ಗುರುವರ್ಯರ ಅನುಮತಿ ಆಶೀರ್ವಾದಗಳೂ ಬೇಕು' ಎಂದು ಕಿರ್ಮಾನಿಯವರ ಕಡೆ ವಿನೀತ ಭಾವದಿಂದ ತಿರುಗಿ ನೋಡಿದ. ಗುರುಗಳು,

'ನಿನ್ನ ಪ್ರಗತಿಗೂ ಮಿಗಿಲಾದ ಭಾಗ್ಯ ನನಗಾವುದಿದೆ ಗಾವಾನ್ ! ನೀನಿಲ್ಲಿರುವುದು, ಈ ಬಹಮನೀ ಸಾಮ್ರಾಜ್ಯದ ಕೀರ್ತಿಗೆ ಕಾರಣನಾಗುವುದು ಸರ್ವಸಮ್ಮತ.' ಎಂದಂದರು.

'ಗುರುವಾಜ್ಞೆ, ಶಿರಸಾಮನ್ನಿಸುವೆ !'

ಅಂದಿನ ಗೋಷ್ಠಿ ಗಂಭೀರವಾಗಿ ಮುಕ್ತಾಯವಾಯಿತು.

೨

ಮಹಮೂದ್ ಗಾವಾನ್ ಅಂದು ಆಗಮಿಸಿದ್ದು, ಧಾರ್ಮಿಕ ಸಭೆಯಲ್ಲಿ ಭಾಗವಹಿಸಿದ್ದು ಬಹಮನಿ ವಂಶದ ೧೦ನೆಯ ಸುಲ್ತಾನ ಅಲ್ಲಾವುದ್ದೀನನ (ಕ್ರಿ.ಶ. ೧೪೩೬–೧೪೫೮) ಸುಖೀ ಆಡಳಿತ ಕಾಲದಲ್ಲಿ. ಅಂದರೆ ಕ್ರಿ.ಶ. ೧೪೫೦ರಲ್ಲಿ. ಬಹಮನಿ ರಾಜ್ಯ ಕರ್ನಾಟಕದ ಭಾಗವೊಂದನ್ನಾಳಿದ ಹಸನ್ ಗಂಗು ಬಹಮನ್ ಷಾ ಎಂಬುವನಿಂದ ೧೩೪೭ ರಲ್ಲಿ ಕಲಬುರ್ಗಿಯಲ್ಲಿ ಸಂಸ್ಥಾಪಿತವಾದ ಸಾಮ್ರಾಜ್ಯ. ಅದು ಸ್ಥಾಪಿತವಾಗುವ ಮೊದಲು ಬಿದರೆ ಕಲಬುರ್ಗಿ ಭಾಗಗಳು ದೇವಗಿರಿಯ ಯಾದವರ

ಅಧೀನದಲ್ಲಿದುವು. ಯಾದವ ವಂಶದ ಕಡೆಯ ಅರಸ ಶಂಕರದೇವನನ್ನು ದೆಹಲಿಯ ಅಲ್ಲಾವುದ್ದೀನ್ ಖಿಲ್ಜಿಯ ದಂಡನಾಯಕ ಮಲ್ಲಿಕ್ ಕಾಫರ್ ಕೊಂದು, ತನ್ನ ಮಗ ಕರೀಮುದ್ದೀನನನ್ನು ಅಲ್ಲಿಯ ಆಡಳಿತಾಧಿಕಾರಿಯಾಗಿ ನೇಮಿಸಿದ್ದ. ಖಿಲ್ಜಿಯ ನಂತರ ಬಂದ ಮೊಹಮ್ಮದ್ ಬಿನ್ ತೊಗಲಖ್ ರಾಜಧಾನಿಯನ್ನು ದೆಹಲಿಯಿಂದ ದೇವಗಿರಿಗೆ, ದೇವಗಿರಿಯಿಂದ ಮತ್ತೆ ದೆಹಲಿಗೆ ವರ್ಗಾಯಿಸಿದ ಸಂದರ್ಭದಲ್ಲಿ ದೇವಗಿರಿಯಲ್ಲಿದ್ದ ಅವನ ಸೇನಾಪತಿ ಹಸನ್ ಸ್ವತಂತ್ರನಾಗಿ ತಾನೇ ಸುಲ್ತಾನನೆಂದು ಘೋಷಿಸಿಕೊಂಡ. ಅವನು ಆ ಹಿಂದೆ ತುಂಬಾ ಕಷ್ಟದಲ್ಲಿದ್ದಾಗ ಗಂಗರಸನೆಂಬ ಹಿಂದುವು ನೆರವಾದ್ದರಿಂದ ಕೃತಜ್ಞತೆ ಸಲ್ಲಿಸಲು ತನ್ನ ಹೆಸರಿನ ಮುಂದೆ 'ಗಂಗು' ಎಂಬ ಉಪಸರ್ಗ ಸೇರಿಸಿ, 'ಹಸನು ಗಂಗು' ಎಂದು ಕರೆಸಿಕೊಂಡ. ಆದರೆ ದೇವಗಿರಿ, ಬಿದರೆ, ಕಲಬುರ್ಗಿ ಒಳಗೊಂಡ ಮಹಾಭಾಗದ ಸುಲ್ತಾನನೆಂದು ಸ್ವಯಂಘೋಷಿತ ಬಾದಶಹನಾದ ಮೇಲೆ 'ಅಬ್ದುಲ್ ಮುಜಫರ್ ಅಲ್ಲಾವುದ್ದೀನ್ ಬಹಮನ್ ಷಾ' ಎಂದು ತನ್ನ ಹೆಸರನ್ನು ಬದಲಿಸಿಕೊಂಡು ರಾಜ್ಯಭಾರ ನಡೆಸತೊಡಗಿದ. ಕ್ರಿ. ಶ. ೧೩೪೭ರಿಂದ ೧೩೫೮ರವರೆಗೆ ಕಲಬುರ್ಗಿಯನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡು ರಾಜ್ಯವಾಳಿ ಬಹಮನೀ ರಾಜ್ಯಕ್ಕೆ ಭದ್ರ ಬುನಾದಿ ಹಾಕಿದ. ಅನಂತರದಲ್ಲಿ ಆ ರಾಜ್ಯ ವಿಜಯನಗರ ಸಾಮ್ರಾಜ್ಯದ ಪ್ರತಿಸ್ಪರ್ಧಿಯಾಗಿ ಬೆಳೆಯಿತು. ಕ್ರಿ. ಶ. ೧೪೫೬ರಲ್ಲಿ ರಾಜಧಾನಿ ಕಲಬುರ್ಗಿಯಿಂದ ಬೀದರ್‌ಗೆ ಬದಲಾಯಿತು. ೧೩೪೭ರಿಂದ ೧೫೨೭ರವರೆಗೆ ಹದಿನೆಂಟು ಜನ ಸುಲ್ತಾನರು ಈ ವಂಶದಲ್ಲಿ ಆಳ್ವಿಕೆ ನಡೆಸಿದರು. ಅವರಲ್ಲಿ ಹತ್ತನೆಯವನು ಅಲ್ಲಾವುದ್ದೀನ್. ಅವನ ಪ್ರಸಿದ್ಧ ಮುತ್ಸದ್ದಿ ಅಥವಾ ಸಲಹೆಗಾರನಾಗಿದ್ದ ಮುಹಮೂದ್ ಗಾವಾನ್. ಅವನು ಸತ್ತಮೇಲೂ ಅಧಿಕಾರದಲ್ಲಿದ್ದ. ಆದರೆ ಅದು ಸಲಹೆಗಾರ ಹುದ್ದೆಗಿಂತಲೂ ಮೇಲ್ತರಗತಿಯ, ಹೆಚ್ಚು ಜವಾಬ್ದಾರಿಯ ಸ್ಥಾನದಿಂದ ಕೂಡಿದ್ದುದಾಗಿತ್ತು. ಅದನ್ನು 'ಮಾಲಿಕ್ ನಾಯಿಬ್' ಅರ್ಥಾತ್ 'ಸುಲ್ತಾನನ ಸಹಾಯಕ' ಎಂದು ಕರೆಯಲಾಗಿತ್ತು. ಆ ಪದವಿಗೇರಿಸಿದವನು ಬಹಮನಿಯ ಹನ್ನೊಂದನೆಯ ಸುಲ್ತಾನ ಹುಮಾಯೂನ್ ಷಾ (ಕ್ರಿ. ಶ. ೧೪೫೮–೬೧). ಹುಮಾಯೂನ್ ಪಟ್ಟಕ್ಕೆ ಬಂದ ಮೂರೇ ವರ್ಷಗಳಲ್ಲಿ ಕೊಲೆಯಾದ. ಅದಕ್ಕೆ ಮೂಲಕಾರಣ ಸ್ಥಳೀಯ ಆಸ್ಥಾನಿಗಳ ಆಂತರಿಕ ಅತೃಪ್ತಿ. ತಮ್ಮಲ್ಲಿಯೇ ಸಾಕಷ್ಟು ಮಂದಿ ಮೇಧಾವಿ ಮುತ್ಸದ್ದಿಗಳಿದ್ದರೂ ಹೊರಗಿನಿಂದ ಪರದೇಶಿಗೆ ಪ್ರತಿಷ್ಠಿತ ಸ್ಥಾನಕೊಟ್ಟದ್ದು ಅವನ ಬುದ್ಧಿಮತ್ತೆಗೆ ನೀಡಿದ ಗೌರವವಲ್ಲ, ಬೇಕೆಂದೇ ತಮಗೆ ಮಾಡಿದ ಅವಮಾನ ಎಂದು ಭಾವಿಸಿದರು. ಆ ಮೂಲಕ ತಮ್ಮನ್ನು ಅವಹೇಳನಗೊಳಿಸಿದ ಅರಸನನ್ನೇ ಇಲ್ಲಗೈಯಲ್ಲು ಯೋಚಿಸಿ, ವೈಹಾಳಿ ಮುಗಿಸಿ ನಗರಕ್ಕೆ ಹಿಂತಿರುಗುತ್ತಿದ್ದ ಹುಮಾಯೂನನನ್ನು ಮಳಖೇಡದ ಬಳಿ ಮೋಸದ ಕೊಲೆ ಮಾಡಿಸಿದರು. ಹುಮಾಯೂನನಿಂದ ತೆರವಾದ ಸ್ಥಾನವನ್ನು ಅವನ ಮಗ ಎಂಟು ವರ್ಷದ ಬಾಲಕ ನಿಜಾಂಷಾ ತುಂಬಿದ. ಆ ಎಳೆಯನ ರಕ್ಷಣೆಗೆ ರಾಜಮಾತೆ (ವಕೀಲ್–ಉಸ್–ಸುಲ್ತಾನತ್ = ರಾಜರಕ್ಷಕಿ) ಎರಡು ಮಕ್ಕಳ ತಾಯಿ ಮಖದುಮಾ ಜಹಾನಿ ನಿಂತಳು. ಆಡಳಿತ ನಿರ್ವಹಣೆಗೆ ಮಹಮೂದ್ ಗಾವಾನ್ ಪ್ರಧಾನಮಂತ್ರಿ ಪಟ್ಟಕ್ಕೇರಿದ. ಅಷ್ಟೇ ಅಲ್ಲ, ವಜೀರ್–ಎ–ಆಜಮ್ ಎಂಬ ಬಿರುದಿಗೂ ಪಾತ್ರನಾದ. ರಾಜಮಾತೆಯ ಅನುಗ್ರಹಕ್ಕೆ ಪಾತ್ರನಾದ ಗಾವಾನ್ ಅತ್ಯುತ್ತಮ ಸ್ಥಾನ ಪಡೆದ. ನೂತನ ಸುಲ್ತಾನ ಬಾಲಕ, ಅಶಕ್ತ ಎಂದು ಭಾವಿಸಿ ಕಳಿಂಗ ಮತ್ತು ತೆಲುಂಗಾಣದ ರಾಜರುಗಳು ಬಹಮನಿ ರಾಜ್ಯದ ಮೇಲೆ ದಂಡೆತ್ತಿ ಬಂದರು. ಕಳಿಂಗ ಕದನ ಅಷ್ಟೇನೂ ಪ್ರಬಲವಾದುದಾಗಿರಲಿಲ್ಲ. ಮಹಾಚಾಣಾಕ್ಷ, ಪ್ರಚಂಡ ಸೇನಾನಿ ಮಹಮೂದ್ ಗಾವಾನನ ಬಿರುಗಾಳಿಯ ಎದುರಿನಲ್ಲಿ ಕಳಿಂಗ ಸೇನೆ ತರಗೆಲೆಯಾಯಿತು. ಆದರೆ ತೆಲುಂಗಾಣದ ಹೋರಾಟ ಎಂಥವರಿಗೂ ಉಸಿರು ಕಟ್ಟಿಸುವಂತಿತ್ತು. ತೆಲುಂಗಾಣಕ್ಕೆ ವಿಜಯನಗರದ ನೆರವು ಇತ್ತು. ಆ ಪ್ರಬಲ ರಾಜ್ಯಗಳ ಪ್ರಚಂಡ ಸೇನೆಯನ್ನು ಬಿದರೆ ಎದುರಿಸುವುದು ಕಷ್ಟಸಾಧ್ಯವೇ ಆಗಿತ್ತು. ಆಗ ಗಾವಾನ್ ಒಂದು ಉಪಾಯ ಮಾಡಿದ. ವಿಜಾಪುರದ ಆಡಳಿತಾಧಿಕಾರಿ ಯೂಸುಫ್ ಆದಿಲ್ ಷಾನನ್ನು ಬಿದರೆಗೆ ಕರೆಸಿಕೊಂಡು, ತೆಲಂಗಾಣ ಮತ್ತು ವಿಜಯನಗರಗಳು ಒಂದಾಗಿ ದಂಡೆತ್ತಿ ಬರುವ ಸುದ್ದಿ ತಿಳಿಸಿ, 'ಯೂಸುಫ್, ಈಗ ನೀನು ನಿನ್ನ ಕೈಮನ ಒಂದಾಗಿ ಹೋರಾಡಬೇಕು.' ಎಂದ.

'ಹೇಳಿ ವಜೀರ್‌ಜಿ, ನೀವು ನನಗೆ ಗುರು ಸಮಾನರು. ನಿಮ್ಮಾಜ್ಞೆಯಂತೆ ಏನು ಬೇಕಾದರೂ ಮಾಡಲು ಈ ಶಿಷ್ಯ ಸಿದ್ಧನಿದ್ದಾನೆ. ಹೇಳೋಣವಾಗಲಿ.'

'ಈಗ ಒಂದು ಸಾವಿರ ಸವಾರರಿರುವ ತುಕಡಿಯನ್ನು ತೆಗೆದುಕೊಂಡು ನೀನು ನೇರ ವಿಜಯನಗರ ಕೋಟೆಯನ್ನು ಭೇದಿಸಿ ಒಳನುಗ್ಗಿ, ಅಲ್ಲಿ ಊರು ಕೇರಿಗಳನ್ನು ಲೂಟಿ ಮಾಡತೊಡಗು, ಈ ಸುದ್ದಿ ಬಹು ಬೇಗ ಬಿದರೆ ಹಾದಿಯಲ್ಲಿರುವ ವಿಜಯನಗರದ ಸೇನೆಗೆ ಗೊತ್ತಾಗಬೇಕು. ವಿಜಯನಗರದವರಿಗೆ ದುರಾಕ್ರಮಣಕ್ಕಿಂತ ಆತ್ಮರಕ್ಷಣೆ, ದೇಶರಕ್ಷಣೆ ಮುಖ್ಯವಾಗುತ್ತೆ. ಅವರು ಹಿಂತಿರುಗಿ ವಿಜಯನಗರದ ಕಡೆಗೆ ಧಾವಿಸುತ್ತಾರೆ. ಸಮಯವರಿತು ಹಾದಿಯಲ್ಲೇ ತೆಲುಂಗಾಣದ ಸೇನೆಯ ಮೇಲೆ ಬಿದ್ದು ನಾವು ಅದನ್ನು ಹಣ್ಣುಗಾಯಿ, ನೀರುಗಾಯಿ ಮಾಡುತ್ತೇವೆ. ನೀವು ಬಹಳ ಎಚ್ಚರದಿಂದ ಕಾರ್ಯ ನಿರ್ವಹಿಸಿ, ಅನಂತರ ಹಂಪಿಯ ಅಡವಿಮಾರ್ಗವಾಗಿ ದೌಡಾಯಿಸಿ. ಎಲ್ಲಾ ಅರ್ಥವಾಯಿತು ತಾನೆ ?'

'ನಾನು ನಿಮ್ಮೂರಿನ ಹತ್ತಿರದವನು. ನನ್ನ ತುರ್ಕಿಸ್ಥಾನಕ್ಕೂ ನಿಮ್ಮ ಪರ್ಷಿಯಾ ದೇಶಕ್ಕೂ ಬಹುದೂರವೇನಿಲ್ಲ. ನಿಮ್ಮ ಮತ್ತು ನನ್ನ ಧಮನಿಯಲ್ಲಿ ಹರಿಯುತ್ತಿರುವ ರಕ್ತ ಅರಬ್ಬೀ ಸಮುದ್ರ ಉಪ್ಪುಂಡದ್ದು. ಈ ಜನಕ್ಕೆ ಮಣ್ಣು ಮುಕ್ಕಿಸುವಷ್ಟು ಬುದ್ಧಿ ಸರಕು ನನ್ನಲ್ಲೂ ಇವೆ. ತಾವು ನನ್ನಲ್ಲಿ ವಿಶ್ವಾಸವಿರಿಸಿ, ನಿರ್ಭೀತಿಯಿಂದ ತೆಲುಂಗಾಣರನ್ನು ಎದುರಿಸಿ.'

ಆಶ್ವಾಸನೆ ಇತ್ತ ಯೂಸುಫ್ ಬಿದರೆಯಿಂದ ಕಾಲ್ತೆಗೆದ ಅಂದೇ ಸರಿರಾತ್ರಿಯಲ್ಲಿ.

ಯೂಸೂಫ್ ತುರ್ಕಿಸ್ಥಾನದವನು. ಅಲ್ಲಿನ ಬಾದಶಹನಿಂದ ತನಗೆ ಪ್ರಾಣಾಪಾಯವಿದೆಯೆಂದು ತಿಳಿದು ಚಿಕ್ಕಂದಿನಲ್ಲೇ ತನ್ನ ರಾಷ್ಟ್ರವನ್ನು ತೊರೆದು ಠ್ಠಿನೆ ನದಿ ದಾಟಿ ಸವಾಬಂದರಿನಲ್ಲಿ ಹಡಗು ಹಿಡಿದು ಭಾರತಕ್ಕೆ ಬಂದವನು. ಇಲ್ಲಿ ಕರ್ನಾಟಕದ ವಿಜಾಪುರದಲ್ಲಿ ಸುಲ್ತಾನನ ಸಾಮಾನ್ಯ ಅಂಗರಕ್ಷಕನಾಗಿದ್ದು, ಸ್ವಪ್ರತಿಭೆ, ಪರಾಕ್ರಮಗಳಿಂದ ಮೇಲೆ ಬಂದ ಧೀರ. ತುರ್ಕಿ, ಅರಬ್ ಹಾಗೂ ಪರ್ಷಿಯಾ ದೇಶಗಳಿಂದ ಬಂದವರೇ ಮಹಾಮೇಧಾವಿಗಳು ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದ. ಅವನ ಆ ಮಾತಿನಲ್ಲಿ ಸತ್ಯಾಂಶವೂ ಇತ್ತು. ಬಿದರೆ ದುರ್ಬಲಗೊಂಡಲ್ಲಿ ತಾನೇಕೆ ವಿಜಾಪುರದಲ್ಲಿ ಸ್ವತಂತ್ರ ಸಾಮ್ರಾಟನಾಗಿ ಗಾದಿಯನ್ನೇರಬಾರದು ಎಂದು ಕೂಡ ಆಲೋಚಿಸಿದ್ದ. ಅವನ ಆಲೋಚನೆ ಕಾರ್ಯರೂಪಕ್ಕೆ ಬರುವ ದಿನಗಳು ದೂರದಲ್ಲಿರಲಿಲ್ಲ. ಅಂತಹ ಮಹತ್ವಾಕಾಂಕ್ಷಿ ಯೂಸೂಫ್ ಆದಿಲ್ ಶಾಹ್ ಮಹಮೂದ್ ಗಾವಾನನ ಹಂಚಿಕೆಯನ್ನು ಕಾರ್ಯರೂಪಕ್ಕೆ ತಂದು, ತೆಲುಂಗಾಣ ದಾಳಿಯಲ್ಲಿ ಬಿದರೆಗೆ ಯಶಸ್ಸು ಲಭಿಸುವಂತೆ ಮಾಡಿದ.

ಈ ಯುದ್ಧದ ಹಿಂದೆಯೇ ಮತ್ತೊಂದು ಯುದ್ಧ ಕಾದುಕೊಂಡಿತ್ತು. ಮಾಳವದ ಸುಲ್ತಾನ ಇದ್ದಕ್ಕಿದ್ದಂತೆ ಬಿದರೆಯ ಮೇಲೆ ಯುದ್ಧ ಸಾರಿದ. ಬಿದರೆಗೆ ಕಳೆದ ಯುದ್ಧದ, ಮೈನೋವು ಮುಗಿದಿರಲಿಲ್ಲ. ಮೈಮೇಲಿನ ಗಾಯಗಳು ಮಾಯ್ದಿರಲಿಲ್ಲ. ಕರೆಗಟ್ಟಿದ್ದ ರಕ್ತಸಿಕ್ತ ಖಡ್ಗಗಳು ಮೈತೊಳೆದುಕೊಂಡು ಒರೆಗಳನ್ನು ಸೇರಿರಲಿಲ್ಲ. ಆ ವರ್ಷ ಮಳೆಬೆಳೆಗಳಿಲ್ಲದೆ ದೇಶಕ್ಕೊದಗಿದ ಕ್ಷಾಮ ಬೇರೆ. ಹೀಗಾಗಿ ಪೂರ್ವಸಿದ್ಧತೆಗಳೆಲ್ಲವನ್ನೂ ಮಾಡಿಕೊಂಡು ಬಂದಿದ್ದ ಮಾಳವಕ್ಕೆ ಬಿದರೆ ಶರಣಾಗಬೇಕಾಯಿತು. ಮಾಳವದ ಸುಲ್ತಾನ ಬಿದರೆಯನ್ನು ವಶಪಡಿಸಿಕೊಂಡ. ಆದರೆ ಚಾಣಾಕ್ಷ ಗಾವಾನ್ ಎದೆಗುಂದಲಿಲ್ಲ. ಬಾಲಕ ರಾಜನನ್ನು ಫಿರೋಜಾಬಾದಿಗೆ ಹೇಗೋ ಸಾಗಿಸಿ, ಗುಜರಾತಿನ ಸುಲ್ತಾನನ ನೆರವು ಪಡೆದು, ದಂಡೆತ್ತಿ ಬಂದು ಮಾಳವದ ಸುಲ್ತಾನನ್ನು ಬಡಿದೋಡಿಸಿ, ಬಿದರೆಯನ್ನು ನಿಜಾಂಷಾಹನಿಗೆ ಪುನಃ ದೊರಕಿಸಿಕೊಟ್ಟ.

ಕಿಶೋರ ಸುಲ್ತಾನನ್ನು ಫಿರೋಜಾಬಾದ್‌ನಿಂದ ಬಿದರೆಗೆ ಕರೆತರುವ ಏರ್ಪಾಟು ನಡೆದಿತ್ತು. ಮಹಾಮಂತ್ರಿ ಗಾವಾನನೇ ಅದರ ರೂವಾರಿಯಾಗಿದ್ದ. ಮಾಳವದವರಿಗೆ ಸೋತಾಗ ಛದ್ಮವೇಷದಿಂದ ಗುಟ್ಟಾಗಿ ಫಿರೋಜಾಬಾದಿಗೆ ಕರೆದೊಯ್ದುದುಂಟು. ಆದರೆ ಈಗ ಜಯ ತಮ್ಮದಾಗಿದೆ. ಬಿದರೆ ಮತ್ತೆ ತಮ್ಮ ವಶವರ್ತಿಯಾಗಿದೆ. ಕೇಳಬೇಕೆ ! ಅತ್ಯಂತ ವೈಭವದ ಮೆರವಣಿಗೆಯೋಪಾದಿಯಲ್ಲಿ ಸಿದ್ಧತೆ ನಡೆಯಿತು. ಸೇನೆಯಲ್ಲಿ ರಾಜಮಾತೆ ಮಖದುಮಾರವರು, ಅವರ ಸುತ್ತಾ ಮುತ್ತಾ ಫರದಾಮಹಿಳೆಯರು ನೂರಾರು ಜನ. ನಿಜಾಂಷಾಹ್‌ನಿಗಾಗಿ ಸರ್ವಾಲಂಕೃತ ರಥ. ಇದರ ಇಕ್ಕೆಲಗಳನ್ನೂ ಬಿಚ್ಚುಗತ್ತಿಯ ಭಟರು ರಾಹುತರು ನೂರಾರು ಜನ. ರಥದ ಮುಂಬದಿಯಲ್ಲಿ ಮಾರ್ಗದರ್ಶಕನಂತೆ ಮಹಮೂದ್ ಗಾವಾನ್. ರಸ್ತೆಯುದ್ದಕ್ಕೂ ಬಿಗಿ ಬಂದೋಬಸ್ತ್. ಹಾದಿಯಲ್ಲಿ ಅಲ್ಲಲ್ಲಿ ಹಳ್ಳಿಪಟ್ಟಣಗಳೆಡೆಗಳಲ್ಲಿ ಕಿರುವಯದ ಸುಲ್ತಾನನಿಗೆ ಪ್ರಜರ ದರ್ಶನ ಕಾಣಿಕೆ ಹಾರ ತುರಾಯಿಗಳು. ಕುಮಾರ ಎಲ್ಲರಿಗೂ ತನ್ನ ಪ್ರೀತಿಪೂರ್ವಕ ನುಡಿ ನುಡಿಯುವಂತೆ ಕೊಟ್ಟ ತರಬೇತಿಯೂ ಗಾವಾನನದೆ. ರಾಜಮಾತೆಯರಿಗೂ ಅದು ಆನಂದ ತಂದ ಹಜ್ ಯಾತ್ರೆಯೋ ಎಂಬಂತಿತ್ತು.

ರಥ ಫಿರೋಜಾಬಾದ್ ಬಿಟ್ಟು ಬಹಳ ದೂರ ಸಾಗಿತು. ಸಂಜೆಯಾಗುತ್ತಾ ಬಂತು. ಆ ವೇಳೆಗೆ ದಟ್ಟಡವಿ ಮಡಲಿಗೆ ಬಂದಿತ್ತು ಮೆರವಣಿಗೆ. ಇದ್ದಕ್ಕಿದ್ದಂತೆಯೇ ಸಮಯಪ್ರಜ್ಞೆಯಿಂದ ಗಾವಾನ್ ಸಂಜ್ಞೆ ಮಾಡಿದ. ಕೂಡಲೇ ಸನ್ನೆಗಹಳೆ ಕೂಗಿತು. ಸೇನೆ ಗಕ್ಕನೆ ನಿಂತಿತು. ಎಲ್ಲರೂ ಏನು ? ಏನು ? ಎಂದು ತಮ್ಮಲ್ಲಿಯೇ ಪ್ರಶ್ನೆ ಹಾಕಿಕೊಳ್ಳುತ್ತಾ ಅವಾಕ್ಕಾಗಿ ನಿಂತರು. ಗಾವಾನ್ ವಿನಮ್ರಭಾವದಿಂದ ಪ್ರಭುವಿಗೆ ಮುಜುರೆ ಸಲ್ಲಿಸಿ, ಅವರ ರಥದ ಹಿಂದೆಯೇ ಬರುತ್ತಿದ್ದ ಮೇನೆ ಬಳಿ ಹೋದ. ರಾಜಮಾತೆ ಮೇನೆಯ ಪರದೆ ಒಳಗಿನಿಂದಲೇ ಕೇಳಿದರು ವಜೀರ್‌ಜಿ, ಸವಾರಿ ನಿಂತಿತೇಕೆ ?'

ಮಾತಾಜಿಯವರು ಕ್ಷಮಿಸೋಣವಾಗಲಿ. ಇದು ನನ್ನ ನಮಾಜಿನ ಸಮಯ. ಅದಕ್ಕಾಗಿ ಚಣಕಾಲ ನಿಲ್ಲಿಸಲಾಯಿತು. ಈಗ ಪೂಜ್ಯ ಮಾತೆಯವರು ಅನುಮತಿಸಿದಲ್ಲಿ...'

'ಅಗತ್ಯವಾಗಿ. ಭಗವಂತನ ಪ್ರಾರ್ಥನೆಗೆ ನನ್ನಂತಹ ಸಾಮಾನ್ಯಳ ಅನುಮತಿ ಬೇಕೆ ? ತಾವು ದಯವಿಟ್ಟು ನಮಾಜ್ ಮುಗಿಸಿ ಬನ್ನಿ.'

'ಅನುಗ್ರಹೀತನಾದೆ.'

ಹೀಗೆಂದು ಗಾವನ್ ರಸ್ತೆ ಬದಿಯಲ್ಲಿ ಅನತಿ ದೂರದಲ್ಲಿ ತನ್ನ ಹೆಗಲ ಮೇಲಿನ ಛದ್ದರ್ ತೆಗೆದು ನೆಲದ ಮೇಲೆ ಹಾಸಿ, ನೆತ್ತಿಯ ಮೇಲೊಂದು ಪಾಗು ಧರಿಸಿ, ಮಕ್ಕಾ ಕಡೆಗೆ ಮುಖ ಮಾಡಿಕೊಂಡು ಮೊಣಕಾಲೂರಿ ಕುಳಿತ. ತನ್ನೆರಡೂ ಕೈಗಳನ್ನು ಬಿರಿದ ತಾವರೆಯಂತೆ ತೆರೆದು ಅರ್ಧ ನಿಮೀಲಿತ ನೇತ್ರನಾಗಿ,

ಅಲ್ಲಾ ಹು ಅಕ್ಬರ್
(ಸರ್ವೋತ್ತಮನಾದ ಭಗವಂತನೆ)
ಸುಬ್ಹಾನ ರಬ್ಬೀ ಅಲ್ ಅಜೀಮ್
(ಮಂಗಳದ ಮೂರ್ತಿಯೇ, ಓ ಸರ್ವಶಕ್ತನೆ)
ಸಮಿ ಅಲ್ಲಾ ಹು ಲಿಮನ್ ಹಮಿದ
(ನಮ್ಮ ಪ್ರಾರ್ಥನೆಗಳಿಗೆ ಕಿವಿಗೊಡುವ ಸ್ವಾಮಿಯೆ)

ಸುಬ್ಹಾನ ರಬ್ಬೀ ಅಲ್ ಆಲ
(ಪಾವನನೆ, ಪರಮ ಪುರುಷೋತ್ತಮ)
ಅಸ್ಸಲಾಂ ಮೊ ಆಲೈಕುಂ ರಹಮತ್ತಲ್ಲಾ ಹಿ
(ಇದಿಗೊ ನಾ ಮಣಿದಿರುವೆ ನಿನ್ನ ಪದತಳದಲ್ಲಿ ನೀ ದಯಾಸಿಂಧು !)

ಇದೇ ಮೊದಲಾಗಿ ತುಟಿತೆರೆಯದೆ ಪಠಿಸಿದ. ನಮಾಜ್ ಮುಂದುವರಿದಂತೆ ಗಾವಾನ್ ಆವೇಶಭರಿತನಾದ. ಅವನಿಗೆ ಲೋಕ ಮರೆಯಾಯಿತು. ಅಮೋಘ ಅತ್ಯದ್ಭುತ ಜ್ಯೋತಿರ್ಮಂಡಲವೊಂದು ಕಾಣಿಸಿಕೊಂಡಿತು. ಮೈದುಂಬಿ ಮನದುಂಬಿ ಭಗವಂತನನ್ನು ಕೀರ್ತಿಸತೊಡಗಿದ.

ಅಷ್ಟರಲ್ಲೊಂದು ಪುಟ್ಟ ಘಟನೆ !

ಅಡವಿಯ ಕೊಳ್ಳದಲ್ಲಿ ನೀರ್ಗುಡಿದು ನಿಧಾನವಾಗಿ ಅತ್ತ ಅಡ್ಡಾಡಿಕೊಂಡು ಬಂದ ಹುಲಿಯೊಂದು ನಮಾಜು ಸಲ್ಲಿಸುತ್ತಿದ್ದ ಗಾವಾನನ ಬದಿಯಲ್ಲಿ ಕುಳಿತುಕೊಂಡಿತು ! ಪರಿವಾರ ಬೆದರಿತು, ಸೇನೆ ಹುಲಿಯ ಮೇಲೆ ಬೀಳಲು ಸಜ್ಜಾಯಿತು. ಇದನ್ನರಿತ ರಾಜಮಾತೆ 'ಬೇಡ' ಎಂದು ಸನ್ನೆ ಮಾಡಿದರು. ಅದಕ್ಕೆ ಕಾರಣ ಎಲ್ಲಿ ಗಾವಾನರ ನಮಾಜಿಗೆ ಭಂಗ ಉಂಟಾಗುತ್ತೊ ಎಂದು ಅಥವಾ ಹುಲಿ ಹೊಡೆಯುವ ಆತುರದಲ್ಲಿ ಗಾವಾನಿಗೇನಾದರೂ ಅಪಾಯ ಸಂಭವಿಸಿದರೆ ! ಇಲಿ ಹೊಡೆಯಲು ಹೋಗಿ ಗಣಪನನ್ನೇ ಮುಗಿಸಿದ ಪಾಪ ಪ್ರಾಪ್ತಿ ! ಅದ ತಿಳಿದು ತಡೆದರು. ನಮಾಜು ಮುಗಿಯುವಷ್ಟರಲ್ಲಿ ಹುಲಿ ಜಾಗ ಖಾಲಿ ಮಾಡಿತ್ತು !

ಇದೆಲ್ಲವನ್ನೂ ಬಿಟ್ಟ ಕಣ್ ತೆರೆದ ಬಾಯಾಗಿ ನೋಡುತ್ತಿದ್ದ ಪ್ರಹರಿ, ಪರಿವಾರ ಅದನ್ನೊಂದು ಪವಾಡವೆಂದೇ ಭಾವಿಸಿತು !

ನಮಾಜ್ ಮುಗಿದ ಕೂಡಲೇ ಗಾವಾನ್ ತನ್ನವರ ಬಳಿ ಬಂದ. ಭಯದಿಂದಲೇ ತುಂಬಿದ್ದ ಪರಿವಾರದವರು 'ಸಾಹೇಬ್ ಜೀ...ಹುಲಿ' ಅಂದರು. ಮುಂದಿನ ಮಾತು ಹೊರಬರುವ ಮುನ್ನವೆ 'ಹ್ಞಾ ! ಎಲ್ಲಿ ?' ಎಂದು ಬೆಚ್ಚಿ ಬೆದರಿ ಹೌಹಾರಿ ನಿಂತ ಗಾವಾನ್. 'ಈಗಿಲ್ಲ ಹೋಯಿತು !'

'ಅಷ್ಟೇ ತಾನೆ ! ಒಳ್ಳೆಯದಾಯಿತು. ನಾನೆಲ್ಲೋ ಈಗಲೇ ಬಂದು ಮೇಲೆ ಬಿತ್ತೇನೊ ಎಂದು ಗಾಬರಿಯಾಗಿದ್ದೆ !'

'ಈಗಿಲ್ಲ ವಜೀರರೆ' ನಿಜಾಂಷಾಹ್ ಹೇಳಿದ, 'ನೀವು ನಮಾಜು ಮಾಡುವಾಗ ನಿಮ್ಮ ಪಕ್ಕದಲ್ಲೇ ಕುಳಿತಿತ್ತು. ಆಗ ನೀವು ಭಯಪಡಲೇ ಇಲ್ಲ. ಈಗ ಅದರ ಹೆಸರು ಕೇಳಿದ ಕೂಡಲೇ ಮಿಡಿಕಿ ಬಿದ್ದಿರಿ ! ಇದರರ್ಥ .... ?'

'ಅಷ್ಟೇ ತಾನೆ, ಕೇಳಿ ಪ್ರಭು, ನಮಾಜ್ ಮಾಡುವಾಗ ನಾನು ದೇವದೇವನ ಬಳಿಯಲ್ಲಿದ್ದೆ. ಅಲ್ಲಿ ಅವನ ರಕ್ಷೆ ಇತ್ತು. ಯಾವ ಭಯವೂ ನನ್ನನ್ನು ಅಲ್ಲಿ ಕಾಡಲಿಲ್ಲ. ಆದರೆ ಈಗ ಅವನಿಂದ ದೂರ ಇದ್ದೇನೆ. ಅವನ ರಕ್ಷೆಗೂ ಎಟುಕುವಷ್ಟು ಸಮೀಪದಲ್ಲಿಲ್ಲ. ಆದ್ದರಿಂದ ಭಯಬಿದ್ದೆ ಅಷ್ಟೆ !'

ಈ ಮಾತುಗಳನ್ನು ಆ ಸಂದರ್ಭದ ಪವಾಡವನ್ನೂ ಕೇಳಿದ, ನೋಡಿದ ರಾಜಮಾತೆಗೆ ಸಾಕ್ಷಾತ್ ದೇವದೂತ ಜಿಬ್ರೀಲ್‌ನೇ ಮಹಮೂದ್ ಗಾವಾನನ ರೂಪದಲ್ಲಿ ಅವತೀರ್ಣಗೊಂಡು ಭಗವಂತನ ಆದೇಶವಿತ್ತಂತೆ ಭಾಸವಾಯಿತು. ಅವಳಿಗರಿವಿಲ್ಲದೇ ಅವಳ ನಾಲಿಗೆ ನುಡಿಯಿತು 'ನೀನು ಮಹಾತ್ಮ !' ಎಂದು.

೩

ಹಗಲಿರುಳುನಿಗ್ಗಾಲಿ ನೂರುರುಳನುರುಳಿತು.

ಆ ವೇಳೆಗೆ ದೇಶ ಸುಭಿಕ್ಷವಾಗಿತ್ತು. ಶಾಂತಿ ನೆಲೆಸಿತ್ತು. ಪ್ರತಿಭೆಗಳು ಅರಳುವುದು ಪ್ರಫುಲ್ಲಿತ ಪ್ರಶಾಂತ ವಾತಾವರಣದಲ್ಲಿ. ಬಹಮನೀ ರಾಜ್ಯಕ್ಕೆ ದೇಶವಿದೇಶಗಳಿಂದ ಕವಿ, ಕಲಾವಿದರು, ಗಮಕಿ, ವಾಗ್ಮಿಗಳು, ಶಿಲ್ಪಿ, ಸ್ಥಪತಿಗಳು ಬಂದರು. ಬಿದರೆಯ ಕೋಟೆಗೆ ಶತಮಾನ ಸಂದಿದ್ದರೂ ಸುಭದ್ರವಾಗಿಯೇ ಇತ್ತು. ಆದರೆ ಕೋಟೆಯೊಳಗಣ ಪಟ್ಟಣದಲ್ಲಿ ಅನೇಕ ಶಿಲ್ಪ ಕಲಾಕೃತಿಗಳು ಪ್ರಾರ್ಥನಾಮಂದಿರಗಳು ತಲೆ ಎತ್ತಬೇಕಿತ್ತು. ಗಾವಾನ್ ಸಮಯವರಿತು ರಾಜಮತಾ ಮಖದುಮಾ ಜಹಾನ್‌ರವರನ್ನು ಚೀಗೀ ಮಹಲ್‌ನಲ್ಲಿ ಭೇಟಿಮಾಡಿದ. ತರುಣ ಸುಲ್ತಾನ ನಿಜಾಂಷಾಹ್‌ನೂ ತನ್ನ ರಂಗೀನ್ ಮಹಲಿನಿಂದ ರಾಜಮಾತೆಯವರ ಗೃಹಕ್ಕೆ ಆಗಮಿಸಿದ್ದ. ಮಾತಾ ತೆಳು ತೆರೆಯ ಹಿಂದೆ ಉನ್ನತಾಸನದಲ್ಲಿ ಕುಳಿತಿದ್ದರು. ತೆರೆಯ ಮುಂದೆ ಮಹಮಂತ್ರಿ ಮಹಮೂದ್ ಗಾವಾನ್ ಪೀಠಸ್ಥನಾಗಿದ್ದ. ಅವರಿಬ್ಬರ ನಡುವಿನ ತೆರೆ ಸರಿವ ಭಾಗದಲ್ಲಿ ಸಿಂಹವಿಷ್ಟರದ ಮೇಲೆ ನಿಜಾಂಷಾಹ್ ಸುಲ್ತಾನ ಮಂಡಿತನಾಗಿದ್ದ.

'ವಜೀರ್ ಮಹಾಶಯರ ಸಮಯೋಚಿತ ವ್ಯವಸ್ಥೆ, ಕಾರ್ಯತತ್ಪರತೆ, ಜಾಗ್ರತಿಗಳಿಂದಾಗಿ ರಾಜ್ಯಕ್ಕೆ ಸಂಭವಿಸಿದ್ದ ಕುತ್ತು ನಿವಾರಣೆಯಾಗಿ, ನಾಡು ನೆಮ್ಮದಿಯಿಂದ ಉಸಿರಾಡುವಂತಾಯಿತು' ರಾಜಮಾತಾ ಪ್ರಶಂಸೆ.

'ಎಲ್ಲಾ ಅಲ್ಲಾನ ಕೃಪೆ, ಮಾತಾಜಿಯವರ ಆಶೀರ್ವಾದ ಹಾಗೂ ನಾಡಾಳುವ ಪ್ರಭುಗಳ ಅನುಗ್ರಹ ಇವು ಮುಪ್ಪುರಿಗೊಂಡು ಮಹತ್ತು ಸಾಧಿತವಾಗಿದೆ. ಅದಕ್ಕೆ ನಾನೊಂದು ಕರಣವೊ ಸಾಧನವೊ ಆಗಿರಬಹುದು.'

'ಬರೀ ಅಷ್ಟು ಮಾತ್ರವಲ್ಲ ವಜೀರ್‌ಜೀ, ತಾವು ಅ ಯಶಸ್ಸಿನ ರೂವಾರಿಯಾಗಿದ್ದೀರಿ ಎಂಬುದು ಜನಮನದ ಅಭಿಪ್ರಾಯ' ದನಿಗೂಡಿಸಿದರು ಸುಲ್ತಾಂ–ಏ–ಆಜಮ್.

'ಹಾಗಲ್ಲ ಪ್ರಭು, ನಳದಲ್ಲಿ ನೀರು ಬಂದರೆ, ನಳದ ಹೊಟ್ಟೆಯಲ್ಲೇ ನೀರು ಹುಟ್ಟಲಿಲ್ಲ. ಹನಿ ನೀರಿಗೆ ವಿಶ್ವದ ಸಮಸ್ತ ಚೇತನಗಳ ಕಲಾಕೈವಾಡವಿದೆ ಎಂಬುದನ್ನು ಮರೆಯಲಾಗುವುದಿಲ್ಲ. ಭೂಮಿಯ ಬಯಕೆ ಬೇಕು, ಸೂರ್ಯನ ಶಾಖ ಬೇಕು, ಸಮುದ್ರದ ನೀರು ಕಾಯಬೇಕು, ಕಾದು ಆವಿಯಾಗಿ ಮೇಲೆ ಮೋಡ ಕಟ್ಟಬೇಕು, ಕಟ್ಟಿದ ಮೋಡಕ್ಕೆ ಗಾಳಿಯ ಹೊಡೆತ ಬೇಕು, ಅದು ಮಳೆಯಾಗಿ ಸುರಿದು, ತೊರೆಯಾಗಿ ಹರಿದು, ಕಿರುಕಾಲುವೆಗಳ ಮೂಲಕ ಕೊಳಾಯಿಗೆ ಸೇರಿ, ನಮ್ಮ ಮನೆ ಮುಟ್ಟಬೇಕು. ಒಂದು ಹನಿ ನೀರಿನ ಸೃಷ್ಟಿಗೆ ಇಷ್ಟೆಲ್ಲ ಪ್ರಕ್ರಿಯೆಗಳಿರುವಾಗ, ವಿಶ್ವ ಜಗತ್ತಿನ ಮಹತ್ವದ ಸಾಧನೆ ಅಥವಾ ಅವಕಾಶ, ಇಲ್ಲವೆ ಆವಿರ್ಭಾವಗಳ ಹಿನ್ನೆಲೆಯಲ್ಲಿ ಆ ಜಗತ್ ಶಕ್ತಿಯ ರೂವಾರಿತನ ಇರುವುದಿಲ್ಲವೆ ? ವ್ಯಷ್ಟಿಯ ಮೂಲಕ, ಆ ಸಮಷ್ಟಿಯ ಅವತಾರ, ಅದನ್ನೇ ನಾವು ಲೋಕಾಶ್ಚರ್ಯವೆಂದು ಗುರುತಿಸುತ್ತೇವೆ. ತಮ್ಮೆಲ್ಲರ ಅನುಗ್ರಹ ಆಶೀರ್ವಾದ ಹಾಗೂ ಹಿಂದಿನವರ ತಪೋಬಲ ಇವು ನಮ್ಮ ಗೆಲುವಿಗೆ ಕಾರಣ. ಇದು ನನ್ನ ಭಾವನೆ ಮಾತಾಜಿ.'

'ತುಂಬಾ ಸಂತೋಷ. ನಿಮ್ಮ ಮುಂದಿನ ಯೋಜನೆಗಳೇನು ವಜೀರ್‌ಜಿ ?

'ಮಾತಾಜಿಯವರಿಗೆ ಜಯ ಕೋರಿ ಒಂದು ಮಾತು....'

'ಹೇಳಿ.'

'ರಾಜಮಾತಾ, ಜನ ಅನ್ನಕ್ಕಷ್ಟೇ ಬದುಕಿಲ್ಲ, ಬದುಕುವುದೂ ಇಲ್ಲ. ಮೈ ಹಸಿವೆ ಇದ್ದಂತೆ ಅದಕ್ಕೆ ಮನಸ್ಸಿನ ಹಸಿವೆ, ಆತ್ಮದ ಹಸಿವೆಗಳೂ ಇವೆ. ಮೈ ಹಸಿವೆಯನ್ನು ಅನ್ನ ನಿದ್ರೆ ಮೈಥುನಗಳಿಂದ ಪೂರೈಸಿಕೊಂಡರೆ, ಮನಸ್ಸಿನ ಹಸಿವೆಯನ್ನು ಚಿತ್ರ, ಶಿಲ್ಪ, ನೃತ್ಯ, ಸಂಗೀತ, ಸಾಹಿತ್ಯ ಎಂಬ ಲಲಿತಕಲೆಗಳ ಮೂಲಕ ಇಂಗಿಸಿಕೊಳ್ಳಬೇಕು. ಅಂತೆಯೇ ಆತ್ಮದ ಹಸಿವು ಅಡಗಲು ಅಧ್ಯಾತ್ಮ ಸಾಹಿತ್ಯ ಬೇಕು. ಆಧ್ಯಾತ್ಮ ಮಂದಿರಗಳೂ ಬೇಕು. ಸಂಗ್ರಹಿಸಿ ಹೇಳುವುದಾದರೆ ಬಿದರೆಯಲ್ಲಿ ಗಗನ್, ತರ್ಕಾರ್, ಚೀಗೀ, ನಗೀನಾ ಮುಂತಾದ ಹಲವು ಮಹಲುಗಳಿವೆ. ಅವು ಸುಂದರ ಹಿಂದೂ ಪರ್ಷಿಯನ್ ಸಂಯುಕ್ತ ವಿನ್ಯಾಸದ ಇಂಡೋಸಾರ್ಸನಿಕ್ ಶೈಲಿಯ ಕಟ್ಟಡಗಳು. ಇವುಗಳ ಜೊತೆಗೆ ಆತ್ಮಾನುಸಂಧಾನಕ್ಕೊಂದು ಮಸೀದಿಯ ಅವಶ್ಯಕತೆ ಇದೆ. ರಾಜಧಾನಿಯಲ್ಲಿ ಭವ್ಯವಾದ ಸೋಲಾಖಂಬಾ ಮಸೀದಿ ಕಟ್ಟಿಸುವ ಇಚ್ಛೆ.'

'ಇಚ್ಛೆ ಪೂರ್ಣವಾಗಲಿ. ಆಮೇಲೆ'

'ಆಮೇಲೆ, ಸನ್ನಿಧಾನಕ್ಕೆ ಮನವರಿಕೆಯಾಗಿದೆ. ನಾನು ವಿದ್ಯಾ ಪಕ್ಷಪಾತಿ ಎಂದು. ಜ್ಞಾನ ಸರ್ವರ ಸ್ವತ್ತಾಗಬೇಕಿದ್ದರೆ ಅದು ಶಿಕ್ಷಣದ ಮೂಲಕ ಮಾತ್ರ ಸಾಧ್ಯ ಎಂಬುದು ನನ್ನ ನಂಬಿಕೆ.'

'ಸರ್ವರಿಗೂ ಶಿಕ್ಷಣದ ಅಗತ್ಯತೆ ಇದೆಯೇ ಗಾವಾನರೆ ?'

'ಇದೆ ಮಾತಾಜಿ, ವಿದ್ಯಾ ವಿಹೀನಃ ಸಾಕ್ಷಾತ್ ಪಶುಃ, ಅಂತಾರೆ. ವ್ಯಕ್ತಿಯ ವೈಯಕ್ತಿಕ ಕಲ್ಯಾಣದ ಮೂಲಕ ರಾಜ್ಯದ ಸರ್ವತೋಮುಖ ಪ್ರಗತಿ ಸಾಧ್ಯ. ಇದು ಸಾಧಿತವಾಗಬೇಕಿದ್ದರೆ ಪ್ರತಿಯೊಬ್ಬ ರಾಷ್ಟ್ರಕನಿಗೂ ಶಿಕ್ಷಣದ ಅಗತ್ಯತೆಯಷ್ಟೇ ಅಲ್ಲ, ಅನಿವಾರ್ಯತೆಯೂ ಇದೆ. ಶಿಕ್ಷಣದ ಅರ್ಥ ಪದವಿ ಪಟ್ಟಿ ಹಚ್ಚಿ ಹೊರಕ್ಕೆ ಕಳುಹಿಸುವುದಿಲ್ಲ. ಜ್ಞಾನಾರ್ಜನೆ ಮಾಡುವುದು. ತಿಂದ ಅನ್ನ ರಕ್ತವಾದಂತೆ. ಓದಿದ ಓದು ಜ್ಞಾನವಾಗಬೇಕು ಎಂಬುದು ನನ್ನ ಮನೀಷೆ. ಅದಕ್ಕಾಗಿ ಒಂದು ವಿನೂತನ ಯೋಜನೆ ನನ್ನ ತಲೆಯಲ್ಲಿ ಸುಳಿಯುತ್ತಿದೆ.'

'ಅದು ಬೇಗ ಕಾರ್ಯರೂಪಕ್ಕೆ ಬರಲಿ ವಜೀರ್‌ಜಿ. ಬಹಮನೀ ಸುಲ್ತಾನತ್ ಸರ್ವಥಾ ಅದಕ್ಕೆ ಸಹಾಯ ಹಸ್ತ ನೀಡಲು ಸಿದ್ಧವಿದೆ.'

'ಅವಿಧೇಯತೆ ಎನ್ನಿಸದಿದ್ದರೆ ಸನ್ನಿಧಾನದಲ್ಲಿ ನನ್ನದೊಂದು ಅರಿಕೆ'

'ಹೇಳಿ'

'ಬಿದರೆ ಕೋಟೆಯ ಹೊರವಲಯದಲ್ಲಿ ಒಂದು ಮಹಾವಿದ್ಯಾಲಯ ಸ್ಥಾಪಿಸಬೇಕೆಂದಿದ್ದೇನೆ. ಅಲ್ಲೊಂದು ಭವ್ಯಾ ಪ್ರಾಸಾದವನ್ನು ನಿರ್ಮಿಸಿ 'ಮದ್ರಸಾ' ಎಂದು ಕರೆಯಲಿಚ್ಛಿಸುತ್ತೇನೆ. ಆದರೆ ಮದ್ರಸಾ ನಿರ್ಮಾಣಕ್ಕೆ ರಾಜ್ಯದ ಬೊಕ್ಕಸದಿಂದ ಹಣ ಕೊಡುವುದು ಬೇಡ. ಈ ಸೇವಕನಿಗೆ ಬಹಮನೀ ರತ್ನಸಿಂಹಾಸನವು ಪ್ರತಿ ತಿಂಗಳೂ ಕೊಡುತ್ತಾ ಬಂದಿರುವ ಸಂಬಳ ಸಾಕು. ಅದಕ್ಕೆ ಅಪ್ಪಣೆಯಾಗಬೇಕೆಂದು ಪ್ರಾರ್ಥಿಸುತ್ತೇನೆ.'

'ತಮ್ಮಿಚ್ಛೆ'

ಇಚ್ಛೆ ಕಾರ್ಯರೂಪಕ್ಕೆ ಬಂತು.

ಸುಮಾರು ೨೫೦ ಅಡಿ ಉದ್ದ, ೧೦೦ ಅಡಿ ಅಗಲದ ನಿವೇಶನವನ್ನು ತುಂಬಿಕೊಂಡು ಮದ್ರಸಾ ತಲೆ ಎತ್ತಿ ನಿಂತಿತು. ಮೂರು ಮಜಲುಗಳುಳ್ಳ ಈ ಕಟ್ಟಡದ ಎರಡೂ ಮೂಲೆಗಳಲ್ಲಿ ಎತ್ತರದ ಸ್ತಂಭಗೋಪುರಗಳು (ಮೀನಾರ್‌ಗಳು) ಎದ್ದು ನಿಂತವು. ಈ ಸ್ತಂಭ ಗೋಪುರಗಳ ಹೊರಭಾಗಗಳಲ್ಲಿ ಹೊಳೆಯುವ ಹಲವು ಬಣ್ಣದ ಬಿಲ್ಲೆಗಳ ಅಲಂಕರಣವಿದ್ದು, ಸೂರ್ಯನ

ಹೊಂಗಿರಣಗಳು ಬಿದ್ದಾಗ ಸಪ್ತವರ್ಣ ಸುಶೋಭಿತವಾದ ಕಾಮನಬಿಲ್ಲು ನಿರ್ಮಿತವಾಗುತ್ತಿತ್ತು ! ನೋಡುಗರ ಕಣ್ ಮನಗಳಿಗೆ ಆಹ್ಲಾದ ಆಶ್ಚರ್ಯಗಳನ್ನು ನೀಡುತ್ತಿದ್ದ ಮದ್ರಸಾ ಪರ್ಷಿಯಾ ದೇಶದ ಜಗದ್ವಿಖ್ಯಾತ ಕಟ್ಟಡಗಳಿಗೆ ಹೆಗಲೆಣೆಯಾಗಿತ್ತು.

ಮದ್ರಸಾ ಮಗುಲಲ್ಲೇ ಒಂದು ದೊಡ್ಡ ಮಸೀದಿಯನ್ನು ಕಟ್ಟಿಸಿದ ಗಾವಾನ್. ಅದು ಮಿಲಾದುನ್ ನಬಿ, ಅಂದರೆ ಪೈಗಂಬರ್ ಮಹಾಶಯರ ಜನ್ಮದಿನದಂದು ಉದ್ಘಾಟಿತವಾಯಿತು. ಅಲ್ಲಿ ನಿತ್ಯ ಪ್ರಾರ್ಥನೆ ನಡೆಯಲು ಏರ್ಪಾಟಾಗಿತ್ತು. ಪ್ರತಿಯೊಬ್ಬ ವಿದ್ಯಾರ್ಥಿಯೂ ಅಲ್ಲಿ ನಮಾಜ್ ಸಲ್ಲಿಸಿ ಶಾಲೆಗೆ ಹಾಜರಾಗಬೇಕಿತ್ತು. ಆ ವಿದ್ಯಾಲಯದಲ್ಲಿ ಸುಮಾರು ಮೂರು ಸಾವಿರ ಹಸ್ತಪ್ರತಿಗಳಿದ್ದವು. ತನ್ನ ಸಂಪಾದನೆಯ ಬಹುಭಾಗವನ್ನು ದಾನಧರ್ಮಗಳಿಗೆ ಮತ್ತು ಶಿಕ್ಷಣಕ್ಕೆ ವಿನಿಯೋಗಿಸಿದ ಗಾವಾನ್. ಅದರಿಂದಾಗಿ ಮದ್ರಸಾ ಒಂದು ಸುಪ್ರಸಿದ್ಧ ಶಿಕ್ಷಣ ಕೇಂದ್ರವಾಯಿತು. ಪರ್ಷಿಯಾ ದೇಶದಿಂದ, ಅರೇಬಿಯಾದಿಂದ ಅನೇಕ ಶ್ರೇಷ್ಠ ಶಿಕ್ಷಕರನ್ನು ಕರೆಸಿದ. ಅವರಿಗೆ ಮದ್ರಸದ ಪರಿಸರದಲ್ಲೇ ಉತ್ತಮ ಗೃಹಗಳನ್ನು ಕಟ್ಟಿಸಿಕೊಟ್ಟ. ವಿದ್ಯಾರ್ಥಿಗಳಿಗೂ ಅಲ್ಲಿಯೇ ಊಟ ವಸತಿಗಳನ್ನೇರ್ಪಡಿಸಿದ. ಗುರುಗಳ ಮಾರ್ಗದರ್ಶನದಲ್ಲಿ ಅವರ ಸ್ತುತ್ಯ ನಿಯಂತ್ರಣದಲ್ಲಿ ಶಿಷ್ಯ ಜೀವನ ಸಾಗಿಸಬೇಕಿತ್ತು. ಆದರೆ ಗುರು–ಶಿಷ್ಯ ಸಾಮರಸ್ಯಕ್ಕೆ ಯಾವ ರೀತಿಯ ಊನವೂ ಇರಲಿಲ್ಲ. ಅಲ್ಲಿ ಅರೇಬಿಕ್, ಪರ್ಷಿಯನ್, ಸಂಸ್ಕೃತ ಭಾಷಾ ಸಾಹಿತ್ಯ, ವೇದೋಪನಿಷತ್ತು, ಖುರಾನ್, ಕನ್ನಡದ ವಚನ ಸಾಹಿತ್ಯ ಮೊದಲಾದವುಗಳು ಬೋಧಿಸಲ್ಪಡುತ್ತಿದ್ದವು. ಗಾವಾನ್ ಬಿಡುವು ಸಿಕ್ಕಾಗ ಮದ್ರಸದಲ್ಲಿ ಮಕ್ಕಳಿಗೆ ತಾನೂ ಬೋಧಿಸುತ್ತಿದ್ದ. ಸ್ವಯಂ ಸಾಹಿತ್ಯ ಪ್ರೇಮಿಯಾದ ಗಾವಾನನಿಗೆ ಪುಸ್ತಕಗಳೇ ಸ್ನೇಹಿತರು. ಓದುವುದು ಅವನ ಹವ್ಯಾಸವಾಗಿತ್ತು. ಬಿಡುವು ಸಿಕ್ಕಾಗಲೆಲ್ಲಾ ಓದುತ್ತಿದ್ದ. ಜ್ಞಾನವೃದ್ಧಿ ಓದಿನಿಂದ ಮಾತ್ರ ಎಂದು ನಂಬಿದ್ದ. ಹರಟೆಯಲ್ಲಾಗಲಿ, ನಿದ್ದೆಯಲ್ಲಾಗಲಿ, ಕೆಟ್ಟತನದಲ್ಲಾಗಲಿ ಅವನು ಕಾಲ ಕಳೆಯುತ್ತಿರಲಿಲ್ಲ. ಕಾಲದ ಮಹತ್ವ ಅವನಿಗೆ ಚೆನ್ನಾಗಿ ತಿಳಿದಿತ್ತು. ಮನುಷ್ಯ ಏನನ್ನು ಕಳೆದುಕೊಂಡರೂ ಮತ್ತೆ ಸಂಪಾದಿಸಿಕೊಳ್ಳಬಲ್ಲ, ಆದರೆ ಕಳೆದು ಹೋದ ಕಾಲವನ್ನು ಮತ್ತೆ ಪಡೆಯಲಾರ ಎಂದು ಹೇಳುತ್ತಿದ್ದ.

* * *

ಅಂದು ರಾಜಧಾನಿಯಲ್ಲಿ ಸಂಭ್ರಮವೋ ಸಂಭ್ರಮ ! ಅದಕ್ಕೆ ಮುಖ್ಯ ಕಾರಣ ಗಾವಾನನ ಕನಸಿನ ಕನ್ನಡಿ ಮದ್ರಸಾ ಉದ್ಘಾಟನೆ. ಆ ಮಹೋತ್ಸವಕ್ಕೆ ಗೊತ್ತಾಗಿದ್ದ ದಿನ ರಂಜಾನ್ ಇಬಾದತ್ ಒಂದು ತಿಂಗಳ ಉಪವಾಸದ ಅಂತಿಮ ದಿನ. ಮಸೀದಿ ಮತ್ತು ಮದ್ರಸಾ ನಡುವಿನ ವಿಶಾಲ ಬಯಲಿನಲ್ಲಿ ನೂರಾರು ಬಗೆಯ ಶಾಮಿಯಾನಗಳ ತಣ್ಣೆಳಲ ತಂಪಿನಲ್ಲಿ ಸಹಸ್ರಾರು ಜನರು ಕುಳಿತುಕೊಳ್ಳುವ ವ್ಯವಸ್ಥೆ ಮಾಡಲಾಗಿತ್ತು. ಸಹಸ್ರಾರು ಕಂಬಗಳು ಬಣ್ಣ ಬಣ್ಣದ ಸೀರೆಯನ್ನು ಉಟ್ಟಿದ್ದರೆ, ನೆಲ ಮಕಮಲ್ಲು ಹೊದೆದಿತ್ತು. ಅಲ್ಲಲ್ಲಿ ಮುತ್ತಿನಗೊಂಚಲು ಇಳಿಬಿದ್ದಿದ್ದರೆ, ಕೆಲವೆಡೆ ಬಗೆಬಗೆಯ ಚಿತ್ರಪಟಗಳು ರಾರಾಜಿಸುತ್ತಿದ್ದವು. ಒಂದು ಬದಿಯಲ್ಲಿ ಎತ್ತರವಾದ ವೇದಿಕೆ, ಆ ವೇದಿಕೆ ನಾನಾ ರೀತಿಯಲ್ಲಿ ಅಲಂಕರಿಸಿಕೊಂಡಿತ್ತು ಎಂದು ಹೇಳಬೇಕಿರಲಿಲ್ಲ. ಅದರ ಮೇಲೆ ಉನ್ನತಾಸನಗಳು, ಪ್ರಭು ಪ್ರಧಾನಿಗಳ ಉಪಸ್ಥಿತಿ. ಪಕ್ಕದ ತೆಳುಪರದೆಯ ಒಳಗಡೆ ರಾಜಮಾತಾ ಮತ್ತು ಘೋಷಾ ಸ್ತ್ರೀಸಂದೋಹ.

ಮೌಲ್ವಿ ಮಹನೀಯರ ನಿರ್ದೇಶನದಂತೆ ಸಾಮೂಹಿಕ ನಮಾಜು ಮುಗಿದು ಸಭಾ ಕಾರ್ಯಕ್ರಮ ಆರಂಭವಾಯಿತು. ಕುರ್‌ಆನ್ ಪಠಣ ಆಯಿತು. ಪ್ರಾರ್ಥನೆ ಆಯಿತು. ಸಭೆಯನ್ನುದ್ದೇಶಿಸಿ ಮಹಾಮಂತ್ರಿ ಮಹಮೂದ್ ಗಾವಾನರಿಂದ ಭಾಷಣ. ಅದು ರಂಜಾನ್ ಹಬ್ಬದ ಅರ್ಥ ಔಚಿತ್ಯವನ್ನು ಕುರಿತದ್ದಾಗಿತ್ತು. ಗಾವಾನ್ ಎದ್ದು ನಿಂತರು. ಪ್ರಭುಪೀಠಕ್ಕೆ, ಮಾತಾ ಸನ್ನಿಧಿಗೆ ಮತ್ತು ಕುಳಿತಿದ್ದ ಜನಸ್ತೋಮಕ್ಕೆ ಸಲಾಂ ಸಲ್ಲಿಸಿ, ಕ್ಷಣಕಾಲ ಏನನ್ನೋ ಧೇನಿಸುತ್ತಾ, ಬಾಯಲ್ಲಿ ಮಂತ್ರಗಳನ್ನು ಕುಳುಕುತ್ತಾ, ಕೈಗಳನ್ನು ಮೇಲೆತ್ತಿ ಉಚ್ಚ ಕಂಠದಲ್ಲಿ ಹಾಡತೊಡಗಿದರು.

ಪರಮೋದ್ಧಾರನೂ ಪರಮ ದಯಾಪರನೂ ಆದ ಪರಮಾತ್ಮನ ಹೆಸರಿನಲ್ಲಿ.

ಬಿಸ್ಮಿಲ್ಲಾ ಹಿರ್ ರಹಮಾನ್ ನಿರ್ ರಹೀಮ್

ನನ್ನ ಪವಿತ್ರತಮ ಕರ್ತವ್ಯವನ್ನಾಚರಿಸುತ್ತಿದ್ದೇನೆ. ಓ ದಯಾಮಯನೆ, ಕಾರುಣ್ಯದ ಕಡಲಾದವನೆ ನಮ್ಮೆಲ್ಲರ ಧರ್ಮಾಧರ್ಮಗಳಿಗೆ ಸತ್ಯದ ತೀರ್ಪು ಕೊಡುವ ನ್ಯಾಯದೇವತೆಯೆ ನಮಗೆ ಮಾರ್ಗದರ್ಶನ ಮಾಡು, ಸನ್ಮಾರ್ಗ ದರ್ಶನ ಮಾಡು, ಬಾಳಿನ ಪ್ರತಿಕ್ಷಣದಲ್ಲೂ ನಮಗೆ ಯಶಸ್ಸು ಲಭಿಸಲೆಂದು ಆಶೀರ್ವದಿಸು. ಪ್ರಾಚೀನ ಪ್ರವಾದಿಗಳೆಲ್ಲರೂ ಯಾವ ಸತ್ಪಥದಲ್ಲಿ ಪಯಣಿಸಿದರೋ ಅದೇ ಹಾದಿಯಲ್ಲಿ ನಾವೂ ನಮ್ಮ ಪಯಣವನ್ನು ಮುಂದುವರಿಸುವಂತೆ ಆಶೀರ್ವದಿಸು. ನಿನ್ನ ಕರುಣೆಯ ಕಂದಮ್ಮಗಳ ಮೇಲೆ ನೀನಿಟ್ಟಿದ್ದ ಅಪೂರ್ವಾನುಗ್ರಹವೇ ನಮ್ಮ ಪಾಲಿಗೂ ಬರಲಿ. ನಿನ್ನ ದಯೆಯೊಂದೆ ನಮಗಿರುವ ಏಕೈಕ ಆಶ್ರಯ, ಆಲಂಬನ.

ಈ ರೀತಿಯಲ್ಲಿ ದೈವದೊಲುಮೆಯ ಬೇಡಿಕೆ ಸಲ್ಲಿಸಿ, ಗಾವಾನ್ ಜನತೆಯನ್ನುದ್ದೇಶಿಸಿ ನುಡಿದರು.

ಆತ್ಮೀಯರೆ,

ಇಂದು ನಾವೆಲ್ಲರೂ ಸಾಮೂಹಿಕವಾಗಿ ಸಲ್ಲಿಸಿದ ಇಬಾದತ್ – ಅರ್ಥಾತ್ ಪ್ರಾರ್ಥನೆಯನ್ನು ಅರ್ಥಪೂರ್ಣವಾಗಿಸುವ ಪುಣ್ಯದಿನ ಇದು. ಮನುಕುಲದ ಉದ್ಧಾರಕ್ಕಾಗಿ, ಸತ್ಯಾಸತ್ಯಗಳ ಬಗೆಗೆ ಉತ್ತಮ ಶಿಕ್ಷಣ ನೀಡಲಿಕ್ಕಾಗಿ ಜಿಬ್ರಹಿಲ್ ಎಂಬ

ದೇವದೂತನ ಮೂಲಕ ಭಗವಂತನ ಆದೇಶವು 'ಸಲ್ಲಲ್ಲಾ ಹು ಅಲೈಹಿ ವ ಸಲ್ಲಮ್' ಪ್ರವಾದಿ ಮುಹಮ್ಮದರ ಮೂಲಕ ಭಗವಂತನ ಕರುಣೆಯು ಪವಿತ್ರ ಕುರ್‌ಆನ್ ರೂಪದಲ್ಲಿ ಅವತರಿಸಿದ ಅತಿ ಮಹೋನ್ನತ ಮಹೋದಯದ ದಿನ ಇದು. ರಂಜಾನ್ !

ರಂಜಾನ್ ಹಬ್ಬವೂ ಹೌದು, ವರ್ಷದ ಪವಿತ್ರ ಮಾಸವೂ ಹೌದು. ಹಿಂದೂಗಳಿಗೆ ಶ್ರಾವಣ ಹೇಗೆ ಶುಭಮಾಸವೋ, ಚಾಂದ್ರಮಾನುಸರಣಿಗಳಾದ ಮುಸಲ್ಮಾನರಿಗೆ ರಂಜಾನ್ ಪವಿತ್ರ ಮಾಸ. ದೇವೀಶಕ್ತಿಗಳು ಅಥವಾ ದೈವೀ ಸಂದೇಶಗಳು ಜಗತ್ತಿಗೆ ಅಂದು ಅವತರಿಸುತ್ತವೆ ಎಂಬ ನಂಬಿಕೆ ಇದೆ. ಈ ರಂಜಾನ್ ಮಾಸದ ಇಪ್ಪತ್ತೇಳೂ ದಿನಗಳು ಉಪವಾಸ ವ್ರತವನ್ನಾಚರಿಸಿ, ದಿನಕ್ಕೈದು ಬಾರಿ ನಮಾಜ್ ಸಲ್ಲಿಸಿ, ಈ ಇಪ್ಪತ್ತೇಳನೆಯ ರಾತ್ರಿ ಅಖಂಡ ಜಾಗರಣೆಯನ್ನಾಚರಿಸಬೇಕು. ಅಂದೇ ಬಾಲಚಂದ್ರನ ಪ್ರಸನ್ನ ದರ್ಶನ ಆಗಬೇಕು. ಹೊಸಚಂದ್ರನನ್ನು ದರ್ಶಿಸಿದ ಕ್ಷಣವೇ ಹೊಸವರ್ಷದ ಶುಭಾರಂಭ ಎಂಬ ಸದ್ಭಾವನೆ ನಮ್ಮದು. ಈಗ ಅದೆಲ್ಲ ಆಗಿ ಮುಗಿದಿದೆ. ಜಾಗರಣೆ ಮುಗಿದ ಮಾರನೆಯ ದಿನವಾದ ಇಂದು ನಮಗೆಲ್ಲ ಶುಭದಿನ, ಶುಭ ಹಬ್ಬ.

ತಿಳಿಯಿರಿ, ಹಬ್ಬದ ಆಚರಣೆ ಮೌಢ್ಯದ ಅಂಧಾನುಸರಣ ಅಲ್ಲ. ಇಂದು ಪ್ರತಿಯೊಬ್ಬ ಮುಸಲ್ಮಾನೂ ತನ್ನ ದುಡಿಮೆಯ ಶೇಕಡ ಎರಡೂವರೆಯಷ್ಟನ್ನು 'ಜಕಾತ್'(ತೆರಿಗೆ) ಕೊಡಬೇಕು. ಶೇಖರಣೆಗೊಂಡ ಆ ಹಣ ಬಡಬಗ್ಗರಲ್ಲಿ, ಅಂಗವಿಹೀನರಲ್ಲಿ, ಅಶಕ್ತರಲ್ಲಿ ಹಂಚಿಕೆಯಾಗಬೇಕು. ಹೀಗೆ ಉಪವಾಸ, ಪ್ರಾರ್ಥನೆ, ಜಕಾತ್ ಸಲ್ಲಿಕೆಗಳ ಜೊತೆಗೆ ಪ್ರತಿಯೊಬ್ಬ ಮುಸಲ್ಮಾನನೂ ಭಗವಂತನಲ್ಲಿ, ಪ್ರವಾದಿ ಮುಹಮ್ಮದ (ಸ) ರಲ್ಲಿ ಅಚಲವಾದ ನಂಬಿಕೆ ಇಡಬೇಕು. ಇದು ನಾಲ್ಕನೆಯ ಅಂಶ. ಐದನೆಯದಾಗಿ ಸಾಧ್ಯವಾದಲ್ಲಿ ಮುಸಲ್ಮಾನನಾದವನು ತನ್ನ ಜೀವಿತದಲ್ಲಿ ಒಮ್ಮೆಯಾದರೂ ಹಜ್ ಯಾತ್ರೆ ಕೈಗೊಳ್ಳಬೇಕು.

ಈ ಐದು ಅಂಶಗಳೇ ಇಸ್ಲಾಂ ಧರ್ಮದ ಆಧಾರ ಸ್ತಂಭಗಳು ! ರಂಜಾನ್ ತಿಂಗಳುದ್ದಕ್ಕೂ ಉಪವಾಸ ಮಾಡುವ ಉದ್ದೇಶ ಕೇವಲ ಹಸಿವು ಅಡಗಿಸಲಷ್ಟೇ ಅಲ್ಲ. 'ತಕ್ವಾ' ಅಥವಾ ಧಾರ್ಮಿಕ ಜಾಗ್ರತಿ ಉಂಟುಮಾಡಲು. ಸತ್ಯ ನಿಷ್ಠೆಗಳನ್ನು ಮನದಲ್ಲಿ ತುಂಬಿಕೊಳ್ಳಲು. ಕೊಲೆ, ಕೋಪ, ಕಳವು, ಮೋಸ, ಸುಳ್ಳು, ದುರಾಸೆ, ದುರಾಕ್ರಮಣ ಮುಂತಾದ ಹೇಯಕೃತ್ಯಗಳಿಂದ ದೂರವಿರಲು. ಯಾರನ್ನೂ ಯಾವುದನ್ನೂ ದ್ವೇಷಿಸದೆ ಪ್ರೀತಿಯನ್ನು ಹಂಚಿ, ಪ್ರೀತಿಯನ್ನು ಪಡೆಯಲು ; ಸಾತ್ವಿಕತೆ, ಸೌಜನ್ಯ, ಸಜ್ಜನಿಕೆ ಮೊದಲಾದ ಸದ್ಗುಣಗಳನ್ನು ಸಾಕಾರಗೊಳಿಸಿಕೊಳ್ಳಲು, ಕ್ರೌರ್ಯ, ದೌರ್ಜನ್ಯ, ದ್ರೋಹ, ಜಗಳಗಂಟಿತನ ಮೊದಲಾದ ರಾಕ್ಷಸೀಕೃತ್ಯಗಳಿಂದ ದೂರವಿದ್ದು ಮನುಷ್ಯರಾಗಲು ! ಉಪವಾಸದ ದಿನಗಳಲ್ಲಿ ಮೌನ ಆಚರಿಸುವುದರಿಂದ ಮಾತಿಗೆ ಮಂತ್ರದ ಸತ್ವ ಬರುತ್ತದೆ. ಕೆಟ್ಟದ್ದು ನುಡಿಯದ, ಕೆಟ್ಟದ್ದು ಕೇಳದ, ಧೂಮಪಾನ ಮಾಡದ, ಮದ್ಯಪಾನಗೈಯದ, ಸಂಭೋಗದಿಂದ ದೂರವಿರುವುದರಿಂದ ಆತ್ಮಬಲ ಹಾಗೂ ಆಂತರಿಕ ಶುದ್ಧಿಗಳು ಏಕಕಾಲದಲ್ಲಿ ಪ್ರಾಪ್ತವಾಗುತ್ತವೆ. ಈ ರಂಜಾನ್ ತಿಂಗಳ ಉಪವಾಸ ವ್ರತಾಚರಣೆಯಿಂದ ಎಂತಹ ಲಾಭ ಪ್ರಾಪ್ತಿ ಎಂಬುದನ್ನು ಆಲೋಚಿಸಿ ಆಚರಿಸಿ. ಈ ಮಾಸದ ಉಪವಾಸದ ಪುಣ್ಯ ಒಂದು ತಿಂಗಳಿಗಷ್ಟೇ ಮೀಸಲಿಲ್ಲ. ಅದು ಒಂದು ವರ್ಷದ ಸಾತ್ವಿಕ ಸಂಗ್ರಹಣದ ಸಂಕೇತವೂ ಆಗಿರುತ್ತದೆ. ನೈತಿಕತೆಯನ್ನು ಬಿತ್ತಿ, ಆತ್ಮಸಂಯಮ, ಬಂಧುತ್ವಗಳನ್ನು ಬೆಳೆಸುವುದಲ್ಲದೆ ಅವನು ಒಬ್ಬನೇ ಹಲವರಿಲ್ಲ ಎಂಬ ಏಕದೈವ ಪ್ರಜ್ಞೆಯನ್ನೂ ಅದು ಜಾಗೃತಗೊಳಿಸುತ್ತದೆ. ಅನ್ಯರ ಹಂಗಿನೊಳಗಾಗದ, ತನ್ನತನಕ್ಕೆ ಧಕ್ಕೆ ತಂದುಕೊಳ್ಳದ, ಸ್ವಾಭಿಮಾನ ಸ್ವಾವಲಂಬನಗಳನ್ನು ಯಥೇಚ್ಛ ಬೆಳೆಸಿಕೊಳ್ಳಲು ನೆರವಾಗುತ್ತದೆ.

ಇಂತಹ ಪವಿತ್ರತಮ ರಂಜಾನ್ ಮಾಸವನ್ನು ಜಗತ್ತಿನಾದ್ಯಂತ ಎಲ್ಲ ಮುಸಲ್ಮಾನರೂ ಆಚರಿಸಿ, ದೈವೀಗುಣಗಳನ್ನು ತಮ್ಮಲ್ಲಿ ತುಂಬಿಕೊಳ್ಳಬೇಕು. ಸರ್ವರಿಗೂ ಭಗವಂತ ಒಳ್ಳೆಯದು ಮಾಡಲಿ.

ಓಂ ಸ್ವಸ್ತಿ

ಅಸ್ಸಲಾಂ ಮೊ ಅಲೈಖುಂ ರಹಮತ್ತಲ್ಲಾ ಹಿ !

ಭಾಷಣ ಮುಗಿದ ಕೂಡಲೇ ಎಲ್ಲರೂ ಎದ್ದು ಕೈಯೆತ್ತಿ ವಂದಿಸಿ ಒಬ್ಬರಿಗೊಬ್ಬರು ಆಲಿಂಗಿಸಿಕೊಂಡು ನಿರ್ಗಮಿಸಿದರು.

ೞ

ರಾಜ್ಯ ರಕ್ಷಣೆ ಮತ್ತು ರಾಜ್ಯ ವಿಸ್ತರಣೆ ರಾಜಧರ್ಮ. ಅ ಧರ್ಮ ಪಾಲನೆಗೆ ಯುದ್ಧ ಅನಿವಾರ್ಯ. ಯುದ್ಧ ಎಂದರೆ ಧರ್ಮಬದ್ಧವಾದ ಕೊಲೆ. ಈ ಕೊಲೆ ತನಗೆ ಒಪ್ಪಿತ ಅಲ್ಲ ಎಂಬುದು ಶಾಂತಿಪ್ರಿಯ ಮಹಮೂದ್ ಗಾವಾನನ ಅಭಿಪ್ರಾಯ. ಆದರೆ ಹೊಸ ಪ್ರಾಯದ ಹೊಸಿಲಲ್ಲಿ ಕಾಲಿರಿಸುತ್ತಿದ್ದ ತರುಣ ಸುಲ್ತಾನ ನಿಜಾಂಷಾಹ್‌ನಿಗೆ ಯುದ್ಧಾಂಕಾಂಕ್ಷೆ. ಅದನ್ನು ಪೂರ್ಣಗೊಳಿಸಲು ತಾಯಿ ಮತ್ತು ಪ್ರಧಾನಿಯವರ ಮುಂದಿಟ್ಟ ಅದೊಂದು ದಿನ ತನ್ನ ಮಂತ್ರಾಗಾರದಲ್ಲಿ. ಚರ್ಚೆ ಆರಂಭವಾಯಿತು.

'ರಾಜಮಾತಾ ಸಾನ್ನಿಧ್ಯದಲ್ಲಿ, ಪ್ರಭುಪೀಠಕ್ಕೆ ಮಣಿದು, ಮಹಾಪ್ರಭು, ಯುದ್ಧಘೋಷಣೆಯಷ್ಟೇ ರಾಜಧರ್ಮದ ಗಾಯತ್ರಿ ಅಲ್ಲ. ಅದಕ್ಕೆ ಮಾನವ ಧರ್ಮದ ಹೊಣೆಗಾರಿಕೆ ಇದೆ. ತಾನು ಬದುಕಿ ಅನ್ಯರನ್ನೂ ಬದುಕಬಿಡು ಎಂದು ಬೋಧಿಸುತ್ತದೆ ಅದು. ಆ ಮಗ್ಗುಲನ್ನೂ ಸನ್ನಿಧಾನವು ಗಮನಿಸಬೇಕಾಗಿ ಪ್ರಾರ್ಥನೆ.'

'ಮಹಾಪ್ರಧಾನರೆ, ಕಳಿಂಗ, ತೆಲುಂಗಾಣ ಮತ್ತು ಮಾಳವಗಳ ಮೇಲೆ ನಾವು ನಡೆಸಿದ್ದೇನು? ಯುದ್ಧ ತಾನೆ ? ಒಂದು ವೇಳೆ ಆ ದಿನ ಅವಿದನ್ನು ಮರೆತು ಮಲಗಿದ್ದಿದ್ದರೆ ಈ ದಿವಸ ನಾವು ಸತ್ತು ಸುಣ್ಣವಾಗುತ್ತಿದ್ದೆವು, ಅಲ್ಲವೆ ? ಈಗ ನೋಡಿ

ವಿಜಯನಗರ ತುಂಬು ಪ್ರಾಬಲ್ಯಕ್ಕೆ ಬರುತ್ತಿದೆ. ನಾವು ತೆಪ್ಪಗಿದ್ದರೆ ಒಂದಲ್ಲ ಒಂದು ದಿನ ಅದು ಬಹಮನೀ ಸಾಮ್ರಾಜ್ಯವನ್ನು ನುಂಗಿ ನೀರು ಕುಡಿಯುವುದು ಸತ್ಯ. ಅದಕ್ಕೊಂದು ಪೂರ್ವಭಾವಿ ಪರಿಹಾರವನ್ನು ಹುಡುಕಲೇಬೇಕು. ಪರಿಹಾರ ಯುದ್ಧವಲ್ಲದೆ ಬೇರಾವುದೂ ಅಲ್ಲ.'

'ತಮ್ಮ ಮುಂದಾಲೋಚನೆಯನ್ನು ನಾನು ಒಪ್ಪುತ್ತೇನೆ ಪ್ರಭು. ಆದರೆ ವಿನಾಕಾರಣ ರಕ್ತಪಾತಗೈಯುವುದು ನನಗೆ ಒಪ್ಪಿತ ಅಲ್ಲ.'

'ಪ್ರಧಾನಿಗಳೇ, ಈ ನೆಲದ ರಕ್ತದಾಹ ಇನ್ನೂ ಇಂಗಿಲ್ಲ ; ಇಂಗುವುದೂ ಇಲ್ಲ. ಸದಾ ಶತ್ರು ನೆತ್ತರಿನಿಂದಲೇ ಇದು ತೃಪ್ತಗೊಳ್ಳಬೇಕಾಗಿದೆ. ಅಲ್ಲದೆ ಕತ್ತಿಗಳು ಬಹಳ ಕಾಲ ಒರೆಯಲ್ಲೇ ಮಲಗಿದ್ದರೆ ತುಕ್ಕು ಹಿಡಿದು ಉಪಯೋಗಕ್ಕೆ ಬರದ ವಸ್ತುಗಳಾಗುತ್ತವೆ. ಅವನ್ನು ಆಗಾಗ್ಗೆ ಬಳಸುತ್ತಿರಬೇಕು. ಅದೇ ರೀತಿ ಮನುಷ್ಯನ ಮತಿ ತುಕ್ಕು ಹಿಡಿದು ಪ್ರಗತಿಯನ್ನು ಚಿಂತಗಿಸುವುದೇ ಇಲ್ಲ. ಅದಕ್ಕೆ ಯುದ್ಧದ ಚುರುಕು ಮುಟ್ಟಿಸುತ್ತಲೇ ಇರಬೇಕು. ಯುದ್ಧವಾದರೇನೇ ಜನತೆಯಲ್ಲಿ ಜಾಗ್ರತಿ ಮೂಡುವುದು.'

'ತಮ್ಮ ಒಟ್ಟು ಅಭಿಪ್ರಾಯ ಯುದ್ಧ ಘೋಷಿಸಬೇಕು ?'

ಹೌದು. ಹಕ್ಕಿಯ ರೆಕ್ಕೆ ಪುಕ್ಕಗಳನ್ನು ಕಿತ್ತಂತೆ ವಿಜಯನಗರದ ಸುತ್ತಮುತ್ತಣ ಪಾಳೆಪಟ್ಟುಗಳನ್ನು ಸದೆಬಡಿಯಬೇಕು. ಆಗ ಸಾಮ್ರಾಜ್ಯ ತಾನಾಗಿಯೇ ಸೊರಗಿ ಮೂಲೆ ಹಿಡಿಯುತ್ತೆ. ತಟ್ಟೆ ತುಂಬ ತುಂಬಿರುವ ಬಿಸಿ ಬಿಸಿ ಪಾಯಸವನ್ನು ಒಮ್ಮೆಲೇ ಕುಡಿಯಬರುವುದಿಲ್ಲ. ಏಕ್‌ದಂ ತಟ್ಟೆಯ ಮಧ್ಯಭಾಗಕ್ಕೆ ಕೈ ಹಾಕಿದರೆ ಕೈಸುಟ್ಟುಕೊಳ್ಳುವುದು ಖಂಡಿತ. ಅದನ್ನು ತಪ್ಪಿಸಲು ತಟ್ಟೆಯ ಕಂಠಭಾಗದಲ್ಲಿ ಸುತ್ತಲೂ ಇರುವ ಪಾಯಸವನ್ನು ಸ್ವಲ್ಪಸ್ವಲ್ಪವಾಗಿ ಹದ ಮೀರದಂತೆ, ಬಿಸಿ ಆರದಂತೆ ನೆಕ್ಕುತ್ತಾ ಹೋಗಬೇಕು. ಕಡೆಗೊಮ್ಮೆ ಬಟ್ಟಲ ಪಾಯಸ ಪೂರ್ಣ ಹೊಟ್ಟೆ ಸೇರುತ್ತೆ. ಪ್ರಸ್ತುತ ರಾಜಕಾರಣದಲ್ಲೂ ಈ ನೀತಿ ಒಪ್ಪಿತ !.'

'ಆಗಲಿ, ಮುಂದಿನ ಮಾಗಿಗೆ ಯುದ್ಧ ಘೋಷಣೆ !'

ಮಂತ್ರಾಲಯದ ನಿರ್ಧಾರದಂತೆ ಗಾವಾನನ ಚೈತ್ರಯಾತ್ರೆ ಆರಂಭವಾಯಿತು. ಮಳೆಗಾಲಕ್ಕೆ ಮೊದಲೇ ಬಹಮನೀ ರಾಜ್ಯ ತುಂಬಾ ವಿಸ್ತಾರಗೊಂಡಿತು. ವಿಜಯನಗರ ಸಾಮ್ರಾಜ್ಯಕ್ಕೆ ಸೇರಿದ್ದ ಪೂರ್ವದ ರಾಜಮಹೇಂದ್ರಿ, ಕೊಂಡವೀಡು, ಪಶ್ಚಿಮದ ಬೆಳಗಾವಿ, ಗೋವೆ, ಕೊಂಕಣಗಳು, ದಕ್ಷಿಣದ ಬಾಗಲಕೋಟೆ, ಹುಬ್ಬಳ್ಳಿಗಳು ಬಹಮನೀ ರಾಜ್ಯದ ವಶವಾದವು. ಈ ವಿಜಯೋತ್ಸವವನ್ನು ಆಚರಿಸಲು ದಿನವೊಂದನ್ನು ಗೊತ್ತು ಮಾಡಿಕೊಂಡು ಸೇನೆ ಬಿದರೆಗೆ ಹಿಂತಿರುಗಿತು. ಆದರೆ ಹಾದಿಯಲ್ಲಿ ಒಂದು ದುರ್ಘಟನೆ ಸಂಭವಿಸಿ ಎಲ್ಲರ ಉತ್ಸಾಹ ಉಲ್ಲಾಸಗಳನ್ನು ಕುಂದುಮಾಡಿತು. ಸೇನೆ ಹಿಂತಿರುಗುತ್ತಿದ್ದಾಗ ಅತಿವೇಗದಲ್ಲಿ ಚಲಿಸುತ್ತಿದ್ದ ನಿಜಾಂಷಾಹ್‌ನ ರಥದ ಮುಂದಿನ ಗಾಲಿಗಳೆರಡೂ ಅಚ್ಚಿನಿಂದ ದೂರವಾಗಿ ರಥ ಮುಗ್ಗರಿಸಿ ಬಿದ್ದು ಸುಲ್ತಾನನನ್ನು ಬಲಿ ತೆಗೆದುಕೊಂಡಿತು.

ರಾಜಧಾನಿಗೆ ಸುದ್ದಿ ಸಿಡಿಲಂತೆ ಬಡಿಯಿತು. ರಾಜಮತಾ ಗಾವಾನನ್ನು ಕರೆಸಿ ಸಮಲೋಚನೆ ನಡೆಸಿ ತಮ್ಮ ಎರಡನೆಯ ಹಾಗೂ ಕಡೆಯ ಮಗ ಮೂರನೆಯ ಮುಹ್ಮಮದನನ್ನು ಪಟ್ಟಕ್ಕೆ ತಂದರು. ಕ್ರಿ.ಶ. ೧೪೭೦ರಲ್ಲಿ ಮುಹಮ್ಮದನಿಗೆ ಬಿದರೆಯಲ್ಲಿ ಪಟ್ಟವಾಯಿತು. ನೂತನ ಸುಲ್ತಾನನಿಗಿನ್ನೂ ಮೀಸೆ ಮೊಳೆದೋರಿರಲಿಲ್ಲವಾದ ಕಾರಣ ಅವನ ಪೋಷಣೆ ವಕೀಲ್-ಉಸ್ - ಸುಲ್ತಾನತ್ ಮಖದುಮಾ ಜಹಾನ್‌ರವರ ಪಾಲಿಗೂ, ರಕ್ಷಣೆ ವಜೀರ್-ಏ - ಅಜಮ್ ಜನಾಬ್ ಮಹಮೂದ್ ಗಾವಾನರ ಪಾಲಿಗೂ ಬಂತು.

ಮಾತಾರವರು ಗಾವಾನನ ಮೇಲೆ ಅಪಾರ ವಿಶ್ವಾಸವಿಟ್ಟು ಅವನಿಗೆ ಹೆಚ್ಚು ಸ್ವಾತಂತ್ರ್ಯ ಅಧಿಕಾರಗಳನ್ನು ಕೊಟ್ಟರು. ಸ್ವಾತಂತ್ರ್ಯದ ಅರ್ಥ ಸ್ವೇಚ್ಛಾಚಾರವಲ್ಲ ಎಂಬುದನ್ನು ಅರಿತಿದ್ದ ಗಾವಾನ್ ಲೋಕಹಿತ ಕಾರ್ಯಗಳನ್ನೆಸಗುವ ಮೂಲಕ ಅದನ್ನು ಸಾರ್ಥಕಪಡಿಸಿಕೊಂಡ. ವೀರ ಯೋಧನಾದ ಈತನಿಗೆ ಆಡಳಿತದ ಸೂಕ್ಷ್ಮವೂ ತಿಳಿದಿತ್ತು. ಈ ಸಲದ ಪ್ರಧಾನಿತ್ವದಲ್ಲಿ ಅನೇಕ ಯೋಜನೆಯನ್ನು ಹಾಕಿಕೊಂಡು ರಾಜಮಾತೆಯವರ ಅಪ್ಪಣೆ ಪಡೆದು ಅವುಗಳನ್ನು ಕಾರ್ಯರೂಪಕ್ಕೆ ತಂದ. ಮುಖ್ಯವಾಗಿ ಬಹಮನೀ ರಾಜ್ಯದಲ್ಲಿ ಹಿಂದೆ ಇದ್ದ ನಾಲ್ಕು ತರಫ್ (ಪ್ರಾಂತ)ಗಳನ್ನು ಎಂಟಾಗಿ ಮಾರ್ಪಡಿಸಿ, ರಾಜಾದಾಯವನ್ನು ಹೆಚ್ಚಿಸಿದ. ತರಫ್‌ದಾರ (ರಾಜ್ಯಪಾಲ)ರಿಗೆ ಜಹಗೀರು ನೀಡುವ ಪದ್ಧತಿಯನ್ನು ತಪ್ಪಿಸಿ, ಸಂಬಳ ಕೊಡುವ ಪದ್ಧತಿಯನ್ನು ಜಾರಿಗೆ ತಂದ. ಆಡಳಿತವನ್ನು ಕೇಂದ್ರೀಕರಿಸಿ ರಾಜ್ಯದಲ್ಲಿ ಬಂಡಾಯ ಅಶಾಂತಿಗಳು ತಲೆ ಎತ್ತದಂತೆ ನೋಡಿಕೊಂಡ. ಪ್ರತಿ ತರಫ್‌ನಲ್ಲೂ ಒಂದೊಂದು ಸುಭದ್ರವಾದ ಕೋಟೆಯನ್ನು ಕಟ್ಟಿಸಿ, ಅಲ್ಲೊಂದು ಬಲವಾದ ಸೇನೆಯನ್ನಿಡಲು ಏರ್ಪಾಡು ಮಾಡಿದ. ರೈತರ ಕಷ್ಟನಷ್ಟಗಳನ್ನು ಗಮನಿಸಿ ಕಂದಾಯ ಆಕರಣೆಯನ್ನು ವಿಮರ್ಶೆಮಾಡಿದ. ಮಣ್ಣಿನಗುಣ (ಫಲಶಕ್ತಿ) ಅದಕ್ಕೆ ಇರಬಹುದಾದ ನೀರಾವರಿ ಸವಲತ್ತು ಮತ್ತು ಜಮೀನಿಗೂ ಮಾರುಕಟ್ಟೆಗೂ ಇರುವ ದೂರ ಇವುಗಳನ್ನು ಗಮನಿಸಿ ಕಂದಾಯದ ಆಕರಣೆಯನ್ನು ಸುಧಾರಿಸಿದ. ಕಂದಾಯ ಸಂಗ್ರಹಣೆಯನ್ನು ಕಟ್ಟುನಿಟ್ಟಾಗಿ ವಸೂಲು ಮಾಡಿಸುವ ವ್ಯವಸ್ಥೆ ತಂದ. ಈ ರೀತಿ ಹಣ ಕೂಡಿಸಿ ರಾಜ್ಯದ ಬೊಕ್ಕಸದ ಬೊಜ್ಜು ಬೆಳೆಸುವುದಷ್ಟೇ ಅವನ ಧ್ಯೇಯವಾಗಿರಲಿಲ್ಲ. ಪ್ರಜರ ಹಣ ಪ್ರಜರ ಆಪತ್ಕಾಲದಲ್ಲಿ ಸಹಾಯಕ್ಕೆ ಬರುವಂತೆ ಮುಂಜಾಗ್ರತೆ ವಹಿಸಿದ. ಆ ದಿನವೂ ಬಂತು. ಕ್ರಿ.ಶ. ೧೪೭೪ರಿಂದ ೭೬ರವರೆಗೆ ಸುಮಾರು ಎರಡು ವರ್ಷಗಳ

ಕಾಲ ದಕ್ಷಿಣ ಭಾರತದಲ್ಲಿ ಘೋರ ಕ್ಷಾಮ ಬಂತು. ಅದರ ನಿವಾರಣೆಗಾಗಿ ರಾಜ್ಯದ ಖಜಾನೆಯಿಂದ ಹಣ ತೆಗೆದು ಬರಪೀಡಿತರಿಗೆ ನೀಡಿ ಸೂಕ್ತ ಪರಿಹಾರ ಒದಗಿಸಿದ.

ಇಂತಹ ಸತ್ಯವಂತ ಪ್ರಾಮಾಣಿಕ ಶುದ್ಧ ಮಾನವತಾವಾದಿ ಗಾವಾನನಿಗೆ ಜನತೆ ಕೊಟ್ಟ ಪ್ರಶಸ್ತಿ ಏನು ? ಅಪಮಾನ, ಅವಹೇಳನ, ಮತ್ತು ಶಿರಚ್ಛೇದನ ! ಹೌದು. ನಿಷ್ಠಾವಂತರಿಗೆ ಸಿಗುವ ಗೌರವವೇ ಇದು. 'ಸತ್ಯವಂತರಿಗೆ ಇದು ಕಾಲವಲ್ಲ' ಎಂದು ಹಾಡಿದರು ಪುರಂದರದಾಸರು. ಈ ಮಾತು ಅವರ ಕಾಲಕ್ಕಷ್ಟೇ ಅನ್ವಯಿಸುವುದಿಲ್ಲ, ಎಲ್ಲ ಕಾಲಕ್ಕೂ ಸತ್ಯ.

ಪರ್ಷಿಯಾ ದೇಶದಿಂದ ಬಂದ ಮಹಮೂದ್ ಗಾವಾನ್ ಬಹಮನೀ ರಾಜ್ಯದಲ್ಲಿ ಪ್ರಬುದ್ಧಮಾನಕ್ಕೆ ಬಂದದ್ದು ಅಲ್ಲಿನ ಸ್ಥಳೀಯರಿಗೆ ಸೈರಣೆಯಾಗಲಿಲ್ಲ. ಗಾವಾನ್‌ನ ಪ್ರಖ್ಯಾತಿಯ ಜೊತೆಯಲ್ಲೇ ಇವರಲ್ಲಿ ಅವನ ಬಗೆಗಿನ ದ್ವೇಷವೃಕ್ಷವೂ ಬೆಳೆಯುತ್ತಾ ಹೋಯಿತು. ಅವನು ವಜೀರ್ – ಏ – ಆಜಮ್ ಆಗುವ ಹೊತ್ತಿಗೆ ಹೆಮ್ಮರವಾಗಿ ಇಬ್ಭಾಗದ ವಿಷಫಲ ನೀಡಿತು. ಬಹಮನಿ ಆಸ್ಥಾನದಲ್ಲಿ 'ದಖ್ಖಣಿ' ಮತ್ತು 'ಪರದೇಶಿ' ಎಂಬ ಎರಡು ಗುಂಪುಗಳು ಹುಟ್ಟಿಕೊಂಡು, ಅಲ್ಲಿನ ಅಧಿಕಾರಿಗಳೂ, ಸೇನಾನಿಗಳೂ ವಿಭಜಿತರಾದರು. ಪರ್ಷಿಯಾ, ಅರೇಬಿಯಾ, ತುರ್ಕಿ, ಆಫ್ಘಾನಿಸ್ಥಾನ ಮೊದಲಾದೆಡೆಗಳಿಂದ ಬಂದು ಬಿದರೆಯಲ್ಲಿ ರಾಜ್ಯಾಡಳಿತ ಸೂತ್ರ ಹಿಡಿದ 'ಪರದೇಶಿಗಳು' ಸ್ಥಳೀಯ 'ದಖ್ಖಣಿ' ಮುಸಲ್ಮಾನರನ್ನು ಕೀಳಾಗಿ ಕಾಣುತ್ತಾರೆ ಎಂಬ ಕೆಟ್ಟಭಾವನೆಯನ್ನು ಆಸ್ಥಾನದ ಇತರ ವಜೀರರುಗಳೇ ಹುಟ್ಟು ಹಾಕಿದರು. ಭಾರತೀಯ ಮೂಲದ ಮುಸಲ್ಮಾನರು ಆಫ್ರಿಕಾದಿಂದ ಬಂದು ಕರ್ನಾಟಕದಲ್ಲಿ ನೆಲಸಿದ ಸಿದ್ಧಿ (ನೀಗ್ರೋ)ಗಳ ಜೊತೆ ರಕ್ತ ಸಂಬಂಧ ಬೆಳೆಸಿದವರು. ಇಂತಹ ಎರಡು ಪ್ರಬಲ ಪಕ್ಷಗಳು ಹುಟ್ಟಿಕೊಂಡು ಆಗಾಗ ಮೇಲಾಟ ಆಡಿ ರಕ್ತಪಾತ ಮಾಡಿದ್ದೂ ಉಂಟು. ಹೊರಗಿನ ಕಾಳ್ಗಿಚ್ಚಿಗಿಂತ ಮನೆಯೊಳಗಣ ಕಿಚ್ಚು ಮನೆಯ ಸುಡದೆ ಬಿಡಲಿಲ್ಲ.

ಪರದೇಶಿಗಳಿಗೆ ಪುರಸ್ಕಾರ, ಸ್ವದೇಶಿಗಳಿಗೆ ತಿರಸ್ಕಾರ ಇದು ನಮಗಾಗುತ್ತಿರುವ ಅನ್ಯಾಯ. ಇದಕ್ಕೆಲ್ಲ ಮೂಲ ಕಾರಣ ಮಹಮೂದ್ ಗಾವಾನ್. ನಮಗೆ ತುರ್ಕಿ ಪರ್ಷಿಯಾ ಅರೇಬಿಯಾ ಗಾಳಿಯ ವಾಸನೆಯೇ ಗೊತ್ತಿರಲಿಲ್ಲ. ಅದನ್ನು ನುಗ್ಗಿಸಿ ನಮ್ಮ ದೇಶದ ವಾಯುಮಂಡಲವನ್ನೇ ಮಲಿನಗೊಳಿಸಿದ್ದಾನೆ ಈ ಗಾವಾನ್ ; ಇವನನ್ನು ಮುಗಿಸದೆ ಗತ್ಯಂತರವಿಲ್ಲ – ಎಂದೆಲ್ಲ ಆಲೋಚಿಸಿ, ಒಳಸಂಚು ನಡೆಸಿದರು.

ಗಾವಾನ್ ಆಜನ್ ಬ್ರಹ್ಮಚಾರಿ. ಆಚಾರವಂತ, ತ್ರಿಕರಣ ಶುದ್ಧಿಯಿದ್ದ ಕ್ರಿಯಾಶೀಲ ವ್ಯಕ್ತಿ ; ಅಲ್ಲಾನ ಅವಿಚ್ಛಿನ್ನ ಭಕ್ತ. ತನ್ನದೊಂದು ಪುಟ್ಟ ಕುಟೀರ, ಅದರಲ್ಲಿದ್ದುದು ಒಂದು ತಟ್ಟೆ, ಒಂದು ತಂಬಿಗೆ, ಮತ್ತೊಂದು ಅನ್ನ ಬೇಯಿಸುವ ಪಾತ್ರೆ, ಮಲಗಲು ಇದ್ದೊಂದು ಚಾಪೆ ಮಾತ್ರ. ಉಡುಗೆ ಎರಡೇ ಜೊತೆ. ಉಟ್ಟುದೊಂದು, ತಾನೇ ತೊಳೆದು ಹಾಕಿದ್ದೊಂದು. ಇಷ್ಟೇ ಅವನ ಸರ್ವಸಂಪದ. ಸೇವೆಗೆ ತನಗಾರೂ ಬೇಡವೆಂದರೂ ಬಲವಂತವಾಗಿ ರಾಜಮಾತೆಯವರು ಓರ್ವ ಸೇವಕನನ್ನು ನೇಮಿಸಿದ್ದರು. ಆ ಸೇವಕನಿಗೆ ಹಣದ ಆಸೆ ತೋರಿಸಿ ಪಿತೂರಿಕೋರರು ಗಾವಾನನ ಸ್ವನಾಮಾಂಕಿತ ಅಧಿಕೃತ ಪತ್ರಕ್ಕೆ ಅವನ ಕುಟೀರದಲ್ಲಿದ್ದ ಅಧಿಕಾರ ಮುದ್ರೆಯನ್ನು ಒತ್ತಿಸಿ, ಬೇರೆಯವರಿಂದ ಅರೇಬಿಯಾ ಭಾಷೆಯಲ್ಲಿ ಗಾವಾನನ ಕುತಂತ್ರವೆಂಬಂತಹ ಸುಳ್ಳು ಪತ್ರವನ್ನು ಸಿದ್ಧಪಡಿಸಿ, ಓರ್ವ ಸರದಾರನ ಹಸ್ತಕೊಟ್ಟು ಕಳಿಂಗ ದೇಶದ ಕಡೆಗೆ ಕುದುರೆಯೇರಿ ಹೋಗುವಂತೆಯೂ, ಇನ್ನಿಬ್ಬರು ದೇಶೀಯ ಸರದಾರರು ಅವನನ್ನು ಸೆರೆಹಿಡಿದು ಸುಲ್ತಾನ ಮುಹಮ್ಮದನ ಮುಂದೆ ಹಾಜರುಪಡಿಸಿವಂತೆಯೂ ವ್ಯವಸ್ಥೆ ಮಾಡಿದರು. ಅವರು ಆಲೋಚಿಸಿದಂತೆ ಕಾರ್ಯವೂ ನೆರವೇರಿತು. ವೇಷಧಾರಿ ಗುಪ್ತಚರನ ಸೊಂಟದ ಪಟ್ಟಿಯಲ್ಲಿ ಬಚ್ಚಿಟ್ಟುಕೊಂಡಿದ್ದ ಕೃತಕ ಪತ್ರವನ್ನು ತೆಗೆದು ಸುಲ್ತಾನನ ಮುಂದೆ ಓದಿದರು. ಕೇಳಕೇಳುತ್ತಿದ್ದಂತೆಯೇ ಸುಲ್ತಾನ ಕೆಂಡಾಮಂಡಲವಾದ. ಅವನನ್ನು ಸಮಾಧಾನ ಪಡಿಸುವಂತೆ ನಾಟಕ ಮಾಡಿ ಒಬ್ಬರಾದ ಮೇಲೊಬ್ಬರು ಕುಡಿಸಿ ಕುಡಿಸಿ ಕೆಣಕಿದರು. ಸುಲ್ತಾನ ತೂರಾಡುತ್ತಾ ನಾಳಿನ ತುರ್ತು ಒಡ್ಡೊಲಗದಲ್ಲಿ ಗಾವಾನನನ್ನು ಕರೆಸಿ ಶಿಕ್ಷಿಸುವುದಾಗಿ ಹೇಳಿ ಕಳುಹಿಸಿದ. ಸಂಚುಕೋರರಿಗೆ ಆನಂದವೇ ಆನಂದ !

ಮಾರನೆಯ ದಿನ ಬಂತು.

ಬೆಳಗಿನ ಒಡ್ಡೋಲಗ ನೆರೆಯಿತು. ಹಿಂದಿನ ರಾತ್ರಿಯೇ ಗಾವಾನನಿಗೆ ಕರೆ ಹೋಗಿತ್ತು. ಧಾರ್ಮಿಕ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಲು ಕಲಬುರ್ಗಿಗೆ ಹೋಗಿದ್ದ ಗಾವಾನ್ ಮೂರುದಿವಸಗಳು ಅಲ್ಲಿದ್ದು, ತುರ್ತು ಕರೆಯ ಹಿಂದಿನ ರಾತ್ರಿಯಷ್ಟೇ ಬಂದಿದ್ದ. ವಿಚಾರವೇನೂ ಗೊತ್ತಿರದಿದ್ದ ಗಾವಾನ್ ಮಾಮೂಲಿನಂತೆಯೇ ಆಸ್ಥಾನವನ್ನು ಪ್ರವೇಶಿಸಿದ. ಪ್ರಭುಪೀಠಕ್ಕೆ ಮುಜುರುಗೈದು ವಜೀರ್ - ಏ – ಆಜಮ್ ಪೀಠದಲ್ಲಿ ಕುಳಿತ. ಸಭೆ ಗಂಭೀರವಾಗಿತ್ತು. ಎಲ್ಲರ ಕಳ್ಳಕಣ್ಣುಗಳೂ ಗಾವಾನನನ್ನು ನೋಡುತ್ತಿದ್ದವು. ಇದಾವುದೂ ಗೊತ್ತಿರದಿದ್ದ ಗಾವಾನ್ ಸಹಜವಾಗಿಯೇ ಬಿನ್ನವಿಸಿದ.

ಜಹಾಂಪನಾ, ತುರ್ತುಸಭೆಯನ್ನು ಕರೆಯುವಂತಹ ಕಾರ್ಯವೇನಿತ್ತು ತಿಳಿಯಲಿಲ್ಲ.'

'ತಿಳಿಯಪಡಿಸುತ್ತೇವೆ ಪ್ರಧಾನರೆ, ತಾವು ಕಲಬುರ್ಗಿಗೆ ಹೋದ ಈ ಮೂರು ದಿನಗಳ ಅವಧಿಯಲ್ಲಿ ರಾಜಧಾನಿಯಲ್ಲಿ ಏನೇನೋ ಬದಲಾವಣೆಗಳು ಆದುವು. ಅವೇನೇ ಇರಲಿ, ಆಸ್ಥಾನದಲ್ಲಂತೂ ಅನೇಕ ವಿಷಯಗಳು ಚರ್ಚೆಗೆ ಬಂದು ಎಲ್ಲದಕ್ಕೂ

ಪರಿಹಾರೋಪಾಯ ಹುಡುಕಲಾಯಿತು. ಆದರೆ ಒಂದು ಮಾತ್ರ ಉತ್ತರ ಕಾಣದೆ ಹಾಗೇ ಉಳಿದಿದೆ. ಅದು ತಮ್ಮ ಆಗಮನವನ್ನು ಕಾಯುತ್ತಾ ಕುಳಿತಿದೆ. ಕೃಪೆ ಮಾಡಿ ಸಮಸ್ಯೆಗೆ ಉತ್ತರ ಕೊಡುವಿರಾ !'

'ಮಹಾಪ್ರಭು, ನಾನು ಪ್ರಭುಪೀಠದ ಸೇವಕ. ನನ್ನನ್ನು ಈ ರೀತಿ ಪ್ರಾರ್ಥಿಸಿಕೊಳ್ಳಬಾರದು. ಆಜ್ಞೆ ಮಾಡಬೇಕು. ತಾವು ಕಾಲಲ್ಲಿ ತೋರಿದ್ದನ್ನು ಈ ದಾಸ ನೆತ್ತಿಯಲ್ಲಿ ಹೊತ್ತು ನೆರವೇರಿಸುತ್ತೇನೆ. ಅಪ್ಪಣೆಯಾಗಲಿ ಆಲಂಪನಾ.'

'ಪ್ರಧಾನಿಗಳೇ, ರಾಜದ್ರೋಹಿಗೆ ನಮ್ಮ ದಂಡ ಸಂಹಿತೆ ಏನು ಶಿಕ್ಷೆ ವಿಧಿಸುತ್ತೆ ?'

'ಮರಣದಂಡನೆ ಮಹಾಪ್ರಭು.'

'ದ್ರೋಹಿ ದೊಡ್ಡವನಿರಲಿ, ಚಿಕ್ಕವನಿರಲಿ ಎಲ್ಲರಿಗೂ ಒಂದೇ ದಂಡನೆ ಅಲ್ಲವೆ ?'

ನ್ಯಾಯದ ಕಣ್ಣು ಯಾವಾಗಲೂ ಕುರುಡು. ಅದಕ್ಕೆ ಪಕ್ಷಪಾತ ತಿಳಿದಿಲ್ಲ ಮಹಾಪ್ರಭು.'

'ತುಂಬಾ ಸಂತೋಷ. ತಮ್ಮಂತಹ ಪ್ರಾಜ್ಞರನ್ನು ಪಡೆದ ನಮ್ಮ ಸಾಮ್ರಾಜ್ಯ ನಿಜಕ್ಕೂ ಭಾಗ್ಯಶಾಲಿ. ನಿನ್ನೆ ಒಂದು ಪತ್ರ ಬಂತು. ಇದರ ಅರ್ಥ ನಮಗಾರಿಗೂ ತಿಳಿಯಲಿಲ್ಲ. ತಾವು ಸಮರ್ಥರು. ಕೃಪೆಮಾಡಿ ಓದಿ, ನಮಗೆ ಅದರ ಅಂತರಾರ್ಥವನ್ನು ತಿಳಿಯ ಹೇಳಬೇಕಾಗಿ ಪ್ರಾರ್ಥನೆ !'

ಪತ್ರ ಗಾವಾನನ ಕೈ ಸೇರಿತು. ಸುಲ್ತಾನನ ಈ ವ್ಯಂಗ್ಯ ಗಾವಾನನಲ್ಲಿ ಕಸಿವಿಸಿ ಉಂಟುಮಾಡಿತು. ಆದರೂ ಪ್ರಭು ಕೈಗಿತ್ತ ಪತ್ರವನ್ನು ವಿನೀತಭಾವದಿಂದ ಶಿರಬಾಗಿ ಸ್ವೀಕರಿಸಿ ಓದಿಕೊಂಡ. ಓದ ಓದುತ್ತಲೇ ಅವಾಕ್ಕಾದ ! ಆದರೂ ಧೈರ್ಯ ತಂದುಕೊಂಡು,

ಮಹಾಪ್ರಭು, ಇದು ಕುಚೇಷ್ಟೆಯಲ್ಲ ತಾನೆ ?'

'ಕುಚೇಷ್ಟೆ.... ಪ್ರಧಾನಿಗಳೇ ಬಹಮನಿಯ ಧರ್ಮ ಸಾಮ್ರಾಜ್ಯದ ನಿಘಂಟುವಿನಲ್ಲಿ ಕುಚೇಷ್ಟೇ ಎಂಬ ಶಬ್ದವೇ ಇಲ್ಲ. ಇದು ಪ್ರಭುಪೀಠ, ಧರ್ಮಸಾಮ್ರಾಜ್ಯದ ಪವಿತ್ರ ಪೀಠ. ಇದು ಆಜ್ಞಾಪಿಸುತ್ತಿದೆ ತಾವು ಗಟ್ಟಿಯಾಗಿ ಓದಬೇಕು ಎಂದು.'

ಮಹಮೂದ್ ಗಾವಾನ್ ಪತ್ರವನ್ನು ಗಟ್ಟಿಯಾಗಿ, ಗಂಭೀರವಾಗಿ ಓದತೊಡಗಿದ. ಓದಿನಲ್ಲಿ ಗತ್ತು ಇತ್ತು. ತಾನು ನಿರಪರಾಧಿ ನನಗೇಕೆ ಭಯ ಎಂಬ ಆತ್ಮವಿಶ್ವಾಸವೂ ಇತ್ತು. ಪತ್ರದ ಒಕ್ಕಣೆ ವಿವರಣೆ ಹೀಗಿತ್ತು :

ಕಳಿಂಗಾಧಿಪತಿ ಶ್ರೀ ಶ್ರೀ ಗಜಪತಿ ಮಹೋದಯರ ಸನ್ನಿಧಿಗೆ ಬಹಮನೀ ರಾಜ್ಯದ ವಜೀರ್ –ಏ– ಆಜಮ್ ಮಹಮೂದ್ ಗಾವಾನನ ಸಲಾಮತ್‌ಗಳು. ಅಲ್ಲಾಹ್‌ನ ಕೃಪೆಯಿಂದ ನಾವು ಕ್ಷೇಮ, ತಮ್ಮೆಲ್ಲರ ಕ್ಷೇಮ ಕೋರುತ್ತೇನೆ.

ಕುಡುಕ, ವಿಷಯಲಂಪಟ ಪ್ರಜಾಹಿತವನ್ನೇ ಮರೆತು ಮೆರೆಯುವ ಅರಸನಿಂದ ಆಡಳಿತ ಆರೋಗ್ಯವಾಗಿರದು. ಅಂತಹ ರೋಗಗ್ರಸ್ಥ ಆಡಳಿತದಿಂದ ಪ್ರಜಾಕೋಟಿಯನ್ನು ಉದ್ಧರಿಸುವುದು ರಾಷ್ಟ್ರಜೀವನದ ಹೊಣೆ ಹೊತ್ತ ನನ್ನಂಥವನ ಕರ್ತವ್ಯವಾಗಿದೆ. ಎಲ್ಲ ಹಿರಿಯರೂ ನನ್ನ ಪರರಾಗಿದ್ದಾರೆ. ಇಂದು ರಾಜ್ಯಾಡಳಿತ ಬದಲಾವಣೆಗೆ ಎಲ್ಲರೂ ಕಾತರರಾಗಿದ್ದಾರೆ. ನನ್ನಲ್ಲಿ ಬೇಡಿಕೆ ಸಲ್ಲಿಸಿದ್ದಾರೆ ಕೂಡ. ಸಂಕ್ಷಿಪ್ತದಲ್ಲಿ ಹೇಳುವುದಾದರೆ ಇಲ್ಲಿನ ಸುಲ್ತಾನ ಅವಿವೇಕಿ, ಅಯೋಗ್ಯ, ಸದಾ ಭೋಗಾಸಕ್ತ. ಈ ಕಾಮುಕ ಎಲ್ಲಾ ಜವಾಬ್ದಾರಿಯನ್ನು ನನ್ನ ಮೇಲೆ ಹಾಕಿ ನಿರಾತಂಕವಾಗಿ ನಿದ್ರಿಸುತ್ತಿದ್ದಾನೆ. ಇವನಿಂದ ದೇಶಕ್ಕಾಗಲಿ, ಬಹಮನಿ ಅರಸು ಕುಲಕ್ಕಾಗಲಿ ಸುಖ ಇಲ್ಲ. ಅವನನ್ನು ಸುಲಭದಲ್ಲಿ ಮುಗಿಸಬಹುದು. ಆದರೆ ಅದು ರಾಜ್ಯದ ಕೋಲಾಹಲಕ್ಕೆ, ಸಲ್ಲದ ಕಲ್ಪನೆಗಳಿಗೆ ಆಸ್ಪದ ಆಗಬಹುದು. ಆದ್ದರಿಂದ ತಾವು ದಯವಿಟ್ಟು ನೆಪಮಾತ್ರಕ್ಕೆ ಯುದ್ಧ ಸಾರಿ, ಬಿದರೆಯ ಮೇಲೆ ದಂಡೆತ್ತಿ ಬನ್ನಿ. ನಾನು ಯುದ್ಧ ಸಂದರ್ಭದಲ್ಲಿ ಸುಲ್ತಾನನ ಜೀವನ ನಾಟಕದ ಕಡೆಯ ಫರದೆ ಎಳೆಯುತ್ತೇನೆ. ತದನಂತರ ನಾನು ಬಹಮನಿ ಸಾಮ್ರಾಟ ; ನೀವು ನಮ್ಮ ಆಜೀವ ಸ್ನೇಹಿತರು ! ನಿಮ್ಮೆಲ್ಲ ಕಷ್ಟ ಸಂದರ್ಭಗಳಲ್ಲೂ ನಮ್ಮ ಸಹಾಯ ಹಸ್ತ ಸಿದ್ಧವಿರುತ್ತದೆ ಎಂದು ಅಲ್ಲಾಹನ ಮೇಲೆ ಆಣೆಯಿಟ್ಟು ಈ ಆಮಂತ್ರಣ ನೀಡುತ್ತಿದ್ದೇನೆ. ಕೃಪೆಮಾಡಿ ಪುರಾಂಬರಿಸಿ ನೆರವಾಗಬೇಕೆಂದು ಕೇಳಿಕೊಳ್ಳುತ್ತೇನೆ. ವಿಷಯ ರಹಸ್ಯವಾಗಿರಲಿ ಎಂದು ನಿವೇದಿಸಿಕೊಳ್ಳುವ ಅವಶ್ಯಕತೆ ಇಲ್ಲವಷ್ಟೆ ! ಮತ್ತೊಮ್ಮೆ ಸಹಸ್ರ ಸಲಾಂಗಳೊಡನೆ.

ರಾಜಮುದ್ರೆ ತಮ್ಮ ಆತ್ಮೀಯ
ಮೊಹರು ಸಹಿತ ಮಹಮೂದ್ ಗಾವಾನ್
ಬಹಮನೀ ಮಹಾಪ್ರಧಾನಿ

ಓದು ಮುಗಿಸಿದ ಗಾವಾನ್ ಮೌನ ತಳೆದು ನಿಂತ ! ಸಭೆ ಗಂಭೀರ ಭಾವದಿಂದ ಕೂಡಿ, ರಾಜಾಜ್ಞೆಯನ್ನು ತುದಿಗಾಲಲ್ಲಿ ನಿಂತು ನಿರೀಕ್ಷಿಸುತ್ತಿತ್ತು. ಸುಲ್ತಾನರೆ ಮೌನ ಮುರಿದರು.

'ಸತ್ಯ ಸಂವಾಹಕರಾದ ಮಹಮೂದ್ ಗಾವಾನ್ ಸಾಹೇಬರು ಮಾತಾಡಬೇಕು. ಆಪಾದನೆಯ ವಿರುದ್ಧ ಸಮರ್ಥನೆ ಇದೆಯೆ?

'ಇದೆ ಮಹಾಪ್ರಭು.'

'ಬಹಿರಂಗಪಡಿಸೋಣವಾಗಲಿ !'

'ಮಹಾಪ್ರಭು ಇದರಲ್ಲಿ ಏನೋ ಒಳಸಂಚು ಅಡಗಿದೆ. ಇದು ಕುತಂತ್ರದಿಂದ ಕೂಡಿದ ಪತ್ರ. ನನ್ನ ಮತ್ತು ತಮ್ಮ ವಿಶ್ವಾಸದ ಹಾಲಿಗೆ ಹುಳಿ ಹಿಂಡುವ, ನನ್ನ ತೇಜೋವಧೆಗಾಗಿ ಸೃಷ್ಟಿಸಿರುವ ಕೃತಕ ಕೂಟ ಪತ್ರ.'

'ಪತ್ರ ಕೃತಕ, ಕೂಟ ಇರಬಹುದು. ಆದರೆ ಅದನ್ನೊರೆಯಲು ಬಳಸಿರುವ ಉಪಕರಣಗಳು ಕೃತಕವೆ ?'

'ಇಲ್ಲ ಮಹಾಪ್ರಭು, ಬಳಕೆಗೊಂಡ ಅಧಿಕೃತ ನಾಮಪತ್ರವಾಗಲಿ, ಮುದ್ರೆ ಮೊಹರುಗಳಾಗಲಿ ಕೃತಕ ಅಲ್ಲ, ಅವು ಸಹಜ ಸತ್ಯ – ಪ್ರಭುಪೀಠವು ಈ ಗಾವಾನನಿಗೆ ವಜೀರ್ ಪದವಿ ಪ್ರದಾನಗೈದ ಸಂದರ್ಭದಲ್ಲಿ ವಹಿಸಿಕೊಟ್ಟ ಅಧಿಕಾರ ಪರಿಕರಗಳು.'

'ಮಾತು ವಿಚಿತ್ರವಾಗಿದೆ. ಮಹಾಪ್ರಧಾನಿಗಳು ಸ್ವಹಸ್ತ ಸ್ವೀಕರಿಸಿ, ಅತ್ಯಂತ ಗೋಪ್ಯದಲ್ಲಿಟ್ಟಿದ್ದ ಅಧಿಕಾರ ಪರಿಕರಗಳು ಬಹಿರಂಗಗೊಂಡದ್ದು ಹೇಗೆ ?'

'ನನಗೆ ಗೊತ್ತಿಲ್ಲ ಮಹಾಪ್ರಭು.'

ಈ ಬಗೆಯ ಬೆಕ್ಕಿಗೆ ಚಳಿಜ್ವರ ಬರುವ ಮಾತು ನಮಗೆ ಬೇಕಿಲ್ಲ. ಈ ಪತ್ರ ಕೃತಕ ಅಲ್ಲ. ಸಹಜ ಸತ್ಯ. ಇದರಲ್ಲಿ ರಾಜದ್ರೋಹದ ಒಳಸಂಚು ಇದೆ.'

'ಸುಳ್ಳು, ನಾನು ಸತ್ಯವಂತ. ಅಲ್ಲಾಹ್‌ನ ಆಣೆಗೂ ನಾನು ಪ್ರಭುಪೀಠದ ನಿಷ್ಠಾವಂತ ಸೇವಕ. ಇದು ನನಗಾಗದವರು ನಡೆಸಿರುವ ಕುತಂತ್ರ. ಕೃಪೆಮಾಡಿ ಧರ್ಮಪ್ರಭುಗಳು ನಂಬಬಾರದಾಗಿ ವಿನಂತಿ.'

'ಗಾವಾನ್, ಕೈಹುಣ್ಣಿಗೆ ಕನ್ನಡಿ ಬೇಕೆ. ಅದು ತಾನಾಗಿಯೇ ತನ್ನನ್ನು ಪ್ರದರ್ಶಿಸಿಕೊಳ್ಳುತ್ತದೆ. ನೀನು ಧರ್ಮದ್ರೋಹಿ, ರಾಜದ್ರೋಹಿ, ಸುಲ್ತಾನನಾಗುವ ಕನಸು ಕಂಡ ಮಹತ್ವಾಕಾಂಕ್ಷಿ, ಅಧಿಕಾರ ಪಿಪಾಸು. ನಿನಗೆ ಮರಣದಂಡನೆಯೇ ಸೂಕ್ತ ಮನ್ನಣೆ.'

'ಸಾಯಲು ನಾನಂಜುವುದಿಲ್ಲ. ಆದರೆ ನಾನು ರಾಜದ್ರೋಹಿ ಅಲ್ಲ. ನಾನು ರಾಜದ್ರೋಹಿ ಅಲ್ಲ, ನಾನು ರಾಜದ್ರೋಹಿ ಅಲ್ಲ !'

'ರಾಜದ್ರೋಹಿ, ರಾಜದ್ರೋಹಿ, ಮಹಮೂದ್ ಗಾವಾನ್ ರಾಜದ್ರೋಹಿ' ಸಭೆಗೆ ಸಭೆಯೇ ಕೂಗಿ ಗುಡುಗಿತು.

ಅಷ್ಟೇ ಎತ್ತರದ ಧ್ವನಿಯಲ್ಲಿ ಗಾವಾನ್ ಕೂಗಿಕೊಂಡ.

'ಇಲ್ಲ. ನಾನು ರಾಜದ್ರೋಹಿ ಅಲ್ಲ, ಪ್ರಭುಪೀಠವೇ ತಂದೆ, ತಾಯಿ, ಗುರು, ದೈವ ಎಂದು ಭಾವಿಸಿ, ಸೇವಿಸಿ, ಪೂಜಿಸಿ, ಗೌರವಿಸಿ, ನನ್ನ ಪ್ರಾಣಕ್ಕಿಂತಲೂ ಮಿಗಿಲಾಗಿ ಪ್ರೀತಿಸಿದ ನಾನು ರಾಜದ್ರೋಹಿ ಅಲ್ಲ ! ಅಲ್ಲಾಹ್‌ನ ಸಾಕ್ಷ್ಯವಾಗಿ ನಾನು ಸತ್ಯವಂತ, ಪ್ರಾಮಾಣಿಕ, ನಾನು ಅಗ್ನಿ ಪರಿಶುದ್ಧ....ನಾನು ರಾಜದ್ರೋಹಿ ಅಲ್ಲ !

'ರಾಜದ್ರೋಹಿ, ರಾಜದ್ರೋಹಿ, ರಾಜದ್ರೋಹಿಗೆ ಮರಣದಂಡನೆ ಆಗಬೇಕು, ಮರಣದಂಡನೆ ವಿಧಿಸಬೇಕು.'

ಮತ್ತೆ ಅರಚಿತು ಸಭೆ.

'ಆಗಲಿ, ದ್ರೋಹಕ್ಕೆ ತಕ್ಕ ದಂಡನೆ ಆಗಲಿ. ಈ ಕ್ಷಣದಲ್ಲೇ ಇದೇ ಸಭಾಮಧ್ಯದ ನವರಂಗ ರಂಗೋಲಿಯ ಮಧ್ಯದಲ್ಲಿ ಅನ್ನವಿಟ್ಟ ಮನೆಗೇ ಕನ್ನ ಹಾಕಲು ಯತ್ನಿಸಿದ ರಾಜದ್ರೋಹಿ ಮಹಮದ್ ಗಾವಾನನ ಶಿರಚ್ಛೇದನ ಆಗಲಿ ! ಇದು ರಾಜಾಜ್ಞೆ.'

ಗಾವಾನನ ಮುಖದಲ್ಲಿ ದುಃಖ ದುಗುಡಗಳಿಗೆ ಬದಲು ಮಂದಹಾಸ ಮೂಡಿತು. ತನ್ನ ಟೊಪ್ಪಿಗೆಯನ್ನು ತೆಗೆದು ಪ್ರಧಾನಿ ಪೀಠದ ಮೇಲಿರಿಸಿ, ಕೆಳಗಿಳಿದು ಬಂದು, ಪ್ರಭುಪೀಠಕ್ಕೆ ಸಲಾಂ ಸಲ್ಲಿಸಿ ಭಗವಂತನನ್ನು ಮನಸ್ಸಿನಲ್ಲೇ ಸ್ಮರಿಸುತ್ತಾ –

'ಮಹಾಪ್ರಭುಗಳಲ್ಲಿ ನನ್ನದೊಂದು ಬಿನ್ನಹ.'

'ಪ್ರಾಣಭಿಕ್ಷೆಯಲ್ಲವಷ್ಟೆ ?'

ಛೇ ! ಅಂತಹ ಕೀಳು ಚಿಂತನೆ ನನ್ನ ಬಳಿ ಸುಳಿಯದಿರಲಿ. ಪಂಚಭೂತಗಳಿಂದ ನಿರ್ಮಿತವಾದ ಈ ದೇಹ ಒಂದಲ್ಲ ಒಂದು ದಿನ ಮಣ್ಣಲ್ಲಿ ಮಣ್ಣಾಗಿ, ಧೂಳಿನಲ್ಲಿ ಧೂಳಾಗಿ ಹೇಳಹೆಸರಿಲ್ಲವಾಗುತ್ತೆ. ನಶ್ವರವಾದ ಈ ಶರೀರಕ್ಕಾಗಿ ಚಿಂತಿಸುತ್ತಿಲ್ಲ.'

'ಮತ್ತೆ ?'

'ನಾನು ಇನ್ನೊಂದು ಕ್ಷಣದಲ್ಲಿ ನಿಮ್ಮೆಲ್ಲರಿಂದಲೂ ದೂರವಾಗುತ್ತೇನೆ. ದುಡಿದು ಬಿದ್ದ ನನ್ನ ದೇಹವನ್ನು ಭೂತಾಯಿಯ ಮಡಿಲಿಗಿರಿಸಬೇಕು. ಆದರೆ ನನ್ನ ಎರಡೂ ಕೈಗಳ ಹೊರತು ದೇಹವೆಲ್ಲ ಭಾಗವೂ ಭೂಗರ್ಭದಲ್ಲಿ ಮುಚ್ಚಿ ಹೋಗಲಿ. ಬಿಚ್ಚಿದ ಎರಡೂ ಕೈಗಳು ನನ್ನ ಸಮಾಧಿಯ ಮೇಲೆ ಕಾಣುವಂತಿರಲಿ.'

'ಏಕೆ ?'

'ನಾನು ಈ ಭೂಮಿಗೆ ಬರುವಾಗ ಬರಿಗೈಯಲ್ಲಿ ಬಂದೆ, ಹೋಗುವಾಗ ಬರಿಗೈಯಲ್ಲಿ ಹೋಗುತ್ತಿದ್ದೇನೆ. ಈ ದರ್ಶನಕ್ಕೊಂದು ನಿದರ್ಶನವಾಗಿ ಪ್ರದರ್ಶಿತವಾಗಲಿ. ಅದೊಂದು ಸದಾ ಸಾಂಕೇತಿಕ ಅರ್ಥ ನೀಡಲಿ !'

'ಓಹೋ ! ಹುತಾತ್ಮನೆನಿಸುವ ಹಂಬಲ ಈ ರಾಜದ್ರೋಹಿಗೆ ! ಚಾರರೆ, ತಡವೇಕೆ ? ರಾಜಾಜ್ಞೆ ನೆರವೇರಲಿ.'

ಮೊದಲೇ ಸಜ್ಜುಗೊಂಡಿದ್ದ ಹಗ್ಗ ಕೊಡಲಿಗಳು ಮುಂದೆ ಬಂದವು. ಮುಗಿದ ಕೈ, ಮುಚ್ಚಿದ ಕಣ್ಣುಗಳ ಗಾವಾನರ ದೇಹ ಎರಡು ತುಂಡಾಗಿ ಉರುಳಿ ಬಿತ್ತು.

ಮರಣದಂಡನೆಯ ಸುದ್ದಿ ಮಾತಾಮಂಜಿಲ್‌ಗೂ ಮುಟ್ಟಿತು. ರಾಜಮಾತೆಯವರಿಗೆ ಸಿಡಿಲೆರಗಿದಂತಾಯಿತು. ಕೂಡಲೇ ಆಸ್ಥಾನಕ್ಕೆ ಓಡೋಡಿ ಬಂದರು. ಆದರೆ ಅವರು ಬರುವಷ್ಟರಲ್ಲಿ ರಾಜಾಜ್ಞೆ ನೆರವೇರಿತ್ತು.

ತಾಯಿ ಸ್ತಬ್ಧರಾಗಿ ನಿಂತರು. ರಕ್ತದ ಮಡುವಿನಲ್ಲಿ ತುಂಡಾಗಿ ಬಿದ್ದಿದ್ದ ಗಾವಾನರನ್ನು ಕಂಡರು. ಕಣ್ಣೀರು ಧಾರಾಕಾರವಾಗಿ ಹರಿಯಿತು. ಅದೂ ಚಣಕಾಲ ಮಾತ್ರ. ನೀರು ಬತ್ತಿ ಕಣ್ಣು ಕೆಂಡದುಂಡೆಗಳಾದುವು. ಅದೂ ಬತ್ತಿ ಕಾಂತಿಹೀನವಾದವು. ಅವರಿಗರಿವಿಲ್ಲದೆ ಒಂದೇ ಒಂದು ನುಡಿ ತುಟಿಯಿಂದ ಹೊರಬಿತ್ತು.

'ಮಹಾತ್ಮರಿಗೆ ಇದು ಮನೆಯಲ್ಲ !'

೫

'ಮಹಾಮಾನವ ಮಹಮೂದ್ ಗಾವಾನ್ ಬಲಿಯಾದದ್ದು ದಿನಾಂಕ ೫-೪-೧೪೮೧ರಂದು. ಅಂದೇ ಅವನ ಪಾರ್ಥಿವ ಶರೀರದ ಎರಡೂ ತುಂಡುಗಳನ್ನು ಬಿದರೆಗೆ ಸುಮಾರು ೫ ಕಿ. ಮೀ. ದೂರದಲ್ಲಿದ್ದ ಗೋರನಹಳ್ಳಿಯಲ್ಲಿ ಸಮಾಧಿ ಮಾಡಲಾಯಿತು. ಮಾರನೆಯ ದಿನ ರಾಜಮಾತೆ ಮಖದುಮಾ ಘೋಷಾ ತೆಗೆದು ಮುಡಿ ಬಿಚ್ಚಿದವಳಾಗಿ, ಬರಿಗಾಲಲ್ಲಿ ಬಿದರೆಯಿಂದ ಗೋರನಹಳ್ಳಿಯವರೆಗೂ ನಡೆದು ಹೋಗಿ ಸಮಾಧಿಯ ಬಳಿ ನಿಂತು ಕಣ್ಣೀರಿನ ಕಾಣಿಕೆ ಅರ್ಪಿಸಿ, ಭಗವಂತನನ್ನು ಕುರಿತು ಪ್ರಾರ್ಥನೆ ಸಲ್ಲಿಸಿ ಅಲ್ಲಿಯೇ ನೆಲೆಸಿದರು.

ಹಗಲೆಂಟು ಇರುಳೆಂಟು ಉರುಳಿದವು. ರಾಜಮಾತೆಯವರು ಸಮಾಧಿ ಸ್ಥಳದಿಂದ ಅರಮನೆಗೆ ಹಿಂತಿರುಗಲು ಇಚ್ಛಿಸಲಿಲ್ಲ. ಅನ್ನ ನೀರಿಲ್ಲದೆ ಸೊರಗಿರುವುದನ್ನು ಕೇಳಿ ಮುಹಮ್ಮದ್ ಷಹಾನೇ ಪರಿಪರಿಯಾಗಿ ಬೇಡಿದ. ತಾಯಿಯ ಒಂದು ಮಾತನ್ನೂ ಉಸುರಲಿಲ್ಲ. ತಾನೇ ಸೋತು ಹಿಂತಿರುಗಿದ. ಏನನ್ನೋ ಆಲೋಚಿಸಿ ಮತ್ತೆ ಆ ಸಂಜೆ ಗೋರನಹಳ್ಳಿಯ ಆ ಸಮಾಧಿಯ ಬಳಿ ಬಂದ. ಅಲ್ಲಿ ಇಬ್ಬರು ಪುರುಷರು ರಾಜಮಾತೆಯವರ ಸಂಗಡ ಮಾತನಾಡುತ್ತಿದ್ದುದು ಕೇಳಿಸಿತು. ಸುಲ್ತಾನ ಆ ಮಾತುಗಳನ್ನಾಲಿಸುತ್ತಾ ನಿಂತ.

'ಹೂಂ ಹೇಳು ಆಮೇಲೇನಾಯಿತು ?'

'ಮಾತಾಜಿಯವರು ಮನ್ನಿಸಬೇಕು. ಇತರ ವಜೀರರು ನನಗೆ ಹಣದಾಸೆ ತೋರಿಸಿ ಮುಂಗಡವಾಗಿ ಸಾವಿರ ಹೊನ್ನು ಕೊಟ್ಟರು. ಗಾವಾನ್‌ಜಿಯವರ ಮನೆಯದು ತೆರೆದ ಬಾಗಿಲು, ಅವರ ಜೀವನ ತೆರೆದ ಪುಸ್ತಕ. ಅವರು ಪ್ರಧಾನಿ ಮುದ್ರೆ, ಅಧಿಕೃತ ಕಾಗದ ಎಲ್ಲ ಒಂದು ಗೂಡಿನಲ್ಲಿಟ್ಟಿದ್ದರು. ಅವುಗಳನ್ನು ಜೋಪಾನವಾಗಿಡಲು ಅವರಲ್ಲಿ ಒಂದು ಪುಟ್ಟ ಪೆಟ್ಟಿಗೆ ಕೂಡ ಇರಲಿಲ್ಲ. ನಾನು ಹಣದಾಸೆಯಿಂದ ಅವರ ವಿರೋಧಿಗಳಿಗೆ ಕೊಟ್ಟೆ. ಮುಂದೇನಾಯಿತು ನನಗೆ ತಿಳಿಯದು.'

ಗಾವಾನನ ಸೇವಕ ವರದಿ ಒಪ್ಪಿಸಿದ.

'ಮುಂದಿನದು ನನ್ನ ಸರದಿ. ಪೂಜ್ಯ ಮಾತಾಜಿಯವರ ಪಾದ ಮುಟ್ಟಿ ಕ್ಷಮೆ ಬೇಡುತ್ತೇನೆ. ಅದೇ ದ್ರೋಹಿಗಳು ನನಗೆ ಆಜೀವ ಪರ್ಯಂತ ಬದುಕಲು ಹೊಲ, ಮನೆ, ಹೊನ್ನು, ವಸ್ತ್ರ ಕೊಡುವುದಾಗಿ ಆಸೆ ಹುಟ್ಟಿಸಿ, ಸಾಕಷ್ಟು ಹೊನ್ನು ಕೊಟ್ಟು ನಾನು ಅ ಪತ್ರವನ್ನು ಕಳಿಂಗದ ಕಡೆಗೆ ಕುದುರೆಯೇರಿ ಕೊಂಡೊಯ್ಯುವಂತೆಯೂ, ಸರದಾರರಿಬ್ಬರು ನನ್ನನ್ನು ಹಿಡಿಯುವಂತೆಯೂ ಸುಲ್ತಾನರ ಸಮ್ಮುಖದಲ್ಲಿ ತಾನು ಗಾವನರ ಬೇಹುಗಾರನೆಂದು ಒಪ್ಪಿಕೊಳ್ಳುವಂತೆಯೂ ಹೇಳಿಕೊಟ್ಟರು. ಅವರ ನಿರ್ದೇಶನದಂತೆ ನಾನು ನಾಟಕ ಆಡಿದೆ. ಅದು ಮಹಾನುಭಾವ ಗಾವಾನರನ್ನು ಬಲಿ ತೆಗೆದುಕೊಂಡಿತು. ನಾನು ಪಾಪಿ ! ಮಹಾಪಾಪಿ. ಕ್ಷಮಿಸಬೇಕಾಗಿ ಪ್ರಾರ್ಥಿಸುತ್ತೇನೆ.'

ಕೃತಕ ಬೇಹುಗಾರ ನಡೆದುದ್ದನ್ನು ನಡೆದಂತೆ ಹೇಳಿದ.

'ಹಾಳಾಗಿ ಹೋಗಿ. ಅಂತೂ ಸಂಚುಗಾರರ ಪಿತೂರಿಯಿಂದಾಗಿ ಮಹಾಪುರುಷನನ್ನು ನುಂಗಿ ನೊಣೆದಿರಿ. ಇದು ಅವರ ಅಳಿವಲ್ಲ. ನಿಮ್ಮ ನಾಶ, ಇಡೀ ಬಹಮನಿ ಸಾಮ್ರಾಜ್ಯದ ಸರ್ವನಾಶ ! ಇನ್ನಿದಕ್ಕೆ ಏಳಿಗೆ ಇಲ್ಲ. ಹೋಗಿ, ಬೇಗ ತೊಲಗಿ, ನಿಮ್ಮ ಹೇಯ ಮುಖವನ್ನು ನೋಡಲೂ ನನಗೆ ಮನಸ್ಸಿಲ್ಲ. ಹೂಂ ಹೊರಡಿ, ತಡಮಾಡಿದರೆ ನಿಮ್ಮಿಬ್ಬರ ತಲೆಗಳೂ ನಿಮ್ಮ ಮುಂಡದ ಮೇಲಿರುವುದಿಲ್ಲ.'

ಎಲ್ಲ ಸಂಭಾಷಣೆಯನ್ನೂ ಕದ್ದಾಲಿಸಿದ ಸುಲ್ತಾನ 'ನನ್ನದು ಮಹಾಪರಾಧವಾಯಿತು. ನಿರಪರಾಧಿಯನ್ನು ಕೊಲೆಗೈದ ಪಾತಕಿ ನಾನು' ಎಂದು ಕೂಗಿಕೊಳ್ಳುತ್ತಾ ಎತ್ತರಲೋ ಓಡಿದ. ಹುಚ್ಚನಾಗಿ ಊರೂರು ಅಲೆದ. ಅರಮನೆಯವರು ಹಿಡಿದು ತಂದು ಕೊಠಡಿಯೊಂದರಲ್ಲಿ ಕೂಡಿ ಹಾಕಿದರು. ಅಲ್ಲಿಯೇ ಕೊರಗಿ ಕೊರಗಿ ವರ್ಷ ತುಂಬುವುದರೊಳಗಾಗಿ ಸತ್ತ. ರಾಜಮಾತಾ ಭವಿಷ್ಯ ನುಡಿದಂತೆ ಬಹಮನೀ ರಾಜ್ಯ ಕೆಲವೇ ವರ್ಷಗಳಲ್ಲಿ ಒಡೆದು ಪಂಚಷಾಹೀ ರಾಜ್ಯಗಳಾಗಿ ರೂಪುಗೊಂಡಿತು.

* * *

ಅಂದಿನಿರುಳು ತನ್ನ ಪಯಣದ ಅರ್ಧ ಹಾದಿ ಸವೆಸಿತ್ತು.
ಎಲ್ಲೆಡೆಯೂ ಹಾಲ್ದಿಂಗಳು ಚೆಲ್ಲಿತ್ತು.

ರಾಜಮಾತಾ ಮಖದುಮಾರವರಿಗೆ ಒಂದು ಸುಂದರ ಸ್ವಪ್ನ ಬಿದ್ದಿತ್ತು. ಕನಸಿನಲ್ಲಿ ಬಿದರೆಯ ಮದ್ರಸಾ ಬಳಿಯ ಸ್ತಂಭ ಗೋಪುರ (ಮೀನಾರ್)ದ ತುತ್ತತುದಿಯಿಂದ ಬೆಳಕಿನ ಕೋಲೊಂದು ಗೋರನಹಳ್ಳಿಯ ಸಮಾಧಿವರೆಗೆ ಬೆಳೆದು ಬಂದು ಹೇಳಿತು :

'ಮಾತಾಜಿಯವರ ಮೇಲೆ ಅಲ್ಲಾಹ್‌ನ ಕೃಪೆ ಇರಲಿ. ಮಾತಾಜಿ, ದ್ರೋಹಿಗಳ ದೌಷ್ಟ್ಯಕ್ಕೆ ಬಲಿಯಾಗುವವರಲ್ಲಿ ಮಹಮೂದ್ ಗಾವಾನ್ ಮೊದಲನೆಯವನೂ ಅಲ್ಲ, ಕಡೆಯವನೂ ಅಲ್ಲ. ಜಗತ್ತು ಎಲ್ಲಿನವರೆಗೆ ಮಾನವತೆಯ ಮಹಾಪಾಠವನ್ನು ಕಲಿಯುವುದಿಲ್ಲವೊ, ಎಂದಿನವರೆಗೆ ಮನುಷ್ಯ ಮನುಷ್ಯನಾಗುವುದಿಲ್ಲವೊ ಅಲ್ಲಿನವರೆಗೆ ಇಂತಹ ದುರಂತಗಳು ನಡೆಯುತ್ತಲೇ ಇರುತ್ತವೆ. ಈ ತರಹೆಯ ಘಟನೆ ನಿಯತಿಯ ಒಂದು ಘಟಿಕೆಯೋ ಎಂಬಂತಾಗಿದೆ ! ಇದಕ್ಕಾಗಿ ತಾವು ಚಿಂತಿಸಬಾರದು. ಕಡೆಯಲ್ಲಿ ಇಷ್ಟು ತಿಳಿದು ಸಮಾಧಾನಗೊಳ್ಳಿ – ಏನಾಗಬೇಕೊ ಅದು ಆಗಿಯೇ ತೀರುತ್ತದೆ.., ನಿಯತಿಯನ್ನು ಮೀರುವ ಶಕ್ತಿ ಯಾರಿಗೂ ಇಲ್ಲ.

ಕೇಳಿ ಮಾತಾಜಿ, ಸರ್ವಾಂಗ ಸುಂದರವಾದ ಈ ಜಗತ್ತನ್ನು ಸೃಷ್ಟಿಸಿದ ಭಗವಂತ, ಇಂದಿಗೂ ತಾನು ಕಳುಹಿಸಿದ ಸಾಧು ಸಂತರನ್ನು ಮುನಿ ಮಹಾತ್ಮರನ್ನು ಸ್ವಾಗತಿಸುವ ಚೈತನ್ಯವನ್ನು ಈ ಜನತೆಗೆ ದಯಪಾಲಿಸಿಲ್ಲ. ಇಂದು ಸಾಕ್ರೆಟೀಸನು ಬಂದರೆ ಅವನಿಗೆ ಮತ್ತೆ ಹೆಮ್ ಲಾಕ್ ವಿಷ ಹಾಕುತ್ತೆ ಜಗತ್ತು. ಬುದ್ಧನಿಗೂ ಮದ್ದು ಹಾಕುತ್ತೆ. ಯೇಸುವನ್ನು ಮೊಳೆ ಜಡಿದು ಸಿಲುಬೆಗೇರಿಸುತ್ತೆ. ಮೊಹಮ್ಮದ್‌ರವರನ್ನು ಕಲ್ಲಿಟ್ಟು ಮೆಕ್ಕಾದಿಂದ ಮದೀನಾಕ್ಕೆ ಓಡಿಸುತ್ತೆ. ಸೀತೆಯನ್ನು ಸೂಳೆಯೆಂದು ಕರೆದ ಈ ಜನ, ಮಹಾತಾಯಿ ಉಡುತಡಿಯ ಮಹಾದೇವಿಯಕ್ಕನನ್ನು ಬತ್ತಲೆ ಕಳುಹಿಸಿ ಚಪ್ಪಾಳೆ ತಟ್ಟಿ ನಕ್ಕಿದೆ. ಇತಿಹಾಸದ ಪುಟಪುಟದಲ್ಲೂ ಇಂತಹ ರಕ್ತದ ಕಲೆಗಳಿವೆ ತಾಯಿ ! ತಾವು ತಿಳಿದವರು, ಪ್ರಾಜ್ಞರು, ಅರಿವಿನಲ್ಲಿ ಮರೆವು ಕಾಣುವುದು ಸುಕ್ಷೇಮ, ತಾವು ಶಾಂತರಾಗಬೇಕು. ದಣಿದ ಆತ್ಮಕ್ಕೆ ಶಾಂತಿ ಲಭಿಸಲಿ !'

ದಿವ್ಯವಾಣಿ ದೂರವಾದಂತೆ ರಾಜಮಾತೆ ಮಖದುಮಾರವರ ಅಂತರಾತ್ಮದಲ್ಲಿ ಹಾಡೊಂದು ಹಾಡುತ್ತಲೇ ಅಂತರ್ಧಾನವಾಯಿತು !

ಬುವಿ ಬಾನ ತುಂಬಿರುವ ಓ ಸರ್ವ ವ್ಯಾಪಿಯೆ
ನಿನ್ನ ನಾಮಾಮೃತವು ಪಾವನದ ಸರಸಿ
ವಿಶ್ವದಣು ಘನಕೆಲ್ಲ ಸಿದ್ಧಿ ಸೊಗವೈತರಲಿ
ನಮ್ಮ ನಡೆ ನುಡಿಯಲ್ಲಿ ಮಡಿಯ ಕಲಿಸಿ
ದಿನದ ದಾಹದ ತವಿಸೆ ದಯೆದೋರು ಓ ಧೇನು
ನಿನ್ನೆದೆಯ ಸೊದೆಯನ್ನು ಅನವರತವಾಗಿ
ನಿನ್ನ ಕರುಣಾಂಗೆ ನಮ್ಮ ಮನ ಮಲಿನತೆಯ
ತೊಳೆದು ಶುದ್ಧವಗ್ಗೆಯೆ ಬರಲಿ ಸಾಗಿ
ಕಗ್ಗತ್ತಲೊಡಲಿನಲಿ ಪರಿವ ಹರಿಗೋಲಿಂಗೆ
ಚುಕ್ಕಾಣಿ ನೀನಾಗಿ ದಾರಿತೋರು
ಸರ್ವಶಕ್ತಿಯು ನೀನೆ ಯತ್ನ ಸಿದ್ಧಿಯು ನೀನೆ
ವಿಶ್ವಗಾಯಕ ಹಾಡಿ ಅರವ ಬೀರು
ನಮ್ಮೆದೆಯ ಸುಮವರಳಿ ಕ್ಷಮೆಯ ಸೌರಭ ಸೂಸಿ
ನಿನ್ನಡಿಗೆ ಮುಡಿಸಲಿಕೆ ತೆರವು ನೀಡು
ನಿನ್ನದೇ ಈ ರಾಜ್ಯ ನಿನ್ನದೇ ಈ ಭೋಜ್ಯ
ನಿನ್ನದೀ ನಲವಾಡು ನಮ್ಮ ಪಾಡು

*

# ಮುದ್ದಣ
## ಕಬ್ಬಿಗರ ಬಲ್ಲಹಂ

### ಕಬ್ಬಿಗರ ಬಲ್ಲಹಂ

'ಕಬ್ಬಿಗರ ಬಲ್ಲಹಂ', 'ಕನ್ನಡ ನವೋದಯದ ಮುಂಗೋಳಿ' ಎಂಬೆಲ್ಲ ಹೊಗಳಿಕೆಗೆ ಪಾತ್ರನಾದ ಮುದ್ದಣ ಹುಟ್ಟಿದ್ದು ಕಾರ್ಕಳ ತಾಲೂಕು ನಂದಳಿಕೆ ಗ್ರಾಮದಲ್ಲಿ, ೨೪ ಜನವರಿ ೧೮೭೦ರಲ್ಲಿ. ತಂದೆ ತಿಮ್ಮಪ್ಪಯ್ಯ, ತಾಯಿ ಮಹಾಲಕ್ಷ್ಮಿ. ಈ ಸಾತ್ವಿಕ ದಂಪತಿಗಳ ಹಿರಿಯ ಮಗನಾದ ಮುದ್ದಣನ ಮೂಲ ಹೆಸರು ಲಕ್ಷ್ಮೀನಾರಾಯಣ ಎಂದು. ದಪ್ಪಗೆ ದುಂಡಗೆ ಮುದ್ದು ಮುದ್ದಾಗಿದ್ದುದರಿಂದ ಲಕ್ಷ್ಮೀನಾರಾಯಣನನ್ನು ಅವನ ತಂದೆತಾಯಿಗಳು 'ಮುದ್ದಣ' ಎಂದು ಪ್ರೀತಿಯಿಂದ ಕರೆಯುತ್ತಿದ್ದರು. ಈ ಪ್ರೀತಿನಾಮವೆ ಮುಂದೆ ಕವಿಯ 'ಕಾವ್ಯನಾಮ'ವಾಗಿ ಪ್ರಸಿದ್ಧಿ ಪಡೆಯಿತು.

ಬಡತನವನ್ನೇ ಬೆನ್ನಿಗೆ ಕಟ್ಟಿಕೊಂಡು ಹುಟ್ಟಿದ ಮುದ್ದಣನಿಗೆ ಆರ್ಥಿಕಾಭಾವದಿಂದಾಗಿ ಹೆಚ್ಚು ಶಿಕ್ಷಣ ದೊರೆಯಲಿಲ್ಲ. ಹುಟ್ಟೂರು ನಂದಳಿಕೆಯಲ್ಲಿ ಪ್ರಾಥಮಿಕ ಶಿಕ್ಷಣ, ಉಡುಪಿಯಲ್ಲಿ ಮಾಧ್ಯಮಿಕ ಶಾಲಾ ಶಿಕ್ಷಣ ; ಅಲ್ಲಿಗೆ ಮುಗಿಯಿತು. ಅನಂತರ ವಿದ್ಯಾರ್ಥಿ ವೇತನದಿಂದಾಗಿ ಮದರಾಸಿನಲ್ಲಿ ವ್ಯಾಯಾಮ ಶಿಕ್ಷಣ ದೊರೆಯಿತು. ಲಕ್ಷ್ಮೀನಾರಾಯಣ ತಿಂಗಳಿಗೆ ಹತ್ತು ರೂಪಾಯಿ ಸಂಬಳದ ವ್ಯಾಯಾಮ ಶಿಕ್ಷಕನಾದ ಉಡುಪಿಯ ಮಿಷನ್ ಹೈಸ್ಕೂಲಿನಲ್ಲಿ. ೧೮೯೩ರಲ್ಲಿ ಶಿವಮೊಗ್ಗ ಜಿಲ್ಲೆಯ ಕಾನೇಕೋಡ ಮಗ್ಗಿ ಗ್ರಾಮದ ನಾರ್ಣಪ್ಪಯ್ಯನವರ ಮಗಳು ಕಮಲೆಯೊಡನೆ ಅವನ ವಿವಾಹವಾಯಿತು. ರಸಿಕಚಕ್ರಿಯಾದ ಮುದ್ದಣನಿಗೆ ತಕ್ಕ ಹೆಂಡತಿ ಕಮಲೆ. 'ಇಚ್ಚೆಯನರಿತು ನಡೆವ' ಆ ಮೋಹದ ಮಡದಿ ಮುದ್ದಣನ ಮೆಚ್ಚಿನ ಕಾವ್ಯ ಮನೋರಮೆಯೂ ಆದಳು. ಅವರಿಬ್ಬರ ದಾಂಪತ್ಯದ ಫಲವಾಗಿ ೧೮೯೭ರಲ್ಲಿ ರಾಧಾಕೃಷ್ಣ ಹುಟ್ಟಿದ. ಆದರೆ ಅಲ್ಪಾಯುಷಿಯಾದ ಮುದ್ದಣ ೧೫ ಫೆಬ್ರವರಿ ೧೯೦೧ರಂದು ಕ್ಷಯರೋಗ ಪೀಡಿತನಾಗಿ ತನ್ನ ಮೂವತ್ತನೇ ವರ್ಷಕ್ಕೆ ತೀರಿಕೊಂಡ. ಇಂಗ್ಲಿಷಿನ ಖ್ಯಾತ ರಮ್ಯ ಕವಿ ಕೀಟ್ಸನಿಗೆ ಹೋಲಿಸಿ ಇವನನ್ನು ಕನ್ನಡದ ಕೀಟ್ಸ್ ಎಂದು ಕರೆದದ್ದುಂಟು.

ಮುದ್ದಣ ತುಂಬಾ ಪ್ರತಿಭಾವಂತ. ದೈವದತ್ತವಾದ ಪ್ರತಿಭೆಯ ಜೊತೆಗೆ ಅವನ ಸ್ವಯಂ ಶ್ರಮದಿಂದಾಗಿ ಕನ್ನಡದಲ್ಲಿ ಅಸಾಧಾರಣ ಪಾಂಡಿತ್ಯವೂ ಅವನಿಗೆ ಕರಗತವಾಗಿತ್ತು. ಚಿತ್ರ, ಸಂಗೀತ ಕಲೆಗಳಲ್ಲಿ ವಿಶೇಷ ಪರಿಣತಿ ಪಡೆದಿದ್ದ ಆತ ಯಕ್ಷಗಾನ ಕಲೆಯನ್ನು ಮೈಗೂಡಿಸಿಕೊಂಡಿದ್ದ. ಅದರಿಂದಾಗಿ 'ರತ್ನಾವತಿ ಕಲ್ಯಾಣ' ಮತ್ತು 'ಕುಮಾರವಿಜಯ' ಎಂಬ ಎರಡು ಯಕ್ಷಗಾನ ಪ್ರಸಂಗಗಳು ಅವನಿಂದ ಹೊರಬಂದವು. ಅಂತೆಯೇ ತನ್ನ ಅದ್ವಿತೀಯ ಸಾಧನೆಯಿಂದಾಗಿ 'ಶ್ರೀರಾಮ ಪಟ್ಟಾಭಿಷೇಕ'ವನ್ನು ವಾರ್ಧಕ ಷಟ್ಪದಿಯಲ್ಲೂ, 'ಅದ್ಭುತ ರಾಮಾಯಣ' ಮತ್ತು 'ಶ್ರೀರಾಮಶ್ವಮೇಧ'ಗಳನ್ನು ಗದ್ಯದಲ್ಲೂ ಯಶಸ್ವಿಯಾಗಿ ರಚಿಸಿದ. ಅವನದೆಂದೇ ಹೇಳಲಾದ 'ಜೋಜೋ' ಎಂಬೊಂದು ಸಂಶೋಧನಾತ್ಮಕ ಲೇಖನವು ಮಂಗಳೂರಿನ ಸುವಾಸಿನೀ ಪತ್ರಿಕೆಯಲ್ಲಿ ಡಿಸೆಂಬರ್ ೧೯೦೦ರ ಸಂಚಿಕೆಯಲ್ಲಿ 'ಚಕ್ರಪಾಣಿ' ಎಂಬ ಗುಪ್ತಕರ್ತೃ ನಾಮದಿಂದ ಪ್ರಕಟವಾಗಿದೆ. ಇವಿಷ್ಟು ಕೃತಿಗಳನ್ನು ಬಿಟ್ಟರೆ ಅವನು ರಚಿಸಲು ಆರಂಭಿಸಿದ್ದನೆಂದು ಹೇಳಲಾದ 'ಗೋದಾವರಿ' ಎಂಬ ಕಾದಂಬರಿಯಾಗಲಿ, ಒಂದು ವ್ಯಾಕರಣ ಗ್ರಂಥವಾಗಲಿ, ವಿಶ್ವಕೋಶವಾಗಲಿ ಇಂದಿನವರೆಗೂ ಲಭ್ಯವಾಗಿಲ್ಲ.

ಮೇಲೆ ಕಾಣಿಸಿದ ಉಪಲಬ್ಧ ಕೃತಿಗಳಾವನ್ನೂ ನಂದಳಿಕೆ ಲಕ್ಷ್ಮೀನಾರಾಯಣಪ್ಪ ತನ್ನ ಹೆಸರಿನಲ್ಲೇ ಬರೆದು ಪ್ರಕಟಿಸಲಿಲ್ಲ. ಅವನದು ಒಂದು ಬಗೆಯ ಸಂಕೋಚ ಪ್ರವೃತ್ತಿ ; ಜೊತೆಗೆ ತಾನು ಬರೆದದ್ದೆಂದು ಹೇಳಿಕೊಂಡರೆ ಯಾರೂ ಪ್ರಕಟಿಸುವುದಿಲ್ಲ ಎಂಬ ಕೀಳರಿಮೆ. ಅದರಿಂದಾಗಿ ಲಕ್ಷ್ಮೀನಾರಯಣಪ್ಪ ತಾನು ಬರೆದ 'ಶ್ರೀರಾಮ ಪಟ್ಟಾಭಿಷೇಕ' ಕಾವ್ಯವು 'ಚಾವಡಿ ರಂಗಭಟ್ಟನಾತ್ಮಜೆ ಮಹಾಲಕ್ಷ್ಮಿ ಎಂಬ ಕನ್ನಡಿತಿ ರಚಿಸಿದುದೆಂದು' ಹೇಳಿಕೊಂಡ ; 'ಅದ್ಭುತ ರಾಮಾಯಣ'ವನ್ನು 'ತಿರುಳ್ಗನ್ನಡಿಗನಡಿದಾವರೆಯ ಬಂಡುಣಿಗಳಪ್ಪ ಕನ್ನಡ ಕಬ್ಬಿಗರ ಮನೆಯೊಳಿಗದವನೊರ್ವಂ ಕನ್ನಡಿಗಂ ಪೇಳ್ದಂ' ಎಂದು ತನ್ನ ಹೆಸರನ್ನು ಬಿಟ್ಟುಕೊಟ್ಟ : 'ಶ್ರೀರಾಮಾಶ್ವಮೇಧ'ದ ಕರ್ತೃ 'ಮುದ್ದಣ' ಎಂದು ಕರೆದ. 'ಜೋಜೋ' ಲೇಖನ ಬರೆದವರು 'ಚಕ್ರಪಾಣಿ' ಎಂದು ಸಾರಿದ. ಅವನ ಈ ಬಗೆಯ ಹೆಸರು ಮರೆಮಾಚುತನ ಅನೇಕರಲ್ಲಿ ಸಂದೇಹಕ್ಕೆಡೆಮಾಡಿಕೊಟ್ಟಿತು. ಇಂದಿಗೂ ಮುದ್ದಣನೇ ಬೇರೆ, ಲಕ್ಷ್ಮೀನಾರಾಣಪ್ಪನೇ ಬೇರೆ ಎಂಬ ಸಿದ್ಧಾಂತದವರೆಗೂ ವಿದ್ವಾಂಸರು ಹೋಗುತ್ತಿರುವುದುಂಟು. ಆದರೆ ಮುದ್ದಣ ಲಕ್ಷ್ಮೀನಾರಾಯಣನಲ್ಲದೆ ಬೇರೆ ಅಲ್ಲ ; 'ಚಕ್ರಪಾಣಿ'ಯೂ ಅವನೇ ; ಕನ್ನಡಿಗರ್ ಮನೆಯೊಳಿಗದ ಕನ್ನಡಿಗನೂ ಅವನೇ. ಅಂತೆಯೇ ಶ್ರೀರಾಮಪಟ್ಟಾಭಿಷೇಕದ ಮಹಾಲಕ್ಷ್ಮಿ ಅವನನ್ನು ಹೆತ್ತ ತಾಯಿಯಲ್ಲದೆ ಬೇರೆ ಯಾರೂ ಅಲ್ಲ.

ಮಾತೃಋಣ ತೀರಿಸಲು ತಾನೇ ಬರೆದು ಅವಳ ಹೆಸರಿನಲ್ಲಿ ಪ್ರಕಟಿಸಲು ನಿರ್ಧರಿಸಿ, ಪ್ರಕಾಶಕರ ಮುಂದೆ ಸುಳ್ಳು ಹೇಳಿದ. ಇದಕ್ಕೆ ಮುಖ್ಯ ಕಾರಣ ಕೃತಿಗಳು ತನ್ನವೆಂದು ಹೇಳಿಕೊಂಡರೆ ಪ್ರಕಾಶಕರು ಎಲ್ಲಿ ಮುಂದೆ ಬರುವುದಿಲ್ಲವೊ ಎಂಬ ಅಳುಕು ಮತ್ತು 'ರತ್ನಾವತಿ ಕಲ್ಯಾಣ' 'ಕುಮಾರವಿಜಯ' ಯಕ್ಷಗಾನ ಪ್ರಸಂಗಗಳನ್ನು ತನ್ನ ಹೆಸರಿನಲ್ಲಿ ತಾನೇ ಪ್ರಕಟಿಸಿ ಕೈಸುಟ್ಟುಕೊಂಡದ್ದು. ಹೀಗಾಗಿ ತನ್ನ ಕೃತಿಗಳಿಗೆ ಬೆಳಕು ಕಾಣಿಸುವ ಉತ್ಕಟೇಚ್ಛೆಯಿಂದ ಈ ಉಪಾಯ ಹುಡುಕಿದನೆಂದು ಹೇಳಬಹುದು. ಇಂತಹ ಪರೋಕ್ಷ ವಿನಯ ಸ್ವಭಾವದ ಮುದ್ದಣ ಕನ್ನಡ ನವೋದಯದ ಹರಿಕಾರನಾಗಿದ್ದಾನೆ, ಕನ್ನಡದ ಅಚ್ಚಳಿಯದ ಆಸ್ತಿಯಾಗಿದ್ದಾನೆ.

**ಶ್ರೀರಾಮಾಶ್ವಮೇಧಂ :**

ಮುದ್ದಣನಿಗೆ ಕೀರ್ತಿ ತಂದ, ಕನ್ನಡ ಸಾಹಿತ್ಯ ಲೋಕದಲ್ಲಿ ಅವನನ್ನು ಅಜರಾಮರವಾಗಿ ಉಳಿಸಿದ ಗ್ರಂಥ '**ಶ್ರೀರಾಮಾಶ್ವಮೇಧ**'. ಇದು ಅವನ ಆಚಾರ್ಯ ಕೃತಿಯೂ ಅಹುದು. ಪದ್ಮಪುರಾಣಾಂತರ್ಗತವಾದ ಕಥಾನಕವೇ ಇದರ ವಸ್ತು. ಅಯೋಧ್ಯಾಪತಿಯಾದ ಶ್ರೀರಾಮಚಂದ್ರ ಲೋಕಾಪವಾದಕ್ಕೆ ಹೆದರಿ ಪೂರ್ಣ ಗರ್ಭಿಣಿಯಾದ ಸೀತೆಯನ್ನು ಕಾಡಿಗಟ್ಟುವುದು, ಅರಣ್ಯದಲ್ಲಿನ ವಾಲ್ಮೀಕಿಗಳ ಆಶ್ರಮದಲ್ಲಿ ಸೀತೆ ಕುಶಲವರಿಗೆ ಜನ್ಮ ಕೊಡುವುದು, ಕೆಲವು ವರ್ಷಗಳು ಉರುಳಿದ ಮೇಲೆ ಆಶ್ರಮದೆಡೆಗೆ ಬಂದ ರಾಮನ ಯಜ್ಞಾಶ್ವವನ್ನು ಕಟ್ಟುವುದು, ಸೇನೆಗೂ ಮಕ್ಕಳಿಗೂ ಯುದ್ಧ ಆಗಿ ದಾಯಾದಿಗಳು ಸೋಲುವುದು. ಕಡೆಗೆ ಮಹರ್ಷಿ ವಾಲ್ಮೀಕಿಗಳ ಸಮ್ಮುಖದಲ್ಲಿ ಪತಿ ಪತ್ನಿಯರ ಸಮಾಗಮ ನಡೆದು, ಪತ್ನೀ ಪುತ್ರರ್‍ನು ರಾಮ ಸ್ವೀಕರಿಸುವುದು. ಇಂತಹ 'ಉತ್ತರ ರಾಮಚರಿತ' ಭಾಗವನ್ನು ಆಯ್ದುಕೊಂಡಿದ್ದರೂ ಮುದ್ದಣ ತನ್ನ ಸ್ವೋಪಜ್ಞತೆಯನ್ನು ಮೆರೆದು 'ಸಾಮಾನ್ಯ ಚಿತ್ರಕ್ಕೆ ಸುವರ್ಣದ ಚೌಕಟ್ಟು ಎಂಬಂತೆ ಮುದ್ದಣ ಮನೋರಮೆಯರ ಸರಸ ಸಂಭಾಷಣೆಯೊಂದಿಗೆ ರಸಿಕ ವೃಂದವನ್ನು ಆಕರ್ಷಿಸಿದ್ದಾನೆ. ಕಥೆಯ ಮಧ್ಯೆ ಮಧ್ಯೆ ಉದ್ಭವಿಸಬಹುದಾದ ಸ್ತ್ರೀ ಸಹಜ ಸಂದೇಹಗಳಿಗೆ ಮುದ್ದಣ ನಿವಾರಕನಾಗಿದ್ದಾನೆ, ಪ್ರಶ್ನೆಗಳಿಗೆ ಉತ್ತರವೂ ಆಗಿದ್ದಾನೆ. ಈ ವಿಶಿಷ್ಟ ಪಾತ್ರಗಳ ಪ್ರವೇಶವಿಲ್ಲದಿದ್ದರೆ '**ರಾಮಾಶ್ವಮೇಧ**' ನಿಜಕ್ಕೂ ನೀರಸವಾಗುತ್ತಿತ್ತು. ಅಂತಹ ಚರ್ವಿತ ಚರ್ವಣ ಭಾಗ ಕಾಂತಾಸಮ್ಮಿತದಲ್ಲಿ ತನ್ನ ಯಶಸ್ಸು ಕಂಡುಕೊಂಡಿದೆ.

**ಅದ್ಭುತ ರಾಮಾಯಣಂ :**

ಇದು ಮುದ್ದಣನ ಮತ್ತೊಂದು ಗದ್ಯಕೃತಿ. ಸಂಸ್ಕೃತದ ಇದೇ ಹೆಸರಿನ ಪದ್ಯ ಕಾವ್ಯವೇ ಇದರ ಮೂಲ ಆಕರ ಗ್ರಂಥ. ಹೆಸರೇ ಸೂಚಿಸುವಂತೆ ಇದು ಅನೇಕಾನೇಕ ಅದ್ಭುತಗಳ ಆಗರ. ಸಾತ್ವಿಕತೆಯ ಸಾಕಾರ ಮೂರ್ತಿಯಾದ ಸೀತೆ ಇಲ್ಲಿ ಮಹಾಕಾಳಿ ; ಆದಿಶಕ್ತಿ ಸ್ವರೂಪಿಣಿ. ಇದರ ಅರಿವು ರಾಮನಿಗೂ ಆಗಿ, 'ಮಾಹೇಶ್ವರಿ, ಈ ಅದ್ಭುತ ರೂಪಮಂ ಕಂಡು ಮನಮಂಜುವುದು, ಅದಱಿಂ ಮುನ್ನಿನ ರೂಪಮಂ ತೋಱು' ಎಂದು ಬೇಡುವಲ್ಲಿ, ಜಗನ್ಮಾತೆಯ ಅಭಯ ಪ್ರದಾನದೊಂದಿಗೆ ಕಥೆ ಮುಗಿಯುತ್ತದೆ. ಫಣಿರಾಯನು ತಿಣುಕುವಷ್ಟು ಮಂದಿ ರಾಮಾಯಣದ ಕವಿಗಳೆಲ್ಲರೂ ತಮ್ಮ ತಮ್ಮ ಕೃತಿಗಳಲ್ಲಿ ರಾಮನಿಗೇ ಪ್ರಾಶಸ್ತ್ಯ ನೀಡಿರುವುದನ್ನು ಕಂಡು, ಆ ಭಾವನೆಯನ್ನು ಬದಲಿಸಲು ಯತ್ನಿಸಿ ಸೀತೆಗೇ ಪ್ರಾಧಾನ್ಯವಿತ್ತು ವಾಲ್ಮೀಕಿ ಭರದ್ವಾಜನಿಗೆ ಕಥೆ ಹೇಳಿದನೆಂದು ಮೂಲ ಸಂಸ್ಕೃತ ಕವಿ ಕಲ್ಪಿಸಿಕೊಂಡಿದ್ದಾನೆ. ಅದನ್ನೇ ಮುದ್ದಣ ತನಗೆ ಬೇಕಾದಂತೆ ಆಯ್ದು ಅಳವಡಿಸಿಕೊಂಡಿದ್ದಾನೆ.

**ಶ್ರೀರಾಮಪಟ್ಟಾಭಿಷೇಕಂ :**

ಇದು ಕಿರು ಖಂಡ ಕಾವ್ಯ( Fragment). ಐದು ಸಂಧಿ ಮತ್ತು ೨೪೨ ವಾರ್ಧಕ ಷಟ್ಪದಿಗಳಿವೆ. ಕಥಾಬಿತ್ತಿ ತುಂಬಾ ಕಿರಿದು. ಶ್ರೀರಾಮನು ರಾವಣಾದ್ಯರನ್ನು ಸಂಹರಿಸಿ, ವಿಭೀಷಣನನ್ನು ಪಟ್ಟಾಭಿಷಿಕ್ತನನ್ನಾಗಿಸಿ ಸೀತಾಸಮೇತನಾಗಿ ಅಯೋಧ್ಯೆಗೆ ಬಂದು ಪಟ್ಟಾಭಿಷಿಕ್ತನಾಗುವುದು ಇದರ ವಸ್ತು. ಕನ್ನಡ ಜೈಮಿನಿ ಭಾರತ ಮತ್ತು ಹರಿಶ್ಚಂದ್ರ ಕಾವ್ಯಗಳ ಪ್ರಭಾವ ದಟ್ಟವಾಗಿ ಇವನ ಮೇಲಾಗಿರುವುದು ಸ್ಪಷ್ಟ.

**ರತ್ನಾವತೀ ಕಲ್ಯಾಣ :**

ಈ ಹಿಂದೆ ಪರಿಚಯಿಸಿದ ರಾಮಾಯಣಕ್ಕೆ ಸಂಬಂಧಿಸಿದ ಕೃತಿಗಳಲ್ಲದೆ ಕವಿ ಮುದ್ದಣ ಪುರಾಣಾಂತರ್ಗತ ಕಥಾವಸ್ತುವನ್ನೆತ್ತಿಕೊಂಡು 'ರತ್ನಾವತೀ ಕಲ್ಯಾಣ' ಮತ್ತು 'ಕುಮಾರ ವಿಜಯ' ಎಂಬೆರಡು ಯಕ್ಷಗಾನ ಪ್ರಸಂಗಗಳನ್ನು ರಚಿಸಿದ್ದಾನೆ. ಇವುಗಳಲ್ಲಿ ಮೊದಲನೆಯದರ ಕಥಾಸಾರ ಹೀಗಿದೆ :

ರತ್ನಾವತಿ ಅಂಗಾಧಿಪತಿ ದೃಢವರ್ಮ ಮತ್ತು ಅವನ ಪತ್ನಿ ಸೌರಂಭೆಯರ ಏಕಮಾತ್ರ ಪುತ್ರಿ. ನಾರದ ಮಹರ್ಷಿಯ ಅನುಗ್ರಹ ಆಶೀರ್ವಾದಗಳಿಂದ ಹುಟ್ಟಿದವಳು. ಇವಳನ್ನು ದೃಢವರ್ಮ ಕೌಶಂಬಿಯ ವತ್ಸರಾಜನಿಗೆ ಕೊಡಲು ನಿಶ್ಚಯಿಸಿರುತ್ತಾನೆ. ಆದರೆ ಕಳಿಂಗ ರಾಜನಾದ ಭದ್ರಸೇನನು ರತ್ನಾವತಿಯನ್ನು ಮದುವೆಯಾಗಲು ಅಪೇಕ್ಷಿಸಿ, ಬೇಡಿ ವಿಫಲನಾಗುತ್ತಾನೆ. ಬಲತ್ಕಾರದಿಂದಲೇ ಪಡೆಯಲು ನಿರ್ಧರಿಸಿ ತನ್ನ ಮಂತ್ರಿ ಮಗನಾದ ಚಿತ್ರಧ್ವಜನನ್ನು ಅಂಗರಾಜ್ಯದ ಮೇಲೆ ದಂಡೆತ್ತಿ ಹೋಗಲು ಆಜ್ಞಾಪಿಸುತ್ತಾನೆ. ಚಿತ್ರಧ್ವಜನು ದೃಢವರ್ಮನನ್ನು ಸೋಲಿಸಿದನಾದರೂ, ವಿಂಧ್ಯಕೇತುವೆಂಬ ಶಬರನಿಗೆ ಸೆರೆಯಾಳಾಗುತ್ತಾನೆ. ಇದನ್ನು ತಿಳಿದ ಭದ್ರಸೇನನು ತಾನೇ ಮೇಲೇರಿ ಬಂದು, ವಿಂಧ್ಯಕೇತನನ್ನು ಕೊಂದು ರತ್ನಾವತಿಯನ್ನು ಅಪಹರಿಸಿಕೊಂಡು

ಹೋಗುತ್ತಾನೆ. ಆದರೆ ಅರಣ್ಯ ಮಧ್ಯದಲ್ಲಿ ಹೋಗುವಾಗ ವಿದ್ಯುಲ್ಲೋಚನನೆಂಬ ರಾಕ್ಷಸನ ಕೈಗೆ ಸಿಕ್ಕು ಹತನಾಗುತ್ತಾನೆ. ಆ ರಾಕ್ಷಸನು ರತ್ನಾವತಿಯನ್ನು ಒಲಿಸಿಕೊಳ್ಳಲೆತ್ನಿಸುತ್ತಿದ್ದಾಗ ಬೇಟೆಗೆಂದು ಬಂದ ವತ್ಸರಾಜನು ಅವನನ್ನು ಕೊಂದು ರತ್ನಾವತಿಯನ್ನು ವಿವಾಹವಾಗುತ್ತಾನೆ.

ಘಟನೆಗಳ ಮೇಲೆ ಘಟನೆಗಳು ಚಲಚ್ಚಿತ್ರದಲ್ಲಿ ಬರುವುದರಿಂದ, ವಿವಿಧ ಛಂದಗಳ ಬಂಧಗಳ ಹರಿತ, ಪಾತ್ರಗಳ ಮೆರೆತ ಇವೇ ಮೊದಲಾದವುಗಳಿಂದ ಪ್ರಸಂಗ ಪ್ರೇಕ್ಷಕರನ್ನು ಖುಷಿಪಡಿಸುತ್ತದೆ.

**ಕುಮಾರ ವಿಜಯ :**

'ಸ್ಕಂದ ಪುರಾಣ'ದ ಶಿವರಹಸ್ಯ ಖಂಡದಿಂದ ಆಯ್ದ ಕಥೆಯೇ ಇದರ ವಸ್ತು. ಶೂರಪದ್ಮನೆಂಬ ರಾಕ್ಷಸನು ದೇವೇಂದ್ರನ ಪತ್ನಿ ಶಚಿಯನ್ನಪೇಕ್ಷಿಸಿ, ಯುದ್ಧ ಮಾಡಿ, ಕಡೆಗೆ ಶಿವನ ಸುಪುತ್ರನಾದ ಕುಮಾರಸ್ವಾಮಿಯಿಂದ ಹತನಾಗುತ್ತಾನೆ. ಈ ನಡುವೆ, ಶಚಿ ದೇವೇಂದ್ರರು ತಲೆ ಮರೆಸಿಕೊಂಡದ್ದು ಇಂದ್ರನ ಮಗ ಜಯಂತನು ಸೆರೆ ಸಿಕ್ಕಿದ್ದು, ಶೂರಪದ್ಮನ ತಂಗಿ ಅಜಮುಖಿ ಮತ್ತು ದೂರ್ವಾಸರ ಪ್ರಣಯ ಇತ್ಯಾದಿ ಕುತೂಹಲ ಉಕ್ಕಿಸುವ ಪ್ರಸಂಗಗಳು ಬಂದು ಪ್ರೇಕ್ಷಕರ ಕಣ್‌ಮನಗಳಿಗೆ ರಸದೌತಣ ನೀಡುತ್ತವೆ. ಕಡೆಯಲ್ಲಿ ಕುಮಾರಸ್ವಾಮಿಯು ದೇವೇಂದ್ರನ ಸುಪುತ್ರಿ ಸುರಸೇನೆಯನ್ನು ಲಗ್ನವಾಗುತ್ತಾನೆ. ಸುಖಾಂತ ಸತ್ಕೃತಿ ಬೋಧಪ್ರದವಾಗಿದೆ.

**ಜೋಜೋ :**

ಇದು ಮುದ್ದಣ ವಿರಚಿತ ಸಂಶೋಧನ ಪ್ರಬಂಧ. 'ಜೋಜೋ' ಎಂಬ ಜೋಕುಳಿ ಶಬ್ದದ ನಿಷ್ಪತ್ತಿಯನ್ನು ಮುದ್ದಣ ತುಳುವಿನಲ್ಲಿ ಹುಡುಕಿದ್ದಾನೆ. ತಮಿಳಿನಲ್ಲಿ ಜೋ ಅಥವಾ ಜೋವು ಎಂದರೆ ಮಗು. ಆಣ್ ಜೋವು ಎಂದರೆ ಗಂಡು ಮಗು, ಪೊಣ್ ಜೋವು ಎಂದರೆ ಹೆಣ್ಣು ಮಗು. ಜೋಕುಳು ಎಂಬುದು ಬಹುವಚನ ರೂಪ ಆಕಳು ಇದ್ದಂತೆ. ಇದು ಉಭಯ ಭಾಷಾ ಪ್ರವೀಣನಾದ ಮುದ್ದಣನ ಪ್ರಾಮಾಣಿಕ ಸಂಶೋಧನೆ ಮತ್ತು ಕನ್ನಡದ ಪ್ರಪ್ರಥಮ ಸಂಶೋಧನೆ ಕೂಡ. ಮುದ್ದಣ ಈ ಅರ್ಥದಲ್ಲಿ ಮೊತ್ತಮೊದಲ ಸಂಶೋಧಕ.

**ಶ್ರೀರಾಮಾಶ್ವಮೇಧಂ :**

**'ರಾಮಾಶ್ವಮೇಧಂ'ನ ಆರಂಭವೇ ಒಂದು ಹೊಸತನವನ್ನು ಒಳಗೊಂಡಿದೆ. ಗಂಡ–ಹೆಂಡತಿಯ ಸರಸ ಸಂಭಾಷಣೆಯೊಂದಿಗೆ ಮೊದಲಾಗುವ ಈ ಕಾವ್ಯ ಗದ್ಯ–ಪದ್ಯಗಳ ಸಮ್ಮಿಶ್ರದಲ್ಲಿಯೂ ನಾವೀನ್ಯತೆ ಪಡೆದಿದೆ. ಓದುಗರಿಗೆ ಪರಿಚಿತವಾದ ಕಥೆಯಾದರೂ ಅದನ್ನು ಮಂಡಿಸುವಾಗ ಮುದ್ದಣನ ಪ್ರತಿಭೆ ಹೇಗೆ ಹೊಮ್ಮಿದೆ ಎಂಬುದನ್ನು ಇಲ್ಲಿ ನೋಡಬಹುದು.**

ಕಾಡುಂ ನಾಡುಂ ಮನೋಜ್ಞಮಾಗೆ ಸಂಪ್ರಾಪ್ತಮಾದ ವರ್ಷಾಕಾಲದೊಳೊಂದು ದೆವಸಂ ಬೈಗುಂಬೊಟ್ಟನೊಳೆಂದಿನಂತಿರೋಲಗಂ ಪರಿಯೆ ಕಬ್ಬಿಗರ ಬಲ್ಲಹಂ ಮುದ್ದಣನರಮನೆಯಿಂ ಪೊಱಮಟ್ಟು ನೆರೆವೀದಿವಿಡಿದು ಪೊರೆ ವೀಡಿಂಗೈತರ್ಪುದುಮಾತನ ಮಡದಿ ಮನೋರಮೆ ದೂರದೆ ಕಂಡೆಟ್ಟಿರ್ದು ಇದಿರ್ವಂದು ಕಾಲ್ಗೆ ನೀರಂ ನೀಡಿ ಮತ್ತಂ ಕೈವಿಡಿದೊಳ ಚೌಕಿಗೊಯ್ದು ಮಣೆಯಿತ್ತು ಕುಳ್ಳಿರಿಸಿ ಒಡನೆಯೆ ತನಿವಣ್ಣಂ ತಿನಲಿತ್ತು ಕೆನೆವಾಲಂ ಕುಡಿವೊಡಿತ್ತು ಉಪಚರಿಸುತಿರ್ದಳ್. ಈ ಉಪಚಾರದಿನಾತನ ಪಸಿವುಂ ಬಟಲ್ಕೆಯುಂ ಮುಡಿಯೆ ಕೆಳದಿನಱುದಂಬುಲಮಂ ಸವಿಯಲ್ಕೆಂದು ಮಡದೀಯುತಮಿರೆ ಇಂತು ಸುಖಸಲ್ಲಾಪಂಗೊಳುತಿರ್ದರ್ ಅದೆಂತೆನೆ –

ಮನೋರಮೆ : (ಮೆಲ್ನುಡಿಯಿಂ) ನೋಟ್ಪುದೀ ಪಗಲ್ಗಳೆಂತೊ ಪಿರಿಯವು. ಪಗಲುಮಿರುಳುಂ ಸುರಿವ ಬಲ್ಸೋನೆಯ ಜಿನುಂಗಿನತ್ತಣಿನೆನ್ನ ಬಗೆಯುಂ ಬೇಸರ್ತುದು. ಅಂತದಱಿನೇನಾಮಮೊಂದು ನಲ್ಗತೆಯಂ ಪೇೞ !

ಮುದ್ದಣಂ : ಪ್ರಾಣೇಶ್ವರಿ, ತಡೆಯೇಂ ! ಇನಿತೊಂದು ಬಯಕೆ ತಲೆದೋಱೆ ಆವ ಗಹನಂ ! ಆದೊಡಾಮಾವ ನಲ್ಗತೆಯಂ ಪೇೞ್ವೆಂ. ಏಂ ಭೋಜ ಪ್ರಬಂಧಂ ? ವಿಕ್ರಮ ವಿಜಯಯಂ ? ಮಹಾವೀರಚರಿತಮ್ ?

ಮನೋ : ಇಸ್ಸಿ ! ಇವಱೊಳೆನಗೞ್ಕೆಱೆಲ್ಲಂ ಉಟಿದೊಡಮಟಿದೊಡಂ ಬಟ್ಟೆದೋರಿಪ ರಸಭರಿತಂ ಚರಿತಮ್ಮೆಸೆ !

ಮುದ್ದಣಂ : ನಿನಗಾವ ರಸದೊಳಿಷ್ಟಂ ? ಶೃಂಗಾರ ರಸದೊಳೆ ? ವೀರರಸದೊಳೆ ? ಹಾಸ್ಯರಸದೊಳೆ ?

ಮನೋ : ಆವ ರಸದೊಳೆಂದೊಡೇಂ ! ನವರಸದೊಳಂ.

ಮುದ್ದಣಂ : ಅಂತಿರೆ ಮತ್ತಮಾ ಕತೆ ಯಾವುದು ?

ಮನೋ : ರಾಮಯಣದೊಳೇನಾನುಮೊಂದು.

ಮುದ್ದಣಂ : ಅಂತೆಯೇ ಅಕ್ಕೆ. ಸೀತಾಸ್ವಂವರಮಂ ಪೇೞ್ವೆಂ.

ಮನೋ : ಆಂ ಮುನ್ನಮೆ ಕೇಳ್ದಿರ್ಪೆನಲ್ತೆ ?

ಮುದ್ದಣಂ : ಏಂ ಸೀತಾಪಹರಣ ಕಥನದೊಳ್ ಬಯಕೆಯೆ ?

ಮನೋ : ಉಃ ! ಆನೊಲ್ಲೆಂ.

ಮುದ್ದಣಂ : ಮೇಣಾವ ನಲ್ಗತೆಯಂ ಪೇೞ್ವೆನೋ.

ಮನೋ : ಇಂತೇಕುಸಿರ್ವಯ್, ನಾಡೊಳೆನಿತ್ತೊ ರಾಮಾಯಣಂಗಳೊಳವು. ನೀಂ ಕೇಳ್ದುದಱೊಳೊಂದು ನಲ್ಮೆದೋಱೆ ಕಂಡು ಪೇೞ್ವುದು.

ಮುದ್ದಣಂ : ನೀನೆ ಒಂದನಾಯ್ದುಕೊಳ್ವುದು.

ಮನೋ : ಶ್ರೀರಾಮನಶ್ವಮೇಧಮಂ ಕೈಕೊಂಡನೆಂಬರಲ್ತೆ ;
ಆ ಕತೆಯೆ ಅಕ್ಕುಂ.

ಮುದ್ದಣಂ : ಈಗಳಱಿತೆಂ, ಶೇಷರಾಮಾಯಣಮಂ ಪೇೞ್ವುದೆಂಬೆಯೆ ?

ಮನೋ ; ಅಪ್ಪುದಪ್ಪುದು. ಆದೊಡೆ ಮುನ್ನಮಾರಾರ್ಗಿದನೊರೆದರ್ ?

ಮುದ್ದಣಂ : ಮುನ್ನಂ ಶೇಷಂ ವಾತ್ಸಯನಂಗೆ ಪೇೞ್ದನದನೆಯೆ ನಿನಗೆ ಬಿತ್ತರಿಪೆಂ. ಅದೊಡೆ ಬಲ್ಗತೆ ಕಣಾ ! ಒಂದೆರಡ್ದಿವಸಕ್ಕೆ ಮುಡಿಯದು.

ಮನೋ : ಇರ್ಕೆ. ಓರೊಂದು ದೆವಸಮಿನಿಸಿನಿಸಂ ಪೇೞೊಡೇಂ. ?

ಮುದ್ದಣಂ : ಅಕ್ಕುಂ ಆವ ಧಾಟಿಯೊಳ್ ಪೇೞ್ವೆಂ. ಪದ್ಯದೊಳ್ ಪೇೞ್ವೆನೊ ? ಗದ್ಯದೊಳ್ ಪೇೞ್ವೆನೊ ?

ಮನೋ : ಪದ್ಯಂ, ಗದ್ಯಂ ಹೃದ್ಯಂ. ಹೃದ್ಯಮಪ್ಪ ಗದ್ಯದೊಳೆ ಪೇೞ್ವುದು.

ಮುದ್ದಣಂ : (ನಸುನಗೆಯಿಂ)ಅದಂತಿರ್ಕೆ, ಇಂತಪ್ಪ ನಲ್ಗತೆಯಂ ಬಿತ್ತರಿಸಿದೊಡೆ ಅರಮನೆಯೊಳ್ ರನ್ನಗಡಗಮಂ ಪೊನ್ನ ಕಂಠಿಕೆಯಂ ಮೆಚ್ಚವನೀವರ್. ನೀನೀವುದೇಂ ?

ಮನೋ : ಪೆಱತೇಂ ? ಎನ್ನನೆ ಆನೀವೆಂ.!

ಮುದ್ದಣಂ : ಬಲ್ಗಡುಸುಗಾರ್ತಿಯ್ಯೆಸೆ ! ಅಱೆಯಾ ಮುನ್ನಮೆ ನಿನ್ನ ತಾಯ್ತಂದೆವಿರೆನಗಿತ್ತರೆಂಬುದಂ !

ಮನೋ : ಇದೇತಱ ನುಡಿ ! ಪೋಕೆ. ಆಂ ಪರಾಧೀನೆ ಗಡಾ ! ಪುರಾಣಮನೋದೊದಿದಂ ಬೞೆಯಮಲ್ತೆ ದಕ್ಷಿಣೆಯನೀವುದು, ಅರಮನೆಯವರುಂ ಕಬ್ಬಮಂ ಕಂಡಲ್ತೆ ಕಚ್ಚೞೆಯನಿತ್ತರ್. ಆನುಂ ಕತೆಯಂ ಕೇಳ್ದು ಸೊಗಸಾಗೆ ಬಲ್ಲಂತೆ ಸಮ್ಮಾನಿಸುವೆಂ.

ಮುದ್ದಣಂ : ಒಳ್ಳಿತೊಳ್ಳಿತು ! ಕತೆಯನಾಲಿಸಿ ಬೞಿಕ್ಕಮೀಯನೆಂದೊಡೆ ಬಿಡೆಂ ನೋೞ್ಪೆಂ.

ಮನೋ : ಆನುಂ ನೋೞ್ಪೆಂ. ಕತೆಯ ಪುರುಳೆಂತಿರ್ಕುಮೆಂದು.

ಮುದ್ದಣಂ : ಆದೊಡಾಲಿಸು : ಸ್ವಸ್ತಿಶ್ರೀಮತ್ಸುರಾಸುರೇಂದ್ರ ನರೇಂದ್ರ ಮುನೀಂದ್ರ ಫಣೀಂದ್ರ ಮಣಿಮಕುಟತಟಘಟಿತ....

ಮನೋ : ಓಓ ! ತಡೆ ! ತಡೆ ! ವಸುಧೆಗೊಡೆಯನಪ್ಪ ರಾಮಚಂದ್ರನ ಕತೆಯಂ ಪೇೞೆನೆ ಬಸದಿಗೊಡೆಯನಪ್ಪ ಸುರೇಂದ್ರರ ಚರಿತೆಯಂ ಪೇೞ್ವುದೇಂ ? ಸಾಲ್ಗುಂ ಸಾಲ್ಗುಂ. ಇಂತೆರ್ದೆಗೊಳ್ವ ಕತೆಗೆಂತುಡುಗೊಱೆಯಂಗೆಯ್ವೆನೋ !

ಮುದ್ದಣಂ : ನಲ್ನುಡಿಯಿದು ರಮಣಿ! ಕಚಂಗಳಾಣೆ. ಅಲ್ತು ಬಸದಿಯಿಂದ್ರರ ಕತೆಯಲ್ತು ; ರಾಮಚಂದ್ರನ ಕತೆಯೆನೆ ಪೊಗೞ್ದು ಪೇೞ್ದಿದಿದು ಸಕ್ಕದದೊಂದು ಚೆಲ್ವು !

ಮನೋ : ಲೇಸು ! ಲೇಸು ! ನೀರಿೞಿಯದ ಗಂಡಲೊೞ್ ಕಡುಬಂ ತುಱುಕಿದಂತಾಯ್ತು ! ಕನ್ನಡದ ಸೊಗಸನಱಿಯಲಾರ್ತೆನಿಲ್ಲೆನಗೆ ಸಕ್ಕದದ ಸೊಗಸಂ ಪೇೞ್ವುದು ಗಡ !

ಮುದ್ದಣಂ ; ಅಪ್ಪೊಡಿನ್ನೆಂತೊ ಒರೆವೆಂ ?

ಮನೋ : ತಿರುಳ್ಗನ್ನಡದ ಬೆಳ್ನುಡಿಯೊಳೆ ಪುರುಳೊಂದೆ ಪೇೞ್ವುದು. 'ಕನ್ನಡಂ ಕತ್ತುರಿಯಲ್ತೆ !'

ಮುದ್ದಣಂ ; ಅಪ್ಪುದಪ್ಪುದು. ಆದೊಡಂ ಸಕ್ಕದಮೊಂದೆ ರನ್ನಮಣಿಯಂ ಪೊನ್ನಿಂ ಬಿಗಿದಂತೆಸೆಗುಂ . ಅದಱಿಂ ಕರ್ಮಣಿಸರದೊಳ್ ಚೆಂಬವಳಮಂ ಕೋದಂತಿರೆ, ರಸಮೊಸರೆ, ಲಕ್ಕಣಂ ಮಿಕ್ಕಿರೆ ಎಡೆಯೊಡೆಯೊಳ್ ಸಕ್ಕದದ ನಲ್ನುಡಿ ಮೆಱೆಯೆ ತಿರುಳ್ಗನ್ನಡದೊಳೆ ಕತೆಯನುಸಿರ್ವೆಂ.

ಹೀಗೆ ಪೀಠಿಕೆ ಹಾಕಿರುವ ಮುದ್ದಣ ಮುಂದೆ ಕಥೆಗೆ ಪ್ರವೇಶ ಮಾಡುತ್ತಾನೆ. ಅಗಸ್ತ್ಯ ಋಷಿ ರಾಮನ ಬಳಿಗೆ ಬರುವ ಸಂದರ್ಭದಿಂದ ರಾಮಾಯಣದೊಳಗಿನ ಕಥೆಯನ್ನು ಆರಂಭಿಸುತ್ತಾನೆ.

ಅಯೋಧ್ಯಾ ನಗರದೊಳ್ ಶ್ರೀರಾಮಚಂದ್ರಮನರಸುಗೆಯ್ಯುತ್ತಿರಲೊಡಮೊರ್ಮೆ ದರ್ಶನಾರ್ಥಮಗಸ್ತ್ಯಂ ಶಿಷ್ಯಂಗೂಡಿ ಬಂದು ತನಗೆಱಗಿದ ರಘುಪುಂಗವನಂ ಮುನಿಪುಂಗವಂ ಕೂರ್ಮೆಯಿನೆೞ್ತಿ ತಳ್ಕೈಸಿ – 'ಸೀತಾರಮಣ, ನೀಂ ಕೈಕೊಳ್ವುವುದಶ್ವಮೇಧಮಂ. ಕ್ಷಾಮಡಾಮರಂಗಳುಂ ಬೇರುಡಿದು ಪಾೞ್ಪೋಕುಂ ; ಲೋಗರ್ಗೆ ಕಲ್ಯಾಣಮುಮೊಡರ್ಗುಂ ; ಅದಱಿನ್ನಿದೆ ಜನಂಮಂ ಬೇಳ್ದು ಲೋಕಮಂ ಕಾಯ್ಯೆ ; ನಿನ್ನಿಷ್ಟಾರ್ಥಮುಂ ನೆಱೆಯಿಕುಂ ; ನಿನಗಕ್ಕೆಮ ಸರ್ವಂ ಮಂಗಳಂ' – ಎಂದು ಬೋಧಿಸಿದಂ.

ಪೆಣ್ಮಣಿ ಕೇಳ ! ಈವುಪದೇಶಂ ರಾಮಂಗಮೊಡಂಬಟ್ಟುದು. ಒಡನೆಯೆ ಸರಯೂ ತೀರದೊಳ್ ಮುನಿತೋಱಿದೆಡೆಯನಾಯ್ದು ಯಗಶಾಲೆಯಂ ನೇರ್ಪಡಿಸಿ, ಯಾಗಂಗಳಂ ನೆರೆಯಿಸುತಿರ್ದರ್. ಆ ಪ್ರಸ್ತಾವದೊಳ್ ವಶಿಷ್ಠಂ

ರಾಘವಂಗೆ ಇದೀಗಳ್ ಸಮಯಂ ಯಾಜ್ಞೀಯಾಶ್ವಮಂ ಪೂಜಿಸಲ್ಕೆ. ಅಂತಱಿಂ ನೀಂ ಪೊನ್ನಸೀತೆವೆರಸು ವ್ರತಮನಪ್ಪುಕೆಯ್ವುದೆಂದೆಚ್ಚರಿಸಿದಂ.

ಮನೋ : ರಮಣ, ಇಂತಿದೇಂ ಪೊನ್ನ ಸೀತೆಯೆಂಬೈ ! ರನ್ನ ಸೀತೆಯೆತ್ತವೋದಳ್ ? ಜನಕಂ ಜನಕಂ ಕರೆದುಯ್ದಿರ್ದನೇಂ ? ಅಂತಿರೆಯುಂ ಮಗುಟ್ದುಂ ಕರೆಯಿಸಿಕೊಳ್ವುದಲ್ತೆ ನೋಂಪಿಗೆ.

ಮುದ್ದಣ : ಓ ! ಮಱೆತೆನೀಯಿರವಂ ಪೇೞಲ್ಕೆ. ಸಂದೆಯಂ ಸಾಜಂ. ಕೇಳ, ರಾಘವಂ ಸೀತಾಸಮೇತಂ ಅಯೋಧ್ಯೆಯೊಳರಸುಗೆಯ್ಯುತಿರ್ದನೆಂಬುದನಾಗಳೆ ಕೇಳ್ದಿರ್ಪೆಯಲ್ತೆ ! ಇಂತಿರೆ ಅರಸುಗೆಯ್ಮೆಯ ಕಜ್ಜದುಜ್ಜುಗಂ ಬಿಡಿದು ನಾಡಿಗರಿರವ ನಾರಯ್ವೊಡೆಂದು ರಾಯನಟ್ಟಿದ ಬೇಹಿನವರ್ ಮಱರೂವಿಂ ನಾಡಂ ಸುತ್ತಿ ಕಂಡುದನಱಿಪಲ್ಕೆಂದು ಸೋದರರಿಂ ಬಳಸಿ ಬಣ್ಣದ ಚೌಕಿಯೊಳಿರ್ಪ ರಾಯನಂ ಕಂಡು ತಲೆವಾಗಿ ಬಿನ್ನವಿಸಿದರ್ – 'ರಾಯ, ನಡುಗೇರಿಯೊಳರ್ವನ್ ಪೆಂಡತಿ ಮುಳಿಸಿಂ ಪೇೞದೆ ತವರ್ವನೆಗೆ ಪೋಪುದುಂ ಕಳ್ದುವಂದಳ್ಗೆ ಬುದ್ಧಿವೇಳ್ದು ತಾಯ್ತಂದೆವಿರ್ ಬೞವಂದಳಿಯಂಗೊಪ್ಪಿಸಲೆಂದು ಕೋಪಮಂ ತಿಳಿಪಲೊಡಂ, "ಅಗಲ್ದ ಮಡದಿಯಂ ರಘುಜನಂತಿರೆ ಕೊಂಡಾಳೆಂ ಬಾೞಿಂ" ಎಂದು ಬಿಱು ನುಡಿದಂ. ಇಂತಿದೊಂದು ವಾರ್ತೆಯಲ್ಲದಾವುದುಮುಂ ಕೇಳ್ದುವಿಲ್ಲೆಂದು ಮಗುೞ್ದುಱಿಗೆ, ರಾಯನವರಂ ಕೈಸನ್ನೆಯಿಂ ಕಳಿಪಿದಂ.

ಪ್ರಾಣನಾಯಕೆ. ಆಗಳ್ ಮಂಡಲೇಶ್ವರಂ ಮನಂಗೆಟ್ಟು – ಸಾಜಂ ; ರಕ್ಕಸನ ಬಂದಿಯೊಳ್ ಬಾೞ್ದಳಂ ಮಗುೞ್ದಮಾನಾಳ್ವೊಡಕ್ಕುಮೆ ? ಮಾತೇಂ, ಸೀತೆ ಮನ್ಮನಃಪ್ರೀತೆಯೆಂದೊಡಂಬಟ್ಟೆಂ ; ಇಂತು ಲೋಗರ ಮಾತಿಂಗೆ ಕೈಗಿಡುವೆದನೆಂದೆಣಿಸದಾದೆ ! ಇನ್ನೇವೆಂ ? ಕೆಯ್ವೊಲನೊಳ್ ಬೆಳೆದ ಕುಱುಂಬುಲ್ಲುಂ ಕಿೞ್ತು ಬಿಸುಡುವಂತಿರೆ ಸೀತೆಯಂ ಬಿಡುವೆಂ ಎಂದೇ ಬಗೆದು ಬೞಯಂ ಸೋದರರೊಳ್ ಲಕ್ಷ್ಮಣಂಗೆ – ಕೇಳ್ದೈ ತಮ್ಮ, ಪೆಱನೆ ಕಱೆಯೆಂತಂತೆಮ್ಮೀಬೞಗೆ ಪೞಯೊದವಿತ್ತೀಜಾನಕಿಯ ದೂಸಱನಾಕೆಯಂ ಕಾನನಕ್ಕುಯ್ದು ತೊಱೆದು ಬಾರಾ.... ಮಾರ್ನುಡಿಯದಿರ್, ಪೋ ಪೋಗೆಂದುಸಿರ್ದಂ, ಲಕ್ಷ್ಮಣಂ –ದೊಡ್ಡಿತೇ ! ಅಂತೆಯೆಸಗುವೆಂ ಸಂದೆಯಮಣಂ ಬೇಡಮೆಂದು ದಿಮ್ಮನೆೞ್ದು ನಡೆದಂ.

ಅಂತು ಲಕ್ಷ್ಮಣಂ ನಡೆತಂದು ಪೊಂದೇರನಣಿಗೆಯ್ದು, ದಿವ್ಯಾಶ್ವಂಗಳಂ ಪೂಡಿ – ಇದೆ ಇದೆ ಬಣ್ಣದೇರ್, ವನಕುಯ್ವೊಡೆಂದೆ ರಾಘವನಟ್ಟಿದಂ, ತಳ್ವದೆ ಪೊಱಮಡಿಮೆಂದಂ.

'ಅಯ್ತಾಯ್ತು. ಪೋಪಂ ಪೋಪಮೆಂದು, ಆನಂದಾಶ್ರುವಿಲುಳಿತ ಕಮಲ ವಿಲೋಚನೆ ಚಂದ್ರಮುಖಿ ಮುನಿಕಾಂತಾದರ್ಶನೋತ್ಕಂಠೆ ಪುಳಕಿತ ಸರ್ವಾಂಗಿ ರಥದೊಳ್ ಕುಳ್ಳಿರಲೊಡಂ ಲಕ್ಷ್ಮಣಂ ಬಲಗಯ್ಯ ಕಸೆಗೋಲನಲುಗಿ ಹಯಂಗಳಂ ಚಪ್ಪರಿಸಿ ಜಡಿದಂ.

ಇಂತು ರಥಂ ನಡೆನಡೆದು ಬಲ್ದೂರಂಬೋಗಿ ನಟ್ಟಡವಿಯಂ ಪೊಕ್ಕುಕಟ್ಟಕಡೆಯೊಳಣ್ಣನ ಕಟ್ಟಾಣತಿಯನೊರೆದು ಲಕ್ಷ್ಮಣಂ ಭೂಮಿಜೆಯನುೞಪಿಪೋದಂ !

**ಕಥೆ ನೇರವಾಗಿ ಮುದ್ದಣನ ನಿರೂಪಣೆಯಲ್ಲಿಯೇ ಸಾಗದೆ ಮನೋರಮೆ ಮಧ್ಯೆ ಮಧ್ಯೆ ಕಥೆಯನ್ನು ತುಂಡರಿಸುವುದು, ಪ್ರತಿಕ್ರಿಯಿಸುವುದು ಈ ಕೃತಿಗೆ ಒಂದು ತಂತ್ರದ ಹೆಣಿಗೆಯಾಗಿಯೂ ಕೂಡಿಕೊಳ್ಳುತ್ತಾ ಸಾಗುತ್ತದೆ.**

ಮನೋ : (ಕಂಬನಿಗಱೆದು) ಆಃ ! ಎನ್ನೊಡೆಯ, ನೀನುಮೆಂತು ಕಲ್ಮನನಾದಯ್ ! ಒರ್ತಡವೆಯೆ ದೇವಿಯಂ ಕಾರಡವಿಯೊಳುೞದು ಲಕ್ಷ್ಮಣಂ ಪೋದನೆಂಬೊಡೆ ಮೈದುನಂಗಮಾದೊಡಮೆಂತು ಮನಮಾದುದೋ ! ತೊಱೆದು ಪೋಪನ್ನಂ ಸೀತೆಯೇನೆಂದು ಮಱುಗಿದಳೋ ! ಅಕ್ಕವಾ, ಪೆಣ್ಗಳೊಂದು ಬಾೞ್ತೆ ಬಾೞ್ತೆಯೆ ! ಸೀತೆ ಏನಾದಳ್ ಪೇೞ.

ಮುದ್ದಣಂ : (ನೀಡುಂಸುಯ್ದು) ಆಯ್ತು ಕೇಳ್, ತನ್ನಡಿಗೆಱಗಿದ ಮೈದುನನಂ ಜಾನಕಿ ಸಂತವಿಟ್ಟು – ಏೞೇೞ್ ಕಂದ. ಕೈವಿಡಿದ ನಲ್ಲನೇ ಮುನಿವೆಡೆಯೊಳಾರೇನೆಂಗುಂ. ನಿನ್ನೊಳೇನಪರಾಧಂ ? ಪೆಣ್ಣೆನಿ ಸಿಪುಟ್ಟಿದೆನ್ನಯ ದೋಷಂ ! ಪೊೞ್ತೞದುದಲ್ತೆ, ಪೋಗಯ್. ನಿನಗೆ ಮೇಲಕ್ಕೆ. ಮೇಣ್ ಪಯಣಂ ಸೊಗಮಕ್ಕೆ. ಎಮ್ಮೆಲ್ಲರ್ಗೆ ಶ್ರೀರಾಮನಡಿದಾವರೆಯೊಲ್ಮೆಯೊಂದು ವಜ್ರಪಂಜರಮಕ್ಕೆ ! ಪೋಗೈ ಎಂದು ಪರಸಿ ಲಕ್ಷ್ಮಣಂಗೆ ಪಯಣಕ್ಕಾಣತಿಗೊಟ್ಟಳು.

ಆಗಳ್ ಸೌಮಿತ್ರಿ ಡೋಲಾಯಮಾನಮಾನಸವಾಗಿ ದೇವಿಯರಂ ಬಲವಂದು, ಕೈಮುಗಿದು ದೆಸೆವಳರ್ಗೆ –ಕೇಳಿಂ ಎಮ್ಮಣ್ಣನಾಣತಿಗಿವಳಂ ವನದೊಳಿರಿಸಿ ಪೋಪೆಂ, ಪೂರ್ಣಗರ್ಭಿಣಿ, ನೀಮೆಲ್ಲರ್ ಕಾವಲಿರ್ದು ಕಾಯಿಮೆಂದು ಕೇಳಿಸಿ ಅಗಲ್ದು ಪೋದಂ.

ಮುದ್ದಣಂ : ಅತ್ತಲಯೋಧ್ಯಾನಗರಿಯೊಳ್ ಜನ್ನಗುದುರೆಯಂ -

ಮನೋ : ಸುಡು ಸುಡು ನಿನ್ನ ಜನ್ನ ಕುದುರೆಯಂ ! ಆ ಕತೆಗೀಗಳ್ ಪೊೞ್ತೇ ? ಆಃ ! ಸೀತೆಯೇನಾದಳೆಂತಿರ್ದಳೆಂದು ಪೇೞಯ್ ?

ಮುದ್ದಣಂ : ಆಯ್ತಾಯ್ತು ಬಾಲೆ, ಕೇಳ್, ಅಂತು ಲಕ್ಷಣಂ ಬೆನ್ನಿತ್ತು ಪೋಪುದುಮಾ ದೆಸೆಯನೆ ನೋಡಿ ನೋಡಿ, ಶ್ರೀರಾಮನಂ ನೆನೆದು – ಹೇ ಕಲ್ಯಾಣರೂಪ, ನೀನೆನ್ನಂ ಕೈವಿಡದಿರಯ್ ! ದೆಸೆಗೆಟ್ಟೆನ್ನಂ ಮಱೆಯದಿರ್. ಹೇ ಜಗದೊಡೆಯ, ಪೆಣ್ಣೊನ್ನೊಳ್ ಕರುಣೆಯಿರಲಯ್. ರಾಮಾ ! ರಾಮಾ !! ರಾಮಾ !!! ಎಂದು ಧ್ಯಾನದೊಳಿರ್ದಳ್. ಆ ಪೊೞ್ತಿಂಗೆ

ವೇದಪುರುಷನೇ ಮುದುಪಿನೊಂದು ಪರಿಜಿಂ ಮೆಯ್ಗೊಂಡು ನಡೆತಂದನೋ ಎನೆ ವಾಲ್ಮೀಕಿ ತಾನಾ ಬಟ್ಟೆಯೊಳೆ ಬರುತುಮಿರ್ದು ಸೀತೆಯಂ ಕಂಡು, ಬಾಲೆ, ಆಂ ಅನ್ಯರಲ್ತು ; ತವಸಿಗಳ್, ಕಡೆ ನಾಡಾಗಿ ಈಯೆಡೆಯ ಆಶ್ರಮದೊಳೆ ಇರ್ಪೆವು. ವಾಲ್ಮೀಕಿ ಕಣಾ ! ಅಂಜದಿರೌ. ನೀನಾರ್ಗೆ ? ಪೆಸರೇನೆಂದು ಪೇಟ್ ಎಂದು ಕೇಳ್ದಂ. ಆಗಳ್ – ತಂದೆ, ಎನ್ನಿರವನೇನೆಂಬೆನೊ, ಜನಕರಾಜಂಗೆ ಮಗಳಾಗಿ ದಶರಥಂಗೆ ಸೊಸೆಯಾಗಿ ಶ್ರೀರಾಮಂಗೆ ಪಟ್ಟದರಸಿಯಾಗಿ ಬಾಳ್ವೆನ್ನ ಬರ್ದುಂಕು ಈಗಳ್ ವನದೊಳಾಯ್ತೈ ! ಲೋಕಾಪವಾದದ ದೂಸಜಿಂ ಶ್ರೀರಘುಜನೆನ್ನನಡವಿಯೊಳ್ ಬಿಸುಟಿಸ್ವೆದೆಂದು ಲಕ್ಷ್ಮಣಂಗೆ ಬೆಸನಿತ್ತು ಕಳಿಪಿದನ್ನೈ....' ಎಂದು ಆತನ ಪಾದಕಾನತೆಯಾದಳ್. ಇಂತೆಜಿಗಿದಳಂ ಕಂಡು ಮುನಿಪಂ ನಿಕ್ಕುವಂ ನೀಂ ಮಕ್ಕಳ ಪಡೆವುದುಂಟು ಮಱುಗದಿರ್. ಎಡೆಯೊಳೆಮ್ಮಾಶ್ರಮಂ. ಮಗಳೆಂದೆ ನಿನ್ನ ಸಲವುವೆಂ, ಏಟೌ ಎಂದು ಸಂತಯಿಸಿ ತನ್ನಾಶ್ರಮದತ್ತಣ್ಗೆ ಕರೆದುಯ್ದಂ.

ಮುದ್ದಣಂ : ಎನ್ನ ಕೊಂಡಾಟದ ಬಾಳ್ವಣಮೆ, ಇಂತು ಭೂಜಾತೆ ಪ್ರಾಚೇತಸನೊಲ್ಮೆಗಾಪಿಂ ಪುಣ್ಯಾಶ್ರಮದೊಳಿರ್ಪಿನಮಿತ್ತಲ್ ಸಾಕೇತ ನಗರದೊಳ್ ಸೀತಾರಾಮಂ ತನ್ನ ....

ಮನೋ : ನಲ್ಲ ! ಏ ಮಾತೋ ? ಸೀತೆಯನಂತುಟಿದುಮೇತಱ ಸೀತಾರಾಮಂ ಪೋ, ಮಾಣ್, ಅವಂಗಿನ್ನೆತ್ತಣ ಸೀತೆ? ಆಪ್ಪೊಡಿನ್ನಾ ಕಲ್ಲೆರ್ದೆಯಂ ರಾಮನೊ ಭೀಮನೊ ? ಏನ್ ?

ಮುದ್ದಣಂ : ಎನ್ನ ಕೈಗಳಸಮೆ, ಇಂತುಮೆಂಬರೆ ! ಶ್ರೀರಾಮಂ ಕಲ್ಲೆರ್ದೆಯನೆ ! ಆಃ ! ಬಟಿಕ್ಕಮಾತನ ಪ್ರಳಾಪಮಂ ನೀಂ ಕೇಳ್ದುದಿಲ್ಲಂ !

ಮನೋ : ಏಂ ತಾನೆ ತಲೆವೊಯ್ದುಂ ಮಱುಗಿದನೆ ?

ಮುದ್ದಣಂ : ರಾಮಂ ತಲೆವೋಯ್ದನೇಂ ? ತಾಂ ಯಶೋಧನನಪ್ಪಿನಂ ಲೋಕಾಪವಾದ ಭೀತಿಗಡವಿಗಟ್ಟಿದನಲ್ಲದರಸಿಯೊಳೇಂ ಪಗೆಯೆ ?

ಮನೋ : ಪಗೆಯೇಂ ನಗೆಯೇಂ, ಬಡವಿಯೊರ್ವಳ್ ಕಾಡಿಂಗಾದಳ್ಗೆಸೆ !

ಮುದ್ದಣಂ : ಇಂತಿದನೆ ನೆನೆನೆದಟುಂಬರಂ ಪಲುಂಬಿದಂ.

ಮನೋ : ಏಂ ತನಗೆ ಪೆಱರ್ ಪೆಂಡಿರಿಲ್ಲೆಂದೆಯೆ ?

ಮುದ್ದಣಂ : ಪರಿಹಾಸಂ ಸಾಲ್ಗುಂ ಕೇಳ್, ಅಂತು ಕುಂಭಸಂಭವನ ಬೆಸನಂ ಪಿಡಿದು ಅಶ್ವಮೇಧಮಂ ಕೈಕೊಂಡ ರಾಘವಂ ಸ್ವರ್ಣಸೀತಾ ಸಮೇತಂ ದೀಕ್ಷೆನಿಂದಂ ತದನಂತರಂ ಶುಭ ಮುಹೂರ್ತದೊಳ್ ಸಿಂಗರದ ಚೆನ್ನ ಜನ್ನಗುದುರೆಯಂ ಪೂಜಿಸಿ, ಬಟಿಯಗ್ಗಳಿಕೆಯ ಬಿರುದೋದಂ ಬರೆದೋಲೆಯಂ ಪಣೆಗೆ ಬಿಗಿದು,

"ನಿರಾಕುಳಂ ಚಪ್ಪನ್ನದೇಶಂಗಳಂ ಸಂಚರಿಸುತುಂ ಕಪ್ಪಕಾಣಿಕೆಗಳಂ ಕೂಡಿ ತರ್ಪುದು" ಎಂದು ಶಿರದೊಳ್ ಮಂತ್ರಾಕ್ಷತೆಯನಿಟ್ಟುಂ ಬಿಟ್ಟಂ, ಆ ಮಾಟ್ಕೆಯಿಂ ಯಜ್ಞೀಯಾಶ್ವಂ ನಾನಾ ವಿಷಯಂಗಳೊಳಂ ಮನೋರಥದ ವಾಜಿಯ ಪಾಂಗಿನಿಂ ತೊಟತೊಟಲ್ದು, ದೇವಿ !

ಮನೋ : ಆವ ದೇವಿ ? ಶ್ರೀದೇವಿ ಏಂ ಭೂದೇವಿ ?

ಮುದ್ದಣಂ : ನಿನ್ನನೆ ದೇವಿಯೆಂದು ಕರೆದೆಂ !

ಮನೋ : ಬಲ್ಗತೆಯಂ ಬಿತ್ತರಿಪ್ಪೊಂದುಬ್ಬೆಮೆಯೊಳೇನೆನ್ನಂ ತೊಟಿಸ್ತಿ ಮಾಡಿ ದೇವಿಗೆತ್ತು ಕರೆದಯ್ ?

ಮುದ್ದಣಂ : ಏಂ ಕಾಣೆನೆ ? ಸೋಯಂದಪ್ಪಿದೆನೆ ?

ಮನೋ : ಮೇಣಾವ ದೇವಿಯಾಂ ?

ಮುದ್ದಣಂ : ರತೀದೇವಿ !

ಮನೋ : ಅಂತಪ್ಪೊಡೆ ನೀಂ ಕಾಮದೇವಂ !

ಮುದ್ದಣಂ : ಅಕ್ಕೆ ದೇವಿಯೊಂದು ಹಸಾದಂ.

ಮನೋ : ಎಲೆ ಮದನಮೋಹನ ರಾಜ ! ಅಂತಿರ್ಪೊಡೆ ನೀಂ ಪೇಟ್ದೆ ರತಿಯನೆ ಬಣ್ಣಿಸಿ ಪೊಗಟ್, ನೋಟ್ಪೆಂ !

ಮುದ್ದಣಂ : ಓ ! ಏತರ ಮಾತೊ ? ಎನ್ನಳವೆ ?

ಮನೋ : ಆಃ ! ರತಿಯಂ ಬಣ್ಣಿಸಲ್ಕೆ ಸಲ್ಲದ ನೀನೇತಱ ಕಾಮದೇವಂ !

ಮುದ್ದಣಂ : ಆಂತಪ್ಪೊಡೆ ಸಲ್ವೆಂ ಸಲ್ವೆಂ. ಕಾಮದೇವನೆಂಬೊಂದು ಬಿರುದಂ ಪಡೆದುಮಾಱಿನೆ ? ತೆಗಟ್ವೆರ್ಕೆ ! ಇದೆ ಇದೆ ತೊಡಂಗಿದೆಂ : ಅಸಿದೊಡಲ ಪೂಗಣ್ಣ ಪೆಣ್ ; ಸಸಿಮೊಗದ ಕಿಸುವಾಯ ಪುಸಿನಡುವಿನರಸಿ ;

ಮನೋ : (ಅರೆನೋಟದಿಂ) ಆಃ ! ಕಬ್ಬಿಗರ್ಗೆ ನೀಂ ಕಲ್ಲಾಯ್ತನಕ್ಕುಂ ಎಂದುಂ ಕಾಣದರೊಂದು ಪಾಂಗಿನಿಂ ಪೇಟ್ದೆ ಪೊಚ್ಚಱದ ನಿನ್ನೀ ಬಣ್ಣನೆಯ ನುಡಿಗೇನೆಂಬೆನೋ ! ಒಡಲಸಿದೇಂ ? ಮೊಗದೊಳೆ ತಱ ಸಸಿ, ಕಣ್ಣೊಳೇತರ ಪೂ ; ನಡುವಿನೊಳೇಂ ಪುಸಿ ! ಎಂದು ಬಾಯಂ ಕಿಸಿದಳ್ ! ಪೋ ನೀಂ ಕಾಮನಲ್ತು, ಭೀಮಂ.

ಮುದ್ದಣಂ : (ಕಿಱುನಗೆಯಿಂ) ಎನ್ನ ಕುಲದೇವಿ ! ಇನಿತೊಂದು ಮುನಿಸೇಂ. ಎನ್ನ ನಗೆಯಿನಿಂತಾಯ್ತಕ್ಕುಂ. ಸೈರಿಸು ! ಸೈರಿಸು ! ನುಡಿನಿಜೆಗೆಯಂ ಬೆದಂಕಿ ಪಾರದಂತುಂ, ಇರ್ದಂತೆ ಬಣ್ಣಿಪೊಂದು ಜಾಣ್ಮೆ ದೊರೆಕೊಳ್ವಂತುಂ ಬಾಸೆವೆಣ್ಣೊಂದೊಲ್ಮೆದಾಳ್ದಿ ವಾಕ್ಸಿದ್ಧಿಯಂ ಪಡೆದು ನಿನ್ನಂ, ಎನ್ನ ಜನ್ನದಾರದಾಣೆ ! ರತಿಯಿಂ ನೂರ್ಮಡಿ ಮಿಗಿಲೆನಿಸಿ ಬಣ್ಣಿಪೆಂ.

ಸುವ್ವಿ ! ಸುವ್ವಿ ! ನಾಲ್ಮೊಗನಗ್ಗಿಟ್ಟಿಕೆಯೊಳೊಗೆದ ಒಳ್ನಗೆಯ ಮುದ್ದುಗುವರಿ ! ಸುವ್ವಿ! ಸುವ್ವಿ ! ಬೀಣೆ ಹೊತ್ತಗೆಗಳಂ ಪೊತ್ತ ಕೈಯ ಚೆಲ್ವೆ ! ಸುವ್ವಿ ! ಸುವ್ವಿ ! ಬಾಣಿ, ಎನ್ನೀ ಮಡದಿ ರನ್ನೆಯಂ ರತಿಗೆಣೆಯೆಂದು ಪೊಗೞ್ದು ಪಾಡುವೊಂದು ಜಾಣ್ಮೆಯ ಪೊರ್ದುಗೆಯ ನುಡಿ ಬಿನ್ನಣಮನೆನಗೆ ಕರುಣಿಸೌ ! ನಿನಗೆಱಗುವೆಂ. ಸುವ್ವಿ ! ಸುವ್ವಿ ! ಆ ! ಆ ! ಆ ! ಆ !

ಮನೋ : ನೀಗೆಯ್ದ ಸರಸತಿಯ ಪೊಗೞ್ಕೆಯ ತುತ್ತತುದಿಯ"ಆ ! ಆ ! !" ಏಂ ?

ಮುದ್ದಣಂ : ಅಂತದು ಪಾಡಿನ ಜೋಡಿನ ದಾಟಿಯ್ಯೆಸೆ.

ಮನೋ : ಆಯ್ತಾಯ್ತು. ಚೆಲ್ವು. ಏಂ ನಿನ್ನಂ ಸರಸತಿಯೊಲ್ದಳ್ ?

ಮುದ್ದಣಂ : ಎಂತೆಂತೊ ಪಾಡಿ ಬೇಡಿ ಒಲ್ಮೆವಡೆದೆಂ. ಈಗಳೆನಸುಂ ತಡಂಬಡದೆ ಬಣ್ಣಿಸಿ ನಿನತೊಂದೊಲ್ಮೆವಡೆದಪೆಂ. ಕೇಳ್ ! ಮಾಕಾಳಿಯ ಮೈವೊಗರ್ಗೆ ...

ಮನೋ : ನಿನ್ನ ರತಿಯಂ ಬಣ್ಣಿಪೊಂದು, ಸಂಧಿಯೊಳ್ ಮಾಕಾಳಿಯೊಳೇಂ ಕಜ್ಜಂ ?

ಮುದ್ದಣಂ : ಆಃ ! ಎಡರ್ಗೇಡಿಯನೆ ಮಱೆತೆಂ. ಆತನಂ ಬಲಂಗೊಳದಿರ್ಪಿನಂ ಮೊತ್ತಮೊದಲೊಳೆನಿತುಂ ವಿಘ್ನಂ. ಓ ! ಓ ! ಬರ್ಪನೆಯ ಬಿಕಣಿಗಿವಿಯ ಮೂಗೊಂಕುಮೂಗಿನ ಪೇರೊಡಲ ಇಲಿದೇರ ಬೆನಕ ! ಇದೆ ಮಣಿವೆಂ. ಈ ರಮಣೀಮಣಿಯಪ್ಪ ರತಿದೇವಿಯಂ ಬಣ್ಣಿಪೊಂದು ಕವನದ ಕಜ್ಜುದುಜ್ಜುಗದನಿತೊಂದು ಪೊಟ್ಟನೇಮಾಱ್ಕೆಯೊಳಮೆಡರ್ ಬಾರದಂತು ಕಾವುದು. ಇನಿತೊಂದು ಮೇಲನೊಡರ್ಚಿದೆಯಪ್ಪೊಡೆ ಆ ಬಣ್ಣನೆಯ ಪೊಗೞ್ಕೆಯ ಪಾಡಿಂಗೊಲ್ವೆನ್ನೀಮಡದಿ ಕೂರ್ಮೆಯಿನೆನಗೆ ತಿನವಡಿಸುವಾಪಸುಗೆಯ ಚಕ್ಕುಲಿಯಂ ಗಾರಿಗೆಯಂ ಪುರಿಗಡಲೆಯನವಲಂ ಕರ್ಬಂ ತೇಂಗಾಯಂ ನಿನಗಂ ಪಾಲಿತ್ತು ಮೊದಲೊಳರ್ಪಿಸುವೆಂ.

ಮನೋ : ಎನ್ನ ಬೆನಕಂ ಒರ್ಪನೆವಾಯೊಳೆಂತುಣ್ಬುಂ.

ಮುದ್ದಣಂ : ಏಂ ! ರಮಣಿ ದೇವರುಣ್ಬರೆ ! ಉಣ್ಬೊಡಂತೆಂಬೆನೆ ?

ಮನೋ : ಮೇಣೊರ್ವನೆ ತಿನಲ್ ಬಗೆವಾ ?

ಮುದ್ದಣಂ : ನೀನೀವುದೇಂ ದಿಟಂ ?

ಮನೋ : ಎತ್ತಾನುಮಿತ್ತೊಡೇಂಗೆಯ್ವಯ್ ?

ಮುದ್ದಣಂ : ಇಸ್ಸಿ ! ಅನಿತ್ತು ಭಕ್ಷ್ಯಮನೊರ್ವನೆ ನುಂಗಲಾಂ – ತಾವೆ ? ಚಕ್ಕುಲಿ ಗಾರಿಗೆಗಳ್ ಕಾಮದೇವಂಗೆ ; ಅವಲುಂ ಪುರಿಗಡಲೆಯುಂ ಮುದ್ದಣಂಗೆ ; ಕಬ್ಬು ಕಬ್ಬಿಗಂಗೆ ; ತೇಂಗಾಯೆನಗೈಸೆ !

ಮನೋ : ನೀಂ ಜಾಣಂ, ನಿನ್ನ ರತಿದೇವಿಗೇಂ ?

ಮುದ್ದಣಂ : ತಾನೆ ಒಲ್ದೀವ ದೇವಿಗಾವುದಱೊಳಗಾಸೆಯೋ ?

ಮನೋ : ಅಂತಿರೆಯುಂ ಮನೋರಮೆಗೇಂ ?

ಮುದ್ದಣಂ : ಓವೊ ! ರತಿಯಂ ಬಣ್ಣಿಪೊಂದು ಬೆಸನದೊಳ್ ಮನೋರಮೆಯಂ ಮಱೆದುಟಿದೆಂ. ಅಕ್ಕೆ ! ಕರ್ಬಿನ ಸಿವುರುಂ ಮುಗ್ಗಿದ ಗಾರಿಗೆವುಡಿಯುಂ ಮನೋರಮೆಗಿರ್ಕೆ.

ಮನೋ : ನೀಂ ಬಲ್ಗಡಸುಗಾಱಂ, ಸಾಜಂ, ಇರ್ಕೆ ನೀಂ ಮನದೊಳೆ ಮಂಡಿಗೆಯನುಂಡಂತಾಯ್ತು. ಈಗಳಿಂ ಕೇಳ್ವೆಂ ರತಿಯ ಪೊಸಬಣ್ಣನೆಯಂ.

ಮುದ್ದಣಂ : ಕೇಳ್ ! ಆಂ ಬಣ್ಣಿಪ ರತಿಗೆ ಮಿಂದ ಮರಗೂಟನೊಂದು ಮೆಯ್ವೊಗರ್.

ಮನೋ : ಮರಗೂಟನೆಂದೊಡಾರ್ ?

ಮುದ್ದಣಂ : ದೆಸೆವಳರೊಳೋರ್ವಂ.

ಮನೋ : ಉಂ ! ಹುಂ !

ಮುದ್ದಣಂ : ಸಿಂಗರದ ಮಲೆನಾಡಿಗನೊಂದು ಭಂಗಿಯ ಮೊಗಂ.

ಮನೋ : ಮಲೆನಾಡಿಗನೆಂದೊಡಾವಂ ?

ಮುದ್ದಣಂ : ಮಲೆಯೊಳೆ ನೆಲೆಗೊಂಡಿರ್ಪ ನಾಲ್ಗೈಯ ದೇವರ್.

ಮನೋ : ಇಂತಪ್ಪ ದೇವರೊಲ್ಮೆವಡೆದ ಮಲೆನಾಡ ಪೆಣ್ಗಳ್ ಕಣ್ಗೆ ಚೆಲ್ವೆಯರಾದರಕ್ಕುಂ !

ಮುದ್ದಣಂ : ಅಪ್ಪುದು, ಮತ್ತಮಾನೀಜೆಗೆ ಇರುಳ್ಗಣ್ಣಮಗೆಂತಂತೊಪ್ಪುವ ಬಟ್ಟ ನುಣ್ಗಣ್.

ಮನೋ : ಇರುಳ್ಗಣ್ಣನೆಂದೊಡೆ ಆವ ಸೈಪುಳ್ಳಂ ?

ಮುದ್ದಣಂ : ಉರುಳ್ಗಣ್ಣನೆಂದು ಚೆಂದವನಕ್ಕುಂ.

ಮನೋ : ಆಃ ! ಕಾಮದೇವರ ದೇವ ! ಈಗಳೀಗಳಱಿತೆಂ ನೀಂ ಬಣ್ಣನೆಯೊಳೆರಡನೆಯ ಬೊಮ್ಮಂ ನಿಕ್ಕುವಂ. ಎನ್ನೀ ಜೋಲ್ಮುಡಿಯ ಪೂಸರಾದಾಣೆ ! ನಿನಗಾವ ಭಕ್ಷ್ಯದೊಳಿಷ್ಟಂ ? ಪುರಾಣಗಡುಬನೀನೊ ? ಚಕ್ಕುಲಿಯಂ ?

ಮುದ್ದಣಂ : ಇರಿರ್ ! ಸೈತು ಬೈತಿಡು ಮಾದೇವಿಯ ಕಡೆವೊಟ್ಟೆನೊಂದು ರೂಪಿಗೆ ಪಡಿವರಿಜಗೆ ಮೆಱೆವೆನ್ನ ರತಿದೇವಿಯನಡಿವಿಡಿದು ಮುಡಿವರೆಗಂ ಬಣ್ಣಿಸದ ಮುನ್ನಮಿನಿತೊಂದು ಬೇಗದಿನೊಲ್ವಾ !

ಮನೋ : ಮುನ್ನೀರ ನೀರ ಸವಿವೊಂದು ಬಗೆಯೊಳ್ ಕೊಡನ ಕುವರನಂತಿರೆ ಬಲ್ಗಡಲನೆ ಕುಡಿವೊಡಕ್ಕುಮೆ ? ಒರ್ಪನಿ ಸಾಲದೆ ?

ಮುದ್ದಣಂ : ಅತಿಪ್ರಸಂಗಂ ಸಾಲ್ಗುಂ. ಇಂತು ವ್ಯರ್ಥಾಳಾಪದಿಂ ಪೊಟ್ತಂ ಕಟಿವೆಮ್ಮಂ ಲೋಗರ್ ಪೞಿಯರೆ ? ಪೋ ಮಾಣ್, ರಾಮಕಥೆಯನಿನ್ನೊರೆವೆಂ, ಕೇಳ್.

ಎನ್ನ ಬಿತ್ತರದ ಚಿತ್ತರದ ಬೊಂಬೆ, ರಂಭೆ, ಸುಮಿತ್ರಾಪುತ್ರಂ ಚಿತ್ರಚಿತ್ರಾಂಗದರಂ ಮಿತ್ರಭಾವದೊಳೊಪ್ಪುಗೊಂಡು ಸಭುಜಸುದ್ವಜರೊಳೊಡಂಬಟ್ಟುಂ, ದಮನನಂ ಸಂತಮಿಟ್ಟುಂ ಮುಂಬಟ್ಟು ಪಡೆವೆರಸು ಹಯದ ಬೆನ್ನೊಳೆ ನಡೆಯುತಿರೆಯಿರೆ, ಅಲ್ಲಿಗಲ್ಲಿಗೆ, ಅಡಿಗಡಿಗೆ ಬಂದೆರಗುವಱೆಕೆಯ ಬಲ್ಲಾಳ ಸಾವಂತರಾಯರ ಮುಂದಲೆಯಚ್ಚಪೊನ್ನಪೊಚ್ಚಪೊಸ ಬಾಸಿಗದ ಮುತ್ತಿನಗೊಂಡೆಯ ತುಱುಗುವೆಳಗಿಂ ಪೊರೆಯೇಱಿದ ತನ್ನಡಿದಾವರೆಯ ಮೇಲ್ವೊಗ್ಗರಿನವರವರ ವೆಂಡಿರೈದೆದಾಳಿಯಂ ಬಣ್ಣವರ್ಚಿಸುತುಂ, ಮುಂಗುಡಿಯೊಳ್ ತಂತಮ್ಮ ಸೇನೆವೆರಸೈದಿವರ್ಪ ನಾಡ ನಾಡ ರಾಯರನೊಡಗೂಡಿ ಪುಷ್ಕಲಾದಿ ಸುಭಟರ್, ತಮ್ಮನೆ ಒಲ್ದೊಱಲ್ದು ಬೆಂಬಿಡಿದೈದಿವರ್ಪ ವಿಜಯಶ್ರೀಯಂ ತಳ್ಕೈಸಿ ನೋಡಿ ಕೂಡಿ ಹಯಂ ಬೆರಸು ಜೋದರೆಲ್ಲರ್ ಶತ್ರುಹನೊಂದಾಣತಿಯೊಳನುವಱಿತು ಬಡಗದೆಸೆವಿಡಿದು ನಡೆಯುತುಮಿರ್ದರ್. ಆ ಕಾಲದೊಳ್ ರಾಘವನ ಯಜ್ಞತುರಗಂ ಅರಣ್ಯಕನೆಂಬೊರ್ವ ಕಿತ್ತಡಿಯ ಪುಣ್ಯಾಶ್ರಮಮಂ ಪುಗುತರ್ಪುದುಂ ಕಂಡು ಶತ್ರುಘ್ನಾದ್ಯರ್ ಮುನಿಯದರ್ಶನಕೆಂದೊಳಪೊಕ್ಕು ಮುನಿಗೆಱಗಿದರ್. ಆಗಳರಣ್ಯಕನಭ್ಯಾಗತರಂ ಮನ್ನಿಸಿ ಸರ್ವರನಾತಿಥ್ಯದಿಂ ಸತ್ಕರಿಸಿ ಶ್ರೀರಾಮಸತ್ಕಥಾವಿನೋದಗೋಷ್ಠಿಯೊಳ್ ....

ಮನೋ : ಎನ್ನ ಚೆನ್ನಿಗ, ಆತಿಥ್ಯಮೆಂದೊಡೇಂ ? ಬಱಿದೆ ಬಾಯುಪಚಾರಮೆ ?

ಮುದ್ದಣಂ : ಅಲ್ತುಲ್ತು. ಬಾಯ ಉಪಚಾರಮಲ್ತು. ಬಂದರ್ಗೆ ಕೈಗೆ ಕಾಲ್ಗೆ ನೀರಿತ್ತು ಕುಳ್ಳಿರಿಸಿ ಸವಿಗೂೞನಿಕ್ಕಿ ಪೂವಿಂ ಸಿಂಗರಿಸಿ ಬಾವನ್ನದಿಂ ಸೊಗಸುಗೆಯ್ದು ಒಡನಿರ್ದು ನುಡಿದು ನಡೆದು ಮನ್ನಿಪುದು.

ಮನೋ : ಅಂತಿರ್ಪುದುಂ, ಶತ್ರುಹನ ಸಾಯಿರ ಲೆಕ್ಕದಿನಿವಿರದು ಪಡೆಡಗರಣ್ಯಕಂ ಕೂಟ್ನೀರಿತ್ತು ಸಮ್ಮನಿಸಿದನೆ ?

**ಈ ಕೃತಿಯ ಕಥೆಯ ನಡುವಿನ ಸರಸ ಸಂಭಾಷಣೆಗೆ ಈ ಮುಂದಿನ ಭಾಗವನ್ನು ನೋಡಬಹುದು. ಮನೋರಮೆ ಆತಿಥ್ಯದ ಬಗೆಗೆ ಹೇಳುತ್ತಿರುವ ಸಂದರ್ಭದಲ್ಲಿ :**

ಮುದ್ದಣಂ : ಅಪ್ಪುದ್ಪಪುದು. ಅನಿಬರುಮಂ ಯಥೇಚ್ಛಂ ಮೃಷ್ಟಾನ್ನ ಭೋಜನದಿಂ ತಣಿಪಿದಂ.

ಮನೋ : ಎನಗಿದಚ್ಚರಿ. ಎಂತುಟಾರ್ತಂ ?

ಮುದ್ದಣಂ : ಏಂ ! ಮುನಿಗಳೊಂದು ಜಪದ ತಪದ ಮಂತ್ರದ ಬಲ್ಮೆಯೇಂ ಕಿಱಿದೆ ! ಬೇಡಿದ ಪುರುಳನುಱಿದಿಂ ತಂದೀಗುಂ.

ಮನೋ : ಅಂತುಟೇಂ ಗನಂ ! ಆವುದೊ ಮಂತ್ರಂ ?

ಮುದ್ದಣಂ : ಆವುದೇಂ ! ಏಕಾಕ್ಷರಿ, ದ್ವ್ಯಕ್ಷರಿ, ತ್ರ್ಯಕ್ಷರಿ, ಚತುರಾಕ್ಷರಿ, ಪಂಚಾಕ್ಷರಿ, ಷಡಕ್ಷರಿ ಮುಂತಪ್ಪ ಪ್ರಸಿದ್ಧಮಂತ್ರಂಗಳೊಳವಲ್ತೆ.

ಮನೋ : ಇವಱಿಂ ಜಪಿಸಿದೊಡೇನಕ್ಕುಂ ?

ಮುದ್ದಣಂ: ಈ ಮಂತ್ರಂಗಳಂ ಬಿಡದೆ ಜಪಿಸಿ ಸಿದ್ಧಿವಡೆದೊಡೆ ತತ್ತದಭಿಮಾನಿ ದೇವತೆಗಳ್ ಮೆಯ್ದೋಱಿಯುಮೆಳಸಿದರ್ಥಮುನಿತ್ತು ಪೋಕುಂ.

ಮನೋ : ಓ ! ಇನಿತೊಂದು ಜಪದ ಬಲ್ಮೆ ನೆರಮಿರ್ಪಿನಂ ಪೆಱತೊಂದಱ ಗೊಡವೆಯಿಲ್ಲದಿರ್ಕುಂ ತಾಪಸರ್.

ಮುದ್ದಣಂ : ಅಪ್ಪುದಪ್ಪುದು, ತಪ್ಪೇಂ ?

ಮನೋ : ಅಂತದಿರ್ಕೆ. ನಿನ್ನನ್ನರಪ್ಪ ಕಬ್ಬಿಗರ್ ಮನೆವಾೞ್ತೆಯೊಳಿನಿಸೊಂದುಂಗೊಡವೆಗೊಳ್ಳದೆ ಕೆಮ್ಮಕೆಮ್ಮನೆ ಪಾಟ್ಗತೆಯ ಕಬ್ಬದೊಳೇವೋಟ್ಟುಂ ಬೆಮೆಗೊಂಡಿರ್ಪರಲೇ. ಅವರ್ಗೇಂ ಬಟ್ಟೆಯೊ ? ಉಣಲೇಂ, ತಿನಲೇಂ ಅಂತಿರೊಂದು ಜಪಮಂ ಪಿರಿಯದವಸಿಗಳನತ್ತಣಿನುಪದೇಶಂಗೊಂಡೊಡಾಗದೆ !

ಮುದ್ದಣಂ : (ಮುಗುಳ್ನಗೆಯಿಂ) ಏಂ ! ಎಮ್ಮವರೊಂದಿರವಿಗೆ ನಗುವಾ ? ಆಃ ! ಎಮ್ಮನ್ನರಪ್ಪ ಕಬ್ಬಿಗರ್ಗೇಂ ಕೊಱತೆಯೊ ! ತಾನೆ ಬಯಸಿದೊಡಮೆಯನಾಗಳೆ ತಂದೀವ ಮಂತ್ರದ ಜಪದೊಂದು ನೆರಂ ತಮ್ಮೊಳೊಂದಿರದೊಡಲ್ತೆ ಕಾಡ ಜೋಗಿಗಳತ್ತಣಿನುಪದೇಶಂ. ನಾಡಂ ಕಾಡಂ, ಕಾಡಂ ಬೀಡಂ ಗೆಯ್ವೊಂದು ಪೆರ್ಮೆಯ ಬಲ್ಮಯ ಕಬ್ಬಿಗರೇಂ ಕಕ್ಕುಲಿತೆಯ

ಮುದುದವಸಿಗಳತ್ತಣಿಂ ಪಿರಿಯರಾಗರೆ ! ನುಡಿವರೇನದುವೆ ಪುರುಳ್, ಪಿಡಿವರೇನದುವೆ ತಿರುಳ್ ! ಪಲವೇಂ ಕೆಲವೇಂ ? ತಮ್ಮಂದೆ ನುಡಿಯ ಬಲ್ಪಿಂ ಮೂಜಗಮುಮನಟೆಯಿಸುವ ಪೊಗಟಿ ಕೊಳ್ವಾಳ್ವ ತಾಳ್ವ ಪೂಟ್ವಿ ಪೇಟ್ವಿ ಬಾಟ್ವಿ ಸಿಂಗರದ ಬಣ್ಣಗಬ್ಬಿಗರೆಮ್ಮ ತೆಱನನಿನ್ನುಂ ನೀನಱೆಯಯ್.

ಮನೋ : (ಬಿಸವಂದಂಗೊಂಡು) ನಿಮ್ಮವರ್ಗಮಂತಿರೆ ಮಂತ್ರಂ ಸಿದ್ಧಿವರ್ಕುಮೇ ?

ಮುದ್ದಣಂ : ತಡೆಯನಳ್ಕೇಂ !

ಮನೋ : ನಿನ್ನೊಳಮೊಳವೆ ?

ಮುದ್ದಣ : ಎನ್ನೊಳಿಂತಿದು ಪಾಸುವೊಕ್ಕು.

ಮನೋ : ಆಃ ! ನೀನುಂ ಬಲ್ ಮೈಮೆಗಾಱಂ. ನಿನಗಾರತ್ತಣಿನೆಂದುಪದೇಶಮಾಯ್ತು ?

ಮುದ್ದಣ : ಗುರುವತ್ತಣಿನೆಂದೆಳವಿಯೊಳ್.

ಮನೋ : ಎನ್ನೆಱೆಯ ! ಅದಾವುದೊ ಮಂತ್ರಮೆನ್ನೊಳುಸಿರ ?

ಮುದ್ದಣ : ಆಃ ! ಆಃ ! ಒಳ್ಳಿತೊಳ್ಳಿತು !! ಮಂತ್ರಂಗಡ ! ತನಗೊರೆವುದು ಗಡ ! ಚೀಃ ಚೀಃ ಚೀಃ ! ಪೆಣ್ಗಳ್ಗೀಮಂತ್ರೋಪದೇಶಂ ಸಲ್ವುದೆ ?

ಮನೋ : ಆನಱೆಯೆನೆ ! ನಿನ್ನತ್ತಣಿನುಪದೇಶಂ ಬೇಡುವೆನೆ ! ನೀನಾಗಳೆಂದ ಮಂತ್ರಂಗಳೊಳಾವುದದಱ ಪೆಸರೇನೆಂದೆ ಕೇಳ್ದಂ.

ಮುದ್ದಣ : ಆಗಳೆಂದ ಮುನಿಗಳ ಮಂತ್ರಗಳೊಳಲ್ತು. ಎಮ್ಮ ಮಂತ್ರಗಳ ಬಗೆ ಬೇಱೆ, ಮೂಱೆರಡಕ್ಷರದ ಮಂತ್ರಂಗಳೆಮಗಕ್ಕುಮೆ ! ಎಮ್ಮತಗಂತು ಕಿಱೆದಲ್ತು. ಬಲ್ಪಿರಿದು. ಒಂದಕ್ಕರಮಲ್ತೆರಡಲ್ತು ಮೂಱಲ್ತು, ನಾಲ್ಕೈದಲ್ತು, ಅಱುಮಲ್ತು ! ಏೞಕ್ಕರದ ಬೀಜ ಮಂತ್ರಂ. ಅಂತದಱೆಂ ಸರ್ವ ಮಂತ್ರಂಗಳ್ಗೆ ತಲೆಯೊಳಿರ್ದು ಮೇಲೆನಿಪ್ಪ ಸಪ್ತಾಕ್ಷರೀ ಮಂತ್ರಮೆಂದು ಪೆಸರ್.

ಮನೋ : ಹಾ ! ಹಾ ! ಆ ಮಂತ್ರಕ್ಕಭಿಮಾನಿದೇವತೆ ಯಾವುದು ? ಮುನ್ನಮಾರಿದಂ ಜಪಿಸಿ ಸಿದ್ಧಿಗಂಡರ್ ?

ಮುದ್ದಣ : ಪೋ ! ಪೋ ! ಇಂತಿವಟಿಂ ಕೊಂಡೇಂ ಕಜ್ಜಂ ?

ಮನೋ : ಇರ್ಕೆ ಕೇಳ್ವೆಂ.

ಮುದ್ದಣ : ಅಂತಾದೊಡೆ ಕೇಳ್ ಪೇಟ್ವೆಂ. ಇಂತೇರ್ಪಟ್ಟ ಮಂತ್ರದಧಿದೇವತೆ ಜೇಷ್ಠೆ. ಮುನ್ನಮೀಶ್ವರಂ ತನ್ನೊಂದು ಲೀಲೆಯೊಳ್ ಜಪಿಸಿ ಸಿದ್ಧಿಗೊಂಡನಂತಱೆನಾತನೆ ಋಷಿ.

ಮನೋ : ಓ ಓ ! ಇಂತುಟೆ ಮಂತ್ರದೊಂದು ಮೈಮೆ ! ಎಲೆ ರಮಣ ! ನಿನ್ನಡಿಗಳ್ಗೆಱಗುವೆಂ. ಎನ್ನತಿನಿತೊಂದು ಬಿನ್ನಪಂ. ಅಂತು ಸಂದ ಸಿದ್ದಿಯ ಮಂತ್ರಮಾವುದೊ ಕೂರ್ಮೆಯಿಂ ತಿಳಿಯೆ ಪೇೞ್.

ಮುದ್ದಣ : ಆಗಳೆ ಪೇೞೆನಲ್ತೆ ಸಪ್ತಾಕ್ಷರೀ ಮಂತ್ರಮೆಂದು.

ಮನೋ : ಅಂತು ಪೆದಸರನಲ್ತು, ಮೂಲಮನೆ ಕುಱೆತೆನ್ನೊಳಾಡಿ ತೋಱ.

ಮುದ್ದಣ : ಅಬ್ಬಾ ! ಪೆಣ್ಣೇಂ ಗಡಸುಗಾರ್ತಿಯೊ ! ಆಗಳ್ ಪೆಸರೇನೆಂದಳ್ ; ಈಗಳ್ ಮೂಲಮಂ ಕೇಳ್ವಳ್. ಇನ್ನೇವಳೊ ? ಮೂಱೆಳೆಯ ಜನ್ನದಾರದಾಣೆ ! ಉತ್ತರಿಗೆಯಾಣೆ ! ಆಗದಾಗದು. ಕೇಳ್ವುದರ್ಕೆ ಪೇೞುದ್ದರ್ಕೆ ನಿಮಗಧಿಕಾರಮಿರದು. ಕಣ್ಗೆ ಕಾಲ್ಗೆ ಕೇಡು !

ಮನೋ : ಕಿವಿಯಿಂ ಕೇಳ್ವುದಱೊಳೇಂ ದೋಸಂ ? ಅಂತೇರ್ಪಟ್ಟ ವೆದಮನಾದೊಡಮೋದುವೆದಡೆಯೊಳ್ ಕೇಳದೆ ಪೆಣ್ ? ನಿನ್ನೊಳಮೇಂ ಜಂಬಮೋ !

ಮುದ್ದಣ : ವೇದ ಮಂತ್ರದ ಬಗೆ ಬೇಱೆ. ಇದಱ ಪರಿ ಬೇಱೆ, ಅಜಗಜಾಂತರಂ. ಅದಱೊಳಂ"ಗೂಢಾದ್ಗೂಢತರಂ ಮಂತ್ರ" ಎಂದು ಪೇೞ್ದುದುಂಟು. ಅದು ಕಾರಣಂ ನಾ ಪೇೞಲಾಗದು ; ನೀಂ ಕೇಳಲುಮಾಗದು. ಮುಂತಣ ಕತೆಯಂ ಕೇಳ್. ಮತ್ತಮರಣ್ಯಕಂ ಶತ್ರಘ್ನಾಧ್ಯರೊಳ್...

ಮನೋ : ತೆಗೆ ತೆಗೆ ! ನಿನ್ನ ಮುಂಗತೆಯಂ ವಿತೆಯಂ ; ಅದೆಂ ಮಂತ್ರಮೊ ಕೇಳ್ವಂ. ಕೊರಲಾಣೆ, ಉಂಗುರದಾಣೆ, ಪೇೞ್ದಲ್ಲದೆ ಬಿಡೆಂ.

ಮುದ್ದಣ : ಏಂ ಚಲಮೊ ಚಪಳೆಗೆ ! ಪೇೞೆನೆಂದೊಡೆ ಕೇಳಳ್. ಆಃ ! ಪೆಱರೊಳೊರೆದೆಮ್ಮೀ ಬೀಜಮಂತ್ರಮನೆಂತು ಪೊಲೆಗಿಡಿಪೆನೊ ! ಚೀಃ ! ಎಳವೆಂಡಿರ ಕೈಯೊಳಿರ್ಪ ಕಬ್ಬಿಗರ ಬಾೞ್ಕೆಯೆ ದೂಷ್ಯಂ. (ಎಂದು ನೀಡುಂ ಭಾವಿಸಿ) ಎಲೆ ಪೆಣ್ಣೆ ! ನೀನಾರೊಳಮೆಂದಿಂಗುಮುಸಿರಲ್ಬಾರದು. ಜೋಕೆ.

ಮನೋ : ಎಂದುವೆಂತುಮುಸಿರೆನಾಡೆಂ.

ಮುದ್ದಣ : ಅಂತಾದೊಡಿಂತಿದು, ಕೇಳ್, ಭ....ವ....ಪೆಱರೊಳಾಡೆನಂಬ ನಂಬುಗೆಯ್ಯಂ ಪೊಯ್.

ಮನೋ : ಇದೆ, ಪಿಡಿ ನಂಬುಗೆಯ್ಯಂ, ನಿನ್ನಾಣೆ, ಕುಲದೈವದಾಣೆ ! ಎಂದುಂ ಪೆಱವರೊಳೊರೆಯೆಂ.

ಮುದ್ದಣ : ಉಂ ! ಭವತಿ....ಭಿ....ಪೆಣ್ಗಳಂ ನಂಬಲಾಗದೆಂಬರ್ ಬಲ್ಲರ್. ನೀನೆಂತೊ ಮಱವೆಯೊಳ್ ಪೆಱರೊಡನುಸಿರ್ದುರ್ ಗುಟ್ಟಂ ಬಿಟ್ಟೊಡೆಮ್ಮನರ ಬಾಬು ಪಾಟಿಕ್ಕುಂ.

ಮನೋ : ಆನೇಂ ಮೋಡೆಯೆ ! ಪೋ ! ತನ್ನಾಣೆ, ಕಣ್ಣಾಣೆ, ಕೇಳ್ವೆಂ.

ಮುದ್ದಣ : (ಎಕ್ಕಟಿಯೊಳ್)"ಭವತಿ ಭಿಕ್ಷಾಂ ದೇಹಿ" ಎಂಬುದಿದುವೆ ಕಬ್ಬಿಗರ್ಗೆ ಸಿದ್ಧಿಸಿದ ಪೆರ್ಮೆಯ ಸಪ್ತಾಕ್ಷರೀ ಮಂತ್ರ. ಆರೊಳಾನುಮುಸಿರದಿರ್.

ಮನೋ : (ಅರೆಮುನಿಸಿಂ) ಪೋ ಮಾಣೆಲೆ ರಮಣ ! ನಿನ್ನ ನುಡಿಯಂ ಸಾಜಂ ನಿಕ್ಕುವಮೆಂದೇ ಬಗೆದೆಂ. ಈ ತೆಱನ ಮಾಟದ ಕವಡು ನುಡಿಯ ಕೊಂಕೆಂಬುದನಱಿಯದಾದೆಂ. ನೀಂ ಕಬ್ಬಿಗನೊ, ಸಬ್ಬವಕಾಱರನೊ ! ನಿನ್ನೀ ಕಬ್ಬದ ಸೊಗಸಮೆನ್ನರಪ್ಪ ಜಾಣಿಲಿವೆಣ್ಗಳೆ ಕೊಂಡಾಡುವರಲ್ಲದೆ ಬಲ್ಲರೇನೊಲ್ವರೆ !

ಮುದ್ದಣ : ಸಾಲ್ಗುಮೀ ಪರಿಹಾಸಂ. ಮುಂಗತೆಯುಮ ಕೇಳ್ –

ಅಂತು ಕುಂಡಲಪುರದಿಂ ತಳರ್ದು ಪೆಱವರ ಕೆಱೆವರ ಕಣ್ಣಿಲಿ ಮೊಗರ ಗುಡ್ಡರೋರೊಂದು ನಾಡಂ ಕಟಿಕಟಿದು ಬರುವರುತುಮಿರ್ಪುದುಮಲ್ಲಿ ಮಲ್ಲೀವಲ್ಲಿಕುಂಜಪುಂಜರಂಜಿತಮಾದೊಂದು ಮುನಿಗಳಾಶ್ರಮದ ಪೊಱವಳಯದ ತೋಂಟದೊಳಾಟದ ಕಿಱುವರೆಯದ ಕುವರರಿರ್ವರದಟಂ ತಡೆದು ಪಿಡಿದು ಹಯಮಂ ಕಟ್ಟಿದರ್ ಗಡ !

ಮನೋ : (ಕೇಳ್ವೊಂದು ತವಕದಿನೆನಸುಂ ಸರಿಸಕ್ಕೈತಂದು ನಲ್ಮೆ ಮಿಗೆ ನಲ್ಲನಂ ಗಲ್ಲಮನಲುಗಿ ತಳ್ತಮರ್ದಪ್ಪಿ) ಎನ್ನ ಚೆನ್ನರಸ ! ಮುನಿಗಳಾಶ್ರಮದ ತರಳರ್ಗೀ ಬಗೆಯೊಳ್ ನಾಡ ರಾಯರಂ ಜನ್ನಗುದುರೆಯಂ ಕಟ್ಟಿ ಕಾದುವೊಂದು ಬಲ್ಪುಂ ಕೂರ್ಪುಂ ನೇರ್ಪಟ್ಟುದೆಂತು ? ಆರಪ್ಪರೀ ಕುಮಾರರೇಂಗೆಯ್ದರೇನಾದರೆಂದತು ಕಾದಿದರ್ ಪೇೞ ? ಅಬ್ಬಾ ! ಏಂ ಗಡುಸುಗಾಱರೊ !

ಮುದ್ದಣ : ಉಃ ! ಪೋಕೆ. ಬಾಟ್ಗೆಟ್ಟ ಮಕ್ಕಳಾರಾದೊಡಮೇಂ ? ಸಾಲ್ಗುಮೀ ಪಾಟ್ಗತೆ ; ಕತೆವೇಟ್ಬು ಬೇಸತ್ತೆಂ ; ಎಂತುಂ ಯಜ್ಞಪರಿಸಮಾಪ್ತಿಗೆಯ್ವೆಂ.

ಮನೋ : ಮುದ್ದುಮೊಗದ ಚೆನ್ನಿಗರಾಯ ! ಆಗದಾಗದು. ತನ್ನಾಣೆ. ಬಾಲಕರ್ ರಣದೊಳ್ ಸೋಲ್ತರೆ ? ಗೆಲ್ದರೆ ? ಪೇೞಯ್, ನಿನಗಮೇನಿಂತು ಬೇಸಱಿಂ ಕಾಣೆಂ.

ಮುದ್ದಣ : ನೀನುಡುಗೊಱೆಯನೀವುದನೇನುಮಂ ಕಾಣೆನಂತೆ ಪೇೞೆಂದೊಡೆ ಪೇೞ್ವರೆ ?

ಮನೋ : (ಕಿಱುನಗೆಯಿಂ) ಎಱೆಯ ! ನೀನುಮೆರೆವರೆಂತಂತು ಬೇಡುವಯ್. ಇಸ್ಸಿ ! ಕಾಡಿ ಬೇಡಿಕೊಂಡೊಡೊಂದುಡುಗೊಱೆಯೆ ? ಮನವೊಲ್ದೀವೊಡಲ್ತೆ ಮೆಚ್ಚು ?

ಮುದ್ದಣ : ಮೆಚ್ಚಂ ನಚ್ಚಿ ಪಚ್ಚೆವೋದೆಂ. ಆಯ್ತು ನೋಟ್ಪೆಂ. ಎಳಗುವರರೊಂದು ಕತೆ ಮುಂತಿರ್ಕೆ. ನೀಂ ಮುನಿವೆರಸು ಪೋದ ಸೀತೆಯೊಂದಿರವನಱಿತುಂಟೆ ?

ಮನೋ : (ಅಱಿವುಗೊಂಡು) ಮನಗಮೇನೊಂದು ಮಱವೆಯೋ ? ಎನ್ನಬ್ಬೆ ಸೀತೆಯನಂದಾಗಳೆ ಮಱೆತೆಂ. ಅಪ್ಪುದಪ್ಪುದು, ಮುನಿಗಳಾಶ್ರಮದೊಳೆಂತಿರ್ದಳೇಂಗೆಯ್ದಳ್ ತಮರವರ್ ಕಡೆಗೆ ಕೋಡೊಯ್ದರೇಂ ? ಎನಗಿದನೆ ಪೇೞ್. ಆ ಮಕ್ಕಳಿರ್ಕೆ ಪೋಕೆ.

ಮುದ್ದಣ : ಸೀತೆ ಕಿಱಿದಾನುಂ ದಿನಕೆ ಮೇಣೊಂದು ಮುಹೂರ್ತದೊಳಮಳರನಮಳರಂ ಪೆಱೆನೇಸರ್ಕಳಂ ಪೂರ್ವದಿಕ್ಸುಂದರಿಯೆಂತಂತು ಪೆತ್ತು ಪತ್ತುಂದಿವಸಂಗಳ್ಗೆ ಮುನಿಪಂ ಕುಶನೆಂದು ಲವನೆಂದು ಕೊಂಡಾಟದ ಪೆಸರನಿಟ್ಟು ಕರೆವುದುಮಂದಿಂದಿಂಗಮವರ್ಗೆ ಕುಶಲವರೆಂಬ ಸಂದ ಪೆಸರಾಯ್ತೆಳೆಗೆ. ಒರ್ಮಡಿಯ ಚೆಲ್ವಿರ್ಮೆಯ್ವೆತ್ತಂತುಮಿರ್ಮೆಯ್ಯ ಸೋಮಕಾಮರ್ ಒರ್ಮೊದಲೊಳೊಗೆದಂತುಮೊಗೆದು ಗಾಡಿಗಾಡುಂಬೊಲಂ, ಸತ್ತಿನಗೊತ್ತು. ಹರಿಸದ ಸರಿಸಮನೆ ತೋಱೆ ದಿನದಿನಕ್ಕೇಱುಂಬೆಱೆಯಂತೆ ಕಳೆವೆದರ್ಚುತೆ ಬಳೆಯುತಿರ್ಪಾ ನಿಸರ್ಗ ಸುಭಗರ್ ಪೆತ್ತಬ್ಬೆಗಂ ಪುತ್ತಿನ ಪುತ್ರಂಗಂ ಮುತ್ತಮುನಿಗಳ್ಗಮೆತ್ತಿ ನಲಿವ ಬಾಲೆಯರ್ಗಂ ಮತ್ತಮೆಲ್ಲರ್ಗಂ ಮುದ್ದು ಮುದ್ದಾದರ್. ದಟ್ಟಡಿ ಬಟ್ಟಮೊಗಂ ಪುಟ್ಟಗೈ ನಿಟ್ಟಾಲಿನಟ್ಟು ನಡುವಣ ನಾಭಿ ಕಟ್ಟಾಯದ ಮೆಯ್ಸಿರಿ ನೋಟ್ಪರಂ ನಿರ್ವ್ಯಾಜಂ ಬೆಮೆಗೊಳಿಸೆ ಮೊಳೆವಲ್ಲ ಚೆಲ್ವು ಕಿಱುನಗೆಯಂದಂ ತೊದಲ್ನುಡಿಯ ಸೊಗಸು ತಳರ್ನಡೆಯ ಗಾಡಿ ಮನಂಬುಗೆ ಕಣ್ಗೆಂಬಾದರಾ ಲಂಬಾಲಕರ್ ಬಾಲಕರ್.

ಅನಿತಱಂ ಬೞಿಕ್ಕೆ ಮುನಿಪಂ ಚೌಲೋಪನಯನಸಂಸ್ಕೃತರಾದ ಬಾಲಕರ್ಗೆ ಪಲವೋದುಗಳನೋದಿಸಿ ಬಿಜ್ಜೆಯೊಳ್ ಬಿನ್ನಣಿಗರನಾಗಿಸಿ ಪಱಿವಾತುಗಳನೆಲ್ಲಮಂ ಸಾಂಗಮಱಿಪಿ, ಶಾಸ್ತ್ರಂಗಳನೊಱೆದು ಪುರಾಣಂಗಳೊಳ್ ಪರಿಣತರಂ ಮಾಡಿ, ಗಾಣದೊಳ್ ಜಾಣರಂಗೆಯ್ದು, ಬಿಲ್ಗಾಱಿಕೆಯೊಳ್ ಬಲ್ಗೈಗಲಿಗಳನೆಸಗಿ, ಪಾಟಮಾಟಮಪ್ಪಂತು ಕಲಿಸಲೊಡಂ ಮೋಡಮಟಿಯೆದ ತಿಳಿದ ಕಳೆಗಳಿಂ ಬೆಳಗುವ ಚಂದ್ರಮನಂತೆ ಬೆಳಗಿದರ್ ಯಮಳರ್. ಪುಸಿಯದ, ಬೇಸಱದ, ಗಾಸಿಗೆಯ್ಯದ, ಬಾಸೆದಪ್ಪದ, ಬೋಸರಿಸದ ಕಟ್ಟೆಱಕದ ಕೂರ್ಮೆ ಪೆರ್ಮೆವೆತ್ತುದು. ತಮ್ಮೊಳೆಣೆಯರ್ಗೆಂದುಂ ಮುನಿಯೊಳೊಂದು ಗುರುಭಕ್ತಿ

ಮಾತೆಯೊಳ್ ದೈವಭಕ್ತಿ ಕಣ್ಬೊಲಮಾಗೆ, ತಾಪಸರೊಳೊಲ್ಮೆಯಿಂ, ವಟುಗಳೊಳ್ ನಲ್ಮೆಯಿಂ ಸಂತಂ ಬಳೆಯುತಿರ್ದರಾಜಿತಮಾರರ್ ಕುಮಾರರ್.

ಓ ಎನ್ನ ಪ್ರಾಣೇಶ್ವರೀ ! ಇಂತು ದಿನದಿನಕ್ಕೇ ಟ್ಗೆವೆತ್ತು ಬಳೆಯುತಿರ್ಪ ಬಾಲರ ಬಳವಿಯನೆ ಕಂಡು ತನ್ನ ಮುನ್ನಿನ ಬನ್ನಮಂ ಪಿರಿದುಂ ಮಱೆದು ನಲಿವ ಜಾನಕಿಯಿರವಿಂಗೆ ಕೃತಕೃತ್ಯನಾದೆನೆಂದು ಬಗೆಮಿಗೆ ಪೊಂಗಿ ಸಂತಮಿರ್ಪ ವಾಲ್ಮೀಕಿ ಕಿಱಿದಾನುಂ ದಿನಕ್ಕೆ ತನ್ನೊಂದವಸರಕ್ಕೆ ಕುಶಲವರನಾಶ್ರಮಕೆ ಕಾಪಿಟ್ಟು ವರುಣಲೋಕಕ್ಕೆ ಪೋಪುದುಮಾಗಳೆತ್ತಾನುಂ ಸ್ವೇಚ್ಛೆಯಿಂ ನಡೆವ ರಾಘವನ ಜನ್ನಗುದುರೆ ಆ ಆಶ್ರಮವಂ ಪುಗುತರಲೊಡಂ –

ಮನೋ : ಈಗಳಱಿತೆಂ ಹಸುವಂ ಕಟ್ಟಿದ ಬಾಲರಾರೆಂಬುದಂ. ಕುಶಲವರಾಗರೆ ? ನೀನು ಮಾವ ನಾಡ ಗತಕಿಯೊ ? ಆಗಳೆ ಸೀತೆಯ ಮಕ್ಕಳ್ ಕಟ್ಟಿ ಕಾದಿದರೆಂದೊಡಾಗದೆ ! ತಾಂ ಪೇೞಿಂ ಗಡ ! ಮುಚ್ಚು ಗಡ ! ಆಯ್ತಾಯ್ತು ಮುಮತನ ಕತೆಯಂ ಪೇೞ್ ನೋೞ್ಪೆಂ.

**ಮುದ್ದಣನ ಗದ್ಯದ ಶೈಲಿಗೆ ಈ ಮುಂದಿನ ಭಾಗವನ್ನು ನೋಡಬಹುದು.**

ಮುದ್ದಣ : ಒಳವುಗೊಟ್ಟ ಕಾದಲನಂ ಮೂದಲಿಪ ಹೂಜೆಗಾತಿಯೊಂದಾಯತಿಯಂ ಮೆಱೆವ ನಿನಗೆ ನಲ್ಗೆಳದಿಗಲ್ಲದೆ ಪೆಱಳಾವಳ್ಗಿಂ ಕತೆಯಂ ಬಿತ್ತರಂ ಬಿತ್ತರಿಪಂ ನುಡಿಗಬ್ಬದ ಗಬ್ಬದುಬ್ಬರದಿಂ ನನೆಕೊನೆವೊರ್ಗಿ ಕೊನೆವೆಜನಪುಜಿನ ಪೊಳ್ಳಬಳ್ಳು ಮುದ್ದಣಂ. ಆಯ್ತು ಕೇಳ್, ಇರ್ವರುಮಲ್ತೊರ್ವನೆ ಕಿಱಿಯಂ ಲವಂ ತಾನೊರ್ಮೆ ಸಂಗಡಸಿಗರ್ವೆರಸು ಆಶ್ರಮಕೆನಸುಂ ದೂರದ ತೋಂಟದೊಳ್ ಬಿನದಿಸುತಿರ್ಪ ವೇಳೆಗೆ ಬಿಂಕದಿನಲ್ಲಿಗಲ್ಲಿಗೆ ಸುೞಿದುಂ ತುೞಿದುಂ ಮೂಸಿಯುಂ ಬಾಸಿಯುಂ ಮೇದುಂಪಾಯ್ದು ವನಮಂ ಮನಮಂತಾಟಾಱಿ ಪುಡಿಗಟ್ಟಿ ಕಿಚಿಕಿಲ್ವ ಹಯಮಂ ದಿಟ್ಟಿಸಿ ಆರ್ತಿದೊಂದು ದುಱುದುಂಬಿಗುದುರೆ? ಕಂಡಿರೆ ! ಮುತ್ತಯ್ಯನಿಲ್ಲದಂತೆ ಬಂದು ಪೊಕ್ಕು ಪೊಱದೋಂಟಮಂ ತೊತ್ತೞ ದುೞಿದು ಪಾೞ್ಗಡಿಕುಂ. ಪೋಪಂ ! ಪಿಡಿದಿ ಕಟ್ಟಿ ಬಂದೊಡನೆ ಮುತ್ತಮುನಿಗೊಪ್ಪಿಸುವಮೆಂದು ತಾಂ ಮುಂತೆ ತಳರಲೊಡಂ ಮಿಕ್ಕಿನ ಬಟುಗಳ್ ಪಿಡಿಪಿಡಿ ಎಂದಾರ್ದು ಸೋವುದುಂ, ಲವಂ ತಾನೆ ಮುಂಬರಿದುತ್ತರಿಗೆಯಿಂ ಕೊರಲಂ ಬಿಗಿದು ಕೆಲನ ಕಿಱುಗೋಣೆಯ ಕಿೞೊಂಬಿನೊಳ್ ಕಟ್ಟಿ ನೊಸಲೊಳೆಸೆವ ಬಿರುದಿನೋಲೆಯಂ ವಾಚಿಸಿಕೊಂಡು - ಉಂ ! ಇಂತುಟಲೆ ಬೀರರೊಮದು ಪೆರ್ಮವಡೆದೇೞ್ಗೆ. ತಾಂ ಕೌಸಲ್ಯೆಯೊಳ್ ಪುರುಳುಂ ಲಕ್ಕಣಮುಂ ಒರ್ಮೆಯ್ವೆತ್ತುದೆಂಬಂತಿರೊಗೆದನಕ್ಕುಂ ! ಇಂತಿರಂತದಂ ಬಿಚ್ಚಳಿಸಿ ತೋಱೆ ಪೊಡೆಮ್ಮಣ್ಣನೆ ಸಾಲ್ಗುಂ. ನೋೞ್ಪೆಂ ಮಾರಿಗೆ ಬಾಱೆಗಾರೆಂಬುದಂ ಅಲ್ಲದಂದು ಪಂದೆಗಳಾಗೆವೆ ? ಹಯಮಂ ಮರಲ್ಚುವೊಡಿಂದು ಸೋದರಂ ಸಾದರಂ ಬರ್ಕೆ, ಅನಿತೊಂದು ಬೇಗದಿನೆಮ್ಮಣ್ಣಂಗಿಂತಿದನಱಿಪಿ ಕೂಡಿವರ್ಪೆಂ – ಎಂಬನಿತಱೊಳ್ ಮಿಕ್ಕುೞಿದ ಬಾಲರೆನುಸುಂ ಬೆರ್ಚಿ – ನಿನಗೇನೆಲೆ ಸೊರ್ಕು ! ಬಲ್ಪುಳ್ಳ ನಾಡರಾಯರ ಜನ್ನಗುದುರೆಯಂ ಕಟ್ಟಿ ಚಲದಿಂ ಕಾದುವೆನೆಂಬ ನೀಂ ಮರುಳಾಗ ! ಬಾಲಂ ನೀನೆತ್ತಂ ; ಅಳವಿಗೞಿದ ಕೂರ್ಪಿನ ಕಾಲಾಳ್ಗಳೆತ್ತಂ ! ಪೋ ಮಾಣ್ ! ಅರಿಗಳ್ಗಱಿವಾಗದ ಮುನ್ನಮೆ ಕಟ್ಟಿದ ಹಯಮಂ ಪೋವಿಟ್ಟು ಮನೆಗೆ ಪೋಪಂ, ಅಜ್ಜನಾಣೆ ! ದುಡುಕಿ ಪೋಗದಿರೆಂದು ಗದ್ದಿಪುದುಮವನವರ್ಗಳಂ ಗದಱಿ – ಚೀಃ ! ಚೀಃ ! ಕಣ್ಗಟ್ಟಿನ ತಪದ ಬವಸಿನ ಮುದುಗೂಗೆಯ ಪಿಳ್ಳೆಗಳ್ ಪೋಪೋಗಿರೆ ! ಆಂ ತರುವಲಿಗಡ ! ಪಗೆ ಕಡುಗಲಿ ಗಡ ! ಆಂ ಕಿಱಿಯನಾದೊಡೇಂ ; ಅಣ್ಣಂ ಪಿರಿಯಂ ಸಾಲನೆ ? ಎಂದು ಮಾಂಕರಿಸಲೊಡಮತ್ತಲ್ ಬೆಂಬೞಿಯ ಕಾಪಿನಾಳ್ಗಳ್ ಹಸುವನಱಸುತಾಂ ಬರೆವರೆ ಕಟ್ಟಿದಿರೊಳ್ ಬಾಲಕರುಮಂ ಮರನ ಮೊದಲೊಳ್ ಹಯಮುಮಂ ಕಂಡು ಕಟ್ಟಿದರಾರೆಂದು ಜರ್ಬಿಂ ಮಸಗಿ ನುಡಿವುದುಂ ; ಮಿಕ್ಕ ವಟುಗಳ್ ನಡನಡುಗಿ ಆಮಲ್ತಾವಲ್ತು, ಈ ಪೊಸಮಾಣಿಯಾಗಲ್ವೇೞ್ಕುಂ, ಬೇಡಬೇಡೆಂದೊಡಂ ಚಲದಿಂ ಪಿಡಿದು ಕಟ್ಟಿ ಮಿಣ್ಣನಿರ್ಪನೆಂದು ಲವನಂ ತೋಱೆತಾಂ ಮೆಲ್ಲಮೆಲ್ಲನೆ ಪಿಂಜರಿದು ಮರನ ಮಱೆಯೊಳಾದರ್. ಅಂತಪ್ಪುದುಮಾಳ್ಗಳಾ ಲವನಂ ಮುತ್ತಿ ಪಳ್ಳಿಯ ತುಱುವಳನಂತಿರೆ ಹಸುವನೇನೆಂದು ಕಟ್ಟಿದಯ್. ಹಯಮುಮನೆಮ್ಮುಮಂ ನೋಡದೆ ನಾಡರಾಯರೆಂದು ಸಂಕಿಸದೆ ಕದನಕ್ಕಂಜದೆ ಜೀವದಾಸೆಯಿಲ್ಲದೆ ಕಟ್ಟಿನಿಂದ ನಿನಗೆ ಕಣ್ಮೂಱಿರವೇಡಾ ! ನೆಲನಂ ಕಿನ್ನೆಲನಂ ಬಾನಂ ತಾನಂತುಟೊಂದು ಮೈಮೆಯಿಂ ಕಾವ ದೇವಂ ಬೇಳ್ವ ಜನ್ನದ ಮಾನ್ಯದ ಹೂನ್ಯದ ಕುದುರೆ ಕಣಾ ! ಅಬ್ಬಾ ! ಏಂ ಸೊರ್ಕೊ ? ಸೆಳೆಯ ಸವಿ ಬೇಱೆ. ಪೊನ್ನಪಿಳುಕಿನ ಬಲ್ಗಣೆಯ ಸವಿ ಬೇಱೆ, ಪೋ ! ಪೋ ! ಕಡ ಕೋಡುಗವಸುಳೆ – ಎಂದು ಸೊಪ್ಪಿಂಱೆಪ್ಪೆವೋದರ್. ಅನಿತಱೊಳ್ ಮಾರ್ಕೊಂಡಾ ಕುಱಿವಿಂಡಂ ಪುಗುವಮಱಿಸಿಂಗನೊಂದಾಟೋಪದಿಂ ಕಾವಲರ ಪಡೆಯಂ ನುರ್ಗಿ ಸರಲಸೋನೆಯಂ ಕರೆದು ಘಾತಿಸಿ ಬೊಬ್ಬಿಱಿದು ಕಂಡಿರೆ ಕಾಡಕೋಡಗವಸುಳೆಯ ಕೈಚಳಕಮಂ ! ಎನಗೆ ಸೆಣಸಾಟಂ ಸಲ್ವುದೆ ? ನಿಮಗಿಂದಿನ ಗೆಲ್ಲಮೆಂದುಮತ್ತಂ ಮತ್ತಂ ಕೋಲ್ಗಳನೆಚ್ಚು ಎನಸುದೂರಕಱಿಯದಟ್ಟಿದಂ. ಬೞಿಕ್ಕಮವರಾತಂಮಾತನೊಂದು ತದೆಗಂ ಬೆಂಗೊಟ್ಟಂತುಮಿಂತುಮೋಡಿ ತಮ್ಮೊಡೆಯಂಗಿಂತಿದಂ ಪೇೞ್ವುದುಮಾತಂ ಮಾತಂ ಮಾನಿಸಿ, ಸುಮತಿಯೊಳಾರ್ತೀವನಂ ಅಂತಪ್ಪ ಬಾಲನೇನಿರ್ಕುಂ ? ನೀಂ ಕೇಳ್ದುಂಟೆ, ಪೇೞಿನಲೊಡಂ - ಇಂತೀ ವನಂ ಮುನಿಗಳಾಶ್ರಮಮೆಂಬುದುಂ ಬಲ್ಲೆಂ, ಬಾಲನಾರೆಂಬುದನಱಿಯೆನೆಂದಂ. ಅದರ್ಕೆ ಆ ಶತ್ರುಹನಾರಾದೊಡೇನಾಯ್ತು,

ಎತ್ತಿಪೋಪಮೆಂದು ಸೇನೆವೆರಸ್ಯೆದಿವಂದು ಕುದುರೆಯನಣ್ಣನೆಡೆಗುಯ್ವ ಲವನಂ ತಡೆದು ತಾಗಿದನಾಗಳ್, ಅವನ ಬೀರಮುಮಂ ಕಂಡು ರಾಘವಾವರಜಂ ತಾನೆ ತೇರಂ ನೂಂಕಿ ಬಾಲಂಗಿದಿರಾಗಿ – ಎಲೆ ಮಾಮಿಡಿಯ ತೋರದ ತೋಱದ ಪೆರ್ಕಳಿಕೆಯ ತರಳ ! ಮೊಟ್ಟೆಯೊಳೆ ಕೆಲೆವೊಂದದಟು ನಿನಗೆತ್ತಣಿನಾಯ್ತು ? ನೀನಾವಂ ? ಹಯಮನೇನೆಂದು ಬಗೆದು ಕಟ್ಟಿದೆಯೋ ? ಕಟ್ಟಳವಿಯೇಂ ? ನಿನಗೆ ಸೊಗಸಾಯ್ತು ! ಬಿಡು ಬಿಡು ಮರುಳೆ ! ಆಟದ ಕೂಟದ ನಿನ್ನನ್ನರೊಳ್ ಪೋರ್ಣವಂದಂ ಕದನಮಲ್ಲೆಂದು ಗದಱೆ ಮರಲ್ಚುವೊಂದು ಬಗೆಯಿಂ ಹಯಕೆ ಸನಿಯಂಬೋಪುದು ಲವಂ ಕಿಸುಗಣ್ಣಿ ಕಣೆಯನೆಚ್ಚು ಪಗೆಯಂ ನೋಯಿಸಿ ಕಡೆಯೊಳ್ – ಪ್ರಾಯಂ ಕೂಸಾದೊಡೇನೀ ಸಾಯಕಂ ಕೂಸಕ್ಕುಮೆ ! ಜಗದೆ ನೀವೇ ಬಲ್ಲುಳ್ಳರ್ ! ಆಂ ನಡೆವೆತ್ತ ಸಿರ್ಪುಟಿೌಗೆವೆ ! ಅಲ್ಲದೊಡೇಂ ಪೆರ್ಕಳಿಕೆಯೋ ? ಆಮೆ ಜಗದ ಗಂಡರ ಗಂಡರ್. ಪೆಱರ್ ಪಂದೆಗೊಂದೆಗಳ್, ಹಯಂ ಬರ್ಪುದುಮೊಡನೆ ಮಱೆವಾಳ್ವುದು ! ಕಪ್ಪಮನೊಪ್ಪಿಸುವುದು ಗಡ ! ನಿರ್ಧನರಪ್ಪಿನಂ ಮೊಗಸಿರ್ದ ಜನ್ನಕ್ಕೆ ಪಣಮಂ ಕುಡಿಮೆಂದು ಬೇಡಿದೊಡಾಗದೆ ! ಲೇಸು ಲೇಸು ! ನಿಮ್ಮನ್ನರಪ್ಪ ನಾಡರಾಯರೊಂದಾಯತಿಯೆಂದು ಹಂಗಿಸಿ ನುಡಿದಂ. ಆ ನುಡಿಗೆ ಶತ್ರಘ್ನನಿನಿಸುಂ ಖತಿಗೊಂಡು ಮೇಣೊಂದಂಬನಿಸಲೊಡಂ ಮಾರ್ಕೊಂಡು ಮುಱಿದು ತಾನೈದು ಕೂರ್ಗಣೆಗಳಿಂ ತೇರಂ ಬಿಲ್ಲನಾರಿಯಂ ತುಂಡಿಸಿ ಹೂಂಕರಿಸಿದಂ ಮತ್ತಂ ಶತ್ರುಹಂ ನವ್ಯಭವ್ಯರಥಮಂ ಪೊಸಬಿಲ್ಲಂ ಕೊಂಡು ಬಾಲಕನಂ ಶರಂಗಳಿಂ ಮುಸುಂಕಿದಿಂಬಟೆಯಿಂ ಕೋಲ್ಗಳುಱುಬೆಗೆ ಗಾಱುಗೆಟ್ಟು ಬಾಯಾಱೆ ಬನ್ನವಟ್ಟು ಮುಚ್ಚೆವೋದ ಲವನೊಂದು ಗಂಡಗರ್ವಕ್ಕೆ ಮೆಚ್ಚಿ ಕೊಂಡಾಡಿ ನೇಹಂ ಮಿಗೆ ತಾನೆ ತೋಳೊಳೆತ್ತಿ ತೇರೊಳಿಟ್ಟು ಹಯಮಂ ಬರಸಿ ಪುರಕೆ ಪೋಗವೋಪುದುಂ , ಮಿಕ್ಕ ಮಕ್ಕಳಿಂತಿದಂ ಕಂಡು ಬೆದಱೆ ಕುಟ್ಟಱಿದಿಂ ತಮ್ಮಾಶ್ರಮಕ್ಕೆ ಬಂದು ಬೆಟ್ಟುಸಿರಿಂ ಇನಿವೊಟಿಸ್ತಂ ಬಾರದೆ ನಿಂದ ಮಕ್ಕಳ ಬಲವನೆ ಪಾರುತಮಿರ್ಪ ಸೀತೆಯಂ ಕಂಡು – ಅಬ್ಬೆ ! ಪೋ ! ಪೋ ! ಈಗಡೆ, ಲವನಂ ಬಿಂಕದ ರಾಯರ ಕುದುರೆಯಂ ಕೊಂಡನೆಂಬೊಂದು ಕತದಿಂ ಬೇಡವೇಡೆಂದೊಡಂ ಕೇಳದೆ ಪಗೆಗಳ್ ಪಿಡಿದುಯ್ದರಯ್ಯೊ ! ಕುಶನಾವೆಡೆ ! ಮುತ್ತಯ್ಯನೇಂ ಬಾರನಿನ್ನುಂ ! ಕೆಟ್ಟುದು ಕಜ್ಜಂ ! ನಡೆನಡೆ ಪೋಪಂ, ತಳ್ವದಿರೆಂದು ತಾಮುಂ ಕೆಯ್ಯೊಳ್ ದಂಡಂಗೊಂಡು ಪೊಱಮಟ್ಟರ್.

ಇಂತಾಡಿದ ಮಕ್ಕಳ ಮಾತಂ ಕೇಳ್ದು ಸೀತೆ ಮನಮಱುಗಿ ಪಲುಂಬಿ ಪಳಯಿಸಿತಿರ್ಪಾವೇಳೆಗರಿಗಜಾಂಕುಶಂ ಕುಶಂ ಕುಶಸಮಿತ್ಫಲಪುಷ್ಪಂಗಳಂ ಪೊತ್ತು ತೊಟ್ಟನೆ ಬಂದು ಪೊಱೆಯನಿೞಿಪಿ ಮಱುಗುವ ಮಾತೆಯ ಪೊರೆಯೊಳ್ ನಿಂದು – ಎನ್ನಬ್ಬೆ ! ಇಂತೇನಟಿಲಾರಿನಾಯ್ತು ? ನಿನಗೇಂ ಜಡಂ ! ಎಂದೆನಸುಂ ಪತ್ತೆಸಾರ್ದು ಕೊರಲನಮರ್ದಪ್ಪಿಯುಂ ಗಲ್ಲಮನಲುಗಿಯುಂ ಒಱೆವ ಕಂಬನಿಯಂ ತೊಡೆದುಂ ನುಡಿಯಿಸುವ ಬಾಲಕಂಗೆ ಮಱುನುಡಿ ಗುಡಲಾರದಂದು ಬಟಿಯ ಮಕ್ಕಳ್ – ಪಗೆರಾಯರ ಜನ್ನಗುದುರೆಯಂ ಬಂದಿವಿಡಿದುದಂ ಮೇಣ್ ಕಾದಿ ಸೆಱೆವೋದುದಂ ಕುಶಂಗೆ ಕೇಳಿಸಿದರ್. ಇಂತೆಂಬ ವಟುಗಳಂ ಗದಱೆ ಬೆದಱೆ ಪೋಪಂತುಮಾಡಿ ತಾಯಂ ಎನ್ನಾಣೆ ! ಮಱುಗದಿರೌ ! ಜವನಕ್ಕೆ, ಉರಿಗಣ್ಣಭವನಕ್ಕೆ ; ಬೆಟ್ಟಿನ ತಿಟ್ಟಿನ ಮಾಧವನಕ್ಕೆ, ಎಮ್ಮ ಲವನಂ ಕೊಂಡುಯ್ದವನಂ ಸೊರ್ಕು ಸೆರ್ಕೆಪ್ಪಿನೆಗಂ ಬಡಿದು ಪಿಡಿದು ಸುವೆರಸು ನಿನ್ನಡಿಗೊಪ್ಪಿಸದಿರೆ, ನಿನ್ನ ಮುದ್ದಿನ ಕಂದನೆ ! ನೋಡೆನ್ನಧಟನೆಂದು ಪೂಣ್ದು ಮಾತೆಯಂ ಸೈತಿಟ್ಟು ಮುನ್ನಂ ಮುನಿ ತನಗಿತ್ತ ಸವಗಮಂ ಸೀಸಕಮಂ ಕಣೆಯಂ ದೊಣೆಯಂ ಬಿಲ್ಲನೆಲ್ಲಮಂ ಕೊಂಡು ತಾಯ್ಗೆ ಪೊಡಮಟ್ಟು ಪರಕೆಗೊಂಡಂದಿನಱುಪೊಗನೊಂದು ಪನ್ನತಿಕೆಯಂ ಬೆಂಬತ್ತಿ ನಡೆದು ತಡೆದರಿಸೇನೆಯದಿರ್ಚೆ – ಎಲೆಲೆ ಬಣಗುಗಳಿರಾ ! ರಣದೆ ಮೈಸೋಲದ ಸಾಲದ ಬಾಲನೋರ್ವನಂ ಬಳ್ಳುಪಿಳ್ಳೆಯನೆಂತಂತು ಕೊಂಡುಯ್ವುದಿದಾವ ನಾಯಂ ? ಸೆಣಸಾಳ್ಗಳ್ ನಿಮ್ಮಂ ಗೆಲ್ಲವೆಣ್ಣೆಂತೊಲ್ವಳ್ ! ಬಲ್ಪುಳ್ಳೊಡೆನ್ನೊಳ್ ತೋಱೆಮೆಂದು ತನಿವೆಳಗಿನ ಪೊಸಮಸೆಯಲಗಂ ತೆಗೆದೆಚ್ಚು ಚೂಣಿಯಂ ಘಾತಿಸಿದಿಂಬಟೆಯಂ ದೆಸೆಗೆಟ್ಟು ತಮ್ಮ ದಟಮಂ ಕೈವೀಸಿ ಸೈತಿಟ್ಟು ಪುಷ್ಕಲಂ ಬಂದ ಬವರಿಗಂಗೆ ಮಾಱಂತು ನೀನವಂಗೆ ಸೋದರನಕ್ಕುಮದಱೆಂ ಕಡುಕೆಯ್ದೊಡೆ ನಿನ್ನುಮಂ ಸೆಱೆಗೊಂಡು ಕೊಂಡು ಪಿಂಡಮರ್ದನಂ ಮಾಡದೆ ಬಿಡುವೆನೆ ನೋಡೆಂದು ಪೊಂಗಱೆಯ ಕೂಱಂಬುಗಳನಾರ್ದೆಚ್ಚಂ. ಅಂತಿರೆ ಕುಶಂ ಗುಱೆಗೊಂಡು ಬರ್ಪ ಬಾಣಮಂ ಕಾಣದಂತು ಕಡಿದು ಪಡಿಸರಲನೇಸಾಡಿ ಈಗಳೇ ನಿಮ್ಮನುಗಿದುಂ ಬಗಿದುಂ ದೆಸೆವಲಿಗುಡುತುಮೆನ್ನ ಚೆನ್ನ ತಮ್ಮನಂ ಕೊಳ್ವೆನೆಂದು ನೋಯಿಸಿದಂ. ಇಂತಿರೆ ಪುಷ್ಕಲಂ ಶರಹತಿಗೆ ಗಾಱುಗೆಟ್ಟು ಬಾಯಾಱೆ ಕೀಱೆ ನೆಲಕುರುಳ್ದು ಇನಿವೊಟಿಸ್ತಂ ತೆಪ್ಪಱದಿರೆ ಕಂಡು ಲವಣಾಂತಕನಂತಕನಂತೆ ಕನಲ್ದು ತೇರನೇಱೆ ಬಂದು ಕಟ್ಟಿದರ ಪೂಣಿಗನಂ ಕಂಡು - ಅಬ್ಬಾ ಕಂಡಿರೆ ನೀರೊಳ್ಳೆಪುತ್ತಿನ ಪಾವಂ ನುಂಗಲಾಟಿ ಪೊಂದಂದಮಂ ! ಎಂದು ಬೆಳಗೆಬೆಂಗ್ಯೆದಂಬುಗಳನೆಚ್ಚೊಡಾಸರಲ್ ಪೂಸರಲವೊಲಾಯ್ತುಸರಲಮ. ಆಗಳ್ಗೆ ಕುಶಂಪಗೆಯ ಕಣೆಯಂ ಸದೆದು ಮೇಣೆರಡಱೆಂ ಕರೆದ ಕೋಯಂಡಮಂ ಮುಱಿದಂ. ತೇರಂ ವಾರುವಮಂ ಕಡಿದು ರಥಿಯಂ ಸಾರಥಿಯಂ ಸಮಂತು ಕಾಱುಗೆಡದಂ. ಅಂತಪ್ಪುದಮಿಳೆಗಿಟಿತಂದು ಗದೆಗೊಂಡು ಪೊಯ್ಯಲೊಡಂ ಕುಶನೆಣತುಂ ಮಯ್ಮಮುದುಡಿ ಪುಟನೆಗೆದು ತನ್ನೊಂದು ಕಣೇಯಿಂ ಶತ್ರಹನನಿಱೆದಂ. ಆಗಳೇನೆಂಬೆನೊ ! ಬೆಟ್ಟಿನ ನಡುಮರಂ ಬಿರುಗಾಳಿಯ ಪೊಯ್ಲಿಂಗೆ ಬೇರುಡಿದು ಬೀೞ್ವಂತೆ ದಿಮ್ಮನೆ ಗದೆವೆರಸು ತಿರೆಗೆ ಕೆಡೆದಂ, ಮೊಱೆಯಿಟ್ಟುದು ಸೇನೆ. ಮುಂದುಗೆಟ್ಟುದು ಯೋಧರೊಂದು ನೆರವಿ. ಗಜಬಜಿಸಿದರ್ ಮಹಾರಥರ್. ಇಂತಾಗಲೊಡಮೆತ್ತಂ ಸುಭುಜಂ ಲಕ್ಷ್ಮೀನಿಧಿ ಮುಂತಪ್ಪ ವೀರರುಂ

ಸುಗ್ರೀವ ಸುಷೇಣರಾದಿಯಪ್ಪ ಮರ್ಕಟ ನಾಯಕರುಮಿರ್ತಂಡದಿಂ ಮಂಡಳಿಸಿ ಕಾದುವುದುಮೊರ್ವನೆ ಬಾಲನನಿಬರಂ ಮಱಿಸಿಂಗನಾನೆವಿಂಡನೆಂತಂತು ಮಾಮಸಕದಿಂ ದೆಸೆಗಿಡಿಸಿದಂ, ಕೆಲರಂ ಕಡಿದಂ, ಕೆಲರಂ ಬಡಿದಂ, ಕೆಲರಂ ಕುಱಿದಱಿದಱಿದಂ, ಕೆಲರಂ ಬಿಟ್ಟಂ ಮೊನೆಯೊಳ್.

ಆ ವೇಳೆಗೆ ಮುಚ್ಚಿವೋದ ಲವಂ ಕಿಱಿದುಂ ಬೇಗಮೆಟ್ಟಿತ್ತು ತನ್ನ ಬಂದಿಗೆ ಬೆಱಗುವೆಟ್ಟೆತ್ತಂ ನಿಟ್ಟಿಸಿ ಪಗೆಯೊಡ್ಡು ಬಕ್ಕಂಬಯಲಾದುದಂ ನೀಡುಮೆಣಸಿ ಮುಂದೆಸಡೆಯೊಳಟಿದುಟಿದ ಜೋದರೊಳ್ ಪೊಣರ್ವಗ್ರಜತನಂ ಕಂಡು ತಾನುಂ ಕೈದುಗೊಂಡಾತನಂ ಕಿಚ್ಚಂ ಗಾಳಿಯೆಂತಂತು ಕೂಡಿದಂ. ಹತಶೇಷರೊಳಮೀಗಳ್ ಪಲಂಬರ್ ಗತಾಸುಗಳಪ್ಪುದಂ ಕಂಡು ಕಂಡಗತಾಸುಗಳೆಂತುಂ ರಣಕೆ ಬೆಂಗೊಟ್ಟೋಡಿ ಕಟ್ಟುಱದಿಂ ಪೊಟಲ್ಗೆ ಬಂದು ರಾಘವಂಗೀ ವಿವರಮನಱಿಕೆಗೆಯ್ವುದುಂ ; ತನ್ನವರ ಪರಿಭವಕ್ಕೆ ಮಱುಗಿಯುಂ, ಪಗೆದ ಮಕ್ಕಳಿರ್ವರ ಏಟ್ಗೆವೆತ್ತ ಬಲ್ಪಿಂಗೆ ಬೆಱಗಾಗಿಯುಂ ದೀಕ್ಷೆಯೊಳಿರ್ದ ರಾಘವನನುಜಂಬೆರೆಸು ತಾನೆ ಪೊಱಮಟ್ಟಂ. ಇಂತು ಕಡುವೇಗದಿಂ ಪಡೆಗೂಡಿ ನಡೆದು ಕಾಡನೆತ್ತಂ ಕವಿದೊತ್ತಿ ರಾಮಲಕ್ಷ್ಮಣರೋರೊಂದು ದೆಸೆಯೊಳಿರ್ದು ದಟಿವನೊಡ್ಡಿ ಮಕ್ಕಳ ಪಿಡಿಯೆ ಬರ್ಪುದುಮಾವೊಡ್ಡು ಗಾಳಿಯೊಡ್ಡಿನ ಮುಗಿಲೊಡ್ಡಾಯ್ತು ಬಾಲಕರಿದಿರೊಳ್.

ಇಂತು ಸಂಕೆಯಿಲ್ಲದೆ ಬಿಂಕದಿಂ ಮುಟ್ಟಿವರ್ಪ ಮಕ್ಕಳ ಬಲಕಂ ಚಲಕಂ ನಿಬ್ಬೆಱಗಾಗಿ ರಾಘವಂ ಲಕ್ಷ್ಮಣಂಗೆ ಎಲೆ ತಮ್ಮ ನಾಡೊಡೆಯರ ಮಕ್ಕಳ್ಗಮೀವಗೆಯ  ಪೆಂಪುಂ ಕೆಂಪುಂ ನೋಱೆಡರಿದು ಗಡಾ ! ಪಾಡುಗೆಟ್ಟ ಕಾಡತರುವಲಿಗಳ್ಗಿಂತುಟೊಂದು ಬೆರಮೆತ್ತಣ್ತು ! ಇವರೊಳೆನಗೇನೊ ಮಮತೆ ಪುಟ್ಟುಗುಂ ; ಮುನಿಸಬಾರದು. ಆರೆಂಬುದಾರ್ಕೈದು ಪೇಟಿಯ್ – ಎಂಬುದುಂ ಲಕ್ಷ್ಮಣಂ ತೇರನಣಿದು ನೂಂಕಿ ಬಿಲ್ಲಕೊಪ್ಪಿಂಗೆ ನಾರಿಯನಳವಡಿಸುತೆ ಕೋಲಂ ಸಂಧಿಸುತೆ ನುರ್ಗಿವರ್ಪ ಬಾಲರಂ ತಡೆದು – ಎಲೆ ಮಕ್ಕಳಿರ ! ನೀಮಾರ್ ? ಹಯಮಂ ಕಟ್ಟಿದರೇಕೆ ? ಎಮ್ಮವರನಿದಿರ್ಚಿದರೇಕೆ ? ಪೋಪಿರೆಲ್ಲಿಗೆ ? ತಡೆಯಿಮೆಂದು ಬಿಲ್ಲಮೇಱಿಸಿದಂ ಆಗಳ್ಗೆ ಲವಂ ಎಲೆಲೆ ಕಟ್ಟೊತ್ತಾಯದ ರಾಯ ! ಮೊನೆಗೊಡ್ಡಿ ಬಂದು ನೀವಾರೆಂದು ಬೆಸಗೊಳ್ವುದು ಇದಾವ ನಡತೆ ? ಸಲ್ವೊಡೆ ಕಾದು, ಮೋದು, ಅಱಿಯಪ್ಪುಡೆ ಪಲಾಯನಮನೊಂದು. ಆದೊಡಂ ನೀಂ ಕೇಳ್ವನಂ ಪೇಟ್ವೆಂ. ಎಮ್ಮನಬ್ಬೆ ಪೆತ್ತಳಜ್ಜಂ ಸಾಕಿದಂ. ಚಲದಿಂ ನಿಮ್ಮ ಹಯಮಂ ಕಟ್ಟಿದೆವು. ಇದಿರ್ಚಿದೊಡಿದಿರ್ಚಿದೆವು. ಮೀಸಲಿರ್ಪ ನಿಮ್ಮ ಜೋದರ ಸಮ್ಮುಖಕ್ಕೆ ಪೋಪೆವು. ತಡೆದೊಡೆ ತಡೆವೆವೆಂದು ಕಟ್ಟಿ ನುಡಿವುದುಂ; ಲಕ್ಷ್ಮಣಂ ಕೊರ್ವಿನ ಕೊಡುನುಡಿಗಿದು ಪೊಟ್ತೆಲು. ನೀಮೆಳೆಯರ್. ಗೆಲ್ದಂ ಗೆಲ್ಲಂ ಸೋಲ್ತ ಸೋಲಂ ಬೀರರ್ಗೆಮಗೆ ಬಾರದು. ಸವಿನುಡಿಯಂ ಲಾಲಿಸಿ ಕೊಳುಗುಳಮಂ ಹಯಮಂ ಕಡುಚಲಂ ಬಿಟ್ಟುಪೋಗಿಂ. ಈ ನುಡಿ ನಿಮಗೆ ಸೊಗಸಾಗದೆ ಪೋಗೆ ನಿಮ್ಮೊಡಲುಮಂ ಬಿಟ್ಟುಪೋಪಿರ್. ಇದು ನಿಕ್ಕವಂ – ಎಂದು ಮೂಡಿಗೆಯಿಂ ಕಣೆಯನೆತ್ತಿ ಬಿಲ್ಗೆ ಪೂಡಿದಂ. ಅದರ್ಕಾ ಲವಂ ಬೆರ್ಚದೆ, ಎಲೆ ! ಕೊಱಚಾಡುವೆಯೇಂ ? ಆ ಮೆಳೆಯರಾದೊಡೇಂ ಕೋಲ್ಗೊಂದೆಳಮೆಯುಂಟೆ ? ಎಂದು ಎನಿತ್ತೆನಿತ್ತಂ ಲಕ್ಷ್ಮಣನಿಸುವವನಿತ್ತನಿತ್ತಂ ಕೊಚ್ಚಿದಱಿದಂ ಲವಂ. ಅತ್ತಲ್ ಮೇಣೊಂದು ದೆಸೆಯೊಳ್ ಸೂಟಿಯಂ ಪೋಪ ಕುಶನಂ ತಡೆದು ರಾಘವಂ - ಎಲೆ ಪಸುಳೆ ! ನೀವಾವಂ ? ಹಯಮೇನೆಂದು ಕಟ್ಟಿದಯ್ ? ಎನ್ನಾಣೆ ? ನಿನ್ನೊಳೆನಗಟಿಕ್ಕಱುಂಟು. ನೀಂ ಗೆಯ್ದ ದುಱುದುಂಬಿತನಮಂ ಪೊಲ್ಲದ ಕಜ್ಜಮಂ ಮಱೆತೆಂ. ಇದಕೊಳ್ ನಿನ್ನಂ ಕಾವೆಂ. ನಿಮಗಿನಿತ್ತು ಬಲ್ಪೆಂತುಂಟಾಯ್ತು? ಬಿಲ್ಲೋಜನಾವಂ ? ಪುಟ್ಟಿದರೆಲ್ಲಿ ? ಪೇಟೆಂಬುದುಂ ; ಕುಶಂ – ಕೇಳೆಲೆ ರಾಯ ! ನಿನ್ನ ಹಯಮಂ ಗಿಯಮಂ ನಾಂ ಕಟ್ಟಿದೆನಿಲ್ಲ. ಕಿಱಿಯನಱಿಯದೆ ಕಟ್ಟಿದನಕ್ಕುಂ. ಮೇಣೆನ್ನೊಳಾವುದು ದುಱುದುಂಬಿತನಂ ಬಾರದು. ನಿಮ್ಮ ವರಾತನಂ ಬಱಿದೆ ನೋಯಿಸಲೊಡಮೆನಗೆ ನಿಮ್ಮೊಳ್ ಮುನಿಸಾಯ್ತು. ಈಗಳ್ ನಿಮ್ಮನಿದಿರ್ಚುವೊಡಾದೆಂ. ಎಮ್ಮಗಜ್ಜಂ ವಿಲ್ಲೋಜಂ. ಕಾಡೊಳೆ ಪುಟ್ಟಿದೆವು. ಅಬ್ಬೆಯ ಪರಕೆ, ಮುತ್ತಯ್ಯನ ಕಾಪು, ಕೆಳೆಯರ ನಲ್ಮೆ, ಪಿರಿಯರೊಲ್ಮೆ, ಎಮಗೀವಗೆಯ ಬಲ್ಪನೊಡರ್ಚಿದತ್ತು – ಎಂದಾಡಿದಂ. ಆ ನುಡಿಗೆ ರಾಘವಂ ತಲೆದೂಗಿ ಕಿಱುಗೂಸುಗಳ್ ನಿಮಗೆಮಗೆ ಜುದ್ದಮಕ್ಕುಮೆ ? ಬಱಿದೆ ಕಾದಿ ಬಟಲದಿರಿಂ. ಕೊಂಡ ಹಯಮಂ ಬಿಟ್ಟು ಸಂತಂ ಪೋಗಿ, ಪೋಗಿಮೆಂದು ಸಿರ್ದಿಂಬಟೆಯಿಂ ಕುಶಂ ನಿನ್ನೀ ಕೊರ್ವಿನ ನುಡಿಯಂತಿರ್ಕೆ ! ಕಟ್ಟಿದ ಹಯಮಂ ಕೊಟ್ಟು ಬಾಟ್ವೆ ಮಾತುಂಟೆ ? ಅಬ್ಬೆ ಱೋಡಿಸಳೆ ?ಅಜ್ಜಂ ಪಟಿಯನೆ ? ಎನ್ನ ಚಲಕಂ ತೋಳ್ವಲಕಂ ಕುಂದಾಗದೆ ? ಎನ್ನ ಮೇಣೆನ್ನ ಪೊನ್ನ ಪಿಳುಕಿನ ಕೋಲ ಬಾಲಿಶಮಂ ನೋಡೆಂದು ಜಡಿದು ನುಡಿದು ರಾಘವನೊಡಲನಿಸುಗೆಯಿಂ ತರ್ಳಿತಸುಗೆಯಂ ಗೆಯ್ವುದುಮೆನಸುಂ ಕೋಪದಿಂ ಚಾಪಮಂ ತುಡುಕಿ ಸಂದ ಚಾಣಮಂ ಸಂಧಿಸುವುದುಂ ಆ ಬಾಣಂ ಮಾಣದೆಯ್ದಿ ಗುಟಿಗೆಟ್ಟು ಬಂದತ್ತು. ಏನೊಂದಚ್ಚರಿಯೋ ! ಆಹವಮಲ್ಲರಾಮಂಗಿಂದು ಚಿಣ್ಣರಾಟದ ಕೂಟದ ಪಸುಳೆಗತ್ತಣಿಂ ಸೋಲಂಗಡ !

ಲಕ್ಷ್ಮಣನಸಿದಸಿಯಾಯ್ತು ಗಡ ! ರಾಮಬಾಣಕ್ಕೆ ಮಣಿಯರ್ ಗಡ !

ಎನ್ನ ಕಣ್ಣೆ ! ಪೆಣ್ಣೆ ! ಇಂತು ಕುಶಲವರ್ ಬಾಂಬಟ್ಟೆಗರೊಟ್ಟಯಿಸಿ ನೆರೆದು ಬೆಱಗುವಡುವಿನಂ ರಾಮಲಕ್ಷ್ಮಣರೊಳ್ ಕಡುಕೆಯ್ಯುತಿರಲೊಡಮಾವೇಳೆಗತ್ತಲ್ ವರುಣಲೋಕಕ್ಕೆ ಪೋದ ವಾಲ್ಮೀಕಿ ಬಾಲಕರಿರವಂ ನಾರದತ್ತನತ್ತಣಿನಱಿದು ಮಾಣದೆ ತನ್ನಾಶ್ರಮಕ್ಕೆ ಬರೆ ಅಲ್ಲಿ ಮಕ್ಕಳ ಬಟ್ಟೆಯನೆ ನಿಟ್ಟಿಸುತೆ ಹಂಬಲಿಸಿ ಬೆಬ್ಬಳೆವೋಪ ಸೀತೆ ಮುನಿಯಂ ಕಂಡೆಱಗಿ ಲವನನರಿಗಳ್

ಹಯದ ನೆಪದಿಂ ಬಂದಿಗೊಂಡುದುಂ ಮೇಣಾತನಂ ಮಗುಟ್ಚುವೊಡೆಂದು ಕುಶಂ ಬೆಂಗೊಂಡುದನಿನ್ನುಂಬಾರದೆ ತಡೆದುದಂ ಬಿನ್ನಯಿಸಿದಳ್. ಅದರ್ಕಾ ಮುನಿಪಂ ಸೀತೆಯಂ ಸೈತಿಟ್ಟು ಮಕ್ಕಳಂ ಕೂಡಿವರ್ಪೆನೆಂದು ಪೊಱಮಟ್ಟು ಬರುತುಮಿರ್ದಂ.

ಇಂತು ಬರುವರುತಮಿರಲೊಡಂ ಎನಸುಂ ದೂರದೊಳ್ ರಣವಿಕ್ರಮ ಮೂರ್ತಿಗಳಂತೆ ಕೋಡದೆ ಬಾಡದೆ ಸಾಹಸಮಲ್ಲರೊಳ್ ಪೊಣರ್ವ ಕುಶಲವರಂ ಕಂಡು ತಲೆದೂಗಿ ಸನಿಯಂ ಸಾರ್ದು - ಓ ಓ ! ಮಾಣ್ಮಾಣಿಮೆಂದು ನುಡಿದುಂ ತಡೆದುಂ ಮಕ್ಕಳಂ ತಳ್ಕೈಸಿ ರಾಮಲಕ್ಷ್ಮಣರ್ಗೆ ಕಾಣಿಸಿಕೊಂಡಂ.

ಮುದ್ದಣ : (ಮನೋರಮೆಗೆ) ಏನೆಲೆಗೆ ! ಕಡೆಗೆ ಹುಂಗುಟ್ಟದೆ ಗುಱುಗುಮ್ಮನಿರ್ಪಯ್ ?

ಮನೋ : ಮಕ್ಕಳ ಸೆಱಗಿಲ್ಲದ ಸಾಹಸಕ್ಕೆ ಬೆಱಗುವಟ್ಟು ಇನಿವೊಟ್ತುಂ ಕೆಮ್ಮನಿರ್ದೆಂ.

ಮುದ್ದಣ : ನೀನೊರ್ವಳೆ ಅಲ್ತು ; ಬಾನೊಳ್ ಬರ್ದಿಲವೆಂಡಿರುಂ ಕಂಡು ಬೆಱಗುಗೊಂಡು ಬೆಂಡಾದರ್, ಅಂತಿರೆ ತಳ್ವದಾಗಳಿರ್ವರುಂ ಮುನಿಗೆ ಮಣಿವುದುಂ ವಾಲ್ಮೀಕಿ ಮುಗುಳ್ನಗೆಯಿಂ ರಾಘವಂಗೆ - ಓ ಓ ! ಇನಿತೊಂದು ಜಗಕೆ ಪೊಸತೆನೆ ತಂದೆಮಕ್ಕಳ್ ನಿಮಗೆ ಸಂಗರಂ ಕಡಿದಾಯ್ತೇಂ ! ಇಂತುಮೊಳವೆ ? ಕಾದುವರುಂಟು ದಾಯಿಗರ್. ಪಗೆಗಳಗ್ರಜಾನುಜರ್. ತಂತಮ್ಮೊಳಿನ್ನೆಬರಂ ಕಂಡೆನಿಲ್ಲಂ ಕೇಳ್ದೆನಿಲ್ಲೀತೆಱನ ದೊರೆವೆತ್ತಂ ಸೆಣಸಂ. ಅಂತಲ್ಲದೊಂದು ನಿಮಗಮೇಂ ಜಗದ ಮಾಯದ ಜವನಿಕೆಯ ಬೆಗಡೊ ? ನಿನ್ನ ಬಣ್ಣದ ರೂಪು ನಿನ್ನ ತಿಣ್ಣದ ಬಲ್ಪು ಪಣ್ಣಿದ ಪೊಣರ್ಕೆಯೊಳ್ ನಿನ್ನನೆಟ್ಚಿಸದೆ ಪೋದುವೆ ? ನೀಂ ನಾಡೊಡೆಯನೆಂಬೊಂದುರ್ಕಿಂ ಸೊರ್ಕಿಂ ಕೈವಿಡಿದ ಮಡದಿಯಂ ಬಗೆಯದ ನಿನಗೀ ಬಾಲರ ಕುಱುಪೆಂತುಟಕ್ಕುಮೆನಲೊಡಂ - ರಾಮಂ ಲಕ್ಷ್ಮಣನ ಮೊಗಮಂ ದಿಟ್ಟಿಸೆ ; ಜೀಯ ಮುನಿಪಂ ಪೇೞ್ದಂತಾಗದಂದು ಕಾಡಾಡಿ ಮಕ್ಕಳ್ಗೀವಗೆಯ ತೋಳ್ವಲಮುಂಟಪುದೆ ?ನೋಟ್ಪೊಡೆ ನಿನ್ನಂ ಪೋಲ್ವರೆಂದಂ. ಅದರ್ಕಾ ರಾಮಚಂದ್ರಮಂ ಸೀತೆಯ ವಾರ್ತೆಯೇನೆದಂಬುದಂ ; ಅನುಜಂ ಕೂಡಿವೋದುದಂ ಕಾಡೊಳೊಟಿಪಿವಂದುದನಾಡಿತೋಱಿಪುದುಂ ; ಮುನಿಪಂ ಸಮನಂತರದೊಳ್ ತನ್ನಾಶ್ರಮಕ್ಕುಯ್ದಾರಯ್ದುದಂ ಮೊದಲ್ಗೆಯ್ದು ಅಮಳರೊಗೆವಂ ಬಿಲ್ಗಾಱಿಕೆಯ ಬಿನ್ನಣಮಂ ನಾನಾಬಿಜ್ಜೆಯಯಱಿವಂ ನಿರವಿಸಿ ಮುಗಿಸಿದಂ. ಆಗಳ್ಗಾಗಸದತ್ತಣಿಂ – ಇವರೀಬಾಲಕರಪ್ರತಿಮವೀರರ್. ನಿನಗೆ ಸೀತೆಯೊಳ್ ಪುಟ್ಟಿದರಿವರನೊಪ್ಪುಗೊಳ್ಳೆಂದು ಮಱಿನುಡಿ ಪುಟ್ಟಲೊಡಂ ಸುರರ್ ಪೂಮಟೆಗಱೆದರ್.

ಮತ್ತಂ ರಾಘವಂ ಸಿಗ್ಗಿಂ ಕೆಮ್ಮನಿರ್ಪುದಂ ವಾಲ್ಮೀಕಿ ಮಕ್ಕಳನಯ್ಯ ನಡಿಗೆಱಗಿಸಿ – ಇವಱೊಳೇನನೆಯಂ ? ನಿನ್ನಂ ಮೀಱಿದ ತೋರದ ಬಲ್ಪಿನ ಬಾಲರೆಂಬ ಜಸಂ ಜಗಮಱಿಯೆ ಪರ್ಬಿದತ್ತು. ಅಪ್ಪ ಬರ್ಪ ಜಯಪರಾಜಂಗಳಂ ನೀನಱಿಯದುಂಟೆ ? ನಿನ್ನ ಲೀಲೆಗೇನೆಂಬೆನೊ ! ಎಂದಂ. ಆಗಳ್ ಸಂತಸದಾಲಿನೀರ್ ಕಾಟುರಮಗೆ ನವಿರ್ ನಿಗರಮಾಗಿ ಗುಡಿಗಟ್ಟೆ ಮಣಿದ ಮಕ್ಕಳನಿರ್ವರುಮನೆತ್ತಿ ತೊಡೆಯೊಳ್ ಕುಳ್ಳಿರಿಸಿ ತಳ್ಕೈಸಿ ಮುದ್ದಿಸಿ ಮುಂಡಾಡಿ ಶಿರವನಾಘ್ರಾಣಿಸಿ ಮುಂಗುರುಳಂ ನೇವರಿಸಿ ಮೈದಡವಿ ತನಯರ ಮೆಯ್ಸೋಂಕಿನೊಂದು ಹರವಸದಿಂ ಬಗೆಯುರ್ಬಿದ ರಾಘವಂ - ಎಲೆಲೆ ಬಾಲಕರಿರ ! ನಿಮಗೀ ಜಾಣ್ಮೆಗಾವುದು ಮೊದಲ್ ಪೇೞಿಮೆಂಬುದಂ ; ಎಮಗೀ ಅಜ್ಜನುಪದೇಶಿಸಿದ ರಾಮಾಯಣಮೆ ಮೊದಲಾಯ್ತೆಂದರ್. ಅಗಳ್ ವಾಲ್ಮೀಕಿ ತಾನವಿತಾನವಿನಿದಂ ಕಱಿಯೆ, ಕೊರಲುಂ ಬೆರಲುಮೊಂದಾಗಿ ಬೆರೆಯೆ, ಲಯಮನೆಡವದ ತಾಳದ ಮೇಟವದಿಂ ಪತ್ತುಂಬಗೆಯ ಗಮಕಂಗಳೋಜೆಯಿಂ ಶುದ್ಧಮಿಶ್ರ ಸಂಕೀರ್ಣಗಳೆಂಬ ಪಲವುಂ ಬಗೆಯ ರಾಗಂಗಳೊಳ್ ಬಾಜಿಪ ಬಾಣಿಯ ಬೀಣೆಯಿಂಚರಕೆ ನೆರವರ್ಪೊಂದು ಭಂಗಿಯಿಂ ಬಾಲಕರಿಂ ರಾಮಾಯಣಮನೊಪ್ಪಿಸಿದಂ. ದೇವರ್ಕಳ್ ಹಿಗ್ಗಿದರ್. ಅನಿತಱೊಳ್ ಮುನಿಪಂ ತನ್ನ ಗುಂಡಿಗೆಯ ನೀರಂ ತಳಿದು ಮುಚ್ಚೆವೋದರೆನೆಟ್ಚಱಿಸಿದಂ. ಈಗಳ್ ಸರ್ವರುಂ ಪುರಕೆ ಬಿಜಯಂಗೆದಯ್ದರ್.

ಮನೋ : ಏಂ ಸೀತೆಯನಿನ್ನುಂ ಕೂಡಿ ಪೋಗನೆ ? ಉೞಿದೆ ಪೋದನೆ ರಾಮಂ ?

ಮುದ್ದಣ : ಓ ! ಇನ್ನುಮುೞಿವನೆ ಸತಿಯಂ ! ಈವೊಟ್ತುಂ ತನ್ನರಸಿಯ ಉಱುಗಿಲ್ಲದ ನಡೆಗೆ ದೇವರ್ಕಳಂ ಸಾಕ್ಷಿಗೊಟ್ಟು ಆಗಳೆ ತನ್ನತನ್ನೆಯಮಂ ಮನ್ನಿಸೆಂದು ನನ್ನಿವೇಱ್ದು ಸಂತಮಿಟ್ಟು ಸುದತಿ ಸೀತೆಯಂ ಪೊನ್ನ ಸಿಬಿಗೆಯೊಳೇಱಿಸಿ ದೇವರ್ಕಳ್ ಪೊಗೞೆ ತಾನುಂ ತನ್ನವರುಂ ಆಶ್ರಮದ ಮುನಿಗಳೊಂದುಗೂಡಿಪೋದಂ.

ಮನೋ : ಓ ! ರಾಮನೊಳ್ಪಿದನಕ್ಕೆ ! ಸೊಗಂಬಾಟ್ಗೆ ! ರಾಮಂಗೆ ಗೆಲವಕ್ಕೆ ! ರಾಮಂ ಕೊಂಡಾಡುಗೆ ! ಜಸಂ ಪೆರ್ಚಿ ಪರಿಗೆ ! ರಾಮನೊಳ್ ನನ್ನಿ ಸನ್ನಿದಮಾಗಿರ್ಕೆ...

ಮುದ್ದಣ : ಇಂತು ರಾಮನಂ ನೀಂ ಪರಸುವ ಪರಕೆಯ ಸೊಗಸು ! ಬಲ್ಸೊಗಸು ! ಎನ್ನ ಪಟ್ಟದರಾಣಿ ! ಇನ್ನೆತ್ತಂ ನಿರಾಮಯಂ, ನಿರಾಕುಳಂ, ಸುಭಿಕ್ಷಂ ಶಾಂತಿ...

ಮನೋ : ಏನೆಲೆ ರಮಣ ! ಇಂದಿದೇನೆತ್ತಣ ಶಾಂತಿಗೀಂತಿಗಳ್.

ಮುದ್ದಣ : ರಾಘವನ ಜನ್ನಗುದುರೆ ಬರಿಸಂಬರೆ ಬಿಡದೆ ಚರಿಸಲೊಡಂ ಖುರಪುಟದ ತುೞಿತಕ್ಕೆ ಪಾವನಮಾದ ನಾಡ ಜನರ್ಗೆತ್ತಂ ಮಂಗಳಮೆಂದೆಂ. ಕಟ್ಟಾಯಸದ ನಿಚ್ಚವಯಣಮಂ ಬನ್ನವಟ್ಟೆಯ ಬಟಿಲ್ಕೆಯುಂ ಗಾಳುಗೂಟಿರೊಳ್ ಪೊಣರ್ವ

ಗನ್ನನಿಟ್ಟುರದ ಸೆಣಸಾಟಮುಂ ರಾಮಸೇನೆಗೆ ಮಡಿದುದು. ಈಗಳ್ ತಂತಮ್ಮ ಬೀಡಿಂಗೆದಿವಂದುಂ ಬೀರರೆಲ್ಲರ್ ನೇಹಂ ಮಿಗೆ ತಂತಮ್ಮರಸಿಯರಿನೋಲೈಸಿಕೊಳ್ವರ್.

ಮನೋ : ಅಂತಪ್ಪೊಡೆ ನೀಂ ಪೇಟ್ದೆ ನಲ್ಗತೆ ಮುಗಿಯೆವಂದುದು.

ಮುದ್ದಣ : ಉಂ ! ಎಂತಂತೊ ರಗಟೆಯ ಪಾಟ್ಗತೆ ಕಡೆಗಂಡುದು.

ಮನೋ : ಚೀ ! ಶ್ರೀರಾಮಪುಣ್ಯಚರಿತಮಂ ಪಾಟ್ಗತೆಯೆಂದು ಇಟಿಕೆಯ್ದು ತೆಗಟ್ದಾ !

ಮುದ್ದಣ : ಶ್ರೀರಾಮಚರಿತಮನಿಟಿಸಿ ಕುಟಿಸಿ ನುಡಿದೆನಿಲ್ಲಂ. ಪುರುಳಿಲ್ಲದ ಸಲ್ಲದ ಪೊಲ್ಲದೆನ್ನ ಬಱುವಣ್ಣನೆಯ ಬೇಸಱಿಕೆಯ ಪಾಟ್ಗಬ್ಬಮಂ ಪೊಳ್ಳೆಂದೆ ನುಡಿದೆಂ.

ಮನೋ : (ಸವಿನಯಂ) ತಮ್ಮೊಡಮೆಯಂ ತಾಮೆ ಪೊಗಟ್ವರೆ ಬಲ್ಲರ್ ? ಅಲ್ಲದಂದು ನವರಸದ ತನಿರಸಮೊಱೆವ ಬಣ್ಣಗಬ್ಬಮಂ ಪೊಳ್ಳೆಂದೊಱೆವ ನಿನಗಮೇಂ ನಿರಹಂಕೃತಿಯೊ ನಿನ್ನಾ ಜಾಣ್ಮೆಯೊಳ್.

ಮುದ್ದಣ : ಏನೆನ್ನ ಕಬ್ಬಂ ನಿನಗೆ ಮೆಚ್ಚುಗೆಯಾಯ್ತೆ ?

ಮನೋ : ಎನಗೊರ್ವಳ್ಗೆಂದೊಡೇಂ ನಾಡೊಳೆಲ್ಲರ್ಗಂ.

ಮುದ್ದಣ : (ನಕ್ಕು) ಎನ್ನೊಳೊಳದಭಿಮಾನದಿನಿಂತುಸಿರ್ವೆಯಕ್ಕುಂ.

ಮನೋ : ಎನ್ನ ಮುದ್ದಿನರಸ ! ಅಂತಲ್ತು ; ನಿನ್ನ ಪೆಸರೆಂತಂತು ಕಬ್ಬಮಂ ಮುದ್ದು ಮುದ್ದಾಯ್ತು ಜಗಕೆ.

ಮುದ್ದಣ : ಇಂತೀ ನುಡಿಯಿನೆನ್ನಂ ನೀನೇಟಿಪಂತಿರ್ಕುಂ.

ಮನೋ : ಉಃ ! ಉಃ ! ಗುಣದೊಳ್ ಪುರುಡುಂಟೆ ? ಸಾಜಂ. ನಿನ್ನೀ ಜಾಣ್ಮೆಯ ಬಣ್ಣನೆಯ ನಲ್ಗತೆ ಕೇಳ್ವರನೆಂತಪ್ಪರುಮಂ ಬಗೆಯನಿರ್ಕುಟಿಗೊಳ್ಗುಂ ; ನಾಡಮಾತೇಕೆ ? ಎನಗೆಂತೋ ಮೇಣುಂ ಮೇಣ್ ಕೇಳ್ವೆನೆಂಬೊಂದಾಸೆ ಪುಟ್ಟುಗುಂ.

ಮುದ್ದಣ : ಎನ್ನಾಣೆ ?

ಮನೋ : ನಿನ್ನಾಣೆ ! ತಡೆಯೇಂ ? ಕಮ್ಮಲರ್ ಮಗಮಗಿಸದೇಂ ಪೋಕುಂ !

ಮುದ್ದಣ : ಮುತ್ತಬ್ಬೆಯಾಣೆ !

ಮನೋ : ಮುತ್ತಬ್ಬೆಯಾಣೆ ! ಇಸ್ಸಿ ! ಪುಸಿಯನೇವೊಟ್ತಂಗಮುಸಿರೆಂ. ಈ ಬಗೆಯ ನುಡಿಗಬ್ಬಮುಂತಿಲ್ಲ ಪಿಂತಿಲ್ಲಮೆಂದಾಯ್ತು.

ಮುದ್ದಣ : ಎಂತುಂ ನಿನಗೆ ಸೊಗಸಾಯ್ತಲೆ ! ಇದುವೆ ಪರಮಾನಂದಮೆನಗೆ.

ಮನೋ : ಬಿನ್ನಣದ ಬಣ್ಣನೆಯ ನುಡಿಯಲ್ತು ; ಬಲ್ಸೊಗಸು ಬಲ್ಸೊಗಸು ನೀನೆಂದ ಕತೆ.

ಮುದ್ದಣ : ಅಂತಪ್ಪೊಡೆ ತಾರೆಲೆ ನೀನೆಂದ ಮೆಚ್ಚಿನುಡುಗೊಱೆಯಂ.

ಮನೋ : (ಕಣ್ಬೆಗಡುಗೊಂಡಳಂತೆ ನಟಿಸಿ) ಇನ್ನೇಂ ಜಾಣನೋ ! ನೀನಱಿಯದರಂತೆ ಮಿಣ್ಣಮಿರ್ದುಮೆನ್ನಿಂದೆನ್ನಂ ಕಟ್ಟಿಸಿದ ದಿಟ್ಟಂ. ನಿನಗೇನೆಂಬೆನೇನೆಂಬೆನೋ ! ನಿನ್ನಾ ಬಣ್ಣಾವಾತಿಗೆ ಮಾಱುವೊದೆಂ ; (ಎಂದು ವಿಚಾರದಿಂ) ಆಯ್ತಾಯ್ತು ಪೇಟ್ದ ಕತೆಗೆ ಮಂಗಳಮಂ ಮಾಡು ; ಮೆಚ್ಚುಗಿಚ್ಚು ಬಟಿಕ್ಕಮಲ್ತೆ.

ಮುದ್ದಣ : ಬಱಿದೆ ಮಂಗಳಮಕ್ಕಮೆ ! ಹೋಳಿಗೆ ತುಪ್ಪಮಂ ತಿನವಡಿಸವೇಡಾ !

ಮನೋ : ಹೋಳಿಗೆ ತುಪ್ಪಕ್ಕಿಂದೇಂ ನಿನಗೆ ಶೋಭನಮೆ ?

ಮುದ್ದಣ : ಇಂದೆನಗೆಂದೊಡೇಂ ? ಎನಗಮ ನಿನಗಂ.

ಮನೋ : ಪೋ ಸಾಲ್ಗುಮೀ ಬಣ್ಣದ ಕೊಂಕುನುಡಿ. ರಾಘವನ ಯಜ್ಞಮೆಂತು ಪರಿಸಮಾಪ್ತಿಯಾಯ್ತು ಪೇಟ್.

ಮುದ್ದಣ : ಶೋಭನಾಂಗಿ ! ಅಂತು ರಾಘವಂ ಸತಿಸುತರ್ವೆರಸು ಅಯೋಧ್ಯೆಗೆ ಪೋಪುದುಂ ಕೆಲವಾನುಂ ದಿನಕ್ಕೆ ಜನ್ನಗುದುರೆಯುಂ ಪೊಟಿಲ್ಗೆ ಮುಮ್ಮೊಗಮಿಕ್ಕಿ ನಡೆದತ್ತು. ಕಾಪಿನ ಬಲ್ಪಡೆಯುಂ ಬಟಿಸಾರ್ದುವಂದುದು ; ಶತ್ರುಹಪ್ರಮುಖವೀರವರ್ಗಮುಂ ತೆರಳ್ದುದು. ಓ ಓ !~ ಇದೆತ್ತಣ ಕಪ್ಪಕಾಣ್ಕೆಗಳೊ ! ಪೊನ್ನೇಂ, ಪೊಂದೊಡವೇಂ ರನ್ನಮೇಂ ಬಗೆವಗೆಯ ಪಟ್ಟುಡೆಯೇಂ ! ನಾಡೊಳುಳ್ಳ ಐಸಿರಿಯೆತ್ತಮೊಂದುಗೂಡಿ ತಮ್ಮಾಣ್ಮರಂ ಮುಂದುಮಾಡಿದನ್ನದ ಪೇರುಕ್ಕೆವಮಂ ಕಾಣ್ಬೊಡೆಂದು ಪೊಱಮಟ್ಟು ಪೋಪಂತಿರಾಯ್ತು. ಇಂತು ಬಂದು ಪೊಟಿಲ್ಗೆ ಗಾವುದದಳತೆಯೊಳ್ ನಿಂದು ದಿಗ್ವಿಜಯಂಗೆಯ್ದು ಬಂದೊಸಗೆಯಂ ಪೇಟ್ದಟ್ಟಲೊಡಂ ರಾಜಕಾರ್ಯನಿರತಂ ಭರತಂ ಅವರೆಲ್ಲರಂ ಮನ್ನಿಸುತಟ್ಟೆಱೆನಿದಿರ್ಗೊಂಡು ರಾಘವಂಗೆ ಕಾಣಿಸಲೊಡಂ ಬೇಱೆವೇಱೆವಂದ ಸಾವಂತರಂ ಸತ್ಕರಿಸಿ ಮಂಡಳಿಕರಂ ಕೊಂಡಾಡಿ, ತನ್ನ ಕಿಱುದಮ್ಮನ ಸಾಸಮಂ ಪೊಗಟ್ದು, ಪುಷ್ಕಲನಂ ಮೆಚ್ಚಿ, ಲಕ್ಷ್ಮೀನಿಧಿಯಂ ಮನ್ನಿಸಿ, ಮಿಕ್ಕುಟಿದ ವೀರರನುಪಚರಿಸಿ, ಸರ್ವರಮ ಬಿಡಾರಕ್ಕೆ ಬೀಟ್ಕೊಟ್ಟಂ.

ಮಱುದೆವಸಂ ಬೇಳ್ವ ಜನ್ನಕ್ಕೆ ಪೂರ್ಣಾಹುತಿ. ಪೊಟ್ತಡೆಗೆ ಮುನ್ನಮೆ ಸರ್ವಸಂಭಾರಮೇರ್ಪಟ್ಟುದು. ಬಂದ ವಿಪ್ರರ್ಗೊಂದು ಸಭೆ; ಮುನಿಜನಂಗಳ್ಗೊಂದು ಸಭೆ ; ರಾಜನ್ಯರ್ಗೊಂದು ಸಭೆ. ಪುರದ ಪುರಂಧ್ರಿಯರ್ಗೊಂದು ಸಭೆ ಯೋಜನದಳತೆದಯೊಳಾಯ್ತು. ಈಗಳ್ ಯಾಗಶಾಲೆಯೊಳು ಎಣ್ದೆಸೆಯೊಳಂ ಬಾಗಿಲೊಳೋರೀರ್ವರ್ ಮುನಿಗಳ್

ರಕ್ಷೋಘ್ನಸೂಕ್ತಮಂ ಪಠಿಸುತ್ತೆ ಕಾವಲರೆಸೆದರ್. ಮತ್ತಮೀರೆಣ್ಬರ್ ಯಾಜಕರೋರೊಂದು ದೆಸೆಯೊಳ್ ಸಾಮಗಾನಮಂ ಪಾಡುತಮದ್ಗಾತೃಗಳುಮೊಂದೆಸೆಯೊಳ್ ತಂತ್ರದಧ್ವರ್ಯುಗಳುಮೊರ್ದೆಸೆಯೊಳ್ ಹೋತಾರರುಮೊಪ್ಪಿದರ್. ವೇದಘೋಷಂ ವಾದ್ಯಘೋಷಂ ನೃತ್ಯಘೋಷಮೆತ್ತಂ ದಿಕ್ತಟಮಂ ತುಂಬಿದುದು ; ಕೊಂಡದೊಳಿನ್ನೆಬರಮೆಡೆವಿಡದೆ ಚಟವಟಿಪ ಬೇಳುರಿ ನಾಲಗೆಗಳಂ ನೀಡಿಕೊಂಡಿರ್ದುದು.

ಈಗಳೀಗಳ್ ಮಂಗಳಂ ; ದೆಸೆವಳರ್ ಮೆಯ್ದೋಱ ಜನ್ನಕ್ಕೆ ಬಂದು ತಂತಮ್ಮ ಹಸುಗೆಯಂ ಮನಂದಣಿಯೆ ಕೈಯಾರೆ ಕೊಂಡರವರ್ಗಂ ಮಂಗಳಂ. ಋತ್ವಿಜರೆಲ್ಲರ್ ಕೊಳಗ ಮತ್ತಮಿರ್ಬಳ್ಳ ರನ್ನಮಂ ಪೊನ್ನಹೇಱಂ ಚೆನ್ನಾಕಳಂ ಪ್ರತಿಗ್ರಹಿಸಿ ರಾಮನಂ ಪರಿಸಿ ಬೀೞ್ಕೊಂಡರವರ್ಗಂ ಮಂಗಳಂ. ಮುನಿಗಳೆಲ್ಲರ್ ನರಲೀಲೆಯ ಪರಬೊಮ್ಮನಂ ಕಣ್ದಣಿಯೆ ಕಂಡೆವೆಂಬೊಂದು ಸಂತಸದಿಂ ನಲಿನಲಿಯುತೆ ತಮ್ಮಾಶ್ರಮಕ್ಕೆ ಪೋದರವರ್ಗಂ ಮಂಗಳಂ. ಮೂಗುದ್ದಮುಂಡುಂಡು ತೇಗಿ ಕೊಟ್ಟ ದಕ್ಷಿಣೆಯಿಂ ಪೊತ್ತುಬ್ಬಸಂಬಡುತೆ ನಡೆದರ್ವಾವರವರ್ಗಂ ಮಂಗಳಂ. ಪೌರಪೌರಂಧ್ರಿಯರ್ ಶ್ರೀರಾಮನ ದಿವ್ಯಮೂರ್ತಿಯಂ ಕಂಡು ಸಂತಸಂದಾಳ್ದಿ ತಾಂ ತಮಗೆ ಮಾತುಗುಟ್ಟುತೆ ಪೋದರವರ್ಗಂ ಮಂಗಳಂ. ಕೊಂಡಾಟದ ಮಾಸಾವಂತರ್ ತಮಗೆ ದೊರೆವಡೆದ ಗಜರಥತುರಗವಿಭೂಷನಾದಿಗಳಂ ಕೈಕೊಂಡು ರಾಘವಂಗೆಱಗಿ ಆತನಡಿಯಾಣತಿವಡೆದು ಪುರಕೆ ಬಿಜಯಂಗೆಯ್ದರವರ್ಗಂ ಮಂಗಳಂ. ಇಂತು ಶ್ರೀರಾಘವಂ ಸೀತಾಸಮೇತಂ ಜನ್ನಮಂ ಬೇಳ್ದು ತನ್ನೊಂದು ಬೆಳ್ಪಸದಿಂ ದೆಸೆಮೂಲೆಗಳಂ ಬೆಳಗಿಸಿ ಸೋದರರ್ವೆರಸು ಪಲವು ಪಗಲರಸಗೆಯುತ್ತುಮಿರ್ದನವಂಗಂ ಮಂಗಳಂ, ಶುಭ ಭದ್ರಂ ಕಲ್ಯಾಣಂ.

ಮುದ್ದಣ : (ಅನಿತಱೊಳ್ ಮನೋರಮೆ ಎಟ್ಟಿ ಪೋದಳ್ – ಎಟ್ಟಿ ಪೋಪಳನೀಱ್ದಿ ಮಾಣಿಸಿ) ಬಲ್ಸೆಡಕುಗಾರ್ತಿ ಕಣಾ ! ಮುದ್ದಣನುಮಂ ಟಕ್ಕಿಪ ಪೆಂಡಿರೊಳರೆ ? ಕೊಂಕುನುಡಿಯೊಂದು ನೆವದಿಂ ಬಿಂಕದಿನೆರ್ದೊಡಾಯ್ತೆ ? ಮೆಚ್ಚನಿತ್ತಲ್ಲದೆ ಪೋಪೊಡೇಂ ಬಿಡುವೆನೆ !

ಮನೋ : ಕತೆಗೆ ಮಂಗಳಮಂ ಮಾಡದೆ ಬಱದೆ ಉಡುಗೊಱ ತುಡುಗೊರೆಯೆಂದೊಡೇಂ ?

ಮುದ್ದಣ : ಕತೆಗೆ ಮಂಗಳಮನಗಳೆ ಪೇೞ್ದೆನುಟಿದೆನಿಲ್ಲ. ಈಗಳುಟಿದುದೊಂದೆ ನಿನ್ನುಡುಗೊಱ.

ಮನೋ : ಉಡುಗೊಱಯಕಾಟಕ್ಕಿನ್ನೆತ್ತಪೋಪೆಂ ! ನೀನೆನ್ನ ಬೇಡುವಯ್ ?

ಮುದ್ದಣ : (ಮುಸಿಮುನಿಸಿಂ) ಬೇಡುವೊಡೇಂ ತಿರಿಕನೇ ? ಮನೆಗೆ ಬಂದನೆ ? ಮೆಚ್ಚಿತ್ತೊಡದನೆ ಕೈಕೊಳ್ವೆಂ.

ಮನೋ : ಆನೆಂತುಂ ಪರಾಧೀನೆ ಮೇಣನಗೊಡಮೆ ಯಾವುದು ? ಏನನೀವೆನೆಂತೀವೆಂ ?

ಮುದ್ದಣ : ಏನೋ ! ಎಂತೋ ! ಆಂ ಮೆಚ್ಚುಬಂತುಂ, ಕತೆಯ ಪುರುಳ್ಗೀವಂತುಂ ನಾಲ್ವರ್ ತಲೆದೂಗುವಂತುಂ ಉಡುಗೊಱಗೆಯ್ದೊಡಾಯ್ತು.

ಮನೋ :ಅಂತಪ್ಪೊಡಿಂತಿದು.... ನಿನ್ನೀ ಕಬ್ಬಮನೋದುವ ಜಾಣರೇವಗೆಯುಡುಗೊಱಯನೀಯೆಂಬರಾವಗೆ ಮೆಚ್ಚನೀವೆಂ.

ಮುದ್ದಣ : ಅಂತಾನುಮಕ್ಕೆ ಪೋಪಂ.

**ಅದ್ಭುತ ರಾಮಾಯಣಂ**

**ರಾಮಾಯಣದಿಂದಲೇ ಮುದ್ದಣ ಸ್ಫೂರ್ತಿ ಪಡೆದು ರಚಿದಿರುವ 'ಅದ್ಭುತ ರಾಮಾಯಣಂ'ನಲ್ಲಿ ಸೀತೆಯನ್ನು ಕೇಂದ್ರವಾಗಿರಿಸಿಕೊಂಡ ಕಥಾನಕವಿದೆ. 'ಸೀತಾ ಮಹಾತ್ಮ್ಯ ಮಾಧುರ್ಯ' ಎಂದು ಕವಿ ಇದನ್ನು ಕರೆದಿದ್ದಾನೆ.**

ಒಂದು ದಿನಮೆಂದಿನಂತೆ ಪುತ್ತಿನಣುಗಂ ತಮ್ಮ ಶಿಷ್ಯರ್ಗೆ ರಾಮಾಯಣ ಕಥಾಕೌತುಕಮಂ ನಿರವಿಸುತಿರಲಾ ಶಿಷ್ಯರೊಳಗ್ಗಳನೊರ್ವಂ ಭಾರದ್ವಾಜಂ ಕೆಯ್ಮುಗಿದಿಂತು ಬೆಸಗೊಂಡಂ – ಜೀಯ, ತಾಮೆಮನುಗ್ರಹಿಸಿದ ರಾಮಚಾರಿತ್ರಮಂ ಕಿವಿಯೊಳೆ ಕೇಳ್ದೊಡಂ ಮನಮಾಱದುದಱಂ ಮಗುೞ್ದಮದನೆ ಬಿತ್ತರಿಸಿ ಪೇೞ್ವುದು. ಕಾರ್ಮೆಯಿಂದಱಪಲಕ್ಕುಂ. ಈ ನುಡಿಗೇಳ್ದು ವಾಲ್ಮೀಕಿ ತಾಂ ಕಿಱುನಗೆವೀಱ – ಒಳ್ಳಿತುಸಿರ್ದೈ, ಚಿರಂಜೀವಿಯೇ, ಅನಿತೆಲ್ಲಮನಾನೊರ್ವನೆ ಕೇಳ್ದೆನಾದೊಡಂ ಕೇಳ್ದಂತೆ ಪೇೞಲೆನಗಂ ಸಾಧ್ಯಮಲ್ತು. ಆದೊಡಂ ಬಲ್ಲನಿತಂ ಪೇೞ್ವೆಂ ಕೇಳ್. ಆ ಬ್ರಹ್ಮಲೋಕದೊಳೆಸೆವ ಶ್ರೀರಾಮಕಥಾಮೃತ ಭರಿತ ಶತಕೋಟಿ ರಾಮಾಯಣ ಮಹಾರ್ಣವದತ್ತಣಿಂ ಪಂಚವಿಂಶತಿ ಸಾಹಸ್ರ ಚಾರಿತ್ರಪೀಯೂಷಕಣಂಗಳ್ ಶಿವನ ಜಟಾಜೂಟದಿಂ ಕೆಳಗೆ ಜಗುಳ್ದ ವಿಯದ್ಗಂಗಾಸಲಿಲಬಿಂದುಗಳಂತೆ ಭೂಲೋಕಮಂ ಪೊರ್ದಿದುವು. ಅವಱೊಳಂ ಸೀತಾ ಮಹಾತ್ಮ್ಯ ಮಾಧುರ್ಯಂ ಸಂಪೂರ್ಣಂ ಕಾಣಿಸದು. ಆದುದಱಂ ದ್ರುಹಿಣಲೋಕದೊಳಂಗಿರ್ದು ಶ್ರಾವ್ಯಮಪ್ಪ ರಾಮಾಯಣಂಗಳೊಳ್ ಕಾಕುತ್ಸ್ಥಚಾರಿತ್ರಮುಮಂ ಮೇಣ್ ಮೂಲಪ್ರಕೃತಿ ಬೂತೆಯಪ್ಪ ಸೀತಾಚಾರಿತ್ರಮುಮಂ ನೀನೆಮ್ಮ ಪ್ರೀತಿಶಿಷ್ಯನಪ್ಪಕತದಿನೊರೆವೆಂ, ಕೇಳ್.

ಒರ್ಮೆ, ವಿಷ್ಣುಸಾನ್ನಿಧ್ಯಂಬಡೆದ ಕೌಶಿಕನುಕ್ಕೆವದಟ್ಟಿಗೆ ವಿಪಂಚೀ ಗುಣತತ್ವಜ್ಞರುಂ ವಾದ್ಯವಿದ್ಯಾವಿಶಾರದರುಮಪ್ಪವನ ಶಿಷ್ಯರಾಗಳ್ ಸೂಟಿಱತು ಪಾಡಲ್ ತೊಡಂಗಿದರ್. ಅಂತಪ್ಪ ಬಿನದಮಂ ನೋಡೆ ಅಲರಿಚಂ, ಮುಗಿಲ್ದೇರಂ ಮುಂತಪ್ಪ ಬಿಡುಗಣ್ಣರುಂ ನಾರದಾದಿರಿಸಿಗಳುಂ ಸಾರ್ತಂದು ಒಳಗೆ ಪುಗೆ ಗಲಭೆಗೆಯ್ದರ್. ಆಗಳ್ ಬಾಗಿಲವರ್ ತಡೆದು ಪಿಂದಟ್ಟಿ ನಾಲ್ಮೊಗನಣುಗಂ ಮುಂತೆ ನುರ್ಗಿದಂ. ಪಡಿಯಱತಿಯರಿವನಂನೂಂಕಿದರ್. ಆಗಳ್ ನಾರದಂ ಕೋಪಕೆ ಮೆಯ್ಯಿತ್ತು -

‘ಆವಳಾಣತಿಯಂತೆ ನಡೆಸೆವರಾವಳ ದಾಸಿಯರೆನ್ನಂ ಪೊಯ್ದು ನೂಂಕಿದರೋ, ಆ ಲಕ್ಷ್ಮಿ ರಕ್ಕಸಿಗೆ ಪುಟ್ಟುಗೆ ; ಲೋಕರೇಟಿಪಂತೆ ಎನ್ನನಟ್ಟಿಸಿದಂತವಳುಮಂ ಪಡೆದಬ್ಬೆ ಪೆಱಗಟ್ಟುಗೆ’ – ಎಂದು ಬಿಱುನುಡಿ ನುಡಿದಂ.

ಭಾರದ್ವಾಜ, ನಾರದನ ಶಾಪದಿಂ ಮಾಲಕುಮಿಗೆ ರಕ್ಕಸಿ ಮಂಡೋದರಿಯ ಬಸಿಱೊಳಾದಳ್ ಮೇಣವಳೀ ತಿರೆಯಣುಗಿಯಾಥಲ್ ! ಎಂತೆನೆ – ರಾವಣನ ನಡತೆ ಮಂಡೋದರಿಗೆ ಸೊಗಸಿತಿಲ್ಲಂ. ಎಱೆಯವನಾವಗಂ ನೆಱೆವೆಣ್ಗಳೊಳೆ ಎಱಕಂಗೊಂಡು ತನ್ನಂ ಕಾಣನೆಂಬ ಪುರುಡಿಂ ಬೇಗುದಿಗೊಂಡು, ಮುನ್ನಂ ರಾವಣಂ ತಂದಿತ್ತ ರುಧಿರಮಂ ನಂಜುನೆತ್ತರೆನುತೆಯೆ ಬಗೆದು ಕುಡಿದಳ್. ಮುಂತೆ ವಿಮಾನಮನೇರ್ದು ಯಥಾರ್ಥಂ ಬರೆವರೆ ಆ ಹದಿಬದೆ ಕುರುಕ್ಷೇತ್ರದೊಳ್ ರತಿಯತ್ತಣಿಂ ನಾಲ್ಮಡಿ ಸೊಬಗಿನ ಪೆಣ್ಗೂಸಂ ಪಡೆದಳ್. ಮತ್ತಂ ಕಲ್ಮನಂಗೊಂಡು ಕೂಸಂ ಪೇಟಿಗೆಯೊಳ್ ಕ್ಷೇತ್ರದೊಳ್ ನೆಲದೊಳ್ ಬಯ್ತಿಟ್ಟು, ಎಂತಾನುಂ ನಿಜಪ್ಪುರಿಗೆ ತಿರುಗಿದಳ್.

ಬಹುದಿನಮಿಂತು ಕಳೆಯಲೊಂದು ದಿನಂ ಮಿಥಿಲೆಗೊಡೆಯಂ ಜನಕನೆಂಬೊರ್ವಂ ರಾಜರ್ಷಿ ತಾನಾಕ್ಷೇತ್ರಕೆಯ್ತಂದು ಜನ್ನಮಂ ಗೆಯ್ಯಲೆಂದು ನೆಲನಂ ಶೋಧಿಸುತಿರೆ, ಪುಣ್ಯದಿನೀ ಪೇಳಿಗೆ ದೊರೆಯೆ ಚಿತ್ರಪುತ್ಥಳಿಯಂತೆ ರಂಜಿಪೀ ಬಾಲೆಯಂ ಕಂಡಂ. ಒಡನೆಯೆ ಗಗನದತ್ತಣಿಂ ಪೂಮಱೆ ಅವಳ ಮೇಲೆ ಕಱೆದುದು. ಮೇಣ್ – ಎಲ್ಯೆರಾಯ, ಪೆಱತೆನ್ನದಿರ್, ಇವಳ್ ಸಾಕ್ಷಾಲಕ್ಷ್ಮಿ. ಪುಣ್ಯವಿಶೇಷದಿಂ ದೊರೆಕೊಂಡಳ್. ಇವಳಂ ಮನೆಗುಯ್ದು ಮಗಳೆಂದೆ ಪಲಿಸು ಎಂದು ಬಾನ್ನುಡಿಯೊಂದಾದುದು. ಬೞಿಕಮಾರಾಯಂ ನೇಗಿಲಿನೆಱ್ದು ಬಂದುದಱಿಂ ಸೀತೆಯೆಂಬ ಪೆಸರಿಟ್ಟು ಸದಾ ಸಂತೋಷದೊಳಿರ್ದಂ.

ಮುನಿಕುಲಲಲಾಮ, ಆಲಿಪುದು ; ಕೇಳ್, ಸೀತಾರಾಮರ್ಕಳ ಪರಿಣಯಂ ಮಿಥಿಲೆಯೊಳ್ ನಡೆದುದು. ಶ್ರೀರಾಘವಂ ಸೀತಾಸಮೇತಂ ನಿಜಪುರಿಗೆ ಅಯೋಧ್ಯೆಗೆ ಬಂದಿರ್ಪುದುಂ, ದಿನಗಲೆಯೊಳೆಂತಾನುಮೊಂದು ಹೇತುವಿಂ ಈರೇೞ್ಗಲಂ ವನವಾಸಂ ಪ್ರಾಪ್ತಿಯಾಗೆ, ಸೀತಾಲಕ್ಷ್ಮಣ ಸಮೇತಂ ದಂಡಕಾರಣ್ಯದತ್ತಲ್ ಪೋಱಮಟ್ಟಂ.

ಕೆಲಕಾಲಂ ಪೋಗೆ, ದುಟ್ಟರಕ್ಕಸಂ ರಾವಣಂ ಗಂಡಸರ್ ಪೋಱಗಿರ್ಪ ಪೊೞ್ತಂ ಕಾದು ಕವರ್ತೆಯೊಳ್ ಪರ್ಣಸಾಲೆಯಿಂ ಸೀತೆಯಂ ಕಳ್ದು ಲಂಕೆಯತ್ತಲ್ ಕೊಂಡುಯ್ದಂ. ರಾಮಲಕ್ಷ್ಮಣರ್ ಬೇಂಟೆಯಾಡಿ ಮರಲ್ದೆಲೆವನೆಗೆ ಬಂದು ನೋಡೆ, ಸೀತೆ ತೋರ್ದುದಿಲ್ಲಂ. ರಾಮಲಕ್ಷ್ಮಣರಿರ್ವರುಂ ಬಲ್ದುಗುಡದಿಂ ಪುಡುಕುತ್ತುಂ ಋಷ್ಯಮೂಕ ಪರ್ವತ ನಿಕಟಪ್ರಾಂತದೊಳ್ ಬರೆವರೆ ಬೆಟ್ಟನೊಡೆಯಂ ಸುಗ್ರೀವನೆಂಬೊರ್ವಂ ಆತನಾಪ್ತನಾಂಜನೇಯಂ ಆಪ್ತರಾದರ್. ರಾಮಂ ಅವರ್ಗಳ ನೆರವಿಂ ಕಡಲಿಂಗೆ ಕಟ್ಟಂ ಕಟ್ಟಿ, ದಾಂಟಿ ಲಂಕೆಗೆಯ್ದಿ ರಾವಣನಂ ರಕ್ಕಸಕುಲದೊಡನೆಯೆ ಕೊಂದು, ಸೀತೆಯೊಡಗೊಂಡು ನಿಜನಗರಿಯಂ ಪುಗುತೆ ಮೇಣೊಂದು ಮುಹೂರ್ತದೊಳ್ ಪಟ್ಟವಣೆಯೇರ್ದು ತಿರೆಯಂ ಪೊರೆಯುತಿರ್ದಂ.

ಇಂತಿರಲೊರ್ಮೆ, ಪಲರ್ ಮುನಿಗಳ್, ರಾಘವನಂ ಮನ್ನಿಸೆ ಅಯೋಧ್ಯೆಗೆಯ್ತಂದು – ಎಲ್ಯೆ ಜಗನ್ನಾಥ ಮಡದಿಯ ನೆವದಿಂ ದುಟ್ಟರನೆಲ್ಲಂ ಕೊಂದಿಕ್ಕಿದೀ ಮೈಮೆಯಾರ್ಗೆ ನೆರಂ. ಬಲ್ಗೈಯ ರಾವಣಂಗೆ ನೀನಲ್ಲದೆ ಮಾರಾಂತರುಂಟೆ ? ಎನುತೆ ಬಲ್ಬಗೆಯೊಳ್ ಕುಳ್ಳಿರ್ದ ಸೀತೆ ತವಸಿಗಳ್ಗೆ -

ಎಲ್ಯೆ ಪೂಜ್ಯರೆ, ಎಮ್ಮರಸನ ವಿಷಯಮಾಗಿ ನೀಮಿಂತಪ್ಪಣೆಯಿತ್ತುದು ನಿಚ್ಚಯಂ ನಾಣ್ನುಡಿಯಕ್ಕುಂ ! ಏತರ್ಕೆನೆ, ದುಟ್ಟಂ ಕೈಕಸಿಯಣುಗಂ ರಕ್ಕಸನಾದೊಡಂ ರಕ್ಕಸರೊಳ್ ಪೆರ್ಕಳನಲ್ತು. ಈತನಣ್ಣಂ ಸಹಸ್ರ ಕಂಠ ರಾವಣಂ ಜಗದೇಕವೀರಂ ಎಳವರೆಯದೊಳ್ ಆಟಕೆಂದು ಸೂರ್ಯಚಂದ್ರಮರಂ ತಾಳಮಾಗೆ ಪಿಡಿವಂ ! ಅವನ ನೀರ್ಗಿಱಿಯನಂ ಗೆಲ್ವುದರ್ಕೆಯೆ ಎಮ್ಮರಸಂಗಿನಿತ್ತು ಬವಣೆ, ಬೇನೆ, ದಣುವು, ತೊಡರ್ ಮುಂತಪ್ಪೆಡರಡರೆ ಪಿರಿಯ ರಕ್ಕಸನಂ ಮುಱಿವ ಸೈಪನೆಣಿಸಲ್‌ಬಹುದೆ ? ಎನುತೆ ಚುಚ್ಚಿ ನುಡಿವುದುಂ ಸಾಜಮೆನುತೆ ತಲೆದೂಗಿದರ್ ಕಿತ್ತಡಿಗಳ್.

ಭಾರದ್ವಾಜ, ಆಲಸ, ಮಡದಿಯೆಂತೆಂತು ಸಹಸ್ರಕಂಧರನ ಬಲ್ಪಂ ಪೊಗೞುವ್ವಂತಂತು ಕೋಪಂ ಪೆರ್ಚಿದುದು. ಒಡನೆಯೆ ರಾಘವಂ ಸಿಂಹನಾದಮಂಗೆಯ್ದು - ‘ಅಂತಪ್ಪ ರಕ್ಕಸನಂ ಗೆಲ್ವ ಬಲ್ಮೆಯಿಕುಮೊ ಕಾಣ್ಬೆಂ ; ಈಗಳ್ ಗಂಡುಗಪಿಗಳೆಲ್ಲರ್ ಪೋಱಮಡಲ್ಕಕುಂ – ಎನುತಾಜ್ಞೆಯಿತ್ತು ದಿವ್ಯ ಪುಷ್ಪಕಮಂ ಬರಿಸಿದಂ. ರಾಯಂಗೆ ಬೆಂಬಲಮಾಗೆ ಪಡೆವಳರ್ ತಮ್ಮ ತಮ್ಮ ಪೆರ್ಪಡೆವೆರಸು ತೆರಳ್ದರ್. ರಾಮಂಗಂ ಸಹಸ್ರಕಂಠಗಂ ಘೋರಸಂಗ್ರಾಮ ಸಂಘಟಿಸಿತಕ್ಕುಂ. ಅಂತಿರೆ ರಾಮಚಂದ್ರಂ ಸಾಯಕಮೊಂದಂ ತೂಣೀರದಿಂ ತೆಗೆದು, ಬಿಲ್ಲನಾಕರ್ಣಾತಮೆೞೆದು ಬಿಟ್ಟಂ ! ಆದೊಡೇಂ ! ಆ ದಾನವಂ ವೇಗದಿನದಂ ಪಿಡಿದು ಮುಱಿದು ಮಱುಗಣೆಯಂ ತಲೆದೂಗಿ ಸೆಳೆದಿಡುವುದುಂ, ಆ ಕೋಲ್ ಮೆಲ್ಲನೆ ರಾಘವನೆರ್ದೆಯಂ ತಟ್ಟಿ ಮಲಂಗಿಸಿ ಮರಳ್ದುದು !

ತವಸಿಗಳೆಲ್ಲರ್ ದೇವಿಯೊಡನೆ ಅಬ್ಬೆ, ಪಿಂತೆ ನೀಂ ಪೇೞ್ದುದನಿತುಂ ದಿಟಂ, ರಕ್ಕಸಂ ಬಲ್ಲಿದಂ ರಾಮಂಗೀ ಗತಿಯಾಯ್ತು. ನೋಡು ನೋಡೌ ಪವಡಿಸಿರ್ಪಂ ಕಿವಿಗುಡೌ. ನಿನ್ನನಾದಿಶಕ್ತಿಯೆಂಬರ್. ಆ ಶಕ್ತಿಯಿನೆಮ್ಮಂ ಪೊರೆ - ಎಂದು ಬಲ್ವಗೆಯಿಂ ತುತಿಸುತಿರೆ, ಏನೆಂಬೆಂ ! ಎಂತೆಂತು ಭಯದಿಂ ಬೇಡಿಕೊಳ್ವರಂತಂತು ಮಾರ್ಪಡುತೆ, ತಿರ್ದಿದ ಕೂಂದಲ್ ನಿಗುರ್ದು

ಕೆದರ್ದಿರೆ, ಪೆಱನೊಸಲ್ ಪೆರ್ನೊಸಲಾಗೆ, ಎಸಟಿಗ್ಗಣ್ ಗುಟಿಗಣ್ಣಾಗೆ, ನಗೆಮೊಗಂ ಉರಿಮೊಗಮಾಗೆ, ಸುಲಿಪಲ್ ನಿಡುವಲ್ಲಾಗೆ, ತಳಿರ್ನಾಲಗೆ ಜೋಲ್ನಾಲಗೆಯಾಗೆ ಸೀತೆ ಕರಾಳಮುಖಿಯಾದಳ್. ಒಡನೆಯೆ ಅದ್ಭುತ ರೂಪದಿಂ ಮಾಕಾಳಿಯಾಗಿ ದಿಮ್ಮನೆ ತಿರೆಗೆ ಧುಮ್ಮಿಕ್ಕುತೆ, ಸೂಲಂ ಕಡುಗಂ ತಲೆಯೋಡು ಇಂತಿವುಗಳಂ ಪಿಡಿದು ಪಕ್ಕಿವೇಗದಿಂ ರಕ್ಕಸನೆಡೆಗೆ ಸಾರ್ತಂದಳ್.

ಎವೆಯಲುಗುವನಿತಱೊಳೆ ದಾನವನ ಸಹಸ್ರ ಕಂಠಂಗಳುಂ ಗಾಳಿಗೆ ಮಾಂಗಾಯುದಿರ್ವಂತುದಿರ್ದವು. ಇಂತೀ ಮಾಟ್ಕೆಯಿಂ ದಾನವರ ಬಳಗ ಮೆಲ್ಲಮಡಿಯಟಿದು ಪೋಗಲ್, ಸೀತೆಯಂ ಪ್ರಸನ್ನಳಾಗಿಸೆ ಬೊಮ್ಮಂ ಮುನಿಗಣಂಬೆರಸು ಬಗೆಬಗೆಯೊಲ್ ತುತುಸಿದಂ. ಆಗಳ್ ರಾಘವಂ ನಿದ್ದೆವೋಪರುಪ್ಪವಡಿಸುವಂತೆ ತಿಳಿದೆೞ್ದು ಎತ್ತಲಡಗಿದಂ ದುಟ್ಟರಾವಣಂ ? ಎನ್ನಯ ಕೋಲ್ಮುಱಿದವಂಗೆ ತಕ್ಕುದಂ ತೋಱಿಪೆಂ ಎನುತೆ ಪುರ್ಬಂ ಗಂಟಿಕ್ಕಿ ಕೆಲದ ಕೋಯಂಡಮಂ ತುಡುಂಕಿ ಪಿಡಿದಿರ್ದಿರ್ನಿಂದಂ.

ಇಂತು ಬಿರುನೋಟದಿನೆರ್ದು ನೋೞ್ಪವಂಗೆ ರಕ್ತಪಾನಂಗೆಯ್ದು ಗಣಂಗಳೊಡನೆ ನಲಿದಾಡುವ ಅತ್ಯದ್ಭುತ ರೂಪಮೊಂದು ಕಾಣಿಸೆ, ದಿಟ್ಟತನದ ಕಟ್ಟುಡುಗಿ, ಮರವಟ್ಟುಪೋಗೆ, ರಾಮನ ಕೆಯ್ಯ ಸರಳುಂ ಬಿಲ್ಲುಂ ತನ್ನಿಂತಾನೆ ತಿರೆಯೊಳ್ ಬಿದ್ದಿತ್ತು. ಕಣ್ಮಲರ್ ಮುದಿರ್ದುದು. ಮೆಯ್ಯೊಳ್ ನಡುಕಂ ತೋದುರ್ದು. ಅನಿತಱೊಳೆ ಬೊಮ್ಮಂ – ರಾಘವಂ ಭಯಂದಾಳ್ದನೆಂದಱಿತು, ಸೀತೆ ಮಾಕಾಳಿಯಾದ ಸವಿಸ್ತರ ಮೈಮೆಯಂ ಬಿತ್ತರಿಸಿದಂ. ಆಗಳ್ ರಾಮಂ ಮುಂತಿರ್ಪ ಪರಮೇಶ್ವರಿಯಂ ಕಂಡಡ್ಡವಿೞ್ದು – ಎಲೆ ದೇವಿ, ನೀನಾರೆಂಬುದಂ ಬಗೆಗೊಂಡುದಿಲ್ಲಂ ಅದಱಿನೆನ್ನೊಳನುಗ್ರಹಿಸುಪುದು – ಎಂದು ಬಿನ್ನಯಿಸಿದಂ.

ರಘು ಪುಂಗವನ ನುಡಿಗೇಳ್ದು ಪರಮೇಶ್ವರಿಯಿಂತೆಂದಳ್ – ಕೇಳ್ವುದು, ಆಂ ಮಹೇಶನಾಶ್ರಯಂಗೆಯ್ದಿರ್ಪವಳ್. ಎನ್ನಂ ಮಹೇಶ್ವರಿಯೆಂದುಂ, ಆದಿಶಕ್ತಿಯೆಂದುಂ ಕರೆವರ್. ಅನನ್ಯೆ, ಅವ್ಯಯೆ ಎಂದು ಮುನಿಗಳಿಟ್ಟ ಪೆಸರ್. ಎನ್ನಿರವನೊಂದುಟಿಯದಱಿಯಲ್ವೇೞ್ಕುಮಾದೊಡೆ, ದಿವ್ಯ ದೃಷ್ಟಿಯಿಂ ನೋೞ್ಪುದು – ಎಂದೊರೆದು, ತಾನಂತೆಯಿರ್ದಳ್. ರಾಘವಂ ಅಂತೆ ನೋಟಿಪ್ಪುದುಂ, ಸಾಸಿರ ನೇಸರ್ಕಳಂ ಪಟಿವ ಮೆಯ್ಯೊಗರ್ ಸೂಸೆ ಕಂಡು ಭಯದಿಂ ಭಕ್ತಿಯಿಂ ಸಾಸಿರದೆಂಟುವೆಸರಿಂ ತುತಿಸಿ, ಸೋರೆಗೆಯ್ಯೆತ್ತಿಂತೆಂದಂ - ಎಲೆ ಮಹೇಶ್ವರಿಯೆ, ಈಯದ್ಭುತ ರೂಪಮಂ ಕಂಡೆನ್ನಮನಮಂಜುವುದು. ಅದಱಿಂ ಮುನ್ನಿನ ರೂಪಂ ತೋಱಿಸು - ಎಂಬುದಂ, ಸೀತೆ ಪಿಂತಣ ಲೋಕೋತ್ತರ ಸೌಂದರ್ಯದಿಂ ಮೆಱೆಯುತಿರೆ - ಇಂದಿಗೆನ್ನ ಜನ್ಮಂ ಪಾವನಮಾದುದು. ನೀನಾದಿಶಕ್ತಿಯೆಂಬುದು ನಿಶ್ಚಯಂ. ಪರಮ ಪ್ರಕಾಶಿಕೆಯುಂ ನೀನೆ, ಕಲ್ಯಾಣಿಯುಂ ನೀನೆ. ಮತ್ತಂ ಸಾಂಖ್ಯಯೋಗದೊಳ್ ಕಪಿಲಯೋಗಮುಂ, ವೇದಂಗಳೊಳ್ ಸಾಮವೇದಮುಂ ವಿದ್ಯೆಯೊಳಧ್ಯಾತ್ಮವಿದ್ಯೆಯುಂ ಛಂದಸ್ಸಿನೊಳ್ ಗಾಯತ್ರಿಯುಂ, ಶಕ್ತಿಯೊಳ್ ಮಾಯೆಯುಂ ಗುಹ್ಯಮಂತ್ರಂಗಳೊಳ್ ಓಂಕಾರಮುಂ ನೀನೆ ! ಎಂದು ಪಾಡಿ ಪೊಗೞ್ದಂ.

ಇಂತು ಬಲ್ವಗೆಯಿಂ ಪೊಗೞ್ವ ರಾಮನಂ ನೋಡುತೆ ಸೀತೆಯಿಂತೆಂದಳ್ - ಕೇಳ್ವುದು, ಏ ರೂಪಿಂ ರಕ್ಕಸರಂ ಮಡುಹಿದೆನಾ ರೂಪಿಂ ಮಾನಸೋತ್ತರ ಪ್ರದೇಶದೊಳಿರ್ಪೆಂ. ಆದೊಡೆ ನೀಲಲೋಹಿತ ರೂಪದಿಂ ನಿನ್ನಂ ಬಱಿಸಲ್ವೆಂ. ಅಗಳ್ ಆಗಸದತ್ತಣಿಂ ಬಿಡುಗಣ್ಣರ್ ಭೇರಿ ಮೊಟಗಿತ್ತು. ಅರಲ ಬಲ್ಸರಿ ಸುರಿದತ್ತು.

ಆಗಳ್ ಶ್ರೀರಾಮಚಂದ್ರಮಂ ಸೀತಾದೇವಿವೆರಸು ಋಷಿಗಳ್ ಸಹಿತಂ ಪುಷ್ಪಕಮನೇರ್ದಯೋಧ್ಯೆಯತ್ತಲ್ ತೆರಳ್ವುದುಂ. ಕಣ್ಣೆವೆಯಿಕ್ಕುವನ್ನೆಗಂ ಸರಯೂ ನದಿತೋರ್ದತ್ತು. ಈ ವಾರ್ತೆ ಪುಟ್ಟಿದೊಡನೆಯೆ ರಾಮನಂ ಕಾಣ್ಬ ಕೌತುಕದಿಂ ಪುರಜನರೊಡನೆ ಸೋದರರ್ ಇದಿರ್ಗೊಂಡು ಕರೆದು ತಂದು ತಮ್ಮಿರವನೋರೊರ್ವರೊಳ್ ಪೇೞ್ದು ಸಂತಸಂಗೊಳುತಿರ್ದರ್.

– ಎಂಬಲ್ಲಿಗೆ ಅದ್ಭುತ ರಾಮಾಯಣಂ ಸಮಾಪ್ತಂ.

*******************************************

## ಶ್ರೀರಾಮ ಪಟ್ಟಾಭಿಷೇಕಂ

ಶ್ರೀಮದಚಲಾತ್ಮಜಾನನ ಕೈರವಾಬ್ಜಂನಿ
ರಾಮಯಂ ದಿವ್ಯಕೇಶಂ ರಾಜಶೇಖರಂ
ಸಾಮಗಾನ ಪ್ರಿಯಂ ಹರಿಸುತಾಹಿತನಹೀನಾಲಂಕೃತಾಂಗಂ ಶಿವಂ
ಕಾಯಮುಖ್ಯಾರಿವರ್ಗಧ್ವಂಸಿ ಭೂತಪತಿ
ಭೀಮವಿಕ್ರಮಿ ಪುಣ್ಯಜನವಂದಿತಂ, ಸದಾ
ರಾಮನೊಳಿದೀಗೆಮಗೆ ಕಾಮಿತಾರ್ಥಂಗಳಂ ಗೋತ್ರೇಶ್ವರಂ ೧

ಬುಧರೆಲ್ಲರೊಲ್ದು ಕೈಕೊಳ್ಗೆ ತಿರ್ದುಗೆ ಕೃತಿಯೊ
ಳಧಿಕದೋಷಂಗಳೇನಾನುಮುಳ್ಳೊಡೆ ಕಥಾ
ಸುಧೆಯನೀಂಟುಗೆ ಭಕ್ತವೃಂದಮಭಿಮಾನಿಗಳ್ ಮನ್ನಿಸುತ್ತಿರ್ಕೆ ನಿಚ್ಚಂ
ಅಧಿನಾಥರೆಂತುಮಾಶ್ರಯಮನಿತ್ತೆಸಗೆ ನವ
ಮಧುರರಸಝರಿಯರಸಿಕರ್ ಶೋಧಿಸುತ್ತಿರ್ಕೆ
ವಿಧುಪುರದ ಲಕ್ಷ್ಮೀಮನೋಹರಂ ಕಬ್ಬಿಗರ ಕುಲಮಂ ಪೊರೆಗೆ ಸಂತತಂ ೨

ನ್ಯಸ್ತಮಾನಸನಾಗಿ ಸತ್ಕಥಾಕೌತುಕವ
ವಿಸ್ತರಿಪರಾರೆಂದು ಚಿಂತಿಸುತ ನಡೆದುನಾ
ಗಸ್ತೋಮಮಧ್ಯದೊಳು ರಂಜಿಪ ಮಹಾಶೇಷನಂ ಕಂಡು ದೈನ್ಯಮೆಸೆಯೆ
ಮಸ್ತಕವನಿಟುಹಿ ಬೆಸಗೊಂಡನಾತನೊಳಾದಿ,
ವಸ್ತುರಘುವರನ ಮೂರ್ಧಾಭಿಷೇಚನಸ
ಮಸ್ತ ಚಾರಿತ್ರಮಂ ಪೇಟ್ದು ತನ್ನಂ ಪೊರೆಯಬೇಕೆಂದು ವಾತ್ಸ್ಯಾಯನಂ ೩

ಉಪಚಾರಮೇಕೆಮಗೆ ವಾತ್ಸಾಯನನೆ ಕಥೆಯ
ನುಪದೇಶಗೆಯ್ದೊಡದು ಸುಕೃತಮಂತಲ್ಲದಿದ
ನುಪಕಾರಮೆಂದು ಬಗೆಯಲ್ಬಹುದೆ ನಿನಗನುಭವಂ ತನಗೆ ತೋಷಮಹುದು
ಉಪಲಬ್ಧಮಕ್ಕು ಸುಜ್ಞಾನಗಿರಿಶಿಖರಮಿ
ನ್ನುಪಜೀವನಂ ತಾಪ ಸೌಘಕೆನೆ ಶಂಕೆಯಂ
ಬುಪರಾಗಮಂ ಕಳೆದು ಚಿದ್ಭಾನುಕಿರಣಮಂ ಪ್ರಸರಿಪುದು ರಾಮಚರಿತಂ ೪

ರಾವಣಾದ್ಯರ್ ಮಡಿಯೆ ಪೌರಜನಮೆಯ್ದೆಸಂ
ಭಾವಿಸಲ್ ಶರಣಂಗೆ ರಾಜ್ಯಪದಮಂ ಶಶಿವಿ
ಭಾವಸುಗಳಿರ್ಪನಕ ನೆಲೆಗೊಳಿಸಿ ಪಟ್ಟಾಭಿಷೇಕಮಂ ವಿರಚಿಸಿದನು
ದೇವ ದುಂದುಭಿಮೊಟಗೆ ಸೋಗೆಗಣ್ಣಬಲೆಯರ್
ಭಾವದಿಂ ನಲಿಯೆ ಪೂಮಟೆಗಱೆಯೆ ಬಳಿಕ ಸು
ಗ್ರೀವ ಜಾಂಬಳ ಮುಖ್ಯರುಲಿದರೆಣೆ ವೀರರಾಘವನ ವಚನಕೆಂದು ೫

ಸತ್ಯದೊಳ್ ಶರಣ ರಕ್ಷಣೆಗೊಳನುನಯದೊಳುಪ
ಕೃತ್ಯದೊಳ್ ಗಂಭೀರ ಭಾವದೊಳ್ ಸಾಸದೊ
ಳತ್ಯಧಿಕ ಕೀರ್ತಿಯೊಲ್ ಸತ್ವಾತಿಶಯದೊಳನುಗತವಾಹಿನೀ ನಿಕರದಿಂ
ನಿತ್ಯಲೀಲಾ ವಿನೋದಂಗಳೊಳ್ ಶ್ರೀಯೊಳೌ
ಚಿತ್ಯದಾನಂಗಳೊಳ್ ವಿಭವದೊಳ್ ದಶರಥಾ
ಪತ್ಯನಿಂ ಕಿರಿಯನಲ್ಲೆಂಬಂತೆವೋಲ್ ಶರಧಿ ಘೋಷಿಸುತಿರ್ಪುದನಿಶಂ ೬

ವತ್ಸಕೇಳಿಂತೆಸೆವ ಕೂಪಾರಮಂ ಭಕ್ತ
ವತ್ಸಲಂ ವಿಭುದೇಂದ್ರ ಮಣಿಮಕುಟ ಘಟಿತ ಭಾ
ಸ್ವತ್ಸದಮಲ ಪದಪದ್ಮಂ ಸುಗುಣ ಸದ್ಮಂ ಸರೋಜಾಕ್ಷಿಗೊಲ್ದು ತೋರೆ
ತತ್ಸಮಯದೊಳ್ ರಾಜರಾಜನ ವಿಮಾನಂ ಚ
ಲತ್ಸಮುದ್ರವನುಳಿದು ಪೊರಟುತ್ತರಕೆ ವಿರಾ
ಜತ್ಸರಸಿನದನದೀವಿಪಿನಗಳ ಸಾರ್ದು ಬರೆ ರಾಘವಂ ರಮಣಿಗೆಂದು ೭

ಅತಿನೂರುಹಬಲಂ ಬಲವೈರಿನುತನೆಮ್ಮ

ಪಿತಗೆ ಮಿತ್ರಂ ಮಿತ್ರಸೂತನೂದ್ಭವಂ
ಚತುರಂ ವಿಹಂಗರಾಜಂ ರಾಜರಾಜಸರು ಸದ್ಭಕ್ತನಪ್ರತಿಮನು
ದಿತಿ ಜಗರ್ವಾಪಹಾರಂ ಹಾರಕಂಧರೆ ವಿ
ಗತ ದುರಿತ ಸಂಪಾತಿ ಸಂಪತ್ಸುಖಾಶ್ರಯವಿ
ತತಪಿವಿನಮಿದು ನೋಡು ನೋಡಿತ್ತಲಿತ್ತ ಲಂಬುಜದಳಾಯತಲೋಚನೆ ೮

ಮುಂದೆ ತೋರ್ಪುದೆ ಕೊಳಂ ಮಯನಿರ್ಮಿತಂ ಮಡದಿ
ಪಿಂದೆ ನಿನ್ನಂ ಪುಡುಕಿ ಬರೆ ತೊಡಕಿ ಬಳಿಸಾರ್ದು
ಸಂದೆಗಂಬಡೆ ಸೌರಿಪುತ್ರಿ ಮಂದಿರಕ್ಕೈದಿ ಮೂವಗಲ್ ಕಪಿಗಳುಳಿದು
ಬಂದೆನುತ್ತುಸಿರೆತ್ತುವನ್ನೆಗಂ ಪುಷ್ಪಕಂ
ಸುಂದೆಡೆಯ ಕಿಷ್ಕಿಂಧಮಂ ಕಾಣೆ ತೋರಿ ಸತಿ
ಗಂದೆಮ್ಮ ಬಳಿವಿಡಿದ ಕೀಶಬಲನಾಯಕಂ ಸುಗ್ರೀವನೆಡೆಯಿದೆಂದಂ ೯

ಮುಂದೆ ಮುಂದೈತರಲ್ಕತಿ ಜವದಿ ಪವನನಂ
ಮಿಂದುಳುಪಿ ಕೆರೆತೊರೆಗಳಂ ಕಳೆದು ರಥಮರಸಿ
ಗಂದು ರಕ್ಕಸವಕ್ಕಿಗಳ ಪೋಣರ್ಕೆಯ ವಿಪಿನಮಂ ತೋರೆ ಸುಟ್ಟುತಿರಲಿಂ
ಕಂದೆ ಮೊಗಸಿರಿಯೆಸಳ್ಗಿಣ್ಣೊಸರೆ ಮೈಬಣ್ಣ
ಗುಂದೆ ಬೆಮರುಣ್ಮೆ ಬಿಸುಸುಯ್ಲೆರ್ದು ಮೂಗರಳಿ
ಚೆಂದುಟಿಯೊಳಿಂಪಡಗೆ ಪೇಳ್ದಳಿನಿಯಂಗೆ ನಿಟ್ಟುಸಿರಿಂ ಸರೋಜಾನನೆ ೧೦

ವರ್ಮದಿಂ ಖಳನನಡ್ಡೈಸಲ್ ಜಟಾಯು ನಿಜ
ಮರ್ಮಮಂ ಪೇಟ್ದೊಟಿದನೆನಲೆತ್ತಲೆಡೆ ಸತ್ಯ
ಧರ್ಮಕಿನ್ನಕಟಕಟ ಖಳರಂತರಂಗಮಂ ಬಲ್ಲರಾರಿಳೆಯೊಳೆನ್ನ
ಕರ್ಮಪಾಕದೊಳಸುರನುಯ್ದೊಡಂ ಕಾವೆನೆಂ
ದೊರ್ಮನದೊಳೊದವಿದಪದ್ಬಾಂಧವಂಗೆ ಸಾ
ಸಿರ್ಮೆ ನೆನೆನೆನೆದೊಡಂ ತೀರದಹಹಾ ! ಪರಹಿತೇಚ್ಛುಕರ ಜಸಮಡೆಂತೊ ೧೧

ಎಂಬನ್ನೆಗಂ ವನಂ ಕಂಡಡಗಿದಂತಾಗೆ
ಮುಂಬರೆದು ಪುಷ್ಪಕಂ ಬರುತ್ತಿರಲ್ಕಿತ್ತ ರಾ
ಮಂ ಬೆರಲ್ದುದಿಯಿಂ ಸಮೀಪಿಸಿದ ಪಂಚವಟಿ ವಿಪಿನಮಂ ತೋರುತೆಂದಂ
ಅಂಬುಜಾನನೆ ದನುಜೆ ಕಾಡಿದೆಡೆ ನೋಡಿತ್ತ
ಲಂಬಿಂ ಸಹೋದರಂ ಮಾನಗಳೆದಿರ್ಪತಾ
ಣಂ ಬವರಮುಖದಿ ಖಳರಳಿದ ನೆಲೆ ಪೊಮ್ಮಿಗಂ ನಲಿದುದಿಲ್ಲತ್ತಲೆಂದು ೧೨

ಅರಗಿಣಿಯನುಳಿದ ಪಂಜರದಂತೆ ಜೀವನಂ
ತೊರೆದ ತನುವಂತೆ ಭಗಣೇಶನಡಗಿರ್ದ ಕಾ
ರಿರುಳಿನಾಗಸದಂತೆ ತೋರ್ಪುದೆಲೆವನೆಯಂ ನಡೆಯ ನೋಡಬ್ಜಾನನೇ
ಪರೆದು ಕೀಳ್ಮೊಗಗೊಂಡು ಮಾಧವೀಲತೆಯೆ ಮಾ
ಮರನೊಳೊಪ್ಪಂ ಬಿಟ್ಟುದಿತ್ತಿತ್ತ ಬಾಡಿದುದು
ಕುರುವಕಂ ನೋಡೆಂದು ತೋರೆ ಬಳಿಕಾರಥಂ ಪರೆದುದುತ್ತರಕೆ ಜವದಿ ೧೩

ದಾಟಿ ಪುಣ್ಯಕ್ಷೇತ್ರಮಂ ತೊರೆದು ತೊರೆಯಂ ಮ
ಹಾಯಟವಿಯನಗಲಿ ಬಿಟ್ಟಾಶ್ರಮಂಗಳ ಚಿತ್ರ

ಕೂಟಮಂ ಕಡೆಗೊತ್ತಿ ಜಗುನೆಯಂ ಮೀರಿ ಭಾರದ್ವಾಜನೆಡೆಯನುಳಿದು
ನೋಣಕಳವಟ್ಟುದಿಲ್ಲೆನೆ ಧಾತ್ರಿ ಪುಷ್ಪಾಕಂ
ಸಾಟಿದೋರದೆ ನಡೆಯಲಿತ್ತಲತ್ತಲ್ ಹನುಮ
ನೋಟಗೊಂಡೈದಿದಂ ಪವನಾಧ್ವದೊಳ್ ರಾಮನಾಜ್ಞೆಯಂ ಶಿರದೆಪೊತ್ತು ೧೪

ಚಿತ್ತದೊಳ್ ಶ್ರೀರಾಮಮೂರ್ತಿಯಂ ಕೀರ್ತಿಯಂ
ಪೊತ್ತಿಂತು ಜಿಹ್ವಾಗ್ರದೊಳ್ ಭರತನನವರತ
ಸುತ್ತಿ ಬಲವರುತಿರಲ್ಕನಿಲನಂದನನಿತ್ತ ಪವನಾಧ್ವದಿ
ಒತ್ತುಗೊಂಡೈತರಲ್ಪೊಗೆಯ ಕುಟುಪೊಗೆಯಲುರು
ಪೆತ್ತಣತ್ತಂ ಧಾತ್ರಿಗಿಟಿದು ಜನರುಟಿದು ಮನ
ಮಿತ್ತು ಕಾಣುತ್ತಿರಲ್ ಸೈಪಿಡಿದು ಕೈಪಿಡಿದ ಕಟ್ಟುಸಿರೊಳವನೆಂದನು ೧೫

ದಕ್ಷನಾದೊಡೆ ಸಾಹಸಂದೋರ್ಪೆ ದಿಟವೈ ಪ್ರ
ದಕ್ಷಿಣೆಯಗೈವೆ ಚಲಮಂ ಪಿಡಿದು ಮೇಣಾಶು
ಶುಕ್ಷಣಿಯಹಹ ! ನಿನ್ನವೊಲಾರುಮಂ ಕಂಡುದಿಲ್ಲ ಮೇದಿನಿಯೊಳೆತ್ತಂ
ದಕ್ಷಿಣಾಶೆಯದತ್ತಣಿಂ ಬರ್ಪನೆಲೆ ದೀನ
ರಕ್ಷಕಂ ಸತಿ ಸುಮಿತ್ರಾತ್ಮಜರ್ಸಹಿತ ನೋ
ಡೀಕ್ಷಣಂ ಬರ್ದೇನಮರ್ದೆ ತಡೆತಡೆ ಬಿಡು ಬಿಡೀ ಮರುಳ್ತನನಕಟ ೧೬

ರಾಮನೈತಂದನಸುರಾಂತಕಂ ಭುವನಾಭಿ
ರಾಮನೈತಂದನನುಗತ ಭಕ್ತಚಿತ್ಸುಖಾ
ರಾಮನೈತಂದನಮರೇಂದ್ರ ಪೂಜಿತ ಪಾದಪದ್ಮನೊಡನೈತಂದನು
ಸೋಮಕೋದಂಡ ಭೇದಕನರ್ಕಕುಲವಾರ್ಧಿ
ಸೋಮನೀಗಳೆ ಬಂದನಿತ್ತಲವಧರಿಪುದೆಲೆ
ಸೋಮಪುರದೊಡೆಯ ಲಕ್ಷ್ಮೀ ಮನೋಹರನಿರದೆ ಬಂದನೆಮ್ಮಂ ಪೊರೆಯಲು ೧೭

ಅವಧರಿಪುದೆಲೆ ತಪೋಧನ ಬಳಿಕ ಪವನಸಂ
ಭವನ ಕಂಡಕ್ಷಿಯಂ ಮೇಣವನ ನುಡಿಗೇಳ್ದ
ಕಿವಿಯನೊರ್ಮೆಯೆ ನಂಬದನುಮಾನುಮುಖದಿ ನಿರ್ಧರಿಸಿದಂ ಸಹಜಮೆಂದು
ಭವಭವಾಂತರದ ಸುಕೃತಮೆ ರೂಪುಗೊಂಡು ಧರೆ
ಗವತರಿಸುತಿದಿರೊಳೇನಿಹುದೊ ರವಿ ತಾನೆತ
ನ್ನವನಿವಂ ಕಿಡುವನೆಂದಟ್ಟಿದನೊ ಕಾಣೆನೀತನನೆಂದು ಭರತನಿರ್ದಂ ೧೮

ಪುಟ್ಟಿದುದು ಭಯಮೊರ್ಮೆಯಚ್ಚರಿಯದೊರ್ಮೆ ಮನ
ಗುಟ್ಟೊರ್ಮೆನಗೆಯೊರ್ಮೆ ಕಡುಪೊರ್ಮೆ ಹನುಮನಂ
ದಿಟ್ಟಿಸಲ್ ಸಟೆಯೊರ್ಮೆ ದಿಟವೊರ್ಮೆ ಮುದಲೊರ್ಮೆ ಭರತಂಗೆ ನುಡಿಗೇಳ್ದೊಡೆ
ಬಿಟ್ಟಿಂತುಮಿರದೆ ಚಂಚಲಮನಿಂತೆಂದನೆಲೆ
ಕಟ್ಟಿದಿರೊಳೈತಂದು ಮರಣೋನ್ಮುಖಂಗೆ ಸೊದೆ
ಗೊಟ್ಟು ಕಾವಂತೆ ನುಡಿಸೊದೆಯೊಳೆನ್ನಂ ಪೊರೆಯಲುಜ್ಜುಗಿಪೆ ನೀನಾವನೈ ೧೯

ವ್ಯಸನಮೇಕೆಲೆ ಧೈರ್ಯಮುಡುಗದಿರ್ ತನ್ನಾಣೆ
ಪುಸಿಯಲ್ಲ ಬರ್ಪನೀವಾರ್ತೆಯಂ ನಿನಗೊಲ್ದು

ಬೆಸಸೆಂದು ರಾಘವಂ ಪೇೞ್ದಟ್ಟಿದೊಡೆ ಬಂದೆನೆನ್ನ ಪರಿಯಂ ಕೇಳ್ವೆಯಾಂ
ಅಸುವಾಗಿ ಜಗಕೆ ವಿಷ್ಣುವಿಗೆ ಸಖನಾಗುತೊ
ರ್ದೆಸೆಯಾಣ್ಮನೆನಿಪ ಮಾರುತನ ಪೊಲಬುಂಬೆ ತಾ
ನೊಸೆದಂಜನಾದೇವಿಯೊಳ್ ಪಡೆದ ಹನುಮನೆಂದೆಂಬರೆನ್ನಂ ಜಗದೊಳು ೨೦

ವನದೊಳಿರೆ ಸತಸೋದರರ್ವೆರಸು ರಾಘವಂ
ದನುಜನೊರ್ವಂ ಕೈತವದೊಳುಯ್ಯಲಬಲೆಯಂ
ಮನಮರುಗಿ ಪುಡುಕಿ ಬರೆ ಬರೆ ತನ್ನ ಸೈಪೊಡರ್ಚಲ್ಕಿಂತು ಕೂಂಟಮೆಮಗೆ
ದಿನಪಾತ್ಮಸಂಭವಂ ಬಯಸಲಾದುದು ಬಟಿಕ
ಮನುವರದೊಳಸುರನಂ ಗೆಲ್ದು ಮೇಣರಸಿಯಂ
ತನಗೊಪ್ಪೆ ತರ್ಪನಕ ಸೇವಿಸಲ್ ಕರೆವರೆನಗಾರಾಮದೂತನೆಂದು ೨೧

ಕೇಳ್ದಣಿಯೆ ಮುನಿಪ ಬಟಿಕಸುರಾರಿ ತನ್ನವರಿ
ನೆೞ್ದಿ ಪುಷ್ಪದಿಂದಮವನಿಗವತರಿಸಿ ಬರೆ
ಬಾನ್ದಟಂ ಸೈವಱಿದುದೆಂಬೊಲಾಗಳ್ ಜನರ ಜಯಜಯರವಂ ಪೊಣ್ಮಿರೆ
ಸೂಟಿಳ್ದಿರುಗುತಡಿವೆರನೇರ್ದು ಕಾಲ್ಗವಲಿನೊಳ್
ತೂಳ್ದಟ್ಟಿಕೊಂಬಿಂಗಡರ್ದು ನಗೆಮೊಗದ ಪಣ್ಣಿ
ನೊಳ್ದಿಟ್ಟಿಗೊಂಡುದು ಭರತನ ಕಣ್ಬುರುಳಿ ಬಳಿಕಾರಾಮಸಹಕಾರದಿ ೨೨

ತಮ್ಮ ಬಗೆಗನುರಾಗಮಿಂಬಾಗೆ ಬಟಿಕಣ್ಣ
ತಮ್ಮಂದಿರೋರೊರ್ವರಂ ಬಿಡದೆ ನಡೆನೋಡು
ತುಮ್ಮನಂ ದಣಿಯೆ ನಲ್ಮುಡಿಯಿನೊಡಬಡಿಸೆ ರಾಘವನನುಜನಂ ಭರತನು
ಸಮ್ಮತಿಸುತೆಡದ ಭೂಮಿಜೆಗೆಂದನೆರಗಿ ಲೇ
ಸಮ್ಮ ತನಗಾಗಿ ತೊಟಲಿದೆ ಕಾಂತನೊಡನೆ ಮನ
ವಮ್ಮದಡವಿಯನಕಟ ಸಿಲ್ಕಿದೌ ರಕ್ಕಸರ ಕೋಟಲೆಗಿನಿತು ಸಾಲದೇ ೨೩

ಮೂರ್ವಳಿಯನುದ್ಧರಿಪ ದೇವಿ ನಿನಗೀಯೆಡರ್
ನುರ್ವಗೆಯೊಳೊರೆಯಲಿಂತೊಂದವಿದತ್ತಕಟ ತ
ನ್ನೊರ್ವನಿಂ ಪತಿಪರಾಯಣೆಗೆ ಸನ್ಮಂಗಳೆಗೆ ಸತ್ಯವಾಣಿಗೆ ಜಾಣೆಗೆ
ಉರ್ವರೆಯೊಳನಸೂಯೆಯಂತರುಂಧತಿಯಂತೆ
ಪರ್ವೆ ಜಸಮಲ್ಲೆಡೆಗೆ ನೋಯಿಸಿದೆನೌ ನಿಮ್ಮ
ನಾರ್ವರ್ಪರೆಣೆಗೆ ತನ್ನಂ ಕಾವುದೆನೆ ಮೈದುನಂಗೆಂದಳವನಿಜಾತೆ ೨೪

ಬಸವೞಿದು ಮಱುಗದಿರ್ನಿನ್ನರಂ ಭರತ ನೋ
ಯಿಸುವವರಾರ್ ಸೋವರಾರ್ ಬಗೆಯೆ ಮುಮ್ಮೈಮಾಟ
ಬೆಸುಗೆಗಡ ಸುಖದುಃಖಮಿರದೆ ಪಗಲಿರುಳಂತೆ ಸಹಜಮಿದು ಪುಟ್ಟಿದರ್ಗೆ
ಬೆಸನಮಿಂತೆಮಗೆ ನಾಣ್ನುಡಿಗೆ ನಿನ್ನಿಂದೊದಗೆ
ನಸಿನಸಿನಗೆಮ್ಮತ್ತಣಿಂ ತೋಱೆ ಲೋಕದಾ
ಯಸಕೊರ್ವನೊರ್ವನಂ ದೂಱೆ ಮರುಳಾಗದೇಂ ಬಲ್ಲವರ್ಗೆಂದೊರೆದಳು ೨೫

ಮಣಿವ ಬಲವರ್ಪ ಪಾಡುವ ನೋಡುವಾಸೆಯಿಂ
ಕುಣಿವ ಪರಸುವ ಸೇವೆಗೆಯ್ವ ನುಡಿಸುವ ಬವ(ಣೆ)

ಯೆಣಿಸಿ ಮಱುಗುವ ಸಂತಸಂಗೊಳ್ವ ಪೊಸಬಿನದಮಂ ತೋರ್ಪ ಮೌನಮಿರ್ಪ
ಅಣಿಯರಂ ಫಲಕುಸುಮಗಳ ಸಮರ್ಪಿಸುವ ಬೆಲೆ
ವಣಿಗಳಂ ಕಾಣ್ಕೆಗಳನೀವ ಜನರೊಡನೆ ಮೆಱೆ
ವಣಿಗೆಯಿಂ ರಾಜವೀಧಿಯೊಳಳ್ತಿಯಿಂ ರಾಘವಂ ಮುಂದೆ ಬರುತಿರ್ದನು ೨೬

ಪಡೆದನಂ ಕಂಡಂತೆ ಭರತನೊಂದೂರ್ಗೆ ಪೋ
ದೊಡೆಯನಂ ಕಂಡಂತೆ ನೀಱೆಯರ್ ದ್ವಿಜರಲ
ರ್ವೊಡೆಯನಂ ಕಂಡಂತೆ ದಿಗ್ವಿಜಯಮೆಸಗಿ ಬರ್ಪರಸನಂ ಕಂಡಂತಿರೆ
ನಡೆತರ್ಪ ಮಿಕ್ಕುಳಿದವರ್ ಕಂಡು ಸಂತಸದ
ಕಡಲೊಳಳ್ದಿರೆ ದೇವತತಿ ಪೊಗಳೆ ಗಾಡಿಯಿಂ
ದುಡುಪಪುರದೊಡೆಯ ಲಕ್ಷ್ಮೀಮನೋಹರನೊಡನೆ ನಿಜನಗರಿಯಂ ಪೊಕ್ಕನು ೨೭

ದಂಡಿಗೆಯನೇರ್ದು ಬರೆ ಕೈಕೆಯರಮನೆಗಿದಿ
ರ್ಗಂಡಿಳಿದು ಪೊಕ್ಕೊಳಗೆ ಮಣಿಮುಗುಡಗದಿರ್ವಗಲ್
ಕಂಡಪೊಳಪಿಂ ಬೆಳಗುವಡಿದಾವರೆಗೆ ಪುರುಡಿ ಕೊರಗೆ ಕಣ್ಣೈದಿಲಿಂತು
ದುಂಡುಮೊಗಸಸಿ ಕಂಡು ಕಂದಿತೆನೆ ತಾಯಡಿಗೆ
ಮಂಡೆಯಂ ಬಾಗಿರ್ದೊಡಂ ಕಣ್ಮಲರ್ಗಳಿಟಿ
ಗೊಂಡು ಬಾಡಿರಲಬಲೆ ನುಡಿಸದಿನಿಸುಂ ನೋಡದಿರ್ದಳತಿ ಲಜ್ಜೆಯಿಂದ ೨೮

ಮಾತನಡಿಸದಿರಲ್ ಕೈಕೆ ಬಳಿಕೆಂದನೆಲೆ
ಮಾತೆ ನಿನ್ನಾಜ್ಞೆಯಂ ಮೀರ್ದೆ(ನಿ)ಲ್ಲಿನ್ನೆವರ
ಮಾ ತೆರದೆ ಮುಂದೆಂದುಮೆಂದಿಗುಂ ನಡೆಯದಿರ್ಪೆಂ ಸಿದ್ಧಮಂತಲ್ಲದೆ
ನೂತನಂಬೇಳ್ವೆನೆಂದೆಣಿಸದಿರ್ ನಿನ್ನಾತ್ಮ
ಜಾತನೆಂದೇ ಬಗೆದು ಬಾಲಬುದ್ಧಿಯೊಳೆಂತು
ನಾ ತಿಳಿಯದೆನ್ನವಗುಣಂಗಳಿರೆ ಮಱೆದು ಪಾಲಿಪ್ಪುದಿಂತಿಂತಿರಲ್ಕೆ ೨೯

ಕೀಳುಮೇಲರಿಯದೆ ಮರುಳ್ತನದೊಳೊರ್ಮೆ ಕೇ
ಡಾಳಿ ತಾನೊಱೆದ ಬಿಱುನುಡಿಗೆ ಪೋಪುದೆ ಮಹಾ
ಭೀಳಕಾನನಕಂತು ಪೋದೊಡಂ ಮರಳಿ ಬರೆ ಪೇೞ್ದುಟ್ಟಲಾ ಮಾತನು
ಕೇಳದಿರ್ಪುದೆ ಪುರಾಕೃತ ದೋಷಮಿಂತೆನ್ನ
ನೇಳಿಸಿತು ಬಳಿದಾಡಿ ಪುರುಳದೇಂ ಕಂದಂ
ಬಾಳುವೆಯ ಮಱೆವುದೆಂದಪ್ಪಿ ಕುಳ್ಳಿರಿಸಿದಳ್ ಕೈಕೆ ದುಮ್ಮಾನದಿಂದ ೩೦

ಸವಿನುಡಿಯ ಸೊಗಸು ನಿರಹಂಕಾರ ಭಾವಮೊ
ಪ್ಪುವ ಮಾತೃಭಕ್ತಿ ಮುಪ್ಪುರಿಗೊಳಲ್ ಪಲ್ವೆಳಗು
ಕವಲೊಡೆಯೆ ದೆಸೆದೆಸೆಗೆ ಮನ್ನಿಸಿ ಸುಮಿತ್ರೆಯಂ ಪರಕೆಗೊಂಡೊಡನೆ ಪೊಱಟು
ಕವಿದುರಿಂಗಣಗುಣಿದು ಸುಳಿದಾಡಿ ತಾಯೆಡೆಗೆ
ಜವದಿಂ ಮರಳ್ವಕಱುವಂತೆ ಸಂತಸದೆ ರಾ
ಘವನಾಗಹಳ್ಕೈತಂದನಬ್ಬೆಯರಮನೆಗೆ ಮನ್ನಿಸಿ ನುಡಿಸಲೆಂದು ಭರದಿ ೩೧

ಕಿತ್ತಡಿಯ ಜನ್ನಮಂ ಕಾದು ಪಣ್ಗೈದಡಿಯಿ
ನೊತ್ತಿಕಲ್ಲಂ ಹರನ ಬಿಲ್ಮುಱಿದು ಭಾರ್ಗವನ

ನೊತ್ತಟ್ಟಿಗುಱಿದನಯ್ಯನಾಣೆಯಂ ಮಿಡದಡವಿಯಂ ಸಾರ್ದು ಕೀಶರ್ಕಳ
ಮೊತ್ತಮಂ ಪೊರೆದು ಕಡಲಂ ಕಟ್ಟಿ ದಾನವರ
ನೆತ್ತರಂ ಚೆಲ್ಲಿ ತಿರೆವೊಱೆಯಿಱಿಸಿದ ಜಸವಂ
ಪೊತ್ತಭಾರಕೆ ಸಿರಂ ಬಾಗಿತೆನೆ ಮಾತೆಯಡಿಗೆರಗಿದಂ ಶ್ರೀರಾಮನು ೩೨

ಅಡಿಗೆರಗಲೆತ್ತಿ ಕಂದನನಪ್ಪಿ ಪಿರಿದು ಮೈ
ದಡವಿ ಕೈಯಿತ್ತು ಕುಳ್ಳಿರಿಸಿ ಪಲವುಮ ಪಗಲ್
ಪೊಡವಿಯಂ ಪೊರೆದು ಬಟಿಯಂ ಬೆಳಗಿ ಬಾಟ್ವರೆಂದಬ್ಬೆ ಬಾಯ್ದಣಿಯೆ ಪರಸಿ
ಕಡುಪಾಪಿಗೆನಗೇಕೆ ಪುಟ್ಟದೈ ನೀಂ ಕೈಕೆ
ಯೊಡಲೊಳಾಗದೆ ಪಾತಕಿಯನಟ್ಟುವಂತೆ ಪೇ
ರಡವಿಗಟ್ಟುವೊಡೆ ನಿನಗಂದು ಕಂಬನಿವಣಿಸರಂ ಪೇಱಿಮೊಲೆಗೆಂದಳು ೩೩

ಒಯ್ಯರಲ್ಲದ ಮಾತಲ್ಲ ಮಾತೆ ನೀ ಪರಸಲೆ
ಣ್ಮಯ್ಯವಂ ಕರುಣಿಸಲ್ ತೈತೆಯಟ್ಟಿದೊಡಮೆ
ಮ್ಮಯ್ಯನುಟಿದೊಡವಿಯೊಳ್ ಬವಣಿಗೊಂಡೊಡಂ ರಕ್ಕಸರ್ ಬಟಲಿಸಿದೊಡಂ
ಕಯ್ಯಡ್ಡಗಟ್ಟಿ ಮೇಲ್ವಾಯ್ವ ದುಃಖಾಂಬುಧಿಯ
ನೊಯ್ಯನೆ ಸಡಿಲ್ದು ದಾಂಟಿದೆವು ಮೇಣ್ ಬಿನ್ನಪಂ
ಸಯ್ಯಡಿಯೊಳೆಱಗಿ ಪೇೞ್ದಪೆನೆನುತ್ತೆ ರಾಘವಂ ಮತ್ತೆ ಜನನಿಯೊಳೆಂದನು ೩೪

ಎನ್ನತೆನಗಕ್ಕುಮೆಂದಾವಗಂ ಕಂದನಂ
ನನ್ನಿಮಿಗೆ ಪೊರೆದಬ್ಬೆಯಂ ಸೇವಿಸದ ತನುಜ
ನಿನ್ನವಂ ಸುತನಲ್ಲಮಂತು ರೇತೋಜಾತಕೀಟಂವಲಂ ನೋೞ್ಪೊಡೆ
ಮನ್ನಿಪುದು ತಾಯೆ ಬಹುಕಾಲ ಸೇವಿಸದಿರ್ದು
ದನ್ನೆಯಮಿದಂ ಕೂಮೆಯಿಂ ಜಸಂ ಸೈಪುಮೆ
ನೆನ್ನೆಗಂ ಬಿಡದೆ ತನಗಪ್ಪಂತೆ ಬುದ್ಧಿಯಂ ನೆಱೆ ತಿಳಿಪಿ ನೀಂ ಕಾವುದು ೩೫

ಮುನಿನಾಥ ಕೇಳ್ ಭರತಮುಖ್ಯರೊಡನಾಗಳರ
ಮನೆಗೆ ತೆರಳಲ್ ಮರ್ಕಟ ಪ್ರಮುಖರಂತು ರಾ
ಮನ ನೇಮದಿಂ ನವ್ಯ ಭವನಮಂ ಸೇರ್ದರೊಡನುಬ್ಬರದ ಸಂತಸದೊಳು
ಅನಿತರಿಂ ಮೇಲೆ ರಾಘವನ ಪಟ್ಟಾಭಿಷೇ
ಚನಕೆ ಸನ್ನಹಮಂ ಸುಮಂತ್ರ ಗುರುಭರತರಂ
ದಿನ ದಿನದೊಳುಟಿಳಿದ ಕಡೆವೊಂಗಲೊಲಣಿಗೈಯುತಿರಲಿನನಬ್ಧಿಯಂ
ಕಂಡನು ೩೬

ಮುನಿಪ ಕೇಳ್ ಬಟಿಕ ವೈಶಾಖಸಿತ ಸಪ್ತಮಿಯ
ದಿನದುದಯಕಾಪುರದೊಳೆತ್ತಲುಂ ಬದ್ದಣದ
ದನಿ ತಡೆಯದೈತರ್ಪುದೆಂದು ದಿಕ್ಪಾಲರಂ ಕರೆವಂತೆ ಪುದುದೊಡನೆ
ಅನಿತಱೊಳ್ ಬಟಿವಿಡಿದು ನಡೆತರ್ಪ ನಾಲ್ದೆಸೆಯ
ಜನಪಾಲಕರ ವಿಭವಕೆಂಬುದೇನೆಣಿಕೆಗೊಳ
ಗೆನಿಸದಂದಣತುರಗಕರಿ ರಥೋಷ್ಟ್ರಂಗಳ್ಗೆ ಬೀದಿಗಳ್ ಕಿರಿದಾದುವು ೩೭

ಆಲಿಸೆಲೆ ಮುನಿಪ ಮನ್ನಣೆಯ ಸಾವಂತರೊಡ
ನೋಲಗಕೆ ನಡೆತರ್ಪ ರಾಮನಂ ಕಂಡು ದಿ
ಕ್ಪಾಲಕರ್ ಮಣಿಯೆ ಮುನಿಗಳ್ ಪರಸೆ ಕೈಗಟ್ಟಿನಿಲೆ ಮಿಕ್ಕ ಸರ್ವಜನರು
ಮೂಲದರಸುಗಳ ಪರವಿಡಿಯೊಳೊಪ್ಪಿದ ಕಿರಣ
ಮೂಲಿಯನ್ವಯದ ಸಿಂಹಾಸನದಿ ಸಕಲಸುರ
ಜಾಲದನುಮತಿಯಿಂದೆ ಕೈವಿಡಿದು ಕುಳ್ಳಿರಿಸಿದಂ ಸುಮಂತ್ರಂ ಸಭೆಯೊಳು ೩೮

ಮಣಿದು ಗುರುಪದಕೆ ಪಿರಿಯರ್ಗೆಱಗಿ ಮನದಿ ದಿನ
ಮಣಿಗೆ ಕೈಮುಗಿದು ಸಭೆಗಿಂಬಾಗಿ ಬಾಗಿ ಬೆಲೆ
ವಣಿಯ ಗದ್ದುಗೆಯನೆಲ್ಲರ್ ಪೊಗಟೆ ಗುರುವಾಜ್ಞೆಯಿಂದೇಱೇ ಕಾಕುತ್ಸ್ಥನು
ರಣದ ಮೈಸಿರಿಯೆನಿಪ ಕೈದುವಂ ಭಾಸ್ಕರ ಕಿ
ರಣದ ಪಡಿಯೆನೆ ಪೊಳೆವ ಮಗುಟಮಂ ಕುಲದನುಸ
ರಣದ ಪದ್ಧತಿಯಂತೆ ರಾಜಮುದ್ರೆಯನೊಪ್ಪಿಸಿದರಾಗ ಮಂತ್ರಿವರರು ೩೯

ಪತಿಯ ವೈಭವಮೆಂದು ನಗೆದೋರಿ ನೆರೆದ ಭೂ
ಪತಿಗಳೆಮ್ಮವರೆಂದು ಕಣ್ಗೊಟ್ಟು ಪೂಜ್ಯರ್ಜ
ಗತಿಗೆ ನಿರ್ಜರರೆಂದು ಬಗೆಗೊಂಡು ನಿಗ್ರಹಾನುಗ್ರಹ ಸಮರ್ಥರೆಂದು
ಯತಿಗಳಂ ಮೆಟ್ಟಿ ಘನ ಜಘನಭಾರಕೆ ಮಂದ
ಗತಿದೋಱೆ ಕಲಶಕುಚಭರಕೆ ನಡು ಬಳ್ಕೆ ರೇ
ವತಿಯೊಡವರ್ಪ ರೋಹಿಣಿಯಂತೆ ಬಂದಳಾಳಿಯರೊಡನೆ ರಾಜಸಭೆಗೆ ೪೦

ಕುಂತಲಭ್ರಮರಮಡಿದಾವರೆಯ ಮಧುವಂ ನಿ
ಕಂತಮಸಿದುಣ್ಬುದೆನೆ ಭೂಜಾತೆ ಬಂದು ನಿಜ
ಕಾಂತನಡಿಗೆಱಗಿ ಪಿಡಿದೆತ್ತಿ ವಾಮಾಂಕದೊಳ್ ಕುಳ್ಳಿರಿಸಿದಂ ರಾಮನು
ಸಂತಸದ ಸುಗ್ಗಿಗೆ ಕುಕಿಲ್ವ ಕೋಗಿಲೆಯಂತೆ
ದಂತಿಗಮನೆಯರೊಲ್ದು ಪಾಡೊ ಪೊಂದಟ್ಟೆಯೊಳ್
ಕಾಂತ ರತ್ನಪ್ರದೀಪಂ ಬೆಳಗೆ ಬೆಳಗಿದರ್ ಮಂಗಳಾರತಿಯನಾಗ ೪೧

ದಿಗ್ಗಜಂಗಳ್ ಮುಕ್ಕುಱಿಕ್ಕಿದುವು ಪೊಱೆಯ ಬ
ಲ್ಪುಗ್ಗಿನಿಂ ಕುಸಿದ ತಲೆಗಳನೆತ್ತಿ ಕಚ್ಛಪಂ
ಹಿಗ್ಗಿಕಾಲಾಡಿದಂ ಮೈಮುರಿದು ಸರಿದು ಪೆಡೆಯೆತ್ತಿದಂ ನಾಗೇಂದ್ರನು
ಅಗ್ಗಿಮೊಗರೊಡಲ ಪಸಿವಡಗಿದುದು ಮೈವಣ್ಣ
ತಗ್ಗಿದೆಳೆವೆಣ್ಣ ಬಿಂಕಂ ಬಿಗುರ್ವಾದುದೀ
ಸುಗ್ಗಿಯೊಳ್ ದಾನವಾಂತಕನ ಮೂರ್ಧಾಭಿಷೇಚನದೊಳಿಂದೀ ದಿನದೊಳು ೪೨

ನ್ಯಾಯಧರ್ಮವನುೞಿದು ಶಿಕ್ಷೆರಕ್ಷಣೆಗಳಾ
ಮ್ನಾಯಧರ್ಮವನುೞಿದು ಭಕ್ತಿ ಭಾವನೆಗಳಾ
ತ್ಮೀಯ ಧರ್ಮವನುೞಿದು ಸಾಮಸಂಗ್ರಾಮಂಗಳಾಗವೆನೆ ಧರ್ಮವೞಿತು
ರಾಯರೀ ಬೞಿಯೊಳಿಂತಿರ್ದರಿಲ್ಲೆನೆ ಪೂರ್ವ
ದಾಯಮಂ ಬಿಡದೆ ಶಕ್ತಿತ್ರಯಂ ತನಗೆ ಸಮ
ವಾಯಲಕ್ಷ್ಮಣಮಾಗೆ ಲಕ್ಷ್ಮೀಮನೋಹರಂ ಧರೆಯನಾಳುತ್ತಿರ್ದನು ೪೩

ಪಡೆಮಣಿಯ ಬೆಳಗು ನಗೆಮೊಗದ ಬೆಳಗಂ ಬೆರೆಯೆ
ನುಡಿಯ ಬಿನ್ನಾಣಮಱಿವಿನ ನಿಜಿಗೆಯಂ ಕೂಡೆ
ಸೆಡದ ನವರಸದೊಡನೆ ಭಕ್ತಿರಸಮೊಂದೆ ನಾಗೇಂದ್ರಂ ಮುನೀಶ್ವರಂಗೆ
ಮುಡಿಯದೀಚರಿತಮೀ ಬಾಯ್ಗಳಿಂ ಪೇೞ್ದಮೆನೆ
ಕಡುನೇಹದಿಂದೊರೆದೆ ಕಥೆಯನತಿಭಕ್ತಿಯಿಂ
ಬಿಡದೋದಿ ಕೇಳ್ವ ಸಜ್ಜನರಿಗಿಷ್ಟಾರ್ಥಮಂ ಕುಡುವನಾ ಶ್ರೀರಾಯನು ೪೪

ಪಡುಗಡಲ್ಗಡೆಯೊಳೇೞಿಡೆಯಂ ಭೃಗೂದ್ವಹಂ
ಪಡೆದನದಱೊಳ್ ಸೈಪಿಗೆಡೆಯಾಗಿ ಕನ್ನಡದ
ನುಡಿವೆಣ್ಗೆ ಭರ್ತೃಮಂದಿರಮಾಗಿ ಸುಖಕೆ ಬೀಡಾಗಿ ನಡಾಗಿ ಮೆಱೆವ
ಉಡುಪಪುರಮೆಂಬ ಸುಕ್ಷೇತ್ರಮಂಟಲ್ಲಿ ಚಾ
ವಡಿ ರಂಗಭಟ್ಟನಾತ್ಮಜೆ ಮಹಲಕ್ಷ್ಮಿ ಕ
ನ್ನಡತಿ ಚೆಂಗಳದೇವಿ ಪೇೞಿಂದು ಪೇೞ್ನೆಱಪೇೞ್ದಳೀ ಸತ್ಕೃತಿಯನು ೪೫

(ಶ್ರೀರಾಮ ಪಟ್ಟಾಭಿಷೇಕಂ ಸಂಪೂರ್ಣಮಾದುದು)

********************************

## ರತ್ನಾವತೀ ಕಲ್ಯಾಣ

**(ದೃಢವರ್ಮ ಕಾಳಗ)**

ಶ್ರೀ ಲಕ್ಷ್ಮೀವರಮಬ್ಜಜಾತ ಪಿತರಂ ಬಾಲಾರ್ಕ ಕೋಟಿಪ್ರಭಂ

ನೀಲೇಂದೀವರ ಶಾಮ ಕೋಮಲ ವಪುಂ ಸಾಲಂಕೃತೋರಸ್ಥಲಂ
ಫಾಲಾಕ್ಷಾರ್ಚಿತ ವ್ಯಾಲರಾಜಶಯನಂ ಕಾಲಿಂಗ ಸಮ್ಮರ್ದನಂ
ಮಾಲೋಲಂ ಸುರಪಾಲಮುಖ್ಯನಂತ ಗೋಪಾಲಂ ಸದಾ ಭಾವಯೇ ೧

ರಾಗ – ಸೌರಾಷ್ಟ್ರ ತ್ರಿವುಡೆ
ಭುಮಿಯೊಳಗತ್ಯಧಿಕ ಕಾಶ್ಮೀರ । ಗೋಮಿನಿಪ ಶ್ರೀ ಹರ್ಷರಾಯಂ
ಗಾ ಮಹಾ ಮಾಂಡವ್ಯ ಮುನಿಪತಿ । ಪ್ರೇಮದಿಂದ
ಒರೆಯುತಿರೆ ಬೃಹತ್ ಕಥಾನಕ । ವರಪುರಾಣವ ಕೇಳುತಾ ಮುನಿ
ವರನ ಪದಯುಗಕೆರಗಿ ಪೃಥ್ವೀ । ಶ್ವರ ನುಡಿದ
ಅದರೊಳಾ ವತ್ಸಾಖ್ಯರಾಯನು । ಪದುಮಮುಖಿ ರತ್ನಾವತಿಗೆ ತಾ
ಮದುವೆಯಾದನದೆಂತೆನುವುದನು । ಮುದದೊಳೆನಗೆ
ಮೊದಲರುಹಬೇಕೆನುತ ಬಿನ್ನವಿ । ಸಿದ ನೃಪಾಲನ ನುಡಿಗೆ ಮೆಚ್ಚುತ
ಯದುವರನ ನೆನದುಸರ್ದ ತಾಪಸ । ನಿಧಿಯು ಬಳಿಕ ೨

ರಾಗ – ಭೈರವಿ, ಝಂಪೆ
ಧಾರಿಣೀಶ್ವರ ಕೇಳು । ಊರ್ವಿಯೊಳುಮೆರೆವೈವ
ತ್ತಾರು ದೇಶದೊಳು ಭಾ । ಗೀರಥಿಯ ತಟದಿ
ಚಾರು ಸಂಭ್ರಮದಿ ವಿ । ಸ್ತಾರವಾಗಿರುವಂಗ
ಧಾರಿಣಿಯು ವೈಭವದಿ । ಮೀರಿದುದು ಸ್ವರಕೆ

ಬೆಡಗಿನಿಂ ರಂಜಿಸುವ । ಪೊಡವಿಯನು ಪ್ರೇಮದೊಳು
ದೃಢವರ್ಮನೆಂದೆನುವ । ಕಡುಪರಾಕ್ರಮಿಯು
ಸತ್ಯ ಸದ್ಗುಣದಿಂದ । ಪೃಥ್ವಿಯನು ದಯದಿ ಪೊರೆ
ವುತ್ತಿರ್ದ ಮಂತ್ರಿಜನ । ಮೊತ್ತದಿಂ ಜನಪ ೩

ಅರಸಕೇಳ್ ಬಳಿಕಿತ್ತ ಭೂಮಿಪ
ನರಸಿ ಮರುದಿನ ಶುಭಮುಹೂರ್ತದಿ
ವರ ಸುಪುತ್ರಿಯ ಪಡೆದಳಾ ಮುರಹರನ ಕರುಣದೊಳು
ಪರಮ ಹರುಷದಿ ಜನಪ ಮಂತ್ರಿಯ
ಕರೆದು ಪೇಳಿದ ಪಟ್ಟಣವಶ್ಯಂ
ಗರಿಪುದೆನೆ ಕೇಳುತ್ತ ಸಚಿವನು ಮನದಿ ಮುದವಾಂತು ೪

ಪುರವರವ ಶೃಂಗರಿಸಿ ಮಂತ್ರೀ । ಶ್ವರನು ವಿಪ್ರಸ್ತೋಮವನು ತಾ
ಕರೆಸಿ ಕೊಡಿಸಿದ ಧನಕನಕವನು । ಹರುಷದಿಂದ
ಇತ್ತಲಾ ಶಿಶುವಿಂಗೆ ದಿನಗಳು । ಹತ್ತು ಸಂದವು ಮರು ದಿವಸ ಭೂ
ಪೋತ್ತಮನು ಪುಣ್ಯಾಹವಾಚನ । ಬಿತ್ತರಿಸಿದ
ಪೊಡವಿಪಾಲಕ ಲಾಲಿಸಾ ಧರೆ । ಯೊಡೆಯ ಹನ್ನೆರಡನೆಯ ದಿನ ದ್ವಿಜ
ಗಡಣವನು ಬರಹೇಳಿ ತನ್ನಯ । ಮಡದಿ ಸಹಿತ
ಪುಟ್ಟಿರುವ ಕುವರಿಗೆ ತಾ ಪೆಸ । ರಿಟ್ಟ ರತ್ನವತಿಯೆನುತ ನೃಪ
ಕಟ್ಟಳೆಯದನುಸರಿಸಿ ದ್ವಿಜರುಗ । ಳಿಷ್ಟದಿಂದ ೫

ರಾಗ – ಸುರುಟಿ, ಏಕತಾಳ

ಇಂಥ ಬಾಲಕಿಗೆ ವರುಷವು । ಸಂದಿತೇಳೆಂಟು ಹೀಗೆ
ನಂತರ ಹತ್ತಾನಂತರ ಹನ್ನೆರ । ಡಂ ತಾಳ್ದಳು ಬಲು । ಸಂತಸದಿಂದ
ಪದುಮಸಖನ ತೆರದಿ । ಶೋಭಿಪ । ಪದುಮಾಕ್ಷಿಗೆ ಮುದದಿ
ಪದಿನಾರ್ಕಳೆಯಲು । ಮದಗಜಗಮನೆಯು । ಮದನನುರಿಗೆ ಬಲು
ಬೆದರಿರಲಿತ್ತ ೬

ಭಾವಕಿಯ ಮನದೊಳಿಹ ಭಾವವನ್ನರಿತಾಗ
ಭೂವರೇಣ್ಯಂ ಮನದಿ ಭಾವಿಸಿದನಿವಳಿಂಗೆ
ಭಾವಜನು ಬಹುತರದೊಳೀವ ಕಷ್ಟವನಿನ್ನು ನಾವು ಸುಮ್ಮನೆ ಕುಳಿತಿರೆ
ಆವುದಪಕೀರ್ತಿಯಿನ್ನೀ ವನಿತೆಯನು ನಿಜದಿ
ಭೂವಧು ಕುಶಂಬಿಯೆಂಬಾ ವಸುಧೆಪತಿ ವತ್ಸ
ಗೀವುದೆಂದೆನುತಲವನೀ ವಿಧದಿ ಮಂತ್ರಿಯೊಳು ತಾ ವಿವರಿಸಿದನು
ಬಿಡದೆ ೭

ರಾಗ – ಕಾಂಬೋಧಿ – ಝುಂಪೆತಾಳ

ಅತ್ತಲವನಿಪ ತನ್ನಾ । ಪುತ್ರಿಯನು ವತ್ಸನಂ ಗಿತ್ತು ಲಗ್ನವಗೈವುದೆನುತ
ಚಿತ್ತದೊಳು ಯೋಚಿಸಿರ । ಲಿತ್ತವರ ಕಾಳಿಂಗ । ಪೃಥ್ವಿಪಾಲಕ
ಭದ್ರಸೇನ ಎಂದೆನುವ ನರಪತಿಯು ೮

ಮಿತ್ರಾಂಬುಜಾವಳಿಗೆ ಮಿತ್ರನಂತೆಸೆವಂಗ । ಧಾತ್ರಿಪತಿ ದೃಢವರ್ಮನೃಪಗೆ
ಉತ್ತಮ ಕಳಿಂಗ ಧಾರಿತ್ರಿಗೊಡೆಯನು ತಾನು । ಮಿತ್ರಭಾವದಿ ಬರೆದ ಲಿಖಿತ
ಇದುವರೆಗೆ ನಾವು ಶ್ರೀ ಪದುಮನಾಭನ ದಯದಿ । ಮುದದೊಳಿತ್ತಪು
ದುತ್ತರವನು
ಭೂಮಿಪತಿ ಕೇಳ್ ನಿನ್ನ ಕಾಮಿನಿಯು ಪೆತ್ತ ಗಜ । ಗಾಮಿನಿಯ ಬೆಡಗನಾ ತಿಳಿದು
ಕಾಮಿಸಿಹೆನದರಿಂದ ಸೋಮಪ್ರಭೆಯನು ಕೊಟ್ಟು । ಪ್ರೇಮದಿಂ
ವೈವಾಹವೆಸಗು
ಈ ತೆರದಿ ಬರೆದ ಲಿಖಿತಾರ್ಥವನು ತಿಳಿದು ಭೂ । ನಾಥ ನುಡಿದನು
ಸಚಿವನೊಡನೆ
ಮಾತುಕೊಟ್ಟಿಹೆನು ಸುಪ್ರೀತ ವಾತ್ಸಾಖ್ಯನಂ । ಗೀ ತರುಣಿಯನು
ಕೊಡುವೆನೆನುತ
ಅದರಿಂದಲೀ ನೃಪನು ಬದಲು ಕುವರಿಯ ನೋಡಿ । ಮದುವೆಯಾಗುವುದು
ಬಲು ಲೇಸು
ಇದಕಾಗಿ ನೃಪತಿ ದುರ್ಮದ ತಾಳದಂತೆ ಬರೆ । ವುದು ಭದ್ರಸೇನನಿಗೆ
ತಿರುಗಿ
ಬರೆದು ಕಳುಹಿಸುವುದೆನಲಂತು ಮಂತ್ರಿಯು ಬಂದ । ಚರರೊಡನೆ
ಕೊಟ್ಟು ಕಳುಹಿಸಲು
ತೆರಳಿ ಬಂದಾ ದೂತರರಸಗಭಿನಮಿಸಿ ತಂ । ದಿರುವ ಲೇಖನವಿತ್ತರಾಗ ೯

ರಾಗ – ಕೇದಾರಗೌಳ, ಝಂಪೆತಾಳ

ಧಾರಿಣಿಪನೋದಿ ಲಿಖಿತ । ಮನದೊಳಗೆ । ಭೂರಿ ರೋಷವ ತಾಳುತ
ವೀರ ಮಂತ್ರಿಯ ಕರೆಯುತ । ವುಸುರಿದನು
ಕರೆಸು ಮಾರ್ಬಲವನೀಗ । ನಾ ಪೋಗಿ । ತರುವೆ ಕುವರಿಯನು ಬೇಗ
ಪುರವ ಮುತ್ತುತ ಭೂಪನ । ಗರ್ವವನು । ತರಿದು ಬರುವೆನು
ಈ ಕ್ಷಣ ೧೦

ರಾಗ – ಮಾರವಿ, ಏಕತಾಳ

ಕೇಳುತಲಿ ಮುದವಾಂತು ಭೂಪನು
ವೀಳೆಯವ ತಾನಿತ್ತು ಕಳುಹಲು
ಮೇಲೆ ಚಿತ್ರಧ್ವಜನು ಪೊರಟಾ ತಾಯಿಗಭಿನಮಿಸಿ
ಪೇಳಿದನು ಕೇಳ್ ಜನನಿಯಂಗನೃ
ಪಲನಲ್ಲಿಗೆ ಕಲಹಕೈದುವೆ
ಲೀಲೆಯಿಂದಾಶೀರ್ವದಿಪುದೆನಗೆಂದನವಳೊಡನೆ ೧೧

ರಾಗ – ಕಾಂಬೋಧಿ, ಅಟ್ಟತಾಳ

ಅರಸನಪ್ಪಣೆಯಂತೆ ಶಬರೇ
ಶ್ವರನು ಬಳಿಕಾ ಚಿತ್ರಕೇತುವ
ಸೆರೆಮನೆಯೊಳಿಟ್ಟಿರ್ದನೆತ್ತಲು ಪೋಗದೋಲಿನಿತು
ಪರಿಕಿಸುತ ಪೊರಟಾಗಳೋರ್ವನು
ಚರನು ಬಂದಾ ಭದ್ರಸೇನನಿ
ಗೆರಗಿ ಬಿನ್ನವಿಸಿದನು ಬಹುತರ ಭಯವ ತಾಳುತಲಿ ೧೨

ರಾಗ – ಯಮನ್, ಅಷ್ಟತಾಳ

ಕದಲದೋಲೆತ್ತಿ ಕೊಂಡೊಯ್ದಾಗ ಮಂಚಮಂ
ಒದಗಿನಿಂ ನಿಶಿಯೊಳಾ ಪುರಗಿರಿಗಳಂ ಕಳೆದು
ಪದುಮಸಖನುದಯದೊಳ್ ದಿಂಡೀರವೆಂಬ ವನದೆಡೆಗೈದಿ ಪೊರೆಯನಿಳುಹಿ
ಉದಧಿವಸನೇಶ ಶ್ರಮವನು ಕಳೆಯಲೋಸುಗವೆ
ಮುದದಿ ಕುಳಿತಿರಲಿತ್ತ ನಿದ್ದೆ ತಿಳಿದೆದ್ದಾಗ
ಅದುಭುತವಿದೇನೆಂದು ಬಯ್ ಬಿಡುತ ಮರುಗಿದಳ್ ಕಡುಭಯವ ತಾಳ್ದು ಸುದತಿ ೧೩

ರಾಗ – ನೀಲಾಂಬರಿ, ಏಕತಾಳ

ಹರಹರಾ ಕರುಣಾನಿಧೇ । ಏನಚ್ಚರಿ । ಯರಿಯೆನರುಹ ಬಾರದೆ
ಪುರವ ತ್ಯಜಿಸುತಲಿಲ್ಲ । ಪಲ್ಲಂಗದೊಡ । ಬರಲೇನಾರಣ್ಯದಲ್ಲಿ
ಚೋರರ್ಮಂದಿರವ ಹೊಕ್ಕು । ಸುಲಿದು ಎನ್ನ । ಘೋರ ಕಾನನದೊಳಿಕ್ಕಿ
ಸರಿದರೇನೊ ಹೀಗೆ । ಅಲ್ಲದಡೆನ್ನಾ । ತೀರಿಸಲ್ ನೆನೆದ ಬಗೆ
ಭೂತಗಳೆನ್ನನೀಂತು । ಗೈದವೊ ಗಿರಿ । ಜಾತೆಯ ಪತಿಗೆ ಗೊತ್ತು
ಈ ತೆರನೆಸಗುವುದೆ । ಶಿವ ಶಿವ ಎನ್ನ । ಘಾತಿಸದೈದುವುದೆ
ಈ ಪರಿ ದುಗುಡದಿಂದ । ನಾಲ್ದೆಸೆಯನು । ತಾಪದಿ ನೋಡಲ್ಲಿಂದ
ಭೂಪನನೀಕ್ಷಿಸುತಾ । ಭಯದಿ ತಾ ಪ್ರ ।ಳಾಪಿಸುತೆಂದಳ್ ಮಾತೆ ೧೪

ರಾಗ – ಕಲ್ಯಾಣಿ, ಆದಿತಾಳ

ಬೆದರಲೇತಕೆ ನಾರಿ । ಮಾರನ ಕಠಾರಿ
ಬೆದರಲೇತಕೆ ನಾರೀ ॥ ಪ ॥
ಬೆದರಲೇತಕೆ ನಾ । ಬದಿಯೊಳಿರಲು ನೀ
ನಿದ ಬಿಡು ಮನದಲಿ । ಮುದವನು ತಳೆದು ॥ ಅ. ಪ. ॥
ಮದಿರಲೋಚನೆ ನಿನ್ನ । ಸೊಬಗನೊಮ್ಮೆ । ಬುಧರು ಪೇಳಲು ಚಿನ್ನ
ಪದುಮಗಂಧಿ ನಾ । ನಿದಕೋಸುಗ ಕದನದಿ ನೃಪನೊಳು ಕಾ ।
ದಿದುದೆಲೆ ರಮಣಿ
ಕಲಹದಿ ಗೆಲಿದಿತ್ತ । ತಂದಿಹೆ ನಿನ್ನಾ । ಕೊಲ್ಲುವರಲ್ಲಿದು ಚಿತ್ತ
ಬಲು ತರದೊಳು ಭ್ರಮೆ । ಗೊಳುತಿದೆಯದನನು ।ಗೊಳಿಸೈ ಬೇಗನೆ
ಕಲಶುಕವಾಣಿ
ಮಾರನುರಬೆ ತಣಿಯೆ ಕೇಳ್ ಗುಣಮಣಿಯೆ । ದಾರಿಯೇನೆನುತರಿಯೆ
ನಾರೀಮಣಿ ನಗೆ । ಬೀರುತ ನುಡಿ ದಯ । ದೋರಲೆ ಎನ್ನೊಳು ।
ನೀರೆ ಶೃಂಗಾರ
ಇಂಗಿತವೆನಗುಸುರೆ । ದಣಿಸುವುದೇಕೆ । ಭೃಂಗಕುಂತಳೆ ಶೂರೆ
ಅಂಗಜಗಿಣಿ ಸಾ । ರಂಗನಯನೆ ಲಲಿ ।ತಾಂಗಿ ಚಿಂತಿಸುವುದ ರಂಗವನರಿಯೆನು
ಅಷ್ಟಭಾಗ್ಯವು ಎನಗೆ । ಇಹುದು ಮೇಲೆ ವಿ । ಶಿಷ್ಟಭೂಪರು ಎನಗೆ
ಥಟ್ಟನೆ ಕಪ್ಪವ । ಕೊಟ್ಟೊಂದಿಪರಿದು । ದಿಟ್ಟವು ನಾ ಮನ । ಗೊಟ್ಟಿಹೆ
ನಿನಗೆ ೧೫

ರಾಗ – ತೋಡಿ, ಏಕತಾಳ

ನುಡಿಯ ಕೇಳುತೊಡನೆ ಸುದತಿ । ನಡುಗಿ ಕೋಪದಿಂದ
ಸುಡುಸುಡಿವನ ಧಡಿಗ ತನ್ನ । ಕೆಡಿಸುವನೆಂದೆನುತ
ಮರುಳೆ ಕೇಳಿನ್ನರೆಯೊಳ್ನೀರ, ನೆರೆದರೇನು ಫಲವು

ದುರುಳ ನಿನಗೀ ಪರಿಯೊಳೆರೆಯೆ । ಬರುವುದುಂಟೆ ದಯವು
ದಶಕಂಠ ರಕ್ಕಸನು ಸೀತೆ । ಗಸುವಿತ್ತ ಕೀಚಕನು
ಕುಸುಮಾಕ್ಷಿ ಸೈರಂಧ್ರಿಗಾಗಿ । ಉಸಿರ ತೊರೆದ ನೀನು
ದಾತ ಸುಕುಲಜಾತನೆಂಬೆ । ಮಾತಿದೆಲ್ಲ ಸಟೆಯು
ಧೂರ್ತರಿರುವ ರೀತಿ ನಡೆವೆ । ಪಾತಕಿ ಕೇಳದಿಟವು
ಪರರ ಹೆಂಗಸರೊಳು ಮನವ । ನಿರಿಸಿ ಕುಜನರಂತೆ
ನರಕದೊಳಗೆ ಹೊರಳುತಿಹುದು । ತರವೆ ನಿನಗೆ ಭ್ರಾಂತೆ ೧೬

ಸುದತಿಯಿಂತೆನಲಾಗ ಕೋಪಿಸುವ ಭೂಮಿಪಂ
ಹದದ ಕೂರಸಿಗೆ ಬಲಿಕೊಡುವೆನೀಕೆಯನೆನ್ನು
ತದ ನೆಗೆಯೆ ಬಳಿಕಲಶರೀರ ನುಡಿಯಾಯ್ತು ಹೆಂಗೊಲೆಯನೆಸಗದಿರೆನ್ನುತ
ಇದನರಿಯುತಚ್ಚರಿಗೊಳುತಾಗ ಧಾರುಣಿಪ
ನಧಿಕ ಚಿಂತೆಯೊಳಿರಲ್ಕಿತ್ತಲಾ ಕಾನನದೊ
ಳದುಭುತಾರ್ಭಟೆಗೊಟ್ಟು ವನವ ಸಂಚರಿಸಲ್ಕೆ ಪೊರಟ
ವಿದ್ಯುಲ್ಲೋಚನ ೧೭

ಚರಿಸುತ ಕಾನನವನು ನಿಶಿ
ಚರನಿವರಿರ್ಪೆಡೆಗತಿ ವಹಿಲದಿ ಬಂದೀಕ್ಷಿಸಿ
ಹರಿದಿವರಂ ತಿಂಬುವನೆನೆ
ಹರಿನಾದದೊಳಿಂತೆಂದನು ಗರ್ಜಿಸುತಾಗಲ್ ೧೮

ರಾಗ – ದೂರವಿ, ಅಷ್ಟತಾಳ

ಆರೆಲೋ ಮನುಜಾ । ಬಂದಿರುವವ । ನಾರೆಲೊ ಮನುಜಾ ॥ ಪ ॥
ಆರೊ ಸುಮ್ಮನೆ ಹುಲಿಯ ತುತ್ತಿಗೆ । ಹರಿ ಬಂದಿಹ ಕುರಿಯ ತೆರದಲಿ
ನಾರಿಯನು ಒಡಗೊಂಡು ಯಮನೆಡೆ । ಸೇರುವರೆ ಸರಿಯಾಗಿ
ಬಂದವನಾರೆಲೊ ಮನುಜ ॥ಅ. ಪ.॥
ಮನುಜರ ಮಾಂಸವಮೆಲದೆ । ಬಲು ದಿನವಾಯ್ತು ನಾನಿಲ್ಲಿ ಬರದೆ
ಮನಕೆ ತೋಷವದಾಯ್ತು ಬಲುಪರಿ । ಕ್ಷಣಕೆ ಹಿಡಿತಂದೀಕೆಯನು ನಾ
ಮನೆಗೆ ಕೊಂಡೊಯ್ದಿಡುವೆ ಕೊಬ್ಬಿಸಿ । ಘನದ ಬೋನವಗೈವೆ ನಂತರ
ಅಲ್ಲದಿರಲು ಲಗ್ನಗೈದು । ಸುಖ । ದಲ್ಲಿ ಮನೆಯೊಳಿಟ್ಟು ನಲಿದು
ವಲ್ಲಭೆಯ ತಾ ಮಾಡಿಕೊಳುವೆನು । ಮೆಲ್ಲಲೆಂತೀಯಧಮನಿರುತಿಹ
ಚೆಲ್ವ ಪಾಕವನೆಸಗುವೆನು ತೊಡು ನಿಲ್ಲದಿವನನು ಕೊಲ್ಲದೀ ಕ್ಷಣ ೧೯

ನಿಶಿಚರನು ಹೀಗೆನಲು ಕೇಳ್ದಾ
ಶಶಿಮುಖಿಯ ಭಯಗೊಂಡಿರಲು ಬಳಿ
ಕಸಮಸಾಹಸಿ ಸಾಯಕಂಗಳ ಧರಿಸಿ ಪೊರಟಾಗ
ಉಸುರಿದನು ಇನಿತೇಕೆ ಘರ್ಜಿಪೆ
ನುಸಿಯೆ ಗರ್ವವ ನಿಲಿಪೆನೆನುತಲಿ
ಮಸೆದ ಬಾಣವ ಬಿಡಲು ಖಳನಿಂತೆಂದ ರೋಷದಲಿ ೨೦

ರಾಗ – ಮಾರವಿ – ಏಕತಾಳ

ನರಗುರಿ ಕೇಳೆಲೊ । ಬರಿದೇತಕೆ ಶರ । ಸರಿಮಾಡುವೆ ಮರುಳೆ

ಧೂರದೊಳು ಎನ್ನಲಿ । ಸರಿನಿಲ್ಲುವರೀ । ಧರಣಿಯೊಳಾರುಸಿರು
ಖೂಳ ಖಳಾಧಮ । ತಾಳೆಲೊ ನಿನ್ನದೆ । ಸೀಳುತ ರುಧಿರದೊಳು
ಕಾಳಿಯನೋಕುಳಿ । ಕೇಳಿಪಡುಸಿರುವೆ । ಮೂಳನೆ ಬಾಯ್ಮುಚ್ಚು
ಖುಲ್ಲ ಮನುಜ ಬರಿ । ಝಲ್ಲಿನೊಳೇನ್ ಫಲ । ನಿಲ್ಲದೆ ಹಿಡಿದೀಗ
ಚೆಲ್ಲ ಬಡಿದು ಬಾಯ್ । ಪಲ್ಲಿಗೆ ತಗುಲದೆ । ಮೆಲ್ಲುವೆ ನೋಡೆಂದ
ಗಿಹಿಗಹ್ವರದೊಳು । ನರಿಪಂದಿಗಳನು । ತಿರಿದಟ್ಟುತ ತಿಂದ
ಉರವನು ಹೊಡೆದೀ  । ಧಾರೆಯೊಳು ಕೆಡಹುವೆ । ಖಳಕೇಳ್ ಖರೆಯೆಂದು
ಹೊಸಮಸೆತಿಹ ಕಣೆ । ವಿಸರದಿ ರಕ್ಕಸ ನಸುಕುಸಿಯುವೆನೆನುತ
ಎಸೆಯಲು ನೋಡುತ । ನಶಿಚರನವರನು । ತುಸ ಗಣಿಸದೆ ಮುರಿದು
ರೌದ್ರದೊಳಿವನನು । ಛಿದ್ರಿಪೆನೆನುತಲಿ । ಅದ್ರಿ ಕುಜವ ಮುರಿದು
ಭದ್ರನ ಶಿರಕಾ ಕ್ಷುದ್ರನು ಹೊಡೆಯಲು । ಬಿದ್ದನು ರಣಕಳದಿ ೨೧

ಧರಣಿಪತಿ ಕಾಮಿನಿಯ ಹಂಬಲ
ತೊರೆದು ಯಮನೆಡೆಗೈದಲಿತ್ತಲು
ಭರಿತತೋಷದಿ ಕರ್ಬುರನು ಸತಿಯೆಡೆಗೆ ನಡೆತರಲು
ಅರಿತದನು ನೃಪಸುತೆಯು ಮನದೊಳು
ಮರುಗಿದಳು ಖಗರಾಜನಟ್ಟುಳಿ
ತೊರೆದು ನಕುಲೇಶ್ವರಗೆ ಸಿಕ್ಕಿದ ನಗನೊಲ್ಕಾಂತೆ ೨೨

ರಾಗ – ಆನಂದಭೈರವಿ, ಏಕತಾಳ

ಜಯ ಜಯ ಜಗನ್ನಾಥ ಜಾನಕೀ ಸುಪ್ರೀತ
ಜಯ ಜಯ ಚಿದಾನಂದ ವಂದದ್ಯ ಸುಮನಸವೃಂದ
ಜಯ ರುಕ್ಮಿಣೀರಮಣ ಜಯ ಕೌಸ್ತುಭಾಭರಣ ಜಯ ಖಳಸ್ತೋಮ ಭೀಮ
ಭಯದೂರ ನೀ ಎನ್ನ ಬವಣೆಯನು ಪರಿಹರಿಸು
ದಯೆದೋರು ಕರುಣಾವಾವಿಧಿ ತನ್ನ ಬಿಡದೆ ವಿ
ನ್ಮಯ ಮೂರ್ತಿ ಕಾಯುತೀ ಖಳನ ಬಾಧೆಯ ಬಿಡಿಸು
ಪದುಮನಾಭನೆ ದಯದೊಳು ೨೩

ರಾಗ _ ಕೇದಾರಗೌಳ, ಅಷ್ಟತಾಳ

ಅರಮನೆಗೊಯ್ಯುತ ಸತಿಯನು
ಪೊರಮಡದೋಲ್ ಬಂಧನದೊಳಗಿಡುತಾ ಕರ್ಬುರ
ನಿರಲಿತ್ತಾ ವನಿತೆಯು ಬಲಂ ಪರಿ ದುಃಖಿಸಿದಳ್ ಘಾತಿಪ ರಕ್ಕಸನೆನುತಂ ೨೪

ರಾಗ – ಸೌರಾಷ್ಟ್ರ, ತ್ರಾವುಡೆ ತಾಳ

ಇನಿತು ಕಾಮಿನಿ, ದುರುಳ ನಡೆಯೊಳು । ದಿನಪ ಯುಗದೊಲ್ಕಳೆಯುತಿರಲಾ
ವನಿತೆ ಸುಖಿಸುವ ಕಾಲ ಬಂದುದು ಜನಪ ಕೇಳು
ಒಂದು ದಿನ ಕೌಶಂಬಿ ಧರಣಿಪ । ನೆಂದೆನುವ ವತ್ಸಾಖ್ಯ ಸಂತಸ
ದಿಂದ ಮಂತ್ರಿಯ ಕರೆದು ಮತ್ತವ । ನೆಂದನಿನಿತು
ಬೇಟೆಯಾಡದೆ ಬಹಳ ದಿನಗಳು । ದಾಟಿದವು ಇದಕಾಗಿ ಶಬರರ
ಕೂಟವನು ಬರಹೇಳು ತನ್ನಯ । ಘೋಟಕವನು
ತರಲುಸುರು ಇಂತೆನಲು ಕೇಳ್ದಾ । ವರಸಚಿವನಾಕ್ಷಣದಿ ಕರೆಸಲು
ಪೊರಟ ಜನಸಂದಣಿಯ ಕೂಡುತ । ಧರಣಿಪಾಲ ೨೫

ರಾಗ – ತುಜಾವಂತಿ, ಏಕತಾಳ

ಬಂದ ವತ್ಸಾಖ್ಯ ಬೇಟೆಗೆಂದು । ಸಂತೋಷದಿಂದ । ಬಂದ ॥ ಪ ॥
ಬಂದನಾಗ ಬಹು । ಮಂದಿಯ ಕೂಡುತ । ಚಂದದಿ ನರಪತಿ ।
ನಂದನನಂದು ॥ ಅ.ಪ. ॥
ಹಿಡಿಹಿಡಿ ಕಡಿ ಹೊಡಿ । ಜಡಿಬಡಿ ತಡೆಯೆನು
ತೊಡನಾ ಬೇಡರ । ಪಡೆಯನು ನೆಹರಿ ೨೬

ರಾಗ – ಕಾಪಿ, ಅಷ್ಟತಾಳ

ಏನ ಪೇಳುವೆನೀ ಸೋಜಿಗವ । ಇದ
ತಾನೆ ಕಟ್ಟಿಹುದಾರೊ ತಿಳಿಯೆ ತಾ ನಿಜವ
ಬಣ್ಣಿಸಲೇನೀ ಮಂದಿರವ । ಬಿಡು
ಗಣ್ಣರ ಮನೆಗಿಂತ ಸೊಬಗಿನೊಳ್ ಮೆರೆವ
ಬಣ್ಣದುಪ್ಪರಿಗೆ ವೈಭವವ । ನೋಡಿ
ತಣ್ಣಗಾಯಿತು ತೃಷೆ ಪೇಳಲೇನಿರವ
ಅರರೆ ಏನಚ್ಚರಿ ಭಯದಿ । ಓಡಿ
ದೆರಲೆ ಬಂದಿಲ್ಲೆನ್ನ ಕಾಂಬುವ ತೆರದಿ
ಹೊರನೋಟದಕ್ಷಿಗಳೆನಗೆ । ತೋರ್ಪ
ವರಿಯಬೇಕೆನುತೆಂದು ಭೂಮಿಪ ತಿರುಗೆ
ಅಂಗನೆಯೆನುತ ನಿಶ್ಚಯಿಸಿ । ತಾ ಕಾ
ಳಿಂಗವೇಣಿಯ ಬಳಿಗಾಗಿ ಮಂದರಿಸಿ
ಅಂಗಣವನು ಪೊಕ್ಕು ನೋಡಿ । ನೃಪ
ಪುಂಗವ ಮನದೊಳಗಿನಿತು ಮಾತಾಡಿ ೨೭

ರಾಗ – ಮುಖಾರಿ, ಏಕತಾಳ

ನೀರೆ ಸುಗುಣಿ ದಯೆದೋರುತ ಪೇಳ್ ನೀ । ನಾರೆನುತಲಿ ಚದುರೆ
ನೀರಜಾಕ್ಷಿ ಮದವಾರಣ ನಡೆ ನಗೆ । ಬೀರುತ ನುಡಿ ಧೀರೆ ॥ ಪ ॥
ಮಾನಿನಿ ನಿನ್ನಯ ಪಿತನಾರೆನ್ನುತ । ನೀನೊರೆಯಲೆ ಜಾಣೆ
ಕಾನನದೊಳಗೊರ್ವಳೆ ನೀನಿರುತಿಹೆ । ಯೇನೆನುತಲಿ ಕಾಣೆ
ಮನದೊಳು ಚಿಂತಾಲತೆಯದು ಹಬ್ಬುತ । ಮೊನೆಗೊಂಡಿಹುದೇನು
ಕನಕಾಂಗಿಯ ಮತ್ತದು ತವಮೊಗದೊಳು । ಮಿನುಗುವ ಬಗೆಯೇನು
ಚಂಚಲಾಕ್ಷಿ ಬಲು ಮಿಂಚುವ ಕದಪದು । ಕೊಂಚ ಕಂದಿಹುದೇನು
ವಂಚನೆಗೈಯದಲಸುರೆನ್ನೊಡನರ । ಸಂಚೆಗಮನೆ ನೀನು
ಬೆದರಲೇಕೆ ನಾ ವಂಚಕನೆನ್ನುತ । ಪದುಮನೇತ್ರೆ ಹೀಗೆ
ವಿಧುಧರೆನಾಣೆಯು ಕುಹಕಿಗನಲ್ಲವು । ಮುದದೊಳಗರುಹೆನಗೆ ೨೮

ರಾಗ – ಸುರುಟಿ, ಏಕತಾಳ

ಸುದತಿ ಶಿಖಾಮಣಿಯೇ । ಪೇಳುವೆ । ನಿದೊ ಮನ್ಮನ ತಣಿಯೆ
ಚದುರೆ ನೀನೆನಗಾ ।ಗದಿಕ ಬವಣೆ ಪಟ್ಟುದರಿಂ ದುಃಖಿಪೆ । ನಿದನೇನೆನಲಿ
ವತ್ಸನೆನಲು ನಾನೇ । ಬೇಟೆಗೆ । ಉತ್ಸಾಹದೊಳು ಕಾಣೆ
ಮತ್ತೀ ವಿಪಿನಕೆ ಚಿತ್ತೈಸಿದೆ ಮೃಗ । ದೊತ್ತಿನೊಳೈತಂ । ದಿತ್ತೆನು ದರ್ಶನ
ದುರುಳನ ಕಡುಭಯಕೆ । ದುಃಖಿಸ । ದಿರು ನಾನೀಕ್ಷಣಕೆ

ತರಿದಟ್ಟುವೆ ಯಮಪುರಿಗವನನು ಚಂ । ದಿರಮುಖಿ ನಿನ್ನನು
ಕರೆದೊಯ್ಯುವೆನು ೨೯

ಕೇಳುತಾಯತ ನೇತ್ರೆ ವತ್ಸನೃ
ಪಾಲನನು ಬಿಗಿದಪ್ಪಿ ಸಂತಸ
ತಾಳಿದುದನೊರೆಯಲ್ಕೆ ಫಣಿಪನಿಗಸದಳವು ನೃಪತಿ
ಲೀಲೆಮಿಗೆ ಘಟಿ ಎರಡು ಕಳೆಯಲ್
ಖಳನಿತ್ತಲು ನಡೆತರುತ ಕಡೆ
ಗಾಲ ಬಂದಿಹುದರಿಯದಾ ಗಂಧರ್ವನನು ನೋಡಿ ೩೦

ಭಳಿ ಭಳಿರೆನ್ನುತ ಕರ್ಬುರ । ಫಳಿಲನೆ ಮರಮುರಿದು
ತಲೆಯೊಳು ಹೊಡೆಯಲ್ಕಂಡಾ । ಬಲವಂತನು ತರಿದು
ಧರಣಿಪ ರೋಷವ ತಾಳುತ । ಶರವನು ಸುರರಿಪುಗೆ
ಭರದಿಂದೆಸೆಯಲು ದಾನವ । ತೆರಳಿದ ಯಮಪುರಿಗೆ ೩೧

ರಾಗ – ಭೈರವಿ, ಝುಂಪೆತಾಳ

ಚಿತ್ತವಿಸು ಶ್ರೀಹರ್ಷ । ನಿತ್ತ ವತ್ಸಾಖ್ಯಜನ
ಪೋತ್ತಮನು ನಡೆತರಲಿ । ನ್ನತ ದೃಢವರ್ಮ
ನಿದ್ದೆಯನು ತಿಳಿದುತ ತಾ । ನೆದ್ದು ನೋಡುತ ತನ್ನ
ಮುದ್ದುಮಗಳನು ವೈರಿ ಕದ್ದೊಯ್ದನೆನುತ
ಕಂಗೆಟ್ಟು, ಬಳಲಿ, ಹಲ । ವಂಗ ಚಿಂತಿಸುತ ಸಂತೆ
ಯಂಗವನು ನೆನೆನೆನೆಯು । ತಂಗಜನಪಾಲ
ಇರಲಿತ್ತಾಕ್ಷಣ ಬಂದು । ಚರರು ಪೇಳ್ದರು ನಮ್ಮ
ಪೊರಬಾಗಿಲೊಳಗೋರ್ವ । ತರಳೆಯನು ಕೂಡಿ
ಬಂದಿರುವೆನೆನಲು ನೃಪ । ನೆಂದವರಿಗೆ ಸಭೆಯ
ಹೊಂದ ಬಿಡಬಹುದೆನಲಾ । ನಂದದಿಂ ಚರರು
ಪೇಳಿದರು ಒಳಗೆ ಪೋ । ಗೆಂದುದನು ತಿಳಿದು
ನೀಲಕುಂತಳೆ ಸಹಿತ । ಗೋಲವತ್ಸಾಖ್ಯ ೩೨

ನಡೆತಂದು ಭೂಮಿಪಗೆ ವಂದಿಸಲು ತಿಳಿದಾಗ
ದೃಢವರ್ಮ ತೋಷಾಬ್ಧಿಯೊಳಗಾಡೆ ಪರಿವಾರ
ಜಡಜಮುಖಿ ಸೌರಂಭೆ ಸಹಿತಲಾನಂದವನು ಪಡೆದುದನು ಪೇಳಲೆಂತು
ಒಡನೆ ವತ್ಸನ ಮನ್ನಿಸುತ ಕುವರಿಯನು ಕೇಳು
ತಡಸಿರ್ದ ಕಷ್ಟಕತಿ ದುಃಖಿಸಲು ನರಪತಿಯ
ನುಡಿದಳಾಸುದರಿ ಚಿಂತಿಪುದೇಕೆ ವಿಧಿಲಿಪಿಯ ಮೀರಲಾರಳವು ಜಗದಿ ೩೩

ರಾಗ – ಮುಖಾರಿ, ಝುಂಪೆತಾಳ

ಮಗಳ ಮಾತಿಗೆ ಮೆಚ್ಚಿ ಜನಪತಿ
ಮಿಗಿಲುತೋಷವ ತಾಳಿ ಮುದ್ದಿಸಿ
ಭಗಣಪತಿ ಮುಖಿಗಾಗ ಲಗ್ನಕೆ ದಿನವ ನಿಶ್ಚೈಸಿ
ಜಗದ ರಾಯರನೆಲ್ಲ ಬರಿಸುತ
ಲಗಣಿತದ ಭೂದಿವಿಜರಿಂದಲಿ

ನಗಹರಾದಿ ದಿವೌಕಸರು ಮನಮೆಚ್ಚುವೋಲೆಸಗಿ ೩೪

ಮದುವೆಯ ಸಮಯದಿ ದ್ವಿಜರಿಗೆ
ಮುದದೊಳು ದಕ್ಷಿಣೆಯಿತ್ತಾ ಜನಪತಿ ಬಳಿಕಾ
ವಧುವರರಿಗೆ ಬಳುವಳಿಯ
ನ್ನಧಿಕ ತೆರದೊಳೀವುತ ಕಳುಹಿದ ಪುರವರಕಂ ೩೫

ಬಳಿಕಾವತ್ಸನು
ನಳಿನಾಕ್ಷಿಯನೊಡ
ಗೊಳುತಲಿ ಪಟ್ಟಣಕೈತದು
ಇಳೆಯನು ಪಾಲಿಸಿ
ಕಳೆದನು ಕಾಲವ
ಜಲಜಾಕ್ಷನ ಕರುಣದೊಳಂದು ೩೬

ರಾಗ – ಆಹೇರಿ, ಮಂಗಲ, ಝಂಪೆತಾಳ

ಶ್ರೀಕೃಷ್ಣನಿಗೆ ಕಮಲನಾಭನಿಗೆ । ಗಿರಿಧರಗೆ । ಲೋಕಪಾಲಕ ದೇವಕೀ ಕಂದಗೆ
ಪಾಕಶಾಸನ ಮುಖ್ಯ । ದಿವಿಜಗಣ ರಕ್ಷಕಗೆ । ಕಾಕುತ್ಸನಿಗೆ ವಿಮಲ ವನಮಾಲಿಗೆ ॥ ಜಯಮಂಗಲಂ ॥
ಮಾರಪಿತನಿಗೆ ಲಕ್ಷ್ಮೀನಾರಾಯಣಗೆ ಯೋಗಿ । ವರವಂದಿತಸದಾ । ನಂದಮಯಗೆ
ಶ್ರೀರಮಾಧವ ಕರುಣ । ವಾರಿನಿಧಿ ಭಕ್ತಜನ । ವಾರಿರುಹ ತರಣಿಭವ ದೂರ ಹರಿಗೆ ॥ ಮಂಗಲಂ ॥
ನಗಧರನಿಗಘಹರಗೆ । ಖಗರಾಜರೂಢನಿಗೆ । ಭೃಗುಜಗರ್ವಾಪಹಾರಗೆ ಗೋಪಗೆ
ಮಗುವನುದ್ಧರಿಸಿ ಮುಂ ಜಗವ ಸಲಹಿದ ಉಡುಪಿ । ಯಗಣಿತಾನಂದ ಶ್ರೀಕೃಷ್ಣಾದೊರೆಗೆ
ಜಯಮಂಗಲಂ । ನಿತ್ಯ ಶುಭಮಂಗಲಂ

*********************************

## ಯಕ್ಷಗಾನ ಕುಮಾರ ವಿಜಯ

**(ಶೂರ ಪದ್ಮಾಸುರ ಕಾಳೆಗ)**

ಶ್ರೀಕೃಷ್ಣ ಕರುಣಾಕರಂ ಶುಭಕರಂ ರಾಕೇಂದು ಶೋಭಾನ್ವಿತಂ
ನಾಕೇಶಾದ್ಯಮರೌಘವನ್ವಿತಪದಂ ಲೋಕೈಕನಾಥಂ ಹರಿಂ
ಕಾಕುತ್ಸ್ಥಂ ಸುರಥಾಙ್ಗಶೋಭಿತಕರಂ ಮಾಕಾಮಿನೀವಲ್ಲಭಂ
ಶೋಕಾಮ್ಭೋನಿಧಿಕುಮ್ಭಜಂ ವಿಮಲಶಾನ್ತಾಕಾರ ಮೂರ್ತಿಂ ಭಜೇ ೧
ಘನ ತಪೋಧನ ಸೂತ ನೈಮಿಷರ್ವಾದಿ ಮುನಿಸಂಕುಲಕೆ ಷಣ್ಮುಖನ
ನುಪಮದ ಲೀಲೆಗಳ ವರ್ಣಿಸಿದಂ –

ಚಿತ್ತವಿಪುದಖಿಲ ಮುನಿವರರೊರ್ಮೆ ಸಾಕೇಶ
ನಿತ್ತ ಸುರಪುರದಿ ಭೌಮ ಪ್ರತಿಹ ಪುರುಜ ಜಿತ
ವೃತ್ತ ರೇಣುಕ ತಪನ ಚವಮಾನನಿಮಿಷಾದ್ಯನಿಮಿಷದಿಂ ವೈಭವದೊಳು
ಮತ್ತೆ ಮೇನಕೆ ರಂಭೆಯುರ್ವಶಿ ತಿಲೋತ್ತಮೆಯ
ರೊತ್ತಿನೊಳು ಪಾಡುತಿಹ ದೇವಗಾಯಕರಿಂದ
ಚಿತ್ತಾವಧಾನದಿಂದೊಡ್ಡೋಲಗವನಿತ್ತು ಗೀಷ್ಪತಿಯ ಕರೆದೆಂದನು ೨

ಗುರುವರ್ಯ ಕೇಳೆನ್ನ ಮಾತ । ನಿನ್ನೊ । ಳರುಹುದೆಲ್ಲ ಪ್ರಖ್ಯಾತ

ಹರಿಹರ ಶರಜರ । ಕರುಣದಿ ನಮಗಿನ್ನು
ದುರುಳರ ಭಯವೆಲ್ಲಿ । ದೊರಕಿತು ಸೌಖ್ಯವು ಪ.

ತಾರಕನಳಿದಮೇಲವರ । ಶೌರ್ಯ । ತೀರಿತೆಮ್ಮೊಡನಿಲ್ಲ ಬವರ
ಮೀರಿ ಬಂದರೆ ಜಯ । ಸೇರುವುದುಂಟೆ ಪೆ
ಆರೆಮಗೆಣೆಯು ಕಾ । ಮಾರಿಯ ಕರುಣದಿ
ಸುರರ ಸೌಭಾಗ್ಯವೆಲ್ಲಿಹುದು । ಕಲ್ಪ । ತರು ರಕ್ಕಸರೊಳೆಂತು ಬಹುದು
ಪರಿಪರಿ ವಿಭವದಿ । ಮೆರೆವಪ್ಸರಾಂಗನೆ
ಯರನಾಳಲುಂಟೆ ನ । ಮ್ಮರಗಳೀನಾಕದಿ ೩

ಮುನಿವರರು ಕೇಳಿ ಬರ್ದಿಲರಾಣ್ಮ ಜೀವನೊಡ
ನಿನಿತುಸಿರಿ ಸಂಭ್ರಮದೊಳಿರೆ ಶೂರಪದ್ಮಾಖ್ಯ
ವನಧಿ ಮಧ್ಯದೊಳೆಸೆವ  ವೀರ ಮಾಹೇಂದ್ರ ಧರಣೀತಳವ ಪರಿಪಾಲಿಸಿ
ದನುಜೇಶ್ವರಂ ಶಂಖಪಾಲಾದಿ ಸಚಿವರಿಂ
ದನುಸರಿಸಿ ವಜ್ರಬಾಹುಕನಗ್ನಿ ಮುಖ ಮುಖ್ಯ
ತನುಜರಿಂ ಸಪ್ತಾಂಗಯುತ ಸಭೆಯೊಳೆಸೆದಿರಲ್ ಸುರಮುನಿಪ ನಡೆತಂದನು ೪

ಭಳಿರೆ ಮೆಚ್ಚಿರೆ ಕೇಳು । ಖಳಕುಲಮಣಿಯೆ
ಇಳೆಯ ಮಿಕ್ಕಿನ ದೊರೆ । ಗಳು ನಿನಗೆಣೆಯೆ ॥ ಪ ॥

ಸುರಪನರ್ಧಾಂಗಿಯ । ನರಿಯೆಂದು ಶಚಿಯೆಂಬ
ತರುಣಿ ತಾ ತೇಜದಿ । ಮೆರೆವಳು ರವಿಯಂತೆ
ವರಿಸು ನೀ ಶೀಘ್ರದೊಳು ವೀರರನಟ್ಟಿ
ಕರೆತಹುದಿಲ್ಲಿ ಕೇಳು ಆಡಿದ ನುಡಿ
ಸರಿಬಂತೆ ನಿನಗೆ ಪೇಳು ಧಾರಿಣಿಯನ್ನು
ಪರಿಪಾಲಿಸುತ್ತ ಸೌಖ್ಯದಿ ಮತ್ತೆ ಬಾಳು ೫

ಸುರರೊಡೆಯನಿಂಗನ್ಯನಾರಿಯ
ರಿರುವರಪ್ಸರಲೋಕದೊಳು ನಮ
ಗಿರದ ವಸ್ತುವೆ ಶಕ್ರಗೆನಲಾ ಮುನಿಪನುಸುರಿದನು
ಸರಿ ನುಡಿದೆ ತಾರಕನ ಕೊಲಿಸಿದ
ದುರುಳನಾಗಿಹನವನ ಮಡದಿಯ
ತರಲುಳಿಯಬೇಡೆನುತ ತೆರಳಲು ಸಚಿವನೊಡನೊರೆದ ೬

ಅಂತು ಪದ್ಮನು ಶಚಿಯ ಬಯಕೆಯನಾಂತು ಮನದೊಳು
ಖಚಿತಗೆಯ್ದುಯ್ದುವೆನು ನಾಕಕೆನುತ್ತ ಪೊರಮಡಲು –
ನಾಕದ ಭೋಗವ ತ್ಯಜಿಸುತ
ಶೋಕದಿ ಸಹಧರ್ಮಿಣಿಯೊಡನಾ ಗುರುಮತದಿಂ
ಶ್ರೀಕಾಶಪುರದುವನಕೆ
ಸಾಕೆನುತಯ್ತಂದನದಾರರಿಯದ ತೆರದಿಂ ೭

ವಿಪಿನದೊಳೀಶನ ಪದಯುಗ

ಜಪಿಸುತ ಸತಿಯೊಡನಮರೇಶನಿರಲ್ಕಿತ್ತಂ
ಗುಪಿತದಿ ಬಂದೆರಗುತ ಖಳ
ರುಪಟಳಗೆಯ್ದದನಾಳ್ದಂಗೊರೆದರ್ ಭಯದಿಂ ೮

ಆಗಳನಿಷರೊಡಯಂ ಅಜನೊಡಗೂಡಿ ರಜತಾದ್ರಿಯ ಬಳಿಗಂ ಹರಿತರುತೊಯ್ಯನೆ ಭರ್ಗಗೆ ಮೊರೆಯಿಟ್ಟನ್. ಪ್ರಸನ್ನನಾದ ಪರಶಿವನು ಪೊರೆಯುವೆ ಸರ್ವರ ಕಿರಿದು ದಿನದೊಳಿದು ಭರವಸೆರಯಹುದ್ಯೆ – ಎಂದರುಹುತ ಅಂತರ್ಧಾನನಾದನು. ಇತ್ತ ಪದ್ಮಾಖ್ಯ ರಕ್ಕಸನು ಶಕ್ರ ಶಚಿಯರು ಸಿಕ್ಕದಿದುಕೆ ಚಿಂತಿಸುತಿರಲು, ತಂಗಿ ಆ ಅಜಮುಖಿಯು ಬಂದಗ್ರಭವಗೆರಗಿ –

ಓಹೋ – ನೀನೇತಕೆ ಚಿಂತಿಪೆ ಮನದಿ । ಬಿಡುಸದ್ಗುಣವನಧಿ ॥ ಪ ॥

ಧರಣಿ – ಈರೇಳರೊಳಿರಲಾ ಸತಿಯ । ಕರುಣಿಪುದನುಮತಿಯ
ತರುವೆ – ನಾ ಧರಿಸುತ ಸೂಕ್ಷ್ಮಾಕೃತಿಯ
ಗಿರಿಗಹ್ವರ ಸಂಚರಿಸುತಲಲ್ಲ
ಲ್ಲರಸಿ ಸರಸಿ ನದ । ಸರಿತೆಯೊಳೆಲ್ಲ ೯
ಸೋದರಿಯೆಂದ ನುಡಿಯ ನಚ್ಚಿ । ಕಲ್ಮಷಮನ ಬಿಚ್ಚಿ
ಮೋದದಿಂದುಸಿರಿದ ತಾ ಮೆಚ್ಚಿ
ಆದಡೆ ಕೇಳ್ ಸ್ಮರ್ । ಬಾಧೆಯಯೊಳೆಡಬಲ
ಹಾದಿಗರನು ನೀ ಬಾಧಿಸದಿಹುದು ೧೦

ಎನಲೊಪ್ಪಿ ಪೊರಮಡುತ ಕಾನನವ ಕಳೆಕಳೆದು, ಒಂದೆಡೆ ಕುಳಿತು –
ರೂಢಿಯಲಿ ತೊಳಲಿರ್ಪ ಶ್ರಮ ಹೋ
ಗಾಡಿಸಿದನೀ ಪವನ ಬಾಯೊಳ
ಗಾಡಿದೊಡೆ ಫಲವಿಹುದೆ ಮತ್ತೀಸಮಯ ಹರವಶದಿ
ಜೋಡಿಗನು ತಾನೊದಗಲೀ ಸುಖ
ಕೀಡಿಹುದೆ ಮಧುಮಾಧವಿಗೆ ತಾ
ಕೂಡಿದಂತಕ್ಕೆನುತ ಯೋಚಿಸುತಿರ್ದಳಜಮುಖಿಯು ೧೧

ದುರುಳೆಯು ತಾನೀ । ಪರಿ ಮನದೊಳು ಪರ
ಪುರುಷನ ಬಯಸುತ ಮರನೆಡೆಯ
ತೊರೆದಾಕ್ಷಣ ಶಚಿ ।ಯರಸಲ್ಕೆನ್ನುತ
ಪೊರಟಯ್ತಂದಳು ಮುಂಗಡೆಯ
ಅನಿತರೊಳೊಯ್ಯನೆ । ಮುನಿದುರ್ವಾಸನು
ವನದೊಳಗೊರ್ವನೆ ಬರಲಿತ್ತ
ದನುಜೆಯು ಕಂಡಿದ । ತನು ಹಿಗುತ ನಿಜ
ಮನಸಿನೊಳಾಡಿದಳಿಂತೆನುತ ೧೨
ಸರಿಸರಿ ಇದು ಸುಕೃತ ಫಲ । ದೊರಕಿದುದೀ ಸಮಯ ಭಲ
ನೆರವಾಯ್ತಹ ಮನವರಿಸೆ । ಸ್ಮರಶರದುರಿ ಪರಿಹರಿಸೆ ॥ ಪ ॥
ಬಾರೆನುತಲಿ ಕರೆಯಲಿಲ್ಲ । ದೂರದೊಳಿಗೊ ಬಪ್ಪನಲ್ಲ
ಮಾರನಿಗೆನ್ನೊಲು ಮುನಿಸೆ । ತೋರಿದೆನೀತನ ಮನಸೆ
ಅಡಿಗಡಿಗುಡಿ ಸಡಲಿಡುತ । ದೃಢ ಕುಚಗಳನೊತ್ತಿ ಮುತ್ತ
ಬಿಡದೊಡನಿಡುತೆಡಬಲದಿ । ಪಿಡಿದಪ್ಪುತ ಕಡು ಛಲದಿ
ಸಮರತಿಯೊಳು ರಮಿಸಿ ಚಿತ್ತ । ಭ್ರಮಿಸಿ ವಿಟನನಿರಿಸಿ ಮತ್ತಾ

ಗಮುವನರಿವೆನೆನುತಲಾಡಿ । ಗಮಿಸಿ ಪಿಂದೆ ತನ್ನ ನೋಡಿ
ಸಟೆಯಿದಲ್ಲ ತನಗೆ ತಾನೆ । ಪಟುಗಾಣಿಸೆನು ಘೋರ ಶಾನೆ
ವಿಟನು ಮೆಚ್ಚಲುಂಟೆ ಬೇರೆ । ಕುಟಿಲಗೆಯ್ಯದಗಲಲಾರೆ ೧೩

ಎಂದುಸಿರಿ ದಾನವಿಯು ಮಾಯದಿ
ಸುಂದರಾಂಗನ ಧರಿಸಿ ಎಳೆವೆ
ಣ್ಣಂದ ಚಂದದಿ ಮಂದಗತಿ ಸುಮಗಂಧ ತಳೆದಿರಲು
ಮುಂದೆ ಮುಂದಯ್ತರುತ ಮುನಿಪತಿ
ಬಂಧುರದ ಕೋಮಲೆಯನೀಕ್ಷಿಸು
ತೆಂದ ತನ್ನೊಳಗರೆರೆ ಯಾರಿವಳೆನುತ ಬೆರಗಿನೊಳು ೧೪
ಇರೆ,
ಮೃಗನಯನೆ ಮತ್ತಾ ಮುನೀಶನ
ಬಿಗಿವಿಡಿದು ಬಿಡದಾಗ ಮಾರನ
ಬಗೆಬಗೆಯ ತಂತ್ರದೊಳು ರಮಿಸುತ ನಿಜವ ತೋರಲ್ಕೆ
ದಿಗಿಲುಗೊಂಡತಿ ಭಯದಿ ಮುನಿಕೈ
ಮಿಗುತಲೋಡುವುದರಿತು ರಕ್ಕಸಿ
ಯುಗಗೊಡದನುತಾಪಗಳೆದಿಂತೆಂದಳಡಿಗೆರಗಿ ೧೫

ಎತ್ತನೋಡಿರಮಮ ತನಗಾ
ಮತ್ತಕಾಶಿನಿ ಕಾಣಳೆಲೆಮುನಿ
ಪೋತ್ತಮನೆ ನಿನಗರಿವಿರಲು ಪೇಳೆನುತ ಮಗುಳೆರಗೆ
ಮತ್ತೆ ಮನದೊಳು ಕೋಪಿಸದೆ ಹಿತ
ಚಿತ್ತನಾಗುತ ನಾರಿಯೊಳು ತಾ
ಬಿತ್ತರಿಸಿದನು ಶಚಿಯು ನೆಲಸಿಹ ಠಾಣವನು ದಯದಿ ೧೬

ಅಖಿಳ ಮುನಿವರರು ಲಾಲಿಸುವುದೈ ತಾಪಸಿಯು
ಮಖಹರನ ಪ್ರಾರ್ಥಿಸುತ ತೆರಳಿದಂ ಬಳಿಕುಲಜ
ಮುಖಿಯು ವಿಪಿನದೊಳಿತ್ತ ವಾತಾಪಿ ಇಲ್ವಲರ ಪಡೆದವರನಟ್ಟಿ ಪುರಿಗೆ
ಶುಕವಾಣಿಯನ್ನರಸಲೆಂದು ಮುಂದಯ್ದಿ ಗಿರಿ
ನಿಕರಮಂ ಕಳೆದು ಶ್ರೀಕಾಶವನದೊಳ್ ಕುಮುದ
ಸಖನಂತೆ ರಾಜಿಸುತ್ತಿರ್ಪ ಸುರಪಾಲನರ್ಧಾಂಗಿಯಂ ಕಂಡಳಸುರೆ ೧೭

ಏನೊರೆದೆಯೆಲೆ ತರುಣಿ ನಿನಗಸ
ಮಾನವಾದನೆ ಪದ್ಮ ನಿನ್ನ ಅ
ಧೀನವೇ ಬೀಕೊಲ್ಲೆನೆಂಬುದು ಬಿಡುವರ್ ಯಾರೆನುತ
ಹೀನ ರಕ್ಕಸಿ ಭುಜಕೆ ಕರವಿಡೆ
ಮುನಿನಿಯು ತಾ ಕೆಟ್ಟೆನೆನ್ನುತ
ದೀನರಕ್ಷಕ ತ್ರಿಪುರಹರ ಸಲಹೆನುತ ಮರುಗಿದಳು ೧೮

ತರುಣಿ ಮೊರೆಯಿಡಲರಿತು ಬಳಿಕಾ
ಧುರ ಪರಾಕ್ರಮಿ ಕಾನನೇಶನು
ಭರದಿ ದುರುಳೆಯ ಕರಗಳನು ತರಿದಡಗಲಾ ಕ್ಷಣದಿ
ಅರರೆ ವಡಬೆಂಬಗಿನಿಯೋ ನಾಣ

ನರಿಯೆ ಪದ್ಮನ ಭಗಿನಿಯೋ ಗಿರಿ
ಬಿರಿವ ತೆರದೊಳು ಗರ್ಜಿಸುತಲಿಂತೆಂದಳಜಮುಖಿಯು ೧೯

ಭಳಿ ಭಳಿರೆಲೆ ಶಚಿ ಜಾಣೆ । ದಿಟ । ವಿಳೆಯೊಳು ನಿನಗೆಣೆಗಾಣೆ
ತಿಳಿಯಂದದಿ ಕರಯುಗವ । ನೀ । ಕಳೆದೆಯೆ ಸುಡು ಈ ಮೊಗವ
ಪೊತ್ತಿಹ ಮೇಲೆ ದಿಟವಾಗೆ । ನಿ । ನ್ನೆತ್ತಿಕೊಂಡೊಯ್ಯದ ಮೇಗೆ
ಕೊತ್ತಿಯೆಂದೆಣಿಸಿಕೊ ಮನದಿ । ಇ । ನ್ನೆತ್ತಲಡಗಲೀ ವನದಿ
ಅಣ್ಣನೊಳೊರೆದಿದನೆಲ್ಲ । ಮು । ಕ್ಕಣ್ಣನು ಬರೆ ಭಯವಿಲ್ಲ
ಬಣ್ಣಗೆಡಿಸುತೊಯ್ಯದಿರೆ । ನಾ । ಪೆಣ್ಣಿನ ಜನ್ಮವೆ ಮದಿರೆ ೨೦

ರಜತಾದ್ರಿಯೊಳು ಮಹೇಶನ
ಗಜೆಯೊಡೆನಖಿಳ ಗಣದಿಂದೆಸೆದಿರೆ ಶಶಿಚಕ್ರ
ರಜನಂ ಕೂಡುತ ಬಂದಾ
ಭುಜಗಾಭರಣಂಗೆರಗುತ ಪ್ರಾರ್ಥಿಸುತೆಂದರ್ ೨೧

ದೇವ ಸಂಕುಲವೂ ಕೂಡಿ ಮಹಾದೇವನನು ಸಾಕಲು, ಪ್ರಸನ್ನನಾದ ಗೌರೀನಾಥನವರ ಸಂತೈಸಿ, ಷಣ್ಮುಖನಿಗೆ ಪ್ರೀತಿಯೊಳು ಬರಲೊರೆವುದೆನ್ನುತ ದೂತನೋರ್ವನ ಕಳುಹಿದೊಡೆ ತಿಳಿದಾ ತತ್‌ಕ್ಷಣ ಕಾರ್ತಿಕೇಯನು ಬಂದನಾ ಸಭೆಗೆ

ಬಾರೆನ್ನ ಸುಕು । ಮಾರ ಸ । ಮೀರ ಬಲಾನ್ವಿತ ಸುಂದರ ।
ವೀರ ಉದಾರ ಮ । ಯೂರ ಸ್ಕಂದನ ಸು । ಧಾರಸನಿಧಿ ಗುಣಚಂದಿರ ॥ ಪ ॥
ಜಲಜಭವನರ । ಬಲದಿ ಛಲದಿ ಬ
ರ್ದಿಲರಿಂದಸದಳ ನೊಡಲು
ಗೆಲುವೆ ಕಲಹದೊಳು । ಹಲವರೇಕೆ ನೀ
ಒಲಿದಿದಿರೊಳು ಮನಮಂಡಲು
ಇದರಿಂದ ನೀ । ಮುದದಿ ಪೋಗಿ ರಣ । ಕೊದಗಿ ದನುಜರನು ಗೆಲ್ಲುತ
ಬೆದರಿ ಬಂದಿರುವ ವಿ । ಬುಧರ ಪಾಲಿಸೆನೆ । ಚದುರೆನಂದ । ನಗೆ ಚೆಲ್ಲುತ ೨೨

ಪದ್ಮಾಸುರನ ಮೇಲೆ ಯುದ್ಧ ಘೋಷಿಸಿದ ಕುಮಾರಸ್ವಾಮಿ. ಅದು ಘನಘೋರ ಸಂಗ್ರಾಮ !

ವೀರಷಡುರಥರಖಿಳರಿಂತು ಕು
ಮಾರಿನಿಂ ಮಡಿಯಲ್ಕೆ ಮಿಕ್ಕಿಹ
ಭೂರಿಬಲ ಬೆರುತಲೆ ಚದರಿತು ನಾಲ್ದೆಸೆಗೆ ಬಳಿಕ
ಶೂರ ಪದ್ಮಾಸುರನು ಕಾಣುತ
ಪಾರುತಿಹ ನಿಶಿಚರಕದಂಬಕೆ
ಸಾರಿದನು ಭಯವಿಲ್ಲ ನಿಲಿ ನಲಿರೆನುತ ಧೈರ್ಯದೊಳು ೨೩

**ಆ ಪ್ರಸ್ತಾವದೊಳ್, ಶೂರಪದ್ಮನ ಮಾಯಕದ ಯುದ್ಧವಿದ್ಯೆಯ ಕಂಡು –**

ನೋಡುತಲವರಾದ್ಯರ್ ಕರ
ಜೋಡಿಸಿ ಗುಹನಂ ಪ್ರಾರ್ಥಿಸೆ ಪದ್ಮಾಸುರಗಂ
ಕೂಡಲ್ ಸುಜ್ಞಾನಂ ಯವೆ
ಯಾಡದೆ ಬೆರಗಿನೊಳ್ ವಿಶ್ವಾಕಾರನ ಕಂಡಂ ೨೪

ಬೆರಗಾಗಿ ನಿಂದಿರೆ –
ಭಳಿಭಳಿರೆ ಬಾಲಕನು ಮೋಡಿಯ
ತಿಳಿದಿಹನು ನಮ್ಮಂತೆ ಮತ್ತರೆ
ಗಳಿಗೆಯೊಳು ಕಲಕಿದನು ಮನ್ಮನ । ದೊಳಗೆ ಪೊಕ್ಕು

ವರವ ಪಡೆದಿಹೆ ಹರನೊಳೀತನ
ಸರಕುಗೆಯ್ವೆನೆ ಹೊಡೆದು ಸಂಗರ
ಧರಣಿಯೊಳು ಕೆಡಹುವೆನೆನುತ । ಬೊಬ್ಬಿರಿದನಾಗ
ಇಂತುಮಾಯಾ ಮೋಹಿಕನು ಕೌಂ
ಚಾಂತಕನೊಳನುವರಕೆ ಪುನರಪಿ
ಭ್ರಾಂತಿವಿಡಿದಯ್ತರಲು ಕಂಡು ಮ । ಹಾಂತ ಬಲನು
ಮುಕ್ತಿ ಹೊರಪಿನಗಿಲ್ಲ ಧರ್ಮಾ
ಸಕ್ತಿ ಸಾಮವನೊಲ್ಲನೀತನ
ಶಕ್ತಿ ಬಿಟ್ಟರಿದೆಮ್ಮ ನಂಬಿಹ
ಭಕ್ತರನು ರಕ್ಷಿಸುವೆನೆಂದೆನುತ ಶಕ್ತಿ
ಪಕ್ಷಿವಾಹನ ಕಳುಹೆ ಜ್ವಲಿಸುತ
ತಕ್ಷಣದಿ ಬರೆ ಭಯದಿ ದಾನವ । ನೀಕ್ಷಿಸುತ
ಕಡಲ ಪೊಗಲಾ ಶಕ್ತಿ ದುರುಳನ
ಬಿಡದೆ ಸುಡುತಿರೆ ಮೇಲ್ಬರಲು ಕಂ
ಡೊಡನೆ ಶಿರವನು ಕಡಿದು ಬಾಂದಳ । ಕಡರಿತಾಗ ೨೫

ಅಂಬಿಕಾತ್ಮಜನು ದಿತಿಸಂಭವರ ಸಂಹರಿಸಿ ಸಂಭ್ರಮದೊಳಿರೆ
ದಿವಿಜೇಂದ್ರನು ನಮಿಸಿ
ಚಿತ್ತವಿಸೆನ್ನಯ ಮಾಂತ । ಸ । ರ್ವೋತ್ತಮ ಸಜ್ಜನಪ್ರೀತ
ಅತ್ತಲಳುವ ಜಡ । ಗಿತ್ತ ಪಗ್ಯಜಂ । ತುತ್ತರವಿದು ಲೋ
ಕೋತ್ತರ ಪಾವನ
ದೇವ ನೀನಿರೆ ಕೇಳು । ಇ । ನ್ನಾವನು ಬಾಧಿಸ ಪೇಳು
ಸಾವಿಗಂಜುವೆನೆ । ಭೂವಲಯದಿ ಸಂಜೀವನೌಷಧವ ಸೇವಿಸಲೊಮ್ಮೆಗೆ
ನಂಬಿದಕೆ ಫಲವಾಯ್ತು । ಮನ । ದ್ದಂಬಲವೆಲ್ಲವು ಹೋಯ್ತು
ಶಂಭು ನೀನೆ ಬೇ । ರೆಂಬುದಕೆ ಎಮ । ಗಿಂಬುಗೊಟ್ಟು ಪೊರೆ
ಯಂಬಿಕೆಯಣುಗನೆ
ಸತಿಸುತರ ರಕ್ಷಿಸಿದೆ । ನೀ ದಿತಿಜರನು ಶಿಕ್ಷಿಸದೆ
ಅತುಲವಾದುದಪ । ಕೃತಿಯಿದಕೆನ್ನೊಳು । ಪ್ರತಿಗಾಣೆನು ಸುಲ
ಲಿತ ಷಡ್ವದನ ೨೬

ಆದಡೆನ್ನೊಂದರಿಕೆಯಿಹುದಿನ
ನಾದರಿಪುದೆಲೆ ದೇವ ನೀ ವಿಬು
ಧಾದಿ ಸರ್ವರ ಜೀವದಾನವನಿತ್ತ ಪ್ರತಿಫಲಕೆ
ಮೋದದಿಂದೆನ್ನಣುಗೆಯನು ತವ
ಪಾದಕರ್ಪಿಸಲಿಚ್ಛಿಸುವೆ ಕಡ
ವೋದುದೆಂಬುದಕಲ್ಲ ದಾನವ ನೀ ಪರಿಗ್ರಹಿಸು ೨೭

ನಾರಿಯರು ನೆರೆದಾ ವಧೂವರರ ಹಸೆಗೆ ಕರೆ
ದಾ ರಾಜಶೇಖರನ ನೆನೆದದರಸಿನೆಣ್ಣೆ ವಿಧಿ
ಯಾರಂಭ ಮೆಸಗಿ ಸೌರಂಭಾತಿಶಯಮಾಗೆ ಮಂಗಲಾಕ್ಷತೆಯ ತಳಿದು
ಭೂರಿ ವಿಬುಧಾದಿ ಸಂದಣಿ ದಣಿಯೆ ಕಂಡು ಕಂ
ಡಾ ರಂಭೆಯುರ್ವಶಿಯರೊಲಿದು ನಲಿದಾಡೆ ರತು
ನಾರತಿಯನಾ ರತಿಯ ಮೂರುತಿಯರೆತ್ತಿದರ್ ಬಳಿಕ ಮಂಗಳರವದೊಳು ೨೮

ಶ್ರೀ ಶಂಕರ ಸುತಗೆ । ರವಿಸಂ । ಕಾಶ ದಿವಿಜನುತಗೆ
ದೋಷರಹಿತ ಜಗ । ದೀಶ ಗುಹಗೆ ಮುನಿ । ಪೋಷಗೆ ದೈತ್ಯವಿ
ನಾಶಗೆ ನಿರ್ಜರ । ಯೋಷೆಯರಾರತಿಯ ಬೆಳಗಿದರೆ । ಶೋಭಾನೆ
ಅಂಗಜನರಗಿಣಿಗೆ । ಸತತ ಸು । ಮಂಗಳೆ ಗುಣಮಣಿಗೆ
ಭೃಂಗಾಲಕಿಗೆ । ಕುರಂಗನಯನೆಗೆ ಭು । ಜಂಗವೇಣಿಗೆ
ಶೃಂಗಾರಿಗೆ ದೇ । ವಾಂಗನೆಯರಾಗ ಬೆಳಗಿದರೆ । ಶೋಭಾನೆ
ಅಗಣಿತ ಮಹಿಮನಿಗೆ । ನಿತ್ಯಾ । ತ್ಮಗೆ ಗಣಪಾಲನಿಗೆ
ಅಗಜಾತ್ಮಜನಿಗೆ । ಖಗರೂಢಗೆ ಮೂ । ಜಗದೊಡೆಯನಿಗಾ
ರ್ಮಗನಿಗೆ ಶರಜಗೆ । ಮುಗುದೆಯರಾರತಿಯ ಬೆಳಗಿರೆ । ಶೋಭಾನೆ ೨೯

ತಂದೆ ತಾಯ್ಗಳ ಕೂಡಿ ಶಿವಗಣ
ಸಂದಣಿಯನೊಡಗೊಂಡು ಮೇಣ್ ಸಂ
ಕ್ರಂದನಾತ್ಮಜೆಯೊಡನೆ ವಿಭವದಿ ರಜತಗಿರಿಗಾಗ
ಬಂದು ಶರ್ವರ ಮನ್ನಿಸುತ ಬಳಿ
ಕಿಂದುಶೇಖರ ಸಹಿತ ಸಜ್ಜನ
ಬಂಧು ಕರುಣಾಸಿಂಧು ಪೀಠದೊಳೊಪ್ಪಿ ಮೆರೆದಿರ್ದ ೩೦

ಇಂತೆಸೆವ ಸತ್ಕಥೆಯ ಗೌರೀ । ಕಾಂತನೊಲುಮೆಯೊಳಾ ಮಹಾಮುನಿ
ಸಂತತಿಗೆ ವಿವರಿಸಲು ಸೂತನು । ಸಂತಸದೊಳು
ಪರಮಪಾವನ ಲೋಕದೊಳು ಶಂ । ಕರನ ಲೀಲೆಯಿದೆನುತ ಮುನಿಗಳು
ಹರನ ಪ್ರಾರ್ಥಿಸುತ್ತಿದ್ದರೆಂಬೀ । ಚರಿತೆಯನ್ನು

ವಿಧುಪುರಾಧಿಪ ಚಂದ್ರಮೌಳಿಯ । ಪದವ ನೆನೆದಿದ ರಚಿಸಿದೆನು ತ
ಪ್ಪಿದರೊಳಿರೆ ಸಮವೆಸಗಿ ಮೆರೆಸಲೆಂ । ಬುದಕೆ ಬಳಿಕೆ

ಸರ್ಪಭೂಷಣನ ಭಕ್ತ ಕವಿತಾ । ದರ್ಪಣಾಬ್ಧಿಗಭೀರ ಗುರುವೆನಿ
ಸಿರ್ಪ ಮಳಲೀ ಸುಬ್ಬರಾಯರಿ । ಗರ್ಪಿಸಿದೆನು
ಅರಿಯೆ ಯಮಕಗಮಕದ ವ್ಯವ ಹೃತಿ । ಯರಿಯೆ ಪ್ರಾಸೀರೆಂಟು ಭೇದವ
ನರಿಯೆ ಪದಿನೆಂಟಂಗ ದಶಗುಣ । ವರಿಯೆನಿಸಿತು
ಹರನು ಪ್ರೇರೇಪಿಸಿದಂ ತೆರಗಿದ । ಬರೆದನಾತನ ಲೀಲೆಯೆಂಬುದ
ನರಿತು ಸರ್ವರು ಮನ್ನಿಸುವುದಿರೆ । ಕೊರತೆಯುಳಿದು
ಕನ್ನಡದ ನುಡಿಯೆಂದುಪೇಕ್ಷಿಸ । ದಿನ್ನಿನದನು ಪ್ರಾಚುರ್ಯಗೊಳಿಸುವ
ಕನ್ನಡಿಗರನು ಪೊರೆವ ಶಂಕರ । ಕನ್ನಡಿಗನು ೩೧

ಮಂಗಳಂ ಜಯ । ಮಂಗಳಂ ಶುಭ । ಮಂಗಳಂ ಮಹಲಿಂಗಗೆ
ಅಂಗಜಾರಿ ಭು । ಜಂಗಭೂಷ ಸಿ । ತಾಂಗ ಕರುಣಾಪಾಂಗಗೆ ಪ.

ನೀಲಕಂದರ । ಶೂಲಧರ ಶಿರ । ಮಾಲ ಗಿರಿಜಾಲೋಲಗೆ
ಕಾಲಕಾಲ ಕ । ಪಾಲ ಭೃದ್ಗಣ । ಪಾಲ ತ್ರಿಗುಣಸುಶೀಲಗೆ
ಈಶಮುನಿಜನ । ಪೋಷಪಾವನ । ವೇಷ ಪುಷ್ಕರಕೇಶಗೆ
ದೋಷ ರಹಿತ ಗಿ । ರೀಶ ರವಿಸಂಕಾಶ ತ್ರಿಪುರರ ನಾಶಗೆ
ಇಂದುಶೇಖರ । ನಂದಿವಾಹನ । ಸ್ಕಂದಪಿತ ಗುಣವೃಂದಗೆ
ಅಂಧಕಾರಿ ಸು । ರೇಂದದ್ರನುತ ನತ । ಬಂಧು ನಿತ್ಯಾನಂದಗೆ
ಭೀಮಸಂಗರ । ಭೀಮವಿಘ್ನವಿ। ರಾಮ ತಾರಕನಾಮಗೆ
ಕಾಮಪಿತ ಪ್ರೀ । ತಾಮಲಾಚಲ । ಜಾಯನೋತ್ಪಲಸೋಮಗೆ
ಹರದಿಗಂಬರ ಗಿರಿಶ ಗಂಗಾ । ಧರ ವರದ ಶಂಕರನಿಗೆ
ನಿರುತ ಭಕ್ತರ ಪೊರೆವ ಹಿಮಕರ । ಪುರದ ಚಂದ್ರೇಶ್ವರನಿಗೆ ೩೨

***********************************

## ಅರ್ಥಕೋಶ

| | | |
|---|---|---|
| ಅಕ್ಕುಮೆ | = | ಸಾಧ್ಯವೆ, ಯೋಗ್ಯವೆ |
| ಇಟಿಕೆಯ್ | = | ಹೀಯಾಳಿಸು |
| ಅಗಲ್ದ | = | ಬಿಟ್ಟುಹೋದ, ಓಡಿಹೋದ |
| ಇಱೀಳ್ಕಾಲ | = | ಹದಿನಾಲ್ಕು ವರ್ಷ |
| ಅಟ್ಟುಳಿ | = | ಹಿಂಸೆ |
| ಉಂತೆ | = | ಸುಮ್ಮನೆ |
| ಅಣಿಗೆಯ್ | = | ಸಿದ್ಧಪಡಿಸು |
| ಉಕ್ಕಿನ | = | ಹರ್ಷ |
| ಅಪ್ಪುಕೆಯ್ | = | ಸ್ವೀಕರಿಸು |
| ಉತ್ತರಿಗೆ | = | ಉತ್ತರೀಯ, ಮೈ ಮೇಲಿನ ಹೊದಿಕೆ |
| ಅರಲ್ | = | ಹೂವು |
| ಉಪ್ಪವಡು | = | ಮೇಲೇಳು |
| ಅರಸುಗೆಯ್ಮೆ | = | ರಾಜ್ಯಭಾರ |
| ಉಬ್ಬೆಮೆ | = | ದೊಡ್ಡ ಭ್ರಮೆ |
| ಅಱಿಪು | = | ಹೇಳು, ಬಿನ್ನವಿಸು, ತಿಳಿಸು |
| ಉರದೆ | = | ತಡಮಾಡದೆ |
| ಅಱಿಯಾ | = | ಗೊತ್ತಿಲ್ಲವೆ |
| ಉಱುಗಿಲ್ಲದ | = | ತಪ್ಪಿಲ್ಲದ |
| ಅಲರಿಚ | = | ಬ್ರಹ್ಮ |
| ಉಸಿರ್ | = | ಹೇಳು |
| ಅಸಿಯೊಡಲು | = | ತೆಳುವಾದ ಹೊಟ್ಟೆ |
| ಉಟಿ | = | ಬಿಡು |
| ಅಳವಿಗಳಟಿದ | = | ಲೆಕ್ಕಕ್ಕೆ ಸಿಕ್ಕದ |
| ಎಕ್ಕಟಿ | = | ಏಕಾಂತ |
| ಅಟಿಕೆ | = | ಸಾರ (?) ಅಳಿವು |
| ಎಗ್ಗು | = | ಅವಿವೇಕ |
| ಅಟ್ಟ್ | = | ಪ್ರೀತಿ |
| ಎಡರ್ಗೇಡಿ | = | ವಿಘ್ನೇಶ್ವರ |
| ಅಟಿಂಬ | = | ತುಂಬಾ, ಬಹಳ |
| ಎಣೆ | = | ಸಮಾನ |
| ಆಕರ್ಣಾಂತ | = | ಕಿವಿಯವರೆಗೆ |
| ಎರೆವರು | = | ಭಿಕ್ಷುಕರು |
| ಆಣತಿ | = | ಅಪ್ಪಣೆ |
| ಎರ್ದೆಗೊಳ್ | = | ಮೆಚ್ಚಾಗು |
| ಆನತ | = | ನಮಸ್ಕಾರ |
| ಎಱಗು | = | ನಮಸ್ಕರಿಸು |
| ಆಘ್ರಾಣಿಸು | = | ನೆತ್ತಿಯನ್ನು ಮೂಸು |
| ಎಱೆಯ | = | ಗಂಡ |
| ಆರ್ತಂ | = | ಸಮರ್ಥನಾಗು |
| ಎಳವು | = | ಬಾಲ್ಯ |
| ಆರ್ದು | = | ಕೂಗಾಡು |
| ಏಟಿಸು | = | ಗೇಲಿ ಮಾಡು; ಅವಹೇಳನಗೊಳಿಸು |
| ಆರಯ್ | = | ಪರೀಕ್ಷಿಸು, ಗಮನಿಸು |
| ಒಗೆ | = | ಹುಟ್ಟು, ಜನನ |
| ಆಱು | = | ತೃಪ್ತನಾಗು |
| ಒಡರ್ | = | ಉಂಟಾಗು, ಪ್ರಾಪ್ತವಾಗು |
| ಆವಳಿ | = | ಸಮಾಹ |
| ಒಡರ್ಚು | = | ಮಾಡು |
| ಇಂಬಾಗು | = | ಸೊಗಸಾಗು, ಸುಂದರವಾಗು |
| ಒರ್ತತವೆ | = | ಇದ್ದಕ್ಕಿದ್ದ ಹಾಗೆ |

ಇತ್ತಂಡ = ಎರಡೂ ಕಡೆಯ ಸೇನೆ
ಒರ್ಪನೆ = ಏಕದಂತ
ಇನಿವಿರಿದು = ಅಷ್ಟೊಂದು ದೊಡ್ಡ
ಒರೆ = ಹೇಳು
ಇರ್ಕುಟಿಗೊಳ್ = ಆಕರ್ಷಿಸು
ಒಸರು = ಚಿಮ್ಮು
ಇರವು = ಇರುವಿಕೆ, ಸ್ಥಿತಿ
ಔಘ = ಗುಂಪು, ಸಮೂಹ
ಕಚ = ಮುಡಿ, ತುರುಬು
ಕೋದು = ಪೋಣಿಸು
ಕಚ್ಚಳಿ = ಕೈಕಡಗ
ಕೊಳಗುಳ = ರಣರಂಗ
ಕಜ್ಜದುಜ್ಜುಗ = ಕೆಲಸದಲ್ಲಿ ತೊಡಗಿಸಿಕೊಂಡಿರುವುದು
ಗತಕ = ಮೋಸಗಾರ
ಕಟ್ಟಾಣತಿ = ಕಟ್ಟಪ್ಪಣೆ
ಗದ್ದಿಪು = ಗದರಿಸು
ಕಣ್ಣಿಲಿ = ಕಣ್ಣಿಲ್ಲದ
ಗಾಡಿ = ಸೌಂದರ್ಯ
ಕಡೆವೊಟ್ಟು = ಪ್ರಳಯಕಾಲ
ಗಾಜುಗೆಡು = ಬಾಡು
ಕತ = ಕಾರಣ
ಗಾಳಗೂಟಿರು = ಕ್ಷುದ್ರರು
ಕರ್ಬುರ = ರಾಕ್ಷಸ
ಗೀಷ್ಪತಿ = ಬ್ರಹ್ಮ
ಕಜೆ = ಕಪ್ಪು , ಕಳಂಕ
ಗುಂಡಿಗೆ = ಕಮಂಡಲು
ಕವಡುನುಡಿ = ಕೊಂಕುಮಾತು
ಗುಡ್ಡ = ಕುಳ್ಳ
ಕವರ್ತೆ = ವಂಚನೆ , ಮೋಸ
ಗುಪಿತ = ಗೋಪ್ಯ , ಗುಟ್ಟಾಗಿ
ಕಸೆಗೋಲು = ಬಾರುಕೋಲು, ಕೋಲುಚಾವಟಿ
ಗೋಮಿನಿಪ = ರಾಜ
ಕಾಪು = ರಕ್ಷೆ
ಚೆಂಬವಳ = ಕೆಂಪು ಹವಳ
ಕಾಟ್ಸೊರ = ಪ್ರವಾಹ
ಜೋಡಿಗ = ಜೊತೆಗಾರ
ಕಿಚಿಕಲ್ = ಕುದುರೆ ಕೆನೆಯುವುದು
ಜೋದ = ಯೋಧ
ಕಿತ್ತಡಿ = ಸನ್ಯಾಸಿ , ಋಷಿ
ತನಿವಣ್ಣು = ರಸಭರಿತ ಹಣ್ಣು
ಕಿಟ್ಕೊಂಬು = ಕೆಳಗಿನ ಕೊಂಬೆ
ತದೆ = ಹೊಡೆ

ಕೆಸುಗಣ್ಣು = ಕೆಂಪುಕಣ್ಣಾಗು
ತರುವಲಿ = ಎಳೆಯ, ತಬ್ಬಲಿ
ಕುಂಭಸಂಭವ = ಅಗಸ್ತ್ಯ
ತಳರ್ = ಮುಂದೆ ಹೋಗು
ಕುಜುಂಬುಲ್ಲು = ಕಳೆಹುಲ್ಲು
ತಳ್ವು = ತಡಮಾಡು
ಕೂರ್ಪು = ಪರಾಕ್ರಮ
ತಳ್ಕೈಸು = ಆಲಿಂಗಿಸು
ಕೂರ್ಮೆ = ಪ್ರೀತಿ
ತಾಪಸ = ತಪಸ್ವಿ
ಕೂರಸಿ = ಹರಿತವಾದ ಕತ್ತಿ
ತುಜುವಳ = ಕಾಯುವವ
ಕೆಲೆ = ಕೂಗು, ಅರಚು
ತೂಣೀರ = ಬತ್ತಳಿಕೆ
ಕೆಟಿವ = ಮುದುಕ
ದಂಡಿಗೆ = ಪಲ್ಲಕ್ಕಿ
ಕೈಗಿಡು = ಪರಿಹಾರ ಕಾಣದಾಗು
ಧಿಷಣ = ಬೃಹಸ್ಪತಿ
ಕೈಹೊಲ = ಗದ್ದೆ ಹೊಲ
ದುಗುಡ = ದುಃಖ
ಕೊಂಡಾಟ = ಮುದ್ದು , ಪ್ರೀತಿ
ದುಟ್ಟ = ದೃಷ್ಟ
ಕೊಡನಕುವರ = ಅಗಸ್ತ್ಯ
ದುರುದುಂಬಿ = ತುಂಟ, ಪುಡಾರಿ
ಕೊಂಡಾಳು = ಸ್ವೀಕರಿಸಿ ಸಂಸಾರ ಮಾಡು
ದೂಸರು = ಕಾರಣ , ದೆಸೆ
ದೆಸೆವಳ = ದಿಕ್ಪಾಲಕ
ಪಟಿ = ನಿಂದೆ
ದೊಡ್ಡಿತೇ = ಏನು ಮಹಾ !
ಪಾಂಗು = ರೀತಿ
ದೋಣೆ = ಬತ್ತಳಿಕೆ
ಪಾಜ್ಸೋಗು = ಹಾಳಾಗು
ದುಹಿಣಲೋಕ = ಬ್ರಹ್ಮಲೋಕ
ಪ್ರಾಚೇತಸ = ವಾಲ್ಮೀಕಿ
ನಕುಲೇಶ್ವರ = ಮುಂಗುಸಿ
ಪಿಂಡಮರ್ದನ = ಮಾಂಸದ ಮುದ್ದೆ
ನನೆಕೊನೆವೋಗು = ಚಿಗುರು, ಹಿಗ್ಗು
ಪೀಯೂಷ = ಅಮೃತ
ನಲ್ಮೆದೋಜು = ಪ್ರೀತಿಯುಂಟಾಗು
ಪಿಳುಕು = ಹಿಳುಕು, ಹಿಡಿ
ನಜುದಂಬುಲ = ಸುಗಂಧಪೂರಿತ ತಾಂಬುಲ, ಪಾನಪಟ್ಟಿ
ಪುಗು = ಪ್ರವೇಶ

ನಲ್ಗತೆ = ಒಳ್ಳೆಯ ಕತೆ
ಪುತ್ತಿನಪುತ್ರ = ವಾಲ್ಮೀಕಿ
ನಾಕೇಶ = ಇಂದ್ರ
ಪುರಂಧ್ರಿಯರು = ಮುತ್ತೈದೆಯರು
ನಾಣ್ನುಡಿ = ನಾಚಿಕೆ ತರುವ ಮಾತು
ಪುರುಳು = ಹುರುಳು
ನಾಲ್ಮೊಗ = ಚತುರ್ಮುಖ ಬ್ರಹ್ಮ
ಪೆರ್ಚಳಿಕೆ = ಹೆಗ್ಗಳಿಕೆ, ದೊಡ್ಡಸ್ತಿಕೆ
ನಾಲ್ಮೊಗನಣುಗ = ನಾರದ
ಪೆಜಿಕೆ = ಚಂದ್ರ
ನಿಕ್ಕುವಂ = ನಿಜವಾಗಿಯೂ, ಖಂಡಿತವಾಗಿಯೂ
ಪೆಟಿವ = ಹೆಳವ
ನಿನಗಕ್ಕೆಮ = ನಿನಗುಂಟಾಗಲಿ
ಪೇಟಿಗೆ = ಪೆಟ್ಟಿಗೆ
ನಿರವಿಸು = ನಿರೂಪಿಸು
ಪೊರ್ದು = ಸೇರು, ಕೂಡು
ನಿಶಿಚರ = ರಾಕ್ಷಸ
ಪೊಳ್ಳುಬಳ್ಳು = ಕಂಕನ
ನುಡಿನಿಜಿಗೆ = ಮಾತಿನ ಧಾಟಿ
ಪೊಜ್ತ್ತಿಜ್ = ಸಂಜೆಯಾಗು
ನೆರ = ಸಹಾಯ
ಬಟ್ಟ = ದುಂಡಗಿರುವ
ನೇರ್ಗಿಜಿಯ = ತಮ್ಮ
ಬಟ್ಟೆ = ದಾರ, ಸನ್ಮಾರ್ಗ
ನೋಂಪಿ = ವ್ರತ, ಮಂಗಳ ಕಾರ್ಯ, ಯಜ್ಞ
ಬಲವರು = ಪ್ರದಕ್ಷಿಣೆ ಬರು
ನ್ಯಸ್ತಮಾನಸ = ಮನಸ್ಸಿಟ್ಟ
ಬಲ್ಗಡಸುಗಾರ್ತಿ = ಗಟ್ಟಿವಾಣಿ ಹೆಂಗಸು
ಪಂದೆ = ಹೇಡಿ
ಬಲ್ಗ್ಗೈ = ಪರಾಕ್ರಮ
ಪದುಮಸಖ = ಸೂರ್ಯ
ಬಲ್ಪು = ಶಕ್ತಿ
ಪನ್ನತಿಕೆ = ಪರಾಕ್ರಮ
ಬಲ್ವಗೆ = ಅನೇಕ ವಿಧ
ಪಚ್ಚೆವೋಗು = ಎಳಸೆಳಸಾಗು
ಬಲ್ಸರಿ = ಬಲ್ಸೋನೆ, ಜಡಿಮಳೆ
ಪಡಿವರಿಜು = ಪ್ರತಿರೂಪ
ಬವರಿಗ = ಹೋರಾಟಗಾರ, ಯೋಧ
ಪಂಜು = ರೂಪು
ಬವಸು = ಉದ್ಯೋಗ
ಪವನಾಧ್ಯ = ಆಕಾಶ
ಬರ್ದಿಲ = ದೇವತೆ
ಪಸುಗೆ = ಪಾಲು, ಭಾಗ
ಬಾಂಬಟ್ಟೆ = ಆಕಾಶಮಾರ್ಗ
ಬಾನ್ನುಡಿ = ಆಕಾಶವಾಣಿ
ಮಿಣ್ಣನೆ = ತೆಪ್ಪಗೆ
ಬಾವನ್ನ = ಶ್ರೀಗಂಧ
ಮುಗಿಲ್ದೇರ = ಇಂದ್ರ
ಬಾಜು = ಸರದಿ
ಮುಡಿ = ಪರಿಹಾರ, ನೀಗುವುದು
ಬಾಸಿ = ಲದ್ದಿ ಸಾಕಿ
ಮುದುಪು = ಮುಪ್ಪು
ಬಾಸೆವೆಣ್ಣು = ವಾಗ್ದೇವತೆ, ಸರಸ್ವತಿ
ಮುನ್ನೀರ್ = ಸಮುದ್ರ
ಬಾಟ್ವೊ = ಜೀವಂತ ಸಂಪತ್ತು
ಮೂಡಿಗೆ = ಬತ್ತಳಿಕೆ
ಬಾಟ್ತ್ = ಬದುಕು
ಮೂರ್ಧಾಭಿಷೇಚನ = ಪಟ್ಟಾಭಿಷೇಕ
ಬಿಂಕಣಿಗಿವಿ = ಬೀಸಣಿಗೆಯಂತಹ ಕಿವಿ
ಮೆಚ್ಚು = ಬಹುಮಾನ, ಪ್ರಶಸ್ತಿ
ಬಿಡುಗಣ್ಣರು = ದೇವತೆಗಳು
ಮೇಲು = ಉಪಕಾರ, ಒಳ್ಳೆಯದು
ಬಿರುದೋದು = ಬಿರುದಿನ ಒಕ್ಕಣೆ
ಮೈದೋಜು = ಪ್ರತ್ಯಕ್ಷವಾಗು
ಬಿಜುನುಡಿ = ಕಠೋರವಾದ ಮಾತು
ಮೈಯಿಕ್ಕು = ನಮಸ್ಕರಿಸು
ಭೂಮಿಜೆ = ಸೀತೆ
ಮೆಯ್ಗೊಳ್ = ಮೈತಳೆ, ಧರಿಸು
ಬೆಂಗೆಬೆಂಗೆ = ಪುಂಖಾನುಪುಂಖ, ಮೇಲಿಂದ
ಮೇಲೆ ಮೆಯ್ಯೊಗರ್ = ಶರೀರ ಕಾಂತಿ
ಬೆಬ್ಬಳವೋಗು = ಗಾಬರಿಯಾಗು
ಮೊಗಸು = ಕೈಗೊಳ್ಳು
ಬೆಸಗೊಳ್ = ಕೇಳು
ಮೋಡಿ = ದಡ್ಡಿ
ಬೆಳ್ನುಡಿ = ತಿಳಿಯಾದ ಮಾತು
ಯಶೋಧನ = ಕೀರ್ತಿಯನ್ನೇ ಸಂಪತ್ತಾಗುಳ್ಳವ
(ರಾಮ)
ಬೇರುಡಿದು = ಬೇರು ಹರಿದು
ಯಾಜ್ಞೀಯಾಶ್ವ = ಯಜ್ಞದ ಕುದುರೆ
ಬೇಹು = ಗುಪ್ತ, ಗೂಢ
ರಾಕೇಂನ್ದು = ಪೂರ್ಣಚಂದ್ರ
ಬೇಳ್ = ಹೋಮಮಾಡು
ರುಧಿರ = ರಕ್ತ
ಬೈತಿಡು = ಬಚ್ಚಿಡು, ಮುಚ್ಚಿಡು
ಲಂಬಾಲಕಕು = ಅಲುಗಾಡುವ ಮುಂಗೂದಲುಳ್ಳವರು

ಬೋಸರಿಸು = ವಂಚಿಸು
ಲೋಗರು = ಜನರು
ಮಡುಹು = ಕೊಲ್ಲು
ಮಧ್ಯಂ = ದೂರ ಇರಲಿ
ಮನಂಬುಗು = ಮೆಚ್ಚಾಗು, ಆಕರ್ಷಿಸು
ವಪು = ದೇಹ
ಮನೆವಾಟ್ತೆ = ಗೃಹಕೃತ್ಯ, ಯೋಗಕ್ಷೇಮ
ವಸುಧೆ = ಭೂಮಿ
ಮನೋಜ್ಞ = ಸುಂದರ, ಮನೋಹರ
ವಹಿಲ = ಶೀಘ್ರ
ಮರಗೂಟಿ = ಮಂಗ, ಕೋತಿ
ವಿಪಂಚಿ = ವೀಣೆ
ಮಲ್ಲಿವಲ್ಲೀಕುಂಜಪುಂಜ = ಮಲ್ಲಿಗೆ ಬಳ್ಳಿಯ ಬಳ್ಳಿಮಾಡ
ವಿಪಿನ = ಅರಣ್ಯ
ಮಹಾರ್ಣವ = ದೊಡ್ಡಸಮುದ್ರ
ವಿಯದ್ಗಂಗೆ = ಅಕಾಶಗಂಗೆ
ಮಾಣಿ = ಮಣವಕ, ಹುಡುಗ
ವಿಷಯ = ದೇಶ
ಮಾರಾಂತು = ಪ್ರತಿಭಟಿಸು
ವ್ಯಾಲರಾಜ = ಆದಿಶೇಷ
ಸಂಗರ = ಯುದ್ಧ
ಸತ್ತಿನಗೊತ್ತು = ಸದ್ಗುಣಗಳ ವಾಸಸ್ಥಳ
ಸಬ್ಬವಕಾಱ = ಹಾಸ್ಯಗಾರ
ಸರಿಸ = ಸಮೀಪ, ಹತ್ತಿರ

ಸಲಿಲಬಿಂದು = ನೀರಹನಿ
ಸಲ್ಯೆಂ ಸಲ್ಯೆಂ = ಸಮರ್ಥ ಸಮರ್ಥ
ಸವಗ = ಕವಚ
ಸವನಿಸು = ಸಿದ್ಧಗೊಳಿಸು
ಸಾರ್ತರು = ಬರು
ಸಾಯಕ = ಬಾಣ
ಸಿಬಿಕೆ = ಪಲ್ಲಕ್ಕಿ
ಸೀರ್ಪುಟು = ಸೀರಿನಂತಹ ಸಣ್ಣ ಹುಳು
ಸೀಸಕ = ಶಿರಸ್ತ್ರಾಣ, ತಲೆಕವಚ
ಸೂಟ್ = ಸರದಿ, ಅನುಕ್ರಮ
ಸೆರ್ಕೆಪ್ಪು = ಕರಗು
ಸೆಳೆ = ಬೆತ್ತ, ಮರಗಿಡಗಳ ಎಳೆಯದಾದ ಕಡ್ಡಿ
ಸೇರೆಗೆಯ್ = ಮುಗಿದ ಕೈ
ಸೈತು = ಚೆನ್ನ
ಸೈತಿಡು = ಸಮಾಧಾನ ಮಾಡು
ಸೈಪು = ಪುಣ್ಯ
ಸೋಯ = ವಿವೇಕ, ಕ್ರಮ
ಸೋವು = ಓಡಿಸು, ಅಟ್ಟು
ಹಸಾದ = ಅನುಗ್ರಹ
ಹರಿಸ = ಹರ್ಷ, ಸಂತೋಷ
ಹೂನ್ಯ = ಪುಣ್ಯಶಾಲಿ
ಹೃದ್ಯ = ಮೆಚ್ಚು
ಱೆಪ್ಪು = ಹೊಡೆ, ಬಾರಿಸು

**********************************************

# ಸಾ. ಶಿ. ಮ. ಗದ್ಯ ಸಾಹಿತ್ಯ
# ಸಂಪುಟ ೧
# (ಭಾಗ ೨)

## ಡಾ. ಸಾ.ಶಿ. ಮರುಳಯ್ಯ

## ಬಿ. ಶಿವಮೂರ್ತಿಶಾಸ್ತ್ರಿಗಳು

---

### ಪೀಠಿಕೆ

**ಕಲ್ಯಾಣವೆಂಬ ಪ್ರಣತೆಯಲ್ಲಿ**
**ಭಕ್ತಿರಸವೆಂಬ ತೈಲವನೆರೆದು**
**ಆಚಾರವೆಂಬ ಬತ್ತಿಗೆ**
**ಬಸವಣ್ಣನೆಂಬ ಜ್ಯೋತಿಯ ಮುಟ್ಟಿಸಲು**
**ತೊಳಗಿ ಬೆಳಗುತ್ತಿದ್ದಿತಯ್ಯಾ ಶಿವನ ಪ್ರಕಾಶ**
**ಆ ಬೆಳಗಿನೊಳಗೆ ಒಪ್ಪುತಿರ್ದರಯ್ಯಾ**
**ಅಸಂಖ್ಯಾತ ಶಿವಶರಣರು**
**ಶಿವಭಕ್ತನಿರ್ದ ಕ್ಷೇತ್ರ**
**ಶಿವಭಕ್ತನಿರ್ದ ದೇಶ**
**ಪಾವನವೆಂಬುದು ಹುಸಿಯೆ ಗುಹೇಶ್ವರಾ**

ಅಲ್ಲಮ ಪ್ರಭು ಅಣ್ಣನ ಬಗೆಗೆ ನುಡಿದ ಮೆಚ್ಚುಗೆಯ ಮಾತುಗಳು ಇವು. ಬಸವಣ್ಣ ಮೆಟ್ಟಿದ ಕರ್ನಾಟಕ ಪಾವನ.

ಹಲವು ಧರ್ಮಗಳ ನೆಲೆವೀಡಾದ ಕರ್ನಾಟಕ, ಬೌದ್ಧ, ಜೈನಾದಿ ಭಾರತೀಯ ಧರ್ಮಗಳ ಪ್ರಚಾರಕ್ಕೂ ನೆರವಾಗಿದೆ. ಅಶೋಕನ ಶಾಸನಗಳು ಕರ್ನಾಟಕದಲ್ಲಿ ಸಿಕ್ಕಷ್ಟು ಭಾರತದಲ್ಲಿ ಬೇರೆಲ್ಲೂ ಸಿಕ್ಕಿಲ್ಲ. ಪ್ರಾಚೀನ ಕಾಲದಿಂದಲೂ ಗ್ರೀಸ್, ಪರ್ಷಿಯಾ, ಅರೇಬಿಯಾ ಮೊದಲಾದ ಹೊರರಾಷ್ಟ್ರಗಳೊಡನೆ ವ್ಯಾಪಾರ ಮತ್ತು ವಾಣಿಜ್ಯಗಳಲ್ಲಿ ಸೌಹಾರ್ದಯುತವಾದ ವ್ಯವಹಾರಿಕ ಜೀವನ ವನ್ನು ನಡೆಸುವಲ್ಲಿ ಕನ್ನಡಿಗರು ನಿಪುಣರು, ನಿಷ್ಣಾತರು.

ಕರ್ನಾಟಕದಲ್ಲಿ ನಿಸರ್ಗ ಸೌಂದರ್ಯವಿದೆ. ನೈಸರ್ಗಿಕವಾದ ಸಂಪತ್ತೂ ಇದೆ. .ಇದು ಅನೇಕ ಪುಣ್ಯ ನದಿಗಳ, ತೀರ್ಥ ಕ್ಷೇತ್ರಗಳ ಜನ್ಮಸ್ಥಳ. ಬಸವ, ಚೆನ್ನಬಸವ, ಅಕ್ಕ, ಅಲ್ಲಮ, ಸಿದ್ಧರಾಮ, ಪುರಂದರಾದಿ ಪುಣ್ಯಪುರುಷರ ಪಾದಧೂಳಿಯಿಂದ ಪುನೀತವಾದ ಶ್ರೀಕ್ಷೇತ್ರ ಈ ಕರ್ನಾಟಕ. ಅಂತೆಯೇ ಶಾತವಾಹನರು, ಚಾಲುಕ್ಯರು, ರಾಷ್ಟ್ರಕೂಟರು, ಕದಂಬರು, ಗಂಗರು, ಹೊಯ್ಸಳರು, ಕಳಚೂರ್ಯರು. ವಿಜಯನಗರದವರು, ಮೈಸೂರ ಅರಸರು ಇವರೇ ಮೊದಲಾದವರಿಂದ ಆಳಿಸಿಕೊಂಡ ಹಿರಿಮೆ ಕನ್ನಡನಾಡಿನವರದು. ತನ್ನದೇ ಆದ ಸಂಗೀತ ಪದ್ಧತಿಯನ್ನೂ, ತನ್ನದೇ ಆದ ಶಿಲ್ಪವಾಸ್ತುಗಳ ಮಾದರಿಯನ್ನೂ ಜಗ ತ್ತಿನ ಲಲಿತ ಕಲಾಕ್ಷೇತ್ರಕ್ಕೆ ಕಾಣಿಕೆಯನ್ನಿತ್ತ ಕರ್ನಾಟಕ, ಹೇಮಕೂಟದ ಮೇಲೆ ಕನ್ನಡದ ಬಾವುಟವನ್ನು ಹಾರಿಸಿದೆ; ಶ್ರೀಗಂಧಧ ಸೌರಭವನ್ನು ಸೂಸಿದೆ, ಬಂಗಾರದ ಹೊಗೆಯನ್ನು ಹಾಯಿಸಿದೆ. ಇಂತಹ ಪುಣ್ಯಭೂಮಿ ಕರ್ನಾಟದಲ್ಲಿ ಮಾನವರಾಗಿ ಹುಟ್ಟಿದ ನಾವು ಧನ್ಯರು. ಅಂತೆಯೇ ಈ ನಾಡಿಗಾಗಿ, ನುಡಿಗಾಗಿ, ಸಂಸ್ಕೃತಿ ಕಲೆಗಳಿಗಾಗಿ ದುಡಿದ ಮಹಾಪುರುಷರನ್ನು ಸ್ಮರಿಸುವುದು ಮುಂದಿನವರಾದ ನಮ್ಮ ಕರ್ತವ್ಯ. ಆ ಕರ್ತವ್ಯಕ್ಕೆ ಚ್ಯುತಿ ಬರದಂತೆ ಇತ್ತೀಚೆಗೆ ಕನ್ನಡ ನಾಡಿನಲ್ಲಿ ಆಗಿಹೋದ ಮಹತ್ವದ ವ್ಯಕ್ತಿಗ ಳಲ್ಲಿ ಒಬ್ಬರಾದ ಶ್ರೀ ಬಿ. ಶಿವಮೂರ್ತಿಗಳ ಬದುಕು ಸಾಧನೆ, ಸಿದ್ಧಿ, ವೀರಶೈವ ಸಂಸ್ಕೃತಿಗೆ, ವೀರಶೈವ ಮತಕ್ಕೆ ಕೊಟ್ಟ ಸಲಹೆ, ಸಂದೇಶಗಳನ್ನು ಸ್ಮರಿಸೋಣ.

**ಸಿದ್ಧಪುರುಷರ ನಾಡು**

ಕರ್ನಾಟಕದ ಹೃದಯಸ್ಥಾನದಲ್ಲಿರುವ  ಜಿಲ್ಲೆ ಎಂದರೆ ತುಮಕೂರು. ಕನ್ನಡ ನಾಡಿನ ಧಾರ್ಮಿಕ ಹಾಗೂ ಸಾಹಿತ್ಯಿಕ ಇತಿ ಹಾಸದಲ್ಲಿ ಇದರ ಪಾತ್ರ ಗಮನಾರ್ಹವಾದುದು. ಏಕೆಂದರೆ ಇಂದಿಗೂ ಎಂದೆಂದಿಗೂ ವಿಶ್ವಜ್ಯೋತಿಯಾಗಿ ಮೆರೆಯುತ್ತಿರುವ ಶ್ರೀ ತೋಂಟದ ಸಿದ್ಧಲಿಂಗೇಶ್ವರ ನೆಲೆವೀಡಾದ ಯಡೆಯೂರು ಇರುವುದು ಈ ತುಮಕೂರು ಜಿಲ್ಲೆಯಲ್ಲಿ. ವೀರಶೈವ ಸಾಹಿತ್ಯ ಮತ್ತು ಸಂಸ್ಕೃತಿಗಳ ಪುನರುತ್ಥಾನಕ್ಕೆ ಕಾರಣರಾದ ವೀರಶೈವ ಮತಕ್ಕೆ ನವಚೈತನ್ಯವನ್ನು ತುಂಬಿದ, ಅವರ ಪವಾಡಗಳ ಆಡುಂಬೋಲ, ಈ ತುಮಕೂರು ನೆಲ ಜಗದ್ಗುರು ಮರುಳಸಿದ್ಧೇಶ್ವರರು ನಿಡುವಳ್ಳಿಯಲ್ಲಿ ಜನ್ಮತಳೆದು, ಸಾಸಲು, ಶೆಟ್ಟೀಕೆರೆ ದಬ್ಬೆಕಟ್ಟ ಮೊದಲಾದೆ ಡೆಗಳಲ್ಲಿ ಸಂಚರಿಸಿ, ಲೋಕಕಲ್ಯಾಣ ಕಾರ್ಯವನ್ನು ನೆರವೇರಿಸಿ ಇಂದಿಗೂ ಜ್ಯೋತಿಸ್ವರೂಪರಾಗಿ ನೆಲೆನಿಂತಿರುವ ಶ್ರೀ ಕುಪ್ಪೂರು ಗದ್ದಿಗೆಮಠದಂತಹ ಜಾಗೃತ ಕ್ಷೇತ್ರ ಇರುವುದು ಈ ಜಿಲ್ಲೆಯಲ್ಲೆ. ಗುಬ್ಬಿ ಆಟವೀಸ್ವಾಮಿಗಳ ಆಶೀರ್ವಾದದಿಂದ ಇಂದು ಜ್ಞಾನಾರ್ಥಿ ಗಳಿಗೆ ವಾರಣಾಸಿ ಎನಿಸಿರುವ ಸಿದ್ಧಗಂಗೆ ಇರುವುದು ಇದೇ ಜಿಲ್ಲೆಯಲ್ಲಿ. ಶಿವಯೋಗಿ ಸಿದ್ಧರಾಮರು 'ಇದ್ದು ಇಲ್ಲದ ಹಾಗೆ' ಇರುತ್ತಿರುವ ಯಳನಡು, ಗೋಡಕೆರೆ ಮುಂತಾದ ಪುಣ್ಯಕ್ಷೇತ್ರಗಳಿರುವುದೂ ಇದೇ ಜಿಲ್ಲೆಯಲ್ಲಿ.

ತುಮಕೂರು ಜಿಲ್ಲೆ ಧರ್ಮಕ್ಕೆ ಹೇಗೋ ಸಾಹಿತ್ಯಕ್ಕೂ ಹಾಗೆಯೇ ತನ್ನ ಅಮೂಲ್ಯ ಸೇವೆ ಸಲ್ಲಿಸಿದೆ. ಶ್ರೀ ತೋಂಟದ ಸಿದ್ಧ ಲಿಂಗೇಶ್ವರ ಏಳುನೂರಾ ಒಂದು ವಚನಗಳು ಬೆಳಕು ಕಂಡದ್ದು ಇಲ್ಲಿ. ಕನ್ನಡದ ಧೀಮಂತ ಕವಿ ಮಲ್ಲಣಾರ್ಯನ ಗುಬ್ಬಿ ಇರು ವುದು ಈ ಜಿಲ್ಲೆಯಲ್ಲಿ. ಶೂನ್ಯ ಸಂಪಾದನೆಯ ಮಹತ್ಕಾರ್ಯವನ್ನು ನೆರವೇರಿಸಿದ ವಿಖ್ಯಾತ ಸಂಕಲನಕಾರ ಸಿದ್ಧವೀರಣ್ಣೊಡೆ ಯನ ಗೂಳೂರು ಇರುವುದು ಇಲ್ಲಿ. ಸಂಪಾದನೆಯ ಪರ್ವತೇಶ್ವರ, ಗುಬ್ಬಿಯ ಶಾಂತೇಶ, ಬಿಜ್ಜಾವರದ ಆಸ್ಥಾನಕವಿ ಮಲ್ಲಿಕಾ ರ್ಜುನ ವಿರಕ್ತ ತೋಂಟದಾರ್ಯ ನಿಟ್ಟೂರ ನಂಜಯ್ಯ ಇವರೇ ಮೊದಲಾದವರು ಹುಟ್ಟಿದ್ದು, ಈ ಯುಗದ ಒಂದು ಪವಾಡವೆ ಎಂದೆನಿಸಿದ ಕನ್ನಡ ರಂಗಭೂಮಿ ಗುಬ್ಬಿ ಶ್ರೀ ಚನ್ನಬಸವೇಶ್ವರಸ್ವಾಮಿ ಕೃಪಾಪೋಷಿತ ನಾಟಕ ಸಭಾರೂಪದಲ್ಲಿ ಕಣ್ಣು ತೆರೆದದ್ದು ಗುಬ್ಬಿಯಲ್ಲಿ, ತುಮಕೂರು ಜಿಲ್ಲೆಯಲ್ಲಿ.

ಸುಮಾರು ಒಂದು ಸಾವಿರ ವರ್ಷಗಳಿಂದಲೂ ಕರ್ನಾಟಕದಲ್ಲಿ ತಮ್ಮ ಪ್ರಭುತ್ವವನ್ನು ಮೆರೆಸಿಕೊಂಡು ಬಂದವರೆಂದರೆ ವೀರಶೈವರು. ವಿಶ್ವವಿಖ್ಯಾತ ವಿಜಯನಗರ ಸಾಮ್ರಾಜ್ಯ ಹಾಳಾಗಿ, ಹತ್ತಾರು ಪಾಳೆಯಪಟ್ಟುಗಳಾಗಿ ಹರಿಹಂಚಾದಾಗ ಅವುಗಳನ್ನು ಕಟ್ಟಿ ಮತ್ತೆ ಆಳಿದವರು ವೀರಶೈವರು. ಮುಖ್ಯವಾಗಿ ಕಿತ್ತೂರು, ಕೆಳದಿ, ಕೊಡಗು, ಸ್ವಾದಿ, ಬೀಳಗಿ, ಚಿತ್ರದುರ್ಗ, ಹಾಗಲ್ವಾಡಿ, ಬಿಜ್ಜಾವರ, ಮತ್ತೋಡು, ಶ್ರೀರಂಗಪಟ್ಟಣ ಮೊದಲಾದ ಪಾಳೆಪಟ್ಟುಗಳನ್ನು ಹೆಸರಿಸಬಹುದು. ಇವುಗಳಲ್ಲಿ ಹಾಗಲ್ವಾಡಿ ಮತ್ತು ಬಿಜ್ಜಾವರ ಸಂಸ್ಥಾನಗಳು ತುಮಕೂರು ಜಿಲ್ಲೆಯಲ್ಲೇ ಇವೆ. ಇವು ಸಣ್ಣ ಪಾಳೆಯಪಟ್ಟುಗಳಾಗಿದ್ದರೂ ಸಾಮ್ರಾಜ್ಯದ ವೈಭವವನ್ನು

ಮೆರೆದಿವೆ. ಇವುಗಳನ್ನಾಳಿದ ಪಾಳೆಯಗಾರರು ಹುಟ್ಟಿನಿಂದ ವೀರಶೈವರಾದರೂ ಭಾವನೆಯಲ್ಲಿ ಭಾರತೀಯರಾಗಿದ್ದಾರೆ. ಸರ್ವ ಧರ್ಮ ಸಹಿಷ್ಣುಗಳಾಗಿ, ಸಾಹಿತ್ಯಪೋಷಕರಾಗಿ, ಕವಿ ಕಾಮಧೇನುಗಳಿಗೆ ಆಶ್ರಯದಾತರಾಗಿ, ಸ್ವಯಂ ಕವಿಗಳೂ ಆಗಿ ಸಾಮ್ರಾಟ ರಂತೆಯೇ ಆಳಿಕೊಂಡು ಬಂದಿದ್ದಾರೆ. ಅವುಗಳ ಬಗೆಗೆ ಅವರ ಆಸ್ಥಾನಗಳಲ್ಲಿ ಹುಟ್ಟಿಬೆಳೆದ ಸಾಹಿತ್ಯ ಸಂಪತ್ತಿನ ಬಗೆಗೆ ಇನ್ನೂ ಶೋಧನೆ, ಸಂಶೋಧನೆಗಳು ನಡೆಯಬೇಕಾಗಿದೆ.

ಇಂತಹ ಸಾಹಿತ್ಯ, ಸಾಂಸ್ಕೃತಿಕ, ಧಾರ್ಮಿಕ, ಐತಿಹಾಸಿಕ ವಿಷಯಗಳಲ್ಲಿ ತನ್ನದೇ ಆದ ಸೇವೆ ಸಲ್ಲಿಸುತ್ತಿರುವ ತುಮಕೂರು ಜಿಲ್ಲೆಯ, ತುಮಕೂರು ನಗರ ಶ್ರೀ ಶಿವಮೂರ್ತಿಗಳವರ ಹುಟ್ಟೂರು, ಶ್ರೀ ಶಾಸ್ತ್ರಿಗಳು ಶುಭಕೃತು ಸಂವತ್ಸರದ ಮಾರ್ಗಶಿರ ಬಹುಳ ಏಕಾದಶಿ ಸೋಮವಾರ ಬೆಳಗ್ಗೆ ಅಂದರೆ ಕ್ರಿಶ. ೧೯೦೩ನೆಯ ಇಸವಿ ಫೆಬ್ರವರಿ ೨೩ನೆಯ ತಾರೀಖು ಜನ್ಮವೆತ್ತಿದರು. ದಿನಾಂಕ ದಿನಾಂಕ ೧೫. ೦೧. ೧೯೭೭ರಂದು ಶಿವೈಕ್ಯರಾದರು. ಅಂದರೆ ಸುಮಾರು ೭೫ ವರ್ಷಗಳ ಸುದೀರ್ಘವಾದ, ಸಾರ್ಥಕವಾದ ಬಾಳನ್ನು ಬದುಕಿದರು.

**ಜನನ, ಬಾಲ್ಯ ಮತ್ತು ವಿದ್ಯಾಭ್ಯಾಸ :**

ಶಿವಮೂರ್ತಿಶಾಸ್ತ್ರಿಗಳು ತುಮಕೂರಿನ ಶ್ರೀ ಬಸವಯ್ಯ ಸ್ವಾಮಿ ಹುಲುಕುಂಟಿಮಠ ಮತ್ತು ಶ್ರೀಮತಿ ನೀಲಮ್ಮ ಎಂಬ ಶಿವದಂಪತಿಗಳ ಒಬ್ಬರೇ ಪುತ್ರರು. ಶ್ರೀ ಶಿವಮೂರ್ತಿಶಾಸ್ತ್ರಿಗಳವರ ಮೊದಲ ಹೆಸರು ಶ್ರೀ ಕುಪ್ಪಯ್ಯಶಾಸ್ತ್ರಿ ಎಂದು. ಇವರು ಕುಪ್ಪೂರುಗದ್ದಿಗೆಯ ಶ್ರೀ ಮರುಳುಸಿದ್ಧೇಶ್ವರದ ವರಪ್ರಸಾದದಿಂದ ಹುಟ್ಟಿದವರಾದ್ದರಿಂದ ಇವರ ತಂದೆ ತಾಯಿಗಳು 'ಕುಪ್ಪಯ್ಯ' ಎಂದಿಟ್ಟಿದ್ದರು. ಅದೇ ಹೆಸರು ಬಹಳ ವರ್ಷಗಳವರೆಗೂ ಇತ್ತು. ಆದರೆ ಒಮ್ಮೆ ಶ್ರೀ ರಂಭಾಪುರೀ ವೀರ ಸಿಂಹಾಸನಾಧೀಶ್ವರಾದ ಜಗದ್ಗುರು ಶ್ರೀ ಶಿವಾನಂದ ಮಹಾಸ್ವಾಮಿಗಳವರು ತುಮಕೂರಿಗೆ ದಯಮಾಡಿಸಿದ್ದಾಗ, ಶ್ರೀಯುತ ಕುಪ್ಪಯ್ಯನವರಿಗೆ ನೂತನ ನಾಮಕರಣವಾಯಿತು. ಅಂದಿನಿಂದ ಶ್ರೀಯುತ ಕುಪ್ಪಯ್ಯಶಾಸ್ತ್ರಿ ಎಂಬುದು ಹೋಗಿ ಶ್ರೀ ಶಿವಮೂರ್ತಿಶಾಸ್ತ್ರಿ ಎಂದಾಯಿತು. ಶ್ರೀ ಶಿವಾನಂದ ಜಗದ್ಗುರುಳವರ ಶುಭಾಶೀರ್ವಾದದಿಂದ 'ಕುಪ್ಪಯ್ಯ' ಎಂಬ 'ಭೂತಿ ಅಳೆದು 'ಶಿವಮೂರ್ತಿ' ಎಂಬ ವಿಭೂತಿ ಉಳಿ ಯಿತು. ಬೆಳೆಯಿತು, ಮೆರೆಯಿತು.

ಜಂಗಮಜ್ಯೋತಿಗಳಾದ ಬಸವಯ್ಯಸ್ವಾಮಿಯವರು ಸದಾ ಪುರಾಣ ಪುಣ್ಯಕಥೆಗಳನ್ನು ಹೇಳಿಕೊಂಡು ಭಕ್ತರ ಬಿನ್ನಹಗಳನ್ನು ತೀರಿಸಿಕೊಂಡು ಸಾತ್ವಿಕ ಜೀವನವನ್ನು ಸಾಗಿಸುತ್ತಿದ್ದ ಶರಣರು. ಅವರಲ್ಲಿದ್ದ ಗಮಕವಾಚನ ಕಲೆ ಅವರ ಅಮೃತ ಪುತ್ರರಾದ ಶಿವಮೂರ್ತಿಶಾಸ್ತ್ರಿಗಳವರಲ್ಲೂ ಹರಿದು ಬಂದಿದೆ. ಶಾಸ್ತ್ರಿಗಳವರದು ಕಂಚಿನ ಕಂಠ. ಅದಕ್ಕೆ ಸಾಕಷ್ಟು ಸಾಣೆ ಹಿಡಿದವರು ಮೈಸೂರು ಶಿವಪ್ಪಶಾಸ್ತ್ರಿಗಳು ಮತ್ತು ಮಾಗಡಿ ವೀರಪ್ಪಶಾಸ್ತ್ರಿಗಳು. ಈ ಇಬ್ಬರು ಕೀರ್ತನ ಕಲಾ ಕೋವಿದರು ತೇಜಸ್ವೀ ಬಾಲಕನಾದ ಶಿವಮೂರ್ತಿಯ ಗ್ರಹಣ ಶಕ್ತಿಯನ್ನು ಅರಿತುಕೊಂಡು ಸೂಕ್ತ ರೀತಿಯಲ್ಲಿ ಕೀರ್ತನ ಕಲೆಯನ್ನು ಅಭ್ಯಾಸ ಮಾಡಿಸಿ ಯಶಸ್ವಿಯಾದರು. ಶಿವಮೂರ್ತಿ ಚಿಕ್ಕಂದಿನಿಂದಲೇ ಕೀರ್ತನ ಕಲೆಯಲ್ಲಿ ಸಿದ್ಧಿಪಡೆದು ತನ್ನ ಗುರುಗಳನ್ನೂ ಮೀರಿಸಿಬಿಟ್ಟ. ಮುಂದೆ ಹಲವು ವರ್ಷಗಳ ಕಾಲ ಅದೇ ಅವನ ಜೀವನವೃತ್ತಿಯಾಯಿತು.

ಚುರುಕು ಬುದ್ಧಿಯ ಶಿವಮೂರ್ತಿಗೆ ಪ್ರೌಢ ವಿದ್ಯಾಭ್ಯಾಸ ಪಡೆಯುವ ಭಾಗ್ಯ ಇರಲಿಲ್ಲ. ಬಾಲ್ಯ ವಿದ್ಯಾಭ್ಯಾಸ ತುಮಕೂರಿನ 'ವೆಸ್ಲಿಯನ್ ಮಿಷನ್ ಸ್ಕೂಲಿ'ನಲ್ಲಿ ನಡೆಯಿತು. ೧೯೧೭ರಲ್ಲಿ ಕನ್ನಡ ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ. ಆದರೆ ಹೈಸ್ಕೂಲು ಮತ್ತು ಕಾಲೇಜು ಶಿಕ್ಷಣಕ್ಕೆ ಕಾಲ ಅನುಕೂಲಿಸಿ ಬರಲಿಲ್ಲ. ಕಾರಣ ಕಿತ್ತು ತಿನ್ನುವ ಬಡತನ ; ಜೊತೆಗೆ ೧೯೧೮ರಲ್ಲಿ ಸಂಭವಿಸಿದ ಶಿವಮೂರ್ತಿಯ ಪೂಜ್ಯ ತಂದೆ ಶ್ರೀ ಬಸವಯ್ಯಸ್ವಾಮಿ ಹುಲುಕುಂಟೆಮಠ ಅವರ ಅಕಾಲ ಮರಣ, ಮೂರನೆಯದು ಗಾಂಧೀಜಿಯವರು ದೇಶಸೇವೆಗಿತ್ತ ಕರೆ. ಯುವಕ ಶಿವಮೂರ್ತಿ ೧೯೨೧ರಲ್ಲಿ ತುಮಕೂರಿನಲ್ಲಿ ಗಾಂಧೀಜಿಯವರು ಒಂದು ಬೃಹತ್ ಸಭೆಯನ್ನು ಉದ್ದೇಶಿಸಿ ಮಾಡಿದ ಭಾಷಣದಿಂದ ಆಕರ್ಷಿತನಾದ. ಆದರೆ ಚಳುವಳಿಯನ್ನು ಮಾಡದೆ, ಕೀರ್ತನೆಗಳ ಮೂಲಕ ಜನ ಜಾಗೃತಿಗೆ ಕೈಹಾಕಿದ. ವಿದ್ಯಾಭ್ಯಾಸವೂ ಜೊತೆಯಲ್ಲೇ ಸಾಗಿತು. ಶಿವಮೂರ್ತಿ ತುಮಕೂರಿನ ನಾರ್ಮಲ್ ಸ್ಕೂಲಿಗೆ ಸೇರಿ, ೧೯೨೩ರಲ್ಲಿ ಅಪ್ಪರ್ ಸೆಕೆಂಡರಿ ಪರೀಕ್ಷೆಯಲ್ಲಿ ಉತ್ತೀರ್ಣನಾದ. ಮುಂದಿನ ವಿದ್ಯಾಭ್ಯಾಸಕ್ಕೆ ತಿಲಾಂಜಲಿ ಕೊಟ್ಟು ಸಂಸಾರದ ಹೊರೆ ಹೊತ್ತು ನಿಂತ. ೧೯೨೪ರಲ್ಲಿ ಗುಬ್ಬಿಯ ಒಂದು ಶಾಲೆಯಲ್ಲಿ ಉಪಾಧ್ಯಾಯನಾಗಿ ಸೇರಿ ೧೯೨೫ರವರೆಗೆ ಸೇವೆ ಸಲ್ಲಿಸಿದ.

**ಏಳು – ಬೀಳು**

ತರುಣ ಶಿವಮೂರ್ತಿಯ ಜ್ಞಾನದಾಹ ಅಂದರೆ ಓದುವ ಹಂಬಲ ಅಡಗಲಿಲ್ಲ. ಅದರಿಂದಾಗಿ ಅಂದು ಮೈಸೂರಿನಲ್ಲಿದ್ದ ಉಭಯ ಭಾಷಾಪಂಡಿತ ಶ್ರೀ ಪಿ. ಆರ್. ಕರಿಬಸವಶಾಸ್ತ್ರಿಗಳ ಹತ್ತಿರ ಹೋಗಿ, ಶಿಷ್ಯನಾಗಿ ನಿಂತು ಅವರಿಂದ ಸಂಸ್ಕೃತ ಮತ್ತು ಕನ್ನಡ ಸಾಹಿತ್ಯವನ್ನು ಅಭ್ಯಾಸಮಾಡಿ ಎರಡೂ ಭಾಷೆಗಳಲ್ಲೂ ಸಾಕಷ್ಟು ಪಾಂಡಿತ್ಯವನ್ನು ಗಳಿಸಿಕೊಂಡರು. ಹೀಗೆ ಗಳಿಸಿಕೊಂಡ ಪಾಂಡಿತ್ಯವನ್ನು ಪ್ರದರ್ಶಿಸಲು ಒಂದು ವೇದಿಕೆ ಬೇಕಾಗಿದ್ದಿತು. ಅದೂ ದೈವಾನುಗ್ರಹದಿಂದ ಶಿವಮೂರ್ತಿಯವರಿಗೆ ಲಭಿಸಿತು. ಕ್ರಿ.ಶ ೧೯೨೬ರಲ್ಲಿ ಸಿದ್ಧಗಂಗಾ ಕ್ಷೇತ್ರದಲ್ಲಿ ಪ್ರೊ. ಶಿ. ಶಿ. ಬಸವನಾಳರ ಅಧ್ಯಕ್ಷತೆಯಲ್ಲಿ ನಡೆದ ಒಂದು ಧಾರ್ಮಿಕ ಸಮ್ಮೇಳನದಲ್ಲಿ ಶಾಸ್ತ್ರಿಗಳಿಗೆ ಭಾಷಣಕ್ಕೆ ಅವಕಾಶ ಸಿಕ್ಕಿತು. ಕವಿ ಷಡಕ್ಷರಿಯನ್ನು ಕುರಿತು ಮಾಡಿದ ಅವರ ಭಾಷಣ ತುಂಬಾ ಸ್ವಾರಸ್ಯಕರವೂ, ವಿದ್ವತ್‌ಪೂರ್ಣವೂ ಆಗಿದ್ದಿತು. ಅವರ ಭಾಷಣವನ್ನು ಕೇಳಿ ಪ್ರಸನ್ನರಾದ ಪ್ರೊ. ಬಸವನಾಳರು, ಮಾಗಡಿ ವೀರಪ್ಪಶಾಸ್ತ್ರಿಗಳು ಮೊದಲಾದವರು 'ಉಪಾಧ್ಯಾಯ ವೃತ್ತಿಯನ್ನು ಬಿಟ್ಟು, ಕೀರ್ತನೆಯನ್ನೇ ತಮ್ಮ ವೃತ್ತಿಯನ್ನಾಗಿ ಅವಲಂಬಿಸಿಕೊಂಡು, ನಾಡಿನ ಮೂಲೆ ಮೂಲೆಗಳಲ್ಲೂ ಸಂಚರಿಸಿ ಜನಜಾಗೃತಿಯನ್ನುಂಟು ಮಾಡಬೇಕು. ಅದರಿಂದ ನಶಿಸಿಹೋಗುತ್ತಿರುವ ಕೀರ್ತನ ಕಲೆಯು ಉಳಿದಂತೆಯೂ ಆಗುತ್ತದೆ. ನಮ್ಮ ಜನಕ್ಕೆ ನಮ್ಮ ಸಂಸ್ಕೃತಿಯ ಶ್ರೇಷ್ಠತೆಯನ್ನು ಅರಿವುಮಾಡಿಕೊಟ್ಟಂತೆಯೂ ಆಗುತ್ತದೆ' ಎಂದು ಪ್ರೋತ್ಸಾಹಿಸಿದರು. ಬಡತನದ ಬೇಗೆಯಲ್ಲಿ ಬೆಂದು ಹೋಗಿದ್ದ ಶಾಸ್ತ್ರಿಗಳಿಗೆ ಭವಿಷ್ಯದ ಬಗೆಗೆ ಭಯವಾಯಿತು. ಆದರೆ ಎದೆಗುಂದಲಿಲ್ಲ. ಮುನ್ನುಗ್ಗುವ ಮನಮಾಡಿದರು. ಅದಕ್ಕೆ ಮೊದಲು ಮಾಡಬೇಕಾಗಿದ್ದ ಕೆಲಸವೆಂದರೆ ಉಪಾಧ್ಯಾಯ ವೃತ್ತಿಗೆ ರಾಜೀನಾಮೆ ನೀಡುವುದು. ಶಾಸ್ತ್ರಿಗಳ ಮನಸ್ಸಿನಲ್ಲಿ ಒಂದು ದೊಡ್ಡ ಹೋರಾಟ ಆರಂಭವಾಯಿತು. ಕೈಗೆ ಸಿಕ್ಕಿರುವ ಕೆಲಸ ಬಿಟ್ಟು ಜೀವನ ನಡೆಸುವುದು ಹೇಗೆ ? ತನ್ನೊಬ್ಬನ ಬದುಕು ಮುಖ್ಯ ಅಲ್ಲ ಅಲ್ಲಿ, ತನ್ನನ್ನೇ ನಂಬಿ ಕೈಹಿಡಿದ ಹೆಂಡತಿ ಬೇರೆ ಇದ್ದಾಳೆ. ಅವಳಿಗೆ ಒಂದು ಮಗುವೂ ಇದೆ. ಅವರಿಗಾಗಿಯಾದರೂ ತಾನು ದುಡಿಯಬೇಕಲ್ಲವೆ ? ಕೀರ್ತನೆಯಲ್ಲಿ ದುಡಿಯೋಣವೆಂದರೆ ಅದಾವ ಭರವಸೆ ? ತುತ್ತಿನ ಚೀಲಗಳನ್ನು ತುಂಬಲು ನಿತ್ಯವೂ ಕೀರ್ತನೆಗಳು ಸಿಗಬೇಕಲ್ಲ ! ಅಲ್ಲದೆ ಕೀರ್ತನೆ ಎಂಬುದು ಉಪಕಸುಬಾಗಿರಬೇಕೆ ಹೊರತು ಪ್ರಧಾನವೃತ್ತಿ ಆಗಬಾರದು. ಆದದ್ದಾದರೆ ಅದರಿಂದ ಹೊಟ್ಟೆ ತುಂಬುವುದಿಲ್ಲ. ಕಲೆ ಆತ್ಮನ ಹಸಿವನ್ನು ಹಿಂಗಿಸುತ್ತದೆಯೇ ಹೊರತು ಹೊಟ್ಟೆಯ ಹಸಿವನ್ನಲ್ಲ. ಮೊದಲು ಜೀವನ ಆಮೇಲೆ ಕಲೆ. ಎಲ್ಲ ಕಲೆಗಳ ಕಲೆ ರಾಜಕಲೆ, ಶ್ರೇಷ್ಠಕಲೆ ಅಂದರೆ ಜೀವನಕಲೆ. ಆ ಕಾರಣಕ್ಕೆ ಕೆಲಸಕ್ಕೆ ರಾಜೀನಾಮೆ ಕೊಡಬೇಡ ಎಂದಂದುಕೊಂಡರು. ಆದರೆ ದೈವೇಚ್ಛೆ ಬೇರೆ ಇತ್ತು !

### ತುಂಬು ಸ್ವಾಭಿಮಾನಿ

ಶಿವಮೂರ್ತಿಶಾಸ್ತ್ರಿಗಳು ಉಪಾಧ್ಯಾಯರಾಗಿ ಕೆಲಸ ಮಾಡುತ್ತಿದ್ದ ಶಾಲೆ ಕ್ರಿಶ್ಚಿಯನ್ ಮಿಶಿನರಿಯವರದು. ಅದರ ಮುಖ್ಯಸ್ಥರು ರೆವರೆಂಡ್ ಫಾದರ್ ಬ್ರೈನ್. ಬ್ರೈನ್ ಇಂಗ್ಲೆಂಡಿನಿಂದ ಬಂದಿದ್ದವರು. ಅವರಿಗೆ ಕನ್ನಡ ಬರುತ್ತಿರಲಿಲ್ಲ. ಶಿವಮೂರ್ತಿಶಾಸ್ತ್ರಿಗಳು ಅವರಿಗೆ ಕನ್ನಡ ಹೇಳಿಕೊಡುವ ಮನೆಮೇಷ್ಟ್ರಾದರು. ಒಂದು ದಿನ ಒಂದು ಘಟನೆ ನಡೆಯಿತು. ಬಂಗಲೆಗೆ ಕನ್ನಡ ಪಾಠ ಹೇಳಿಕೊಡಲು ನಿತ್ಯವೂ ಹೋಗುತ್ತಿದ್ದ ಶಾಸ್ತ್ರಿಗಳು ಅಂದು ತಲೆಯ ಮೇಲೆ ಗಾಂಧೀ ಟೋಪಿಯನ್ನು ಧರಿಸಿ ಹೋದರು. ಅದ ನ್ನು ಕಂಡಕೂಡಲೇ ಕೆಂಡವನ್ನು ಮುಟ್ಟಿದವರಂತೆ ಮುಖಮಾಡಿಕೊಂಡರು ಬ್ರೈನ್.

'ತಲೆಯ ಮೇಲಿರುವುದನ್ನು ತೆಗೆ. ಇನ್ನು ಮುಂದೆ ಅದಕ್ಕೆ ಬದಲು ಒಂದು ಪೇಟವನ್ನು ಕಟ್ಟಿಕೊಂಡು ಬಾ.'

'ಏಕೆ ?'

'ಅದು ಗಾಂಧೀಟೋಪಿ ! ಅದನ್ನು ಕಂಡರೆ ನನಗಾಗುವುದಿಲ್ಲ. ಗಾಂಧಿ ನಮ್ಮ ಪರಮಶತ್ರು. ನಮ್ಮನ್ನು ಆತ ಇಂಡಿಯಾ ದಿಂದಲೇ ಓಡಿಸಬೇಕೆಂದಿದ್ದಾನೆ ಅದಕ್ಕೆ !'

'ಫಾದರ್ ಭಾರತ ಭಾರತೀಯರದು, ಬ್ರಿಟಿಷರದ್ದಲ್ಲ ಅಲ್ಲವೆ ?'

'ಇರಬಹುದು. ರಾಜಕೀಯವೆಲ್ಲ ನಿನಗೆ ಬೇಡ. ಹೇಳಿದಷ್ಟು ಮಾಡುವುದನ್ನು ಮೊದಲು ಕಲಿ !'

'ಕಲಿಸಬೇಕಾಗಿ ಬಂದ ನಾನು ನಿಮ್ಮಿಂದ ಏನನ್ನೂ ಕಲಿಯುವ ಅಗತ್ಯ ಇಲ್ಲ'

'ಅಗತ್ಯ ಕಂಡು ಬಂದರೆ ?'

'ಕಂಡು. . .ಬಂ. . .ದ. . .ರೆ. . .ಅಂದಿನಿಂದ ನಿಮ್ಮ ನಮ್ಮ ಬಾಂಧವ್ಯಕ್ಕೆ ಬೆಲೆ ಇರುವುದಿಲ್ಲ. ಗುರು ಎನಿಸಿದ ನನಗೂ ಅಥವಾ ಶಿಷ್ಯರಾದ ನಿಮಗೂ ಅಂತೂ ಇಬ್ಬರಿಗೂ ಗೌರವ ತರುವ ಸುದ್ದಿ ಅಲ್ಲ ಅದು.'

'ಶಾಸ್ತ್ರೀಜಿ. . .ದಯವಿಟ್ಟು ನಿಮ್ಮ ಉಡುಪು ಬದಲಿಸಬೇಕು ಎಂಬ ಸಣ್ಣ ವಿಷಯದಲ್ಲಿ ಇಷ್ಟೇಕೆ ಚರ್ಚೆ. . .ನೀವು ಮನೆಯಲ್ಲಿ ಪಾಠ ಹೇಳಿಕೊಡುವ ವ್ಯಕ್ತಿಯಾದರೂ, ಶಾಲೆಯಲ್ಲಿ ನನ್ನ ಕೈಕೆಳಗಿನ ನೌಕರ ಎಂಬುದು ನೆನಪಿರಲಿ.'

'ಚೆನ್ನಾಗಿ ನೆನಪಿದೆ ಫಾದರ್. ನೀವು ಶಾಲೆಯ ಮುಖ್ಯೋಪಾಧ್ಯಾಯರು. . .ಆದರೂ. . .ನನ್ನ ಉಡುಗೆತೊಡುಗೆಗಳನ್ನು ನಿಯಂತ್ರಿಸುವ ಅಥವಾ ಅವುಗಳನ್ನು ಕುರಿತು ನಿರ್ದೇಶಿಸುವ ಅಧಿಕಾರ ನಿಮಗಿಲ್ಲ ! ಕ್ಷಮಿಸಿ. ಈ ವಿಷಯವನ್ನು ಅತ್ಯಂತ ವಿನಯದಿಂದ ಅರಿಕೆ ಮಾಡಿಕೊಳ್ಳುತ್ತಿದ್ದೇನೆ.

'ಅದು ಅವಿವೇಕ ಶಾಸ್ತ್ರಿ ! ನಾಳೆಯಿಂದ ನೀವು ಇದೇ ಉಡುಪು ಧರಿಸಿಬರುವುದಾದರೆ ನನ್ನ ಬಂಗಲೆಗಷ್ಟೇ ಅಲ್ಲ, ಶಾಲೆಗೂ ಪ್ರವೇಶ ದೊರಕಲಾರದು ?'

'ತುಂಬಾ ಸಂತೋಷ ! ಮರೆಯಲ್ಲಿ ನಿಂತು ಮಾಡಿದ ಆಶೀರ್ವಾದ. . .ಬರುವೆ. . .ನಮಸ್ಕಾರ!'

'ಏಕೆ ಸಿಟ್ಟುಗೊಂಡು ಎದ್ದುಬಿಟ್ಟಿರಿ ಶಾಸ್ತ್ರೀ. . .ಮತ್ತೊಮ್ಮೆ ಆಲೋಚಿಸಿ ನೋಡಿ !'

ಆಲೋಚಿಸುವುದೇನಿದೆ ಇಲ್ಲಿ. ಮಿಸ್ಟರ್ ಬ್ರೈನ್. . .ತೆಗದುಕೊಳ್ಳಿ ರಾಜೀನಾಮೆ ಪತ್ರ.. ಥ್ಯಾಂಕ್ಸ್. . .ಇಷ್ಟು ದಿವಸದ ನಮ್ಮ ನಿಮ್ಮ ಸ್ನೇಹಕ್ಕೆ. . .'

ರಾಜೀನಾಮೆ ಪತ್ರ ಮೇಜಿನ ಮೇಲೆ ಮಲಗಿತ್ತು !

ಬ್ರೈನ್ ಅದನ್ನು ಎವೆಯಿಕ್ಕದೆ ನೋಡುತ್ತ ಕುಳಿತಿದ್ದ !!

**ಕೀರ್ತನಾಚಾರ್ಯ**

ಶಾಸ್ತ್ರಿಗಳವರದು ತುಂಬು ಆಕರ್ಷಕ ವ್ಯಕ್ತಿತ್ವ. ಎಂಥದೇ ಗುಂಪಿನಲ್ಲೂ ಎದ್ದುಕಾಣುವ ವ್ಯಕ್ತಿ. ದೀರ್ಘಕಾಯ, ಆಜಾನು ಬಾಹು, ತುಂಬಿದ ಮುಖಮಂಡಲ. ವಿಭೂತಿಧಾರಣೆ ಮಾಡಿಕೊಂಡು, ಹಣೆಗೆ ಶ್ರೀಗಂಧದ ಬೊಟ್ಟನ್ನಿಟ್ಟುಕೊಂಡು, ಬಿಳಿಯ ಜುಬ್ಬ ಧರಿಸಿ, ಮುಚ್ಚಿದ ಕಾಲರಿನ ಕೋಟು ಹಾಕಿ, ಗರಿಮುರಿಯದ ಕಲಾಬತ್ತಿನ ಪೇಟ ಹಾಕಿಕೊಂಡು, ಕೈಯಲ್ಲಿ ವಾಕಿಂಗ್ ಸ್ಟಿಕ್ ಹಿಡಿದು ನಿಂತರೆ ಭಕ್ತಿಮೂಡಿಸುವಂತಹ ಗಾಂಭೀರ್ಯ ತುಂಬಿರುತ್ತಿತ್ತು.

ಕೀರ್ತನೆಯನ್ನು ನಡೆಸುವುದರಲ್ಲಿ ಆ ಕಾಲಕ್ಕೆ ಶಾಸ್ತ್ರಿಗಳನ್ನು ಮೀರಿಸುವ ವ್ಯಕ್ತಿ ಬೇರೊಬ್ಬನಿರಲಿಲ್ಲ ಅಂದರೆ ಅತಿಶಯೋಕ್ತಿ ಯಾಗಲಾರದು. ಅವರ ತುಂಬು ಗಾಂಭೀರ್ಯದ ಆಕೃತಿಗೆ ಅನುಗುಣವಾದ ಅವರ ಕಂಠಶ್ರೀ ಅನುಪಮ, ಅದ್ವಿತೀಯ. ಅವರು ಕಥೆ ಮಾಡುತ್ತಿದ್ದರೆ ನೆರೆದಿದ್ದ ಜನಸ್ತೋಮ ಮಂತ್ರಮುಗ್ಧವಾಗಿ ಕುಳಿತು ಬಿಡುತ್ತಿತ್ತು. ಸಾಕ್ಷಾತ್ ಸರಸ್ವತಿಯೇ ಅವರ ನಾಲಗೆಯ ಮೇಲೆ ನರ್ತಿಸುತ್ತಿರುವಂತೆ ಭಾಸವಾಗುತ್ತಿತ್ತು. ವೀಣೆ ನುಡಿದಂತೆ ನಯ, ನವುರು, ಅವರ ನುಡಿಯಲ್ಲಿ ಅಭಿವ್ಯಕ್ತವಾಗುತ್ತಿತ್ತು.

ಶಾಸ್ತ್ರಿಗಳವರು ಕೀರ್ತನೆಯನ್ನು ಆರಂಭಿಸುವಾಗ ತಮ್ಮದೇ ಆದ ಗತ್ತು ವೈಖರಿಗಳನ್ನು ಪ್ರಕಟಿಸುತ್ತಿದ್ದರು. ಜನ ಮನವನ್ನು ಆಕರ್ಷಿಸುವ ಕಲೆ ಅವರಿಗೆ ಚೆನ್ನಾಗಿ ಸಿದ್ಧಿಸಿತ್ತು. ಮೊದಲು ಒಂದು ಸುಂದರ ಹಾಗೂ ಮಧುರವಾದ ಗಣಪತಿ ಪ್ರಾರ್ಥನೆ. ಅದನ್ನು ತುಂಬಾ ಸುಶ್ರಾವ್ಯವಾಗಿ ಹಾಡಿ ತಣಿಸುತ್ತಿದ್ದರು. ಅನಂತರ ಶಿವ–ಶಿವೆಯರನ್ನೂ, ಶರಣರನ್ನೂ, ಕನ್ನಡ ಮತ್ತು ಸಂಸ್ಕೃತ ಸಾಹಿತ್ಯಕ್ಕೆ ಸಂಬಂಧಿಸಿದ ಹಿರಿಯ ಕವಿಗಳನ್ನು ಅನನ್ಯ ಭಕ್ತಿಯಿಂದ ಸ್ಮರಿಸಿ ಅಂದು ನಡೆಸಿಕೊಡಬೇಕಾಗಿದ್ದ ಕಥೆಯನ್ನು ಹೆಸರಿಸುತ್ತಿದ್ದರು. ಅದಕ್ಕೆ ಹಿನ್ನಲೆಯಾಗಿ ದೈವ ಧರ್ಮ, ದೇಶಗಳನ್ನು ಕುರಿತಂತೆ ದೈವಭಕ್ತಿ, ಧರ್ಮಶ್ರದ್ಧೆ, ದೇಶಪ್ರೇಮ, ಪುರುಷಶಕ್ತಿ, ನಿಷ್ಠೆ, ನ್ಯಾಯ, ಭಕ್ತನ ನಿಲವು, ದೈವದ ಒಲವು ಇತ್ಯಾದಿಗಳನ್ನು ನಿರೂಪಿಸುತ್ತಿದ್ದರು. ಅದು ಪ್ರಾಸ್ತಾವಿಕವಾಗಿದ್ದರೂ, ಕಥೆಗೆ ಪೋಷಕ ವಾಗಿರುತ್ತಿತ್ತು. ಅಲ್ಲದೆ ನಾನಾ ಹವ್ಯಾಸಗಳಲ್ಲಿ ಹರಿದುಹಂಚಾಗಿದ್ದ ಶ್ರೋತೃಗಳ ಹೃದಯವನ್ನು ಹದಗೊಳಿಸಿ, ಕಥೆಯ ಕಥೆಗೆ ಪೂರ್ಣ ಗಮನ ಹರಿಯಲು ಅದನ್ನು ಸಿದ್ಧಗೊಳಿಸುತ್ತಿತ್ತು.

ಶಾಸ್ತ್ರಿಗಳು ಕಥೆಗೆ ಕಾಲಿರಿಸುವ ಮುನ್ನ ಜನರನ್ನು ಹಾಸ್ಯದ ಕಡಲಲ್ಲಿ ಓಲಾಡಿಸುತ್ತಿದ್ದರು.

**'ನೋಡಿ ಕೀರ್ತನ ಮಾಡುವವನಿಗೆ**

**ಮುಖ್ಯವಾಗಿ ಎರಡು ಅರ್ಹತೆಗಳಿರಬೇಕು !**

**ಒಂದು, ಸೊಂಟ ತ್ರಾಣ**

**ಎರಡು, ಕಂಠ ತ್ರಾಣ !!**

ಇವೆರಡರ ಜೊತೆಯಲ್ಲಿ ಮಿಕ್ಕ ತ್ರಾಣಗಳು, ತಾಖತ್ತುಗಳು ಈ ಪ್ರಾಣಿಯೊಂದಿಗೆ ಸೇರಿಕೊಂಡಿರಬೇಕು. ಸೊಂಟತ್ರಾಣ ಏಕೆಂದರೆ ಶ್ರೋತೃಗಳ ಆಸಕ್ತಿ ಅಭಿರುಚಿಗಳಿಗೆ ತಕ್ಕಂತೆ ಕೀರ್ತನಕಾರ ಎರಡು ಗಂಟೆ, ಮೂರು ಗಂಟೆ ಕೆಲವು ವೇಳೆ ಐದು ಗಂ

ಟೆಗಳ ಕಾಲ ಬಿಟ್ಟೂ ಬಿಡದೆ ಕಥಾಶ್ರವಣ ನಡೆಸಬೇಕಾಗುತ್ತದೆ. ಅಷ್ಟೂ ಹೊತ್ತು ನಿಲ್ಲಲು ಅವನಿಗೆ ಸೊಂಟತ್ರಾಣ ಇಲ್ಲದೇ ಹೋದರೆ ಕೆಸರಿನಲ್ಲಿ ನಿಂತ ಬಾಳೆಕಂಬದ ಹಾಗೆ ಯಾವುದಾದರೂ ಒಂದು ಕಡೆ ತಪ್ಪದೆ ಉರುಳಿಕೊಳ್ಳಬೇಕಾಗುತ್ತೆ. ಆದ್ದರಿಂದ ಸೊಂಟ ತ್ರಾಣ ಮೊದಲನೆಯದು.

**ಇನ್ನು ಕಂಠ ತ್ರಾಣ :**

ನೋಡಿ, ನೀವು ಸುಮಾರು ಎರಡು ಮೂರು ಸಾವಿರ ಜನ ಈ ಆವರಣದಲ್ಲಿದ್ದೀರಿ. ನೀವಲ್ಲದೆ ಅತ್ತ ಇತ್ತ ಇರೋ ಮನೆ ಬಾಗಿಲುಗಳಲ್ಲಿ, ಮನೆಗಳ ಒಳಗೆ, ಮಾಳಿಗೆ ಮೇಲೆ, ದೇವಸ್ಥಾನದ ಗೋಪುರದ ಮೇಲೆ, ಅಂಗಡಿ ಮುಂದೆ, ಅರಳೀಕಟ್ಟೆ ಮೇಲೆ ಎಲ್ಲಿ ಅಂದರೆ ಅಲ್ಲಿ ಇನ್ನೂ ಜನರು ಸೇರಿದ್ದಾರೆ. ಊರಿಗೆ ಊರೇ ಬಂದಿದೆ ಎಂದರೆ ಆಶ್ಚರ್ಯ ಅಲ್ಲ. ಜೊತೆಗೆ ನಿಮ್ಮ ನಿಮ್ಮ ನೆಂಟರಿಷ್ಟರುಗಳನ್ನು ಬೇರೆ ಬೇರೆ ಊರುಗಳಿಂದ ಶಿವಕಥಾಶ್ರವಣಕ್ಕಾಗಿಯೇ ಚಕ್ಕಡಿಕಟ್ಟಿ ಕರೆಸಿದ್ದೀರಿ. ಅಂದಮೇಲೆ ಎಷ್ಟು ಮಂದಿ ಆಯ್ತು ! ಅಷ್ಟೂ ಜನಕ್ಕೆ ಒಬ್ಬನೇ ಒಬ್ಬ ಕೀರ್ತನಕಾರ ಸ್ಪಷ್ಟವಾಗಿ ಕೇಳಿಸುವಂತೆ ಬಾಯಿ ಬಡಕೋಬೇಕಾದರೆ ಅವನ ಕಂಠ ತ್ರಾಣ ಎಷ್ಟಿರಬೇಕು. ಆದರೆ ನನ್ನ ಜೊತೆಗಿರೋ ಪೆಟ್ಟಿಗೆಯವರನ್ನೂ, ತಬಲದವರನ್ನೂ ನಾನು ಮರೆಯೋಹಾಗಿಲ್ಲ' ಅವರಿಲ್ಲದೆ ಹೋದರೆ ನನ್ನ ಪುಂಗಿ ಬಂದ್ ! ಅವರು ನನ್ನ ಜೊತೆಯಲ್ಲೇ ಬೆಳೆದು ಬರ್ತಾರೆ, ಸಾಹಿತ್ಯದ ಸ್ವಾರಸ್ಯವನ್ನು ನಾದ ಮಾಧು ರ್ಯದಿಂದ ಹೆಚ್ಚಿಸುತ್ತಾರೆ.

ಇಷ್ಟೆಲ್ಲಾ ಆಯ್ತು.

ಈ ರಾತ್ರಿಯೆಲ್ಲಾ ಕಥಾಶ್ರವಣ ಆದ ಮೇಲೆ ನಿಮ್ಮ ನಿಮ್ಮ ಮನೆಗಳಿಗೆ ಹೋಗ್ತೀರಿ. ಹೋದಕೂಡಲೇ ಗಂಡಸರು ಹೂ ಪತ್ರಿ ತರುವುದರಲ್ಲಿ ನಿರತರಾದರೆ, ಹೆಣ್ಣುಮಕ್ಕಳು ಅಡುಗೆಗೆ ಸಿದ್ಧಪಡಿಸಿಕೊಳ್ಳುತ್ತೀರಿ ಅಲ್ಲವೆ ? ಹೌದು, ನನಗೆ ಗೊತ್ತು ನಿಮ್ಮ ನೆಂಟರು ಇಷ್ಟರು - ಇವರಿಗೆ ಸಂತೋಷ ಆಗೋ ಹಾಗೆ ಹಬ್ಬಮಾಡ್ತೀರಿ. ಮಾಡಿ ಚೆನ್ನಾಗಿ ಮಾಡಿ, ಬೇಡ ಅನ್ನೋಲ್ಲ. ಆದರೆ ನಮ್ಮನ್ನು ಮಾತ್ರ ಮರೀಬೇಡಿ. ನನ್ನ ಹೊಟ್ಟೆ ಸಣ್ಣದು, ತುಂಬಾ ಸಣ್ಣದು. ಕೇವಲ ಒಂದು ಗುಡಾಣದ ಗಾತ್ರ ಅಷ್ಟೆ !. . .ಕೇಳಿ ಲ್ಲವೇ 'ಅಯ್ಯಗೋಳ ಹೊಟ್ಟಿ, ಕವುದೀಮೊಟ್ಟೆ' ಅಂತಾ ; ನಾನು ಅಯ್ಯ, ಜಂಗಮಯ್ಯಾ. . .ನನ್ನ ಹೊಟ್ಟೆ ಹೆ ಹ್ಹೆ ಹ್ಹೆ ಹ್ಹೆ!. . .

ಈಗ ಇಷ್ಟು ಸಾಕು

ಇನ್ನು ಕಥೆ ಎಲ್ಲಿಗೆ ಬಂತು ನೋಡೋಣ.

–ಹೀಗೆ ವಿನೋದಪೂರ್ಣವಾದ ಶೈಲಿಯಲ್ಲಿ ಕೀರ್ತನೆ ಆರಂಭಿಸುತ್ತಿದ್ದರು ಶಾಸ್ತ್ರಿಗಳು. ಕಥಾನಕವನ್ನು ಎತ್ತಿಕೊಂಡ ಮೇಲಂತೂ ಅವರ ವಿದ್ವತ್ತು ಪ್ರತಿಭೆಗಳು ಗುಡುಗು ಮಿಂಚುಗಳಂತೆ ಆರ್ಭಟಿಸುತ್ತಿದ್ದವು.

ಅಂದಿನ 'ಗಿರಿಜಾ ಕಲ್ಯಾಣ'ದಲ್ಲಿ ಗಿರಿಜೆಯ ಅಚಲವಾದ ಭಕ್ತಿನಿಷ್ಠೆಯ ಮುಷ್ಠಿ ಹಿಡಿದು ಸಾಗಿದ ರೀತಿ, ಅವಳ ನಿಲವು, ಇವುಗಳನ್ನು ಅತ್ಯಂತ ಉಜ್ವಲವಾಗಿ ಬಣ್ಣಿಸಿದರೆ, ವಟುವೇಷಧಾರಿ ಶಿವನ ಲೀಲೆಗಳನ್ನು ತುಂಬಾ ಹಾಸ್ಯಭರಿತವಾಗಿ ಹೇಳುತ್ತಿ ದ್ದರು. ಶಿವನ ಕತೆಯಲ್ಲಿ ಗಿರಿಜೆಯನ್ನು ಒಲಿದು 'ಗಿರಿಜೆ ನಾನು ನಿನಗೆ ದಾಸನು !' ಎಂದು ಅವಳ ಕೈಹಿಡಿದ ಕೂಡಲೇ ಮತ್ತೆ ಶಾಸ್ತ್ರಿಗಳವರ ಹಾಸ್ಯ ಚಟಾಕಿ ಹಾರುತ್ತಿತ್ತು.

ರಾಜಶೇಖರವಿಳಾಸ, ಹರಿಶ್ಚಂದ್ರನ ಕಥೆ, ತಿರುನೀಲಕಂಠರ ಕಥೆಗಳನ್ನು ಅತ್ಯಂತ ಮನೋಜ್ಞವಾಗಿ ಬಣ್ಣಿಸುತ್ತಿದ್ದರು. ಅದರಲ್ಲೂ ತಿರುಕುಳವಿನಾಚಿಯ ಪ್ರಲಾಪವನ್ನು ಬಣ್ಣಿಸುವಾಗ, ತಿರುನೀಲಕಂಠ ಮತ್ತು ಮುತ್ತೈದೆಯರ ಮುಪ್ಪು ಚಪ್ಪರಿಸುವವ ರೆಗೂ ಪಾಲಿಸಿಕೊಂಡು ಬಂದ ನಿಷ್ಠೆಯ ಹಾಗೂ ಚಂದ್ರಮತಿ ಮತ್ತು ಹರಿಶ್ಚಂದ್ರರ ಸ್ಮಶಾನ ಸಂದರ್ಭದ ದಾರುಣತೆಯ ಅಪೂರ್ವ ಕರುಣಾಜನಕ ಸನ್ನಿವೇಶಗಳನ್ನು ಬಿತ್ತರಿಸುವಾಗ ಶ್ರೋತೃಗಳ ಹೃದಯ ಹಿಂಡಿದಂತಾಗುತ್ತಿತ್ತು. ಶಾಸ್ತ್ರಿಗಳು ಕಥೆ ಹೇಳು ಹೇಳುತ್ತಲೇ ಗಳಗಳ ಅತ್ತುಬಿಡುತ್ತಿದ್ದರು. ಅವರ ಏಕಪಾತ್ರಾಭಿನಯ, ಅವರ ಬಾಯಿಂದ ಬರುತ್ತಿದ್ದ ಕರುಳಿನ ನುಡಿಗಳು ಇವು ನಿಜಕ್ಕೂ ಶ್ರೋತೃಗಳಲ್ಲಿ ಕರುಣರಸ ಕೋಡಿಹರಿಯುವಂತೆ ಮಾಡುತ್ತಿದ್ದವು. ಆದರೆ ಶಾಸ್ತ್ರಿಗಳು ಬಹು ಜಾಣರು ಕೂಡಲೇ ಯಾವುದಾದರೊಂದು ಸಂಸಾರ ಚಿತ್ರಣವನ್ನು ಎತ್ತಿಕೊಳ್ಳುತ್ತಿದ್ದರು. ' ನಮ್ಮೂರಲ್ಲಿ ಒಂದು ಸಂಸಾರ ಹೀಗಿತ್ತು ನೋಡಿ. . .ಎಂದು ಪ್ರಾರಂಭಿಸುತ್ತಿದ್ದರು. ಅದು ಜನಕ್ಕೆ ಆನಂದ ತರುತ್ತಿತ್ತು. ಆನಂದದ ಜೊತೆಯಲ್ಲೇ ಆತ್ಮಸಾಕ್ಷಾತ್ಕಾರವೂ ಆಗುತ್ತಿತ್ತು. ಅಂತಹ ರೀತಿ ಯಲ್ಲಿ ಮನಸ್ಸಿಗೆ ಸ್ನಾನ ಮಾಡಿಸಿ, ಶುದ್ಧಗೊಳಿಸಿ ಅದು ಸದಾ ಶುದ್ಧವಾದುದ್ದನ್ನೇ ಚಿಂತಿಸುವಂತೆ ಮಾಡುವ ಮೋಡಿ ಶಾಸ್ತ್ರಿ ಗಳವರಿಗಿತ್ತು.

ಶಿವಮೂರ್ತಿಶಾಸ್ತ್ರಿಗಳು ಹಂಗುಹರಿದು ಸ್ವತಂತ್ರರಾದರಷ್ಟೆ. ಅವರ ಸ್ವಾಭಿಮಾನ ಅವರಲ್ಲಿದ್ದ ದೇಶಾಭಿಮಾನವನ್ನು ಎಚ್ಚರಿಸಿತು. ಆದರೆ ರಾಷ್ಟ್ರೀಯ ಮಟ್ಟದ ಆಂದೋಲನದಲ್ಲಿ ಅವರು ನೇರವಾಗಿ ಧುಮ್ಮಿಕ್ಕದೆ ಪರೋಕ್ಷವಾಗಿ ಜನಮನವನ್ನು ರಾಷ್ಟ್ರಸೇವೆಯ ಕಡೆಗೆ ತಿರುಗಿಸಲು ಯತ್ನಿಸಿದರು. ಅದಕ್ಕೆ ಕೀರ್ತನೆಯನ್ನೇ ಪ್ರಮುಖ ಸಾಧನವನ್ನಾಗಿ ಮಾಡಿಕೊಂಡರು. ಅವರ ನಾಲಗೆಯೇ ಅಸ್ತ್ರವಾಯಿತು. ಮೈಕು ಮೊದಲಾದ ವ್ಯವಸ್ಥೆಯನ್ನೇ ಕಾಣದ ಕಾಲ ಅದು. ಆದರೂ ಶಾಸ್ತ್ರಿಗಳ ಕಂಚಿನ ಕಂಠದಿಂದ ಹೊರಬಂದ ವಾಕ್ ಧಾರೆ ಸಹಸ್ರ ಸಹಸ್ರ ಸುಪ್ತ ಚೇತನಗಳನ್ನು ಬಡಿದೆಬ್ಬಿಸಿತು ; ರಾಷ್ಟ್ರಹಿತ ಕಾರ್ಯಕ್ಕೆ ಅನುವುಗೊಳಿಸಿತು.

ಕರ್ನಾಟಕ ಏಕೀಕರಣ ಶಾಸ್ತ್ರಿಗಳ ಪಂಚಾಕ್ಷರೀ ಮಂತ್ರವಾಗಿತ್ತು. 'ಭಾರತಕ್ಕೆ ಸ್ವಾತಂತ್ರ್ಯವನ್ನು ದೊರಕಿಸಿಕೊಡಲು ಗಾಂಧೀಜಿ, ನೇತಾಜಿ ಮೊದಲಾದ ಮಹಾಪುರಷರಿದ್ದಾರೆ. ಆದರೆ ಹರಿದು ಹಂಚಾಗಿರುವ ನನ್ನ ಕರ್ನಾಟಕ ಮತ್ತೆ ಅಖಂಡ ಕರ್ನಾಟಕವಾಗಿ ಮೆರೆಯುವುದು ಯಾವಾಗ ? ಅದಕ್ಕಾಗಿ ಶ್ರಮಿಸುವವರು ಯಾರು ? ನನ್ನ ಆತ್ಮಬಲಿದಾನವಾದರೂ ಚಿಂತೆಯಿಲ್ಲ. ಕರ್ನಾ ಟಕ ಏಕೀಕರಣ ಆಗಲೇಬೇಕು" ಎಂದು ನಿರ್ಧಾರದ ನುಡಿಗಳನ್ನಾಡುತ್ತಿದ್ದರು. ಅವರ ಸಿಂಹವಾಣಿ ಅನೇಕ ರಾಜಕಾರಣಿಗ ಳನ್ನೂ, ಸಾಹಿತಿಗಳನ್ನೂ ಆಹ್ವಾನಿಸಿತು. ಟಿ. ಸಿದ್ಧಲಿಂಗಯ್ಯ, ಬೆನಗಲ್ ರಾಮರಾಯ ಇವರೊಡನೆ ಸೇರಿಕೊಂಡು, ನಿಜಲಿಂಗಪ್ಪನ ವರ ನೇತೃತ್ವದಲ್ಲಿ, ಕುಲಪುರೋಹಿತ ಆಲೂರು ವೆಂಕಟರಾಯರ ಸಲಹೆಯಂತೆ ಒಂದು 'ಕರ್ನಾಟಕ ಏಕೀಕರಣ ಸಂಘ'ವನ್ನು ಸ್ಥಾಪಿಸಿದರು.

ಶಾಸ್ತ್ರಿಗಳು ಪ್ರಗತಿಪಥದಲ್ಲಿ ಮುನ್ನಡೆದದ್ದು ಕ್ರಿ.ಶ. ೧೯೩೫ರ ಅನಂತರದಲ್ಲಿ, ಬೆಂಗಳೂರಿಗೆ ಬಂದು ಸೇರಿದ ಮೇಲೆ, ಆದರೆ ಕ್ರಿ.ಶ. ೧೯೨೭ರಲ್ಲೇ ಅವರ ಪ್ರಗತಿಗೆ ಮುನ್ಸೂಚನೆಯಾಗಿ ಒಂದು ಅರುಣಕಿರಣ ಕಾಣಿಸಿಕೊಂಡಿತ್ತು. ಅದರ ವಿವರ ಹೀಗಿದೆ.

ಕ್ರಿ.ಶ. ೧೯೨೭ರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ ಸವಾರಿ ತುಮಕೂರಿಗೆ ದಯಮಾಡಿಸಿತ್ತು. ಅಂದು ಶಾಸ್ತ್ರಿಗಳು 'ನಾಲ್ವಡಿ ಕೃಷ್ಣರಾಜವಿಳಾಸ' ಎಂಬ ಪುಟ್ಟ ಚಂಪೂಕಾವ್ಯವೊಂದನ್ನು ರಚಿಸಿ, ಸಭೆಯಲ್ಲಿ ಹಾಡಿ ಅರ್ಪಿಸಿದರು. ಪ್ರಭುಗಳು ಸುಪ್ರೀತರಾಗಿ, ಹತ್ತಿರಕ್ಕೆ ಕರೆದು ಆತ್ಮೀಯವಾಗಿ ನುಡಿದರು. ಆ ದಿನಗಳಲ್ಲಿ ಶ್ರೀಮನ್ ಮಹಾರಾಜರವರ ಪ್ರೀತಿಗೆ ಪಾತ್ರರಾಗುವುದೆಂದರೆ ಕೈಲಾಸದಲ್ಲಿ ಗಣಪದವಿ ದೊರೆತಂತೆ ಎಂಬ ಭಾವನೆ ಇತ್ತು. ಅಂತಹ ವಿಶಿಷ್ಟ ಗೌರವಕ್ಕೆ ಶ್ರೀ ಶಾಸ್ತ್ರಿಗಳು ಪಾತ್ರರಾದರು. ಜೊತೆಗೆ ಅಂದು ಮೈಸೂರು ಸಂಸ್ಥಾನದ ದಿವಾನರಾಗಿದ್ದ ಅಮೀನ್ ಉಲ್ ಮುಲ್ಕ್ ಸರ್ ಮಿರ್ಜಾ ಇಸ್ಮಾಯಿಲ್ ಸಾಹೇಬರವರ ಗಮನಕ್ಕೆ ಶಾಸ್ತ್ರಿಗಳು ಬಂದರು.

ಕೆಲವು ವರ್ಷಗಳು ಉರುಳಿದವು. ಇದ್ದಕ್ಕಿದ್ದಂತೆಯೇ ಶಿವಮೂರ್ತಿಶಾಸ್ತ್ರಿಗಳಿಗೆ ಮೈಸೂರು ಅರಮನೆಯಿಂದ ಆಹ್ವಾನ ಬಂತು. ಆ ವರ್ಷದ ದಸರಾ ದರ್ಬಾರಿನಲ್ಲಿ ಶ್ರೀ ಶಿವಮೂರ್ತಿ ಶಾಸ್ತ್ರಿಗಳವರಿಗೆ 'ಆಸ್ಥಾನ ವಿದ್ವಾನ್' ಎಂಬ ಬಿರುದನ್ನಿತ್ತು ಗೌರವಿಸಲಾಯಿತು. ಅನಂತರದಲ್ಲಿ ಮತ್ತೊಂದು ವರ್ಷದ ದಸರಾ ದರ್ಬಾರಿನಲ್ಲಿ 'ಪಂಡಿತರತ್ನಂ' ಎಂಬ ಬಿರುದನ್ನು ಸಮರ್ಪಿಸಲಾಯಿತು. ಆದರೂ ಶಾಸ್ತ್ರಿಗಳು ಕೀರ್ತನ ಕಾಯಕವನ್ನು ಮಾತ್ರ ಬಿಡಲಿಲ್ಲ. ಅದನ್ನು ಸುಮಾರು ೧೯೩೭ರವರೆಗೂ ನಡೆಸಿಕೊಂಡು ಬಂದರು. ಆಮೇಲೆ ಅವರ ಬದುಕಿನ ಹಾದಿ ಬದಲಾದ್ದರಿಂದ ಅನಿವಾರ್ಯವಾಗಿ ಆ ಕಾಯಕವನ್ನು ಬಿಡಬೇಕಾಯಿತು.

ಹೀಗೆ ಶಿವಮೂರ್ತಿಶಾಸ್ತ್ರಿಗಳು ಗುರುಮನೆಯ ಆಶೀರ್ವಾದ, ಅರಮನೆಯ ಸನ್ಮಾನ, ನೆರಮನೆಯ ಆದರ ಇವು ಮೂರನ್ನೂ ಸಂಪಾದಿಸಿಕೊಂಡು ಬೆಳೆದರು.

**ದೇಶ : ಒಂದು ಶಿಕ್ಷಣ ಶಾಲೆ !**

ಶಿವಮೂರ್ತಿ ಶಾಸ್ತ್ರಿಗಳು ಕಾಲೇಜು ಮೆಟ್ಟಲು ಹತ್ತಲಿಲ್ಲ. ಆದರೆ ಅನೇಕ ವಿದ್ವಾಂಸರ ಮಹಾ ಪ್ರಬಂಧಗಳ ರಚನೆಗೆ ಮಾರ್ಗ ದರ್ಶನರಾದರು. ಅವುಗಳನ್ನು ಪರಿಶೀಲಿಸಿ ವಿಶ್ವವಿದ್ಯಾಲಯವು ನೀಡುವ ಉನ್ನತ ಪದವಿಗಳ ಪರೀಕ್ಷಕರಾದರು. ಅದಕ್ಕೆ ಅರ್ಹತೆ ಬಂದದ್ದು ಸ್ವಶಿಕ್ಷಣದಿಂದ ಅವರ ಶಿಕಣ ಕೇಂದ್ರ ಸುತ್ತಣ ಸಮಾಜ, ಪರಿಸರ, ಪ್ರದೇಶ, ಪ್ರಾಂತ ಹಾಗೂ ರಾಷ್ಟ್ರ ಇವುಗಳ ರೂಪ ದಲ್ಲಿತ್ತು. 'ಅರಿವೇ ಗುರು' ಎಂಬುದನ್ನರಿತ ಶಾಸ್ತ್ರಿಗಳು ತಮಗೆ ತಾವೇ ಬೋಧಕರಾದರು. 'ಸರ್ವರೊಳು ಒಂದೊಂದು ನುಡಿಗ ಲಿತು ವಿದ್ಯದಾಪರ್ವತವೆ' ಆದರೆ.

'ದೇಶ ನೋಡಬೇಕು ಇಲ್ಲವೆ ಕೋಶ ಓದಬೇಕು' ಎಂಬುದು ಕನ್ನಡದ ಗಾದೆಯ ಮಾತು. ಅದರರ್ಥ ದೇಶ ಪರ್ಯಟನೆಯಿಂದ ದೊರೆಯುವ ಲಾಭದಲ್ಲಿ ಅಡಗಿದೆ. ಶಾಸ್ತ್ರಿಗಳು ಅಖಂಡ ಭರತಖಂಡವನ್ನು ಸುತ್ತಾಡಿದರು. ಕರ್ನಾಟಕದಲ್ಲಂತೂ ಅವರ ಅಡಿಮೆಟ್ಟದ ನೆಲ ಇಲ್ಲ, ಮುಡಿ ಮುಟ್ಟದ ಮೂಲೆ ಇಲ್ಲ, ಎಲ್ಲಡೆಯ ಪರಿಚಯವೂ ಅವರಿಗಿದೆ.

ಶಾಸ್ತ್ರಿಗಳು ದೇಶವನ್ನು ಸುತ್ತಿದ್ದು ಕೇವಲ ವಿನೋದಕ್ಕಾಗಿ ಅಲ್ಲ ಅಥವಾ ಇತರರಂತೆ ಹವ್ಯಾಸಿ ಅಲೆಮಾರಿಗಳಾಗಿ ಅಲ್ಲ; ಜನಜೀವನವನ್ನು ತಿಳಿಯಲಿಕ್ಕೆ, ಜಗತ್ತನ್ನು ಅರಿಯಲಿಕ್ಕೆ, ಭರತಖಂಡದ ಬದುಕಿನಲ್ಲಿ ವೈವಿಧ್ಯತೆ ಇದೆ ಎಂಬುದನ್ನು ಮೊದಲು ಅರಿತರು, ಅನಂತರದಲ್ಲಿ ವೈವಿಧ್ಯತೆಯ ಮಧ್ಯೆ ಏಕತೆ ಇರುವುದನ್ನು ಕಂಡುಕೊಂಡರು. ಭಾಷೆ ಬೇರೆ, ವೇಷ ಬೇರೆ ಆದರೆ ದೇಶ ಒಂದೇ ಅದು ಭಾರತ ಎಂದು ಸಾರಿದರು.

ಬೆಂಗಳೂರಿನ ಲಾಲ್‌ಬಾಗಿನ ಗಾಜಿನ ಮನೆಯಲ್ಲಿ ಸಿದ್ದಪ್ಪ ಕಂಬಳಿಯವರ ಅಧ್ಯಕ್ಷತೆಯಲ್ಲಿ ಸರ್ ಪುಟ್ಟಣ್ಣಶೆಟ್ಟರ ನೇತೃತ್ವದಲ್ಲಿ ನಡೆದ ಅಖಿಲ ಭಾರತ ವೀರಶೈವ ಮಹಾಸಭೆಗೆ ತುಮಕೂರಿನಿಂದ ಬಂದಿದ್ದ ಶಾಸ್ತ್ರಿಗಳು ವೀರಶೈವದ ಭವಿಷ್ಯದ ಬಗೆಗೆ ನಡೆದ ಚರ್ಚೆಯಲ್ಲಿ ಭಾಗವಹಿಸಿದ್ದರು. ವಯಸ್ಸಿನಲ್ಲಿ ಚಿಕ್ಕವರಾಗಿದ್ದರೂ ಹಿರಿಯ ಮಟ್ಟದ ಸಲಹೆಗಳನ್ನು ಕೊಟ್ಟರು. ಅದೇ ಸುಮಾರಿನಲ್ಲಿ ಮದರಾಸಿನಲ್ಲಿ ನಡೆದ ಥಿಯಾಸಫಿಕಲ್ ಕಾನ್‌ಫೆರನ್ಸ್‌ನಲ್ಲಿ ಭಾಗವಹಿಸಿದರು. ಅದರಿಂದ ಅವರ ಅನುಭವ ವಿಶಾಲವಾಯಿತು. ಅಂತೆಯೇ ಮದರಾಸಿನಲ್ಲಿ ಒಂದು ಹೊಸ ವಿಚಿತ್ರ ಅನುಭವವೂ ಶಾಸ್ತ್ರಗಳವರಿಗೆ ಆಯಿತು.

ಒಂದು ದಿನ ತಾವೊಬ್ಬರೇ ಸಮುದ್ರ ನೋಡಲು ಹೋದರಂತೆ. ಸಮುದ್ರ ತೀರದಲ್ಲಿ ಒಂದು ದೋಣಿ ನಿಂತಿತ್ತು. ಹಲವರು ಹಣಕೊಟ್ಟು ಸ್ವಲ್ಪದೂರ ಸಮುದ್ರಯಾನ ಮಾಡಿ ಬರುತ್ತಿದ್ದರು. ಶಾಸ್ತ್ರಿಗಳವರಿಗೂ ಹೋಗಿ ಬರುವ ಕುತೂಹಲವುಂಟಾಯಿತು. ಆದರೆ ತಾವು ಹೊಸದಾಗಿ ಕೊಂಡು ತಂದಿದ್ದ ಚಪ್ಪಲಿಗಳನ್ನು ಸಮುದ್ರದಡದಲ್ಲೇ ಬಿಟ್ಟರು. ಕಾರಣ ಚಪ್ಪಲಿ ಹಾಕಿಕೊಂಡು ದೋಣಿ ಹತ್ತಿದರೆ ಸಮುದ್ರರಾಜನಿಗೆ ಅಪಚಾರ ಮಾಡಿದಂತೆ ಎಂಬುದು ಅವರ ಭಾವನೆ. ಆದರೆ ಸಮುದ್ರಯಾನ ಮುಗಿದು ದಡಕ್ಕೆ ಬಂದು ಇಳಿದು ನೋಡಿದಾಗ ಚಪ್ಪಲಿ ಕಾಣೆಯಾಗಿದ್ದವು. ಇದರಿಂದ ಶಾಸ್ತ್ರಿಗಳಿಗೆ ಒಂದು ವಿಧದಲ್ಲಿ ನಷ್ಟವಾಗಿದ್ದರೂ, ಮತ್ತೊಂದು ವಿಧದಲ್ಲಿ ಲಾಭವೇ ಆಗಿತ್ತು. ಅಂದರೆ ಒಂದು ಜೊತೆ ಹೊಸ ಚಪ್ಪಲಿಗಳನ್ನು ದಾನಕೊಟ್ಟ ಪುಣ್ಯ ಲಭಿಸಿತು ! ಈ ವಿಷಯವನ್ನು ಅವರು ಮದರಾಸಿನಲ್ಲಿ ಇಳಿದುಕೊಂಡಿದ್ದ ಗುರುಬಸವ ಮತ್ತು ಕಂಪನಿ ಮಾಲೀಕರ ಮನೆಯಲ್ಲಿ ಹೇಳಿದಾಗ ಮನೆಯವರೆಲ್ಲರೂ ಬಿದ್ದು ಬಿದ್ದು ನಕ್ಕರಂತೆ ! ಶಾಸ್ತ್ರಿಗಳಿಗೆ ತುಂಬಾ ನಾಚಿಕೆಯಾಯಿತು. ಕಾಲ, ದೇಶ, ವರ್ತಮಾನಗಳನ್ನು ತಿಳಿದು ನಡೆಯಬೇಕು ಎಂಬ ಅರಿವು, ಅನುಭವ ಅವರಿಗಾಯಿತು.

ಇದೇ ರೀತಿ ಶಾಸ್ತ್ರಿಗಳು ಕೀರ್ತನೆಯ ನೆಪದಲ್ಲಿ, ಭಾಷಣದ ನೆಪದಲ್ಲಿ, ಸಮ್ಮೇಳನ, ಅಧಿವೇಶನಗಳ ನೆಪದಲ್ಲಿ ಆಗಾಗ ದೇಶಸಂಚಾರ ಕೈಗೊಳ್ಳುತ್ತಿದ್ದರು. ಆ ವೇಳೆಯಲ್ಲಿ ಅವರು ಹೋದಡೆಯಲ್ಲೆಲ್ಲಾ ಓಲೆಗರಿ ಪುಸ್ತಕಗಳನ್ನೂ, ಅನ್ಯಭಾಷಾ ಕೃತಿಗಳನ್ನೂ ಸಂಗ್ರಹಿಸಿ ತರುತ್ತಿದ್ದರು. ಅವರೇ ಒಂದೆಡೆಯಲ್ಲಿ ಹೇಳುತ್ತಾರೆ.

'ದೇಶಾಟನದಲ್ಲಿ ಅನೇಕ ಅನುಭವಗಳು ಉಂಟಾದವು. ತೀರ್ಥಕ್ಷೇತ್ರಗಳನ್ನು, ಐತಿಹಾಸಿಕ ಸ್ಥಳಗಳನ್ನು ಅಗತ್ಯವಾಗಿ ಸಂದರ್ಶಿಸಿದರು. ನಾಡಿನ ಮನೆ ಮಠಗಳಲ್ಲಿ ಅವಿತುಕೊಂಡು ಕೂತಿದ್ದ ತಾಳೆಗರಿ ಗ್ರಂಥಗಳು, ತಾಮ್ರ ಶಾಸನಗಳು ಮೊದಲಾದವುಗಳನ್ನು ಸಂಗ್ರಹಿಸುತ್ತಿದ್ದೇನೆ' ಎಂದು. ಶಾಸ್ತ್ರಿಗಳು 'ಶರಣ ಸಾಹಿತ್ಯ' ಮಾಸಪತ್ರಿಕೆಯನ್ನು ಆರಂಭಿಸಿದ ಮೇಲೆ ಅವುಗಳನ್ನೆಲ್ಲಾ ಉಪಯೋಗಿಸಿಕೊಂಡು ಪತ್ರಿಕೆಯನ್ನು ಶ್ರೀಮಂತಗೊಳಿಸಿದರು. ಮೊದಲು ಸಂಗ್ರಹಣೆ ಅನಂತರ ಸಂಶೋಧನೆ ಆರಂಭವಾದವು. ಇದರಿಂದ ಬಹುಕಾಲದವರೆಗೂ ಅಜ್ಞಾತವಾಸ ಮಾಡುತ್ತಿದ್ದ ವೀರಶೈವ ಹಾಗೂ ವೀರಶೈವೇತರ ಸಾಹಿತ್ಯ ಬೆಳಕಿಗೆ ಬಂತು. ಗೆದ್ದಲು ಹುಳುಗಳಿಗೆ ಆಹಾರವಾಗುತ್ತಿದ್ದ ಸಾಹಿತ್ಯ, ಅನೇಕ ಮನೆಗಳಲ್ಲಿ ನೀರು ಕಾಯಿಸಲು ಬಳಸಲ್ಪಡುತ್ತಿದ್ದ ತಾಡೋಲೆಯ ಅಮೂಲ್ಯ ಸಾಹಿತ್ಯ ಕನ್ನಡಿಗರ ಹೃದಯವನ್ನು ಸೇರುವಂತಾಯಿತು.

### ಪತ್ರಿಕೋದ್ಯಮಿಯಾಗಿ

ಶಾಸ್ತ್ರಿಗಳವರ ಬದುಕಿನ ತೇರು ಬೆಂಗಳೂರು ಸೇರಿದ ಮೇಲೆ, ಅವರ ಕಾರ್ಯಕ್ಷೇತ್ರ ವಿಸ್ತಾರವಾಯಿತು. ೧೯೩೭ರಲ್ಲಿ 'ಶರಣ ಸಾಹಿತ್ಯ' ಎಂಬ ಮಾಸಪತ್ರಿಕೆಯನ್ನು, ೧೯೩೯ರಲ್ಲಿ 'ಸ್ವತಂತ್ರ ಕರ್ನಾಟಕ' ಎಂಬ ವಾರಪತ್ರಿಕೆಯನ್ನು ಪ್ರಾರಂಭಿಸಿದರು. ೧೯೪೦ರಲ್ಲಿ ಸ್ವತಂತ್ರ ಕರ್ನಾಟಕ ಮುದ್ರಣಾಲಯವನ್ನು ಸ್ಥಾಪಿಸಿದರು. ಅವುಗಳೆಲ್ಲವುಗಳಿಂದಲೂ ಬಂದ ಸಿಹಿ–ಕಹಿಗಳನ್ನು ಗೊಣಗದೆ ಸಮಪಾಲಾಗಿ ಸ್ವೀಕರಿಸಿದರು. ವಾರಪತ್ರಿಕೆ ಹುಟ್ಟಿದ ಮೂರೇ ಮೂರು ವರ್ಷಗಳಲ್ಲಿ ಮಡಿಯಿತು. ಮಾಸ ಪತ್ರಿಕೆ ದೀರ್ಘಾಯುವಾದ್ದರಿಂದ ೧೯೭೩ರವರೆಗೆ ಅಂದರೆ ಸುಮಾರು ೩೫ ವರ್ಷಗಳ ಕಾಲ ಬಾಳಿ ಬದುಕಿತು.

ಶರಣ ಸಾಹಿತ್ಯ ಸಾಮಾನ್ಯವಾಗಿ ಸಾಹಿತ್ಯ ಮಾಸಿಕವೇ ಆಗಿದ್ದರೂ, ವಿಶೇಷವಾಗಿ ವೀರಶೈವ ಸಾಹಿತ್ಯಕ್ಕೆ ಮೀಸಲಾಗಿತ್ತು. ಉತ್ತರ ಕರ್ನಾಟಕದಲ್ಲಿ ವಚನ ಪಿತಾಮಹ ಫ. ಗು. ಹಳಕಟ್ಟಿಯವರು 'ಶಿವಾನುಭವ' ಪತ್ರಿಕೆಯ ಮೂಲಕ ನೂರಾರು, ಸಾವಿರಾರು ವಚನಕಾರರನ್ನು, ವಚನಗಳನ್ನು ಬೆಳಕಿಗೆ ತಂದಂತೆ, ಶಿವಮೂರ್ತಿಶಾಸ್ತ್ರಿಗಳು 'ಶರಣ ಸಾಹಿತ್ಯ' ಎಂಬ ಮಾಸಪತ್ರಿಕೆಯ ಮುಖಾಂತರ ಸುಮಾರು ನಲವತ್ತು ಕೃತಿಗಳನ್ನು ಪ್ರಕಟಿಸಿ, ಪ್ರಸಿದ್ಧಿಸಿದ್ಧರಾದರು. ಪತ್ರಿಕೆಯಲ್ಲಿ ಬೆಳಕು ಕಂಡ ಕೃತಿಗಳು ಅವರೇ ಸ್ಥಾಪಿಸಿದ 'ಶರಣ ಸಾಹಿತ್ಯ ಗ್ರಂಥಮಾಲೆ'ಯಲ್ಲಿ ಪುಸ್ತಕ ರೂಪದಲ್ಲಿ ಹೊರಬಂದವು. ಇವುಗಳಲ್ಲಿ ಕೊಂಡಗುಳಿ ಕೇಶಿರಾಜನ ಷಡಕ್ಷರ ಮಂತ್ರ ಮಹಿಮೆ, ಗುರು ಸಿದ್ಧ ಕವಿಯ ಮಾದೇಶ್ವರ ಸಾಂಗತ್ಯ, ಶರಣ ಕವಿಗಳ ಶತಕ ಸಾಹಿತ್ಯ, ರಾಘವಾಂಕನ ವೀರೇಶ ಚರಿತೆ ಇವು ಮುಖ್ಯವಾದವುಗಳು. ಈ ಕೆಲವು ಗ್ರಂಥಗಳು ಬೇರೆಲ್ಲೂ ದೊರೆಯುವುದಿಲ್ಲ. ಅಂತಹ ಅಪೂರ್ವ ಗ್ರಂಥಗಳನ್ನು ಹುಡುಕಿ ತಂದು ಪ್ರಕಟಿಸಿ ಕನ್ನಡದ ಸಾಹಿತ್ಯ ಸಂಪತ್ತನ್ನು ಹೆಚ್ಚಿಸಿದರು.

ಶರಣ ಸಾಹಿತ್ಯ ಕನ್ನಡದಲ್ಲಿ ವಿಚಾರ ಸಾಹಿತ್ಯವನ್ನು, ಕನ್ನಡಿಗರಲ್ಲಿ ವಿಮರ್ಶಾ ಶಕ್ತಿಯನ್ನು ಬೆಳಸಿತು.

## ಮತ್ತೆ ಮದುವೆ

ಶ್ರೀಮತಿ ಅನ್ನಪೂರ್ಣಮ್ಮನವರು ಶಾಸ್ತ್ರಿಗಳ ಹಿರಿಯ ಹೆಂಡತಿ. ಗುಬ್ಬಿಯ ದೊಡ್ಡಕಣ್ಣಪ್ಪ ಮತ್ತು ಸಿದ್ಧಹೊನ್ನಮ್ಮ ಇವರ ಪ್ರೇಮದ ಪುತ್ರಿ, ಶ್ರೀ ಎಚ್. ಎಸ್. ರೇಣುಕಾಪ್ರಸಾದ್ ಅವರ ತಾಯಿ. ಶಾಸ್ತ್ರಿಗಳವರ ಏಳಿಗೆಗೆ ಈ ತಾಯಿಯ ಶೀಲ ಸದ್ಗುಣ ಗಳೇ ಬೆನ್ನೆಲಬು. ಶಾಸ್ತ್ರಿ ಮತ್ತು ಅನ್ನಪೂರ್ಣಮ್ಮ ಇವರ ಸುಖ ದಾಂಪತ್ಯದ ಫಲವಾಗಿ ಆರು ಗಂಡು; ಒಂದು ಹೆಣ್ಣು ಹುಟ್ಟಿ ದವು. ಆದರೆ ಎಲ್ಲವೂ ಮಡಿದು ಒಂದೇ ಒಂದು ಗಂಡು ಮಗು ಉಳಿಯಿತು. ಆ ಮಗುವೆ ಶ್ರೀ ಎಚ್. ಎಸ್. ರೇಣುಕಾ ಪ್ರಸಾದ್.

ಶ್ರೀ ರೇಣುಕಾ ಪ್ರಸಾದ್ ವಿಖ್ಯಾತ ವಕೀಲರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಬೆಂಗಳೂರಿನಲ್ಲಿ ಶ್ರೀಮತಿ ಅನ್ನಪೂರ್ಣಮ್ಮನವರು ತಮ್ಮ ಮಗನ ಅಭ್ಯುದಯವನ್ನು ಕಂಡರು, ಗಂಡು ಮೆಟ್ಟಿದ ಭೂಮಿಯೆನಿಸಿದ ಕಿತ್ತೂರ ಚೆನ್ನಮ್ಮನ ನಾಡಿನ ಮಹಿಳೆ ಶ್ರೀಮತಿ ಲೀಲಾವತಿ ಪ್ರಸಾದ್ ಎಂಬ ಮುದ್ದಿನ ಸೊಸೆಯನ್ನು ನೋಡಿದರು. ಮೊಮ್ಮಕ್ಕಳನ್ನು ತಮ್ಮ ತೊಡೆಯ ತಲ್ಪದ ಮೇಲೆ ಆಡಿಸಿ, ಪಾಡಿಸಿ ದಿನಾಂಕ ೨೧.೧.೧೯೫೫ರಲ್ಲಿ ಶಿವನಪಾದ ಸೇರಿದರು.

ಶ್ರೀಮತಿ ಅನ್ನಪೂರ್ಣಮ್ಮನವರು ತೀರಿಕೊಂಡ ಮೇಲೂ ಶಾಸ್ತ್ರಿಗಳಿಗೆ ಒಂಟಿ ಜೀವನ ಬೇಸರ ತರಲಿಲ್ಲ. ಕಾರಣ ತಮ್ಮ ಕಣ್ಮಣಿಯಾದ ರೇಣುಕಾಪ್ರಸಾದ್ ತೇಜಸ್ವೀ ಯುವಕ ಅಭ್ಯುದಯಪರನಾಗಿದ್ದ. ಪ್ರೌಢ ಹಾಗೂ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವಾಗಲೇ ರೇಣುಕಾಪ್ರಸಾದ್ ತನ್ನ ತಂದೆಗೆ ಸರ್ವ ವಿಧದಿಂದಲೂ ನೆರವಾಗುತ್ತಿದ್ದ. ಇದರಿಂದ ಶಾಸ್ತ್ರಿಗಳಿಗೆ ತಮ್ಮ ಪತ್ನಿಯ ಸಾವು ಅಷ್ಟಾಗಿ ನೋವು ಕೊಡುತ್ತಿರಲಿಲ್ಲ. ಮಗನನ್ನೂ, ಮುದ್ದಿನ ಸೊಸೆಯನ್ನು ಅವರಿಬ್ಬರ ಅಭ್ಯುದಯದ ಕುರು ಹುಗಳನ್ನು ಕಂಡು ಶಾಸ್ತ್ರಿಗಳು ನೋವು ಮರೆತು ನಲಿವು ಪಡೆಯುತ್ತಿದ್ದರು.

ಆದರೆ ಒಂದು ದಿನದಂತೆ ಮತ್ತೊಂದು ದಿನ ಇರುವುದಿಲ್ಲ. ಒಮ್ಮೆ ಶಾಸ್ತ್ರಿಗಳು ಪ್ರವಾಸ ಕೈಕೊಂಡಿದ್ದಾಗ ಮಧುರೈ ಜಿಲ್ಲೆಯ ಪೆರೈಯೂರಿನ ಮಠದ ಜಂಗಮರಾದ ಶ್ರೀ ವೀರಯ್ಯನವರ ಹಿರಿಯ ಮಗಳು ಶರಣೆ ಮುದ್ದು ವೀರಮ್ಮನವರನ್ನು ಮನಸಾ ಮೆಚ್ಚಿ ಮದುವೆಯಾದರು. ಸಂಪನ್ನೆಯೂ, ಸಾಧ್ವೀ ಶಿರೋಮಣಿಯೂ ಆದ ಮುದ್ದು ವೀರಮ್ಮನವರು ಶಾಸ್ತ್ರಿಗಳ ಜೊತೆಯಲ್ಲಿ ೧೯೭೦ರವರೆಗೂ ದಾಂಪತ್ಯ ಜೀವನ ನಡೆಸಿ, ಶಿವಪ್ರಕಾಶನೆಂಬ ಕುಲಪುತ್ರನನ್ನು ಕರುಣಿಸಿ, ದಿನಾಂಕ ೩.೯. ೧೯೭೧ರ ಸಂಜೆ ೬.೩೦ರಲ್ಲಿ ಶಿವೈಕ್ಯರಾದರು. ಶಾಸ್ತ್ರಿಗಳು ಅಂದಿನಿಂದ ಅಧೀರರೂ ಆದರು, ಅನಾಥರೂ ಆದಂತೆ ಭಾವಿಸಿದರು. ಶಾಸ್ತ್ರಿಗಳು ರಂಗಸ್ವಾಮಿ ಗುಡಿಯ ಬೀದಿಯಲ್ಲಿದ್ದ ತಮ್ಮ ನಿವಾಸವನ್ನು ಮಾರಿ, ಬೆಂಗಳೂರಿನ ರಾಜಾಜಿನಗರದಲ್ಲಿ ಒಂದು ಆಶ್ರಮವನ್ನು ನಿರ್ಮಿಸಿಕೊಂಡು, ಅದಕ್ಕೆ 'ಶಿವಪ್ರಸಾದ' ಎಂಬ ಹೆಸರಿಟ್ಟು ಒಂದು ರೀತಿಯಲ್ಲಿ ಆಶ್ರಮ ಜೀವಿಗಳಾಗಿಯೇ ಕಾಲ ಕಳೆದರು.

ಶ್ರೀಮತಿ ಮುದ್ದು ವೀರಮ್ಮನವರು ಮಡಿದದ್ದು ಶಾಸ್ತ್ರಿಗಳವರಿಗೆ ತುಂಬಬಾರದ ನಷ್ಟವಾಯಿತು. ಅವರ ದುಃಖಕ್ಕೆ ಮೇರೆಯೇ ಇಲ್ಲವಾಯಿತು. ತಮ್ಮ ಅಳಲನ್ನೂ 'ಶಿವಪ್ರಸಾದ' ಆಶ್ರಮದಲ್ಲಿ ಕುಳಿತು 'ಶ್ರದ್ಧಾಂಜಲಿ' ಎಂಬ ಸುಧೀರ್ಘ 'ಶೋಕಗೀತೆ' (Elegy) ಯಲ್ಲಿ ತೋಡಿಕೊಂಡಿದ್ದಾರೆ. ಅದರ ಕೆಲವು ಚರಣಗಳು ಹೀಗಿವೆ.

ಮನೆಯಲ್ಲ ಬರಿದಾಯ್ತು ಮನವು ಶೂನ್ಯಮದಾಯ್ತು
ಮನಸಿನಾಸೆಗಳೆಲ್ಲ ಬಟ್ಟಬಯಲಾಯ್ತು
ಕನಸಿನಂದದೊಳಾಯ್ತು ನನ್ನ ಸಂಸಾರವು
ಮನಸಿಜಾರಿಯ ಕರುಣೆ ಎನಗಿಲ್ಲವಾಗಿ
ಇಪ್ಪತ್ತು ಮೇಲೆರಡು ವರುಷ ಗೃಹಕೃತ್ಯವಂ
ಒಪ್ಪವಾಗಿಯೆ ಮಾಡಿ ಶಿವಶರಣೆಯೆನಿಸಿ
ಕಪ್ಪುಗೊರಲನ ಪಾದಭಕ್ತಿಯಿಂ ಮಿಗಿಲೆನಿಸಿ
ಇಷ್ಟ ಸಮಯದಿ ವಿಧಿಯು ಕೊಂಡೊಯ್ದುದು
'ಮುದ್ದು' ನೀನಿದ್ದ ಮನೆ ಕಲ್ಯಾಣವೆನಿಸಿತ್ತು
ಶುದ್ಧರೆನಿಸಿದ ನಿನ್ನ ಚಾರಿತ್ರ್ಯದಿಂ
ಬಿದ್ದು ಹೋದುದು ನೀನು ಸತ್ತುಹೋದುದರಿಂದ
ಮಧ್ಯಾಹ್ನದೊಳ ಕಣ್ಗೆ ಕತ್ತಲಹುದು
ನನ್ನ ಮನೆ ನನ್ನ ಪತಿ ನನ್ನ ಮಗನೆಂದು ನೀ
ನುನ್ನತದ ಮಮತೆಯಂ ತೋರುತಿರ್ದೆ
ನಿನ್ನ ಮನೆ ನಿನ್ನ ಪತಿ ನಿನ್ನ ಮಗನಂ ತೊರೆದು
ಚನ್ನ ಶಿವನಡಿಗಳನು ಸೇರಿಬಿಟ್ಟೆ
ಮುಪ್ಪಿನೊಳು ನೀನೆನ್ನುಪಚರಿಪೆಯೆಂದಿರ್ದೆ
ನಪ್ಪುದೆನಗಿನ್ನು ಸುಖಶಾಂತಿಯೆಂದಿರ್ದೆ
ತಪ್ಪಾಯ್ತು ನನ್ನೆಣಿಕೆ ನಿನ್ನಗಲುವಿಕೆಯಿಂದ
ಮುಪ್ಪುರವನುರುಹಿದನ ಕೃಪೆಯಿಲ್ಲವಾಗಿ
ಶರಣೆ ಶಿವಶರಣೆ ನಿರ್ಮಲಚಿತ್ತೆ ಶಿವಭಕ್ತೆ
ಮರಣಬೇಕಾಯ್ತು ನಿನಗೀಪರಿಯೊಳು ?
ಸರಸ ಸಜ್ಜನೆಯೆನಿಸಿ ಆದರ್ಶಸತಿಯೆನಿಸಿ
ಧರಣಿಯೊಳು ಬೆಳ್ ಜಸವನಾಂತ ನಿನಗೆ
ನಿನ್ನ ನಿರ್ಮಲಚರಿತೆ ನಿನ್ನ ವಿನಯದ ನಡತೆ
ನಿನ್ನ ಸೌಜನ್ಯ ಪತಿಭಕ್ತಿ ನೀತಿ
ಎನ್ನ ಮನವಂ ಸದಾ ಸೆರೆಹಿಡಿದು ನಿಂತಿಹವು
ಮನ್ನಣೆಯ ಸತಿ ನೀನು ಅಮರ ಮಹಿಳೆ
ದಿನವು ಕಳೆದಂತೆಲ್ಲ ದುಃಖವದು ಬೆಳೆಯುತಿದೆ
ಮನವು ಮಂಕಾಗುತಿದೆ ಶಕ್ತಿಯುಡುಗುತಿದೆ
ವಿನುತ ತೈಲವದಿಲ್ಲದಿರ್ಪ ದೀಪದ ತೆರದಿ
ಮಿನುಗುತಿಹ ಹಣತೆಯಂತೆನ್ನಪರಿಯು
ನೀನಿಲ್ಲದಿಹ ಮನೆಯು ಕಾನನವು ಎನಿಸಿಹುದು
ನೀನಿಲ್ಲದಿಹ ಬಾಳು ಬಯಲು ಬಯಲಹುದು
ನೀನಿಲ್ಲದಿಹ ಗೃಹವು ಕತ್ತಲೆಯ ಗುಡಿಯಹುದು
ಮಾನಿನೀಮಣಿ ನೀತಿ ಚಿಂತಾಮಣಿ

**ಇಂದಲ್ಲ ನಾಳೆ ನಾನೂ ಬಹೆನು ನಿನ್ನೆಡೆಗೆ**
**ಇಂದುಚೂಡನ ದಿವ್ಯಪಾದದೆಡೆಗೆ**
**ಅಂದಲ್ಲಿ ನಿನ್ನ ಸಂದರ್ಶನವ ಪಡೆಯುವೆನು**
**ಮಂದಹಾಸದ ನಿನ್ನ ನುಡಿಕೇಳ್ವೆನು !**

**ಸಾಹಿತ್ಯ ಸೇವೆ**

ಕನ್ನಡ ಸಾಹಿತ್ಯಕ್ಕೆ ಶಾಸ್ತ್ರಿಗಳು ಅಮೋಘ ಸೇವೆ ಸಲ್ಲಿಸಿದ್ದಾರೆ. ಹಲವು ಸ್ವತಂತ್ರ ಕೃತಿಗಳನ್ನೂ, ಮತ್ತೆ ಕೆಲವು ಸಂಪಾದಿತ ಗ್ರಂಥಗಳನ್ನೂ, ಕನ್ನಡಕ್ಕೆ ಕೊಟ್ಟು ಮಹದುಪಕಾರ ಮಾಡಿದ್ದಾರೆ. ಅವರಿತ್ತ ಗ್ರಂಥಗಳು ಸಂಖ್ಯೆಯಲ್ಲೂ, ಸತ್ವದಲ್ಲೂ ಗಮನಾರ್ಹವಾಗಿವೆ. 'ಶೂಲಪಾಣಿ' ಎಂಬ ಕಾವ್ಯನಾಮದಲ್ಲಿ ಅವರು ಅನೇಕ ಕವನಗಳನ್ನು ರಚಿಸಿದ್ದುಂಟು. ಮುಖ್ಯವಾಗಿ, 'ದುಂಬಿನಾದ' ಎಂಬ ಕವನ ಸಂಗ್ರಹ ಹೊರಬಂದಿದೆ. ಆದರೆ ಶಾಸ್ತ್ರಿಗಳನ್ನು ಕವಿಗಳು ಎನ್ನುವುದಕ್ಕಿಂತ ವಿಮರ್ಶಕರು ಎನ್ನಬಹುದು ; ವಿಮರ್ಶಕರು ಎನ್ನುವುದಕ್ಕಿಂತ ಸಂಶೋಧಕರು, ಸಂಪಾದಕರು ಎಂದು ಹೇಳುವುದು ಹೆಚ್ಚು ಸೂಕ್ತ. ಶ್ರೀಯುತರು ಹಲವಾರು ಗ್ರಂಥಗಳನ್ನು ಸ್ವತಃ ರಚಿಸಿದ್ದಾರೆ, ಸಂಶೋಧಿಸಿ ಸಂಪಾದಿಸಿಕೊಟ್ಟಿದ್ದಾರೆ. ಅವರು ಕೊಟ್ಟ ಸಾಹಿತ್ಯ ಸಂಪದ ಹೀಗಿದೆ -

ಕರ್ನಾಟಕ ಸಂದರ್ಶನ, ಸಾಹಿತ್ಯ ಮತ್ತು ಸಂಶೋಧನೆ ಭಾಗ ೧– ೨ ; ವೀರಶೈವ ಮಹಾಪುರುಷರು, ಭಾಗ ೧–೨ ; ವೀರಶೈವ ಸಾಹಿತ್ಯ ಮತ್ತು ಇತಿಹಾಸ ಭಾಗ ೧–೨, ೩–೪ ; ವೀರಶೈವ ಧರ್ಮ–ಸಂಸ್ಕೃತಿ (ಕನ್ನಡ–ತೆಲುಗು); ಸರ್ವಜ್ಞ ಮೂರ್ತಿ; ಮಾದೇಶ್ವರ ಚರಿತ್ರೆ (ಕನ್ನಡ–ತಮಿಳು); ಕರ್ನಾಟಕ ವಿಜಯ (ನಾಟಕ), ಕೆಳದಿಯ ರಾಣಿ ಚೆನ್ನಮ್ಮಾಜಿ (ನಾಟಕ); ಬಿದನೂರು ಶಿವಪ್ಪನಾಯಕ, ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ ; ಘನಲಿಂಗದೇವರ ವಚನಗಳು, ಶಿವಶರಣರ ತ್ರಿಪದಿಗಳು, ಸ್ವಾದಿ ಶಿವರಾಯನ ಪಂಚಶತಕಗಳು ; ಭೈರವೇಶ್ವರ ಕಾವ್ಯದ ಕಥಾಸೂತ್ರ ರತ್ನಾಕರ ಭಾಗ–೧; ರಾಘವಾಂಕನ ವೀರೇಶ ಚರಿತೆ, ನಿಜ ಗುಣಶಿವಯೋಗಿಗಳ ಪುರಾತನ ತ್ರಿವಿಧಿ; ಕೊಂಡಗುಳಿ ಕೇಶಿರಾಜನ ಷಡಕ್ಷರ ಮಂತ್ರಮಹಿಮೆ, ಪಾಲ್ಕುರಿಕೆ ಸೋಮನಾಥನ ಬಸವೋದಾಹರಣಂ (ಸಂಸ್ಕೃತ); ಅವನದೇ ಆದ ಗಣಸಹಸ್ರ ನಾಮಾವಳಿ; ಚಂದ್ರಕವಿಯ ಪಂಪಾಸ್ಥಾನ ವರ್ಣನಂ, ಗುರುಸಿದ್ಧ ಕವಿಯ ಮಾದೇಶ್ವರ ಸಾಂಗತ್ಯ ; ರಾಮೇಶ್ವರಮುಖಿಯ ನ್ಯಾಯಶತಕಂ (ಸಂಸ್ಕೃತ); ಶ್ರೀ ದೇವುಡುರವರೊಡನೆ ಕನ್ನಡ ಜೈಮಿನಿ ಭಾರತ ಸಂಪಾದನೆ; ಡಾ. ಕೆ. ಎಂ. ಕೃಷ್ಣರಾವ್‌ರೊಡನೆ 'ಕನಕದಾಸರ ಕೀರ್ತನೆಗಳು ಮತ್ತು ಹರಿಭಕ್ತಿಸಾರ' ಸಂಪಾದನ, ಕರ್ನಾಟಕ ಕವಿ ಚರಿತೆ ಭಾಗ ೧– ಇತರರೊಡನೆ, ಇವುಗಳ ಜೊತೆಗೆ ವೈವಿಧ್ಯಮಯವಾದ ನೂರಾರು ಬಿಡಿ ಲೇಖನಗಳೂ ಹಲವು ದಿನ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಈಗ ತಾನೆ ಬಿಡುಗಡೆಯಾದ 'ಜೀವನ ಸ್ಮೃತಿ' ಅವರ ಆತ್ಮಕಥನವಾಗಿದೆ.

'ಶ್ರದ್ಧಾಂಜಲಿ' ಎಂಬ ಶೋಕಗೀತೆಯ ಕೆಲವು ಚರಣಗಳನ್ನು ಮೇಲೆ ಕೊಟ್ಟಿದ್ದೇವಷ್ಟೆ. ಅವುಗಳನ್ನೊಳಗೊಂಡ ಆ ನೀಳ್ಗ ವನ ಸುಮಾರು ೩೩ ಪದ್ಯಗಳಿಂದ ಕೂಡಿದೆ. ಅದು ಬಹುಶಃ ಶಾಸ್ತ್ರಿಗಳವರ ಕಟ್ಟಕಡೆಯ ರಚನೆಯಾಗಿದ್ದಿರಬಹುದು. ಅದು ಅವರ 'ಜೀವನ ಸ್ಮೃತಿಗಳು' ಎಂಬ ಆತ್ಮಕಥನದಲ್ಲಿ ೧೯೭೪ರಲ್ಲಿ ಪ್ರಕಟವಾಗಿದೆ.

**ಪರಿಷತ್ತಿನ ಸೇವೆ**

ಶಿವಮೂರ್ತಿಶಾಸ್ತ್ರಿಗಳು ೧೯೩೬ರಿಂದ ೧೯೬೪ರವರೆಗೆ ಸುಮಾರು ೧೦೦ ತಿಂಗಳುಗಳ ಕಾಲ ಬೆಂಗಳೂರಿನಲ್ಲಿರುವ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಪರಿಷತ್ತಿನ ಸದಸ್ಯ ಸಂಪತ್ತನ್ನು, ಗ್ರಂಥ ಭಂಡಾರದ ಪುಸ್ತಕ ಸಂಪ ತ್ತನ್ನೂ ಹೆಚ್ಚಿಸಿದ್ದಾರೆ. ಅಲ್ಲದೆ ಶಾಸ್ತ್ರಿಗಳು ಕನ್ನಡ ಸಾಹಿತ್ಯ ಪರಿಷತ್ತಿನ ಇತಿಹಾಸದಲ್ಲೇ ಮೊಟ್ಟಮೊದಲ ಬಾರಿಗೆ ಸರ್ಕಾರದಿಂದ ಆರ್ಥಿಕ ನೆರವು ಪಡೆದು ಕನ್ನಡ ನಿಘಂಟಿಗಾಗಿ ಅದನ್ನು ವಿನಿಯೋಗಿಸಿದರು. ಅಂದಿನ ಅವರ ದುಡಿಮೆ ಇಂದು ಫಲ ಕೊಡು ತ್ತಿದೆ.

ಶಾಸ್ತ್ರಿಗಳು ಪರಿಷತ್ತಿನ ಅಧ್ಯಕ್ಷರಾಗಿದ್ದಾಗ ಉಡುಪಿ, ಧಾರವಾಡ, ಬಳ್ಳಾರಿ, ಗದಗ, ಬೀದರ, ಸಿದ್ಧಗಂಗೆ ಮೊದಲಾದೆಡೆಗಳಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನಗಳನ್ನು ನಡೆಸಿದ್ದಾರೆ. ತುಮಕೂರಿನಲ್ಲಿ ನಡೆದ ಪ್ರಥಮ ಜಿಲ್ಲಾ ಸಾಹಿತ್ಯ ಸಮ್ಮೇಳನಕ್ಕೆ ಶ್ರೀ ಶಿವಮೂರ್ತಿಶಾಸ್ತ್ರಿಗಳವರು ಅಧ್ಯಕ್ಷರಾಗಿದ್ದರು.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದಾಗ ಶಾಸ್ತ್ರಿಗಳು ತುಂಬಾ ದುಡಿದಿದ್ದಾರೆ. ಅಂತೆಯೇ ೧೯೩೬ರ ಡಿಸೆಂಬರ್‌ನಲ್ಲಿ ಪರಿಷತ್ತಿನ ಮಾಜಿ ಅಧ್ಯಕ್ಷರು ಮತ್ತು ಸಮ್ಮೇಳನಾಧ್ಯಕ್ಷರುಗಳ ಗೌರವಾರ್ಥವಾಗಿ ಒಂದು ಸನ್ಮಾನ ಸಮಾರಂಭವನ್ನು ಮೈಸೂರು

ಶ್ರೀಮನ್ ಮಹಾರಾಜ ಜಯಚಾಮರಾಜ ಒಡೆಯರವರ ಸಮ್ಮುಖದಲ್ಲಿ ಸಮಾವೇಶಗೊಳಿಸಿದ್ದರು. ಹಿಂದೆ ರಾಷ್ಟ್ರಪತಿಗಳಾಗಿದ್ದ ಡಾ. ರಾಜೇಂದ್ರ ಪ್ರಸಾದ್ (೧೯೫೮) ಮತ್ತು ಡಾ. ರಾಧಾಕೃಷ್ಣನ್ (೧೯೬೩) ಇವರುಗಳನ್ನು ಪರಿಷತ್ತಿಗೆ ಆಹ್ವಾನಿಸಿ ಗೌರವಿಸಿದ್ದರು. ಬೆಂಗಳೂರಿನಲ್ಲಿ ನಡೆದ ಬಂಗಾಳಿ ಸಾಹಿತ್ಯ ಸಮ್ಮೇಳನಕ್ಕೆ ಪರಿಷತ್ತಿನ ವತಿಯಿಂದ ವಿಶೇಷ ನೆರವು ನೀಡಿದರು. ಕರ್ಣಾಟಕದ ಹೊರನಾಡಿನ ಕನ್ನಡ ಸಂಘಗಳಿಗೂ, ಕನ್ನಡ ಸಾಹಿತ್ಯ ಪರಿಷತ್ತಿಗೂ ನಿಕಟ ಬಾಂಧವ್ಯ ಬೆಳೆದದ್ದು ಶ್ರೀ ಶಾಸ್ತ್ರಿಗಳವರ ಕಾಲದಲ್ಲಿ. ಕನ್ನಡ ಗಾದಿಯ ಮೇಲೆ ಕುಳಿತ ಶಿವಮೂರ್ತಿಶಾಸ್ತ್ರಿಗಳು ಎಲ್ಲಕ್ಕೂ ಮಿಗಿಲಾಗಿ ಕನ್ನಡಿಗರಲ್ಲಿ ಕನ್ನಡತನ ಮೊಳೆದೋರುವಂತೆ ಮಾಡಿದರು ; ಅವರಲ್ಲಿ ಅಭಿಮಾನ ಹೆಚ್ಚುವಂತೆ ಮಾಡಿದರು. ಆ ದಿನಗಳಲ್ಲಿ ಅದು ಹೆಚ್ಚಿನ ಸಾಹಸವೇ ಆಗಿದ್ದಿತು.

ಸಂದರ್ಶನವೊಂದರಲ್ಲಿ ಪದ್ಮಶ್ರೀ ಶಿವಮೂರ್ತಿಶಾಸ್ತ್ರಿಗಳು ಹೀಗೆ ಹೇಳಿದರು –

'ಕರ್ನಾಟಕ ರಾಜ್ಯವು ಉದಯವಾಗಿ ಕನ್ನಡಿಗರೆಲ್ಲ ಒಂದಾಗಿ ಕೂಡದ ಹೊರತು ಕರ್ನಾಟಕದ ಸರ್ವಾಂಗೀಣ ಉನ್ನತಿ ಅಗ ಲಾರದೆಂಬುದನ್ನು ನಾನು ಮನಗಂಡೆನು. ಅಲ್ಲಿಂದ ಒಂದೇ ಸಮನೆ ಕರ್ನಾಟಕ ಏಕೀಕರಣದ ದುಂದುಭಿಯನ್ನು ಮೂಲೆ ಮೂಲೆಗಳಲ್ಲಿ, ಊರು ಕೇರಿಗಳಲ್ಲಿ, ಮನೆ ಮಠಗಳಲ್ಲಿ ಮೊಳಗಿಸಲು ಪ್ರಾರಂಭಿಸಿದೆನು. ಈ ಕಾರ್ಯದಲ್ಲಿ ದಿವಂಗತರಾದ ಬೆನಗಲ್ ರಾಮರಾಯರು, ಆಲೂರು ವೆಂಕಟರಾಯರು, ಮುದವೀಡು ಕೃಷ್ಣರಾಯರು, ಪ್ರೊ. ಬಸವನಾಳ್, ಬಿ.ಎಂ.ಶ್ರೀ, ಪ್ರೊ. ಟಿ.ಎಸ್. ವೆಂಕಣ್ಣಯ್ಯ, ಎಲ್ಲಕ್ಕೂ ಹೆಚ್ಚಾಗಿ ಶ್ರೀ ಆರ್. ನರಸಿಂಹಾಚಾರ್, ಶ್ರೀ ಎಂ. ಶಾಮರಾವ್, ಮೊದಲಾದವರ ಪರಿಚಯವಾಗಿ ನನ್ನ ಅಭಿಪ್ರಾಯಗಳು ದೃಢಗೊಂಡು 'ನಮ್ಮ ನಾಡಿನ ಏಕೀಕರಣ ಆಗುತ್ತದೆ' ಎಂಬ ಭರವಸೆ ನನಗುಂಟಾಯಿತು. ಈ ಹಾದಿಯಲ್ಲಿ ಹಿರಿಯ ಕನ್ನಡಿಗರಾದ ದಿ. ಬಿ.ಎನ್. ದಾತಾರ್, ದಿ. ಮೊಹರೆ ಹನುಮಂತರಾವ್, ಶ್ರೀಯುತರಾದ ಡಾ. ಆರ್. ಆರ್. ದಿವಾಕರ್, ಎಸ್. ನಿಜಲಿಂಗಪ್ಪ ಮೊದಲಾದ ಮಹನೀಯರು ಕರ್ನಾಟಕ ಏಕೀಕರಣಕ್ಕೆ ಕಂಕಣ ಕಟ್ಟಿದುದು ನನ್ನ ಧೈರ್ಯವನ್ನು ಹೆಚ್ಚಿಸಿತು. ೧೯೦೩ರಲ್ಲಿ ದಿ. ಬೆನಗಲ್ ರಾಮರಾಯರಿಂದ ಪ್ರಾರಂಭವಾದ ಈ ಏಕೀಕರಣ ಚಳುವಳಿ ನಾನಾ ರೂಪದಲ್ಲಿ ಮುಂದುವರಿದು ದೇವರ ಕೃಪೆಯಿಂದ ೧೯೫೬ನೇ ನವೆಂಬರ್ ೧ ರಂದು ವಿಶಾಲ ಮೈಸೂರು ಅಥವಾ ಕರ್ನಾಟಕ ರಾಜ್ಯ ಉದಯವಾಯಿತು. ಅಂದು ನನ್ನ ಮನಸ್ಸಿಗೆ ಒಂದು ಬಗೆಯ ನೆಮ್ಮದಿಯಾಯಿತು. ನಾನು ಆನಂದದಿಂದ ಕುಣಿದಾಡಿದೆನು. ಸುಖವಾಗಿ ನಿದ್ರೆ ಮಾಡಿದೆನು.

ಆಗ ನಾನು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷನಾಗಿದ್ದುದು, ಈ ದಿಸೆಯಲ್ಲಿ ಹೆಚ್ಚು ಕೆಲಸಮಾಡಲು ಸಹಾಯವಾಯಿತು. ೧೯೬೪ನೇ ಅಕ್ಟೋಬರ್ ೨೫ನೇ ತಾರೀಖಿನವರೆಗೆ ನಾನೇ ಪರಿಷತ್ತಿನ ಅಧ್ಯಕ್ಷನಾಗಿದ್ದು ಕರ್ನಾಟಕದ ಪರಿಪೂರ್ಣತೆಗೆ ಕನ್ನಡ ನುಡಿಯ ಏಳಿಗೆಗೆ ಕನ್ನಡಿಗರ ಭಾವೈಕ್ಯತೆಗೆ ನನ್ನ ಕೈಲಾದ ಸೇವೆ ಸಲ್ಲಿಸಿದ್ದೇನೆಂದು ಧೈರ್ಯದಿಂದ ಹೇಳುತ್ತೇನೆ.

ಇಷ್ಟಾದರೂ ಕನ್ನಡ ಭಾಷೆ ಎಷ್ಟು ಮುಂದುವರಿಯಬೇಕೋ ಅಷ್ಟು ಮುಂದುವರಿದಿಲ್ಲ ಎಂಬುದೇ ನನ್ನ ಅಭಿಪ್ರಾಯ. ಕನ್ನಡ ರಾಜ್ಯ–ಭಾಷೆಯಾದರೂ ನಮ್ಮ ಸರ್ಕಾರ ಆ ಬಗ್ಗೆ ಹೆಚ್ಚು ತೀವ್ರತೆ ತೋರಿಸುತ್ತಿಲ್ಲ. ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಮಾಧ್ಯಮವಾಗಿಲ್ಲ. ನಾಡಿನಲ್ಲಿ ಮೂಲೆ ಗುಂಪಾಗಿ ಬಿದ್ದಿರುವ ಸಾವಿರಾರು ಶಿಲಾ ಶಾಸನಗಳು, ತಾಮ್ರ ಶಾಸನಗಳೂ ಸಂಶೋಧಿಸಲ್ಪಟ್ಟು ಪ್ರಕಟವಾಗಿಲ್ಲ. ಕನ್ನಡಿಗರ ಮನಸ್ಸಿನಲ್ಲಿ ಕನ್ನಡ ಭಾಷೆ ಸಂಸ್ಕೃತದಂತೆ ಪ್ರಾಚೀನ, ಇಂಗ್ಲೀಷಿನಂತೆ ಪ್ರಭಾವಯುತ - ಎಂಬ ಅರಿವುಂಟಾಗಿಲ್ಲ. ೨೦೦೦ ವರ್ಷಗಳ ನಾಡಿನ ಉಜ್ವಲ ಚರಿತ್ರೆ ಸಂಶೋಧಿಸಲ್ಪಟ್ಟು ಪ್ರಮಾಣಪೂರ್ವಕವಾಗಿ ಪ್ರಕಟವಾಗಿಲ್ಲ, ಕನ್ನಡಕ್ಕೆ ಒಂದು ವಿಶ್ವಕೋಶ, ಕನ್ನಡಕೋಶ ಇನ್ನೂ ದಕ್ಕಿಲ್ಲ. ಇತ್ಯಾದಿ ಕಾರಣದಿಂದ ಕನ್ನಡ ಇನ್ನೂ ತಲೆ ಎತ್ತಿ ನಿಂತಿಲ್ಲ ಎಂಬುದೇ ನನ್ನ ಅಭಿಪ್ರಾಯ.

ನಮ್ಮ ಸರಕಾರ, ಸಾರ್ವಜನಿಕರು, ಈ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು ಕನ್ನಡದ ಏಳಿಗೆಗೆ ಕಂಕಣ ಕಟ್ಟಿದಾಗ ಇದರ ಉನ್ನತಿ ಸಾಧ್ಯವಾಗುತ್ತದೆ. ಇದಕ್ಕೆ ನಿದರ್ಶನವಾಗಿ ಲಂಡನ್‌ನಲ್ಲಿನ ಇಂಡಿಯಾ ಲೈಬ್ರರಿಯಲ್ಲಿ ಭಾರತದ ಎಲ್ಲ ಭಾಷೆಗಳ ಸಾವಿರಗಟ್ಟಲೆ ಪುಸ್ತಕ ಇದ್ದರೆ ಕನ್ನಡದ ಕೇವಲ ೨೮೬ ಪುಸ್ತಕಗಳು ಇವೆ ಎಂಬುದನ್ನು ನಾವಿಲ್ಲಿ ಸ್ಮರಿಸಿಕೊಳ್ಳಬಹುದು. ಈ ಪರಿಸ್ಥಿತಿಗೆ ಕಾರಣರು ನಾವು ನಮ್ಮ ಜನರು, ವಿಶೇಷವಾಗಿ ನಮ್ಮ ಸರ್ಕಾರ ಎಂದು ಹೇಳದೆ ಗತ್ಯಂತರವಿಲ್ಲ,

. . .೫೦ ವರ್ಷಗಳ ಹೋರಾಟದ ಅನಂತರ ಕರ್ನಾಟಕ ಏಕೀಕರಣವಾಯಿತು. ಪರಭಾಷೆಯ ದಬ್ಬಾಳಿಕೆಗೆ ಕನ್ನಡಿಗರು ಒಳಗಾಗದಂತಾಯಿತು ಎಂಬುದೇನೋ ಸಮಾಧಾನದ ಸಂಗತಿಯೇ. ಆದರೆ ಕನ್ನಡಿಗರಲ್ಲಿ ಮೈಸೂರಿನವರು, ಮುಂಬಯಿಯವರು, ಹೈದರಾಬಾದಿನವರು, ಕೊಡಗಿನವರು ಎಂಬ ಭೇದಭಾವ ತೊಲಗಿಲ್ಲ. ಸರಕಾರದಲ್ಲಿ ಕೂಡ ಈ ಬಗ್ಗೆ

ಇನ್ನೂ ಹೊಂದಾಣಿಕೆ ಇಲ್ಲ. ಕರ್ನಾಟಕದಲ್ಲಿ ಜಾತೀಯತೆ ಪ್ರಬಲವಾಗಿದ್ದು ಅದರ ಪರಿಣಾಮವಾಗಿ ರಾಜಕೀಯ ಪಗ್ರತಿ ಕೂಡ ತಡೆಯಾಗಹತ್ತಿದೆ. ಸಮ ರ್ಥರೂ, ಯೋಗ್ಯರೂ ಅಧಿಕಾರಕ್ಕೆ ಬರಲು ಅಥವಾ ಉನ್ನತ ಸ್ಥಾನಕ್ಕೆ ಬರಲು ಈ ಜಾತೀಯತೆ ಅಡ್ಡಿಯಾಗುತ್ತಿದೆ. ಆದ್ದರಿಂದ ಸಮಗ್ರ ಕರ್ನಾಟಕದ ಪ್ರಗತಿಯಾಗಲು ಅಡಚಣೆಯಾಗಿದೆ.'

ಕನ್ನಡ ಸಾಹಿತ್ಯ ಪರಿಷತ್ತನ್ನು ಕಟ್ಟಿ ನಿಲ್ಲಿಸಲು ಪಟ್ಟ ಶ್ರಮವನ್ನು ವಿವರಿಸಿದರು ಶಾಸ್ತ್ರಿಗಳು –

'೧೯೧೫ರಲ್ಲಿ ಪುಣ್ಯಶ್ಲೋಕರಾದ ಎಚ್. ವಿ. ನಂಜುಂಡಯ್ಯ, ಎಂ. ವೆಂಕಟಕೃಷ್ಣಯ್ಯ, ಕರ್ಪೂರ್ ಶ್ರೀನಿವಾಸರಾವ್, ಸರ್. ಕೆ. ಪಿ. ಪುಟ್ಟಣ್ಣಶೆಟ್ಟಿ, ಆಲೂರ್ ವೆಂಕಟರಾವ್ ಮೊದಲಾದ ಹಿರಿಯರ ಪ್ರಯತ್ನದ ಫಲವಾಗಿ ಸರ್. ಎಂ. ವಿಶ್ವೇಶ್ವರಯ್ಯನವರ ಪ್ರೋತ್ಸಾಹದಿಂದ ಇದು (ಕನ್ನಡ ಸಾಹಿತ್ಯ ಪರಿಷತ್ತು) ಸ್ಥಾಪಿತವಾಯಿತು. ಕರ್ನಾಟಕ ಏಕೀಕರಣವಾಗಲು ಪರಿಷತ್ತು ಮತ್ತು ಅದು ನಡೆಸಿದ ಸಾಹಿತ್ಯ ಸಮ್ಮೇಳನಗಳು ಬಹು ಮಟ್ಟಿಗೆ ಕಾರಣ. ಅದರ ಧ್ಯೇಯೋದ್ದೇಶಗಳು ಅಮೋಘವಾಗಿವೆ. ನಾನು ಪರಿಷತ್ತಿನ ಅಧ್ಯಕ್ಷನಾಗಿದ್ದಾಗ (೧೭.೬.೧೯೫೬) ಅಲ್ಲಿ ಅನೇಕ ಅನಾನುಕೂಲಗಳಿದ್ದವು. ಪರಿಷತ್ತಿನ ಹಿಂಭಾಗದ ಪೌಳಿ ಬಿದ್ದು ಹೋಗಿತ್ತು. ಸಭಾಭವನದಲ್ಲಿ ಕೂರು ಪೂರ್ತಿ ಕುರ್ಚಿಗಳಿರಲಿಲ್ಲ. ಪರಿಷತ್ತಿನ ಒಂದು ಕೋಣೆಯಲ್ಲಿ ಪುಸ್ತಕಗಳು ರಾಶಿ ರಾಶಿ ಯಾಗಿ ಬಿದ್ದಿದ್ದವು. ಸದಸ್ಯ ಸಂಪತ್ತು ಅಷ್ಟು ಅಧಿಕವಾಗಿರಲಿಲ್ಲ. ಗ್ರಂಥ ಪ್ರಕಟಣೆಗೆ ಹಣವಿರಲಿಲ್ಲ. ಆಗ ರಾಜ್ಯದ ಮುಖ್ಯ ಮಂತ್ರಿ ಗಳಾದ ಶ್ರೀ ಕೆ. ಹನುಮಂತಯ್ಯನವರನ್ನು ಕಂಡು ಪರಿಸ್ಥಿತಿ ವಿವರಿಸಿದೆ. ಅವರು ೪೫,೦೦೦ ರೂ.ಗಳನ್ನು ಪರಿಷತ್ತಿನ ಅಭ್ಯುದ ಯಕ್ಕೆ ಉದಾರವಾಗಿ ಕೂಡಿಸಿಕೊಟ್ಟರು. ಕನ್ನಡ–ಕನ್ನಡ ನಿಘಂಟು ಕಾರ್ಯಸಾಗುತ್ತಿತ್ತು. ಅದಕ್ಕೆ ಸ್ಥಿರವಾದ ನೆಲೆ ಇರಲಿಲ್ಲ. ಆಗ ಮುಖ್ಯಮಂತ್ರಿಗಳಾದ ಶ್ರೀ ಬಿ.ಡಿ. ಜತ್ತಿ, ವಿದ್ಯಾಮಂತ್ರಿ ಶ್ರೀ ಅಣ್ಣಾರಾಯರು, ಆಗಿನ ಅರ್ಥಮಂತ್ರಿ ದಿ.ಟಿ. ಮರಿಯಪ್ಪನವರನ್ನು ಕಂಡು ಮಾತನಾಡಿದೆ. ದೂರದೃಷ್ಟಿಯಿಂದ ಅವರು ನನ್ನ ಕೋರಿಕೆ ಒಪ್ಪಿಕೊಂಡರು. ಅದರ ಫಲವಾಗಿ ಸರಕಾರಕ್ಕೂ ಪರಿಷತ್ತಿಗೂ ಒಂದು ಕರಾರಾಯಿತು. ೧೫ ಲಕ್ಷ ರೂಪಾಯಿಗಳನ್ನು ಸರ್ಕಾರ ಕೊಡಲೊಪ್ಪಿತು. ಜೊತೆಗೆ ಆಗ ಪರಿಷತ್ತಿನ ಕೋಶಾಧಿಕಾರಿಗಳಾ ಗಿದ್ದ ಶ್ರೀ ಜಿ. ಶ್ರೀನಿವಾಸನ್‌ರ ನೆರವಿನಿಂದ ಸಾರ್ವಜನಿಕರಿಂದ ಹಣ ಕೂಡಿಸಿ ಅಚ್ಚುಕೂಟವನ್ನು ಮಾಡಲಾಯಿತು. ಮುದ್ರಣಯಂತ್ರ ತರಿಸಲಾಯಿತು. ನಿಘಂಟಿಗೆ ಕಾಗದ, ಅಚ್ಚುಮೊಳೆ ಸಂಗ್ರಹಿಸಲಾಯಿತು. ನಾನು ಅಧ್ಯಕ್ಷನಾಗಿದ್ದಾಗ ೮೦ ಪುಟ ನಿಘಂಟು ಅಚ್ಚಾಗಿತ್ತು. ಈಗ ಅದರ ಮೂರು ಸಂಚಿಕೆಗಳು ಮಾತ್ರ ಪ್ರಕಟವಾಗಿವೆ.'

**ಸಮಾಜಸೇವೆ**

ಶಿವಮೂರ್ತಿ ಶಾಸ್ತ್ರಿಗಳು ಅಪ್ಪಟ ವೀರಶೈವರು, ವೀರಶೈವ ಮತಾಭಿಮಾನಿಗಳು. ಆದರೆ ಅನ್ಯಮತ ದ್ವೇಷಿಯಾಗಿರಲಿಲ್ಲ. ಕರ್ನಾಟಕದ ಏಕೀಕರಣವಾದಂತೆ, ವೀರಶೈವದಲ್ಲಿ ಭಾವಕ್ಯತೆ ಆಗಬೇಕು ಎಂದು ಸದಾ ಹಂಬಲಿಸುತ್ತಿದ್ದರು. ವೀರಶೈವ ಧರ್ಮ ಪ್ರಚಾರಕ್ಕೆ ಒಬ್ಬ ಬಸವಣ್ಣ ಸಾಕಾಗಿದ್ದ. ಆದರೆ ಅದೇ ಧರ್ಮಿಗಳ ಒಕ್ಕೂಟಕ್ಕೆ ಸಹಸ್ರ ಮಂದಿ ಬಸವಣ್ಣಗಳು ಬೇಕು. ನಿರಭಿಮಾನಿ ಕನ್ನಡಿಗರನ್ನು ಒಂದು ಕಡೆ, ದುರಭಿಮಾನಿ ವೀರಶೈವರನ್ನು ಒಂದು ಕಡೆ ತಂದು ಸೇರಿಸಲು ಶಾಸ್ತ್ರಿಗಳು ತುಂಬಾ ಯತ್ನಿಸಿದರು. ಆದರೆ ಅದು ಕೊನೆಯವರೆಗೂ ಕನಸಾಗಿಯೇ ಉಳಿಯಿತು.

ಇಷ್ಟಾದರೂ ಶ್ರೀ ಶಾಸ್ತ್ರಿಗಳವರ ಆಶಾವಾದಿತನ ಮೆಚ್ಚುವಂಥದು. ಅವರು ತಮ್ಮ ಕರ್ತವ್ಯದಲ್ಲಿ ಹಿಂದೆ ಬೀಳಲಿಲ್ಲ. ಭಾಷಣದ ವೇದಿಕೆಗಳ ಮೇಲೆ, ಪತ್ರಿಕೆಗಳಲ್ಲಿ ಪ್ರಚಾರೋಪನ್ಯಾಸಗಳಲ್ಲಿ ಹಲವು ಸಂಘಸಂಸ್ಥೆಗಳ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಕರ್ನಾಟಕದ ಪ್ರಗತಿಯ ಬಗೆಗೆ ಘೋಷಣೆ ಮಾಡುತ್ತಾ ಬಂದರು. ಅಂತೆಯೇ ಧಾರ್ಮಿಕ ವಲಯಗಳಲ್ಲಿ ವೀರಶೈವವನ್ನು ಪ್ರಚುರಪಡಿಸುತ್ತಾ ಬಂದರು, ಅದರ ಪಾರಮ್ಯವನ್ನು ಪ್ರಕಟಪಡಿಸಿದರು.

ಕರ್ನಾಟಕ ಏಕೀಕರಣವಾಗಬೇಕಾದರೆ ಕನ್ನಡ ಸಾಹಿತ್ಯ ಪರಿಷತ್ತಿನ ಶ್ರಮದಾನವಾಗಬೇಕು, ವೀರಶೈವರಲ್ಲಿ ಭಾವೈಕ್ಯತೆ ಮೂಡಬೇಕಾದರೆ ಅಖಿಲ ಭಾರತ ವೀರಶೈವ ಮಹಾಸಭೆಯ ಬಲಿದಾನವಾಗಬೇಕು ಎಂಬುದು ಶೂಲಪಾಣಿ (ಶಿವಮೂರ್ತಿ ಶಾಸ್ತ್ರಿ)ಯ ವೀರವಾಣಿ, ಅವರ ಸಿಂಹವಾಣಿಯೂ ಹೌದು.

ಅವರು ತಮ್ಮ ಜೀವನಸ್ಮೃತಿಯ ಹೊತ್ತಗೆಯನ್ನು ಬಿಚ್ಚುತ್ತಾ, ಒಂದೆಡೆಯಲ್ಲಿ ವೀರಶೈವ ಮಹಾಸಭೆಯ ವಿಷಯವನ್ನು ಪ್ರಸ್ತಾಪಿಸಿದ್ದಾರೆ. ಅದರಿಂದ ವೀರಶೈವದ ಬಗ್ಗೆ, ಅದರ ಪ್ರಗತಿ ಪ್ರಸ್ಥಾನಗಳ ಬಗ್ಗೆ ಶ್ರೀ ಶಾಸ್ತ್ರಿಗಳಿಗಿದ್ದ ಕಳಕಳಿ ವೇದ್ಯವಾಗುತ್ತದೆ. ಅವರ ಹೇಳಿಕೆ ಹೀಗಿದೆ -

'ಭರತಖಂಡದಲ್ಲಿ ಸುಮಾರು ಒಂದು ಸಾವಿರ ವರ್ಷದಷ್ಟು ಪ್ರಾಚೀನ ಕಾಲದಿಂದ ಶೈವಧರ್ಮದ ಅಂಗವಾಗಿ ವೀರಶೈವ ಅಥವಾ ಲಿಂಗಾಯಿತ ಧರ್ಮವು ತಲೆಯೆತ್ತಿ ನಿಂತಿದೆ. ಶ್ರೀ ರೇಣುಕಾಚಾರ್ಯ, ಶ್ರೀ ಪಂಡಿತಾರಾಧ್ಯ, ದೇವರ ದಾಸಿಮಯ್ಯ,

ಕೊಂಡುಗುಳಿ ಕೇಶಿರಾಜ, ಬಸವೇಶ್ವರ, ಚೆನ್ನಬಸವೇಶ್ವರ, ಅಲ್ಲಮಪ್ರಭು, ಕೆರೆಯ ಪದ್ಮರಸ, ಪ್ರೌಢದೇವರಾಯ, ಜಕ್ಕಣಾಚಾರ್ಯ, ಲಕ್ಕಣ್ಣ ದಂಡೇಶ, ಕಾಕತೀಯ ರಾಜರು, ಕೆಳದಿಯ ರಾಜರು, ಸ್ವಾದಿಯ ರಾಜರು, ಕೊಡಗಿನ ರಾಜರು, ವಿಜಯನಗ ರದ ಅರಸರು, ತೋಂಟದಾರ್ಯ, ಹರಿಹರ, ರಾಘವಾಂಕ, ಚಾಮರಸ, ನಿಜಗುಣ ಶಿವಯೋಗಿ, ಷಡಕ್ಷರದೇವ, ಪಾಲ್ಕುರಿಕೆ ಸೋಮನಾಥ, ಶಿವಪ್ರಕಾಶ ಸ್ವಾಮಿ, ಮನ್ಮಥ ಸ್ವಾಮಿ ಮೊದಲಾದ ಮಹಾಪುರುಷರಿಂದ ವಿಕಾಸಗೊಂಡು, ವೀರಶೈವ ಧರ್ಮ, ದರ್ಶನ, ಸಂಸ್ಕೃತಿ, ಮತ್ತು ಇತಿಹಾಸ ಮೊದಲಾದುವು ಪ್ರಕಾಶಗೊಂಡಿವೆ. ಇಂತಹ ಸುಪ್ರಸಿದ್ಧವಾದ ಧರ್ಮವು, ಅದನ್ನು ಅವಲಂಬಿಸಿದ ಸಮಾಜವು ಇತ್ತೀಚೆಗೆ ಅವನತಿಗೆ ಬಂದುದರಿಂದ, ಈ ಶತಮಾನದ ಪ್ರಾರಂಭದಲ್ಲಿ ಪರಮ ಪೂಜ್ಯರಾದ ಶ್ರೀ ಹಾನಗಲ್ಲ ಕುಮಾರ ಶಿವಯೋಗಿಗಳು, ವೀರಶೈವ ಧರ್ಮದ ಉನ್ನತಿಗಾಗಿ ೧೯೦೪ರಲ್ಲಿ ಧಾರವಾಡದಲ್ಲಿ ಅಖಿಲ ಭಾರತ ವೀರಶೈವ ಮಹಾಸಭೆಯನ್ನು ಸಂಸ್ಥಾಪಿಸಿದರು. ಅದರ ಮೊದಲನೆಯ ಮತ್ತು ಎರಡನೆಯ ಅಧಿವೇಶನಗಳು ಧಾರವಾಡ ಮತ್ತು ಬೆಂಗಳೂ ರಿನಲ್ಲಿ ೧೯೦೪, ೧೯೦೫ರಲ್ಲಿ ದಾನವೀರ ಶಿರಸಂಗಿ ಲಿಂಗರಾಜರ ಅಧ್ಯಕ್ಷತೆಯಲ್ಲಿ ವೈಭವದಿಂದಾದುದು. ಅನಂತರ ೧೯೦೭ರಲ್ಲಿ ಸೊಲ್ಲಾಪುರದಲ್ಲಿ ಸರ್. ಕೆ. ಪಿ. ಪುಟ್ಟಣ್ಣ ಶೆಟ್ಟರ ಅಧ್ಯಕ್ಷತೆಯಲ್ಲಿ ೧೯೦೮ರಲ್ಲಿ ಬಾಗಲ್ಕೋಟೆಯಲ್ಲಿ ವೆಂಟಮುರಿ ದೇಸಾಯಿ, ರಾಜಾ ಲಖಮನಗೌಡರ ಅಧ್ಯಕ್ಷತೆಯಲ್ಲಿ, ೧೯೦೯ರಲ್ಲಿ ಬಳ್ಳಾರಿಯಲ್ಲಿ ವಾರದ ಮಲ್ಲಪ್ಪನವರ ಅಧ್ಯಕ್ಷತೆಯಲ್ಲಿ ೧೯೧೨ರಲ್ಲಿ ನಿಪ್ಪಾಣಿಯಲ್ಲಿ ರಾವ್ ಬಹಾದ್ದೂರ್ ಅರಟಾಳು ರುದ್ರಗೌಡರ ಅಧ್ಯಕ್ಷತೆಯಲ್ಲಿ, ದಾವಣಗೆರೆಯಲ್ಲಿ ೧೯೧೭ರಲ್ಲಿ ಸರ್. ಕೆ.ಪಿ. ಪುಟ್ಟಣ್ಣ ಶೆಟ್ಟರ ಅಧ್ಯಕ್ಷತೆಯಲ್ಲಿ ಈ ಸಭೆಯ ಅಧಿವೇಶನಗಳು ಮುಂದುವರಿದುವು. ೧೯೧೧ರಲ್ಲಿ ಬೆಳಗಾವಿಯಲ್ಲಿ ಹಂದಿಗನೂರು ದೇಸಾಯಿಯವರ ಅಧ್ಯಕ್ಷತೆಯಲ್ಲಿಯೂ, ೧೯೧೯ರಲ್ಲಿ ದಿವಾನ್ ಬಹಾದ್ದೂರ್ ಶಾಂತವೀರಪ್ಪನವರ ಅಧ್ಯಕ್ಷತೆಯಲ್ಲಿ ಬೀರೂರಿನಲ್ಲಿಯೂ, ೧೯೨೭ರಲ್ಲಿ ಬೆಂಗಳೂರಿನಲ್ಲಿ ಸರ್ ಸಿದ್ದಪ್ಪ ಕಂಬಳಿಯವರ ಅಧ್ಯಕ್ಷತೆಯಲ್ಲಿ ಅಧಿವೇಶನಗಳು ಮುಂದುವರಿದುವು. ೧೯೩೩ ಧಾರವಾಡದಲ್ಲಿ ರಾವ್ ಬಹದ್ದೂರ್ ಫ.ಗು. ಹಳಕಟ್ಟಿಯವರ ಅಧ್ಯಕ್ಷತೆಯಲ್ಲಿ, ೧೯೩೪ರಲ್ಲಿ ರಾಯಚೂರಿನಲ್ಲಿ ಸರ್ ಸಿದ್ದಪ್ಪ ಕಂಬಳಿಯವರ ಅಧ್ಯಕ್ಷತೆಯಲ್ಲಿ, ೧೯೩೮ರಲ್ಲಿ ಪ್ರೊ.ಎಸ್. ಎಸ್. ಬಸವನಾಳರ ಅಧ್ಯಕ್ಷತೆಯಲ್ಲಿ ಹುಬ್ಬಳ್ಳಿಯಲ್ಲಿ, ಬ್ಯಾರಿಸ್ಟರ್ ಎಂ. ಎಸ್. ಸರದಾರರ ಅಧ್ಯಕ್ಷತೆಯಲ್ಲಿ ಕುಂಭಕೋಣಂನಲ್ಲಿ ೧೯೪೦ರಲ್ಲಿ, ೧೯೪೮ರಲ್ಲಿ ತುಮಕೂರಿನಲ್ಲಿ ಸಿ. ಸಿ. ಹುಲಕೋಟಿಯವರ ಅಧ್ಯಕ್ಷತೆಯಲ್ಲಿ, ೧೯೫೫ರಲ್ಲಿ ಬಸವಕಲ್ಯಾಣದಲ್ಲಿ ಬಂಥನಾಳ ಸ್ವಾಮಿಯವರ ಅಧ್ಯಕ್ಷತೆಯಲ್ಲಿ, ೧೯೬೦ ರಲ್ಲಿ ಶಿವಯೋಗ ಮಂದಿರದಲ್ಲಿ ಡಾ. ಡಿ.ಸಿ. ಪಾವಟೆಯವರ ಅಧ್ಯಕ್ಷತೆಯಲ್ಲಿ, ೧೯೬೯ರಲ್ಲಿ ಬೊಂಬಾಯಿಯಲ್ಲಿ ಡಾ. ಶ್ರೀ ಶಿವಕುಮಾರಸ್ವಾಮಿಗಳವರ ಅಧ್ಯಕ್ಷತೆಯಲ್ಲಿ, ೧೯೭೩ರಲ್ಲಿ ಬೆಂಗಳೂರಿನಲ್ಲಿ ಶ್ರೀ ಜೆ.ಬಿ. ಮಲ್ಲಾರಾಧ್ಯರ ಆಧ್ಯಕ್ಷತೆಯಲ್ಲಿ ಮಹಾಸಭೆಯ ಅಧಿವೇಶನಗಳು ನಡೆದವು.

೧೯೧೭ರಲ್ಲಿ ದಾವಣಗೆರೆಯಲ್ಲಿ ಶ್ರೀ ಶ್ರೀ ಚಿತ್ರದುರ್ಗ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರ ಉದಾರಾಶ್ರಯದಲ್ಲಿ 'ಮಹಾಸಭಾ ಚಿರಸ್ಥಾಯಿನಿಧಿ' ಸ್ಥಾಪನೆಯಾಯಿತು. ೧೯೩೮ರಲ್ಲಿ ಹುಬ್ಬಳ್ಳಿಯಲ್ಲಿ ಪ್ರೊ. ಬಸವನಾಳರ ಅಧ್ಯಕ್ಷತೆಯಲ್ಲಿ  ಮಹಾಸಭೆಯ ಒಂದು ಘಟನೆ ನಿರ್ಮಾಣವಾಯಿತು. ೧೯೭೪ರಲ್ಲಿ ಬೆಂಗಳೂರಿನಲ್ಲಿ ಮಹಾಸಭೆಯ ಘಟನೆ ಶ್ರೀ. ಜೆ. ಬಿ. ಮಲ್ಲಾರಾಧ್ಯರ ಅಧ್ಯಕ್ಷತೆಯಲ್ಲಿ (ಘಟನೆ) ಮತ್ತೆ ಪರಿಸ್ಥಿತಿಗೆ ಅನುಗುಣವಾಗಿ ಸುಧಾರಿಸಲ್ಪಟ್ಟಿತು.

ಈ ಮೇಲೆ ಕಂಡ ಮಹಾಸಭೆಯ ಚರಿತ್ರೆಯಲ್ಲಿ ಧಾರವಾಡ, ಹುಬ್ಬಳ್ಳಿ, ಕುಂಭಕೋಣಂ, ತುಮಕೂರು, ಬಸವ ಕಲ್ಯಾಣ ಮತ್ತು ಬೆಂಗಳೂರು ಈ ಮಹಾಸಭೆಗಳಲ್ಲಿ ನಾನು ಕೈಲಾದಮಟ್ಟಿಗೂ ಸೇವೆಯನ್ನು ಸಲ್ಲಿಸಿದ್ದೇನೆ. ೧೯೩೩ರಿಂದ ಇಲ್ಲಿಯವರೆಗೆ ಸುಮಾರು ೪೦ ವರ್ಷಗಳಿಂದ ಮಹಾಸಭೆಯ ಕಾರ್ಯಕಾರಿ ಸಮಿತಿ ಸದಸ್ಯನಾಗಿದ್ದೇನೆ. ಪ್ರಕೃತ ಮಹಾಸಭೆಯ ನಾಲ್ವರು ಉಪಾಧ್ಯಕ್ಷರಲ್ಲಿ ನಾನು ಒಬ್ಬನಾಗಿದ್ದೇನೆ.

ವೀರಶೈವ ಸಮಾಜದಲ್ಲಿ ಇದುವರೆಗೆ ಆಗುವ ಎಲ್ಲ ಅಭಿವೃದ್ಧಿ ಕಾರ್ಯಗಳಿಗೂ ಮಹಾಸಭೆಯು ಸ್ಫೂರ್ತಿಯನ್ನು ಕೊಟ್ಟಿದೆ. ಶಿವಯೋಗ ಮಂದಿರದ ಸ್ಥಾಪನೆಯೂ, ಮೈಸೂರು ಲಿಂಗಾಯುತ ವಿದ್ಯಾಭಿವೃದ್ಧಿ ನಿಧಿ, ಮೊದಲಾದವುಗಳೆಲ್ಲ ಮಹಾ ಸಭೆಯಿಂದ ಸ್ಫೂರ್ತಿ ಪಡೆದಿವೆ. ಬೆಳಗಾವಿ, ನಿಪ್ಪಾಣಿ, ಧಾರವಾಡ, ಹುಬ್ಬಳ್ಳಿ, ಗದಗ, ಬಳ್ಳಾರಿ, ವಿಜಾಪುರ, ಸೊಲ್ಲಾಪುರ, ಗುಲ್ಬರ್ಗ, ಯಾದಗಿರಿ, ಬೆಂಗಳೂರು, ಮೈಸೂರು, ಸಿದ್ಧಗಂಗಾ, ಸಂಕೇಶ್ವರ, ಹಾವೇರಿ, ಹರಿಹರ, ದಾವಣಗೆರೆ, ಬಸವಕಲ್ಯಾಣ ಮೊದಲಾದ ಕಡೆಗಳಲ್ಲಿ ಸಮಾಜ ಬಾಂಧವರಿಂದ ಸಂಸ್ಥಾಪಿಸಲ್ಪಟ್ಟಿರುವ ಶಾಲಾ ಕಾಲೇಜು ಪ್ರಸಾದನಿಲಯ ಮೊದಲಾದವುಗಳಿಗೆಲ್ಲ ಮಹಾಸಭೆಯೇ ಮೂಲ ಕಾರಣವಾಗಿದೆ. ಈಗ ಉತ್ಸಾಹಶಾಲಿಗಳೂ, ಪ್ರತಿಭಾಶಾಲಿಗಳೂ ಆಗಿರುವ ಶ್ರೀ ಜೆ.ಬಿ. ಮಲ್ಲಾರಾಧ್ಯರು ಮಹಾಸಭೆಯ ಅಧ್ಯಕ್ಷರಾಗಿದ್ದು ಮಹಾಸಭೆಗೆ ಒಂದು ಕಾರ್ಯಾಲಯವನ್ನು ಸ್ಥಾಪಿಸಿಕೊಂಡು

ಸಮಾಜೋದ್ಧಾರ ಕಾರ್ಯವನ್ನು ಪ್ರಾರಂಭಿಸಿರುತ್ತಾರೆ. ವಿವೇಕವುಳ್ಳ ಲಿಂಗವಂತರೆಲ್ಲರೂ ಈ ಮಹಾಸಭೆಯ ಬೆಂಬಲಕ್ಕಿದ್ದು ತಮ್ಮನ್ನು ತಾವೇ ಉದ್ಧಾರ ಮಾಡಿಕೊಳ್ಳುವರೆಂದು ನಂಬುತ್ತೇನೆ."

"ಒಂದು ಕಾಲದಲ್ಲಿ ವೀರಶೈವ ಧರ್ಮವು ಸಮಗ್ರ ಭಾರತದಲ್ಲಿ ಪ್ರಚಾರದಲ್ಲಿತ್ತೆಂಬುದಕ್ಕೆ ಕೇದಾರ, ಕಾಶಿ, ಪ್ರಯಾಗ, ಶ್ರೀಶೈಲ, ಉಜ್ಜಯಿನಿ, ರಂಭಾಪುರಿ, ಧಾರವಾಡ, ಗದಗ, ಹುಬ್ಬಳ್ಳಿ, ಚಿತ್ರದುರ್ಗ, ಕುಂಭಕೋಣಂ, ಚಿದಂಬರ, ತಿರುವಣ್ಣಾಮಲೆ, ರಾಮೇಶ್ವರ, ಮತ್ತು ಲಂಕಾದ್ವೀಪದ ಜಾಫ್ನಾ ಮೊದಲಾದ ಕಡೆ ಇರುವ ವೀರಶೈವ ಮಠಗಳು ಸಾಕ್ಷಿಯಾಗಿವೆ. ಪ್ರಕೃತ ವೀರಶೈವ ಮಠಾಧಿಪತಿಗಳಲ್ಲಿಯೂ, ಸಮಾಜದಲ್ಲಿಯೂ ಅನೈಕಮತ್ಯ ಮತ್ತು ಅಜ್ಞಾನಗಳು ಆವರಿಸಿವೆ. ಸಮಾಜವು ಅಧೋಗತಿಗೆ ಹೋಗುತ್ತಿದೆ. ಈ ಪರಿಸ್ಥಿತಿಯಿಂದ ಉದ್ಧಾರವಾಗಲು ಅಖಿಲ ಭಾರತ ಮಹಾಸಭೆಯನ್ನು ಅಭಿವೃದ್ಧಿಪಡಿಸಿ ತನ್ಮೂಲಕ ಸಮಾಜ ಬಾಂಧವರು ಮುಂದುವರಿಯಲು ಪ್ರಯತ್ನಿಸುವರೆಂದು ನಂಬುತ್ತೇನೆ."

### ಬಹುಮುಖ ಸೇವೆ

ಶಿವಮೂರ್ತಿ ಶಾಸ್ತ್ರಿಗಳು ಕೇವಲ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಅಷ್ಟೇ ಅಲ್ಲದೆ ಇನ್ನೂ ಹಲವು ಕ್ಷೇತ್ರಗಳಲ್ಲಿ ಸಾಕಷ್ಟು ದುಡಿದಿದ್ದಾರೆ. ಮೈಸೂರು ಸಾಹಿತ್ಯ ಅಕಾಡೆಮಿ ಸಂಗೀತ ಮತ್ತು ನಾಟಕ ಅಕಾಡೆಮಿ, ಕನ್ನಡ ನಿಘಂಟು ಸಂಪಾದಕ ಸಮಿತಿ, ಕನ್ನಡ ವಿಶ್ವಕೋಶ ಸಮಿತಿ, ಆಕಾಶವಾಣಿ ಸಲಹಾ ಸಮಿತಿ, ಬಸವ ಸಮಿತಿ, ಭಾರತೀಯ ವಿದ್ಯಾಭವನ, ಅಖಿಲಭಾರತ ವೀರಸೈವ ಮಹಾಸಭಾ, ಲಿಂಗಾಯತ ವಿದ್ಯಾಭಿವೃದ್ಧಿ ಸಮಿತಿ, ಗಡಿ ಸಲಹಾ ಸಮಿತಿ ಇತ್ಯಾದಿ ಸಮಿತಿಗಳಲ್ಲಿ ಸದಸ್ಯರಾಗಿ ಸಕ್ರಿಯ ಪಾತ್ರ ವಹಿಸಿ ಯಶಸ್ಸುಗಳಿಸಿದ್ದಾರೆ. ಅವರ ಕೃತ್ವ ಶಕ್ತಿ, ಕಾರ್ಯದಕ್ಷತೆ, ಕರ್ತವ್ಯ ನಿಷ್ಠೆ – ಇವುಗಳಿಗೆ ಅವರ ಬಹುಮುಖ ಸೇವೆಯೇ ಸಾಕ್ಷಿಯಾಗಿದೆ.

'ಶ್ರೀಯುತ ಬಿ.ಶಿವಮೂರ್ತಿಶಾಸ್ತ್ರಿಗಳು ತಮ್ಮ ವಿವಿಧ ಮುಖ ಶಕ್ತಿಕೂಟದಿಂದ, ಬಹುಮುಖ ಕ್ಷೇತ್ರಗಳಲ್ಲಿ ಬೃಹತ್ತು ಮಹತ್ತುಗಳಿಂದ ಸೇವೆಗೈದು, ಕನ್ನಡನಾಡಿನ ಜನಕೋಟಿಗೆ ಪರಿಚಿತರಾಗಿರುವರು. ಅವರು ಕೋಶ ಓದಿ ಪಂಡಿತ ಮಾನ್ಯರಾದುದಲ್ಲದೆ, ದೇಶ ತಿರುಗಿ ನಾಡಿನ ಉದ್ದಗಲದಲ್ಲಿ ಸಂಚರಿಸಿ, ನಾಡುನುಡಿಯ ಧರ್ಮ ಹಾಗೂ ಸಮನ್ವಯ ಸೂತ್ರವನ್ನು ಪ್ರಚುರಪಡಿಸಿ ಬಹುಜನಪ್ರಿಯತೆಯನ್ನು ಸಂಪಾದಿಸಿಕೊಂಡಿದ್ದಾರೆ. ಅವರ ಸಂದರ್ಶನ ಪಡೆದು ರೇಡಿಯೋದ ಮೂಲಕ ಪ್ರಚಾರ ಮಾಡಿದಂತೆ, ಅವರ ಸೇವೆಯ ೪೦ ವರ್ಷಗಳ ಕಾರ್ಯವನ್ನು ಚತುರ್ಮುಖವಾಗಿ ವಿಂಗಡಿಸಬಹುದು. ಸಾಮಾಜಿಕವಾಗಿ ಅವರು ಕೈಕೊಂಡ ಮಹತ್ತರ ಕಾರ್ಯವೆಂದರೆ, ಕನ್ನಡ ನಾಡಿನಲ್ಲಿ ಸಂಚರಿಸಿ, ನಗರ–ಗ್ರಾಮಗಳಲ್ಲಿ ಊರಿನ ಮುಖ್ಯರನ್ನು ಸಂದರ್ಶಿಸಿ, ಅಲ್ಲಿನ ದೇವಾಲಯಗಳಲ್ಲಿ ಪುರಾಣ–ಕೀರ್ತನೆಗಳನ್ನು ನಡೆಸಿ, ಧರ್ಮ, ನೀತಿ, ನಿಯಮಗಳನ್ನು ಪಾಂಡಿತ್ಯಪೂರ್ಣ ಭಾಷೆಯಿಂದ ಜನಮನರಂಜನೆಯ ರೀತಿಯಲ್ಲಿ ವ್ಯಾಖ್ಯಾನಿಸಿದ್ದಾರೆ. ಈ ಮೂಲಕ ನಿರಕ್ಷರಿಗಳಿಗೆ ಬೇಕಾದ ಧರ್ಮವನ್ನು ಕಥೆಗಳ ರೂಪದಲ್ಲಿ ರಂಜನೆಯ ರೂಪದಲ್ಲಿ ಪ್ರಸಾರ ಮಾಡಿ, ಪುರಾಣ ಪುಣ್ಯ ಕಥೆಗಳ ಶ್ರವಣ ಮಾಡಿಸಿ, ಜನರ ಮನಸ್ಸನ್ನು ತಿದ್ದುವ ಕಾರ್ಯದಲ್ಲಿ ಅಮೋಘವಾದ ಸೇವೆಯನ್ನು ನಡೆಸಿದ್ದಾರೆಂದು ಹೇಳಬಹುದು. ಅವರ ಜೀವನದ ನಾಂದಿಯಂತಿದ್ದ, ಅವರ ಈ ಪುಣ್ಯಕಾರ್ಯ, ಅವರ ಅರಳುವ ಪ್ರತಿಭೆಗೆ ಪೋಷಕವಾಗಿ, ಅವರೊಬ್ಬ ನಾಡಿನ ಹಿತಚಿಂತಕರ ವರ್ಗದಲ್ಲಿ ಪರಿಗಣಿಸಲ್ಪಡುವಂತಾಯಿತು.'

ಆಸ್ಥಾನ ವಿದ್ವಾನ್ ಶಿವಮೂರ್ತಿ ಶಾಸ್ತ್ರಿಗಳವರ 'ಆಸ್ಥಾನ' ಮುಕ್ಕೋಟಿ ಕನ್ನಡಿಗರ ಹೃದಯ ಮಂದಿರ ! ಕರ್ನಾಟಕದ ಉದ್ದಗಲ ಅವರ ಆಡೊಂಬಲ. ಪದ್ಮಶ್ರೀ ಶಿವಮೂರ್ತಿಶಾಸ್ತ್ರಿಗಳು ಬರೇ ತನ್ನ ಕೋಣೆಯ ನಾಲ್ಕು ಗೋಡೆಗಳ ಮಧ್ಯೆ ಕುಳಿತುಕೊಂಡು ಬರೆಯುವ ನಿಷ್ಕ್ರಿಯ ಸಾಹಿತಿಯಲ್ಲ. ಕರ್ನಾಟಕದ ಪ್ರತಿಯೊಂದು ತಾಲ್ಲೂಕು, ಜಿಲ್ಲೆ, ಚಾರಿತ್ರಿಕ ಸ್ಥಳ, ಪುಣ್ಯಕ್ಷೇತ್ರಗಳೆಲ್ಲವನ್ನೂ ಒಂದು ಮೂಲೆಯಿಂದ ಇನ್ನೊಂದಕ್ಕೆ ಎಂಬಂತೆ ಒಂದಲ್ಲ ಹಲವು ಬಾರಿ ಪ್ರತ್ಯಕ್ಷ ಸಂದರ್ಶಿಸಿ ವಿಚಾರ ವಿನಿಮಯ ನಡೆಸಿ ಪೌರಾಣಿಕ ಮತ್ತು ಚಾರಿತ್ರಿಕ ವಿವರಗಳನ್ನು ಪರಿಶೀಲಿಸಿ ತಮ್ಮ ಕೀರ್ತನ ಭಾಷಣಗಳ ಮೂಲಕ ಜನಮನವನ್ನು ತಣಿಸಿ ನಡೆಸಿದ ಪ್ರಯತ್ನದ ಫಲವು ಇವರ ಗ್ರಂಥಗಳಲ್ಲಿ ಮೇಲಿಂದ ಮೇಲೆ ಕಾಣುತ್ತದೆ. ಹಾಗಾಗಿ ಇಡೀ ಕರ್ನಾಟಕವೇ ಅವರ ಪರಿಶೋಧನಾ ಕೇಂದ್ರವಾಯಿತು. ಕನ್ನಡ ಭೂಮಿಯೇ ಅವರ ಸೇವೆ ಮತ್ತು ಆರಾಧನಾ ದೈವವಾಯಿತು. ಎಲ್ಲಕ್ಕೂ ಮಿಗಿಲಾಗಿ ವೀರಶೈವ ಸಾಹಿತ್ಯದ ಸರ್ವರೂಪ ರೇಖೆಯು ಅವರ ನಿತ್ಯದ ಪಂಚಾಕ್ಷರೀ ಮಂತ್ರವಾಯಿತು. ಸಮಗ್ರ ಭಾರತವನ್ನು ಸಂಚರಿಸಿದ್ದರಿಂದ ಅವರ ಅನುಭವ ಭಂಡಾರವು ಅಧಿಕವಾಯಿತು; ಅಧಿಕೃತವಾಯಿತು.

ಶಾಸ್ತ್ರಿಗಳ ಬಹುಮುಖ ಸೇವೆಗೆ ಹತ್ತು ಕೈ, ಹತ್ತು ಭುಜಗಳು. ಅವರು ಯಾರನ್ನೂ ಮೆಚ್ಚಿಸುವುದಕ್ಕಾಗಲೀ, ಪ್ರಶಸ್ತಿಯ ಪ್ರಲೋಭನಕ್ಕಾಲೀ, ಉದ್ಯುಕ್ತರಾದವರಲ್ಲ. ಅವರು ತಮ್ಮ ಕರ್ತವ್ಯವೆಂದು ಭಾವಿಸಿ ಮಾಡುತ್ತಿದ್ದರು. ಕೊಡುವುದನ್ನು ಆತ್ಮಸಂತೋಷದಿಂದಲೇ ಮಾಡುತ್ತಿದ್ದರು. ಅವುಗಳಲ್ಲಿ ಅವರಿಗೆ ಪ್ರಿಯವಾದ ಕಾರ್ಯವೆಂದರೆ ಕರ್ನಾಟಕ ಏಕೀಕರಣ. 'ನನ್ನ ಜೀವಮಾನ ಕಾಲದಲ್ಲಿ ನಾನು ನಡೆಸಿದ ಮಹತ್ವದ ಪ್ರಯತ್ನಗಳಲ್ಲಿ ಕರ್ನಾಟಕ ಏಕೀಕರಣ ಸಾಧನೆ ಒಂದು ಮುಖ್ಯ ಸಾಧನೆ ಎಂದು ಹೇಳಬಹುದು' ಎಂದು ಒಂದೆಡೆ ಅವರೇ ಹೇಳಿದ್ದುಂಟು. ಅವರ ಸತತವಾದ ಶ್ರಮ, ಸಾಧನೆಗಳ ಫಲವಾಗಿ ಕರ್ನಾಟಕ ಏಕೀಕರಣ ಆಯಿತು. ಆದರೆ ಅತೃಪ್ತಿ ಅಳಿಯಲಿಲ್ಲ. ಕರ್ನಾಟಕದ ಗಡಿಗಳಾದ ನೀಲಗಿರಿ, ತಾಳವಾಡಿ, ಹೊಸೂರು ಇವುಗಳು ತಮಿಳುನಾಡಿಗೂ, ಕಾಸರಗೋಡು ಕೇರಳಕ್ಕೂ, ಮಡಕಶಿರ, ಆದವಾನಿ, ಆಲೂರು, ರಾಯದುರ್ಗ ಇವುಗಳು ಆಂಧ್ರಕ್ಕೂ, ಸೊಲ್ಲಾಪುರ, ಅಕ್ಕಲಕೋಟ, ಜತ್ತ ಮೊದಲಾದವುಗಳು ಮಹಾರಾಷ್ಟ್ರಕ್ಕೂ ಹಂಚಿಹೋದವು. ಇದನ್ನು ಕಂಡು ಶಾಸ್ತ್ರಿಗಳು ತುಂಬಾ ಕೊರಗಿದರು. ಅವರ ಕೊನೆಯುಸಿರಿನವರೆಗೂ ಇದೇ ಕೊರಗು ಹೇಳುತ್ತಾರೆ.

'ಭೌಗೋಳಿಕವಾಗಿ ನಾವು ಕನಸು ಕಂಡ ಕರ್ನಾಟಕ, ಒಂದಾಗಿದ್ದರೂ, ನನಗೆ ಈ ಏಕೀಕರಣದಿಂದ ಪೂರ್ಣವಾಗಿ ಸಂತೋಷವಾಗಿಲ್ಲ. ಏಕೀಕರಣದಿಂದ ಜನತೆಯ ಹೃದಯದಲ್ಲಿ ನಾವೆಲ್ಲ ಒಬ್ಬ ತಾಯಿಯ ಮಕ್ಕಳೆಂಬ ಭಾವನೆ ಮೂಡಿ ಮಾನಸಿಕ ಏಕೀಕರಣ, ಭಾವೈಕ್ಯ ಇನ್ನೂ ಬಂದಿಲ್ಲ. ನಮ್ಮ ಜನರಲ್ಲಿ ನೆಲ, ಕುಲದ ಅಭಿಮಾನ ಬೆಳೆಯಬೇಕಾಗಿದೆ. ಕನ್ನಡನಾಡು ಒಂದಾಗಿ ಇಷ್ಟು ಕಾಲದ ಮೇಲೂ ಅದನ್ನು ಎರಡಾಗಿ ಒಡೆಯಬೇಕೆಂಬ ವಿಚ್ಛಿದ್ರಕಾರಕ ವ್ಯಕ್ತಿಗಳ, ಶಕ್ತಿಗಳ ಒಡಕುಮಾತು ಕೇಳುತ್ತಲಿರುವುದು ವಿಷಾದಕರ. ಭೌಗೋಳಿಕವಾಗಿ, ಐತಿಹಾಸಿಕವಾಗಿ, ಸಾಂಸ್ಕೃತಿಕವಾಗಿ ಒಂದಾಗಿರುವ ಕರ್ನಾಟಕವನ್ನು ತುಂಡರಿಸಿದರೆ ಅಂದೇ ನಾಡಿನ ದುರಂತ ! ಎರಡನೆಯದಾಗಿ ನಮ್ಮ ಕನ್ನಡನಾಡಿನ ಗಡಿ ಪ್ರದೇಶಗಳೆಲ್ಲವೂ ನಾಡಿನೊಂದಿಗೆ ಮತ್ತೆ ಸೇರ್ಪಡೆಯಾಗದೆ ಹೋದರೆ ಕರ್ನಾಟಕ ಪರಿಪೂರ್ಣವಾಗುವುದಿಲ್ಲ. 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' ಎಂಬ ಕವಿಯ ಉಕ್ತಿ ನಿಜವಾಗುವುದಿಲ್ಲ ಎಂಬುದು ನನ್ನ ಸ್ಪಷ್ಟವಾದ ಅಭಿಪ್ರಾಯ. ಈ ಹಂತದಲ್ಲಿ ಮಹಾಜನ ವರದಿ ಜಾರಿಗೆ ಬರುವಂತೆ ಮಾಡುವುದು, ಕರ್ನಾಟಕ ಸರಕಾರದ ಹಾಗೂ ಮಹಾಜನರ ಕರ್ತವ್ಯವಾಗಿದೆ.'

ಇಂತೆಂದ ಶಾಸ್ತ್ರಿಗಳು ವಿವೇಕ ಹೇಳುವುದನ್ನೂ ಮರೆಯಲಿಲ್ಲ. 'ಜನಗಳಲ್ಲಿ ತಿಳುವಳಿಕೆ ಹೆಚ್ಚಬೇಕು, ದೇಶಾಭಿಮಾನ, ಭಾಷಾಭಿಮಾನಗಳು ಬೆಳೆಯಬೇಕು. ಪ್ರಜಾಪ್ರಭುತ್ವ ತತ್ವಗಳಲ್ಲಿ ನಂಬಿಕೆ ಇರಿಸಿ, ಸರ್ವರಿಗೂ ಸಮಾನ ಅವಕಾಶ ದೊರಕಬೇಕು. ಇದು ನಮ್ಮ ರಾಜ್ಯ. ಇದರ ಕ್ಷೇಮ ಚಿಂತನೆ ನಮಗೆ ಸೇರಿದೆ. ಉನ್ನತಿ ಅವನತಿಗಳು ನಮ್ಮ ಮೇಲೆ ನಿಂತಿವೆ ಎಂದು ನಾಡಿನ ಜನತೆ ತಿಳಿದು, ತ್ರಿಕರಣಪೂರ್ಣವಾಗಿ ಅಹರ್ನಿಶಿ ದುಡಿದಾಗಲೇ ನಮ್ಮ ರಾಜ್ಯದ ಅಭ್ಯುದಯ.'

## ಪದ್ಮಶ್ರೀ ಪ್ರಶಸ್ತಿ

೧೯೨೬ರಿಂದ ೧೯೩೬ರವರೆಗಿನ ಕರ್ನಾಟಕವನ್ನೆಲ್ಲಾ ಕೀರ್ತನೆ, ಭಾಷಣಗಳಿಗಾಗಿ ಕಾಲ್ಗಟ್ಟದ ಶಾಸ್ತ್ರಿಗಳು ಆಗಾಗ ಅಲ್ಲಲ್ಲಿ ಹಲವು ಪೀಠಗಳ, ಮಠಗಳ, ಜಗದ್ಗುರುಗಳ ಹಾಗೂ ಅರಮನೆಗಳಿಂದ ಹಲವಾರು ಬಿರುದುಗಳನ್ನು ಪಡೆದಿದ್ದಾರೆ. ಮುಖ್ಯವಾಗಿ ಕೀರ್ತನ ವಿಚಕ್ಷಣ, ಕೀರ್ತನ ಕೇಸರಿ, ಕೀರ್ತನಾಚಾರ್ಯ, ವಿಮರ್ಶನಾಚಾರ್ಯ ಇತ್ಯಾದಿ ಅಂತೆಯೇ ಮೈಸೂರು ಅರಮನೆಯಿಂದ ೧೯೪೦ರಲ್ಲಿ ಆಸ್ಥಾನ ವಿದ್ವಾನ್, ೧೯೪೮ರಲ್ಲಿ 'ಪಂಡಿತರತ್ನಂ' ಎಂತಲೂ, ೧೯೬೬ರಲ್ಲಿ ಭಾರತ ಸರ್ಕಾರದಿಂದ 'ಪದ್ಮಶ್ರೀ ಪ್ರಶಸ್ತಿಯನ್ನೂ, ೧೯೬೭ರಲ್ಲಿ ಮೈಸೂರು ಸಾಹಿತ್ಯ ಅಕಾಡೆಮಿಯಿಂದ ಸನ್ಮಾನವನ್ನೂ, ೧೪.೯.೧೯೬೮ರಂದು ಕನ್ನಡ ನಾಡಿನ ಸಾಹಿತಿಗಳು ಹಗೂ ಅಭಿಮಾನಿಗಳಿಂದ 'ದೇವಗಂಗೆ' ಎಂಬ ಸಂಭಾವನಾ ಗ್ರಂಥವನ್ನೂ ಪಡೆದಿದ್ದಾರೆ. ೧೯೭೨ ರಿಂದ ಅವರ ಅಂತ್ಯಕಾಲದವರೆಗೆ ಅಂದರೆ ೧೫.೦೧.೧೯೭೬ ರವರೆಗೆ ಕರ್ನಾಟಕ ರಾಜ್ಯ ಸರ್ಕಾರ ತಿಂಗಳಿಗೆ ೫೦೦ ರೂಪಾಯಿಗಳ ವಿಶ್ರಾಂತಿ ವೇತನವನ್ನು ನೀಡಿ ಗೌರವಿಸಿದ್ದುಂಟು.

## ಜ್ಞಾನದೇಗುಲ ಧರ್ಮ ದೇಗುಲವಾಯಿತು

ಶಿವಮೂರ್ತಿ ಶಾಸ್ತ್ರಿಗಳು ಸುಮಾರು ೫೦ ವರ್ಷಗಳ ಕಾಲ ಕರ್ನಾಟಕದ ಎಲ್ಲೆಡೆಗಳಲ್ಲೂ ತಿರುಗಿ ಸಂಗ್ರಹಿಸಿದ್ದ ಸಾವಿರಾರು ತಾಳೆಗರಿ ಗ್ರಂಥಗಳನ್ನೂ, ಹಸ್ತಪ್ರತಿಗಳನ್ನೂ, ತಾಮ್ರಶಾಸನಗಳನ್ನೂ ಮೈಸೂರು, ಬೆಂಗಳೂರು, ಕರ್ನಾಟಕ ವಿಶ್ವವಿದ್ಯಾಲಯಗಳಿಗೂ ಮತ್ತು ಕರ್ನಾಟಕ ಸರ್ಕಾರದ ಪ್ರಾಚೀನ ಪುಸ್ತಕ ಭಂಡಾರಕ್ಕೆ ಸುಮಾರು ಐವತ್ತು ಸಾವಿರ ರೂಪಾಯಿ ಮೌಲ್ಯದ ಹತ್ತು ಸಾವಿರ ಪುಸ್ತಕಗಳನ್ನು ಬೆಂಗಳೂರಿನ ಬಸವ ಸಮಿತಿಗೂ ಶಿವಾರ್ಪಿತ ಬುದ್ಧಿಯಿಂದ ಸಮರ್ಪಿಸಿದ್ದಾರೆ. ಇದು ಶಾಸ್ತ್ರಿಗಳ ಮತ್ತೊಂದು ರೂಪದ ಕೊಡುಗೆ ಸಾರಸ್ವತ ಕ್ಷೇತ್ರಕ್ಕೆ.

ಶಾಸ್ತ್ರಿಗಳು ತಮ್ಮ ಮನೆಯ ಪಕ್ಕದಲ್ಲೇ ಇದ್ದ ಬಹು ದೊಡ್ಡ ಪ್ರಮಾಣದ ಸ್ವತಂತ್ರ ಕರ್ನಾಟಕ ಪ್ರೆಸನ್ನು ೧೯೭೨ರಲ್ಲಿ ಮಾರಾಟ ಮಾಡಿದರು. ಅವರ ನಿವಾಸ ಮತ್ತು ಪ್ರೆಸ್‌ಗಳೆರಡೂ ಇದ್ದುದು ನಗರದ ಹೃದಯದಂತಿರುವ ಬಳೆಪೇಟೆ, ಚಿಕ್ಕಪೇಟೆ, ಅವೆನ್ಯೂ ರಸ್ತೆ, ಕೆಂಪೇಗೌಡ ರಸ್ತೆ– ಇವುಗಳ ಮಧ್ಯೆ. ಅಲ್ಲಿ ಬಹುಶಃ ಒಂದೊಂದು ಅಂಗುಲ ನೆಲಕ್ಕೂ ಅದೆಷ್ಟೊ ಬೆಲೆ ಇದೆ. ಅಂತಹ ಬೆಲೆ ಬಾಳುವ ತಮ್ಮ ಮನೆ ಹಾಗೂ ಕಾರ್ಯಾಲಯಗಳ ಭೂಭಾಗವನ್ನೆಲ್ಲ ಮಾರಾಟ ಮಾಡಿದರು ಜೈನಮತಸ್ಥರಿಗೆ, ವ್ಯಾಪಾರದ ಮಳಿಗೆಗಳನ್ನು ಕಟ್ಟಲಿಕ್ಕಲ್ಲ, ಜಿನ ಚೈತ್ಯಾಲಯವನ್ನು ನಿರ್ಮಿಸುವುದಕ್ಕಾಗಿ. ಆ ಸ್ಥಳ ವ್ಯಾಪಾರವಾಗುತ್ತಿದ್ದಾಗ ಅನೇಕರು ಶಾಸ್ತ್ರಿಗಳವರ ಬಳಿಗೆ ಬಂದು, ನಾವು ಹೋಟೆಲ್ ತೆರೆಯುತ್ತೇವೆ, ನಾವು ಬೀರು ಬ್ರಾಂದಿ ಷಾಪ್ ತೆರೆಯುತ್ತೇವೆ, ನಾವು ಒಂದು ಬ್ಯಾಂಕ್ ತೆರೆಯುತ್ತೇವೆ, ನಮಗೆ ಕೊಡಿ, ಬೇರೆಯವರು ಕೊಡುವುದಕ್ಕಿಂತ ಐವತ್ತು ಸಾವಿರ ಹೆಚ್ಚು ತೆಗೆದುಕೊಳ್ಳಿ ಎಂದು ಬೇಡಿದರು. ಆದರೆ ಶಾಸ್ತ್ರಿಗಳು ಒಪ್ಪಲಿಲ್ಲ.

'ಈ ನೆಲ ನನ್ನ ಬೆವರು ಕುಡಿದು ಬೆಳೆದಿದೆ ! ಇದು ನನ್ನ ನಂತರ ಸತ್ಪಾತ್ರಕ್ಕೆ ಸಲ್ಲಬೇಕು. ಅದಕ್ಕಾಗಿ ನನಗೆ ಐವತ್ತು ಸಹಸ್ರವಲ್ಲ ಲಕ್ಷ ರೂಪಾಯಿ ನಷ್ಟವಾದರೂ ಚಿಂತೆಯಿಲ್ಲ. ನಾನು ಜಿನಮಂದಿರ ನಿರ್ಮಾಣಕ್ಕೆ ಕೊಡುತ್ತೇನೆ. ಹೆಂಡ ಮಾರುವ, ಖಂಡ ಕೀಳುವವರಿಗೆ ಖಂಡಿತ ಕೊಡುವುದಿಲ್ಲ. ಯಾರಾದರೂ ಶಿವಭಕ್ತರು ಬಂದು ಶಿವಾಲಯದ ನಿರ್ಮಾಣಕ್ಕೆ ಅಥವಾ ಒಂದು ವಿದ್ಯಾರ್ಥಿ ನಿಲಯದ ನಿರ್ಮಾಣಕ್ಕೆ ಕೇಳಿದ್ದಿದ್ದರೆ ಅವರಿಗೇ ಕೊಡುತ್ತಿದ್ದೆ. ಇನ್ನೂ ಕಡಿಮೆಗೇ ಕೊಡುತ್ತಿದ್ದೆ ಆದರೆ ಯಾರೂ ಬರಲಿಲ್ಲ. ಜಿನ ಭಕ್ತರು ಬಂದರು. ಅದೂ ಒಂದು ಪುಣ್ಯದ ಕೆಲಸ. ಅದರಲ್ಲಿ ನನ್ನದೂ ಒಂದು ಸೇವಾಭಾಗ ಇದೆ ಎಂದು ಭಾವಿಸಿ ಅವರಿಗೆ ಕೊಡುತ್ತಿದ್ದೇನೆ.

'ಈ ಸ್ಥಳವನ್ನು ನಾನು ಹಣದ ಆಸೆಯಿಂದ ಮಾರುತ್ತಿದ್ದೇನೆ ಎಂದು ಯಾರೂ ಭಾವಿಸಬಾರದು. ಇಲ್ಲದಿದ್ದರೆ ನನ್ನ ಧರ್ಮಪತ್ನಿಯ ನೆನಪು ಸದಾ ನನ್ನನ್ನು ಕಾಡುತ್ತಿರುತ್ತದೆ. ಅದಕ್ಕಾಗಿ ಬಹುದೂರದಲ್ಲಿ ಯಾವುದೋ ಒಂದು ಮೂಲೆಯಲ್ಲಿ ಪ್ರಶಾಂತ ವಾತಾವರಣದಲ್ಲಿ ವಾಸಿಸಬೇಕೆಂದಿದ್ದೇನೆ. ಅದರಿಂದಾಗಿ ಈ ನನ್ನ ಬಂಗಲೆಯ ಮಾರಾಟ. ಆದರೆ ಮಾರಿದರೂ ಅದು ಸಾರ್ಥಕವಾದುದಕ್ಕೇ ಮೀಸಲಾದರೆ, ನಾನು ಗತಿಸಿದ ಮೇಲೆ ನನ್ನಾತ್ಮ ಅಲ್ಲಿ ಸದಾ ಸುಳಿಯುತ್ತಿರುತ್ತದೆ. ಅಂತಾಗಿಸಲೆಂದೇ ಈ ಸ್ಥಳವನ್ನು ಪವಿತ್ರ ಮಂದಿರವನ್ನಾಗಿಸಲು ವಿಕ್ರಯಿಸುತ್ತಿದ್ದೇನೆ.

ಶಾಸ್ತ್ರಿಗಳವರ ಆಸ್ತಿಕತೆಗೆ ಇದು ಉತ್ತಮ ನಿದರ್ಶನ. ಅವರ ಅಭಿಲಾಷೆಯಂತೆಯೇ ಅಂತೂ ರಂಗಸ್ವಾಮಿ ಗುಡಿಬೀದಿಯಲ್ಲಿದ್ದ ಪದ್ಮಶ್ರೀ ಶಿವಮೂರ್ತಿಶಾಸ್ತ್ರಿಗಳ ನಿವಾಸ ಇಂದು ಒಂದು ಭವ್ಯ ಜಿನ ಮಂದಿರವಾಗಿ ಬೆಳಗುತ್ತಿದೆ.

## ಪ್ರಶಂಸೆಯ ಪರಿಸರದಲ್ಲಿ

ಪದ್ಮಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳವರನ್ನು ಕಂಡವರು ಕೋಟಿ, ನುಡಿಸಿದವರು ಸಾವಿರ, ಅವರೊಡನಿದ್ದು ಅವರನ್ನು ಅರ್ಥ ಮಾಡಿಕೊಂಡವರು ನೂರು. ಈ ಪ್ರಮಾಣದಲ್ಲಿ ನಮಗೆ ಜನ ಸಿಕ್ಕುತ್ತಾರೆ. ಅದರೆ ಒಡನಾಡಿಗಳು ಶ್ರೀ ಶಾಸ್ತ್ರಿಗಳವರ ಬಗೆಗೆ ಎಂತಹ ಅಭಿಪ್ರಾಯ ಉಳ್ಳವರಾಗಿದ್ದರೆಂಬುದನ್ನು ಅವರವರ ಬರಹಗಳನ್ನೇ ನೋಡಬೇಕು. ಅಂತಹ ಹಲವು ಅಭಿಪ್ರಾಯಗಳಲ್ಲಿ ಕೆಲವನ್ನು ವೀಕ್ಷಿಸೋಣ.

ಶ್ರೀ ಶಾಸ್ತ್ರಿಗಳವರ ಹತ್ತಿರದ ಗೆಳೆಯರೂ ಕನ್ನಡದ ವಿಖ್ಯಾತ ಐತಿಹಾಸಿಕ ಕಾದಂಬರಿಕಾರರೂ ಆದ ಶ್ರೀ ಶ್ರೀನಿವಾಸರಾವ್ ಕೊರಟಿಯವರು ಹೀಗೆ ಹೇಳುತ್ತಾರೆ –

'ಕನ್ನಡ ನಾಡಿನಲ್ಲಿ ಶ್ರೀ ಶಾಸ್ತ್ರಿಗಳವರನ್ನು ನೋಡದವರು ವಿರಳ, ಕೇಳದವರು ಇನ್ನೂ ವಿರಳ. ಅವರು ಜೀವನದ ಆರಂಭದೆಸೆಯಲ್ಲಿ ಉಪಾಧ್ಯಾಯರಾಗಿ, ಅನಂತರ ಕೀರ್ತನಕಾರರಾಗಿ ಪ್ರಸಿದ್ಧಿಗೆ ಬಂದರು. ಅನಂತರ ತಮ್ಮ ಕ್ಷೇತ್ರವನ್ನು ವೃತ್ತಪತ್ರಿಕಾ ವ್ಯವಸಾಯಕ್ಕೆ ಬದಲಿಸಿಕೊಂಡು, ಕೆಲಕಾಲ 'ಸ್ವತಂತ್ರ ಕರ್ನಾಟಕ' ಎಂಬ ಹೆಸರಿನ ವಾರಪತ್ರಿಕೆಯನ್ನು ನಡೆಸಿದರು. ಮುಂದೆ 'ಶರಣ ಸಾಹಿತ್ಯ'ವನ್ನು ನೆಚ್ಚಿ ಸಾಹಿತ್ಯ, ಕಲೆ ಸಂಸ್ಕೃತಿಗಳ ಪ್ರಸಾರಕ್ಕೆ ಟೊಂಕ ಕಟ್ಟಿದರು. ಪಂಡಿತ ಪಾಮರರ ಪ್ರೀತ್ಯಾದರಗಳಿಸಿದರು; ಅರಮನೆ ಗುರು ಮನೆಗಳಿಂದ ಗೌರವ ಮನ್ನಣೆಗೆ ಪಾತ್ರರಾದರು. ಸಾರ್ವಜನಿಕ ಸಂಸ್ಥೆ ಸರಕಾರಗಳ ಆದರಕ್ಕೆ ಪಾತ್ರರಾಗಿ ಬಿರುದು ಬಾವಲಿಗಳನ್ನು ಪಡೆದರು. ನಾಡುನುಡಿಗಳ ಸೇವೆಗೆ ಕಂಕಣತೊಟ್ಟು ಕರ್ನಾಟಕದ ಮೂಲೆಮೂಲೆಗಳನ್ನು ಸಂಚರಿಸಿ ಬಂದರು. ಕರ್ನಾಟಕದ ಏಕೀಕರಣ ಚಳುವಳಿ– ಗಡಿನಾಡು ಸಮಿತಿಯ ಸಕ್ರಿಯ ಸಚೇತಕರಾದರು, ಕನ್ನಡಮ್ಮನ ಸೇವೆಗೆ, ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಪೂಜಾರಿಯಾದರು. ತುಮಕೂರಿನ ಹುಲುಕುಂಟೆ ಮಠದ ಒಬ್ಬ ಅಜ್ಞಾನ ವ್ಯಕ್ತಿ 'ಹೈದ' ಯಾವ ಕಾಲೇಜುಗಳನ್ನು ಹತ್ತದೆ, ಇಷ್ಟೆಲ್ಲಾ ಪ್ರತಿಷ್ಠೆಯ ಕೀರ್ತಿ ಗೌರವಗಳು, ಅಧಿಕಾರ

ಪದವಿಗಳನ್ನು ಪಡೆದಿರುವುದು ಶಾಸ್ತ್ರಿಗಳ ಕರ್ತೃತ್ವಶಕ್ತಿಯ ದ್ಯೋತಕ; ಯುವಜನರನ್ನು ನಾಚಿಸುವ ಅವರ ನಿತ್ಯ ಉತ್ಸಾಹದ ಫಲ, ಅನುಭವದ ಗುರುವಿನಡಿಯಲ್ಲಿ ಲೋಕದ ವಿಶ್ವವಿದ್ಯಾನಿಲಯದಲ್ಲಿ ಅವರು ಗಳಿಸಿದ ಈ ಸಿದ್ಧಿ ಸಾಧನೆ– ಶಾಸ್ತ್ರಿಗಳ ಬಾಳಿನ ಶಿಲ್ಪ.'

ಗೋವೆಯಲ್ಲಿರುವ ಕನ್ನಡದ ನಿಷ್ಠಾವಂತ ಸೇವಕ ಶ್ರೀ ಶಾ.ಮಂ. ಕೃಷ್ಣರಾಯರು ಹೀಗೆ ಅಭಿಪ್ರಾಯಪಟ್ಟಿದ್ದಾರೆ.

ಅಗಲವಾದ ಮುಖ, ಮುಖದಲ್ಲಿ ಮಿನುಗುವ ನಗೆ, ಜಗತ್ತಿನ ಆಗು ಹೋಗುಗಳನ್ನು ಸಂವೇದಿಸುವ ಕಣ್ಣುಗಳು, ಆಜಾನುಬಾಹು ಶರೀರ, ಶರೀರವನ್ನಪ್ಪಿಕೊಂಡ ಖಾದಿಯ ಜುಬ್ಬ, ಶುಭ್ರ ಧೋತರ, ತಲೆಗೊಂದು ಜರಿಯಪೇಟ, ಹೆಗಲ ಮೇಲೊಂದು ಶಾಲು, ಉದ್ದನೆಯ ಕೋಟು, ಕೈಯಲ್ಲೊಂದು ಕೋಲು, ಇನ್ನೊಂದು ಕೈಯಲ್ಲಿ ಪುಸ್ತಕಗಳ ಕಂತೆಗಳು ಇವು ಪಂಡಿತರತ್ನಂ ಪದ್ಮಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳ ಹೊರಪರಿಚಯ ಮಾಡಿಕೊಡುತ್ತವೆ.

ಅವರನ್ನು ಗುರುತಿಸುವ ನೇರದಾರಿ ಇದಲ್ಲ. ಅವರು ಕನ್ನಡನಾಡಿಗೆ ನೀಡಿದ ಸಾಹಿತ್ಯ ಸೇವೆ, ಧಾರೆಯೆರೆದ ಸಾಮಾಜಿಕ ಕಾರ್ಯ, ರಾಜಕೀಯ ಸುಧಾರಣೆಯ ಬಗೆಗೆ ಅವರಲ್ಲಿರುವ ತಳಮಳ, ರಾಷ್ಟ್ರದ ಉತ್ಕರ್ಷಕ್ಕಾಗಿ ಹೋರಾಡುವ ಪ್ರಜ್ಞೆ, ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳನ್ನು ಇಂದು ಸಾರ್ವಜನಿಕರು ಗೌರವಿಸುವಂತೆ ಮಾಡಿದೆ.

ಅವರು ಮಾಡಿದ ಸಾಹಿತ್ಯ ತಪಸ್ಸಿನ ನಾಲ್ಕು ದಶಕಗಳು ಇಂದು ಕನ್ನಡಿಗರಿಗೆ ಸತ್ಫಲವನ್ನು ನೀಡುತ್ತಿದೆ. ಅವರಿಗೆ ಮೊದಲಿನಿಂದಲೂ ಕನ್ನಡದ ಮೇಲೆ ಅಪಾರ ಪ್ರೇಮ, ಅನನ್ಯ ಭಕ್ತಿ, ಕರ್ನಾಟಕದಲ್ಲಿ ಕನ್ನಡವು ನಿಶ್ಶೇಷ್ಟಿತವಾಗಿ ನಿಂತಾಗ ಕರ್ನಾಟಕ ಕುಲಪುರೋಹಿತರೆನಿಸಿ ಆಲೂರ ವೆಂಕಟರಾಯರು, ಬೆನಗಲ್ ರಾಮರಾಯರು, ಬಿ. ಎಂ. ಶ್ರೀಕಂಠಯ್ಯನವರು, ಎಸ್. ಎಸ್. ಬಸವನಾಳರು, ಡಾ. ಫ.ಗು. ಹಳಕಟ್ಟಿ, ರಾಷ್ಟ್ರಕವಿ ಗೋವಿಂದ ಪೈಯವರು ಕನ್ನಡದ ಡಿಂಡಿಮವನ್ನೂದಿದವರು. ಆ ಪ್ರೇರಣೆಯಿಂದ ಉತ್ಸಾಹಿತರಾದ ಶಾಸ್ತ್ರಿಗಳು ಕನ್ನಡಾಭಿಮಾನದ ಕಂಕಣತೊಟ್ಟು ರಿಂಗಣಕ್ಕಿಳಿದರು. ಆದರೆ ಶಾಸ್ತ್ರಿಗಳಿಗೆ ಪ್ರೇರಣೆ ನೀಡಿದುದು ಅವರ ಆತ್ಮ ಸಂವೇದನೆ, ನಾಡಿನ ಅಂದಿನ ಸ್ಥಿತಿಗತಿಗಳು, ಕನ್ನಡದ ಪರಿಸ್ಥಿತಿ ಬಾಳಿನ ಸಂಘಟನೆಗಳು ಕನ್ನಡಿಗರ ದೈನ್ಯಾವಸ್ಥೆ.

ಇಂದಿನ ಕರ್ನಾಟಕ ಭಾಷೆ ಮೇಲೆ, ಕನ್ನಡ ನಾಡಿನ ನೆಲದ ಬಗೆಗೆ, ಕರ್ನಾಟಕದ ಗೌರವಕ್ಕೆ ಕುಂದು ಬರುವುದಾದರೆ ಶ್ರೀ ಶಾಸ್ತ್ರಿಗಳು ಕಿಡಿ ಕಾರುತ್ತಲಿದ್ದರು. ಕೈಗೆ ಬಿಡುವಿಲ್ಲ ತಲೆಗೆ ಪುರುಸೊತ್ತಿಲ್ಲ, ಬಾಯಿಗೆ ವಿರಾಮವಿಲ್ಲ. ಅವರಿಂದು ಗಡಿನಾಡು ಕ್ರಿಯಾ ಸಮಿತಿಯ ಅಧ್ಯಕ್ಷರು, ಸರಕಾರದ ಗಡಿ ಸಲಹಾ ಸಮಿತಿಯ ಸದಸ್ಯರು. ಕರ್ನಾಟಕದ ಗಡಿಗಳ ಬಗೆಗೆ ಶಾಸ್ತ್ರಿಗಳ ಲಕ್ಷ್ಯ ಕೇಂದ್ರಿಕೃತ ವಾಗಿದೆ. ಬೆಂಗಳೂರಿಗೆ ಬಂದ ಮಹಾಜನ ಆಯೋಗದ ಮುಂದೆ ಶ್ರೀಯುತರು ನೀಡಿದ ಸಾಕ್ಷ್ಯ ಅವರ ನಲವತ್ತು ವರ್ಷಗಳ ಅನುಭವ ಅಧ್ಯಯನ ಮತ್ತು ಪ್ರವಾಸಗಳ ಸಾಕ್ಷಿಯಾಗಿದೆ.

ಕರ್ನಾಟಕದ ಬಹುಮುಖ ಪ್ರತಿಭೆಯ ವ್ಯಕ್ತಿಯಾದ ಶ್ರೀ ಶಾಸ್ತ್ರಿಗಳು ಒಂದು ಶಕ್ತಿಯಾಗಿ ಬಾಳಿದ್ದಾರೆ.

ಗೋವೆಯ ಕೃಷ್ಣರಾಯನ ಭಿನ್ನಾಭಿಪ್ರಾಯಗಳನ್ನು ಅನುಮೋದಿಸಿದ್ದಾರೆಯೋ ಎಂಬಂತಿದೆ ಖ್ಯಾತ ಬರಹಗಾರ ಶ್ರೀ ನಿರಂ ಜನರ ನುಡಿ –

"ಕಳೆದ ಅರವತ್ತು ವರ್ಷಗಳಲ್ಲಿ ಅವರು ಸಾಧಿಸಿರುವ ಕೆಲಸ, ಸಂಪಾದಿಸಿರುವ ಬಿರುದುಗಳು ಗಮನಾರ್ಹ ಪ್ರಮಾಣದವು. ಮುಂದಿನ ನಾಲ್ವತ್ತು ವರ್ಷಗಳಲ್ಲಿ ಅವರು ಸಾಧಿಸಬಹುದಾದ ಕೆಲಸ ಮತ್ತು ಸಂಪಾದಿಸಬಹುದಾದ ಬಿರುದುಗಳು ಮತ್ತಷ್ಟು ದೊಡ್ಡ ಪ್ರಮಾಣದವೇ ಆಗಿರುತ್ತವೆ. ಮುಂದಿನ ಕನ್ನಡ ಚರಿತೆಗಾರರು ಅವರನ್ನು ತಪ್ಪದೆ ನೆನೆಯುತ್ತಾರೆ ಇದರಲ್ಲಿ ಸಂದೇಹವಿಲ್ಲ."

ಶ್ರೀ ಶಾಸ್ತ್ರಿಗಳ ಒಡನಾಡಿಗಳಾದ ಶ್ರೀ ಬ.ನ. ಸುಂದರ ರಾಯರು ಶಾಸ್ತ್ರಿಗಳು ಪಡೆದ ಬಿರುದುಗಳ ಸಾರ್ಥಕತೆಯನ್ನು ಸಮರ್ಥಿಸಿದ್ದಾರೆ -

'ಯಶೋಲಕ್ಷ್ಮಿಯನ್ನು ಅರಸಿ ಇವರು ಹೋದವರಲ್ಲ; ಆ ಲಕ್ಷ್ಮೀದೇವಿ ತಾನಾಗಿಯೇ ಇವರ ಬಳಿಗೆ ಬಂದಿದ್ದಾಳೆ. ಮೊದಲು ಕೀರ್ತನೆ ಕೇಸರಿಗಳೆನಿಸಿದ್ದ ಶ್ರೀ ಶಾಸ್ತ್ರಿಗಳು ಆಸ್ಥಾನ ವಿದ್ವಾಂಸರೂ, 'ಪಂಡಿತರತ್ನಂ'ರವರೂ ಆಗಿ, ಈಗ ಸ್ವರಾಜ್ಯ ಲಭಿಸಿದ ಮೇಲೆ 'ಪದ್ಮಶ್ರೀ'ಗಳೂ ಆಗಿದ್ದಾರೆ. ಇದು ಕನ್ನಡನಾಡಿಗೊಂದು ಹೆಮ್ಮೆಯ ವಿಚಾರ. ಮೊದಲು ಶಾಲಾ ಮಾಸ್ತರಾಗಿದ್ದು ಅನಂತರ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಈಗ ಪದ್ಮಶ್ರೀ ಪಡೆದು ಕೀರ್ತಿವೆತ್ತಿದ್ದಾರೆ.

ಇಂದಿನ ಯುವಕರಿಗಂತೂ ಶ್ರೀ ಶಾಸ್ತ್ರಿಗಳು ಆದರ್ಶ ಪುರುಷರು. ಅವಿಶ್ರಾಂತ ದುಡಿತಕ್ಕೆ ಇನ್ನೊಂದು ಹೆಸರೇ ಶಿವ ಮೂರ್ತಿ ಶಾಸ್ತ್ರಿಗಳು. ಕರ್ನಾಟಕದ ಏಕೀಕರಣಕ್ಕೆ ಇವರು ಮಾಡಿದ ಸೇವೆ ಅವಿಸ್ಮರಣೀಯವಾದುದು. 'ಕರ್ನಾಟಕದ ವಿಭೂ ಷಣ' ಎಂಬ ಹೆಸರು ಇವರಿಗೆ ಅನ್ವರ್ಥವಾದುದು."

ಸುಪ್ರಸಿದ್ಧ ಸಾಹಿತಿ ದಿವಂಗತ ಅ.ನ.ಕೃರವರು ಒಂದೆಡೆ ಹೀಗೆ ಹೇಳಿದ್ದಾರೆ.

'ಶಾಸ್ತ್ರಿಗಳ ವ್ಯಕ್ತಿತ್ವ ಅಸಾಮಾನ್ಯವಾದುದು. ಕಲ್ಲಿನಿಂದ ನೀರು ತೆಗೆಯಬಲ್ಲರು, ಒಣಗಿದ ಕಾಷ್ಟದಲ್ಲಿ ಹೂವರಳಿಸಬಲ್ಲರು. ಕನ್ನಡ ನಾಡಿನಲ್ಲಿ ಅವರು ಹೋಗದ ಸ್ಥಳವಿಲ್ಲ. ಕಾಣದ ವ್ಯಕ್ತಿಯಿಲ್ಲ. . .ಸಹಾಯ ಕೋರಿದವರಿಗೆ ಇಲ್ಲವೆನ್ನುವುದು ಶಾಸ್ತ್ರಿಗಳ ಜಾಯಮಾನಕ್ಕೆ ಬಂದಿಲ್ಲ. ಅನೇಕ ಸಲ ತಮ್ಮ ಮಹತ್ವದ ಕೆಲಸಗಳನ್ನೂ ಬದಿಗೊತ್ತಿ ಕಂಡವರ ಕೆಲಸಕ್ಕೆ ತೊಡಗುತ್ತಾರೆ. ಪರರ ಸೇವೆಗೆ ತೊಡಗಿದಾಗ ತಮಗಾಗುವ ಕಷ್ಟನಷ್ಟಗಳನ್ನು ಸಹಿಸುವರು.'

ಶಾಸ್ತ್ರಿಗಳ ಬರವಣಿಗೆಯಲ್ಲಿ ಮೊನಚಿದೆ, ವಿಚಾರ ವೀಕ್ಷಣೆಯೂ ಇದೆ. ಆಗಾಗ್ಗೆ ಅದು ಪುರಾಣದ ಜಾಡು ಹಿಡಿಯು ವುದೂ ಉಂಟು. ಪುನರಾವರ್ತನೆಗಳೂ, ಉತ್ಪ್ರೇಕ್ಷೆಗಳೂ ತಲೆಹಾಕುವುದೂ ಉಂಟು. ಆದರೆ ಶೈಲಿಯಲ್ಲಿ ಜೀವನವಿದೆ, ಲಾಲಿತ್ಯವಿದೆ, ರಸವಿದೆ.

"ಶಾಸ್ತ್ರಿಗಳು ಉತ್ತಮ ಮಾತುಗಾರರೆನ್ನುವದು ಕನ್ನಡನಾಡೇ ಬಲ್ಲುದು. ಸಂದರ್ಭೋಚಿತವಾಗಿ ಹಾಸ್ಯ ಬಳಸಿಕೊಂಡು, ಕ್ಲಿಷ್ಟ ವಿಷಯವನ್ನು ಲಲಿತವಾಗಿ ನಿರೂಪಿಸಿ ಶ್ರಾವಕರ ಚಿತ್ತವನ್ನೂ ಅಪಹರಿಸುತ್ತಾರೆ. ಇವರು ನಾಡಿನ ಹಿರಿಯ ವಾಗ್ಮಿಗಳು." ಶ್ರೀ ಶಾಸ್ತ್ರಿಗಳ ಪ್ರತಿಭೆಯ ಸೆಳತಕ್ಕೆ ಸಿಕ್ಕಿದ ಶ್ರೀ ಜಿ. ಶ್ರೀನಿವಾಸನ್ ಹೇಳುತ್ತಾರೆ:

"ಶ್ರೀಮಾನ್ ಶಾಸ್ತ್ರಿಗಳ ಮನಸ್ಸು ಬಹಳ ಉದಾರವಾದುದು. ಅದು ಪಾದರಸದಂತೆ ಸದಾ ಎಚ್ಚರವಿರುತ್ತದೆ. ಅದು ತಮ್ಮ ವರೆಂದರೆ ಎಲ್ಲೂ ಕೈ ಬಿಡುವುದಿಲ್ಲ. ತಾವೂ ಮರ್ಯಾದೆ ಕೊಟ್ಟು ಬೇರೆಯವರಿಂದಲೂ ಗೌರವವನ್ನು ಪಡೆಯುತ್ತಾರೆ. ಇದು ಅವರಲ್ಲಿರುವ ಹಿರಿಯ ಗುಣಗಳಲ್ಲೊಂದು.

ಸ್ನೇಹಕ್ಕಿಂತಲೂ ಅಧಿಕವಾದ ವಸ್ತುವನ್ನು ಅವರು ಕಂಡರಿಯರೆಂದೇ ನನ್ನ ಭಾವನೆ. ನಮ್ಮಲ್ಲಿ ಎಷ್ಟೋ ಸಾರಿ ತತ್ವಕ್ಕೋಸ್ಕ ರವಾಗಲಿ, ನಿಬಂಧನೆಗಳ ಅನುಷ್ಠಾನದಲ್ಲಿಯಾಗಲಿ ಭಾರಿ ಘರ್ಷಣೆಗಳು ಉದ್ಭವಿಸಿವೆ. ಅವರೇ ಗೆದ್ದಿದ್ದರೂ, ಸೋತಿದ್ದರೂ, ಸಂಘ ಸಂಸ್ಥೆಗಳು ವ್ಯಕ್ತಿಗಳಿಗಿಂತ ಹಿರಿದಾದುದು ಎಂದು ಕಾಯೇನ, ವಾಚಾ, ಮನಸಾ ಆಚರಣೆಯಲ್ಲಿ ತೋರಿಸಿದ್ದಾರೆ. ಹಿರಿ ಯರು, ಕಿರಿಯರು ಎಂಬ ಭೇದ ಭಾವನೆ ಇಲ್ಲದೆ ಸಮತಾ ಭಾವವನ್ನು ಮೈತುಂಬಾ ಬೆಳೆಸಿಕೊಂಡಿದ್ದಾರೆ. ಆದ್ದರಿಂದಲೇ ಅವರು ಕರ್ನಾಟಕದಲ್ಲಿ ಸುಮಾರು ೪೦ ವರ್ಷಗಳಿಂದಲೂ ಗಣ್ಯಸ್ಥಾನದಲ್ಲಿದ್ದಾರೆ. ಕರ್ನಾಟಕದ ಐಕ್ಯತೆಗಾಗಿ ದುಡಿದ ಹಿರಿಯ ರಲ್ಲಿ ಪದ್ಮಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳೊಬ್ಬರು."

ಖ್ಯಾತ ಪತ್ರಿಕೋದ್ಯಮಿ ಅರ್ಚಕ ವೆಂಕಟೇಶರ ಈ ಪತ್ರವನ್ನು ಓದಿ –

ಪೂಜ್ಯರೆ,

ನಾನು ಬೆಂಗಳೂರಿಗೆ ಬರಲು, ಬಂದು ಒಬ್ಬ ವ್ಯಕ್ತಿಯಾಗಲು, ಇದೇ ನಾಡಿನ ಜನ ಮನ್ನಣೆ ಪಡೆದ ಕವಿಯಾಗಲು, ಅಸಂಖ್ಯಾತ ನಾಡವರ ಮೆಚ್ಚಿಗೆ ಪಡೆದ ಪತ್ರಿಕೋದ್ಯಮಿಯಾಗಲು, ನಗರದ ಓರ್ವ ಪ್ರತಿಷ್ಠಿತ ವ್ಯಕ್ತಿ ಎನಿಸಲೂ ತಾವೇ ಕಾರಣರು, ಎಂದು ನಾನು ವಿನಮ್ರವಾಗಿ ಹೇಳಿಕೊಳ್ಳುವುದರಲ್ಲಿ ನನಗೆ ಹೆಮ್ಮೆಯೇ ಇದೆ. ಇಂದು ನನಗೆ ಬಂದಿರುವ ಕೀರ್ತಿಗೆ ತಾವೇ ಕಾರಣರು, ಜೊತೆಗೆ ದೇವ ಕೃಪೆ, ನನ್ನ ತಾಯಿಗಳ ಪುಣ್ಯ ಅದಕ್ಕೆ ಪುಟಗೊಟ್ಟಿದೆ. ನನ್ನ ತಾರುಣ್ಯಾವಸ್ಥೆಯಲ್ಲಿ ನೀವು ನನ್ನ ಮೇಲೆ ತೋರಿದ ಕರುಣೆ, ಅಂತಃಕರುಣೆ, ವಿಶ್ವಾಸ ಆದರ ಗೌರವಗಳನ್ನು ನಾನು ಯಾವಜ್ಜೀವವೂ ಅತ್ಯಂತ ಕೃತಜ್ಞತೆಯಿಂದ ಸ್ಮರಿಸಿಕೊಳ್ಳುತ್ತೇನೆ. ನಿಮಗೆ ನಿತ್ಯ ನಿತ್ಯ ಮಂಗಳವನ್ನು ಕೋರುತ್ತೇವೆ. ತಮ್ಮ ಆಶೀರ್ವಾದ ಪ್ರೇಮಾಂತಕರಣಗಳ ಈ ಬಡವನಾದ ತರುಣ ಕವಿಯ ಮೇಲೆ ಸದಾ ಇರಬೇಕೆಂದು ಅನನ್ಯ ಭಕ್ತಿಯಿಂದ ಪ್ರಾರ್ಥಿಸುತ್ತೇನೆ.

ಇಂತು ತಮ್ಮ ಕರುಣೆಯ ಕಂದ

**ಅರ್ಚಕ ವೆಂಕಟೇಶ**

ಅಂತೆಯೇ ಸಂಯುಕ್ತ ಕರ್ನಾಟಕ ತನ್ನ ಮೆಚ್ಚುಗೆಯನ್ನು ಸೂಚಿಸಿದೆ -

“ಕೀರ್ತನ ಕಲೆಗೆ ಅಪಾರ ಸೇವೆ ಸಲ್ಲಿಸಿರುವ ಮಹನೀಯರಲ್ಲಿ ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳು ಒಬ್ಬರು ಎಂಬುದು ಎಲ್ಲರಿಗೂ ತಿಳಿದ ಸಂಗತಿಯೇ. ಈ ಕ್ಷೇತ್ರದಲ್ಲಿ ಇವರು ತಮ್ಮದೇ ಆದ ಒಂದು ಹೆಸರು ಗಳಿಸಿದ್ದಾರೆ. ಕೀರ್ತನ ಲೋಕ ಇವರನ್ನು ‘ರಾಜಕೀಯ ಕೀರ್ತನಕಾರರು’ ಎಂದು ಕರೆಯುತ್ತದೆ.

ತಮ್ಮಲ್ಲಿ ರಕ್ತಗತವಾಗಿದ್ದ ಕೀರ್ತನ ಕಲೆಯನ್ನು ಶ್ರೀಯುತರು ಸ್ವಾತಂತ್ರ್ಯ ಹೋರಾಟದಲ್ಲಿ ದೇಶಪ್ರೇಮವನ್ನು ಹೆಚ್ಚಿಸುವುದಕ್ಕೆ ಹಾಗೂ ಕರ್ನಾಟಕ ಏಕೀಕರಣ ಸಾಧನೆಗೆ ವಿನಿಯೋಗಿಸಿದ್ದೇ ಇವರಿಗೆ ಈ ಹೆಸರನ್ನು ತಂದಿದೆ ಎನ್ನಬಹುದು.

ಪರದಾಸ್ಯಶೃಂಖಲೆ ಕಳಚಿದ ಮೇಲೆ, ಕರ್ನಾಟಕವು ಅಖಂಡ ಕರ್ನಾಟಕವಾದ ಮೇಲೆ, ಧ್ಯೇಯ ಸಾಧಿಸಿದ್ದಾಯ್ತು ಎಂಬ ನೆಮ್ಮದಿಯಿಂದ ಕೀರ್ತನ ಮಾಡುವುದಕ್ಕೆ ‘ವಿರಾಮ’ ಕೊಟ್ಟು, ಕೇವಲ ಧಾರ್ಮಿಕ ಪ್ರಚಾರದಲ್ಲಿ, ಸಾಹಿತ್ಯ ಸೇವೆಯಲ್ಲಿ ತೊಡಗಿರುವುದು ಇವರ ಒಂದು ವೈಶಿಷ್ಟ್ಯ.

ಕಳೆದ ೧೦-೧೨ ವರ್ಷಗಳಿಂದ ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳು ಪುರಾಣ ಪ್ರಚಾರದಲ್ಲಿ ತೊಡಗಿದ್ದಾರೆ.”ಕರ್ನಾಟಕ ಏಕೀಕರಣ ಸಾಧನೆ, ಧರ್ಮ ಪ್ರಚಾರ, ಇವೆರಡೇ ನನ್ನ ಧ್ಯೇಯಗಳಾಗಿದ್ದವು. ಒಂದನ್ನು ಸಾಧಿಸಿದೆ. ಎರಡನೆಯದನ್ನು ಸಾಧಿಸದಿದ್ದರೆ ನಮ್ಮ ದೇಶದಲ್ಲಿ ಅನೈಕ್ಯ ತಲೆದೋರಿ ನೈತಿಕ ಪತನವಾಗುತ್ತದೆ” ಎನ್ನುತ್ತಾರೆ ಇವರು.

ಕೀರ್ತನ ಕಲೆಗೆ ಅಗತ್ಯವಾದ ಸಾಹಿತ್ಯ ಜ್ಞಾನ, ಸಂಗೀತ ಜ್ಞಾನ, ಒಳ್ಳೆಯ ಶಾರೀರ, ವಿಷಯ ನಿರೂಪಣಾ ವಿಧಾನದಲ್ಲಿ ವಿಶೇಷ ಸಾಮರ್ಥ್ಯ ಇವೆಲ್ಲವೂ ಶ್ರೀ ಶಿವಮೂರ್ತಿ ಶಾಸ್ತ್ರಿಗಳಲ್ಲಿರುವುದೇ ಇವರನ್ನು ‘ಕೀರ್ತನಕೇಸರಿ’ಯನ್ನಾಗಿ ಕೀರ್ತನ ಶಿರೋಮಣಿಯನ್ನಾಗಿ, ಕೀರ್ತನಾಚಾರ್ಯರನ್ನಾಗಿ ಮಾಡಿದೆಯೆನ್ನಬೇಕು.

ಕೊಡಗಿನ ಇತಿಹಾಸ ಬರಹಗಾರ ಡಾ. ಐ. ಎಂ. ಮುತ್ತಣ್ಣನವರು ಶಾಸ್ತ್ರಿಗಳನ್ನು ಹೀಗೆ ಪ್ರಶಂಸಿದ್ದಾರೆ :

ಕಾವ್ಯ, ಕೀರ್ತನೆ, ಪಾಂಡಿತ್ಯ, ಸಾಹಿತ್ಯ ಸಮಾಜ ರಾಜಕೀಯ ಮತ್ತು ಪತ್ರಿಕೋದ್ಯಮ – ಇವೆಲ್ಲವೂ ಒಂದೇ ಒಂದು ವ್ಯಕ್ತಿಯಲ್ಲಿ ಅಥವಾ ಆ ವ್ಯಕ್ತಿಯ ಚಟುವಟಿಕೆಗಳಲ್ಲಿ ಕಂಡುಬಂದರೆ ಆ ವ್ಯಕ್ತಿ ಬರೇ ಒಂದು ವ್ಯಕ್ತಿ ಮಾತ್ರವಲ್ಲ, ಅದೊಂದು ಶಕ್ತಿ, ಸಂಸ್ಥೆ (An Institution) ಎಂದು ಹೇಳುತ್ತಾರೆ. ನಮ್ಮ ನಾಡಿನಲ್ಲಿ ಅಂಥಾ ಸಂಸ್ಥೆಗಳ, ಸಂಸ್ಥೆಗಳೆಂದೆನ್ನಿಸಿಕೊಳ್ಳುವ ಮಂದಿ ಎಷ್ಟು ಜನ ಇದ್ದಾರೋ ಎಂದು ಬಲ್ಲವರು ಹೇಳಬೇಕು. ಸಂಸ್ಕೃತಿ ಸಮಾಜ ಮತ್ತು ಸಾಹಿತ್ಯ ಇವು ಕರ್ನಾಟಕದಲ್ಲಿ ಪಾರಂಪರ್ಯವಾಗಿ ಬೆಳೆದು ಜೀವಾಳವಾಗಿದೆ. ಈ ಪರಂಪರೆಗೆ ಅನುಗುಣವಾಗಿ ಆ ಜೀವಾಳವನ್ನು ತಮ್ಮ ಜೀವನಾಡಿಗಳಲ್ಲಿ ಅರಗಿಸಿಕೊಂಡಿರುವವರಲ್ಲಿ ಪದ್ಮಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳು ಒಬ್ಬರು.

ಬ್ರಹ್ಮ, ವಿಷ್ಣು ಮತ್ತು ಮಹೇಶ್ವರರು ಒಟ್ಟು ಸೇರಲಾರರು. ಆದರೆ ಶಿವ, ಮೂರ್ತಿ ಮತ್ತು ಶಾಸ್ತ್ರಿ ಇವರು ಒಟ್ಟು ಸೇರಿ ಓರ್ವ ಶಕ್ತಿಯಾಗಿ ಕಾಣಿಸಿಕೊಂಡಿದ್ದರೆ ಅವರು ಶ್ರೀ ಬಿ. ಶಿವಮೂರ್ತಿಶಾಸ್ತ್ರಿಗಳು. ಶಿವ, ನಿಶ್ಚಲ ಶಿವಭಕ್ತರು, ವೀರಶೈವರು, ವೀರಶೈವಸಾಹಿತ್ಯ ಸುಧೆಯನ್ನು ಕುಡಿದು ಅರಗಿಸಿಕೊಂಡವರು. ‘ಮೂರ್ತಿ’ ವ್ಯಕ್ತಿಶಃ ಹೇಗೆ ಪ್ರತಿಭಾವಂತ ಮೂರ್ತಿಯೋ, ಅಂತೆಯೇ, ಕೀರ್ತನ, ಭಾಷಣ, ತತ್ವ ಪ್ರತಿಪಾದನೆಗಳಲ್ಲಿಯೂ ಅಕ್ಷರಶಃ ಸಜೀವ ಮೂರ್ತಿಯೆನಿಸಿಕೊಂಡಿದ್ದಾರೆ. ಸಂಸ್ಕೃತ, ಕನ್ನಡ ಮತ್ತು ಹಿಂದಿ ಸಾಹಿತ್ಯಗಳನ್ನು ಶಾಸ್ತ್ರೀಯವಾಗಿ ಕರತಲಾಮಲಕವೆನಿಸಿಕೊಂಡ ಪ್ರವೀಣರು ಶಾಸ್ತ್ರಿಗಳು. ತೆಲಗು, ತಮಿಳುಗಳನ್ನು ಕೆಲಮಟ್ಟಿಗೆ ಪರಿಚಯ ಮಾಡಿಕೊಂಡವರು. ಹೀಗೆ ಶ್ರೀ ಬಿ. ಶಿವಮೂರ್ತಿಶಾಸ್ತ್ರಿಗಳವರಿಗೆ ತಮ್ಮ ಆ ಹೆಸರು ಒಪ್ಪಿದ ಹಾಗೆ ಇತರ ಯಾರಿಗೂ ಅವರ ಆ ಹೆಸರುಗಳು ಅಕ್ಷರಮಟ್ಟಿಗೆ ಸಂಪೂರ್ಣವಾಗಿ ಒಪ್ಪಿದ ಹಾಗೆ ಕಾಣುವುದಿಲ್ಲ.

ಪ್ರೊ. ದೇ. ಜವರೇಗೌಡರು ಹೇಳುತ್ತಾರೆ –

“ಕಾಲೇಜು ಮೆಟ್ಟಲು ಹತ್ತದೆ ಕೇವಲ ಸ್ವಪ್ರೇರಣೆ, ಸ್ವಶಕ್ತಿ, ಸ್ವಪ್ರಯತ್ನಗಳಿಂದ ಅಗಾಧ ಪಾಂಡಿತ್ಯವನ್ನು ಸಂಪಾದಿಸಿ, ನಿರರ್ಗಳವಾದ ಲೇಖನ ಸಾಮರ್ಥ್ಯವನ್ನು ಗಳಿಸಿ, ವ್ಯವಹಾರ ಲೋಕದ ಹಲವು ಕ್ಷೇತ್ರಗಳಲ್ಲಿ ದಕ್ಷತೆಯಿಂದ ಕಾರ್ಯ ನಿರ್ವಹಿಸಿ ಕೀರ್ತಿಭಾಜನರಾಗಿರುವ ಭೀಷ್ಮ ವ್ಯಕ್ತಿಗಳ ವಿರಳ ಶ್ರೇಣಿಯಲ್ಲಿ ಶ್ರೀ ಬಿ. ಶಿವಮೂರ್ತಿಶಾಸ್ತ್ರಿಗಳು ಅಗ್ರಗಣ್ಯರು. . .ಸಾಹಸ ಪ್ರಿಯರಾಗಿ, ವ್ಯವಹಾರ ಚತುರರಾಗಿ, ಸ್ವಯಂ ಪತ್ರಿಕೋದ್ಯಮಿಯಾಗಿ, ಶ್ರೇಷ್ಠವಾಗ್ಮಿಗಳಾಗಿ, ವಾಕ್ಕೋವಿದರಾಗಿ, ಸಂಶೋಧಕರಾಗಿ, ಕನ್ನಡನಾಡು, ನುಡಿಗಳ ಉತ್ಥಾನಕ್ಕಾಗಿ ನಿರಂತರ ಕ್ರಿಯಾಶೀಲರಾಗಿ ದುಡಿದ ಸತ್ಯಾನುಭವದ ವಿದ್ವಾಂಸರು ಬಿ. ಶಿವಮೂರ್ತಿ ಶಾಸ್ತ್ರಿಗಳು.’

ದಿವಂಗತ ಪ್ರೊ. ಡಿ.ಕೆ. ಭೀಮಸೇನರಾಯರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ :

"ಶ್ರೀಕಂಠನು ಶಾಸ್ತ್ರಿಗಳವರಿಗೆ ಪ್ರಶಸ್ತವಾದ ಕಂಠಶ್ರೀಯನ್ನು ಪ್ರದಾನ ಮಾಡಿದ್ದಾನೆ. ಭಾಷಣ ವೇದಿಕೆಯ ಮೇಲೆ ಶಾಸ್ತ್ರಿಗಳು ನಿಂತೊಡನೆಯೇ ವಾಗ್ದೇವಿಯು ಶಾಸ್ತ್ರಿಗಳವರ ನಾಲಗೆಯನ್ನು ರಂಗಸ್ಥಳವನ್ನಾಗಿ ಮಾಡಿಕೊಂಡು ತಾಂಡವವಾಡುತ್ತಾಳೆ. ಪೂರ್ವಸಿದ್ಧತೆ ಇಲ್ಲದೆ ವಾಕ್ಪ್ರವಾಹ ನಿರರ್ಗಳ ಜಾಹ್ನವಿಯಂತೆ ಪ್ರವಿಸುತ್ತದೆ. ತಮ್ಮ ವಾಕ್ಚಾತುರ್ಯದಿಂದ ಸಹಸ್ರಾರು ಜನರನ್ನು ಮಂತ್ರಮುಗ್ಧರನ್ನಾಗಿ ಮಾಡುತ್ತಾರೆ. ಶಬ್ದಗಳಿಗಾಗಿ ಶಾಸ್ತ್ರಿಗಳವರು ತಡಕಾಡುವುದಿಲ್ಲ. ಶಬ್ದಗಳೇ ಅಹಮಹಮಿಕೆಯಿಂದ ಅವರನ್ನು ಹುಡುಕಿಕೊಂಡು ಧಾವಿಸಿ ಬರುತ್ತವೆ. ಅಸಂಬದ್ಧ ಪ್ರಲಾಪವಾಗಲಿ, ಅಪ್ರಸ್ತುತ ಪ್ರಸಂಗ ನಿರೂಪಣೆಯಾಗಲಿ, ತಲೆಹಾಕದು. ಇದು ಶಾರದೆಯ ಪೂರ್ಣ ಪ್ರಸಾದವಲ್ಲದೆ ಮತ್ತೇನು ? ಅರಮನೆಯಿಂದಲೂ ಗುರುಮನೆಯಿಂದಲೂ ಸಮಾನವಾಗಿ ಗೌರವವನ್ನು ಪಡೆದವರು ತುಂಬಾ ವಿರಳ. ಅಂಥ ಗೌರವಕ್ಕೆ ಶಾಸ್ತ್ರಿಗಳವರು ಪಾತ್ರರಾಗಿರುವುದು ಕನ್ನಡಿಗರ ಹೆಮ್ಮೆಯ ವಿಷಯ. ಭಾರತ ಪ್ರಭುತ್ವದಿಂದಲೂ, ರಾಜ್ಯಪ್ರಭುತ್ವದಿಂದಲೂ, ಸಾಹಿತ್ಯ ಅಕಾಡೆಮಿಯಿಂದಲೂ ಬಿರುದು ಬಾವಲಿಗಳನ್ನು ಪಡೆದು ಶಾಸ್ತ್ರಿಗಳು ಕನ್ನಡ ತಾಯಿಯ ಹಿರಿಮೆಯನ್ನು ಎಲ್ಲೆಲ್ಲಿಯೂ ಬೆಳೆಸಿದ್ದಾರೆ, ಬೆಳಗಿಸಿದ್ದಾರೆ.'

ಪದ್ಮಶ್ರೀ ಡಾ. ವಿ.ಕೃ. ಗೋಕಾಕರು ಪದ್ಮಶ್ರೀ ಶಾಸ್ತ್ರಿಗಳನ್ನು ಹಿತಮಿತ ವಾಕ್ಯಗಳಿಂದ ಆಲಿಂಗಿಸಿಕೊಂಡಿದ್ದಾರೆ :

"ಪಂಡಿತರತ್ನ ಶ್ರೀ ಶಾಸ್ತ್ರಿಗಳು ಪಡುವಣದ ವಿದ್ಯೆಯಲ್ಲಿ ಶ್ರಮಿಸದಿದ್ದರೂ, ಆಧುನಿಕ ದೃಷ್ಟಿಯುಳ್ಳವರಾಗಿದ್ದಾರೆ. ಪರಂ ಪರೆಯ ಧರ್ಮವನ್ನು ಶ್ರದ್ಧೆಯಿಂದ ನಿರ್ವಹಿಸಿಕೊಂಡು ಬಂದರೂ ಅವರ ಜೀವನದೃಷ್ಟಿ ನೂತನವೂ ವ್ಯಾಪಕವೂ ವಿಶಾಲವೂ ಆಗಿದೆ. ಕನ್ನಡ ನಾಡುನುಡಿಗಳ ಏಳಿಗೆಗೆ ಅವರು ತಮ್ಮ ಜನ್ಮವನ್ನು ಮೀಸಲಿಟ್ಟಿದ್ದಾರೆ."

ಭಾರತ ಸರ್ಕಾರದ ಉಪರಾಷ್ಟ್ರಪತಿ ಶ್ರೀ ಬಿ.ಡಿ. ಜತ್ತಿಯವರು : ಶ್ರೀ ಶಿವಮೂರ್ತಿ ಶಾಸ್ತ್ರಿಗಳು ಕನ್ನಡ ಮತ್ತು ಸಂಸ್ಕೃತದಲ್ಲಿ ಘನಪಂಡಿತರು. ಹಿಂದಿ, ತೆಲುಗು, ತಮಿಳು ಮೊದಲಾದ ಭಾಷೆಗಳನ್ನು ಅರಿತವರು. ಶ್ರೀಯುತರನ್ನು ಅರಮನೆಯವರೂ, ಗುರು ಮನೆಯವರೂ ಸನ್ಮಾನಿಸಿ ಸತ್ಕರಿಸಿದ್ದಾರೆ. ಇವರಿಗೆ ಮೈಸೂರು ಸರ್ಕಾರದಿಂದ 'ಪಂಡಿತರತ್ನ' ಎಂಬ ಬಿರುದು ಪ್ರಾಪ್ತವಾಗಿದೆ. ಪಂಚ ಜಗದ್ಗುರು ಪೀಠಗಳಿಂದ ಬಿರುದು ಗಳಿಸಿದ್ದಾರೆ. ವಿದ್ವತ್ ಸಭೆಗಳಿಂದ ಮನ್ನಣೆ ಪಡೆದಿದ್ದಾರೆ. ಇದಕ್ಕಿಂತಲೂ ಮಿಗಿಲಾಗಿ ಇವರಿಗೆ ಭಾರತ ಸರ್ಕಾರದಿಂದ 'ಪದ್ಮಶ್ರೀ' ಎಂಬ ಪ್ರಶಸ್ತಿ ಲಭಿಸಿದೆ. ಇವೆಲ್ಲವೂ ಶ್ರೀ ಶಾಸ್ತ್ರಿಗಳ ಮೇಧಾಶಕ್ತಿಗೂ ಕ್ರಿಯಾಶಕ್ತಿಗೂ, ಕರ್ತೃತ್ವ ಶಕ್ತಿಗೂ ನಿದರ್ಶನಗಳಾಗಿವೆ." ಎಂದು ನುಡಿದಿದ್ದರೆ ಮೈಸೂರು ಸಂಸ್ಥಾನದ ಶ್ರೀಮನ್ ಮಹಾರಾಜರವರಾಗಿದ್ದ ದಿ. ಶ್ರೀ ಶ್ರೀ ಜಯಚಾಮರಾಜೇಂದ್ರ ಒಡೆಯರ್‌ರವರು ಶ್ರೀ ಶಾಸ್ತ್ರಿಗಳವರ ಅಗಾಧ ಸೇವೆಯನ್ನು ಮುಕ್ತ ಕಂಠದಿಂದ ಹೊಗಳಿದ್ದಾರೆ."ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳು ಮೈಸೂರು ಅರಮನೆಯ ಆಸ್ಥಾನ ಪಂಡಿತರಾಗಿದ್ದಾರೆ. ಅವರ ಗುರುಗಳಾಗಿದ್ದ ಕರ್ನಾಟಕ ಭಾಷಾ ರತ್ನ ಕೈ ॥ ಪಿ. ಆರ್. ಕರಿಬಸವ ಶಾಸ್ತ್ರಿಗಳು ಹಾಗೂ ಅವರ ಗುರುಗಳಾಗಿದ್ದ ಅಭಿನವ ಕಾಳಿದಾಸ ಕೈ ॥ ಬಸವಪ್ಪ ಶಾಸ್ತ್ರಿಗಳು ಆಸ್ಥಾನ ವಿದ್ವಾಂಸರಾಗಿಯೇ ಪ್ರಖ್ಯಾತರಾಗಿರುತ್ತಾರೆ. ಹೀಗೆ ಸುಮಾರು ಒಂದು ಶತಮಾನ ಕಾಲದ ಅರಮನೆಯ ವಿದ್ವದ್ಬಾಂಧವ್ಯವನ್ನು ಶ್ರೀ ಶಾಸ್ತ್ರಿಗಳು ಪಡೆದುಕೊಂಡಿರುತ್ತಾರೆ. ಶ್ರೀ ಶಾಸ್ತ್ರಿಗಳು ನಿಷ್ಕಾಮ ಬುದ್ಧಿಯಿಂದ ಸಾಹಿತ್ಯಕ್ಕೂ ಸಮಾಜಕ್ಕೂ ಸಲ್ಲಿಸಿದ ಸೇವೆಯನ್ನು ಮೆಚ್ಚಿದ ಮೈಸೂರು ಸರ್ಕಾರದಿಂದ 'ಪಂಡಿತರತ್ನಂ' ಬಿರುದು ಪ್ರಾಪ್ತವಾಗಿದೆ (೧೯೪೯). ಇತ್ತೀಚೆಗೆ ಭಾರತ ಸರ್ಕಾರದಿಂದ ಅವರಿಗೆ 'ಪದ್ಮಶ್ರೀ' ಎಂಬ ಬಿರುದು ಪ್ರಾಪ್ತವಾಗಿದೆ (೧೯೬೬). ಪ್ರಖ್ಯಾತವಾದ ಹಲವು ಗುರುಮಠಗಳಿಂದ ಕೂಡ ಅವರು ಮನ್ನಣೆ ಗಳಿಸಿದ್ದಾರೆ. ಕರ್ನಾಟಕದ ಹಲವಾರು ಸಂಘ ಸಂಸ್ಥೆಗಳಿಂದಲೂ ಅವರು ಮಾನಪತ್ರಗಳನ್ನು ಸುವರ್ಣಪದಕಗಳನ್ನು ಪಡೆದಿದ್ದಾರೆ.

"ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳು ಹಲವಾರು ವರ್ಷಗಳ ಕಾಲ ಕರ್ನಾಟಕವನ್ನೆಲ್ಲಾ ಸುತ್ತಿ ತಮ್ಮ ವಿದ್ವತ್ಪೂರ್ಣ ಹಾಗೂ ವಿಚಾರಪೂರ್ಣ ಕೀರ್ತನ ಭಾಷಣಗಳಿಂದ ಜನಜಾಗೃತಿಯನ್ನುಂಟುಮಾಡಿ ಅಲ್ಲಿನ ಜನರಿಗೆ ಕರ್ನಾಟಕದ ಅಭಿಮಾನವನ್ನು ಉಕ್ಕೇರಿಸಿರುವುದು ಗಮನಾರ್ಹ ಸಂಗತಿಯಾಗಿದೆ. ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳ ಉತ್ಸಾಹಪೂರ್ಣವಾದ ದೇಶಸೇವಾಕಾರ್ಯ ವನ್ನು ನಾವು ಬಹುಕಾಲದಿಂದಲೂ ವೀಕ್ಷಿಸುತ್ತಿದ್ದೇವೆ. ವಿಶಾಲ ಮೈಸೂರು ರಾಜ್ಯದ ನಿರ್ಮಾಣಕ್ಕಾಗಿ ಸುಮಾರು ನಲವತ್ತು ವರ್ಷ ಗಳ ಅವಧಿಯಲ್ಲಿ ಅವರು ಮಾಡಿರುವ ಪ್ರಯತ್ನ ಅನುಪಮವಾದುದು."

ಸುತ್ತೂರು ವೀರಸಿಂಹಾಸನಾಧೀಶ್ವರರಾದ ಶ್ರೀ ಜಗದ್ಗುರು ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ ಆಶೀರ್ವಚನದೊಂದಿಗೆ ಈ ಪ್ರಶಂಸೆಯ ಪರಿಸರದಿಂದ ನಾವು ವಿರಮಿಸಬಹುದು.

"ಕರ್ನಾಟಕವೆಂದರೆ ಶಾಸ್ತ್ರಿಗಳು, ಶಾಸ್ತ್ರಿಗಳು ಎಂದರೆ ಕರ್ನಾಟಕ, ಕನ್ನಡ ನಾಡಿನಲ್ಲಿ ಅವರು ನೋಡದ ಸ್ಥಳವಿಲ್ಲ. ಮಾತನಾಡಿಸದ ಕಲ್ಲಿಲ್ಲ. ಕಾಣದ ಗುರುಪೀಠವಿಲ್ಲ. ಕೈಮುಗಿಯದ ಗುಡಿಯಿಲ್ಲ, ಓದದ ಗ್ರಂಥವಿಲ್ಲ, ಪರಿಚಯವಿಲ್ಲದ

ಜನರಿಲ್ಲ."ಅವರು ಒಂದು ಓಡಾಡುವ ವಿಶ್ವಕೋಶವಿದ್ದಂತೆ" ಕೀರ್ತನಾಚಾರ್ಯರಾಗಿ, ಕನ್ನಡ ಸಾಹಿತ್ಯ-ಸಂಸ್ಕೃತಿಗಳ ಉಪನ್ಯಾಸಕರಾಗಿ, ಧರ್ಮಪ್ರಸಾರಕರಾಗಿ, ಪತ್ರಿಕಾ ಸಂಪಾದಕರಾಗಿ, ಸಂಶೋಧಕರಾಗಿ, ಕವಿಗಳಾಗಿ"ಶರಣ ಸಾಹಿತ್ಯ" ಗ್ರಂಥ ಮಾಲೆಯ ಕೃತಿಸುಮ ಗಳಿಂದ ತತ್ವ ಪರಿಮಳವನ್ನು ನಾಡಿನಲ್ಲೆಲ್ಲಾ ಬಿತ್ತರಿಸಿ ಅಗ್ರಮ ಪಂಡಿತರೆನಿಸಿದ ಅವರು ಕರ್ನಾಟಕದ ಸಾರಸ್ವತ ಗದ್ದುಗೆಯಾದ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರೂ ಆಗಿದ್ದು ಬಹುದಕ್ಷತೆಯಿಂದ ಆ ಬೃಹತ್ ಸಂಸ್ಥೆಯ ಸರ್ವಾಂಗೀಣ ಪ್ರಗತಿಗೆ ಶ್ರಮಿಸಿ ದುದು ಸರ್ವವಿದಿತವಾಗಿದೆ. ಕರ್ನಾಟಕ ಏಕೀಕರಣ ಹೋರಾಟ ಪ್ರಮುಖ ಸೂತ್ರಧಾರಿಗಳಾಗಿದ್ದು ಹೋರಾಡಿದುದಲ್ಲದೆ, ನಾಡ ಗಡಿಯ ರಕ್ಷಣೆಗಾಗಿ ಕಂಕಣ ಕಟ್ಟಿ ೪೨ ವರ್ಷಗಳಿಂದ ನುಡಿಗಡಿಯ ಪ್ರಸ್ತಾಪ ಬಂದಾಗಲೆಲ್ಲ ಮುಂದಾಗಿ ನಿಲ್ಲುವ ಧೀಮಂತ ಶಕ್ತಿಯ ಕನ್ನಡಿಗರೆನಿಸಿದ್ದಾರೆ. ಕನ್ನಡ ನಾಡಿಗೆ, ಕನ್ನಡ ನುಡಿಗೆ ಅವರಿಂದ ಸಂದ ಅಮೋಘ ಸೇವೆಗೆ ರಾಜ್ಯ ಸನ್ಮಾನಗಳಲ್ಲದೆ "ಪದ್ಮಶ್ರೀ" ಎಂಬ ರಾಷ್ಟ್ರಸನ್ಮಾನವು ಲಭಿಸಿದುದು ಪರಮಸಂತೋಷದಾಯಕವಾದುದು."

**ಭರತವಾಕ್ಯ** :

ನಾಟಕದಲ್ಲಿ ಭರತವಾಕ್ಯ ಹೇಳುವುದು ಸಹಜ. ಆದರೆ ಗದ್ಯಕೃತಿಯಲ್ಲಿಯೂ ಉಂಟೆ ? ಔಚಿತ್ಯವೇ ? ಎಂದು ಪ್ರಶ್ನಿಸಬಹುದು. ಆದರೆ ಇದು ಗದ್ಯಗ್ರಂಥವಾದರೂ ಇದರ ವಸ್ತು ಜೀವನ, ಈ ಜೀವನ ನಾಟಕದ ಅಂತ್ಯದಲ್ಲಿ ಭರತವಾಕ್ಯ ಬರುವ ಅಗತ್ಯ ಇದೆ. ಆದರೆ ಅದು ರಚನಕಾರರು ಹೇಳುವುದಲ್ಲ ಕಥಾನಾಯಕನೇ ಹೇಳುವಂಥದು ! ಆದ್ದರಿಂದ ನಮ್ಮ ಕಥಾನಾಯಕ ಪದ್ಮಶ್ರೀ ಶೀವಮೂರ್ತಿ ಶಾಸ್ತ್ರಿಗಳ ಕಡೆಯ ಸಂದೇಶವನ್ನು ಕೇಳಿ :

"ಮನುಷ್ಯನು ತಾನು ಹುಟ್ಟಿದ ಮನೆ, ಬೆಳೆದ ಸಮಾಜ ಸಾಕಿದ ದೇಶ ಇವುಗಳಿಗೆ ಉಪಯುಕ್ತನಾಗಿ ಬಾಳುವುದಕ್ಕೆ ಬೇಕಾದ ಗುಣ ಮತ್ತು ಸಂಪತ್ತನ್ನು ಗಳಿಸಿಕೊಳ್ಳಬೇಕು. ಕೈಲಾದ ಮಟ್ಟಿಗೆ ವ್ಯಕ್ತಿಯು ಜನತೆಗೆ ಉಪಕಾರ ಮಾಡಬೇಕು. ತಮಗೆ ಉಂಟಾದ ಅಪಕಾರಗಳನ್ನು ಶಾಂತಿ ಸಮಾಧಾನಗಳಿಂದ ಸಹಿಸಿಕೊಳ್ಳಬೇಕು. ಅಪಘಾತ, ಅಪಮಾನ ಒದಗಿದಾಗ ಸಮಾಧಾನದಿಂದ ಇರಬೇಕು, ಗಾಬರಿಗೊಳ್ಳಬಾರದು. ಒಂದು ಕಾಲದಲ್ಲಿ ಅವುಗಳು ಒಳ್ಳೆಯದಾಗಿ ಪರಿಣಮಿಸಬಹುದು. ವಿಶ್ವದಲ್ಲಿ ಮಾನವಜನ್ಮ ದೊಡ್ಡದು. ಅದನ್ನು ಎಲ್ಲ ರೀತಿಯಲ್ಲಿ ಸಾರ್ಥಕಪಡಿಸಿಕೊಳ್ಳಬೇಕು. 'ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರು' ಎಂಬ ಬಸವೇಶ್ವರರ ಮಾತಿನಲ್ಲಿ ನಾವು ನಡೆಯುವುದು. 'ಕಾಯಕವೇ ಕೈಲಾಸ' ಎಂದು ಅರಿತಾಗಲೇ ನಮ್ಮ ಜನ್ಮ ಸಾಫಲ್ಯ."

### ಪದ್ಮಶ್ರೀ ಬಿ. ಶಿವಮೂರ್ತಿಶಾಸ್ತ್ರಿಗಳ

## ಜೀವನದ ಪ್ರಮುಖ ಘಟನೆಗಳು

| | | |
|---|---|---|
| ಜನನ | : ತಾ. ೨೩.೦೨.೧೯೦೩. ತಂದೆ ಶ್ರೀ ಬಸವಯ್ಯ ಸ್ವಾಮಿಗಳು ; ತಾಯಿ ಶ್ರೀಮತಿ ನೀಲಮ್ಮನವರು, ಸ್ಥಳ ಹುಲಕುಂಟಿಮಠ, ತುಮಕೂರು. | |
| ವಿದ್ಯಾಭ್ಯಾಸ | : ೧೯.೦೮.೧೯೨೩, ತುಮಕೂರಿನಲ್ಲಿ | |
| ಉಪಾಧ್ಯಾಯ | : ವೃತ್ತಿ ೧೯೨೩-೧೯೨೫ ಅನಂತರ ಸ್ವತಂತ್ರ ಜೀವನ ಕೀರ್ತನವೃತ್ತಿ - ಕರ್ನಾಟಕ ಸಂಚಾರ ೧೯೩೬ರವರೆಗೆ | |
| ಬೆಂಗಳೂರಿನಲ್ಲಿ | : ೧೯೩೬ರಲ್ಲಿ ಬೆಂಗಳೂರಿಗೆ ವಲಸೆ ಬಂದು ನೆಲೆಸಿದ್ದು. 'ಶರಣ ಸಾಹಿತ್ಯ' ಆರಂಭ. ಅನಂತರ ೧೯೩೮ ರಿಂದ ೧೯೪೨ರವರೆಗೆ 'ಸ್ವತಂತ್ರ ಕರ್ನಾಟಕ' (ವಾರಪತ್ರಿಕೆ) ನಡೆಸಿಕೊಂಡು ಬಂದದ್ದು. | |
| ಪಡೆದ ಬಿರುದುಗಳು | :ಆಸ್ಥಾನ ವಿದ್ವಾನ್ | ೧೯೪೦ |
| | ಪಂಡಿತರತ್ನಂ | ೧೯೪೮ |
| | ಪದ್ಮಶ್ರೀ | ೧೯೬೬ |
| | ಮೈಸೂರು ಅಕಾಡೆಮಿ ಸನ್ಮಾನ | ೧೯೬೬ |

| | |
|---|---|
| | 'ದೇವಗಂಗೆ' ಸಂಭಾವನಾಗ್ರಂಥ ಸಮರ್ಪಣೆ ೧೯೬೮, ಶ್ರೀ ಶ್ರವಣಬೆಳಗೊಳ ರಂಭಾಪುರಿ ಉಜ್ಜಯಿನಿ, ಶ್ರೀಶೈಲ, ಚಿತ್ರದುರ್ಗ, ಕಾಶಿ ಜಗದ್ಗುರುಗಳವರಿಂದ ಪಡೆದ ಅನೇಕ ಬಿರುದು ಬಾವಲಿಗಳು ೧೯೨೬ರಿಂದ ೧೯೩೬ರವರೆಗೆ. |
| ವಿವಾಹ | : ಮೊದಲ ಮದುವೆ, ಶ್ರೀಮತಿ ಅನ್ನಪೂರ್ಣನಮ್ಮನವರೊಂದಿಗೆ ೧೯೨೪, ಎರಡನೆಯ ಮದುವೆ ಶ್ರೀಮತಿ ಮುದ್ದು ವೀರಮ್ಮನವರೊಂದಿಗೆ ೬.೩.೧೯೪೩ (ಕುಂಭಕೋಣಂನಲ್ಲಿ) |
| ಸಂತಾನ | : ಮೊದಲ ಹೆಂಡತಿ ಶ್ರೀಮತಿ ಅನ್ನಪೂರ್ಣಮ್ಮನವರಿಗೆ ಆರು ಗಂಡು, ಒಂದು ಹೆಣ್ಣು, ಆದರೆ ಉಳಿದದ್ದು ಒಂದೇ ಗಂಡು. ಅದು ಇಂದಿನ ಪ್ರಸಿದ್ಧ ವಕೀಲರಾದ ಶ್ರೀ ಎಚ್. ಎಸ್. ರೇಣುಕಾಪ್ರಸಾದ್, ಖ್ಯಾತ ಮಹಿಳಾ ನಾಯಕಿ ಶ್ರೀಮತಿ ಲೀಲಾವತಿ ಪ್ರಸಾದ್ ಅವರ ಪತ್ನಿ. ಎರಡನೆಯ ಹೆಂಡತಿ ಶ್ರೀಮತಿ ಮುದ್ದು ವೀರಮ್ಮನವರಿಗೆ ಒಂದು ಗಂಡು; ಹೆಸರು ಶ್ರೀ ಎಚ್. ಎಸ್. ಶಿವಪ್ರಕಾಶ್, ಇವರು ಸರ್ಕಾರಿ ಕಾಲೇಜಿನಲ್ಲಿ ಇಂಗ್ಲಿಷ್ ಅಧ್ಯಾಪಕರಾಗಿದ್ದಾರೆ. |
| ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷತೆ | : ೧೯೫೬ರಿಂದ ೧೯೬೪ರವರೆಗೆ |
| ಷಷ್ಠಿ ಶಾಂತಿ | : ದಿನಾಂಕ ೨೪.೦೨.೧೯೬೩ರಂದು ಬೆಂಗಳೂರಿನಲ್ಲಿ |
| ಶಿವೈಕ್ಯರಾದದ್ದು | : ದಿನಾಂಕ ೧೫.೦೧.೧೯೭೬ |

**ಆಸ್ಥಾನ ವಿದ್ವಾನ್, ಪಂಡಿತರತ್ನಂ**
**ಪದ್ಮಶ್ರೀ ಬಿ. ಶಿವಮೂರ್ತಿಶಾಸ್ತ್ರಿ ಅವರಿಂದ ರಚಿತವಾಗಿರುವ ಗ್ರಂಥಗಳು**

೧. ವೀರಶೈವ ಸಾಹಿತ್ಯ ಮತ್ತು ಇತಿಹಾಸ (ಭಾಗ ೧, ೨, ೩, ೪)
೨. ಕರ್ನಾಟಕ ಸಂದರ್ಶನ (ಭಾಗ ೧, ೨)
೩. ದುಂಬಿ ಮತ್ತು ನಾದ (ಕವನ ಸಂಗ್ರಹ)
೪. ವೀರಶೈವ ಮಹಾಪುರುಷರು (ಅರವತ್ತು ಜೀವನ ಚರಿತ್ರೆಗಳು)
೫. ಶ್ರೀ ಮಾದೇಶ್ವರ ಚರಿತೆ (ಸಂತರ ಜೀವನ ಚರಿತೆ)
೬. ಮಹಾಕವಿ ಷಡಕ್ಷರದೇವಿ (ಕವಿ, ಕಾವ್ಯ ವಿಮರ್ಶೆ)
೭. ಬಿದನೂರ ಪ್ರಭು ಶಿವಪ್ಪನಾಯಕ (ಮಲೆನಾಡಿನ ರಾಜ್ಯಗಳ ಇತಿಹಾಸ)
೮. ಸರ್ವಜ್ಞಮೂರ್ತಿ (ಕವಿ ಕಾವ್ಯ ವಿಮರ್ಶೆ)
೯. ಮಹಾತ್ಮ ಕಾಳಿದಾಸ (ಕವಿ ಕಾವ್ಯ ವಿಮರ್ಶೆ)
೧೦.ಮಹಾಕವಿ ಲಕ್ಷ್ಮೀಶ (ಕವಿ ಕಾವ್ಯ ವಿಮರ್ಶೆ)
೧೧ ಕರ್ನಾಟಕ ವಿಜಯ (ನಾಟಕ)
೧೨. ಕೆಳದಿ ರಾಣಿ ಚೆನ್ನಮ್ಮಾಜಿ (ನಾಟಕ)
೧೩. ಆಕಾಶವಾಣಿಯ ಶಬ್ದ ಚಿತ್ರಗಳು
೧೪. ಶರಣ ಚರಿತ ಮಾನಸ (೧೫೫ ಕಂದ ಪದ್ಯಗಳು)
೧೫. ಹರಿಹರ ಮತ್ತು ರಾಘವಾಂಕ (ಕವಿ ಕಾವ್ಯ ವಿಮರ್ಶೆ)

**ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳವರಿಂದ ಸಂಪಾದಿಸಿ ಪ್ರಕಟವಾಗಿರುವ ಗ್ರಂಥಗಳು**

೧.ಪುರಾತನ ತ್ರಿವಿಧಿ – ನಿಜಗುಣ ಶಿವಯೋಗಿ
೨. ವೀರೇಶ ಚರಿತೆ – ಮಹಾಕವಿ ರಾಘವಾಂಕ
೩. ಬಸವೋದಾಹರಣಂ (ಸಂಸ್ಕೃತ) – ಪಾಲ್ಕುರಿಕೆ ಸೋಮನಾಥ
೪. ಘನಲಿಂಗಿ ದೇವರ ವಚನಗಳು – ಘನಲಿಂಗಿದೇವ

೫. ತುರುಗಾಯಿ ರಾಮಣ್ಣನ ವಚನಗಳು – ತುರುಗಾಯಿ ರಾಮಣ್ಣ
೬. ನ್ಯಾಯ ಶತಕ (ಸಂಸ್ಕೃತ) – ರಾಮೇಶ್ವರಮುಖಿ
೭. ಕನ್ನಡ ಕಲಿಸಿರುವ ಚರಿತೆ – (ದಿ. ಹು. ಶ್ರೀನಿವಾಸ ಜೋಯಿಸರು)
೮. ಕನ್ನಡ ಆದಿತ್ಯ ಪುರಾಣ (ಭಾಗ ೧)
೯. ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರ – ರತ್ನಾಕರ (ಭಾಗ ೧) ಶಾಂತಲಿಂಗದೇಶಿಕ
೧೦. ಗಣ ಸಹಸ್ರನಾಮಾವಳಿ – ಪಾಲ್ಕುರಿಕೆ ಸೋಮನಾಥ
೧೧. ಷಡಕ್ಷರ ಮಂತ್ರ ಮಹಿಮೆ – ಕೊಂಡಗುಳಿ ಕೇಶಿರಾಜ
೧೨. ಮಾದೇಶ್ವರ ಸಾಂಗತ್ಯ – ಗುರುಸಿದ್ಧ ಕವಿ
೧೩. ಪಂಪಾಸ್ಥಾನ ವರ್ಣನೆ – (ಚಂಪು) ಅಷ್ಟಭಾಷಾ ಕವಿ ಚಂದ್ರಶೇಖರ
೧೪. ಕನ್ನಡ ಶತಕ ಸಾಹಿತ್ಯ – (ಐವರು ಪ್ರಾಚೀನ ಕವಿಗಳು)
೧೫. ಬಸವಲಿಂಗ ನಾಮಾವಳಿ
೧೬.ಶರಣ ಬಸವರಗಳೆ – ಪಾಲ್ಕುರಿಕೆ ಸೋಮನಾಥ
೧೭. ಸಂಕ್ಷಿಪ್ತ ಶಿವಪೂಜಾಧಿ (ಚೌಡದಾನಪುರದ ವಿರೂಪಾಕ್ಷ ಒಡೆಯರು)

**ಪ್ರಕಟಣೆಗೆ ಸಿದ್ಧವಾಗಿರುವ ಗ್ರಂಥಗಳು**

೧. ದೀಕ್ಷಾಬೋಧೆ – ಕೆರೆಯ ಪದ್ಮರಸ
೨. ಸಾನಂದ ಚರಿತೆ – ಕುಮಾರ ಪದ್ಮರಸ
೩. ಅರವತ್ತು ಮೂವರ ಪುರಾಣ (ಷಟ್ಪದಿ) ವೀರಭದ್ರಕವಿ
೪. ಬಸವರಾಜೀಯ – ಪಾಲ್ಕುರಿಕೆ ಸೋಮನಾಥ
೫. ಪಂಚಶತಕ ನೀತಿಗಳು – ಸ್ವಾದಿ ಸದಾಶಿವರಾಜ
೬. ತೋಂಟದ ರಾಯನ ಸಾಂಗತ್ಯ
೭. ಆರಾಧ್ಯ ಚರಿತ್ರೆ – ನೀಲಕಂಠಾಚಾರ್ಯ
೮. ಚತುರಾಚಾರ್ಯಪುರಾಣ – ಸಂಪಾದನೆ ಪರ್ವತೇಶ್ವರ
೯. ವೀರಶೈವ ಚರಿತ್ರೆ (ಕನ್ನಡ, ತೆಲುಗು, ತಮಿಳು, ಸಂಸ್ಕೃತ, ಮರಾಠಿ)
೧೦. ಶರಭ ಚರಿತೆ, ಕವಿ ನಿಶ್ಚಿತಾತ್ಮ
೧೧. ಕಾಕತೀಯ ಚರಿತ್ರೆ
೧೨. ಕೈವಲ್ಯ ಪದ್ದತಿ – ನಿಜಗುಣ ಶಿವಯೋಗಿ

**ಶ್ರೀ ಬಿ. ಶಿವಮೂರ್ತಿಶಾಸ್ತ್ರಿ ಅವರಿಂದ ಬರೆಯಲ್ಪಟ್ಟ ಲೇಖನಗಳು (ಗ್ರಂಥಸ್ಥವಲ್ಲದ)**

| | | |
|---|---|---|
| ೧. | ಜಿನಧರ್ಮ ಮತ್ತು ಮಹಾವೀರಸ್ವಾಮಿ | (ಶ.ಸಾ. ೨೮–೧) |
| ೨. | ಕನ್ನಡದ ಉದ್ಧಾರಕರು | (ಶ.ಸಾ. ೨೮–೧೬) |
| ೩. | ಹರಿಭಕ್ತಸಾರ ಕುರಿತ | (ಶ.ಸಾ. ೨೮–೧೬) |
| ೪. | ವಚನ ವಾಙ್ಮಯದಲ್ಲಿ ಕಾವ್ಯಗುಣ | (ಶರಸಾ ೨೮–೪) |
| ೫. | ಶಿವಯೋಗಿಸರ್ಪಭೂಷಣರು | (ಶರಸಾ ೨೮–೪) |
| ೬. | ಸರ್ವಜ್ಞ ವಚನಗಳು | (ಶರಸಾ ೨೮–೫) |
| ೭. | ಹರಿಹರ–ರಾಘವಾಂಕರು ಸ್ಮರಿಸುವ ಪೂರ್ವ ಕವಿಗಳು | (ಸಾ.ಪ. ೧೯೬೪ ಮತ್ತು (ಸರಸಾ ೨೧–೧) |
| ೮. | ಮೃತ್ಯುಂಜಯ ಶಿವಯೋಗಿಗಳು | (ಶರಸಾ ೨೮–೭) |
| ೯. | ಕನ್ನಡ ಜಾಣ್ನುಡಿಗಳು | (ಶರಸಾ ೨೮–೮) |

೧೦.ಪಿ.ಆರ್. ಕರಿಬಸವ ಶಾಸ್ತ್ರಿಗಳು ಮತ್ತು ಗಂಗಾಧರ
ಮಡಿವಾಳೇಶ್ವರ (ಶರಸಾ ೨೮–೮)
೧೧.ಕನ್ನಡ ಶಬ್ದ ವಿಜ್ಞಾನ (ಶರಸಾ ೩೦–೬)
(ಶರಸಾ ೨೭–೯)
(ಶ.ಸಾ. ೨೯–೪೦೯–೬)
೧೨.ದೇಶಭಕ್ತ ಮಂಜಪ್ಪ ಹರ್ಡೇಕರ್ (ಶರಸಾ ೨೮–೧೧, ೧೨)
೧೩.ಜಗನ್ಮಾಯಿ ಕಂ.ವಾ.ಪ್ರಾಸಾದಿಕಂ (ಸಂಸ್ಕೃತ) ಶರಸಾ ೨೮–೧೧,೧೨)
೧೪. ಹಿಂದೂ ಸಂಘಟನೆಗೆ ಬಸವಣ್ಣನವರು ತೋರಿದ ದಾರಿ (ವಿಕ್ರಮ ವಿಜಯದಶಮಿ ೧೯೭)
೧೫.ವೇದಾಂತ ಮತ್ತು ವಿಜ್ಞಾನ (ಶ.ಸಾ. ೨೭–೧)
೧೬. ವೀರಶೈವ ಧರ್ಮ ಮತ್ತು ಶ್ರೀಶೈಲಕ್ಷೇತ್ರ (ಶ್ರೀಶೈಲಸಂಚಿಕೆ ೧೯೯೪)
೧೭. ಡಾ. ಫ.ಗು. ಹಳಕಟ್ಟಿ (ಶ.ಸಾ. ೨೭–೨,೩)
೧೮.ಕನಕದಾಸರ ಜಾಣ್ನುಡಿಗಳು (ಶ.ಸಾ. ೨೭–೧೦)
೧೯. ಗೋವೆಯಲ್ಲಿ ನನ್ನ ಅನುಭವಗಳು (ಶ.ಸಾ. ೨೭–೧೦)
೨೦. ಕೊಂಕಣಿ ಶಬ್ದ ಸಂಪತ್ತು (ಶ.ಸಾ. ೨೭–೧೦)
೨೧. ಹಿಂದೀ ವಿರೋಧ ಸಲ್ಲದು (ಶ.ಸಾ. ೨೭, ೧೧)
೨೨. ಮಹಾತ್ಮ ಕನಕದಾಸರು (ಶ.ಸಾ. ೨೭–೧೨)
೨೩. ವೀರಶೈವ ಧರ್ಮ (ಶ.ಸಾ. ೨೯–೨,೩)
೨೪. ಕೈ. ಐ. ಮಹಾದೇವಯ್ಯನವರು (ಶ.ಸಾ. ೨೯–೨,೩)
೨೫. ಕೈ.ಡಿ.ಎಸ್.ಮಲ್ಲಪ್ಪನವರು (ಶ.ಸಾ. ೨೯–೪)
೨೬. ಕೆಲವು ಐತಿಹಾಸಿಕ ಸ್ಥಳಗಳು (ಶ.ಸಾ. ೨೯–೪)
೨೭. ಹರಿಭಕ್ತಿಸಾರದ ಕಥೆಗಳು (ಶ.ಸಾ. ೨೮–೫)
೨೮. ಮುಪ್ಪಿನ ಷಡಕ್ಷರ ಸ್ವಾಮಿಗಳು (ಶ.ಸಾ. ೨೯–೭)
೨೯. ಕನ್ನಡಿಗರ ಇಂದಿನ ಅಗತ್ಯಗಳು (ಶ.ಸಾ. ೨೯–೮)
೩೦. ಕೊಡಗರ ಇಂದಿನ ನಡೆನುಡಿಗಳು (ಶ.ಸಾ. ೨೯–೮)
೩೧. ಹರಿಹರನ ರಗಳೆಗಳು (ಶ.ಸಾ. ೨೯–೮)
೩೨. ಕರ್ನಾಟಕಕ್ಕಾಗಿ ದುಡಿದ ಸುಪ್ರತಿಷ್ಠರು (ಪ್ರಜಾವಾಣಿ ೧೯೬೬) (ಶ.ಸಾ. ೨೯–೬)
೩೩. ಶಿವಶರಣರ ಚರಿತ್ರೆಗಳು ಮತ್ತು ಭಾರತದಲ್ಲಿ ವೀರಶೈವರ ಕುರುಹುಗಳು (ಶ.ಸಾ. ೨೯–೧೦)
೩೪. ಶಿವಶರಣರ ತತ್ವಗಳೂ ಭಾರತದ ರಾಜ್ಯಾಂಗವೂ (ಶ.ಸಾ.೨೯–೧೧)
(ಗೋವೆಯ ಕನ್ನಡ ಸಂಘದ ಪ್ರಕಟಣೆ ೧೯೬೭) (ಶ.ಸಾ. ೨೯–೧೧–೧೨)
೩೫. ಕನ್ನಡನಾಡು ಶರಣರ ಬೀಡು, 'ತರಳಬಾಳು ಜಗದ್ಗುರು ವಿಶೇಷ ಸಂಚಿಕೆ ೧೯೬೬
೩೬. ಕೊಂಡುಗುಳಿ ಕೇಶಿರಾಜನ ಕಾಲವಿಚಾರ
೩೭. ಅಮರಗೊಂಡದ ಮಲ್ಲಿಕಾರ್ಜುನ (ಶ.ಸಾ. ೩೦–೧)
೩೮. ಬಿಜ್ಜಮಹಾದೇವಿ
೩೯. ಆಚಾರ್ಯ ರೇವಣಸಿದ್ಧ ಮತ್ತು ರುದ್ರಮುನಿಗಳು (ಶರಸಾ ೩೯–೧೧, ೧೨)
೪೦. ವಚನ ಶಾಸ್ತ್ರದ ಉದ್ಧಾರಕರು ೧) ಆಚಾರ್ಯ ಮರುಳಸಿದ್ಧ ೨) ಪಂಡಿತಾಚಾರ್ಯ (ಶರಸಾ. ೩೦–೩)
೪೧. ಆಚಾರ್ಯ ಏಕೋರಾಮ (ಏಕಾಂತರಾಮ)
೪೨. ಕೈ ಬಸವನಾಳರು, ಸ್ಮಾರಕ ಸಂಚಿಕೆ

೪೩. ಭಾರತೀಯ ಸಂಸ್ಕೃತಿ, ಸರಕಾರದ ಪ್ರಕಟಣೆ
೪೪. ಕವಿ ಪುಲಿಗೆರೆಯ ಸೋಮ (ಶರಸಾ.)
೪೫. ಸಪ್ತಕಾವ್ಯದ ಗುರುಬಸವ (ಶರಸಾ. ೩೦–೬, ೭)
೪೬. ನಿಜಗುಣ ಶಿವಯೋಗಿ ('ಸ್ವರೂಪದರ್ಶನದಲ್ಲಿ' ೧೯೫೪)
೪೭. ಬಿಳಗಿ ರಾಜರ ಚರಿತ್ರೆ (ಶಿವಾನುಭವ)
೪೮. ಕೆಳದಿ ರಾಜರ ಚರಿತ್ರೆ ಶಿವಾನುಭವ
೪೯. ವೀರಶೈವ ಮಠಗಳು (ಜಯ ಕರ್ನಾಟಕ)
೫೦. 'ರಾಮಾಯಣದ ವಾನರರು ಕಪಿಗಳಲ್ಲ ಕನ್ನಡಿಗರು' (ಕರ್ಮವೀರ) ಸಂಯುಕ್ತ ಕರ್ನಾಟಕದ ವಿಶೇಷ ಸಂಚಿಕೆ, 'ಭರತಭಕ್ತಿ ಕಾವ್ಯ' ಪೀಠಿಕೆ.
೫೧. ಬಿಳಿಗಿಯ ಶಾಸನಗಳು (ಶರಸಾ)
೫೨. ಕೈ॥ ಸರ್. ಸಿದ್ದಪ್ಪ ಕಂಬಳಿ, ಕೈ ॥ ಎಚ್. ಸಿದ್ದಯ್ಯನವರು
೫೩. ವಿಜಯನಗರ ಸಾಮ್ರಾಜ್ಯರಿಂದ ವೀರಶೈವರಿಗೆ ಅದ ಸಹಾಯ
೫೪. ವೀರಶೈವರ ಸಮನ್ವಯ ದೃಷ್ಟಿ
೫೫. ದಯಾ–ಧರ್ಮ ಪ್ರಧಾನ ಮತ
೫೬. ವೀರಶೈವ ಮತ್ತು ಸನಾತನ ಧರ್ಮ
೫೭. ಧರ್ಮಸ್ಥಳಗಳಲ್ಲಿ ಭಾಷಣಗಳು ಮತ್ತು ವಿಶೇಷ ಸಂಚಿಕೆ ಲೇಖನಗಳು
೫೮. ಬೊಂಬಾಯಿ, ಮದರಾಸು, ಹೊಸದೆಹಲಿ, ಬನಾರಸ್ ಮತ್ತು ಹೈದರಾಬಾದು ಕರ್ನಾಟಕ ಸಂಘಗಳಲ್ಲಿ ಭಾಷಣಗಳು
೫೯. ಅನುಭವ ಮಂಟಪ (ಶರಸಾ)
೬೦. ಪೊಟ್ಟಲಗೆರೆ ಶಸನ (ಶರಸಾ)
೬೧. ನಿಜಗುಣ ಶಿವಯೋಗಿ ಶಬ್ದಚಿತ್ರ (ಶರಸಾ)
೬೨. ಹರಿಶ್ಚಂದ್ರ ಕಾವ್ಯ ಸಂಗ್ರಹ (ಶರಸಾ)
೬೩. ಬಸವೇಶ್ವರ ಶಬ್ದಚಿತ್ರ (ಶರಸಾ)
೬೪. ಶಿವಶರಣೆಯರ ಶಬ್ದಚಿತ್ರ (ಶರಸಾ)
೬೫. ಸರ್ಪಭೂಷಣ ಶಿವಯೋಗಿ (ಶರಸಾ)
೬೬. ಅಮರಗೊಂಡ – ಗುಬ್ಬಿ (ಶರಸಾ)

**ಸರ್ಕಾರದ ಪರವಾಗಿ ಸಂಪಾದಿಸಿದ ಗ್ರಂಥಗಳು**

೧. ಕನ್ನಡ ಜೈಮಿನಿ ಭಾರತ (ದಿವಂಗತ ದೇವುಡು ಅವರೊಡನೆ)
೨. ಕನಕದಾಸರ ಕೀರ್ತನೆಗಳು ಡಾ. ಕೆ.ಎಂ. ಕೃಷ್ಣರಾವ್ ಅವರೊಡನೆ

**ಸಾಹಿತ್ಯ ಪರಿಷತ್ತಿನಲ್ಲಿ ಸಂಪಾದಿಸಿ ಪ್ರಕಟಿಸಿದ ಗ್ರಂಥಗಳು**

೧. ಕರ್ನಾಟಕ ಕವಿ ಚರಿತ್ರೆ (ಭಾಗ ೧), ಪ್ರೊ. ಡಿ.ಎಲ್. ನರಸಿಂಹಾಚಾರ್, ಶ್ರೀ ಕಾ.ಸ. ಧರಣೇಂದ್ರಯ್ಯ, ಶ್ರೀ ಜಿ. ವೆಂಕಟಸುಬ್ಬಯ್ಯ ಅವರೊಂದಿಗೆ
೨. ಗಮಕ ಕಾವ್ಯಮಂಜರಿ
೩. ಸೋಮೇಶ್ವರ ಶತಕ – ಪ್ರಸ್ತಾವನೆ

**ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿ ಅವರಿಂದ ರಚಿತವಾದ ಕವನಗಳು**

ನೀಲಗಿರಿ ಶಿಖರದಲ್ಲಿ (ಗಮಕ ಕಾವ್ಯಮಂಜರಿ ಪರಿಷತ್ತಿನ ಪ್ರಕಟಣೆ)

೧. ಕರುಣೆಯ ನಿಧಿ (ಶರಸಾ ೨೮–೭)

೨. ಜಯವಿಭವ ಜಗದ್ಗುರು (ಶರಸಾ ೨೭–೧)

೩. ಇನ್ನಿಲ್ಲ ಜವಹರನು (ಶರಸಾ ೨೭–೪)

೪. ಮಂಗಳ ಗೀತೆಗಳು (ಶರಸಾ ೨೭–೭)

೫. ಹಿಮಗಿರಿಯ ಶಿಖರದಲಿ ( ವೀರಗೀತೆಗಳು)

೬. ಅಜಂತದ ಗವಿಯೆ (ಸರ್ಕಾರಿ ಪಠ್ಯಪುಸ್ತಕ)

೭. ಇಮ್ಮಡಿ ಪುಲಿಕೇಶಿ (ಹೈಸ್ಕೂಲ್ ॥ ಗೆ ತರಗತಿ ಪಠ್ಯಪುಸ್ತಕ)

# ದೇವುಡು

**(ಜೀವನ. ವ್ಯಕ್ತಿತ್ವ ಮತ್ತು ಕೃತಿಗಳ ಸಮೀಕ್ಷೆ)**

---

**೧. ಪ್ರವೇಶ**

೧೯೫೦ನೆಯ ಇಸವಿ,

ತಿಥಿ ವಾರ ನಕ್ಷತ್ರ ಆಯನ ಪಕ್ಷ ಯಾವುದೂ ಗೊತ್ತಿಲ್ಲ. ಅಂದು ಚಿತ್ರದುರ್ಗದ ಇಂಟರ್ ಮೀಡಿಯಟ್ ಕಾಲೇಜಿನ ಸಭಾಂಗಣದಲ್ಲಿ ಬೆಂಗಳೂರಿಂದ ಆಗಮಿಸಿದ್ದ ಶ್ರೀ ದೇವುಡು ನರಸಿಂಹಶಾಸ್ತ್ರಿಗಳವರ ವಿಶೇಷೋಪನ್ಯಾಸ ಕಾರ್ಯಕ್ರಮ. ಕಾಲೇಜು ಪರಿಸರವೆಲ್ಲಾ ಅಲಂಕೃತವಾಗಿತ್ತು. ಒಳ ವ್ಯವಸ್ಥೆಯೂ ಅದ್ದೂರಿಯಾಗಿತ್ತು. ಕಾಲೇಜು ವಿದ್ಯಾರ್ಥಿ ಸಂಘದ ಬ್ರಹ್ಮ, ಅಧ್ವರ್ಯ, ಹೋತೃ, ಉದ್ಗಾತೃಗಳು ಅವರ ಜೊತೆಯಲ್ಲಿ ಅವರ ಮಿತ್ರ ವಟುಬಳಗ, ಮೈಕಾಸುರನ ಹಾವಳಿ ಕೇಳಬೇಕೆ ! ಇಡೀ ಆ ಆವರಣವೆ ಗದ್ದಲದ ಗೂಡಾಗಿತ್ತು. ಕಾಲೇಜು ಕಟ್ಟಡದ ಸುತ್ತಮುತ್ತ ಕೆಳಗೆ ಮೇಲೆ ಬಂಟಿಂಗ್ಸ್ ಬಾವುಟಗಳು, ದ್ವಾರದಲ್ಲಿ ಹಸಿರು ತೋರಣ, ಅಲಂಕೃತ ವಿದ್ಯುದ್ದೀಪಗಳ ಜೋಮಾಲೆ ಸರಗಳನ್ನು ಧರಿಸಿ ಇಡೀ ಕಟ್ಟಡಕ್ಕೆ ಒಂದು ನವಚೇತನ ಬಂದೊದಗಿತ್ತು. ಕಾಲೇಜು ವಿದ್ಯಾರ್ಥಿ, ವಿದ್ಯಾರ್ಥಿನಿಯರಲ್ಲದೆ ಊರಿನ ಪ್ರಮುಖರು, ಆಸಕ್ತರು, ಆಸ್ತಿಕರು, ಪಂಡಿತರು, ವಿದ್ವಜ್ಜನರು ಎಲ್ಲರೂ ಆಗಮಿಸಿದ್ದರು. ಅದು ಇಡೀ ಚಿತ್ರದುರ್ಗ ನಗರಕ್ಕೆ ಒಂದು ಹಬ್ಬದ ವಾತಾವರಣ ತಂದುಕೊಟ್ಟಿತ್ತು. ದೇವುಡುರವರ ಮಯೂರ, ಮಹಾಬ್ರಾಹ್ಮಣ ಕಾದಂಬರಿಗಳನ್ನು ಓದಿದ್ದ ನಮಗೆ ಅವರನ್ನು ಕಾಣುವ, ನುಡಿಸುವ ಇಚ್ಛೆ. ಅದರಿಂದಾಗಿ ಸಭಾಂಗಣದ ಮೊದಲ ಸಾಲಿನ ಪೀಠಗಳನ್ನು ನಾವು ಒಂದು ಗಂಟೆಗೆ ಮೊದಲೇ ಕಾದಿರಿಸಿದ್ದೆವು. ಸಮಯಕ್ಕೆ ಸರಿಯಾಗಿ ಶ್ರೀ ದೇವುಡುರವರು ಕಾಲೇಜಿನ ಸೂಪರಿಂಟೆಂಡೆಂಟ್ ಮತ್ತಿತರ ಅಧ್ಯಾಪಕರೊಡನೆ ದಯಮಾಡಿಸಿದರು. ಅವ ರನ್ನು ಮಂಗಲ ವಾದ್ಯಗಳ ಸಮೇತ ಸ್ವಾಗತಿಸಲಾಯಿತು. ವಿದ್ಯಾರ್ಥಿ ಸಂಘದ ಪದಾಧಿಕಾರಿಗಳು ಹೂವು, ಹಣ್ಣು ಹಾರಗ ಳೊಡನೆ ಎದುರುಗೊಂಡರು. ವಿದ್ಯಾರ್ಥಿನಿಯರು ಕಳಶ ಕನ್ನಡಿಗಳನ್ನು ಹಿಡಿದು ಹಾದಿಯುದ್ದಕ್ಕೂ ಹೂಮಳೆಕರೆಯುತ್ತಾ ಸ್ವಾಗತ ಗೀತೆ ಹಾಡಿಕೊಂಡು ಆರತಿ ಎತ್ತಿ ಶುಭ ಹಾರಯಿಸುತ್ತಾ, ಸಭಾಂಗಣಕ್ಕೆ ಕರೆತಂದರು. ಇಡೀ ಸಭಾಂಗಣ ಎದ್ದು ನಿಂತು ಅತಿಥಿ ಮಹೋದಯರಿಗೆ ತನ್ನ ಗೌರವ ಸೂಚಿಸಿತು. ನಗುನಗುತ್ತಾ ಆಗಮಿಸಿದ ಆ ದುಂಡುಮಲ್ಲಿಗೆಯಂತಹ ದುಂಡುಮುಖದ, ಒಳ್ಳೆಯ ಮಲಗೋವ ಮಾವಿನಹಣ್ಣಿನ ಮಾಟದ ದೇವುಡುರವರು ಎಲ್ಲರಿಗೂ ಕೈಮುಗಿದು ವೇದಿಕೆಯ ನ್ನೇರಿದರು. ಅವರಿಗಾಗಿ ಒಂದು ದೊಡ್ಡ ಮೇಜನ್ನು ಇಡಲಾಗಿತ್ತು. ಉಳಿದವರಿಗೆ ಕುರ್ಚಿಗಳು. ದೇವುಡುರವರು ವೇದಿಕೆ ಮೇಲೆ ಹೋದ ಕೂಡಲೇ ತಾವು ತೊಟ್ಟಿದ್ದ ಜುಬ್ಬಾ ತೆಗೆದು, ಮೇಲೊಂದು ಉತ್ತರೀಯವನ್ನು ಹೊದೆದು, ಮೇಜಿನ ಮೇಲೆ ಹತ್ತಿದರು. ಕಂಚೀ ಅಂಚಿನ ಕಚ್ಚೆ ಪಂಚೆ, ಸೊಂಟಕ್ಕೆ ಬಿಗಿದಿದ್ದ ಕೆಂಪು ವಸ್ತ್ರ, ಹೆಗಲೇರಿದ್ದ ಬಿಳೀ ಉತ್ತರೀಯದ ಆ ವ್ಯಕ್ತಿ ನಿಜಕ್ಕೂ ಆರ್ಷೇಯ ಕಾಲದ ಋಷಿ ಸದೃಶರಾಗಿ ಗೋಚರಿಸಿದರು. ಅವರು ಬರುವ ವಿಚಾರ ಒಂದು ತಿಂಗಳ ಹಿಂದೆಯೇ ತಿಳಿದಿದ್ದಾಗ ನಾವು ಕೆಲವರು ಮಿತ್ರರು 'ದೇವುಡು' ಎಂಬ ಹೆಸರು ಹಿಡಿದು ಗೇಲಿ ಮಾಡಿದ್ದೂ ಉಂಟು. ನನ್ನ ಸಹಾಧ್ಯಾ ಯಿಯನ್ನು ಕೇಳಿದೆ 'ದೇವುಡು' ಅಂದರೆ ಏನು ? ಅಂದು. ಆತ ದೇವುಡು ಅಂಟೆ ದೇವುಡು – ದೇವರು ಕಣೋ ಅಂದ. "ಓಹೊಹೋ ! ನಮ್ಮ ಕಾಲೇಜಿಗೆ ಸ್ವರ್ಗದಿಂದ ದೇವರು ಬರುತ್ತೆ ; ತಾವರೆಯ ತೇರಿನಲ್ಲಿ ಕುಳಿತು ಅವತರಿಸುತ್ತೆ. ಇಲ್ಲವೇ ಪ್ರತ್ಯಕ್ಷವಾಗಿ 'ಭಕ್ತ ಏನು ಬೇಕು ನಿನಗೆ ? ವರ ಕೇಳಿಕೊ ಅನ್ನುತ್ತೆ !' ಆಗ ನಾನು 'ಈ ವರ್ಷದ ಪರೀಕ್ಷೆಯ ಪ್ರಶ್ನೆ ಪತ್ರಿಕೆಯನ್ನು ಅನುಗ್ರಹಿಸು' ಎಂದು ಬೇಡಿಕೊಳ್ಳುತ್ತೇನೆ ಎಂದೆ. ನನ್ನ ತವರೂರಿನ ಗೆಳೆಯ ಈಶ್ವರಪ್ಪ, ಇಲ್ಲಪ್ಪಾ, ದೇವರೇ ನನಗೆ ವರ ಬೇಡ, ವಧು ಕೊಡು ಅಂತಾ ಕೇಳ್ತೇನೆ ಅಂದಾ. ಅದೇ ವಾರ ನಗರದ ಸಿನಿಮಾ ಮಂದಿರಕ್ಕೆ ಒಂದು ತೆಲಗು ಚಿತ್ರ ಬೇರೆ ಬಂದಿತ್ತು. ಅದರಲ್ಲಿ ಹಾಸ್ಯ ನಟ ರೇಲಂಗಿ 'ದೇವುಡಯ್ಯ ದೇವುಡೊ ಮಾಯಕಾರ ದೇವುಡು. ಮಂತ್ರಕಾರ ದೇವುಡು' ಎಂದು ಹಾಡಿದ್ದ. ಆ ಹಾಡನ್ನು ಅನುಕರಣೆ ಮಾಡಿ ಜಯದೇವ ಹಾಸ್ಟೆಲ್ ಕಾಂಪೌಂಡಿನಲ್ಲಿ ಹಾಡಿ ಕುಣಿದದ್ದುಂಟು. ಆದರೆ ನಮ್ಮ ಕಾಲೇಜು ಅವರಿಗಿತ್ತ ಭಕ್ತಿಪುರಸ್ಸರ ಸ್ವಾಗತ ನಮ್ಮ ಬಾಯಿ ಮುಚ್ಚಿಸಿತ್ತು. ಕುಣಿಯುತ್ತಿದ್ದ ನಮ್ಮ ಕಾಲುಗಳನ್ನು ಕಟ್ಟಿಹಾಕಿತ್ತು. ಅವರ ಭಾಷಣ ಕೇಳಿದ ಮೇಲಂತೂ ನಮ್ಮ ಹೃದಯಗಳು ಭಕ್ತಿ ಭಾವದಿಂದ ತುಂಬಿ ತುಳುಕಿದವು. ಹೇಳದೆ ಕೇಳದೆ ನಮ್ಮ ನಮ್ಮ ತಲೆಗಳು ಅವರ ಶ್ರೀಪಾದಕ್ಕೆ ಮಣಿದವು. ಆ

ಗಳಿಗೆಯವರೆಗೂ ನಮ್ಮಲ್ಲಿ ಮನೆಮಾಡಿಕೊಂಡಿದ್ದ ಹುಡುಗಾಟ, ಚೆಲ್ಲಾಟಗಳು ಹೋಗಿ ಭಾವಗಾಂಭೀರ್ಯ ಮನೆಮಾಡಿತು. ಇದು ಔಪಚಾರಿಕ ನುಡಿ ಅಲ್ಲ, ಅಂದಾದ ಸತ್ಯಸ್ಯ ಸತ್ಯ ಅನುಭವ ಹಾಗೂ ಅನುಭಾವ ದರ್ಶನ.

ಪ್ರಾರ್ಥನೆ, ಸ್ವಾಗತಗಳಾದ ಮೇಲೆ ಶ್ರೀ ದೇವುಡುರವರ ಭಾಷಣ. ಕಡೆಯ ವಂದನಾರ್ಪಣೆ ಮತ್ತು ರಾಷ್ಟ್ರಗೀತೆಗಳಿಗಾಗಿ ಕೆಲವೇ ನಿಮಿಷಗಳನ್ನು ಉಳಿಸಿ ಮಿಕ್ಕೆಲ್ಲ ಸಮಯವನ್ನೂ ಅತಿಥಿ ಮಹೋದಯರ ಭಾಷಣಕ್ಕೆ ಮೀಸಲಾಗಿತ್ತು. ಭಾಷಣದ ಹಿಂದೆ ಮುಂದೆ ಭಾವಗೀತೆ, ಭಕ್ತಿಗೀತೆ, ನೃತ್ಯ, ನಟನೆ ಎಂಬ ಬೇರಾವ ವಿವಿಧ ವಿನೋದ ಹಾವಳಿಗಳಿರಲಿಲ್ಲವಾದ್ದರಿಂದ ನೇರವಾಗಿ ನಾವೆಲ್ಲರೂ ಭಾಷಣವನ್ನಷ್ಟೇ ತುಂಬಿಕೊಳ್ಳಲು ಸಿದ್ಧತೆ ಮಾಡಿಕೊಂಡೆವು.

ಭಾಷಣ ಆರಂಭವಾಯಿತು,

ಮೊದಲ ಮಂಗಲ ಶ್ಲೋಕ ಉಪನಿಷತ್ತಿನ ಶಾಂತಿ ಮಂತ್ರ :

**ಓಂ ಪೂರ್ಣಮದಃ ಪೂರ್ಣಮಿದಂ ಪೂರ್ಣಾತ್ಪೂರ್ಣಮುದಚ್ಚತೇ**
**ಪೂರ್ಣಸ್ಯ ಪೂರ್ಣಮಾದಾಯ ಪೂರ್ಣಮೇವಾವಶಿಷ್ಯತೇ**

ಅಮೃತಪುತ್ರರೆ, ಸಾಕ್ಷಾತ್ ನಚಿಕೇತ ಸ್ವರೂಪರಾದ ವರ್ಧಿಷ್ಣುಗಳೆ, ಮೊತ್ತ ಮೊದಲು ತಮಗೆಲ್ಲ ನನ್ನ ಹಾರ್ದಿಕ ನಮನ ಗಳು. ನಮನ ಕೇವಲ ಮಜ್ಜೆ ಮಾಂಸಗಳಿಂದ ಅಸ್ಥಿ ರಕ್ತಗಳಿಂದ ಕೂಡಿದ ಈ ಶರೀರಗಳಿಗಷ್ಟೇ ಅಲ್ಲ ಅದನ್ನೇ ದೇವಾಲಯವಾ ಗಿಸಿಕೊಂಡು ನಿಮ್ಮೆಲ್ಲರ ಅಂತರಂಗಗಳಲ್ಲೂ ಪ್ರತಿಷ್ಠಾಪಿತನಾಗಿರುವ ಆ ಪುಣ್ಯ ಪರಮೇಷ್ಠಿಗೆ ಕೂಡ. ಈಶಾವಾಸ್ಯೋಪನಿಷತ್ ಹೇಳುವಂತೆ 'ಈಶಾವಾಸ್ಯಮಿದಂ ಸರ್ವಂ' ಸಮಸ್ತವೂ ಶಿವನ ಆವಾಸಸ್ಥಾನವೆ, ಶಿವಾಂಶ ಸಂಭೂತವೇ. ಆದ್ದರಿಂದ ಸಾಕ್ಷಾತ್ ಶಿವಸ್ವರೂಪಿಗಳಾದ ತಮಗೆಲ್ಲರಿಗೂ ಅನಂತ ಪ್ರಣಾಮಗಳು.

ತುಂಬು ತೇಜಸ್ವಿಗಳಾದ ನಿಮ್ಮೆಲ್ಲರನ್ನೂ ಕಂಡ ಭಾಗ್ಯ ನನ್ನದು. ಷೋಡಶಕಳಾಪೂರ್ಣನಾದ ಪೂರ್ಣ ಚಂದ್ರಮನನ್ನು ಕಂಡ ಆಹ್ಲಾದ ನನ್ನದಾಯಿತು. ನಿಮ್ಮ ಸೌಹಾರ್ದಯುತ ಸ್ವಾಗತ ನನ್ನನ್ನು ಮೂಕವಿಸ್ಮಿತನನ್ನಾಗಿಸಿದ್ದರೆ, ನಿಮ್ಮ ಅಕ್ಕರೆಯ ನುಡಿಗಳು ನನ್ನಲ್ಲಿ ನವಸ್ಫೂರ್ತಿಯೊಂದನ್ನು ಪ್ರಚೋದಿಸುತ್ತಿವೆ. ನಾನು 'ಮಹಾಬ್ರಾಹ್ಮಣ', 'ಮಹಾಕ್ಷತ್ರಿಯ'ದ ಸಾಲಿನಲ್ಲೇ 'ಮಹಾದರ್ಶನ' ವೆಂಬ ವಿನೂತನ ಪೌರಾಣಿಕ ಕಾದಂಬರಿಯನ್ನು ಬರೆಯಬೇಕೆಂದಿದ್ದೇನೆ. ವಸ್ತು ಇನ್ನೂ ಮನೋವಲಯದಲ್ಲೇ ರೂಪುಗೊಳ್ಳು ತ್ತಿದೆ. ಅದಕ್ಕೆ ಆಗಾಗ ಸ್ಫೂರ್ತಿ, ಪ್ರಭಾವ, ಪ್ರೇರಣೆಗಳು ಆಗುವುದುಂಟು. ಅಂತವುಗಳಲ್ಲಿ ನೀವಿತ್ತ ಆತಿಥ್ಯ ಒಂದು ಎಂದು ಭಾವಿಸಿದ್ದೇನೆ. ಕಾದಂಬರಿ ಪೂರ್ಣಗೊಂಡರೆ ಅದಕ್ಕೆ ನೀವು ಎಂದರೆ ಚಿತ್ರದುರ್ಗದ ಇಂಟರ್ ಮೀಡಿಯಟ್ ಕಾಲೇಜು ವಿದ್ಯಾ ರ್ಥಿನಿಯರು, ಅಧ್ಯಾಪಕರುಗಳು ಹಾಗೂ ಆಡಳಿತವರ್ಗ ಮೂಲ ಹೇತುವೆಂದು ಆನಂದದಿಂದ ಸ್ಮರಿಸಿಕೊಳ್ಳುತ್ತೇನೆ.

ಆರಂಭದಲ್ಲಿ ನಿಮ್ಮನ್ನು ನಚಿಕೇತ ಸ್ವರೂಪರೆಂದು ಸಂಬೋಧಿಸಿದೆ. ಅದು ಅಕ್ಷರಶಃ ಸತ್ಯವಾಗಬೇಕು. ನೀವು ನಚಿಕೇತ ಸ್ವರೂಪರು, ಸದೃಶರಷ್ಟೇ ಅಲ್ಲ ನಚಿಕೇತರೇ ಆಗಬೇಕೆಂಬುದು ನನ್ನ ಬಯಕೆ. ಅಂದರೆ ನಚಿಕೇತನಂತೆ ತಾವು ವಿಚಾರವಂತ ರಾಗಬೇಕು. ಸತ್ಯ ಪ್ರಕಾಶದ ಸಂದರ್ಭದಲ್ಲಿ ಅವನಂತೆ ನೀವೂ ಯಮನನ್ನು ಪ್ರಶ್ನಿಸುವಂಥಾ ವೈಚಾರಿಕತೆಯನ್ನು ಮೈಗೂಡಿಸಿ ಕೊಳ್ಳಬೇಕು. ಅದೇ ಸ್ವೋಪಜ್ಞತೆ ಅಥವಾ ನಿಮ್ಮತನ. ಆ ನಿಮ್ಮತನವನ್ನುಳಿಸಿಕೊಳ್ಳುವ ತವಕದಲ್ಲಿ ಹಿರಿಯರ ಅಭಿಮತಗಳನ್ನು ತಿರಸ್ಕರಿಸಬಾರದು. ಹಳೆಯದರ ಆಧಾರದ ಮೇಲೆ ಹೊಸತನ್ನು ಚಿಂತಿಸಿ, ಏಕೆಂದರೆ ಈ ಜೀವನವೃಕ್ಷಕ್ಕೆ 'ಹಳೆ ಬೇರು ಹೊಸ ಚಿಗುರು' ಎರಡೂ ಬೇಕು. ಆಗಲೇ ಅದರ ಸೊಬಗು ಸೌಂದರ್ಯಗಳು. ನಚಿಕೇತನು ಅವೆರಡನ್ನೂ ಏಕಕಾಲದಲ್ಲಿ ಸಾಧಿಸಿಕೊಟ್ಟ ಮಹಾಮೇಧಾವಿ. ನಿಮ್ಮಂಥ ವಿದ್ಯಾರ್ಥಿಗಳಿಗಂತೂ ಆತ ಆದರ್ಶ. ಅವನ ವಿನಯ ಸಂಪನ್ನತೆ, ವಿಚಾರಶೀಲ ಗುಣ, ಗುರುಹಿರಿ ಯಲ್ಲಿ ಅವನಿಟ್ಟಿದ್ದ ಪೂಜ್ಯತೆ, ಮೃತ್ಯುವೇ ತನ್ನೆದುರು ಬಂದು ನಿಂತಿದ್ದರೂ ಸತ್ಯಕ್ಕೆ ಅಪಚಾರವಾಗದಂತೆ ನುಡಿವ ಅವನ ನಿಲುವು ಇವು ನಿಮ್ಮ ಬಾಳಿನ ದಾರಿದೀಪವಾಗಬೇಕು.

ನಚಿಕೇತನು ಗೋತಮವಾಜಶ್ರವಸ್ಸಿನ ಮಗ. ಅವನ ತಂದೆ ಸ್ವರ್ಗ ಪ್ರಾಪ್ತಿಗಾಗಿ ಒಂದು ಯಾಗ ಮಾಡಿದ. ಅದರಲ್ಲಿ ತನ್ನಲ್ಲಿದ್ದ ಸರ್ವಸ್ವವನ್ನೂ ದಾನ ಮಾಡಿದ. ಹಾಗೆ ದಕ್ಷಿಣೆಗಾಗಿ ಎಲ್ಲವನ್ನೂ ಕೊಡುತ್ತಿದ್ದಾಗ ಮನೆಯಲ್ಲಿದ್ದ ಮುದಿ ಹಸುಗಳನ್ನು ದಾನಕೊಟ್ಟನು. ದಾನಕೊಡುವುದು ಅಂದದ್ದರಿಂದ ಒಂದು ಕಥೆ ಜ್ಞಾಪಕಕ್ಕೆ ಬಂತು : ಕೇಳಿ

ಧನವಂತನೊಬ್ಬನಿಗೆ ಹೆಂಡತಿಯು ಬಂದು ಒಂದು ಕುಂಬಳಕಾಯಿ ಕೆಟ್ಟು ಹೋಗಿದೆ ಎಂದು ಹೇಳಿದಳಂತೆ. ಗಂಡ ದನಕ್ಕೆ ಹಾಕು ಎಂದನಂತೆ. ಅದೂ ಮುಟ್ಟಲಿಲ್ಲ ಎನ್ನಲು, ಹಾಗಾದರೆ ಅದನ್ನು ದಾನಕೊಡು ಎಂದನಂತೆ ! ಅಂತಹ ಹೀನ

ಮನೋಧರ್ಮದ ದಾನವಲ್ಲ ಗೋತಮವಾಜಶ್ರವಸ್ಸಿನದು. ಒಳ್ಳೆಯದನ್ನೂ ಕೊಟ್ಟ, ಅದರ ಜೊತೆಯಲ್ಲಿ ಮುದಿ ಹಸುಗಳನ್ನೂ ಕೊಟ್ಟ. ಆಗ ಮಗನು ಯೋಚಿಸಿದನು : 'ನಮ್ಮ ತಂದೆಯು ತಮ್ಮ ಸರ್ವಸ್ವವನ್ನೂ ಕೊಟ್ಟುಬಿಡುತ್ತಿದ್ದಾನೆ. ಹಾಗಾದರೆ ನನ್ನನ್ನೂ ಕೊಡುವನೇನೊ ! ಏಕೆಂದರೆ ಮಗನಾದ ನಾನು ಆ ತಂದೆಯ ಸ್ವತ್ತು ತಾನೆ ? ಹಾಗಾದರೆ ಯಾರಿಗೆ ಕೊಡುವನೋ ? ಕೇಳಬಾರದೇಕೆ ಎನ್ನಿಸಿತು. 'ಅಪ್ಪಾ ನನ್ನನ್ನು ಯಾರಿಗೆ ಕೊಡುವೆ?' ಎಂದು ಕೇಳಿದನು. ಒಂದು ಸಲವಾಯಿತು, ಎರಡು ಸಲವಾಯಿತು, ಮೂರು ಸಲವೂ ಆಯಿತು. ತಂದೆಗೆ ಕೋಪ ಬಂತು. ಯಜ್ಞದಲ್ಲಿ ಯಜಮಾನರಾಗಿರುವವರು, ದೀಕ್ಷಿತರಾದವರು ಕೋಪ ಮಾಡಿಕೊಳ್ಳಬಾರದು ಎನ್ನುವುದೂ ಮರೆತುಹೋಯಿತು. 'ನಿನ್ನನ್ನು ಮೃತ್ಯುವಿಗೆ ಕೊಡುವೆನು' ಎಂದನು. ಯಜ್ಞಶಾಲೆಯ ತುಂಬಾ ಇದ್ದ ದೇವತೆಗಳು 'ತಥಾಸ್ತು' ಎಂದರು. ಮೃತ್ಯುವಿನ ದೂತರು ಬಂದರು. ನಚಿಕೇತನನ್ನು ಕರೆದುಕೊಂಡು ಹೋದರು.

ಮೃತ್ಯುವೆಂದರೆ ಯಮನು ತಾನೆ ? ಆತನು ನಚಿಕೇತನನ್ನು ಮೂರು ದಿವಸ ಪರೀಕ್ಷೆ ಮಾಡಿದನು. ನಾಲ್ಕನೆಯ ದಿನ ಅಶರೀರವಾಣಿಯು 'ಮೊದಲು ಆತನನ್ನು ಸತ್ಕರಿಸು' ಎಂದು ನುಡಿಯಿತು. ಯಮನು ಆಗಲೆಂದು ಆ ಹುಡುಗನ್ನು ಕರೆದು ಕೊಂಡು 'ಪಾಪ, ನೀನು ಬಂದು ಮೂರು ದಿನವಾಯಿತು, ಯಾರೂ ನಿನ್ನನ್ನು ವಿಚಾರಿಸಿಕೊಳ್ಳಲಿಲ್ಲ. ಆ ಮೂರು ದಿನಗಳನ್ನು ಮರೆತುಬಿಡು. ಆ ಮೂರು ಕಷ್ಟದ ದಿನಗಳಿಗೆ, ದಿನಕ್ಕೊಂದರಂತೆ ಮೂರು ವರವನ್ನು ಕೊಡುವೆನು ಕೇಳಿಕೊ' ಎಂದನು.

ನಚಿಕೇತನು 'ಧರ್ಮರಾಜ, ನನ್ನ ತಂದೆಗೆ ನನ್ನ ಮೇಲೆ ಬಹಳ ಪ್ರೀತಿ. ಆತನು ನಾನಿಲ್ಲವೆಂದು ಶೋಕಿಸುತ್ತಿರುವನು. ಯಾಗವನ್ನು ಮುಂದುವರಿಸಿದನೊ ಇಲ್ಲವೊ ತಿಳಿಯದು. ಆದ್ದರಿಂದ ಆತನ ಯಾಗವು ಪೂರ್ಣವಾಗಲಿ, ಅವನು ಶೋಕವಿಲ್ಲದವನಾಗಲಿ, ಕೋಪವಿಲ್ಲದವನಾಗಲಿ' ಇದು ಮೊದಲು ಬೇಡುವ ವರ ಎಂದನು. ಧರ್ಮರಾಜನಿಗೆ ಆನಂದ, ಆಶ್ಚರ್ಯ ಎರ ಡೂ ಏಕಕಾಲದಲ್ಲಿ ಆದವು ! 'ಈ ಬಾಲಕನು ತನಗಾಗಿ ಏನನ್ನೂ ಕೇಳಿಕೊಳ್ಳಲಿಲ್ಲ. ತಂದೆಗಾಗಿ ವರ ಬೇಡಿದ' ಎಂದಂದುಕೊಂ ಡು, 'ಮಗು ಹಾಗೇ ಆಗಲಿ, ಮತ್ತೊಂದು ವರವನ್ನು ಕೇಳಿಕೊ' ಎಂದನು.

ನಚಿಕೇತನು 'ಧರ್ಮರಾಜ, ನಮ್ಮ ತಂದೆಯು ಯಾಗವನ್ನು ಮಾಡಿದುದು ಸ್ವರ್ಗಕ್ಕಾಗಿ. ಆ ಸ್ವರ್ಗಕ್ಕೆ ಹೋಗಲು ಯಜ್ಞವನ್ನುಳಿದು ಬೇರೆ ದಾರಿ ಉಂಟೆ ? ಉಂಟಾದರೆ ಅದನ್ನು ನನಗೂ ತಿಳಿಸು' ಎಂದನು. ಧರ್ಮರಾನು 'ಆಗಲಿ' ಎಂದು ಅವನಿಗೆ ಅಗ್ನಿವಿದ್ಯೆಯನ್ನು ಹೇಳಿದನು. ಹೇಳುತ್ತಿದ್ದ ಹಾಗೆಯೇ ನಚಿಕೇತನು ಕಲಿತುಕೊಂಡನು. ಬಾಲಕನ ಮೇಧಾವಿತನವನ್ನು ಮೆಚ್ಚಿದ ಧರ್ಮರಾಜನು ನಚಿಕೇತನು ಕಲಿತ ಆ ವಿದ್ಯೆಗೆ 'ನಾಚಿಕೇತಾಗ್ನಿ' ಎಂದು ನಾಮಕರಣ ಮಾಡಿ, ನಚಿಕೇತನ ಹೆಸರನ್ನು ಶಾಶ್ವತಗೊಳಿಸಿದನು. ಅಂತೆಯೇ, 'ನಚಿಕೇತ, ಈ ಅಗ್ನಿಯನ್ನು ಮೂರುಸಲ ಆರಾಧಿಸಿದವರಿಗೆ ಅವರಿಗಿಷ್ಟವಾದ ಲೋಕವು ಪ್ರಾಪ್ತವಾಗುವುದು' ಎಂದನು.

ಎಲ್ಲದಕ್ಕೂ ಮುಖ್ಯವಾಗಿ ನಿಮ್ಮಲ್ಲಿ ಶ್ರದ್ಧೆ ವೃದ್ಧಿಯಾಗಬೇಕು. ಶ್ರದ್ಧೆ ಎಂದರೆ ಹಿರಿಯರ ನುಡಿಗಳಲ್ಲಿ ವಿಶ್ವಾಸವಿಡುವುದು. ನಿಮ್ಮ ನಿಮ್ಮ ಕರ್ತವ್ಯಗಳಲ್ಲಿ ನಿಷ್ಠೆ ಉಳ್ಳವರಾಗುವುದು. ಇದು ನಿಮ್ಮ ಶ್ರೇಯಸ್ಸಿಗೆ ಕಾರಣವಾಗುತ್ತದೆ. ಯಾವಾಗಲೂ ಶ್ರದ್ಧೆ ಸಿದ್ಧಿಗೆ ಮೂಲ, ಮುದ್ದೆ ನಿದ್ದೆಗೆ ಮೂಲ. ಆದ್ದರಿಂದ ಮಿತಾಹಾರ ಇರಲಿ, ಹಿತ ಚಿಂತನೆ ಇರಲಿ.

ಆತ್ಮೀಯರೆ,

ಇಂದು ನಿಮ್ಮಲ್ಲಿ ಮೂರು ಉನ್ನತಿಗಳನ್ನು ನಿವೇದಿಸಿಕೊಳ್ಳಬೇಕೆಂಬ ಇಚ್ಛೆ ನನ್ನದು. ಅವು ಕಾಯೋನ್ನತಿ, ಮನೋನ್ನತಿ ಮತ್ತು ವಿದ್ಯೋನ್ನತಿ, ಈ ಉನ್ನತಿ ಕ್ರಮಗಳನ್ನು ವಿದ್ಯಾರ್ಥಿಗಳಾದ ನೀವು ಮೈಗೂಡಿಸಿಕೊಳ್ಳಬೆಕು. ಕಾಯೋನ್ನತಿ ತಾಯಿಯಾದವಳು ಮಗುವಿಗೆ ಮೊಲೆಯುಣಿಸುವಾಗ ಕೊಡುವ ಸಂಸ್ಕಾರ. ಓರ್ವ ತಾಯಿ 'ಕೆರೆಯಂ ಕಟ್ಟಿಸು, ಬಾವಿಯಂ ತೆಗೆಸು. . .' ಎಂದು ನಿತ್ಯವೂ ಸ್ತನ್ಯಪಾನ ಮಾಡಿಸುವಾಗ ತನ್ನ ಕಂದಮ್ಮನಿಗೆ ಹೇಳುತ್ತಿದ್ದಳಂತೆ. ಅದರ ಗುಟುಕು ಗುಟುಕಿಗೂ ಎದೆ ಹಾಲಿನ ಜೊತೆಯಲ್ಲಿ ಈ ಬಗೆಯ ಧಾರ್ಮಿಕ ಭಾವನೆಗಳನ್ನು ಗುಟುಕಿಸುತ್ತಿದ್ದಳಂತೆ. ಅದೇ ರೀತಿ ನಮ್ಮ ಜಾನಪದ ಕವಯಿತ್ರಿ ಹೇಳುತ್ತಾಳೆ:

**ಆಚಾರಕರನಾಗು ನೀತಿಗೆ ಪ್ರಭುವಾಗು**
**ಮಾತಿನಲಿ ಚೂಡಾಮಣಿಯಾಗು ! ನನ ಕಂದ**
**ಜ್ಯೋತಿಯೆ ಆಗು ಜಗಕೆಲ್ಲ**

ಎಂದು.

ಈ ಮೇಲಿನ ಉದಾಹರಣೆಗಳಲಿ ಕಾಣುವ ತಾಯಂದಿರ ಸದ್ಭಾವನೆಗಳನ್ನು ಗುರುತಿಸಬಹುದು. ಈ ಭಾವನೆಗೆ ಪ್ರೇರಣೆ ಅವರ ಅಂತರಂಗದ ಸಂಕಲ್ಪ. ಸಂಕಲ್ಪವೇ ಸದಾಶಯದಿಂದ ಕೂಡಿದ್ದು. ಅದನ್ನು ಕೇಳುತ್ತಾ ಕೇಳುತ್ತಾ ಮಗುವಿನ ಮನಸ್ಸಿನ ಮೇಲೆ ಒಂದು ಸತ್ ಪರಿಣಾಮವಾಗುತ್ತೆ. ಮಗು ಎನ್ನುವುದು ಏನೇನೂ ಅರಿಯದ ಮಾಂಸದ ಮುದ್ದೆಯಲ್ಲ. ಅದು ನಮ್ಮ ನಮ್ಮ ಸಂಸ್ಕೃತಿಯ ಸಂಗ್ರಹರೂಪ. ಮಗುವಿನ ದೇಹ ಚಿಕ್ಕದಿರಬಹುದು. ಆದರೆ ಆ ದೇಹದಲ್ಲಿರುವ ಚೇತನ ಮಗುವಲ್ಲ, ಚಿಕ್ಕದೂ ಅಲ್ಲ. ಯಾವಾಗಲೂ ನಾವು ಮಗುವಿನ ಮುಂದೆ ಮಾತನಾಡುವಾಗ ಸಮಾನ ಮನಸ್ಕರೊಡನೆ ಮಾತನಾಡಿದಂತೆ ಆಡಬೇಕು. ನಮ್ಮ ಯಾವುದೇ ಕೆಟ್ಟತನದ ಪ್ರಭಾವ ಆ ಮೃದುವಾದ ಮನಸ್ಸಿನ ಮೇಲಾಗಬಾರದು.

ಹೀಗೆ, ತಾಯಿಯಂತೆ, ಶರೀರದ ಬಗೆಗೆ ಕಾಳಜಿ ವಹಿಸುವುದು ಕಾಯೋನ್ನತಿ. ಹುಚ್ಚುಹುಚ್ಚಾಗಿ ತನಗೆ ತೋರಿದಂತೆ ಬೆಳೆದರೆ ಕಾಡು, ಹಾಗಿಲ್ಲದೆ ಒಬ್ಬನ ಸಂಕಲ್ಪದಂತೆ ಬೆಳೆದರೆ ಹೊಲ ! ಹಾಗೆ ಕಾಯೋನ್ನತಿ, ದೇಹವು ದೇವತೆಗಳ ಆವಾಸ ಸ್ಥಾನವಾಗಲಿ ಎಂಬ ಸಂಕಲ್ಪ ಸಿದ್ಧಿಯೇ ನಾನು ಹೇಳುವ ಮೊದಲನೆಯ ಕಾಯೋನ್ನತಿ ತತ್ವ.

ಎರಡನೆಯದು ಮನೋನ್ನತಿ

ಮಾನೋನ್ನತಿ ಪ್ರಮಾಣವರಿತ ಪ್ರಜ್ಞೆ. ಉದಾಹರಣೆಗೆ ಸೌದೆಯು ಬೇಕೆನ್ನುವವನು ಬೆಳುದಪ್ಪದ ಮರವನ್ನು ಕಡಿಯುವು ದಿಲ್ಲ. ಸವಿತ್ತುಗಳು ಬೇಕೆನ್ನುವವನು ದೊಡ್ಡ ಕೊಂಬೆಯನ್ನು ಕಡಿಯುವುದಿಲ್ಲ. ಅದರಂತೆಯೇ ತನ್ನ ಸ್ಥಾನ ಅಂತಸ್ತುಗಳಿಗೆ ತಕ್ಕುದನ್ನು ಬಿಟ್ಟು ಬೇರೆ ಏನನ್ನೂ ಮಾಡುವುದಿಲ್ಲವೆಂಬ ಹಟವೇ ಮಾನೋನ್ನತಿ.

ಬೇರೆಯ ಮಾತಿನಲ್ಲಿ ಹೇಳಬೇಕೆಂದರೆ ಪ್ರತಿಯೊಬ್ಬ ಮಾನವನೂ ತನಗೆ ಕೀರ್ತಿಬರಬೇಕು ಎನ್ನುತ್ತಾನೆ. ಆ ಕೀರ್ತಿಯು ಹೇಗಿರಬೇಕು ಎಂಬುದನ್ನು ಗೊತ್ತುಮಾಡುವುದು ಮಾನೋನ್ನತಿ. ಯಾವನಾದರೊಬ್ಬ ತನಗೆ ಕಾಮುಕಾಗ್ರಣಿ ಎಂಬ ಕೀರ್ತಿ ಬರಲಿ ಎನ್ನುತ್ತಾನೇನು ? ಹಾಗೇನಾದರೂ ಬಂದರೆ ಅದನ್ನು ಅಪಕೀರ್ತಿ ಎನ್ನುತ್ತಾರೆ. ಹೀಗೆ ಕೀರ್ತಿ ಅಪಕೀರ್ತಿ ಎಂದು ಗೊತ್ತು ಮಾಡುವುದು ಯಾವುದು ? ಅದೇ ಮಾನೋನ್ನತಿ.

ತನ್ನದಲ್ಲದ್ದು ತನಗೆ ಬೇಡ ಎಂಬ ಮರ್ಯಾದೆಯನ್ನು ಕಲ್ಪಿಸಿಕೊಳ್ಳುವುದೂ ಒಂದು ಮಾನೋನ್ನತಿ. ಅನ್ಯಾಯಾರ್ಜಿತ ವಾಗಿ ಬರುವುದಿದ್ದರೂ ಬೇಡ ಎನ್ನುವುದು ಮಾನೋನ್ನತಿ. ಇತರರಿಗೆ ಹಿಂಸೆಯಾಗದಂತೆ, ತನಗೆ ನೋವಾಗದಂತೆ ನಡೆದು ಕೊಳ್ಳುವುದು ಒಂದು ಮನೋನ್ನತಿ. ಅಷ್ಟೇಕೆ, ಕಾಮಕ್ರೋಧಾದಿಗಳಿಗಾಗಿ ವಶನಾಗಿ ಹುಚ್ಚಾಪಟ್ಟೆ ನಡೆಯದೆ, ದೊಡ್ಡವರ ಮಾರ್ಗದಲ್ಲಿಯೇ ನಡೆಯುತ್ತೇನೆಂದೂ ತನ್ನಲ್ಲಿ ಈಶ್ವರನಿದ್ದಾನೆಂದೂ, ಅದೇ ಈಶ್ವರನು ಇತರರಲ್ಲಿಯೂ ಇದ್ದಾನೆಂದು ನಂಬಿ, ಈಶ್ವರನಿಗೆ ದ್ರೋಹವಾಗದಂತೆ ನಡೆಯುವುದೇ ಮನೋನ್ನತಿ. ಆದರೆ ಮಾನವನು ಬಹುಬೇಗ ರಾಗದ್ವೇಷಗಳಿಗೆ ವಶನಾಗಿ ನಡೆಯುತ್ತಾನೆ. ಇತರರನ್ನು ಮೆಚ್ಚಿಸಬೇಕೆಂಬ ದಾಕ್ಷಿಣ್ಯದಿಂದಲೋ, ತನಗೆ ಯೋಗಕ್ಷೇಮ ಹಾನಿಯಾಗುವುದೆಂಬ ಲೋಭದಿಂ ದಲೊ, ತಾನು ಸರಿಯೆಂಬ ಮೋಹದಿಂದಲೋ ಅಪಮಾರ್ಗ ಪ್ರವರ್ತಕನಾಗುತ್ತಾನೆ. ಹಾಗಾಗದಂತೆ ತಡೆಯುವ ಶಕ್ತಿ ಯಾವುದೋ ಅದೇ ಮಾನೋನ್ನತಿ. ನ್ಯಾಯವಾದ, ಧರ್ಮವಾದ ಆತ್ಮವಿನಿಯೋಗವೇ ಮಾನೋನ್ನತಿ ! ಒಮ್ಮೆ ಒಬ್ಬ ಅರಸನು ಯುದ್ಧ ದಲ್ಲಿ ಸೋತು ಶತ್ರುವಿಗೆ ಸೆರೆ ಸಿಕ್ಕಿದನಂತೆ. ಶತ್ರುವು ತನಗೆ ಶರಣಾಗತನಾಗಿ ಸಾಮಂತನಾಗಿರುವುದಾದರೆ ಅವನನ್ನು ಬಿಟ್ಟು ಆತನಿಗೆ ಮೊದಲಿನ ಸ್ಥಾನಮಾನಗಳನ್ನು ಕೊಡುವುದಾಗಿ ಹೇಳಿದನಂತೆ. ಅದಕ್ಕೆ ಸೋತ ಅರಸನು"ನಿನ್ನ ಮೇಲೆ ಎತ್ತಿದ ಕೈಯನ್ನು ನಿನಗೆ ಮುಗಿಯುವುದು ನನ್ನಂತಹವನಿಗೆ ಯೋಗ್ಯವಲ್ಲ. ಎಂದಿದ್ದರೂ ಬಿದ್ದು ಹೋಗುವ ಅಶಾಶ್ವತವಾದ ದೇಹದ ಭೋಗಕ್ಕಾಗಿ ನಾನು ಕೈಮುಗಿದು ಬೇಡುವುದಿಲ್ಲ" ಎಂದನಂತೆ ! ಹಾಗೆ ಶಾಶ್ವತವಾದದ್ದನ್ನು ಆಶಾಶ್ವತಕ್ಕಾಗಿ ಬಲಿಕೊಡದಿರುವುದೇ ಮನೋನ್ನತಿ. ಒಟ್ಟಿನಲ್ಲಿ ಹೇಳಬೇಕೆಂದರೆ ಮಾನೋನ್ನತಿ ಎನ್ನುವುದು ಸಮಾಜವೆಂಬ ಆನೆಯನ್ನು ಅಂಕಿತದಲ್ಲಿಡುವ ಅಂಕುಶ. ಬೇರೆಯ ಮಾತಿನಲ್ಲಿ ಹೇಳುವುದಾದರೆ ಅದನ್ನು 'ಧರ್ಮ' ಎಂದು ಕರೆಯಬಹುದು. ಧರ್ಮಕ್ಕೆ ಬಹು ಮುಖಗಳಿವೆ. ಹುಲಿಯ ಧರ್ಮ ಬೇರೆ, ಹಸುವಿನ ಧರ್ಮ ಬೇರೆ, ಮರದ ಧರ್ಮ ಬೇರೆ, ಬಳ್ಳಿಯ ಧರ್ಮ ಬೇರೆ, ಹೀಗೆ ನಾನಾ ಮುಖವಾಗಿ ಹೆಜ್ಜೆ ಹೆಜ್ಜೆಗೂ ಬಿನ್ನೈಸುವ ಧರ್ಮವನ್ನು ಆರಾಧಿಸುವುದೇ ಮನೋನ್ನತಿ.

ವಿದ್ಯೋನ್ನತಿ ಮೂರನೆಯ ತತ್ವ. ಕಾಯೋನ್ನತಿಯಲ್ಲಿ ದೇಹವನ್ನು ಕುರಿತಂತೆ, ಮಾನೋನ್ನತಿಯಲ್ಲಿ ಮನಸ್ಸನ್ನು ಲಕ್ಷೀಕರಿಸಿದಂತೆ, ವಿದ್ಯೋನ್ನತಿಯಲ್ಲಿ ಬುದ್ಧಿಯನ್ನು ಸೂಕ್ಷ್ಮಗೊಳಿಸಬೇಕು. ಬದುಕಿನ ಹಾದಿಯ ಅಂತ್ಯವನ್ನು ತಿಳಿಸಿಕೊಡುವ ತತ್ವವೇ ವಿದ್ಯೋನ್ನತಿ. ವಿತ್ ಅಂದರೆ ಜ್ಞಾನ. ಆ ಜ್ಞಾನದ ಪ್ರಗತಿ ಆಗಬೇಕು. ಅದೇ ವಿದ್ಯೋನ್ನತಿ. ಹೂವಿನಿಂದ ಹೂವಿಗೆ ಹಾರಿ

ಅದರಲ್ಲಿರುವ ಮಧುವನ್ನು ಸಂಗ್ರಹಿಸುವ ದುಂಬಿಯಂತೆ, ನಾವು ಅಮೃತವನ್ನು ಹುಡುಕಬೇಕು. ಆ ಸಾಮರ್ಥ್ಯವನ್ನು ಕಲ್ಪಿಸಿಕೊಡುವುದೇ ವಿದ್ಯೆ. ಅಂತಹ ವಿದ್ಯೆಯನ್ನು ಸಾಧಿಸುವುದು ವಿದ್ಯೋನ್ನತಿ.

ಬಂಧುಗಳೇ,

ಕಡೆಯದಾಗಿ ನಾನು ಆರಂಭಿಸಿದ ಉಪನಿಶತ್ ಶಾಂತಿ ಮಂತ್ರವನ್ನು ಅರ್ಥೈಸಿ ವಿರಮಿಸುತ್ತೇನೆ.

ಪೂರ್ಣವೆಂದರೆ ಶೂನ್ಯ ಅಥವಾ ಸೊನ್ನೆ. ಅದು ಏನೂ ಇಲ್ಲದ್ದಲ್ಲ, ಎಲ್ಲವನ್ನೂ ಒಳಗೊಂಡದ್ದು ಕೇಳಿ :

ಪೂರ್ಣಮದಃ = ಅದೂ ಪೂರ್ಣ, ಪೂರ್ಣಮಿದಂ ಇದೂ ಪೂರ್ಣ, ಪೂರ್ಣತ್ಪೂರ್ಣಮುದಚ್ಯತೇ ಆ ಪೂರ್ಣದಿಂ ದಲೇ ಈ ಪೂರ್ಣವು ಬಂದಿದೆ; ಪೂರ್ಣಸ್ಯ ಪೂರ್ಣಮಾದಾಯ ಆ ಪೂರ್ಣದಲ್ಲಿ ಈ ಪೂರ್ಣವನ್ನು, ಕಳೆದರೆ, ಪೂರ್ಣ ಮೇವಾವ ಶಿಷ್ಯತೇ ಪೂರ್ಣವೇ ಉಳಿಯುತ್ತದೆ. ನಿಮ್ಮ Mathematics Lecturer ಹೇಳಿಕೊಟ್ಟಂತೆ O–O = O ಅದೇ Infinity.

ಕವಿ ಬೇಂದ್ರೆಯವರು ಹಾಡಿದ ಗೀತೆಯನ್ನು ಕೇಳಿದ್ದೀರಿ. 'ಆ ಅದು ತುಂಬಿ, ಈ ಇದೂ ತುಂಬಿ ಯಾವುದೂ ತುಂಬಿ ಬರದೆ' ಎಂಬ ಹಾಡು. ಅಂದರೆ ಆ ಸಾಗರ ರೂಪಿಯಾದ ಪರಮಾತ್ಮನೂ ತುಂಬಿ ಪೂರ್ಣನಾಗಿದ್ದಾನೆ. ಆ ಪರಮಾತ್ಮ ಸಾಗರ ದಿಂದ ಬೇರ್ಪಟ್ಟು ಬಂದ ಈ ಜೀವಾತ್ಮನೆಂಬ ಹನಿ. ಅದೂ ತನಗೆ ತಾನೇ ಪೂರ್ಣ, ಸಾಗರದ ನೀರಿನ ಹೋಳಲ್ಲ, ಚೂರಲ್ಲ. ಆ ಪರಮಾತ್ಮ ಪೂರ್ಣದಿಂದಲೇ ಈ ಜೀವಾತ್ಮ ಪೂರ್ಣವು ಬಂದದ್ದು. ಆ ಪೂರ್ಣದಲ್ಲಿ ಈ ಪೂರ್ಣವನ್ನು ಕಳೆದರೆ ಪೂರ್ಣವೇ ಉಳಿಯುತ್ತದೆ. ಯಾವ ನಷ್ಟವೂ ಆಗುವುದಿಲ್ಲ. ಜ್ಯೋತಿಯಿಂದ ಮತ್ತೊಂದು ಜ್ಯೋತಿಯನ್ನು ಹತ್ತಿಸಿದರೆ ಜ್ಯೋತಿ ಯೇ ಉಳಿಯುತ್ತದೆ, ಜ್ಯೋತಿ ತಾನಾಗುತ್ತದೆ.

ಆ ಪರಿಪೂರ್ಣತೆಯ ಕಡೆಗೆ ನಿಮ್ಮ ಗಮನ ಹರಿಯಲಿ. 'ನಾನೇನು ಮಹಾ !' ಎಂಬ ಕೀಳರಿಮೆ ಬೇಡ. ನಾವೆಲ್ಲರೂ ಭಗವಂತನ ಅಂಶ ಸಂಭೂತರು ಎಂಬುದನ್ನು ಮರೆಯಬೇಡಿ.

ಉಪನಿಷತ್ತಿನ ಶಾಂತಿ ಮಂತ್ರ ಹೀಗಿದೆ : ನೋಡಿ

**ಓ ಭದ್ರಂ ಕರ್ಣೇಭೀಃ ಶ್ರುಣುಯಾಮ ದೇವಾಃ**
**ಭದ್ರಂ ಪಶ್ಯೇಮಾಕ್ಷಭಿರ್ಯ ಜತ್ರಾಃ**
**ಸ್ಥಿರೈರಂಗೈ ಸ್ತುಷ್ಟುವಾಂಸಸ್ತನೂಭಿಃ**
**ವ್ಯಶೇಮ ದೇವಹಿತಂ ಯದಾಯುಃ**
**ಓಂ ಶಾಂತಿಃ ಶಾಂತಿಃ ಶಾಂತಿಃ**

ಅದರರ್ಥ:

ಎಲೈ ದೇವತೆಗಳಿರಾ, ಕಿವಿಯಿಂದ ಶುಭ್ರವಾದದ್ದನ್ನು ಕೇಳಿಸಿ, ಕಣ್ಣುಗಳಿಂದ ಶುಭವಾದದ್ದನ್ನು ನೋಡಿರುವಂತೆ ಮಾಡಿ. ಸ್ಥಿರ ಅಂಗಾಂಗಗಳುಳ್ಳ ದೇಹವುಳ್ಳವರಾಗಿ ಹೊಗಳುವಂತೆಸಗಿ ಆಯಸ್ಸು ಇರುವವರೆಗೂ ದೇವಹಿತನ್ನು ಸಾಧಿಸುವಂತಾಗಲಿ ! ಎಂದು.

ಗಾಂಧೀಜಿಯವರ ಬಳಿ ಇದ್ದ ಮೂರು ಮಂಗಗಳ ಪ್ರತಿಮೆಗಳಂತೆ ಕೆಟ್ಟದ್ದನ್ನು ಕೇಳದ, ಕೆಟ್ಟದ್ದನ್ನು ನೋಡದ, ಕೆಟ್ಟದ್ದನ್ನು ನುಡಿಯದ ರೀತಿಯಲ್ಲಿ ಸದಾ ಮಂಗಳವನ್ನೇ ಸ್ಮರಿಸಿ ಅನುಷ್ಠಾನಕ್ಕೆ ತರೋಣ.

ಮತ್ತೊಂದು ಮಂತ್ರ

**ಅನ್ಯತ್ ಶ್ರೇಯಃ ಅನ್ಯದುತೇವ ಪ್ರೇಯಃ**
**ತೇ ಉಭೇ ನಾನರ್ಥೇ ಪುರುಷಂ ಸಿನ್ನೀತಃ**
**ತಯೋಃ ಶ್ರೇಯ ಆದದಾನಸ್ಯ ಸಾಧು ಭವತಿ**
**ಹೀಯತೇ ಅರ್ಥಾದ್ಯ ಉ ಪ್ರೇಯೋವೃಣೀತೇ**

ಅಂದರೆ,

ಮಾನವ ಚೇತನದ ತುಡಿತಗಳು ಎರಡು : ಒಂದು ಶ್ರೇಯಸ್ಸು, ಮತ್ತೊಂದು ಪ್ರೇಯಸ್ಸು. ಎರಡರ ಗುರಿಗಳೂ ಬೇರೆ ಬೇರೆ. ಆದರೆ ಎರಡೂ ಪುರುಷನನ್ನು ಕಟ್ಟುತ್ತವೆ. ಅದರಲ್ಲಿ ಶ್ರೇಯಸ್ಸನ್ನು ಅಂಗೀಕರಿಸಿದವನಿಗೆ ಒಳ್ಳೆಯದಾಗುತ್ತೆ. ಶ್ರೇಯಸ್ಸನ್ನು

ಸ್ವೀಕರಿಸದವನು ಜೀವಿತದಲ್ಲಿ ಗುರಿ ತಪ್ಪಿದವನಾಗುತ್ತಾನೆ. ಶ್ರೇಯಸ್ಸನ್ನು ಹಿಡಿದವನಿಗೆ ಮಾತ್ರ ಪೂರ್ಣ ದರ್ಶನ ಸಾಧ್ಯ. ಆ ಪೂರ್ಣದರ್ಶನವೇ ಮಹಾದರ್ಶನ !

ನಾವು ನೀವೆಲ್ಲರೂ ಅಂತಹ ಶ್ರೇಯಸ್ಸಿನ ಕಡೆ ವಾಲೋಣ.

**ಸರ್ವರಿಗೂ ಶುಭವಾಗಲಿ**

**ಮಂಗಳವಾಗಲಿ**

**ವಿಶ್ವಕ್ಕೆ ಶಾಂತಿ ಲಭಿಸಲಿ**

**ಓಂ ತತ್ ಸತ್**

ಭಾಷಣ ಮುಗಿದ ಕೂಡಲೇ ಚಪ್ಪಾಳೆ ಸುರಿಮಳೆ. ಆ ಶುಭಮಯ ಭಾಷಣ ಕೇಳಿ ನಮ್ಮ ನಮ್ಮ ಮನಗಳು ಪ್ರಾಂಜಲಗೊಂಡಿದ್ದವು.

ಇಂತಹ ಪ್ರಾಜ್ಞನ ಪುಣ್ಯ ಪರಿಚಯವೆ ಈ ಕೃತಿಯ ಮೂಲ ಉದ್ದೇಶ. ಶ್ರೀಮಾನ್ ದೇವುಡು ನರಸಿಂಹಶಾಸ್ತ್ರಿಗಳ ಸಂಕ್ಷಿಪ್ತ ಜೀವನ ದರ್ಶನದ ಅನಂತರದಲ್ಲಿ ಅವರ ಕೃತಿಗಳ ಮೂಲಕ ಅವರ ಭೂಮ ವ್ಯಕ್ತಿತ್ವವನ್ನು ಗುರುತಿಸೋಣ.

## ಪರಿಚಯ

---

ದೇವುಡುರವರದು ಬಹುಮುಖ ಪ್ರತಿಭೆ. ಶ್ರೀಯುತರು ಸಾಹಿತಿಗಳಾಗಿ, ಪತ್ರಿಕೋದ್ಯಮಿಗಳಾಗಿ, ಶಿಕ್ಷಣ ತಜ್ಞರಾಗಿ, ನಟರೂ–ನಾಟಕಕಾರರೂ ಆಗಿ ಪ್ರಸಿದ್ಧರಾಗಿದ್ದಾರೆ. ಅವರು ಯಾವುದೇ ಕ್ಷೇತ್ರದಲ್ಲಿರಲಿ, ಅವರದು ಸ್ವತಂತ್ರ ಧೀರ ಮನೋವೃತ್ತಿ. ದೈವಕ್ಕೆ ಧರ್ಮಕ್ಕೆ ವಿನಾ ಮಿಕ್ಕಮತೆ ಯಾರೆದರೂ ಅವರ ತಲೆ ಬಾಗಿದ್ದಿಲ್ಲ. ಜೀವನದಲ್ಲಿ ಆತ್ಮ ಬಲವನ್ನು ವೃದ್ಧಿಸಿಕೊಂಡು ಅನ್ಯರಿಗೆ ಹಂಗಾಗದ ಬದುಕು ಬದುಕಿದವರು. ಎಲ್ಲೂ ಸೋಲರಿಯದ, ಸೋಲೊಪ್ಪದ ನಿರ್ಭೀತ ನಿಲುವು ಅವರದು. ಅವರು ಯಾವತ್ತೂ ಯಾವುದರ ಬಗೆಗೂ ತಮ್ಮ ಬದುಕಿನೊಡನೆ ಕಾಂಪ್ರೊಮೈಸ್ ಮಾಡಿಕೊಳ್ಳುತ್ತಿದ್ದ ವ್ಯಕ್ತಿಯಲ್ಲ. ವಿಶೇಷವೆಂದರೆ ಅವರ ಕಡೆಯ ದಿನಗಳಲ್ಲಿ ಸಕ್ಕರೆ ಕಾಯಿಲೆ ಬಂದು, ಡಾಕ್ಟರು 'ಸಿಹಿ ತಿಂಡಿ ತಿನ್ನಬೇಡಿ' ಅಂದರು. 'ತಿಂದರೆ ಏನಾಗುತ್ತೆ ನೋಡೇಬಿಡ್ತೀನಿ ಅಂದು ೧೯೬೨ರಲ್ಲಿ ನೋಡೇ ಬಿಟ್ಟರು ! ಅಂತಹ ಹಠವಾದಿ. 'ಚಲದೊಳ್ ದುರ್ಯೋಧನಂ' ಅಂದರೆ ಅವನಿಗಿಂತಲೂ ನಾನು ಒಂದು ಗುಂಜಿ ತೂಕ ಹೆಚ್ಚು ಅನ್ನೋ ಸ್ವಭಾವದವರು ಅವರು. ಅಭಿಮತ ನೈಷ್ಠುರ್ಯ ಅವರ ಹುಟ್ಟುಗುಣ. ಆದ್ದರಿಂದ ಅವರು ಯಾವ ಯಾರ ದಾಕ್ಷಿಣ್ಯಕ್ಕೂ ಮಣಿಯುತ್ತಿರಲಿಲ್ಲ. ಆದರೆ ಅಷ್ಟೇ ಪ್ರಮಾಣದ ಮಹಾನ್ ವಿದ್ವನ್ಮಣಿಯಿದ್ದರು. ಅವರ ಗಾಂಭೀರ್ಯ ಮುಖದ ವರ್ಚಸ್ಸುಗಳು ನೋಡಿದವರಲ್ಲಿ ಭಕ್ತಿ ಭಾವ ಮೂಡಿಸುತ್ತಿದ್ದವು. ಅವರ ಆರ್ಷೇಯ ವಿದ್ವತ್ತು, ಅವಾರ್ಚೀನ ಪ್ರಜ್ಞೆ, ಅತ್ಯಮೋಘ ಪ್ರತಿಭೆ, ಆಕರ್ಷಕ ವ್ಯಕ್ತಿತ್ವ – ಇವುಗಳನ್ನು ಗುರುತಿಸಿದ ನಮ್ಮ ಸ್ವತಂತ್ರ ಭಾರತದ ಮೊದಲ ರಾಷ್ಟ್ರಪತಿ ಡಾ. ರಾಜೇಂದ್ರಪ್ರಸಾದ್‌ರವರು ಪೂರ್ವ ಸಂಪ್ರದಾಯದಲ್ಲಿ ನಾಡಿನ, ನೂರೊಂದು ಮಂದಿ ವೈದಿಕ ವಿದ್ವಾಂಸರನ್ನು ಕರೆಸಿ, ಕಾಶಿಯಲ್ಲಿ ಪಾದ ತೊಳೆದು, ಪೂಜಿಸಿ ಅರ್ಚಿಸಿ ಗೌರವಿಸಿದರು. ಅಂದಿನ ಆ ಗೌರವ ಮನ್ನಣೆಗಳನ್ನು ಪಡೆದವರಲ್ಲಿ ದೇವುಡು ನರಸಿಂಹಶಾಸ್ತ್ರಿಗಳು ಒಬ್ಬರು ಎಂಬುದು ನಮ್ಮೆಲ್ಲರ ಹೆಮ್ಮೆ !

ದೇವುಡು ಅವರದು ಸುಪುಷ್ಟ ದೇಹ. ಸುಂದರ ಹಾಗೂ ಆಕರ್ಷಕ ಮುಖಮಂಡಲ. ಗಂಡು ಸ್ವಭಾವದ ದುಂಡು ವ್ಯಕ್ತಿ. ಶ್ರೀಯುತರು ೧೮೯೬ ಡಿಸೆಂಬರ್‌ನಲ್ಲಿ ಮೈಸೂರಿನಲ್ಲಿ ಜನಿಸಿದರು. ಅರಮನೆ ರಾಜಪುರೋಹಿತರ ಮನೆತನ ಅವರದು. ಸಾರಸ್ವತ ಮನೆತನವೂ ಹೌದು. ಇವರ ಹಿರಿಯರು ಪ್ರಕಾಂಡ ಪಂಡಿತರು. ಚಿಕ್ಕಂದಿನಲ್ಲಿಯೇ ತಂದೆಯನ್ನು ಕಳೆದುಕೊಂಡ ಇವರು ತಮ್ಮ ತಾಯಿಯ ವಾತ್ಸಲ್ಯ ವೃಕ್ಷದಲ್ಲಿ ಬೆಳೆದರು. ತಮ್ಮ ಮನೆತನದ ಸಂಪ್ರದಾಯ ಪರವಾದ ಜೀವನ, ಬಾಹ್ಯಪ್ರಪಂಚದ ಜಾನಪದೀಯವಾದ ಬದುಕು ಎರಡೂ ಅವರ ಮನಸ್ಸನ್ನು ಕಟ್ಟಿದುವು. ಅವರು ತಮ್ಮ ಬದುಕನ್ನು ತಾವೇ ರೂಪಿಸಿಕೊಂಡರು. ಅವರ ಬದುಕಿನ ಶಿಲ್ಪಿ ಅವರೇ. ಶಾಲೆಯಲ್ಲಂತೂ ಬಾಲಕ ದೇವುಡುರವರು ಅತಿ ಚುರುಕಿನಿಂದ ಗ್ರಹಿಸಿ, ತಮ್ಮ ಒಂಬತ್ತನೇ ವಯಸ್ಸಿಗೆ ಬರುವಷ್ಟ

ರಲ್ಲಿ ರಾಮಾಯಣ, ಮಹಾಭಾರತ, ಭಾಗವತಗಳನ್ನು ಓದಿ ಮುಗಿಸಿದ್ದರು. ಅಲ್ಲದೆ ತಮ್ಮ ಹದಿನೈದನೇ ವಯಸ್ಸಿನಲ್ಲಿ ಛಂದೋಬದ್ಧವಾಗಿ ಕವನಗಳನ್ನು ಬರೆಯುತ್ತಿದ್ದರು. ಅವರಿಗೆ ಕನ್ನಡ, ಸಂಸ್ಕೃತ, ಇಂಗ್ಲಿಷ್ ಮತ್ತು ತೆಲಗು ಈ ನಾಲ್ಕೂ ಭಾಷೆಗಳಲ್ಲಿ ವಿಶೇಷ ಪ್ರಭುತ್ವವಿದ್ದಿತು. ಅದರಲ್ಲಿ ಪ್ರತಿಭೆ ಮತ್ತು ಪಾಂಡಿತ್ಯವನ್ನು ಮೇಳೈಸಿ, ಅದರ ರಚನೆಗೆ ಒಂದು ಬಗೆಯ ಅಚ್ಚುಕಟ್ಟು, ಬಿಗುಹು, ಬಂಧುರತೆ ಒದಗಿಸಿವೆ. ಅವರ ಹೃದ್ಯವಾದ ಗದ್ಯ ನಮ್ಮನ್ನು ಓದಿಸಿಕೊಂಡು ಹೋಗುತ್ತದೆ.

ಡಾ. ಎಸ್. ರಾಧಾಕೃಷ್ಣನ್‌ರವರು ಮೈಸೂರು ಮಹಾರಾಜಾ ಕಾಲೇಜಿನಲ್ಲಿ ತಮ್ಮ ಗುರುಗಳಾಗಿದ್ದರೆಂದು ಹೇಳಿಕೊಳ್ಳಲು ಹೆಮ್ಮೆಪಡುತ್ತಾರೆ ದೇವುಡು. ಡಾ. ರಾಧಾಕೃಷ್ಣನ್ ಅವರು ತತ್ವಶಾಸ್ತ್ರದ ಪ್ರಾಧ್ಯಾಪಕರು, ಪ್ರೊ. ಹಿರಿಯಣ್ಣನವರು ಸಂಸ್ಕೃತ ಬೋಧಿಸಿದ ಗುರುಗಳು. ೧೯೧೬ರಿಂದ ೧೯೨೨ರವರೆಗಿದ್ದು, ಬಿ.ಎ. ಮತ್ತು ಎಂ.ಎ. ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿ, ಮಹಾರಾಜ ಕಾಲೇಜಿನಿಂದ ಹೊರಬಂದ ಮೇಲೆ ಸದ್ವಿದ್ಯಾಶಾಲೆಯಲ್ಲಿ ಅಧ್ಯಾಪಕರಾಗಿ ಸೇವೆ ಸಲ್ಲಿಸಿದರು. ಆದರೆ ಸ್ವತಂತ್ರ ಮನೋಭಾವದ ಶ್ರೀಯುತರು, ಬೆಂಗಳೂರಿಗೆ ತಮ್ಮ ಕುಟುಂಬವನ್ನು ವರ್ಗಾಯಿಸಿ, ಅಲ್ಲಿ ತಮ್ಮದೇ ಆದ 'ಆರ್ಯ ವಿದ್ಯಾಶಾಲಾ' ಎಂಬ ಶಾಲೆಯೊಂದನ್ನು ತೆರೆದು, ಅದರ ಮುಖ್ಯೋಪಾಧ್ಯಾಯರಾಗಿದ್ದುಕೊಂಡು, ತಮ್ಮ ಆದರ್ಶಗಳು ಆ ಶಾಲೆಯ ಮೂಲಕ ಪ್ರಕಾಶಕ್ಕೆ ಬರಲು ಕಾರಣರಾದರು. ಶಾಲೆಯ ಅಧ್ಯಾಪಕತ್ವವನ್ನು ಬೇರೆಯವರಿಗೆ ವಹಿಸಿಕೊಟ್ಟು 'ನವಜೀವನ' ಎಂಬ ಪತ್ರಿಕೆಯ ಸಂಪಾದಕತ್ವ ಸ್ವೀಕರಿಸಿದರು. ಒಂದು ಅಮೆಚ್ಯೂರ್ ನಾಟಕ ಕಂಪೆನಿಯ ಸದಸ್ಯರಾಗಿದ್ದುಕೊಂಡು, ಅಲ್ಲಿ ಆಡುತ್ತಿದ್ದ ನಾಟಕಗಳಲ್ಲಿ ಪ್ರಧಾನ ಪಾತ್ರಗಳಲ್ಲಿ ರಂಜಿಸಿದರು. ಮಾರ್ಕಂಡೇಯದಲ್ಲಿ ಮೃಕಂಡುಮುನಿ, ಸಿ.ಕೆ. ವೆಂಕಟರಾಮಯ್ಯನವರ 'ನಚಿಕೇತ'ದಲ್ಲಿ ಯಮ, 'ಮಂಡೋದರಿ'ಯಲ್ಲಿ ರಾವಣ, ಮಾಸ್ತಿಯವರ 'ಯಶೋಧರಾ'ದಲ್ಲಿ ಬುದ್ಧ ಇಂತಹ ಪಾತ್ರಗಳು ಅವರಿಂದ ಬೆಳಗಿ ದವು. ವರದಾಚಾರ್ಯರ ವೃತ್ತಿ ನಾಟಕ ಕಂಪೆನಿಯಲ್ಲಿ ನಟರಾಗಿ ನಟಿಸಿದರು ; 'ಚಿರಂಜೀವಿ' ಎಂಬ ಚಲನಚಿತ್ರದ ತಯಾರಕ ಪಾಲುದಾರರೂ ಆಗಿದ್ದರು. ಕೆಲಕಾಲ ಪುರಸಭೆಯ ಕೌನ್ಸಿಲರ್ ಆಗಿ ಎಲೆಕ್ಟ್ ಆಗಿ, ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿ ಸೆಲೆಕ್ಟ್ ಅಗಿ ತಮ್ಮ ನಿಷ್ಠಾಪೂರ್ಣವಾದ ಜನಸೇವೆ ಸಲ್ಲಿಸಿದ್ದಾರೆ.

ಶ್ರೀಮತಿ ಗೌರಮ್ಮನವರು ದೇವುಡುರವರ ಬಾಳನ್ನು ಬೆಳಗಿಸಿದ ಭಾಗ್ಯ ದೇವತೆ. ಅವರಿಂದ ಮೂರು ಗಂಡು, ಒಂದು ಹೆಣ್ಣು ಪಡೆದ ತಂದೆಯಾಗಿದ್ದಾರೆ. ಅವರ ಹಿರಿಯ ಮಗ ಡಿ. ಎನ್. ರಾಮು ಕನ್ನಡ ಎಂ.ಎ ಪಾಸು ಮಾಡಿ, 'ಕನ್ನಡ ಸಾಹಿತ್ಯ ಮತ್ತು ರಾಜಾಶ್ರಯ' ಎಂಬ ಕಿರು ಹೊತ್ತಗೆಯನ್ನು ಪ್ರಕಟಿಸಿ ಬಹುಬೇಗ ಕಣ್ಣು ಮುಚ್ಚಿಕೊಂಡರು. ಇದು ದೇವುಡುರವರಿಗಷ್ಟೇ ಅಲ್ಲದೆ ಕನ್ನಡ ಸಾಹಿತ್ಯಕ್ಕೇ ತುಂಬಲಾರದ ನಷ್ಟ. ಮಗ ಚಿಕ್ಕಂದಿನಲ್ಲಿಯೇ ಮಡಿದ. ಮಗಳೂ ಚಿಕ್ಕಂದಿನಲ್ಲಿಯೇ ವಿಧವೆಯಾದಳು. ಇದು ಭರಿಸಲಾಗದ ದುಃಖ. ಅದರೆ ಇನ್ನಿಬ್ಬರು ಗಂಡು ಮಕ್ಕಳು, ಗಂಗಾಧರ ದೇವುಡು ಮತ್ತು ಸದಾಶಿವ ದೇವುಡು ಸುಸ್ಥಿತಿಯಲ್ಲಿದ್ದಾರೆ. ಇದು ಹರ್ಷ. ಹೀಗೆ ಬದುಕಿನಲ್ಲಿ ಅರವತ್ತೆರಡು ವಸಂತ ಮಾಗಿಗಳನ್ನು ಕಂಡಿದ್ದಾರೆ ದೇವುಡು.

ದೇವುಡುರವರು ಸುಮಾರು ಐವತ್ತು ಮೌಲಿಕ ಗ್ರಂಥಗಳನ್ನು ಕನ್ನಡಕ್ಕೆ ಕಾಣಿಕೆಯಾಗಿ ಕೊಟ್ಟಿದ್ದಾರೆ. ಇವು ಸಂಖ್ಯೆಯಲ್ಲಷ್ಟೇ ಅಲ್ಲ, ಸತ್ವದಲ್ಲೂ ದೊಡ್ಡವು. ಕಾದಂಬರಿ ರಚನೆಯಲ್ಲಿ ಅದರಲ್ಲೂ ಪೌರಾಣಿಕ ಕಾದಂಬರಿ ರಚನೆಯಲ್ಲಿ ಅವರು ಸಿದ್ಧಹಸ್ತರು. ಅದರಲ್ಲೇ ಅವರ ಹೆಗ್ಗಳಿಕೆ ಇದೆ. ಅವರ ಪೌರಾಣಿಕ ಕಾದಂಬರಿಗಳಾದ ಮಹಾಬ್ರಾಹ್ಮಣ, ಮಹಾಕ್ಷತ್ರಿಯ ಮತ್ತು ಮಹಾದರ್ಶನ ಇವು ಕನ್ನಡಕ್ಕಷ್ಟೇ ಅಲ್ಲ, ಇಡೀ ಭಾರತೀಯ ಸಾಹಿತ್ಯಕ್ಕೇ ಮಾದರಿಯಾಗಿವೆ.

ದೇವುಡು ಅವರ ಕೃತಿಗಳು ಅವರ ಬದುಕಿನಷ್ಟೇ ಗಹನವೂ ಗಂಭೀರವೂ ಆದವುಗಳು. ಅವರು ಬರೆದಂತೆ ಬದುಕಿದರು; ಅವರು ಬದುಕಿದ್ದನ್ನೇ ಬರೆದರು. ಮಹಾಬ್ರಾಹ್ಮಣ, ಮಹಾಕ್ಷತ್ರಿಯ, ಮಹಾದರ್ಶನ – ಇವು ಅಪರೂಪದ ಕಾದಂಬರಿಗಳು. ಇವುಗಳಲ್ಲದೆ ಸಾಹಸಪರ್ವ (೧೯೧೨), ಕಳ್ಳರಕೂಟ (೧೯೨೬), ಅಂತರಂಗ (೧೯೩೧), ಚಿನ್ನಾ (ಅವಳ ಕಥೆ) (೧೯೫೨), ಗೆದ್ದವರು ಯಾರು ? ಎರಡನೆಯ ಜನ್ಮ, ಮಲ್ಲಿ (೧೯೫೩) ಮೊದಲಾದ ಕಾದಂಬರಿಗಳನ್ನೂ, ಮೂರು ಕನಸು (೧೯೪೪) ಹೊಸ ಗನ್ನಡ ಪಂಚತಂತ್ರ, ಕಥಾಸರಿತ್ಸಾಗರ, ವೇದದ ಕಥೆಗಳು, ದೇಶಾಂತರದ ಕಥೆಗಳು, ಬುದ್ಧಿಯ ಕಥೆಗಳು, ಮಕ್ಕಳಿಗಾಗಿ ನೀತಿ ಬೋಧಕ ಕಥಾ ಪುಸ್ತಕ ಮಾಲೆಯನ್ನು ಆರಂಭಿಸಿ ಸಾಕಷ್ಟು ಸಂಖ್ಯೆಯ ಉತ್ತಮ ಕೃತಿಗಳನ್ನು ಕೊಟ್ಟರು. ಕ್ರಿಸ್ತನ ವಿಚಾರಣೆ ಎಂಬ ನಾಟಕ ಬರೆದರು. ಮೇಘ ಸಂದೇಶ, ಕರ್ನಾಟಕ ಸಂಸ್ಕೃತಿ (೧೯೩೩), ಮೀಮಾಂಸಾ ದರ್ಪಣ (೧೯೩೮) ಕಾಳಿದಾಸನ ಕೃತಿಗಳು (೧೯೪೪), ಭಾರತದ ಮಹಾಪುರುಷರು (೧೯೪೬), ಸಂಗ್ರಹ ರಾಮಾಯಣ (೧೯೫೧), ಮಹಾಭಾರತ ಸಂಗ್ರಹ I-III (೧೯೫೬–೧೯೫೮–೧೯೬೦) ರಾಮಾಯಣವೂ ಭಗವದ್ಗೀತೆಯೂ (೧೯೫೮), ಉಪನಿಷತ್ತು (೧೯೫೯). ವಿವೇಕಾನಂದರ ಭಾಷಣ (ಅನುವಾದ) ಇವು ಕೆಲವು.

ಜ್ಞಾನದಾಹಿಗಳಾದ ದೇವುಡುರವರು ಬೆಂಗಳೂರು ಶಂಕರಮಠದಲ್ಲಿದ್ದ ಮಹಾಮಹೋಪಾಧ್ಯಾಯ ವೈದ್ಯನಾಥಶಾಸ್ತ್ರೀ ಅವರಲ್ಲಿ ಮೀಮಾಂಸಾ ವ್ಯಾಸಂಗ ಮಾಡಿ, 'ಮೀಮಾಂಸಾ ದರ್ಪಣ' ಎಂಬ ಗ್ರಂಥವನ್ನು ಕನ್ನಡಕ್ಕೆ ಕೊಟ್ಟರು. 'ಯೋಗವಾಸಿಷ್ಠ'ದ ೨೪ ಸಂಪುಟಗಳನ್ನು ಅರಮನೆಯ ಪ್ರಕಾಶನಕ್ಕಾಗಿ ಅನುವಾದಿಸಿ ಕೊಟ್ಟರು. ಥೋರೋ ಎಂಬುವನ 'ವಾಲ್ಡನ್' ಎಂಬ ಇಂಗ್ಲಿಷ್ ಗ್ರಂಥವನ್ನು ಕನ್ನಡಿಸಿದರು.

೪೧

ಹೀಗೆ ಅನುವಾದ, ಭಾವಾನುವಾದ ಹಾಗೂ ಸ್ವತಂತ್ರ ಕೃತಿಗಳನ್ನಿತ್ತು ಕನ್ನಡಮ್ಮನ ಮಡಿಲು ತುಂಬಿದ್ದಾರೆ, ಮುಡಿಯ ಸಿಂಗರಿಸಿದ್ದಾರೆ. ಶ್ರೀಯುತರು ೨೪.೧೦.೧೯೬೨ರಂದು ನಿಧನರಾದರು. ಅವರ 'ಮಹಾಕ್ಷತ್ರಿಯ'ಕ್ಕೆ ಅದೇ ವರ್ಷ ಮರಣೋತ್ತರ ಕೇಂದ್ರ ಸಾಹಿತ್ಯ ಅಕಾಡೆಮಿ ಬಹುಮಾನ ಬಂದಿತು. 'ಮಹಾದರ್ಶನ' ಅವರು ತೀರಿಕೊಂಡ ಮೇಲೆ ೧೯೬೭ರಲ್ಲಿ ಪ್ರಕಟವಾಯಿತು. ಅವರು ಬರೆಯದೇ ಇದ್ದ, ಆದರೆ ಬರದೇ ಬರೆವೆನೆಂದಿದ್ದ ಆದಿಶಂಕರರ ದಿವ್ಯ ಜೀವನವನ್ನು ಕುರಿತ 'ಮಹಾಸಂನ್ಯಾಸಿ' ಹೊರಬರಲೇ ಇಲ್ಲ. ಅವರ ಹೃದಯದಲ್ಲೇ ರೂಪುಗೊಳ್ಳುತ್ತಿದ್ದ ಆ ಕೃತಿಯು ಅವರ ಭೌತಿಕ ದೇಹದ ಜೊತೆಯಲ್ಲಿಯೇ ಬಾರದ ಹಾದಿಗೆ ಹೋಯಿತು. !

•

## ಅವಲೋಕನ

---

ದೇವುಡುರವರ ಸಾಹಿತ್ಯ ಸಂಪತ್ತು ವಿಪುಲವಾದದ್ದು, ವಟವೃಕ್ಷದಂತೆ ಹಲವು ಶಾಖೆಗಳ ಬಿಳಿಲು ಬಿಟ್ಟು ಬೆಳೆದಿದೆ. ಸ್ಥೂಲವಾಗಿ ಕತೆ, ಕಾದಂಬರಿ, ನಾಟಕ, ವಿಮರ್ಶೆ, ಸಂಪಾದಿತ, ಅನುವಾದಿತ ಮತ್ತು ಜಾನಪದ – ಎಂದು ಎಂಟು ಭಾಗಗಳಾಗಿ ವಿಂಗಡಿಸಬಹುದು.[೧]. ಅಂತೆಯೇ ಕತೆಗಳನ್ನು ಭಾರತೀಯ ಮತ್ತು ಭಾರತೀಯೇತರ ಎಂತಲೂ, ಕಾದಂಬರಿಗಳನ್ನು ಸಾಮಾಜಿಕ, ಐತಿಹಾಸಿಕ ಮತ್ತು ಪೌರಾಣಿಕ ಎಂತಲೂ, ಅನುವಾದಗಳಲ್ಲಿ ಸಂಸ್ಕೃತ ಮತ್ತು ಇಂಗ್ಲಿಷ್ ಭಾಷೆಯವೆಂತಲೂ ವಿಭಜಿಸಿಕೊಳ್ಳಬಹುದು. ಇವುಗಳಲ್ಲಿ ಕೆಲವು ಕೃತಿಗಳ ಮೇಲೆ ಹಕ್ಕಿನೋಟ ಹರಿಸೋಣ[೨].

---

| | |
|---|---|
| ೧.[೧] ಕತೆ | : ಮೂರು ನಸು, ಹೊಸಗನ್ನಡ ಪಂಚತಂತ್ರ, ವೇದದ ಕಥೆಗಳು, ದೇಶಾಂತರದ ಕಥೆಗಳು, ಯವನ ಪುರಾಣ, ಸೋಲೋ ಗೆಲುವೋ, ಘಾಟಿ ಮುದುಕ, ಅಲ್ಲಿ ಇಲ್ಲಿ ಕಥೆಗಳು. ಮನಸ್ಸಿಗೆ ಒಪ್ಪುವ ಕಥೆಗಳು (ಇತ್ಯಾದಿ ಮಕ್ಕಳ ಸಾಹಿತ್ಯ ಕೃತಿಗಳು) |
| ೨. ಕಾದಂಬರಿ | : ಸಾಹಸವರ್ಮ, ಕಳ್ಳರ ಕೂಟ, ಅಂತರಂಗ, ಮಯೂರ, ಎರಡನೆಯ ಜನ್ಮ, ಮಲ್ಲಿ, ಚಿನ್ನಾ (ಅವಳ ಕಥೆ), ಡಾ. ವೀಣಾ, ಗೆದ್ದವರು ಯಾರು ? ಮಹಾಬ್ರಾಹ್ಮಣ, ಮಹಾಕ್ಷತ್ರಿಯ, ಮಹಾದರ್ಶನ, |
| ೩. ನಾಟಕ | : ಕ್ರಿಸ್ತನ ವಿಚಾರಣೆ |
| ೪. ವಿಮರ್ಶೆ | : ಕಾಳಿದಾಸನ ಕೃತಿಗಳು, ರಾಮಾಯಣವೂ ಭಗವದ್ಗೀತೆಯೂ, (ಮೂಲ ಸಂಸ್ಕೃತ) |
| ೫. ಸಂಪಾದಿತ | : ಉಪನಿಷತ್ತು, ಸಂಗ್ರಹ ರಾಮಾಯಣ, ಮಹಾಭಾರತ ಸಂಗ್ರಹ ಸಂಪುಟ I, II ಮತ್ತು III |
| ೬. ಅನುವಾದಗಳು | : ಕಥಾಸರಿತ್ಸಾಗರ, ಮೇಘ ಸಂದೇಶ, ವಾಲ್ಡನ್, ಮೀಮಾಂಸಾ ದರ್ಪಣ, ಯೋಗವಾಸಿಷ್ಠ (೨೪ ಸಂಪುಟಗಳು), ವಿವೇಕಾನಂದ ಭಾಷಣ |
| ೭.ವ್ಯಕ್ತಿ ಚಿತ್ರಗಳು | : ಭಾರತದ ಮಹಾಪುರುಷರು |
| ೮.ಜಾನಪದ | : ಕರ್ನಾಟಕ ಸಂಸ್ಕೃತಿ |

---

೨ಗ್ರಂಥಾಭಾವ ಮತ್ತು ಪುಸ್ತಕ ಪುಟಮಿತಿ ಕಾರಣ ಈ ಮುಂದೆ ಕೆಲವೇ ಕೃತಿಗಳನ್ನು ಅವಲೋಕಿಸಲಾಗಿದೆ.

# ೧. ಕಥೆ

**ಮಹಾಭಾರತದ ಮಹಾಪುರುಷರು**

'ಇದುವರೆಗೆ ಕನ್ನಡದಲ್ಲಿ ಭಾರತಾಧ್ಯಯನವು ತೀವ್ರವಾಗಿ ನಡೆದಿಲ್ಲ. ಕನ್ನಡದಲ್ಲಿ ಪಂಪಭಾರತ, ಗದುಗಿನ ಭಾರತ, ಜೈಮಿನಿ ಭಾರತ ಮೊದಲಾದ ಪದ್ಯ ಗ್ರಂಥಗಳೂ, ಅರಮನೆಯದೊಂದು, ದೇವಶಿಖಾಮಣಿಯರದು ಒಂದು, ಗಳಗನಾಥರ ದೊಂದು– ಹೀಗೆ ಮೂರು ಗದ್ಯಗ್ರಂಥಗಳು ಇದ್ದರೂ ಜನರ ಮನಸ್ಸಿಗೆ ಇನ್ನೂ ಹೆಚ್ಚಿನ ಸಂಸ್ಕಾರವಾಗಲು ಸಾಧನವಾಗಲಿ ಎಂದು ಹೊಸ ಮಾದರಿಯ ಈ ಸಣ್ಣ ಪ್ರಯತ್ನವು ನಡೆದಿದೆ' – ದೇವುಡುರವರ ಈ ಪ್ರಯತ್ನದ ಫಲವೇ 'ಭಾರತದ ಮಹಾ ಪುರುಷರು'.

'ಇದರಲ್ಲಿ ಮಹಾಭಾರತದ ಕವಿ ವ್ಯಾಸನ ಜನನ, ಜೀವನ, ಸಾಧನೆ ಸಿದ್ಧಿಗಳನ್ನು ಚಿತ್ರಿಸಿದ್ದಾರೆ. ಅದೇ ರೀತಿ ಅರುಣಿ, ಉಪಮನ್ಯು, ಉದಂಕ ಮೊದಲಾಧ ವೇದಕಾಲದ ಗುರುಶಿಷ್ಯರ, ಪುರೂರವ, ನಹುಷ, ಯಯಾತಿ, ಶಕುಂತಲೆ, ಭೀಷ್ಮ, ಶ್ರೀಕೃಷ್ಣ ಮೊದಲಾದ ಇತಿಹಾಸಕಾಲದ ಮಹಾನುಭಾವರ ಕಿರುಪರಿಚಯ ಮಾಡಿಕೊಟ್ಟಿದ್ದಾರೆ. ಅಂತೆಯೇ ಋಗ್ವೇದ, ಶತಪಥ ಬ್ರಾಹ್ಮಣ, ಕಥಾಸರಿತ್ಸಾಗರ, ಮಹಾಭಾರತ ಮೊದಲಾದೆಡೆಗಳಲ್ಲಿ ಸಿಕ್ಕುವ ಪುರೂರವನ ಕಥೆಯನ್ನು ಇಲ್ಲಿ ಕ್ರೋಢೀಕರಿಸಿದ್ದಾರೆ. ಆ ಎಡೆಗಳಲ್ಲಿ ಸಿಗುವ ಅವನ ಕಥೆಯಲ್ಲಿ ಅಲ್ಪ ಸ್ವಲ್ಪ ವ್ಯತ್ಯಾಸವಿದೆ. ಅದನ್ನಿಲ್ಲಿ ಸರಿಪಡಿಸಿ ಸಾಧುವಾದ ರೂಪವೊಂದನ್ನು ಕೊಟ್ಟಿದ್ದಾರೆ.

ಶೈಲಿ ಸರಳ, ಭಾಷೆ ಬಂಧುರ, ಹೃದ್ಯವಾದ ಗದ್ಯ ಇಲ್ಲಿದೆ.

**ಯವನ ಪುರಾಣ**

ಗ್ರೀಸ್ ದೇಶದಲ್ಲಿ ಒಬ್ಬ ಅರಸನಿದ್ದನು. ಅವನಿಗೆ ಮೂರು ಜನ ಹೆಣ್ಣುಮಕ್ಕಳು. ಅವರು ಮೂವರೂ ಚೆಲಯವೆಯರೇ. ಆದರೂ ಹಿರಿಯವಳು ಎಲ್ಲರಿಗಿಂತ ಚೆಲುವೆ. ಅವಳನ್ನು ನೋಡಿದವರೆಲ್ಲ 'ಇದು ಯಾವುದೋ ದೇವಲೋಕದ ಹೆಣ್ಣು ಎಲ್ಲಿಯೋ ಹಾದಿ ತಪ್ಪಿ ಇಲ್ಲಿಗೆ ಬಂದಿದೆ' ಎನ್ನುವರು. ಅವಳ ಹೆಸರು ಸೈಕಿ : (ಪುಟ ೩೯)

ಈ ರೀತಿ ಮಕ್ಕಳಿಗೆ ಸರಳವಾದ ಭಾಷೆಯಲ್ಲಿ ಕತೆ ಹೇಳುತ್ತಾ ಹೋಗುತ್ತಾರೆ ದೇವುಡು. ಯವನ ಪುರಾಣ ಭಾಗ ೧ ಮತ್ತು ಭಾಗ ೨ – ಈ ಎರಡರಲ್ಲೂ ಗ್ರೀಸ್ ದೇಶದ ಪುರಾಣಗಳಿಂದ ಆರಿಸಿಕೊಂಡ ಕಥಾವಸ್ತುವನ್ನೇ ಗದ್ಯ ರೂಪದಲ್ಲಿಟ್ಟಿದ್ದಾರೆ. ಗ್ರೀಕರ ದೇವತೆಗಳಾದ ಜ್ಯೂಸ್, ಆಫ್ರೊಡೈಟಿ ಮೊದಲಾದವರೆಲ್ಲರ ಬದುಕಿಗೆ ಸಂಬಂಧಪಟ್ಟ ಕತೆಗಳಿವೆ. ಯವನ ಪುರಾಣ ಭಾಗ ೧ ಮತ್ತು ಭಾಗ ೨ ಎರಡರಿಂದ ಒಟ್ಟು ಹನ್ನೊಂದು ಕತೆಗಳಿವೆ. ಕ್ರಮವಾಗಿ ದೇವರ ದಯೆ, ಮಾತಿಗೆ ತಪ್ಪಿದ ದೊರೆ, ಗ್ರೀಕರ ಭೀಮಸೇನ, ಹೊಟ್ಟೆಯ ಕಿಚ್ಚು, ಆರ್ಗೋ ನಾವಿಕರು ಮತು ಮಗ, ತಾಯಿ ಮಕ್ಕಳು, ವನ ಕಾಣಿಕೆ, ಹಣೆಯ ಬರಹ, ಹೊಟ್ಟೆಯ ಕಿಚ್ಚು, ಅಣ್ಣ ತಂಗಿಯರು – ಈ ಕತೆಗಳು ಹೋಮರನ ಇಲಿಯಡ್ ಮತ್ತು ಒಡಿಸ್ಸಿ, ಗ್ರೀಕ್‌ನ ರತ್ನತ್ರಯರಾದ ಈಸ್ಕೈಲಸ್, ಸೋಫೋಕ್ಲಿಸ್ ಮತ್ತು ಯೂರಿಪಿಡೀಸರ ರುದ್ರ ನಾಟಕಗಳು (Tragedies) ಹಾಗೂ ಗ್ರೀಕ್ ಪುರಾಣ (Mythology) ಗಳಿಂದ ಪಡೆದ ಗ್ರೀಕ್ ವೀರರ, ಗ್ರೀಕ್ ದೇವತೆಗಳ ದಿವ್ಯ ಭವ್ಯ ಕಥಾನಕಗಳು. ಓದಿದ್ದನ್ನು ಅರಗಿಸಿಕೊಂಡು ಅವಕ್ಕೊಂದು ಹೊಸ ರೂಪ ಕೊಟ್ಟಿದ್ದಾರೆ.

ಅಂತೆಯೇ ದುರಂತ ವಸ್ತುವಿನ್ಯಾಸವು (Tragic Element) ಗ್ರೀಕ್ ಸಾಹಿತ್ಯದಿಂದ ಆಮದಾಗಿ ಬಂದು ಕನ್ನಡ ಸಾಹಿತ್ಯದಲ್ಲಿ ಬೆರೆಯಿತು. ಗ್ರೀಕ್ ಸಾಹಿತ್ಯದ ತುಸು ರುದ್ರಾಂತ ಪರಿಚಯವಾಗುವುದರ ಜೊತೆಗೆ ಅವರ ಜಾನಪದೀಯ ಆಚರಣೆಗಳು, ನಂಬಿಕೆಗಳು, ದೇವತೆಗಳು, (Tragedies) ಇವೆಲ್ಲವುಗಳು ಪರಿಚಯವಾಗುವುದು ಈ ಬಗೆಯ ರಚನೆಯಿಂದಾಗಿ ದೇವುಡು ಕನ್ನಡ ಸಾಹಿತ್ಯಕ್ಕೆ ಹೊಸ ಆಯಾಮವನ್ನೊದಗಿಸಿ ಕೊಟ್ಟರಲ್ಲದೆ ಮಕ್ಕಳ ಸಾಹಿತ್ಯ ರಚನೆಗೆ ಚಾಲನೆ ಕೊಟ್ಟರು. ಈ ದಿಸೆಯಲ್ಲಿ ಅವರ ಸಾಹಿತ್ಯಸೇವೆ ಶ್ಲಾಘನೀಯ.

**ಸೋಲೋ–ಗೆಲವೋ**

ಓ ಹೆನ್ರಿಯ ಕಥೆಗಳನ್ನು ನೆನಪಿಗೆ ತರುವ ಒಂದೇ ವಸ್ತುವಿನ ಮೂರು ಕಥಾಸರಣಿಗಳನ್ನು ಕಾಣುತ್ತೇವೆ 'ಸೋಲೋ–ಗೆಲವೋ' ಕೃತಿಯಲ್ಲಿ. ಇದರಲ್ಲಿ ಸೋಲೋ–ಗೆಲವೋ, ಇದು ನಿಜವೇ ? ಮತ್ತು ಅದರ ಫಲ – ಎಂಬ ಮೂರು ಕಥೆಗಳಿವೆ. ಮೂರೂ ಒಂದೇ ಸೂತ್ರದ ಮೂರು ಮಣಿಗಳು. ಅಂದರೆ ಪ್ರೇಮದಾಂಪತ್ಯದ ಮೂರು ಮುಖಗಳು. ಮೊದಲನೆಯದರಲ್ಲಿ

ತರುಣ ತರುಣಿಯರಿಬ್ಬರು ಪ್ರಣಯಿಗಳಾಗುತ್ತಾರೆ. ಎಂಥದೇ ಸಾಮಾಜಿಕ ಪ್ರತಿಭಟನೆ ಇದ್ದರೂ ಎದುರಿಸುತ್ತಾರೆ. ಪ್ರೇಮಕ್ಕೆ ಜಾತಿ, ಮತ, ಬಡವ, ಬಲ್ಲಿದ ಎಂಬ ಭೇದ ತಿಳಿದಿಲ್ಲ ಎಂಬುದನ್ನು ತೋರಿಸಿಕೊಡುತ್ತಾರೆ. ಎರಡನೆಯದರಲ್ಲಿ, ಗಂಡ ಹೆಂಡತಿ ಇದ್ದಾರೆ. ಒಂದು ಮಗುವೂ ಇದೆ. ಆದರೆ ಪರಸ್ಪರ ಹೊಂದಾಣಿಕೆ ಇಲ್ಲ. ಇಬ್ಬಂದಿ ಸಂಸಾರ. ಆದರೂ ಘಟನೆಯೊಂದರ ಪರಿಣಾಮವಾಗಿ ಒಬ್ಬರಿಗೊಬ್ಬರು ಅರ್ಥಮಾಡಿಕೊಂಡು ಅಂದದ ಸಂಸಾರ ಸಾಗಿಸುತ್ತಾರೆ. ಮೂರನೆಯದರಲ್ಲಿ, ಗಂಡು ಹೆಣ್ಣಿನ ಸುಂದರ ಸಂಸಾರ. ಆದರೆ ಹೆಣ್ಣಿನಲ್ಲಿರುವಷ್ಟು ತ್ಯಾಗ ಗಂಡಿನಲ್ಲಿರುವುದಿಲ್ಲ. 'ನೀನೂ ಬೇಕು ಎಂಬ ಘಟ್ಟದಲ್ಲಿದ್ದ. ಆದರೆ ಘಟನೆಯೊಂದರ ಪರಿಣಾಮವಾಗಿ ನೀನಾದರೆ ಸಾಕು' ಎಂಬ ಪರಿವರ್ತನೆ ಪಡೆಯುತ್ತಾನೆ. ಇದು ಅನ್ಯೋನ್ಯ ದಾಂಪತ್ಯದ ಅಮೃತ ರೂಪ.

ಹೀಗೆ ಒಂದೇ ವಸ್ತುವಿನ ಮೂರು ಮುಖಗಳ ದರ್ಶನ ಮಾಡಿಸಿದ್ದಾರೆ ಶ್ರೀ ದೇವುಡು.

ಘಾಟೀ ಮುದುಕ, ಅಲ್ಲಿ ಇಲ್ಲಿ ಕಥೆಗಳು, ದೇಶಾಂತರದ ಕತೆಗಳು, ಮನಸ್ಸಿಗೆ ಒಪ್ಪುವ ಕಥೆಗಳು ಒಂದೇ ವರ್ಗಕ್ಕೆ ಸೇರುವ ಕಥೆಗಳು. ಇವು ಅನ್ಯಭಾಷಾ ಸಾಹಿತ್ಯದಲ್ಲಿ ಕಾಣಸಿಗುವ ಕಥಾಂಶಗಳನ್ನು ಕನ್ನಡ ನೆಲಕ್ಕೆ ಕನ್ನಡ ಜಲ, ಕನ್ನಡ ಜನ, ಕನ್ನಡ ಮನ. ಒಟ್ಟಿನಲ್ಲಿ ಕನ್ನಡಿಗರ ಜಾಯಮಾನಕ್ಕೆ ಒಗ್ಗುವಂತೆ ಅಳವಡಿಸಿ ರಚಿಸಿದ್ದಾರೆ. ಘಾಟೀ ಮುದುಕನ ಮುನ್ನುಡಿಯಲ್ಲಿ ಅವರೇ ಹೇಳು ವಂತೆ 'ಒಂದನೆಯ ಕಥೆ ಚೀನದ Miraculous Picture ಓದಿ ಮೆಲುಕು ಹಾಕಿದುದರ ಫಲ. ಮೂರನೆಯದು ರಶಿಯದ ಕಥೆಯೊಂದರ ನೆರಳು ಹಿಡಿದು ಹುಟ್ಟಿದುದು. ಎರಡನೆಯದು ಕಸಿ, ಕೊನೆಯದು ಕಂಡು ಕೇಳಿದುದರ ಕಷಾಯ ! ಆದರೆ ಎಲ್ಲವೂ ಕನ್ನಡದ ಮಣ್ಣಿನಲ್ಲಿ ಬೇರುಬಿಟ್ಟಿರುವ ವೃಕ್ಷಗಳು, ಕುಂಡದ ಗಿಡಗಳಲ್ಲ. ಇವರ ಕಥೆಗಳಲ್ಲಿ ಭಾಷಾಂತರ translations ಗಳಿಗಿಂತ, ಭಾವಾಂತರಗಳು (Transcreation) ವಿಪುಲ. ಆದರೆ ಕೃತಿಚೌರ್ಯ, (Playgiarism) ಅಂತೂ ಅಲ್ಲ, ಎಲ್ಲವೂ ಸ್ವತಂತ್ರ ರಚನೆಗಳಂತೆ, ಸ್ವೋಪಜ್ಞ ಸೃಷ್ಟಿಗಳಂತೆ (Original and Creative Works) ಭಾಸವಾಗುತ್ತವೆ. ಇಂತಹ ಉದ್ದೇಶಿತ ರಚನೆಗಳನ್ನು, ಅನುದ್ದೇಶಿತ ಅಥವಾ ಅಯತ್ನಪೂರ್ವಕ ಸ್ವೀಕೃತಿಗಳನ್ನು ತೌಲನಿಕ ಸಾಹಿತ್ಯಾಧ್ಯಯನವು The Renaissance theory of borrowing ಎಂದು ಹೆಸರಿಸಿದೆ. ಆ ಸ್ವೀಕರಣದ ಕಕ್ಷೆಯಲ್ಲಿ ಅನ್ಯಕವಿ ಪ್ರಭಾವ (Influence) ಅನುಕರಣೆ (imita tion) ಬರುತ್ತವೆ. ಇದು ಕವಿಯಲ್ಲಿ ಗುಣವೇ ಹೊರತು ದೋಷವಲ್ಲ. ಅದನ್ನೇ ಉದ್ಗರಿಸುತ್ತಾ ವಿ.ಕೃ. ಗೋಕಾಕರು, 'ತಮ್ಮ ದೇಶವು ಮುಂದೆ ಬರಬೇಕಾದರೆ ತಮ್ಮ ಭಾಷೆಯೂ ಶ್ರೀಮಂತವಾಗಬೇಕಾಗಿದೆ. ಇದಕ್ಕಾಗಿ ಉಳಿದ ದೇಶಗಳ ಹಿರಿಯ ಇಲ್ಲವೆ ಸಮಕಾಲೀನ ಕವಿಗಳಿಂದ ಸಲೀಸಾಗಿ ಭಾವಗಳನ್ನಾಗಲಿ ಕಲ್ಪನೆಗಳನ್ನಾಗಲಿ, ವಿಚಾರಗಳನ್ನಾಗಲಿ ಎರವಲು ತರಬಹುದು. ನಮ್ಮ ಭಾಷೆಯನ್ನೂ ಶ್ರೀಮಂತಗೊಳಿಸಿದರೆ ನಮ್ಮ ದೇಶ ಸಫಲವಾದಂತಾಯಿತು' ಎಂದಿದ್ದಾರೆ.

ಇದರಿಂದ ಸಾಹಿತ್ಯಪ್ರಪಂಚಕ್ಕೆ ವಿಶೇಷ ಲಾಭವೇ ಆಯಿತು. ಯಾವುದೇ ಭಾಷಾಸಾಹಿತ್ಯವಿರಲಿ ಎರವಲಿಂದ ಅದರ ಶ್ರೀಮಂತತೆ ಸಾಧಿತವಾಯಿತು. ಅದು ಬಹು ಮುಖ್ಯ. ಎರವಲು ಪಡೆದರೆ ಎಂಜಲು ಎಂಬ ಕ್ಷುದ್ರ ಭಾವನೆ ಎಲ್ಲೂ ಯಾರಿಗೂ ಸಲ್ಲದು. ಆದ್ದರಿಂದ ದೇವುಡುರವರ ರಚನೆಗಳು ಅವರ ಸ್ವಪ್ರತಿಭೆಯ ಸ್ವಂತ ಸೃಷ್ಟಿಗಳೇ ಹೊರತು ಅನುಕರಣಗಳಲ್ಲ. ಬೀಜ ಬೇರೆ ಊರಿನದು, ಬೆಳೆ ನಮ್ಮ ಹೊಲದ್ದು, ಬೆಳೆದವರು ನಮ್ಮ ರೈತ. ಎಳೆ ಬೇರೆ ಕಡೆಯಿಂದ ಬಂದದ್ದು, ಆದರೆ ಅದನ್ನು ಕನ್ನಡದ ಮಗ್ಗದಲ್ಲಿ ನೆಯ್ದ ನೇಕಾರ ನಮ್ಮವನು. ಆ ಸೀರೆ ನಮ್ಮ ಮಗ್ಗದ್ದು ; ನಮ್ಮದು. ಹೆಣ್ಣು ವಧುವಾಗಿರುವ ತನಕ ಬೇರೆ ಮನೆಯವಳು, ಸೊಸೆಯಾಗಿ ಈ ಮನೆಗೆ ಬಂದಮೇಲೆ ಅವಳು ಈ ಮನೆಯವಳೇ, ಮನದವಳೇ, ಒಡತಿಯೂ ಹೌದು !

### ೨. ಕಾದಂಬರಿ

ಪೌರಾಣಿಕ ಕಾದಂಬರಿ ರಚನೆಯಲ್ಲಿ ದೇವುಡುರವರದು ಬಹು ದೊಡ್ಡ ದಾಖಲೆ. ಅವರನ್ನು ಬಿಟ್ಟರೆ ಎರಡನೆಯವರು ಇಲ್ಲ ಎನಿಸುವಷ್ಟು ಪ್ರಸಿದ್ಧರು. ಅವರಿಗೆ ಕೀರ್ತಿತಂದ ಪೌರಾಣಿಕ ಕಾದಂಬರಿಗಳೆಂದರೆ 'ಮಹಾಬ್ರಾಹ್ಮಣ', 'ಮಹಾಕ್ಷತ್ರಿಯ' ಮತ್ತು 'ಮಹಾದರ್ಶನ' – ಈ ಕೃತಿರತ್ನಗಳು. ಇವುಗಳಲ್ಲಿ ವೈದಿಕ ಯುಗದ ಜನಜೀವನ, ಸಂಸ್ಕೃತಿ ಮತ್ತು ನಾಗರಿಕತೆಗಳನ್ನು ಚಿತ್ರಿಸಲಾಗಿದೆ. ಮಹಾಬ್ರಾಹ್ಮಣದಲ್ಲಿ ಕೌಶಿಕನೆಂಬ ಕ್ಷತ್ರಿಯನು ವಿಶ್ವಾಮಿತ್ರನೆನಿಸಿ, ಕಡೆಯಲ್ಲಿ ಬ್ರಹ್ಮರ್ಷಿಯಾದ ಸಾಹಸ ಚಿತ್ರಣ ಇದ್ದರೆ, ಮಹಾಕ್ಷತ್ರಿಯದಲ್ಲಿ ಇಂದ್ರನ ಸೊಕ್ಕು ಮುರಿದು ದೇವೇಂದ್ರಪಟ್ಟ ಪಡೆದ ನಹುಷ ಚಕ್ರವರ್ತಿಯ ಕಥೆ ಇದೆ. ಮೂರನೆಯದು ಯಾಜ್ಞವಲ್ಕ್ಯ ಪ್ರಸಂಗ. ವೇದ ಉಪನಿಷತ್ತುಗಳಲ್ಲಿ ಖ್ಯಾತರಾದವರ ಪ್ರಸಂಗಗಳೂ ಇವೆ.

ಇಂತಹ ಪೌರಾಣಿಕ ಕಾದಂಬರಿಗಳಲ್ಲದೆ, ದೇವುಡುರವರ 'ಮಯೂರ' ಮತ್ತು 'ಚಿನ್ನಾ' ಎಂಬ ಎರಡು ಇತಿಹಾಸಾಧಾ ರಿತ ಕಾಲ್ಪನಿಕ ಕಾದಂಬರಿಗಳನ್ನೂ ಕೊಟ್ಟಿದ್ದಾರೆ. ಮೊದಲನೆಯದು ಸ್ವಲ್ಪ ಇತಿಹಾಸಗಳನ್ನೊಳಗೊಂಡಿದ್ದರೂ ಎರಡನೆಯದು

ಕೇವಲ ಕಾಲ್ಪನಿಕ ವಸ್ತುವುಳ್ಳದ್ದು. ವೈಶಿಷ್ಟ್ಯವೆಂದರೆ ಮೊದಲನೆಯದು ಕರ್ನಾಟಕ ರತ್ನ ಸಿಂಹಾಸನದ ಸಂಸ್ಥಾಪಕ ವಂಶಕ್ಕೆ ಸೇರಿದ್ದು. ಎರಡನೆಯದು ಅದೇ ರತ್ನ ಸಿಂಹಾಸನವನ್ನು ನುಚ್ಚು ನೂರಾಗಿಸಿದ ಮತ್ತೊಂದು ಅರಸು ಮನೆತನಕ್ಕೆ ಸೇರಿದ್ದು. ಡಾ. ವೀಣಾ, 'ಗೆದ್ದವರು ಯಾರು ?', ಎರಡು ಜನ್ಮ, ಮಲ್ಲಿ, ಅಂತರಂಗ, ಕಳ್ಳರಕೂಟ ಮೊದಲಾದವು ಸಾಮಾಜಿಕ ಕಾದಂಬರಿಗಳು. 'ಅಂತರಂಗ' ಮಾನವ ಮನಸ್ಸಿನ ಸೂಕ್ಷ್ಮ ವ್ಯಾಪಾರಗಳನ್ನು ಚಿತ್ರಿಸುವ ಮನೋವಿಶ್ಲೇಷಣಾತ್ಮಕ ಕಾದಂಬರಿ. 'ಎರಡನೆಯ ಜನ್ಮ' ಲೈಂಗಿಕ ಸಮಸ್ಯೆಗಳಿಗೆ ಪರಿಹಾರ ಹುಡುಕ ಹೊರಟ ಕಾದಂಬರಿ. ಹೀಗೆ ವೈವಿಧ್ಯಪೂರ್ಣ ವಸ್ತುವಿನ್ಯಾಸವುಳ್ಳ ಕಾದಂಬರಿಗಳನ್ನು ಕೊಟ್ಟಿದ್ದಾರೆ ದೇವುಡು. ಅವುಗಳಲ್ಲಿ ಕೆಲವು ಹೀಗಿವೆ :

**ಮಹಾಬ್ರಾಹ್ಮಣ**

ಮಹಾದ್ರಷ್ಟಾರ ವಸಿಷ್ಠರು ಅರಿತರು ತಮ್ಮಾಶ್ರಮಕ್ಕೆ ಸಂಭವಿಸಲಿರುವ ಕುತ್ತನ್ನು. ಅದರಂತೆ ಕೌಶಿಕ ಮಹಾರಾಜನು ಬ್ರಹ್ಮರ್ಷಿ ವಸಿಷ್ಠರಿಂದ ಸತ್ಪಾತ್ರನಾಗಿದ್ದರೂ ಅದಕ್ಕೆ ಪ್ರತಿಯಾಗಿ ವಿದ್ರೋಹ ಬಗೆದ. ಅವನೆಲ್ಲ ಪರಿವಾರಕ್ಕೂ ಸಂತುಷ್ಟಿಯನ್ನುಂಟುಮಾಡಿದ. ನಂದಿನಿ ಧೇನುವನ್ನು ವಸಿಷ್ಠರಿಂದ ಪಡೆಯಲೆತ್ನಿಸಿ, 'ಇಂದಿನ ಸಮಾರಾಧನದ ಸಂಭ್ರಮವು ಸಾಮ್ರಾಟರನ್ನೂ ನಾಚಿಸುವಂಥದು. ಅದೆಲ್ಲವೂ ತಮ್ಮಲ್ಲಿರುವ ನಂದಿನಿ ಧೇನುವಿನ ಪ್ರಭಾವವಂತೆ ಗುರುದೇವ. ಇಂತಹ ಉತ್ತಮೋತ್ತಮ ವಸ್ತುವು ಆಶ್ರಮದಲ್ಲಿರುವುದ ಕ್ಕಿಂತ ಅರಮನೆಯಲ್ಲಿರುವುದೇ ಚೆನ್ನ ಅಲ್ಲವೆ ?' ಎಂದು ಪ್ರಶ್ನಿಸಿದನು. ಕೌಶಿಕನ ಮನದ ಇಂಗಿತವನ್ನರಿತ ವಸಿಷ್ಠರು, 'ರಾಜೇಂದ್ರ, ಪ್ರಪಂಚದಲ್ಲಿರುವ ಭಾಗ ಸಾಮಗ್ರಿಗಳೆಲ್ಲವೂ ದೇವತೆಗಳು ಕೊಟ್ಟುದು. ಅವರು ಕೊಡದಿರುವುದನ್ನು ನಾವು ತೆಗೆದುಕೊಳ್ಳಲು ಸಾಧ್ಯವಿಲ್ಲ, ಕೊಡುವುದೂ ಬಿಡುವುದೂ ಅವರಿಚ್ಛೆ' ಎಂದು ಮಾರ್ಮಿಕವಾಗಿ ಉತ್ತರಿಸಿದರು.

'ರಾಜ್ಯವೆಲ್ಲವೂ ಮೂರ್ಧಾಭಿಷಿಕ್ತನಾದ ರಾಜನದು. ಇಂತಹ ಸುಸಂಪನ್ನನಾದ ಭೂಮಂಡಲವನ್ನೇ ದೇವತೆಗಳು ರಾಜ ನಿಗೆ ಕೊಟ್ಟಿರುವರು. ಆದ್ದರಿಂದ ಆ ರಾಜ್ಯಕ್ಕೆ ಅಧಿಕಾರಿಯಾದ ರಾಜನಿಗೆ ತನ್ನ ರಾಜ್ಯದಲ್ಲಿ ಎಲ್ಲಿ ಏನಿದ್ದರೂ ಅದನ್ನು ತೆಗೆದು ಕೊಳ್ಳಲು ಅಧಿಕಾರವುಂಟು ಅಲ್ಲವೇ?'

'ರಾಜ್ಯದಲ್ಲಿರುವ ಸಮಸ್ತಕ್ಕೂ ರಾಜನೇ ಸ್ವಾಮಿ ; ನಿಜ, ಆದರೆ ಮಹಾರಾಜ, ರಾಜನು ಧರ್ಮದ ಸೇವಕ. ಧರ್ಮವನ್ನು

---

[೩]ಮಹಾಬ್ರಾಹ್ಮಣ. ಪು. ೧೦–೧೧

ರಕ್ಷಿಸಲು ಬದ್ಧಕಂಕಣನಾಗಿ ದೀಕ್ಷಿತನಾಗಿರುವ ರಾಜನು ಲೋಭಮೋಹಗಳಿಂದ ಧರ್ಮವನ್ನು ನಿರ್ಣಯಿಸಬಾರದು.'[೩]

ಕೌಶಿಕ ಎಲ್ಲವನ್ನು ಕಿವಿಡುಗೇಳಿದ. ಬಲಾತ್ಕಾರದಿಂದ ಧೇನುವನ್ನು ಪಡೆಯಬಹುದೆಂದು ಭ್ರಮಿಸಿ, ಸೇನೆಯನ್ನು ಕಳುಹಿಸಿದ. ನಂದಿನಿ ತನ್ನನ್ನು ತಾನು ರಕ್ಷಿಸಿಕೊಂಡಳು. ಅವಳು ತನ್ನ ಮೈ ಒದರಿದಾಗ ಉದ್ಭವಗೊಂಡ ಕಾಡು ಜನರು ಸಮಸ್ತ ಸೇನೆಯನ್ನೂ ತರಿದು ಚೆಲ್ಲಿದರು. ಸೋತು ಅವಮಾನಿತನಾದ ಕೌಶಿಕನು, ಗುರು ವಾಮದೇವನ ಸಲಹೆಯಂತೆ ರುದ್ರಸೂಕ್ತಗಳನ್ನು ಪಠಿಸುತ್ತಾ ಜಪತಪ ಹೋಮತರ್ಪಣಾದಿಗಳನ್ನು ಮಾಡಿ ರುದ್ರನನ್ನು ಒಲಿಸಿಕೊಂಡು, ಅವನಿತ್ತ ದಿವ್ಯಾಸ್ತ್ರಗಳ ಬೆಂಬಲದಿಂದ ಗೆಲ್ಲುವುದಾಗಿ ಹೋದ. ಅಂದು ಆಶ್ರಮದಲ್ಲಿ ವಸಿಷ್ಠರಿರಲಿಲ್ಲ. ಆದರೆ ಆ ಬ್ರಹ್ಮರ್ಷಿಯ ಬ್ರಹ್ಮದಂಡವಿತ್ತು. ಅದು ಆಶ್ರಮವನ್ನು ರಕ್ಷಿಸಿತು. ಸೋತು ಸಿಗ್ಗಾದ ಕೌಶಿಕನು ಬ್ರಹ್ಮಬಲದ ಮುಂದೆ ಯಾವ ಕ್ಷತ್ರಿಯ ಶಕ್ತಿಯೂ ನಿಲ್ಲಲಾರದೆಂದು ಅರಿತ. 'ಈ ಲೋಕದಲ್ಲಿರುವ ಸಿದ್ಧಿಗಳೆಲ್ಲ ಒಂದು ಬ್ರಹ್ಮಜ್ಞಾನದಲ್ಲಿ ಅಡಗುವುವು. ಒಂದು ದೊಡ್ಡ ನಾಣ್ಯವನ್ನು ಇಟ್ಟುಕೊಂಡಿರುವವನು ಚಿಕ್ಕ ಚಿಕ್ಕ ನಾಣ್ಯಗಳಿಂದ ಆಗುವ ಪ್ರಯೋಜನವನ್ನೆಲ್ಲ ಹೇಗೆ ಪಡೆಯುವನೋ ಹಾಗಾಗಿ ಈ ಕ್ಷುದ್ರ ಸಿದ್ಧಿಗಳಿಂದ ಆಗುವುದೆಲ್ಲವೂ ಆಗಿ, ಇನ್ನೂ ಅಷ್ಟು ಹೆಚ್ಚು ಫಲವು ಅವರಿಂದ ಆಗುವುದು. ಹನ್ನೆರಡು ಕಾಸಿನ ಒಂದಾಣೆಯೆಂದರೆ, ನಾಲ್ಕಾಣೆಯಲ್ಲಿ ಈ ಹನ್ನೆರಡು ಕಾಸುಗಳು ನಾಲ್ಕಲ್ಲವೆ ? ಅದರಂತೆ ಆ ಬ್ರಹ್ಮಜ್ಞಾನವೆಂಬುದು ! ಎಂದ ' ವಾಮದೇವನ ಬುದ್ಧಿವಾದ ಹಿಡಿಸಿತು ಕೌಶಿಕನಿಗೆ.

ತಪಸ್ಸಿನಿಂದ ಸಕಲವನ್ನೂ ಸಾಧಿಸಲು ಸಿದ್ಧನಾಗಿ, ಗುರು ವಾಮದೇವನಿಗೆ ನಮಸ್ಕರಿಸಿ, ಅವನಿಂದ ಆಶೀರ್ವದಿತನಾಗಿ ಅರಣ್ಯದೆಡೆಗೆ ನಡೆದನು. ವಿಂಧ್ಯವನ್ನು ದಾಟಿ ದಕ್ಷಿಣಕ್ಕೆ ಬಂದು, ವಿಂಧ್ಯ ಪಾದದಲ್ಲಿ ಹರಿಯುವ ರೇವಾ ನದಿಯ ತೀರವು ಆತನ ಮನಸ್ಸಿಗೆ ಸೊಗಸಿತು. ಅಲ್ಲಿಯೇ ಆ ಜಂಬೂವೃಕ್ಷಗಳ ತಂಡದಲ್ಲಿ ಒಂದು ಪರ್ಣಶಾಲೆಯನ್ನು ಮಾಡಿಕೊಂಡು ತಪಸ್ಸಿಗೆ ನಿಂತನು. 'ನಾನು ಇನ್ನುಮಂದೆ ಎಲ್ಲರಿಗೂ ಮಿತ್ರನಾಗಿರಬೇಕು. ಬೇಕಾದುದಾಗಲಿ ಯಾರಿಗೂ ಯಾವ ರೀತಿಯಲ್ಲೂ ಕೇಡುಮಾಡಬಾರದು' ಎಂದು ಸಂಕಲ್ಪಿಸಿಕೊಂಡು ತನ್ನನ್ನು 'ವಿಶ್ವಾಮಿತ್ರ'ನೆಂದೂ ಕರೆದುಕೊಂಡನು.

ತಪಸ್ಸು ಸಿದ್ಧಿಸಿತಾದರೂ ಬ್ರಹ್ಮರ್ಷಿಯಾಗಲಿಲ್ಲ. ಕೌಶಿಕ–ಅಲ್ಲ ವಿಶ್ವಾಮಿತ್ರ. ಈ ನಡುವೆ ಇಕ್ವಾಕು ಕುಲತಿಲಕನಾದ ತ್ರಿಶಂಕು ಬಂದು 'ಸಶರೀರನಾಗಿ ಸ್ವರ್ಗಕ್ಕೆ ಹೋಗಬೇಕು. ಹಾಗೆ ಕಳಿಸುವಲ್ಲಿ ವಿಶ್ವಾಮಿತ್ರ ಮಹರ್ಷಿಗೆ ಮಾತ್ರ ಸಾಧ್ಯ ಎಂದು ವಸಿಷ್ಠರು ಹೇಳಕಳಿಸಿರುವುದಾಗಿ ತಿಳಿಸಿದ'. ವಸಿಷ್ಠರ ಅಭಿಮತವನ್ನು ಗೌರವಿಸಿದ ವಿಶ್ವಾಮಿತ್ರನು 'ವಿಶ್ವಜಿದ್ಯಾಗ' ಮಾಡಿ, ತ್ರಿಶಂಕುವಿಗೆ ಸ್ವರ್ಗ ಪ್ರಾಪ್ತಿಯಾಗುವಂತೆ ಮಾಡಿದ.

ಮತ್ತೆ ತಪಸ್ಸು, ಮತ್ತೆ ತಪೋಭಂಗ ! ದೇವೇಂದ್ರನಿಂದ ಆಜ್ಞಪ್ತಳಾದ ಮೇನಕೆ ಧರೆಗಿಳಿದು ಬಂದಳು. ಮಹರ್ಷಿ ವಿಶ್ವಾಮಿತ್ರರನ್ನು ಕಾಮಬಂಧನದಲ್ಲಿ ಬಿಗಿದು ಶಕುಂತಲೆಯನ್ನು ಕೈಗಿತ್ತು ಸ್ವರ್ಗದತ್ತ ನಡೆದಳು. ವಿಶ್ವಾಮಿತ್ರನು ಆ ಶಿಶುವನ್ನು ತೆಗೆದುಕೊಂಡು ಹೋಗಿ ಕಣ್ವರಿಗೆ ಒಪ್ಪಿಸಿದ. ಕಣ್ವರು ಶಕುಂತಲೆಯನ್ನು ದತ್ತಕವಾಗಿ ಸ್ವೀಕರಿಸಿದರು.

ಇದಾದ ಮೇಲೆ ಹರಿಶ್ಚಂದ್ರನ ಹಗರಣ ಬಂತು. ಅವನ ಮಗನ ಪರವಾಗಿ ಬಲಿಯಾಗಬೇಕಿದ್ದ ಶುನಶ್ಯೇಷನ ಪುತ್ರ ಆಂಗೀರಸ ಅಜೀರ್ಗತನನ್ನು ಬದುಕಿಸಿ ಆಶೀರ್ವದಿಸಿ ಕಳುಹಿಸಿದ.

ವಿಶ್ವಾಮಿತ್ರನು ಮತ್ತೆ ಹಿಮಾಲಯಕ್ಕೆ ಹೋದ. ಮತ್ತೆ ತಪಸ್ಸು ; ಮತ್ತೆ ಸಿದ್ಧಿ ! ವಿಶ್ವಾಮಿತ್ರನಿಗೆ ಬ್ರಹ್ಮರ್ಷಿ ಪದವಿಯನ್ನು ಪ್ರದತ್ತ ಮಾಡಲು ಋಷಿಪರಿಷತ್ತು ಮಂದಾಕಿನಿ ಮತ್ತು ಅಲಕನಂದಾ ನದಿಗಳ ಸಂಗಮ ಸ್ಥಾನದಲ್ಲಿದ್ದ ನಚಿಕೇತಾಶ್ರಮದಲ್ಲಿ ನೆರೆಯಿತು. ಸಭೆಗೆ ಯಾಜ್ಞವಲ್ಕ, ಗಾರ್ಗಿ, ಸುಮಂತು, ಕಹೋಳ, ಬಭ್ರು, ನೋಢಾ, ವಿಶ್ವಾವರಾ, ಗೌತಮ, ಭಾರದ್ವಾಜ ಮೊದಲಾದ ನೂರಾರು ಸಾವಿರಾರು ಜನ ಋಷಿ ಮುನಿಗಳು ಅಗಮಿಸಿದ್ದರು. ಅಂದಿನ ಸಭೆಯ ಅಧ್ಯಕ್ಷತೆ ವಹಿಸಲು ಪಿಪ್ಪಲಾದರ ಹೆಸರನ್ನು ನಚಿಕೇತರೇ ಸೂಚಿಸಿದರು. ಭಗವಾನ್ ಯಾಜ್ಞವಲ್ಕರು ಅದನ್ನು  ಅನುಮೋದಿಸಿದರು, ಎಲ್ಲರೂ 'ತಥಾಸ್ತು' ಎಂದರು. ಪಿಪ್ಪಲಾದರು ಅಂದಿನ ಸಭಾಧ್ಯಕ್ಷರಾದರು.

ಸಭೆಯನ್ನು ಕರೆದಿದ್ದ ನಚಿಕೇತರು ಎದ್ದು ನಿಂತು, 'ಹಿರಿಯರಿಗೆ ನಮಸ್ಕಾರ, ಕಿರಿಯರಿಗೆ ನಮಸ್ಕಾರ, ಸಮಾನರಿಗೆ ನಮಸ್ಕಾರ, ಇವತ್ತು ನಾವು ಸೇರಿರುವುದು ತಪೋಬಲದಿಂದ ಬ್ರಾಹ್ಮಣ್ಯ ಸಾಧಿಸಿ ಬ್ರಹ್ಮರ್ಷಿಯಾಗಿ ಇರುವ ವಿಶ್ವಾಮಿತ್ರರ ಬ್ರಹ್ಮರ್ಷಿತ್ವವನ್ನು ಒಪ್ಪಿಕೊಳ್ಳುವುದಕ್ಕೆ. ಈ ಸೂಚನೆಗೆ ಸಾಧಕ ಬಾಧಕಗಳು ಏನಿದ್ದರೂ ಸಭೆಯವರ ಮುಂದಿಡುವುದು ನಮ್ಮೆಲ್ಲರ ಕರ್ತವ್ಯ' ಎಂದರು.

ಭಗವಾನ್ ಯಾಜ್ಞವಲ್ಕ್ಯರೆದ್ದು 'ನಾನು ಪ್ರತ್ಯಕ್ಷನಾಗಿ ವಿಶ್ವಾಮಿತ್ರರನ್ನು ನೋಡಿದುದು ಇದೇ ಮೊದಲು. ತ್ರಿಶಂಕು ಮಹಾರಾಜನನ್ನು ಸ್ವರ್ಗಕ್ಕೆ ಕಳುಹಿಸಿದ ಮಹಾನುಭಾವರು. ವಸಿಷ್ಠರಿಗೆ ಪುತ್ರಶೋಕವನ್ನು ನೀಗುವುದಕ್ಕೆ ಕಾರಣರಾದವರು. ಇವೆರಡರಲ್ಲಿ ಒಂದೊಂದು ಸಾಕು ಬ್ರಹ್ಮರ್ಷಿ ಎನ್ನುವುದಕ್ಕೆ. ಅಂತಾದ್ದರಲ್ಲಿ ಎರಡೂ ಇರುವಾಗ ನಾವು ಹಿಂತೆಗೆಯಲು ಯಾವ ಕಾರಣವೂ ಇಲ್ಲ. ಇದೆಲ್ಲದರ ಜೊತೆಗೆ ಸಿಂಧೂದ್ವೀಪ ಬ್ರಹ್ಮರ್ಷಿಯ ವಂಶದವರು ಮತ್ತೂ ಇವರ ತಂದೆಯಾದ ಕೌಶಿಕ ಮಹಾರಾಜನು ಚ್ಯವನ ಮಹರ್ಷಿಯ ಸೇವೆ ಮಾಡಿ ಬ್ರಾಹ್ಮಣ್ಯವನ್ನು ಅನುಗ್ರಹಿಸಬೇಕೆಂದು ಕೇಳಿದ್ದನು. ಆಗ ಅವರನ್ನು 'ನಿನಗೆ ಈ ಯೋಗ ವಿಲ್ಲ. ನಿನ್ನ ಮಗನಾಗುವನು' ಎಂದು ಅನುಗ್ರಹ ಮಾಡಿದ್ದರು. ಆದ್ದರಿಂದ ಆ ಋಷಿವಾಕ್ಯವನ್ನು ನೆರವೇರಿಸಲು ಇಂದು ನಾವು ಸೇರಿರುವುದು. ನಿರಾತಂಕವಾಗಿ ಆಗಬಹುದು. ಧರ್ಮ ಬ್ರಹ್ಮಪರಾಯಣರಾದ ಭಗವಾನ್ ನಚಿಕೇತರ ಸೂಚನೆಯನ್ನು ನಾನು ತ್ರಿಕರಣ ಶುದ್ಧವಾಗಿ ಅನುಮೋದಿಸುತ್ತೇನೆ' ಎಂದರು.

ಭಗವತೀ ಗಾರ್ಗಿಯು ಎದ್ದು ಹೇಳಿದರು ; ಭಗವಾನ್ ನಚಿಕೇತರು ಸೂಚಿಸಿ, ಭಗವಾನ್ ಯಾಜ್ಞವಲ್ಕರು ಅನುಮೋದಿಸಿದ ಮೇಲೆ ಎಷ್ಟಾಗಲಿ ಸ್ತ್ರೀಯಾದ ನಾನು ಸಭೆಯಲ್ಲಿ ನಿಂತು ಸಮರ್ಥಿಸಲೇಬೇಕು, ಆದರೆ, ಬ್ರಹ್ಮರ್ಷಿತ್ವವು ಒಬ್ಬರು ಇಬ್ಬರ ಅಭಿಮಾನದಿಂದ ಬರುವ ಪದವಿಯಲ್ಲ. ಕ್ಷತ್ರಿಯನಾಗಿದ್ದ ಈತನ ದೇಹದಲ್ಲಿರುವ ಪಂಚಭೂತ ತನ್ಮಾತ್ರಗಳೆಲ್ಲವೂ ಪರಿಶುದ್ಧವಾಗಿ ಸತ್ವಗುಣಕ್ಕೆ ಬಂದಿದೆಯೆಂದು ಪರೀಕ್ಷೆಯಾಗಿ ಸಿದ್ಧಾಂತವಾಗಲಿ. ಆ ಕೂಡಲೇ ನಾನು ಒಪ್ಪುತ್ತೇನೆ' ಎಂದು.

ಭಗವಾನ್ ಪಿಪ್ಪಲಾದರು ಎದ್ದು ನಿಂತರು 'ಸಭೆಗೂ ಸಭಿಕರಿಗೂ ನಮಸ್ಕಾರಗಳು. ಭಗವತೀ ಗಾರ್ಗಿಯವರು ಕೇಳಿರುವ ಪ್ರಶ್ನವು ಸಾಧುವಾದುದು. ನಾನು ಈ ಅಧ್ಯಕ್ಷ ಸ್ಥಾನದಲ್ಲಿ ಇಲ್ಲದೆ ಅಲ್ಲಿ ಸಭೆಯಲ್ಲಿ ಕುಳಿತಿದ್ದರೆ ನಾನೂ ಅದೇ ಮಾತು ಕೇಳುತ್ತಿದ್ದೆ. ಬ್ರಹ್ಮರ್ಷಿ ಪದವಿಯೆಂದರೆ ಸಾಮಾನ್ಯವಲ್ಲ. ನಾಳಿನ ದಿನ ಸಪ್ತರ್ಷಿಗಳ ಸ್ಥಾನಕ್ಕೆ ಹೋಗಬಹುದಾದ ಯೋಗ್ಯತೆಯಿರುವವರಿಗೆ ಮಾತ್ರ ಆ ಪದವಿ. ಸಪ್ತರ್ಷಿಗಳೆಂದರೆ ಸಾಮಾನ್ಯವಾಯಿತೆ ? ಸೃಷ್ಟಿಗೆ ಬರುವ ಪ್ರತಿಯೊಬ್ಬ ಪ್ರಜೆಯ ಮೇಲೂ ಅಧಿಕಾರ ನಡೆಸಬೇಕು. ಸೃಷ್ಟಿಕರ್ತನಾದ ಪ್ರಜಾಪತಿಗೆ ಸಹಾಯ ಮಾಡಬೇಕು. ಆದ್ದರಿಂದ ಆಕೆಯು ಕೇಳಿರುವ ಪ್ರಶ್ನೆಯು ಬಹು ಸಾಧುವಾದುದು. ಪ್ರತಿಯೊಬ್ಬರೂ ವಿಚಾರಮಾಡಿ ನಿರ್ದಾಕ್ಷಿಣ್ಯವಾಗಿ ಕೇಳಬೇಕಾದದನ್ನೆಲ್ಲ ಕೇಳಿ ಆನಂತರ

ಒಪ್ಪಬೇಕಾದ ಮಾತು ಇದು. ಅಧ್ಯಕ್ಷ ಸ್ಥಾನ ದಲ್ಲಿ ಇದ್ದು ಇಷ್ಟು ಮಾತನಾಡಿದ್ದು ತಪ್ಪಿದ್ದರೆ ಸಭೆಯವರು ಮನ್ನಿಸುವುದು.' ಎಂದು ಕೈಮುಗಿದು ಕುಳಿತರು[೪].

ವಿಶ್ವಾಮಿತ್ರರಿಗೆ ಮತ್ತೆ ಅಗ್ನಿ ಪರೀಕ್ಷೆ. ಅದರಲ್ಲೂ ಉತ್ತೀರ್ಣರಾದರು. ಪೂಷನ ಸ್ಪರ್ಶದಿಂದ ದೇಹವು ಪುಳಕಿತವಾಯಿತು. ಅಗ್ನಿಸ್ಪರ್ಶದಿಂದ ಕಾದ ಲೋಹವು ಕೆಂಪಾಗಿ ತೇಜೋಮಂಡಲವಾಗಿ ಉದ್ದೀಪ್ತವಾಗುವಂತೆ, ಭಗವಾನರೂ ತೇಜೋಮಂಡಲ ವಾದರು. ರೋಮ ಕೂಪಕೂಪವೂ ಒಂದೊಂದು ನಾಲಗೆಯಾಗಿ ಆ ದೇವಿಯನ್ನು ಸ್ತುತಿಸುವುದಕ್ಕೆ ಸಿದ್ಧವಾಗಿರುವಂತೆ ಆಗಿರಲು, ಅವರ ಬಾಯಿಂದ ಸ್ತೋತ್ರರೂಪವಾಗಿ ಮಾತು ಧಾರೆಯಾಗಿ ಹೊರಟಿತು. ಆ ದೇವಿಯು ಅಭಯ ವರದ ಮುದ್ರೆಗಳನ್ನು ತೋರಿಸಿದಳು. ತೆರೆದಿಟ್ಟ ಪುಸ್ತಕದಿಂದ ಓದುವಂತೆ ಭಗವಾನರು ಆನಂದದಿಂದ ಉದುರುತ್ತಿರುವ ಅಸ್ರುಗಳು ಬಾಹ್ಯದೃಷ್ಟಿಯನ್ನು ಮುಚ್ಚುತ್ತಿದ್ದರೂ ಅಂತಃಕರಣವೂ ಸೂರ್ಯ ಕಿರಣಗಳಿಂದ ಅರಳುತ್ತಿರುವ ತಾವರೆಯಂತೆ ಅರಳುತ್ತಿರಲು, ಭಗವಾನರು ಆ ವೇದಮಾತೆಯನ್ನು ಸ್ತೋತ್ರ ಮಾಡಿಸಿದರು.

---

[೪] ಮಹಾಬ್ರಾಹ್ಮಣ, ಪು. ೨೨೮-೨೯

'ದೇವಿ, ನಿನಗೆ ನಮಸ್ಕಾರವು. ಸೃಷ್ಟಿಕರ್ತನ ಪರಾಶಕ್ತಿಯಾಗಿ ಲೋಕ ಲೋಕಗಳನ್ನೆಲ್ಲ ಆವರಿಸಿ ಕುಳಿತಿರುವ ಪ್ರಾಣ ಶಕ್ತಿಯಾದ ನಿನಗೆ ನಮಸ್ಕಾರವು. ಅರಳಿದ ತಾವರೆಯನ್ನು ಆಶ್ರಯಿಸಿರುವ ದಳಗಳಂತೆ, ಕರ್ಮಕಾಂಡಕ್ಕೆ ಆಧಾರವಾದ ವಿದ್ಯೆಗಳೆಲ್ಲವೂ ನಿನ್ನನ್ನು ಆಶ್ರಯಿಸಿರುವುದರಿಂದ ನಿನ್ನನ್ನು ವಿದ್ವಾಂಸರು ಧರ್ಮ ಸ್ವರೂಪಿಣೀ, ಧರ್ಮ ಸಂವರ್ಧಿನೀ ಎಂದು ಆರಾಧಿಸುವರು. ಅರಳಿದ ತಾವರೆಯು ಪರಿಮಳವನ್ನು ಬೀರುವಂತೆ ಶುದ್ಧ ಬ್ರಹ್ಮ ವಿದ್ಯೆಯನ್ನು ಅನುಗ್ರಹಿಸುವ ನಿನ್ನನ್ನು ಬಲ್ಲವರು ಬ್ರಹ್ಮ ಮಯೀ ಎನ್ನುವರು. ಬಿರಿದ ತಾವರೆಯು ಸುರಿಯುವ ಪುಷ್ಪರಜದಂತೆ ಸಿದ್ಧಿಗಳ ಮೇಲೆ ಸುರಿಯುವ ನಿನ್ನನ್ನು ಸಿದ್ಧಿಪ್ರದಾಯಿನಿ ಎನ್ನುವರು. ಸರ್ವ ಹೃದಯಗಳಲ್ಲೂ ಕುಳಿತು ಎಲ್ಲರನ್ನೂ ಪ್ರೇರಿಸುವ ಸಾವಿತ್ರೀದೇವಿಗೆ ನಮಸ್ಕಾರವು. ಎಲ್ಲರ ಮನೋ ಬುದ್ಧಿಗಳಲ್ಲಿ ಕುಳಿತ ವೃತ್ತಿಗಳನ್ನು ಬೆಳಸುವ ಸರಸ್ವತೀ ದೇವಿಗೆ ನಮಸ್ಕಾರವು. ದೇವಿ, ಜಗದ್ಧಾತ್ರಿ, ಮನಸ್ಸು ಮಾಡು, ಕೃಪೆತೋರು, ದಯವಿಡು, ಲೋಕವನ್ನೆಲ್ಲಾ ಆರ್ಯವನ್ನು ಮಾಡುವ ಮಂತ್ರರಾಜವನ್ನು ಕಂಡು ನುಡಿಯುವ ಭಾಗ್ಯವು ನನ್ನದಾಗಲಿ, ಬ್ರಹ್ಮರ್ಷಿಗಳ ಇಷ್ಟಾರ್ಥವು ನೆರವೇರಲಿ. ವಿಶ್ವವೆಲ್ಲವೂ ಉದ್ಧಾರವಾಗುವ ಹಾದಿಯನ್ನು ಕಂಡುಕೊಳ್ಳಲಿ."

ಭಗವತೀ ಗಾಯತ್ರೀ ದೇವಿಯು ವಿಶ್ವಾಮಿತ್ರರು ಹೊಗಳುತ್ತಿದ್ದ ಹಾಗೆಯೇ ತನ್ನ ಸಾವಿತ್ರಿ ಸರಸ್ವತೀ ಗಾಯತ್ರೀ ರೂಪಗಳನ್ನು ತೋರಿಸಿದಳು. ಪ್ರಣವವೊಂದೇ ಕವಲೊಡೆದು ಹದಿನಾರಾಗಿ, ಇಪ್ಪತ್ತೆರಡಾಗಿ, ಇಪ್ಪತ್ನಾಲ್ಕಾಗಿ ಬ್ರಹ್ಮಾಂಡ ಬ್ರಹ್ಮಾಂಡವೆಲ್ಲವನ್ನೂ ಆವರಿಸಿರುವ ರಹಸ್ಯವನ್ನು ತೋರಿಸಿ, ಭೂಮ್ಯಂತರಿಕ್ಷ ಆಕಾಶಗಳನ್ನೆಲ್ಲ ತುಂಬಿ ಹೋಗಿರುವ ತನ್ನ ನಾದ ಸ್ವರೂಪವನ್ನು ತೋರಿಸಿ, ವತ್ಸ, ಇದನ್ನು ಅನುಸಂಧಾನ ಮಾಡಿ ನಿನ್ನದು ಮಾಡಿಕೊ. ನೀನು ಕೃತಾರ್ಥನಾದುದರ ಗುರುತಾಗಿ ನಿನ್ನ ಬಾಯಲ್ಲಿ ಇಪ್ಪ ತ್ನಾಲ್ಕು ಅಕ್ಷರಗಳ, ಮೂರು ಪದಗಳ ಮಂತ್ರವು ಪ್ರಕಟವಾಗುವುದು. ಅದನ್ನು ಅನುಸಂಧಾನ ಮಾಡಿ, ಅದನ್ನೂ ನಿನ್ನದು ಮಾಡಿಕೋ. ಈ ಮಂತ್ರಕ್ಕೆ ದೇವತೆಯು ಸವಿತೃವೇ ಆದರೂ ಪೂಷಾದೇವನ ಅನುಗ್ರಹದಿಂದ ನಿನಗೆ ಮೊದಲು ನನ್ನ ದರ್ಶನ ವಾಯಿತ್ತಾದ್ದರಿಂದ ನಿನ್ನ ಬಾಯಲ್ಲಿ ಹೊರಡುವ ಮಂತ್ರವು ಗಾಯತ್ರೀ ಎಂದು ಪ್ರಸಿದ್ಧವಾಗಲಿ. ಅಷ್ಟೇ ಅಲ್ಲ, ಗಾಯತ್ರಿಯು ವಿಶ್ವಾಮಿತ್ರ ಗಾಯತ್ರೀ ಎಂದೇ ಆಗಲಿ. ನೀನು ಯಾರಿಗಾದರೂ ನನ್ನನ್ನು ದಾನಮಾಡು, ನಾನು ಅವರನ್ನು ಕಾಪಾಡುವೆನು. ಅವನನ್ನು ಆರ್ಯನನ್ನು ಮಾಡುವೆನು. ಮೂರು ವೇದಗಳಿಗೆ ಅಧಿಕಾರಿಯನ್ನು ಮಾಡುವೆನು. ಆದರೆ, ಇಗೋ, ಇದೇ ಮಾತು. ನನ್ನನ್ನು ದುರುಪಯೋಗಪಡಿಸಿದವನ ವಂಶವು ಒಣಗಿದ ಮರದಂತೆ ಒಣಗಿಹೋಗುವುದು.' ಎಂದು ಹೇಳಿ, ಬ್ರಹ್ಮಣಸ್ಪತಿ ಪೂಷರ ಅಪ್ಪಣೆಯನ್ನು ಕೇಳಿ, ವಿಶ್ವಾಮಿತ್ರರಿಗೂ ಹೇಳಿ ಆತನ ಪೂಜೆಯನ್ನು ಪಡೆದು ಅಂತರ್ಧಾನವಾದಳು. ಅವರೂ ಪರ ಮಾನಂದಭರಿತರಾಗಿ ಕೃತಕಾರ್ಯರಾದ ವಿಶ್ವಾಮಿತ್ರರನ್ನು ಆನಂದಾಶ್ರೂಪೂರ್ವವಾಗಿ ಹೊಗಳಿ ಆತನಿಂದ ಪೂಜೆಯನ್ನು ಪಡೆದು ಮರೆಯಾದರು.[೫]

ಸತತ ಸಾಧನೆಯಿಂದ ಸಿದ್ಧಿ ಪಡೆದು ಬ್ರಹ್ಮರ್ಷಿ ಎನಿಸಿಕೊಂಡ ವಿಶ್ವಾಮಿತ್ರರ ಆಶ್ರಮಕ್ಕೆ ಒಮ್ಮೆ ವಸಿಷ್ಠರು ಬಂದರು. ಅಭ್ಯಾ ಗತರನ್ನೂ ಮಧುಪರ್ಕಾದಿಗಳಿಂದ ಸತ್ಕರಿಸಿದ ಮೇಲೆ ಅವರಿಬ್ಬರ ಮಾತುಕತೆ ಸರಸವಾಗಿ ಮಧುವಾಗಿ ಆತ್ಮೀಯವಾಗಿ ನಡೆ ಯಿತು. ವಸಿಷ್ಠರು ಹೇಳಿದರು ; 'ಅಂತೂ ಗೆದ್ದಿರಿ, ಲೋಕವನ್ನು ಉದ್ದಾರ ಮಾಡಿದಿರಿ.' ಎಂದು.

ಒಂದು ದಿನ ದೇವ ಸಭೆ ನೆರೆದು ವಸಿಷ್ಠರು ಚತುರ್ಮುಖರನ್ನು ಮುಂದಿಟ್ಟುಕೊಂಡು ಸಪ್ತರ್ಷಿಗಳನ್ನು ಕರೆಸಿಕೊಂಡು ವಿಶ್ವಾಮಿತ್ರರಿಗೆ ಬ್ರಹ್ಮರ್ಷಿ ಪಟ್ಟಾಭಿಷೇಕವನ್ನು ಮಾಡಿದರು.

ಮತ್ತೆ ಪಿಪ್ಪಲಾದರ ಅಧ್ಯಕ್ಷತೆಯಲ್ಲಿ ಋಷಿ ಪರಿಷತ್ ಸೇರಿ ವಿಶ್ವಾಮಿತ್ರರಿಗೆ ಮಹರ್ಷಿ ಪದವಿಯನ್ನು ಪ್ರದತ್ತಮಾಡಿತು. ಕಡೆಯಲ್ಲಿ ಪುಷ್ಪರಥದಲ್ಲಿ ವಸಿಷ್ಠ ವಿಶ್ವಾಮಿತ್ರರನ್ನು ಒಟ್ಟಿಗೆ ಕೂರಿಸಿ ಧರ್ಮಿಷ್ಠ ಯಯಾತಿ, ಬ್ರಹ್ಮಿಷ್ಠ ಜನಕ ಇಬ್ಬರೂ ಸೇರಿ ಆ ರಥವನ್ನು ಎಳೆದರು. ಆ ಮೆರವಣಿಗೆಯನ್ನು ಕಂಡು ವಿಶ್ವಕ್ಕೆ ವಿಶ್ವವೇ ಸಂತೋಷಪಟ್ಟಿತು.

---

[೫] ಅದೇ ಪು. ೨೯೬–೨೯೮

ಹೀಗೆ ಕ್ಷತ್ರಿಯ ಕುಲ ಸಂಭೂತನಾದ ವಿಶ್ವಾಮಿತ್ರನು ಸ್ವಸಾಧನೆ ಹಾಗೂ ಆತ್ಮ ಬಲಗಳಿಂದ ಬ್ರಹ್ಮರ್ಷಿಯಾದ ಪುಣ್ಯಕಥೆ 'ಮಹಾಬ್ರಾಹ್ಮಣ'.

**ಮಹಾಕ್ಷತ್ರಿಯ**

ದೇವೇಂದ್ರನ ಅಹಂಕಾರದ ಫಲವಾಗಿ ಭರಿಸಲಾಗದ ನಷ್ಟವೇ ಆಯಿತು. ದೇವಲೋಕಕ್ಕೆ ಬೃಹಸ್ಪತಾಚಾರ್ಯರು ಬಹುದಿನಗ ಳವರೆಗೆ ಕಾಣೆಯಾದರು. ಅವರಿಂದ ತೆರವಾದ ಧರ್ಮಾಚಾರ್ಯಸ್ಥಾನವನ್ನು ಅಸುರ ಗುರು ತ್ವಷ್ಟ್ರು ಬ್ರಹ್ಮನ ಮಗನಾದ ವಿಶ್ವರೂಪಾಚಾರ್ಯನು ತುಂಬ ಬೇಕಾಗಿ ಬಂತು. ಆತನ ಬಗ್ಗೆ ದೇವೇಂದ್ರನಿಗೆ ಬ್ರಹ್ಮ ಹೇಳಿದ– 'ಆತನು ಬೃಹಸ್ಪತಿಗೆ ಸಮನು, ಮಹಾತೇಜಸ್ವಿಯು ಸಾಂಗವಾಗಿ ವೇದಗಳನ್ನು ಬಲ್ಲವನು. ಜೊತೆಗೆ ಶಾಂತ ಘೋರ ಕ್ರಿಯೆಗಳೆರಡನ್ನೂ ಬಲ್ಲವನು. ಶಾಪಾನು ಗ್ರಹ ಶಕ್ತನು. ಆತನಿಗೆ ಮೂರು ಮುಖಗಳು. ಒಂದರಿಂದ ಯಾವಾಗಲೂ ವೇದಪಾರಾಯಣವನ್ನು ಮಾಡುತ್ತಿರುವವನು. ಇನ್ನೊಂ ದರಿಂದ ಮಾತೃವಂಶದವರಿಂದ ಕಲಿತಿರುವ ಸುರಾಪಾನವನ್ನು ಮಾಡುವನು. ಮತ್ತೊಂದರಿಂದ ನಿನಗೆ ಪೌರೋಹಿತ್ಯವನ್ನು ಮಾಡಿಸುವನು. ನೀನು ಹೋಗಿ ಪ್ರಾರ್ಥಿಸಿದರೆ ದೇವತೆಗಳು ತನಗೆ ಪಿತೃಗಳು ಎಂದು ಗೌರವಿಸಿ ನಿಮ್ಮ ಯಜಮಾನ್ಯವನ್ನು ಅಂಗೀಕರಿಸುವನು. ಆತನಲ್ಲಿ ತಪ್ಪಿ ನಡೆದರೆ ನಿನಗೆ ಅನರ್ಥವು ತಪ್ಪದು. ಅದನ್ನು ಮನಸ್ಸಿನಲ್ಲಿಟ್ಟುಕೊಂಡು ಆತನನ್ನು ದೇವಾಚಾ ರ್ಯನಾಗುವಂತೆ ಪ್ರಾರ್ಥಿಸಿ ಒಪ್ಪಿಸು.

ಬ್ರಹ್ಮನ ಆದೇಶದಂತೆ ಅಸುರಸ್ತ್ರೀ ಹೊಟ್ಟೆಯಲ್ಲಿ ಹುಟ್ಟಿದ ವಿಶ್ವರೂಪಾಚಾರ್ಯನನ್ನು ಧರ್ಮಾಚಾರ್ಯನಾಗಿರಲು ಒಪ್ಪಿಸಿದ ಇಂದ್ರ. ಆದರೆ ಅಸುರ ಶ್ರೇಷ್ಠನಾದ ವಿರೂಪಾಕ್ಷನ ಪ್ರೇರಣೆ ಪ್ರಚೋದನೆಗಳಿಂದಾಗಿ ವಿಶ್ವರೂಪ ತನ್ನ ಬಣ್ಣ ಬದಲಿಸಿದ. ದೇವತೆಗಳಿಗೆ ವಿರುದ್ಧವಾಗಿ ನಿಂತ. ದೇವೇಂದ್ರನಿಗೆ ಅವನನ್ನು ಧರ್ಮಾಚಾರ್ಯನನ್ನಾಗಿಸಿದ್ದೂ ತುಂಟಹಸುವನ್ನು ತಂದು ಕಟ್ಟಿ ಕೊಂಡಂತಾಯಿತು ! ಅವನ ಎಲ್ಲ ಗುಣಗಳೂ ಮೆಚ್ಚಿತವಾದುದಾದರೂ ಸುರಾಪಾನವನ್ನು ಕಂಡು ಸಹಿಸಲಾಗಲಿಲ್ಲ. 'ಅಚಾರ್ಯ, ಸುರಾಪಾನವು ತಮೋಗುಣವನ್ನು ಬೆಳಸುವುದು, ಸೋಮಪಾನವು ಸತ್ತ್ವವಾಗುವ ರಜೋಗುಣವನ್ನು ಬೆಳೆಸುವುದು. ಅದನ್ನು ಬಿಡಿ ಎಂದಾಗ, ಕುಪಿತನಾದ ವಿಶ್ವರೂಪಾಚಾರ್ಯನು, ' ದೇವರಾಜ, ಇದು ನಮ್ಮ ಸ್ವಂತವಿಚಾರ. ಇದನ್ನು ನಾವು ಅಂಗೀಕ ರಿಸಿದ್ದೇವೆ. ಹಸುವನ್ನು ಒಪ್ಪಿಕೊಂಡಾಗ ಅದರ ಕೊಂಬು, ಬಾಲಗಳನ್ನೂ ಒಪ್ಪಿಕೊಂಡಂತೆ, ನಮ್ಮನ್ನು ಅಂಗೀಕರಿಸಿದವರು, ನಮ್ಮ ಕೆಟ್ಟ ಚಾಳಿಗಳನ್ನು ದುರ್ಗುಣಗಳನ್ನೂ ಅಂಗೀಕರಿಸಬೇಕು. ನಮ್ಮ ಪ್ರಾಣವನ್ನಾದರೂ ಬಿಟ್ಟೇವು ಇದನ್ನು ಬಿಡುವುದಿಲ್ಲ. ಇದರಲ್ಲಿ ನಮಗೆ ಸೌಖ್ಯವಿದೆ. . .'

'ದೇವಾ, ತಾವು ದೊಡ್ಡವರು, ನಿಯತಿಗೆ ಭಂಗ ಬರಬಾರದು. ಆಚಾರ್ಯರಾಗುವ ಮುಂಚೆ ಯಥೇಚ್ಛಾಚಾರವು ಶೋಭಿ ಸುತ್ತಿತ್ತು. ಈಗ ನಿಯತಾಚಾರವು ಮಾತ್ರ ಶೋಭಿಸುವುದು. . .ನಿಯತಿಯು ನಿಯಮ ತಿರಸ್ಕಾರವನ್ನು ಸಹಿಸುವುದಿಲ್ಲ ಆಚಾರ್ಯ!

'ಈ ಬೆದರಿಕೆ ನಮಗಲ್ಲ'

ವಾಗ್ವಾದ ವಿಕೋಪಕ್ಕೆ ಹೋಯಿತು.

ಮತ್ತೊಮ್ಮೆ ಇಂದ್ರ ಪ್ರಯತ್ನಿಸಿದ. ವಿಶ್ವರೂಪಾಚಾರ್ಯನನ್ನು ಭೇಟಿ ಮಾಡಿ ಬೇಡಿದ. ದೇವತೆಗಳ ಪ್ರಾರ್ಥನೆಯಂತೆ ದೇವಾಚಾರ್ಯರಾದ ತಾವು ಸುರಾಪಾನ ಮಾಡಬಾರದು. ಮಾಡಿದ್ದರೆ ಅದು ಅಪರಾಧವಾಗುವುದು, ಎಂದು.

'ಅಪರಾಧಿ ! ಅಪರಾಧ– ಎಲ್ಲಿ? ನಿನಗೆ ಶಕ್ತಿ ಇದ್ದರೆ ಅಪರಾಧಿಗೆ ಶಿಕ್ಷೆ ವಿಧಿಸು, ನೋಡೋಣ.'

'ಶಿಕ್ಷೆ ವಿಧಿಸಲು ಹಿಂತೆಗೆಯುವುದಾಗಿದ್ದರೆ, ಈ ಭುಜವು ತ್ರೈಲೋಕಾಧಿಪತ್ಯದ ಭಾರವನ್ನು ವಹಿಸುತ್ತಿರಲಿಲ್ಲ. ಇದು ಶಿಕ್ಷೆಗೆ ಸ್ಥಾನವಾಗಬಾರದೆಂದು ಮತ್ತೆ ಬಿನ್ನವಿಸಿಕೊಳ್ಳುವೆನು.'

'ಹೌದು, ಹೌದು ನಿನಗೆ ನನ್ನನ್ನು ಶಿಕ್ಷಿಸುವ ಧೈರ್ಯವಿಲ್ಲ. . .ಎಲ್ಲಿ. ಇಂದ್ರ ಶಪಥ ಮಾಡು. ನಿನ್ನ ಕೈಲಾದರೆ ನನಗೆ ಶಿಕ್ಷೆಯನ್ನು ವಿಧಿಸು.'

ಇಂದ್ರನ ಸೈರಣೆ ಸಮಾಧಿಯಾಯಿತು. ಖಡ್ಗವನ್ನೆಳೆದ, ಬೀಸಿದ. ವಿಶ್ವರೂಪಾಚಾರ್ಯನ ರುಂಡಮುಂಡಗಳು ಬೇರಾದವು ಕ್ಷಣಾರ್ಧದಲ್ಲಿ.

ಪುತ್ರವಧಾ ವೃತ್ತಾಂತವನ್ನು ಕೇಳಿದ ತ್ವಷ್ಟೃಬ್ರಹ್ಮನು ಕ್ಷುದ್ರನಾದನು. 'ಇಂದ್ರನು ಇಂತಹ ಅಕಾರ್ಯ ಮಾಡಿದನೆ ? ದೇವ ಲೋಕದಲ್ಲಿ ಇಂದ್ರನೇ ಇಲ್ಲದಂತೆ ಮಾಡುವೆನು. . .ಮತ್ತೊಬ್ಬ ಅತೀಂದ್ರನನ್ನು ಸೃಷ್ಟಿಸುವೆನು' ಎಂದು ತ್ವಷ್ಟೃ ಘೋರ ಯಜ್ಞವನ್ನು ಮಾಡಿ, ಅದರ ಫಲವಾಗಿ ಕರಾಳಾಕೃತಿಯೊಂದನ್ನು ಪಡೆದ, ಆ ಆಕೃತಿಯೇ ವೃತ್ರಾಸುರ. ಅಜೇಯನಾದ ವೃತ್ರಾಸುರವನ್ನು ಕೊಲ್ಲಬೇಕಾದರೆ ದಧೀಚಿ ಮಹರ್ಷಿಯ ಬೆನ್ನೆಲುಬೇ ಬೇಕು. ಅದಕ್ಕಾಗಿ ಇಂದ್ರನು ದಧೀಚಿಗಳ ಆಶ್ರಮಕ್ಕೆ ಹೋದ. ಅಲ್ಲಿ ಅವರನ್ನು ಸಂದರ್ಶಿಸಿ, 'ದೇವಾ, ತಮ್ಮ ಮುಂದೆ ಕ್ಷುದ್ರರೆಂದು ಹೇಳಿಕೊಳ್ಳಲೂ ಆಗದ ಕ್ಷುದ್ರರು ನಾವು. . .ಈ ಬ್ರಹ್ಮಾಂಡನಾಯಕ ನಾದ ಮಹಾವಿಷ್ಣುವಿನ ಅಪ್ಪಣೆಯೆಂದು ತಮ್ಮ ಸನ್ನಿಧಾನಕ್ಕೆ ಬಂದು ಬೇಡಿಕೊಳ್ಳುತ್ತಿರುವೆವು. ತಮ್ಮ ಮೈಯೆಲ್ಲವೂ ತಪಸ್ಸಿನಿಂದ ವಜ್ರವಾಗಿರುವುದು. ರಕ್ತ ಮಾಂಸಾದಿ ಸಪ್ತಧಾತುಗಳನ್ನು ತಮ್ಮ ತಪೋಬಲದಿಂದ ವಜ್ರಗಳನ್ನು ಮಾಡಿರುವರು. ತಾವು ದೇವಗಣಾ ಸಂರಕ್ಷಣಾರ್ಥವಾಗಿ ಬ್ರಹ್ಮಾಂಡದ ಪ್ರಯೋಜನಕ್ಕಾಗಿ ವರವನ್ನು ಕೊಡಬೇಕು.'

'ವರವು ಬೇಕು, ಕೊಟ್ಟಿದ್ದೇನೆ. ಈಗ ಬಾಯಿ ಬಿಟ್ಟು ಹೇಳು'

'ದೇವ' ತಮ್ಮ ಬೆನ್ನು ಮೂಳೆಯು ಬೇಕು'

'ಈ ದೇಹದಲ್ಲಿ ಇನ್ನೂ ಪ್ರಾಣವಿದ್ದಾಗಲೇ ಬೇಕೊ ? ಅಥವಾ ಅನಂತರ ತೆಗೆದುಕೊಳ್ಳುವಿರೊ!'

'ದೇವಾ, ತಾವು ಈ ದೇಹವನ್ನು ಬಿಟ್ಟರೆ ಅಸ್ಥಿಯು ಹತ ತೇಜವಾಗುವುದು. ಅದು ಆಗ ವಜ್ರವಾಗುವುದಿಲ್ಲ. ನಾವು ತಮ್ಮ ಬೆನ್ನು ಮೂಳೆಯಿಂದ ವಜ್ರವನ್ನು ಮಾಡಬೇಕೆಂದಿರುವೆವು. ವಜ್ರವು ಸರ್ವ ಶಸ್ತ್ರಗಳಲ್ಲೂ ಉತ್ತಮವಾಗಿರುವುದು. ಆದ್ದರಿಂದ ಅನುಗ್ರಹ ಮಾಡಿ ಸಜೀವವಾಗಿರುವಾಗಲೇ ಅಸ್ತಿಯನ್ನು ದಾನಮಾಡಬೇಕು.'

ದಧೀಚಿ ನಕ್ಕು 'ಯಾವತ್ತಾದರೂ ಎಸೆಯಬೇಕಾದ ದೇಹವಿದು. ಇವತ್ತೇ ಹೋದರೆ ಏನು ಮಹಾ ! ಈಗ ಈ ದೇಹವನ್ನು ದೇವ ಕಾರ್ಯಾರ್ಥವಾಗಿ ಬಿಡುವುದಕ್ಕಿಂತ ಇನ್ನೇನು ಬೇಕು?' ಎಂದಂದುಕೊಂಡು ತನ್ನನ್ನು ತಾನೇ ಅರ್ಪಿಸಿಕೊಂಡ. ಅವನ ಬೆನ್ನುಮೂಳೆಯಿಂದ 'ವಜ್ರಾಯುಧ' ತಯಾರಾಯಿತು.

ಇಂದ್ರನಿಗೂ ವೃತ್ರಾಸುರನಿಗೂ ಯುದ್ಧ ಸಂಘಟಿಸಿತು. ವಜ್ರಾಯುಧವನ್ನೆತ್ತಿಕೊಂಡು ಎದುರಿಗೆ ಬಂದ ಇಂದ್ರನನ್ನು ವೃತ್ರ ಹಿಡಿದು ತನ್ನ ಬಾಯೊಳಗೆ ಹಾಕಿಕೊಂಡನು. ಅಣಿಮಾಸಿದ್ಧಿಯನ್ನು ಪಡೆದಿದ್ದ ಇಂದ್ರ ಆ ರಕ್ಕಸನ ತೆರೆದ ಬಾಯಿಂದ ಮತ್ತೆ ಹೊರಗೆ ಬಂದ. ಬಂದವನೇ ವಜ್ರಾಯುಧದಿಂದ ಅವನನ್ನು ತುಂಡರಿಸಲು ಮುಂದೆ ನುಗ್ಗಿದಾಗ, ಯಾರೋ ಅವನ ಕಿವಿಯಲ್ಲಿ, 'ಇದು ಕಾಲವಲ್ಲ ಪ್ರಯೋಗಿಸಿದ್ದಾದರೆ ಅದೇ ಆಯುಧವು ನಿನ್ನ ಪಾಲಿನ ಮೃತ್ಯುವಾಗುವುದು' ಎಂದರು. ಇಂದ್ರನು ಹತಾಶನಾದ. ಸಮರವೇಷವನ್ನು ತೆಗೆದು ಹಾಕಿ ವೃತ್ರಾಸುರನನ್ನು ಅವನ ಬೀಡಿನಲ್ಲೇ ಕಂಡು, ಇಂದ್ರಪದವಿಯನ್ನು ಅವನಿಗೇ ವಹಿಸಿಕೊಟ್ಟ. ಈಗ ವೃತ್ರಾಸುರನೇ ಇಂದ್ರ.

ಮಾಜಿ ಮತ್ತು ಹಾಜೀ ಇವರಿಬ್ಬರೂ ಸಮುದ್ರ ತಡಿಯಲ್ಲಿದ್ದಾಗ ಒಮ್ಮೆ ವೃತ್ರಾಸುರನು ನೊರೆಯಿಂದ ತನ್ನನ್ನು ಹೊಡೆಯು ವಂತೆ ಹೇಳಿದನು. ಅದೇ ರೀತಿ ಇಂದ್ರನು ತನ್ನ ಸರ್ವಶಕ್ತಿಯನ್ನೂ ಪ್ರಯೋಗಿಸಿ ನೊರೆಯಿಂದ ಹೊಡೆದ ಕೂಡಲೇ ವೃತ್ರ ಕಡೆದು ಬಿದ್ದ, ಪರ್ವತಾಕಾರವಾಗಿ.

ವೃತ್ರಾಸುರ ಮಡಿದನೆಂದೇ ದೇವೇಂದ್ರ ಬಗೆದ. ಆದರೆ ಆತ ಮಡಿದಿರಲಿಲ್ಲ ಮೂರ್ಛಾಗತನಾಗಿದ್ದ. ಮತ್ತೆ ಎಚ್ಚರಗೊಂಡ ನೆಂಬ ಸುದ್ದಿ ತಿಳಿದು ಇಂದ್ರನು ದೇಶಾಂತರ ಓಡಿಹೋದ.

ಇತ್ತ ಸುರದೊಡೆಯ ಇಂದ್ರ ಇಲ್ಲ, ಅತ್ತ ಅಸುರನಾಯಕ ವೃತ್ರ ಸಲ್ಲ. ಅಂದ ಮೇಲೆ ಇಂದ್ರ ಪದವಿ ಯಾರಿಗೆ ? ವಿಶ್ವ ಅರಾಜಿಕವಾಗಬಾರದು. ಅದರಿಂದಾಗಿ, ಚ್ಯವನ ಮಹರ್ಷಿಗಳ ಅಭಿಮತದಂತೆ ಭೂಲೋಕದೊಡೆಯ, ಧರ್ಮಪ್ರಭು, 'ನಹುಷ'ನನ್ನು ಆರಿಸಿದರು. ನಹುಷನೇ ಮಹಾಕ್ಷತ್ರಿಯ ! ಅಧಿಕಾರ ಸ್ವೇಚ್ಛಾಚಾರದ ವೇದಿಕೆಯಲ್ಲ, ಅದು ಸೇವೆಯ ಕರ್ಮ

ಭೂಮಿ ಎಂದು ಭಾವಿಸಿದ್ದ ಆತ, ಪೀಠವೆನ್ನುವುದು ವಿಚಾರವೇದಿಕೆಯಲ್ಲ, ವಿಧಿವೇದಿಕೆ. ಅದಕ್ಕೆ ಅಪಚಾರ ಮಾಡಬಾರದು ಎಂದೇ ಧರ್ಮದಿಂದಾಳುತ್ತಿದ್ದ. ಅದರಿಂದಾಗಿ ಇಂದ್ರ ಪದವಿ ತಾನೇ ಅವನನ್ನರಿಸಿಕೊಂಡು ಬಂತು. ಆದರೆ ಇಂದ್ರಾಣಿಯ ಪ್ರಶ್ನೆ ಬಂತು. ಯಾವನು ಇಂದ್ರನಾಗುವನೋ ಶಚೀದೇವಿ (ಇಂದ್ರಾಣಿ) ಅವನವಳಾಗಬೇಕು ಎಂಬ ಅಭಿಪ್ರಾಯ ಮೂಡಿತು. ಮೂಲಪುರಾಣಗಳಲ್ಲಿ ನಹುಷನು ಶಚಿಯನ್ನು ತನ್ನ ಪತ್ನಿಯಾಗಿ ಪಡೆಯಲಿಚ್ಛಿಸಿದ ಮತ್ತು ಸಪ್ತರ್ಷಿಗಳಿಂದ ಹೊರಸಿಕೊಂಡು ಶಿಬಿಕೆಯಲ್ಲಿ ಮೆರೆದ ಆ ಅಪರಾಧದಿಂದಾಗಿ ಇಂದ್ರ ಪದವಿ ಕಳೆದುಕೊಂಡ ಎಂದಿದೆ. ಆದರೆ ದೇವುಡುರವರು ನಹುಷನ ಪಾತ್ರವನ್ನು ಉದಾ ತ್ತೀಕರಿಸಲು ಯತ್ನಿಸಿ, ಪರಸ್ತ್ರೀ ಮೋಹ ಅಲ್ಲ ಎಂಬುದನ್ನು ಸ್ಪಷ್ಟೀಕರಿಸಿದ್ದಾರೆ. ನಹುಷನು ತನ್ನ ಮಹಾರಾಣಿ ವಿರಜಾದೇವಿಯೊ ಡನೆ ಧರ್ಮದಿಂದ ಬದುಕುವುದಾಗಿ ತಿಳಿಸುತ್ತಾನೆ. ಆದರೆ ದೇವತೆಗಳ ಕುತಂತ್ರದಿಂದಾಗಿ ಶಿಬಿಕೆ ಏರಿ, ಸಪ್ತರ್ಷಿಗಳ ಕೋಪಕ್ಕೆ ಪಾತ್ರನಾಗಿ ಇಂದ್ರಪದವಿಯನ್ನು ತ್ಯಜಿಸುತ್ತಾನೆ.

ವಿಶ್ವಜಿದ್ಯಜ್ಞ ಮಾಡಿದ ಮಹಾನುಭಾವ ನಹುಷನು ಅನೇಕ ವರ್ಷಗಳ ಕಾಲ ಬದುಕಿ ಮೋಕ್ಷಪಡೆಯುತ್ತಾನೆ. ಇಂತಹ ಧರ್ಮಭೀರು, ಪ್ರಜಾವತ್ಸಲ ನಾಯಕಮಣಿಯೇ ಮಹಾಕ್ಷತ್ರಿಯ. ಈ ಕಾದಂಬರಿಯ ಪೂವಾರ್ಧ ಇಂದ್ರ ವೃತ್ರಾಸುರರಿಗೆ ಮೀಸಲಿದ್ದರೆ ಉತ್ತರಾರ್ಧ ನಹುಷ ಚಕ್ರವರ್ತಿಯ ಧರ್ಮಾಡಳಿತಕ್ಕೆ ಮೀಸಲಿದೆ.

**ಮಹಾದರ್ಶನ :**

ಮಹರ್ಷಿ ಮಹೋದಯರಲ್ಲಿ ಒಬ್ಬನಾದ ಯಾಜ್ಞವಲ್ಕನ ಮಹತ್ಸಾಧನೆ ಸಿದ್ಧಿಗಳ ವಿನ್ಯಾಸವೆ 'ಮಹಾದರ್ಶನ' ಜ್ಯೋತಿ ರೂಪನಾಗಿ ಅವತರಿಸಿದ ಆ ಮಹಾನುಭಾವನು ಜಗತ್ತನ್ನೆಲ್ಲಾ ತನ್ನ 'ಆರ್ದ್ರಜ್ಯೋತಿ' (ಒದ್ದೆಯಾದ ಬೆಳಕು)ಯ ಹೊಂಬೆಳಗಿನಲ್ಲಿ ಜಗತ್ತನ್ನೆಲ್ಲಾ ಬೆಳಗಿದನು. ಋಕ್, ಯಜುರ್, ಸಾಮ ಮತ್ತು ಅಥರ್ವಣ ಎಂಬ ವೇದಗಳು ನಾಲ್ಕೇ ಆದರೂ ಅವುಗಳ ವ್ಯವಸ್ಥೆ ಸರಿ ಇರಲಿಲ್ಲ. ಆ ಸಂಹಿತೆಗಳಲ್ಲಿ ಯಜ್ಞಭಾಗ, ಬ್ರಾಹ್ಮಣಭಾಗ, ರಹಸ್ಯಭಾಗಗಳೆಲ್ಲಾ ಬೆರೆತು, ಕಲಸುಮೇಲೋಗರ ಆಗಿ ಹೋಗಿತ್ತು. ಯಾಜ್ಞವಲ್ಕ್ಯನು ಸಂಹಿತೆಯನ್ನು ಸಮಂಜಸವಾಗಿ ವರ್ಗೀಕರಣ ಮಾಡಿದನು. ಕೃಷ್ಣಯಜುರ್ವೇದದ ಶುಕ್ಲಾಂಶಗಳನ್ನು ತೆಗೆದು ಶುಕ್ಲಯಜುರ್ವೇದವನ್ನು ರೂಪಿಸಿಕೊಟ್ಟನು. ಅದು ಐದನೆಯ ವೇದವಾಗಲಿಲ್ಲ, ಯಜುರ್ವೇದದ ಒಂದಂಗವಾಯಿತು. ಅದು ವಾಜಿರೂಪನಾದ ಆದಿತ್ಯನಿಂದ ಬಂದದ್ದಾದ್ದರಿಂದ ಅದನ್ನು 'ವಾಜಸನೆಯ ಸಂಹಿತಾ' ಎಂದು ಕರೆದರು.

ಹೀಗೆ ಯಾಜ್ಞವಲ್ಕ್ಯನಿಂದ ಶುಕ್ಲಯಜುರ್ವೇದ ಅಥವಾ ವಾಜಸನೇಯ ಸಂಹಿತಾ ಸೃಷ್ಟಿಯಾಯಿತು. ಅದೇ ರೀತಿ ಶತಪಥ ಬ್ರಾಹ್ಮಣವನ್ನೂ, ಮತ್ತು ಈಶಾವಾಸ್ಯ ಅಥವಾ ಸಂಹಿತೋಪನಿಷತ್ತನ್ನೂ ರಚಿಸಿಕೊಟ್ಟನು. ಅಲ್ಲಿಗೆ ಒಂದು ವೇದ, ಒಂದು ಬ್ರಾಹ್ಮಣ, ಒಂದು ಉಪನಿಷತ್ ಸೃಷ್ಟಿಯಾದಂತಾಯಿತು. ಅದರಿಂದ ಸಂಸ್ಕೃತ ಸಾರಸ್ವತಲೋಕ ಶ್ರೀಮಂತವಾಯಿತು. ಅಂತೆಯೇ ಭಾರತೀಯವಾದ ದರ್ಶನ ಪ್ರಪಂಚದ ಜ್ಯೋತಿದ್ವಾರವೆ ತೆರೆದುಕೊಂಡಿತು.

ಇಂತಹ ಮಹಾಮೇಧಾವಿ ಯಾಜ್ಞವಲ್ಕ್ಯನು ದೇವರಾತ ಮತ್ತು ಅಲಂಬೀ ದೇವಿಯರ ಸುಪುತ್ರ. ದೇವರಾತನಿಗೆ 'ಯಾಜ್ಞ ವಲ್ಕ್ಯ' ಎಂಬ ಬಿರುದಿತ್ತು. ಅದನ್ನು ರಾಜ ಮಹಾರಾಜರು, ಋಷಿಮುನಿಗಳು ಕೊಟ್ಟಿದ್ದರು. ಆ ಯಾಜ್ಞವಲ್ಕ್ಯ ದೇವರಾತನ ಮಗ 'ಯಾಜ್ಞವಲ್ಕ್ಯ' ಎಂದಾದನು. ಕಾರ್ತೀಕ ಶುದ್ಧ ಸಪ್ತಮಿಯ ದಿನ ಕಾರಣಪುರುಷನಾಗಿ ಅವತರಿಸಿದ ಯಾಜ್ಞವಲ್ಕ್ಯನು ತನ್ನ ಯಳ ಮೆಯಲ್ಲೇ ವೇದ ವೇದಾಂತಗಳನ್ನು, ವೇದಾಂಗಗಳನ್ನು ಕರತಲಾಮಲಕ ಮಾಡಿಕೊಂಡನು. ಭಾಷೆಯ ಮೂಲಕ ಬ್ರಹ್ಮವನ್ನು ಸಾಧಿಸಿದನು. ಬ್ರಹ್ಮವಿದ್ಯೆಯನ್ನು ಬಲ್ಲವನು ನಾಯಿ, ನರಿ, ಚಂಡಾಲರಾದಿಯಾಗಿ ಸಮಸ್ತವನ್ನೂ ಸಮಭಾವದಿಂದ ನೋಡಬೇಕು. ಮತ್ತೊಂದು ಕರ್ಮ ; ಸರ್ವೇಷಾಮ ವಿರೋಧೇನ ಬ್ರಹ್ಮಕರ್ಮವನ್ನು ಹೊಸ ಸಂಹಿತೆ ಬ್ರಾಹ್ಮಣಗಳನ್ನು ಕೊಡುವ ಮೂಲಕ ಕರ್ಮಗಳನ್ನೆಲ್ಲಾ ಕನ್ನಡಿಯಂತೆ ಸ್ವಚ್ಛಗೊಳಿಸದವನು. 'ಶಂನೋ ಅಸ್ತು ದ್ವಿಪದೇ ಶಂ ಚತುಷ್ಪದೇ' ಅಂದರೆ ಎರಡು ಕಾಲಿನ ಪ್ರಾಣಿಗಳಿಗೂ ನಾಲ್ಕು ಕಾಲಿನ ಪ್ರಾಣಿಗಳಿಗೂ ಸುಖವಾಗಲಿ ಎಂಬುದನ್ನು ಅನುಷ್ಠಾನಗೈದನು. ಹೀಗೆ ಕರ್ಮ ಬ್ರಹ್ಮಗಳೆರಡಕ್ಕೂ ಅಧಿಕಾರಿಯಾದನು. ಯಜುರ್ವೇದಿಗಳ ಮನೆಯಲ್ಲಿ ಹುಟ್ಟಿದವನಾದ್ದರಿಂದ ಅವನ ಪಾಲಿಗೆ ಅಧ್ವರ್ಯವ ಮುಖ್ಯವಾದುದು. ಅದನ್ನು ಗಟ್ಟಿಗಳಿಸಿಕೊಂಡ

ಯಾಜ್ಞವಲ್ಕ್ಯನು ತಾಯಿ ಆಲಂಬಿನಿದೇವಿ ಮತ್ತು ಅಜ್ಜಿ (ಆಲಂಬಿನಿಯ ತಾಯಿ) ಜಾಯಂತಿಯರ ಪೋಷಣೆ, ಪ್ರೇಷಣೆ, ಲಾಲನೆ ಪಾಲನೆಗಳಲ್ಲಿ ಬೆಳೆದನು. ಮಗು ಮಗನಾದ ಮೇಲೆ ಅವನ ವಿದ್ಯಾಭ್ಯಾಸದ ವ್ಯವಸ್ಥೆ ನಡೆಯಿತು. ಯಾಜ್ಞವಲ್ಕ್ಯನ ಮೊದಲ ಗುರು ಅವನ ತಾಯಿ, ಅನಂತರದವನು ಅವನ ತಂದೆ, ಮೂರನೆಯವರು ಆಗಾಗ ಅವರ ಗೃಹಕ್ಕೆ ಆಗಮಿಸುತ್ತಿದ್ದ

ಮಹರ್ಷಿ ಬುಡಿಲರು – ಒಮ್ಮೆ ಯಾಜ್ಞವಲ್ಕ್ಯನು ತನ್ನ ತಾಯಿಯನ್ನು ಶ್ರೇಯಸ್ಸು ಮತ್ತು ಪ್ರೇಯಸ್ಸುಗಳ ಅರ್ಥ ವ್ಯತ್ಯಾಸ ಕೇಳಿದ. ಅವಲಂಬಿನಿ ಹೇಳಿದರು, 'ಮಗು ಮಾನವನ ಮನಸ್ಸಿನ ಮುಂದೆ ಎರಡು ಮಾರ್ಗಗಳಿವೆ. ಎರಡೂ ಭಿನ್ನಮಾರ್ಗಗಳು, ಗುರಿಯೂ ಬೇರೆ ಬೇರೆ, ಆದರೆ ಎರಡೂ ಮನುಷ್ಯನನ್ನು ಕಟ್ಟುತ್ತವೆ. ಶ್ರೇಯೋಮಾರ್ಗವನ್ನು ಹಿಡಿದರೆ ಒಳ್ಳೆಯದಾಗುತ್ತೆ, ಪ್ರೇಯೋಮಾರ್ಗ ಹಿಡಿದವನು ದಾರಿತಪ್ಪುತ್ತಾನೆ. ಶ್ರೇಯಸ್ಸು ಸದ್ಭಾವನೆ ಮತ್ತು ಆಚರಣೆ (ಸದಾಚಾರ). ಪ್ರೇಯಸ್ಸು ತನಗೆ ತೋರಿದಂತೆ ಅಂದರೆ ಮನಸೋ ಇಚ್ಛೆ ನಡೆದುಕೊಳ್ಳುವುದು (ಸ್ವೇಚ್ಛಾಚಾರ). ತಾಯಿಯ ಮಾತು ಹಿಡಿಸಿತು. ತಾನು ಶ್ರೇಯೋಮಾರ್ಗ ಹಿಡಿಯುವುದಾಗಿ ಭರವಸೆ ಕೊಟ್ಟ ಮಗ, ತಂದೆ ದೈವಾಂಶಸಂಭೂತನಾದ ಮಗನು ಮಹಾ ಪ್ರಾಜ್ಞನಿದ್ದಾನೆ, ಆಗುತ್ತಾನೆ. ಅವನಿಗೆ ಸಾಮಾನ್ಯನಾದ ತಾನು ಹೇಳುವುದೇನಿದೆ ? ಎಂದು ಸರ್ವವನ್ನು ಅವನ ಗುರುಗಳಿಗೆ ಮೀಸಲಿಟ್ಟನು.

ಮಹರ್ಷಿ ಬುಡಿಲರಿಂದ ಯಾಜ್ಞವಲ್ಕ್ಯನ ಉಪನಯನ ಆಯಿತು. ಮಂತ್ರ ಮತ್ತು ಮಂತ್ರ ಅರ್ಥ ನಿತ್ಯಾಚರಣೆ, ಅನುಷ್ಠಾನ ಇತ್ಯಾದಿಗಳೆಲ್ಲವನ್ನೂ ಬೋಧಿಸಿದರು. ಉಪನಯನವಾದ ಎರಡು ವರ್ಷಗಳ ಮೇಲೆ ಮಗನನ್ನು ವಿದ್ಯಾಭ್ಯಾಸಕ್ಕಾಗಿ ಗುರುಕುಲಕ್ಕೆ ಕಳುಹಿಸಿಕೊಡುವ ಯೋಚನೆ ಬಂತು. ಯಾಜ್ಞವಲ್ಕ್ಯನ ತಂದೆ ತಾಯಂದಿರಿಗೆ, ತಮಗೆ ಬೇಕಾದವರೊಡನೆ ಆಲೋಚನೆ ಮಾಡಿ ಕಡೆಗೆ ಕುಲಪತಿ ವೈಶಂಪಾಯನ ಗುರುಕುಲಕ್ಕೆ ಕಳುಹಿಸುವುದೆಂದು ತೀರ್ಮಾನಿಸಿದರು. ಅದರಂತೆಯೇ ತಂದೆ ತಾಯಂದಿರಿಬ್ಬರೂ ಹೋಗಿ ಕುಮಾರನನ್ನು ಗುರುಕುಲಕ್ಕೆ ಕರೆತಂದು ಕುಲಪತಿಗೆ ಒಪ್ಪಿಸಿದರು.

ಕುಲಪತಿಗಳ ಕ್ಷಮೆಕೋರಿ ದೇವರಾತ ಹೇಳಿದ 'ಪೂಜ್ಯರೆ, ನಮ್ಮ ಕುಮಾರನು ಇದುವರೆಗೂ ಯಾವ ವಿಷಯದಲ್ಲೂ ಅವಿಧೇಯನಾಗಿ ನಡೆದುಕೊಂಡಿಲ್ಲ. ಆದರೆ ಸಂಗೀತದ ಬಗೆಗೆ ಸ್ವಲ್ಪ ಹುಚ್ಚು !' ಎಂದು. 'ಅದೇನು ದೊಡ್ಡದಲ್ಲ, ಸಂಗೀತ ಬಹು ಬೇಗ ಕಾಮಪ್ರಚೋದನೆ ಮಾಡುತ್ತೆ. ಅದಕ್ಕೆ ಬೇಡ ಎನ್ನುತ್ತೇವೆ ಅಷ್ಟೆ. ಗಂಧರ್ವರಿಗೆ ಕಾಮ ಹೆಚ್ಚು ಆಗಲಿ, ಅದನ್ನು ನಾದಯೋಗವಾಗಿ ತಿದ್ದಿಕೊಟ್ಟರೆ ಆಯಿತು. ಆಗ ಬಹಿರ್ಮುಖ ಕಾಮನೆಯು ತಪ್ಪಿ, ಅಂತರ್ಮುಖವಾಗುವುದು. ಆಗ ಪ್ರಣವವು ಗುರಿಯಾಗುವುದು' ಎಂದರು.

ತಾಯಿ, 'ಇದುವರೆಗೂ ಕುಮಾರನು ಮನೆ ಬಿಟ್ಟು ಹೊರಗೆ ಇದ್ದವನಲ್ಲ. ಅದರಿಂದ ಅವನು ನೋಯದಂತೆ ಕಾಪಾಡುವ ಭಾರ ನಿಮ್ಮದು' ಎಂದು ಬೇಡಿದಳು. ಕುಲಪತಿ ವೈಶಂಪಾಯನರು, 'ತಾಯಿ, ನಮ್ಮ ಗುರುಕುಲದಲ್ಲಿರುವವರೆಲ್ಲ ನಮ್ಮ ಸ್ವಂತ ಮಕ್ಕಳಂತೆ' ಎಂದು ಸಮಾಧಾನ ಹೇಳಿದರು.

ಮಾತಾಪಿತೃಗಳ ಸಮ್ಮುಖದಲ್ಲೇ ವಟುವಿನ ಮೌಖಿಕ ಪರೀಕ್ಷೆ ಆಯಿತು. ಕುಲಪತಿಗಳು ಕೇಳಿದರು 'ಯಾಜ್ಞವಲ್ಕ್ಯ ನಿನಗೆ ವೇದಗಳಲ್ಲಿ ಯಾವುದರ ಮೇಲೆ ಹೆಚ್ಚು ಅಭಿಮಾನ' ಎಂದು. ಯಾಜ್ಞವಲ್ಕ್ಯನು ನಿರ್ವಿಕಾರ ಮನೋಭಾವದಿಂದ ಉತ್ತರಿಸಿದ 'ಕಲ್ಪ ಜ್ಯೋತಿಷಿಗಳು ನೇರವಾಗಿ ಯಜ್ಞಕ್ಕೆ ಸಂಬಂಧಪಟ್ಟುವು. ನಿರುಕ್ತವು ವೇದಾರ್ಥವನ್ನು ವಿವರಿಸುವುದು, ಛಂದಸ್ಸು ಮಂತ್ರಗಳಲ್ಲಿರುವ ಅಕ್ಷರಗಳು ಸರಿಯಾಗಿವೆಯೊ ಇಲ್ಲವೊ ತಿಳಿಯಲು ಸಾಧನವು. ಶಿಕ್ಷೆಯು ಅಕ್ಷರೋಚ್ಚಾರಣದ ಸಾಧುತೆ ಅಸಾಧುತೆಗಳನ್ನು ಹೇಳುವುದು. ಇದೆಲ್ಲಕ್ಕಿಂತ ನನಗೆ ವ್ಯಾಕರಣದ ಮೇಲೆ ಹೆಚ್ಚು ಅಭಿಮಾನ !'

'ಅದೇಕಯ್ಯಾ ?'

'ನೋಡಿ, ಅದರಲ್ಲಿ ಪ್ರಕೃತಿ, ಪ್ರತ್ಯಯ, ಪದಗಳೆಂಬ ವಿಭಾಗ, ಪ್ರಕೃತಿಯು ಶಬ್ದ ಖಂಡ. ಅದಕ್ಕೆ ಪ್ರತ್ಯಯವು ಸೇರಿ ಕಿಜಿಂತವೋ ಸಂಬತವೋ ಆದ ಪದವನ್ನು ಮಾಡುವುದು, ಪ್ರತ್ಯಯಗಳನ್ನು ತೆಗೆದರೆ ಪದವು ಮತ್ತೆ ಪ್ರಕೃತಿಯಾಗುವುದು. ಹಾಗೆಯೇ ಈ ಪೂರ್ಣವಾದ ಜಗತ್ತು, ಅದರಲ್ಲಿರುವ ಪ್ರತ್ಯಯವನ್ನು ತೆಗೆದರೆ, ಅದು ಪ್ರಕೃತಿಯೆ ಆಗಿ ಮೊದಲಿನಂತೆ ಪೂರ್ಣವೇ ಆಗುವುದು. ಹೀಗೆಂದು ತೋರಿಸುವುದೆಂದು 'ಪೂರ್ಣಮದಃ' ಮಂತ್ರದ ವ್ಯಾಖ್ಯಾನವೆಂದು ನನಗೆ ವ್ಯಾಕರಣದ ಮೇಲೆ ಅಭಿಮಾನ ಹೆಚ್ಚು.

'ಶಿಕ್ಷೆಯು ಒಂದೇ ಶಬ್ದವು ಪರಾ ಪಶ್ಯಂತಿ ಮಧ್ಯಮಾ ವೈಖರೀ ರೂಪದಲ್ಲಿ ಪ್ರಕಟವಾಗುವುದು ಎನ್ನುವರಲ್ಲ ! ಅದಕ್ಕೆ ಹೀಗೆ ವ್ಯಾಖ್ಯಾನ ಮಾಡಬಾರದೇಕೆ ?'

'ಪರಾಸ್ಥಾನವು ಗೋಚರವಲ್ಲ ಎನ್ನುವುದು ಆ ಶಾಸ್ತ್ರದ ಸಂಪ್ರದಾಯ. ಪ್ರಕೃತಿಯೂ ಗೋಚರವಾಗುವುದು, ಇದು ಪ್ರಯೋಗಸಿದ್ಧ ಎನ್ನುವುದರ ಮೇಲೆ ವ್ಯಾಕರಣವನ್ನು ಕಂಡರೆ ನನಗೆ ಅಭಿಮಾನ.'

ಗುರುಗಳಿಗೆ ಆನಂದ ಆಶ್ಚರ್ಯಗಳೆರಡೂ ಆದವು. ಯಾಜ್ಞವಲ್ಕ್ಯನನ್ನು ತಮ್ಮ ಶಿಷ್ಯನನ್ನಾಗಿ ಸೀಕರಿಸಿದರು. ಗುರುಕುಲದಲ್ಲಿ ಕುಲಪತಿ ವೈಶಂಪಾಯನರ ಧರ್ಮಪತ್ನಿ ಕಬಂಧಿನಿದೇವಿಯವರು ಮಾತೃವಾತ್ಸಲ್ಯ ತೋರಿ ಅವರು ತಾಯಿಯನ್ನೇ ಮರೆಯು ವಂತೆ ಮಾಡಿದರು.

ಹೀಗಿರುವಾಗ ಒಂದು ದಿನ. . .

ವೈಶಂಪಾಯನರು ಧ್ಯಾನಸಮಾಧಿಯಲ್ಲಿದ್ದಾಗ ಭಗವತಿ ದರ್ಶನವಿತ್ತು ತೇಜಸ್ವೀತರುಣ ಯಾಜ್ಞವಲ್ಕ್ಯನನ್ನು ಬಿಟ್ಟುಕೊಡ ಬೇಕೆಂದು ಬೇಡಿದಳು. ಕಾರಣ ಕೇಳಿದಕ್ಕೆ ದೇವತೆಗಳು, ಋಷಿಗಳು, ಪಿತೃಗಳೂ ಮೂವರೂ ಸೇರಿ ಸಪ್ತರ್ಷಿ ಕಲ್ಪದಲ್ಲಿದ್ದ ಅವನನ್ನು ಕರ್ಮವನ್ನು ಸಾಂಗವಾಗಿ ಹೇಳುವ ಸಂಹಿತಾ ಬ್ರಾಹ್ಮಣವನ್ನು ಸಾರ್ವಕಾಲಿನವಾದ ಉಪನಿಷತ್ತನ್ನು ಹೇಳಿ ಜನರುದ್ಧಾರ ಮಾಡಲು ಕಳುಹಿಸಿರುವರು. ಜಗತ್ಕಲ್ಯಾಣಕಾರ್ಯ ಅವನಿಂದಾಗ ಬೇಕಾಗಿರುವುದರಿಂದ ಅವನ ಶಿಷ್ಯವೃತ್ತಿ ಸಾಕು ಬಿಟ್ಟುಕೊಡು, ಅದು ದೇವರಹಸ್ಯ ! ಎಂದು ಹೇಳಿದರು. ದೈವೇಚ್ಛೆಗೆ ಮಣಿದು ಕುಲಪತಿಗಳು ಅವನನ್ನು ಕಳುಹಿಸಿಕೊಟ್ಟರು. ಒಂದು ಕುಂಟು ನೆಪ ಹೇಳಿ, ಅವನ ಮೇಲೆ ವಿನಾ ಕಾರಣ ರೇಗಿ, 'ಇತರರಿಗಿಂತ ಚೆನ್ನಾಗಿ ಅಧ್ಯಯನ ಮಾಡಿರುವೆನೆಂಬ ಅಹಂಕಾರ ನಿನಗೆ ಬಂದಿದೆ. ಈ ಅಹಂಕಾರವು ವಿದ್ಯಾವಂತನಿಗೆ ತಕ್ಕುದಲ್ಲ, ಈ ಅಹಂಕಾರದಿಂದ ಇತರರಿಗೆ ಅವಮಾನ ಮಾಡಿದಂತಾಯಿತು. ನಮ್ಮ ವಿದ್ಯೆಯನ್ನು ನಮಗೆ ಕೊಟ್ಟು ಹೋಗು' ಎಂದು ಹಾರಾಡಿದರು, ನಾಟಕ ಮಾಡಿದರು.

ಯಾಜ್ಞವಲ್ಕ್ಯನಿಗೆ ಗುರುವಿನ ಕೋಪಕ್ಕೆ ಕಾರಣ ಗೊತ್ತಾಗಲಿಲ್ಲ. ವಿನಯ ಸಂಪನ್ನನಾದ ಅವನು 'ಎಂಥದೇ ರೀತಿಯಲ್ಲಿ ತಪ್ಪಾಗಿದ್ದರೆ ಕ್ಷಮಿಸಬೇಕು' ಎಂದು ಕ್ಷಮೆ ಬೇಡಿದ. ಆದರೆ ಗುರುವು ಮತ್ತೂ ಕೋಪಾವಿಷ್ಟನಾಗಿ, 'ಅಪಚಾರಕ್ಕೆ ವಿನಯದ ಮುಸುಕು ಹಾಕಬೇಕೆಂದಿದ್ದೀಯಾ? ನಾವು ಹೇಳಿದಂತೆ ಮಾಡಿ ಹೊರಟು ಹೋಗು, ಇನ್ನು ನೀನು ನಮ್ಮ ಅಧೀನದಲ್ಲಿರುವುದು ಬೇಡ. ನೀನು ನಮ್ಮ ಆಶ್ರಮದಲ್ಲಿ ಒಂದು ಗಳಿಗೆಯೂ ಇರಕೂಡದು, ನಮ್ಮ ವಿದ್ಯೆಯನ್ನು ನಮಗೆ ಕೊಟ್ಟು ಹೋಗು' ಎಂದು ಗದರಿದನು.

ಅಂದಿಗೆ ಯಾಜ್ಞವಲ್ಕ್ಯನ ಗುರುಕುಲಾಶ್ರಮದ ಬಾಂಧವ್ಯ ಮುರಿದುಬಿತ್ತು. ಅಲ್ಲಿಂದ ನೇರವಾಗಿ ತನ್ನ ಮನೆಗೆ ಬಂದು ಅದ್ವಿತೀಯವಾದ ಸಾಧನೆ ತಪಸ್ಸುಗಳನ್ನು ಮಾಡಿದ. ಅಗ್ನಿದೇವನ ಕೃಪೆ ಅವನಿಗಾಯಿತು. ಒಂದು ದಿನ ಅವನು ತಪೋಮಗ್ನನಾಗಿ ಕುಳಿತಿದ್ದ. ಪರ್ಣಕುಟಿ ಹತ್ತಿ ಉರಿಯುವಂತೆ ಕಂಡಿತು. ತಾಯಿ ಓಡಿ ಬಂದು ನೋಡಿದಳು. ಮಗನೂ ಪರ್ಣಶಾಲೆಯಂತೆಯೇ ಉರಿಯುತ್ತಿದ್ದಾನೆ, ಸುಟ್ಟು ಭಸ್ಮವಾಗಲಿಲ್ಲ, ವಿಶ್ವಕ್ಕೆ ಜ್ಯೋತಿಯಾಗಲು. ಆ ವಿಷಯ ತಿಳಿದ ಮೇಲೆ ದೇವರಾತನು ಬಹುಬೇಗ ಗುಡಿಸಿಲಿನ ಬಳಿ ಬಂದು ನೋಡಿದ. ಅಲ್ಲಿ 'ಆರ್ದ್ರಂ ಜ್ಯೋತಿರ್ಜ್ವಲತಿ ! (ಒದ್ದೆಯಾದ ಬೆಳಕು ಬೆಳಗುತ್ತಿದೆ) ಎಂದು ಉದ್ಗರಿಸಿದ.

ಮಹಾಜ್ಞಾನಿಯಾದ ಯಾಜ್ಞವಲ್ಕ್ಯನು ಬ್ರಹ್ಮವಿದ್ಯೆಯನ್ನು ಪಡೆದುಕೊಂಡು ಸಂಹಿತೆ, ಬ್ರಾಹ್ಮಣ, ಉಪನಿಷತ್ತುಗಳನ್ನು ರೂಪಿ ಸಿಕೊಟ್ಟ. ಆದರೂ ಅಂದುಕೊಂಡು ಪುರುಷ ಸೂಕ್ತದಲ್ಲಿ ಹೇಳಿರುವಂತೆ 'ಪಾದೋಽಸ್ಯ ವಿಶ್ವಾಭೂತಾನಿ ತ್ರಿಪಾದಸ್ಯ ಅಮೃತಂ ದಿವಿ' 'ಅಂದರೆ ಸೃಷ್ಟಿಗೆ ಬಂದಿರುವುದೆಲ್ಲಾ ಒಂದು ಪಾಲಾದರೆ ಸೃಷ್ಟಿಗೆ ಬಾರದಿರುವುದು ಅದರ ಮೂರರಷ್ಟು. ಅದು ಅಮೃತವಾಗಿ ದ್ಯುಲೋಕದಲ್ಲಿ ಕುಳಿತಿದೆ' ಹೀಗಿರುವಲ್ಲಿ ಎಲ್ಲದರಲ್ಲೂ 'ನಾನು ಎನ್ನುವುದೆಂತು ? ಎಂದು.

'ಆತ್ಮನಃ ಆಕಾಶಸ್ಸಂಭೂತಃ!'

'ಹೌದು, ಆತ್ಮನೊಬ್ಬನಿಂದಲೇ ಈ ಪಂಚಭೂತಗಳ ಸೃಷ್ಟಿ. ಅವನಿಂದಲೇ ಬಂದವುಗಳು ಇವು. ಆಕಾಶವೂ ಸಹ 'ಗಾಳಿ ಗಿಂತ ತೆಳ್ಳಗೆ, ಬೆಳ್ಳಿಗಿಂತ ಬೆಳ್ಳಗೆ !' ಅಷ್ಟೇ ಅಲ್ಲ, ಬೆಳಕಿಗಿಂತಲೂ ಸೂಕ್ಷ್ಮವಾಗಿ ವಾಯುವಿಗೂ ಅವಕಾಶವನ್ನೂ ಕೊಡುತ್ತದೆ, ಅಂದ ಬಳಿಕ ಅದಕ್ಕೂ ತೆಳು ! ಅಂತಹುದನ್ನು ಪ್ರತ್ಯಕ್ಷವಾಗಿ ತೋರಿಸುವುದಾದರೂ ಹೇಗೆ ? ಶಾಸ್ತ್ರವು 'ಶಬ್ದ ಗೂಣಕಮಾಕಾರಂ' ಎನ್ನುತ್ತದೆ (ಕೇವಲ ಶಬ್ದಗುಣ ಮಾತ್ರವುಳ್ಳದು) ನಿಜ. ತೇಜೋಗ್ರಹಿಯಾದ ಚಕ್ಷುವಾಗಲಿ, ಸ್ಪರ್ಶಗ್ರಹಿಯಾದತ್ವಕ್ಕಾಗಲಿ ಸಾಕ್ಷಾತ್ಕರಿಸಿಕೊಳ್ಳುವುದೆಂತು ? ಅವೆರಡೂ ಬೇಡ. ಶಬ್ದಗ್ರಾಹಿಯಾದ ಶ್ರೋತ್ರನಾದರೂ ಗ್ರಹಿಸಲಿ ಎಂದರೆ, ಶ್ರೋತೇಂದ್ರಿಯದಿಂದ ದೊರೆಯುವ ಶಬ್ದಕ್ಕೆಲ್ಲ ಒಂದೊಂದು ರೂಪವಿದೆ. ಹಾಗಾದರೆ ಆಕಾಶವು ಸಗ್ರಾಹ್ಯವೇನು ? ಹೌದು ಆಕಾಶವನ್ನು ತೋರಿಸು ವುದು ಎಷ್ಟು ಕಷ್ಟ ! ಅಷ್ಟೇ ಕಷ್ಟ ಆಕಾಶದಿಂದ ಸಂಭವಿಸಿದ ವಾಯು, ವಾಯುವಿನಿಂದ ಸಂಭವಿಸಿದ ತೇಜಸ್ಸು, ತೇಜಸ್ಸಿನಿಂದುಂಟಾದ ಜಲ, ಅದರಲ್ಲಾದ ಪೃಥ್ವಿ ಈ ಪಂಚಭೂತಗಳನ್ನು ಸಾಕ್ಷಾತ್ಕಾರಿಸಿಕೊಳ್ಳುವುದು.

ಋಗ್ವೇದದ ಉಷಾಮೌಕ್ತಿದ ಉಷಾದೇವಿಯನ್ನು ಒಲಿಸಿಕೊಂಡು ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನ ಮಯ, ಆನಂದಮಯ ಕೋಶಗಳ ವಿಲಾಸವನ್ನರಿತು ಮನೋವಲಯದಲ್ಲಿ ಎರಡು ರೂಪಗಳು ಕಂಡವು; ಒಂದು ಮನಸ್ಸರ್ವ, ಮತ್ತೊಂದು ಮನೋತೀತ ! ಮನಸ್ಸರ್ವವು ಇಂದ್ರಿಯಾದಿಗಳನ್ನು ಆಶ್ರಯಿಸಿಕೊಂಡಿರುವ ಬಹುರ್ಮುಖಿ, ಮನೋತೀತವು ಇಂದ್ರಿಯಾದಿಗಳಿಗೆ ಅನೇಕವಾಗಿ ದೇಹದಲ್ಲಿ ಪ್ರಾಣನೊಡನೆ ವ್ಯಾಪಾರ ಮಾಡುತ್ತಿರುವುದು. ಮನಸ್ಸರ್ವವನ್ನು ಕಟ್ಟಿದರೆ, ಮನೋ ತೀತದ ಪರಿಚಯವಾಗುವುದು. ಪ್ರಾಣವಾಹಿನಿಯಾಗಿ ಮನೋತೀತವು ಲೋಕ ಲೋಕಗಳಲ್ಲೆಲ್ಲಾ ಸಂಚರಿಸಿ ಬರಬಲ್ಲುದು. ಈ ಮನೋತೀತದ ಸನ್ನಿಧಿಯನ್ನು ಸಾಧಿಸಿ ಯೋಗಿಗಳ, ನಾನಾತ್ವದ ಗುಟ್ಟನ್ನು ಭೇದಿಸಿ, ಕಾಲದೇಶ ವರ್ತಮಾನಗಳನ್ನು ಗೆದ್ದು, ತಾವು ಎಲ್ಲಿ ಬೇಕೆಂದರಲ್ಲಿ, ಯಾವಾಗ ಎಂದರೆ ಆವಾಗ ಬೇಕಾದ ರೂಪಗಳನ್ನು ತೆಗೆದುಕೊಂಡು, ಬೇಕಾದ ವ್ಯಾಪಾರ ಮಾಡ ಬಲ್ಲರು. ಆದರೆ ಹೀಗಾಗಬೇಕಾದರೆ ನನ್ನನ್ನು ನಾನು ಅತಿಕ್ರಮಿಸಿದ್ದಲ್ಲದೆ ಸಾಧ್ಯವಿಲ್ಲ– ಹೀಗೆಂದುಕೊಂಡ ಯಾಜ್ಞವಲ್ಕ್ಯ, ಎಲ್ಲ ವನ್ನೂ ಸಾಧಿಸಿದ ಓರ್ವ ಪುರುಷನು ಹೇಳಿದಂತೆ ಯಾಜ್ಞವಲ್ಕ್ಯ ಋಷಿಯಾದ, ಮಹರ್ಷಿಯಾದ, ಬ್ರಹ್ಮರ್ಷಿಯಾದ, ಸರ್ವಜ್ಞ, ಸರ್ವದೇವತಾಮಯನೂ ಆದ, ತಾನು ತಾನಾದ ! (ಪು. ೨೬೬).

ಯೌವನ ಮೈ ಮೇಲೆ ಮೆರೆದಾಡಿತು. ಬುಡಿಲರ ಮಗಳು ಕಾತ್ಯಾಯಿನಿಯನ್ನು ವಿವಾಹಗೊಳಿಸಲಾಯಿತು. ಕಾತ್ಯಾಯನಿಯು ಶಿವಭಕ್ತೆ ಪರಾಯಣೆಯಾಗಿ ಬದುಕು ಮಾಡಿದಳು. ಮೈತ್ರೇಯಿಯ ಬಗೆಗೆ ಅಮಿತ ಪ್ರೇಮ ಇವಳಿಗೆ. ಅವಳನ್ನು 'ಅಕ್ಕ' ಎಂದೇ ಕರೆಯುತ್ತಿದ್ದಳು ಮತ್ತು ಭಾವಿಸಿದ್ದಳು. ಬ್ರಹ್ಮರ್ಷಿಯೂ ಒಮ್ಮೆ ತಬ್ಬಿಬ್ಬಾಗುವ ಪರಿಸ್ಥಿತಿ ಬಂದಾಗ ಮೈತ್ರೇಯಿ ಸೂಕ್ತ ಸಲಹೆ ಸೂಚಿಸಿ, ಅವನ ಮಾನ ಕಾಪಾಡಿದ್ದಳು. ಅಂದಿನಿಂದಲೂ ಕಾತ್ಯಾಯನಿ ಬಗೆಗೆ ವಿಶೇಷ ಗೌರವ. ಅದು ಯಾವ ಮಟ್ಟಕ್ಕೆ ಹೋಯಿತೆಂದರೆ ಕಾತ್ಯಾಯನಿ ಮೈತ್ರೇಯಿಯನ್ನು ಕರೆತಂದು, ಕೈಹಿಡಿಸಿ ತನ್ನ ಗಂಡನಿಗೆ ಮಡದಿಯನ್ನಾಗಿ ಮಾಡಿಕೊಂಡಳು. ನನಗಿಂತ ವಯಸ್ಸಿನಲ್ಲಿ, ಜ್ಞಾನದಲ್ಲಿ, ವಿಚಾರದಲ್ಲಿ ಹಿರಿಯವಳಾದ ನೀನು ನನ್ನ ಅಕ್ಕ, ನಾನು ತಂಗಿ. ಇಬ್ಬರೂ ಆ ಮಹಾನು ಭಾವನನ್ನು ಸೇವಿಸಿ ಕೃತಾರ್ಥರಾಗೋಣ. ನಾವು ಸವತಿಯರಲ್ಲ. ಅಕ್ಕ ತಂಗಿಯರು, ತಿಳಿಯಿತೆ ?' ಎಂದಳು. ಇಂತಹ ಔದಾರ್ಯ ಹೆಣ್ಣಿನಲ್ಲಿದ್ದರೆ ಅದು ಅಪರೂಪದ ಗುಣ. ಯಾವ ಹೆಣ್ಣೂ ಕಾಮ ಪ್ರೇಮಗಳಲ್ಲಿ ಮತ್ತೊಬ್ಬಳೊಡನೆ ಹಂಚಿಕೊಳ್ಳಲಾರಳು. ಆದರೂ ತಾನಾಗಿಯೇ ಒಪ್ಪಿದ್ದು ಕಾತ್ಯಾಯನಿಯ ಪಾತ್ರದ ಹಿರಿಮೆ. ಮೈತ್ರೇಯಿಗೂ ಅದು ನೆಮ್ಮದಿ ತಂದ ಸನ್ನಿವೇಶ.

ಯಾಜ್ಞವಲ್ಕ್ಯನ ಅಧ್ಯಯನತನದಲ್ಲಿ ಮಹತ್ ಕಾರ್ಯಗಳಾದವು. ಜ್ಞಾನಸತ್ರ ಶಾರದಾ ಮಂಟಪ ನಿರ್ಮಾಣಗೊಂಡವು. ಜನಕ ಮಹಾರಾಜನೇ ಅದೆಲ್ಲ ವ್ಯವಸ್ಥೆ ಮಾಡಿಸಿಕೊಟ್ಟ. ಬ್ರಹ್ಮವಾದದಲ್ಲಿ ವಿದಗ್ಧನನ್ನು ಗೆದ್ದ ಮೇಲೆ ಅವನಿಗೆ ಸರ್ವಜ್ಞಾಭಿಷೇಕ ವಾಯಿತು. ಹಾಗೆ ಅಭಿಷಿಕ್ತನಾಗಿ ಮನೆಗೆ ಬಂದ ಮಗನನ್ನು ಅವನ ತಂದೆ ತಾಯಿಗಳು ಬಾಚಿ ತಬ್ಬಿಕೊಂಡು ಶುಭ ಹಾರೈಸಿದರು.

ದಿನಗಳು ಉರುಳಿದವು.

ವೈಶಂಪಾಯನ ದಂಪತಿಗಳು, ದೇವರಾತ ದಂಪತಿಗಳು ದೇವಪಾದ ಸೇರಿಕೊಂಡರು. ಭಗವಾನ್ ಯಾಜ್ಞವಲ್ಕ್ಯರೂ ಅನೇಕ ವಸಂತಗಳ ದಾಂಪತ್ಯ ಜೀವನವನ್ನು ಸಾಗಿಸಿ, ಒಂದು ದಿನ, 'ಮೈತ್ರೇಯಿ, ನಾನು ಕೊನೆಯ ಆಶ್ರಮವನ್ನು ವಹಿಸುವೆನು, ಅನುಮತಿಯನ್ನು ಕೊಡು. ನಿನಗೂ ಕಾತ್ಯಾಯನಿಗೂ ಆರ್ಥಿಕ ಸಂಬಂಧವಿಲ್ಲದಂತೆ ಎಲ್ಲವನ್ನೂ ವ್ಯವಸ್ಥೆ ಮಾಡಿ ಹೋಗುವೆನು' ಎಂದರು. ಮೈತ್ರೇಯಿ ಅವಕ್ಕಾದಳು. ಅರ್ಥದ ಮಾತು ವ್ಯರ್ಥ ಎಂದು ಹೇಳಿ, ಸನ್ಯಾಸ ಬೇಡಿದಳು. ಸನ್ಯಾಸಾಧಿಕಾರ ಹೆಣ್ಣಿಗಿಲ್ಲ ಅಂದಾಗ ಪಂಚಭೂತಗಳಿಂದಾದ ಈ ದೇಹ ಆ ದೇಹದಿಂದ ಭಿನ್ನವೇ ? ಗಂಡಸಿಗೆ ಸಿಕ್ಕುವ ಸೌಲಭ್ಯ ಹೆಣ್ಣಿಗೂ ಸಿಗಬೇಕಲ್ಲವೆ? ತಾರತಮ್ಯ ಸಲ್ಲದು– ಎಂದು ವಾದಿಸಿ ಗೆದ್ದಳು. ಸಕಲವನ್ನು ಸರ್ವರಿಗೆ ಸಮರ್ಪಿಸಿ ಮಹಾತ್ಮನಾದನು ಯಾಜ್ಞವಲ್ಕ್ಯ.

'ಮಹಾದರ್ಶನ' ಆಧ್ಯಾತ್ಮ ಭೂಯಿಷ್ಠವಾದ ಒಂದು ಅಪೂರ್ವ ಕಲಾಕೃತಿ. ಅಮೂಲ್ಯವೂ ಹೌದು, ಅದ್ವಿತೀಯವೂ ಹೌದು. ಅನ್ಯಾದೃಶ್ಯವಾದ ಈ ಕೃತಿ ಸಂಜೀವಿನಿ ಇಹ–ಪರ, ಸ್ಥಾವರ–ಜಂಗಮ, ಕರ್ಮಕಾಂಡ–ಜ್ಞಾನಕಾಂಡ, ತ್ಯಾಗ–ಸೇವೆ, ಅಗ್ನಿ –ಯಜ್ಞ, ಅನುಭವ–ಅನುಭಾವ ಇವೇ ಮೊದಲಾದ ದ್ವಂದ್ವಗಳ ನಗ್ನದರ್ಶನ ಮಾಡಿಸುವ ಮಹತ್ವದ ಕೃತಿ. ದ್ವೈತ ಪರವಾದ ಆಧ್ಯಾತ್ಮ ದರ್ಶನದ ಕೈಪಿಡಿ. ವಾಸ್ತವವಾಗಿ ಇದು ಕಾಮ ಪ್ರೇಮ ಅಥವಾ ಘಟನೆಗಳುಳ್ಳ ರಂಜನೆಯ ಕಾದಂಬರಿ ಅಲ್ಲ. ಇದೊಂದು ವಿಚಾರ ವೇದಿಕೆ. ಇಹದಲ್ಲಿದ್ದುಕೊಂಡೇ ಪರವನ್ನು ಸಾಧಿಸಿ ತೋರಿಸುವ ಒಂದು ಮಾರ್ಗದರ್ಶಿ. ಈ ಗದ್ಯಕಾವ್ಯ

ಹೆಜ್ಜೆಹೆಜ್ಜೆಗೂ ಆತ್ಮ ಶಿಕ್ಷಣವನ್ನು ಕೊಡುತ್ತದೆ; ಆತ್ಮಕ್ಕೆ ಬಲವನ್ನೂ ದಯಪಾಲಿಸುತ್ತದೆ. ಅವ್ಯಕ್ತವಾಗಿ ಆತ್ಮಕವಚವೂ ಆಗಿ ಪರಿಣಮಿಸುತ್ತದೆ.

ಮಹಾದರ್ಶನ ವೇದ ಋಷಿಕಾಲದ ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ ಚಿತ್ರಣ. ಆರ್ಷೇಯ ಬದುಕನ್ನು ಬಿತ್ತರಿಸುವ ಒಂದು ಮಹಾಕಾದಂಬರಿ ಕೂಡ. ಬದುಕಿನ ಬಹುಮುಖ ದರ್ಶನ ನಮಗಾಗದಿದ್ದರೂ ಆಶ್ರಮವಾಸಿಗಳ ಸರಳ ಹಾಗೂ ಸಾತ್ವಿಕ ಜೀವನದ ಪರಿಚಯ ಆಗುತ್ತದೆ. ವೇದಯುಗದ ಜನ ನಮ್ಮಂತೆಯೇ ಗೃಹವಾಸಿಗಳಾಗಿ, ಸುಂದರ ಸಾಂಸಾರಿಕ ಜೀವನ ಸಾಗಿಸುತ್ತಿದ್ದರು. ಅಂದು ಅನ್ಯೋನ್ಯ ದಾಂಪತ್ಯಕ್ಕೆ ಹೆಸರಾದವರೆಂದರೆ ದೇವರಾತ ಮತ್ತು ಅಲಂಬಿನಿ, ವೈಶಂಪಾಯನ ಮತ್ತು ಕಬಂಧಿನಿ, ಉದ್ದಾಲಕ ಮತ್ತು ಅಲಾಪಿನಿ, ಮಹಿರಾಸ ಮತ್ತು ಜಾಯಂತಿ, ಬುಡಿಲ ಮತ್ತು ಅವನ ಮಕ್ಕಳು ಕಾತ್ಯಾಯನ ಮತ್ತು ಕಾತ್ಯಾಯಿನಿ ಮೊದಲಾದವರು. ಇವರ ಪರಸ್ಪರ ಕೊಳ್ ಕೊಡುಗೆಗಳು, ಧಾರ್ಮಿಕ ಸಾಮಾಜಿಕ ಆಚರಣೆಗಳು ವಿಶಿಷ್ಟ ರೀತಿಯಲ್ಲೇ ಅಭಿವ್ಯಕ್ತವಾಗುತ್ತಿದ್ದವು. ಉದಾಹರಣೆಗೆ ದೇವರಾತ ಮತ್ತು ಆಲಂಬಿನಿಯರ ಸುಪುತ್ರ ಯಾಜ್ಞವಲ್ಕ್ಯನ ಪತ್ನಿಯರಲ್ಲಿ ಮೈತ್ರೇಯಿ ಅಲಾಪಿನಿಯ ತಂಗಿಯ ಮಗಳು; ಕಾತ್ಯಾಯಿನಿ ಬುಡಿಲರ ಮಗಳು. ಆಜನ್ಮ ಬ್ರಹ್ಮಚಾರಿಣಿ ಗಾರ್ಗಿ ಬುಡಿಲರ ಶಿಷ್ಯ ವಾಚಕುರಿನ ಮಗಳು. ಹೀಗೆ ಅವರ ಬಾಂಧವ್ಯದ ಬಳ್ಳಿ ಹೆಣೆದುಕೊಂಡಿತ್ತು.

ರಾಜಧಾನಿಗೂ ಆಶ್ರಮಕ್ಕೂ ನಿಕಟ ಸಂಬಂಧವಿತ್ತು. ಜನಕ ಮಹಾರಾಜನು ತನ್ನರಮನೆಯಲ್ಲಿ ಆಗಾಗ ಹಲವು ಗೋಷ್ಠಿಗ ಳನ್ನು ಕರೆದು, ಜಿಜ್ಞಾಸುಗಳಿಗೆ ದಾನ ದಕ್ಷಣೆ ಕೊಟ್ಟು ಗೌರವಿಸಿ ಕಳುಹಿಸುತ್ತಿದ್ದರೆಂದು ತಿಳಿಯುತ್ತದೆ. ಅದೇ ರೀತಿ ಪ್ರಸ್ತುತ ಕಾದಂ ಬರಿಯಲ್ಲಿ ಯಾಜ್ಞವಲ್ಕ್ಯನ ನಾಮಕರಣ, ಉಪನಯನ, ವಿವಾಹ ಈ ಸಂದರ್ಭಗಳಲ್ಲೆಲ್ಲಾ ಅರಮನೆ ಆಶ್ರಮಕ್ಕೆ ಬಂದು ಸೇವೆ ಸಲ್ಲಿಸುವ ಪ್ರಸ್ತಾಪವಿದೆ. ಬುಡಿಲನು ರಾಜಪುರೋಹಿತನ ಸಮೀಪದ ಬಂಧುವಾಗಿದ್ದನು.

ಆಶ್ರಮಗಳಲ್ಲಿ ಧಾರ್ಮಿಕಾಧ್ಯಯನ, ಅಧ್ಯಾಪನಗಳು ನಿರಂತರವಾಗಿ ನಡೆಯುತ್ತಿದ್ದವು. ಎರಡೂ ಕಾಲಗಳ ಸಂಧ್ಯಾವಂದನೆ, ಮಾಧ್ಯಹ್ನಿಕಗಳು ನಡೆದೇ ನಡೆಯುತ್ತಿದ್ದವು. ಆಶ್ರಮ ಮತ್ತು ಗೋಶಾಲೆಗಳ ಸ್ವಚ್ಛತೆ, ನಿರ್ದಿಷ್ಟ ಸಂದರ್ಭಗಳಲ್ಲಿ ಇಪ್ಪತ್ತನಾಲ್ಕು ದಂಪತಿಗಳ ಪೂಜೆ, ಅತಿಥಿ ಅಭ್ಯಾಗತರಿಗೆ ನಡೆಸುವ ಅರ್ಘ್ಯ ಪಾದ್ಯಾದಿ ಕರ್ಮ, ಹೆಣ್ಣುಗಂಡಿನ ಬದುಕಿನಲ್ಲಿ ಆಗಲೇಬೇಕಾದ ಷೋಡಶ ಸಂಸ್ಕಾರಗಳು, ವಿದ್ಯುಕ್ತ ಆಚರಣೆಗಳು ಅವಿಚ್ಛಿನ್ನವಾಗಿ ನಡೆಯುತ್ತಿದ್ದವು. ಯೋಗಾಭ್ಯಾಸ ಮತ್ತು ವ್ಯಾಯಾಮಗಳು, ಗರ್ಭಿಣಿ ಹೆಂಗಸಿಗೆ ಸೀಮಂತ, ಶಿಕ್ಷಣಕ್ಕೆ ಗುರುಕುಲವಾಸ, ಬ್ರಹ್ಮಚರ್ಯ, ಅಗ್ನಿ ಔಪಾಸನೆ, ಪ್ರಕೃತಿ ಪೂಜೆ, ಜಪ, ತಪ, ಧ್ಯಾನ, ತಪಸ್ಸು, ಸಮಾಧಿ, ಪುರಾಣ, ಪಠಣ, ಪಾರಾಯಣ – ಮೊದಲಾದ ಆಶ್ರಮ ಯೋಗ್ಯ ಆಚರಣೆಗಳ ವಿವರ ಇಲ್ಲಿ ಸಿಗುತ್ತದೆ. ಬ್ರಹ್ಮಚರ್ಯ, ಗ್ರಾಹಸ್ಥ್ಯ, ಸನ್ಯಾಸ ಮತ್ತು ವಾನಪ್ರಸ್ಥ ಈ ಆಶ್ರಮ ಅಂದಿತ್ತು. ಅಂತೆಯೇ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ಚಾತುರ್ವರ್ಣಗಳುವ ಅಂದು ಪ್ರಚಲಿತವಿದ್ದವು. ಆದರೆ ಅವುಗಳಿಗೆ ಜಾತಿ ಎಂಬ ಸೂತಕ ಅಂಟಿರಲಿಲ್ಲ. ವ್ಯಕ್ತಿಯ ವೃತ್ತಿ ಯನ್ನು ಅವಲಂಬಿಸಿ ವರ್ಗ ನಿರ್ಣೀತವಾಗುತ್ತಿತ್ತು. ಆದರೆ ಬ್ರಾಹ್ಮಣನಾದವನಿಗೆ ಪೂಜ್ಯಸ್ಥಾನವಿತ್ತು. 'ಸರ್ವೇದೇವಾಃ ವೇದವಿಧಿ ಬ್ರಾಹ್ಮಣೇ ಪ್ರತಿವಸಂತಿ' (ಪು. ೪೮) ಅಂದರೆ 'ದೇವತೆಗಳೆಲ್ಲರೂ ವೇದವಿಧನಾದ ಬ್ರಾಹ್ಮಣನಲ್ಲಿ ಇರುವರು' ಎಂಬ ಸದ್ಭಾವನೆ ಎಲ್ಲರಲ್ಲೂ ಬೇರೂರಿತ್ತು. ಬ್ರಾಹ್ಮಣನು ಯಜ್ಞಯಾಗಾದಿ ಕರ್ಮಗಳನ್ನು ಮಾಡಿಕೊಂಡು, ಸದಾ ಅಧ್ಯಯನ ಅಧ್ಯಾಪನಗಳಲ್ಲಿ ನಿರತನಾಗಿರುತ್ತಿದ್ದನು. ಕ್ಷತ್ರಿಯನು ಯಜ್ಞರಕ್ಷಕ, ಪ್ರಜಾಪಾಲಕ ಆಗಿರುತ್ತಿದ್ದನು. ವ್ಯಾಪಾರ ವಾಣಿಜ್ಯಗಳಲ್ಲಿ ವೈಶ್ಯನು ನಿಷ್ಣಾತನಾಗಿ ಧನಾ ರ್ಜನೆಯನ್ನೇ ತನ್ನ ಧ್ಯೇಯವಾಗಿರಿಸಿಕೊಂಡಿದ್ದನು. ಈ ಮೇಲಿನವುಗಳಲ್ಲಿ ಯಾವುದರಲ್ಲೂ ಅರ್ಹತೆ ಪಡೆಯದಿದ್ದವನು ಶೂದ್ರ ನೆನಿಸುತ್ತಿದ್ದನು. ಸೇವೆಯೇ ಅವನ ವೃತ್ತಿಯಾಗಿರುತ್ತಿತ್ತು. ಆದ್ದರಿಂದ ಬ್ರಾಹ್ಮಣನಲ್ಲಿ ಜ್ಞಾನ ವೃದ್ಧತ್ವ, ಕ್ಷತ್ರಿಯನಲ್ಲಿ ಪರಾಕ್ರಮ ವೃದ್ಧತ್ವ, ವೈಶ್ಯನಲ್ಲಿ ಐಶ್ವರ್ಯ ವೃದ್ಧತ್ವ, ಶೂದ್ರನಲ್ಲಿ ಸೇವಾವೃದ್ಧತ್ವಗಳಿರುತ್ತಿದ್ದವು. ಈ ಬಗೆಯ ಹಂಚಿಕೆ ಅಂದಿನ ಸಾಮಾಜಿಕ ವ್ಯವಸ್ಥೆಯಲ್ಲಿತ್ತು.

ಅಂದಿನ ಸಾಮಾಜಿಕ ಜೀವನದಲ್ಲಿದ್ದ ನಾವೆಲ್ಲರೂ ಮೆಚ್ಚಲೇಬೇಕಾದ ಒಂದಂಶವೆಂದರೆ ಸ್ತ್ರೀಗೆ ಪುರುಷನಷ್ಟೆ ಸಮಾನ ಪುರಸ್ಕಾರವಿತ್ತು. ಅವಳೂ ಸಹ ಬ್ರಹ್ಮಜಿಜ್ಞಾಸೆಯಲ್ಲಿ ಪಾಲ್ಗೊಳ್ಳಲು ಅವಕಾಶವಿತ್ತು. ಗಾರ್ಗಿ ಅಂದಿನ ಸ್ತ್ರೀ ಸಂಕುಲದ ಹೆಮ್ಮೆ! ಅವಳ ಪಕ್ಕದಲ್ಲೇ ಮೈತ್ರೇಯಿ, ಕಾತ್ಯಾಯಿನಿಯರನ್ನು ಕಾಣುತ್ತೇವೆ. ಗಾರ್ಗಿ ಪ್ರಚಂಡ ಬ್ರಹ್ಮವಾದಿನಿ, ಆಜನ್ಮ ಬ್ರಹ್ಮಚಾರಿಣಿ, ಮೈತ್ರೇಯಿ ಮತ್ತು ಕಾತ್ಯಾಯಿನಿಯರು ವಿವಾಹಿತ ಸ್ತ್ರೀಯರು, ಗೃಹಿಣಿಯರು. ಆದರೂ ಪುರುಷರೊಡನೆ ಸಮಾನಸ್ಕಂದರಾಗಿ ಕುಳಿತು ಮುಕ್ತಮನಸ್ಸಿನಿಂದ ಚರ್ಚಿಸುವ ಅರ್ಹತೆಯನ್ನು ಸಂಪಾದಿಸಿಕೊಂಡಿದ್ದರು. ಆ ಸಮಾಜವೂ ಅದಕ್ಕೆ ರಹದಾರಿ ನೀಡಿತ್ತು. ಹೆಣ್ಣಾ ಗಲಿ, ಗಂಡಾಗಲಿ ವಿದ್ವತ್ತಿಗೆ ಮನ್ನಣೆಯ ಮಣೆ ಮೀಸಲಿರುತ್ತಿತ್ತು. ಮಹಾಪ್ರಾಜ್ಞಳೂ, ಬ್ರಹ್ಮವಾದಿನಿಯೂ ಆದ

ಗಾರ್ಗಿಯನ್ನು ದೇವರಾತ ಒಮ್ಮೆ ಪ್ರಶಂಸಿಸುತ್ತಾ ಹೇಳುತ್ತಾನೆ, 'ಗಾರ್ಗೀ, ಹೆಂಗಸೂ ಅಲ್ಲ, ಗಂಡಸೂ ಅಲ್ಲ, ವಿದ್ವಾಂಸರು' ಎಂದು (ಪು. ೩೨೦) ಅಂದರೆ ವಿದ್ವತ್ ಪ್ರತಿಭೆಗೆ ಹೆಣ್ಣು-ಗಂಡು ಎಂಬ ತಾರತಮ್ಯ ತಿಳಿದಿರಲಿಲ್ಲ ಅಂದು ಎಂಬುದು ವೇದ್ಯ.ವಾದ ವಿದ್ಯೆಯಲ್ಲಿ ಸ್ತ್ರೀಯರದೇ ಮೇಲುಗೈ. ಒಮ್ಮೆ ದೇವರಾತನ ಮನೆಯಲ್ಲಿ ಗೋಷ್ಠಿ ಏರ್ಪಟ್ಟಿತ್ತು. ಅಂದು ಯಾಜ್ಞವಲ್ಕ್ಯ ಯಜುರ್ವೇದ ರಚನೆಯನ್ನು ಮುಗಿಸಿದ್ದನು. ಅದಕ್ಕಾಗಿ ಅಂದು ಸಂಭ್ರಮದ ಸಮಾರಾಧನೆ, ಭಾರ್ಗವ, ಕುಲಪತಿ, ವೈಶಂಪಾಯನ, ಉದ್ದಾಲಕ, ಬುಡಿಲ, ಗಾರ್ಗಿ ಮೊದಲಾದವರೆಲ್ಲರೂ ಆಗಮಿಸಿದ್ದರು. ಭೋಜನಾನಂತರ ತಾಂಬೂಲಚರ್ವಣ ಸಂದರ್ಭದಲ್ಲಿ ಹಲವರು 'ಪ್ರಕೃತಿ ವಿಕೃತಿ ಯಾಗಗಳನ್ನು ಬೈತಲೆ ತೆಗೆದಂತೆ ಬೇರೆ ಬೇರೆ ಮಾಡಿ ತೋರಿಸುವ ಒಂದು ವೇದವನ್ನೇ ಆದಿತ್ಯದೇವನ ದಯೆ ಯಿಂದ ಪಡೆದು ತಂದನೆಂದು ಯಾಜ್ಞವಲ್ಕ್ಯನನ್ನು ಹೊಗಳಿದರು. ಅದಕ್ಕೆ ಯಾಜ್ಞವಲ್ಕ್ಯನು ಎಲ್ಲವೂ ತಮ್ಮನುಗ್ರಹ ! ಎಂದ. ವೈಶಂಪಾಯನು 'ಸಮಾರೋಪಣ ಹೇಗಾಗಿದೆ ನೋಡೋಣ ತೆಗೆಯಯ್ಯ' ಎಂದರು. ಯಾಜ್ಞವಲ್ಕ್ಯನು ತೆಗೆದು ಓದಿದನು. ಈಶಾವಾಸ್ಯಮಿದಂ ಸರ್ವಂ ಮುಂತಾದ ಹದಿನೆಂಟು ಮಂತ್ರಗಳು ! ಎಲ್ಲವನ್ನೂ ಕೇಳಿದಮೇಲೆ ವೈಶಂಪಾಯನರು 'ಈ ಮಂತ್ರಗಳಿಗೆ ಯಾವ ಕ್ರಮದಲ್ಲಿ ವಿನಿಯೋಗ' ಪ್ರಶ್ನಿಸಿದರು ತಮ್ಮ ಹಳೆಯ ಶಿಷ್ಯನ ವಿದ್ವತ್ ಪರೀಕ್ಷೆಗಾಗಿ. ಯಾಜ್ಞವಲ್ಕ್ಯ ನಿರುತ್ತರನಾದ. ಆ ಸನ್ನಿವೇಶದ ಸೂಕ್ಷ್ಮತೆಯನ್ನರಿತ ಮೈತ್ರೇಯಿ, ಮೇಲೆದ್ದ ಸಭೆಗೆ ಮತ್ತು ಕುಲಪತಿಗಳಿಗೆ ಕೈ ಮುಗಿದು, 'ಈ ನವೀನ ವೇದವು ಲಭಿಸಿರುವುದು ಆದಿತ್ಯನ ಕೃಪೆಯಿಂದ. ಯಾಜ್ಞವಲ್ಕ್ಯರನ್ನು ಕೇಳಿದರೆ ಹೇಗೆ ? ಆದಿತ್ಯನನ್ನೇ ಕೇಳಬೇಕು !' ಎಂದಳು.

ಸಭೆಯು ಅವಳ ಮಾತನ್ನು ಒಪ್ಪಿತು. ಯಾಜ್ಞವಲ್ಕ್ಯನು ಗುರುಜನರ ಅನುಮತಿಯಂತೆ, ಆಗಮನಾದಿಗಳನ್ನು ಮಾಡಿ ಆದಿತ್ಯನ ಪ್ರಾರ್ಥನೆ ಮಾಡಿದನು. ಆದಿತ್ಯನು ಆತನ ಬಾಯಿಯಿಂದಲೆ ನುಡಿಸಿದನು. 'ಈ ಮಂತ್ರಗಳಿಗೆ ವಿನಿಯೋಗವಿಲ್ಲ. ಇವು ಉಪನಿಷತ್ತು. ತಾವೆಲ್ಲರೂ ವೇದನ್ನು ಬ್ರಹ್ಮ ಎನ್ನುತ್ತಿರಿ. ಪ್ರತ್ಯಕ್ಷವಾಗಿ ಬ್ರಹ್ಮವನ್ನು ಬೋಧಿಸುವ ಉಪನಿಷತ್ತು ಇಲ್ಲದಿದ್ದರೆ ಅದು ಬ್ರಹ್ಮವಾಗುವುದು ಹೇಗೆ ? ಅದರಿಂದ ಇದು !' ಎಂದು.

ಹೀಗೆ ಹೆಣ್ಣು ತನ್ನ ಸಮಯ ಸ್ಫೂರ್ತಿಯಿಂದ ನುಡಿದು ಗಂಡಿನ ಮಾನ ಸಂರಕ್ಷಣೆ ಮಾಡಿದ ಸಂದರ್ಭಗಳೂ ಉಂಟು. ಇಷ್ಟಾದರೂ ಹೆಣ್ಣಿಗೆ ಪರಿಪೂರ್ಣಾರ್ಥದಲ್ಲಿ ಸಾಮಾಜಿಕ ನ್ಯಾಯ ದೊರಕುತ್ತಿದ್ದಂತೆ ಕಾಣುವುದಿಲ್ಲ. ಉದಾಹರಣೆಗೆ ಒಮ್ಮೆ ಗಾರ್ಗಿಯು ಯಾಜ್ಞವಲ್ಕ್ಯನನ್ನು ನೋಡಲು ಬಂದಳು. ಯಾಜ್ಞವಲ್ಕ್ಯನು 'ದಯವಿಟ್ಟು ಅರ್ಘ್ಯ ಪಾದ್ಯಾದಿಗಳನ್ನು ಸ್ವೀಕರಿಸಬೇಕು' ಎಂದನು (ಪು. ೨೭೬)

ಗಾರ್ಗಿ ನಗುತ್ತ ಹೇಳಿದಳು 'ನಾವು ಸ್ತ್ರೀಯರು ನಮಗೆ ಮಧುತರ್ಕಾಧಿಕಾರವಿಲ್ಲ'.

'ನಿಜ ಮಧುತರ್ಕಾಧಿಕಾರವು ಸ್ತ್ರೀಯರಿಗಿಲ್ಲ. ಆದರೆ ತಾವು ಬ್ರಹ್ಮವಾದಿನಿಯರು. ತಮ್ಮ ದೇಹದಲ್ಲಿ ಅಗ್ನಿಯು ಇದ್ದೇ ಇರುವನು. ಆದ್ದರಿಂದ ಅಗ್ನಿ ತೃಪ್ತಿಗೆಂದು ನಾವು ಒಪ್ಪಿಸುವ ಅರ್ಘ್ಯ ಪಾದ್ಯಾದಿಗಳನ್ನು ತಾವು ಸ್ವೀಕರಿಸದಿರುವುದು ಎಲ್ಲಿಯ ನ್ಯಾಯ' ಎನ್ನುತ್ತಾನೆ ಯಾಜ್ಞವಲ್ಕ್ಯ.

ಇಂತಹ ರಿಯಾಯಿತಿ ತರಹದ ಮರ್ಯಾದೆ ಹೆಣ್ಣಿನ ಪಾಲಿಗೆ ! ಮತ್ತೊಂದು ನಿದರ್ಶನ.

ಯಾಜ್ಞವಲ್ಕ್ಯನು ಸನ್ಯಾಸಾಶ್ರಮವನ್ನೂ ಸ್ವೀಕರಿಸುವ ನಿರ್ಧಾರವನ್ನು ಮೈತ್ರೇಯಿಗೆ ತಿಳಿಸಿದಾಗ, ತಾನೂ ಅದನ್ನೇ ಬೇಡುತ್ತಾಳೆ. ಆಗ ಯಾಜ್ಞವಲ್ಕ್ಯ ಹೇಳುತ್ತಾನೆ 'ಹೆಂಗಸಿಗೆ ಸನ್ಯಾಸವಿಲ್ಲದಿಲ್ಲ' ಎಂದು. ಅಂದ ಬಳಿಕ ಧರ್ಮಾಚರಣೆ ಹೆಣ್ಣಿಗೊಂದು ಗಂಡಿ ಗೊಂದು ಎಂಬುದು ತಿಳಿಯುತ್ತದೆ.

ಇಂದಿನಂತೆ ಅಂದೂ ಹೆಣ್ಣು ಮದುವೆಯಾಗಿ ಗೃಹಿಣೀ ಜೀವನ ಸಾಗಿಸಬೇಕು. ಅದು ಮರ್ಯಾದೆ. ಇಲ್ಲವಾದರೆ ಅವಳು ಅಪವಾದಗಳಿಗೆ ಗುರಿಯಾಗುತ್ತಿದ್ದಳು. ಮೈತ್ರೇಯಿ ಯೌವನವತಿಯಾದರೂ, ಸ್ಫುರದ್ರೂಪಿಣಿಯಿದ್ದರೂ, ಮದುವೆಯಾಗದಿರುವುದನ್ನು ಕಂಡು ಕಾತ್ಯಾಯಿನಿ ಕೇಳುತ್ತಾಳೆ 'ನೀನು ಏನು ಮಾಡಬೇಕು ಎಂದಿದ್ದೀಯ ?' 'ನಾನು ಇನ್ನೆಲ್ಲಿಯಾದರೂ ಹೋಗೋಣ ಎಂದಿದ್ದೇನೆ', 'ಎಲ್ಲಿಗೆ ?' 'ಅದೇ ಇನ್ನೂ ಗೊತ್ತಾಗಿಲ್ಲ ನೋಡು. ನಾನು ಬೆಳೆದ ಹುಡುಗಿ, ಮದುವೆಯಿಲ್ಲದವಳು. ಜೊತೆಗೆ ಮನಸ್ಸು ಬಂದಂತೆ ನಡೆಯುವವಳು. ಹೀಗೆ ಲೋಕವೀಕ್ಷಣವಾದ ಹೆಣ್ಣು ಎಲ್ಲಿದ್ದರೂ ಅಪಯಶಸ್ಸು ತಪ್ಪುವುದಿಲ್ಲ. ಇಲ್ಲಿ ಬಿಟ್ಟು ತವರು ಮನೆಗೆ ಹೋದೆನೆಂದುಕೊಳ್ಳೋಣ. ಅಲ್ಲಿಯೂ ಅಪಯಶಸ್ಸು ತಪ್ಪಿದ್ದಲ್ಲ. . .!

ಮೈತ್ರೇಯಿಯ ಈ ಮಾತುಗಳಲ್ಲಿ ಹೆಣ್ಣಿಗೆ ನಿಜವಾದ ಅರ್ಥದಲ್ಲಿ ಸ್ವಾತಂತ್ರ್ಯ ಇರಲಿಲ್ಲ ಎಂಬುದು ವೇದ್ಯವಾಗುತ್ತದೆ. ಈ ಅಪಚಾರ ವೇದಯುಗದಲ್ಲಿ ನೈಜವಾಗಿತ್ತೆ ಎಂಬ ಸಂದೇಹವಿರುತ್ತದೆ. ಕಾದಂಬರಿಕಾರರು ಆಧುನಿಕ ವ್ಯವಸ್ಥೆಯ ಪ್ರಭಾವಕ್ಕೆ ಸಿಕ್ಕಿ ಅದನ್ನೇ ಅಂದಿನ ಬದುಕಿಗೆ ಆರೋಪಿಸಿರಬಹುದು ಎಂಬ ಗುಮಾನಿ ಉಂಟಾಗುತ್ತದೆ.

ಇದೇ ರೀತಿ ಮತ್ತೊಂದು ವಿಪರ್ಯಾಸವೆಂದರೆ ಈ ಕಾದಂಬರಿಯನ್ನು ಓದುತ್ತ ಹೋದಂತೆ ಓದುಗನಿಗೆ ಋಷ್ಯಾಶ್ರಮದ ನೈಜಚಿತ್ರಣ ಮಾಯವಾಗಿ ಬ್ರಾಹ್ಮಣರಿರುವ ಒಳ್ಳೆ ಅಗ್ರಹಾರದ ಕಲ್ಪನೆ ಬರುತ್ತದೆ. ಇದು ವಿಶಿಷ್ಟ ರೀತಿಯಲ್ಲಿ ಟಿಪಿಕಲ್ ತಪೋವನವಾಗಿ ಬಣ್ಣಿತವಾಗಿದ್ದರೆ ಸಹಜತೆಯಿಂದ ತುಂಬಿರುತ್ತಿತ್ತು.

ಇಂಥವೇನೇ ಅಲ್ಪ ಸ್ವಲ್ಪ ದೋಷಗಳಿರಲಿ, ದೇವುಡುರವರ 'ಮಹಾದರ್ಶನ' ಒಂದು ದರ್ಶನೀಯ ಅಧ್ಯಯನ ಯೋಗ್ಯ ಅಮರ ಕಲಾಕೃತಿ.

**ಮಯೂರ :**

ಕರ್ನಾಟಕ ರತ್ನಸಿಂಹಾಸನವನ್ನು ಮೊತ್ತ ಮೊದಲು ಸಂಸ್ಥಾಪಿಸಿದ ಕೀರ್ತಿ ಬನವಾಸಿಯ ಕದಂಬರಿಗೆ ಸಲ್ಲುತ್ತದೆ. ಅವರಿಗಿಂತಲೂ ಮುಂಚೆ ಉತ್ತರದಿಂದಲೇ ಆಳಿದ ಮೌರ್ಯರಿದ್ದಾರೆ, ಗುಪ್ತರಿದ್ದಾರೆ, ಅನಂತರದ ಶಾತವಾಹನರೂ ಇದ್ದಾರೆ. ಆದರೆ ಅವರಾರೂ ಕುಂತಳ ಅಥವಾ ಕರ್ನಾಟಕದಲ್ಲಿ ನೆಲೆ ನಿಂತು ಪ್ರತ್ಯೇಕ ಸಾಮ್ರಾಜ್ಯ ಸ್ಥಾಪನೆ ಮಾಡಿ ಆಳಿದವರಲ್ಲ. ಇಲ್ಲಿಯೇ ಇದ್ದು ರಾಜ್ಯ ಸ್ಥಾಪನೆಗೈದವರಾದರೂ ಗಂಗರು ಸಾಮ್ರಾಟರಾಗಿ ಎಂದಿಗೂ ಮೆರೆಯಲಿಲ್ಲ. ಅವರ ಆಡಳಿತದ ಸುಮಾರು ಎಂಟನೂರು ವರ್ಷಗಳಲ್ಲಿ ಎಂದಿಗೂ ಗಂಗರು ಚಕ್ರವರ್ತಿಗಳಾಗಲಿಲ್ಲ, ಅಧೀನ ರಾಜರಾಗಿಯೇ ಆಳಿಕೊಂಡು ಬಂದರು. ಆದರೆ ಕದಂಬರು ವೈಜಯಂತಿಪುರ ಅಥವಾ ಬನವಾಸಿಯಲ್ಲಿ ಸಾಮ್ರಾಜ್ಯ ಸ್ಥಾಪನೆ ಮಾಡಿದರು. ಆ ವಂಶದಲ್ಲಿ ಮಯೂರ ಮೊದಲಿಗ. ಅವನೇ ಆ ಸಾಮ್ರಾಜ್ಯದ ಸಂಸ್ಥಾಪಕ. ಆದರೆ ಅವನಿಗಿಂತಲೂ ಕದಂಬ ಕುಲ ಆಳ್ವಿಕೆ ನಡೆಸುತ್ತಿತ್ತೆಂದು ದೇವುಡುರವರು ತಿಳಿಸುತ್ತಾರೆ. ಆ ಮೊದಲು ಆ ಪ್ರಾಂತವನ್ನಾಳುತ್ತಿದ್ದ ಶಾತವಾಹನ ರಾಜನು ಗಂಡು ಸಂತಾನವಿಲ್ಲದೆ ಸತ್ತ. ರಾಜಲಕ್ಷ್ಮಿಯು ಆ ರಾಜನ ಪತ್ನಿಯ ಕನಸಿನಲ್ಲಿ ಕಾಣಿಸಿಕೊಂಡು ಹೇಳಿದಳು : 'ನಾಳೆಯ ದಿನ ಪಟ್ಟದಾನೆಯನ್ನು ಪೂಜಿಸಿ, ಅದರ ಕೈಗೆ ಒಂದು ಪುಷ್ಪಮಾಲೆಯನ್ನು ಕೊಡಿಸು. ಅದು ಯಾವನನ್ನು ಆ ಮಾಲೆಯಿಂದ ಅರ್ಚಿಸಿ ಕರೆದುಕೊಂಡು ಬರುವುದೊ ಆತನಿಗೆ ಆ ಕೂಡಲೇ ರಾಜ್ಯಾಭಿಷೇಕ ಮಾಡು. ಆತನೇ ನಿಮಗೆ ಅರಸು' ಎಂದು. ಅದರಂತೆ ನಡೆದಾಗ ಆನೆಯು ತ್ರಿನೇತ್ರ ಕದಂಬನಿಗೆ ಹಾರ ಹಾಕಿತು. ಆ ವಂಶಕ್ಕೆ ಸೇರಿದವನು ಚಂದ್ರವರ್ಮ. ಅವನು ಆಳುತ್ತಿದ್ದಾಗ ನಾಗಶ್ರೀ ಎಂಬುವಳು ಓರ್ವ ಮಂತ್ರವಾದಿಯ ನೆರವಿನಿಂದ ಚಂದ್ರವರ್ಮನನ್ನು ಕೊಂದು ತಾನೇ ಆ ರಾಜ್ಯದ ರಾಣಿಯಾದಳು. ಚಂದ್ರವರ್ಮನ ಹೆಂಡತಿ ಪುಷ್ಪಾವತಿಯು ಒಂದು ವರ್ಷದ ಬೊಮ್ಮಟೆಯನ್ನು ಮಡಿಲಲ್ಲಿ ಕಟ್ಟಿಕೊಂಡು, ಈಶಭಟ್ಟ ಎಂಬುವನ ನೆರವಿನಿಂದ ತಲಕಾವೇರಿಯಲ್ಲಿ ಆ ಮಗುವನ್ನು ಬೆಳೆಸಿದಳು. ಹಾಗೆ ಬೆಳೆದವನೇ ಕದಂಬ ಮಯೂರ.

ಈ ಕ್ಷತ್ರಿಯ ಕುಮಾರನು ಪಲ್ಲವರ ರಾಜಧಾನಿಯಾದ ಕಾಂಚಿಗೆ ಹೋಗಿ ವಿದ್ಯಾಭ್ಯಾಸ ಮಾಡುತ್ತಿದ್ದನು. ಭಿಕ್ಷಾನ್ನದ ಬ್ರಾಹ್ಮಣ ವಟು ವೇಷಧಾರಿಯಾಗಿದ್ದು ಸಕಲ ಶಸ್ತ್ರಾಸ್ತ್ರ ವಿದ್ಯೆಯನ್ನೂ ಕಲಿತ. ಒಮ್ಮೆ ಕಾಂಚಿಯ ರಾಜಕುಮಾರನನ್ನು ಕತ್ತಿವರಸೆ ಸ್ಪರ್ಧೆಯಲ್ಲಿ ಸೋಲಿಸಿ, ಅವನ ಮೆಚ್ಚುಗೆಗೆ ಪಾತ್ರನದ, ಅವನಿಂದ ಖಡ್ಗವನ್ನು ಕಾಣಿಕೆಯಾಗಿ ಪಡೆದ. ಅನಂತರ ತನ್ನ ಕೃತಜ್ಞತೆಯನ್ನು ತಿಳಿಸಲು ಸರಿರಾತ್ರಿಯಲ್ಲಿ ಅರಮನೆಯನ್ನು ಪ್ರವೇಶಿಸಿ, ಅಕಸ್ಮಾತ್ತಾಗಿ ದಾರಿತಪ್ಪಿ ರಾಣಿವಾಸ ಸೇರಿ, ಪಲ್ಲವ ರಾಜಕುಮಾರಿ ಪ್ರೇಮಾವತಿಯ ಅಂತಃಪುರಕ್ಕೆ ಹೋಗುತ್ತಾನೆ. ಅಲ್ಲಿ ಅವಳನ್ನು ಮೋಹಿಸುತ್ತಾನೆ. ಇಬ್ಬರಲ್ಲೂ ಪರಸ್ಪರ ಅನುರಾಗ ಮೂಡುತ್ತದೆ. ರಾಜಕಾರಣಕ್ಕೆ ತಾನೆ ಶತ್ರು–ಮಿತ್ರ ಎಂಬ ಭೇದ ಭಾವನೆ, ಪ್ರೇಮಕ್ಕೆಲ್ಲಿಯದು ?

ಅಂದಿನಿಂದ ಮಯೂರ ಕಾಂಚಿಯ ಮಹಾರಾಜನಿಗೆ ನುಂಗಲಾರದ ತುತ್ತಾಗುತ್ತಾನೆ. ಅವನನ್ನು ಸೆರೆ ಹಿಡಿಯುವ ಪ್ರಯತ್ನ ವ್ಯರ್ಥವಾಗುತ್ತದೆ. ಮಯೂರನು ಅರಣ್ಯಪ್ರದೇಶದಲ್ಲಿ ತನ್ನವರನ್ನು ಸೇರಿಕೊಳ್ಳುತ್ತಾನೆ. ಅವರೇ ಅವನ ತಂದೆ ಚಂದ್ರ ವರ್ಮನಿಗೆ ಆಪ್ತರಾಗಿದ್ದ ಈಶಭಟ್ಟರು, ಮಂತ್ರಿ ಷಡಾನನಶರ್ಮ, ಸೇನಾಧಿಪತಿ ನರಸಿಂಹದತ್ತ, ವೀರಯೋಧ ಮುನಿಯಾ ಶೆಟ್ಟಿ, ಕದಂಬಕುಲ ಪುರೋಹಿತ ವೀರಶರ್ಮ. ಇವರೆಲ್ಲರು ವೇಷಧಾರಿಗಳಾಗಿ ಕಾಂಚಿಯಲ್ಲಿದ್ದುಕೊಂಡು ಮಯೂರನಿಗೆ ಸಹಾಯ ಮಾಡುತ್ತಾರೆ. ಈಶಭಟ್ಟರು ಮಯೂರನ ಸಾಕು ತಂದೆ. ಇವರೆಲ್ಲರ ನೆರವಿನಿಂದ ಮಯೂರನು ಒಂದು ಪ್ರಬಲವಾದ ಸೇನೆಯನ್ನು ಕಟ್ಟಿ ಪಲ್ಲವ ರಾಜ್ಯದ ಮೇಲೆ ಯುದ್ಧವನ್ನು ಘೋಷಿಸುತ್ತಾನೆ. ಯುದ್ಧದಲ್ಲಿ ಗೆಲುವು ಇವನದಾಗಿ ಬನವಾಸಿ

ಮಯೂರನ ಕೈವಶವಾಗುತ್ತದೆ. ಅನಂತರ ದೊಂಬ ವೇಷದಲ್ಲಿ ಹೋಗಿ ಗಣೆ ಏರಿ ಲಗಾಟಿ ಹೊಡೆದು, ಸಮಯ ನೋಡಿಕೊಂಡು ವೇಷಧಾರಿ ಸೈನಿಕರಿಂದ ದಾಳಿಮಾಡಿಸಿ ಶ್ರೀಶೈಲ ಕೋಟೆಯನ್ನು ಸ್ವಾಧೀನಪಡಿಸಿಕೊಂಡ. ಹಾಗಾಗಿ ಕಾಂಚಿಯ ಪಶ್ಚಿಮ ರಾಜಧಾನಿ ಬನವಾಸಿ, ಉತ್ತರ ರಾಜಧಾನಿ ಶ್ರೀಶೈಲ ಇವು ಮಯೂರನ ವಶವಾಗಿ ಪಲ್ಲವರಿಗೆ ಅವರ ಪೂರ್ವ ರಾಜ ಧಾನಿ ಕಾಂಚಿ ಮಾತ್ರ ಉಳಿಯಿತು. ಕಡೆಯಲ್ಲಿ ಮಯೂರನು ಕಾಂಚಿಯ ಪಲ್ಲವ ರಾಜಕುಮಾರಿ ಪ್ರೇಮಾವತಿಯನ್ನು ಲಗ್ನವಾಗಿ ಬನವಾಸಿಯಲ್ಲಿ ಕದಂಬ ಸಾಮ್ರಾಜ್ಯಕ್ಕೆ ಚಕ್ರವರ್ತಿಯಾಗಿ ಆಳಿ ಖ್ಯಾತನಾಗುತ್ತಾನೆ.

---

[೬] ಮಯೂರ ಪು. ೮೧-೮೨

ಸಾಮಾನ್ಯವಾಗಿ ಐತಿಹಾಸಿಕ ಕಾದಂಬರಿಗಳಲ್ಲಿ ಚರಿತ್ರಾಂಶ ಕಡಿಮೆ ಕಲ್ಪನಾಂಶ ಹೆಚ್ಚು. ಈ ಹೇಳಿಕೆಗೆ ಹೊರತಲ್ಲ ಮಯೂರ. ಇಲ್ಲಿ ಮಯೂರನ ಹೊರತು ಮಿಕ್ಕೆಲ್ಲ ಪಾತ್ರಗಳೂ ಕಲ್ಪಿತಗಳು. ಮಯೂರನು ಕಾಂಚಿಯವರಿಂದ ಕರ್ನಾಟಕ ಭಾಗವನ್ನು ಗೆದ್ದುಕೊಂಡು ಬನವಾಸಿಯಲ್ಲಿ ಸಾಮ್ರಾಜ್ಯ ಸ್ಥಾಪನೆ ಮಾಡಿದ್ದು ಐತಿಹಾಸಿಕ ಸತ್ಯ. ಆದರೆ ಅದಕ್ಕೆ ಸಂಬಂಧಿಸಿದ ಮಯೂರನ ಪ್ರಯತ್ನ, ಪ್ರಣಯಗಳು ಕಾದಂಬರಿಕಾರರ ಕಲ್ಪನೆಯ ಅಂಶಗಳು. ಏನೇ ಇರಲಿ ಇಂತಹ ಲೋಕಪ್ರಸಿದ್ಧ ಐತಿ ಹಾಸಾಂಶವನ್ನು ಕೈಗೆತ್ತಿಕೊಂಡು ಕಲಾತ್ಮಕ ಕಾದಂಬರಿಯನ್ನು ರಚಿಸಿದ್ದಾರೆ ದೇವುಡು. ಇದು ಸರಳ, ಸುಭಗ ಶೈಲಿಯ ಸುಂದರ ರಚನೆ. ಮೇಲಿಂದ ಮೇಲೆ ಬಂದೊದಗುವ ಘಟನೆಗಳು ಓದುಗರ ಕುತೂಹಲವನ್ನು ಹೆಚ್ಚಿಸಲು ಸಹಕಾರಿಯಾಗಿವೆ.

ಇಪ್ಪತ್ತನೆಯ ಶತಮಾನದ ಪೂರ್ವಾರ್ಧದಲ್ಲಿ ಬಂದ ಮಹತ್ವಪೂರ್ಣ ಐತಿಹಾಸಿಕ ಕಾದಂಬರಿಗಳಲ್ಲಿ ಮಯೂರ ಒಂದು.

**ಚಿನ್ನಾ (ಅವಳ ಕಥೆ)**

ಇತಿಹಾಸವನ್ನು ಹಿನ್ನೆಲೆಯಾಗುಳ್ಳ ಒಂದು ಕಾಲ್ಪನಿಕ ಕಾದಂಬರಿ. ರಾಮರಾಯ ವಿಜಯನಗರ ಸಾಮ್ರಾಜ್ಯದ ಕಟ್ಟಕಡೆಯ ಚಕ್ರವರ್ತಿ. ಅವನು ವಿಲಾಸಿ, ವಿಷಯಾಸಕ್ತ. ಅಷ್ಟೇ ಕಲಾಪ್ರೇಮಿ, ರಸಿಕ. ಅವನ ಪೌರುಷ ಪ್ರತಾಪಗಳೂ ಮೆಚ್ಚುವಂಥವು. ಆದರೆ ವಿಲಾಸ ಜೀವನದ ಸಾಹಸಮಯ ಬದುಕಿಗೆ ವಿದಾಯ ಹೇಳುವುದುಂಟು. ವಿಜಯನಗರದ ಸಾಮ್ರಾಜ್ಯದ ಅವನತಿಗೂ ಅದೇ ವಿಲಾಸ, ಆಲಸ್ಯಗಳೇ ಮೂಲ ಹೇತುಗಳು. ಅದರಲ್ಲಿ ಬಹುಮನೀ ಮೊದಲಾದ ದೈತ್ಯಶಕ್ತಿಗಳ ಪ್ರಾಬಲ್ಯ ಬೆರೆತಿರಬಹುದು. ಆದರೂ ಬಂಗಾರದ ಹೊಗೆ ಹಾಯುತ್ತಿದ್ದ ವಿಜಯನಗರ ಹಾಳುಕೊಂಪೆಯಾಗಲು ಭೋಗವಿಲಾಸವೇ ಮುಖ್ಯ ಕಾರಣ. ಭಾರತೀಯರನ್ನು ಯಾರೂ ಸೋಲಿಸಲಿಲ್ಲ. ಅವರು ತಮಗೆ ತಾವೇ ಸೋತರು – ಎಂಬ ಹೇಳಿಕೆಗೆ ವಿಜಯನಗರ ಅಪವಾದವೇನೂ ಅಲ್ಲ.

ಪ್ರಸ್ತುತ ಚಿನ್ನಾ ಕನ್ನಡಿಗರ ಭವ್ಯೇತಿಹಾಸದ ಅಂತಿಮ ದರ್ಶನವನ್ನೇನೂ ಮಾಡಿಸುವುದಿಲ್ಲ. ವಿಜಯನಗರ ಸಾಮ್ರಾಜ್ಯದ ಸಾಂಸ್ಕೃತಿಕ ಪರಂಪರೆಯ ಬದುಕು ಮಾಡುತ್ತಿದ್ದ ದಿನಗಳಲ್ಲಿ ನಡೆದುದೆನ್ನಲಾದ ಒಂದು ಘಟನೆ ಆ ಕಾದಂಬರಿಯ ಕಥಾವಸ್ತು. ಚಿನ್ನಾಸಾನಿ ವಿಜಯನಗರದ ಆಸ್ಥಾನ ನರ್ತಕಿ, ನರ್ತಕಿಯರ ಶಿರೋಮಣಿ, ಅವಳು ಮಾನವಿಯಲ್ಲ. ಪತಿತ ಗಂಧರ್ವಾಂಗನೆ, ಇಲ್ಲವೇ ಶಾಪಗ್ರಸ್ತ ಅಪ್ಸರೆ ! ವಿದ್ಯಾನಗರದ ಚಕ್ರವರ್ತಿಗಳ ಅದೃಷ್ಟರೂಪಿಣಿಯಾಗಿ ಬಂದ ಕನ್ಯೆ ! ಅವಳು ಹುಟ್ಟಿನಿಂದ ವೇಶ್ಯೆ ; ಅಭಿವ್ಯಕ್ತಿಯಲ್ಲಿ ಕಲಾವಿದೆ, ನಡತೆಯಲ್ಲಿ ಸಾಧ್ವಿಶಿರೋಮಣಿ. ಅವಳು ತ್ರಿಲೋಕ ಸುಂದರಿ. ದೇವಲೋಕದ ಅಪ್ಸರೆಯರೂ ನಾಚು ವಂತಹ ಸೌಂದರ್ಯ ಅವಳದು. ಆ ಚೆಲುವಿನ ಚಿಲುಮೆಯಡಿಯಲ್ಲಿ ಹಾತೊರೆದ ಬಕ, ಮರಾಳಗಳ ಸಂಖ್ಯೆಗೆ ಲೆಕ್ಕವಿಲ್ಲ ! ಆದರೆ ಸಿಕ್ಕ ಸಿಕ್ಕವರಿಗೆಲ್ಲ ಸೆರಗು ಹಾಸುವ ಕೀಳು ಸೂಳೆಯಲ್ಲ. ಅವಳು ಕಲಾವಿದೆ. ಕಲೋಪಾಸಕಿ. ಅಷ್ಟೇ ಮಟ್ಟದ ಗುರುಭಕ್ತಿ ಪರಾಯಣೆ, ಸ್ವೈರಿಣಿಯಾದರೂ ಸ್ವಾಭಿಮಾನಿ, ಗೋಲ್ಕೊಂಡದ ಷಾಹೀ ನವಾಬನಿಗೆ ಅವನದೇ ಆದ ಒಂದು ವಜ್ರದ ಗಣಿ ಇತ್ತು. ಅವನು ಬಹುಮನಿಯ ಸೀಮಂತ ಸುಲ್ತಾನ. ಐದು ಲಕ್ಷ ರೂಪಾಯಿಗಳ ಬಹುಮಾನ ಕೊಡುವುದಾಗಿ ಹೇಳಿ ಚಿನ್ನಸಾ ನಿಯ ಗಾಯನ ನರ್ತನೆಗಳಿಗಾಗಿ ಕರೆಯಿತ್ತ. ಚಿನ್ನಾ ಅವನ ಆಹ್ವಾನವನ್ನು ನಿರಾಕರಿಸಿದಳು. ಸ್ವಯಂ ಚಕ್ರವರ್ತಿಗಳೇ ಹೇಳಿದರೂ ಒಪ್ಪಲಿಲ್ಲ. ತಾನು ವಿಜಯನಗರದ ಆಸ್ಥಾನ ನರ್ತಕಿ ! ದೇವ ದೇವನಾದ ವಿರೂಪಾಕ್ಷನ ಸಾನಿಧ್ಯದಲ್ಲಿ, ಇಲ್ಲವೇ ದೈವಸ್ವರೂಪ ನಾದ ಮಹಾಪ್ರಭುಗಳ ಸಮ್ಮುಖದಲ್ಲಿ ಮಾತ್ರ ತನ್ನ ನರ್ತನ, ಗಾಯನ ಎಂದಳು. ಆದರೂ ಯಜಮಾನ ವೀರಶೆಟ್ಟಿಯ ಕುತಂ ತ್ರದಿಂದಾಗಿ ಒಮ್ಮೆ ಗೋಲ್ಕೊಂಡದ ಐವಾನ್ ಷಾಹಿಯಲ್ಲಿ ಅವಳು ತನ್ನದೊಂದು ಗಾಯನ ಪ್ರದರ್ಶನ ನೀಡಲೇಬೇಕಾಯಿತು. ಅದು ತಪ್ಪಿದ್ದರೆ ಗೋಲ್ಕೊಂಡದ ಷಾಹೀ ರಾಜ್ಯಕ್ಕೂ ವಿಜಯನಗರ ಸಾಮ್ರಾಜ್ಯಕ್ಕೂ ಘೋರ ಯುದ್ಧವೇ ಸಂಭವಿಸುತ್ತಿತ್ತು. ಅದನ್ನು ತಪ್ಪಿಸಲಿಕ್ಕಾಗಿ ಚಿನ್ನಸಾನಿ ಒಪ್ಪಿದಳು.

ಆ ಸಂದರ್ಭ ಹೀಗಿದೆ :

ತುಂಬು ಸ್ವಾರ್ಥಿ ಹಾಗೂ ಮಹತ್ವಾಕಾಂಕ್ಷಿ ವಿಜಯನಗರದ ವೀರಸೆಟ್ಟಿಯ ಗೋಲ್ಕೊಂಡದ ಸುಲ್ತಾನನಿಂದ ವಜ್ರದ ಗಣಿಯನ್ನು ಪಡೆಯಲು ಒಂದು ಪಿತೂರಿ ಮಾಡಿದ. ಅದರ ಪರಿಣಾಮ ಪಂಚಷಾಹೀ ರಾಜ್ಯಗಳ ಸಂಘಟನೆಗೆ ಕಾರಣವಾಯಿತು. ಬೀದರ್, ಅಹಮ್ಮದ್ ನಗರದ ರಾಯಭಾರಿಗಳು ಗೋಲ್ಕಂಡಕ್ಕೆ ಬಂದು ಬಿನ್ನೈಸಿದರು : 'ಖಾವಂದ್, ಈ ವಿಜಯನಗರದವರು ನಮ್ಮ ಐವರು ಸುಲ್ತಾನರಲ್ಲಿ ಒಬ್ಬರ ಮೇಲೊಬ್ಬರನ್ನು ಎತ್ತಿಕಟ್ಟಿ ನಮ್ಮ ನಮ್ಮಲ್ಲಿ ನಾವು ಕಾದಾಡಿಕೊಂಡು ಇರುವಾಗ ತಾವು ಸುಖವಾಗಿದ್ದಾರೆ. ಇತ್ತಕಡೆ ಕೊಂಡವೀಡು ರಾಜ್ಯವನ್ನು ತೆಗೆದುಕೊಂಡರು. ವಿಜಯನಗರದ ಪ್ರಜೆಗಳೆಲ್ಲ, 'ನಮ್ಮ ರಾಯರು ಮನಸ್ಸು ಮಾಡಿದರೆ ಬಹುಮನೀ ಸುಲ್ತಾನರೆಲ್ಲಾ ಏಕ್‌ದಂ ಮಟ್ಟಹಾಕಬಲ್ಲರು ಏನೋ ಬಿಟ್ಟುಕೊಂಡು ಬರುತ್ತಿದ್ದಾರೆ' ಎನ್ನುತ್ತಿದ್ದಾರೆ. ಈಗ ವಿಂಧ್ಯಪರ್ವತದ ಉತ್ತರ ರಾಜ್ಯವೆಲ್ಲ ಮುಸಲ್ಮಾನರದು ಆಗಿದೆ. ಇತ್ತಲಾಗಿ ಪಶ್ಚಿಮ ಬಂಗಾಳದಲ್ಲಿಯೂ ಪಠಾನರ ರಾಜ್ಯವಾಯಿತು. ಇನ್ನು ಉಳಿದಿರುವುದು ಅರಾವಳಿ ಬೆಟ್ಟಗಳ ರಜಪೂತ ಅಥಾನ, ದಕ್ಷಿಣದಲ್ಲಿ ವಿಜಯನಗರ. ಅದನ್ನು ಗೆಲ್ಲುವುದಕ್ಕೆ ತಮಗೂ ಬಿಜಾಪುರದವರಿಗೂ ಏನು ಮದತ್ ಮಾಡುವುದಕ್ಕೂ ನಾವು ಮೂವರೂ ಸುಲ್ತಾನರೂ ಸಿದ್ಧರಾಗಿದ್ದೇವೆ. ಇದೋ ನಮ್ಮ ಮಾತಿಗೆ ದುಸರಾ ಹೇಳುವುದಿಲ್ಲವೆಂದು ಬೀರಾರಿನ ಸುಲ್ತಾನರು ಬರೆದಿರುವ ಪತ್ರ. ಹಿಂದೆ ಖಿಲ್ಜಿ ದಳವಾಯಿ ಮಲ್ಲಿಕ್‌ಕಾಫರನು ಮಾಡಿದಂತೆ ಈಗ ನಾವೂ ಮಾಡಬೇಕು. ಖಾವಂದರು ಮನಸ್ಸು ಮಾಡಿದರೆ ತಾವೇ ದಳವಾಯಿಗಳಾಗಬಹುದು. ಈ ವಿಜಯನಗರದಿಂದ ನೇರವಾಗಿ ದಕ್ಷಿಣಕ್ಕೆ ಒಂದು ಗೆರೆಯನ್ನು ಎಳೆಯುವುದು. ಆ ಗೆರೆಯ ಪಶ್ಚಿಮದ ರಾಜ್ಯವೆಲ್ಲ ಬಿಜಾಪುರಕ್ಕೆ ; ಪೂರ್ವದ ರಾಜ್ಯವೆಲ್ಲ ಗೋಲ್ಕಂಡಕ್ಕೆ. ಪೂರ್ವದಲ್ಲಿರುವ ಕೊಂಡವೀಡು ರಾಜ್ಯವು ಬೀದರ್‌ಗೆ ಸೇರಿ, ರಾಜಮಂದರಿ, ಮಚ್ಛಲೀ ಬಂದರ್ ಇವೆಲ್ಲಾ ಅವರಿಗೆ. ಅಹಮ್ಮದ್ ನಗರಕ್ಕೆ ಸಮುದ್ರ ತೀರದ ರಾಜ್ಯ ಸಾಕು. ಅದೂ ನಮ್ಮ ಮೆಕ್ಕಾಕ್ಕೆ ಹೋಗುವ ಮುಸಲ್ಮಾನರ ರಕ್ಷಣೆಗೋಸ್ಕರ ನಾವು ಆ ಕರಾವಳಿಯನ್ನು ಕೇಳುತ್ತಿದ್ದೇವೆ. ಬೀರಾರಿನವರು ಮುಂದೆ ಒರಿಸ್ಸಾ ಹಿಡಿಯಬೇಕೆಂದು ಆಸೆ ಪಡುತ್ತಿದ್ದಾರೆ. ಅವರಿಗೆ ಸಹಾಯ ಮಾಡುವುದಾಗಿ ನಾವು ಮಾತು ಕೊಡಬೇಕು. ಇದಿಷ್ಟು ಇಲ್ಲಿ ಆದರೆ ವಿಂಧ್ಯದ ಆಚೆ ಇರುವ ಮುಸಲ್ಮಾನೀ ರಾಜ್ಯದೊಡನೆ ಸೇರಿ ರಜಪೂತರನ್ನು ಮಟ್ಟ ಹಾಕುವುದು ಸುಲಭ. ಅಲ್ಲಿಗೆ ಸಾರೆ ಹಿಂದೂಸ್ತಾನ್ ಮುಸಲ್ಮಾನರದೇ ಆಗಿ ಹೋಯಿತು. ಆದರಿಂದ ಖಾವಂದರು ಈ ಕಾರ್ಯದಲ್ಲಿ ಮನಸ್ಸು ಹಾಕಿ, ಒಪ್ಪಿಕೊಳ್ಳಬೇಕು ಎಂದು ಬಹಳ ವಿನಯದಿಂದ ಅಹಮ್ಮದ್ ನಗರ, ಬೀದರ್ ಸುಲ್ತಾನರು ಸಲಾಂ ಮಾಡಿ ಹೇಳಿಕೊಳ್ಳುತ್ತಾರೆ.[೭]

ಪಂಚಷಾಹೀ ರಾಜ್ಯಗಳ ಈ ಬಗೆಯ ಸಂಘಟನೆ ವಿಜಯನಗರಕ್ಕೆ ವಾಂತಿ ಭೇದಿ ತಂದಿತು. ಒಂದು ಕಾಲಕ್ಕೆ ಶತ್ರು ರಾಜರಿಗೆ ಸಿಂಹಸ್ವಪ್ನವಾಗಿದ್ದ ವಿಜಯನಗರ ಇಂದು ಅಳ್ಳದೆಯ ಗುಳ್ಳೆನರಿಗಳ ಗೂಡಾಗಿತ್ತು. ಅಂದಿನ ಪೌರುಷದ ಮೇರು ವಿಜಯನಗರ ಇಂದು ಯುದ್ಧವೆಂದರೆ ಥರಥರನೆ ನಡುಗುತ್ತಿತ್ತು. ಅದರಿಂದಾಗಿ ಗೋಲ್ಕಂಡದೊಡನೆ ಯುದ್ಧ ಹೂಡುವುದಕ್ಕಿಂತ ಚಿನ್ನಸಾನಿಯ ಸಾಂಸ್ಕೃತಿಕ ರಾಯಭಾರ ಅಚ್ಚುಮೆಚ್ಚಾಯಿತು. ಸಮರಕ್ಕಿಂತ ಸಂಧಿಯೇ ಸೂಕ್ತವೆನಿಸಿತು ಸಾಮ್ರಾಟ ರಾಮರಾಯನಿಗೆ. ಕೂಡಲೆ ರಾಜಾಜ್ಞೆಯಾಯಿತು. 'ಚಿನ್ನಸಾನಿ ಸಮ್ಮುಖಕ್ಕೆ ಬರಲಿ' ಎಂದು. 'ಚಿನ್ನಸಾನಿಯು ಚಕ್ರವರ್ತಿಗಳ ಸನ್ನಿಧಿಯಲ್ಲಿ ತಲೆ ಬಾಗಿ ನಿಂತು 'ಮಹಾಪಾದಗಳಿಗೆ ಜಯವಾಗಲಿ ಈಗ ನಾನು ಮೊದಲು ಯಾರಿಗೆ ನಮಸ್ಕಾರ ಮಾಡಬೇಕು ಎನ್ನುವುದನ್ನು ಪ್ರಭುಗಳೇ ಅಪ್ಪಣೆ ಕೊಡಿಸಬೇಕು. ಅಲ್ಲಿ ಗುರುಗಳು, ಇಲ್ಲಿ ಸನ್ನಿಧಾನ. ಅಪ್ಪಣೆಯಾದಂತೆ ನಡೆಯಲು ಸಿದ್ಧಳಾಗಿದ್ದೇನೆ' ಎಂದು ಕೈ ಮುಗಿ ದಳು. ಚಿಕ್ರವರ್ತಿಗಳು 'ಮೊದಲು ಅಲ್ಲಿ ಆಮೇಲೆ ಇಲ್ಲಿ' ಎಂದರು. ಅದರಂತೆ ಅವಳು ನಾಟ್ಯದಿಂದ ಮೊದಲು ಗುರುಪೂಜೆ ಯನ್ನು ಒಪ್ಪಿಸಿ, ಅವರ ಅಪ್ಪಣೆ ಪಡೆದು ಸಾಮ್ರಾಟರಿಗೂ ನಾಟ್ಯದಿಂದಲೇ ಪೂಜಾಯ ಕಾಣಿಕೆಯನ್ನು ಒಪ್ಪಿಸಿದಳು. ಅವರ ಅಪ್ಪಣೆಯಾದಂತೆ ಹಾಸಿದ್ದ ರತ್ನಗಂಬಳಿಯ ಮೇಲೆಯೇ ಕುಳಿತುಕೊಂಡಳು. ಅವಳ ವಿನಯವನ್ನು ಕಂಡು ರಾಯರು 'ನಿಜವಾ ಗಿಯೂ ಇವಳಲ್ಲಿ ನಮ್ಮ ಮಾತು ಕೇಳದಿರುವಷ್ಟು ಹಟವಿದೆಯೇ ?' ಎಂದು ಆಶ್ಚರ್ಯಪಟ್ಟರು. ಚಿನ್ನಳು ಮತ್ತೆ ಎದ್ದು ಕೈ ಮುಗಿದುಕೊಂಡು 'ಮಹಾಸನ್ನಿಧಾನದ ಅಪ್ಪಣೆಯಾಯಿತಂತೆ. ಮಹಾಪಾದದ ಉಪ್ಪು ತಿಂದ ದಾಸಿ ಅಪ್ಪಣೆಯನ್ನು ನೆರವೇರಿಸಲು ಸಿದ್ಧಳಿದ್ದಾಳೆ' ಎಂದು ಭಕ್ತಿಯಿಂದ ಕೈ ಮುಗಿದಳು.

---

[೭] ಚಿನ್ನಾ, ಪುಟ ೧೧-೧೧೨

ರಾಯರು ಕೇಳಿದರು, 'ಚಿನ್ನಾಸಾನಿ, ನಿನ್ನಿಂದ ಈ ಸಲ ಈ ಸಾಮ್ರಾಜ್ಯವು ಒಂದು ಸೇವೆಯನ್ನು ಬಯಸುತ್ತಿದೆ. ಒಂದು ರಾಜಕಾರ್ಯವು ನಿನ್ನಿಂದ ಆಗಬೇಕಾಗಿದೆ. ಮಾಡಿಕೊಡುವೆಯಾ ?'

'ಮೊದಲೇ ಅರಿಕೆ ಮಾಡಿದ್ದೇನೆ ಮಹಾಪಾದದಲ್ಲಿ, ತಮ್ಮಂಥವರ ಸ್ಮರಣೆ ಮಾಡುವುದೇ ನಾವು ಮಾಡಿದ ಪುಣ್ಯದ ಗುರುತು. ಯಾವ ಜನ್ಮದಲ್ಲಿ ಮಾಡಿದ ಮಹತ್ಪುಣ್ಯದ ಫಲವೋ ಈ ಪಂಪಾಕ್ಷೇತ್ರದಲ್ಲಿ ಜನಿಸಿ, ಭಕ್ತಪರಾಧೀನರಾದ ಪಂಪಾಧೀಶ್ವರನ ಅನುಗ್ರಹಮೂರ್ತಿ ಎನ್ನಿಸಿಕೊಂಡಿರುವ ವಿಜಯನಗರಾಧೀಶ್ವರನನ್ನು ಸೇವಿಸುವ ಭಾಗ್ಯ ದೊರೆತಿದೆ. ಅದೇ ಪುಣ್ಯವೇ ಈಗ ಇನ್ನೂ ಒಂದು ವಿಧವಾಗಿ ಅತಿಶವಾದ ಸೇವೆಯನ್ನು ಸಲ್ಲಿಸಿ ಕೃತಾರ್ಥಳಾಗುವ ಅವಕಾಶವನ್ನು ಒದಗಿಸಿಕೊಟ್ಟಿದ್ದರೆ ಅದನ್ನು ಬೇಡವೆನ್ನುವಷ್ಟು ಮೂರ್ಖಳಾಗಲೆ ? ದಾಸಿಯು ಚರಣ ಸೇವೆಗೆ ಸರ್ವಥಾ ಸಿದ್ಧಳು.'

ರಾಯರು ಆಚಾರ್ಯರ ಮುಖ ನೋಡಿದರು. ಅವರ ಅಭಿಪ್ರಾಯದಂತೆ ಅವರು ಕೇಳಿದರು: 'ರಾಜಾಜ್ಞೆಯು ನಿನ್ನ ಮನಸ್ಸಿನಲ್ಲಿರುವುದಕ್ಕೆ ವಿರುದ್ಧವಾಗಿದ್ದರೂ ನಡೆಸುವೆಯಾ ಚಿನ್ನಮ್ಮಾ ?'

'ಗುರುದೇವ, ಗುರುಗಳೂ ರಾಜರೂ ವಿನಿಯೋಗವನ್ನು ಸರ್ವಥಾ ಬಲ್ಲರು. ನಹಿ ಚೂಡಾಮಣೀ ಪಾದೇ ಪ್ರಭಾವಾ ಮೀತಿ ಬದ್ಧ್ಯತೇ ಅಂದರೆ ಚೂಡಾಮಣಿಯನ್ನು ಯಾರೂ ಕಾಲಿಗೆ ಕಟ್ಟಿಕೊಳ್ಳುವುದಿಲ್ಲವಷ್ಟೇ ?. . .

ರಾಯರು ಕೇಳಿದರು. 'ಆಯಿತು, ಚಿನ್ನಸಾನಿಯವರೇ ಅಗತ್ಯವಾಗಿ ಆಗಬೇಕಾದ ಕಾರ್ಯದಲ್ಲಿ ವಿನಿಯೋಗ ಮರ್ಯಾ ದೆಯು ಸಡಿಲಬಾರದೇನು?' 'ಸರ್ವಕಾಲಗಳಲ್ಲಿ ಮೇರೆಯನ್ನು ಮೀರುವುದು ಸಮುದ್ರಕ್ಕೆ ಭೂಷಣವೇ ಅಲ್ಲವೇನು ?'

'ಆಯಿತು ಚಿನ್ನಾ. ಅಲಂಕಾರೋಕ್ತಿಗಳು ಸಾಕು. ನೇರವಾಗಿ ಒಂದು ಮಾತು ಹೇಳು. ನಿನ್ನ ಮನಸ್ಸೊಪ್ಪದ ಕೆಲಸವೊಂದನ್ನು ನೀನು ಮಾಡಿ, ನಮ್ಮ ಕಾರ್ಯವನ್ನು ಗೆಲ್ಲಬೇಕಾಗಿದೆ !

'ಅಂತಹ ಋಷ್ಯಶೃಂಗನನ್ನು ಹಿಡಿದು ತರಬೇಕಾದ ಕೆಲಸ ಯಾವುದು ಇದೆಯೋ ಅಪ್ಪಣೆಯಾಗಲಿ. ನನ್ನಿಂದ ಆಗುವುದಿದ್ದರೆ ಮಾಡಿಯೇ ಮಾಡುತ್ತೇನೆ. ಇನ್ನೇನು ನನ್ನ ಕೈಗೆ ಒಂದು ಸೈನ್ಯವನ್ನು ಕೊಟ್ಟು ಗೋಲ್ಕಂಡವನ್ನು ಗೆದ್ದು ಬಾ ಎನ್ನುವುದಿಲ್ಲವಲ್ಲ ?'

'ಗೋಲ್ಕಂಡದ ನವಾಬರು ನಮ್ಮೊಡನೆ ಸಂಧಿಯನ್ನು ಮಾಡಿಕೊಳ್ಳಲು ಒಪ್ಪಿದ್ದಾನೆ. ಆದರೆ ಸಂಧಿಯಾಗುವುದೂ ಬಿಡುವುದು ನಿನ್ನ ಕೈಲಿದೆ'

'ಎಂದರೆ ನಾನೇನು ಮಾಡಬೇಕು?'

'ನೀನು ಹೋಗಿ ಅಲ್ಲಿ ಹಾಡಿ ಬರಬೇಕು'

'ಮಹಾಸನ್ನಿಧಾನದ ಅಪ್ಪಣೆಗೆ ಪ್ರತಿಯಾಗಿ ನುಡಿಯುವುದು ನನ್ನಿಂದ ಸಾಧ್ಯವಿಲ್ಲ. ಪ್ರಭುಗಳ ಅಪ್ಪಣೆಯು ನೆರವೇರುವುದು; ಜೊತೆಯಲ್ಲಿಯೇ ಚಿನ್ನಳಿಗೆ ರಾಜಾಜ್ಞೆಯನ್ನು ಪಾಲಿಸಿದುದರ ಫಲವಾಗಿ ದಿವ್ಯಶರೀರವು ಲಭಿಸಿತೆಂಬ ಶುಭ ಸಮಾಚಾರವೂ ಸನ್ನಿಧಾನಕ್ಕೆ ತಲುಪುವುದು.'

'ನೀನೂ ಹೀಗೆ ಹಟ ಮಾಡಿದರೆ ಆಗುವ ಹಾನಿಯೇನು ಬಲ್ಲೆಯಾ ?'

'ಹಟವೇನು ಬಂತು ಮಹಾಪ್ರಭು. ಸನ್ನಿದಾನದ ಅಪ್ಪಣೆಯು ನೆರವೇರುವುದು. ವಿಜಯನಗರದ ಒಂದೇ ಒಂದು ಅನಾಥ ಪ್ರಾಣಿಯು ಇಲ್ಲವಾದರೆ ರಾಜಧಾನಿಗೆ ಹಾನಿಯಾಗುವುದಿಲ್ಲ.'

'ನಿನ್ನ ಕಷ್ಟವೇನು ಹೇಳು ?'

'ನನ್ನ ಕಷ್ಟವೇನು ಮಹಾಪ್ರಭು. ಈ ಪ್ರಭುವಿಗೆ ಮುಗಿದ ಕೈಗಳು ಇನ್ನೊಬ್ಬ ಪ್ರಭುವೆನಿಸಿಕೊಂಡವನಿಗೆ ಮುಗಿಯುವುದಿಲ್ಲ. ಅದು ನನ್ನ ವ್ರತ. ಊರುಭಂಗದಲ್ಲಿ ಹೇಳುವಂತೆ, 'ಯೇನೈವ ಮಾನೇನಭುವಿಪ್ರಸೂತೋ ತೈನೇವ ಮಾನೇನ ದಿವಂ ಪ್ರಯಾಮಿ

'ನೀನು ಒಪ್ಪಿದರೆ ವಿಜಯನಗರಕ್ಕೆ ಒಂದು ಯುದ್ಧ ನಿಂತಿತು. ಅದು ಲಾಭ. ನೀನು ಒಪ್ಪದಿದ್ದರೆ ವಿಜಯನಗರಕ್ಕೆ ಒಂದು ಯುದ್ಧ. . .' (ಪುಟ ೯೭–೧೦೦)

ಇಂತಹ ಸಂಧಿಗ್ಧಕ್ಕೆ ಸಿಕ್ಕಿದ ಚಿನ್ನಾಸಾನಿ ರಾಷ್ಟ್ರಕ್ಕಾಗಿ ತನ್ನನ್ನು ತಾನು ಒಪ್ಪಿಸಿಕೊಳ್ಳಲು ನಿರ್ಧರಿಸಿ, ಗೋಲ್ಕೊಂಡಕ್ಕೆ ಹೋಗಲು ಒಪ್ಪಿಗೆ ಸೂಚಿಸುತ್ತಾಳೆ.

ಭರತಾಚಾರ್ಯರು (ಶ್ಯಾಮಣ್ಣ) ಚಿನ್ನಾಸಾನಿಯ ಗುರು, ಗೋಪಾಲರಾಯರು ಚಿನ್ನಾಸಾನಿಯ ಅವಿಚ್ಛಿನ್ನ ಪ್ರೇಮಿ, ರತ್ನಾಸಾನಿ ಅವಳ ತಂಗಿ, ಎಲ್ಲರೂ ಗೋಲ್ಕಂಡಕ್ಕೆ ನಡೆದರು. ಅಂದು ಗೋಲ್ಕಂಡದ ಜನಾನಾ, ಐವಾನ್ ಷಾಹಿಗಳಲ್ಲೆಲ್ಲಾ ತುಂಬಿ ಹರಿಯಿತು ಸಂಗೀತ ಸುಧೆ. ಮೊದಲ ಮೂರು ದಿನ ಚಿನ್ನಾಸಾನಿಯ ಗುರು, ಗಾಯನ ಗಂಧರ್ವ

ಭರತಾಚಾರ್ಯರಿಂದ ಅತ್ಯ ಪೂರ್ವ ಸಂಗೀತ ಸುಧಾ ವಿಲಾಸ. ನಾಲ್ಕನೆಯ ದಿನ ಚಿನ್ನಾಸಾನಿಯ ಗಾಯನ, ಅದು ಮುಗಿದ ಮಾರನೆಯ ದಿನವೇ ಶ್ರೀಶೈಲ ಕ್ಷೇತ್ರಕ್ಕೆ ಯಾತ್ರೆ.

ಅಂದು ಶ್ರೀಶೈಲದಲ್ಲಿ ವಿಶೇಷೋತ್ಸವ. ಚಿನ್ನಾಸಾನಿ, ರತ್ನಾಸಾನಿ ಎಲ್ಲರೂ ಅಲ್ಲಿಗೆ ಹೋದರು. ಆದರೆ ಅಂದು ಚಿನ್ನಾಸಾನಿಯ ನಿರ್ಧಾರವೇ ಬೇರೆಯಾಗಿತ್ತು. ತಾನೊಂದು ಮೀಸಲು ಕುಸುಮ. ಅದು ಸುಲ್ತಾನನ ಜನಾನವನ್ನು ಪ್ರವೇಶಿಸಿ ಅಪವಿತ್ರವಾಯಿತು. ಅಲ್ಲದೆ, ಗೋಪಾಲರಾಯ 'ನಟಶ್ರೇಷ್ಠ'ನೆಂದು ಬಿರುದು ಪಡೆದಿದ್ದ. ಅವನಿಗೊಬ್ಬಳು ಅಗ್ನಿಸಾಕ್ಷಿಯಾಗಿ ಕೈ ಹಿಡಿದ ಹೆಂಡತಿ ಇದ್ದಳು. ಆದರೂ ಚಿನ್ನಾಸಾನಿಯ ಮೇಲಣ ಮೋಹ ಮಾಸಿರಲಿಲ್ಲ. ಚಿನ್ನಾಸಾನಿಗೂ ಅವನ ಮೇಲೆ ಅಮಿತವಾದ ಪ್ರೀತಿ. ಈ ಜನ್ಮ ಹಾಳಾಯಿತು. ಮುಂದಿನ ಜನ್ಮಕ್ಕಾದರೂ ಗೋಪಾಲರಾಯನನ್ನೇ ಪತಿಯಾಗಿ ಪಡೆಯುವ ಭಾಗ್ಯ ಲಭಿಸಲೆಂಬ ಆಶಾವಾದಿತನ ಅವಳದು. ಆದರೆ ಸದ್ಯದಲ್ಲಿ ಯಾವ ಕಾರಣದಿಂದಲೂ ತನ್ನಿಂದ ಗೋಪಾಲರಾಯನ ಹೆಂಡತಿಯಾಗಿ ಅನ್ಯಾಯವಾಗಬಾರದು. ಇಷ್ಟಕ್ಕೂ ತಾನು ಶುದ್ಧ ಕನ್ಯೆಯೇನಲ್ಲ ! ಹೇಳಿ ಕೇಳಿ ವೇಶ್ಯೆ, ಹಣಕ್ಕಾಗಿ ಅನ್ಯರಿಗೆ ಸೆರಗು ಹಾಸಿದವಳು. ಎಂಜಲನ್ನು ಹೃದಯೇಶ್ವರನಿಗೆ ಉಣಬಡಿಸಬಾರದು. ತನ್ನಿಂದ ತನ್ನ ಗುರುವಿನ ಕೀರ್ತಿಗೂ ಕಳಂಕ ತಟ್ಟದಿರಲಿ, ಅಪಖ್ಯಾತಿ ಪ್ರಾಪ್ತವಾಗದಿರಲಿ. ಆಗಬಹುದಾದ ಭೀಕರ ಯುದ್ಧವೊಂದು ತನ್ನಿಂದ ತಪ್ಪಿತು. ಸಂಧಿ ಏರ್ಪಟ್ಟು, ಉಭಯ ರಾಷ್ಟ್ರಗಳಲ್ಲೂ ಶಾಂತಿ ನೆಲೆಸಿತು. ಆ ಪುಣ್ಯದ ಪಾಲು ತನಗೆ ಸಂದುದು ತನ್ನ ಭಾಗ್ಯವಿಶೇಷ. ಇಂದಿಗೆ ತನ್ನ ಕಾರ್ಯ ನೆರವೇರಿತು. ಇನ್ನು ಕೊನೆಯ ಯಾತ್ರೆಗೆ ಸಿದ್ಧತೆಗಳಾಗಬೇಕು. ಶ್ರೀಶೈಲ ಮಲ್ಲಿಕಾರ್ಜುನ ಸ್ವಾಮಿಗೆ ರುದ್ರಾಕ್ಷ ಮಂಟಪದ ಉತ್ಸವ, ಒಂದು ಲಕ್ಷ ಹೊನ್ನು ಕಾಣಿಕೆ, ಜಗನ್ಮಾತೆ ಭ್ರಮರಾಂಬ ಹೆಸರಿನಲ್ಲಿ ಸಹಸ್ರ ಸುವಾಸಿನಿಯರಿಗೆ – ಪ್ರತಿಯೊಬ್ಬ ಮುತ್ತೈದೆಗೂ ಒಂದೊಂದು ಸೀರೆ, ಕುಪ್ಪಸ ಮೊರದ ಬಾಗಿನ, ಹತ್ತು ರೂಪಾಯಿ ದಕ್ಷಿಣೆ, ಹೂವು ಹಣ್ಣು ಅರಿಶಿಣ ಕುಂಕುಮ ಮೊದಲಾದ ಮಂಗಲದ್ರವ್ಯಗಳ ಕೊಡುಗೆ – ಹೀಗೆ ಸಕಲರಿಗಿತ್ತು ಸಕಲ ಸುವಾಸಿನಿಯರಿಂದಲೂ ಆಶೀರ್ವದಿತಳಾಗಿ, ನೆರೆದಿದ್ದ ಜನಕೋಟಿಗೆ ಔತಣವೇರ್ಪಡಿಸಿ ಮುಗಿಸಿ, ಅಂತ್ಯದಲ್ಲಿ ತನಗಾಗಿ ನಿರ್ಮಿಸಿಕೊಂಡಿದ್ದ ಪರ್ಣಕುಟಿಯಲ್ಲಿ ಯಜ್ಞೇಶ್ವರನಿಗೆ ಪೂರ್ಣಾಹುತಿಯನ್ನು ಕೊಡುತ್ತಾ ತನ್ನನ್ನೇ ತಾನು ಅಗ್ನಿದೇವನಿಗೆ ಅರ್ಪಿಸಿಕೊಂಡಳು. ಅಗ್ನಿಕುಂಡಕ್ಕೆ ಸುರಿದ ಆಜ್ಯ ಪರ್ಣಕುಟಿ ಮತ್ತು ಮೈಮೇಲೆಲ್ಲಾ ಪ್ರೋಕ್ಷಿತವಾಗಿ ಭುಗಿಲೆದ್ದ ಮಹಾಜ್ವಾಲೆಯಲ್ಲಿ ಇಲ್ಲವಾದಳು ಆ ತಾಯಿ.

ಇಂತಹ ದುರಂತ ವಸ್ತು ವಿನ್ಯಾಸವುಳ್ಳ ಸುಂದರ ಕಲಾಕೃತಿ ಚಿನ್ನಾ.

**ಕಳ್ಳರಕೂಟ***

ಕಳ್ಳರಕೂಟ ಒಂದು ಸಾಮಾಜಿಕ ಕಾದಂಬರಿ. ಮಿನಿ ಕಾದಂಬರಿ. ಇದನ್ನು ಕಾದಂಬರಿ ಅನ್ನುವುದಕ್ಕಿಂತ ಒಂದು ನೀಳ್ಗತೆ ಎಂದರೂ ಒಪ್ಪುತ್ತದೆ. ಇದರಲ್ಲಿ ಸರಾಗವಾಗಿ ಓದಿಕೊಂಡು ಹೋಗುವ ಕಥೆ ಇದೆ. ವಸ್ತುವಿನ್ಯಾಸ, ಮನಸ್ಸನ್ನು ಸೆರೆ ಹಿಡಿಯುವ ಸನ್ನಿವೇಶ, ಸಂಭಾಷಣೆಯಲ್ಲಿನ ಭಾವಾವೇಶ ಇವು ಓದುಗರನ್ನು ಮೋಹಮುಗ್ಧರನ್ನಾಗಿಸುತ್ತವೆ. ಆ ಕಾರಣದಿಂದಲೇ ೧೯೨೬ರಲ್ಲಿ ಮೂರನೆಯ ಮುದ್ರಣದ ಮದುವಣಿಗನಾಯಿತು ! ಇದರಿಂದಲೇ ಇದರ ಜನಪ್ರಿಯತೆ ವೇದ್ಯಾಗುತ್ತದೆ.

ಕಳ್ಳರ ಕೂಟದ ನಾಯಕ ರಾಮು ! ನಾಯಕಿ ಸುಂದರಿ, ರಾಮು ಭಗ್ನ ಪ್ರಣಯಿ; ಸುಂದರಳದು ವಿರಸ ದಾಂಪತ್ಯ; ಎರಡೂ ದದ್ದವೇ. ಆದರೂ ಹೊರಗೆ ಹಾಕುವಷ್ಟು ಅಥವಾ ಬೀಸಾಡುವಷ್ಟು ಅಪ್ರಯೋಜಕ ಅಲ್ಲ. ರಾಮಸ್ವಾಮಿ ಮತ್ತು ಸುಂದರ ಚಿಕ್ಕಂದಿನಿಂದಲೂ ಜೊತೆಯಲ್ಲೇ ಬೆಳೆದವರು, ಆದರೆ ಹರೆಯದ ದಿನಗಳಲ್ಲಿ ಪರಸ್ಪರ ಅಗಲಿ ದೂರವಾದವರು. ರಾಮಸ್ವಾಮಿಗೆ ಸುಂದರಮ್ಮನನ್ನೇ ಮದುವೆಯಾಗುವ ಇಚ್ಛೆ ಪ್ರಬಲವಾಗಿತು. ಅವಳೂ ಹಾಗೇ ಅಂದುಕೊಂಡಿದ್ದಳು. ಆದರೆ ರಾಮುವಿನ ತಾಯಿ ಸೋದರಿಕೆಯಾದರೂ ಸುಂದರಿ ಬೇಡ ಅಂದಳು. ಹಾಗೆನ್ನಲು ಸುಂದರಿಯ ತಂದೆ ತಾಯಿಗಳು ಕಡು ಬಡವರು ಎಂಬುದೊಂದೇ ಕಾರಣ. ಬಡವರ ಮನೆಯ ಹೆಣ್ಣು ಬೇಡ ಎಂದು ತಿರಸ್ಕರಿಸಿದಳು. ತಾಯಿಯನ್ನು ಮೀರುವ ಧೈರ್ಯ ಮತ್ತು ಸಾಹಸಗಳು ರಾಮುವಿಗಿರಲಿಲ್ಲ. ಅವನು ಮನೆ ಬಿಟ್ಟು ದೇಶಾಂತರ ಹೊರಟು ಹೋದ. ಅನೇಕ ವರ್ಷಗಳವರೆಗೆ ಪತ್ತೆ ಆಗಲಿಲ್ಲ. ಅವನ ತಾಯಿಗೆ ದಿನಗಳು ಹತ್ತಿರವಾದವು. ಕಡೆಗೆ ಮಗನ ಕೊರಗಿನಲ್ಲೇ ಕಣ್ಣು ಮುಚ್ಚಿದಳು. ಅವಳ ಮುಪ್ಪಿನ ದಿನಗಳಲ್ಲಿ, ಮರಣದ ವೇಳೆಯಲ್ಲಿ ಅವಳ ನೆರವಿಗಿದ್ದವರು ಸುಂದರಿಯ ತಂದೆ ತಾಯಿಯರೆ. ಸಾಯುವ ಸಮಯದಲ್ಲಿ ಆ ಮುದುಕಿ ತನ್ನ ತಪ್ಪನ್ನು ತಿದ್ದಿಕೊಂಡು ರಾಮುವನ್ನು ಹುಡುಕಿ ಸುಂದರಿಯನ್ನು ಕೊಟ್ಟು ಅವನಿಗೆ ಮದುವೆ ಮಾಡಿ ಎಂದು ಬೇಡಿ ಕಣ್ಣು ಮುಚ್ಚಿದಳು.

ಆದರೆ ರಾಮು ಹಿಂತಿರುಗಲಿಲ್ಲ. ಸೂಚನೆಯೂ ಕಂಡು ಬರಲಿಲ್ಲ. ಸುಂದರಿಗೆ ಹನ್ನೊಂದು ವರ್ಷ ತುಂಬುತ್ತಾ ಬಂತು. ಅವಳು ನೆರೆಯುವುದಕ್ಕೆ ಮುಂಚೆಯೇ ಮದುವೆ ಮಾಡಬೇಕಿತ್ತು. ಇಲ್ಲವಾದರೆ. ಸಮಾಜದ ಬಹಿಷ್ಕಾರ, ಊರ ಜನರ ಭರ್ತ್ಸನೆಗಳಿಗೆ ಗುರಿಯಾಗಬೇಕಿತ್ತು. ಹೀಗೆಂದುಕೊಳ್ಳುವಷ್ಟರಲ್ಲಿ ಸುಂದರಿ ಮೈನೆರೆದಳು. ಅನಂತರವಂತೂ ಕರ್ಣಕಠೋರ ನುಡಿಗಳು : 'ಇವಳು ರಾಮನನ್ನು ಕಟ್ಟಿಕೊಂಡು ಓಡಿ ಹೋಗ್ತಾಳಂತೆ !' . . .ಇಲ್ಲ ಇವಳನ್ನು ಬಸವಿ ಬಿಡ್ತಾರೆ ಕಣ್ರೋ. . .' ಹಾಗೆ ಹೀಗೆ ಆಡಿಕೊಳ್ಳತೊಡಗಿದರು. ಜನರ ಕಾಟ ತಡೆಯಲಾರದೆ ಅವಳ ತಂದೆ ಬೆಂಗಳೂರಲ್ಲಿ ಓದುತ್ತಿದ್ದ ಕೃಷ್ಣಮೂರ್ತಿ ಎಂಬುವವನನ್ನು ಪೂಸಿಮಾಡಿ ಮೈಸೂರಿಗೆ ಕರೆ ತಂದು ಸುಂದರಿಯ ಕೊರಳಿಗೆ ತಾಳಿ ಕಟ್ಟಿಸಿದ. ಅವನು ಕೊಟ್ಟ ತೈಲಿ ಹಣಕ್ಕಾಗಿ ಹುಡುಗ ಮೈನೆರೆದಿದ್ದರೂ ಆ ಹುಡುಗಿಯನ್ನು ಮದುವೆಯಾದ.

ಕೃಷ್ಣಮೂರ್ತಿ ಉಡಾಳ ! ಪತ್ನಿ ಸುಂದರಿಯನ್ನು ಸರಿಯಾಗಿ ನಡೆಸಿಕೊಳ್ಳಲಿಲ್ಲ. ತಾನಿದ್ದ ವರುಣದಲ್ಲಿ ಒಂದು ಇಸ್ಪೀಟ್ ಕ್ಲಬ್ ತೆರೆದ. ಅನೇಕ ಜನರನ್ನು 'ಮೆಂಬರ್ ದಾರ್' ಮಾಡಿಕೊಂಡ. ಭರಾಟೆ ಬಿಸಿನೆಸ್ ನಡೆಸಹತ್ತಿದ. ಅವನ ಸೋದರಮಾವ ವೆಂಕಟರಮಣಯ್ಯ ಆ ವರುಣದಲ್ಲಿದ್ದ ಛತ್ರದ ಪಾರುಪತ್ತೇದಾರ ಸೋದರಳಿಯ ಮತ್ತು ಸೋದರಮಾವ. ಇಬ್ಬರದೂ ಒಂದೇ ರೀತಿಯ ಜಾತಕ ! ಈ ಅಡಕತ್ತರಿಯಲ್ಲಿ ಸಿಕ್ಕು ಸೊರಗುತ್ತಿದ್ದ ಗುಂಡಡಕೆ ಎಂದರೆ ಸುಂದರಿ. ಹಿರಿಯರ ವಾತ್ಸಲ್ಯವನ್ನಾಗಲಿ, ಗಂಡನ ಪ್ರೀತಿಯನ್ನಾಗಲಿ ಕಾಣದ ಆ ಹೆಣ್ಣು, ಕಣ್ಣೀರಿನಲ್ಲೇ ಕೈತೊಳೆಯುತ್ತಿತ್ತು.

ಹೀಗಿದ್ದಾಗ ಒಂದು ದಿನ ಇದ್ದಕ್ಕಿದ್ದ ಹಾಗೆ ರಾಮಸ್ವಾಮಿ ಕಾಣಿಸಿಕೊಂಡ ! ದೇಶಾಂತರ ಹೋಗಿದ್ದವನು ತನ್ನ ತಾಯಿ ಮತ್ತು ಪ್ರೇಮಿಸಿದ ಹೆಣ್ಣನ್ನು ಹುಡುಕಿಕೊಂಡು ಬಂದ. ಪರಿಸ್ಥಿತಿ ತಿಳಿದು ಹುಚ್ಚನಂತೆ ಅಲೆದಲೆದು ಒಂದು ದಿನ ಛತ್ರದ ಮುಂದೆ ನಿಂತು ಸುಂದರಿ ಕೊಟ್ಟ ಮೊಸರನ್ನ ಉಪ್ಪಿನಕಾಯಿ ಭಿಕ್ಷೆ ಪಡೆದು ಏಕಾಂತದಲ್ಲಿ ತನ್ನನ್ನು ಭೇಟಿಯಾಗಬೇಕೆಂದು ಬೇಡಿದ. ಸುಂದರಿ ಸಮ್ಮತಿಸಿದಳು. ಅವನ ಮನಸ್ಸಮಾಧಾನಕ್ಕಾಗಿ ಅಂದು ರಾತ್ರಿ ಹನ್ನೊಂದು ಗಂಟೆ ವೇಳೆಗೆ ಆ ಛತ್ರದ ಪಕ್ಕದಲ್ಲಿದ್ದ

*ಗಯಟೆಯ ನಾಟಕದ ಕಾದಂಬರಿ ರೂಪ

ತೋಪಿನಲ್ಲಿ, ತನ್ನ ಬಿಡಾರ ಅವನ ಸಂಕೇತ ಸ್ಥಳವಾಯಿತು. ಬಹುದಿನಗಳ ಮೇಲೆ ಸರಿ ರಾತ್ರಿಯ ವೇಳೆಯಲ್ಲಿ ಹಳೆಯ ಪ್ರೇಮಿಗಳಿಬ್ಬರೂ ಭೇಟಿಯಾದರು.

ಆ ಮಧ್ಯೆ ಒಂದು ಘಟನೆ ನಡೆಯಿತು. ಕೃಷ್ಣಮೂರ್ತಿ ಇಸ್ಪೀಟ್ ಕ್ಲಬ್ ನಡೆಸುವ ವಿಚಾರ ಹೇಗೋ ಮೈಸೂರಿನ ಪೋಲೀಸ್ ಅಧಿಕಾರಿಗಳಿಗೆ ತಿಳಿದು ಹೋಯಿತು. ಅವರು ದಫೇದಾರ್ ನರಸಿಂಗರಾವ್ ಜೊತೆಯಲ್ಲಿ ಇಬ್ಬರು ಕಾನ್ಸ್‌ಟೇಬಲ್ ಗಳನ್ನು ಕೊಟ್ಟು ಕಳುಹಿಸಿದ್ದರು. ದಫೇದಾರ್ ಕ್ಲಬ್ ಒಳಗೆ ನುಗ್ಗಿ ಜಪ್ತಿ ಮಾಡಿದ. ಕೃಷ್ಣಮೂರ್ತಿ ಥರಥರಾ ನಡುಗುತ್ತಾ, ನಾಳೆ ಬೆಳಗ್ಗೆ ಒಂದು ನೂರು ರೂಪಾಯಿ ಲಂಚ ಕೊಡುವುದಾಗಿ ದಫೇದಾರನನ್ನು ಮೈಸೂರಿಗೆ ಕಳುಹಿಸಿದ್ದ. ಆದರೆ ನೂರು ರೂಪಾಯಿ ಸಿಗಬೇಕು ಹೇಗೆ ? ತನ್ನ ಮಾವನನ್ನು ಕೇಳಿದ ; ಯಾರು ಯಾರನ್ನೇ ಕೇಳಿದ, ಸಿಗಲಿಲ್ಲ. ಕಡೆಗೆ ಆ ಊರಿಗೆ ಒಬ್ಬ ವ್ಯಕ್ತಿ ಹೊಸದಾಗಿ ಬಂದಿದ್ದಾರೆ. ಛತ್ರದ ಪಕ್ಕದ ತೋಪಿನಲ್ಲಿ ಗುಡಾರ ಹಾಕಿಕೊಂಡಿದ್ದಾನೆ ಎಂಬುದು ತಿಳಿದ ಕೂಡಲೇ ಏನೋ ಹೊಳೆಯಿತು. ಅವನ ಬಿಡಾರಕ್ಕೆ ನುಗ್ಗಿ ಹಣ ಕಳ್ಳತನ ಮಾಡಬೇಕು ಎಂದುಕೊಂಡ. ಅಂದು ರಾತ್ರಿ ೧೦.೩೦ರ ಸುಮಾರಿನಲ್ಲಿ ಅತ್ತ ನಡೆದ ಕಳ್ಳನ ವೇಷದಲ್ಲಿ. ಅಲ್ಲಿ ದೀಪ ಹಚ್ಚಿಕೊಂಡು ರಾಮಸ್ವಾಮಿ ಸುಂದರಿಗಾಗಿ ಕಾಯುತ್ತಿದ್ದ. ಅವನದೊಂದು ನಾಯಿ ಇತ್ತು. ಕೃಷ್ಣಮೂರ್ತಿಯ ಸುಳಿವು ತಿಳಿದು ಬೊಗಳಿತು. ರಾಮು ಸುಂದರಿಯೇ ಬಂದಳೆಂದು ಭಾವಿಸಿ, ಗದ್ದಲ ಆಗದಿರಲಿ, ಅವಳಿಗೆ ನಾಯಿಯಿಂದ ಅಡಚಣೆ ಆಗದಿರಲಿ ಎಂದು ಅದನ್ನು ಸ್ವಲ್ಪ ದೂರ ಕೊಂಡುಹೋಗಿ ಕಟ್ಟಿಹಾಕಿ ಬರಲು ಹೊರಗೆ ಹೋದ. ಆ ಸಮಯವನ್ನೇ ಕಾಯುತ್ತಿದ್ದ ಕೃಷ್ಣಮೂರ್ತಿ ಬಿಡಾರದೊಳಗೆ ನುಸುಳಿ ಅಲ್ಲಿದ್ದ ಸುಮಾರು ೧೫೦ ಬೆಳ್ಳಿ ರೂಪಾಯಿ ಗಳನ್ನು ಗಂಟುಕಟ್ಟಿ ಹೊರಟ, ಇನ್ನೇನು ಬಾಗಿಲ ಬಳಿ ಬರಬೇಕು ಎನ್ನುವಷ್ಟರಲ್ಲಿ ನಾಯಿ ಕಟ್ಟಿ ರಾಮಸ್ವಾಮಿ ಹಿಂತಿರುಗಿದ, ಕೃಷ್ಣಮೂರ್ತಿ ಹೊರಗೆ ಹೋಗಲಾರದೆ ಕೂಡಲೇ ಮಂಚದ ಕೆಳಗೆ ಅವಿತುಕೊಂಡ.

ರಾತ್ರಿ ೧೧ ಗಂಟೆ ಆಯಿತು. ಸುಂದರಿ ಬಂದಳು ರಾಮು ತನ್ನನ್ನು ತಂದುಕೊ ಎಂದು ಒತ್ತಾಯಿಸಿದಳು. ಸುಂದರಿ ತನ್ನ ವ್ಯಥೆಯ ಕಥೆಯನ್ನು ಹೇಳಿದಳು. ಅವಳು ಹೇಳುವ ಕಥೆಯನ್ನೆಲ್ಲಾ ರಾಮುವೂ ಕೇಳಿದ. ಮಂಚನ ಕೆಳಗಿದ್ದ ಅವಳ ಗಂಡನೂ ಕೇಳುತ್ತಿದ್ದ. ಅವರಿಬ್ಬರೂ ಪರಸ್ಪರ ಮೆಚ್ಚಿದ್ದೂ, ಮದುವೆಯಾಗಲು ಆಶಿಸಿದ್ದೂ, ಭಗ್ನವಾದದ್ದೂ ಎಲ್ಲ ಹೇಳಿದಳು. ಆದರೆ ಈಗಾಗಲೇ ಓರ್ವ ಗೃಹಿಣಿಯಾದ ತಾನು ಸ್ವೈರಿಣಿ ಎಂದೆನಿಸಲು ಇಷ್ಟಪಡದೆ, ತನ್ನ ಶೀಲವನ್ನು ಯಾವ ಕಾರಣದಿಂದಲೂ ಹಾಳುಮಾಡಿಕೊಳ್ಳಲಿಚ್ಛಿಸದೆ ರಾಮುವಿಗೆ ಬುದ್ಧಿವಾದ ಹೇಳಿದಳು ತಂಗಿ ಅಣ್ಣನಿಗೆ ತಿಳುವಳಿಕೆ ಕೊಡುವಂತೆ.

ರಾಮು ಅವಳನ್ನು ಭೋಗಿಸಲು ಯತ್ನಿಸಿ ಅವಳ ಮಾತಿನಿಂದ ಪರಿವರ್ತಿತನಾದ. ಇವರಿಬ್ಬರ ಸಂಭಾಷಣೆಯನ್ನು ಕೇಳಿದ ಕೃಷ್ಣಮೂರ್ತಿ ತನ್ನ ತಪ್ಪನ್ನು ತಿದ್ದಿಕೊಂಡ. ತನ್ನ ಪತ್ನಿ ಸುಂದರಿಯ ಬಗೆಗೆ ವಿಶೇಷ ಗೌರವ ಭಾವ ಮೂಡಿತು. ರಾಮು ಬೇರೊಬ್ಬಳನ್ನು ಲಗ್ನವಾಗಿ ಸುಖವಾಗಿದ್ದ.

ಈ ಕಿರು ಕಾದಂಬರಿಯಲ್ಲಿ ಸುಂದರಿ ಒಬ್ಬಳನ್ನು ಬಿಟ್ಟು ಎಲ್ಲರೂ ಕಳ್ಳರೆ ! ಅಪ್ಪ, ಗಂಡ, ಪ್ರೇಮಿ, ಪೊಲೀಸ್, ದಫೇದಾರ ಎಲ್ಲರೂ ಒಂದಲ್ಲ ಒಂದು ವಿಧದಲ್ಲಿ ವಂಚಕರೇ. ಆದರೆ ಭಾರತೀಯ ಸಂಸ್ಕೃತಿಯ ಸಾಕಾರಮೂರ್ತಿಯಾಗಿ ಓದುಗರ ಮೇಲೆ ಪರಿಣಾಮ ಬೀರಿ ನಿಲ್ಲುವವಳು ಸುಂದರಿ ಮಾತ್ರ.

ವಸ್ತು (Theme) ಮತ್ತು ತಂತ್ರ (Technique)ಗಳ ದೃಷ್ಟಿಯಿಂದ ದೇವುಡುರವರ ಪ್ರಯತ್ನ ಹೊಸದು. ವಸ್ತು, ಪ್ರೇಮ, ಸಾಮಾಜಿಕವಾದದ್ದು. ತಂತ್ರದಲ್ಲಿ ಸಿಂಹಾವಲೋಕನ (Flash back) ಕ್ರಮವನ್ನು ಕೈಗೆತ್ತಿಕೊಂಡು ನಡೆಸಿದ್ದಾರೆ. ಆದರೆ ಸಾಮಾಜಿಕ ವಸ್ತು ಅವರ ಒಲವಿನ ವಸ್ತುವಲ್ಲ. ಪೌರಾಣಿಕದಲ್ಲಿರುವ ಪ್ರಭುತ್ವ ಸಾಮಾಜಿಕದಲ್ಲಿಲ್ಲ.

## ೩. ಜಾನಪದ

**ಕರ್ಣಾಟಕ ಸಂಸ್ಕೃತಿ**

ಜಾನಪದ (Folklore) ಇದು ಪ್ರಚಲಿತವಿರುವ ಅಧ್ಯಯನ. ಪ್ರಪಂಚದ ಅನೇಕ ವಿಶ್ವವಿದ್ಯಾಲಯಗಳ ಮಟ್ಟದಲ್ಲೂ ಇದರ ಸಮಗ್ರ ಸಂಗ್ರಹಣ, ವರ್ಗೀಕರಣ ಮತ್ತು ಅಧ್ಯಯನಗಳು ವೈಜ್ಞಾನಿಕವಾಗಿ ನಡೆಯುತ್ತಿವೆ. ಇದಕ್ಕೆ ಮೂಲ ಪ್ರೇರಣೆ ಇಂಗ್ಲಿಷ್ ಮೂಲಕ ನಾವು ಪಡೆದ ಪಾಶ್ಚಾತ್ಯ ವ್ಯವಸ್ಥೆಗಳು ಮತ್ತು ಅದರ ಅಧ್ಯಯನ ವಿಧಾನಗಳು.

ಕನ್ನಡದಲ್ಲಿ ಇದು ವಿಫುಲವಾಗಿ ವ್ಯಾಪಕವಾಗಿ ನಡೆದಿದ್ದರೂ ನಡೆಯುತ್ತಿದ್ದರೂ ಇದಕ್ಕೆ ನಾಮಕರಣ ಮಾಡಲು ಹಲವರು ಜೋಯಿಸರು ಅದರ ನಕ್ಷತ್ರ ಗೋತ್ರ ಸೂತ್ರಗಳನ್ನು ಗುಣಿಸಿ ಹೆಸರು ಸೂಚಿಸಿದ್ದುಂಟು. ಇದರಲ್ಲಿ ಬಿ. ಪುಟ್ಟಸ್ವಾಮಯ್ಯ, ಹಾ. ಮಾ. ನಾಯಕ ಮತ್ತು ಕುವೆಂಪು ಪ್ರಮುಖರು. ಇಂಗ್ಲಿಷಿನ Folklore ಎಂಬುದಕ್ಕೆ ಕನ್ನಡದಲ್ಲಿ 'ಜಾನಪದ' ಎಂಬ ಸಂವಾದಿ ಪದವನ್ನು ಹುಡುಕಿ ಮೊದಲು ಘೋಷಿಸಿದವರು ಬಿ. ಪುಟ್ಟಸ್ವಾಮಯ್ಯನವರು. ೧೫.೦೬.೧೯೬೩ರಲ್ಲಿ ಅವರು ಕ.ರಾ.ಕೃರವರ 'ಹಣತೆ ಉರಿಯುತಿದೆ' ಎಂಬ ಜಾನಪದ ಸಂಗ್ರಹಕ್ಕೆ ಮುನ್ನುಡಿ ಬರೆಯುತ್ತಾ 'ಜಾನಪದ' ಎಂಬ ಹೆಸರನ್ನಿತ್ತರು. ಅದಾದ ಮೂರೂವರೆ ವರ್ಷಗಳ ನಂತರ ಅಂದರೆ ೧೯೬೬ ಡಿಸೆಂಬರ್‌ನಲ್ಲಿ ಹಾ.ಮಾ. ನಾಯಕರು 'ಜಾನಪದ' ಎಂಬ ಹೆಸರನ್ನೇ ಅನುಮೋದಿಸಿ ಸ್ಥಾಪಿಸಿದರು. ಜನಪದದಿಂದ ಬಂದದ್ದು 'ಜಾನಪದ' ಎಂಬುದನ್ನು ಅಷ್ಟಾಗಿ ಒಪ್ಪದ ಕುವೆಂಪುರವರು, ಜನಪದ ಕುರಿತದ್ದು 'ಜಾನಪದೀಯ' ಎಂದಿಟ್ಟರೆ ಹೇಗೆ ? ಉದಾಹರಣೆಗೆ ಪತ್ರಿಕೆಗಳ ಸಂಪಾದಕ ಬರೆದದ್ದು 'ಸಂಪಾದಕೀಯ' ಆದಂತೆ ಎಂದರು. ಆದರೆ ಅವರಿಟ್ಟ ಹೆಸರು ಈ ಜಾನಪದ ಶಿಶುವಿಗೆ ಉಳಿದು ಬರಲಿಲ್ಲ. ಅದೇ ರೀತಿ ಜಾನಪದ ಹಾಡುಗಳಷ್ಟೇ ಮೊದಮೊದಲು ಪ್ರಚಲಿತವಿದ್ದುದರಿಂದ ಅಂದು ಅವುಗಳನ್ನು ಸಂಗ್ರಹಿಸಿದ ಗೊರೂರು, ಗದ್ದಗೀಮಠ, ಕರೀಂಖಾನ್, ಮೊದಲಾದವರು ಆ ಸಂಗ್ರಹಗಳಿಗೆ ಮುನ್ನುಡಿಗಳನ್ನು ಬರೆದ ಬಿ.ಎಂ.ಶ್ರೀ, ಬೇಂದ್ರೆ, ಮಾಸ್ತಿ ಮೊದಲಾದವರು ಜನಪದ ಸಾಹಿತ್ಯ, ಜನಪದ ಗೀತೆ ಎಂಬ ಸೀಮಿತ ಅರ್ಥದಲ್ಲಿ ಕರೆದರು. ಆದರೆ ಮುಂದೆ ನಮ್ಮಲ್ಲಿ ಜಾನಪದ ಅಧ್ಯಯನ ಆರಂಭವಾದ ಮೇಲೆ ಅದರ ವ್ಯಾಪ್ತಿ, ದೀಪ್ತಿಗಳನ್ನರಿತು Folklore ಪದಕ್ಕೆ 'ಜಾನಪದ' ಎಂಬ ಸಮಗ್ರಾರ್ಥದ ಪದ ಹುಡುಕಿದರು. ಮೊದಲು ಹುಡುಕಿದವರು ಬಿ. ಪುಟ್ಟಸ್ವಾಮಯ್ಯ, ಅನಂತರ ಅದನ್ನು ಸ್ಥಾಪಿಸಿದವರು ಹಾ. ಮಾ. ನಾಯಕ.

Folklore ಅನ್ನುವುದು ಇಂಗ್ಲಿಷ್ ಮೂಲಕ ಭಾರತಕ್ಕೆ ಆಮದಾದ ಸರಕಾದರೂ ಅದಕ್ಕೆ ಪಾಶ್ಚಾತ್ಯದಲ್ಲೇ ಹೆಸರಿಡುವ ಬಗೆಗೆ ಸಾಕಷ್ಟು ಚರ್ಚೆ ನಡೆದಿದೆ. ಮೊದಲು ಅದನ್ನು The Popular Antiquities (ಜನಪ್ರಿಯ ಪ್ರಾಚೀನ ನಡವಳಿಕೆಗಳು) ಎಂದು ಕರೆಯುತ್ತಿದ್ದರು. ೧೮೪೬ರಲ್ಲಿ ವಿಲಿಯಂ ಜಾನ್ ಥೋಮ್ಸ್ ಎಂಬುವನು 'Folklore' ಎಂದು ಕರೆದ. ಅದೇ ರೂಢಿಗೆ ಬಂತು.

ಹಿಂದಿಯಲ್ಲೂ ಇದನ್ನು ಲೋಕಾಯನ, ಲೋಕವಿಜ್ಞಾನ, ಲೋಕವಾಙ್ಮಯ ಎಂದು ಕರೆದಿದ್ದಾರೆ. Folk ಎನ್ನುವುದಕ್ಕೆ ಲೋಕ ಎಂದರು ಅವರು. ಆದರೆ 'ಜಾನಪದ' ಎಂಬ ಕನ್ನಡದ ಶಬ್ದ ತುಂಬಾ ಸುಂದರ ಹಾಗೂ ಔಚಿತ್ಯಪೂರ್ಣ ಎನ್ನಿಸುತ್ತದೆ. ಇದನ್ನು ಮೊದಲು ಕೊಟ್ಟ ಬಿ. ಪುಟ್ಟಸ್ವಾಮಯ್ಯನವರು ಎಲ್ಲ ಕನ್ನಡಿಗರ ಕೃತಜ್ಞತೆಗೆ ಪಾತ್ರರು.

ತನ್ನ ಕಕ್ಷೆಗೆ ಬರುವ ಸಮಗ್ರ ಜಾನಪದೀಯ ಅಂಶಗಳನ್ನು ವ್ಯಾಪಕ ರೂಪದಲ್ಲಿ ಗ್ರಹಿಸಿ, ಅಧ್ಯಯನ ನಡೆಸಿದವರು ದೇವುಡು ನರಸಿಂಹಶಾಸ್ತ್ರಿಗಳು. ಶ್ರೀಯುತರು ೧೯೩೩ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಆಶ್ರಯದಲ್ಲಿ ವಿಶೇಷೋಪನ್ಯಾಸ ವನ್ನು ಮಾಡುವ ಸಂದರ್ಭದಲ್ಲಿ 'ಜಾನಪದ'ವನ್ನು ಆರಿಸಿಕೊಂಡರು. ಆದರೆ Folkloreಗೆ ಅವರು 'ಸಂಸ್ಕೃತಿ' ಎಂದು ಕರೆದರು. ಹೇಳುತ್ತಾರೆ : 'ಜನಾಂಗದ ಕುಲಕುಲಗಳ ಸಂಸ್ಕೃತಿಯನ್ನು ಪಾಮರ ಸಂಸ್ಕೃತಿ, ವಾಸ್ತವ್ಯ ಸಂಸ್ಕೃತಿ, ಜನತೆಯ ಸಂಸ್ಕೃತಿಯೆಂದೂ ಕರೆಯುವುದುಂಟು. (ಇದನ್ನು ಇಂಗ್ಲಿಷಿನಲ್ಲಿ Folklore ಎಂದೂ,) ಜರ್ಮನ್ ಭಾಷೆಯಲ್ಲಿ Culture ಎಂದೂ ಕರೆಯುತ್ತಾರೆ. ಇವುಗಳಲ್ಲಿ ಎರಡನೆಯದೇ ಸರಿಯೆಂದು ನಮ್ಮ ಅಭಿಪ್ರಾಯ[೮].

ಆದರೆ ಅವರು ಸೂಚಿಸಿದ ಹೆಸರು ಸೂಕ್ತವಲ್ಲವಾದರೂ ವ್ಯಾಖ್ಯಾನ ವಿಷಯ ವಿಶ್ಲೇಷಣೆ ಮತ್ತು ಕೈಕೊಂಡ ನಿರ್ಧಾರ – ಇವು ಶ್ಲಾಘನೀಯ, 'ಈ ದೇಶದಲ್ಲಿ ಜೈಮಿನಿ, ರಾಜಶೇಖರ ವಿಳಾಸಗಳಂತಹ ಪ್ರೌಢ ಗ್ರಂಥಗಳನ್ನು ಈ ಕೊನೆಯಿಂದ ಆ ಕೊನೆ ಯವರೆಗೆ ಕಂಠಪಾಠ ಮಾಡಿರುವ ನಿರಕ್ಷರರಿದ್ದಾರೆ; ಚಿಟಿಕೆ ಹೊಡೆಯುವಷ್ಟು ಹೊತ್ತಿನಲ್ಲಿ ಹಾಡು ಲಾವಣಿಗಳನ್ನು ಕಟ್ಟಬಲ್ಲ ಪಾಮರರಿದ್ದಾರೆ, ಸಾವಿರಾರು ನುಡಿಯ ಹಾಡುಗಳು ಇಪ್ಪತ್ತು ಮೂವತ್ತನ್ನು ನಿರಾಯಾಸವಾಗಿ ಚಾಚೂ ತಪ್ಪದೆ, ಇತರರ ಸಹಾಯವಿಲ್ಲದೆ ಬಾಯಲ್ಲಿ ಹೇಳುವ 'ಹೆಣ್ಣು ಹೆಂಗಸ'ರಿದ್ದಾರೆ. ಹೆಸರಾದ ಡಾಕ್ಟರುಗಳು ಕೈಬಿಟ್ಟ ವ್ಯಾಧಿಗಳನ್ನು 'ಘಂಟಿಕಾ ಮಂತ್ರ ಮೂಲಿಕೆ' ಗಳಿಂದ ಗುಣಪಡಿಸಬಲ್ಲ ತಜ್ಞರಿದ್ದಾರೆ. ಇವರೆಲ್ಲರನ್ನೂ ಒಳಗೊಂಡಿರುವ ಜನಾಂಗದಲ್ಲಿ ಪಂಡಿತ ಸಂಸ್ಕೃತಿ, ಪಾಮರ ಸಂಸ್ಕೃತಿ, ಮೇಲಿನವರ ಸಂಸ್ಕೃತಿ, ಕೆಳಗಿನವರ ಸಂಸ್ಕೃತಿ ಎಂದು ವಿಭಾಗ ಮಾಡುವುದು ಸಾಧ್ಯವಿಲ್ಲ. ಅದರಿಂದ ನಾವು ಸಮಷ್ಟಿಯಾಗಿ ಕರ್ನಾಟಕ ಸಂಸ್ಕೃತಿಯನ್ನು ಕುರಿತು ಹೇಳುವೆವು.[೯]

ಹೀಗೆಂದು ಪ್ರತಿಜ್ಞೆಗೈದು ಕೃತಿಯುದ್ದಕ್ಕೂ ಜಾನಪದೀಯ ಅಂಶಗಳನ್ನೇ ಕುರಿತು ಪ್ರಸ್ತಾಪಿಸಿದ್ದಾರೆ. ಆದರೆ ಜಾನಪದ (Folklore) ಕ್ಕೆ ಸಂಬಂಧಿಸಿದ ವ್ಯಾಖ್ಯಾನವೆಂದು ಭ್ರಮಿಸಿ, ಸಂಸ್ಕೃತಿ (Culture) ಎಂದು ವ್ಯಾಖ್ಯಾನ ನೀಡಿದ್ದಾರೆ. ಜಾನಪದ ಗೀತೆಗಳನ್ನು 'ಗಂಡಸರ ಹಾಡುಗಳು', 'ಹೆಂಗಸರ ಹಾಡುಗಳು' ಎಂದು ವಿಭಜಿಸಿ. ಮೊದಲನೆಯವು 'ಸಾಮಾನ್ಯವಾಗಿ ಲಯಪ್ರಧಾನವಾದವು. ಇವುಗಳಲ್ಲಿ ಕುಣಿತವೂ ಸೇರುವುದುಂಟು[೧೦]. . .ಹೆಂಗಸರ ಹಾಡುಗಳು ರಾಗ ಪ್ರಧಾನವಾದವು. ಇಲ್ಲಿ ತಾಳವುಂಟು. ಆದರೂ ಗಂಡಸರ ಹಾಡುಗಳಲ್ಲಿರುವ ತಾಳ ವೈವಿಧ್ಯವೂ ಬಿಗಿಯೂ ಬಿಕ್ಕಟ್ಟು ಇಲ್ಲಿ ಇಲ್ಲವೆಂದರೂ ಒಪ್ಪುವುದು[೧೧] ಎಂದಿದ್ದಾರೆ. ವರ್ಗ (Type) ಮತ್ತು ಆಶಯ (Motif)ಗಳನ್ನು ವಿವರಿಸಿಕೊಡದಿದ್ದರೂ ಜಾನಪದ ಕತೆಗಳನ್ನು ಕುರಿತು ಸಾಕಷ್ಟು ಹೇಳಿದ್ದಾರೆ. ಅದೇ ರೀತಿ ಗಾದೆಗಳು, ಒಗಟುಗಳು, ಆಚಾರ ಸಂಪ್ರದಾಯಗಳು – ಮೊದಲಾದವುಗಳ ಬಗೆಗೆ ವಿಸ್ತಾರ ವ್ಯಾಖ್ಯಾನ ನೀಡಿದ್ದಾರೆ.

೧೯೩೩ರಲ್ಲೇ ಜಾನಪದವನ್ನು ಕುರಿತ ಅಧ್ಯಯನಕ್ಕೆ ಕೈ ಹಾಕಿದ್ದು ಪ್ರಶಂಸನೀಯ.

---

[೮] ಕರ್ನಾಟಕ ಸಂಸ್ಕೃತಿ, ಪು. ೩–೪ (೧೯೬೧ರ ಮುದ್ರಣ)

[೯] ಅದೇ ಪು. ೪–೫

[೧೦] ಅದೇ, ಅಡಿ ಟಿಪ್ಪಣಿ ಪು.೨೦

[೧೧] ಅದೇ ಪು. ೬೬

## ೪. ಗದ್ಯಶಿಲ್ಪಿ

ಮನುಷ್ಯ ತಿಂದದ್ದು ಅವನ ತೇಗಿನಲ್ಲಿ ವ್ಯಕ್ತವಾಗುತ್ತೆ. ಅವನಾಡುವ ಮಾತು ಅವನ ಸಂಸ್ಕೃತಿ ಸಂಸ್ಕಾರಗಳನ್ನು ನಿವೇದಿಸುತ್ತೆ. ಅದೇ ರೀತಿ ದೇವುಡುರವರ ಸುಸಂಸ್ಕೃತ ಚೇತನಕ್ಕೆ ಅವರ ಗದ್ಯರಚನೆ ಹಿಡಿದ ಕನ್ನಡಿಯಾಗಿದೆ. 'ವ್ಯಕ್ತಿಯ ಶೀಲವೇ ಶೈಲಿ' ಎನ್ನುತ್ತಾರೆ. ಅದೇ ದೇವುಡುತನ ಎಲ್ಲ ಗದ್ಯ ಕೃತಿಗಳಲ್ಲೂ ಮೈತಳೆದು ನಿಂತಿದೆ. ಇಲ್ಲಿನ ಪುಟಪುಟಗಳಲ್ಲೂ ನಾವು ಅವರನ್ನು ಓದಬಹುದು. ಅಂತಹ ಪಾರದರ್ಶಕ ಅವರ ಹೃದಯ. ಅದಕ್ಕೆ ಜನ್ಮಜನ್ಮಾಂತರಗಳ ಸಂಸ್ಕಾರ, ಪ್ರಾಂಜಲ ಮನಸ್ಸಿನ ಪರಿ ಕಲ್ಪನೆಗಳು, ಪರಿಶುದ್ಧ ವಾತಾವರಣ ಇವೆಲ್ಲ ಕಾರಣ. ದೇವುಡುರವರ ಸಮೃದ್ಧಿಗೆ ಇವು ಸಾಧನೆಗಳೂ ಹೌದು.

'ಗದ್ಯಂ ಕವೀನಾಂ ವದಂತಿ' ಎನ್ನುತ್ತಾರೆ. ಅದು ಉತ್ಪ್ರೇಕ್ಷೆ ಮಾತಲ್ಲ ಅಥವಾ ಭಾವನಾತ್ಮಕ ಹೇಳಿಕೆಯೂ ಅಲ್ಲ. ಸಾಮಾನ್ಯವಾಗಿ ಪದ್ಯ ನರ್ತಿಸಿದರೆ, ಗದ್ಯ ತೆವಳುತ್ತ ನಡೆಯುತ್ತದೆ. ಕವಿಯ ಭಾವವು ಛಂದಸ್ಸಿನ ಚೌಕಟ್ಟಿನಲ್ಲಿ ಸೆರೆಸಿಕ್ಕುವುದರಿಂದ ಪದ್ಯಕ್ಕೊಂದು ಬಗೆಯಲ್ಲಿ ಸಂಯಮ ಪ್ರಾಪ್ತವಾಗುತ್ತದೆ. ಆ ಸೌಲಭ್ಯ ಅದಕ್ಕಿದೆ, ಆದರೆ ಗದ್ಯಕ್ಕಿಲ್ಲ. ಗದ್ಯದಲ್ಲಿ ಭಾವ ಹಿಂಜಿದ ಅರಳೆಯಾಗುತ್ತೆ; ಜಾಳುಜಾಳಾಗುವ ಸಂಭವವೇ ಹೆಚ್ಚು. ಅಲ್ಲಿನಂತೆ ಇಲ್ಲಿ ಭಾವವು ಹರಳುಗೊಳ್ಳು (Crystalize)ವುದಿಲ್ಲ. ಗದ್ಯದಲ್ಲೂ ಪದ್ಯದ ಓಘ, ಓಜಸ್ಸುಗಳನ್ನು ತಂದುಕೊಡುವುದು ಪದ್ಯ ರಚಕನಿಗಿಂತಲೂ ಹೆಚ್ಚು ಕಷ್ಟ ಗದ್ಯ ರಚಕನಿಗೆ. ಆದ್ದರಿಂದ ಅದು ಕವಿಗಳು 'ಓರೆಗಲ್ಲು' !

ಇಂತಹ ಒರೆಗಲ್ಲಿನಲ್ಲಿ ಸಿಕ್ಕಿದಾಗ ಅಪ್ಪಟ ಅಪರಂಜಿಯಾಗಿಯೇ ಒರೆಕೊಡುತ್ತೆ ದೇವುಡುರವರ ಗದ್ಯಶೈಲಿ. ಕೆಲವು ಉದಾ ಹರಣೆಗಳು :

**ಒಂದು ವರ್ಣನೆ**

ಹೊಸ ಇಂದ್ರನಾದ ನಹುಷನ ಆಸ್ಥಾನಕ್ಕೆ ಬರುತ್ತಾಳೆ ಶಚಿ. ಇಂದ್ರಾಣಿಯೆಂದು ಆಡಂಬರವೇನೂ ಇಲ್ಲ. ಶಾಂತಿದೂತ ಳಂತೆ ಬಿಳಿಯ ವಸ್ತ್ರವನ್ನು ಉಟ್ಟಿದ್ದಾಳೆ. ಅವಳ ವೇಷಭೂಷಣಗಳ ಬಣ್ಣನೆ ಹೀಗಿದೆ :

'ಆ ವಸ್ತ್ರವು ಆಕಾಶಮಾರ್ಗದಲ್ಲಿ ಚಂದ್ರಮನ ಐಸಿರಿಯು ದಿಗಂತಗಳವರೆಗೂ ವ್ಯಾಪಿಸಿ ಶೋಭಿಸುತ್ತಿರುವಾಗ ಮೆರೆಯುವ ನಕ್ಷತ್ರಪಥದಂತೆ ವಜ್ರಕಣಶೋಭಿತವಾಗಿದೆ. ಕೆನೆಯ ಬಣ್ಣದ ರವಕೆಯನ್ನು ಧರಿಸಿದ್ದಾಳೆ. ಅದರ ಮೇಲೆ ಚುಮುಕಿಸಿದಂತೆ ಕೆತ್ತಿ ರುವ ನವರತ್ನಗಳು ಮೃಗಶಿರಾ ನಕ್ಷತ್ರ ಪುಂಜದಂತೆ ಥಳಥಳ ಎನ್ನುತ್ತಿವೆ. ಕಿವಿಯಲ್ಲಿರುವ ವಜ್ರದ ಓಲೆಗಳು ಪುನರ್ವಸು ಪುಂಜದ ಯೋಗತಾರೆಯಂತೆ, ಎರಡು ದೀಪಗಳನ್ನು ಇಟ್ಟಂತೆ ಬೆಳಗುತ್ತಿವೆ. ಕೊರಳಲ್ಲಿ ಕಟ್ಟಿಕೊಂಡಿರುವ ತಾಳಿಯು ತನ್ನ ಸುತ್ತಲೂ ಇರುವ ಜೀವರತ್ನಗಳಿಂದ ಪ್ರಕಾಶವಾಗಿ ಮೆರೆಯುತ್ತಿದೆ. ಕೈಯಲ್ಲಿರುವ ರತ್ನದಬಳೆಗಳು ಜಂಗಮದೇಹಕಾಂತಿಯಂತೆ ಹೊಳೆಯುತ್ತಿವೆ. ಎಡಗೈಯ ಬೆರಳಿನಲ್ಲಿ ಹರಳಿನುಂಗುರವೊಂದು. ಅದರ ಹರಳು ಪೂರ್ವಾಕಾಶದಲ್ಲಿ ಚಂದ್ರಮನಿಲ್ಲದಿರುವಾಗ ಮೆರೆಯುವ ಸ್ವಾತೀ ನಕ್ಷತ್ರದಂತೆ ವಿರಾಜಿಸುತ್ತಿದೆ. ನಡುವಿನಲ್ಲಿ ಒಂದು ಸಿಂಹಮೇಖಲೆ, ತಲೆಯಮೇಲೆ ಧರಿಸಿರುವ ರತ್ನಕಿರೀಟವೂ, ಹಣೆಯ ಮೇಲಿರುವ ಜೀವರತ್ನವೂ ಹೊದ್ದಿರುವ ವಿದ್ಯುನ್ಮಾಲಾ ಸುಂದರವಾದ ತೆಳು ಮೋಡದಂತಿರುವ ಹೊದಿಕೆಯೂ ಆಕೆಯ ಅಂತಸ್ತನ್ನು ಉದ್ಘೋಷಿಸುತ್ತಿವೆ.[೧೨]

**ಮತ್ತೊಂದು ಸರಳ ಶೈಲಿಯ ಬಣ್ಣನೆ**

ಹಿಮಾಲಯದ ಪ್ರಾಂತಭೂಮಿ. ದೇವದಾರುಮರುಗಳು ಸಭೆಗೂಡಿ ನಿಂತಿರುವಂತೆ ಬೆಳೆದಿವೆ. ಅಲ್ಲಲ್ಲಿ ಬಂಡೆಗಳ ಮೇಲೆ ಅರಳಿರುವ ಕಲ್ಲು ಹೂವು ಚಳಿಯೆಂದು ಬಂಡೆಗಳು ಹೊದೆದುಕೊಂಡಿರುವ ಚಿತ್ರಕಂಬಳಿಗಳಂತೆ ಇವೆ. ಮಗ್ಗುಲಲ್ಲಿ ಒಂದು ಸಣ್ಣ ನದಿ. ಜುಳಜುಳನೆ ಬಂಡೆಗಳ ನಡುವೆ ಹರಿಯುತ್ತಿದೆ. ಅಲ್ಲಿಯೇ ಬಂಡೆಗಳ ನಡುವೆ ದೈವಕೃತವಾದ ಒಂದು ಜಲಾಶಯ. ಮೇಲಿಂದ ನೀರು ಬರುತ್ತಿದೆ. ಇನ್ನೊಂದು ಮೂಲೆಯಲ್ಲಿ ನೀರು ಹೊರಕ್ಕೆ ಓಡುತ್ತಿದೆ. ನದಿಯ ಈ ಕೊನೆಯಿಂದ ಆ ಕೊನೆಯವರೆಗೂ ದೇವದಾರುಗಳು ಇದ್ದು, ನದಿಯು ಅವುಗಳು ಕಾಲು ತೊಳೆದುಕೊಂಡು ಹೋಗುತ್ತಿರುವಂತೆ ಇದೆ. ನದಿಯ ತಂಪಿನ

---

[೧೨] ಮಹಾಕ್ಷತ್ರಿಯ, ಪು. ೧೬೩–೧೬೪

[೧೩] ಅದೇ ಪು. ೨೪–೨೬

ಜೊತೆಗೆ ದೇವದಾರುವಿನ ಸಣ್ಣ ಪರಿಮಳವೂ ತುಂಬಿ ಗಾಳಿಯು ಸರ್ವವಿಧವಾದ ಶ್ರಮವನ್ನೂ ಪರಿಹರಿಸುವ ಸಖನಂತೆ ಬೀಸು ತ್ತಿದೆ.[೧೩]

**ಪ್ರೌಢಶೈಲಿಗೆ ಇದು ನಿದರ್ಶನ**

‘ಈತನ ಪೂಜಾಸ್ತುತಿಗಳಿಂದ ಮೂರ್ತಿಯು ಸ್ಫುಟವಾಗಿ ಶಿಲ್ಪಿಯ ಕರ್ಮದಿಂದ ಶಿಲೆಯಲ್ಲಿ ಅಭಿವ್ಯಕ್ತವಾಗುವ ಮೂರ್ತಿಯಂತೆ ವ್ಯಕ್ತವಾಗಿ ಪ್ರತ್ಯೇಕವಾಗಿ ತೋರುತ್ತಿದೆ. ಕೊನೆಗೆ ನೋಡಿದರೆ ರುದ್ರ ವೇದಗಳಲ್ಲಿ ಹೇಳಿರುವಂತೆ ಕೆಂಪಗೆ, ಭೀಮಾಕಾರನಾಗಿ, ಸರ್ವಶಸ್ತ್ರಾಸ್ತ್ರಗಳನ್ನೂ ಹಿಡಿದು ನಿಂತಿರುವ ಜಟಾಮಂಡಲ ಸುಂದರಮೂರ್ತಿ, ಭಸ್ಮೋದ್ಧೂಳಿತ ಗಾತ್ರನಾಗಿ ಭಸ್ಮ ತ್ರಿಪುಂಡ್ರ ರಂಜಿತ ಫಾಲಪ್ರದೇಶದಲ್ಲಿ ನಿಮೀಲಿತ ಸುಂದರ ವಿರೂಪಾಕ್ಷದಿಂದ ಲೋಲವಿಲಕ್ಷಣನಾಗಿ, ಜ್ವಾಲಾಮಾಲಾರಹಿತನಾಗಿ ದೇದೀಪ್ಯಮಾನವಾದ ಹವ್ಯವಾಹನನಂತೆ ತೇಜೋವಿರಾಜಮಾನನಾಗಿ ಘೋರನಾಗಿರುವಂತೆ ಕಂಡರೂ ಶಾಂತ ವಾಗಿರುವ ತನುವಿನಂದ ನಯನಮನೋಹರನಾಗಿರುವ ರುದ್ರಮೂರ್ತಿ[೧೪].

**ನೇರ ನಗ್ನ ಶೈಲಿಗೆ ಈ ಭಾಗ ಉತ್ತಮ ಉದಾಹರಣೆ :**

ಮೈತ್ರೇಯಿಯು ಒಳ್ಳೆಯ ಹೆಣ್ಣು. ಗಣೆಯ ಮೇಲೆ ಹತ್ತಿಸಿ ಕುಣಿಯುವಂತಹ ರೂಪವತಿಯಲ್ಲದಿದ್ದರೂ ತೆಗೆದು ಹಾಕುವ ಹೆಣ್ಣಲ್ಲ. ಮುಖದಲ್ಲಿನ ಸೌಮ್ಯತೆಯು ಮನಸ್ಸಿನ ಶಾಂತಿಯ ಗುರುತೆಂಬಂತೆ ಕಾಣಿಸುತ್ತಿರಲು, ಅವಳ ಲಾವಣ್ಯವನ್ನು ಅಷ್ಟು ಗಮನಿಸುವುದಕ್ಕಾಗುತ್ತಿರಲಿಲ್ಲ. ಆಕೆಯ ಮೈ ಬಿಳುಪಾದರೂ ಆ ಬಿಳುಪು ಗೋಡೆಯ ಸುಣ್ಣದ ಬಿಳುಪಲ್ಲ. ಆ ಮುಖಕ್ಕೆ ಹಳದಿಯ ಅರಿಸಿನವನ್ನು ತೊಡದಿದ್ದರೆ ಬಿಳುಪು ಹಳದಿಗಳೆರಡೂ ಸೇರಿ ಏನೋ ಮನೋಹರವಾಗಿದೆ. ಕಣ್ಣುಗಳಲ್ಲಿ ಚಾಂಚಲ್ಯವಿಲ್ಲದೆ ಸ್ಥಿರವಾದ ಏನನ್ನೋ ಹುಡುಕುವುದಕ್ಕೋಸ್ಕರವೇ ಹುಟ್ಟಿದವು ಇವು ಎಂಬಂತಿದೆ. ಆ ವಿಶಾಲವಾದ ಮುಖದಲ್ಲಿ ಮೇಲೆ ಕುರುಳೂ ಕೆಳಗೆ ಹುಬ್ಬೂ ಚೌಕಟ್ಟಾಗಿರಲು ಜೀವನದ ಗುರಿಯನ್ನು ಹಿಡಿದು ಬರೆದಿಟ್ಟಿರುವಂತಿದೆ ಆ ಮುಖ. ನಾಸೆ ದಂಡವು ನೀಳವಾಗಿ ಅಂತಃಕರಣದ ಸರಲತೆಯನ್ನೂ ಋಜುತೆಯನ್ನೂ ಪ್ರತಿಬಿಂಬಿಸುವಂತಿದೆ. ಕೆನ್ನೆಗಳು ಅತಿಕೋಮಲವಾಗಿ ಬಾಲ ಭಾವವನ್ನು ಬಿಂಬಿಸುವಂತಿಲ್ಲ ! ಅಥವಾ ತಮ್ಮ ಬಿಗಿಯನ್ನು ಕಳೆದುಕೊಂಡು ಜೋಲು ಬಿದ್ದು ವೃದ್ಧೆಯ ಗಳಿತ ಭಾವವನ್ನು ತೋರಿಸುತ್ತಿಲ್ಲ, ಗಲ್ಲವು ಮಾತ್ರ ಎದ್ದು ನಿಂತು ಆ ದೇಹದ ಯೌವನ ಪ್ರಾದುರ್ಭಾವವನ್ನು ಸೂಚಿಸುತ್ತಿದೆ. ದೇಹದಲ್ಲಿ ಯೌವನವು ಮೂಡಿ ಏರು ತಗ್ಗುಗಳನ್ನು ಬಿಡಿಸುತ್ತಿದೆ. ಅವಳು ನಿಂತಿರುವ ಭಾವ, ಪ್ರೌಢಿಯ ಸ್ಥಿರ ಭಾಗ್ಯವೂ ಅಲ್ಲ, ಯೌವನದಲ್ಲಿ ಪದಾರ್ಪಣೆ ಮಾಡುತ್ತಿ ರುವ ಷೋಡಶಿಯ ಚಂಚಲ ಭಾವವೂ ಅಲ್ಲ. ಒಟ್ಟಿನಲ್ಲಿ ನೋಡಿದರೆ ಮೈಗಿಂತ ಮನಸ್ಸು ಹೆಚ್ಚಾಗಿ ಬೆಳೆದಿರುವ ಗುರುತುಗಳು ತಪ್ಪದೆ ಕಾಣಿಸುತ್ತಿವೆ. ಮನೋಹರವಾದ ಕುಸುಮವನ್ನು ಬಿಟ್ಟಿದ್ದರೂ ಅದರಿಂದ ಗರ್ವವನ್ನು ತಳೆಯದ ಮರದಂತೆ, ಅವಳು ತಾನು ಯುವತಿಯೆಂಬ ಲಕ್ಷ್ಯವೇ ಇಲ್ಲದವಳಂತೆ ನಿಗರ್ವಿಯಾಗಿದ್ದಾಳೆ.[೧೫]

ಕಳ್ಳಕೂಟ ಕಾದಂಬರಿಯ ದಫೇದಾರ್ ನರಸಿಂಗರಾಯನ ಆಗಮನದ ವರ್ಣನೆ ಹೀಗಿದೆ :

ಮೈಸೂರಿನಿಂದ ಹೊರಟಾಗ ಸುಮಾರು ಒಂದು ಘಂಟೆ. ಕೃಷ್ಣವರ್ಣದ ಆ ಹಿಡಿಂಬ ಸುಂದರಾಕೃತಿಯು ಮಧ್ಯಾಹ್ನದ ಬಿಸಿಲಿನಲ್ಲಿ ಬೆಂದು ಸ್ವಲ್ಪ ವಿವರ್ಣವಾಗಿದ್ದಿತು. ಆದರೂ ಆ ಗಟ್ಟಿ ಬಣ್ಣಕ್ಕೇನೂ ಲೋಪವಿರಲಿಲ್ಲ. ಬೆವರು ಮಾತ್ರ, ಬೆಟ್ಟದಿಂದ ಮಳೆ ಹುಯ್ದು ಮಾರನೇ ದಿನ ಹಗಿನು ಇಳಿದು ಬರುವಂತೆ ತಲೆ ಕತ್ತು ಕಣ್ಣು ಮೊಗ ಎಲ್ಲದರಿಂದಲೂ ಸುರಿದು ಹೋಗು

---

[೧೨] ಮಹಾಕ್ಷತ್ರಿಯ, ಪು. ೧೬೩ – ೧೬೫

[೧೪] ಮಹಾಬ್ರಾಹ್ಮಣ, ಪು. ೩೨

[೧೫] ಮಹಾದರ್ಶನ, ಪು. ೩೩೭ – ೩೮

ತ್ತಿದ್ದಿತು. ಆತನನ್ನು ಹೊತ್ತಿದ್ದ ಆ “ಬೈಕು” ಸಹ ಸ್ವಲ್ಪ ಧೂಲಿ ಧೂಸರವಾಗಿ, ವರ್ಣಾಂತರವನ್ನು ಹೊಂದಿ, ಸ್ವಾಮಿಯ ಮನೋಭಾವವನ್ನೇ ಸೂಚಿಸುತ್ತಿದ್ದಿತು. ದಾರಿಯಲ್ಲಿ ಯಾರೂ ಸಿಕ್ಕಲಿಲ್ಲವಲ್ಲ ಎಂಬುದೊಂದೇ ಇವನಿಗೆ ಮಹಾಕೋಪವನ್ನುಂಟುಮಾಡಿದ್ದಿತು. ಯಾರಿಗೂ ಅದೃಷ್ಟ ತೀರಿರಲಿಲ್ಲ. ಏನು ಮಾಡುವುದು.[೧೬]

ತೇಜಸ್ವೀ ತರುಣ ಮಯೂರನಿಗೆ ಅವನ ಗುರು ಉಪದೇಶಿಸುತ್ತಾನೆ. ಆ ಸಂದರ್ಭದಲ್ಲಿ ಬರುವ ಬೋಧೆ ಇದು. ಇಲ್ಲಿ ದೇವುಡುರವರ ಸಂಸ್ಕೃತ ಭೂಯಿಷ್ಟನಾದ ಆದರೂ ಹೃದ್ಯವಾದ ಗದ್ಯ ಶೈಲಿಯ ಪರಿಚಯ ನಮಗಾಗುತ್ತದೆ. ಅದರ ಪಾಠ ಹೀಗಿದೆ :

‘ಯಾವ ಮಹತ್ಕಾರ್ಯವನ್ನು ಸಾಧಿಸಬೇಕಾದರೂ ದೈವಾನುಕೂಲತೆ ಬೇಕು. ದೈವವು ಒಲಿದಿಲ್ಲದ ಮನುಷ್ಯನು ಏನೂ ಮಾಡಲಾರನು. ಮಾನವನ ಸತತ ಪ್ರಯತ್ನವೂ ದೈವದ ಅನುಗ್ರಹವೂ ಸೇರಿದರೆ ವಿಜಯಲಕ್ಷ್ಮಿಯು ತಾನಾಗಿ ಒಲಿಯುವಳು.

ಅದರಿಂದ ತಿಳಿದವರು ಮೊದಲು ದೈವ ಪ್ರಸಾದವನ್ನು ಸಂಪಾದಿಸಬೇಕೆನ್ನುವರು. ದೈವವು ಸರ್ವವ್ಯಾಪಿಯಾಗಿರುವುದು ನಿಜ. ಆದರೂ ಸಮುದ್ರ ಜಲವು ಉಪ್ಪಾಗಿದ್ದರೂ ಉಪ್ಪು ಬೇಕಾಗಿರುವವನಿಗೆ ಉಪಯೋಗಕ್ಕೆ ಬರದಂತೆ ಮಹತ್ವಾಕಾಂಕ್ಷಿಗೆ ಅಮೂರ್ತ ದೈವದಿಂದ ಏನೂ ಆಗದು. ನಾಮರೂಪಗಳಿಂದ ನಿಬಿಡವಾಗಿರುವ ಈ ಪ್ರಪಂಚದಲ್ಲಿ ನಾಮರೂಪಗಳಿಂದ ಅವಿಚ್ಛಿನ್ನವಾದ ದೈವಶಕ್ತಿಯೇ ಉಪಯೋಗಕಾರಿಯೂ, ಭೂಮಂಡಲವಿಷ್ಟು ವಿಶಾಲವಾಗಿದ್ದರೂ ಮನುಷ್ಯನು ತನ್ನ ವಾಸಕ್ಕೆಂದು ಅಷ್ಟಗಲದ ಭೂಮಿಯೊಂದನ್ನು ಗುರುತಿಸಿಕೊಳ್ಳುವಂತೆ, ಬೇಕಾದವನು ಭೂಮಿಯೊಂದನ್ನು ತೆಗೆದು ನೀರು ತುಂಬಿಕೊಳ್ಳುವಂತೆ, ಎಲ್ಲೆಲ್ಲೂ ಇರುವ ಉಷ್ಣವನ್ನು ಕಾಷ್ಠಾದಿಗಳ ಸಂಯೋಗದಿಂದ ಸ್ಫುಟಮಾಡಿ ಜ್ವಾಲೆಯೆಬ್ಬಿಸುವಂತೆ, ಜಗತ್ಪ್ರಾಣನಾಗಿರುವ ಸಮೀರಣನನ್ನು ಬೀಸಣಿಗೆಯಿಂದ ಬರಮಾಡಿಕೊಳ್ಳುವಂತೆ, ಅನಂತವಾಗಿ ಅವ್ಯಕ್ತವಾಗಿ ಈ ಬ್ರಹ್ಮಾಂಡವೆಲ್ಲವನ್ನೂ ತುಂಬಿರುವ ಪರಾಪರ ವಸ್ತುವನ್ನು ಇಷ್ಟ ದೇವತೆಯ ರೂಪವನ್ನು ಧರಿಸುವಂತೆ ಮಾಡಿಕೊಳ್ಳಬೇಕು. ಉಕ್ಕಿನ ಬೆಟ್ಟವೇ ಎದುರಿಗಿದ್ದರೇನು ? ವೀಣೆಯ ತಂತಿಯ ಸ್ಥಲನಾದವನ್ನಾಗಲಿ ಕತ್ತಿಯ ಕೂರಗಿನ ಧಾರೆಯನ್ನಾಗಲಿ ಕಾಣಬಹುದೇನು ? ಅಗಾಧವಾದ ಮಡುಗಳಿಂದ ಕೂಡಿ ವಿಶಾಲವಾದ ಗಂಭೀರವಾಹಿನಿಯು ಹರಿಯುತ್ತಿದ್ದರೂ, ಮನುಷ್ಯನು ಬೊಗಸೆಯಿಂದಲ್ಲವೆ ನೀರು ಕುಡಿಯುವುದು ? ಅದರಂತೆ ಮೂರ್ತ ಪ್ರಪಂಚದಲ್ಲಿ ಸಕಾಯ ಕರ್ಮ ಮಾಡುವವರು ದೈವವನ್ನು ಮೂರ್ತಿ ರೂಪದಿಂದಲೇ ಕಾಣಬೇಕು. ಚಳಿಯಡುಗುವುದಕ್ಕೆ ಬಿಸಿಲು ಸಾಕಾದರೂ ಬೆಂಕಿಯಂತೆ ಸುಡಬೇಕಾದರೆ ಭೂತಗನ್ನಡಿಯ ಉಪಾಧಿಯು ಬೇಕಲ್ಲವೇ ? ಹಾಗೆಯೇ ಲೋಕದ ಸಾಮಾನ್ಯ ಸ್ಥಿತಿಗೆ ಅಮೂರ್ತವಾಗಿರುವ ದೈವದ ಸ್ಥಿತಿಯು ಸಾಕಾಗಿದ್ದರೂ ವಿಶೇಷವಾದ ಕಾರ್ಯಗಳು ಆಗಬೇಕಾಗಿದ್ದರೆ ಅಪಾರವಾದ ದೈವಶಕ್ತಿಯ ಒಂದು ವಿಶೇಷವಾದ ಆವಿರ್ಭಾವವು ಬೇಕಾಗುವುದು. ದಿನ ದಿನಕ್ಕೆ ಮನೆಯಲ್ಲಿರುವ ಪದಾರ್ಥಗಳೇ ಸಾಕಾದರೂ ವಿಶೇಷ ದಿನಗಳಲ್ಲಿ ಹೊರಗಿನಿಂದ ತರಬೇಕಾಗಿರುವುದಿಲ್ಲವೆ ? ಅದರಂತೆ ನೀನು ಮಾಡಬೇಕಾಗಿರುವ ಈ ಮಹಾತ್ಕಾರ್ಯಕ್ಕೆ ದೈವಾನುಗ್ರಹದ ಬೆಂಬಲವು ಸಿಕ್ಕದೇ ಹೋದರೆ ನಿನ್ನ ಪ್ರಯತ್ನಗಳೆಲ್ಲವೂ ಗಾಳಿಯನ್ನು ಗುದ್ದಿದಂತಾಗುವುದು, ಬೂದಿ ಯಲ್ಲಿ ಹೋಮ ಮಾಡಿದಂತಾಗುವುದು, ಹೊಳೆಯಲ್ಲಿ ಹುಳಿಯನ್ನು ತೇದಂತಾಗುವುದು. ಅದರಿಂದ ನೀನೂ ಒಂದು ದೈವವ ನ್ನಾರಾಧಿಸಿ ಪ್ರಸಾದವನ್ನು ಪಡೆ. ಆಮೇಲೆ ನಿನ್ನ ಕಾರ್ಯಗಳೆಲ್ಲವೂ ಹೂವಿನ ಸರವೆತ್ತಿದಂತಾಗುವುದು.[೧೭]

'ಅನ್ನವು ಯಾರಿಗೆ ಬೇಡ ? ಹಾಗೆಂದು ಅದಕ್ಕೆ ಒಂದೇ ರೂಪವೇನು ? ಹಾಗೆ ಅನ್ನವು ಒಬ್ಬೊಬ್ಬರಿಗೆ ಒಂದೊಂದು ರೂಪವಾಗಿದ್ದರೂ ತಿಂದವರಿಗೆ ತೃಪ್ತಿಯನ್ನು ಕೊಡುವುದೆಂದು ಅದಕ್ಕೆ ಗೌರವ. ಅದು ಎಲ್ಲರಿಗೂ ಬೇಕಾಗಿರುವುದೂ ಅದೇ

---

[೧೭] ಮಯೂರ, ಪು. ೨೯–೭೯

ಕಾರಣದಿಂದಲೇ. ಕೆಲವು ಪ್ರಾಣಿಗಳಿಗೆ ಮಾಂಸವು ಅನ್ನ, ಕೆಲವಕ್ಕೆ ಹುಲ್ಲು ಅನ್ನ. ಹೀಗೆ ರೂಪದಿಂದ ಬೇರೆ ಬೇರೆಯಾದರೂ ಎಲ್ಲರಿಗೂ ಅನ್ನವು ಒಂದೇ ಹೇಗೆಯೋ, ಹಾಗೆಯೇ ಧರ್ಮವು ಆಚಾರದಲ್ಲಿ ಬೇರೆ ಬೇರೆಯಾದರೂ ಮೇಲಕ್ಕೆ ಏರಲು ಬೇಕಾಗುವ ಏಣಿಯೆಂದು ಎಲ್ಲರಿಗೂ ಬೇಕಾಗುವುದು. ಹೀಗೆ ವ್ಯವಹಾರದಲ್ಲಿ ಕಾಣುವ ಸತ್ಯವು ಧರ್ಮದ ಅನುಷ್ಠಾನದಿಂದ ಕಾಣುವುದು !. . .

ಧರ್ಮವು ಚೋದನಾತ್ಮಕವಾದುದು ಎಂದರೆ ಇದೇ ಎಲ್ಲರನ್ನೂ ಕಾರ್ಯಪರನನ್ನಾಗಿ ಮಾಡುವುದು. . .ಲೋಕದ ಲ್ಲಿರುವ ನೀರೆಲ್ಲವೂ ಮಳೆಯಿಂದಲೇ ಬಂದುದು. ಹಾಗೆಯೇ ಒಳ್ಳೆಯದಾಗಲಿ ಕೆಟ್ಟುದಾಗಲಿ ಎಲ್ಲಕ್ಕೂ ಧರ್ಮವೇ ಚೋದಕವು. ನೀರು ಮೇಲಿನಿಂದ ಇಳಿಯುವಾಗ ಅದರಲ್ಲಿ ವಾಸನೆಯಾಗಲಿ, ರುಚಿಯಾಗಲಿ ಇಲ್ಲದಿದ್ದರೂ, ಭೂಮಿಯಲ್ಲಿ ರುಚಿಯೂ ವಾಸನೆಯೂ ಇಲ್ಲದಿರುವ ನೀರು ಉಂಟೇನು ? ಹಾಗೆ ಧರ್ಮವೇ ಪ್ರೇರಿಸಿದ್ದರೂ ಕಾರ್ಯವು ಆಗುವಾಗ ಕಾರ್ಯಕರ್ತನಲ್ಲಿ ರುವ ಸತ್ವರಜಸ್ತಮೋ ಗುಣಗಳ ಸಂಸರ್ಗದಿಂದ ಧರ್ಮಾಧರ್ಮಗಳು ಏರ್ಪಡುವುವು. . .ಧರ್ಮವು ಬೇಕು ಎನ್ನುವವನು ಮೊದಲು ಅಂತರಂಗ ಶುದ್ಧಿಯನ್ನು ಸಂಪಾದಿಸಬೇಕು. ಶುದ್ಧವಲ್ಲದ ಅಂತರಂಗದಲ್ಲಿ ತೋರುವುದೆಲ್ಲ ಅಧರ್ಮವೇ. ಅಂತರಂಗ ಶುದ್ಧಿಯು ದೇಹವೂ, ಮನಸ್ಸೂ ಸರಿಯಾಗಿರುವಾಗ ಮಾತ್ರ ಸಾಧ್ಯವು. ಆದುದರಿಂದ ಆಹಾರ, ವಿಹಾರ, ವಿಚಾರ, ವ್ಯವಹಾರ – ನಾಲ್ಕೂ ಶುದ್ಧಿಯಾಗಿದ್ದರೆ ಮಾತ್ರ ಅಂತರಂಗ ಶುದ್ಧಿಯು. ಅದರಿಂದ ಧರ್ಮಕಾಯನಾದವನು ಈ ನಾಲ್ಕರಲ್ಲೂ ವಿವೇಕವುಳ್ಳವ ನಾಗಬೇಕು. ವಿವೇಕವೆಂದರೆ ಸತ್ವ ಗುಣವನ್ನು ಪೋಷಿಸಿ, ಮಿಕ್ಕೆರಡನ್ನೂ ತುಳಿಯುವಂತಹ ಬೇಕು ಬೇಡಗಳ ಜ್ಞಾನ, ಇದನ್ನು ಸಂಪಾದಿಸಿಕೊಳ್ಳಲು ಎರಡು ಹಾದಿ; ಒಂದು ತನ್ನ ಅನುಭವವೆಂಬ ಕಷ್ಟದ ಹಾದಿ; ಇನ್ನೊಂದು ಬಲ್ಲವರ ಉಪದೇಶವೆಂಬ

ಸುಲಭದ ಹಾದಿ. ಆ ಉಪದೇಶವು ಸ್ವಾರ್ಥವಿಲ್ಲದೆ ರೋಗನಿವಾರಕವಾದ ಔಷಧದಂತೆ ಅನುಭವ ಸಿದ್ಧವಾಗಿದ್ದರೆ ಮಾತ್ರ ಶಾಸ್ತ್ರವಾಗುವುದು.

ಸತ್ಯವು ನೇರವಾಗಿ ಏಕೆ ತಿಳಿಯಬಾರದು ಎನ್ನುವಿರೇನೋ ? ಹಾಲು ಇಟ್ಟಿದ್ದ ಕಡೆಯೇ ಕೆನೆ ಕಟ್ಟುವಂತೆ ಮನಸ್ಸು ಬುದ್ಧಿಗಳು ತಮ್ಮ ಅಲ್ಪತ್ವದಿಂದ ಅಜ್ಞಾನದ ಮುಸುಕನ್ನು ಎಳೆದುಕೊಳ್ಳುತ್ತಿರುವುವು. ಆಗ ಸತ್ಯವು ಎದುರು ನಿಂತರೂ ಮುಚ್ಚಿದ ಕಣ್ಣಿಗೆ ಕಂಡ ರೂಪದಂತೆ ಆಗುವುದು. ಅಲ್ಲದೆ, ಸತ್ಯವು ಕೂಡ ಕಲಾತ್ಮಕವಾದ ಜಗತ್ತಿನಲ್ಲಿ ಕಾಣುವಾಗ ಯೋಗಮಾಯೆಯ ಛಾಯೆಗೆ ಒಳಪಟ್ಟಿರುವುದರಿಂದ ಅದೇ ಥಟ್ಟನೆ  ಕಾಣದಾಗುವುದು. ಅದರಿಂದಲೇ ಸತ್ಯಧರ್ಮಗಳಿಗೆ ಚಿನ್ನದ ಪಾತ್ರೆಯನ್ನು ಮುಚ್ಚಿದೆಯೆಂದು ವೇದಗಳಲ್ಲಿ ಹೇಳಿರುವುದು ಅದನ್ನು, ಆ ಪಾತ್ರೆಯನ್ನು ಪೂಷಾದೇವನೊಬ್ಬನು ತೆಗೆಯಬಲ್ಲನು. ಒಮ್ಮೆ ಆತನ ದಯೆಯಿಂದ ಸತ್ಯಧರ್ಮಗಳ ದರ್ಶನವಾದರೆ, ಅದು ಎಂದಿಗೂ ಮರೆಯುವುದಿಲ್ಲ.[೧೮]

ಕಣ್ಣಿಗೆ ಕಟ್ಟುವ ಮನಕ್ಕೆ ಕಾವ್ಯಪ್ರತಿಮೆ (Poetic Images)ಗಳಿಂದ ಕೃತಿಗಳ ಕಮನೀಯತೆ ಹೆಚ್ಚಿದೆ. ಅಲ್ಲಿ ಬರುವ ಉಪಮೆಗಳಂತೂ ಅತ್ಯಂತ ಮನೋಜ್ಞವಾಗಿವೆ. ಅಂತೆಯೇ ಅವರ ಸಂಭಾಷಣೆಗೆ ಇದೊಂದು ಗದ್ಯಖಂಡ ಸಾಕು. ನೋಡಿ :

'ರಾಮು ನನ್ನನ್ನು ಬರಹೇಳಿದುದೇಕೆ ?'

'ಸುಂದರಾ ! ನನ್ನ ಆಸೆ !'

'ನನಗೆ ಮದುವೆಯಾಗಿದೆ, ನಾನೀಗ ನಿನಗೆ ಪರಸ್ತ್ರೀ'

'ಹಾಗಾದರೆ ಇಲ್ಲಿಗೆ ಬಂದೆ ಏಕೆ ?'

---

[೧೮] ಮಹಾಕ್ಷತ್ರಿಯ ಪು. ೧೧೨-೧೧೪

'ನಾನು ಬಂದದ್ದು ಸ್ವೈರಣಿಯಂತಲ್ಲ ; ಸೋದರಿಯಂತೆ, ನೀನು ಬೇರೆ ಭಾವಿಸುವುದಾದರೆ ಇದೋ ಹೊರಟೆ ?'

'ಇಲ್ಲ ಇಲ್ಲ, ಸುಂದರ ನೀನು ಕುಳಿತುಕೋ. ನನ್ನ ಎರಡು ಮಾತು ಕೇಳಿ ಹೊರಟು ಹೋಗುವೆಯಂತೆ ಕುಳಿತುಕೋ. . . ನಿನ್ನೆಯ ದಿನ ನೇನೆಂದಂತೆ ತಪ್ಪು ನನ್ನದೇ ಸುಂದರ ! ಅಮ್ಮನ ಮಾತು ನಾನೇಕೆ ಮೀರಬಾರದಾಗಿದ್ದಿತು ? ಮೀರಿದ್ದರೆ ನಾವಿಬ್ಬರೂ ಗಂಡ ಹೆಂಡಿರಾಗಿ ಎಷ್ಟು ಸುಖವಾಗಿರಬಹುದಾಗಿದ್ದಿತು ? ನಾನು ನಿನ್ನೆಯೇ ಹೇಳಲಿಲ್ಲವೇ ? ಕಳೆದು ಹೋದದ್ದನ್ನು ಕೆಣಕಬೇಡವೆಂದು ! ಮತ್ತೇಕೆ ? ಈಗ ಇಷ್ಟು ಹೇಳುವವನು ನೀನಿರುವೆಡೆಯನ್ನು ತಿಳಿಸದೆ ಹೊರಟು ಹೋದೆಯೇಕೆ ? ನಾನು ಕೊನೆಗೆ ಅಮ್ಮನನ್ನೂ, ಅಯ್ಯನನ್ನೂ ಒಪ್ಪಿಸಿದ್ದೆ. ಅವರೂ ನನ್ನನ್ನು ನಿನಗೆ ಕೊಡುವುದಕ್ಕೆ ಒಪಿದ್ದರು.'

'ನನಗೆ ಹುಚ್ಚು ಹಿಡಿದಂತಾಯಿತು ಸುಂದರ ! ಅಮ್ಮ ಆಗಕೂಡದೆಂದು ಹಟ ಹಿಡಿದಳು. ಅಯ್ಯನು ನೀನುಂಟು ನಿನ್ನ ಅಮ್ಮ ಉಂಟು ಎಂದುಬಿಟ್ಟ. ಮಾವನಿಗೆ ಮೊದಲೇ ಆಗದು. ಅತ್ತೆಗೆ ಅಮ್ಮನ ಮೇಲೆ ಕೋಪ' ಇನ್ನಾಗುವುದೆಂತು ? ತಡೆಯಲಾರದ ದುಃಖದಲ್ಲಿ ಪ್ರಾಣವನ್ನೇ ಕಳೆದುಕೊಳ್ಳಬೇಕೆಂದಿದ್ದೆ. . .ದೇಶಾಂತರ ಹೊರಟು ಹೋದೆ. ಎರಡು ವರ್ಷದ ದಿನ ಹುಚ್ಚು ಹಿಡಿದವನಂತೆ ಅಲೆದುಬಿಟ್ಟೆ. ದಿನವೂ ಬೆಳಗಾಗುತ್ತಿದ್ದಿತು, ಸಂಜೆಯಾಗುತ್ತಿದ್ದಿತು. ನನಗೆ ತಿಳಿಯುತ್ತಿದ್ದುದು ಅಷ್ಟೆ. . .ಆವೊತ್ತಿಗೆ ನಿನಗೆ ಮದುವೆಯಾಗಿ ಎಂಟು ದಿನವಾಗಿತ್ತಂತೆ !'

'ಹೌದು ರಾಮು, ನೀನೂ ದೇಶಾಂತರ ಹೋದೆ. ನಾನೂ ಸನ್ನಿಯಾಗಿ ಆರು ತಿಂಗಳು ಹಾಸಿಗೆ ಹತ್ತಿ ಬಿದ್ದಿದ್ದೆ. . .ಅದೇ ಮೂಲವಾಗಿ ಅಮ್ಮನು ಕೊರಗಿ ಪ್ರಾಣಬಿಟ್ಟಳು. . .ನೆರೆಹೊರೆಯವರೆಲ್ಲರೂ 'ಬಸವಿ ಬಿಡ್ತಾರೆ ಕಾಣಿರೋ. ಹುಡುಗಿ ಚೆನ್ನಾಗಿದೆ' ಎನ್ನುವರು. ಅಪ್ಪನು ಸೈರಿಸಲಾಗದೆ ಕೊನೆಗೆ ಬೆಂಗಳೂರಿಗೆ ಹೋಗಿ ಅಲ್ಲಿ ಓದುತಿದ್ದ ಯಾವುದೋ ಊರಿನವನೊಬ್ಬನನ್ನು ನೋಡಿಕೊಂಡು ಬಂದನು. ಅಪ್ಪನು ಕೊಟ್ಟ ತೈಲಿ ಹಣಕ್ಕಾಗಿ ಅವನು ಮದುವೆಯಾದನು !'

'ಸುಂದರ, ಹೋಗಲಿ ನೀವು ಗಂಡ ಹೆಂಡಿರು ಸುಖವಾಗಿದ್ದೀರಾ ?'

'ನೀನೀ ಪ್ರಶ್ನೆಯನ್ನು ಕೇಳುವೆಯೆಂದು ನನಗೆ ಮೊದಲೇ ಗೊತ್ತು.

ಆದರೆ ಆ ಪ್ರಶ್ನೆಗೆ ಉತ್ತರವನ್ನು ಹೇಳುವುದು ನನಗೆ ಸಮ್ಮತವಿಲ್ಲ.'

. . .

'ಸುಂದರ, ನಿನ್ನ ಆಳುಗಳಿಂದ ನಿನ್ನ ಅಸ್ಥಿಗತಿಗಳನ್ನೆಲ್ಲಾ ತಿಳಿದುಕೊಂಡೆ. ನೀನು ಹಗಲಿರುಳೆನ್ನದೆ ಕಣ್ಣೀರಿನಲ್ಲಿ ಕೈ ತೊಳೆಯುತ್ತಿರುವುದೂ ತಿಳಿಯಿತು. ನಿನ್ನ ಗಂಡನು ನಿನ್ನ ವಿಚಾರದಲ್ಲಿ ಉದಾಸೀನನಾಗಿರುವುದೂ ತಿಳಿಯಿತು. . .ಕೊನೆಗೆ ಮನಸ್ಸು ತಡೆಯಲಾರದೆ ಹೋಯಿತು. ಅದಕ್ಕೆ ಪ್ರತೀಕಾರ ಮಾಡಿಯೇ ಬಿಡುವೆನೆಂದು ಬಂದಿದ್ದೇನೆ !'

'ಪ್ರತೀಕಾರವೇನೊ ?'

'ನನ್ನ ಪ್ರತೀಕಾರದ ತೆರನು ಹೊಸತು. ಅವನೀಗ ನಿನ್ನನ್ನು ನಿರಾಕರಿಸಿ ಕಾಲುಕಸಕ್ಕಿಂತ ಕಡೆಯಾಗಿ ನೋಡುತ್ತಿರುವನು. ನಾನು ನಿನ್ನನ್ನು ಭವ್ಯವಾದ ಹೃದಯಮಂದಿರದ ಅಧಿದೇವಿಯನ್ನಾಗಿ ಪ್ರತಿಷ್ಠಾಪಿಸಿ ನಿನ್ನ ಆಜ್ಞೆಗೆ ಬದ್ಧನಾಗಿ ಅಡಿಯಾಳಾಗಿರುವೆನು. ನಿನ್ನನ್ನು ಸಹಧರ್ಮಿಣಿಯಂತೆ ಅರ್ಧಾಂಗಿಯಂತೆ ಕಷ್ಟ ಸುಖಗಳಲ್ಲಿ ಸಮಭಾಗಿಯಂತೆ ಕಾಣದೆ ನಿನ್ನ ಮನಸ್ಸಿಗೆ ದುಃಖವನ್ನುಂಟುಮಾಡುತ್ತರುವವನು. ನಾನು ನಿನ್ನ ನೆರಳಾಗಿ ನಡೆದರಡಿ ಸಮೆಯುವುದೆಂದು ಆರಾಧಿಸುವೆನು. ದಾಸಿಯೆಂದು ದೂರವಿಟ್ಟಿರುವನವನು. ದೇವಿಯೆಂದು ಸರ್ವಸ್ವವನ್ನು ಒಪ್ಪಿಸಿ ತಲೆಯಲ್ಲಿಟ್ಟು ಮೆರೆವೆನು ನಾನು. ನೀನು ಮನಸ್ಸು ಮಾಡು. ಇಂದಿನ ರಾತ್ರಿಯೇ ನಾಳೆ ಬೆಳಗಾಗುವುದರೊಳಗಾಗಿ ನೂರಾರು ಮೈಲಿ ದೂರ ಹೊರಟು ಹೋಗೋಣ. ನಿನ್ನ ಗಂಡನಿಗೆ ನೀನು ಬೇಡ. ಅವನು ಹುಡುಕುವುದಿಲ್ಲ. ಇನ್ನು ಮಾವ ! ಹ್ಹಾ. . .ಅವನಿಗೆಂದು ಹಣ ತಂದಿದ್ದೇನೆ. ಇನ್ನೇನಾಗಬೇಕು.'

'ನೋಡುವವರು ಏನೆನ್ನುವರು ?'

'ನೋಡುವವರ ಮಾತು ಎಷ್ಟು ದಿನ ? ಎರಡು ದಿನ, ಬೆಟ್ಟದ ನದಿಯಂತೆ ಎರಡು ದಿನ ಬಿರುಸಾಗಿದ್ದು ಮತ್ತೆ ತಣ್ಣಗಾಗುವರು' 'ಎಲ್ಲವನ್ನು ಚೆನ್ನಾಗಿಯೇ ಗುಣಿಸಿದೆ. ಆದರೆ ನಾನು ಹೆಂಗಸೆಂಬುದನ್ನು ಮಾತ್ರ ಗುಣಿಸಲಿಲ್ಲ !'

'ಹಾಗೆಂದರೆ ?'

'ಎಂದರೆ ಗಂಡನೊಡನೆ ಮಾನವಾಗಿ ಸಂಸಾರ ಮಾಡಿಕೊಂಡಿರಬೇಕಲ್ಲದೆ ಮಾನಗೆಟ್ಟು ಮಿಂಡನೊಡನೆ ಮೆರೆಯಬೇಕೆನ್ನುವಳಲ್ಲ ಎಂದು. ನೀನಿಂತಹ ದುರ್ಭಾಷೆಯನ್ನಾಡುವೆ ಎಂದು ತಿಳಿದಿದ್ದರೆ ನಾನಿಲ್ಲಿ ನಿಲ್ಲುತ್ತಿರಲಿಲ್ಲ. ನಾನಿಲ್ಲಿಗೆ ಬರುತ್ತಿರಲಿಲ್ಲ ಇದೋ ಹೊರಟೆ' ಸುಂದರ ! ಈಗ ರಾತ್ರಿ ಎರಡೂವರೆ ಗಂಟೆ. ಸರಿ ರಾತ್ರಿಯಲ್ಲಿ ಇಲ್ಲಿ ಬಂದಿರುವೆ. ನೀನು ಒಬ್ಬಳು. ನಾನು ವರ್ಷಾಂತರಗಳಿಂದ ತಡೆದುಕೊಂಡು ಬಂದಿದ್ದು ಈಗ ಕಟ್ಟು ಒಡೆದಿರುವ ಮೋಹದ ಆಡಳಿತದಲ್ಲಿ ಸಿಕ್ಕಿರುವವನು. ನನಗೆ ಮೈಮೇಲೆ ಅರಿವಿಲ್ಲ. ನಾನು ನಿನ್ನನ್ನು ಅಡ್ಡಹಾಕಿದರೆ ?'

'ಅದು ನಿನ್ನ ಕೈಯಲ್ಲಾಗುವುದಿಲ್ಲ. . .ನಿನ್ನ ಮನಸ್ಸು ನೀನರಿಯೆ. ಅದರಿಂದ ಹೀಗೆ ಹೇಳುವೆ. ನೀನು ಬೇಕೆನ್ನುವುದು ನನ್ನನ್ನು, ನನ್ನ ದೇಹವನ್ನಲ್ಲ. ನನ್ನನೊಲಿಸಿಕೊಳ್ಳಬೇಕೆಂದು ಬಂದಿರುವೆಯಲ್ಲವೆ ; ನನ್ನನ್ನು ನನ್ನ ಇಷ್ಟಕ್ಕೆ ವಿರೋಧವಾಗಿ ಹೊತ್ತುಕೊಂಡು ಹೋಗಬೇಕೆಂದಲ್ಲ, ಇದನ್ನು ನಾನು ಬಲ್ಲೆ. ನೀನರಿಯೆ'

'ಸುಂದರ, ದೇವರು ನನಗೆ ಎಲ್ಲವನ್ನು ಕೊಟ್ಟು ಒಂದನ್ನು ಕಿತ್ತುಕೊಂಡಿದ್ದಾನೆ. ದೇವರು ಕೊಡದಿರುವುದನ್ನು ನೀನು ಕೊಡಬಲ್ಲೆ. ಮತ್ತೊಮ್ಮೆ ಯೋಚಿಸು. ನನ್ನ ಜೀವನವನ್ನು ರಮಣೀಯವಾದ ನಂದನವನವನ್ನು ಮಾಡುವುದೂ ಹುಲ್ಲುಕಡ್ಡಿಯೂ ಕಾಣದ ಬೆಂಗಾಡನ್ನು ಮಾಡುವುದೂ ಈಗ ನಿನ್ನ ಕೈಯಲ್ಲಿದೆ. ನನ್ನ ಹೃದಯವನ್ನು ನಿನ್ನ ಪಾದತಲದಲ್ಲಿ ಒಪ್ಪಿಸಿದ್ದೇನೆ. ನನ್ನ ಜೀವಿತವನ್ನು ನಿನಗೆಂದು ಮೀಸಲು ಕಟ್ಟಿ ಇಟ್ಟಿದ್ದೇನೆ. ಕಾಲಲ್ಲಿ ನೂಕುವೆಯಾ ? ತಳ್ಳಿ ಬಿಡುವೆಯಾ ? ಮತ್ತೊಮ್ಮೆ ಕೈ ಮುಗಿದು ಕೇಳಿಕೊಳ್ಳುವೆನು. ನನ್ನ ಜನ್ಮವನ್ನು ಸಫಲಮಾಡು !

'. . .ನಾನು ಯಾವಾಗಲೂ ನಿನ್ನವಳೇ ರಾಮು ! ಆದರೆ ಯೋಚಿಸು. ಜಗತ್ತಿನಲ್ಲಿ ಕೆಟ್ಟವಳೆನ್ನಿಸಿಕೊಳ್ಳಲು ನನಗೆ ಇಷ್ಟವಿಲ್ಲ ರಾಮೂ, ನಾವಿಬ್ಬರೂ ಹೃದಯವನ್ನು ನೋಡಬಲ್ಲ ದೇವರೆದುರಿಗೆ ಧರ್ಮ ದಂಪತಿಗಳು. . .ಲೋಕವನ್ನು ನಾನು ಕಂಡಿರುವೆನು, ಧರ್ಮವನ್ನು ನಾನು ಕಾಣೆ, ರಾಮು. ಕಂಡಿರುವ ಈ ಲೋಕವನ್ನೇ ಮೆಚ್ಚಿಸದ ನಾನು ಕಂಡರಿಯದ ದೇವರನ್ನು ಮೆಚ್ಚಿಸುವುದುಂಟೆ ?. . . ನಾಳೆಯ ದಿನ ನನ್ನ ಮಕ್ಕಳನ್ನು ನೋಡಿ ಯಾರಾದರೂ 'ಇವರಿಂಥವಳ ಮಕ್ಕಳೆಂದರೆ, ಇವರ ತಾಯಿ ಹೀಗೆಂದರೆ, ಅದನ್ನು ಕೇಳಿ ನನ್ನ ಮಕ್ಕಳು ಏನೆಂದುಕೊಳ್ಳುವರು ಯೋಚಿಸು. . .ಸುಂದರಿಯ ದೇಹವು ನಿನ್ನದಲ್ಲ. ಮನಸ್ಸು ನಿನ್ನದು. ಆದರೂ ಈ ಜನ್ಮದಲ್ಲಿ ಮಾತ್ರ ನಿನ್ನವಳಾಗಲಾರೆನು. ನಿನ್ನವಳು ಹೌದು. ಆದರೆ ಮತ್ತೊಬ್ಬನೊಡನೆ ಸಂಸಾರ ಮಾಡಿಕೊಂಡಿರುವೆನು. ಅಲ್ಲದೆ ನೀನು ಮತ್ತೊಂದನ್ನು ಯೋಚಿಸಿಲ್ಲ. . ನಾವಿಬ್ಬರೂ ಎಳೆತನದಲ್ಲಿ ಸಸಿಗಳಂತೆ ಒಟ್ಟಿಗಿದ್ದೆವು. ಈಗ ? ಜತೆಯಲ್ಲಿ ಹುಟ್ಟಿದರೂ ಪ್ರವಹಿಸುವಾಗ ಬೇರೆಯಾಗುವ ನದಿಗಳಂತೆ ಇದ್ದೇವೆ. ನಿನ್ನ ಪಾಡಿಗೆ ನೀನಿರು, ನನ್ನ ಪಾಡಿಗೆ

ನಾನಿರುವೆನು. ಒಂದು ವೇಳೆ ನಾನು ಸತ್ತುಹೋಗಿದ್ದರೆ ಆಗ ನೀನೇನು ಮಾಡುತ್ತಿದ್ದೆ ? ಈಗಲೂ ಹಾಗೆಯೇ ಇರು. . ಇಂದಿನಿಂದ ನಾನೂ ನೀನು ಅಣ್ಣತಂಗಿಯರು. ಸೋದರ ಮಾವನ ಮಕ್ಕಳಲ್ಲ ; ಒಂದು ಹೊಟ್ಟೆಯಲ್ಲಿ ಹುಟ್ಟಿದವರು. . .ಆಗಲೇ ಕೋಳಿಕೂ ಗುವ ಹೊತ್ತಾಯಿತು. ಇನ್ನು ನಾನು ಹೋಗುವೆನು ! 'ಸುಂದರ, ನೀನು ಹೇಳಿದಂತೆ ಕೇಳಿಕೊಂಡಿರುವೆನು. ನಿನ್ನ ದಾಸಾನು ದಾಸನಾಗಿರುವೆನು. ಕೊನೆಯ ಮಾತನ್ನು ಹೇಳು.'

'ನಾನು ಹೇಳುವುದನ್ನು ಆಗಲೇ ಹೇಳಿದ್ದೇನೆ. ನಿನಗೆ ಈ ದೇಹದ ಮೇಲೆ ಆಶೆಯಾದರೆ ಈಗಲೆ, ಇದೋ, ನಿನಗೆ ಬೇಕಾದ್ದನ್ನು ಮಾಡಿಕೊ. ಆದರೆ ಒಂದು ತಿಳಿದಿರು. ಮಾನವನ್ನು ನೀಗಿ ನನ್ನನ್ನು ದನಕ್ಕಿಂತಲೂ ಕಡೆಯಾಗಿಸುವೆ ನೀನು. ಇಂತಹ ನಿನ್ನಲ್ಲಿ ಸಾಯುವವರೆಗೂ ದ್ವೇಷವನ್ನು ಸಾಧಿಸುವೆನು. ಒಂದು ಗಳಿಗೆಯ ಇಂದ್ರಿಯ ಸುಖಕ್ಕಾಗಿ ಜೀವಾವಧಿ ತಪಿಸುವ ರಾಕ್ಷಸಿಯ ದ್ವೇಷ ಬೇಕೋ ಇಲ್ಲ ನಿನ್ನ ಶ್ರೇಯಸ್ಸಿಗೆಂದು ದಿನವೂ ದೇವರಿಗೆ ಹರಕೆಯನ್ನು ಹೊರುವ ತಂಗಿಯ ಪ್ರೇಮ ಬೇಕೋ. ನೀನೇ ಗೊತ್ತು ಮಾಡು.[೨೧]

[೨೧] ಕಳ್ಳರಕೂಟ, ಪು. ೩೨–೪೪

## ೫.ವ್ಯಾಖ್ಯಾನ ವೈಭವ ಮತ್ತು ವಚೋವಿನ್ಯಾಸ

ವೇದೋಕ್ತ ಶಬ್ದಗಳಿಗೆ ಅರ್ಥವೂ ಬೇಕು. ಅರ್ಥವಿವರಣೆಯೂ ಬೇಕು. ಈ ಬೇಕುಗಳಿಗೆ ಸಾಕು ಎನ್ನುವಷ್ಟು ವಿವರ ಒದಗಿಸಿದ್ದಾರೆ ದೇವುಡು. ಅನೇಕ ಶಬ್ದಗಳಿಗೆ ಅರ್ಥವಷ್ಟೇ ಇಲ್ಲ, ನಿರ್ವಚನ ಅಥವಾ ವ್ಯಾಖ್ಯೆ ಅಥವಾ ವ್ಯಾಖ್ಯಾನ ನೀಡಿದ್ದಾರೆ. ಇದು ಅವರ ಬರೆಹದ ಪ್ರಾಮಾಣಿಕತೆಗೆ ಸಾಕ್ಷಿ. ಎಲ್ಲೂ ಓದುಗರನ್ನು ತೊಡಕಿಗೆ ಸಿಗುವಂತೆ ಮಾಡುವುದೇ ಇಲ್ಲ. ಕ್ಲಿಷ್ಟ ಸನ್ನಿವೇಶಗಳ ಬಣ್ಣನೆಯಲ್ಲೂ ಅಃಇಕ್ಕು ಕಾಣದ, ಸುಕ್ಕು ತಿಳಿಯದ ಚೊಕ್ಕ ರಚನೆ, ತೆಳುವಾದ ತಿಳಿಯಾದ ವ್ಯಾಖ್ಯಾನ ಇವು ದೇವುಡುರವರ ವೈಶಿಷ್ಟ್ಯಗಳು. ಅವರ ಕೃತಿಗಳ ಕೆಲವೊಂದು ಉದಾಹರಣೆಗಳು ಓದುಗನ ಜ್ಞಾನಕೋಶವನ್ನು ಹಿಗ್ಗಿಸದಿರುವುದಿಲ್ಲ, ನೋಡಿ:

### ವ್ಯಾಖ್ಯಾನಗಳು :

೧. **ಬ್ರಹ್ಮವಿದ್ಯೆ**

ಯಜ್ಞದಲ್ಲಿ ಅಧ್ವರ್ಯುವು ಈ ದೇವರನ್ನು ಕರೆಯಬೇಕೆಂದು ಪ್ರೇಷವನ್ನು ಕೊಡುವನು.
ಹೋತೃವು ಓಂ ಎಂದು ಆ ದೇವತಾ ಸಂಬಂಧವಾದ ಸೂಕ್ತವನ್ನು ಪಾರಾಯಣ
ಮಾಡಿ, ಆ ದೇವತೆಯನ್ನು ಆಕರ್ಷಿಸುವನು. ಉದ್ಗಾತೃವು ಅದನ್ನು ಸಾಮವಾಗಿ
ಹಾಡಿ ಆ ದೇವತೆಯ ಸೂಕ್ಷ್ಮ ಇಂದ್ರಿಯಗಳಿಗೆ ಗೋಚರವಾಗುವಂತೆ ಮಾಡುವನು.
ಹೆಚ್ಚು ಕಡಿಮೆ ಆದದ್ದನ್ನು ಬ್ರಹ್ಮನು ಸರಿಪಡಿಸುವನು. ಆಗ ಅಧ್ವರ್ಯುವು ಆ
ದೇವತೆಗೆ ಹೋಮ ಮಾಡಿ ಯಜಮಾನನ ಇಷ್ಟವನ್ನು ಸಂಪಾದಿಸುವನು. ಆ
ಜ್ಞಾನಕ್ಕೆ ಬ್ರಹ್ಮ ವಿದ್ಯೆ ಎಂದು ಹೆಸರು.

(ಮಹಾದರ್ಶನ, ಪು. ೬–೭)

'ಬ್ರಹ್ಮ' ಎಂದರೆ ದೊಡ್ಡದು. ಆ ಭೂಮವನ್ನು ಸಂಪಾದಿಸಿ ಕೊಡುವ ವಿದ್ಯೆ ಬ್ರಹ್ಮವಿದ್ಯೆ.

೭೪

೨. **ನಾಲ್ಕು ವೇದಗಳು – ನಾಲ್ವರು ಋತ್ವಿಜರು**

ಒಂದು ಯಜ್ಞಕ್ಕೆ ನಾಲ್ಕು ವೇದಗಳು ಬೇಕು. ಅದರಲ್ಲಿ
ಯಜುರ್ವೇದದವನಿಗೆ ಅಧ್ವರ್ಯು, ಋಗ್ವೇದದವನಿಗೆ
ಹೋತೃ, ಸಾಮವೇದದವನಿಗೆ ಉದ್ಗಾತೃ, ಅಥರ್ವಣ

ವೇದದವನಿಗೆ ಬ್ರಹ್ಮ ಎಂದು ಹೆಸರು ಅದೇ ಪುಟ ೭

೩. **ಅಧ್ಯಯನ – ಪ್ರವಚನ**

ತಾನು ಸ್ವಂತವಾಗಿ ಅಭ್ಯಾಸ ಮಾಡುವುದು ಅಧ್ಯಯನ :

ಇತರರಿಗೆ ತಿಳಿಯ ಹೇಳುವುದು ಪ್ರವಚನ – ಅಲ್ಲೇ

೪. **ವಿಧಿ : ಪ್ರತಿಪ್ರಸವ**

ವಿಧಿ ಎಂಬುವುದು ಮಾಡಬೇಕು ಎಂದು ವಿಧಾಯಕ ಮಾಡುವ ಶಾಸ್ತ್ರ ;
ಪ್ರತಿಪ್ರಸವ ಎಂದರೆ ಅದನ್ನು ತಡೆಯುವ ಶಾಸ್ತ್ರ. ಒಂದು
ಎಂಜಿನ್ನಿನ ಹಾಗೆ ಮತ್ತೊಂದು ಬ್ರೇಕಿನ ಹಾಗೆ. ಎರಡೂ
ತಿಳಿದಲ್ಲದೆ ಶಾಸ್ತ್ರಜ್ಞಾನ ಪೂರ್ಣವಾಗುವುದಿಲ್ಲ ಅದೇ, ಪು ೮

೫. ಸ್ವರ ಅದೇ, ಪು. ೧೦

೬. ಮೂಢ

ಒಣಗಿದ ಸೆಗಣಿಯ ಉಂಡೆ ಅದೇ ಪು. ೧೫

೭. ಉನ್ನತಿ ತ್ರಯ :

ಕಾಯೋನ್ನತಿ, ಮಾನೋನ್ನತಿ, ವಿದ್ಯೋನ್ನತಿ ಅದೇ ಪು. ೫೧

೮. ಪಾಪ–ಪುಣ್ಯ :

ಅಪೂರ್ಣತೆ – ಪೂರ್ಣತೆಗಳು ; ಒಂದು ಹೆಚ್ಚಾದರೆ ಜಗತ್ತಿನ ವಿನಾಶ :
ಇನ್ನೊಂದು ಹೆಚ್ಚಾದರೆ ಜಗತ್ತಿನ ಉದ್ಧಾರ ಅದೇ.

೯. ಮಹಾವಾಕ್ಯ :

ಬ್ರಹ್ಮವನ್ನು ಬೋಧಿಸುವ ವಾಕ್ಯ ಅದೇ ಪು. ೭೧

೧೦. ಶ್ರೇಯಸ್ಸು–ಪ್ರೇಯಸ್ಸು :

ಎರಡೂ ಭಿನ್ನಮಾರ್ಗಗಳು ; ಗುರಿಯೂ ಬೇರೆ ಬೇರೆ. ಎರಡೂ ಮನುಷ್ಯನನ್ನು
ಕಟ್ಟುತ್ತವೆ. ಸದ್ಭಾವನೆ ಮತ್ತು ಆಚರಣೆ (ಸದಾಚಾರ), ಪ್ರೇಯಸ್ಸು ತನಗೆ
ತೋರಿದಂತೆ ನಡೆದುಕೊಳ್ಳುವುದು ಅಂದರೆ ಮನಸೋ ಇಚ್ಛೆ ಸ್ವೇಚ್ಛಾಚಾರ. ಶ್ರೇಯಸ್ಸು
ಹಿಡಿದವನಿಗೆ ಒಳ್ಳೆಯದಾಗುತ್ತೆ ; ಪ್ರೇಯಸ್ಸು ಬೇಕು. ಎಂದರೆ ಹಾದಿ ತಪ್ಪಿಸುತ್ತೆ

–ಅದೇ ಪು. ೭೧ ಮತ್ತು ೯೯

೧೧.ತತ್ವ

ತತ್ = ಅದರ, ತ್ವ = ತನ (ಅದರ ತನ) –ಅದೇ. ಪು. ೯೦

೧೨.ದೇವಾಪ್ಯಯ :

ಉಪಾಸಕನು ಉಪಾಸ್ಯಮಾನ ದೇವತೆಯಲ್ಲಿ ಸೇರಿ ಹೋಗುವುದು (ಐಕ್ಯನಾಗುವುದು) ಅದೇ. ಪು. ೯೬

೧೩.ಶ್ರದ್ಧೆ : ಬೇಕೆಂದೇ ತನ್ನ ವಿಚಾರಶಕ್ತಿಯನ್ನು ತಡೆದು ತನಗಿಂತ ಮೇಲಿನವರ ಮಾತನ್ನು ಸತ್ಯವೆಂದು ಅಂಗೀಕರಿಸುವುದು ಅದೇ ಪು. ೯೮

೧೪. ಹವಿಸ್ಸು :

ಗಂಜಿಯನ್ನು ಬಸಿಯದೆ, ಹುರಿದ ಅಕ್ಕಿಯಿಂದ ಮಾಡುವ ಅನ್ನ, ಯಜ್ಞ ಸಂದರ್ಭದಲ್ಲಿ ಬಳಸುವ ವಸ್ತು
ಅದೇ. ಪು. ೧೦೪

೧೫. ಮಹಾದರ್ಶನ :

ಶ್ರೇಯಸ್ಸಿನ ಹಾದಿಯಲ್ಲಿ ಹೊರಟವನು ಮೊದಲು ದೇವರುಗಳನ್ನು ಬೇರೆ ಬೇರೆಯೆಂದುಕೊಂಡಿದ್ದು, ಕೊನೆಗೆ ಎಲ್ಲವನ್ನೂ ಒಟ್ಟಾಗಿ ಕಾಣುವುದೇ ಪೂರ್ಣದರ್ಶನ ಅರ್ಥಾತ್ ಮಹಾದರ್ಶನ ಅದೇ ಪು. ೧೦೮

೧೬. ಪ್ರಾಣ : ಪ್ರಾಣವು ದೇಹ ದೇಹದಲ್ಲಿಯೂ ಇದೆ ; ಈ ಜಗತ್ತಿನಲ್ಲಿ ಎಲ್ಲೆಲ್ಲಿಯೂ ಇದೆ. ಅದನ್ನು ಸಾಧಕ ಸಾಕ್ಷಾತ್ಕರಿಸಿಕೊಳ್ಳಬೇಕು. ಅಂದರೆ ಆತ್ಮಜ್ಞಾನದಿಂದ ಅದರ ನಗ್ನದರ್ಶನ ಪಡೆಯಬೇಕು. ಪ್ರಾಣವು ದೇಹದಲ್ಲಿದ್ದಾಗ ಪ್ರಾಣವೆನ್ನಿಸುವುದು, ಹೊರಗೆ ಕಾರ್ಯ ಮಾಡುವಾಗ ಮಾತರಿಶ್ವಾ ವಾಯುವೆನ್ನುವುದು, ಆಕಾಶದಲ್ಲಿ ಸರ್ವ ಪ್ರಾಣಾಧಿಕಾರಿಯಾದ ಆದಿತ್ಯನಾಗುವುದು. ಇದು ಪ್ರಾಣದ ಮಹತ್ವ. ಅದೇ ಪು. ೧೨೦–೨೧

೧೭. ಶಾಸ್ತ್ರ

ನಮ್ಮ ವ್ಯವಹರಣೆಗೆ ಎರಡು ಮುಖ : ಒಂದು ಬಹಿರ್ಮುಖ, ಮತ್ತೊಂದು ಅಂತರ್ಮುಖ. ಬಹಿರ್ಮುಖ ಸರ್ವೇ ಸಾಮಾನ್ಯ. ಅಂತರ್ಮುಖ ಅನುಭಾವಿಗೆ ಮಾತ್ರ ಸಾಧ್ಯ. ಮೊದಲು ಇಂದ್ರಿಯ ಅನಂತರ ಮನಸ್ಸು, ಬುದ್ಧಿ – ಹೀಗೆ ಒಂದೊಂದರ ಮೇಲೂ ಹಿಡಿತ ಇಟ್ಟುಕೊಳ್ಳುವುದನ್ನು ಕಲಿಸುವ ವಿದ್ಯೆ ಅದೇ ಪು ೧೨೧–೧೨೨

೧೮. ಉಲ್ಬ :

ಮಾತೃಗರ್ಭದಲ್ಲಿರುವ ಮಾಂಸದ ಚೀಲ ಅದೇ ಪು ೧೩೦

೧೯. ರುದ್ರ

ಪ್ರಾಣಾನಾಂ ಗ್ರಂಥಿರಸಿ ರುದ್ರ, ಅಂದರೆ ಪ್ರಾಣಗಳು ಒಂದನ್ನೊಂದು ಸಂಧಿಸಿದ ಕೂಡಲೆ ಬೆಸೆದುಕೊಳ್ಳುವುವು. ಅದೇ ರುದ್ರ ಅದೇ ಪು ೧೩೩

ಮತ್ತೊಂದು ಅರ್ಥವಿವರಣೆ :

ಇವನು ಹುಟ್ಟುತ್ತಲೇ ಏನು ಹೊಡೆಯಲಿ ? ಏನು ಕೊಲ್ಲಲಿ ! ಎಂದೇ ಹೊರಡುತ್ತಾನೆ. ಅದರಿಂದ ; ಓ ರುದ್ರ, ನಮ್ಮ ಮಕ್ಕಳು ಮೊಮ್ಮಕ್ಕಳನ್ನು ಹೊಡೆಯಬೇಡ. ನಮ್ಮ ಹಸುಗಳನ್ನು, ಕುದುರೆಗಳನ್ನು ಹಿಂಸಿಸಬೇಡ, ನಮ್ಮ ವೀರರನ್ನು ಕೊಲ್ಲಬೇಡ. ನಿನಗೆ ಹವಿಸ್ಸನ್ನು ಕೊಟ್ಟು ಹೊಗಳುವೆವು ಎಂದು ರುದ್ರನಲ್ಲಿ ರಕ್ಷಾಯಾಚನ ಮಾಡುತ್ತಾರೆ ಅದೇ ಪು. ೧೩೩

೨೦. ಕೃತ್ವಾಚಿಂತೆ :

ಹಾಗಾದರೆ ಹೀಗಾಗಬಹುದು ಎಂದು ಒಪ್ಪಿಕೊಳ್ಳುವುದು ಅದೇ ಪು. ೧೯೬

೨೦. ಋತಲಿಂಗನ್ಯಾಯ :

ಆಯಾ ಋತುವಿಗೆ ತಕ್ಕಂತೆ ಮರ, ಹಕ್ಕಿ ಮೊದಲಾದ ಬಾಹ್ಯ ಪ್ರಪಂಚದಲ್ಲಿ ಆಯಾ ಗುರುತುಗಳು ಯಾರ ಅಪೇಕ್ಷೆ ಇಲ್ಲದೆ ವ್ಯಕ್ತವಾಗುವುವು ಎಂಬ ನ್ಯಾಯ ಅದೇ. ಪು. ೨೦೫

೨೨. ಮೇರು :

ಮಧ್ಯಮ, ಅನಾಮಿಕಾ, ಅಂಗುಲಿಗಳ ಮಧ್ಯಪರ್ವಗಳಿಗೆ 'ಮೇರು' ಎಂದು ಹೆಸರು. ಅದೇ ಪು. ೪೩೧

೨೩. ಹವ್ಯ–ಕವ್ಯ

ದೇವತೆಗಳಿಗೆ ಕೊಡುವುದು ಹವ್ಯ ; ಪಿತೃಗಳಿಗೆ ಕೊಡುವುದು ಕವ್ಯ ಅದೇ ಪು. ೪೪೧

೨೪. ಹೆದ್ನ :

ತೇರುಗಳ ಚಕ್ರಗಳು : ಅತ್ತಲಾಗಿ ಇತ್ತಲಾಗಿ ಹೋಗದೆ ಸರಿಯಾಗಿ ನಡೆಯಲು ಅಡ್ಡಗಿಸುವ ಮರದ ತುಂಡು

–ಕಳ್ಳರ ಕೂಟ ಪು. ೨೭

೨೫. ದೇವಯಜನ :

ಯಜ್ಞಶಾಲೆ ಮಹಾಬ್ರಾಹ್ಮಣ, ಪು. ೨೭

೨೬. ಪ್ರಯಾಜ :

ಪ್ರಧಾನ ಆಹುತಿ ಅದೇ ಪು. ೧೦೩

೨೭. ಪ್ರೈಷ :

ಅಧ್ವರ್ಯುವು ಯಜಮಾನನ ಪ್ರತಿನಿಧಿಯಾಗಿ ನಿಂತು ಯಾಗಮಾಡುವನು. ಆತನು ದೇವತೆಯನ್ನು ಕರೆ ಎಂದು ಆಜ್ಞೆ ಮಾಡುವುದು ಪ್ರೈಷ. – ಅಲ್ಲೇ

೨೮. ದೇವಯು :

ದೇವತೆಗಳು ಬೇಕು ಎನ್ನುವ ಶ್ರದ್ಧಾವಂತ – ಅಲ್ಲೇ

೨೯. ಉಪ ಬೃಂಹಣ :

ಚಿಕ್ಕದ್ದನ್ನು ದೊಡ್ಡದನ್ನಾಗಿ ಮಾಡುವುದು. ಪರಮಾಣುವನ್ನು ಪರ್ವತವನ್ನಾಗಿ ಮಾಡುವುದು ಅದೇ ಪು. ೧೦೪

೩೦. ಸ್ವಿಷ್ಟಕೃತ್ ಹೋಮ :

ಅದುವರೆಗೆ ಆಗಿರುವ ನ್ಯೂನ ಅತಿರೇಕಗಳನ್ನೆಲ್ಲ ಸರಿಮಾಡೆಂದು ಅಗ್ನಿಯನ್ನು ಪ್ರಾರ್ಥಿಸಿ, ಆತನಿಗೆ ಹವಿಸ್ಸನ್ನು ಕೊಡುವುದು –ಅದೇ ಪು. ೧೦೬

೩೧. ಪ್ರತಿಪತ್ತಿಕರ್ಮ :

ಯಜ್ಞದಲ್ಲಿ ಉಳಿದಿರುವಿದನ್ನೆಲ್ಲ ವಿನಿಯೋಗಿಸುವುದು – ಅಲ್ಲೇ

೩೨. ಸಸರ್ಪರೀ :

ಬೇಗ ಬೇಗ ಬರುವ ಜಮದಗ್ನಿಯು ವಿಶ್ವಾಮಿತ್ರನ ಬಾಯನ್ನು ಕಟ್ಟಿದಾಗ ಸಸರ್ಪರೀ ಎಂಬ ವಾಕ್ಸೂಕ್ತದಿಂದ ಆತನ ಬಾಯಿ ಬಿಚ್ಚಿದನೆಂದು ವೇದದಲ್ಲಿ ಹೇಳಿದೆ –ಅದೇ ಪು. ೧೧೨

೩೩. ಮಧುತರ್ಕ

ಶ್ರೋತ್ರಿಯರು, ಬ್ರಹ್ಮನಿಷ್ಠರು, ರಾಜ್ಯಾಭಿಷೇಕ ಪಡೆದ ಕ್ಷತ್ರಿಯರು ಮನೆಗೆ ಬಂದರೆ ಸಲ್ಲಿಸಬೇಕಾದ ಪೂಜೆ –ಅಲ್ಲೇ

೩೪. ಐಂದ್ರ :

ಇಂದ್ರನಿಗೆ ಕೊಡುವ ಆಹುತಿ – ಅಲ್ಲೇ

೩೫. ಕೃಷ್ಣದ್ವೈಪಾಯನ :

ಮಹರ್ಷಿ ಪರಾಶರ ಮತ್ತು ಸತ್ಯವತಿಯರ ಪ್ರೇಮದ ಫಲ ! ದ್ವೀಪದಲ್ಲಿ ಹುಟ್ಟಿದ್ದರಿಂದ 'ದ್ವೈಪಾಯನ' ಕಪ್ಪಗಿದ್ದುದರಿಂದ 'ಕೃಷ್ಣ' ಒಟ್ಟಿನಲ್ಲಿ ವ್ಯಾಸ, 'ಕೃಷ್ಣ ದ್ವೈಪಾಯನ' ಎಂದಾದ –ಭಾರತದ ಮಹಾಪುರುಷರು ಪು. ೪

೩೬. ಮಹಾಭಾರತ :

ಹಿಂದೆ ದೇವತೆಗಳು ನಾಲ್ಕು ವೇದಗಳನ್ನು ಒಂದು ಕಡೆಯಲ್ಲಿಯೂ ಮಹಾಭಾರತವೊಂದನ್ನೇ ಒಂದು ಕಡೆಯಲ್ಲಿಯೂ ಇಟ್ಟು ತೂಗಿದರಂತೆ. ಆಗ ಭಾರತವೇ ತೂಕದಲ್ಲಿ ಹೆಚ್ಚಾಗಿದ್ದುದರಿಂದ ಇದಕ್ಕೆ 'ಮಹಾಭಾರತ'ವೆಂದು ಹೆಸರಾಯಿತಂತೆ ! –ಅದೇ ಪು. ೫

೩೭. ಪಂಚಮವೇದ :

ವೇದೋಪನಿಷತ್ತುಗಳನ್ನು ಅಧ್ಯಯನ ಮಾಡುವವರಿಗೆ ಅಡಿಗಡಿಗೆ ಬರುವ ಸಂಶಯಗಳೆಲ್ಲ ಭಾರತಾಧ್ಯಯನದಿಂದ ಪರಿ ಹಾರವಾಗುವುವು. ಅದರಿಂದಲೇ ಬಲ್ಲವರು ಇದನ್ನು 'ಪಂಚಮೋ ವೇದಃ' ಎಂದಿರುವರು. ಶ್ರೀರಾಮನಂತಹ ಪುರುಷ ನಿಲ್ಲ ; ಮಹಾಭಾರತದಂತಹ ಗ್ರಂಥವಿಲ್ಲ. –ಅದೇ ಪು. ೧೧

೩೮. ಕೃತೋಪಾಸ್ತಿಗಳು – ಅಕೃತೋಪಾಸ್ತಿಗಳು :

ಶಿಷ್ಯರಲ್ಲಿ ಕೃತೋಪಾಸ್ತಿಗಳು – ಅಕೃತೋಪಾಶ್ತಿಗಳು ಎಂದು ಎರಡು ವಿಧವು. ಅಕೃತೋಪಾಸ್ತಿಗಳು ಎಷ್ಟು ಓದಿದರೆ ಅಷ್ಟು ಮಾತ್ರ ಅವರಿಗೆ ಲಭಿಸುವುವು. ಕೃತೋಪಾಸ್ತಿಗಳಿಗೆ ಅಧ್ಯಯನ ಮಾಡಿದ ಶಾಸ್ತ್ರವು ಬೀಜವಾಗಿ, ಪಲ್ಲವಿಸಿ ಬೆಳೆ ಯುವುದು. ಅದರಿಂದ ಪೂರ್ವಿಕರು ಶಿಷ್ಯರೆಲ್ಲರೂ ಕೃತೋಪಾಸ್ತಿಗಳಾಗಲಿ ಎನ್ನುತ್ತಿದ್ದರು. ಕೃತೋಪಾಸ್ತಿಯೆಂದರೆ ಯಾವುದಾದರೊಂದು ದೇವತೆಯನ್ನು ಆರಾಧಿಸಿ, ಅದರ ಅನುಗ್ರಹವನ್ನು ಪಡೆದವನು. ನಮ್ಮ ಪೂರ್ವಿಕರು ವಿದ್ಯಾ ರ್ಜನೆ ಮಾಡುತ್ತಿದ್ದುದು ಹೀಗೆ ! ಅದೇ ಪು. ೧೫

೩೯. ಎರಡು ನಾಲಿಗೆ ಸರ್ಪ :

ಗರುಡನು ಅಮೃತ ಕಲಶವನ್ನು ತಂದು ಸರ್ಪಗಳಿಗೆ ಕೊಟ್ಟನಂತೆ. ಅದನ್ನು ಒಂದು ದರ್ಬೆಯ ಹಾಸಿನ ಮೇಲಿಟ್ಟಿದ್ದ ರಂತೆ, ಇಂದ್ರನು ಅದನ್ನು ಅಪಹರಿಸುತ್ತಾನೆ, ಅದನ್ನು ಕಾಣದ ಸರ್ಪಗಳು ದರ್ಭೆಯ ಹಾಸನ್ನು ನೆಕ್ಕಿರುವಂತೆ, ಆಗ ಅವರ ನಾಲಗೆ ದರ್ಭೆಯಿಂದ ಸೀಳಿಕೊಂಡು ಎರಡು ಹೋಳಾಯಿತಂತೆ ! ಮಯೂರ ಪು. ೨೪

೪೦. ಅನುಲೋಮ ವಿವಾಹ – ಪ್ರತಿಲೋಮ ವಿವಾಹ

ಬ್ರಾಹ್ಮಣನು ಕ್ಷತ್ರಿಯ ಕನ್ಯೆಯನ್ನು ಮದುವೆಯಾದರೆ ಅದು ಅನುಲೋಮ ವಿವಾಹ, ಕ್ಷತ್ರಿಯನು ಬ್ರಾಹಣ ಕನ್ಯೆಯನ್ನು ಮದುವೆಯಾದರೆ ಅದು ಪ್ರತಿಲೋಮ ವಿವಾಹ. ಅದೇ, ಪು. ೬೯

೪೧. ಸಂಸ್ಕೃತಿ

ಮಾನವನಿಗೂ ಮೃಗಕ್ಕೂ ಇರುವ ಅಂತರವನ್ನು ತೋರಿಸುವ ಅಂತಸ್ಸತ್ವ ಮನಸ್ಸಿನ ಬೆಳವಣಿಗೆ (ಮನೋವಿಕಾಸದ)

---

*ಕರ್ನಾಟಕ ಸಂಸ್ಕೃತಿ ೧೩, ೧೪, ೧೫, ೧೭೬-೧೭೭

೧ ಮಯೂರ ಪು. ೨೩



೨ ಅದೇ, ಪು. ೨೭

೩.ಅದೇ, ಪು. ೪೯

ಅಥವಾ ಬೆಳೆದ ಮನಸ್ಸಿನ ಸಂದು ಬಿಡದಂತೆ ಎರಡನ್ನೂ ಒಂದಾಗಿ ಬೆಸೆಯುವ ಮನಃ ಪರಿಣಾಮವು ಸಂಸ್ಕೃತಿ. ಒಂದು ಶ್ಲೋಕದಲ್ಲಿ,

**'ನವನೀತ ಸಮಾಂ ವಾಣೀಂ ಕೃತ್ವಾ ಚಿಂತ್ತಂತು ನಿರ್ದಯಂ'** ಎಂದು ಹೇಳಿದೆ. ಇನ್ನೊಂದು ಕಡೆ –

**'ಕ್ಷಾರಂ ನೀರಂ ಚ ಶೀತಲಂ ಭವತಿ'**

ಎಂದು ಹೇಳಿದೆ. ಎಂದರೆ ಮಾತು ಬೆಣ್ಣೆಯಂತೆ ಮನಸ್ಸು ಕಲ್ಲಿನಂತೆ. ನೀರು ಉಪ್ಪಾದಷ್ಟೂ ತಣ್ಣಗಿರುತ್ತದೆ ಎಂದು ಅರ್ಥ. ಅದು ಸಂಸ್ಕೃತಿಯೇನು ? ಪ್ರವಾಹಕ್ಕೆ ಸಿಕ್ಕಿದ ಕಲ್ಲು ನುಣುಪಾಗುತ್ತದೆ ಆದರೆ ಮೆತ್ತಗಾಗುವುದಿಲ್ಲ. ನುಣ್ಣಗೂ ಇದ್ದು ಮೆತ್ತಗೂ ಇದ್ದು ಕಲ್ಲೂ ಆಗಿರುವುದು ಸಂಸ್ಕೃತಿ.'*

**(ಆ) ಲೋಕೋಕ್ತಿಗಳು**

ಗಾದೆ ಸಮಷ್ಟಿಸೃಷ್ಟಿ. ಆ ಅಣಿ ಮುತ್ತುಗಳು ವೃಷ್ಟಿ ಸೃಷ್ಟಿ. ವೇದ ಸುಳ್ಳಾದರೂ, ಗಾದೆ ಸುಳ್ಳಾಗುವುದಿಲ್ಲ. ಏಕೆಂದರೆ ಅದು ಹಲವರ ಒಂದೇ ವಿಧದ ಅನುಭವ ಗಟ್ಟಿಗೊಂಡು ಆದ ಶಬ್ದ ರೂಪ; ಇದು ವ್ಯಕ್ತಿಯ ಅನುಭಾವದಿಂದ ಆವಿರ್ಭವಿಸಿದ ಮಾತು. ದಾರ್ಶನಿಕರ ಅಣಿ ಮುತ್ತಿನ ಮಾತುಗಳೂ ಕ್ರಮೇಣ ಲೋಕೋಕ್ತಿಗಳಾಗುವ ಸಂಭವವುಂಟು. ಅವುಗಳನ್ನಿಲ್ಲಿ ಅವಲೋಕಿಸೋಣ.

೧. ಸಾವಿರ ಚಿತ್ತಾರಾನಾ ಒಂದು ಮಸಿ ನುಂಗಿತು ಎಂದ ಹಗೆ

೨. ಆಶೆ ಆಕಾಶದಷ್ಟು; ಸಾಧನೆ ಸಾಸಿವೆಯಷ್ಟು

೩. ಪುರುಷನ ಸತ್ಕರ್ಮಕ್ಕೆ ಅನುಗುಣವಾಗಿ ದೈವವು ಕೊಡುವ ಫಲಾನುಭವ ಸಾಮರ್ಥ್ಯವು ಪುಣ್ಯವು

೪. ಬಿಜವೊಂದಾಗಿ ಗಿಡವೊಂದಾಗುವುದಿಲ್ಲ. ಹಾಗೆಯೇ ಪೂರ್ವವಾಸನೆಗೆ ಅನುಸಾರವಾಗಿಯೇ ಬುದ್ಧಿಯೂ ಹೊರಡುವುದು

೫. ಯಾವ ಕೆಲಸವನ್ನು ಮಾಡಬೇಕಾದರೂ ಉದ್ದೇಶ, ಧನಸಂಪತ್ತಿ, ಆತ್ಮಯೋಗ್ಯತೆಗಳನ್ನು ವಿಚಾರಿಸಿ ಆರಂಭಿಸುವುದು ಬುದ್ಧಿವಂತನ ಲಕ್ಷಣ

೬. ದ್ವೇಷವು ವೈಚಮ್ಯ ಮೂಲವು

೭. ಪಾಯಸ ತಿನ್ನುವಾಗ ಈ ಬೆಲ್ಲ ಮಾಡಿದ ಕಬ್ಬು ಎಷ್ಟುದ್ದವಿತ್ತು ಎನ್ನುವ ಹಾಗೆ

೮. ಭೋಜನದಿಂದ ತೃಪ್ತನಾದ ಬ್ರಾಹ್ಮಣನು ಹಲ್ಲು ಕಳೆದುಕೊಂಡ ಹಾವಿನ ಹಾಗೆ

೯. ಅನುಕೂಲ ಕಾಲದಲ್ಲಿ ಅಲ್ಪ ಪ್ರಯತ್ನದಿಂದ ಮಹತ್ತರವಾದ ಫಲವಾಗುವುದು

೧೦. ವಯಸ್ಸು ದೇಹಕ್ಕೆ, ಉತ್ಸಾಹ ಮನಸ್ಸಿಗೆ

---

೪. ಅಲ್ಲೇ

೫. ಅಲ್ಲೇ

೬. ಅದೇ. ಪು. ೬೭

೭. ಅದೇ. ಪು. ೧೧೫

೮. ಅದೇ ಪು. ೧೪೦

೯. ಅದೇ ಪು. ೨೦೫

೧೦.ಚಿನ್ನಾ ಪು. ೧೨೧

೧೧ ಕಳ್ಳರ ಕೂಟ, ಪು. ೨೫

೧೨ ಮಹಾಕ್ಷತ್ರಿಯ ಪು. ೨೨,

೧೩ ಅಲ್ಲೇ

೧೧.ಕಾಯುವುದು ಮಾತ್ರ ಕೆಟ್ಟ ವೈರಿಗೂ ಬೇಡ

೧೨. ಚಿಂತೆಯೂ ಜೀವನದ ವ್ಯಾಪಾರಗಳಲ್ಲೊಂದು

೧೩. ಮನಸ್ಸಿನ ರಾಗ ದ್ವೇಷಗಳಿಂದಲೇ ಸುಖ ದುಃಖಗಳು

೧೪. ಯಾವ ರಾಗವನ್ನು ಹಾಡಿದರೂ ಅದಕ್ಕೆ ಆಧಾರ ಶ್ರುತಿಯು ಇದ್ದೇ ಇರುತ್ತೆ

೧೫ ನಾವೆಲ್ಲರೂ ಕಾಲದ ಶಿಶುಗಳು

೧೬ ಯೋಗ–ಕ್ಷೇಮಗಳೆರಡನ್ನೂ ಒಂದೇ ಕಾಲದಲ್ಲಿ ಸಾಧಿಸಬೇಕು. ನೀರನ್ನು ತಡೆಯುವುದೊಮ್ಮೆ, ತಡೆದ ನೀರು ನಿಲ್ಲುವಂತೆ ಮಾಡುವುದೊಮ್ಮೆಯಲ್ಲ. ಎರಡೂ ಒಟ್ಟಿಗೇ ನಡೆಯಬೇಕು.

೧೭. ಸಂತೋಷವಾಗಲಿ ದುಃಖವಾಗಲಿ ಸಂಗಡಿಗರೊಡನೆ ಹೇಳಿಕೊಳ್ಳದಿದ್ದರೆ ಹಿಡಿಸುವುದಿಲ್ಲ

೧೮. ಜಗತ್ತಿನಲ್ಲಿ ತಿಳಿಯದಿದ್ದರೂ ತಮಗೆ ತಿಳಿಯದು ಎಂದು ಹೇಳಲು ಹಿಂದೆಗೆದು ಚಿತ್ತಾರವನ್ನು ಕೆಡಿಸುವವರೇ ಹೆಚ್ಚು. ನಿಸ್ಸಂಕೋಚವಾಗಿ ನನಗೆ ತಿಳಿಯದು ಎಂದು ಹೇಳುವವರು ವಿರಳ

೧೯. ಹೊರಗೆ ತೊಳೆಯದಿದ್ದರೆ ಮಸಿ; ಒಳಗೆ ತೊಳೆಯದಿದ್ದರೆ ಮುಸುರೆ

೨೦. ಎರಡು ಕಣ ಕಾದ ದಾಸಯ್ಯನ ಗತಿ

೨೧ ಸಾಹಿತ್ಯ ಸೃಷ್ಟಿಯಾಗುವುದು ಸನ್ಮಿತ್ರರಿಗಾಗಿ. ಬಾಳೆಯ ಹಣ್ಣು ಹಲಸಿನ ಹಣ್ಣು ಹುಟ್ಟಿರುವುದು ಹೊಟ್ಟೆಯ ನೋವಿನಿಂದ ನರಳುವವರಿಗಲ್ಲ; ಹಸಿವನ್ನು ತಡೆಯಲಾರದವರಿಗಾಗಿ

೨೨. ಬಲಿಯಿಲ್ಲದೆ ಫಲವಿಲ್ಲ

೨೩. ಎಲ್ಲವನ್ನೂ ಮಾಡುವುದು ಕಾಲ. ಆ ಕಾಲದ ಒಂದು ಕೊನೆ ಕರಾಳ ಎನ್ನೊಂದು ಶಾಂತ, ಸುಖ. ಅದೇ ಪ್ರಕೃತಿಯ ಧರ್ಮ --

೨೪. ಸುಖ ದುಃಖ ಎರಡೂ ವಿಕಾರಗಳು ; ಒಂದು ಚಿನ್ನದ ಬಳೆ, ಇನ್ನೊಂದು ಕಬ್ಬಿಣದ ಬಳೆ

೨೫. ರಾಜನ ಗುರಿ ಸಮೃದ್ಧಿ; ತ್ಯಾಗ ಅಲ್ಲ

---

೧೪. ಅದೇ ಪು. ೫೫

೧೫. ಅದೇ ಪು. ೬೮

೧೬. ಅದೇ ಪು. ೬೯

೧೭. ಮಹಾದರ್ಶನ ಪು. ೫

೧೮. ಅದೇ. ಪು. ೫೫

೧೯. ಅದೇ, ಪು. ೯೪

೨೦. ಅದೇ, ಪು. ೨೦೭

೨೧. ಮಹಾಬ್ರಾಹ್ಮಣ ಪು.

೨೨. ಅದೇ ಪು. ೨

೨೬. ಎಲ್ಲ ತೇಜಸ್ಸೂ ರಾಜತೇಜದ ಮುಂದೆ ಒಂದು ಗಳಿಗೆಯಾದರೂ ಮಂಕಾಗಬೇಕು
೨೭. ತಮ್ಮ ತಮ್ಮ ಸಿದ್ಧಿಗೋಸ್ಕರ ಯಾರು ಯಾರು ಯಾವ ಯಾವ ಕೆಲಸವನ್ನು ಮಾಡುವವರೋ ಅದೆಲ್ಲಾ ತಪಸ್ಸೆ
೨೮. ಹಾವಾಡಿಗನು ಹಾವನ್ನು ಆಡಿಸುವಂತೆ ಸಿದ್ಧಿಯನ್ನು ಕೋರಿದವನು ಮನಸ್ಸನ್ನು ಹಿಡಿದು ಆಡಿಸುವುದನ್ನು ಕಲಿಯಬೇಕು
೨೯ ಕನ್ನಡಿಯೂ ತನ್ನದಾಗಿ ಯಾವ ಬಿಂಬವನ್ನೂ ಧರಿಸದೆ, ಎದುರಿಗೆ ಬಂದ ಬಿಂಬಗಳನ್ನೆಲ್ಲ ಪ್ರತಿಬಿಂಬಿಸುತ್ತದೆ
೩೦. ದುರ್ಜನರು ಸಜ್ಜನರನ್ನೂ, ಬಲಹೀನರೂ ಬಲವಂತನನ್ನೂ, ಕುರೂಪಿಯು ಸುರೂಪಿಯನ್ನು; ಧನಹೀನನು ಧನವಂತನನ್ನು; ಕರ್ಮಭ್ರಷ್ಟನು ಕರ್ಮಿಷ್ಟನನ್ನೂ, ಧರ್ಮನೀನನು ಧಾರ್ಮಿಕನನ್ನೂ; ಗುಣಹೀನನು ಗುಣವಂತನನ್ನೂ ; ದ್ವೇಷಿಸುವುದು ಕಲಿಯುಗದ ಲಕ್ಷಣವು.
೩೧. ಗುರುವು ಮಯೂರನಿಗಿತ್ತ ಉಪದೇಶದಲ್ಲಿ ಮೂರಂಶಗಳು ಮುಖ್ಯ : 'ಮೊದಲನೆಯದು' ಕಂಡು ಹೇಳಬೇಕಲ್ಲದೆ ಕಾಣದೆ ಹೇಳಬಾರದು. ಎರಡನೆಯದು, ಹೆರರು ಹೇಳಿದುದನ್ನು ಕಾಣಲು ಯತ್ನಿಸಬೇಕು. ಕಾಣದ ಮಾತ್ರಕ್ಕೆ ಇಲ್ಲವೆನ್ನಬಾರದು. ಹಾಗೆಯೇ ಹೇಳಿದವರೆಲ್ಲರ ಮಾತನ್ನು ನಂಬಬಾರದು. ಲೋಕದಲ್ಲಿ ಬಾಳಬೇಕೆಂದಿರುವವನು ನಂಬಿಕೆ ಅಪನಂಬಿಕೆಗಳನ್ನು, ಬೆಳಕು ಕತ್ತಲೆಗಳಂತೆ ಹವಣರಿತು, ಉಪಯೋಗಿಸಿಕೊಳ್ಳಬೇಕು ; ಮೂರನೆಯದ, ಗುರಿಯಿಲ್ಲದ ಕೆಲಸ ಮಾಡಬಾರದು. ಕೇಳಿ ಹೇಳಿದರೂ ಅರಿತು ಕುರಿತು ಮಾಡಬೇಕು, ತೋರಿತೆಂದು ಆಡಿ ಮಾಡಬಾರದು.

---

೨೩. ಅದೇ ಪು .೩,
೨೪ ಅಲ್ಲೇ
೨೫ ಅದೇ ಪು. ೭
೨೬ ಅದೇ, ಪು. ೮
೨೭. ಅದೇ. ಪು. ೫೯,
೨೮. ಅದೇ. ಪು. ೬೧
೨೯. ಅದೇ. ಪು. ೬೨
೩೦. ಮಯೂರ, ಪು. ೬೩
೩೧. ಅದೇ. ಪು. ೮೧

## ೬. ಉಪಸಂಹಾರ

---

ದೇವುಡು ಈ ಶತಮಾನದ ಆರಂಭದ ದಿನಗಳಲ್ಲಿ ಬಂದ ಸಾಹಿತಿಗಳು, ಕತೆಗಾರರಾಗಿ, ಕಾದಂಬರಿಕಾರರಾಗಿ ಹೆಸರು ಮಾಡಿದವರು. ಅದರಲ್ಲೂ ಪೌರಾಣಿಕ ದಾದಂಬರಿ ರಚಕರಲಿ ಅದ್ವಿತೀಯರು. ಇವರ ರಚನೆ–ಕಾಲಕ್ಕಾಗಲೇ ಕನ್ನಡದಲ್ಲಿ ಒಂದು ವೇದಿಕೆ ಸಿದ್ಧವಾಗಿತ್ತು. ಕ್ರಿ.ಶ. ೧೭೫೦ರಿಂದ ಆರಂಭಗೊಂಡು ೧೮೫೦ರ ಅವಧಿಯಲ್ಲಿ ಇಂಗ್ಲಿಷ್ ಸಾಹಿತ್ಯದ ಪ್ರಭಾವವಿಲ್ಲದೆ ಸಾಮಾನ್ಯ ಓದುಗರಿಗಾಗಿ ಕನ್ನಡ ಮತ್ತು ಸಂಸ್ಕೃತ ಮಹಾಕಾವ್ಯಗಳ ಗದ್ಯರೂಪ ಚಾಲ್ತಿಗೆ ಬಂದಿತ್ತು. ಅವುಗಳನ್ನು ಕಥಾನಕಗ ಳೆಂದು ಕರೆಯುತ್ತಾರೆ. ಇವುಗಳಲ್ಲಿ ಯಾದವ ಕಬ್ಬಿಗನ 'ಕಲಾವತೀ ಪರಿಣಯ (೧೮೧೫), ಗಂಗಾಧರ ಮಡಿವಾಳೇಶ್ವರ ತೂರಿ ಮರಿಯವರ ಬಾಣಭಟ್ಟನ ಕಾದಂಬರಿಯ ಗದ್ಯಾನುವಾದ (೧೮೭೫) ಮುಖ್ಯವಾದವುಗಳು. ಅದೇ ಅವಧಿಯಲ್ಲಿ ಸ್ವತಂತ್ರ ಕೃತಿ ಗಳೋ ಎನ್ನುವಷ್ಟರಮಟ್ಟಿನ ಸಂಸ್ಕೃತ ಸಾಹಿತ್ಯ ಪ್ರಭಾವದಿಂದ ಕಾದಂಬರಿಗಳು ಮೂಡಿಬಂದವು. ಅವುಗಳಲ್ಲಿ ಮುಮ್ಮಡಿ ಕೃಷ್ಣ ರಾಜನ ಸೌಗಂಧಿಕಾ ಪರಿಣಯ (೧೮೨೦), ಕೆಂಪು ನಾರಾಯಣನ ಮುದ್ರಾಮಂಜೂಷ (ಮೊತ್ತ ಮೊದಲ ಐತಿಹಾಸಿಕ ಕಾದಂ ಬರಿ ಕಾಲ ಕ್ರಿ. ಶ. ೧೯೨೩) ಬಂದವು.

ಇವಾದ ಮೆಲೆ ಕ್ರಿ.ಶ. ೧೮೫೦ರ ಈಚೆಗೆ ಇಂಗ್ಲಿಷ್ ಸಾಹಿತ್ಯ ಸಂಪರ್ಕ ವಿಶೇಷವಾಗಿ ಆಯಿತು ಕನ್ನಡ ಸಾಹಿತ್ಯದ ಮೇಲೆ. ಕ್ರೈಸ್ತ ಮಿಷನರಿಗಳ ಸ್ತುತ್ಯ ಪ್ರಯತ್ನದಿಂದಾಗಿ ಕನ್ನಡ ಸಾಹಿತ್ಯ ಸರ್ವಾಂಗ ಸುಂದರವಾಯಿತು. ಅಲ್ಲಿನ ಅನೇಕ ಸಾಹಿತ್ಯ ಪ್ರಕಾರಗ

ಳನ್ನು ತಾನು ಅಳವಡಿಸಿಕೊಂಡು ಮೆರೆಯಿತು. ಅಂದು ಭಾವಗೀತ (Lyric) ಮೊದಲಾದ ಕಾವ್ಯ ಪ್ರಕಾರಗಳಿಗಿಂತಲೂ ಮೊದಲು ಪ್ರಭಾವಿತವಾದದ್ದು ಗದ್ಯ. ಹಿಂದಿನ ಕಥಾನಕ ಕೋಶವನ್ನು ಹರಿದು ಹೊರಬಂದು ಕನ್ನಡ ಗದ್ಯ ಕಾದಂಬರಿ ಪ್ರಕಾರ ದತ್ತ ಧಾವಿಸಿತು. ಪರಿಣಾಮವಾಗಿ ೧೮೫೨ರಲ್ಲಿ ಎಸ್. ಬಿ. ಕೃಷ್ಣಸ್ವಾಮಿ ಅಯ್ಯಂಗಾರ್ 'ರಾಬಿನ್ ಸನ್ ಕ್ರೂಸೊ' ಕಾದಂಬರಿ ಕೊಟ್ಟರು. ಬಾಪು ಸುಬ್ಬರಾಯರು 'ನಿರ್ಭಾಗ್ಯ ಮುರಾದ' ಕೊಟ್ಟರು. ೧೮೯೨ರಲ್ಲಿ ಲಕ್ಷ್ಮಣರಾವ ಭೀಮರಾವ ಗದಗಕರವರು 'ಸೂರ್ಯಕಾಂತ' ಎಂಬ ಮೊತ್ತಮೊದಲ ಸ್ವತಂತ್ರ ಕಾದಂಬರಿ ಕೊಟ್ಟರು. ಗುಬ್ಬಿ, ಸೋ. ಮುರಿಗಾರಾಧ್ಯರು ೧೮೯೬ರಲ್ಲಿ 'ಶೃಂಗಾರ ಚಾತುರ್ಯೋಲ್ಲಾಸಿನಿ' ಕೊಟ್ಟು – ಮೈಸೂರು ವಿಭಾಗದ ಮೊತ್ತ ಮೊದಲ ಸ್ವತಂತ್ರ ಕಾದಂಬರಿಕಾರರೆನಿಸಿದರು. ಅವರ ನಂತರ ೧೮೯೨ರಲ್ಲಿ ಎಂ. ಎಸ್. ಪುಟ್ಟಣ್ಣನವರ ಸುಮತಿ ಮತ್ತು ಮದನಕುಮಾರ ಚರಿತ್ರೆ ಎಂಬ ಇಂಗ್ಲಿಷ್ ಪ್ರಭಾವಿತ ಕೃತಿ, ೧೮೯೯ರಲ್ಲಿ ಗೂಳಪ್ಪ ಕೊಟ್ರಪ್ಪನ 'ಕನ್ನಡ ಶೌರ್ಯಸಾಗರ' ಎಂಬ ಕಾಲ್ಪನಿಕ ಕಾದಂಬರಿ, ೧೯೦೩ರಲ್ಲಿ ಗುಲ್ವಾಡಿ ವೆಂಕಟ ರಾಯರ 'ಇಂದಿರಾ ಬಾಯಿ', ಗುಲ್ವಾಡಿ ಅಣ್ಣಾಜಿರಾಯರ 'ರೋಹಿಣಿ ', ಬೋಳಾರ ಬಾಬೂರಾಯರ 'ವಾಗ್ದೇವಿ' ಮೊದಲಾದ ಸಾಮಾಜಿಕ ಕಾದಂಬರಿಗಳು ಬಂದವು. ಈ ಪರಂಪರೆಯಲ್ಲೇ ಕಾಣುವ ಮುಂದಿನ ಹೆಸರು ದೇವುಡು ನರಸಿಂಹಶಾಸ್ತ್ರಿಗಳದು. ಅವರು ೧೯೧೭ರಲ್ಲಿ ಸಾಹಸವರ್ಮ ಎಂಬ ಒಂದು ಕಾಲ್ಪನಿಕ ಕಾದಂಬರಿಯನ್ನು ರಚಿಸಿದ್ದರು. ಅನಂತರ ಅದೇ ದಿಸೆಯಲ್ಲಿ ಮುಂದುವರಿದು ಸಾಮಾಜಿಕ, ಐತಿಹಾಸಿಕ, ಮನೋವಿಶ್ಲೇಷನಾತ್ಮಕ ಹಾಗೂ ಪೌರಾಣಿಕ ಕಾದಂಬರಿಗಳನ್ನು ಕೊಟ್ಟರು. ಅದರಲ್ಲಿ ಪೂರ್ವ ಪಶ್ಚಿಮಗಳೆರಡೂ ಮೇಳೈಸಿದವು. ಭಾರತದ ಆರ್ಷೇಯ ಸಂಸ್ಕೃತಿ ಮತ್ತು ಪಾಶ್ಚಾತ್ಯರ ಅರ್ವಾಚೀನ ನಾಗರಿಕತೆ ಎರಡನ್ನೂ ಸಮಪ್ರಮಾಣದಲ್ಲಿ ಸ್ವೀಕರಿಸಿ ಅವುಗಳ ಸಾರವನ್ನು ಭಟ್ಟಿ ಇಳಿಸಿದರು ತಮ್ಮ ಕೃತಿಗಳಲ್ಲಿ. ತಮ್ಮ ಪೌರಾಣಿಕ ಕಾದಂ ಬರಿಗಳಲ್ಲೂ ಆಧುನಿಕತೆಯನ್ನು ಅಳವಡಿಸಿದರು. ಉದಾಹರಣೆಗೆ ವಿಶ್ವಾಮಿತ್ರನಿಗೆ ಬ್ರಹ್ಮರ್ಷಿ ಪಟ್ಟವನ್ನು ಪ್ರದತ್ತ ಮಾಡುವ ಸನ್ನಿವೇಶ ಆಧುನಿಕ ಘಟಿಕೋತ್ಸವವನ್ನು ನೆನಪಿಗೆ ತರುವಂಥದು. ಅಲ್ಲಿ ನಡೆಯುವ ವಿಚಾರ ಚರ್ಚೆ ಒಬ್ಬರು ಸೂಚಕರು, ಮತ್ತೊಬ್ಬರು ಅನುಮೋದಕರು – ಈ ಕಲ್ಪನೆ ಇವೆಲ್ಲಾ ಆಧುನಿಕ ಪ್ರಭಾವ. ಹೀಗೆ ಒಂದು ಹೊಸ ಆಯಾಮ ಕನ್ನಡ ಗದ್ಯ ಸಾಹಿತ್ಯಕ್ಕೊದಗಿ ಅದು ಸಮೃದ್ಧವಾಗಲು ಸಹಾಯವಾಯಿತು.

ದೇವುಡುರವರ ಮನೋಧರ್ಮ ತುಂಬಾ ನಿಷ್ಠುರದ್ದೆಂದು ಹಿಂದೆಯೇ ತಿಳಿದೆವು. ಆದರೆ ಅವರದು ತುಂಬಾ ಹೆಣ್ಣುಗ ರಳು. ಅವರು ಚಿತ್ರಿಸಿರುವ ಸ್ತ್ರೀಪಾತ್ರಗಳೆಲ್ಲವೂ ಭೂಮ ವ್ಯಕ್ತಿತ್ವವುಳ್ಳ ಆದರ್ಶ ಪಾತ್ರಗಳು. ಆದರ್ಶ ಪಾತ್ರ ನಿರ್ಮಾಣವೇ ಅವರ ರಚನೆಯ ಪರಮಗುರಿ. ಏನೋ ಎನ್ನುವ ಭಾವನೆ ಮೂಡುವಷ್ಟು ಕರುಣೆ ತೋರಿದ್ದಾರೆ. ಸ್ತ್ರೀ ಪಾತ್ರಗಳಿಗೆ ಚಿನ್ನಾ ಕಾದಂಬರಿಯ ಚಿನ್ನಾಸಾನಿಯಂತೆ, ಕಳ್ಳರಕೂಟದ ಸುಂದರಿಯನ್ನೂ ಆದರ್ಶದ ಮಾನವ ಅಟ್ಟಣಿಯ ಮೇಲಿಟ್ಟು ನೋಡಿದ್ದಾರೆ. ಆ ನಾಯಕಿ ಯಲ್ಲಿ ಎಷ್ಟೇ ಸಹಜ ದೌರ್ಬಲ್ಯಗಳಿದ್ದರೂ ಅವುಗಳನ್ನು ಹತ್ತಿಕ್ಕುವ ಮನಶ್ಯಕ್ತಿ ಅದರಲ್ಲಿದೆ. ಪೌರಾಣಿಕ ಕಾದಂಬರಿಗಳಲ್ಲಿ ಬರುವ ಗಾರ್ಗಿ, ಮೈತ್ರೇಯಿ, ಕಾತ್ಯಾಯಿನಿ, ಆಲಂಬಿನಿ, ಕದಂಬಿನಿ, ಜಾಯಂತಿ – ಇವರು ನಿಜಕ್ಕೂ ಸ್ತ್ರೀ ಕುಲದ ಮುಡಿಗೆ ಹೂವ ತಂದ ವರು. ದೇವುಡುರವರ ಪುರುಷ ಪಾತ್ರಗಳಲ್ಲಿ ಒಂದಲ್ಲ ಒಂದು ದೋಷ ಹುಡುಕಬಹುದು. ಆದರೆ ಸ್ತ್ರೀ ಪಾತ್ರಗಳಲ್ಲಿ ಎಲ್ಲೂ ನಾವು ಬೆರಳೆತ್ತುವಂತಿಲ್ಲ. ಇದು ದೇವುಡುರವರ ಮನೋಧರ್ಮ. ಅದು ಸಂಸ್ಕೃತಿ ಭೂಯಿಷ್ಠ ಮತ್ತು ಅನುಕರಣ ಯೋಗ್ಯಗುಣ.

ಸಾಮಾಜಿಕ ಕಾದಂಬರಿ ರಚನೆಯಲ್ಲಿ ದೇವುಡುರವರದು ಹೆಚ್ಚು ಪಳಗಿದ ಕೈ ಅಲ್ಲ. ಆದರೆ ಪೌರಾಣಿಕ ಕಾದಂಬರಿಯಲ್ಲಿ ಅವರದು ಎತ್ತಿದ ಕೈ ; ಅದ್ವಿತೀಯ, ಅನ್ಯಾದೃಶ. ವೇದಯುಗಕ್ಕೆ ಓದುಗನನ್ನು ಕೊಂಡೊಯ್ಯುವ ಮೋಡಿ ಇದೆ. ಅಲ್ಲಿನ ಜನ ಜೀವನ, ಸಂಸ್ಕೃತಿ, ನಾಗರಿಕತೆ, ಶಿಕ್ಷಣ, ಕೊಳ್ ಕೊಡುಗೆ – ಒಟ್ಟಿನಲ್ಲಿ ಆರ್ಷೇಯ ಬದುಕು ನಮ್ಮನ್ನು ಸಂಪೂರ್ಣವಾಗಿ ಆಕ್ರಮಿ ಸಿಕೊಂಡು ಬಿಡುತ್ತದೆ. ಎಲ್ಲಿ ನೋಡಿದರೂ ಏನು ಕೇಳಿದರೂ ಆಶ್ರಮ ವಾಸಿಗಳ ವಾಣಿ ಮತ್ತು ಬದುಕು ಇವುಗಳೇ ತಾಂಡವ ವಾಡುವಂತೆ ಮಾಡಿದ್ದಾರೆ. ಕತೆಯ ತಿರುಳು ಕಡಿಮೆ ಇದ್ದರೂ ತುಂಬಿಕೊಡುತ್ತಾರೆ ವೇದ ಉಪನಿಷತ್ತುಗಳ ಆಧಾರದ ಮೇಲೆ. ಉದಾಹರಣೆಗೆ ಮಹಾಕ್ಷತ್ರಿಯದ ವಸ್ತು ತೆಳು, ಮಹಾಬ್ರಾಹ್ಮಣದ ವಸ್ತು ದಳ. ಇವೆಲ್ಲಕ್ಕೂ ವ್ಯಾಪಕ ಮಹಾದರ್ಶನದ್ದು. ಆದರೂ ಯಾವುದೂ ಯಾವುದಕ್ಕೂ ಕಡಿಮೆ ಕುಂದು ಎಂಬ ಭಾವನೆ ಬರುವುದೇ ಇಲ್ಲ. ಇಂತಹ ಶಿಲ್ಪಸೌಷ್ಠವದ ಸಿದ್ಧಿ ದೇವುಡುರವ ರದು. 'ವಶಿಷ್ಟ – ವಿಶ್ವಾಮಿತ್ರ, ನಹುಷ, ಯಾಜ್ಞವಲ್ಕ್ಯ – ಇವು ಚರಿತ್ರೆ ಭರತ ಖಂಡವನ್ನು ಒಂದು ಹಿರಿಯ ಸತ್ಯವನ್ನಾಗಿ ಬೆಳ ಗಿದ ಚೈತನ್ಯಗಳು. ತತ್ವಸಿದ್ಧಿಗೆ, ಲೋಕಸಂಗ್ರಹಕ್ಕೆ, ಸಾತ್ವಿಕ ಹಿರಿಮೆಗೆ ಎತ್ತಿದ ಕೈಗಳು ಅವರವು. ಮೂರ್ತಿ ಸ್ವರೂಪವನ್ನು ಜೀವ ವಿಶೇಷವನ್ನು ತಕ್ಕಂತೆ ಕಾಣಿಸುವುದು ಯಾರಿಗೂ ಸಾಹಸವೇ. ಸಾಧಿಸಿದವರು ದೇವುಡು[೧].

ಇಂತಹ ಪುರುಷ ಸಿಂಹಗಳನ್ನು ದೇವುಡುರವರ ಈ ಆಚಾರ್ಯ ಕೃತಿ (Master Piece) ಗಳಲ್ಲಲ್ಲದೆ ಬೇರೆಲ್ಲಿ ಕಾಣಲು ಸಾಧ್ಯ ? ಆದರೆ ಆ ಮೂರೂ ಕೃತಿ ರತ್ನಗಳೂ ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಅಮರ ಕಾವ್ಯಗಳಾಗಿವೆ. ದೇವುಡೂರವರನ್ನೂ ಅಮರಗೊಳಿಸಿದೆ. ದೇವುಡುರವರನ್ನು ಸಾಹಿತಿಯಾಗಿ ಗುರುತಿಸಿ ಅವರಿಗೊಂದು ವಿಶಿಷ್ಟ ಸ್ಥಾನ ಮೀಸಲಿರಿಸುವೆಡೆಯಲ್ಲಿ ಮಹಾ ಬ್ರಾಹ್ಮಣ, ಮಹಾಕ್ಷತ್ರಿಯ ಮತ್ತು ಮಹಾದರ್ಶನ ಕೃತಿಗಳು ಗಣನೆಗೆ ಬರುತ್ತವೆ ಎಂಬ ಮಾತು ಅತಿಶಯೋಕ್ತಿಯಾಗಲಾರದು.

ಹೀಗೆ ಪೌರಾಣಿಕ ಕಾದಂಬರಿಗಳೆಂಬ ಹೊಸ ಗದ್ಯ ಪ್ರಕಾರವನ್ನು ಬೆಳೆಸಿ, ಅದಕ್ಕೊಂದು ರೂಪುಕೊಟ್ಟು ಭಾರತೀಯ ಸಾಹಿತ್ಯಕ್ಕೆ ಮಾದರಿ ಒದಗಿಸಿಕೊಟ್ಟ ದೇವುಡು ನರಸಿಂಹಶಾಸ್ತ್ರಿಗಳು, ಕನ್ನಡದ ಉದ್ದಾಮ ಸಾಹಿತಿಗಳಾಗಿ, ಪೌರಾಣಿಕ ಕಾದಂಬರಿಗಳ ಅಧ್ವರ್ಯುಗಳಾಗಿ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ತಮ್ಮದೇ ಆದ ಒಂದು ಸ್ಥಾನವನ್ನು ಪಡೆದುಕೊಂಡಿದ್ದಾರೆ.

•

---

[೧] ಹಿರಿಯರು–ಗೆಳೆಯರು, ಪು. ೪೨೬

## ದೇವುಡು ಬದುಕಿನ ಪ್ರಮುಖ ಘಟ್ಟಗಳು

| | |
|---|---|
| ಜನನ | : ೧೮೯೬ ಡಿಸೆಂಬರ್ |
| ಶಿಕ್ಷಣ | : ಬಿ.ಎ ಮತ್ತು ಸಂಸ್ಕೃತ ಎಂ.ಎ. ೧೯೧೭–೨೨ |
| ಮೈಸೂರಿನ ಸದ್ವಿದ್ಯಾಶಾಲೆಯ | |
| ಮುಖ್ಯೋಪಾಧ್ಯಾಯ ವೃತ್ತಿ | : ೧೯೨೩ – ೨೪ |
| ಬೆಂಗಳೂರಿನಲ್ಲಿ ಆರ್ಯ ವಿದ್ಯಾಶಾಲಾ | : |
| ಸ್ಥಾಪನೆ | : ೧೯೨೫ |
| ನಿಧನ | : ೨೪–೧೦–೧೯೬೨ |
| ಮಹಾಕ್ಷತ್ರಿಯಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ | |
| ಪ್ರಶಸ್ತಿ (ಮರಣೋತ್ತರ) | : ೧೯೬೨ |

೮೫

# ಹೀಗೊಬ್ಬ ಧರ್ಮರಾಯ

---

**ಎಳೆಯಿಂದ ಮೊಳಕೆಯೊಗೆವಂದು ತಮಟೆಗಳಿಲ್ಲ**
**ಫಲಮಾಗುವಂದು ತುತ್ತೂರಿ ದನಿಯಿಲ್ಲ**
**ಬೆಳಕೀನ ಸೂರ್ಯ ಚಂದ್ರರದೊಂದು ಸದ್ದಿಲ್ಲ**
**ಹೊಲಿ ನಿನ್ನ ತುಟಿಗಳನು – ಮಂಕುತಿಮ್ಮ**

ಇದು ಮಂಕುತಿಮ್ಮನ ಮನೀಷೆ. ಆದರೆ ಹಲವು ಆದರ್ಶಗಳಿರುವುದು ಅಲಂಕಾರಕ್ಕೇ ಹೊರತು ಅನುಷ್ಠಾನಕ್ಕಲ್ಲ. ದೈನಂದಿನ ಬದುಕಿನಲ್ಲಿ ಅವುಗಳನ್ನು ದುಡಿಸಿಕೊಳ್ಳುವುದು ಬಹು ಕಷ್ಟ. ಏಕೆಂದರೆ ಅವು ಅನುಷ್ಠಾನ ಸುಲಭಗಳಲ್ಲ. ಮನಸ್ಸಮಾಧಾನದ ಸಾಧನಗಳು.

ಮೇಲೆ ಕಾಣಿಸಿದ ಮಂಕುತಿಮ್ಮನ ಆದರ್ಶವನ್ನು ಯಾರು ಪಾಲಿಸಿದ್ದಾರೆ, ಪಾಲಿಸುತ್ತಾರೆ ? ಪ್ರಪಂಚದಲ್ಲಿ ಎಲ್ಲರೂ ಪ್ರಚಾರ ಪ್ರಿಯರೆ ! ಅವರ ದೃಷ್ಟಿಯಲ್ಲಿ ಪ್ರಚಾರವೇ ಪ್ರಗತಿ. ಆದರ್ಶವೆನ್ನುವುದು ಅವರ ಅನುಕೂಲ ಸಿಂಧು ! ಪ್ರಾಚೀನ ಕಾಲದಲ್ಲಿ ರಾಜಮಹಾರಾಜರುಗಳು ವಂದಿಮಾಗದರನ್ನು ಸಂಬಳ ಕೊಟ್ಟು ಇಟ್ಟುಕೊಂಡು ಹೊಗಳಿಸಿಕೊಳ್ಳುತ್ತಿದ್ದರು. ಅವರ ಬಾಯಲ್ಲಿ ನರಪೇತಲ ನಾರಾಯಣನೂ ರಣಧೀರನೆನಿಸಿ ಬಿಡುತ್ತಿದ್ದ. ಇಂದಿನ ರಾಜಕಾರಣಿಗಳೂ ಅ ಪ್ರಾಚೀನ ಪದ್ಧತಿಯನ್ನು 'ಚಾಚು' ತಪ್ಪದೆ ಆಚರಣೆಗೆ ತಂದಿದ್ದಾರೆ. ಪ್ರಜಾತಂತ್ರದಲ್ಲಿ ಪ್ರಚಾರಕ್ಕೆ ಗಣ್ಯಸ್ಥಾನ ! ಪ್ರಪಂಚದಿಂದಲೇ ಪದವಿ, ಪ್ರಗತಿ ! ಇಂದು ನ್ಯಾಯ, ಸತ್ಯ, ಧರ್ಮ ನಿಂತಿರುವುದು ಬಹುಮತದ ಮೇಲೆ, ಪ್ರಸ್ತುತದಲ್ಲಿ ಪ್ರಚಾರದ ಮಹತ್ವ ಕುರಿತ ಒಂದು ನಿದರ್ಶನ ಭೌತ ವಿಜ್ಞಾನಿ ಸರ್. ಸಿ.ವಿ. ರಾಮನ್‌ರವರ ಜೀವನದ ಒಂದು ಘಟನೆ ಹೀಗಿದೆ :

'ರಾಮನ್ ರೇಸ್' ಕಂಡು ಹಿಡಿದು ವಿಜ್ಞಾನ ಕೇತ್ರವನ್ನು ಶ್ರೀಮಂತಗೊಳಿಸಿದ ರಾಮನ್‌ರವರಿಗೆ ಬಹಳ ವರ್ಷಗಳವರೆಗೆ ನೋಬೆಲ್ ಪ್ರಶಸ್ತಿ ಬರಲಿಲ್ಲ. ಅವರ ಶಿಷ್ಯ ಪ್ರಶೀಷ್ಯರುಗಳು ಪ್ರಶಸ್ತಿ ಪಡೆದರು. ಅದರೆ ಗುರುವಿಗೆ ಗಿಟ್ಟಲೇ ಇಲ್ಲ. ಅವರ ಅಭಿಮಾನಿಗಳೆಲ್ಲರಿಗೂ ಬೇಸರವಾಯಿತು. ಪ್ರಶಸ್ತಿ ನಿರ್ಣಯಮಂಡಲಿಯವರ ಅವಜ್ಞತೆಯನ್ನು ಗೊತ್ತುಪಡಿಸುವ ಸಲುವಾಗಿ ಅನೇಕರು ಮಂಡಲಿಯ ಪದಾಧಿಕಾರಿಗಳನ್ನು ಭೇಟಿಮಾಡಿ ರಾಮನ್‌ರವರ ಮೇಧಾವಿತನ, ಅವರ ಅಭೂತಪೂರ್ವ ಆವಿಷ್ಕಾರ, ಅವರ ಶಿಷ್ಯ ಸಮುದಾಯದ ಪ್ರಗತಿ, ಪ್ರಸಿದ್ಧಿ ಎಲ್ಲವನ್ನೂ ವಿವರಿಸಿದರು. ಮಂಡಲಿ ಕಿವುಡುಗೊಳ್ಳಲಿಲ್ಲ. ಎಲ್ಲವನ್ನೂ ಅರ್ಥಮಾಡಿಕೊಂಡು, ತಾನೂ ಒಮ್ಮೆ ಪರಿಶೀಲಿಸಿ, ಸರಿ ಅನ್ನಿಸಿದಮೇಲೆ ರಾಮನ್‌ರವರಿಗೆ ಪ್ರಶಸ್ತಿಯನ್ನು ಘೋಷಿಸಿತು. ಸುದ್ದಿ ಪತ್ರಿಕೆಗಳಿಗೆ ಬಿಡುಗಡೆಯಾದ ಕೂಡಲೇ ಹತ್ತಾರು ಜನ ಪತ್ರಕರ್ತರು ಮುತ್ತಿಗೆ ಹಾಕಿದರು. ಸರ್. ಸಿ.ವಿ. ರಾಮನ್‌ರವರನ್ನು ಅವರು ಕೇಳಿದ ಒಂದೇ ಒಂದು ಪ್ರಶ್ನೆ, 'ರಾಮನ್‌ರವರೆ ತಮಗೆ ನೋಬೆಲ್ ಪ್ರಶಸ್ತಿ ಬಂದಿರುವ ಈ ಶುಭ ಸಂದರ್ಭದಲ್ಲಿ ನಿಮಗೆ ಏನನ್ನಿಸುತ್ತೆ?' ಕ್ಷಣಕಾಲ ತಡೆದು ರಾಮನ್ ಉತ್ತರಿಸಿದರು.

'Propoganda succeeds everything' ಎಂದು.

ಇದು ಕಟುವಾದರೂ ಸತ್ಯ.

ಹೇಳಿಕೇಳಿ ಇದು ಪ್ರಚಾರಯುಗ. ಪ್ರಚಾರವಿಲ್ಲದೆ ಯಾರೂ ಯಾವ ಕಾರ್ಯವೂ ಬೆಳಕಿಗೆ ಬರುವುದಿಲ್ಲ. ಬೆಳಕಿಗೆ ಬರಬೇಕು, ತನ್ನ ತಾನು ಮೆರೆಯಬೂಕು, ಎಲ್ಲರಿಂದಲೂ ಹೊಗಳಿಸಿಕೊಳ್ಳಬೇಕು ಎಂಬ ಅಭೀಪ್ಸೆಗಳು ದ್ವಾಪರಯುಗದ ಧರ್ಮರಾಯನನ್ನು ಕಾಡಲಿಲ್ಲ. ಅವನದು ನುಡಿದಂತೆ ನಡೆ. ತನ್ನ ದಾಯಾದಿಗಳು ಅಹಿತವನ್ನೇ ಬಗೆದರು. ಪ್ರತಿಯಾಗಿ ಅವರಿಗೆ



ದ್ರೋಹ ಬಗೆಯಲಿಲ್ಲ. ಘೋಷಯಾತ್ರೆಯ ಸಂದರ್ಭವನ್ನು ಉದಾಹರಿಸಬಹುದು. ವನವಾಸ ಅನುಭವಿಸುತ್ತಿದ್ದ ಪಾಂಡವರ ಹೊಟ್ಟೆ ಉರಿಸಲು ದುರ್ಯೋಧನ ತನ್ನ ಅಂತಃಪುರದ ಸ್ತ್ರೀಯರು ಪರಿವಾರದವರು ಮೊದಲಾದವರೊಡನೆ ಅವರಿದ್ದ ಅಡವಿಗೆ ಹೋದ. ಅವರ ಮುಂದೆ ತನ್ನ ಅಧಿಕಾರ, ಅಟ್ಟಹಾಸ, ಸಿರಿವಂತಿಕೆಗಳನ್ನು ಮೆರೆಯುವ ಇಚ್ಛೆಯಿಂದಲೇ ಹೋದ. ಆದರೆ ಪರಿಸ್ಥಿತಿ ಬೇರೆಯಾಯಿತು. ಮಾರ್ಗ ಮಧ್ಯದಲ್ಲಿ ಚಿತ್ರಾಂಗದ ಎಂಬ ಓರ್ವ ಗಂಧರ್ವ ದುರ್ಯೋಧನನ್ನು ಎಡೆಮುರಿ ಕಟ್ಟಿಕೊಂಡು ಗಗನ ಮಂಡಲಕ್ಕೆ ಕೊಂಡೊಯ್ದ. ಆ ಸಂದರ್ಭದಲ್ಲಿ ದ್ರೋಣ, ಕರ್ಣ, ಭೀಷ್ಮ, ದುಶ್ಯಾಸನ ಎಲ್ಲರೂ ಇದ್ದರೂ, ಯಾರೂ ಬಿಡಿಸಿ ತರುವ ಸಾಹಸಕ್ಕೆ ಕೈಹಾಕಲಿಲ್ಲ. ಸನ್ನಿವೇಶದ ಸೂಕ್ಷ್ಮವರಿತ ಭಾನುಮತಿ (ದುರ್ಯೋಧನನ ಪತ್ನಿ) ಓಡಿ ಬಂದು ಧರ್ಮರಾಯನ ಪಾದ ಹಿಡಿದು ಪತಿಭಿಕ್ಷೆ ಬೇಡಿದಳು. ಧರ್ಮರಾಯ ಅರ್ಜುನನಿಗೆ ಆಜ್ಞೆ ಮಾಡಿದ. ಆದರೆ ಭೀಮನಿಗೆ ಅದು ಸಮ್ಮತವಾಗಲಿಲ್ಲ. 'ಸಾಯಲಿ ಪಾಪಿ ! ಅಣ್ಣಾ, ನಾವು ಮಾಡಬೇಕಾದ ಕಾರ್ಯವನ್ನು ಗಂಧರ್ವ ಮಾಡಿದ್ದಾನೆ. ಹಲಾಗಲಿ ದ್ರೋಹಿ' ಅಂದ. ಆ ಮಾತು ಧಮ್ರಾಯಬಿಗೆ ಮೆಚ್ಚಾಗಲಿಲ್ಲ. ನಾದಿನಿಯನ್ನು ಕುರಿತು 'ಅಮ್ಮ ನಾವು ಕಿತ್ತಾಡುವಾಗ ಕೌರವರು ನೂರು ಮಂದಿ ಪಾಂಡವರು ಐದು ಜನ. ಆದರೆ ಮೂರನೆಯವರು ನಮ್ಮ ಮೆಲೆರಗಿ ಬಂದಾಗ 'ನೂರೈವರಾವಲ್ಲದೆ' 'ವಯಂ ಪಂಚಾಧೀಕಂ ಶತಂ' ಎಂದು ಹೇಳಿ ಅವಳನ್ನು ಸಮಾಧಾನಪಡಿಸಿ, ಅರ್ಜುನನ್ನು ಕರೆದು 'ಧನಂಜಯ, ಈ ಕೂಡಲೇ ಗಂಧರ್ವನಿಂದ ನಿಮ್ಮಣ್ಣನ್ನು ಬಿಡಿಸಿಕೊಂಡು ಬಾ' ಎಂದು ಆಜ್ಞಾಪಿಸುತ್ತಾನೆ.

ಇಲ್ಲಿ ಮುಖ್ಯವಾಗಿ 'ನಿಮ್ಮಣ್ಣನನ್ನು' ಎಂಬ ಮಾತಿನಲ್ಲಡಗಿರುವ ಅಭಿಮನ, ಆತ್ಮೀಯತೆ, ಭ್ರಾತೃಪ್ರೇಮಗಳನ್ನು ಗುರುತಿಸ ಬೇಕು. ಒಂದು ವೇಳೆ ಧರ್ಮರಾಯನನ್ನೇ ಬೇರೊಬ್ಬ ಗಂಧರ್ವ ಅಪಹರಿಸಿಕೊಂಡು ಹೋಗಿದ್ದರೆ ಅರ್ಜುನಾದಿಗಳು ಸುಮ್ಮನಿರಲು ಸಾಧ್ಯವಿತ್ತೆ ? ಈಗಲೂ ಅಷ್ಟೆ ತಮಗೆಷ್ಟೇ ದ್ರೋಹ ಬಗೆದದ್ದರೂ ದುರ್ಯೋಧನ ತನ್ನವನು, ತನಗೆ ತಮ್ಮ, ಇತರರಿಗೆ ಅಣ್ಣ ನಮ್ಮ ತಮ್ಮಲ್ಲಿ ಜಗಳವಾಗಿದ್ದರೆ ಅದು ಜ್ಞಾತಿ ಕಲಹ. ಆ ಬಗ್ಗೆ ಅನ್ಯರ ಪ್ರವೇಶ ಕೂಡದು. ಅದರ ದುರ್ಲಾಭವನ್ನು ಪಡೆಯುವ ಹಕ್ಕೂ ಸವರಿಗಿಲ್ಲ. ಆದ್ದರಿಂದ ಧರ್ಮರಾಯ ದುರ್ಯೋಧನನ್ನು ಬಿಡಿಸಿಕೊಂಡು ಬಾ ಎನ್ನುವುದಿಲ್ಲ. 'ನಿಮ್ಮಣ್ಣನನ್ನು ಬಿಡಿಸಿಕೊಂಡು ಬಾ' ಎನ್ನುತ್ತಾನೆ. 'ವಿಷವಿಕ್ಕಿವರಿಗೆ ಅಮೃತ ಉಣಿಸುಬೆಕು' ಎಂಬ ದಾಸರ ನುಡಿಯನ್ನು ನಡೆದು ತೋರಿದವನು ಅಂದಿನ ಧರ್ಮರಾಯ. ಇಂದು ಈ ಕಲಿಯುಗದಲ್ಲಿ ತನ್ನ ಮಗ ತಾಯಿಯ ಮಕ್ಕಳನ್ನು ಒಡ ಹುಟ್ಟಿದವರಿಗಿಂತಲೂ ಮಿಗಿಲಾಗಿ ಕಂಡು ತಂದೆ ತೀರಿಕೊಂಡ ಮೇಲೆ ತಂದೆಯ ಸ್ಥಾನದಲ್ಲಿ ತಾನು ನಿಂತು ಸಂಸಾರ ನಿರ್ವಹಣೆ ಮಾಡಿದ ಮಹನೀಯನೊಬ್ಬನಿದ್ದಾನೆ. ಅವನನ್ನು ಅವನ ಮಲತಾಯಿ (ಹೆತ್ತ ತಾಯಿಗೂ ಮಿಗಿಲು) ಹೇಳಿದ ಮಾತು 'ನಿಮ್ಮಣ್ಣನನ್ನು ನೋಡ್ರೋ ಧರ್ಮರಾಯ ನಂಥ ಮನುಷ್ಯ' ಎಂಬ ಪ್ರಶಂಸೆ. ಅಂತಹ ವ್ಯಕ್ತಿ ಈ ಬರಗಾಲದಲ್ಲಿ ಸಿಗುವುದು ಅಪರೂಪ, ಕೇಳಿ –

ಹೀಗೊಬ್ಬ ಧರ್ಮರಾಯ
ಅವನೇ ನಮ್ಮ ಟಿ. ಎನ್. ಮಹದೇವಯ್ಯ

* * *

ಎರಡು ಸಾವಿರ ವರ್ಷಗಳ ಹಿಂದೆ ಯೇಸುನಾಥ ಹುಟ್ಟಿದ್ದು ಡಿಸೆಂಬರ್ ೨೫ರಂದು, ಜೆರುಸಲೆಮ್‌ನಲ್ಲಿ ಜೋಸೆಫ್ ಮತ್ತು ಮೇರಿಯವರ ಮಗನಾಗಿ. ನಮ್ಮ ಕಥಾನಾಯಕ ಹುಟ್ಟಿದ್ದು ೧೯೧೪ರ ಡಿಸೆಂಬರ್ ೨೬ರಲ್ಲಿ ನಾಗಪ್ಪ ಮತ್ತು ಅಡವಮ್ಮನವರ ಮಗನಾಗಿ. ಅವನು ತನ್ನ ಅವಸಾನದ ವೇಳೆಯಲ್ಲಿ ತನ್ನ ಶಿಲುಬೆ ತಾನೆ ಹೊತ್ತ. ಈತ ತನ್ನ ಜೀವನದುದ್ದಕ್ಕೂ ಬೆನ್ನು ಮೂಳೆ ಮುರಿಯುವಂಥ ಶಿಲುಬೆ ಹೊರೆ ಹೊತ್ತು ಸಾಗಿದ. ಅವನಿಗೆ ಮೇರಿಮಾತೆಯ ರಕ್ಷಣೆ ಅನೇಕ ವರ್ಷಗಳವರೆಗಿತ್ತು. ಈತ ಹುಟ್ಟಿದ ನಾಲ್ಕು ವರ್ಷಗಳಲ್ಲೇ ತಾಯಿ ಕಳೆದುಕೊಂಡು ತಬ್ಬಲಿ ಆದ. ಆದರೆ ಜಯದೇವಿ ತಾಯಿ ಲಿಗಾಡೆಯವರು ಹೇಳುವಂತೆ 'ಹಡೆವ ತಾಯಿಗಿಂತ ಪಡೆದ ತಾಯಿ ಶ್ರೇಷ್ಠಳಾದಳು! ' ಅವಳೇ ಹೊನ್ನುಡಿಕೆಯ ನಂಜಮ್ಮ. ನಂಜಮ್ಮ ನಾಗಪ್ಪನವರ ಕೈಹಿಡಿದು ಮನೆ ಮನ ತುಂಬಿದ ಮುಗ್ಧ ಮಡದಿಯಾಗಿ ಬಂದರು. ಮಹದೇವಯ್ಯ, ಮಂಜುನಾಥ ಇವರನ್ನು ತಮ್ಮ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳೆಂದೇ ಭಾವಿಸಿ ಬೆಳಸಿದರು. ಸಾಗ್ಗೆರೆ ವೀರಮ್ಮ ನಂಜಮ್ಮನವರ ಸವತಿಯಾಗಿ ಬರದೇ ಅಕ್ಕರೆಯ ಅಕ್ಕನಿಗೆ ನೆರವಾಗುವ ಬೆಳಕಿನ ತಂಗಿಯಾಗಿ ಬಂದರು. ಅವರಿಗೂ ಪಾರ್ವತಮ್ಮ, ಷಣ್ಮುಖ, ಸದಾಶಿವಯ್ಯ, ಮಲ್ಲಿಕಾಜುನಯ್ಯ ಮಕ್ಕಳಾದವು. ಮನೆತುಂಬ ಮಕ್ಕಳು, ಅಷ್ಟೇ ಪ್ರಮಾಣದ ಬಡತನ. ಇಬ್ಬರು ತಾಯಂದಿರು. ಒಬ್ಬರು ತಂದೆ. ಆರು ಜನ ಸೋದರರು, ಒಬ್ಬಳು ತಂಗಿ, ಅಬ್ಬಾ ! ಎಷ್ಟು ದೊಡ್ಡ ಸಂಸಾರ ; ಹಡಗಿನ ಗಾತ್ರದ್ದು. ತಂದೆ ತುಮಕೂರಿಂದ ತಿಪಟೂರಿಗೆ ಸಂಸಾರವನ್ನು ವರ್ಗಾಯಿಸಿ, ತಿಪಟೂರಲ್ಲಿ ಒಂದು ಕಿರಾಣಿ ಅಂಗಡಿ ತೆರೆದರು. ದುಡಿಯುವ ಕೈ ಒಂದು ಉಣ್ಣುವ ಬಾಯಿಗಳು ಹನ್ನೊಂದು ! ದೈನಂದಿನ ತುತ್ತಿಗೇ ಕಷ್ಟವಿರುವಾಗ ತನ್ನ ಮತ್ತು ತನ್ನ ತಮ್ಮ ತಂಗಿಯರ ವಿದ್ಯಾಭ್ಯಾಸ ಹೇಗೆ ನಡೆದೀತು ? ವಿದ್ಯೆ ನೈವೇದ್ಯವಾಯಿತು ! ಆದರೂ ಒಳಗಿನೊಳಗಣ ಒತ್ತಡ ಬಿಡಲಿಲ್ಲ. ದಾರುಣ ದಿನಗಳಲ್ಲಿ ಈ ತರುಣ ದೈವ ನಂಬಿ ನಡೆದರು, ಓದಿದ ಹೇಳುತ್ತಾರೆ.

"ಅವರು (ತಾಯಿ ಅಡವಮ್ಮ) ಸತ್ತ ನಂತರ ನನ್ನ ಕಷ್ಟದ ದಿನಗಳು ಆರಂಭಿಸಿದವು. ಸುಮಾರು ಎಂಟು ಹತ್ತು ವಯಸ್ಸಿನ ವರೆಗೆ ಅನೇಕ ವಿಧವಾದ ರೋಗಗಳಿಂದ ನಾನು, ನನ್ನ ತಮ್ಮ ನರಳೆದೆವು. ದುರಂತ ಯಾತನೆಯಲ್ಲಿ ಅನೇಕ ಬಾರಿ ಉಳಿದದ್ದೇ ಹೆಚ್ಚಾಯಿತು. ಆ ಪರಿಸ್ಥಿತಿಯಲ್ಲಿ ಹಗಲು ರಾತ್ರಿಯ ಊಟಕ್ಕಾಗಿ ಬೇಕಾದಷ್ಟು ಕಾತರಗೊಳ್ಳುವಂತಾಯಿತು. ಎಷ್ಟೋ ಉಪವಾಸದ ರಾತ್ರಿಗಳನ್ನು ಕಂಡದ್ದಾಯಿತು. ಅದನ್ನೆಲ್ಲ ನೆನಸಿಕೊಂಡರೆ ಹೃದಯಕ್ಕೆ ಅಪರಿಮಿತವಾದ ಯಾತನೆಯಾಗುತ್ತದೆ. ಈ ಸಂದರ್ಭದಲ್ಲಿ ಕೆಲಕಾಲ ನನ್ನ ವಿದ್ಯಾಭ್ಯಾಸವೂ ನಿಂತುಹೋಯಿತು. ಒಂದೆರಡು ವರ್ಷಗಳ ನಂತರ ದೇವರದಯದಿಂದ ನಾವೂ ತಕ್ಕಮಟ್ಟಿಗಾದೆವು. ನಾನೂ ನನ್ನ ವಿದ್ಯಾಭ್ಯಾಸವನ್ನು ಮುಂದುವರೆಸಿದೆ. ಆದರೆ ರೋಗ ರುಜಿನಗಳು ಮಾತ್ರ ಕಡಿಮೆಯಾಗಲಿಲ್ಲ. ಅಂತೂ ಇಂತೂ ಈ ಕಷ್ಟದಲ್ಲಿ ನನ್ನ ಎಸ್. ಎಸ್. ಎಲ್. ಸಿ. ಪರೀಕ್ಷೆಯನ್ನು ಪೂರ್ತಿಮಾಡಿದೆ. ಪರೀಕ್ಷೆಯಲ್ಲಿ ನಾನು ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯಾದ್ದರಿಂದಲೂ ಫೋರ್ತ್ ಫಾರಂ (ಈಗಿನ ಎಂಟನೆಯ ಸ್ಟಾಂಡರ್ಡ್)ನಿಂದಲೆ ನಾನು ಕವಿತೆಗಳನ್ನು ಬರೆಯುವುದಕ್ಕೆ ಕೈಹಾಕಿದುದರಿಂದಲೂ ನಾನು ಎಲ್ಲರಿಗೂ ಪ್ರಿಯನಾಗಿ ಮುಂದೆ ಓದಲು ಪ್ರೋತ್ಸಾಹ ದೊರಕಿತು."

ಬರಗಾಲಕ್ಕೆ ಬೆನ್ನೆಲ್ಲಾ ಹೊಟ್ಟೆಯಂತೆ ! ಆ ಗಾದೆಯನ್ನು ಸುಳ್ಳು ಮಾಡಿದ ಈ ತರುಣ ತೇಜಸ್ವಿ, ಎಸ್.ಎಸ್.ಎಲ್.ಸಿ. ಆದ ಮೇಲೆ ಕಾಲೇಜು ಶಿಕ್ಷಣಕ್ಕೆ ಬೆಂಗಳೂರಿಗೇ ಬರಬೇಕಿತ್ತು. ಹುಡುಗ ಸವರಿವರಿಂದ ಉತ್ತೇಜಿತನಾಗಿ ಬೆಂಗಳೂರಿಗೆ ಬಂದೇ ಬಿಟ್ಟ. ಗುಬ್ಬಿ ತೋಟದಪ್ಪ ಹಾಸ್ಟೆಲಿನಲ್ಲಿ ಬಿಟ್ಟಿ ಊಟ, ವಸತಿ ಗಿಟ್ಟಿಸಿಕೊಂಡ. ಇಂಟರ್ ಮೀಡಿಯಟ್ ಕಾಲೇಜಿನಲ್ಲಿ ಪ್ರವೇಶಾಕಾಶ ಕಲ್ಪಿಸಿ ಕೊಂಡ. ಇಂಟರ್ ಮೀಡಿಯಟ್ ಎರಡುವರ್ಷದ ಪರೀಕ್ಷೆಯನ್ನು ಉತ್ತಮ ಶ್ರೇಣಿಯಲ್ಲಿ ಮುಗಿಸಿ, ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಬಿ.ಎಸ್.ಸಿ. ಶಿಕ್ಷಣ ಮುಂದುವರಿಸಿದ. ಅಂದೂ ಸಹ ಅನಾಥ ಪಕ್ಷಿಗಳಿಗೆ ಆಶ್ರಯ ನೀಡುವ ನವವೃಕ್ಷದಂತಿದ್ದ ಗುಬ್ಬಿ ತೋಟಪ್ಪನವರ ಹಾಸ್ಟೆಲ್ ಆಶ್ರಯ ಅನ್ನ ನೀಡಿ ಸಾಕಿತು.

ಹಟ ಮತ್ತು ಛಲ ಶಬ್ದಗಳು ಸ್ಥಳ ರೂಪಕ್ಕೆ ಒಂದೇ ರೀತಿ ಕಂಡರೂ, ಅವುಗಳ ಅರ್ಥಾಚ್ಛಾಯೆ ತುಮಬಾ ಭಿನ್ನ., ಹಟ ಹಾಳು ಮಾಡುತ್ತೆ, ಛಲ ಉದ್ಧಾರ ನೆರವೇರಿಸುತ್ತೆ. ಹಟ ಮನೆಯೊಳಗಣ ಕಿಚ್ಚು ಹಟವಾದಿ ಹಾಲಾಗ್ತಾನೆ. ಛಲ ಗುರಿಯತ್ತ ಗಮನ ಸೆಳೆಯುವ ದಾರಿ ದೀಪ. ಅದು ಉರಿವ ಕೊಳ್ಳಿ, ಇದು ಬೆಳಗುವ ಜ್ಯೋತಿ, ಆ ಜ್ಯೋತಿ ಹಿಡಿದ ನಮ್ಮ ತರುಣ ತಾನೂ ಜ್ಯೋತಿಯಾಗಿ ಬೆಳಗಾದ. 'ಛಲ ಬೇಕು ಶರಣಂಗೆ'. . .ಎಂಬ ಶರಣ ವಾಣಿಯಂತೆ ಸನ್ಮಾರ್ಗ ದರ್ಶಿ ಛಲವನ್ನು ಮೆರೆದ. 'ಏಳು, ಎದ್ದೇಳು, ಗುರಿಮುಟ್ಟುವವರೆಗೂ ನಿಲ್ಲದಿರು' ಎಂಬ ವಿವೇಕವಾಣಿ ಅಮೃತ ಸೂಚನವಾಯಿತು. ಅವನಂತರಾತ್ಮಕ್ಕೆ. ಅದೇ ರೀತಿಯಲ್ಲಿ ನಡೆದ. ತನ್ನ ಬಾಳಿನ ಅಚಿತಿಮ ಹಂತವಲ್ಲದಿದ್ದರೂ ಸಾಮಾನ್ಯನು ಹತ್ತಬಹುದಾದ ಒಂದು ಮೆಟ್ಟಿಲು ಹತ್ತಿದ. ಬಿ.ಎಸ್.ಸಿ. ಪದವೀಧರನಾಗಿ ವಿದ್ಯಾದಾರಿದ್ರದ ತನ್ನ ಮನೆತನಕ್ಕೆ ವಿದ್ವಾಂಸತ್ವದ ಘನತೆ ತಂದುಕೊಟ್ಟ.

ಹೀಗೊಬ್ಬ ಧರ್ಮರಾಯ
ಅವನೇ ನಮ್ಮ ಟಿ. ಎನ್. ಮಹದೇವಯ್ಯ

* * *

ಹಸಿವಾಯಿತು ಎಂದು ಹುಲಿ ಹುಲ್ಲು ತಿನ್ನುವುದಿಲ್ಲ. ಮೃಗಬೇಟೆಯಾಡಿಯೇ ಬದುಕೀತು. ಬಡತನ ಬಂತೆಂದು ಬದುಕಲು ಏನೇನೊ ಮಾಡಬಾರದು. ಹಸಿವಾದಾಗ ಏನೆಲ್ಲ ತಿಂದರೆ ಆರೋಗ್ಯ ಕೆಡುವಂತೆ, ಬಾಳು ಹಾಳಾಗುತ್ತೆ. ಬಡತನ ಮನುಷ್ಯನ ಯೋಗ್ಯತೆಯ ಒರೆಗಲ್ಲು, ಸಿರಿಯ ಸೆರಗಿನಲ್ಲಿ ಎಲ್ಲ ದೋಷಗಳು ಮರೆಯಾಗುತ್ತವೆ. ಆದರೆ ಬಡತನದ ಬತ್ತಲೆಯಲ್ಲಿ ಎಲ್ಲವೂ ನಗ್ನ ! ಸಮತಟ್ಟಿನ ದಾರಿಯಲ್ಲಿ ನಡೆಯುವಾಗ ಕಣ್ಣು ಮುಚ್ಚಿಕೊಂಡು ನಡದರೂ ಅಪಾಯವಿಲ್ಲ. ಆದರೆ ಏರಿಳಿತಗಳ ಹಳ್ಳಕೊಳ್ಳಗಳೆಡೆಯಲ್ಲಿ ತುಸು ಮೈಮರೆತರೂ ಅಪಾಯ. ಹಗೆ ಬಡತನ ಬಂದಾಗ ಎಚ್ಚರದಿಂದಿರಬೇಕು. ಅಂತೆಯೆ ಬಡತನ ಅನೇಕ ಬಗೆಯ ಪಾಠಗಳನ್ನು ಕಲಿಸುತ್ತದೆ. ಸಿರಿತನದಂತೆ ಮೈಮರೆಸುವುದಿಲ್ಲ. ಆದ್ದರಿಂದ ಬಡವ ತನ್ನ ತನವನ್ನು ಒಡವೆಯಂತೆ ಬಚ್ಚಿಕೊಂಡು, ಮೈಯೆಲ್ಲಾ ಕಣ್ಣಾಗಿ, ಮನವೆಲ್ಲಾ ಕಿವಿಯಾಗಿ ನಡೆಯಬೇಕು. ದೇವರು ಸಹ ಬಡತನ ಕೊಟ್ಟು ವ್ಯಕ್ತಿಯ 'ಒಳತನ' ಪರೀಕ್ಷಿಸುತ್ತಾನೆ. ಆ ಸಂದರ್ಭದಲ್ಲೇನಾದರೂ ಧೃತಿಗೆಟ್ಟನೊ, ದಾರಿತಪ್ಪಿದನೊ ಹಾಳಾಗ್ತಾನೆ. ಸಮಸ್ಯೆಯನ್ನು ಎದುರಿಸಿ ಸನ್ಮಾರ್ಗ ದಲ್ಲಿ ಗಮನಿಸಿದ್ದಾದರೆ 'ಕೈ ಹಿಡಿದೆತ್ತಿಕೊಂಬ ನಮ್ಮ ಕೂಡಲಸಂಗಮದೇವ ! '

ಅಂತಹ 'ಲಿಂಗಮೆಚ್ಚಿ ಅಹುದಹುದೆನ್ನುವ' ಮಟ್ಟಕ್ಕೇರಬೇಕಾದರೆ ಸಾಧಕನಿಗೆ ಅದೆಂತಹ ಆತ್ಮ ಬಲ ಇರಬೇಕು. ನಮ್ಮ ನಾಯಕ ಅಂತಹ ಬಲವುಳ್ಳವನು. ಕಷ್ಟದ ದಿನಗಳಲ್ಲೂ 'ಅನ್ನಕ್ಕೆ ಆಸೆ ಪಡದ ಸ್ಥಿತಪ್ರಜ್ಞ' ಒಮ್ಮೆ ಏನಾಯ್ತು ಅಂದರೆ –

ತಾನು ಮತ್ತು ತನ್ನ ಚಿಕ್ಕಮ್ಮ ಬೆಂಗಳೂರು ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದರು. ಮಧ್ಯದಲ್ಲಿ ಇದ್ದಕ್ಕಿದ್ದ ಹಾಗೆ ಒಂದು ಪುಟ್ಟ ಪರ್ಸ್ ಕಂಡಿತು. ಅದರಲ್ಲಿ ಸ್ವಲ್ಪ ಹಣವೂ ಇತ್ತು. ಚಿಕ್ಕಮ್ಮ ಕೈಗೆತ್ತಿಕೊಂಡರು. ಅವರಿಗೆ ಖುಷಿಯೋ ಖುಷಿ. ಏಕೆಂದರೆ ಹಣವಿಲ್ಲದ ಆಪತ್ಕಾಲ. ತುಂಬಾ ಕಿತ್ತು ತಿನ್ನುವ ದಾರಿದ್ರ್ಯ. ಬೆಂಗಳೂರಿಂದ ತಿಪಟೂರಿಗೆ ಹೋಗುವಷ್ಟು ರೈಲು ಖರ್ಚನ್ನು ಪರಮಾತ್ಮ ಕರುಣಿಸಿದನೆಂಬ ಹಿಗ್ಗು ! ಆದ್ದರಿಂದ ಅದನ್ನೆತ್ತಿ ಮಗನಕೈಗಿಡುತ್ತಾ 'ತಗೊಳಪ್ಪ, ದೇವರು ಕಷ್ಟದಲ್ಲಿ ಆಗ್ತನೆ ಅನ್ನೋದಕ್ಕೆ ಇದು ಸಾಕ್ಷಿ.' ಅಂದರು.

ಕ್ಷಣಕಾಲ ಸ್ತಬ್ದನಾಗಿ ನಿಂತ ಬಾಲಕ (ಆಗಿನ್ನು ಬೆಂಗಳೂರಿನಲ್ಲಿ ಇಮಟರ್ ಮಿಡಿಯಟ್ ಓದುತ್ತಿದ್ದ) ಹೇಳಿದ – 'ಅಮ್ಮಾ ಇದನ್ನು ಯಾರೋ ಪುಣ್ಯಾತ್ಮರು ಗೊತ್ತಿಲ್ಲದೆ ಉದುರಿಸಿಕೊಂಡು ಹೋಗಿದ್ದಾರೆ. ಅನ್ಯರ ಸ್ವತ್ತಿನ ಮೇಲೆ ನಮ್ಮ ಹಕ್ಕು, ಅಧಿಕಾರಗಳಿ ರುವುದಿಲ್ಲ. ಅದಕ್ಕೆ ನಾವು ಆಸೆ ಪಡಬಾರದಲ್ಲವೆ ? ಶಿವನ ಸೊತ್ತು ಶಿವನಿಗೇ ಸೇರಲಿ. ಅಂದರೆ ನಮಗಿಂತಲೂ ಕಷ್ಟ ಕಾರ್ಪಣ್ಯ ಗಳನ್ನುಭವಿಸುತ್ತಾ ಬೀದಿಯಲ್ಲಿ ಅರೆ ಬೆತ್ತಲೆಯಲ್ಲಿ ಅಎಹೊಟ್ಟೆಯಲ್ಲಿ ಹಗಲಿರುಳೆನ್ನದೆ, ಮಳೆ ಗಾಳಿಗಳೆನ್ನದೆ, ಚಳಿ ಬಿಸಿಲುಗಳೆನ್ನದೆ ಒಂದೆ ಸಮನೆ ಭಿಕ್ಷೆ ಬೇಡುವ ಈ ಭಿಕ್ಷುಕರು ಇದರ ಹಕ್ಕುದಾರರು. ಅವರೇ ಅರ್ಹ ಫಲಾನುಭವಿಗಳು. ಅವರಿಗಿದು ಅರ್ಪಿತವಾ

ಗಲಿ. ನಮಗಿದು ಬೇಡ. ಇದನ್ನು ನಾವು ತೆಗೆದುಕೊಂಡು ಹೋದದ್ದಾದರೆ ನಾವು ಬದುಕಿರುವವರೆಗೂ ನಮ್ಮನ್ನು ಕಾಡುತ್ತದೆ. ಅಯ್ಯೋ ಅನ್ಯ ವಸ್ತುವನ್ನು ನಾವು ಉಪಭೋಗಿಸುತ್ತಿದ್ದೇವೆ. ಇದು ಪಾಪ ! ಇದು ಪಾಪ ! ಯಾವ ಪುಣ್ಯಾತ್ಮನೊ ಕಳೆದುಕೊಂಡದ್ದನ್ನು ನಾವು ತಿಂದೆವಲ್ಲಾ ಎಂದು. ಹಾಗೆ ಜನ್ಮವಿಡೀ ಕೊರಗುವುದಕ್ಕಿಂತ, 'ಕೊಎ ನೀರನು ಕೆರೆಗೆ ಚೆಲ್ಲಿ ವರವ ಪಡೆದುಕೊಂಡವ'ರಾದರೆ ಅದರಿಂದ ಸಿಗುವ ಆತ್ಮಾನಂದಕ್ಕೆ ಬೆಲೆ ಕಟ್ಟಲು ಸಾಧ್ಯವಿಲ್ಲ ಅಲ್ಲವೇನಮ್ಮ ? ಹಾಗೆ ಮಾಡಲೇನಮ್ಮ ?

'ಸಂತೋಷ ಹಾಗೆ ಮಾಡು ಮಗು. ಅದಕ್ಕೆ ನಿನ್ನ ತಮ್ಮಂದಿರಿಗೆ ನಾನು ಆಗಾಗ ಹೇಳ್ತಿದ್ದೆ. ನಿಮ್ಮಣ್ಣನನ್ನು ನೋಡು ಎಂತಹ ಗುಣವಂತ. ಸಾಕ್ಷಾತ್ ಧರ್ಮರಾಯ ಎನ್ನುತ್ತಿದ್ದೆ. ನನ್ನಮಾತನ್ನು ನೀನು ಸತ್ಯವಾಗಿಸಿದೆ' ಅಂದರು.

ಹೀಗೊಬ್ಬ ಧರ್ಮರಾಯ
ಅವನೇ ನಮ್ಮ ಟಿ. ಎನ್. ಮಹದೇವಯ್ಯ

* * *

'ಅರಿವೇ ಗುರು' ಎಂಬುದು ಅಲ್ಲಮ ಪ್ರಭುವಿನ ಮಾತು. ನಿನಗೆ ನೀನೆ ಗುರು. ನರ ಗುರು ನಿಮಿತ್ತ ಮಾತ್ರ ಎಂಬುದು ಹಲವರು ಅನುಭವಿಗಲ ಮತು. ಎರಡೂ ಸತ್ಯ. ಅನುಭವದ ಅರ್ಥ ಮೊದಲು ಮಾಡಿದ ತಪ್ಪನ್ನು ಅನಂತರದಲ್ಲಿ ತಿಳಿದು ತಿದ್ದಿಕೊಳ್ಳುವುದು, ಅನುಭಾವವೆಂಬುದು ಆತ್ಮೋನ್ನತಿಯ ಉನ್ನತ ಸ್ತರದಲ್ಲಿ ಜೀವತ್ವ ದೇವತ್ವವನ್ನು ಗುರುತಿಸುವುದು ; ಅಂತಾಗಲು ಹವಣಿಸುವುದು ಕೂಡ. ಆದರದು ಅಲ್ಲಮನಂತಹ ಅಪರೋಕ್ಷ ಜ್ಞಾನಿಗಳ ಮಾರ್ಗ. ನಮ್ಮಂತಹ ಸಾಮನ್ಯರಿಗೆ ತಪ್ಪುಮಾಡದ ಎಚ್ಚರ, ಅರಿದೆ ಮಾಡಿದ್ದರ ತಿದ್ದುಪಡಿಜ್ಞಾನ, ತನ್ನನ್ನು ತನು ರೂಪಿಸಿಕೊಳ್ಳುವ ಸತ್ ಚಿಂತನ ಇವು ಮುಖ್ಯವೆನಿಸುತ್ತವೆ. ಜೊತೆಗೆ ಸತ್ಸಂಗ ಅಥವಾ ಸಹವಾಸವು ಮುಖ್ಯ. ಏಕೆಂದರೆ ಮನುಷ್ಯ ಸಂಘಜೀವಿಯಷ್ಟೇ ಅಲ್ಲ, ಅವನು ಪರಿಸರದ ಶಿಶು ಕೂಡ. ಪರಿಸರ ಅವನ ಬೆಳವಣಿಗೆಯ ಮೇಲೆ ತುಂಬಾ ಪ್ರಭಾವ ಬೀರುತ್ತದೆ. 'ಒಳ್ಳೆಯವರೊಡನಿದ್ದ ಕಳ್ಳನೊಳ್ಳಿದನಕ್ಕೆ, ಕಳ್ಳರೊಳಗಿದ್ದ ಒಳ್ಳೆಯವ ಆವ ಶುದ್ಧ ಕಳ್ಳನೇ ಅಕ್ಕು' ಅಲ್ಲವೆ ! ಹಲವು ವೇಳೆ ಪರಿಸರದ ಪ್ರಲೊಬನೆಗೆ ಮನುಷ್ಯ ಬಲಿಯಾಗುತ್ತಾನೆ. ಅಂಥೆಡೆಗಳಲ್ಲಿ ತನ್ನ ಬುದ್ಧಿ ಭಾವಗಳನ್ನು ಅನ್ಯಹಸ್ತಗಳಿಗೀಯದೆ ತನ್ನಲ್ಲಿಯೇ ಜೋಪಾನ ಮಾಡಿದರೆ ಅವನು ನಿಜಕ್ಕೂ ಶ್ರೇಷ್ಠನಾಗುತ್ತಾನೆ. ಅವನೇ ಜ್ಞಾನಿ. ಅವನೇ ಮುನಿ., ಅವನೇ ಮಹಾತ್ಮ ಆದ್ದರಿಂದ ಅಂಥವನಿಗೆ ಗುರು ಯಾಕೆಂದರೆ ಅವನೇ. ಅವನ ಅಂರಾತ್ಮನೇ ಪರೀಕ್ಷಕ.

ಕೆಡುವುದಕ್ಕೆ ನೂರು ಸಾವಿರ ಮಾರ್ಗಗಳಿರುತ್ತದೆ. ಆದರೆ ಬದುಕುವುದಕ್ಕಿರುವುದು ಒಂದೇ ಮಾರ್ಗ ; ಅದು ಸತ್ಯ ಸನ್ಮಾರ್ಗ. ಸತ್ಯ ಇಂದು ಕ್ಷೀಷೆಯಾಗಿದ್ದರೂ ಅದರ ನೈಜಾರ್ಥಕ್ಕೆ ಧಕ್ಕೆ ತಗಲಲಿಲ್ಲ. ಇಂದಿಗೂ ಅದನ್ನು ಅಕ್ಷರಶಃ ಪಾಲಿಸುವವರಿದ್ದಾರೆ. ಅದರಿಂದಲೇ ಮಳೆ ಬೆಳಗಳಾಗುತ್ತಿವೆ, ಲೋಕ ಬೆಳೆಯುತ್ತದೆ, ಅಂಥವರನ್ನು ಸಮಾನ್ಯರು ಗುರ್ತಿಸುವುದೂ ಇಲ್ಲಿ ಮುಖ್ಯ ಏಕೆಂದರೆ –

**ಸಂಸಾರದ ವಿಷವೃಕ್ಷದಿ ಹಣ್ಣೆರಡಿವೆ ಅಮೃತೋಪಂ**
**ಕಾವ್ಯಾಮೃತದಾಸ್ವಾದನ ಮೇಣ್ ಸಜ್ಜನ ಸಲ್ಲಾಪಂ**

–ಸಂಸಾರವೆಂಬ ವಿಷವೃಕ್ಷ ಬಿಟ್ಟ ಅಮೃತ ಸದೃಶವಾದ ಹಣ್ಣುಗಳು ಎರಡು ; ಒಂದು ಕಾವ್ಯಾಮೃತದ ಆಸ್ವಾದನ, ಮತ್ತೊಂದು ಸಜ್ಜನರ ಸಹವಾಸ. ಒಂದರ್ಥದಲ್ಲಿ ಸಜ್ಜನ ಸಹವಾಸವೆಂಬುದು ಒಳ್ಳೆಯ ಹವ್ಯಾಸ ಕೂಡ. ಮೋಡದಿಂದ ಮಳೆಯಾಗಿ ಬೀಳುವ ನೀರಿಗೆ ಯಾವ ಬಣ್ಣ, ವಾಸನೆ ರುಚಿಗಳೂ ಇರುವುದಿಲ್ಲ. ಅದು ಭೂಮಿಯ ಸಂಪರ್ಕ ಪಡೆದ ಕೂಡಲೇ ಸಹಜವಾಗಿ ತಾನು ಹರಿವ ಭೂಮಿಯ ಬಣ್ಣ ಮೊದಲಾದುವನ್ನು ಪಡೆಯುತ್ತದೆ. ಆದರೆ ಅದೇ ನೀರ ಹನಿಯೊಂದು ಒಂದು ಗಿಡದ ಮೇಲೆ ಬಿದ್ದರೆ ಕರ್ಪೂರವಾಗುತ್ತದಂತೆ. ಒಮದು ಹನಿ ಕಪ್ಪೆ ಚಿಪ್ಪಿನಲ್ಲಿ ಸೇರಿದರೆ ಮುತ್ತಾಗುತ್ತದಂತೆ. ಅದೇ ನೀರು ಜೋಗದ ಜನರೇಟಿಂಗ್ ಸ್ಟೇಷನ್‌ನಲ್ಲಿ ಪೆನ್ ಸ್ಟಾಕ್ಸ್ ಮೂಲಕ ನುಗ್ಗಿ ಹರಿದು ಟರ್ಬೈನ್ ತಿರುಗಿಸಿದರೆ ಜ್ಯೋತಿಯಾಗುತ್ತೆ (ಎಲೆಕ್ಟ್ರಿಸಿಟಿ) ಆದೇ ನೀರು ಗಂಗಾ, ತುಂಗಾ, ಕಾವೇರಿ, ಕೃಷ್ಣೆ, ಗೋದಾವರಿ ಮೊದಲಾದ ಪುಣ್ಯನದಿಗಳ ಪವಿತ್ರ ಪಾತ್ರದಲ್ಲಿ ಹರಿದರೆ ತೀರ್ಥವಾಗುತ್ತೆ. ಅದೇ ನೀರು ನಗರದ ಚರಂಡಿಯಲ್ಲಿ ಹರಿದರೆ ಕೊಚ್ಚೆಯೂ ಆಗುತ್ತೆ. ಮಳೆಯಾಗಿ ಬಿದ್ದ ನೀರು ಒಂದೇ, ಆದರೆ ಅದು ಹರಿಯುವ ಪಾತ್ರದ ಮೆಲೆ ಅದರ ಯೋಗ್ಯತೆ ನಿರ್ಮಾಣವಾಗುತ್ತದೆ. ಮಾನವನ ವ್ಯಕ್ತಿತ್ವದ ನಿರ್ಮಾಣದಲ್ಲಿ ಅವನು ಸ್ವೀಕರಿಸಿದ ಕಾರ್ಯ, ನಡೆದ ಹಾದಿ ಮುಖ್ಯವಾಗುತ್ತದೆ. ಅವನ ಚೇತನ ಕರ್ಪೂರವಾಗಬೇಕು., ಮುತ್ತಾಗಬೆಕು, ಜ್ಯೊತಿಯಾಗಬೇಕು, ತೀರ್ಥವಾಗಬೇಕು. ಆದರೆ ಕೊಚ್ಚೆ ಮಾತ್ರ ಎಂದೆಂದಿಗೂ ಆಗಬಾರದು. ತೋರ್ಥವಾಗಿಯೋ ಕೊಚ್ಚೆಯಾಗಿಯೋ ರೂಪಿಸಿಕೊಳ್ಳುವುದು

ಅವನವನ ಇಚ್ಛೆಗೆ ಸಂಬಂಧಿಸಿದ್ದು. ಆ ಕಾರಣ ಆತ ಎಚ್ಚರಿಕೆಯಿಂದ ತನ್ನ ಪರಿಸರವನ್ನು ಆರಿಸಿಕೊಳ್ಳಬೇಕು. ಅದರೊಡನೆ ಯುಕ್ತ ರೀತಿಯಲ್ಲಿ ವ್ಯವಹರಿಸಬೇಕು. ಅಂತಹ ಸನ್ನಿವೇಶಕ್ಕೆ ಸ್ಪಂದಿಸಿದವನು ನಮ್ಮ ಕಥಾನಾಯಕ.

ಆಚಾರ್ಯ 'ಶ್ರೀ', ಎ.ಆರ್.ಕೃ. ವೀ.ಸಿ. ಮೊದಲಾದ ಸಾಹಿತ್ಯ ದಿಗ್ಗಜಗಳು ಕಾಲೇಜಿನಲ್ಲಿ ಅವನಿಗೆ ಗುರುಗಳಾಗಿದ್ದರು. ಅವರ ಪ್ರೋತ್ಸಾಹ ಮಾರ್ಗದರ್ಶನಗಳ ಜೊತೆಗೆ ಸ್ವಿಇಚ್ಛೆಯಿಂದ ವೇದ ಉಪನಿಷತ್ತುಗಳನ್ನು, ವಚನಸಾಹಿತ್ಯ, ದಾಸ ಸಾಹಿತ್ಯಗಳನ್ನು, ಚಂಪೂ ರಗಳೆ ಷಟ್ಪದಿಗಳನ್ನು, ಶೇಕ್ಸ್‌ಪಿಯರ್, ಬರ್ನಾಡ್ ಷಾ ಮೊದಲಾದವರ ನಾಟಕಗಳನ್ನು, ಗ್ರೀಕ್ ಭಾಷೆಯ ಟ್ರಾಜಿಡಿ ಹಾಗೂ ತತ್ವಶಾಸ್ತ್ರಗಳನ್ನು, ವಡ್ಸ್‌ವರ್ತ್, ಶೆಲ್ಲಿ, ಕೀಟ್ಸ್, ಬೈರನ್, ಕೋಲ್ ರಿಡ್ಜ್ ಮೊದಲಾದ ರಮ್ಯ ಕವಿಗಳ ಕೃತಿಗಳನ್ನು, ಎಲ್ಲಕ್ಕೂ ಮಿಗಿಲಾಗಿ ರವೀಂದ್ರನಾಥ ಠಾಕೂರರ ಗೀತಾಂಜಲಿ, ಸ್ಟ್ರೇಬರ್ಡ್ಸ್ ಮೊದಲಾದ ಗ್ರಂಥಗಳನ್ನು ಓದಿ ಮನನ ಮಾಡಿಕೊಂಡಿದ್ದ. ತಾನು ವಿದ್ಯಾರ್ಥಿಯಾಗಿದ್ದಾಗಲೆ ಅವನಿಗೆ ತಿಳಿದಿತ್ತು ತಿಂದ ಅನ್ನ ರಕ್ತವಾದಂತೆ ಓದಿದ ಓದು ಜ್ಞಾನವಾಗಬೇಕು ಎಂಬುದು. ತುಂಡುದನಗಳು ಕಂಡವರ ಹೊಲ ಮೇದಂತೆ, ಅವನು ಸಿಕ್ಕ ಸಿಕ್ಕದ್ದನ್ನೆಲ್ಲಾ ಓದಿ ಜೀರ್ಣಿಸಿಕೊಂಡ. ಯಾವುದೂ ಅವನಲ್ಲಿ ಅಜೀರ್ಣವಾಗಲಿಲ್ಲ. ಅದರಿಂದಾಗಿ ಅವನಾತ್ಮ ಬೆಳೆಯಿತು.

ಒದು ಒಂದು ಕಡೆಯದರೆ ಬೋಧೆ ಮತ್ತೊಂದು ಕಡೆ ಜೇನು ಮಳೆಯಾಗಿ ಹಾಲ ಹೊಳೆಯಾಗಿ ಸುರಿದು ಹರಿದವು. ಕಾಲೇಜಿನಲ್ಲಿ ಶಿಕ್ಷಾಗುರು ಹಾಗೂ ಗುರುಗಳು ಮಾರ್ಗದರ್ಶನ ಮಾಡಿದಂತೆ, ಇಲ್ಲಿ ಅಂದರೆ ಸರ್ಪಭೂಷಣ ಶಿವಯೋಗಿಗಳ ಮಠದಲ್ಲಿ ಶ್ರೀಮನ್ನಿರಂಜನ ಪ್ರಣವ ಸ್ವರೂಪಿಗಳಾದ ಮಹಾದೇವಸ್ವಾಮಿಗಳು ಜ್ಞಾನಗುರುಗಳಾಗಿ ಬೋಧೆಗೈದರು. ಪೂಜ್ಯರು ಕಾಶಿ ವಿಶ್ವವಿದ್ಯಾನಿಲಯದಲ್ಲಿ ಸಂಸ್ಕೃತ, ದರ್ಶನ, ಶಾಸ್ತ್ರಾದಿಗಳನ್ನು ಅಭ್ಯಸಿಸಿ ಘನವಿದ್ವಾಂಸರೆನಿಸಿಕೊಂಡಿದ್ದರು. ೧೯೩೭ರಲ್ಲಿ ಶ್ರೀ ಮಠದ ಅಧಿಪತಿಗಳಾಗಿದ್ದಪೂಜ್ಯ ಶ್ರೀ ಚನ್ನಬಸವ ಶಿವಯೋಗಿಗಳು ಶಿವೈಕ್ಯರಾದ್ದರಿಂದ ಪೂಜ್ಯ ಶ್ರೀ ಮಹಾದೇವಯ್ಯ ಸ್ವಾಮಿಗಳವರನ್ನು ಅಧಿಕಾರಕ್ಕೆ ತರಲಾಗಿತ್ತು. ಪೂಜ್ಯರು ಪ್ರತಿದಿನವೂ ಶ್ರೀಮಠದಲ್ಲಿ ಉಪನ್ಯಾಸಗಳು, ವಿದ್ವತ್ ಗೋಷ್ಠಿಗಳು ಮೊದಲಾದ ಸಾಂಸ್ಕೃತಿ, ಧಾರ್ಮಿಕ ಕಾರ್ಯಕ್ರಮಗಳನ್ನು ನಡೆಸುತ್ತಾ ಬಂದರು. ಆ ದಿನಗಳಲ್ಲಿ ತರುಣ ತೇಜಸ್ವಿ ನಮ್ಮ ನಾಯಕ ಮಣಿಯ ಪಾತ್ರ ಎದ್ದು ಕಾಣುವಂತಿತ್ತು ಎಂದು ಹೇಳಬೇಕಾಗಿಲ್ಲ. ನಿತ್ಯದ ಕಾರ್ಯಕ್ರಮಗಳಲ್ಲಿ ಅವನು ಸಕ್ರಿಯವಾಗಿ ಭಾಗವಹಿಸುತ್ತಿದ್ದ. ಸೆಂಟ್ರಲ್ ಕಾಲೇಜಿನಲ್ಲಿ ಪಾಠ, ತೋಟದಪ್ಪ ಛತ್ರದಲ್ಲಿ ಊಟ, ಸರ್ಪಭೂಷಣ ಮಠದಲ್ಲಿ ಶಿವಾನುಭವ ಚಿಂತನ, ಅವನ ಜೊತೆಗಿದ್ದವರು ಸಾಮಾನ್ಯರಾಗಿರಲಿಲ್ಲ. ಡಾ. ಜಚನಿ ಎಂದೇ ಪ್ರಸಿದ್ಧರಾದ ಋಷಿಕವಿ ನಿಡುಮಾಮಿಡಿ ಜಗದ್ಗುರುಗಳವರು (ಅವರ ಪೂರ್ವಾಶ್ರಮದ ಹೆಸರು ಶ್ರೀ ಚಂದ್ರಶೇಖರ ದೇವರು ಅಡ್ನೂರ್ ಎಂದು) ಮತ್ತು ಪ್ರಕಾಂಡ ಪಂಡಿತ, ಪ್ರಗಲ್ಭವಾಗ್ಮಿ ನವಕಲ್ಯಾಣಮಠದ ಶ್ರೀ ಕುಮಾರಸ್ವಾಮಿಗಳು (ಅವರ ಅಂದಿನ ಹೆಸರು ಲಚ್ಚಪ್ಪ ಎಲಿಗಾರ್ ಎಂದು). ಇಂತಹ ವಿದ್ವನ್ಮಣಿಗಳ ಸಹಯೋಗ, ಪೂಜ್ಯ ಶ್ರೀ ಮಹಾದೇವ ಮಹಾಸ್ವಾಮಿಗಳ ಉಪದೇಶ ಇವು ನಮ್ಮ ನಾಯಕನಿಗೆ ಚಿನ್ನದ ಕಮಲಕ್ಕೆ ಸುಗಂಧವನ್ನು ಬೆರಸಿಕೊಟ್ಟಂತಾಗಿತ್ತು.

ಶ್ರೀ ಸರ್ಪಭೂಷಣ ಮಟ ಅಂದಿನ ಅನುಭವ ಮಂಟಪವಾಗಿತ್ತು. ಪ್ರತಿದಿನವೂ ದೈವ, ಧರ್ಮ, ದರ್ಶನ, ಕಲೆ, ಸಾಹಿತ್ಯ ಸಂಸ್ಕೃತಿ ಮೊದಲಾದವುಗಳ ಬಗೆಗೆ ಚರ್ಚೆ ಡೆಯುತ್ತಿತ್ತು. ಶೂನ್ಯ ಪೀಠವೇರಿದ ಪ್ರಭುದೇವರಂತೆ ಶ್ರೀ ಮಹಾದೇವ ಸ್ವಾಮಿಗಳು ಸಮಾರೋಪ ಭಾಷಣ ನೀಡುತ್ತಿದ್ದರು. ನಮ್ಮ ತರುಣನಿಗೆ ಒಂದೊಂದು ದಿನದ ಸಮಾವೇಶವೂ ಒಂದೊಂದು ತರಬೇತಿ ತರಗತಿಯಾಗುತ್ತಿತ್ತು. ಭಾಷಣವೂ ಒಂದು ಕಲೆ, ಆ ಕಲೆ ಅವನಿಗೆ ಸಿದ್ಧಿಸಿತು. ಶ್ರೇಷ್ಠ ಮಟ್ಟದ ವಾಗ್ಮಿಯಾದ, ಕನ್ನಡ ಸಾಹಿತ್ಯ ಸಾರ್ವಭೌಮ ಅ.ನ.ಕೃರವರ ಪ್ರಶಂಸೆಗೂ ಪಾತ್ರನಾಗುವ ಮಟ್ಟಕ್ಕೆ ಬೆಳೆದ. ೧೯೩೩ರಲ್ಲಿ ಧಾರವಾಡದಲ್ಲಿ ಸಮಾವೇಶಗೊಂಡಿದ್ದ ಅಖಿಲ ಭಾರತ ವೀರಶೈವ ಮಹಾಸಭೆಯಲ್ಲಿ ಅತ್ಯಮೋಘಭಾಷಣ ನೀಡಿ ಎಲ್ಲರ ಮೆಚ್ಚುಗೆ ಗಳಿಸಿದ.

ಹಗಲು ಇರುಳಿನಂತೆ, ಭೂಮಿ ಆಕಾಶದಂತೆ, ಗಂಡು–ಹೆಣ್ಣಿನಂತೆ, ಮೂಡ ಮುಳುಗುಗಳಂತೆ ಬದುಕಿನಲ್ಲಿ ದ್ವಂದ್ವ ಇದ್ದೇ ಇದೆ. ಮಾನವ ಅಂತರ್ಯದಲ್ಲಿ ದೇವನೂ ಇದ್ದಾನೆ, ದೈತ್ಯನೂ ಇದ್ದಾನೆ. ರಾಬರ್ಟ್ ಲೂಯಿ ಸ್ಟೀವನ್ ಸನ್ ತನ್ನ ಡಾ. ಜಕ್ಬೆಲ್ ಮತ್ತು ಮಿ. ಹೈಡ್ ನೀಳ್ಗತೆಯಲ್ಲಿ ವಿಶ್ಲೇಷಿಸಿರುವಂತೆ ಮಾನವನ ದ್ವಂದ ವ್ಯಕ್ತಿತ್ವ ಸಹಜವಾದದ್ದೇ. ಆದರೆ ವಿವೇಚನಾಶೀಲನಾದ ಮಾನವ ತನ್ನಲ್ಲಿನ ದೈತ್ಯತೆಯನ್ನು ನಟರಾಜನಂತೆ ಮೆಟ್ಟಿ, ದೇವತ್ವವನ್ನು ಮೆರೆಸಬೇಕು. ನಟರಾಜ ಈ ದ್ವಂದ್ವ ಗುಣಗಳ ಸುಂದರ ಸಮ್ಮಿಶ್ರಣ, ನಮ್ಮವರ ನಟರಾದ ಕಲ್ಪನೆ ನೋಡಿ ನೆತ್ತಿಯಲಿ ಗಂಗೆ, ಅಂಗೈಯಲ್ಲಿ ಅಗ್ನಿ, ಜಟೆಯಲ್ಲಿ ಅಮೃತ ಕಿರಣನಾದ ಚಂದ್ರ, ಕೊರಳಲ್ಲಿ ವಿಷಪೂರಿತ ಸರ್ಪ, ಮೆಟ್ಟಿ ನಿಂತಿರುವುದು ಅಪಸ್ಮಾರ ಪುರುಷನೆಂಬ ರಕ್ಕಸನ ಎದೆಯ ಮೇಲೆ, ದೈವಕ್ಕೆ ಮಣಿದರೆ ಸರ್ವ ಶ್ಠರೇಯಸ್ಸೆಂಬ ಸೂಚನೆಯ ಅಭಯ ಹಸ್ತ ! ಹೀಗೆ ಅನೇಕತೆಯಲ್ಲಿ ಏಕತೆಯನ್ನು ಮೃತಿಯಲ್ಲಿ

ಅಮೃತತ್ವವನ್ನು, ಕತ್ತಲೆಯಲ್ಲಿ ಜ್ಯೋತಿಯನ್ನು, ಅಸತ್ತಿನಲ್ಲಿಸತ್ಯವನ್ನು ಹೆಕ್ಕಿ ತೆಗೆಯಬೇಕು. ಹಾಗಲ್ಲದೆ ದೈತ್ಯತೆಗೆ ಧೂಪ ಹಾಕಿದರೆ ಡಾ. ಜಕೈಲ್ ಮಿ. ಹೈಡ್ ಆದ ಮೇಲೆ ಮತ್ತೆ ಜಕ್ಕೆಲ್ ಆಗಲು ಬರುವುದಿಲ್ಲವೊ ಹಾಗೆ ಮಾನವ ದಾನವನೇ ಆಗಿಬಿಡುತ್ತಾನೆ. ಸದ್ಭಾವನೆಗಳನ್ನು ತುಂಬಿಕೊಂಡು ಸದ್ವರ್ತನೆಯಿಂದ ನಡೆದದ್ದಾದರೆ ದೇವ ತಾನಾಗುತ್ತಾನೆ. ಈ ದ್ವಂದ್ವಗಳಲ್ಲಿ ನಮ್ಮ ಯುವಕ ಆರಿಸಿಕೊಂಡಿದ್ದು ಉತ್ತಮ ಉದಾತ್ತ ಗುಣಗಳ ಹಾದಿಯನ್ನೆ. ಅದರಿಂದಲೇ ಆತ ಔನ್ನತ್ಯ ಶಿಖರವೇರಿದ.

ಹೀಗೊಬ್ಬ ಧರ್ಮರಾಯ

ಅವನೇ ನಮ್ಮ ಟಿ. ಎನ್. ಮಹದೇವಯ್ಯ

* * *

ನಿಸರ್ಗ ದ್ವಂದ್ವ ಗುಣ ಸಮ್ಮಿಶ್ರಣ. ಜಗನ್ಮಾನ್ಯ ಧರ್ಮಗಳು ದ್ವೈತಭಾವ ಸಂಯೋಜನ. ಉದಾಹರಣೆಗೆ ಕ್ರೈಸ್ತಧರ್ಮದಲ್ಲಿ ರೋಮನ್ ಕ್ಯಾಥೊಲಿಕ್ ಮತ್ತು ಪ್ರೊಟೆಸ್ಟಂಟ್, ಇಸ್ಲಾಂನಲ್ಲಿ ಶಿಯಾ ಮತ್ತು ಸುನ್ನಿ, ಬೌದ್ಧದಲ್ಲಿ ಮಹಾಯಾನ, ಹೀನಾ ಯಾನ, ಜೈನರಲ್ಲಿ ದಿಗಂಬರ ಮತ್ತು ಶ್ವೇತಾಂಬರ, ವೈದಿಕರಲ್ಲಿ ದ್ವೈತ ಮತ್ತು ಅದ್ವೈತ, ಶ್ರೀ ವೈಷ್ಣವರಲ್ಲಿ ತೆಂಕಲೆ, ವಡಗಲೆ, ದೇವಾಂಗದವರಲ್ಲಿ ಬಿಳಿಮಗ್ಗ, ಕರಿಮಗ್ಗ, ಪರಿಶಿಷ್ಟ ಜಾತಿಯಲ್ಲಿ ಹೊಲೆಯ, ಮಾದಿಗ, ನಾಯಕ (ಬೇಡ)ರಲ್ಲಿ ಊರನಾಯಕ, ಕಾಡನಾಯಕ, ಕುರುಬರಲ್ಲಿ ಶಿವೌಪಾಸಕರ ಕಟ್ಟೆ, ತಿರುಪತಿ ವೆಂಕಟರಮಣಾರಾಧಕರ ಕಟ್ಟೆ, ಒಕ್ಕಲಿಗರಲ್ಲಿ ಗಂಗಡಿಕಾರ ಮತ್ತು ಮರಸು, ಅದೇ ಒಳಪಂಗಡದಲ್ಲಿ ಸಾದ ಮತ್ತು ಕುಂಚಟಿಗ – ಇವೆ ಮೊದಲಾದುವನ್ನು ಹೆಸರಿಸಬಹುದು. ಇಂತಹ ದ್ವೈಧೀ ಭಾವಿ ವೀರಶೈವದಲ್ಲೂ ಇದೆ. ಅದನ್ನು ಗುರುವರ್ಗ ಮತ್ತು ವಿರಕ್ತವರ್ಗ ಎನ್ನುತ್ತಾರೆ. ಪಂಚಪೀಠಾಧಿಪತಿಗಳಾದ ಶೀವಾಚಾರ್ಯರು ಗುರುವರ್ಗದವರು, ಶೂನುಪೀಠಾಧಿಪತಿಗಳಾದ ಶಿವಯೋಗಿ ಜಂಗಮರು ವಿರಕ್ತವರ್ಗದವರು. ಮತ್ತೆ ವಿರಕ್ತವರ್ಗದಲ್ಲಿ ಎರಡು.

ಹೀಗೆ ಕವಲು ಕವಲಾಗಿ ತುದಿಯ ಕುಡಿಯಾಗಿ, ಕುಡಿಯ ಕೊನೆಯಾಗಿ, ತೆರೆದ ಹೂವಾಗಿ ವೀರಶೈವ ವಿಕಾಸಗೊಂಡಿದೆ. ಅಷ್ಟೇ ಪ್ರಮಾಣದಲ್ಲಿ ದ್ವೇಷದ ವಿಷಕಾರಿ ಹಾಳಾಗುತ್ತಿದೆ. ಸಂಸಾರದಲ್ಲಿ ಹೆಣ್ಣು ಗಂಡು ಇರುವುದು ಕಾದಾಡಲಲ್ಲ, ಕೂಡಿಬಾಳಲು, ಧರ್ಮದಲ್ಲೂ ಅಷ್ಟೆ. ಆ ಬಗೆಯ ಅನ್ಯೋನ್ಯ ಮೈತ್ರಿಯು ಬೆಳೆಯದಿದ್ದರೆ ಹೃದಯಗಳು ಬೆರೆಯದಿದ್ದರೆ ಧರ್ಮಪಕ್ಷದ ಬುಡಕ್ಕೆ ಕೊಡಲಿಪೆಟ್ಟು ಕೊಟ್ಟಂತೆ, ಇದನ್ನು ಅರ್ಥಮಾಡಿಕೊಳ್ಳುವ ಚೈತನ್ಯ ಧರ್ಮೀಯರಿಗಿಲ್ಲ. ಅರಿವು ಮಾಡಿಕೊಡುವ ಗೋಜಿಗೆ ಮಠಾಧೀಪತಿಗಳೂ ಹೋಗುವುದಿಲ್ಲ. ತಮ್ಮ ತಮ್ಮ ಕುರ್ಚಿಗಳನ್ನು ಭದ್ರಪಡಿಸಿಕೊಳ್ಳಲು ಪ್ರಯತ್ನಿಸುವ ರಾಜಕಾರಿಣಿಗಳಂತಾಗಿ ಬಿಟ್ಟಿದ್ದಾರೆ ಮಠಾಧೀಶರುಗಳು. 'ಲಾಂಛನಕ್ಕೆ ಶರಣು' ಎಂಬ ಭಕ್ತ ವೃಂದಕ್ಕೆ ತಾರತಮ್ಯವೇ ತಿಳಿದಿಲ್ಲ. ಕಂಡದ್ದಕ್ಕೆಲ್ಲ ಕೈಉಗಿಯುತ್ತಾರೆ, ಸಿಕ್ಕಿದ್ದಕ್ಕೆಲ್ಲ ನಮಸ್ಕಾರ ಹಾಕುತ್ತಾರೆ. ಹೀಗಾಗಿ ಧರ್ಮದ ಸಹಜ ಸ್ವರೂಪ ಚಿತ್ರಣ ಕೊಡುವ ಮೇಧಾವಿ ಇನ್ನು ಈ ಧರ್ಮದಲ್ಲಿ ಹುಟ್ಟಿ ಬಂದಿಲ್ಲ. ಬಂದಿರುವ ತುಸು ಬುದ್ಧಿವಂತ ಅರೆಬೆಂದ ಕಾಳು, ತಾನು ಸರಿಯಾಗಿ ಬೇಯುವುದಿಲ್ಲ, ತನ್ನನ್ನು ತಿಂದವರಿಗೆ ವಾಂತಿ ಬೇಧಿ ತರದೆ ಬಿಟ್ಟಿಲ್ಲ. ಎರಡನ್ನು ಒಂದು ಮಾಡುವವನು ಮಹಾತ್ಮ. ಒಂದನ್ನು ಎರಡು ಮಾಡುವವನು ಪಾಪಾತ್ಮ ! ಇಂತಹ ಪಾಪಾತ್ಮರ ಪರಿವಾರ ಇಂದು ವಿಫುಲವಾಗಿದೆ, ಕಂಡವರ ಒಲೆಯಲ್ಲಿ ತಮ್ಮ ಬೇಳೆ ಬೇಯಿಸಿಕೊಳ್ಳುವ ಇಂತಹ ಚಂಡಾಲರಿಂದ ಸಮಾಜ ಒಡೆದು ಚೂರುಚೂರಾಗಿದೆ.

ದೀಪದ ಬುಡ ಯಾವಾಗಲೂ ಕತ್ತಲು. ದೊಡ್ಡವರ ಸಣ್ಣತನ ಕಂಡು ತರುಣ ಚೇತನಗಳು ಹೇಸಿದವು. ಅಭಿನವ ಅಲ್ಲಮ ನೆನಿಸಿದ್ದ ಶ್ರೀ ಮಹದೇವ ಸ್ವಾಮಿಗಳವರಲ್ಲಿ ಎಲ್ಲವನ್ನೂ ನಿವೇದಿಸಿಕೊಂಡಾಗ ಪೂಜ್ಯರು ತರುಣ ಪೀಳಿಗೆಯಿಂದ ಮಾತ್ರ ಸಮಾಜ ಸುಧಾರಣೆ ಸಾಧ್ಯ ಎಂದರಿತು ಅವರಿಗೆ ಸಾವಿರ ತೋಳುಗಳ ಬಲಕೊಟ್ಟರು. ಒಡೆದು ಚೂರು ಚೂರಾಗುತ್ತಿರುವ ವೀರಶೈವ ಸಮಾಜದ ಸಂಘಟನೆಗಾಗಿ, ಹಲವು ಸೂಕ್ತ ಸಲಹೆಗಳನ್ನು, ಸಹಕಾರವನ್ನು ಕೊಟ್ಟರು. ಅದರ ಪರಿಣಾಮವಾಗಿ 'ಸಮಾಜೋತ್ಕರ್ಷ ಸಾಧಕ ಸಂಘ' ಸ್ಥಾಪಿತವಾಯಿತು. ಪೂಜ್ಯ ಸ್ವಾಮೀಜಿಯವರು ಅದರ ಅನಿವಾರ್ಯ ಅಧ್ಯಕ್ಷರಾಗಬೇಕಾಯಿತು. ನಮ್ಮ ತರುಣ ಪ್ರಧಾನ ಕಾರ್ಯದರ್ಶಿಯಾದ, ಎಂ. ಈ. ನಂಜುಂಡಾರಾಧ್ಯರು, ಸಹಕಾರ್ಯದರ್ಶಿಗಳು, ಲಚ್ಚಪ್ಪ ಎಲಿಗಾರ್ (ನವ ಕಲ್ಯಾಣ ಮಠದ ಕುಮಾರಸ್ವಾಮಿಗಲು) ಸಲಹೆಗಾರರು, ಬಿ. ನಂಜುಂಡಪ್ಪ, ಎಚ್. ಜೆ. ಶಿವಶಂಕರಶರ್ಮ, ಷಣ್ಮುಗಂ ಮೊದಲಾದವರು ಸದಸ್ಯರು. ಸಂಘರ್ಷಕ್ಕಾಗಿ ತೋಳೇರಿಸಿ ನಿಂತಿದ್ದ ಗುರು ವಿರಕ್ತ ಪಂಗಡಗಳಿಗೆ ತಿಳಿಯ ಹೇಳುವ ಅದಕ್ಕೂ ಮಿಗಿಲಾಗಿ ವೀರಶೈವದ ನೈಜರೂಪ ಸ್ವರೂಪಗಳನ್ನು ಧರ್ಮಾನುಯಾಯಿಗಳ ಹೃದಯದಲ್ಲಿ ಸ್ಪಷ್ಟವಾಗಿ ಚಿತ್ರಿಸಿ, ಅದರ ಮಹತ್ವದ

ಬಗೆಗೆ ಒಲವು ಮೂಡಿಸುವ ಘನೋದ್ದೇಶಕ್ಕಾಗಿ ಒಂದು ಸಂಘ ಸ್ಥಾಪನೆಯಾಯಿತು. ನಮ್ಮ ನಾಯಕ ಅದರ ಕರ್ಣಧಾರಣ ನಾಗಿ, ಕೆಲವು ಸಮಾನಾಂಶಗಳನ್ನು ರೂಪಿಸಿಕೊಟ್ಟ ಸಮಾಜ ಸುಧಾರಕರಿಗೆ.

ಗುರು ವಿರಕ್ತರ ನಡುವಿನ ಬಿರುಕನ್ನು ಬೆಸೆಯುವ ಕಾರ್ಯದಲ್ಲಿ ಸಮಾಜತ್ಕರ್ಷ ಸಾಧಕ ಸಂಘ ಸದಾ ನಿರತವಾಗಿರುತ್ತಿತ್ತು. ಅಂತೆಯೇ ಜನಜಾಗ್ರತಿಗಾಗಿ ಪ್ರತಿ ಭಾನುವಾರ ಸಂಜೆ ಗೌಡರ ವೀರಭದ್ರಪ್ಪನವರ ಛತ್ರದಲ್ಲಿ ದಭಾ ಕಾರ್ಯಕ್ರಮವನ್ನೇರ್ಪಡಿಸಿ, ಪೂಜ್ಯ ಶ್ರೀ ಮಹಾದೇವಸ್ವಾಮಿಗಳ ಆಶೀರ್ವಚನ, ಲಚ್ಚಪ್ಪ ಎಲಿಗಾರರ ವಿಚಾರ ಪ್ರಚೋದಕ ಭಾಷಣಗಳನ್ನೇರ್ಪಡಿಸುತ್ತಿತ್ತು.

ವೀರಶೈವ ಸಮಾಜವನ್ನು ಒಂದುಗೂಡಿಸುವ ಮೊದಲ ಹಾಗೂ ಕಡೆಯ ಪ್ರಯತ್ನ ಸಮಾಜೋತ್ಕರ್ಷ ಸಾಧಕ ಸಂಘವೆ ನ್ನಬಹುದು. ಅದಕ್ಕೆ, ಅದಾದ ಮೇಲೆ ಎಲ್ಲೂ ಆ ಪ್ರಯತ್ನ ನಡೆಯಲೇ ಇಲ್ಲ. ಅಸ್ತಿತ್ವದಲ್ಲಿದ್ದ ಆ ಸಂಗವನ್ನು ಹಲವು ಸ್ವಾರ್ಥಕರು ಗಳು ನಾಮಾವಶೇಷ ಮಾಡಿದರು. ಇಂಥದೇ ದುರ್ಭರ ಪ್ರಸಂಗದಲ್ಲೂ ಎದೆಗುಂದದ ನಮ್ಮ ತರುಣ ಸಮಾಜ ಸಂಘಟನೆಗಾಗಿ ಸತತ ಹೋರಾಡಿದ. ೧೯೩೩ರಲ್ಲಿ ಧಾರವಾಡದಲ್ಲಿ ನಡೆದ ಅಖಿಲ ಭಾರತ ವೀರಶೈವ ಮಹಾಸಭೆಯಲ್ಲಿ ಸಕ್ರಿಯವಾಗಿ ಭಾಗವ ಹಿಸಿ ವೀರಶೈವ ಸಮಾಜದ ಭಾವೈಕ್ಯತೆ ಬಂಧುಕತೆಯ ಬಗೆಗೆ ಸ್ಫೂರ್ತಿದಾಯಕ ಭಾಷಣ ಮಾಡಿದ. ಆದರೆ ಕಿವಿ ಇಲ್ಲದ ಸಮಾ ಜಕ್ಕೆ ಮುಟ್ಟಲಿಲ್ಲ. ಜಾತ್ಯಂಧತೆಯ ಕಣ್ಣಿಗೆ ಕಾಣಲಿಲ್ಲ. ಹೃದಯ ಹೀನ ಜನತೆಯ ಹೃದಯಕ್ಕೂ ತಟ್ಟಲಿಲ್ಲ. ಆದರೂ ಅವನ ಪ್ರಯತ್ನ ಸ್ತುತ್ಯಾರ್ಹ.

ಹೀಗೊಬ್ಬ ಧರ್ಮರಾಯ
ಅವನೇ ನಮ್ಮ ಟಿ. ಎನ್. ಮಹದೇವಯ್ಯ

* * *

ಭರತೀಯರಿಗೆ ಮದುವೆ ಎಂಬುದು ಒಂದು ಧರ್ಮ ಪ್ರಕ್ರಿಯೆ. ಪಾಶ್ಚಾತ್ಯರಂತೆ ಗಂಡು ಹೇಣ್ಣಿನ ನಡುವಿನ ಒಪ್ಪಂದ ಅಲ್ಲ, ವಿವಾಹ ಮಂಟಪಕ್ಕೆ ಸಕಲ ದೇವಾನು ದೇವತೆಗಳನ್ನು ಆಹ್ವಾನಿಸಿ, ಆರಾಧಿಸಿ, ನೂತನ ವಧುವರರನ್ನು ಸಾಕ್ಷಾತ್ ಶಿವ–ಶಿವೆಯರೆಂದೇ ಭಾವಿಸಿ ಪೂಜಿಸುತ್ತಾರೆ. ಸಮಸ್ತ ದೇವತೆಗಳ ಸಾಕ್ಷಿಯಾಗಿ ಅವರಿಬ್ಬರೂ ಮುಖ್ಯವಾಗಿ ಗಂಡನಿಂದ ಪ್ರಮಾಣ ವಚನ ಸ್ವೀಕರಿಸುವಂತೆ ಮಾಡುತ್ತಾರೆ. ವಿವಾಹ ಮಹೋತ್ಸವಕ್ಕೆ ಆಗಮಿಸಿದ ಸಕಲ ಸಜ್ಜನರಿಂದಲೂ ಆಶೀರ್ವಾದಪೂರ್ವಕವಾಗಿ ಸೇಸೆ ಇಡಿಸುತ್ತಾರೆ. ಧಾರೆ ಮಾಂಗಲ್ಯಧಾರಣಗಳಾಗಿ ಗಂಡು–ಹೆಣ್ಣು ಸತಿಪತಿಗಳಾಗುತ್ತಾರೆ.

ಇಂತಹ ಪವಿತ್ರ ಮಂಗಲ ಮಹೋತ್ಸವವನ್ನು ಭಾರತೀಯರು ಷೋಡಷ ಸಂಸ್ಕಾರಗಳಲ್ಲಿ ಒಂದು ಎಂದು ಪರಿಗಣಿಸಿ ದ್ದಾರೆ. ಇದು ಹತ್ತರಲ್ಲಿ ಹನ್ನೊಂದಲ್ಲ ಅತ್ಯಂತ ಮಹತ್ವದ್ದು. ಸಂಸಾರವೂ ಒಂದು ಯೋಗವಾದ್ದರಿಂದ ಸತಿಪತಿಗಳಿಬ್ಬರೂ ಅಲ್ಲಿ ಯೋಗಿ ಯೋಗಿಣಿಯರಾಗಿ ತಮ್ಮ ಪ್ರೀತಿಯ ಮಾತುಗಳೇ ಮಂತ್ರ, ಪ್ರೇಮವೇ ಪರಶಿವನ ಪೂಜೆ ಎಂಬ ಪವಿತ್ರ ಭಾವನೆ ಯಿಂದ ಸಾಂಸಾರಿಕ ಜೀವನ ನಡೆಸುತ್ತಾರೆ. ಈ ಅರ್ಥದಲ್ಲಿ ಸತಿಪತಿಗಳೊಂದಾದ ಸಹಯೋಗ ಎಂದೆಂದಿಗೂ ಕ್ಷುದ್ರ ಲೈಂಗಿಕಾ ರ್ಥದಲ್ಲಿ ನಿಲ್ಲುವುದಿಲ್ಲ. ಈ ಯೋಗಕ್ಕೆ ನಮ್ಮ ತರುಣ ಸಿದ್ಧನಾಗಿದ್ದ. ಅವನಿಗೀಗ ಇಪ್ಪತ್ತಮೂರು, ಪದವೀಧರ ಬೇರೆ, ತುಂಬು ಹರೆಯ ಮೈಮೀಸೆಗಳಲ್ಲಿ ತುಂಬಿ ಹರಿಯುತ್ತಿತ್ತು ! ಅದನ್ನು ಕಂಡ ತಂದೆ ಮಗನಿಗೆ ಮದುವೆ ಮಾಡಬೇಕೆಂಬ ಹಂಬಲ. ಅವರ ಹಂಬಲ ಹಣ್ಣಾಯಿತು, ಮೈಸೂರಿನ ನಿವೃತ್ತ ಶಿರಸ್ತೇದಾರ್ ಎನ್. ಚನ್ನಪ್ಪನವರ ಜ್ಯೇಷ್ಠ ಪುತ್ರಿ ಚಿರಂಜೀವಿ ಸೌಭಾಗ್ಯವತಿ ಹರಿಸಿಣ ಕುಂಕುಮ ಶೋಭಿತೆಯಾದ ಮಹದೇಮ್ಮನವರೊಡನೆ ೧೯೩೭ ಜೂನ್ ೪ರಂದು ಮೈಸೂರಿನಲ್ಲಿ ಮದುವೆ ಅತ್ಯಂತ ಆತ್ಮೀಯ ವಾಗಿ ನೆರವೇರಿತು.

ಮುಂದಿನದು ಜೀವನ ಸಂಗ್ರಾಮ. ಯಾವನೇ ಮನುಷ್ಯ ತನ್ನ ಅಸ್ತಿತ್ವ ಸ್ಥಾಪನೆಗಾಗಿ, ಸ್ವಪ್ರತಿಷ್ಠೆಯ ಪ್ರದರ್ಶನಕ್ಕಾಗಿ ಹೋರಾಡಲೇಬೇಕು. ಹೋರಾಟವಿಲ್ಲದ ಬದುಕೆಲ್ಲಿದೆ, ಅಂತೆಯೇ ಬದುಕು ಬಯಸುವ ಬಯಕೆಗಳಾದರೂ ಎಂಥವು ? ಕೊನೆಮುಟ್ಟದವು. ಶಿವಶರಣರು ಹೇಳುವಂತೆ :

**ಬಡತನಕ್ಕೆ ಉಂಬುವ ಚಿಂತೆ**
**ಉಂಬುವುದಾದರೆ ಉಡುವ ಚಿಂತೆ**
**ಉಡುವುದಾದರೆ ಹೆಂಡಿರ ಚಿಂತೆ**
**ಹೆಂಡಿರಾದರೆ ಮಕ್ಕಳ ಚಿಂತೆ**
**ಮಕ್ಕಳಾದರೆ ಬದುಕಿನ ಚಿಂತೆ**

**ಬದುಕಾದರೆ ಕೇಡಿನ ಚಿಂತೆ**

**ಕೇಡಾದರೆ ಮರಣದ ಚಿಂತೆ**

ಹೀಗೆ ಚಿಂತೆಯ ಸಂತೆಯಲ್ಲಿ ತಿನಿಸಿಕೊಳ್ಳುವ ವ್ಯಾಪಾರಿಗಳು ನಾವು. ನಮ್ಮ ನಾಯಕ ಸಂಸಾರಿಗನಾದ ಕೆ.ಆರ್.ಎಸ್.ನ ಲೋಕೋಪಯೋಗಿ ಇಲಾಖೆಯಲ್ಲಿ ಹೇಗೋ ಒಂದು ಗುಮಾಸ್ತೆ ಕೆಲಸ ಗಿಟ್ಟಿಸಿಕೊಂಡು ಒರೆ ಒಪ್ಪು ಹೂಡಿದ. ಅನಂತರ ೧೯೩೮ನೆಯ ಇಸವಿಯಲ್ಲಿ ರೆವೆನ್ಯೂ ಇನ್ಸ್‌ಪೆಕ್ಟರಾಗಿ ನೇಮಕಗೊಂಡು ಕರ್ನಾಟಕ ಸರ್ಕಾರದಲ್ಲಿ ಕೆಲಸಕ್ಕೆ ಸೇರಿದ ಒಂದೇ ವರ್ಷದಲ್ಲಿ ಗುಂಡ್ಲುಪೇಡೆಯಿಂದ ಹನಗೋಡಿಗೆ ವರ್ಗವಾಯಿತು. ೧೯೪೧ರಲ್ಲಿ ಹನಗೋಡಿನಿಂದ ಬಿಳಿಕೆರೆಗೆ, ಅನಂತರ ಶಿರಸ್ತೇದಾರನಗಿ ಬಡ್ತಿ ಸಿಕ್ಕು ಬಿಳಿಕೆರೆಯಿಂದ ಮತ್ತೆ ಗುಂಡ್ಲುಪೇಟೆಗೆ, ಗುಂಡ್ಲುಪೇಟೆಯಿಂದ ಕಡೂರಿಗೆ, ಹೀಗೆ ಪರಿಭ್ರಮಣ ಕಾರ್ಯ ಸ್ಥಳದಿಂದ ಸ್ಥಳಕ್ಕೆ ನಡೆಯಿತು. ಸರ್ಕಾರಿ ನೌಕರರಿಗೆ ವರ್ಗ ಎನ್ನುವುದು ಒಂದೊಂದು ಹೆರಿಗೆ ಆದಂತೆ. ಗಂಡಾಂತರ ಇದ್ದದ್ದೆ. ಅಲೆಮಾರಿಗಳಂತೆ ಊರಿಂದೂರಿಗೆ ಕುಡಿಕೆ ಮಡಕೆ ಹೊತ್ತು ಗುಳೇ ಹೋಗಬೇಕು. ಯಾವುದೇ ಒಳ್ಳೆಯ ವಸ್ತುವನ್ನು ನಮ್ಮದೆಂದು ಇಟ್ಟುಕೊಳ್ಳುವಂತಿಲ್ಲ. ಮುಂದಿನ ಊರಿಗೆ ವರ್ಗವಾದಾಗ ಅದು ತಗ್ಗಿಯೊ ಮಗ್ಗಿಯೊ ಮುರಿದೊ ಹೋಗಿರುತ್ತೆ. ಹೀಗಾಗಿ ಅಡಿಗೆ ಊಟದ ಪಾತ್ರೆಪಗಡು ಇದ್ದರೆ ಇದ್ದ ಊರಿನಲ್ಲಿ ಬಳಸಿ, ಬೇರೆ ಊರಿಗೆ ಹೋಗುವಾಗ ಬಿಸಾಟು ಹೋಗುವುದು ಲೇಸು. ಅನೇಕರು ಈ ಬಗ್ಗೆ ಗೊಣಗುತ್ತಲೆ ಇರುತ್ತಾರೆ. ಹತ್ತು ಕಿಲೋಮೀಟರ್ ಹತ್ತಿರದ ಊರಿಗೆ ವರ್ಗವಾದರೆ ಸಾಕು ಯಾವುದೋ ಅಂಡಮಾನ್ ನಿಕೋಬಾರ್‌ಗೊ ಚಂದ್ರಲೋಕಕೋ ಮಂಗಳ ಗ್ರಹಕ್ಕೋ ಕಳುಹಿಸಿದ್ದಾರೆಂದು ಭಾವಿಸಿ ಬಮ್ಮಡಿ ಬಾರಿಸುತ್ತಾರೆ. ಟ್ರ್ಯಾನ್ಸ್‌ಫರ್ ಕ್ಯಾನ್ಸಲ್ ಮಾಡಿಸಲು ಭೂಮಿ ಆಕಾಶ ಅಳಿತಾರೆ. ಆದರೆ ನಮ್ಮ ನಾಯಕ ಹಾಗಲ್ಲ. ಕನ್ನಡ ನಾಡಿನ ಬಂಧು ಬಳಗದವರ ಸೇವೆಗಾಗಿ ಸರ್ಕಾರ ಕಲ್ಪಿಸಿಕೊಟ್ಟ ಸುಚರ್ಣಾವಕಾಶ ಎಂದೇ ಭಾವಿಸಿದ್ದ. ಬಿದ್ದೆಡೆಯಲ್ಲೇ ಹುಡುಕಬೇಕು, ಇದ್ದೆಡೆಯಲ್ಲೇ ಬದುಕಬೇಕು ಎಂಬ ಮನೋಭಾವದ ವ್ಯಕ್ತಿ. ಊರು ಕೆಟ್ಟದ್ದು ಎನ್ನುತ್ತಾರೆ ಹಲವರು. ಆದರೆ ಕೆಟ್ಟಿರೋದು ಊರಲ್ಲ, ನಾವು. ಮೊದಲು ನಾವು ಸರಿಹೋದರೆ ಊರುಕೇರಿ ಎಲ್ಲ ಸರಿಹೋಗುತ್ತವೆ.

**ಲೋಕದ ಡೊಂಕ ನೀವೇಕೆ ತಿದ್ದುವಿರಿ**

**ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ**

**ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ**

**ಪರರ ದುಃಖಕ್ಕೆ ಅಂಜುವವರ ಮೆಚ್ಚ**

**ಕೂಡಲಸಂಗಮದೇವ**

ಎಂಬ ಅಣ್ಣನ ಅಮೃತವಾಣಿ ಅವರಿಗೆ ದಾರಿದೀಪವಾಗಿತ್ತು. ಬೇರೆಯವನನ್ನು ಪಾಪಿ ಅನ್ನುವ ಮುನ್ನ ನೀವೆಷ್ಟು ಪುಣ್ಯವಂತ ಎಂಬುದನ್ನು ಕುರಿತು ಆಲೋಚಿಸು ಎಂದು ಹೇಳುತ್ತಿದ್ದ. ಮತ್ತು ನಮ್ಮ ನಮ್ಮ ಬದುಕುಗಳನ್ನು ರೂಪಿಸಿಕೊಳ್ಳುವ ರೂವಾರಿಗಳು ನಾವೇ ಬದುಕನ್ನು ನಂದನವನವನ್ನಾಗಿ ಮಾಡಿಕೊಳ್ಳಬಹುದು. ಇಲ್ಲವೇ ಶ್ಮಶಾನವಾಗಿಯಾದರೂ ಮಾಡಿಕೊಳ್ಳಬಹುದು. ಆದರೆ ಮಾನವ ತಾನು ಬದುಕಿ ಅನ್ಯರಿಗೆ ಬದುಕುಕೊಡುವ, ತಾನು ಬೆಳಗಿ ಅನ್ಯರಿಗೆ ಬೆಳಕು ಕೊಡುವ ಮಹಾಮಾನವನಾಗಬೇಕು. ಇದು ನಮ್ಮ ನಾಯಕನ ಜೀವನೋದ್ದೇಶ. ತುಂಬು ಭಾವುಕನಾದ ಈತನಲ್ಲಿಮಕಲೆಯ ಮೂಲಕ ಸತ್ಕಾರ್ಯ ನಡೆಸುವ ಮೂಲಕ ಜನತೆಯಲ್ಲಿ ಸದ್ಭಾವನೆಯನ್ನು ಬಿತ್ತಿ ಸ್ನೇಹ ಸೌಹಾರ್ದಗಳನ್ನು ಬೆಳೆಯಬಹುದು ಎಂಬ ಜೀವನ ದರ್ಶನವನ್ನು ಕಂಡಿದ್ದವನು. ಪ್ರೀತಿಯಿಂದ ಜಗತ್ತನ್ನೇ ಗೆಲ್ಲಬಹುದು. ದ್ವೇಷದಿಂದ, ದರ್ಪದಿಂದ ಯಾವುದನ್ನೂ ಸಾಧಿಸಲು ಬರುವುದಿಲ್ಲ ಎಂಬುದನ್ನು ಚೆನ್ನಾಗಿ ಅರಿತಿದ್ದ. ದ್ವೇಷ ದ್ವೇಷಕ್ಕೆ ಮೊಟ್ಟೆ ಹಾಕುತ್ತೆ. ಪ್ರೀತಿ ಹೃದಯಗಳನ್ನು ಗೆಲ್ಲುತ್ತೆ ಎಂದು ಹೇಳುತ್ತಿದ್ದ. ಅಂತಹ ಸೌಹಾರ್ದಯುತ ಸಹಬಾಳ್ವೆ ತನ್ನ ನಾಡಿಗರದಾಗಬೇಕೆಂದು ಆಶಿಸಿ, ಇದ್ದೆಡೆಗಳೆಲ್ಲೆಲ್ಲಾ ಒಂದು ಸತ್ಸಂಗ, ಸಜ್ಜನರ, ಸಾಹಿತಿಗಳ, ಕಲಾವಿದರ ಕೂಟ ಕಟ್ಟುತ್ತಿದ್ದ. ತನ್ಮೂಲಕ ಹೃದಯ ಹೃದಯಗಳನ್ನು ಬೆಸೆಯುವ ಕಾರ್ಯದಲ್ಲಿ ನಿರತನಾಗುತ್ತಿದ್ದ. ಪರಿಣಾಮವಾಗಿ ಕಳ್ಳ ಸುಳ್ಳರೂ ಒಳ್ಳೆಯವರಾಗುತ್ತಿದ್ದರು. ಪುಂಡುಪೋಕರಿಗಳೂ ಉತ್ತಮತೆಯ ಕಡೆಗೆ ವಾಲುವಂತಾದರು.

ಹನಗೋಡಿನಲ್ಲಿದ್ದಾಗ 'ಬೆಳಗು' ಎಂಬ ಕೈ ಬರಹದ ಪತ್ರಿಕೆಯನ್ನು ಆರಂಭಿಸಿ ಸ್ಥಳೀಯ ಪ್ರತಿಭೆಗಳನ್ನು ಬೆಳಕಿಗೆ ತಂದ. ಒಬ್ಬ ರೆವಿನ್ಯೂ ಅಧಿಕಾರಿ ತೋರುತ್ತಿದ್ದ ಸಾಹಿತ್ಯಾಸಕ್ತಿ ಸಾರ್ವಜನಿಕರನ್ನು ಒಂದು ವೇದಿಕೆಯ ಮೇಲೆ ತಂದು ಒಬ್ಬರನ್ನೊಬ್ಬರು ಅರ್ಥಮಾಡಿಕೊಳ್ಳುವಂತೆ ಮಾಡಿತು. ಹಲವರು ತಮ್ಮ ತಮ್ಮಲ್ಲಿನ ದೋಚಗಳನ್ನು ತಿದ್ದಿಕೊಂಡು ಪ್ರೀತಿ ಗೌರವಗಳಿಂದ ಬದುಕಲು ತೊಡಗಿದರು. ಹನಗೋಡಿನಿಂದ ಹುಣಸೂರು ತಾಲ್ಲೂಕು ಬಿಳಿಕೆರೆಗೆ ವರ್ಗವಾಗಿ ಬಂದಾಗ, ಅಲ್ಲಿ 'ಉಷಾ' ಎಂಬ ಕೈ

ಬರೆಹದ ಪತ್ರಿಕೆಯನ್ನು ಆರಂಭಿಸಿ, ಸಹೃದಯ ಸಜ್ಜನ ಬಳಗವನ್ನು ಆಕರ್ಷಿಸಿದ. ಅದರಲ್ಲಿ ಕತೆ, ಕವನ, ಪ್ರಬಂಧ, ಪ್ರದೇಶ ಪರಿಚಯಗಳಲ್ಲದೆ, ತಾನೇ ಸ್ವತಃ ರಚಿಸುತ್ತಿದ್ದ ವರ್ಣಚಿತ್ರಗಳನ್ನು ಪ್ರಕಟಿಸಿದ. ಅದೇ ಊರಿನಲ್ಲೊಂದು ಕರ್ಣಾಟಕ ಸಂಘ ಸ್ಥಾಪನೆ ಮಾಡಿ ವಾರಕ್ಕೊಮ್ಮೆ ತಪ್ಪದೆ ಒಂದೊಂದು ಸಾಹಿತ್ಯಿಕ ಸಾಂಸ್ಕೃತಿಕ ಕಾರ್ಯಕ್ರಮವನ್ನೇರ್ಪಡಿಸುವ ವ್ಯವಸ್ಥೆ ಮಾಡಿದ. ಬಡವ ಬಲ್ಲಿದ ಎಂಬ ಭೇದವಿಲ್ಲದೆ ಉಚ್ಚಕುಲ ನೀಚಕುಲ ಎಂಬ ತಾರತಮ್ಯ ತೋರದೆ ಯಾರದೇ ಮನೆಯ ಶುಭಾಶುಭ ಕಾರ್ಯಗಳಲ್ಲಿ ಭಾಗಿಯಾಗುತ್ತಿದ್ದ. ಊರಿಂದೂರಿಗೆ ಎತ್ತಿನ ಗಾಡಿಯಲ್ಲಿ ಹೋಗಿ ಬಡವರ ಮದವೆ ಮುಂಜಿಗಳಲ್ಲಿ ಸಾರ್ವಜನಿಕ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಹಾಜರಾಗುತ್ತಿದ್ದ. ಉತ್ತಮ  ವಾಗ್ಮಿಯಾದ್ದರಿಂದ ಸಾಂದರ್ಭಿಕವಾಗಿ ಔಚಿತ್ಯಮೀರದ ಮಾತುಗಳಿಂದ ಜನಮನವನ್ನು ಸೂರೆಗೊಳ್ಳುತ್ತಿದ್ದ.

ಗುಂಡ್ಲುಪೇಟೆಯಿಂದ ಕಡೂರಿಗೆ ಬಂದಾಗಲೂ ಅಷ್ಟೆ. ಕಡೂರಿನಲ್ಲಿ ಒಂದು 'ಕರ್ನಾಟಕ ಸಂಘ' ಸ್ಥಾಪನೆ ! ಸಂಘದ ಉದ್ಘಾಟನೆ ನಾಡಿನ ಹಿರಿಯ ಸಾಹಿತಿ ಮಾಸ್ತಿಯವರನ್ನು ಆಹ್ವಾನಿಸಿ, ಅತ್ಯಂತ ಯಶಸ್ವೀ ಕಾರ್ಯಕ್ರಮ ನಡೆಸಿದ್ದ. ಮತ್ತೊಬ್ಬ ಸಾಹಿತ್ಯ ದಿಗ್ಗಜ ವಿ. ಸೀತಾರಾಮಯ್ಯನವರು ಚಿಕ್ಕಮಗಳೂರು ಇಂಟರ್ ಮೀಡಿಯಟ್ ಕಾಲೇಜಿನ ಸೂಪರಿಂಟೆಂಡರಾಗಿದ್ದರು. ಅವರನ್ನು ಕರೆಸಿ ಒಂದು ಪುಟ್ಟ ಗ್ರಂಥಾಲಯ ತೆರೆಸಿದ. ಸಾಹಿತ್ಯವಷ್ಟೆ ಅಲ್ಲ ಆತನಿಗೆ ಚಿತ್ರ ಸಂಗೀತಾದಿ ಲಲಿತಕಲೆಗಳಲ್ಲಿ ತುಂಬಾ ಆಸಕ್ತಿ. ಅದರಿಂದಾಗಿ ಪಂಡಿತ ಸೂರ್ಯನಾರಾಯಣ ಶಾಸ್ತ್ರೀ ಎಂಬುವರಲ್ಲಿ ಸಂಗೀತವನ್ನು ಅಭ್ಯಾಸಮಾಡಿ ವೀಣೆ ನುಡಿಸುವುದರಲ್ಲಿ ಪರಿಣಿತನೆನಿಸಿದ. ಕಡೂರಿನ ಜನರಿಗೆ ಖ್ಯಾತ ಸಂಗೀತ ವಿದ್ವನ್ಮಣಿಯ ಪರಿಚಯ ಮಾಡಿಸುವ ಅಪೇಕ್ಷೆ ಇಟ್ಟುಕೊಂಡಿದ್ದ. ಈತ ಗಾನಗಂಧರ್ವ ಶ್ರೀ ದೇವೇಂದ್ರಪ್ಪನವರನ್ನು ಮೈಸೂರಿನಿಂದ ಕರೆಸಿ ಸಂಗೀತ ಕಾರ್ಯಕ್ರಮ ಏರ್ಪಡಿಸಿದ. ದೇವೇಂದ್ರಪ್ಪನವರ ಹಾಡುಗಾರಿಕೆಯಷ್ಟೇ ಮಧುರವಾಗಿತ್ತು ಅವರು ನುಡಿಸಿದ 'ಜಲತರಂಗ' ವಾದನ !

ಊರಿಂದೂರಿಗೆ ಪರದಾಟ ತಪ್ಪಲಿಲ್ಲ. ಕಡೂರಾಯಿತು ಹುಣಸೂರು ಬಂತು. ಹುಣಸೂರಾಯಿತು ತುರುವೇಕೆರೆ ಬಂತು. ತುರುವೇಕೆರೆಗೆ ಚಿಕ್ಕನಾಯಕನ ಹಳ್ಳಿ ಹತ್ತಿರವಾಯಿತು. ಅಲ್ಲಿ ಸಹೃದಯ ಸಾಹಿತಿ ಓ. ಎನ್. ಲಿಂಗಣ್ಣಯ್ಯನವರು ಅಮಲ್ದಾರರು. ಅಲ್ಲಿಗೆ ವರ್ಗವಾಗಿ ಬಂದ ಶಿರಸ್ತೇದಾರರು ಸ್ವೋಪಜ್ಞ ಸಾಹಿತಿ ಮಹದೇವಯ್ಯನವರು. ಇಬ್ಬರಿಗೂ ಹಾಲಿಗೆ ಹಾಲು ಬೆರೆತಂತೆ. ಹೂವಿಗೆ ಪರಿಮಳ ಕೂಡಿದಂತೆ ಅನ್ಯೋನ್ಯ ಅನುರಾಗ ಮೂಡಿತು. ಅದೊಂದು ಅಪರೂಪದ ಜೋಡಿ ಎನಿಸಿತು. ಚಿಕ್ಕನಾಯಕನಹಳ್ಳಿಯ ರೆವೆನ್ಯೂ ವಿಭಾಗದ ಇತಿಹಾಸದಲ್ಲಿ ಸೃಜನಾತ್ಮಕ ಸಾಹಿತ್ಯದ ಜೊತೆಗೆ ಜಾನಪದ ಕಲಾಪ್ರಪಂಚ ಅವರೆದುರು ತೆರೆದುಕೊಂಡಿತು. ಜನಪದ ಸಾಹಿತ್ಯ ಮತ್ತು ಜನಪದ ಗೀತ, ಸಂಗೀತ ಕಲೆಗಳೂ ಕಲೆಗಾರರೂ ಗುರುತಿಸಲ್ಪಟ್ಟರು, ಗೌರವಿಸಲ್ಪಟ್ಟರೂ ಕೂಡ,  ಗ್ರಾಮೀಣ ಜನತೆಯ ಮನೋಜ್ಞಾನದಾಯಕ ನಾಟಕಾಭಿನಯ, ಯಕ್ಷಗಾನ, ಸುಗ್ಗಿ ಕುಣಿತ, ಚೋಮನ ಕುಣಿತ, ಡೊಳ್ಳು ಬಡಾವಣೆಗಳಲ್ಲದೆ, ದೇವರ ಜಾತ್ರೆಗಳೂ ತುಂಬಾ ವಿಜೃಂಭಣೆಯಿಂದ ಮೆರೆದವು. ಎಲ್ಲದಕ್ಕೂ ಸಾಹಿತಿ ಅಧಿಕಾರಿಗಳಿಬ್ಬರ ಸಹಕಾರ ಪ್ರೋತ್ಸಾಗಳು ಸದಾ ಇದ್ದವು.

ನಮ್ಮ ನಾಯಕನ ಹೇದಯ ಹೂವಿನಷ್ಟು ಕೋಮಲ, ವಜ್ರದಷ್ಟು ಕಠೋರ, ಬಾದಾಮಿಯ ಅರಸ ಕಪ್ಪೆ ಅರಭಟ್ಟನಂತೆ, 'ಸಾಧುಗೆ ಸಾಧು ಮಾಧುರ್ಯಂಗೆ ಮಾಧುರ್ಯ'. ಅದರೆ 'ಬಾಧಿಪ್ಪ ಕಲಿಗೆ ಕಲಿಯುಗ ವಿಪರೀತ' ನಾಗಿರುತ್ತಿದ್ದ. ಒಮ್ಮೆ ಹೀಗಾಯಿತು. ಆತ ಚಿಕ್ಕನಾಯಕನ ಹಳ್ಳಿಯಲ್ಲಿ ಶಿರಸ್ತೇದಾರನಾಗಿದ್ದಾಗ ಖ್ಯಾತ ಗಾಂಧಿವಾದಿ ಜಿ. ವಿ. ನಾರಾಯಣ ಮೂರ್ತಿಯವರ ಪರಿಚಯ ಸಹಜವಾಗಿಯೇ ಆಯಿತು. ಮೂರ್ತಿಯವರು ಆ ಪ್ರದೇಶದ 'ಗ್ರಾಮಗಾಂಧಿ' ಎಂದು ಕರೆಸಿಕೊಂಡಿದ್ದವರು; ಸಾಹಿತಿ ಕೂಡ, ಅವರೊಡನೆ ಸಾಹಿತ್ಯ ಸಲ್ಲಾಪ, ಸಂಸ್ಕೃತಿ ಚಿಂತನೆ ನಿತ್ಯ ಇರುತ್ತಿತ್ತು ನಮ್ಮ ನಾಯಕನದು. ಆದರೆ ಅವರಿಬ್ಬರ ಅನ್ಯೋನ್ಯತೆ ಕಲಾಪ್ರಪಂಚದಲ್ಲಿ ಮಾತ್ರ. ಸ್ನೇಹವನ್ನು ಲೌಕಿಕ ವ್ಯವಹಾರದೊಡನೆ ತಾಳೆ ಹಾಕುತ್ತಿರಲಿಲ್ಲ. ಶುದ್ಧ ಸಾತ್ವಿಕ ಸ್ವಭಾವದ ವರೂ ಸ್ಥಿತಪ್ರಜ್ಞರೂ ಆದ ಜಿ.ವಿ. ನಾರಾಯಣರ ಮನಸ್ಸನ್ನು ಮುಟ್ಟಿದರು ಓರ್ವ ಶಾನುಭೋಗರು. ಹಳ್ಳಿಯ ಪೋಟಿಗೆಯನ್ನು ದುರುಪಯೋಗ ಮಾಡಿಕೊಂಡಿದ್ದ ಶ್ಯಾನುಭೋಗ ಮೂರ್ತಿವರ ಮೊರೆಹೊಕ್ಕ ವಿಧಿಯಿಲ್ಲದೆ ಮೂರ್ತಿಯವರ ವಿಷಯವನ್ನು ನಮ್ಮ ನಾಯಕನ ಮುಂದಿಟ್ಟರು. ಮತ್ತೆ ಹೇಳಿದರು ಅಪಹೃತ ಹಣದ ರಿಯಾಯಿತಿ ಅಲ್ಲ, ಕಟ್ಟಲು ಕೆಲವು ದಿನಗಳ ಅವಕಾಶ ಎಂದು. ನಮ್ಮ ನಾಯಕ ಬಹಳ ಯೋಚಿಸಿ ಒಪ್ಪಿದ. ಹಣವೂ ಬಂತು. ಶ್ಯನುಭೋಗನೂ ಬದುಕಿದ. ಇಂತಹ ಸಾಂದರ್ಭಿಕ ಸೌಹಾರ್ದ ಸಹಾಯ ಸಹಕಾರಗಳು ಸದಾ ಮುಂದಿದ್ದವು ಸಾತ್ವಿಕರ ಬಗೆಗೆ. ಆದರೆ ದುಷ್ಟರನ್ನು ಕಂಡರೆ ಅಷ್ಟೇ. ಕೆಂಡಾಮಂಡಲ ಅವನ ಮುಖ, ದುಷ್ಟರನ್ನು ಗೌರವಿಸುವುದು, ಸತ್ಪುರಷರನ್ನು ಕಡೆಗಣಿಸಕ್ಕಿಂತಲೂ ಅಪಾಯ ಎಂಬುದು ಅವನ ಇರಾದೆ. ಅದ ರಿಂದಾಗಿ ಅಪಾಯಕಾರಿ, ಸಮಾಜ ಘಾತುಕ ಶಕ್ತಿಗಳನ್ನು ಹತ್ತಿಕ್ಕುವುದರಲ್ಲಿ ಆತ ಹಿಂದು ಮುಂದು

ನೋಡುತ್ತಿರಲಿಲ್ಲ. ಅಪರಾಧಿ ಯಾವನೇ ಇರಲಿ ಮುಖಮುಲಜು ನೋಡುತ್ತಿರಲಿಲ್ಲ. ಅಪರಾಧಕ್ಕೆ ತಕ್ಕ ದಂಡನೆ ಆಗಲೇಬೇಕು ಎಂಬುದು ಅವನ ದೃಢನಿ ಶ್ಚಯ. ಅವನ ನ್ಯಾಯನಿಷ್ಠುರತೆಗೆ ಒಂದು ನಿದರ್ಶನ, ಆತ ಚಿಕ್ಕನಾಯಕನ ಹಳ್ಳಿಗೆ ಅಮಲ್ದಾರನಾಗಿ ಬಂದ. ಬಂದ ಕೆಲವೇ ದಿನಗಳಲ್ಲಿ ಓರ್ವ ರಾಜಕಾರಣಿಯ ಅವ್ಯವಹಾರ ತಿಳಿದುಹೋಯಿತು. ರಾಜಕಾರಣಿ ತಾನು ಸಾಮ್ರಾಟನೆಂದು ಭಾವಿಸಿ, ತನ್ನ ಕ್ಷೇತ್ರದ ಗಂಧದ ಮರಗಳನ್ನು ಕಡಿಸಿ, ಅಕ್ರಮ ಸಾಗಾಣಿಕೆ ಮಾರಾಟ ಮಾಡುತ್ತಿದ್ದ. ಅಮಲ್ದಾರ ಸಾಹೇಬ ಮಾಲು ಸಹಿತ ಹಿಡಿದು ಕಾನೂನು ಕ್ರಮ ಕೈಗೊಂಡ. ಆದರೆ ಪ್ರಭಾವಶಾಲಿ ರಾಜಕಾರಣಿ ತನ್ನ ಕೈವಾಡ ತೋರಿಸಿ, ಕೋಟಿಗೆ ಅಲೆಸಿದ. ಆದರೂ ಪ್ರಾಮಾಣಿಕ ಸತ್ಯವಾದಿ ನಮ್ಮ ನಾಯಕ ಜಗ್ಗಲಿಲ್ಲ. ಜಯಗಳಿಸಿ ಖ್ಯಾತ ದಕ್ಷ ಹಾಗೂ ಪ್ರಾಮಾಣಿಕ ಅಧಿಕಾರಿ ಎಂಬ ಪ್ರಶಂಸೆಗೆ ಪಾತ್ರನಾದ.

ಅವನ ನ್ಯಾಯನಿಷ್ಠುರತೆ ಮತ್ತು ಪ್ರಾಮಾಣಿಕತೆಗೆ ಮತ್ತೊಂದು ನಿದರ್ಶನ.

ಚಿಕ್ಕನಾಯಕನ ಹಳ್ಳಿಯಿಂದ ಶಿಡ್ಲಘಟ್ಟಕ್ಕೆ ಬಂದ ಮೇಲೆ ಅಲ್ಲಿನ ಒಬ್ಬ ವ್ಯಕ್ತಿ ಸರ್ಕಾರಕ್ಕೆ ಸಂದಾಯ ಮಾಡಬೇಕಾಗಿದ್ದ ಹಣವನ್ನು ತಿಂದುಬಿಟ್ಟಿದ್ದ. ಅಮಲ್ದಾರರ ಕಚೇರಿಯಿಂದ ಅದೇಶ ಹೋಯ್ತು. ವ್ಯಕ್ತಿ ಉದಾಸೀನವಾಗಿ ನಡೆದುಕೊಂಡ. ವಾಯ್ದೆ ಮುಗಿದ ಮಾರನೆಯ ದಿನವೇ ಕಾನೂನು ರೀತ್ಯಾ ಕ್ರಮ ಕೈಗೊಂಡಿರುವುದಾಗಿ ನೋಟೀಸ್ ಹೋಯ್ತು. ವ್ಯಕ್ತಿ ಹೆದರಿದ. ಒಂದು ಉಪಾಯ ಹೊಳೆಯಿತು. ಅಮಲ್ದಾರರು ಸಂಜೆ ಗಾಳಿ ವಿಹಾರಕ್ಕೆ ಹೊರಡುವ ಸಮಯ ನೋಡಿಕೊಂಡಿದ್ದು, ಅವರು ಬಾಗಿಲಿಗೆ ಬರುವ ಹೊತ್ತಿಗೆ ಸರಿಯಾಗಿ ಓಡಿ ಬಂದು ಅಡ್ಡಗಟ್ಟಿ, ಕೈಮುಗಿದು ಕೆಲವು ಕರೆನ್ಸಿ ನೋಟುಗಳನ್ನು ಅವನ ಜೇಬಿಗೆ ತುರುಕಿದ. ಅಮಲ್ದಾರರಿಗೆ ಅಸಹ್ಯವೆನಿಸಿತು. ಕೂಡಲೆ ಪೋಲೀಸ್ ಕರೆಸಿ ಅವರ ವಶಕ್ಕೊಪ್ಪಿಸಿದರು.

ಲಂಚ ಎಂಬ ಶಬ್ದ ನಮ್ಮ ನಾಯಕನ ನಿಘಂಟುವಿನಲ್ಲೇ ಇರಲಿಲ್ಲ. ಅದರ ಬಗೆಗೆ ಯಾರಾದರೂ ಮಾತನಾಡಿದರೆ, ನಾನು ನನ್ನ ತಂದೆ ಮಗನಾಗಿ ಬದುಕು ಮಾಡಲು ಇಚ್ಛೆಪಡುತ್ತೇನೆ. ಅನ್ಯನ ಎಂಜಲನಾಯಾಗಿ ಅಲ್ಲ ಎನ್ನುತ್ತಿದ್ದ. ಅಲ್ಲದೆ ಮನುಷ್ಯ ಕೆಟ್ಟತನದಿಂದಲೇ ಬದುಕಬೇಕಾಗಿಲ್ಲ. ಒಳ್ಳೆಯ ರೀತಿಯಿಂದಲೂ ಬದುಕಬಹುದು. ದೊಡ್ಡ ದೇಶದಲ್ಲಿ ಹುಟ್ಟಿದೆವೆಂದು ಹೇಳಿಕೊಳ್ಳುವುದು ದೊಡ್ಡಸ್ತಿಕೆ ಅಲ್ಲ. ಆದಷ್ಟೂ ಅತ್ಯವನ್ನು ಹಿಡಿದು ಬಾಳಬೇಕು. ಅದು ಶ್ರೇಷ್ಠ. ಅದರಲ್ಲಿ ತೃಪ್ತಿ ಇದೆ ಎನ್ನುತ್ತಿದ್ದ.

ವಿನಯಕ್ಕೆ ತಲೆಬಾಗುತ್ತಿದ್ದ ನಮ್ಮ ನಾಯಕ ಸತ್ಪುರುಷರನ್ನು ಕಂಡರೆ ಎದೆ ಹಾಸುತ್ತಿದ್ದ. ಅವರ ಬಗೆಗಿನ ಪ್ರೀತಿ ಭಕ್ತಿ ಎಲ್ಲವನ್ನು ಪುನಃಪೂರ್ವಕವಾಗಿ ಮಾಡುತ್ತಿದ್ದ. ಆದರೆ ಅಹಂಕಾರ ಮೆರೆದವರಿಗೆ ತಕ್ಕ ಪಾಠವನ್ನು ಕಲಿಸುತ್ತಿದ್ದ. ಅಂತಹ ಆತ್ಮ ಬಲ ಆತನಲ್ಲಿತ್ತು. ಒಂದು ಘಟನೆ :

೧೯೫೫ ಅಕ್ಟೋಬರ್ ನಮ್ಮ ಅಮಲ್ದಾರರಿಗೆ ಶಿಡ್ಲಘಟ್ಟದಿಂದ ರಾಮನಗರಕ್ಕೆ ವರ್ಗವಾಯಿತು. ಇವರ ಬಗೆಗೆ ಈ ಮೊದಲೇ ತಿಳಿದಿದ್ದ ಗುರಪ್ಪ ಎಂಬ ಶ್ಯಾನುಭೋಗ ಒಂದು ಕೈ ನೋಡೋಣ ಎಂದು ಮನಸ್ಸಿನಲ್ಲಿ ಆಲೋಚಿಸಿಕೊಂಡ. ಏಕೆಂ ದರೆ ಅವನು ಮೊದಲಿನಿಂದಲೂ ರಾಮನಗರಕ್ಕೆ ಬಂದ ಅಮಲ್ದಾರರನ್ನು ಬೆದರಿಸಿಕೊಂಡೋ ಇಲ್ಲವೆ ಅವರ ಕೈಬೆಚ್ಚಗೆ ಮಾಡಿ ಬುಟ್ಟಿಗಟ ಹಾಕಿಕೊಂಡೋ ಆತಳಿತ ನಡೆಸಿದ್ದ ಖದೀಮ. ನಮ್ಮ ಅಮಲ್ದಾರರು ನ್ಯಾಯನಿಷ್ಠುರಿ, ಸತ್ಯಸಂಧ, ಶುದ್ಧಹಸ್ತ ಎಂದು ತಿಳಿದೂ ಪ್ರಲೋಭನಕ್ಕೆ ಒಳಗಾಗವದವನಾವನಿದ್ದಾನೆ ಎಂಬ ಧಾರ್ಷ್ಟ್ಯದಿಂದ ನಡೆದುಕೊಂಡ. ನಮ್ಮ ಅಮಲ್ದಾರರ ಅಧಿಕಾರ ಸ್ವೀಕರಿಸಿದ ಮೊದಲು ಈ ಗುರಪ್ಪ ತನ್ನ ಚಪ್ಪಲಿಗಳನ್ನು ಹೊರಗಡೆ ಬಿಟ್ಟು ಬರುವ ಸೌಜನ್ಯವನ್ನು ಬಿಟ್ಟು ಜೋರಾಗಿ ಅಮಲ್ದಾರರ ಚೇಂಬರಿಗೆ ನುಗ್ಗಿದ. ಅಮಲ್ದಾರರ ಗಂಭೀರ ವದನ, ಅವರ ಕರುಣೆಯ ಕಡಲಂತಿದ್ದ ಕಣ್ಣುಗಳು ಇವುಗಳನ್ನು ನೋಡಿದ. ಮನಸ್ಸು ಪರಿವರ್ತನೆಗೊಂಡಿತು. ಹೇಳದೆ ಕೇಳದೆ ಕಾಲಲ್ಲಿದ್ದ ಚಪ್ಪಲಿಗಳು ಕಳಚಿಕೊಂಡವು. ಕೈಗಳು ಮುಗಿದುಕೊಂಡವು. ಶಿರಬಾಗಿತು. ಕ್ಷಮೆ ಕೇಳಿ ಹಿಂತಿರುಗಿದ.

ವ್ಯಕ್ತಿಯ ವ್ಯಕ್ತಿತ್ವದ ಪ್ರಭಾವ ಎಂಥದೆಂಬುದಕ್ಕೆ ನಮ್ಮ ನಾಯಕ ನಿದರ್ಶನವಾಗಿದ್ದಾನೆ.

ಹೀಗೊಬ್ಬ ಧರ್ಮರಾಯ

ಅವನೇ ನಮ್ಮ ಟಿ. ಎನ್. ಮಹದೇವಯ್ಯ

* * *

ಬಾಳೆಲ್ಲ ಬೇವಲ್ಲ, ಬೆಲ್ಲವೂ ಅಲ್ಲ, ಅವೆರಡರ ಸಮ್ಮಿಶ್ರಣ. ಜೀವನದಲ್ಲಿ ಏರುಪೇರುಗಳಿರಬೇಕು. ಇಲ್ಲದಿದ್ದರೆ ಅದು ಜೀವನ ಅನಿಸಿಕೊಳ್ಳುವುದಿಲ್ಲ. ಹಗಲಿರುಳು, ನೋವು ನಲಿವು ಬದುಕೆಂಬ ನಾಣ್ಯದ ಎರಡು ಮುಖಗಳು. ವ್ಯಕ್ತಿಯ ಜೀವನದಲ್ಲಿ ಆಜೀವ ಪರ್ಯಂತ ಬರೀ ಸುಖವೇ ಇದ್ದರೆ ಅದಕ್ಕೆ ಬೆಲೆ ಇರುವುದಿಲ್ಲ. ಬರೀ ದುಃಖವೇ ಇದ್ದರೆ ಸಹಿಸಲಳವಲ್ಲ. ಹಸಿವಾ

ದಾಗ ಊಟಮಾಡಿದರೆ ಊಟ ಮೆಚ್ಚಾಗುವುದು. ಕತ್ತಲ ಗರ್ಭ ಸೀಳಿ ಬೆಳಕು ಬಂದಾಗಲೇ ಅದರ ಹಿರಿಮೆ ಗೋಚರವಾಗುವುದು. ಅದೇ ರೀತಿ ಕಷ್ಟ ಅಥವಾ ಶ್ರಮದ ಅನಂತರದಲ್ಲಿ ಲಭ್ಯವಾದ ಸುಖಕ್ಕೆ ತುಂಬಾ ತುಂಬಾ ಮಹತ್ವವಿರುತ್ತದೆ. ಉದಾಹರಣೆಗೆ : ಉತ್ತರ ಅಮೆರಿಕೆಯ ತುತ್ತ ತುದಿಯಲ್ಲಿ ಉತ್ತರ ಧ್ರುವದ ಬಳಿ ಅಲಾಸ್ಕ ಇದೆ. ಅಲ್ಲಿ ವರ್ಷಕ್ಕೆ ಒಂತ್ತು ತಿಂಗಳು ಇಪ್ಪತ್ತು ನಾಲ್ಕು ಗಂಟೆಯೂ ಹಗಲು, ಸೂರ್ಯನ ಪ್ರಶರ್ಷಾವರ್ಷ ! ನನ್ನ ಮಗಳ ಮನೆಗೆ ಹೋಗಿದ್ದಾಗ, ನನ್ನ ಸ್ನೇಹಿತನನ್ನು ನೋಡಲು ಅಲಾಸ್ಕಾಕ್ಕೆ ಹೋದೆ. ಹರಿಯದ ಹಗಲು ಬೇಸರ ತಂದಿತು. ನನ್ನ ಗೆಳೆಯನನ್ನು ಕೇಳಿದೆ ಹೇಗೆ ಜೀವನ ಸಾಗಿಸ್ತೀರಿ ಇಲ್ಲಿ ಎಂದು. ಆತ ಹೇಳಿದ. ಹಸಿದಾಗ ಊಟಮಾಡ್ತೇವೆ, ನಿದ್ದೆ ಬಂದಾಗ ಮಲಗ್ತೇವೆ. ಉಳಿದಂತೆ ನಮ್ಮ ಕರ್ತವ್ಯಗಳಲ್ಲಿ ನಿರತರಾಗಿರ್ತೇವೆ' ಎಂದು ಅಂತಹ ಜೀವನ ನಿಜಕ್ಕೂ ಬೋರ್ ! ಆದ್ದರಿಂದ ಹಗಲಿನ ಬೆಲೆ ಗೊತ್ತಾಗುವುದು ಹನ್ನೆರಡೂ ಗಂಟೆಗಳಕಾಲ ಕತ್ತಲಾದಾಗ, ಇಪ್ಪತ್ತನಾಲ್ಕೂ ಗಂಟೆಗಳೇ ಹಗಲೇ ಇದ್ದರೆ ಹಗಲಿಗೆ ಬೆಲೆಯೇ ಇರುವುದಿಲ್ಲ. ನಮಗೆ ಜೀವನ ಏಕೆ ಸಹ್ಯವಾಗುತ್ತೇ ಎಂದರೆ ಸಾವು ನಮ್ಮ ತಲೆಯ ಮೇಲೆ ತೂಗುತ್ತಿರುವುದರಂದ, ಸಾವೇ ಇಲ್ಲ ಎಂದಿದ್ದರೆ ಬದುಕು ಭಾರವಾಗಿ ಬಿಡುತ್ತಿತ್ತು. ಸಾವು ಎಂಬುದು ನಮ್ಮ ಬದುಕಿನ ಅಪೂರ್ಣ ಚಿತ್ರಕ್ಕೆ ಕಡೆಯಲ್ಲಿ ಕೊಡುವ ಫಿನಿಷಿಂಗ್ ಟಚ್ !

ಈ ಫಿಲಾಸಫಿ ನಮ್ಮ ನಾಯಕಮಣಿಗೆ ಚೆನ್ನಾಗಿ ಗೊತ್ತಿತ್ತು. ಆತ ಕಷ್ಟ ಬಂದಾಗ ಕುಗ್ಗುತ್ತಿರಲಿಲ್ಲ. ಸುಖ ಬಂದಾಗ ಹುಚ್ಚಾಬಟ್ಟೆ ಹಿಗ್ಗುತ್ತಿರಲಿಲ್ಲ. ತನ್ನ ಸ್ಥಿತಪ್ರಜ್ಞತೆಯನ್ನು ಸದಾ ಕಾಯ್ದುಕೊಂಡಿರುತ್ತಿದ್ದ. ತುಂಬಿದ ಬಸುರಿಯಂತೆ ಇಕ್ಕೆಲಗಳಲ್ಲೂ ತುಂಬಿ ಹರಿಯುವ ನದಿಯ ಗರ್ಭದಲ್ಲಿ ಹಳ್ಳ ದಿಣ್ಣೆಗಳಿರುತ್ತವೆ. ಆದರೆ ತುಂಬಿದ ತೊರೆ ಅದನ್ನು ತೋರ್ಪಡಿಸುವುದಿಲ್ಲ. ಮೇಲು ನೋಟಕ್ಕೆ ಗಂಭೀರವಾಗಿ ಗಮಿಸುತಿರುತ್ತದೆ. ಒಳಗಿನ ಏರು ಪೇರುಗಳನ್ನು ನೆನೆಯುವ ಗೋಜಿಗೂ ಹೋಗುವುದಿಲ್ಲ. ನಮ್ಮ ನಾಯಕ ಅಂತಹ ತುಂಬಿ ಹರಿಯುವ ನದಿಯ ಹೋಲಿಕೆ ಪಡೆದವರು. ಸುಖ ಬಂದಾಗ ಬೇಡ ಅನ್ನಲಿಲ್ಲ. ಹಾಗೆಯೇ ಕಷ್ಟ ಬಂದಾಗಲೆಲ್ಲಾ ಬೇಡ ಅನ್ನುವುದು ಬೇಡ. ದೇವರು ಕಷ್ಟ ಕೊಡುವುದು ನಮ್ಮನ್ನು ಪರೀಕ್ಷಿಸುವುದಕ್ಕಾಗಿ. ಅದರಲ್ಲಿ ಗೆದ್ದರೆ ಶರಣಾಗುತ್ತೇವೆ, ಮರೆತರೆ ಸಾಮಾನ್ಯ ಮಾನವರಾಗುತ್ತೇವೆ ಎಂಬ ಅನಸಿಕೆ ಅವನದು.

ತಾಲ್ಲೂಕು ಶಿರಸ್ತೇದಾರನಾಗಿ ನಮ್ಮ ನಾಯಕ ಗುಂಡ್ಲುಪೇಟೆಯಿಂದ ಕಡೂರಿಗೆ ಬಂದದ್ದೇ ಕಷ್ಟ ಅವನ ಹೊಟ್ಟೆಯ ಮೇಲೆ ಕಾಲೂರಿ ಕುಣಿಯತೊಡಗಿತು. ಸಾಮಾನ್ಯರಾಗಿದ್ದರೆ ಅದರ ರುದ್ರ ತಾಂಡವಕ್ಕೆ ಪುಡಿ ಪುಡಿಯಾಗುತ್ತಿದ್ದರು. ನಾಯಕ ಗಟ್ಟಿಗ, ಎಷ್ಟೇ ಕಷ್ಟ ಬಂದರೂ ವಿಚಲಿತನಾಗದ ವ್ಯಕ್ತಿ. ಅವನಿಗಾದ ಮೊದಲ ಆಘಾತ ಅವನ ತಂದೆ ನಾಗಪ್ಪನವರು ಲಿಂಗೈಕ್ಯರಾದರು. ವಸಂತ, ಶರಶ್ಚಂದ್ರ ಮತ್ತು ಶೈಲಜ ಎಂಬ ಮೂರು ಮಕ್ಕಳನ್ನು ಕೊಟ್ಟ ಅವನ ಪತ್ನಿ ಮಹದೇವಮ್ಮ ಅನಾರೋಗ್ಯಕ್ಕೆ ಬಲಿಯಾದರು. ಅಂದಿನ ದಿನಗಳಲ್ಲಿ ಗುಣವಾಗುವುದೇ ಇಲ್ವೆಂದು ಪರಿಗಣಿತವಾಗಿದ್ದ ಕ್ಷಯ ಅವರನ್ನು ಬಾಧಿಸತೊಡಗಿತ್ತು. ರೋಗ ನಿವಾರಣೆಗಾಗಿ ಮೈಸೂರಿನ ಸ್ಯಾನಿಟೋರಿಯಂಗೆ ಸೇರಿಸಲಾಯಿತು. ಈ ಮಧ್ಯೆ ಕಡೂರಿಂದ ಹುಣಸೂರಿಗೆ ವರ್ಗ. ವಾರದ ಐದು ದಿನಗಳೂ ಹುಣಸೂರಿನಲ್ಲಿ ಸರ್ಕಾರಿ ಕೆಲಸ, ಶನಿವಾರ ಮಕ್ಕಳನ್ನು ಕರೆದುಕೊಂಡು ಮೈಸೂರಿಗೆ ಬರುವ ಹವ್ಯಾಸ. ಭಾನುವಾರ ಅಲ್ಲಿದ್ದು ನರಳುತ್ತಿದ್ದ ಪತ್ನಿಗೆ ಧೈರ್ಯ ತುಂಬಿ ಮತ್ತೆ ಸೋಮವಾರ ಬೆಳಗ್ಗೆ ಹುಣಸೂರಲ್ಲಿ ತನ್ನ ಕಚೇರಿಯಲ್ಲಿ ಸಮಯಕ್ಕೆ ಸರಿಯಾಗಿ ಹಾಜರ್. ಹೀಗೆ ಕೆಲವು ದಿನಗಳು ಕಳೆದವು. ಪತ್ನಿಯವರು ಗುಣಮುಖರಾಗಲಿಲ್ಲ. ಸ್ಯಾನಿಟೋರಿಯಂನಲ್ಲಿ ಕೊಳೆಸುವುದು ನಮ್ಮ ನಾಯಕನಿಗೆ ಬೇಡವಾಯಿತು. ಮೈಸೂರಿನಲ್ಲೇ ಮನೆ ಮಾಡಿ ಮನೆಯಾಕೆಯನ್ನು ಅಲ್ಲಿಗೆ ತಂದು ಸೇರಿಸಿದರು. ಆದರೂ ದಿನಾಂಕ ೪ ಜನವರಿ ೧೯೪೮ರಲ್ಲಿ ಮಹದೇವಮ್ಮನವರು ತಮ್ಮ ಕೊನೆಯುಸಿರೆಳೆದರು. ಮುತ್ತೈದೆಯಾಗಿ ಮುಕ್ತರಾದರು.

ಸಂಸಾರ ಸಾರ ಸಸಾರವಾಗಿದ್ದಾಗ, ನಿಸ್ಸಾರ ಹೊರೆಯಾದಾಗ ಇದರ ವಿಮರ್ಶೆಗೆ ನಮ್ಮ ನಾಯಕ ಕೈಹಾಕಲಿಲ್ಲ. ಸುಖ ಬಂತು ಹೋಯ್ತು. ಹಾಗೆಯೇ ದುಃಖ ಬಂದಿದೆ ಹೋಗುತ್ತೆ ಎಂದು ಸರಳವಾಗಿ ನುಡಿದ. ಅದರಂತೆ ಬಾಳಿದ ಕೂಡ. ಮೂರು ಹೆಣ್ಣು ಮಕ್ಕಳು ಒಬ್ಬ ಪೋಲಿಯೋ ಪೀಡಿತ ಮಗ ಶರಶ್ಚಂದ್ರ. ಎಲ್ಲಾ ಚಿಕ್ಕ ಚಿಕ್ಕ ಮಕ್ಕಳು. ಎಲ್ಲರ ನಿಗಾ ಯಾರಿಂದ ಸಾಧ್ಯ. ಅನ್ಯರು ಎಷ್ಟು ನೋಡಿಕೊಂಡಾರು. ಅದರಿಂದಾಗಿ ಎರಡನೆಯ ಮದುವೆ ಅನಿವಾರ್ಯವಾಯಿತು. ಕೊಡಗಿನ ಸೋಮವಾರಪೇಟೆಯ ಮಸಗೋಡು ಎಷ್ಟೇಟಿನ ಒಡೆಯ ಶ್ರೀ ಕೆ.ಎಸ್. ಚನ್ನಬಸವಯ್ಯನವರ ಜ್ಯೇಷ್ಠಪುತ್ರಿ ಚಿ.ಸೌ. ಸುಶೀಲಮ್ಮ ಪತ್ನಿಯಾಗಿ ಮನೆಗೆ ಬಂದಳು. ತಬ್ಬಲಿ ಮಕ್ಕಳಿಗೆ ತಾಯಾಗಿ, ಮನೆಮನ ಬೆಳಗುವ ದೀಪವಾಗಿ ಹೆಸರಿಗೆ ತಕ್ಕಂತಹ ಶೀಲವಂತೆಯಾಗಿ, ಗುಣಾಢ್ಯ ಗವರಿಯಗಿ, ನಮ್ಮ ನಾಯಕನು ಕೈಹಿಡಿದ ಭಾಗ್ಯದೇವತೆಯಾಗಿ ೨೭ ಮೆ ೧೯೪೮ರಲ್ಲಿ ಎಷ್ಟೇಟಿನಲ್ಲಿ ಮದುವೆಯಾಗಿ ಮನೆಗೆ ಬಂದಳು. ೨೯ ಮೇ ೧೯೪೯ರಲ್ಲಿ ಅಮೃತ ಹುಟ್ಟಿದಳು.

ಸುಖದ ಚೆಲ್ಲಾಟ ನೋಡಿ ದುಃಖ ಮರೆಯಲ್ಲಿ ನಿಂತು ಅಣಕವಾಡುತ್ತಿತ್ತು ! ನಮ್ಮ ನಾಯಕಮಣಿಯ ಅಚ್ಚುಮೆಚ್ಚಿನ ತಮ್ಮ ಇವನ ಮನೆಯಲ್ಲೇ ಓದಿಕೊಂಡಿದ್ದ. ಆ ವರ್ಷ ಎಸ್.ಎಸ್.ಎಲ್.ಸಿ ಪರೀಕ್ಷೆ ಕಟ್ಟಬೇಕಾಗಿತ್ತು. ಸೆಲೆಕ್ಷನ್ ಪರೀಕ್ಷೆಯಲ್ಲಿ ಫೇಲಾದ. ಬೇಸರ ಆಯತು. ಮರಕ್ಕೆ ನೇಣು ಹಾಕಿಕೊಂಡು ಸತ್ತ. ನಮ್ಮ ನಾಯಕ ತಮ್ಮ ಮುದ್ದಿನ ತಮ್ಮನಿಗಾಗಿ ಕಣ್ಣೀರು ಹಾಕಿದ. 'ಹುಡುಗ ದುಡುಕಿದ. ಹುಡುಗ ಬುದ್ದಿ, ಎಡವಿ ಬಿದ್ದ' ಎಂಬ ಗಾದೆಗೆ ತಕ್ಕಂತೆ ಆದ ಎಂದು ಮರುಗಿದ.

೧೯೫೦ರ ನವೆಂಬರ್‌ನಲ್ಲಿ ತರುವೇಕೆರೆಗೆ ವರ್ಗವಾಗಿ ಬಂದ ಮೇಲೆ ಅರವಿಂದ ಹುಟ್ಟಿದ. ಶರಚ್ಚಂದ್ರನಂತೆ ಅಂಗಹೀನ ನಾಗಿರಲಿಲ್ಲ. ತುಂಬಾ ಸ್ಫುರದ್ರೂಪಿ. ಶಿಶು. ಮುದ್ದಾದ ಮಗು ಹುಟ್ಟಿದೆ, ನೋಡಿ ಅದರ ಕೇಕೆ ಕೇಳಿ ಆನಂದಿಸುವಷ್ಟರಲ್ಲಿ ತಮ್ಮ ಮಗಳು ಸ್ವರ್ಣಳ ಅಕಾಲ ಮರಣದ ಸುದ್ದಿ. ಅವಳಂತೆಯೇ ಕೇವಲ ಹನ್ನೊಂದು ತಿಂಗಳು ಸಾಕಿಸಿಕೊಂಡ ಅರವಿಂದ ಡಯೋ ರಿಯಾಕ್ಕೆ ಬಲಿಯಾದ. ನಾಯಕ  ಧೃತಿಗೆಡಲಿಲ್ಲ. ನೋವುಂಡು ನಂಜುಂಡರಾಗಬೇಕು ಎಂದು ಭಾವಿಸಿದ. ತನ್ನ ಪತ್ನಿ ಸುಶೀಲ ಮ್ಮನ ಸಾಂತ್ವನಕ್ಕಾಗಿ ಒಂದು ಪತ್ರ ಬರೆದ. ಅದು ಸಾಧಾರಣ ಪತ್ರವಲ್ಲ, ಓರ್ವ ಸ್ಥಿತಪ್ರಜ್ಞನ ಜೀವನದರ್ಶನ. ಅದೊಂದು ಕಲಾ ತ್ಮಕ ಕಿರುಬರಹ. ಅದು ಹೀಗಿದೆ.

'ಆ ಅರವಿಂದ ಶತಕೋಟಿ ಪುಷ್ಪಪಗಳಿಂದ ನಿತ್ಯ ಪೂಜೆ ಪಡೆಯುವ ಭಗವಂತನ ಚರಣಗಳಿಗೇ ಚೆಂದ ! ಆ ಅಪರೂ ಪದ ಹೂವನ್ನು ನಾನು ನೀನು ನಮ್ಮ ತೊಡೆ ತೋಳುಗಳಲ್ಲಿ ಧರಿಸುವುದು ಅಪರಾಧ. ತಾನಾಗಿ ಬಂದು ಅರೆಗಳಿಗೆ ನಮ್ಮ ಬಳಿ ಕುಳಿತ ಮಾತ್ರಕ್ಕೇ ನಮ್ಮದೆಂದರೆ ಅದನ್ನು ಸಂಪಾದಿಸಿದ ಅಪ್ಸರೆಯರಿಗೆ ದ್ರೋಹಮಾಡಿದಂತೆ ! ಭಗವಂತನ ಚರಣದಲ್ಲಿ ಪೂಜೆಗೆ ಸಿದ್ಧವಾಗಲಿರುವ ಹೂವಿನ ಅಪರೂಪ ಪುಣ್ಯಕ್ಕೆ ಕಲ್ಲು ಹಾಕಿದಂತೆ. ಅದರ ದರ್ಶನ, ಸ್ಪರ್ಶ ಸುಖ, ಸಂಭಾಷಣೆಗಳು ನಮಗೆ ದೊರಕಿದ್ದರೆ ಅದೇ ನಮ್ಮ ಅಲಭ್ಯಲಾಭ ; ಜನ್ಮಾಂತರದ ಪುಣ್ಯ ವಿಶೇಷ ! ಹೆಚ್ಚು ಪುಣ್ಯಕ್ಕೆ ಆಸೆಪಡಬೇಡ ಅದು ಸ್ವಾರ್ಥವಾಗುತ್ತದೆ. ನಮ್ಮ ಯೋಗ್ಯತೆಗೆ ತಕ್ಕಷ್ಟು ನೀಡುವವನು ಭಗವಂತನೊಬ್ಬನೇ. ಲೋಕದ ಮನುಷ್ಯರ ಸ್ತುತಿ ನಿಂದೆಗಳಿಂದ ಏನು ಫಲ ! ನಮಗೆ ಅಷ್ಟಾದರೂ ಸಿಕ್ಕಿತಲ್ಲ ! ಸಂತೋಷದಿಂದ ನಿಜವನ್ನು ತಿಳಿದು"ಹೇ ಭಗವಂತಾ, ಈ ಹೂವು ನಿನಗೆ ಪೂಜಾಯೋಗ್ಯ ವಾಗಿತ್ತು. ನಿನ್ನ ಚರಣ ಸ್ಪರ್ಷದಿಂದ ಅದನ್ನು ನಾನು ಕಿತ್ತುಕೊಳ್ಳಲು ಬಯಸುವುದಿಲ್ಲ. ಅದು ದುರಾಗ್ರಹ. ನೀನು ಸ್ವೀಕರಿಸಬಯ ಸಿದರೆ ಅದಕ್ಕೆ ಎದುರುಂಟೆ ? ಸ್ವೀಕರಿಸು ! ಕಣ್ಣಿನ ನೀರನ್ನು ಒರೆಸಿ, ಆನಂದದಿಂದ ಅದನ್ನು ತ್ಯಾಗ ಮಾಡಿ ಎದೆಯ ಹೂವಾಗಿ ಬಾಳಿನ ಉಸಿರಾಗಿ, ನನ್ನ ಜೀವದ ಸರ್ವಸ್ವವಾಗಿದ್ದ ನನ್ನ ಅರವಿಂದ ಪುಷ್ಪವನ್ನು ಇಂದು ನಿನ್ನ ಚರಣತಲದಲ್ಲಿ ಸಮರ್ಪಿಸಿದ್ದೇನೆ" – ಎಂದು ಧೈರ್ಯವಾಗಿ ನಗುನಗುತ್ತಾ ದೇವರ ಮುಂದೆ ಒಂದು ನಮಸ್ಕಾರ ಹಾಕಿ ಸುಖವನ್ನು ಪೂಜಿಸಿ, ನೈವೇದ್ಯ ನೀಡಿದ ಹೆಂಗಸು ಭಕ್ತಿಯಿಂದ ಪುಳಕಿತಳಾಗಿ ಏಳುವಂತೆ ಏಳು, ಮತ್ತೊಮ್ಮೆ ಮನಸ್ಸನ್ನು ಸಣ್ಣ ಸಣ್ಣ ವಿಷಯಗಳ ಕಡೆಗೆ ನೂಕ ಬೇಡ. ಉತ್ತಮವಾದ, ಉದಾತ್ತವಾದ ಈ ಬಾವನೆಯಿಂದ ಈ ಅರ್ಪಣ ಭಾವದಿಂದ ನಡೆ, ಬೆಂದು ಹೋಗುತ್ತಿರುವ ನನ್ನ ಹೃದಯಕ್ಕೂ ಭಗವಂತನು ಅಮೃತವನ್ನು ಎರೆದು ಶಾಂತಿ ಜಲವನ್ನು ಪ್ರೋಕ್ಷಿಸಿ ಮನಸ್ಸಿಗೆ ನೆಮ್ಮದಿ ನೀಡುತ್ತಾನೆ. ಇದೇ ಶಿವನಿಗೆ ನಾವು ಅರ್ಪಿಸಿದ ಶಿವರಾತ್ರಿಯ ಕಾಣಿಕೆ. ಇಂದಿನಿಂದ ನಿನ್ನ ಮನಸ್ಸು ಈ ನೆನಪಿನಿಂದ ಮಧುರವಾಗಲಿ. ಆನಂದದಿಂದ ಹೆಚ್ಚಳ ಪಡೆಯಲಿ. ಈ ಅಪರೂಪ ಸೌಂದರ್ಯವನ್ನು ಕೂಡ ಎಲ್ಲ ಮಕ್ಕಳ ಕಣ್ಣಿನ ಬೆಳಕಿನಲ್ಲೂ ತುಟಿಯ ನಗೆಯಲ್ಲೂ ಮಿನುಗುವ ಕೆನ್ನೆಯಲ್ಲೂ ಕಾಣುತ್ತಾ ಬಾ. ಆ ಅರವಿಂದ ಪುಷ್ಪ ಜಗತ್ತಿನ ಎಲ್ಲ ಮಕ್ಕಳ ಕಣ್ಣು, ಮೂಗು, ಮುಖಗಳಲ್ಲಿ ಮೂಡಿ ನಿಲ್ಲುತ್ತದೆ. ಭಗವಂತ ಆಗ ಮಗುವನ್ನು ವಿಶ್ವರೂಪದ ಆಕೃತಿಯಲ್ಲಿ ಸಕಲ ಜಗತ್ತಿನಲ್ಲೂ ತೋರಿಸುತ್ತಾನೆ. ಇದೇ ವೀಶ್ವರೂಪದ ರಹಸ್ಯ, ಅದೊಂದು ಪ್ರತ್ಯೇಕ ರೂಪವಲ್ಲ. ಜಗತ್ತಿನ ಪ್ರತಿ ಕೂಸೂ ನಮ್ಮ ಕೂಸೇ. ಏಕೆಂದರೆ ಅರವಿಂದ ನಮ್ಮ ಕೂಸು ! ಎಲ್ಲೆಲ್ಲಿ ಅರ ವಿಂದನ ಭಾವ ಕಾಣಬಹುದೊ ಅಲ್ಲೆಲ್ಲ ಭಗವಂತನ ಚರಣ ಕಮಲ ಕಂಡು ಬರಲಿ, ಇಂದಿನಿಂದ ಈ ಮಧುರವಾದ ಭಾವ ಭಾವನೆಯನ್ನು ಪೋಷಿಸುತ್ತ ಬಾ !'

–ಇಂತಹ ಮನೋಬಲ, ಆತ್ಮಸ್ಥೈರ್ಯ, ಚಿತ್ತಸಂಯಮ, ನಮ್ಮ ನಾಯಕ ವೀರನಿಗಲ್ಲದೆ ಬೇರಾರಿಗೆ ಬರಲು ಸಾಧ್ಯ ?

ಕಾಲವೆಂಬುದೊಂದು ಉತ್ತಮ ಮುಲಾಮು. ಅದು ಮನಸ್ಸಿನ ಗಾಯವನ್ನು ಮಾಯಿಸುತ್ತದೆ ಎಂದಿದ್ದಾನೆ ಶೇಕ್ಸ್ ಪಿಯರ್. ಆ ಮುಲಮು ನಮ್ಮ ನಾಯಕ ನಾಯಕಿಯರ ಒಡಲಾಳದ ಅಳಲನ್ನು ಅಣಗುವಂತೆ ಮಾಡಿತು. ದುಃಖ ಮರೆತ ಮಗ್ಗುಲಲ್ಲೇ ಸುಖ ಬಂತು. ೧೨ ಜನವರಿ ೧೯೫೩ರಲ್ಲಿ ಮಂಜುನಾಥ ಹುಟ್ಟಿದ. ಮನೆಯಲ್ಲೆಲ್ಲ ಆನಂದ ಹರಿದಾಡಿತು. ಆದ ರೇನು ಮೃತ್ಯ ತನ್ನ ಕರಾಳ ಹಸ್ತವನ್ನು ನಮ್ಮ ನಾಯಕನ ಮೇಲೂ ಇಟ್ಟ. ಒಂದು ದಿನ ಶಿವಮೊಗ್ಗೆಯಲ್ಲಿದ್ದಾಗ ಉರಿಯುತ್ತಿದ್ದ ದೀಪವನ್ನು ಮಗ ಇದ್ದಕ್ಕಿದ್ದಂತೆ ಆರಿಸಿದ. ಕೋಪವನ್ನೇ ಅರಿಯದ ಆ ಶಾಂತಮೂರ್ತಿಗೆ ಅಂದೇಕೊ ಕೋಪ ಭುಗ್ ಎಂದು

ನುಗ್ಗಿತು. ಮಗನ ಮೇಲೆ ಕಿಡಿಕಾರುತ್ತಾ ದೀಪ ಏಕೋ ಆರಿಸೆ. ಅಷ್ಟು ಅವಸರವೇ ಆರಿಸೋಕೆ. . .ಆ ದೀಪ ಏನಾರಿಸೋದು ಬಿಡು. . .ಮನೆಯ ದೀಪವೇ ಆರೀಕಾಲ ಬಂದಿದೆ !' ಎಂದು ನುಡಿದುಬಿಟ್ಟ. ಸಾಧ್ವೀಶೀರೋಮಣಿ ಸುಶೀಲಮ್ಮನವರಿಗೆ ತಲೆಯ ಮೇಲೆ ಸಿಡಿಲೆರಗಿದಂತಾಯಿತು. ಅಂದಿನ ತುಟಿ ಮೀರಿದ ಮಾತು ದಿಟವಾಗಿತ್ತು. ದಿನಾಂಕ ೬ ಏಪ್ರಿಲ್ ೧೯೬೧ರಂದು ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆಗಾಗಿ ಗಾಡಿಯಲ್ಲಿ ಕೊಂಡೊಯ್ಯುತ್ತಿದ್ದಾಗ ಹೃದಯಸ್ತಂಭನ ಆಯಿತು. ಎಂದೋ ಬರೆದ ಕವನ ಎರಡು ಸಾಲು ಹಾಡಿತು ಆ ಅಂತರಾತ್ಮ.

**ಕಂಡೆನು**

**ಮೃತ್ಯುವದು ಕರೂಣೆಯಿಂ ನೀಡುವ ಮಹಾಸುಖದ**
**ಸತ್ತಮೇಲೇನಾಗುವುದೊ ಕಾಣೆನಯ್ಯಾ**
**ಆದರೂ ಮತ್ತೆ ಪುಟ್ಟದಾ ಸಾವೆನಗಿರಲಿ**
**ಬೆವರದಲೆ ಹೆದರದಲೆ ತಬ್ಬುವೆನು ಮೃತ್ಯುವನು**
**ಮೃತ್ಯುದೇವತೆಯೆ. ಬಾ. ತಾಯಿ. ಬೀಳುವೆನು ಬಾ**
**ನಿನ್ನ ಪಾದಗಳಲ್ಲಿ ಹಿಡಿದೆತ್ತು ಸಾಕೆನಗೆ !**
**ಶಾಂತಿಯ್ಯೆ ! ಸಿಕ್ಕಿತೈ ! ಓಂ ಶಾಂತಿ !**

**(ಮಹಾಮೃತ್ಯು ಪು. ೨೨)**

ಸಾವನ್ನು ಸ್ವಾಗತಿಸಿದ ಮಹಾನುಭಾವ ನಮ್ಮ ಪಾಲಿಗಿಲ್ಲವಾದ
ಹೀಗೊಬ್ಬ ಧರ್ಮರಾಯ
ಅವನೇ ನಮ್ಮ ಟಿ. ಎನ್. ಮಹದೇವಯ್ಯ

* * *

'ನಾನು ಬಾಲ್ಯದ ಉದ್ಯಾನವನದಲ್ಲಿ ಹೂ, ಮರ, ಹಕ್ಕಿಗಳೊಡನೆ ಆಟವಾಡುತ್ತಿದ್ದೆ. ಆಗ ನೀನು ಬಂದೆ. ನಸು ನಗೆ ಬೀರುತ್ತ ಕೇಳಿದೆ 'ನಾನಾರು' ಗೊತ್ತೆ ? ಎಂದು. ನಿನ್ನ ಮುಖದ ಪರಿಚಯವಿದ್ದರೂ ಇಲ್ಲದಂತಿತ್ತು. ಸರಿಯಾಗಿ ಗುರುತು ಹಿಡಿಯಲಾಗಲಿಲ್ಲ. ಅಂಜುತಂಜುತ ನಾನು 'ಇಲ್ಲ ನನಗೆ ತಿಳಿಯದು' ಎಂದು ನುಡಿದೆ. ನೀನು ಒಂದು ಎಳನಗೆ ಬೀರಿ 'ಮುಂದೆ ತಿಳಿಯುವೆ' ಎಂದು ನುಡಿದು ಮರೆಯಾಗಿಬಿಟ್ಟೆ.

ನಿದ್ರೆಯಲ್ಲಿ ಸವಿಗನಸುಗಳನ್ನು ಕಾಣುತ್ತ ಮಲಗಿರುವಾಗ ಸ್ವರ್ಣದ ಪುತ್ಥಳಿಯಂತೆ ನೀನು ಮತ್ತೆ ಬಂದೆ. ನಿನ್ನ ಬಿಸಿಯುಸಿರಿನ ಸೋಕಿನಿಂದ ನನಗೆ ಥಟ್ಟನೆ ಎಚ್ಚರವಾಯಿತು. ಕಣ್ಣುಜ್ಜಿಕೊಂಡು ನಿನ್ನನ್ನು ದಿಟ್ಟಿಸಿ ನೋಡಿದೆ. ನೀನು ಅದೇ ಮೃದು ಹಾಸ್ಯದಿಂದ ಮತ್ತೆ ಪ್ರಶ್ನಿಸಿದೆ 'ನಾನಾರು ಈಗ ಗೊತ್ತೆ ?' ಎಂದು. ನಾನು ಮತ್ತೆ 'ನನಗೆ ತಿಳಿಯದು' ಎಂದೇನು. ನೀನು ಅಂದಿನಂತೆಯೇ 'ಮುಂದೆ ತಿಳಿಯುವೆ' ಎಂದು ನುಡಿದು ಮಾಯವಾಗಿ ಬಿಟ್ಟೆ.

ಅಸಹನೀಯ ವೇದನೆಯೊಂದು ನನ್ನನ್ನು ಆವರಿಸಿ ಬಿಟ್ಟಿತು. ನಾನು ನರಳುತ್ತ ಸಂಕಟಪಡುತ್ತಿದ್ದೆ. ತಲೆ ಸಿಡಿದು ಹೋಗುತ್ತಿತ್ತು. ಆಗ ಯಾರದೋ ಶೀತಲವಾದ ಕರಪಲ್ಲವ ಸ್ಪರ್ಶದಿಂದ ಅರ್ಧಯಾತನೆ ಕಳೆದುಹೋಯಿತು. ಕಣ್ಣು ತೆರದು ನೋಡಿದೆನು. ನೀನು ಬಂದು ಕುಳಿತು ಆರೈಕೆ ಮಾಡುತ್ತಿದ್ದೆ. ಮತ್ತೆ ತುಸು ಹಾಸ್ಯದ ನಗೆತೋರಿ ಕೇಳಿದೆ 'ನಾನಾರು ಈಗ ಗೊತ್ತೆ?' ಎಂದು. ನಾನು ಉತ್ತರ ಕೊಡಲಾರದೆ ಸುಮ್ಮನೆ ನಿನ್ನ ಮುಖವನ್ನೇ ನೋಡುತ್ತಿದ್ದೆ. ನನ್ನ ಕಣ್ಣಿನಲ್ಲಿ ನೀರು ಸಂಚಿತವಾಗುತ್ತಿದ್ದಿತು. ನೀನು ಬಹು ಪ್ರಶಾಂತವಾದ ಒಂದು ನಗೆಯ ಲಹರಿಯನ್ನೆಸೆದು 'ನಾನು ನಿನ್ನ ಹೃದಯ ಗೆಳತಿ ! ಮುಂದೆ ತಿಳಿಯುವೆ' ನುಡಿದು ಎಂದಿನಂತೆ ಅದೃಶ್ಯಳಾಗಿ ಬಿಟ್ಟೆ'.

ಈ ರೀತಿ ಕಾವ್ಯಕಾಮಿನಿ ಕಣ್ಣು ಮುಚ್ಚಾಲೆಯಾಟವಾಡಿದ್ದು ಯಾರೊಡನೆ ಗೊತ್ತಾ? ಗೊತ್ತಿಲ್ಲ ! ಕೇಳಿ, ಅವನೇ ನಮ್ಮ ಮಹದೇವ ಕವಿ ; ಮಹದೇವ ಸಂತ ಕವಿ. ನಮ್ಮ ಕವಿಯದು ಪ್ರಸನ್ನ ಪ್ರಕೃತಿ ; ಪ್ರಾಂಜಲ ಮನಸ್ಸು, ಸತ್ಯ ಶಿವ ಸೌಂದರ್ಯಗಳ ನಿತ್ಯದಾರಾಧಕ. ಸತ್ಯವೆಂದರೆ ಭಾವಸತ್ಯ, ಲೋಕಸತ್ಯ ಅಲ್ಲ ; ಸೌಂದರ್ಯವೆಂಬುದು ಬಾಹ್ಯದಲಂಕಾರವಲ್ಲ, ಆಂತರಿಕ ಶೋಭೆ, ಇವೆರಡೂ ಪರಿಣಾಮಗೊಳ್ಳುವುದು ಶಿವ ಅಥವಾ ಮಂಗಳದಲ್ಲಿ ಎಂಬುದು ನಮ್ಮ ಕವಿವರ್ಯನ ಇರಾದೆ. ಅಂತೆಯೇ ನನ್ನ ದೃಷ್ಟಿಯಲ್ಲಿ ಪ್ರತಿಯೊಬ್ಬ ಮಾನವನೂ ಜನ್ಮತಃ ಕವಿ, ಅವನು ಇಳೆಗೆ ಬರುವಾಗ ಅಳುತ್ತಾ ಬಂದ, ಆದರೆ ಅದು ಅಳು

ವಲ್ಲ, ಅವನು ಅಂದು ಹಾಡಿದ ಬಾಲಗೀತೆ, ಪ್ರಾಯದಲ್ಲಿ ಪ್ರೇಮ ಸಲ್ಲಾಪ ನಡೆಸಿದ, ಅದು ಹರಟೆಯಲ್ಲ ಅವನು ಹಾಡಿದ ಪ್ರೇಮೋನ್ಮಾದ ರಸೋನ್ಮತ್ತತೆಯ ಪ್ರಣಯಗೀತೆ ! ಮತ್ತೆ ಮುಪ್ಪಿನಲ್ಲಿ ಬಚ್ಚುಬಾಯಲ್ಲು ಮಾತು ಚಪ್ಪರಿಸಿದ. ಅದು ಮಾತಲ್ಲ ಮಧುರ ಭಾವದ ಆರ್ಧಯಾತ್ಮಗೀತೆ. ಸಂಜೆಯ ಸಮೀರಣನೊಡನೆ ಸರಸವಾಡುವ ಹೊಂಗಿರಣದ ಪ್ರಣವಗೀತೆ ! ನನ್ನ ಈ ಅನಿಸಿಕೆಯನ್ನು ಅನುಷ್ಠಾನಕ್ಕೆ ತಂದವನು ನಮ್ಮ ಮಹದೇವ ಕವಿ. ಅದನ್ನೇ ಮೇಲಿನ ಗದ್ಯಗೀತದಲ್ಲಿ ತನ್ನ ಪುಷ್ಪಾಂಜಲಿಯಲ್ಲಿ ಓದಿ ಹಾಡಿದ, ಹಾಡಿ ಆನಂದಿಸಿದ. ಕಾವ್ಯಕಾಮಿನಿಯ ಸಹಜ ಸೌಂದರ್ಯವನ್ನು ಕಂಡು ಮೂಕವಿಸ್ಮಿತನಾದ. ಅವಳು ಅವನ ಲ್ಲಿಯೇ ಅಂತರ್ಗತ ಅಮೃತ ಚೇತನಳೆಂದು ತಿಳಿದಾಗ ಆನಂದದ ಉದ್ಗಾರ ತೆಗೆದು ಅದು ಗೀತವಾಯಿತು. ಗದ್ಯಭಾವಗೀತವಾಯಿತು ! ಅವಳ ಅನುಗ್ರಹಕ್ಕೆ ಪಾತ್ರನಾದ ತಾನು ಧನ್ಯನೆಂದು ಭಾವಿಸಿ ಅವಳ ಸೌಂದರ್ಯ ಸಾಧಶರಣವಾದುದಲ್ಲ, ಅನಾಯಾಸವಾಗಿ, ಆಯಾಚಿತವಾಗಿ ದೊರೆತುದೂ ಅಲ್ಲ, ಅದು ತನ್ನ ತನ್ನವರ ಅನಂತ ಪುಣ್ಯದ ಫಲ ಎಂಬ ವಿನೀತ ಭಾವದಿಂದ ಆಹ್ವಾನಿಸಿದ., ಆಸ್ವಾದಿಸಿದ. ತನ್ನಾಂದವನ್ನು ಹಲವು ಹತ್ತು ರೂಪಗಳಲ್ಲಿ, ರಾಗ ಲಯ ತಾಳಗಳಲ್ಲಿ, ಗತಿ ಜತಿಯ ಗಾಂಭೀರ್ಯ ದಲ್ಲಿ ಸಹೃದಯ ಹೃದಯ ವಿಶ್ರಾಂತಗೊಳಿಸಿದ ನಮ್ಮ ಭಾವುಕ ಬಂಧು.

ಮಾನವ ಜೀವನದ ನಾಲ್ಕು ಅವಸ್ಥೆಗಳನ್ನಿಲ್ಲಿ ಹೀಗೆ ಅಳವಡಿಸಿದ್ದಾನೆ ತನ್ನ 'ಮನುಷ್ಯ ಜೀವನ' ಕವನದಲ್ಲಿ. ಅದು ಹೀಗಿದೆ

**ಮೂಡಣ ಬಾಂದಳವೆಳೆ ಚಂದ್ರನಂತೆ**
**ಪ್ರವಹಿಸುವ ತಿಳಿಜಲದೆಳೆ ತೊರೆಯಂತೆ**
**ಬೀಸುವ ಮಧುರತರ ಮಾರುತನಂತೆ**
**ಉಷೆಯ ನಸುಕು ಬೆಳಕಿನಂತೆ ಬಾಲ್ಯವು**

ಹೌದು, ಕಿಶೋರ ಭಾವಕ್ಕೆ ಇಲ್ಲಿ ದುಡಿದಿವೆ ಎಳೆಯ ಚಂದ್ರಮ, ತಿಳಿಜಲದ ಹಳ್ಳ, ಬೀಸಿ ಮೆರೆವ ಮಂದ ಮಾರುತ ಹಾಗೂ ಉಷೆಯ ನಸುಕಿನ ಸ್ವರ್ಣವರ್ಣದ ಜಾಲ ! ಇದು ಬಾಲ್ಯ, ಅನಂತರ :

**ರಾಕಾ ಚಂದ್ರಮನಮೃತ ವರ್ಷದಂತೆ**
**ಗಿರಿವನಗಳಬ್ಬರಿಸ ನದಿಯಂತೆ**
**ತೀಡುವ ಚಂಡತರ ಮಾರುತನಂತೆ**
**ಬೇಸಗೆಯ ಉರಿಬಿಸಲಂತೆ ಯೌವನ !**

'ಮೀಸೆ ಬರುವಾಗ ದೇಶ ಕಾಣುವುದಿಲ್ಲ, ಮೊಲೆ ಬರುವಾಗ ನೆಲ ಕಾಣುವುದಿಲ್ಲ' ಎಂಬುದು ಗಾದೆ. ಅದರಂತೆ ಪ್ರಾಯದ ಅಬ್ಬರ ಮೇಲೆ ಕಾಣಿಸಿದ ದಿಬ್ಬಣ ! ಮುಂದೆ –

**ಪಡುವಣ ಬಾಂದಳದಿಳಿ ಚಂದ್ರನಂತೆ**
**ಶರಧಿಯಲೆಗಳನು ಕಾಂಬ ನದಿಯಂತೆ**
**ತುಹಿನ ಗಿರಿಯ ಕಠಿಣ ಮಾರುತನಂತೆ**
**ತುಹಿಣನಾಗಮನದ ತೆರನಿಹುದು ಇರವು !**

ಜರೆ ನರೆತಾಗ ಅಥವಾ ಮುಪ್ಪು ಚಪ್ಪರಿಸಿದಾಗ ನಿತ್ಯ ನೂತನ ಪ್ರಕೃತಿ ವಿಕೃತ ರೂಪ ತಳೆದ ರೀತಿ, ಸಹಜ ಉಪಮೆಯ ಸಂಯೋಜನೆ ಕವಿಯ ಕಲಾಚಮತ್ಕಾರ, ಅಂತೆಯೇ,

**ಪಡುವಣ ಬಾನಿನೊಳಿಳಿದ ಸೆರೆಯಂತೆ**
**ಸಾಗರದೊಳಿಳಿದ ಜಲರಾಶಿಯಂತೆ**
**ಚೇತನ ರಹಿತವಹ ಮಾರುತನಂತೆ**
**ಹೆಪ್ಪಾದ ಕಪ್ಪು ನಿಶೆಯಂತೆ ಸಾವು**

ಬದುಕಿನ ಚಿತ್ರಣಕ್ಕೆ ಪೂರ್ಣತೆ ಕೊಡುವುದೇ ಸಾವು. ಆ ಸಾವು ಹೇಗೆಂಬುದಕ್ಕೆ ಪ್ರಕೃತಿ ಚೇತನಗಳು ನೆರವಾಗಿವೆ ಇಲ್ಲಿ. ಎಲ್ಲರೂ ಅಂತ್ಯದಲ್ಲಿ ಶಾಂತವಾಗುವ ಸ್ಥಿತಿಯಲ್ಲಿ ಮಾತು ಕೂಡ ಮೌನ ತಾಳೂತ್ತದೆ. ಇದು ನಮ್ಮ ಕವಿಪುಂಗವನ ಕಾವಯ ಕಲಾಕುಂಚದ ವರ್ಣವೈಖರಿ !

ಅವನ ಸಮಗ್ರ ಕಾವ್ಯದ ಆವತೀರ್ಣಕೆ ಬೇಡಿದ ಅವಧಿ ಮೂರು ದಶಕಗಳು ಅಂದರೆ, ಕ್ರಿ.ಶ. ೧೯೩೦ರಿಂದ ೬೦ರವರೆಗೆ, ಈ ಅವಧಿಯಲ್ಲಿ ಅವನು ಈಚಲ ಮರವಾಗಿ ಬೆಳೆಯಲಿಲ್ಲ, ಗೊಂಚಲಿನ ಹೂವಾಗಿ ಅರಳಿದ್ದಾನೆ. ಅದರಿಂದಾಗಿ ಇವನ ಕಾವ್ಯಜೀವನ ಸ್ಥಿತ್ಯಂತರ ಸ್ತರಗಳಲ್ಲಿ ಸದಾ ಸ್ಪಂದಿಸುತ್ತಲೇ ಬಂದಿದೆ. ಅದನ್ನು ಹಿಂದಿನ ಪುಟ ಗಳಲ್ಲಿ ನಾನು ಬರೆದಿರುವ ಅವನ ಬಾಳಗೀತದ ಲಹರಿಯಲ್ಲಿ ತೇಲಿಬಿಟ್ಟಿದ್ದೇನೆ. ದಯವಿಟ್ಟು ಮತ್ತೊಮ್ಮೆ ನೋಡಿ. ಅದರಲ್ಲಿ ಅವನ ಕಾವ್ಯ ಕುಸುಮದ ಸೌರಭವನ್ನು ಆಘ್ರಾಣಿಸಿ ದಯವಿಟ್ಟು. ನನ್ನ ದೃಷ್ಟಿಯಲ್ಲಿ ಪರಿವರ್ತನೆಯೇ ಪ್ರಗತಿ. ನಿತ್ಯ ನೂತನತೆ ಯನ್ನು ಸಾಧಿಸಬಯಸುವ ಯಾವುದೇ ಸಾಹಿತ್ಯವಿರಲಿ ಅದು ಸದಾ ಪರಿವರ್ತನಶೀಲವುಳ್ಳದ್ದು, ಚಲನಶೀಲವುಳ್ಳದ್ದು ಕೂಡ. ಮಾನವ ಜೀವನದೊಡನೆ ಅದರ ಜೈವಿಕ ಸಂಬಂಧ ಇದ್ದೇ ಇರುತ್ತದೆ. ಬದಲಾವಣೆಯೇ ಅದರ ಬದುಕು. ಪರಂಪರೆ (Tra- dition) ಯನ್ನು ತನ್ನ ಬೆನ್ನಿಗೆ ಕಟ್ಟಿಕೊಂಡು, ಸಂಪ್ರದಾಯ (Convension)ವನ್ನು ತುಳಿದು, ಹೊಸ ಹೊಸ ಆಯಾಮಗಳ ಗರಿಮೂಡಿಸಿಕೊಂಡು ಅದು ವಿಹಂಗಮ ವಿಹಾರ ಕೈಗೊಳ್ಳುತ್ತದೆ. ಆರಂಭದ ಅಭಿಜಾತ ಸಾಹಿತ್ಯ (Classical Literature) ಅನಂತರದ ಚಳವಳಿಗೆ ಆಸ್ಪದವಿತ್ತು ವಿರಮಿಸುತ್ತದೆ. ಅಂಥವುಗಳಲ್ಲಿ ರಮ್ಯ (Romanticisim) ಸಂಪ್ರದಾಯ ಒಂದು. ಇಂ ಗ್ಲೇಂಡಿನಿಂದ ಆಮದಾಗಿ ಬಂದ ಈ ಸಾಹಿತ್ಯಕ ಸರಕನ್ನು ಪ್ರಪಂಚದ ಬಹಭಾಗ ಬಳಸಿಕೊಂಡಂತೆ, ಭಾರತ, ಕರ್ನಾಟಕಗಳೂ ಬಳಸಿಕೊಂಡವು. ಆದ್ಯರ ಹಾದಿಯಲ್ಲಿ ನಮ್ಮ ಕವಿಪುಂಗವನೂ ನಡೆದಾಡಿದ್ದಾನೆ. ಈ ರಮ್ಯದಲ್ಲೇ ಹುಟ್ಟಿ ರಮ್ಯದಲ್ಲೇ ಬೆಳೆದ ರಮ್ಯಕವಿ ತಾನಾಗಿದ್ದಾನೆ. ಯಾರು ಯಾರೋ ರಮ್ಯದಿಂದ ನವ್ಯಕ್ಕೆ ಪಕ್ಷಾಂತರಿಗಳಾದರು. ಇವನು ಮಾತ್ರ ಪಕ್ಷಾಂತರಿಯಾಗಲಿಲ್ಲ. ರಮ್ಯದಲ್ಲಿನ ತನ್ನ ನಿಷ್ಠೆಯನ್ನು ಸಡಿಲಿಸಲಿಲ್ಲ. ಅಲ್ಲಿಯೇ ಬೆಳೆದು ಅರಳಿದ, ಹಣ್ಣಾದ, ಅಮೃತ ಫಲ ತಾನಾದ. ರಮ್ಯ ರಚಕರ ಘೋಷಿತ ತತತ್ವಗಳಾದ ಸಂಸ್ಕೃತಿಯ ಸಮವರ್ಧನೆ, ಮಾನವತಾ ವಾದವನ್ನು ಎತ್ತಿ ಹಿಡಿಯುವ ಆದರ್ಶ, ಗಂಡು ಹೆಣ್ಣಿನ ಪ್ರಣಯ, ಪ್ರಕೃತಿ ಪ್ರೇಮ, ದೇಶಭಕ್ತಿ, ಸ್ವಾತಂತ್ರಾಪೇಕ್ಷೆ ಇವೇ ಮೊದಲಾದವು ಇವನ ಕಾವ್ಯದ ವಸ್ತುವಾದವು. ಗಾಂಧಿ, ಟಾಕೂರು ಮೊದಲಾದವರ ನೇತೃತ್ವದಲ್ಲಿ ಭುಗಿಲೆದ್ದ ದೇಶಾಭಿಮಾನ ಭಾಷಾಭಿಮಾನಗಳೂ ಇವನ ಕಾವ್ಯದಲ್ಲಿ ಅವಕಾಶ ಕಲ್ಪಿಸಿಕೊಂಡವು. ಭಾವ ಪ್ರಧಾನವಾಗಿ ಅದಕ್ಕೆ ಭಾಷೆ ಒಗ್ಗಿತು, ಛಂದಸ್ಸು ಆ ಭಾವಕ್ಕೆ ತಕ್ಕಂತೆ ರೂಪಗೊಳ್ಳುತ್ತಾ ಹೋಯಿತು. ಹಳೆಯ ಛಂದೋ ನಿಯಮಗಳನ್ನು ಮುರಿಯುವ ಫಲ ಸಿದ್ದಿಸಿ, ಹೊಸ ಲಯದ ಹೊಸ ವಿನ್ಯಾಸದಲ್ಲಿ ಕಾವ್ಯವಾಹಿನಿ ಪ್ರವಹಿಸತೊಡಗಿತು. ಅಂದಿನ ಆ ಪ್ರಚಂಡ ಪ್ರವಾಹದಲ್ಲಿ ನಮ್ಮ ಕವಿ ತಾನು ಚೇತೋಹಾರಿಯಾದ. ಸಂಸ್ಕೃತಿಯೊಂದಿಗೆ ಕಾವ್ಯವನ್ನು ಬೆಸೆದ. ಅಂದಿನ ರಚ ನೆಯ ಪ್ರಮುಖ ಲಕ್ಷಣವೆನಿಸಿದ ವ್ಯಕ್ತಿನಿಷ್ಠತೆ, ಭಾವುಕತೆ, ಗೇಯತೆ, ಸಂಕ್ಷಿಪ್ತತೆ, ಸ್ವಯಂಪೂರ್ಣತೆಗಳನ್ನು ಮೈಗೂಡಿಸಿಕೊಂಡು ಮೆರೆದ ಈ ನಮ್ಮ ನಂದಕಿಶೋರ, ಅವನು ಮೊದಲು ವಸಂತಕುಮಾರ ಆಗಿದ್ದ, ವಸಂತಗಾನ ಹಾಡಿದ ತನ್ನಲ್ಲಿ ಮಾಗಿ ನೋವನ್ನು ಗರ್ಭೀರಿಸಿಕೊಂಡು :

**ಶೋಕದಿಂ ಶ್ಲೋಕಗಳು**
**ಹೊರಹೊಮ್ಮಿ ಬರಲಿ !**
**ಅವರಿಗಾಗಿಯೆ ಇರಲಿ !**
**ಅಳಲಿನೊಡಲಲಿ ಜನಿಸಿ**
**ತೇಲಿ ಬಹ ಭಾವಗಳೊ**
**ಅಮರಗೀತಗಳಂತೆ**
**ಲೋಕದೆದೆಯಲ್ಲಿ ಕಲೆಯ ರಸವೊಸರಲು !**

**(ಮಹಾಶ್ವೇತೆ, ಪು. ೪೬೫)**

'Our sweetest songs are those that tell of saddest thought' ಎಂಬ ಪಿ.ಬಿ.ಶೆಲ್ಲಿಯ ಮಾತನ್ನು ಪ್ರತಿಧ್ವನಿಸಿದ

೧೦೨

ನಮ್ಮ ನಂದಕಿಶೋರನ ಪ್ರಕೃತಿ ಪ್ರೇಮ ಮೈವೆತ್ತು ನಿಂತಿವೆ. 'ಬಾ ಉಷೆಯೇ' ಎಂಬ ಪ್ರಗಾಥ (ode)ನಲ್ಲಿ ಕೇಳಿ :

**ಬಾ ಉಷಯೇ. . .ಬಾ !**
**ಇರುಳ ಛಾಯೆಯ ಕಳೆದು**

**ಎಳೆಯ ಕಿರಣವ ತೋರಿ**

**ಬಾ ಉಷೆಯೆ. ಮೂಡಿ ಬಾ.**

. . . . . .

**ಕಲೆಯ ಮೊಗ್ಗುಗಳರಳಿ**

**ತಲೆ ಬಾಗಿ ನಿಂದಿಹವು ಕಾಣಿಕೆಯ ನೀಡಲ್ಕೆ !**

**ಸೊಂಪಾದ ವನವಿಹುದು**

**ತಂಪಾದ ಜಲವಿಹುದು**

**ಇಂಪಾದ ಕೊರಲಿಹುದು**

**ಭಂಗ ಕೋಕಿಲ ಇಹವು**

**ಕುರಿತು ಹಾಡಲು ಬೇಕೆ.**

**ಕವಿವರರೆ ಇಹರು !**

. . . . . . . . . .

**ವ್ಯಕ್ತ ಅವ್ಯಕ್ತದಲಿ**

**ಎನಿತೆನಿತೊ ಅಡಗಿಹುದು !**

**ಕತ್ತಲೆಯ ರಾತ್ರಿಯಲಿ**

**ಏನೂ ಕಾಣದಿದೆ**

**ಬಾ ಉಷೆಯೆ. . .ಬಾ. . .ಮೂಡಿ ಬಾ !**

**ಪ್ರಗತಿ ರೂಪಿಣಿಯಾಗಿ**

**ಕಲೆಯ ಕಣ್ಮಣಿಯಾಗಿ**

**ನೊಂದು ಬೆಂದೆದೆಗಿಳಿಗೆ**

**ಶಾಂತಿಯುಣಿಸಾಗಿ**

**ಬಾ ಬೆಳಗಿನೆಲೆ ರಮಣಿ**

. . . . . . . . . .

**ಬಾ ಉಷೆಯೆ. . . ಮೂಡಿ ಬಾ. . . ಬಾ !**

ನಿಸರ್ಗವನ್ನು ಆಹ್ವಾನಿಸಿ, ಬದುಕಿನೊಡನೆ ಬೆಸೆಯುವ ಮೋಡಿತನ ಈ ಪ್ರಗಾಥದಲ್ಲಿ ಸುವ್ಯಕ್ತ. ಮೂಡಣ ದಿಗಂತದಲ್ಲಿ ಚಿಮು ಚಿಮು ಬೆಳಕು ಚಿಮ್ಮುವಾಗ ಇಡೀ ಜಗತ್ತು ಹೊಂಬಣ್ಣದುಡೆಯುಟ್ಟು ದೈನಂದಿನ ಚಟುವಟಿಕೆಗಳಿಗೆ ನಾಂದಿ ಹಾಡಿದಾಗ ಅದಮ್ಯ ಮನೋಹರ ನೋಟ ಕವಿಯ ಭಾವಕೋಶದಲ್ಲಿ ಅಲೆದಾಡಿ ಬಾಳಿನತ್ತ ವಾಲಿದೆ ; ಒಲಿದಿದೆ, ಇಲ್ಲಿನ ಬದುಕನ್ನು ಹಸನುಗೈಯುವುದೆಲ್ಲ ಸೌಂದರ್ಯದ ಪ್ರತಿನಿಧಿಯೆ ! ಆದ್ದರಿಂದಲೇ ಈ ಬೇಡಿಕೆ ಸಲ್ಲಿಸಿದ್ದಾನೆ.

ಮಡು ಬೆಟ್ಟದ ನೆತ್ತಿಯ ಮೇಲೆ ಅರೆಗಣ್ಣು ತೆರೆದ ಉಷೆ ವೇದ ಋಷಿಗೇ ಹುಚ್ಚು ಹಿಡಿಸಿದ್ದಾಳೆ ಎಂದಮೇಲೆ ನಮ್ಮ ಕಾಯಕಯೋಗಿ ನಮ್ಮ 'ವಸಂತಕುಮಾರ'ನನ್ನು ಬಿಟ್ಟಾಳೆ ! 'ಶರತ್ ಪ್ರಭಾತ'ದ ಸಾನೆಟ್‌ನಲ್ಲಿ ಸ್ವರ್ಣರೇಖೆ ನಿರ್ಮಿಸಿದ್ದಾಳೆ. ಅವಳನ್ನು ಹಾರ್ದಿಕವಾಗಿ ಆಹ್ವಾನಿಸಲು ರಸಿಕ ವೃಂದವನ್ನು ಕವಿ ಹೀಗೆ ಎಚ್ಚರಿಸುತ್ತಾನೆ.

**ಅರುಣ ಕಿರಣದ ರೋಚಿ ಮೂಡುದೆಸೆ ಮೋಹಿಸಿದೆ**

**ವಿಹಗ ಕುಲ ಕಲಾಗನ ಬಾನ್ ತುಂಬಿ ಹರಿಯುತಿದೆ**

**ಅನುಸಾನಕಣಿಯಾಗಿ ಅರೆದೆರೆದ ಸುಮಪಾತ್ರೆ**

**ಸ್ವಾಗತವ ನೀಡುತಿದೆ ಭ್ರಮರ ವಿಭ್ರಮಕಾಗಿ**

**ರಸಭಾರದಿಂ ತಾನೆ ಜಗ್ಗುತಿದೆ ಮಧುಪಾತ್ರೆ**

**ರಮಣೀಯ ತಿರೆಯೊಡನೆ ಹೊನ್ನಿನೋಕುಳಿಯಲ್ಲಿ**

**ಮಿಂದೆದ್ ಉ, ಬೆಡಗು ತುಂಬುತಿದೆ ಎದೆಯಲ್ಲಿ**
**ಮಂಜುಹನಿ ದಳವೇರಿ ಮುತ್ತೊಂದನೇ ಸೆಳೆದು**
**ರಂಜಿಸುವ ತುಟಿಗಳಲಿ ರಾಗಮಂ ತಳೆದು**
**ಮೆಲ್ವನರಳಿಸುತಿಹುದು ಒಂದೊಂದೆ ದಳಮಾತ್ರ !**
**ಶರದೃತುವಿನಪರೂಪ ಸುಖ ಸೋಂಕಿನಲಿ ಬೆರೆತು**
**ಸೌಂದರ್ಯ ಸಾರದಿಂ ವನಶ್ರೀಯೆ ಚೆಲುವಾಯ್ತು !**
**ಪುಣ್ಯ ಪ್ರಭಾತದಲಿ ಆಲಸಿಕೆಯ ಬಿಟ್ಟೇಳು**
**ಉಷೆ ಚರಣ ಸರಸಿಜಕೆ ಕಾಮಿಕೆಯ ತರಹೇಳು !** (ಪು. ೩೯೭)

ಸುಮವರಳಿ ಸೌರಭವ ಸೂಸುವೆಡೆಯಲ್ಲಿ ರಸಿಕ ಮನಸ್ಸು ಸ್ವಾರ್ಥದಿಂದ ದೂರವಿರಬೇಕು. ಕಾವ್ಯಾಸ್ವಾದನದ ವೇಳೆಯಲ್ಲಿ ಹೇಗೋ ಹಾಗೆ ಇಲ್ಲಿಯೂ ಮಾನಸಿಕ ದೂರ (Psychical Distance) ಅಥವಾ ನಿಸ್ಸಂಗತ್ವ ಅಥವಾ ನಿರ್ಲಿಪ್ತತೆ ನೆಲೆಗೊಂಡಿರಬೇಕು. ಅದಕ್ಕೆ ಹತ್ತಿರವಾದಷ್ಟೂ 'ಅನತಿ ದೂರ'ದ ದೋಷಕ್ಕೆ ಗುರಿಯಾಗಬೇಕಾಗುತ್ತೆ. ಅಂತೆಯೇ ಅತಿದೂರವೂ ಮನಹೋಗಬಾರದು ಅದೂ ಒಂದು ದೋಷವಾಗುತ್ತದೆ. ಆದ್ದರಿಂದ ಗೊತ್ತಾದ ಸ್ತರದಲ್ಲಿ ಮನಸ್ಸನ್ನು ನಿಲ್ಲಿಸಿ ಅವಲೋಕಿಸಿ ಆನಂದಿಸಬೇಕು. ಇದು ನಮ್ಮ ಕವಿಯ ಸೌಂದರ್ಯತತ್ವ. ಅದರಿಂದಾಗಿ ಹೇಳುತ್ತಾನೆ :

'ಇರಲಿ ಬಿಡು ನೋಡುವೆನು, ಗಿಡದೊಳಿರು ಬಹುಕಾಲ, ನಾನಿಲ್ಲಿ ನಿಲ್ಲುವೆನು, ಮನದಣಿಯೆ ಕಣ್ದಣಿಯೆ ನೋಡುತಲೆ ಹಿಗ್ಗುವೆನು' ಎಂದು. ಹೀಗೆ ಪ್ರಕೃತಿಯ ವಸ್ತುವಿನ ಸಹಜ ಸೌಂದರ್ಯವನ್ನು ಮುಟ್ಟಿ ಮೈಲಿಗೆ ಮಾಡದ ನೋಡಿಯೇ ಆನಂದಿಸುವ ಪ್ರಾಂಜಲ ಮನೋಭಾವ ನಮ್ಮ ಕವಿವರ್ಯನದು.

ಈ ಸಿದ್ಧಾಂತಕ್ಕೆ ಬದ್ಧನಾದರೂ ಪ್ರಣಯ ಸನ್ನಿವೇಶದಲ್ಲಿ ಪ್ರಕೃತಿಯಿಂದ ಭಿನ್ನನಾಗಿಯೇ ನಿಂತು ವೀಕ್ಷಿಸುತ್ತಾನೆ ತನ್ನವಳನ್ನು. ಶೆಲ್ಲಿಯ Love philosophyಯ ಪ್ರಭಾವ ಮುದ್ರೆಯ ಪ್ರೇಮಗೀತ ನೋಡಿ. ಶೀರ್ಷಿಕೆ 'ಚೆನ್ನೆ !' ಕೇಳಿ.

**ದಿನದಿನವೂ ಹೂವುಗಳು ಅರಳುತಿವೆ ಬಾಡುತಿವೆ**
**ಎನಿತೊ ಚೆಲುವನು ತೋರಿ ನಗೆಯ ಸೂಸುತಿವೆ**
**ಆದರೂ ನಿನ್ನಂತೆ ಒಂದು ದಿನ ನಗಲಿಲ್ಲ !** . . . . . . .
. . . .

೧೦೪

**ಕೋಗಿಲೆಯು ಹಾಡುತಿದೆ ಮಧುರತರಗೀತಿಕೆಯ**
**ಸಂಜೆ ಬೆಳಗಿನ ವನವೆ ಝೇಂಕರಿಸುತಿಹುದು**
**ಆದರೂ ನಿನನ್ನಂತೆ ಒಂದು ದಿನ ಹಾಡಿಲ್ಲ**
. . . . . . . . . . . .
**ಉಷೆಯ ಮುಂಬೆಳಗಿನಲಿ ಮುಂದಾಗಿ ಮೂಡುತಿದೆ**
**ನಾಚಿ ಕೆಂಪಾಗುತಿದೆ ಅವಳ ಕೆನ್ನೆಗಳು !**
**ಆದರೂ ಅಲ್ಲಲ್ಲ ನಿನ್ನ ಕನಸಿನ ಕಾಂತಿ !**
**ಸೃಷ್ಟಿಯೊಳಗಿಹುದಂತೆ ಮಹಮಹಾಸೌಂದರ್ಯ**
**ನಿನಗಿಂತ ಚೆಲುವೆ ಎನ್ನ ಎಲವಿನ ಚೆನ್ನೆ** (ಚೆನ್ನೆ ೪೬)

ಪ್ರಕೃತಿಯ ಸುಂದರ ವಸ್ತುಗಳನ್ನು ತನ್ನವಳ ಅಂಗಾಗಂಗಳಲ್ಲಿ ಗುರುತಿಸಿದ್ದಾನೆ. ಆ ಅಂಗಗಳು ಪ್ರಕೃತಿಯಂಶಗಳಿಗಿಂತಲೂ ಚೆನ್ನು ! ದಿನ ಬೆಳಗದರೆ ಗಿಡಬಳ್ಳಿಗಳಲ್ಲಿ ಹೂವು ಅರಳುತ್ತವೆ. ಆದರೆ ಅವು ಸಂಜೆಗೆ ಬಾಡುತ್ತವೆ. ಇವನ ಪ್ರೇಯಸಿಯ ಚೆಂದುಟಿಯಿಂದ ಹೊರಬಂದ ನಗೆ ಎಂದೆಂದೂ ಬಾಡುವುದೂ ಇಲ್ಲ, ಬತ್ತುವುದೂ ಇಲ್ಲ. ಮಧುರ ಗೀತವನ್ನು ಹಾಡುವ ಕೋಗಿಲೆಯಲ್ಲಿ ಏಕತಾನ ಮಿಡಿಯುತ್ತದೆ. ಅದರ ಕಂಠಕೂ ಮಿಗಿಲು ಇವನ 'ಸುಶೀಲೆ'ಯ ಶಾರೀರ ಮಾಧುರ್ಯ! ಉಷೆ ಹಸೆಯ ಮಣೆಯನೇರಿದಾಗ ಮೂಕವೆಣ್ಣಿನ ಕೆನ್ನೆ ಕೆಂಪಗಾಗುತ್ತದೆ, ರಂಗೇರುತ್ತದೆ. ಆದರೆ ತನ್ನವಳು ನಾಚಿದಾಗ ಅವಳ ಕೆನ್ನೆ ಕೆಂಪು

ಗುಲಾಬಿಯದಾಗ ನೋಡಬೇಕು. ಅ ರಮ್ಯಕಾಂತಿ ! ಅದು ವರ್ಣನಾತೀತ ! ಉಷಾಕಾಂತಿಯೂ ಇವಳ ಕೆನ್ನೆಗಂಪು ಚೆನ್ನು ! ಅಷ್ಟೇ ಅಲ್ಲ ಪ್ರಕರತಿಯ ಯಾವ ವಸ್ತುವೂ ಇವಳ ದೇಹದ ಅಂಗಾಂಗಲ ಸೌಂದರ್ಯಕ್ಕೆ ಸಾಟಿಯಿಲ್ಲ. ಅವಳ ಸೌಂದರ್ಯವೇ ಸಾಕಾರಗೊಂಡ ಒಂದು ಚೆಲುವಿನ ಚಿಲುಮೆ ! ಇಂತಹ ಸೌಂದರ್ಯದ ಸೀಮಾರೇಖೆಯಂತಿರುವ ಈ ಹದಿನಾಲ್ಕು ಸಾಲಿನ ಕವನ ಓದಿ ಆನಂದಿಸದಿರುವ ರಸಿಕನಿಲ್ಲ.

ನಮ್ಮ ಕವಿ ವಸಂತಕುಮಾರನ ಪ್ರಣಯಕ್ಕೆ ದೈವಿಕ ಪ್ರೇಮದ ಲೇಪನ ಇದೆ. ಅದು ಶಿವ–ಶಿವೆಯರ ಅಥವಾ ಕೃಷ್ಣ–ರಾಧೆಯರ ಪ್ರಣಯವನ್ನು ನೆನಪಿಗೆ ತರುವಂಥದು. ಅವರ ಪ್ರೇಮ ಪಾವಿತ್ರ್ಯಕ್ಕೆ ಹಲವು ಸಂಕೇತಗಳು, ಅವುಗಳಲ್ಲಿ 'ಕೊಳಲು' ಒಂದು. ಬೃಂದಾವನದ ವಕ್ಷಸ್ಥಳದಲ್ಲಿ ಗೋಪಿಯರೊಡನೆ ರಾಸಕ್ರೀಡೆಯಾಡುವ ಆ ಮುರಳೀ ಮೋಹನನ ಮುರಳಿ ಕೂಗಿ ಕರೆಯುತ್ತದೆ ರಾಧೆಯನ್ನು. ಆಗ–

**ಎದೆಯ ಮೇಗಣ ಸೆರಗ ತೆರೆದು ನೂಂಕಿ**
**ಮನದ ಒಳಗಣ ಭಯವ ಹರಿದು ಹಾಕಿ**
**ನೀನೆಗತಿ ಶರಣೆಂದು ಮಧುರಭಾವವ ಸಾಕಿ**
**ನಡೆಯುತ್ತ – ಗಿರಿಯತ್ತು ಹೊಳೆಯತ್ತ**
**ಗೋವು ಕಾಯುವ ಗೋಪಾಲನತ್ತ !**
**ನೀರವದ ರಾತ್ರಿಯಲಿ ಯಮುನೆಯಾ ತಟಿಯತ್ತ**
**ತುಂಬು ಬೆಳದಿಂಗಳಲಿ ಬೃಂದೆಯಾ ವನದತ್ತ**
**ಶೂನ್ಯದೀ ಅಂಚಿನಲಿ ದಿವ್ಯಮಂಗಳದತ್ತ**
**ಕೊಳಲ ಗಾಯ ಬಂತು. . .ಬಂತು !**

೧೦೫

ಇದು ಪ್ರಣವ ಛಾಯೆವಡೆದ ಪ್ರಣಯ !

ಅದೇ ಗುಂಗಿನ ಓಟದಲ್ಲಿ ಜೀವನ್ಮುಕ್ತನಾಗಬಯಸುತ್ತಾನೆ ಪ್ರಣಯ ಪಾತ್ರದಲ್ಲಿ ! ತನ್ನವಳನ್ನು ಮೋಹದ ಬಲೆಯಲ್ಲಿ ಸೆರೆಹಿಡಿಯುವಾಗ ಕಾಮದ ಕೆಸರನ್ನು ನಿರ್ಮಿಸುವುದಿಲ್ಲ. ಪವಿತ್ರತಮ ಭಾವನೆಯಲ್ಲೇ ಸಮೀಪಿಸುತ್ತಾನೆ.

**ಲತೆಯಾಗುತೆ ನೀನಿಲ್ಲಲು ಒಡನೆಯೆ**
**ಎಲರಾಗುತ ಬಂದೆರಗುವೆನು**
**ಕಮಲದ ರೂಪವನಾಂತೊಡೆ ನಾನೂ**
**ಭ್ರಮರ ರೂಪವ ತಾಳುವೆನು**

ಎಂತಹ ರಸಿಕತನ ಕವಿಯದು !

ಅವಳು ಬಳ್ಳಿಯಾದರೆ ಅದು ನಲಿಯುವಂತೆ, ನರ್ತಿಸುವಂತೆ, ಬಾಗಿ ಬಳುಕಿ ತೊನೆಯುವಂತೆ ಮಾಡುವ ಸುಳಿಗಾಳಿ, ಎಳೆಗಾಳಿ ತಾನಾಗುತ್ತಾನಂತೆ ! ಅವಳು ಕಮಲದ ಹೂವಾದರೆ, ಮಧುರಗಾನವ ಹಾಡಿ, ಅದರ ಹೂಬಟ್ಟಲ ಮಧುರವನ್ನು ಹೀರುಬ ತುಂಬಿ ತಾನಾಗುತ್ತಾನಂತೆ ! ಅಂತೆಯೇ –

**ವೀಣೆಯ ಆಗಲು ಶ್ರಮಿಸುತಲಾದರು**
**ವೈಣಿಕನಾಗುತೆ ಮಿಡಿಯುವೆನು**
**ಕೊಳಲಿನ ರೂಪವ ತಳೆದರೆ ಆಗ**
**ಪಿಡಿಯುತ ನಿನ್ನನು ನುಡಿಸುವೆನು**

ಎಂತಹ ಅನ್ಯೋನ್ಯತೆ !

ವೀಣೆ–ವೈಣಿಕ, ಮುರಳಿ–ಮೋಹನ ಈ ಮಧೂರಭಾವಕ್ಕೆ ಬಳಸಿಕೊಂಡಿರುವ ಪ್ರೇಮ ಪರಿಕರಗಳು ನಿಜಕ್ಕೂ ಸಾರ್ಥಕ್ಯ ಪಡೆದಿವೆ ಇಲ್ಲಿ. ಅಂತೆಯೇ –

**ಪ್ರೇಮದ ಗೀತೆಯು ನೀನಾಗುತೆ ನಾ**
**ಪಾಮರನಾಗುತೆ ಪಾಡುವೆನು**
**ಪ್ರೇಮಪದವ ನೀಂ ಪಾಲಿಪುವುದಾದಡೆ**
**ಜೀವನ್ಮುಕ್ತನು ನನಗೇನು !**

ಅಬ್ಬಾ !

ಇದು ಪ್ರಣಯ ಪ್ರರೋಹದ ಪರಾಕಾಷ್ಠೆ ! ಪ್ರೇಮದಿಂದಲೇ ಬದುಕು, ಪ್ರೇಮದಿಂದಲೇ ಮುಕ್ತಿ, ಪ್ರೇಮವೇ ರಾಗ, ಪ್ರೇಮವೇ ಅನುರಾಗ ಅಮರಗೀತ !

ಇಂತಹ ಭವ್ಯಭಾವನೆಯ ಸಂತ ಕವಿ ಪ್ರಣಯವನ್ನು ಪವಿತ್ರ ರೂಪದಲ್ಲೇ ಗುರುತಿಸಿದ್ದಾನೆ. ಇಂಥವೆನಿತೋ ಭಾವಗಳ ಭವ್ಯ ಕುಣಿತಗಳ ಚಿತ್ರಮಾಲೆ ನಂದಕಿಶೋರನ ಕಾವ್ಯ ಕಲಾಶಾಲೆ ! ಪ್ರಕೃತಿ ಪ್ರೇಮ, ಪತ್ನಿ ಪ್ರಣಯದಂತೆ, ಈ ಕವಿಗೆ ಮಕ್ಕಳ ಮೇಲೆ ವಿಶೇಷ ಮಮತೆ. ಇದು ಪ್ರೇಮದ ಅನಂತ ಮುಖಗಳಲ್ಲಿ ಒಂದು. ಈ ಕವಿಯ ದೃಷ್ಟಿಯಲ್ಲಿ ಪ್ರತಿಯೊಂದು ಶಿಶುವೂ ಪ್ರೇಮದೊಂದು ಪುತ್ಥಳಿ. ಅದರಿಂದಲೇ ಹೇಳುತ್ತಾನೆ.

**ವಿಶ್ವದೊಲವು ನಿನ್ನೊಳಹುದು**
**ಜಗವ ಬಳಿಗೆ ಸೆಳೆಯುತಿಹುದು !**

ಅಬ್ಬಾ !

ಆ ಪವಿತ್ರ ಪ್ರೇಮಕ್ಕೆ ಎಂತಹ ಆಕರ್ಷಣೆ ! ಮಗುವಿನ ಮುಗ್ಧತೆಗೆ ಮಾರುಹೋಗುವ ಕಲ್ಲು ಹೃದಯಗಳಿವೆಯೆ ಜಗತ್ತಿನಲಿ ಎನ್ನಿಸುತದೆ. ಅಲ್ಲಿ ಎಂಥವನೂ ಕರಗುತ್ತಾನೆ. ಕರಗಿ ನೀರಾಗಿ ಮೇಲಿಂದ ಮೇಲೆ ಚುಂಬಿಸಿ, ತೃಪ್ತನಾಗುತ್ತಾನೆ. ಆದ್ದರಿಂದಲೇ ಕವಿ ಪ್ರಶ್ನಿಸುತ್ತಾನೆ. 'ಒಲವಿನಾಳವನರಿಯಲಳವೆ?' ಎಂದು ಹೌದು, ಪ್ರೇಮದ ಆಳವನ್ನು ಅರಿಯಲು ಯಾರಿಂದಲೂ ಸಾಧ್ಯವಿಲ್ಲ, ಸಾಧ್ಯವಾಗಿಲ್ಲ. ಈ ವಿಶ್ವದ ಸೃಷ್ಟಿಯ ಮೂಲವೇ ಪ್ರೇಮ. ಸಮಸ್ತವೂ ಈ ಪ್ರೇಮ ಸೂತ್ರದಲ್ಲಿ ಪೋಣಿಸಿದ ಮಣಿಗಳು. ಅದು ಹರಿದರೆ ಎಲ್ಲವೂ ದಿಕ್ಕುಪಾಲು. ಸೂರ್ಯ, ಚಂದ್ರ ತಾರಾನಿಹಾರಿಕೆಗಳು, ನದಿನಗಗಳನ್ನು ಹೊತ್ತ ಪೃಥ್ವಿ, ಸಮಸ್ತ ಸೌರವ್ಯೂಹ, ಒಟ್ಟಿನಲ್ಲಿ ಸಕಲವಿಶ್ವ ಈ ಪ್ರೇಮ ಜಾಲದಲ್ಲಿ ಬಂಧಿ. ಇಂತಹ ಅನ್ಯೋನ್ಯ ಬೆಸುಗೆಯ ಪ್ರೇಮಕ್ಕೆ ಪೂರ್ಣ ವ್ಯಾಖ್ಯಾನ ಬರೆಯುವ ವಿಮರ್ಶಕ ಅಥವಾ ಮೀಮಾಂಸಕ ಹುಟ್ಟಿಲ್ಲ. ಬಂದ ಎಲ್ಲ ಕವಿಗಳೂ ಅದರ ಒಂದೊಂದು ಮುಖವನ್ನು ಚಿತ್ರಿಸಿ ಧನ್ಯರಾಗಿದ್ದಾರೆ. ನಮ್ಮ ಕವಿಯೂ ಅವರಲ್ಲಿ ಒಬ್ಬ.

ಮಹರ್ಷಿ ವಾಲ್ಮೀಕಿ ಹೇಳಿದ 'ಜನನೀ ಜನ್ಮ ಭೂಮಿಶ್ಚ ಸ್ವರ್ಗಾದಪಿ ಗರೀಯಸಿ ' ಎಂದರೆ ಹೆತ್ತ ತಾಯಿ, ಹೊತ್ತ ನೆಲ ಎರಡೂ ಸ್ವರ್ಗಕ್ಕೆ ಸಮಾನ. ಮಣ್ಣಿನ ಮೋಹ ಎಂತಹ ಕವಿಯನ್ನು ಬಿಟ್ಟಿಲ್ಲ. ಅಂದಮೇಲೆ ಈ ತತ್ವಕ್ಕೆ ನಮ್ಮ ಕವಿ 'ನಂದ ಕಿಶೋರ 'ನೂ ಹೊರತಲ್ಲ. ತನ್ನ ಅಭಿಮಾನವನ್ನು ಹೀಗೆ 'ನಮ್ಮೂರು' ಕವನದಲ್ಲಿ ಅಭಿವ್ಯಕ್ತಿಸಿದ್ದಾನೆ.

**ತೂಗು ತೆಂಗಿನಕಾಯಿ ಬೀಸುತಿಹ ಎಳೆಬಾಳೆ**
**ಊರ ಮುಂಗಡೆ ಬಾಗಿ ಹರಿಯುತಿಹ ತೊರೆ**
**ನೀರು ನಮ್ಮ ಗುಡಿಸಲು ಸುತ್ತ ಗೆಳೆಯರ ನೆರವು**
**ಹೊನ್ನ ಕನಸಿನ ಚಿತ್ರ ಹಾಯಾಗಿ ಮೂಡುತಿದೆ !**

ಇಂತಹ ತಲೆ ಎತ್ತಿದ ತೆಂಗು, ತೋಳ ಬೀಸಿ ಕರೆವ ಎಳೆಬಾಳೆ, ಸುಳಿಬಾಳೆ, ಸನಿಹದಲ್ಲೇ ಜುಳುಜುಳು ನಿನಾದಗೈಯುತ್ತ ಹರಿವ ತೊರೆ, ತಾನಿರುವ ಬಡಗುಡಿಸಲಿನ ಸುತ್ತೆಲ್ಲ ಒಡನಾಡಿಗಳ ಬಳಗ, ಓಹ್ ! ಎಲ್ಲವೂ ಚೆಂದ, ಎಲ್ಲವೂ ಆನಂದ, ಅಂದಿನ ಅಂದ ಮರೆಯಲಾಗದ ಚಿತ್ರ.

ಆ ಹಳ್ಳಿಯಲ್ಲಿ ತುಂಬು ಹೊಳೆಯಂತಿರುವ ತುಂಬು ಹರೆಯದ ಹೆಣ್ಣುಗಳು, ರಸಿಕ ನಂದಕಿಶೋರ ಹೆಣ್ಣೊಬ್ಬಳ ಚೆಲುವನ್ನು ಸವಿಯುತ್ತಾನೆ –

**ಏರುತಿಹ ಹೊಳೆಯಂತೆ ತುಂಬು ಹರೆಯದ ಹೆಣ್ಣು**
**ಗಡಿಗೆ ನೀರನು ತುಂಬಿ ಹೊತ್ತು ನಡೆಯಲು ಮನೆಗೆ**
**ನಡೆದು ನಡೆಯದ ನಡಿಗೆ ಊರಿಗವಳೇ ಕಣ್ಣು !**

ಸಾಕು ಅವಳ ಬಣ್ಣನೆ ! ಬಂದಿದೆ ಅವಳ ಸುಂದರ ಕಲ್ಪನೆ ! ತುಂಬಿದ ಕೊಡಹೊತ್ತ ತುಂಬು ಹರೆಯದ ತರುಣಿ ಬರುವಾಗ ಅವಳದು 'ನಡೆದು ನಡೆಯದ ನಡಿಗೆ ! ' ಇಂತಹ ಮಾತಿನ ಮೋಡಿ. ಅದು ನಡಿಗೆಯಲ್ಲ ಬಹುಶಃ ನರ್ತನವೇ ಇದ್ದಿರಬೇಕು. ಆ ಬೆಡಗಿನ ಹುಡುಗಿಯ ನಡೆಯಲ್ಲಿ ಬಹುಶಃ ನರ್ತನವೇ ಇದ್ದಿರಬೇಕು. ಆ ಬೆಡಗಿನ ಹುಡುಗಿಯ ನಡೆಯಲ್ಲಿ ಕವಿಯ ಕಣ್ಣು ಸೌಂದರ್ಯವನ್ನು ಮೊಗೆ ಮೊಗೆದು ಕುಡಿದೆ. ಅಂತೆಯೇ ತನ್ನೂರಿನಲ್ಲಿ ತನ್ನ ಬಂಧುಬಳಗದ ನರವಿ ಕೇಳಬೇಕ ? ಪ್ರೀತಿಯೇ ಮೂರ್ತಿವೆತ್ತಂತೆ ಅಜ್ಜಿ ಅಕ್ಕ ಮೊದಲಾದವರು. ಆ ನೆನಪನ್ನು ನೆಕ್ಕುತ್ತಾ ಅವನ ನಾಲಗೆ ನುಡಿಯುತ್ತೆ –

**ಬಯಲ ಬೆಳದಿಂಗಳಲಿ ಅಣ್ಣ ಅಕ್ಕರು ನೆರೆದು**
**ತಿಂಗಳಿನ ಸವಿಯೂಟ ಮುಗಿಸಿ ಮರೆಯುವ ಮುಂಚೆ**
**ಅಜ್ಜಿ ಕತೆ ಹೇಳುವಳು. ಮುಗಿಲ ಚಿಕಿಗು ಚಿನ್ನ**
**ತಂಗಾಳಿ ತೆರೆಗಿಂತ ಇಂಪು ಕಥನದ ಸುದ್ಧಿ !**

ಅಬ್ಬ !

ಹಾಲ್ದಿಂಗಳು ಕೆನೆಕಟ್ಟಿ ನಿಂತಾಗ, ಅಜ್ಜಿ ಹೇಳುತ್ತಿದ್ದ ಕತೆ ಆಕಾಶದ ನಕ್ಷತ್ರಕ್ಕಿಂತಲೂ ಮಿಗಿಲು ಮಿನುಗು ! ಅಂದರೆ ಅಜ್ಜಿ ಹೇಳುತ್ತಿದ್ದ ಕತೆಯ ಮೋಡಿ ತನ್ನನ್ನು ನಕ್ಷತ್ರಲೋಕಕ್ಕೆ ಯಾವುದೋ ಗಂಧರ್ವರ ನಾಡಿಗೆ ಕೊಂಡೊಯ್ಯುತ್ತಿತ್ತು. ಅದರಲ್ಲಿ ಬೆಳ ಕಿತ್ತು ಬೆರಗೂ ಇತ್ತು ಎಂಬ ಭಾವ ಅಜ್ಜಿ ಕತೆ ಹೇಳುತ್ತಿದ್ದರೆ ತಂಗಾಳಿ ತೀಡಿದಂತೆ ಆಹ್ಲಾದ, ಆನಂದದಾಯಕ ಸನ್ನಿವೇಶ ನಿರ್ಮಾಣವಾಗುತ್ತಿತ್ತು ಎಂಬ ಅನುಭವ. ಅಜ್ಜಿಯ ಕತೆಯ ಕನವರಿಕೆಯಂತೆ ಅವನ ಊರಿನ ದನಕರುಗಳ 'ಅಂಬಾ' ಎಂಬ ಮೊಳಗು ಮೋಹಕ ಗಾನ !

ಇಂತಹ ಕಮನೀಯ ಕವಿತೆಗಳಿಂದ ಕವಿ ನಮಗೆ ಆತ್ಮೀಯವಾಗಿ ಬಿಡುತ್ತಾನೆ.

ನಾಥು ಎಂತೋ ನುಡಿಯೂ ಅಂತೆ ಅವನ ದೃಷ್ಟಿಯಲ್ಲಿ ಕನ್ನುಡಿ ಅದೇ ಚೆನ್ನುಡಿ. ಅದನ್ನು ಎಲ್ಲವೂ ಕಲಿಯುವಂತೆ, ನುಡಿಯುವಂತೆ ಆದೇಶಿಸುತ್ತಾನೆ. ಕೇಳಿ :

**ಗಿಡ ಗಿಡದಲಿ ಹಾರಾಡುವ ದುಂಬಿ**
**ನುಡಿ ನುಡಿ ಕನ್ನಡವ**
**ಪಂಚಮದಲಿ ಇಂಚರಿಸುವ ಕೋಗಿಲೆ**
**ನುಡಿ ನುಡಿ ಕನ್ನಡವ**

ಎನ್ನುತ್ತಾನೆ

**ಕನ್ನಡ ಕನ್ನಡ ಅವನ ಬಾಳಿನ ಗಾಯಿತ್ರಿ ಕೂಡ**
**ಕನ್ನಡದ ಉಸಿರಿನಲಿ ಬದುಕುವತನಕವು ಬದುಕಿ**
**ಕನ್ನಡದ ಸಂಸ್ಕೃತಿಯ ಒಡಗೂಡಿ ಒಂದಾಗಿ**
**ಕನ್ನಡದ ಉಸಿರಿನಲಿ ನನ್ನ ಸಾವಿರುವಂತೆ**
**ವರವಿತ್ತು ಹರಸುಬಾ, ಇನಿತೊಂದು ಸಾಕು !**

ಎಂತಹ ಹಂಬಲ ಈ ಕವಿಯದು. ಇವನಿಗೆ ಕನ್ನಡವೇ ಬದುಕು. ಬಂಗಾರ ಕನಸು ಬಿದ್ದರೂ ಬಹುಶಃ ಕನ್ನಡದಲ್ಲೇ ಬೀಳುತ್ತದೆ ಎನ್ನಿಸುತ್ತದೆ. ಅಂತಹ ಭಾಷಾಭಿಮಾನಿ. ತನ್ನ ಕೊನೆಯುಸಿರೂ ಕನ್ನಡವೇ ಆಗಿರಲಿ ಎಂಬ ಉತ್ಕಟೇಚ್ಛೆಯನ್ನು ವ್ಯಕ್ತಪಡಿಸಿದ್ದಾನೆ. ತನ್ನ ತಾಯ್ನುಡಿಯ ಅಭಿಮಾನವನ್ನು ತನ್ಮೂಲಕ ಅಭಿವ್ಯಕ್ತಿಸಿದ್ದಾನೆ.

ಕವಿ ನಂದಕಿಶೋರನ ಕಾವ್ಯಾಸ್ಥಾನಿ ಭಕ್ತಿ. ಅದರಲ್ಲೂ ಸಮರ್ಪಣ ಭಾವದ ಅನನ್ಯ ಭಕ್ತಿ. ಇದು ರವೀಂದ್ರರ ಪೂರ್ಣ ಪ್ರಭಾವದ ಫಲ. ಅದರಿಂದಾಗಿ ಎಲ್ಲೆಲ್ಲೂ ಅರ್ಚನೆಯ ಜೊತೆಯಲ್ಲಿ ಅರ್ಪಣದ ಅಮೃತ ಸೇಚನಗೈದಿದ್ದಾನೆ. ಭಗವದ್ ಭಕ್ತಿಯೂ ಒಂದು ಪ್ರೇಮವೆ. ನಾರದರ ಭಕ್ತಿ ಸೂತ್ರ ಹೇಳುವಂತೆ ಭಕ್ತಿ ಎಂಬುದು 'ನಾ ಪರಮ ಪ್ರೇಮ ರೂಪಾ' ಆದ್ದರಿಂದ ಹೆಂಡತಿಯಲ್ಲಿ ಪ್ರಣಯವೆನಿಸಿದ್ದು. ಮಕ್ಕಳಲಿ ವಾತ್ಸಲ್ಯವಾಗುತ್ತೆ. ತಂದೆ ತಾಯಂದಿರಲ್ಲಿ ಪ್ರೇಮವೆನಿಸುತ್ತೆ. ಸ್ನೇಹಿತರಲ್ಲಿ ಸ್ನೇಹ ರೂಪ ತಳೆಯುತ್ತೆ. ಅದೇ ಭಾವ ಭಗವಂತನಲ್ಲಿಟ್ಟ ಭಕ್ತಿಯೂ ತಾನಾಗುತ್ತೆ. ಅಂತಹ ಅಮಲ ಪ್ರೇಮದ ಪ್ರತೀಕವೆಂಬಂತಿದೆ 'ಪೂಜೆ' ಎಂಬ ಕವನ, ಕೇಳಿ :

**ತಾರೆ ನೀಹಾರಿಕೆಯು**

**ಗ್ರಹ ಕೋಟಿತಂಡಗಳು**

**ನಿನ್ನ ನಿಲವಿನೊಳಡಗಿ**

**ಬಟ್ಟ ಬಯಲಾಗಿರಲು**

**ಆವ ಗುಡಿಯನು ಕಟ್ಟಿ**

**ಆವ ಮೂರ್ತಿಯನಿರಿಸಿ**

**ಅರ್ಚಿಸಲಿ ದೇವ ?**

. . . . .

**ಕಾಡೆಲ್ಲ ಹೂವಾಗಿ**

**ನಾಡೆಲ್ಲ ನೀನಾಗಿ**

**ಕಂಪು ಚೆಲ್ಲುತಲಿರಲು**

**ಚೆಲುವು ಚಿಮ್ಮುತಲಿರಲು**

**ಆವ ಹೂವನು ಕಿತ್ತು**

**ಆರ ಚರಣದೊಳಿಟ್ಟು**

**ಪೂಜಿಸಲಿ ದೇವ ?**

**ಕೋಟಿ ತಾರೆಗೆ ಮಿನುಗೆ**

**ಸಾಲು ದೀವಿಗೆ ತೋರೆ**

**ಕಣ್ಣು ಮಿಟುಕಿಸಿ ನಗುವ**

**ನಿನ್ನ ಬೆಳಕೇ ಬೆಳಕು**

**ಆವ ದೀಪವ ಹಚ್ಚಿ**

**ಆರ ಬದಿಯೊಳಗಿಟ್ಟು**

**ಬೆಳಗಿಸಲಿ ದೇವ ?** **(ಪೂಜೆ ೪-೫)**

ಸೃಷ್ಟಿಯ ಸಮಸ್ತವೂ ಅವನಾಲಯ, ಅವನಿರವು, ಅವನಂಶ ! ಅಂದ ಮೇಲೆ ಬೇರೊಂದು ಗುಡಿ ಕಟ್ಟಿ, ಅದರಲ್ಲೊಂದು ಸ್ಥಾವರದ ಬೊಂಬೆ ಇರಿಸಿ ಪೂಜಿಸಲೇಕೆ ? ನಿರ್ಗುಣ ನಿರಾಕಾರವನ್ನು ಸಗುಣ ಸಾಕಾರ ರೂಪು ಕೊಡುವುದೇಕೆ ? ಅಂತೆಯೇ ಚೇತನ (Spirit)ವನ್ನು ಚೇತೋಹಾರಿಯಾಗುವಂತೆ ಬಿಡದೆ, ಜಡ (Matter)ದಲ್ಲೇಕೆ ಬಂಧಿಸಬೇಕು. ಅಣ್ಣ ಹೇಳುವಂತೆ 'ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ' ಅಲ್ಲವೆ ? ಜಡಮಡಿಯುತ್ತೆ. ಚೇತನ ಉಳಿಯುತ್ತೆ. ಉಳಿಯುವ ಚೈತನ್ಯವನ್ನು ಬಿಟ್ಟು ಅಳಿಯುಯುವ ನಶ್ವರಕ್ಕೇಕೆ ಪರಿತಾಪ ? ಈ ಭಾವ ಕವಿಯದು. ಅಂತೆಯೇ ಎಲ್ಲವೂ ಅವನ ಆವಾಸ ಸ್ಥಾನ. ಜಾನಪದರು ಹೇಳುವಂತೆ 'ಅವನು ಹೂವಾಗ ಹುದಿಯಾನ, ಮಾರ್ಯಾಗ ಮಲಗ್ಯಾನ.' ಹೂವಿನ ಪರಿಮಳ ಕಣ್ಣಿಗೆ ಕಾಣದಿದ್ದರೂ ಘ್ರಾಣಕ್ಕೆ ವೇದ್ಯ. ಅಂತಹ ಹೂವು ಅವನೇ, ಪರಿಮಳವೂ ಅವನೇ ಆಗಿರುವಾಗ ಅವನನ್ನು ಯಾವ ಹೂವಿನಲಗಲಿ ಪೂಜಿಸಬೇಕು. ಹಾಗೆ ಮಾಡಿದಲ್ಲಿ ಅವನಿಂದಲೇ ಅವನನ್ನು ಅರ್ಚಿಸಿದಂತಾಗುತ್ತದಲ್ಲವೆ ? ಅದೇ ರೀತಿ ಕೋಟಿ ಕೋಟಿ ನಕ್ಷತ್ರಗಳಿಗೆ ಬೆಳಕಾದವನು ಅವನೇ. ಅವನ ಮುಂದೆ ಹತ್ತಿಸಿದ ಹಣತೆಯಿಂದ ಆರತಿ ಮಾಡುವುದು ಯುಕ್ತವೆ ? ಹೀಗೆ ಆ ಪರಾತ್ಪರ ಚೇತನ ಸರ್ವವ್ಯಾಪಿತ್ವ ಹಾಗೂ ಸರ್ವಶಕ್ತತ್ವವನ್ನು ಗುರುತಿಸಿ ಗೌರವಿಸಿದ್ದಾನೆ, ಮನದ ಸದ್ಭಾವನೆಯ ಭಕ್ತಿ ಭಾವ ಭರಿತ ಹೃದಯದಿಂದ ಅವನನ್ನು ಪೂಜಿಸಿದ್ದಾನೆ ಕೂಡ.

೧೦೯

ಕನ್ನಡ ನಾಡಿನಲ್ಲಿ ಕಲ್ಲು ಕಲ್ಲು ಕತೆ ಹೇಳುತ್ತವೆ, ವೀರಗಲ್ಲು, ಮಾಸ್ತಿಕಲ್ಲು, ನಿಸದಿಗಲ್ಲು, ಯಾವುದೇ ಕಲ್ಲಿನಲಿ ಅದು ಗತ ಇತಿಹಾದ, ಗತದಿನದ ಸಂದ್ಕೃತಿಯ ಸ್ಮಾರಕ ! ಅಂತಹ ಸಂಸ್ಕೃತಿಯ ಕುರುಹಾಗಿ ನಿಂತಿದೆ 'ಹಾಳೂರಿನ ಒಂದು ಕಲ್ಲು !' ಅದು

ಆಕಸ್ಮಿಕವಾಗಿ ನಮ್ಮ ಕವಿಪುಂಗವನ ಕಣ್ಣಿಗೆ ಬಿದ್ದ ಮೇಲೆ ಅವನ 'ಕವನವಸ್ತು' ವಾಗದಿರುತ್ತದೆಯೆ ? ಅದರ ಗತವೈಭವದ ಸ್ಮರಣೆಯನ್ನು ಕವಿ ಕಲ್ಲಿನ ಬಾಯಿಂದಲೇ ಮಾಡಿಸಿದ್ದಾನೆ. ಜಡವೊಂದು ಚೇತನವಾಗಿ ಆತ್ಮಕಥೆಯಲ್ಲಿ ನಿವೇದಿಸಿಕೊಳ್ಳುತ್ತದೆ.

ಊರು ಹಾಳಾದರೂ ಅದರ ಹಿಂದಿನ ವೈಭವದ ದಿನಗಳನ್ನು ಬಣ್ಣಿಸುವ ವಿಜಯೋತ್ಸವ ಶಿಲಾಶಾಸನ ಇನ್ನೂ ಜೀವಂತವಾಗಿ ಉಳಿದಿದೆ. 'ನಾಡ ವೈಭವ ಬೆಳೆದು ಸುಗ್ಗಿಯಲಿ ಹಿಗ್ಗೆ, ಇಳೆಯೊಡನೆಯ ರಾಜ್ಯವನ್ನು ಪಾಲಿಪುದ ಕಂಡೆ' ಎಂದು ತನ್ನ ಹಳೆಯ ದಿನಗಳನ್ನು ಸ್ಮರಿಸಿಕೊಳ್ಳುತ್ತದೆ. ಈ ಹಾಳೂರಿನ ಕಲ್ಲು ಮಹತ್ವಾಕಾಂಕ್ಷಿ ಮಾನವನಿಗೆ ರಕ್ತದಾಹ, ರಾಜ್ಯಮೋಹ. ಅದಕ್ಕಾಗಿ ಹಲವರು ಅಮಾಯಕರನ್ನು ಬಲಿ ತೆಗೆದುಕೊಳ್ಳುತ್ತಾನೆ. ಅವರ ಅಸ್ತಿಪಂಜರಗಳ ಮೇಲೆ ತನ್ನ ಸಿಂಹಾಸನವನ್ನಿರಿಸಿ ಮೆರೆಯಬಯಸುತ್ತಾನೆ. ಅವೆಲ್ಲವೂ ಒಂದು ದಿನ ಪರರ ಪಾಲಾದಾಗ ತಾನು ಹೆಣವಾಗಿ ಉರುಳುತ್ತಾನೆ. ಹೀಗೆ ಮನುಷ್ಯನಿದ್ದಂತೆ ರಾಜ್ಯ ಸಾಮ್ರಾಜ್ಯಗಳಿಗೂ ಹುಟ್ಟು ಸಾವುಗಳಿರುತ್ತವೆ. ಹುಟ್ಟಿದ್ದು ಮಡಿಯಲೇಬೇಕು. ಆ ಎರಡು ದಡಗಳ ನಡುವಿನ ಜೀವವಾಹಿನಿ ಹರಿಯಲೇಬೇಕು. ಹರಿಯುವಾಗ ಕಂಡ ಬೆಡಗೇನು ? ಬೆರಗೇನು ?

**ನಾಡಮಾತೆಯ ಜಸವ ಗಜತುರಗ ಕೂಗಿ**
**ದಿಕ್ಕುಗಳ ಕೊನೆಯ ಚುಂಬಿಸುತ ನುಡಿದಿರಲು**
**ನಾಡಕಳೆ ಕಳೆಯೇರಿ ತೊಳಗಿ ಬೆಳಗಿರಲು**
**ಆನಂದದೊಳು ನಲಿದು ಸಂತಸ ಪಡೆದೆ**

ಆ ಹಾಳೂರಕಲ್ಲು ಇಷ್ಟೆಲ್ಲ ಯುದ್ಧೋತ್ಸಾಹದ ಗೆದ್ದ ದಿನಗಳನ್ನು ಸ್ಮರಿಸಿಕೊಂಡು ಹಿಗ್ಗುತ್ತದೆ. ಆದರೆ

**ಖಡ್ಗಗಳ ಹೊಡೆತದಲಿ ಈಟಿಯಿರಿತದಲಿ**
**ನೆಲವೆಲ್ಲ ನೆತ್ತರಿನ ಕೆಸರಿನಲಿ ಕೂಡೆ**
**ಕುದುರೆಗಳು ಕೆನೆಯುತಿರೆ ಕತ್ತರಿಸಿ ಬೀಳೆ**
**ನಾಡಿದನು ಪಾಳ್ದ ಅರಿಗಳನು ಕಂಡೆ**

ಶತ್ರು ಸಂಹಾರಕ್ಕೆ ಬಲಿಯಾದದ್ದನ್ನು ಕಂಡು ಅದರ ನಾಲಗೆ ಒಣಗುತ್ತದೆ, ಕಣ್ಣೀರು ಕೋಡಿವರಿಯುತ್ತದೆ. ಭೀಕರ ಕಾಳಗ ! ಬಿದ್ದವರ ಎದ್ದವರ ಸತತ ಹೋರಾಟ, ಹೋರಾಟದಂತ್ಯದಲಿ ಹೆಣಗಳ ಬಣಬೆ, ಹರಿವ ನೆತ್ತರ ಹೊನಲು, ಮುರಿಬಿದ್ದ ರಥಚಕ್ರ ಅಯುಧಗಳು, ತದನಂತರ ಗೆದ್ದವರ ಹಾರಾಟ, ನಗರ ಲೂಟಿ, ಮಹಿಳೆಯರ ಮಾನಭಂಗ, ಮಕ್ಕಳು ಮುದುಕರ ಕಗ್ಗೊಲೆ ! ಇಂತಹ ಅಮಾನುಷ ಕೃತ್ಯಕ್ಕೆ ಬಲಿಯಾದ ಆ ವೈಭವ ಬೀಡು, ಇದು ಸುಡುಗಾಡು ! ಕಲ್ಲು ಹೇಳುತ್ತೆ :

**ಅಳಿದ ವೀರವಾಹಿನಿ ರಕುತದಲಿ ನೆನೆದೆ**
**ಸತ್ತ ಹೆಣಗಳ ನಡುವೆ ಹೊರಳಾಡಿಯುಳಿದೆ !**

ತಾನು ಮಾತ್ರ ಉಳಿಯಿತು. ಆದರೆ ಯಾವ ಪುರುಷಾರ್ಥಕ್ಕಾಗಿ ? ಕಣ್ಣು ಒಡೆಯುವಂತಹ ಇಂದಿನ

**ಪಾಳೂರು ಪಾಳುಶಿಲೆ ಪಾಳು ಬರಿಪಾಳು**
**ಕಲ್ಲು ಮುಳ್ಳುಗಳಿಂದ ನಿಬಿಡವಾಗಿಹುದು**
**ಬರಿಕಾಡು ಮರುಭೂಮಿಯಾಗಿಹುದು ನೋಡು !**

ಈ ಭಗ್ನ ದೃಶ್ಯ ನೋಡಲು !

ಕಲ್ಲು ಮರುಗುತ್ತದೆ ಇಲ್ಲ ಕೊರಗುತ್ತದೆ. ಎಲ್ಲವನು ಪಾಳುಗೈದ ಮೇಲೆ ಆ ಭಗವಂತ ತನ್ನನ್ನೇಕೆ ಉಳಿಸಿದ ಎಂದು ಜುಗುಪ್ಸೆಯ ಬಿಸಿಯುಸಿರುಬಿಡುತ್ತದೆ. ಹೇಳುತ್ತದೆ :

**ಬಿಸಿಲ ಧಗೆಯಲಿ ಬೆಂದು ಚಳಿಯಲ್ಲಿ ನಡುಗಿ**
**ಮಳೆಯಲ್ಲಿ ಮಿಂದು ಸಿಡಿಲಾಟದೊಳಗಾಡಿ**
**ಬಿತ್ತರದ ಬೆಂಗಾಡು ಪಾಳು ಪಾಳಾಯ್ತು**
**ಎನ್ನ ಬಾಳೇಕೋ ಕೊನೆಯಾಗಲೇ ಇಲ್ಲ !**
**ಹಿಂದಿನೈಸಿರಿ ನೆನೆದು ಹಿಗ್ಗುವೆನು ಒಮ್ಮೆ**
**ಮುಂದಿರುವ ವಿಲಯ ದೃಶ್ಯವ ಕಂಡು ಮರುಗಿ**

**ಕಣ್ಣೀರ ಹರಿಸುವೆನು ಅಳಿಲ ತೋಡುವೆನು**

**ಸಾಕಾಯ್ತು ಕೊನೆಮಾಡು ಬಾಳಿದನು ದೇವ !**

ಇಂದು ತನ್ನಳಲನ್ನು ತೋಡಿಕೊಳ್ಳುತ್ತಾ, ಹೇಸಿಗೆಯ ಬಾಳಿಗೆ ಬೇಸರಪಟ್ಟುಕೊಂಡು ತಾನೂ ಬೇಗ ಮಡಿಯುವುದು ಲೇಸು ಎಂಬ ನಿರ್ಧಾರಕ್ಕೆ ಬರುತ್ತದೆ, ಅಂತೆಯೇ ಆ ದಿನವನ್ನು ಬೇಗ ಕೊಡು ಎಂದು ಬೇಡುತ್ತದೆ.

ಕಲ್ಲೊಂದರ ಸಾಂಕೇತಿಕತೆಯಲ್ಲಿ ಗತ ಇತಿಹಾಸದ ಬಾಳ ಚಿತ್ರಗಳನ್ನು ಬಿಡಿಸಿದ ಈ ಕವಿಯ ಕೈಕುಂಚಕ್ಕೆ ಅವನ ಪ್ರತಿಭೆಯ ವಿದ್ಯುತ್ ಕಾಂತಿಗೆ ಮಣಿಯದಿರಲಾಗುವದೆ ! ಎಂತಹ ಸುಂದರಕಲ್ಪನೆ. ಇಲ್ಲಿ ಸಾಕಾರಗೊಂಡಿದೆ ನೋಡಿ. ಅಂತೆಯೇ ಶೋಕಗೀತೆ (Elegy) ರಚನೆಯಲ್ಲೂ ಈ ಕವಿಗಿರುವ ಸಿದ್ಧಹಸ್ತಕ್ಕೆ ಸಾಕ್ಷಿ ಹೇಳುತ್ತದೆ. ಬಹುಶಃ ಥಾಮಸ್ ಗ್ರೇ ಬರೆದ 'ಎಲಿಜಿ ರಿಟನ್ ಇನ್ ದಿ ಕಂಟ್ರಿ ಚರ್ಚ್ ಯಾರ್ಡ್' – ಸ್ಫೂರ್ತಿ ಕೊಟ್ಟಿರಬಹುದು. ಪ್ರಭಾವ ಬೀರಿರಬಹುದು. ಅಲ್ಲಿನ ಇಗರ್ಜಿಯ ರುದ್ರ ಭೂಮಿಯಲ್ಲಿ ಅನೇಕಾನೇಕ ಕವಿ ಕಲಾವಿದ ಚೇತನಗಳು ಹುದುಗಿರುವಂತೆ, ಇಲ್ಲಿ ರಣಭೂಮಿಯ ಹೆಣಗಳು ಮಣ್ಣಾಗಿವೆ ಎಂಬ ಕಲ್ಪನೆ ಬೆಳಗಿದೆ.

ಇಂತಹ ಮನಮುಟ್ಟುವ ಬಣ್ಣನೆಯಲ್ಲಿ ನಮ್ಮ ಕವಿ ನಂದಕಿಶೋರನ ಲೇಖಣಿ ದಣಿವು ಕಂಡಿಲ್ಲ. ಕಾಣುವುದೂ ಇಲ್ಲ.

ಹೀಗೊಬ್ಬ ಧರ್ಮರಾಯ

ಅವನೇ ನಮ್ಮ ಟಿ.ಎನ್. ಮಹದೇವಯ್ಯ

* * *

ಕನ್ನಡ ಸಾಹಿತ್ಯವನ್ನು ವಿಶ್ವಸಾಹಿತ್ಯದ ಉನ್ನತಿಗೆ ಕೊಂಡೊಯ್ದ ಕೀರ್ತಿ ೧೨ನೆಯ ಶತಮಾನದ ವಚನಕಾರರಿಗೆ ಸಲ್ಲುತ್ತದೆ. ಅವರ ಆರ್ಧಯಾತ್ಮದ ಹಸಿವು, ಧರ್ಮದ ಮೇಲಣ ಮೋಹ, ಏಕದೇವೋಪಾಸನೆಯ ನಿಷ್ಠೆ, ಸಮಾಜ ಸುಧಾರಣೆಯ ಕಳಕಳಿ – ಇವೆಲ್ಲವೂ ಸಂಗಮಿಸಿದ ಸಂಕೀರ್ಣ ಭಾವಗಳು ಅರಳವಾದ ನುಡಿಯಲ್ಲಿ ಸಹಜವಾಗಿ ಮೂಡಲು ಯತ್ನಿಸಿದವು. ಅವು ವಚನಗಳು ಎಂದಾದವು. ಸೇಂದ್ರಿಯ ಅನುಭವಗಳನ್ನು ಅತೀಂದ್ರಿಯ ಅನುಭಾವವನ್ನು ಅರ್ಥಪೂರ್ಣವಾಗಿ ಅಭಿವ್ಯಕ್ತಿಸಲು ಸಮರ್ಥ ಸಾಧನವಾದವು. ವಚನಕಾರರು ಪದ್ಯವನ್ನು ಗದ್ಯದ ಮಟ್ಟಕ್ಕಿಳಿಸಲಿಲ್ಲ. ಗದ್ಯವನ್ನೇ ಪದ್ಯದ ಮಟ್ಟಕ್ಕೇರಿಸಿದರು. ಅದರ ಲಯದಲ್ಲಿ ಹೊಸತನ ತಂದರು. ಅದಕ್ಕೆ ಭಾವಗೀತಾತ್ಮಕ ಚಾಲನೆ ಕೊಟ್ಟರು. ತಮ್ಮಲ್ಲಿ ಮಿಡಿದ ಭಾವಗಳನ್ನು ಅದರಲ್ಲಿ ನುಡಿದರು. ಕಸುವುಳ್ಳ ಆಡುನುಡಿಯ ಬನಿಯನ್ನು ಬಳಸಿಕೊಳ್ಳುವ ಯತ್ನದಲ್ಲಿ ವಚನ ಸಾಹಿತ್ಯ ಯಶಸ್ವಿಯಾಯಿತು. ಅದು ಬಳಸಿದ್ದು ಭಾಷ್ಯದ ಭಾಷೆಯಲ್ಲ, ಭಾವದ ಭಾಷೆ. ರೂಪ ಸ್ವರೂಪಗಳೆರಡರಲ್ಲೂ ತಮ್ಮ ತನವನ್ನು ಮೆರೆದ ವಚನಗಳು ಬಿಡಿ ಬಿಡಿ ಮುಕ್ತಗಳಾಗಿ, ಅನುಭ ಅನುಭಾವಗಳಿಂದ ಮಿರುಗುವ ಅಣಿಮುತ್ತುಗಳಾಗಿ ಕನ್ನಡ ಸಾಹಿತ್ಯ ಶರಧಿಯಲ್ಲಿ ತುಂಬಿ ತುಳುಕಿದವು. ಹೀಗೆ ಭಾವ, ಭಾಷೆ ಬಂಧ – ಇವುಗಳ ಮಧುರ ಬಾಂಧವ್ಯದ ಹೆಪ್ಪು ಒಡೆಯದಂತೆ ಎಚ್ಚರ ವಹಿಸಿತು. ಇವೆಲ್ಲದರ ಪರಿಣಾಮವಾಗಿ ವಚನ ಸಾಹಿತ್ಯ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಒಂದು ಹೊಸ ಆಯಾಮವನ್ನೇ ನಿರ್ಮಾಣಮಾಡಿತು.

ವಿಶ್ವಸಾಹಿತ್ಯಕ್ಕೆ ಕನ್ನಡವಿತ್ತ ಅಮೂಲ್ಯ ಕಾಣಿಕೆಯೆನಿಸಿದ ವಚನ ರಚನೆಯನ್ನು ಹಲವರು ಆಧುನಿಕ ಕವಿಗಳು ದುಡಿಸಿಕೊಂಡುದುಂಟು. ಅವರಲ್ಲಿ ನಮ್ಮ ಕವಿ ಪುಂಗವನೂ ಒಬ್ಬ.

ರಮ್ಯದರ ಮನೆಯ ವರ್ಣಮಯ, ವೈವಿಧ್ಯಮಯ ಭಾವಗೀತ, ಭಕ್ತಿಗೀತ, ಸಾನೆಟ್, ಎಲಿಜಿ, ಪ್ರಗಾಥ ಮೊದಲಾದ ಪ್ರಾಕಾರಗಳನ್ನು ಅವಲೋಕಿಸಿ, ಆನಂದಿಸಿ ಹೊರಬಂದ ನಮ್ಮ ನಂದಕಿಶೋರ ಹೊರವಲಯದ ವಚನೋದ್ಯಾನಕ್ಕೆ ಕಾಲಿರಿಸುತ್ತಾನೆ. ಅಲ್ಲಿ ಅವನೇ ಬೆಳೆದ 'ಶ್ರೀ ಮಲೆಯ ಮಹದೇವ' ಎಂಬ ಅಂಕಿತದ ಬಗೆ ಬಗೆಯ ಸುಮರಾಜಿಯನ್ನು ಕಂಡು ಹಿಗ್ಗುತ್ತಾನೆ. ಪಾದಚಾರಿಯ ಪಥಚಲನದ ಪಕ್ಕದಲ್ಲಿ ಅಚ್ಚ ಹಸುರಿನ ಪಚ್ಚೆ ಹರಹಿ ಅದರುದ್ದಕ್ಕೂ ಸುಗಂಧಪೂರಿತ ಪ್ರಫುಲ್ಲಿತ ಪುಷ್ಪಗಳ ಸಾಲು ಸಾಲು ನಿರ್ಮಿಸಿದ್ದಾನೆ. ಈಗ ನಾವೂ ಅವನೊಡನೆ ವಚನೋದ್ಯಾನವನ್ನು ಪ್ರವೇಶಿಸೋಣ.

ವಚನೋದ್ಯಾನದ ಪ್ರವೇಶದ್ವಾರದಲ್ಲೇ ತನ್ನ ಇಷ್ಟದೈವ ಕುರಿತ ಅಂಜಲಿ ಬದ್ಧ ಬಳ್ಳಿ ಬಾಗಿಲ ದರ್ಶನ ! ಅದು ಹೀಗಿದೆ.

**ಏಳು ಗಿರಿ ಹತ್ತಿ ಏಳು ಗಿರಿ ಇಳಿದು ಬಾಳಬಯಲಿಗೆ ಬಂದೆ**

**ಹೆಬ್ಬಿದಿರ ಪಡೆದಾಟ ಶಿರಿಶೃಂಗದೆವೆ ಮರೆಸಿ ನಿನ್ನರಸಿ ಬಂದೆ**

**ಕಲ್ಲುಳ್ಳ ಬಯಲೆಂದು ಮೃಗಜಾತಿಯಿರವೆಂದು ಹೊಂಜರಿಯದಲೆ ಬಂದೆ.**

**ಬಂದ ಭಕ್ತರಿಗೆಲ್ಲ ವರದ ಹಸ್ತವವನೆತ್ತಿ**

**ನಿಲವ ತೋರಿದ ಗುರುವೆ ಶ್ರೀ ಮಲೆಯ ಮಹಾದೇವ**
**ನಿನ್ನ ಶ್ರೀಚರಣಕ್ಕೆ ನಮೋ ನಮೋ ಎನುತಿರ್ದೆನು.**

ಏಳು ಮಲೆ ಏಳು ಕೊಳ್ಳಗಳ ದಾಟಿ ಅಡವಿಯೊಡಲಿನ ನಡುವೆ ಮುನ್ನಡೆದರೆ ನಾವು ಮೆಟ್ಟುತ್ತೇವೆ ಬೆಟ್ಟದೋರೆಯ ಬಟ್ಟಬಯಲಿನ ತಟ್ಟಿ ತಾಣವನ್ನು. ಅಲ್ಲಿ ಸ್ವಾಮಿ ಮಲೆಯ ಮಹಾದೇವ ಧ್ಯಾನಮುದ್ರೆಯಲ್ಲಿ ಕುಳಿತಿದ್ದಾನೆ. ತಾನು ಅರ್ಧನಿಮೀಲಿತ ನೇತ್ರನಾಗಿದ್ದರೂ ಜಗತ್ತನ್ನೇ ಆನಂದ ಆಹ್ಲಾದಗಳಲ್ಲಿ ಉನ್ಮಿಲಗೊಳಿಸುತ್ತಿದ್ದಾನೆ. ಅವನನ್ನು ಕವಿ ದರ್ಶಿಸಿದ್ದು ಹೀಗೆ :

**ಶೂನ್ಯದೊಳಗೊಂದು ಗದ್ದುಗೆಯ ಕಂಡೆ !**
**ಗದ್ದಿಗೆಯ ಮೇಲೊಂದು ಸತ್ತಿಗೆಯ ಕಂಡೆ**
**ಸತ್ತಿಗೆಯ ನೆರಳಿನೊಳಗೊಂದು ಮೂರ್ತಿಯನು ಕಂಡೆ**
**ಶೂನ್ಯದಾಳವನರಸಿ ಲಿಂಗದನುಭವ ತರಿಸಿ**
**ಅಂಗಕಳವಡಿಸಿ ಜಗದ ಗುರುವಾದೆಯಯ್ಯಾ**
**ಶ್ರೀ ಮಲೆಯ ಮಹಾದೇವನೊಲಿದು**
**ಬಚ್ಚಬರಿ ಬಯಲಿನೊಳಗೋಲಾಡಿದ ನಿನ್ನ ಶ್ರೀಚರಣಕ್ಕೆ**
**ನಮೋ ನಮೋ ಎನುತಿರ್ದೆನಯ್ಯಾ !**

ಅಲ್ಲಿ, ಆ ದಿವ್ಯ ಸಾನಿಧ್ಯದಲ್ಲಿ –

**ನುಡಿಸಿದಂತೆಲ್ಲ ಮನವುಬ್ಬಿ ಚಿಮ್ಮಬೇಕು**
**ಅರ್ಚಿಸಿದಂತೆಲ್ಲ ಅಸುವುಬ್ಬಿ ಅರಳಬೇಕು**
**ಶಾಂತಿ ಸುಮ್ಮಾನದಲಿ ಭಾವ ತಾ ತೂಗಬೇಕು**
**ಅಂತಲ್ಲದಿಹ ಪೂಜೆ ಮೆಚ್ಚನಯ್ಯಾ ಶ್ರೀ ಮಲೆಯ ಮಹಾದೇವ !**

ಆದ್ದರಿಂದ ಭಕಿಭಾವ ಭರಿತರಾಗಿ, ಮುಗಿದ ಕೈ, ಬಾಗಿದ ಶಿರ, ತುಂಬಿದ ಹೃದಯದಿಂದ ಆ ದೇವ ದೇನ ಬಳಿ ನಿಂತು ಅರ್ಚಿಸಬೇಕಾಗುತ್ತೆ. ಅರ್ಪಿಸಲೂ ಬೇಕಾಗುತ್ತದೆ. ಏಕೆಂದರೆ –

| | | |
|---|---|---|
| **ಭಾವವನೊಲಿಸಿ** | | **ಅರಿಯಬೇಕು** |
| **ಮನವ** | **ನಿಲಿಸಿ** | **ತ್ಯಜಿಸಬೇಕು** |
| **ಹೃದಯವ** | **ಬೆರಸಿ** | **ಬೆರೆಯಬೇಕು** |
| **ತನುವ** | **ಸವೆಸಿ** | **ದುಡಿಯಬೇಕು** |

**ಶ್ರೀ ಮಲೆಯ ಮಹಾದೇವನ ನಿಲುವನರಿತು ಬಯಲಾಗಬೇಕು !**

ಈ ಗುಟ್ಟರಿತ ಗಾರುಡಿಗ ನಮ್ಮ ಕವಿ. ನಮಗೂ ಬೋಧಕನಾಗಿ, ಮಾರ್ಗದರ್ಶಿಯಾಗಿ ಕೈಹಿಡಿದು ಕರೆದೊಯ್ಯುತ್ತಾನೆ. ನಾವೂ ಅವನೊಡನೆ ಜಗತ್‌ಪಿತನಿಗೆ ಮಣಿದು ಮುಂದೆ ಸಾಗೋಣ. ಅಲ್ಲಿ ತಾವಾಗಿಯೇ ಅರಸಿ ಬಂದ ಘಮಘಮಿಸುವ ಹಲರು ವಚನ ರಚನೆಯ ಕುಸುಮಗಳನ್ನೆತ್ತಿ ಸ್ವಾಮಿಯ ಶ್ರೀ ಚರಣಗಳ ಮೇಲೆ ಭೂಮಿರಚಿ,

**ನಾನೊಂದು ದೀಪವ ಹಚ್ಚುವೆನಯ್ಯ**
**ಮನದ ಹಣತೆಯ ತೊಳೆದು ನೇಹದ ತೈಲವ ಸುರಿದು**
**ಭಕ್ತಿಯ ಬತ್ತಿಯನೂಡಿ ನಾನೊಂದು ದೀಪವ ಹಚ್ಚುವೆನಯ್ಯಾ !**
**ಕ್ರಿಯಾಜ್ಞಾನದ ಉರಿತಾಕಿ ನಿಚ್ಚ ನಿಚ್ಚಲಿಂಗಯ್ಯನ ಬೆಳಗಲೆಂದು**
**ನಮ್ಮ ಮಲೆಯ ಮಹಾದೇವನ ಚರಣ ತೊಳಗಲೆಂದು**
**ನಾನೊಂದು ದೀಪವ ಹಚ್ಚುವೆನಯ್ಯ !**

ಎಂಬುವನ ಪ್ರಾಂಜಲ ಮನದಲ್ಲಿ ಮನವಿರಿಸಿ ನಾವೂ ಅಂಜಲಿಯಲ್ಲಿ ನೀಲಾಂಜನ ಹಿಡಿದು ಬೆಳಗೋಣ. ಮತ್ತೆ –

**ಚಿತ್ತಾರಕೊಂದು ಗೆರೆಯಾಗಿ ಲಿಪಿಗೊಂದು ಅಕ್ಷರವಾಗಿ**
**ಕಾವ್ಯಕೊಂದು ಕಲೆಯಾಗಿ, ಜೀವಕೊಂದು ಚೇತನವಾಗಿ**

**ಜಗವೆಲ್ಲವನು ಆವರಿಸಿರುವ ನಿನ್ನ ನಿಲವ ನೋಡಯ್ಯ !**

**ಹಕ್ಕಿಗಳ ಕೊರಳಲ್ಲಿ ನೀನು ವಾಣಿ.**

**ಮೋಡಗಳ ಮರೆಯಲ್ಲಿ ನೀನು ಮಿಂಚು**

**ಅರಳಿದಲರಿನಲಿ ನೀ ಸೊಂಪು ಕಂಪು**

**ಶ್ರೀಮತಿಯ ಮಹಾದೇವ ನನ್ನ ಜೀವದಲಿ ನೀನೇ ಪ್ರಾಣ**

ಹೀಗೆ ಅಣುವಿನಲ್ಲಿ ಅಣುವಾಗಿ, ಘನದಲ್ಲಿ ಘನವಾಗಿ ನೀರಲ್ಲಿ ತಂತ್ರ, ಗಾಳಿಯಲ್ಲಿ ವೇಗ, ಸೂರ್ಯನಲ್ಲಿ ತೇಜಸ್ಸು, ಚಂದ್ರನಲ್ಲಿ ಕಾಂತಿ, ನಕ್ಷತ್ರದಲ್ಲಿ ನಗೆ, ಹೂವಿನಲ್ಲಿ ಪರಿಮಳ, ಹಕ್ಕಿಯ ಕಂಠದಲ್ಲಿ ಹಾಡು, ಕಲ್ಲಿನಲ್ಲಿ ಘನೀಭೂತತ್ವ ಏನೆಲ್ಲ ಆಗಿ ವಿಶ್ವಾಂತರಾಳದಲ್ಲಿ ನೂತನ ಚೇತನವಾಗಿ ಸ್ಪಂಧಿಸುವ ಆ ಜಗನ್ನಿಯಾಮಕನಿಗೆ ಶಿರಬಾಗಿ ಧನ್ಯರಾಗೋಣ !

ಹೀಗೊಬ್ಬ ಧರ್ಮರಾಯ

ಅವನು ನುಡಿ ಶಿಲ್ಪಿ

ಅವನೇ ನಮ್ಮ ಟಿ.ಎನ್.ಮಹಾದೇವಯ್ಯ

* * *

ಇಂತಹ ಭಕ್ತಿ ಗೀತಾಂಜಲಿಯ ಸಾಲಿನಲ್ಲಿ ಅವನ ಭಾವ ಪುಷ್ಪಾಂಜಲಿಯೂ ಸೇರುತ್ತದೆ. ಪುಷ್ಪಾಂಜಲಿಯ ಅವತಾರಕ್ಕೆ ಆದ ಪ್ರೇರಣೆ ಪ್ರಚೋದನೆಗಳೇ ಬೇರೆ. ಅದರ ಕುರಿತು ಕವಿ ತಾನೇ ಹೀಗೆ ನಿವೇದಿಸಿಕೊಳ್ಳುತ್ತಾನೆ.

ಕವಿ ರವೀಂದ್ರರ 'ಗೀತಾಂಜಲಿ'ಯನ್ನು ನಾನು ಇಂಗ್ಲಿಷಿನಲ್ಲಿ ಓದಲು ಆರಂಭಿಸಿದಂದಿನಿಂದಲೂ, ಅಲ್ಲಿನ ಭಾವದ ತರಂಗ ವಾತಾವರಣ ಸೃಷ್ಟಿ, ಶಬ್ದದ ಸೊಗಸು ಮತ್ತು ಕಾವ್ಯದ ಜೀವ ಇವುಗಳು ನನ್ನನ್ನು ಮುಗ್ಧಗೊಳಿಸಿದುದಲ್ಲದೆ, ನನ್ನ ಜೀವನದ ಮೇಲೂ ಸಹ ತುಂಬಾ ಪರಿಣಾಮವನ್ನುಂಟುಮಡಿದವು. ಕೆಲವು ವರ್ಷಗಳ ತನಕ ಗೀತಾಂಜಲಿಯನ್ನು ಓದದೆ ಮುಚ್ಚಿಟ್ಟಿದ್ದರೂ ಸಹ ಆ ವಾತಾವರಣದ ಪ್ರಭಾವವು ನನ್ನನ್ನು ಆವರಿಸದೆ ಇರಲಿಲ್ಲ. ಚಿತ್ರಾರ್ಪಿತ ಕಾವ್ಯದಂತೆ ಅದು ಪದೇ ಪದೇ ಎದುರಾಗಿ ನಿಲ್ಲುತ್ತಿದ್ದಿತು. ಜೀವನದ ಸಮಸ್ಯೆಗಳು, ಸುಖ ದುಃಖಗಳ ಒಳತೋಟಿ, ಹೋರಾಟ ಮೊದಲಾದ ಸಂದರ್ಭಗಳಲ್ಲೆಲ್ಲಾ ಅದೇ ಭಾವಗಳೇ ಮನಸ್ಸಿನಲ್ಲಿ ಮೂಡಿ ಒಂದೊಂದು ಹೊಸರೂಪವನ್ನು ಧಾರಣ ಮಾಡಲಾರಂಭಿಸಿದವು. ಆಗಾಗ ಹೊಳೆದವುಗಳನ್ನೂ ನಾನು ಅನುಭವಿಸಿದವುಗಳನ್ನೂ ಚಿತ್ರಿಸಲು ಪ್ರಯತ್ನಿಸಿದ ಕಾರ್ಯದ ಫಲವೇ 'ಪುಷ್ಪಾಂಜಲಿ' ಇವುಗಳಲ್ಲಿ ಅರ್ಧಕ್ಕಿಂತ ಹೆಚ್ಚು ಭಾಗಗಳನ್ನು ಒಂದೇ ರಾತ್ರಿಯಲ್ಲಿ ಬರೆಯಬೇಕಾಯಿತು. ಪದ್ಯಗಳ, ಪ್ರಾಸ, ಮಾತ್ರಗಣನಿಯಮಗಳ ಅಚ್ಚಿಗೆ ಜೋಡಿಸಬಹುದಾಗಿದ್ದರೂ ಹಾಗೆ ಮಾಡದಿರುವುದೇ ಲೇಸೆಂದು ಮನಸ್ಸಿಗೆ ಬಂದದ್ದನ್ನು ಬಂದಂತೆಯೇ ಬರೆದಿದ್ದೇನೆ.

ಇವುಗಳ ವಿಷಯವಾಗಿ ನಾನು ಏನೂ ಹೇಳಲಾರೆ. ಅವುಗಳೇ ಅದನ್ನು ಬಿಡಿಸಬೇಕು. ನನ್ನ ಅನುಭವವು ಎಷ್ಟು ದೂರದ ವರೆಗೆ ಹೋಯಿತೋ, ನನ್ನ ಮನಸ್ಸು ಅದರಲ್ಲಿ ಎಷ್ಟನ್ನು ಹಿಡಿಯಿತೋ, ನನ್ನ ಲೇಖನಿ ಅದರಲ್ಲಿ ಎಷ್ಟು ಭಾಗವನ್ನು ಇಳಿಸಿಕೊಳ್ಳಲು, ಶಕ್ತಿಯಿದ್ದಿತೋ ಅಷ್ಟನ್ನೂ ಉಪಯೋಗಿಸಿಕೊಂಡು ನನ್ನ ಮನಸ್ಸನ್ನು ತೆರೆದಿಟ್ಟಿದ್ದೇನೆ. ಇಲ್ಲಿ ಮುಚ್ಚು ಮರೆಗಳಿಲ್ಲ. ಮುಚ್ಚಿಡುವಂಥದು ಏನೂ ಇಲ್ಲ. ಕೇವಲ ಆತ್ಮತೃಪ್ತಿಗಾಗಿ ಬರೆದ ಕಾವ್ಯವಿದು. ಸುಖದುಃಖಗಳ ಆಂದೋಳನದಲ್ಲಿ ಜೀವನವು ಸಿಲ್ಕಿ ಹೊಯ್ದಾಡುತ್ತಿರುವಾಗ, ಅನೇಕ ನಿಶೀಥ ರಾತ್ರಿಗಳಲ್ಲಿ ಎದ್ದು ಕುಳಿತು ಈ ಕೈಬರಹದ ಪ್ರತಿಯ ಪುಟಗಳನ್ನು ತಿರುವಿ ಹಾಕುತ್ತಾ ನನ್ನ ಸುಖದುಃಖಗಳಿಗೆ ಸರಿ ಹೊಂದುವಂಥ ಶಾಂತಿ ಸಮಾಧಾನಗಳನ್ನು ಇಲ್ಲಿ ಕಂಡಿದ್ದೇನೆ. ಆ ರೀತಿ ಮಾಡುವುದರಲ್ಲಿ ನನಗೊಂದು ಆನಂದವಿದೆ. ಅದರಲ್ಲಿನ ನೂರರಲ್ಲಿ ಒಂದು ಪಾಲಿನಷ್ಟಾದರೂ ಓದಿದವರು ಅನುಭವಿಸಿದರೆ ನನ್ನ ಅಲ್ಪ ಕಾರ್ಯವು ಯಶಸ್ವಿಯಾದಿತೆಂದು ಭಾವಿಸುತ್ತೇನೆ.

'ಪುಷ್ಪಾಂಜಲಿ' ಅವ್ಯಕ್ತ ಚೈತನ್ಯಕ್ಕೆತ್ತಿದ ಕವಿಯ ಆತ್ಮ ಗೀತಾಂಜಲಿ. ಇಲ್ಲಿ ಕವಿ ಪ್ರತಿ ಪಾದದಲ್ಲೂ ಅಡಗಿದ್ದಾನೆ. ಪುಟ ಪುಟದಲ್ಲೂ ಮೂಡಿದ್ದಾನೆ. ಅವನ ಬದುಕಿನ ಬೇವು ಬೆಲ್ಲಗಳು ಇಲ್ಲಿ ಸಹನೀಯ ಪಾನೀಯಗಳಾಗಿವೆ. ಓದುಗರ ಮಾನಸಿಕ ಆರೋಗ್ಯಕ್ಕೆ, ಅವರ ಆತ್ಮೋನ್ನತಿಗೆ, ಅನುಭೂತಿಗೆ ಅನುಕೂಲ ವೇದಿಕೆಯೊಂದನ್ನು ನಿರ್ಮಿಸಿಕೊಟ್ಟಿದ್ದಾನೆ ಕವಿ. ತನ್ಮೂಲಕ ಅವರ ಎತ್ತರ ಬಿತ್ತರಗಳು ಸಹೃದಯ ವೃಂದಕ್ಕೆ ವೇದ್ಯವಾಗಿರುವುದಿಲ್ಲ. ಇರಲಿ, ಪುಷ್ಪಾಂಜಲಿಯಿಂದ ಹೊರಸೂಸಿದ ಮೊದಲ ಕುಸುಮದ ಸೊಬಗು ಸುಗಂಧಗಳನ್ನು ನೋಡಿ–

‘ಏಳು ! ಏಳು ! ಆಗಲೇ ದಿಗ್ವಧುವಿನ ಶಂಕು ನಿನಾದವು ಗಂಭೀರವಾಗಿ ಮೊಳಗುತ್ತಿವೆ ! ಜನಗಳ ಕೋಲಾಹಲದಿಂದ ಮನಸ್ಸು ಚದುರಿ ಹೋಗುವುದಕ್ಕೆ ಮುಂಚೆ, ವಸ್ತುಗಳ ಮೇಲೆ ದೃಷ್ಟಿಬಿದ್ದು ಮನಸ್ಸು ಇಬ್ಬಗೆಯಾಗುವುದಕ್ಕೆ ಮುಂಚೆ, ಜನ ಸಮುದಾಯ ಸಂದಣಿಗಳಿಂದ ಅವನ ದರ್ಶನವು ಸಿಗದಂತಾಗಿ ಬಿಡುವುದಕ್ಕೆ ಮುಂಚೆ ನಮ್ಮ ಪೂಜೆಯನ್ನು ಅವನ ಚರಣತಲದಲ್ಲಿ ಅರ್ಪಿಸಿಬಿಡೋಣ ! ಏಳು ಬೇಗ ಮಿಂದು ಮಡಿಯುಟ್ಟು ಪೂಜಾದ್ರವ್ಯಗಳನ್ನು ಸಿದ್ಧಪಡಿಸಿಕೋ ! ಈ ಕ್ಷಣ ಕಳೆದುಹೋಗುವುದರಲ್ಲಿ ಏನಾಗಿ ಬಿಡುವುದೋ ! ಈಗಲೇ ನಮ್ಮ ಎಡೆಯನ್ನು ಸಲ್ಲಿಸಿ ಬಿಡೋಣ ! ನಮ್ಮ ಪೂಜೆಯೇ ಮೊದಲಾಗಲಿ, ಬೇಗ ಏಳು ಏಳು ! – (೧)

ಮುಗಿದ ಸಂಜೆಯ ನಿರಾಶೆ ಏನೆ ಇರಲಿ, ಹಿಂದಿನಿರುಳ ಗೋಳು ಎಷ್ಟೇ ಅಸಹನೀಯವಿರಲಿ, ಅಂತು ‘ಇಂದಿನ ಈ ಪೂಜೆಗೆ ನಾನೇ ಮೊದಲು’ ಎಂದುಕೊಳ್ಳುವುದರಲ್ಲೇ ಅವನ ತೃಪ್ತಿ ಅಡಗಿದೆ. ಅದಕ್ಕೆ ಕಾರಣ –

“ಅನೇಕ ಮಂತ್ರ ಪ್ರಾರ್ಥನೆಗಳನ್ನು ಹಡಿ ನಿನ್ನನ್ನು ನುತಿಸಬೇಕೆಂದು ಮನಸ್ಸಿನಲ್ಲಿ ತವಕಪಟ್ಟಿದ್ದೆನು. ಆದರೆ ಹೊತ್ತು ಬಳಿ ಸಾರಿದಾಗ ಅವುಗಳೆಲ್ಲವೂ ಮರೆತುಹೋದವು. ನಾನು ಮೂಕನಾಗಿ ಬಂದು ನಿನ್ನ ಮುಂದೆ ನಿಂತು ‘ನನ್ನ ಹೃದಯದ ಈ ಆಸೆಯನ್ನೇ ಪ್ರಾರ್ಥನೆಯಾಗಿ ಸ್ವೀಕರಿಸು’ ಎಂದು ನುಡಿದೆನು.” (೨)

ಇಂಥದಲ್ಲಿ ಕವಿಯ ಸ್ವಂತಿಕೆಯೂ, ಅವನ ದರ್ಶನದ್ಯುಉತಿಯೂ ಓದುಗರಿಗೆ ದೃಗ್ಗೋಚರವಾಗದಿರದು.

ವಿಶ್ವಶಕ್ತಿಯ ವಿರಾಟ್ ದರ್ಶನವನ್ನು ಪಡೆದು ಹಾಡಹೊರಟ ಕವಿಗೆ ಇರುವ ಹಂಬಲ ಒಂದೇ. ಆ ಆದಿಶಕ್ತಿ, ಜಗತ್ ಶಕ್ತಿ, ಪರಾತ್ಪರಶಕ್ತಿಯೆನಿಸಿದ ಜಗನ್ಮಾತೆಯ ಪದತಲದಲ್ಲಿ ತನ್ನನ್ನು ತಾನು ಸಂಪೂರ್ಣವಾಗಿ ಸಮರ್ಪಿಸಿಕೊಂಡು ಬಿಡಬೇಕು ಎಂಬುದು. ಅದನ್ನೇ ಈ ವಚನದಲ್ಲಿ ಕಾಣಬಹುದು –

“ದೇಹ ನಶಿಸಿದರೇನು, ಬಳಲಿದರೇನು, ಉಳಿದರೇನು ನಿನ್ನ ಕೃಪೆಯಲ್ಲಿ ಎಲ್ಲ ಸುಖಗಳಿಗೀಮತ ಮಿಗಿಲಾದ ಸುಖ, ಎಲ್ಲ ಆನಂದಗಳಿಗಿಂತ ಮಿಗಿಲಾದ ಆನಂದವಿದೆ ಎಂದು ತಿಳಿದ ಬಳಿಕ ಆವುದಕಾಗಿ ಆಶಿಸಲಿ. ಏನೂ ಬೇಡ, ನಿನ್ನ ಸಿರಿಹರಕೆ ಮಾತ್ರ ಚಿರವಿರಲಿ ಸಾಕು. ಇದನ್ನೇ ಸದಾ ಅನುಗ್ರಹಿಸು !” (೨೬)

“ನಿನ್ನ ಕರುಣೆಯ ಅಸೀಮ ಮತ್ತು ಅನಂತವಾಗಿದೆ. ಅದರಿಂದ ಸಾಧ್ಯವೂ ಸುಲಭ ಸಾಧ್ಯವಾಗಿದೆ. ಕಠಿನವೂ ಮೃದುವಾಗುತ್ತಿದೆ, ಅಶಾಂತಿಯೂ ಶಾಂತಿಯಾಗುತ್ತಿದೆ.” (೨೩)

ಈ ಒಪ್ಪಂದಕ್ಕೆ ಕವಿ.

“ನನ್ನ ಗೀತೆಯ ಆಲಾಪನೆಯೊಂದನ್ನು ನಿನಗರ್ಪಿಸಬೇಕೆಂದು ನನ್ನ ಹೇದಯದ ವೀಣೆಯ ತಂತಿಗಳನ್ನು ಮಿಡಿದು ನೋಡಿದೆನು. ಅದರಿಂದ ಈಗ ಹೊರಟ ಸ್ವರವೂ ಇನ್ನೂ ಪರಿಪಕ್ವವಾಗಿರುವಂತೆ ತೋರಲಿಲ್ಲ. ದಿನ ಕಳೆಯಲೆಂದು ಸುಮ್ಮನಾದೆನು.

ಕೆಲವು ದಿನಗಳ ನಂತರ ತಂತಿಗಳನ್ನು ಮಿಡಿದು ಪರೀಕ್ಷಿಸಿದೆನು. ಅವುಗಳಿಂದ ಇನ್ನೂ ಒರಟಾದ ಸ್ವರವೇ ಎದ್ದಿತು. ಇನ್ನೂ ಕಾಲವಿರುವುದೆಂದು ಪುನಃ ಮುಂದಕ್ಕೆ ತಳ್ಳಿದೆನು ದಿನಗಳನು.

ಅನೇಕ ದಿನಗಳು ಹಾಗೆಯೇ ಉರುಳಿ ಹೋದವು. ಮತ್ತೆ ಮಿಡಿದು ನೋಡುವಾಗ ತಂತಿಗಳೇ ನಿಶ್ಶಕ್ತಿಯಿಂದ ಕಳಚಿ ಹೋಗುವಂತೆ ತೊರಿದವು. ಅವುಗಲಿಗೆ ತುಕ್ಕು ಹಿಡಿಯಲಾರಂಭಿಸಿದ್ದಿತು. ಸ್ವರ ಸರಿಯಾಗಿ ಹೊರಡುವಂತಿರಲಿಲ್ಲ. ನನ್ನ ತಲೆಯ ಮೇಲೆ ಆಕಾಶವೇ ಕಲಚಿ ಬಿದ್ದಂತಾಯಿತು. ಕಣ್ಣುಗಳಿಗೆ ಕತ್ತಲು ಕವಿಯಿತು. ಬಹುಕಾಲದಿಂದಲೂ ಪೋಷಿಸಿ ಬೆಲಸಿದ್ದ ಅಶೆಯಂಕುರವೆ ಅಲಿದು ಹೊಗುವಂತೆ ತೋರಿತು. ಅಯ್ಯೊ ಇನ್ನೇನು ಗತಿ ಎಂದು ಹೆದರಿ ಇದ್ದುದರಲ್ಲೇ ತಂತಿಗಲನ್ನು ಸರಿಗೂಡಿಸಿ ಹಾಡಿಬಿಡಬೇಕೆಂದು ನಿರ್ಧರಿಸಿರುವೆನು. ಏಕೆಂದರೆ ಕಾಲ ಕಳೆದಂತೆಲ್ಲಾ ನಾನು ನನ್ನ ಅವಲಂಬನದ ಸಕ್ತಿಯನ್ನು ಕಳೆದುಕೊಳ್ಳುತ್ತಿರುವೆನು. ತಾಳ ಲಯಬದ್ಧವಲ್ಲವೆಂದಾಗಲಿ, ಸುಸ್ವರ ಹಿನವೆಂದಾಗಲೀ ನಿರಾಕರಿಸಬೇಡ, ಹಾಗೆ ನಿರಾಕರಿಸಿದರೆ ನನ್ನ ಜಿವಿತವು ಅಂಧಕಾರಮಯವಗುವುದು. ನನ್ನ ಏಕಮಾತ್ರ ಆಸೆಯೂ ಈಡೇರದಂತಾಗಿ ಬಿಡುವುದು. ನಾನಂತೂ ಹಾಡುವೆನು ಎಂಬ ಆತ್ಮವಿಶ್ವಾಸದಿಂದಲೇ ಮುಂದುವರಿಯುತ್ತಾರೆ.

ಕವಿ ಶ್ರಿ ಮಹಾದೇವಯ್ಯನವರ ಹಾಡು ಏಕಮುಖಿ ; ಆದರೆ ಪ್ರಾರ್ಥನೆ ಅನಂತ ಮುಖವುಳ್ಳದ್ದು. ಕನ್ನಡ ಕಾರಣಿಕಕನ್ಯೆ ಮಹಾದೇವಿಯಕ್ಕನನ್ನ, ಆಧುನಿಕ ತಪಸ್ವಿ ಶ್ರೀ ರಾಮಕೃಷ್ಣ ಪರಮಹಂಸರನ್ನು, ಗುರುದೇವ ರವೀಂದ್ರರನ್ನು, ತಾಯಿ ಭಾರತಿಯನ್ನ

ಭಾರತಾಂಬೆಯನ್ನು, ಬೃಂದಾವನ, ಚೈತ್ರನಂದನ, ಕವಿತಾ ಕಾಮಿನಿ, ಶಾರದ ಯಾಮಿನಿ, ಉಷೆ, ನಿಶೆ, ಪೃಥ್ವಿ ಇತ್ಯಾದಿ ಹತ್ತಾರು ಚೈತನ್ಯಗಳನ್ನೇ ದರ್ಶಿಸಿದ ಚೈತ್ರಾಕ್ಷಿ ಶ್ರೀ ಮಹಾದೇವಯ್ಯನವರು.

ಇಂಥವೆನಿತೋ ಗೀತೆಗಳ ಗುಚ್ಚ ಈ ಪುಷ್ಪಾಂಜಲಿ ! ಒಂದೊಂದೂ ಒಂದೊಂದು ಅಣಿಮುತ್ತು. ಸಮೀಕ್ಷಕನಿಗೆ ಈ ಸಮುದ್ರ ಕೃತಿ ನಿಜಕ್ಕೂ ಶ್ರೀ ಮಹಾದೇವಯ್ಯನವರ 'ಆಚಾರ್ಯ ಕೃತಿ' ಎನ್ನಿಸದಿರದು. ಇಂತಹ ಪವಿತ್ರ ಪರಿಶುದ್ಧ ಕಾವ್ಯ ಸಲಿಲದಲ್ಲಿ ಮಿಂದಾಗ ನಾವು ಪಾವನರಗುತ್ತೇವೆ, ಪುನಿತರಾಗುತ್ತೇವೆ. ಅಂತೆಯೇ ಅವರದೊಂದು ಪ್ರಾರ್ಥನೆಯೊಂದಿಗೆ ಲೇಖಣಿಗೆ ವಿರಾಮ ಕೊಡೋಣ.

ಹೇ ಕವಿತಾ ಮನೋಹರೆ ! ಹೇ ಕಲಾಮೂರ್ತಿ ! ನಿನ್ನಿಂದಲೇ ಸೃಷ್ಟಿಯು ಇಷ್ಟು ಮನೋಹರವಾಗಿದೆ ! ಹೇ ಲಾಸ್ಯ ಮಯೀ ! ನಿನ್ನಿಂದಲೇ ಆಕಾಶವು ಬಣ್ಣ ಬಣ್ಣದ ಮೋಡಗಳಿಂದ ತನ್ನ ಸೌಂದರ್ಯವನ್ನು ತಾಳಿದೆ ! ನೀನಿಲ್ಲದ ಕೋಕಿಲ ಕಂಠವು ಕೇವಲ ರವ! ನಿನ್ನ ಇನಿಗೊರಲಿನ ಹಿನ್ನೆಲೆಯ ಮೇಲೆ ಮೂಡಿದ ಕೊರಲದನಿ ಪಂಚಮದ ಇಂಚರವಾಗಿದೆ. ನಿನ್ನಿಂದಲೇ ಕೆರೆ, ತೊರೆ, ಕಾನನ, ಹಚ್ಚ ಹಸುರು ಬೂದು ಬಣ್ಣದ ಬೆಟ್ಟಗಳು ಎಲ್ಲವೂ ಸುಂದರವಾಗಿವೆ. ನಿನ್ನ ಸೀರೆಯ ಮುಸುಗಿನ ವರ್ಣನಾ ವೈಖರಿಯಿಂದ ರಮ್ಯವಗಿವೆ !

ನಿನ್ನ ಒಡೆತನದಲ್ಲಿ ಓಲೈಸುವ ನಿಶಿ, ದಿವಾ, ಉಷಾ, ಸಂಜೆ ಮೊದಲಾದ ನೀರೆಯರು ಬಹು ಕೋಮಲ ಕಾಂತಿಪೂರಿತರು ! ನೀನಿಲ್ಲದ ಅವರು ನಿಸರ್ಗ ಸೌಂದರ್ಯಹೀನರು ! ನಿನ್ನಿಂದಲೇ ಋತು ನಿಯಮ ಭೇದಗಳಿಗೆ ಒಂದು ಸೊಗಸು ಬಂದಿದೆ ! ಶಿಶಿರವು ತಪಸ್ವಿನಿಯಂತೆಯೂ, ವಸಂತವು ವಿಲಾಸಮಯಿಯಂತೆಯೂ ಪೃಥ್ವಿಯ ಮೇಲೆ ಮೂಡಿವೆ !

ನಿನ್ನಿಂದಲೇ ಕವಿಯವಾಣಿ ಅಮರವಾಗಿದೆ ! ನಿನ್ನಿಂದಲೇ ಚಿತ್ರಕಾರನ ಕುಂಚ ಸಜೀವವಾಗಿದೆ, ಸೃಷ್ಟಿಸುತ್ತಿದೆ ! ! ನಿನ್ನಿಂದಲೇ ಗಾಯಕನ ಕೊರಳು ಮನಮೋಹಕವಾಗಿದೆ. ಸಂಗೀತ ಮಾತೆಯು ಜೀವಿದ್ದಾಳೆ. ನಿನ್ನಿಂದಲೇ ತತ್ವಮಾತೆಯೂ ಚಿರಯೌವನೆಯಾಗಿರುವಳು !

ಮಂದಮಾರುತನು ಸುಳಿವುದು ನಿನ್ನಿಂದ ! ಸೃಷ್ಟಿ ಸಾಗುವುದೂ ನಿನ್ನಿಂದ. ಬಿಸಿಲು ಬರುವುದೂ, ಚಂದ್ರನು ಮೂಡುವುದೂ, ಸಮುದ್ರವು ಘೋಷಿಸುವುದೂ, ನಿನ್ನಿಂದ ! ನೀನಿಲ್ಲದ ವಿಶ್ವ ನಿರಾಧಾರ ! ಸೌಂದರ್ಯಹೀನ ! ಸ್ವರವಿಲ್ಲದ ವಾಣಿ ! ರೇಖೆಯಿಲ್ಲದ ಚಿತ್ರ ! ಆಕರವಿಲ್ಲದ ಶಿಲ್ಪ ! ಹೈ ಅನಂತ ವ್ಯಾಪ್ತ ಸೌಂದರ್ಯ ನಿಧಿ ! ಹೇ ವಿರಾಟಸ್ವರೂಪಿಣಿ ! ಸರ್ವದಾ ನಿನ್ನ ಅಮಲ ಸ್ಪರ್ಶದಿಂದ ಪೃಥ್ವಿಯನ್ನು ಜೀವಂತವಾಗಿಡು ! ಸೃಷ್ಟಿಗೆ ಚೈತನ್ಯವನ್ನು ಅನುಗ್ರಹಿಸು ತಾಯಿ !

* * * *

ಕವಿಯ (ಗದ್ಯರಚಕನಲ್ಲ, ಕೇವಲ ಪದ್ಯರಚಕ) ಅಭಿವ್ಯಕ್ತಿ ಪ್ರಣಾಳಿಗಳು ಮೂರು. ಒಂದು ಭಾವಗೀತ (Lyric Poetry) ಎರಡು, ಮಹಾಕಾವ್ಯ (Epic Poetry) ಮೂರು, ನಾಟಕ (Play writing) ಕವಿಯ ಅಭಿವ್ಯಕ್ತಿ ಪ್ರಣಾಳಿ ಕುರಿತು ಟಿ.ಎಸ್. ಎಲಿಯಟ್, The Three Voices of Poetry ಎಂದು ಕರೆದಿದ್ದಾನೆ. ಅದಕ್ಕೆ ಸಾಕಷ್ಟು ವಿವರಣೆ ನೀಡಿದ್ದಾನೆ ಕೂಡ. ಅವನ ಅಭಿಮತದಂತೆ The first voice in the voice of the poet talking to himself or to nobody – ಈ ಮೊದಲವಾಣಿ ಭಾವಗೀತ. ಕವಿ ತನಗೆ ತಾನೇ ಹೇಳಿಕೊಳ್ಳುವ ಭಾವಗೀತ ಒಂದು ಬಗೆಯ ಆತ್ಮರತಿ ಅಥವಾ ಸ್ವಾಹಾರಥನ ರೂಪಿ. ತನ್ನ ಅನಿ ಸಿಕೆಯನ್ನು ನಿರ್ಭಿಡೆಯಿಂದ ಕವಿ ಹೇಳಿಕಳ್ಳುತ್ತಾನೆ. ಅದು ಭಾವದ ಕಾವು ನಾದದ ಮೋದ ಎರಡೂ ಸೇರಿ ಅದದ್ದು. ಆನಂದ ದಾಯ. ಆಹ್ಲಾದಕಾರಿಣಿ ಕೂಡ.

ಎರಡನೆಯ ವಾಣಿ ಅಥವಾ ಪ್ರಣಾಳಿ ಕುರಿತು ಹೀಗೆ ಹೇಳುತ್ತಾನೆ.

The Second in the voice of the poet, addressing an audience ಅಂದರೆ ತಾನು ಕವಿ ಮರೆಯಲ್ಲಿ ನಿಂತು, ಸಮುದಾಯದ ಮುಂದೆ ಕಲಾರಚನೆ ಚಲಾವಣೆ ಮಾಡುತ್ತಾನೆ. ಅದು ಮಹಾಕಾವ್ಯ, ಅಲ್ಲಿ ಕವಿ ತನ್ನ ವ್ಯಷ್ಟಿತನವನ್ನು ಸಮಿಷ್ಟಿಯಲ್ಲಿ ವಿಲೀನಗೊಳಿಸಿಕೊಂಡು ನುಡಿಯುತ್ತನೆ.

ಮೂರನೆಯದು ದೃಶ್ಯಕಾವ್ಯ ಅಥವಾ ನಾಟಕ. ಅದು The Third voice of the poet speaking verse through a character ಅಂದರೆ ಕವಿ ಇಲ್ಲಿಯೂ ಮರೆಯಲ್ಲಿ ನಿಂತು ತಮ್ಮ ಅಂಬೋಣವನ್ನು ಪಾತ್ರದ ಮೂಲಕ ಆಡಿಸುತ್ತಾನೆ.

ಹೀಗೆ ಕೇವಲ ಕವಿಯಾಗಿ ಈ ಮೂರು ವಾಣಿಗಳಲ್ಲಿ ಮಾತನಾಡಿದ್ದಾನೆ ನಮ್ಮ ಕವಿ ವಸಂತಕುಮಾರ. ಅವನ ಮುನ್ನೂರು ನಾನ್ನೂರು ಭಾವಗೀತಗಳು 'ಸಮಗ್ರಕಾವ್ಯ' ರೂಪದಲ್ಲಿ ಪ್ರಕಟಗೊಂಡಿರುವುದನ್ನು ಈಗಾಗಲೇ ಅವಲೋಕಿಸಿದ್ದೇವೆ.

ಆದರೆ ಮಹಾಕಾವ್ಯ ರಚನೆ ಅಲ್ಲಿಲ್ಲ, ಎಲ್ಲೂ ಇಲ್ಲ. ಕೇವಲ ಒಂದೆರಡು ಖಂಡಕಾವ್ಯ (Fragments)ದಂತಹ ನೀಳ್ಗವನಗಳನ್ನು ಬಿಟ್ಟರೆ ಮಹಾಕಾವ್ಯದ ಸುಳಿವೇ ಇಲ್ಲ ನಿಜ, ಆದರೆ ಅವನ ಪ್ರತಿಯೊಂದು ಭಾವಗೀತವೂ ಒಂದೊಂದು ಮಹಾಕಾವ್ಯವೆ ! ಈ ಮಾತನ್ನು ಕನ್ನಡದ ವರ ಕವಿ ಬೇಂದ್ರೆಯವರೇ ಅವರನ್ನು ಏಕೆ ನೀವು ಮಹಾಕಾವ್ಯ ಬರೆಯಲಿಲ್ಲ ? ಎಂದು ಕೇಳಿದ್ದಕ್ಕೆ ಹೇಳಿದ್ದರು. ಅದನ್ನೇ ನಮ್ಮ ಕವಿಪುಂಗವನ ಕೃತಿ ರಚನೆಗಳಿಗೂ ಅನ್ವಯಿಸಿ ಹೇಳಿದರೆ ತತ್ವಗಳು ಮೂರೆಯ ವಾಣಿ ಅಥವಾ ಅವನು ಅಭಿವ್ಯಕ್ತಿಸಿದ ವಾಣಿಗೆ ಹಲಲವು ಹತ್ತೆಂಟು ಮುಖಗಳು. ಅವು ಏಕಾಂಶ ಅನೇಕಾಂಶಗಳು, ಆಡು ನಾಟಕ ಹಾಡು ನಾಟಕ (ಗೀತನಾಟಕ)ಗಳಾಗಿವೆ. ಸುಮಾರು ಮೂವತ್ತೈದು ಹಿರಿ ಕಿರಿಯ ನಾಟಕಗಳು ನಮ್ಮ ಕವಿವರನ ಮೌಲ್ಯಭರಿತ ಕಾಣಿಕೆಗಳಾಗಿವೆ. ಹೆಚ್ಚು ಸಂಖ್ಯೆಯವು ಆಕಾಶವಾಣಿಯ ಪ್ರಸಾರ ನಾಟಕಗಳು. ಇವುಗಳಲ್ಲಿ ಪೌರಾಣಿಕ, ಐತಿಹಾಸಿಕ ಮತ್ತು ಸಾಮಾಜಿಕ ವಸ್ತುವುಳ್ಳವುಗಳೂ ಇವೆ.

ಇದೇ ರೀತಿ ಸಾಹಿತ್ಯದ ವಿವಿಧ ಪ್ರಕಾರಗಳಾದ ಕತೆ, ಕಾದಂಬರಿ, ಪ್ರವಾಸ ಕಥನ, ಗ್ರಂಥಸಮಪಾದನೆ, ವಿಚಾರ 'ಸಾಹಿತ್ಯ, ವಿಮರ್ಶಾ ಸಾಹಿತ್ಯ ಮೊದಲಾದ ಕೃಷಿ ಮಾಡಿದ್ದಾನೆ. ಕನ್ನಡ ನುಡಿಯ ಶ್ರೀಮಂತಿಕೆಗೆ ಕಾರಣನಗಿದ್ದಾನೆ.

ಹೀಗೊಬ್ಬ ಧರ್ಮರಾಯ
ಅವನು ನುಡಿ ಶಿಲ್ಪಿ
ಅವನೇ ನಮ್ಮ ಟಿ.ಎನ್. ಮಹದೇವಯ್ಯ

* * * *

ಕಡೆಯದಾಗಿ ಶ್ರದ್ಧಾಂಜಲಿ !

ಸಾಮಾನ್ಯವಾಗಿ ಸಾಹಿತಿಗಳು ಆತ್ಮವಂಚಕರು. ಅವರು ತಮ್ಮ ಬರೆಹದಂತೆ ಬದುಕಿದವರೇ ಅಲ್ಲ. ಕಾವ್ಯವಿರುವುದು ಓದುವುದಕ್ಕೆ ಕೇಳುವುದಕ್ಕೆ ಬದುವುದಕ್ಕಲ್ಲ. ಆದ್ದರಿಂದ ಬದುಕು ತಮಗೆ, ಬರೆಹ ಪರರಿಗೆ ಎಂಬ ನೀತಿ ಸಂಹಿತೆ ಉಳ್ಳವರು ಅವರು. ಎಲ್ಲೋ ನೂರಕ್ಕೆ ಒಬ್ಬ ಬದುಕು ಬರೆಹ ಒಂದಾಗಿ ಬಾಳಿದವನು. ಅಂತವರಲ್ಲಿ ನಮ್ಮ ಕವಿ ನಂದಕಿಶೋರ ಒಬ್ಬ. ಈತ ಅನ್ಯರಂಥಲ್ಲ. ಹೊನ್ನು, ಹೆಣ್ಣು, ಕೀರ್ತಿ, ಪ್ರಿ, ಪ್ರಶಸ್ತಿಗಳಿಗೆ ಬಾಯಿ ಬಾಯಿ ಬುಡುವುದರಿಂದ ದೂರವಿರವವನು, ಬರಹಕ್ಕಿಂತ ಬದುಕು ದೊಡ್ಡದು. ಎಲ್ಲ ಕಲೆಗಳ ಕಲೆ ಜೀವನ ಕಲೆ ಎಂದು ಭಾವಿಸಿದ್ದವನು. ಅದರಂತೆ ಬದುಕಿದವನು ಕೂಡ, ಹಲವರಂತೆ ಬಾಯಲ್ಲಿ ಪುರಾಣ ಹೇಳಿ, ಬದನೆಕಾಯಿ ತಿನ್ನುವ ಸ್ವಭಾವದವನಲ್ಲ. ಯಾರೇ ಆಗಲಿ ಬರೆಹದಲ್ಲಿ ಬದುಕಿದಲ್ಲಿ ಸಾಲದು, ಬಾಳಿನಲ್ಲಿ ಶುದ್ಧವಾಗಿ, ಸತ್ಯವಗಿ ಧರ್ಮದಿಂದ ಬದುಕು ಮಾಡುವುದು ಮುಖ್ಯ. ಈ ಭಾವನೆಯನ್ನು ಬೆಳೆಸಿಕೊಂಡಿದ್ದವನು, ಅದರಂತೆ ಆದಷ್ಟೂ ಪ್ರಾಮಾಣಿಕವಾಗಿ ಬದುಕಿದವನು.

ಹುಟ್ಟುವಾಗ ಬಡತನವನ್ನೇ ಬಳುವಳಿಯಾಗಿ ಪಡೆದುಕೊಂಡು ಬಂದ ನಮ್ಮ ನಂದಕಿಶೋರ ಬವಣೆಯ ಬಾಳನ್ನೇ ಹಾಸಿಕೊಂಡ, ಅದನ್ನೇ ಹೊದೆದುಕೊಂಡ. ಆದರೆ ಬಡತನವಿತ್ತೆಂದು ತನ್ನ ವ್ಯಕ್ತಿತ್ವವನ್ನು ಮಾರಿಕೊಂಡವನಲ್ಲ, ಎಂತಹ ದುರ್ಭರ ಸನ್ನಿವೇಶದಲ್ಲೂ ತನ್ನನ್ನು ತಾನು ಮೆರೆದವನು, ಹೇಳುತ್ತಾನೆ.

'ಅನಂತ ಯಾತನೆಗಳಿವೆ. ಗುರಿಯಾಗಿ ಬಡತನದಲ್ಲಿ ಬೆಳೆದು ಬಂದರೂ ಒಂದು ಶಕ್ತಿ ಮಾತ್ರ ಸಾಯಲಿಲ್ಲ. ಮನುಷ್ಯನಲ್ಲಿರುವ ಸ್ವಾತಂತ್ರ್ಯಾಪೇಕ್ಷೆ, ಸ್ವಾಭಿಮಾನ, ಆತ್ಮಮರ್ಯಾದೆಗಳು ಬಡತನದಲ್ಲಿ ನ್ಯಾಯವಾಗಿ ನಾಶವಾಗಬೇಕು. ಆದರೆ ಅವು ನನ್ನ ಜೀವನದಲ್ಲಿ ಹೆಚ್ಚು ಬೆಳೆದವು. ನನ್ನ ಪ್ರಾಣ ಕೊಟ್ಟೇನು, ನನ್ನ ಮನಸ್ಸಿಗೆ ತಾಕುವಂತಹ ಚಕಾರ ಶಬ್ದವನ್ನು ನಾನು ಎಂದೂ ಸಹಿಸಲಾರೆ. ಅದನ್ನು ಕೆಲವರು ದುರಹಂಕಾರವೆಂದು ಕರೆಯಬಹುದು. ಆದರೆ ಅನೇಕ ನನ್ನ ಹಿರಿಯರು ಅದಕ್ಕೆ ತಕ್ಕ ಮರ್ಯಾದೆ ಕೊಟ್ಟಿರುವರು. ಅದರ ಬಲದಿಂದಲೇ ನಾನು ತಕ್ಕಷ್ಟು ಹೆಸರು ಸಂಪಾದಿಸಿದೆನು. ಅನೇಕರಿಗೆ ಪರಿಚಿತನಾದೆನು. ನಾನು ಬಡವನಾಗಿದ್ದರೂ ನನ್ನ ಹೆಸರಿಗೆ ಎಂದೂ ಬಡತನ ಬರಲಿಲ್ಲ. ನಾನು ಬಡವನಾದರೂ ನನ್ನ ಮನಸ್ಸಿಗೆ ಎಂದೂ ಬಡತನ ಬರಲಿಲ್ಲ. ಭಾವನೆಗಳಿಗೆ ಬಡತನ ಬರಲಿಲ್ಲ. ನನ್ನನ್ನು ಬಡವನೆಂದು ಸಮಾಜವು ದೂರ ಅಟ್ಟುವಷ್ಟು ದೈವವನ್ನು ಎಂದೂ ತಾಳಿಲ್ಲ !. . .

ನಂಬಿದ ದೇವರು ಕೈಬಿಡನೆಂಬ ಒಂದೇ ಧೃಢಚಿತ್ತದಿಂದ ದೇವರನ್ನು ಪೂಜಿಸಿದೆನಾದ ಕಾರಣ ನಾನು ನಿರಾಶನಾಗಿ ಕೈಬಿಟ್ಟಾಗಲೆಲ್ಲ ಅವನೇ ಕೈಹಿಡಿದು ಸಲಹಿರುವನು. ಇಂದಿನವರೆಗೂ ಅವನಿಂದಲೇ ಜೀವನವು ಸಾಗಿಬಂದಿದೆ. ಅವನ ವಾಣಿಯೇ ನನಗೆ ಶಕ್ತಿ ಕೊಟ್ಟಿದೆ. ಎಂದೂ ಅವನು ನನ್ನ ಕೈಬಿಟ್ಟಿಲ್ಲ.'

ಇಂತಹ ಶುಚಿ ಜೀವನದ ದೈವಪ್ರೇಮ, ಸ್ವಾಭಿಮಾನಿ, ಸತ್ಯಸಂಧಿ, ನಿಷ್ಠಾವಂತನ ಬಾಳು ನಿಜಕ್ಕೂ ಆದರ್ಶ. ಇವನ ಬರೆಹಕ್ಕೆ ಇವನ ಬದುಕು ಹತ್ತಿರವಿರುವುದೇ ವೈಶಿಷ್ಟ್ಯ. ಬರೆಹದಲ್ಲಿ ಇವನು ಕಾಲ ಕಾಲಕ್ಕೆ ಬೇಳೆದಿಲ್ಲ ಎಂಬ ಆಕ್ಷೇಪಣೆ ಇರಬಹುದು, ಆದರೆ ಕಾಲಕಾಲಕ್ಕೂ ತಾನೂ ಪರಿಶುದ್ಧ ಬಾಳಿನಲ್ಲಿ ಇವನು ಖಂಡಿತ ಬೆಳೆದಿದ್ದಾನೆ. ಇವನು ಕವಿಯಾದ ಋಷಿಯಲ್ಲ, ಋಷಿಯಾದ ಕವಿ ! ಈ ಕವಿಗೆ ಸಮಾಜ ಕೊಟ್ಟಿದ್ದೇನು ? ಅವಜ್ಞತೆ, ತಿರಸ್ಕಾರ, ಹೀಗಾಗಿ ಇವನು ಅಜ್ಞಾತನಾಗಿಯೇ ಈವರೆಗೆ ಉಳಿಯಬೇಕಾಯಿತು. ಸಾಮಾನ್ಯವಾಗಿ ಬದುಕಿದ್ದಾಗ ವ್ಯಕ್ತಿಯನ್ನು ಸರಿಯಾಗಿ ಗುರುತಿಸುವುದಿಲ್ಲ. ಈ ಸಮಾಜ ಸತ್ತ ಮೇಲೆ ಸಾಕಷ್ಟು ಹೊಗಳುತ್ತದೆ. ಬದುಕಿನುದ್ದಕ್ಕೂ ಅವನು ತುಳಿದದ್ದು ಮುಳ್ಳು. ಬದುಕಾದ ಮೇಲೆ ಮುಡಿದದ್ದು ಹೂವು. ಶವಕ್ಕೆ ಶೃಂಗಾರ ಮಾಡುವುದು ಈ ಸಮಾಜಕ್ಕೆ ಸಹಜಗುಣ. ಇದನ್ನರಿತೇ ಮಿತ್ರ 'ಸುಜನಾ' ಹೀಗೆ ಹೇಳಿದ್ದಾರೆ.

ಮಳೆಯ ನೀರೆಲ್ಲ ಹೊಳೆಯಾಗಿಹರಿಯುವುದಿಲ್ಲ.ಹರಿಯುವ ಹೊಳೆಗಳೆಲ್ಲ ಲೋಕದ ಕಣ್ಣಿಗೆ ಕಾಣುವುದು ಇಲ್ಲ. ಕಂಡ ನದಿಗಳೆಲ್ಲ ದೊಡ್ಡವಲ್ಲ. ಕಂಡ ನದಿಗಳಷ್ಟೇ ನದಿಗಳಲ್ಲ. ಈಗ ದಿವಂಗತರಾಗಿರುವ ಶ್ರೀ ಟಿ.ಎನ್.ಮಹದೇವಯ್ಯನವರು ಕನ್ನಡ ಕವಿತಾ ಪ್ರಪಂಚಕ್ಕೆ ಕಾಣಬೇಕಾದ ಕಾಲದಲ್ಲಿ ಕಾಣಲಿಲ್ಲ. ಕಾಣದಂತೆ ಹರಿದು ಕಣ್ಮರೆಯಾದ ಅವರು ಮುನ್ನೂರಕ್ಕು ಮಿರಿದ ಕವನಗಳನ್ನು ೧೯೩೦–೭೦ರ ಅವಧಿಯಲ್ಲಿ ಬರೆದರು. ದುರದೃಷ್ಟವೆಂದರೆ ಅವರ ಕವಿತೆಗಳು ಅವರ ಜೀವಿತ ಕಾಲದಲ್ಲಿ ಎಲ್ಲವೂ ಅಚ್ಚಾಗಲಿಲ್ಲ. ಅಚ್ಚಾಗಿದ್ದರೂ ಎಲ್ಲೋ ಚೆದರಿದಂತೆ ಕೆಲವು. ಒಂದು ವೇಳೆ ಅವು ಆಯಾ ಕಾಲದಲ್ಲೇ ಪ್ರಕಟವಾಗಿ ಸರಿಯಾದ ಸಹೃದಯರ ಗಮನ ಪಡೆದಿದ್ದರೆ ಕವಿಗೆ ಹಿಗ್ಗಾಗುತ್ತಿತ್ತು. ಜನಕ್ಕೆ ಸದ್ಭಾವ ದೊರೆಯುತ್ತಿತ್ತು ಎಂಬುದರ ಜೊತೆಗೆ ಕವಿಯಾಗಿಯೆ ಅವರಲ್ಲಿ ಮತ್ತೂ ಅತಿಶಯ ಬೆಳವಣಿಗೆಯನ್ನು ಕಾಣಬಹುದಿತ್ತು. ಪ್ರಕಟಣಾ ಕಾತರನಲ್ಲದ ಅತಿಶಯ ಸಂಯಮದ ಈ ಕವಿ ತುಂಬಾ ಸಂಕೋಚ ಸ್ವಭಾವದವರಾಗಿದ್ದರೆಂಬಂತೆ ತೋರುತ್ತದೆ. ಅದರಿಂದ ಅಭಯತ್ರ ನಷ್ಟವಾಯಿತು. ಅವರೇನೂ ಅತ್ಮತೃಪ್ತಿಗಾಗಿಯಷ್ಟೇ ಬರೆದುಕೊಂಡು ವಿರಮಿಸಿದರು. ನಾವು ಅವನ್ನು ಈಗಲಾದರೂ ಪ್ರಕಟಿಸಿ ಓದಿ ಅಮೋದಗೊಳ್ಳುವ ಅಗತ್ಯವಿದೆ.'

ಈ ಸಹೃದಯಾಶಯವನ್ನು ಕನ್ನಡಿಗರು ಈಡೇರಿಸುವ ಜವಾಬ್ದಾರಿ ಇದೆ. ಈ ಕಾರ್ಯ ಸಾಕಷ್ಟು ನಡೆದಿರುವ ಈ ಶುಭ ಸಂದರ್ಭದಲ್ಲಿ ನನ್ನದೊಂದು ಅಳುಕೂ ಇದೆ. ಮೊದಲೇ ನಿವೇದಿಸಿಕೊಂಡಂತೆ ಎಲ್ಲ ಬದುಕಿದ್ದಾಗ ಮುಳ್ಳಿನಲ್ಲಿ ಚುಚ್ಚಿ, ಬದುಕಾದ ಮೇಲೆ ಎಲ್ಲಿ ಹೂವನ್ನು ಮುಡಿಸುತ್ತಿದ್ದೇವೊ ಎಂದು. ಆದರೂ ಅವನ ಹಾಡಿನ ಮೂಲಕವೇ ಈ ರಚನೆಗೆ ಭರತವಾಕ್ಯ ಹೇಳೋಣ.

**ನಾನೊಬ್ಬ ಕವಿಯು**
**ಕಡು ಬಡಕವಿ !**
**ನಾನಿಲ್ಲೆ ಇರುವಾಗ**
**ತುತ್ತು ಕವಳಕೆ ಕೊರಗಿ**
**ಹೊಟ್ಟೆ ಹೊಟ್ಟೇ ಎನುವಾಗ**
**ತೆರದೊಡಲ ತೋರ್ದಾಗ**
**ಒಂದು ಹಿಡಿ ಮಣ್ಣು**
**ಹಾಕಿದಿರಿ ನೀವು !**
**ಹೊಗಳದಿದ್ದರು ಸಾಕು**
**ಬೊಗಳಿಕೆಯು ಇರಬೇಕು**
**ಬೊಗಳಿ ಬೈದರು ಚಿತ್ತ**
**ನಾ ಬರೆದೆ ಬ್ದೆ !**
**ಬಿಳಿ ಹಾಳೆ ಕರಿಮಸಿಯು**
**ಹಾಳೆ ಹಾಳೆಗಳು !**
**ನಾನು ಸತ್ತು ಶವವಾಗಿ**
**ಹಿಡಿಮಣ್ಣು ಕೆಳಗುರಳಿ**

ಎದೆಯ ಮೇಲೆಳೆದಾಗ
ಕಲ್ಲು ಚಪ್ಪಡಿ ಹಾಯ್ಸಿ
ಮಸಣದಂಚನು ಬಿಟ್ಟು
ಮರಳುವಾಗ
ಕೈತುಂಬ ಚೆಲ್ಲಿದರೋ
ನನ್ನೆದೆಯ ಮೇಲೆಲ್ಲ
ಹಿಡಿ ಹೂವು ಹೊನ್ನು !
ಹೀಗೊಬ್ಬ ಧರ್ಮರಾಯ
ಅವನುಡಿ ಶಿಲ್ಪಿಯಯ್ಯಾ
ಅವನೇ ನಮ್ಮ ಟಿ.ಎನ್. ಮಹದೇವಯ್ಯ !

* * * *

# ಬಲ್ಲವರ ಒಡನಾಟ (೧೯೯೧)

# ಮಲೆನಾಡಿನ ಕೋಗಿಲೆಯ ! ಬಯಲು ನಾಡ ಮಲ್ಲಿಗೆಯೆ !!*

---

**ಮಲೆನಾಡಿನ ಕೋಗಿಲೆ****

'ನಿನ್ನೆ ಪತ್ರಿಕೆಯಲ್ಲಿ ಸುದ್ದಿ ಓದಿದೆ. ಇವೊತ್ತು ನೀವು ಬಂದಿರಿ, ಆದರೆ. . .'

ನನ್ನ ಮತ್ತು ಗೆಳೆಯ ನಾಗೇಂದ್ರಪ್ಪನ ಎದೆಗಳು ಡವಡವನೆ ಹೊಡೆದುಕೊಳ್ಳತೊಡಗಿದವು. ಮಧ್ಯೆ ಬಾಯಿ ಹಾಕಿದೆ.

'ಅದೂ. . .ಸ್ವಾಗತ ಸಮಿತಿಯವರ ತೀರ್ಮಾನ ಸಾರ್ ತಾವು. . .' ಸಮಿತಿಯ ತೀರ್ಮಾನವಿರಲಿ ನಿಮ್ಮ ತೀರ್ಮಾನವೇ ಇರಲಿ. ಅದಲ್ಲ ನಾನು ಹೇಳಿದ್ದು. . .ಷಷ್ಟಬ್ದಿ. . .'

'ಹೌದು ಸಾರ್. . .ನಿಮ್ಮ ಷಷ್ಟಬ್ದಿ ನಿಮ್ಮ ತವರಿನಲ್ಲಿ ಮೊದಲಾಗಲಿ ಅನ್ನೋದೇ ಎಲ್ಲರ ಅಪೇಕ್ಷೆ. ಅದಕ್ಕಾಗಿ. . .'

'ಅದಲ್ಲರೀ. . .ನೀವು. . .'

'ಅಂದ್ರೆ ನಿಮ್ಮ ಅನುಮತಿ ಪಡೆಯದೆ ಪತ್ರಿಕಾಗೋಷ್ಠಿ ಕರೆದು ತಿಳಿಸಿದ್ದೆ ಸಾರ್ !'

'ಅದೂ ಅಲ್ಲಾರೀ. . .'

ನನ್ನೆದೆ ಧಸಕ್ಕೆಂದಿತು ! ಓಹೋ ಇವರು ಒಪ್ಪುವ ಹಾಗೆ ಕಾಣೊಲ್ಲ ಅನ್ನಿಸಿತು. ಅವರಿಂದ ಎಲ್ಲಿ ನಕಾರಾತ್ಮಕ ಉತ್ತರ ಬರುತ್ತೋ ಅಂತ ಹೆದರಿ ಹೇಳಿಬಿಟ್ಟೆ. 'ಸಾರ್. . .ನಾವೇನೇ ತಪ್ಪು ಮಾಡಿದ್ದರೂ ನಾವು ನಿಮ್ಮ ಶಿಷ್ಯರು. ಶಿಷ್ಯರ ದೋಷ ಕ್ಷಮಾರ್ಹ.'

'ಹಾಗಲ್ಲಪ್ಪಾ. . .'

'ಏನೂ ಹೇಳಬೇಡಿ ಸಾರ್, ದಯವಿಟ್ಟು ನಮ್ಮ ಭಾವನೆಗಳಿಗೆ ಬೆಂಕಿ ಕೊಡಬೇಡಿರಿ. ಇಡೀ ಶಿವಮೊಗ್ಗೆಯೆ ನಿಮ್ಮ ಆಗಮನವನ್ನು ನಿರೀಕ್ಷಿಸ್ತಾ ಇದೆ.'

'ನೀವು ಬಹಳ ಮುಂದುವರಿದಿರಿ. ಇಲ್ಲಿ ಕೇಳಿ ನಾನು ಬರೋಲ್ಲ ಅಂತಾ ಹೇಳಿಲ್ಲ. ಬರ್ತೀನಿ ಆಯ್ತೆ ? ಮರುಳಯ್ಯನವರಿಗೆ ನನ್ನ ಪರವಾಗಿ ನೀವೇ ಭರವಸೆ ಕೊಡಿ ನಾಗೇಂದ್ರಪ್ಪ.' ಅಂದರು. ನನಗೆ ಸ್ವರ್ಗ ಒಂದು ಗೇಣಲ್ಲಿತ್ತು.

ಎಲ್ಲರೂ ನಕ್ಕೆವು.

ನಮಗೆ ಹಾಲು ಅನ್ನ ಉಂಡಷ್ಟು ತೃಪ್ತಿ ಆಯಿತು ಆ ಮಾತು ಕೇಳಿ. ಕಡೆಗೂ ಕುವೆಂಪು ತಮ್ಮ ಷಷ್ಟಬ್ದಿಗೆ ಒಪ್ಪಿದರಲ್ಲಾ ಅನ್ನೋ ಆನಂದ !

---

*ಶ್ರೀ ಕುವೆಂಪು ಮತ್ತು ದ.ರಾ. ಬೇಂದ್ರೆ, ಕವಿದ್ವಯರನ್ನು ಆಗ–ಈಗ ಭೇಟಿ ಮಾಡಿದಾಗ

**ಶ್ರೀ ಕುವೆಂಪು

'ನಾನು ಹೇಳಬೇಕೂ ಅಂತಾ ಇದ್ದಿದ್ದು ಇದು. ನಿನ್ನೆಯ ಪತ್ರಿಕೆ ತೋರಿಸಿ ಓದಿದರು. 'ಶ್ರೀ ಕುವೆಂಪುರವರ ಷಷ್ಟಬ್ದಿ ಸಮಾರಂಭವನ್ನು ೨೯ ಡಿಸೆಂಬರ್ ೧೯೬೪ರಂದು ಶಿವಮೊಗ್ಗೆಯಲ್ಲಿ ನಡೆಸಲು ಸಮಿತಿ ನಿರ್ಧರಿಸಿದೆ. ಪುರಸಭಾಧ್ಯಕ್ಷ ರಾಜ ಗೋಪಾಲ್ ಗಿರಿಮಾಜಿ ಅಧ್ಯಕ್ಷರು, ಡಿ.ಕೆ. ಸುಬ್ಬಣ್ಣ, ಉಪಾಧ್ಯಕ್ಷರು, ರತ್ನಾಕರ್ ಕೋಶಾಧ್ಯಕ್ಷರು, ಸಾ.ಶಿ. ಮರುಳಯ್ಯ, ಕೆ. ನಾಗೇಂದ್ರಪ್ಪ – ಕಾರ್ಯದರ್ಶಿಗಳು ಎಲ್ಲಾ ಸರಿಯೆ. ಆದರೆ ಅತಿಥಿಗಳನ್ನು ಮೆರವಣಿಗೆಯ ಮೂಲಕ ಕರೆತರಲಾಗುವುದು. ಅದ್ದೂರಿಯ ಮೆರವಣಿಗೆಯಲ್ಲಿ ಭಾಗಿಗಳಾಗಿ. . .! ಏನಿದೆಲ್ಲ. . .ಇದ್ಯಾವುದೂ ನನಗೆ ಬೇಡ. ನೀವು ನನ್ನ ಮೆರವಣಿಗೆ ಮಾಡ್ತೀವಿ ಅಂತಾ ಅಂದ್ರೆ ನಾನೂ ಬರೋದೇ ಇಲ್ಲ. . .ಅಷ್ಟೇ ಅಲ್ಲ. ನನ್ನ ಕೃತಿ ಮೆರವಣಿಗೇನೂ ಬೇಡ!'

'ಏಕೆ ಸಾರ್, ನೀವು ಒಪ್ಪದಿದ್ದರೆ ಹೋಗಲಿ, ಶ್ರೀ ರಾಮಾಯಣ ದರ್ಶನಂ ಮಹಾಕಾವ್ಯದ ಮೆರವಣಿಗೆ?'

'ನೋಡೀ, ಕೃತಿ ಆನೆ ಮೇಲೆ ಅಂಬಾರಿ ಹತ್ತಿ ಕೂತರೆ, ಜನರಿಗೂ ಕಾವ್ಯಕ್ಕೂ ಏನೇನೂ ಸಂಬಂಧ ಇಲ್ಲ ಅಂತಾ ಆಗುತ್ತೆ! ಕಾವ್ಯ ಹತ್ತಿ ಮೆರೆಯಬೇಕಾದ್ದು ಆನೆ ಮೇಲಲ್ಲ, ಸಹೃದಯರ ಹೃದಯ ವೇದಿಕೆಯ ಮೇಲೆ !'

'ಒಳ್ಳೇದು ಸಾರ್, ಮೆರವಣಿಗೆ ಮಾತೆತ್ತಿದರೆ ತಲೆ ದಂಡ !. . .ಈಗ ನಾವು ಮುಂದುವರಿಯಬಹುದು ಅಲ್ಲವೇ?'

'ಆಗಲಿ!'

ಶ್ರೀ ಕುವೆಂಪು ಒಪ್ಪಿದ್ದು ದೇವರು ವರಕೊಟ್ಟ ಹಾಗೆ ಆಯಿತು. ಗೆಳೆಯ ನಾಗೇಂದ್ರಪ್ಪ ನಾನು ಖುಷಿ ಆದೆವು. ಕುವೆಂಪು ಅದೂ ಇದೂ ಬಹಳ ಹೊತ್ತು ಮಾತಾಡಿದರು. ಅವರಿಗೂ ಸಂತೋಷ ಆಯಿತು. ನಮಸ್ಕಾರ ಹೇಳಿ ಹೊರಟೆವು.

'ಆಂ. . .ನಾನೂ ಬರ್ತೇನೆ!'

'ಬೇಡಿ ಸರ್. . .ಮೆಟ್ಟಿಲು ಹತ್ತೋದು ಇಳಿಯೋದೊ. . .'

'ಚಿಂತೆಯಿಲ್ಲ. . .ನಿಮ್ಮನ್ನು ಕಳಿಸೋ ನೆಪದಲ್ಲಿ ಕಾಂಪೌಂಡಿನಲ್ಲಿ ಅಡ್ಡಾಡ್ತೇನೆ. ಹೂ ಗಿಡಗಳನ್ನು ಸ್ವಲ್ಪ ಮಾತಾಡಿಸಬೇಕು. ಹೆಹ್ಹೆಹ್ಹೆ!' ಕುವೆಂಪು ನಕ್ಕರು.

ನಾವೂ ನಕ್ಕೆವು. . .ಹೂಗಿಡಗಳು ನಕ್ಕವು.

* * * *

ಶ್ರೀ ಕುವೆಂಪು ಷಷ್ಟಬ್ದಿಯ ಸಮಾರಂಭ ಇಡೀ ಶೀವಮೊಗ್ಗೆಗೆ ಒಂದು ಹಬ್ಬದ ವಾತಾವರಣ ತಂದಿತ್ತು. ನ್ಯಾಷನಲ್ ಕಾಲೇಜಿನ ಆವರಣದಲ್ಲಿ ಅವರಿಗೆ ಸನ್ಮಾನ ಇತ್ಯಾದಿ. ಸುಮಾರು ಇಪ್ಪತ್ತು ಸಹಸ್ರ ಜನ ಅಂದು ಅಲ್ಲಿ ಕಿಕಿರಿದಿತ್ತು. ವರಕವಿ ಬೇಂ ದ್ರೆಯವರು ಅಂದಿನ ಮುಖ್ಯ ಅತಿಥಿಗಳು. ನನ್ನ ಸ್ವಾಗತ ಭಾಷಣ ಎಲ್ಲರಿಗೂ ಖುಷಿ ಕೊಟ್ಟಿತು. ಹೇಳಿದೆ :

ಕನ್ನಡ ಸಾಹಿತ್ಯಾಕಾಶದ ಎರಡು ಸೂರ್ಯರನ್ನು ನಾವು ಏಕತ್ರ ಏಕಕಾಲದಲ್ಲಿ ಕಾಣುತ್ತಿದ್ದೇವೆ. ಒಂದು 'ಮೂಡಲ ಮನೆಯ ಮುತ್ತಿನ ನೀರಿನ ಎರಕವ ಹೊಯ್ದಾ ಬಾಗಿಲ ತೆರದೂ ಬೆಳಕೂ ಹರಿದು' ಬಂತು. ಅದು"ಆ ಅದೂ ತುಂಬಿ ಈ ಇದೂ ತುಂಬಿ ಯಾವುದು ತುಂಬಿ ಬರದೆ, ತುಂಬಿ ಕಳೆದರೂ ತುಂಬಿ ಉಳಿದರೂ ತುಂಬಿ ತುಂಬಿ ಬರದೆ, ಹೂ ಹೂವು ತುಂಬಿ ಈಟೀಟು ತುಂಬಿ ದನಿ ಮೀಟು ತುಂಬಿ ಬರದೆ' ಎಂದು ದುಂಬಿ ಬಂಬಲಲ್ಲಿ ಓಂಕಾರದ ಝೇಂಕಾರ ಮಾಡುತ್ತಾ ಬಂತು, 'ಹರನ ಜಡೆಯಿಂದ ಹರಿಯ ಅಡಿಯಿಂದ ಋಷಿಯ ತೊಡೆಯಿಂದ' ಬುಡಬುಡನೆ ಉರುಳಿ ಬಂತು; ಮತ್ತೆ ಸುರಸ್ವಪ್ನ ವಿದ್ದ ಆಕಾಶದುದ್ದ ಉದ್ಬುದ್ಧ ನೀರಾಗಿ ಜೋಗದ ಜಲಪತದ ನಿರ್ಘೋಷಗೈಯುತ್ತ ಬಂತು ! ಮಲ್ಲಿಗೆಯಂತೆ ಘಮ ಘಮ ಘಮಾಡಸ್ತಾ, ಅನಂತರ 'ಅನ್ನಾವತಾರ' ಆಗಿ, ಕನ್ನಡದ ಕಂದಮ್ಮ ಕಟ್ಟಿರುವ ತೊಟ್ಟಿಲು ತೂಗುತ್ತಾ ಜೋ ಜೋ ಜೋಗುಳ ಹಾಡುತ್ತಾ ಬಂತು ! ಅದು ವಿಶ್ವಮಾತೆ, ಭೂಮಿತಾಯಿ, ಭರತಮತೆ, ಕನ್ನಡದ ತಾಯಿ ಮತ್ತು ಹಡೆದವ್ವ ಅಂಬಿಕೆ ಈ ಐವರು ಐದೆಯರ ಸುಪುತ್ರನಾಗಿ ಬಂದ ದತ್ತಾತ್ರೇಯ ರಾಮಚಂದ್ರ ಬೇಂದ್ರೆ ಎಂಬ ಅಭಿದಾನದ ಭೂತಿ ಅಂಬಿಕಾತನಯದತ್ತನೆಂದು ತಾನಾದ ಶ್ರಿ ಮದ್ವಿಭೂತಿ !

ಎರಡನೆಯ ಸೂರ್ಯನನ್ನು ಕಾಣುವುದು ಅಷ್ಟು ಸುಲಭ ಅಲ್ಲ. ಅದು 'ವಿಕಸಿತ ಸಹಸ್ರದಲ ಪದ್ಮಪೀಠದ ಮೇಲೆ ಮಂಡಿ ಸಿಹ ಧವಳಿಮಾಧ್ಯಾನಸ್ತಿಮಿತ ಮೂರ್ತಿ!' 'ಕವಿ ವಿಭೂತಿಗೆ ನಮೋ ಕೃತಿ ವಿಭೂತಿಗೆ ನಮೋ' ಎಂದು. ವಿಭೂತಿ ಇದ್ದೆಡೆಗೆಲ್ಲ

ಮಣಿದು, ಬೆಳಕು ಬಂದೆಡೆಗೆಲ್ಲಾ ತನ್ನ ಎದೆಯ ಕವಾಟ ತೆರೆದು ತಾನೊಂದು ತೇಜಃಪುಂಜವಾಗಿ ಬೆಳಗಿದ ಮಹಾ ಚೇತನ! ಅದು ಕುಪ್ಪಳ್ಳಿ ವೇಂಕಟಾರ್ಯಂಗೆ ಮೇಣ್ ಸೀತಮ್ಮನೆಂಬಭಿಧಾನದಾ ಮಾತೃದೇವತೆಗೆ ಮಗನಾಗಿ ಹುಟ್ಟಿದ ಶ್ರೀ ಶಿವಾನಂದರ ಕರಕಮಲ ಸಂಜಾತ ಶಿಶು, ಭವತಾರಿಣಿಯ ಭವ್ಯಸ್ವರೂಪಿಯಾದ ಹೇಮಾ ಎಂಬ ದೇವತೆಯ ಪ್ರೇಮಾರಾಧಕ ಶ್ರೀ ಕುವೆಂಪು!

ಹೀಗೆ ಸಾಗಿತ್ತು ನನ್ನ ಅಲಂಕಾರಿಕ ಭಾಷೆಯ ಭಾಷಣ ! ಮಾರನೆಯ ದಿನ ಬೆಳಿಗ್ಗೆ ಶ್ರೀ ರತ್ನಾಕರಗೌಡರ ಮನೆಯಲ್ಲಿ ಕವಿ ದ್ವಯರ ಭೇಟಿ ನಮಗೂ ಆಹ್ವಾನ. ಉಪಹಾರಕ್ಕೆ ಮೊದಲು ಉಪಚಾರದ ಬುಡಿಗಳು. ಇಬ್ಬರೂ ಹೇಳಿದರು. 'ನಿನ್ನೆಯ ನಿಮ್ಮ ಸ್ವಾಗತ ಭಾಷಣ ಚೆನ್ನಾಗಿತ್ತು' ಎಂದು. 'ಎಲ್ಲ ನಿಮ್ಮ ಆಶೀರ್ವಾದದ ಫಲ' ಎಂದೆ. ಹರ್ಷಿತರಾದರು.

ಅಂದು ಸಂಜೆ ಕುವೆಂಪು ನಾನು ಇಬ್ಬರೂ ಸರ್ಕ್ಯೂಟ್ ಹೌಸ್ ಕಡೆ ರಸ್ತೆಯಲ್ಲಿ ಗಾಳಿ ಸಂಚಾರಕ್ಕೆ ಹೊರಟೆವು. ಆ ರಸ್ತೆ ಈಗ 'ಕುವೆಂಪು ಸತೆ' ಎಂದು ಹೆಸರಿಟ್ಟುಕೊಂಡಿದೆ. ಆ ರಸ್ತೆಯಲ್ಲಿ ಅದು ಇದೂ ಮಾತಾಡ್ತಾ ಪ್ರಕೃತಿ ಗೀತೆಗಳ ಬಳಿಗೆ ಬಂದೆವು ಕುವೆಂಪು ಹೇಳಿದರು : ನಾನೂ ಬರೆದಿರೊ ಪ್ರಕೃತಿ ಗೀತಗಳಲ್ಲೆಲ್ಲ ನನ್ನ Walking ವೇಳೆಯಲ್ಲಿ ಹುಟ್ಟಿಕೊಂಡಂಥವುಗಳು. Walk ಮಾಡ್ತಾ ನಾನೊಬ್ಬನೆ ನನ್ನುಭವವನ್ನು ಮೆಲುಕು ಹಾಕ್ತಾ ಇರ್ತೀನೆ. ಹಸುವೊಂದು ಹುಲ್ಲು ಮೆಲುಕು ಹಾಕಿದ ಹಾಗೆ. ಅದು ಅಲ್ಲಿ ರಸಗೊಳ್ಳುತ್ತೆ. ಮನೆಗೆ ಬಂದ ಕೂಡಲೇ ಬರೀತೇನೆ' ಕೆಲವು ಗೀತಗಳನ್ನು ಕುವೆಂಪು ಹಾಡಿದರು ಕೂಡ. ಅವರ ಕಂಠ ಕಾವ್ಯದಷ್ಟು ಮಧುರ ಅಲ್ಲ' ಆದರೂ ಕೇಳಲು ಅಡ್ಡಿ ಇರಲಿಲ್ಲ. ಕೇಳಿದೆ.

ನಮ್ಮ ಸಂಚಾರ ಹಿಂತಿರುಗಿತು. ನನ್ನ ಕುತೂಹಲವು ಬೇರೆ ಆತಿ 'ಸಾರ್ ಒಂದು ದಿನ ಆನರ್ಸ್ ತರಗತಿಯಲ್ಲಿ ಷೆಲ್ಲಿಯ 'Love Philosophy' ಬಗ್ಗೆ ಚರ್ಚೆ ಮಾಡಿ ನಾನು ಹಾ.ಮಾ. ನಾಯಕರು, ಜಿ. ಎಸ್. ಸಿದ್ಧಲಿಂಗಯ್ಯನವರು ಎಲ್ಲರ ಕೈಯಲ್ಲೂ ಬಯ್ಸಿಕೊಂಡೆ ಅಂದೆ. 'ಏಕೆ?' ಆ ದಿನದ ನಿಮ್ಮ ಮೂಡ್ ಹಾಳು ಮಾಡಿದೆ. ಸುಮಾರು ಎರಡೂ ಎರಡೂವರೆ ಗಂಟೆ ಕಾಲ ವ್ಯರ್ಥ ಮಾಡಿದೆ ಅಂತ. 'ಹಾಗೇನಿಲ್ಲ ವಾದ ಮಾಡಿದಿರಿ ವಿಷಯ ತಿಳಿಯಿತು.' 'ಆದರೆ ಸಂದೇಹ ಹಾಗೆ ಉಳೀತು ಸಾರ್!' 'ಏನು ?' 'ಶೆಲ್ಲಿ ಭೂಮಿ ಆಕಾಶವನ್ನು ಮುತತಿಡುತ್ತೆ. ಹೂವುಗಳು ಒಂದು ಮತ್ತೊಂದನ್ನು ಮುತಿಡುತ್ತೆ ಅಂಥಾ ಪ್ರಕೃತಿ ಚೇತನಗಳ ಪ್ರಣಯ ಬಣ್ಣಿಸ್ತಾ ಏಕ್‌ದಂ ವೈಯಕ್ತಿಕತೆಗಿಳಿದು, 'O dear can all these kisses worth if thou not kiss me' ಅಂತಾನಲ್ಲ ಅವನೆಷ್ಟು ಬೇಗ ಕೀಳು ಮಟ್ಟಕ್ಕೆ ಇಳಿದಾ ಅನ್ನುಸುತ್ತೆ' 'ಹ್ರುಂ. . .ಕುವೆಂಪುರವರಿಗೆ ಸಿಟ್ಟು ಬಂದಾಗ ಹೀಗೆ ಹೂಂಕರಿಸ್ತಾರೆ. ನನಗೆ ಅರ್ಥವಾಯ್ತು. ಗಂಭೀರಗೊಂಡು ಹೇಳಿದರು. 'ನೋಡಿ ಕವನ ಒಂದು ಕಲೆ ಆದರೆ ಕವನಕ್ಕಿಂತ ದೊಡ್ಡ ಕಲೆ ಜೀವನ. ಎಲ್ಲ ಕಲೆಗಳ ಜೀವನ ಕಲೆ ! ಅದರ ಒಳಿತಿಗಾಗಿ, ಪ್ರಕಾಶಕ್ಕಾಗಿ ಇತರ ಕಲೆಗಳಿವೆ ಅನ್ನೋದನ್ನ ಮರೀಬೇಡಿ. ಷೆಲ್ಲಿ ಹೇಳಿದ್ದರಲ್ಲಿ ಎಂತಹ ನೈಜತೆ ಇದೆ, ಸತ್ಯ ಇದೆ ! ಇರಲಿ, ಆ ದಿನ ನಾನೇನು ಹೇಳಿದೆ?'

'ನನ್ನ ಮೊಂಡವಾದ ಕೇಳಿ ಕೇಳಿ ನೀವು ಹೇಳಿದಿರಿ ಸಾರ್. 'ನೋಡಿ, ಕಲ್ಕತ್ತೆಯ ಬೀದಿಯೊಂದರಲ್ಲಿ ಎರಡು ಗಂಡು ಹೆಣ್ಣು ನಾಯಿಗಳು ಕೂಡಿದ್ದನ್ನು ರಾಮಕೃಷ್ಣ ಪರಮಹಂಸರು ಕಂಡು ಅಂದರಂತೆ 'ಸಾಕ್ಷಾತ್ ಶಿವ–ಶಿವೆಯರ ಪ್ರಣಯವನ್ನು ಕಂಡೆ' ಎಂದು. ಆ ಮಹಾತ್ಮರಿಗೆ ಹಾಗೆ, ಉಳಿದ ಜನರಿಗೆ !. . .ಹಾಗೆ ದೃಷ್ಟಿಯಂತೆ ಸೃಷ್ಟಿ ಪುಣ್ಯವಿದ್ದಷ್ಟು ಫಲ' ಅಂದಿರಿ ನಾನು ಖಿನ್ನನಾಗಿ 'ಸಾರ್ ಕ್ಷಮಿಸಿ ತಪ್ಪು ತಿಳಿಯಬಾರದು ಅಂದೆ' ಅದಕ್ಕೆ ನೀವು 'ಮರುಳಯ್ಯ, ನಿಮಗೆ ಮದುವೆ ಆಗಿದೆಯೆ ?' ಅಂತಾ ಕೇಳಿದಿರಿ 'ಇಲ್ಲ' ಅಂದೆ. ಮದುವೆ ಆದಮೇಲೆ ಮಲಗೋ ಮಂಚದ ಮೇಲಿಟ್ಟುಕೊಂಡು ಷೆಲ್ಲಿಯ ಈ ಕವಿತೆ ಓದಿ ಮರೀಬೇಡಿ. 'ನಿಗೊಂದು ಚೆಂದುಟಿಯ ಸವಿಮುತ್ತಿಗೆಂದು ನಾ ಜನ್ಮ ಜನ್ಮಗಳೆತ್ತಿ ಬಯಸಿ ಬಂದೆ' ಅನ್ನೋ ನನ್ನ ಕವನಾನೂ ಓದಿ ಆಗ ನಿಮಗೆ Love Philosophy ಅರ್ಥವಾಗುತ್ತೆ ಅಂದಿರಿ!'

'ಹಾಗಾದರೆ ಈಗ ಮದುವೆ ಆಗಿ ಮಗು ಆಗಿದೆ. ಈ ಕವನಗಳು ಚೆನ್ನಾಗಿ ಅರ್ಥ ಆಗಿರಬೇಕಲ್ಲಾ!' ನಗುತ್ತಾ ಅಂದರು.

ಮೈಸೂರಿಗೆ ಹೋದಾಗಲೆಲ್ಲಾ 'ಉದಯರವಿ' ಯಾತ್ರೆ ಕೈಗೊಳ್ತೇನೆ. ಗುರು ದರ್ಶನ ಪಡೆದು ಬರ್ತೇನೆ.

* * * *

**ಬಯಲುನಾಡ ಮಲ್ಲಿಗೆ***

ಇನ್ನೊಬ್ಬ ಚಂಡಕಿರಣನನ್ನು ನಾನು ಧಾರವಾಡಕ್ಕೆ ಹೋದಾಗಲೆಲ್ಲ ಕಾಣುತ್ತಿದ್ದೆ. ಸಾಧನಕೇರಿಯ ವೇದಿಕೆಯಲ್ಲಿ, ವೇದಿಕೆ ಮನೆಯಲ್ಲಿ ಭೆಟ್ಟಿ ಮಾಡಿದಾಗಲೆಲ್ಲ ಪರಂಗಿಹಣ್ಣು ಹಚ್ಚಿ, ಅದಕ್ಕೆ ಸಕ್ಕರೆ ಬೆರಸಿ ಕೊಡುತ್ತಾ, ತಿನ್ನುಸ್ತಾ ಶಿವಮೊಗ್ಗೆಯ ನನ್ನ ಸ್ವಾಗತ ಭಾಷಣ ನೆನೆಸಿಕೊಳ್ಳೋರು. ಅವರ ಧರ್ಮಪತ್ನಿಯವರು ತೀರಿಕೊಂಡ ಮೇಲೆ ಒಮ್ಮೆ ಹೋದಾಗ 'ಮರುಳಯ್ಯ, ನನ್ನಾಕೆ ಬಿಟ್ಟು ಹೋಗಿದ್ದಾಳೆ ಅಂತಾ ಅನ್ನಿಸೋದೆ ಇಲ್ಲ ನೋಡು. ಅವಳು ಇಲ್ಲೇ ಈ ಮಂಚದ ಮೇಲೆ ಜ್ಯೋತಿಯಾಗಿ ಉರೀತಾ ಇರ್ತಾಳೆ.

ನಾನು ಈ ಮಂಚದ ಬಳಿ ಬಂದು ಕೂತು ಅವಳ ಸ್ಪರ್ಶದ ಹಿತ ಪಡಿತೇನೆ' ಅಂದರು. ಅವರದು ಮರ್ತ್ಯದ ಪ್ರೀತಿಯಾದರೂ ಎಷ್ಟು ಅಮರ, ಅಪೂರ್ವ ಅನ್ನಿಸಿತು.

ಮತ್ತೊಮ್ಮೆ ಹೋದಾಗ ೧೯೫೭ನೇ ಇಸವಿಯಲ್ಲಿ ತುಮಕೂರಿನಲ್ಲಿ ಸಿಕ್ಕಿದ ಒಂದು ರಸ ಘಳಿಗೆಯನ್ನು ಅವರ ನೆನಪಿಗೆ ತಂದೆ. ನಾನು ತುಮಕೂರು ಸಕಾರಿ ಕಾಲೇಜಿನಲ್ಲಿ ಅಧ್ಯಾಪಕನಾಗಿದ್ದಾಗ ನನ್ನ ಮಿತ್ರರ ವಿದ್ಯಾರ್ಥಿಗಳ ಅಪೇಕ್ಷೆಯ ಮೇರೆಗೆ ಬೇಂದ್ರೆಯವರನ್ನು ಕಾಲೇಜಿಗೆ ಕರೆಸಿದೆ. ಧಾರವಾಡಕ್ಕೆ ನಾನೇ ಹೋಗಿ ಆಹ್ವಾನಕೊಟ್ಟು ಬಂದಿದ್ದೆ. ಹಾಗೇ ಆಧುನಿಕ ಕನ್ನಡ ಕಾವ್ಯದ ರತ್ನತ್ರಯರಲ್ಲಿ ಒಬ್ಬರಾದ ಪುತಿನರನ್ನು ಬೆಂಗಳೂರಿಗೆ ಹೋಗಿ ಬೇಡಿಕೊಂಡಿದ್ದೆ. ಇಬ್ಬರೂ ದಯಮಾಡಿಸಿದರು. ಇಬ್ಬರಿಗೂ ತುಮಕೂರಿನಲ್ಲಿ ಪೌರ ಸನ್ಮಾನ. ಮತ್ತೆ ದೇವರಾಯನ ದುರ್ಗಕ್ಕೆ ಭೇಟಿ. ಮೂರು ದಿವಸಗಳು ಊರಲ್ಲಿ ಅನೇಕ ಕಡೆ ಕಾರ್ಯಕ್ರಮಗಳಾದವು.

ಅಂದು ರಾತ್ರಿ ಶ್ರೀ ಚನ್ನಬಸವೇಶ್ವರ ಕೃಪಾಪೋಷಿತ ನಾಟಕ ಮಂಡಲಿಯವರ ಕುರುಕ್ಷೇತ್ರ ಪ್ರದರ್ಶನ ತುಮಕೂರಿನ ಬಸ್ ಸ್ಟ್ಯಾಂಡ್ ಬಳಿ ಇದ್ದ ಅವರ ಧನಲಕ್ಷ್ಮೀ ಥಿಯೇಟರಿನಲ್ಲಿ. ಬೇಂದ್ರೆ ಪುತಿನರವರಿಗೆ ನನಗೆ ಆಹ್ವಾನ ಬಂತು. ಮುಖ್ಯಮಂತ್ರಿ ಶ್ರೀ ಸಿದ್ಧವನಹಳ್ಳಿ ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ನಾಟಕದ ಮಧ್ಯದಲ್ಲಿ ಭಾಷಣ. ಕಾರ್ಯಕ್ರಮ ಆರಂಭವಾಯಿತು. ರಂಗದ ತುಂಬ ಜನ. ನಟ ನಟಿಯರೆಲ್ಲಾ ಸೈಡ್‌ವಿಂಗ್ಸ್‌ಗಳಲ್ಲಿ ಕಿಕ್ಕಿರಿದು ನಿಂತಿದ್ದರು. ನಾಟಕ ರತ್ನ ವೀರಣ್ಣನವರು ಕರೀ ಕೋಟು ತೊಟ್ಟು ಮುಖ್ಯಮಂತ್ರಿಗಳನ್ನು ಮತ್ತಿತರನ್ನು ಹಾರ ಹಾಕಿ ರಂಗದ ಮೇಲೆ ಸ್ವಾಗತ ಕೋರಿದರು. ಆದರೆ ಬೇಂದ್ರೆಯವರಿಗೆ ಹಾರ ಹಾಕಲು ಬಂದಾಗ ಬೇಂದ್ರೆ ಬೇರೊಂದು ಹಾರ ಹಿಡಿದು ವೀರಣ್ಣನವರಿಗೆ ಹಾಕಲು ನಿಂತರು. ಇಬ್ಬರ ಕೈಗಳಲ್ಲೂ ಹಾರಗಳು, ಇಬ್ಬರು ಹಾಕುವುದಕ್ಕೆ ಕಾತುರರಾಗಿದ್ದರೇ ವಿನಾ ಹಾಕಿಸಿಕೊಳ್ಳಲಿಲ್ಲ. ಇಬ್ಬರೂ ನೆಗೆದರು. ಇಬ್ಬರೂ ಕುಳ್ಳರು ! ಲಂಕೆಯಿಂದ ಸೀತಾದೇವಿಯನ್ನು ಶ್ರೀರಾಮನು ಅಯೋಧ್ಯೆಗೆ ಕರೆತಂದ ದಿನ ಊಟದ ವೇಳೆಯಲ್ಲಿ ಉಪ್ಪಿನಕಾಯಿ ಕೈಯಿಂದ ಚಿಮ್ಮಿದ ಕೂಡಲೇ ಒಂದು ಕೋತಿ ನೆಗೆಯಿತು. ಅದನ್ನು ನೋಡಿ ಎಲ್ಲವೂ ನೆಗೆದವು ಎಂದು ಕಥೆ ಕೇಳಿದ್ದೆ. ಅದು ನೆನಪಾಯಿತು. ವೀರಣ್ಣನವರೂ ಬೇಂದ್ರೆಯವರೂ ಬಹಳ ಹೊತ್ತು ನಾ ಮುಂದು ತಾ ಮುಂದು ಎಂದು ಹಾಋಆಡಿ ಕಡೆಗೆ ಒಂದೇ ಬಾರಿಗೆ ಒಬ್ಬರಿಗೊಬ್ಬರು ಹಾರಗಳನ್ನು ಹಾಕಿ ಆಲಂಗಿಸಿಕೊಂಡರು ! ಇಡೀ ರಂಗಭೂಮಿ ಚಪ್ಪಾಳೆ ಜಯಘೋಷಗಳಿಂದ ಗಡಚಿಕ್ಕಿತು. ಜಯಮ್ಮನವರು ಬೇಂದ್ರೆಯವರು ಪುತಿನರವರಿಗೆ ಹಾರಗಳನ್ನು ಹಾಕಿ ಕವಿದ್ವಯರ ಪಾದಗಳನ್ನು ಮುಟ್ಟಿ ನಮಸ್ಕರಿಸಿದರು, ನಿಜಲಿಂಗಪ್ಪನವರು.

'ರಾಜಕಾರಿಣಿಗಳಾದ ನಾವು ಇಂದು ಇರ್ತೇವೆ ನಾಳೆ ಹೋಗ್ತೇವೆ ಆದರೆ ಸಂಸ್ಕೃತಿಯ ಸಂರಕ್ಷಕರೂ ರಾಷ್ಟ್ರದ ಮಾರ್ಗದರ್ಶಕ ಚೈತನ್ಯಗಳೂ ಆದ ಬೇಂದ್ರೆ, ಪು.ತಿ.ನ. ಕುವೆಂಪು, ಗುಬ್ಬಿ ವೀರಣ್ಣವಂಥವರು ಸೂರ್ಯ ಚಂದ್ರರಿರುವವರೆಗೂ ಉಳೀತಾರೆ' ಎಂದರು. ಅಂದಿನ ಆ ಅವಿಸ್ಮರಣೀಯ ಆತ್ಮೀಯ ಸಮಾರಂಭ ಬೇಂದ್ರೆಯವರಿಗೆ ತುಂಬಾ ಹಿತ ತಂದಿತ್ತು.

---

*ದತ್ತಾತ್ರೇಯ ರಾಮಚಂದ್ರ ಬೇಂದ್ರೆ

ಮತ್ತೆ ಅವರನ್ನು ಭೇಟಿ ಆದದ್ದು 'ಜ್ಞಾನಪೀಠ ಪ್ರಶಸ್ತಿ ವಿಜೇತ ಕನ್ನಡಿಗರು' ಎಂಬ ಪುಸ್ತಕ ಬರೆಯುವ ಸಮಯದಲ್ಲಿ. ಬೆಂಗಳೂರು ವಿರ್ಶವವಿದ್ಯಾಲಯಕ್ಕೆ ಆ ಪುಸ್ತಕ ಬರೆದು ಕೊಡುವುದಾಗಿ ಒಪ್ಪದ್ದೆ. ಕುವೆಂಪು, ಕಾರಂತ ಬಗ್ಗೆ ಬರೆದೆ. ಆದರೆ ಬೇಂದ್ರೆಯವರ 'ನಾಕುತಂತಿ' ನನಗೆ ಅರ್ಥವಾಗಲಿಲ್ಲ. ಅವರ ಬಳಿ ಹೋದೆ. ಮೊದಲು ರೇಗಿದರು. 'ಏಕೆ ಅರ್ಥವಾಗೊಲ್ಲ? ನಿನ್ನಲ್ಲಿ ಸಾಧನೆ ಇಲ್ಲ, ಶ್ರಮ ಇಲ್ಲ. . .ಹಾಗೆ ಹೀಗೆ' ಅಂದರು. ನಾನೆಂದೆ 'ಹಾಗಲ್ಲ, ನಾಕುತಂತಿಯ ಬೇಂದ್ರೆ 'ನಾದಲೀಲೆ' 'ಗಂಗಾವತರಣ'ಗಳ ಬೇಂದ್ರೆ ಅಲ್ಲ, ತುಂಬಾ Mystic poet ಆಗಿಬಿಟ್ಟಿದ್ದಾರೆ ಅಂದಿನ ಭಾವುಕ ಬೇಂದ್ರೆ ಅಂದೆ. ಅವರಿಗೆ ಅರ್ಥವಾಯ್ತೇನೊ ತಣ್ಣಗಾದರು 'ಬಾ ತಗೋ ಈ ಚಾ ಕುಡಿ. ಆಮೇಲೆ ಮಾತಾಡೋಣ' ಅಂದು ಟೀ ಕೊಟ್ಟರು. ಸೊಸೆ ತಂದು ಕೊಟ್ಟ ಪರಂಗಿಹಣ್ಣಿನ ತುಂಡು, ಕಲ್ಲುಸಕ್ಕರೆ ಏನೇನೋ ತಿನ್ನಿಸಿ ಶುರು ಮಾಡಿದರು

ನಾ

ಆ ನು ತಾ

ನೀ

'ನಾನು, ನೀನು, ಆನು, ತಾನು ಇವೇ ನಾಕುತಂತಿಗಳು, ಆ 'ಆನು ನೀನಿನ ನಾನು ತಾನಿನ'ಗಳನ್ನು ಕೇಂದ್ರೀಕರಿಸುವ ಒಂದು ಬಿಂದು ಇದೆ. ಅದೇ 'ನು'! ಅದು ಸದಾ ನೂಲುತ್ತಿರುತ್ತೆ. ಇದು ಸೃಷ್ಟಿಯ ರಹಸ್ಯ, ಬದುಕಿನ ಭವಿಷ್ಯವೆಂದುಕೊ

ಅಂದರು. ಸುಮಾರು ಮೂರು ಗಂಟೆಗಳ ಕಾಲ ಅವರ ಏಕಪಾತ್ರಾಭಿನಯ ನಾನೊಬ್ಬ ಮೂಕಪ್ರೇಕ್ಷಕ. ಕೇಳಿ ಧನ್ಯನಾದೆ, ಭಾವಭರತನಾದೆ ಮೂಕವಿಸ್ಮಿತನೂ ಆದೆ.

ಅಂತಹ ಮಹಾ ಚೇತನಗಳ ಸಾನಿಧ್ಯ ತಾಯಿಯ ಮಡಿಲಿದ್ದಂತೆ, ಅವರೊಡನಾಟ ಮಾತುಕತೆ ಗಂಗೆಯಲ್ಲಿ ಮಿಂದಂತೆ!

# ನಮ್ಮ ಮೇಷ್ಟ್ರು*

---

ದೊಲನ ನಮ್ಮ ಮೇಷ್ಟ್ರು. ಮೇಷ್ಟ್ರು ಎಂದು ಕರೆಸಿಕೊಳ್ಳುವುದಕ್ಕಿಂತಲೂ ದೊಡ್ಡ ಪದವಿ ಅವರಿಗೆ ಸಿಗಲಿಲ್ಲ. ಸಿಗಬೇಕೆಂಬ ಹಂಬಲವೂ ಅವರಿಗಿರಲಿಲ್ಲ. ಇಲ್ಲದ್ದನ್ನು ಬಯಸಲಿಲ್ಲ. ಇದ್ದದ್ದನ್ನು ತ್ಯಜಿಸಲಿಲ್ಲ. ಉಳ್ಳದ್ದರಲ್ಲೇ ತುಷ್ಟಿ ; ಆತ್ಮ ಸಾಂತ್ವನವೇ ಮುಕ್ತಿ, ಅಧ್ಯಯನ ಅಧ್ಯಾಪನಗಳು ಪರಮಾರಾಧನೆ, ಪರಮನ ಆರಾಧನೆಯೂ ಹೌದು ಅವರ ಪಾಲಿಗೆ.

ಈ ಕಾಯಕನಿಷ್ಠ ಕರ್ಮಯೋಗಿ ಬೇಡಿದದೇನೂ ಇಲ್ಲ, ಮಾಡಿದುದು ಮಾತ್ರ ಬೆಟ್ಟದಷ್ಟು. ಹಳಗನ್ನಡ ಕಾವ್ಯಗಳ ದಿವ್ಯ ದರ್ಶನ ಮಾಡಿಸಿದರು. ಹೊಸದಾದ ಸಾಹಿತ್ಯ ಚರಿತ್ರಯನ್ನು ರಚಿಸಿಕೊಟ್ಟರು. ಸಂಶೋಧನೆಯ ಪಥ ನಿರ್ಮಾಣ ಮಾಡಿದರು. ಗ್ರಂಥ ಸಂಪಾದನೆಯ ಘನ ದಿಗ್ದರ್ಶನ ನೀಡಿದರು. ಇವರು ಪಾಂಡಿತ್ಯದ ಮೇರು, ವಿಮರ್ಶೆಯ ಹೆದ್ದೊರೆ, ನಿರುಕ್ತ ನಿಪುಣರು, ಶಾಸ್ತ್ರ ಸಂಹಿತೆಯಲ್ಲಿ ಸೀಮಾ ಪುರುಷರು. ಕನ್ನಡ ಸಾಹಿತ್ಯದಲ್ಲಿ ಇವರದು ಬಹು ದೊಡ್ಡ ಹೆಸರು. ದೊಡ್ಡ ಬೆಲೆ ಲಕ್ಷ್ಮೀನರಸಿಂಹಾಚಾರ್ ಅವರು ತಮ್ಮ ಹೆಸರಿಗೆ ತಕ್ಕಂತೆ ಕನ್ನಡಕ್ಕೆ ಕನ್ನಡ ನಾಡಿಗೆ 'ದೊಡ್ಡ ಬೆಲೆ' ತಂದುಕೊಟ್ಟವರು.

ಮೊನ್ನೆ ದಸರೆಯಲ್ಲಿ ಮೈಸೂರರಮನೆಯ ಒಳಗಿಂದ ಹೊರಬರುತ್‌ತಿದ್ದ 'ದ್ರೋಣ'ನನ್ನು ನೋಡಿದೆ, ಅರಮನೆಯೇ ಎದ್ದು ಬರುತ್ತಿದೆಯೋ ಎನ್ನುವಂತಿತ್ತು. ಅದರ ಬೆನ್ನಿನಮೇಲೆ ಬಂಗಾರದ ಅಂಬಾರಿ. ಅಂಬಾರಿಯಲ್ಲಿ ಜಗನ್ಮಾತೆ ಚಾಮುಂಡೇಶ್ವರಿ ನಮ್ಮ ಮೇಷ್ಟ್ರೂ ಅಷ್ಟೆ. 'ದ್ರೋಣ'ನಂಥೋರು, ಬೆನ್ನು ತುಸು ಬಗ್ಗಿದ್ದರೂ ಅವರ ನೆತ್ತಿಯ ಮೇಲೆ ನವಿಲಾಡುತ್ತಿತ್ತು ! ಕನ್ನಡ ರಾಜೇಶ್ವರಿಯ ಜಯಧ್ವಜ ಅವರ ಹೆಗಲಮೇಲೆ ಮೆರೆದಾಡುತ್ತಿತ್ತು. ನಿಜಕ್ಕೂ ಕನ್ನಡ ಪೃಥ್ವಿಯನ್ನು ಹೊತ್ತ ದಿಗ್ಗಜಗಳಲ್ಲಿ ಒಬ್ಬರು ಅವರು. ಅವರು 'ದ್ರೋಣ' ನಭೂತೋ ನಭವಿಷ್ಯತಿ' ಎಂದೆನಿಸಿಕೊಂಡ 'ಆಚಾರ್ಯ ದ್ರೋಣ'ರೂ ಹೌದು.

ನಮ್ಮ ಮೇಷ್ಟ್ರರದು ಗರಿವಡೆದ ಗಾಂಭೀರ್ಯ. ಸಿರಿ ತುಂಬಿದ ಮುಖಭಾವ ಹಿರಿತನದ ವರ್ಚಸ್ಸು. ಬ್ರಹ್ಮರ್ಷಿಯ ತೇಜಸ್ಸು ಒಂದು ಮಾತಿನಲ್ಲಿ ಹೇಳುವುದಾದರೆ, ಹರಿದುಬರುತ್ತಿರುವ ಅಲಂಕೃತವಾದ ದೇವರ ತೇರು ಅವರು. ಗರಿಮುರಿಯದ ಜರಿಪೇಟ, ನಿರಿ ಕದಲದ ಕಚ್ಚೆ ಪಂಚೆ, ಕುತ್ತಿಗೆ ಮುಚ್ಚಿದ ಕೋಟು, ಹಣೆಯಲ್ಲಿ ಕಂಡೂ ಕಾಣದಂತಹ ಒಂದೇ ಒಂದು ಕೆಂಪುಬಣ್ಣದ ಕಡ್ಡಿ ನಾಮ. ಇದಿಷ್ಟೂ ಅವರ ವೇಷ, ಭೂಷಣ.

ಇವರು ಹುಟ್ಟಿದ್ದು ಇದೇ ತಿಂಗಳು, ಅಂದರೆ ಅಕ್ಟೋಬರ್ ತಿಂಗಳು. ವರ್ಷ ಮತ್ತು ತಾರೀಖು ಬೇರೆ. ೧೯೬೦ನೆಯ ಇಸವಿ ಅಕ್ಟೋಬರ್ ೨೭ನೇ ತಾರೀಖು. ಮತ್ತೊಂದು ವೈಶಿಷ್ಟ್ಯ ಏನೆಂದರೆ ಅವರು ಹುಟ್ಟಿದ್ದು ನನ್ನ ತಾಲ್ಲೂಕಿನಲ್ಲಿ, ಅಂದರೆ ಚಿಕ್ಕನಾಯಕನಹಳ್ಳಿಯಲ್ಲಿ. ಹಾಗೆಂದು ಹೇಳಿಕೊಳ್ಳಲು ನನಗೆ ಬಲು ಹೆಮ್ಮೆ. ಅದು ಅವರ ತಾಯಿಯ ತಂದೆ ಮನೆ. ಆ ಮತಾಮಹ ಹೆಸರು ಅಣ್ಣಾಸ್ವಾಮಿ ಅಯ್ಯಂಗಾರ್ಯರೆಂದು. ನಮ್ಮ ಮೇಷ್ಟ್ರರ ತಂದೆ ಶ್ಯಾಮಯ್ಯಂಗಾರ್. ಸಬ್ ರಿಜಿಷ್ಟ್ರಾರ್ ಆಫೀಸಿನಲ್ಲಿ ಕಾರಕೂನರು. ಶ್ಯಾಮಯ್ಯಂಗಾರವರ ತಂದೆ ದೊಡ್ಡ ಬೆಲೆ ಕೃಷ್ಣಮಾಚಾರ್ಯರು. ಆ ಕಾಲದಲ್ಲಿ ಆ ಊರಲ್ಲಿದ್ದ ಕೂಲಿ ಮಠದ ಓಚಯ್ಯಗಳು ; ಅವರ ಪೂರ್ವಿಕರು ಆಂದ್ರದ ಸೇಲಂ ಜಿಲ್ಲೆಯವರಂತೆ; ಗಂಡಿಕೋಟದವರಂತೆ. ವಿಜಯನಗರವು ಪತನ ಪದವಿ ಪಡೆದ ಮೇಲೆ ಕರ್ನಾಟಕಕ್ಕೆ ವಲಸೆ ಬಂದು ಬೆಂಗಳೂರು ಜಿಲ್ಲೆಯಲ್ಲಿರುವ ದೊಡ್ಡಬೆಲೆ ಗ್ರಾಮದಲ್ಲಿ ನೆಲೆಸಿದರಂತೆ. ಇವರು ತಿರುಪತಿ ತಿಮ್ಮಪ್ಪನ ಒಕ್ಕಲು, ಅವನು ಬಹಳ ದೂರ ಆದ ಅಂತ ತುಮಕೂರು ಬಳಿ ಇರುವ ದೇವರಾಯನದುರ್ಗದ ಲಕ್ಷ್ಮೀನರಸಿಂಹನನ್ನೇ ತಮ್ಮ ಕುಲದೇವತೆಯನ್ನಾಗಿ ಮಾಡಿಕೊಂಡಿದ್ದರು. ಅವನ ಪುಣ್ಯನಾಮವೇ ನಮ್ಮ ಮೇಷ್ಟ್ರರದು. ಇಟ್ಟ ಹೆಸರು

---

*ದಿವಂಗತ ಡಿ.ಎಎಲ್. ನರಸಿಂಹಾಚಾರ್‌ರವರು, ಪೂಜ್ಯರು ಮಹಾರಾಜ ಕಾಲೇಜಿನಲ್ಲಿ ಕನ್ನಡ ಬಿ.ಎ. (ಆನರ್ಸ್) ಮತ್ತು ಎಂ.ಎ. ತರಗತಿಗಳ ೧೯೫೨ರಿಂದ ೫೬ರವರೆಗೆ ನನಗೆ ಅಧ್ಯಾಪಕರಾಗಿದ್ದರು. ಕನ್ನಡ ಸಾಹಿತ್ಯ ಪರಿಷತ್ತು ದಿನಾಂಕ ೩.೧.೮.

೧೯೮೪ರಿಂದ ೧೯.೧೧.೧೯೮೪ರವರೆಗೆ ಬೆಂಗಳೂರಿನಲ್ಲಿ ಏರ್ಪಡಿಸಿದ್ದ 'ಸಾಹಿತ್ಯ ದರ್ಶನ' ಉಪನ್ಯಾಸ ಮಾಲೆಯಲ್ಲಿ ೧೦. ೧೦.೧೯೮೪ರಂದು ನಾನು ಮಾಡಿದ ಭಾಷಣದ ಸಾರ ಇದು.

ಲಕ್ಷ್ಮೀನರಸಿಂಹಾಚಾರ್ಯ. ಆದರೆ ತುಮಕೂರಿನ ಎ.ವಿ. ಸ್ಕೂಲಿನ ಮುಖ್ಯೋಪಧ್ಯಾಯರು ಸಂಕ್ಷಿಪ್ತಗೊಳಿಸಿ ಕೊಟ್ಟ ಹೆಸರು. ಡಿ.ಎಲ್. ನರಸಿಂಹಾಚಾರ್. ಪೂರ್ವಜರು ಬಂದು ನೆಲೆಸಿದ ಊರಿನ ಹೆಸರು ದೊಡ್ಡಬೆಲೆ ಇವರ ಹೆಸರಿನಲ್ಲಿ ಅಂಟಿಕೊಂಡಿತು. ದೊಡ್ಡಬೆಲೆ ಲಕ್ಷ್ಮೀನರಸಿಂಹಾಚಾರ್ ಹೋಗಿ, ಡಿ.ಎಲ್. ನರಸಿಂಹಾಚಾರ್ ಆಯಿತು. 'ಡಿ.ಎಲ್.ಎನ್.' ಅಥವಾ 'ದೊಲನ' ಎಂದು ಅಕ್ಕರೆಯಿಂದ ಕರೆಸಿಕೊಂಡರು.

ಅಪ್ಪನ ವರ್ಗಾವರ್ಗಿಯ ಜೊತೆಯಲ್ಲೇ ಮಗನ ವಿದ್ಯಾಭ್ಯಾಸದ ಸ್ಥಾನವೂ ಪಲ್ಲಟವಾಗುತ್ತಿತ್ತು. ಅಲ್ಲಿ ಇಲ್ಲಿ ಓದು. ಕಡೆಗೆ ಕೆ.ವಿ. ಕೃಷ್ಣಸ್ವಾಮಿ ಅಯ್ಯರ್ ಎಂಬುವರು ಮುಖ್ಯೋಪಾಧ್ಯಾಯರಾಗಿದ್ದ ತುಮಕೂರಿನ ಪ್ರೌಢಶಾಲೆಯಲ್ಲಿ ವಿದ್ಯಾಭ್ಯಾಸ ಉತ್ತಮ ರೀತಿಯಲ್ಲಿ ಮುಂದುವರಿಯಿತು. ಗುರು–ಶಿಷ್ಯ ಸಾಮರಸ್ಯವು ಚೆನ್ನಾಗಿದ್ದ ಕಾಲ ಅದು. 'ಸ್ಕೂಲ್ ಪೋಕ್' ಎಂಬ ಕನ್ನಡ ಮತ್ತು ಇಂಗ್ಲಿಷ್ ಪತ್ರಿಕೆ ಆರಂಭಿಸಿದರು ಗುರು ಶಿಷ್ಯರು. ಅನೇಕ ಪ್ರತಿಭಾವಂತ ವಿದ್ಯಾರ್ಥಿಗಳು ಆ ಪತ್ರಿಕೆಗೆ ಬರೆಯುತ್ತಿದ್ದರು. ಡಿ. ಎಲ್. ಎನ್. ಕೂಡ ಬರೆದರು. ದೊಡ್ಡ ಮನುಷ್ಯನು ಯಾರು ? ಇದು ಅವರು ಬರೆದ ಮೊದಲ ಕನ್ನಡ ಲೇಖನ. The Story of Cotton Seed ಇದು ಮೊದಲ ಇಂಗ್ಲಿಷ್ ಲೇಖನ.

೧೯೨೪ರಲ್ಲಿ ಕೊಲಿಜಿಯೇಟ್ ತರಗತಿಯ ಇನ್‌ಸ್ಪೆಕ್ಷನ್. ತುಮಕೂರಿಗೆ ಬಂದಿದ್ದ ಆಚಾರ್ಯ ಬಿ.ಎಂ.ಶ್ರೀಯವರ ದರ್ಶನ ಆಯಿತು. ಒಲವು–ಭಕ್ತಿ ಎರಡೂ ಮೂಡಿದವು ಏಕಕಾಲದಲ್ಲಿ. ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಬಿ.ಎ. ಮುಗಿಸಿ, ೧೯೨೭ ರಲ್ಲಿ ಮೈಸೂರು ಮಹಾರಾಜಾ ಕಾಲೇಜಿನಲ್ಲಿ ಮೊದಲ ಬಾರಿಗೆ ಆರಂಭವಾದ ಕನ್ನಡ ಎಂ.ಎ.ಗೆ ಸೇರಿದರು. ಎಂ.ಎ.ದಲ್ಲಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿ ಉಪಕುಲಪತಿ ಎಚ್.ವಿ. ನಂಜುಂಡಯ್ಯ ಪದಕ ಪಡೆದರು. ಮೈಸೂರಿನ ಪ್ರಾಚ್ಯವಿದ್ಯಾ ಸಂಶೋಧನ ಸಂಸ್ಥೆಯಲ್ಲಿ ಕೆಲಸ ಕಾಧಿತ್ತು; ದುಡಿದರು. ೧೯೩೨ರಲ್ಲಿ ಮಹಾರಾಜಾ ಕಾಲೇಜಿನಲ್ಲಿ ಅಧ್ಯಾಪಕರದರು. ಅನಂತರ ಉಪಪ್ರಾಧ್ಯಾಪಕರಾಗಿ, ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ೧೯೬೨ರ ಮಾರ್ಚಿ ೩೧ರಂದು ನಿವೃತ್ತರಾದರು. ದಿನಾಂಕ ೭.೫. ೧೯ ೭೧ರಂದು ಇಹಲೋಕದಿಂದಲೇ ಶಾಶ್ವತ ನಿವೃತ್ತಿ ಹೊಂದಿದರು.

ಡಿ.ಎಲ್.ಎನ್. ಕನ್ನಡಕ್ಕಾಗಿ ಸಾಕಷ್ಟು ದುಡಿದರು. ಅವರ ದುಡಿಮೆಯಿಂದಾಗಿ ಕನ್ನಡ ಶ್ರೀಮಂತವಾಯತು. ಅವರು ಅನೇಕ ಮೌಲಿಕ ಕೃತಿಗಳನ್ನು ಕೊಟ್ಟರು. ಕನ್ನಡ ನಿರುಕ್ತದಿಂದ ಹಿಡಿದು ವೀರಶೈವ ಸಾಹಿತ್ಯದ ಆರಂಭ ಕಾಲವನ್ನು ಕುರಿತು ಸಂಶೋಧನೆಯವರೆಗೆ ಅವರ ಕೃಷಿಯ ಹರವು ಇದೆ.

೧೯೬೦ರಲ್ಲಿ ಬಿದರೆಯಲ್ಲಿ ನಡೆದ ೪೧ನೆಯ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರಾಗಿದ್ದರು. (ಈ ವರ್ಷ ಮತ್ತೊಮ್ಮೆ ಅಲ್ಲೇ ನಡೆಯಲಿದೆ ಸಮ್ಮೇಳನ). ಆ ಸಮ್ಮೇಳನದ ನೆನಪಿಗಾಗಿ 'ಜ್ಞಾನೋಪಾಸಕ' ಅಭಿನಂದನ ಗ್ರಂಥ ಬಂತು. ೧೯೬೭ರಲ್ಲಿ ರಾಜ್ಯ ಸರ್ಕಾರ ಸನ್ಮಾನಿಸಿತು. ಅದೇ ವರ್ಷ 'ಉಪಾಯನ' ಎಂಬ ಬೃಹತ್ ಗ್ರಂಥವನ್ನು ಅವರ ಶಿಷ್ಯರು, ಆಭಿಮಾನಿಗಳು ಸನ್ಮಾನ ಪೂರ್ವಕ ಅರ್ಪಿಸಿದರು. ೧೯೫೯ರಲ್ಲಿ ಮೈಸೂರು ವಿಶ್ವವಿದ್ಯಾನಿಲಯವು ಅವರಿಗೆ ಗೌರವ ಡಾಕ್ಟರೇಟ್ ಕೊಟ್ಟು ತನ್ನ ಗೌರವ ಹೆಚ್ಚಿಸಿಕೊಂಡಿತು.

ನಮ್ಮ ಮೇಷ್ಟ್ರನ್ನು ಸುಳಿವ ಶಾಸನ, ನಡೆದಾಡೊ ವಿಶ್ವಕೋಶ, ಪಾಂಡಿತ್ಯದ ಪರ್ವತ ಎಂದೆಲ್ಲಾ ಕರೆಯುತ್ತಾರೆ. ಅದು ಅವರ ಪ್ರತಿಭೆ ಪಾಂಡಿತ್ಯಗಳ ದ್ಯೋತಕ. ಡಿ.ಎಲ್.ಎನ್. ಒಂದು ದೊಡ್ಡ ಚೇತನ. ಅದರ ಬಣ್ಣನೆಗೆ ಮಾತು ಸೋತಾವು. ಸಾಹಿತ್ಯೋಪಜೀವನವೆ ನಿತ್ಯಗಾಯಿತ್ರಿ ಎಮದು ಭಾವಿಸಿದ್ದ ಅವರು ಕೊಟ್ಟದ್ದು ಸರ್ಥಕ ಸಾಹಿತ್ಯ, ಬದುಕಿದ್ದು ಸಾರ್ಥಕ ಜೀವನ. ನಾನು ಪಡೆದ ಕಡೆಯ ದರ್ಶನ ಮೈಸುರು ಬಳಿ ಇರುವ ಇಲವಲದ 'ಅಲೋಕ'ದಲ್ಲಿ. ನಾನು ಅಲಿಗೆ ಹೋದದ್ದು ಆಕಸ್ಮಿಕ. ಆದರೂ ಅದೊಂದು ಸುಯೊಗ. ಕನ್ನಡ–ಕನ್ನಡ ನಿಘಂಟು ಸಭೆ ಅಲ್ಲಿ ಏರ್ಪಟ್ಟಿತ್ತು. ಡಿ.ಎಲ್.ಎನ್. ಮೈಸೂರಿಂದ ಬೆಂಗಳೂರ ವರೆಗೆ ಪ್ರಯಾಣ ಬೆಳಸುವಷ್ಟು ಆರೋಗ್ಯವಂತರಾಗಿರಲಿಲ್ಲ. ಅದಕ್ಕಾಗಿ ಇಲವಾಲದ 'ಆಲೋಕ'ದಲ್ಲಿ ನಿಘಂಟು ಸಭೆ. ಸಭೆಯಲ್ಲಿ 'ಸೊಲಿಗೆ' ಎಂಬ ಪದ ಚರ್ಚೆಗೆ ಬಂತು. ನಾನು ಹೇಳಿದೆ. 'ನಮ್ಮ ಕಡೆ ಕುರುಬರು ಇಪ್ಪತ್ತೈದು ಕುರಿಗಳ ಒಂದು ಘಟಕಕ್ಕೆ 'ಸೊಲಿಗ' ಎಂದು ಕರೆಯುತ್ತಾರೆ' ಎಂದು. ಡಿ.ಎಲ್.ಎನ್. ಸಂತೋಷಪಟ್ಟರು. ಶಬ್ದ ಸ್ವೀಕೃತವಾಯಿತು. ಆದರೂ ನನಗೆ ಭಯ. ಬಿ.ಎ. ಆನರ್ಸ್ ತರಗತಿಯಲ್ಲಿ 'ಉಡುಕು ನೀರು' ಶಬ್ದ ಬಂದಾಗ ಒಮ್ಮೆ ಚರ್ಚೆ ಆಗಿತ್ತು. ನನ್ನ ಗೆಳೆಯ ಕೆ. ನಾಗೇಂದ್ರಪ್ಪ ತೆಲುಗಿನಲ್ಲಿ 'ವುಡುಕು ನೀಳ್ಳು' ಅಂತಿದೆ ಬಿಸಿ ನೀರಿಗೆ ಅಂದ. ಮತ್ತೆ ಕೇಳಿ ಶಬ್ದೋಚ್ಚಾರದ ಸರಿಯಾದ ಪ್ರಯೋಗ ತಿಳಿಸಿದ್ದರು.

ಅಂದಿನ ಸಭೆಯಲ್ಲಿ ಅದೆಲ್ಲಾ ನಡೆಯೊಲ್ಲಪ್ಪಾ. . .ಸಮ್ನೆ ಕೂತ್ಕೋ' ಅಂತಾ ಎಲ್ಲಿ ಅಂದು ಬಿಡುತ್ತಾರೊ ಎಂಬ ಭಯ. ಆದರೆ ನಮ್ಮ ಮೇಷ್ಟ್ರು ಹಾಗೆನ್ನಲಿಲ್ಲ. ಒಳ್ಳೆಯದು ಯಾವೆಡೆಯಿಂದಲಾದರೂ ಬರಲಿ, ಯಾರೇ ತೋರಲಿ ಅದನ್ನು ಆದರದಿಂದ, ಗೌರವದಿಮದ ಸ್ವಾಗತಿಸುವ ದೊಡ್ಡತನ ಅವರದ್ದು.

ತುಮಕೂರು ಸರಕಾರಿ ಕಾಲೇಜಿಗೆ ಅಧ್ಯಾಪಕರಾಗಿ ಹೋಗ್ತಿದ್ದೇನೆ ಅಂದೆ. ಗುರುಗಳು ವಿವೇಕ ಹೇಳಿದರು – 'ಯಾವುದೇ ತರಗತಿಗೆ ಪಾಠ ಮಾಡು ಚಿಂತೆಯಿಲ್ಲ, ಧೈರ್ಯವಾಗಿ ಕೊಠಡಿ ಒಳಗೆ ಹೋಗು. ಆದರೆ ಪಾಠ ಹೇಳುವ ಭಾಗವನ್ನು ಹಿಂದಿನ ದಿನವೇ ಚೆನ್ನಾಗಿ ಓದಿ, ಬೇಕದ ರೆಫರೆನ್ಸ್ ಮಾಡಿ, ಚೆನ್ನಾಗಿ 'ತಯಾರಿ' ಮಾಡಿಕೊಂಡು ತರಗತಿ ಕೊಠಡಿಗೆ ಕಾಲಿಡು. ಕಾಯಕದಲ್ಲಿ ನಿಷ್ಠೆ ಇರಲಿ. ನಿನಗೆ ಒಳ್ಳೆಯದಾಗಲಿ' ಅಂದರು. ಅವರ ಆಶೀರ್ವಾದ ಬುದ್ಧಿವಾದಗಳು ನನ್ನ ಶ್ರೀರಕ್ಷೆ ಆಗಿವೆ.

ವ್ಯಕ್ತಿಗೆ ಒಂದು ಮುಖ. ಆದರೆ ವ್ಯಕ್ತಿತ್ವಕ್ಕೆ ನಾನಾ ಮುಖಗಳು. ಹರಿಯುವ ನೀರಿನಂತೆ, ಉರಿಯುವ ಜ್ಯೋತಿಯಂತೆ. ನಮ್ಮ ಮೇಷ್ಟ್ರರ ವ್ಯಕ್ತಿತ್ವ ಬಹುಮುಖವಾದದ್ದು. ಅದರಲ್ಲಿ ನಾನು ಗುರುತಿಸಿದ್ದು ಕೆಲವನ್ನು ಮಾತ್ರ. ಅವುಗಳ ಭಾವಚಿತ್ರ ಈ ಕಿರು ಲೇಖನ.

**ಸವ್ಯ ಸಾಚಿ**

**ದೈವರ್ತ್ಮನೀ ಗಿರೋ ದೇವ್ಯಾಃ**
**ಶಾಸ್ತ್ರಂಚ ಕವಿಕರ್ಮಚ**
**ಪಚ್ಪೋಪ್ರಜ್ಞಂ ತಯೋರಾದ್ಯಂ**
**ಪ್ರತಿಭೋದ್ಯವಮಂತಿಮಂ**[೧]

ವಾಗೇವಿಗೆ ಮಾರ್ಗಗಳು ಎರಡು ಒಂದು ಶಾಸ್ತ್ರ, ಇನ್ನೊಂದು ಕಾವ್ಯ, ಇವುಗಳಲ್ಲಿ ಮೊದಲನೆಯದು ಪ್ರಜ್ಞೆಯಿಂದ ಜನಿಸಿದ್ದು ; ಕೊನೆಯದು ಪ್ರತಿಭೆಯಿಂದ ಉದ್ಭವಿಸಿದ್ದು, ಹೌದು :

ವಾಙ್ಮಯಕ್ಕೆ ಸಂಬಂಧಿಸಿದ ಈ ವಿಭಜನೆಯಲ್ಲಿ ಡಾ. ದೊಲನರವರದು ವಿಸ್ತೃತ ವ್ಯಾಖ್ಯೆ ಕೇಳಿ

"ಸಾಹಿತ್ಯವೆಂದರೆ ಅದರ ವಿಶಾಲವಾದ ಅರ್ಥದಲ್ಲಿ ಒಂದು ಭಾಷೆಯಲ್ಲಿ ಉತ್ಪನ್ನವಾಗಿರುವ ಗ್ರಂಥ ಸಮುದಾಯ. ಇದ ರಲ್ಲಿ ಸ್ಥೂಲವಾಗಿ ಎರಡು ವಿಭಾಗಗಳನ್ನು ಮಾಡಬಹುದು. ಒಂದನೆಯದು ಶಾಸ್ತ್ರ ; ಜ್ಞಾನ ಪ್ರಸಾರವೇ ಇದರ ಮುಖ್ಯ ಉದ್ದೇಶ. ಮಾನವನ ಲೌಕಿಕ ಜೀವನಕ್ಕೆ ಬೇಕಾದ ನಾನಾ ಬಗೆಯಾದ ವಸ್ತು ವಿಜ್ಞಾನವೇ ಈ ಗ್ರಂಥಗಳ ಸಾರ. ಲೇಖಕನ ರಾಗಾವೇಶಗಳ ಆವಿಷ್ಕಾಖಕ್ಕೆ ಎಲ್ಲಿ ಎಡೆಯಿಲ್ಲ. ರೈಲುಗಳು ಹೊರಡುವ ವೇಳಾಪಟ್ಟಿಯಿಂದ ಹಿಡಿದು ಭೌತಪ್ರಪಂಚದ ಮರ್ಮ ವನ್ನು ಭೇದಿಸಲು ಹವಣಿಸುವ ಮಾನವನ ಬುದ್ಧಿಯ ಸಾಹಸವನ್ನು ಒಳಗೊಂಡಿರುವ ಗ್ರಂಥಗಳವರೆಗೆ ಎಲ್ಲವನ್ನೂ ಶಾಸ್ತ್ರವೆಂ ದಾಗಲಿ, ಲೌಕಿಕವಸ್ತು ವ್ಯಾವರ್ಣನೆಯೆಂದಾಗಲಿ ಕರೆಯಬಹುದು. ವಿವೇಚನೆ, ತರ್ಕ ಮುಂತಾದ ಬುದ್ಧಿ ಕಾರ್ಯಗಳಿಗೆ ಇಲ್ಲಿ ಅವಕಾಶ ಅಧಿಕವಾಗಿರುತ್ತದೆ. ಏನಾದರೂ ಹೊಸ ವಿಷಯವೊಂದನ್ನು ಕಂಡುಹಿಡಿದಾಗ ಸಂತೋಷವೂ ಉಂಟಾಗುತ್ತದೆ. ಇದು ಬುದ್ಧಿಯ ವಿಲಾಸದಿಂದ ಬರುವ ಹರ್ಷ, ತೃಪ್ತಿ. ಎರಡನೆಯದು ಕಾವ್ಯ. ಹೃದಯವಿಕಸನವೇ ಇದರ ಮುಖ್ಯ ಗುರಿ. ಮಾನವನ ಮನೋಮಂದಿರದಲ್ಲಿ ನೆಲೆಸಿರುವ ಅಸಂಖ್ಯಾತವಾದ ರಾಗಾವೇಶ ಭಾವಗಳನ್ನು ಉದ್ದೀಪನಗೊಳಿಸಿ ತನ್ಮೂಲಕ ಆನಂದಾನುಭೂತಿಯನ್ನು ಉಂಟು ಮಾಡಿಕೊಡುವುದು ಕಾವ್ಯದ ಕಾರ್ಯ. ಇದು ರಸ ಪ್ರಧಾನವಾದ ಗ್ರಂಥಜಾತಿ. ಇದರಲ್ಲಿ ಬುದ್ಧಿಕಾರ್ಯಕ್ಕಿಂತಲೂ ಭಾವನಾಬಲಕ್ಕೆ ಪಾಮುಖ್ ಅಧಿಕ. ಮೊದಲನೆಯದು ಜ್ಞಾನ ಸಾಹಿತ್ಯ ; ಎರಸನೆಯದು ಶಕ್ತಿ ಸಾಹಿತ್ಯ"[೨]

---

[೧] 'ಭಟ್ಟತೌತನದಿದ್ದಿರಬಹುದು' ತೀನಂಶ್ರೀ ಭಾರತೀಯ ಕಾವ್ಯಮೀಮಾಂಸೆ (ಮೈಸೂರು ೧೯೫೩) ಪು.೧೨೭

[೨]. ಪೀಠಿಕೆಗಳು ಲೇಖನಗಳು ಪು. ೯೯೩

De Quency ಹೇಳುವಂತೆ ಇವು ಇಂತಹ ಸ್ಪಷ್ಟ ವಿವರಣೆ ಅವರದು.

1. Literature of Knowledge
2. Literature of Power

ಮೊದಲನೆಯದರ ಉದ್ದೇಶ ಶಿಕ್ಷಣ, ಎರಡನೆಯದರ ಉದ್ದೇಶ ಚಾಲನ.[೩] ಶಾಸ್ತ್ರಕಾರನ ದೃಷ್ಟಿ ಇಹಜೀವನವನ್ನು ಹಸನಗೊಳಿಸುವುದು ; ಕಾವ್ಯರಚನಕನದು ಪರದ ನೆಲೆಯನ್ನು ಸಿದ್ಧಗೊಳಿಸುವುದು ; ಶಾಸ್ತ್ರಕಾರ ಬುದ್ಧಿಜೀವಿ ; ಶಾಸ್ತ್ರದ ಕಾರ್ಯ ವಿಭಜನೆ,

ಕಾವ್ಯದ ಕೆಲಸ ಸಹಯೋಜನೆ[೪] ವಸ್ತುವಿನ ವಸ್ತು ಸ್ವರೂಪವನ್ನು ತಿಳಿಸುವುದು ಶಾಸ್ತ್ರ, ಹೊಸದನ್ನು ಸೃಷ್ಟಿಸಿ ತೋರುವುದು ಕಲೆ, ಇದು ಸಿದ್ಧವಸ್ತುವಿನ ಇದ್ದ ರೂಪ, ಅದು ವಿಶ್ವ ಚೈತನ್ಯದ ಸಾಧ್ಯ ರೂಪ, ಒಂದು ಜ್ಞಾನ ಮೂಲವಾದದ್ದು. ಈ ಬಗ್ಗೆ ತೀನಂಶ್ರೀ ಹೀಗೆ ಹೇಳುತ್ತಾರೆ.

ಶಾಸ್ತ್ರದ ಉದ್ದೇಶವು ತತ್ವ ಪ್ರತಿಪಾದನೆ – ಇದು ಸತ್ಯ, ಇದು ಅಸತ್ಯ ಎಂದು ಒರೆಹಚ್ಚಿ ನೋಡುವುದೇ ಇದರ ಕಾರ್ಯ. ಇಲ್ಲಿ ನಿರ್ಣಯವು ತಪ್ಪಾಗಿರುವುದಕ್ಕೋಸ್ಕರ ಪ್ರತ್ಯಕ್ಷ, ಅನುಮಾನ ಮೊದಲಾದ ಪ್ರಮಾಣಗಳನ್ನು ಹೆಜ್ಜೆ ಹೆಜ್ಜೆಗೂ ಅವ ಲಂಬಿಸಬೇಕು. ಹೀಗೆ ಶಾಸ್ತ್ರದಿಂದ ತಿಳಿಯುವ ವಿಷಯವು ಸರಿಯೆನಿಸಬೇಕಾದರೆ, ಗ್ರಾಹ್ಯವಾಗಬೇಕಾದರೆ ತನ್ನಿಂದ ಹೊರ ಗಿರುವ ಪ್ರಮಾಣಗಳ ಪರೀಕ್ಷೆಗೆ ಒಳಪಡಬೇಕು. ಆದರೆ ಇಲ್ಲಿ ಕಾವ್ಯದ ಬಗೆಯೇ ಬೇರೆ, ಕಾವ್ಯದ ಗುರಿ ರಸಾನುಭವ, ಅನುಭವಕ್ಕೆ ಅನುಭವವೊಂದೇ ಪ್ರಮಾಣ. ಅದು ತನಗೆ ದೊರೆತರೆ ಉಂಟು. ಇಲ್ಲವಾದರೆ ಇಲ್ಲ. . .ಹೀಗೆ ಕಾವ್ಯಾನುಭವಕ್ಕೆ ಪ್ರಮಾಣಾಂತ ರದ ಹಂಗಿಲ್ಲ, ಅನುಭವವೆ ಅದರ ಸತ್ಯ. . .”[೫] ಹೀಗಿದ್ದರೂ ಶಾಸ್ತ್ರವೂ ಕಾವ್ಯವೂ ಒಂದೇ ಭಾಷೆಯ ಎರಡು ಪ್ರವೃತ್ತಿ ಪ್ರಕಾರ ಗಳು ; ಒಂದೇ ವಾಙ್ಮಯದ ಎರಡು ಶಾಖೆಗಳು[೬] ಅಂತೆಯೇ ಅವೆರಡೂ ಪೂರಕ ಪೋಷಕ ಜೀವಿಗಳು. . .” ಕಲೆಯನ್ನು ಸಾಧಿಸುವುದಕ್ಕೆ ಶಾಸ್ತ್ರವು ಸಾಧನ ; ಶಾಸ್ತ್ರಾಭ್ಯಾಸದ ಫಲ ಕಲೆ, ಇವೆರಡೂ ಅನ್ಯೋನ್ಯಾಶ್ರಯದವು. ಒಂದನ್ನು ಬಿಟ್ಟು ಮತ್ತೊಂದು ಸ್ವತಂತ್ರ ವಾಗಿ ಇರಲಾರದು ; ಇರಲಾಗದು. ಶಾಸ್ತ್ರಜ್ಞಾನದ ಬೆಂಬಲವಿಲ್ಲದ ಕಲೆ ಮರಳಿನ ಕಟ್ಟಡದ ಹಾಗೆ ದುರ್ಬಲವಾಗಿ ಸಂ ಕುಚಿತವಾಗಿರುವುದು. ಕಲೆಯ ಧ್ಯೇಯವಿಲ್ಲದೆ ಬರಿಯ ಶಾಸ್ತ್ರಜ್ಞಾನದಿಂದ ಏನೇನು ಅನರ್ಥಗಳಾಗಬಹುದೆಂದು ಊಹಿಸುವುದು ಕಷ್ಟ. ಶಾಸ್ತ್ರದಿಂದ ಲೋಕೋಪಕರವಾಗಬೇಕದರೆ ಶಾಸ್ತ್ರಜ್ಞನು ಕಲೆಗಾರನೂ ಆಗಬೇಕು. . . ಕಲೆ ಸರಿಯಾಗಿ ಸಿದ್ಧಿಸಬೇಕಾದರೆ ಶಾಸ್ತ್ರವು ಹಿಂದೆ ಬಂದೇ ಬರುವುದು. ಆದ್ದರಿಂದಲೇ ಭವಭೂತಿ ಮಹಾಕವಿಯು ಸರಸ್ವತಿಯನ್ನು”ಅಮೃತಾಮಾತ್ಮನಃ ಕಲಾಮ್” ಎಂದೇ ಸ್ಮರಿಸಿದ್ದಾನೆ. ಶಾಸ್ತ್ರದಲ್ಲಿ ವಿಷವೂ ಅಮೃತವೂ ಸಪ್ಪೆಯೂ ಉಂಟು. ಆದರೆ ಕಲೆಯಲ್ಲಿರುವುದು ಇರಬೇಕಾ ದುದು ಅಮೃತವೊಂದೇ.”[೭] ಆದರೆ ಬದುಕಿನ ಭದ್ರತೆಗೆ ಇವೆರಡರ ಅನಿವಾರ್ಯತೆ ಇದೆ. ಔಚಿತ್ಯವರಿತ ಇವೆರಡರ ಸುಂದರ ಸಂಗಮವೇ ಜೀವನದ ಸಾಮರಸ್ಯಕ್ಕೆ ಸಾಧನ.”ವ್ಯಕ್ತಿಯ ವಿಕಾಸಕ್ಕೆ ಧರ್ಮಾರ್ಥ ಕಾಮಗಳು ಹೇಗೆ ಅವಶ್ಯಕವೊ ಹಾಗೆಯೇ ಶಾಸ್ತ್ರ ಸಂಸ್ಕಾರ, ಸಾಹಿತ್ಯ ಸಂಸ್ಕಾರಗಳೂ ಅವಶ್ಯಕ. ಅವು ವ್ಯಕ್ತಿಯನ್ನು ಪ್ರಾಣಿಗಳ ಮಟ್ಟದಿಂದ ಮೇಲಕ್ಕೊಯ್ದು ಮಾನವನನ್ನಾಗಿ ಮಾಡುತ್ತವೆ. ಈ ಕಾರ್ಯವನ್ನು ಶಾಸ್ತ್ರವು, ಪ್ರಭು, ಮಿತ್ರ ಸಂಮಿತಗಳಿಂದ ಮಾಡಿದರೆ, ಸಾಹಿತ್ಯ ಕಾಂತಾಸಂಮಿತದಿಂದ ನಡೆಸು ತ್ತದೆ. ಶಾಸ್ತ್ರ ಮಾನವನ ಬುದ್ಧಿ ಪ್ರಕಾಶಕ್ಕೆ ಅನುಕೂಲ ಸಾಧನವಾದರೆ, ಸಾಹಿತ್ಯ ಅವನ ಹೃದಯ ಪಾವನತೆಗೆ ಸಹಾಯಕಾರಿ. ಆದ್ದರಿಂದ ಜೀವನ ರಂಗದಲ್ಲಿ ಶಾಸ್ತ್ರ ಸಾಹಿತ್ಯಗಳು ಪರಸ್ಪರ ವಿರೋಧಿಗಳಲ್ಲ, ಪೋಷಕ ಜೀವಿಗಳು. ಅಜ್ಞಾನದಿಂದ ಒಡಗೂಡಿದ ಹೃದಯಪರಿಪಾಕದಿಂದ ಜೀವನಕ್ಕೆ ಹೇಗೆ ಫಲ ಸಿದ್ಧಿಯಾಗುವುದಿಲ್ಲವೋ, ಹಾಗೆಯೇ ಹೃದಯ ಶುದ್ಧಿಯಿಲ್ಲದ ಜ್ಞಾನ ಜೀವನಕ್ಕೆ

---

[3]Quotation taken from The making of Lierature by Scott James, p. 22

[4]ಒಂದು ವಸ್ತುವಿನಲ್ಲಿ ಭಿನ್ನಭಾಗಗಳನ್ನು ಬೇರ್ಪಡಿಸಿ ತೋರುವುದೇ ಶಾಸ್ತ್ರ, ಭಿನ್ನ ಪದಾರ್ಥಗಳನ್ನು ಒಂದೆಡೆ ಸೇರಿಸಿ ಮಾಡುವ ಹೊಲಿಗೆಯ ಕಲೆ, ರಾಳ್ಳಪಲ್ಲಿ ಅನಂತಕೃಷ್ಣಶರ್ಮ, ಸಾಹಿತ್ಯ ಮತ್ತು ಜೀವನಕಲೆ, ಪು. ೧೭

[೫] ತೀನಂಶ್ರೀ ಭಾರತೀಯ ಕಾವ್ಯ ಮೀಮಾಂಸೆ (೧೯೫೩) ಪು. ೧೨೨೮

[೬] ಅದೇ ಪು. ೧೨೯

[೭] ರಾಳ್ಳಪಳ್ಳಿ ಅನಂತಕೃಷ್ಣಶರ್ಮ, ಸಾಹಿತ್ಯ ಮತ್ತು ಜೀವನಕಲೆ, ಪು. ೮–೯

ಅಪಾಯಕಾರಿಯಾಗುತ್ತದೆ. ಆದ್ದರಿಂದ ಜೀವನದ ಶ್ರೇಯಕ್ಕೆ ಸದ್ಭಾವನೆಯೊಡಗೂಡಿದ ಶಾಸ್ತ್ರಜ್ಞಾನವೂ, ಜ್ಞಾನಚಕ್ಷುಸ್ಸಿನಿಂದ ಕೂಡಿದ ಸದ್ಭಾವನೆಯೂ ಅವಶ್ಯಕ. ಈ ಹೃದಯ ಶುದ್ಧಿಕಾರ್ಯದಲ್ಲಿ ಅಗ್ರಸ್ಥಾನ ಸಾಹಿತ್ಯಕ್ಕಿದೆ. ಶಾಸ್ತ್ರಜ್ಞಾನ, ಸಾಹಿತ್ಯ ಸಂಸ್ಕಾರ ಗಳು ಮಾನವನ ಮಂಗಳದಲ್ಲಿ ಸಮಭಾಗಿಗಳು. ಸಾಧನಾ ಭೇದಗಳಿಂದ ಬೇರೆಯಾಗಿ ಕಾಣುತ್ತವೆಯೋ ಹೊರತು ಮೂಲತಃ ಎರಡರ ಗುರಿಯೂ ಒಂದೇ. ಆದರೆ ಒಂದರ ಯೋಗ್ಯತೆಯನ್ನು ಮತ್ತೊಂದರ ಮಾನದಂಡದಿಂದ ಅಳೆಯಲಾಗದು.”[೮] ಅಂ ತೆಯೇ”ಕಾವ್ಯಶಾಸ್ತ್ರ ವಿನೋದೇನ ಕಳೋ ಗಚ್ಛತಿ ಧೀಮತಾಮ್” ಅಲ್ಲವೆ ?

ಶಾಸ್ತ್ರಕ್ಕೂ ಕಲೆಗೂ ಇರುವಂಥ ಅವಿನಾ ಸಂಬಂಧ ಕಾವ್ಯ ಮತ್ತು ವಿಮರ್ಶೆ ಇವುಗಳಿಗೂ ಇದೆ. ಕವಿ ಮತ್ತು ವಿಮರ್ಶಕ ಬೇರೆ ಬೇರೆ ಅಲ್ಲ. ಅವರಿಬ್ಬರೂ ಒಬ್ಬನಲ್ಲೇ ಅಂತರ್ಗತವಾಗಿರುವ ಶಕ್ತಿಗಳು. ಸ್ವಪ್ರಭಾನಂದ ಶಿವಾದ್ವೈತ ಮಂಜರಿಯಲ್ಲಿ ಪರ

ಬ್ರಹ್ಮ ವಿದ್ಯೆಯು 'ಶ್ರೀ ಪ್ರಕಾಶ ಮತ್ತು ವಿಮರ್ಶೆ' ಎರಡರ ಸಾಮರಸ್ಯಾತ್ಮಕ ಎಂದು ಕರೆಯಲಾಗಿದೆ. ಇವೆರಡೂ ಬೇರ್ಪಪಡಿಸಲಾರದಷ್ಟು ಮಟ್ಟಿಗೆ ಒಂದರೊಡನೊಂದು ಬೆರೆತುಕೊಂಡಿವೆ. ಕಾವ್ಯ ಮತ್ತು ವಿಮರ್ಶೆಗಳೂ ಅಷ್ಟೆ. ಕಾವ್ಯ ಎಂದರೆ ಈ ಎರಡೂ ಕೂಡಿ ಆದದ್ದು ಎಂದೇ ಅರ್ಥ. ಉತ್ತಮ ವಿಮರ್ಶೆ ಉತ್ತಮ ಕಾವ್ಯದಂತೆಯೇ ಒಂದು ಸೃಜನಶೀಲಕಲೆ, ಅದು ಸಾಹಿತ್ಯಕ್ಕೆ ಬೆಲೆ ಕಟ್ಟುವ ಕಲೆ. ಅದೂ ಸಹ ಕವಿಯ ಕಾವ್ಯದಂತೆ ವ್ಯಕ್ತಿನಿಷ್ಠ ಸೃಷ್ಟಿ."The criticism of literature is often as entirely individual as the creation of literature and as much the work of indefinable genius"[9] ಅಷ್ಟೆ ಅಲ್ಲ, ಪ್ರತಿ ಯುಗಾದಿಗೂ ಒಬ್ಬ ಕವಿ ಹುಟ್ಟಬಹುದು. ಆದರೆ ಶತಮಾನಕ್ಕೊಬ್ಬ ಹುಟ್ಟುವುದು ಕಷ್ಟ. ಅವನು ತಾನು ಬದುಕಿ ಹಲವು ಕವಿಗಳನ್ನು ಬದುಕಿಸುತ್ತಾನೆ, ಸಹೃದಯ ವೃಂದವನ್ನು ಬೆಳೆಸಿ, ಅದರ ರುಚಿ ಗ್ರಹಣ ಶಕ್ತಿಯನ್ನು ಹೆಚ್ಚಿಸುತ್ತಾನೆ. ಪ್ರಾಚೀನ ಕವಿ ಕೃತಿಗಳ ಬಗೆಗೆ ಹೆಚ್ಚು ಬೆಳಕು ಚೆಲ್ಲುತ್ತಾನೆ. ಕವಿಗೂ ಓದುಗನಿಗೂ ಮಧ್ಯೆ ನಿಲ್ಲುವ ಈ ತದ್ವಿಧನ ನೆರವು ಇಲ್ಲದಿದ್ದರೆ ಸಾಹಿತ್ಯಪ್ರಪಂಚ ಇನ್ನೂ ಅಂಧಕಾರದಲ್ಲಿಯೇ ಇರುತ್ತಿತ್ತು.

ಇಷ್ಟೆಲ್ಲ ಪ್ರವರದ ಹಿನ್ನಲೆ ಇಷ್ಟೆ : ಡಾಕ್ಟರ್ ಡಿ.ಎಲ್. ನರಸಿಂಹಾಚಾರ್ಯರ ಭೂಮ ವ್ಯಕ್ತಿತ್ವವನ್ನು ಗುರುತಿಸುವುದು. ಡಿ.ಎಲ್.ಎನ್. ಮಹಾ ವಿದ್ವಾಂಸರು, ಪ್ರಕಾಂಡ ಪಂಡಿತರು. ಅನೇಕ ಶಾಸ್ತ್ರಗಳನ್ನು ಓದಿ ತಿಳಿದವರು, ಕಲೆಯನ್ನು ಬಲ್ಲವರು, ವಿಮಶೇಯನ್ನು ಕೊಟ್ಟವರು, ಅಬರ್ ಕ್ರಾಂಬಿ ಹೇಳುವ ೧) ಸೃಷ್ಟಿ ಅಥವಾ (The powe to create) ೨) ಸಹೃದಯ ಶಕ್ತಿ (The power to enjoy) ೩) ವಿಮರ್ಶನ ಶಕ್ತಿ (The power to criticise) ಈ ಮೂರೂ ಶಕ್ತಿಗಳು ಅವರಲ್ಲಿ ಮುಪ್ಪುರಿಗೊಂಡಿದ್ದವು. ಅವರ ಸಂಶೋಧನೆ ಒಂದು ಕಾವ್ಯ, ಅವರ ವಿಮರ್ಶೆ ಒಂದು ಭಾವಗೀತೆ. ಅವರ ಮಾತಿನಲ್ಲಿ ಒಂದು ತೂಕ ಇದೆ, ಬನಿ ಇದೆ, ಬ್ಯಾಲೆನ್ಸ್ ಇದೆ. ಪಾಂಡಿತ್ಯಕ್ಕೆ ಒಬ್ಬರೇ ಡಿ.ಎಲ್.ಎನ್ ಎನ್ನುವಷ್ಟರಮಟ್ಟಿಗೆ ಪ್ರಭಾವ ಬೀರಿರುವ ವ್ಯಕ್ತಿ ಅವರು.

---

೮ ಎನ್. ಬಾಲಸುಬ್ರಹ್ಮಣ್ಯ, ಜೀವನದಲ್ಲಿ ಸಾಹಿತ್ಯ ಬಾಗಿನ, ಪು. ೭೩

೯ .Lascelies Aber Crombie. The Principlesa of Literary Criticism, p.121

**ಸಂಶೋಧಕ ಸಂಪಾದಕ**

ಡಿ.ಎಲ್.ಎನ್. ಗ್ರಂಥಸಂಪಾದನೆಯಲ್ಲಿ ಎತ್ತಿದ ಕೈ. ಆ ಕಲೆ ಅವರಿಗೆ ಮೈಗೂಡಿ ಹೋಗಿತ್ತು. 'ಗ್ರಂಥಸಂಪಾದನೆ' ಎಂಬ ಸಂಪಾದನಾ ಸಂಹಿತೆಯನ್ನು ರೂಪಿಸಿಕೊಟ್ಟಿತುವರಲ್ಲದೆ, ಪ್ರಾಯೋಗಿಕವಾಗಿ ಗುಣವರ್ಮನ ಪುಷ್ಪದಂತೆ ಪುರಾಣ, ಕರ್ಣಪಾರ್ಯನ ನೇಮಿನಾಥ ಪುರಾಣ, ಕುಮುದೇಂದುವಿನ ರಾಮಾಯಣ, ಬಸವಣ್ಣನವರ ಕೆಲವು ವಚನಗಳು – ಇವುಗಳ ಸಂಸ್ಕರಣ, ಪಾಠಪರಿಷ್ಕರಣ ಮಾಡಿಕೊಟ್ಟಿದ್ದಾರೆ. ಪಾಠ ನಿಷ್ಕರ್ಷೆಯಲ್ಲಿ ಅವರ ವೈಜ್ಞಾನಿಕ ಚಿಕಿತ್ಸೆಯಿದೆ, ಸತ್ಯಕ್ಕೆ ಎಂದೂ ಅಪಚಾರವೆಸಗದ ಪ್ರಾಮಾಣಿಕ ಪ್ರಯತ್ನ ಇದೆ. ಕರ್ನಾಟಕ ಕಾದಂಬರಿಯಿಂದ, ಅಜಿತಪುರಾಣದಿಂದ, ಜೀವಸಂಬೋಧನೆಯಿಂದ, ಹರಿಹರನ ರಗಳೆಗಳಿಂದ ಧಾರಾಳವಾಗಿ ಉದಾಹರಣೆಗಳನ್ನೆತ್ತಿಕೊಂಡು, ಗ್ರಂಥಸಂಪಾದನೆ ಎಂದರೆ, ಹಳೆಯ ಗ್ರಂಥಗಳನ್ನು ಶೇಖರಿಸಿ ತರುವಾಯ ಸಂಸ್ಕರಿಸಿ ನಾಡಿ ಅಚ್ಚು ಹಾಕಿಸುವುದು (Textual Criticism) ಎಂಬ ವ್ಯಾಖ್ಯಾನಕ್ಕೆ ನಿಷ್ಠರಾಗಿ, ಕಡೆಯಲ್ಲಿ ಈ ಗ್ರಂಥ ಸಂಸ್ಕರಣ ಶಾಸ್ತ್ರದಲ್ಲಿ ವಿದ್ವತ್ತಿಗಿಂತ ಪ್ರಾಮಾಣಿಕತನವೂ ಎಚ್ಚರಿಕೆಯೂ ಅಧಿಕವಾಗಿರಬೇಕು ಎಂಬ ತಮ್ಮ ಸ್ವಾನುಭವ ಸಿದ್ಧಾಂತವನ್ನು ಸಾರುತ್ತಾರೆ.

ಗ್ರಂಥಸಂಪಾದನಾ ತತ್ವಗಳನ್ನು ಸೂತ್ರೀಕರಿಸುವುದಕ್ಕೆ ಮೊದಲೇ ಡಿ.ಎಲ್.ಎನ್. ಅವುಗಳನ್ನು ಲೀಲಾಜಾಲವಾಗಿ ಬಳಸಿಕೊಂಡು, ಪಂಪರಾಮಾಯಣ, ಸಿದ್ಧರಾಮಚರಿತೆ, ಸುಕುಮಾರಚರಿತೆ, ಶಬ್ಧಮಣಿದರ್ಪಣ, ಸಕಲ ವೈದ್ಯ ಸಂಹಿತಾ ಸಾರಾರ್ಣವಂ – ಮೊದಲಾದ ಕೃತಿಗಳನ್ನು ಅಚ್ಚುಕಟ್ಟಾಗಿ ಸಂಪಾದಿಸಿ ಕೊಟ್ಟಿದ್ದರು. ಅವರ ಸಂಪಾದನೆಯ ಶಿಲ್ಪದಲ್ಲಿ ಒಂದು ಕ್ರಮ ಇದೆ. ವೈಜ್ಞಾನಿಕ ವ್ಯವಸ್ಥೆ ಇದೆ. ಕವಿ, ಅವನ ಕಾಲ, ದೇಶ, ರಾಜಾಶ್ರಯ ಇವುಗಳ ನಿಷ್ಕರ್ಷೆ, ಅನಂತರ ಅವರ ಕೃತಿಯನ್ನು ಕುರಿತ ವ್ಯಾಪಕವಾದ ಅಧ್ಯಯನ, ಕಥಾ ವಿಶ್ಲೇಷಣೆ, ಪಾತ್ರ ಪರಿಶೀಲನೆ, ಅಲಂಕಾರ ಛಂದಸ್ಸುಗಳು, ತೌಲನಿಕವಾಗಿ ಅನ್ಯಕಾವ್ಯ ಅನ್ಯ ಭಾಷಾ ಅನ್ಯದೇಶ ಅಥವಾ ದೇಶೀಯ ಕಾವ್ಯಗಳೊಡನೆ ತೂಗಿನೋಡಿ ಅದರ ಹಾಗೂ ಅದನ್ನು ರಚಿಸಿದ ಕವಿಯ ಸ್ಥಾನಮಾನಗಳನ್ನು ನಿರ್ಧರಿಸುವುದು ಇದು ಡಿ.ಎಲ್.ಎನ್. ಹಾಕಿಕೊಂಡಿರುವ ಪರಿಪಾಠ. ಅದಕ್ಕೆ 'ಚ–ತು' ನಡೆದುಕೊಳ್ಳುತ್ತಾರೆ. ಅಭಿನವ ಪಂಪನನ್ನು ಕುರಿತ ಈ ಹೇಳಿಕೆ ನೋಡಿ :"ನಾಗಚಂದ್ರನದು, ಕೋಮಲವಾದ, ಮೃದುವಾದ, ಅರಳವಾದ ಸ್ಫುಟವಾದ

ಮನೋಧರ್ಮ. ಅದರಲ್ಲಿ ಮುಚ್ಚು ಮರೆಯಿಲ್ಲ, ಕುಟಿಲತೆಯಿಲ್ಲ, ಪರಮತ ದ್ವೇಷವಿಲ್ಲದ ಧರ್ಮಾನುರಾಗದಿಂದ ಕೂಡಿದೆ ಅವನ ಮನಸ್ಸು. ಶಾಂತಿ ಸಂತುಷ್ಟಿಗಳಿಂದ ತುಂಬಿದ ಆ ಚಿತ್ತವೃತ್ತಿಗೆ ವೀರರೌದ್ರ ಭಯಾನಕಗಳ ಅನುಭವ ಕಡಿಮೆ ; ಮಧುರ ಭಾವಗಳ ಅನುಭವ ಅದಕ್ಕಿಂತ ಹೆಚ್ಚು. ಗಾನ, ಚಿತ್ರಕಲೆಗಳಲ್ಲಿ ಒಲವು ಹಿರಿದು. ವಿಶೇಷ ವಿನಯದಿಂದ ಸಾಮಾನ್ಯದ ಕಡೆಗೆ ಹಾಯುವುದು ಅವನ ಮನಸ್ಸಿನ ಶೀಲ, ರಸಿಕತೆ. ಎಂದರೆ ಬೇರೊಂದು ಪ್ರಪಂಚವನ್ನು ಸೃಷ್ಟಿಸಿ ಅದರಲ್ಲಿ ವಿಹರಿಸುವ ಶಕ್ತಿ. ಅದಕ್ಕೆ ಸ್ವಾಭಾವಿಕ ವಾದದ್ದು ಪ್ರಸನ್ನತೆ, ಸ್ನೇಹಪರತೆ, ದಯೆ, ಸಹೃದಯತೆ ಮುಂತಾದ ಸದ್ಗುಣಗಳಿಂದ ಕೂಡಿದ ಆರ್ಯನಂತೆ, ಸಾಧುವಿನಂತೆ ನಾಗಚಂದ್ರನು ಕಾಣುವನು. ಅವನ ಕಾಲದ ಉತ್ತಮ ಸಂಸ್ಕೃತಿಗೆ ಅವನು ಕೈಗನ್ನಡಿಯಾಗಿದ್ದಾನೆಂದು ಸಂದೇಹವಿಲ್ಲದೆ ಹೇಳಬ ಹುದು."

ಮತ್ತೊಂದು ತೌಲನಿಕ ವಿವೇಚನೆ ರಾಘವಾಂಕನ ಸಿದ್ಧರಾಮ ಚಾರಿತ್ರ ಕ್ಕೆ ಸಂಬಂಧಿಸಿದ್ದು. ಸಂಪಾದಕರು ಹೇಳುತ್ತಾರೆ – "ವೀರಶೈವಪುರಾಣ ಪದ್ಧತಿಗೆ ಈ ಕಾವ್ಯ ಮೇಲ್ಪಂಕ್ತಿ. ಚನ್ನಬಸವಪುರಾಣದಂಥ ಇತರ ಕಾವ್ಯಗಳು ರಾಘವಾಂಕನ ಪದ್ಧತಿಯನ್ನೇ ಹಿಡಿದು ಸಾಗಿದ್ದರೆ ಅವುಗಳ ಬೆಲೆ ಏರುತ್ತಿತ್ತು. ಅವುಗಳಲ್ಲಿ ನೆಪಮಾತ್ರಕ್ಕೆ ಕಥಾನಾಯಕನಿದ್ದಾನೆ. ವರ್ಣನೆಗಳೂ ಉಪದೇಶ ಗಳೂ ನೂರಾರು ಉಪಕಥೆಗಳೂ ತೂರಿಕೊಂಡು ಬಂದು ಮುಖ್ಯ ಕಥೆಯನ್ನು ಮಸುಳಿಸಿ ಕುಗ್ಗಿಸಿವೆ. ಆದ್ದರಿಂದ ಆ ಪುರಾಣಗ ಳಿಗೆ ಒಂದು ಗುರಿಯಿಲ್ಲ, ರಸೈಕ್ಯವಿಲ್ಲ. 'ಹಲವು ಕೊಂಬೆಗೆ ಹಾಯುವ ಮರ್ಕಟನಂತೆ' ಓದುವವರ ಮನಸ್ಸು ವಿಕ್ಷಿಪ್ತವಾಗಿ ಬಳ ಲುವುದು. ರಾಘವಾಂಕನ ಕಾವ್ಯದಲ್ಲಿ ಈ ದೋಷಗಳಾವುವೂ ಇಲ್ಲ. 'ಸಿದ್ಧರಾಮ ಪುರಾಣದ ವಿಷಯವು ಹೆಚ್ಚು ಗಂಭೀರವಾಗಿದೆ ಗುರುಭಕ್ತಿ ಗೌರವಗಳಿಂದ ಕೂಡಿದೆ : ಇದರಲ್ಲಿ ಕೀಳುಭಾವಗಳಿಗಾಗಲಿ ಸಡಿಲವಾದ ಸಂಗತಿಗಳಿಗಾಗಲಿ ಮತವೈಷಮ್ಯಕ್ಕಾಗಲಿ ಅವಕಾಶವಿಲ್ಲ. ಅತಿಶಯೋಕ್ತಿ ಹೆಚ್ಚಾಗಿಲ್ಲ." ಎಂಬ ಶ್ರೀಮಾನ್ ಎ. ಆರ್. ಕೃಷ್ಣಶಾಸ್ತ್ರಿಯವರ ಅಭಿಪ್ರಾಯ ಸಮಂಜಸವಾಗಿದೆ. ಈ ಎಲ್ಲ ಕಾರಣಗಳಿಂದ 'ಸಿದ್ಧರಾಮಚಾರಿತ್ರ'ವು ಉತ್ಕೃಷ್ಟವಾದ ವೀರಶೈವ ಪುರಾಣವೆಂದು ಧೈರ್ಯವಾಗಿ ಹೇಳಬಹುದು ಎಂದು ಇಂತಹ ಅನೇಕ ಉದಾಹರಣೆಗಳನ್ನು ಅವರ ಸಂಪಾದನ ಕೋಶದಿಂದ ಹೆಕ್ಕಿ ತೆಗೆಯಬಹುದು.

**ಕನ್ನಡದ ಯಾಸ್ಕ :**

ಕವಿಗಳ ನಿರ್ದೇಶನ ಸಂದರ್ಭದಲ್ಲಿ ಡಿ.ಎಲ್.ಎನ್. ರವರ ನೆನಪಿನ ನಿಲವುಗನ್ನಡಿಯಲ್ಲಿ ನೂರೆಂಟು ಬಿಂಬ ಪ್ರತಿಬಿಂಬ ಗಳು. ಶಬ್ದವೊಂದರ ನಿಷ್ಪತ್ತಿ ಹೇಳುವೆಡೆಯಲ್ಲೂ ಅಷ್ಟೆ. ಬಲ್ಲ ಭಾಷೆಗಳ ಎಲ್ಲ ಮೂಲಗಳನ್ನೂ ಹುಡುಕಿ ತಂದು ಹಾಕುತ್ತಾರೆ. ಪಕ್ಷಿಯಿಂದ ಒಂದು ಹಕ್ಕಿಗೆ ಸಮಾನವಾದ ಶಬ್ದ 'ಪುಳು' ಎಂಬುದನ್ನು ಸಿದಿಕಿ ತಂದು ಹೇಳುತ್ತಾರೆ. 'ಇಸಿಲ' ಎಂಬುದರ ಅರ್ಥ ಕೋಟೆಯಿಂದಾವೃತ್ತವಾದ ಪಟ್ಟಣ ಎಂದು. ಇದು ಶುದ್ಧ ಕನ್ನಡ ಪದ. ಅಶೋಕನ ಬಂಡೆ ಶಾಸನದಲ್ಲಿ ಈ ಶುದ್ಧ ಕನ್ನಡ ಸ್ಥಾನ ಇದೆ. ಅಂದರೆ ಕನ್ನಡ ಭಾಷೆಯ ಪ್ರಾಚೀನತೆ ಕ್ರಿ.ಪೂ. ೩ನೇ ಶತಮಾನಕ್ಕೂ ಹಿಂದೆ ಹೋಗುತ್ತದೆ – ಎಂದು ನಿರ್ಧರಿಸುತ್ತಾರೆ.

'ಈಳಲ್' ಪದಕ್ಕೆ ಹೆರಿಗೆಯ ಮನೆ, ಪ್ರಸವಾನುಭವವನ್ನು ನೀಗುವುದಕ್ಕಾಗಿ ಮಾಡುವ ಶುದ್ಧಿ ಸ್ನಾನ, ಮಂಗಳ ಸ್ನಾನ ಎಂಬೆಲ್ಲ ಅರ್ಥಗಳನ್ನು ತುಂಬಿ ಹೇಳುತ್ತಾರೆ. ಹೀಗೆ ಅನೇಕ ಶಬ್ದಗಳ ಜೊತೆಯಲ್ಲಿ ನಿರುಕ್ತ ವಿಹಾರ ಕೈಗೊಂಡಿದ್ದಾರೆ, ಆದುನಿಕ ಕನ್ನಡದ ಯಾಸ್ಕ ಎಂಬ ಬಿರುದಿಗೆ ಪಾತ್ರಾಗಿದ್ದಾರೆ.

**ಛಂದಸ್ಸಿನ ಚಿಕಿತ್ಸಕ :**

ಛಂದಸ್ಸನ್ನು ಕುರಿತ ಅವರ ವಿದ್ವತ್ತಿಗೆ 'ಮಾನಸೋಲ್ಲಾಸದಲ್ಲಿ ಛಂದಸ್ಸು' ಎಂಬ ಲೇಖನ ನೋಡಬೇಕು. 'ಧವಳ'ದ ಹಾಡಿನ ಸ್ವರೂಪವನ್ನೂ 'ತೋಮರ ರಗಳೆ'ಯ ನೈಜ ಅರ್ಥವನ್ನೂ ಕೊಟ್ಟಿದ್ದಾರೆ. ಸಂಪಾದನ ಕೃತಿಗಳಲ್ಲಿ ಬರುವ ಛಂದಸ್ಸುಗ ಳನ್ನು ಕುರಿತು ಪ್ರಾಸಂಗಿಕವಾಗಿ ಪ್ರಸ್ತಾಪಿಸಿದ್ದಾರೆ. ಕವಿಗಳ ಬಗೆಗಿನ ಅವರ ನಿರ್ಣಯ ನೋಡಿ : 'ಹಿಂದಿನಿಂದಲೂ ರಗಳೆ ಬಳಕೆ ಯಲ್ಲಿದ್ದರೂ ಅದರ ಸಂಪೂರ್ಣ ಸತ್ವವನ್ನೂ ವ್ಯಾಪ್ತಿಯನ್ನೂ ಮನಗಂಡು ಅದಕ್ಕೆ ಜೀವವನ್ನು ತುಂಬಿದವನು ಹರಿಹರನು. ಅವನ ಕೈಯಲ್ಲಿ ಅದು ನದಿಯಂತೆ ಸುಳಿಯುತ್ತ ಮೊರೆಯುತ್ತ ಏಳುತತ ಬೀಳುತ್ತ ಕನಲುತ್ತ ಕೊಬ್ಬತ್ತ ಬಗೆಬಗೆಯ ಬೆಡಗಿನಿಂದ ಹರಿಯುತ್ತದೆ. ಅವನ ಸ್ಫೂರ್ತಿ ವಿಶೇಷವೂ ಭಕ್ತಿ ಪರವಶತೆಯೂ ಪ್ರತಿಭೆಯ ಸಂಚಾರವೂ ಅವನ ರಗಳೆಯನ್ನು ಇಚ್ಛೆ ಬಂದ ಹಾಗೆ ಕುಣಿಸುತ್ತದೆ. ನಂದಿಯ ಧ್ವಜವನ್ನು ನರ್ತನ ಮಾಡಿಸುವವನಂತೆ ಹರಿಹರನು ತನ್ನ ರಗಳೆಗೆ ಲಾಸ್ಯವಿದ್ಯೆಯನ್ನು ಕಲಿಸಿ ಕೊಟ್ಟಿದ್ದಾನೆ. ಅವನ ವ್ಯಕ್ತಿತ್ವವು ಅವನ ರಗಳೆಯಲ್ಲಿ ಪ್ರಕಟವಾಗಿರುವಷ್ಟು ಸಾಂದ್ರವಾಗಿ, ಮನೋಹರವಾಗಿ ಅವನ ಚಂಪೂಕಾವ್ಯ

ವಾದ 'ಗಿರಿಜಾ ಕಲ್ಯಾಣದಲ್ಲಿಯೂ ಪ್ರಕಾಶವಾಗಿಲ್ಲ. ಹರಿಹರನ ಕೀರ್ತಿ ಆಚಂದ್ರಾರ್ಕವಾಗಿ ನಿಲ್ಲುವುದು ಅವನ ರಗಳೆಗಳಿಂದ. ಆ ಚಂಪೂ ಕಾವ್ಯವನ್ನು ಅವನು ಬರೆಯದಿದ್ದರೂ 'ರಗಳೆಯ ಕವಿ' ಎಂಬ ಪರಿಹಾಸ್ಯಕ್ಕೆ ಅವನು ಈಡಾಗಿದ್ದರೂ ಅವನ ಶಿವಶರಣರ ರಗಳೆಗಳೇ ಸಾಕು ಅವನ ಕಾವ್ಯ ಮಹಿಮೆಯನ್ನು ಸಾರುವುದಕ್ಕೆ. ಭಾಮಿನೀ ಷಟ್ಪದಿಗೆ ಕುಮಾರವ್ಯಾಸನು ಹೇಗೋ ಹಾಗೆ ರಗಳೆಯ ಛಂದಸ್ಸಿಗೆ ಹರಿಹರನು'[೧೦]

**ಖ್ಯಾತ ವೈಯಾಕರಣಿ :**

ಶ್ರೇಷ್ಠ ಛಂದಸ್ ಶಾಸ್ತ್ರಜ್ಞರಾದ ಡಿ.ಎಲ್.ಎನ್. ಉತ್ತಮ ವೈಯಾಕರಣಿಯೂ ಆಗಿದ್ದಾರೆ. ಕೇಶಿರಾಜನ ಶಬ್ದಮಣಿ ದರ್ಪಣವನ್ನು ಉತ್ತಮ ರೀತಿಯಲ್ಲಿ ಸಂಪಾದಿಸಿ ಕೊಟ್ಟಿರುವುದೇ ಇದಕ್ಕೆ ನಿದರ್ಶನ. ಅವರಿಗೆ ಶಾಸನ ಶಾಸ್ತ್ರದ ಪರಿಚಯವೂ ಸಾಕಷ್ಟು ಇದ್ದಿತು. ಇದಕ್ಕೆ ಅವರು ಗ್ರಂಥಸಂಪಾದನಾ ಸಂದರ್ಭದಲ್ಲಿ ಬಳಸಿಕೊಮಡಿರುವ ಶಾಸನಗಲೆ ಸಾಕ್ಷಿ.

---

[೧೦] ಪೀಠಿಕೆಗಳು, ಲೇಖನಗಳು ಪು. ೪೨೯

**ಕಾವ್ಯ ಮೀಮಾಂಸಕ : ಸಾಹಿತ್ಯ ವಿಮರ್ಶಕ**

ಡಿ.ಎಲ್.ಎನ್. ರವರು ಗಣ್ಯ ಕಾವ್ಯಮೀಮಾಂಸಕರೂ ಹೌದು ; ಸಹೃದಯ ಸಾಹಿತ್ಯ ವಿಮರ್ಶಕರು ಹೌದು. ಅವರ ವಿದ್ವತ್ ಪ್ರತಿಭೆಗೆ ಸಾಕ್ಷಿಯಾಗಿ ಅವರ ಕಾವ್ಯವನ್ನು ಕುರಿತ ಅದರಲ್ಲೂ ಶೈಲಿಯನ್ನು ಕುರಿತ ಪ್ರೌಢ ಪ್ರಬಂಧ ನಿಂತಿದೆ. ಅವರ ಕಾವ್ಯ ಕಲಾಪ್ರತಿಭೆಗೆ ಸಾಕ್ಷಿಯಾಗಿ ಅವರ ಹತ್ತಾರು ಮಿಮರ್ಶಾ ಲೇಖನಗಳು ನಿಂತಿವೆ.

ಶೈಲಿಯನ್ನು ಕುರಿತ ಅವರ ನಿರ್ವಚನ ಹೀಗಿದೆ –

ಶೈಲಿ ಎಂದರೆ ಏನು ? ಎಂಬ ಪ್ರಶ್ನೆಗೆ ಸರಿಯಾದ ಸೂತ್ರಪ್ರಾಯವಾದ ಉತ್ತರವೊಂದನ್ನು ಕೊಡುವುದು ಕಷ್ಟ. ಅದರಲ್ಲಿ ಮಾತಿನ ಮಾಲೆಗೆ ನಿಲುಕದ ನಿಗೂಢ ತತ್ವವಡಿಗಿರುವಂತಿದೆ. ಇದೇ ಅದರ ಗುಟ್ಟು ಎಂದು ಬೆರಳಿಟ್ಟು ತೋರಿಸುವಂತಿಲ್ಲ. ಅದು ಬರವಣಿಗೆಯ ಒಂದು ಲಕ್ಷಣ ಅಥವಾ ಗುಣ ಎಂದು ಕೆಲವರ ಅಭಿಪ್ರಾಯ. ಇದರಂತೆ 'ಶೈಲಿ' ಎಂಬುದು ಹೊರಗಡೆ ಅಲಂಕಾರಕ್ಕಾಗಿ ಹಾಕಿಕೊಳ್ಳುವ ವೇಷಭೂಷಣಗಳಿದ್ದ ಹಾಗೆ. 'ಶೈಲಿ ಆಲೋಚನೆಗಳ ಉಡುಪು' ಎಂಬ ಸೂತ್ರ ಈ ಮತಕ್ಕೆ ಆಧಾರ. ಇಲ್ಲಿ 'ಆಲೋಚನೆ' ಎಂಬ ಪದಕ್ಕೆ ಇರುವ ಅರ್ಥ ಬಹು ವಿಸ್ತಾರವಾದುದು. ಕವಿಯ ಮನಸ್ಸಿನಲ್ಲಿ ಏಳುವ ಚಿಂತನೆಗಳು, ಭಾವೋದ್ರೇಕಗಳು, ಬಗೆ ಬಗೆಯ ಅನುಭವಗಳು, ಸಂಕೋಚ, ವಿಕಾಸಗಳು – ಇವೇ ಮೊದಲಾದ ಮಾನಸಿಕ ಪ್ರಪಂಚಕ್ಕೆ ಎಲ್ಲ ವ್ಯಾಪಾರಗಳೂ ಆ ಪದದಿಂದ ನಿರ್ದಿಷ್ಟವಾಗಿವೆ. ಅವನ್ನು ಒಂದು ಮಾತಿನಲ್ಲಿ ಚಿತ್ತವೃತ್ತಿ ಅಥವಾ ಮನೋಧರ್ಮ ಎಂದು ಕರೆಯಬಹುದು. ಎಂದರೆ ಶೈಲಿ ಕವಿಯ ಚಿತ್ತವೃತ್ತಿಯ ಉಡುಪು ಎಂದಾಗುತ್ತದೆ. ಈ ಅಭಿಪ್ರಾಯದಲ್ಲಿ ಬಹುಮಟ್ಟಿಗೆ ನಿಜಾಂಶವಿದ್ದರೂ ಪೂರ್ತಿ ಸಮರ್ಪಕವಾಗಿವೆಯೆಂದು ಕೆಲವರು ಒಪ್ಪುವುದಿಲ್ಲ. ಅವರು ಹೇಳುವಂತೆ ಶೈಲಿ ಚಿತ್ತವೃತ್ತಿಯ ಉಡುಪು ಮಾತ್ರವಲ್ಲ ; ಅವೆರಡಕ್ಕೂ ಇರುವ ಸಂಬಂಧ ಇನ್ನೂ ಹೆಚ್ಚು ನಿಕಟವಾದದ್ದು ; ಉಡುಪನ್ನು ಧರಿಸಬಹುದು, ತೆಗೆದುಹಾಕಬಹುದು, ಆದರೆ ಶೈಲಿಯನ್ನು ಮನೋಧರ್ಮದಿಂದ ಬೇರ್ಪಡಿಸಲಾಗುವುದಿಲ್ಲ. ಆದ್ದರಿಂದ 'ಶೈಲಿ ಚಿತ್ತವೃತ್ತಿಯ ಚರ್ಮ' ಎಂದು ಅವರ ವಾದ. ಶೈಲಿ ಏನೆಂಬುದರ ವಿವೇಚನೆಯಲ್ಲಿ ಈ ಎರಡನೆಯ ಸೂತ್ರ ಮೊದಲನೆಯ ಸೂತ್ರಕ್ಕಿಂತ ಹೆಚ್ಚು ಮುಂದುವರೆದಿದೆ. ಇನ್ನೂ ಮುಂದೆ ಹೋದರೆ ಶೈಲಿಗೂ ಚಿತ್ತವೃತ್ತಿಗೂ ಇರುವ ದ್ವೈತ ಸಂಬಂಧವು ಮಾಯವಾಗಿ 'ಶೈಲಿಯೇ ವ್ಯಕ್ತಿತ' ಎಂಬ ಅದ್ವೈತದಲ್ಲಿ ಪರ್ಯವಸನವಾಗಿ ಚಿತ್ತವೃತ್ತಿಯೇ ಮನೋಧರ್ಮವೇ ಅಥವಾ ವ್ಯಕ್ತಿತ್ವವೇ ಶೈಲಿ ಎಂಬ ತತ್ವವು ಹೊರಪಡುತ್ತದೆ. ಇದು ಮೂರನೆಯ ಪಂಥ.

ಈ ಕೊನೆಯ ಸೂತ್ರದಲ್ಲಿ ಮೊದಲ ಎರಡೂ ಅಂತರ್ಗತವಾಗುತ್ತವೆ. ಕಾವ್ಯದಲ್ಲಿ ಆದಷ್ಟು ಅಲಂಕಾರ ಚಮತ್ಕಾರಗಳನ್ನು ತುಂಬಬೇಕೆಂದು ಕವಿಯ ಮನೋಧರ್ಮವಿದ್ದರೆ ಅವನ ಶೈಲಿ ಅಲಂಕಾರಮಯವಾಗುತ್ತದೆ. ಉಕ್ತಿ ವೈಚಿತ್ರದಿಂದ ತುಂಬಿಕೊಳ್ಳುತ್ತದೆ. ಅವನ ಮನಸ್ಸು ಆ ರೀತಿ ಕಾವ್ಯಕರ್ಮದಲ್ಲಿ ಪ್ರವರ್ತಿಸುವುದು ಅನಿವಾರ್ಯವಾಗುತ್ತದೆ. ಮನಸ್ಸು ಮಾರ್ಪಟ್ಟ ಹೊರತು ಶೈಲಿ ಮಾರ್ಪಡಲು ಅವಕಾಶವಿಲ್ಲ. ಅದು ಮೂಲ ಮೂರ್ತಿಯದರೆ ಶೈಲಿ ಉತ್ಸವ ವಿಗ್ರಹ. ವಸ್ತುವಿದ್ದರೆ ಅದರ ನೆರಳು, ವಸ್ತುವಿಲ್ಲದಿದ್ದರೆ ಕನ್ನಡಿಯಲ್ಲಿ ಅದರ ಬಿಂಬ ಕಾಣುತ್ತದೆಯೇ ? ವ್ಯಕ್ತಿ ವಿಶೇಷವಿಲ್ಲದಿದ್ದರೆ ಶೈಲಿಯೂ ಇಲ್ಲ. ಧರ್ಮವಿಲ್ಲದಿದ್ದರೆ ದೇಹ ಉಳಿದೀತೆ ? ಆದರೆ ಧರ್ಮವೇ ದೇಹವೇ ? ಸಿಪ್ಪೆಯೇ ಸೇಬಿನ ಹಣ್ಣೇ ? ಎಂಬ ಸಂಶಯ ಹುಟ್ಟುತ್ತದೆ. ಈ ರೀತಿ ವಿಂಗಡಿಸುವುದು ಸರಿಯಲ್ಲ, ಸಿಪ್ಪೆ ಹಣ್ಣಿನ ಒಂದು ಬಾಗ, ಸೇಬಿನ ಹಣ್ಣು ಎಂದು ಕೂಡಲೇ ಸಾಧಾರಣವಾಗಿ ಯಾರಿಗೂ ಸಿಪ್ಪೆ ಇಲ್ಲದ ಆ

ಹಣ್ಣಿನ ಕಲ್ಪನೆ ಬರುವುದಿಲ್ಲ. ದೇಹ ಎಂದು ಹೇಳಿದರೆ ಧರ್ಮ ಸುಲಿದ ಶರೀರದ ಕಲ್ಪನೆ ಬರುವುದಿಲ್ಲ. ಆದ್ದರಿಂದ ಹಣ್ಣೆಂದರೂ ದೇಹವೆಂದರೂ ಮನಸ್ಸಿನ ಮುಂದೆ ಬರುವ ಚಿತ್ರದಲ್ಲಿ ಅದರದರ ಮೇಲ್ಮುಸುಕೂ ಸೇರಿಕೊಂಡಿರುತ್ತದೆ. ವ್ಯಕ್ತಿತ್ವವೆಂದು ಹೇಳಿದರೂ ವ್ಯಕ್ತಿಯ ಒಳಗೂ ಹೊರಗೂ ಅದರಲ್ಲಿ ಸಮಾವೇಶವಾಗುತ್ತದೆ. ಶೈಲಿ ವ್ಯಕ್ತಿತ್ವದ ಪಡಿನೆರಳಾದರೆ ಅದರಲ್ಲಿ ವ್ಯಕ್ತಿಯ ಹೊರಗು ಒಳಗುಗಳ ಪ್ರತಿಫಲಿತಬೇಕು. ಅವು ಸಮತೂಕದಲ್ಲಿಯೇ ಇರಬೇಕೆಂಬ ನಿಯಮವೇನೂ ಇಲ್ಲ. ಒಳಗಣವು ಹೆಚ್ಚಿರ ಬಹುದು, ಹೊರಗಣದು ಕಡಿಮೆ ಇರಬಹುದು. ಅವುಗಳ ಪ್ರಮಾಣದಲ್ಲಿ ವ್ಯತ್ಯಾಸವಿರಬಹುದು ಅಷ್ಟೆ. ಅಂತೂ ಎರಡು ಎದ್ದೇ ಇರುತ್ತದೆ. ಹಣ್ಣು ಎಮಬುದು ನೆನಪಿಗೆ ಬಂದರೆ ಕೊಂಚ ಹೊತ್ತು ಅದರ ಬಣ್ಣ ಕಣ್ಮುಂದೆ ಸುಳಿದಾಡಿದರೂ ಅದಕ್ಕಿಂತಲೂ ಹೆಚ್ಚಾಗಿ ಅದರ ರುಚಿ ಬಾಯಲ್ಲಿ ನೀರೂರಿಸುತ್ತದೆ. ತಿರುಳು ಸಿಪ್ಪೆಗಿಂತ ಹೆಚ್ಚು ರುಚಿಯಲ್ಲವೆ ? ಚಿತ್ತವೃತ್ತಿಯೂ ಹೊರಗಣ ಥಳುಕಿಗಿಂತ ಹೆಚ್ಚು ಸ್ವಾರಸ್ಯವಾದುದು. ಅಂಥ ಶೀಲವು ಹೊರಗಣ ಶೀಲಕ್ಕಿಂತ ಹೆಚ್ಚು ಮುಖ್ಯವಾದುದು. ಈ ದೃಷ್ಟಿಯಿಂದ ನೋಡಿದರೆ ಈ ಸೂತ್ರಗಳೆಲ್ಲ ಒಂದಕ್ಕೊಂದು ಪೂರಕವಾಗಿರುವಂತೆ ತೋರುತ್ತದೆ.

ಈ ದ್ವೈತಾಭಿಪ್ರಾಯವನ್ನು ಒಪ್ಪದ ಬೇರೊಂದು ಪಂಗಡದವರಿದ್ದಾರೆ. ಆ ಸೂತ್ರದಲ್ಲಿ ಆಸಕ್ತಿ ಇದೆಯೆಂದು ಕಾಣುತ್ತದೆ. ಅದರಲ್ಲಿ ತಿದ್ದುಪಡಿ ಮಾಡಿದ ಹೊರತು ಇವರು ಅದನ್ನು ಇರುವಂತೆಯೇ ಅಂಗೀಕರಿಸಲು ಒಪ್ಪರು. ಎಷ್ಟೇ ಆತ್ಮ ತೃಪ್ತಿಗಾಗಿ ಕವಿ ಕಾವ್ಯವನ್ನು ಹೇಳಿ, ಅದನ್ನು ಓದುವವರು ಕೆಲವರಾದರೂ ಇರುತ್ತಾರೆ. ಅದನ್ನು ಬರೆಯುವಾಗ ಕವಿಯ ಮನಸ್ಸು ಬೇರೊಂದು ಕಲಾಪ್ರಪಂಚದಲ್ಲಿ ಸಂಚಾರ ಮಾಡುತ್ತಿದ್ದರೂ ಬರೆದು ಮುಗಿಸಿದ ಮೇಲಂತೂ ಅದು ವಾಚಕರ ಸ್ವತ್ತಾಗುತ್ತದೆ. ತಾನು ಪಟ್ಟ ಆನಂದವನ್ನು ಇತರರಿಗೂ ನಿವೇದಿಸುವುದು ಕವಿಯ ಕೆಲಸ. ಪಾಠಕರು ಅವನ ಕಾವ್ಯವನ್ನು ಓದಿ ತಮ್ಮ ಶಕ್ತಿ ಇರುವಷ್ಟು ಮಟ್ಟಿಗೆ ಅದೇ ಆನಂದವನ್ನು ಅನುಭವಿಸಲು ಪ್ರಯತ್ನಪಡುತ್ತಾರೆ. ಅದೇ ಪ್ರಪಂಚವನ್ನು ತಿರುಗಿ ಸೃಷ್ಟಿಸಿಕೊಳ್ಳಲು ಹವಣಿಸುತ್ತಾರೆ. ಒಂದು ಕಡೆ ಕವಿ ಇನ್ನೊಂದು ಕಡೆ ವಾಚಕವೃಂದ. ಇಬ್ಬರಿಗೂ ಮಾನಸಿಕ ಸಂಬಂಧವನ್ನು ಕಲ್ಪಿಸಿಕೊಡುವುದು ಕಾವ್ಯ. ಕವಿಯ ಮನಸ್ಸಿನ ಸಾಂಧ್ರವಾದ ಪರಿಚಯವು ಓದುಗನಿಗೆ ಉಂಟಾಗುವುದು ಅವನ ಕಾವ್ಯದ ಮೂಲಕ. ಈ ಪರಿಚ ಯವು ಎಷ್ಟೆಷ್ಟು ನೇರವಾಗಿ ಸ್ಫುಟವಾಗಿ, ಸರಿಯಾಗಿ ಪಾಠಕನಿಗೆ ಉಂಟಾಗುತ್ತದೋ ಅಷ್ಟಷ್ಟು ಆ ಕಾವ್ಯದ ಶೈಲಿ ಉತ್ಕೃಷ್ಟವಾ ದದ್ದು, ಇದಾಗಬೇಕಾದರೆ ಅವನ ಚಿತ್ತವೃತ್ತಿಯಲ್ಲಿಯೂ ಇಂಥ ಅಪೂರ್ವಗುಣಗಳು ತುಂಬಿರಬೇಕು. ಅವನ ಆ ಮಾನಸಿಕ ಶಕ್ತಿಯಿಂದ ಶೈಲಿ ಹುಟ್ಟುತ್ತದೆ. ಆದ್ದರಿಂದ ಶೈಲಿ ಎಂಬುದು ಈ ಪಂಗಡದ ಅಭಿಪ್ರಾಯದಂತೆ"ವರ್ಣನೀಯವಾದ ಒಂದು ಆಲೋಚನೆಗೆ ಅದರಿಂದ ನಿರಿಕ್ಷಿತವಾದ ಪರಿಣಾಮ ಪೂರ್ತಿಯಾಗಿ ಹೊರಪಡುವಂತೆ ಮಾಡತಕ್ಕ ಸಂದರ್ಭ ವಿಶೇಷಗಳನ್ನೆಲ್ಲ ಜೋಡಿಸುವುದು" ಇದನ್ನು ಒಪ್ಪಿಕೊಂಡರೆ ಶೈಲಿ ಮನಸ್ಸಿನ ಈ"ಜೋಡಿಸುವ" ಶಕ್ತಿ ಎಂದಾಗುತ್ತದೆ. ಇದು ಒಬ್ಬೊಬ್ಬ ವ್ಯಕ್ತಿಯಲ್ಲಿ ಒಂದೊಂದು ಬಗೆಯಾಗಿರುತ್ತದೆ. ವ್ಯಕ್ತಿತ್ವವೆಂದೂ ಇದನ್ನು ಕರೆಯಬಹುದು. ಇದನ್ನು ಬೇರೊಬ್ಬನು ಕದಿಯಲಾಗುವುದಿಲ್ಲ. ಅನು ಕರಿಸಲಾಗುವುದಿಲ್ಲ. ಬರವಣಿಗೆಯಲ್ಲಿ ಇದು ಅಚ್ಚೊತ್ತಿದಂತೆ ಇಳಿದು ಬಂದರೆ ಅಲ್ಲಿ ಶೈಲಿ ಬರುತ್ತದೆ. ಆದರೆ ಅದು ವ್ಯಕ್ತಿತ್ವವಲ್ಲ. ಅದರ ಪ್ರತಿಬಿಂಬ ಮಾತ್ರ. ಆದ್ದರಿಂದ ಈ ಅಭಿಪ್ರಾಯದಂತೆ"ಶೈಲಿ ವ್ಯಕ್ತಿತ್ವದ – ಚಿತ್ತವೃತ್ತಿ, ಮನೋಧರ್ಮ, ಶೀಲ ಎಂಬುವು ಬೇರೆ ಹೆಸರುಗಳು. – ಪ್ರತಿಬಿಂಬ" ಎಂದು ಈಗಿನ ಮಟ್ಟಿಗೆ ತಿಳಿದುಕೊಳ್ಳಬಹುದು.[೧೧]

ಡಿ.ಎಲ್.ಎನ್.ರವರ ಶೈಲಿಯನ್ನು ಗುರುತಿಸಬೇಕಾದರೆ ಅವರ ಭಾವನಾ ವಿಮರ್ಶೆಗಳನ್ನು ನೋಡಬೇಕು. ಭಾವನಾ ವಿಮರ್ಶೆ ಎಂದರೆ ಒಂದೊಂದು ಕೃತಿ ಬಗೆಗೆ ಒಂದೊಂದು ನಿಖರವಾದ ಮಾತು ಆಡಿಬಿಡುವುದು. ಅಂಥಲ್ಲಿ ಅವರ ಹೃದ್ಯ ವಾದ ಗದ್ಯಶೈಲಿ ವೇದ್ಯವಾಗುತ್ತದೆ.

೧) ಪದಗಳ ಹುಟ್ಟು ಸಾವು ಕುರಿತು –

"ಮನುಷ್ಯ ಹುಟ್ಟಿ ಬೆಳೆದು ದೊಡ್ಡವನಾಗಿ ಮುಪ್ಪಡಿಸಿ ಸಾಯುತ್ತಾನೆ. ಏಕೆ ಸಾಯುತ್ತಾನೆ ಎಂದು ಕೇಳಿದರೆ ಅದಕ್ಕೆ ಉತ್ತರ ಹೇಳಬಲ್ಲವರು ಯಾರು ? ಅದೊಂದು ಪ್ರಕೃತಿ ನಿಯಮ ಎಂದಷ್ಟೇ ಹೇಳಬೇಕಾಗುತ್ತದೆ. ಶಬ್ದಗಳು ನಷ್ಟವಾಗುವುದೂ ಹೀಗೆ ಒಂದು ಪ್ರಕೃತಿ ನಿಯಮವೆಂದು ತೋರುತ್ತದೆ"[೧೨]

೨)"ಗೋದಾವರಿಯ ಉತ್ತರದಲ್ಲಿ ಕನ್ನಡವನ್ನು ಹುಡುಕಲಿಕ್ಕೆ ಹೊರಡುವುದು ಊರಲ್ಲಿಲ್ಲದವರನ್ನು ಹೆಸರು ಹಿಡಿದು ಕೂಗಿದ ಹಾಗೇ ಅಲ್ಲವೆ?"[೧೩]

---

[೧೧] ಅದೇ ಪು. ೫೮-೫೯

[೧೨] ಅದೇ ಪು. ೯೨೧

[೧೩] ಅದೇ ಪು. ೬೨೩

೩)"ನೀರಿಗೆ ಬಿದ್ದ ಮೇಲೆ ಬುರುಡೆಯಂತೆ ಗಾಳಿ ಹೊಡೆದತ್ತ ಅಲೆದಾಡುವ ಜಾತಿ ಜನಾಂಗಗಳನ್ನು ಹಿಡಿದುಕೊಂಡು ಯಾವ ಸಿದ್ಧಾಂತವನ್ನಾದರೂ ಮಾಡಲು ಸಾಧ್ಯವೆ?"[೧೪]

೪) ಕಾರಂತರ ಮರಳಿ ಮಣ್ಣಿಗೆ ಕುರಿತು ಹೇಳುತ್ತಾ –"ಇವರಿಗೆ ಪ್ರೇರಣೆ ಅನಂತವಾದ ಕಡಲಸಹರ : ಅದಕ್ಕಿಂತಲೂ ಅಗಲವಾದ ಆಳವಾದ, ಸಕಲ ರೂಪಗಳನ್ನು ತಾಳುವ ಜೀವನ ಸಾಗರ'[೧೫]

೫) ಅನಕೃರವರ ಜೀವನ ಯಾತ್ರೆ ಕಾದಂಬರಿ ಕುರಿತು –

'ಪ್ರಕೃತ ಕಲಾದೃಷ್ಟಿಯಿಂದ' ಜೀವನ ಚರಿತ್ರೆಯನ್ನು ನೋಡುವುದಾದರೆ ಪಟ್ಟಣ ನೋಡುವುದಕ್ಕೆ ಹೋಗಿ ಚರಂಡಿ ಹೊಕ್ಕಂತಾಗಿದೆ"[೧೬]

೬) ಬುರ್ಲಿ ಬಿಂದುಮಾಧವ ಸಂಪಾದಿತ ಕರ್ನಾಟಕ ದರ್ಶನ ಕುರಿತು –

"ಆಂಜನೇಯನ ಶಕ್ತಿ ಆತನಿಗೇ ತಿಳಿದಿರಲಿಲ್ಲವಂತೆ. ಆಪ್ತರ ಹೇಳಿಕೆಯಿಂದ ಆ ಜ್ಞಾನ ಅವನಿಗೆ ಬಂತಂತೆ. ಇಂದು ಕನ್ನಡಿಗರ ಪಾಡು ಹೀಗಾಗಿದೆ. ಅವರ ಸತ್ವವನ್ನು ಅವರಿಗೆ ತಿಳಿಸುವ ಕನ್ನಡಿ ಬೇಕಾಗಿದೆ. ಕರ್ನಾಟಕ ದರ್ಶನ' ಇಂಥ ಒಂದು ಕನ್ನಡಿ.[೧೭]

೭) ಕಾರಂತರ ಕನ್ಯಾಬಲಿ ಕುರಿತು –

ಈ ಗ್ರಂಥದಲ್ಲಿ ಶಿವರಾಮ ಕಾರಂತರು ಬಾಲವಿಧವೆ ಮಾಲತಿಯ ಜೀವನ ಕಥೆಯನ್ನು ಚಿತ್ರಿಸಿದ್ದಾರೆ. ತುಂಬಿದ ಯೌವನದಿಂದ ಅವಳು ಬೆಳೆದು ಬೀಗಿದ ಬಾಳೆಯ ಸುಳಿಯಂತೆ ಕಂಗೊಳಿಸುತ್ತಾಳೆ. ಆದರೆ ಅವಳ ಬಾಳು ಮರಳಲ್ಲಿ ಬಿದ್ದ ಮಾವಿನ ಹಣ್ಣು[೧೮]

೮) ಬ್ರಹ್ಮಶಿವನ ಸಮಯಪರೀಕ್ಷೆ ಕುರಿತು ಪಾಠ ಮಾಡುತ್ತಾ ಹೇಳೀದರು :"ಬ್ರಹ್ಮಶಿವನ ಕೈಯಲ್ಲಿ ಬೈಸಿಕೊಳ್ಳುವುದು ಒಂದು ಥರಾ ಚೆಂದ ಕಣಯ್ಯ" ಎಂದು ಇಂಥೆಡೆಗಳಲ್ಲಿ ಅವರನ್ನು ಕಾಣಬಹುದು ಅವರ ಶೈಲಿಯನ್ನು ಗುರುತಿಸುವ ಮೂಲಕ. ಡಿ.ಎಲ್.ಎನ್ ರವರ ಶುಚಿ, ರುಚಿ ವಿಮರ್ಶೆಯ ಮೂಲಕವೂ ಅವರ ಶೈಲಿ ಸುವೇದ್ಯ. ಹರಿಹರನನ್ನು ಕುರಿತ ಈ ಹೇಳಿಕೆ ನೋಡಿ : 'ಸಾಹಿತ್ಯ ಕಲೆಗೆ ಅವನಿಂದ ಆಗಿರುವ ಪ್ರಯೋಜನ ಹಲವು ರೀತಿಯಾಗಿದೆ. ಚಂಪೂ ಪದ್ಧತಿಯನ್ನು ಬಹುಶಃ ಹಿಮ್ಮೆಟ್ಟಿಸಿದವನು, ಅದರ ಪ್ರಚಾರವನ್ನು ಕುಗ್ಗಿಸಿದವನು ಹರಿಹರ. ಹಣವಂತರ ಮನೆಯ ಬಡ ತೊತ್ತಿನಂತೆ ಬಿದ್ದಿದ್ದ ರಗಳೆಯನ್ನು ಕೈಹಿಡಿದು ಅದಕ್ಕೆ ಜೀವದಾನ ಮಾಡಿ ತಲೆಯೆತ್ತಿ ನಡೆಯುವಂತೆ ಮಾಡಿದವನು ಅವನು. ತನ್ನ ವೇಷ ಬಿಗಿಥೋರಣೆ ಹೊಳಪು ಗಳಿಂದ ಗದ್ಯಶೈಲಿಯನ್ನು ಅವನು ಬೆಳಗಿದನು. ಅದು ಚಂಪೂ ಕಾವ್ಯಗಳಲ್ಲಿ ಸಾಮಾನ್ಯವಾಗಿ ಕಾಣುವ ನೀರಸವಾದ ಸತ್ತ ಮಾತುಗಳ ಸಮುದಾಯವಲ್ಲ. ಅದರಲ್ಲಿ ತೇಜಸ್ಸಿದೆ, ಸತ್ಯವಿದೆ. ಹೀಗೆ ಗದ್ಯಪದ್ಯಗಳಲ್ಲಿ ಅವು ತೋರಿಸಿರುವ ದಾರಿ ಅವನ ಸ್ವಾತಂತ್ರ್ಯ ರಮಣೀಯತೆಗಳನ್ನೂ ಕವಿತಾವಿವೇಕವನ್ನೂ ಸಾರುತ್ತಿದೆ. ಅವನು ಸಲ್ಲಿಸಿರುವ ಸೇವೆ ಇಲ್ಲಿಯವರೆಗೂ ಕಾಣುವ ಹಾಗೆ ನಿಂತಿದೆ. ತನ್ನ ಕಾಲದ ಸಾಹಿತ್ಯಕ್ಕೆ ಸೀಮಾಪುರುಷ ಹರಿಹರ. ಕನ್ನಡ ಸಾಹಿತ್ಯ ಮಂದಿರದ ಚಿನ್ನದ ಕಲಶಗಳಲ್ಲಿ ಅವನು ಒಬ್ಬನು.

---

[೧೪] ಅದೇ ಪು. ೬೨೬

[೧೫] ಅದೇ ಪು. ೬೨೮

[೧೬] ಅದೇ ಪು. ೬೫೪

[೧೭] ಅದೇ ಪು. ೬೫೮ [೧೮] ಅದೇ ಪು. ೬೬೨

ಬಹು ಎತ್ತರದಲ್ಲಿ ನಿಂತು ಆ ಕಲಶ ತನ್ನ ಕಾಂತಿಯನ್ನು ಎಲ್ಲ ದಿಕ್ಕುಗಳಿಗೂ ಚೆಲ್ಲಿ ನಾಡಮೇಲೆಲ್ಲ ಬೆಳದಿಂಗಳನ್ನು ಹರಡಿದೆ. ಅದು ಎಂದೂ ಮಸುಳದೆ ನಿಲ್ಲಲಿ ; ಕನ್ನಡ ಜನತೆಗೆ ಹೆಮ್ಮೆಯ ಕೀರ್ತಿಸ್ತಂಭವಾಗಿರಲಿ.'[೧೯]

ಇಂಗ್ಲಿಷಿನ ಬಗ್ಗೆ ಮಾತನಾಡುತ್ತಾ ಹೀಗೆ ಹೇಳಿದ್ದಾರೆ :

“ಇಂಗ್ಲೀಷು ಭಾಷಾ ಸಾಹಿತ್ಯಗಳ ಅಭ್ಯಾಸ ನಮಗುಂಟಾದದ್ದು ನಮ್ಮ ನಾಢಿನ ಪುನರುಜ್ಜೀವನಕ್ಕೂ ಕಾರಣ. ಅದು ಕತ್ತಲೆಯ ಮನೆಗೆ ಬೆಳಕನ್ನು ತುಂಬಿಸುವ ಕಿಟಕಿಯಾಯಿತು. ಅದರ ಮೂಲಕ ಆ ಸಾಹಿತ್ಯದ ಪರಿಚಯವೊಂದೇ ಅಲ್ಲದೆ ಇತರ ಪಾಶ್ಚಾತ್ಯ ದೇಶಗಳ ಸಾಹಿತ್ಯಗಳೂ ನಮ್ಮ ಕೈಗೆ ಸಿಕ್ಕಿದವು. ವಿಜ್ಞಾನ ಶಾಸ್ತ್ರಗಳೂ ರಾಜ್ಯತಂತ್ರವೂ ಅರ್ಥಶಾಸ್ತ್ರವೂ ನಮಗೆ ಹೊಸ ಕಣ್ಣನ್ನು ಕೊಟ್ಟವು. ನಮ್ಮ ದೃಷ್ಟಿ ವಿಶಾಲವಯಿತು. ವಿಚಾರಶಕ್ತಿ ಬೆಳೆಯಿತು.ಯಾವುದನ್ನೂ ವಿಮರ್ಶಿಸಿ ಒರೆಹಚ್ಚಿ ತಿರುಳನ್ನು ಗ್ರಹಿ ಸುವ ಸಾಮರ್ಥ್ಯ ಬಲಿಯಿತು. ಚರಿತ್ರೆಯ ವ್ಯಾಸಂಗದಿಂದ ನಮ್ಮಲ್ಲಿ ಚಾರಿತ್ರಿಕ ದೃಷ್ಟಿ ಅಂಕುರಿಸಿತು. ನಮ್ಮ ಬದುಕಿಗೂ ಸಾಹಿ ತ್ಯಕೂ ತ್ಯಕ್ಕೂ ತೀರ ಬೇರೆಯಾದ ಈ ಇಂಗ್ಲಿಷ್ ಸಂಸ್ಕೃತಿಯ ಸಂಪರ್ಕ ನಮ್ಮ ಏಳಿಗೆಯ ದಾರಿಯನ್ನು ಕಾಣಿಸಿತು. ಅದರ ಪ್ರಭಾವ ನಮ್ಮ ಬದುಕಿನ ಪ್ರತಿಯೊಂದು ನಡವಳಿಕೆಯಲ್ಲಿಯೂ ತುಂಬಿಕೊಂಡಿದೆ. ನಮ್ಮಲ್ಲಿರುವ ಕೊರತೆಗಳನ್ನು ನೀಗಿ ನಮ್ಮ ದೇಶದ ಬಯಕೆಗಳನ್ನು ಈಡೇರಿಸಿಕೊಳ್ಳುವ ಹಂಬಲ ನಮಗೆ ಉಂಟಾದದ್ದು ಅದರಿಂದ. ಇಂಗ್ಲಿಷ್ ಸಾಹಿತ್ಯವನ್ನು ಚೆನ್ನಾಗಿ ಓದಿ ಅದರ ಅಂದಕ್ಕೆ ಸೋತು ತಮ್ಮ ನಾಡುಭಾಷೆಗಳಲ್ಲಿಯೂ ಅದನ್ನು ರೂಪಿಸುವ ಪ್ರೇರಣೆ ಸಾಹಿತಿಗಳಿಗೆ ಬಂತು. ‘ಇಂಗ್ಲಿಷ್ ಗೀತ ಗಳು’ ಎಂಬ ಇಂಗ್ಲಿಷ್ ಕವಿತೆಗಳ ಅನುವಾದ ಸಂಗ್ರಹ”ಇಂಗ್ಲಿಷ್ ಸಾಹಿತ್ಯ ಸಮುದ್ರದ ಕೆರೆಯಲ್ಲಿ ತೆರೆಯಿಸಿದ ಕೆಲವು ಚಿಪ್ಪುಗ ಳಿಂದ ಆ ದಿವ್ಯ ರತ್ನಾಕರದ ಲಾವಣ್ಯವೂ ವಾಸನೆಯೂ ಘೋಷವೂ ರುಚಿಯೂ ಸಹೃದಯರ ಅನುಭವಕ್ಕೆ ಬರುವಂತೆ ಮಾಡಿತು. ಕನ್ನಡವನ್ನೂ ಇಂಗ್ಲಿಷನ್ನೂ ಕಲಿತ ಸವ್ಯಸಾಚಿಗಳಾದ ‘ಶ್ರೀ’ ಅವರು ಕನ್ನಡದ ಹೊಸಕಾವ್ಯಕ್ಕೆ ಪ್ರೇರಕರಾದರು. ಅವರು ರಚಿಸಿದ ‘ಇಂಗ್ಲಿಷ್ ಗೀತಗಳು’ ಕಾವ್ಯಮಾರ್ಗವನ್ನು ತೋರಿಸಿದ್ದೊಂದೇ ಅಲ್ಲದೆ ಹೊಸ ಕನ್ನಡ ಛಂದಸ್ಸನ್ನೂ ಧಾಟಿಯನ್ನೂ ಕಾಣಿಸಿತು. ಹೊಸ ಚೈತನ್ಯ ಹರಿಯುವುದಕ್ಕೆ ಹೊಸ ಪಾತ್ರವನ್ನು ನಿರ್ಮಿಸಿತು. ಹೊಸ ಕನ್ನಡದ ಬಗೆ ಬಗೆಯ ಮಟ್ಟುಗಳಿಗೆ ಅವರು ನಿರ್ಮಾಪಕರಾಗಿದ್ದಾರೆ. ಅವರು ತೋಡಿದ ನಾಲೆ ಇಂದು ತುಂಬು ಹೊನಲಾಗಿದೆ. ಹೀಗೆ ಹೊಸ ಕನ್ನಡ ಕವಿತೆಗೆ ಬೇಕಾದ ವಿಷಯ ಸಂಗ್ರಹ ಇಂಗ್ಲೀಷು ವಿದ್ಯೆಯ ಪ್ರಸಾರದಿಂದ ಬಂದು ಕನ್ನಡದ ಕಾಲುವೆಯಲ್ಲಿ ಹರಿಯತೊಡಗಿತು. ಇದರ ಫಲವಾಗಿ ಕವಿಗಳ ದೃಷ್ಟಿ ನೂತನವಾಯಿತು.

**ಸಂಸ್ಕೃತಿಯ ಸಂವರ್ಧಕ :**

ಡಿ.ಎಲ್.ಎನ್. ಭಾಷಾಭಿಮಾನಿಗಳು, ದೇಶಾಭಿಮಾನಿಗಳು. ಅವರಿಗೆ ಸಂಸ್ಕೃತಿಯ ಸಂವರ್ಧನೆಯಲ್ಲಿ ವಿಶೇಷ ಆಸಕ್ತಿ. ಅವರ ಭಾಷಾಭಿಮಾನಕ್ಕೆ”ಕಣ್ಮರೆಯಾದ ಕನ್ನಡ, ಮಹಾರಾಷ್ಟ್ರದ ಮೂಲ” ಎಂಬ ಲೇಖನವನ್ನು ಓದಬೇಕು. ಅಂತೆಯೇ ಶಿವ ಯೋಗಿ ಸಿದ್ಧರಾಮನನ್ನು ಕುರಿತು ಹೇಳುತ್ತಾ ಸಿದ್ಧರಾಮನಂಥ ನಿಷ್ಕಾಮ ಕರ್ಮಯೋಗಿಗಳೂ ಪರಸೇವಾ ದುರಂಧರರೂ ಹೆಚ್ಚಿದಷ್ಟು ನಮಗೆ ಈಗ ಒಳ್ಳೆಯದು. ಹೀನಸ್ಥಿತಿಗೆ ಇಳಿದಿರುವ ನಮ್ಮ ಹಳ್ಳಿಗಳ ಪುನರಜ್ಜೀವನವಾಗಬೇಕು. ಜನ ವಿದ್ಯಾವಂತ ರಾಗಿ ಪ್ರಜಾರಾಜ್ಯದ ಸ್ವರೂಪವನ್ನು ತಿಳಿಯಬೇಕು ; ಸಮಾಜದ ದೀನದಲಿತ ವರ್ಗ ನೆಮ್ಮದಿಯ ನೆಲೆಗೆ ಬರಬೇಕಾಗಿದೆ. ಸಾಮೂಹಿಕ ನೀತಿಯ ಮಟ್ಟ ಮಿಗಿಲಾಗಬೇಕಾಗಿದೆ. ಅಸ್ಪೃಶ್ಯತೆ ತೊಲಗಬೇಕು, ಐಕ್ಯತೆಯುಂಟಾಗಬೇಕು. ಒಮದೇ, ಎರಡೇ ಇಂಥ ನೂರಾರು ಕಾರ್ಯಗಳು ಈಗ ನೆರವೇರಬೇಕಾಗಿವೆ. ಇವನ್ನೆಲ್ಲ ಯಾವ ಸರ್ಕಾರವೂ ಜನತೆಯ ಸಹಕಾರವಿಲ್ಲದೆ ಸಮ ರ್ಪಕವಾಗಿ ಮಾಡಲಾಗುವುದಿಲ್ಲ. ಜೈಲಿಗೆ ಹೋಗುವುದೊಂದೇ ದೇಶಭಕ್ತಿಯ ಲಕ್ಷಣವೆಂಬ ಅಭಿಪ್ರಾಯದಿಂದ ನಮ್ಮ ಜನಮನ ಬಿಡುಗಡೆ ಹೊಂದಬೇಕು. ಹಾಗೆ ಹೋಗಿರುವವರಿಗೂ ಬೇರೆ ಬೇರೆ ಸೇವಾ ಕ್ಷೇತ್ರಗಳಲ್ಲಿ ಮನವಿಟ್ಟು ದುಡಿಯುತ್ತಿರು ವವರಿಗೂ ಯಾವ ಪಕ್ಷಪಾತವನ್ನೂ ಸಮಾಜವಾಗಲಿ, ಸರ್ಕಾರವಾಗಲಿ ತೋರಿಸಕೂಡದು. ರಚನಾತ್ಮಕ ಕಾರ್ಯಗಳು, ಅವು ಎಷ್ಟೇ ಅಲ್ಪವಾಗಿರಲಿ, ಎಲ್ಲವೂ ಸಮಾನ ಪ್ರಧಾನತೆಯುಳ್ಳವು. ಸಾವಿರಾರರು ಸೇವಾ ನಿಷ್ಠರಿಗೆ ಈಗ ಕೈತುಂಬ ಕೆಲಸವಿದೆ. ಈ ಲೌಕಿಕ ದೃಷ್ಟಿ ಯಿಂದ ನೋಡಿದರೂ ರಾಘವಾಂಕನ ಕೃತಿ ಮತ್ತಷ್ಟು ಉಜ್ವಲವಾಗಿ ಕಾಣುತ್ತದೆ. ಕವಿ ಹಿರಿಯ ವ್ಯಕ್ತಿಯನ್ನು ಕಂಡು ಹಿಗ್ಗಿ ಜನದ ಮುಂದೆ ಆತನ ಆದರ್ಶ ಚಿತ್ರವನ್ನು ಇಟ್ಟುಹೋಗಿದ್ದಾನೆ.”ಸಿದ್ಧರಾಮನಂತೆ ಎಲ್ಲರೂ ಅಭಿರಾಮರಾಗಲು ಪ್ರಯತ್ನಪಡಿರಿ; ಸೇವೆ ಯಲ್ಲಿ ಅನುರಕ್ತರಾಗಿರಿ; ನೀವೂ ಬದುಕಿ ಜನರನ್ನೂ ಬದುಕುವಂತೆ ಮಾಡಿ’ ಎಂದು ಹೇಳುತ್ತದೆ ರಾಘವಾಂಕನ ವಾಣಿ. ಈ ಸಂದೇಶದ ಬೆಲೆ ಎಷ್ಟಿದೆಯೆಂದು ಬೇರೆ ಹೇಳಬೇಕಾಗಿಲ್ಲ, ರಾಘವಾಂಕನ ಕಾವ್ಯ ನಮಗೆ ದಾರಿತೋರಿಸುವ ದೀವಟಿಗೆಯಾಗಿದೆ ಎಂದಿದ್ದಾರೆ. ಇಲ್ಲಿ ಸಂಸ್ಕೃತಿಯ ನೆಲೆಯಷ್ಟೇ ಗುರುತಿಸುವ ಅವರ ಋಜು ಸ್ವಭಾವ ಮೆಚ್ಚುವಂಥದು.

ಅವರಲ್ಲಿ ದೇಶ ಸ್ವಾತಂತ್ರ್ಯದ ಕೆಚ್ಚು ಕುಡಿಯಾಡಿದೆ. ರಾಜರತ್ನಂರವರ ಗಂಡುಗೊಡಲಿಯ ವಿಮರ್ಶಾ ಸಂದರ್ಭದಲ್ಲಿ ಈ ನಾಟಕವನ್ನು ನಮ್ಮ ಇಂದಿನ ಪರಿಸ್ಥಿತಿಗೆ ಅನ್ವಯಿಸಿಕೊಂಡು ನೋಡಿದರೆ ಅದರ ಸ್ವಾರಸ್ಯ ಚೆನ್ನಾಗಿ ತಿಳಿದುಬರುತ್ತದೆ. ಸ್ವಾತಂತ್ರ್ಯ

ಸಾಧನೆಗೆ ಯಾವುದು ಒಳ್ಳೆಯ ಮಾರ್ಗ ? ಜಮದಗ್ನಿಯದೆ ಅಥವಾ ಪರುಶರಾಮರದೆ ? ಈ ಸಮಸ್ಯೆಗೆ ಉತ್ತರ ಈ ನಾಟಕ. ಪರುಶರಾಮನದೇ ಸೂಕ್ತವಾದ ದಾರಿ ಎಂಬುದು ಕವಿಯ ನಂಬಿಕೆ ಇರಬಹುದು. ಹೇಳಬಲ್ಲವರಾರು, ಕವಿಯ ದರ್ಶನವೇ ಸರಿಯೋ, ಜಮದಗ್ನಿಯದೇ ಸರಿಯೋ ? ಕಾಲ ಕಳೆದರೆ ಎಲ್ಲ ತನ್ನಷ್ಟಕ್ಕೆ ತಾನೇ ಗೊತ್ತಾಗುತ್ತದೆ.
"ಹೀಗೆ ನಾಟಕವು ವಸ್ತುವಿನ ಘನತೆಯಿಂದಲೂ, ಸಮಸ್ಯೆಯ ಗಹನತೆಯಿಂದಲೂ ಅವಕ್ಕೆ ತಕ್ಕ ಬಿಗಿಯಾದ ಗಂಡು ಶೈಲಿ ಯಿಂದಲೂ ಮನೋರಂಜಕವಾಗಿರುವುದೇ ಅಲ್ಲದೆ ಹೃದಯವನ್ನು ಪ್ರಚೋದಿಸುವಂತಿದೆ. ಇದು ಎಲ್ಲರೂ ಓದಬಹುದಾದ ಉತ್ತ ಮವಾದ ನಾಟಕವೆಂದು ಧಾರಾಳವಾಗಿ ಹೇಳಬಹುದು" ಎನ್ನುವಲ್ಲಿ ಅಪ್ರತ್ಯಕ್ಷವಾದ ಅವರ ಸ್ವಾತಂತ್ರ್ಯಾಕಾಂಕ್ಷೆ ಇಣಿಕು ಹಾಕಿರು ವುದು ಸುಷ್ಪಷ್ಟ.

**ಗುರುನಂದನ :**

ಆಚಾರ್ಯ ಡಿ.ಎಲ್.ಎನ್. ನನ್ನಂಥ ಅನೇಕ ಶಿಷ್ಯರಿಗೆ ಗುರುಗಳು. ಅವರೆಲ್ಲರ ಪರವಾಗಿ ಆ ಮಹಾಚೇತನಕ್ಕೆ ಪ್ರಣಾಮ ಗಳು. ಇಷ್ಟೂ ಹೊತ್ತು ಕುಳಿತು ಕೇಳಿದ ನಿಮಗೆಲ್ಲರಿಗೆ, ಗುರುಸ್ಮರಣೆಗೆ ಅವಕಾಶ ಮಾಡಿಕೊಟ್ಟ ಕನ್ನಡ ಸಾಹಿತ್ಯ ಪರಿಷತ್ತಿಗೆ, ಪರಿಷತ್ತಿನ ಅಧ್ಯಕ್ಷ ಗೆಳೆಯ ಹಂಪನಾ, ಅವರಿಗೆ ಸಹಸ್ರ ಸಹಸ್ರ ಪಣಾಮಗಳು.

•

---

[೧೯] ಅದೇ ಪು. ೭೭೨

# ಮಾಸ್ತಿ ವೆಂಕಟೇಶ ಅಯ್ಯಂಗಾರ್

ಕನ್ನಡ ಸಾಹಿತ್ಯದ ಬದುಕಿನಲ್ಲಿ ಹತ್ತೊಂಬತ್ತನೆಯ ಶತಮಾನ ಒಂದು ಮಹತ್ವದ ಘಟ್ಟ. ಅದರದು ಅನ್ವೇಷಕ ಬುದ್ಧಿ ; ಪ್ರಗತಿಶೀಲ ಮನಸ್ಸು ; ಸಮಸ್ತವನ್ನೂ ಆಕರ್ಷಿಸುವ ಚಪಲಚಿತ್ತ ; ಸಿಕ್ಕಿದ್ದನ್ನು ದಕ್ಕಿಸಿಕೊಳ್ಳುವ ಉತ್ಸಾಹಶೀಲ ಪ್ರವೃತ್ತಿ. ಈ ಜಾಯ ಮಾನ ಇಪ್ಪತ್ತನೆಯ ಶತಮಾನದ ಆರಂಭದ ದಿನಗಳಲ್ಲೂ ಮುಂದುವರಿಯಿತು. ಅದು ಕನ್ನಡ ನವೋದಯ ಕಾಲ. ರಮ್ಯ ಚಳು ವಳಿಯ ತಾರುಣ್ಯದ ದಿನ. ಪಾಶ್ಚಾತ್ಯ ರಾಷ್ಟ್ರಗಳಿಂದ ಬೀಸಿಬಂದ ಹೊಸ ಗಾಳಿಗೆ ಕನ್ನಡ ಮೈಯ್ಯೊಡ್ಡಿತು. ಅದರ ಮೈ ಪುಲಕ ಗೊಂಡು ಮನಸ್ಸು ಉಲ್ಲಾಸಗೊಂಡು ಹೊಸ ರೂಪು, ಹೊಸ ಹುರುಪು, ಹೊಸ ಉಡುಪು, ಹೊಸ ಬಣ್ಣಗಳಿಂದ ಹೊಮ್ಮಿ ಹೊಳೆಯಿತು. ಹೊಡ ನೀರಿಗೆ ಮೀನಿಗೆ ಹತ್ತುವುದು ಬಹಳ. ಅಂತಾಗಿ ಹೊಸತನ್ನು ಸ್ವಾಗತಿಸಿತು ಕನ್ನಡ. ಇಂಗ್ಲಿಷ್ ಸಾಹಿತ್ಯ ಸಂ ಪರ್ಕದಿಂದ ಕನ್ನಡ ಗದ್ಯ ಪದ್ಯಗಳೆರಡರಲ್ಲೂ ತನ್ನ ಹೊಸ ಕ್ಷಿತಿಜವನ್ನು ನಿರ್ಮಿಸಿಕೊಂಡಿತು. ಶಿಲ್ಪ, ಶೈಲಿ, ವಿನ್ಯಾಸ, ಅಭಿವ್ಯಕ್ತಿ ಮೊದಲಾದವುಗಳಲ್ಲಿ ಹೊಸತನ ಮೂಡಿತು. ರಚನೆಯಲ್ಲಿ ಆಸಕ್ತಿ ಹೆಚ್ಚಿತು; ಅಭಿರುಚಿಯೂ ಬದಲಾಯಿತು.

ರಮ್ಯ ಯುಗದಲ್ಲಿ ಸೃಜನಶೀಲರ ಘೋಷಿತ ತತ್ವಗಳು ಇಲ್ಲವೇ ನಂಬಿಕೆಗಳು ಅಂದಿನ ಸಾಹಿತ್ಯ ಮೌಲ್ಯಗಳೆನಿಸಿದವು. ಲೇಖಕರು ಅವುಗಳ ಪ್ರಚಾರಕರಾದರು ; ಪ್ರವರ್ತಕರಾದರು. ಬಾಳಿನ ಬೆಳಕಿಗಾಗಿ ಅಥವಾ ಬದುಕಿನ ಸೈರಿಗಾಗಿ, ಸಂಸ್ಕೃತಿಯ ಸಂವರ್ಧನೆಯ ಅಥವಾ ಮಾನವತಾ ವಾದವನ್ನು ಎತ್ತಿ ಹಿಡಿಯುವ ಸಲುವಾಗಿ ಸಾಹಿತ್ಯವನ್ನು ದುಡಿಸಿಕೊಳ್ಳುವುದು ಸಾಮಾ ನ್ಯವಾಯಿತು. ಅದೇ ನವೋದಯ ಕಾಲದ ಕಾವ್ಯ ಮೌಲ್ಯ ಎನಿಸಿತು. ಬದುಕಿನ ಋಜುತ್ವಕ್ಕೆ ಮೋಜುಗಳಿಗೆ ಸಾಹಿತ್ಯ ಒಂದು ವಾದವೇದಿಕೆಯಾಯಿತು. ಒಂರ್ಥದಲ್ಲಿ ಸಾಹಿತ್ಯ ಜನಜೀವನದ ಜಾಹೀರಾತು ಹಿಡಿಯಿತು ಎಂದು ಹೇಳಬಹುದು. ಅದರಿಂದಾಗಿ ನವೋದಯ ಕಾಲದ ರಮ್ಯ ಕವಿಗಳು ಸಂಸ್ಕೃತಿಯೊಂದಿಗೆ ಕಾವ್ಯವನ್ನು ಬೆಸೆದರು. ಅದರ ಪ್ರಭಾವ ಗದ್ಯಕ್ಕಿಂತ ಪದ್ಯದ ಮೇಲೆ ವಿಶೇಷವಾಗಿ ಆಯಿತು. ಅದರಲ್ಲೂ ಭಾವಗೀತೆ ಬಹುಬೇಗ ಎಲ್ಲ ಸಾಧ್ಯತೆಗಳನ್ನೂ ಮೈಗೂಡಿಸಿಕೊಂಡು ಪ್ರಯೋಗಕ್ಕೆ, ಪ್ರಚಾರಕ್ಕೆ ಸಿದ್ಧವಾಯಿತು. ಅದರ ಪ್ರಮುಖ ಲಕ್ಷಣಗಳೆನಿಸಿದ ವ್ಯಕ್ತಿನಿಷ್ಠತೆ, ಭಾವುಕತೆ, ಗೇಯತೆ, ಸಂಕ್ಷಿಪ್ತತೆ ಸ್ವಯಂಪೂರ್ಣತೆಗಳು ಮೆರೆ ದಾಡಿದವು. ಕನ್ನಡ ಕವಿಗಳು ನಿಸರ್ಗ ಪ್ರೇಮ ಬೆಳಸಿಕೊಂಡರು. ಬದುಕಿನ ಏಳುಬೀಳುಗಳನ್ನು ಕುರಿತು ಹಾಡಿದರು. 'Our swe

etest songs are those that tell sadest thought' ಎಂಬಂತೆ 'ದುಃಖವೇನೇ ಇರಲಿ ಸುಖವೊಂದುಣಿಸುವೆನು ರಸಿಕ ನಿನಗೆ,' ಎಂಬ, 'ಬೆಂದರೆ ಆದಾನು ಬೇಂದ್ರೆ' ಎಂಬ ಹೇಳಿಕೆಗಳಲ್ಲಿ ಕಾವ್ಯ ಯಾವಾಗಲೂ ಅನುಭವಜನ್ಯವಾದದ್ದು ಎಂಬ ಸತ್ಯ ಸ್ಥಿತವಾಯಿತು. ಪ್ರಣಯ, ಪ್ರಕೃತಿ, ಪ್ರೇಮ, ದೇಶಭಕ್ತಿ, ಸ್ವತಂತ್ರ್ಯಾಪೇಕ್ಷೆ ಇವೇ ಮೊದಲಾದವು ಕಾವ್ಯದ ವಸ್ತುವಾದವು. ಗಾಂಧೀಜಿಯವರ ನೇತೃತ್ವದಲ್ಲಿ ಬುಗಿಲೆದ್ದ ದೇಶಾಭಿಮಾನವೂ ಬೆಸೆದುಕೊಂಡಿತು. ಭಾವವೇ ಪ್ರಧಾನಾಂಶವಾಗಿ, ಅದಕ್ಕೆ ಭಾಷೆ ಒಗ್ಗಿತು, ಬಗ್ಗಿತು, ಛಂದಸ್ಸು ಭಾವಕ್ಕೆ ತಕ್ಕಂತೆ ಬಳುಕಿತು, ಜೀಕಿತು, ಹೊಸ ಹೊಸ ಶಬ್ದಗಳು ಟಂಕಿಸಿಕೊಂಡು ಚಲಾವಣೆಗೆ ಬಂದವು. ಪ್ರಯೋಗದ ಎಲ್ಲ ಸಾಧ್ಯತೆಗಳನ್ನೂ ಕಂಡುಕೊಂಡಿತು ಕನ್ನಡ ಕಾವ್ಯ. ಆಡುನುಡಿ ಸ್ವೇಚ್ಛೆಯಾಗಿ ಉಸಿರಾಡಿತು. ಹಳೆಯ ಛಂದೋನಿಯಮಗಳನ್ನು ಮುರಿಯುವ ಛಲ ಸಿದ್ಧಿಸಿ, ಹೊಸ ಲಯದ ಹೊಸ ವಿನ್ಯಾಸದಲ್ಲಿ ಕಾವ್ಯವಾಹಿನಿ ಪ್ರವಹಿಸತೊಡಗಿತು. ಹೊಸ ಸ್ವರೂಪಗಳೆರಡರಲ್ಲೂ ಹಂಗು ತೊರೆದ ಹೊಸ ರಚನೆ ಆಗಿ ಕನ್ನಡ ಸಾಹಿತ್ಯ ಶ್ರೀಮಂತವಾಯಿತು.

ಈ ಹಿನ್ನಲೆಯಲ್ಲಿ ಮಾಸ್ತಿಯವರನ್ನು ಗುರುತಿಸಬೇಕಾಗಿದೆ. ಏಕೆಂದರೆ ಮಾಸ್ತಿ ಹುಟ್ಟಿದ್ದು ಆ ದಿನಗಳಲ್ಲಿ. ಸಾಹಿತಿಯಾಗಿ ಬೆಳೆದದ್ದೂ ಅದೇ ದಿನಗಳಲ್ಲಿ. ಶ್ರೀಯುತರ ಜನನ ೬ ಜೂನ್ ೧೮೯೧, ನಿಧನ ೬ ಜೂನ್ ೧೯೮೬. ಅವರ ಹುಟ್ಟೂರು ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿನ ಮಾಸ್ತಿ ಎಂಬ ಗ್ರಾಮ. ಬೆಳೆದದ್ದು ತಾಯಿಯ ತವರೂರು ಹೊಂಗೇನಹಳ್ಳಿಯಲ್ಲಿ. ಪ್ರಾಥಮಿಕ ಶಿಕ್ಷಣ ಹೊಂಗೇನಹಳ್ಳಿಗೆ ಸಮೀಪದಲ್ಲಿದ್ದ ಶಿವಾರಪಟ್ಟಣದಲ್ಲಿ. ಉನ್ನತ ಶಿಕ್ಷಣ ನಡೆದದ್ದು ಮಳವಳ್ಳಿ, ಮೈಸೂರು ಮತ್ತು ಬೆಂಗಳೂರುಗಳಲ್ಲಿ. ೧೯೦೭ರಲ್ಲಿ ಮೆಟ್ರ್ಯುಕಲೇಷನ್, ೧೯೦೯ರಲ್ಲಿ ಎಫ್.ಎ. ೧೯೧೨ರಲ್ಲಿ ಬಿ.ಎ. ೧೯೧೩ರಲ್ಲಿ ಮೈಸೂರು ಸಿವಿಲ್ ಸರ್ವೀಸ್, ೧೯೧೪ರಲ್ಲಿ ಎಂ.ಎ ಈ ಪರೀಕ್ಷೆಗಳಲ್ಲಿ ಉತ್ತಮ ಶ್ರೇಣಿಯಲ್ಲಿ ತೇರ್ಗಡೆಯಾಗಿ ೧೯೧೩ರಲ್ಲಿ ಅಸಿಸ್ಟೆಂಟ್ ಕಮಿಷನರ್ ಆಗಿ ಸರ್ಕಾರಿ ಸೇವೆಯಲ್ಲಿ ನಿಂತರು. ೧೯೩೦ರಲ್ಲಿ ಡೆಪ್ಯೂಟಿ ಕಮಿಷನರ್ ಆಗಿ ಬಡ್ತಿ ಪಡೆದು, ೧೯೪೩ರಲ್ಲಿ ಸರ್ಕಾರಿ ಸೇವೆಯಿಂದ ಸ್ವಾಪೇಕ್ಷಿತ ನಿವೃತ್ತಿ ಪಡೆದು, ತಮ್ಮ ಬಾಳಿನ ಅಮೂಲ್ಯ ದಿನಗಳನ್ನು ಕನ್ನಡ ಸಾಹಿತ್ಯ ಕೃಷಿಗೆ ಮೀಸಲಿಟ್ಟು ದುಡಿದರು. ೧೯೪೪ರಿಂದ ೧೯೬೫ರವರೆಗೆ ಜೀವನ ಪತ್ರಿಕೆಯ ಸಂಪಾದಕರಾಗಿ, ೧೯೫೩–೫೪ರ ಅವಧಿಯನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಸಾರ್ಥಕ ಸೇವೆ ಸಲ್ಲಿಸಿದರು.

೧೯೪೨ರಲ್ಲಿ ಮಾಸ್ತಿಯವರಿಗೆ ಮೈಸೂರು ಮಹಾರಾಜರಿಂದ 'ರಾಜಸೇವಾ ಪ್ರಸಕ್ತ' ಬಿರುದು ಪ್ರಧಾನವಾಯಿತು. ೧೯೫೬ರಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯದಿಂದ ಮತ್ತು ೧೯೭೭ರಲ್ಲಿ ಮೈಸೂರು ವಿಶ್ವ ವಿದ್ಯಾನಿಲಯದಿಂದ ಗೌರವ ಡಾಕ್ಟರೇಟ್ ಪ್ರಶಸ್ತಿಗಳು, ೧೯೬೮ರಲ್ಲಿ 'ಸಣ್ಣ ಕಥೆಗಳು' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪುರಸ್ಕಾರ, ೧೯೭೦ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ, ೧೯೮೩ರಲ್ಲಿ ಅವರ ಸಮಗ್ರ ಸಾಹಿತ್ಯಕ್ಕಾಗಿ (ಚೆನ್ನಬಸವನಾಯಕ ಕಾದಂಬರಿ ?) ಜ್ಞಾನಪೀಠ ಪ್ರಶಸ್ತಿ– ಇವೇ ಮೊದಲಾದ ಗೌರವಗಳು ಲಭಿಸಿವೆ.

ಇಂತೆಲ್ಲ ಬದುಕಿದ, ಸೇವೆ ಸಲ್ಲಿಸಿದ, ಗೌರವ ಪ್ರಶಸ್ತಿಗಳಿಗೆ ಪಾತ್ರಾದ ಡಾ. ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು ಆಧುನಿಕ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಕಾಣಸಿಗುವ ಬಹುದೊಡ್ಡ ಹೆಸರು. ಬೇರೊಂದು ಮಾತಿನಲ್ಲಿ ಹೇಳುವುದಾದರೆ ಕನ್ನಡ ನವೋದಯ ಕಾಲದ ರಮ್ಯೋದಯ ಹರಿಕಾರರು.

* * * *

ಮಾಸ್ತಿಯವರ ಒಲವು ಗೆಲವುಗಳಿರುವುದು ಅವರ ಸಣ್ಣಕತೆಯಲ್ಲಿ. ಹುಟ್ಟು ಕತೆಗಾರರಾದ ಮಾಸ್ತಿ ಬೆಳೆದದ್ದು ಕತೆಗಾರರಾಗಿ. ಬದುಕಿದ್ದೂ ಕತೆಗಾರರಾಗಿ. ಕಾವ್ಯ ನಾಟಕ, ವಿಮರ್ಶೆ ಮೊದಲಾದವು ಅವರ ಆನುಷಂಗಿಕ ರಚನೆಗಳು. ಕತೆಗಾರಿಕೆ ಅವರ ಪ್ರತಿಭಾ ಜ್ಯೋತಿಯ ಬೆಳಗಿದ ಸಾಹಿತ್ಯ ಪ್ರಕಾರ. 'ಭಾವದ ಉತ್ಕಟತೆಗಿಂತ ಮಾಸ್ತಿಯವರ ಪ್ರತಿಭೆ ಕಥನವನ್ನಾಶ್ರಯಿಸಿದೆ' ಎಂಬ ಕುರ್ತುಕೋಟಿಯವರ ಮಾತಿನಲ್ಲಿ ಅರ್ಥವಿದೆ. ಮಾಸ್ತಿಯವರದು ಮೂಲತಃ ಕಥನ ಪ್ರತಿಭೆ. ಅದು ಭಾವಗೀತದಲ್ಲೂ ಕಥನ ಕಲೆಯನ್ನೇ ಹುಡುಕಿಕೊಂಡು ಹೋಗುತ್ತದೆ. ಸಣ್ಣಕತೆಗಳಲ್ಲಿ ಹೇಗೋ ಹಾಗೆ ಕಥನ ಕವನಗಳಲ್ಲೂ ಅವರು ತಮ್ಮದಾದ ಕತೆಗಾರಿಕೆಯ ಮುದ್ರೆಯೊತ್ತಿದ್ದಾರೆ.

ಶ್ರೀನಿವಾಸರ ಕಥಾಸೃಷ್ಟಿ ಸಪ್ತವರ್ಣ ಸುಶೋಭಿತವಾದ ಕಾಮನ ಬಿಲ್ಲಿನಂತೆ ವರ್ಣಮಯ, ವೈವಿಧ್ಯಮಯ, ಬದುಕಿನ ಬಹುಮುಖ ದರ್ಶನ ಅಲ್ಲಾಗುತ್ತದೆ. ಜೀವನದಲ್ಲಿ ನಡೆದ, ನಡೆವ ಘಟನೆಗಳಿಗಿಂತ ವ್ಯಕ್ತಿಯ ಸ್ವಭಾವ ಚಿತ್ರಣ, ವ್ಯಕ್ತಿತ್ವ ಪ್ರತಿಪಾದನೆಗಳು ಮುಖ್ಯವಾಗುತ್ತವೆ. ಕತೆ ಒಂದು ಹಂದರ, ಪಾತ್ರಗಳು ಅದರ ಮೇಲೆ ಹಬ್ಬಿರುವ ಹೂ ಬಳ್ಳಿಗಳು. ಎಲ್ಲೆಡೆಯೂ ಮಾಸ್ತಿಯವರ ಜೀವನೋತ್ಸಾಹ, ಜೀವನದ ಪರಿಶುದ್ಧತೆ ಪ್ರತಿಪಾದಿತವಾಗಿರುವುದು ಕಂಡುಬರುತ್ತದೆ. ಯಾವ ಸನ್ನಿವೇಶವೂ ಅಗ್ರಾಹ್ಯ

ವಲ್ಲ, ಯಾವ ಪಾತ್ರವೂ ಸಹಜತೆಯಿಂದ ದೂರ ಉಳಿಯುವುದಿಲ್ಲ. ನಿರೂಪಣೆಯಲ್ಲೂ ಅಷ್ಟೇ ಸರಳ, ಸುಂದರ, ಸುಭಗ ಶೈಲಿ. ಓದುಗರನ್ನು ಹೌಹಾರಿಸಿ, ಚೇತೋಹಾರಿಯನ್ನಾಗಿ ಮಾಡುವ ಮೋಡಿ ಇರದಿದ್ದರೂ ಎಲ್ಲ ಕತೆಗಳೂ ಅಂತ್ಯದಲ್ಲಿ ಚಿಂತನೆಗೆ ಒಳ ಗುಮಾಡುತ್ತವೆ. 'ಬೀದಿಯಲ್ಲಿ ಹೋಗುವ ನಾರಿ' ಕತೆಯಲ್ಲಿ ಕ್ಷಣಿಕ ಲೈಂಗಿಕತೆ ಈಡೇರಬಹುದು. ಆದರೆ ಅದರಿಂದ ಹುಟ್ಟಿದ ಮಕ್ಕಳ ದೀರ್ಘದಿನಗಳ ಗತಿ ? ಮೊಸರಿನ ಮಂಗಮ್ಮನಂತಹ ಸಾಮಾನ್ಯ ಹಳ್ಳಿಯ ಹೆಂಗಸಿನ ಬದುಕು ಒಂದು ನಿತ್ಯ ರಾಮಾ ಯಣವೆ. ಅತ್ತೆ ಸೊಸೆಯರ ಮನೋಧರ್ಮಗಳು ಎಳೆಎಳೆಯಾಗಿ ಬಿಡಿಸಿಕೊಳ್ಳುತ್ತಾ ಹೋಗುತ್ತವೆ ; ತನ್ಮೂಲಕ ಓದುಗನನ್ನು ಜೀವನ ಕುರಿತ ಚಿಂತನಕ್ಕೆ ಒಳಗುಮಾಡುತ್ತವೆ. ತೀರ್ಪು, ಜೋಗ್ಯೋರ ಅಂಜಪ್ಪನ ಕತೆಗಳಲ್ಲಿ ಕಾನೂನು ಅಥವಾ ಸಾಮಾಜಿಕ ಕಟ್ಟಳೆಗಳ ಸಂದರ್ಭದಲ್ಲಿ ನಿಜವಾದ ನ್ಯಾಯ ದೊರೆಯದಿರುವ ದುರಂತ ಓದುಗನನ್ನು ಅವಕ್ಕಾಗಿಸುತ್ತದೆ. ಇಂತಹ ಸಾಮಾಜಿಕ ನಗ್ನ ಚಿತ್ರಗಳಲ್ಲದೆ, ಐತಿಹಾಸಿಕ ವಸ್ತುಗಳನ್ನಾಧರಿಸಿದ ನಿಜಗಲ್ಲಿನ ರಾಣಿಯಾಗಲಿ, ಪುರಾಣ ಕಾವ್ಯಕಥೆ ನಾಟಕಗಳ 'ಹೇಮಕೂಟ ದಿಂದ ಬಂದಮೇಲೆ' ವಸ್ತುವಿನ್ಯಾಸದ ವೈಖರಿಯನ್ನಾಗಲೀ ಮಾಸ್ತಿ ವಾಸ್ತವದೊಡನೆ ಸೌಂದರ್ಯವನ್ನು ಸಮೀಕರಿಸಿ ಮಾನಸಿಕ ವಿಕಾಸಕ್ಕೆ ಅನುವು ಮಾಡಿಕೊಡುತ್ತಾರೆ. ಅವರ ಸುಬ್ಬಣ್ಣ ಒಂದು ನೀಳ್ಗತೆ ಅಥವಾ ಮಿನಿ ಕಾದಂಬರಿ ಕನ್ನಡದ ಒಂದು ಅತ್ಯು ತ್ತಮ ಕಥಾಶಿಲ್ಪ ! ಕಲಾವಿದನ ಬದುಕಿನ ಏಳು ಬೀಳುಗಳು ಎಂಥವರನ್ನು ಮಂತ್ರ ಮುಗ್ಧರನ್ನಾಗಿಸುತ್ತದೆ. ಈ ನೀಳ್ಗತೆ ಬಿಟ್ಟರೆ, ಉಳಿದೆಲ್ಲ ಸಣ್ಣಕತೆಗಳೂ ಒಂದೊಂದು ಭಾವಗೀತ !

ಮಾಸ್ತಿ ಕತೆಗಳು ಭಾವಗೀತ ಹಾಡಿದಂತೆ ಅವರ ಅನೇಕ ಕವನಗಲೂ ಕತೆಗಳನ್ನು ಓದಿದಂತೆ ! 'ಮುರಿದುಬಿದ್ದ ವೀರ ಗಲ್ಲು'ವಿನಂತಹ ಶೋಕಗೀತೆ (ಎಲಿಜಿ)ಯಾಗಲಿ, 'ದೊಡ್ಡವರ ಗುಣ'ದಂತಹ ಚುಟುಕು ಕವನವಾಗಲಿ, ಸುನೀತ, ಡ್ಯಾಕ್ – ಸ್ಯಾಂಡಿ ಸಂವಾದವಾಗಲಿ, ಆಚಾರ್ಯ – ಗಾಣಿಗ ಸಂವಾದವಾಗಲಿ, 'ವಾಲ್ಟೇರ್ ಮಾತು' ಆಗಲಿ ಎಲ್ಲಡೆಯೂ ಮಾಸ್ತಿಯವರ ಕಥನಕಲೆ ಹಬ್ಬಿ ಹರಡಿರುವುದು ಸ್ಪಷ್ಟಗೋಚರ. ಅವರ ಕತಗಾರಿಕೆ ಕಾವ್ಯದಲ್ಲಿ ಮೊದಲು ಮೊಳಕೆ ಒಡೆದದ್ದು 'ಅರುಣ' ಸಂಕಲ ನದ ಸ್ಥಳಗಳ ಹೆಸರು ಎಂಬ ನೀಳ್ಗವನದೊಂದಿಗೆ. ಅನಂತರ ಅವರ 'ತಾವರೆ', 'ಚೆಲುವು', 'ಸುನೀತ', 'ಸಂಕ್ರಾಂತಿ' ಮೊದಲಾದ ಭಾವಗೀತಗಳ ಉದ್ಯಾನದಲ್ಲಿ ಕುಡಿಯೊಡೆದು 'ನವರಾತ್ರಿ' ಎಂಬ ಐದು ಸಂಪುಟಗಳ ವಿಶಾಲ ವಲಯದ ಕಾರಂಜಿಗಳ ರಮ ಣೀಯ ಬೃಂದಾವನದಲ್ಲಿ. ಆ ಸೊಂಪು ಸಮೃದ್ಧಿಗಳ ಹಿನ್ನಲೆಯಲ್ಲಿ ಮಾಸ್ತಿಯವರ ಕಥಾಸಿದ್ಧಿಯನ್ನು ಗುರುತಿಸಬಹುದು.

ಭಾವಗೀತೆಗಳೊಡನೆ ಬೆರೆತು ಬಂದ 'ಮದಲಿಂಗನ ಕಣಿವೆ' ಮತ್ತು 'ಗೌಡರ ಮಲ್ಲಿ' ಕಥನ ಕವನಗಳನ್ನು ಯಾರೂ ಮರೆಯಲಾರರು. ಮದಲಿಂಗನ ಕಣಿವೆಯಲ್ಲಿ ಕಲ್ಲು ಕರಗುವಂತಹ ರೀತಿಯಲ್ಲಿ ಕತೆ ನಿರೂಪಿತವಾಗಿದೆ. ಗೌಡರ ಮಲ್ಲಿಯಲ್ಲಿ ಪವಿತ್ರ ಪ್ರೇಮದ ಪರಾಕಾಷ್ಠೆ ಚಿತ್ರಿತವಾಗಿದೆ. ವಿಧುರ ಗೌಡ ಮತ್ತು ಬೇಡರ ಬಸವಿ ಮಲ್ಲಿಯರ ಪ್ರಣಯ ಫಲಿಸಿದ 'ಗೌಡರ ಮಲ್ಲಿ' ನಿಜಕ್ಕೂ ಜಗತ್ಪ್ರಸಿದ್ದ ಕಥನ ಕವನಗಳಲ್ಲಿ ಒಂದಾಗಿದೆ. ಅದೊಂದು ಚಿರಂತನ ಕಾವ್ಯವೂ (ಕ್ಲಾಸಿಕ್) ಅಹುದು.

ಮಾಸ್ತಿಯವರ ಕಥನದ ಪೂರ್ಣದರ್ಶನ ನಮಗಾಗುವುದು – ಅವರ ನವರಾತ್ರಿ ಶೀರ್ಷಿಕೆಯ ಐದು ಸಂಪುಟಗಳ ಕಥನ ಕವನಗಳಲ್ಲಿ. ಗದ್ಯದಲ್ಲಿನ ಸಣ್ಣಕತೆಗಳ ಸಿದ್ದಿ ಸಂಯಮಗಳು, ಸ್ವಚ್ಛತೆ, ಹೃದ್ಯತೆಗಳು, ಶೈಲಿಯ ಸೊಬಗು, ವಿನ್ಯಾಸದ ವೈಭವ, ಸಂವಿಧಾನದ ಕೌಶಲ, ಪಾತ್ರ ಪರಿಪೋಷಣೆ, ಸನ್ನಿವೇಶ ಸೃಷ್ಟಿ. ಅಚಿತಿಮ ಜೀವನ ದರ್ಶನ ಎಲ್ಲವೂ ಇಲ್ಲಿನ ಹತ್ತೊಂ ಬತ್ತು ಕಾವ್ಯ ಕತೆಗಳಲ್ಲಿ ಸ್ಪಷ್ಟ ಗೋಚರ. ನವರಾತ್ರಿ ಕಾವ್ಯ ಕಂಡಿಕೆಉ ಶಿಲ್ಪಕ್ಕೆ ಛಾಸರನ ಕ್ಯಾಂಟರ್ ಬರಿ ಟೇಲ್ಸ್ ಮೂಲ ಮಾದರಿ ಎಂಬುದು ನಿರ್ವಿವಾದ. ಅಲ್ಲಿನ ಕಥಾನಿರೂಪದ ಕಲ್ಪನೆ, ತಂತ್ರಗಳು ಮಾಸ್ತಿಯವರ ಮೇಲೆ ತುಂಬಾ ಪ್ರಭಾವ ಬೀರಿವೆ. ಆದರೆ ಮಾಸ್ತಿಯವರು ತಮ್ಮ ದೇಶ, ದೃಷ್ಟಿಗನುಗುಣವಾಗಿ ಮಾರ್ಪಡಿಸಿಕೊಂಡು ಕತೆ ಹೇಳಿದ್ದಾರೆ, ಇಲ್ಲವೆ ಹೇಳಿಸಿದಂತೆ ಕಲ್ಪಿಸಿಕೊಂಡಿ ದ್ದಾರೆ. ಅಲ್ಲಿ 'ಸಮಾಧಿ ಸತ್ಯ'ದ ಮೂಲಕ ಯಾವ ದೇಶದವನಾಗಿರಲಿ ಯಾವ ಕಾಲದವನೇ ಆಗಿರಲಿ, ಮನುಷ್ಯನ ಮೂಢ ನಂಬಿಕೆ ಹೇಗೆ ಕೆಲಸಮಾಡುತ್ತದೆ ಎಂಬುದನ್ನು ಚಿತ್ರಿಸಿದರೆ, 'ಸೋಜಿಗದ ಹೊಳಲು' ಅಫೀಮಿನ ಮಹಿಮೆಯನ್ನು ಬಿಚ್ಚಿಟ್ಟು ಕಚಗುಳಿಯಿಟ್ಟು ನಗಿಸುತ್ತದೆ. 'ನಾಮದ ಮಹಿಮೆ' ಆಧ್ಯಾತ್ಮದ ಹಂತಕ್ಕೊಯ್ದರೆ, 'ಕಪ್ಪೆ ಚೆನ್ನಿಗಮೂರ್ತಿ' ನಮ್ಮನ್ನು ಮರುಕದ ಮಡುವಿನಲ್ಲಿ ಅದ್ದುತ್ತದೆ. ಇಲ್ಲಿನ ಇಂಥಹ ಹೃದಯಂಗಮ ಕಥನಗೀತಗಳು ಮಾಸ್ತಿಯವರ ಕಥನ ಕಲೆಗೂ ಕವಿತಾ ಶಕ್ತಿಗೂ ಎತ್ತಿದ ಪತಾಕೆಗಳಾಗಿವೆ.

ಇಷ್ಟಾದರೂ ಮಾಸ್ತಿಯವರಿಗೆ ಭಾವಗೀತ ರಚನೆಯಲ್ಲಿ ಸಿದ್ದಿ ಇಲ್ಲ. ಅವು ಹೆಚ್ಚಾಗಿ ಗೇಯಗೀತಗಳು, ಭಕ್ತಿಗೀತಗಳು. ಅವುಗಳಲ್ಲಿ ಹಲವು ಕಟ್ಟಿದವುಗಳೇ ಹೊರತು ಹುಟ್ಟಿದವುಗಳಲ್ಲ. ಈ ಮಾತು ಅವರ ಅಭಿಮನ್ಯು, ಇಂದುಮತಿ ಮೊದಲಾದ ಎಪಿಕ್ ಫ್ರಾಗ್‌ಮೆಂಟ್‌ಗಳಿಗೂ, ಮಹಾಕಾವ್ಯ ಎಂದು ಕರೆಸಿಕೊಳ್ಳುವ 'ಶ್ರೀರಾಮ ಪಟ್ಟಾಭಿಷೇಕ'ಕ್ಕೂ ಅನ್ವಯಿಸುತ್ತದೆ. ಜಗತ್ಪ್ರಸಿದ್ಧ

ವಿಶ್ವ ಮಹಾಕಾವ್ಯ ರಾಮಾಯಣ ಮಾಸ್ತಿಯವರ ಕೈಯಲ್ಲಿ ತುಂಬ ಸರಳ ಸಾಧಾರಣ ರಚನೆಯಾಗಿ ರೂಪಿತವಾಗಿದೆ. ನೈಜತೆಯ ಬೆನ್ನು ಹತ್ತಿದ ಮಾಸ್ತಿ ಬುದ್ಧಿ ಮಹಾಕಾವ್ಯದ ಭವ್ಯತೆಯನ್ನು ನೀಗಿ. ಆದರೆ ಅದರ ತಂತ್ರ ಮೆಚ್ಚುವಂಥದು. ಅದೂ ಕೂಡ ಸಂಸ್ಕೃತದಲ್ಲಿ 'ಕಾದಂಬರಿ'ಯ ಬಾಣಭಟ್ಟನ ಅನುಕರಣೆ ಅಥವಾ ಪ್ರಭಾವ ಅಥವಾ ಪ್ರೇರಣೆ ಎನ್ನದೆ ವಿಧಿಯಿಲ್ಲ. ರಾವಣ ಹತನಾಗಿ ವಿಭೀಷಣನಿಗೆ ಲಂಕೆಯ ಪಟ್ಟ ಕಟ್ಟಿ, ನಾಳೆ ಅಯೋಧ್ಯೆಗೆ ರಾಮ ಸೀತ ಲಕ್ಷ್ಮಣರು ಹಿಂತಿರುಗಬೇಕು. ಅವರ ಆಗಮನದ ಸುದ್ದಿ ಮುಟ್ಟಿಸಲು ಅಂಜನಾಸುತ ನಿಯೋಜಿತನಾಗಿ, ಮುಂದೆ ಹೋಗಿ ನಂದಿಗ್ರಾಮದಲ್ಲಿ ಭರತಾದಿಗಳನ್ನು ಭೇಟಿ ಮಾಡಿದಾಗ ಅವರು ಕೇಳಿದ ಪ್ರಶ್ನೆಗಳಿಗೆ ಹನುಮ ಉತ್ತರ ಕೊಡುವುದರೊಂದಿಗೆ ಕಾವ್ಯ ಆರಂಭವಾಗುತ್ತದೆ. ಅನಂತರ ಬಂದ ಬಂದವರೊಡನೆ ಪಕ್ಷ ಪಕ್ಷವಾಗಿ ಕಥೆ ಹೇಳಿಸಿ ರಾಮಾಯಣ ಕಾವ್ಯದ ಸಮಗ್ರತೆ ಕೈಗೆ ಸಿಗುವಂತೆ ಮಾಡುತ್ತಾರೆ. ಹೀಗೆ ಕಥೆ ಅಂತ್ಯದಿಂದ ಆರಂಭವಾಗಿ ಮೊದಲೆಡೆಗೆ ಸುರುಳಿ ಬಿಚ್ಚುತ್ತಾ ಹೋಗುತ್ತದೆ. ಅಗತ್ಯ ಕಂಡೆಡೆಗಳಲ್ಲಿ ಸಾಂದರ್ಭಿಕ ಹಿನ್ನಲೆಯ ಹೊಳಪು (Flash back) ಚೆಲ್ಲಿ, ಹಾದಿಯುದ್ದಕ್ಕೂ ಸಂಹಾವಲೋಕನಗೈಯುತ್ತಾ, ಕಾವ್ಯಕ್ಕೊಂದು ಚಾಲನೆ ನೀಡುತ್ತಾ ಸಾಗುತ್ತದೆ. ಇಂತಹ ತಂತ್ರವಷ್ಟೇ ಈ ಕೃತಿಯ ಜೀವದ್ರವ್ಯವಾಗಿದೆ.

ಕಥೆಗಾರ ಮಾಸ್ತಿ ನಾಟಕ ಪಟುವಾಗಿಯೂ ಪ್ರಸಇದ್ಧರಾಗಿದ್ದಾರೆ. ಅವರ ಕಾಕನಕೋಟೆ ಬದಲಾದ ಸಂಸ್ಕೃತಿಯ ದುರಂತ ಛಾಯೆ ಚೆಲ್ಲಿದರೆ, ಯಶೋಧರೆ ಬಾಳಿನ ಬೆಳಕನ್ನು ಪ್ರಖರವಾಗಿ ಬೀರುತ್ತದೆ. 'ಒಳಗಿನೊಳಗಣ ಬೇಲಕು ಸರಿಪಡಿಸಿಕೊಳ್ಳಬೇಕು' ಎಂಬ ಮಾತು ಪ್ರತಿ ವ್ಯಕ್ತಿಯನ್ನು ಅವನ ಆತ್ಮ ವಿಶ್ಲೇಷಣೆಗೆ ಒಳಗುಮಾಡುತ್ತದೆ. ಸಂಕ್ಷಿಪ್ತವಾಗಿ ಈ ಎರಡು ನಾಟಕಗಳ ಬಗೆಗೆ ಹೇಳುವುದಾದರೆ – ಕಾಕನಕೋಟೆ ಕನ್ನಡ ರಂಗಭೂಮಿಯ ಮೇಲೆ ಬಿದ್ದ ಗಟ್ಟಿ ಕಾಳು : ಯಶೋಧರಾ ಮಾಸ್ತಿಯವರ ನಾಟಕಗಳ ನಾಯಕ ರತ್ನ. ಕನ್ನ ಸಾಹಿತ್ಯ ವಾರಿಧಿಯ ಕೃತಿರತ್ನವೂ ಹೌದು. ವಿಶ್ವದ ಮಹದ್ವಿಭೂತಿಯ ಹಿರಿಬಾಳು ಭವ್ಯ ಬಾವನೆಗಳನ್ನು ಪುಟಿಯಿಸುವ ಸೆಲೆ. ಅಂತಹ ಮಹಾನ್ ಚೇತನದ ಜೀವನೇತಿಹಾಸದ ಒಂದು ಪುಟಿಕೆ – ಈ ಯಶೋಧರಾ. ಬುದ್ಧನ ಬದುಕಿನ ಒಂದು ಮುರುಕು. 'ಸಾರಿ ಪುತ್ರನ ಕಡೆಯ ದಿನಗಳು' ಎಂಬೊಂದು ಸಣ್ಣಕತೆಯ ರೂಪುಧಾರಣ ಮಾಡಿದ್ದರೆ, ಇನ್ನೊಂದು ಮುರುಕು ಯಶೋಧರಾ ಎಂಬಭಿಧಾನ ಗೀತರೂಪಕವಾಗಿದೆ.

* * * *

ಮಾಸ್ತಿಯವರ ಬೃಹತ್ ಕಾದಂಬರಿಗಳು ಎರಡು – ಒಚಿದು ಚನ್ನಬಸವ ನಾಯಕ ಮತ್ತೊಂದು ಚಿಕ್ಕವೀರ ರಾಜೇಂದ್ರ. ಎರಡೂ ಐತಿಹಾಸಿಕ ಕಾದಂಬರಿಗಳೇ. ಬಿದನೂರು ಮತ್ತು ಕೊಡಗು ರಾಜ್ಯಗಳನ್ನಾಳಿದ ಎರಡು ಅರಸು ಮನೆತನಗಳು. ಪತನ ಪದವಿ ಪಡೆದ ಅಚಿತಿಮ ದಿನಗಳ ಭಗ್ನ ಚಿತ್ರಣಗಳು ಇಲ್ಲಿವೆ. ಕೆಳದಿ ಇಕ್ಕೇರಿಗಳನ್ನು ತಮ್ಮ ರಾಜ್ಯದ ರಾಜಧಾನಿಗಳನ್ನಾಗಿ ಮಾಡಿಕೊಂಡರು. ಅಳಿದ ಕೆಳದಿಯ ಅರಸರು ತಮ್ಮ ವೈಭವದ ದಿನಗಳಲ್ಲಿ ಬಿದನೂರನ್ನು ರಾಜಧಾನಿಯನ್ನಾಗಿ ಮಾಡಿಕೊಂಡರು. ವಿಜಯನಗರದ ಪತನಾನಂತರದ ಸಾಮ್ರಾಜ್ಯದಷ್ಟೇ ವೈಭವ ವೈಶಿಷ್ಟ್ಯಗಳಿಂದ ಮೆರೆಯುತ್ತಿದ್ದ ಬಿದನೂರು ಹೈದರನ ಕಣ್ಣು ಸೆಳೆಯಿತು. ಆತ ದೇಶೀಯ ದೊರೆಗಳ ನೆರವಿನಿಂದ ಬಿದನೂರ ಮೇಲೆ ಧಾಳಿ ಮಾಡಿ, ಅದನ್ನು ವಶಪಡಿಸಕೊಂಡ. ಬಿದನೂರು ತನ್ನ ಹೆಸರು ಬದಲಿಸಿಕೊಂಡು ಹೈದರ್ ನಗರ ಎಂದಾಯಿತು. ಹೀಗೆ ಹೈದರನಿಂದ ಬಿದನೂರು ರಾಜ್ಯ ಹಾಳಾದಂತೆ, ಕೊಡಗನ್ನಾಳುತ್ತಿದ್ದ ಹಾಲೇರಿ ಅರಸು ಮನೆತನವನ್ನು ಬ್ರಿಟಿಷರು ನಾಮಾವಶೇಷ ಮಾಡಿದರು. ಎರಡೂ ಮನೆಗಳ ನೈತಿಕ ಪತನವೇ ಅವುಗಳ ವಿನಾಶಕ್ಕೆ ಕಾರಣವಾಯಿತು ಎಂಬುದು ಮಾಸ್ತಿಯವರ ಅಭಿಪ್ರಾಯ. ಏನೇ ಇರಲಿ ಮನುಷ್ಯನಗೆ ಆಯಸ್ಸು ಇದ್ದಂತೆ, ರಾಜ್ಯ ಸಾಮ್ರಾಜ್ಯಗಳಿಗೂ ಇರುತ್ತದೆ. ಒಂದು ದಿನ ಹುಟ್ಟಿದ್ದು, ಬೆಳೆದು ಅಳಿಯಲೇಬೇಕು. ಇದು ನಿಸರ್ಗ ನಿಯತಿ. ಇಂತಾದ ಎರಡು ಬಹು ದೊಡ್ಡ ಅರಸು ಮನೆತನಗಳ ವಿನಾಶ ವಿದೇಶಿಯರ ದುರಾಕ್ರಮಣ ಧೇಶೀ ಸಂಸ್ಕೃತಿಯ ಸರ್ವನಾಶಕ್ಕೆ ಕಾರಣವಾಯಿತು. ಈ ಐತಿಹಾಸಿಕ ಕಥಾಭಿತ್ತಿಯ ಮೇಲೆ ಭಗ್ನಚಿತ್ರಣ ಬಿಡಿಸಿದ್ದಾರೆ ಮಾಸ್ತಿ.

ಹುಲುಸಾಗಿ ಬೆಳೆದ ಮೇಲೆ ಕಳೆ ಕೀಳುವ ಕೆಲಸ ಆರಂಭವಾಗುತ್ತದೆ. ಬೆಳಸೇ ಇಲ್ಲದ ಬರೀ ಹೊಲದಲ್ಲಿ ಕಳೆಗೆ ಕೆಲಸವಿರುವುದಿಲ್ಲ. ಅದರಂತೆ ಮಾಸ್ತಿಯವರ ಹೊನ್ನಾರು ಹೂಡಿದಾಗ ಕನ್ನಡ ಸಾಹಿತ್ಯ ಕ್ಷೇತ್ರ ಇನ್ನೂ ಕನ್ನೆ ಭೂಮಿಯಾಗಿತ್ತು. ಆಗ ತಾನೆ ಹೊಸ ಮಾದರಿಯ ಬಿತ್ತನೆ ಕೆಲಸ ಆರಂಭವಾಗಿತ್ತು. ಬೆಳಸೇ ಇಲ್ಲದಾಗ ಹೊಲಸು ಎಲ್ಲಿ ಹುಟ್ಟಬೇಕು ? ಅಂದರೆ ಸಮಕಾಲೀನ ಸಾಹಿತ್ಯ ಕುರಿತು ನೈಜ ವಿಮರ್ಶೆ ಮಾಸ್ತಿ ದಿನಗಳಲ್ಲಿ ಆಗಲಿಲ್ಲ. ಅದಕ್ಕೆ ಬದಲು ಪ್ರಾಚೀನ ಕೃತಿರತ್ನಗಳ ವ್ಯಾಖ್ಯಾನ ವಿಮರ್ಶೆ, ವರ್ಣನಾತ್ಮಕ ವಿಮರ್ಶೆಗಳು ನಡೆದವು. ಅವುಗಳಲ್ಲಿ ಮಾಸ್ತಿಯವರು ವಾಲ್ಮೀಕಿ ರಾಮಾಯಣ ಮತ್ತು ವ್ಯಾಸ ಭಾರತಗಳ ಮೇಲೆ ನಡೆಸಿದ ವ್ಯಾಖ್ಯಾನ ವಿಮರ್ಶೆ ಅದ್ವಿತೀಯವಾದುದು. 'ಆದಿಕವಿ ವಾಲ್ಮೀಕಿ'ಯಲ್ಲಿ ವಾಲ್ಮೀಕಿ ವಿರಚಿತ ರಾಮಾಯ

ಣದಲ್ಲಿ ಪ್ರಕ್ಷಿಪ್ತಗಳೆಷ್ಟು, ಪಾತ್ರಗಳೆಂಥವು, ಮಹರ್ಷಿ ವಾಲ್ಮೀಕಿಯ ಪ್ರಾತಿಭಾಜ್ಯೋತಿ ಎಂಥದು ಇತ್ಯಾದಿಗಳನ್ನು ಅತ್ಯದ್ಭುತವಾಗಿ ವಿಶ್ಲೇಷಿಸಿ ವಿವರಿಸಿದ್ದಾರೆ. ಈ ಕುರಿತು ಕುವೆಂಪು ಹೀಗೆ ಹೇಳಿದ್ದಾರೆ.

'ಆದಿಕವಿ ವಾಲ್ಮೀಕಿ' ಬರಿಯ ವಿಮರ್ಶಾ ಗ್ರಂಥವಲ್ಲ. ಅದೊಂದು ರಸಕೃತಿ. ಕವಿಕೃತಿಯೇ ವಿಷಯವಾಗಿರುವ ಕವಿಕೃತಿ. ಆದ್ದರಿಂದ ಅದರ ಓದು ಬೇಸರವಾಗುವುದಿಲ್ಲ. ವಾಲ್ಮೀಕಿ ರಾಮಾಯಣಕ್ಕಾಗಿ ಮಾತ್ರವಲ್ಲ ಅದಕ್ಕಾಗಿಯೂ ಅದನ್ನು ಓದಬೇಕು. ಎಚ್ಚರಿಕೆಯಿಂದ ಸಾವಧಾನಾಗಿ ಓದಬೇಕು. ಅದು ಅವಸರದಿಂದ ಹೊರಬಂದ ಪುಸ್ತಕವಲ್ಲ. ಬಹುಕಾಲದ ಅಧ್ಯಯನ, ಅವ ಲೋಕನ, ಮನನ, ಧ್ಯಾನ, ತಪಸ್ಸುಗಳ ಪುಷ್ಪರೂಪವಾಗಿ ಫಲಿಸಿದೆ. ಕನ್ನಡಿಗರ ಸುದೈವದಿಂದ ಅದು ಕನ್ನಡದಲ್ಲಿ ಬಂದಿದೆ. ಲೋಕದ ಯಾವ ಉದ್ದಾಮ ಸಾಹಿತ್ಯಕ್ಕಾದರೂ ಅದು ಶ್ರೇಷ್ಠ ರತ್ನವಾಗಬಹುದಾದ ವಿಮರ್ಶ ಗ್ರಂಥ." ಅಂತಹ ತಪಸ್ಸಿನ ಕೃತಿ ಯನ್ನು ಇತರ ಪುಸ್ತಕಗಳಂತೆ ಲಘುವಾಗಿ ಕಾಣುವುದೂ ಕೃತಿಗೌರವಕ್ಕೆ ಕುಂದು. ಈ ಸ್ವಲ್ಪಾವಕಾಶದ ಉಪನ್ಯಾಸದಲ್ಲಿ ಅದರ ಮಹತ್ತನ್ನು ತೋರಿಸುವುದು ಸಾಧ್ಯವಿಲ್ಲ. ಇಲ್ಲಿ ಆ ಪ್ರಯತ್ನಕ್ಕೆ ಕೈ ಹಾಕಿಯೂ ಇಲ್ಲ. ಹೆಬ್ಬಾಗಿಲೇ ತೆರೆದಿರುವಾಗ ಬಾಗಿಲಲ್ಲಿ ನಿಂತುಕೊಂಡು ಒಳಗಣದನ್ನು ಬಣ್ಣಿಸಿ ಹೇಳುವ ಗಾಂಪತನವೇಕೆ ? ಕುತೂಹಲ ಕೆರಳಿದವರು ಒಳಹೊಕ್ಕು ಕಾಣಬಹುದು.

ಮಾಸ್ತಿಯವರು ದಂಡಕಾರಣ್ಯವನ್ನು ಉದ್ಯಾನವನ್ನಾಗಿ ಮಾಡಿಲ್ಲ. ಅಷ್ಟು ಅರಸಿಕರಲ್ಲ ಅವರು. ಅರಣ್ಯದ ಮಹತ್ತು ಬೃಹತ್ತು. ಸಂಪತ್ತು ವಿಪತ್ತುಗಳ ಉದ್ಯಾನಕ್ಕೆ ಎಂದೆಂದಿಗೂ ಬರಲಾರವು. ಆದರೆ ಅವರು ದಂಡಕಾರಣ್ಯಕ್ಕೆ ದಾರಿ ಕಡೆದಿದ್ದಾರೆ. ದರ್ಶನೀಯ ಸ್ಥಾನಗಳನ್ನು ಕೈಮರನೆಟ್ಟು ಸೂಚಿಸಿದ್ದಾರೆ ; ರಾಮಾಯಣವೆಂಬುದು ದಂಡಕಾರಣ್ಯವೆಂದು ಹೆದರಬೇಡಿ ; ಅತ್ರಿ ಅನುಸೂಯೆಯರ ಆಶೀರ್ವಾದ ಪಡೆದ ರಾಮನಂತೆ ಮುಂದೆ ನುಗ್ಗಿ ; ವಿರಾಧ ರಾಕ್ಷಸನಂತೆ ಮೊದಲು ಕ್ಷಿಷ್ಟತೆ ಕಂಡರೂ ತರುವಾಯ ಆ ರಾಕ್ಷಸನ ಮೈಯಿಂದಲೇ ಗಂಧರ್ವನು ಮೂಡಿದಮತೆ ರಸಾಸ್ವಾದನೆಯ ಮಹಾನಂದವೂ ಮಹದ್ವ್ಯಕ್ತಿ ಪರಿ ಚಯದ ಮಹಿಮೆಯೂ ರಸಋಷಿ ವಾಲ್ಮೀಕಿಯ ದರ್ಶನ ಕೃಪೆಯ ಮನಶ್ಯಾಂತಿಯೂ ನಿಮ್ಮಲ್ಲಿ ಆವಿರ್ಭವಿಸುತ್ತವೆ, ಎಂದು ಮನಗಾಣುವಂತೆ ಹೇಳಿದ್ದಾರೆ. ಅವರ ಶೈಲಿ, ಅವರ ವಿಚಾರಸರಣಿ, ಅವರ ಸೂಕ್ಷ್ಮ ಪರಿಶೀಲನೆ, ವಿಷಯ ಸಂಯೋಜನೆ, ವಾದ ಸೌಜನ್ಯ, ವ್ಯಾಖ್ಯಾನ ರಮಣೀಯತೆ, ಫಣಿಗಮನದಂತೆ ನುಣ್ಣಗೆ ಮುಂಬರಿವ ಒಂದು ಉದ್ದೇಶದ, ಒಂದು ಆದರ್ಶದ ಕ್ರಮ ವಿನ್ಯಾಸ – ಇವುಗಳು ಎದುರಾಳಿಯ ಭೀನ್ನಾಭಿಪ್ರಾಯಗಳನ್ನು ಕೂಡ ಒಲಿಸಿ, ಒಪ್ಪಿಸಿ, ಒಮ್ಮೊಮ್ಮೆ ಪುಸಲಾಯಸಿ, ಒಮ್ಮೊಮ್ಮೆ ವಂಚಿಸಿಯೂ ತಮ್ಮ ಗುರಿಗೆ ಮುನ್ನುಗ್ಗುತ್ತವೆ. ಸೋತ ಎದುರಾಳಿಯೂ ಗೆದ್ದಂತೆ ನಲಿಯುತ್ತಾನೆ. ಮಾಸ್ತಿಯವರ ಮೋಹನ ಕಲೆಗೆ ಅವರ"ಆದಿಕವಿ ವಾಲ್ಮೀಕಿ' ಒಂದು ಹಿರಿಯ ಸಾಕ್ಷಿ ! '

ವ್ಯಾಸರ ಭಾರತ ತಿರ್ಥದಲ್ಲಿ ಮೊದಲು ಮಿಂದವರು, ಮಿಂದು ಮಡಿಯಾದವರು ಮಾಸ್ತಿಯವರೆ. ಮಹಾಭಾರತದ ವಿನ್ಯಾಸ ವೈಖರಿಯನ್ನು ಸಂಗ್ರಹವಾಗಿ ರೂಪಿಸಿ, ಆ ಮಹಾಭಾರತ ಪೃಥ್ವಿಯನ್ನು ಹೊತ್ತು ನಿಂತಿರುವ ಸ್ತಂಭಸ್ವರೂಪಿ ಪಾತ್ರ ಗಳನ್ನು ವಿಶ್ಲೇಷಿಸಿದ್ದಾರೆ. ವಿಶೇಷವಾಗಿ ವ್ಯಾಸ ಭಾರತದ ಅನೇಕ ಉಪಾಖ್ಯಾನಗಳ ಔಚಿತ್ಯ ಅವುಗಳ ಆವಿರ್ಭಾವದ ವೈಶಿಷ್ಟ್ಯ ಇವೇ ಮೊದಲಾದುವನ್ನು ವಿವೇಚಿಸಿದ್ದಾರೆ. ಬದುಕಿನ ಸಂಕೀರ್ಣತೆಗೆ ಹೇಗೆ ಅಲ್ಲಿ ಬಿತ್ತರಗೊಂಡಿದೆ ಎಂಬುದನ್ನು ಎಳೆ ಎಳೆ 'ಯಾಗಿ ತೆರೆದು, ಜೀವನದ ಅಂತಿಮ ಗುರಿ ಯಾವುದು ? ಎಂಥದು ? ಎಂಬ ತಾತ್ವಿಕ ನೆಲೆಗೆ ಕೊಂಡೊಯ್ಯುತ್ತಾರೆ. ಇಂತಹ ದರ್ಶನ ವಿಮರ್ಶೆಯ ಕಾರ್ಯ 'ಭಾರತ ತೀರ್ಥ'ದಲ್ಲಿ ನಡೆದಿದೆ.

ಈ ಮಹತ್ವಪೂರ್ಣ ಮಹತ್ವಾಪೂಣ್ ವಿಮರ್ಶಾ ಕೃತಿಗಳಲ್ಲದೆ ಮಾಸ್ತಿಯವರು 'ವಿಮರ್ಶೆ' ಕುರಿತ ನಾಲ್ಕು ಸಂಪುಟಗ ಳನ್ನು ಕೊಟ್ಟಿದ್ದಾರೆ. ಅವುಗಳಲ್ಲಿ 'ಸಾಹಿತ್ಯದಲ್ಲಿ ವಿಮರ್ಶೆಯ ಕಾರ್ಯ' ಎಂಬ ಪ್ರಬಂಧದದ ಮೂಲಕ ತಮ್ಮವೇ ಹಲವು ತಾತ್ವಿಕ ವಿಮರ್ಶೆಯ ಸೂತ್ರಗಳನ್ನು ಕೊಟ್ಟಿದ್ದಾರೆ. ಜಾಫೀಸ್, ಡೇವಿಡ್, ಟಾಗೂರ್, ಗಯಟೆ, ಮೊದಲಾದವರ ವಿಮರ್ಶಾ ಸೂತ್ರಗಳನ್ನು ಕನ್ನಡಿಗರಿಗೆ ಪರಿಚಯಿಸಿದ್ದಾರೆ. ಲಕ್ಷ್ಮೀಶನ ಜೈಮಿನಿ ಭಾರತ ಕುರಿತದ್ದು ಮತ್ತೊಂದು ರಸವಿಮರ್ಶೆ. ಹೀಗೆ ಮಾಸ್ತಿಯಿಂದ ವಿಮರ್ಶಾ ಕೃಷಿ ಸಾಕಷ್ಟು ಪ್ರಮಾಣದಲ್ಲಿ ನಡೆದಿದೆ.

* * * *

'ಮಾಸ್ತಿಯವರ ಮಾತು ಮುಗಿಲೆತ್ತರದ್ದಲ್ಲ, ತೃಣಮೂಲದ್ದು. ಮಾಸ್ತಿಯವರ ಬದುಕಿನಲ್ಲೆಂತೊ ಅವರ ಮಾತಿನಲ್ಲೂ ಅಂತೆಯೆ ಬಿರುಸು, ಒರಟು, ರಭಸ, ಆರ್ಭಟ, ಆಡಂಬರ, ಕಾಠಿಣ್ಯ, ಜಟಿಲತೆ ಇವೊಂದರ ಸುಳಿವೂ ಇಲ್ಲ. ಎಲ್ಲಡೆಯೂ ನಮಗೆ ಅರಿವಾಗುವುದು ಅವರ ನಯ, ನವುರು, ಮೆಲುಕು, ಲಾಲಿತ್ಯ, ಮಾರ್ದವತೆ, ಸರಳತೆ, ಸೌಲಭ್ಯ, ಮನ ನೋಯಿಸುವ

ಮೆದುಳು ಸೋಲಿಸುವ ಪದಪ್ರಯೋಗ ಅದರಲ್ಲಿ ಇಲ್ಲವೇ ಇಲ್ಲವೆನ್ನಬಹುದು. ಅವರ ಮಾತು ಚಾವಟಿಯಿಂದ ಹೊಡೆದೆಬ್ಬಿಸುವಂಥದಲ್ಲ, ತಾಯಿ ಮಗುವನ್ನು ತಟ್ಟಿ ಎಬ್ಬಿಸುವಂಥದು' ಎಂದು ಕ.ವೆಂ. ರಾಗವಾಚಾರ್ಯರ ಮಾತುಗಳು ಅರ್ಥಪೂರ್ಣ.

ಕಾವ್ಯವೊಂದನ್ನು ಓದಿದರೆ ಕವಿ ಹೃದಯವನ್ನೇ ಓದಿದಂತೆ. ಕವಿ ತನ್ನ ಕಾವ್ಯದ ಪುಟಪುಟದಲ್ಲೂ ಕುಳಿತಿರುತ್ತಾನೆ. ಪ್ರತಿ ಪಾದದಲ್ಲೂ ಅವನತನ ತನ್ನನ್ನೇ ತಾನು ಹಂಚಿಕೊಂಡಿರುತ್ತದೆ. ಅದನ್ನು ಗುರುತಿಸಲಿರುವ ಮಾಪನ ಕವಿಯ ಶೈಲಿ. ಕವಿಯ ಕಾವ್ಯಶೈಲಿ. ತಿಂದಿದ್ದರ ವಾಸನೆ ತೇಗಿದಲ್ಲಿ, ಬದುಕಿದ್ದರ ಬೆಳಕು ಬರೆಹದಲ್ಲಿ.

ಮಾಸ್ತಿಯವರ ಮನೋಧರ್ಮವನ್ನು ತಿಳಿದ ನಮಗೆ ಅವರ ಶೈಲಿಯನ್ನರಿಯುವುದು ತುಂಬಾ ಸುಲಭ. ಅವರದು ಸಾತ್ವಿಕ ಶೈಲಿ. ಸಾರ್ಥಕ ಶೈಲಿ. ಅವರ ಮೃದು ಮತ್ತು ಸುಸಂಸ್ಕೃತ ಮನೋಧರ್ಮಕ್ಕನುಗುಣವಾಗಿ ಅವರ ಶೈಲಿ ಸುಭಗ ಹಾಗೂ ಶುದ್ಧ ತತ್ವದ ಸಾಕಾರ ರೂಪ. ಅದಕ್ಕೆ ಕುಟಿಲತೆ ಗೊತ್ತಿಲ್ಲ, ಪೆಡಸು ತಿಳಿದಿಲ್ಲ, ಬಯ್ಯುವುದು ಬರುವುದೇ ಇಲ್ಲ. ಅಂದರೆ ಎಲ್ಲಿ ನೊಂದಾರೋ ಎಂಬ ಸುಕೋಮಲ ಸ್ವಭಾವ ಅವರದು. ಊದುಬತ್ತಿಯ ನವುರಿನಂತೆ ಬಹು ಸೂಕ್ಷ್ಮ. ಒಂದು ರೀತಿಯಲ್ಲಿ ನಾಚಿಕೆ ಮುಳ್ಳು ಇದ್ದ ಹಾಗೆ. ಮುಟ್ಟಿದರೆ ಸಾಕು ಹಾಗೇ ಮುದುಡಿಕೊಂಡು ಬಿಡುತ್ತದೆ. ಅನ್ಯರು ಅಪಾಯಗೈಯುವರೆಂಬ ಭೀತಿಯಿಂದಲ್ಲ. ಯಾರಿಗೂ ನೋವಾಗದಿರಲೆಂಬ ಸಾನುಕ್ರೋಶತೆಯಿಂದ. ಆದರೆ ಅದರಲ್ಲಿ ಬನಿ ಇಲ್ಲದಿಲ್ಲ, ಭಾವ ಗೌರವದ ಇಕ್ಷಣೆ ಆಗದಿಲ್ಲ. ಅಲ್ಲಿ ಶರಾವತಿಯ ನಿರ್ಘೋಷ ಕೇಳಿಬರುವುದಿಲ್ಲ. ಆದರೆ ತುಂಗಭದ್ರೆಯ ಪ್ರಶಾಂತ ಪ್ರವಾಹ ದೃಗ್ಗೋಚರ. ಅವರ ಕಾವ್ಯಕ್ಕೆ ಎಲ್ಲವೂ ಸ್ಪಷ್ಟ. ಎಲ್ಲವೂ ಸುಂದರ. ಬಾಳಿನ ಏಳಿಗೆಯ ಬಗ್ಗೆ ಪ್ರೀತಿ, ಶುಚಿಯ ಬಗ್ಗೆ ವಿಶೇಷ ಕಳಕಳಿ ಅದಕ್ಕೆ. ಬದುಕಿನ ಸಂಕೀರ್ಣತೆ ಗೋಜಲುಗಳ ಕಡೆಗೆ ನೋಡುವ ಇಚ್ಛೆ ಇವಿಗೆ ಹೇಗಿಲ್ಲವೋ ಅವರ ಕಾವ್ಯ ಶೈಲಿಗೂ ಕ್ಲಿಷ್ಟ ಪದಗಳನ್ನು ತಂದು ತುರುಕುವ ಅಲಂಕಾರಗಳ ಅವಾಂತರ ಮೆರಸುವ, ಆಡಂಬರದ ಡಾಂಬಿಕತನ ಪ್ರದರ್ಶಿಸುವ ಇಚ್ಛೆ ಇಲ್ಲ, ಅವರ ಶೈಲಿ ತೆರೆದ ಹೃದಯ ; ಸ್ಪಷ್ಟತೆಯೇ ಅದರ ಜಿವಾಲ. ಹಾರಾಟ ಉದ್ವೇಗಗಳು ಅದಕ್ಕೆ ಬಾಹಿರ. ಕಣ್ಣುಕುಕ್ಕುವ ವರ್ಣವಿನ್ಯಾಸಕ್ಕಲ್ಲಿ ಎಡೆಯಿಲ್ಲ ; ಆದರೆ ಅದರಲ್ಲಿ ಮನವೊಲಿಸುವ ಗಾರುಡಿಗತನವಿದೆ”[೧] ಗದ್ಯದಲ್ಲಾಗಲೀ ನವ್ಯದಲ್ಲಗಲೀ ಲಯತತ್ವದ ನಡಿಗೆ ಮಾಸ್ತಿಯವರದು. ಸಂವೇದನೆಲ್ಲೂ ಅಷ್ಟೆ. ಸಮತೋಲನವನ್ನು ನೀಗಿಕೊಳ್ಳದ ಗಾಂಭೀರ್ಯ. ಇವರ ಕವಿತೆ ನಾಮದ ಚಿಲುಮೆ, ಸಿದ್ಧಗಂಗೆ, ದಶರಥರಾಮೇಶ್ವರ ವಜ್ರ ಇವೇ ಮೊದಲಾದ ಪುಣ್ಯಕ್ಷೇತ್ರಗಳಲಿನ ಭೂಗರ್ಭದಿಂದೆದ್ದ ತೀರ್ಥಗಳಂತೆ, ವಿದ್ಯುತ್ ಇದ್ದಾಗ ಎದ್ದು ನಿಂತು ಇಲ್ಲದಗ ಅತವಾ ಸ್ವಿಚ್ ತೆಗೆದಾಗ ಸಣ್ಣಗಾಗುವ ಬೃಂದಾವನ ಅಥವಾ ಬೀದಿಯ ಸರ್ಕ್‌ಲ್‌ನಲ್ಲಿರುವ ನೀರನಟಿಯರಂತಲ್ಲ, 'ಬಾಳಿನ ವೈವಿಧ್ಯದಲ್ಲಿ ಸುಖದುಃಖಗಳಲ್ಲಿ ಉಬ್ಬರ ಇಳಿತಗಳಲ್ಲಿ, ಏರುತಗ್ಗುಗಳಲ್ಲಿ ಎಲ್ಲೂ ತೂಕ ತಪ್ಪದಂತೆ, ಧೃತಿಗೆಡದಂತೆ ಶಾಂ ತವಾಗಿ, ಪ್ರಜ್ಞೆಯ ಬೆಲಕಿನಲ್ಲಿ ಸುದ್ಧವಾಗಿ, ಸಮೃದ್ಧವಾಗಿ ವ್ಯಕ್ತವಾಗುವ ಮಾಸ್ತಿಯವರ ಅಂತರಂಗದ ಅನುಭವದ ಅಭಿವ್ಯಕ್ತಿಗೆ ಬೆಳದಿಂಗಳ ಪ್ರಶಾಂತಿ, ಹೂವುಗಲ ಮೃದುತ್ವ, ಬಯಲಿನಲ್ಲಿ ಹರಿಯುವ ಅಗಲ ಕಿರಿದಾದ ಹೊಳೆಯ ಸ್ಫಟಿಕ ನಿರ್ಮಲ ಜಾಲದ ಪಾರದರ್ಶಿಕತೆ ಇದೆ. ಇವರ ಸಾಹಿತ್ಯಕ್ಕೆ ಮನಸ್ಸನ್ನು ಅಲ್ಲೋಲಕಲ್ಲೋಲಗೊಳಿಸಬಲ್ಲ ಯುಗಾಂತರಕರಕ ಆವೇಶ, ತೀವ್ರತೆ, ತಲಸ್ಪರ್ಶಿತ್ವ, ಆಕಾಶೋಡ್ಡಯನ ಇಲ್ಲ. . .ಕಣ್ಣಿಗೆ ಹೊಡೆಯುವ ರೂಪವಿಲ್ಲ, ಸ್ಫೂರ್ತಿಗೊಳಿಸಬಲ್ಲ ಮಾಂತ್ರಿಕತೆ ಇಲ್ಲ, ಭಾವೋ ದ್ವೇಗ ಸ್ಥಿತಿಯಾಗಲೀ, ಇಂಥ ಉದ್ವೇಗವನ್ನು ಹುಟ್ಟಿಸುವ ಶಕ್ತಿ ಇವರ ಸಾಹಿತ್ಯಕ್ಕೆ ಇಲ್ಲ. ಅಪಾರವಾದ ಅನುಕಂಪ, ವ್ಯಾಪಕವಾದ ಸಹಾನುಭೂತಿ ಇವರ ಸಾಹಿತ್ಯದಲ್ಲಿ ಅನುಸ್ಯೂತವಾಗಿ ಕಂಡುಬಂದರೂ ಅಲ್ಲಿ ದುರಂತ ದೃಷ್ಟಿ ಇಲ್ಲ. ಆದಕಾರಣ ಈ ಕೃತಿಗಳಲ್ಲಿ ಕಂಡುಬರುವ ಸಾಂತತೆ ಜಾಗೃತ ಮನಸ್ಸಿನ ವಿಚಾರಸ್ಥಲದಿಂದ ಹೊಮ್ಮುವಂತೆ ಕಾಣುತ್ತದೆಯಲ್ಲದೆ ಆಳದಿಂದೆದ್ದು ಬಂದು ಅಶಾಂತಿಯ ಬಿರುಗಾಳಿಯನ್ನೆಬ್ಬಿಸಿ ಹಡಗೊಡೆದು ಪಾಡುಪಟ್ಟು ಬದುಕಿನ ಅರ್ಥವನ್ನು ಅನುಭವಿಸಿದ ಬಳಿಕ ಸಂಪಾದಿಸಿಕೊಂಡ ಶಾಂತಿಪರ್ವದ ಹಾಗೆ ಕಾಣುವುದಿಲ್ಲ. ಇದು ಇವರ ಸಾಹಿತ್ಯದ ಪರಿಮಿತಿ ; ಪ್ರಜ್ಞಾಬದ್ಧತೆ, ದ್ವಂದ್ವಗಳ ಚಿತ್ರವಿಲ್ಲದ ದ್ವಂದ್ವ ಸಮನ್ವಯ[೨] ಒಟ್ಟಿನಲ್ಲಿ ಮಾಸ್ತಿಯವರ ಕಾವ್ಯ ಪ್ರಪಂಚ ಒಂದು ಗುಣಾದರ್ಶಲೋಕ. ಅಲ್ಲಿ ಶುಚಿ, ಋಜು, ಸ್ನೈತು, ಸಹಜತೆ – ಇವುಗಳಿಗೆ ಮಾತ್ರ ಸ್ಥಾನ ; ಆವೇಶ, ಆಕ್ರೋಶ, ದುರಂತ, ದೌರ್ಜನ್ಯಗಳಿಗೆ ಎಡೆ ಇಲ್ಲ.

ಮಾಸ್ತಿಯವರದು ಸುಭಗ ಸುಂದರ ಸುಕೊಮಲ ಶೈಲಿ, ಅದರಲ್ಲಿ ನಾವೀನ್ಯವಿದೆ, ನಾಟಕಿಯತೆ ಇದೆ, ಕೇಳುತ್ತಿದ್ದರೆ ರಸವೊಸರಿ ಸಹೃದಯ ಹೃದಯದಾಂತರ್ಯದಲ್ಲಿ ಮಡುಗಟ್ಟಿ ನಿಲ್ಲುತ್ತದೆ. ಆದರೆ ಅವರ ಸರಳತೆ ಹಾಗೂ ಸಹಜತೆಗಳಿಂದಾಗಿ ಕಾವ್ಯಕ್ಕೆ ಅಪಚಾರವೂ ಆಗಿದೆ. ಉದಾಹರಣೆಗೆ, ಸೀತೆಯ ಅಪಹರಣವಾದದ್ದು ಮನದಟ್ಟಾದಾಗ ರಾಮನಾಡುವ ಇಂಪ್ಯಾಷನೇಟ್ ನುಡಿಗಳು, ಶಬರಿಯನ್ನು ಕಂಡಾಗ ಪ್ರಶ್ನಿಸುವ ಕ್ಷೇಮ ಸಮಾಚಾರದ ಮಾತುಗಳು – ಇಂಥೆಡೆಗಳಲ್ಲಿ ಕ್ರಮವಾಗಿ

ಕರುಣೆ ಸಾಕಾರಗೊಳ್ಳಬಹುದಿತ್ತು ; ಭಕ್ತಿ ಭಾಗೀರಥಿಯಾಗಿ ಹರಿಯಬಹುದಿತ್ತು. ಇವೆರಡರಿಂದಲೂ ವಂಚಿತವಾಗಿವೆ ಆ ಸಂದರ್ಭಗಳು.

---

[೧] ದೇ.ಜ..ಗೌ, ಶ್ರೀನಿವಾಸ ಸಾಹಿತ್ಯ (೧೯೭೪). ಪು. ೩೨

[೨] ಪ್ರೊ.. ಎಂ. ಗೋಪಾಲಕೃಷ್ಣ ಅಡಿಗ, ಶ್ರೀನಿವಾಸ, ಪು. ೨೦೩–೨೦೪

ಕಲೆಯಲ್ಲಿ ಅಸ್ಪಷ್ಟತೆಯೂ ಒಂದು ದೋಷ. ಮಾಸ್ತಿಯವರ ಕವಿತೆ ಕೆಲವೆಡೆಗಳಲ್ಲಿ ಮೊದಲನೆಯ ದೋಷಕ್ಕೆ ಪಕ್ಕಾಗಿದೆ ಎನ್ನದೆ ವಿಧಿಯಿಲ್ಲ, ಇದು ಕಲ್ಪನಾ ದಾರಿದ್ರ್ಯ, ಶಬ್ದ ದಾರಿದ್ರ್ಯ ಅಲ್ಲ ; ತಿರ ಸಹಜತೆಯ ದೋಷ.

ಸಾಹಿತ್ಯ ಕ್ಷೇತ್ರದಲ್ಲಿ ಮಾಸ್ತಿಯವರದು ನಿರಂತರ ಬೇಸಾಯ. ಅಲ್ಲಿ ಅವರ ಬೆವರುಣ್ಣದ ಭೂಮಿಯಿಲ್ಲ ; ಅವರು ಹಾಯಿಸದ ನೀರುಣ್ಣದ ನೆಲವಿಲ್ಲ. ಅವರ ಪ್ರತಿಭೆಗೆ ಅನಂತ ಮುಖಗಳು. ಅದು ಮಾಸ್ತಿಯವರ ಎಲ್ಲ ಅಭಿವ್ಯಕ್ತಿಗೂ ಮೆರುಗು ಕೊಟ್ಟಿದೆ. ಅವರ ಶಾಬ್ದಿಕ ಪ್ರವೃತ್ತಿಗೆ ಶಾಶ್ವತತೆಯನ್ನು ದಯಪಾಲಿಸಿದೆ. ಅವರನ್ನು ಕವಿ ಮಾಸ್ತಿ, ಕತೆಗಾರ ಮಾಸ್ತಿ, ನಾಟಕಕಾರ ಮಾಸ್ತಿ, ವಿಮರ್ಶಕ ಮಸ್ತಿ, ಭಾಷಾಂತರಕಾರ ಮಾಸ್ತಿ, ಪತ್ರಿಕೋದ್ಯಮಿ ಮಾಸ್ತಿ, ಗದ್ಯಶಿಲ್ಪಿ ಮಾಸ್ತಿ ಎಂದೆಲ್ಲ ರೂಪಿಸಿಕೊಟ್ಟಿದೆ. 'ಮಾಸ್ತಿ ಕನ್ನಡದ ಆಸ್ತಿ' ಎಂಬಷ್ಟು ಸತ್ಕೀರ್ತಿಗೆ ಅವರನ್ನು ಚಿರಭಾಜನರನ್ನಾಗಿ ಮಾಡಿದೆ.

# ಗೊರೂರು ರಾಮಸ್ವಾಮಿ ಅಯ್ಯಂಗಾರ್

---

**ಒಂದು**

ಹೆತ್ತ ತಾಯಿ ಹೊತ್ತ ನೆಲ ಅತ್ಯಂತ ಪವಿತ್ರವಾದವುಗಳು. ತನಗಾಗಿಯೇ ಬದುಕುವ ಸಾಮಾನ್ಯ ವ್ಯಕ್ತಿ ಒಬ್ಬ ತಾಯಿಯಿತ್ತ ಒಂದು ಜನ್ಮದ ಸಾಲವನ್ನು ಹತ್ತು ಬಾರಿ ಹುಟ್ಟಿ ಬಂದರೂ ತೀರಿಸಲಾರ. ನೆಲದ ಋಣವೂ ಅಷ್ಟೆ ; ಸ್ವಾರ್ಥಿ ಬೆಳೆದು ಭಾರವಾಗುತ್ತಾನೆಯೇ ಹೊರತು ಅನಾಥ ಪಕ್ಷಿಗಳಿಗೆ ಆಶ್ರಯ ನೀಡುವ ಫಲಭರಿತ ವ್ಯಕ್ತಿಯಾಗುವುದಿಲ್ಲ. ಆದರೆ ಕವಿ – ಕಲಾವಿದ, ಸಾಹಿತಿ – ಸಂಶೋಧಕ, ಜ್ಞಾನಿ – ವಿಜ್ಞಾನಿ, ಸಮಾಜ ಸುಧಾರಕ – ರಾಷ್ಟ್ರಪ್ರೇಮಿ, ತಪಸ್ವಿ – ತತ್ವಜ್ಞಾನಿ ಸಾಮಾನ್ಯ ಸ್ವಾರ್ಥಿಯಂತಲ್ಲ, ಅವರು ಅನ್ಯರಿಗಾಗಿ ಬದುಕಿದವರು. ಸದಾ ಲೋಕಸಂಗ್ರಹ ಕಾರ್ಯದಲ್ಲಿ ನಿರತರಾದವರು ; ಸಮುದಾಯದ ಶ್ರೇಯಸ್ಸಿಗಾಗಿ ಶ್ರೀಗಂಧವಾಗಿ ತೇಯ್ದವರು, ಕರ್ಪೂರವಾಗಿ ಉರಿದವರು. ಅವರಿಗೆ ಮರಣವೇ ಇಲ್ಲ. ಸಾಂಸ್ಕೃತಿಕ ಸತ್ಕಾರ್ಯಗಳನ್ನು ತಮ್ಮ ಸುಸ್ಮೃತಿಯ ಕುರುಹಿಗಳಾಗಿ ತಮ್ಮ ಬೆನ್ನ ಹಿಂದೆ ಬಿಟ್ಟುಹೋಗುವುದರಿಂದ ಅವರು ಅಮರರು. ಅಂತಹ ಸಾರ್ಥಕ ಬದುಕು ಬದುಕಿ ಮೇಲೆ ಕಾಣಿಸಿದ ಇಬ್ಬರು ತಾಯಂದಿರ ಸಾಲವನ್ನು ಏಕಕಾಲದಲ್ಲಿ ತೀರಿಸಿ, ಋಣಮುಕ್ತರಾಗಿ ನುಡಿಭಕ್ತರಾಗಿ ಕೀರ್ತಿಗಳಿಸಿದ ಮಹನೀಯರಲ್ಲಿ ಗುರೂರು ರಾಮಸ್ವಾಮಿ ಅಯ್ಯಂಗಾರ್‌ರವರೂ ಒಬ್ಬರು.

ಅವರಿಗೆ ಜನ್ಮಕೊಟ್ಟ ತಾಯಿ ಲಕ್ಷ್ಮಮ್ಮ ಪುಣ್ಯ ಗರ್ಭೆಯೆನಿಸಿದರು ; ತಂದೆ ಶ್ರೀನಿವಾಸ ಅಯ್ಯಂಗಾರ್‌ರವರು ಪುಣ್ಯಜೀವಿಗಳೆನಿಸಿದರು ; ಹಡೆದ ತಂದೆ ತಾಯಿಯರಷ್ಟೇ ಪಡೆದ ನೆಲ ಅದೇ ಹಾಸನ ಜಿಲ್ಲೆಯ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಸಾಹಿತಿಯಾಗಿ ಬೆಳೆದು ತಮ್ಮ ಹುಟ್ಟೂರನ್ನು ಬೆಳಗಿಸಿದರು. ತನ್ಮೂಲಕ ಯಾರ ಗಮನಕ್ಕೂ ಬಾರದಿದ್ದ ಪುಟ್ಟ ಗ್ರಾಮ ಗೊರೂರು ಸಾಹಿತ್ಯಾರ್ಥಿಗಳ ಮೆಕ್ಕಾ ಎಂದು ಸಾಹಿತ್ಯ ಕ್ಷೇತ್ರದಲ್ಲಿ ತನ್ನ ಹೆಸರನ್ನು ಶಾಶ್ವತವಾಗಿ ದಾಖಲಿಸಿಕೊಂಡಿತು. ಊರಿನ ಬದಿಯಲ್ಲೇ ಹರಿಯುವ ನದಿ ಹೇಮಾವತಿ ತೀರ್ಥವತಿಯಾದಳು. ವ್ಯಕ್ತಿಯಿಂದ ಊರಿಗೆ ಗೌರವ ಬಂದಿತೆಂಬುದಕ್ಕೆ ಗೊರೂರು ಸಾಕ್ಷಿ. ಇಂತೆಲ್ಲ ಹಿರಿಮೆಗೆ ಗೌರವಕ್ಕೆ ಭಾಜನರಾದ ಗೊರೂರು ರಾಮಸ್ವಾಮಿ ಅಯ್ಯಂಗಾರ್‌ರವರ ಸ್ಮರಣೆಯೇ ಪೂಜೆ ಕನ್ನಡಿಗನಿಗೆ, ಸಾಹಿತ್ಯಾಭಿಮಾನಿಗೆ.

ಗೊರೂರು ಹುಟ್ಟಿದ್ದು ೪ ಜುಲೈ ೧೯೦೪. ಅವರದ್ದು ಶುದ್ಧ ವೈದಿಕ ಮನೆತನ. ತಂದೆ ಸಂಸ್ಕೃತದಲ್ಲಿ ಬಹು ದೊಡ್ಡ ವಿದ್ವಾಂಸರು. ತಂದೆ ಊರು ಹಾಸನ ಜಿಲ್ಲೆ ಅರಕಲಗೂಡು ತಾಲ್ಲೂಕು ಗೊರೂರಾದರೆ, ತಾಯಿಯ ತವರು ಅರಕಲಗೂಡು. ಮಕ್ಕಳ ಇಸ್ಕೂಲು ಮನೇಲಲ್ವೆ ಅಂದಹಾಗೆ ಮನೆಯೇ ಶಾಲೆ ತಂದೆಯೇ ಮೊದಲ ಗುರು. ಮರಳಿನ ಮೇಲೆ ಅ ಆ ಇ ಈ ತಿದ್ದಿದ ಮೇಲೆ ಹುಟ್ಟೂರಿನ ಕನ್ನಡ ಶಾಲೆಯಲ್ಲಿ ಶಿಕ್ಷಣ ಆರಂಭ. ಆದರೆ ಬಾಲಕ ರಾವಸ್ವಾಮಿಗೆ ಓದು ಎಂದರೆ ತಲೆನೋವು. ಹೇಗೋ ಕನ್ನಡ ಲೋಯರ್ ಸೆಕೆಂಡರಿ ಮುಗಿಸಿ, ಅನಂತರ ಎರಡು ವರ್ಷ ಇಂಗ್ಲಿಷ್ ಲೋಯರ್ ಸೆಕೆಂಡರಿ ಪರೀಕ್ಷೆಯನ್ನೂ ಮುಗಿಸಿದ. ಮುಮಧೆ ಜಿಲ್ಲಾ ಕೇಂದ್ರವಾದ ಹಾಸನದಲ್ಲಿ ಹೈಸ್ಕೂಲ್ ವಿದ್ಯಾಭ್ಯಾಸ. ಆದರೆ ಅದು ಪೂರ್ಣಗೊಳ್ಳಲಿಲ್ಲ. ಒಂದೆರಡು ವರ್ಷಗಳು ಉರುಳುವಷ್ಟರಲ್ಲಿ ರಾಷ್ಟ್ರದಾದ್ಯಂತ ಸ್ವಾತಂತ್ರ್ಯ ಚಲುವಳಿ ಆರಂಭವಾಗಿತ್ತು. ಅದರ ಕಾವು ವಿದ್ಯಾರ್ಥಿ ರಾಮಸ್ವಾಮಿಗೂ ತಟ್ಟಿತು. ಗಾಂಧೀಜಿ ದಕ್ಷಿಣ ಆಫ್ರಿಕೆಯಿಂದ ಭಾರತಕ್ಕೆ ಮತ್ತೆ ಹಿಂತಿರುಗಿ ಹೋಗದಂತೆ, ಇಲ್ಲೇ ನೆಲಸಲು ಬಂದಿದ್ದರು. ಪಾಪಿ ಡಯರ್‌ನಿಂದ ಜಲಿಯನ್ ವಾಲಾಬಾಗ್ ಹತ್ಯಾಕಾಂಡ ಆಗಿ ಮುಗಿದಿತ್ತು. ಬ್ರಿಟಿಷರ ದಬ್ಬಾಳಿಕೆಗೆ, ದೌರ್ಜನ್ಯಗಳಿಗೆ ಕೊನೆ ಮೊದಲಿರಲಿಲ್ಲ. ಇದೆಲ್ಲವನ್ನೂ ಅರಿತ ಬಾಲಗಂಗಾಧರ್ ತಿಲಕ್, ಲಾಲಾ ಲಜಪತ್‌ರಾಯ್ ಮೊದಲಾದ ರಾಷ್ಟ್ರಭಕ್ತರೊಡನೆ ಸಮಾಲೋಚನೆ ನಡೆಸಿ ಗಾಂಧೀಜಿ ಬ್ರಿಟಿಷರ ವಿರುದ್ಧ ಒಂದು ದೊಡ್ಡ ಆಂಧೋಲನವನ್ನೇ ಆರಂಭಿಸಿದ್ದರು. ೧೯೧೯, ೨೦ ಮತ್ತು ೨೧ರ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಗೊರೂರು ಧುಮಿಕಿದರು. ಶಾಲೆಯನ್ನು ತೊರೆದು, ಗಾಂಧೀಜಿ ಕರೆಗೆ ಓಗೊಟ್ಟು ಅಸಹಕಾರ ಚಳುವಳಿಯನ್ನು ಯಶಸ್ವಿಯಾಗಿಸಿದರು. ಊರು ಬಿಟ್ಟು ಸ್ಕೂಲು ಬಿಟ್ಟು ಧಾರವಾಡಕ್ಕೆ ಬಂದರು. ಅಲ್ಲಿ ಚಳುವಳಿ ಉಗ್ರವಾಗಿತ್ತು. ಪೊಲೀಸರು ಅನೇಕರನ್ನು ಗುಂಡಿಕ್ಕಿ ಕೊಂದಿದ್ದರು. ನಗರದ ಬೀದಿ ಬೀದಿಗಳ್ಲಿ ರಕ್ತದ ಕೋಡಿ ಹರಿದಿತ್ತು. ಅಂತಹ ಕಠಿಣ ಸಮಯದಲ್ಲಿ ಸ್ವಾತಂತ್ರ್ಯ ಹೋರಾಟಗಾರರಿಗೆ ಗುಪ್ತವಾಗಿ ಸುದ್ಧಿ ಮುಟ್ಟಿಸುವ ಕೆಲಸ ಮಾಡಿದರು ಗೊರೂರು. ಸ್ವಾತಂತ್ರ್ಯ

ಪ್ರೇಮಿಗಳ ಸಮಾವೇಶಕ್ಕೆ ಕಾರಣರಾದರು. ಆದರೆ ಹೇಗೋ ಈ ಗುಟ್ಟು ತಿಳಿದ ಪೊಲೀಸರು ಲಾಟಿ, ಬಾಯನೆಟ್, ಗುಂಡುಗಳ ಮೂಲಕ ಸಭೆಯನ್ನು ಚದುರಿಸಲು ಬರುತ್ತಾರೆಂಬುದನ್ನು ತಿಳಿದು, ತಲೆ ತಪ್ಪಿಸಿಕೊಂಡು ಮುಂಬಯಿ ಮಾರ್ಗವಾಗಿ ಅಹಮದಾಬಾದಿಗೆ ಹೋದರು. ಅಲ್ಲಿ ಕಾಂಗ್ರೇಸ್ ಸ್ವಯಂ ಸೇವಕರಾಗಿ, ಅನಂತರ 'ಸಹಜೀವನ' 'ಯಂಗ್ ಇಂಡಿಯಾ' ಪತ್ರಿಕೆಗಳ ಕಾರ್ಯಾಲಯದಲ್ಲಿ ಅಚ್ಚುಮೊಳೆ ಜೋಡಿಸುವವರಾಗಿ ಕೆಲಸ ಮಾಡಿದರು. ಆಶ್ರಮದಲ್ಲದ್ದ ಆ ದಿನಗಳಲ್ಲೇ ಗಾಂಧೀಜಿಯವರ ಪ್ರೀತಿಗೆ ಪಾತ್ರರಾದರು. ಅವರ ಪ್ರಭಾವ ದಟ್ಟವಾಗಿ ಆ ತರುಣನ ಮೇಲಾಯಿತು. ಆಶ್ರಮದ ಶಿಸ್ತಿನ ಜೀವನ ಒಗ್ಗಿತು, ಖಾದಿ, ಗ್ರಾಮೋದ್ಯೋಗಗಳು ಮೆಚ್ಚಿದವು. ಪ್ರವಾಸದ ವೇಳೆಯಲ್ಲಿ ಗಾಂಧೀಜಿಯವರ ಆಪ್ತ ಅನುಯಾಯಿಯಾಗಿ ನಡೆವ ಭಾಗ್ಯವೂ ಲಭಿಸಿತು.

ಈ ಅಲೆಮಾರಿ ಆಸಾಮಿಗೆ ಕಾಲಲ್ಲಿ ಚಕ್ರ ಇತ್ತೆಂದು ತೋರುತ್ತೆ. ಗುಜರಾತ್‌ನ ಗಾಂಧೀ ಆಶ್ರಮದಿಂದ ಮದರಾಸಿಗೆ ಬಂದರು. ಅಲ್ಲಿ ಒಂದು ಕನ್ನಡ ಪತ್ರಿಕೆಯ ಉಪ ಸಂಪಾದಕರಾಗಿ ಕೆಲಸ ಮಾಡಿದರು. ಅಷ್ಟರಲ್ಲಿ ಗಾಂಧೀಜಿಯ ಸಾವತ್ರಿಕ ಕರೆ ಬಂತು ಹಳ್ಳಿಗಳಿಗೆ ಹಿಂತಿರುಗಿ ಎಂದು. ಕೂಡಲೆ ರಾಮಸ್ವಾಮಿ ಅಯ್ಯಂಗಾರ್‌ರವರು ಬೆಂಗಳೂರು ಬಳಿಯಿದ್ದ ಕೆಂಗೇರಿ ಗುರುಕುಲ ಸೇರಿಕೊಂಡರು. ತದನಂತರ ಬೆಂಗಳೂರಿನ ಅಖಿಲ ಭಾರತ ದಲಿತ ಸಂಘದ ಖಾದಿ ವಸ್ತ್ರಾಲಯದ ಉಸ್ತುವಾರಿಯಾಗಿ ಸೇವೆ ಸಲ್ಲಿಸಿದರು. ಹೀಗೆ ಎಲ್ಲೋ ಸುತ್ತಿ ಕಡೆಗೆ ಹುಟ್ಟೂರಿಗೆ – ಗೊರೂರಿಗೆ – ಬಂದು ನೆಲೆನಿಂತರು. ಹೀಗಿದ್ದರೂ ೧೯೪೨ರ ಕ್ವಿಟ್ ಇಂಡಿಯಾ ಚಳುವಳಿಗೆ ತಪ್ಪಿಸಿಕೊಳ್ಳಲಿಲ್ಲ. ಅದರಿಂದಾಗಿ ತುರಂಗವಾಸ ಪ್ರಾಪ್ತವಾಯಿತು. ಈ ಮಧ್ಯೆ ತಾಯಿ ತೀರಿಕೊಂಡರು. ತಂದೆ ಪಾರ್ಶ್ವವಾಯು ಪೀಡಿತರಾಗಿ ಮಲಗಿದರು. ಹದಿನೇಳು ವರ್ಷದ ಬಾಲಕ ತಮ್ಮ ಹಿರಿಯ ಮಗ ರಾಮಚಂದ್ರ ತುಕೂರಿನಲ್ಲಿ ಪೊಲೀಸರ ಗುಂಡಿಗೆ ಬಲಿಯಾದ. ವೈಯುಕ್ತಿಕ ನೋವಿ ನಷ್ಟಗಳೇನೇ ಇರಲಿ ರಾಷ್ಟ್ರದ ಕಲ್ಪನೆ ಅವೆಲ್ಲವನ್ನೂ ತಳ್ಳಿಹಾಕಿತು. ೧೯೪೭ ಆಗಸ್ಟ್ ೧೫ರಂದು ದೇಶಕ್ಕೆ ಸ್ವಾತಂತ್ರ್ಯ ಬಂತು ; ಅದರ ಹಿಂದೆ ಗಾಂಧೀಜೀಯ ಕೊಲೆಯ ದುಃಖವೂ ಬಂತು. ಗೊರೂರು ಧ್ಯೇಯವಾದಿಗಳು. ಕಡೆಯತನಕ ಧ್ಯೇಯಕ್ಕಾಗಿ, ಜನತೆಯ ಒಳಿತಿಗಾಗಿ ದುಡಿದರು. ಅವರ ಸಾಹಿತ್ಯ ಸೇವೆಯನ್ನು ಗುರುತಿಸಿ ರಾಜ್ಯ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿಗಳು ಅನುಕ್ರಮವಾಗಿ ೧೯೬೯ ಮತ್ತು ೧೯೮೦ರ ಪ್ರಶಸ್ತಿ, ೧೯೭೨ರಲ್ಲಿಗೊರೂರು ಗವರವ ಗ್ರಂಥ ಸಮರ್ಪಣೆ, ೧೯೭೪ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಿಂದ ಗೌರವ ಡಾಕ್ಟರೇಟ್ ಪದವಿ, ೧೯೮೨ರಲ್ಲಿ ಸಿರಸಿಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ – ಇವೇ ಮೊದಲಾದ ಗೌರವಗಳು ಸಂದಿವೆ. ಗೊರೂರು ೧೯೫೨ರಲ್ಲಿ ವಿದಾನ ಪರಿಷತ್‌ನಲ್ಲಿ ಶಾಸಕರಾದರು, ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ ಸದಸ್ಯರಾದರು. ೧೯೬೭ರಲ್ಲಿ ತರೀಕೆರೆಯಲ್ಲಿ ನಡೆದ ಮೊದಲ ಅಖಿಲ ಕರ್ನಾಟಕ ಜಾನಪದ ಸಮ್ಮೇಳನ ಅಧ್ಯಕ್ಷರಾಗಿದ್ದರು. ಅದು ಇದು ಎಲ್ಲ ಆಗಿ ಎಲ್ಲರಂತೆ ಅಮರರಾದರು.

**ಎರಡು**

'ಓದು ಚಿಕ್ಕಾಲು ಬುದ್ಧಿ ಮುಕ್ಕಾಲು' ಎಂಬ ಮಾತು ಗೊರೂರಿಗೆ ಚೆನ್ನಾಗಿ ಒಪ್ಪುತ್ತದೆ. ಅವರು ಕಾಲೇಜು ಮೆಟ್ಟಿಲು ಹತ್ತಿದವರಲ್ಲ ; ಆದರೆ ಕಾಲೇಜಿನ ವಿದ್ಯಾರ್ಥಿಗಳಿಗೆ ಅವರು ಬರೆದ ಕೃತಿಗಳು ಪಠ್ಯಪುಸ್ತಕಗಳಾಗಿದ್ದವು. ಅವರು ಬರವಣಿಗೆ ಆರಂಭಿಸಿದ್ದು ಪತ್ರಿಕೆಗಳಿಗೆ ಲೇಖನಗಳನ್ನು ಬರೆದುಕೊಡುವ ಮುಖಾಂತರ. ಒಮ್ಮೆ ಹೀಗಾಯಿತು – 'ಜಯ ಕರ್ನಾಟಕ' ಪತ್ರಿಕೆಗೆ ಒಂದು ಲೇಖನ ಕಳುಹಿಸಿ, ಅದರಲ್ಲಿ 'ಸೀತಾಪತಿ' ಎಂಬ ಕಾವ್ಯನಾಮ ಸುಚಿಸಿದ್ದರು. ಆದರೆ ಪತ್ರಿಕೆಯ ಸಂಪಾದಕರಾಗಿದ್ದ ಆಲೂರು ವೆಂಕಟರಾಯರು 'ಸೀತಾಪತಿ' ಎಂಬ ಕಿತಾಪತಿ ಬೇಡ ಎಂದು 'ಸೀತಾತನಯ' ಎಂದು ಮರುನಾಮಕರಣ ಮಾಡಿ ಅಚ್ಚುಮಾಡಿದ್ದರು. ಬದಲಾದ ಹೆಸರು ನೋಡಿ ಗೊರೂರು ತುಂಬಾ ಖುಷಿಪಟ್ಟರಂತೆ. ಆದರೂ ಗೊರೂ ರಾಮಸ್ವಾಮಿ ಅಯ್ಯಂಗಾರ್‌ರವರು 'ಗೊರೂರು' ಎಂದೇ ಖ್ಯಾತರಾದರು. ಆ ಸುಮಾರಿನಲ್ಲಿ ಕೆಲವು ಕವನಗಳನ್ನೂ ಬರೆದರು. ಆದರೆ ಕಾವ್ಯ ಕೈಸಾಗದೆ ಬಿಟ್ಟರು. ಗದ್ಯ ಹಿಡಿದುಕೊಂಡರು. ಕೆಂಗೇರಿಯ 'ಗುರುಕುಲ'ದಲ್ಲಿದ್ದಾಗ ಅಂದರೆ ೧೯೩೦ರಲ್ಲಿ ತಮ್ಮ ಚೊಚ್ಚಲ ಕೃತಿ 'ಹಳ್ಳಿಯ ಚಿತ್ರಗಳು' ಹೊರಬಂದಿತು.ಇದೇ ರೀತಿ ಕತೆ, ಕಾದಂಬರಿ, ಪ್ರಬಂಧ, ವಿಮರ್ಶೆ ಮೊದಲಾದ ಅನೇಕ ಸಾಹಿತ್ಯ ಪ್ರಕಾರಗಳ್ಲಿ ಸಾಕಷ್ಟು ಕೃಷಿ ಮಾಡಿದ್ದಾರೆ.

ಗೊರೂರರ ಸಾಹಿತ್ಯವನ್ನು ಅವರ ವಿವಿಧ ವಿನ್ಯಾಸದ ಆಧಾರದ ಮೇಲೆ ಚಿತ್ರಸಾಹಿತ್ಯ, ಪ್ರಬಂಧ ಸಾಹಿತ್ಯ, ಪ್ರವಾಸ ಸಾಹಿತ್ಯ, ಕಥಾ ಸಾಹಿತ್ಯ, ವಿಮರ್ಶಾ ಸಾಹಿತ್ಯ ಎಂದು ಸ್ಥೂಲವಾಗಿ ವಿಭಜಿಸಬಹುದು. ಇವುಗಳಲ್ಲಿ ಅವರು ತಮ್ಮನ್ನು ತಾವು ಗುರುತಿಸಿಕೊಂಡಿರುವುದು 'ಚಿತ್ರ ಸಾಹಿತ್ಯ' ಮತ್ತು 'ಕಥಾ ಸಾಹಿತ್ಯ' ರಚನೆಗಳಲ್ಲಿ. ಚಿತ್ರ ಸಾಹಿತ್ಯವೆಂದರೆ ಸಿನೆಮಾ ಸಾಹಿತ್ಯವಲ್ಲ.

ವ್ಯಕ್ತಿ ಅಥವಾ ಪ್ರದೇಶವೊಂದರ ನೈಜ ಜೀವನವನ್ನು ಮಾತಿನ ಮಾಧ್ಯಮದಲ್ಲಿ ಎಳೆ ಎಳೆಯಾಗಿ ತೆರೆದಿಡುವುದು. ಇದಕ್ಕೆ ಅವರ 'ಹಳ್ಳಿಯ ಚಿತ್ರಗಳು' ಉತ್ತಮ ಉದಾಹರಣೆ. ಅಂತೆಯೇ 'ನಮ್ಮ ಊರಿನ ರಸಿಕರು' 'ಬೈಲ ಹಳ್ಳಿಯ ಸರ್ವೆ' ಕೃತಿಗಳು ಚಿತ್ರ ಸಾಹಿತ್ಯದ ಕಕ್ಷೆಯಲ್ಲಿ ಬರುತ್ತವೆ. ಪ್ರಬಂಧ ರೂಪದಲ್ಲಿ ಗ್ರಾಮೀಣ ಜನಜೀವನದ ನಗ್ನ ಚಿತ್ರಣವನ್ನು ಕೊಡುವುದರಲ್ಲಿ ಈ ಕೃತಿಗಳ ಯಶಸ್ಸು ಅಡಗಿದೆ. ಇಂತಹ ಚಿತ್ರ ಸಾಹಿತ್ಯ ಹರಿಕಾರ ಗೊರೂರು ಎನ್ನಬಹುದು.

ಅದು ಸ್ವಾತಂತ್ರ್ಯದ ಕಿಚ್ಚು ಎಲ್ಲೆಡೆಯೂ ಹತ್ತಿ ಉರುಯುತ್ತಿದ್ದ ಕಾಲ. ಅಂದು ಜನಜಾಗೃತಿಯ ಅನಿವಾರ್ಯತೆ ಇತ್ತು. ಅದರಲ್ಲೂ ಅಮಾಯಕ ಶೀಶುಗಳಂತಿದ್ದ ಗ್ರಾಮೀಣ ಜನತೆಯನ್ನು ಎಚ್ಚರಗೊಳಿಸಬೇಕಿತ್ತು. ಇದು ರಾಷ್ಟ್ರಪ್ರೇಮಿ, ಸ್ವಾತಂತ್ರ್ಯಪ್ರೇಮಿ ಗೊರೂರರನ್ನು ಪ್ರೇರೇಪಿಸಿತು. ಅಂತೆಯೇ ಅಂದಿನ ಜೀವಂತ ಸಮಾಜದ ಪರಿಚಯ ಮಾಡುತ್ತಾ ಅವರಲ್ಲಿನ ನಿಷ್ಕಲ್ಮಶ ಮನೋ ಧರ್ಮವನ್ನು ಎತ್ತಿಹಿಡಿಯುವ ಕೆಲಸ ಆ ಮೂಲಕ ನಡೆಯಿತು. ಬಹುಮುಖ್ಯವಾಗಿ ಜಾತಿಬೇಧವನ್ನು ಮೆಟ್ಟಿನಿಂತ ಮಾನವೀಯ ಮೌಲ್ಯ ಮೆರೆಯಿತು. ಓದುಗರನ್ನು ನಗಿಸುತ್ತಲೇ ಶಿಷ್ಟ ಸಮಾಜದ ಕೆಟ್ಟತನವನ್ನು ಪರಿಚಯಿಸಿದ ಪ್ರಸಾದ ಗುಣ ಇವರ ರಚನೆಯ ಲ್ಲಿರುವುದು ಸುವೇದ್ಯ. ಅದನ್ನು ಅವರ ಬೇಲ ಹಳ್ಳಿಯ ಸರ್ವೆಯಲ್ಲಿ ವಿಶೇಷವಾಗಿ ಕಾಣಬಹುದು. ಹಳ್ಳಿಯ ಬಾಳಿನಲ್ಲಿ ಎಂತಹ ಸೌಹಾರ್ದತೆ ಇತ್ತು ಎಂಬುದನ್ನು ಅವರ 'ನಮ್ಮ ಊರಿನ ರಸಿಕರು'ನಲ್ಲಿ ಕಾಣಬಹುದು. ಇದನ್ನು ಗಮನಿಸಿದ ದೇಜಗೌ, 'ಗೊರೂರ ಗರುಡ ದೃಷ್ಟಿಗೆ ಗೋಚರವಾಗದ ವಸ್ತುವಿಲ್ಲ, ಸಂಗತಿಯಿಲ್ಲ, ರೂಢಿಯಿಲ್ಲ. ಆದ್ದರಿಂದ ಅವರ ಹಳ್ಳಿಗೆ ಸಂಬಂಧಿಸಿದ ಈ ಕೃತಿ ಸಮುದಾಯ ಮಹಾ ವಿಶ್ವಕೋಶವಾಗುತ್ತದೆ' ಎಂಬ ಮುತ್‌ತಿನಂತಹ ಮಾತುಗಳಲ್ಲಿ ಪ್ರಶಂಸಿದ್ದಾರೆ.

ಗ್ರಾಮೀಣ ಪರಿಸರ ಕುರಿತ ಗೊರೂರ ರಚನೆಗಳ ಜೊತೆಯಲ್ಲಿ ಅವರ ಲಲಿತ ಪ್ರಬಂಧ (Essay)ಗಳನ್ನು ಅವಲೋಕಿಸು ವುದು ಹೆಚ್ಚು ಸೂಕ್ತ. ಏಕೆಂದರೆ ಅವರು ಕೊಡುವ 'ಚಿತ್ರ'ಗಳಲ್ಲಿ 'ಪ್ರಬಂಧ'ದ ಗಂಧ ಅಡಗಿದೆ. ಮುಖ್ಯವಾಗಿ ಗರುಡಗಂಬದ ದಾಸಯ್ಯ, ಬೆಟ್ಟದ ಮನೆಯಲ್ಲಿ ಮತ್ತು ಇತರ ಪ್ರಬಂಧಗಳು, ಹೇಮಾವತಿಯ ತೀರದಲ್ಲಿ ಮತ್ತು ಇತರ ಪ್ರಬಂಧಗಳು – ಎಂಬ ಸಂಕಲನಗಳನ್ನು ಗಮನಿಸಬಹುದು. ಇವುಗಳಲ್ಲಿ ಸಾಮಾನ್ಯವಾಗಿ ಗ್ರಾಮೀಣ ಜನಜೀವನದ ವೈಶಿಷ್ಟ್ಯ ಬದುಕು ಹಾಗೂ ಅವರ ವಿಚಿತ್ರ ಮನೋಧರ್ಮಗಳನ್ನು ಗುರುತಿಸಬಹುದು. ಎಂ.ಸಿ. ವಸಂತಕುಮಾರ್‌ರವರು ಹೇಳುವಂತೆ –' ಗೊರೂರರ ಪ್ರಬಂಧ ಗಳಲ್ಲಿ ನಾವು ವಿಶೇಷವಾಗಿ ಗಮನಿಸಬೇಕಾದುದು ಅವರ ನಿರ್ದಾಕ್ಷಿಣ್ಯವಾದ ಪ್ರವೃತ್ತಿ ಮತ್ತು ನಿರ್ಮಲವಾದ ಮನಸ್ಸು. ಅವರು ಒಂದು ಪ್ರದೇಶದಲ್ಲಿ ಹಾರುವ, ಹೊಲೆಯ, ಒಕ್ಕಲಿಗ, ಬೆಸ್ತ, ಸತಸ,, ತುರುಕ ಮೊದಲಾದ ನಾನಾ ಜನಾಂಗದವರ ಬುದುಕಿನಲ್ಲಿ ಹಾಸು ಹೊಕ್ಕಾಗಿ ಸೇರಿಕೊಂಡಿರುವ ಗುಣದೋಷಗಳಿಗೆ ಕನ್ನಡಿ ಹಿಡಿದಿದ್ದಾರೆ. ಅವರಲ್ಲಿರುವ ಅಜ್ಞಾನ, ಅವಿವೇಕ, ಸ್ವಾರ್ಥತೆ, ಸಂಕುಚಿತ ಭಾವನೆ, ಹೀನ ಪ್ರವೃತ್ತಿ ಮೊದಲಾದ ದೌರ್ಬಲ್ಯಗಳನ್ನು ತುಂಬಾ ಮಾರ್ಮಿಕವಾಗಿ ವಿಡಂಬಿಸಿದ್ದಾರೆ. ಆದರೆ ಆ ವಿಡಂಬನೆಗಳು ಹಾಸ್ಯದ ಕಡ್ಡಾಯಗಳಾಗಿವೆಯೇ ಹೊರತು ಮತೀಯ ಮೂದಲಿಕೆಗಳಾಗಿಲ್ಲ. ಅಲ್ಲಿ ಸುಧಾರಣೆಯ ಸದಾಶಯ ವಿದೆಯೇ ಹೊರತು ಅಪಮಾನದ ದುರುದ್ದೇಶವಿಲ್ಲ. ಹೀಗಾಗಿ ಅವರ ಪ್ರಬಂಧಗಳ ಬಗ್ಗೆ ಯಾವ ಮತದವರಿಗೂ ಅಸಹನೆ ಇಲ್ಲ, ಯಾವ ಜಾತಿಯವರೂ ರೊಚ್ಚಿಗೆದದಿಲ್ಲ"** ಇಂತಹ ಪ್ರಾಂಜಲ ಪ್ರಬಂಧಗಳಲ್ಲಿ ಒಂದು ಅಚ್ಚುಕಟ್ಟುತನ ಇದೆ. ಪ್ರಬಂಧ ಬಂಧಕ್ಕೆ ನ್ಯಾಯ ದೊರಕಿಸುತ್ತವೆ ಇವರ ಪ್ರಬಂಧಗಳು.

---

*ಗೊರೂರು ಗೌರವ ಗ್ರಂಥ ಪು. ೫೬

** ಅದೇ ಪು. ೨೦೩

ಗೊರೂರ 'ಪ್ರವಾಸ ಸಾಹಿತ್ಯ' ಕಕ್ಷೆಯಲ್ಲಿ ಬರುವ ಬಹುಮಯಖ್ಯವಾದ ಕೃತಿಯೆಂದರೆ 'ಅಮೆರಿಕೆಯಲ್ಲಿ ಗೊರೂರು'. ಇದರ ಜೊತೆಯಲ್ಲಿ 'ಮಹಾತ್ಮ ಗಾಂಧಿಯವರ ದಕ್ಷಿಣ ಯಾತ್ರೆಯನ್ನು ಹೆಸರಿಸಬಹುದು. ಅಮೆರಿಕೆಗೆ ಹೋದವರು ಅನೇಕರು ಅದನ್ನು ಕುರಿತು ಪ್ರವಾಸ ಕಥೆಗಳನ್ನು ಬರೆದಿದ್ದಾರೆ. ಆದರೆ ಗೊರೂರ ಕಥನ ವಿಧಾನವೇ ಬೇರೆ. ಅವರ ನಿರಾಡಂಬರ ಶೈಲಿ, ಹಾಸ್ಯಪೂರ್ಣ ಅಭಿವ್ಯಕ್ತಿ, ಸ್ವಾನುಭವ ವಿಶ್ಲೇಷಣೆ, ಕಂಡದ್ದರ ಮನಮುಟ್ಟುವಂತಹ ವರ್ಣನೆ – ಇವು ನಾವು ಅಮರೆಕೆಯಲ್ಲಿ ಅಡ್ಡಾಡುತ್ತಿದ್ದೇವೆ ಎನ್ನುವಂತಹ ಭಾವನೆ ಹುಟ್ಟಿಸುತ್ತವೆ. ಅಮೇರಿಕ ಆರ್ಥಿಕವಾಗಿ ಮಹೋನ್ನತಿಯ ಮಜಲೇರಿದ್ದರೂ ಎಲ್ಲಿ ಅದು ಎಡವಿದೆ ಎಂಬುದನ್ನು ಗುರುತಿಸಿದ್ದಾರೆ. ಇದೇ ಒಂದು ಮಾದರಿ ಪ್ರವಾಸ ಕಥನ ಎನ್ನಬಹುದು.

'ಮಹಾತ್ಮ ಗಾಂಧಿಯವರ ದಕ್ಷಿಣ ಯಾತ್ರೆ'ಯೂ ಸಹ ಒಂದು ಪ್ರವಾಸ ಕಥನವೆ. ಆದರೆ ಅದು ತಮ್ಮದಾದ ಪ್ರವಾಸ ಭಿತ್ತರಣೆ ಅಲ್ಲ. ೧೯೪೬ರ ಏಪ್ರಿಲ್ ತಿಂಗಳ ಕೊನೆಯಲ್ಲಿ ಕೈಕೊಂಡ ಬಾಪೂಜಿಯವರ ದಕ್ಷಿಣ ಭಾರತದ ಸಂಚಾರದ ವರ್ಣನೆ.

ಗಾಂಧೀಜಿ ಹೆಚ್ಚಾಗಿ ಮದರಾಸಿನಲ್ಲಿ ಮಾಡಿದ ಭಾಷಣಗಳು, ಮತ್ತೆ ಕೆಲವೆಡೆಗಳಲ್ಲಿ ನಡೆಸಿದ ಸಂವಾದಗಳು ಹಾಗೂ ರಾಷ್ಟ್ರಹಿತ ಸಾಧನೆಯ ಮಾತುಗಳು ಇದರಲ್ಲಿ ಹೇರಳವಾಗಿ ದೊರೆಯುತ್ತವೆ.

ಕನ್ನಡ ಸಾಹಿತ್ಯದಲ್ಲಿ ಸಣ್ಣಕತೆ ಮತ್ತು ಕಾದಂಬರಿಗಳನ್ನು ಒಟ್ಟಿಗೇ ನೋಡುವುದು ಒಳ್ಳೆಯದು. ಗೊರೂರರು ಸಣ್ಣಕತೆಗಳ ರಚನೆಯಲ್ಲಿ ಎತ್ತಿದ ಕೈ. ಅದು ಅತ್ಯಂತ ಪರಿಪೂರ್ಣ ಕಲಾಪ್ರತಿಮೆಯ ರೂಪು ತಳೆದಿರುವುದು ಅವರ 'ಶಿವರಾತ್ರಿ' ಮತ್ತು 'ಬೆಸ್ತರ ಕರಿಯ' ಕಥಾ ಸಂಕಲನಗಳಲ್ಲಿ. ಅಂದಾಕ್ಷಣಕ್ಕೆ ಅವರ 'ಕಮ್ಮಾರ ವೀರಭದ್ರಾಚಾರಿ' 'ಗೋಪುರದ ಬಾಗಿಲು', 'ಉಸುಬು' ಕಥೆಗಳು ಮತ್ತು ವಿನೋದ ಚಿತ್ರಗಳು' ಸಂಕಲನಗಳನ್ನು ಮರೆಯುವಂತಿಲ್ಲ. ಇವರ ಕತೆಗಳು ಗ್ರಾಮೀಣ ಪರಿಸರದಲ್ಲಿ ಬೆಳೆದ ಸಾಮಾನ್ಯನ ಜೀವನವೇ ಆಗಿದ್ದರೂ ಅದು ಸಾಂಸ್ಕೃತಿಕವಾಗಿ ಶ್ರೀಮಂತವಾದುದು ಎಂಬುದನ್ನು ಸಾರಿ ಸಾರಿ ಹೇಳುತ್ತವೆ. ಸಣ್ಣ ಕತೆಯ ಚಲವು ಮಾಸದಂತೆ ಎಚ್ಚರ ವಹಿಸಿ, ಅದು ಓದುಗರ ಕಣ್ಣಿಗೆ ಕಟ್ಟುವಂತೆ ಮನಕ್ಕೆ ಮುಟ್ಟುವಂತೆ ರೂಪಿಸಿದ್ದಾರೆ. ಎಲ್.ಎಸ್. ಶೇಷಗಿರಿರಾಯರು ಹೇಳುವಂತೆ, 'ಸಾಹಿತ್ಯದಲ್ಲಿ ಪ್ರಕ್ಷುಬ್ಧತೆಯೇ ಬೆಳೆಯುತ್ತಿರುವ ಈ ದಿನಗಳಲ್ಲಿ ತಿಳಿಹಾಸ್ಯ, ಅಹಂಭಾವಕ್ಕೆ ಕಡಿವಾಣ ಹಾಕಿ ಸಾಧಿಸಿದ ಶಾಂತಿ – ಇವುಗಳಿಂದ ಶ್ರೀಮಂತವಾದ ಅನುಭವವನ್ನು ನೀಡುವ ಕಥೆಗಳು ವಿಶಿಷ್ಟವಾಗಿ ಕಾಣುತ್ತವೆ. ಮುಗ್ಧತೆಗೆ ಸೆರೆಯಾಗದ ಆದರ್ಶತ್ವ, ಸರಳೀಕರಣಕ್ಕೆ ಸೆರೆಯಾಗದ ವಾಸ್ತವಿಕೆ, ಅನುಕಂಪವನ್ನು ಬಿಡದ ತಿಳಿಹಾಸ್ಯ, ಮಾನವ ಸ್ವಭಾವದಲ್ಲಿ ನೈಜವಾದ ಮತ್ತು ಉದಾರವಾದ ಆಸಕ್ತಿ – ಇವು ಅವರ ಕಥಾ ಸಾಹಿತ್ಯಕ್ಕೆ ಜೀವವನ್ನು ಬೆಲೆಯನ್ನು ತಂ ದಿವೆ.'

ಕನ್ನಡ ನವೋದಯ ಕಾಲದ ಸಾಹಿತಿಗಳು ಸಾಮಾನ್ಯವಾಗಿ ಪಕ್ಷಾಂತರಿಗಳು. ಮೊದಲು ಸಣ್ಣಕತೆ ರಚನೆಯನ್ನು ಆರಂ ಭಿಸಿ, ಅನಂತರ ಏಕ್‌ದಂ ಕಾದಂಬರಿ ಕ್ಷೇತ್ರಕ್ಕೆ ಕಾಲಿರಿಸಿದವರು. ಗೊರೂರರು ಅನ್ಯರಂತಲ್ಲ. ಜನಪ್ರಿಯ ಪ್ರಕಾರವಾದ ಕಾದಂಬ ರಿಗೆ ಕಾಲಿರಿಸಿದ ಕೂಡಲೇ ಮೇಲೇರಲು ನೆರವಾದ ಸಣ್ಣಕತೆ ಎಂಬ ಏಣಿಯನ್ನು ಮರೆತವರಲ್ಲ. ಉಭಯ ಪ್ರಕಾರಗಳನ್ನು ಸಮಸಮವಾಗಿ ದುಡಿಸಿಕೊಂಡ ಸವ್ಯಸಾಚಿಗಳು. ಅವರ ಕಾದಂಬರಿಗಳು 'ಮರವಣಿಗೆ' 'ಊರ್ವಶಿ', ಪುನರ್ಜನ್ಮ' ಮತ್ತು 'ಹೇಮಾವತಿ' ಇವುಗಳ ಜೊತೆಯಲ್ಲಿ ಅನುವಾದಿತ ಸಣ್ಣಕತೆಗಳಂತೆ ಹಲವು ಅನುವಾದಿತ ಕಾದಂಬರಿಗಳೂ ಬರುತ್ತವೆ.

ಕಾದಂಬರಿಯನ್ನು 'ಕರತಲ ರಂಗಭೂಮಿ' (Pocket theatre) ಎಂದು ಕರೆಯುತ್ತಾರೆ. ಅದು ಓದುಗನ ಕಣ್ಣುಮುಂದೆ ನಡೆಯುವ ನಾಟಕ. ಆ ನಾಟಕದ ದೃಶ್ಯಗಳನ್ನು ತೆರೆದು ತೋರುವ ಸಾಹಸಿ ಶ್ರೇಷ್ಠ ಕಾದಂಬರಿಕಾರನೆನಿಸುತ್ತಾನೆ. ಸಣ್ಣಕತೆಗಳಲಿನ ಸೌಂದರ್ಯ ಸೌಷ್ಠವಗಳು ಇಲ್ಲಿ ಅಷ್ಟಾಗಿ ಇಲ್ಲ. ಕಾದಂಬರಿಯ ಶಿಲ್ಪದಲ್ಲೂ ತುಸು ಶೈಥಿಲ್ಯವಿದೆ. ಆದರೂ ಗ್ರಾಮೀಣ ಜೀವನದ ಹಿನ್ನಲೆಯಲ್ಲಿ ವೀಕ್ಷಿಸಿದಾಗ ಅವರು ಇಂಗ್ಲಿಷ್ ಕಾದಂಬರಿಕಾರ ಥಾಮಸ್ ಹಾರ್ಡಿಗೆ ಸರಿಗಟ್ಟುತ್ತಾರೆ. ಇವರ 'ಮೆರವಣಿಗೆ'

---

*ಅದೇ ಪು. ೧೦೬

ಸ್ವಾತಂತ್ರ್ಯ ಪೂರ್ವದ ಗ್ರಾಮೀಣ ಬದುಕಿನ ನಗ್ನ ಚಿತ್ರಣವಾಗಿದೆ. ಇದೊಂದು ಸರಳ, ಸುಂದರ, ಸಹಜವಾದ ಕಾದಮಬರಿ. ಇದೊಂದು ಗ್ರಾಮೀಣ ಮಹಾಭಾರತ. ಮಲ್ಲಿಗೆ ಹಳ್ಳಿಯ ಶ್ಯಾನುಭೋಗ, ಹಳ್ಳಿಯ ಮುಗ್ಧಜನ, ಶಾಲೆಯ ಉಪಾಧ್ಯಾಯ, ತಿಪ್ಪಯ್ಯ ಉಪಾದ್ರಿ, ಸಿಟ್ಟಿನ ಚಾಮೇಗೌಡ, ವಿದ್ಯಾರ್ಥಿಗಳು, ಹಳ್ಳಿಯ ನಿರಕ್ಷರ ಕುಕ್ಷಿಗಳು, ಆಚಾರಿಯ ಕುಲುಮೆ, ಸರ್ಜಿಯ ಗಿರಾಕಿಗಳು – ಹೀಗೆ ಹಲವು 'ಮೆರವಣಿಗೆ'ಗಳು ಇಲ್ಲಿವೆ.

'ಪುನರ್ಜನ್ಮ' ಹೇಳಿಕೊಳ್ಳುವಷ್ಟು ಮಟ್ಟದ ಕಾದಂಬರಿಯಲ್ಲದಿದ್ದರೂ ಗೊರೂರರ ಹೇಮಾವತಿ ಮತ್ತು ಊರ್ವಶಿ ಗಮನಿಸಬೇಕಾದವುಗಳು. ಹೇಮಾವತಿ ಒಂದು ಉತ್ತಮ ಕಾದಂಬರಿ. ಸಹಜತೆಯ ನೆರಳಿನಲ್ಲೇ ಅರಳುವ ಹೂವು. ಲೇಖಕರು ಹೇಮಾವತಿಯ ಬದುಕಿಒಡನೆ ಹಳ್ಳಿಯ ಜೀವನವನ್ನು ಬೆಸೆದಿದ್ದಾರೆ. ಅಲ್ಲಿಯ ಶಠಾರಿಯಂಥವನ ದುರಾಸೆ ದುರ್ಗುಣಗಳು, ಹೇಮಾವತಿಯ ತಂದೆ ರಾಮಣ್ಣ ಪೆರುಮಾಳರ ಸಾತ್ವಿಕತೆ, ವಿವಾಹದ ನೆಪದಲ್ಲಿ ಮೇಲುವರ್ಗದವರಲ್ಲಿ ನಡೆಯುವ ಶೋಷಣೆ, ಹೆಂಡ ಕುಡಿದು ಹಾಳಾಗುವ, ಎಂದೆಂದಿಗೂ ಉದ್ಧಾರ ಕಾಣದ ಪಂಚಮರು – ಎಲ್ಲರೂ ಇಲ್ಲಿ ಜೀವಂತವಿದ್ದಾರೆ. ವಿಮರ್ಶಕ ಪ.ವಿ. ಚಂದ್ರಶೇಖರ್‌ರವರು ಹೇಳುವಂತೆ – 'ಗೊರೂರರು ಒಂದು ಹಳ್ಳಿಯ ಬದುಕನ್ನೇ ಮಗ್ಗವಾಗಿ ಹಾಸಿಕೊಂಡು ಅಲ್ಲಿಯ ರಾಜಕೀಯ, ಧಾರ್ಮಿಕ, ಸಾಮಾಜಿಕ ಚಿತ್ರಗಳನ್ನು ಸೊಗಸಾಗಿ ನೆಯ್ದಿದ್ದಾರೆ.'

'ಊರ್ವಶಿ ಎಂದ ಕೂಡಲೇ ಥಟ್ಟನೇ ನಮಗೆ ದೇವನರ್ತಕಿಯ ನೆನಪಾಗುತ್ತಾಳೆ. ಅವಳ ಸೌಂದರ್ಯವೂ ರಸಿಕ ರಸನೆಗೆ ಸವಿ ತುಂಬುತ್ತದೆ. ಕಥಾನಾಯಕಿ ಸೀತಾಲಕ್ಷ್ಮಿ ಊರ್ವಶಿಯಂತೆ ಸುಂದರಿ : ಅದರೆ ಊರ್ವಶಿಯಂತಹ ದೇವಗಣಿಕೆ ಅಲ್ಲ. ಆದರೆ ಜೀವನದಲ್ಲಿ ಒಮ್ಮೆ ಜಾರುತ್ತಾಳೆ. ಅಕ್ಕ ಜಲಜಾಕ್ಷಿಯ ಬಾಣಂತನಕ್ಕೆ ಹೋಗಿ ಭಾವನಿಂದ ಬಸುರಾಗುತ್ತಾಳೆ. ಆದರೆ ಅನಾಹುತಕ್ಕೆ ಆಸ್ಪದ ಕೊಡದೆ ಆತ್ಮೋದ್ಧಾರಕ್ಕೆ ಕಾರಣಲಾಗುತ್ತಾಳೆ. ಇಂತಹ ಉದ್ಧಾರದ ಚಿತ್ರಣ ಮನೋಜ್ಞವಾಗಿ ಚಿತ್ರಿತವಾಗಿದೆ ಇಲ್ಲಿ.

ವ್ಯಕ್ತಿ ಚಿತ್ರಣ, ಕತೆಗಾರಿಕೆ, ವೈನೋದಿಕ ರಚನೆ, ಜಾನಪದ ಜೀವನ ಮೊದಲಾದವುಗಳ ಪರಿಣತಿ ಕಾವ್ಯಮೀಮಂಸೆ ಅಥವ ಸಾಹಿತ್ಯ ವಿಮರ್ಶೆಯಲ್ಲಿಲ್ಲ ಗೊರೂರರಿಗೆ. ಅವರು 'ಸಾಹಿತ್ಯರಶ್ಮಿ' ಕೊಟ್ಟಿದ್ದಾರೆ. ಆದರೆ ಅದು ಸಾಹಿತ್ಯಕ್ಕೆ ಸೀಮಿತವಾದುದಲ್ಲ. ಶಿಲ್ಪ ಚಿತ್ರ ಶಿಕ್ಷಣ, ವೃತ್ತಪತ್ರಿಕೆ ಮೊದಲಾದವುಗಳನ್ನು ಕುರಿತ ಬರೆಹದ ಬೆಟ್ಟ ! ಸಾಹಿತ್ಯಕ ಲೇಖನಗಳಾದ ಲಕ್ಷ್ಮೀಶ ಮೊದಲಾದವರ ಕೃತಿ ವಿಮರ್ಶೆ, ಬೇಂದ್ರೆ ವ್ಯಕ್ತಿತ್ವ ವಿಶ್ಲೇಷಣೆ ಮೆಚ್ಚುವಂಥವುಗಳಾಗಿವೆ. ಇದೇ ವಿಮರ್ಶಾ ವಲಯದಲ್ಲಿ ಬರುವ 'ಸಾಹಿತ್ಯ ಜೀವಾಳ' ಷೋಪನ್ ಹೌರನ ನಾಲ್ಕು ಸಾಹಿತ್ಯ ಪ್ರಬಂಧಗಳ ಅನುವಾದ. ಮಹಾ ತತ್ವಜ್ಞಾನಿ ಹೌರನ ಚಿಂತನೆಗಳನ್ನು ತುಂಬಾ ಚೆನ್ನಾಗಿ ಕನ್ನಡಿಸಿದ್ದಾರೆ.

**ಮೂರು**

ಹೀಗೆ ಕತೆ, ಕಾದಂಬರಿ, ಪ್ರಬಂಧ, ವ್ಯಕ್ತಿಚಿತ್ರ, ವಿಮರ್ಶೆ ಮೊದಲಾದ ಸಾಹಿತ್ಯದ ಹಲವು ಪ್ರಕಾರಗಳಲ್ಲಿ ಕೃಷಿ ಮಾಡಿರುವ ಗೊರೂರರಲ್ಲಿ ಜಾನಪದ ಬದುಕು ಧಾತು, ಹಾಸ್ಯ ದ್ರವ್ಯ ಎಲ್ಲೆಡೆಯೂ ಓದುಗನ ಮೂಗಿಗೆ ತಟ್ಟುವುದು ಈ ನೆಲದ ಸೊಗಸು. ಇಂತಹ ಸೊಬಗಿನ ಸಾಹಿತ್ಯ ನಿರ್ಮಾಪಕ ಗೊರೂರು ರಾಮಸ್ವಾಮಿ ಅಯ್ಯಂಗಾರ್‌ರವರು ನಿಜಕ್ಕೂ ಕನ್ನಡಮ್ಮನ ಪುತ್ರರತ್ನ.

# ಕೊಡಗಿನ ಗೌರಮ್ಮ

---

**ಒಂದು**

ಹುಟ್ಟು ಆಕಸ್ಮಿಕ, ಮರಣ ಅನಿವಾರ್ಯ – ಎಂಬ ನಿತ್ಯಸತ್ಯದ ಅರಿವಿಲ್ಲದಿಲ್ಲ ಮೇಧಾವಿ ಮಾನವನಿಗೆ. ಅದು ಕ್ಷಣಿಕ, ನಶ್ವರ ಎಂಬ ಅರಿವೂ ಇದೆ. ಆ ಕಾರಣದಿಂದಲೇ ಹುಟ್ಟು ಸಾವು ಎಂಬ ಎರಡು ದಡಗಳ ನಡುವೆ ಹರಿಯುವ ತನ್ನ ಜೀವ(ನ) ವಾಹಿನಿ ಶುದ್ಧ ಸಲಿಲವಾಗಿಸಿಕೊಳ್ಳಲು ಸದಾ ಯತ್ನಿಸುತ್ತಾನೆ ; ಯತ್ನಿಸಬೇಕು, ಅಂತಹ ಸತ್ ಚಿಂತಕರ ಸಾಲಿನಲ್ಲಿ ಋಷಿಮುನಿಗಳಷ್ಟೇ ಅಲ್ಲ, ಕವಿ ಕಲಾವಿದರು ಸಾಹಿತಿ ವಿಜ್ಞಾನಿಗಳು ಇವರೇ ಮೊದಲಾದ ಲೋಕಸಂಗ್ರಹಕಾರರು ಬರುತ್ತಾರೆ. ತಮ್ಮಲ್ಲಿನ ದೈವದತ್ತವಾದ ಪ್ರಾತಿಭ ಜ್ಯೋತಿಯ ಮೂಲಕ ತಾವು ಬೆಳಗಿ, ಅನ್ಯರಿಗೆ ಬೆಳಕು ಕೊಡುತ್ತಾರೆ ; ತಾವು ಬದುಕಿ ಅನ್ಯರಿಗೆ ಬದುಕು ಕೊಡುತ್ತಾರೆ. ನಮ್ಮ ಅಂತಃಸತ್ವದ ನೆರವಿನಿಂದ ಇಹದ ಬದುಕು ಸವಿಯಾಗುವಂತೆ ಸಹನೀಯವಾಗುವಂತೆ ಮಾಡುತ್ತಾರೆ. ಆ ದಿವ್ಯ ದ್ರಷ್ಟಾರರು ತಮ್ಮ ಅನುಭವವನ್ನು ಅಂದದ ರೂಪದಲ್ಲಿ ಅಭಿವ್ಯಕ್ತಗೊಳಿಸುವ ಮೂಲಕ ಸಾಹಿತ್ಯ, ಸಂಗೀತ, ನೃತ್ಯ, ಚಿತ್ರ, ಶಿಲ್ಪ ಮೊದಲಾದ ಕಲಾವಲಯದಲ್ಲಿ ಅದನ್ನು ಚಿರಂತನ ಚಿರನೂತನಗೊಳಿಸಿ ಹೋಗುತ್ತಾರೆ. ಅಂತಹ ಪುಣ್ಯ ಪುರುಷರ ಮಾಲಿಕೆಯಲ್ಲಿ ಬರುತ್ತಾರೆ ಕತೆಗಾತಿ ಕೊಡಗಿನ ಗೌರಮ್ಮ.

ಈ ಮಹಿಳಾ ಸಾಹಿತ್ಯರತ್ನ ಹುಟ್ಟಿದ್ದು ಕರ್ನಾಟಕ ಅವಿಭಾಜ್ಯ ಅಂಗವಾಗಿರುವ ನಿಸರ್ಗ ಸೌಂದರ್ಯಕ್ಕೆ ನೆಲೆವೀಡಾದ, ಬೆಡಗಿನ ಕಾವೇರಿಯ ತವುರಾದ ಕೊಡಗಿನಲ್ಲಿ, ಕೊಡಗಿನ ಮಡಿಕೇರಿಯಲ್ಲಿ, ಕ್ರಿ.ಶ. ೧೯೧೨ರಲ್ಲಿ. ತಂದೆ ಕೊಡಗು ಜಿಲ್ಲೆಯಲ್ಲೇ ಒಳ್ಳೆಯತನದಲ್ಲಿ ಹೆಸರು ಮಾಡಿದ್ದ ಸುಪ್ರಸಿದ್ದ ವಕೀಲರಾದ ಶ್ರೀ ಎನ್. ಎಸ್. ರಾಮಯ್ಯನವರು. ಅವರ ಕಿರಿಯ ಮಗಳಾಗಿ ಹುಟ್ಟಿದ ಗೌರಮ್ಮ ಹೆಸರಿಗೆ ತಕ್ಕಂತೆ ಮುದ್ದಾದ ಹುಡುಗಿ. ಹೆತ್ತ ತಂದೆ ತಾಯಿಯರಿಗೆ, ಬೆಳಸಿದ ಬಳಗಕ್ಕೆ, ಪೋಷಿಸಿದ ಪರಿಸರಕ್ಕೆ ಅಚ್ಚುಮೆಚ್ಚಿನ ಮಗುವಾಗಿ ಬೆಳೆದಳು.

ಆದರೆ ನೋವೊಂದು ಅವರನ್ನು ಆಗಾಗ ಕಾಡುತ್ತಲೇ ಇತ್ತು. ಅದು ಅವರ ಮಾತಾಪಿತೃ ವಿಯೋಗ ದುಃಖ. ತಾಯಿಗಿಂತ ತಂದೆಯ ಮರಣ ಅವರ ಮನಸ್ಸಿನ ಮೇಲೆ ಅಗಾಧವಾದ ಪರಿಣಾಮವುಂಟುಮಾಡಿತ್ತು. ಅವರ ತಾಯಿ ಚಿಕ್ಕವರಾಗಿದ್ದಾಗಲೇ, ಅವರಿಗೆ ಬುದ್ಧಿ ಮೂಡುವ ಮೊದಲೇ ತೀರಿಕೊಂಡಿದ್ದರು. ಅದರಿಂದಾಗಿ ಅವರ ತಾಯಿಯ ನೆನಪು ಅಷ್ಟಕಷ್ಟೆ. ಒಂದೆಡೆ

ಹೀಗೆ ಹೇಳುತ್ತಾರೆ :"ನನಗೆ. . .ಅವ್ವ ಚಿಕ್ಕವಳಾಗಿರುವಾಗಿನಿಂದಲೂ ಇಲ್ಲ. ಹಾಗವಳು ಇಲ್ಲವೆಂದು ತಿಳಿದುಕೊಳ್ಳುವ ಶಕ್ತಿ ನನಗೆ ಬರುವ ಮೊದಲೇ ನನಗವಳು ಇಲ್ಲವಾಗಿಬಿಟ್ಟಿದ್ದಳು. ಮತ್ತೆ"ನನಗೂ ಎಲ್ಲರಂತೆ ಅವ್ವನಿಲ್ಲ" ಎಂದು ತಿಳಿದುಕೊಳ್ಳುವಂತಾಗುವಾಗ 'ಇಲ್ಲದಿದ್ದರೂ ತೊಂದರೆ ಇಲ್ಲ' ಎನ್ನುವಂತೆ ಅಭ್ಯಾಸವಾಗಿ ಹೋಗಿತ್ತು. ಆದರೂ – ಆದರೂ ನೋಡಿ, ಎಲ್ಲ ಹುಡುಗಿಯರು 'ನಮ್ಮವ್ವ – ನಮ್ಮವ್ವ ಹಾಗಿದ್ದಾರೆ – ಹೀಗಿದ್ದಾರೆ' ಎಂದಂದುಕೊಳ್ಳುವಾಗ 'ನನಗೂ ಅವ್ವ ಏಕಿರಬಾರದಿತ್ತು, ಎನಿಸದಿರುವುದಿಲ್ಲ.

ಆದರೆ ತಂದೆಯ ವಿಚಾರದಲ್ಲಿ ಹಾಗಲ್ಲ. ತಾಯಿ ಇಲ್ಲದ ತಬ್ಬಲಿಯನ್ನು ತಂದೆ ರಾಮಯ್ಯನವರು ತುಂಬು ಅಕ್ಕರೆಯಿಂದ ಸಾಕಿದ್ದರು. ಯೋಗ್ಯ ವರನಿಗೆ ಕೊಟ್ಟು ಲಗ್ನ ಮಾಡಿದ್ದರು. ಮಗಳನ್ನು ಅಂಗೈ ಮಲ್ಲಿಗೆಯಂತೆ ಸಾಕಿ ಬೆಳಸಿದ್ದರು. ಅವರ ಪ್ರೇಮ ಮಧು ಪೀಯೂಷವನ್ನುಂಡು ಬೆಳೆದ ಗೌರಮ್ಮನ ಎದೆಯಂಗಳದಲ್ಲಿ ಅಪ್ಪನ ಅಮೃತೋಪಮ ಪ್ರೀತಿ ಎಂದೆಂದಿಗೂ ಅಚ್ಚ ಹಸುರಾಗಿತ್ತು. ಅದನ್ನು ತಂದೆ ತೀರಿಕೊಂಡ ಬಳಿಕ ಕುಲಕರ್ಣಿಯವರಿಗೆ ಪತ್ರ ಮುಖೇನ ತಿಳಿಸಿದರು. ಅದು ಹೀಗಿದೆ : 'ನನ್ನ ತಂದೆ–ತಾಯಿಯಿಲ್ಲದ ನನ್ನನ್ನು ತಾಯಿ ತಂದೆಗಳ ಭಾರ ಹೊತ್ತು ಸಾಕಿದ ತಂದೆ ಇನ್ನಿಲ್ಲ. . .ಅವರನ್ನು ನೋಡದೆ ಎರಡು ತಿಂಗಳಾಗಿತ್ತು. ಏನೋ ಒಂದು ದಿನ ಸ್ವಲ್ಪ ಜ್ವರವಿತ್ತಂತೆ. ಅಷ್ಟರ ಸಲುವಾಗಿ ಕಾಗದವೇಕೆ ? ಎಂದು ನನಗೆ ಬರೆದಿರಲಿಲ್ಲ. ಮರುದಿನ ಸ್ನಾನ ಮಾಡಿ ಆಯಾಸವೆಂದು ಮಲಗಿದರಂತೆ. ಹತ್ತು ನಿಮಿಷಗಳೊಳಗಾಗಿ ಆಯಾಸ ನರಳುವಿಕೆ ಇಲ್ಲದೆಡೆಗೆ ಹೋಗಿಬಿ ಟ್ಟರವರು. ಆ ದಿನದಿಂದ ಈಚೆಗಿನ ಕಾಲವೆಲ್ಲ ನನ್ನ ಜೀವನದ ಅತ್ಯಂತ ದುಃಖದ ದಿನಗಳಾಗಿವೆ.*

ವಯಸ್ಸು ಹದಿಮೂರಕ್ಕೆ ಬಂತು. ದೇಹದಲ್ಲಿ ಕೆಲವು ಬದಲಾವಣೆಗಳೂ ಕಂಡವು. ತೆಳ್ಳಗೆ ಬೆಳ್ಳಗೆ ಸಪ್ರಮಾಣದ ಎತ್ತರವುಳ್ಳ ಹೆಣ್ಣಾದಳು. ಬಾಲ್ಯವಿವಾಹ ಪದ್ಧತಿಯ ಕಾಲವಾದ್ದರಿಂದ ೧೯೨೫ರಲ್ಲಿ ಮದುವೆಯೂ ಆಯಿತು. ಶುಂಠಿಕೊಪ್ಪದ ಬಿ.ಟಿ. ಗೋಪಾಲ ಕೃಷ್ಣಯ್ಯ ಈಕೆಯ ಕೈಹಿಡಿದರು. ಅಂದಿನಿಂದ ಗೌರಮ್ಮ ಮಿಸೆಸ್ ಬಿ.ಟಿ.ಜಿ. ಕೃಷ್ಣ ಆದರು. ಲಂಗ ಬಿಟ್ಟು ಸೀರೆ ಉಟ್ಟು ತಾಳಿ ಕಟ್ಟಿಸಿಕೊಂಡಿದ್ದರೂ ಆಕೆಯಿನ್ನೂ ತಾಯಿ ಮಡಿಲು ಬಿಟ್ಟು ಕೆಳಗಿಳಿದು ಹರಿದಾಡುವ ಮಗು. ಹಾಗೇ ಬೆಳೆದ ಆಕೆಗೆ ಶಾಲೆ ಕಲಿಯುವ ಹಂಬಲ. ಶಿಕ್ಷಣ ಎಂಬುದು ಹೆಣ್ಣು ಮಕ್ಕಳಿಗೆ ಮೊಲದ ಕೊಂಬಾಗಿದ್ದ ಆ ಕಾಲದಲ್ಲಿ ಪತಿ ಗೋಪಾಲ ಕೃಷ್ಣಯ್ಯನವರ ಒಪ್ಪಿಗೆ ಪಡೆದು ಗೌರಮ್ಮ ಪ್ರೌಢಶಾಲೆಯ ಎರಡನೆ ತರಗತಿಯವರೆಗೆ ಹೋಗಿ ತಮ್ಮ ಓದು ಮುಗಿಸಿದರು. ಮುಗಿಸುವುದಕ್ಕೆ ಕಾರಣ, ಮಗ ಬಂದದ್ದು. ಮದುವೆಯಾದ ಆರು ವರ್ಷದ ಮೇಲೆ ಅಂದರೆ ೧೯೩೧ರಲ್ಲಿ ವಸಂತಕುಮಾರ ಹುಟ್ಟಿದ. ಆಮೇಲೆ ಐದು ವರ್ಷದ ನಂತರ ಅಂದರೆ ೧೯೩೬ರಲ್ಲಿ ಹಿಂದಿ ವಿಶಾರದ ಪರೀಕ್ಷೆಯನ್ನು ಮೊದಲ ಶ್ರೇಣಿಯಲ್ಲಿ ಪಾಸು ಮಾಡಿದರು.

ಗೌರಮ್ಮ ತಾಯಿಯಾಗುವ ವೇಳೆಗಾಗಲೆ ಸಣ್ಣಕತೆಗಾರಳೆಂದು ಕನ್ನಡ ಸಾರಸ್ವತ ಕ್ಷೇತ್ರದಲ್ಲಿ ತಮ್ಮನ್ನು ತಾವು ಗುರುತಿಸಿಕೊಂಡಿದ್ದರು. ಜಯಕರ್ನಾಟಕ ಪತ್ರಿಕೆಯ ಮೂಲಕ ಅವರ ಒಂದೆರಡು ಕತೆಗಳು ಪ್ರಕಟವಾಗಿ ಗೌರಮ್ಮನವರ ಹೆಸರನ್ನು ಪ್ರಕಾಶಕ್ಕೆ ತಂದಿದ್ದವು. ಕನ್ನಡಿಗರಲ್ಲಿ ಭರವಸೆ ಹುಟ್ಟಿಸಿದ ಈ ಕತೆಗಾರ್ತಿ ಎಲ್ಲ ಕನ್ನಡಿಗರ ಪ್ರೀತಿ ಗೌರವಗಳಿಗೆ ಪಾತ್ರಾಗಿದ್ದರು. ಆದರೆ ಆಕೆಯಲ್ಲಿ ತಾವು ಸಾಹಿತಿ ಎಂಬ ಹಮ್ಮು ಇರಲಿಲ್ಲ. ಆಕೆ ವಿನಯಸಂಪನ್ನೆ. ತಮ್ಮನ್ನು ತಾವು ಪ್ರದರ್ಶಿಸಿಕೊಳ್ಳುವುದು ಅವರಿಗೆ ತಿಳಿದೇ ಇರಲಿಲ್ಲ. ಸುಗುಣಶೀಲೆ ಗೌರಮ್ಮ ಮಿತಭಾಷಿ, ಆದರೆ ನುಡಿಸಿದವರೊಡನೆ ಸರಸವಾಗಿ ಆತ್ಮೀಯವಾಗಿ ಮಾತನಾಡುವ ಸ್ವಬಾವವುಳ್ಳವರು. ಮುಖಭಾವ ತುಂಬಾ ಗಂಭೀರ. ಆದರೆ ವಿನೋದಪ್ರಿಯರಾಗಿದ್ದುದುಂಟು. ಯಾರೇ ಆಗಿರಲಿ ಅವರನ್ನು ನೋಡಿದ ಕೂಡಲೇ ನೋಡಿದವರ ಶಿರಸ್ಸು ಮನಸ್ಸು ತಾವಾಗಿಯೇ ಮಣಿಯುತ್ತಿದ್ದವು. ಆಕೆಯ ಕಣ್ಣುಗಳಲ್ಲಿ ಕರುಣೆ ಕಡಲುಗಳು ಉರುಳುತ್ತಿದ್ದವು. ವಾತ್ಸಲ್ಯಭರಿತ ನೇತ್ರಗಳ್ಲಿ ಕಳ್ಳನನ್ನೂ ಒಳ್ಳೆಯವನನ್ನಾಗಿ ಮಾಡುವ ಗಾರುಡಿಗತನವಿತ್ತು.

ಗೌರಮ್ಮ ಮತ್ತು ಬಿ.ಟಿ.ಜಿ. ಕೃಷ್ಣರವರದು ಅನ್ಯೋನ್ಯ ದಾಂಪತ್ಯ. ಅವರಿಬ್ಬರ ಪ್ರೇಮಸೇತುವಾಗಿ ಬಂದವನು ವಸಂತಕುಮಾರ. ಕೃಷ್ಣ ಒಂದು ಕಾಫಿ ಎಸ್ಟೇಟಿನಲ್ಲಿ ಮ್ಯಾನೇಜರಾಗಿದ್ದರು. ಜೀವನಕ್ಕಾಗುವಷ್ಟು ಸಂಬಳ ಬರುತ್ತಿತ್ತು. ಬೆಚ್ಚನೆಯ ಮನೆ ಇತ್ತು; ಇಚ್ಛೆಯನರಿತು ನಡೆವ ಸತಿ ಇದ್ದಳು. ಕೇಳಬೇಕೇ ? ಸ್ವರ್ಗಕ್ಕೆ ಕಿಚ್ಚು ಹಚ್ಚಿಸುವಂತಿತ್ತು ಅವರ ದಾಂಪತ್ಯ ಜೀವನ. ಕಾಫಿ ಗಿಡದ ಹಸಿರು ಜಾರುಗುಪ್ಪೆ ದಾಟಿ ತುಸು ದೂರ ನಡೆದರೆ ಸುತ್ತುಮುತ್ತೆಲ್ಲ ಪಕಪಕನೆ ನಗುವ ಹೂ ಗಿಡಗಳ ಕೈದೋಟ. ಎರಡು ಮೆಟ್ಟಿಲು ಹತ್ತಿ ನೋಡಿದರೆ ಕಾಣಿಸುತ್ತದೆ ವಿಶಾಲವಾದ ಪಾರ್ಲಿಮೆಂಟ್ ಭವನ ಹೋಲುವ ಒಂದು ಬಾದಾಮಿಯಾಕಾರದ ಪುಟ್ಟ ಬಮಗಲೆ. ಯಾವ ಹೆಚ್ಚಿನ ಆಡಂಬರವಿಲ್ಲದಿದ್ದರೂ ಅನುಕೂಲಕ್ಕಾಗಿ ಇರುವ ನಾಲ್ಕು ಕುರ್ಚಿಗಳು, ಹಲವು ಹೂವಿನ ಕುಂಡಗಳು, ಖಾದಿ ಹೊದೆದು ಕುಳಿತಿರುವ ಪುಟ್ಟ ಮೇಜುಗಳು, ಆಗುಂತಕರನ್ನು ನೋಡಿ ನಗುತ್ತಾ ಸ್ವಾಗತಿಸುವ ಮಗನ ವಿವಿಧ ಭಂಬಿಯ ಭಾವಚಿತ್ರಗಳು. ಅದನ್ನು ದಾಟಿ ಮುಂದೆ ಹೋದರೆ ಅಲ್ಲಿದೆ ಮೊಗಸಾಲೆ. ಅದರ ಆ ಬದಿಯಲ್ಲಿ ವೀಳೆದೆಲೆ ಬಳ್ಳಿ,

ಉದ್ದಕ್ಕೂ ಎದೆ ತೆರೆದು ನಿಂತ ಕಿತ್ತಲೆ ಹಣ್ಣಿನ ಮರದ ಸಾಲು. ಅದೊಂದು ಪ್ರಶಾಂತ ಸ್ಥಳ. ಅಲ್ಲೊಂದು ಮೇಜು ಮತ್ತು ಕುರ್ಚಿ. ಗೌರಮ್ಮನವರ ಸಾಹಿತ್ಯೋಪಾಸನೆಯ ನೆಲೆ ; ಹೀಗೆಂದಾಕ್ಷಣಕ್ಕೆ ಗೌರಮ್ಮನವರು ಕೇವಲ ಓದು ಬರಹದಲ್ಲಿ ನಿರತ ರಾಗಿರುತ್ತಿದ್ದರು ಎಂದರ್ಥವಲ್ಲ. ಮನೆ ಕೆಲಸದಲ್ಲಿ ತುಂಬಾ ಆಸ್ತೆ ಇಟ್ಟುಕೊಂಡಿದ್ದರು. ತಮ್ಮ ಯಜಮಾನರು ಎಸ್ಟೇಟಿನ ಕೆಲಸ ಮುಗಿಸಿ ಮನೆಗೆ ಬರುತ್ತರುವಾಗಲೇ ಅವರನ್ನು ಬಾಗಿಲಿನಲ್ಲಿ ನಿಂತು ಸ್ವಾಗತಿಸಿ, ಅವರ ಬೂಟ್ ಬಿಚ್ಚಿ, ಟೈ ಸಡಲಿಸಿ, ಕುರ್ಚಿ

---

*ಅದೇ ಪು. ೧೮

ಮೇಲೆ ಕೂಡಿಸಿ, ಬಿಸಿ ಬಿಸಿ ಕಾಫಿಕೊಟ್ಟು ಕುರ್ಚಿ ತೋಳ ಮೇಲೆ ಕುಳಿತು ಹ್ಯಾಟ್ ತೆಗೆದು ತಲೆ ನೇವರಿಸುತ್ತಿದ್ದರು. ಇದಕ್ಕಿಂತ ಮಿಗಿಲಾದ ಸ್ವರ್ಗ ಬೇರೊಂದಿದೆಯೇ ? ಎನ್ನಿಸುತ್ತಿತ್ತು ಆ ಪುಣ್ಯ ದಂಪತಿಗಳ ಸಂಸಾರ.

ಗೌರಮ್ಮನವರ ರಾಷ್ಟ್ರಪ್ರೇಮ ಅಪ್ರಮೇಯ. ಅವರು ಖಾದಿಯನ್ನು ಬಿಟ್ಟು ಬೇರೆ ಯಾವ ಬಟ್ಟೆಯನ್ನೂ ಧರಿಸುತ್ತಿರಲಿಲ್ಲ. ಖಾದಿ ಧರಿಸುವುದರಿಂದ ಅದನ್ನು ತಯಾರಿಸಿದ ಭಾರತೀಯ ಬಂಧುವಿಗೆ ತುತ್ತು ಅನ್ನ ಸಿಕ್ಕುವಂತಾದೀತು ಎಂಬ ಸದ್ಭಾವನೆ ಅವರದು. ಅವರ ಮೈಮೇಲೆ ಒಂದು ಚಿಮ್ಮುಟಿ ಬಂಗಾರ ಇರಲಿಲ್ಲ. ಅದಕ್ಕೊಂದು ಕಥೆ ಇದೆ. ಒಮ್ಮೆ ಮಹಾತ್ಮ ಗಾಂಧಿಯವರು ಕೊಡಗಿಗೆ ಬಿ.ಟಿ. ಗೋಪಾಲಕೃಷ್ಣಯ್ಯನವರು ಮ್ಯಾನೇಜರಾಗಿದ್ದ ಕಾಫಿ ಎಸ್ಟೇಟಿನ ಮಾಲಿಕ ಶ್ರೀ ಮಂಜುನಾಥಯ್ಯನವರ ಮನೆಗೆ ಭೇಟಿ ಕೊಟ್ಟರಂತೆ. ಅಲ್ಲಿಗೆ ಹೋಗಿದ್ದ ಗೌರಮ್ಮ ತಮ್ಮ ಮನೆಗೂ ಬಾಪು ದಯಮಾಡಿಸಬೇಕೆಂದು ಕೇಳಿಕೊಂಡರಂತೆ. ಆದರೆ ಸಮಯಾಭಾವದಿಂದ ಬಾಪು ಆಗುವುದಿಲ್ಲ ಅಂದಾಗ ಗೌರಮ್ಮ ತಮ್ಮ ಮನೆಗೆ ಬಂದು ಉಪವಾಸ ಸತ್ಯಾಗ್ರಹ ಆರಂಭಿಸಿಬಿಟ್ಟ ರಂತೆ. ಬಾಪು ಅವರ ಧೃಢತೆಗೆ ಮೆಚ್ಚಿ ಅವರ ಮನೆಗೂ ಹೋದರಂತೆ. ಗೌರಮ್ಮನಿಗೆ ಎಣೆಯಿಲ್ಲದ ಆನಂದ. ಇದನ್ನು ಕುರಿತು 'ಹರಿಜನ' ಪತ್ರಿಕೆ ಹೀಗೆ ವರದಿ ಮಾಡಿದೆ, ನೋಡಿ :

ಸಂಜೆಗೆ ತಂಗಿದ್ದು ಗುಂಡುಕಟ್ಟೆಯಲ್ಲಿ. ನಿಜವಾಗಿ ಆಲೂರು ಬಿಡಬೇಕಾದರೆ ನಮಗೆಲ್ಲರಿಗೂ ನಿಟ್ಟಿಸಿರು ಬಂತು. ಅಷ್ಟು ಚೆಲುವು ಅದರ ಸುತ್ತಲೂ ಹರಡಿದ ಅಂದ ಚೆಂದ. ನಾವು ತಂಗಿದ್ದ ಮನೆಗೆ ನೆರೆಯಲ್ಲೇ ಒಬ್ಬ ಹುಡುಗಿ ಗಾಂಧೀಜಿ ತನ್ನ ಮನೆಗೆ ಬರಬೇಕೆಂದು ಬೆಳಗಿನಿಂದ ಹಟಹಿಡಿದು ಉಪವಾಸವಿದ್ದಾಳೆ ಎಂದು ನಮಗೆ ಸುದ್ದಿ ತಿಳಿಯಿತು. ಆಕೆ ಗಾಂಧೀಜಿಯ ಬಳಿಗೆ ಬರುತ್ತಿದ್ದಾಗ ಕಣ್ಣು ಒದ್ದೆಯಾಗಿತ್ತು. ಒಮದು ಮಾತೂ ಆಡಲರದಂತಾಗಿದ್ದಳು.

'ನೀನು ಏಕೆ ಉಪವಾಸ ಮಾಡುತ್ತಿದ್ದೀ ಮಗು ?' ಗಾಂಧೀಜಿ ಕೇಳಿದರು.

'ನೀವು ನಮ್ಮ ಮನೆಗೆ ಬರಬೇಕು ಅಂತ' ಕಣ್ಣೀರಿನಿಂದ ಕಂಠ ಬಿಗಿದಿತ್ತು ಆಕೆಗೆ.

'ನನ್ನ ಒಡವೆಯನ್ನು ನಿಮಗೆ ಸಮರ್ಪಿಸಬೇಕು'

'ಬಹಲ ಚಲೋ ಮಾತು. ಆದರೆ ಮೊದಲು ನೀನು ಉಪವಾಸ ಬಿಡಬೇಕು'

'ಊಹುಂ. ಇಲ್ಲ, ಮೊದು ಮಾತು ಕೊಡಬೇಕು ಮನೆಗೆ ಬರುವುದಾಗಿ'

'ಮಾತು ಗೀತೂ ಕೇಳಬಾರದು ಮಗು. ಈ ಕಿತ್ತಳೆಹಣ್ಣು ತಗೊ. ಇದನ್ನು ಮೊದಲು ಬಾಯಿಗೆ ಹಾಕು. ಹಗೆಲ್ಲ ಚೌಕಸಿ ಮಾಡಬಾರದು. ನನ್ನ ಮೇಲೆ ನೆಚ್ಚಿಗೆ ಇರಲಿ. ನಿನ್ನ ದೃಢ ಪ್ರೀತಿಯಲ್ಲಿ ನಿನಗೆ ನಂಬಿಕೆ ಇರಲಿ.'

ಆದರೂ ಆಕೆ ಹಣ್ಣು ಮುಟ್ಟಲಿಲ್ಲ. ಬಾಪು ಆಗಲೇ ಮಾತು ಕೊಟ್ಟಾಯಿತೆಂದು ಆಕೆಗೆ ತಿಳಿಯಲಿಲ್ಲ ಪಾಪ ! ಮೀರಾಬೆನ್ ಕಿತ್ತಳೆ ಹಣ್ಣು ಸುಲಿದರು. ಆಕೆಗಿನ್ನೂ ಅನುಮಾನ !

'ನಿಜವಾಗಿಯೂ ಬರುತ್ತೀರಾ ?'

'ನಿಜವಾಗಿಯೂ ಬರ್ತಾರೆ' ಮೀರಾಬೆನ್ ಹೇಳಿದರು. ಆಗ ಗೌರಿ ನಗುತ್ತ ಕಿತ್ತಳೆ ಹಣ್ಣು ತೆಗೆದುಕೊಂಡಳು.

ಆಕೆಗೆ ಒಡವೆ ಕೊಡಲು ಗಟ್ಟಿ ಮನಸ್ಸು ಹೌದೋ ಅಲ್ಲವೋ ತಿಳಿಯಲು ಗಾಂಧೀಜಿ ಹವಣಿಸಿದರು. ಈಗ ಕೊಟ್ಟ ಒಡವೆಗಳನ್ನು ಮತ್ತೆ ಮಾಡಿಸಿಕೊಳ್ಳುವುದಿಲ್ಲವೆಂದು ಆಕೆ ಹೇಳಿದಳು. ಆಕೆಗೆ ಇನ್ನೂ ೨೧ ವರ್ಷ, ಮದುವೆಯಾಗಿತ್ತು. ಆಕೆಯ ಗಂಡನೂ ಅಲ್ಲಿದ್ದರು. ಗಾಂಧೀಜಿ ಅವರನ್ನು ಕೇಳಿದರು :

'ಈಕೆ ಒಡವೆ ಕೊಡಬೇಕೆನ್ನುವುದು ಸ್ವಬುದ್ಧಿಯೋ ಹೇಗೇ ?'

'ಆಕೆಯ ಸ್ವಬುದ್ಧಿಯೇ. ನಾನೂ ಹೂಂ ಅಂದೆ.'

ಆ ತರುಣ ಹೇಳಿದರು. ಅವರಿಗೆ ತಿಂಗಳಿಗೆ ನಲವತ್ತು ರೂಪಾಯಿ ಸಂಬಳ. ಏನೋ ಒಂದು ಉತ್ಸಾಹದ ಮಬ್ಬಿನಲ್ಲಿ ಹೀಗೆ ಮಾಡಬಾರದು ಎಂದು ಗಾಂಧೀಜಿ ಬಲವಾಗಿ ಉಪದೇಶಿಸಿದರು. 'ಸರಳವಾದ ಮಿತಜೀವನ ಬಹಳ ಒಳ್ಳೆಯದು' ಎಂದರು. ಗೌರಿಯೂ ಆಕೆಯ ಗಂಡನೂ ಒಪ್ಪಿದರು. ಆಮೇಲೆ ಅವರ ಮನೆಗೆ ಹೋದಾಗ ಆಕೆ ಒಡವೆಗಳನ್ನು ಗಾಂಧೀಜಿಗೆ ಒಪ್ಪಿಸಿದಳು.'

(ಹರಿಜನ, ಮಾರ್ಚ್ ೨, ೧೯೩೪)

ಗೌರಮ್ಮನವರು ಗಳಗಳ ಮಾತನಾಡುತ್ತಿರಲಿಲ್ಲ. ಯಾವುದೇ ಅಭಿಪ್ರಾಯವಿರಲಿ ಅದನ್ನು ಚೆನ್ನಾಗಿ ಆಲೋಚಿಸಿ ಹೊರ ಹಾಕುತ್ತಿದ್ದರು. ಒಮ್ಮೆ ಆಡಿದ ಮಾತಿಗೆ ತಾವು ಅಂಟಿಕೊಂಡು ಬಿಡುತ್ತಿದ್ದರು. ತಮ್ಮ ಆತ್ಮಸಾಕ್ಷಿಗೆ ಒಪ್ಪಿದ್ದನ್ನು ಸತ್ಯವೆಂದು ತಿಳಿದದ್ದನ್ನು ಪಟ್ಟುಬಿಡದೆ ಸಾಧಿಸುತ್ತಿದ್ದರು. ಕೃತಿ ವಿಮರ್ಶೆಯಲ್ಲಿ ಅವರದೇ ಒಂದು ನಿಲುವು. ಅನ್ಯರ ರಚನೆಗಳನ್ನು ಕುರಿತು ಕೇಳಿದರೆ ದಾಕ್ಷಿಣ್ಯಕ್ಕೆ ಹೊಗಳುವ ಅಥವಾ ದ್ವೇಷದಿಂದ ತೆಗಳುವ ಸ್ವಭಾವ ಅವರದ್ದಾಗಿರಲಿಲ್ಲ. ಕೈಗೆತ್ತಿಕೊಂಡ ಕೃತಿಗೆ ವಸ್ತು ನಿಷ್ಠ ವಿಮರ್ಶೆ ನೀಡುತ್ತಿದ್ದರು. ತಮ್ಮ ಕೃತಿಗಳಿಗೂ ತಾವೇ ಒಮ್ಮೊಮ್ಮೆ ವಿಮರ್ಶಕರಾಗುತ್ತಿದ್ದುದೂ ಉಂಟು. ಅಂತೆಯೇ ಮಹಿಳಾ ಸಾಹಿತ್ಯದ ಬಗೆಗೆ ವಿಶೇಷ ಕಾಳಜಿ ಉಳ್ಳವರಾಗಿದ್ದರು. ಹೆಣ್ಣು ಮಕ್ಕಳು ತಮ್ಮ ಪ್ರತಿಭೆಯನ್ನು ಅಡುಗೆ ಒಲೆಯಲ್ಲಿ ಹಾಕಿ ಉರಿಸಬಾರದು. ಬರಹಕ್ಕೆ ಬೆರಸಬೇಕು. ಪುರುಷರ ಸರಿಸಮಾನ ಸ್ಕಂದರಾಗಿ ಸ್ತ್ರೀಯರು ಉತ್ತಮ ಕೃತಿ ರಚನೆ ಮಾಡಬೇಕು ಎಂದು ಕರೆ ಕೊಡುತ್ತಿದ್ದರು !

ಟೆನಿಸ್ ಆಡುವುದು, ಈಜಾಡುವುದು ಗೌರಮ್ಮನವರ ಹವ್ಯಾಸಗಳಾಗಿದ್ದವು. ಓದುವುದಂತೂ ನಿತ್ಯ ಗಾಯಿತ್ರಿ ! ಸ್ಫೂರ್ತಿ ಬಂದಾಗ, ಪ್ರತಿಭೆ ಮಿಂಚಿದಾಗ, ಮನಸ್ಸು ಬೇಡಿದಾಗ ಕತಾರಚನೆ. ವೇಳಾಪಟ್ಟಿಯನ್ನಿಟ್ಟುಕೊಂಡು ನಡೆವ ಕಛೇರಿ ಕೆಲಸಗಾರನಂತೆ ಅಚ್ಚುಕಟ್ಟಾದ, ಅಷ್ಟೇ ಕಟ್ಟುನಿಟ್ಟಾದ ಕೆಲಸದಲ್ಲಿ ತಮ್ಮನ್ನು ತೊಡಗಿಸಿಕೊಂಡು ದುಡಿಯುತ್ತಿದ್ದ ಗೌರಮ್ಮ ಏಕೋ ಏನೋ ಒಮ್ಮೆ ಮೈಮರೆತರು. ಈಜು ಚೆನ್ನಾಗಿ ಬರುತ್ತಿದ್ದರೂ ನೆರೆ ಬಂದಾಗ ಅರಿಯದೆ ಈಜಲು ಧುಮ್ಮಿಕ್ಕಿದರು. ನೀರಲ್ಲಿ ಬಿದ್ದವರು ಎದ್ದು ಬರಲೇ ಇಲ್ಲ. ನೀರಿನ ಸೆಳವಿಗೆ ಸಿಕ್ಕಿ ಈಜಲಾರದೆ ಕೈಸೋತು, ೧೩.೪.೧೯೩೯ರಂದು ತಮ್ಮ ಮನೆಯ ಸಮೀಪದಲ್ಲಿದ್ದ ಹರದೂರ ಹೊಳೆಯಲ್ಲಿ ನೀರ್ಮಸಣವಾದರು. ತಮಗೆ ೨೭ ವರ್ಷ ತುಂಬುವ ಮುನ್ನವೇ ಭಗವಂತನ ಮಾವನಮನೆಯನ್ನು ತುಂಬಿದರು !

ಬೆಳಗ್ಗೆ ಮೊಗ್ಗೆಯಾಗಿ ಮಧ್ಯಾಹ್ನ ಪ್ರಫುಲ್ಲಿತ ಪುಷ್ಪವಾಗಿ ತನ್ನ ಸುತ್ತೆಲ್ಲ ಪರಿಮಳ ಬೀರಿದ ಮಲ್ಲಿಗೆ ಸಂಜೆಗಿಲ್ಲವಾದಂತೆ ತನ್ನ ಕಿರಿ ವಯಸ್ಸಿನಲ್ಲೇ ತೀರಿಕೊಂಡ ಕೊಡಗಿನ ಸೋದರಿಯನ್ನು ಕುರಿತು ಕವಿ ಬೇಂದ್ರೆ, ಕಣ್ಣೀರಿನ ತರ್ಪಣವನ್ನರ್ಪಿಸುತ್ತಾ, "ಸಮಾನ ಗುಣಶೀಲ ವಧೂವರ ದಾಂಪತ್ಯವನ್ನು ಕೂಡಿಸುವುದು ದುರ್ವಿಧಿಯು ತನ್ನ ಹಣೆಯಲ್ಲಿ ತಾನೆ ಬರೆದುಕೊಂಡಿಲ್ಲ – ಎಂದು ಕಾಳಿದಾಸನೇ ಮಿಡುಕಿದ್ದನೆ. ಕಾಂತಾ ಹೃದಯಕ್ಕೆ ಹಾಗೆ ತೋಚಿದರೆ ಸೋಜಿಗವಲ್ಲ. ಆಕ್ರೋಶಕ್ಕಿಳಿಯದೆ ಕಾರುಣ್ಯದ ಹದವನ್ನು ತರಬಲ್ಲ ಈ ಕಥೆಗಾರ್ತಿಯ ಕೌಶಲದ ಧ್ವನಿ ಹೃದಯಕ್ಕೆ ಮುಟ್ಟಿದಾಗ ತಂಗಿ ಗೌರಮ್ಮನವರ ನಿಧನದಿಂದ ಕನ್ನಡಕ್ಕಾದ ಹಾನಿ ಅಷ್ಟಿಷ್ಟಲ್ಲ ಎಂದು ಮತ್ತೆ ತೋರುತ್ತದೆ."* ಹೀಗೆ ನುಡಿದಿದ್ದಾರೆ. ಅಂತೆಯೇ ತಮ್ಮ ಕಣ್ಣೀರಿನ ಶ್ರದ್ಧಾಂಜಲಿಯನ್ನು ಈ ಶೋಕ ಗೀತೆಯ ಮೂಲಕ ಅರ್ಪಿಸಿದ್ದಾರೆ.

---

*ದ.ರಾ. ಬೇಂದ್ರೆ, 'ಚಿಗುರು'ಗೆ ಬರೆದ ಮುನ್ನುಡಿ, ಪು. ೧–೨

೧೫೨

## ತಂಗಿ ಗೌರಮ್ಮ

**ಜಲದೇವತೆ ವನದೇವತೆ ಒಂದೆಡೆಯಲ್ಲಿ ಸೇರಿ**
**ಬಿನದಿಗಿಸುತಿಹ ಹೊಳೆ ಮಡುವಿಗೆ ನೀನೀಸಲು ಹಾರಿ**
**ತಾಯೊಡಲನು ಕೂಸಾಟಕೆ ತಾಮಡಲಿಗೆ ಬೀರಿ**
**ತೀರಲು. ಜಡವಾಗಳೆ ಕಾವರಿಯೆ ತಂಪೇರಿ ?**
**ನೆದರೆಯೇ ನಾ ನಡುಗುವೆ ಇದು ಆದುದದೆಂತೋ ?**
**ಎಲ್ಲೆಂದೀ ಎಳೆ ಜೀವಕೆ ಸಾವೆಂಬುದು ಬಂತೋ ?**

**ಪತಿಯೊಲವಿನ ಸುತನೊಲವಿನ ಕೆಳೆಯೊಲವಿನ ತಂತು**
**ಜಗ್ಗದೆ ನಿನ್ನನು ಮೇಲಕೆ ನೀ ಮುಳುಗಿದೆಯೆಂತು ?**
**ಗೌರವಸ್ತ್ರ ಗೌರಸ್ಥಿತ ಗೌರವರೀ ಗೌರಿ**
**ಮಿಂಚಿದಳದೊ ಬಾನಂಚಿಗೆ ಕಾವೇರಿಯ ಕುವರಿ**
**ಬೆಳದಿಂಗಳೆ ಕರುವಿಟ್ಟಿತೊ ಈ ನಿರ್ಮಲ ಮೂರ್ತಿ**
**ಮೊದಲೆಲ್ಲಿಯೆ ಕುಡಿಬಿಟ್ಟಿತೊ ಮುಗುಳಿಟ್ಟಿತೊ ಕೀರ್ತಿ !**
**ಉಷೆ ಸುರಿಸುವ ಇಬ್ಬನಿಯೊಲು ಕರುಣೆಯ ಕಂಬನಿಯೆ**
**ಬಾಳ ಬಳ್ಳಿಗೆ ಬೀರಿದೆ ನೀ ಮಧುಹಾಸ್ಯದ ಹನಿಯ**

– **ಅಂಬಿಕಾತನಯದತ್ತ**

ಕೊಡಗಿನ ಗೌರಮ್ಮನವರು ಬದುಕಿದ್ದು ಕೇವಲ ೨೭ ವರ್ಷಗಳು ; ಕೊಟ್ಟಿದ್ದು ೨೧ ಸಣ್ಣಕತೆಗಳು. ಇವು ಕಂಬನಿ ಮತ್ತು ಚಿಗುರು ಎಂಬ ಎರಡು ಕಥಾ ಸಂಕಲನಗಳ ರೂಪದಲ್ಲಿ ಪ್ರಕಟವಾಗಿವೆ** ಇವುಗಳನ್ನು ತಮ್ಮ ಹರಯದ ದಿನಗಳಲ್ಲಿ ಅಂದರೆ ೧೮–೧೯ ವರ್ಷಗಳ ವಯಸ್ಸಿನ ದಿನಗಳಲ್ಲಿ ಬರೆದಿರಬಹುದು. 'ಕಂಬನಿ' ಮೊದಲು ಬಂದಿದ್ದರೂ ಅದರಲ್ಲಿನ ಕತೆಗಳಲ್ಲಿ ಅನುಭವದ ಪಕ್ವತೆ ಇದೆ, ಅಭಿವ್ಯಕ್ತಿಯ ಓಜಸ್ಸಿದೆ. 'ಚಿಗುರು' ಹೆಸರಿಗೆ ತಕ್ಕಂತೆ ವಿಗುರು,. ಚೆಲುವಾಗಿ ನಳನಳಿಸುವ ಚಿಗುರು. ಅವುಗಳಲ್ಲಿ ಅನುಭವ ಮಾಗಿಲ್ಲದಿದ್ದರೂ ಅಂದ ಇದೆ, ಆಕರ್ಷಣೆ ಇದೆ. ಆ ಕಾರಣದಿಂದಲೇ ಗೌರಮ್ಮನವರು ಅಷ್ಟು ಬೇಗ ಪ್ರಸಿದ್ಧಿಗೆ ಬಂದಿದ್ದು. ಕೇವಲ ಮೂವತ್ತು ವರ್ಷಗಳಲ್ಲಿ ತಮ್ಮ ಇಹದ ಬದುಕು ಮುಗಿಸಿದ ಜಾನ್ ಕೀಟ್ಸ್, ಮುದ್ದಣರಿದ್ದಾರೆ. ಅವರಂತೆ ಕೇವಲ ಇಪ್ಪತ್ತೇಳು ವರ್ಷಗಳಲ್ಲೇ ಅವರ ಅಮೃತ ಮಾಲಿಕೆಯಲ್ಲಿ ಬಂದವರು ಅರಿವು ತುಂಬಿದ ನುರಿತ ಕೈಯಿನ ಬರಹಗಾರ್ತಿಯೆನಿಸಿದವರು ಕೊಡಗಿನ ಗೌರಮ್ಮನವರು. ಅವರು ಕೊಟ್ಟದ್ದು ಕೇವಲ ಎರಡೇ ಎರಡು ಕೃತಿಗಳು. ಆದರೆ ಅವು ಕನ್ನಡದ ಶಾಶ್ವತ ನಿಧಿಯಾಗಿವೆ, ಮಹಿಳಾ ಸಾಹಿತ್ಯದ ಪ್ರತಿನಿಧಿ ಆಗಿವೆ. ಅನುಕ್ರಮವಾಗಿ ಅವರ ಎರಡೂ ಕಥಾ ಸಂಕಲನಗಳನ್ನು ಕುರಿತ ಒಂದು ಅವಲೋಕನ ನಡೆಸಬಹುದು.

ಮೊದಲನೆಯದಾಗಿ, 'ಕಂಬನಿ' ಸಂಕಲನ ಕಥೆಗಳು. ಇದರಲ್ಲಿನ ಕಥೆಗಳು ಒಂದಕ್ಕಿಂತ ಒಂದು ಚೆನ್ನ. ಎಲ್ಲೂ ಕಥಾಶಿಲ್ಪ

---

**ಈ ಎರಡೂ ಕಥ ಸಂಕಲಗಳಿಂದ ಆಯ್ದ ೧೦ ಕತೆಗಳನ್ನು 'ಗೌರಮ್ಮನ ಕತೆಗಳು' ಎಂಬ ಶಿರ್ಷಿಕೆಯಡಿಯಲ್ಲಿ ಸಿ.ಎಂ. ರಾಮರಾವ್ ಸಂಪಾದಿಸಿ, ಶ್ರೀ ಕಾವೇರಿ ಪ್ರಟನಾಲಯ, ಮಡಿಕೇರಿ ಈ ಮೂಲಕ ಜನವರಿ ೧೯೪೯ರಲ್ಲಿ ಮೂರನೆಯ ಕಥಾ ಸಂಕಲನವಾಗಿ ತಂದಿದ್ದಾರೆ.

ಶಿಥಿಲಗೊಳ್ಳದೆ, ಸಣ್ಣಕತೆಯ ಸಂಹಿತೆಯನ್ನು ರೂಢಿಸಿಕೊಂಡು ರಚಿತವಾದ ಕಲಾಕುಸುಮಗಳು. ಅವುಗಳಲ್ಲಿ ಲೇಖಕಿಯ ಸ್ತ್ರೀ ಸಹಜವಾದ ಕರುಳಿದೆ, ಕೆರಳೂ ಇದೆ. ಕಾರಣ ಆಕೆ ಹೆಣ್ಣು ! ಹೆಣ್ಣು ಹೇಗೆ ಶೋಷಣೆಗೊಳಗಾಗಿದ್ದಾಳೆ ಎಂಬ ವ್ಯಥೆ ಕಥೆಯ ರೂಪು ತಾಳಿರುವುದು ಕಂಡು ಬರುತ್ತದೆ. ಆದ್ದರಿಂದಲೇ, 'ಕತೆಗಳಲ್ಲಿ ಕಟುತ್ವವಿದ್ದರೂ ರೊಚ್ಚಿಲ್ಲ, ಸೋದ್ದೇಶ ಲೇಖನದ ಸೂಚನೆ ಯಿದ್ದರೂ ಅವಾಸ್ತವ ಆರ್ಭಟೆಯಿಲ್ಲ. ಕಲೆಯು ನೈಜವನ್ನು ಮರೆಮಾಡಿಲ್ಲ – ಎಲ್ಲೆಲ್ಲಿಯೂ ಹೆಚ್ಚಿನ ಹೃದಯ ಸಾಕ್ಷಿ ಯನ್ನು ಸಾರುವ ಈ ಕಥಾಗುಚ್ಛವು 'ಶ್ರೀನಿವಾಸ' 'ಆನಂದ'ರ ಕತೆಗಳನ್ನು ವಾಚಕರಿಗೆ ಮನೋವಿಶ್ಲೇಷಣಾತ್ಮಕ ಕತೆಗಳ ಮಾದರಿಯಾಗಿ ಹೃದಯಂಗಮವಾಗುವುದೆಂದು ನಾನು ನಂಬಿದ್ದೇನೆ.' – ಎಂಬುದಗಿ ಗೌರಮ್ಮನವರು ತೀರಿಕೊಂಡ ಮೇಲೆ ೧೯೩೯ರಲ್ಲಿ ಪ್ರಕಟ ವಾದ ಅವರ 'ಕಂಬನಿ' ಕಥಾಸಂಕಲನದ ಮುನ್ನುಡಿಯಲ್ಲಿ ಹೇಳಿದ್ದಾರೆ ವರಕವಿ ಬೇಂದ್ರೆ.

'ಕಂಬನಿ'ಯಲ್ಲಿನ ವಾಣಿಯ ಸಮಸ್ಯೆ ಒಂದು ಮಾದರಿ ಸಣ್ಣಕತೆ. ಚಿಕ್ಕಂದಿನಲ್ಲೇ ಗಂಡನನ್ನು ಕಳೆದುಕೊಂಡ ಇಂದುವಿಗೆ ಯೌವನದ ಮೋಡ ಕವಿದಾಗ ಹೆಣ್ಣಿಗೆ ಸಹಜವಾದ ಕಾಮ ಕೆರಳುತ್ತೆ. ಆದರೆ ಅದರ ಜೊತೆಯಲ್ಲೇ ಅರಿವಿನ ಮಿಂಚು ಮಿಂಚಿ ಅವರ ವ್ಯಕ್ತಿತ್ವನ್ನು ಬೆಳಕಾಗಿಸಿ ಶುದ್ಧ ನಿರ್ಧಾರದೆಡೆಗೆ ಮಾರ್ಗದರ್ಶನ ಮಾಡುತ್ತದೆ. ಹೆಮಡತಿ ತವರಿಗೆ ಹೋಗಿದ್ದಾಗ ಪಕ್ಕದ ಮನೆಯ ವಾಣಿಯ ಗಂಡ ರತ್ನ ಇಂದುವಿನಲ್ಲಿ ಇಂಬು ಪಡೆಯಲು ಹಂಬಲಿಸುತ್ತಾನೆ. ಇದರ ಸೂಕ್ಷ್ಮತೆಯನ್ನರಿತ ಇಂದು ತನ್ನ ಆಂತಿರಕ ತುಡಿತವನ್ನು ಪಡೆದು, ಅದರಿಂದ ಗೆಳತಿ ವಾಣಿಗೆ ಅನ್ಯಾಯವಾಗುವುದು ಬೇಡ ಎಂದು ಭಾವಿಸಿ ಆ ಊರು ಬಟ್ಟು ಎಲ್ಲಿಗೋ ಹೊರಟುಹೋಗುತ್ತಾಳೆ. ತನ್ನ ತವರಿನಿಂದ ಊರಿಗೆ ಹಿಂತಿರುಗಿ ಬಂದ ವಾಣಿಗೆ ಇಂದು ಹೇಳದೆ ಕೇಳದೆ ಊರು

ಬಿಟ್ಟು ಹೋದದ್ದು ಸಮಸ್ಯೆಯಾಗುತ್ತದೆ. ಅದರ ಗುಟ್ಟು ಅವಳ ರತ್ನನಿಗೆ ಗೊತ್ತಿರುತ್ತದೆ. ಆದರೆ ಆ ಗುಟ್ಟಿಗೆ ಕಾರಣನಾದ ರತ್ನ ಅದನ್ನು ಬಹಿರಂಗಪಡಿಸುವುದಿಲ್ಲ, ವಾಣಿಯ ಸಮಸ್ಯೆ ಬಗೆಹರಿಯುವುದೂ ಇಲ್ಲ. ಇಂತಹ ಸರಳ, ಸುಂದರ, ಅಷ್ಟೇ ಸಹಜ ಕಥಾರಚನೆ ಕನ್ನಡದ ಅತ್ಯುತ್ತಮ ಕಥೆಗಳ ಮಾಲಿಕೆಯಲ್ಲಿ ನಿಲ್ಲುತ್ತದೆ.

'ಸನ್ಯಾಸಿ ರತ್ನ' ಒಂದು ಪ್ರೇಮದ ಕಥೆ, ಪ್ರೇಮ ಫಲಿಸಿದ ಕಥೆ. ಆಜನ್ಮ ಬ್ರಹ್ಮಚಾರಿಯಾಗಿರುವುದಾಗಿ ಜಂಬ ಕೊಚ್ಚಿಕೊಳ್ಳು ತ್ತಿದ್ದ ರತ್ನ ವಾಣಿಯ ಕಂಠಶ್ರೀಗೆ ಮಾರುಹೋಗಿ ಅವಳನ್ನು ಮೋಹಿಸಿ ಮದುವೆಯಾದದ್ದು ಇಲ್ಲಿನ ಕಥಾವಸ್ತು. ಕಾಮ ಒಂದು ಅವ್ಯಕ್ತ ಅಪ್ರತಿಹತ ಶಕ್ತಿ ಎಂಬುದು ಇದರಿಂದ ವೇದ್ಯ.

ಕ್ಷೇಮ ಸಮಾಚಾರದ ಪತ್ರಗಳ ಮೂಲಕವೆ ಕಥೆ ಬೆಳಸುವುದು ಗೌರಮ್ಮನವರಿಗೆ ಒಲಿದ ಒಗ್ಗಿದ ತಂತ್ರ. ವಿರಹಿ ಯಕ್ಷನಿಗೆ ಮೇಘದೂತ ನೆರವಾದಂತೆ ಪ್ರೇಮಿಗಳಿಗೆ ಪತ್ರದೂತ ! ಅವರ ಮಾನಸಿಕ ಸಮಾಗಮದ ಸೇತುವಾಗುತ್ತಾನೆ. ಇದು ಈ ಸಂಕಲ ನದ 'ಒಂದು ಪುಟ್ಟ ಚಿತ್ರ', 'ನಾಲ್ಕು ಘಟನೆಗಳು', 'ಅಪರಾಧಿ ಯಾರು', ಸುಳ್ಳು ಸಲ್ಲಾಪ' ಕಥೆಗಳಲ್ಲೂ, 'ಚಿಗುರು' ಸಂಕಲನದ 'ಕೆಲವು ಕಾಗದಗಳು' ಎಂಬ ಕಥೆಯಲ್ಲೂ ಸ್ಪಷ್ಟ ಮೂಡಿದೆ. ಆದರೆ 'ಒಂದು ಪುಟ್ಟ ಚಿತ್ರ'ದ ಸಂದರ್ಭ ಬೇರೆ. ಬದುಕೆಂಬ ನಾಣ್ಯ ದ ಒಂದು ಮುಖ ಸುಖ, ಮತ್ತೊಂದು ದುಃಖ, ಆದರೆ ನನ್ನ ದರ್ಶನ 'ಒಂದು ಪುಟ್ಟ ಚಿತ್ರ' ಕಥೆಯಲ್ಲಾಗುತ್ತದೆ. ರಘು ಮತ್ತು ರಾಜ ಎಂಬ ಗೆಳೆಯರಿಬ್ಬರ ನಡುವೆ ನಡೆದ ಪತ್ರ ವ್ಯವಹಾರದಲ್ಲೇ ಕಥೆಯ ಎಳೆ ನೆಯ್ಯಲ್ಪಟ್ಟಿದೆ. ವಿವಾಹಕ್ಕೆ ಮುನ್ನವೇ ಗರ್ಭಿಣಿ ಯಾದ ಶಾಂತಿ ಕೆರೆಯಲ್ಲಿ ಬಿದ್ದು ಆತ್ಮಹತ್ಯೆ ಮಾಡಿಕೊಂಡ ದಾರುಣ ಚಿತ್ರ ಇಲ್ಲಿ ಒಡೆದು ಮೂಡುತ್ತದೆ. ಆ ಕಳ್ಳ ಬಸುರಿಗೆ ಕಾರಣರಾದವರು ರಘುವಿನೊಡನೆ ಪತ್ರ ವ್ಯವಹಾರ ನಡೆಸುತ್ತಲಿದ್ದ ರಾಜ ಎಂಬುದು ಅಂತ್ಯದಲ್ಲಿ ಓದುಗನ ಅರಿವಿಗೆ ಬರುತ್ತದೆ. ಇಂತಹ ಪತ್ರ ಕಥೆಯ ತಂತ್ರಸಿದ್ಧಿಗೆ ಗೌರಮ್ಮನವರ 'ಒಂದು ಪುಟ್ಟ ಚಿತ್ರ' ಒಂದು ಉತ್ತಮ ಉದಾಹರಣೆ 'ನಾಲ್ಕು ಘಟನೆಗಳು' ಕಥೆಯ ಮೊದಲ ಘಟನೆ ಸೀತೆಯಿಂದ ಕಾಗದ ಬರಲಿಲ್ಲ ಎಂಬ ವಿರಹ ವೇದನೆಯ ನಿವೇದನೆ. ಎರಡನೆಯ ಪತ್ರದ ಮೂಲಕ ಅಭಿವ್ಯಕ್ತವಾಗುವ ಎರಡನೇ ಘಟನೆ ತಿಮ್ಮ ತನ್ನ ಹೆಂಡತಿಯನ್ನು ನಡುಬೀದಿಗೆ ಎಳೆತಂದು ಹೊಡೆಯುತ್ತಿದ್ದವನು ಮಾರನೆಯ ದಿನ ಮನೆ ಮುಂದೆ ಬೇಲಿ ಹಾಕುತ್ತಿರುವ, ಅವನೊಡನೆ ಸರಸವಾಡುತ್ತಾ ಕಠ್ರಗಿದ್ದ, 'ಹೆತ್ತವಳಿಗೆ ಹೆಗ್ಣ ಮುದ್ದು' ಅನ್ನುವಂತೆ ತನ್ನ ಕಂದಮ್ಮನೊಡನೆ ವಿನೋದದೊಡನಿದ್ದ ತಿಮ್ಮನ ಸಂಸಾರ, ಕಳೆದಿರುಳಿನ ಘಟನೆಯಿಂದಾಗಿ ಪಾಶ್ಚಾತ್ಯ ದೇಶಗಳಾಗಿದ್ದಿದ್ದರೆ ಡೈವೋ ರ್ಸ್‌ನಲ್ಲಿ ಮುಕ್ತಾಯವಾಗುತ್ತಿತ್ತು. ಸಹನಾಮೂರ್ತಿ ಭಾವನೆಯ ಮಹಿಳೆ ವಿಷ ಉಂಡ ನಂಜುಂಡಳಾಗಿದ್ದಾಳೆ ಎಂಬ ಸಹಜ ದೃಶ್ಯ ಇಲ್ಲಿದೆ.

ಭಾರತೀಯ ಮಹಿಳೆಗೆ ಆರ್ಥಿಕ ಸ್ವಾವಲಂಬನೆ ಇಲ್ಲದಿದ್ದರೆ ಪರಿಣಾಮ ಮೂರನೆಯ ಘಟನೆ. ತನ್ನ ಕರುಳ ಕುಡಿಯನ್ನಪ್ಪಿ ಕೊಂಡು ಮುಸ್ಸಂಜೆಯಲ್ಲಿ ಗೋಲಿಡುತ್ತಿದ್ದ, ಅತ್ತೆಯಿಂದ ಹೊರದೂಡಲ್ಪಟ್ಟ ವಿಧವೆಯೋರ್ವಳ ಧಾರುಣ ಚಿತ್ರಣ. ಅರಿಯದೆ ಗಂಡ ಹಾರಿಸಿದ ಗುಂಡು ತಾಕಿ ಮಡಿದ ಹಸುಗೂಸಿನ ದುರಂತ ದೃಶ್ಯ ನಾಲ್ಕನೆಯ ಘಟನೆ. ಎಲ್ಲ ಘಟನೆಗಳೂ ರಾಮು ತನ್ನ ಸೀತೆಗೆ ಬರೆದ ಪತ್ರಗಳ ಮೂಲಕವೇ ಅಭಿವ್ಯಕ್ತ.

ಮತ್ತೊಂದು ಪತ್ರ ಕಥೆ 'ಅಪರಾಧಿ ಯಾರು ?', 'ನಮ್ಮವರ ಹೃದಯದಲ್ಲಿ ಜಾತಿಗಲ್ಲದೆ ದಯೆಗೆ ಎಡೆಯಿಲ್ಲ. ಅದೂ ಜಾತಿ ನಿಯಮಗಳು ಹೆಂಗಸರಿಗೆ ಮಾತ್ರ. ಗಂಡಸರು ಆ ನಿಯಮಕ್ಕೆ ಒಳಪಡಬೇಕಾಗಿಲ್ಲ. ಇದೇ ನೋಡು ನಮ್ಮ ಜಾತಿಯ ದೊಡ್ಡ ಕುರುಹು' ಎಂಬ ತತ್ವಾಧಾರಿತ ಕಥೆ ಇದು. ಇಲ್ಲಿ ಸಮಾಜ ಶೋಷಣೆಗೆ ಸಿಕ್ಕು ಪಾರ್ವತಿ ರಜಿಯಾ ಆಗುತ್ತಾಳೆ. ಅಂತಾ ಗಲು ಕಾರಣರು ಯಾರು ? ಅಪರಾಧಿ ಯಾರು ? ಹುಡುಕುವ ಕೆಲಸ ನಮ್ಮದು. ಸಮಾದಿಂದ ಪಾರ್ವತಿಗೆ ಬಹಿಸ್ಕಾರ ಕೊಡಿ ಸಿದ ಸಮಾಜ ಸುಧಾರಕನೆಂಬ ಸೋಗು ಹಾಕಿದ ನಾಗೇಶರಾಯನೇ ಅವಳ ಬಾಳ ಬದಲಾವಣೆಗೆ ಇಲ್ಲವೇ ದುರಂತಕ್ಕೆ ಕಾರಣ ವಾಗಿರುತ್ತಾನೆ. ಆದರೆ ಜನತೆಯ ಕಣ್ಣ ಮುಂದೆ ನಾಗೇಶರಾಯನಲ್ಲ ಅಪರಾಧಿ, ಪಾರ್ವತಿ. ಇಲ್ಲಿ ಗಮನಿಸಬೇಕಾದ ವಿಚಿತ್ರ ವಿಪ ರ್ಯಾಸವೆಂದರೆ ಪಾರ್ವತಿಯ ಹಾಗೆ ಹಿಂದೂ ಸ್ತ್ರೀ ಮುಸಲ್ಮಾನಳಾಗಿ ಮತಾಂತರಗೊಂಡಂತೆ ಮುಂದೆ ಅಂತಹ ಘಟನೆಗಳು ನಡೆಯದಿರುವಂತೆ ಎಚ್ಚರ ವಹಿಸಲು ಊರಿನ ಹಿಂದೂಗಳ ಸಭೆ ಶ್ರೀಮಾನ್ ನಾಗೇಶರಾಯರ ಅಧ್ಯಕ್ಷತೆಯಲ್ಲಿ ನಡೆದು ತೀರ್ಮಾನ ಸ್ವೀಕರಿಸಿದ್ದು. ಪಾರ್ವತಿಯನ್ನು ಕೆಡಸಿ, ಅವಳ ಕೈಗೊಂದು ಮಗು ದಯಪಾಲಿಸಿದ, ಅನಂತರ ಅವಳು ರಜಿಯಾ ಆಗಲು ಕಾರಣನಾದ ನಾಗೇಶರಾಯನಂಥ ಮಹಾನುಭಾವರು ಇಂದೂ ಇದ್ದಾರೆ ಎಂದೂ ಇರುವವರೇ ಎಂಬ ಆ ಸತ್ಯ ಸಂಗತಿ ನಮ್ಮನ್ನು ಚಿಮತೆಗೆ ಒಳಗುಮಾಡುತ್ತದೆ.

ಒಂದು ಹೆಣ್ಣಿಗೊಂದು ಗಂಡು ಹುಟ್ಟಿಯೇ ಇರುತ್ತೆ ಎಂಬ ನಂಬಿಕೆ ಬಾರತೀಯರದು. ಅದನ್ನು ಸಮರ್ಥಿಸುತ್ತದೆ 'ಅವಳ ಭಾಗ್ಯ'. ಪಾರು ಹುಟ್ಟು ಕುರೂಪಿಯಾದರೂ ಸುಂದರ ಪುರುಷನನ್ನೇ ಮದುವೆಯಾಗುತ್ತಾಳೆ. ಅದು 'ಅವಳ ಭಾಗ್ಯ'ದ ವಸ್ತು ನಿರೂಪಣೆ. ವಿನ್ಯಾಸಾದಿಗಳು ಸಾಧಾರಣ. ಆದರೆ 'ಕೌಸಲ್ಯಾನಂದನ' ಚಮತ್ಕಾರ ಸಣ್ಣಕತೆ. ಲಿನ್ನಿ ಉರುಫ್ ರಾಮುವನ್ನು ಮೆಚ್ಚಿದಳು ನಿಜ. ಆದರೆ ಐ.ಸಿ.ಎಸ್. ಪರೀಕ್ಷೆಗೆ ತೆಗೆದುಕೊಂಡಿದ್ದರೂ ಕುದುರೆಯಿಂದ ಬಿದ್ದು ಕಾಲು ಕಳೆದುಕೊಂಡಿದ್ದ ಅವನು ಐ.ಸಿ.ಎಸ್. ಅಧಿಕಾರಿಯಾಗದಿದ್ದರೂ 'ಕೌಸಲ್ಯಾನಂದನ' ಎಂಬ ಕಾವ್ಯ ನಾಮದ ಪ್ರಸಿದ್ಧ ಕತೆಗಾರನಾದ. ತನ್ನ ಸೋದರತ್ತೆಯ ಮಗನಾದ ಅವನನ್ನು ಮೊದಲಿನಿಂದಲೂ ಮನಸಾ ಮೆಚ್ಚಿದ್ದ ಲಿನ್ನಿ ಕಡೆಗೆ ಅವನ ಕೈ ಹಿಡಿಯುತ್ತಾಳೆ. ಕತೆಯಲ್ಲಿ ಒಪ್ಪ ಇದೆ, ಓರಣ ಇದೆ, ಕಡೆಯವರೆಗೂ ಓದುಗನ ಕುತೂಹಲವನ್ನು ಕೆಣಕುತ್ತಲೇ ಸಾಗುತ್ತದೆ. ಇಂಥದೇ ಪ್ರೇಮ ಫಲಿಸಿದ ಕಥೆ 'ಪ್ರಾಯಶ್ಚಿತ್ತ.'

'ಹೋಗಿಯೇ ಬಿಟ್ಟಿದ್ದ' ಮುದುಕನೊಬ್ಬನ ಆತ್ಮಕಥೆ. ರೈಲಿನಲ್ಲಿ ಅವನ ಕಥೆಯನ್ನು ಅವನೇ ಶ್ರೋತೃಗಳಿಬ್ಬರಿಗೆ ಹೇಳುತ್ತಾ, ಯುವಕನಾಗಿದ್ದಾಗ  ಮುಸಲ್ಮಾನರ ಹುಡುಗಿ ಲತೀಫಳನ್ನು ಪ್ರೇಮಿಸಿದ್ದು, ಅದಕ್ಕೆ ಸಮಾಜ ಅಡ್ಡಿ ಬಂದಾಗ ಅವಳು ಅವನ ತೋಳ್ತೆಕ್ಕೆಯಲ್ಲೇ ಸಾವಪ್ಪಲು ತಾನು ಬಾವಿಗೆ ಹಾರಿಕೊಂಡ. ಆದರೆ ಅವನು ಹುಚ್ಚನೆಂದು ನ್ಯಾಯಾಲಯ ಕರೆಯಿತು. ಮೂವತ್ತು ವರ್ಷ ಹುಚ್ಚಾಸ್ಪತ್ರೆಯಲ್ಲಿದ್ದು ಹೊರಬಂದ. ಹೊರಬಂದವನು ಹೊರಟೇಬಿಟ್ಟ ಎಂದು ಹೇಳುತ್ತಲೆ ಓಡುವ ರೈಲಿನ ಕಿಟಕಿಯಿಂದ ಹಾರಿಬಿದ್ದು ಸತ್ತ. ವಕ್ತೃ ರಚಿಸುವ ಆತ್ಮಕಥೆ ಮನೋಜ್ಞವಾಗಿದೆ.

ಉತ್ತಮ ಪುರುಷದಲ್ಲಿ ನಿರೂಪಿತವಾಗಿರುವ ಕಥೆ ಮನುವಿನ ರಾಣಿ 'ಓರ್ವ ಸೂಳೆ. ಹಣಕ್ಕಾಗಿ ಸೆರಗು ಹಾಸುವವಳು, ಮೈಮಾರಿಕೊಳ್ಳುವವಳು ನಿಜ. ಆದರೆ ಸೂಳೆಯಲ್ಲೂ ನೈಜ ಪ್ರೇಮ ಇರುತ್ತದೆ ಎಂಬುದಕ್ಕೆ 'ಮನುವಿನ ರಾಣಿ' ಈ ಕಥೆ ಸಾಕ್ಷಿ. ಶೂದ್ರಕ ಮಹಾಕವಿ ಸೂಳೆ ವಸಂತಸೇನೆಯನ್ನು ಚಾರುದತ್ತನಿಗೆ ಮದುವೆ ಮಾಡಿಸಿ ಗರತಿಯನ್ನಾಗಿಸಿದ. ಅದೇ ರೀತಿ ಗೌರಮ್ಮನವರು ಕಥಾನಾಯಕಿ ರಾಜಮ್ಮ ತಾಯಿಯಿಂದ ಬಳುವಳಿಯಾಗಿ ಬಂದ ಸೂಳೆತನ ಹೊತ್ತವಳು. ಆದರೆ ಮನುಷ್ಯತ್ವ ಮಾರಿಕೊಂಡವಳಲ್ಲ. ಮನಮೋಹನ ತಬ್ಬಲಿ, ಅನಾಥ, ಅವಳಿಗಾಗಿ ಸರ್ವಸ್ವವನ್ನೂ ಕೊಟ್ಟು ಭಿಕಾರಿಯಾದ. ಅವಳಿಲ್ಲದೆ ಹುಚ್ಚನಾದ. ಕಡೆಗೆ ರಾಜಮ್ಮ ತನ್ನ ತಾಯಿಯನ್ನು ತೊರೆದು ಹುಚ್ಚ ಮನುಷ್ಯನನ್ನೇ ಬೇರೆ ಊರಿಗೆ ಕೊಂಡೊಯ್ದು ಸಾಕಿದಳು. ಅವಳ ನಿಷ್ಕಲ್ಮಶ ಪ್ರೇಮ ಮೆಚ್ಚುವಂಥದು. ಅವನ ಸಾವು ಸಮೀಪಿಸಿದಾಗ ಸೂಳೆ ಸಾಯಲಿ ಎಂದು ಶಪಿಸುವವರೇ ! ಆದರೆ ವಕ್ತೃ ಡಾಕ್ಟರ್ ಹಾಗಲ್ಲ. ಮಾನವತೆಯನ್ನು ಬೆಳಗಿದವರು. ಸೂಳೆಯ ಮನೆಗೆ ಹೋಗಿ ರೋಗಿಯ ಚಿಕಿತ್ಸೆ ನಡೆಸಿದರು. ಫಲಿಸಲಿಲ್ಲ. ಆದರೆ ಸೂಳೆಯಾಗಿದ್ದರೂ ರಾಜಮ್ಮನಲ್ಲಿ ಮನುವಿನ ಬಗೆಗಿದ್ದ ಪ್ರೇಮ ಅಚಲ. ಇದರ ಪ್ರತಿಪಾದನೆ ತುಂಬಾ ಹೇದಯಂಗಮವಾಗಿದೆ. 'ಚಿಗುರಿನೊಳಗನ ಎಲ್ಲ ಕಥೆಯ ವಸ್ತು ಚಿರಂತನವಾದ ವಸ್ತು. ಅದು ಗಂಡು ಹೆಣ್ಣಿನೊಳಗಿನ ಪರಸ್ಪರ ಆಕರ್ಷಣ, ಒಲವು ದಾಂಪತ್ಯ, ಚಿರಂತವೋ ಸುಖಮುಕ್ತಿಯೋ ದೇವರೇ ಬಲ್ಲ. ವಾಲ್ಮೀಕಿ ಕವಿಯ ಕ್ರೌಂಚ ಮಿಥುನದಲ್ಲಿ ಕಂಡ, ರಾಮಾಯಣದ ತುಂಬೆಲ್ಲ ಮಿಡುಕಿ ಬರೆದ ಮೂಲ ವಸ್ತುವೆಂದರೆ ಸುಖ ದಾಂಪತ್ಯ – ದರ್ಶನ. ಅದರ ಆಗು–ಹೋಗು, ಅದರ ಸರಸ–ವಿರಸ, ಅದರ ವಿಧಿ–ವಿಲಾಸ ದೈವದುರ್ವಿಪಾಕ ತಂಗಿ ಗೌರಮ್ಮನವರ ಹೆಣ್ಣು ಹೃದಯ ಆ ವಸ್ತುವನ್ನೇ ಮುಗ್ಧ ಅಪೇಕ್ಷೆಯಿಂದ ಪ್ರೌಢ ವಿವೇಕದಿಂದ, ಸುಧಾರಕ ದೃಷ್ಟಿಯಿಂದ ಅವರಿಗೇ ಸಹಜವಾದ ಬೆಳಯಲಿರಿಸಿದ ಸಮತೂಕದಿಂದ, ನೀತಿಯ ಗರ್ಭದಲ್ಲಿಯೂ ರಸಪಾಕಗೊಳಿಸುವ ಜಾಣ್ಮೆಯಿಂದ ಈ ವಿಧದ ಕಥೆಗಳಲ್ಲಿ ವಿಸ್ತರಿಸಿದೆ.'*

ಇದು ಕೊಡಗಿನ ಗೌರಮ್ಮ ವಿರಚಿತ 'ಚಿಗುರು' ಕಥಾ ಸಂಕಲನ ಕುರಿತು ಮೆಚ್ಚುಗೆಯ ಮಾತು ಬೇಂದ್ರೆಯವರದು. ಇದರಲ್ಲಿನ ಕಥೆ ಧಾತು–ದ್ರವ್ಯಗಳೆರಡೂ ಪ್ರೇಮಕ್ಕೆ ಸಂಬಂಧಿಸಿದವುಗಳು ಎಂಬುದು ಅವರ ಮಾತಿನ ಅಂತರಾರ್ಥ. ಇದನ್ನು ಒಪ್ಪಬಹುದಾದರೂ ಈ ಸಂಕಲನದ ಒಂದೆರಡು ಕಥೆಗಳನ್ನು ಬಿಟ್ಟರೆ ಉಳಿದವುಗಳು ಹೇಳಿಕೊಳ್ಳುವಷ್ಟು ಸಿದ್ಧಿ ಪಡೆದವುಗಳಲ್ಲ. ಅದನ್ನು ಲೇಖಕಿ ಗೌರಮ್ಮನವರೇ ಒಂದೆಡೆ ಅಭಿಪ್ರಾಯಪಟ್ಟಿದ್ದಾರೆ. ತಮ್ಮ 'ಚಿಗುರು' ಕಥಾ ಸಂಕಲನದ 'ಪುನರ್ವಿವಾಹ ಎಂಬ ಕಥೆಗೆ ಅಡಿಟಿಪ್ಪಣಿಯಾಗಿ ಈ ಕೆಲವು ನುಡಿ ನುಡಿದಿದ್ದಾರೆ.

'ಇದು ೧೯೩೧ರಲ್ಲಿ ಬರೆದ ನನ್ನ ಮೊಟ್ಟ ಮೊದಲಿನ ಕತೆ. ಈ ಕತೆ ಬರೆಯಲು ಕಾರಣವಾದ – ಬಹುಶಃ ನನ್ನೆಲ್ಲ ಕತೆಗಳಿಗೂ ಮೂಲ ಕಾರಣವಾದ ಅದೊಂದು ಉಪಕತೆ ಇದೆ. ಅದನ್ನು ತಾವು ಕೇಳಿದರೆ ನಾನು ಕೇವಲ ವಿಧವೆಯರ ಕತೆಗಳಲೇ ಹೆಚ್ಚಿನ ಪಕ್ಷಪಾತಿ ಏಕೆಂದು ತಮಗೆ ತಿಳಿಯಬಹುದು. ಆಗ ನನಗಿದು ಬಹಳ ಸೊಗಸಾಗಿದೆ ಎಂಬ ಭಾವನೆಯಿತ್ತು. ಈಗ

ಓದಿದರೆ ಆಗಿನ ಭಾವನೆಗಳನ್ನೆಲ್ಲಾ ನೆನಸಿಕೊಂಡು ನಗು ಬರುತ್ತೆ. ಆದರೂ ಮೊಟ್ಟ ಮೊದಲಿನ ಪ್ರಯತ್ನ ನೋಡಿ, ಅದರಿಂದ ಸ್ವಲ್ಪ ಮಮತೆ.

೧೪.೩.೧೯೩೮ **ಗೌರಮ್ಮ**

ಪುರುಷ ಪ್ರಧಾನ ಸಮಾಜದಲ್ಲಿ ಸ್ತ್ರೀ ಶೋಷಣೆ ಹಲವು ಮುಖಗಳಲ್ಲಾಗಿದೆ. ಅಗುತ್ತಿದೆ ಎಂಬುದಕ್ಕೆ ಪುನರ್ವಿವಾಹ ಕಥೆ ಯಲ್ಲಿ ಒಳ್ಳೆಯ ಆಹಾರ ಸಿಗುತ್ತದೆ. ಕತಾನಾಯಕ ವಿಧುರ ; ಕೇವಲ ಅರವತ್ತೈದೇ ವರ್ಷ ವಯಸ್ಸು. ಅವನಿಗೆ ಪುಟ್ಟ ಮಗಳು ಬೇರೆ ಇದ್ದಾಳೆ. ಆದರೆ ಪಕ್ಕದ ಮನೆಯ ವಿಧವೆ ರಾಜಿಯನ್ನು ಮದುವೆಯಾಗುವುದು ಅವನ ಸಂಪ್ರದಾಯದ ಪ್ರಕಾರ ಅವನ ಪ್ರಕಾರ ಮೈಲಿಗೆ. ಇದನ್ನರಿತ ರಾಜಿ ಸ್ವಾರ್ಥಿ ಪುರುಷ ವರ್ಗವನ್ನೇ ಧಿಕ್ಕರಿಸುತ್ತಾಳೆ. ಕಡೆಗೆ 'ಅಣ್ಣಾ' ಎಂದು ಸಂಬೋಧಿಸಿ ಸಮಜ ಸೇವೆಗೆ ನಾಯಕನನ್ನು ತೊಡಗುವಂತೆಸಗುತ್ತಾಳೆ.

ಈ ಸಂಕಲನದಲ್ಲಿ ಎಲ್ಲ ಕಥೆಗಳೂ ಆ ಮಟ್ಟದವೇ. ಕಥಾವಸ್ತುವಿನ ಪ್ರತಿಪಾದನೆ, ವಿನ್ಯಾಸ, ಸೌಷ್ಠವ, ಪಾತ್ರ ಪೋಷಣೆ ಮೊದಲಾದ ದೃಷ್ಟಿಯಿಂದ ಗೌರಮ್ಮನವರ ಕೈ ಕುದುರುವುದನ್ನು ಸ್ಪಷ್ಟವಾಗಿ ಗುರುತಿಸಬಹುದು. ಇದು ಆರಂಭದ ದಿನಗಳ ಅವಸ್ಥೆ ಎಂದು ಹೇಳಬಹುದು. ಅರ್ಥವಿಲ್ಲದ ಆದರ್ಶ, ನೀತಿ ಬೋಧನೆಗಳಿಗೆ ತೊಡಗಿ ಅಪಕ್ವ ರಚನೆಗಳೆನಿಸಿಕೊಳ್ಳುತ್ತವೆ. 'ಪುನ ರ್ವಿವಾಹ' ಇಲ್ಲಿ ವಿಧವೆಯರ ಬಗೆಗಿನ ಸಾನುಕ್ರೋಶತ್ವ ತೋರಿದರೆ, ಅದೃಷ್ಟದ ಆಟದಲ್ಲಿ ಅಸಜಹತೆ ಎದ್ದು ಕಾಣೂತ್ತದೆ. ಆದರೆ 'ನನ್ನ ಮದುವೆ'ಯ ಅಂತ್ಯ, ಪಾಪನ ಮದುವೆಯ ಅಂತ್ಯಗಳು ತುಂಬಾ ಅನಿರೀಕ್ಷಿತ ಹಾಗೂ ಆಶ್ಚರ್ಯಕರ ರೀತಿಯಲ್ಲಿ

---

*ದ.ರಾ. ಬೇಂದ್ರೆ 'ಕಂಬನಿ'ಗೆ ಬರೆದ ಮುನ್ನುಡಿ ಪು.೩

ರಚಿತವಾಗಿವೆ.

ಇಂತಹ ವಿಸ್ಮಯಾಂತ್ಯ ಸಣ್ಣಕತೆಯ ತಂತ್ರಗಳ್ಲಿ ಒಂದು. ಇದು ಚೆನ್ನಾಗಿ ಸಿದ್ಧಿಸಿದೆ. ಮುರಿದ ಬೊಂಬೆ ಕತೆಯ ಕುಚೇಷ್ಟೆ ಉಪಾಧ್ಯಾಯ ಕೃಷ್ಣಮೂರ್ತಿ ಮತ್ತು ಸೀತೆಯರ ಲಗ್ನದಲ್ಲಿ ಮುಕ್ತಾಯಗೊಂಡಿತು ಎಂಬುದು ಮನೋಜ್ಞವಾಗಿದೆ. ಆದರೆ 'ಮುನ್ನಾದಿನ' ಅಪೂರ್ಣವೆನಿಸಿದರೂ ಇದ್ದಷ್ಟು ಮಟ್ಟಿಗೆ ಸಣ್ಣ ಕತೆಯ ಎಲ್ಲ ಲಕ್ಷಣಗಳ ಪರಿಪೂರ್ಣತೆಯನ್ನು ಸಾಧಿಸಿದೆ. ತಂದೆ ಸತ್ತ ಮೇಲೆ ತಾಯಿ ಬೇರೆಯವರನ್ನು ಮದುವೆಯಾಗಿ ಹೆತ್ತ ಮಗನನ್ನೇ ಬಿಸುಟಾಗ, ಅನಾಥ ಬಾಲಕ ಕಾಡ ಅನ್ನಕ್ಕಾಗಿ ಜಾತಿ ಕೆಟ್ಟು ಕ್ರಿಶ್ಚಿಯನ್ ಆಗ್ತಾನೆ. ಅನಂತರ ಹೆಣ್ಣಿಗಾಗಿ ಮುಸಲ್ಮಾನನಾಗುತ್ತಾನೆ. ಅವನಿಗೆ ಜಾತಿ ಎಂದರೇನೆಂದು ಗೊತ್ತಿಲ್ಲ. ಸುಖವಾಗಿ ಸೌಹಾರ್ದದಿಂದ ಕೂಡಿ ಬಾಳುವುದು ಮುಖ್ಯ. ಅಂತಹ ಸರಳ ಸುಂದರ ಕನಸು ನನಸಾಗಿಸಿಕೊಂಡ ಕಾಡನ ಬದುಕು ಕಟ್ಟುಕತೆ ಯಲ್ಲ. ವಾಸ್ತವ ಜೀವಂತ ಚಿತ್ರಣ. ಪರಿಸರದ ಸತ್ಯಸ್ಯ ಸತ್ಯ ವಸ್ತುವನ್ನು ಕತೆಯಾಗಿಸುವ ಜಾಣೆ,. ಕಲಾಭಿಜ್ಞತೆ ಗೌರಮ್ಮನ 'ವರಿಗಿದೆ. ಅಷ್ಟೇ ಪ್ರಮಾಣದಲ್ಲಿ ಅವರು ತಮ್ಮ ಕ್ರಾಂತಿಕಾರಕ ಮನೋಧರ್ಮವನ್ನು ಮೆರೆದಿದ್ದಾರೆ.

ಈ ಕತೆಗೆ 'ಮುನ್ನಾದಿನ' ಎಂಬ ಹೆಸರಿಟ್ಟವರು ಗೌರಮ್ಮನವರಲ್ಲ ; ಅವರ ಪತಿ ಬಿ.ಟಿ. ಗೋಪಾಲಕೃಷ್ಣಯ್ಯನವರು. ಏಕೆಂ ದರೆ – 'ಇದು ಗೌರಮ್ಮ ಹೊಳೆಯಲ್ಲಿ ಈಸ ಹೋಗಿ ತಮ್ಮ ಇಹ ಯಾತ್ರೆ ಕೊನೆಗಾಣಿಸಿದ ಮುನ್ನಾದಿನ ಬರೆದಿದ್ದ ಕಥಾ ಭಾಗ. ಕಾಡ ನಮ್ಮ ಮೆಸ್ತ್ರೀ. ಈಗಲೂ ಮೇಸ್ತ್ರೀಯಾಗಿ ಇದ್ದಾನೆ ನಮ್ಮಲ್ಲಿ. ಅವನ ಜೀವನದಲ್ಲಿ ಇದು ದ್ವಿತೀಯಾಂಕ ಮಾತ್ರ ಈ ಕಥೆ ಇಷ್ಟಕ್ಕೆ ನಿಂತಿತು. ಗೌರಮ್ಮನ ಕಥೆಯೂ ಅಷ್ಟೆ. ಇಷ್ಟರಲ್ಲಿ ಕಾಡ ಕಲ್ಪನೆಯ ವ್ಯಕ್ತಿ ಅಲ್ಲ. ಅವನ ಜೀವನ ಘಟನೆ ಕಟ್ಟಕಡೆಯಲ್ಲ ಎಂಬುದರ ಜೊತೆಗೆ ಪತ್ನಿ ಗೌರಮ್ಮನವರ ಬಗೆಗಿನ ಗೋಪಾಲಕೃಷ್ಣಯ್ಯನವರ ಕಣ್ಣೀರು ಬೆರೆತಿರುವುದು ವೇದ್ಯವಾಗುತ್ತದೆ.

**ಮೂರು**

ಕೊಡಗಿನ ಗೌರಮ್ಮನವರು ಕನ್ನಡ ನವೋದಯದಯ ಕಾಲದಲ್ಲಿ ಕನ್ನಡಿಗರಲ್ಲಿ ಉಉ ಭರವಸೆ ಮೂಡಿಸಿದ ಶ್ರೇಷ್ಠ ಕತೆ ಗಾರ್ತಿ. ಅವರ ಕಥೇಗಳಲ್ಲಿ ವಿಶೇಷವಾಗಿ ಪ್ರೇಮ–ಪ್ರಣಯ, ಸರಸ–ವಿರಸ, ದಾಂಪತ್ಯ ಜೀವನದ ಒಳವು – ಹೊಳವುಗಳು ಮನೋಜ್ಞವಾಗಿ ಮೂಡಿಬಂದಿವೆ. ಕೌಟುಂಬಿಕ ಜೀವನ ಚಿತ್ರಣವನ್ನು ಬಿಡಿಸುವುದರಲ್ಲಿ ಗೌರಮ್ಮನವರು ಅದ್ವಿತೀಯರು. ಹೆಚ್ಚಿನ ಬಗೆಗಿನ ಸಹಜವಾದ ಪಕ್ಷಪಾತ ಇದೆ. ಆದ್ದರಿಂದಲೇ ಅಲ್ಲಲ್ಲಿ 'ಕಾರಣವಿರಲಿ ಇಲ್ಲದಿರಲಿ ನಮ್ಮ ಸಮಾಜದಲ್ಲಿ ಪತಿಯಿಂದ ತಿರ ಸ್ಕೃತೆಯಾದ ಪತ್ನಿ ಎಂದರೆ ಎಲ್ಲರಿಗೂ ಸಂಶಯ' ಎನ್ನುತ್ತಾರೆ. ಅವರ ಮಾತಿನೊಳಗಣ ನೋವು ಎಂಥವರ ಕರುಳನ್ನೂ ಹಿಂ ಡುತ್ತವೆ. ಅಂತೆಯೇ ಪುರುಷನಿಗೆ ಸ್ತ್ರೀ ನೆರವು ಪ್ರೋತ್ಸಾಹಗಳಿರಬೇಕು ಎಂಬ ಅಭಿಪ್ರಾಯಕ್ಕೆ ಒತು ಕೊಡುತ್ತಾರೆ. ಪ್ರತಿಯೊಬ್ಬ ಪುರುಷನ ಪ್ರಗತಿಯ ಹಿಂದೆ ಮಹಿಳೆಯೊಬ್ಬಳಿದ್ದಾಳೆ ' ಎಂಬ ಗಾದೆಯನ್ನು ಒಪ್ಪಿ, ಕೆಲವು ಸ್ತ್ರೀ ವಿರೋಧಿ ಬರೆಹಗಳನ್ನು

'ಲತ್ತೆಯ ಪೆಟ್ಟುಗಳನ್ನು ಸಹಿಸಬಹುದು, ಲೇಖನಿಯ ಬರೆಹಗಳನ್ನು ಸಹಿಸುವುದು ಕಷ್ಟ' ಎಂದು ನೊಂದು ನುಡಿದಿದ್ದಾರೆ. ತಮ್ಮ ಬರೆಹಗಳಲ್ಲಿ ಅಲ್ಲಲ್ಲಿ ಇಂದಿನ ಈ ಪುರುಷ ಪ್ರಧಾನ ಸಮಾಜ ವ್ಯವಸ್ಥೆಗೆ ವ್ಯವಸ್ಥೆ ನೀಡಿದ್ದಾರೆ ಕೂಡ.

•

# ತ್ರಿವೇಣಿ

---

'ತ್ರಿವೇಣಿ ' ಎಂಬ ಕಾವ್ಯನಾಮದಿಂದ ಪ್ರಸಿದ್ಧರಾಗಿರುವ ಶ್ರೀಮತಿ ಅನುಸೂಯ ಹುಟ್ಟಿದ್ದು ಮೈಸೂರಿನಲ್ಲಿ, ಅವರ ಅಜ್ಜಿಯ ಮನೆಯಲ್ಲಿ, ೧ ಸೆಪ್ಟೆಂಬರ್ ೧೯೨೮ರಲ್ಲಿ. ತಂದೆ ಬಿ. ಎಂ. ಕೃಷ್ಣಸ್ವಾಮಿ, ತಾಯಿ ತಂಗಮ್ಮ. ಒಬ್ಬ ಅಕ್ಕ, ಒಬ್ಬ ತಂಗಿ, ನಾಲ್ವರು ತಮ್ಮಂದಿರು. ತುಂಬಿದ ಮನೆಯ ಮಂದಾರವಾಗಿ ಬೆಳೆದರು ಅನುಸೂಯ.

ಇವರದು ಒಂದು ಶುದ್ದ ಸಾರಸ್ವತ ಮನೆತನ. ಜನ್ಮಕೊಟ್ಟ ತಂದೆ ಶ್ರೀ ಬಿ.ಎಂ. ಕೃಷ್ಣಸ್ವಾಮಿಯವರು ಕನ್ನಡದ ಕಣ್ವ ಆಚಾರ್ಯ ಬಿ. ಎಂ. ಶ್ರೀಯವರ ಸೋದರರು. ತಾಯಿ ಕನ್ನಡ ವಿಖ್ಯಾತ ಲೇಖಕಿ ವಾಣಿ (ಶ್ರೀಮತಿ ಸುಬ್ಬಮ್ಮ)ಯವರ ಸಹೋದರಿ ; ತಂಗಿ ಪ್ರಸಿದ್ಧ ಕಾದಂಬರಿಕಾರ್ತಿ ಆರ್ಯಾಂಬಾ ಪಟ್ಟಾಭಿ. ಇಂತಹ ಸಾಹಿತ್ಯೋಪಾಸಕರ ಪರಿಸರದಲ್ಲಿ ಅನು ಸೂಯ ಹುಟ್ಟಿ ಬೆಳೆದವರು. ಪರಿಸರದ ಜೊತೆಗೆ ವಾಸನಾರೂಪವಾಗಿ ಬಂದ ಪ್ರತಿಭಾ ಪರಂಪರೆ ಅವರನ್ನು ಕೃತಿರಚನೆಗೆ ಪ್ರಚೋದಿಸಿತು. ಮತುಯ ಬಾಲ್ಯದಿಂದಲೂ ಓದುವ ಬರೆಯುವ ಹವ್ಯಾಸವಿದ್ದುದರಿಂದ ಸಿದ್ಧಿಗೆ ಅದು ಅವರ ಕಾರಣವಾಯಿತು, ಪ್ರಖ್ಯಾತ ಲೇಖಕಿಯಾದರು.

ಬಾಲಕಿ ಅನುಸೂಯ ತುಂಬಾ ಸ್ಫುರದ್ರೂಪಿ ಹುಡುಗಿ. ವಿಶಾಲವಾದ ಹಣೆ, ನೀಳವಾದ ಕೇಶರಾಶಿ, ಸಂಪಗೆಯಂತಹ ಸೊಂಪಾದ ಮೂಗು, ಮೃದುವಾದ ಮುದ್ದುಗಲ್ಲ. ತುಂಬಿಕೊಂಡ ಕೆನ್ನೆ, ಅಂದದ ತುಟಿ, ಅರಳಿದ ಮುಖ, ಮುಖಕ್ಕೊಪ್ಪುವ ಓಂ ಕಾರದಾಕಾರದ ಕಿವಿಗಳು – ಓಹ್ ! ಈ ಪುಟ್ಟ ಬಾಲಕಿಯ ಚೆಲುವು ವರ್ಣನಾತೀತ. ಈ ಹೊಂಬಣ್ಣದ ಮೈಯ ಹುಡುಗಿ ಕಂಡವರನ್ನೆಲ್ಲಾ ಆಕರ್ಷಿಸುತ್ತಿದ್ದಳು. ಇಷ್ಟೆಲ್ಲಾ ಚೆಲುವು ತುಂಬಿದ್ದ ಬ್ರಹ್ಮ ಅನುಸೂಯಳಲ್ಲಿ ಒಂದು ಕೊರತೆಯನ್ನೂ ಬಚ್ಚಿಟ್ಟಿದ್ದ. ಅದೇ ಆಸ್ತಮಾ ರೋಗ. ಈ ಮುದ್ದಾದ ಮಗುವಿಗೆ ಅದು ಹೇಗೋ ಅಂಟಿಕೊಂಡು ಅವಳ ಬದುಕಿನ್ನುದ್ದಕ್ಕೂ ಕಾಡಿತು, ಕಡೆಗೊಂದು ದಿನ ಕೊಂಡೊಯ್ದಿತು ಕೂಡ.

ಶಾಪರೂಪದ ಆಸ್ತಮಾ ಒಂದರ್ಥದಲ್ಲಿ ವರವೇ ಆಯಿತು ಅನುಸೂಯಳಿಗೆ. ಯಾರೊಡನೆಯೂ ಹೆಚ್ಚು ಕಾಲಹರಣ ಮಾಡಲು ಇಚ್ಚಿಸದ ಈಕೆ ಪುಸ್ತಕಗಳ ಒಡನಾಡಿಯಾದಳು. ಬಿಡುವು ಸಿಕ್ಕಾಗಲೆಲ್ಲಾ ಪುಸ್ತಕಗಳನ್ನು ಓದುವ ಹವ್ಯಾಸ ಬೆಳಸಿ ಕೊಂಡಳು. ಮಂಡ್ಯದಲ್ಲಿ ತನ್ನ ಪ್ರೌಢಶಾಲಾ ಶಿಕ್ಷಣ ಮುಗಿಯುವಷ್ಟರಲ್ಲಿ ಸಾಕಷ್ಟು ಶ್ರೇಷ್ಠ ಕೃತಿಗಳನ್ನು ಓದಿ ಮುಗಿಸಿದ್ದಳು. ಪದವಿ ಶಿಕ್ಷಣಕಾಗಿ ಮೈಸೂರು ಸೇರಿ, ಅಲ್ಲಿ ಮಹಾರಾಣಿ ಕಾಲೇಜಿನಲ್ಲಿ ಮನಶಾಸ್ತ್ರವನ್ನು ಒಂದು ಐಚ್ಛಿಕ ವಿಷಯವಾಗಿ ತೆಗೆದುಕೊಂ ಡಳು. ೧೯೪೭ರಲ್ಲಿ ಉತ್ತಮ ವರ್ಗದಲ್ಲಿ ತೇರ್ಗಡೆಯಾಗಿ, ಡಿಗ್ರಿ ಪಡೆದು, ಹಲವು ಪಾರಿತೋಷಕಗಳ ಪುರಸ್ಕೃತೆ ಕೂಡ ಆದಳು.

ಕಾಲೇಜು ಪರೀಕ್ಷೆಯಲ್ಲಿ ಉತ್ತೀರ್ಣಳಾದಂತೆ ಜೀವನ ಪರೀಕ್ಷೆಯಲ್ಲೂ ಅನುಸೂಯ ಯಶಸ್ವಿಯಾದಳು. ಮೈಸೂರಿನಲ್ಲಿ, ಅಜ್ಜಿಯ ಮನೆಯಲ್ಲಿ ಕಾಲೇಜು ಶಿಕ್ಷಣವನ್ನು ಮುಂದುವರಿಸುತ್ತಿದ್ದಾಗ ಪ್ರೌಢಶಾಲಾ ಶಿಕ್ಷಕ ಶ್ರೀ ಎಸ್. ಎನ್. ಶಂಕರ್ ಅವರ ಪರಿಚಯ ಈಕೆಗಾಯಿತು. ಪರಿಚಯ ಪ್ರೇಮವಾಗಿ ಮಾರ್ಪಟ್ಟು ಅದು ವಿವಾಹದಲ್ಲಿ ಮುಕ್ತಾಯಗೊಂಡಿತು. ಈಕೆಯ ಕೈ ಹಿಡಿದಿ ದ್ದರ ಪುಣ್ಯ ವಿಶೇಷವೊ ಏನೋ ಶಂಕರ್ ನಗಪುರ ವಿಶ್ವವಿದ್ಯಾಲಯದಿಂದ ಎಂ.ಎ. ಪದವಿ ಪಡೆದು ಮೈಸೂರಿನ ಶಾರದಾ ವಿಲಾಸ ಕಾಲೇಜಿನಲ್ಲಿ ಪ್ರಧಾದ್ಯಾಪಕರಾದರು.

ಅನಸೂಯ ಮತ್ತು ಶಂಕರ್‌ರವರ ದಾಂಪತ್ಯ ಜೀವನ ಹಾಲು ಜೇನಿನಂತಿತ್ತು. ಅವರದು ಅನುರೂಪ ಹಾಗೂ ಅಪ ರೂಪ ದಾಂಪತ್ಯ ; ಆದರ್ಶ ದಾಂಪತ್ಯವೂ ಹೌದು. ಇಬ್ಬರೂ ಸಮಾನ ಮನಸ್ಕರಾಗಿದ್ದರು. 'ಬೆಚ್ಚನೆಯ ಮನೆ, ವೆಚ್ಚಕ್ಕೆ ಹೊನ್ನು,

ಇಚ್ಛೆಯನರಿತು ನಡೆವ ಸತಿ' ಹೀಗಿದ್ದಲ್ಲಿ 'ಸ್ವರ್ಗಕ್ಕೆ ಕಿಚ್ಚು ಹಚ್ಚಬಹುದಲ್ಲವೆ'! ಸರ್ವಜ್ಞನ ಕಡೆಯ ನುಡಿಯನ್ನು ಬದಲಿಸಿ ಹೇಳುವುದಾದರೆ 'ಇಚ್ಛೆಯನರಿತುನಡೆವ ಪತಿ' ಎಂದು ತಿದ್ದುಪಡಿ ಮಾಡಿಕೊಳ್ಳಬಹುದು. ಅದೇ ರೀತಿ, ಪ್ರತಿಯೊಬ್ಬ ಪ್ರಸಿದ್ಧ ಪುರುಷನ ಯಶಸ್ಸಿನ ಹಿನ್ನಲೆಯಲ್ಲಿ ಓರ್ವ ಮಹಿಳೆ ಇರುತ್ತಾಳೆ ಎಂಬುದು ಇಂಗ್ಲಿಷ್ ಗಾದೆ ಮಾತು. ಇದಕ್ಕೂ ಒಂದು ತಿದ್ದುಪಡಿ ತಂದು 'ಪ್ರತಿಯೊಬ್ಬ ಪ್ರಕೃತ ಮಹಿಲೆಯ ಯಶಸ್ಸಿನ ಹಿನ್ನಲೆಯಲ್ಲಿ ಓರ್ವ ಪುರುಷನಿದ್ದಾನೆ' ಎನ್ನಬಹುದು. ಪ್ರಕೃತದಲ್ಲಿ ಆ ಪುರುಷ ಶ್ರೀ ಶಂಕರ್. ಶಂಕರ್ ನಿಜಕ್ಕೂ ಉದಾತ್ತಗುಣಗಳ ಗಣಿ' ಸಹೃದಯ, ಸಾತ್ವಿಕ, ಸುಸಂಸ್ಕೃತ ವ್ಯಕ್ತಿ. ಆದ್ದರಿಂದಲೇ ತಮ್ಮ ಪತ್ನಿಯ ಮನೋಧರ್ಮವನ್ನು ಅರ್ಥ ಮಾಡಿಕೊಂಡು, ಅವರ ಪ್ರತಿಭೆಯ ಪ್ರದರ್ಶನಕ್ಕೆ ಸೂಕ್ತ ವೇದಿಕೆಯನ್ನು ನಿರ್ಮಿಸಿಕೊಡುತ್ತಿದ್ದರು. ಇಂಗ್ಲಿಷ್, ಕನ್ನಡ, ಹಿಂದಿ ಮೊದಲಾದ ಅನೇಕ ಭಾಷೆಗಳ ಉದ್ದಾಮ ಕೃತಿಗಳನ್ನು ಕೊಂಡು ತಂದು ತಮ್ಮ ಪ್ರೀತಿಯ ಪತ್ನಿಗೆ ಕೊಡುತ್ತಿದ್ದರು. ಶ್ರೀಮತಿಯವರ ಕತೆ ಕಾದಂಬರಿಗಲಿಗೆ ನೂತನ ವಸ್ತು ಮತ್ತು ಶೀರ್ಷಿಕೆಗಳನ್ನು ಕೊಡುತ್ತಿದ್ದರು. ಅಷ್ಟೇ ಅಲ್ಲ ಕೆಲವು ಕಥಾಭಿತ್ತಿಯನ್ನೂ ಸುಕ್ತ ತಡಿಕೆಯನ್ನೂ ಒದಗಿಸುತ್ತಿದ್ದುದೂ ಉಂಟು. ಅವರ ಬರೆಹದ ಬಗೆಗೆ ತಾವೇ ಮೊದಲ ಶ್ರೋತೃವೂ ವಿಮರ್ಶಕರೂ ಆಗಿರುತ್ತಿದ್ದರು. ಇಂತಹ ಅವಿಚ್ಛಿನ್ನ ಸಹೃದಯಿ ಅಧಿಕಾರೀವಿಮರ್ಶಕನ ಪ್ರೋತ್ಸಹದಿಂದಲೇ ಅನುಸೂಯ ತ್ರಿವೇಣಿಯಾದಳೆಂದರೆ ಆಶ್ಚರ್ಯಪಡಬೇಕಾಗಿಲ್ಲ.

ತ್ರಿವೇಣಿತ್ವ ಪ್ರಾಪ್ತಿಗೆ ಒದಗಿಬಂದ ಒಂದು ಸಂದರ್ಭವನ್ನು ಇಲ್ಲಿಯೇ ಹೇಳುವುದು ಸೂಕ್ತ. ಅನುಸೂಯ ಪದವೀಧರೆಯಾಗಿ ಮೈಸೂರಿನ ಅಜ್ಜಿ ಮನೆಯಿಂದ ಮಂಡ್ಯಕ್ಕೆ ತನ್ನ ತಂದೆ ಮನೆಗೆ ಹಿಂದಿರುಗಿದ ಮೇಲೆ ಹಿಂದಿ ಕಲಿತರು, ಒಂದು ಕಾಲೇಜಿನಲ್ಲಿ ಶಿಕ್ಷಕಿಯೂ ಆದರು. ಅವರ ಮನೆಯ ಸಮೀಪದಲ್ಲಿ ಕನ್ನಡದ ಖ್ಯಾತ ಲೇಖಕಿ ಶ್ರೀಮತಿ ಎಂ.ಕೆ. ಇಂದಿರಾರವರು ಇದ್ದರು. ಇಬ್ಬರಿಗೂ ಪರಸ್ಪರ ಪರಿಚಯವಾಯಿತು. ಉಭಯತ್ರರೂ ಬರೆಯುವ ಹವ್ಯಾಸಿಗಳಾದ್ದರಿಂದ ಒಬ್ಬರಿಗೊಬ್ಬರು ವಿಮರ್ಶಕರಾಗಿ, ವಿಚಾರಪರರಾಗಿ ಬೆಳೆದರು. ಒಂದು ದಿನ ಮಂಡ್ಯದ ಮಹಿಳಾ ಸಮಾಜದಲ್ಲಿ ಸದಸ್ಯೆಯ ಜೊತೆಯಲ್ಲಿ ಹರಟೆ ಹೊಡೆಯುತ್ತಾ ಕುಳಿತಿದ್ದಾಗ ಎಲ್ಲರ ಕಣ್ಣುಗಳೂ ಅನುಸೂಯಳ ಮುಡಿಯ ಕಡೆ ಹರಿದವು. ಅವಳ ನೀಳವಾದ, ಕಪ್ಪಾದ, ಹಿಮ್ಮಡಿವರೆಗೂ ಇಳಿಬಿದ್ದ ಸೋರ್ಮುಡಿ, 'ಆ ಮಹೀಶಕ್ರತುವರದೊಳುದ್ದಾಮಮುನಿಜನ ಸಹಿತ ಮಂತ್ರಸ್ತೋಮ ಪೂತ ಪುಷ್ಕರ ಜಲಾಭಿಷೇಚನದ ಶ್ರೀಮುಡಿಯೇ' ಆಗಿತ್ತು ! ಕರೀ ರೇಷ್ಮೆಯಂತೆ ಬಹು ಸುಂದರವಾದ ಆ ಕೇಶರಾಶಿ ನೋಡಿ ಓರ್ವ ಗೆಳತಿ ಹೇಳಿದಳು, 'ಅನುಸೂಯ, ನಿಮ್ಮಂತಹ ದಟ್ಟ ಹಾಗೂಉದ್ದದ ಕೂದಲು ನನಗಿದ್ದಿದ್ದರೆ 'ದ್ವಿವೇಣಿ' ಆಗಿಬಿಡುತ್ತಿದ್ದೆ' ಎಂದು. ಆ ಮಾತು ಕೇಳಿಸಿಕೊಂಡ ಎಂ.ಕೆ. ಇಂದಿರಾರವರು ಕೂಡಲೇ, 'ಎರಡೇಕೆ ? ಮೂರು ಜಡೆ ಹಾಕಿಕೊಂಡು ತ್ರಿವೇಣಿ ಆಗಲಿ ಬಿಡಿ ಎಂದರಂತೆ. ಯಾವುದೇ ಪೂರ್ವಾಲೋಚನೆ ಇಲ್ಲದೆ ಇದ್ದಕ್ಕಿದ್ದಂತೆ ಇಂದಿರಮ್ಮನ ನಾಲಿಗೆಯಿಂದ ಚಿಮ್ಮಿ ಬಂದ 'ತ್ರಿವೇಣಿ' ಶಬ್ದ ಅನುಸೂಯಾರವರನ್ನು ಚಕಿತಗೊಳಿಸಿತು. ಮೂಕವಿಸ್ಮಿತರಾಗಿ, ಭಾವಪರವಶರಾಗಿ ಸ್ವಲ್ಪ ಹೊತ್ತು ಕುಳಿತಿದ್ದು ಅಂದರಂತೆ– ಇಂದಿರಮ್ಮ ಎಷ್ಟು ಚೆನ್ನಾದ ಹೆಸರನ್ನು ಸೂಚಿಸಿದಿರಿ ನೀವು, ನನಗೆ 'ತ್ರಿವೇಣಿ' ಎಂದು ಕರೆಸಿಕೊಳ್ಳಲು ತುಂಬಾ ಇಷ್ಟಾಪ್ಪ' ಎಂದು ಅಂದಿನಿಂದ ಅನುಸೂಯ 'ತ್ರಿವೇಣಿ' ಆದರು. ಅಕ್ಕಿ ಬೆಲ್ಲ ಖರ್ಚು ಮಾಡದೆ ಎಂ.ಕೆ. ಇಂದಿರಾ 'ತ್ರಿವೇಣಿ' ಎಂದು ನಾಮಕರಣ ಮಾಡಿದರು.

ತ್ರಿವೇಣಿತನ ಪಡೆದ ಕೆಲವೇ ದಿನಗಳಲ್ಲಿ ಅನುಸೂಯ ತಮ್ಮ ಶಿಕ್ಷಕ ವೃತ್ತಿಗೆ ಶರಣು ಹೊಡೆದು ಕಥಾ ರಚನೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡರು.

ವ್ಯಕ್ತಿ ಎಷ್ಟೇ ದೊಡ್ಡವನಿರಲಿ, ಅವನಲ್ಲಿ ಮನುಜ ಸಹಜ ಬಯಕೆಗಳಿದ್ದೇ ಇರುತ್ತವೆ. ತ್ರಿವೇಣಿಯವರೂ ಈ ಹೇಳಿಕೆಗೆ ಹೊರತಲ್ಲ. ಅವರನ್ನು ಸದಾ ಕಾಡುತ್ತಿದ್ದ ಒಂದೇ ಒಂದು ಬಯಕೆ ತಾನು ತಾಯಿಯೆನಿಸಿಕೊಳ್ಳಬೇಕು ಎಂಬುದು. ಬಹಳ ದಿನಗಳನಂತರ ಅದು ಈಡೇರುವ ಕುರುಹು ತೋರಿತು.  ಆದರೆ ನಾವು ಅಂದುಕೊಳ್ಳುವುದೇ ಒಂದು, ಅದಾಗುವುದೇ ಒಂದು. ತ್ರಿವೇಣಿಯವರ ಚೊಚ್ಚಲ ಮೈಯಿಳಿಯುವ ಮೂಲಕ ಮಗುವಾಗಿ ಮೂಡಲೇ ಇಲ್ಲ. ಮರುಚಲು ಹುಟ್ಟಿತು ಜೀವ ತುಂಬಿ ಅಲ್ಲ, ಗರ್ಭದಲ್ಲೇ ಸತ್ತು. ಈ ಬಗೆಯ ನಿರಾಶೆಯ ನೆರಳು ತ್ರಿವೇಣಿಯವರ ಮನಸ್ಸಿನ ಮೇಲೆ ಸುಳಿದಾಡುತ್ತಿದ್ದರೂ ಆಸೆಯ ಮೊಳಕೆ ಮುರುಟಿರಲಿಲ್ಲ. ಬಂತು ಮೂರನೆಯ ಬಸುರು ; ಶಸ್ತ್ರಕ್ರಿಯೆ ನಡೆಸಿದ ಮೇಲೆ ಹೆಣ್ಣೊಂದಕ್ಕೆ ಜನ್ಮ ಕೊಟ್ಟರು ತ್ರಿವೇಣಿ. ಸ್ಫಟಿಕದ ಪುತ್ಥಳಿಯಂತಿದ್ದ ಆ ಕಂದಮ್ಮನೊಡನೆ ಅನಂತರದ ದಿನಗಳನ್ನು ಹರ್ಷದಿಂದ ಕಳೆಯುವ ಭಾಗ್ಯ ತ್ರಿವೇಣಿಯವರಿಗಿರಲಿಲ್ಲ. ಮಗಳು ಹುಟ್ಟಿದ್ದು ೧೯ ಜುಲೈ ೧೯೬೩. ಹತ್ತು ದಿನಗಳು ತಾಯಿ ಮಗು ಆಸ್ಪತ್ರೆಯಲ್ಲಿ ಇದ್ದರು. ಶುಭದಿನವೊಂದರಲ್ಲಿ ತಾವಿ

ಬ್ಬರೂ ಮನೆಗೆ ಬರಲು, ಮನೆ ತುಂಬಿ ಕೇಕೆ ಹರಿಸಲು ಹಂಬಲ. ಅದಕ್ಕಾಗಿ ಅದೇ ತಿಂಗಳ ೩೦ನೆಯ ತಾರೀಖು ಗೊತ್ತಾಯಿತು ಆದರೆ ಅದರ ಹಿಂದಿನ ದಿನವೇ ಅಂದರೆ ೨೯ ಜುಲೈ ೧೯೬೩ರ ಬೆಳಗ್ಗೆ ತಾವು ಕುಳಿತದ್ದ ಕುರ್ಚಿಯಲ್ಲೇ ಅಸು ನೀಗಿದ್ದರು. ಹೃದಯಾಘಾತದಿಂದ ಅವರ ಆತ್ಮಪಕ್ಷಿ ಹಾರಿಹೋಗಿತ್ತು. ಕೇವಲ ಮೂವತ್ತೈದು ತುಂಬದ ಅಲ್ಪಾಯುಷಿ ತ್ರಿವೇಣಿ ಇಲ್ಲವಾದರು. ಭೌತಿಕವಾಗಿ ಇಲ್ಲವಾದರೂ ಮಾನಸಿಕವಾಗಿ ಎಲ್ಲ ಕನ್ನಡಿಗರ ಅಚ್ಚುಮೆಚ್ಚಿನ ಸಾಹಿತಿಯಾಗಿ ಶಾಶ್ವತವಾಗಿ ಉಳಿದರು.

ತ್ರಿವೇಣಿಯವರು ಸಾಹಿತ್ಯ ಕ್ಷೇತ್ರದಲ್ಲಿ ತಮ್ಮನ್ನು ಗುರುತಿಸಿಕೊಂಡಿದ್ದು ಕತೆಗಾರರಾಗಿ, ಕಾದಂಬರಿಕಾರರಾಗಿ. ಅದರಿಂದಾಗಿ ಅವರು ಕಾವ್ಯ, ನಾಟಕ, ವಿಮರ್ಶೆ ಮೊದಲಾದ ಯಾವ ಕ್ಷೇತ್ರಗಳಿಗೂ ಕಾಲಿಡಲಿಲ್ಲ. ಸಂಶೋಧನೆಯಂತೂ ಅವರ ಕಾರ್ಯಕ್ಷೇತ್ರದಿಂದ ಬು ದೂರವೇ ಉಳಿಯಿತು. ಅವರಿಗೆ ನೃತ್ಯದಲ್ಲದ್ದಷ್ಟು ಅಭಿರುಚಿ ಅಭಿನಯದಲ್ಲಿರಲಿಲ್ಲ. ಸುಗಮ ಸಂಗೀತದಲ್ಲಿದ್ದ ಆಸಕ್ತಿ ಶಾಸ್ತ್ರೀಯ ಸಂಗೀತದಲ್ಲಿರಲಿಲ್ಲ. ಹಾಡುಗಾರ್ತಿ 'ಆ. . .! ಎಂದು ಆಲಾಪನೆ ಆರಂಭಿಸಿದರೆ ತ್ರಿವೇಣಿ ನಿದ್ದೆಹೋಗಿಬಿಡುತ್ತಿದ್ದರು. ಸುಗಮ ಸಂಗೀತ ಮಾಧ್ಯಮದಲ್ಲಿ ಕನ್ನಡದ ಭಾವಗೀತೆಗಳನ್ನು ಆಲಿಸುವುದರಲ್ಲಿ ಅವರಿಗೆ ಎಲ್ಲಿಲ್ಲದ ಆನಂದ. ಅಷ್ಟೇ ಹರ್ಷ ಮೀರಾಭಜನ್ ಕೇಳುವುದರಲ್ಲಿ (ಗಿರಿಧರ ಗೋಪಾಲನನ್ನು ಮೆಚ್ಚಿದ ಮೀರಾಳ ನಗೆಗೆ ಅವರಿಗಿದ್ದ ಅಭಿಮಾನವೇ ಬಹುಶಃ ಅವರು ಬಿಟ್ಟುಹೋದ ತಮ್ಮ ಏಕಮಾತ್ರ ಪುತ್ರಿಗೆ 'ಮೀರಾ' ಎಂದು ನಾಮಕರಣ ಮಾಡಿದ್ದರೆಂದು ತೋರುತ್ತದೆ). ಅವರ ವಿಶೇಷ ಒಲವು, ವಿಶ್ವಾ ಸಾಹಿತ್ಯ ರಚನೆಯಲ್ಲಿ. ಇಷ್ಟಿದ್ದರೂ ಅವರೇಕೆ ಕವಿಯಿತ್ರಿ ಆಗಲಿಲ್ಲ ಅನ್ನುವುದಕ್ಕೆ ಅವರೇಕೆ ಕತೆಗಾರರಾದರು ಎಂಬುವುದೇ ಉತ್ತರ. ಕತೆಗಾರಿಕೆ ಅವರಿಗೆ ಒಲಿದುಬಂದ ಕಲೆ. ವಸ್ತುವಿನ ಆಯ್ಕೆಯಲ್ಲಿ, ಕಥಾ ಸಂವಿಧಾನದಲ್ಲಿ, ಪಾತ್ರ ಪೋಷಣೆಯಲ್ಲಿ, ಸಂಭಾಷಣೆಯ ಸೌಷ್ಠವದಲ್ಲಿ ತ್ರಿವೇಣಿಯವರು ತಮ್ಮದೇ ಆದ ಛಾಪು ಮೂಡಿಸಿದ್ದಾರೆ. ಅದರಲ್ಲೂ ಅವರು ದುಡಿಸಿಕೊಂಡ ಮನೋವಿಜ್ಞಾನ ಅವರ ಕಥಾಸಿದ್ಧಿಗೆ ಮತ್ತು ಜನಪ್ರಿಯತೆಗೆ ಸಾಕ್ಷಿಯಾಗಿದೆ. ಒಂದು ಮಾತಿನಲ್ಲಿ ಹೇಳುವುದಾದರೆ ಮನಃಶಾಸ್ತ್ರದ ಆಧಾರದ ಮೇಲೆ ಕತೆ ಕಾದಂಬರಿ ಬರೆದ ಮಹಿಳೆಯರಲ್ಲಿ ಇವರೇ ಮೊದಲಿಗರು. ತಮ್ಮ ಪದವಿ ತರಗತಿಯಲ್ಲಿ ಮನಃಶಾಸ್ತ್ರವನ್ನು ಒಂದು ಐಚ್ಛಿಕ ವಿಷಯವಾಗಿ ತೆಗೆದುಕೊಂಡದ್ದು ತ್ರಿವೇಣಿಯವರಿಗೆ ಈಗ ಗಾನ ಕಥಾರಚನೆಗೆ ನೆರವಾಯಿತು. ತ್ರಿವೇಣಿ ಕಲೆಯಲ್ಲಿ ವಿಜ್ಞಾನವನ್ನು ಬೆಸೆದರು.

ಇಲ್ಲಿ ಕಲೆ ಮತ್ತು ವಿಜ್ಞಾನಗಳ ಸಹಯೋಗ ಕುರಿತಂತೆ ತುಸು ವಿವರಣೆ ಕೊಡುವ ಅಗತ್ಯ ಇದೆ. ಕಲೆ ಮತ್ತು ಶಾಸ್ತ್ರ ಭಿನ್ನ ಜೀವಿಗಳಲ್ಲ ; ಒಂದು ಮತ್ತೊಂದಕ್ಕೆ ಪೂರಕ, ಪೋಷಕ. ಉದಾಹರಣೆಗೆ ಛಂದಸ್ಸು ಮತ್ತು ಕಾವ್ಯ. ಇವುಗಳಿಗಿರುವ ಸಂಬಂಧವನ್ನು ಹೆಸರಿಸಬಹುದು. ಸ್ಪಷ್ಟ ಹೇಳುವುದಾದರೆ ಛಂದಸ್ಸಿಗಾಗಿಯೇ ಕಾವ್ಯ ಅಲ್ಲ. ಆದರೆ ಛಂದಸ್ಸಿಲ್ಲದೇ ಕಾವ್ಯ ಇಲ್ಲ. (ನವ್ಯ ನವ್ಯೋತ್ತರಗಳಲ್ಲೂ ಛಂದಸ್ಸಿದೆ. ಅದು ಅಭಿಜಾತ ಅಥವಾ ರಮ್ಯಗಳಲ್ಲಿರುವಂತಹ ನಿಯತ ಛಂದಸ್ಸಿಲ್ಲದಿರಬಹುದು. ಅನಿಯತವಾದ ಕಾವ್ಯದ ನಡಿಗೆ ಇದ್ದೇ ಇದೆ. ಆ ನಡಿಗೆಯೇ ಛಂದಸ್ಸು). ಅದೇ ರೀತಿ ಉದ್ದೇಶವಿಲ್ಲದ ಕತೆ ಇಲ್ಲ, ಎಲ್ಲ ಕತೆಗಳಲ್ಲೂ ತಮ್ಮದೇ ಆದ ಒಂದೊಂದು ಉದ್ದೇಶ ಇದ್ದೇ ಇರುತ್ತದೆ. ಅಂತಹ ಉದ್ದೇಶಗಳು ಹಲವು. ಸಮಾಜದ ಬಹುಮುಖಗಳ ನಗ್ನ ಚಿತ್ರಣ ಇರಬಹುದು. ವ್ಯಕ್ತಿಗತವಾದ ಚಿತ್ರ ವ್ಯಾಪಾರವಿರಬಹುದು. ಈ ಚಿತ್ತವೃತ್ತಿ ವಿಶೇಷವನ್ನೇ ಮನೋವಿಜ್ಞಾನ ಗುರುತಿಸಿ ವಿಶ್ಲೇಷಿಸಿದೆ. ಈ ವಿಶ್ಲೇಷಣೆ ಕಥನ ಕಲೆಗೆ ಪೂರಕವಾಗಬಹುದು. ವಿಜ್ಞಾನ ಮತ್ತು ಕಲೆ ಮೇಳವಿಸಿದರೆ ಕತೆಯ ಕಾಂತಿ ಹೆಚ್ಚುತ್ತದೆ. ಆದರೆ ಮನೋವಿಜ್ಞಾನದ ಸೂತ್ರಕ್ಕೂ ಕಥನ ಕಲೆಯ ಸೂತ್ರಕ್ಕೂ ಕಸಿಕಟ್ಟುವ ಜಾಣ್ಮೆ ಕತೆಗಾರನಿಗಿರಬೇಕು. ಅದು ತ್ರಿವೇಣಿಯಲ್ಲಿ ಸಿದ್ಧಿಸಿದೆ ಎಂಬುದೇ ಅವರ ಕತೆ ಕಾದಂಬರಿಗಳ ಯಶಸ್ಸಿನ ಗುಟ್ಟು ಎಂದು ಹೇಳಬಹುದು. ಪ್ರಯೋಗಾರ್ಥವಾಗಿ ಅವರ 'ಸಮಸ್ಯೆಯ ಮಗು' ಎಂಬ ಕತೆಯನ್ನು ತೆಗೆದುಕೊಳ್ಳಬಹುದು.

'ಸಮಸ್ಯೆಯ ಮಗು' ಅದೇ ಹೆಸರಿನ ಕಥಾ ಸಂಕಲನದ ಒಂದು ಕಥೆ.

ಗೋಪಾಲರಾಯ ಮತ್ತು ಜಾನಕಮ್ಮನವರು ತಮ್ಮ ವಿವಾಹದ ಬಹಳ ವರ್ಷಗಳ ಮೇಲೆ ಹುಟ್ಟಿದ ಮಗು ನಾಗೇಂದ್ರನನ್ನು ಸಿಕ್ಕಾಪಟ್ಟೆ ಮುದ್ದಿನಿಂದ ಬೆಳಸುತ್ತಾರೆ. ಆದರೆ ನಾಲ್ಕೈದು ವರ್ಷಗಳಲ್ಲಿ ಮತ್ತೊಂದು ಗಂಡು ಮಗು ಹುಟ್ಟುತ್ತೆ. ಸಹಜವಾಗಿ ತಂದೆ ತಾಯಿಗಳಿಗೆ ಮೊದಲ ಮಗನ ಮೇಲೆ ಪ್ರೀತಿ ಕಡಿಮೆಯಾಗುತ್ತೆ. ಪ್ರೀತಿ ಪಾಲುಗಾರ ಬಂದ ಎನ್ನುವ ಭಾವನೆ ಮೂಡಿ ನಾಗೇಂದ್ರ ತನ್ನ ತಮ್ಮನನ್ನು ಬಡಿಯುವುದು, ತಂದೆ ತಾಯಿಯರ ಗಮನ ಸೆಳೆಯಲು ತನ್ನನ್ನು ತಾನು ದಂಡಿಸಿಕೊಳ್ಳುವುದು ಇಂತಹ ಹಲಬಗೆಯ ವಿಚಿತ್ರ ವರ್ತನೆಯ ಅಮಸ್ಯೆಯ ಮಗು ಆಗುತ್ತಾನೆ. ಒಂದು ದಿನ ದಾರಿಯಲ್ಲಿ ಸಿಕ್ಕಿದ ಓರ್ವ ಮನೋವಿಜ್ಞಾನಿ, ಹುಡುಗನನ್ನು ಮನೆಗೆ ಕರೆತಂದು, ಗೋಪಾಲರಾಯ ಮತ್ತು ಜಾನಕಮ್ಮನವರಿಗೆ ಹುಡುಗನ ಮನಸ್ಸನ್ನು ವಿವರಿಸಿ ಹೇಳಿ

ಮುಂದೆ ಪ್ರೀತಿಯಲ್ಲಿ ತಾರತಮ್ಯ ತೋರದಂತೆ ನಡೆದುಕೊಳ್ಳಲು ಹೇಳುತ್ತಾರೆ. ಅದರಂತೆ ಆಚರಣೆ ನಡೆದು ನಾಗೇಂದ್ರ ಉತ್ತಮ ಹುಡುಗನಾಗುತ್ತಾನೆ.

ಇಲ್ಲಿ ಮಕ್ಕಳ ಮನಸ್ಸನ್ನು ಅರ್ಥಮಾಡಿಕೊಂಡು ಅದಕ್ಕನುಗುಣವಾಗಿ ಹಿರಿಯರು ನಡೆದುಕೊಳ್ಳಬೇಕು. ಮಗು ಸದಾ ಪ್ರೀತಿ ವಾತ್ಸಲ್ಯದ ವಕ್ಷದಲ್ಲೇ ಬೆಳೆಯಬೇಕು. ಅದರಲ್ಲಿ ತುಸು ವ್ಯತ್ಯಾಸವಾಯಿತೆಂದರೆ ಮಗುವಿನ ಮನಸ್ಸಿನ ಮೇಲೆ ತುಂಬಾ ಕೆಟ್ಟ ಪರಿಣಾಮ ಬೀರುತ್ತದೆ. ಅದು ಹಟ, ತುಡುಗು ರೂಪದಲ್ಲಿ ಅದನ್ನು ಅಭಿವ್ಯಕ್ತಿಸುತ್ತಾ ಹೋಗುತ್ತದೆ. ಓದು ಓದು ಎಂದು ಮಕ್ಕಳನ್ನು ಹೊಡೆಯುವುದು, ಬಡಿಯುವುದು, ಹೆದರಿಸುವುದು, ಸಲ್ಲದ ಆಸೆ ಹುಟ್ಟಿಸುವುದು – ಇವೆಲ್ಲ ದುಷ್ಪರಿಣಾಮದ ಹೇತುಗಳು. ಇವುಗಳ ಪಾಲಿಕೆಯಲ್ಲಿ ಅತೀ ಪ್ರೀತಿ, ಅಷೇ ತಿರಸ್ಕಾರ ಇವೂ ಕಾರಣವಾಗುತ್ತವೆ. ಇವುಗಳ ಇತಿ ಮಿತಿಯಿಂದ ಮಕ್ಕಳ ಮನಸ್ಸು ವಿಕಾಸಗೊಳ್ಳುತ್ತದೆ ಸದ್ಭಾವನೆಗಳನ್ನು ಮೂಡಿಸಿಕೊಳ್ಳುತ್ತದೆ ಎಂಬ ಅಂಶವನ್ನು ಗರ್ಭೀಕರಿಸಿಕೊಂಡ ಮನೋವಿಜ್ಞಾನದ ವಿಕಾಸ ರೂಪವೇ ಸಮಸ್ಯೆಯ ಮಗು. ಕಥಾ ನಿರುಪಣೆ ಚೆನ್ನಾಗಿದೆ. ಔಚಿತ್ಯವರಿತ ಸಂಭಾಷಣೆ, ಸುಭಗ ಶೈಲಿ, ಮನೋಜ್ಞ ಸನ್ನಿವೇಶ ಸೃಷ್ಟಿ, ಮಗುವಿನ ಮನೋವಲಯದಲ್ಲಿ ತೆರೆದುಕೊಳ್ಳುವ ಭಾವಗಳ ಪದರು – ಎಲ್ಲವೂ ಚೆನ್ನ. ಸಣ್ಣ ಕತೆಯ ಸಕಲ ಲಕ್ಷಣಗಳನ್ನೂ ಒಳಗೊಂಡ ಅಚ್ಚುಕಟ್ಟಿನ ಶಿಲ್ಪ ಈ ಸಮಸ್ಯೆಯ ಮಗು. ಅಂತೆಯೇ ಮನೋವಿಜ್ಞಾನದ ಸೂಕ್ಷ್ಮ ಎಳೆ ಎಳೆಯಷ್ಟೂ ಎಡಬಿಡದೆ ಹೊಂದಿಕೊಂಡಿರುವುದು ಕತೆಗಾರ್ತಿಯ ಸಿದ್ಧಹಸ್ತ ಸೂಚಕ.

ಮಗುವಿನ ಮನಸ್ಸನ್ನು ಅನಾವರಣಗೊಳ್ಳುವ ಮತ್ತೊಂದು ಚಿತ್ರಣ 'ಎಂಟು ಗಂಟೆ'. ಬಾಲ್ಯದಲ್ಲಿ ಸದಾ ಅಜ್ಜಿಯ ಜೊತೆಯಲ್ಲೇ ಮಲುಗುತ್ತಿದ್ದ ರೋಹಿಣಿ ತನ್ನ ಮಗ್ಗುಲಲ್ಲೇ ಅಜ್ಜ ಸತ್ತದ್ದನ್ನು ಕಂಡಿದ್ದಳು.

ಇಂಥದೇ ಮನೋವಿಜ್ಞಾನವನ್ನಾಧರಿಸಿದ ಸಣ್ಣ ಕತೆಗಳು ಇನ್ನೂ ಹತ್ತಾರಿವೆ. ಮನೋವಿಜ್ಞಾನ ಇವುಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ಸುಳಿದಾಡಿದ್ದರೂ ನಮಸ್ಯೆಉ ಮಗುವಿನಷ್ಟು ಗಂಭೀರವಾಗಿಲ್ಲ. ವಿಜ್ಞಾನ ಒಪ್ಪಬಹುದು. ಕಲಾತ್ಮಕತೆಯ ದೃಷ್ಟಿಯಿಂದ ಸಮರ್ಥಿಸಿಕೊಳ್ಳುವದು ಕಷ್ಟವಾಗುತ್ತದೆ. 'ಹೆಂಡತಿಯ ಹೆಸರು' ಕತೆಯಲ್ಲಿ ಪ್ರೇಮಿಸಿದವಳು ಕೈಕೊಟ್ಟಿದ್ದರಿಂದ ತನ್ನನ್ನು ಒಪ್ಪಿ ಮದುವೆಯಾದವಳ ಹೆಸರೇ ಮರೆತುಹೋಗುವುದೆ ! ಇದನ್ನು ಮನೋವಿಜ್ಞಾನ ಸಮರ್ಥಿಸಿಕೊಳ್ಳಬಹುದು. ಆದರೆ ಲೋಕಧರ್ಮ ನಂಬುವುದಿಲ್ಲ.

ಅಭಾವ ವೈರಾಗ್ಯ, ಶ್ಮಶಾನ ವೈರಾಗ್ಯಗಳಂತೆ ಪ್ರಸವ ವೈರಾಗ್ಯವೂ ಒಂದಿದೆ. ಹೆರಿಗೆಯ ಬೇನೆ ತಡೆಯಲಾರದೆ ಹೆಣ್ಣು ಜನ್ಮ ಜನ್ಮಾಂತರಕ್ಕೂ ಗಂಡನ ಕೂಟ ಬೇಡ, ಈ ಬಸುರು ಬೇಡ, ಹಡೆಯುವಾಗಿನ ಈ ಸಾವು ಸಂಕಟ ತನ್ನ ಶತ್ರುಗಳಿಗೂ ಬೇಡ ಅನ್ನಿಸುತ್ತೆ ಕಥಾನಾಯಕಿ ಕಾಮಾಕ್ಷಿಗೆ. ಆದರೆ ತಾನು ಹೆತ್ತ ಮಗು ಸತ್ತಿರುವುದೆಂದು ತಿಳಿದ ಮರುಗಳಿಗೆಯಲ್ಲೇ ಆ ಹೆಣ್ಣು ಹೃದಯ ಬಯಸುತ್ತೆ ನೋವೇನಾದರೇನು ? ಎಷ್ಟಿದ್ದರೇನು ತಾನು ಮಗುವೊಂದರ ತಾಯಿ ಆಗಬೇಕು ಎಂದು. ಇಲ್ಲಿನ ಸಹಜತೆ ಓದುಗನ ಮೆಚ್ಚುಗೆ ಪಡೆಯುತ್ತದೆ. ಪ್ರಸವ ವೇದನೆಯನ್ನು ತಾನು ಹೆಣ್ಣಾಗಿ, ಸತ್ತ ಮಗುವನ್ನು ಪಡೆದ ಅನುಭವವುಳ್ಳ ತ್ರಿವೇಣಿಯವರ 'ಅತಿಥಿ ಬರಲಿಲ್ಲ' ತುಂಬಾ ಅನುಭವಜನ್ಯವೂ, ಭಾವಪೂರ್ಣವೂ ಆಗಿದೆ.

ಹೆರಿಗೆಗೆ ಸಂಬಂಧಿಸಿದ, ಮತ್ತೊಂದು ಮನೋವೈಜ್ಞಾನಿಕ ಕಥೆ 'ಸಲಹೆ'. ತನ್ನ ಅಕ್ಕ ಹೆರಿಗೆಯ ವೇಳೆಯಲ್ಲಿ ಸತ್ತದ್ದನ್ನು ಕಂಡ, ಮತ್ತೆ ಬೇರೆ ಮೂಲಗಳಿಂದ ಓದಿ ತಿಳಿದಿದ್ದ ರೇವತಿ ತಾನು ಗರ್ಭಿಣಿಯಾದ ಕೂಡಲೇ ಮನೋರೋಗಕ್ಕೆ ಒಳಗಾಗುತ್ತಾಳೆ ತಾನೂ ಸಾಯುವುದು ನಿಶ್ಚಯ ಎಂದು. ಇದನ್ನರಿತ ಅವಳ ಗಂಡ ಶ್ರೀಧರ ಪತ್ರಿಕೆಯೊಂದರಲ್ಲಿ ಧಾರಾವಾಹಿಯಾಗಿ ಬರುತ್ತಿದ್ದ ಅಂತಹ ಕತೆಯನ್ನು ಸುಖಾಂತಗೊಳಿಸುವಂತೆ ಮಡಿ ಹೆಂಡತಿಯ ಆರೋಗ್ಯ ಕಾಪಾಡುತ್ತಾನೆ. ಹುಳುವಿನಂತೆ ಕೊರೆಯುತ್ತಿದ್ದ ಚಿಂತೆಗೆ ಮಾನಸಿಕ ಪರಿಹಾರವನ್ನು ಒಂದು ಕಲಾಕೃತಿ ನೀಡುವಲ್ಲಿ ಯಶಸ್ವಿಯಾಗಿದೆ. ಅಂತೆಯೇ ಇಲ್ಲಿ ಕಲೆ ಮತ್ತು ವಿಜ್ಞಾನಗಳ ಸಂಲಗ್ನವನ್ನು ಗುರುತಿಸಬಹುದು.

ಜೀವನದಲ್ಲಿ ಎಲ್ಲವೂ ಇದ್ದರೂ ಏನೂ ಇಲ್ಲ ಎಂದು ಗೊಣಗುವ ಅತೃಪ್ತ ಜೀವಿಗಳಿದ್ದಾರೆ. ಅಂಥಹವರಲ್ಲಿ 'ಕೊನೆಯ ದಿನ'ದ ಕಥಾನಾಯಕಿ. ಕಾಣುವ ಕಣ್ಣುಗಳು ಹಲವು ವೇಳೆ ಸಂದೇಹದ ಕಣ್ಣುಗಳು. ಆದರೆ ಸಹಜವಾದ ಒಳಗಣ್ಣು ತೆರೆದಿರುತ್ತದೆ. ಅದು ಅರಿವಿನ ಕಣ್ಣು. ಈ ಅರಿವಿನ ಕಣ್ಣು ಮೂಡಿ ಅನಂತನು ತನ್ನ ಹೆಂಡತಿಯ ಬಗೆಗೆ ಕಲ್ಪಿಸಿಕೊಂಡಿದ್ದ ಸಂದೇಹ ಮಾಯವಾಗುತ್ತದೆ 'ಮೂರನೆಯ ಕಣ್ಣು' ಕಥೆಯಲ್ಲಿ.

ಇಂತಹ ಮನೋವಿಜ್ಞಾನಾಧಾರಿತ ಸಣ್ಣಕತೆಗಳು ಹಲವಿವೆ ತ್ರಿವೇಣಿಯವರ ಕಥಾಕೋಶಿಯಲ್ಲಿ. ಅವುಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ವಿಶ್ಲೇಷಿಸಲಾಯಿತು.

ಈಗ ತ್ರಿವೇಣಿಯವರ ಕಾದಂಬರಿಗಳಲ್ಲಿ ಇಂತಹ ಮನೋವಿಜ್ಞಾನಕ್ಕೆ ಸಂಬಂಧಿಸಿದ ಒಂದೆರಡನ್ನು ನೋಡಬಹುದು.

ತಬ್ಬಲಿ ಕುಸುಮ ಮಲತಾಯಿಯ ಕಿರುಕುಳದಲ್ಲಿ ಬೆಳೆಯುತ್ತಾಳೆ. ಅವಳ ಉಡುಗೆ ತೊಡುಗೆ ಮೊದಲಾದವುಗಳಲ್ಲಿ ಬೆಕ್ಕಿನ ಕಣ್ಣು ಬಣ್ಣ ಗುರುತಿಸಿ ಆ ಬಣ್ಣ ಎಲ್ಲಿ ಕಾಣಲಿ ಅಲ್ಲಿ ಕಿಡಿಕಾರುತ್ತಾಳೆ. ತಾನೇ ಸಾಕುತ್ತಿದ್ದ 'ಪಾಲಿ' ಎಂಬ ಬೆಕ್ಕನ್ನೇ ಬಡಿದು ಬಡಿದು ಗೋಳುಹೊಯ್ದುಕೊಳ್ಳುತ್ತಾಳೆ. ಅದೇ ಮನೋರೋಗದಿಂದಾಗಿ ಹುಚ್ಚಾಸ್ಪತ್ರೆ ಸೇರಿ, ಮರಳಿ ಮನೆಗೆ ಬಂದಾಗ, ಅಲ್ಲಿನ ಪ್ರೀತಿಯ ವಾತಾವರಣದಿಂದಾಗಿ ಮತ್ತೆ ಮನುಷ್ಯಳಾಗುತ್ತಾಳೆ. ಇದರಷ್ಟೇ ಅಥವಾ ಇದಕ್ಕಿಂತಲೂ ಹೆಚ್ಚು ಜನಪ್ರಿಯತೆ ಪಡೆದ 'ಶರಪಂಜರ' ಒಂದು ಅತ್ಯುತ್ತಮ ಮನೋವಿಜ್ಞಾನಾಧಾರಿತ ಕಾದಂಬರಿ. ಇದೊಂದು ದುರಂತ ವಸ್ತುವಿನ್ಯಾಸವುಳ್ಳ ಕಥೆಯೂ ಹೌದು. ಕಥಾನಾಯಕಿ ಕಾವೇರಿ ತಾಗ್ಯೆದ ಅಲ್ಪಾಪರಾಧದಿಂದಾಗಿ ಮನೋರೋಗಕ್ಕೆ ತುತ್ತಾಗುತ್ತಾಳೆ. ಹುಚಾಸ್ಪತ್ರೆ ಸೇರುತ್ತಾಳೆ. ಗುಣಮುಖಳಾಗಿ ಮನೆಗೆ ಅಲ್ಲಿಂದ ಬಂದಮೇಲೆ ಮನೆಯವರ ನಡೆ ನುಡಿಗಳಲ್ಲಿ ಬದಲಾವಣೆ ಆದಂತಾಗಿ ಮತ್ತೆ ಹುಚ್ಚಿಯಾಗಿ ಆಸ್ಪತ್ರೆ ಸೇರುತ್ತಾಳೆ. ಅಲ್ಲಿಂದ ಮನೆಗೆ ಹಿಂದಿರುಗಲೇ ಇಲ್ಲ.

ಈ ಕಥೆಯಲ್ಲಿನ ಮಾನಸಿಕ ವಿಶ್ಲೇಷಣೆ ತುಂಬು ವೈಜ್ಞಾನಿಕ ಮತ್ತು ಮನೋಜ್ಞ, ಇತ್ತ ನಿರೂಪಣೆಯಲ್ಲಿ ಲೇಖಕಿಯ ಪರಿಣತಿ ಇದೆ. ಮನಸ್ಸು ತಳೆವ ವಿಚಿತ್ರ ವರ್ಣಪೂರ್ಣ ವಿನ್ಯಾಸಗಳು ಕತೆಗಾರ್ತಿಯ ಕಥನಕಲೆಯ ಯಶಸ್ಸಿಗೆ ಕಾರಣವಾಗಿವೆ.

ಹೀಗೆ ದೂರದ ಬೆಟ್ಟ, ಮುಚ್ಚಿದ ಬಾಗಿಲು ಮೊದಲಾದ ಕಾದಂಬರಿಗಳಲ್ಲಿ ಮನೋ ವಿಶ್ಲೇಷಣ ಕಾರ್ಯ ಸಮರ್ಪಕವಾಗಿ ನಡೆದಿದೆ.

ಮನುಷ್ಯ ಶಿಶು ಪರಿಸರದ ಶಿಶು. ಸಾಹಿತಿಯೂ ಮನುಷ್ಯನೇ. ಆದ್ದರಿಂದ ಪರಿಸರ ಬೆಳಸಿದಂತೆ ಅವನೂ ಬೆಳೆಯುತ್ತಾನೆ. ಬೆಳೆದಿದ್ದಾನೆ. ತ್ರಿವೇಣಿ ಎಷ್ಟೇ ಭಾವುಕಿಯಾದರೂ ಪರಿಸರ ಪ್ರಜ್ಞೆಯುಳ್ಳ ಜಾಗೃತ ಮನಸ್ಸಿನ ಲೇಖಕಿ. ಕೇವಲ ಮನೋವಿಜ್ಞಾನಕ್ಕೆ ಸಂಬಂಧಿಸಿದ ಕತೆ ಕಾದಂಬರಿಗಳಲ್ಲದೆ ಹಲವು ಸಾಮಾಜಿಕ, ಸಾಂಸಾರಿಕ ಸಮಸ್ಯೆಗಳನ್ನೊಳಗೊಂಡ ಕೃತಿಗಳನ್ನೂ ರಚಿಸಿದ್ದಾರೆ. ಆದರೆ ಎಲ್ಲವೂ ಸಮಾಜಾಧಾರಿತಗಳು. ಯಾವುವೂ ಐತಿಹಾಸಿಕ, ಪೌರಾಣಿಕ ವಸ್ತುವನ್ನಾಯ್ದವುಗಳಲ್ಲ. ಇವರ ಸಾಮಾಜಿಕ ಕತೆ ಕಾದಂಬರಿಗಳಲ್ಲಿ ಬಹಳವಾಗಿ ಸ್ತ್ರೀವಾದಿತ್ವವನ್ನು ಕಾಣುತ್ತೇವೆ. ಶತಶತಮಾನಗಳಿಂದಲೂ ಪುರುಷಪ್ರಧಾನ ಸಮಾಜದ ತುಳಿತಕ್ಕೆ ಸಿಕ್ಕು ನಜ್ಜುಗುಜ್ಜಾದ ಹೆಣ್ಣು ಹೇಗೆ ಹೇಗೆ ಎಲ್ಲೆಲ್ಲಿ ನೊಂದು ಬೆಂದಿದ್ದಾಳೆ ಎಂಬ ನಗ್ನ ಚಿತ್ರಣಗಳನ್ನು ಕೊಟ್ಟಿದ್ದಾರೆ ತ್ರಿವೇಣಿ. ತನ್ನ ಕಂಠಶ್ರೀಯಿಂದ ಜನಮನವನ್ನು ಸೂರೆಗೊಂಡ ವಿಶ್ವವಿಖ್ಯಾತ ಗಾಯಕಿ ಉಷಾಳ ಜನಪ್ರಿಯತೆಯೇ ಗಂಡನ ಹೊಟ್ಟೆಕಿಚ್ಚಿಗೆ ಕಾರಣವಾಗುತ್ತದೆ. ಅವನ ಒತ್ತಾಯಕ್ಕೆ ಮಣಿದು ಸಂಗೀತಕ್ಕೆ ತಿಲಾಂಜಲಿ ಕೊಡುತ್ತಾಳೆ – ಉಷಾ 'ತ್ಯಾಗಮಯವೀ ಜೀವನವು' ಕತೆಯಲ್ಲಿ. ಮದುವೆಯಾಗುವವರೆಗೂ ಹೆಣ್ಣಿನ ಬಗೆಗೆ ಅವರ ತ್ಯಾಗಶೀಲಗಳ ಬಗೆಗೆ ಭಾಷಣ ಬಿಗಿಯುತ್ತಿದ್ದ ಸುಬ್ಬು ಲೀಲಳನ್ನು ಕೈಹಿಡಿದ ಮೇಲೆ ತಣ್ಣಗಾಗುತ್ತಾನೆ. ಇದು 'ಆಕರ್ಷಣೆಯ' ಕತೆ. ಗಂಡ ಸಾಯುತ್ತಾ ಬಿದ್ದಿದ್ದಾಗ ಅವನ ನಿತ್ಯ ನಿರಂತರ ಸೇವೆ ಸಲ್ಲಿಸಿದ ಹೆಣ್ಣು, ತಾನು ಕಾಯಿಲೆ ಮಲಗಿದ್ದಾಗ ಗಂಡನ ಸೇವೆಯಲ್ಲಿ, ಅವನ ನೆಳಲೂ ಅತ್ತ ಸುಳಿಯುವುದಿಲ್ಲ. ಅಷ್ಟೇ ಅಲ್ಲ, ರೋಗಿಷ್ಠೆ ಸಂಸಾರಕ್ಕೆ ಯೋಗ್ಯಳಲ್ಲ ಎಂದು ಅವಳನ್ನು ತಿರಸ್ಕರಿಸಿ ಬೇರೊಬ್ಬಳನ್ನು ಲಗ್ನವಾಗುತ್ತಾನೆ ನಾಯಕ. ಇದು ಬೆಡ್ ನಂ. ಏಳು ಕತೆಯ ವಸ್ತು.

ಇಂತಹ ಹಲವು ಸಣ್ಣಕತೆಗಳಲ್ಲಲ್ಲದೆ ಪುರುಷ ವಿರೋಧಿ ಭಾವನೆ 'ಹೂವು ಹಣ್ಣು' ಕೀಲುಬೊಂಬೆ ಮೊದಲಾದ ಕಾದಂಬರಿಗಳಲ್ಲಿ ಕಾಣಬಹುದು. ಎಳೆ ಹರೆಯದಲ್ಲೇ ವಿಧವೆಯಾದ ರಮಾ ಕೆಟ್ಟ ಕಣ್ಣಿನ ಪುರುಷಸಮಾಜದ ಕೈಗೆ ಸಿಕ್ಕು ಸೂಳೆಯಾಗುತ್ತಾಳೆ 'ಹೂವು ಹಣ್ಣು' ಕಾದಂಬರಿಯಲ್ಲಿ. ತುಂಬಿದ ಮನೆಯ ಸೊಸೆಯಾಗಿ ಬಂದ ಸೀತಮ್ಮ ಮನೆಯ ಹಿರಿಯರ ಕಾಲ್ಚೆಂಡಾಗುತ್ತಾಳೆ 'ಕೀಲುಬೊಂಬೆ'ಯಲ್ಲಿ.

ತ್ರಿವೇಣಿಯವರ ಮನೋಧರ್ಮ ಈ ಬಗೆಯ ಪುರುಷವಿರೋಧಿಯತ್ತಲಷ್ಟೇ ಹರಿದಿಲ್ಲ. ಜೀವನದ ವಿಧವಾ ಸಮಸ್ಯೆ, ಅನಕ್ಷರತೆ, ಬಡತನ, ವಿವಾಹ ಮೊದಲಾದ ಹಲವು ಹತ್ತೆಂಟು ಸಮಸ್ಯೆಗಳ ಕಡೆಗೂ ದೃಷ್ಟಿ ಹರಿಸಿದೆ. ಆದರೆ ಲೋಕಾನುಭವ ಖಂಡಿತಾ ಸೀಮಿತವಾದದ್ದು. ಸಮಕಾಲೀನ ಬದುಕಿನ ಬಹುಮುಖಗಳ ದರ್ಶನ ಅವರಿಗಾಗಿಲ್ಲ. ಅದಕ್ಕೆ ಕಾರಣ ಅವರ ಅನಾರೋಗ್ಯ. ನಾಡಿನಾದ್ಯಂತ ತಿರುಗಾಡಿ ಬರಬೇಕು ಮತ್ತು ಅಲ್ಲಲ್ಲಿನ ಅನುಭವಗಳನ್ನು ಅಭಿವ್ಯಕ್ತಿಸಬೇಕು. ಇಚ್ಛೆ ಇದ್ದರೂ ಅವರ ಅನಾರೋಗ್ಯ ಅನುಮತಿಸಲಿಲ್ಲ. ಅಂದಿನ ರಾಜಕೀಯ ಜೀವನದ ಏರುಪೇರುಗಳ ಕಡೆಗೂ ಅವರು ಅಷ್ಟಾಗಿ ಗಮನ ಹರಿಸಲಿಲ್ಲ. ಕೇವಲ ಕೌಟುಂಬಿಕ ಚಿತ್ರಣಗಳನ್ನು ನೀಡುವಲ್ಲಿ ಕೆಲವು ಸಾಂಸಾರಿಕ ಸಮಸ್ಯೆಗಳನ್ನು ಬಿಡಿಸುವಲ್ಲಿ,

ಮನೋವಿಶ್ಲೇಷಣೆಯನ್ನು ವಿವೇಚಿಸುವಲ್ಲಿ ಅವರು ಹೆಚ್ಚು ಒತ್ತು ಕೊಟ್ಟರು. ಹೀಗಾಗಿ ತ್ರಿವೇಣಿಯವರ ಕತೆ ಕಾದಂಬರಿಗಳು ಒಂದು ಪರಿಮಿತ ವಲಯದಲ್ಲಷ್ಟೇ ವಿಕಾಸಗೊಂಡಿರುವುದು ಸುವೇದ್ಯ.

•

# ಬೆನಗಲ್ ರಾಮರಾವ್

---

'ಕನ್ನಡವನ್ನುಳಿದೆನಗೆ ಅನ್ಯ ಜೀವನವಿಲ್ಲ' ಎಂದು ಕನ್ನಡವನ್ನೇ ಉಸಿರಾಡಿ, ಕನ್ನಡವನ್ನೇ ಬದುಕಿದವರು ಬೆನಗಲ್ ರಾಮರಾಯರು. ಯಾವತ್ತೂ ಮರೆಯಲಾಗದ ಮಹಾನುಭಾವರ ಗೌರವಮಾಲಿಕೆಯಲ್ಲಿ ಬರುವ ಬಹು ದೊಡ್ಡ ಹೆಸರು. ನಾಡು ನುಡಿಗಳಿಗಾಗಿ ನಿರಂತರ ದುಡಿದ ಹಿರಿಯ ಜೀವ. ಹರಿದು ಹಂಚಾಗಿರುವ ಕನ್ನಡನಾಡು ಒಂದಾಗಬೇಕು, ಕನ್ನಡಿಗರು ಒಂದಾಗಿ ಚೆಂದಾಗಿ ಬಾಳುವಂತಾಗಬೇಕು, ಅವರ ತಾಯ್ನುಡಿಯು ಬೆಳೆಯಬೇಕು, ಬೆಳಗಬೇಕು ಎಂದು ಹಂಬಲಿಸಿ, ಅದಕ್ಕಾಗಿ ತನ್ನ ತನು ಮನ ಧನಗಳನ್ನು ಮುಡಿಪಾಗಿಟ್ಟು ಶ್ರಮಿಸಿದ ಮಹಾನ್ ಚೇತನ. ಒಂದು ಮಾತಿನಲ್ಲಿ ಹೇಳುವುದಾದರೆ ಬೆನಗಲ್ಲರ ಪ್ರತಿಭೆಗೆ ಅನಂತಮುಖಗಳು, ಸೇವೆಗೆ ಅನಂತ ಬಾಹುಗಳು.

ಬೆನಗಲ್ ರಾಮರಾಯರು ಹುಟ್ಟಿದ್ದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ. ಶಿಕ್ಷಣ ಮದರಾಸಿನಲ್ಲಿ (ಈಗಿನ ಚೆನ್ನೈ), ಬೆಳೆದದ್ದು ಮುಂಬಯಿಯಲ್ಲಿ. ಯಾವುದು ಎಲ್ಲೇ ಇರಲಿ, ಅವರ ಕಾರ್ಯಕ್ಷೇತ್ರ ಕರ್ನಾಟಕ. ಕನ್ನಡದ ಕವಿಯಾಗಿ, ಕತೆಗಾರರಾಗಿ, ನಟರಾಗಿ, ನಾಟಕಕಾರರಾಗಿ. ಗ್ರಂಥಸಂಪಾದಕರಾಗಿ, ಸಂಶೋಧಕ ಸಾಹಿತಿಯಾಗಿ, ಪತ್ರಿಕೋದ್ಯಮಿಯಾಗಿ, ಪ್ರಾಧ್ಯಾಪಕರಾಗಿ, ಭಾಷಾಂತರಕಾರರಾಗಿ, ಸಂಗೀತಗರರಾಗಿ, ಜ್ಯೋತಿಷ್ಯ, ಆಯುರ್ವೇದಗಳಲ್ಲಿ ಘನಪಂಡಿತರಾಗಿ ದುಡಿದ ಮಹನೀಯರು. ಅಂತೆಯೇ ಮದರಾಸಿನ 'ಸ್ಕೂಲ್ ಬುಕ್ ಅಂಡ್ ಲಿಟರೇಚರ್ ಸೊಸೈಟಿ 'ಯ ಕನ್ನಡ ವಿಭಾಗದಲ್ಲಿ. ಅದೇ ರಾಜ್ಯ ಸರ್ಕಾರದ 'ಸೈಂಟಿಫಿಕ್ ಟರ್ಮ್ಸ್ ಕಮಿಟಿ', 'ಓರಿಯಂಟಲ್ ಲೈಬ್ರರಿ' ಇವುಗಳ ಸಲಹಾ ಸಮಿತಿಯಲ್ಲಿ. ಮದರಾಸು ವಿಶ್ವವಿದ್ಯಾಲಯದ ಸೆನೆಟ್, ಪಠ್ಯಪುಸ್ತಕ ಸಮಿತಿ ಮೊದಲಾದ ಮಂಡಲಿಗಳಲ್ಲಿ ಸಕ್ರಿಯ ಸದಸ್ಯರಾಗಿ ಸೇವೆ ಸಲ್ಲಿಸಿದವರು. ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಧಾರವಾಡದ ವಿದ್ಯಾವರ್ಧಕ ಸಂಘಗಳು ತಮ್ಮ ಹೃದಯ ಮತ್ತು ಶ್ವಾಸಕೋಶಗಳೆಂದೇ ಭಾವಿಸಿದ್ದವರು. ಮೇ ೯, ೧೦ ಮತ್ತು ೧೧, ೧೯೨೫ರಲ್ಲಿ ಬೆಳಗಾವಿಯಲ್ಲಿ ನಡೆದ ೧೧ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಕನ್ನಡ ಕುಲಕೋಟಿಯ ಗೌರವಕ್ಕೆ ಪಾತ್ರಾದವರು.

ಬೆನಗಲ್ ರಾಮರಾಯ್ ಪೂರ್ವಜರು ದಕ್ಕಷಿಣ ಕನ್ನಡ ಜಿಲ್ಲೆಯ ಚಿತ್ರಾಪುರದವರು. ವಿಜಯನಗರದ ಪತನಾನಂತರ ಪ್ರಬುದ್ಧಮಾನಕ್ಕೆ ಬಂದ ಕೆಳದಿಯ ಅರಸರ ಆಸ್ಥಾನದಲ್ಲಿ ಅಧಿಕಾರಿಗಳಾಗಿದ್ದರು. ಅನಂತರದ ದಿನಗಳಲ್ಲಿ ಭರತಖಂಡದ ವ್ಯಾಪ್ತಿಯಲ್ಲಿ ಉನ್ನತ ಹುದ್ದೆಗಳಲ್ಲಿ ವಿವಿಧ ಸೇವೆ ಸಲ್ಲಿಸಿದವರು. ಆದರೆ ಬೆನಗಲ್ ರಾಮರಾಯರ ತಾತ ಬೆನಗಲ್ ಸುಬ್ಬರಾಯರು (೧೮೨೨–೧೮೯೫) ಮುಲ್ಕಿ ಮುನಸೀಫ್ ಕೋರ್ಟಿನ ಮುಖ್ಯ ಗುಮಾಸ್ತರಾಗಿದ್ದರು. ಸುಬ್ಬರಾಯರ ಹಿರಿಯ ಮಗ ಮಂಜುನಾಥಯ್ಯನವರು ವಕೀಲವೃತ್ತಿಯನ್ನವಲಂಬಿಸಿ ಪುತ್ತೂರಿನಲ್ಲಿ ನೆಲೆಸಿದ್ದರು. ಈ ಮಂಜುನಾಥಯ್ಯ ಮತ್ತು ರಮಾಬಾಯಿ ಪುಣ್ಯದಂಪ

ತಿಗಳ ಜ್ಯೇಷ್ಠಪುತ್ರರಾಗಿ ಬೆನಗಲ್ ರಾಮರಾಯರು ದಿನಾಂಕ ೨ ಏಪ್ರಿಲ್ ೧೮೭೬ರಂದು, ತಮ್ಮ ತಾಯಿಯ ತವರಾದ ಮಂಗಳೂರಿನಲ್ಲಿ ಜನಿಸಿದರು. ಜನ್ಮದಿನ ಶ್ರೀರಾಮನವಮಿಯಾದ್ದರಿಂದ ಮಗುವಿಗೆ 'ರಾಮ' ಎಂದು ಹೆಸರಿಡಲಾಯಿತು. ಈ ಮಗುವಿನ ತಂದೆ ತಾಯಿಗಳಿಬ್ಬರೂ ನಾಟಕ, ಸಂಗೀತ, ಸಾಹಿತ್ಯಾದಿ ಲಲಿತಕಲೆಗಳಲ್ಲಿ ತುಂಬಾ ಆಸಕ್ತಿ ಉಳ್ಳವರಾಗಿದ್ದರು. ತಂದೆ ಮಂಜುನಾಥಯ್ಯನವರು 'ಲಾವಣ್ಯಮಯೀ' ಎಂಬ ನಾಟಕವನ್ನು ಬರೆದಿದ್ದರಂತೆ. ತಾಯಿ ರಮಾಬಾಯಿಯವರು ಕನ್ನಡ ಮತ್ತು ಮರಾಠಿ ಭಾಷೆಗಳನ್ನು ಬಲ್ಲವರಾಗಿದ್ದುದಲ್ಲದೆ, ಉಭಯ ಭಾಷೆಗಳಲ್ಲೂ ಹಾಡುಗಳನ್ನು ಶ್ರುಶ್ರಾವ್ಯವಾಗಿ ಹಾಡುತ್ತಿದ್ದುದುಂಟು. ಇಂತಹ ಸಾರಸ್ವತ ಪರಿಸರವುಳ್ಳ ಮನೆತನದಲ್ಲಿ, ಸಂಸ್ಕೃತ ವಂಶೀಯರ ಹೊಟ್ಟೆಯಲಿ, ಶ್ರೇಷ್ಠ ಸರಸ್ವತೀ ಪುತ್ರರಾಗಿ ಬೆನಗಲ್ ರಾಮರಾಯರು ಜನ್ಮ ತಳೆದದ್ದು ನಾಡಿನ ಭಾಗ್ಯವಿಶೇಷ.

ರಾಮರಾಯ ಮಂಜುನಾಥಯ್ಯ ಬೆನಗಲ್‌ರ ಶಾಲಾಶಿಕ್ಷಣ ಮುಲ್ಕಿ, ಪುತ್ತೂರು ಮತ್ತು ಮಂಗಳೂರುಗಳಲ್ಲಿ ನಡೆದು, ಕಾಲೇಜು ಶಿಕ್ಷಣವು ಮಂಗಳೂರು ಸರಕಾರೀ ಇಂಟರ್ ಮೀಡಿಯೇಟ್ ಕಾಲೇಜ್ ಮತ್ತು ಪದವಿ ಶಿಕ್ಷಣ ಮದರಾಸಿನ ಕ್ರಿಶ್ಚಿಯನ್ ಕಾಲೇಜುಗಳಲ್ಲಿ ನಡೆದುವು. ಪದವಿ ತರಗತಿಗಳಲ್ಲಿ ಭೂಗರ್ಭಶಾಸ್ತ್ರ ಮತ್ತು ಜೀವಶಾಸ್ತ್ರಗಳು ಅವರ ಐಚ್ಛಿಕ ವಿಷಯಗಳಾಗಿದ್ದವು. ಅವರ ಕನ್ನಡದ ಶಿಕ್ಷಾಗುರುಗಳು ಸುಪ್ರಸಿದ್ಧ ವಿದ್ವಾಂಸ, ಬ್ರಹ್ಮಸಿದ್ಧಾಂತಿ ಶಿವಶಂಕರಶಾಸ್ತ್ರಿಗಳು. ಶಾಸ್ತ್ರಿಗಳ ಕನ್ನಡ ಭಾಷಾಭಿಮಾನ, ದೇಶಾಭಿಮಾನಗಳು ತರುಣ ರಾಮರಾಯನ ಮೇಲೆ ವಿಶೇಷ ಪರಿಣಾಮ ಬೀರಿದವು. ಇಡೀ ದಕ್ಷಿಣ ಭಾರತಕ್ಕಿದ್ದ ಒಂದೇ ಒಂದು ವಿಶ್ವವಿದ್ಯಾಲಯ ಮದರಾಸು ವಿಶ್ವವಿದ್ಯಾಲಯ. ಆದರೆ ಬಿ.ಎ. ಪದವಿ ಪರೀಕ್ಷೆಯಲ್ಲಿ ವಿಶ್ವವಿದ್ಯಾಲಯಕ್ಕೇ ಎರಡನೆಯವನಾಗಿ ಪಾಸುಮಾಡಿದ ರಾಮರಾಯ. ವಿದ್ಯಾರ್ಥಿದೆಸೆಯಿಂದಲೇ ಕನ್ನಡದಲ್ಲಿ ಕಾವ್ಯ ರಚಿಸುವ, ತನಗೆ ಪಠ್ಯಪುಸ್ತಕವಾಗಿದ್ದ 'ನಲೋಪಾಖ್ಯಾನ'ವೆಂಬ ಕಾವ್ಯವನ್ನು ತನ್ನ ಸಹಾಧ್ಯಾಯಿಗಳಿಗೆ ಕಲಿಸುವ ಪ್ರತಿಭೆ ಪಾಂಡಿತ್ಯಗಳನ್ನು ಪಡೆದಿದ್ದ ರಾಮರಾಯನಿಗೆ ತಾನು ಓದಿದ ಕಾಲೇಜಿನಲ್ಲಿಯೇ ಹಂಗಾಮಿ ಕನ್ನಡ ಶಿಕ್ಷಕನಾಗುವ ಅವಕಾಶ ಸಿಕ್ಕಿತು. ಅವನ ಗುರುಗಳಾದ ಶ್ರೀ ಶಿವಶಂಕರಶಾಸ್ತ್ರಿಗಳು ಅನಾರೋಗ್ಯದಿಂದ ಆರು ವಾರಗಳ ಕಾಲ ರಜೆಯಲ್ಲಿದ್ದುದರಿಂದ ಆ ಸವಧಿಯಲ್ಲಿ ರಾಮರಾಯ ಕನ್ನಡ ಪಂಡಿತನಾಗಿ ಹುದ್ದೆ ಸ್ವೀಕರಿಸಿದ. ಅನಂತರ ಕಾಲೇಜಿನ ಮತ್ತೊಬ್ಬ ಕನ್ನಡ ಪಂಡಿತರಾದ ಹಿರಿಯೂರು ಲಕ್ಷ್ಮೀ ನರಸಿಂಹಯ್ಯನವರು ಅನಾರೋಗ್ಯದಿಂದ ರಜೆಯಲ್ಲಿದ್ದಾಗ ಮತ್ತೆ ಆರು ತಿಂಗಳು ರಾಮರಾಯ ಕನ್ನಡ ಪಂಡಿತನಾಗಿ ಮುಂದುವರಿದ. ಶ್ರೀ ಲಕ್ಷ್ಮೀನರಸಿಂಹಯ್ಯನವರು ನಿಧನರಾದ್ದರಿಂದ ಖಾಯಂ ಅಧ್ಯಾಪಕನಾಗಿ ರಾಮರಾಯ ನೇಮಕಗೊಂಡ. ಅಲ್ಲಿದ್ದ ಅವಧಿಯಲ್ಲಿ (೧೮೯೭–೧೯೦೦) 'Renaissance in Modern Kannada' (ಕನ್ನಡ ಸಾಹಿತ್ಯದ ನವೋದಯ) ಎಂಬ ಪ್ರೌಢ ಪ್ರಬಂಧವನ್ನು ಮದರಾಸು ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿ, ಎಂ.ಎ. ಡಿಗ್ರಿ ಪಡೆದ. ಆವರೆಗೆ ಕನ್ನಡದಲ್ಲಿ ಎಂ.ಎ. ಪದವಿ ಪಡೆದವರಲ್ಲಿ ಬೆನಗಲ್ ರಾಮರಾಯರು ಎರಡನೆಯವರು. ಮೊದಲನೆಯವರು ರಾ. ನರಸಿಂಹಾಚಾರ್ಯರು. ಮದರಾಸು ಬಿಟ್ಟು ಮೈಸೂರಿಗೆ ಬಂದು ಎರಡು ವರ್ಷಗಳ ಕಾಲ ಮೈಸೂರಿನ ನಾರ್ಮಲ್ ಸ್ಕೂಲಿನಲ್ಲಿ (ಶಿಕ್ಷಕರ ತರಬೇತಿ ಕಾಲೇಜಿನಲ್ಲಿ) ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ, ೧೯೦೨ರಲ್ಲಿ ಮುಂಬಯಿ ಸರ್ಕಾರದ ಭಾಷಾಂತರ ಇಲಾಖೆಕೆ ಸೇರಿದರು. ಬಾಂದ್ರಾದಲ್ಲಿ ಮನೆ. ಮನೆಯ ಪಕ್ಕದಲ್ಲೇ ಕನ್ನಡದ ಖ್ಯಾತ ಸಂಶೋಧಕ ವಿದ್ವಾಂಸ ಹತ್ತಂಗಡಿ ನಾರಾಯಣರಾಯರು. ಬೆನಗಲ್ಲರು ಹತ್ತಂಗಡಿಯವರ ಸ್ನೇಹ ಲಭಿಸಿದ್ದು ತಮ್ಮ ಭಾಗ್ಯ ಎಂದು ಭಾವಿಸಿದ್ದರು. ೧೯೦೪ರಲ್ಲಿ ರಾಮರಾಯರು ಮುಂಬಯಿ ವಿಶ್ವವಿದ್ಯಾಲಯದಲ್ಲಿ ಎಲ್. ಎಲ್. ಬಿ. ಪದವಿ ಪಡೆದರು. ೧೯೧೭ರಲ್ಲಿ ಪ್ರಧಾನ ಭಾಷಾಂತರಕಾರರಾಗಿ ಬಡ್ತಿ ಪಡೆದರು. ೧೯೩೧ರಂದು ಅದೇ ಹುದ್ದೆಯಿಂದ ನಿವೃತ್ತರಾದರು.

ಮದ್ರಾಸಿನ ಕ್ರಿಶ್ಚಿಯನ್ ಕಾಲೇಜಿನಲ್ಲಿದ್ದಾಗಲೇ ಮಂಗಳೂರಿಂದ 'ಸುವಾಸಿನಿ' ಪತ್ರಿಕೆಯ ಸಂಪಾದಕತ್ವಕ್ಕೆ ಕರೆ ಬಂತು. ಬೋಳಾರ ವಿಠಲರಾಯರು ಈ ಪತ್ರಿಕೆಯನ್ನು ಪ್ರಾರಂಭಿಸಿ ಬೆನಗಲ್ ರಾಮರಾಯರನ್ನು ಸಂಪಾದಕರಾಗಲು ಕೇಳಿಕೊಂಡರು. ರಾಮರಾಯರು ಆಹ್ವಾನವನ್ನು ಒಪ್ಪಿ ಮದರಾಸಿನಿಂದ ಮೈಸೂರಿಗೆ ಬಂದ ಮೇಲೂ ಪತ್ರಿಕೆಯನ್ನು ಮೂರು ವರ್ಷಗಳು ನಡೆಸಿ, ಮೈಸೂರಿನ ನಾರ್ಮಲ್ ಸ್ಕೂಲಿನ ಆಡಳಿತವರ್ಗಕ್ಕೆ ಇವರು 'ಸುವಾಸಿನಿ'ಯ ಸಂಪಾದಕರಾಗಿರುವುದು ಇಷ್ಟವಿಲ್ಲದ ಕಾರಣ, ಅದರ ಸಂಪಾದಕತ್ವವನ್ನು ಬಿಟ್ಟುಬಿಟ್ಟರು. ಮೈಸೂರಿಗೆ ಬರುವಾಗ ತಮ್ಮಿಂದ ತೆರವಾದ ಮದರಾಸಿನ ಪ್ರಸಿಡೆನ್ಸಿ ಕಾಲೇಜಿನ ಶಿಕ್ಷಕ ಸ್ಥಾನಕ್ಕೆ ನಂದಳಿಕೆ ಲಕ್ಷ್ಮೀನಾರಾಯಣಯ್ಯ (ಮುದ್ದಣ್ಣ)ನನ್ನು ತರಲು ಯತ್ನಿಸಿದರು. ಲಕ್ಷ್ಮೀನಾರಾಯಣನಿಗೆ ದೇಹಾರೋಗ್ಯ ಕೆಡುತ್ತಿದ್ದುದರಿಂದಲೂ ಮದರಾಸಿನಲ್ಲಿ ಇಂಗ್ಲಿಷ್ ಬರದ ತಾನು ಕಾಲೇಜು ಪಾಠ ಪ್ರವಚನವನ್ನು ನಿಭಾಯಿಸುವುದು ಕಷ್ಟವಾದ್ದರಿಂದಲೂ ಆತ ಅಲ್ಲಿಗೆ ಹೋಗಲು ಒಪ್ಪಲಿಲ್ಲ. ತನ್ನ ಅಸಹಾಯಕತೆ ಸೂಚಿಸಿ ಪತ್ರ ಬರೆದ. ಅದನ್ನು ನೋಡಿ ಬೆನಗಲ್ಲರು ತುಂಬಾ ನೊಂದುಕೊಂಡರು.

೧೯೦೧ ಫೆಬ್ರವರಿ ೧೨ರಂದು ಬೆನಗಲ್ ರಾಮರಾಯರ ಮೊದಲ ವಿವಾಹ ಕುಂದಾಪುರದಲ್ಲಿ ನಡೆಯಿತು. ಹೊಸಂಗಡೆ ಮನೆತನದ ಅಂಬಾಬಾಯಿ (ಸೀತಾಬಾಯಿ) ಅವರ ಧರ್ಮಪತ್ನಿಯಾದರು. ನಂದಳಿಕೆ ಲಕ್ಷ್ಮೀನಾರಾಯಣಯ್ಯನಿಗೂ ಆಹ್ವಾನ ಕಳುಹಿಸಿದ್ದರು. ಆದರೆ ಮುದ್ದಣ ಬರಲಿಲ್ಲ, ಪತ್ರ ಮಾತ್ರ ಬಂತು. 'ದೇಹದಲ್ಲಿ ಕ್ಷೇಮವಿಲ್ಲ, ಏನೇನೂ ಶಕ್ತಿಯಿಲ್ಲ, ಎದ್ದು ನಾಲ್ಕು ಹೆಜ್ಜೆ ನಡೆಯಲಾರೆ. ಮುಂದೇನಾಗುವುದೋ ಅನ್ನುವ ಭಯ ತಲೆದೋರಿದೆ. ಇಷ್ವರ ಮೇಲೆ ದೈವೇಚ್ಛೆ. ಅಂದ ಹಾಗೆ ಇದೇ ದಿನ ನಿಮ್ಮ ವಿವಾಹದ ಆಮಂತ್ರಣ ಪತ್ರವೂ ಬಂದಿದೆ. ನನ್ನ ಶುಭ ಹಾರೈಕೆಗಳು. ಬಹಳ ಹತ್ತಿರದ ಕುಂದಾಪುರದಲ್ಲಿ ಮದುವೆ ಜರಗುವುದಾದರೂ ನಾನು ಅಲ್ಲಿಯವರೆಗೂ ಬರೆಬಲ್ಲೆನೆಂಬ ನಂಬಿಕೆಯಿಲ್ಲ. ಇಲ್ಲಿಂದಲೇ ಶುಭ ಹಾರೈಸುತ್ತೇನೆ. ಯಾವಾಗ ಸಮಯ ಆಗುವುದೋ ಆಗ ಒಮ್ಮೆ ಬಂದು ಹೋಗೋದನ್ನ ಮರೆಯಬೇಡಿ. ಎಂದಿನಂತೆ ಈ ಬಡವನ ಮೇಲೆ ವಿಶ್ವಾಸವಿರಲಿ.

ನಿಮ್ಮವ, **ಲಕ್ಷ್ಮೀನಾರಾಯಣ**

ಮುದ್ದಣ್ಣನು ಬೆನಗಲ್ಲರಿಗೆ ೨೧.೦೧.೧೯೦೧ರಂದು ಬರೆದ ಈ ಪತ್ರವೇ ಅಂತಿಮ ಸಂದೇಶವಾಯಿತು. ರಾಮರಾಯರ ಮದುವೆ ಮುಗಿದ ನಾಲ್ಕನೆಯ ದಿನವೇ ಅಂದರೆ ೧೬ ಫೆಬ್ರವರಿ ೧೯೦೧ರಂದು ಮುದ್ದಣ ಉಡುಪಿಯಲ್ಲಿ ಸ್ವರ್ಗಸ್ಥನಾದ.

ಬೆನಗಲ್ ರಾಮರಾಯರ ಮತ್ತು ಅಂಬಾಬಾಯಿಯವರ ದಾಂಪತ್ಯ ಜೀವನ ಎಂಟು ವರ್ಷಗಳಲ್ಲಿ ಮುಕ್ತಾಯ ಕಂಡಿತು. ಅವರ ಶ್ರೀಮತಿಯವರು ೧೯೦೯ ಫೆಬ್ರವರಿ ೯ನೆಯ ದಿನಾಂಕದಂದು ನಿಧನರಾದರು. ಆಕೆ ಪುತ್ರವತಿಯಾಗಿರಲಿಲ್ಲ. ರಾಮರಾಯರಿಗೂ ಎರಡನೆಯ ಮದುವೆಯಾಗದಷ್ಟು ವಯಸ್ಸೇನೂ ಆಗಿರಲಿಲ್ಲ. ತಂದೆ ಮಂಜುನಾಥಯ್ಯನವರು ಹಟ್ಟಂಗಡಿ ಮನೆತನದ ರತ್ನಾಬಾಯಿಯವರನ್ನು ತಂದು ಮಗನಿಗೆ ಮದುವೆ ಮಾಡಿದರು. ಭಾಗ್ಯದೇವತೆ ಮನೆಗೆ ಬಂದ ಮೇಲೆ ಬೆನಗಲ್ಲರಿಗೆ ಶುಕ್ರದೆಸೆ ಆರಂಭವಾಯಿತು. ಮದರಾಸಿನಲ್ಲಿದ್ದಾಗಲೇ ಆರು ಜನ ಸೋದರಿಯರನ್ನು ಒಳ್ಳೆ ಮನೆತನಗಳಿಗೆ ಸೇರಿದ ಗಣ್ಯವ್ಯಕ್ತಿಗಳಿಗೆ ಕೊಟ್ಟು ಲಗ್ನಮಾಡಿದ್ದರು. ಅವರ ಮೊದಲ ಸೋದರಿ ಗಿರಿಜಾಬಾಯಿಯನ್ನು ಪ್ರಾಧ್ಯಾಪಕ, ಭೂಗೋಲಶಾಸ್ತ್ರಜ್ಞ ಹೆಚ್. ನಾರಾಯಣರಾಯರು ಲಗ್ನವಾಗಿದ್ದರೆ, ಎರಡನೆಯ ತಂಗಿಯನ್ನು ತಮ್ಮ ಬಾಲ್ಯಸ್ನೇಹಿತರೂ, 'ಸುವಾಸಿನಿ' ಪತ್ರಿಕೆಯ ಸಂಪಾದನ ಕಾರ್ಯದಲ್ಲಿ ಜೊತೆಗಿದ್ದು ದುಡಿದವರೂ ಆದ ಕನ್ನಡದ ಖ್ಯಾತ ಸಾಹಿತಿ ಪಂಜೆ ಮಂಗೇಶರಾಯರು ತಮ್ಮ ಪತ್ನಿಯಾಗಿ ಸ್ವೀಕರಿಸಿದ್ದರು. ರಾಮರಾಯರು ತಮ್ಮ ಪತ್ನಿ ರತ್ನಾಬಾಯಿಯವರಿಂದ ಐದು ಪುತ್ರರತ್ನಗಳನ್ನು ಪಡೆದರು. ಹಿರಿಯ ಮಗ ಭಾಸ್ಕರ ಹುಟ್ಟಿದ ಮೇಲೆ ಅವನ ಹೆಸರಿನಲ್ಲಿ ಮದರಾಸಿನಲ್ಲಿ, 'ಭಾಸ್ಕರ ವಿಲಾಸ' ಎಂಬ ಮನೆ ಕಟ್ಟಿದರು. ಆ ಮನೆ ಅವರ ಕುಟುಂಬದವರಿಗಷ್ಟೇ ಮೀಸಲಾಗಿರಲಿಲ್ಲ, ಶಾಲಾಕಾಲೇಜುಗಳಲ್ಲಿ ಕಲಿಯುತ್ತಿದ್ದ ಬಡ ವಿದ್ಯಾರ್ಥಿಗಳು, ಮೈಸೂರಿನಿಂದ ಹೋದ ಅನೇಕ ಜನ ಕನ್ನಡ ಕವಿ ಕಲಾವಿದರುಗಳು ತಂಗುವ ವಿಶ್ರಾಂತಿಧಾಮವಾಗಿತ್ತು. ಸಾರ್ವಜನಿಕ ಹಾಸ್ಟೆಲಿನೋಪಾಧಿಯಲ್ಲಿತ್ತು. ಭಾಸ್ಕರ್ ಖ್ಯಾತ ಕ್ರೀಡಾ ಪಟು. ಎರಡನೆಯ ಮಗ ನಾಗೇಶರಾಯ ದೊಡ್ಡ ಸಂಗೀತ ವಿದ್ವಾಂಸ. ಇದೇ ರೀತಿ ಉಳಿದವರನ್ನೂ ವಿದ್ಯಾವಂತರನ್ನಾಗಿಸಿದ ಬೆನಗಲ್ಲರು ಮತ್ತೊಬ್ಬ ಮಗನ ಮದುವೆಗೆ ಮೊದಲೇ ಅಂದರೆ ದಿನಾಂಕ ೮ ಮೇ ೧೯೪೩ರಂದು ಬೆಂಗಳೂರಿನ ಸ್ವಗೃಹವಾದ 'ಆನಂದ ಬಾಗ್ ' ನಲ್ಲಿ ಸ್ವರ್ಗಸ್ಥರಾದರು. 'ಆನಂದಬಾಗ್ ' ಶೀರಾಲಿಮಠದ ಸ್ವಾಮೀಜಿಯವರ ಆನಂದಾಶ್ರಮದಲ್ಲಿ ತಮಗಿದ್ದ ಭಕ್ತಿಯ ಸಂಕೇತವಾಗಿ ಆ ಹೆರಿಟ್ಟಿದ್ದರು. ಅದು ಬೆಂಗಳೂರಿನ ಮಲ್ಲೇಶ್ವರದಲ್ಲಿತ್ತು. ರಾಯರ ಮರಣಾನಂತರ'ಆನಂದ ಬಾಗ್ ' ಮಾರಾಟವಯಿತು. ಈಗ ಖ್ಯಾತ ಚಲನಚಿತ್ರ ತಾರೆ ಬಿ. ಸರೋಜಾದೇವಿಯವರ ನಿವಾಸವಾಗಿದೆ.

ಬೆನಗಲ್ ರಾಮರಾಯರ ಕನ್ನಡದ ಸಾಧನೆಗಳು ಅಸಂಖ್ಯಾತ. ಹೊರನಾಡುಗಳಲ್ಲಿದ್ದುಕೊಂಡೇ ಕನ್ನಡಕ್ಕೆ ಅಮಿತ ಸೇವೆ ಸಲ್ಲಿಸಿದ್ದಾರೆ. ಮದರಾಸು ವಿಶ್ವವಿದ್ಯಾಲಯದಲ್ಲಿ ತಮಿಳು, ತೆಲಗು ಮೊದಲಾದ ದ್ರಾವಿಡ ಭಾಷೆಗಳಿಗಿರುವಂತೆ ಕನ್ನಡಕ್ಕೂ ಒಂದು ಸ್ಥಾನವನ್ನು ದೊರಕಿಸಿಕೊಟ್ಟ ಕೀರ್ತಿ ಬೆನಗಲ್ ರಾಮರಾಯರಿಗೆ ಸಲ್ಲುತ್ತದೆ. ಮದರಾಸಿನ ಬಹುಭಾಷಾ ಸಂಸ್ಥೆಯಾದ 'ಸಗುಣ ವಿಲಾಸ ಸಭೆ' ಅತಿ ಪ್ರಸಿದ್ಧ ಸಾಂಸ್ಕೃತಿಕ ಕೇಂದ್ರವಾಗಿತ್ತು. ಅಲ್ಲಿ ಇಂಗ್ಲಿಷ್, ತಮಿಳು, ತೆಲಗು, ಸಂಸ್ಕೃತ ಮೊದಲಾದ ಭಾಷೆಗಳ ನಾಟಕಗಳು ಪ್ರದರ್ಶಿತವಾಗುತ್ತಿದ್ದವು. ರಾಯರ ಪ್ರಯತ್ನದಿಂದಾಗಿ ಕನ್ನಡ ನಾಟಕಗಳೂ ರಂಗಮಂಚವನ್ನೇರಿದವು. ರಾಮರಾಯರು ತಾವು ಓರ್ವ ನಟರಾಗಿ, ಸ್ತ್ರೀ ಪಾತ್ರಗಳಿಂದ ಆರಂಭಿಸಿ, ಮುಖ್ಯ ಪುರುಷ ಪಾತ್ರಗಳಲ್ಲೂ ಅಭಿನಯಿಸುತ್ತಿದ್ದರು. ಧಾರವಾಡದ ವಿದ್ಯಾವರ್ಧಕ ಸಂಘದ ಸದಸ್ಯರಾಗಿದ್ದು ಕೊಂಡು, ಅದು ಹೊರಿಡಿಸುತ್ತಿದ್ದ 'ವಾಗ್ಭೂಷಣ' ಪತ್ರಿಕೆಯ ಸಹಸಂಪಾದಕರಾಗಿ ಸೇವೆ ಸಲ್ಲಿಸಿದ್ದಾರೆ. ಜೊತೆಗೆ ಮಂಗಳೂರಿನ 'ಸುವಾಸಿನಿ' ಪತ್ರಿಕೆಯ ಸಂಪಾದಕತ್ವ ಸ್ವೀಕರಿಸಿ, ಕನ್ನಡದ ನವೋದಯ ಕಾಲದ ಮುಂಗೋಳಿ ಮುದ್ದಣ ಮೊದಲಾದ ಪ್ರತಿಭಾವಂತ ಕವಿಗಳಿಗೆ ಉತ್ತಮ ವೇದಿಕೆ ನಿರ್ಮಿಸಿಕೊಟ್ಟರು. ೧೯೧೫ರಲ್ಲಿ ಬೆಂಗಳೂರಿನಲ್ಲಿ ಸ್ಥಾಪಿತವಾದ ಕನ್ನಡ ಸಾಹಿತ್ಯ ಪರಿಷತ್ತು ಅಸ್ತಿತ್ವಕ್ಕೆ ಬರಲು ಬೆನಗಲ್ ರಾಮರಾಯರ ಬೆವರಿನ ಹಳ್ಳ ಹರಿದಿದೆ. ಧಾರವಾ

ಡದ ಸಾಹಿತ್ಯ ಸಮ್ಮೇಳನದ ವೇಳೆಗೆ ಅಖಂಡ ಕರ್ನಾಟಕದ ಭೂಪಟವೊಂದು ತಯಾರಾಗಬೇಕಿತ್ತು. ಅದನ್ನು ಬೆನಗಲ್ ರಾಮ ರಾಯರ ಮತ್ತು ಅವರ ಪೂಜ್ಯ ತಂದೆಯವರಾದ ಮಂಜುನಾಥಯ್ಯನವರು ನೆರವೇರಿಸಿಕೊಟ್ಟರು. ಅದೇ, ಅವರದೇ ಕರ್ನಾಟಕ ಭೂಪಟ ಮೊತ್ತ ಮೊದಲಿನದು. ಕನ್ನಡ ಸಾಹಿತ್ಯ ಪರಿಷತ್ತು ಕನ್ನಡಿಗರ ಒಂದು ಆಶಾಜ್ಯೋತಿ. ಅದು ಕರ್ನಾಟಕದ ಏಕೈಕ ಸಾರ್ವಭೌಮ ಸಂಸ್ಥೆಯಾಗಿ ಯಾವತ್ತೂ ಬೆಳಗುತ್ತಿರಬೇಕು. ತನ್ಮೂಲಕ ಕನ್ನಡಿಗರ ಸರ್ವತೋಮುಖ ಪ್ರಗತಿ ಆಗಬೇಕು ಎಂದು ಕನಸು ಕಾಣುತ್ತಿದ್ದರು ಬೆನಗಲ್ ರಾಮರಾಯರು.

ಅದು ಭಾರತದ ಸ್ವಾತಂತ್ರ್ಯ ಸಂಗ್ರಾಮ ಹೊಗೆಯಾಡುತ್ತಿದ್ದ ಕಾಲ. ಆ ದಿನಗಳಲ್ಲಿ 'ಭಾರತ ಮಾತಾ–ಕಿ–ಜೈ' ಎಂದವ ರನ್ನು ಗುಂಡಿಟ್ಟು ಕೊಲ್ಲುತ್ತಿದ್ದರು. ಅಂತಹ ಭೀಕರ ಹೋರಾಟದ ದಿನಗಳಲ್ಲಿ ಬೆನಗಲ್ ರಾಮರಾಯರು ಕಮಲಾಕರ ಗುಲ್ವಾಡಿ ಮೊದಲಾದ ಸ್ವಾತಂತ್ರ್ಯ ಹೋರಾಟಗಾರರನ್ನು ತಮ್ಮ ಮನೆಯಲ್ಲಿ ಗುಪ್ತವಾಗಿ ಬಚ್ಚಿಟ್ಟುಕೊಂಡಿದ್ದರು. ಆ ಯೋಧರಿಗೆ ಅನ್ನ, ಬಟ್ಟೆ, ವಸತಿ, ಹಣಕಾಸು ಮೊದಲಾದ ಸೌಲಭ್ಯಗಳನ್ನು ನೀಡುತ್ತಿದ್ದರು. ಇದು ರಾಯರ ದೇಶಭಕ್ತಿ, ಸ್ವಾತಂತ್ರ್ಯ ಪ್ರೇಮಗಳಿಗೆ ನಿಂತ ಸಾಕ್ಷಿ.

ಸ್ವಾತಂತ್ರ್ಯದ ಹೋರಾಟದ ಜೊತೆಯಲ್ಲಿ ಕರ್ನಾಟಕ ಏಕೀಕರಣ ಆಂದೋಲನವೂ ತೆಕ್ಕೆ ಬಿತ್ತು. ರಾಯರು ನಿವೃತ್ತರಾದ ಮೇಲೆ ಬೆಂಗಳೂರಿನಲ್ಲಿ ಏಕೀಕರಣ ಸಮಿತಿಯನ್ನು ಸ್ಥಾಪಿಸಿ, ಅದರ ಅಧ್ಯಕ್ಷರಾದರು. ಕೀರ್ತನ ಕೇಸರಿ ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಯವರು ಕಾರ್ಯದರ್ಶಿಗಳಾಗಿ ಅವರಿಗೆ ನೆರವಾದರು. ಅಂದು ರಾಯರಿತ್ತ ಕರೆ ಕೇಳಿ –

'ಕನ್ನಡ ನಾಡಿಗೆ ಒಂದು ಗಣ್ಯವಾದ ಭಾಷೆಯಿದೆ, ಮೇಲಾದ ಸಂಸ್ಕೃತಿ ಇದೆ. ಕನ್ನಡ ನಾಡಿನಲ್ಲಿ ಮಹಾರಾಷ್ಟ್ರೀಯರಿರಬಹುದು, ಆಂಧ್ರರು ನೆಲಸಿರಬಹುದು. ಆದರೆ ನಮ್ಮ ಮಟ್ಟಿಗೆ ಅವರು ಕನ್ನಡಿಗರೇ. ಅವರಾದರೂ ಅದೇ ಭಾವನೆಯನ್ನು ಇಟ್ಟು ಕೊಂಡಿದ್ದಾರೆಂದು ನಾವು ನಂಬುತ್ತೇವೆ. ಒಂದೇ ಆಡಳಿತದೊಳಗೆ ಕನ್ನಡಿಗರು ಬಾಳುವುದರಿಂದ ಕನ್ನಡಿಗರ ಸರ್ವಾಂಗೀಣ ಅಭ್ಯುದಯ ಸಾಧ್ಯ.'

ರಾಮರಾಯರ ಈ ದೃಢವಿಶ್ವಾಸವನ್ನು ಮನಃಪೂರ್ವಕವಾಗಿ ಮೆಚ್ಚಿದ ಕನ್ನಡ ಕುಲಪುರೋಹಿತ ಆಲೂರ ವೆಂಕಟರಾಯರು – '೧೯೦೫ರ ಹಿಂದೆ ಉತ್ತರ ಕರ್ನಾಟಕವು ಶೋಚನೀಯ ಸ್ಥಿತಿಯಲ್ಲಿತ್ತು. ಒಟ್ಟಿನ ಮೇಲೆ ಯಾವ ಕನ್ನಡಿಗನೂ ನಮ್ಮ ಕನ್ನಡನಾಡು ಎಂದರೇನು ಎಂಬ ಕರ್ನಾಟಕ ಭಾವನೆಯೂ ಇರಲಿಲ್ಲ. ಅಖಿಲ ಕರ್ನಾಟಕದ ಭಾವನೆಯನ್ನು ಮೊತ್ತ ಮೊದಲಿಗೆ ಹರಡಿದ ಕೀರ್ತಿಯು ಮಂಗಳೂರಿನವರಿಗೆ ಸಲ್ಲುತ್ತದೆ. ಹೇಗೆಂದರೆ ಮಂಗಳೂರಿನವರಾದ ಶ್ರೀ ಬೆನಗಲ್ ರಾಮರಾ ಯರು ೧೯೦೩ರಲ್ಲಿ ಧಾರವಾಡಕ್ಕೆ ಬಂದು ಅಲ್ಲಿನ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ಭಾಷಣಮಾಡಿದಾಗ ಅವರು ಏಕೀಕರ ಣದ ಬೀಜವನ್ನು ಬಿತ್ತಿದರು' ಎಂದು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ೧೯೩೯ರಲ್ಲಿ ನಡೆದ ನಾಡಹಬ್ಬ ಸಮಾರಂಭದಲ್ಲಿ ಹೇಳಿ ದರು. ಅಂದು ಬೆನಗಲ್ ರಾಮರಾಯರು ಬಿತ್ತಿದ ಬೀಜ ಇಂದು ಅಖಂಡವಲ್ಲದಿದ್ದರೂ ಖಂಡ ಕರ್ನಾಟಕ ವೃಕ್ಷವಾಗಿ ಬೆಳೆದಿದೆ.

ಬೆನಗಲ್ ರಾಮರಾಯರ ಒಂದು ಕೈ ಕರ್ನಾಟಕ ಏಕೀಕರಣಕ್ಕಾಗಿ ದುಡಿಸಿದ್ದರೆ, ಮತ್ತೊಂದು ನಂದಳಿಕೆ ಲಕ್ಷ್ಮೀನಾರಾಯ ಣನೇ 'ಕವಿ ಮುದ್ದಣ' ಎಂಬುದನ್ನು ಸಂಸ್ಥಾಪಿಸುವಲ್ಲಿ ದುಡಿದಿದೆ. ಆತ ತನ್ನ 'ರತ್ನಾವತಿ ಕಲ್ಯಾಣ' 'ಕುಮಾರ ವಿಜಯ' ಯಕ್ಷ ಗಾನ ನಾಟಕಗಳನ್ನು, 'ಅದ್ಭುತ ರಾಮಾಯಣ' 'ಶ್ರೀರಾಮ ಪಟ್ಟಾಭಿಷೇಕ' ಪದ್ಯ ಕಾವ್ಯಗಳನ್ನೂ, ಜನಪ್ರಿಯ ಗದ್ಯಕೃತಿ"ಶ್ರೀರಾಮಾ ಶ್ವಮೇಧ' ವನ್ನೂ ಗ್ರಂಥಕರ್ತೃ ಸ್ಥಾನದಲ್ಲಿ ಬೇರೆ ಬೆರೆ ಹೆಸರುಗಳನ್ನಿಟ್ಟು, ತನ್ನ ಹೆಸರನ್ನು ಮರೆಮಾಡಿದ್ದ. ಇದರ ಕಾರಣವನ್ನು ತಿಳಿದು ಸತ್ಯವನ್ನು ರಹಸ್ಯವನ್ನು ಬಯಲುಮಾಡಲು ಬೆನಗಲ್ ರಾಮರಾಯರು ಏಪ್ರಿಲ್ ೨೦, ೧೯೦೦ರಲ್ಲಿ ಕವಿಯನ್ನೇ ಭೇಟಿ ಮಾಡಿ ಕೇಳಿದರು. ನಂದಳಿಕೆ ನೊಂದು ಹೇಳಿದ – 'ರಾಯರೇ, ಕೃತಿ ನನ್ನದೆಂದು ಹೇಳಿದರೆ ಜನ ಸ್ವಾಗತಿಸುವುದಿಲ್ಲ. ಅದರಿಂ ದಾಗಿ ಬೇರೆ ಹೆಸರಿಟ್ಟೆ. ನಾನು ಯಾರಾದರೇನು ? ನನ್ನ ಹೆಸರು ಹೇಳದಿದ್ದರೇನು ? ನನ್ನ ಕಾವ್ಯ ಶಿಶು ಕನ್ನಡಮ್ಮನ ಕರುಣೆಯ ಕಂದನಾಗಿ ಬೆಳೆದದ್ದು ದೊಡ್ಡದು. ಇದಕ್ಕೆ ಕಾರಣರಾದ ಮೈಸೂರಿನ ಕಾವ್ಯಕಲಾನಿಧಿಯ ಒಡೆಯರಾದ ಶ್ರೀ ನರಸಿಂಹಾಚಾರ್ಯ ರಿಗೆ ನಾನು ಕೃತಜ್ಞ. ನನಗದರಲ್ಲಿ ತೃಪ್ತಿ ಇದೆ, ಎಂದು. ಈ ಮಾತುಗಳನ್ನು ಕೇಳಿ ರಾಮರಾಯರಿಗೆ ಕರುಳು ಹಿಂಡಿದಂತಾಯಿತು. ಲಕ್ಷ್ಮೀನಾರಾಯಣ ತೀರಿಕೊಂಡ ಮೇಲೆ ಅವನ ಬಗೆಗೆ ಎಲ್ಲ ಸಾಕ್ಷ್ಯಾಧಾರಗಳನ್ನು ಒದಗಿಸಿ, ಸತ್ಯವನ್ನು ಎತ್ತಿಹಿಡಿದು, ಅವನ ಹೆಸರಿಗೆ ನ್ಯಾಯ ದೊರಕಿಸಿಕೊಟ್ಟರು. ಅವನ ಭಾವಚಿತ್ರವನ್ನು ಮದರಾಸಿನ ವೈ.ಎಂ.ಸಿ. ದೈಹಿಕ ಶಿಕ್ಷಣ ತರಬೇತಿ ಶಾಲೆಯಿಂದ ಹುಡುಕಿ ತಂದುಕೊಟ್ಟರು. ಆ ಮುನ್ನ ಮೈಸೂರಿಗೆ ಕಾರ್ಯಾರ್ಥವಾಗಿ ಬಮದ ಬೆನಗಲ್ ಕಾವ್ಯಕಲಾನಿಧಿಯ ಕಚೇರಿಯನ್ನು

ಹುಡುಕಿಕೊಂಡು ಹೋಗಿ, ನರಸಿಂಹಾಚಾರ್ಯರ ಅಪೇಕ್ಷೆಯಂತೆ ಕೆಲವೇ ದಿನಗಳಲ್ಲಿ ಲಕ್ಷ್ಮೀನಾರಾಯಣನನ್ನು ಕಂಡು ಅವರಿಂದಲೇ ಪತ್ರ ಬರೆಸುವುದಾಗಿ ಹೇಳಿಹೋದರು ಬೆನಗಲ್. 'ಸುವಾಸಿನಿ' ಪತ್ರಿಕೆಯಲ್ಲೂ ಪ್ರಕಟಿಸುವುದಾಗಿ ಹೇಳಿ ಹೋದರು. ಆದರೆ ಅಷ್ಟರಲ್ಲಿ ಮುದ್ದಣ ಇಹಲೋಕದಿಂದ ಕಣ್ಮರೆಯಾಗಿದ್ದ.

ಕೂಡಲೇ ಉಡುಪಿಗೆ ಹೋದರು. ಅಲ್ಲಿ ಹುರುಳಿಭೀಮರಾಯರಿಂದ ಅವನ ಕ್ಷಯರೋಗದ ಎಲ್ಲ ವಿವರ ತಿಳಿದರು. ಮುದ್ದಣ ಖಾಲಿ ಮಾಡಿ ಮನೆಗೆ ಬೇರೆಯವರು ಬಂದಿದ್ದ ವಿಷಯ ತಿಳಿಯಿತು. ಕಡೆಗೆ ಹುರುಳಿನವರು ಮಾತುಗಳನ್ನು ತಮ್ಮ 'ಸುವಾಸಿನಿ' ಪತ್ರಿಕೆಯಲ್ಲಿ ಅಚ್ಚಿಸಿದರು.

'ಸುವಾಸಿನಿ'ಯಲ್ಲಿ ಅಚ್ಚಾದ ಲೇಖನ ಹೀಗಿದೆ :

ಉಡುಪಿಯ ಕ್ರಿಶ್ಚಿಯನ್ ಹೈಸ್ಕೂಲಿನಲ್ಲಿ ಕನ್ನಡ ಪಂಡಿತರಾಗಿದ್ದ ನಂದಳಿಕೆ ಲಕ್ಷ್ಮೀನಾರಾಯಣಯ್ಯನವರ ಅಕಾಲಿಕ ಮರಣ ದಿಂದಾಗಿ ಕರ್ನಾಟಕ ಭಾಷಾಭಿವೃದ್ಧಿಗೆ ಅಪಾರಹಾನಿಯುಂಟಾಗಿದೆ. ಲಕ್ಷ್ಮೀನಾರಾಯಣಯ್ಯನವರು ಕಳೆದ ಒಂದು ವರ್ಷದಿಂದ ಅಸ್ವಸ್ಥರಾಗಿದ್ದು, ೧೬ನೇ ಫೆಬ್ರವರಿ ೧೯೦೧ರಂದು ಉಡುಪಿಯಲ್ಲಿಯೇ ತೀರಿಕೊಂಡರು. ಇವರಲ್ಲಿ ಅಸಾಧಾರಣ ಬುದ್ಧಿಬಲವೂ, ಗ್ರಹಣಶಕ್ತಿಯೂ, ಕವಿತಾ ಚಮತ್ಕಾರವೂ ಇದ್ದುದಕ್ಕೆ ಇವರು ಬೇರೆ ಬೇರೆ ಹೆಸರುಗಳನ್ನಿಟ್ಟುಕೊಮಡು ಕರ್ನಾಟಕ ಕಾವ್ಯಮಂಜರಿ ಯಲ್ಲಿ ಪ್ರಕಟಗೊಳಿಸಿದ ಅದ್ಭುತ ರಾಮಾಯಣ, ಶ್ರೀರಾಮ ಪಟ್ಟಾಭಿಷೇಕ, ಶ್ರೀರಾಮಾಶ್ವಮೇಧ ಮೊದಲಾದ ಗ್ರಂಥಗಳೇ ಸಾಕ್ಷಿ ಯಂತೆ. ಸ್ವದೇಶವನ್ನು ಬಿಟ್ಟು ಹೊರಗೆ ಹೋಗದೇ ಇದ್ದರೂ ಈ ಮಹನೀಯರು, ತೆಲುಗು, ತಮಿಳು, ಮಲೆಯಾಳಂ ಮತ್ತು ಸಂಸ್ಕೃತ ಭಾಷೆಗಳಲ್ಲಿ ತಮ್ಮ ಸ್ವಂತ ಉದ್ಯಮ ಬಲದಿಂದಲೇ ವಿಶೇಷವಾದ ಅಧ್ಯಯನ ಮಾಡಿದ್ದರು. ಇವರ ಮನಸ್ಸು ಸದಾ ನೂತನ ವಿಷಯಗಳನ್ನು ಕುರಿತು ಗ್ರಂಥ ಸಂಪಾದನೆ ಮಾಡುವುದರಲ್ಲಿಯೇ ಮಗ್ನವಾಗಿರುತ್ತಿತ್ತು. ಅಂದಿನಿಂದ ಇಂದಿನವರೆಗೆ ಮಂಗಳೂರು ಜಿಲ್ಲೆಯಲ್ಲಿ ಉತ್ತಮ ಕವಿಯೂ, ಲೇಖಕರೂ ಹುಟ್ಟಿರುವರೆಂದಾದರೆ ಅವರು ನಂದಳಿಕೆ ಲಕ್ಷ್ಮೀನಾರಾಯಣಯ್ಯನ ವರೇ ಸರಿ. ಇವರಿಗೆ ಕರ್ನಾಟಕ ಭಾಷೆಯ ಉತ್ತರಾಭಿವೃದ್ಧಿಯ ವಿಷಯದಲ್ಲಿ ಉತ್ಸಾಹಪೂರ್ವಕವಾದ ಪ್ರತ್ಯಾಶೆ ಇತ್ತು. ಅಂದಿ ನಿಂದಲೂ ಇವರಿಗೆ 'ಸುವಾಸಿನಿ'ಯ ಮೇಲೆ ಬಲವಾದ ಮಮತೆ ಇತ್ತು. ಇವರ ಅಸ್ವಸ್ಥತೆ ಇಲ್ಲದೇ ಹೋಗಿದ್ದರೆ 'ಸುವಾಸಿನಿ'ಯ ಪ್ರತಿಯೊಂದು ಸಂಚಿಕೆಯೂ ಇವರ ಲೇಖನಗಳಿಂದ ತುಂಬಿ ಹೋಗಿತ್ತು. ಜೋ. . .ಜೋ ಪದದ ಉತ್ಪತ್ತಿಯನ್ನು ಕುರಿತು 'ಚಿತ್ರ ಧಾರಿ' ಎಂಬ ಅಭಿದಾನದಿಂದ ಇವರು ಸುವಾಸಿನಿಗೆ ಬರೆದ ಒಂದೇ ಒಂದು ಲೇಖನವು ಇಷ್ಟು ಮನೋಹರವೂ ಜ್ಞಾನ ಪೂರ್ಣವೂ ಆಗಿದೆಯೆಂದು ನಾವು ಪ್ರತ್ಯೇಕವಾಗಿ ಹೇಳುವ ಅಗತ್ಯವಿಲ್ಲ. ಮೊದಲಿನಿಂದಲೂ ಇವರಿಗೂ ನಮಗೂ ಸ್ನೇಹವಿದ್ದು ಆಗಿದ್ದಾಂಗ್ಗೆ ಪತ್ರ ವ್ಯವಹಾರ ನಡೆಯುತ್ತಲೇ ಇತ್ತು. ಸುವಾಸಿನಿಯ ಜನನವು ಈ ಸ್ನೇಹಪಾಶಗಳನ್ನು ಮತ್ತಷ್ಟು ಬಿಗಿಯಾಗಿ ಕಟ್ಟಿತು. ಹೀಗಾದುದರಿಂದ ನಾವು ಕರ್ನಾಟಕ ಭಾಷೆಗಾಗಿ ವ್ಯಸನಪಡುತ್ತಿರುವುದು ಮಾತ್ರವಲ್ಲದೆ ಅತ್ಯಂತ ಸನ್ಮಾನ್ಯರೂ. . ಪ್ರಿಯರೂ ಆದ ಮಿತ್ರರ ಮರಣವನ್ನು ಕುರಿತು ಸಹ ನಾವು ಬಹಳವಾಗಿ ಚಿಂತಿಸಿರುವೆವು. ಕರ್ನಾಟಕ ಭಾಷಾ ವತ್ಸಲರಾದ ಸರ್ವರೂ ಒಂದಾಗಿ ಸೇರಿ ಇವರ ಹೆಸರು ಶಾಶ್ವತವಾಗಿ ನಿಲ್ಲುವಂತೆ ಮಾಡದಿರಲಾರರೆಂದು ದೃಢವಾಗಿ ನಂಬುವೆವು.

– **ಸುವಾಸಿನಿ**

ಹೀಗೆ ಅವರ ಶ್ರಮದ ಫಲವಾಗಿ ನಂದಳಿಕೆ ಲಕ್ಷ್ಮೀನಾರಾಯಣಯ್ಯನೇ ಮುದ್ದಣ, ಮುದ್ದಣನೇ ಲಕ್ಷ್ಮೀನಾರಾಯಣಯ್ಯ ಎಂಬುದು ಸಾಬೀತಾಯಿತು. ಅವನ 'ಜೋ ಜೋ' ಲೇಖನವನ್ನು ರಾಮರಾಯರು ತಮ್ಮ 'ಸುವಾಸಿನಿ' ಪತ್ರಿಕೆಯಲ್ಲಿ ಪ್ರಕಟಿಸಿ ದ್ದಲ್ಲದೆ, ಕೇವಲ ಮೂವತ್ತು ವರ್ಷಗಳ ತನ್ನ ಜೀವಿತಾವಧಿಯಲ್ಲಿ ಅಮೂಲ್ಯ ಗ್ರಂಥಗಳನ್ನಿತ್ತು 'ಕನ್ನಡದ ಕೀಟ್ಸ್ ' ನಂದಳಿಕೆ ಲಕ್ಷ್ಮೀನಾರಾಯಣಯ್ಯನ ನಿಧನದ ಬಗೆಗೆ ಒಂದು ಸುದೀರ್ಘ ಲೇಖನವನ್ನೂ ಬರೆದು, ತಮ್ಮ ಕಣ್ಣೀರ ಕಾಣಿಕೆ ಸಲ್ಲಿಸಿದ್ದಾರೆ.

ಆತನಿದ್ದ ಮನೆಯನ್ನು ಒಂದು ಸ್ಮಾರಕ ಭವನವನ್ನಾಗಿಸಲು ಯೋಚಿಸಿ, ಅದನ್ನು ಹುಡುಕಿಕೊಂಡು ಉಡುಪಿಗೆ ಹೋದರು. ಆದರೆ ಆ ಮನೆಯಲ್ಲಿ ಬೇರೆಯವರು ವಾಸವಾಗಿದ್ದರು ! ಬೆನಗಲ್ ರಾಮರಾಯರು 'ಮುದ್ದಣ ಸ್ಮಾರಕ' ನಿರ್ಮಿಸು ವಲ್ಲಿ ಸೋತರು, ಶ್ರೀ ರಾಮಾಶ್ವಮೇಧವೇ ಮೊದಲಾದ ಕೃತಿಗಳ ಕರ್ತೃ ನಂದಳಿಕೆ ಲಕ್ಷ್ಮೀನಾರಾಯಣಯ್ಯ ಎಂಬುದನ್ನು ಸ್ಥಾಪಿಸು ವಲ್ಲಿ ಗೆದ್ದರು.

ಬೆನಗಲ್ ರಾಮರಾಯರ ಕನ್ನಡಾಭಿಮಾನ ಅಮಿತ, ಅಪರೂಪ. 'ಮನೆಗೆದ್ದು ಮಾರುಗೆದ್ದೆ' ಎಂಬ ನೀತಿ ಅವರದು. ಒಮ್ಮೆ ತಮ್ಮ ಮಗ ನಾಗೇಶರಾಯರಿಗೆ ಹೇಳಿದರಂತೆ – ಕನ್ನಡ ಪುಸ್ತಕ ಮತ್ತು ವೃತ್ತಪತ್ರಿಕೆಗಳನ್ನು ಬೇರೆಯವರಿಂದ ಪಡೆದು

ಓದಬಾರದು, ಸಾಧ್ಯವಾದಷ್ಟೂ ಸ್ವಸಂಪಾದನೆಯಿಂದ ಬೆಲೆಗೆ ಕೊಂಡು ಓದಬೇಕು – ಎಂದು. ಅಂತೆಯೇ ಅವರು ಅನೇಕ ಸಾಹಿತ್ಯ ಕೃತಿಗಳನ್ನು ಕನ್ನಡಕ್ಕೆ ಕೊಟ್ಟಿದ್ದಾರೆ. ಅವುಗಳಲ್ಲಿ ಸೃಜನಾತ್ಮಕಗಳಿಗಿಂತಲೂ ಅನುವಾದಗಳೇ ಹೆಚ್ಚು. ೧೮೯೮ರಲ್ಲಿ ಅಣ್ಣಾ ಸಾಹೇಬ ಕಿರ್ಲೋಸ್ಕರರ 'ಸಂಗೀತ ಸುಭದ್ರ'ವನ್ನು ಮರಾಠಿಯಿಂದಲೂ ವೀರೇಶಲಿಂಗಂ ಪಂತಲುರವರು 'ಸತ್ಯರಾಜಾ ಪೂರ್ವ' ದೇಶದ ಯಾತ್ರೆ ಎಂಬ ತೆಲುಗಿನ ವ್ಯಂಗ್ಯ ಕಾದಂಬರಿಯನ್ನೂ ಅವಿಮಾರಕ, ಘೋಷಯಾತ್ರೆ, ಕುಂದಮಾಲೆ ಮೊದಲಾದ ನಾಟಕಗಳನ್ನು ಸಂಸ್ಕೃತದಿಂದಲೂ ಅನುವಾದಿಸಿದ್ದಾರೆ. ಪಾನ್ಯಂ ಸುಂದರಶಾಸ್ತ್ರಿಯವರ ಜೊತೆಗೂಡಿ ಸಿದ್ಧಪಡಿಸಿದ 'ಪುರಾಣ ವಸ್ತು ವಿಶ್ವಕೋಶ'ವೆನಿಸಿದ 'ಪುರಣನಾಮ ಚೂಡಾಮಣಿ' ಶ್ರೀಯುತರ ಅತ್ಯಮೂಲ್ಯವಾದ ಕೊಡುಗೆ. ಕನ್ನಡ ಕೈಫಿಯತ್ ಸಂಗ್ರಹಣೆ ಮತ್ತು ಪ್ರಕಟಣೆ ರಾಮರಾಯರ ಮತ್ತೊಂದು ಮಹತ್ವದ ಕೊಡುಗೆ. ಸುಮಾರು ೮–೧೦ ಕೈಫೀಯ ತ್ತುಗಳನ್ನು ಸಂಕಲಿಸಿ ಪ್ರಕಟಿಸಿದ್ದಾರೆ. ತನ್ಮೂಲಕ 'ಕೈಫೀಯತ್ ರಾಮರಾಯರು' ಎಂದೇ ಗುರುತಿಸಿಕೊಂಡಿದ್ದಾರೆ. ತಮ್ಮ ಪೂರ್ವಜರು ಕೆಳದಿಯ ಅರಸರ ಆಸ್ಥಾನದಲ್ಲಿದ್ದುದರಿಂದ ಅಲ್ಲಿನ ಪ್ರಸಿದ್ದ ದೊರೆ ಹಿರಿಯ ಬಸವಪ್ಪ ನಾಯಕನಿಂದ ವಿರ ಚಿತವಾದ ಸಂಸ್ಕೃತದ 'ಶಿವತತ್ವ ರತ್ನಾಕರ'ವೆಂಬ ವಿಶ್ವಕೋಶವನ್ನು ಓಲೆಗರಿಯಿಂದ ಮುದ್ರಣಕ್ಕಿಲಿಸಿದ್ದಾರೆ.

ಈ ರೀತಿ ಕನ್ನಡದ ಸರ್ವತೋಮುಖ ಪ್ರಗತಿಗಾಗಿ ಶ್ರಮಿಸಿದ ಬೆನಗಲ್ ರಾಮರಾಯರು ಕನ್ನಡಮ್ಮನ ವರಪುತ್ರರು. ಅವರ ಕನ್ನಡಾಭಿಮನವನ್ನು ಅಭಿವ್ಯಕ್ತಿಸುವ ಅವರ ಕಾವ್ಯವೊಂದರ ಎರಡು ಸಾಲುಗಳು ಹಿಗಿವೆ.

**ಕನ್ನಡದ ಕೀರ್ತಿಯೆನ್ನ ಚಿತ್ತದ ಸ್ಫೂರ್ತಿ**
**ಕನ್ನಡದ ಒಗ್ಗೂಟ ಎನಗದುವೆ ಕಿರೀಟ**

ಅವರೀ ಬಗೆಯ ಕಿರೀಟಕ್ಕೆ ನಮ್ಮ ಮನದ ಪುಕ್ಕ ಸಿಕ್ಕಿಸಿ ಧನ್ಯರಾಗೋಣ.

•

# ಕನ್ನಡದ ದ್ರಾಕ್ಷಿ – ದಾಳಿಂಬೆ – ವಿ.ಸೀ

---

ಕಾಲೇಜು ಮುಗಿಸಿ ಚಾಮರಾಜಪೇಟೆಯ ಅಂಗಡಿ ಬೀದಿಯಲ್ಲಿರುವ ಬಸ್‌ಸ್ಟಾಪ್‌ನಲ್ಲಿ ಇಳಿದ ಕೂಡಲೇ ನನ್ನ ಕಾಲು ಗಳು ನನ್ನ ಆದೇಶವಿಲ್ಲದೆ ಈಗ ನಾಮಕರಣ ಮಾಡಿಕೊಂಡಿರುವ ವಿ. ಸೀತಾರಾಮಯ್ಯ ಬೀದಿಗೆ ತಾವಾಗಿಯೇ ಹೊರಟು ಬಿಡುತ್ತಿದ್ದವು. ಎಷ್ಟೋ ಬಾರಿ ಅವುಗಳನ್ನು ನಿಯಂತ್ರಿಸಲು ಪ್ರಯತ್ನಿಸಿ ಸೋತದ್ದೂ ಉಂಟು. ವಿ.ಸೀ ಬೀದಿಯ ಮುಖ್ಯ ಆಕ ರ್ಷಣೆ ವಿ.ಸೀಯವರೇ ! ನನ್ನ ಮನೆ (ಬಾಡಿಗೆ ಮನೆ) ಅವರ ನಿವಾಸಕ್ಕೆ ಸಮೀಪದಲ್ಲಿದ್ದುದರಿಂದ ಅವರನ್ನು ಒಂದು ದಿನ ಕಾಣದೆ ಹೋದರೆ ಏನನ್ನೋ ಕಳೆದುಕೊಂಡಂತಾಗುತ್ತಿತ್ತು. ಆ ಕಾರಣ ನಿತ್ಯ ಹೋಗ್ತಿದ್ದೆ. ಆಗಾಗ ಹೋಗ್ತಿದ್ದೆ. ಹೋದಾಗಲೆಲ್ಲಾ ಕಾಫಿ ಖಂಡಿತ ಸಿಗುತ್ತಿತ್ತು. ಅನೇಕ ವೇಳೆ ಕಾಫಿಗಾಗಿಯೇ ಇವನು ಬರ್ತಾನೇನೋ ಅಂತಾ ಎಲ್ಲಿ ವಿ.ಸೀಯವರ ಸೊಸೆ ತಿಳಿದು ಕೊಂಡುಬಿಡ್ತಾರೋ ಎಂಬ ಭಯ ! ಆದರೆ ಅವರ ಮನೆಯವರು ಯಾರೂ ಅಂಥವರಲ್ಲ. ಅದೊಂದು ಗುರುಮನೆಯೇ ಆಗಿ

ರುತ್ತಿತ್ತು. ವಿ.ಸೀ.ಯವರು ನನಗೆ ಗುರುಗಳಾಗಿ ಪಾಠ ಹೇಳದಿದ್ದರೂ ನನ್ನ ಮನಸ್ಸು ಅವರನ್ನು ಗುರುಗಳೆಂದೇ ಗುರುತಿಸಿ ಗೌರವಿಸುತ್ತಿತ್ತು.

ಇಮ್ಮೆ ಹೀಗಾಯಿತು, ಮಾಮೂಲಿ ಸಂಜೆ ಅವರ ಮನೆಗರ ಹೋದ ಕೂಡಲೆ ಹೇಳಿದರು : 'ನೋಡು ಮರುಳಯ್ಯಾ, ನನಗೆ ಬೇಕಾದವರು, ನನ್ನ ಶಿಷ್ಯರೇ, ಈ ಬೆಳಗ್ಗೆ ಒಂದು ರಾಜ್ಯೋತ್ಸವದ ಕಾರ್ಯಕ್ರಮಕ್ಕೆ ಒಪ್ಪಿಸಿಕೊಂಡು ಹೋದರಪ್ಪಾ'

'ಸಂತೋಷ ಹೋಗಿ ಬನ್ನಿ ಸಾರ್.'

ಅಷ್ಟೇ ಅಲ್ಲ ಮಹಾರಾಯ, ನಿನ್ನನ್ನೂ ಭಾಷಣಕಾರನಾಗಿ ಕರೆದುಕೊಂಡು ಬರ್ತೀನಿ ಅಂತಾ ನಿನ್ನ ಪರವಾಗಿ ಮಾತುಕೂಡ ಕೊಟ್ಟು ಬಿಟ್ಟೆ !'

ದೇವರೇ ಗತಿ ! ನಿಮ್ಮ ಜೊತೆಯಲ್ಲಿ ಸೇವಕನಾಗಿ ಬರುವ ಅರ್ಹತೆ ನನ್ನದು. ಜತೆಯಲ್ಲಿ ಕೂತು ಭಾಷಣ ಬಿಗಿಯುವ ಸಾಮರ್ಥ್ಯ ಇಲ್ಲ'

'ಅದೆಲ್ಲಾ ಬೇಡ, ಮುಂದಿನ ವಾರ ಸಿದ್ಧವಾಗಿ ಬಂದು ಬಿಡು. ಹೋಗುಬರೋಣ.'

'ನೀವು ಕೂಡ ಯಾಕೆ ಒಪ್ಪಿಕೊಂಡ್ರಿ ಸಾರ್. ಇದು ಭಾಷಣ ಕೇಳೋ ಕಾಲ ಅಲ್ಲ. ಭಾಷಣಕಾರರು ಅಂದ್ರೆ ಬೆಲೇನೂ ಕೊಡೊಲ್ಲ.'

'ಹಾಗಲ್ಲಪ್ಪ. ಅದು ನಮ್ಮ ರಾಜ್ಯದಲ್ಲೇ ದೊಡ್ಡ ಫ್ಯಾಕ್ಟರಿ. ಅಲ್ಲಿಗೆ ನಾನು ಹೋಗದೆ ಇದ್ರೆ ಬೇರೆ ಯಾವನೋ ಕನ್ನಡ ಸರಿಯಾಗಿ ಮಾತನಾಡೋಕೆ ಬರದವನು ಹೋಗಿ, ಯದ್ವಾ ತದ್ವಾ ಮಾತಾಡಿ, ಆ ಜನರಲ್ಲಿ ಅಯ್ಯಯ್ಯೋ ! ಕನ್ನಡ ಅಂದ್ರೆ ಇಷ್ಟೇನಾ? ಹೀಗೇನಾ ? ಅಂತ ಕನ್ನಡ ಭಾಷೆ ಬಗ್ಗೆ, ಕನ್ನಡ ಸಾಹಿತ್ಯದ ಬಗ್ಗೆ ಕೆಟ್ಟ ಭಾವನೆ ತಳೆಯೋ ಹಾಗೆ ಮಾಡಿದ್ರೆ ಅದು ಕನ್ನಡ ಕ್ಕಾದ ಅನ್ಯಾಯ ಅಲ್ವಾ. ಸ್ವಲ್ಪ ಕಷ್ಟ ಆಗುತ್ತೆ. ಆದರೂ ಜನರಲ್ಲಿ ಕನ್ನಡದ ಬಗ್ಗೆ ಸದ್ಭಾವನೆ ಮೂಡಿಸೋಕೆ ಹೋಗಬೇಕು. ಅದಕ್ಕೆ ಒಪ್ಪಿಕೊಂಡೆನಪ್ಪಾ, ನಿನ್ನನ್ನು ಕರೆಕೊಂಡು ಬರ್ತೀನಿ ಅಂತ ಕೂಡ ಅಂದೆ.'

ನವೆಂಬರ್ ಒಂದನೇ ತಾರೀಖು ಬಂತು. ಆ ದಿನ ರಜ ಇದ್ದುದರಿಂದ ಶಿಸ್ತಾಗಿ ವಿ.ಸೀ ಗುರುಗಳ ಮನೆಗೆ ಹೋದೆ. ಅವರ ಮನೆಯ ಮುಂದೆ ಫ್ಯಾಕ್ಟರಿ ಕಾರು ನಿಂತಿತ್ತು. ಇಬ್ಬರೂ ಕುಳಿತು ಕಾರ್ಖಾನೆಯ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮಕ್ಕೆ ಹೋದೆವು. ಕಾರ್ಯಕರ್ತರು ಕಾರ್ಖಾನೆಯ ಮಹಾದ್ವಾರದಲ್ಲಿ ನಮಗಾಗಿ ಕಾದು ನಿಂತಿದ್ದರು. ಇಬ್ಬರನ್ನೂ ಅಲ್ಲಿಳಿಸಿ ಹೇಳಿದರು. 'ಸಾರ್, ತಮ್ಮನ್ನು ಈ ದ್ವಾರದಿಂದ ವೇದಿಕೆಗೆ ಮೆವಣಿಗೆಯಲ್ಲಿ ಕರೆದುಕೊಂಡು ಹೋಗ್ತೇವೆ. ವೇದಿಕೆ ಇಲ್ಲಿಗೆ ಸುಮಾರು ಒಂದು ಅಥವಾ ಒಂದೂವರೆ ಫರ್ಲಾಂಗ್ ಆಗುತ್ತೆ' ಅಂದರು. ವಿ.ಸೀ.ಯವರು 'ಆಗಬಹುದು, ನಿಮ್ಮ ವ್ಯವಸ್ಥೆ ಹೇಗೋ ಹಾಗೆ ಮಾಡಿ' ಅಂದರು. ಕಾರು ಬಿಟ್ಟು ಕೆಳಗಿಳಿದು ಅರ್ಧ ಗಂಟೆಯಾದರೂ ತೆರೆದ ಜೀಪ್ ಬರಲಿಲ್ಲ ! ಆದರೆ ಜನಮಾತ್ರ ಫೇರಾಯಸ್ತಾ ಇತ್ತು. ನಿಮಿಷ ನಿಮಿಷಕ್ಕೂ ತುಂಬಿದ ತೊರೆಯಂತೆ ನಾವಿದ್ದ ಬಳಿಗೆ ಹರಿದು ಬರುತ್ತಲೇ ಇತ್ತು ! ಅದನ್ನು ನೋಡಿ ನನಗೆ ತುಂಬಾ ಖುಷಿ ! 'ಭೇಷ್ ನನ್ನನ್ನು ನೋಡಲು ಇಷ್ಟು ಜನ ಬರ್ತಿದ್ದಾರೆ. ನಾನೂ ಸ್ವಲ್ಪ ವೆರಿ ಇಂಪಾರ್ಟೆಂಟ್ ವ್ಯಕ್ತಿ. ಅಲ್ಲದೆ ಮೆರವಣಿಗೆಯಲ್ಲಿ ಕರೆದುಕೊಂಡು ಹೋಗ್ತಾರೆ ಪ್ರೊ. ವಿ.ಸೀ.ಯವರ ಜೊತೇನಲ್ಲಿ ಅಂದರೆ ಇದಕ್ಕಿಂತ ಭಾಗ್ಯ ಬೇರೆ ಇಲ್ಲ' ಅಂದುಕೊಂಡೆ.

ಅರ್ಧ ಮುಕ್ಕಾಲುಗಂಟೆ ನಿಂತ ಮೇಲೆ ವಿ,ಸೀ.ಯವರು ಬ್ಯಾಡ್ಜ್ ತಗುಲಿಸಿಕೊಂಡಿದ್ದ ಒಬ್ಬ ಕಾರ್ಯಕರ್ತನನ್ನು ಕರೆದು ಕೇಳಿದರು 'ಏನಪ್ಪಾ, ಯಾಕೆ ತಡ. ನಾವು ಎಷ್ಟು ಹೊತ್ತು ಹೀಗೆ ಇಲ್ಲಿ ನಿಲ್ಲೋದು. ಈ ಜನ ಬೇರೆ ಜಮಾಯ್ಸಿತ್ತಿದ್ದಾರೆ ಏನಿದು?' ಅಂದರು. ಅದಕ್ಕೆ ಆತ ಹೇಳಿದ 'ಸಾರ್, ಒಬ್ಬರು ಸಿನೇಮಾ ನಟರು, ಭಾರಿ ನಟರು ಬರ್ತಿದ್ದಾರೆ. ಅವರು ಬರೋದು ಸ್ವಲ್ಪ ತಡ ಆಯ್ತು. ಅದಕ್ಕಾಗಿ ನಿಮ್ಮನ್ನು ನಿಲ್ಸಿದ್ವಿ. ಅವರು ಬಂದ ಕೂಡಲೇ ನಿಮ್ಮ ಜೊತೆಯಲ್ಲೇ ಜೀಪ್‌ನಲ್ಲಿ ಅವರದೂ ಮೆರವಣಿಗೆ' ಅಂದ.

ಗುರುಗಳ ಮುಖದಲ್ಲಿ ಅಸಮಾಧಾನದ ಅಲೆ ಅಡ್ಡಾಡಿದವು. ಆದರೂ ಒಪ್ಪಿ ಬಂದ ಮೇಲೆ ನಮ್ಮ ಗೌರವ ನಾವು ಉಳಿಸಿ ಕೊಳ್ಳಬೇಕು ಎಂದುಕೊಂಡರೂಂತ ಕಾಣುತ್ತೆ. ಗಂಭೀರವಾಗಿ ಅತ್ತ ತಿರುಗಿ ನಿಂತರು. ಎಷ್ಟೋ ಹೊತ್ತು ಕಾಯಿಸಿದ ಮೇಲೆ ಸಿನೆಮಾ ತಾರೆ ಬಂದ. ಬಂದ ಕೂಡಲೆ ಎಲ್ಲಿತ್ತೊ ಕಾಣೆ, ಕಲ್ಲು ಹೊಡೆಸಿಕೊಂಡ ಜೇನುಗೂಡಿನ ಹಾಗೆ ಜನ ಮುತ್ತಿಕೊಂಡು ಬಂದರು. ನಟವರ್ಯ ಕಾರಿನಿಂದ ಇಳಿಯೋದೇ ಕಷ್ಟ ಆಯ್ತು. ಹೇಗೋ ಪ್ರಯಾಸಪಟ್ಟುಕೊಂಡು ಇಳಿದ. ಮುಂದೆ ಒಂದೆರಡು ಹೆಜ್ಜೆ ಇಟ್ಟು ನಮ್ಮನ್ನು ಸಮೀಪಿಸುವುದರಲ್ಲಿದ್ದ. ಅಷ್ಟರಲ್ಲಿ ಜನರ ನೂಕಾಟ, ಕೂಗಾಟ ತಡೆಯಲಾರದಷ್ಟಾಯಿತು. ಜನರನ್ನು ಹತೋ

ಟಿಗೆ ತರುವುದು ಪೊಲೀಸರಿಗೂ ಕಷ್ಟವಾಯಿತು. ಕಡೆಗೆ ತಡೆಯಲಾರದೆ ಪೊಲೀಸ್ ಇನ್ಸ್‌ಪೆಕ್ಟರ್ 'ಚಾರ್ಜ್' ಎಂದು ಜೋರಾಗಿ ಕೂಗಿ ಆಜ್ಞೆ ಮಾಡಿದ. ಕೂಡಲೇ ಪೊಲೀಸ್ ಪೇದೆಗಳು ಲಾಠಿ ಬೀಸಿದರು. ಮೊದಲ ಏಟು ನನಗೆ ! ಎರಡನೇ ಏಟು ಗದ್ದಲ ದಲ್ಲಿ ಅವರ ಗರಿಮುರಿಯಾದ ಪೇಟ, ಹಿಂದು ಮುಂದಾಗಿತ್ತು. ಕಾರ್ಯಕ್ರಮ ಮುಗಿಸಿಕೊಂಡು ಮನೆಗೆ ಬರುವಾಗ ವಿ.ಸೀ. ಹೇಳಿದರು, 'ನೋಡಯ್ಯಾ, ಯಾವುದೇ ಕಾರ್ಯಕ್ರಮಕ್ಕೆ ಹೋದರೂ ಇದು ನೆನಪಿರಲಿ ; ಯಾವನಾದರೂ ರಾಜಕಾರಣಿ ಬರ್ತಾನೆ ಅಂತಿದ್ರೆ. ಒಂದು ಗಂಟೆ ತಡವಾಗಿ ಹೋಗು, ಯಾಕೆ ಅಂದರೆ ಅವನು ಸಮಯಕ್ಕೆ ಸರಿಯಾಗಿ ಅವನಪ್ಪನಾಣೆಗೂ ಬರೋಲ್ಲ. ಯಾವನಾದರೂ ಸಿನಿಮಾತಾರೆ ಬರ್ತಾನೆ ಅಂತಿದ್ರೆ, ಒಂದು ಗಂಟೆ ಮುಂಚೆ ಹೋಗು. ಯಾಕೆ ಅಂದರೆ ಮನೆಗೆ ಹೋದ ಮೇಲೆ ನಿನ್ನ ಕಾಲುಗಳನ್ನು ಜೋಡಿಸಿಕೊಳ್ಳಬೇಕಾಗುತ್ತದೆ.'

'ಅಲ್ಲಾ ಸಾರ್, ಇಷ್ಟೂ ಜನ ನಮ್ಮನ್ನ ನೋಡಲಿಕ್ಕೆ ಬಂದಿದ್ದಾರೆ ಅಂತ ತಿಳಿದಿದ್ದೆ.'

'ನಿನ್ನ ಭ್ರಾಂತು ! '

'ಅದು ಸರಿ, ನಿಮ್ಮ ಕನ್ನಡ ಆದರ್ಶ ?'

'ಅದೂ ಅಷ್ಟೆ. ನಮ್ಮ ಕೆನ್ನೆಗೆ ನಾವೇ ಹೊಡಕೋಬೇಕು !

'ಮನಸ್ಸಿಗೆ ಸಹನೆ ಪಾಠವನ್ನೂ ಕಲಿಸಬೇಕು. ಸಂಯಮದ ಪಾಠವನ್ನೂ ಕಲಿಸಬೇಕು. ಏನೇ ಆದರೂ ನಮ್ಮ ಕರ್ತವ್ಯವನ್ನು ನಾವು ಮಾಡಿದ್ದೇವೆ ಅನ್ನೋ ತೃಪ್ತಿ ನನಗಿದೆ. ನನಗೂ ಇದ್ದರೆ ಸಂತೋಷ' ಅಂದರು.

ನೋವುಂಡು ನಲಿವು ನೀಡುವ ವಿ.ಸೀ. ಯವರ ಹಿರರಿಯ ಗುಣ ನನಗೆ ಮೆಚ್ಚಾಯಿತು. ಅವರಿಗೆ ಸಾಹಿತ್ಯ ಅಕಾಡೆಮಿ ಪುರಸ್ಕಾರ ಬಂದಿದೆ ಎಂಬ ಸುದ್ಧಿ ಬಂದ ದಿನ 'ಶುಭಾಶಯ'ಗಳನ್ನು ಹೇಳಲು ಹೋದೆ. ಆಗ ಅವರ ಮುಖದಲ್ಲಿ ಹಿಗ್ಗಿನ ಬುಗ್ಗೆಗಳು ಕುಣಿದಾಡಿದ್ದು ಕಾಣಲಿಲ್ಲ. ಆಗ ಅಂದುಕೊಂಡೆ. ದೊಡ್ಡವರು ದೊಡ್ಡವರೆ ! ಸಂಸ್ಕೃತ ಶ್ಲೋಕವೊಂದು ಹೇಳುವಂತೆ 'ಜ್ಞಾನಿಗಳು ಸುಖದಲ್ಲಾಗಲಿ, ದುಃಖದಲ್ಲಾಗಲಿ ಒಂದೇ ರೀತಿ ಇರುತ್ತಾರೆ. ಸೂರ್ಯ ಮೂಡುವಾಗಲೂ ಕೆಂಪು, ಮುಳುಗುವಾಗಲೂ ಕೆಂಪು ! ವಿ.ಸೀ. ಅಂತಹ ತುಂಬಿದ ಕೊಡ ಎಂದು !

ವಿ.ಸೀ. ಯವರೊಡನೆ ಸಂಭಾಷಿಸುವುದು ಒಂದು ಸುಶ್ರಾವ್ಯ ಸಂಗೀತ ಕೇಳಿದಂತೆ. ವಿಮರ್ಶೆ ಕುರಿತು ಅನೇಕ ಬಾರಿ ಅವ ರೊಡನೆ ಚರ್ಚಿಸಿದ್ದೇನೆ. ಅವರು ಭಾರತೀಯ ಕಾವ್ಯ ಮೀಮಾಂಸೆ, ಪಾಶ್ಚಾತ್ಯರ ಸಾಹಿತ್ಯ ವಿಮರ್ಶೆ ಓದಲು ಪ್ರೋತ್ಸಾಹಿಸುತ್ತಿ ದ್ದರು. ಅರ್ಥವಾಗದ್ದನ್ನು ಸರಳವಾಗಿ ಮನಮುಟ್ಟುವಂತೆ ವ್ಯಾಖ್ಯಾನಿಸುತ್ತಿದ್ದರು. ಆದರೆ ಅಷ್ಟೇ ಪ್ರಮಾಣದಲ್ಲಿ ಕೃತಿಯೊಂದರ ಬೆಲೆ ಕಟ್ಟುವಾಗ ನಿನ್ನದಾದ ಸೋಪಜ್ಞತೆ ಜಾಗೃತವಿರಲಿ. ಅನ್ಯರ ತತ್ವ, ಸಿದ್ಧಾಂತಗಳನ್ನಷ್ಟೇ ಮಾಪನವನ್ನಾಗಿಟ್ಟುಕೊಳ್ಳಬೇಡ.' ಎಂದು ಕಿವಿಮಾತು ಹೇಳುತ್ತಿದ್ದರು.

ಅವರ ಪುಟ್ಟ ಕೊಠಡಿ ಪುಸ್ತಕಗಳಿಂದ ತುಂಬಿರುತ್ತಿತ್ತು. ಅಲ್ಲಿ ಕುರ್ಚಿ ಮೇಜು ಯಾವುದೂ ಇಲ್ಲ. ಆ ನೆಲದ ಮೇಲೆ ಒಂದು ಮೆತ್ತೆ. ಅದರ ಮೇಲೆ ಅವರು, ಇದಿರಿನಲ್ಲಿದ್ದ ಚಾಪೆಯ ಮೇಲೆ ನಾನು, ಅತ್ತ ಇತ್ತ ಕಣ್ಣಾಡಿಸಿದರೆ ಸಾಕಷ್ಟು ಕಾಗದದ ಚೂರುಗಳು ಸಿಗುತ್ತಿದ್ದವು. 'ಇದೇನು ಸಾರ್' ಅಂದರೆ, ಇಲ್ಲಿ ಕೊಡು ಇವು ನನ್ನ ಆಸ್ತಿಗಳು, ಎಂದು ನಗುತ್ತಿದ್ದರು. ಕಾಗದದ ಚೀಟಿಗಳನ್ನು ತೆರೆದು ನೋಡಿದರೆ, ಅದರ ಮೇಲೆ ಏನೋ ಒಂದು ಅಭಿಪ್ರಾಯ, ಅನಿಸಿಕೆ, ಚಿಂತನೆ ಇಲ್ಲವೇ ಮಿಂಚಿ ಮೂಡಿದ ಒಂದು ಭಾವಗೀತ ಭಾಗ ! ನನಗೆ ಆಶ್ಚರ್ಯವಾಗುತ್ತಿತ್ತು. ಬೆರಳಗಲದ ಕಾಗದದಮೇಲೂ ಬರೆಹ ! 'ಸಾರ್, ದ್ರಾಕ್ಷಿ ದಾಳಿಂಬೆ ಹರಡಿದ ನೀವು ಈ ಚಿಟಿಕೆಗಳ ಅಕ್ಷತೆ ಚೆಲ್ಲಿದ್ದೀರಿ ಈ ಕೊಠಡಿಯಲ್ಲಿ' ಎಂದೆ. ಅದಕ್ಕೆ ಕೂಡಲೇ ನಗುತ್ತಾ ಉತ್ತರಿಸಿದರು. 'ಸರಿ ಯಾಗಿ ಹೇಳಿದೆ. ದ್ರಾಕ್ಷಿ ದಾಳಿಂಬೆ ಆರಿಸಿಕೊಂಡು ತಿನ್ನುತ್ತೇವೆ. ಮದುವೆ ಮುಂಜಿಗಳಲ್ಲಿ ಹಾಕಿದ ಅಕ್ಷತೆಯನ್ನು ತುಳಿದುಕೊಂಡು ತಿರುಗಾಡುತ್ತೇವೆ. ಕಡೆಗೆ ಪೊರಕೆಯಲ್ಲಿ ಗುಡಿಸಿ ಮೂಲೆಗೆ ತಳ್ಳುತ್ತೇವೆ. ಬಹುಶಃ ನನ್ನ ಈ ಅಕ್ಷತೆಗಳ ಗತಿಯೂ ಅದಾಗಬ ಹುದೋ ಏನೋ !

ಆಮೇಲಾಮೇಲೆ ಅವರ ಆರೋಗ್ಯವೂ ಕೆಡುತ್ತಾ ಬಂತು. ಬರವಣಿಗೆಯೂ ನಿಲ್ಲುತ್ತಾ ಹೋಯಿತು.

ಈಗಲೂ ಗುರುಪುತ್ರರಲ್ಲಿ ಪ್ರಾರ್ಥನೆ – ಅಲ್ಲಿ ಇಲ್ಲಿ ಗುರುಗಳಿದ್ದ ಆ ಕೊಠಡಿಯಲ್ಲಿ ಅಕ್ಷತೆಯ ಕಾಳು ಸಿಕ್ಕರೆ ಜೋಪಾನ ವಾಗಿ ತೆಗೆದಿಡಿ' ಎಂದು.

ಪೂಜ್ಯ ವೀ.ಸೀ.ಯವದು ನಾನು ಕಂಡಂತೆ ಬಹು ಎತ್ತರದ ನಿಲವು. ಅವರು ಕನ್ನಡದ ಸಹಸಸ್ರಕೂಟ ಚೈತ್ಯಾಲಯದ ಮಾನಸ್ತಂಭ.

# ಭವ್ಯಮಾನವಶಿಲ್ಪಿ*

---

'ಶೂನ್ಯ ಸಂಪಾದನೆಯ ವಿಮರ್ಶೆ ' ಎಂಬ ಬೃಹತ್ ಕೃತಿಯ ಮೂಲಕ ಬಹುಶ್ರುತ ವಿಮರ್ಶಕರೆಂದು ಪ್ರಸಿದ್ಧಿ ಪಡೆದ ಪ್ರೊ. ಎಸ್. ಎಸ್. ಭೂಸನೂರು ಮಠದವರು ಹುಟ್ಟಿದ್ದು ನವೆಂಬರ್, ೭, ೧೯೧೦ರಂದು ಧಾರವಾಡ ಜಿಲ್ಲಾ ರೋಣ ತಾಲ್ಲೂಕಿನ ನಿಡಗುಂದಿಯಲ್ಲಿ. ಪೂರ್ಣ ಹೆಸರು ಸಂಗಯ್ಯ ಶಿವಮೂರ್ತೆಯ್ಯ ಭೂಸನೂರಮಠ. ತಂದೆ ಶಿವಮೂರ್ತೆಯ್ಯನವರು, ತಾಯಿ ರಾಚಮ್ಮ. ಸಂಗಯ್ಯನವರಿಗೆ ಇಬ್ಬರು ಅಕ್ಕಂದಿರು, ಒಬ್ಬ ಅಣ್ಣ. ಆದರೆ ಉಳಿದವರು ಸಂಗಯ್ಯನವರೊಬ್ಬರೆ. ಅಪ್ಪನ ಎರಡನೆಯ ಹೆಂಡತಿ ಮಗನಾಗಿ. ಕಲಿತಿದ್ದು ನಿಡಗುಂದಿಯ ಕನ್ನಡಶಾಲೆಯಲ್ಲಿ. ಮಾಧ್ಯಮಿಕ ಶಾಲಾ ಶಿಕ್ಷಣ ಗದಗ ಮತ್ತು ಹುಬ್ಬಳ್ಳಿಗಳಲ್ಲಿ, ಕಾಲೇಜು ವಿಧ್ಯಾಭ್ಯಾಸ ಕೊಲ್ಲಾಪುರದಲ್ಲಿ.

ಗದಗಿನ ಇಂಗ್ಲಿಷ್ ಶಾಲೆಯಲ್ಲಿ ಅಧ್ಯಯನ, ಮನೆಯಲ್ಲಿ ಸಂಗೀತ ಶಿಕ್ಷಣ ಎರಡೂ ಕ್ರಮವಾಗಿ ನಡೆದವು. ಶಾಲಾ ಶಿಕ್ಷಣ ಮುಗಿದಿರಲಿಲ್ಲ. ಅಷ್ಟರಲ್ಲೇ ಮದುವೆ. ಸಂಗಯ್ಯ ಭೂಸನೂರಮಠರವರ ವಿವಾಹ ಅವರ ಹದಿನೇಳನೆ ವಯಸ್ಸಿನಲ್ಲಿ ಕೂಸಗಲ್ಲು ಪಾರ್ವತಿದೇವಿಯವರೊಡನೆ ನೆರವೇರಿತು. ೧೯೩೧ರಲ್ಲಿ ಮ್ಯಾಟ್ರಿಕ್ ಮುಗಿಯಿತು. ೧೯೩೩ರಲ್ಲಿ ತಂದೆ ಶಿವೈಕ್ಯರಾದರು. ಕುಂಟುತ್ತಾ ನಡೆಯುತ್ತಿದ್ದ ಶಿಕ್ಷಣಕ್ಕೆ ಸೊಂಟಮುರಿದಂತಾಯಿತು. ಆದರೂ ಪ್ರತಿಭಾವಂತ ವಿದ್ಯಾರ್ಥಿ ಸಂಗಯ್ಯನಿಗೆ ವಿದ್ಯಾರ್ಥಿವೇತನ ದೊರೆಯಿತು. ಎ.ಟಿ. ಸಾಸನೂರ, ಪತ್ರಾವಳಿ, ಸ.ಸ.ಮಾಳವಾಡ, ಕೆ.ಜಿ. ಕುಂದಣಕಾರ ಮೊದಲಾದ ಗುರುಗಳ ಕೃಪೆ ಮತ್ತು ಆಶೀರ್ವಾದಗಳ ಬೆಂಬಲದಿಂದ ಬಿ.ಎ. ಮುಗಿಸಿ, ಕೊಲ್ಲಾಪುರದ ಕಾಲೇಜಿಗೆ ಸೇರಿ, ಮುಂಬಯಿ ವಿಶ್ವವಿದ್ಯಾಲಯದಿಂದ ಕನ್ನಡ ಎಂ. ಎ. ಪದವಿ ಪಡೆದರು ; ಪ್ರಥಮ ರ್‍ಯಾಂಕ್ ಗಳಿಸಿದರು.

ಬೆಳಗಾವಿಯ ಲಿಂಗರಾಜಾ ಕಾಲೇಜ್, ಧಾರವಾಡದ ಕರ್ನಾಟಕ ಕಾಲೇಜುಗಳಲ್ಲಿ ಅಧ್ಯಾಪಕ ವೃತ್ತಿ ಆರಂಭವಾಯಿತು. ಹುದ್ದೆ ಹಂಗಾಮಿಯಾದ್ದರಿಂದ ಕೆಲಸ ಹೋಯಿತು. ಧರ್ಮಪತ್ನಿ ಪಾರ್ವತಮ್ಮನವರು ರಾಜಶೇಖರ, ದಾಕ್ಷಾಯಿಣಿ ಮತ್ತು ಮಹಾದೇವಿ ಎಂಬ ಮೂವರು ಮಕ್ಕಳನ್ನು ಬಿಟ್ಟು ೧೯೪೨ರಲ್ಲಿ ಲಿಂಗದಲಾದರು. ದೈವ ಸಹಾಯದಿಂದ ಲಿಂಗರಾಜಾ ಕಾಲೇಜಿನಲ್ಲಿ ಖಾಯಂ ಕೆಲಸ ಸಿಕ್ಕಿತು. ಎರಡನೆಯ ಮದುವೆಯೂ ಆಯಿತು ೧೯೪೪ರಲ್ಲಿ ಕೋಟಬಾಗಿ ಹಿರೇಮಠದ ಗೌರದೇವಿಯವರೊಡನೆ. ಈ ದಂಪತಿಗಳಿಗೆ ವಿಜಯಾ ಮತ್ತು ಸುಭಾಷ್ ಎಂಬ ಒಂದು ಹೆಣ್ಣು, ಒಂದು ಗಂಡು ಮಕ್ಕಳಾದವು. ಸಂಗಯ್ಯನವರು ಇಪ್ಪತ್ತಮೂರು ವರ್ಷಗಳವರೆಗೆ ಬೆಳಗಾವಿಯ ಲಿಂಗರಾಜಾ ಕಾಲೇಜಿನಲ್ಲಿ ಸೇವೆ ಸಲ್ಲಿಸಿ, ೧೯೬೬ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದಲ್ಲಿ ಕನ್ನಡ ಪ್ರಾಧ್ಯಾಪಕರಾದರು. ೧೯೬೯ರಲ್ಲಿ ಅವರ ವಾತ್ಸಲ್ಯದೇವತೆ ತಾಯಿ ರಾಜಮ್ಮ ಕೈಲಾಸವಾಸಿಗಳಾದರು. ೧೯೭೬ರಲ್ಲಿ ಸೇವೆಯಿಂದ ಸಂಪೂರ್ಣ ನಿವೃತ್ತಿ ಹೊಂದಿ ಧಾರವಾಡದಲ್ಲಿ 'ಪರಂಜ್ಯೋತಿ'ಯಲ್ಲಿ ಅಂದರೆ ತಮ್ಮ ನಿವಾಸದಲ್ಲಿ ವಿಶ್ರಾಂತರಾಗಿದ್ದರು. ಆದರೆ ೬, ನವೆಂಬರ್ ೧೯೯೦ರಲ್ಲಿ ಶಿವನಲ್ಲಿ ಸೇರಿದರು, ಶಿವವೆ ತಾವಾದರು.

ಪ್ರೊ. ಸಂ.ಶಿ. ಭೂಸನೂರಮಠರವರ ಶೂನ್ಯ ಸಂಪಾದನೆಯ ಪರಾಮರ್ಶೆ ೧೯೭೨ರ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳಿಸಿದ್ದರೆ, ಅವರ ಭವ್ಯಮಾನವ ೧೯೮೪ರ ರಾಜ್ಯ ಸಾಹಿತ್ಯ ಅಕಾಡೆಮಿ ವಿಶೇಷ ಬಹುಮಾನ ಪಡೆದಿದೆ.

ಗ್ರಂಥ ಸಂಪಾದನೆಯಲ್ಲಿ ಸಂ.ಶಿ. ಭೂಸನೂರಮಠರವರದು ಬಹು ದೊಡ್ಡ ಹೆಸರು. ಹಳಗನ್ನಡ ಕಾವ್ಯಗಳನ್ನು ಅಚ್ಚುಕಟ್ಟಾಗಿ ಸಂಪಾದಿಸಿ ಕೊಡುವಲ್ಲಿ ಅವರು ಸಮರ್ಥರು. ಆ ಕ್ಷೇತ್ರದಲ್ಲಿ ಕೃಷಿ ಮಾಡ ಬಯಸುವವರಿಗೆ ಭೂಸನೂರಮಠರವರು ಆದರ್ಶ ಮಾರ್ಗದರ್ಶಕರು. ಪ್ರಾಚೀನ ಕಾವ್ಯಗಳನ್ನು, ಅವುಗಳ ವಂಶಾನುಕ್ರಮದಲ್ಲಿ ಜೋಡಿಸಿಕೊಂಡು, ಅಧ್ಯಯನ ಯೋಗ್ಯ ಸಂಕೇತಗಳನ್ನಿಟ್ಟುಕೋಂಡು, ಸ್ಖಾಲಿತ್ಯವಿದ್ದೆಡೆಯಲ್ಲಿ ಸೂಕ್ತ ಶಬ್ದವನ್ನು ಪ್ರತಿಯೋಜಿಸಿ, ಅದಕ್ಕೊಂದು ಅರ್ಥಪೂರ್ಣ ಪ್ರಸ್ತಾವನೆಯನ್ನು ಬರೆದು, ಉಪಯುಕ್ತ ಅರ್ಥಕೋಶದೊಂದಿಗೆ ಗ್ರಂಥವನ್ನು ಪರಿಷ್ಕರಿಸಿ ಪ್ರಕಟಿಸುತ್ತಾರೆ. ಪ್ರತಿ ಸಂಪಾದನ ಗ್ರಂಥವೂ

---

*ಲಿಂಗೈಕ್ಯ ಶ್ರೀ ಸಂ.ಶಿ. ಭೂಸನೂರಮಠರವರು. 'ಗೌರವ' ಅವರಿಗರ್ಪಿಸಿದ ಅಭಿನಂದನಾ ಗ್ರಂಥ. ಅದಕ್ಕಾಗಿ ಬರೆದ ಮತ್ತು ಅವರನ್ನು ೨೧-೧೨-೧೯೮೨ ಮಂಗಳವಾರ ಧಾರವಾಡದಲ್ಲಿ 'ಪರಂಜ್ಯೋತಿ'ಯಲ್ಲಿ ಸಂದರ್ಶಿಸಿದೆ. ಅಂದಿನ ಸಂದರ್ಶನದ ಸಾರ ಈ ಪರಿಚ್ಛೇದ.

ಅವರ ವಸ್ತುನಿಷ್ಠ ವಿಮರ್ಶೆಯಿಂದಾಗಿ ತನ್ನ ತೂಕವನ್ನು ಹೆಚ್ಚಿಸಿಕೊಂಡಿದೆ. ಅಂದಮೇಲೆ ಸಂಗಯ್ಯ ಭೂಸನೂರಮಠರವರನ್ನು ಗ್ರಂಥಸಂಪಾದನೆಯ ಕ್ಷೇತ್ರವಲ್ಲದೆ ಬೇರೆಲ್ಲಿ ಗುರುತಿಸಲು ಸಾಧ್ಯ ?

ಗ್ರಂಥ ಸಂಪಾದನೆ ಕಲೆಯೂ ಹೌದು, ಶಾಸ್ತ್ರವೂ ಹೌದು. ಆದರೆ ಮೂಲತಃ ಅದು ಶುದ್ಧಶಾಸ್ತ್ರ. ಅದನ್ನು ಸಿದ್ಧಪಡಿಸುವಲ್ಲಿ ಪಾಂಡಿತ್ಯ ಪ್ರತಿಭೆಗಳೆರಡೂ ಇರಬೇಕು. ಆ ಪರಿಣತಿ ಇಲ್ಲದವನಿಗೆ ಆ ಶಾಸ್ತ್ರ ಸಿದ್ಧಿಸದು. ಗ್ರಂಥ ಸಂಪಾದನಕಾರನದು ಸೃಜನಶೀಲ ರಜಕ (Creative writer)ನಿಗಿಂತಲೂ ಹೆಚ್ಚು ಹೊಣೆಗಾರಿಕೆಯಿಂದ ಕೂಡಿದ್ದು. ಹತ್ತಾರು ಹಸ್ತಪ್ರತಿಗಳನ್ನಿಟ್ಟುಕೊಂಡು ಅವುಗಳನ್ನು ವಂಶಾನುಕ್ರಮದಲ್ಲಿ ಜೋಡಿಸಿಕೊಂಡು ಪ್ರತಿಯೊಂದಕ್ಕೂ ಒಂದೊಂದು ಸಂಕೇತವನ್ನಿತ್ತು ಭಿನ್ನಪಾಠಗಳನ್ನು ಓದಿ, ಸ್ವೀಕೃತ ಪಾಠವನ್ನು ಪ್ರಸಿದ್ಧಿ ಅದರ ಔಚಿತ್ಯದ ಬಗ್ಗೆ ಸಮರ್ಥನೆ ನೀಡಿ ಪ್ರಕಟಿಸುವವರೆಗೆ ಅವನ ಜವಾಬ್ದಾರಿ ಇದೆ. ಆ ಘಟ್ಟದ ತನಕ ಅವನು ಶಾಸ್ತ್ರಕಾರ. ಅಲ್ಲಿಂದ ಮುಂದೆ ಅವನು ಕಲಾವಿದ. ಅಂದರೆ ಗ್ರಂಥ ಸಂಪಾದನಕಾರನು ತಾನು ಸಂಪಾದಿಸಿದ ಚೆಲುವು– ಚದುರುಗಳನ್ನು ಹೆಕ್ಕಿ ತೆಗೆದು ಪಾತ್ರಪದರುಗಳನ್ನು ತೆರೆದು ಕವಿಯ ಧ್ಯೇಯ ಧೋರಣೆ ದರ್ಶನಾದಿಗಳನ್ನು ಎಳೆ ಎಳೆಯಾಗಿ ಬಿಡಿಸಿ ತೋರಿಸುವಲ್ಲಿ ಒಂದು ಪ್ರಸ್ತಾವನೆ ಸಿದ್ಧವಾಗುತ್ತದೆ. ಅದು ಗ್ರಂಥ ಸಂಪಾದನಕಾರನ ಸೋಪಜ್ಞತೆಗೆ ನಿಂತ ಜ್ವಲಂತ ನಿದರ್ಶನವಾಗುತ್ತದೆ. ಗ್ರಂಥಕಾರನನ್ನು ಗುರುತಿಸುವಲ್ಲಿ ಸ್ಖಾಲಿತ್ಯಗಳನ್ನು ಸರಿಪಡಿಸುವಲ್ಲಿ ಅವನ ಪ್ರತಿಭೆ ಸದಾ ಎಚ್ಚೆತ್ತಿರುತ್ತದೆ. ಮೊದಲೇ ಹೇಳಿದಂತೆ ಅವನ ಕರ್ತವ್ಯ ಅತ್ಯಂತ ಜವಾಬ್ದಾರಿಯಿಂದ ಕೂಡಿದ್ದು, ತಾನೂ ಬದುಕಿ ಪೂರ್ವಕವಿಯನ್ನೂ ಬದುಕಿಸಬೇಕಾಗುತ್ತದೆ. ಅಂತೆಯೇ ಅವನಲ್ಲಿ ಪರಕಾಯಪ್ರವೇಶಮಾಡಬಲ್ಲ ಅಸಮಾನ್ಯ ವಿದ್ಯೆಯು ಇರಬೇಕು. ಆಗಲೇ ಅವನ ಕಾರ್ಯ ಮೆಚ್ಚಿತವಾಗುವುದು. ಪ್ರತಿಭೆ, ವ್ಯುತ್ಪತ್ತಿ, ಮತ್ತು ಅಭ್ಯಾಸಗಳೆಂಬ ಕಾವ್ಯಹೇತುಗಳು ಕಲೆಗಷ್ಟೇ ಮೀಸಲಿಲ್ಲ. ಗ್ರಂಥ ಸಂಪಾದಕನಿಗೂ ಬೇಕು. ರಾಜಶೇಖರನು ಹೇಳುವಂತೆ ಚಿತ್ತಸ್ವಾಸ್ಥ್ಯ, ಪ್ರತಿಭೆ, ಅಭ್ಯಾಸ, ಭಕ್ತಿ, ವಿದ್ವತ್ತು, ಬಹುಶ್ರುತತ್ವ, ಅಗಾಧ ಸ್ಮೃತಿಶಕ್ತಿ, ಅದಮ್ಯ ಉತ್ಸಾಹ – ಈ ಅಷ್ಟಕಾತೃಕೆಯರು ಸೃಜನಶೀಲ ಕವಿಯ ತಾಯಂದಿರು. ಇವರು ಗ್ರಂಥಸಂಪಾದಕನ ಮಾತೆಯರೂ ಹೌದು.

ಈ ಹಿನ್ನಲೆಯಲ್ಲಿ ಭುಸನೂರಮಠರವರ ಕೆಲವು ಸಂಪಾದಿತ ಕೃತಿಗಳ ಮೇಲೆ ನಮ್ಮ ದೃಷ್ಟಿ ಹರಿಸೋಣ.

ಘನಮಠದ ಶಿವಯೋಗಿಗಳು ರಚಿಸಿದ ಹತ್ತಾರು ತತ್ವಪದಗಳ ಸುಂದರ ಸಂಗ್ರಹವೇ 'ಭಕ್ತಿ ಸುಧಾಸಾರ'. ಭಕ್ತಿ ಇದರ ಮೂಲದ್ರವ್ಯ. ಅದರಲ್ಲೂ ಬಸವಣ್ಣನ ಬಗೆಗಿನ ಭಕ್ತಿ ಇಲ್ಲಿ ಭಾಗೀರಥಿಯಾಗಿ ಹರಿದಿದೆ. ಘನಮಠಾರ್ಯರ ಸಂಗೀತಪ್ರಜ್ಞೆಗೆ ಇದು ಸಾಕ್ಷಿಯಾಗಿದೆ. ಇದನ್ನು 'ಭಕಿ ಸುಧಾಸಾರ' ಎನ್ನುವುದಕ್ಕಿಂತ 'ಘನ ಮಠಾರ್ಯರ ತತ್ವಪದಗಳು' ಎಂದಿದ್ದರೆ ಒಳಿತಿತ್ತು ಎಂದು ಅಭಿಪ್ರಾಯಪಟ್ಟಿದ್ದಾರೆ ಸಂಪಾದಕರು.

ಕ್ರಿ.ಶ. ೧೬೫೦ರದ್ದೆಂದು ಹೇಳುವ ಸಿದ್ಧನಂಜೇಶನ 'ಗುರುರಾಜ ಚಾರಿತ್ರ' ಒಂದು ಧಾರ್ಮಿಕ ಗ್ರಂಥ. ಇದು ವೀರಶೈವದ ಒಂದು ಇತಿಹಾಸ ಗ್ರಂಥವೂ ಹೌದು. ಹನ್ನೆರಡನೆಯ ಶತಮಾನದ ವೀರಶೈವ, ಹದಿನೈದನೆಯ ಶತಮಾನದ ವಿರಕ್ತ ಪಂಥ. ಅನಂತರದ ಅದರ ಬೆಳವಣಿಗೆ ಇತ್ಯಾದಿಗಳನ್ನು ಕುರಿತು ಬರೆದಿದ್ದಾನೆ ಸಿದ್ಧನಂಜೇಶ. ಸಂಪಾದಕ ಭೂಸನೂರಮಠರು ಇದಕ್ಕೆ ತೊಂಬತ್ತು ಪುಟಗಳಷ್ಟು ಸುವಿಸ್ತಾರ ಪ್ರಸ್ತಾವನೆ ಬರೆದಿದ್ದಾರೆ.

ಕ್ರಿ.ಶ. ೧೫೭೫ರವೆನ್ನಲಾದ ಕವಿ ಗೌರಾಂಕನ 'ಮೋಳಿಗಯ್ಯನ ಪುರಾಣ' ಮತ್ತೊಂದು ವೀರಶೈವ ಧಾರ್ಮಿಕ ಗ್ರಂಥ. ಈ ಸಾಂಗತ್ಯ ಕೃತಿಗೆ ವಿಸ್ತೃತ ಪ್ರಸ್ತಾವನೆ ಬರೆಯುತ್ತಾ ಸಂಪಾದಕರು ಸಾಂಗತ್ಯ ಛಂದಸ್ಸಿನ ಅನೇಕ ಮಗ್ಗುಲುಗಳನ್ನು ಪರಿಚಯಿಸಿದ್ದಾರೆ. ದಿ. ಉತ್ತಂಗಿಯವರ ಸಹಸಂಪಾದಕತ್ವದಲ್ಲಿ ಮೋಳಿಗೆ ಮಾರಯ್ಯ ಮತ್ತು ರಾಣಿ ಮಹಾದೇವಿಯವರ ವಚನಗಳನ್ನು ಅಚ್ಚುಕಟ್ಟಾಗಿ ಸಂಕಲಿಸಿ, ಸಂಪಾದಿಸಿಕೊಟ್ಟಿದ್ದಾರೆ.

ವಿಜಯನಗರದ ಸಾಮ್ರಾಟ ಇಮ್ಮಡಿ ಪ್ರೌಢದೇವರಾಯನ ಕಾಲ (ಕ್ರಿ.ಶ. ೧೪೮೯–೧೪೪೬) ವೀರಶೈವಧರ್ಮ, ಸಾಹಿತ್ಯ ಸಂಸ್ಕೃತಿಗಳ ಪುನರುತ್ಥಾನದ ಕಾಲ. ಅಂದು ಬೆಳಕು ಕಂಡ ಕೃತಿಗಳಲ್ಲಿ ಕಲ್ಲುಮಠದ ಪ್ರಭುದೇವನ 'ಲಿಂಗಲೀಲಾವಿಲಾಸ ಚಾರಿತ್ರ' ವನ್ನೂ ಜಕ್ಕಣಾಚಾರ್ಯರ 'ಏಕೋತ್ತರ ಶತಸ್ಥಲ' ವನ್ನೂ ಸಂಪಾದಿಸಿ ಪ್ರಸಿದ್ದಿಸಿದ್ದಾರೆ ಭೂಸನೂರಮಠರು.

ಮೇಲಿನವೆರಡೂ ವೀರಶೈವಪರವಾದ ಧಾರ್ಮಿಕ ಗ್ರಂಥಗಳು. ಇವುಗಳೊಡನೆ ಸೇರುವ ಮತ್ತೊಂದು ಮಹತ್ವದ ಗ್ರಂಥ ಕ್ರಿ.ಶ. ೧೫೭೫ರಲ್ಲಿದ್ದ ಅದೃಶ್ಯ ಕವಿಯ 'ಪ್ರೌಢರಾಯನ ಕಾವ್ಯ' ಸಂಪಾದಕರು ಇದಕ್ಕೆ ಒಂದು ಸುದೀರ್ಘ ಪ್ರಸ್ತಾವನೆ ಬರೆದಿದ್ದಾರೆ. ಆಧುನಿಕ ರೀತಿಯ ವೈಜ್ಞಾನಿಕ ಗ್ರಂಥ ಸಂಪಾದನೆಗೆ ಇದು ಮಾದರಿಯಾಗಿದೆ.

ಅರವತ್ತಾರು ವಚನಕಾರರ ೨೧೩೫ ವಚನಗಳ ಬೃಹತ್ ಸಂಗ್ರಹ 'ವಚನ ಸಾಹಿತ್ಯ ಸಂಗ್ರಹ.' ಔಚಿತ್ಯಪೂರ್ಣ ಶೀರ್ಷಿಕೆಗಳೊಂದಿಗೆ ಇಪ್ಪತ್ತೊಂದು ಅಧ್ಯಾಯಗಳಲ್ಲಿ ಇದನ್ನು ಸಂಯೋಜಿಸಿದ್ದಾರೆ.

ಇಂತಹ ವೈಜ್ಞಾನಿಕ ಸಂಪಾದನೆ, ತಲಸ್ಪರ್ಶಿ ಅಧ್ಯಯನ ಇವುಗಳಿಂದಾಗಿ ಪ್ರೊ. ಭೂಸನೂರಮಠರು ನಿಷ್ಠಾವಂತ ಸಂಶೋಧಕ, ಪ್ರಾಮಾಣಿಕ ಗ್ರಂಥಸಂಪಾದನಕಾರ, ವಸ್ತುನಿಷ್ಠ ದೃಷ್ಟಿಯುಳ್ಳ ವಿಮರ್ಶಕ ಮತ್ತು ದಾರ್ಶನಿಕ ಕವಿ ಎಂಬ ಗೌರವಕ್ಕೆ ಪಾತ್ರರಾಗಿದ್ದಾರೆ. ಇವರು ಪರಿಚಿತರಿಗೆ ಪ್ರಕಾಂಡ ಪಂಡಿತರು, ಅಪರಿಚಿತರಿಗೆ ಸಾಕ್ಷಾತ್ ಮರುಳು ಶಂಕರದೇವ !

ಭೂಸನೂರಮಠರು ಶ್ರೇಷ್ಠ ವಿದ್ವಾಂಸರು, ಬಹುಶ್ರುತರು, ಸಮರ್ಥ ಗ್ರಂಥ ಸಮಪಾದನಕಾರರು ಎಂಬುದಕ್ಕೆ ಗೂಳೂರು ಸಿದ್ಧವೀರಣ್ಣೊಡೆಯನ ಶೂನ್ಯಸಂಪಾದನೆ ನೋಡಬೇಕು. ಪಾಠ ಪರಿಷ್ಕರಣದಲಿ, ಪಥ ನಿರ್ವಹಣೆಯಲ್ಲಿ, ಕಾಲ ದೇಶ ನಿರ್ಣಯದಲ್ಲಿ ತುಂಬಾ ಖಚಿತತೆ ಇದೆ. ಅಧ್ಯನದಲ್ಲಿ ಅಚ್ಚುಕಟ್ಟಿದೆ. ಇದರ ಜೊತೆಯಲಿ ವಿವೇಚಿಸಬೇಕಾದ ಕೃತಿ ಶೂನ್ಯ ಸಂಪಾದನೆಯ ಇಂಗ್ಲೀಷ್ ಅನುವಾದ ಪ್ರೊ. ಮೆನಜಿಸ್‌ರವರ ಸಹಯೋಗದಲ್ಲಿ ಶ್ರೇಷ್ಠಮಟ್ಟದ ಭಾಷಾಂತರ ಸಂಪುಟಗಳನ್ನು ಹೊರತಂದಿದ್ದಾರೆ ಭೂಸನೂರಮಠರವರು.

ಗೂಳೂರು ಸಿದ್ಧವೀರಣ್ಣೊಡೆಯನ ಸೂನ್ಯಸಂಪಾದನಾ ಸಂದರ್ಭ ಕುರಿತು ಸಂಪಾದಕರಿಂದಲೇ ಕೆಲವು ಮಾತುಗಳು[೧].
'ಓದು ನನ್ನ ಹವ್ಯಾಸ, ಸದಾಶಿವನ ಪೂಜೆ ಬೇರೆಯಲ್ಲ ನನ್ನ ದೃಷ್ಟಿಯಲ್ಲಿ. ಆದರೆ ಓದಿದ ಓದು ಕಬ್ಬಿನ ಸಿಪ್ಪೆಯಾಗಬಾರದು, ರಸವಾಗಬೇಕು, ರಕ್ತವಾಗಬೇಕು ಎಂಬ ಹಂಬಲ ನನ್ನದು. ಓದಿದೆ ಶುದ್ಧಸಾಹಿತ್ಯವನ್ನು, ವಿಶ್ವಜಗತ್ತಿನ ತೀರ್ಥಸಾಹಿತ್ಯವನ್ನು, ವೇದ ಉಪನಿಷತ್ತುಗಳು, ಪ್ಲೇಡೊ ಸಂಭಾಷಣೆ, ಪ್ರಭುದೇವರ ಶೂನ್ಯಸಂಪಾದನೆ ನನ್ನಂತರಂಗದ ಹಸಿವಿಗೆ ಆಹಾರವಾದವು. ಅಧ್ಯಯನಗೈದುದನ್ನು ಅರಗಿಸಿಕೊಂಡೆ. ನನ್ನಾತ್ಮ ವೃದ್ಧಿಯಾಯಿತು. ಶಿವದ ಸ್ವಾಗತಕ್ಕೆ ಸಿದ್ಧವಾಯಿತು.

'ಬೆಳಗಾವಿಯ ಲಿಂಗರಾಜ ಕಾಲೇಜಿನಲ್ಲಿ ಅಧ್ಯಾಪಕನಾಗಿ ಸೇವೆ ಸಲ್ಲಿಸುವ ಭಾಗ್ಯ ನನ್ನದಾಯಿತು. ಅಧ್ಯಾಪನದ ಜೊತೆಯಲ್ಲಿ ನನ್ನ ನಿತ್ಯಕಾಯವೆನಿಸಿದ ಅಧ್ಯಯನವನ್ನು ಮುಂದುವರೆಸಿದೆ. ಮತ್ತೆ ಜೊತೆಗೂಡಿತು ಬರೆಹ. ಶಿವಸಮಯ ಸಂಜೀವಿನಿ ಎನಿಸಿದ 'ಏಕೋತ್ತರಶತಸ್ಥಲ'ವನ್ನು ಸಂಪಾದಿಸುವ ಗೀಳು ಹಿಡಿಯಿತು. ಹಸ್ತಪ್ರತಿ ಓಲೆಪ್ರತಿಗಳನ್ನು ಸಂಗ್ರಹಿಸಿ ಅಭ್ಯಾಸಕ್ಕೆ ಕುಳಿತೆ.

'ಅಷ್ಟರಲ್ಲಿ ಕರೆ ಬಂತು – ರಾವೂರ ಶ್ರೀ ಸಿದ್ಧಲಿಂಗೇಶ್ವರಮಠ ಮತ್ತು ಆದವಾನಿಯ ಕಲ್ಲುಮಠದ ಅಧಿಪತಿಗಳಿಂದ. ಸನ್ನಿಧಿಯಲ್ಲಿ ಶರಣು ಸಮರ್ಪಿಸಿದಾಗ ಅಪ್ಪನವರ ಅಪ್ಪಣೆಯಾಯಿತು –"ನೀನು ಗೂಳುರು ಸಿದ್ಧರವೀರಣ್ಣೊಡೆಯರು ಸಂಗ್ರಹಿಸಿದ ಪ್ರಭುದೇವರ ಶೂನ್ಯಸಂಪಾದನೆ"ಯನ್ನು ಮುಗಿಸು" ಎಂದು."ಏಕೋತ್ತರ ಶತಸ್ಥಲದ ಆಶಯವನ್ನು ಮುಂದಿಟ್ಟೆ. ಶ್ರೀಗಳವರ ಚಿತ್ತಕ್ಕೆ ಅದು ಒಪ್ಪಿತವಾಗಲಿಲ್ಲ. ಅವರ ನಿರ್ಧಾರದ ನುಡಿ ನನಗೆ ಶಿರೋಧಾರ್ಯವಾಯಿತು. ಪ್ರಭುದೇವರ ಶೂನ್ಯ ಸಂಪಾದನೆಯ ಮಹಾಮಣಿಹದಲ್ಲಿ ಉದ್ಯುಕ್ತನಾದೆ.

'ಗ್ರಂಥಸಂಪಾದಕನ ಪ್ರಥಮ ಕರ್ತವ್ಯ ಹಸ್ತಪ್ರತಿಗಳ ಸಂಗ್ರಹಣ ತಾನೆ. ಆ ಕಾರ್ಯದಲ್ಲಿ ತೊಡಗಿದೆ. ಸಂಪಾದನೆಗೆ ಸಂಬಂಧಿಸಿದಂತೆ ಸುಮಾರು ೨೧ ಹಸ್ತಪ್ರತಿಗಳನ್ನು (ತಾಡವೋಲೆ ಮತ್ತು ಕಾಗದದ ಪ್ರತಿಗಳನ್ನು) ಸಂಗ್ರಹಿಸಿದೆ. ರಾವೂರ ಮಠದ ಶ್ರೀಗಳವರು ಐದು ಓಲೆಗ್ರಂಥಗಳನ್ನು ಒದಗಿಸಿದರು. ಪ್ರೊ. ಡಿ.ಎಲ್. ನರಸಿಂಹಾಚಾರ್ಯರು ತಮ್ಮಲ್ಲಿದ್ದ ಹಸ್ತಪ್ರತಿಯನ್ನು ಕಳುಹಿಸಿಕೊಟ್ಟರು. ಶಿವಯೋಗಮಂದಿರದ ಪ್ರತಿ ಸಿಕ್ಕಿತು. ಗುಮ್ಮಳಾಪುರದ ಸಿದ್ಧಲಿಂಗದೇವನ ಕೃತಿಯೂ ಲಭಿಸಿತು. ಕೆಂಚವೀರಣ್ಣೊಡೆಯ, ಹಲಗೆದೇವ ಮೊದಲಾದ ಮೂರುನಾಲ್ಕು ಜನರ ಅಪ್ರಬುದ್ಧ, ಅಸಂಬದ್ಧ ಸಂಪಾದನೆಯ ಹಸ್ತಪ್ರತಿಯನ್ನೂ ತರಿಸಿಕೊಂಡೆ. ಮೈಸೂರಿನ ಪ್ರಾಚ್ಯ ಸಂಶೋಧನಾಲಯದಿಂದ, ಸಂಪಾದನಾಕಾರ್ಯಕ್ಕೆ ಉಪಯುಕ್ತವಾದ ಸಮಸ್ತ ಸಾಧನೆ ಸಾಮಗ್ರಿಗಳೂ ಸಂಗ್ರಹವಾದವು ಸಕಾಲದಲ್ಲಿ. ಕೆಲವು ಪ್ರತಿಗಳನ್ನು ಮಾತ್ರ ನನ್ನ ಆಧ್ಯಯನದ ಆಕರಗಳನ್ನಾಗಿ ಸ್ವೀಕರಿಸಿದೆ. ಕ್ರಮವಾಗಿ ಅವುಗಳನ್ನು ಪೀಳಿಗೆಯ ಪ್ರಕಾರ ಜೋಡಿಸಿಕೊಂಡೆ. 'ಅ ಆ ಇ ಈ' ಇತ್ಯಾದಿ ಸಂಜ್ಞೆಗಳನ್ನಿಟ್ಟುಕೊಂಡು ಸಂಪಾದನೆಯ ಕಾರ್ಯದಲ್ಲಿ ತೊಡಗಿದೆ.

---

[೧] ಈ ಮುಂದಿನ ಭಾಗ ಧಾರವಾಡದಲ್ಲಿ ಅವರ ನಿವಾಸದಲ್ಲಿ ೩–೧೧–೧೯೮೭ರಲ್ಲಿ ಸಂಸರ್ಶಿಸಿದಾಗ ಹೇಳಿದ್ದು. ಅದನ್ನಿಲ್ಲಿ ಸಂಗ್ರಹಿಸಿದ್ದೇನೆ – (ಸಂ)

‘ಆದರೆ ಸಂಪಾದನಾಕಾರ್ಯಕ್ಕೆ ಕಾಲ ಕೂಡಿ ಬಂದಿರಲಿಲ್ಲ ಎಂದು ಕಾಣುತ್ತದೆ. ಆರಂಭದಲ್ಲೇ ಬಾಲಗ್ರಹಪೀಡೆ ಪಕ್ಕಾಯಿತು. ಹಿರಿಯ ವಿದ್ವಾಂಸರೊಬ್ಬರು ಶ್ರೀಗಳವರಲ್ಲಿ ಅರಿಕೆ ಮಾಡಿಕೊಂಡರು –”ಸ್ವಾಮೀಜಿ, ಶೂನ್ಯಸಂಪಾದನೆಯ ಕಾರ್ಯ ಸಾಮಾನ್ಯವಾದುದಲ್ಲ. ಅದಕ್ಕೆ ಕನಿಷ್ಠ ಪಕ್ಷ ೪–೫ ಮಂದಿ ವಿದ್ವಾಂಸರಾದರೂ ಬೇಕು. ಅವರಿಂದಾಗಿ ಒಂದು ಸಮಿತಿ ಸಿದ್ಧವಾಗಬೇಕು’ ಎಂದು.

‘ಕಾರ್ಯರೂಪಕ್ಕೆ ಬರುವ ಮುನ್ನ ಈ ಸಲಹೆ ನನ್ನ ಬಳಿ ಬಂತು. ಈ ಜನ ಏನು ಮಾಡಬಲ್ಲರು, ಎಷ್ಟು ಮಾಡಬಲ್ಲರು ಎಂಬ ಕಲ್ಪನೆ ನನಗಿತ್ತು. ನಾನು ಹತ್ತರಲ್ಲಿ ಹನ್ನೊಂದನೆಯವನಾಗಿ ‘ಉಧೋ ಉಧೋ’ ಎನ್ನಬಾರದೆಂದು ನಿರ್ಧರಿಸಿದೆ. ಅದಕ್ಕಾಗಿ ಸ್ಪಷ್ಟವಾಗಿ ಹೇಳಿದೆ :”ಕೆಲಸ ಆಗಬೇಕು ಎಂಬ ಇಚ್ಛೆ ಇದೆಯೋ ಇಲ್ಲವೋ ? ಆಗಬಾರದು ಎಂದಿದ್ದಲ್ಲಿ ಸಮಿತಿ ರಚನೆ ಮಾಡಬಹುದು ; ಆಗಬೇಕು ಎನ್ನುವುದಿದ್ದರೆ ನನ್ನ ಕೈಗೊಪ್ಪಿಸಿ ನಿಶ್ಚಿಂತರಾಗಿರಿ’ ಎಂದು.

“ಶ್ರೀಗಳವರು ಸಂಪೂರ್ಣ ಭರವಸೆ ಇಟ್ಟರು ನನ್ನಲ್ಲಿ. ಎಲ್ಲವನ್ನೂ ನನಗೆ ವಹಿಸಿದರು. ನಾನು ಪಾಠಾಂತರಗಳನ್ನು ಹಾಕತೊಡಗಿದೆ, ಪರಿಷ್ಕರಿಸಿದೆ. ಹಮ್ಮಿಕೊಂಡ ಕಾರ್ಯವನ್ನು ಆಗುಮಾಡಿದೆ.

‘ನನ್ನ ಸಂಪಾದನೆ ಪ್ರಕಟವಾದುದು ೧೯೫೮ರಲ್ಲಿ. ಅಂದು ಸಂಪಾದನಾಶಾಸ್ತ್ರ ಕನ್ನಡದಲ್ಲಿ ಹುಟ್ಟೇ ಇರಲಿಲ್ಲ. ಆದರೆ ಪ್ರಾಚೀನ ಗ್ರೀಕರಲ್ಲಿ ಪ್ರಚಲಿತವಿದ್ದ ಈ ಶಾಸ್ತ್ರವನ್ನು ಆಧರಿಸಿ ಡಾ. ಎಸ್. ಎಂ. ಕತ್ರೆಯವರು Introduction to Indian Textual Criticism’ ಎಂಬ ಗ್ರಂಥವನ್ನು ೧೯೪೧ರಲ್ಲಿ ಪ್ರಕಟಪಡಿಸಿದ್ದರು. Textual Criticism ಸಂವಾದಿಯಾಗಿ ಕನ್ನಡದಲ್ಲಿ ‘ಗ್ರಂಥಸಂಪಾದನೆ’ ಹುಟ್ಟಿಕೊಂಡಿತು.

ಗ್ರೀಕ್ ಮತ್ತು ಲ್ಯಾಟೀನ್ ಗ್ರಂಥಗಳ ಸಂಪಾದನೆಯಲ್ಲಿ ನಮೂದಿಸಿರುವ (೧) ಸಾಮಗ್ರಿ, ಸಂಗ್ರಹಣ (Heuristics) (೨) ವಂಶಾವಳಿ ನಿರ್ಣಯ (Stemma Codicum) (೩) ಪಾಠ ಸಂಪ್ರದಾಯ ನಿರ್ಣಯ (Recensio) (೪) ಪಾಠ ಪರಿಷ್ಕರಣ (Emendation) (೫) ಉನ್ನತ ವಿಮರ್ಶೆ (Higher Criticism) ಇವೇ ಮೊದಲಾದ ವಿಧಾನಗಳನ್ನು ನಾನು ಅನುಸರಿಸಿದ್ದೇನೆ ಎಂದು ಧೈರ್ಯವಾಗಿ ಹೇಳಲಾರೆ. ನನ್ನದೇ ಆದ ಹಾದಿಯಲ್ಲಿ ಹೆಚ್ಚಾಗಿ ನಡೆದೆ. ನನ್ನಲ್ಲಿ ಇದ್ದದ್ದು ನಿಷ್ಠೆ ಮತ್ತು ರಾಮಾಣಿಕತೆ. ದರ್ಶನಕೃತಿಗೆ ಎಲ್ಲೂ ಅಪಚಾರವಾಗಲಾರದೆಂಬ ಅಚಲ ನಿರ್ಧಾರ. ವೀರಶೈವ ಸಿದ್ಧಾಂತ ಮತ್ತು ಅನುಭಾವಗಳಿಗೆ ಭಂಗತಾರನೆಂಬ ಆತ್ಮವಿಶ್ವಾಸ. ಇವುಗಳಿಂದಾಗಿ ನಾನು ಅರ್ಥಜ್ಞನಾದೆ, ರಸಜ್ಞನಾದೆ. ವ್ಯಾಕರಣ, ಛಂದಸ್ಸು, ತಾಳ, ಲಯ, ಗತಿ, ಚಿನ್ಹೆಗಳ ಬಳಕೆ, ಅಲ್ಪಪ್ರಾಣ ಮಹಾಪ್ರಾಣಗಳ ಪ್ರಯೋಗ. ಱಟ ಶಕಟರೇಫ ಇತ್ಯಾದಿಗಳೆಲ್ಲವನ್ನೂ ದೃಷ್ಟಿಯಲ್ಲಿ ಇಟ್ಟುಕೊಂಡು ಮುನ್ನಡೆದೆ.

‘ಅನೇಕ ಶಬ್ದಗಳು ನನಗೆ ಅರ್ಥವಾಗಿದೆ ಎಂದಷ್ಟೇ ಅಲ್ಲ ಅನುಭೂತವಾಗಿವೆ. ಉದಾಹರಣೆಗೆ ‘ಪರಿಣಾಮ’ ಎಂಬ ಪದದ ಅರ್ಥ Result ಎಂದಷ್ಟೇ ಅಲ್; ‘ಆನಂದ’ ಎಂದು. ಅದೇ ರೀತಿ ‘ಬಯಕೆ’ ಎಂಬುದು Desire ಅಲ್ಲ, ಅದು ಬೈಕು, ಬೈಕೆ, ಬಯಕೆ ಅಂದರೆ Deposite ಅನ್ನೋ ಅರ್ಥ. ‘ದಯತ’ drawn out ಹೊರತೆಗೆದದ್ದು ಎಂದರ್ಥ, ಎಂದರೆ ವಿಶೇಷ ವಾಗಿ ಬ್ರಹ್ಮಚಕ್ರದಿಂದ ಭಾವಕ್ಕೆ, ಮನಸ್ಸಿಗೆ, ಕಣ್ಣಿಗೆ ತೆಗೆದು ಕೊಟ್ಟದ್ದು ಎಂದು ಅರ್ಥೈಸಬೇಕಾಗುತ್ತದೆ. ಆಗಲೇ ಆ ಪದ ಪ್ರಯೋ ಗಕ್ಕೆ ಸಾರ್ಥಕತೆ. ಚೆನ್ನಬಸವಣ್ಣನನ್ನು ಚನ್ನಬಸವಣ್ಣ ಎನ್ನುವುದು, ಗೊಹೇಶ್ವರಾ ಎಂದಿದ್ದರೆ ‘ಗುಹೇಶ್ವರಾ’ ಎನ್ನುವುದು. – ಇವೆಲ್ಲಾ ತಪ್ಪು. ನನಗೆ ಸಿಕ್ಕಿದ ಎಲ್ಲಾ ಓಲೆಗರಿ ಪ್ರತಿಗಳಲ್ಲೂ ಪ್ರಭುವಿನ ಅಂಕಿತ ‘ಗೊಹೇಶ್ವರಾ’ ಎಂದೇ ಇದೆ. ಎಲ್ಲೂ ‘ಗುಹೇ ಶ್ವರಾ’ ಎಂದಿಲ್ಲ. ಈ ಶಬ್ದ ಹೇಗೆ ಬಂತೋ, ಏಕೆ ಬಂತೋ ಕಾಣೆ. ಬಹುಶಃ ‘ಗುಹೆ’ಯಿಂದ ‘ಗುಹೇಶ್ವರಾ’ ಆಗಿರಬಹುದು. ಆದರೆ ಗೊಗ್ಗ, ಗೊಗ್ಗಯ್ಯ ಎಂಬ ಶಬ್ದಗಳೂ ಇಂದಿಗೂ ಜಾನಪದದಲ್ಲಿ ರೂಢಿಯಲ್ಲಿವೆ. ಆ ಗೊಗ್ಗಯ್ಯನೇ ಗೊಗ್ಗೇಶ್ವರಾ, ಗೊಹೇಶ್ವರಾ ಆಗಿದ್ದಿರಬಹುದು. ನಾನು ಪ್ರತಿಗಳ ಪಾಠವನ್ನೇ ಉಳಿಸಸಿಕೊಂಡಿದ್ದೇನೆ. ಎರಡನೆಯದಾಗಿ ಎಲ್ಲ ಓಲೆಗರಿ ಗರಂಥ ಗಳಲ್ಲೂ ‘ಪ್ರಭುದೇವರ ಶೂನ್ಯಸಂಪಾದನೆ’ ಎಂದಿದ್ದರೆ ಹಳಕಟ್ಟಿಯವರಾದಿಯಾಗಿ ಎಲ್ಲ ಸಂಪಾದನಕಾರರೂ ಕೇವಲ ‘ಶೂನ್ಯ ಸಂಪಾದನೆ’ ಎಂದು ಅಚ್ಚು ಮಾಡಿಸಿದ್ದಾರೆ. ‘ಪ್ರಭುದೇವರ’ ಹೆಸರನ್ನು ಬಿಡುವುದರ ಉದ್ದೇಶವು ನನಗೆ ತಿಳಿಯಲಿಲ್ಲ. ಇದು ಹೇಗಾಯಿತೆಂದರೆ ಡಾ. ನರಸಿಂಹಚಾಯ್ರು ‘ಮಲಬಸವರಾಜ ಚಾರಿತ್ರ’ ಎಂದು ಅಚ್ಚಿಸಿ ಪ್ರಕಟಿಸಿದರು. ಎಚ್. ದೇವೀರಪ್ಪನವರು ‘ಅ’ ಸೇರಿಸಿ ‘ಸಮಲ ಬಸವರಾಜ ಚಾರಿತ್ರ’ ಎಂದು ಮಾಡಿದರು. ಎರಡೂ ತಪ್ಪೇ. ಅದರ ಶುದ್ಧರೂಪ ‘ಬಸವರಾಜ ಚಾರಿತ್ರ’ ಅಷ್ಟೇ. ಗ್ರಂಥಸಂಪಾದಕ ಒಂದು ಮುಳ್ಳು ತೆಗೆಯಲು ಹೋಗಿ ಮತ್ತೊಂದು ಮುಳ್ಳು ಮುರಿಯಬಾರದು. ಮೂಲಕ್ಕೆ ಹೆಚ್ಚು

ನಿಷ್ಠನಾಗಿರುವುದು ಸರ್ವತ್ರ ಕ್ಷೇಮ. ಪಾಠಸ್ವೀಕಾರಕ್ಕಿಂತ ಗ್ರಂಥಪಾತ, ಅಕ್ಷರಸ್ಖಾಲಿತ್ಯ, ತ್ರುಟಿತ ಭಾಗಗಳೆಡೆಯಲ್ಲಿ ಗ್ರಂಥಸಂಪಾದಕ ಎಷ್ಟು ಎಚ್ಚರ ವಹಿಸಿದರೂ ಸಾಲದು.

'ಗಮನಿಸಬೇಕಾದ ಮತ್ತೊಂದು ಅಂಶ 'ಪ್ರಕ್ಷಿಪ್ತ'ಗಳನ್ನು ಪತ್ತೆಹಚ್ಚುವುದು. ಅದು ಸುಲಭ ಕೆಲಸವಲ್ಲವಾದರೂ ಶುದ್ಧಸಂಪಾದನೆಯ ದೃಷ್ಟಿಯಿಂದ ಅತಿ ಅವಶ್ಯ. ಉದಾಹರಣೆಗೆ ಪ್ರಭುದೇವರ ಯಾವುದೇ ವಚನದಲ್ಲಿ ಕಾಮವನ್ನು ಕುರಿತ ಪ್ರಸ್ತಾಪವಿಲ್ಲ. ಆದರೂ ಡಾ. ಎಲ್. ಬಸವರಾಜುರವರು ಒಂದೆರಡು ಕಡೆ ಇದೆ ಎಂದಿದ್ದಾರೆ. ಒಂದು ವೇಳೆ ಇದ್ದರೆ ಅವು ಪ್ರಕ್ಷಿಪ್ತಗಳಾಗಿರಬೇಕೆಂದು ನನ್ನ ಗುಮಾನಿ. ಅದೇ ರೀತಿ ಲಿಂಗ, ಷಟ್ಸ್ಥಲ, ವೀರಶೈವ – ಇವಾವೂ ಅಲ್ಲಮನ ಪರಿಭಾಷಾ ಕೋಶದಲ್ಲಿದ್ದಂತಿಲ್ಲ.

'ಶೂನುಸಂಪಾದಕರು ಹೆಸರಿಗೆ ಐವರು. ಆದರೆ ಪ್ರಸಿದ್ಧರು ಮೂವರೆ, ಕೆಂಚವೀರಣ್ಣೊಡೆಯ ಮತ್ತು ಹಲಗದೇವ. ಇವರು ಮೊದಲೇ ಹೇಳಿದಂತೆ ಅಪ್ರಬುದ್ಧರು. ಕಾಲದ ದೃಷ್ಟಿಯಿಂದ ಶಿವಗಣಪ್ರಸಾದಿಯೇ (೧೪೨೦) ಮೊದಲಿಗ. ಗುಮ್ಮಳಾಪುರದ ಸಿದ್ಧಲಿಂಗ (೧೫೦೦) ಎರಡನೆಯವನು. ಮೂರನೆಯವನೆ ಗೂಳೂರು ಸಿದ್ಧವೀರಣ್ಣೊಡೆಯ (೧೫೧೦), ಈ ಸಂಪಾದನಕಾರರ ಕಾಲನಿರ್ಣಯ ಮಾಡಿದವರು ಆಧುನಿಕ ವಿದ್ವಾಂಸರು. ಶಿವಗಣಪ್ರಸಾದಿಯ ಕಾಲ ಚಾಮರಸನಿಗಿಂತ ಹಿಂದೆ ಎಂಬುದು ಅವರ ಅಭಿಮತ. ಆದರೆ ಚಾಮರಸ ಪ್ರಾಚೀನ, ಶಿವಗಣಪ್ರಸಾದಿ ಅರ್ವಾಚೀನ ಎಂಬುದು ನನ್ನ ವಾದ.[೨] ಸಿಂಗಿರಾಜಪುರಾಣ, ಪ್ರಭುಲಿಂಗಲೀಲೆಗಳೇ ಬಹುಶಃ 'ಶೂನ್ಯಸಂಪಾದನೆ'ಗೆ ಮೂಲಪ್ರೇರಣೆ ಮತ್ತು ಪ್ರಚೋದನೆ' ಪ್ರಭುಲಿಂಗಲೀಲೆಯಲ್ಲ. ಬರುವ 'ಗತಿ' ಅಲ್ಲಿ 'ಸಂಪಾದನೆ' ಎಂದಾಗಿರಬಹುದು. ಸಾಕಷ್ಟು ಬದಲಾವಣೆಗಳೊಂದಿಗೆ 'ಸಂಪಾದನೆ'ಯನ್ನು ಪೂಣ್ಗೊಳಿಸಿರಬೇಕು.

**ಮತ್ತೊಂದು ವಿಚಾರ :**

ಮೇಲಿನ ಮೂವರ ಸಂಪಾದನೆಗಳಲ್ಲಿ ಗೂಳೂರು ಸಿದ್ಧವೀರಣ್ಣೊಡೆಯನ ಸಂಪಾದನೆಯೆ ಉತ್ತಮ ಮತ್ತು ವಿಶ್ವಾಸಾರ್ಹ ಅನ್ನಿಸುತ್ತದೆ. ಶಿವಗಣಪ್ರಸಾದಿ ಮತ್ತು ಗುಮ್ಮಳಾಪುರದ ಸಿದ್ಧಲಿಂಗರಲ್ಲಿ ಕಂಡ ಹಲವು ದೋಷಗಳನ್ನು ದೂರಮಾಡಿದ್ದಾನೆ ಗೂಳುರು ಸಿದ್ಧವೀರಣ್ಣೊಡೆಯ. ಈತ ಅಜ್ಜನ ಹೆಗಲೇರಿದ ಮೊಮ್ಮಗ, ಅಜ್ಜನಿಗಿಂತ ಹೆಚ್ಚು ದೂರ ನೋಡಿದ್ದಾನೆ. ನೋಡಿರುವುದಷ್ಟೇ ಅಲ್ಲ, ರಚನೆಯಲ್ಲೂ ತನ್ನ ಪರಿಣತಿಯನ್ನು ಸಾಬೀತು ಮಾಡಿ ತೋರಿಸಿದ್ದಾನೆ. ಆದರೆ ಎಲ್. ಬಸವರಾಜುರವರು ವಿನಾ ಕಾರಣ ಇವನನ್ನು ದೂರಿದ್ದಾರೆ. ತಾವು ಸಂಪಾದಿಸಿದ ಶಿವಗಣಪ್ರಸಾದಿ ಮಹಾದೇವಯ್ಯ ಸಂಗ್ರಹಿಸಿದ ಶೂನ್ಯಸಂಪಾದನೆಯಲ್ಲಿ. ಚಿತ್ರದುರ್ಗದ ಬೃಹನ್ಮಠದ ಜಗದುರುಗಳವರೂ ಅವರನ್ನು ಅನುಮೋದಿಸಿದ್ದಾರೆ. ಇದು ನಿಜಕ್ಕು ಸಂಕಟಪಡುವ ವಿಚರ. ಏಕೆಂ

---

[೨] ಇದು ವಿವಾದಾತ್ಮಕ ವಿಚಾರ. ಭೂಸನೂರಮಠದ ವಾದದಲ್ಲಿ ತಪ್ಪಿದೆ ಎಂಬುದು ನನ್ನ ಅಭಿಪ್ರಾಯ

ದರೆ ಗೂಳೂರು ಸಿದ್ಧವೀರಣ್ಣೊಡೆಯ 'ಅದು ಇದು' ಮಾಡಿಲ್ಲ, ಮಾಡಿದ್ದನ್ನು ಉತ್ತಮ ರೀತಿಯಲ್ಲಿ ಮಾಡಿದ್ದಾನೆ. ಇದು ಸತ್ಯ ಸಂಗತಿ. ಅಧಯ್ಯನದ ಅನುಕೂಲಕ್ಕಾಗಿ ಈ ಪಟ್ಟಿ :

**ಶೂನ್ಯ ಸಂಪಾದನೆಗಳ ತೌಲನಿಕ ದರ್ಶನ**

| ಗೂ. ಸಂ (ವ. ೧೫೪೩) | ಶಿ.ಮ.ಸಂ (ವ. ೧೦೧೨) | ಗು.ಸಂ (ವ. ೧೪೭೯) | ಹಲಗದೇವರ ಸಂ. (ವ. ೧೫೭೯) |
|---|---|---|---|
| ೧. ಪ್ರಥಮೋಪದೇಶ | ಇದೆ | ಇದೆ | ಇದೆ |
| ೨. ಮುಕ್ತಾಯಕ್ಕಗಳ ಸಂಪಾದನೆ | ಇದೆ | ಇದೆ | ಇದೆ |
| ೩. ಸಿದ್ಧರಾಮಯ್ಯಗಳ ಸಂಪಾದನೆ | ಇದೆ | ಇದೆ | ಇದೆ |
| ೪. ಬಸವೇಶಚೆನ್ನಬಸವಲಿಂಗಾನುಗ್ರಹ ಮಾಡಿದ ಸಂಪಾದನೆ | ಇದೆ | ಇದೆ | ಇದೆ |
| ೫. ಪ್ರಭುಕಲ್ಯಾಣಕ್ಕೆ ಬಂದ ಸಂಪಾದನೆ | ಇದೆ | ಇದೆ | ಇದೆ |
| ೬. ಮರುಳಶಂಕರದೇವರ ಸಂಪಾದನೆ | ಉಲ್ಲೇಖವಿದೆ ವಚನಗಳಿಲ್ಲ | ವಚನಗಳಿವೆ | ಇದೆ |
| ೭. ಬಸವೇಶ್ವರ ಸಂಪಾದನೆ | ಇದೆ | ಇದೆ | ಇದೆ |

| | | | |
|---|---|---|---|
| ೮. ಚೆನ್ನಬಸವೇಶ್ವರನ ಸಂಪಾದನೆ | ಇದೆ | ಇದೆ | ಇದೇ |
| ೯. ಮಡಿವಾಳಯ್ಯಗಳ ಸಂಪಾದನೆ | ಇದೆ | ಇದೆ | ಇದೆ |
| ೧೦.ಸಿದ್ಧರಾಮೇಶ್ವರನ ಗುರುಕರುಣ | ಇದೆ | ಇದೆ | ಇದೆ |
| ೧೧.ಪ್ರಭುದೇವರ ಪೂಜಾಸ್ತುತಿ | ಇದೆ | ಇದೆ | ಇದೆ |
| ೧೨.ಆಯ್ದಕ್ಕಿ ಮಾರಯ್ಯಗಳ ಸಂಪಾದನೆ | ಇಲ್ಲ | ಇದೆ | ಇದೆ |
| ೧೩.ಮೋಳಿಗಯ್ಯಗಳ ಸಂಪಾದನೆ | ಇಲ್ಲ | ಇಲ್ಲ | ಇಲ್ಲ |
| ೧೪.ನುಲಿಯಚಂದಯ್ಯಗಳ ಸಂಪಾದನೆ | ಇಲ್ಲ | ಇದೆ | ಇಲ್ಲ |
| ೧೫.ಘಟ್ಟಿವಾಳಯ್ಯನ ಸಂಪಾದನೆ | ಇಲ್ಲ | ಇಲ್ಲ | ಇಲ್ಲ |
| ೧೬.ಮಹಾದೇವಿಯಕ್ಕಗಳ ಸಂಪಾದನೆ | ಇದೆ | ಇದೆ | ಇದೆ |
| ೧೭.ಪ್ರಭು ದೇಶಾಂತರಕ್ಕೆ ಹೋಗಿ ಬಂದ ಸಂಪಾದನೆ | ಇದೆ | ಇಲ್ಲ | ಇಲ್ಲ |
| ೧೮.ಪ್ರಭುದೇವರು ಶೂನ್ಯಸಿಂಹಾಸನವನೇರಿದ ಸಂಪಾದನೆ | ಇದೆ | ಇಲ್ಲ | ಇಲ್ಲ |
| ೧೯.ಪ್ರಭುದೇವರ ಆರೋಗಣೆ | ಇದೆ | ಇಲ್ಲ | ಇಲ್ಲ |
| ೨೦.ಶರಣರ ಶವಸಾನಪರಾಮರಿಕೆ | ಇದೆ | ಇಲ್ಲ | |
| ಇಲ್ಲ ೨೧.ಗೋರಕ್ಷನ ಸಂಪಾದನೆ ಮತ್ತು ಎಲ್ಲ ಗಣಗಳ ಐಕ್ಯ | (ವಚನಗಳಿಲ್ಲ) | ವಚನಗಳಿವೆ | ಇಲ್ಲ |

೧೯೩೪-೩೫ರ ಸಾಲು ನಾನಾಗ ಪ್ರಥಮ ಬಿ.ಎ. ತರಗತಿಯಲ್ಲಿ ಓದುತ್ತಿದ್ದೆ. ಕರ್ನಾಟಕ ಕಾಲೇಜಿನ ವಿದ್ಯಾರ್ಥಿಯಾಗಿ, ಅಮಧಿಗಾಗಲೇ (೧೯೩೦) ಪ್ರಕಟವಾಗಿದ್ದ ರಾವಸಾಹೇಬ ಫ.ಗು. ಹಳಕಟ್ಟಿ ಸಂಪಾದಿತ 'ಶೂನ್ಯ ಸಂಪಾ ದನೆ' ಕೈಗೆ ಸಿಕ್ಕಿತು. ಅದರ ಮೇಲೆ ಕಣ್ಣಾಡಿಸಿದೆ. ಕಂಡದ್ದೇನು ? ನೂರಾರು ತಪ್ಪುಗಳು. ಮೊದ ಮೊದಲು ಮುದ್ರಣ ದೋಷವೆಂದೇ ಬಗೆದೆ. ಆದರೆ ಅದಲ್ಲ. ಅದು ಸಂಪಾದನೆಯಲ್ಲಿ ಅವೈಜ್ಞಾನಿಕತೆ ಎಂಬುದು ಮನದಟ್ಟಾಯಿತು. ಮತ್ತೆ ಅದೇ ಹಳಕಟ್ಟಿಯವರು ಸಂಪಾದಿಸಿ ಪ್ರಕಟಿಸಿದ್ದ ಪ್ರಭುದೇವರ ವಚನಗಳು[೨] ಹೊತ್ತಿಗೆಯನ್ನು ತೆಗೆದು ನೋಡಿದೆ. ಅದರಲ್ಲೂ ಹಲವಾರು ತಪ್ಪುಗಳು ಕಂಡುಬಂದವು. ಮನಸ್ಸಿನ ಅತೃಪ್ತಿಗೆ ಸಮಾಧಾನ ಹೇಳುವ, ಸಾಂತ್ವನಗೈಯುವ ಸಾಮರ್ಥ್ಯ ನನಗಿನ್ನೂ ಅಂದು ಬಂದಿರಲಿಲ್ಲ. ಅದರಿಂದಾಗಿ ತೆಪ್ಪಗಾದೆ.[೩]

ಹಳಕಟ್ಟಿಯವರ ಅನಂತರದಲ್ಲಿ ಪ್ರಕಾಶಪಡಿಸಿದ ಸಂ.ಶಿ. ಭೂಸನೂರಮಠರ ಸಂಪಾದನ ಕೃತಿಯ ಶಾಸ್ತ್ರೀಯತೆಯನ್ನು ಪರಿಶೀಲಿಸಬೇಕಾದರೆ ತೌಲನಿಕ ಅಧ್ಯಯನ ಅತ್ಯಗತ್ಯ. ಪಾಠಸಂಪ್ರದಾಯ ನಿರ್ಣಯ ಮತ್ತು ಪಾಠಪರಿಷ್ಕರಣದಲ್ಲಿ ಪ್ರೊ. ಭೂಸ ನೂರಮಠರ ಶ್ರದ್ಧೆ ಮತ್ತು ನಿಷ್ಠೆಗಳು ಇದರಿಂದ ವೇದ್ಯವಾಗುತ್ತವೆ. ಕನ್ನಡ ಕಲಾಗುಮ್ಮಟ, ವಚನಪಿತಾಮಹರ ಬಗೆಗೆ ಇರುವ ಗೌರವಾದರಗಳು ಕಡಿಮೆಯಾಗುತ್ತದೆ ಎಂದೇನಲ್ಲ. ಈ ಪ್ರಯೋಗಗಳನ್ನು ಗಮನಿಸಿ –

| **ಫ.ಗು. ಹಳಕಟ್ಟಿ** | **ಸಂ.ಶಿ. ಭೂಸನೂರಮಠ** |
|---|---|
| ೧. ಸಂಸಾರ ಹ್ಯೇಯಸ್ಥಲ<br>(ಹ್ಯೇಯ ಉಚ್ಚಾರಣೆಯೇ ಅಸಹ್ಯ) | ೧. ಸಂಸಾರಹೇಯಸ್ಥಲ |
| ೨. ಹಳ್ಳದೊಳಗೆ ಉಳ್ಳಿ ಬರುತ್ತಿರಲು ನೊರೆ ತೆರೆಗಳು ತಾಗದಿಪ್ಪವೆ ಸಂಸಾರ ಸಾಗರ ದೊಳಗೆ ಮುಳುಗಾಡುತ್ತಿರ್ಪ ಪ್ರಾಣಿಗಳಿಗೆ ಸುಖ ದುಃಖಗಳು ತಾಗದಿಪ್ಪವೇ ? ಇದು ಕಾರಣ ಮೂರ್ತಿ ಯಾದುದಕ್ಕೆ ಪ್ರಳಯ ತಪ್ಪದು ಕಾಣಾ ಗುಹೇಶ್ವರ | ೨. ಹಳ್ಳದೊಳಗೆ ಹುಳ್ಳಿ ಬರುತ್ತಿರಲು XXXXXX ಪ್ರಳಯ ತಪ್ಪದು ಕಾಣಾ ಗೊಹೇಶ್ವರಾ |

'ಉಳ್ಳಿ' ಅಂದರೆ ಉಳ್ಳಾಗಡ್ಡೆ (ಈರುಳ್ಳಿ) ಅಥವಾ 'ಉರುಳಿ' ಎಂಬ ಅರ್ಥವನ್ನೂ ಹೇಳಬಹುದು. ಆದರೆ ಪ್ರಸ್ತುತ ಸಂದರ್ಭದಲ್ಲಿ ಎರಡೂ ಅರ್ಥಗಳ ಆರೋಪಣೆ ಆರೋಗ್ಯಕರವಾಗಿಲ್ಲ. 'ಹುಳ್ಳಿ' ಎಂದರೆ ಕಟ್ಟಿಗಟ ತುಂಡು. ಪ್ರವಾಹದಲ್ಲಿ ಕಟ್ಟಿಗೆ ತುಂಡು ಬರುತ್ತಿರಲು ಅದಕ್ಕೆ ನೊರೆತೆರೆಗಳು ತಾಗದಿರುತ್ತವೆಯೇ. ಇದು ತುಂಬಾ ಸೂಕ್ತ ಪಾಠ. ಅದುಬಿಟ್ಟು ಈರುಳ್ಳಿಗೆ ಇಲ್ಲಿ ಮಹತ್ವವೇನಿದೆ ? 'ಉರುಳಿ' ಎಂದಿಟ್ಟುಕೊಂಡರೂ 'ಏನು ಉರುಳಿ ?' ಎಂಬ ಸಂದೇಹ ಮೂಡುತ್ತದೆ. ಅದು 'ಉಳ್ಳಿ' ಅಲ್ಲ 'ಹುಳ್ಳಿ'

| | |
|---|---|
| ೩. (ಅ) ಅಯಿತ್ತೆ ಉದಯಮಾನ ಹೋಯಿತ್ತೆ | ೩. ಅಯಿತ್ತೆ ಉದಯಮಾನ ಹೋಯಿತ್ತೆ |
| ಅಸ್ತಮಾನ ಅಳಿದವ ನಿರಲಾದ ನಿರ್ಮಿತಂಗಳೆಲ್ಲ | ಅಸತಮಾನ, ಅಳಿದವಲ್ಲಾ ನೀರಲಾದ |
| ಕತ್ತಲೆ ಕವಿಯಿತ್ತು ಮೂರು ಲೋಕದೊಳಗೆ | ನಿರ್ಮಿತಂಗಳೆಲ್ಲ X X X X X X |
| ಇದರಚ್ಛುಗವೇನು ಹೇಳಾ ಗುಹೇಶ್ವರಾ? ೧–೯ | ಇದರಚ್ಛುಗವೇನು ಹೇಳಾ ಗೊಹೇಶ್ವರಾ ೧–೯ |

ಆ) ಆಯಿತ್ತೆ ಉದಯಮಾನ ಹೋಯಿತ್ತೆ ಅಸ್ತಮಾನ
ಅಳಿದವಲ್ಲಾಗಿರಲಾದ ನಿರ್ಮಿತಂಗಳೆಲ್ಲ[೫]

ಒಬ್ಬರೇ ಸಂಪಾದಿಸಿದ ಎರಡು ಕೃತಿಗಳಲ್ಲಿ ಎರಡು ರೂಪಗಳು. ಒಂದರಲ್ಲಿ 'ಅಳಿದವನಿರಲಾದ' ಎಂದಿದೆ, ಮತ್ತೊಂದರಲ್ಲಿ 'ಅಳಿದವಲ್ಲಾಗಿರಲಾದ' ಎಂದಿದೆ. ಇಂಥೆಡೆಯಲ್ಲಿ ನೈಜರೂಪು ಗುರುತಿಸಲು ತುಂಬಾ ತಲೆಕೆಡಸಿಕೊಳ್ಳಬೇಕಾಗುತ್ತದೆ.

'ಅಯಿತ್ತೆ ಉದಯಮಾನ ಹೋಯಿತ್ತೆ ಅಸ್ತಮಾನ' ಅಂದರೆ ಹುಟ್ಟು –ಉದಯ, ಹೊಂದು – ಅಸ್ತಮಾನ. ಮುಂದೆ ಹಳಕಟ್ಟಿಯವರು ಬಳಸಿರುವ ಎರಡೂ ರೂಪಗಳು ತಪ್ಪು. ಅದು ನೀರಲಾದ ನಿರ್ಮಿತಂಗಳೆಲ್ಲ ಅಂದರೆ ನೀರಿನಿಂದಾದ ಬುದ್ಬುದಂಗಳೆಲ್ಲಾ ಅಳಿದು ಹೋದುವಲ್ಲಾ ; ಆತ್ಮ ಪ್ರಕಾಶ ಉದಯಮಾನ, ಆತ್ಮ ಕಣ್ಮರೆ ಅಸ್ತಮಾನ, ಮಿಕದಕಿದ್ದೆಲ್ಲಾ ನೀರಮೇಲಣ ಗುಳ್ಳೆಯಂತೆ ಕ್ಷಣಿಕ, ಣಶ್ವರ. ಇದರ ಅರಿವು ಇಲ್ಲದಾಗ ಅಜ್ಞಾನದ ಕತ್ತಲೆ ಕವಿದಂತೆಯೇ ! ಮೂರು ಲೋಕಗಳೂ ಶೂನ್ಯ. ಇದು ಇಲ್ಲಿನ ಮಥಿತಾರ್ಥ. ಇದನ್ನುಳಿದು 'ಅಲಿದವನಿರಲಾದ' ಅಥವಾ 'ಅಳಿದವಲ್ಲಾಗಿರಲಾದ' ಶಬ್ದಗಳಿಗೆ ಅರ್ಥವೇ ಇಲ್ಲ.

ಇಲ್ಲಿ ಆದ ತಪ್ಪಿಗೆ ಮೂಲಕಾರಣ ಓಲೆಯ ಲಿಪಿರಚನೆ. ಓಲೆಗರಿಗಳಲ್ಲಿನ 'ಗಿ' ಮತ್ತು 'ನಿ' ವರ್ಣಗಳು ನೋಟಕ್ಕೆ ಒಂದೇ ರೂಪದಲ್ಲಿರುತ್ತವೆ. ಅವೆರಡಕ್ಕೂ ವ್ಯತ್ಯಾಸವೇ ತಿಳಿಯುವುದಿಲ್ಲ. ಇದರಿಂದಾಗಿ ಪ್ರತಿಕಾರರು ಬಹುಸುಲಭವಾಗಿ ಹಾದಿ ತಪ್ಪುತ್ತಾರೆ. ಈ ದೋಷದಿಂದ ಮೇಲೆ ತಿಳಿಸಿದ ಸಂಪಾದಕರು ದೂರವಾಗಿಲ್ಲ.

| | |
|---|---|
| ೪. ತನುವ ತೋಟವ ಮಾಡಿ ಮನವ | ೪. ತನುವ ತೋಟವ ಮಾಡಿ ಮನವ ಗುದ್ದಲಿಯ |
| ಗುದ್ದಲೆ ಮಾಡಿ ಅಗಿದು ಕಳೆದೆನಯ್ಯ, | ಮಾಡಿ, ಅಗಿದು ಕಳೆದೆನಯ್ಯ ಭ್ರಾಂತಿ ಬೇರ. ಒಡೆದು |
| ಭ್ರಾಂತಿನ ಬೇರ. ಒಡೆದು ಸಂಸಾರದ | ಸಂಸಾರದ ಹೆಂಟೆಯ ಬಗಿದು ಬಿತ್ತಿದೆನಯ್ಯ ಬ್ರಹ್ಮ |
| ಹೆಂಟೆಯ ಬಗಿದು ಬಿತ್ತಿದೆನಯ್ಯ ಬ್ರಹ್ಮ | ಬೀಜವ. ಅಖಂಡಮಂಡಲವೆಂಬ ಬಾವಿ, ಪವ |
| ಬೀಜವ ಅಖಂಡ ಮಂಡಲವೆಂಬ ಬಾವಿ | ನವೇ ರಾಟಾಳ, ಸುಷುಮ್ನ ನಾಳದಿಂದ ದಕವ |
| ಪವನವೆ ಊಟಾಳ, ಸುಷುಮ್ನದಿಂದುದ ಕವ | ತಿದ್ದಿ ಬಸವಗಳೈವರು ಹಸಗೆಡಿಸಿಹವೆಂದು ಸಮತೆ |
| ತಿದ್ದಿ ಬಸವಗಳೈವರು ಹಸಗೆಡಸಿಹವೆಂದು | ಸೈರಣೆಯೆಂಬ ಬೇಲಿಯನಿಕ್ಕಿ ಆವಾಗಳು ಈ ತೋಟ |
| ಸಮತೆಯೆಂಬ ಬೇಳಿಯನಿಕ್ಕಿ ಆವಾಗಳು | ದಲ್ಲಿ ಜಾಗರವಿದ್ದು ಸಸಿಯ ಸಲಹಿದೆನು ಕಾಣಾ |
| ಈ ತೋಟಂದಲ್ಲಿ ಜಾಗರವಿದ್ದು ಸಸಿಯ | ಗೊಹೇಶ್ವರಾ ೧–೨೯ |
| ಸಲಹೆದೆನು ಕಾಣಾ ಗುಹೇಶ್ವರಾ. ೧–೨೯ | |

ಇಲ್ಲಿ ಗುದ್ದಲೆ–ಗುದ್ದಲಿ, ಲಾಟಾಳ–ರಾಟಾಳ, ಸುಷುಮ್ನದಿಂದ––ಸುಷುಮ್ನನಾಳದಿಂದ, ಸಮತೆ–ಸಮತೆ ಸೈರಣೆ ಈ ಉತ್ತಮ ಪಾಠಾಂತರಗಳ ಜೊತೆಗೆ ಸಂಶಿ. ಭೂಸನೂರಮಠರು ಕೆಲವು ಆಕ್ಷೇಪವೆತ್ತಿದ್ದಾರೆ. 'ತನುವ ತೋಟವ ಮಾಡಿ ಮನವ

---

[೨].. ಶಿವಾನುಭವ ಗ್ರಂಥಮಾಲಾ ನಂ. ೨೨.

[೩]. ೨೧–೧೨–೧೯೮೨ರ ಸಂದರ್ಶನದಲ್ಲಿ [೫] ಫ.ಗು. ಹಳಕಟ್ಟಿ ಸಂಪಾದಿತ ಪ್ರಭುದೇವರ ವಚನಗಳು (೧೯೩೧) ಮಾಯಾವಿಲಾಸ ವಿಡಂಬನಸ್ಥಲ; ವಚನ ೪೧, ಗ್ರಂಥಮಾಲಾ ನಂ.೮

ಗುದ್ದಲಿಯ ಮಾಡಿ ಅಗಿದು ಕಳೆದನಯ್ಯ ಭ್ರಾಂತಿನ ಬೇರ' ಎಂಬಲ್ಲಿ ವಾಕ್ಯ ಮುಗಿಸಿ, ಪೂರ್ಣ ವಿರಾಮ ಹಾಕಿರುವುದು ಅರ್ಥವತ್ತಾಗಿದೆ. ಆದರೆ 'ತೋಂಟ' ಎಂಬಲ್ಲಿ 'ತೋಟ' ಎಂದು ಉಳಿಸಿಕೊಂಡರೇಕೆ? ಕೇಶಿರಾಜನ ಪ್ರಕಾರ 'ತೋಂಟ' ಅಬಿಂದುಕ. ಅಂತಹ ೬೭ ಶಬ್ದಗಳು ಸ್ವಭಾವತಃ ನಿತ್ಯ ಬಿಂದುಗಳೆಂದು ಒಂದು ಪಟ್ಟಿಯನ್ನೇ ಕೊಟ್ಟಿದ್ದಾನೆ.[೬]. ಆ ವೈಯಾಕರಣಿಯ ಪ್ರಕಾರ ಅಬಿಂದುಕವಾದರೆ ಅದು ದೋಷ. ಈ 'ದೋಷ'ವನ್ನೇ 'ಗುಣ' ಎಂದು ಭಾವಿಸಿದರೇಕೆ ? ಇದೇ ಸಂಪಾದಕರು ತಮ್ಮ ಕೃತಿಯ ಆರಂಭದಲ್ಲಿ ಮತ್ತು ಸಮಾಪ್ತಿವಾಕ್ಯದ 'ಗದ್ಯ'ದಲ್ಲಿ 'ತೋಟದ ಸಿದ್ಧಲಿಂಗೇಶ್ವರನು' ಎಂಬೆಡೆಯಲ್ಲಿ 'ತೋಂಟದ ಸಿದ್ಧಲಿಂಗೇಶ್ವರನು' ಎಂಬ ಪಾಠಾಂತರವನ್ನಿಟ್ಟುಕೊಂಡಿದ್ದಾರೆ.[೭] ಹಾಗಾದರೆ ಒಂದೆಡೆ 'ತೋಟ' ಎಂಬ ಪ್ರಯೋಗ ಸಾಧು. ಮತ್ತೊಂದೆಡೆ 'ತೋಂಟ' ಎಂಬ ಪ್ರಯೋಗ ಸಾಧು ಎಂದಾಯಿತು. ಇಲ್ಲಿ ಸಂಪಾದಕರ ನಿಲುವು ಸ್ಪಷ್ಟವಿಲ್ಲ. ಇಂಥದೇ ದೋಷ ಮತ್ತೊಂದೆಡೆಯಲ್ಲಿ ಸಂಭವಿಸಿರುವುದನ್ನು ಡಾ.ಎಂ. ಎಂ. ಕಲಬುರ್ಗಿಯವರು ತೋರಿಸಿಕೊಟ್ಟಿದ್ದಾರೆ.[೮]

ಕೇಶಿರಾಜ ಯಾವ ಱಗಳ ಪುನಃ ಪ್ರತಿಷ್ಠಾಪನಕ್ಕಾಗಿ ಶ್ರಮಿಸಿದ್ದನೋ ಅದನ್ನು ತಾವೂ ಉಳಿಸಲು ಯತ್ನಿಸಿದ ಸಂಪಾದಕರು 'ರಾಟಾಳ'ವನ್ನು 'ಱಟಾಳ' ಎಂದು ಪ್ರಯೋಗಿಸಿದ್ದಾರೆ. ಕೇಶಿರಾಜನ ಅಭಿಮಾನಿಗಳಾದ ಇವರು ಅವನ 'ನಿತ್ಯಬಿಂದು' ತತ್ವಕ್ಕೆ ತಿಲಾಂಜಲಿ ಕೊಟ್ಟಿರುವುದು ತಪ್ಪಲ್ಲವೇ?

| | |
|---|---|
| ೫. ಅದೆಂತೆಂದೊಡಾ ಪ್ರಭುದೇವರು<br>XXX ಶಿವಾದ್ವೈತ ತತ್ವಭೇದಂಗಳನು<br>ಕೃಪೆಯಿಂ ನಿರೂಪಿಸುತ್ತ,<br>ಅಕಾಯವೇ ಕಾಯವಾಗಿ ೨–೧<br>ಕೈಗೂಡುತ್ತಾ ಪರಸ್ಥಲದ<br>ಲಿಂಗಮಂ ಕರಸ್ಥಲದೊಳು ಸೈತಿಟ್ಟು<br>ಪಿರಿದು ನೋಟವೆ ಪ್ರಾಣವಾಗಿ,<br>ಭಾವವೆ ನಿಬ್ಬೆರಗಿನ ನಿಲವಾಗಿ, ಜ್ಞಾನವೇ ಸರ್ವಾಂಗ<br>ಲಿಂಗವಾಗಿ, ಮನವೆ ಕರಸ್ಥಲದೊಳು ಲಯವಾಗಿ,<br>ಆ ಕಾಯವೆ ಕಾಯವಾಗಿ (೨–೧) | ೫. ಅದೆಂತೆಂದೊಡಾ ಪ್ರಭುದೇವರು XXXXX<br>XX ಕೈಗೂಡುತ್ತೆ ಶಿವಸುಖಿಗಳೊಳು<br>XXXXXXXX ಸ್ವಾನುಭಾವಗಮ್ಯದೊಳು ಸಮ್ಮೇಳಂಗೆಯುತ್ತ,<br>ಸಮ್ಯಕ್ ಶರಣರೊಳು ಸಮರಸಮಂ |
| ೬. ಎಮ್ಮ ನಲ್ಲನೊಲಿದು ಒಲಿಸಿ ಕಾಡುತ್ತಿದ್ದಿರೆ ಬಾರಾ ಬಾರಾ<br>ಎಂದೆನ್ನ ಕರಣ ಹರಿಣವ ತೋರಿದರೆ ತಾನೆ ಒಲಿದು<br>ಬಂದೆನ್ನ ತಲೆಯ ಹಿಡಿದು ನೆಹಿಗ ಎನ್ನ ಮನೆಗೆ ಬಂದ | ೬. ಎಮ್ಮ ನಲ್ಲನೊಲಿದು ಒಲಿಸಿ ಕಾಡುತ್ತಿದ್ದರೆ<br>ಬಾರಾ ಬಾರಾ ಎಂದೆನ್ನ ಕರುಣ ಹರ<br>ಣವ ತೋರಿದರೆ ೩–೭೨ |

---

[೬] ಡಿ.ಎಲ್.ಎನ್. ಸಂಪಾದಿತ ಶಬ್ದಮಣಿದರ್ಪಣ – ಸಂಧಿ ಪ್ರಕರಣ, ಸೂತ್ರ ೪೬

[೭] ಗೂಳೂರ ಸಂಪಾದನೆ ಪುಟ ೨ ಮತ್ತು ೪೨೧ (೧೯೫೮)

[೮] "ಒಂದು ಶಬ್ದದ ಹಲವು ರೂಪಗಳಲ್ಲಿ ಒಮ್ಮೆ ಒಂದನ್ನು ಇನ್ನೊಮ್ಮೆ ಮತ್ತೊಂದನ್ನು ಕೈಗೆ ಬಂದಂತೆ ಬಳಸದೆ ರೂಪವನ್ನು ಕೊನೆಯವರೆಗೂ ಬಳಸಬೇಕು" ಎಂದು ತಿಳಿಸುತ್ತಾ ಭೂಸನೂರಮಠರ ಸಂಪಾದಿತ ಶೂನ್ಯಸಂಪಾದನೆಯಿಂದ ಉದಾಹರಣೆಗಳನ್ನು ಕೊಟ್ಟಿದ್ದಾರೆ. ಅಂತೆಯೇ 'ಇಂಥ ಪ್ರಸಂಗಗಳಲ್ಲಿ ಏಕರೂಪತೆಯತ್ತ ಸಂಪಾದಕ ಲಕ್ಷ್ಯ ವಹಿಸಬೇಕು' ಎಂದು ಎಚ್ಚರಿಸಿದ್ದಾರೆ.

[೧] ಹುಸಿ ಹುಂಡನೆ ಮಾಡಿ (ಪು. ೯೧)

ಹೂಸಿ ಹುಂಡನಿ ಮಾಡಿ (ಪು. ೧೦೭)

[೮] ಮರಣವುಳ್ಳವರಿಗೆ ಮರುಜನನಾದಿ ಸಿಕ್ಕುವುದೆ ? (ಪು. ೧೨೪)

ಮನುಜರು ಹಸಿದೆದ್ದು ಮರಣವಾಯಿತ್ತ ಕಂಡೆ (ಪು. ೮೪೪)

(ನೋಡಿ : ಡಾ.ಎಂ.ಎಂ. ಕಲಬುರ್ಗಿ, ಕನ್ನಡ ಗ್ರಂಥಸಂಪಾದನ ಶಾಸ್ತ್ರ, ಪುಟ ೧೯೭, ಮಾರ್ಚ್ ೧೯೭೨ ಪ್ರಕಟಣೆ)

ಕಪಿಲಸಿದ್ಧ ಮಲ್ಲಿನಾಥನ ಒಲುಮೆಯ ಘನವೇನೆಂದು ಪಮಿಸುವೆನು. ೩–೭೨

೭. ಅಯ್ಯ ಮನದ ರಜದ ಮಣ್ಣಕಳೆದುದಯ ಶಾಂತಿಯ ಉದಕದಲ್ಲಿ ತೆಗೆವೆನಯ್ಯಾ, ಜಳಕವನೆ ಮಾಡಿ ಯೋಗ ಕಂಪನಿಕ್ಕಿ ಹುದುಗುವೆನಯ್ಯಾ ಅದನೊಂದು ಎಡಗೆ ತಂದು ಬಟ್ಟ ಗಾಣದಲ್ಲಿಕ್ಕಿ ಹಿಳಿವೆನಯ್ಯ ಹಿಳಿದರಸದ ಕಂಪಕೊಡುವ ಒಡೆಯ ನೀನೆ ಕಪಿಲಸಿದ್ಧಮಲ್ಲಿನಾಥಾ ೩–೧೦೯

೭. ಅಯ್ಯಾ ಮನದ ರಜದ ಮಣ್ಣಕಳೆದು ದಯ ಶಾಂತಿಯ ಉದಕದಲ್ಲಿ ತೆಗೆವೆನಯ್ಯಾ, ಜಳ ಕವನೆ ಮಾಡಿ ಯೋಗಕಂಪನಿಕ್ಕಿ ಹೊದೆವ ನಯ್ಯಾ XXXXXXXX ೩–೧೦೯

8. ನೀವು ಮರ್ತ್ಯಕ್ಕೆ ಬಂದರೇನು? ಶಿವ ಲೋಕದಲ್ಲಿದ್ದರೇನು? ಚಿಕದಣ್ಣಾಯಕರು ಬಿನ್ನೈಸಲು ಇದಕ್ಕೆ ಬಸವ ರಾಜದೇವರು ಪರಮ ಹರುಷಿತರಾಗಿ ಆ ನಿಜ ಸಮಾಧಿಯೊಳು ಬೇಸುವ ಭೇದ ಎನಗೆಂದು ಸಯವಪ್ಪುದೆಂದು ಉಪಾಸ್ಥೆಯಂ ಮಾಡುವ ಪ್ರಸ್ತಾವದ ವಚನ. ೪–೩೦

೮. XXXXXXXXಉಪಾವಸ್ತೆಯಂ ಮಾಡುವ ಪ್ರಸ್ತಾವದ ವಚನ, ೪–೩೦

9. ಗುರುಲಿಂಗಜಂಗಮಕ್ಕೆ ತನುಮನ ಧನವೆಶವದು, ದೃಢವಿಲ್ಲದ ಪೊಡವಿಯ ಜನಂಗಳು ಮೆಚ್ಚಬೇಕೆಂದು, ಮೃಡನಭಕ್ತರಿಗೆ ನೆರೆ ನಿಚ್ಚಟವುಂಟೆನಿಸಿಕೊಂಡೆಹೆನೆಂಬ ಧಾರುಣಿಯ ಚೋರರಿಗೆ ಎಲ್ಲಿಯದೊ ನಿಜಭಕ್ತಿ ನಿಃಕಳಂಕ ಮಲ್ಲಿಕಾರ್ಜುನಾ? ೧೩–೩

೯. ಗುರುಲಿಂಗಜಂಗಮಕ್ಕೆ ತನುಮನಧನವ ಸವೆದು ದೃಢಚಿತ್ತವಿಲ್ಲದೆ XXXX೧೩–೩

10. ಏಕಬೀಜಂ ಸಮಾವೃಕ್ಷಂ ಏಕಲಿಂಗಂತು ಪೂಜನಂ ಏಕಧ್ಯಾನ ಸಮಾಚಿತ್ತಂ ಊರ್ಧ್ವಲಿಂಗಂತು ಪೂಜನಂ ೬–೨೧

೧೦. ಏಕಬೀಜಂ ಸಮಂ ವೃಕ್ಷಂ ಏಕಧ್ಯಾನ ಸಮಂ ಚಿತ್ತಂ XXX ೬–೨೧

ಇದೇ ರೀತಿ ಉದ್ಧೃತವಾದ ಸಂಸ್ಕೃತ ಶ್ಲೋಕಗಳೆಲ್ಲಾ ಸುಮಾರಾಗಿ ತಪ್ಪಾಗಿ ಪ್ರಕಟವಾಗಿವೆ ಹಳಕಟ್ಟಿಯವರ ಸಂಪಾದನೆಯಲ್ಲಿ. ಅವುಗಳನ್ನು ಸಾಕಷ್ಟು ತಿದ್ದಿದ್ದಾರೆ ಭೂಸನೂರಮಠರು. ಭೂಸನೂರಮಠರ ಪಾಠಾಂತರಗಳ ಸಾಧುತ್ವ ಸ್ವಯಂವೇದ್ಯ. ಮೇಲಿನ ವಚನದಲಿರುವ 'ಉಪಾಸ್ಥೆ' ಎಂಬ ಶಬ್ದ ಒಂದು ಅವಸ್ಥೆಯ ಅರ್ಥಕೊಡುತ್ತದೆ ಎಂದು ಭಾವಿಸಿ 'ಉಪಾವಸ್ತೆ' ಪಾಠವನ್ನು ಉಳಿಸಿಕೊಂಡಿದ್ದಾರೆ. 'ಉಪಾಸ್ತ' – ಸಮೀಪದಲ್ಲಿರುವುದು. ಇದು 'ಉಪಾಸ್ಥೆ' ಎಂದಿದ್ದರೂ ತಪ್ಪಲ್ಲ. ಆದರೆ ಅದರ ಸಮೀಪದ ಶಬ್ದವಾದ 'ಉಪಾವಸ್ತೆ'ಯನ್ನು ಉಳಿಸಿಕೊಂಡಿದ್ದಾರೆ. ಅಂತೆಯೇ ಪ್ರಭುದೇವರ ಪೂಜಾಸ್ತುತಿಯಲ್ಲಿನ ಎಲ್ಲ ಹಾಡುಗಳನ್ನೂ ಭೂಸನೂರಮಠ ಶಾಸ್ತ್ರೀಯವಾಗಿ ಜೋಡಿಸಿದ್ದಾರೆ. ಅವರೇ ಆ ಹಾಡುಗಳಿಗೆ ರಾಗ ಸಂಯೋಜನೆ ಮಾಡಿದ್ದಾರೆ ಕೂಡ.

* * * *

೧೮೨

ಭೂಸನೂರಮಠರ ಶೂನ್ಯಸಂಪಾದನೆ ಪ್ರಕಟವಾದ ತಾರುಣ್ಯದಲ್ಲಿ ಒಂದು ದಿನ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಅತಿಥಿಗೃಹದಲ್ಲಿ ಒಂದು ಅನೌಪಚಾರಿಕ ಪರಿಷತ್ತು ನೆರೆರದಿತ್ತು. ಉಪಸ್ಥಿತರಿದ್ದ ಇಷ್ಟಲಿಂಗಪ್ಪ ಪಾವಟೆಯವರು 'ಓರ್ವ ವಿದ್ವಾಂಸ'ರನ್ನು ಕೇಳಿದರು"ಏನ್ರಿ ಹೇಗಿದೆ ಭೂಸನೂರಮಠರ ಶೂನ್ಯಸಂಪಾದನೆ' ಎಂದು. ಅದಕ್ಕೆ ವಿದ್ವಾಂಸರ ಉತ್ತರ 'ಅಡ್ಡಿಯಿಲ್ಲ'. 'ಹಾಗಲ್ಲ, ಹಳಕಟ್ಟಿಯವರ ಸಂಪಾದನೆ ಕೃತಿಗೆ ಹೋಲಿಸಿದರೆ ಭೂಸನೂರಮಠರ ಕೃತಿ ಉತ್ತಮ ಅನ್ನಸತ್ತೋ ಹೇಗೆ 'ಹೆಚ್ಚೇನಿಲ್ಲ, ತುಸು ಉತ್ತಮ'.

'ಎಷ್ಟು?'

'ನೀವೇ ಹೇಳಿ'

'ಸುಮಾರು ೧೦೦ಕ್ಕೆ ೮೫ರಷ್ಟು'

‘ಖಂಡಿತವಾಗಿ’

ಇಲಿ ಗಮನಿಸಬೇಕಾದ ಅಂಶ ಒಂದೇ. ಅದೇ ಐ. ಎಸ್. ಪಾವಟೆ (ಇಷ್ಟ ಲಿಂಗಪ್ಪ ಪಾವಟೆ)ಯವರಿತ್ತ ‘೧೦೦ಕ್ಕೆ ೮೫ರಷ್ಟು ಶುದ್ಧಗೊಂಡಿವೆ’ ಎಂಬ ಪ್ರಶಸ್ತಿ ಭೂಸನೂರಮಠರ ಈ ಸಂಪಾದನಕೃತಿ ದೋಷದಿಂದ ಸಂಪೂರ್ಣ ವಿಮುಕ್ತಿ ಹೊಂದಿಲ್ಲ. ಶೇಕಡಾ ೧೫ರಷ್ಟು ದೋಷ ಉಳಿದೇ ಇದೆ. ಆದರೆ ಇದಿಷ್ಟರಿಂದಲೇ ೮೫ರಷ್ಟು ಗುಣವನ್ನು ಮರೆಯುವಂತಿಲ್ಲ. ಗುಣದೋಷಗಳಿಂದಾದವನೆ ಮಾನವ. ಭೂಸನೂರಮಠರೂ ಮಾನವರು.

ಅವರ ಸಂಪಾದನೆಯ ಗುಣದೋಷಗಳ ಮಾದರಿಪಟ್ಟಿ ಇಲ್ಲಿದೆ :

| ಪ್ರತಿಯ ಸಂಕೇತ | ಭಾಗ | ವಚನದ ಸಂಖ್ಯೆ | ಪಾಠ | ವ್ಯಾಖ್ಯಾನ |
|---|---|---|---|---|
| | ೧ | ೧೯ | ಸೂಳೆಯ ಕೊರಳಲ್ಲಿ ಏಳುನೂಱೆಪ್ಪತ್ತು ಆನೆ ನೇರಿತ್ತ ಕಂಡೆ | ಮಾಯೆಯ ಅಸಮಾನ್ಯ ಸಾಮರ್ಥ್ಯವನ್ನು ಬಣ್ಣಿಸುವ ಈ ವಚನದ ಅಂತ್ಯ ಬರುವ ಸೂಳೆಯ ಕೊರಳಲ್ಲಿ ಏಳು ನೂರಿಪ್ಪತ್ತು ಆನೆಗಳು ಸಕ್ರಮವಾಗಿ ಸಾಲುಗಟ್ಟಿದ್ದನ್ನು ಕಂಡೆ ಎಂಬ ಪ್ರಯೋಗ |
| ಉ | – | – | ಆನೆ ತೋರಿತ್ತ ಕಂಡೆ | ಸೂಕ್ತವಾಗಿದೆ. ‘ತೋರಿತ್ತ ಕಂಡೆ’ ಎಂಬ ಸಪ್ಪೆಯ ಪ್ರಯೋಗಕ್ಕಿಂತ ಇದು ಉತ್ತಮ |
| ೩. | ೧ | ೨೧ | ‘ಬಂದು ಬಂದುಳುವರು’ ಬಳಗ ಘನವಾದ ಕಾರಣ | ಅಜ್ಞಾನಿಯಾದ ಜೀವಿಯು ಅನಾಹತಕ್ಕೀಡಾದ ಚಿತ್ರಣ ಇಲ್ಲಿದೆ. ದೇಹವೆಂಬ ಊರಮಧ್ಯದಲ್ಲಿ ಕಣ್ಣು ಕತ್ತಲಿಸುವಂತಹ ಅಜ್ಞಾನದ |
| ಇ ಉ | | | ಬಂದು ಬಂದುಳವರ ಬಳಗ | ಕಗ್ಗಾಡು. ಅಲ್ಲಿ ಪಂಚೇಂದ್ರಿಯಗಳೆಂಬ ಹೆಣಗಳು ನಿಶ್ಚೇಷ್ಟಿತವಾಗಿ ಬಿದ್ದಿವೆ. ಜೀವನು ಮೇಲಿಂದ ಮೇಲೆ ಪ್ರಲೋಭನಕ್ಕೆ ಒಳಗಾಗುವದರಿಂದ ಕಾಮ ತೃಪ್ತವಾಗುವುದಿಲ್ಲ, ಅಜ್ಞಾನ ಅಳಿಯುವುದಿಲ್ಲ. ಕಡೆಗೆ ಸಕಲ ನಾಶ ಅವರಿಂದ ಪ್ರಾಪ್ತ. ಈ ವಚನದಲ್ಲಿ ಬರುವ ‘ಬಂದು ಬಂದುಳುವರು’ ಬಳಗ ಘನವಾದ ಕಾರಣ –ಎಂಬಲ್ಲಿ ವಾಕ್ಯ ಸ್ಪಷ್ಟವಾಗಲಿಲ್ಲ. ‘ಇಉ’ ಪ್ರತಿಗಳ ಪಾಠದಂತೆ ‘ಬಂದು ಬಂದುಳವರ’ ಬಳಗ ಘನವಾದ ಕಾರಣ ಎಂಬುದು ಹೆಚ್ಚು ಸೂಕ್ತವಾಗುತ್ತದೆ. ‘ಬಂದು ಬಂದಳುವರು’ ಎಂಬುದಕ್ಕೆ ಬದಲು ‘ಬಂದು ಬಂದು ಆಳುವರು’ ಎಂದಿಟ್ಟುಕೊಂಡಿವೆ ಇತ |

| | | | | |
|---|---|---|---|---|
| | | | | ರ ಶೂನ್ಯ ಸಂಪಾದನೆಗಳು. ಆದರೆ<br>ಭೂಸನೂರಮಠರು ‘ಬಂದು ಬಂದು<br>ಳುವವರ ಬಳಗ’ ಎಂದು ಮಾಡಿದಿ<br>ದ್ದರೆ ತುಂಬ ಉತ್ತಮವೆನಿಸುತ್ತಿತ್ತು |
| | | | ೧೮೪ | |
| | | | | ಎಂಬುದು ನನ್ನ ಅಭಿಪ್ರಾಯ. ಆರ್.<br>ಸಿ. ಹಿರೇಮಠರ ಸಂಪಾದನೆಯಲ್ಲಿ<br>‘ಹೆಣನೂ ಬೇಯದು ಕಾಡೂ ನಂದ<br>ದು’ ಎಂದಿದೆ. ‘ಹೆಣನೂ, ಕಾಡು’ ಎಂ<br>ಬ ಪದಗಳಲ್ಲಿನ ಧೀರ್ಘಕ್ಕೆ ಔಚಿತ್ಯವಿಲ್ಲ,<br>ಭೂಸನೂರಮಠರ ‘ಹ್ರಸ್ವ’ ಪ್ರಯೋಗ<br>ಉತ್ತಮ. |
| ೩ | ೧ | ೩೬ | ಅಗಲಲಿಲ್ಲದ ಕೂಟಕ್ಕೆ ಬಿಜ್ಜೆ | ಗುರುಶಿಷ್ಯ ಸಾಮರಸ್ಯಕ್ಕೆ ಸಂಬಂಧಿಸಿದ<br>ಈ ವಚನದಲ್ಲಿ ಬೆಜಗಾಗುವುದಕ್ಕಿಂತ |
| ಆಉ | – | – | ಬಿಜ್ಜೆ ಬೆಜಗಾದ | ಯುಕ್ತ ಎಂಬುದಕ್ಕೆ ಬೇಜಾಗದ<br>ಅರ್ಥವಿಲ್ಲ |
| | | ಇ | ಬೇಜಾಗದ | ಸಂಪಾದಕರ ಪ್ರತಿಭೆ ಬಿಜ್ಜೆ ಬೇಜಾಗದ<br>ಉಪದೇಶವನ್ನೇ ಗ್ರಹಿಸಿರುವುದು<br>ಯೋಗ್ಯ |
| ೪ | ೫.೧೫ | ೨ | ಮತಿಗೆಟ್ಟು ಮತಿಗುಂದಿ ಬೇಳಾದೆನಯ್ಯಾ<br>+ + + +<br>ಕಹಿಸೋರೆ ಮುತ್ತಂತಾಯಿತೆನ್ನ ಭಕ್ತಿ | ವ್ಯೋಮಮಾರುತಿ ಅಲ್ಲಮನು ಮಹಾ<br>ಮನೆಯ ಮುಂದೆ ಬಂದು ಹೋದ<br>ದಿಗಿಲುಬಿದ್ದ. ಮತಿಗೆಟ್ಟು ಧೃತಿಗುಂದಿ<br>ಬೇಳಾದೆ’ ಎನ್ನುತ್ತಾನೆ. ‘ಬೆಳೆದೆ’ ಎನ್ನ<br>ಲಾರ. ಅದೇ ರೀತಿ |
| ಇ ಈ ಉ | | | ಬೆಳೆದೆನಯ್ಯಾ. . . . . .<br>ಕಾಯಿಯಂತಾಯಿತ್ತೆನ್ನ. . . | ತನ್ನ ಭಕ್ತಿ ‘ಕಹಿಸೋರೆ ಮುತ್ತಂತಾಯಿ<br>ತ್ತು’ ಮುದಿಯಾಯಿತು (ಹಣ್ಣಾಯಿತು)<br>ಎನ್ನುತ್ತಾನೆ. ಕಹಿಸೋರೆ ಕಾಯಿ ಹಣಾ<br>ದರೂ ತನ್ನ ಮೊದಲಿನ ಕಹಿ ಬಿಡುವು<br>ದಿಲ್ಲ. ಹಾಗೆಯೇ ಬೆಳೆದುನಿಂತ ತನ್ನ<br>ಯ ಭಕ್ತಿಸ್ಥಿತಿ ಕಹಿತನ ಬಿಟ್ಟಿಲ್ಲ ಎನ್ನು<br>ತ್ತಾನೆ ಬಸವಣ್ಣ |
| ೫ | ೧೩ | ೬ | ತಾವು ತಂದ ಕಟ್ಟಿಗೆಯ<br>ಸರಬುಗಳ ಮೇಲೆ | ‘ಸರಬು’ ಶುದ್ಧ ದೇಶಿಶಬ್ದ. ಇಂದಿಗೂ<br>ತುಮಕೂರು ಜಿಲ್ಲಾ ಚಿಕ್ಕನಾಯಕನಹಳ್ಳಿ<br>ತಾಲ್ಲೂಕಿನ ಹಳ್ಳಿಗಳ ಬೇಲಿ ಹಾಕಲು<br>ಕಾಡಿನಿಂದ ತರುವ ದೇವದಾರುವಿನ ರೆಂ<br>ಬೆಗಳನ್ನು ‘ಸರಬು’ ಎನ್ನುತ್ತಾರೆ. |
| ಇ | – | – | ಈ ಸಬಳಗಳ ಮೇಲೆ | ಉದ್ದವಾಗಿರುವ ಅಥವಾ ನೀಳರಾಗಿರು |

| | | | | |
|---|---|---|---|---|
| | | | | ವ ಸರಬುಗಳ ಮೇಲಿ ಪಾದೋದಕ ತಳಿದು ಮೋಳಿಗಯ್ಯಗಳು ಅವೆಲ್ಲವನ್ನು 'ಸುವರ್ಣ ದಂಡಂಗಳಂ' ಮಾಡಿದರೆಂಬ ಪವಾಡ ಸಂದರ್ಭಕ್ಕೆ ಸಬಳಕ್ಕಿಂತ 'ಸರಬು' ಉಪಯುಕ್ತ ಪದ. |
| ೬ | ೧೩ | ೨೯ | ಈ ಗುಣ ನಿನ ಸದ್ ಭಾವ ನಿಜವಾದಲ್ಲಿ ನಿನ್ನಂಗವ ಕೈಲಾಸ | ಸದ್ಭಾವ 'ನಿಜ'ವಾಗಬೇಕು. 'ಬೀಜ'ವಾಗ ಬಾರದು. ಜೀವ ಬಯಲು ಬಯಸುವುದಾದರೆ. ಆ ಕಾರಣ 'ನಿಜ' ಯೋಗ್ಯ |
| ಇಈ | | | ಬೀಜವಾದಲ್ಲಿ | |
| | | | + + + + | ಪಾಠಾಂತರ |
| ೭ | ೨೦ | ೫೯ | ಬಯಕೆಯುಳಿಯಿತ್ತು ನಿಜವೆಂಬುದಳಿಯಿತ್ತು | ಜೀವನ ತನು, ಮನ, ಭಾವ, ಬಯಕೆ ಮೊದಲಾದವು ಅಳಿದಂತೆ, ದೇವನ ನಿಜ, ನಾಮ, ಸೀಮೆ ಇವುಗಳೂ ಪೂರ್ಣ ಅಳಿಯಬೇಕು |
| ಇಈ | – | – | ನಿಜವೆಂಬುರುಳಿಯಿತ್ತು | 'ಆಗಲೇ 'ಶೂನ್ಯಸಂಪಾದನೆ' ಶೂನ್ಯದ ಅರ್ಥ ಕೇವಲ ಎಲ್ಲವನ್ನು ಒಳಗೊಂಡಿದ್ದು ಅಷ್ಟೇ ಅಲ್ಲ. ಒಳಗೊಂಡದ್ದಕ್ಕೂ ಅತೀತವಾಗಿ ನಿಲ್ಲುವ 'ನಿರಂಜನ ಶಿವತತ್ವ, ಅಂತಹ ಶಿವಾದ್ವೈತದರ್ಶನದ ಅಥವಾ ಶೂನ್ಯಸಂದನೆಯ ನೆಲೆಯನ್ನು ಮುಟ್ಟುತ್ತಾರೆ. ನಿಜವೆಂಬುದಳಿದಾಗ. ಆದ್ದರಿಂದ ನಿಜ ಉಳಿಯುವುದಿಲ್ಲ. ನಿಜ ಅಳಿಯುವುದು ಶ್ರೇಷ್ಠ, ಸಂಪಾದಕಪ್ರಜ್ಞೆ ಈ ನಿಜವನ್ನು ಗ್ರಹಿಸಿ ಸಾರ್ಥಕತೆ ಪಡೆದಿದೆ. |
| ೮. | ೨೧ | ೭೭ | ಕಿಡಿಗೊಂಡರಗಿನ ಸಂಗದಂತ್ತಾಯಿತ್ತಾಗಿ | ನನ್ನೆದೆಂಬುದಳಿಯಬೇಕು. ಇದು ಮಡಿವಾಳ ಮಾಚಯ್ಯಗಳ ಹಂಬಲ. ಅದಕ್ಕಾಗಿ ಆತ್ಮ ಪರಮಾತ್ಮ ಸ್ಪರ್ಶದಿಂದ ತಾನಿಲ್ಲ ತಾನೆಲ್ಲವಾಗ ಬೇಕು ಎಂಬುದು ಅವನ ಆಶಯ. ಆ |
| ಈ | – | – | ಕೀಡಿ ಕುಂಡಲಿಗನ | ಭಾವದ ಅಭಿವ್ಯಕ್ತಿಗೆ 'ಕಿಡಿಗೊಂಡ ಅರಗು' ಎಂಬ ಉಪಮೆಗಿಂತ 'ಕೀಡಿ ಕುಡಲಿಗನ' ಸಂಗ ಹೆಚ್ಚು ಅರ್ಥಪೂರ್ಣ. 'ಭ್ರಮರಕೀಟ ನ್ಯಾಯ'ದಂತೆ ಹುಳು ಭ್ರಮರಸ್ವರೂಪ ಧಾರಣಗೈಯುವುದು. ಸಾಂದರ್ಭಿಕವಾಗಿ ಉಚಿತ ವೆನಿಸುತ್ತದೆ. ಅರಗುಕರ್ಪೂರದಂತಲ್ಲ. ಅಗ್ನಿ ಕೊಂಡಾಗ ಅದರಿಂದಾಗುವ ರಾಸಾಯನಿಕ ಬದಲಾವಣೆಗಳು ಪ್ರಸ್ತುತಕ್ಕೆ ಒಪ್ಪಿತ ವಲ್ಲ. |

ಉನ್ನತ ವಿಮರ್ಶೆಯೇ ಗ್ರಂಥಸಂಪಾದನೆಯ ಅಂತಿಮಘಟ್ಟ. ಅಲ್ಲಿ ಸಂಪಾಧಕನ ಚಾತುರ್ಯವಷ್ಟೇ ಅಲ್ಲದೆ ಅವನ ಸೋಪಜ್ಞತೆಯನ್ನೂ ಗುರುತಿಸಬಹುದು. ಆತ ಸಂಪಾದನೆಗೆಂದು ಎತ್ತಿಕೊಂಡ ಹಸ್ತಪ್ರತಿಗಳ ವಿವರ, ವಂಶಾವಳಿ, ಜೋಡಣೆ, ಶುದ್ಧ ಪ್ರಾಚೀನ ಪ್ರತಿ ನಿರ್ಣಯ, ಕೃತಿಕಾರನ ಪರಿಚಯ, ಕೃತಿ ವಿಮರ್ಶೆ, ಅನುಬಂಧರೂಪಿ ಪದ್ಯ ಅಥವಾ ವಚನಗಳ ವರ್ಣಾನುಕ್ರಮಣಿಕೆ, ಶಬ್ದಕೋಶ, ಟಿಪ್ಪಣಿ ಇತ್ಯಾದಿಗಳು ಅವನ ಸಂಪಾದನ ಕಾರ್ಯಗಳಲ್ಲಿ ಪಾಲ್ಗೊಳ್ಳುತ್ತವೆ.

ಸಂ.ಶಿ. ಭೂಸನೂರಮಠರು ತಮ್ಮ ಸಂಪಾದನಕಾರ್ಯಕ್ಕಾಗಿ ೨೧ ಹಸ್ತ ಪ್ರತಿಗಳ ನೆರವು ಪಡೆದಿದ್ದಾರೆ. ಒಂದು ಶುದ್ಧ ಪ್ರತಿಯನ್ನು ಆಧಾರವಾಗಿಟ್ಟುಕೊಂಡು ಉಳಿದ ಪ್ರತಿಗಳ ಉಪ[ಯುಕ್ತತೆಯನ್ನು ಪಡದಿದ್ದಾರೆ. ಕೇವಲ ಗೂಳೂರು ಸಿದ್ಧವೀರಣ್ಣೊಡೆಯನ ಸಂಗ್ರಹ ಪ್ರತಿಗಳಷ್ಟೇ ಅಲ್ಲದೆ, ಶೂನ್ಯಸಂಪಾದನೆಗಳ ಪ್ರಥಮ ಕರ್ತೃವಾದ ಶಿವಗಣಪ್ರಸಾದಿ ಮಹದೇವಯ್ಯ, ಅನಂತರದ ಗುಮ್ಮಳಾಪುರದ ಸಿದ್ದಲಿಂಗದೇವ ಹಾಗೂ ಹಲಗೆಯಾರ್ಯ ಇವರುಗಳ ಸಂಪಾದನೆಗಳನ್ನು ಪಕ್ಕದಲ್ಲೇ ಇಟ್ಟುಕೊಂಡು ವಿವೇಚಿಸಿದ್ದಾರೆ.

ಭೂಸನೂರಮಠರ ಸಂಪಾದನೆಯಲ್ಲಿ ಒಂದು ಅಚ್ಚುಕಟ್ಟಿದೆ. ಕೃತಿಯ ಅಂತ್ಯದಲ್ಲಿ ಉಪಯುಕ್ತವಾದ ವಚನಗಳ ವರ್ಣಾನುಕ್ರಮ, ವಚನಕಾರರ ಅಂಕಿತಗಳ ವರ್ಣಾನುಕ್ರಮ, ಪಾರಿಭಾಷಿಕ ಶಬ್ದಕೋಶ, ಕಠಿಣ ಪದಗಳ ಶಬ್ದಕೋಶ ಮತ್ತು ಕಡೆಯಲ್ಲಿ ಒಂದು ಒಪ್ಪೋಲೆಯನ್ನೂ ಕೊಟ್ಟಿದ್ದಾರೆ. ಇದು ಒಂದು ಬಗೆಯ ಪ್ರಾಮಾಣಿಕ ಪ್ರಯತ್ನ ಎಂದು ಹೇಳಬೇಕಾಗುತ್ತದೆ. ಅನುಬಂಧದಲ್ಲಿನ ದೋಷವೆಂದರೆ ವೀರಶೈವ ಪಾರಿಭಾಷಿಕ ಶಬ್ದಕೋಶ ಬೃಹತ್ ಪ್ರಮಾಣದಲ್ಲಿರಬೇಕಾಗಿತ್ತು. ಅದೇರೀತಿ ಶಬ್ದಕೋಶದಲ್ಲಿ ಪದಗಳಿಗಿತ್ತ ಅರ್ಥವಷ್ಟೇ ಸಾಲದು. ಆ ಶಬ್ಧ ಪ್ರಯೋಗವಾಗಿರುವ ಸಂದರ್ಭ ತಿಳಿಯಲು ಅನುಕೂಲವಾಗಿರುವಂತೆ ಆ ಪದ ಪ್ರಯೋಗಗೊಂಡ ವಚನದ ಸಂಖ್ಯೆಯನ್ನೂ ಹೇಳಬೇಕಾಗಿತ್ತು.

ಕೃತಿಯ ಪ್ರಾರಂಭದಲ್ಲಿ ಪೀಠಿಕೆ, ಪ್ರಸ್ತಾವನೆ ಇಲ್ಲದೆ ಇರುವುದು ಒಂದು ದೊಡ್ಡ ಕೊರತೆ. ಈ ಕೊರತೆಯನ್ನು ಸಂಪಾದಕರು ತಮ್ಮ ಎರಡನೆಯ ಸಂಪುಟದಲ್ಲಿ ತುಂಬಿಸಿರುವುದಾಗಿ ಹೇಳಿ ಹಸ್ತಪ್ರತಿಯನ್ನು ನನಗೆ ತೋರಿಸಿದರು. ಅದು ಬರೀ ವಿಮರ್ಶೆಯಲ್ಲ, ರಸ ವಿಮರ್ಶೆ ! ಅದರಲ್ಲಿ ನಾಲ್ಕು ಶೂನ್ಯಸಂಪಾದನೆಗಳು ತೌಲನಿಕ ಅಧ್ಯಯನ ನಡೆದಿದೆ. ಅದೊಂದೇ ಕೃತಿಯಲ್ಲಿ ಸಮಗ್ರ ಸಂಪಾದನೆಗಳೂ ಅಡಕವಾಗಿವೆ. ಕೃತಿಕಾರನ ಕಾಲ, ದೇಶ ಸಾಹಿತ್ಯಕ ಅಂಶಗಳು, ವೀರಶೈವ ಪರವಾದ ಪಾರಿಭಾಷಿಕ ವಿವರಣೆಗಳು ಇವೆಲ್ಲವುಗಳಿಂದ ಕೂಡಿದ ಅದು ದರ್ಶನವಿಮರ್ಶೆಯಾಗಿದೆ. ಆದರೆ ದುರದೃಷ್ಟವಶಾತ್ ಅದು ಪ್ರಕಟವಾಗಿಲ್ಲ. ಪ್ರಕಟದಿದ್ದುದೇಕೆ ? ಎಂದು ಕೇಳಿದರೆ ಭೂಸನೂರಮಠರು ಹೇಳುತ್ತಾರೆ – 'ನಮ್ಮ ರಾವೂರಮಠದ ಶ್ರೀ ಶ್ರೀಗಳವರಲ್ಲಿ ಅಷ್ಟು ಹಣ ಇಲ್ಲ' ಎಂದು.

ಪ್ರಸ್ತುತದಲ್ಲಿ ಪ್ರಸ್ತಾಪಿಸಲೇಬೇಕಾದ ಮತ್ತೆರಡು ಅಂಶಗಳೆಂದರೆ ಶಿವಗಣ ಪ್ರಸಾದಿಯ ಕಾಲನಿರ್ಣಯ ಮತ್ತು ಗೂಳೂರು ಸಿದ್ಧವೀರಣ್ಣೊಡೆಯರ ಕೃತಿಯ ಮಹತ್ವ.

ಶಿವಗಣಪ್ರಸಾದಿಯು ಚಾಮರಸನಿಗಿಂತಲೂ ಅರ್ವಾಚೀನನಲ್ಲ, ಬಸವಣ್ಣನ ಸಮಕಾಲೀನನಾದ ಹರಿಹರನಿಗೆ ಹತ್ತಿರದವನು, ಅದರಿಂದಾಗಿ ಕಾಮಲತೆಯ ಪ್ರಸಂಗ ತಂದಿದ್ದಾನೆ. ಬಹುಶಃ, ವೀರಶೈವಕ್ಕೆ ಮಡಿತನ ಬಂದದ್ದು ಎಡೆಯೂರ ಸಿದ್ಧಲಿಂಗನನಂತರದಲ್ಲಿ. ನೋರೊಂದು ಜನ ವಿರಕ್ತರ ಪ್ರಭಾವ ಪ್ರಚಾರಗಳಿಂದ ಅನ್ನಿಸುತ್ತೆ. ಈ ಮಡಿತನಕ್ಕೆ ಮಹತ್ವಕೊಟ್ಟಿರುವ ಗೂಳೂರು ಸಿದ್ಧವೀರಣ್ಣೊಡೆಯನ ಕೃತಿ ಶುದ್ಧ ಶ್ರೇಷ್ಠ ಸಮರ್ಪಕ ಎಂದು ಕರೆದಿರುವುದು ಆಶ್ಚರ್ಯವಲ್ಲ. ಆದರೂ ನಿರ್ಲಿಪ್ತ ನಿಷ್ಪಕ್ಷಪಾತ ಸಂಶೋಧಕನಿಗೆ ಇದು ಕರೆಕೊಡುತ್ತಿದೆ. ಕಲೆ ಒಂದು ಶ್ರೇಣಿಯೇ ಹೊರತು ವೇದಿಕೆ ಅಲ್ಲ. ಕಲೆಯನ್ನು ಕುರಿತ ಕೆಲಸವೂ ಅಷ್ಟೇ. ಹತ್ತಿದಷ್ಟೂ ಮೇಲೆ ಮೇಲೆ ಅದರ ಕ್ಷಿತಿಜ ವಿಸ್ತಾರವಾಗುತ್ತಾ ಹೋಗುತ್ತದೆ.

* * * * * *

ಗ್ರಂಥಸಂಪಾದನೆ ಒಂದು ಕಲೆ ಎನ್ನುವುದು ಕೇವಲ ಔಪಚಾರಿಕ ಅಷ್ಟೆ. ಅದು ಶುದ್ಧಶಾಸ್ತ್ರ. ಸೃಜನಶೀಲತೆಯಂತೂ ಅಲ್ಲ. ಆದರೆ ಅದೊಂದು ಮರುಸೃಷ್ಟಿ. ಗ್ರಂಥಸಂಪಾದಕ ಓರ್ವ ಪುನರ್ ಸೃಷ್ಟಿಕರ್ತ. ಅವನ ಕರ್ತವ್ಯ ಅತ್ಯಂತ ಜವಾಬ್ದಾರಿಯಿಂದ ಕೂಡಿದ್ದು, ಅವನಲ್ಲಿ ಪರಕಾಯಪ್ರವೇಶ ಮಾಡಬಲ್ಲ ಅಸಾಮಾನ್ಯ ವಿದ್ಯೆಯು ಇರಬೇಕು. ಆಗಲೇ ಅವನ ಕಾರ್ಯ ಮೆಚ್ಚಾಗುವುದು. 'ಪ್ರತಿಭೆ, ವ್ಯುತ್ಪತ್ತಿ, ಅಭ್ಯಾಸ'ಗಳೆಂಬ ಕಾವ್ಯಹೇತುಗಳು ಕಲೆಗಷ್ಟೇ ಮೀಸಲಲ್ಲ, ಗ್ರಂಥ ಸಂಪಾದಕನಿಗೂ ಬೇಕು. ರಾಜಶೇಖ

ರನು ಹೇಳುವಂತೆ ಚಿತ್ತಸ್ವಾಸ್ಥ್ಯ, ಪ್ರತಿಭೆ, ಅಭ್ಯಾಸ, ಭಕ್ತಿ, ವಿದ್ವತ್ತು, ಬಹುಶ್ರುತತ್ವ, ಗಾಢವಾದ ಸ್ಮೃತಿಶಕ್ತಿ, ಅದಮ್ಯ ಉತ್ಸಾಹ – ಈ ಅಷ್ಟಮಾತೃಕೆಯರು ಸೃಜನಶೀಲಕವಿಯ ತಾಯಂದಿರು[೮]. ಇವರು ಗ್ರಂಥ ಸಂಪಾದಕನ ಮಾತೆಯರೂ ಹೌದು.

ಮೌಲಿಕ ಕೊಡುಗೆಯಿತ್ತ ಭೂಸನೂರಮಠರ ಸ್ಥಾನ ನಿರ್ದೇಶನ ಸಂದಿಗ್ದ ಅಲ್ಲ. ಅವರು ಭಾವುಕ ಕವಿಯಾಗಿದ್ದಾರೆ. ಚಿಕಿತ್ಸಾ ಚತುರ ವಿಮರ್ಶಕರಿದ್ದಾರೆ. ಪ್ರತಿಭೆ ವ್ಯುತ್ಪತ್ತಿಗಳೆರಡನ್ನೂ ಸಮ ಪ್ರಮಾಣದಲ್ಲಿ ದುಡಿಸಿಕೊಂಡು, ಅವುಗಳ ಮೂಲಕ ಸಂಶೋಧನೆಗೆ ಜೀವ ತುಂಬುವ ದಕ್ಷತೆಯೂ ಅವರಲ್ಲಿದೆ. ಅವರು ತುಂಬು ಅನುಭಾವಿಗಳು. ಅನುಭಾವವೇ ಅವರ ಮಹಾಕಾವ್ಯದ ಜೀವರಸ. ಅನುಭವದಾಗರವಾದ ವಚನಸಾಹಿತ್ಯ ಅವರ ಅನುಭೂತಿಗೆ ಪ್ರೇರಕವೂ ಹೌದು, ಪರಿಣಾಮವೂ ಹೌದು. ಶೂನ್ಯಸಂಪಾದನೆಯ ಪರಿಷ್ಕರಣ ಸಂದರ್ಭದಲ್ಲಿ ಅವರು ನಿಜಕ್ಕೂ ಶರಣಸ್ಥಲದ ಶರಣರಾಗಿ ಗೋಚರಿಸುತ್ತಾರೆ. ಶಿವಯೋಗ ಅವರ ಪಾಲಿಗೆ ಸಹಜಯೋಗ ! ಅದರಿಂದಾಗಿ ವಚನ ವೈಭವವನ್ನು ಗುರುತಿಸುವೆಡೆಯಲ್ಲಿ ಭೂಸನೂರಮಠರ ಪರಿಶ್ರಮವನ್ನು ಮರೆಯಲಾಗದು. ಅವರು ಸಂಪಾದಿಸಿದ ಪ್ರಭುದೇವರ ಶೂನ್ಯಸಂಪಾದನೆ ಶಿವಯೋಗಿ ಧರಿಸಿದ ಕಂಥೆ (ಕಾವಿ ಕಪಿನಿ), ಅಪ್ರಕಟಿತ ಎರಡನೆಯ ಭಾಗ[೯] ಕಪ್ಪರ ! (ಕಮಂಡಲು)

* * * * * *

ಪ್ರೊ. ಸಂ.ಶಿ. ಭೂಸನೂರಮಠರ ಕೃತಿಗಳು ಸಂಖ್ಯೆಯಲ್ಲಿ ಕಿರಿಯವು. ಸತ್ವದಲ್ಲಿ ಹಿರಿಯವು. ಇವರ ಕೃತಿಗಳು ಹದಿ

---

[೮] ರಾಜಶೇಖರ, ಕಾವ್ಯಮೀಮಾಂಸೆ ಅಧ್ಯಾಯ ೧೦

[೯] ಅವರ ಎರಡನೆಯ ಸಂಪುಟ ಹೊರಬರಲೇ ಇಲ್ಲ. ಇನ್ನೇನು ಬಂದೀತು ಎನ್ನುವಷ್ಟರಲ್ಲಿ ಅವರೇ ಇಲ್ಲವಾದರು ನಮ್ಮ ಪಾಲಿಗೆ.

[೧೦] ೧. ಭಕ್ತಿ ಸುಧಾಸಾರ ೧೯೪೫

೨. ಗರುರಾಜ ಚಾರಿತ್ರ ೧೯೫೦

೩. ಮೋಳಿಗೆ ಮಾರಯ್ಯ ಮತ್ತು ರಾಣಿ ಮಹಾದೇವಿಯವರ ವಚನಗಳು (ರೆ॥ ಚನ್ನಪ್ಪ ಉತ್ತಂಗಿಯವರೊಡನೆ) ೧೯೫೦

೪. ಮೋಳಿಗಯ್ಯನ ಪುರಾಣ ೧೯೫೬

೫. ಲಿಂಗಲೀಲಾವಿಲಾಸ ಚಾರಿತ್ರ ೧೯೫೬

೬. ಪ್ರೌಢರಾಯನ ಕಾವ್ಯ ೧೯೫೭

೭. ಶೂನು ಸಂಪಾದನೆ ೧೯೫೮

೮. ವಚನ ಸಾಹಿತ್ಯ ಸಂಗ್ರಹ ೧೯೬೫

೯, ಶೂನ್ಯ ಸಂಪಾದನೆಯ ಪರಾಮರ್ಶೆ ೧೯೬೯

೧೦. ಶೂನ್ಯ ಸಂಪಾದನೆ ಇಂಗ್ಲಿಷ್ ಅನುವಾದ

ಸಂಪುಟ II ೧೯೬೮ , ಸಂಪುಟ III, ೧೯೬೯ , ಸಂಪುಟ IX, ೧೯೭೦

ಮೂರು.[೧೦] ಅವುಗಳಲ್ಲಿ 'ಶೂನ್ಯ ಸಂಪಾದನೆಯ ಪರಾಮರ್ಶೆ' ಶ್ರೇಷ್ಠ ವಸ್ತುನಿಷ್ಠ ವಿಮರ್ಶೆ 'ಭವ್ಯಮಾನವ' ಸೃಜನಾತ್ಮಕ ಮಹಾಕಾವ್ಯ.

'ಪರಾಮರ್ಶೆ' ಗೂಳೂರು ಸಿದ್ಧವೀರಣ್ಣೊಡೆಯನ 'ಶೂನ್ಯಸಂಪಾದನೆ'ಗೆ ಬರೆದ ಒಂದು ವಿಶಿಷ್ಠ ವ್ಯಾಖ್ಯಾನ. ಅದುವರೆಗೂ ಆಗಿರದಿದ್ದ ಆ ಮಹತ್ವದ ಕೃತಿಯನ್ನು ಕುರಿತು ಸಮಗ್ರ ಸಂಶೋಧನೆ ಹಾಗೂ ಸ್ತುತ್ಯ ಪ್ರಯತ್ನದ ಸಾರ್ಥಕ ಚಿಂತನೆ. ಭೂಸನೂರ ಮಠರವರಿಗೆ 'ಶೂನ್ಯಸಂಪಾದನೆ' ಒಂದು ಕಮನೀಯ ಕಾವ್ಯವಾಗಿಯಾಗಲಿ ಅಥವಾ ಧರ್ಮ–ದರ್ಶನಗಳನ್ನು ಎತ್ತಿ ಹಿಡಿಯುವ ಪಠ್ಯಪುಸ್ತಕವಾಗಿಯಾಗಲಿ ಗೋಚರಿಸಿಲ್ಲ. ಮಾನವನಲ್ಲಿ ವಿಶ್ವಮಾನವ ಪ್ರಜ್ಞೆಯನ್ನು ಯುಗಯುಗಕ್ಕೂ ಜಾಗೃತಗೊಳಿಸಬಲ್ಲ ಸತ್ವಶಾಲೀ ರಚನೆಯಾಗಿ ಕಂಡಿದೆ. ಜೀವದೇವರ ಐಕ್ಯಾನುಸಂಧಾನದ ಅನಿರ್ವಚನೀಯ ಪರಿಣಾಮದ ಪ್ರಾಪ್ತಿ ಅಲ್ಲಾಗಿದೆ. ಭುವಿಯಲ್ಲಿ ಆವಿರ್ಭವಿಸಿದ ಆತ್ಮವು ಸ್ವಯಂ ಸಾಹಸದಿಂದ ವಿಕಾಸಗೊಂಡು, ಕ್ರಮೇಣ ಅರಿವು ಮರೆವುಗಳೆರಡನ್ನೂ ನೀಗಿಕೊಂಡು, ನಿರ್ಮಲ ನಿರಂಜನ ಜ್ಯೋತಿಯಾಗಿ, ಕಡೆಯಲ್ಲಿ ನಾದಬಿಂದು ಕಳಾತೀತ ಮಹೋನ್ನತಿಯ ಮಜಲಿನಲ್ಲಿ 'ಶಿವ' ಅಥವಾ 'ಶೂನ್ಯ' ಆಗುವ ಬೃಹದ್ದರ್ಶನ ಅಲ್ಲಿ ಬಿತ್ತರಗೊಂಡಿದೆ. ಅದು ಅನುಭಾವದ ಕೆನೆ, ಆಧ್ಯಾತ್ಮದ ತೆನೆ. ಕೇವಲ ಅದು ಭಾವವನ್ನೇ ತನ್ನ

ಮೂಲ ದ್ರವ್ಯವನ್ನಾಗಿರಿಸಿಕೊಂಡ ಶೂನ್ಯಸಂಪಾದನೆಗೆ ವೈಜ್ಞಾನಿಕ ವಿಶ್ಲೇಷಣೆಯಿತ್ತು, ಸದರ ಮೂಲ ನೆಲೆಯನ್ನು ಗುರುತಿಸಿದ್ದಾರೆ ತಮ್ಮ ಪರಾಮರ್ಶೆಯಲ್ಲಿ. ಶೂನ್ಯಸಂಪಾದನೆಯದು ಆಧ್ಯಾತ್ಮ ಸಾಹಿತ್ಯ ; ಪರಾಮರ್ಶೆಯದು ದರ್ಶನ ವಿಮರ್ಶೆ. ಅದು ಶಬ್ದ ದೊಳಗಣ ನಿಶ್ಯಬ್ಧ, ಇದು ನಿಶ್ಯಬ್ಧ ಗರ್ಭಿತ ಶಬ್ಧರೂಪ ; ಅದು ನಿಜದ ನಿರಾಳ ಲಿಂಗ, ಇದು ಪ್ರಜ್ವಲಿಸುವ ದಿವ್ಯಪ್ರತಿಭೆಯ ಜ್ಯೋತಿ; ಅದು ನಿರಂಜನ ನಿರುಪಾಧಿಕ, ಇದು ರಂಜನ ಪ್ರತಿಪಾದಕ ; ಅದರದು ಸತ್ಯಾರ್ಥದ ಆವಿಷ್ಕಾರ, ಇದರದು ನಿತ್ಯಾರ್ಥ ಪ್ರಕಾಶ ಪರಿಷ್ಕಾರ ; ಅದರದು ಅವರೋಹಣ ಕರ್ಮ, ಇದರದು ಆರೋಹಣ ಕ್ರಿಯೆ ; ಅಲ್ಲಿ ನಿತ್ಯಸತ್ಯದ ಆವಿಷ್ಕರಣದ ಸಾಧ್ಯ, ಇಲ್ಲಿ ಅದರ ಪೃಥಕ್ಕರಣ ವೇದ್ಯ ; ಪ್ರಭುದೇವರ ಶೂನ್ಯಸಂಪಾದನೆಯನ್ನು ಸೃಜನಾತ್ಮಕ ಕಾವ್ಯ (Creative poetry) ಎಂದು ಕರೆಯುವುದಾದರೆ; ಭೂಸನೂರಮಠರ 'ಪರಾಮರ್ಶೆ'ಯನ್ನು ಒಂದು ಸೃಜನಾತ್ಮಕ ವಿಮರ್ಶೆ (Creative Criticism) ಎಂದು ಘೋಷಿಸಬಹುದು. ಅದು 'ನೆಲದ ಅಚ್ಚರಿ'ಯಾದರೆ, ಇದು ಅಚ್ಚರಿಯ ನೆಲೆ !

* * * * *

**ನಾಯಕನನ್ನಾಗಿ ಕೃತಿ ವಿಶ್ರುತಮಾಗದುದಾತ್ತ ರಾಘವಂ**
**ನಾಯಕನಾಗೆ ವಿಶ್ರುತವೆನಿಪ್ಪುದು ವಿಸ್ಮಯಕಾರಿಯಲ್ತು ಕಾ**
**ಲಾಯಸದಿಂ ವಿನಿರ್ಮಿಸಿದ ಕಂಠಿಕೆ ಕಾಂಚನ ಮಾಲೆಯಂತುಪಾ**
**ದೇಯಮೆನಿಕ್ಕುಮೇ ವಿಷಯಮೊಪ್ಪದೊಡಾವುದುಮೊಪ್ಪಲಾರ್ಕುಮೇ**

ಮಹಾಕಾವ್ಯವನ್ನು ಕುರಿತ ಅಭಿನವ ಪಂಪನ ಈ ಪದ್ಯದಲ್ಲಿ ಎರಡು ಅಂಶಗಳು ಸ್ಫುಟಗೊಳ್ಳುತ್ತವೆ. ಒಂದು ಕಥಾನಾಯಕ ಪಾತ್ರ (Character) ಮತ್ತೊಂದು ವಿಷಯ ಅಥವಾ ಕಥಾವಸು (Story) ಇವೆರಡೂ ಉದಾತ್ತವಾದವುಗಳಾದರೆ ಸಾಕು ಕಾವ್ಯ ತನ್ನ ಘನತೆಯನ್ನು ಹೆಚ್ಚಿಸಿಕೊಳ್ಳುತ್ತದೆ ; ಬಹು ವಿಶ್ರುತವಾಗುತ್ತದೆ ಎಂಬುದು ಕವಿಯ ನಂಬಿಕೆ. ಈ ನಂಬಿಕೆ ಪಾಶ್ಚಾತ್ಯ ಕಾವ್ಯ ಮೀಮಾಂಸಕರಲ್ಲೂ ಇದೆ. ಅವರಲ್ಲಿ ಸಕಲಕ್ಕೂ ಪ್ರಮಾಣಭೂತ ವ್ಯಕ್ತಿಯಾದ ಅರಸ್ಟಾಟಲ್ ಮಹಾಕಾವ್ಯದ ಕಥಾವಸ್ತು ಮತ್ತು ಪಾತ್ರ ಕುರಿತ ಅಭಿಪ್ರಾಯಗಳನ್ನು ಸ್ಪಷ್ಟೀಕರಿಸಿದ್ದಾನೆ. ಅವುಗಳನ್ನು ಕ್ರೋಡೀಕರಿಸಿದಾಗ ಈ ಕೆಲ ಅಂಶಗಳು ವೇದ್ಯವಾಗುತ್ತವೆ :

---

೧೧ ಏಕೋತ್ತರ ಶತಸ್ಥಲ ೧೮೭೪

೧೨ ಶೂನ್ಯ ಸಂಪಾದನೆಯ ಪರಾಮರ್ಶೆಯ ಸಂಗ್ರಹ ೧೯೭೮

೧೩ ಭವ್ಯಮಾನವ ೧೯೮೪

ಮಹಾಕಾವ್ಯವೆನ್ನುವುದು ಕವಿಯ ಕಥನರೂಪೀ ಕಲಾಕೃತಿ. ಅದು ಒಂದೇ ಛಂದಸ್ಸಿನ ಬಳಕೆಯಿಂದ ರಚಿತವಾದದ್ದು. ಅದರ ಕಥಾವಸ್ತು ವಿನ್ಯಾಸದಲ್ಲಿ ಆದಿ ಮಧ್ಯ ಮತ್ತು ಅಂತ್ಯಗಳನ್ನೊಳಗೊಂಡ ಅಖಂಡಕ್ರಿಯೆ ಅಳವಟ್ಟಿರಬೇಕು. ಆದಿಗೂ ಅಂತ್ಯಕ್ಕೂ ಮುಕ್ತ ಹೊಂದಾಣಿಕೆ ಇರಬೇಕು. ಇಲ್ಲಿ ಮೆರೆವ ಪಾತ್ರಗಳು ಭೂಮವಾದುವಾಗಿರಬೇಕು. ನಿರೂಪಣೆಯಲ್ಲಿ ಸಾತತ್ಯ ವಿರಬೇಕು. ಕಥಾವಸ್ತು ಮತ್ತು ಪಾತ್ರ – ಇವುಗಳ ಬೆಳವಣಿಗೆಯಲ್ಲಿ ಚಾರಿತ್ರಿಕ ದೃಷ್ಟಿಗಿಂತ ಹೆಚ್ಚಾಗಿ ನಿತ್ಯ ಸತ್ಯದ ಕಡೆಗೆ ಗಮನ ವಿರಬೇಕು. ಕಥಾವಸ್ತುವು ನಂಬಬಹುದಾದ ಅಸಾಧ್ಯತೆ (Convincing impossibility)ನ್ನು ರೂಪಿಸಬೇಕೇ ಹೊರತು, ನಂ ಬಲಾಗದ ಸಾಧ್ಯತೆ (Unconvincing possibility)ಯನ್ನು ಚಿತ್ರಿಸಬಾರದು.

ಅರಿಸ್ಟಾಲನ ಈ ಅಭಿಪ್ರಾಯವನ್ನು ಅನುಮೋದಿಸುತ್ತಾ ಸಿ.ಎಂ. ಬೌರಾ ತನ್ನ 'Heroic Poetry' ಯಲ್ಲಿ ಮಹಾಕಾವ್ಯ ಒಂದು ವಸ್ತುನಿಷ್ಠಕಾವ್ಯ. ಅದರಲ್ಲಿ ನಾಟಕೀಯತೆ ಇರಬೇಕು, ಛಂದಸ್ಸಿನಲಿ ಏಕತೆ ಇರಬೇಕು, ಕಥಾವಸ್ತುವಿಗೆ ಹೆಚ್ಚು ಪ್ರಾಧಾನ್ಯವಿ ರಬೇಕು ಎಂದು ಹೇಳಿದ್ದಾರೆ.

ಈ ಎಲ್ಲ ಹೇಳಿಕೆಗಳ ಒಟ್ಟು ಅಭಿಪ್ರಾಯ ಮಹಾಕಾವ್ಯದಲ್ಲಿನ ಕಥಾವಸ್ತು ಮತ್ತು ಪಾತ್ರಗಳಿಗೆ ಸಂಬಂಧಿಸಿದ್ದು. ಮಹಾ ಕಾವ್ಯದಲ್ಲಿ ಕಥೆಯ ಪಾತ್ರವೇನು ? ಎಂಬುದನ್ನು ಪರಿಶೀಲಿಸ ಹೊರಟರೆ ಅದು ಕಾವ್ಯ ಶರೀರದ ಮೂಳೆ ಎನ್ನಬೇಕಾಗುತ್ತದೆ. ಮೂಳೆ ಇಲ್ಲದಿದ್ದರೆ ಮನುಷ್ಯ ಮಾಂಸ ಮುದ್ದೆಯಾಗಿ ಬಿಡುತ್ತಾನೆ. ಅದನ್ನು ಕಲ್ಪಿಸಿಕೊಳ್ಳಲೂ ಸಾಧ್ಯವಿಲ್ಲ. ಅದೇ ರೀತಿ ಕಥೆ ಯಿಲ್ಲದೆ ಮಹಾಕಾವ್ಯ ಇಲ್ಲ. ಇದು ನಾಟಕ, ಸಣ್ಣಕತೆ, ಕಾದಂಬರಿ ಮೊದಲಾದ ಪ್ರಕಾರಗಳಿಗೂ ಅನ್ವಯಿಸುತ್ತದೆ. ಈ ಸಾಹಿತ್ಯ ಪ್ರಕಾರಗಳಲ್ಲಿ ಕಥೆಯೇ ಮೂಲಾಧಾರ, ಅಥವಾ ಲತಾವಿತಾನದ ಹಂದರ. ಆ ಹಂದರದ ಮೇಲೆ ಅಲಂಕಾರಿಕ ಕಾವ್ಯವಲ್ಲರಿ

ಹಬ್ಬಿಕೊಂಡಿರುತ್ತದೆ. ಕಥೆಯನ್ನಾಶ್ರಯಿಸಿಕೊಂಡೇ ವಿಕಾಸಗೊಳ್ಳುವ ಮತ್ತೊಂದು ಅಂಶವೆಂದರೆ ಅದರಲ್ಲಿನ ಪಾತ್ರ (Character) ಇದು ವ್ಯಕ್ತಿಯ ವ್ಯಕ್ತಿತ್ವ ವಿಸಿಸುವ ಜೀವಂತ ಪ್ರತಿಮೆ; ಆದರ್ಶದ ಪ್ರತೀಕವೂ ಹೌದು. ಕಥೆ ಶ್ರೋತೃವನ್ನು ಸಮ್ಮೋಹಿಸಿದರೆ, ಪಾತ್ರ ಅವನಲ್ಲಿ ಆತ್ಮೀಯತೆಯನ್ನು ತುಂಬುತ್ತದೆ ; ಅವನತನಕ್ಕೆ ಹತ್ತಿರವಾಗುತ್ತಾ ಬರುತ್ತದೆ. ಅವನನ್ನು ಒಲಿಸಿಕೊಂಡು, ಒಲವರದ ಮೂಲಕವೇ ತನ್ನ ಗೆಲುವನ್ನೂ ಸಾಧಿಸಿಕೊಳ್ಳುತ್ತದೆ. ಅರಿಸ್ಟಾಟಲ್ ತನ್ನ ಕಾವ್ಯಮೀಮಾಂಸೆಯಲ್ಲಿ ಮಹಾಕಾವ್ಯ (Epic poetry) ಮತ್ತು ರುದ್ರನಾಟಕ (Tragedy) ಗಳನ್ನು ಪರಸ್ಪರ ಹೋಲಿಸುತ್ತಾ ಈ ರೆದ್ರನಾಟಕ ಪಾತ್ರ ಪ್ರಧಾನ ಎನ್ನುತ್ತಾನೆ. ಆದರೂ ಎರ ಡರಲ್ಲೂ ಪಾತ್ರ ಮತ್ತು ವಸ್ತು ಅನ್ಯೋನ್ಯ ಎಂಬುದು ಸ್ವಯಂವೇದ್ಯ.

ಈ ರಚನೆಗಳಲ್ಲಿ ಕಥೆ (Story) ಮತ್ತು ಪಾತ್ರ (Character) ಇವು ಗಣನೀಯ ಅಂಶಗಳು ನಿಜ. ಆದರೆ ಮತ್ತೊಂದು ಅಂಶ ಇದರೊಡನೆ ತೆಕ್ಕೆ ಬಿದ್ದು ಪ್ರಕಟವಾಗುತ್ತದೆ. ಅದೇ ವಸ್ತು (theme) 'ವಸ್ತು' ಎಂದರೆ ಕಾವ್ಯ ಅಥವಾ ನಾಟಕ ಅಥವಾ ಕಥೆ ಅಥವಾ ಕಾದಂಬರಿ ಇವುಗಳಲ್ಲಿ ಬರುವ ಕಥೆ ಅಲ್ಲಿ ಕವಿಯ ಅನಿಸಿಕೆ ಅಥವಾ ಅನುಭೂತಿಯ ಮೊತ್ತ, ಅವನ ಪ್ರತಿಭೆ ಮತ್ತು ವ್ಯುತ್ಪತ್ತಿಗಳ ಪ್ರದರ್ಶನ. ಇದು ಪ್ರತಿಯೊಬ್ಬ ಕವಿಯ ಸೋಪಜ್ಞತೆಗೆ ಸಾಕ್ಷಿ. ಕವಿ ತನ್ನ ಕಾವ್ಯಕ್ಕೆ ಕಥಾವಸ್ತುವನ್ನು ಎಲ್ಲಿಂದಲೇ ತೆಗೆದುಕೊಂಡಿರಲಿ, ಯಾವ ಕಾವ್ಯದಿಂದಲೀ ಆಯ್ದುಕೊಂಡಿರಲಿ, ಅದನ್ನು ತನ್ನದಾಗಿಸಿಕೊಂಡು ತನ್ನ ದೃಷ್ಟಿಗೆ ತಕ್ಕಂತೆ ಸೃಷ್ಟಿ ಮಾಡುತ್ತಾನೆ. ಮೂಲಕಥೆ ಅವನಿಗೆ ಕೇವಲ ಒಂದು ಆಲಂಬನ ಅದರಲ್ಲಿ ಅಭಿವ್ಯಕ್ತಿಸುವ ಎಲ್ಲ ಅಂಶವೂ ಅವನದು. ಅವನದೇ ಭಾವನ, ಚಿಂತನ, ಕಲ್ಪನ, ದರ್ಶನ. ಅವನದಾದ ಈ ಅಭಿವ್ಯಕ್ತಿತನ್ನೇ ವಸ್ತು (Theme) ಎಂದು ಕರೆಯುವುದು. ಮಹಾಕಾವ್ಯ ಸಂದರ್ಭದಲ್ಲಿ ಈ ಬಗೆಯ ಸ್ವೀಕರಣ ಕ್ರಿಯೆಯನ್ನು ಹೆಚ್ಚಿನ ಪ್ರಮಾಣದಲ್ಲಿ ಗುರುತಿಸುತ್ತೇವೆ. ಜನಪದವನ್ನೇ ತನ್ನ ಮಾತೃಗರ್ಭ ವಾಗಿರಿಸಿಕೊಂಡ ಮೂಲ ಮಹಾಕಾವ್ಯ (Premitive or Natural Epic) ಚಾರಣರಿಂದ (The Bards) ಅಭಿವ್ಯಕ್ತಸಿಕೊಂಡು ಮುಂದಿನ ಸಾಹಿತ್ಯಿಕ ಮಹಾಕಾವ್ಯಗಳಿಗೆ (Literary Epics) ಮೂಲ ಮಾತೃಕೆಯಾಗುತ್ತದೆ. ಈ ಸಾಹಿತ್ಯಿಕ ಮಹಾಕಾವ್ಯದ ಕವಿ ಗಳು ಮೂಲ ಕಥೆಯ ಮೇಲೆ ಕುಸುರಿ ಕೆಲಸದ ಕಲಾ ಕೈವಾಡವನ್ನು ನಡೆಸುತ್ತಾರೆ. ಅದಕ್ಕೆ ಹೊಸ ಹೊಸ ಆಯಾಮಗಳನ್ನು
ಒದಗಿಸಿ ಅದೊಂದು ವಿನೂತನ ಸೃಷ್ಟಿಯಾಗುವಂತೆ ಮಾಡುತ್ತಾರೆ. ಇಂತಾಗಲು ಅವರು ಕೊಡುವ ವಸ್ತು (theme) ಮುಖ್ಯವೆ ನಿಸುತ್ತದೆ.

ಅಲ್ಲಿ ಭಿತ್ತಿ ಮಾತ್ರವಾಗಿ ನಿಲ್ಲುತ್ತದೆ ಮೂಲಕಥೆ. ಸಾಹಿತ್ಯಿಕ ಮಹಾಕಾವ್ಯದ ಮಹಾ ಕವಿಯ ವಸ್ತು ಆ ಭಿತ್ತಿಯ ಮೇಲೆ ಬರೆದ ಚಿತ್ರವಾಗುತ್ತದೆ. ಕತೆ ಪ್ರಾಚೀನ, ವಸ್ತು ಅರ್ವಾಚೀನ, ಅದು ನೆಲೆ ನಿಂತದ್ದು, ಇದು ಸದಾ ಪರಿವರ್ತನಶೀಲವುಳ್ಳದ್ದು. ಸ್ವೀಕರಣ ಸಂದರ್ಭದಲ್ಲಿ ಸೃಜನಶೀಲ ಕವಿ ಮೂಲಕವಿಯಿಂದ ಸ್ಥೂಲ ಕಥೆಯನ್ನಷ್ಟೇ ಎರವಲಾಗಿ ಪಡೆಯುತ್ತಾನೆ. ಅದರಲ್ಲಿ ತನ್ನನ್ನು ತಾನು ಗುರುತಿಸಿಕೊಳ್ಳುತ್ತಾನೆ, ಅಭಿವ್ಯಕ್ತಿಸುತ್ತಾನೆ, ಅನಾವರಣಗೊಳಿಸಿಕೊಳ್ಳುತ್ತಾನೆ. ಅದರ ಪುಟಪುಟದಲ್ಲೂ ತಾನು ಕುಳಿ ತಿರುತ್ತಾನೆ. ಹೇಳುತ್ತಾರೆ :

**'ತನು ನಿನ್ನದಾದೊಡಂ ಚೈತನ್ಯಮೆನ್ನದೆನೆ**
**ಕಥೆ ನಿನ್ನದಾದೊಡಂ ನೀನೆ ಮೇಣಾಶೀರ್ವದಿಸಿ**
**ಮತಿಗೆ ಬೋಧನವಿತ್ತೊಡಂ ಕೃತಿ ನನ್ನದರ್ಶನಂ !'**

**(ಕುವೆಂಪು, ರಾಮಾಯಣ ದರ್ಶನಂ)**

ಎಂದು.

ಈ ಆತ್ಮಪ್ರತ್ಯಯದ ಫಲವಾಗಿ ರಾಮಾಯಣದ ಮೇಲೆ ರಾಮಾಯಣಗಳು ಹುಟ್ಟಿದವು. ಫಣಿರಾಯ ತಿಣುಕುವಷ್ಟು ಜನ ರಾಮಾಯಣದ ಕವಿಗಳು ಹುಟ್ಟಿಕೊಂಡರು. ಶ್ರೀ ಕುವೆಂಪು 'ಶ್ರೀ ರಾಮಾಯಣ ದರ್ಶನಂ' ಮಹಾಕಾವ್ಯವಿತ್ತರು. ಮಾಸ್ತಿ 'ಶ್ರೀರಾಮಪಟ್ಟಾಭೀಷೇಕ'ವನ್ನು ವಿನೂತನಗೊಳಿಸಿದರು. ತಮ್ಮದಾದ ತಂತ್ರ ಪ್ರಯೋಗದ ನೆರವಿನಿಂದ. ವೇದ ಕಾಲದ ಬದುಕಿಗೆ ಹೊಸ ಹುಟ್ಟು ಕೊಟ್ಟರು. ವಿ.ಕೃ. ಗೋಕಾಕ್ ಭಾಗವತವನ್ನು ಭವ್ಯಗೊಳಿಸಿದರು. ಪುತಿನ, ಅಶ್ವಘೋಷನ 'ಬುದ್ಧ ಚರಿತ'ಕ್ಕೆ 'ಬುದ್ಧ ವಚನಮಧು' ಎಂದು ಭದ್ರ ಮಂಗಳ ಆಯಾಮ ನಿರ್ಮಿಸಿದರು ಕಾಶಿವಿಶ್ವನಾಥಶೆಟ್ಟಿ, ಇದೇ ಮಾಲಿಕೆಯಲ್ಲಿ ಬರುವ ಕೃತಿ ರತ್ನ ಸಂ.ಶಿ. ಭೂಸನೂರಮಠರ 'ಭವ್ಯಮಾನವ' ಅನುಭಾವದ ಮೇರು ! ಅಕ್ಕನ ಆಧ್ಯಾತ್ಮ ಜೀವನಕ್ಕೆ ಆಧುನಿಕತೆಯನ್ನು ಜೋಡಿಸಿ ಒಂದು ಬೃಹತ್ ಕಾವ್ಯವನ್ನಾಗಿಸಿದ್ದಾರೆ.

ಪ್ರಸ್ತುತದಲ್ಲಿ ಸಂಗಯ್ಯ ಭೂಸನೂರಮಠರ 'ಭವ್ಯಮಾನವ'ದಲ್ಲಿ ಸ್ವೀಕರಣ ಎಷ್ಟು ? ಸ್ವಂತಿಕೆ ಎಷ್ಟು ? ಅದರ ವೈಭವ, ವಿಶಿಷ್ಟತೆಗಳೇನು ? ಎಂಬ ಬಗ್ಗೆ ಒಂದು ಸ್ಥೂಲ ಅವಲೋಕನ ಮಾಡೋಣ.

ಭವ್ಯಮಾನವ ಶಿಲ್ಪದಲ್ಲಿ ಶೈಥಿಲ್ಯವಿದ್ದರೂ ಕಥಾವಸ್ತು ಮತ್ತು ಕವಿಯವಸ್ತು ಇವುಗಳ ಸಂಯೋಗದಲ್ಲಿ ಒಂದು ವಿನೂತನ ಸಿದ್ಧಿ ಇದೆ. ಕವಿ ಕಥೆಯನ್ನು ಇತಿಹಾಸದಿಂದಲೇ ಆಯ್ದಿದ್ದಾರೆ. ಹನ್ನೆರಡನೆಯ ಶತಮಾನದಲ್ಲಿ ಬದುಕು ಮಾಡಿದ ಮಹಾಮಾನವರಲ್ಲಿ ಒಬ್ಬಳಾದ ಅಕ್ಕನ ಆಧ್ಯಾತ್ಮ ಜೀವನವನ್ನು ಕೈಗೆತ್ತಿಕೊಂಡಿದ್ದಾರೆ. ಅವಳ ಅತ್ಯಂತ ಜನಪ್ರಿಯ ಕಥೆಗೆ ಗುರುಚೆನ್ನಮಲ್ಲ ಮತ್ತು ಶಿಷ್ಯ ಗಿರಿಮಲ್ಲರ ಕಥಾನಕಗಳನ್ನು ಜೋಡಿಸಿದ್ದಾರೆ. ಮೊದಲು ಮೂಡಿ ಬಂದ 'ಸಮರಸ' ಎಂಬ ಶೀರ್ಷಿಕೆಯ ನೀಳ್ಗವನ, ಇಪ್ಪತ್ತು ವರ್ಷಗಳಾದ ಮೇಲೆ 'ಭವ್ಯಮಾನವ'ಕ್ಕೆ ಪೀಠಿಕೆಯಾಯಿತು. 'ಕಲ್ಯಾಣಕಾಂಡ'ವೆಂಬ ಅಭಿದಾನ ತಳೆದು ಮುಂದೆ ಆರು ಕಾಂಡಗಳ, ಸುಮಾರು ಒಂಬೈನೂರು ಪುಟಗಳ ಬೃಹತ್ ಕಾವ್ಯರೂಪ ಧರಿಸಿತು. ಅಕ್ಕ, ಗುರುಮಲ್ಲ ಮತ್ತು ಗುರುಮಲ್ಲರಷ್ಟೇ ಸಮಗ್ರ ಕಾವ್ಯವನ್ನು ನಡೆಸಿಕೊಡುತ್ತಾರೆ. ಗುರುಮಲ್ಲರು ಲೋಕ–ಆಲೋಕಗಳನ್ನು, ಕಲೆ–ವಿಜ್ಞಾನಗಳನ್ನು ಬಲ್ಲ ಮಹಾ–ಮೇಧಾವಿ ಪುರುಷರಾಗಿ ಚಿತ್ರಿತರಾಗಿದ್ದಾರೆ. ಅವರ ಬೋಧೆಯಲ್ಲಿ ನಯವಿದೆ, ನೀತಿಯಿದೆ, ವಿಜ್ಞಾನವಿದೆ, ವೈಚಾರಿಕತೆ ಇದೆ, ಅನುಭವವಿದೆ, ಆಧ್ಯಾತ್ಮವಿದೆ, ಆಧುನಿಕತೆ ಎದ್ದು ಕಾಣುವಷ್ಟಿದೆ. ಅವರು ವಿಚಾರವಾದಿಗಳು, ತ್ರಿಕಾಲ ಜ್ಞಾನಿಗಳು, ಭವ್ಯ ಮಾನವ ಪ್ರಜ್ಞೆ ಉಳ್ಳವರು. ಸಮಷ್ಟಿಯ ವ್ಯಷ್ಟಿರೂಪ ಅಥವಾ ವ್ಯಕ್ತರೂಪ, ಅವರ ಅನುಭವ, ಅಕ್ಕನ ಅನುಭಾವ, ಗಿರಿಮಲ್ಲನ ಅನುಷ್ಠಾನ ಇವುಗಳಿಂದ ಮುಪ್ಪರಿಗೊಂಡಿದೆ ಈ ಮಹಾಕಾವ್ಯ.

೧೯೨

**ತನ್ನರಿವು ತನಗಿಲ್ಲ, ತನ್ನಿರಿವು ತನಗಿಲ್ಲ**
**ತನ್ನೊಳಗೆ ತಿರುಗಿಯೂ ಭಾಳುವೆಯ ನಡೆಸಿರುವ**
**ವಿಶ್ವಬ್ರಹ್ಮಾಂಡಗಳ ತನ್ನ ಸಂಪದದರಿವು**
**ತನಗಿಲ್ಲ ತನಗಿಲ್ಲ ಕೋಟಿ ನೇತ್ರದ ಕುರುಡು**
**ಆಕಾಶ ಬ್ರಹ್ಮ ರಾತ್ರಿಯ ಮಹಾ ಕತ್ತಲೆಗೆ**
**ಅಂತಹ ಕತ್ತಲೆಯ ಕಾಂಡದಿಂದ ಕಲ್ಯಾಣದೆಡೆಗೆ ಬರಬೇಕು**
**ಜಗದ್ದೇಶ್ಯ ನಿಜ ಕಾರ್ಯಃ**
**ಸ್ವಯಂ ಬ್ರಹ್ಮೇತಿ ವೇದನಾತ್**
(ಯಾವಾಗ ತಾನೇ ಬ್ರಹ್ಮ ಎಂಬ ಅರಿವು ಮೂಡಿತೋ ಆಗಲೇ ತನ್ನ ಕಾರ್ಯ ಆಯಿತು)

ಅಂದಬಳಿಕ ಜಗತ್ತಿನ ಯಾವುದೇ ಮೂಲೆಯಲ್ಲಿ ಏನೇ ನೋವು ನಲಿವಾಗಲಿ, ಅದು ತನಗಾದ ನೋವು, ನಲಿವು ಎಂಬ ಭಾವನೆ ಬಲಿಯಬೇಕು. ಪ್ರಾಣಿ ಪ್ರಪಂಚಕ್ಕಷ್ಟೇ ಅಲ್ಲ, ವೃಕ್ಷ ಪ್ರಪಂಚಕ್ಕೆ ನೋವಾದರೂ ತನಗೆ ನೋವಾದಂತೆ ಎಂದು ಭಾವಿಸಿ ಸಕಲಕ್ಕೂ ಸ್ಪಂಧಿಸುವ ಮನೋಧರ್ಮ ಮೂಲಭೂತವಾದದ್ದಾಗಿರಬೇಕು. ವಿಶ್ವವಿಸ್ತಾರ ತಾನು, ಬ್ರಹ್ಮಮಯ ತಾನು ಎಂಬ ಭವ್ಯಭಾವನೆ ಇಲ್ಲಿನ ಭವ್ಯಮಾನವನದು.

ಈ ಕಾವ್ಯ ಭವ್ಯಮಾನವ ಕಲ್ಪನೆಯೇ ಅದ್ಭುತವಾದುದು. ಕವಿಕೊಟ್ಟ ಭವ್ಯಮಾನವದ ಅರ್ಥ ಭವಿಷ್ಯ ಮಾನವ ಎಂದು ಭವ್ಯಮಾನವ ಅಥವಾ ಇಂಗ್ಲಿಷ್ (ಸುಪರ್ ಮ್ಯಾನ್) ಡಂದಲ್ಲ. ಮನುಕುಲಕ್ಕಾಗಿ ಮೀಸಲಿರುವ (ದಿ ಗ್ರ್ಯಾಂಡ್ ಫ್ಯೂಚರ್) ಅಂದರೆ ಪರಮಭವ್ಯಕ್ಕೆ ಭುತ ಮತ್ತು ವರ್ತಮಾನಗಳು ಯಾವ ಭವಿಷ್ಯದ ಕಡೆಗೆ ನಡೆದಿವೆ, ನಡೆಯಬೇಕು ಎಂಬ ಸೂಚನೆ, ಜೀವಾತ್ಮ ವಿಶ್ವಾತ್ಮನಾಗಬೇಕು ಎಂಬ ಹಂಬಲ, ಅಪೂರ್ಣ ಪರಿಪೂರ್ಣತ್ವಕ್ಕೆ ಮಾನವತೆಯೇ ಅಡಿಗಲ್ಲು, ಭವ್ಯಮೌಲ್ಯಗಳು ಬೆಳಗಬೇಕು, ಜಾತಿ ಎಂಬ ಸೂತಕ, ಸ್ವಾರ್ಥವೆಂಬ ಮೈಲಿಗೆಗಳನ್ನು ಕಳಚಿ ದೂರ ಬಿಸಾಡಬೇಕು, ದೇಶ ಭಾಷೆ, ಮತ, ಮತ ವನ್ನು ಪ್ರಬಲಿಸುವ ವಿಚಿತ್ರ ದೈವನಿರ್ಮಾಣ ಇವೆಲ್ಲವುಗಳಿಗೂ ಅತೀತವಾಗಬೇಕು. ಅಂಕುಚಿತತೆಯ ಕೋಟೆಯಲ್ಲಿ ಸ್ಥಗಿತವಾಗಬಾರದು, ಮಾನವ ವಿಶ್ವಾತ್ಮನಾಗಬೇಕು. ವಿಶ್ವಮಾನವನೆನಿಸಬೇಕು.

ಆದರೆ ವಾಸ್ತವತೆಯನ್ನು ಮರೆತು ನಡೆಯಬೇಕೆಂದು ಅರ್ಥವಲ್ಲ. ನೆಲಬಿಟ್ಟು ಸಾಧನೆ ಇಲ್ಲ, ಪಂಚಭೂತಗಳಾದ ಗಾಳಿ, ನೀರು, ನೆಲ, ಬೆಳಕು, ಆವರಣ ಇವುಗಳನ್ನು ಬಿಡಲು ಬರುವುದಿಲ್ಲ. ಅವುಗಳನ್ನೇ ಬಳಸಿಕೊಂಡು ಮಾನವ ಬೆಳೆಯಬೇಕು, ಬೆಳಗಬೇಕು.

**'ಬಯಲು ಬೆಂಕಿಯನೊಡೆದು ನೀರು ಗಾಳಿಯ ಸೀಳಿ**
**ಮಣ್ಣಮುಚ್ಚಳ ಕರೆದು ಮೂಡಿಹುದು ಮೂಡಿಹುದು**
**ಪ್ರಾಣವಿಲ್ಲದ ಪಂಚಭೂತಗರ್ಭವದಾಟ**
**ಉದ್ಭವಿಸಿ ತೋರಿಹವು ನವ್ಯ ನಿರ್ಮಾಣ,** **(ಪು. ೨೪೯)**

ಈ ಪರಿಭಾವನೆಯೇ ಇಲ್ಲಿಯ ಭವ್ಯ !

ಹೇಗೆ ಸ್ವಪ್ರಕಾಶಿತ ವಸ್ತುವಾದ ಸೂರ್ಯನಿಂದ ಸಕಲ ಸೃಷ್ಟಿ ಅಂಕುರಿಸಿತೊ ಹಾಗೆ ಮಾನವತೆ ಮೇಧಾವಿತನದಿಂದ ವಿಶ್ವಜಗತ್ತಿನ ಸಮಗ್ರ ಪ್ರಗತಿ, ಸರ್ವೋತ್ಕೃಷ್ಟ ಸಾಧನೆ. ಅವನ ಸಾಹಸ ಅಸೀಮವಾದದ್ದು. ಭೂಮಿಯಿಂದ ಭೂಮದವರೆಗೆ, ಅಣುವಿನಿಂದ ಘನದವರೆಗೆ ಸೂರ್ಯ, ಚಂದ್ರ, ತಾರಾ ನೀಹಾರಿಕೆಗಳನ್ನು ಸುತ್ತಿ ಬರಬಲ್ಲ ಅದಮ್ಯ ಪ್ರವೃತ್ತಿ ಅದರದು. ಚಂದ್ರಲೋಕಕ್ಕೆ ಚೈತ್ರಯಾತ್ರೆ ಹೋಗಿ ಚುಕ್ಕೆಗಳ ಕೂಡ ಚಕ್ಕಂದ ಆಡಿಬರುವ ಪ್ರಚಂಡ ಸಾಹಸಿ ಇದ್ದಾನಿ ಇಂದು ಮಾನವ. ಸುರಲೋಕವನ್ನು

೧೯೩

ನಿರ್ಮಿಸಿದವನೂ ಅವನೇ, ಸ್ವರ್ಗವನ್ನು ಭೂಮಿಗಿಳಿಸಿದವನೂ ಅವನೇ ; ರಾಕೆಟ್ ಹಡೆದವನೂ ಅವನೇ, ರಾಮಾಯಣವನ್ನು ಬರೆದವನೂ ಅವನೇ, ಗೀತೆಯನ್ನು ಬೋಧೀಸುವವನೂ ಅವನೇ, ಗೆಲಾಕ್ಸಿಯಲ್ಲಿ ವಿಹರಿಸುವವನೂ ಅವನೇ, ಬುದ್ಧ, ಬಸವ, ಶಂಕರ, ಏಸು, ಪೈಗಂಬರ, ಜೊರಾತೃಷ್ಟ ಎಲ್ಲೂ ಮಾನವರೆ – ಆದರೆ ತಮ್ಮ ಸೇವೆ, ಸಾಧನೆಗಳಿಂದಾಗಿ ಮಹಾಮಾನವರಾದರು. ಮಾನವನಿಗೆ ಅಸಾಧ್ಯವೆಂಬುದೇ ಇಲ್ಲ. ಎಲ್ಲ ಸೃಷ್ಟಿ, ಸ್ಥಿತಿ, ಲಯಕಾರರ ಪ್ರತಿರೂಪಿಯಾಗಿ ನಿಂತಿದ್ದಾನೆ ಇಂದು ಮಾನವ. ಅವನ ಸಾಹಸದ ಕಕ್ಷೆಗೆ ಅಳವಡದ ಕಾಯಕವೇ ಇಲ್ಲ. ತಾನೆಲ್ಲವನ್ನೂ ಸಾಧಿಸಿ ತೋರಿಸುವ, ಸಿದ್ಧಿಸಿಕೊಳ್ಳುವ ಪ್ರಚಂಡ ಸಾಹಸ ಪ್ರವೃತ್ತಿ ಅವನಲ್ಲಿದೆ. ಮನಬಂದರೆ ಬದುಕುಕೊಡಬಲ್ಲ, ಬೇಡವಾದರೆ ಅದನ್ನು ಕಿತ್ತುಕೊಳ್ಳಲೂ ಬಲ್ಲ. ಆದ್ದರಿಂದ ಮಾನವ ಸರ್ವೋತ್ತಮನಾಗಿದ್ದಾನೆ.

**ಸಾಗರದ ತೆರೆ ಮಸಗಿ ಮುಖವನಪ್ಪಳಿಸಿದರು.**
**ಮೀನು, ಮೊಸಳೆಗಳೆದ್ದು ನುಂಗಬರಲಿ,**
**ಬಿರುಗಾಳಿ ಬೀಸಲಿ, ಆಕಾಶ ಗುಡುಗಲಿ,**
**ಪ್ರಳಯಕಾಲದ ಮೋಡ ಒಡೆದು ಬೀಳಲಿ ಮೆಲೆ.**
**ಕತ್ತಲೆಯ ಸಾಗರವನ್ನೀಸುತ್ತ ಮೇಲುಗಡೆ**
**ನಿಜಬೆಳಗು ಮೆಲ್ಲುಮೆಲ್ಲು ಕಂದೆರೆವ ಕಡೆ**
**ಉರಿಬರಲಿ, ಸಿರಿಬರಲಿ ದಿವ್ಯಭವ್ಯದ ಕಡೆ**
**ಸರ್ವಾಂಗದೊಳು ತನ್ನ ಎಚ್ಚರದೊಳಿರ್ದು**
**ಮೇಲೇರಿ ಈಸಿಹನು ನಿಜ ನಿರಾಳದ ಕಡೆ** **(ಪು. ೭೧೮)**

ಆದ್ದರಿಂದ ಶಿವಚರ್ವೋತ್ತಮನಲ್ಲ, ವಿಷ್ಣು ಸರ್ವೋತ್ತಮನಲ್ಲ, ಯಾವ ಕಲ್ಪನೆಯ ಕುಸುಮವೂ ಸರ್ವೋತ್ತಮ ಅಲ್ಲ ; ಆದರೆ ಮಾನವ ಸರ್ವೋತ್ತಮ ; ಸರ್ವಶ್ರೇಷ್ಠ. ಅವನು ಬಯಲು ಬ್ರಹ್ಮ, ವಿಯತ್ ಪುರುಷ, ವಿರಾಟ್ ಪುರುಷ !

**ಶಿವನು ಆಡಿದ ಲೀಲೆ ಶ್ರೀ ಕೃಷ್ಣ ಮಾಡಿದ ಕ್ರೀಡೆ**
**ಜೈನ ತೀರ್ಥಂಕರರು ಗೌತಮ ಮಹಾಬುದ್ಧ**
**ಮನು ಮುನೀಶ್ವರ ತಪಸ್ವಿಗಳು ದೃಷ್ಟಾರರು**
**ಕಣ್ಣ ಮುಂದಿರುವರೇ ? ನಡೆ ನಡೆಯುತಿಹರೆಂತು ?**
**ವರ್ತಮಾನವು ಅಂತೆ ವರ್ತಿಷ್ಯಮಾನವು**
**ಹೇಗೆ ಮೂಡಲಿಹುದು ಬೆಳೆದಾಡುವಂತಿಹುತೆಂತು ?** **(ಪು. ೨೩೩)**

ಇಂತಹ ನಿತ್ಯ ಸಾಕ್ಷಿಯಾಗಿ ನಿಂತವನು ಮಾನವ. ಈ ಬಗೆಯ ಮಾನವ ಪಾರಮ್ಯ ಪ್ರತಿಪಾದನೆಯೇ ಭವ್ಯ ಮಾನವ ದರ್ಶನ ಅಥವಾ ಕವಿ ಕಂಡು ಕಂಡರಿಸಿದ ಆಧುನಿಕತೆ. ಇದು ಇಂದು ಬಾಳಿನ ಕಡೆಗೆ ಕೈಚಾಚುವಂತಹುದು.

ಪ್ರೊ.ಭೂಸನೂರಮಠರವರು ಬಳಸಿಕೊಂಡ ಭಾಷೆ, ದುಡಿಸಿಕೊಂಡ ಶೈಲಿ ಅನ್ಯಾದೃಶ ಆಧ್ಯಾತ್ಮಗರ್ಭಿತ. ರಚನೆಗೆ ಅದರಲ್ಲೂ ಮಹಾಕಾವ್ಯ ರಚನೆಗೆ ಸಂಸ್ಕೃತ ಭೂಯಿಷ್ಠ ಭಾವನೆಯಿದೆ. ಶೈಲಿಯೇ ಆಗಬೇಕು, ಅದು ಅನಿವಾರ್ಯ ಎನ್ನುವ ಆದರೆ ಭೂಸನೂರಮಠರ ಭಾಷೆ ಕೇವಲ ಕನ್ನಡ, ತಿಳಿಗನ್ನಡ, ನುಡಿಗನ್ನಡ, ಕಸುವುಳ್ಳ ಕಮನೀಯ ಕನ್ನಡ.

**ಎಲೆ ಮೋಳಿಗೆಯ ತಂದೆ.**
**ನೀವಯ್ಯ ಜನ್ಮದಾ ಕಡೆಗಂದು ಬಂದವರು**
**ಚರಮಾಂಕದಂಚಿನೊಳು ನಿಂದವರು ನೀವಯ್ಯ**
**ಮರಣ ಸುತ್ತಿತ್ತಿಲ್ಲಿ ಹುಟ್ಟು ಕೆಟ್ಟಿತ್ತು**
**ದಾಟಿ ಬಂದಿಹಿರಯ್ಯಾ ಜಡ ಭೂತ ಪ್ರಕೃತಿಯೊಳು**
. . . . . . . . . . . . . . . . . . . . . . .
**ಕಾಯಕ್ಕಿಲ್ಲಾ ನಿಮ್ಮ ಕಷ್ಟಲಿಂಗ**
**ಪ್ರಾಣವೆಲ್ಲಾ ಭಕ್ತಿ ದಾಸೋಹಲಿಂಗ**
**ಭಾವವೆಲ್ಲ ನಿಮ್ಮ ಬೆಳಗು ಲಿಂಗ**
**ಎಂಥ ಇರವೀ ಮಹಾದೇವರವು**

ಈ ಕನ್ನಡಕ್ಕೆ ಬೆಡಗು ಗೊತ್ತಿಲ್ಲ, ಬಿನ್ನಾಣ ತಿಳಿದಿಲ್ಲ, ಆದರೆ ಪರಿಣಾಮಕಾರಿ. ಹದವರಿತ, ಔಚಿತ್ಯವರಿತ ಶಬ್ದ ಪ್ರವೇಶ. 'ಸತ್ತರೆ ಶಿವರಾತ್ರಿ ಬದುಕಿದರೆ ಬಯಲು!' 'ನಾನುಗಳ ನಡುವೊಂದು ತಾನು ನಾನು' 'ಬಿಸಿಲೆಂಬ ಗುರುವಿಂಗೆ ನೆಳಲೆಂಬ ಶಿಷ್ಯ' 'ನೋಡಿಲ್ಲಿ ಮಾದೇವಿ ಸಲ್ಲಿಸಿರುವೆ ಲಿಂಗಕ್ಕೆ, ಬಿದ್ದು ಹೋಗುವ ತಾನು ಶಿವಪೂಜೆಯಾಗಿರುವೆ' 'ಮತ್ತೆ ಬಳ್ಳಿಗುರುಡರು ಸೇರಿ ಹಳ್ಳವನು ಬಿದ್ದಂತೆ' 'ತಾಯಿ ಬಳ್ಳಿಗೆ ತಾಯಿ ದಿಮ್ಮಿತ್ತೆ' 'ಕೈಗಡಗ ಕಾಂಬುದಕೆ ಕನ್ನಡಿಯ ಹಂಗೇಕೆ ? !' ಮೊದಲಾದ ಮಾತುಗಳಲ್ಲಿ ನೂರಾರು ವಚನ/ರಗಳೆಗಳ ಉದ್ಧೃತಿಯಲ್ಲಿ ಕನ್ನಡ ಭಾಷೆಯ ಸೊಗಡು ಬೀದಿವರಿಯುತ್ತದೆ. ವಚನ ಸಂಪಾದಕರಾಗಿ ದುಡಿದ ಈ ಕವಿಗೆ ವಚನಗಳ ಪ್ರಭಾವ ಸಾಕಷ್ಟಿದೆ. ತಮ್ಮದಾದ 'ಶೂನ್ಯ ಛಂದಸ್ಸಿ'ನಲ್ಲಿ (ಅಂದರೆ ಇಲ್ಲವಾದದ್ದಲ್ಲ ಎಲ್ಲವಾದ ಛಂದಸ್ಸು) ನೂರಾರು ವಚನಗಳು ಓತಪ್ರೋತವಾಗಿ ಬಂದಿವೆ. ಅಲ್ಲಮನ ವಚನವೊಂದು ಹೇಗೆ ಮಹಾಕಾವ್ಯದಲ್ಲಿ ರೂಪುದಳೆದಿದೆ ಎಂಬುದನ್ನು ಈ ಸಾಲುಗಳಲ್ಲಿ ಗುರುತಿಸಬಹುದು.

**ವಿಷಯದಾಸೆಗೆ ಸತ್ತು ಹೋಯಿತ್ತು ಕೋಟಿ**
**ಹೊಲಸು ಮಲ ಸುಖಕಾಗಿ ಸತ್ತು ಹೋಯಿತ್ತು ಕೋಟಿ**
**ತಾಮಸದ ತೃಪ್ತಿಯೊಳು ಸತ್ತು ಹೋಯಿತು ಕೋಟಿ :**
**ಬ್ರಹ್ಮಾಂಡ ಗುಹೆಯೊಳಗೆ ಬೆಳಗಿರುವ**
**ಎಲೆ ಗುಹೇಶ್ವರ ಲಿಂಗ ಕೇಳು ಕೇಳಯ್ಯಾ**
**ನಿಮಗಾಗಿ ಸತ್ತವರನಾರನೂ ಕಾಣೆ !**
**ನಿಮಗಾಗಿ ಸತ್ತವರು ಸತ್ತರೇನಯ್ಯಾ ?** **(ಪು. ೪೨೨-೨೩)**

ಇಲ್ಲಿ 'ನಿಮಗಾಗಿ ಸತ್ತವರು ಸತ್ತರೇನಯ್ಯಾ ?' ಎಂದು ಕಡೆಯ ಸಾಲಿನ ದರ್ಶನ ಧ್ವನಿ' ಕವಿಯಿತ್ತ ಸ್ವಂತದ ಕಾಣಿಕೆ.

ಈ ಕವಿಯ ಮೇಲೆ ವಚನಗಳಲ್ಲದೆ ರಾಘವಾಂಕನ ನಾಟಕೀಯತೆ ಪ್ರಭಾವಬೀರಿದೆ. ಇಡೀ ಕಾವ್ಯದಲ್ಲಿ ನಾಟಕೀಯತೆ ಗರಿವಡೆದು ಮೂಡಿದೆ. ಆದರೆ ಎಲ್ಲೆಡೆಯೂ ಕವಿಯ ಸೋಪಜ್ಞತೆ ಮೆರೆದಿದೆ. ಶೈಲಿ ನಾಟಕೀಯವಾಗಿದ್ದರೆ, ಛಂದಸ್ಸು ಆದಿ ಅಂತ್ಯ ಪ್ರಾಸಗಳನ್ನು ಕಿತ್ತು ಬೋಳು ರಗಳೆಯ ಸಾಲು, ಅದಕ್ಕಿಷ್ಟು ಲಯದ ವೈವಿಧ್ಯ. ಒಟ್ಟಿನಲ್ಲಿ ಲಲಿತ ರಗಳೆಯನ್ನು ಮುರಿದು ಮಾಡಿದ ಚಿಕ್ಕ ಅಚ್ಚು ! ಇದು ಹೊಸಗನ್ನಡದ ಹೊಸಾವ್ಯ.

ಸಂಪಾದಕ ಸಂ.ಶಿ. ಭೂಸನೂರಮಠರಲ್ಲಿ ಕವಿಸಹಜವಾದ ಪ್ರತಿಭೆ ಇದೆ. ವಿಮರ್ಶನಯೋಗ್ಯ ಚಿಕಿತ್ಸಕ ಪ್ರಜ್ಞೆ ಇದೆ. ಅವರದು ನವನವೋಲ್ಲೇಖಶಾಲಿ ನಿತ್ವವುಳ್ಳ ಪ್ರಾಂಜಲ ಪ್ರತಿಭೆ, ತೂಕತಪ್ಪದ ವಿಮರ್ಶಾ ಪ್ರಜ್ಞೆ, ಅವರ ಪರಾಮರ್ಶೆ ಬಹುಶ್ರುತತ್ವಕ್ಕೆ ಸಾಕ್ಷಿ, ಅವರ ಶೂದ್ಧ ಚೇತನಕ್ಕೆತ್ತಿದ ಕಾವಿ ಧ್ವಜ. ಅದು ಆಧ್ಯಾತ್ಮ ಸಾಹಿತ್ಯದ ವೈಜಯಂತಿ !

ದಾಶ್ನಿಕ ಕವಿ ಸಂ.ಶಿ. ಭೂಸನೂರಮಠರ ಶೂಭಕಾಮನೆಯೊಂದಿಗೆ ಈ ಒಡನಾಟಕ್ಕೆ ಮಂಗಲ ಹಾಡಬಹುದು.

**ಆದ್ಯತನ ಮಾನವನ ಮನ ಬುದ್ಧಿ ಭಾವಗಳು**
**ಮುಗಿದು ಮಂಗಲ ಮಹಾರತಿಯ ಬೆಳಗಿದರೆ**
**ಗುಹ್ಯಕ್ಕೆ ಗುಹ್ಯತರ ಗೋಹೇಶ್ವರರೇಚ್ಛೆ**
**ಜಗದ ಮುನ್ನಡೆಯನೊಡೆದು ತಾನೆದ್ದು ಬರಬಹದು**
**ಆ ಮಹಾಭವ್ಯ ಭವಿತವ್ಯ ಸೃಷ್ಟಿಗೆ.**
**ಬೇಹರೆ ಅಮಾನುಷದ ಉದಯ ಶಕ್ತಿಗಳು**
**ತಲೆದೋರಬಹುದಯ್ಯ ತನತನಗೆ ಸಹಜ**
**ಆ ಬ್ರಹ್ಮ ಭವ್ಯದ ಭವಿಷ್ಯ ನಿರ್ಮಾಣಕ್ಕೆ**
**ಆ ಬ್ರಹ್ಮ ಭವ್ಯ ಕಲ್ಯಾಣ ಸಾಮ್ರಾಜ್ಯಕ್ಕೆ**
**ನಡೆಸಯ್ಯಾ ತಂದೆ ನೀ ನಡೆಸುವಂತೆ** **(ಪು. ೮೨೯)**

# ಛಂದೋವಿಕಾಸದ ಕಾವ್ಯವಿಲಾಸಿ

---

**ವ್ಯಕ್ತಿ**
**ಕರಿಕೆ ಬೆಳೆಯದ ನೆಲ ಇಲ್ಲ**
**ಕರ್ಕಿ ಕಾಣದ ಜನ ಇಲ್ಲ**

ಈ ಜಾಣ್ನುಡಿಯಲ್ಲಿ ಏನೇನೂ ಉತ್ಪ್ರೇಕ್ಷೆ ಇಲ್ಲ !

ಕರ್ಕಿ ತುಂಬಾ ಜನಪ್ರಿಯ ವ್ಯಕ್ತಿ ಎಂಬುದೇ ಈ ನುಡಿ ಸಾರುವ ಧ್ವನಿ. 'ಹಚ್ಚೇವು ಕನ್ನಡದ ದೀಪ' ಎಂಬ ನಾಡು-ನುಡಿ ಅಭಿಮಾನ ಹೊತ್ತ ಹಾಡು ಕೇಳದ ಎಳೆಯರಿಲ್ಲ. 'ಕನ್ನಡ ಛಂದೋವಿಕಾಸ' ಪ್ರಬಂಧ ಪ್ರೌಢಿಮೆಯನ್ನು ಮೆಚ್ಚದ ವಿದ್ವಾಂಸರಿಲ್ಲ. ತಮ್ಮ ಸಾಹಿತ್ಯ, ಎಂತೋ ತಮ್ಮ ನಿಜ ಜೀವನದಲ್ಲೂ ಸೌಜನ್ಯವನ್ನು ಮೆರೆಯದ, ಸಜ್ಜನಿಕೆಯನ್ನು ತೊರೆಯದ ಸ್ವಯಂ ತೃಪ್ತ ಜೀವಿ ಡಾ. ಕರ್ಕಿ, ಈ ಸ್ನೇಹಪರ ವ್ಯಕ್ತಿಗೆ ರಸಿಕತೆಯೆ ಉಸಿರು, ಸರಳತೆಯೆ ಆತ್ಮ, ಬೋಧನೆಯೆ ಬದುಕು.

ಕರ್ಕಿ ಕನ್ನಡ ನೆಲದ ಕರಿಕೆ, ಕರು ತಿಂದಾಗ ಕರಗದ, ಜನಜಾನುವಾರುಗಳು ತುಳಿದಾಗ ನಶಿಸದ, ಬಿದಿರಂತೆ ಬೆಳೆಯುವ, ನಾಚಿಕೆ ಮುಳ್ಳಿನಂತೆ ಮುದುಡದ ಸ್ವಭಾವ ಅವರದು. ಅತಿಯಾದದ್ದನ್ನು ಆಶಿಸದ, ಮಿತಿಯಲ್ಲಿ ಬದುಕುವ ವ್ಯಕ್ತಿಯನ್ನು ಕುರಿತು ತಿಳಿದವರು ಹೇಳುತ್ತಾರೆ : 'ಅವನೇ. . .ಅವನೊಂದು ಕರುತಿಂದ ಕರಿಕೆ' ಎಂದು. ಡಾ. ಕರ್ಕಿಯವರು 'ಕರು ತಿಂದ ಕರಿಕೆ'! ನಾನು ದಾವಣಗೆರೆಯ ಧ.ರಾ.ಮ. ಇಂಟರ್ ಮೀಡಿಯಟ್ ಕಾಲೇಜಿನಲ್ಲಿ ಅಧ್ಯಾಪಕನಾಗಿದ್ದಾಗ ಕರ್ಕಿಯವರನ್ನೂ, ಚನ್ನವೀರ ಕಣವಿಯವರನ್ನೂ ಸಮಾರಂಭವೊಂದಕ್ಕೆ ಕರೆಸಿದ್ದೆವು. ಕರ್ಕಿ ತಮ್ಮ ಭಾಷಣದ ಆರಂಭದಲ್ಲಿ ಹೇಳಿದರು. ಎಲ್ಲಿ ಕಣಿವೆ (ಕಣಿವೆ) ಇರುತ್ತೊ ಅಲ್ಲಿ ಕರ್ಕಿ (ಗರಿಕೆ ಹುಲ್ಲು) ಇರುವುದು ಸಹಜ. ನಾನು ಹಾಂಗ ಈ ಕಣವಿ ಜತೀಲಿ' ಎಂದು. ಅಂತಹ ವಿನಯ ಸಂಪನ್ನತೆ ಕವಿ ಕರ್ಕಿಯವರದು. ಸಾಹಿತ್ಯದಲ್ಲೂ, ಸಂಪತ್ತಿನಲ್ಲೂ, ಆರಕ್ಕೇರದ ಮೂರಕ್ಕಿಳಿಯದ ಮಧ್ಯವರ್ತಿ ಮಟ್ಟ, ಆಳ್ತನದಲ್ಲಿ

ಒಂದಂಗುಲ ಉದ್ದವೂ ಅಲ್ಲ, ಒಂದಂಗುಲ ಗಿಡ್ಡವೂ ಅಲ್ಲ ಐದೇ ಐದು ಅಡಿ ಎತ್ತರ, ಗಾತ್ರದಲ್ಲೂ ಅಷ್ಟೆ. ಪಾತ್ರಕ್ಕೆಷ್ಟು ಬೇಕೋ ಅಷ್ಟೇ, ಬ್ರಿಟಿಷ್ ಬಿಳುಪಲ್ಲ, ನೀಗ್ರೋ ಕಪ್ಪಲ್ಲ. ನೋಡಿದವರಲ್ಲಿ ಮೋಹ ಮೂಡಿಸುವ ವರ್ಚಸ್ಸು, ಸಾಕಷ್ಟು ಸ್ಫುರದ್ರೂಪಿ.

ಅಂದಾಯಿತು ನನ್ನ ಅವರ ಗುರು–ಶಿಷ್ಯ ಬಾಂಧವ್ಯ !

ಡಿ.ಎಸ್. ಕರ್ಕಿಯವರ ಪೂರ್ಣ ಹೆಸರು ದಂಡಪ್ಪ ಸಿದ್ದಪ್ಪ ಕರ್ಕಿ ಎಂದು. ಬೆಳಗಾವಿ ಜಿಲ್ಲೆಯ ರಾಮದುರ್ಗ ತಾಲ್ಲೂಕಿನ ಭಾಗೋಜಿಕೊಪ್ಪ ಇವರ ಜನ್ಮಸ್ಥಳ. ಆನನ ೧೫.೧೧.೧೯೦೭. 'ತೊಟ್ಟಲಿಗ'ರಾದ (ಅಂದರೆ ಎಳಮೆಯಲ್ಲೆ ತಾಯಿಯನ್ನು ಕಳೆದು ಕೊಂಡ) ಇವರು ಸೋದರ ಮಾವ ಈಶ್ವರಪ್ಪ ಕಣಗಲಿಯವರ ವಾತ್ಸಲ್ಯದ ವಕ್ಷದಲ್ಲಿ ಬೆಳೆದರು ಬೆಲ್ಲದ ಬಾಗೇವಾಡಿಯಲ್ಲಿ ತಮ್ಮ ತಾಯಿಯ ತೌರಿನಲ್ಲಿ. ಅಲ್ಲೇ ಮುಗಿಯಿತು ತಮ್ಮ ಪ್ರಾಥಮಿಕ ಶಿಕ್ಷಣ, ಪ್ರೌಢಶಿಕ್ಷಣ ಬೆಳಗಾವಿಯ ಗಿಲಗಂಜಿ ಅರಟಾಳ ಪ್ರೌಢಶಾಲೆಯಲ್ಲಿ, ಸ್ನಾತಕ ಹಾಗೂ ಸ್ನಾತಕೋತ್ತರ ಪದವಿ ಪಡೆದದ್ದು ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ. ಅನಂತರ ಮುಂಬಯಿಯ ಎಸ್. ಟಿ. ಕಾಲೇಜಿನಲ್ಲಿ ಬಿಟಿ. ಪದವಿ. ಶಿಕ್ಷಣ ಮುಗಿದ ಮೇಲೆ ಶೀಕ್ಷಕರಾಗಿ ಜೀವನ ಆರಂಭಿಸಿದರು. ೧೯೩೫ರಲ್ಲಿ ಕೆಲ ತಿಂಗಳ ಕಾಲ ಕಾರವಾರದ ಸರ್ಕಾರಿ ಮಾಧ್ಯಮಿಕ ಶಾಲೆಯಲ್ಲಿ ಉಪಾಧ್ಯಾಯರಗಿ, ೧೯೪೧ರಲ್ಲಿ, ಬೆಳಗಾವಿಯಲ್ಲಿ ಕೆ.ಎಲ್.ಇ. ಸೊಸೈಟಿಯ ಕನ್ನಡ ಪ್ರಾಥಮಿಕ ಶಿಕ್ಷಕರ ತರಬೇತಿ ಸಂಸ್ಥೆಯಲ್ಲಿ ಶಿಕ್ಷಕರಾಗಿ, ಲಿಂಗರಾಜ ಕಾಲೇಜಿನಲ್ಲಿ ಅಧ್ಯಾಪಕರಾಗಿ, ಪ್ರಾಧ್ಯಾಪಕರಾಗಿ, ೧೯೫೪ರಲ್ಲಿ ಹುಬ್ಬಳ್ಳಿಯ ಕಾಡುಸಿದ್ದೇಶ್ವರ ಕಾಲೇಜಿನಲ್ಲಿ ಮತ್ತು ಮೂರು ಸಾವಿರ ಮಠದ ಮಹಿಳಾ ಕಾಲೇಜಿನಲ್ಲಿ ಪ್ರಾಚಾರ್ಯರಾಗಿ, ಅನಂತರ ೧೯೬೭ರಲ್ಲಿ ನಿವೃತ್ತರಾದ ಮೇಲೆ ೧೯೭೧ರವರೆಗೆ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಯು.ಜಿ.ಸಿ. ಸಂಶೋಧನ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ. ಕರ್ನಾಟಕ ವಿಶ್ವವಿದ್ಯಾಲಯದ ಕಲಾ ವಿಭಾಗದ ಡೀನ್, ಕೇಂದ್ರ ಸಾಹಿತ್ಯ ಅಕಾಡೆಮಿಯ ಸಲಹಾಮಂಡಲಿಯ ಸದಸ್ಯ, ಅಖಿಲಭಾರತ ಲೇಖಕರ ಸಮ್ಮೇಳನದ ಅಧ್ಯಕ್ಷ, ರಷ್ಯಾ ಫ್ರಾನ್ಸ್ ದೇಶಗಳಿಗೆ ಭೇಟಿ ಕೊಟ್ಟ ಭಾರತದ ಸಾಂಸ್ಕೃತಿಕ ರಾಯಭಾರಿ, ರಾಜ್ಯಪ್ರಶಸ್ತಿ ವಿಜೇತ – ಇಂಥವೆನಿತೋ ಗೌರವದ ಗಣ್ಯಸ್ಥಾನ ಪಡೆದಿದ್ದ ಭಾಗ್ಯವಂತ.

ಕರ್ಕಿ ಸಧಾ ಭೋಗಿ. ಬಾಳಿನುದ್ದಕ್ಕೂ ಬರೀ ಹಾಲು ಕುಡಿದವರು. ಕಷ್ಟಕಾರ್ಪಣ್ಯಗಳು ಅವರನ್ನು ಕಾಡಲಿಲ್ಲ. ಅಚ್ಚುಮೆಚ್ಚಿನ ಮಡದಿ ಪಾರ್ವತಿದೇವಿ, ಅಣಿಮುತ್ತಿನಂತಹ ಐದು ಮಕ್ಕಳು. ದ.ರಾ. ಬೇಂದ್ರೆಯವರ ಮಾತಿನಲ್ಲಿ ಹೇಳುವುದಾದರೆ ದುಃಖ ಮೂಸದ ಜೀವವಾಗಿ ಬಾಳಿದ ಪುಣ್ಯವಂತ. ಆದರೆ ಕಡೆಯ ದಿನಗಳಲ್ಲಿ ನೋವು ಅವರನ್ನು ಕಾಡದೆ ಇಲ್ಲ. ಕೈನೆರೆಗೆ ಬಂದಿದ್ದ ಡಾ। ರಾಜಶೇಖರ ಕರ್ಕಿ ಮತ್ತು ಪ್ರೊ. ಆನಂದ ಕರ್ಕಿಯವರ ಅಕಾಲ ಮರಣ ಕರ್ಕಿಯವರ ಜೀವನವನ್ನೇ ಹಿಂಡಿದವು. ಅದೇ ಕೊರಗಿನಲ್ಲಿ ದಿನಾಂಕ ೧೬–೧.೧೯೮೪ ಅಪರಾಹ್ನ ೪ ಘಂಟೆಯಲ್ಲಿ ವೃದ್ಧ ಪತ್ನಿ ಇಬ್ಬರು ಗಂಡು ಮಕ್ಕಳು ಒಬ್ಬ ಮಗಳು ಮತ್ತು ಅಪಾರ ಅಭಿಮಾನಿಗಳು ಇವರನ್ನು ಬಿಟ್ಟು ಶಿವೈಕ್ಯರಾದರು. ಅವರ ಕರ್ಮಭೂಮಿಯಾಗಿದ್ದ ಹುಬ್ಬಳ್ಳಿಯ ಕಾಡುಸಿದ್ದೇಶ್ವರ ಕಾಲೇಜಿನ ಹಿಂಬಾಗದಲ್ಲಿ ೧೭–೧.೧೯೮೪ರಂದು ಅವರ ಪಾರ್ಥಿವ ಶರೀರವನ್ನು ಸಮಾಧಿ ಮಾಡಲಾಯಿತು.

**ಸಾಹಿತ್ಯ**

ಅಧ್ಯಾಪಕ, ಆಡಳಿತಗಾರ ದುಂಡಪ್ಪ ಕರ್ಕಿ ಇಂದಿಲ್ಲ ; ಆದರೆ ಕವಿ ಸಂಶೋಧಕ ಕರ್ಕಿ ಎಂದಿಗೂ ಉಳಿದಿದ್ದಾರೆ. ಕವಿ ಕಲಾವಿದರಿಗೆ ಎರಡು ಹುಟ್ಟು ಎಂಬುದಕ್ಕೆ ನಿದರ್ಶನವಾಗಿದ್ದಾರೆ. ೧೯೩೪ರಲ್ಲಿ ಕಾವ್ಯರಚನೆ ಮಾಡತೊಡಗಿದ ಅವರ ಲೇಖಣಿ ೧೯೮೪ರವರೆಗೆ ಅಂದರೆ ಅರ್ಧಶತಮಾನ ಕಾಲ ದಣಿವಿಲ್ಲದೆ ದುಡಿದಿದೆ ; ನಕ್ಷತ್ರಗಾನ, ಭಾವತೀರ್ಥ, ಗೀತಗೌರವ, ನಮನ, ಕರಿಕೆ, ಕಣಿಗಲ, ಬಣ್ಣದ ಚೆಂಡು, ತನನ ತೋಂ, ಎಂಬ ಏಳು ಪದ್ಯ ಕೃತಿಗಳನ್ನೂ, ನಾಲ್ದೆಸೆಯ ನೋಟ, ಮಕ್ಕಳ ಶಿಕ್ಷಣ, ಸಾಹಿತ್ಯ ಸಂಸ್ಕೃತಿ, ಶ್ರುತಿ ಎಂಬ ಮೂರು ಗದ್ಯ ಕೃತಿಗಳನ್ನೂ, ಕನ್ನಡ ಛಂದೋವಿಕಾಸವೆಂಬ ಒಂದು ಮಹಾಪ್ರಬಂಧವನ್ನೂ, ಬಸವಣ್ಣನವರ ಲೋಕಪ್ರಿಯ ವಚನಗಳು, ಶರೀಫರ ಜನಪ್ರಿಯ ಪದಗಳು ಎಂಬ ಸಂಪಾಧಿತ ಕೃತಿಗಳನ್ನೂ ಕನ್ನಡಕ್ಕೆ ಕಾಣಿಕೆ ಕೊಟ್ಟಿದೆ.

ಕನ್ನಡ ನವೋದಯ ಕಾಲದಲ್ಲಿನ ರಮ್ಯ ರಚನೆಯ ಎಲ್ಲ ಆದರ್ಶಗಳನ್ನೂ ಕರ್ಕಿಯವರ ಕವಿತೆ ಮೈಗೂಡಿಸಿಕೊಂಡೇ ಬೆಳೆದಿದೆ. ಅಂದಿನ ಆದರ್ಶ ಬಿಂದುಗಳಾಗಿದ್ದ ದೇಶಸ್ವಾತಂತ್ರ್ಯ, ದೈವೋಪಾಸನೆ, ನಿಸರ್ಗಪ್ರೇಮ, ಸೌಮದರ್ಯಕಾಂಕ್ಷೆ ಪ್ರೇಮ–ಪ್ರಣಯ ಮತ್ತು ಭಾವಗೀತದಲ್ಲಿನ ಭಾವುಕತೆ, ಗೇಯತೆ, ಸಂಕ್ಷಿಪ್ತತೆ, ಇವೇ ಮೊದಲಾದ ರಮ್ಯೋದಯ ಕಾಲದ ವೈಚಿತ್ರ್ಯ

---

*ಡಾ॥ ಡಿ.ಎಸ್. ಕರ್ಕಿ

ವೈಶಿಷ್ಟ್ಯಗಳು ಪೂರ್ಣ ಪ್ರಮಾಣದಲ್ಲಿ ಪ್ರಕಟವಾಗಿವೆ. ಅಂತೆಯೇ ವಿದೇಶಿ ಕವಿಗಳಿಗಿಂತ ದೇಶಿಯ ಕವಿಗಳ ಪ್ರಭಾವ ಈ ಕವಿಯ ಮೇಲೆ ವಿಶೇಷವಾಗಿ ಆಗಿದೆ. ಅದನ್ನು ಕವಿ ಮುಚ್ಚುಮರೆಯಿಲ್ಲದೆ ಹೇಳಿಕೊಂಡಿದ್ದಾರೆ ತಮ್ಮ 'ನಕ್ಷತ್ರಗಾನ ಕವನ ಸಂಕಲನದ 'ಮೊದಲಮಾತು'ವಿನಲ್ಲಿ.

'ಯಾವ ಪ್ರಭಾವಗಳು ಮನದ ಮೇಲೆ ಆದುದರ ಪರಿಣಾಮವಾಗಿ ಈ ಹಾಡುಗಳು ಮುಡಿಬಂದಿವೆ ಎಂಬುದನ್ನು ಬಿಡಿಸಿ ಹೇಳುವುದು ಸುಲಭವಲ್ಲ. ಅಂತರಿಕ್ಷವನ್ನು ವ್ಯಾಪಿಸಿದ ಅಸಂಖ್ಯಾತ ನಕ್ಷತ್ರಗಳ ಕಿರಣಗಳೊಡನೆ ಎಲ್ಲೆಲ್ಲಿಯೂ ಯಾವಾಗಲೂ ಗಾನವು ಇಳಿದು ಬರುತ್ತಲೇ ಇರುತ್ತದೆ. ಆ ಕಿರಣಗಳಲ್ಲಿ ಯವುವೊ ಈ ಕವನಗಳ ಹಿಮದೆ ಇರುವ ನಡಿಗಳ ಮೇಲೆ ಒಂದಿನಿತು ಹಾಡಿ ಅವುಗಳನ್ನು ಈ ರೀತಿಯಾಗಿ ನುಡಿಸಿರಬಹುದು. ಹರಿಹರ ಕವಿಯ ರಗಳೆಗಳ, ಶರಣರ ವಚನಗಳ, ಕವಿ ರವೀಂದ್ರರ ಭಾವಗೀತಗಳ, ಅದರಂತೆ ನಮ್ಮ ಇಂದಿನ ಹಿರಿಯ ಕವಿಗಳಾದ ಮಾಸ್ತಿ, ಮಧುರ ಚೆನ್ನ, ಬೇಂದ್ರೆ, ಪುಟ್ಟಪ್ಪ, ವಿ.ಸೀ. ಅವರ ಗೀತಗಳ ಪರಿಚಯವು ಮೊದು ಮಸುಕುಮಸುಕಾಗಿ ಮೂಡಿದೆ. ಒಲವನ್ನು ನಿಚ್ಚಳಗೊಳಿಸಿ ಭಾವಾಭಿವ್ಯಕ್ತಿಗೆ ಒಂದು ದೀಕ್ಷೆಯನ್ನು ಕೊಟ್ಟಿರಬಹುದೆಂದು ನಾನು ಭಾವಿಸಿದ್ದೇನೆ.

'ಈ ಕವನಗಳಲ್ಲಿ ನೋವಿನ ಸುಳಹೇ ಕಾಣುವುದಿಲ್ಲವೆಂದು ನನ್ನ ಸ್ನೇಹಿತರಲ್ಲಿ ಕೆಲವರು ಸ್ನೇಹದ ಸಲಿಗೆಯಿಂದ ಒಂದು ಕೊರತೆಯನ್ನು ನನ್ನ ಗಮನಕ್ಕೆ ತಂದಿದ್ದಾರೆ. ಅದು ಸತ್ಯವಾದ ಸಂಗತಿ. ನನಗೆ ತೋರಿದಂತೆ ಅದರ ಸ್ಪಷ್ಟೀಕರಣ ಹೀಗೆ. ಮೊದಲನೆಯದಾಗಿ ನನ್ನ ಜೀವನಕ್ಕೆ ನೋವಿನ ಸೋಂಕೇ ಕಡಿಮೆಯಾಗಿರಬಹುದು, ಎರಡನೆಯದಾಗಿ ನೋವು ಒಮ್ಮೊಮ್ಮೆ ನುಗ್ಗಿ ಬಂದಿರಬಹುದಾದರೂ ಅದನ್ನು ಆಳವಾಗಿ ಅನುಭವಿಸಿ ಅನುಭಾವಕ್ಕೆ ತಿರುಗುಸುವ ಶಕ್ತಿ ಸಾಲದೆ ಹೋಗಿರಬಹುದು. . .'

ಇದು ಪ್ರಾಮಾಣಿಕತೆ, ಮೆಚ್ಚುವಂಥದು. ಕರ್ಕಿ ಸೋಗಿನ ಕವಿ ಅಲ್ಲ ; ಸೊಬಗಿನ ಕವಿ ; ಸೌಂದರ್ಯವನ್ನು ಕೊಂಡವರು, ಕೊಟ್ಟವರು, ಮುಚ್ಚುಮರೆಯಿಲ್ಲದೆ ಯಾರಿಂದ ಕೊಂಡುಕೊಂಡೆ ಎಂಬುದನ್ನು ಸ್ಪಷ್ಟ ಹೇಳಿಕೊಳ್ಳುವ ದೊಡ್ಡ ಗುಣ ಇವರಲ್ಲಿದೆ.

**ಪದ್ಯ**

'ನಕ್ಷತ್ರಗಾನ' ೧೯೪೯ರಲ್ಲಿ ಕರ್ಕಿಯವರು ಪ್ರಕಟಿಸಿದ ಮೊದಲ ಕವನ ಸಂಕಲನ. ಇದರಲ್ಲಿ ನಲವತ್ತೆರಡು ಕವನಗಳಿವೆ. ಕವಿಯ ದೇಶಪ್ರೇಮ, ನಿಸರ್ಗ ಪ್ರೀತಿ, ನುಡಿಭಕ್ತಿ ಇವೆಲ್ಲವೂ ಅಭಿವ್ಯಕ್ತವಾಗಿವೆ. ಇದರಲ್ಲಿನ 'ಕಾರವಾರ' 'ತಾಯಿ ಎಲ್ಲಿ ?' 'ನನ್ನ ನಿನ್ನ ಮಾತು', ಲಿಪಿಲತೆ', ತಿರುಗದ ಬೀಸುವ ಕಲ್ಲಿಗೆ' ಕವಿತೆಗಳು ಈ ಹೇಳಿಕೆಗೆ ಉತ್ತಮ ನಿದರ್ಶನಗಳನ್ನು ಒದಗಿಸುತ್ತವೆ. ದ.ರಾ. ಬೇಂದ್ರೆ 'ಹಿರಿಯ ಕವಿ ಕುವೆಂಪು ಅವರಂತೆಯೇ ನಿಮ್ಮಲ್ಲಿಯೂ ದುಃಖ ಮೂಸದ ಸುಖದ ಸಂವೇದನೆ ಇದೆ. ಅದರ ತಂತಿ ಮೀಟಿದಾಗ ಹೊರಟ ನಾದ ಅವರ್ಣನೀಯವಾಗಿರುತ್ತದೆ. . .ಮೋಡಗಳ ಹಾಡು, ಹಚ್ಚೇವು ಕನ್ನಡದ ದೀಪ – ಇವುಗಳ ಧಾಟಿಯ ಗತ್ತೂ, 'ಜೀವ ಜಗ' 'ಗರ್ಭಸ್ಥ ಶಿಶು' ಇವುಗಳ ವಿಚಾರ ವಿಲಾಸ ಉಳಿದ ಅನೇಕ ಗೀತಗಳ ಸುಕುಮಾರ ಶೈಲಿ ನನ್ನ ಮನ ಮೆಚ್ಚಿಸಿದವು' ಎಂದಿದ್ದಾರೆ. ಈಮಕೃತಿಯ ಕಡೆಯಲ್ಲಿ ಕವಿಯೇ ಓದುಗರಿಗಾಗಿ ತಮ್ಮ ಕವನಗಳಿಗೆ ಸಹಾಯಕ ಅಂಶಗಳನ್ನು ಒದಗಿಸಿ ಕೊಟ್ಟಿದ್ದಾರೆ. ಅಂದರೆ ಪಸಕ್ತ ಕವನ ರಚನೆಗೆ ದೊರೆತ ಪ್ರೇರಣೆ, ಪ್ರಚೋದನೆ, ರಚನೆಯಲ್ಲಿನ ಭಾವ ಹಾಗೂ ದರ್ಶನ ಇತ್ಯಾದಿಗಳ ವಿವರ ನೀಡಿದ್ದಾರೆ.

೧೯೫೨ರಲ್ಲಿ ಎಸ್.ಡಿ. ಇಂಚಲವರ ಜೊತೆಗೂಡಿ ಹೊರತಂದ ಕಿರು ಹೊತ್ತಿಗೆ 'ಬಣ್ಣದ ಚೆಂಡು' ಇದು ಮಕ್ಕಳ ಹಾಡಿನ ಪುಟ್ಟ ಪುಸ್ತಕ. ಇವರ 'ತನನತೋಂ' ಎಂಬ ಮಕ್ಕಳಿಗಾಗಿಯೇ ಬರೆದ ಮತ್ತೊಂದು ಹಾಡುಗಳ ಸಂಕಲನವೂ ಇದೇ ವರ್ಷ ಪ್ರಕಟವಾಯಿತು. ಇಲ್ಲಿನ ಹಾಡುಗಳಲ್ಲಿ ಮಕ್ಕಳಿಗೆ ನಾದಮಾಧುರ್ಯದ ಪರಿಚಯ ಮಾಡಿಕೊಟ್ಟಿದ್ದಾರೆ.

೧೯೫೩ರಲ್ಲಿ ಬೆಳಕು ಕಂಡ 'ಭಾವತೀರ್ಥ' ಕರ್ಕಿಯವರ ಎರಡನೇ ಕವನ ಸಮಕಲನ. ಇದರಲ್ಲಿನ ಇಪ್ಪತ್ತು ಕವಿತೆಗಳು ಕನ್ನಡ ನಾಡಿನ ಪ್ರೇಕ್ಷಣೀಯ ಸ್ಥಳಗಳ ಪರಿಚು ಮತ್ತು ಅವುಗಳಲ್ಲಿನ ಸೌಂದರ್ಯ ದರ್ಶನ ಮಾಡಿಸುತ್ತದೆ. 'ಕನ್ನಡ ನಾಡಿನ ಹಲವು ಪುಣ್ಯಕ್ಷೇತ್ರಗಳನ್ನೂ ಕಲಾಕೃತಿಗಳನ್ನೂ ಕಂಡು ಉಕ್ಕಿದ ಭಾವನೆ – ಕಲ್ಪನೆಗಲು ಅವರ ಭಾವತೀರ್ಥದಲ್ಲಿ ಹರಿಸಿದ್ದಾರೆ. ಇದರಲ್ಲಿ ಆರು ಪ್ರವಾಹವಾಗಿ ಹರಿದ 'ತುಂಗಭದ್ರೆಯ ಹಾಡು' 'ಗೋಕರ್ಣ ತೀರ', 'ಗೋಮಟ ಶಿಲ್ಪಿಗೆ' 'ಗೋಲಗುಮ್ಮಟ' ಇವು ತುಂಬ ಮೆಚ್ಚತಕ್ಕವು' ಎಂದು ಡಾ.ರ>ಶ್ರೀ. ಮುಗಳಿಯವರು ನುಡಿದಿದ್ದರೆ, ಭಾವತೀರ್ಥಕ್ಕೊಂದು ಕೆಳನುಡಿ ಬರೆದ ಡಾ. ವಿ.ಕೃ. ಗೋಕಾಕರು 'ಮಲೆನಾಡಿನ ಗಿರಿ ನಿರ್ಝರದಂತೆಯೇ ಸ್ವಚ್ಛಂದವಗಿ, ಪವಿತ್ರವಾಗಿ, ಪಾವನವಗಿ ಕಾವ್ಯದ ಸೆಲೆಯು ಹೊರಹೊಮ್ಮಿದೆ. ಅದರ ಮಂಜುಳಗಾನಕ್ಕೆ ಮೋಹಿಸದವರು ವಿರಳ. ಈ ಹೊನಲಿನಲ್ಲಿ ಮೀಯುವುದು ಆರೋಗ್ಯಕರ, ಆಹ್ಲಾದಕರ. ಈ

ಭಾವ ತೀರ್ಥದಲ್ಲಿ ಶುದ್ಧ ಹೃದ್ಯವಾದ ಸಂಸ್ಕಾರವಿದೆ. ಪವಿತ್ರ ಚಿತ್ತದ ಪ್ರಸನ್ನತೆಯಿದೆ' ಎಂದು ಮೆಚ್ಚಿದ್ದಾರೆ. ಇಲ್ಲಿನ ಇಪ್ಪತ್ತು ಕವನಗಳು ಕನ್ನಡ ನಾಡಿನ ಪುಣ್ಯ ಕ್ಷೇತ್ರಗಳನ್ನು ಸಂದರ್ಶಿಸಿದಾಗ ಹೊಮ್ಮಿ ಬಂದುದಾಗಿವೆ. ಶಿಲೆಯಲ್ಲಿ ಕಲೆಯಾಗಿ ಅರಳಿರುವ ಕನ್ನಡಿಗರ ಜೀವನ ಮಂದಾರದ ಕಂಪನ್ನು ಅವರು ತಮ್ಮ ನುಡಿಗಳಲ್ಲಿ ಸೆರೆಹಿಡಿಯಲು ಯತ್ನಿಸಿದ್ದಾರೆ.

'ಇಲ್ಲಿಯ ಸೌಂದರ್ಯ ತೀರ್ಥವೂ ಕಾವ್ಯ ಪ್ರಸಾದವೂ ಧಾರಾಳವಾಗಿ ದೊರೆಯುವುದೆಂದು ಹೇಳಬೇಕು' ಎಂದಿದೆ ಒಂದು ವಿಮರ್ಶೆ.

ಕರ್ಕಿಯವರ ಮೂರನೆಯ ಕವನ ಸಂಕಲನ 'ಗೀತಗೌರವ'. ಇದು ಪ್ರಕಟವಾದದ್ದು ೧೯೬೯ರಲ್ಲಿ. ಅವರ ಷಷ್ಠಬ್ಧಿಯ ಸಂದರ್ಭದಲ್ಲಿ. ಇದು ಆ ವರ್ಷ ರಾಜ್ಯ ಪ್ರಶಸ್ತಿ ಪಡೆದ ಕೃತಿ. ಹದಿನಾಲ್ಕು ಕಥನ ಗೀತ, ನಾಲ್ಕು ಭಾವಗೀತ ಇವುಗಳನ್ನೊಳಗೊಂಡ ಸುಂದರ ಕಲಾಕುಸುಮ. ಡಾ. ಕರ್ಕಿಯವರೇ ಇದನ್ನು 'ಕಥನ ಕವನಗಳ ಸಂಗ್ರಹ' ಎಂದು ಕರೆದಿದ್ದಾರೆ. ಹಾಗಿದ್ದರೆ ಇಲ್ಲಿ ಕಡೆಯ ನಾಲ್ಕು ಬಿಡಿ ಕವನಗಳನ್ನು ಸೇರಿಸಬಾರದಾಗಿತ್ತು. ಇರಲಿ, ಈ ಸಂಕಲನದ ಮೊದಲ ಐದು ಗೀತಗಳು ಬುದ್ಧನ ಶುದ್ಧ ಜೀವನಕ್ಕೆ ಸಂಬಂಧಿಸಿದವುಗಳು. 'ಸಿದ್ಧಾರ್ಥ' ಕವನದಲ್ಲಿ ಸಿದ್ಧಾರ್ಥನಿಗೂ ಅವನ ಮಲ ತಮ್ಮ ದೇವದತ್ತನಿಗೂ ಒಂದು ಹಂಸೆಗಾಗಿ ನಡೆದ ಜಗಳ ಚಿತ್ರಿತವಾಗಿದೆ. 'ಪ್ರಾಣ ತೆಗೆಯುವವನಿಗಿಂತಲೂ ಪ್ರಾಣ ಕೊಡುವವನಿಗೆ ಪಕ್ಷಿಯ ಮೇಲೆ ಹೆಚ್ಚು ಅಧಿಕಾರವುಂಟು' ಎಂಬ ತೀರ್ಪಿನಂತೆ ಬಾಣ ಹೊಡೆದ ದೇವದತ್ತನಿಗಿಂತಲು ಔಷಧಿ ಹಾಕಿ ಬದುಕಿಸಿದ, ಜೀವಕೊಟ್ಟ, ಚೈತನ್ಯ ತುಂಬಿದ ಸಿದ್ಧಾರ್ಥನಿಗೆ ಆ ಪಕ್ಷಿಯ ಮೇಲೆ ಹೆಚ್ಚು ಹಕ್ಕು ಬರುತ್ತದೆ. ಇದು ಸಿದ್ಧಾರ್ಥನ ಭೂತದಯೆಗೆ ಸಾಕ್ಷಿಯಾಗಿ ನಿಂತಿದೆ. ಆದರೆ ಕವಿಗಳು ಇಲ್ಲಿ 'ಬುದ್ಧ' ಎಂಬ ಪದವನ್ನು ಬಳಸಬಾರದಿತ್ತು. 'ಸಿದ್ಧಾರ್ಥ' ಎಂದಿದ್ದರೇ ಹೆಚ್ಚು ಔಚಿತ್ಯವಿರುತ್ತಿತ್ತು. ಏಕೆಂದರೆ ಆಗಿನ್ನೂ ಸಿದ್ಧಾರ್ಥ ಬುದ್ಧನಾಗಿರಲಿಲ್ಲ.

ಮುಂದಿನ ಪದ್ಯ ಬುದ್ಧ – 'ಯಶೋಧರೆ' ತುಂಬಾ ಸೊಗಸಾದ ಕವನ. 'ನೀರ ಎರೆದಳು ಬೋಧಿ ವೃಕ್ಷಕ್ಕೆ ಬುದ್ಧನ ಪತ್ನಿ ಯಶೋಧರೆ. ಅವಳ ನಿರ್ಮಲ ಮನದಮೃತ ಫಲ ಸವಿದು ತಣೆಯಿತು ಈ ಧರೆ'. ಬುದ್ಧದೇವನ ಪೂರ್ವಾಶ್ರಮದ ಸತಿ ಯಶೋಧರೆ ಅವನೆದುರು ನಿಂತು 'ಭಿಕ್ಷೆ ನಾನೇ, ಸ್ವೀಕರಿಸಿ, ತೊರೆ ಕಡಲ ಕೂಡಲಿ ?' ಎಂದು ತನ್ನನ್ನು ತಾನು ಒಪ್ಪಿಸಿಕೊಳ್ಳುತ್ತಾಳೆ ; ಭಗವಂತನಿಂದ ಪ್ರವಜ್ಯೆಯನ್ನು ಪಡೆದ ಪ್ರಥಮ ಭಿಕ್ಷುಣಿ ಅವಳಾಗುತ್ತಾಳೆ. ಕವನದ ಆರಂಭದಲ್ಲಿ ಅರ್ಥಗರ್ಭಿತವಾಗಿ ಕವಿ ಹಾಡಿದ್ದಾರೆ.

'ಸಹಸ್ರಬನ'ದಲ್ಲಿ ಬುದ್ಧದೇವನು ಕುರುಬ ಕೊಟ್ಟ ಕುರಿ ಹಾಲು ಕುಡಿದು 'ಉಂಟೆ ಜಾಣ, ಹೃದಯಕ್ಕೆ ಜಾತಿ' ಎಂಬ ಮಾನವೀಯತೆಯ ಮಹಾಮಂತ್ರವನ್ನು ಜಗತ್ತಿಗೆ ಸಾರಿದ ಸುಂದರ ಸನ್ನಿವೇಶಗಳು ಚಿತ್ರಿತವಾಗಿವೆ.

'ಸುಜಾತ' ಜಗತ್ತಿಗೆ ಬುದ್ಧನನ್ನು ಉಳಿಸಿಕೊಟ್ಟ ಪುಣ್ಯವಂತೆ. ಏಕೆಂದರೆ ಅನ್ನಾಹಾರಾದಿಗಳನ್ನು ತೊರೆದು ತಿಂಗಳು ತಿಂಗಳುಗಟ್ಟಲೆ ಘೋರತಮ ತಪವನ್ನಾಚರಿಸಿದ ಸಿದ್ಧಾರ್ಥ. ಕೃಶನಾಗಿ ಈಗಲೋ ಇನ್ನೊಂದು ಗಳಿಗೆಗೋ ಎನ್ನು ಸ್ಥಿತಿಗೆ ಬಂದಿದ್ದ ಸುಜಾತ ವನದೇವತೆಗೆ ಎಡೆ ಇಡಲೆಂದು ಬಂದು ಸಿದ್ಧಾರ್ಥನಿಗೆ ಹಾಲು ಖೀರು ಕುಡಿಸಿ ಬದುಕಿಸುತ್ತಾಳೆ. ಅವರಿಬ್ಬರಲ್ಲಿ ಸಂಭಾಷಣೆ ನಡೆಯುತ್ತದೆ. ದಯೆ, ಧರ್ಮ, ಸ್ನೇಹ, ನಂಬಿಕೆ, ದುಡಿಮೆ, ದೈವ ಇತ್ಯಾದಿಗಳ ಬಗ್ಗೆ ವ್ಯಾಖ್ಯಾನಿಸಿ ಸುಜಾತ ಪದ್ಮಪಾಣಿಯೆದುರಿನಲ್ಲಿ ತನ್ನ ನಿಲುವನ್ನು ಪ್ರತಿಷ್ಠಾಪಿಸುತ್ತಾಳೆ. ಆತ್ಮವನ್ನು ಅರಿಯಲು ಹೊರಟ ವ್ಯಕ್ತಿಗೆ ಅದಕ್ಕೆ ಆಶ್ರಯರಿತ್ತಿರುವ ಶರೀರವನ್ನು ಚೆನ್ನಾಗಿ ಕಾಪಾಡಿಕೊಳ್ಳಬೇಕೆಂಬ ಬುದ್ಧಿವಾದವನ್ನು ಮಹಾಪ್ರಾಜ್ಞಳಾದ ಸುಜಾತ ಹೇಳುತ್ತಾಳೆ. ಡಾ. ಕರ್ಕಿಯವರು ಈ ವಿಷಯವನ್ನು ಬಿಟ್ಟುಬಿಟ್ಟಿದ್ದಾರೆ. ಆದರೆ ಸುಜಾತಳ ಪಾತ್ರಕ್ಕೆ ಪೂರ್ಣತೆಯನ್ನು ದೊರಕಿಸಿಕೊಟ್ಟಿದ್ದಾರೆ.

ರಾಜಗೃಹದ ವೇಣುವನದಲ್ಲಿ ಬುದ್ಧದೇವನಿಗಾಗಿ ಬಡವಿಯೊಬ್ಬಳು ಕೊಂಡ ಎಣ್ಣೆಯ ಪುಟ್ಟ ದೀಪವನ್ನು ತಥಾಗತನ ಮುಂದೆ ಮುಡಿಸಿ ಧನ್ಯಳಾಗುತ್ತಾಳೆ. 'ಪುಟ್ಟ ಹಣತೆ' ಕವನ ಇದನ್ನು ಬಿತ್ತರಿಸಿದೆ.

ಇವಿಷ್ಟೂ ಬುದ್ಧದೇವನ ಬದುಕಿಗೆ ಸಂಬಂಧಿಸಿದ ಚಿತ್ರಣಗಳು.

'ದಿಟದದಾರಿಯಲ್ಲಿ' ಅಣ್ಣನು ಕೂಡಲ ಸಂಗಮ ಕ್ಷೇತ್ರದಿಂದ ಕಲ್ಯಾಣಕ್ಕೆ ಬಂದು ಮರಳಿ ಕೂಡಲದೆಡೆಗೆ ಹೊರಡುಲು ಮನವುಳ್ಳವನಾಗುವುದು ಭಾವಪೂರ್ಣವಾಗಿ ಚಿತ್ರಿತವಾಗಿದೆ. ಅಣ್ಣನ ಭಕ್ತಿ ಹೊನಲಾಗಿ ಹರಿದಿದೆ. 'ನೀಲಾಂಬಿಕೆ' ಕವಿತೆಯಲ್ಲಿ ಬಸವಣ್ಣನ ಧರ್ಮಪತ್ನಿಯಲ್ಲಿನ ಪತಿಪರಮಾತ್ಮರ 'ಏಕತಾಭಾವ' ಮಿಡಿದಿದ್ದರೆ, 'ಕಾಯಕ ದೀಕ್ಷೆ'ಯಲ್ಲು ಆಯ್ದಕ್ಕಿ ಮಾರಯ್ಯನ ಪತ್ನಿ ಲಕ್ಕವ್ವ ಸಾರಿದ ಕಾಯಕತತ್ವ ಬಿತ್ತರಿಗೊಂಡಿದೆ. ಅಲ್ಲಲ್ಲಿ ವಚನಗಳೂ ಹಾಸುಹೊಕ್ಕಾಗಿ ಬೆರೆತು ಕಾವ್ಯಕ್ಕೆ ಮೆರಗು ತಂದಿವೆ.

'ದಾನ ಚಿಂತಾಮಣಿ' ಅತ್ತಿಮಬ್ಬೆಯನ್ನು ಕುರಿತ ಕವನ. 'ಅಜಿತ ತೀರ್ಥಂಕರ ಪುರಾಣತಿಲಕ'ದಲ್ಲಿ ರನ್ನ ಅತಿಯಾಗಿ ಬಣ್ಣಿಸಿದ್ದಾನೆ. ಅವಳನ್ನೇ ಡಾ.ಕರ್ಕಿಯವರು ಮಿತವಾಗಿ ಪರಿಚಯಿಸಿದ್ದಾರೆ.

ಕೊರಳದೊರೆ 'ತಾನ್‌ಸೇನ್'' ಸಿರಿಯದೊರೆ ಅಕ್ಬರನಿಗೆ ಪಾಠ ಕಲಿಸಿದ ಗಂಭೀರ ಸಂದರ್ಭ ಚಿತ್ರತವಾಗಿದೆ. 'ಅಮರ ಗೀತ'ದಲ್ಲಿ ತನ್ನ ಗುರುವನ್ನು ತೋರುವುದಾಗಿ ಕರೆದೊಯ್ದು ತಾನ್‌ಸೇನ್ ಅವ್ಯಕ್ತ ಮಧುರ ಗೀತವನ್ನು ಸಾಮ್ರಾಟನಿಗೆ ಕೇಳಿಸಿ ಹೇಳುತ್ತಾನೆ. 'ದೊರೆ ನನ್ನ ಹಾಡು ನಿನಗಾಗಿ' ಹಾಡುವೆನು. ತನ್ನ ದೊರೆ ದೇವನೆಂದು ಹಾಡುವನು' ಗುರುವಿನ ಮುಂದೆ ಹಾಡುವ ಹಾಡು ನರನ ಮುಂದೆ ಒದಗಿರುವ ಹಾಡಿಗಿಂತ ಮಿಗಿಲು ಎಂದು ಧ್ವನಿಸುತ್ತಾನೆ. 'ತಾನ್‌ಸೇನ್ ' ಕವನ ರಚನೆ ಚೆನ್ನಾಗಿದೆ.

'ಹರಣ' ಬೇಟೆಗಾರನ ಅಸೂಯೆಗೆ ಬಲಿಯಾದ ಚಿತ್ರಿತವಾದರೆ 'ಪರಮಶಿಷ್ಯ' ಕವಿ ಕನಕದಾಸನ ವೈಶಿಷ್ಟ್ಯ ತೋರಿಸಿಕೊಟ್ಟ ಕವಿತೆ. 'ಶಿಲೆ' ಇಂಗ್ಲಿಷ್ ಕವನದ ಅನುವಾದ. ನಲ್ಲನನ್ನು ಕಳೆದುಕೊಂಡ ನಲ್ಲೆಯ ಎದೆಯ ಹಂಬಲ ತುಂಬು ತೊರೆಯಾಗಿ ಹರಿದಿದೆ ಈ ಕವಿತೆಯಲ್ಲಿ. ನೆಹರೂಜಿಯವರ ತಮ್ಮ ಕೋಟಿಗೆ ಚೆಂಗುಲಾಬಿ ಇತ್ತು, ತಣಿದ ರೀತಿ 'ನೆಹರೂ – ಹೂದೋಟಿಗ' ದ ವಸ್ತು.

'ದಿವ್ಯಜ್ಯೋತಿ' 'ನಿಂತಿರುವರು ಗಾಂಧಿಜಿ' 'ಪದ್ಮಪಾಣಿ' 'ಕಂಡೆ ಕವಿಯ' ಇವೆಲ್ಲಾ ಬಿಡಿ ಭಾವಗೀತಗಳು.

'ನಕ್ಷತ್ರಗಾನ' 'ಭಾವತೀರ್ಥ' 'ಗೀತಗವರವ'ಗಳ ತರುವಾಯ ಇವರ ನಾಲ್ಕನೆಯ ಹಾಗೂ ಕಡೆಯ ಕವನ ಸಂಗ್ರಹ 'ಕರಿಕೆ –ಕಣಗಿಲು' ಪ್ರಕಟವಾಯಿತು. ೧೯೬೭ರಲ್ಲಿ. ಹುಬ್ಬಳ್ಳಿ ಮೂರು ಸಾವಿರ ಮಠದ ಜಗದ್ಗುರು ಶ್ರೀ ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳು ಈ ಕೃತಿಗೆ 'ಆಶೀರ್ವಚನ'ವೀಯುತ್ತಾ ಹೀಗೆ ಅಪ್ಪಣೆ ಕೊಡಿಸಿದ್ದಾರೆ –

'ಡಾ. ಡಿ.ಎಸ್. ಕರ್ಕಿಯವರ 'ನಮನ' ದೀಪ್ತ ಭಾವನೆಯಿಂದ ಬೆಳಗುತ್ತಿರುವ ನಂದಾದೀಪ, ಆಧ್ಯಾತ್ಮ ಸಿರಿಯಿಂದ ಕಂಗೊಳಿಸುವ ಅಮೃತಕಲಶ. ಭಕ್ತಿಯ ತೃಪ್ತಿಯಿಂದ ತುಂಬಿದ ಜೇಂಗೊಡ. ಹೊತ್ತಗೆ ಕಿರಿಯದಾದರೂ ತೂಕವುಳ್ಳದ್ದು. ಎಲ್ಲರೆಡೆಗೆ ಸವಿದನಿ ತೇಲಿಬರುವಂತಹುದು.

'ಕರಿಕೆ–ಕಣಗಿಲು' ಕರ್ಕಿಯವರ ಭಾವಗೀತ ಸಂಕಲನಗಳಲ್ಲೇ ಉತ್ತಮ ಕೃತಿ. ಇದರಲ್ಲಿ ೮೪ ಕವಿತೆಗಳಿವೆ ; ನಕ್ಷತ್ರಗಾನದ ಎರಡರಷ್ಟು. ಕವಿ ಕಣವಿಯವರ 'ಕೆಳನುಡಿ' ಇದೆ. ಅವರ ಪ್ರೇರಣೆಯಂತೆ ಈ ಕೃತಿಯನ್ನು ೧) ಗಣನಾಥಾ ೨) ಸಂತಸವು ಮಿಡಿಯುತಿದೆ ೩) ಕಲ್ಪನೆಯು ಬರುವ ಭಾಗ್ಯಕ್ಕೆ ತಲ್ಪ ೪) ಸವಿಬಾಳಿನ ಸಾರ ೫) ಕದವ ತೆರೆ ಬೆಳಕು ಬರಲಿ ೬) ಋತು ಋತುವಿಗೊಂದು ಶ್ರುತಿ ೭) ಬಾ ವಿಕಾಸಕ್ಕೆ ಬಾ ಪ್ರಕಾಶಕ್ಕೆ – ಎಂದು ಏಳು ಭಾಗಗಳಾಗಿ ವಿಂಗಡಿಸಿದ್ದಾರೆ. ಬಹುಶಃ ಪ್ರಕಟವಾಗಲಿರುವ ಕೃತಿಗಳು ಎಂದು ಕನ್ನಡ ಛಮಧೋವಿಕಾಸದ ಹಿಂಬದಿಯ ರಕ್ಷಾಪುಟದಲ್ಲಿ ಸೂಚಿಸಿರುವ 'ರಾಗ–ಪರಾಗ'ವೇ 'ಕರಿಕೆ–ಕಣಗಿಲು' ಎಂಬ ಶೀರ್ಷಿಕೆಯನ್ನು ಹೊತ್ತು ಪ್ರಕಟವಾಗಿರಬೇಕು. ಆದರೆ ಕವಿ ಈ ಬಗ್ಗೆ ಮೌನ ತಳೆದಿದ್ದಾರೆ. ಇದೇನೆ ಇರಲಿ ಈ ಕವಿ ತಮ್ಮ 'ಕರಿಕೆ–ಕಣಗಿಲು' ಬಗ್ಗೆ ತಮ್ಮ 'ಮನದ ಮಾತು'ವಿನಲ್ಲಿ ಹೀಗೆ ಹೇಳಿದ್ದಾರೆ.

'ಈ ಕವನ ಸಂಗ್ರಹದ ಹೆಸರಿಗೆ ಹಿನ್ನಲೆಯಿಲ್ಲದೆ ಇಲ್ಲ. ಕರಿಕೆ ಕಣಗಿಲು ಮೊತ್ತ ಮೊದಲು ನೆಲದ ಚೆಲುವನ್ನು ಒಲವನ್ನು ಸುಳುಹುಗಾಣಿಸಿದ ನೆನಪು ನನಗೆ.

'ಎರಡನೆಯದಾಗಿ ಈ ಜೋಡುನುಡಿ ಜಾನಪದದಲ್ಲಿ ರೂಢಿಗೊಂಡು ಬಂದುದುಂಟು. ಹಸಿರ ಹರಹಿನಲ್ಲಿ ತಿಳಿಗೆಂಪು ವರ್ಣದ ವಿಲಾಸವನ್ನು ಎತ್ತಿತೋರಬಹುದು ಈ ಹೆಸರು ಎಂಬುದು ನನ್ನ ಭಾವನೆ. ಒಂದು ವೈಯುಕ್ತಿಕವಾದ ಮಾತನ್ನೂ ಇಲ್ಲಿ ಹೇಳಬಹುದು. ನನ್ನ ಮನೆತನದ ಹೆಸರು (ಕರ್ಕಿ), ನಮ್ಮ ಮನೆಯವರ ಮನೆತನದ ಹೆಸರೂ (ಕಣಗಿಲಿ), 'ಕರಿಕೆ ಕಣಗಿಲಿ' ನಲ್ಲಿ ಬಂದುದೊಂದು ಸಹಜ ಸುದೈವ.

'ಕರಿಕೆ–ಕಣಗಿಲು' ಏಲು ಅಕ್ಷರದ ಜೋಡುಪದ ತಾನೆ ? ವಿಷಯಾನುಗುಣವಾಗಿ ಇಲ್ಲಿಯ ಕವಿತೆಗಳನ್ನು ಏಳು ಗುಂಪುಗಳಲ್ಲಿ ಮೇಳಯಿಸಲಾಗಿದೆ. ಪರಿವಿಡಿಯನ್ನು ನೋಡಿದರೆ ಈ ಕ್ರಮದ ಕಲ್ಪನೆ ಆಗಬಹುದು.'

ಆನಪದದಲ್ಲಿ ಕರಿಕೆ ಮತ್ತು ಕಣಗಿಲು ಪರಿಚಿತ ವಸ್ತುಗಳು. ಅವುಗಳ ಬಗೆಗೆ ಪೂಜ್ಯ ಭಾವನೆ. ಅಗಣಿಯ ಉಂಡೆ ಮಾಡಿ ಅದಕ್ಕೊಂದು ಕರಿಕೆ (ಮೂರು ದಳದ) ಪತ್ರ ಮುಡಿಸಿ ಗಣಪನನ್ನು ಮಾಡುತ್ತಾರೆ ರೈತರು ಕಣಗಳಲ್ಲಿ. ಮದುವೆ ಅಥವಾ ಯಾವುದೇ ಶುಭ ಸಂದರ್ಭದಲ್ಲಿ ಅರಿಶಿಣಪುಡಿಯ ಉಂಡೆ ಕಟ್ಟಿ ಅದರ ನೆತ್ತಿಯ ಮೇಲೆ ಮೂರು ದಳದ ಗರಿಕೆ ಸಿಕ್ಕಿಸಿ ಗಣಪನೆಂದು ಕರೆಯುತ್ತಾರೆ.

ಗ್ರಹಣ ಸಂದರ್ಭದಲ್ಲಿ ಅನ್ನ ತಿನಿಸು, ತುಂಬಿಟ್ಟ ನೀರು ಮೊದಲಾದವುಗಳ ಪಾತ್ರಗಳ ಮೇಲೆ ಗರಿಕೆ ದಳ ಇಡುತ್ತಾರೆ – ಗ್ರಹಣ ದೋಷನಿವಾರಾಣಾರ್ಥವಾಗಿ, ಬಹುಶಃ ಇದು ವೈಜ್ಞಾನಿಕ ಸತ್ಯವಿರಬಹುದು.

ಕುಡಿದ ಹಾಲು ಸಾಕಾಗದಾಗ ಮೊದಲು ಹುಲ್ಲು ತಿನ್ನುವುದನ್ನು ರೂಢಿ ಮಾಡಲು ಎಳೆ ಕರುಗಳಿಗೆ ಕೊಡುತ್ತಾರೆ 'ಕರಿಕೆ' ಯನ್ನು. ಎಳೆಯ ಕರುವಿಗೆ ಜೀರ್ಣಿಸಿಕೊಳ್ಳಲು ಹಾಲಿನ ಜೊತೆಯಲ್ಲೇ ಪಚನಗೊಳಿಸಿಕೊಳ್ಳಲು ಉತ್ತಮ ಆಹಾರ ಕರಿಕೆ.

ಕರಿಕೆ ಅಚ್ಚಹಸುರ ಪಚ್ಚೆ ಹಾಸು ನೆಲಕ್ಕೆ. 'ನೆಲವೆಲ್ಲ ಮಕಮಲ್ಲು ಮೃದುಲ ತಲ್ಪ.'

ಕಣಿಗಲು ಹಳ್ಳದ ದಂಡೆಯಲ್ಲಿ ಬೆಳೆದ ಹೂವು. ಇದೂ ಸಹ ದೇವರ ಪೂಜೆಗೆ ಗರಿಕೆಯಷ್ಟೇ ಪವಿತ್ರ. ಗರಿಕೆಯಲ್ಲಿ ಗಣಪನನ್ನು ಮಾಡಿದರೆ ಅವನನ್ನು ಕಣಿಗಲಲ್ಲಿ ಪೂಜಿಸುತ್ತಾರೆ. ಇವೆರಡರ ಮಹತ್ವವನ್ನು ಕೇಳಿ –

**ಕರಿಕೆ ಕಣಗಿಲೆಲೆಯ**
**ತೊಡೆಯ ತಡಿಯ ಮಳಲ**
**ತಂದು ಗೌರಿಯ ನೋನುವ**
**ಬನ್ನಿರೇ. . .**
**ಚಿಕ್ಕ ಮಕ್ಕಳೆಲ್ಲ ನೆರೆದು**
**'ಕೂಡಲ ಸಂಗಮದೇವ ಗಂಡನಾಗಬೇಕೆಂದು'**
**ಇದೇ ನಂಟು ಸುಳಿದುದುಂಟು ಜಾನಪದ ದನಿಯೊಳಿಂತು**
**'ಕರಿಕೆ ಪತ್ರಿ ಕಣಗಿಲ ಹೂವು ಗಣನಾಥಾ'**
**ಅರಿವಿಗೆ ಇದು ಶುಭ ಮಂಗಳ ಪ್ರಥಮಗಾಥಾ**

ಕನ್ನಡಿಗರಿಗೆ ಕರಿಕೆ ಕಳಶ ಇದ್ದ ಹಾಗೆ. ಬೆನಕನ ನಿರ್ಮಾಣದಲ್ಲಿ ಮೂರು ದಳದ ಬಿಲ್ವದಷ್ಟೇ ಪವಿತ್ರ ಮೂರು ದಳದ ಕರಿಕೆ. ಅಂತೆಯೆ ಅದಕ್ಕೆ ಏರಿಸಿದ ಕಣಗಿಲವೂ ಪವಿತ್ರ.

**ಒಂದು ಅವಲೋಕನ**

ಕರ್ಕಿ ಒಳ್ಳೆಯ ಭಾವುಕ. ನಿಸರ್ಗಕ್ಕೆ ಮನಸೋತ ಕವಿಚೇತನ. ಹೂವುಗಳನ್ನು ಕುರಿತು 'ಹಳ್ಳಿಯ ಹೂಗಳಿಗೆ' ಎಂಬ ಗೀತೆಯಲ್ಲಿ ತುಂಬೆಯಿಂದ ಹಿಡಿದು ಪುಂಡಿ ಹೂವಿನವರೆಗೂ ಒಂದೊಂದನ್ನೂ ಕರೆದು ಮಾತನಾಡಿಸಿದೆ. ಕೇಳಿ –

**ಚೊಕ್ಕ ನಗೆ ತುಂಬಿರುವ**
**ಚಿಕ್ಕ ತುಂಬೆಯ ಹೂವೆ**
**ಚಿಕ್ಕ ನಗಬಹುದೇನು**
**ನಿನ್ನ ಹಾಗೆ ?**
**ಹಳ್ಳದಂಚಿನಲಿ ಗೊಂ**
**ಚಲು ಕುಣಿವ ಕಣಗಿಲೆಯೆ**
**ಯಾರು ಕುಂಚವನೆಳೆಯೆ**
**ಬಣ್ಣ ತಳೆದೆ ?**
. . . . . . .
. . . . . . .
**ಹತ್ತಿರದ ಎರೆ ಹೊಲದಿ**
**ಬಿರಿದ ಹತ್ತಿಯ ಹೂವೆ**
**ಮದುಮಗಳ ಪತ್ತಲವ**
**ನುಟ್ಟ ಗರತಿ**
. . . . . . .
. . . . . . .

**ನಿನ್ನೊಲವ ಕಂಡವರು**

**ಉಂಟೆ ಪುಂಡಿಯ ಹೂವೆ?**

**ಒರಟು ನಲ್ಲನ ನಗಿಸು**

**ವಂಥ ಮುಗುದೆ**

ಕವಿಯ ಕೋಮಲ ಹೃದಯಕ್ಕೆ ಹಿಡಿದ ಕನ್ನಡಿ ಈ ಕವಿತೆ. ಹರಿಹರನ ಪುಷ್ಪರಗಳೆಯ ಒಲವು ಆತ್ಮೀಯತೆಗಳನ್ನು ಇಲ್ಲಿ ನೆನೆಯಬಹುದು.

ಇದೇ ಭಾವ 'ಎಲೆ ಎಲೆ ಮಲ್ಲಿಗೆ ಬಳಕುವೆ ಮೆಲ್ಲಗೆ ಬಳ್ಳಿಯ ಮೇಲೇರಿ' ಎಂದು ಸಂಬೋಧಿಸುವ 'ಮಲ್ಲಿಗೆ ಕವನ ದಲ್ಲೂ ವಿಕಾಸಗೊಂಡಿದೆ.

ಕರಿಕೆ–ಕಣಗಿಲುದಲ್ಲಿನ 'ಶಬರಿಯ ಬನ' ಕವನ ಶ್ರೀ ಕುವೆಂಪುರವರ 'ಹೋಗುವೆನು ನಾ,' ಗೀತವನ್ನು ಸ್ಮರಣೆಗೆ ತರುತ್ತದೆ.

**ಇಲ್ಲಿ ತೂಗಿದೆ ನಮ್ಮ ಸೀಮೆಯ**

**ಭಕ್ತಿ ಭಾವದ ತೋರಣ**

**ಕನ್ನಡ ಕುಲ ಹೆಮ್ಮೆ ಪಡುವೊಲು**

**ತೀವಿ ಬರುವುದು ಭಾವನಾ**

ಆದರೆ –

**ಬರುವೆನೆಂದಿಗೆ, ಬರುವನೆಂದಿಗೆ**

**ನಮ್ಮ ಮನದಾ ಮೂರುತಿ ?**

**ಎಂದು ನಾ ಹಿಗ್ಗಿನಲಿ ಬೆಳಗುವೆ**

**ನನ್ನ ಕಂಗಳ ಆರತಿ ?**

ಎಂಬಲ್ಲಿನ ಕವಿ ಭಾವ ಮೆಚ್ಚುವಂಥದು. ಅದು ಆತನ ದೀಪ್ತ ಪ್ರತಿಭೆಗೆ ಸಾಕ್ಷಿ ೩–೪, ೩–೪ರ ಭಾಮಿನಿಯ ಓಟವೂ ಇಲ್ಲಿ ಹೃದ್ಯ.

ಕನ್ನಡ ಲಿಪಿಯು ಬಳ್ಳಿಯಂತೆ ಅತ್ಯಂತ ಸುಂದರವಾದದ್ದು ಎಂಬುದು ಕವಿಯ ಅಭಿಪ್ರಾಯ. ಅದನ್ನು 'ಲಿಪಿಲತೆ' ಕವನ ಅಭಿವ್ಯಕ್ತಿಸುತ್ತಾ, ಕಲಿನಲಿ, ಕಾವ್ಯದಲಿ, ಓಲೆಯಲಿ, ಲೋಹದಲಿ, ಭಿತ್ತಿಯಲಿ ಈ ಬಳ್ಳಿ ಸುಳಿದಿರುವುದು. ಚಾಲುಕ್ಯ ಕಲುಚರ್ಯ ಹೊಯ್ಸಳಾಧೀಶ್ವರರ ಯುಗಗಳಲಿ ಹೊಗರೇರಿ ಹರಡಿರುವುದು (ನಕ್ಷತ್ರಗಾನ) ಎಂದು. ಕನ್ನಡ ಲಿಪಿಯ ಐತಿಹಾಸಕತೆಯನ್ನು ಗುರುತಿಸಿ ನುಡಿದಿದೆ.

ಈ ಕವೆ ಕೇವಲ ಧವಳಗೋಪುರದಲ್ಲಿ ಕುಳಿತು ಸೊಬಗನ್ನೇ ಆಸ್ವಾದಿಸಿದ ಕನಸುಣಿ ಅಲ್ಲ. ಬದುಕಿನೊಡನೆ ಅವನ ತೀವ್ರ ಸಂವೇದನೆ ಇದೆ. ಹಿಂದೆಂದೋ ಕಳೆದುಕೊಂಡ ತಾಯಿಯನ್ನು ಸ್ಮರಿಸುತ್ತಾ, 'ಎದೆಯ ಎದೆಯಯೊಳಗಿನಿಂದ, ಕೊರಗಿನರೆ ಮರೆ ಯಿಂದ ಕೂಗೊಂದು ಕೇಳುತಿದೆ : ತಾಯಿ ಎಲ್ಲಿ ? ನನ್ನ ತಾಯಿ ಎಲ್ಲಿ ?' ಎಂದು ಹಂಬಲಿಸಿದೆ ತಾಯಿ ಎಲ್ಲಿ ? ಎಂಬ ಕವಿತೆ ಯಲ್ಲಿ. ಬೇಸಗೆಯ ಬಿಸುಲಲ್ಲಿ ಸೌದೆ ಒಡೆವವನ ಕರುಣಾಜನಕ ಚಿತ್ರಣ ನೋಡಿ –

**ನಟ್ಟ ನಡು ಬೇಸಗೆಯ ನಡುಹಗಲಿನಲ್ಲಿ**

**ಬಿಸಿಲಲ್ಲಿ ರಣಗುಡುವ ನಡು ಓಣಿಯಲ್ಲಿ**

**ಸೌದೆ ಒಡೆವನ ಹರಕು ಪೈಠಣವ ಚೆಲ್ಲಿ**

**ಸೌದೆ ಒಡೆಯುತಲಿದ್ದ ಕೊಡಲಿಯಿಂ ಸೀಳಿ**

**ಪೆಟ್ಟು ಬೀಳುತಲಿಹುದು"ಹುಂ" ಎಂಬ ಲಯಕೆ**

**ಹೊಟ್ಟೆ ಒಳಸೇರಿತ್ತು ಕಾಯದಾ ಹೊರಗೆ**

**ಪೂಜೆ ನಡೆದಿತ್ತೊಳಗೆ ಅನ್ನ–ಬ್ರಹ್ಮನಿಗೆ**

**ಯಾವಾಗ ನೈವೇದ್ಯ ಸಲುವುದಾತನಿಗೆ**

ತೀರುವುದೇ ಇಷ್ಟಕ್ಕೆ ಬಡತನದ ಬವಣೆ
ಮಿತಿಯುಂಟೆ ಕಷ್ಟಕ್ಕೆ ಬರುವುದದು ತಾನೆ
ಬಡಸೌದೆ ಒಡೆವವನ ಬಡಮಗುವು ಜಾಣೆ
ಬಿರುಬಿಸಿಲೊಳಾಡಿತ್ತು ಬರಿಮೈಯಲೇನೆ
ಐದು ವರ್ಷದ ಕಂದ ಪಾಪ; ಕಾಲಿಲ್ಲ
ಬಣ್ಣ ಕಪ್ಪಾದರೂ ಜೀವ ಕಪ್ಪಲ್ಲ
ಕಾಲ ಹೊಸೆಯುತ ಚಲಿಸಿ ಆಡುತಿಹುದಲ್ಲ
ಬಾಳ ಜೀವಿನೊಳದರ ಆಟವೇ ಬೆಲ್ಲ
ಕೈಕೊಡಲಿಗಾಗಿ ನಸು ಬಿಡುವನಿತ್ತು
ನೋಡುತ್ತಿದ್ದನು ತಂದೆ ಕೊಡುವವನೆ ಮುತ್ತು
ಸಾಗಿತ್ತು ಇಂತು ನಗೆ ನೋವುಗಳ ಜತ್ತು
ಅವನ ಬಾಳಿನ ಗೋಳು ಅದಕೇನು ಗೊತ್ತು

ಕವನದ ಪ್ರತಿಪಾದವೂ ನಮ್ಮ ಕರುಳನ್ನು ಹಿಂಡುತ್ತದೆ. ಬಡತನದ ಬವಣೆ, ಅದರಲ್ಲಿಯೇ ನಗೆಕಾಣುವ ಹವಣಿಕೆ–ಇವೆರಡರ ಸರಿಬೆರಕೆ ಕವನಕ್ಕೆ ಕಮನೀಯತೆಯನ್ನು ತಂದಿದೆ ; ಉತ್ತಮ ಭಾವಗೀತವನ್ನಾಗಿಸಿದೆ.

ಕವಿಯ ನಾಡು–ನುಡಿ ಪ್ರೇಮಕ್ಕೆ 'ಹಚ್ಚೇವು ಕನ್ನಡದ ದೀಪ' ಎಂಬ ಕವನ ಸಾಕು. ಅದರ ಪ್ರತಿಮಾತಿನಲ್ಲೂ ಕವಿಯ ನುಡಿ ಒಲವು ಪುಟಗೊಂಡಿದೆ ಕೇಳಿ :

ಹಚ್ಚೇವು ಕನ್ನಡದ ದೀಪ
ಕರುನಾಡದೀಪ ಸಿರಿನುಡಿಯ ದೀಪ
ಒಲವೆತ್ತಿ ತೋರುವಾ ದೀಪ ॥ ಹಚ್ಚೇವು ॥
ಬಹುದಿನಗಳಿಂದ ಮೈಮರೆವೆಯಿಂದ
ಕೂಡಿರುವ ಕೊಳೆಯ ಕೊಚ್ಚೇವು
ಎಲ್ಲೆಲ್ಲಿ ಕನ್ನಡದ ಕಂಪ ಸೂಸ
ಲಲ್ಲೆ ಕರಣ ಚಾಚೇವು
ನಡುನಾಡೆ ಇರಲಿ ಗಡಿನಾಡೆ ಇರಲಿ
ಕನ್ನಡದ ಕಳೆಯ ಕೆಚ್ಚೇವು
ಮರೆತೇವು ಮರವ. ತೆರೆದೇವು ಮನವ. ಎರೆದೇವು
ಒಲವ ಹಿಡಿ ನೆನಪ
ನರನರವನೆಲ್ಲ ಹುರಿಗೊಳಿಸಿ ಹೊಸೆದು
ಹಚ್ಚೇವು ಕನ್ನಡದ ದೀಪ
ಕಲ್ಪನೆಯ ಕಣ್ಣು ಹರಿವನಕ ಸಾಲು
ದೀಪಗಳ ಬೆಳಕ ಬೀರೇವು
ಹಚ್ಚಿರುವ ದೀಪದಲ್ಲಿ ತಾಯ ರೂಪ
ಅಚ್ಚಳಿಯದಂತೆ ತೋರೇವು
ಒಡಲೊಡಲ ಕೆಚ್ಚಿನಾ ಕಿಡಿಗಳನ್ನು
ಗಡಿನಾಡಿನಾಚೆ ತೋರೇವು
ಹೊಮ್ಮಿರಲಿ ಪ್ರೀತಿ ಎಲ್ಲಿಯದು ಭೀತಿ ?
ನಾಡೊಲವೆ ನೀತಿ ಹಿಡಿನೆನಪ

**ಮನೆಮನೆಗಳಲ್ಲಿ ಮನಮನಗಳಲ್ಲಿ**
**ಹಚ್ಚೇವು ಕನ್ನಡದ ದೀಪ**
**ಕರುನಾಡಿನರಿವ ನೆರೆತೀವಿ ಭಾವ**
**ದಲಿ ಜೀವನಾಡಿ ನುಡಿಸೇವು**
**ತೆರೆತೆರೆದ ಕಣ್ಣಿನಲಿ ನೇಹವೆರೆದು**
**ನವಜ್ಯೋತಿಯನ್ನೇ ಮುಡಿಸೇವು**
**ನಮ್ಮನ್ನವುಂಡು ಅನ್ಯಾಯಗೈಯು**
**ವಂಥವರ ಹುಚ್ಚ ಬಿಡಿಸೇವು**
**ಇಹುದೆಮನಗೆ ಛಲವು. ಕನ್ನಡದ ಒಲವು ಕನ್ನಡದ**
**ಒಲವ ಹಿಡಿನೆನಪ**

೨೦೫

**ನಮ್ಮೆದೆಯ ಕೆಚ್ಚುನೆಚ್ಚುಗಳಗೂಡಿ**
**ಹಚ್ಚೇವು ಕನ್ನಡದ ದೀಪ**
**ನಮ್ಮವರು ಗಳಿಸಿದಾ ಹೆಸರ ಉಳಿಸ**
**ಲೆಲ್ಲಾರು ಒಂದುಗೂಡೇವು**
**ನಮ್ಮೆದೆಯ ಮಿಡಿಯುವೀ ಮಾತಿನಲ್ಲಿ**
**ಮಾತೆಯನು ಪೂಜೆ ಮಾಡೇವು**
**ನಮ್ಮುಸಿರು ತೀಡುವೀ ನಾಡಿನಲ್ಲಿ**
**ಮಾಂಗಲ್ಯಗೀತ ಹಾಡೇವು**
**ತೊರೆದೇವು ಮರುಳ, ಕಡೆದೇವು ಇರುಳ ಪಡೆದೇವು**
**ತಿರುಳ ಹಿಡಿ ನೆನಪ**
**ಕರುಳೆಂಬ ಕುಡಿಗೆ ಮಿಂಚೆನ್ನ ಮುಡಿಸಿ ಹಚ್ಚೇವು**
**ಕನ್ನಡ ದೀಪ**

ಭಾವಗೀತೆ ಅನುಭವ ಜನ್ಯ, ಭಕ್ತಿಗೀತೆ ಅನುಭಾವಜನ್ಯ. ದುಂಡಪ್ಪ ಕರ್ಕಿ ಅನುಭವಿಯೂ ಹೌದು ಅನುಭಾವಿಯೂ ಹೌದು. ಅವರ ಅನುಭವ ಸುಂದರ ಭಾವಗೀತಗಳಾಗಿ ಅರಳಿದ್ದರೆ, ಅನುಭಾವ ಆಧ್ಯಾತ್ಮಗೀತಗಳಾಗಿ, ಪ್ರಾರ್ಥನಾ ಪದಗಳಾಗಿ ಪ್ರಕಾಶಗೊಂಡಿದೆ. ಅವರ 'ನಮನ' ಎಂಬ ಕವನ ಸಂಕಲನ ಸಂಪೂರ್ಣವಾಗಿ ಪ್ರಾರ್ಥನೆಗೆ ಮೀಸಲು. ಆದರೆ ಅವರ ಪ್ರಾರ್ಥನೆಯಾದರೂ ಎಂಥದು ?

**ಹಸನು ಮನದಿ ಗೈದ ದುಡಿಮೆ**
**ದಿನದ ಸಹಜ ಪ್ರಾರ್ಥನೆ**
**ಎದೆಯ ಕಿರಣ ಪ್ರೇರಿಸಿರುವ**
**ಕ್ರಿಯೆಯ ಸಹಜ ಕೀರ್ತನೆ**
**ಕರ್ತವ್ಯದ ಮುಖದೊಳಿರಲಿ**
**ಸುಪ್ರಸನ್ನ ಚಿತ್ತ**
**ಬಂದ ಬದುಕು ಅಂದವಹುದು**
**ಬರಿಮಾಡುವ ಇತ್ತ**

ಇಂತಹ ಪ್ರಾಂಜಲ ಮನದ ಪವಿತ್ರ ಪ್ರಾರ್ಥನೆ ಈ ಕವಿಯದು. ಪ್ರಾರ್ಥನೆಯ ಅರ್ಥ ಕಾಡುವುದಲ್ಲ, ಭಕ್ತಿಯ ರೂಪ ಬೇಡುವುದಲ್ಲ, ನಿಸ್ವಾರ್ಥ ಮನೋಭಾವದಿಂದ ಸಕಲವನ್ನೂ ಸರ್ವೇಶ್ವರಿಗರ್ಪಿಸುವ ತಾದ್ಯಾತ್ಮಭಾವ. ಅದು ಕರ್ಕಿಯವರ 'ನಮನ'ದಲ್ಲಿ ದೀರ್ಘವಾಗಿವೆ.

**ನಿನ್ನ ಚರಣದಲಿ ಅರಳಲಿ**
**ತಿಳಿಯ ಬಿಳಿಯ ಮೆಲುನಗೆ**
**ದಳವೇರುತ ಬಿರಿಯುವಂತೆ**
**ಹೊಸ ಹಗಲಿನ ಮಲ್ಲಿಗೆ**
**ಸುಪ್ರಸನ್ನ ಭಾವದಿಂದ**
**ಮಿಗಿಲಾವುದು ಜಗದಲಿ**
**ನಿನ್ನ ನೆನೆವ ಮನದ ನಲಿವು**
**ನಿನ್ನ ಅಡಿಯೊಳಾಡಲಿ**
**ದಿನ ದಿನ ಪ್ರಕೃತಿಯಲಿ ನಯದಿ**
**ನೀನು ನೆಯ್ವ ಚೆಲುವಿಗೆ**
**ಬೇಡ ಒಲವು ನಮೋ ಎನಲು**
**ನವಿರೇಳ್ವುದು ನೆನಹಿಗೆ**
**ನಿನ್ನ ಚಿರಣದಲಿ ಅರಳಲಿ**
**ತಿಳಿಯ ಮೆಲುನಗೆ**
**ದಳ ತೆರೆಯುವ ನಗುವ ಹಾಗೆ**
**ಹೊಸ ಹಗಲಿನ ಮಲ್ಲಿಗೆ**

ಇದೇ ಬಗೆಯ ಸರ್ವ ಸಮರ್ಪಣ ಭಾವ ಸ್ಫುಟವಾಗಿದೆ. 'ನೀ ಕರೆಯೆ ನಾ ಬಂದೆ' ಎಂಬ ಕವನದಲ್ಲಿ :

**ನೀ ಕರೆಯೆ ನಾ ಬಂದೆ ಈ ಜಗಕೆ ಓ ದೊರೆಯೆ**
**ಜೀವನವಿದೊಂದು ಪರಮಾರಾಧನೆ**
**ನಿನ್ನ ಪದಪದ್ಮ ದಯೆಗೆಯ್ದ ಸಂಪದ ಸಾಕು**
**ದಿನದ ಕಾಯಕ ಸಂಕೀರ್ತನೆ**
**ದೀಪ್ತ ಭಾವನೆ ನಂದದಿರುವ ನಂದಾದೀಪ**
**ನಯ ಸ್ನೇಹ ತುಂಬಿದೆದೆ ಸ್ವರ್ಣ ಪ್ರಣತೆ**
**ನಿನ್ನ ಅಂತಃಕರನ ನನ್ನರುಹ ಕಿರಣಿಸಿದೆ**
**ನಿನಗೆ ಕಂಗಳ ಜ್ಯೋತಿ ಬೆಳಗದಿಹೆನೇ ?**
**ದಿನವು ಹಮ್ಮುವ ಉದಯ ನಿಜಕು ಮಾಂಗಲ್ಯಮಯ**
**ಚಿತ್ರದೆದುರೆತ್ತು ದೊರೆ ಬೆನ್ನ ಗುರಿಯ**
**ಎಚ್ಚರಿಸು ನಿಚ್ಚವೂ ಎಚ್ಚರಿಸು, ದಕ್ಷತೆಯ**
**ಅಕ್ಷತೆಯನರ್ಪಿಸುವೆ ಅರುಹಿನೊಡೆಯ.**
**ಕಂಪ ತಳೆದಿಹ ಗಾಳಿ ಸುಳಿಯೆ ನಾನೈತಂದೆ**
**ಅರಳಿಸೆನ್ನೆದೆಯ. ಅದೆ ಪುಷ್ಪವೆಂಬೆ**
**ದಿನದ ದಾರಿಯ ನಡೆದು ಪಡೆದ ಭಕ್ತಿಯ ತೃಪ್ತಿ**
**ಪರಮ ನೈವೇದ್ಯವದು, ದೇವ, ನಿನಗೆ.**
**ಜೀವನದ ಪಯಣದಲಿ ಸಂಧಿಸಿದ ಪಯಣಿಗರ**

**ರಾಗ, ಅನುರಾಗದಲಿ ಕಂಡು ಒಡನೆ**
**ನನಗೆ ಬಂದನುಭವದ ವಿನಯದಲಿ ವಿನಮಯಿಸಿ**
**ತಣಿವ ಕೃಪೆ ಮಾಡು, ದೊರೆ, ನಮನ ನಿನಗೆ**

**ಕಾವ್ಯಶೈಲಿ ಮತ್ತು ಛಂದಸ್ಸು**

ಒಂದೊಂದು ಜಾತಿಯ ಹೂವಿಗೂ ಒಂದೊಂದು ಸೌರಭ ; ಬಂಡು ಒಂದಾದರೂ ಬಣ್ಣ ಬೇರೆ. ಅದೇ ರೀತಿ ವ್ಯಕ್ತಿ ವ್ಯಕ್ತಿಗೂ ಮನೋಧರ್ಮದಲ್ಲಿ ಭಿನ್ನತೆ ಇದೆ. ಈ ಭಿನ್ನ ಮನೋಧರ್ಮವೆ ಕವಿ ಕಲಾವಿದರ ವ್ಯಕ್ತಿಗತ ಶೈಲಿಯನ್ನು ರೂಪಿಸಿಕೊಡುವ ಮೂಲಬಿಂದು ; ಅವರ ಸೋಪಜ್ಞತೆಗೂ ಅದೇ ಧವಳ ದ್ರವ್ಯ.

ಕರ್ಕಿಯವರ ಕಾವ್ಯ ಶೈಲಿ ತುಂಬಿದ ತೊರೆ ಇದ್ದ ಹಾಗೆ. ಎಲ್ಲೂ ಏರಿಳಿತವಿಲ್ಲದ ಅಂದರೆ ಸಮತಟ್ಟಿನಲ್ಲಿ ಸಾಗುವ ಪ್ರಶಾಂತ ಪ್ರವಾಹದಂತೆ. ಅಬ್ಬರ ಗೊತ್ತಿಲ್ಲ ; ಆರ್ಭಟ ತಿಳಿದಿಲ್ಲ. ತಡಸಲದ ತಳ್ಳಿ ಇಲ್ಲ, ನಿರ್ಘೋಷದ ವ್ಯಾಮೋಹವೂ ಅದಕ್ಕಿಲ್ಲ. ತಡಿತುಂಬಿ ತೇಂಕುತಿಹ ತೊರೆಯ ತೆರೆಯ ಸಹಜ ಗಾಂಭೀರ್ಯ ಅದರದು.

ಅದಕ್ಕೆ ಅತಿ ಶೀಘ್ರವಾಗಿ ಸಮುದ್ರವನ್ನು ಸೇರಿಕೊಳ್ಳುವ ಕಾತರ ಇಲ್ಲ ; ಸೇರಿದರಾಯಿತು ಎನ್ನುವ ತಾತ್ಸಾರವೂ ಇಲ್ಲ. ತನ್ನ ಭಾವದೆಲೆಯ ತೆರೆಗೆ ಸಿಕ್ಕ ಯಾವ ವಸ್ತುವನ್ನೂ ಬಿಟ್ಟು ಹೋಗುವ ದಾರ್ಷ್ಟ್ಯ ಇಲ್ಲ. ಸೆಳವಿನಿಂದ ನುಸುಳಿದ್ದರ ಬಗ್ಗೆ ವಿಶೇಷ ಕಾಳಜಿಯೂ ಇಲ್ಲ. ಇದ್ದದ್ದರಲ್ಲೇ ತೃಪ್ತಿ, ಸಂತೃಪ್ತಿ. ತನ್ನ ಇಕ್ಕೆಲ್ಲದ ಮರಗಿಡಗಳೊಡನೆ ಮಾತನಾಡುತ್ತಾ, ಕಲ್ಲು ಬಂಡೆಗಳ ನಡುವೆ ಕಿಲಕಿಲನೆ ನಗುತ್ತಾ, ಅಲ್ಲಲ್ಲಿ ಜುಳುಜುಳು ಮಂಜುಳ ನಿನಾದಗೈದು ಹಾಡು ಹಾಡುತ್ತಾ ತನ್ನದೇ ಆದ ಗತ್ತಿನಲ್ಲಿ ಗಮಿಸುವ ಶ್ರೀಮಂತಿಕೆ ಅದಕ್ಕಿದೆ. ಎಲ್. ಅಬರ್ ಕ್ರಾಂಬಿ ಹೇಳುವಂತೆ ಕಾವ್ಯಕ್ಕೆ ಅದರದೇ ಆದ ಅರ್ಥವೂ ಇದೆ, ಹಾಗೆ ಅದರದೇ ಆದ ನಾದವೂ ಇದೆ. ಅದು ಎಂದಿಗೂ ನಾದ ಬಿಂದು ಕಳಾತೀತವಾದುದಲ್ಲ. ಕರ್ಕಿಯವರ ಕಾವ್ಯ ತನ್ನದಾದ ನಾದಮಾಧುರ್ಯಕ್ಕೆ ಮನ ಸೋತದ್ದು. ಅದಕ್ಕೆ ಸಹಜವಾಗಿ ಸರಳ ಸರಳರೀತಿಯಲ್ಲಿ ನಾಟ್ಯವಾಡುವ ಹಂಬಲ. ಆದ್ದರಿಂದಲೇ ಶಬ್ದ ಸಮುದಾಯದ ಮಧ್ಯದಲ್ಲಿ ಒಂದು ಬಗೆಯ ನೃತ್ಯಲಯ ತಂದು ನರ್ತನದ ನಯವನ್ನು ಹೊಮದಿರುವುದುಂಟು. ಹೊಸದಲ್ಲದಿದ್ದರೂ ಹಸನಾದ ಕಾವ್ಯ ಪ್ರತಿಮೆಗಳನ್ನು ಅಲ್ಲಲ್ಲಿ ಮೂಡಿಸಿ ನಿಲ್ಲಿಸುತ್ತಾರೆ ಕರ್ಕಿ. ವಿಶೇಷವಾಗಿ ಅವರಿಗೆ ಜ್ಯೋತಿ ಅಥವಾ ಬೆಳಕಿನ ಬಗೆಗೆ ವಿಶೇಷ ಮಮತೆ. ಜ್ಞಾನದ ಸಂಕೇತವೂ ಶುದ್ಧ ಸತ್ವಕ್ಕೆ ಸಾಕ್ಷಿಯೂ ಆದ ದಿವ್ಯಧವಳ ಜ್ಯೋತಿಯನ್ನು ಕಂಡು ಕಂಡರಿಸಿರುವುದುಂಟು. ಕನ್ನಡದ ದೀಪ ಹಚ್ಚಿದಂತೆ, ವಿಭುತಿತ್ವವನ್ನು ದರ್ಶಿಸಿದೆಡೆಯಲ್ಲೆಲ್ಲಾ ಜ್ಯೋತಿಯನ್ನೇ ಬೆಳಗಿಸಿರುವುದುಂಟು. ಸದಾ ಸರ್ವದಾ 'ಬೆಳಕು ಬೆಳಗುತಿರಲಿ' ಎಂಬುದೇ ಕವಿ ಮನದ ಕಾಂಕ್ಷೆ. ಜ್ಯೋತಿರತಿ ಕವಿಯ ಅಂತದೃಷ್ಟಿ, ಅದು ಅವನ ಪ್ರಾತಿಭ ತೇಜವೂ ಹೌದು, ಅಖಂಡ ಸ್ವಾತ್ಮಸ್ವರೂಪ ಶಕ್ತಿಯ ಸ್ಫುರಣವೂ ಹೌದು. ಇದನ್ನು ಸಪ್ರಮಾಣದಲ್ಲಿ ದುಡಿಸಿಕೊಂಡಿದ್ದಾರೆ ಈ ಕವಿ.

ಕರ್ಕಿಯವರ ಕಾವ್ಯದಲ್ಲಿ ಸಂಸ್ಕೃತ ಪದಗಳೂ ಜನಪದ ನುಡಿಗಳೂ ಆಳವರಿತು ಪ್ರಯೋಗಗೊಂಡಿವೆ. ಆದರೆ ಅವರ ಕಾವ್ಯದ ನಡಿಗೆ ಹೆಚ್ಚು ಪ್ರಿಯವಾದುದು 'ಜೋಡು ನುಡಿಗಳ' ಜಾಡು ಅಥವಾ ದ್ವಿರುಕ್ತಿಯಂತಿರುವ ಆವರ್ತಿತ ಪದಗಳು. 'ಜ್ಯೊತಿ' ಅಥವಾ ಬೆಳಕು ಹೇಗೆ ಅವರ ದರ್ಶನ ದ್ರವ್ಯವೊ 'ಪದಯುಗಗಳ ಪ್ರಯೋಗ' ಅವರಿಗೆ ಅಚ್ಚುಮೆಚ್ಚು 'ಯುಗಯುಗಗಳ ಜನಜನಾಂಗ' ಇವರಿವರೆ ಬಾಪು ಇವರಿವರೆ ನೆಹರು, 'ಎಲ್ಲಿಹುದು ಒಡಲು ? ಎಲ್ಲಹುದು ಒಲವು ಇದರಂತವೇನೆ ಏನೆ ? 'ಸಾಗಿದಳು ದೇಗುಲಕೆ ತುಳು ತುಳುಕೆ ಭಕುತಿ' ಬಗೆಗಣ್ಣ ಮುಂದೆ ಹೊಂಗನಸ ಹೆಣೆದು ಮನಮನವ ಕುಣಿಸುತಾನೆ, ಜಿನು ಜಿನುಗಿ ಜೇನಿನೆಳೆ ಎಳೆಯನೆಳೆದು ಉಕ್ಕನ್ನೇ ಮಣಿಸುತಾನೆ.'

ಇಂತಹ ಪದ ಪುನರಾವರ್ತನೆ ಇವರ ಕವನಗಳಲ್ಲಿ ಹಾಸುಹೊಕ್ಕಾಗಿ ಬಳಕೆಯಾಗಿದೆ. ಬಹುಶಃ ಇಂತಹ ಪುನರಾವರ್ತನೆ ಇಲ್ಲದ ಕವನವೇ ಕರ್ಕಿಯವರಲ್ಲಿಲ್ಲ ಎಂದರೂ ತಪ್ಪಾಗದು. ಅಷ್ಟರಮಟ್ಟಿಗೆ ಪ್ರಯೋಗಗೊಂಡಿದೆ. ಇದು ದ್ವಿರುಕ್ತಿ ದೋಷ ಎನಿಸದೆ ಗುಣವಾಗಿ ಪರಿಣಮಿಸಿ, ಕವಿಯ ಭಾವ ಸ್ಫುಟಕ್ಕೆ ಕಾವ್ಯದ ಸಾಂದರ್ಭಿಕ ಅರ್ಥ ಸ್ಪಷ್ಟತೆಗೆ ಕಾರಣವಾಗಿದೆ ಎಂದು ಹೇಳಬೇಕಾಗುತ್ತದೆ."ಸರೋವರದಿ ಸರೋಜ ದಳ ದಳವ ತೆರದು ಹೊಳೆವೊಲು ಮಧುರಿಸು ಪ್ರಭು ಮನವನು ಎಂಬಲ್ಲಿನ 'ಸರೋಜ ದಳ ದಳವ ತೆರೆದು' ಎಂಬ ಪ್ರಯೋಗ ತಾವರೆಯ ಪಟಲ ಪಟಲವನ್ನು ತೆರೆದು ಸೌರಭವನ್ನು ತುಂಬುವಂತೆ ಸ್ವಾಮಿ ತನ್ನಲ್ಲೂ ತನ್ನ ಒಳಗಿನೊಳಗಿನ ಪದರ ಪದರಗಳನ್ನು ಬಿಚ್ಚಿ ಮಾನವತೆಯ ಸೊಬಗನ್ನು ತುಂಬಲಿ ಎಂಬ ಕವಿ ಬೇಡಿ

೨೦೮

ಕೆಯನ್ನು ಸ್ಫುಟಗೊಳಿಸುತ್ತದೆ. ಕಣ್ಣಿವೆ ಎವೆ ಸೋಂಕಿ ತಾವೆ' ಎಂಬಲ್ಲಿನ 'ಎವೆ ಎವೆ ಸೋಂಕಿ' ಎಂಬುದು ಎರಡೂ ಎಮೆಗಳು ಒಂದಕ್ಕೊಂದು ಚೆಂದಾಗಿ ಕೂಡಿ ಎಂಬ ಅರ್ಥ ಕೊಡುತ್ತದೆ.

**ತುಂಬಿದ ಕೊಡ ತುಳುಕದೆನಲು**
**ಚಂದವೇನು ? ಹೇಳಾ**
**ತುಂಬೆದೆದೆಯು ತುಳುಕುತಿರಲಿ**
**ಒಡಲಿನೊಲವ ಕೊಡುಕೊಡಾ**

ಇಲ್ಲಿನ 'ಕೊಡು ಕೊಡಾ' ಎಂಬುದು 'ಕೊಟ್ಟು ಬಿಡು' ಎಂಬ ಧೋರಣೆಯನ್ನು ಅಭಿವ್ಯಕ್ತಿಸಿದರೆ,

**ಬೆಸಗೆಯ ಬೇಗುದಿಯ ಸಂತೈಸಲೆಂದೆಂದೆ**
**ಕಲ್ಯಾಣಿ ತಾ ಕಲಶ ಕಲಶ ತೀವಿ**

ಎಂಬಲ್ಲಿನ 'ಕಲಶ ಕಲಶ ತೀವಿ' ಪ್ರಯೋಗ, ಎಲ್ಲ ಅಥವಾ ಅನೇಕಾನೇಕ ಕಲಶಗಳನ್ನು ತುಂಬಿ ಎಂಬ ಆಶಯವನ್ನು ವ್ಯಕ್ತಪಡಿಸಿದೆ.

**ಬಿತ್ತದೆದುರಿನಲಿ ಬಿಚ್ಚಿ ಗರಿಗಳನು**
**ಸ್ವರ್ಣವರ್ಣ ಪಕ್ಷಿ**
**ಬೆರಗು ಬೆರಗನೇ ಹರಡಿ ನಭದಿ**
**ಹಾರಿದವು ಲಹರಿಯಲ್ಲಿ**

ಈ ರಚನೆಯಲ್ಲಿ ರುಚಿ ಇದೆ. 'ಬೆರಗು ಬೆರಗನೇ' ಎಂಬುದರ ಅರ್ಥ ಬೆರಗಿನ ಬೆಗು ನಿಬ್ಬೆರಗನು ಧ್ವನಿಸುತ್ತದೆ. ಈ ಪದ್ಯದ ಮುಂದಿನ ಚರಣದಲ್ಲೂ ಇದೇ ಪದ ಇದೇ ಅರ್ಥದಲ್ಲಿ ಪ್ರಯೋಗಗೊಂಡಿದೆ.

**ನಿಜದಿ ನೆಲೆ ಅರಸುತ್ತ**
**ಆ ಮೊದಲೇ ಸಿದ್ಧಾರ್ಥ**
**ಪಯಣಿಸುತ ಪಯಣಿಸುತ**
**ಪಯಣಿಸುತ ಬಂದು**

ಎಂಬಲ್ಲಿ ದ್ವಿರುಕ್ತಿ ಎಲ್ಲ ತ್ರಿರುಕ್ತಿ ಪ್ರಯೋಗ ಆಗಿದೆ. ಮಡದಿ ಮಗು ಮನೆ ಮಾರು, ರಾಜ್ಯಕೋಶಾದಿಗಳನ್ನು ಬಿಟ್ಟು ಹೊರಟ ಪರಿವ್ರಾಜಕ ಸಿದ್ಧಾರ್ಥ ನಡೆದ ನಡೆದೇ ನಡೆದ, ಎಷ್ಟು ದೂರ ನಡೆದ, ಇಷ್ಟೆಲ್ಲಾ ಅರ್ಥವನ್ನು 'ಪಯಣಿಸಿದ ಪಯಣಿಸಿದ ಪಯಣಿಸಿದ' ಎಂಬ ತ್ರಿರುಕ್ತಿ ಸಾರಿ ಹೇಳುತ್ತದೆ.

ಕರ್ಕಿಯವರ ಈ ಬಗೆಯ ಆವರ್ತನ ಪದಪ್ರಯೋಗದಲ್ಲಿ ಚಮತ್ಕಾರವೂ ಅಡಗಿದೆ. ಉದಾಹರಣೆಗೆ –

**ನಿನ್ನೊಡಲ ತುಂಬಿರುವ ತಿರುಳೆಲ್ಲ ಸಿಹಿನೆನಹು**
**ನೆನಹು ನೈಜದಿ ಮೂಡಿ ತಳೆದ ಸ್ವಾದ**

ಇಲ್ಲಿನ 'ಸಿಹಿ ನೆನಹು' ಎಂಬಲ್ಲಿಗೆ ಪೂರ್ಣ ವಿರಾಮ ಇಲ್ಲವೇ ಅರ್ಧ ವಿರಾಮ ಹಾಕಬೇಕು, ಅಲ್ಲಿಗೆ ಸಿಹಿ ನೆನಹು ಮುಗಿಯಿತು. ಅನಂತರದ ಎರಡನೇ ಪಾದದ 'ನೆನಹು' ಮುಂದಿನ ಮಾತುಗಳಿಗೆ ಕರ್ತೃ ಆಗುತ್ತದೆ. ಇದು ಇಲ್ಲಿನ ಪ್ರಯೋಗ ಸ್ವಾರಸ್ಯ, ಇಲ್ಲವೇ ಕವಿ ಚಮತ್ಕಾರ.

೨೦೯

ಕೆಲವೆಡೆ ದ್ವಿರುಕ್ತಿಯ ದೋಷವೂ ಆಗಿ ಕಾಣಿಸುವುದುಂಟು. ನೋಡಿ –

**ತಾಯೊಲವಿಗೆ ಮಗುವಿನ ಬಗೆ**
**'ಓ' ಎನ್ನುತ ನಗೆಯೊಳು**
**ತುಳುಕುವಂತೆ ತುಳುಕಿಸು ಪ್ರಭು**
**ರಸಮಾನಸ ರುಚಿಯನು**

ಇಲ್ಲಿನ 'ತುಳುಕುವಂತೆ ತುಳುಕಿಸು' ಪ್ರಯೋಗ ನಿಜಕ್ಕೂ ಸಪ್ಪೆ ಸಪ್ಪೆ !

**ಬೆಂದದೆ ಎದೆ ಸೋಂಕಿ ಬಂದಿದೆ ಅನುಕಂಪ**
**ತಂದಿದೆ ರಸಪಾನ ಎಲ್ಲಿದೆ**

ಇದರದೂ ಅದೇ ಗತಿ. 'ಪದ ಪ್ರಯೋಗ' ಗಳಲ್ಲೂ ದೋಷಗಳುಂಟು ಎನ್ನಿಸುತ್ತದೆ. ಉದಾಹರಣೆಗೆ –

'ದೂರ ಬಹುದೂರಕ್ಕೆ ಸೌಂದರದ ತೀರಕ್ಕೆ' ಎಂಬಲ್ಲಿನ 'ಸೌಂದರದ' ಎಂಬ ವಿಕೃತ ಪ್ರಯೋಗ, ಸಾಗಿತ್ತು ಇಂತು ನಗೆನೋವುಗಳ ಜತ್ತು ಎಂಬಲ್ಲಿನ 'ಜತ್ತು' ಎಂಬ ವಿಚಿತ್ರ ಪದಪ್ರಯೋಗ ಕರ್ಕಿಯವರ ಕಾವ್ಯಕನ್ಯೆಯ ಮುಖದಲ್ಲಿ ದೃಷ್ಟಿ ಬೊಟ್ಟುಗಳಂತಿವೆ. ಆನೆ ನಡೆದದ್ದೆ ಹಾದಿ ಎಂಬಂತೆ ನಿರಂಕುಶ ಪ್ರಭುವಾದ ಕವಿ, ದೋಷಗಳ ಕಡೆಗೆ ಕಣ್ಣೆತ್ತಿಯೂ ನೋಡದೆ ತನ್ನದೇ ಆದ ಭಾವ ಮಾರ್ಗದಲ್ಲಿ ಗಮನಿಸುತ್ತಾನೆ, ಗಮನಿಸಿದ್ದಾನೆ.

ಇಂಗ್ಲಿಷ್ ಸಾಹಿತ್ಯ ಸಂಪರ್ಕದಿಂದ ಕನ್ನಡದಲ್ಲಿ ನವೋದಯ ಸೃಷ್ಟಿ ಆರಂಭವಾಯಿತಷ್ಟೆ. ಆಗ ರಮ್ಯ ಕವಿಗಳು ಹೊರ ರೂಪವನ್ನು ಅಲ್ಲಿಂದ ಎರವಲಾಗಿ ಪಡೆದು ಒಳಜೀವನಕ್ಕೆ ತಮ್ಮಲ್ಲಿಯ ಹಳೆಯ ಲಯಗಳನ್ನೇ ಆಶ್ರಯಿಸಿದರು. ಆದರೆ ದ್ರಾವಿಡದ ನೈಜರೂಪೀ ತ್ರಿಮೂರ್ತಿ ಗಣ ವಿನ್ಯಾಸಕ್ಕೆ ತಿಲಾಂಜಲಿ ಕೊಟ್ಟು ಪ್ರಾಕೃತವಾದ ಮಾತ್ರಾಗಣ ಘಟಿತ ರಚನೆಗಳನ್ನೇ ಒಲಿದರು, ಒಗ್ಗಿಸಿದರು. ಅವುಗಳಲ್ಲಿ ರಗಳೆ ಮುಖ್ಯವಾದದ್ದು. ಶುದ್ಧ ದೇಶೀ ಛಂದವೆನಿಸಿದ್ದ ಸೀಸಪದ್ಯ ತನ್ನದೇ ವಿಲಾಸ ವೈಭವಗಳಿಂದ ಮೆರೆಯಿತು. ೧೯ ಮತ್ತು ೨೦ನೆಯ ಶತಮಾನದ ಎಲ್ಲ ರಮ್ಯ ಕವಿಗಳು ಈ ಧಾಟಿಗಳನ್ನು ತಮ್ಮ ಸಂವಹನ ಸಾಧನವನ್ನಾಗಿ ಮಾಡಿಕೊಂಡರು. ಅದೇ ಪೀಳಿಗೆಗೆ ಸೇರಿದ ದುಂಡಪ್ಪ ಕರ್ಕಿಯವರೂ ತಮ್ಮ ಸಮಕಾಲೀನ ಹಿರಿಯ ಕವಿಗಳ ಹೆಜ್ಜೆಯಲ್ಲಿ ಹೆಜ್ಜೆ ಇಟ್ಟು ನಡೆದರು. ಆದ್ದರಿಂದ 'ಇದು ಕರ್ಕಿಯವರದು' ಎಂದು ಹೇಳಬಹುದಾದ ಛಂದಸ್ಸು ಇಲ್ಲ.

ಛಂದಸ್ಸಿನ ಸ್ವೀಕರಣದಲ್ಲಿ ಕರ್ಕಿಯವರ ಮೇಲೆ ವಿಶೇಷ ಪ್ರಭಾವ ಬೀರಿದವರು ದ.ರಾ. ಬೇಂದ್ರೆ. ಬೇಂದ್ರೆಯವರ ಗಂಗಾವತರಣವನ್ನು ೫+೩, ೫+೩, ೫+೩ ಮಾತ್ರಾಗಣದ ಪ್ರತಿ ಪಾದದಲ್ಲೂ ೨೪ ಮಾತ್ರೆಗಳಿರುವಂತಹ ಒಂದು ಹಾಸು ಬೀಸಿನ ವಿನ್ಯಾಸವನ್ನು ಬಳಸಿಕೊಂಡರು. ಆ ಛಂದಸ್ಸಿನ ಮೇಲೆ ತಮ್ಮ ಪೂರ್ಣ ಪ್ರಭುತ್ವವನ್ನು ಸಂಪಾದಿಸಿಕೊಂಡ ಬೇಂದ್ರೆ ತಮ್ಮ ಅನಂತರದ ಹಲವು ಕವನಗಳ ಮೂಲಕ ಹೆಚ್ಚು ಚಾಲ್ತಿಗೆ ತಂದರು. ಅದೇ ಓಟ ಧಾಟಿಯನ್ನು ಹಲವರು ರಮ್ಯ ಕವಿಗಳು ಅನುಸರಿಸಿದರು. ಚೆನ್ನಾಗಿ ದುಡಿಸಿಕೊಂಡವರೆಂದರೆ ಡಾ. ಕರ್ಕಿ. ಇವರ ಬಹುತೇಕ ಕವನಗಳಲ್ಲಿ ಬೇಂದ್ರೆ ಗತ್ತು ಕಾಣುತ್ತೇವೆ.

**ಗಾರುಡಿಗನಾರೊ ನಾವರಿಯದೊಂದು**
**ಚಿನ್ನಾಟ ಹೂಡಿದಾನೆ**
**ನರನಾಡಿಯಲ್ಲಿ ಅನುರಾಗ ತೋಡಿ**
**ಮೈಮನವ ಮರಸುತಾನೆ**

ಈ ಬಗೆಯಲ್ಲಿ ಬರೆದ ಹತ್ತಾರು ಕವನಗಳಿವೆ. ಆದರೆ ಕರ್ಕಿಯವರು ಇದರಲ್ಲೂ ತುಸು ವೈವಿಧ್ಯವನ್ನು ಸಾಧಿಸಿದ್ದಾರೆ. ಇಲ್ಲಿನ ೫+೩ ರ ಲಯ ಬದಲಾಗಿ ೩+೪ರ ಲಯವನ್ನು ಸಾಧಿಸಿಕೊಂಡಿರುವುದುಂಟು. ಹೊಸತನ ಕಾವ್ಯಕ್ಕೆ ಕಳೆತಂದುಕೊಟ್ಟಿದೆ.

೨೧೦

**ತೇಲಿಸೆನ್ನನು ಧವಳ ಸ್ಮರಣೆಯ**
**ಗೀತ ಗಂಗಾ ಸ್ರೋತದಿ**
**ಚಿತ್ತ ಛಂದೋಲಯಕೆ ಸಂದಿದೆ**
**ನೆನೆವೆ ನಿನ್ನನು ಗೀತದಿ**

೩+೪, ೩+೪ – ಈ ನಡಿಗೆಯ ಮೂಲವನ್ನು ಯಥಾ ಪ್ರಕಾರ ಭಾಮಿನಿಯಲ್ಲಿ ಹುಡುಕಬಹುದು. ಇದೇ ರೀತಿ ಹಳೆಯ ಸೀಸ ಪದ್ಯವನ್ನೇ ಹೊಸ ಲಯಕ್ಕೆ ತಿರುಗಿಸಿ ರಚಿಸಿರುವ ಪದ್ಯಗಳು ತುಂಬಾ ಸಾಮಾನ್ಯ ಕರ್ಕಿಯವರ ಕವನಗಳಲ್ಲಿ.

ಕನ್ನಡ ಛಂದಸ್ಸು ಕುರಿತು ಸಂಶೋಧನೆ ನಡೆಸಿದ ಕರ್ಕಿಯವರು, 'ಕನ್ನಡ ಛಂದೋ ಗಂಗೆಯ ಗಂಗೋತ್ರಿ' 'ಕನ್ನಡ ಛಂದಸ್ಸಿನ ತಾಯಬೇರು' ಎಂದೆಲ್ಲ ಕರೆಸಿಕೊಂಡಿರುವ ತ್ರಿಪದಿಯಲ್ಲೂ ಕೆಲವು ಪದ್ಯಗಳನ್ನು ರಚಿಸಿದ್ದಾರೆ. 'ಕರಿಕೆ ಕಣಗಿಲು' ಕವನ ಸಂಕಲನದ 'ಹಾಡಿನ ಮೂಲನಾಡಿ' ಎಂಬ ಕವನವನ್ನು ಹತ್ತು ತ್ರಿಪದಿಗಳಲ್ಲಿ ಅಲಂಕರಿಸಿದ್ದಾರೆ. ಇಲ್ಲಿನ ಬಿಡಿ ಮುಕ್ತಗಳ ವಸ್ತು 'ತ್ರಿಪದಿ'ಯನ್ನೇ ಕುರಿತದ್ದು. ಥ್ರಿಪದಿಯನ್ನು ಕುರಿತು ಹೀಗೆ ಹಾಡಿದ್ದಾರೆ.

ನಾ ಮಕ್ಕಳಿಗೆಲ್ಲ ಹಾಡಿನ ಹಾಲುಣಿಸಿ
ಪಾಡಾಗಿ ಪೊರೆವ ತ್ರಿಪದಿ ನೀ ಜೀವದ
ನಾಡಿ ನುಡಿಸುತ ಬಂದಿರುವೆ
ನಿನ್ನ ಮೂರಡಿಯಲಿ ಚಿನ್ನದ ಹೂವರಳಿ
ಕನ್ನಡ ನುಡಿಯ ಚಂದಕೆ ಹೆಣೆದಾವು
ರನ್ನ ಮಾಣಿಕದ ಮಾಲೆಗಳ . . . . . . .
. . . . . . .
ಹಿಗ್ಗುತ ಜೀವಕೆ ಜೋಕಾಲಿ ಕಟ್ಟಿ ನೀ
ತೂಗುವೆ ಒಡಲ ಒಲವನು ನಿನ್ನ ಆ
ಜೋಗುಳ ದಾಟಿ ಬಲು ಸವಿ

ಇಲ್ಲಿನ ಕಡೆಯ ಪದ್ಯ ತ್ರಿಪದಿಯ ಎಲ್ಲ ಲಕ್ಷಣಗಳನ್ನು ಒಳಗೊಂಡ ಅಂಶಗಣ ತ್ರಿಪದಿ. ಇದನ್ನು ಬಿಟ್ಟರೆ ಉಳಿದೆಲ್ಲವೂ ಛಂದಸ್ಸಿನ ಲಕ್ಷಣವನ್ನು ಉಲ್ಲಂಘಿಸಿದವುಗಳೇ ಆಗಿವೆ. ಕೆಲವು ಮಾತ್ರಾ ತ್ರಿಪದಿಗೂ ಹೊಂದುವುದಿಲ್ಲ, ಅಂಶ ತ್ರಿಪದಿಗೂ ಹೊಂದುವುದಿಲ್ಲ. ಒಂದು ಬಗೆಯ ಕವಿಯ ಸ್ವಾಚ್ಛಂದ್ಯ ಇಲ್ಲಿ ಸ್ಪಷ್ಟ ಗೋಚರವಾಗುತ್ತದೆ. ಛಂದಸ್ಸಿನ ಮೇಲೆ ಗ್ರಂಥ ಬರೆದವರೇ ಛಂದೋದೋಷಕ್ಕೆ ಗುರಿಯಾಗಿದ್ದಾರೆ ಎನ್ನಬಹುದು. ಆದರೆ ಹಾಡುಗಬ್ಬದ ಹಾಡುಗಾರಿಕೆಯ ಧಾಡಿಯಲ್ಲಿ ಕವಿಯ ಭಾವ ತೀವ್ರತೆಯ ಒತ್ತಡದಲ್ಲಿ ಶಾಸ್ತ್ರಕಾರ ಬಾಯಿ ಮುಚ್ಚಿ ಕುಳಿತುಕೊಳ್ಳಬೇಕಾಗುತ್ತದೆ. ಶಾಸ್ತ್ರಕಾರ ಕರ್ಕಿಯನ್ನು ಕವಿ ಕರ್ಕಿ ಬಾಯಿ ಹೊಲಿದು ಕೂರಿಸಿದ್ದಾರೆ. ಇಂಥೆಡೆಗಳಲ್ಲಿ ಛಂದಸ್ಸಿನ ಪ್ರಯೋಗ ಸಂದರ್ಭದಲ್ಲಿ ಅವರು ವಹಿಸಿದ ಸ್ವಾತಂತ್ರ್ಯ ಮೆಚ್ಚುವಂಥದು.

**ಗದ್ಯ**

ಸಂಸ್ಕೃತಿಯ ಸಂವಹನ ಸಾಧನಗಳಾದ ಸಾಹಿತ್ಯ, ಸಂಗೀತ, ಚಿತ್ರ, ಶಿಲ್ಪ, ನೃತ್ಯ ಮೊದಲಾದ ಲಲಿತ ಕಲೆಗಳನ್ನು ಕುರಿತ ಕೆಲವು ಲೇಖನಗಳ ಸಂಗ್ರಹವೆ 'ಸಾಹಿತ್ಯ ಸಂಸ್ಕೃತ ಶ್ರುತಿ' 'ನಾಲ್ದೆಸೆಯ ನೋಟ'ದಲ್ಲಿ ಇದಕ್ಕಿಂತಲೂ ವಿಚಾರ ಪೂರ್ಣ ಲೇಖನಗಳಿವೆ. ಜೀವನ, ಪ್ರಕೃತಿ, ಕಲೆ ಮತ್ತು ಕಾವ್ಯ ಎಂಬ ನಾಲ್ಕೂ ನಿಟ್ಟಿನ ನೋಟ ಇಲ್ಲಿ ಒಟ್ಟಾಗಿ ಮೂಡಿದೆ. 'ಮಕ್ಕಳ ಶಿಕ್ಷಣ' ಮಕ್ಕಳ ಶಿಕ್ಷಣದ ವಿವಿಧ ಪದ್ಧತಿಗಳು, ಅವುಗಳ ಸಮಸ್ಯೆ ಹಾಗೂ ಅವುಗಳನ್ನು ಉತ್ತಮಗೊಳಿಸುವ ಬಗೆ ಇತ್ಯಾದಿಗಳನ್ನು ಕುರಿತ ಒಂದು ಪುಟ್ಟ ಪುಸ್ತಕ.

೨೧೧

ಕರ್ಕಿಯವರಿಗೆ ಕಾವ್ಯದಷ್ಟೇ ಪ್ರಿಯವಾದ ವಿಷಯವೆಂದರೆ ಛಂದಸ್ಸು, 'ಕನ್ನಡ ಛಂದೋವಿಕಾಸ' ಅವರ ಸಂಶೋಧನ ಪ್ರಬಂಧವೂ ಹೌದು, ಅವರ ಆಚಾರ್ಯ ಕೃತಿಯೂ ಹೌದು. ಇತ್ತೀಚಿನವರೆಗೂ ಕನ್ನಡ ಛಂದಸ್ಸನ್ನು ಕುರಿತ ಏಕೈಕ ಆಕರ ಗ್ರಂಥವೂ ಅದಾಗಿತ್ತು. ಕನ್ನಡ ಛಂದಸ್ಸಿನ ಮೊದಲ ಕೃತಿ ಎಂಬ ಐತಿಹಾಸಿಕ ಮಹತ್ವವಷ್ಟೇ ಅಲ್ಲ ಸತ್ವದಲ್ಲೂ ಇದಕ್ಕೆ ಅಗ್ರ ಸ್ಥಾನ ಮೀಸಲಿದೆ.  ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಕರ್ಕಿಯವರಿಗೂ ಒಂದು ಸ್ಥಾನವನ್ನು ಗಳಿಸಿಕೊಟ್ಟ ಗಣ್ಯ ಕೃತಿ. ಪಿ.ಎಚ್.ಡಿ. ಪದವಿಗಾಗಿ ೧೯೪೯ರಲ್ಲಿ ಮುಂಬಯಿ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಈ ಮಹಾಪ್ರಬಂಧಕ್ಕೆ ಮಾರ್ಗದರ್ಶಕರಾಗಿದ್ದ ಪ್ರೊ. ಕೆ.ಜಿ. ಕುಂದಣಗಾರರು ಇದಕ್ಕೆ ಮುನ್ನುಡಿ ಬರೆದಿದ್ದಾರೆ. ಕರ್ಕಿಯವರು ಛಂದಸ್ಸಿಗೆ ಸಂಬಂಧಿಸಿದ ತಮ್ಮ ಅಧ್ಯಯನವನ್ನು ೧೪ ಗತಿ ಅಥವಾ ಅಧ್ಯಾಯಗಳಲ್ಲಿ ಹಮ್ಮಿಕೊಂಡಿದ್ದಾರೆ. ಪ್ರಾಚೀನ ಚಂಪೂವಿನಿಂದ ಹಿಡಿದು ಆಧುನಿಕ ಲಯಗಳವರೆಗೆ ಸಂಶೋಧನೆ ನಡೆಸಿದ್ದಾರೆ.

'ಕನ್ನಡ ಕಾವ್ಯಗಳಲ್ಲಿ ಒಟ್ಟಾಗಿ ಮೂರು ಪ್ರಕಾರದ ಛಂದಸ್ಸು ಸೇರಿಕೊಂಡುದು ಕಂಡು ಬರುತ್ತದೆ. ಒಂದು ಕನ್ನಡಕ್ಕೆ ವಿಶಿಷ್ಟವಾದ ಅಂಶ ಛಂದಸ್ಸು. ಇನ್ನೊಂದು ಚಂಪೂ ಕಾವ್ಯಗಳಲ್ಲಿ ಹಾಸು ಹೊಕ್ಕಾಗಿರುವ ಸಂಸ್ಕೃತ ವರ್ಣ ಛಂದಸ್ಸು. ಮೂರನೆಯದು ಪ್ರಾಕೃತಕ್ಕೆ ವಿಶಿಷ್ಟವಾದ ಮಾತ್ರಗಣ ಛಂದಸ್ಸು. ಈ ಮೂರು ಪ್ರಕಾರಗಳ್ಲಿ ಅಚ್ಚಗನ್ನಡ ಛಂದಕ್ಕೆ ಈ ಪರಿಶೀಲನೆಯಲ್ಲಿ ಹೆಚ್ಚು ಲಕ್ಷ್ಯವನ್ನು ಪೂರೈಸಲಾಗಿದೆ. ಕನ್ನಡ ಛಂದದ ಜೀವಾಳ ಜಾನಪದ ಗೀತಗಳಲ್ಲಿಯೇ ಹೆಚ್ಚಾಗಿ ದೊರೆಯುತ್ತದೆ, ದೊರೆಯಬಲ್ಲುದು. ಅಂಶ ಅಥವಾ ತ್ರಿಮೂರ್ತಿಗಳ ವಿಲಾಪವೇ ಆ ಗೀತಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಅಚ್ಚಗನ್ನಡ ಮಟ್ಟುಗಳನ್ನು

ಅವುಗಳಿಗೆ ಸಹಜವೂ ವಿಶಿಷ್ಟವೂ ಆದ ಆವರಣದಲ್ಲಿ ಅವಲೋಕಿಸಿದರೆ ಮಾತ್ರ ಅವುಗಳ ನಾಡಿಯಲ್ಲಿ ನುಡಿಯುವ ಜೀವಸ್ವರದ ಗುರುತು ಆದೀತು. ಆ ಜೀವ ಸ್ವರದ ಕುರುಹುದೋರುವ ಯತ್ನ ಇಲ್ಲಿದೆ.

ನಾಗವರ್ಮನು ಹೆಸರಿಸಿದ 'ಖ್ಯಾತ ಕರ್ನಾಟಕ' ವೃತ್ತಗಳೂ ಇನ್ನೂ ಕೆಲವು ವರ್ಣ ವೃತ್ತಗಳೂ, ಕಂದಗಳೂ ಕನ್ನಡ ಚಂಪೂ ಕಾವ್ಯಗಳಲ್ಲಿ ರಾಶಿ ರಾಶಿಯಾಗಿ ಸೇರಿಕೊಂಡಿರುವುದರಿಂದ ಅವುಗಳ ಕಡೆಗೂ ಸ್ಥೂಲ ದೃಷ್ಟಿಯಿಂದ ಗಮನ ಕೊಡಲಾಗಿದೆ.

ಮಾತ್ರಾಗಣದ ಕಲ್ಪನೆ ಕೂಡ ಕನ್ನಡಕ್ಕೆ ಅಷ್ಟು ನಿಕಟವಾದುದಲ್ಲ. ಏಕೆಂದರೆ ತ್ರಿಪದಿ, ಸಾಂಗತ್ಯ, ಪಿರಿಯಕ್ಕರ ಮೊದಲಾದ ತಿರುಳ್ಗನ್ನಡ ಮಟ್ಟುಗಳಲ್ಲಿ ಖಚಿತ ಸಂಖ್ಯೆಯ ಮಾತ್ರೆಗಳನ್ನೊಳಗೊಂಡ ಗಣಗಳು ಹೊರಡುವುದಿಲ್ಲ. ಮಾತ್ರಾಗಣದ ದಾರಿಯಿಂದ ಕನ್ನಡ ಮಟ್ಟುಗಳಲ್ಲಿ ಲಾಸ್ಯವಾಡುವ ರಾಗ ಪ್ರಧಾನ ಲಯವನ್ನು ನೇರವಾಗಿ ಮುಟ್ಟಲಾರವು. ಈಗ ಗೊತ್ತಿದ್ದ ಮಟ್ಟಿಗೆ ಕನ್ನಡ ಛಂದಶಾಸ್ತ್ರದಲ್ಲಿ ಮೊದಲಿಗನಾದ ನಾಗವರ್ಮನೂ ಕೂಡ ಮಾತ್ರಾಗಣದ ದಾರಿಯನ್ನು ಹಿಡಿದು ಅಲ್ಲಲ್ಲಿ ಎಡೆಹಿದ್ದಾನೆ. ನಾಗವರ್ಮನಿಂದೀಚೆಗೆ ಇಂದಿನವರೆಗೂ ಕನ್ನಡ ಛಂದಸ್ಸಿನ ಅಭ್ಯಾಸ ಮಾಡಿ ತಂತಮ್ಮ ವರದಿಯನ್ನೊಪ್ಪಿಸಿದವರು ಪ್ರಾಯಶಃ ನಾಗವರ್ಮನ ಜಾಡನ್ನೇ ಹಿಡಿದು ಸಾಗಿ ಬಂದಿರುವುದರಿಂದ ಕನ್ನಡ ಛಂದದ ಸಂಬಂಧದಲ್ಲಿ ಮಾತ್ರಾಗಣವು ತಾಳಬಾರದ ಮಹತ್ವವನ್ನು ತಾಳುತ್ತಾ ಬಂದಿದೆ. ಆದರೆ ಒಂದು ಮಾತನ್ನು ನಾವು ಮರೆಯಕೂಡದು. ಕನ್ನಡ ಛಂದಸ್ಸಿನ ಚರಿತ್ರೆಯಲ್ಲಿ, ಮುಂದು ಮುಂದಿನ ಶತಮಾನಗಳಲ್ಲಿ ಕನ್ನಡಕ್ಕೆ ಹೊಂದಿಕೊಳ್ಳುವಲ್ಲಿ ಮಾತ್ರಾಗಣದ ಪ್ರಭಾವವು ಇತರ ಭಾಷೆಗಳಲ್ಲಿನ ಕಾವ್ಯಗಳ ಸಂಪರ್ಕದ ಪರಿಣಾಮವಾಗಿ, ಕನ್ನಡ ಕವಿಗಳ ಮೇಲೆ ಹೆಚ್ಚಾಗುತ್ತ ಹೋಗಿ ಅಂಶ ಅಥವಾ ತ್ರಿಮೂರ್ತಿ ಗಣಗಳ ಮಟ್ಟುಗಳು ಮಾತ್ರಾಗಣ ಬಂಧಗಳಾಗುತ್ತ ಹೋದುದರ ಹೆಜ್ಜೆಗಳನ್ನು ನಾವು ಗುರುತಿಸಬಹುದಾಗಿದೆ. ಆದುದರಿಂದ ಅಂಶಗಣ ಮೂಲವಾಗಿ ಹೊರಟ ಛಂದಃ ಪ್ರವಾಹವು ತನ್ನ ದಾರಿಯಲ್ಲಿ ಯಾವ ಹೊಸ ನೀರಿನೊಡನೆ ಸೇರಿ ಹೊಸ ಪ್ರವಾಹಗಳನ್ನು ಮೈಗೂಡಿಸಿಕೊಂಡು ಹರಿದು ಬಂದಿವೆಯೆಂಬುದನ್ನು ತೋರಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಅದಕ್ಕಾಗಿಯೇ 'ಕನ್ನಡ ಛಂದೋವಿಕಾಸ" ಎಂಬ ನಾಮನಿರ್ದೇಶವನ್ನು ಈ ಪರಿಶೋಧನೆಗೆ ಮಾಡಲಾಗಿದೆ.

ತ್ರಿಪದಿ ಕನ್ನಡ ಛಂದಕ್ಕೆ ಮೂಲವೆಮದು ಹೇಳುವವರಿದ್ದಾರೆ. ಅದು ಹೇಗೆ ? ಎಂಬುದನ್ನು ಮನಂಬುಗುವಂತೆ ಪ್ರಸ್ತಾಪಿಸಿದವರು ಇಲ್ಲ. ಹಾಗೆ ಪ್ರಸ್ತಾಪಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ತ್ರಿಪದಿಯು ಕನ್ನಡಕ್ಕೆ ಮೂಲವಷ್ಟೇ ಅಲ್ಲ, ಮುಖ್ಯವೂ ಆಗಿದೆ. ಕನ್ನಡದಲ್ಲಿ ತ್ರಿಪದಿಯ ಅವತಾರ, ಅವಸ್ಥೆ, ಅದು ಹಿಡಿದ ಜಾಡು, ಅದರಿಂದ ಹೊರಟ ಎಳೆಗಳು, ಬೇರೆ

೨೧೨

ಬೇರೆ ವಾತಾವರಣಗಳ ಸಂಪರ್ಕದಿಂದ ಆ ಎಳೆಗಳು ಪಡೆದ ಗಡಸುತನ, ನಡುಗನ್ನಡ ಹಾಗೂ ಹೊಸಗನ್ನಡ ಬಂಧಗಳಲ್ಲಿ ಆ ಎಳೆಗಳ ಸೇರುವೆ – ಈ ರೀತಿಯಗಿ ಕನ್ನಡದ ಒಡಲ ನೂಲೆಂಬಂತೆ ಹೊರಟು ಕನ್ನಡಲಯದ ಜೀವ ರಕ್ಷಣೆಯ ದಾರಿಯಲ್ಲಿಯೇ ಸುತ್ತಿಕೊಂಡು ಸಹಜವಾಗಿಸ್ವಾಭಾವಿಕವಾಗಿ ರೂಪುಗೊಂಡ ಛಂದದ ಬಲೆ ಈ ಪರಿಶೋಧನೆಯಲ್ಲಿ ತೋರಿ ಬಂದೀತು.

'ಹೊಸಗನ್ನಡದ ಲಯಗಳು' ಎಂಬ ಒಂದೆರಡು ಬಿಡಿ ಲೇಖನಗಳಲ್ಲಿ ತೀ.ನಂ. ಶ್ರಿಕಂಠಯ್ಯ ಅವರು ಹೊಸ ಹಾಡುಗಳ ಮುಖ್ಯ ಬಂಧಗಳನ್ನು ಪರಿಶೀಳಿಸಿ ಅವುಗಳನ್ನು ಕನ್ನಡಿಗರಾದ ನಮ್ಮ ಅವಗಾಹನೆಗೆ ತಂದಿದ್ದರೆ. ಆ ದಾರಿಯಲ್ಲಿ ಒಂದಿನಿತು ಹೊಸದಾರಿ ತುಲಿದು, ಹೊಸ ಕವನಗಳಲ್ಲಿ ಸೇರಿದ ಛಂದೋಬಂಧಗಳ ವಿಬಜನೆ, ವಿಚಾರಣೆಗಳನ್ನು ಇಲ್ಲಿ ವಿಶದವಾಗಿ ಮಾಡಿದ್ದೇನೆ. ಈ ಹೊಸ ಬಂಧಗಳ ನೆಲೆಕಲೆಗಳನ್ನು ಹಳೆ ಮಟ್ಟುಗಳ ಬೆಳಕಿನಲ್ಲಿ ಎತ್ತಿ ತೋರಿಸಲಾಗಿದೆ.

ಭಾವ ಸೌಂದರ್ಯವನ್ನು ಕವಿಗಳು ನದಲಯ ಹಾಗೂ ನಾದಮಾಧುರ್ಯಗಳಿಂದ ಹೇಗೆ ಪ್ರದರ್ಶಿಸುವರೆಂಬುದರ ಕಡೆ 'ಚ್ಚಾಗಿ ಮನಸ್ಸು ಹಾಕಿ ಅ ರಿತಿ ವಿಷಯ ವಿವೇಚನೆ ಮಾಡಿದ್ದೇನೆ. ಇದುವೆ ನಾನಿಟ್ಟುಕೊಂಡ ಛಂದೋದೃಷ್ಟಿ. ಭಾವಾಭಿವ್ಯಕ್ತಿಯ ದೃಷ್ಟಿಯಿಂದ ಛಂದೋಬಂಧಗಳ ಬೆಲೆಗಳನ್ನು ಕಟ್ಟುವ ವಿಷಯದಲ್ಲಿ ಇಲ್ಲಿ ಮಾಡಿದ ಕಾರ್ಯ ಸ್ವತಂತ್ರ ಕಾರ್ಯ. ಯಾವ ಮಟ್ಟೇ ಆಗಲಿ, ಭಾವದ ಕಾವಿಗೆ ಒಳಗಾಗಿ ಕವಿಯ ಗುರಿಸಾಧನೆಗೆ ನೆರವಾಗುವುದೆಂಬ ಗ್ರಹಿಕೆಯು ನಾನು ಹಿಡಿದ ದಾರಿಯ ಉದ್ದಕ್ಕೂ ಜೊತೆಯಾಗಿ ಬಂದಿದೆ."

**ಸಂಪಾದಿತ ಕೃತಿಗಳು**

ಸೃಜನಶೀಲ, ವಿಮರ್ಶಕ, ಶಾಸ್ತ್ರಕಾರ ಆದಂತೆ ದುಂಡಪ್ಪ ಕರ್ಕಿಯವರು ಕೃತಿಗಳ ಸಂಪಾದಕರೂ ಆಗಿದ್ದಾರೆ. ಗೆಳೆಯರೊಡನೆ ಸೇರಿ ೧೯೪೪ರಲ್ಲಿ 'ತುಂಬಿ' ಎಂಬ ಕವನ ಸಂಕಲವನ್ನು ಸಂಪಾದಿಸಿದ್ದಾರೆ. ಕವಿ ಚನ್ನವೀರಕಣವಿಯರ ಜೊತೆ ಸೇರಿ

೧೯೬೧ರಲ್ಲಿ 'ನೈವೇದ್ಯ' ಎಂಬ ಸಂಭಾವನಾ ಗ್ರಂಥವನ್ನು ಅರ್ಪಿಸಿದ್ದಾರೆ. ಸಂ.ಶಿ. ಭೂಸನೂರಮಠ ಮತ್ತು ಪ್ರಭಾ ಕುಲಕರ್ಣಿ ಯವರ ಸಹಯೋಗದಲಿ ಶ್ರೀ ಜಗಜ್ಯೋತಿ ಬಸವಣ್ಣನವರ ಲೋಕಪ್ರಿಯ ವಚನಗಳನ್ನು ಸಂಪಾದಿಸಿಕೊಟ್ಟಿದ್ದಾರೆ. ತಾವೇ ಕ್ಷೇತ್ರ ಕಾರ್ಯ ನಡೆಸಿ ಜನಪದದಿಂದ ಶರೀಫರ ಆಧ್ಯಾತ್ಮ ಗೀತಗಳನ್ನು ಸಂಗ್ರಹಿಸಿ 'ಶರೀಫರ ಜನಪ್ರಿಯ ಪದಗಳು' ಎಂಬ ಶೀರ್ಷಿಕೆ ಯಲ್ಲಿ ಮೊದಲು ಪ್ರಕಟಿಸಿದರು. (೧೯೬೩ರಲ್ಲಿ) ಡಾ.ಕರ್ಕಿಯವರು. ಶಿಶುನಾಳ ಶರೀಫರ ಪದಗಳನ್ನು ಇಂದು ಕೇಳದವರಿಲ್ಲ. ಅಂತಹ ಜನಪ್ರಿಯತೆಗೆ ಕಾರಣರಾದವರು ಡಾ. ಕರ್ಕಿ. ಶಿಶುನಾಳ ಶರೀಫರನ್ನು ಸದಾ ಜೀವಂತವಿರಿಸಿದ ಪುಣ್ಯ ಕರ್ಕಿಯವ ರದು. ಕೇವಲ ಶಿಶುನಾಳರ ರಚನೆಗಳನ್ನು ಒಂದೆಡೆ ಕಲೆಹಾಕುವ ಕೆಲಸವನ್ನಷ್ಟೇ ಇವರು ಮಾಡಿಲ್ಲ, ಪ್ರತಿಯೊಂದು ಪದಕ್ಕೂ ಅದರ ಎದುರು ಪುಟದಲ್ಲಿ ಉಪಯುಕ್ತ ವ್ಯಾಖ್ಯಾನ ನೀಡಿದ್ದಾರೆ. ಶರೀಫರ ಆಧ್ಯಾತ್ಮ ಹಾಗೂ ಅವರ ತಾತ್ವಿಕ ನಿಲುವನ್ನು ಅರಿ ಯಲು ಕರ್ಕಿಯವರ ವ್ಯಾಖ್ಯೆ ತುಂಬಾ ಸಹಕಾರಿ.

ಪ್ರಸ್ತುದಲ್ಲಿ ಒಂದೆರಡನ್ನೂ ಅವಲೋಕಿಸಬಹುದು :

| **ಬೋಧ ಒಂದೇ** | **ಬೋಧ ಒಂದೇ** |
|---|---|
| ಬೋಧ ಒಂದೇ<br>ಬ್ರಹ್ಮನಾದ ಒಂದೇ ॥ ಪ ॥<br><br>ಸಾಧನ ಮಾಡುವ ಹಾದಿ ಒಂದೇ<br>ಆದಿ ಪದ ಒಂದೇ ॥ ಅನು ಪಲ್ಲ ॥ | ಶ್ರೀ ಶರೀಫರ ಕಿರುಪದಗಳಲ್ಲಿ ಇದು ಒಂದು. ಆದರೆ ಇದರಲ್ಲಿ ಒಂದು ಹಿರಿಯ ಅರ್ಥಭಾವ ಪೂರ್ಣವಾಗಿ ಬಂದಿದೆ. ಆಧ್ಯಾತ್ಮದ ನಾದ ಬಿಂದು–ಕಳೆ ಇವು ಇಲ್ಲಿ ಸುಳುವು ತೋರಿವೆ ನಾದ ಸುಖ, ಬಿಂದುವಿನ ಆನಂದ, ಕಳೆಯ ಕಳೆ–ಇವುಗಳನ್ನು ಈ ಹಾಡು ಒಳಗೊಂಡಿದೆ. ಶರೀಫರು ಎದೆ ತುಂಬಿ ಹಾಡಿದ |
| | ೨೧೩ |
| | ಪದವಿದು |
| ೧ | "ಬೋಧ ಒಂದೇ ಬ್ರಹ್ಮನಾದ ಒಂದೇ" |
| 'ಬಿಂದು ಒಂದೇ ನಿಜಾನಂದ ಒಂದೇ ತಂದೆ<br>ಸದ್ಗುರು ಗೋವಿಂದಗೆ ಒಂದೇ ಅಂದಿಗಿಂದಿಗೊಂದೇ | ಎಂಬ ಪ್ರಾರಂಭವಾದ ಚರಣ ಮನವನ್ನು ಸೂರೆಗೊಳ್ಳುವಂತೆ ಮಾಡಿದೆ. ವಿಶಾಲದೃಷ್ಟಿ ಉದಾರ ಹೃದಯ, ಮಧುರನಾದ – ಇವುಗಳ ಸಮ್ಮಿಲನ ಈ ಪದದ ವೈಶಿಷ್ಟ್ಯ. ನಾದಪೂರ್ಣವಾದ, ಆನಂದಪೂರ್ಣವಾದ ಬೋಧ ಇಲ್ಲಿದೆ. ಇದರ ರಾಗ ಸೊಗಸಾದುದು. |
| ೨<br>ದೋಷ ಒಂದೇ ನಿರ್ ದೋಷ ಒಂದೇ<br>ಒಂದೇ ಭಾವನಾಶ | ಎಲ್ಲ ತತ್ವಗಳ ಮೂಲ ಒಂದೇ ಎಂಬ ವಿಶಾಲ ತತ್ವವನ್ನು ಈ ಹಾಡು ಎತ್ತಿ ಹಿಡಿದಿದೆ. ಅಂತರಂಗದ ಅನುಭವ ಇಲ್ಲಿ ಪದವಾಗಿ ಹೊಮ್ಮಿದೆ ಎಂದು ಹೇಳಬಹುದು<br>ಪ್ರತಿಚರಣದ ಕೊನೆಯಲ್ಲಿ ಬರುವ 'ಒಂದೇ' ಎಂಬ ಶಬ್ದ ನಮ್ಮ ಮನದ ಮಂದಿರದಲ್ಲಿ ಪ್ರತಿಧ್ವನಿಗೊಳ್ಳುವಂತೆ ಅನುಭವವಾಗುತ್ತದೆ. ಈ ಪದದ ಪ್ರಾಸ ನಿಜವಾಗಿಯೂ ಪರಿಣಾಮಕಾರಕವಾದುದು. |
| **ಬಿದ್ದಿಯಬ್ಬೇ ಮುದುಕಿ** | **ಬಿದ್ದಿಯಬ್ಬೇ ಮುದುಕಿ** |
| ಬಿದ್ದಿಯಬ್ಬೇ ಮುದುಕಿ<br>ನೀ ದಿನ ಹೋದಾಕಿ, ಬಲುಜೋಕಿ<br>ಬಿದ್ದಿಯಬ್ಬೇ ಮುದುಕಿ ॥ಪಲ್ಲ॥ | ಜೀವವನ್ನು ಸಂಬೋಧಿಸಿ ಹಾಡಿದ ಪದವಿದು, ಇಲ್ಲಿ ಜೀವವೇ ಮುದುಕಿ, ಜೀವ ಯುಗ ಯುಗಗಳಲ್ಲಿ ಹಾದು ಬಂದಿದೆ, ಹಳೆಯದಾಗಿದೆ ಆದುದರಿಂದಲೇ ಅದನ್ನು ಮುದುಕಿಗೆ ಹೋಲಿಸಲಾಗಿದೆ |
| ೧ ಹಲಗೂರು ಸಂತೆಯಲಿ | ಕವಿ ಕಂಡ ನೋಟ ಈ ಪದ್ಯಕ್ಕೆ ವಿಷ |
| ಸದ್ಯಕಿದು ಹುಲುಗರ ಸಂತಿ<br>ಗದ್ದಲದೊಳಗ ಯಾಕ ನಿಂತಿ | ಯವನ್ನು ಒದಗಿಸಿರಬೇಕೆಂದು ತಿಳಿಯಲು ಪದದಲ್ಲಿಯೇ ಆಧಾರವಿದೆ ಈ ನೋಟವನ್ನು ಶರೀಫರು ಇಲ್ಲಿ ಮೋಜಿನಿಂದ ರೂಪ |

ಬಿದ್ದು ಒದ್ದಾಡಿದರ ಎಬ್ಬಿಸುವರಿಲ್ಲಾ
ಬುದ್ಧಿಗೇಡಿ ಮುದುಕಿ ನೀನು
ಬಿದ್ದೀಯಬೇ ಮುದುಕಿ

ಬುಟ್ಟಿಯೊಳು ಪಟ್ಟೆವನಿಟ್ಟೆ
ಉಟ್ಟಿರ ದನ ಚೀಲ ಜೋಶಿ
ಕೆಟ್ಟಿ ಗಂಟಿ ಚೌಡರ ಬಂದು
ಕತ್ತರಿಸಿಕೊಂಡು ಹೋದಾರ ಮುದುಕಿ
ಬಿದ್ದೀಯಬೇ ಮುದುಕಿ

ಶೀಶುನಾಳಧೀಶನ ಮುಂದೆ
ಕೊಸರಿಕೊಸರಿ ಹೋಗದಿರು
ಹಸನವಿಲ್ಲ ಹರೆಯವು ಮೀರಿದ
ಪಿಸುಕು ಪಿಚ್ಚುಗಣ್ಣಿನ ಮುದುಕೀ
ಬಿದ್ದೀಯಬೇ ಮುದುಕಿ

ಕಕ್ಕೆ ತಿರುಗಿಸಿದ್ದಾರೆ.

೨೧೪

೨ ಶರೀಘರ ಚಿತ್ರ ಶೈಲಿಗೆ ಈ ಪದ ಉದಾಹರಣೆಯಾಗಿದೆ. ಎರಡನೆಯ ಮತ್ತು ಮೂರನೆಯ ಪದ್ಯಗಳು ಶಬ್ದ ಚಿತ್ರ ಗಳಾಗಿವೆ

೩ ಜನಪದದ ನಿಚ್ಚಳವಾದ ನುಡಿಯ ಬೆಡಗನ್ನು ಇಲ್ಲಿ ಕಾಣ ಬಹುದು. ಈ ನುಡಿಯ ಬೆಡಗಿಗೆ ಪದ್ಯದ ಪ್ರಾಸ ತನ್ನದೇ ಆದ ಕಾಣಿಕೆಯನ್ನು ನೀಡಿದೆ. ಹಾಡಿನ ದಾಟಿಯಲ್ಲಿ ಒಂದು ಮೋಡಿ ಇದೇ ಇನ್ನೇನು ಬೇಕು ?

**ಕೋಡಗನ ಕೋಳಿ ನುಂಗಿತು**

ಕೋಡಗನ ಕೋಳಿ  ನುಂಗಿತು
ನೋಡವ್ವಾ ತಂಗಿ ॥ಪಲ್ಲ॥

೧
ಆಡು ಆನೆಯ ನುಂಗಿ
ಗೋಡೆ ಸುಣ್ಣವ ನುಂಗಿ
ಆಡಲು ಬಂದ ಪಾತಾರದವಳ
ಮುದ್ದಿ ನುಂಗಿತು

೨
ಒಳ್ಳು ಒನಕೆಯ ನುಂಗಿ
ಬೀಸುಕಲ್ಲು ಗೂಟವ ನುಂಗಿ
ಕುಟ್ಟಲಿಕೆ ಬಂದ ಮುದುಕಿಯನ್ನೆ
ನೊಣವು ನುಂಗಿತು

೩
ಹಗ್ಗ ಮಗ್ಗವ ನುಂಗಿ
ಮಗ್ಗವ ಲಾಳ ನುಂಗಿ
ಮಗ್ಗದಾಗಿರುವ ಅಣ್ಣನ ಕುಣಿಯು
ನುಂಗಿತು

**ಕೋಡಗನ ಕೋಳಿ ನುಂಗಿತು**

ಇದು ಒಂದು ಬೆಡಗಿನ ಹಾಡು, ಬೆರಗನ್ನುಂಟು ಮಾಡುವ ಹಾಡು, 'ಕೋಡಗನ ಕೋಳಿ ನುಗಿತು' ಎಂದು ಆರಂಭ ವಾಗುತ್ತದೆ. ಕೋಡಗನನ್ನು ಕೋಳಿ ನುಂಗುವುದೆಂತು ? ಇದರಲ್ಲಿ ಏನೋ ಒಂದು ಗೂಢವಿರಬೇಕೆಂದು ಅನ್ನಿಸುತ್ತದೆ. ಇದೇ ಬೆರಗು 'ಆಡು ಆನೆಯ ನುಂಗಿತು' ಎಂದು ಮುಂ ದುವರಿದು ಕ್ರಮವಾಗಿ ಬೆಡಗಿನ ಒಂದು ಮಾಲೆಯೇ ಆಗು ತ್ತದೆ. ಈ ಮೋಜನ್ನು ಪದ ಹಾಡಿಯೇ ನೋಡಬೇಕು. ಕೊನೆಯಲ್ಲಿ 'ಅಂಗನನ್ನು ಆತ್ಮ ನುಂಗಿತು' ಎಂಬ ಚರಣ ದಲ್ಲಿ ಈ ಪದದ ತಿರುಳು ಅರಳಿದೆ.

೨೧೫

ಈ ಪದದ ಧಾಟಿಯಲ್ಲಿ ಓಟ ಇದೆ. ಈ ಓಟ ವಿಷಯಕ್ಕೆ ಅನುಕೂಲವಾಗಿ ಪ್ರಾಸ ಸಹಜವಾಗಿ ಸೂಸಿ ಬಂದಿದೆ. ಆದಿ ಪ್ರಾಸ ಅಷ್ಟು ನಿಯವಾಗಿಲ್ಲ. ಆದರೆ ಅನುಪ್ರಾಸದಿಂದ ಈ ಹಾಡಿಗೆ ಒಂದು ಹೆಚ್ಚಿನ ಅಂದ ಒದಗಿದೆ.

ಎತ್ತು ಜತ್ತಿಗಿ ನುಂಗಿ
ಬತ್ತ ಬಾನವ ನುಂಗಿ
ಮುಕ್ಕಟ ತಿರುವೊ ಅಣ್ಣನ
ಮೇಳಿ ನುಂಗಿತು

೪ ಬೆರಗಿನೊಡನೆ ಈ ಹಾಡು ನಮ್ಮ ಮುಖದಲ್ಲಿ ಮೆಲು ನಗೆ (ನಗೆ ಇರಬೇಕು)ಯನ್ನು ಮೂಡಿಸದಿರದು. ಅಂತೂ ಇಲ್ಲಿ ಶರೀಫರು ಬೆರಗಿನ ಒಂದು ಬಲೆಯನ್ನೇ ನೆಯ್ದಿದ್ದಾರೆ. ಹಾಡಿನ ಉದ್ದಕ್ಕೂ ಹಾಸ್ಯ ಸುಳಿದು ಬಂದಿದೆ. 'ಕುಟ್ಟಲು ಬಂದ ಮುದಕೀಯ ನೊಣವು ನುಂಗಿತ್ತು ಎಂದಾಗ ನಗದೆ ಇರುವುದು ಹೇಗೆ !

ಗುಡ್ಡ ಗಂವಹರ ನುಂಗಿ
ಗವ್ವರ ಇರಿವೆ ನುಂಗಿ

೫ ಶರೀಫರ ಗುರುವಿನ ಹೆಸರು ಹಾಡಿನ ಕೊನೆಯಲ್ಲಿ ಬಂದಿದೆ. ಆದರೆ ಶಿಶುನಾಳಧೀಶ ಎಂಬ ಅಂಕಿತ ಅದೇಕೋ ಇಲ್ಲಿ ಬಂದಿಲ್ಲ. ಗುರುಗೋವಿಂದ ಪಾದ ಆತ್ಮ ನುಂಗಿತು

**ಇತರ ಕೃತಿಗಳು**

ಕವಿ, ಛಂದಶಾಸ್ತ್ರಜ್ಞ, ಮಕ್ಕಳ ಶೀಕ್ಷಣ ತಜ್ಞ, ಸಂಪಾದಕ, ವ್ಯಾಖ್ಯಾನಕಾರ ಏನೆಲ್ಲ ಆಗಿರುವ ಕರ್ಕಿಯವರು ಉತ್ತಮ ಭಾಷಾಂತರಕಾರರೂ ಆಗಿದ್ದಾರೆ. ಇದಕ್ಕೆ ಅವರ 'ಲಕ್ಷ್ಮೀನಾಥ ಬೇಜ್ ಬರುವಾ' ಸಾಕ್ಷಿಯಾಗಿ ನಿಂತಿದೆ. ಅವರ ಹತ್ತಾರು ಸಂಶೋಧನ ಲೇಖನಗಳು, ವಿಚಾರಪೂರ್ಣ ಪ್ರಬಂಧಗಳು ಒಂದೆಡೆ ಸೇರಿ ಪ್ರಕಟವಾಗಬೇಕಾಗಿದೆ. ಕನ್ನಡ ಛಂದೋವಿಕಾಸದ

೨೧೬

ನಾಲ್ಕನೆಯ ಆವೃತ್ತಿಯ ರಕ್ಷಾಕವಚದ ಹಿಂಬದಿಯಲ್ಲಿ ಕೆಲವನ್ನು ಹೆಸರಿಸಿದ್ದಾರೆ. ಅವುಗಳಲ್ಲಿ 'ಕರಿಕೆ–ಕಣಗಿಲು' ಎಂಬುದಾಗಿ ನಾಮಾಂತರಗೊಂಡು ಪ್ರಕಟವಾದ 'ರಾಗ–ಪರಾಗ' ಕುರಿತು ಹಿಂದೆಯೇ ಹೇಳಿ ಆಗಿದೆ.

ಆದರೆ ಅವರ ಮತ್ತೊಂದು ಸಾಹಿತ್ಯ ಪ್ರಕಾರವಾದ 'ಪದ್ಮಪಾಣಿ' ಎಂಬ ಗೀತ ರೂಪಕ ಬೆಳಕು ಕಾಣಬೇಕಾಗಿದೆ. ಅಂತೆಯೇ 'ಕನ್ನಡ ಕಾವ್ಯಗಳಲ್ಲಿ ಶಬ್ದ ಚಿತ್ರಗಳು' ಎಂಬುದಂತೂ ಅವರ ಭಾವಗರ್ಭದಿಂದ ಹೊರಬರಲೇ ಇಲ್ಲ. ಬರೆಯದಿರುವುದರ ಗೊಡವೆ ಬೇಡ ಬರದದನ್ನಾದರೂ ಹೊರತರುವ ಪ್ರಯತ್ನ ಆಗಬೇಕಾಗಿದೆ.

**ಪುಷ್ಪಾಂಜಲಿ**

ಇದು ಸುಮಾರು ಇಪ್ಪತ್ತೈದು ವರ್ಷಗಳ ಹಿಂದೆ ನಡೆದ ಪ್ರಸಂಗ.

ದಾವಣಗೆರೆಯಲ್ಲಿರುವ ರಾಜನಹಳ್ಳಿ ಹನುಮಂತಪ್ಪನವರ ಧರ್ಮಶಾಲೆಯ ಆವರಣದ 'ಸುಂದರ ರಾಗಮಂಟಪದಲ್ಲಿ' ಧ.ರಾ.ಮ. ಕಾಲೇಜಿನ ವಿದ್ಯಾರ್ಥಿ ಸಂಘದ ಒಂದು ಕಾರ್ಯಕ್ರಮ. ಅಂದಿನ ಸಭಾಧ್ಯಕ್ಷರು ಡಾ.ಡಿ.ಎಸ್. ಕರ್ಕಿಯವರು, ಮುಖ್ಯ ಅತಿಥಿ ಚನ್ನವೀರಕಣವಿಯವರು. ಅತಿಥಿಗಳ ಭಾಷಣ ಆದಮೇಲೆ ಅಧ್ಯಕ್ಷರಾಡಿದ ನುಡಿ ಹೀಗಿತ್ತು.

'ಮಿತ್ರರೆ, ನಾನು ಕರಿಕೆ. ಇವರು ಕಣವಿ ಅಂದರೆ ನಿಮ್ಮ ಕಡೆ ಕರೆಯುವ ಕಣಿವೆ. ಈ ಕರಿಕೆಗೆ ವಯಸ್ಸಾಗಿದೆ. ಆದರೂ ಅದಕ್ಕೆ ಈ ಕಣಿವೆ ಬಿಟ್ಟು ಬದುಕೊ ಹಾಂಗಿಲ್ಲ. ಈ ಕಣವೀ ಒಳಗಿನ ಕರಿಕಿ ಗುರುತಿಸಿದ್ದೀರಿ. ಕರಿಕಿ ಧನ್ಯ 'ಕೆಳನುಡಿ'ಯಲ್ಲಿ ಕಣವಿ ಈ ರೀತಿಯಲ್ಲಿ ನುಡಿದಿದ್ದಾರೆ.

**ತೀರ ಎತ್ತರವಿರದ ದೇವಗಣಗಿಲ ಗಿಡದ**
**ಸುತ್ತು ನೀರುಂಡು ನಳನಳಿಸಿರುವ ಹಸಲೆ ; ಎಳೆ–**
**ವಿಸಿಲ ಮಂದು ಸಂತೃಪ್ತಿ ಸುಳಿಗಾಳಿಯಲಿ ತಲೆ**
**ಯೊಲೆದು ಮಾಸದ ಹಸುಗೂಸಿನಂತೆ ನಸುನಗುತ**
**ಕೊಂಬೆ ತುತ್ತುದಿಗೆ ಹಳದಿ ಬಿಳಿ ಮಧುರ ಪಾಕದಿ**
**ಹೂವಿನರಾಶಿಯ ಬಾನಿಗೆ ಹಿಡಿದು, ನಿರುಮ್ಮಳ**
**ನಿಂತ ರಸಿಕ ; ಎಲ್ಲರಿಗೂ ನಿಲುಕುವ ಹಾಗೆ ಒಳ**
**ಹೊರಗೆ ತುಂತುಂಬಿ ಬರುವ ನಾದದ ತುಳುಕು, ಹದಿ–**
**ನೆಂಟು ಒಣ ಉಸಾಬರಿ ಇರದ ಮಾತು ; ಮೈತ್ರಿಯ**
**ನಂಟು, ಗೆಂಟು ಗೆಂಟಿಗೆ ಒಡೆದ ನಾಲ್ಕಾರು ಎಳೆ–**

**ಚಿಗುರು, ನಿರಾಡಂಬರ ಟೊಂಗೆ, ಹೊಂಗೆಯ ಹಾಗೆ**
**ಹೂಂ ಎಂದು ಹೂಸುರಿದು ನೆಲವ ಮುಚ್ಚುವದಿಲ್ಲ**
**ಕೆಳಗೆ ಕರಿಕಿ ಪತ್ರಿಯ ಮೇಲೆ ಉದುರಿದ ಹೂವ**
**ಬೆರಳಿಂದೆತ್ತಿ ಮೂಸು ; ಬೇಕಿಲ್ಲ ಹಾವ ಭಾವ.**

ಇಂತಹ ಧನ್ಯತೆಗೆ ಪಾತ್ರಾದ ದುಂಡಪ್ಪ ಕರ್ಕಿ ಸೌಜನ್ಯದ ಸಾಕಾರಮೂರ್ತಿ. ಅವರದು ಹೆಂಗರುಳು. ವಾತ್ಸಲ್ಯಭರಿತ ಹೃದಯ, ಶುಚಿ ಜೀವನ ನಡೆಸಿದ ಆ ಮಹಾಚೇತನಕ್ಕೆ ನಮಸ್ಕಾರ.

೨೧೭

## ಕೃತಜ್ಞತೆ

ಈ ಲೇಖನವನ್ನು ಸಿದ್ಧಪಡಿಸುವಲ್ಲಿ ಕರ್ಕಿಯವರೊಡನೆ ಇಟ್ಟುಕೊಂಡಿದ್ದ ಸಂಪರ್ಕ, ಸಂಭಾಷಣೆಗಳ ಜೊತೆಗೆ ಶ್ರೀ ಎಂ.ಎಸ್.ವಿ. ಪಂಡಿತಾರಾಧ್ಯರು ಪ್ರಬುದ್ಧ ಕರ್ನಾಟಕ ಸಂಪುಟ ೬೬ ಸಂಚಿಕೆ ೧೨ ಸಿದ್ಧಪಡಿಸಿದ 'ಡಿ.ಎಸ್.ಕರ್ಕಿ' ಲೇಖನದ ನೆರವು ಪಡೆದಿದ್ದೇನೆ.

# ವೀರಣ್ಣ ಅಲ್ಲ ಧೀರಣ್ಣ*

==========================================================================

ಬಳ್ಳಾರಿಯಲ್ಲಿ ಅದ್ದೂರಿ ಸಾಹಿತ್ಯ ಸಮ್ಮೇಳನ. ಡಾ.ವಿ.ಕೃ. ಗೋಕಾಕ್ ಸಮ್ಮೇಳನಾಧ್ಯಕ್ಷರು. ಮೈಸೂರು ಸಂಸ್ಥಾನದ ಮಹಾ ಪ್ರಭು ಶ್ರೀ ಜಯಚಾಮರಾಜೇಂದ್ರ ಒಡೆಯರ್‌ರವರು ಉದ್ಘಾಟಕರು. ಎಲ್ಲ ಕಾರ್ಯಕ್ರಮಗಳೂ ಅಂದಿನ ಪರಿಷತ್ ಅಧ್ಯಕ್ಷರಾಗಿದ್ದ ಬಿ. ಶಿವಮೂರ್ತಿ ಶಾಸ್ತ್ರಿಯವರ ನಾಯಕತ್ವದಲ್ಲಿ ಯಶಸ್ವಿಯಾಗಿ ನಡೆದವು. ಮೂರು ದಿನಗಳ ಸಮ್ಮೇಳನದಲ್ಲಿ ಕನ್ನಡ ರಂಗ ಭೂಮಿ ಕುರಿತು ವಿಚಾರ ಗೋಷ್ಠಿ. ಗುಬ್ಬಿ ವೀರಣ್ಣನವರಿಂದ ಉದ್ಘಾಟನೆ. ಉದ್ಘಾಟಕರು ಅಂದಿನ ಇಂದಿನ ರಂಗಭೂಮಿಯ ಸ್ಥಿತಿ ಗತಿ ಕುರಿತು ಹೇಳಿದರು –

'ನನಗೆ ಓದು ಹತ್ತಲಿಲ್ಲ. ಎಂಟು ವರ್ಷಕ್ಕೆ ನನ್ನ ಮಗು ದಂಟು ಅನ್ನೋ ಹಾಗೆ ನಾನು ನನ್ನ ಎಂಟನೇ ವರ್ಷಕ್ಕೆ 'ವೀರಣ್ಣ' ಅನ್ನೋ ಹೆಸರು ಬರೆಯುವಷ್ಟು ಕಲಿತೆ. ಆಮೇಲೆ ಇದು ನನಗೆ ಹೇಳಿಸಿದ್ದಲ್ಲಾ ಅಂದುಕೊಂಡು ಶಾಲೆ ಬಿಟ್ಟು ಚಂದ್ರಣ್ಣ ನವರ ಕಂಪನಿಗೆ ಸೇರಿದೆ. ಚಂದ್ರಣ್ಣನವರು ನಮ್ಮೂರವರೇ. ಗುಬ್ಬಿಯವರೇ, ಅವರು ಜೈನರು. ತುಂಬ ಒಳ್ಳೆಯವರು, ಕಲಾವಿ ದರೂ ಹೌದು. ಅವರ ನಾಟಕದ ಕಂಪನಿ ಗುಬ್ಬಿಯಲ್ಲಿ ಆರಂಭ ಆಗಿತ್ತು. ಎಂಟು ವರ್ಷದ ಹುಡುಗನಾದ ನಾನು ಆ ಕಂಪನಿಗೆ ಸೇರಿದೆ. ನಟನಾಗಿ ಅಲ್ಲ, ಪ್ರಚಾರಕ ಆಗಿ. ತಗಡಿನಲ್ಲಿ ಮಾಡಿದ ಹಾರನ್ ಹಿಡಕೊಂಡು ಪೇಟೆ ಬೀದಿಗಳಲ್ಲಿ ದಿನಕ್ಕೆ ಮೂರು ಸಾರಿ 'ಕಲಾಭಿಮಾನಿಗಳೇ, ಕಲೋಪಾಸಕರೇ, ಬನ್ನಿ, ಬನ್ನಿ, ಈ ದಿನ ರಾತ್ರಿ ೧೦ಘಂಟೆಗೆ ಸರಿಯಾಗಿ ಗುಬ್ಬಿ ಶ್ರೀ ಚನ್ನಬಸವೇ ಶ್ವರ ಸ್ವಾಮಿ ಕೃಪಾಪೋಷಿತ ನಾಟಕ ಮಂಡಲಿಯವರು ಅಭಿನಯಿಸಲಿರುವ ಭಕ್ತಿರಸ ಪ್ರಧಾನ ಪೌರಾಣಿಕ ನಾಟಕ 'ಸಂಪೂರ್ಣ

ರಾಮಾಯಣ' ! ಬಂದು ನೋಡಿ ಆನಂದ ಪಡಿ. ಹೊಸ ಡ್ರೆಸ್ಸು ಹೊಸ ಸೀನರಿ ಮರೆತು ಮಲಗದಿರಿ, ಮಲಗಿ ನೋಯದಿರಿ ! ಈ ಊರಲ್ಲಿ ಇನ್ನು ಕೆಲವೇ ಪ್ರದರ್ಶನಗಳು – ಹೀಗೆ ಕೂಗೋ ಕೆಲಸ ನನ್ನದು. ಅದೇ ಮಾಡಿಕೊಂಡಿದ್ದೆ. ಆಮೇಲೆ ಸಣ್ಣ ಪುಟ್ಟ ಪಾತ್ರಗಳು. ಹೆಚ್ಚಾಗಿ ಹೆಣ್ಣು ಪಾತ್ರ ನನಗೆ ಸಿಕ್ಕಿತ್ತು. ದೊಡ್ಡವನಾದ ಮೇಲೆ ಆ ಕಂಪನೀನ ನಾನೇ ಕೊಂಡೆ. ಆಗ ತುಂಬ ಕಷ್ಟ ಇತ್ತು ಕಂಪನಿ ನಡೆಸೋದು. ಈಗಿನ ಹಾಗೆ ರೆಡಿಮೇಡ್ ಬಣ್ಣ ಇಲ್ಲ. ಕ್ರೇಪ್ ಹೇರ್ ಇಲ್ಲ, ಎಲೆಕ್ಟ್ರಿಕ್ ದೀಪ ಇಲ್ಲ, ಫರದೆ ಸೆಟ್ಟಿಂಗ್ಸ್ ಯಾವುದೂ ಇಲ್ಲ. ಇದ್ದದ್ದೇ ಒಂದು ಬಣ್ಣದ ಬಟ್ಟೆ. ಅದೇ ಪರದೆ ! ಅದರ ಅಕ್ಕ ಪಕ್ಕ ಮತ್ತೆ ಮೇಲೆ ಮೂರು ಹಳೇ ಸೀರೆಗಳು. ಅವೇ ಸೈಡ್‌ವಿಂಗ್ಸ್. ಆ ಕಾಲದಲ್ಲಿ 'ರಾಳ' ಅಂತ ಸಿಗ್ತಾ ಇತ್ತು. ಫಳಿ ಕೆಂಪು ಬಣ್ಣ – ಅದನ್ನು ಮುಖದ ತುಂಬ ಬಳಿದು ಕೊಳ್ತಾ ಇದ್ದು, ಮೀಸೆಗೆ ಹಿಮದಿನ ಫರದೆ ಹಿಂದಿನ ಅಡುಗೆ ಮನೆ ಒಲೇಲಿರೋ ಇದ್ದಲು. ಅದನ್ನು ಕಲ್ಲಿನ ಮೇಲೆ ತಿಕ್ಕಿ ನೀರು ಹಾಕಿ ಹಚ್ಚಿಕೊಳುಳುತ್ತದ್ದೆವು. ರಾವಣ ಭೀಮ ಇಂಥ ಪಾತ್ರದವರಿಗೆ ಕುರಿ ತುಪ್ಪಟ ತಂದು ಸೈಕಲ್ ಟ್ಯೂಬ್‌ಗಳಿಗೆ ಪಂಕ್ಚರ್ ಹಾಕುವಾಗಬಳಸೋ ಸಲ್ಯೂಷನ್ ಹಚ್ಚಿ ಅಂಟಿಸೋದು. ಪಾಲ್ಟು ಜೋರಾಗಿ ಕಾಣೋದು. ಆದರೆ ಬಣ್ಣ ಕೆಡಿಸಿಕೊಳ್ಳು ವಾಗ ಅವನ ಪಾಡು ಬ್ಯಾಡ ! ಮೀಸೆ ಕೀಳಬೇಕು, ಅವನು ಬಾಯಿ ಬಡಕೋ ಬೇಕು. ಆಮೇಲೆ ಥಿಯೇಟರ್ ಅಂದರೆ ಒಂದು ತೆಂಗಿನ ಗರಿ ಚಪ್ಪರ. ಸುತ್ತ ಕುರಿ ರೊಪ್ಪದ ತಡಿಕೆಗಳು. ಚಾಪೆ ಕುರ್ಚಿ ಯಾವುದೂ ಇಲ್ಲ. ಯಾವ ಊರಿನಲ್ಲಿ ಕ್ಯಾಂಪ್ ಮಾಡ್ತೇವೋ ಆ ಊರಿನ ಅಮಲ್ದಾರರ ಹತ್ತಿರ ಮೊದಲು ಹೋಗೋದು. ಸಲಾಮ್ ಹೊಡೆದು, 'ಸ್ವಾಮಿ ಇವೊತ್ತು ನಾಟಕ. ತಮ್ಮ ಅಮೃತ ಹಸ್ತದಿಂದ ಆರಂಭ ಆಗಬೇಕು. ತಾವು ದಯಮಾಡಿಸಬೇಕು ಅನ್ನೋದು. ಅವರ 'ಹುಂ ಆಗಲಿ' ಅಂತಾ ಅಪ್ಪಣೆ ಕೊಡಿಸಿದ ಮೇಲೆ 'ಹಾಗೇ. . .' ಏನು ?' 'ಏನಿಲ್ಲ ಒಂದು ಕುರ್ಚಿ. . .!'

'ಆಗಲಿ, ಆಮೇಲೆ' 'ಆಮೇಲೆ ಅಮ್ಮಾವ್ರು ದಯಮಾಡಿಸಬೇಕು' 'ಹೂಂ, ಆಮೇಲೆ 'ಏನಿಲ್ಲ ಅಮ್ಮಾವ್ರು ಜೊತೆನಲ್ಲಿ ಒಂದು ಚಾಪೆ ! 'ಆಗಲಿ'

ನಮ್ಮ ನಮ್ಮ ಪಾಲ್ಟುಗಳಿಗೆ ನಮ್ಮದೇ ವೇಷ. ಡ್ರೆಸ್ಸ್ ಗಿಸ್ಸ್ ಯಾವುದೂ ಇಲ್ಲ. ಹಳೇ ಸೀರೇನೆ ರಾಜನ ಕರೀಟ. ನಿತ್ಯ

---

ಡಾ. ಗುಬ್ಬಿವೀರಣ್ಣನವರ ಮತ್ತು ಜಯಮ್ಮನವರ ಮತ್ತು ನನ್ನ ಅನೇಕ ವರ್ಷಗಳ ಒಡನಾಟದಿಂದ ಹೊರ ಹೊಮ್ಮಿದ್ದು ೧೯೯೧ ಅವರ ಶತಾಬ್ಧಿ ವರ್ಷ. ಆ ಸಂದರ್ಭದಲ್ಲಿ ಯವನಿಕಾದಲ್ಲಿ ಮಾತನಾಡಿದ್ದು.

೨೧೯

ಉಡೋ ಹಳೇ ಪಂಚೆ ರಾಜನ ಪಟ್ಟೆ ಪೀತಾಂಬರ, ಫರದೆ ಹಿಂಬಾಗವೆ ಕಂಪನಿ ಮನೆ. ಅಲ್ಲೇ ಊಟ ಅಲ್ಲೇ ನಿದ್ದೆ. ಆ ಕಾಲ ದಲ್ಲಿ ಸ್ತ್ರೀ ಪಾತ್ರಾನ ಪುರುಷರೇ ಮಾಡಬೇಕಿತ್ತು. ಹೆಂಗಸರು ಯಾರೂ ಬರ್ತಿಲಿಲ್ಲ. ತಮಾಷೆ ಅಂದರೆ ಸೀತೆ ಪಾತ್ರದವನ ತಲೆ ಅರ್ದ ಬೋಳು, ಹಿಂದೆ ಜುಟ್ಟು, ಅವನ ಖಾಲಿ ಬುರುಡೆ ಕಾಣದೆ ಇರಲಿ ಅಂತಾ ಚೌಲಿಗಳನ್ನು ಹಾಕುತ್ತಿದ್ದೆವು. ಸ್ಟೇಜಿನ ಮುಂದೆ ಆ ಕಡೆ ಈ ಕಡೆ ಎರಡು ದೊಡ್ಡ ದೊಂದೆಗಳನ್ನು ಹಚ್ಚಿರೇವು. ಅವು ಧಗ ಧಗ ಉರೀತಿರಬೇಕು. ಅದೇ ಬೆಳಕು. ಆ ಬೆಳಕಿಗೆ ಹುಳ ಬರೋವು. ಬಂದು ಸೀತೆ ಪಾಲ್ಟಿನ ತಲೆ ಒಳಗೆ ಬುಳ ಬುಳ ಮಾಡೋವು. ಅವನು ರಾಮನ ಜತೇಲಿ ಮಾತಡ್ತಾ ಮಾತಡ್ತಾ ತಲೆ ತುರಿಸಿಕೊಳ್ಳೋನು. ಗೊತ್ತಾಗ್ದೆ ಮುಂದಿನ ಚೌಲಿ ಜರಿ ಬೀಳೊದು. ಖಾಲಿ ಬುರುಡೆ ಕಂಡು ಜನ ಗಳೆಲ್ಲ ಗೊಳ್ ಅಂತಾ ಬಿದ್ದು ಬಿದ್ದು ನಗೋರು.

ಆಗಿನ ಕಾಲದ ನಾಟಕಗಳೆಲ್ಲಾ ಪೌರಾಣಿಕ. ಮಾತೆತ್ತಿದರೆ ಮಟ್ಟು. ಅಂದರೆ ಹಾಡುಗಳು. ದೇವೇಂದ್ರನ ಸಭೆ ಆರಂಭದಲ್ಲಿ ಇಂದ್ರ ಒಂದು ಹಾಡು ಹೇಳಿ 'ಮಂತ್ರಿ ನಮ್ಮ ರಾಜ್ಯದ ಸ್ಥಿತಿ ಹೇಗಿರುವುದು ?' ಅಂದರೆ ಸಾಕು, ಮಂತ್ರಿ ಎದ್ದು ನಿಂತು ಒಂದು ಹಾಡು ಹೇಳಿ 'ಹೀಗಿರುವುದು ಮಹಾಪ್ರಭು' ಅನ್ನೋನು. ಆಮೇಲೆ 'ಸೇನಾಪತಿ ನಮ್ಮ ಸೇನೆ ಹೇಗಿರುವುದು' ಅಂದರೆ ಕೂಡಲೇ, ಎದ್ದು ನಿಂತ ಸೇನಾಪತಿ ದಡಬಡ ಅಂತಾ ಹಾಡಿ 'ಹೀಗಿರುವುದು ಮಹಾಪ್ರಭು' ಅನ್ನೋನು. ಇಷ್ಟೇ ಗದ್ಯ ಉಳಿದದ್ದೆಲ್ಲಾ ಪದ್ಯ, ಹಾಡು. ಒಂದು ಸಾರಿ ಏನಾಯ್ತು ಅಂತೀರಾ, ಸಂಪೂರ್ಣ ರಾಮಯಣ ನಾಟಕ. ಬಿಡಾರಂ ಕರಷ್ನಪ್ಪನವರು ದಶರಥನ ಪಾಲ್ಟು ಮಾಡಿದ್ರು. ರಾಮನನ್ನು ಕಾಡಿಗೆ ಕಳುಹಿಸಿದ ಮೇಲೆ ದಶರಥ ಒಂದು ಕಂದ ಪದ್ಯ ಹಾಡಿ, 'ಹಾ ರಾಮಾ' ಅಂತಾ ಚೀರಿ ಸತ್ತು ಬಿಡೋನು. ಹಾಗೆ ಚೆನ್ನಾಗಿ ಆಕ್ಟ್ ಮಾಡಿದ್ರು ಕೃಷ್ಣಪ್ಪನವರು. ಇನ್ನೇನು ಪರದೆ ಬೀಳಬೇಕು ಅಷ್ಟರಲ್ಲಿ ಯಾವನೋ ನಾಲ್ಕಾಣೆ ಸೀಟಿನಲ್ಲಿದ್ದೋನು 'Once more' ಅಂದುಬಿಟ್ಟ. ಕೃಷ್ಣಪ್ಪನವರು ಎದ್ದೇಬಿಟ್ಟರು. ಹಾಡೋಕೆ ಶುರು ಮಾಡೇಬಿಟ್ರು. ಪಿಟೀಲಿನವರು ಕೊಭಿನಲ್ಲಿ ತಿವೀತಾ 'ಸ್ವಾಮಿ ಕೃಷ್ಣಪ್ಪನವರೆ ನೀವು ಸತ್ತಿದ್ದೀರಿ' ಅಂದಾ. 'ಏಯ್ ಸುಮ್ನೆ ತಂತಿ ಕುಯ್ಯಯ್ಯಾ, ಸತ್ರೇನು ಮತ್ತೆ ಸಾಯ್ತೀನಿ' ಅಂದ್ರು. ಅದೇ ಗತ್ತಿನಲ್ಲಿ ಹಾಡೇಬಿಟ್ರು !

ಹೀಗಿತ್ತು ಕನ್ನಡ ರಂಗಭೂಮಿಯ ಗತವೈಭವ. ಈಗ ನಾಟಕ ನೋಡ್ತಿದ್ದೀವೊ ಸಿನೆಮಾ ನೋಡ್ತಿದೀವೋ ಅನ್ನೋವಷ್ಟರ ಮಟ್ಟಿಗೆ ಬದಲಾಗಿದೆ.

* * * * *

ಮಾರನೆಯ ದಿನ ಹತ್ತು ಗಂಟೆಗೆ ಕವಿಗೋಷ್ಠಿ. ಪು.ತಿ.ನ. ಅಧ್ಯಕ್ಷರು. ಅದು ನನ್ನ ಮೊದಲ ಪ್ರವೇಶ ಸಾಹಿತ್ಯ ಸಮ್ಮೇಳನಕ್ಕೆ. ಪುತಿನರವರನ್ನು ಕೇಳಿದೆ"ನನಗೆಷ್ಟು ಸಮಯ ಕೊಡ್ತೀರಿ ?" ಅಂತಾ, ಅವರು ಅಂದರು 'ಸಮಯಾನ ಶ್ರೋತೃಗಳೇ ಕೊಡ್ತಾರೆ". ನನಗೆ ದಿಗಿಲಾಯಿತು. ಅನೇಕ ಜನ ಘಟಾನುಘಟಿಗಳು ಅಖಾಡದಲ್ಲಿ. 'ಮಕಾಡೆ' ಬಿದ್ರಿದ್ರು ! ನನಗೂ ಹಾಗೇ ಆಗುತ್ತೇ ಅಂತಾ ಅಂದುಕೊಂಡಿದ್ದೆ. ಆದರೆ ನನ್ನಪುಣ್ಯ, ಹಾಗಾಗಲಿಲ್ಲ. 'ಕೆಂಗನಕಲ್ಲು' ಕಥನ ಕವನದ ಬರಗಲದ ವರ್ಣನಾ ಭಾಗ ಓದಿದೆ. ಸುಮಾರು ಐವತ್ತು ಸಹಸ್ರ ಜನರಿದ್ದ ಸಭೆ ಹಿಗ್ಗಿತು. ವೇದಿಕೆ ಬಿಟ್ಟು ಕೆಳಗಿಳಿಯುತ್ತಿದ್ದ ಹಾಗೇ ನನ್ನ ವಿದ್ಯಾ ಗುರುಗಳಾದ ತ.ಸು. ಶಾಮರಾಯರು ಒಂದು ದಿಕ್ಕಿನಿಂದ ಗುಬ್ಬಿ ವೀರಣ್ಣನವರು ಮತ್ತೊಂದು ದಿಕ್ಕಿನಿಂದ ಭರಭರ ಬಂದವರೆ ನನ್ನನ್ನು ತಬ್ಬಿ ಮುದ್ದಾಡಿದರು. ಇಬ್ಬರ ಪಾದ ಮುಟ್ಟಿ ನಮಸ್ಕರಿಸಿದೆ. ನನ್ನ ಕಣ್ಣಲ್ಲಿ ಬಾಷ್ಪಪ ಸುರಿಯುತ್ತಿದ್ದವು. 'ಏನೊ ಮಗು ಎಷ್ಟು ಚೆನ್ನಗಿ ಬರೆದಿದ್ದೀಯೊ ಅಂದರು ಗುರುಗಲು. 'ಅಪ್ಪಾ, ಮಳ್ಳಪ್ಪಾ, ಕೇಳ್ತಾ ಕೇಳ್ತಾ ನನ್ನ ಕಣ್ಣಾಗೆ ನೀರು ಬಂತು ಕಣೋ ನನ್ನಪ್ಪಾ ! ಅದೇನು ಕವಿತಾ, ಅದೇನು ಪದ್ಯ ಅಬ್ಬಬ್ಬಾ !' ಅಂದರು ವೀರಣ್ಣ. ಅವರಿಗೆ ತುಮಕೂರಿನ ನೆನಪು ಮಾಡಿದೆ. ಬೇಂದ್ರೆಯವರು ವೀರಣ್ಣನವರು ವೇದಿಕೆ ಮೆಲೆ ಪರಸ್ಪರ ಹಾರ ಹಾಕಲು ಮುಂದಾದ ಸನ್ನಿವೇಶ ನೆನಪಿಸಿದೆ' ಅಷ್ಟರಲ್ಲಿ ಬೇಂದ್ರೆಯವರೂ ಬಂದರು. ಅವರೂ 'ಶಹಬಾಸ್!' ಅಂದರು ನನ್ನ ಬೆನ್ನು ತಟ್ಟುತ್ತಾ.

---

*ಪೂರ್ವೋಕ್ತ

೨೨೦

ಬೆಂಗಳೂರಿಗೆ ವರ್ಗ ಆಗಿ ಬಂದ ಮೇಲೆ ಪದೇ ಪದೇ ವೀರಣ್ಣನವರ ಭೇಟಿಗೆ ಹೋಗುತ್ತಿದ್ದೆ. ಒಂದಲ್ಲ ಒಂದು ತಿನಿಸು ಕೊಟ್ಟು ಒಳ್ಳೇ ಮಾತು ಆಡೋರು ಜಯಮ್ಮನವರು ವೀರಣ್ಣನವರು. ಆದರೆ ವೀರಣ್ಣನವರ ಅಭಿಪ್ರಾಯ ನನಗೆ ನೋವು ತರುತ್ತಿತ್ತು. 'ನೋಡಪ್ಪಾ ಸ್ವಾಮಿ, ನನಗೆ ಜೀವನ ಸಾಕಾಗೈತೆ. ಎಷ್ಟು ದಿನ ಬದುಕೋದು. ನಾನು ಎಲ್ಲಾ ಸೌಭಾಗ್ಯಾನೂ ಕಂಡೆ, ಡಾಕ್ಟೊರೇಟ್ ಪದವಿ ಕೂಡ ಬಂತು. ನನ್ನ ಶಕ್ತ ಮೀರಿ ಕಲಾ ಸೇವೆ ಮಾಡ್ದೆ. ಇನ್ನೇನು ಬೇಕು ಕಣ್ಮುಚ್ಚೋದು ಬಿಟ್ಟು !' ಅನ್ನುತ್ತಿದ್ದರು. ನಾನು ಸಮಾಧಾನ ಹೇಳಿ ಸಾಕಾಗಿ, ಒಂದು ದಿನ ಬನ್ನಿ ನಮ್ಮ ಕುಪ್ಪೂರು ಗದ್ದಿಗೆ ಮಠಕ್ಕೆ ಹೋಗೋಣ. ಆರೀ ಗುರು ಮರುಳಸಿದ್ಧೇಶ್ವರರ ಸಮಾಧಿಸ್ಥಳ, ಜಾಗೃತ ಕ್ಷೇತ್ರ. ಕ್ಷೇತ್ರಾಧಿಪತಿಗಳಾದ ಶ್ರೀ ಶ್ರೀ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳಿದ್ದಾರೆ. ಅಲ್ಲಿ ಮುಂದಿನ ತಿಂಗಳು ಜಾತ್ರೆ. ನೀವು ಜಯಮ್ಮನವರು ಅತಿಥಿಗಳು. ಏನಂತೀರಿ ? ಅಂದೆ, 'ಜಯಾ, ನೋಡು, ಸ್ವಾಮಿ ಏನೊ ಅನ್ನುತ್ತೆ' ಅನ್ನೋದೇನು ? ಪುಣ್ಯಕ್ಷೇತ್ರ ನಡೀರಿ ಹೋಗಿ ಬರೋಣ !' ಅಂದರು. ನನಗೆ ಖುಷಿ ಆಯಿತು. ಅದೇ ರೀತಿ ವ್ಯವಸ್ಥೆಯೂ ಆಯಿತು ಶ್ರೀ ಮಠದಲ್ಲಿ. ಅಲ್ಲಿಗೆ ಹೋಗುವಾಗ ಕಾರಿನಲಿ ನಾವು ನಾಲ್ವರು. ಅಂದರೆ ನಾನು, ವೀರಣ್ಣನವರು, ಜಯಮ್ಮನವರು, ಮತ್ತು ಜಯಮ್ಮನವರ ತಮ್ಮ ಒಬ್ಬರು. ಹಾದಿ ಉದ್ದಕ್ಕೂ ಹಳೇ ನೆನಪುಗಳು. ಅವರು ಹೇಳಿದವುಗಳೆಲ್ಲಾ ನನ್ನ ನೆನಪಿನಲ್ಲಿ ಉಳಿದಿಲ್ಲ ಈಗ, ಆದರೆ ಬಿ. ಜಯಮ್ಮನವರು ಹೇಳಿದ ಒಂದು ಅರ್ಥಪೂರ್ಣ ಅನೆಕ್‌ಡೋಟ್ ಮಾತ್ರ ಇಂದಿಗೂ ನನ್ನಲ್ಲಿ ಉಳಿದಿದೆ. ಕೇಳಿ :

ಅದು ಸುಮಾರು ೧೯೩೫ರಿಂದ ಸುಮಾರು. ಗುಬ್ಬಿ ಕಂಪೆನಿಯವರ ಹಯದರಬಾದಿನಲ್ಲಿ ಕುರುಕ್ಷೇತ್ರ ನಾಟಕದ ೧೦೧ನೆಯ ಪ್ರದರ್ಶನ. ಅದನ್ನು ಕೇಳಿ ಅಚ್ಚರಿಗೊಂಡ ಹೈದರಾಬಾದು ನಿಜಾಮರು ಆದೇಶವಿತ್ತರು –'ಗುಬ್ಬಿ ಕಂಪೆನಿಯವರು ಕಿಂಗ್ ಕೋಠಿಗೆ ಬಂದು ಒಂದು ನಾಟಕ ಪ್ರದರ್ಶನ ಕೊಡಲಿ. ಅದಕ್ಕೆ ತಗಲುವ ಖರ್ಚು ಮತ್ತು ಸಂಭಾವನೆಯನ್ನು ಕೊಡಲಾಗುವುದು' ಎಂದು.

ಅದಕ್ಕೆ ವೀರಣ್ಣನವರು ಮಾರೋಲೆ ಕಳುಹಿಸಿದರು :

'ಜಹಾಪನಾ, ತಾವು ದೈವಾಂಶ ಸಂಭೂತರು, ನಿಜ. ಆದರೆ ಅಗತ್ಯ ವಸ್ತುಗಳಿದ್ದೆಡೆಗೆ ದೇವನೂ ಬರಬೇಕಾಗುತ್ತೆ ಅಲ್ಲವೆ? ಮರ ಇದ್ದ ಕಡೆ ನೆರಳು ಬರಬೇಕೇ ಹೊರತು, ನೆಳಿದ್ದೆಡೆಗೆ ಮರ ಹೋಗಲಾರದು ! ಆದ್ದರಿಂದ ಖಾವಂದರಿಗೆ ಮುದಕೊಡುವ,

ಆತ್ಮ ಸಂಸ್ಕಾರಗೊಳಿಸುವ ಸತ್ವ ನಮ್ಮ ನಾಟಕದಲ್ಲಿದ್ದರೆ ಹುಜೂರರ ಸವಾರಿ ಇಲ್ಲಿಗೇ ದಯಮಾಡಿಸುವ ಹಿರಿಮೆ ತೋರಬೇಕು. ಇಲ್ಲಿ ನಡೆಯುವ ಕುರುಕ್ಷೇತ್ರ ಇಲ್ಲಿಯೇ ಆಗಲಿ, ಅಲ್ಲಿ ಆಗುವುದು ಬೇಡ !

ಹುಜೂರರ ರಾಯಭಾರಿ ಕೇಳಿದ"ನಿಮ್ಮಲ್ಲಿ ಏನಿದೆ ? ಸಾಮ್ರಾಟರನ್ನು ಸ್ವಾಗತಿಸುವ ಗೌರವಿಸುವ ವ್ಯವಸ್ಥೆ ಇದೆಯೇ?'

'ಓಹೋ ! ಸಾಕಷ್ಟಿದೆ. ನಾವು ಮೈಸೂರನ್ನಾಳಿದ ಮಹಾಪ್ರಭುಗಳನ್ನು ಗೌರವಿಸಿದವರು. ಗವರವದ ಪಾಠವನ್ನು ನಾವು ಯಾರಿಂದಲೂ ಕಲಿಯುವ ಅಭ್ಯಾಸವು ಇಲ್ಲ, ಅಗತ್ಯವೂ ಇಲ್ಲ. ಒಮ್ಮೆ ದಯಮಾಡಿಸಲಿ, ಅನಂತರ ಖಾವಂದರು ತಮ್ಮ ಅಭಿಪ್ರಾಯವನ್ನು ತಿಳಿಸೋಣವಗಲಿ.'

ನಿಜಾಮರು ದಯಮಾಡಿಸಿದರು ಗೊತ್ತಾದ ದಿನ ಗೊತ್ತಾದ ಕಾಲಕ್ಕೆ. ಅವರ ವಾಹನ ಥಿಯೇಟರ್ ದ್ವಾರದಲ್ಲಿ ಬಂದು ನಿಂತ ಕೂಡಲೇ ರಂಗಮಂದಿರದವರೆಗೆ Red Carpet ಹಾಸಲಾಗಿತ್ತು. ಇಕ್ಕೆಲದಲ್ಲೂ ನೂರಾರು ಜನ ಸುವಾಸಿನಿಯರು ನಿಂತು, ಒಂದು ಬಗಲವರು ಪನ್ನೀರು ಸಿಂಪಡಿಸಿದರೆ, ಇನ್ನೊಂದರವರು ಹೂ ಮಳೆಗರೆದು ಹಾದಿಯುದ್ದಕ್ಕೂ ಹೂಹಾಸು ಹಾಸಿದರು. 'ಅಭೂತಪೂರ್ವ ಅತ್ಯದ್ಭುತ ಸ್ವಾಗತ !

ನಾಟಕ ನೋಡಿ ಆನಂದಿಸಿದ ನಿಜಾಮರು ತಮ್ಮರಮನೆಗೆ ಹೋದಮೇಲೆ ಮಾರನೆಯ ದಿನ ಕಾಗದ ಕಳುಹಿಸಿದರಂತೆ. 'ನಮ್ಮ ಜೀವನದಲ್ಲಿ ಇಂಥಾ ಸ್ವಾಗತವನ್ನು ಹಿಂದೆ ಕಂಡಿಲ್ಲ, ಮುಂದೆ ಕಾಣಲಾರೆವು ! ಕನ್ನಡಿಗರು ಎಂತಹ ಗೌರವ ಸಂಪನ್ನರು ಸುಸಂಸ್ಕೃತ ಚೇತನರು ಎಂಬುದು ಈಗ ತಿಳಿಯಿತು ಎಂದು.

೨೨೧

ಮತ್ತೊಂದು ಕೇಳಿ :

೧೯೩೨ನೇ ಇಸವಿ ಕಡೂರಿಲ್ಲಿ ಕ್ಯಾಂಪ್. ಅಂದಿನ ಸಂಪೂರ್ಣ ರಾಮಾಯಣ ಆರಂಭವಗಬೆಕು. ಭರತನ ಪಾತ್ರದಲ್ಲಿ Culture Comedian ಹಿರಣ್ಣಯ್ಯ ಬಣ್ಣ ಹಾಕಿಕೊಳ್ಳುತ್ತಿದ್ದಾರೆ. ಯಜಮಾನರ ಆಗಮನ 'ಏನಯ್ಯಾ ಹಿರಣ್ಣ ನಿನಗೆ ಮದುವೆ ಅಂತೆ!' 'ಹೌದು ಯಜಮಾನ್ರೆ ?' 'ಯಾವತ್ತು ?' 'ಮುಂದಿನ ಮಂಗಳವಾರ ವರಪೂಜೆ, ಬುಧವಾರ ಮುಹೂರ್ತ !' ಇವತ್ತು ಶನಿವಾರ : ಏನಯ್ಯ ಇನ್ನು ಮೂರೇ ದಿನ ! ಅದು ಸರಿ ದುಡ್ಡಿಗೆ ಏನು ಮಾಡಿಕೊಂಡೆ ?' 'ಏನೂ ಮಾಡ್ಕೊಂಡಿಲ್ಲ ಯಜಮಾನ್ರೆ' 'ಮತ್ತೆ ?' 'ದೇವರಿದ್ದಾನೆ?'

'ಏನಯ್ಯಾ ಹಾಗಂತಾ ಕೂತ್ರೆ ದೇವರು ಬಂದು ತಗಾ ದುಡ್ಡಾ ಅಂತಾನ?' 'ಅವರು ಅನ್ನೋಲ್ಲ. ಆತನು ಬರೋಲ್ಲ. ಬಂದರೆ ಮನುಷ್ಯರ ರೂಪದಲ್ಲಿ ಬರ್ತಾನೆ. . .ಅಲ್ಲಾ ಯಜಮಾನ್ರೆ ತಮಗೆ ಗೊತ್ತಿದೆ ನಾಟಕದವನಿಗೆ ಯಾರಾದರೂ ಹೆಣ್ಣು ಕೊಡ್ತೀನಿ ಅಂತಾ ಉಂದೆ ಬರ್ತರಾ ? ಇದೇ ಕಡೂರು ಜಿಲ್ಲೆಯವರು (ಆಗ ಕಡೂರು ಜಿಲ್ಲೆಯಾಗಿತ್ತು ಚಿಕ್ಕಮಗಳೂರಲ್ಲ). ಒಬ್ಬರು ಮುಂದೆ ಬಂದಿದ್ದಾರೆ. ಅಂದಮೇಲೆ ಹೆಣ್ಣು ಕೊಡ್ಸಿದ ದೇವ್ರು ಲಗ್ನಕೆ ಬೇಕಾಗೋ ಹಣಾನಾ ಕೊಡುಸ್ತಾನೆ.'

ನಾಟಕ ಮುಗೀತು. ಅಂಕದ ಫರದೆ ಬೀಳೋ ಹಿಂದಿನ ದೃಶ್ಯದಲ್ಲಿ ಮ್ಯಾನೇಜರ್ ಬಂದು 'ಅನ್ನದಾತರಿಗೆಲ್ಲಾ ಸಾಷ್ಟಾಂಗ ನಮಸ್ಕಾರಗಳು. . .' ಇತ್ಯಾದಿ ಹೇಳಬೇಕಿತ್ತು. ಮಾಮೂಲಿನಂತೆ ಮ್ಯಾನೇಜರ್ ಬರಲಿಲ್ಲ. ವೀರಣ್ಣನವರೇ ಬಂದ್ರು. ಎಲ್ಲರಿಗೂ ವಂದಿಸಿ 'ಈ ದಿನ ಒಂದು ಆನಂದದ ದಿನ. ನಮ್ಮ ಕಂಪೆನಿಯ ಪ್ರಸಿದ್ಧ ನಟ ಹಿರಣ್ಣಯ್ಯನ ಮದುವೆ ನಾಡಿದ್ದು. ಅವನ ದಾಂಪತ್ಯ ಜೀವನ ಸುಖವಾಗಿರಲಿ ಅಂತಾ ಹಾರೈಸ್ತಾ ನೀವು ಕೊಟ್ಟ ಕಾಣಿಕೆಯನ್ನು ಅವನ ವಿವಾಹಕ್ಕೆ ಕೊಡ್ತಿದ್ದೇನೆ,' ಎಂದು ಹೇಳಿ ಗಲ್ಲಾ ಪೆಟ್ಟಿಗೆ ತರಿಸಿದರು. ಅಂದಿನ ಕಲೆಕ್ಷನ್ ೯೮೭ ರೂಪಾಯಿ ; ಬರೀ ಬೆಳ್ಳಿ ರೂಪಾಯಿಗಳು (ಆಗ ನೋಟುಗಳಿರಲಿಲ್ಲ) ಎಲ್ಲಾ ತರಿಸಿ ಸುರಿಸಿ, ಗಲಾ ಪೆಟ್ಟಿಗಟ ಖಾಲಿ ಇರಬಾರದಪ್ಪ ಎಂದು ೧ ರೂಪಾಯಿ ತೆಗೆದು ಪೆಟ್ಟಿಗೆಗೆ ಹಾಕಿ, ಉಳಿದ ೯೮೬ ರೂಪಾಯಿಗಳನ್ನು ಹಿರಣ್ಣಯ್ಯನವರ ಮಡಿಲಿಗೆ ಸುರಿದರು.

ಇಂತಹ ಮಹಾನ್ ಚೇತನವನ್ನು ಅವರ ಶತಮಾನೋತ್ಸವ ನೆರವೇರುತ್ತಿರುವ ಈ ಶುಭ ಸಂದರ್ಭದಲ್ಲಿ ಮನಸಾ ನೆನೆಯೋಣ. ಶಿರಸಾ ಮಣಿಯೋಣ.

# ಕಾವ್ಯಾನಂದ*

---

'ಕಾವ್ಯಾನಂದ' ಕಾವ್ಯನಾಮದ ಡಾ.ಸಿದ್ಧಯ್ಯ ಪುರಾಣಿಕರು ಕವಿಯಾಗಿ, ಕಾದಂಬರಿಕಾರರಾಗಿ, ನಾಟಕಕಾರರಾಗಿ, ವಚನಕಾರರಾಗಿ, ವಿಚಾರವಂತ ವಿಮರ್ಶಕರಾಗಿ, ಜೀವನ ಚಿತ್ರಣಕಾರರಾಗಿ, ಸಮರ್ಥ ಗ್ರಂಥಸಂಪಾದಕರಾಗಿ ಖ್ಯಾತರಾಗಿದ್ದಾರೆ. ಇವರು ವೃತ್ತಿಯಲ್ಲಿ ರೆವೆನ್ಯೂ ಅಧಿಕಾರಿಗಳು, ಪ್ರವೃತ್ತಿಯಲ್ಲಿ ನುಡಿಗನ್ನಡ ಕವಿಗಳು. ತಮ್ಮ ಪರಿಸರದ ಭಾಷೆಯಾಗಲಿ, ಶಿಕ್ಷಣ ಮಾಧ್ಯಮವಾಗಲಿ ಕನ್ನಡವಲ್ಲದ ನೆಲದಲ್ಲಿ ಹುಟ್ಟಿ ಬೆಳೆದ ಇವರು, ಆ ಪ್ರದೇಶದಲ್ಲಿ ಕನ್ನಡದ ಕಿಚ್ಚು ಹಚ್ಚಿದ ಕ್ರಾಂತಿಕಾರಿ, ಕನ್ನಡಿಗರಲ್ಲಿ ಕೆಚ್ಚು ತುಂಬಿದ ಭಾಷಾಭಿಮಾನಿ. ಸರ್ಕಾರಿ ಸೇವೆಯಲ್ಲಿದ್ದೂ ತಮ್ಮ ಕನ್ನಡ ಸೇವೆಗೆ ಚಳುವಳಿಯ ಚಾಲನೆ ಕೊಟ್ಟವರು. ಇವರು ಆಡಿ ಸೋಲಲಿಲ್ಲ, ಮಾಡಿ ಗೆದ್ದರು. ನಡೆನುಡಿಯಲ್ಲಿ ಮಡಿಯಾಗಿ ಬಾಳಿದರು. ಶುದ್ಧ ಹಸ್ತ, ತೆರೆದ ಹೃದಯ, ಪ್ರಾಂಜಲ ಮನಸ್ಸು–ಒಟ್ಟಿನಲ್ಲಿ ಶುಚಿ ಜೀವನ ನಡೆಸಿದ ಓರ್ವ ಕರ್ಮಯೋಗಿ, ಕಲಾತಪಸ್ವಿ.

ಡಾ.ಸಿದ್ಧಯ್ಯ ಪುರಾಣಿಕರು ಹುಟ್ಟಿದ್ದು ೧೮.೮.೧೯೧೮ರಂದು. ಇಂದಿನ ರಾಯಚೂರು ಜಿಲ್ಲೆಯ ಯಲಬುರ್ಗಿ ತಾಲ್ಲೂಕಿನ ದ್ಯಾಂಪುರ ಎಂಬ ಪುಟ್ಟ ಹಳ್ಳಿಯಲ್ಲಿ. ತಂದೆ ಕಲ್ಲಿನಾಥ ಶಾಸ್ತ್ರಿ, ತಾಯಿ ದಾನಮ್ಮ. ಪತ್ನಿ ಗಿರಿಜಾದೇವಿ. ಪುರಾಣಿಕರದು ಒಂದು ಸಾರಸ್ವತ ಮನೆತನ. ಇವರ ಅಜ್ಜ ಕವಿರತ್ನ ಚೆನ್ನಕವಿ. ತಂದೆ ವಿಖ್ಯಾತ ವ್ಯಾಖಾನಕಾರರೂ, ಪುರಾಣಪಾಠಕರೂ ಆದ ಕಲ್ಲಯ್ಯನವರು (ಕಲ್ಲಿನಾಥ ಶಾಸ್ತ್ರಿಗಳು). ಇವರ ಸೋದರ ಮಾವನವರು ಕಳಕಯ್ಯನವರು (ಕಾಲಕಾಲೇಶ್ವರ ಶಾಸ್ತ್ರಿಗಳು) ಮತ್ತು ವಿದ್ವನ್ಮಣಿ ಮಹಾಲಿಂಗಯ್ಯನವರು. ತಂದೆಯೇ ಇವರ ಮೊದಲ ಗುರು, ಮನೆಯ ಮೇಷ್ಟ್ರೂ ಹೌದು. ಅನಂತರ ಕಲಿಸಿದವರು ಇವರ ಸೋದರಮಾವ ಕಳಕಯ್ಯನವರು. ಆರೇಳು ದಶಕಗಳ ಹಿಂದೆ ಕಲ್ಯಾಣ ಕರ್ನಾಟಕದಲ್ಲಿ (ಹೈದರಾಬಾದು ಕರ್ನಾಟಕದಲ್ಲಿ) ವಿದ್ಯೆ ಬಡವರಪಾಲಿಗೆ ನೈವೇದ್ಯವಾಗಿತ್ತು. ಹಳ್ಳಿಗರಿಗೆ ಅದು ಮೊದಲ ಕೊಂಬಾಗಿತ್ತು. ಕನ್ನಡಿಗರಿಗಂತೂ ಅದು ಎಟುಕದ ವಸ್ತುವೇ ಆಗಿರಲಿಲ್ಲ. ಅಂತಹ ವಿಷಮ ಪರಿಸರದಲ್ಲೂ ಪುರಾಣಿಕ ಸಿದ್ಧಯ್ಯನವರು ಕವಿಯಾಗಿ ಬೆಳೆದರು, ಕನ್ನಡಿಗರಾಗಿ ಮೆರೆದರು.

ತಂದೆಯ ಶಿಷ್ಯರಾಗಿ ದ್ಯಾಂಪುರದಲ್ಲಿ, ಸೋದರಮಾವ ಕಳಕಯ್ಯನವರ ಶಿಷ್ಯರಾಗಿ ಚಿಕ್ಕೇನಕೊಪ್ಪದಲ್ಲಿ ಪಾ.ಭೀ. ದೇಸಾಯರ ಶಿಷ್ಯರಾಗಿ ಕುಕ್ಕನೂರಿನಲ್ಲಿ ವಿದಾಪ್ರಗತಿಯನ್ನು ಸಾಧಿಸಿದ ಪುರಣಿಕ ಸಿದ್ಧಯ್ಯನವರು ಶರಬಸವೇಶ್ವರ ಶ್ರೀ ದೊಡ್ಡಪ್ಪ ಅಪ್ಪ ಅವರ ಆಶ್ರಯದಲ್ಲಿ ಕಲಬುರ್ಗಿಯಲ್ಲಿ, ಅನಂತರ ನಿಜಾಮರ ಆಕ್ರಮಿತ ಭೂಮಿಯಾದ ಹೈದರಾಬಾದಿನಲ್ಲಿ ಪೂರ್ಣವಿರಾಮ ಹಾಕಿದರು. ಬಿ.ಎ. ಪದವಿಯನ್ನು ಪಡೆದರು ಪ್ರಥಮ ರ್‍ಯಾಂಕಿನಲ್ಲಿ. ನಿಜಾಮ ರಾಜ್ಯದಲ್ಲೇ ಅಸಿಸ್ಟೆಂಟ್ ಕಲೆಕ್ಟರ್, ಅಸಿಸ್ಟೆಂಟ್ ಕಮೀಷನರ್ ಆಗಿ ಸೇವೆ ಸಲ್ಲಿಸಿ, ಕರ್ನಾಟಕ ಏಕೀಕರಣವಾದ ಮೇಲೆ ಮಂತ್ರಿಗಳ ಆಪ್ತ ಕಾರ್ಯದರ್ಶಿ, ಡೆಪ್ಯೂಟಿ ಕಲೆಕ್ಟರ್, ವಿದ್ಯಾ ಇಲಾಖೆಯ ಡೆಪ್ಯೂಟಿ ಸೆಕ್ರಟರಿ ಚಿನ್ನ ನಿಯಂತ್ರಣಾಧಿಕಾರಿ, ಡೆಪ್ಯೂಟಿ ಕಮೀಷನರ್, ಲೇಬರ್ ಕಮೀಷನರ್ ಆಗಿ ನಿಷ್ಠೆಯಿಂದ. ನಿಯತ್ತಿನಿಂದ ಸೇವೆಸಲ್ಲಿಸಿ ೧೯೭೬ರಲ್ಲಿ ನಿವೃತ್ತರಾದರು.

ಇಷ್ಟೆಲ್ಲ ಅಧಿಕಾರ ಅಂತಸ್ತುಗಳು ಬಂದು ಹೋದರೂ ಪುರಾಣಿಕರು ಮನುಷ್ಯರಾಗಿಯೇ ಉಳಿದರು ! ಮಾನವೀಯತೆ ಎಂಬ ಮೌಲ್ಯವನ್ನು ಜೋಪಾನ ಮಾಡಿದ ಮಹನೀಯರು. ಗೌರವಸ್ಥ ಮನೆತನದಿಂದ ಬಂದ ಇವರದು ಸುಸಂಸ್ಕೃತ ಚೇತನವೂ ಹೌದು. ದೇಶ ಮತ್ತು ಧರ್ಮ ಇವೆರಡೂ ತಮ್ಮ ಹೃದಯ ಮತ್ತು ಪುಪ್ಪುಸಗಳೆಂದು ಬದುಕು ಮಾಡಿದವರು. ಮನುಕುಲದ ಶ್ರೇಯಸ್ಸಿಗಾಗಿ ನಾಡು–ನುಡಿಯ ಶ್ರೇಯಸ್ಸಿಗಾಗಿ ತಮ್ಮನ್ನೇ ತಾವು ಅರ್ಪಿಸಿಕೊಂಡವರು.

ಡಾ. ಪುರಾಣಿಕರು ಬಹು ಭಾಷಾವಿದರು. ಕನ್ನಡ, ಸಂಸ್ಕೃತ, ಮರಾಠಿ, ಇಂಗ್ಲಿಷ್, ಉರ್ದು, ಪರ್ಷಿಯನ್ ಈ ಮೊದ

---

*ಡಾ. ಸಿದ್ಧಯ್ಯ ಪುರಾಣಿಕರು, ಕಲ್ಕತ್ತೆಯ ಭಾರತೀಯ ಭಾಷಾ ಪರಿಷತ್ತಿನ ಮೊದಲ ವರ್ಷದ ಅಂದರೆ ೧೯೮೦ರ ಮೊತ್ತ ಮೊದಲ ಬಿಲ್ವಾರ್ ಪ್ರಶಸ್ತಿ ಪ್ರಾಪ್ತವಾದಂದು ನಾನೆರಚಿದ ಓಕುಳಿ

ಲಾದ ಬಾಷೆಗಳ ಮೇಲೆ ಪ್ರಭುತ್ವ ಉಳ್ಳವರು. ಇವರಿನ್ನೂ ವಿದ್ಯಾರ್ಥಿಯಾಗಿದ್ದಾಗಲೇ ಕಾವ್ಯದೇವಿ ಇವರನ್ನು ಒಲಿದಳು. ಕವನ ಗಳನ್ನು ಬರೆದರು ಕನ್ನಡದಲ್ಲಿ. ಸಾಹಿತ್ಯ ಸಮ್ಮೇಳನಗಳಲ್ಲಿ ಭಾಗವಹಿಸಿದರು. ಕಿರಿಯರಾಗಿದ್ದಾಗಲೇ ಕವಿ ಎಂದು ಖ್ಯಾತರಾದರು. ಆಲಮಟ್ಟಿಯ ಸಮ್ಮೇಳನದಲ್ಲಿ 'ಕಾವ್ಯಾನಂದ'ರಾದರು. ಜಲಪಾತ, ಕರುಣಾಶ್ರಾವಣ, ತುಷಾರಹಾರ, ಮಾನಸ ಸರೋವರ, ಕಲ್ಲೋಲಮಾಲೆ, ಮೊದಲು ಮಾನವನಾಗು, ಚರಗ – ಮೊದಲಾದ ಕವನ ಸಂಕಲನಗಳು, ಆತ್ಮಾರ್ಪಣ, ಭಾರತವೀರ – ಮೊದಲಾದ ನಾಟಕಗಳು, ವಚನೋಧ್ಯಾನ ಮೊದಲಾದ ವಚನ ಗ್ರಂಥಗಳು. ಅನೇಕ ಜೀವನಚರಿತ್ರಗಳು, ಸಂಪಾದನೆಗಳು, ಮಕ್ಕಳ ಪುಸ್ತಕಗಳು ಇತ್ಯಾದಿ. ಸುಮಾರು ಮೂವತ್ತಕ್ಕೂ ಮಿಕ್ಕ ಗ್ರಂಥಗಳು ಇವರ ಲೇಖಣಿಯಿಂದ ಹೊರಬಂದಿವೆ. ಕೇವಲ ಸಂಖ್ಯೆಯಷ್ಟೇ ಅಲ್ಲ, ಸತ್ವದಲ್ಲೂ ಅವು ಮೌಲಿಕ ಕೃತಿಗಳೆಂದು ಪರಿಗಣಿತವಾಗಿರುವುದು ಹೆಮ್ಮೆಯ ವಿಷಯ. ಆಧುನಿಕ ವಚನ ಕಾರರ ಪ್ರಖ್ಯಾತ ಪಂಕ್ತಿಯಲ್ಲಿ ಸಿದ್ಧಯ್ಯ ಪುರಾಣಿಕರದು ಬಹು ದೊಡ್ಡ ಹೆಸರು. ಪರಂಪರೆಯನ್ನು ಬಿಡದೆ, ರಮ್ಯತೆ ನವ್ಯತೆಗ ಳನ್ನು ಮೆರೆಯದೆ ಪರಿಸರಕ್ಕೆ ಸ್ಪಂದಿಸಿದವರು ; ಸಹಜ ಸಂವೇದನೆಯನ್ನು ರೂಢಿಸಿಕೊಂಡವರು, ಅವರದು ಶಿಷ್ಟಶೈಲಿ, ಆದರೂ ಸಾರ್ಥಕ ಸಾಹಿತ್ಯ, ಪ್ರಾಸಾನುಪ್ರಸಗಳ ಮೇಲೆ ಯಮಕದ ಮೇಲೆ ತುಂಬಾ ವ್ಯಾಮೋಹ ಅವರಿಗೆ. ಆದರೂ ಭಾಷೆಯ ಮೇಲೆ ಹಿಡಿತವಿಲ್ಲದಿಲ್ಲ. ಅವರ ಪ್ರಾಸಪ್ರೇಮ ನಾನು–ನೀನು, ಸ್ಥಾವರ–ಜಂಗಮ, ಅಜ್ಞಾನ–ವಿಜ್ಞಾನ, ಹಳತು–ಹೊಸದು, ಮಾತು–ಮೌನ, ಮೇಲು–ಕೀಳು, ನಾಗರಿಕತೆ–ಸಂಸ್ಕೃತಿ ಇವೇ ಮೊದಲಾದ ದ್ವಂದಗುಣಗಳ ನಿರ್ಮಿತಿಗೆ ಕಾರಣವಾಗಿರುವುದೂ ಉಂಟು. ಆದರೂ ವಿರುದ್ಧ ಗುಣಗಳ ಸುಂದರ ಸಮ್ಮಿಶ್ರಣವನ್ನು ಕಾಣುತ್ತೇವೆ. ಇಲ್ಲಿಯವು ಆಗೊಮ್ಮೆ ಈಗೊಮ್ಮೆ ಬರೆದ ಮುಕ್ತಕಗಳಾದ್ದರಿಂದ ಕೆಲವೆ ಡೆಗಳಲ್ಲಿ ವಿರೋಧಾಭಾಸ ಕಂಡುಬರುತ್ತದೆ. ಅದು ಕವಿಗೆ ಕಾಲಕಾಲಕ್ಕೂ ಬದುಕು ಕಲಿಸಿದ ಪಾಠವೆಂದು ಗುರುತಿಸಬಹುದು. ಪ್ರಾಚೀನ ವಚನಗಳ ಸೊಬಗು ಸೊಗಡುಗಳನ್ನು ಮೈಗೂಡಿಸಿಕೊಂಡಿದ್ದಾರೆ. ಸಂಸ್ಕೃತ, ಇಂಗ್ಲಿಷ್, ಪರ್ಷಿಯನ್, ಉರ್ದು ಮೊದ ಲಾದ ಭಾಷಾ ಸಾಹಿತ್ಯದ ನಂತರ ಅಧ್ಯಯನದಿಂದ ಶ್ರೀಮಂತರಾಗಿದ್ದಾರೆ. ಅವರ ಬಹುಶ್ರುತತ್ವ ವಚನೋಧ್ಯಾನದಲ್ಲಿ ಸ್ವಯಂ ವ್ಯದ್ಯ. ಒಟ್ಟಿನಲ್ಲಿ ವಚನೋಧ್ಯಾನ ಆಧುನಿಕ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಬಿದ್ದ ಗಟ್ಟಿಕಾಳು, ಕನ್ನಡಕ್ಕೆ ಕೀರ್ತಿತಂದ ಕಾವ್ಯಾನಂದರ ಆಚಾರ್ಯ ಕೃತಿ.*

ಪ್ರಾಚೀನ ವಚನಕಾರರು ಸ್ವತಂತ್ರಧೀರರು, ಅನ್ಯರಿಗೆ ಹಂಗಾಗದ, ಸ್ವಂತಿಕೆಗೆ ಭಂಗತಂದುಕೊಳ್ಳದ ವಚನ ರಚನಕಾರರು ಅವರು. ಪರಂಪರೆಯ ಪ್ರಭಾವದಲ್ಲಿ ಬೆಳೆದು ಬೆಳಗಿದವರು ಸಿದ್ಧಯ್ಯ ಪುರಾಣಿಕರು. ಆ ಕಾರಣದಿಂದಲೇ ಅವರಿಟ್ಟ"ಸ್ವತಂತ್ರ ಧೀರ ಸಿದ್ಧೇಶ್ವರಾ" ಎಂಬ ಅಂಕಿತ ಅವರ ಮನೋಧರ್ಮದ ಅಭಿವ್ಯಕ್ತಿ ಸಾಧನವಾಗಿದೆ. ದೇವನಾಗಲಿ, ಮಾನವನಾಗಲಿ, ಮಹಾ ಮಂತ್ರಿ ಇರಲಿ, ಮಠಾಧಿಪತಿ ಆಗಿರಲಿ ಅವರ ಬಗ್ಗೆ ಇವರದು ನಿರ್ಭೀತ ಹೇಳಿಕೆ, ನಿಭಿಡೆಯ ನಿಲವು, ದೇಶ ಸ್ವಾತಂತ್ರ್ಯವನ್ನು ಪಡೆದ ಬಾರತೀಯರು ಇಂದು ಮಾಡುತ್ತಿರುವುದೇನು ? ರಾಷ್ಟ್ರ ನಿರ್ಮಾಣವೆ ? ಸಂಸ್ಕೃತಿಯ ಸಂವರ್ಧನೆಯೆ ? ಜನಜೀವ ನದ ಸೈತೆ ? ದೇಶ ಹಿತ ಸಾಧನೆಯ ಸೈಪೆ ? ಯಾವುದೂ ಅಲ್ಲ. ಕ್ಷುದ್ರ ರಾಜಕೀಯ, ಭ್ರಷ್ಟಾಚಾರ, ಗೂಂಡಾಗಿರಿ. ಇಂದು–

**ಮಂತ್ರಿಗಳ ಮನೆಗೆ ಎಡತಾಕುವ ಸ್ವಾಮಿಗಳು ಕೆಲವರು**
**ರಾಜಕಾರಣಿಗಳ ಬಾಲ ಹಿಡಿದು ತಿರುಗುವ ಬುದ್ಧಿಜೀವಿಗಳು ಹಲವರು.**
**ನಟನಟಿಯರ ಬೆಂಬೆತ್ತಿ ಅಲೆವ ನವ ಯುವಕರು ಅನೇಕರು.**
**ಶಾಸನಕಾರರಿಗೆ ಕೊಡೆಹಿಡಿದು ನಡೆವ ಸರಕಾರದ ಅಧಿಕಾರಿಗಳು ಸಾಕಷ್ಟು ಜನರು !**
**ಇಂಥ ಅಧಃಪಾತವನ್ನು ಈ ಹಿಂದೆ**
**ನೊಡಿದ್ದೆಯೇನಯ್ಯಾ ನಿನಾದರೊ ?**
**ನಿನಗೂ ನಮ್ಮ ಅಧೋಗತಿಯಲ್ಲಿಯೇ ಆಸಕ್ತಿಯೇನು ಈಗ ?**
**ಈ ಅವನತಿಯ ಅಧ್ಯಾಯ ಮುಗಿಯಲಿ ಬೇಗ !**
**ನೆಲಕ್ಕೆ ಬಿದ್ದೇ ಮೇಲಕ್ಕೆ ಪುಟಿಯ ಬೇಕೇನು ಪ್ರಗತಿಯ ಚೆಂಡು ?**
**ತಳಕ್ಕೆ ಇಳಿದೇ ಎತ್ತುವವರ ಕಾಯಬೇಕೇನು ಗುರಿಯ ಗುಂಡು ?**

೨೨೪

**ಕೆಳಗೆ ನೂಕಿರುವ ನೀನೇ ಮೇಲೆತ್ತು ತಂದೆ.**
**ಮೇಲೆತ್ತು ಇಂದೆ. ಶರಣುಬಂದೆ. ಸ್ವತಂತ್ರಧೀರ ಸಿದ್ಧೇಶ್ವರಾ**

ಈ ಮಾತುಗಳ ಹಿನ್ನಲೆಯಲ್ಲಿ ಅವರಿಗಿರುವ ಸ್ವಾಭಿಮಾನದ ಕೆಚ್ಚಷ್ಟೇ ಅಲ್ಲ. ದುರಾಚಾರದ ಖಂಡನೆ ಇದೆ, ಆದ್ಯತನ ಜೀವನದ ಅಧೋಗತಿಯ ಬಗೆಗೆ ತುಂಬು ಕಳಕಳಿಯಿದೆ. ಇಂಥೆಲ್ಲ ಅನ್ಯಾಯ ಅನಾಹುತಗಳಿಗೆ ಕಾರಣರಾದವನನ್ನು 'ಈ ಹಿಂದೆ ನೊಡಿದ್ದೆಯೇನಯ್ಯಾ' ಎಂದು ಕೇಳುವಷ್ಟು ದೈರ್ಯವಿದೆ, ಮೇಲೆತ್ತು ತಂದೆ, ಮೇಲೆತ್ತು ಇಂದೆ' ಎಂಬಲ್ಲಿ ಧೈನ್ಯತೆ ಇದೆ. ಕವಿಯ ಧೀಮಂತೆತೆಗೆ ಸೃಷ್ಟಿ ನೀಡಿದೆ ಈ ಕೆಳಗಿನ ವಚನ.

**ಭ್ರಷ್ಟಾಚಾರವೇ ಶಿಷ್ಟಾಚಾರದ ವೇಷ ತೊಟ್ಟಿದೆ,**
**ಶೀಲ ಶೂನ್ಯತೆಯೇ ಸಭ್ಯತೆಯ ಉಡುಪು ಉಟ್ಟಿದೆ.**
**ಶೋಷಣೆಯೇ ಸಾಮ್ಯವಾದದ ಸೋಗು ಹಾಕಿದೆ.**
**ಮೋಸವೇ ಲೇಸಿನ ಆಭಾಸ ಹುಟ್ಟಿಸಿದೆ.**
**ಸಟೆಯೇ ದಿಟದ ಲಾಂಛನ ಧರಿಸಿದೆ.**
**ಹುಸಿ ಪ್ರಚಾರ ಕಸಕ್ಕೆ ಕಸವರದ ಸ್ಥಾನಕೊಟ್ಟಿದೆ**
**ಜಾತೀಯತೆ ರಾಷ್ಟ್ರೀಯತೆಗೆ ಸಿದಿಗೆ ಸಿದ್ಧಗೊಳಿಸುತ್ತಿದೆ**
**ಸ್ವೈರವೃತ್ತಿ ಸ್ವಾತಂತ್ರ್ಯದ ಸಮಾಧಿ ಕಟ್ಟುತ್ತಿದೆ**
**ಮಾಂಸವು ಮಾನಸವನ್ನು ಅದುಮಿಬಿಟ್ಟಿದೆ**
**ವಿಕಾರ ವಿಚಾರದ ತಲೆಯನ್ನೇ ಕುಟ್ಟಿದೆ,**
**ದುರ್ನೀತಿ ನೀತಿ ಪ್ರೀತಿಗಳ ಎದೆಯನ್ನೇ ಮೆಟ್ಟಿದೆ**
**ಇದು ಬಿಡುಗಡೆಯ ಹೊಲದ ಬೆಳಸು**
**ಇದಾಗದಿರಲಿ ದೇಶವಾಸಿಗಳಿಗೆ ವಿಷದ ಉಣಿಸು**
**ಸ್ವತಂತ್ರಧೀರ ಸಿದ್ಧೇಶ್ವರಾ**
**ಇದು ಮಾರಕವಾಗುವ ಮುನ್ನ ಕಳೆಕಿತ್ತು ಬೆಳೆ ಉಳಿಸು**
**ಅವನತಿಯೆ ಗೊಬ್ಬರದಿಂದಲೇ ಉನ್ನತಿಯ ಸಿರಿಬೆಳೆಯ ಬೆಳೆಸು !**

ಇದು ಕಾವ್ಯಾನಂದರ ಸದಾಶಯ. ಅಂತೆಯೇ ಅವರ ಸ್ವತಂತ್ರ ಧೀರತ್ವಕ್ಕೆ ಮತ್ತೊಂದು ವಚನ :

**ಸ್ವತಂತ್ರಧೀರ ಸಿದ್ಧೇಶ್ವರಾ**
**ಹೋಮರನಂಥ ವಿಶ್ವಕವಿಗಳು ಭಿಕ್ಷೆ ಬೇಡಬೇಕು,**
**ಹೆಂಡ ಮಾರುವವರು ಲಕ್ಷಾಧೀಶರಾಗಬೇಕು**
**ಇದೇ ನಿನ್ನ ಸಾಮಾಜಿಕ ನ್ಯಾಯವೇನಯ್ಯಾ** ?
**ದುಡಿವವರಿಗೆ ದುಗ್ಗಾಣಿ, ದುಡಿಸಿಕೊಳ್ವರಿಗೆ ಅಷ್ಟೈಶ್ವರ್ಯ**
**ಇದುವೆ ನಿನ್ನ ಆರ್ಥಿಕ ವ್ಯವಸ್ಥೆಯೇನಯ್ಯಾ !**
**ಮನುಕುಲೋದ್ಧಾರಕರಿಗೆ ವಿಷದ ಬಟ್ಟಲು. ಗುಂಡು,**
**ಮಾನವೋತ್ಪೀಡಕರಿಗೆ ಸುಖ ಸಂಪದ**
**ಇದೇ ನಿನ್ನ ನೀತಿ ನಿಯಮವೇನಯ್ಯಾ** ?
**ಇರಲಾರದು. ಇರಬಾರದು !**
**ಇದ್ದರೆ ಇದರ ತಪ್ಪು ಯಾರದು** ?

೨೨೫

**ನಿನ್ನ ಹೆಸರಿನಲ್ಲಿ ಇಷ್ಟು ದಿನ ಇವು ಬದುಕಿದುದೇ ತಪ್ಪು**
**ನಿನ್ನ ಹೆಸರಿಗೆ ಇವುಗಳಿಂದ ಕಪ್ಪು**
**ಇನ್ನಾದರೂ ಒಪ್ಪು !**
**ನೀನು ಒಪ್ಪು ಬಿಡು, ನಾವು ಮಾತ್ರ**

**ಶಿವಮಯ ಶಕ್ತಿ ಶಕ್ತಿಮಯ ಶಿವದ ಗುರಿಯ,**
**ಸರ್ವೋದ್ಧಾರದ, ಸರ್ವಜನ ಸುಖದ ಗುರಿಯ**
**ಮುಟ್ಟಿಯೇ ತೀರುವೆವು**
**ನಾವು ನಿಮ್ಮನೆ ಮೀರುವೆವು !**

ನಮ್ಮ ಪ್ರಾಚೀನ ವಚನಕಾರರು ಸ್ವತಂತ್ರಧೀರರಷ್ಟೇ ಅಲ್ಲ, ದಿವ್ಯ ನಿರ್ಲಕ್ಷರು. ಅವರಿಗೆ ಅವರ್ಗದ ಮೋಹ, ನರಕದ ಭೀತಿ ಎರಡೂ ಇರಲಿಲ್ಲ. ಮಾನವನ ಮನೋಭೂಮಿಕೆಯಿಂದ ಇವೆರಡನ್ನೂ ಬೇರು ಸಹಿತ ಕಿತ್ತು ಹಾಕಲು ಹವಣಿಸಿದವರಲ್ಲಿ ಇವರೇ ಮೊದಲಿಗರು. ಕಣ್ಣಿಗೆ ಕಾಣದ ಕಲ್ಪನಾ ಸ್ವರ್ಗಕ್ಕೆ ಕೈಚಾಚಿ ಲೋಕಜೀವನವನ್ನು ಕಡೆಗಣಿಸಿದವರಲ್ಲ. ಇಹದ ಜೀವನ ಸ್ಯೆತಾಗಬೇಕು, ಸುಂದರವಾಗಬೇಕು. ಮೊದಲು 'ಇಲ್ಲಿ ಸಲ್ಲಬೇಕು' ಎಂದು ಸಾರಿದವರು. ಭಕ್ತಿ, ಕಾಯಕ, ನಿಷ್ಠೆ, ನ್ಯಾಯ, ದಯೆ, ಧ್ಯೇಯ ಇವು ಅವರ ದೈವವಾಗಿದ್ದವು. ಅವರ ಕಾಯಕತತ್ವ ಪುನರಾವಿರ್ಭಾವ ಪಡೆದಿದೆ ಕಾವ್ಯಾನಂದರ ಈ ವಚನದಲ್ಲಿ !

**ಯಾರು ನಿನ್ನ ನಾಯಕ ? ಯಾರು ನಿನ್ನ ನಾಯಕ ?**
**ಎಂದು ಕೇಳುವರಯ್ಯ ಕೇಳಲೆಂದೇ ಹುಟ್ಟಿದವರು ?**
**ಹೇಳುವೆನಿಂದು ಉತ್ತರವನರಿಗೆ**
**ಕಾಯಕ ನನ್ನ ನಾಯಕ**
**ನೀನು ಕಾಯಕದ ನಾಯಕ. ಸ್ವತಂತ್ರಧೀರ ಸಿದ್ಧೇಶ್ವರಾ**

'ಕಾಯಕವೇ ಕೈಲಾಸ' ಎಂಬುದರ ಪರ್ಯಾಯ ರೂಪ ಇಲ್ಲಿನ 'ನೀನು ಕಾಯಕದ ನಾಯಕ' ಎಂಬ ಮಾತು.

**ಮೌನದ ವೀಣೆಗೆ ಮಾತಿನ ತಂತಿಯೇಕಯ್ಯ ?**
**ಕೃತಿಯ ಬಿಲ್ಲಿಗೆ ಕನಸಿನ ಬಾಣವೇಕಯ್ಯ ?**
**ನಿಜದ ಬಳ್ಳಿಗೆ ಹುಸಿಯ ಹೂಗಳೇಕಯ್ಯ?**
**ನಲ್ಮೆಯ ತಕ್ಕಡಿಗೆ ಆಣೆಯ ಕಾಣಿಕೆಯೇಕಯ್ಯ?**
**ಸ್ವತಂತ್ರಧೀರ ಸಿದ್ಧೇಶ್ವರಾ,**
**ಇಹದ ಬದುಕಿಗೆ**
**ಪರದ ನಿಕಷವೇಕಯ್ಯ ?**

ಹೌದು, ಇಲ್ಲಿ ಬದುಕುವುದಕ್ಕೆ ಅಲ್ಲಿನ ಸರ್ಟಿಫಿಕೇಟ್ ಬೇಕಿಲ್ಲ. ಏಕೆಂದರೆ ಪರ ಇರುವುದು ಅಲ್ಲಿ ಅಲ್ಲ, ಇಲ್ಲಿ – ಇಹದಲ್ಲಿ

**ಕರುಣೆಯೇ ಕಾಶಿ, ದಯೆಯೇ ದಯೆ**
**ಕನಿಕರವೇ ಕಂಚಿ ಕೇದಾರಗಳಯ್ಯಾ**
**ಪ್ರೀತಿ ಜ್ಯೋತಿರ್ಲಿಂಗ, ಮಮತೆ ಮಕ್ಕಾ ಮದೀನಾ,**
**ಭಾತೃತ್ವವೇ ಬೆತ್ಲಹೇಮ್ ಕಂಡಯ್ಯಾ !**
**ಕಲ್ಯಾಣವೇ ಕಲ್ಯಾಣ, ಔದಾರ್ಯವೇ ಉಡುಪಿ.**
**ಸದ್ಗುಣಗಳೇ ಶೃಂಗೇರಿ ಶ್ರವಣಬೆಳಗೊಳಯ್ಯಾ**

೨೨೬

**ಶುದ್ಧಾಂತರಂಗವೇ ಗಂಗೆ, ಯಮುನೆ, ತುಂಗಭದ್ರೆ,**
**ಪಾವನತೆ ಕಾವೇರಿ, ನಿರ್ಮಲತೆ ನರ್ಮದೆ,**
**ಶುಭ್ರಶೀಲವೆ ಕೃಷ್ಣೆ ಗೋದಾವರಿಗಳಯ್ಯಾ**
**ಸ್ವತಂತ್ರಧೀರ ಸಿದ್ಧೇಶ್ವರಾ**
**ಜೀವಿಯಿದ್ದೆಡೆ ಕ್ಷೇತ್ರ, ಹೃದಯವಿದ್ದೆಡೆ ತೀರ್ಥ,**
**ಸದ್ಭಾವ, ಸತ್ಕರ್ಮಗಳಿದ್ದೆಡೆಯೊಳೇ ಸದ್ಧರ್ಮವಯ್ಯಾ !**

ವಸ್ತುಸ್ಥಿತಿ ಹೀಗಿರುವುದರಿಂದ –

**ಬಾನವರನ್ನಾಗಿ ಮಾಡಿ ಬಾನಿಗೇರಿಸದಿರು**
**ದಾನವರನ್ನಾಗಿ ಮಾಡಿ ರಸಾತಳಕ್ಕೆ ಕಳಿಸದಿರು,**
**ಮಾನವರನ್ನಾಗಿ ಮಾಡಿ ಇದೇ ಸುಂದರ ಜಗತ್ತಿನಲ್ಲಿಯೇ**
**ಉಳಿಸಿ ಬೆಳೆಸಿ ಬೆಳಗಿಸಯ್ಯಾ**
**ಸ್ವತಂತ್ರಧೀರ ಸಿದ್ಧೇಶ್ವರಾ** ?
–ಎಂದು ಬೇಡಿದ್ದಾರೆ.

* * * * * *

ಅನುಭವಕ್ಕೂ ಅನುಭಾವಕ್ಕೂ ಭೂವ್ಯೋಮಗಳಷ್ಟು ಅಂತರ ಅರ್ಥದಲ್ಲಿ, ಅನುಭವ ಲೌಕಿಕ, ಅನುಭಾವ ಪಾರಮಾರ್ಥಿಕ, ಕಾವ್ಯಾನುಭವ, ಶಾಸ್ತ್ರಾನುಭವ, ಲೋಕಾನುಭವ – ಇವೆ ಮೊದಲಾದ ವ್ಯುತ್ಪತ್ತಿಗಳು ಅನುಭವ ಎಂದೆನಿಸಿದರೆ, ಜೀವ ದೇವನನ್ನು ಪರಿಭಾವಿಸುವ ರೀತಿ ಅನುಭಾವವಾಗುತ್ತದೆ. ಅವೆರಡರ ಜೈವಿಕ ಸಂಬಂಧವೇ ಇದಾಗುತ್ತದೆ. ಇಂದ್ರಿಯಾತೀತವಾದ, ಭಾವನಿಷ್ಠ ವಾದ ಭವ್ಯಾನುಭವವೆನಿಸಿದ ಅನುಭಾವಕ್ಕೆ ಅನುಭವದ ಮೆಗು ಮೆತ್ತಿಕೊಳ್ಳಬೇಕು. ಆಗಲೇ ಅದಕ್ಕೆ ಸೊಬಗು ತುಂಬುವುದು. ಅನುಭವದಲ್ಲಿ ಅನುಭಾವವನ್ನು ಬೆರಸಿದ್ದೇ ವಚನಕಾರರ ವೈಶಿಷ್ಟ್ಯ. ಅದೇ ರಾಸಾಯನಿಕ ಕ್ರಿಯೆ ಪುರಾಣಿಕ ಸಿದ್ಧಯ್ಯನವರ ವಚ ನಗಳಲ್ಲಿ ನಡೆದಿದೆ. ಅನುಭಾವ ಅನೂಹ್ಯವಾದರೂ ಕವಿಯ ಕಲ್ಪನೆಯಲ್ಲಿ ಸೆರೆ ಸಿಕ್ಕಿದೆ. ಅನುಕ್ತವಾದರೂ ಕಾವ್ಯೋಕ್ತಿಯಲ್ಲಿ ಅಭಿ ವ್ಯಕ್ತಿ ಪಡೆದಿದೆ. ಅಚಿಂತ್ಯವಾದರೂ ವಚನ ದೇಹಿಯಲ್ಲಿ ಚೈತನ್ಯದ ಚಿಲುಮೆಯಾಗಿ ಚಿಮ್ಮಿದೆ. ಒಂದು ವಚನ :

**ನಾನು ಹುಟ್ಟುವ ಮುನ್ನ**
**ನೀನು ಹೇಗಿದ್ದೆಯೆಯ್ಯಾ** ?
**ಶಬ್ದ ಹುಟ್ಟಿದ ಮುನ್ನಿನ ಅರ್ಥದಂತೆ.**
**ದಾದ್ಯು ಹುಟ್ಟಿದ ಮುನ್ನಿನ ನಾದದಂತೆ**
**ಕುಂಚ ಹುಟ್ಟಿದ ಮುನ್ನಿನ ಚಿತ್ರದಂತೆ.**
**ಉಳಿ ಹುಟ್ಟಿದ ಮುನ್ನಿನ ಶಿಲ್ಪದಂತೆ.**
**ದೇಹ ಹುಟ್ಟಿದ ಮುನ್ನಿನ ಪ್ರಾಣದಂತೆ**
**ಇದ್ದೆಯಯ್ಯಾ !**
**ಸ್ವತಂತ್ರಧೀರ ಸಿದ್ಧೇಶ್ವರಾ.**
**ನಾನು ಹುಟ್ಟಿದ ಮೇಲೆ ತಾನೆ**
**ಅರ್ಥಕ್ಕೆ ಶಬ್ದ ನಾದಕ್ಕೆ ವಾದ್ಯ**

೨೨೮

**ಚಿತ್ರಕ್ಕೆ ಕುಂಚ, ಶಿಲ್ಪಕ್ಕೆ ಉಳಿ.**
**ನಿನಗೆ ಭಕ್ತ ದೊರೆತುದು** ?

ಇಲ್ಲಿದೆ ಶಿವಾದ್ವೈತದ ಸಿದ್ಧಿ. ಲೋಕದ ಸಿದ್ಧಯ್ಯ ಲೋಕಾತೀತ ಚೈತನ್ಯವೆನಿಸಿದ ಸಿದ್ಧೇಶ್ವರನನ್ನು ಗುರುತಿಸಿ, ಅವನಲ್ಲಿ ಬೆರೆತಿದ್ದಾನೆ.

ವಚನೋಧ್ಯಾನ ಅರ್ಥವಿಲ್ಲದ, ಆದರ್ಶದ, ವ್ಯರ್ಥ ಸ್ವರ್ಗ ಚಿಂತನೆಯ ಇಲ್ಲವೇ ಶುಷ್ಕ ವೇದಾಂತ ಪ್ರದರ್ಶನದ ವೇದಿಕೆ ಯಾಗಿಲ್ಲ. ನೈಜತೆಯ ನೆಲೆಗಟ್ಟಿನ ಮೇಲೆ ನಿಂತಿದೆ. ದಿವ್ಯ ಪ್ರತಿಭೆಯ ಸಿಂಚನದಿಂದ ಮಿಂಚಿ ಸಹಜ ಪ್ರತಿಭಾನದಲ್ಲಿ ಕಾಂತಿವೆತ್ತು ಸಹಜ ಭಾವದಿಂದ ಕಾವುವಡೆದು, ಭಾಷೆಯ ವೇಷದಲ್ಲಿ, ವಚನದ ಛಂದದಲ್ಲಿ ಅಂದವಾದ ಆಕೃತಿವಡೆದ ಭಾವಗೀತ ಇಲ್ಲಿದೆ. ಇಲ್ಲಿ ಪ್ರಯೋಗಗೊಂಡಿರುವ ಉಪಮೆ, ರೂಪಕಗಳು, ಪ್ರತಿಮೆ, ದೃಷ್ಟಾಂತಗಳು, ಅಲೌಕಿಕ ಅಗ್ರಾಹ್ಯವಾದವುಗಳಲ್ಲಿ, ನಿತ್ಯ ಜಿವನದ ಸತ್ಯ ಚಿತ್ರಣಗಳು.ಕಣ್ಣಿಗೆ ಕಟ್ಟುವಂತೆ ಮನಕ್ಕೆ ಮುಟ್ಟುವಂತೆ ಮೂಡಿಬಂದ ಮಾತಿನ ಮೂರ್ತಿಗಳು, (Images)

**ಅರ್ಧ ರಾತ್ರಿಯಲ್ಲಿ ಎದ್ದು ಹೋಗುವರೆಲ್ಲ ಗೌತಮ**
**ಬುದ್ಧರಾಗುವೇನಯ್ಯಾ** ?

**ಸಂನ್ಯಾಸವ ಸ್ವೀಕರಿಸಿದವರೆಲ್ಲ ಶಂಕರಾಚಾರ್ಯರಾಗುವರೇನಯ್ಯಾ ?**
**ಉಪನಯನವ ನಿರಾಕರಿಸಿದವರೆಲ್ಲ ಬಸವಣ್ಣನಾಗುವರೇನಯ್ಯಾ ?**
**ಶಾಸನವ ಉಲ್ಲಂಘಿಸಿದವರೆಲ್ಲ ಗಾಂಧೀಜಿ ಆಗುವರೇನಯ್ಯಾ ?**
**ಅಧಿಕಾರವ ನಿರಾಕರಿಸಿದವರೆಲ್ಲ ಅಥಣಿಯ ಶಿವಯೋಗಿಗಳು, ಮಠಾಧಿಪತಿಗಳು ಮೃತ್ಯುಂಜಯ ಶಿವಯೋಗಿಗಳಾಗುವರೇನಯ್ಯಾ? ಸ್ವತಂತ್ರಧೀರ ಸಿದ್ಧೇಶ್ವರಾ. ನಿನ್ನ ಹೆಸರ ಬಳಸುವರೆಲ್ಲ ನೀನಾಗುವರೇನಯ್ಯಾ ?**

ಇಷ್ಟೂ ದೃಷ್ಟಾಂತಗಳ ಹಿನ್ನಲೆಯಲ್ಲಿ ಆಧ್ಯಾತ್ಮವನ್ನು ಅರ್ಥೈಸಿದ್ದಾರೆ.

**ನಿನ್ನ ಉದ್ದರಿಮಖಾತೆಯಲ್ಲಿ ನನ್ನ ಹೆಸರೇ ಮೊದಲ ಪುಟದಲ್ಲಿ ಉಳಿದವರು ಅಷ್ಟಷ್ಟು ಬಾಕಿ ಮುಟ್ಟಿಸಿದರೂ ನಾನು ಒಂದು ಪೈಸೆಯನ್ನೂ ಮಾಡಿಲ್ಲವಯ್ಯಾ ? ಬಡ್ಡಿ ಕೇಳದ ದೊಡ್ಡ ಮನಸ್ಸಿನ ಸೆಟ್ಟಿ ನೀನು ಬಡ್ಡಿ ಹಾಕಿದ್ದರೆ ಏನಾಗುತ್ತಿತ್ತೋ ನನ್ನ ಪಾಡು? ಏಸು ಜನ್ಮ ಬರಿ ಬಡ್ಡಿಗಾಗಿಯೇ ದುಡಿಯಬೇಕಾಗುತ್ತಿತ್ತೋ ! ಉದ್ದರಿ ವಸೂಲಿಗಾಗಿ ನನ್ನನ್ನು ಕಾಡು, ಪೀಡಿಸುವ, ಕೊಳ್ಳುವ, ಮಾರುವ ಕೌಶಿಕ ನಕ್ಷತ್ರಿಕ ವೀರಬಾಹುಕರ ಕಳಿಸಯ್ಯಾ ಬಾಕಿದಾರನಾಗಿ ಸಾವುದ ತಪ್ಪಿಸಯ್ಯ ? ಅವರ ಕಾಲುಗುಣದಿಂದಲಾದರೂ**

೨೨೮

**ನಿನ್ನ ಕಾಲೆಡೆಯಲ್ಲಿ ಸ್ಥಳ ಸಿಕ್ಕಲಿ ಸ್ವತಂತ್ರಧೀರ ಸಿದ್ಧೇಶ್ವರಾ !**

ಈ ವಚನದ ಉಪಮೆಯ ಔಚಿತ್ಯವನ್ನೂ, ಅರ್ಥವಂತಿಕೆಯನ್ನೂ ಗಮನಿಸಬೇಕು.

ವಚನೋಧ್ಯಾನದಲ್ಲಿ ದರ್ಶನದೃಷ್ಟಿ ದ್ಯುತಿಪಡೆದಿದೆ. ಹೇಳಿಕೆಯಂತಹ ಮಾತುಗಳಲ್ಲಿ ಸ್ವಾನುಭವ ಬೆರೆತಿರುವುದು ಕಂಡು ಬರುತ್ತದೆ

**ಹೊಟ್ಟೆಗೆ ದಾಸರಾದವರಲ್ಲಿ ದಿಟ್ಟತನವಿರಬಹುದೆ? ಸಂಬಳಕ್ಕೆ ಮಾರುಹೋದವರಲ್ಲಿ ಗಟ್ಟಿತನವಿರಬಲ್ಲುದೆ ?**

* * * * * * *

**ಫಲದ ಆಸೆ ರಾಜಕಾರಣಿಗಲ್ಲದೆ ರಾಷ್ಟ್ರಭಕ್ತನಿಗಲ್ಲವಯ್ಯ**

* * * * * * *

**ಕೆಸರನ್ನು ತೊಳೆದುಕೊ ಎಂದರೆ ತೊಳೆದುಕೊಳ್ಳಬಲ್ಲೆ. ಆದರೆ ಕೆಸರನ್ನೇ ತೊಳೆಯಲಾರೆನಯ್ಯಾ !**

* * * * * * *

**ಉಪ್ಪಿನಕಾಯಿ ರುಚಿಯೆಂದು ಅದನ್ನೇ ಉಣ್ಣಲಾಗುವುದೇನಯ್ಯ**

* * * * * * *

**ಇಟ್ಟಿಗೆ ಕಟ್ಟಿಗೆಗಳನ್ನು ಕೊಂಡಾಕ್ಷಣ ಮನೆಯಾಯಿತೇನಯ್ಯಾ**

* * * * * * *

**ಬಿಳಿಯ ಬಟ್ಟೆಗೆ ಕಪ್ಪು ಕಲೆಯ ಭಯ ಕರಿಯ ಬಟ್ಟೆಗಾವ ಭಯವಯ್ಯಾ**

* * * * * * * *

ಇಂಥವೆನಿತೊ ಮಾತಿನ ಮುತ್ತುಗಳು ಇಲ್ಲಿ ಸುಗ್ಗಿ ಸೂರೆ ! ಕವಿ ಮನದ ಆಶಯ ನೋಡಿ

**ಭಾರತೀಯರು ಮನಸ್ಸು ಮಾಡಿದರೆ**
**ಭಾರತಕ್ಕೆ ಜಗದ್ಗುರು ಪಟ್ಟ ಕಟ್ಟಬಲ್ಲರಯ್ಯಾ ;**
**ಭಾರತೀಯರು ನಿಷ್ಠೆಯಿಂದ ದುಡಿದರೆ**
**ಪ್ರಗತಿಯ ಗೌರೀಶಂಕರನ ಮುಟ್ಟಬಲ್ಲರಯ್ಯಾ ;**
**ಭಾರತೀಯರು ಬಂಧು ಭಾವದಿಂದ ಒಂದಾಗಿದ್ದರೆ**
**ಎಂಥ ವೈರಿಯ ಎದೆಯನ್ನೂ ಮೆಟ್ಟಬಲ್ಲರಯ್ಯಾ**
**ಸ್ವತಂತ್ರಧೀರ ಸಿದ್ಧೇಶ್ವರಾ**
**ಭಾರತೀಯರು ಭಾರತೀಯತೆಯ ಸಿತಚ್ಛತ್ರಛಾಯೆಯಲ್ಲಿ**

೨೨೯

**ಭಾರತೀಯರಾಗಿ ಬೆಳೆದು**
**ಸರ್ವಶುಭಂಕರರಾಗಿ, ಅರಿಭಯಂಕರರಾಗಿ ತೊಳಗಿ**
**ಬೆಳಗುತ್ತಿರಲಯ್ಯಾ !**

ವಚನೋಧ್ಯಾನ ಸಿದ್ಧಯ್ಯ ಪುರಾಣಿಕರ ಆಚಾರ್ಯ ಕೃತಿ (Master piece). ಇದಕ್ಕೆ ೧೯೮೦ರ ಮೊತ್ತ ಮೊದಲ ಭಿಲ್ವಾರ ಪ್ರಶಸ್ತಿ ದತ್ತವಾಯಿತು. ಅನಂತರ ೧೯೮೧ರಲ್ಲಿ ಮಾಳವಾಡ ಪ್ರಶಸ್ತಿ ಪಾತ್ರವಾಯಿತು. ಪುರಾಣಿಕರಿಗೆ ೧೯೭೬ರಲ್ಲಿ ಇವರ ಸಾಹಿತ್ಯ ಸೇವೆಗಾಗಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪ್ರದತ್ತವಾಯಿತು. ೧೯೮೭ರಲ್ಲಿ ಕಲುಬುರ್ಗಿಯಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

ಶ್ರೀ ಕುವೆಂಪು ಒಂದು ಪತ್ರದಲ್ಲಿ ಹೀಗೆ ಬರೆದಿದ್ದಾರೆ –

'ಗುಜರಾತಿ ಕವಿ ಉಮಾಶಂಕರ ಜೋಶಿಯವರು ಭಾರತದ ವಿವಿಧ ಭಾಷೆಗಳಿಂದ ಕವನಗಳನ್ನು ಆಯ್ದು, ಗುಜರಾತಿ ಭಾಷೆಗೆ ಅನುವಾದ ಮಾಡಿ, ವ್ಯಾಖ್ಯಾನ ಸಹಿತ ಪ್ರಕಟಿಸಿದರು. ಕನ್ನಡದಿಂದ ಅವರು ಆರಿಸಿದ್ದು ಮಿತ್ರ ಶ್ರೀ ಸಿದ್ಧಯ್ಯ ಪುರಾಣಿಕರ ಕವನ ಎಂದು ತಿಳಿಸಿದಾಗ ನಾನು ಹರ್ಷ ಪುಳಿಕಿತನಾದೆ !'

ಇಂತಹ ಗಣ್ಯ ಪುಣ್ಯ ಕವಿ ಚಿರಾಯುವಾಗಲಿ.

೧೯೮೧ರಲ್ಲಿ ಮಾಳವಾಡ ಪ್ರಶಸ್ತಿ ಪಾತ್ರವಾಯಿತು. ಪುರಾಣಿಕರಿಗೆ ೧೯೭೬ರಲ್ಲಿ ಇವರ ಸಾಹಿತ್ಯ ಸೇವೆಗಾಗಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪ್ರದತ್ತವಾಯಿತು. ೧೯೮೭ರಲ್ಲಿ ಕಲುಬುರ್ಗಿಯಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

ಶ್ರೀ ಕುವೆಂಪು ಒಂದು ಪತ್ರದಲ್ಲಿ ಹೀಗೆ ಬರೆದಿದ್ದಾರೆ –

'ಗುಜರಾತಿ ಕವಿ ಉಮಾಶಂಕರ ಜೋಶಿಯವರು ಭಾರತದ ವಿವಿಧ ಭಾಷೆಗಳಿಂದ ಕವನಗಳನ್ನು ಆಯ್ದು, ಗುಜರಾತಿ ಭಾಷೆಗೆ ಅನುವಾದ ಮಾಡಿ, ವ್ಯಾಖ್ಯಾನ ಸಹಿತ ಪ್ರಕಟಿಸಿದರು. ಕನ್ನಡದಿಂದ ಅವರು ಆರಿಸಿದ್ದು ಮಿತ್ರ ಶ್ರೀ ಸಿದ್ಧಯ್ಯ ಪುರಾಣಿಕರ ಕವನ ಎಂದು ತಿಳಿಸಿದಾಗ ನಾನು ಹರ್ಷ ಪುಳಿಕಿತನಾದೆ !'

ಇಂತಹ ಗಣ್ಯ ಪುಣ್ಯ ಕವಿ ಚಿರಾಯುವಾಗಲಿ.

# ಸಾಹಿತ್ಯ ತಪಸ್ವಿ*

==========================================================================

ನನ್ನ ಮತ್ತು ಡಾ.ಆರ್.ಸಿ. ಯವರ ಪ್ರಥಮ ಭೇಟಿ ಆಕಸ್ಮಿಕ ಅಲ್ಲ. ಅದು ಪೂರ್ವ ನಿರ್ಧಾರಿತ ನಿಯೋಜನೆ ಆಗಿತ್ತು. ಅಂದರೆ ೧೯೫೭ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಲ್ಲಿನ ಕನ್ನಡ ಅಧ್ಯಾಪಕ ಹುದ್ದೆಗೆ ಅಭ್ಯರ್ಥಿಯಾಗಿ ದಾವಣಗೆರೆಯಿಂದ ಧಾರವಾಡಕ್ಕೆ ಹೋದಾಗ ಅವರನ್ನು ಭೇಟಿಮಾಡಿದ್ದೆ. ಅಂದು ಡಾ. ನಂದಿಮಠರವರ ಜೊತೆಯಲ್ಲಿ ವಿಷಯತಜ್ಞರಾಗಿ ಆರ್.ಸಿ. ಯವರು ಉಪಸ್ಥಿತರಿದ್ದರು. ನನಗಲ್ಲಿ ಸೇವೆಗೈಯುವ ಅವಕಾಶ ಸಿಗಲಿಲ್ಲ. ಸರ್ಕಾರಿ ಕಾಲೇಜಿನಲ್ಲಿ ಅದನ್ನು ಮುಂದುವರಿಸಿದೆ. ಶಿವಮೊಗ್ಗೆಯ ಸಹ್ಯಾದ್ರಿ ಕಾಲೇಜಿಗೆ ವರ್ಗವಾದ ಮೇಲೆ ಬನವಾಸಿ, ಬಳ್ಳಿಗಾವೆ ಮೊದಲಾದ ಸ್ಥಳಗಳನ್ನು ನೋಡಿಕೊಂಡು ಬರಲು ನಾನೋರ್ವನೇ ಅಲೆಮಾರಿಯಾಗಿ ಹೋದಾಗ ಪಂಪನನ್ನು ಕುರಿತು ಕಾದಂಬರಿ ಬರೆಯಬೇಕು ಎಂದಂದುಕೊಂಡೆ. ವಿಷಯ ಸಂಗ್ರಹಣ, ಸ್ಥಳ ಪರಿಶೀಲನಗಳಲ್ಲಿ ತೊಡಗಿದಾಗ ಕೆಳದಿಯ ಆಸ್ಥಾನ ಕೊಟ್ಟ ಸುಮಾರು ೪೦-೫೦ ಓಲೆ ಕಟ್ಟುಗಳು ಸಿಕ್ಕಿದವು. ಅಂದು ಶರಾವತಿ ವ್ಯಾಲಿ ಪ್ರಾಜೆಕ್ಟ್ ನಿರ್ಮಾಣ ಆಗುತ್ತಿತ್ತು. ಅದರ ಹಿಂಬದಿಯ ಸಹಸ್ರಾರು ಎಕರೆ ಅಡಿಕೆ ತೋಟಗಳು ಬತ್ತದ ಗದ್ದೆಗಳು, ಊರು ಕೇರಿಗಳು ಮುಳುಗಡೆಯಾಗಲಿದ್ದವು. ಜೊತೆಗೆ ಕಾಸರವಳ್ಳಿ ಸಾಹುಕಾರ್ ರಾಮಸ್ವಾಮಿಯವರು ಮತ್ತು ಕೆಳದಿ ಗುಂಡಾ ಜೋಯಿಸರ ಮನೆಗಳಲ್ಲಿ ಸಾಕಷ್ಟು ಓಲೆ ಹೊತ್ತಿಗೆಗಳು ಸಿಕ್ಕಿದವು. ಅವು ಕನ್ನಡಕ್ಕೆ ಸಿಕ್ಕ ಅಮೂಲ್ಯ ನಿಧಿಯಾದ್ದ ರಿಂದ ಪಂಪನನ್ನು ಕುರಿತು ಕಾದಂಬರಿಯನ್ನು ಕೈಬಿಟ್ಟು, ಕೆಳದಿಯ ಆಸ್ಥಾನ ಸಾಹಿತ್ಯ ಕುರಿತು ಒಂದು ಮಹಾ ಪ್ರಬಂಧ ರಚಿ ಸಲು ನಿರ್ಧರಿಸಿದೆ. ಡಾ.ಆರ್.ಸಿ. ಯವರ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸುವುದು ಗೌರವದ ಅಂಶವೆಂದು ನನ್ನ ಗೆಳೆ ಯರನೇಕರು ಸಲಹೆ ನೀಡಿದ್ದರಿಂದ ನಾನು ಎರಡನೆಯ ಬಾರಿ ಧಾರವಾಡ ಕಂಡೆ. ಡಾ.ಆರ್.ಸಿ. ಯವರ ದರ್ಶನ ಪಡೆದೆ. ಪೂಜ್ಯರನ್ನು ಮಾಗ್ದರ್ಶನ ಮಾಡಲು ಕೇಳಿಕೊಂಡೆ. ಅಂದೇ ನಾನವರ ಶಿಷ್ಯನಾದೆ. ವಿಶ್ವವಿದ್ಯಾಲಯಕ್ಕೆ ಹಣ ಪಾವತಿಸಿ 'ಕೆಳ ದಿಯ ಅರಸರ ಕಾಲದ ಕನ್ನಡ ಸಾಹಿತ್ಯ' ಎಂಬ ವಿಷಯ ಕುರಿತ ಅಧ್ಯಯನ ನಡೆಸುವುದಾಗಿ ನಮೂದಿಸಿ, ಹೆಸರನ್ನು ನೊಂದಾ ಯಿಸಿ ಬಂದೆ.

ಒಂದು ವರ್ಷ ಅತ್ಯಂತ ಉತ್ಸಾಹದಿಂದಲೇ ಕ್ಷೇತ್ರ ಕಾರ್ಯ ಮಾಡಿದೆ. ಶಿವಮೊಗ್ಗ ಜಿಲ್ಲೆಯ ಊರುಗಳನ್ನೆಲ್ಲಾ ಸುತ್ತಿ ಸುಸ್ತಾದೆ. ಕ್ರಮೇಣ ನನ್ನ ಉತ್ಸಾಹದ ಚಿಲುಮೆ ಬತ್ತುತ್ತಾ ಬಂದು, ಕಡೆಯಲ್ಲಿ ನಿಂತು ಹೋಯಿತು. ಕೈಸಾಗದ ಕಾರ್ಯವೆಂ ದರಿತು, ಆರು ವರ್ಷ ಕಾಲ ಅದನ್ನು ಅಜ್ಞಾತವಾದಲ್ಲಿರಿಸಿದೆ. ಅನಂತರ ಡಾ. ಕಲಬುರ್ಗಿಯವರ ಪ್ರೋತ್ಸಾಹದಿಂದಾಗಿ ಮತ್ತೆ ಕೈ ಹಿಡಿದೆ. ಕೆಲವು ಟಿಪ್ಪಣಿಗಳನ್ನಾಧರಿಸಿ ರಚಿಸಿದ ಒಂದೆರಡು ಅಧ್ಯಾಯಗಳನ್ನು ಕೊಂಡುಹೋಗಿ ತೋರಿಸಿದೆ. ಪೂಜ್ಯರು ಬಹು ದಿನಗಳ ಗೈರುಹಾಜರಿಗೆ ಬೇಸರಪಟ್ಟುಕೊಳ್ಳಲಿಲ್ಲ. ಏನೋ ವೈಯುಕ್ತಿಕ ತೊಂದರೆಯಿಂದಾಗಿ ತಡವಾಯಿತೆಂದು ತಾವೇ ನನಗೆ ಸಾಂತ್ವನ ಹೇಳಿದರು. ಗುರುಗಳ ವಾತ್ಸಲ್ಯಪೂರಿತ ನುಡಿಗಳು ನನ್ನನ್ನು ಮೂಕವಿಸ್ಮಿತನನ್ನಾಗಿಸಿದವು. ಅವರ ಕ್ಷಮೆ ಕೋರಿ ಮಹಾ ಮಣಿಹವನ್ನು ಮುಂದುವರಿಸುವುದಾಗಿ ಪ್ರತಿಜ್ಞೆ ಸ್ವೀಕರಿಸಿದೆ.

ದಿನಗಳು ಉರುಳಿದವು.

ಒಂದು ವರ್ಷ ಪಟ್ಟು ಹಿಡಿದು ಕುಳಿತು ಪ್ರಪಂಚದ – ಅದರಲ್ಲೂ ವಿಶೇಷವಾಗಿ ಭಾರತದ – ಭಾಷಾ ಸಾಹಿತ್ಯಗಳಿಗೆ ದೊರೆತ ರಾಜಾಶ್ರಯ ಕುರಿತು ಸುಮಾರು ಮೂರು ನೂರ ಪುಟಗಳ ಬರಹವನ್ನು ಹೊತ್ತುಕೊಂಡು ಧಾರವಾಡಕ್ಕೆ ಹೋದೆ. ಪೂಜ್ಯರು ಆದ್ಯಂತ ಓದಿ 'ಇಷ್ಟೆಲ್ಲದರ ಅಗತ್ಯ ಇಲ್ಲ. ನೀವು ಕೆಳದಿಯ ಅರಸರ ಕುರಿತ ಸಂಕ್ಷಿಪ್ತ ಇತಿಹಾಸ ಕೊಡಿ, ಅನಂತರ – ನೇರವಾಗಿ ಅಲ್ಲಿ ಸಿಕ್ಕ ಸಾಹಿತ್ಯ ಬಗೆಗೆ, ಅದರ ಸ್ವರೂಪಾದಿಗಳ ಬಗೆಗೆ ವಿಸ್ತೃತವಾಗಿ ಬರೆಯಿರಿ. ಅಂತೆಯೇ ನೀವು ಕೊಟ್ಟ ವಿಷಯ ಸಮಂಜಸವಾಗಿ ಕಾಣುತ್ತಿಲ್ಲ. ತುಸು ಬದಲಾವಣೆ ಮಾಡುವುದು ಸೂಕ್ತ' ಎಂದರು.

---

*ದ್ವಿತೀಯ ಅಖಿಲ ಭಾರತ ಶರಣ ಸಾಹಿತ್ಯ ಸಮ್ಮೇಳನ ೧೯೮೮ ಸಪ್ಟೆಂಬರ್‌ನಲ್ಲಿ ಬೆಂಗಳೂರಿನ ಶ್ರೀ ನಿಜಗುಣ ಮಹಾಸ್ವಾಮಿಗಳ ಜಂಗಮ ಮಠದಲ್ಲಿ ನಡೆಯಿತು. ಅಂದಿನ ಸಮ್ಮೇಳನಾಧ್ಯಕ್ಷರು ಡಾ.ಆರ್.ಸಿ. ಹಿರೇಮಠರವರು. ಆ ಸಂದರ್ಭದ ನೆನಪಿಗಾಗಿ.

೧೯೬೮–೬೯ರಲ್ಲಿ ಸರ್ಕಾರಿ ಕಾಲೇಜಿನಲ್ಲಿ ನಾನಿದ್ದ ಹುದ್ದೆಗೆ ಬಡ್ತಿ ಸಿಗುವ ಸಂಭವ ಇತ್ತು. ಅದಕ್ಕೆ ಸಾಕಷ್ಟು ಪ್ರಮಾಣದ ಸ್ಪರ್ಧೆಯೂ ಇತ್ತು. ವಿಷಯ ತಿಳಿಸಿದೆ, ಗುರುಗಳು, ನಿಮಗೆ ಒಳ್ಳೆಯದಾಗಲಿ, ಸದ್ಯಕ್ಕಂತೂ ಡಾಕ್ಟೊರೇಟ್ ಪ್ರದತ್ತ ಸಾಧ್ಯವಿಲ್ಲ. ನೀನು ನಿಮ್ಮ ಮಹಾಪ್ರಬಂಧವನ್ನು ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸಬೇಕು. ಪರೀಕ್ಷಕರ ಮಂಡಲಿ ರಚನೆ ಆಗಬೇಕು. ಸಿಂಡಿಕೇಟ್ ಸೇರಬೇಕು, ನಿಮಗೆ ಡಿಗ್ರಿ ಕೊಡಬೇಕು. ಇದೆಲ್ಲ ನಿಮ್ಮ ಆತುರಕ್ಕೆ ಆಗದ ಕೆಲಸ. ಆದ್ದರಿಂದ ನಿಮಗೊಂದು ಸರ್ಟಿಫಿಕೇಟ್ ಕೊಡ್ತೇನೆ. ಇಷ್ಟರಲ್ಲಿ ಡಾಕ್ಟೊರೇಟ್ ನೀಡಲಾಗುವುದು ಎಂದು ನಿಮ್ಮ ಹೆಸರನ್ನು ವಿಶೇಷವಾಗಿ ಶಿಫಾರಸು ಮಾಡ್ತೇನೆ. ಇದರ ಉಪಯೋಗ ಪಡೆದುಕೊಳ್ಳಿ' ಎಂದು ಹೇಳಿ, ಆಶೀರ್ವದಿಸಿ ಕೊಟ್ಟರು. ಆದರೆ ಈ ಅದೃಷ್ಟಹೀನನಿಂದ ಪುಣ್ಯ ಪಲಾಯನ ಮಾಡಿತು.

ಪಿ.ಎಚ್.ಡಿ. ಸಂಬಂಧದ ಸಂದರ್ಶನದ ದಿನ ಗೊತ್ತಾಗಿ ನನಗೆ ಕರೆ ಬಂತು. ಧಾರವಾಡಕ್ಕೆ ಹೋದೆ. ಸಮಯಕ್ಕೆ ಸರಿಯಾಗಿ ಕಾರ್ಯಕ್ರಮ ಆರಂಭವಾಯಿತು. ಡಾ.ಡಿ.ಎಸ್. ಕರ್ಕಿಯವರು, ಡಾ.ಎಲ್. ಬಸವರಾಜುರವರು, ಡಾ. ಕುಲಕರ್ಣಿಯವರು, ಡಾ.ಎಂ. ವೃಷಭೇಂದ್ರಸ್ವಾಮಿಯವರು ಇನ್ನೂ ಕೆಲವರು ಸಭೆಯಲ್ಲಿ ಉಪಸ್ಥಿತರಿದ್ದರು. ಚಹಾಪಾನದ ನಂತರ ಡಾ. ಆರ್.ಸಿ. ಯವರು ಎಲ್ಲರನ್ನೂ ಆತ್ಮೀಯವಾಗಿ ಸ್ವಾಗತಿಸಿ, 'ನೋಡಿ ನಾನು ಮತ್ತು ಮರುಳಯ್ಯ ಅಪರಾಧಿಗಳು. ಥೀಸೀಸ್ ಸಿದ್ಧಪಡಿಸಿ ನೀವು ತನಿಖೆ ನಡೆಸಬಹುದು' ಎಂದು ಹಾಸ್ಯ ಚಟಾಕಿ ಹಾರಸಿದರು. ಪ್ರಶ್ನೋತ್ತರಗಳು ಮುಗಿದು ಎಲ್ಲರೂ ನನಗೆ ಶುಭಾಶಯ ಕೋರಿದರು.

ಇದು ನನ್ನ ಮತ್ತು ಡಾ.ಆರ್.ಸಿ. ಯವರ ಗುರು–ಶಿಷ್ಯ ಬಾಂಧವ್ಯದ ಇತಿಹಾಸ.

ಪೂಜ್ಯ ಡಾ.ಆರ್.ಸಿ. ಯವರು ಸರಳರು, ಸಜ್ಜನರು, ಸಾತ್ವಕಿ ಸ್ವಭಾವದವರು. ಮಾತೃ ಹೃದಯ ಉಳ್ಳವರು ಕೂಡ. ವಿದ್ಯೆಯಿದ್ದಲ್ಲಿ ವಿನಯವಿರಬೇಕು ಎಂಬುದಕ್ಕೆ ನಿಂತ ನಿದರ್ಶನವಾಗಿದ್ದರು. ಯಾವ ಹೊತ್ತಿನಲ್ಲಿ ಹೋದರೂ ಆದರದಿಂದ ಸ್ವಾಗತಿಸಿ, ಆತ್ಮೀಯತೆಯಿಂದ ಯೋಗಕ್ಷೇಮ ವಿಚಾರಿಸುತ್ತಿದ್ದರು. ಬೆಂಗಳೂರಿಗೆ ಬಂದಾಗಲೆಲ್ಲಾ ದೂರವಾಣಿಯ ಮೂಲಕ ಮಾತನಾಡಿಸುತ್ತಿದ್ದರು. ಸಮಯವಿದ್ದರೆ ಮನೆಗೆ ಬಂದು ನಮ್ಮ ಆತಿಥ್ಯ ಸ್ವೀಕರಿಸುತ್ತಿದ್ದರು. ಅಂತಹ ಅವರ ವಾತ್ಸಲ್ಯದ ವೃಕ್ಷದಲ್ಲಿ ಬೆಳೆದ ನಾನು ನಿಜಕ್ಕೂ ಧನ್ಯ.

ಡಾ. ರುದ್ರಯ್ಯ ಚಂದ್ರಯ್ಯ ಹಿರೇಮಠರವರು ಹುಟ್ಟಿದ್ದು ಧಾರವಾಡ ಜಿಲ್ಲಾ ರೋಣ ತಾಲ್ಲೂಕು ಕುರುಡಗಿ ಗ್ರಾಮದಲ್ಲಿ. ೧೫ ಜನವರಿ ೧೯೨೦ರಲ್ಲಿ. ಆಊರಿನ ಜಂಗಮಜ್ಯೋತಿ ಚಂದ್ರಯ್ಯನವರು ಮತ್ತು ಅವರ ಪತ್ನಿ ಶ್ರೀಮತಿ ವೀರಮ್ಮ ಇವರ ದ್ವಿತೀಯ ಪುತ್ರರು ಇವರು. ತಂದೆ ವಿದ್ವನ್ಮಣಿಗಳು, ಪ್ರಸಿದ್ಧ ಪ್ರವಚನಕಾರರು. ಅವರ ಮನ ನೋಡಾ ಘನ, ಮನೆ ನೋಡಾ ಬಡವರು ! ಕಿತ್ತು ತಿನ್ನುವ ಬಡತನವನ್ನು ಸಹಿಸಲಾರದೆ ಆರ್.ಸಿ. ಯವರ ತಾಯಿ ತನ್ನ ಒಂದು ಹೆಣ್ಣು, ಐದು ಗಂಡು ಒಟ್ಟು ಆರು ಮಕ್ಕಳನ್ನು ಕಟ್ಟಿಕೊಂಡು ಆತ್ಮಹತ್ಯೆಗೆ ತೊಡಗಿದುದೂ ಉಂಟು. ಯಾವುದೋ ಮಹತ್ ಕಾರ್ಯಸಾಧನೆಗಾಗಿ ದೈವ ಎಲ್ಲರನ್ನೂ ಉಳಿಸಿತು. ಆದರೆ ಖಾಯಿಲೆ ಬಿದ್ದ ಎರಡು ಗಂಡು ಮಕ್ಕಳು ಔಷಧಿ ಕಾಣದೆ ಅಸುನೀಗಿದವು.

ಇಂತಹ ದಾರುಣ ಪರಿಸ್ಥಿತಿಯಲ್ಲಿ ದಿನ ನಿತ್ಯದ ತುತ್ತಿನ ಚೀಲ ತುಂಬುವುದೇ ಕಷ್ಟವಾಗಿರುವಾಗ ಮಕ್ಕಳ ವಿದ್ಯೆಗೆಲ್ಲಿ ಗಮನ ವಿದ್ಯೆ ಶಿವನಿಗೆ ನೈವೇದ್ಯವಾಯಿತು ! ಬಾಲಕ ರುದ್ರಯ್ಯ ನಿತ್ಯವೂ ತರುತ್ತಿದ್ದ ಕೋರಾನ್ನದಿಂದ ಬದುಕು ಸಾಗದಾಯಿತು. 'ಕೆಟ್ಟು ಪಟ್ಟಣ ಸೇರು ಎಂಬಂತೆ ಚಂದ್ರಯ್ಯನವರು ಕುಟುಂಬ ಪರಿವಾರದೊಂದಿಗೆ ಗದಗಿಗೆ ಸ್ಥಲಾಂತರಿಸಿದರು. ಬಾಲಕ ರುದ್ರಯ್ಯ ಗದುಗಿನಲ್ಲೊಂದು ಕೆಲಸ ಗಿಟ್ಟಿಸಿಕೊಂಡ. ಅದು ಬಂಗಾರ ಶೆಟ್ಟರ ಪೆಟ್ರೋಲ್ ಬಂಕ್‌ನಲ್ಲಿ ಪಂಪ್ ಒತ್ತುವ ಕೆಲಸ.! ಆದರೆ ಬಂಕ್‌ನ ಪಕ್ಕದಲ್ಲೇ ಇದ್ದ ಶಾಲೆಯ ಆಕರ್ಷಣೆ ಬಲವಾಯಿತು ರುದ್ರಯ್ಯನಿಗೆ. ಇದನ್ನರಿತ ಬಂಕ್‌ನ ಮೇಲ್ವಿಚಾರಕ ಬ್ಯಾಡಗಿ ಶಿವಪ್ಪನವರು ಬಾಲಕನಿಗೆ ಶಲೆ ಕಲಿಯುವ ವ್ಯವಸ್ಥೆ ಮಾಡಿದರು. ಪ್ರಾಥಮಿಕ ವಿದ್ಯಾಭ್ಯಾಸ ಮುಗಿಯಿತು. ಮುಲ್ಕಿ ಪರೀಕ್ಷೆ

೨೩೨

ನಡೆಯುವ ಮುನ್ನವೆ ತಂದೆ ಚಂದ್ರಯ್ಯ ಶಿವೈಕ್ಯರಾದರು. ತಾಯಿಗೆ ಕಣ್ಣುಗಳು ಹೋದವು. ಕುರುಡಿಯಾದ ತಾಯಿ, ಎಳೆಯ ಸೋದರ ಸೋದರಿಯರು ! ರುದ್ರಯ್ಯನಿಗೆ ದಿಕ್ಕು ತೋಚದಾಯಿತು. ಆ ಸಂಕಷ್ಟ ಸಮಯದಲ್ಲಿ ದೈವ ಡಾ. ತುಮ್ಮಿನಕಟ್ಟಿಯವರ ರೂಪದಲ್ಲಿ ಬಂದು ನೆರವಾಯಿತು. ಬಾಲಕನ ವಿದ್ಯಾಭ್ಯಾಸಕ್ಕೆ ಓರ್ವ ಸರ್ವಚಾಲನೆ ಸಿಕ್ಕಿತು. 'ವಿದ್ಯಾರ್ಥಿ ಜೀವನ ಎಂಬುದು ಒಂದು ತಪಸ್ಸು. ಪ್ರತಿಯೊಬ್ಬ ವಿದ್ಯಾರ್ಥಿಯೂ ಒಬ್ಬ ಗವರವ ತಪಸ್ವಿ. ವಿದ್ಯಾರ್ಜನೆಯ ಸಮಯವೆಂಬುದು ಆವನ ಆತ್ಮಶಕ್ತಿಯ

ಸಂಗ್ರಹದ ಕಾಲ' ಈ ಉಕ್ತಿಯನ್ನು ಸತ್ಯ ಮಾಡಿದ ಆರ್.ಸಿ. ೧೯೩೮ರ ಮ್ಯಾಟ್ರಿಕ್ ಪರೀಕ್ಷೆಯಲ್ಲಿ ೧೦೦ಕ್ಕೆ ೯೦ ಗುಣಗಳನ್ನು ಪಡೆದು ಉತ್ತೀರ್ಣರಾದರು.

ರುದ್ರಯ್ಯನವರ ಕಾಲೇಜು ಶಿಕ್ಷಣಕ್ಕೆ ಪ್ರೊ. ಆರ್.ವಿ. ಜಹಗೀರ್‌ದಾರರು (ಖ್ಯಾತ ನಾಟಕಕಾರ ದಿವಂಗತ ಶ್ರೀರಂಗ) ಕಾರಣರಾದರು. ಅದರಲ್ಲಿ ಡಾ.ಸಿ.ಜೆ. ನಂದಿಮಠರ ಕರುಣೆಯೂ ಬಂದು ಸೇರಿತು. ಬಿ.ಟಿ. ಸಾಸನೂರರ ಸ್ನೇಹ ಬಳಿಸಿತು. ರುದ್ರಯ್ಯನವರ ಬೆಳಗಾವಿಯ ಲಿಂಗರಾಜ ಕಾಲೇಜು ಸೇರಿದರು. ಡಾ.ಕೆ.ಆರ್. ಶ್ರೀನಿವಾಸ ಅಯ್ಯಂಗಾರ್, ಶಿ.ಸಿ. ಬಸವನಾಳ, ಸಮ.ಶಿ. ಭೂಸನುರಮಠ, ವಿ.ಜಿ. ಕುಲಕರ್ಣಿ ಮೊದಲಾದ ಗುರುಗಳ ಸಾನಿಧ್ಯದ ಪುಣ್ಯ ಪ್ರಾಪ್ತವಾಯಿತು. ಬಿ.ಎ., ಎಂ.ಎ. ಪದವೀಧರರಾದ ಆರ್.ಸಿ. ಅವರಿಗೆ ಬಾಗಲಕೋಟೆಯ ಬಸವೇಶ್ವರ ಕಾಲೇಜಿನಲ್ಲಿ ಕೆಲಸ ಕಾದಿತ್ತು. ಕನ್ನಡ ಅಧ್ಯಾಪಕರಾಗಿ ಸೇರಿದರು. ಕ್ರಮೇಣ ಬಡತನ ಬಯಲಾಯಿತು, ಸುಖಸಖ್ಯಗಳು ಸ್ವಾಗತಿಸಿದವು.

| | | |
|---|---|---|
| **ಬಡತನಕ್ಕೆ** | **ಉಂಬುವ** | **ಚಿಂತೆ** |
| **ಉಂಬುವುದಾದರೆ** | **ಉಡುವ** | **ಚಿಂತೆ** |
| **ಉಡುವುದಾದರೆ** | **ಹೆಂಡಿರ** | **ಚಿಂತೆ** |
| **ಹೆಂಡಿರಾದರೆ** | **ಮಕ್ಕಳ** | **ಚಿಂತೆ** |
| **ಮಕ್ಕಳಾದರೆ** | **ಬದುಕಿನ** | **ಚಿಂತೆ** |
| **ಬದುಕಾದರೆ** | **ಕೇಡಿನ** | **ಚಿಂತೆ,** |

**ಕೆಡದಿರೆ ಮರಣದ ಚಿಂತೆ !**

ಶರಣರು ಸಾರಿದ ಚಿಂತೆಗಳಲ್ಲಿ ಕೆಲವಾದರೂ ಆರ್.ಸಿ. ಯವರ ಕೈಬಿಡಲಿಲ್ಲ. ಮುಖ್ಯವಾದದ್ದು ಮದುವೆ. ಮದುವೆ ಆಗ ಬೇಕು ನಿಜ. ಆದರೆ ಹೆಣ್ಣು ಕೊಡುವವರು ಮುಂದೆ ಬರಬೇಕಲ್ಲ ! ಆದರೆ ಬೆಳಗಾವಿ ಜಿಲ್ಲಾ, ತುರಮುರಿಯಪುರ ಮಠರವರ ಮಗಳು ಶ್ರೀಮತಿ ಸುಮತಿದೇವಿಯವರು ಆರ್.ಸಿ. ಯವರ ಭಾಗ್ಯದೇವತೆ ಆದರು. ೧೯೪೮ರಲ್ಲಿ ಅವರಿಬ್ಬರ ವಿವಾಹ ನೆರವೇ ರಿತು. ಅಂದಿನಿಂದ ಪ್ರಾಧ್ಯಾಪಕ ರುದ್ರಯ್ಯನವರ ಬದುಕು ಬಂಗಾರವಾಯಿತು.

ಅಧ್ಯಾಪಕ ವೃತ್ತಿ ಆರ್.ಸಿ. ಯವರ ಅಚ್ಚುಮೆಚ್ಚಿನ ಕಾಯಕ. ಅದನ್ನವರು ಒಪ್ಪಿ ಅಪ್ಪಿಕೊಂಡರು. ೧೯೫೦ರಲ್ಲಿ ಆರಂಭ ವಾದ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಇಬಗಕ್ಕೆ ಅವರು ಅಧ್ಯಾಪಕರಾಗಿ ಬಂದರು ; ಪ್ರಾಧ್ಯಾಪಕರಾದರು. ಕನ್ನಡ ಅಧ್ಯ ಯನ ಪೀಠದ ಅಧ್ಯಕ್ಷರಾದರು. ಅದೇ ವಿಶ್ವವಿದ್ಯಾಲಯದ ಕುಲಪತಿಗಳೂ ಆದರು. ಸೇವೆಯಿಂದ ನಿವೃತ್ತರಾದ ಮೇಲೆ, ತಿವೇಂ ದ್ರಂ ಅಂತರರಾಷ್ಟ್ರೀಯ ದ್ರಾವಿಡ ಭಾಷಾ ಸಂಸ್ಥೆಯ ನಿರ್ದೇಶಕರಾಗಿ ಸೇವೆ ಸಲ್ಲಿಸಿ, ಈಗ ವಿಶ್ರಾಂತಿ ಜೀವನವನ್ನು ಆನಂದ ದಿಂದ ಸವಿಯುತ್ತಿದ್ದಾರೆ. ಆದರೆ ಅಧ್ಯಯನ ಮಾತ್ರ ಅವರ ಬಾಳಿನ ಉಸಿರಾಗಿದೆ.

ಕರ್ನಾಟಕ ವಿಶ್ವವಿದ್ಯಾಲಯದ ಪ್ರತಿಯೊಂದು ಶಾಖೆಯೂ ಡಾ.ಆರ್.ಸಿ ಯವರ ಬೆವರುಂಡು ಬೆಳೆದಿದೆ. ಡಾ.ಡಿ.ಸಿ. ಪಾವ ಟೆಯವರ ಕನಸನ್ನು ನನಸು ಮಾಡಿದ ಕೀರ್ತಿ ಆರ್.ಸಿ. ಯವರದು. ಕನ್ನಡ ಅಧ್ಯಯನ ಪೀಠದ ಸ್ಥಾಪನೆ, ಕನ್ನಡ ಎಂ.ಎ. ತರ ಗತಿಗಳಲ್ಲಿ ಭಾಷಾ ವಿಜ್ಞಾನ ಮತ್ತು ಜನಪದ ಸಾಹಿತ್ಯಗಳನ್ನು ಅಧ್ಯಯನವಿಷಯಗಳನ್ನಾಗಿಸಿದ್ದು, ಭಾಷಾಂತರ ಡಿಪ್ಲೊಮೊ, ವೀರ ಶೈವ, ಜೈನ ಮತ್ತು ವೈದಿಕ ತೌಲನಿಕ ಧರ್ಮ ಡಿಪ್ಲೊಮೊ ತೆರೆದದ್ದು. ಅಖಿಲಭಾರತ ಗ್ರಂಥಾಲಯ ಸಮ್ಮೇಳನ, ಅಖಿಲ ಭಾರತ ಎಪಿಗ್ರಾಫಿ ಸಮ್ಮೇಳನ, ಅಖಿಲ ಭಾರತ ಸ್ಮಾರಕ ಶಿಲೆಗಳ ಸಮ್ಮೇಳನ, ಅಖಿಲ ಭಾರತ ಪ್ರಾಣಿಶಾಸ್ತ್ರ ಸಮ್ಮೇಳನ, ಅಖಿಲ ಭಾರತ ಮಾನಸ ಶಾಸ್ತ್ರ ಸಮ್ಮೇಳನ ಇತ್ಯಾದಿ ಅಖಿಲ ಭಾರತ ವ್ಯಾಪ್ತಿಯ ಸಮ್ಮೇಲನಗಳು – ಇವೆಲ್ಲ ಅವರ ಸತತ ಶ್ರಮದ ಫಲಗಳು. ಅವರು ಕುಲಪತಿಗಳಾಗಿರುವಾಲೇ ಕರ್ನಾಟಕ ವಿಶ್ವವಿದ್ಯಾಲಯದ ರಜತ ಮಹೋತ್ಸವವನ್ನು ಅತ್ಯಂತ ಯಶಸ್ವಿಯಾಗಿ ಆಚರಿಸಿದ ಭಾಗ್ಯಶಾಲಿಗಳು.

ಡಾ.ಆರ್.ಸಿ. ಯವರ ಬಹು ದೊಡ್ಡ ಕೊಡುಗೆಯೆಂದರೆ ವಚನ ವಾಙ್ಮಯ ಯೋಜನೆ. ವಚನ ವಾಙ್ಮಯದ ಶಾಸ್ತ್ರೀಯ ಪ್ರಕಟಣೆಯನ್ನು ಕೈಗೆತ್ತಿಕೊಂಡ ಅವರು ಅದರ ಸಂಪಾದನೆಗೆ ತಮ್ಮದೇ ಆದ ಮಾರ್ಗ ಕಂಡುಕೊಂಡು ಚನ್ನಬಸವಣ್ಣ, ಸಿದ್ಧ ರಾಮ, ಬಸವಣ್ಣ, ಅಲ್ಲಮಪ್ರಭು – ಈ ಪ್ರಮುಖ ವಚನಕಾರರ ವಚನಗಳನ್ನು ಗ್ರಂಥ ಸಂಪಾದನೆಯ ನಿಯಮಗಳಿಗೆ ಅನುಸಾ ರವಾಗಿ ಸಂಪಾದಿಸಿ ಪ್ರಕಟಿಸಿದರು. ಅವರ ಸಕಲ ಪುರಾತನ ವಚನಗಳು ೧,೨ ಮತ್ತು ೩ ; ಶಿವಶರಣೆಯರ ವಚನಗಳು, ಮಹಾದೇವಯ್ಯಗಳ ಶೂನ್ಯಸಂಪಾದನೆ, ಸಿದ್ಧಲಿಂಗದೇವರ ಶೂನ್ಯಸಂಪಾದನೆ, ಸಿದ್ಧಲಿಂಗದೇವರ ಶೂನ್ಯಸಂಪಾದನೆ, ವಿಶೇಷಾನು

ಭವಷಟ್‌ಸ್ಥಲ, ವೀರಶೈವ ಚಿಂತಾಮಣಿ, ಬ್ರಹ್ಮಾದ್ವೈತ ಸಿದ್ಧಾಂತ, ಷಟ್‌ಸ್ಥಲಾಭರಣ – ಇವೆ ಮೊದಲಾದ ಸಂಪಾದನೆಗಳು ವಚನವಾಙ್ಮಯವನ್ನು ಸಮಗ್ರವಾಗಿ ಹೊರತರುವ ಅವರ ಯೋಜನೆಯ ಫಲಗಳಾಗಿವೆ. ಷಟ್‌ಸ್ಥಳ ಜ್ಞಾನಸಾರಾಮೃತ ಹಾಗೂ ಚನ್ನಬಸವಣ್ಣನವರ ವಚನಗಳು ಸಂಪಾದಿತ ಕೃತಿಗಳಿಗೆ ಅವರು ಬರೆದಿರುವ ವಿದ್ವತ್‌ಪೂರ್ಣ ಮುನ್ನುಡಿಗಳು ಅವರಿಗೆ ವಿದ್ವತ್ ಪ್ರಪಂಚದಲ್ಲಿ ಮನ್ನಣೆ ತಂದುಕೊಟ್ಟಿವೆ. 'ಹರಿಹರನ ರಗಳೆಗಳ ಸಮಗ್ರ ಯೋಜನೆ' ಅವರ ಇನ್ನೊಂದು ಮಹತ್ವದ ಕೊಡುಗೆ. ಅವರ 'ಸಕಲ ಪುರಾತನರ ರಗಳೆ' ತಮಿಳು ನಾಡಿನ ನಾಯ್ನಾರರನ್ನು ಕುರಿತು ಹರಿಹರ ಬರೆದಿರುವ ರಗಳೆಗಳ ಸಂಪಾದನೆಯಾಗಿದೆ. 'ಪುರಾತನರ ರಗಳೆಗಳು' ಕರ್ನಾಟಕದ ಶರಣ ಶರಣೆಯರನ್ನು ಕುರಿತು ಬರೆದಿರುವ ರಗಳೆಗಳ ಸಂಪಾದನೆಯಾಗಿದೆ. ವೀರಶೈವ ಕವಿಗಳ ಕಾವ್ಯಗಳನ್ನು ಸಂಪಾದಿಸುವಲ್ಲಿಯೂ ಡಾ.ಆರ್.ಸಿ. ಅವರ ಕೊಡುಗೆ ಸ್ಮರಣೀಯವಾದುದು. ಷಡಕ್ಷರಿಯ ರಾಜಶೇಖರ ವಿಲಾಸ, ಬಸವರಾಜ ವಿಜಯ, ಭೀಮ ಕವಿಯ ಬಸವ ಪುರಾಣ, ಪದ್ಮಣಾಂಕನ ಪದ್ಮರಾಜನ ಪುರಾಣ, ಸುರಂಗನ ತ್ರಿಷಷ್ಠಿ ಪುರಾತನ ಚಾರಿತ್ರಂ, ರಾಘವಾಂಕನ ಸೋಮನಾಥನ ಚಾರಿತ್ರ, ಶಾಂತಲಿಂಗ ದೇಶಿಕನ ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರ ರತ್ನಾಕರ ಸಂಪುಟ ೧ ಮತ್ತು, ಹೀಗೆ ಅವರ ಸಂಪಾದಿತ ಕೃತಿಗಳ ಸಂಖ್ಯೆ ಬೆಳೆಯುತ್ತಾ ಸಾಗುತ್ತದೆ. ವಚನಗಳ ಅಧ್ಯಯನಕ್ಕೆ ನೆರವಾಗುವ ಪೂರಕ ಸಾಮಗ್ರಿಗಳನ್ನು ಕೊಡುವಲ್ಲಿ, ಸಂಪಾದಿತ ಕೃತಿಗಳಿಗೆ ಪ್ರಸ್ತಾವನೆ ಬರೆಯುವಲ್ಲಿ ಡಾ.ಆರ್.ಸಿ. ಅವರು ಸಮಗ್ರವಾದ ತಿಳುವಳಿಕೆಯನ್ನು ಓದುಗರಿಗೆ ನೀಡುವರು. ಅದು ನಿಜಕ್ಕೂ ಮೌಲಿಕವಾಗಿದೆ. ವೀರಶೈವ ಸಾಹಿತ್ಯ ಲಿಂ. ಫ.ಗು. ಹಳಕಟ್ಟಿಯವರ ನಂತರ ದೊಡ್ಡ ಪ್ರಮಾಣದಲ್ಲಿ ಶಾಸ್ತ್ರೀಯವಾಗಿ ಸಂಪಾದಿತವಾಗಿ ಹೊರಬಂದುದು ಡಾ.ಆರ್.ಸಿ. ಅವರಿಂದ. ಈ ದಿಸೆಯಲಿ ಅವರ ಸೇವೆ ಅನುಪಮವಾದುದು, ಸಾರ್ಥಕವಾದುದು.

ಪಾಟೀಲ ಪುಟ್ಟಪ್ಪನವರು ಹೇಳುವಂತೆ ಕಷ್ಟದ ಕೂಳು ತಿಂದು, ಕಣ್ಣೀರು ಕುಡಿದು ಬೆಳೆದ ಈ 'ಆಲಿವರ್ ಟ್ವಿಸ್ಟ್ '.

ಡಾ.ಎಂ.ಎಂ. ಕಲುಬುರ್ಗಿ ಮೊದಲಾದ ಪ್ರತಿಭಾವಂತ ವಿದ್ಯಾರ್ಥಿಗಳನ್ನಿತ್ತ ಅಪರೂಪದ ವ್ಯಕ್ತಿ. ಅವರ ವ್ಯಕ್ತಿತ್ವವೂ ಭೂಮವ್ಯಾಪಿ. ಅವರಿಗೆ ಬಡತನದ ರುಚಿಯೂ ಗೊತ್ತು, ಸಿರಿತನದ ಸವಿಯೂ ಗೊತ್ತು. ನೊಂದ ಹೃದಯಗಳೊಡನೆ ವಿಶೇಷವಾಗಿ ಸ್ಪಂದಿಸುತ್ತಿದ್ದರು. ದೀನರಿಗೆ ದಯೆಯಾಗಿ, ದಲಿತರಿಗೆ ತಾಯಾಗಿ, ವಿದ್ಯಾರ್ಥಿ ವೃಂದಕ್ಕೆ ಅಕ್ಕರೆಯ ಅಣ್ಣನಾಗಿ, ಪ್ರೀತಿಯ ಪ್ರತಿಭೆಯನ್ನು ಬೀರುತ್ತಿದ್ದವರು. ಅವರ ಪ್ರತಿಭೆ ಸಾಹಿತ್ಯಕ್ಕಷ್ಟೇ ಸೀಮಿತವಾಗಿರಲಿಲ್ಲ. ಸಂಗೀತ, ಶಿಲ್ಪ, ವಾಸ್ತುಶಿಲ್ಪ, ತತ್ವಶಾಸ್ತ್ರ ಮೊದಲಾದವುಗಳವರೆಗೂ ವ್ಯಾಪಿಸಿಕೊಂಡಿತ್ತು. ವಿಜ್ಞಾನದ ವಿಷಯದಲ್ಲೂ ಅಧಿಕಾರವಾಣಿಯಿಂದ ನುಡಿಯುತ್ತಿದ್ದರು. ಸಂಶೋಧನೆಯಲ್ಲಂತೂ ಅವರು ಶ್ರೇಷ್ಠರ ಸಾಲಿನಲ್ಲಿ ಬರುವ ಹಿರಿಯ ಸಂಶೋಧಕರಾಗಿದ್ದರು.

ಆ ಮಹಾನ್ ಚೇತನಕ್ಕೆ ಕೋಟಿ ಕೋಟಿ ನಮನಗಳು.

•

# ಶರಣ ಸಾಹಿತಿ*

==========================================================================

**ನನಗೆ ಇವರು ಕಾಣಿಸಿಕೊಂಡದ್ದು ಮೈಸೂರಿನಲ್ಲಿ !**

**ಮೂರುವರೆ ದಶಕಗಳ ಹಿಂದೆ !**

**ಅದೊಂದು ಒಳ್ಳೆಯ ಸಂದರ್ಭ –**

ಮೈಸೂರು ಸರಸ್ವತೀಪುರದ ವಿದ್ಯಾಶ್ರಮದಲ್ಲಿದ್ದ ಜೀ.ಶಂ. ಪರಮಶಿವಯ್ಯ (ಈಗ ಡಾ. ಜೀ.ಶಂ.ಪ) ಪಿ.ಆರ್. ತಿಪ್ಪೇಸ್ವಾಮಿ (ನಾಡಿನ ಶ್ರೇಷ್ಠ ವರ್ಣಶಿಲ್ಪಿ), ಅಬ್ದುಲ್ ನಜೀರ್ ಸಾಬ್ (ರಾಜ್ಯ ಸರ್ಕಾರದಲ್ಲಿ ಸಚಿವರು) ಕೆ. ನಾಗೇಂದ್ರಪ್ಪ (ಕನ್ನಡ ಪ್ರಾಧ್ಯಾಪಕರು) ಕ.ರಾ. ಕೃಷ್ಣೇಗೌಡ (ಈಗ ಜನಪ್ರಿಯ ಜನಪದ ಸಂಗ್ರಾಹಕ ಕರಾಕೃ ಉರುಫ್ ಕ.ರಾ. ಕೃಷ್ಣಸ್ವಾಮಿ) – ಇವರೇ ಮೊದಲಾದವರು ಸೇರಿ 'ಕಲಾಕ್ಷೇತ್ರ' ಎಂಬ ಒಂದು ಪುಟ್ಟ ಕಲಾಸಂಸ್ಥೆ ತೆರೆದಿದ್ದರು. ಪುಸ್ತಕ ಪ್ರಕಾಶನ ಅದರ ಒಂದು ಅಂಗವಾಗಿತ್ತು. ಒಂದೆರಡು ಪುಸ್ತಕಗಳೂ ಬಂದುವು. ಅವುಗಳಲ್ಲಿ ತಿಪ್ಪೇರುದ್ರಸ್ವಾಮಿಯವರ 'ಭಾವಗೀತೆ' ಒಂದು.

ಪುಸ್ತಕ ಬಿಡುಗಡೆಯ ದಿನ ಅವರಾಡಿದ ಮಾತು ಇಂದಿಗೂ ನನ್ನ ಕಿವಿಯಲ್ಲಿ ಗುಣುಗುಟ್ಟುತ್ತಿವೆ. ನಾನು ಚಿಕ್ಕವನಿದ್ದದ್ದರಿಂದ ನೆನಪಿನಲ್ಲಿ ಉಳಿದಿದೆ

**ಗುರುವಿನ ಗುಲಾಮನಾಗುವ ತನಕ**
**ದೊರೆಯದಣ್ಣ ಮುಕುತಿ**

ಎಂದು ಹೇಳಿದರು ದಾಸರು. ನನ್ನ ಪೂಜ್ಯ ಗುರುಗಳಾದ ಶ್ರೀ ಕುವೆಂಪು, ಡಿ.ಎಲ್.ಎನ್ ಇವರ ಕೃಪಾಶೀರ್ವಾದದಿಂದ ಈ ಕೃತಿ ರಚನೆ ಸಾಧ್ಯವಾಯಿತು. ಅವರಿತ್ತುದನ್ನು ನಿಮಗೆ ಮುಟ್ಟಿಸುತ್ತಿದ್ದೇನೆ. ನನ್ನಾತ್ಮವನ್ನು ಬೆಳೆಸಿದ ಈ ಮಹಾ ಚೇತನಗಳಿಗೆ ನನ್ನ ಅನಂತ ಪ್ರಣಾಮಗಳು !

ಗುರುವಿನಲ್ಲಿದ್ದ ಅವರ ಭಕ್ತಿ ದೈವ ಭಕ್ತಿಗೂ ಮಿಗಿಲಾದದ್ದು.

ಅಂದು –

**ಅವರು ಡಾಕ್ಟರಾಗಿರಲಿಲ್ಲ**
**ಪ್ರೊಫೆಸರ್ ಆಗಿರಲಿಲ್ಲ**
**ಪ್ರಶಸ್ತಿ ವಿಜೇತರಾಗಿರಲಿಲ್ಲ**
**ಪ್ರಸಿದ್ಧರೂ ಆಗಿರಲಿಲ್ಲ**

ಆದರೆ –

ಒಳ್ಳೆಯ ಮೇಷ್ಟಾಗಿದ್ದರೂ, ಹಾಸನ ಜಿಲ್ಲೆಯಲ್ಲೆಲ್ಲಾ ಅವರು ಮನೆ ಮಾತಾಗಿದ್ದರು. ಅವರ ನಡೆ, ನುಡಿ, ವಾಕ್‌ಝರಿ ಮೋಹ ಮುಗ್ಧರನ್ನಾಗಿ ಮಾಡಿದ್ದವು. ಹಾಸನದ ಕಾಲೇಜಿನಿಂದ ಬಂದ ಅವರ ಅನೇಕ ಜನ ವಿದ್ಯಾರ್ಥಿಗಳು ಅವರನ್ನು ಬಾಯಿ ತುಂಬಾ ಹೊಗಳುತ್ತಿದ್ದರು.

---

*ಡಾ. ಎಚ್. ತಿಪ್ಪೇರುದ್ರಸ್ವಾಮಿಯವರು– ಈ ಆತ್ಮೀಯರ ಸಂಭಾವನಾ ಗ್ರಂಥಕ್ಕಾಗಿ ೧೯೮೭ರಲ್ಲಿ ಬರೆದುದು.

ಅಂದು –

**ಅವರು 'ಸ್ವಾಮಿ ಆಗಿರಲಿಲ್ಲ**
**ಬರಿಯ ತಿಪ್ಪಯ್ಯ, ಎಂ.ಎ. ಆಗಿದ್ದರು**

ಶಿವಮೊಗ್ಗೆಯ ಅವರ ಬಂಧುಗಳು, ಹಿರಿಯರು, ಅವರ ನೆಚ್ಚಿನ ನೇಹಿಗರು ಪ್ರೀತಿಗೆ 'ತಿಪ್ಪಣ್ಣ' ಎಂದು ಕರೆಯುತ್ತಿದ್ದರು. ಅಣ್ಣ, ಅಯ್ಯಾ ಹೋಗಿ 'ಸ್ವಾಮಿ' ಆದರು. ಭೂತಿ, ವಿಭೂತಿತ್ವ ಪಡೆಯಿತು ಎಂದರು ಕೆಲವರು. 'ಭೂತಿ' ಎಂದರೆ ಇರುವಿಕೆ, 'ವಿಭೂತಿ' ಎಂದರೆ ವಿಶೇಷ ರೀತಿಯಲ್ಲಿ ಆಗುವಿಕೆ ಅಲ್ಲವೆ! ಉದಾಹರಣೆಗೆ ಗದಾಧರ ಭೂತಿ, ಶ್ರೀ ರಾಮಕೃಷ್ಣ ಪರಮಹಂಸ ವಿಭೂತಿ; ನರೇಂದ್ರ ಭೂತಿ, ಸ್ವಾಮಿ ವಿವೇಕಾನಂದ ವಿಭೂತಿ, ಕೆ.ವಿ. ಪುಟ್ಟಪ್ಪ ಭೂತಿ, ಶ್ರೀ ಕುವೆಂಪು ವಿಭೂತಿ ; ದತ್ತಾತ್ರೇಯ ರಾಮಚಂದ್ರ ಬೇಂದ್ರೆ ಭೂತಿ, ಅಂಬಿಕಾತನಯದತ್ತ ವಿಭೂತಿ ; ಮಾಸ್ತಿ ವೆಂಕಟೇಶ ಅಯ್ಯಂಗಾರ್ ಭೂತಿ ; ಶ್ರೀವಾಸ ವಿಭೂತಿ; ಸಿದ್ಧಯ್ಯ ಪುರಾಣಿಕ ಭೂತಿ, ಕಾವ್ಯಾನಂದ ವಿಭೂತಿ ; ವಿ.ಕೃ. ಗೋಕಾಕ ಭೂತಿ, ವಿನಾಯಕ ವಿಭೂತಿ ; ಫಕೀರಗೌಡ ಭೂತಿ, 'ಜೀಶಂಪ' ವಿಭೂತಿ ! ಅದೇ ರೀತಿ ತಿಪ್ಪಯ್ಯ ಭೂತಿ, ತಿಪ್ಪೇರುದ್ರಸ್ವಾಮಿ ವಿಭೂತಿ, ನಾಯಕನ ಹಟ್ಟಿಯ ತಿಪ್ಪೇರುದ್ರಸ್ವಾಮಿಯ ಅನುಗ್ರಹದಿಂದ ಹುಟ್ಟಿದ ಇವರು ಅವನ ಅನುಗ್ಗದಲ್ಲೇ ಬೆಳೆದರು.

ಗುರು, ದೈವ, ಧರ್ಮ – ಈ ಮೂರೂ ಅವರ ಆತ್ಮವನ್ನು ಬೆಳೆಸಿವೆ. ತುಂಬಾ ಸಾತ್ವಿಕ ಸ್ವಭಾವ ಡಾ. ತಿಪ್ಪೇರುದ್ರಸ್ವಾಮಿ ಯವರದು ಸರಳ ಜೀವನ, ವಿನಯವೇ ಮೈವೆತ್ತಂಥ ಮೂರ್ತಿ. ಬಾಯಿ ತೆರೆದರೆ ಸಾಕು ಮೊದಲು ತುಳುಕಿ ಬರುತ್ತದೆ ಅವರ ತಿಳಿ ಮನದ ನಗೆ !

**'ಹಹ್ಹಹ್ಹಾ ! ಬನ್ನಿ ಬನ್ನಿ ! ಏನು ಚೆನ್ನಾಗಿದ್ದೀರಾ ?**
**ಎಲ್ಲಿ ಇತ್ತೀಚೆಗೆ ನೀವು ಸಿಗಲೇ ಇಲ್ಲ !**
**ಹ್ಹೆ ಹ್ಹೆ ಹ್ಹೆ. . .! ಹ್ಹು ಹ್ಹು ಹ್ಹುಹ್ಹು !!**

ಪ್ರತಿ ಮಾತಿನಲ್ಲಿ ಧವಳ ನಗೆ ! ಯಾವ ಬಗೆಯ ಹೊಗೆಯೂ ಇಲ್ಲದ ನಗೆ ! ಸದಾ ಸೂಸುತ್ತಲೇ ಇರುತ್ತದೆ. ಅವರ ನಗೆಯಲ್ಲಿ ಮಗುವಿನ ಮುಗ್ಧತೆಯನ್ನು ಗುರುತಿಸಿದ್ದೇನೆ.

ನನ್ನ ಅವರ ಭೇಟಿ ಧಾರಾಡದಲ್ಲಿ

ನಾವಿಬ್ಬರೂ ಸುಮಾರು ಒಂದು ವಾರದವರೆಗೆ ಧಾರವಾಡದ ನೇರ್ಲೇಕರ್ ಲಾಜ್ಡ್‌ನಲ್ಲಿದ್ದೆವು. ನಮಗೆ ಪ್ರಿಯವಾದ ವಿಷಯ ಕುರಿತು ಇಬ್ಬರೂ ಕರ್ನಾಟಕ ವಿಶ್ವವಿದ್ಯಾಲಯದ ಗ್ರಂತಾಲಯಕ್ಕೆ ಹೋಗುವುದು, ಓದುವುದು, ಬರೆಯುವುದು ಮಾಡುತ್ತಿದ್ದೆವು. ಎಸ್.ಎಂ. ವೃಷಭೇಂದ್ರಸ್ವಾಮಿ, ಪಂಚಾಕ್ಷರಿ ಹಿರೇಮಠ, ಎಚ್.ಪಿ. ಮಲ್ಲೇದೇವರು ಧಾರವಾಡದ ವಿಶ್ವವಿದ್ಯಾಲಯದಲ್ಲಿದ್ದರು. ನಾವೆಲ್ಲರೂ ಸಂಜೆ ಶ್ರೀ ಮುರುಘಾ ಮಠದಲ್ಲಿ ಶ್ರೀ ಶ್ರೀ ಗಳವರನ್ನು ಸಂದರ್ಶಿಸಿದೆವು. ಮೃತ್ಯುಂಜಯ ಅಪ್ಪಗಳು ಕಾವಿ ಕುಲಾವಿ ಧರಿಸಿಕೊಂಡು, ಕೊಡಗಿನ ಕಿತ್ತಲೆ ಹಣ್ಣಿನಂತೆ ಕಾಣಿಸುತ್ತಿದ್ದರು. ಎಲ್ಲರೂ ನಮಸ್ಕರಿಸಿ ಕುಳಿತಾಗ ಅದೂ ಇದೂ ಮಾತು. ಅನಂತರ ಪ್ರಸಾದ ಮುಗಿದ ಮೇಲೆ ಎಲ್ಲರೂ ಹೊರಟೆವು. ಶ್ರೀಶ್ರೀಗಳವರು ಆಶೀರ್ವದಿಸುತ್ತಾ, 'ತಿಪ್ಪೇರುದ್ರಸ್ವಾಮಿಗಳೆ, ನಿಮ್ಮ ಮೇಲೆ ಮುರುಘೇಶನ ಕೃಪೆ ವಿಫುಲವಾಗಿದೆ. ನಿಮ್ಮಿಂದ ಒಳ್ಳೊಳೆಯ ಕೃತಿಗಳು ಹೊರಬರಲಿ ?'
ಎಂದರು.

ಧನ್ಯತೆಯನ್ನು ಸೂಚಿಸಿ ಹೊರಟೆವು.

ಮಾರನೆಯ ದಿನ ರಾತ್ರಿ –

ವಷ್ಯಭೇಂದ್ರಸ್ವಾಮಿಯವರ ಮನೆಯಲ್ಲಿ ನಮಗಿಬ್ಬರಿಗೂ 'ಬಿನ್ನಹ'. ಅವರು ಹೇಳಿದ್ದು ನನಗೆ ಮರೆತು ಹೋಗಿತ್ತು. ನಾನು ಲಾಡ್ಜ್‌ಗೆ ಬರುವುದು ತಡ ಆಯಿತು. ರಾತ್ರಿ ಸುಮಾರು ಒಂಬತ್ತೂವರೆ ಗಂಟೆ. ತಿಪ್ಪೇರುದ್ರಸ್ವಾಮಿಯವರು ಅಲ್ಲಿನವರೆಗೂ ನನಗಾಗಿ ಕಾಯುತ್ತಲೇ ಕುಳಿತಿದ್ದರು.

'ಏಕೆ ಇಷ್ಟು ತಡ ಮಾಡಿದಿರಿ. ಪಾಪ ! ಶ್ರೀಮತಿ ಮತ್ತು ಶ್ರೀ ವೃಷಭೇಂದ್ರ ಸ್ವಾಮಿಗಳು ನಮಗಾಗಿ ಕಾಯುತ್ತಿದ್ದಾರಲ್ಲವೇ? ಮರೆತು ಬಿಟ್ಟಿರೇನು ? ಎಂದರು ನಗುತ್ತಲೆ.

ನನಗೆ ತುಂಬಾ ನಾಚಿಕೆಯಾಯಿತು !

ಡಾ. ತಿಪ್ಪೇರುದ್ರಸ್ವಾಮಿಯವರ ಕರ್ನಾಟಕ ಸಂಸ್ಕೃತಿ ಸಮೀಕ್ಷೆ ಗ್ರಂಥಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಾಗ ನಾನು ಮೈಸೂರಿನಲ್ಲೇ ಇದ್ದೆ. ನಾನು ನಮ್ಮ ಪೂಜ್ಯ ಗುರುಗಳಾದ ತ.ಸು. ಶಾಮರಾಯರು ಜೊತೆಯಲ್ಲೇ ಹೋದೆವು. ಡಾ. ಸ್ವಾಮಿಯವರು ಪೂಜ್ಯಗುರುಗಳಿಗೆ ಪಾದಮುಟ್ಟಿ ನಮಸ್ಕರಿಸಿದರು. ಗುರುಗಳು ಮನಮುಟ್ಟಿ ಆಶೀರ್ವದಿಸಿದರು. ಹಾರ್ದಿಕ ಶುಭಾಶಯ ಕೋರಿದರು.

ಪ್ರಿಯೂನಿವರ್ಸಿಟಿ ತರಗತಿಗೆ ಪಠ್ಯಪುಸ್ತಕ ಸಿದ್ಧಪಡಿಸಬೇಕಾಗಿತ್ತು. ಡಾ. ತಿಪ್ಪೇರುದ್ರಸ್ವಾಮಿಯವರು ಸಮಿತಿಯ ಅಧ್ಯಕ್ಷರು. ನಾವು ಮೂವರು ಸದಸ್ಯರು. ಸಭೆಗಳು ಅಲ್ಲಿ–ಇಲ್ಲಿ ಎರಡು ಮೂರು ನಡೆದವು. ನೆನಪಿನಲ್ಲಿಡುವಂಥದ್ದು ಧಾರವಾಡದ್ದು !

ಧಾರವಾಡ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಕೊಠಡಿಯೊಂದರಲ್ಲಿ ನಮ್ಮ ಪಠ್ಯಪುಸ್ತಕ ಸಿದ್ಧತೆಯ ಸಭೆ. ಗೊತ್ತುಪಡಿಸಿದ್ದ ಹನ್ನೊಂದು ಗಂಟೆಗೆ ಇಬ್ಬರೂ ಸದಸ್ಯರು ಬಂದಿರಲಿಲ್ಲ. ನಾನು ಬೇಂದ್ರೆಯವರ ಮನೆಗೆ ಹೋದೆ. ಅಲ್ಲಿ ಕವಿವರ್ಯರ ಜೊತೆಯಲ್ಲಿ ಮಾತುಕತೆ ಮುಗಿಸುವ ಹೊತ್ತಿಗೆ ಊಟದ ಸಮಯ ಆಯಿತು. ಅಲ್ಲಿಯೇ ಊಟಮಾಡಿ ಸುಮಾರು ಒಂದೂವರೆ ಗಂಟೆಗೆ ವಿಶ್ವವಿದ್ಯಾಲಯಕ್ಕೆ ಬಂದೆ.

ಡಾ. ತಿಪ್ಪೇರುದ್ರಸ್ವಾಮಿಯವರಿಗೆ ಕಾದು ಕಾದು ಬೇಸರ ಹಿಡಿದಿದ್ದಿರಬೇಕು. ಸುಮ್ಮನೇ ಒಬ್ಬರೇ ಕುಳಿತಿದ್ದರು. ನನಗೆ ಒಂದು ಬಗೆಯ ಸಂಕೋಚ. ಎಲ್ಲಿ ಅವರು ರೇಗಿಕೊಳ್ಳುತ್ತಾರೋ ಎಂಬ ಭೀತಿ.

ಆದರೆ –

'ಏನು ಸ್ವಾಮಿಗಳೆ ಅಂದಕೂಡಲೆ

ಅದೇ ನಗೆ !

ಅದೇ ಮಂದಹಾಸ !!

'ಎಲ್ಲರೂ ಬಂದರೂ, ನೀವು ಇರಲಿಲ್ಲ. ಊಟಕ್ಕೆ ಹೋದರು. ನಾನು ನಿಮಗಾಗಿ ಲ್ಲೇ ಕುಳಿತೆ !'

'ಕೋಪ ಮಾಡಿಕೊಂಡಿರಾ ?'

'ಹೆ ಹ್ಹೆ ಹ್ಹೆ ಹ್ಹೆ ಕೋಪ ಎಲ್ಲಿದೂ. . .ಸುಮ್ಮನೆ ಕಾದೆ ಅಷ್ಟೆ !'

ಅವರು ಕೋಪಿಸಿಕೊಂಡಿದ್ದರೆ ನನಗೆಷ್ಟೋ ಸಮಾಧಾನ ಆಗುತ್ತಿತ್ತು ! ಅವರ ನಗೆ, ಪ್ರೀತಿಯ ಸ್ವಾಗತ ನನಗೆ ನಾಚಿಕೆ ತಂದವು.

ಡಾ. ತಿಪ್ಪೇರುದ್ರಸ್ವಾಮಿಯವರದು ಹೆಣ್ಣುಗರುಳು. ಸರ್ವರನ್ನೂ ತಮ್ಮ ಪ್ರೀತಿ ತುಂಬಿದ ಕಣ್ಣುಗಳಲ್ಲಿ ಮುಚ್ಚಿಕೊಳ್ಳುತ್ತಿದ್ದರು. ತಮ್ಮ ಸಜ್ಜನಿಕೆ, ಸೌಹಾರ್ದ, ಪ್ರೀತಿ, ಮೈತ್ರಿಗಳಿಂದಾಗಿ ಸರ್ವರ ಗೌರವಾದರಗಳಿಗೆ ಪಾತ್ರರಾಗಿದ್ದರು. ಸ್ನೇಹನಜೀವಿಯೆನಿಸಿದ್ದ ಶ್ರೀಯುತರು ಗುರುಭಕ್ತಿ ಸಂಪನ್ನರೂ ಆಗಿದ್ದರು. ಎಲ್ಲ ಗುರು, ಮಹಾಗುರು, ಜಗದ್ಗುರುಗಳವರಿಂದಲೂ ಆಶೀರ್ವದಿತರಾಗಿದ್ದರು, ಅಕ್ಷಯರೂ ಆಗಿದ್ದರು.

ಡಾ.ಎಚ್. ತಿಪ್ಪೇರುದ್ರಸ್ವಾಮಿಯವರು ಜನಿಸಿದ್ದು ಕ್ರಿ.ಶ.೧೯೨೮ರಲ್ಲಿ. ಶಿವಮೊಗ್ಗಾ ಜಿಲ್ಲೆಯ ಹೊನ್ನಾಳಿಯಲ್ಲಿ. ತಂದೆ ಚನ್ನ ಮಲ್ಲಯ್ಯ, ತಾಯಿ ಬಸಮ್ಮ. ಆ ಪುಣ್ಯ ದಂಪತಿಗಳ ಮೊದಲ ಕುಡಿ ಇವರು. ಹುಟ್ಟಿದಾಗ ಅಪ್ಪ ಅಮ್ಮ ಇಟ್ಟ ಹೆಸರು ತಿಪ್ಪಯ್ಯ ಎಂದು. ಕೇವಲ ಮೂರು ತಿಂಗಳ ಮಗುವಾಗಿದ್ದಾಗಲೇ ತಾಯಿಯನ್ನು ಕಳೆದುಕೊಂಡ ತಿಪ್ಪಯ್ಯ. ಮತ್ತೆ ಅಜ್ಜಿ ಚೆನ್ನಮ್ಮನವರ ವಾತ್ಸಲ್ಯದ ವೃಕ್ಷದಲ್ಲಿ ಬೆಳೆದರು. ಇವರ ಚಿಕ್ಕಪ್ಪ ಚಿಕ್ಕಮ್ಮನವರೆ ಹೆತ್ತ ತಂದೆ ತಾಯಿಯವರಿಗೆ ಮಿಗಿಲಾದರು.

ಹೊನ್ನಾಳಿ, ಬಿಳಕಿ, ಅನವಟ್ಟಿ, ಶಿರಾಳಕೊಪ್ಪಗಳಲ್ಲಿ ಬಾಲಕ ತಿಪ್ಪಯ್ಯನ ಪ್ರಾಥಮಿಕ, ಮಾಧ್ಯಮಿಕ ಶಾಲಾ ಶಿಕ್ಷಣ ನಡೆಯಿತು.

**ಮಾನವನಾಗಿ ಹುಟ್ಟಿದ ಮ್ಯಾಲೆ ಏನೇನ್ ಕಂಡಿ**
**ಸಾಯೋತನಕ ಸಂಸಾರದೊಳಗೆ ಗಂಡಗುಂಡಿ**
**ಇರೋದರೊಳಗೆ ಒಮ್ಮೆ ನೋಡು ಜೋಗದ ಗುಂಡಿ**

ಎಂಬ ಜನಪ್ರಿಯ ಹಾಡು ಬರೆದ ಶ್ರೀಮೂಗೂರು ಮಲ್ಲಪ್ಪನವರು ತಿಪ್ಪಯ್ಯನ ಶಿಕ್ಷಕರಾಗಿದ್ದರು. ಶಿರಾಳಕೊಪ್ಪದಲ್ಲಾಗಲಿ, ಅನವಟ್ಟಿಯಲ್ಲಾಗಲಿ ಹೈಸ್ಕೂಲು ಇರಲಿಲ್ಲವಾದ್ದರಿಂದ ತಿಪ್ಪಯ್ಯ ಶಿವಮೊಗ್ಗ ಮತ್ತು ತೀರ್ಥಹಳ್ಳಿಗಳಲ್ಲಿ ತನ್ನ ಪ್ರೌಢಶಾಲಾಶಿಕ್ಷಣ ಪಡೆಯಬೇಕಾಯಿತು. ತೀರ್ಥಹಳ್ಳಿಯಲ್ಲಿ ಸುಪ್ರಸಿದ್ಧ ಕನ್ನಡ ಕವಿ ಕಮಗೋಡು ನರಸಿಂಹಶಾಸ್ತ್ರಿಗಳನ್ನು ಗುರುಗಳಾಗಿ ಪಡೆದ ಭಾಗ್ಯ ತಿಪ್ಪಯ್ಯನದು. ಮತ್ತೆ ಇಂಟರ್‌ಮೀಡಿಯಟ್ ಕಾಲೇಜು ಸೇರಿದ್ದು ಶಿವಮೊಗ್ಗೆಯಲ್ಲಿ. ಅಲ್ಲಿ ತಿಪ್ಪಯ್ಯನಿಗೆ ಪ್ರಿಯವಾಗಿದ್ದ ಎರಡು ಅಂಶಗಳೆಂದರೆ, ಕಾಲೇಜಿನಲ್ಲಿ ಎಸ್.ವಿ. ಪರಮೇಶ್ವರ ಭಟ್ಟರ ಕನ್ನಡ ಪಾಠ, ಎನ್.ಡಿ.ವಿ. ಹಾಸ್ಟೆಲ್ಲಿನ ರೊಟ್ಟಿ ಊಟ ! ಇವುಗಳಿಗೆ ಉಪಷ್ಟಂಭಕವಾಗಿ ದೊರೆತದ್ದು ಸಹೃದಯ ಸಹಾಧ್ಯಾಯಿಗಳ ಆತ್ಮೀಯ ಕೂಟ.

ಇಂಟರ್‌ಮೀಡಿಯಟ್ ಮುಗಿಯುತ್ತಿದ್ದಂತೆಯೇ ಮೈಸೂರಿನ ಮಹಾರಾಜಾ ಕಾಲೇಜು ತಿಪ್ಪಯ್ಯನನ್ನು ಕೈಬೀಸಿ ಕರೆಯಿತು. ಅಲ್ಲಿನ ವಿಶೇಷ ಆಕರ್ಷಣೆಯೆಂದರೆ ಶ್ರೀ ಕುವೆಂಪು. ಹಳ್ಳಿ ಹುಡುಗ ರೈಲು ಹತ್ತಿ ಮೈಸೂರಿಗೆ ಹೋದ. ಝಗಝಗಿಸುವ ನಗರ ಕಂಡು ಕಕ್ಕಾವಿಕ್ಕಿಯಾದ. ಅವನ ಈ ಮುಗ್ಧತೆಯನ್ನು ಬೆದರಿಸಿದ್ದು ಕಾಲೇಜಿನಲ್ಲಿ ಕನ್ನಡ ಬಿ.ಎ. (ಆನರ್ಸ್) ತರಗತಿಗೆ ಪ್ರವೇಶ ದೊರೆಯುವುದಿಲ್ಲ ಎಂಬ ಸುದ್ಧಿ. ಯಾರೋ ಹೇಳಿದರು ಇಂಟರ್‌ಮೀಡಿಯಟ್ ಕಾಲೇಜಿನಲ್ಲಿ ವಿಜ್ಞಾನದ ವಿದ್ಯಾರ್ಥಿಯಾಗಿದ್ದ ತಿಪ್ಪಯ್ಯನಿಗೆ ಕಲಾವಿಭಾಗದ ಕನ್ನಡ ಬಿ.ಎ. (ಆನರ್ಸ್) ಪ್ರವೇಶಾವಕಾಶವಿಲ್ಲ ಎಂದು. ಆದರೆ ಆತ ಧೈರ್ಯ ತಂದುಕೊಂಡು ಶ್ರೀ ಕುವೆಂಪುರವರನ್ನು 'ಉದಯಗಿರಿ'ಯಲ್ಲಿ ಭೇಟಿಮಾಡಿದರು. ಅವರಿಂದ ಅಭಯದಾನವಾಯಿತು. ನಿರಾಳದ ಉಸಿರೆಳೆದುಕೊಂಡು ಸುತ್ತೂರ್ ಹಸ್ಟೆಲ್ ಬಳಿ ಹೋದರು. ಅಲ್ಲಿ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಸನ್ನಿಧಿಯಲ್ಲಿ ತಮ್ಮ ಪ್ರಾರ್ಥನೆ ಸಲ್ಲಿಸಿದರು. ಜಗದ್ಗುಳವರು 'ಆಗಲಿ ಕೊಡೋಣ' ಅಂದರು. ಆದರೆ ಕೊಡುವುದು ತಡವಾಯಿತು. ವಿದ್ಯಾರ್ಥಿ ತಿಪ್ಪಯ್ಯನಿಗೆ ಭಯಹುಟ್ಟುಕೊಂಡಿತು. ಜಗದ್ಗುರುಗಳವರಲ್ಲಿ ತಮ್ಮ ಬಗ್ಗೆ ಒಳ್ಳೆಯ ಮಾತುಗಳನ್ನಾಡಿ, ಹಾಸ್ಟೆಲ್ ಸೀಟಿಗೆ ಶಿಫಾರಸು ಮಾಡಿರೆಂದು ಸುಪ್ರಸಿದ್ಧ ಹಾಗೂ ಸುಸಂಸ್ಕೃತ ರಾಜಕಾರಿಣಿಯೊಬ್ಬರನ್ನು ಕಾಣಲು ಬೆಂಗಳೂರಿಗೆ ಹೋದರು. ಆದರೆ ರಾಜಕಾರಣ ನಿರಾಶೆಯುಂಟುಮಾಡಿತು. 'ಆರಿಗಾರೂ ಇಲ್ಲ ಕೆಟ್ಟವಂಗೆ ಕೆಳೆಯಿಲ್ಲ' ಎಂಬ ಶರಣವಾಣಿಯಂತೆ, ಬಡವರಿಗೆ ನೆರವೆಂಬುದೇ ಇಲ್ಲ ಎಂಬ ನಾಣ್ಣುಡಿಯಂತೆ ಆತ ಬರಿಕೈಯಲ್ಲಿ ಮೈಸೂರಿಗೆ ಮರಳಬೇಕಾಯಿತು.

ತಿಪ್ಪಯ್ಯ ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ ಕನ್ನಡ ಬಿ.ಎ. (ಆನರ್ಸ್) ಮತ್ತು ಕನ್ನಡ ಎಂ.ಎ. ಪಾಸು ಮಾಡಿದರು – ಫಸ್ಟ್ ಕ್ಲಾಸ್ ಮತ್ತು ಫಸ್ಟ್ ರ್‍ಯಾಂಕಿನಲ್ಲಿ. ಹಿಂದೆ ಇಂಟರ್ ಮೀಡಿಯಟ್ ಫಸ್ಟ್ ಕ್ಲಾಸ್, ಎಸ್.ಎಸ್.ಎಲ್.ಸಿ. ಫಸ್ಟ್ ಕ್ಲಾಸ್, ಲೋಯರ್ ಸೆಕೆಂಡರಿ ಫಸ್ಟ್ ಕ್ಲಾಸ್, ಜೀವನದಲ್ಲೂ ಫಸ್ಟ್ ಕ್ಲಾಸ್ ! ಅಂತೆಯೇ ಮೃಣ್ಮಯದ ಮೂರ್ತಿ ಚಿನ್ಮಯದ ಚೇತನವಾದಂತೆ ತಿಪ್ಪಯ್ಯ ಎಂಬ ಭೂತಿ, ಎಇಪ್ಪೇರುದ್ರಸ್ವಾಮಿ ಎಂಬಭಿದಾನದ ವಿಭೂತಿಯಾಯಿತು !

೧೯೪೨ರ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದ ತಿಪ್ಪೇರುದ್ರಸ್ವಾಮಿಯವರಿಗೆ ಗಾಂಧೀ ಮಹಾತ್ಮನ ವಿಶೇಷ ಪ್ರಭಾವ ಆಗಿತ್ತು. ಪರಿಣಾಮವಾಗಿ ವಿದೇಶಿವಸ್ತ್ರ ತ್ಯಾಗ, ದೇಶೀಯ ಖಾದಿ ಪುರಸ್ಕಾರ ಆಗಿ ಮುಗಿದಿತ್ತು. ಇಂತಹ ಅಪ್ಪಟ ಖಾದೀಧಾರಿ ದೇಶಭಕ್ತ, ಕನ್ನಡ ಸೇನಾನಿ ಎಂ.ಎ. ಪರೀಕ್ಷೆ ಮುಗಿದ ಮಾರನೆಯ ದಿನವೇ ಹಾಸನ ಕಾಲೇಜಿಗೆ ಅಧ್ಯಾಪಕರಗಿ ನೇಮಿತರಾದರು. ೧೯೫೨ರಿಂದ ೫೯ರವರೆಗೆ ಏಳು ವರ್ಷ ಕಾಲ ಹಾಸನದಲ್ಲಿದ್ದರು. ಚೆನ್ನಾಗಿಯೇ ಇದ್ದರು, ಜನ ಪ್ರಿಯ ಅಧ್ಯಾಪಕರೆನಿಸಿಕೊಂಡಿದ್ದರು. ಮತ್ತೆ ಕೆಲವು ತಿಂಗಳುಗಳವರೆಗೆ ಹೊಸದಾಗಿ ಆರಂಭಗೊಂಡ ಕೊಣೂರಿನ ಪ್ರಥಮದರ್ಜೆ ಕಾಲೇಜಿನ ಅರೆಕಾಲಿಕ, ಆರಂಭದ ಅಧ್ಯಾಪಕರಾಗಿಯೂ ಸೇವೆ ಸಲ್ಲಿಸಿದರು. ಮೈಸೂರಿನ ಮಹಾರಾಣಿ ಕಲೇಜು, ಬೆಂಗಳೂರಿನ ಕಲಾ ಮತ್ತು ವಿಜ್ಞಾನ ಕಾಲೇಜುಗಳಲ್ಲಿ ಅಧ್ಯಾಪನ ನಡೆಸುವಷ್ಟರಲ್ಲಿ ಮೈಸೂರು ವಿಶ್ವವಿದ್ಯಾಲಯ ರಾಷ್ಟ್ರಕವಿ ಕುವೆಂಪುರವರ ಕುಲ ಪತಿತ್ವದಲ್ಲಿ ಸ್ವಾಯುತ್ತತೆ ಪಡೆದು 'ಮಾನಸಗಂಗೋತ್ರಿ' ಎಂಬ ಅರ್ಥವತ್ತಾದ ಹೆಸರಿನಿಂದ ಯುಗಪ್ರವರ್ತಕ ಕಾರ್ಯವನ್ನು ನಿರ್ವಹಿಸಿತು.  ಡಾ. ತಿಪ್ಪೇರುದ್ರಸ್ವಾಮಿಯವರು ಮಾನಸಗಂಗೋತ್ರಿಗೆ ಅಧ್ಯಾಪಕರಾಗಿ ಆಯ್ಕೆಯಾದರು. ಅಲ್ಲಿ ಅಧ್ಯಾಪಕರಾಗಿ, ಪ್ರಾಧ್ಯಾಪಕರಾಗಿ, ಗಾಂಧೀ ಭವನದ ನಿರ್ದೇಶಕರಾಗಿ, ಬಿ.ಆರ್. ಪ್ರಾಜೆಕ್ಟ್‌ನ ಸ್ನಾತಕೋತ್ತರ ವಿಭಾಗದ ಮುಖ್ಯಸ್ಥರಾಗಿ ದುಡಿದು ೧೯೮೮ರ ಫೆಬ್ರವರಿಯಲ್ಲಿ ಸ್ವಚ್ಛೆಯಿಂದ ನಿವೃತ್ತರಾದರು.

ಜೀವನದಲ್ಲಿ ಬಿಸಿಲು–ಬೆಳದಿಂಗಳು ಸಹಜ. ಅಂದರೆ ಅದು ಸುಖದುಃಖಗಳ ಸಮ್ಮಿಶ್ರಣ. ತಿಪ್ಪೇರುದ್ರಸ್ವಾಮಿಯವರು ಹಾಸನದಲ್ಲಿದ್ದಾಗ ಅವರಿಗೆ ಈ ಎರಡೂ ಬಗೆಯ ಅನುಭವಗಳಾದವು. ಅವರ ಪೂಜ್ಯ ತಂದೆಯವರು ತೀರಿಕೊಂಡರು. ಶ್ರೀಮತಿ ಗೌರಮ್ಮನವರು ಸ್ವಾಮಿಯವರ ಕೈಹಿಡಿದ ಪುಣ್ಯವತಿಯಾದರು. ಅನಂತರದ ವರ್ಷಗಳಲ್ಲಿ ಎರಡು ಗಂಡು, ಎರಡು ಹೆಣ್ಣು ಮಕ್ಕಳಿಗೆ ಈ ದಂಪತಿಗಳು ಅಪ್ಪ–ಅಮ್ಮ ಆದರು.

ಮದುವೆ ಅವರ ಅಧ್ಯಾಪನ ಅಧ್ಯಯನಗಳಿಗೆ ಮಾರಕ ಆಗಲಿಲ್ಲ. ಅಧ್ಯಾಪಕರಾಗಿದ್ದುಕೊಂಡೇ ಪ್ರೊ.ಸ.ಸ. ಮಾಳವಾಡರ ಮಾರ್ಗದರ್ಶನದಲ್ಲಿ 'ಶರಣರ ಅನುಭಾವ ಸಾಹಿತ್ಯ' ಕುರಿತ ಮಹಾ ಪ್ರಬಂಧ ರಚಿಸಿ, ಕರ್ನಾಟಕ ವಿಶ್ವವಿದ್ಯಾಲಯದಿಂದ ಪಿ.ಎಚ್.ಡಿ.ಪದವಿ ಪಡೆದರು. ಹಿರಿಯರ ಅಪೇಕ್ಷೆಯಂತೆ ಎಲ್.ಎಂ.ಪಿ. ಅಥವಾ ಎಂ.ಬಿ.ಬಿ.ಎಸ್. ಪರೀಕ್ಷೆ ಪಾಸುಮಾಡಿ ಔಷಧಿ ಇಂಜೆಕ್ಷನ್ ಕೊಡುವ ಡಾಕ್ಟರಾಗದಿದ್ದರೂ, ಸ್ವಿಚ್ಛೆಯಿಂದ ಅಕೆಡೆಮಿಕ್ ಡಾಕ್ಟರ್ ಆದರು. ಆದದ್ದೂ ಒಳ್ಳೆಯದೇ ಆಯಿತು. ತನ್ಮೂಲಕ ಕನ್ನಡದ ಭಾಗ್ಯೋದಯದ ಬಾಗಿಲು ತೆರೆಯಿತು.

ವೃತ್ತಿ ಜೀವನದಿಂದ ನಿವೃತ್ತರಾದರೂ ಡಾ.ತಿಪ್ಪೇರುದ್ರಸ್ವಾಮಿಯವರ ಪ್ರವೃತ್ತಿ ಪ್ರಬಲವಾಗಿಯೇ ಇತ್ತು. 'ಭಾವಗೀತೆ' ಎಂಬ ಕಿರುಹೊತ್ತಗೆಯಿಂದ ಆರಂಭವಾದ ಸಾಹಿತ್ಯ ಕೃಷಿ ೧೯೫೩ರಿಂದ ಅವ್ಯಾಹತವಾಗಿ ಸಾಗಿತು. 'ಶರಣ ಚರಿತ ಮಾನಸ' ಅವರ ಮರುಚಲು ಕೃತಿ. ಅನಂತರ ಶರಣ ಶರಣೆಯರ ಬದುಕ್ನಾಶ್ರಯಿಸಿದ ಆಧ್ಯಾತ್ಮಿಕ ಐತಿಹಾಸಿಕ ಕಾದಂಬರಿಗಳು ರಚಿತವಾದವು. ಅವುಗಳಲ್ಲಿ 'ಪರಿಪೂರ್ಣದೆಡೆಗೆ' ಮೊದಲ ಕಾದಂಬರಿ. ವ್ಯೋಮ ಮೂರುತಿ ಅಲ್ಲಮನ ದಿವ್ಯ ಜೀವನದ ಭವ್ಯೇತಿಹಾಸ ಇದರ ವಸ್ತು. ಅಲ್ಲಮ ಜ್ಞಾನದ ಮೇರು, ವೈರಾಗ್ಯದ ನಿಧಿ, ಹರಿಯುವ ಜ್ವಾಲೆ. ಸುಳಿದಾಡುವ ಬೆಳಕು. ಆ ಜಂಗಮ ಜ್ಯೋತಿಯ ಭೂಮವ್ಯಕ್ತಿತ್ವ ಅಮೇಯ, ಅಪ್ರಮೇಯ, ಕೋಟಿಸೂರ್ಯಪ್ರಭಾಪೂರ್ಣವಾದದ್ದು, ಅವನಿಗೆ ಮಣಿಯದ ವ್ಯಕ್ತಿ ಇಲ್ಲ ; ಅವನಿಂದ ತಣಿಯದ ಆತ್ಮವಿಲ್ಲ. ಎಲ್ಲರ ಪ್ರಶ್ನೆಗಳಿಗೂ ತಾನು ಉತ್ತರವಾದವನು, ಎಲ್ಲರ ಸಂದೇಹಗಳಿಗೆ ತಾನು ಸಮಾಧಾನವಾದವನು. ಅವನದು ಕಾಲಿಲ್ಲದ ಗಮನ, ಕೈಯಿಲ್ಲದ ಸೋಂಕು, ಬಾಯಿ ಇಲ್ಲದ ರುಚಿ, ಜ್ಞಾನ ಕಾಯದಲ್ಲಿನ ಮರಹ ಕಳೆದು, ಭಾವ ಕಾಯದೊಳಗಿನ ಭ್ರಮೆಯ ನೀಗಿ, ಕ್ರಿಯೆಯ ಕೈಲಾಸದಲ್ಲಿ 'ಶಿವ' ಸಾಧಿಸಿದವನು ; ತಾನೆ 'ಶಿವ' ಆದವನು. ಅಲ್ಲಮನೇ ಡಾ.ತಿಪ್ಪೇರುದ್ರಸ್ವಾಮಿಯವರ 'ಪರಿಪೂರ್ಣದೆಡೆಗೆ' ಕಾದಂಬರಿಯ ಕೇಂದ್ರ ಬಿಂದು.

'ಕದಳಿಯ ಕರ್ಪೂರ' ವಸ್ತು ಅಕ್ಕ ಬದುಕು. ಅಕ್ಕ ಹೆಣ್ಣುಕುಲದ ಹೆಮ್ಮೆ. ಅವಳು ಸತ್ಯದ ಸದನ, ನಿತ್ಯದ ನಿಧಿ, ಭಕ್ತಿಯ ಭಾವುಕಿ, ಶೀವಭಾವ ಸಂಪನ್ನೆ. ಅವಳು ನುಡಿದುದೆಲ್ಲಾ ಶಿವತತ್ವ, ನಡೆದುದೆಲ್ಲಾ ಶಿವಮಾರ್ಗ. ಇಂತಹ ಆಧ್ಯಾತ್ಮ ಲೋಕದ ಅಮೃತಸ್ಯಂದಿ ಅಕ್ಕ ಮಹಾದೇವಿಯ ಬಾಳ ಬೆಳಕು 'ಕದಳಿಯ ಕರ್ಪೂರ'.

'ಶಿವಯೋಗಿಯ ಶರೀರಮಾದೊಡಂ ವೃಥಾಸಮೆಯಲಾಗದು, ಅನುಗೊಂಬನಿತು ಕಾಯಕಂ ನಡೆಯುತಿರಬೇಕು' ಎಂದು ನುಡಿದ, ನಡೆದ, ಕರ್ಮಯೋಗದ ಮುಖಾಂತರ ಶಿವಯೋಗವನ್ನು ಸಾಧಿಸಿದ ೧೨ನೆಯ ಶತಮನದ ಮಹದ್ವಿಭೂತಿ ಶಿವಯೋಗಿ ಸಿದ್ಧರಾಮನ ಬದುಕು ಬಿತ್ತರಗೊಂಡಿದೆ ಇಲ್ಲಿ ಈ 'ನೆರಳಾಚೆಯ ಬೆಳಗು' ಎಂಬ ಕಾದಂಬರಿಯಲ್ಲಿ.

'ಕರ್ತಾರನ ಕಮ್ಮಟ' ಅಣ್ಣನ ಬಣ್ಣನೆಗೆ ಮೀಸಲಾದ ಮಹತ್ ಕೃತಿ. ಬೃಹತ್ ಪ್ರಮಾಣ ಗ್ರಂಥವೂ ಹೌದು. ಅಣ್ಣ ಬಸವಣ್ಣ ಭಕ್ತಿ ಭಂಡಾರಿ. ವಿಶ್ವಪ್ರೇಮಿ, ಮಹಾಮಾನವತಾವಾದಿ' ಇಂತಹ ವಿಶ್ವಜಗತ್ತು ಕಂಡ ಈ ಶ್ರೇಷ್ಠ ಸುಧಾರಕನ ಮಹೋನ್ನತ ಸಾಧನೆ ಸಿದ್ಧಿಗಳೆ 'ಕರ್ತಾರನ ಕಮ್ಮಟ'.

ಮಾತು ಮನಂಗಳಿಂದತ್ತತ್ತ ಜ್ಯೋತಿಯಾಗಿ ಬೆಳಗಿದ ನಿಜಗುಣ ಶಿವಯೋಗಿಗಳ ಬದುಕು–ಬಾಳು 'ಜ್ಯೋತಿ ಬೆಳಗುತಿದೆ' ಕಾದಂಬರಿಯ ವಸ್ತು. ಭೋಗದ ಕೆಸರಿನಲ್ಲಿ ಯೋಗದ ತಾವರೆಯಾದ ಮಹಾಪುರುಷನ ಪವಾಡ ಸದೃಶ ಜೀವನ 'ಜ್ಯೋತಿ ಬೆಳಗುತಿದೆ' ಕಾದಂಬರಿಯ ಕಥೆ.

ಇದೇ ರೀತಿ ಹರಿಹರ ರಾಘವಾಂಕರನ್ನು ಕುರಿತ 'ವಚನ ವಿರೂಪಾಕ್ಷ' ಜೇವರಗಿಯ ಮಹಾಯೋಗಿ 'ಷಣ್ಮುಖ ಸ್ವಾಮಿ ಯವರನ್ನು ಕುರಿತ 'ಜಡದಲ್ಲಿ ಜಂಗಮ' ವಿಜಯನಗರದ ರಾಜಕೀಯ, ಧಾರ್ಮಿಕ, ಸಾಂಸ್ಕೃತಿಕ ಹಾಗೂ ಸಾಹಿತ್ಯಿಕ ಬದುಕನ್ನು ಬಿತ್ತರಿಸುವ 'ವಿಜಯ ಕಲ್ಯಾಣ' ಇಮ್ಮಡಿ ಪುಲುಕೇಶಿಯನ್ನು ಕುರಿತ 'ಸತ್ಯಾಶ್ರಯ ಸಾಮ್ರಾಜ್ಯ' ಕೆಳದಿಯ ಗಂಡು ಶಿವಪ್ಪನಾಯಕ ನನ್ನು ಕುರಿತ 'ಶಿಸ್ತುಗಾರ ಶಿವಪ್ಪನಾಯಕ' ಮೊದಲಾದ ಕಾದಂಬರಿಗಳೂ, ವಿಧಿಪಂಜರ, ನಿಜಗುಣ ಶಿವಯೋಗಿ ಮೊದಲಾದ ನಾಟಕಗಳು, ಸಾಹಿತ್ಯ ಚಿತ್ರಗಳು ಎಂಬ ಕಥಾಸಂಕಲನ, ತಪೋರಂಗ ಎಂಬ ಕವನ ಸಂಕಲನ, ಶರಣರ ಅನುಭಾವ ಸಾಹಿತ್ಯ ಎಂಬ ಮಹಾಪ್ರಬಂಧ, ಇವೆಲ್ಲಕ್ಕೂ ಕಿರೀಟಪ್ರಾಯವಾದ 'ಕರ್ನಾಟಕ ಸಂಸ್ಕೃತಿ ಸಮೀಕ್ಷೆ ಎಂಬ ಆಚಾರ್ಯ ಕೃತಿ ಹಾಗೂ 'ತೌಲನಿಕ ಕಾವ್ಯಮೀಮಾಂಸೆ' ಎಂಬ ಪ್ರಮಾಣ ಗ್ರಂಥ – ಇವೇ ಮೊದಲಾದವು ಡಾ. ಸ್ವಾಮಿಯವರಿತ್ತ ಅನರ್ಘ್ಯ ಕೃತಿ ರತ್ನ ಗಳು.

ಇಂತಹ ೪೦–೫೦ ಮೌಲಿಕ ಕೃತಿಗಳನ್ನಿತ್ತ ಡಾ. ತಿಪ್ಪೇರುದ್ರಸ್ವಾಮಿಯವರಿಗೆ, ಅವರ ಸಾಹಿತ್ಯ ಸೇವೆಗಾಗಿ ಹಲವು ಪ್ರಶಸ್ತಿ ಗಳು ಬಂದಿವೆ. ೧೯೬೨ ಮತ್ತು ೧೯೬೮ರಲ್ಲಿ ಅನುಕ್ರಮವಾಗಿ ರಾಜ್ಯ ಹಾಗೂ ಕೇಂದ್ರಸಾಹಿತ್ಯ ಅಕಾಡಮಿ ಪ್ರಶಸ್ತಿಗಳೂ, ಇಳಕ ಲ್ಲಿನ ಮಹಾಂತಸ್ವಾಮಿಗಳವರ ದ್ವಾದಶ ವಾರ್ಷಿಕೋತ್ಸವ ಸಂದರ್ಭದಲ್ಲಿ ರೂಪಾಯಿಗಳ ತುಲಾಭಾರ ಸತ್ಕಾರವೂ ಸಂದಿವೆ. ಅಂ ತೆಯೇ ಅವರ ಅಭಿಮಾನಿಗಳ ಹಾಗೂ ಮಿತ್ರರಿಂದ ೧೯೮೮ರಲ್ಲಿ 'ಶೀವಚಿಂತನ' ಎಂಬ ಗೌರವಗ್ರಂಥವೂ ಸಮರ್ಪಿತವಾಗಿದೆ.

ಹೀಗೆ ಕನ್ನಡ ಸಾಹಿತ್ಯಕ್ಕೆ ಸಂಸ್ಕೃತಿಯ ಸಂವರ್ಧನೆಗೆ ಅಪಾರ ಸೇವೆ ಸಲ್ಲಿಸಿದ ಡಾ. ಹೊನ್ನಾಳಿ ತಿಪ್ಪೇರುದ್ರಸ್ವಾಮಿಯವರ ಪವಿತ್ರಾತ್ಮವು ದಿನಾಂಕ ೨೮ ಅಕ್ಟೋಬರ್ ೧೯೯೪ ಶುಕ್ರವಾರ ಶಿವನೊಳಗಾಯಿತು. ಇಂದು ನಮ್ಮೆದುರು ಅವರಿಲ್ಲ. ಆದರೆ ಅವರಿತ್ತ ಕೃತಿಗಳು ಕನ್ನಡ ಸಾಹಿತ್ಯಾಕಾಶದಲ್ಲಿ ಚಿರಕಾಲ ಬೆಳಗುವ ತಾರೆಗಳಾಗಿವೆ.

# ಕನ್ನಡ ಪ್ರಜ್ಞೆಯ ಎತ್ತರದ ವ್ಯಕ್ತಿ

==========================================================================

"ಕನ್ನಡಕ್ಕಾಗಿ ತನು ತೆತ್ತಿದ್ದೇನೆ, ಮನ ತೆತ್ತಿದ್ದೇನೆ, ಧನ ತೆತ್ತಿದ್ದೇನೆ, ಕನ್ನಡವೇ ನ್ನ ತಾಯಿ ತಂದೆ ಬಂಧು ಬಳಗ, ಅದೇ ನನ್ನ ಜಾತಿ ಅದೇ ನನ್ನ ಗತಿಮತಿ, ಕನ್ನಡದ ಗೆಲುವಿಗಾಗಿ ಎಂಥ ಅವಮಾನವನ್ನಾದರೂ ಸಹಸಿಯೇನು ! – ಇಲ್ಲಿಯ ತನಕ ದಮಡೋಪಾಯದಿಂದಲೇ ಕನ್ನಡಕ್ಕೆ ಸ್ಥಾನಮಾನಗಳನ್ನು ಸಾಧಿಸಿದಂತಾಗಿದೆ. ಶಠರಿಗೆ ಶಾಠ್ಯವೇ ಮದ್ದು. ಸಾಮ್ಯದ ಮೂಲಕ ಹತ್ತು ವರ್ಷಗಳಲ್ಲಿ ಸಾದಿಸಬಹುದಾದ ಒಳ್ಳೆಯದನ್ನು, ದಂಡದ ಮೂಲಕ ಒಂದು ದಿನದಲ್ಲಿ ಸಾಧಿಸಬಹುದಾದರೆ ಅದೇ ಗ್ರಾಹ್ಯ, ಉಳಿದದ್ದು ತ್ಯಾಜ್ಯ, ಕನ್ನಡದ ಹಗೆ ನನಗೆ ಹಗೆ. ಭಗವತ್ ಕೃಪೆಯಿಂದ ನನ್ನ ಬಾಳಿನಲ್ಲಿ ಕೊರತೆಯಿಲ್ಲ. ಆಶೆ ಆಮಿಷಗಳಿಲ್ಲ. ಕನ್ನಡದ ಮೇಲ್ಮೆಯೇ ನನ್ನ ಗುರಿ."

–ಇಂತಹ ಕನ್ನಡಾಭಿಮಾನಿ ದೇಜಗೌ ಕನ್ನಡಮ್ಮನ ಅಮೃತಪುತ್ರ. ಕನ್ನಡವನ್ನೇ ಹೊದೆದು, ಕನ್ನಡವನ್ನೇ ಹಾಸಿ, ಕನ್ನಡ ವನ್ನೇ ಬದುಕಿದವರು, ಕನ್ನಡದಲ್ಲಿ ಮುಕ್ತ ಕಾಣುವ ಹಿರಿದಾಸೆ ಉಳ್ಳವರು ಕೂಡ. ಇವರು ಮೈಸೂರು ವಿಶ್ವವಿದ್ಯಾಲಯಕ್ಕೆ ಪ್ರವೇ ಶಿಸಿದಮೇಲೆ ಕನ್ನಡಕ್ಕೆ ಕಸುವು ಬಂತು, ಉಸಿರು ಬಂತು. ಹಲವು ಹತ್ತೆಂಟು ವಿಭಾಗಗಳ್ಲಿ ಕನ್ನಡ ಕಾಯಕಲ್ಪವೂ ಆಯಿತು. 'ಮಾನಸಗಂಗೋತ್ರಿ'ಯ ಕನ್ನಡ ಅಧ್ಯಯನ ಸಂಸ್ಥೆ ಅಸ್ತಿತ್ವಕ್ಕೆ ಬಂದದ್ದು ಈ ಸಂಸ್ಥಾಪಕ ಅಧ್ವರ್ಯುವಿನ ಅಮೃತ ಹಸ್ತದಿಂದ. ಜಾನಪದ ವಸ್ತುಸಂಗ್ರಹಾಲಯ ರೂಪುಗೊಂಡದ್ದು ಈ ರೂವಾರಿಯ ಕೈಯಲ್ಲಿ. ಕನ್ನಡ ವಿಶ್ವಕೋಶ ಕಣ್ತೆರೆದದ್ದು ಈತನ ಮಾತೃ

ಸ್ಪರ್ಶದ ಮಮತೆಯಲ್ಲಿ. ಸಂಶೋಧನೆ, ಅನುವಾದ, ನಿಘಂಟು, ಗ್ರಂಥಸೂಚಿ, ಕನ್ನಡದ ಏನೆಲ್ಲವಕ್ಕೂ ದೇಜಗೌ ಮಾತೃಗರ್ಭವಾದರು. ನಾಡಿನೆಲ್ಲೆಡೆಯೂ ನಡೆವ ಕನ್ನಡ ಯಜ್ಞದ ಧಾತೃ, ಉದ್ಘಾತೃ, ಹೋತೃ, ಬ್ರಹ್ಮ – ಎಲ್ಲ ತಾವಾದರು. ಅವರ ಶ್ರಮದಿಂದಾಗಿ ವಿಶ್ವವಿದ್ಯಾನಿಲಯದ ಎಲ್ಲ ಹಂತಗಳಲ್ಲೂ ಕನ್ನಡ ಉಸಿರಾಡಿತು. ಶ್ರೀ ರಾಮಕೃಷ್ಣಪರಮಹಂಸರ ದರ್ಶನಕ್ಕೆ ಸ್ವಾಮಿ ವಿವೇಕಾನಂದರು ನಿದರ್ಶನವಿದ್ದಂತೆ, ಋಷಿಕವಿ ಕುವೆಂಪುರವರ ಮಾನಸಗಂಗೋತ್ರಿಯ ಎಲ್ಲ ಕನಸುಗಳನ್ನೂ ನನಸಾಗಿಸಿ ನಿಂತವರು ದೇಜಗೌ. ಇದು ಒಣ ಹೊಗಳಿಕೆಯ ಮಾತಲ್ಲ, ನಿತ್ಯ ಸತ್ಯ ಪ್ರತ್ಯಕ್ಷ ಪ್ರಮಾಣಭೂತ ಅಂಶ.

ದೇಜಗೌರವರ ಕನ್ನಡತನದ ಸಹಸ್ರಕಿರಣಗಳಲ್ಲಿ ಕನ್ನಡ ಶಿಕ್ಷಣ ಮಾಧ್ಯಮ ಆಗಬೇಕು ಎಂಬ ಹೋರಾಟವೂ ಒಂದು. ಅದರ ಪರಿಣಾಮವಾಗಿ ಮಾನವಿಕ ವಿಜ್ಞಾನವೇ ಮೊದಲಾದ ಕ್ಷೇತ್ರಗಳಲ್ಲಿ ನೂರಾರು ಕೃತಿಗಳು ಬರುವಂತಾಯಿತು ಕನ್ನಡದಲ್ಲಿ. ಹಲವು ಹತ್ತೆಂಟು ಕೋನಗಳಲ್ಲಿ ಕನ್ನಡ ಮೈತುಂಬಿ ಬರುವಂತಾಯಿತು. ಅಂತೆಯೇ ವೈಯುಕ್ತಿಕವಾಗಿ ಅವರ ಕನ್ನಡಾಭಿಮಾನಕ್ಕೆ ಅವರು ಸಂಪಾದಿಸಿದ ಕನ್ನಡ ಗ್ರಂಥಗಳೂ ಸಾಕ್ಷಿ. ಅವು ಅವರ ಕಟ್ಟಾ ಕನ್ನಡಾಭಿಮಾನಕ್ಕೆ ಹಿಡಿದ ಕನ್ನಡಿಗಳೂ ಹೌದು. ಕನ್ನಡ ಚಳವಳಿಯ ಮುಂಗೋಳಿ ಬಸವಣ್ಣ, ಅವರ ಆರಾಧ್ಯದೈವ ಕನ್ನಡ ಚಳುವಳಿಯ ನೇತಾರ ಆಂಡಯ್ಯ, ಕಸುವುಳ್ಳ ಕನ್ನಡದ ಆಡುನುಡಿ, ಪಡೆನುಡಿ, ಗಾದೆ ಮಾತುಗಳನ್ನು ಧಾರಾಳವಾಗಿ ಬಳಸಿ 'ಬೆರಸಲ್ ಬಕ್ಕುಮೆ ಘೃತಮುಮಂ ತೈಲಮುಮಂ' ಎಂದು 'ಕನ್ನಡದಲ್ಲಿ ಬರೆಯುವುದಾದರೆ ಶುದ್ಧ ಕನ್ನಡದಲ್ಲಿಯೇ ಬರೆಯಿರಿ, ಸಂಸ್ಕೃತ ಬೆರೆಸಿ ಪಾಕ ಕೆಡಸುವುದೇಕೆ' ಎಂದು ಪ್ರಶ್ನಿಸಿದ ಕನ್ನಡ ಚಳುವಳಿಯ ಕಟ್ಟಾಳು ನಯಸೇನ, ಕನ್ನಡದ ಕಡುಗಲಿ ಕುಮಾರರಾಮನನ್ನು ಕೊಟ್ಟ ನಂಜುಂಡ, ಇಂದು ಕನ್ನಡ, ಕನ್ನಡಿಗ, ಕರ್ನಾಟಕ – ಇವುಗಳೇ ತಮ್ಮ ಗಾಯತ್ರಿಯಾಗುಳ್ಳ ಪಿತಾಮಹ, ರಾಷ್ಟ್ರನಾಯಕ ಶ್ರೀ ಸಿದ್ಧವನಹಳ್ಳಿ ನಿಜಲಿಂಗಪ್ಪ ಇವು ಗೌಡರ ಕನ್ನಡಾಭಿಮಾನದ ಅವಿಸ್ಮರಣೀಯ ಅಭಿವ್ಯಕ್ತಿಗಳು.

---

*ಪ್ರೊ. ದೇ. ಜವರೇಗೌಡರು, 'ರಸಷಷ್ಠಿ' ಅವರಿಗಿತ್ತ ಷಷ್ಠಭಿನಂದನ ಕೃತಿ. ಅದಕ್ಕಾಗಿ ಮತ್ತು ಅದಕ್ಕೆ ಮೊದಲೇ ಹಿಂದ್ ಪಬ್ಲಿಕೇಷನ್‌ರವರಿಗಾಗಿ.

ಕನ್ನಡ ಸಂಕ್ರಮಣ ಯುಗದಲ್ಲಿ ಕನ್ನಡ ಕಾರಣಪುರುಷನಾಗಿ ದುಡಿದ ದೇಜಗೌ ವ್ಯಕ್ತಿತ್ವದ ಮತ್ತೊಂದು ಮುಖವೆಂದರೆ ಅವರದು ಮಾತೃಹೃದಯ. ಬಡತನ, ಹಸಿವು, ಶೋಷಣೆ – ಇವು ಅವರ ಸ್ವಾನುಭವಗಳು. ಅದರಿಂದಲೇ ಅವರಿಗೆ ಅನ್ಯರ ನೋವು ಅರ್ಥವಾಗುವುದು. 'ಹಸಿದವಗೆ ಗೊತ್ತು ಹಸಿವೆಯ ಶೂಲಿ' ಅಲ್ಲವೇ? ಹೀಗಾಗಿ ಅನೇಕ ಅನಾಥ ಪಕ್ಷಿಗಳಿಗೆ ಅವರೊಂದು ವಡವೃಕ್ಷವಾಗಿದ್ದಾರೆ, ಹಸಿದವರಿಗೆ ಅನ್ನವಾಗಿದ್ದಾರೆ. ದಣಿದವರಿಗೆ ತಂಪಾಗಿದ್ದಾರೆ, ಕುರುಡರಿಗೆ ಕಣ್ಣಾಗಿ, ಹೆಳವನಿಗೆ ತೆಮರಾಗಿ, ಕನ್ನಡ ಹಿತ ಸಾಧನೆಯ ಹೊಂದೇರು ತಾವಾಗಿದ್ದಾರೆ.

ನನ್ನ ಮಾತು ಉತ್ಪ್ರೇಕ್ಷೆಯಂತೆ ತೋರಬಹುದು. ಆದರೆ ಅದು ಸತ್ಯ. ನನ್ನದೇ ಒಂದು ನಿದರ್ಶನವಿತ್ತು ಸಮರ್ಥಿಸುತ್ತೇನೆ. ಕನ್ನಡ (ಆನರ್ಸ್) ಪದವಿ ಮುಗಿಸಿದ ಮೇಲೆ ಎಂ.ಎ. ಮುಂದುವರಿಸುವ ಆರ್ಥಿಕ ಸಾಮರ್ಥ್ಯ ನನ್ನಲ್ಲಿರಲಿಲ್ಲ. ನನ್ನ ತಂದೆ ಭಯಂಕರ ರೋಗವೊಂದಕ್ಕೆ ತುತ್ತಾಗಿ ಸಾವಿನ ದವಡೆಯಲ್ಲಿದ್ದರು. ಬೆಂಗಳೂರಿನ ಅವರ ಆಸ್ಪತ್ರೆ ಖರ್ಚಿಗಾಗಿ ನಮ್ಮ ಆಸ್ತಿಯ ಅನೇಕ ಭಾಗ ಹೋಯಿತು. ಬಡತನ ಕಾಲಿರಿಸಿತು. ನನ್ನ ಒಬ್ಬನೇ ತಮ್ಮ ತುಂಬಾ ಚಿಕ್ಕವನು. ನನಗೆ ಎಲ್ಲಿಂದಲೂ ಯಾರ ನೆರವೂ ಇಲ್ಲ. ಇದ್ದರೂ ನನ್ನ ತಾಯಿಯ ಸ್ವಾಭಿಮಾನ ಅವುಗಳನ್ನು ಸ್ವೀಕರಿಸಲು ಸಿದ್ಧವಿರಲಿಲ್ಲ. ಹೀಗಾಗಿ ಆಕೆ ರಸ್ತೆ ರಿಪೇರಿಯ ಕೂಲಿಗಳಲ್ಲಿ ಒಬ್ಬಳಾಗಿ ಪ್ರತಿದಿನ ನಾಲ್ಕಾಣೆ ಹೆಣ್ಣಾಳು ಕೂಲಿ ತರಬೇಕು ಉದರಂಭಣ ಪೂರೈಸಬೇಕು. ಇಂತಹ ಅನಾಥ ಸ್ಥಿತಿಯಲ್ಲಿ ಮೈಸೂರು ಮಹಾರಾಣಿ ಕಾಲೇಜಿನಲ್ಲಿ ಎಂ.ಎ. ಓದುವುದು, ಓದು ಮುಗಿಸುವುದು ಕನಸಿನ ಮಾತಾಗಿತ್ತು. ಅದರಿಂದಾಗಿ ಕೆಲಸ ಹುಡುಕಿಕೊಂಡು ಹೋದೆ. ನನ್ನಗುರು ನನ್ನ ಅಭಿಮಾನದ ಮೂರ್ತಿ ದೇಜಗೌರವರನ್ನು ಮೊದಲು ಕಂಡೆ ಅವರ 'ಗುರುಕೃಪ'ದಲ್ಲಿ. ನನ್ನ ಒಕ್ಕಣೆ ಎಲ್ಲಾ ಮುಗಿದ ಮೇಲೆ ಕಾಫಿ ಕೊಡಿಸಿ ಹೇಳಿದರು, 'ನೋಡಿ, ಮರುಳಯ್ಯ, ನಿಮ್ಮನ್ನು ಯಾವುದಾದರೂ ಒಂದು ಕಾಲೇಜಿಗೆ ಲೆಕ್ಚರರ್ ಆಗಿ ಕಳುಹಿಸುವುದು ಕಷ್ಟವಲ್ಲ. ಆದರೆ ಕೆಲಸ ಸಿಕ್ಕ ಕೂಡಲೇ ಮನುಷ್ಯ ಆಲಸಿ ಆಗ್ತಾನೆ. ನಿಮ್ಮಲ್ಲಿ ಪ್ರತಿಭೆ ಇದೆ. ಅದು ಸೀಮಿತ ವಲಯದಲ್ಲಿ ನಿಂತು ತೃಪ್ತವಾಗಿ, ತಣ್ಣಗಾಗಬಾರದು. ನೀವು ಎಷ್ಟೇ ಕಷ್ಟವಿದ್ದರೂ ಎಂ.ಎ. ಮುಗಿಸುವುದು ಒಳ್ಳೆಯದು. ನನಗರ್ಥವಾಗುತ್ತೆ – ಹಣ ಇಲ್ಲದೆ ಬದುಕು ಸಾಗದು. ಈಗ ಒಂದು ಕೆಲಸ ಮಾಡಿ– ಸುತ್ತೂರು ಜಗದ್ಗುರುಗಳವರು ಚಾಮರಾಜನಗರದಲ್ಲಿ ಹೊಸದಾಗಿ ಒಂದು ಇಂಟರ್ ಮೀಡಿಯಟ್ ಕಾಲೇಜು ತೆರೆಯುತ್ತಿದ್ದಾರೆ. ಅಲ್ಲಿ

ನೀವು ಅರೆಕಾಲಿಕ ಅಧ್ಯಾಪಕರಾಗಿ ಸೇರಿಕೊಳ್ಳಿ. ಇಲ್ಲಿ ಎಂ.ಎ. ವ್ಯಾಸಂಗವನ್ನು ಮುಂದುವರೆಸಿ ವೇಳಾಪಟ್ಟಿಯನ್ನು ಕುವೆಂಪುರವರಿಗೆ ಹೇಳಿ ಸರಿಪಡಿಸೋಣ' ಅಂದರು.

'ಹೌದು ಸಲಹೆ ಒಳ್ಳೆಯದೇ. ಆದರೆ ಚಾಮರಾಜನಗರದ ಜಾಗವನ್ನು ಯಾರಾದರೂ ತುಂಬಿದ್ದರೇ ?'

'ನಾನಿದ್ದೇನೆ, ನಿಮಗೇಕೆ ಆ ಚಿಂತೆ. ನಿಮ್ಮ ವಿದ್ಯಾಭ್ಯಾಸದ ಖರ್ಚಿನ ಕೆಲವು ಭಾಗ ನನಗಿರಲಿ. ಹೆಚ್ಚಿನದನ್ನು ನೀವು ಕೇಳಿದರೆ ಸುತ್ತೂರು ಜಗದ್ಗುರುಗಳಾದ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು ಇಲ್ಲ ಎನ್ನುವಿದಿಲ್ಲ. ಹೇಗೋ ಅನುಸರಿಸಿಕೊಂಡು ಹೋಗುವುದು ಒಳ್ಳೆಯದು.'

ಗುರುಗಳ ಆದೇಶ ನನ್ನ ಬದುಕಿನ ದಾರಿದೀಪವಾಯಿತು. ಅದೇರೀತಿ ನಾನು ಜಗದ್ಗುರುಗಳನ್ನು ಕಂಡೆ. ಅವರ ಅನುಗ್ರಹ ಆಶೀರ್ವಾದಗಳಿಂದ ಚಾಮರಾಜನಗರದ ಶಿಕ್ಷಣ ಸಂಸ್ಥೆಯ ಕಾರ್ಯಾಧ್ಯಕ್ಷರಾಗಿದ್ದ ಉಡೀಗಾಲದ ಮಾದಪ್ಪನವರ ಕೃಪೆಯಿಂದ, ನಾನು ೧೯೫೫ ಆಗಸ್ಟ್‌ನಲ್ಲಿ ಚಾಮರಾಜನಗರದ ಇಂಟರ್ ಮೀಡಿಯಟ್ ಕಾಲೇಜಿನ ತಿಂಗಳಿಗೆ ಅರವತ್ತು ರೂಪಾಯಿ ಸಂಬಳದ ಅಧ್ಯಾಪಕನಾದೆ. ಪೂಜ್ಯ ಗುರುಗಳಾದ ಶ್ರೀ ಕುವೆಂಪುರವರು ನನ್ನೆಲ್ಲ ಕತೆ ಕೇಳಿ, ನಾನು ಚಾಮರಾಜನಗರಕ್ಕೆ ಹೋಗುವ ಎರಡೂ ದಿನಗಳ ಎಂ.ಎ. ತರಗತಿಯ 'ಟೈಟೇಬಲ್ ಹೊಂದಿಸಿಕೊಟ್ಟರು.

ಬಡತನ ಬಯಲಾಯಿತು. ನನ್ನ ಭಾಗ್ಯೋದಯದ ಬಾಗಿಲು ತೆರೆಯಿತು.

ನಾನು ಸಹ್ಯಾದ್ರಿ ಕಾಲೇಜಿನಲ್ಲಿದ್ದಾಗ ನನ್ನ ಗುರುಗಳು ಶಿವಮೊಗ್ಗೆಗೆ ಆಗಮಿಸಿದರು. ಅಲ್ಲಿನ ಕರ್ನಾಟಕ ಸಂಘದ ಕಾರ್ಯಕ್ರಮ ಇತ್ತು. ಅದು ಮುಗಿದ ಮೇಲೆ ಅದೂ ಇದೂ ಮಾತಾಡ್ತಾ ಗುರುಗಳಲ್ಲಿ ಪ್ರಸ್ತಾಪಿಸಿದೆ" 'ಸಾರ್, ನಿಮ್ಮ ಉಪಕಾರ ಎಂದೆಂದಿಗೂ ಮರೆಯಲಾಗದಂಥದು. ಅಂದು ನೀವು ದಾರಿ ತೋರಿದಿರಿ. ನಿಮ್ಮ ಕೃಪೆಯಿಂದ ಇಂದು ನಾನೊಬ್ಬ ಮನುಷ್ಯನಾಗಿದ್ದೇನೆ.'

'ಹಾಗೇನಿಲ್ಲ, ನಿಮ್ಮ ಸ್ವಸಾಮರ್ಥ್ಯದಿಂದ ಮುಂದೆ ಬಂದಿದ್ದೀರಿ. ನಿಮ್ಮ ಪ್ರಗತಿಯ ಬಗೆಗೆ ತುಂಬಾ ಕೇಳಿದ್ದೇನೆ. ಅದಷ್ಟು ಸಾಕು. ಅಷ್ಟೇ ನನ್ನ ಸ್ವಾರ್ಥ.'

'ಅದು ಸರಿ, ನೀವು ನನ್ನ ಮೇಲೆ ಅನುಗ್ರಹ ತೋರಿದಿರಿ, ನಾನು ನಿಮ್ಮ ಹಿಂದಲ್ಲ, ಮುಂದಲ್ಲ, ಬಂಧುವಲ್ಲ ಬಳಗವಲ್ಲ.'

'ಛೇ ಛೇ ಏಕಲ್ಲ ? ಇಲ್ಲಿ ಜಾತಿ ಮುಖ್ಯ ಅಲ್ಲ ಮರುಳಯ್ಯ, ಕನ್ನಡವನ್ನು ಒಪ್ಪುವ ಅಪ್ಪುವ ಎಲ್ಲರೂ ನನ್ನ ಬಂಧುಗಳು. ಈ ಅರ್ಥದಲ್ಲಿ ನೀವು ನನ್ನ ತಮ್ಮ !'

'ಅದು ನನ್ನಭಾಗ್ಯ ಸಾರ್ '

'ಯಾವ ಭಾಗ್ಯ ಹೇಗಾದರೂ ಇರಲಿ. ಕನ್ನಡಕ್ಕೆ ಒಳ್ಳೆಯದಾಯಿತಲ್ಲಾ'

'ಹೇಗೆ ? '

'ನೋಡಿ, ವೀರಶೈವರಲ್ಲಿ ಸಮೂಹ ಭೋಜನದ ದಾಸೋಹ ವೇಳೆಯಲ್ಲಿ ಎಡೆಗೆ ಎಲ್ಲ ಪಡಿಪದಾರ್ಥಗಳನ್ನು ಬಡಿಸಿದ ಮೇಲೆ ಸಂಕಲ್ಪ ಹೇಳ್ತಾರೆ :

**ಶಿವಯೋಗೀನೀ ಸಂತೃಪ್ತೋ ತೃಪ್ತೋ ಭವತಿ ಶಂಕರ ಃ**
**ತತೃಪ್ತ್ಯಾಂ ತನ್ಮಯಂ ವಿಶ್ವಂ ವಿಶ್ವಮೇತಿ ಚರಾಚರಂ**
ಎಂದು

ಅದರರ್ಥ ಶಿವಯೋಗಿಯೊಬ್ಬ ಸಂತೃಪ್ತನಾದರೆ ಪರಶಿವನು ತೃಪ್ತನಾಗುತ್ತಾನೆ. ಜಗತ್ಪಿತನಾದ ಪರಶಿವನು ಸಂತೃಪ್ತನಾದರೆ ಅವನ ಗರ್ಭದಲ್ಲಿ ಅಡಗಿರುವ ವಿಶ್ವಜಗತ್ತು ಅರ್ಥಾತ್ ಸಚರಾಚರ ಚೇತನಗಳೂ ಸಂತೃಪ್ತಗೊಳ್ಳುತ್ತದೆ ಎಂದು. ಹಾಗೆ ನೀವೆಲ್ಲ ಯಾವನೇ ಕನ್ನಡಿಗನಿರಲಿ ಅವರನ್ನು ತೃಪ್ತಿಗೊಳಿಸಿದರೆ ಕನ್ನಡವನ್ನೇ ತೃಪ್ತಿಗೊಳಿಸಿದಂತೆ, ಕನ್ನಡದ ಕಾರ್ಯಕ್ಕೊಂದು ಶಕ್ತಿಯನ್ನು ಒದಗಿಸಿದಂತೆ ! ಇದೇ ಸದ್ಭಾವನೆಯಿಂದ ನಡೆದುಕೊಂಡಿದ್ದೇನೆ. ನನ್ನಭಾವನೆ ಬೆಳಗಿ ಅದೇ ನನ್ನ ಭಾಗ್ಯ. ಕನ್ನಡದ ಭಾಗ್ಯ.'

ಇಂತಹ ಮಾನವತೆಯ ಮಹಾಮೂರ್ತಿಯಲ್ಲಿ ಕನ್ನಡತನ ಎಷ್ಟಿತ್ತೆಂಬುದನ್ನು ಅಳೆದು ತೋರಲು ಸಾಧ್ಯವೇ? ದೇಜಗೌ, ನನು ಹಿಂದೆ ಹೇಳಿದಂತೆ ಬರಿಯ ನೆರಳು ನೀಡುವ ವಟವೃಕ್ಷವೇ ಆಗಿರಲಿಲ್ಲ, ಮಾವಿನ ಮರ ಆಗಿದ್ದರು. ಗುಲಾಬಿ ಹೂ ಬಿಡುತ್ತೆ ಹಣ್ಣು ಕೊಡಲಾರದು. ಹಲಸು ಹಣ್ಣು ಕೊಡುತ್ತೆ ಹೂ ಬಿಡಲಾರದು, ಆದರೆ ಆವು ಮಾತ್ರ ಹೂವನ್ನೂ ಕೊಡುತ್ತೆ, ಹಣ್ಣನ್ನೂ ದಯಪಾಲಿಸುತ್ತೆ. ಅನೇಕಾನೇಕ ಪಕ್ಷಿಗಳ ಕೋಟ್ಯಾನುಕೋಟಿ ದುಂಬಿಗಳ ಆಡುಂಬಲವಾಗುತ್ತೆ. ಅಂತೆಯೇ ತಣ್ಣೆಳಲೀವ ತಾಣವೂ ತಾನಾಗುತ್ತೆ. ಅಂತಹ ಮಾಮರ ನನ್ನ ಗುರುವರ.

ಕಾವ್ಯ ತತ್ವವನ್ನು ಕುರಿತು ಅಧ್ಯಯನ ನಡೆಸುವ ಸಂಶೋಧಕನಿಗೆ ಮೀಮಾಂಸೆ, ವಿಮರ್ಶೆ, ಭಾಷ್ಯ, ವ್ಯಾಖ್ಯಾನ, ತಾತ್ಪರ್ಯ, ಟೀಕು ಇತ್ಯಾದಿ ದ್ವಂದ್ವ ಪದಗಳ ಸಂದರ್ಶನ ಆಗದಿರದು. ಆ ಯಮಲಪದಗಳು ಎಂದಿಗೂ ಒಂದೇ ಅರ್ಥವನ್ನು ವ್ಯಂಜಿಸುವ ಪರ್ಯಾಯ ಪದಗಳಲ್ಲ ಅಭಿವ್ಯಕ್ತರ್ಥದಲ್ಲಿ ಒಂದು ಮತ್ತೊಂದರಿಂದ ಭಿನ್ನ.

ಮೀಮಾಂಸೆ ಎಂದರೆ ಕಾವ್ಯಪುರುಷನ ಶರೀರವನ್ನೂ, ಆ ಶರೀರದ ವಿವಿಧ ಅಂಗಗಳನ್ನೂ ಗುರುತಿಸುವುದು ಹಾಗೂ ಅದರ ಆತ್ಮವನ್ನು ಕುರಿತು ಶೋಧ ನಡೆಸುವುದು. ಅಂದರೆ ಕಾವ್ಯ ಪ್ರಕಾರಗಳನ್ನು ಕುರಿತು ಒಂದು ಸ್ಥೂಲ ವಿವೇಚನೆ. ಕವಿ ಎಂದರೆ ಯಾರು ? ಅವನಿಗಿರಬೇಕಾದ ಯೋಗ್ಯತೆ ಏನು ? ಕಾವ್ಯ ಎಂದರೇನು ? ಅದರ ಸೃಷ್ಟಿ ಹೇಗೆ ? ಅದರ ವಿವಿಧ ಪ್ರಕಾರಗಳು, ಕಾವ್ಯದಲ್ಲಿ ಛಂದಸ್ಸಿನ ಸ್ಥಾನ, ಶೈಲಿಯ ಮಹತ್ವ ಹಾಗೂ ಅಲಂಕಾರ, ರೀತಿ, ಧ್ವನಿ, ರಸ, ಔಚಿತ್ಯ ಎಂಬ ಪ್ರಸ್ಥಾನ ಪಂಚಕ ಇವೇ ಮೊದಲಾದುವನ್ನು ಕುರಿತು ಅಧ್ಯಯನ, ವಿವೇಚನೆ, ವಿಶ್ಲೇಷಣೆ, ವ್ಯಾಖ್ಯಾ, ವರದಿ, ವಿಮರ್ಶೆ. ಅಂದರೆ ಒಬ್ಬ ಕವಿಯ ಒಂದು ಕೃತಿಯನ್ನು ಕೈಗೆತ್ತಿಕೊಂಡು, ಅದನ್ನು ಪ್ರತಿಭಾವಂತನೂ, ಸೂಕ್ಷ್ಮ ಬುದ್ಧಿಯುಳ್ಳವನೂ ಆದ ಸಹೃದಯನೊಬ್ಬನು ಮೊದಲು ತಾನು ಓದಿ, ಆಸ್ವಾದಿಸಿ, ಆನಂದಿಸಿ, ಅದರ ದೋಷಗಳನ್ನು ಖಂಡಿಸಿ, ಗುಣಗಳನ್ನು ಮೆಚ್ಚಿ, ಆ ಮೆಚ್ಚನ್ನು ಹಲವರಿಗೆ ಹಂಚುವ ಸಾಹಸ ಇಲ್ಲವೇ ನಿಷ್ಪಕ್ಷಪಾತಿಯೊಬ್ಬನು ಒಂದು ಕಾವ್ಯ ಅಥವಾ ಕಲಾಕೃತಿಯನ್ನು ತನ್ನ ವಿವೇಚನೆಯ ತ್ರಾಸಿನಲ್ಲಿ ತೂಗಿ, ವಿಚಾರದ ಒರೆಗಲ್ಲಿನಲ್ಲಿ ಒರೆಹಚ್ಚಿ ನೋಡಿ, ಅದರ ಯೋಗ್ಯತೆಗೆ ಬೆಲೆಕಟ್ಟುವ ವಿಧಾನ.

ಇಂತಹ ಪ್ರಾಯೋಗಿಕ ವಿಮರ್ಶೆ ನಮ್ಮಲ್ಲಿ ಮೊದಮೊದಲು ಹುಟ್ಟಲೂ ಇಲ್ಲ, ಬೆಳೆಯಲೂ ಇಲ್ಲ. ಅದಕ್ಕೆ ಕಾರಣಗಳು ಹಲವಿವೆ. ಆದರೆ ಔಚಿತ್ಯ ಸಿದ್ಧಾಂತ ಅವತರಿಸುವವರೆಗೂ ಆ ಕೊರತೆ ಇದ್ದೇ ಇತ್ತು. ವಚಿತ್ಯ ಪ್ರಸ್ಥಾನಕಾರರು ರಸವ್ಯಂಜನೆಗೆ ವಿರೋಧವೆನಿಸುವ ಪದ, ಪದಪುಂಜ, ವಾಕ್ಯ, ಸನ್ನಿವೇಶ, ಪಾತ್ರ, ಪರಿಸರ, ಭಾವ, ಶೈಲಿ, ಛಂದಸ್ಸು, ಯಾವುದೇ ಇರಲಿ ಅದು ಅನೌಚಿತ್ಯ ಎಂದು ಸಾರಿದರು. ಅದನ್ನು ಹಲವರ ಕಾವ್ಯ ನಾಟಕಗಳಲಿ ಹುಡುಕಿದ್ದೂ ಉಂಟು. ಅದರಿಂದಾಗಿ ಒಂದು ಬಗೆಯ ಪ್ರಾಯೋಗಿಕ ವಿಮರ್ಶೆ ಆ ಮೂಲಕ ಆರಂಭವಾಯಿತು ಎಂದು ಹೇಳಬಹುದು. ಆದರೂ ಪಾಶ್ಚಾತ್ಯ ರೀತಯ ವಿಮರ್ಶೆಯ ಅರ್ಥವನ್ನು ತುಂಬಲಿಲ್ಲ, ನಮ್ಮ ಔಚಿತ್ಯ ಸಿದ್ಧಾಂತ. ಅವರಷ್ಟು ನಿರ್ದಿಷ್ಟ ನಿರ್ದಾಕ್ಷಿಣ್ಯ ಪರವಾದ ನಿಕರವಾದ ಬೆಲೆ ಕಟ್ಟುವ ವಿಧಾನ ನಮ್ಮದಾಗಲೇ ಇಲ್ಲ.

ಮೀಮಾಂಸೆ ಅಪ್ಪಟ ಹಾಗೂ ಪೂರಾ ಭಾರತೀಯ ಸಿದ್ಧವಸ್ತು. ಭಾರತೀಯ ಕಲಾಕ್ಷೇತ್ರದಲ್ಲಿ ತಯಾರಾದದ್ದು ; ವಿಮರ್ಶೆ ಪಾಶ್ಚಾತ್ಯ ರಾಷ್ಟ್ರದಿಂದ ಆಮದಾದದ್ದು. ನಮ್ಮಲ್ಲಿನ ಸಿದ್ಧವಸ್ತುವಿಗೆ ಮೊದಮೊದಲು ಬೇಡಿಕೆ ಇದ್ದರೂ, ವಿದೇಶಿಯ ಮಾರುಕಟ್ಟೆಗೆ ಬಂದನಂತರ, ಇದರ ಗಿರಾಕಿ ಕ್ರಮೇಣ ಕಡಿಮೆಯಾಯಿತು. ಹೊಸ ಮಾಲಿಗೆ ಬೇಡಿಕೆ ಬಹಳವಾಯಿತು. ಭಾರತೀಯವಾದ ಮೀಮಾಂಸೆಯಲ್ಲಿ ಬೇರೆಲ್ಲೂ ಕಾಣಸಿಗದ ಬಹುಮೂಲ್ಯವೂ, ಚಿರಕಾಲ ಬಾಳುವಂಥವೂ ಆದ ಹಲವು ಅಂಶಗಳುಂಟು. ಆದ್ದರಿಂದಲೇ ಪಾಶ್ಚಾತ್ಯ ವಿಮರ್ಶಾ ಕ್ಷೇತ್ರದಲ್ಲಿ ನಮ್ಮ ಮೀಮಾಂಸೆಗೆ ಹೆಚ್ಚಿನ ಬೇಡಿಕೆ ಇರುವುದು. ನಮ್ಮಲ್ಲಿನ ಬೆಲೆ ಬಾಳುವ ವಸ್ತು ಅವರಲ್ಲಿ ಉತ್ತಮ ಮಾರುಕಟ್ಟೆ ಪಡೆಯಿತು. ಅವರಲ್ಲಿದ್ದ ಹಲವು ಸ್ತುಗಳು ನಮ್ಮಲ್ಲಿ ಒಳ್ಳೆಯ ಬೆಲೆಯಲ್ಲಿ ಬಿಕರಿಯಾದವು. ಇದರಿಂದಾಗಿ ಉಭಯ ಕಾವ್ಯತತ್ವ ಕ್ಷೇತ್ರಗಳು ಶ್ರೀಮಂತವಾದವು.

ಭಾಷ್ಯ ಮತ್ತು ವ್ಯಾಖ್ಯಾನಗಳೂ, ವಿಮರ್ಶೆ,ಮೀಮಾಂಸೆಗಳಂತೆ ಭಿನ್ನ ಅರ್ಥವುಳ್ಳ ಪದಗಳು, ಭಾಷ್ಯಕ್ಕೆ ಒಂದು ಮೂಲ ಸಿದ್ಧಾಮತವಿರುತ್ತದೆ. ಭಾಷಯಕಾರ ಆ ಸಿದ್ಧಾಂತಕ್ಕೆ ಬದ್ಧನಾಗಿ, ಅದೇ ಬಣ್ಣದ ಕನ್ನಡಕದಲ್ಲಿ ಮೂಲ ಸೂತ್ರಗಳಿಗೆ ಭಾಷ್ಯ ಬರೆಯುತ್ತಾನೆ. ಉದಾಹರಣೆಗೆ ಭಗವದ್ಗೀತಾ ಭಾಷ್ಯ, ಇಲ್ಲವೇ ಪುರುಷಸೂಕ್ತ ಭಾಷ್ಯ. ಇದಕ್ಕೆ ಶೈವನು ಶಿವ ಪರವಾದ ಭಾಷ್ಯವನ್ನೂ, ವೀರಶೈವನು ಶಿವಾದ್ವೈತ ಪರವಾದ ಭಷ್ಯವನ್ನೂ, ವೈಷ್ಣವನು ವಿಷ್ಣುಪರವಾದ ಭಾಷ್ಯವನ್ನೂ ರಚಿಸುತ್ತಾನೆ. ಆದರೆ ವ್ಯಾಖ್ಯಾನಕಾರ ಹಾಗಲ್ಲ. ಆತ ಕವಿಯ ಮೂಲ ಕೃತಿಗೆ ನಿಷ್ಠನಾದವನು. ಇವನಿಗೆ ಭಾಷ್ಯಕಾರನಿಗಿರುವಷ್ಟು ಸ್ವಾತಂತ್ರ್ಯ ಇಲ್ಲ. ಕಾವ್ಯ ಹೃದಯದ ಪರಿಚಯ ಮಾಡಿಕೊಡುವುದು ಅವನ ಕೆಲಸ. ಅದನ್ನು ಅವನು ನಿಷ್ಠೆಯಿಂದ ನಿರ್ವಹಿಸುತ್ತಾನೆ. ಹಲವು ವೇಳೆ ಕವಿಯನ್ನೇ ಪ್ರತ್ಯಕ್ಷವಾಗಿ ಸಂದರ್ಶಿಸಿ, ತನಗೂ ಅರ್ಥವಾಗದ ಅಂಶಗಳಿಗೆ ಅವನಿಂದ ವ್ಯಾಖ್ಯಾನ ಕೊಡಿಸುತ್ತಾನೆ. ಕವಿಯ ಕಾಲ, ದೇಶ, ಪರಿಸರ ವರ್ತಮಾನಗಳನ್ನು ಗಣನೆಗೆ ತಂದುಕೊಂಡು, ಆ ಕೃತಿಯು ಬಿತ್ತರಿಸುವ ಹಲವು ವಿಶಿಷ್ಟಾಂಶಗಳನ್ನು ಹೆಚ್ಚಿನ ರೀತಿಯಲ್ಲಿ ಪ್ರದರ್ಶಿಸುತ್ತಾನೆ. ಅಗತ್ಯವೆನಿಸಿದುವುಗಳನ್ನು ತೇಲಿಸಿ ಮೊಟಕು ಮಾಡುತ್ತಾನೆ. ಆದರೆ ಭಾಷ್ಯಕರನ ಹಾಗೆ ತನ್ನ ದೃಷ್ಟಿಗೆ ತಕ್ಕಂತೆ ಅಥವಾ ತನ್ನ ನಿಯೋಜಿತ ಸಿದ್ಧಾಂತಕ್ಕೆ ಬದ್ಧವಾದ ರೀತಿಯಲ್ಲಿ ವಿವರಣೆಯನ್ನು ಬಲವಂತವಾಗಿ ಎಳೆದು ತಂದು ತುಂಬುವುದಿಲ್ಲ. ಇರುವುದರಲ್ಲೇ ವಿವರ ತುಂಬುವ, ಎಳೆಎಳೆಯಾಗಿ ಬಿಡಿಸುವ, ಸರಳ ರೀತಿಯಲ್ಲಿ ಗದ್ಯದ ಸೊಬಗು ಸೊಗಡುಗಳಲ್ಲಿ

ಕವಿಯ ಅಂತರಂಗವನ್ನು ಬಹಿರಂಗಪಡಿಸುವ ಯತ್ನ ಮಾಡುತ್ತಾನೆ. ಓದುಗರಿಗೆ ಅರ್ಥವಾಗುವಂತೆ, ಮೆಚ್ಚಾಗುವಂತೆ, ಅವರ ಆಸಕ್ತಿ ಕೆರಳುವಂತೆ, ಅಭಿರುಚಿ ಹೆಚ್ಚುವಂತೆ ಮಾಡುತ್ತಾನೆ.

ವ್ಯಾಖ್ಯಾನಕಾರ ಟೀಕು ಬರೆವವನಿಗೂ, ತಾತ್ಪರ್ಯ ರಚಕನಿಗೂ ಹೆಚ್ಚು ಸಮೀಪವರ್ತಿಯಾಗುತ್ತಾನೆ. ಟೀಕು ಬರೆವವನು ಪದ್ಯದ ಪ್ರತಿಪದಕ್ಕೂ ಅನ್ವಯ ಕ್ರಮದಲ್ಲೊ ಅಥವಾ ಚದುರಿನಂತೆಯೊ ಅರ್ಥ ಬರೆದುಕೊಂಡು ಹೋಗುತ್ತಾನೆ. ಇದರಿಂದ ಸಾಮಾನ್ಯ ಓದುಗನಿಗೆ ತುಸು ಸಹಾಯವಾದಂತಾಗುತ್ತದೆ. ತಾತ್ಪರ್ಯಕಾರ ಇಡೀ ಪದ್ಯದ ಸಾರಾಂಶವನ್ನು ಗದ್ಯದಲ್ಲಿ ತೆಗೆದಿಡುತ್ತಾನೆ. ಇದು ಒಂದು ರೀತಿಯ ವ್ಯಾಖ್ಯಾನವೇ ಆಗುತ್ತದೆ. ಹೀಗೆ ಟೀಕು ರಚಕನೂ, ತಾತ್ಪರ್ಯಕಾರನೂ ವ್ಯಾಖ್ಯಾನಕಾರನ ಕಿರಿಯ ಸೋದರರಾಗಿ ನಡೆದುಕೊಳ್ಳುತ್ತಾರೆ. ಆದರೆ ವಿಮರ್ಶಕನಿಂದ ವ್ಯಾಖ್ಯಾನಕಾರ ತುಂಬ ಭಿನ್ನವಾಗಿ ನಿಲ್ಲುತ್ತಾನೆ. ವಿಮರ್ಶಕ ಕವಿಯನ್ನು ದೋಷವಿದ್ದಲ್ಲಿ ಖಂಡಿಸುತ್ತಾನೆ, ದಂಡಿಸುತ್ತಾನೆ. ವ್ಯಾಖ್ಯಾತನಕಾರ ದೋಷಗಳು ಕಂಡಲ್ಲಿ ಅವುಗಳನ್ನು ಮುಚ್ಚಿಹಾಕುತ್ತಾನೆ, ಉತ್ತಮ ಭಾಗಗಳನ್ನು ಮೆಚ್ಚುವಂತೆ ಮಾಡುತ್ತಾನೆ. ಟೀಕು ರಚಕನಂತಾಗಲಿ, ತಾತ್ಪರ್ಯಕಾರನಂತಾಗಲಿ ಕಣ್ಣು ಮುಚ್ಚಿಕೊಂಡು ಕೈಕಟ್ಟಿಕೊಂಡು ಉದ್ದಕ್ಕೂ ಕವಿಯನ್ನು ಅನುಸರಿಸಿ ಹೋಗುವುದಿಲ್ಲ; ಎಲ್ಲಿ ಎಷ್ಟು ವಿವರಣೆ ಅಗತ್ಯವಿರುತ್ತದೋ ಅಷ್ಟನ್ನು ಮಾತ್ರ ಪೂರೈಸುತ್ತಾ ಹೋಗುತ್ತಾನೆ. ಆತ ಓರ್ವ ತದ್ವಿಧ, ಸಹೃದಯ ಸಹೋದರ. ಕವಿಗೂ ಓದುಗನಿಗೂ ಮಧ್ಯ ನಿಲ್ಲುವ ಸ್ನೇಹ ಸೇತು. ವಿಮರ್ಶಕನನ್ನು ಕಂಡಾಗ ಆಗುವ ಭೀತಿ ವ್ಯಾಖ್ಯಾನಕಾರನನ್ನು ಕಂಡಾಗ ಆಗುವುದಿಲ್ಲ. ಇವರಿಬ್ಬರೂ ಸಹೃದಯ ಪ್ರೇಮಿಗಳು. ಇಬ್ಬರೂ ಆರೋಪಿಗಳಲ್ಲ, ಸತ್ಯಣಾಭ್ಯ ವ್ಯವಹಾರಿಗಳೂ ಅಲ್ಲ, ಪ್ರಾಜ್ಞರೇ, ಕಾವ್ಯ ಕಲಾ ಪ್ರೇಮಿಗಳೇ. ಆದರೆ ವಿಮರ್ಶಕ ಪೂರ್ವಗ್ರಹ ಪೀಡಿತನಲ್ಲ. ವ್ಯಾಖ್ಯಾನಕಾರನಿಗೆ ಕವಿಯ ಬಗೆಗೆ ವಿಶೇಷ ಪ್ರೀತಿ. ಅವನ ಬಗೆಗೆ ಪೂಜ್ಯ ಬುದ್ಧಿಯುಳ್ಳವನೂ ಹೌದು. ಅಂದ ಮಾತ್ರಕ್ಕೆ ಹೆಚ್ಚು ತೆಗಳಿಕೆ, ಹುಚ್ಚು ಹೊಗಳಿಕೆಗಳಂದರ್ಥವಲ್ಲ. ಬರಿಯ ಟೀಕೆ ಹೇಗೆ ಉತ್ತಮ ವಿಮರ್ಶೆ ಎನಿಸಿಕೊಳ್ಳದೊ ಹಾಗೆ ಬರಿಯ ಹೊಗಳಿಕೆಯೂ ಶ್ರೇಷ್ಠ ವ್ಯಾಖ್ಯನ ಅನಿಸಿಕೊಳ್ಳುವುದಿಲ್ಲ. ವಿಮರ್ಶೆ ಎನ್ನುವುದು ಒಂದು ಅನುಭವಕ್ಕೂ ಮತ್ತೊಂದು ಅನುಭಾವಕ್ಕೂ ಇರುವ ವ್ಯತ್ಯಾಸಗಳನ್ನು ಗುರುತಿಸುವುದು, ತಾಳೆ ಹಾಕಿ ನೋಡುವುದು. ವ್ಯಾಖ್ಯಾನದಲ್ಲಿ ಎರಡು ಅನುಭವಗಳ ಪ್ರದರ್ಶನದ ಮಾತೇ ಇಲ್ಲ. ಕವಿಯ ಅನುಭವ, ಅನುಭಾವ, ದರ್ಶನ, ದ್ಯುತಿ, ವ್ಯಾಪ್ತಿ, ವೈಭವಗಳಿಗೆ ಕನ್ನಡಿ ಹಿಡಿಯುವುದು. ಒಟ್ಟಿನಲ್ಲಿ ಒಂದು ವಿಧದ ರಸಕ್ರಿಯ ವ್ಯಾಖ್ಯಾನ.

ಇಂತಹ ಇಸಕ್ರಿಯೆಯ ರಸಾಯನ ಮಾಡಿಸುವ ಮಹಾಸಾಹಸಿ ದೇಜಗೌ. ಇವರು ಆಧುನಿಕ ಕನ್ನಡ ಸಾಹಿತ್ಯದಲ್ಲಿ, ಶ್ರೀ ಕುವೆಂಪುರವರ 'ಶ್ರೀ ರಾಮಾಯಣ ದರ್ಶನಂ' ಮಹಾಕಾವ್ಯವನ್ನು ಕುರಿತು ವಿಶೇಷವಾಗಿ, ಅವರ ಹಲವು ನಾಟಕ, ಕಥೆ, ಕಾದಂಬರಿಗಳನ್ನು ಕುರಿತು ಪೋಷಕವಾಗಿ, ಅವರ ಜೀವನ, ಕಾವ್ಯಜೀವನ ಇವುಗಳನ್ನು ಕುರಿತು ಪ್ರಾಸಂಗಿಕವಾಗಿ ವ್ಯಾಖ್ಯಾನ ನೀಡಿದ್ದಾರೆ. ಅವರ ವ್ಯಾಖ್ಯಾನಗಳು ಪ್ರಕಟವಾಗಿರುವುದು ಎರಡು ಹೊತ್ತಗೆಗಳಲ್ಲಿ. ಒಂದು, ಶ್ರೀ ರಾಮಾಯಣ ದರ್ಶನಂ ವಚನ ಚಂದ್ರಿಕೆ, ಎರಡು ಕುವೆಂಪು ಸಾಹಿತ್ಯದ – ಕೆಲವು ಅಧ್ಯಯನಗಳು.

**ವಚನ ಚಂದ್ರಿಕೆ**

ಹೆಸರೇ ಸೂಚಿಸುವಂತೆ ಇದು ಕೃತಿಚಂದ್ರನ ಬಿಂಬದಿಂದುದಿಸಿ ಬಂದ ಪ್ರಭೆ. ಆದರೆ ಅವನ ಛಾಯೆ ಅಥವಾ ನೆರಳು ಅಲ್ಲ. ಆ ಪ್ರಭಾವಲಯದಲ್ಲಿ ನೆರಳಿನ ಸುಳಿವು ಸಿಗುವುದೇ ಇಲ್ಲ. ಬರಿಯ ಬೆಳಕು, ಶುದ್ಧ ಜ್ಯೋತ್ಸ್ನೆ. ಅದರ ಸವಿ ಆತ್ಮಕ್ಕೆ ಆರೋಗ್ಯಕಾರಿ, ಅನುಭವಿಗೆ ಆನಂದದಾಯಿ, ರಸಿಕ ವಿಹಾರಿ ಅಲ್ಲಿ ಚೇತೋವಿಹಾರಿಯಾಗಬಲ್ಲ. ಮಹಾಕಾವ್ಯದ ಮಹಾವಾರ್ಧಿಯನ್ನೀಸಲಶಕ್ತನಾದ ಸಾಧಾರಣ ಓದುಗ. ಚಂದ್ರಿಕೆಯ ಬಹಿತ್ರದಲ್ಲಿ ಕುಳಿತು, ಅದರ ನೆರವಿನಿಂದ ಆ ಅಪಾರ ಪಾರವಾರದಲ್ಲಿ ರಸಾಯನ ಮಾಡಬಲ್ಲ, ದಡ ಸೇರಬಲ್ಲ.

ವಚನ ಚಂದ್ರಿಕೆಯಲ್ಲಿ ದೇಜಗೌ ವ್ಯಾಖ್ಯಾನಕಾರನಿಗಿಂತಲೂ ತಾತ್ಪರ್ಯ ರಚಕನಿಗೆ ಹೆಚ್ಚು ಹತ್ತಿರವಾಗಿದ್ದಾರೆ. ಪ್ರತಿಯೊಂದು ವಿಭಾಗದ ಶೀರ್ಷಿಕೆಯನ್ನೂ ಮೊದಲು ಉಚಿಸಿ ಅದರಲ್ಲಿನ ನಿರೂಪಿತವಾದ ಕಥಾನಕವನ್ನು ಕಿಂಚಿತ್ತೂ ಬಿಡದೆ, ಆದರೆ ಅಲ್ಲಿ ಬರುವ ವರ್ಣಣೆಗಳನ್ನು ಕ್ವಚಿತ್ತಾಗಿ ಔಚಿತ್ಯವರಿತು, ಆಳವಾಗಿ ಸ್ವೀಕರಿಸಿ ಅನುವಾದಿಸಿಕೊಂಡು ಹೋಗಿದ್ದಾರೆ. ಅದರಿಂದಾಗಿ ೪ ಸಂಪುಟಗಳು, ೫೦ ಸಂಚಿಕೆಗಳ, ೨೨, ೨೯೦ ಪಾದಗಳ ಶ್ರೀ ಕುವೆಂಪುರವರ ಶ್ರೀ ರಾಮಾಯಣ ದರ್ಶನಂ ಮಹಾಕಾವ್ಯ, ಅನುವಾದಕ ದೇಜಗೌರವರ ಸಿದ್ಧಹಸಸ್ತದ ಗದ್ಯದಲ್ಲಿ ಸುಮಾರು ೩೦೦ ಪುಟಗಳಷ್ಟು ಪ್ರಮಾಣದಲ್ಲಿ ರೂಪುಗೊಂಡಿದೆ. ಕಥೆಯ ಪಥವನ್ನೇ ಹಿಡಿದು ಸಾಗುವ ಈ ಅನುವಾದಕನಿಗೆ ಸಂಗ್ರಹ ಶಕ್ತಿ ಚೆನ್ನಾಗಿ ಸಿದ್ಧಿಸಿದೆ. ಪ್ರಥಮ ಸಂಚಿಕೆಯ ಕವಿಕ್ರತು ದರ್ಶನದ ರಾಮಾಯಣಾವತಾರದ ಕಥಾ ಹಿನ್ನಲೆಯನ್ನು ಗಂಭೀರವಾಗಿ ಕೈಬಿಟ್ಟು 'ದೇಶ ಕೋಸಲಮಿಹುದು ಧನಧಾನ್ಯ ಜನತುಂಬಿ

ಸರಯೂ ನದಿಯ ಮೇಲೆ' ಎಂಬ ಕವಿಯ ೧೫೬೦ನೆಯ ಪಂಕ್ತಿಯಿಂದ ತಮ್ಮ ಗದ್ಯ ಕೃತಿಯನ್ನು ಆರಂಭಿಸಿದ್ದಾರೆ. ಹೀಗೆ ಪ್ರತಿ ಸಂಪುಟದ ಆರಂಭದ ವಾಕ್ಯಗಳನ್ನು ಅನುವಾದಕರು ಕೈಬಿಟ್ಟಿದ್ದಾರೆ. ಆದರೆ, ಈ ಮೂಲದ ಸ್ವಾರಸ್ಯ ಕೆಡದಂತೆ ಆ ಮಹಾಕಾವ್ಯದ ರಹಸ್ಯವನ್ನು ಈ ಗದ್ಯಾನುವಾದದಲ್ಲಿ ಗ್ರಂಥಕರ್ತರಾದ ದೇಜಗೌ ಅವರು ತೋರಿಸಿಕೊಟ್ಟಿದ್ದಾರೆ. 'ಮೂಲ ಕಾವ್ಯದಲ್ಲಿ ಕಂಡು ಬರುವ ಕವಿಯ ದರ್ಶನ, ಚಿಂತನೆ, ಕಲ್ಪನೆ ಮೊದಲಾದವುಗಳೆಲ್ಲಾ ದೇಜಗೌ ಅವರ ಈ ಅನುವಾದದಲ್ಲಿ ಕಂಡುಬರುತ್ತದೆ. ಅಷ್ಟೇ ಅಲ್ಲದೆ ಹೃದ್ಯವಾದ ಗದ್ಯದಲ್ಲಿ ಬರೆದಿರುವ ಈ ಗ್ರಂಥ ಚೆನ್ನಾಗಿ ಓದಿಸಿ ಕೊಂಡು ಹೋಗುತ್ತದೆ' ಎಂಬ ಪ್ರಕಾಶಕರ ನುಡಿಯ ಸತ್ಯ, ವಚನಚಂದ್ರಿಕೆಯನ್ನು ಓದಿದವರಿಗೆ ವೇದ್ಯವಾಗದಿರದು. ಲಂಕಾ ಸಂಪುಟದ 'ಕಂಡನಾ ಹದಿ ಬದೆಯರಧಿದೇವಿಯಂ' ಸಂಚಿಕೆಯ, 'ಪ್ರವೇಶಿಸಿತು ಪ್ರಥಮ ಕಿರಣಂ ಪೃಥಿವಿಜಾತೆಯ ಪರ್ಣಕುಟಿಯಂ' – ಎಂದು ಆರಂಭವಾಗುವ ಮೊದಲ ಭಾಗದ ಮೂವತ್ತೈದು ಸಾಲುಗಳ ನೆಲಮಗಳ ಎಲೆವನೆಯ ತಡಿಕೆಗೋಡೆಯ ಬಿರುಕಿನಿಂದ ಪ್ರಥಮ ಕಿರಣ ಪ್ರವೇಶಿಸಿತು. ಸಂಕಟ ರಾತ್ರಿಯನ್ನು ಕಳೆದು ಮತ್ತೊಂದು ಸಂಕಟದ ದಿನ ಆರಂಭವಾಗುವುದನ್ನು ಅವಳು ನಿರೀಕ್ಷಿಸುತ್ತಿದ್ದಳು. ತನ್ನ ಪಾದಗಳನ್ನು ಮುಟ್ಟಿ ಸೇವಿಸುತ್ತಿದ್ದ ರವಿಕಿರಣಗಳನ್ನು ನೋಡಿ ಮೈ ತಿಳಿದು ಕಣ್ದೆರೆದು ಸುಯ್ದು ಸುತ್ತಲೂ ನೋಡಿದಳು. ತನ್ನಿಷ್ಟ ದೇವತೆ ರಾಮಚಂದ್ರನಿಗೆ, ಸದಾ ಧೈರ್ಯವನ್ನು ನೀಡುತ್ತ ತನ್ನ ಮುಂದೆ ಹರಡಿದ್ದ ಸಮುದ್ರನಿಗೆ, ಸತಿಯಂತೆ ನೀಲದೇಹಿಯಾದ ಆಕಾಶ ದೇವತೆಗೆ, ಆಶಾರೂಪಿ ತಮೋವೈರಿ ಸೂರ್ಯದೇವನಿಗೆ ನಮಸ್ಕರಿಸಿದಳು. ಆ ನಾಲ್ವರ ಕೃಪಾಶಕ್ತಿಯೆ ಮೈಗೂಡಿತೆಂಬಂತೆ ಅವಳ ನಿರಶನ ವ್ರತದ ನಿಶ್ಯಕ್ತಿ ಕಳೆದು ಸಂಚಾರವಾದಂತಾಯಿತು. ಬಾಡಿದ ಅವಳ ಕಣ್ಣುಗಳಿಂದ ನೀರು ಹೊನಲಾಗಿ ಹರಿಯಿತು' – ಹಿಗೆ ಅಗತ್ಯ ಕಂಡೆಡೆಯಲ್ಲಿ ಕಸುವುಳ್ಳ ಕನ್ನಡದ ದೇಸಿಯ ಮಾತುಗಳನ್ನೊಳಗೊಂಡ ಸಂಸ್ಕೃತದ ಶ್ರೀಮಂತ ಶೈಲಿಯಲ್ಲಿ ಅನುವಾದವಾಗಿದೆ.

ಮೂಲವನ್ನು ಮರೆಸದಂತೆ ಅದರ ಬಗೆಗೆ ಸಾಕಷ್ಟು ಕುತೂಹಲ ಹುಟ್ಟಿಸುವ, ಆಸಕ್ತಿಯನ್ನು ಹೆಚ್ಚಿಸುವ ಈ ಕಾರ್ಯ ಸ್ತುತ್ಯಾರ್ಹವಾದುದು. ಹೀಗಿದ್ದರೂ ದೇಜಗೌ ಅನುವಾದಕರಾಗಿ ಅಂಜುತ್ತಂಜುತ್ತಲೇ ಕೃತಿ ರಚನೆಗೆ ಕೈಹಾಕಿದ್ದಾರೆ. 'ಈ ಕೃತಿ ಆ ಪುಣ್ಯಕ್ಷೇತ್ರಕ್ಕೆ ದಾರಿ ತೋರುವ ಒಂದು ಬೋರ್ಡೇ ಹೊರತು, ಕೈಮರವೇ ಹೊರತು ಇದೇ ಗುರಿಯಲ್ಲವೆಂದು ತಿಳಿಯಬೇಕಾಗಿ ವಾಚಕ ಸಹೃದಯರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ' ಎಂದು ತಮ್ಮ ವಿಷಯವನ್ನು ಮರೆದಿದ್ದಾರೆ. ಸಾರ್ಥಕ ಸಾಹಸವೆನಿಸಿದ್ದರೂ ತಮ್ಮ ಅತೃಪ್ತಿಯನ್ನು ಪ್ರಕಟಿಸಿದ್ದಾರೆ.

**ಕುವೆಂಪು ಸಾಹಿತ್ಯ : ಕೆಲವು ಅಧ್ಯಯನಗಳು**

'ಶ್ರೀ ಕುವೆಂಪು ಸಾಹಿತ್ಯದ ವ್ಯಾಖ್ಯಾನಕಾರ – ಎಂಬ ಗೌರವ ಪ್ರಶಸ್ತಿಯನ್ನು ಡಾ. ದೇಜಗೌರವರಿಗೆ ತಂದುಕೊಟ್ಟ ಕೀರ್ತಿ ಈ ಕೃತಿಗೆ ಸಲ್ಲುತ್ತದೆ. ಏಕೆಂದರೆ ಇದರಲ್ಲಿರುವ ಹಲವು ಬಿಡಿ ಬಿಡಿ ಲೇಖನಗಳು ನಿಜವಾದ ವ್ಯಾಖ್ಯಾನಕಾರನ ಹೆಸರಾಂತ ಬರಹಗಳು. ಹೂ ಹೂಗಳ ಬಂಡುಂಡು ತುಪ್ಪದ ಕೊಡವನ್ನು ಕಟ್ಟುವ ದುಂಬಿಯಂತೆ ಹತ್ತಾರು ರಸಘಟ್ಟಗಳು, ಸುಂದರ ಸನ್ನಿವೇಶಗಳ, ಬಂಧುರವಾದ ಪಾತ್ರಗಳ ಪರಿಚಯ ಹಾಗೂ ವಿಚಾರಯುಕ್ತ ವ್ಯಾಖ್ಯಾನ ನಮಗಿಲ್ಲಿ ದೊರೆಯುತ್ತದೆ. ಮಹಾಕವಿಯ ದರ್ಶನಕ್ಕೆ ಸಂಬಂಧಿಸಿದಂತೆ, ಪಾತ್ರಗಳಿಗೆ ಸಂಬಂಧಿಸಿದಂತೆ ಶ್ರೀ ರಾಮಾಯಣ ದರ್ಶನವನ್ನು ಕುರಿತ ಅಭ್ಯಾಸಯೋಗ್ಯವಾದ ಹತ್ತು ಲೇಖನಗಳು ಇಲ್ಲಿವೆ. ಕವಿಋಷಿ, ವಾಲ್ಮೀಕಿಯಿಂದ ಋಷಿ ಕವಿ ಕುವೆಂಪು ಮಾಡಿಕೊಂಡಿರುವ ಮಹತ್ಕೃತಿಯ ಗಣನೀಯ ಮಾರ್ಪಾಟುಗಳನ್ನು ಪಾತ್ರ ಪೋಷಣೆಯನ್ನೂ ದೇಜಗೌ ವಿಮರ್ಶಕರಾಗಿ ವೀಕ್ಷಿಸಿದ್ದಾರೆ, ಅಹೃದಯರಾಗಿ ಸಮರ್ಥಿಸಿದ್ದಾರೆ. ತಮ್ಮದೇ ಆದ ವಿಶಿಷ್ಟ ಶೈಇಯಲ್ಲಿ ಓದುಗರ ಮನಸ್ಸನ್ನು ಸೆರೆಹಿಡಿದು ಓದಿಸುತ್ತಾರೆ.

ರಾಮಾಯಣ ದರ್ಶನಕ್ಕೆ ಸಂಬಂಧಿಸಿದ ಬರಹಗಳಲ್ಲಿ ಮೊದಲ ಲೇಖನ 'ಕವಿ ಕ್ರತುದರ್ಶನಂ' ಇದಕ್ಕೆ ಕವಿವರ್ಯರಿಂದಲೇ ವ್ಯಾಖ್ಯಾನ, ವಿವರಣೆಗಳನ್ನು ಪಡೆದು ಯಥಾವತ್ತಾಗಿ ಅಚ್ಚೊತ್ತಿದ್ದಾರೆ. ಇದರಿಂದ ಮಹಾಕಾವ್ಯದ ಮೊದಲ ದ್ವಾರ ಪೂರಾ ತೆಗೆದಂತಾಗಿ ಕಾವ್ಯಾಭ್ಯಾಸಿಗಳ ಪ್ರವೇಶಕ್ಕೆ ಯಾವ ಅಡಚಣೆಯೂ ಉಂಟಾಗದಂತಾಗಿದೆ. ವೇದೋಕ್ತ ಕವಿಕ್ರತು ಅಂದರೆ ಅಗ್ನಿ, ನಿಜ. ಆದರೆ ಅದೇ ತೇಜಸ್ಸು ನೀಡಿದ ವಿವಿಧ ಫಲಗಳ ವೈವಿಧ್ಯಮಯವಾದ ಸ್ತರಗಳನ್ನು ಮಹಾಕಾವ್ಯದಲ್ಲಿ ಗುರುತಿಸಲಾಗಿದೆ. 'ಕವಿಕ್ರತು ಎಂದರೆ ಮುಂಗಾಣುವ ಮತ್ತು ಕಂಡುದನ್ನಾಗಿಸುವ ಇಚ್ಛಾ ಶಕ್ತಿ' ಆದರೆ ಅದು ಅವರವರ ಅಭಿರುಚಿ, ಸಂಸ್ಕಾರ, ಸಾಧನವನ್ನವಲಂಬಿಸಿರುತ್ತದೆ. ಅದರಲ್ಲಿ ಐದು ಅರ್ಥಗಳು ಧ್ವನಿಸುತ್ತವೆ. ಒಂದು ಅಗ್ನಿ ದರ್ಶನ, ಎರಡು ಇಚ್ಛಾಶಕ್ತಿಯ ಅಥವಾ

ಬ್ರಹ್ಮನ ಇಚ್ಛಾಶಕಿತಯ ದರ್ಶನ ; ಮೂರು ಕವಿಯ ಇಚ್ಛಾಶಕ್ತಿಯ ದರ್ಶನ, ನಾಲ್ಕು ಋಷಿಗಳ ಮತ್ತು ಜನರ ಇಚ್ಛಾಶಕ್ತಿಯ ದರ್ಶನ, ಐದನೆಯದಾಗಿ ದಶರಥನ ಇಚ್ಛಾಶಕ್ತಿಯ ದರ್ಶನ' ಈ ದರ್ಶನಾರ್ಥವನ್ನು ಮಹಾಕವಿಯಿಂದ ಪಡೆದ ಭಾಗ್ಯ ದೇಜಗೌ ವ್ಯಾಖ್ಯಾನಕ್ಕೆ ಸಂದಿದೆ.

'ಕವಿಕ್ರತುದರ್ಶನ'ಕ್ಕೆ ಶ್ರೀ ಕುವೆಂಪು ವಿವರಣೆ ಇತ್ತರೆ, 'ಸಾಮಾನ್ಯತಾಶ್ರೀ' ಎಂಬಲ್ಲಿ ದೇಜಗೌರವರೇ ಸ್ವತಃ ವ್ಯಾಖ್ಯಾನವಿತ್ತಿದ್ದಾರೆ. ಒಂದರ್ಥದಲ್ಲಿ ಅವರದೇ ಆಗ ವಿಮರ್ಶೆಯೂ ಆಗಿದೆ. ತಾಯಿ ಗುಬ್ಬಚ್ಚಿ ದಶರಥನ ಗುಪ್ತ ಬಯಕೆಯನ್ನು ಕೆರಳಿಸಿದ ಪ್ರಸಂಗ, ಮಂಥರೆಯು ಶಿಶುರಾಮಚಂದ್ರನಿಗೆ ಕನ್ನಡಿ ತೋರಿದ ಪ್ರಸಂಗ. ಒಂದು ಮುಸ್ಸಂಜೆಯಲ್ಲಿ ಶ್ರೀರಾಮನಿಗೆ ಸೀತೆ ತೋರಿದ 'ಕಲ್ಪವಸಿ'ಯ ಪ್ರಸಂಗ. ರೋಮಪಾದರ ಆಶ್ರಮದಿಂದ ಬಂದ ರಾಮ ಸೀತೆಯ ಸ್ಥಿತಿಯನ್ನು ಕಂಡು 'ವಾನರಿ' ಎಂದು ಗೇಲಿಗೈದ ಸಂದರ್ಭ, ವಾಲಿ ಸುಗ್ರೀವರು, 'ಉಪ್ಪು ಬೇಕೇ ಉಪ್ಪು' ಎಂದಾಟವಾಡಿದ ಬಾಲ್ಯದ ದಿನಗಳು. ಅನಲೆ ಚಿಕ್ಕವಳಿದ್ದಾಗ ಅವಳ ದೊಡ್ಡಪ್ಪನಾದ ರಾವಣನು 'ನೀನೊಂದು ಹೂವಿನ ಚೆಂಡು' ಎಂದು ಮುದ್ದಾಡಿದ ಸನ್ನಿವೇಶ ಸ್ಮರಣೆ – ಇಚಿತಹ ಒಂದು ಸಾಮಾನ್ಯ ಸನ್ನಿವೇಶವೂ ಕವಿಯ ದರ್ಶನತೀರ್ಥದಲ್ಲಿ ಮಿಥು, ಮಹತ್ತರ ಸನ್ನಿವೇಶವಾಗಿ ಪರಿಣಮಿಸಿದೆ. ಹೀಗೆಯೇ 'ಹಿಮಮಣಿಗಳ ವರ್ಣನೆಯಲ್ಲಿ ಭಾವ ರಸ ದರ್ಶನಗಳ ತ್ರಿವೇಣೀ ಸಂಗಮವನ್ನು ಕಾಣಬಹುದು. ಇಂತೆಲ್ಲ ರೀತಿಯಲ್ಲಿ ಕವಿಯ ಹೆಜ್ಜೆಗಳನ್ನು ಗುರುತಿಸಿದೆ ದೇಜಗೌರವರ ಸೂಕ್ಷ್ಮಮತಿ.

ಇದೇ 'ಸಾಮಾನ್ಯತಾಶ್ರೀ'ಗೆ ಪೋಷಕವಾಗುವಂತಹ ಪಾತ್ರಗಳೆಂದರೆ ಶಬರಿ ಮತ್ತು ವಹ್ನಿರಂಹರ್. 'ಶ್ರೀ ರಾಮಾಯಣ ದರ್ಶನದ ಶಬರಿಯ ಜೀವನ ಪರಾಭಕ್ತಿಗೊಂದು ಪ್ರತಿಮೆಯಾಗಿದೆ' ಎಂದಿದ್ದರೆ, ವಹ್ನಿರಂಹರ ಬಗೆಗೆ 'ಅಹಂಕಾರ ಮರ್ತ್ಯ ಪ್ರಜ್ಞೆಗೆ, ಖಂಡ ದೃಷ್ಟಿಗೆ ಅಸಾಮಾನ್ಯವಾದುದು, ಅದ್ಭುತವಾದುದು, ಆಡಂಬರಾತ್ಮಕವಾದುದು ಮಾತ್ರ ಸನ್ಮಾನ್ಯವಾಗುತ್ತದೆ, ಉಳಿದುದೆಲ್ಲ  ಅಸಾಮಾನ್ಯವಾಗುತ್ತದೆ. ನಿರಹಂಕಾರ ಮೂಲವಾದ ಕವಿಪ್ರತಿಭೆಯ ಪೂರ್ಣದೃಷ್ಟಿಗೆ ಅತಿ ಸಾಮಾನ್ಯವಾದುದೂ ಅನದ್ಭುತವಾದುದೂ ಅತ್ಯಂತ ಸರಳವಾದುದೂ .ಅಸಮಾನ್ಯದಂತೆಯೆ ಸನ್ಮಾನ್ಯವಾಗುತ್ತದೆ, ಉಪಾಸನಾಯೋಗ್ಯವಾಗುತ್ತದೆ. ಅದರ ಮುಂದೆ ಕೀಳುಮೇಲೆಂಬ ಭಾವನೆಯೆ ಸುಳಿಯದು. ಈ ವಹ್ನಿರಹಂರ ಜೀವನದಲ್ಲಿ ಈ ದರ್ಶನ ಪ್ರತಿಮಾವಿಧಾನದಿಂದ ವ್ಯಕ್ತಗೊಂಡಿದೆ' ಎಂದಿದ್ದಾರೆ ದೇಜಗೌ. ಇದನ್ನು ಕಂಡಾಗ ಇದು ಬರಿಯ ವ್ಯಾಖ್ಯಾನವಲ್ಲ. ದೇಜಗೌರವರ ದರ್ಶನ ವಿಮರ್ಶೆ ಎಂದು ಭಾಸವಾಗದಿರದು.

ವಾಲಿಪಾತ್ರವನ್ನು ಪರಿಚಯಿಸಿಕೊಡುತ್ತಾ ಶ್ರೀ ಕುವೆಂಪು ಅದನ್ನು ವಾನರತ್ವದಿಂದ ಉದ್ಧರಿಸಿದ ರೀತಿಯನ್ನು ವಿವರಿಸಿದ್ದಾರೆ. ಅದಕದಕಿಂತಲೂ ಕವಿ ತಾನು ಕಂಡು ಅನ್ಯರಿಗೆ ಕಾಣಿಸಿದ ತಾರೆ ಲೋಕಪೂಜ್ಯಲಾಗಿದ್ದಾಳೆ. ಅದೇ ಗಾಡಿವೆತ್ತು ನಿಂತಿದ್ದಾಳೆ ಕಯಕೆ. ಬೇರೊಬ್ಬ ಕವಿ ಕೈಯಾಡಿಸದಷ್ಟು ಪರಿಪೂರ್ಣ ಕಲಾಪ್ರತಿಮೆಯನ್ನಾಗಿಸಿದ್ದಾನೆ ಭಾಸ, ನಿಜ. ಆದರೂ ಕುವೆಂಪು ಕವಿವಾಣಿ ನುಡಿದಿದೆ 'ತಾಯಿ, ನಿನಗಲ್ಲದಿನ್ನಾರ್ಗೆ, ಪೇಳ್ ಸಂಮಥಿತ ದಶರಥ ತನೂಜ ಜೀವಿತ ಕಥಾ ಸಗರೋತ್ಥಿತ ಘೋರ ಗರಳಮಂ ಧರಿಸುವ ಶಿವಾಶಿವ ಶ್ರೀಕಂಠಶಕ್ತಿ' ಎಂದು.

ಇವೆಲ್ಲವುಗಳಿಗಿಂತಲೂ ಶ್ರೀ ಕುವೆಂಪುರವರ ವಿಶಿಷ್ಟ ಮಹಾಸೃಷ್ಟಿಗಳೆಂದರೆ, ಒಂದು ಮಂಥರೆ, ಮತ್ತೊಂದು ಊರ್ಮಿಳೆ. ದೇಜಗೌ ಹೇಳುತ್ತಾರೆ – 'ಶ್ರೀ ಕುವೆಂಪು ಸೃಜಿಸಿರುವ ಅಪೂರ್ವ ಭವ್ಯವೂ ಅಲೌಕಿಕ ಸುಂದರವೂ ಆದ ಕಲಾ ಪ್ರತಿಮೆಗಳಲ್ಲಿ ಮಂಥರಾ ಪ್ರತಿಮೆಯೂ ಒಂದು. ಮನೋವಿಜ್ಞಾನ ದೃಷ್ಟಿ, ಕಲಾ ದೃಷ್ಟಿ, ದರ್ಶನಾದೃಷ್ಟಿ ಈ ಯಾವದೃಷ್ಟಿಯಿಂದ ಬೆದಕಿ ನೋಡಿದರೂ ಅದು ಸಂಪೂರ್ಣ ಸಮಗ್ರ ಪ್ರತಿಮೆಯಾಗಿ ಕಾಣುತ್ತದೆ' ಎಂದು. ಶ್ರೀ ಕುವೆಂಪು ಮಂಥರೆಯ ಬಗೆಗೆ ಬೇರೆ ಯಾವ ಸಹೃದಯನ ವಿಶ್ಲೇಷಣೆಯೂ ಇದಕ್ಕಿಂತ ಹೆಚ್ಚು ಇರಲಾರದು.

ಊರ್ಮಿಳೆ ಕವಿ ಋಷಿ ವಾಲ್ಮೀಕಿಯ ಅವಜ್ಞತೆಗೆ, ಕಾವ್ಯದಲ್ಲಿನ ಅನಾದರಕ್ಕೆ ಪಾತ್ರಳಾದ ವ್ಯಕ್ತಿ. ಅವಳನ್ನು ಕನ್ನಡದಲ್ಲಿ – ಅಷ್ಟೇಕೆ ಇಡೀ ಭಾರತೀಯ ಸಾಹಿತ್ಯದಲ್ಲೇ – ಮೊದಲ ಬಾರಿಗೆ ಗುರುತಿಸಿದವರು ಶ್ರೀ ಕುವೆಂಪು."ಶ್ರೀಮದ್ರಾಮಾಯಣದಲ್ಲಿ ಕೇವಲ ನಾಮಶಕ್ತಿಯಾಗಿ ಉಳಿದಿದ್ದ ಊರ್ಮಿಳೆ"ಶ್ರೀ ರಮಯಣ ಧರ್ಶನಂ" ಮಹಾಕಾವ್ಯದಲ್ಲಿ ಕಾವ್ಯಶಕ್ತಿಯಗಿ ತ್ಯಾಗಶಕ್ತಿಯಾಗಿ ಚಿತ್ರಪಶ್ಯಕ್ತಿಯಾಗಿ ಚಿತ್ರತಳಾಗಿದ್ದಾಳೆನ್ನುವುದಕ್ಕಿಂತ ಕವಿಯ ಜ್ಯೋರ್ತಿ ದರ್ಶನದಿಂದ ಮೂಡಿದ್ದಾಳೆನ್ನುವುದು ಉಚಿತ ಮತ್ತು ಸಹಜ. ಈ ಮಹಾಕಾವ್ಯದ ಸುವಿಸ್ತಾರ ಕ್ಷೇತ್ರದಲ್ಲಿ ಅವಳು ಆಕ್ರಮಿಸಿಕೊಂಡಿರುವ ಸ್ಥಾನ ಕಿರಿದಾದರೂ, ಅವಳ ಬಾಹ್ಯ ವ್ಯಾಪಾರಗಳ ರೂಪರೇಷೆಗಳು ಅಗೋಚರವಾಗಿದ್ದರೂ ಅವಳ ತಪಃಪ್ರಭಾವ ಮಾತ್ರ ಇಡೀ 'ರಾಮಾಯಣ'ವನ್ನೆಲ್ಲ ವ್ಯಾಪಿಸಿದೆ.

ಅವಳು ಎಲೆಯ ಮರೆಯ ಹೂವು. ಬಾಹ್ಯ ಚಕ್ಷುವಿಗೆ ಅವಳ ವ್ಯಕ್ತಿತ್ವ ಅವ್ಯಕ್ತ. ಅಂತರಶ್ಚಕ್ಷುವಿಗೆ ಸದಾ ವ್ಯಕ್ತ. ಅವಳು ಕೇವಲ ವ್ಯಕ್ತಿಯಲ್ಲ. ಶಕ್ತಿಯೆಂದರೂ ಮೇಲು" – ಇದು ವ್ಯಾಖ್ಯಾನಕಾರ ದೇಜಗೌರವರ ವಿವೇಚನಾ ಪರವಾದ ಮಾತು.

ಹೀಗೆ ಶ್ರೀ ರಾಮಾಯಣ ದರ್ಶನಂ ಮಹಾಕಾವ್ಯದ ಹಲವು ಪಾತ್ರಗಳಿಗೆ ಸೂಕ್ತ ವ್ಯಾಖ್ಯಾನ ನೀಡಿದ್ದಾರೆ ದೇಜಗೌ. ಅಂತೆಯೇ ಜಗದ್ಭವ್ಯ ಮೇರುಕೃತಿಯ ಮಹತ್ವವನ್ನು ಕುರಿತು ಒಂದು ಲೇಖನದಲ್ಲೂ, ಶ್ರೀ ಕುವೆಂಪುರವರ ದೈತ್ಯಶೈಲಿಯನ್ನು ಕುರಿತು ಮತ್ತೊಂದು ಲೇಖನದಲ್ಲೂ ವಿವರಣೆ ನೀಡಿದ್ದಾರೆ. ಮಹಾಕವಿಯ ದೈತ್ಯಶೈಲಿಯ ಜೊತೆಯಲ್ಲಿ ವ್ಯಾಖ್ಯಾನಕಾರರ ಶ್ರೀಮಂತ ಶೈಲಿಯನ್ನೂ ಕಾಣಬಹುದಾಗಿದೆ.

'ಸಂಕೀರ್ಣ'ವೆಂಬ ಶಿರೋನಮೆಯ ಈ ವಿಭಾಗದಲ್ಲಿ ಜನಪ್ರಿಯ ವಾಲ್ಮೀಕಿ ರಾಮಾಯಣ' ಎಂಬ ಗದ್ಯಕೃತಿಯನ್ನು ಶ್ರೀ ಕುವೆಂಪು ಹೇಗೆ ಶ್ರೀ ಸಾಮಾನ್ಯರಿಗಾಗಿ ರಚಿಸಿದರೋ ಅದೇ ಶೈಲಿಯಲ್ಲಿ ದೇಜಗೌ, ಅದರ ಪರಿಚಯ ಮಾಡಿಕೊಡುತ್ತಾರೆ. 'ಶೂದ್ರ ತಪಸ್ವಿ'ಯ ಬಗೆಗೆ ಸೂಕ್ಷ್ಮ ವಿಮರ್ಶೆ ಇದ್ದರೆ 'ಬೆರಳ್‌ಗೆ ಕೊರಳ್' ನಟಕ ವಿಸ್ತೃತ ವ್ಯಾಖ್ಯಾನ ಪಡೆದಿದೆ. ದಾರ್ಶನಿಕ ಕವಿ ಈ ನಾಟಕದಲ್ಲಿ ಅಭಿವ್ಯಕ್ತಿಪಡಿಸಿರುವ ಮಹದ್ದರ್ಶನವನ್ನು ವ್ಯಾಖ್ಯಾನಕಾರರು ಅತಿರಮ್ಯವಾಗಿ ಪರಿಚಯಿಸಿಕೊಡುತ್ತಾರೆ. 'ಮಲೆಗ ಳಲ್ಲಿ ಮದುಮಗಳು' ಎಂಬ ಕಾದಂಬರಿಯ ಬಗೆಗೆ ಕೋಗಿಲೆ ಮತ್ತು ಸೋವಿಯತ್ ರಷ್ಯಾ ಎಂಬ ಕವನ ಸಂಕಲನದ ಬಗೆಗೆ ಒಂದು ರಸವಿಮರ್ಶೆಯನ್ನೇ ಸಿದ್ಧಪಡಿಸಿದ್ದಾರೆ.

ಕುವೆಂಪು ಸಾಹಿತ್ಯದಲ್ಲಿ ರಾಜಕೀಯ ವಿಚಾರಧಾರೆ, ಕುವೆಂಪು ಸಾಹಿತ್ಯದಲ್ಲಿ ನಿಸರ್ಗ. ಕುವೆಂಪು ಅವರ ಕನ್ನಡ ದೀಕ್ಷೆ – ಇವೇ ಮೊದಲಾದ ವಿಚಾರಪೂರ್ಣ ಲೆಖನಗಳಿವೆ. ಇವುಗಳಲ್ಲಿ ವಸ್ತುವಿಶ್ಲೇಷಣೆಯ ಜೊತೆಗೆ ವಿಮರ್ಶೆಯೂ ಬೆರೆತಿದೆ. ಅಗತ್ಯ ವೆನಿಸಿದೆಡೆಯಲ್ಲಿ ದೇಜಗೌರವರ ವ್ಯಾಖ್ಯಾನ ಅದ್ಭುತ, ಅಮೋಘ, ಅಪೂರ್ವ ಎಂದಷ್ಟೇ ಹೇಳಿದರೆ ಸಾಕೆನಿಸುತ್ತದೆ.

## ಅನಿಮಿತ್ತ ಬಂಧು*

==========================================================================

ಸಾಮಾನ್ಯವಾಗಿ ಸ್ನೇಹಕ್ಕೆ ಸ್ವಾರ್ಥವೇ ಸ್ಥಾಯಿ ; ಸ್ವಾರ್ಥವಿಲ್ಲದ ಸ್ನೇಹವೇ ಇಲ್ಲ; ಸ್ವಾರ್ಥವೇ ಇಲ್ಲ ಎಂಬ ವಾದ ತನ್ನ ಸಮರ್ಥನೆಗಾಗಿ. ಕರ್ಣ–ದುರ್ಯೊಧನ, ಎಂಕಿಡು–ಗಿಲ್ಗಮಿಶ್ ಮೊದಲಾದವರ ಸ್ನೇಹವನ್ನು ಉದಾಹರಿಸುತ್ತದೆ. ಅದೇ ರೀತಿ ಕಾವ್ಯಮೀಮಾಂಸಾ ಸಂದರ್ಭದಲ್ಲಿ 'ಕಲೆಗಾಗಿ ಕಲೆ' ಎಂದಂತೆ. 'ಸ್ನೇಹಕ್ಕಾಗಿ ಸ್ನೇಹ' ಆ ಸ್ನೇಹವನ್ನು ಯಾವುದೇ ವೈಯುಕ್ತಿಕ ಲಾಭಕ್ಕಾಗಿ ಬಳಸಿಕೊಳ್ಳುವುದು ಬೇಡ ಎಂಬ ಇನ್ನೊಂದು ವಾದವೂ ಇದೆ. ಆದರೆ ಎರಡೂ ಪೂರ್ಣ ಸತ್ಯವೂ ಅಲ್ಲ, ಸುಳ್ಳೂ ಅಲ್ಲ. ಪ್ರತಿಯೊಂದು ಸಿದ್ಧಾಂತಕ್ಕೂ ಒಂದೊಂದು ಅಪವಾದವಿದ್ದಂತೆ 'ಸ್ನೇಹ ಸಿದ್ಧಂತ'ಕ್ಕೂ ಅಪವಾದವಿದೆ. ಅಂತಹ ಅಪವಾದ ನನ್ನ ಮತ್ತು ಡಾ.ಎಂ.ಎಂ. ಕಲಬುರ್ಗಿಯವರ ಮೈತ್ರಿ. ನನ್ನದು ಸ್ವಾರ್ಥಪರ ಸ್ನೇಹ, ಅವರದು ನಿಸ್ವಾರ್ಥಪರ ಮೈತ್ರಿ. ನಾನು ಅವರ ಸ್ನೇಹ ಪಡೆದುಕೊಂಡದ್ದು, ಬೆಳಸಿಕೊಂಡದ್ದು ನನ್ನ ವೈಯುಕ್ತಿಕ ಲಾಭಕ್ಕಾಗಿ. ಅವರದು ನಿರ್ವ್ಯಾಜ ಮತ್ತು ಪ್ರಾಂಜಲ ಭಾವದಿಂದ ಕೂಡಿದ್ದು. ಸುಮಾರು ಮೂರು ದಶಕಗಳ ಹಿಂದೆ ಅವರ ನನ್ನ ಭೇಟಿ. ಅಂದಿಗೆ ೫–೬ ವರ್ಷಗಳ ಹಿಂದೆಯೇ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಡಾಕ್ಟರೇಟ್ ಪದವಿಗಾಗಿ ನೋಂದಣಿ ಮಾಡಿ, ಮಹಾಪ್ರಬಂಧ ರಚನೆಯಲ್ಲಿ ಆಸಕ್ತಿ ಕಳೆದು ಕೊಂಡು ಕೈಚೆಲ್ಲಿ ಕುಳಿತಿದ್ದೆ. ಆಗ ಎಸ್.ಎಂ. ವೃಷಭೇಂದ್ರಸ್ವಾಮಿಯವರು ಕಲಬುರ್ಗಿಯವರ ಪರಿಚಯ ಮಾಡಿ, 'ಇವರು ತುಂಬಾ ಪ್ರತಿಭಾವಂತರು, ಉತ್ಸಾಹೀ ತರುಣರು, ನನ್ನ ಆತ್ಮೀಯ ಶಿಷ್ಯರು ಕೂಡ. ನೀನು ಇವರ ನೆರವು ಪಡೆ' ಎಂದು ಹೇಳಿದರು. ಪರಿಚಯ ಸ್ನೇಹವಾಗಿ ರೂಪುಗೊಂಡಿತು.

ನನ್ನಂತೆಯೇ ಕಲಬುರ್ಗಿಯವರೂ ಡಾಕ್ಟರೇಟಿಗಾಗಿ ನೋದಣಿ ಸಲ್ಲಿಸಿದ್ದರು. ಇಬ್ಬರಿಗೂ ಡಾ.ಆರ್.ಸಿ. ಯವರೇ ಮಾರ್ಗ ದರ್ಶಕರಾದ್ದರಿಂದ ಅವರು ಹೇಳಿದರು – –ನಾವಿಬ್ಬರೂ ಒಬ್ಬ ಗುರುಗಳ ಶಿಷ್ಯರು. ಅಂದ ಮೇಲೆ ನಾವಿಬ್ಬರೂ ಸೆರೆ ರಕ್ತವನ್ನು ಹಂಚಿಕೊಂಡುಹುಟ್ಟಿದ ಸೋದರರಿಗಿಂತಲೂ ಹೆಚ್ಚಿನವರು. ಬನ್ನಿ, ನಮ್ಮ ನಮ್ಮ ಜವಾಬ್ದಾರಿಗಳನ್ನು ಹಂಚಿಕೊಳ್ಳೋಣ. ಎಲ್ಲಿ ನಿಮ್ಮ ಥೀಸಿಸ್ ಕೆಲಸ ಎಷ್ಟು ಸಾಗಿದೆ ತೋರಿಸಿ' ಅಂದರು. ನನ್ನ ಕಡತ ಬಿಚ್ಚಿದೆ. ಅಂದಿನವರೆಗೂ ಮಾರ್ಗದರ್ಶಕರಿಗೆ ತೋರದೆ ನನಗೆ ತಿಳಿದಂತೆ ಬರೆದಿದ್ದ ಭಾಗಗಳನ್ನು ಕಲಬುರ್ಗಿಯವರಿಗೆ ತೋರಿಸಿದೆ. ಅದರ ಮೇಲೆ ಕಣ್ಣಾಡಿಸಿದ ಅವರು, 'ನೋಡಿ ಮರುಳಯ್ಯಾ, ನೀವು ಆಯ್ದುಕೊಂಡಿರುವ ವಿಷಯ ತುಂಬಾ ಮಹತ್ವದ್ದಿದೆ. ಏಕೆಂದರೆ ನಮ್ಮ ಕರ್ನಾಟಕದಲ್ಲಿ ಅನೇಕ ಪಾಳೆ

ಪಟ್ಟುಗಳಿವೆ. ಅವು ಕೇವಲ ಯುದ್ಧ ರಂಗಗಳೊ ಅಥವಾ ವಿಲಾದ ವೇದಿಕಗಳೊ ಆಗಿಲ್ಲ. ಸಾಕಷ್ಟು ಪ್ರಮಾಣದಲ್ಲಿ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಸೇವೆ ಸಲ್ಲಿಸಿದ ಕರ್ಮಭೂಮಿಗಳಾಗಿವೆ. ಅವುಗಳ ಕ್ಷೇತ್ರಕಾರ್ಯ ಹಸ್ತಪ್ರತಿ ಸಂಗ್ರಹಣ, ಸಂಶೋಧನಾತ್ಮಕ ಅಧ್ಯಯನ ಆಗಬೇಕಿದೆ. ಆ ದಿಸೆಯಲ್ಲಿ ನಿಮ್ಮದು ಮೊದಲ ಹೆಜ್ಜೆ. ಮುಂದೆ ಅಂಥದೇ ವಿಷಯವನ್ನು ಕೈಗೆತ್ತಿಕೊಂಡವರಿಗೆ ನಿಮ್ಮ ಥೀಸಿಸ್ ಪ್ರೇರಕವಾಗಬೇಕು, ಮಾರ್ಗದರ್ಶನವಾಗಬೇಕು. ಯಾವನೇ ರಾಜ, ಮಹಾರಾಜ, ಮಾಂಡಲಿಕ, ಮನ್ನೆಯನಿರಲಿ. ಪುಟ್ಟ ಪಾಳೆಯಗಾರನಿರಲಿ, ಅವನ ಆಸ್ಥಾನದಿಂದ ಹೊರಬಂದ ಯಾವುದೇ ರೂಪದ ಸಾಹಿತ್ಯವಿರಲಿ ಅದರ ಅಧ್ಯಯನಕ್ಕೆ ನಿಮ್ಮ ಕೃತಿ ನಾಂದಿಯಾಗಲಿ. ಆದೆ ಮೊದಲನೆಯದಾಗಿ, ನಿಮ್ಮ ಪ್ರಬಂಧ ಶೀರ್ಷಿಕೆ ಮಾರ್ಪಾಡಬೇಕು. 'ಕೆಳದಿಯ ಅರಸರ ಕಾಲದ ಕನ್ನಡ ಸಾಹಿತ್ಯ' ಎಂದಿಟ್ಟದ್ದೀರಿ. ಇದು ಸಮರ್ಪಕ ಅಲ್ಲ ಅನ್ನಿಸುತ್ತೆ. ಕೆಳದಿಯ ರಾಜರು ಆಳಿದ ಸುಮಾರು ಎರಡೂ ಮುಕ್ಕಾಲು ಶತ ಮಾನಗಳಲ್ಲಿ ಕರ್ನಾಟಕ ಮತ್ತು ಕರ್ನಾಟಕದ ಇತರೆ ಭಾಗಗಳಲ್ಲಿ ಪ್ರಕಟವಾದ ಸಾಹಿತ್ಯವನ್ನು ಕುರಿತಲ್ಲ ನೀವು ಅಧ್ಯಯನ ನಡೆ ಸುವುದು. ನಿಮ್ಮ ಅಧ್ಯಯನ ಕೇವಲ ಕೆಳದಿಯ ಆಸ್ಥಾನಕ್ಕೆ ಸೀಮಿತವಾದದ್ದು. ಆದ್ದರಿಂದ 'ಕೆಳದಿಯ ಅರಸರು ಮತ್ತು ಕನ್ನಡ ಸಾಹಿತ್ಯ' ಎಂದಿದ್ದರೆ ಸೂಕ್ತ ಎನಿಸುತ್ತದೆ. ಅಂತಾದಲ್ಲಿ, ಇಂದಿನವರೆಗೂ ಹೆಚ್ಚಿನ ಪ್ರಚಾರಕ್ಕೆ ಬಾರದಿರುವ ಸಾಮ್ರಾಟರಷ್ಟೇ ವೈಭವ ವೈಶಿಷ್ಟ್ಯಗಳಿಂದ ಆಡಳಿತ ನಡೆಸಿದ ಕೆಳದಿಯ ರಾಜರಾಣಿಯರ ಇತಿಹಾಸವನ್ನು ಮೊತ್ತ ಮೊದಲಿಗೆ ಸಮಗ್ರವಾಗಿ ಪರಿಚಯಿಸಿ

---

*ನನ್ನ ಅನಿಮಿತ್ತ ಬಂಧು ಬೇರಾರೂ ಅಲ್ಲ, ಖ್ಯಾತ ವಿಮರ್ಶಕ ಡಾ.ಎಂ.ಎಂ. ಕಲಬುರ್ಗಿಯವರು. ಲೇಖನ ಅವರ ಷಟ್ಯಬ್ಧಿ ಸಂದರ್ಭದ ನೆನಹು ಕೊಟ್ಟಂತಾಗುವುದಲ್ಲದೆ, ಅತಿಮುಖ್ಯವಾಗಿ ಕನ್ನಡಕ್ಕೆ ಕೆಳದಿಯವರಿತ್ತ ಸಾಹಿತ್ಯ ಕಾಣಿಕೆಯನ್ನು ಬೆಳಕಿಗೆ ತಂದಂತೆಯೂ ಆಗುತ್ತದೆ' ಎಂದರು. ಅದಕ್ಕೆ ಸಮ್ಮತಿಸಿದೆ. ಶೀರ್ಷಿಕೆಯ ಮಾರ್ಪಾಟಿಕೆ ಅರ್ಜಿ ಸಲ್ಲಿಸಿ, ವಿಶ್ವವಿದ್ಯಾಲಯದಿಂದ ಅನುಮತಿ ಪಡೆದೆ.

ಮಾರನೆಯ ದಿನ ಮತ್ತೆ ಸೇರಿದೆವು. ನನ್ನ ಮಹಾಪ್ರಬಂಧದ ಪೀಠಿಕಾ ಭಾಗವನ್ನು ನೋಡಿ ಕಲಬುರ್ಗಿಯವರು ಅಸಮಾಧಾನ ವ್ಯಕ್ತಪಡಿಸಿದರು. 'ನೋಡಿ, ರಾಜಾಶ್ರಯ ಕುರಿತಂತೆ ಅನಗತ್ಯವಾಗಿ ಆರ ನೂರು ಪುಟ ಬರೆದಿದ್ದೀರಿ. ಇದನ್ನು ಕಿತ್ತು ಹಾಕಿ. ನಮ್ಮ ಪ್ರಬಂಧ ವಿಷಯಕ್ಕೆ ಸಂಬಂಧಿಸಿದಂತೆ ಔಚಿತ್ಯಾಂಶಗಳನ್ನು ಮಾತ್ರ ಉಳಿಸಿಕೊಂಡು, ಮಿಕ್ಕಿದ್ದನ್ನು ಬಿಟ್ಟುಬಿಡಿ. ಬೇಕಾದರೆ 'ಸಾಹಿತ್ಯ ಮತ್ತು ರಾಜಾಶ್ರಯ' ಎಂಬ ಶೀರ್ಷಿಕೆಯಡಿಯಲ್ಲಿ, ಅನಂತರದಲ್ಲಿ ಒಂದು ಪ್ರತ್ಯೇಕ ಪುಸ್ತಕವನ್ನೇ ತರುವಿರಂತೆ. ಇಲ್ಲಿಗೆ ಇದು ಅನುಚಿತ ಮತ್ತು ಅತಿವ್ಯಾಪ್ತಿ ದೋಷಕ್ಕೂ ಇದು ಕಾರಣವಾಗುತ್ತದೆ. ವಿಷಯ ವಿಶ್ಲೇಷಣೆ ಹೀಗಿರಲಿ, ಅಧ್ಯಾಯ ವಿಭಜನೆ ಇಂತಿರಲಿ, ಕೆಳದಿಯ ಆಸ್ಥಾನದಲ್ಲಿ ಹುಟ್ಟಿ ಬೆಳೆದ ಸಾಹಿತ್ಯಾಧ್ಯಯನಕ್ಕೆ ಹೆಚ್ಚು ಒತ್ತು ಕೊಡಿ. ನಿಮ್ಮ ಸಿದ್ಧಾಂತ, ನಿರ್ಣಯಗಳಲ್ಲಿ ಸಷ್ಟತ್ವೆ ಇರಲಿ. ಅಂದಾಜಿನ ಆಧಾರದ ಮೇಲೆ ಯಾವುದೇ ತೀರ್ಪು ಕೊಡಬೇಡಿ. ಇವೆಲ್ಲಕ್ಕೂ ಮೊದಲು ಸಂಶೋಧನೆಗೆ ಇಂತಿಂತಹ ಪರಿಕರಗಳಿರಬೇಕು, ಸೂಕ್ಷ್ಮ ಸಿದ್ಧತೆಗಳೂ ಪೂರ್ವಭಾವಿಯಾಗಬೇಕು. ಆಲಸ್ಯ ದೂರಮಾಡಿ, ಕಾರ್ಯೋನ್ಮುಖರಾಗಿ ಎಂದೆಲ್ಲ ಬೋಧಿಸಿದರು. ತನ್ಮೂಲಕ ತಾವೇ ನನ್ನ ಅನಧಿಕೃತ ಮಾರ್ಗದರ್ಶಕರೂ ಆದರು. ಸಂಶೋಧನೆಯ ಸೂತ್ರ, ಶಿಲ್ಪ, ವಿಧಿ, ವಿಧಾನ, ಅಚ್ಚುಕಟ್ಟು ಎಲ್ಲವನ್ನೂ ಅವರಿಂದ ಕಲಿತೆ.

ಧಾರವಾಡಕ್ಕೆ ಹೋದಾಗಲೆಲ್ಲ ನಾನು ಗಾಂಧಿ ಮಂದಿರದಲ್ಲಿ ಇಳಿದುಕೊಳ್ಳುತ್ತಿದ್ದೆ. ಕಲಬುರ್ಗಿಯವರು ಪ್ರತಿ ದಿನ ತಪ್ಪದೆ ಅಲ್ಲಿಗೆ ಬರುತ್ತಿದ್ದರು. ನಾನು ಸಿದ್ಧಪಡಿಸಿದ ಟಿಪ್ಪಣಿಗಳು, ಕೊಟ್ಟ ವಿವರಣೆ ಎಲ್ಲ ಓದಿ, ತಪ್ಪಿದ್ದರೆ ತಿದ್ದಿ, ಒಪಿದರೆ ಮೆಚ್ಚಿ ಹೋಗುತ್ತಿದ್ದರು. ಒಂದೊಂದು ದಿನ ತಮ್ಮ ಜೊತೆಯಲ್ಲಿ ಗ್ರಂಥಾಲಯಕ್ಕೂ ಕರೆದುಕೊಂಡು ಹೋಗುತ್ತಿದ್ದರು. ಅಲ್ಲಿ ಗ್ರಂಥಪಾಲಕರಿಗೆ ನನ್ನನ್ನು ಪರಿಚಯಿಸಿ, ಬೇಕಾದ ಪುಸ್ತಕಗಳನ್ನು ತೆಗೆದು ಕೊಡುವಂತೆ ಆದೇಶಿಸುತ್ತಿದ್ದರು. ಸಂಬಂಧಪಟ್ಟ ಪುಸ್ತಕಗಳನ್ನು ತಾವೇ ಆರಿಸಿ ತೆಗೆದು ನನ್ನನ್ನು ಅಧ್ಯಯನಕ್ಕೆ ಹಚ್ಚುತ್ತಿದ್ದರು. ಮಹಾಪ್ರಬಂಧದ ಹಸ್ತಪ್ರತಿ ಸಿದ್ಧವಾದ ಮೇಲೂ ಆಮೂಲಾಗ್ರವಾಗಿ ಓದಿ, ಮೆಚ್ಚಿ, ಬೆರಳಚ್ಚು ಮಾಡಿಸಲು ಒಪ್ಪಿಗೆ ಕೊಟ್ಟರು. ಮೌಖಿಕ ಪರೀಕ್ಷೆಯಲ್ಲಿ ಡಾ.ಎಲ್. ಬಸವರಾಜು, ಡಾ.ಡಿ.ಎಸ್. ಕರ್ಕಿಯವರಿದ್ದರೆಂದು ತಿಳಿಸಿದಾಗ ಕಲಬುರ್ಗಿಯವರು, 'ಅಂತಹ ಘನ ವಿದ್ವಾಂಸರ ಮೆಚ್ಚುಗೆಗೆ ಪಾತ್ರರಾಗಿ, ಪ್ರಶಸ್ತಿ ಪತ್ರ ಮತ್ತು ಪದವಿ ಪಡೆಯುವುದು ಭಾಗ್ಯ ವಿಶೇಷ. ಅದಕ್ಕೆ ನೀವು ಪಾತ್ರರಾಗಿದ್ದೀರಿ. ನೀವು ಧನ್ಯರು !' ಎಂದರು. ನನಗೆ ಡಿಗ್ರಿ ಪದತ್ತವಾದ ದಿನ ನನ್ನೆಲ್ಲ ಬಂಧುಗಳಿಗಿಂತಲೂ ಹೆಚ್ಚಿನ ಆನಂದಪಟ್ಟವರು ಡಾ.ಎಂ.ಎಂ. ಕಲಬುರ್ಗಿಯವರು.

ತನ್ನ ಜೊತೆಯವರು ಬೆಳೆದರೆ ತಾನೇ ಬೆಳದಂತೆ ಎಂಬ ಸದ್ಭಾವನೆ ಡಾ. ಕಲಬುರ್ಗಿಯವರದು. ಅದರಂತೆ ತಮ್ಮ ಅಭಿಮಾನದ ತೆಕ್ಕೆಗೆ ಬಂದವರನ್ನೆಲ್ಲ ಬೆಳಸಿಕೊಂಡೇ ಬೆಳೆದರು.

ನಾನು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸ್ಥಾನಕ್ಕೊಮ್ಮೆ ಸ್ಪರ್ಧಿಸಿ ಸೀತೆ. ಇನ್ನೊಮ್ಮೆ ಗೆದ್ದೆ. ಆ ಸೋಲು ಗೆಲವು ಸಂದರ್ಭಗಳೆರಡರಲ್ಲೂ ಡಾ. ಕಲಬುರ್ಗಿಯವರು ನನ್ನ ಜೊತೆ ಇದ್ದರು. ಅಂತಹ ಅವ್ಯಾಜ ಪ್ರೇಮಿಯನ್ನು ನಾನೆಲ್ಲಿ ಕಾಣಲಿ.

ಪರಿಷತ್ತಿನ ಅಧ್ಯಕ್ಷನಾದ ಮೇಲೂ ನಾನವರಿಗೆ ತೊಂದರೆ ಕೊಟ್ಟೆ. ಮಹಾನ್ ಸಂಸ್ಥೆಯ ಕರ್ಣಧಾರನಾಗಿ ಕಾರ್ಯನಿರ್ವಹಿಸುವಲ್ಲಿ ನನಗೆ ಕಲಬುರ್ಗಿಯವರ ಸಲಹೆ, ಸಹಕಾರ ಮತು ಮಾರ್ಗದರ್ಶನಗಳು ಅನಿವಾರ್ಯವಾದವು. ಅಧ್ಯಕ್ಷನಾಗಿ ಅಧಿಕಾರ ಸ್ವೀಕರಿಸಿದ ತರುಣದಲ್ಲಿ ಹೇಳಿದರು, 'ಪರಿಷತ್ತಿನ ವ್ಯಾಪ್ತಿ ದೀಪ್ತಿಗಳೆರಡೂ ದೊಡ್ಡದು. ಅದಕ್ಕೆ ಧಕ್ಕೆ ತಗುಲದಂತೆ ನಿಮ್ಮ ಆಡಳಿತವಿರಲಿ. ನನಗೆ ಗೊತ್ತು ನೀವು ಶುದ್ಧಹಸ್ತರು. ಅಷ್ಟೇ ಮೃದು ಸ್ವಭಾವದವರು ಎಂದು. ಆದರೆ ನಿಮ್ಮಲ್ಲಿ ಜಾಣತನ ಇಲ್ಲ, ಚಾಕಚಕ್ಯತೆಗಳಿಲ್ಲ. ಅವು ಇಂದಿನ ದಕ್ಷತೆಯ ಅಳತೆಗೋಲುಗಳು. ಇಂದು ನಿಷ್ಠೆ ತನ್ನ ಅರ್ಥ ಕಳೆದುಕೊಂಡಿದೆ. ಪ್ರಾಮಾಣಿಕತೆ ಅಪಮೌಲ್ಯಗೊಂಡಿದೆ. ಅಂದರೆ ಅದನ್ನು ಬಿಡಿ ಎನ್ನುವುದು ನನ್ನ ಮಾತಿನ ಅರ್ಥವಲ್ಲ. ಸಂದರ್ಭವನ್ನು ಎಂದಿಗೂ ಎದುರು ಹಾಕಿಕೊಳ್ಳಬೇಡಿ. ಜೀವಚ್ಛವದಂತಿರುವ ನಿಘಂಟು ವಿಭಾಗಕ್ಕೆ ಮೊದಲು ಚಾಲನೆ ಕೊಡಿ. ಓರ್ವ ಶ್ರೇಷ್ಠ ವಿದ್ವಾಂಸರನ್ನು ಅಧ್ಯಕ್ಷರನ್ನಾಗಿ ಮಾಡಿ. ಈವರೆಗೆ ಪ್ರಕಟವಾಗಿರುವ ಎಂಟು ಸಂಪುಟಗಳ ಪರಿಷ್ಕರಣ ಮತ್ತು ಅಲ್ಲಿನ ಪದಗಳಿಗೆ ಲಿಪ್ಯಂತರ ಮತ್ತು ಭಾಷಾಂತರ ಅರ್ಥಗಳನ್ನು ಅಳವಡಿಸಿ, ಆ ನಿಘಂಟು ಕನ್ನಡಿಗರಿಗೆ ಕನ್ನಡೇತರರಿಗೆ ಬೇಗ ಸಿಗುವಂತೆ ಮಾಡಿ. ಕವಿಗಳಲ್ಲಿ, ಸಾಹಿತಿಗಳಲ್ಲಿ, ವಿಮರ್ಶಕರಲ್ಲಿ, ವ್ಯಾಖ್ಯಾನಕಾರರಲ್ಲಿ ಆಸಕ್ತಿ ಮೂಡಿಸಿ, ಅಭಿಮಾನ ಬೆಳೆಸಿ. ರಮ್ಯ ಹಳೇಯದಾಯಿತೆಂದು ಬಿಡಬೇಡಿ, ನವ್ಯ ನಶಿಸಿತೆಂದು ಅಳಬೇಡಿ, ಬಂಡಾಯವನ್ನು ಹೊರಗಿರಿಸಬೇಡಿ. ಕುರ್ಚಿಯಿಂದ ಕಿಮ್ಮತು ಬರುವುದಿಲ್ಲ. ಅದನ್ನೇರಿದ ವ್ಯಕ್ತಿಯಿಂದ ಅದರ ಕಿಮ್ಮತ್ತು ಹೆಚ್ಚುತ್ತದೆ. ಆ ಕೀರ್ತಿಗೆ ನೀವು ಭಾಜನರಾಗಿ ಎಂಬ ಕಿವಿಮಾತು ಹೇಳಿದರು. ಪರಿಷತ್ತಿನ ಕಾರ್ಯಯೊಜನೆ ಬಗೆಗೆ ಸಮ್ಮೇಳನಗಳ ವ್ಯವಸ್ಥೆ ಮತ್ತು ಗೋಷ್ಠಿ ಸಿದ್ಧತೆಗಳ ಬಗೆಗೆ ಉಪಸಮಿತಿಯ ಸದಸ್ಯರಾಗಿದ್ದುಕೊಂಡು ಸೂಕ್ತ ಸಲಹೆಗಲನ್ನು ನೀಡಿದ್ದಾರೆ.

ಇಂತವೆಷ್ಟೋ ಉಪಕೃತಿಯ ಹೆಜ್ಜೆ ಗುರುತುಗಲನ್ನು ನನ್ನ ಬಾಳಪಥದಲಿ ಮೂಡಸಿದ್ದಾರೆ ಡಾ.ಎಂ.ಎಂ. ಕಲಬುರ್ಗಿಯವರು. ಸ್ನೇಹ ಸ್ಥಾಯಿಂದ 'ಪ್ರೇಮಯಾನ್' ರಸ ನಿಷ್ಪನ್ನವಾಗುತ್ತದೆಂದು ಭಾರತೀಯ ಕಾವ್ಯ ಮೀಮಾಂಸೆ ಹೇಳುತ್ತದೆ. ನಾನು ಅದನ್ನು ಕಾವ್ಯ ಸಂದರ್ಭದಲ್ಲಲ್ಲ, ಬದುಕಿನ ಸಂದರ್ಭದಲ್ಲಿ ಎಂಬುದು ನನ್ನರಿವಿಗೆ ಬಂದಿದೆ. ಅಂತಹ ರಸಸ್ವಾದನಕ್ಕೆ ಕಾರಣರಾದ 'ಆತ್ಮೀಯ' ಕಲಬುರ್ಗಿಯವರಿಗೆ ಇಂದಿನ 'ಷಷ್ಟ್ಯಬ್ದಿ' ಶುಭಾಷಯಗಳು, ಮುಂದಿನ ಶತಾಬ್ದಿ ಹಾರಯಿಕೆಗಳು.

# ನೆನಪು ಅಮೃತಸ್ಯಂದಿ*

=================================================================

ಪ್ರತಿಯೊಂದು ಸಿದ್ಧಾಂತಕ್ಕೂ ಒಂದೊಂದು ಅಪವಾದ (Exception) ಇದ್ದಂತೆ 'ಪಂಡಿತಪುತ್ರ' ಎಂಬ ಆಪಾದನೆಗೂ ಒಂದು ಅಪವಾದ ಇದೆ. ಸಾಮಾನ್ಯವಗಿ ಕುಂಬಾರನ ಮಗ ಕುಂಬಾರನಾಗುತ್ತಾನೆ, ಕಮ್ಮಾರನ ಮಗ ಕಮ್ಮಾರನಾಗುತ್ತಾನೆ, ಚಮ್ಮಾರನ ಮಗ ಚಮ್ಮಾರನಾಗುತ್ತಾನೆ. ಆದರೆ ಕವಿಯ ಮಗ ಕವಿಯಾಗುತ್ತಾನೆಂಬ ಭರವಸೆ ಇಲ್ಲ, ಸಂಗೀತಗಾರನ ಮಗ ಸಂಗೀತಗಾರನಾಗುತ್ತಾನೆಂಬ ವಿಶ್ವಾಸವಿಲ್ಲ. ಆಗುವುದೇ ಇಲ್ಲ ಎಂಬ ನಿರ್ಧಾರವೂ ಸಲ್ಲ. ಕಲೆ ವಂಶಪಾರಂಪರ್ಯವಾಗಿ ಬರುವ ಕಸುಬಲ್ಲ. ಅದು ವ್ಯಕ್ತಿಗತ ಅಭಿಜಾತ ಸಿದ್ಧಿ. ಸ್ಥೂಲಾರ್ಥದಲ್ಲಿ ಕಸುಬನ್ನು ಕುಶಲಕಲೆ (Craft) ಅಥವಾ ಉಪಯುಕ್ತ ಕಲೆ (Useful art) ಎಂದು ಕರೆದರೆ ಚಿತ್ರ ಶಿಲ್ಪ, ನೃತ್ಯ, ಸಂಗೀತ, ಸಾಹಿತ್ಯಾದಿ ಕಲೆಗಳು (Time Arts) ಎಂದು ಕರೆಯುತ್ತೇವೆ. ಕಸುಬು ವೃತ್ತಿ ನಿರತ, ಕಲೆ ಪ್ರವೃತ್ತಿ ಭರಿತ. ಅದು ತನ್ನ ಸೃಷ್ಟಿ ಸಂದರ್ಭದಲ್ಲಿ ಚಾತುರ್ಯ (Skll) ಬಯಸಿದರೆ, ಇದು ಪ್ರತಿ ಭೆಯನ್ನು (Geniousness) ಬೇಡುತ್ತೆ. ಅದು ಅನುಕರಣೀಯ ರಚನೆ, ಇದು ಸೋಪಜ್ಞ ಸೃಷ್ಟಿ. ಅದಕ್ಕೊಂದು ಸಿದ್ಧ ಮಾದರಿ (Model) ಇರುತ್ತೆ. ಇದಕ್ಕೆ ಬೇಕಾದ ದಾರಿಯನ್ನು ಇದೇ ಹುಡುಕಿಕೊಳ್ಳುತ್ತೆ. ಅದು ಹತ್ತು ಜನರ ಕೈವಾಡದಿಂದಾ ದದ್ದು. ಇದು ಕಲಾವಿದನ ಏಕಾಂತ ಧ್ಯಾನ ಸಮಾಧಿಯಲ್ಲಿ ಮೂಡಿದ್ದು. ಉದಾಹರಣೆಗೆ ಹತ್ತು ಹಂತಗಳಲ್ಲಿ ಹತ್ತು ಜನರು ಸೇರಿ ಒಂದು ಗಡಿ ಯಾರ ತಯಾರಿಸಬಹುದು. ಆದರೆ ಹತ್ತು ಜನರು ಕೂಡಿ ಒಮದು ಕವಿತೆಯನ್ನು ರಚಿಸಬರುವುದಿಲ್ಲ. ಇಂತಹ ಶುದ್ಧಕಲೆ (Pure Art) ಆತ್ಮಾನಂದಕ್ಕಾಗಿಯೇ ಹುಟ್ಟಿದ ಬ್ರಹ್ಮಾನಂದ ಸಹೋದರ ಸದೃಶವಾದದ್ದು.

ಕಲಾ ಪ್ರಭೇದಗಳ ವಿಶ್ಲೇಷಣೆ ಇಂತಿದ್ದರೂ ಒಂದು ಮತ್ತೊಂದರ ಪೂರಕಜೀವಿ ಎಂಬುದನ್ನು ಮರೆಯುವಂತಿಲ್ಲ. ಕುಶಲ ಕಲೆಗಾರನಲ್ಲಿ ಚತುರತೆಯ ಜೊತೆಗೆ ಪ್ರತಿಭೆಯೂ ಇರಬೇಕು. ಲಲಿತ ಕಲೆಗಾರನಲ್ಲಿ ಚತುರತೆಯಿರಬೇಕು. ಪ್ರಮಾಣದಲ್ಲಿ ವ್ಯತ್ಯಾಸ ವಿರಬಹುದು. ಆದರೆ ಪ್ರಭಾವದಲ್ಲಿ ಶೂನ್ಯವೆಂಬುದಿಲ್ಲ. ಅಷ್ಟೇ ಅಲ್ಲ ಯಾವುದೇ ಕಲೆ ಇರಲಿ ಯಾವ ಕಾಲಕ್ಕೇ ಆಗಲಿ ಅದು ಕಸುಬಾದಾಗ ಮಾತ್ರ ಬಹುಕಾಲ ತನ್ನ ಜೀವಂತಿಕೆಯನ್ನು ಉಳಿಸಿಕೊಂಡು ಬರಬಲ್ಲುದು. ಕೇವಲ ಹವ್ಯಾಸವಾದರೆ ಅದು ಬಹು ಬೇಗ ಮಾಯವಾಗುವ ಅಪಾಯ ಉಂಟು. ಈ ಮಾತು ಲಲಿತ ಕಲೆಗಳಾದ ಚಿತ್ರ, ಶಿಲ್ಪ, ನೃತ್ಯ, ಸಂಗೀತಗಳಿಗೆ (ಸಾಹಿತ್ಯವನ್ನು ಬಿಟ್ಟು) ತುಂಬಾ ಅನ್ವಯಿಸುತ್ತದೆ. ಅವು ಕಸಬಾಗಿ ದುಡಿದದ್ದರಿಂದಲೇ ಇಂದಿಗೂ ಬದುಕು ಮಾಡುತ್ತಿವೆ. ಇಲ್ಲವಾದರೆ ಎಂದೋ ಲಯವಾಗುತ್ತಿದ್ದವು – ಈ ಅಪಾಯವನ್ನು ತಪ್ಪಿಸಿ, ಕಲೆಯನ್ನೇ ಕಸುಬನ್ನಾಗಿ ಮಾಡಿಕೊಂಡು ಅದರ ಜಿವಂತಿಕೆ ಯನ್ನು ಉಳಿಸಿ ಬೆಳಸಿದ ಕೀರ್ತಿ ಕಮಡಿಯನ್ ಮಗ ನಟರತ್ನಾಕರನಿಗೆ ಸಂದಿದೆ. ಶ್ರೇಷ್ಠ ಕಲಾವಿದನ ಮಗ ಅಷ್ಟೇ ಮಟ್ಟದ ಕಲಾವಿದನಾಗಿ ಉಳಿದಿರುವುದು ಅಪರೂಪ. ಅಂತಹ ದ್ವಯಗಳನ್ನು ಅದ್ವಯಗೊಳಿಸಿದ ಅಪರೂಪದ ವ್ಯಕ್ತಿ ಮಾಸ್ಟರ್ ಹಿರ ಣ್ಣಯ್ಯ.

ಮಾಸ್ಟರ್ ಅಥವಾ ಚಿರಂಜೀವಿ ಹಿರಣ್ಣಯ್ಯನವರು. ತಮ್ಮ ಪೂರ್ವಾಶ್ರಮದ ನರಸಿಂಹಮೂರ್ತಿಯಾಗಿದ್ದಾಗಿನಿಂದಲೂ ಅವರು ನನ್ನ ಸ್ನೇಹಿತರು. ಹಾಗೆ ಹೇಳಿಕೊಳ್ಳಿವಲ್ಲಿ ನನಗೆ ಹೆಮ್ಮೆ ಇದೆ, ಹೆದರಿಕೆಯೂ ಇದೆ. ಏಕೆಂದರೆ ಒಬ್ಬ ವ್ಯಕ್ತಿ ಅನಾಮ ಧಯನಾಗಿದ್ದಾಗ ಯಾರೂ ಸವನನ್ನು ಗುರುತಿಸುವುದಿಲ್ಲ, ಗೌರವಿಸುವುದೂ ಇಲ್ಲ. ಆದರೆ ಆತ ಕೀರ್ತಿಯ ಉತ್ತುಂಗ ಶಿಖರ

---

*ಮಾಸ್ಟರ್ ಹಿರಣ್ಣಯ್ಯ ಅರ್ಥಾತ್ ನರಸಿಂಹಮೂರ್ತಿಯವರು.

ವೇರಿದಾಗ ಎಲ್ಲರೂ ನಮ್ಮವನು ತಮ್ಮವನು ಎಂದು ಅಭಿಮಾನಿಸುವುದು ಸಹಜ. ಈ ಅರ್ಥದಲ್ಲಿ ನಾನು ಖಂಡಿತ ಮಾಸ್ಟರ್ ಹಿರಣ್ಣಯ್ಯನವರನ್ನು ನನ್ನ ಸ್ನೇಹಿತರು ಎಂದು ಹೇಳುತ್ತಿಲ್ಲ. ಅವರು ಬಳ್ಳಾರಿ ಲಲಿತಮ್ಮನವರ ಕಂಪನಿಯಲ್ಲಿ ನಟ ನರಸಿಂಹ ಮೂರ್ತಿಯಾಗಿದ್ದಾಗಿನಿಂದಲೂ ಬಲ್ಲೆ. ಅನಂತರದಲ್ಲಿ ಅವರು ನಮ್ಮೂರಿನ ಅಳಿಯ ಆದ ಮೇಲಂತೂ ಹತ್ತಿರದವನಾದೆ. ಅವರ ಧರ್ಮಪತ್ನಿ ಶ್ರೀಮತಿ ಶಾಂತಮ್ಮನವರು ನಮ್ಮೂರಿನ ಸಮೀಪದ ಹಳ್ಳಿಯ ಮಗಳು. ಆ ಮಣ್ಣಿನ ಬಾಂಧವ್ಯ ನನ್ನನ್ನೂ ಅವ ರನ್ನೂ ಬೆಸೆಯಿತು. ಅವರು ನನ್ನನ್ನು ಗುರುತಿಸಿದ್ದು ಇಂದಿಗೆ ಸುಮಾರು ನಲವತ್ತು ವರ್ಷಗಳ ಹಿಂದೆ, ದಾವಣಗೆರೆಯಲ್ಲಿ. ಆಗ ನಾನು ದಾವಣಗೆರೆಯ ಧ.ರಾ.ಮ. ಕಾಲೇಜಿನಲ್ಲಿ ಅಧ್ಯಾಪಕನಾಗಿದ್ದೆ. ೧೯೫೭ರ ಫೆಬ್ರವರಿಯಲ್ಲಿ ನರಸಿಂಹಮೂರ್ತಿಯವರ ಕಂ ಪನಿ ದಾವಣಗೆರೆಗೆ ಬಂದಿತ್ತು. 'ಹೆಣ್ ಹರಾಜ್' ಎಂಬ ಹೊಸ ನಾಟಕದ ಮೊದಲ ದಿನದ ಉದ್ಘಾಟನೆಗೆ ನನ್ನನ್ನು ಅತಿಥಿ ಯಾಗಿ ಕರೆದಿದ್ದರು. ನಾನು ಕಾಲೇಜ್ ಹಾಸ್ಟೆಲಿನಲ್ಲಿದ್ದೆ. ಅಲ್ಲಿಗೆ ಬಂದು ನನ್ನನ್ನು ಆಹ್ವಾನಿಸಿದರು ಶ್ರೀ ನರಸಿಂಹಮೂರ್ತಿ. ಅಂ ದಿನ ಪರಿಚಯ ನನ್ನ ಮತ್ತು ಅವರ ಸ್ನೇಹವಾಗಿ ಪರಿಣಮಿಸಿತು.

'ಹೆಣ್ ಹರಾಜ್' ದಾವಣಗೆರೆಯಲ್ಲಿ ಅನೇಕ ಪ್ರದರ್ಶನಗಳನ್ನು ಕಂಡಿತು. ತೊಟ್ಟಿಲ ಕೂಸಾಗಿದ್ದ 'ಹಿಣ್ಣಯ್ಯ ಮಿತ್ರ ಮಂ ಡಳಿ' ನಡೆದಾಡುವ ಕಿಶೋರಾವಸ್ಥೆಗೆ ಬಂದಿತು ದಾವಣಗೆರೆ ಕ್ಯಾಂಪಿನಲ್ಲಿ. ಅದಕ್ಕೆ ಕಾರಣ ಶ್ರೀ ನರಸಿಂಹಮೂರ್ತಿಯವರ ಅಸಾ ಧಾರಣ ಪ್ರತಿಭೆ ಮತ್ತು ಅಷ್ಟೇ ಪ್ರತಿಭಾ ಸಂಪನ್ನರಾದ ಮುಸುರೀ ಕೃಷ್ಣಮೂರ್ತಿ ಮತ್ತು ಶ್ರೀಮತಿ ಸುಶೀಲಮ್ಮ ಮುಸುರಿ ಮೊದ ಲಾದವರು. ಕನ್ನಡ ರಂಗಭೂಮಿಯಲ್ಲಿ ಹೊಸ ಕ್ಷಿತಿಜವನ್ನು ರೂಪಿಸಿದ 'ಮಾಸ್ಟರ್ ಹಿರಣ್ಣಯ್ಯ' ನವರ 'ಹಿರಣ್ಣಯ್ಯ ಮಿತ್ರ ಮಂ ಡಳಿ' ಎಂಬ ಸ್ವತಂತ್ರ ನಾಟಕ ಸಂಸ್ಥೆ. ಅನೇಕ ತಿಂಗಳುಗಳ ನಂತರ ದಾವಣಗೆರೆಯಿಂದ ಎಳ್ಳಮಾಸೆಯ ವೇಳೆಗೆ ಸರಿಯಾಗಿ ಶೃಂಗೇರಿಗೆ ಹೊರಡಲು ಸಿದ್ಧವಾಯಿತು. ಕ್ಯಾಂಪ್ ಖಾಲಿ ಮಾಡುವ ಮುನ್ನಾ ಮಾಸ್ಟರ್ ಹಿರಣ್ಣಯ್ಯನವರು ನನ್ನ ಕೊಠಡಿಗೆ ಬಂದು, 'ಮರುಳಯ್ಯನವರೆ, ನಾವು ಶೃಂಗೇರಿಗೆ ಹೊರಡುತ್ತಿದ್ದೇವೆ. ಅದರೆ ನನ್ನ ಭಾವಮೈದುನ ಹೊನ್ನಪ್ಪ ನಿಮ್ಮ ಕಾಲೇಜಿನಲ್ಲಿ ನಿಮ್ಮ ಶಿಷ್ಯ. ಅವನಿಗೆ ನಿಮ್ಮ ಕಾಲೇಜು ಹಾಸ್ಟೆಲಿನ ಪ್ರವೇಶಾವಕಾಶ ಕಲ್ಪಿಸಿಕೊಡಬೇಕು. ಕಂಪನಿಯ ಜೊತೆಯಲ್ಲೇ ವಿದ್ಯಾರ್ಥಿ ಯನ್ನು ಟಿ.ಸಿ. ಸಮೇತ ಕೊಂಡೊಯ್ಯವುದು ಸೂಕ್ತ ಅಲ್ಲ. ನಿಮ್ಮ ಶಿಷ್ಯ ನಿಮ್ಮ ವಾತ್ಸಲ್ಯದ ವೃಕ್ಷದಲ್ಲಿರಬೇಕು ಎಂಬುದು ನಮ್ಮ ಅಪೇಕ್ಷೆ' ಅಂದರು. ನನಗೆ ತುಂಬಾ ಸಂತೋಷ ಆಯಿತು. ಹೊನ್ನಪ್ಪ ನನ್ನ ಜೊತೆಯಲ್ಲಿ ಕಾಲೇಜು ಹಾಸ್ಟೆಲಿನಲ್ಲಿದ್ದ. ನಾನೇ ಬರೆದ 'ಮರೀಬೇಡಿ' ಎಂಬ ಹಾಸ್ಯಪ್ರಧಾನ ನಾಟಕದಲ್ಲಿ ನನ್ನ ಹೆಂಡತಿಯಾಗಿ ಪಾತ್ರ ಮಾಡಿದ್ದ. ತುಂಬಾ ಚೆನ್ನಾಗಿ ಅಭಿನಯಿ ಸಿದ್ದ. ನನಗೆ ಆಗ ತಿಳಿಯಿತು. ದಿವಂಗತ ಹಿರಣ್ಣಯನವರದು ಒಂದು ಶ್ರೇಷ್ಠ ಅಭಿಜಾತ ಕಲಾವಿದರ ಮನೆತನ ಎಂದು.

ಮತ್ತೆ ನಾನು ಮಾಸ್ಟರ್ ಹಿರಣ್ಣಯ್ಯನವರನ್ನು ಕಂಡದ್ದು ಅವರು ಪ್ರಬುದ್ಧತೆಯ ಶಿಖರವೇರಿ, ಶ್ರೇಷ್ಠ ನಟರೆಂಬ ಖ್ಯಾತಿ ಗಳಿಸಿ ತುರುವೇಕೆರೆ ಕ್ಯಾಂಪಿಗೆ ಬಂದಾಗ. ಕಾರ್ಯಾರ್ಥವಾಗಿ ಅವರು ಚಿಕ್ಕನಾಯಕನಹಳ್ಳಿಗೆ ಬಂದಿದ್ದರು. ನಾನೂ ರಜೆಗೆ ಊರಿಗೆ ಹೋಗಿದ್ದೆ. ಮಾಸ್ಟರ್ ಹಿರಣ್ಣಯ್ಯನವರ ಷಡ್ಡಕರಾದ ಡಾ.ವೆಂಕಟೇಶಮೂರ್ತಿ (ಸಿದ್ಧಿವಿನಾಯಕ ಕ್ಲಿನಿಕ್ ಮಾಲಿಕರು) ಯವರ ಮನೆಯಲ್ಲೆಂದು ತೋರುತ್ತೆ ಬಹಳ ವರ್ಷಗಳ ಮೇಲೆ ಭೇಟಿಯಾದೆವು. ಅನಂತರದ ಭೇಟಿ 'ಲಂಚಾವತಾರ' ಬೆಂಗ ಳೂರು ಕ್ಯಾಂಪ್‌ನಲ್ಲಿ ನೂರಾರು ಐಶಸ್ವೀ ಪ್ರಯೋಗಗಳನ್ನು ಕಂಡಾಗ ನನಗೂ ಬೆಂಗಳೂರು ಸರ್ಕಾರಿ ಕಾಲೇಜಿಗೆ ವರ್ಗವಾಗಿತ್ತು. ಚಾಪರಾಜಪೇಟೆಯಲ್ಲಿ ಮನೆ. ಅದನ್ನು ಹುಡುಕಿಕೊಂಡು ಒಂದು ದಿನ ಹೊನ್ನಪ್ಪ ಬಂದ. ಮಾಸ್ಟರ್ ಹಿರಣ್ಣಯ್ಯನವರ 'ರಂಗ ಭೂಮಿ' ನೂತನ ಗೃಹಪ್ರವೇಶದ ಆಹ್ವಾನ ತಂದಿದ್ದ. ಆತನದು ಆಗ್ರಹಪೂರ್ವಕ ಆಹ್ವಾನ. ಆದರೆ ನಾನು ಹೋಗಲಾಗಲಿಲ್ಲ. ಕೆಲವೇ ದಿನಗಳಲ್ಲಿ ನಾನೂ ಮನೆಕಟ್ಟಿ ಮಾಸ್ಟರ್ ಹಿರಣ್ಣಯ್ಯ ಕುಟುಂಬ ವರ್ಗದವರನ್ನು ಆಹ್ವಾನಿಸಿದೆ. ಬೇರೆಡೆಯಲ್ಲಿ ನಾಟಕ ಪ್ರದರ್ಶನವಿದ್ದುದರಿಂದ ಅವರಾರೂ ಬರಲಾಗಲಿಲ್ಲ. ನಾನು ಅವರ ಮನೆ ಪ್ರವೇಶಕ್ಕೆ ಹೋಗದ ಸೇಡು ತೀರಿಸಿಕೊಂಡರು. ಮತ್ತೆ ಎಲ್ಲಾದರೂ ಭೇಟಿ ಮಾಡಬೇಕೆನ್ನುವ ತವಕ ಇಬ್ಬರಲ್ಲೂ ಇತ್ತು. ಅದು ಈಡೇರಿದ್ದು ಚಿಕ್ಕನಾಯಕನಹಳ್ಳಿ ಹುಳಿಯಾರಿನಲ್ಲಿ. ಶ್ರೀಯುತರ ಹತ್ತಿರದ ಸಂಬಂಧಿಗಳು ಶ್ರೀ ಅನಂತರಾಮಯ್ಯನವರು. ಅವರ ಹುಟ್ಟೂರು ಹುಳಿಯೂರಾದರೂ ಮೆಟ್ಟಿದ ಊರು ಹಂದನಕೆರೆ. ಎರಡೂ ಸಮೀಪದ ಊರುಗಳು. ಅನಂತರಾಮಯ್ಯನವರು ಹುಳಿಯಾರಿನಲ್ಲಿ ಶ್ರೀನಿವಾಸಸೆಟ್ಟರು, ಚಿಕ್ಕಬಿದರೆ ಡಾಕ್ಟರು, ಕೆಂಕೆರೆ ಯಜಮಾನ್ ಮರುಳಪ್ಪನವರು, ಪುಟ್ಟಪ್ಪನವರು, ಸೋಮಯ್ಯನವರು, ನಿರಂಜನ ಮೂರ್ತಿಯವರು ಮೊದ ಲಾದವರ ನೆರವಿನಿಂದ ಸ್ಥಳೀಯವಾಗಿ ಅನೇಕ ಸಾಹಿತ್ಯಕ ಮತ್ತು ಸಾಂಸ್ಕೃತಿಕ ತಪ್ಪದೆ ನಡೆಸಿಕೊಂಡು ಬಂದವರು. ಅಲ್ಲಿ ಏನಾ ದರೂ ಕನ್ನಡ ಸಂಸಂಸ್ಕ್ರತಿ ಉಳಿದು ಉಸಿರಾಡುತ್ತಿದ್ದರೆ ಶ್ರೀ ಅನಂತರಾಮಯ್ಯನವರ ಅವಿಶ್ರಾಂತ ಶ್ರಮ ಫಲ ಎಂದರೆ ಅತಿಶ ಯೋಕ್ತಿ ಅಲ್ಲ. ಅವರು ಬಹು ದೊಡ್ಡ ಕಾರ್ಯಕ್ರಮವನ್ನು ಹುಳಿಯಾರಿನಲ್ಲಿ ಹಮ್ಮಿಕೊಂಡು ನನ್ನನ್ನೂ ಮಾಸ್ಟರ್ ಹಿರಣ್ಣಯ್ಯ ನವರನ್ನೂ ಆಹ್ವಾನಿಸಿದ್ದರು. ಗೊತ್ತಾದ ದಿನ ರಥಾರೂಢರಾಗಿ ಪುಣ್ಯದಂಪತಿಗಳು ನಮ್ಮ ಮನೆ ಬಳಿ ಬಂದರು. ಸಾರಥ್ಯ ಮಾಸ್ಟರ್ ಹಿರಣ್ಣಯ್ಯನವರದೇ. ಇಬ್ಬರು ಸೋದರಿಯರು ಹಿಂದಿನ ಸೀಟಿನಲ್ಲಿ ನಾವಿಬ್ಬರೂ ಅನಿಮಿತ್ತ ಬಂಧುಗಳು ಮುಂದಿನ ಸೀಟಿನಲ್ಲಿ.

ರಥ ಚಲಿಸಿತು.

ಬೆಂಗಳೂರು ನಗರದ ಸೀಮಾರೇಖೆಯನ್ನು ದಾಟುವವರೆಗೂ ಹಿಂದಿನ ಸೀಟು 'ಅಡುಗೆ ತೊಡುಗೆ' ವಿಷಯದ ಕುರಿತು ಮಾತನಾಡುತ್ತಿತ್ತು. ಮುಂದಿನ ಸೀಟು ಮೌನ ! ನಗರದ ಗಡಿ ದಾಟಿದ ಮೇಲೆ ಸಾರಥ್ಯವೇ ಮೌನ ಮುರಿದು ಮಾತನಾಡಿತು. 'ಮರುಳಯ್ಯನವರೆ, ಇಷ್ಟೂ ಹೊತ್ತು ನಾನು ಮಾತನಾಡದೇ ಇದ್ದುದು ಹಿಂದಿನ ಸೀಟಿನ ಲೋಕಾಭಿರಾಮ ಗ್ರಹಣಕ್ಕಾಗಿ ಅಲ್ಲ ಬೇರೊಂದು ಗುಟ್ಟಿದೆ, ಅದು ನಿಮಗೆ ಗೊತ್ತಾ ?' 'ಓಹೊ ಚೆನ್ನಾಗಿ ಗೊತ್ತು. ಇಷ್ಟು ಹೊತ್ತಿನವರೆಗೂ ಬೆಂಗಳೂರು ರಸ್ತೆ ನಿಮ್ಮನ್ನು ನಿಮ್ಮ ವಾಹನವನ್ನು ಮಾತಾಡಿಸ್ತಾ ಇತ್ತು. ಅದರ ಜೊತೆ ನೀವು ಸಂಭಾಷಣೆಯಲ್ಲಿ ತೊಡಗಿದ್ದಿರಿ ! ಈಗ ರಸ್ತೆ ಬಿಡ್ತು ನನ್ನ ಕಡೆ ತಿರುಗಿದ್ರಿ ! ಹೌದು ತನೆ ?'

'ಹ್ಹೆ ಹ್ಹೆ ಹ್ಹೆ ಹ್ಹೆ !' ನಕ್ಕಾಗ ಕಾರೆಲ್ಲಾ ನಕ್ಕಿತು. 'ಎಷ್ಟು ಚೆನ್ನಾಗಿ ಊಹಿಸಿದ್ರಿ ! ಅಮ್ಮಾ ವೀಣಮ್ಮಾ ನಿಮ್ಮ ಯಜಮಾನ್ರು ಹೆಸರಿನಲ್ಲಿ ಮಾತ್ರ 'ಮರುಳರು' ಮಿಕ್ಕ ವಿಷಯಗಳಲ್ಲಲ್ಲ !'

'ಜಾಣತನದಲ್ಲಿ ನೀವೇನು ಕಡಿಮೆ ? ಲೋಕವೆಲ್ಲಾ ನಿಮ್ಮ ಜಾಣತನವನ್ನು ಹೊಗಳ್ತಾ ಇಲ್ವೇ' ಹೆಣ್ಣು ದನಿ ಗುನುಗಿತು.

'ಹೌದು ಹೌದು ಅದಕ್ಕೆಲ್ಲಾ ನೀವೇ ಕಾರಣರು. ಅಂದರೆ ನಿಮ್ಮ ನಿಮ್ಮ ಗಂಡದಿರನ್ನು ನೀವು ನಿಮ್ಮ ಮಕ್ಕಳಂತೆ ನೋಡಿ ಕೊಂಡಿದ್ದೀರಿ. ನೋಡಿ, ಬೇಂದ್ರೆಯವರು ತಮ್ಮ ತಾಯಂದಿರು ಐದು ಜನ ಅಂತಾರೆ. ಹಾಗೆ ನನಗೂ ಐದು ಜನ ತಾಯಂದಿರಿ ದ್ದಾರೆ. ಆದರೆ ಅವರಿಗಿಂತ ಸ್ವಲ್ಪ ಭಿನ್ನ ವ್ಯಕ್ತಿಗಳು ನನ್ನವರು. ಭಾರತಾಂಬೆ ಮೊದಲ ತಾಯಿ, ಕರ್ನಾಟಕ ಮಾತೆ ಎರಡನೆಯ ವಳು, ನನ್ನನ್ನು ಹೆತ್ತ ತಾಯಿ ಮೂರನೆಯವರು, ನಾಲ್ಕನೆಯವಳೇ ನನ್ನಾಕೆ, ನನ್ನ ಶಾಂತಾ, ಐದನೆಯವರು ನನ್ನ ಹೆತ್ತ ತಾಯಿ ಗಿಂತಲೂ ಮಿಗಿಲಾಗಿ ಕಂಡು ಸಂತೈಸಿ ಬೆಳೆಸಿದ ಕಾದಂಬರಿ ಸಾರ್ವಭೌಮ ಅ.ನ.ಕೃಷ್ಣರಾಯರು ! ಇವರಲ್ಲಿ ಮೊದಲ ಮೂವರ ಬಗೆಗೆ ಯಾರದ್ದೂ ತಕರಾರಿಲ್ಲ. ಏಕೆಂದರೆ ಹೆತ್ತ ತಾಯಿ ಹೊತ್ತ ನೆಲ ಪವಿತ್ರ ಅಲ್ಲವೆ ? ಆದರೆ ನಾಲ್ಕನೆಯ ತಾಯಿ, ನನ್ನ ಶಾಂತಿ – ಇವಳ ಬಗ್ಗೆ ಸ್ವಲ್ಪ ವಿವರ ಬೇಕಾಗುತ್ತೆ. ಕೇಳಿ ನನ್ನಾಕೆ ಹೆಸರಿಗೆ ತಕ್ಕ ಹಾಗೆ ನಿಜವಾಗಿಯೂ ಶಾಂತಿ ! ನಾನು ಅವಳ ಗಂಡನಾದರೂ ಒಂದು ಥರಾ ! ಈ ಕಾರು ಇದ್ದ ಹಗೆ ಅಂತ ಇಟ್ಕೊಳ್ಳಿ. ಇವಳು ಈ ಕಾರಿನ ಸ್ಟಿಯರಿಂಗ್ ವೀಲ್ ! ಗಾಂಧೀಜಿ

ಹೇಳ್ತಾ ಇದ್ರು Man without A character is like a motor car without a stearing wheel' ಅಂತ. ಅದನ್ನೇ ಸ್ವಲ್ಪ ತಿದ್ದುಪಡಿ ಮಾಡಿ, 'Without a good wife' ಅಂದ್ರೇ ನನ್ನ ಜೀವನಕೆ ಆ ಹೇಳಿಕೆ ಸರಿಹೋಗುತ್ತೆ. ನನ್ನ ಬಾಳಿನ ರಥದ ಸ್ಟಿಯರಿಂಗ್ ವೀಳ್ ಇವಳೇ ! ಇವಳಿಲ್ಲದೆ ಹೋಗಿದ್ದಿದ್ದರೆ ನನ್ನ ಗಾಡಿ ಎಂದೋ ಮರಕ್ಕೆ ಡಿಕ್ಕಿ ಹೊಡೆದೊ, ಕೊರಕಲಿಗೆ ಬಿದ್ದೊ ಹಾಳಾಗಿ ಹೋಗ್ತಿತ್ತು. ಅಂತೂ ಇವಳು ಹಾದಿ ತಪ್ಪಿದ ಹುಡುಗನನ್ನು ಸರಿಯಾಗಿ ಹಾದಿಗೆ ಹಚ್ಚಿದಳ. ಇಂಥಾ ಮೇಧಾವಿ ಮಗ ಳನ್ನು ನನ್ನ ಕೈಗೆ ಕೊಟ್ಟ ನಮ್ಮ ಮಾವನವರನ್ನು ತುಂಬು ಕೃತಜ್ಞತೆಯಿಂದ ಸ್ಮರಿಸಿಕೊಳ್ಳುತ್ತೇನೆ. ಅವರು ನಿಮಗೂ ಗೊತ್ತಲ್ವಾ ಮರುಳಯ್ಯನವರೇ ?'

'ಚೆನ್ನಾಗಿ ಗೊತ್ತು. ನಮ್ಮೂರು ಸಾಸಲ ಸಮೀಪವೆ. ಅವರೂರು ದೊಡ್ಡಬಿದಿರೆ. ಅವರ ತೆಂಗಿನ ತೋಟದ ಪಕ್ಕದಲ್ಲೇ ನಮ್ಮ ಬಂಧು ಡಾ. ಉಮಾಪತಯ್ಯನವರ ತೋಟ. ನೆಂಟಸ್ತಿಕೆ ಇದ್ದುದರಿಂದ ಅಲ್ಲಿಗೆ ಹೋಗ್ತಿದ್ದೆ. ನಿಮ್ಮ ಮಾವನವರನ್ನೂ ಆಗಾಗ ಭೇಟಿ ಆಗೋ ಅವಕಾಶ ಸಿಕ್ತಾ ಇತ್ತು.'

'ಹ್ಞಾ! ನೋಡಿ, ನಮ್ಮ ಮಾವನವರು ದೇವರು ಸ್ವಾಮಿ ! ತಿಳಿದೂ ತಿಳಿದೂ ನಾಟಕದವನಿಗೆ ಮಗಳನ್ನು ಕೊಡ್ತಾರಾ ಯಾರಾದರೂ ? ಯೋಚನೆ ಮಾಡಿ ! ಅಪ್ಪಾ ಇಲ್ಲ, ಸಮ್ಮಾ ಇಲ್ಲ. ಈ 'ನಾಟಕದ ಪಟಾಲಂ'ನವನಿಗೆ ಹೆಣ್ಣು ಕೊಟ್ಟು ಮದುವೆ ಮಾಡಿದರು. ಅದು ಅವರ ದೊಡ್ಡತನ. ನೆನೆಸಿಕೊಂಡರೆ ನನ್ನ ಮನಸ್ಸು ಮೌನ ತಳೆಯುತತೆ. ನಿಮ್ಮ ಕೇಸಿನ ಹಾಗಲ್ಲ ನೋಡಿ ನಮ್ಮದು. ನೀವು ಕಾಲೇಜಿನಲ್ಲಿ ಪ್ರಾಧ್ಯಪರು. ಬುದ್ಧಿಜೀವಿಗಳು, ಇನ್ನೂ ಏನೇನೋ !'

'ಏನೇನೂ ಇಲ್ಲ ನನಗೂ ಆಗ ಹೆಣ್ಣು ಕೊಡೋರು ಹಿಂದೆ ಮುಂದೆ ನೋಡ್ತಿದ್ರು. ಯಾಕೆ ಅಂತೀರಾ, ಕನ್ನಡ ಮೇಷ್ಟ್ರಿಗೆ ಹೆಂಡ್ತಿ ಸಾಕೋ ಯೋಗ್ಯತೆ ಇಲ್ಲಾ ಅಂತ. ನಮ್ಮಮ್ಮ 'ನಮ್ಮ ಹುಡುಗನಿಗೆ ಹೆಣ್ಣು ಕೊಡ್ತೀರಾ' ಎಂತ ಕೇಳೋಕೆ ಹೋದರೆ, 'ಇಲ್ಲಮ್ಮ ನಮ್ಮ ಹುಡುಗೀಗೆ ಈಗಲೇ ಮದುವೆ ಮಾಡೋಲ್ಲ' ಅಂತಿದ್ರು. ಆದರೆ ನಮ್ಮ ಮಾವನವರು ನಿಮ್ಮ ಮಾವನವರಂ ತೆಯೇ ಬಡಮೇಷ್ಟ್ರಿಗೆ ಈ ಭಾಗ್ಯವಂತೆ ಕೊಟ್ಟು ಮದುವೆ ಮಾಡಿದರು.

'ಹಾಗಿದ್ದರೆ, ನಾವಿಬ್ಬರೂ ಒಂದೇ ದೋಣಿಯಲ್ಲಿ ಪಯಣಿಸ್ತಾ ಇದೀವಿ ಅಂದ ಹಾಗಾಯ್ತು. ಅಮ್ಮಾ, ವೀಣಮ್ಮ, ನಾನು ನನ್ನ ಹೆಂಡತಿಯನ್ನ ಯಾಕೆ 'ತಾಯಿ' ಅಂತಾ ಅಂದೇ ಅನ್ನೋದು ನಿಮಗೆ ಅರ್ಥವಾಗುತ್ತೆ. ಎಲ್ಲಾ ಹೆಂಗಸರಿಗೂ ಅರ್ಥವಾ ಗೋಲ್ಲ. ಯಾಕೆ ಅಂದರೆ, ನೀವು ನಿಮ್ಮ ಯಜಮಾನ್ರನ್ನ ನನ್ನ ಶಾಂತನ ಹಾಗೇ ಜೋಪಾನ ಮಾಡ್ಕೊಂಡು ಬಂದಿದ್ದೀರಿ. ಇಲ್ಲೇ ಹೋಗಿದ್ರೆ, ಮರುಳಯ್ಯನವರು ಎಂದೋ 'ಮರುಳ' ಆಗಿಬಿಡುತ್ತಿದ್ದರು. ನೋಡಿ, ಇವಳು ಹಸಿದಾಗ ಅನ್ನ ಹಾಕಿದ್ದಾಳೆ, ಮುನಿಸಿ ಕೊಂಡಾಗ ಮುದ್ದು ಮಾಡಿದ್ದಾಳೆ ಅಂತಷ್ಟೇ ಅಲ್ಲ. ಇವಳು ಸಾಕ್ಷಾತ್ ಸಾವಿತ್ರಿನಮ್ಮಾ ! ಎದುರಿನಲ್ಲೇ ಹೆಂಡ್ತಿ ಹೊಗಳ್ತಿದ್ದಾನೆ ಅಂತಾ ಭಾವಿಸಬೇಡಿ ; ಇವಳು ನನ್ನ ಭಾಗ್ಯದ ದೇವತೆ. ನನ್ನ ಭಾಗದ ಸಾವಿತ್ರಿ ಹೇಗಾದಳು ಅಂದ್ರೆ ಒಂದು ವಿಷಗಳಿಗೆಯಲ್ಲಿ ನಾನು ಆತ್ಮಹತ್ಯೆಗೆ ಪ್ರಯತ್ನಪಟ್ಟು ಆಗಲೇ ಅರ್ಧ ದಾರಿ ದಾಟಿದ್ದೆ. ಸಾವಿತ್ರಿ ಯಮನ ಸಂಗಡ ಹೋರಾಡಿ ಸತ್ಯವಾನನ್ನು ವಾಪಸ್ ಕರೆದುಕೊಂಡು ಬಂದ ಹಾಗೆ ಶಾಂತಾ ನನ್ನನ್ನು ಕರೆದುಕೊಂಡು ಬಂದಳು. ಆ ಸಂದರ್ಭದ ಸ್ವರಸ್ಯನ ಅವಳ ಬಾಯಲ್ಲೇ ಕೇಳಬೇಕು.

'ನೋಡಿ ವೀಣಾ, ಗ್ರಹಗತಿ ಚೆನ್ನಾಗಿಲ್ಲದ್ದಾಗ ಎಂಥವರ ಬುದ್ಧಿಗೂ ಗ್ರಹಣ ಹಿಡಿಯುತ್ತೆ. ನಮ್ಮವರ ಸ್ಥಿತೀನೂ ಹಾಗೇ ಆಯ್ತು. ಸಿಕ್ಕಾಪಟ್ಟೆ ನಿದ್ರೆ ಮಾತ್ರೆಗಳನ್ನು ನುಂಗಿ ಮಲಗಿಬಿಟ್ಟಿದ್ದರು. ನೋಡಿದ್ರೆ ಪ್ರಜ್ಞೆ ಇಲ್ಲ ! ಹೋ ! ಪರಿಸ್ಥಿತಿ ಕೈ ಮೀರ್ತಾ ಇದೆ ಅಂದುಕೊಂಡೆ. ಕೂಡಲೆ ಒಂದು ರಿಕ್ಷಾ ತಂದೆ. ಪಕ್ಕದವರ ಸಹಾಯದಿಂದ ಎಡಗೈಯಲ್ಲಿ ಎಳೇ ಮಗು, ಬಲಗೈಯಲ್ಲಿಇವರನ್ನು ಗಟ್ಟಿಯಾಗಿ ತಬ್ಬಿ ಹಿಡಿದುಕೊಂಡು, ಗೊತ್ತಿದ್ದ ಡಾಕ್ಟ್ರ ಹತ್ರ ಕರೆದುಕೊಂಡು ಹೋದೆ. ಅವರು ಕೂಡಲೆ ಟ್ರೀಟ್ ಮೆಂಟ್ ಶುರು ಮಾಡಿದರು. ಅರ್ಧ ಗಂಟೆ ತಡವಾಗಿದ್ದರೂ ಇವರು ನಮ್ಮ ಕೈಗೆ ಸಿಕ್ತಿರಲಿಲ್ಲ ! ದೇವರು ದೊಡ್ಡವನು. ಪ್ರಜ್ಞೆ ಬಂದದ್ದು ಮಾರ ನೆಯ ದಿನ. ಅಲ್ಲೀ ತನಕ ನಾನು ಒಂದು ಹನಿ ನೀರು ಕುಡಿದಿರಲಿಲ್ಲ. ಮಗುವಿಗೂ ಒಂದು ಲೋಟ ಹಾಲಿಲ್ಲ. ಸಾವು ಬದುಕಿನ ನಡುವೆ ಹೋರಾಟ ನೋಡ್ತಾ ಕಲ್ಲು ಬೊಂಬೆಯಂತೆ ಕುಳಿತುಬಿಟ್ಟಿದ್ದೆ. ಆ ಸಂದರ್ಭ ನೆನೆದರೆ ಮೈ ನಡುಗುತ್ತೆ !'

'ಅದೊಂದು ಕೆಟ್ಟ ಕನಸಮ್ಮಾ, ಅಂತೂ ಈ ಅಭಿನವ ಸಾವಿತ್ರಿ ತನ್ನ ಗಂಡನನ್ನು ಬದುಕಿಸಿಕೊಂಡು ಬಿಟ್ಟಳು !'

ಮಾತು ಮುಗಿದಿರಲಿಲ್ಲ. ತಿಪಟೂರು ಬಂದೇ ಬಿಟ್ಟಿತು. ಅಲ್ಲಿ ಪ್ರವಾಸೀ ಮಂದಿರದಲ್ಲಿ ಟೀ ತೆಗೆದುಕೊಂಡು, ಕಲ್ಪತರು ಕಾಲೇಜಿನ ಒಂದು ಬೃಹತ್ ಪ್ರಮಾಣದ ಕಾರ್ಯಕ್ರಮದಲ್ಲಿ ಭಾಗಿಯಾದೆವು. ಅಲ್ಲಿ ಮಾಸ್ಟರ್ ಹಿರಣ್ಣಯ್ಯನವರ ವಾಗ್ಝರಿ, ವೈಖರಿ ಕಾಲೇಜು ಅಧ್ಯಾಪಕ ವೃಂದ ಮತ್ತು ವಿದ್ಯಾರ್ಥಿ ವಿದ್ಯಾರ್ಥಿನಿಯರನ್ನು ಮಂತ್ರ ಮುಗ್ಧರನ್ನಾಗಸಿತು. ಇಂತಹ ಮಹಾನ್ ಕಲಾವಿದ

ನನ್ನು ಕಣ್ಣಾರೆ ಕಂಡು, ಅವರ ಮಾತುಗಳನ್ನು ಕಿವಿಯಾರೆ ಕೇಳಿದ ಭಾಗ್ಯವಂತರು ನಾವು ಎಂದು ಮುಕ್ತ ಕಂಠದಿಂದ ಕೊಂಡಾಡಿದರು. ಈ ಮಾತಿನಲ್ಲಿ ಎಳ್ಳಷ್ಟೂ ಉತ್ಪ್ರೇಕ್ಷೆ ಇಲ್ಲ ಎಂಬ ಸತ್ಯವನ್ನು ಎಲ್ಲರೂ ಮನಗಾಣಬೇಕು.

ಕಾಲೇಜು ಕಾರ್ಯಕ್ರಮ ಮುಗಿಸಿಕೊಂಡು, ತಿಪಟೂರು ರೈಲ್ವೇ ಸ್ಟೇಷನ್ ಬಳಿ ಇದ್ದ ಒಬ್ಬರು ಆತ್ಮೀಯರ ಮನೆಯಲ್ಲಿ ಮಧ್ಯಾಹ್ನದ ಭೋಜನ ಮುಗಿಸಿ, ಹುಳಿಯಾರಿಗೆ ಪ್ರಯಣ ಬೆಳೆಸಿದೆವು. ಆ ವೇಳೆಯ ಮಾತುಗಳು ಬೆಂಗಳೂರು–ತಿಪಟೂರು ಪ್ರಯಣವಾಗಿರಲಿಲ್ಲ. ಅವರ ಆತ್ಮಕಥೆಯ ಬೇರೊಂದು ಅಧ್ಯಾಯ ತೆರೆದುಕೊಂಡಿತ್ತು.

ಹುಲಿಯಾರಿನಲ್ಲಿ ಅನಂತರಾಮಯ್ಯನವರು ಕಾಯ್ತಾ ಇದ್ದರು. ನಾವು ನಾಲ್ವರೂ ಅವರ ಬಂಧು ರಾಜಪ್ಪನವರ ಮನೆಗೆ ಹೋದೆವು. ಮಾಸ್ಟರ್ ಹಿರಣ್ಣಯ್ಯನವರು ಅಲ್ಲಿ ಮನೆಯವರಾದರು, ನಾವೆಲ್ಲ ಅತಿಥಿಗಳಾದೆವು. ಬಿಸಿಲು ತೀಕ್ಷ್ಣವಾದುದರಿಂದ ಅವರು ಒಂದು ಮೋಟು ಚಡ್ಡಿ, ಬನೀನಲ್ಲಿ ಗಾರೆ ನೆಲದ ಮೇಲೆ ಹಾಯಾಗಿ ಮಲಗಿ ಉರುಳಾಡಿದರು. ತಂಪು ಪಾನೀಯ ಆಯಿತು. ಸಂಜೇನೂ ಆಯ್ತು. ಎಲ್ಲರೂ ಮುಖ ತೊಳೆದು ಟೀ ಮುಗಿಸಿದೆವು. ಆಗೆಲ್ಲಾ ಮಾಸ್ಟರ್ ಹಿರಣ್ಣಯ್ಯನವರದೇ ಓಡಾಟ ಸೇವೆ. ಸಂಜೆ ಕಾರ್ಯಕ್ರಮ ವಿಶಾಲ ಬಯಲಿನಲ್ಲಿ ಅದ್ಧೂರಿಯ ಸನ್ಮಾನ ಮಾಸ್ಟರ್ ಹಿರಣ್ಣಯ್ಯನವರಿಗೆ. ಅದು ಮುಗಿದಾಗ ರಾತ್ರಿ ಹತ್ತು ಗಂಟೆ. ಅನಂತರ ಊಟದ ವ್ಯವಸ್ಥೆ ಆಗಿತ್ತು. ಎಲ್ಲಾ ಮುಗಿಸಿ ಬೆಂಗಳೂರು ದಾರಿ ಹಿಡಿದೆವು. ಸೋದರಿ ಶಾಂತಮ್ಮನವರ ತವರಿನ ತೋಟದ ಬಳಿ ಬಂದೆವು. ಎಳೆನೀರು ಸಿದ್ಧವಿದ್ದವು. ಅವುಗಳನ್ನು ಡಿಕ್ಕಿಯಲ್ಲಿ ಹಾಕಿಕೊಂಡು ಎಲ್ಲರಿಂದಲೂ ಆತ್ಮೀಯವಾಗಿ ಬಿಳ್ಕೊಂಡು ಚಿಕ್ಕನಾಯಕನ ಹಳ್ಳಿ ಮಾರ್ಗ ಬೆಂಗಳೂರು ಹೆದ್ದಾರಿ ಹಿಡಿದೆವು. ಆ ವೇಳೆಗೆ ಸರಿರಾತ್ರಿ ಮೀರಿತ್ತು. ಆದರೆ ಹಾಲ್ದಿಂಗಳು ಆಪ್ಯಾಯಮಾನಕಾರಿಯಾಗಿ ಹರಡಿತ್ತು. ಬೆಳಗಿನ ಜಾವ ನಾಲ್ಕು ಗಂಟೆಗೆ ಬೆಂಗಳೂರು ಮುಟ್ಟಿದೆವು.

ಹುಳಿಯಾರು–ಬೆಂಗಳೂರು ಪ್ರಯಾಣದ ಉದ್ದಕ್ಕೂ ಮಾಸ್ಟರ್ ಹಿರಣ್ಣಯ್ಯನವರ ನೆನಪಿನ ಸುಳಿ ಬಿಚ್ಚಿಕೊಂಡಿತು. ಯಾವಾಗಲೂ ನೆನಪುಗಳು ಸಾಯುವುದಿಲ್ಲ. ಅದರಂತೆ ಮಾಸ್ಟರ್ ಹಿರಿಯಣ್ಣಯ್ಯನವರ ಜೀವನ ಸ್ಮೃತಿಗಳು ಅಚ್ಚಳಿಯದೆ ಬಿಚ್ಚಿಕೊಂಡವು. ಅವರೂ ಸಹಯಾವುದನ್ನೂ ಮುಚ್ಚಿ ಬಚ್ಚಿಡದೆ ತೆರೆದ ಪುಸ್ತಕದಂತೆ ವಿವರನೆ ಕೊಟ್ಟರು.

'ನೋಡೀಮ್ಮ ನನ್ನ ಐದನೆಯ ತಯಿ ಅನಕರ ಅಂತಾ ಬೆಳಗ್ಗೆ ಹೇಳಿದೆ. ಅವರೇಕೆ ನನಗೆ ತಾಯಿ ಸಮಾನ ಅಂದರೆ ಅವರಲ್ಲಿ ತಾಯಿತನ ಅಡಗಿತ್ತು. ನಮ್ಮಮ್ಮನೇ ಆವಿರ್ಭವಿಸದ್ದಳೆಂದು ತೋರುತ್ತೆ. ಆತ ಮಹಾಮಾನವನಮ್ಮ. ಅಂತಹ ದೊಡ್ಡ ಚೇತನಗಳು ತುಂಬಾ ಅಪರೂಪ. ನೋಡಿ, ಅಪ್ಪ ತಿರಿಕೊಂಡ ಮೇಲೆ ನಾನು ಅನಾಥನಾದೆ. ಕಾಲೇಜಿಗೆ ಶರನುಹೊಡೆದು, ತಿನ್ನಲಿಕ್ಕೆ ಅನ್ನ ಇಲ್ಲ, ತೊಡಲಿಕ್ಕೆ ಬಟ್ಟೆ ಇಲ್ಲ. ಒಂದು ದಿನ ಒಂದು ಬಾಳೆ ಹಣ್ಣು ಕೊಂಡೆ ಗತ್ತಯ ಪೈಸೆ ಕೊಟ್ಟು. ತಿರುಳು ಮೊದಲ ದಿನದ ಆಹಾರ ಆಯ್ತು. ಸಿಪ್ಪೆ ಎರಡನೆ ದಿನದ್ದು ! ಹೊಟ್ಟೆ ಅನ್ನ ಕಂಡು ಮುರು ದಿನ ಆಗಿತ್ತು. ಬೆಂಗಳೂರಿನ ಡಬಲ್ ರೋಡಿನ ಮೋರಿ ಹತ್ತಿರ ಒಮದು ಮರದ ಕೆಳಗೆ ದಿಕ್ಕು ತೊಚದೆ ನಿಂತಿದ್ದೆ. ದೇವರು ನೇರವಾಗಿ ತನೆ ಬರೊಲ್ಲ ಪಾಪಿಗಲ ಉದ್ಧಾರಕ್ಕೆ. ಅವನು ಮನುಚ್ಯನ ರೂಪದಲ್ಲಿ ಬರ್ತನೆ. ಅನಕೃ ಆ ಮಾರ್ಗವಾಗಿ ಬರುತ್ತಿದ್ದರು. ನೋಡಿದ ಕೂಡಲೆ ನನಗೆ ನಾಚಿಕೆ ಭಯ ಎರಡು ಏಕಕಾಲದಲ್ಲಿ ಆದವು. ನಾನು ಮರದ ಮರೆಯಲ್ಲಿ ನಿಂತೆ. ಆದರೆ ಅವರದು ಗರುಡನ ಕಣ್ಣು ! ಬಹುದೂರದಿಂದಲೇ ನನ್ನನ್ನು ಗುರುತಿಸಿ, 'ಏಯ್ ಹುಡುಗ, ಈ ಕಡೆ ಬಾ. ನೀನು ನಮ್ಮ ಹಿರಣ್ಣಯ್ಯನವರ ಮಗ ನರಸಿಂಹ ಮೂರ್ತಿ ಅಲ್ವೇನೋ' ಅಂದರು. ಕೈ ಹಿಡಿದು ಮರದ ಮರೆಯಿಂದ ನನ್ನನ್ನು ಹೊರಕ್ಕೆಳೆದರು. ನಾನೇನೂ ಮತನಾಡಲಿಲ್ಲ. ಮಾತನಾಡುವ ಸ್ತಿತಿಯಲ್ಲೂ ಇರಲಿಲ್ಲ. ಕೊಳಕು ಬಟ್ಟೆ, ಸ್ನಾನಕಾಣದ ಮೈ ನೋಡಿ, 'ಯಾಕೋ ಹೀಗೆ ? ಏನ್ ಸಮಾಚಾರ ? ಹೇಳು' ಅಂತಾ ನಾಲ್ಕು ಪ್ರಶ್ನೆಗಳನ್ನು ಹಾಕಿದರು. ನಾನೊಂದಕ್ಕೂ ಉತ್ತರ ಕೊಡಲಿಲ್ಲ. ನನ್ನ ಕಣ್ಣೀರೆ ಕಥೆ ಹೇಳಿತು !

ಅನಕೃ ನನ್ನ ಮಖದಲ್ಲೇ ನನ್ನ ಮನಸ್ಸನ್ನು ಓದಿದರು. 'ಬಾ' ಅಂತ ಕೈಹಿಡಿದು ತಮ್ಮ ಮನೆಗೆ ಕರೆದು ಕೊಂಡು ಹೋದರು. 'ನೋಡು ಅಲಿ ಸೋಪಿದೆ, ಇಲ್ಲಿ ಟವೆಲ್ ಇದೆ, ಚೆನ್ನಾಗಿ ಸ್ನಾನ ಮಾಡು. ಹಾಗೆ ನಿನ್ನ ಕೊಳೆ ಬಟ್ಟೆಗಳನ್ನು ತೊಳೆದು ಹಾಕು. ಈ ಲುಂಗಿ ಸುತ್ತಿಕೊ ಬಾ ಬೇಗ' ಅಂದರು. ಯಂತ್ರದಂತೆ ಕೆಲಸ ಮುಗಿಸಿದೆ. ಊಟಕ್ಕೆ ಅವರೂ ಸಿದ್ಧವಾಗಿದ್ದರು. ತಮ್ಮ ಧರ್ಮಪತ್ನಿ ಶ್ರೀಮತಿ ವಸಂತಾದೇವಿಯವರಿಗೆ ಬೇಗ ನಮ್ಮಿಬ್ಬರಿಗೂ ಊಟ ಹಾಕಲು ಹೇಳಿದರು. ಶ್ರಿಮತಿ ಅನಕೃ ಮಹಾತಾಯಿ. ನನ್ನನ್ನು ಸಾಂತ್ವನಗೊಳಿಸುತ್ತಾ ಮಗನಿಗೆ ಬಡಸಿದಂತೆ ಬಡಿಸಿದರು. ಅನಂತರ ಅನಕೃ 'ಹೋಗು ನನ್ನ ರೂಂನಲ್ಲಿ ಸ್ವಲ್ಪ ಹೊತ್ತು ವಿಶ್ರಾಂತಿ ತಗೊ' ಅಂದರು.

ಎಚ್ಚರ ಆದಾಗ ಸಂಜೆ ಆಗ್ತಾ ಬಂದಿತ್ತು. ವಸಂತಾದೇವಿಯವರು ತಿಂಡಿ ಕಾಫಿ ತಂದು 'ತಗೋ ಮಗು' ಅಂದರು. ಮಾತಿಲ್ಲದೆ ಮುಗಿಸಿದೆ. ಆ ಪುಣ್ಯ ದಂಪತಿಗಳು ನನ್ನ ಎದುರು ಕುಳಿತು ನನ್ನೆಲ್ಲ ಜೀವನೇತಿಹಾಸ ಕೇಳಿದರು, ಮರುಗಿದರು. ಆ

ತಾಯಿ ವಸಂತಾದೇವಿಯವರು ಆಜ್ಞೆ ಮಾಡಿದರು 'ನೋಡು ಮಗು ನನ್ನ ಮಕ್ಕಳಲ್ಲಿ ನೀನೂ ಒಬ್ಬ' ನಿನ್ನ ಕಾಲ ಮೇಲೆ ನಿಂತು ಕೊಳ್ಳೋ ಹಾಗೆ ಆಗೂವರೆಗೂ ಊಟ ತಿಂಡಿಗೆ ಆತಂಕ ಮಾಡಿಕೊ ಬೇಡ. ನಮ್ಮಲ್ಲೇ ಇರು. ದೇವರು ನಿನಗೆ ಒಳ್ಳೆಯದು ಮಾಡಲಿ' ಎಂದರು.

ಈ ಕಥೆ ಸುಮಾರು ೧೨೦ ಕಿ.ಮೀ. ದೂರ ನಡೆಯಿತು. ನನ್ನ ಮನೆ ಮುಟ್ಟಿದಾಗ ಬೆಳಗಿನ ಜಾವ ನಾಲ್ಕು ಗಂಟೆ. 'ನೋಡಮ್ಮಾ, ಈಗ ಫಸ್ಟ್ ಕ್ಲಾಸ್ ಕಾಫಿ ಮಾಡಿ ಬಿಡಿ. ಎಲ್ಲರೂ ಕುಡಿಯೋಣ' ಅಂದರು ಮಾಸ್ಟರ್ ಹಿರಣ್ಣಯ್ಯ. ಕಾಫಿ ಆಯಿತು. ಆದರೆ ಮಾತು ಮಾತ್ರ ಮುಗಿದಿರಲಿಲ್ಲ. 'ಇರಲಿ ಬಿಡಿ, ಎಂದಾದರೂ ಒಂದು ದಿನ ಮುಂದುವರಿಸೋಣ' ಅಂದರು. ದಂಪತಿಗಳನ್ನು ಬೀಳ್ಕೊಟ್ಟೆವು.

ಮತ್ತೆ ನಮ್ಮ ಅವರ ಅಧಿಕೃತ ಭೇಟಿ ನನ್ನ ಹುಟ್ಟೂರು ಸಾಸಲಿನಲ್ಲಿ. ಅಲ್ಲಿ ಚಿಕ್ಕನಾಯಕನಹಳ್ಳಿ ತಾಲ್ಲೂಕ ಕನ್ನಡ ಸಾಹಿತ್ಯ ಸಮ್ಮೇಳನ. ಜೂನ್ ೧೩ ಮತ್ತು ೧೪. ಎರಡೂ ದಿನಗಳ ಕಾರ್ಯಕ್ರಮ ನಭೂತೋ ನಭವಿಷ್ಯತಿ ಎನ್ನುವಂತೆ ನಡೆದುಹೋಯ್ತು. ತೀ.ನಂ. ಶಂಕರನಾರಾಯಣ ಸಮ್ಮೇಳನಾಧ್ಯಕ್ಷರು. ಮೊದಲ ದಿನ ರಾತ್ರಿ ಹಿರಣ್ಣಯ್ಯ ಮಿತ್ರ ಮಂಡಳಿಯವರಿಂದ 'ಲಂಚಾವತಾರ' ನಾಟಕ ಪ್ರದರ್ಶನ. ಅದಕ್ಕೆ ಮುಂಚೆ ಗಣ್ಯ ಅತಿಥಿ ಮಾಸ್ಟರ್ ಹಿರಣ್ಣಯ್ಯನವರಿಗೆ ಸಮ್ಮಾನ.

'ಇರೋವರೆಗೂ ಹೀಗೆ ಇರೋಣ ಮರುಳಯ್ಯನವರೆ, ನಾವು ಬರುವಾಗ ಏನನ್ನೂ ತರಲಿಲ್ಲ. ಹೋಗುವಾಗ ಏನನ್ನೂ ಕೊಂಡೊಯ್ಯುವುದಿಲ್ಲ. ಆದರೆ ಹುಟ್ಟು ಸಾವುಗಳ ನಡುವಿನ ಬದುಕು ಮುಖ್ಯ. ಹತ್ತು ಜನಕ್ಕೆ ಬೇಕಾದವರಾಗಿ ಬದುಕಿದರೆ ನಾವು ಇಲ್ಲಿಗೆ ಬಂದದ್ದೂ ಸಾರ್ಥಕ. ಅಲ್ಲವೂ ಅವನಿಚ್ಛೆ !' ಅಂದರು.

ಇಮತಹ ಪ್ರತಿಭಾವಂತ ಕಲಾವಿದನನ್ನು ಸರ್ಕಾರ ಗುರುತಿಸಬೇಕು, ವಿಶ್ವವಿದ್ಯಾಲಯಗಳು ಗುರುತಿಸಬೇಕು. ಗೌರವ ಡಾಕ್ಟರೇಟ್ ಕೊಡುವಲ್ಲಿ, ಪದ್ಮಭೂಷಣ ನೀಡುವಲ್ಲಿ ಮುಂದೆ ಬರಬೇಕು. ಕವಿ ಕಲಾವಿದರು ಒಂದು ರಾಷ್ಟ್ರದ ಸಂಪತ್ತು. ಅದನ್ನು ಜತನ ಮಾಡುವುದು ಎಲ್ಲ ಕ್ಷೇತ್ರಗಳ ಕರ್ತವ್ಯ. ಇಂಥ ಸಹೃದಯಿ ಸುಸಂಸ್ಕೃತ ವ್ಯಕ್ತಿಯನ್ನು ಗೌರವಿಸುವಲ್ಲಿ ಪೂಜ್ಯತೆ ಇದೆ, ಧನ್ಯತೆ ಇದೆ.

## ಮಾನವತಾವಾದಿ*

==========================================================================

ಜೀವನ ಎಂಬುದು ಅನೇಕ ಆಕಸ್ಮಿಕಗಳ ಆಗರ. ನನ್ನ ಮತ್ತು ಹಂಪನಾ ಸ್ನೇಹವೂ ಅಂತಹ ಆಕಸ್ಮಿಕಗಳಲ್ಲಿ ಒಂದು. ದಾವಣಗೆರೆಯ ಧ.ರಾ.ಮ ಕಾಲೇಜಿನಲ್ಲಿ ಅಧ್ಯಾಪಕನಾಗಿದ್ದಾಗ ನನ್ನ ಅವರ ಭೇಟಿ. ಅದೇ ಸಮಾಗಮ ಸರಸ ಆಗಿ, ಸ್ನೇಹವಾಗಿ, ಕಡೆಗೆ ಸಲುಗೆ ಆಗಿ ಬೆಳೆದು ಈಗ 'ಏನೋ ಹಂಪಣ್ಣಾ' ಎಂಬ ಮಟ್ಟಕ್ಕೂ ಬಂದಿದೆ.

ಆತ್ಮೀಯತೆ ಸತ್ಯದ ಕಣ್ಣು ಮುಚ್ಚುತ್ತೆ ಎಂದು ಹೇಳುತ್ತಾರೆ. ಇರಬಹುದು. ಆದರೆ ನನ್ನ ಮತ್ತು ಹಂಪನಾ ಸ್ನೇಹಕ್ಕೆ ಅಂತಹ ಸೊಮ್ಮು ಇಲ್ಲ. ಬೇರೆಯವರ ದೋಷವನ್ನು ಹುಡುಕುವ ವಿಮರ್ಶನ ಶಕ್ತಿ ನನಗಿಲ್ಲ. ಅದೊಂದು ಬಗೆಯ ದೌರ್ಬಲ್ಯ ಎಂದು ನೀವು ಕರೆದರೂ ನನಗೆ ಬೇಸರ ಇಲ್ಲ. ಯಾರಲ್ಲೇ ಆಗಲಿ ಗುಣವನ್ನು ಮಾತ್ರ ಗ್ರಹಿಸಿ ಮೆಚ್ಚುವುದು ನನಗೆ ಗೊತ್ತು. ಹಂಪಣ್ಣನಲ್ಲಿ ಹಲವು ಹುಳುಕುಗಳಿರಬಹುದು. ನನ್ನ ಕಣ್ಣಿಗೆ ಅವು ಕಂಡಿಲ್ಲ. ದೋಷವಿಲ್ಲದ ಮನುಷ್ಯ ಯಾವನಿದ್ದಾನೆ ? ಇರಲಿ. ಆತನ ಗುಣಗಳಿಗೆ ನಾನು ಮಣಿದಿದ್ದೇನೆ. ಅದನ್ನೇ ನಿಮ್ಮೊಡನೆ ಹಂಚಿಕೊಳ್ಳುತ್ತೇನೆ.

ದಾವಣಗೆರೆ ಧ.ರಾ.ಮ.ದಲ್ಲಿದ್ದಾಗ ನಾನು ದೊಡ್ಡವನು. ಅಂದರೆ ಹಂಪನಾಗಿಂತ ಸೀನಿಯರ್. ಚಾಮರಾಜನಗರದ ಜೆ.ಎಸ್.ಎಸ್. ಇಂಟರ್‌ಮೀಡಿಯಟ್, ತುಮಕೂರು ಪ್ರಥಮ ದರ್ಜೆ ಕಾಲೇಜುಗಳಲ್ಲಿ ಎರಡು ವರ್ಷ, ಧ.ರಾ.ಮ.ದಲ್ಲಿ ಮೂರು ವರ್ಷ ಒಟ್ಟು ಐದಯ ವರ್ಷಗಳ ಅಧ್ಯಾಪನ ಅರ್ಹತೆ ಇತ್ತು ನನಗೆ. ಆಗತಾನೆ ಎಂ.ಎ. ಮುಗಿಸಿ ಮೇಷ್ಟ್ರಾಗಿ ಬಂದ ಹಂಪನಾ ನನ್ನ ದೃಷ್ಟಿಯಲ್ಲಿ ಬಚ್ಚ, ಅವನಿಗೇನೂ ಬರದು. ನನು ಸೀನಿಯರ್ ಎಂಬ ದೊಡ್ಡಸ್ತಿಕೆ. ಅವನೊಡನೆ ಮಾತನಾಡುವಾಗಲೂ ನನ್ನ ಶ್ರೀಮತ್ ಗಾಂಭೀರ್ಯ ಗರಿವಡೆದು ನಿಲ್ಲುತ್ತಿತ್ತು. ಆದರೆ ಹಂಪನಾ ತುಂಬಾ ಸರಸಿ, 'ಏನಪ್ಪಾ, ಚೆಂದಾಗಿದ್ದೀಯಾ ? ಏನನ್ನುತ್ತೆ ದಾವಣಗೆರೆ. ಇದು ಅದಾವನ ಗೆರೆಯೊ ಕಾಣೆ ನೀನು ಸಿಕ್ಕಿದಯಲ್ಲಾ ತುಂಬಾ ಸಂತೋಷ, ಬಾ ಬೇಜಾರು ಕಳೆ

ಯುತ್ತೆ ಒಂದಾಟ ರಮ್ಮಿ ಆಟ ಆಡೋಣ, ಅಂದಾಗ ನನ್ನ ಕೋಪ ನೆತ್ತಿಗೇರಿ ಹೋಗುತ್ತಿತ್ತು. 'ನಾನು ಸೀನಿಯರ್ ನನ್ನನ್ನು ಇಷ್ಟು ಸಲಿಗೇನಲ್ಲಿ ಮಾತನಾಡಿಸೋದು ಅಂದರೇನು ? ಇಷ್ಟು ಮರ್ಯಾದೆ ಈ ಪೋರನಿಗೆ ತಿಳಿದಿಲ್ಲ' ಅಂತ ಅಂದುಕೊಂಡದ್ದೂ ಉಂಟು. ಕ್ರಮೇಣ ಗೊತ್ತಾಯ್ತು. ಹಂಪನಾ ಎಷ್ಟು ಒಳ್ಳೆಯವನು ಎಂದು. ಆತ ನನಗೆ ತುಂಬಾ ಆತ್ಮೀಯನಾಗಿಬಿಟ್ಟ. ಯಾವುದೋ ಜನ್ಮದ ಬಾಂಧವ್ಯವೆನ್ನುವಷ್ಟರಮಟ್ಟಿಗೆ ಬೆಸೆಯಿತು ನಮ್ಮಿಬ್ಬರ ಸ್ನೇಹ.

೧೯೬೦ರಲ್ಲಿ ದಾವಣಗೆರೆಯ ಧ.ರಾ.ಮ. ಇಂಟರ್‌ಮೀಡಿಯಟ್ ಕಾಲೇಜನ್ನು ಪ್ರಥಮ ದರ್ಜೆ ಕಾಲೇಜಾಗಿ ವಿಸ್ತರಿಸಿಕೊಡಬೇಕೆಂದು ದಾವಣಗೆರೆ ನಾಗರಿಕರ ಒತ್ತಾಯ. ಆದರೆ ಅಂದಿನ ಕುಲಪತಿ ಡಾ.ಕೆ.ವಿ. ಪುಟ್ಟಪ್ಪನವರು ಅದಕ್ಕೆ ಕಾನೂನು ಒಪ್ಪಲ್ಲ. ಒಂದೇ ಜಿಲ್ಲೆಗೆ ಎರಡು ಪ್ರಥಮ ದರ್ಜೆ ಕಾಲೇಜು ಕೊಡಲು ಬರುವುದಿಲ್ಲ. ಈಗಾಲೇ ಚಿತ್ರದುರ್ಗಕ್ಕೆ ಕೊಟ್ಟಿದೆ, ಬೇಕಾದರೆ ಖಾಸಗಿಯಾಗಿ ಒಂದು ಸಂಸ್ಥೆ ಮಾಡಿಕೊಳ್ಳಿ. ನಾವು ಅದಕ್ಕೆ ಅಫಿಲಿಯೇಷನ್ ಕೊಡ್ತೀವಿ ಅಂದರು. ದಾವಣಗೆರೆಯವರು ಧರ್ಮಾಭಿಮಾನಿಗಳು, ವಿದ್ಯಾಭಿಮಾನಿಗಳೂ ಹೌದು. ಒಂದು ದಿನದಲ್ಲಿ ಬಾಪೂಜಿ ವಿದ್ಯಾಸಂಸ್ಥೆ ಜನ್ಮ ತಳೆಯಿತು/ ಅಂದು ಹಳೆ ಮೈಸೂರಿಗೆಲ್ಲಾ ಇದ್ದುದ್ದು ಮೈಸೂರು ವಿಶ್ವವಿದ್ಯಾಲಯ ಒಂದೇ. ಅದಕ್ಕೆ ಅರ್ಜಿ ಹೋಯಿತು. ಅಫಿಲಿಯೇಷನ್ ಸಿಕ್ಕಿತು. ವಿದ್ಯಾಸಂಸ್ಥೆ ಪ್ರತಮ ದರ್ಜೆ ಕಾಲೇಜನ್ನು ಪ್ರತ್ಯೇಕವಗಿ ನಡೆಸುತ್ತಾ ಬಂತು. ನಾವು ಅದರಲ್ಲಿ ಒಪ್ಪತ್ತಿನ ಉಪನ್ಯಾಸಕರಾಗಿ ಕೆಲಸ ಮಾಡಿದೆವು. ೧೯೬೧ರಲ್ಲಿ ನಾನು ಗಂಟುಮೂಟೆ ಕಟ್ಟಿ ಶಿವಮೊಗ್ಗೆಗೆ ಬಂದೆ. ಹಂಪನಾ ನನ್ನ ಕೂಡಾ ಬಂದರು. ಅವರು ಗೋಪೀ ಹೋಟೆಲಿನ ಒಂದು ಕೊಠಡಿಯಲ್ಲಿ ಗೆಳೆಯ ನಿಸಾರ್ ಅಹಮದ್, ಲಿ. ನರಸಿಂಹಣ್ಣ ಇನ್ನೂ ಅನೇಕರು ಅವರ ಸಹವಾಸಿಗಳು. ಗೋಪೀ

---

*ಡಾ. ಹಂಪನಾ ೧೬.೬.೧೯೮೬ರಲ್ಲಿ ಅವರ ಸಂಭಾವನಾ ಗ್ರಂಥಕ್ಕಾಗಿ ಬರೆದ ಲೇಖನ

ಹೋಟೆಲ್ ಹಿಂಭಾಗದ ರಸ್ತೆಯಲ್ಲಿ ನನ್ನ ಮನೆ. ಪ್ರತಿ ಸಂಜೆ ಹೋಟೆಲ್ ಕೊಠಡಿಯಲ್ಲಿ ನಮ್ಮ ಪರಮಿತಮಿತ್ರರ ಸಭೆ.

ಶಿವಮೊಗ್ಗೆಯ ತರುಣರಿಗೆ ಒಂದು ಕಾರ್ಯಕ್ರಮ ಮಾಡುವ ಆಸೆ. ಹಂಪನಾ ಭೇಟಿ ಮಾಡಿದರು. ಅವರು ಹೇಳಿದರಂತೆ – 'ನಮ್ಮ ಮರುಳಯ್ಯನವರು 'ಕೆಂಗನ ಕಲ್ಲು' ಕವನ ಸಂಕಲನಕ್ಕೆ ೧೯೬೨ರ ಪುರಸ್ಕಾರ ನೀಡಿದೆ ನಮ್ಮ ರಾಜ್ಯ ಸರ್ಕಾರ (ಆ ದಿನದಲ್ಲಿ ಸಾಹಿತ್ಯ ಅಕಾಡಮಿ ರೂಪುಗೊಂಡಿರಲಿಲ್ಲ). ಅಂತಹ ಕವಿಯನ್ನು ನೀವು ಸನ್ಮಾನಿಸುವುದು ತುಂಬಾ ಉಚಿತ. ಇದಕ್ಕಿಂತಲೂ ಉತ್ತಮವಾದ ಕಾರ್ಯಕ್ರಮ ನನಗೆ ಸಧ್ಯದಲ್ಲಿ ಹೊಳೆಯೊಲ್ಲ' ಎಂದು.

ನನ್ನ ತರುಣರ ಉತ್ಸಾಹಕ್ಕೆ ಗರಿ ಮೂಡಿದವು. ಕೂಡಲೇ ಸನ್ಮಾನ ಕಾರ್ಯಕ್ರಮ ಹಮ್ಮಿಕೊಂಡರು.

ಅದು ಕನ್ನಡ ಯುವಜನ ಸಭಾ, ಶಿವಮೊಗ್ಗ ಇವರ ಕಾರ್ಯಕ್ರಮ, ದಿನಾಂಕ ೬.೧೦.೧೯೬೩ ಭಾನುವಾರ ಸಂಜೆ ೬ ಗಂಟೆಗೆ ಹಂಪ ನಾಗರಾಜಯ್ಯನವರಿಂದ ಸಾ.ಶಿ. ಮರುಳಯ್ಯರವರ 'ಕೆಂಗನ ಕಲ್ಲು' ಕೃತಿ ಪರಿಚಯ. ಶಿವಮೊಗ್ಗೆಯ ನ್ಯಾಯವಾದಿಗಳಾದ ಶ್ರೀ ಹೆಚ್. ಲಿಂಗಪ್ಪನವರ ಅಧ್ಯಕ್ಷತೆ.

ಆಹ್ವಾನ ಪತ್ರಿಕೆ ಕೈ ಸೇರಿದ ಮೇಲೆ ನನಗೊಂದು ಯೋಚನೆಗಿಟ್ಟುಕೊಂಡಿತು. ೭.೧೦.೧೯೬೩ ಸೋಮವಾರ ಅಪರಾಹ್ನ ೨ ಗಂಟೆಗೆ ಮಂಗಳೂರಿನಲ್ಲಿ ಸರ್ಕಾರಿ ಕಾಲೇಜಿನಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಡಿಗ್ರಿ ಪರೀಕ್ಷೆಯ ಮೌಲ್ಯಮಾಪಕರ ಸಭೆ ಇತ್ತು. ಏರ್ಪಡಿಸಿದವರು ಡಾ. ಎಲ್. ಬಸವರಾಜುರವರು. ನನ್ನ ಅನೇಕ ಮಿತ್ರರು ೬ನೆಯ ತಾರೀಕೆ ಮಂಗಳೂರಿಗೆ ಹೋದರು. ಆದರೆ ಹಂಪನಾ ಮತ್ತು ನಾನು ಹೋಗಲಿಲ್ಲ. ಹೇಳಿದೆ –"ಹಂಪ, ನೀವು ಹೋಗುವುದಾದರೆ ಹೋಗಿಬಿಡಿ ನಾಳೆ ಹೇಗೋ ನಾನು ಮಧ್ಯಾಹ್ನ ಅಥವಾ ಸಂಜೆ ಒಳಗೆ ನಿಮ್ಮನ್ನು ಬಂದು ಸೇರ್ತೀನೆ" ಎಂದು. ಹಂಪನಾ ಒಪ್ಪಲಿಲ್ಲ."ಮರುಳಯ್ಯಾ ನಿನಗಾಗಿ ನಡೆಯುವ ಸನ್ಮಾನಕ್ಕಿಂತ ಆ ಮೌಲ್ಯಮಾಪನದ ಸಭೆ ದೊಡ್ಡದೇನಯ್ಯಾ. ನೀನು ಚಿಂತೆ ಮಾಡಬೇಡ. ನಾನೂ ನೀನು ಸರಿಯಾದ ಸಮಯಕ್ಕೆ ಮುಟ್ತೇವೆ. ಭಾನುವಾರದ ಸನ್ಮಾನ ಕಾರ್ಯಕ್ರಮ ಆಗಲಿ. ಸೋಮವಾರ ಬೆಳಗ್ಗೆ ೫.೩೦ಕ್ಕೆ ಶಿವಮೊಗ್ಗೆ ಬಿಟ್ಟರೆ ಆಗುಂಬೆ, ಸೋಮೇಶ್ವರ, ಕಾರ್ಕಳ ಮಾರ್ಗವಾಗಿ ಸರಿಯಾದ ವೇಳೆಗೆ ಹೋಗ್ತೇವೆ. ಒಂದು ವೇಳೆ ಆಗಲಿಲ್ಲ, ತಡವಾಗಿ ಸೇರೋಣ. ಅದೂ ಆಗಲಿಲ್ಲ ಅಂದರೆ ಅಧ್ಯಕ್ಷರಾದ ಬಸವರಾಜ್‌ರವರಿಗೆ ವಿಷಯ ತಿಳಿಸಿ ಅವರಿಂದ ಮೌಲ್ಯಮಾಪನದ ವಿಧಾನ ಸಂವಿಧಾನ ತಿಳಿದುಕೊಳ್ಳೋಣ. ಎರಡು ದಿನ ಆರಾಮವಾಗಿ ಅಡ್ಡಾಡಿಕೊಂಡು ಬರೋಣ" ಅಂದರು.

ಹಂಪನಾ ಹೇಳಿದ ಹಾಗೆಯೇ ನಡೆಯಿತು. ನಾವಿಬ್ಬರು ಮಾರನೆಯ ದಿನ ೨.೧೦ಕ್ಕೆ ಸರಿಯಾಗಿ ಸಭಾಂಗಣದಲ್ಲಿದ್ದೆವು. ಮಂಗಳೂರು ಹಂಪನಕಟ್ಟದ ಬಳಿಯ ಸರ್ಕಾರಿ ಕಾಲೇಜಿನಲ್ಲಿ.

೬.೧೦.೧೯೬೩ ಭಾನುವಾರ ಶಿವಮೊಗ್ಗ ಕರ್ನಾಟಕ ಸಂಘ ಭವನ ಸರ್ವಾಲಂಕೃತವಾಗಿತ್ತು. ಎಲ್ಲ ಹಂಪನಾ ಕೈವಾಡ. ಅವರ ನಿರ್ದೇಶನ ಕೇಳಬೇಕೇ ! ಅದ್ಭುತವಾಗಿತ್ತು. ನಾನು ನನ್ನ ಮಿತ್ರರಾದ ಲಿ. ನರಸಿಂಹಣ್ಣ, ಜಿ.ಎಂ. ಬಸವರಾಜ್ ಮೊದಲಾದವರು ಸಮಯಕ್ಕೆ ಸರಿಯಾಗಿ ಹಸೂಡಿ ವೆಂಕಟಶಾಸ್ತ್ರಿಗಳ ಸ್ಮಾರಕ ಭವನ (ಕರ್ನಾಟಕ ಸಂಘ)ಕ್ಕೆ ಬಂದೆವು. ಆದರೆ ನಾವು ನೇರವಾಗಿ ಮಹಾದ್ವಾರದ ಮೂಲಕ ಬರಲಿಲ್ಲ; ಹಿಂದಿನ ಬಾಗಿಲಲ್ಲಿ ನುಗ್ಗಿದೆವು. ಇವನ್ನು ಕಂಡ ಯಾರೋ ಹಂಪನಾರವರಿಗೆ ಹೇಳಿದರೆಂದು ತೋರುತ್ತೆ. ಕೂಡಲೇ ಹಂಪಾ ಮತ್ತು ಮಿತ್ರ ಸದಾಶಿವ, ರಾಮಸ್ವಾಮಿ, ಶೇಷಾದ್ರಿ ಮೊದಲಾದವರು ಓಡಿ ಬಂದು 'ಸಾರ್, ಸಾರ್'' ಎಂದರು. ಹತ್ತಿರ ಬಂದ ಹಂಪನಾ, 'ಅಲ್ಲವಯ್ಯಾ ನಿನ್ನ ಮುಖಕ್ಕೆ ಮಂಗಳಾರತಿ ಎತಿಕೊಂಡು ಓಲಗದ ಸಮೇತ ಸ್ವಾಗತಿಸೋಣ ಅಂತಾ ನಾವು ಮಹಾದ್ವಾರದಲ್ಲಿ ಕಾದಿದ್ದರೆ ನೀನು ಕಳ್ಳನ ಹಾಗೆ ಹಿಂದಿನ ಬಾಗಿಲಲ್ಲಿ ಬರೋದಾ, ನಡೀ ನಡೀ ಮುಂದಿನ ಬಾಗಿಲಿಗೆ' ಎಂದರು.

ಜೊತೆಯಲ್ಲೇ ಹೋದೆವು. ಅಲ್ಲಿ ಸಾಲಾಗಿ ಆರತಿ, ಕಳಸ, ಪೂರ್ಣಕುಂಭಗಳನ್ನು ಹಿಡಿದು ಅನೇಕ ಜನ ವಿದ್ಯಾರ್ಥಿನಿಯರು ಇಕ್ಕೆಲದಲ್ಲೂ ನಿತಿದ್ದರು. ನಾಗಸ್ವರ ವಾದನ ನಭಕ್ಕೇರುತ್ತಿತ್ತು. ಡಾ.ಡಿ. ಕೃಷ್ಣಮೂರ್ತಿ, ಡಾ. ಸರ್ಜಾ ಚಂದ್ರಶೇಖರಯ್ಯ, ಶೀರನಾಳಿ ಚಂದ್ರಶೇಖರ, ಬಳ್ಳೇಕೆರೆ ಹನುಮಂತಪ್ಪ, ಮಂಜಪ್ಪ ಅನೇಕರು ಹಾರ ಹಿಡಿದು ನಿಂತಿದ್ದರು. ಅಭೂತಪೂರ್ವ ಸ್ವಾಗತ ನನಗಾಗಿ ಕಾದಿತ್ತು. ವರನನ್ನು ಮದುವೆಯ ಮಂಟಪಕ್ಕೆ ಕರೆದುಕೊಂಡು ಹೋದಂತೆ ಕರೆದೊಯ್ದರು. ನನಗೆ ಭಯ, ವಿಸ್ಮಯ ಏಕಕಾಲದಲ್ಲಿ ಆದವು ! ನಾನಿನ್ನೂ ಚಿಕ್ಕವನು. ಬಹುಶಃ ಅಷ್ಟು ಚಿಕ್ಕವನಿಗೆ 'ಸನ್ಮಾನ' ಎನ್ನುವುದು ಕನಸಿನ ಮಾತಾಗಿತ್ತು. ಆದರೂ ಅದು ನನಗಾಗಿ ನನ್ನ ಜೀವನೇತಿಹಾಸದಲ್ಲಿ ನೆರವೇರಿತು. ಅದೊಂದು ಸುವರ್ಣಾಧ್ಯಾಯವಾಗಿಯೂ, ಶಿವಮೊಗ್ಗೆಯ ನನ್ನ ಬದುಕು ಒಂದು ಸುರ್ಣ ಸಂಪುಟವಾಗಿಯೂ ಪರಿಣಮಿಸಿದವು.

ಸಹಸ್ರಾರು ಜನರ ಆ ಮಹಾಸಭೆಯ ಮಧ್ಯದಲ್ಲಿ ಕರತಾಡನದೊಂದಿಗೆ ಕರೆದೊಯ್ದರು. ವೇದಿಕೆ ಮೇಲಕ್ಕೆ ಬಹುಮಾನಿತ 'ಕೆಂಗನಕಲ್ಲು' ಕವನವನ್ನು ರಾಗ ಸಂಯೋಜಿಸಿ ವೃಂದಗಾನದಲ್ಲಿ ಹಾಡಿದರು. ಅದನ್ನು ಕೇಳಿ ನಾನು ವಿಸ್ಮಿತನಾದೆ. ಆ ಹಾಡು ಅಂದಿನಿಂದ ಜನಪ್ರಿಯವಾಗಿ ಇಡೀ ಕರ್ನಾಟಕದಲ್ಲೇ ಜಯಭೇರಿ ಬಾರಿಸಿತು. ಅಂದು ಆ ಹಾಡು ನನ್ನನ್ನು ಓರ್ವ ಕವಿ ಎಂದು ಪರಿಚಯ ಮಾಡಿಕೊಟ್ಟಿತು. ಹಂಪನಾರವರು ನನ್ನ ಹಾಗೂ ನನ್ನ ಕಾವ್ಯ ಪರಿಚಯ ಮಾಡಿದರು. ಅವರಾಡಿದ ಮಾತು, ನೀಡಿದ ಪ್ರೋತ್ಸಾಹ, ತುಂಬಿದ ಉತ್ಸಾಹ ಹೇಳಲು ನನ್ನಲ್ಲಿ ಮಾತುಗಳೇ ಇಲ್ಲ. ಅವರ ಅಭಿಮಾನದ ಆಚ್ಛಾದನದಲ್ಲಿ ನಾನು ಮುಚ್ಚಿ ಹೋದೆ. ಅವರ ಮಾತುಗಳು ಕರತಕವಾದುದಾಗಿರಲಿಲ್ಲ. ಹೃದಯದಾಳದಿಂದ ಬಂದ ಆತ್ಮೀಯ ನುಡಿಗಳಾಗಿದ್ದವು. ಬಹಹುಶಃ ಕೇಳದವರನೇಕರು ಕರುಬುವಂತಿದ್ದವು. ಅಂತಹ ಅದಸ್ಫೂರ್ತಿಯ ಸನ್ಮಾನವನ್ನು ನಾನು ಮತ್ತೆ ಕಾಣಲಿಲ್ಲ. ಡಾ.ಡಿ. ಕೃಷ್ಣಮೂರ್ತಿಯವರು (ಮಲೆನಾಡ ಡಾಕ್ಟರು) ಶಾಲು ಹೊದಿಸಿ ಗೌರವಿಸಿದರು. ಸಮಿತಿಯ ಪರವಾಗಿ ಅದು ನಾನು ಪಡೆದ ಮೊದಲ ಶಾಲು. ಅದಾದ ಮೇಲೆ ನೂರರು ಶಾಲುಗಳು ಬಂದಿವೆ. ಅದಕ್ಕಿಂತಲೂ ದೊಡ್ಡವೇ ಇವೆ. ಆದರೆ ಆ ಶಾಲಿನ ಕಂಪನ್ನು ಇಂದಿಗೂ ಮರೆತಿಲ್ಲ ನಾನು. ಅದರಲ್ಲಿ ಹಂಪಣ್ಣನ ಅನುರಾಗದ ಎಳೆ ಇದು ಎಂದು ಹೇಳಬೇಕಾಗಿಲ್ಲ.

೭.೧೦.೧೯೬೩ರಂದು ಗೊತ್ತುಪಡಿಸಿಕೊಂಡ ಪ್ರಕಾರ ಬೆಳಗಿನ ಬಸ್‌ಗೆ ಮಂಗಳೂರಿಗೆ ಹೊರಟೆವು. ಆಗುಂಬೆಯಲ್ಲಿ ಆನಂದದಿಂದ ಕಾಫಿ ಸೇವನೆ. ಅನಂತರ ಬಸ್ ಬದಲಾಯಿಸಿ ಸೋಮೇಶ್ವರ, ಸೋಮೇಶ್ವರದಿಂದ ಮತ್ತೆ ಬಸ್ ಬದಲಾವಣೆ, ಕಾರ್ಕಳದಲ್ಲಿ ಸಾಮಾನ್ಯವಾದ ಉಪಾಹಾರ ಸೇವನೆ ಮತ್ತೆ ಪ್ರಯಾಣ. ಮಂಗಳೂರು ಮುಟ್ಟಿದಾಗ ೧.೩೦. ಹೋಟೆಲ್ ಉಡ್ ಸೈಡ್‌ನಲ್ಲಿ ನಮ್ಮ ಹೊರೆ ಬಿಸಾಟು, ತಣ್ಣೀರು ಝಳಕ ಮಾಡಿ, ಊಟ ಹೊಡೆದು ೨.೧೦ಕ್ಕೆ ಸಭೆಗೆ ಹೋದೆವು. ಎಲ್ಲರಿಗೂ ಹಂಪನಾ ಹಿಂದಿನ ಸನ್ಮಾನ ಸಂಜೆಯ ಹರ್ಷದ ವರದಿ ಒಪ್ಪಿಸಿದರು. ನಾವೆಲ್ಲರೂ ಅಂದು ಸಂಜೆ ಸಮುದ್ರ ತೀರಕ್ಕೆ ಹೋಗಿ ಮರಳು ಹಾಸಿನ ಮೇಲೆ ಮಲಗಿ, ತೆರೆಯೊಡನೆ ಸರಸ ಆಡಿ ನಮ್ಮ ನಮ್ಮ ಲಾಡ್ಜ್ ಸೇರಿಕೊಂಡೆವು.

ಹಂಪಾನಾಗೆ ನಾವು ನೇರ ಶಿವಮೊಗ್ಗೆಗೆ ಹೋಗುವ ಇಚ್ಛೆ ಇರಲಿಲ್ಲ. ಬರುವುದು ಬಂದಿದ್ದೇವೆ. ಮೂಡಬಿದ್ರೆಗೆ ಹೋಗಿ ಅನಂತರ ನಾಡಿದ್ದು ಹೋಗೋಣ ಅಂದರು. ಇಬ್ಬರೂ ಮಾರನೆಯ ದಿನ ಬಸ್ ಹಿಡಿದು ಮೂಡಬಿದ್ರೆಗೆ ಹೋದೆವು. ಅಲ್ಲಿ ಭುಜಬಲಿಶಾಸ್ತ್ರಿಗಳ ಮನೆಯಲ್ಲಿ ಭಾರಿ ಔತಣ, ಸಾಹಿತ್ಯ ಸಲ್ಲಾಪ. ಅನಂತರ ಅಲ್ಲಿಗೆ ದಯಮಾಡಿಸಿದ್ದ ಹೊಂಬುಚದ ಶ್ರೀ ಶ್ರೀಗಳವರ ದರ್ಶನ. ಭುಜಬಲಶಾಸ್ತ್ರಿಗಳು ಹೊಂಬುಚದ ಶ್ರೀಗಳವರು ಇಬ್ಬರೂ ಜೀವದಲ್ಲಿನ ಮಾಗಿದ ಹಣ್ಣುಗಳಾಗಿದ್ದರು. ಅವರನ್ನು ಕಂಡು ನುಡಿಸಿದ ಭಾಗ್ಯ ನಮ್ಮದಾಯಿತು. ಹಂಪನಾ ಈ ಮಹಾಚೇತನಗಳ ಹಾಗೂ ಕಾರ್ಕಳದ ಗೊಮ್ಮಟಸ್ವಾಮಿಯ ದರ್ಶನ ಮಾಡಿಸಿದರು. ಅಂದು ಮಧ್ಯಾಹ್ನ ಒಂದು ಪುಟ್ಟ ಘಟನೆ ನಡೆಯಿತು.

ಮೂಡಬಿದ್ರಿಯ ಚೈತ್ಯಾಲಯಕ್ಕೆ ನಾನು ಹಂಪನಾ ಹೋದೆವು. ಅಲ್ಲಿನ ಗರ್ಭಗುಡಿ ಹಾಗೂ ಬಸದಿಯ ಮೇಲ್ಭಾಗದಲ್ಲಿರುವ ಗ್ರಂಥರಾಶಿ ನೋಡಬೇಕೆಂಬ ಬಯಕೆ ಇಬ್ಬರಿಗೂ. ಅಲ್ಲಿದ್ದ ಅರ್ಚಕರು ನಮ್ಮಿಬ್ಬರನ್ನೂ ತಡೆದು ನಿಲ್ಲಿಸಿ ನೀವು ಜೈನರೇ?' ಜೈನರೇ ಆಗಿದ್ದಲ್ಲಿ ಒಂದು ಪ್ರಾರ್ಥನಾ ನುಡಿ ಹೇಳಿ' ಅಂದರು. ರತ್ನಾಕರ ವಿರಚಿತ ವೃತ್ತವೊಂದನ್ನು ಹಂಪನಾ ಸಲೀಸಾಗಿ ಹೇಳಿಬಿಟ್ಟರು. ನಾನು ಪೆಬ್ಬೆಬ್ಬೆ ಆದೆ ! ಅರ್ಚಕರಿಗೆ ಅನುಮಾನ ಬಂದು 'ಜಯನೇತರರಿಗೆ ಒಳಗೆ ಪ್ರವೇಶ ಇಲ್ಲ ಎಂದಾಗ, ಹಂಪನಾ ಒಂದು ದೊಡ್ಡ ಸುಳ್ಳು ಹೇಳಿದರು – 'ರೀ, ನವು ಬರೀ ಜೈನರಲ್ಲ, ಶುದ್ಧ ಜೈನರು ದಾರಿಬಿಡಿ'.

ದ್ವಾರತೆರೆಯಿತು. ಸ್ವಾಮಿಯ ದರ್ಶನ ಆಯಿತು. ಪೂಜೆ ಪ್ರಸಾದ ಆಯಿತು. ಮಹಡಿ ಮೇಲೇರಿ ಅಲ್ಲಿನ ಅನೇಕ ಪುಸ್ತಕಗಳನ್ನೂ ನೋಡಿಕೊಂಡು ಬಂದೆವು. ದಾರಿ ಯಲ್ಲಿ ಹೇಳಿದರು ಹಂಪನಾ 'ನೋಡಪ್ಪಾ ಭಗವಂತನ ದರ್ಶನಕ್ಕೆ ಭಾವನೆ ಮುಖ್ಯ, ಭಕ್ತಿ ಮುಖ್ಯ, ಜಾತಿ ಅಲ್ಲ'. ಪಂಪನ ಮಾತು 'ಮನುಷ್ಯ ಜಾತಿ ತಾನೊಂದೆ ವಲಂ' ಎಂಬುದನ್ನು ಮರೆತರೆ, ಅವರು ಬದುಕಿದ್ದಕ್ಕೆ, ಬರೆದದ್ದಕ್ಕೆ ಏನು ಬೆಲೆ? ಅವರು ಬರೆದದ್ದಾರೂ ಯಾರಿಗೆ? ನಮ್ಮಂತಹ ಮುಂದಿನ ಪೀಳಿಗೆಗೆ. ಇದನ್ನು ಮರೆಯಬಾರದು ಅಲ್ಲವೆ. ಜೈನನಲ್ಲದ ನಿನ್ನನ್ನು ಗರ್ಭಗುಡಿಯೊಳಗೆ ಪ್ರವೇಶ ಮಾಡಿಸಿದ್ದರಿಂದ ಆದ ಮೈಲಿಗೆಯ ಬಗ್ಗೆ ಯಾವುದೇ ಶಿಕ್ಷೆಯನ್ನು ತೀರ್ಥಂಕರರು ವಿಧಿಸಲಿ, ನಾನು ಅನುಭವಿಸಲು ಸಿದ್ಧ. ಆದರೆ ನಿನ್ನಂತಹ ಆತ್ಮೀಯನಿಗೆ ಸ್ವಾಮಿಯ ಸಾನಿಧ್ಯದರ್ಶನ ಮಾಡಿಸಿದ ಪುಣ್ಯ ನನ್ನ ಬೆನ್ನ ಹಿಂದಿದೆ ಎಂಬುದನ್ನು ಮರೆಯಬಾರದು ಅಲ

ಅದು ನಿಜವಾದ ಮನವೀಯ ಗುಣ. ಆ ಮೌಲ್ಯವನ್ನು ಗುರುತಿಸಿದ, ಗೌರವಿಸಿದ ಹಂಪನಾಗೆ ಮನಸಾ ಮಣಿದೆ.

ಶಿವಮೊಗ್ಗೆಯಲ್ಲಿ ನಮ್ಮಿಬ್ಬರ ಸೇಹ, ಸಖ್ಯ, ಸಾಹಿತ್ಯದ ಸಂಶೋಧನೆಯ ವೇದಿಕೆಯಾಯಿತು. ಇಬ್ಬರೂ ಕುಳಿತು ಹಳಗನ್ನಡ ಕಾವ್ಯಗಳನ್ನು ಓದುವುದು ಗದ್ಯಕ್ಕೆ ಅನುವಾದಿಸುವುದು ಮಾಡಿದೆವು. ಶಾಂತೀಶ್ವರನ 'ಸುಕುಮಾರ ಚರಿತೆ'ಯನ್ನು ಸಂಗ್ರಹಿಸುವ ಕಾರ್ಯವೂ ನಡೆಯಿತು. ನಾನು 'ಮಹಾಕವಿ' ಎಂಬ ಪಂಪನ ಜೀವನವನ್ನು ಕುರಿತ ಒಂದು ಕಾದಂಬರಿ ಬರೆಯಲು ಆರಂಭಿಸಿದ್ದೆ. ಅತ್ತ ಸಂಶೋಧನೆ, ಇತ್ತ ಸೃಜನಶೀಲ ಕಾದಂಬರಿ ರಚನೆ ಏಕಕಾಲದಲ್ಲಿ ಆಗತೊಡಗಿದವು. ಅಷ್ಟರಲ್ಲಿ ಹಂಪನಾರವರಿಗೆ ಬೆಂಗಳೂರಿಗೆ ಕರೆ ಬಂತು. ಕಲೆ ಮತ್ತು ವಿಜ್ಞಾನ ಕಾಲೇಜಿಗೆ ವರ್ಗವಾದರು. ನಮ್ಮ ಯೋಜನೆಗಳು ಅಪೂರ್ಣವಾಗಿಯೇ ಉಳಿದವು.

ಹಂಪನಾ ಬೆಂಗಳೂರಿಗೆ ಹೋದ ಮೇಲೆ ಶಿವಮೊಗ್ಗೆಯ ಸಹ್ಯಾದ್ರಿ ಬಿಕೋ ಅಂದಿತು ಎರಡು ದಿನ. ಏಕೆಂದರೆ ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯ, ಕೆ. ನಾಗೇಂದ್ರಪ್ಪ, ಹಂಪನಾ ಮತ್ತು ನಾನು ನಾಲ್ಕೂ ಜನ ಮನೆಯವರಾಗಿದ್ದೆವು. ನಾಲ್ವರೂ ಒಟ್ಟಿಗೆ ಕಾಲೇಜಿಗೆ ಸೈಕಲ್‌ಗಳಲ್ಲಿ ಹೋಗುತ್ತಿದ್ದೆವು. ಪಟ್ಟಣಕ್ಕೆ ಮರಳುವಗಲೂ ಜೊತೆಯಲ್ಲೇ ಇರುತ್ತಿದ್ದೆವು. ಸಹ್ಯಾದ್ರಿಯ ಕನ್ನಡ ವಿಭಾಗ ಬೇರೆಯವರು ಹೊಟ್ಟೆಕಿಚ್ಚುಪಟ್ಟುಕೊಳ್ಳುವಂತಿತ್ತು. ಹಂಪನಾ ಹೋದ ಮೇಲೆ ಕೆಲವು ದಿನಗಳ ತನಕ ಮಂಕು ಹಿಡಿದುಬಿಟ್ಟಿತ್ತು.

ದಾವಣಗೆರೆಗೆ ಮೊದಲು ಹೋದವನು ನಾನು, ಅನಂತರ ಬಂದವರು ಹಂಪನಾ. ಬೆಂಗಳೂರಿಗೆ ಮೊದಲು ಹೋದವರು ಹಂಪನಾ, ಅವರ ಬೆನ್ನುಹತ್ತಿದವನು ನಾನು. ಅಂತೂ ಇಬ್ಬರೂ ಮತ್ತೆ ಕೂಡಿದೆವು. ಬೆಂಗಳೂರಿನ ಸರ್ಕಾರಿ ಆರ್ಟ್ಸ್ ಸೈನ್ಸ್ ಕಾಲೇಜಿನಲ್ಲಿ. ಬೆಂಗಳೂರು ಬಣ್ಣ ಎಷ್ಟೇ ಪ್ರಖರವಾಗಿದ್ದರೂ ನಮ್ಮ ಸ್ನೇಹಕ್ಕೆ ಕುಂದು ತರಲಿಲ್ಲ. ಹಂಪನಾ ಬಂದ ದಿನವೇ ನನ್ನನ್ನು ಸ್ವಾಗತಿಸಿ 'ಏನಪ್ಪಾ ಬೆಂಗಳೂರಿನಲ್ಲಿ ಇಳುಕೊಳ್ಳೋಕ್ಕೆ ವ್ಯವಸ್ಥೆ ಇದೆ ತಾನೇ? ಮನೆ ಸಿಕ್ಕಿತಾ ? ಸಿಗದಿದ್ದರೆ ಹೇಳು? ಏನಾದರೂಖರ್ಚಿಗಿ ಗಿರ್ಚಿಇಗೆ ಹಣ ಬೇಕಾ ? ಎಂದರು. ನನಗೆ ಅವರ ಆ ಅಕ್ಕರೆಯ ನುಡಿಗಳಷ್ಟೆ ಬೇಕಿತ್ತು. ಕೇಳಿದೆ ; ಸಂತೋಷಪಟ್ಟೆ. ಪ್ರೊ.ಜಿ.ಎಸ್. ಸಿದ್ಧಲಿಂಗಯ್ಯನವರು ಕನ್ನಡ ವಿಭಾಗದ ಮುಖ್ಯಸ್ಥರು, ನಾನು ಹಂಪನಾ ಮತ್ತಿತರ ಏಳೆಂಟು ಜನ ಗೆಳೆಯರು ಕನ್ನಡದ ಕೊಠಡಿಯಲ್ಲಿ ಹಂಚಿಕೊಂಡು ತಿಂದು, ಕೂಡಿಕೊಂಡು ಓದಿ, ಅನುಸರಿಸಿಕೊಂಡು ಪಾಠಪ್ರವಚನ ನಡೆಸಿಕೊಂಡು ಬಂದೆವು.

ಹಂಪನಾ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಕುಪ್ಪಳಿಸಿದರು ; ಇಲ್ಲ ಹಾರಿದರು ಅಧ್ಯಾಪಕರಾಗಿ. ಆದರೆ ನನ್ನನ್ನು ಮಾತ್ರ ಮರೆತಿರಲಿಲ್ಲ. ಒಂದು ದಿನ ಧಿಡೀರ್ ಪ್ರತ್ಯಕ್ಷ 'ಮರುಳಯ್ಯ, ಬಾ ಇಲ್ಲಿ' ಎಂದು ಕಾಲೇಜಿನಿಂದ ದೂರ ಕರೆದುಕೊಂಡು ಹೋಗಿ 'ನೋಡಪ್ಪಾ, ನೀನು ಬೆಂಗಳೂರಿಗೆ ಬಂದ ಮೇಲೆ ಇದ್ದು ಹೋಗುವ ಅಥವಾ ಬಿದ್ದು ಹೋಗುವ ಯೋಚನೆ ಮಾಡಬೇಡ. ನೀನೊಂದು ಗೂಡು ಮಾಡಿಕೊ. ನೋಡು, ನಮಗಲ್ಲದಿದ್ದರೂ ನಮ್ಮನ್ನು ನಂಬಿರೊ ಜನ ಇದ್ದಾರೆ. ಅವರಿಗಾಗಿ ಒಂದು ಮನೆ ಮಾಡಬೇಕು. ಕನಿಷ್ಟ ಒಂದು ಸೈಟು ತಿಳಿತಾ. ನೋಡು ಬಿ.ಡಿ.ಎ. ಸೈಟು ಕೊಡುತ್ತಂತೆ. ಪತ್ರಿಕೆನಲ್ಲಿ ಜಾಹೀರಾತು ಬಂದಿದೆ.

ತಗೋ ಈ ನೂರು ರೂಪಾಯಿ. ಇದನ್ನು ಈ ದಿನವೇ ಕಟ್ಟಿ ಅರ್ಜಿಕೊಡು. ಒಂದು ಸೈಟು ಅಂತ ಮಾಡಿಕೋ. ಆಮೇಲೆ ದೇವರಿದ್ದಾನೆ' ಅಂದರು.

ಇಂತಹ ನನ್ನ ಅನಿಮಿತ್ತಬಂಧುವನ್ನು ನಾನು ಹೇಗೆ ಮರೆಯಲಿ !

ಮುಂದೆ ಮಾಡಿಕೊಂಡ ಮನೆಗಳಲ್ಲಿ ನಾವಿಬ್ಬರೂ ದೂರ ದೂರ ಆದೆವು. ಆದರೆ ಕೂಡುವ ತಾಣ ಒಂದಿತ್ತು. ಅದೇ ಕನ್ನಡ ಸಾಹಿತ್ಯ ಪರಿಷತ್. ಮಿತ್ರ ಅ.ರಾ. ಮಿತ್ರ ಮತ್ತು ಗೆಳೆಯ ಹಂಪನಾ ಇಬ್ಬರೂ ಪರಿಷತ್ತಿನ ಕಾರ್ಯದರ್ಶಿಗಳಾದರು. ಶ್ರೀ ಜಿ. ನಾರಾಯಣರವರು ಅಧ್ಯಕ್ಷರು. ಪರಿಷತ್ತಿನ ಅನೇಕ ಕಾರ್ಯಕ್ರಮಗಳಲ್ಲಿ ನನಗೆ ಅವಕಾಶ ಕೊಡುತ್ತಿದ್ದರು.

ಒಮ್ಮೆ ನಾವು ನಾಲ್ವರೂ ರಾಯಚೂರಿಗೆ ರೈಲಿನಲ್ಲಿ ಹೊರಟೆವು. ರಾಯಚುರು ಜಿಲ್ಲಾ ಅಧ್ಯಕ್ಷರನ್ನು ನೇಮಿಸಬೇಕಾಗಿತ್ತು. ಮೊದಲ ದರ್ಜೆಯ ಡಬ್ಬಿಯಲ್ಲಿ ನಾಲ್ವರಿಗೆ ಅವಕಾಶವಿತ್ತು. ನಾವು ನಾಲ್ವರೂ ಏರಿದೆವು. ಮಿತ್ರ ಮತ್ತು ಹಂಪನಾ ಹಾದಿ ಉದ್ದಕ್ಕೂ ವೈನೋದಿಕವಾಗಿ ಮಾತನಾಡುತ್ತಾ ಪ್ರಯಾಣದ ಬೇಸರ ನೀಗುತ್ತಿದ್ದರು. ಸಾಹಿತ್ಯ ಸಲ್ಲಾಪವೂ ಜಿ. ನಾರಾಯಣರ ಜೊತೆಯಲ್ಲಿ ನಡೆಯುತ್ತಿತ್ತು. ರಾಯಚೂರಿನಲ್ಲಿ ನಾರಾಯಣರವರಿಗೆ ಜ್ವರ ಬಂದು ಮಲಗಿಬಿಟ್ಟರು. ಆದರೆ ಹಂಪನಾ ಮತ್ತು ಮಿತ್ರ ಇಬ್ಬರೂ ಅಧ್ಯಕ್ಷರ ಪರವಾಗಿ ಎಲ್ಲ ಕೆಲಸಗಳನ್ನು ಯೋಗ್ಯ ರೀತಿಯಲ್ಲಿ ಮಾಡಿ ಮುಗಿಸಿದರು. ನಾವು ಮೂವರೂ ಜಿ. ನಾರಾಯಣರವರ ಶುಶ್ರೂಷೆ ಮಾಡಿದೆವು.

ರಾಯಚೇರಿನಲ್ಲಿ ನಡೆದ ಕವಿಗೋಷ್ಠಿಯಲ್ಲಿ ನಾವು ಮೂವರೂ ಕವಿಗಳಾಗಿ ಕವನಗಳನ್ನು ಓದಿದೆವು. ತುಂಬಾ ಆತ್ಮೀಯವಾಗಿತ್ತು. ಆನಂದದಾಯಕವಾಗಿತ್ತು ನಮ್ಮ ಪ್ರವಾಸ. ಅದಕ್ಕೆ ಕಾರಣರಾದವರು ಆ ನನ್ನ ಇಬ್ಬರು ಮಿತ್ರರು ಎಂದು ಮತ್ತೆ ಹೇಳಬೇಕಾಗಿಲ್ಲ. ಬೆಂಗಳುರಿಗೆ ಬಂದ ಮೇಲೆ ಬಾಡಿಗೆ ಟ್ಯಾಕ್ಸಿ ಮಾಡಿ ನಮ್ಮ ಮನೆಗೆ ಮುಟ್ಟಿಸಿದರು ಹಂಪನಾ.

ಹಂಪನಾ ವಿಶ್ವವಿದ್ಯಾಲಯದ ಅಧ್ಯಾಪಕರಾದ ಮೇಲೆ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದರು. ಅನೇಕ ಒಳ್ಳೆಯ ಪ್ರಗತಿಪರ ಕೆಲಸ ಮಾಡಿದರು. ಹತ್ತಾರು ಹೊಸ ಹೊಸ ಯೋಜನೆಗಳನ್ನು ಹಾಕಿಕೊಂಡರು. ಶ್ರೇಷ್ಠರೂಪೀ ಕಾರ್ಯಕ್ರಮಗಳನ್ನು ಹಮ್ಮಿಕೊಂಡರು. ಕನ್ನಡ ಸಾಹಿತ್ಯ ಪರಿಷತ್ತಿಗೆ ಹೊಸ ರಕ್ತ ತುಂಬಿ ಬಂತು. ಅನೇಕ ಸಾಹಿತ್ಯ ಸಮ್ಮೇಳನಗಳನ್ನು ಮಾಡಿದರು. ನೂರಾರು ಶೀರ್ಷಿಕೆಗಳಲ್ಲಿ ಪುಸ್ತಕಗಳನ್ನು ಪ್ರಕಟಪಡಿಸಿದರು. ಮನೆಮನೆಗೆ ಶಾರದೆ ಎಂಬ ಜಿ. ನಾರಾಯಣರ ಸ್ತುತ್ಯಯೋಜನೆಯನ್ನು ಮುಂದುವರೆಸಿದರು. ಪರಿಷತ್ತು ಎಲ್ಲ ಕನ್ನಡಿಗರ ಕೃತಜ್ಞತೆಗೆ ಪಾತ್ರವಾಯಿತು.

ಹಂಪನಾ ಅಧ್ಯಕ್ಷರಾಗಿ ಸೇರಿ, ರೀಡರ್ ಆಗಿ ಅನಂತರ ಪ್ರಾಧ್ಯಾಪಕರಾದರು. ಡಾಕ್ಟರೇಟ್ ಪಡೆದರು, ಪ್ರಖ್ಯಾತರಾದರು. ಅವರು ಚಿಕ್ಕಮಗಳೂರಿನಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಪ್ರಾಸ್ತಾವಿಕ ಭಾಷಣ ಒಂದು ಅಮೂಲ್ಯ ಕಲಾಕೃತಿ. ಅದನ್ನು ನಾನು ಎಂದಿಗೂ ಮರೆಯಲಾರೆ.

ಆಡಳಿತಕ್ಕೆ ಬಂದಮೇಲೆ ಸ್ವಲ್ಪ ಡಿಪ್ಲೊಮೆಸಿ ಬೇಕಾಗುತ್ತೆ. ಹಂಪನಾ ಅದಕ್ಕೆ ಯಾವತ್ತೂ ಅಪವಾದವಾದವರು. ಅವರು ಅಧ್ಯಕ್ಷರಾದ ಮೇಲೆ ನಾನು ಅವರು ಪ.ಸು. ಭಟ್ಟರು ,ತ್ತು ಪಟ್ಟಾಭಿ ಕಾರಿನಲ್ಲಿ ಸಾಗರಕ್ಕೆ ಟಿ. ಮಹಾಬಲೇಶ್ವರ ಭಟ್ಟರ ಷಷ್ಟ್ಯಬ್ಧಿ ಸಮಾರಂಭಕ್ಕೆ ಹೋದೆವು. ಹಂಪನಾ ಅಲ್ಲೊಂದು ಕಟ್ಟಡದ ಶಂಕುಸ್ಥಾಪನೆ ಕಾರ್ಯ ನೆರವೇರಿಸಿ ಭಿಟ್ಟರ ಸನ್ಮಾನದಲ್ಲಿ ಅಧ್ಯಕ್ಷರಾಗಿ ಮಾತಾಡಿ ಎಲ್ಲರ ಪ್ರೀತ್ಯಾದಾರಗಳಿಗೆ ಪಾತ್ರರಾದರು.

ನಮ್ಮ ವಿದ್ಯಾರ್ಥಿ ಮಿತ್ರ ಜಿ. ಗೋವಿಂದರಾಜು ಶಿವಮೊಗ್ಗೆಯಲ್ಲಿ ಮತಾಂಧರ, ದುಷ್ಕರ್ಮಿಗಳ ಆಕ್ರೋಶಕ್ಕೆ ಬಲಿಯಾದಾಗ, ಆತನನ್ನು ಬೆಂಗಳೂರಿನ ನಿಮ್ಹ್ಯಾನ್ಸ್‌ಗೆ ಕರೆತಂದಾಗ ಹಂಪನಾ ಮತ್ತು ಶ್ರೀಮತಿ ಕಮಲಾ ಹಂಪನಾ ತಮ್ಮ ಸಮೀಪದ ಬಂಧುವಿಗಿಂತಲೂ ಮಿಗಿಲಾಗಿ ನೋಡಿಕೊಂಡರು. ಗೋವಿಂದರಾಜು ಕಡೆಯುಸಿರೆಳೆದಾಗ ಎಳೆ ವಯಸ್ಸಿನ ಅವರ ಪತ್ನಿ ಅಂಜನಾ ಗೋವಿಂದರಾಜುರವರನ್ನು ಅವರ ಎಳೆಯ ಕಂದಮ್ಮಗಳನ್ನು ತಾವೇ ತಮ್ಮ ವಾಹನದಲ್ಲಿ ಕರೆದೊಯ್ದು ಉಪಚರಿಸಿದರು.

ಹಂಪಣ್ಣನಲ್ಲಿ ಇಂತಹ ಮಾನವೀಯ ಮೌಲ್ಯಗಳು ಒಂದಲ್ಲ ನೂರಿವೆ. ನೋಡುವ ಗುರುತಿಸುವ ಕಣ್ಣುಬೇಕು. ಆತ ಶತಾಯುವಾಗಲಿ. ಆತನಿಗೆ ಅನಂತ ಶುಭಗಳು ಪ್ರಾಪ್ತವಾಗಲಿ. ಜಗನ್ಮಾತೆಯ ಆಶೀರ್ವಾದ ಅಖಂಡವಾಗಿರಲಿ.

## ನಾನು ಮತ್ತು ನಮ್ಮ ಭಟ್ಟರು*

==============================================================

ಸ್ನೇಹಕ್ಕೆ ಸ್ವಾರ್ಥ ಮೂಲ. ಅವೆರಡೂ ಅನ್ಯೋನ್ಯ ಜೀವಿಗಳು. ಒಂದನ್ನಗಲಿ ಇನ್ನೊಂದು ಇರಲಾರದು. ಇದ್ದರೆ ಬಹಳ ದಿನ ಬದುಕಲಾರದು. ಸ್ನಿಗ್ಧದಿಂದ ಬಂದ ಶಬ್ದ ಸ್ನೇಹ. ಸ್ನಿಗ್ಧಕ್ಕೆ ಅಂಟು ಎಂರ್ಥ. ಆ ಅಂಟು ಸ್ವಾರ್ಥದೊಳಗಿನ ಬಿಡಿಸಲಾಗದ ಗಂಟು. ಅದರಿಂದಲೇ ಇರಬೇಕು ದೊಡ್ಡವರು ಹೇಳುವುದು ಸ್ವಾರ್ಥ ಮತ್ತು ಸ್ನೇಹಗಳದ್ದು ಅಪರೂಪದ ದಾಂಪತ್ಯ ಎಂದು.

ಸ್ನೇಹಕ್ಕೂ ಸ್ವಾರ್ಥಕ್ಕೂ ಇರುವುದು ಮಜ್ಜಿಗೆ ಮತ್ತು ನೀರು ಇವುಗಳಿಗಿರುವ ವಿಶ್ವಾಸವಲ್ಲ, ಹಾಲು ಮತ್ತು ನೀರು ಇವುಗಳಿಗಿರುವ ಬಾಂಧವ್ಯ. ಸಮಯ ಬಂದರೆ – ಬಂದರೇನು ? ಬಂದೇ ಬರುತ್ತೆ – ಒಂದು ಪಾತ್ರೆಯಲ್ಲಿ ನೀರು ಬೆರಸಿದ ಮಜ್ಜಿಗೆ ತುಂಬಿಟ್ಟರೆ ಸ್ವಲ್ಪ ಹತ್ತಿನಲ್ಲಿ ಮಜ್ಜಿಗೆ ತಳಕ್ಕಿಳಿದು ಬಚ್ಚಿಟ್ಟುಕೊಂಡು ಮೇಲೆ ಬರೀ ನೀರು ಉಳಿಸಿ ನೋಡಿದವರಿಗೆ ಬೇಸರ ತರುವಂತೆ ಮಾಡುತ್ತೆ. ಒಂದು ವೇಳೆ ಮೇಲಿನ ತಿಳಿ ನೀರನ್ನು ಕಲಕದೆ ತೆಗೆದರೆ 'ಕಳೆದ್ಹೋಯ್ದಂತೆ ಕುಣಿದಾಡುತ್ತೆ ದೊಡ್ಡದೊಂದು ಕಾಟ ತೊಂದ್ರೆ' ಅಂದುಕೊಳ್ಳುತ್ತೆ ಮಜ್ಜಿಗೆ. ಆದರೆ ಹಾಲು ಹಾಗಲ್ಲ. ಒಲೆ ಮೇಲೆ ಕುಳಿತು ಕಾಯುವಾಗ ನೀರು ಆವಿಯಾಗಿ ಅಮರವಾದರೆ ಹಾಲು ಮುಳು ಮುಳು ಅಳುತ್ತೆ. ತುಂಬ ತಡವಾದರೆ ನೀರೆಂಬ ನೀರೆಯಿಂದಗಲಿದ ವಿರಹ ತಾಳಲಾರದೆ ಆತ್ಮಾರ್ಪಣಕ್ಕೂ ಸಿದ್ಧವಾಗಿ ಅಗ್ನಿಪ್ರವೇಶ ಮಾಡುತ್ತೆ. ಅಲ್ಲಿ ಸಹಗಮನ ಅಲ್ಲದಿರಬಹುದು. ಆದರೆ ಅನುಗಮನವಂತೂ ಸತ್ಯ. ನೀರನ್ನು ಬೇರೆ ಮಾಡಿದ ಮಜ್ಜಿಗೆಗೆ ತನ್ನ ಬಾಳಗೆಳತಿಯ ಸಲುವಾಗಿ ಕಣದಷ್ಟೂ ಕಾಳಜಿ ಮಾಡುವುದಿಲ್ಲ.

ಹಾಲು ನೀರುಗಳಂತೆ ಆತ್ಮೀಯ ಭಾವತಳೆದ ಸ್ವಾರ್ಥ ಮತ್ತು ಸ್ನೇಹಲ ನಂಟು ಅನುಕರಣೀಯ ಅಲ್ಲ, ಅನನ್ಯವಂತೂ ಅಲ್ಲವೇ ಅಲ್ಲ. ಅವೆರಡರ ಅಂತರಂಗದ ಬೆಸುಗೆಯಲ್ಲಿ ಏನೋ ಎಂಥದೋ ಒಂದು ಅವಲೋಃ ಬೆರೆತಿದೆ ಎಂಬ ಗುಮಾನಿ. ಆದರೆ ಆ ತತ್ವವನ್ನು ಎಲ್ಲೆಡೆಯೂ ಅನ್ವಯಿಸ ಹೋಗುವುದು ಸುತಾರಾಂ ತಪ್ಪು. ಎಲ್ಲ ಸಿದ್ಧಾಂತಗಳಿಗೂ ಅಪವಾದ (Except ions) ಗಳಿದ್ದ ಹಾಗೆ ಇದಕ್ಕೂ ಅಪವಾದಗಳಿವೆ. ಅಂತಹ ಅಪವಾದಗಳಲ್ಲಿ ನನ್ನ ಆತ್ಮೀಯ ಮಿತ್ರರಾದ ಶ್ರೀ ಮಹಾಬಲೇಶ್ವರ ಭಟ್ಟರ ಸ್ನೇಹವೂ ಒಂದು.

ನನ್ನ ದೃಷ್ಟಿಯಲ್ಲಿ ಮಹಾಬಲೇಶ್ವರ ಭಟ್ಟ ಎಂಬುದು ಶುದ್ಧ ಸ್ನೇಹಕ್ಕಿರುವ ಪರ್ಯಾಯ ಪದ. ಭಟ್ಟರು ಅಜಾತಶತ್ರು. ಅಪ್ರಮೇಯ ಮಾನವಪ್ರೇಮಿಗಳು. ಹಣ, ಅಧಿಕಾರ, ಕೀರ್ತಿ, ಅಂತಸ್ತು ಇವು ಯಥೇಚ್ಛವಾಗಿದ್ದರೂ ಮನುಷ್ಯರಾಗೇ ಉಳಿದಿರುವ ಮಹಾನುಭಾವರು. ತಮ್ಮ ಹೃದಯಕ್ಕೆ ಹತ್ತಿರವಾದಸವರು ಎಂಬ ಭಾವನೆ ಮೂಡಿದರೆ ಸಾಕು ಭಟ್ಟರು ಅವರನ್ನು ತಮ್ಮ ಹೃದಯದಿಂದಲೇ ಅಪ್ಪಿ, ಆಲಂಗಿಸಿಕೊಂಡು. ಅವರಿಗಾಗಿ ಅಲ್ಲೊಂದು ಸ್ಥಳ ಮೀಸಲಿರಿಸುತ್ತಾರೆ. ಉತ್ಪ್ರೇಕ್ಷೆ ಎನಿಸದಿದ್ದರೆ ಅವರ ಒಡನಾಟ ಸ್ನೇಹ ಗಂಗೆಯಂತೆ ಪಾವನ, ಅಗ್ನಿಯಂತೆ ಪರಿಶುದ್ಧ. ಅವರದು ಬೆಲ್ಲವನು ಮೆದ್ದಂತಹ ಬಲ್ಲವರ ಒಡನಾಟ. 'ಓಹೋ! ಬನ್ನಿ ಮಾರಾಯ್ರೆ, ನಮ್ಮೂರಿಗೆ ಹೋಗುವ ಒಂದೆರಡು ದಿನ ಆರಾಮ ಇರಿ. ಇದ್ದದ್ದೇ ಜೀವನದಲ್ಲಿ ಜಂಜಾಟ' ಎಂಬ ಅವರ ಆತ್ಮೀಯ ನುಡಿಗಳಲ್ಲಿ ಕಿಲುಬೇ ಇಲ್ಲ. ಕಪು ಕಲ್ಮಶಗಳಿರದ ನಿರ್ವ್ಯಾಜ ಪ್ರೇಮ, ಸೌಜನ್ಯ, ಸೌಶೀಲ್ಯ, ಸಜ್ಜನಿಕೆ, ಸ್ನೇಹಪರತೆ ಇವುಗಳನ್ನು ಈ ದುಬಾರಿ ದಿನಗಳಲ್ಲಿ ಎಲ್ಲಿ ಕೊಂಡು ತರಲಿ! ಅವು ಭಟ್ಟರ ಅಂಗಡಿಯಲ್ಲಿ ಮಾತ್ರ ಸಿಗುವ ಸರಕುಗಳು. ಅಣ್ಣನ ಕ್ಷಮೆ ಬೇಡಿ ಹೇಳುವುದಾದರೆ –

**ಧರೆಯ ಮೇಲೆ ಅಂಗಡಿಯನ್ನಿಟ್ಟಿದ್ದಾನೆ**
**ಮಹಾಬಲೇಶ್ವರನೆಂಬ ಶೆಟ್ಟಿ**

---

*ಆತ್ಮೀಯರಾದ ಮಹಾಬಲೇಶ್ವರ ಭಟ್ಟರ ಸನ್ಮಾನ ಸಂದರ್ಭದ ಸುಸ್ಮತಿಯ ಕುರುಹಾಗಿ

**ಒಮ್ಮತವಾದರೆ ಒಡನೆ ನುಡಿವನು**
**ಇಮ್ಮನವಾದರೆ ನುಡಿಯನು**
**ಕಾಣಿಯ ಸೋಲ ಅದ್ದಗಾಣಿಯ ಗೆಲ್ಲ**
**ಜಾಣ ನೋಡಯ್ಯ ಶ್ರೀನಿವಾಸ ಉಡುಪ**

ಇಂತಹ ಸ್ನೇಹದ ಮೂಲಸೂತ್ರ ತಿಳಿದ ವ್ಯಕ್ತಿ ಅಂದರೆ –

**Be Slow in making Friends**
**and slower still in losing them**

ಎಂಬುದು ಭಟ್ಟರ ಸ್ನೇಹ ಸಂಹಿತೆ.

ಸಾಗರಕ್ಕೆ ಹೋದ ಸಾಹಿತಿಗಳು ಮಹಾಬಲೇಶ್ವರ ತೋಟದ ಮನೆಯಲಿ ಒಮ್ಮೆಯಾದರೂ ಊಟ ಮಾಡಿಲ್ಲ ಎಂದರೆ ಅವರು ಸಾಗರಕ್ಕೆ ಹೋಗಿಯೇ ಇಲ್ಲ ಎಂದು ಹೇಳಬೇಕಾಗುತ್ತದೆ. ಅ.ನ.ಕೃಷ್ಣರಾಯರಿಮದ ಹಿಡಿದು ನರಸಿಂಹಯ್ಯನವರವರೆಗೆ ಎಲ್ಲರೂ ಅವರ ಮನೆಯ ಉಪ್ಪುಂಡವರೆ! 'ಎಂಥ ಮರುಳಯ್ಯ ಇದು ಎಂಥ ಮರುಳು!' ಅನುಭವಿಸಿದ ನನಗೇಕೆ ? ಕೇಳಿದ ನಿಮಗೂ ಅಷ್ಟೇ ಅಚ್ಚರಿ ! ಮಹಾಭಲೇಶ್ವರ ಭಟ್ಟ ಆಮಥದೊಂದು ಆಶ್ಚರ್ಯದ ಶಿಶು !

ಮಿತಭಾಷಿ ಭಟ್ಟರಿಗೆ ಅತಿಯಾಸೆ ಇಲ್ಲ. ಅಂದಾಕ್ಷಣಕ್ಕೆ ಸಿದ್ಧಾರ್ಥ ಬುದ್ಧನಂತೆ ಆಸೆಯನ್ನೇ ನಾಶಗೈದವರಲ್ಲ. ಅವರು ಸ್ನೇಹಜೀವಿ, ಭ್ರಾತೃಪ್ರೇಮಿ, ವಾತ್ಸಲ್ಯಮೂರ್ತಿ, ಗೃಹದೇವತೆಯಂತಿರುವ ಶ್ರೀಮತಿ ಪದ್ಮಾವತಿ ಎಂಬ ನನ್ನಕ್ಕನಿಗೆ ಅಭಿಮಾನಿ ಗಂಡ, ಗೀತ, ಪುಷ್ಪ, ವಿಶ್ವನಾಥ, ರೋಹಿಣಿ, ಭಾಗ್ಯ, ತಿಮ್ಮಪ್ಪ– ಈ ಮಕ್ಕಳಿಗೆ ಅಕ್ಕರೆಯ ತಂದೆ. . .ಮೊಮ್ಮಕ್ಕಳಿಗೆ ಸಕ್ಕರೆಯ ತಾತ. . .ಸೊಸೆಯಂದರಿಗೆ 'ಬೆಲ್ಲದಂಥಾ ಮಾವ!' ಇವರ ಮನೆ ಒಂದು ಜೇನುಗೂಡು. ಮುಟ್ಟಿದೆಡೆಯಲ್ಲಿ ಪ್ರೀತಿ ವಾತ್ಸಲ್ಯಗಳ ಜೇನು ಹನಿಯುತ್ತದೆ. ಇವರದು 'ಬೆಚ್ಚನೆಯ ಮನೆ, ವೆಚ್ಚಕ್ಕೆ ಹೊನ್ನು, ಇಚ್ಛೆಯನರಿತು ನಡೆವ ಸತಿ, ರಾಮಲಕ್ಷ್ಮಣ ಭರತರಂತಹ ಸದ್ಭಾವ ಭಾಗೀರಥಿಯ ಮಕ್ಕಳು ಮತ್ತು ಸೊಸೆಯಂದಿರು. ಇವರಿಂದ ಕೂಡಿದ ಸ್ವರ್ಗ ! ಹೀಗಿರುವಾಗ ಸ್ವರ್ಗಕ್ಕೆ ಕಿಚ್ಚು ಹಚ್ಚುವಂತಹ ಸಿಂಗಾರ ಎಂದು ಬೇರೆ ಹೇಳಬೇಕೆ ?

ಭಟ್ಟರ ಮತ್ತು ನನ್ನ ಸ್ನೇಹ ಜನ್ಮಜನ್ಮಾಂತರದಲ್ಲ. ನಾವಿಬ್ಬರೂ ಲಂಗೋಟಿ ಫ್ರೆಂಡ್ಸೂ ಅಲ್ಲ. Birds of the same feather flocked together ಅಂದಂತೆ ಒಂದೇ ಮನೋಧರ್ಮದವರು. ಕುಡುಕ ಕುಡುಕರು ಬಹು ಬೇಗ ಸ್ನೇಹಿತರಾಗ್ತಾ ರಂತೆ. ಹಾಗೆ ವೀರ ವೀರರು ಮೆಚ್ಚಿ ಗೆಳೆಯರಾದುದುಂಟು. ಅದಕ್ಕೆ ಸಾಕ್ಷಿ ಪುರಾವೆಗಳಿವೆ, ಸಾಹಿತ್ಯಾಧಾರಗಳೂ ಇವೆ. ನೋಡಿ, ಟ್ರೋಜನ್ ವಾರ್‌ನಲ್ಲಿ ಟ್ರಾಯ್ ನಗರದ ಹೆಕ್ಟೇರನು ಸಲಾಮಿಸ್‌ನಿಂದ ಯುದ್ಧಕ್ಕೆ ಹೋಗಿದ್ದ ಏಜಾಕ್ಸ್‌ನ ಪರಾಕ್ರಮ ಕಂಡು, ಮೆಚ್ಚಿ, ತನ್ನಂತಹ ಶೂರನನ್ನು ಪೌರುಷ ಪ್ರದರ್ಶಿಸಿ ಆಶ್ಚರ್ಯಗೊಳಿಸಿದ್ದರಿಂದ, ತನ್ನ ಶತ್ರುಪಕ್ಷದ ಪರಮಶತ್ರು ಸೇನಾನಿಯೇ ಆಗಿದ್ದರೂ ಅವನಿಗೆ ತನ್ನ ಅಮೂಲ್ಯವಾದ ಖಡ್ಗವನ್ನಿತ್ತು ಗೌರವಿಸಿದನಂತೆ ! ಇದಲ್ಲವೆ ಶೂನ ಲಕ್ಷಣ. ಅದೇ ರೀತಿಯ ಕಾರ್ಯ ಸಂಪರ್ಕ 'ಗಿಲ್ಗಿಮಿಶ್ ' ಎಂಬ ಜಾನಪದ ಮಹಾಕಾವ್ಯವನ್ನು ಓದಿದರೆ ಎಲ್ಲಾ ಗೊತ್ತಾಗುತ್ತೆ. ಗಿಲ್ಗಿಮಿಶ್ ಯೂರಿಕ್ ದೇಶದ ಚಕ್ರವರ್ತಿ, ಅಸಹಾಯಶೂರ, ಅಧ್ಭುತ ಪರಾಕ್ರಮಿ. ಸೋಲು ಎಂಬ ಶಬ್ದವೇ ಅವನಿಗೆ ತಿಳಿದಿರಲಿಲ್ಲ. ಎಲ್ಲ ಗೆಲುವು ಎಲ್ಲೆಲ್ಲು ಗೆಲುವು. ಅವನ ಸೊಕ್ಕು ಮುರಿಯಲೆಂದೇ ದೇವರು ಎಂಕಿಡುವನ್ನು ಸೃಷ್ಟಿಸಿದ. ಎಂಕಡು ಹುಟ್ಟಿದ್ದು ಕಾಡಿನಲ್ಲಿ, ಬೆಳೆದದ್ದು ಕಾಡು ಮೃಗಗಳ ಜೊತೆಯಲ್ಲಿ. ಅವನ ದೇಹ ಬಟ್ಟೆ ಮುಟ್ಟಿರಲಿಲ್ಲ. ಮನುಷ್ಯರಂತೆ ಮಾತಿಲ್ಲ ಆಹಾರವೂ ಕಾಡುಪ್ರಾಣಿಗಳಂತೆ ಬೇಟೆ ಯಾಡಿ ತಂದ ಹಸಿಮಾಂಸ. ಅಂತಹ ಮಾನವ ಮೃಗವನ್ನು ಮನುಷ್ಯನನ್ನಾಗಿ ಮಾಡಲು ಯತ್ನ ನಡೆಯಿತು. ಓರ್ವ ದೇವ ದಾಸಿಯನ್ನು ಬೆತ್ತಲೆಯಾಗಿ ಅವನೆಡೆಗೆ ಬಿಡಲಾಯಿತು. ಅವಳ ಸಹವಾಸದಿಂದ ಎಂಕಿಡು ಹಸಿಮಾಂಸವನ್ನು ಬಿಟ್ಟು ಬೆಂದ ಮಾಂಸ ತಿನ್ನತೊಡಗಿದ. ಮೇಕೆ ಹಾಲು ಕುಡಿಯುವುದನ್ನು ಕಲಿತ. ಮಾನಮುಚ್ಚುಕೊಳ್ಳುವಷ್ಟು ಮರ್ಯಾದೆಯೂ ಅವನಿಗೆ ಬಂತು. ಆದರೆ ಐರಿಕ್ ನಗರದ್ವಾರದಲ್ಲಿ ಪ್ರವೇಶ ದೊರೆಯಲಿಲ್ಲ. ಸಾಮ್ರಾಟ ಗಿಲ್ಗಮಿಶ್‌ಗೂ ಎಂಕಿಡುವಿಗೂ ಹೋರಾಟ ನಡೆ ಯಿತು. ಪರಿಣಾಮವಾಗಿ ಕೋಟೆ ಬಾಗಿಲುಗಳು ಪುಡಿಪುಡಿಯಾದವು. ಅಗಸೆಯ ಬಳಿಯಿದ್ದ ಮರಗಳು ಬೇರು ಕಳೆದುಕೊಂಡು ಉರುಳಿದವು. ಬಂಡೆಗಳು ನುಚ್ಚು ನುರಿಯಾದವು. ಅಕ್ಷತೆಯ ಕಾಳಿನಂತೆ ನಕ್ಷತ್ರಗಳೂ ಪಳಪಳ ಉದುರಿದವು, ಸಪ್ತಸಾಗರಗಳು ಕುದಿದೆದ್ದವು. ಆದರೆ ಆ ದ್ವಂದಯುದ್ಧದಲ್ಲಿ ಯಾರೂ ಗೆಲ್ಲಲಿಲ್ಲ, ಯಾರೂ ಸೋಲಲಿಲ್ಲ. ಅವರಿಬ್ಬರ ಸಂಧಾನಕ್ಕೆ ಮುಂದಾಗುವ ಎದೆಗಾರಿಕೆ ಯಾರಿಗೂ ಇರಲಿಲ್ಲ. ಆದ್ದರಿಂದ ಆಕಸ್ಮಿಕ ಸಂದರ್ಭದಲ್ಲಿ ದರ್ಶಿಸಿದರೂ ರಾಮಕೃಷ್ಣರು ಸ್ವಾಮಿ ವಿವೇಕಾನಂದರನ್ನು ಗುರುತಿಸಿದಂತೆ ಗಿಲ್ಗಮಿಶ್ ಮತ್ತು ಎಂಕಿಡು ಒಂದಾದರು. ಪರಸ್ಪರ ಪರಾಕ್ರಮವನ್ನು ಮೆಚ್ಚಿಕೊಂಡರು. ಅನ್ಯೋನ್ಯ ಗೆಳೆಯರಾ ದರು. ಜಗತ್ತಿನ ಇತಿಹಾಸದಲ್ಲಿ ಕಾವ್ಯದಲ್ಲಾಗಲಿ ಕಾಣಸಿಗದಂಥಾ ಸ್ನೇಹ ಪ್ರಾಪ್ತವಾಯಿತು ಅವರಿಬ್ಬರಲ್ಲಿ. ಅನೇಕ ದಿನಗಳು ಹಾಗೆಯೇ ಬದುಕಿದರು. 'ಊಟ ಕರ್ಣ ಕೊಡೆ ಹಗಲಿರುಳಾಟ ಕರ್ಣನ ಕೊಡೆ' ಎಂಬಂತೆ ಎರಡು ದೇಹ ಒಂದೇ ಆತ್ಮ ಆದರು. ಇವರಿಬ್ಬರ ಸ್ನೇಹ ದೇವತೆಗಳನ್ನು ನಾಚಿಸಿತು. ಈಷ್ಟರ್ ಎಂಬುವಳ ಕುತಂತ್ರದಿಂದಾಗಿ ಎಂಕಿಡು ಅಕಾಲ ಮರಣಕ್ಕೆ ತುತ್ತಾದ. ತನ್ನ ಪ್ರಾಣ ಸ್ನೇಹಿತನನ್ನು ಬದುಕಿಸಲು ಗಿಲ್ಗಮಿಶ್ ಪಟ್ಟ ಸಾಹಸ ವ್ಯರ್ಥವಾಯಿತು. ಕಡೆಗೆ ಹುಟ್ಟು ಆಕಸ್ಮಿಕ ಮರಣ ಅನಿವಾರ್ಯ ಎಂಬ ಸಿದ್ಧಾಂತಕ್ಕೆ ಬರುತ್ತಾನೆ.

ನಾನು ತಿಳಿದಿದ್ದೆ ಸ್ನೇಹಕ್ಕೆ ಭರತ ತವರು ಎಂದು. ಭಾರತವನ್ನು ಬಿಟ್ಟರೆ ಜಗತ್ತಿನ ಬೇರಾವ ರಾಷ್ಟ್ರಕ್ಕೂ ಸ್ನೇಹದ ಅರ್ಥ ತಿಳಿದಿಲ್ಲ ಎಂದು. ನಮ್ಮ ಮಹಾಭಾರತದಲ್ಲಿ ಬರುವ ಕರ್ಣ ದುರ್ಯೋಧನರ ಮೈತ್ರಿಯ ಮುಂದೆ ಬೇರಾವ ಸ್ನೇಹವೂ ನಿಲ್ಲು ವುದಿಲ್ಲ ಎಂದು ಭಾವಿಸಿದ್ದೆ. ಆದರೆ ಅಮೆರಿಕೆಯಲ್ಲಿ ನನ್ನ ಮಗಳ ಮನೆಯಲ್ಲಿದ್ದಾಗ ನಾನು ಓದಿದ ಗಿಲ್ಗಿಮಿಶ್ ನನ್ನ ಸಂಕುಚಿತ ಭಾವನೆಯ ಕಣ್ಣು ತೆರೆಸಿತು. ಸ್ನೇಹ ಎಂಬುದಿದ್ದರೆ ಗಿಲ್ಗಿಮಿಶ್ ಮತ್ತು ಎಂಕಿಡುರುವರಂತಹ ನಿಃಸ್ವಾರ್ಥ, ನಿಷ್ಕಪಟ ಹಾಗೂ ಪವಿತ್ರ ಪ್ರಾಂಜಲ ಗೆಳತನದಂತೆ ಇರಬೇಕು ಅನ್ನಿಸಿತು. ಇವರ ಸ್ನೇಹಕ್ಕೆ ಹೋಲಿಸಿದರೆ ನಮ್ಮ ಮಹಾಭಾರತದ ಕರ್ಣ ದುರ್ಯೋಧನರ ಮೈತ್ರಿಯೂ ಪವಿತ್ರವಾದುದೆ. ಆದರೆ ಅವರ ಅವ್ಯಾಜ ಪ್ರೇಮವನ್ನು ಪ್ರಶ್ನಿಸುವ ಹುನ್ನಾರ ಕೃಷ್ಣನದಿತ್ತು. ಅದು ಕೈತವದ ಶಿಕ್ಷಾಗುರುವಿನ ತಂತ್ರ. ಸಂದರ್ಭ ತಮಗೆ ತಿಳಿದೇ ಇದೆ. ಆದರೂ ಒಂದು ಮತು ಹೇಳಲೆ ?

ಒಮ್ಮೆ ಕರ್ಣ ದುರ್ಯೋಧನರಿಬ್ಬರೂ ಬೇಟೆಗೆ ಹೋಗಿದ್ದರಂತೆ. ನಗರಕ್ಕೆ ಹಿಂತಿರುಗುವಾಗ ಗಂಗಾನದಿಯ ತಟದಲ್ಲಿ ಸತ್ಯಂತಪ ಮಹಾಮುನಿಗಳ ಆಶ್ರಮವನ್ನು ಪ್ರವೇಶಿಸಿದರು. ದರ್ಶನಾಶೀರ್ವಾದಗಳಿಗಾಗಿ ಮುನಿಗಳ ಮುಂದೆ ನಿಂತಾಗ ಸತ್ಯಂತ ಪರು ಒಂದೇ ಒಂದು ಆಸನ ತರಿಸಿ, 'ಕರ್ಣ ಕುಳಿತುಕೋ ಅಪ್ಪ' ಅಂಸರು. ಅದರಿಂದ ಅಪಮಾನಿತನಾದನೆಂದು ಭಾವಿಸಿದ ದುರ್ಯೋಧನ ಏನೋ ಒಂದು ನೆಪ ಹೇಳಿ ಕರ್ಣನನ್ನು ಆಸ್ರಮದಿಂದ ಹೊರಗೆ ಕಳುಹಿಸಿ, ಮುನಿಗಳನ್ನು ತರಾಟೆಗೆ ತೆಗೆದು ಕೊಂಡ : 'ನಾನಿರೆ ನಿಮಿದೇಕೆ ದಯಗೆಯ್ದಿರೊ ಮೀಂಗುಲಿಗಂಗೆ' ಎಂದು ಇಲ್ಲಿನ 'ಅನಿರೆ' ಎಂಬ ಮೂರಕ್ಷರದ ಶಬ್ಧದಲ್ಲಿ ದುರ್ಯೋಧನನ ಅಹಂಭಾವನೆ ಮೂರ್ತಿಮತ್ತಾಗಿ ನಿಂತಿರುವುದನ್ನು ಕಾಣಬಹುದು. 'ಅನಿರೆ' ಅಂದರೆ ಚಕ್ರವರ್ತಿ ಸಾರ್ವಭೌಮ ನಾನಿರಬೇಕಾದರೆ ನನ್ನ ಸಾಮಂತನಿಗೇಕೆ ಅಗ್ರಸ್ಥಾನ ? ಅನಿರೆ ಅಂದರೆ ಸತ್ಕುಲ ಪ್ರಸೂತನೂ ಸದ್ವಂಶಸಂಜಾತನೂ ಆದ ನಾನಿರಬೇಕಾದರೆ ಹೀನಕುಲದವನಾದ ಕರ್ಣನಿಗೇಕೆ ಮೊದಲ ಮನ್ನಣೆಯ ಮಣೆ?

ದುರ್ಯೋಧನನ ಈ ದುರ್ಭಾವನೆಗಳಿಗೆ ಉತ್ತರವಾಗಿ ಸತ್ಯಂತಪರು ತಿಳಿಯ ಹೇಳಿದರು. 'ಕರ್ಣ ಯಾರೆಂದು ತಿಳಿದಿ ದ್ದೀಯೆ? ಅವನು ಕುಂತು ಚೊಚ್ಚಿಲ ಕಂದ, ಸೂರ್ಯಾಂಶಸಂಭೂತ. ಕೌರವರಾದ ನಿಮಗೂ ಧರ್ಮರಾಯಾದಿ ಪಾಂಡವ ರಿಗೂ ಹಿರಿಯ. ಅವೇ ಈ ಸಾಮ್ರಾಜ್ಯ ಪಟ್ಟ ಪದವಿಗಳಿಗೆ ಹಕ್ಕುದಾರ' ಅಂದಾ ದುರ್ಯೋಧನ ಬುದ್ಧಿ ಅಂದುಕೊಂಡಿತು 'ಮುಳ್ಳೊಳೆ ಮುಳ್ಳ ಪಾಟಿಸುವೆನೆಂದು (ಮುಳ್ಳಿನಿಂದಲೇ ಮುಳ್ಳನ್ನು ತೆಗೆಯುತ್ತೇನೆ) ಅಂದರೆ ಪಾಂಡವನಾದ ಕರ್ಣನಿಂದಲೇ ಪಾಂಡವರ ನಾಶ ಮಾಡಿಸುತ್ತೇನೆ' ಎಂದು.

ನನ್ನ ಮತ್ತು ಭಟ್ಟರ ಸ್ನೇಹ ಕರ್ಣ ದುರ್ಯೋಧನರದ್ದಲ್ಲ. ಗಿಲ್ಗಮಿಶ್ ಮತ್ತು ಎಂಕಿಡುರವರದ್ದು ಅಲ್ಲ. ನಮ್ಮದು ಅವ್ಯಾಜ ಮೈತ್ರಿ. ಅನಿಮಿತ್ತ ಬಂಧುತ್ವ.

ನಮ್ಮಿಬ್ಬರ ಪ್ರಥಮ ಸಮಾಗಮ ಶಿವಮೊಗ್ಗೆಯಲ್ಲಿ, ನಾನಿದ್ದ ಬಾಡಿಗೆ ಮನೆಯಲ್ಲಿ. ಅಂದು ರಾಷ್ಟ್ರಕವಿ ಕುವೆಂಪುರವರ ಅರವತ್ತನೆಯ ಹುಟ್ಟು ಹಬ್ಬದ ಆಚರಣೆ. ಅದ್ದೂರಿಯ ಕಾರ್ಯಕ್ರಮ ಕವಿವರ್ಯರ ತೌರೂರಾದ ಶಿವಮೊಗ್ಗೆಯಲ್ಲಿ. ಅರವತ್ತರ ಅಭಿನಂದನೆಗಾಗಿ ರಚಿತವಾದ ಸಮಿತಿಯಲ್ಲಿ ನಾನು ಮತ್ತು ನನ್ನ ಗೆಳೆಯ ಕೆ. ನಾಗೇಂದ್ರಪ್ಪ ಕಾರ್ಯದರ್ಶಿಗಳು. ವರಕವಿ ಬೇಂದ್ರೆಯವರನ್ನು ಅಂದಿನ ಸಮಾರಂಭಕ್ಕೆ ಅತಿಥಿಯಾಗಿ ಕರೆದಿದ್ದೆವು. ಕವಿದ್ವಯರನ್ನು ಸಭೆಗೆ ಪರಿಚಯಿಸುವ ಹೊಣೆ ನನ್ನದಾಗಿತ್ತು. ಅದ್ಭುತವಾಗಿ, ಅಲಂಕಾರಿಕ ಭಾಷೆಯಲ್ಲಿ, ಕಾವ್ಯಮಯ ಶೈಲಿಯಲ್ಲಿ ಪರಿಚಯಿಸಿದೆ. ಸಹಸ್ರಾರು ಜನರ ಸಭೆ ಅಂದು ಮಂತ್ರಮುಗ್ಧವಾಗಿತ್ತು. ನಾನು ಬಾಯಿಬಡುಕ ಅಲ್ಲ. ಮಾತುಬಲ್ಲವ ಎಂಬುದು ಸಾಬೀತಾಯಿತು. ವೇದಿಕೆಯಮೇಲಿದ್ದ ನನ್ನನ್ನು ನೋಡಿ, ನುಡಿ ಕೇಳಿ ಮೆಚ್ಚಿದ ಮಹಾಬಲೇಶ್ವರ ಭಟ್ಟರು ತಮ್ಮೂರಿನ ಅಂದರೆ ಸಾಗರದ ಶ್ರೀನಿವಾಸ ಉಡುಪ, ಮಧ್ಯಸ್ಥ, ಪಂಪಣ್ಣ ಮೊದಲಾದವರ ಕೂಡೆ ಸಾಹಿತಿಗಳ ತಂಡವನ್ನೇ ಕರೆತಂದರು ನನ್ನ ಮನೆಗೆ ಮಾರನೆಯ ದಿನ. ಅಂದಿನಿಂದ ನನ್ನ ಮತ್ತು ಸಾಗರದ ಸಂಬಂಧ ಬೆಳೆಯಿತು. ಅದು ಇಂದಿಗೂ ಉಳಿದಿದೆ. ಎಂದಿಗೂ ಉಳಿಯುತ್ತೆ. ಅದರ ರೂವಾರಿ ಬಹುಮುಖ ಪ್ರತಿಭೆಯ ಕಾಯಕಯೋಗಿ ಶ್ರೀ ಮಹಾಬಲೇಶ್ವರ ಭಟ್ಟರ ಮತ್ತು ನನ್ನ ನಂಟು ಅಚ್ಚಳಿಯದೆ ಉಳಿದಿದೆ. ಈ ಜನ್ಮವಿರುವವರೆಗೂ ಅದು ಹಚ್ಚ ಹಸುರಾಗಿ, ಹೊಚ್ಚ ಹೊಸದಾಗಿ ಉಳಿಯುವಂಥದು. ಅಷ್ಟೇ ಅಲ್ಲ ಚಂದ್ರಮತಿ ಕೇಳಿಕೊಂಡಳಂತೆ ಜನ್ಮ ಜನ್ಮಾಂತ ರವೂ ಸತ್ಯ ಹರಿಶ್ಚಂದ್ರನೇ ತನ್ನ ಪತಿಯಾಗಲಿ ಎಂದು. ನಾನೂ ಆಸಿಸುತ್ತೇನೆ ಮುಂದಿನ ಜನ್ಮಗಳಲ್ಲೂ ಅಕ್ಕರೆಯ ಅಭಿಮಾನಿ ಮಹಾಬಲೇಶ್ವರ ಭಟ್ಟರ ಸ್ನೇಹ ಲಭಿಸಲಿ ಎಂದು.

ಓಂ ತತ್ ಸತ್

# ಚಿತ್ರಲೋಕದ ಚೈತ್ರ*

==========================================================================

"ಚಲನಚಿತ್ರ ಲೋಕ ಒಂದು ವಿಚಿತ್ರ ಲೋಕ ಅದನ್ನು ಪ್ರವೇಶಿಸಿದರೆ ಉಸುಬಿನ ಹೊಂಡದಲ್ಲಿ ಕಾಲಿರಿಸಿದಂತೆ. ಮೇಲೆತ್ತಿ ದಷ್ಟೂ ಕಳ್ಳ-ಉಸುಬು ಕೆಳಗಿಳಿಸುತ್ತಲೇ ಹೋಗುತ್ತದೆ. ಅದರಿಂದೆದ್ದು ಬರುವುದೇ ಕಷ್ಟ. ಬಂದರೂ ಗೌರವದಿಂದ ಬಾಳುವುದು ಮತ್ತೂ ಕಷ್ಟ. . .ಅದೊಂದು ಉಸುಬಿನ ಹೊಂಡ ಅಂದೆ – ಅಲ್ಲ ಅದೊಂದು ಜೇಡನ ಬಲೆ. ಬಲೆಯನ್ನು ದೂರದಲ್ಲಿದ್ದು ನೋಡೋದು ಚೆಂದ. ಅದರಲ್ಲಿ ಸಿಕ್ಕಿ ಕೊಂಡ ಪ್ರಾಣಿ ಯಾವುದೂ ಬದುಕಿ ಬಂದಿಲ್ಲ. ಎಲ್ಲೋ ಒಂದೋ ಎರಡೋ ಗಟ್ಟಿ ಜೀವಿಗಳು. ಬಲೆ ಹರಿದು ಹೊರಗೆ ಬಂದಿವೆ. . .ಆ ಜೇಡನ ಬಲೆಗೆ ನೀವು ಎಷ್ಟೇ ಸುರೀರಿ, ಅದು ಸೋರ್ತಾನೆ ಇರುತ್ತೆ. ಕಡೆಯ ಪಕ್ಷ ಜರಡಿಯ ಹಾಗೆ ಒಂದಷ್ಟು ಗಸೀನೂ ಉಳಿಸೋಲ್ಲ."

ಇದು ಕೊರಟಿಯವರ ಸ್ವಾನುಭವದ ಮಾತು.

'ಏಕೆ ಕೊರಟಿಯವರೆ. ನಿಮ್ಮ 'ಮಿಸ್ ಲೀಲಾವತಿ' ಸಾಕಷ್ಟು ಜಯಭೇರಿ ಬಾರಿಸಿತು. ಕೀರ್ತಿ ತಂದದ್ದು ಕಾಂಚಾಣ ತರಲಿಲ್ಲವೇ?'

'ಎಲ್ಲಿ ಬಂತು ! ಅಜ್ಜಿ ನೂತದ್ದಕ್ಕೂ, ಅಜ್ಜ ನೆಯ್ದದಕ್ಕೂ ಸರಿಹೋಯತು! ಚಿತ್ರಮಂದಿರಗಳಿಂದ ಮುಂಗಡ ಪಡೆದ ಸಾಲಕ್ಕೆ ಸಿಂಹಪಾಲು, ನಿರ್ದೇಶಕನಿಗೆ ನರಿ ಪಾಲು, ನಿರ್ಮಾಪಕನಿಗೆ ಕುರಿಪಾಲು! ಕಡೆಗೆ ಎಲ್ಲಾ ದಿಕ್ಕಾಪಾಲು ! ಸಾಲಗಾರು ಯಾರೂ ನನ್ನ ತಮ್ಮನ (ಕೆ. ಎಸ್. ಜಗನ್ನಾಥ್) ಮನೆ ಬಾಗಿಲಿಗೆ ಬರದಿದ್ದರೆ ಅಷ್ಟೇ ಪುಣ್ಯ !'

'ಹಾಗೇ. . .ಆ ಎರಡನೇ ಚಿತ್ರ. ಅದೂ ಚಿಂತಾಜನಕ ಅಲ್ಲವೆ ?'

'ಓ, ಯಾವುದು?. . .ನಾವೂ ನೀವೂ ಹೋಗಿದ್ದೆವಲ್ಲ ಹುಚ್ಚಾಸ್ಪತ್ರೆಗೆ ಅದೇ?'

'ಅಲ್ಲಾ ರಾಯರೆ, ಹುಚ್ಚಾಸ್ಪತ್ರೇ ರಸ್ತೇಲಿದ್ದ ಓಂಕಾರ್ ಸ್ಟುಡಿಯೋಕ್ಕೆ ಅನ್ನಿ'

'ಹೂಂ. . .ಕ್ಷಮಿಸಿ. . .ಅದೇ. . .ಅಲ್ಲಿ 'ಸೇಡಿನ ಕಿಡಿ' ತೆಗೆದ ನನ್ನ ತಮ್ಮ, ಅದೂ ಗೊಟಕ್ ಅಂದುಬಿಡ್ತು.'

'ಯಾಕೆ?'

'ಅದು ಬೇಗ ರಿಲೀಸ್ ಆಗಲಿಲ್ಲ. ರಿಲೀಸ್ ಆದಮೇಲೆ ಕ್ಲಿಕ್ ಆಗ್ಲಿಲ್ಲ . .ಹೋಗೇಬಿಡ್ತು. . .'

'ಸಬ್ಸಿಡಿ?'

'ಅಯ್ಯೋ, ಆಗ ಕೊಡ್ತಿದ್ದಿದ್ದು ಐವತ್ತು ಸಾವರ! ಅದಯ ಯಾವ ಮೂಲೇಗೆ? ಮಿಸ್ ಲೀಲಾವತಿಯನ್ನ – ಅದೇ ಆ ಪಾತ್ರದಿಂದ ಖ್ಯಾತಿ ಪಡೆದ ಜಯಂತಿಯನ್ನ ಒಪ್ಪಿಸೋಕೆ, ಮದರಾಸಿನಿಂದ ಕರೆದುಕೊಂಡು ಬರೋಕೆ, ಅದ್ಕೆ, ಇದ್ಕೆ ಅಂತಾ ಮೊದಲನೇ ದಿನಕ್ಕೆ ಐವತ್ತು ಸಾವಿರ ಚಟ್! ಅದು ಕೈಗೆ ಬರೋ ಮೊದಲೇ ಗುಳುಂ ! ಉಳಿದದ್ದಕ್ಕೆಲ್ಲಾ ನನ್ನ ತಮ್ಮನೇ ತಲೆ ಕೊಡಬೇಕಾಗಿ ಬಂತು.'

---

*ಖ್ಯಾತ ಕಾದಂಬರಿಕಾರ ಶ್ರೀ ಕೊರಟಿ ಶ್ರೀನಿವಾಸರಾವ್

ಕೊರಟಿ ಕೊರಗಿದರು ಬೆಂಗಳೂರು ಚಾಮರಾಜಪೇಟೆಯ ಶಂಕರಮಠದ ಪಾವಟಿಗೆಯ ಮೇಲೆ. ಅದು ನಮ್ಮ ನಿತ್ಯದ ಸಭಾವೇದಿಕೆ.

'ನೋಡಿ ಇವರೆ (ಮಾತೆತ್ತಿದರೆ 'ನೋಡಿ ಇವರೆ' ಎನ್ನುವುದು ಕೊರಟಿಯವರ ವ್ಯಕ್ತಿ ವೈಶಿಷ್ಟ್ಯ) ಇಷ್ಟು ಬೇಗ ಗೃಹಿಣೀಗೆ ಗಿರಾಕಿ ಬರುತ್ತೆ ಅಂತಾ ನಾನು ಕನಸು ಮನಸಿನಲ್ಲೂ ಎಣಿಸಿರಲಿಲ್ಲಾ.'

'ಯಾವ 'ಗೃಹಿಣೀಗೆ'? ಎಂಥಾ ಗಿರಾಕಿ ರೀ?

'ಕ್ಷಮಿಸಿ, ನನ್ನ 'ಗೃಹಿಣೀ' ಕಾದಂಬರೀಗೆ. . .ಹ್ಹೆ ಹ್ಹೆ ಹ್ಹೆ !!'

‘ಕಾದಂಬರಿಗೋ? ಸರಿ. . .ಏನು ಬಂತು ? ಯಾರಾದರೂ ಹತ್ತು ಪುಸ್ತಕ ಕೊಂಡುಕೊಂಡರೇನು?

‘ಇಲ್ಲಾರೀ ಅದನ್ನು ಆಧರಿಸಿ ಸಿನೆಮಾ ತೆಗೀತೀನಿ ಅಂತಾ ಒಬ್ಬರು ಬಂದಿದ್ದಾರೆ. ನಾಳೆ ಸಂಜೆ ಬನ್ನಿ ಮರೆಯದೆ, ವ್ಯವಹಾರ ಮುಗಿಸಿಬಿಡೋಣ’

ಮಾರನೆಯ ದಿನ ವ್ಯವಹಾರ ಮುಗಿಯಿತು. ಈಗ ಎರಡು, ಮುಂದೆ ಮೂರು, ಒಟ್ಟು ಐದು ಸಾವಿರ ಅಂತಾ ತೀರ್ಮಾನಕ್ಕೆ ಬಂತು. ಚಿತ್ರಕಥೆ ಸಿದ್ಧವಾಯಿತು. ಅದರಲ್ಲಿ ‘ಸ್ವಪ್ನ ವಾಸವದತ್ತಾ’ ದೃಶ್ಯರೂಪಕ ಅಳವಟ್ಟು, ಆ ಷೆಡ್ಯೂಲ್ ಶ್ರೀ ಚಾಮುಂಡೇಶ್ವರಿ ಸ್ಟುಡಿಯೋದಲ್ಲಿ, ವರ್ಣದಲ್ಲಿ ಎಂದು ಗೊತ್ತಾಗಿತ್ತು (ಆ ದಿನಗಳಲ್ಲಿ ವರ್ಣಚಿತ್ರಗಳೇ ಇರಲಿಲ್ಲ).

‘ನೋಡಿ ಇವರೆ, ನಿರ್ಮಾಪಕ ನಿರ್ದೇಶಿಕರಿಗೆಲ್ಲಾ ಕೇಳಿಕೊಳ್ತೇನೆ. ನೀವು ಬರೆದು ಶಿವಮೊಗ್ಗ, ಭದ್ರಾವತಗಳ್ಲಿ ಪ್ರದರ್ಶಿಸಿದ ಆ ನಿಮ್ಮ ‘ಸ್ವಪ್ನವಾಸವದತ್ತಾ ಅಪೇರಾ’ ವನ್ನು ಈ ಗೃಹಿಣೀ ಚಿತ್ರದಲ್ಲಿ ಅಳವಡಿಸೋಣ ಅಂತಾ ಆಸೆ. ನಿಮ್ಮ ಆ ಕಲಾಕೃತಿಯಿಂದ ಚಿತ್ರಕ್ಕೆ ಖಂಡಿತ ಕಳೆ ಬರುತ್ತೆ ಅಂತ ನನ್ನ ಭಾವನೆ.’

‘ಹಾಗೇ ಆಗಲಿ, ಅವಕಾಶವಿದ್ದರೆ ಔಚಿತ್ಯ ಕಂಡರೆ ಬಳಸಿಕೊಳ್ಳಿ, ಬೇಡವೆಂದವರಾರು ?’

‘ಗೃಹಿಣಿ’ ಚಿತ್ರೀಕರಣದ ವೇಳೆಯಲ್ಲಿ ಆಗಾಗ ನಾವಿಬ್ಬರೂ ಸ್ಟುಡಿಯೋಕ್ಕೆ ಹೋಗುತ್ತಿದ್ದುದುಂಟು. ಆ ದಿನ ನಮಗೆ ಹಬ್ಬ! ಅದು ಸ್ವಪ್ನವಾಸವದತ್ತಾ ಸೆಟ್ ಹಾಕಿದ್ದ ದಿನ. ಸೆಟ್ ಹಾಕಿದ್ದಾತ ಓರ್ವ ಮುಸಲ್ಮಾನ ಬಂಧು. (ಆತನ ಹೆಸರು ಮರೆತು ಹೋಗಿದೆ). ಆತ ತುಂಬಾ ಪ್ರತಿಭಾವಂತ. ನೆಲದಲ್ಲೆಲ್ಲಾ ಬಣ್ಣ ಬಣ್ಣದ ರಂಗವಲ್ಲಿ ರಚನೆ, ಸುತ್ತೆಲ್ಲಾ ಪುಷ್ಪಾಲಂಕಾರ, ಮೇಲೆ ಭುವನೇಶ್ವರಿಯ ವೈಭವದ ವಿನ್ಯಾಸ ಎರಡೂ ಕಣ್ಣು ಸಾಲವು! ಅದರ ರಮ್ಯ ಚಿತ್ರೀಕರಣ ನೋಡಿ ಆನಂದಿಸಿದೆವು.

ಕೊರಟಿಯವರು ಚಿತ್ರ ಸಾಹಿತಿಯಾಗಿ ಸಂತೋಷಾನೂ ಪಟ್ಟಿದ್ದಾರೆ, ಸಂಕಟಾನೂ ಪಟ್ಟಿದ್ದಾರೆ.

ಅವರ ಒಂದೇ ಒಂದು ಕಹಿ ಅನುಭವ :

ಅದು ‘ಇಮ್ಮಡಿ ಪುಲಕೇಶಿ’ ತೆರೆ ಕಂಡ ದಿನ. ನಾವಿಬ್ಬರೂ ನೋಡಿ ಬಂದೆವು. ಚಿತ್ರೀಕರಣ, ನಿರ್ದೇಶನ, ಹಿನ್ನಲೆಗಾಯನ ಎಲ್ಲಾ ಮೆಚ್ಚಾಯಿತು. ಆದರೆ ಕೊರಟಿಯವರ ‘ಪರಮೇಶ್ವರ ಪುಲಕೇಶಿ’ ಕಾದಂಬರಿಯ ಅನೇಕ ಅಂಶಗಳನ್ನು ಚಿತ್ರದಲ್ಲಿ ಮೆರೆದಾಡುತ್ತಿದ್ದವು. ಅವುಗಳಲ್ಲಿ ಮುಖ್ಯವಾದದ್ದು ‘ಚಂದ್ರೋಜ ನಾಗಶ್ರೀ’ ಪ್ರಕರಣ. ಇದು ಕೊರಟಿಯವರ ಸ್ವಂತ ಸೃಷ್ಟಿ. ಅವರ ಪ್ರತಿಭೆಯಿಂದ ಮಿಂಚಿ ಬಂದ ಕಲಾಕುಸುಮ. ಅದನ್ನು ಸಿನೆಮಾದವರು ಮುಡಿದುಕೊಂಡು ಬಿಟ್ಟಿದ್ದರು.

ಕೊರಟಿಯವರಿಗೆ ಸಿಟ್ಟು ಅಲ್ಲ ಸಂಕಟ ಆಯ್ತು. ‘ನನ್ನನ್ನು ಒಂದು ಮಾತು ಕೇಳಿದ್ದರೆ ಸಂತೋಷವಾಗಿ ಬಳಸಿಕೊಳ್ಳಿ ಅಂತಿದ್ದೆ. ಅವರು ಒಂದು ಬಿಡಿಕಾಸು ಸಂಭಾವನ್ಯನ್ನೂ ಕೊಡಬೇಕಾಗಿರಲಿಲ್ಲ. ನನ್ನ ಹೆಸರನ್ನು ಸ್ಮರಿಸಿಕೊಳ್ಳದಿದ್ದರೂ ನಮಗೆ ಬೇಸರ ಆಗುತ್ತಿರಲಿಲ್ಲ. ಈಗ ನೋಡಿ ಹೇಳಲಿಲ್ಲ ಕೇಳಲಿಲ್ಲ. ತಮ್ಮದೇ ಅನ್ನೋ ರೀತಿಯಲ್ಲಿ ಟಾಂ ಟಾಂ ಹೊಡೀತಿದಾರೆ. . . ಇದೆಂಥಾ ಅನ್ಯಾಯ ?’

‘ಹೌದು, ಇದರ ಬಗ್ಗೆ ನೀವು ತಿಳಿಯುವ ಪ್ರಯತ್ನ ಮಾಡಲಿಲ್ಲವೆ?’

‘ನನಗೇನು ಕನಸು ಬೀಳಬೇಕೇ?’

‘ಹಾಗಲ್ಲ. . .ಇಷ್ಟು ದಿವಸ ನೀವು ಈ ಗರಡಿಗೆ ಬಂದದ್ದೂ ವ್ಯರ್ಥ. ಕುಸ್ತಿ ಪಟ್ಟೆ ತಿಳೀಲಿಲ್ಲ. ನಾನು ವಕೀಲ ಅಲ್ಲ. ಹೋಗಲಿ, ಆದರೂ ಮದರಾಸಿಗೆ ಹೋಗಿ ಬರಬೇಕಿತ್ತು. ನನ್ನ ಪುಸ್ತಕದಿಂದ ಏನಾದರೂ ತೆಗದುಕೊಂಡಿದ್ದರೆ ದಯವಿಟ್ಟು ಈಗಲೇ ತಿಳಿಸಿಬಿಡಿ. ನನಗೆ ಹೆಸರಿನ ಆಸೆ ಇಲ್ಲ. ಹಣದ ಮೇಲೆ ಮೋಹ ಇಲ್ಲ. ಆದರೆ ನನ್ನ ಲಿಖಿತ ಒಪ್ಪಿಗೆ ಪಡೆಯಲೇ ಬೇಕು. ಒಂದುವೇಳೆ ಕೃತಿಚೌರ್ಯ ಆಗಿದ್ದರೆ ಪರಿಣಾಮ ನೆಟ್ಟಗಿರುವುದಿಲ್ಲ ಹಾಗೆ – ಹೀಗೆ ಅಂತಾ ‘ಎದ್ದರೆ ಆಳಲ್ಲ’ ಅನ್ನೋ ಹಾಗೆ ಬರೀಬೇಕಿತ್ತು. ಈಗ ಪ್ರದರ್ಶನಕ್ಕೆ ಬಂದು ಹತ್ತು ದಿನದ ಮೇಲೆ ಕುಯ್ಯೋ ಮುಯ್ಯೋ ಅಂದ್ರೆ?’

ಕೊರಟಿ ಸುಮ್ಮನಾದರು. ಅವರ ಬೆಂದ ಮನದ ಮೇಲೆ ಉಪ್ಪು ಸುರಿದೆ ಅನ್ನಿಸಿತು. ವಿಷಯಾಂತರ ಮಾಡಿ ಮನೆಗೆ ಕಳುಹಿಸಿದೆ. ಮೂರು ದಿನ ಕಳೆಯಿತು.

ನಮ್ಮ ಅವರ ಮೀಟಿಂಗಿನಲ್ಲಿ ‘ಇಮ್ಮಡಿ ಪುಲಕೇಶಿ’ ಬಂದ, ಕೊರಟಿ ಲಾಯರ್ ನೋಟೀಸ್ ಕೊಡಿ, ಕೇಸ್ ರಿಜಿಸ್ಟರ್ ಮಾಡಿಬಿಟ್ಟರು. ನಾನೂ ಒಬ್ಬ ಸಾಕ್ಷಿ ಸಾಹಿತ್ಯದ ಸತ್ಯಾಂಶ ಹೇಳಲು.

ಕೇಸು ಮುಂದುವರಿಯಿತು.

ಎರಡು ಮೂರು ‘ಹೀರಿಂಗ್’ ಆದವು.

ಕೊರಟಿಯವರಿಗೆ ಅಲೆದು ಬೇಸರ ಬಂತು. ಹೇಳಿದರು –

'ನೋಡಿ ಇವರೆ, ನಾನಿದಕ್ಕೇಕೆ ಕೈ ಹಾಕಿದೆ?' ಅಂತಾ.

'ನಾನು ಮೊದಲೇ ಹೇಳಿದೆ. ಆದರೆ ಸ್ನೇಹಿತನಾಗಿ ಒಂದು ಸತ್ಯಕ್ಕೆ ಸಾಕ್ಷಿ ಹೇಳು ಅಂತಾ ಕರೆದರೆ ಬರಲಿಲ್ಲ ಅಂತಾ ಎಲ್ಲಿ ಅಂದುಕೊಳ್ತೀರೋ ಅಮದ ನಾನು ಸುಮ್ಮನೆ ಹೂಂಗುಟ್ಟಿದೆ. ನೋಡೀ, ಕೋರ್ಟ್ ಬದುಕು ನಮಗೂ ನಿಮಗೂ ಹೇಳಿಸಿದ್ದಲ್ಲ. ಕೇಸ್ ವಾಪಸ್ ತೆಗೆದುಕೊಂಡು ಬಿಡಿ.'

'ನಿಮ್ಮ ಬುದ್ಧಿವಾದ ಒಳ್ಳೇದೇ, ತಕ್ಕೋತೇನೆ. ಅದರೆ ನನ್ನ ಸಂಕಟ ಇಷ್ಟೇ ನೋಡಿ ಇವರೆ, ಎಷ್ಟೇ ವೇದಾಂತ ಓದಿದರೂ ನಾನು ಮುಗ್ಗರಿಸಿಬಿಟ್ಟೆ. ಅಪರಾಧಕ್ಕೆ ಶಿಕ್ಷೆ ಆಯಿತು. ಇಂದಿಗೆ ಅದಕ್ಕೆ 'ಇತಿಶ್ರೀ' ಹಾಡ್ತೇನೆ.

ಕೇಸ್ ವಾಪಸ್ ತೆಗೆದುಕೊಂಡ ಮೇಲೆ ಅವರ ಆನಂದ ಹೇಳತೀರದು. ಇಂವೆಷ್ಟೋ ಸಿಹಿ–ಕಹಿ ಅನುಭವಗಳು ಕೊರಟಿ ಯವರಿಗೆ. ಆದರೆ ಕಲೆ, ಆಧ್ಯಾತ್ಮ ವಿಚರ ಪ್ರಸ್ತಾಪವಾದರೆ ಎಲ್ಲಾ ದುಃಖ ಮರೀತಿದ್ದರು.

ಮಿಸ್. ಲೀಲಾವತಿ ರಿ–ರಿಕಾರ್ಡಿಂಗ್‌ಗೆ ಮದರಾಸಿಗೆ ಹೋಗಿದ್ದಾಗ ಶ್ರೀ ಕುವೆಂಪುರವರ 'ದೋಣಿ ಸಾಗಲಿ ಮುಂದೆ ಹೋಗಲಿ' ಎಂಬ ಕವನದ ಲಾಲಿತ್ಯ, ಸಾಂದರ್ಭಿಕ ರಾಗ ಸಂಯೋಜನೆ, ಸನ್ನಿವೇಶ, ಎಲ್ಲ ಮೆಚ್ಚು. ಕೇಳಿದಷ್ಟೂ ಸವಿ ಅವರಿಗೆ. ಹೇಳುತ್ತಿದ್ದರು – ಈ ಚಿತ್ರದಲ್ಲಿ ಶ್ರೀ ಸಿ. ಅಂಕಪ್ಪನವರ 'ಕಲ್ಲಿನಲಿ ಕೆತ್ತಿದನು ಶಿಲ್ಪಿಯವ ಶಿವನ' ಗೀತೆ ಬರಬೇಕಿತ್ತು. ಏಕೋ ಬರಲಿಲ್ಲ – ಎಂದು.

ಕನ್ನಡ ಕಲಾಲೋಕಕ್ಕೆ ಸಂಖ್ಯೆಯಲ್ಲೂ ಸತ್ವದಲ್ಲೂ ಗಣನೀಯ ಕೃತಿಗಳನ್ನು ಕೊಟ್ಟ ಶ್ರೀ ಕೊರಟಿ ಶ್ರೀನಿವಾಸರಾಯರು ಇನ್ನಿಲ್ಲ. ಚಿತ್ರರಂಗದ ಚೈತ್ರ ಇನ್ನಿಲ್ಲ ; ನನ್ನ ಅನಿಮಿತ್ತ ಬಂಧು, ನನ್ನಣ್ಣ 'ಸೀನಣ್ಣ' ಇನ್ನಿಲ್ಲ.

ಈ ಕೊರಗು ಉಳಿದಿದೆ. ನೆನಪು ಮಾಸಿಲ್ಲ. ಅವರ ಅಂತಿಮ ಆಸೆ ಇದು –

'ನೋಡಿ ಇವರೆ, ಮರುಳಯ್ಯ ನನಗಾವ ಆಸೆಯೂ ಇಲ್ಲ. ಹಂಬಲವೂ ಇಲ್ಲ. ಮನೆ ಮಾಡಿದೆ, ಮಗಳ ಮದುವೆ ಮಾಡಿದೆ. ಮಕ್ಕಳಿಗೆ ಜೀವನದ ಮಾರ್ಗ ಕಲ್ಪಿಸಿಕೊಟ್ಟೆ. ಕಾಶಿ ಬದರಿ ರಾಮೇಶ್ವರ ಅಂತಾ ಎಲ್ಲಾ ಕಡೆ ಕಾಲಿಟ್ಟು ಬಂದೆ. ಮುಂದಿ ರುವುದು ಸಾಂಸಾರಿಕ ಜೀವನದಿಂದ ಬಿಡುಗಡೆ. ನನಗೆ ಸನ್ಯಾಸ ಸ್ವೀಕರಿಸುವ ಇಚ್ಛೆ, ನನ್ನಾಕೆ ಸಮ್ಮತಿಸಿದ್ದಾಳೆ. ನಾನು ಪರಿವ್ರಾಜಕ ನಾಗಿ ಹರಿದಾಸರ, ದಾಸಶ್ರೇಷ್ಠರ ಅಮೋಘ ತತ್ವವನ್ನು ಅಮೂಲ್ಯ ಸಾಹಿತ್ಯವನ್ನೂ ಜನ ಮನಕ್ಕೆ ಮುಟ್ಟಿಸುವ ಮಹಾ ಮಣಿಹ ವನ್ನು ಕೈಗೊಳ್ಳಬೇಕೆಂದಿದ್ದೇನೆ. ಅದಕ್ಕೆ ಆ ಗುರುರಾಯರು ಆಯುಷ್ಯ ಆರೋಗ್ಯಗಳನ್ನು ಕರುಣಿಸಬೇಕು ಅಷ್ಟೆ.'

ಗುರುರಾಯರಿಗೆ ನಮ್ಮ ಶ್ರೀನಿವಾಸರಾಯರ ಬಗೆಗೆ ದಯೆ ಬರಲಿಲ್ಲ ! ಅಥವಾ ಪ್ರೀತಿಯ ವಸ್ತು ತಮಗೇ ಬೇಕೆಂದು ಬೇಗ ಎತ್ತಿಕೊಂಡುಬಿಟ್ಟರು !

•

# ನಗೆರಾಜ್ಯದ ನಾಡಿಗೇರ*

==================================================================

ದಪ್ಪಕ್ಕಿರುವವರೆಲ್ಲಾ ಕುಳಿಕ್ಕಿರುತ್ತಾರೆ ಎಂಬುದು ನಮ್ಮ ಸಾಮಾನ್ಯ ಭಾವನೆ. ಆದರೆ ನರಪೇತಲಗಳೂ ವಾಮನರು ಎಂಬು ದಕ್ಕೆ ನಾಡಿಗೇರ ಕೃಷ್ಣರಾಯರೇ ಸಾಕ್ಷಿ. ಎತ್ತರ ಐದು ಅಡಿ, ತೂಕ ಎಪ್ಪತ್ತನಾಲ್ಕು ಪೌಂಡು, ರಕ್ತ ಕೆಲವೇ ಔನ್ಸು ! ಒಮ್ಮೆ ಬಸ್ ಆಕ್ಸಿಡೆಂಟ್ ಆದಾಗ ಪ್ರಜ್ಞೆ ತಪ್ಪಿ ಹೋಗಿತ್ತು. ಡಾಕ್ಟರ್ ಬ್ಯಾಂಡೇಜ್ ಮಾಡಿದ್ದರು, ಪ್ರಜ್ಞೆ ಬಂತು. ಈತ ತನ್ನ ಮೈ ನೋಡಿಕೊಂಡ. ಡಾಕ್ಟರನ್ನು ಕೇಳಿದ, 'ಏನ್ ಡಾಕ್ಟ್ರೇ, ಯಾರದೋ ರಕ್ತದ ಬ್ಯಾಂಡೇಜ್ ನನಗೆ ಕಟ್ಟಿದ್ದೀರಿ' ಎಂದು. ಡಾಕ್ಟರು ಹೇಳಿದರು. 'ಅದು ಬೇರೆಯವರದಲ್ಲ, ನಿಮ್ಮ ಮೈ ರಕ್ತ ಹರಿಯದಿರಲು ಕಟ್ಟಿದ ಬ್ಯಾಂಡೇಜ್' ಎಂದು. ರೋಗಿಗೆ ಆಶ್ಚರ್ಯ ! ಏನ್ ಡಾಕ್ಟ್ರೇ ನನ್ನ ಮೈಯಲ್ಲಿ ಅಷ್ಟು ರಕ್ತಾ ಇತ್ತಾ !' ಅಂತ.

ಅಂಥಾ ಮಹಾನ್ ಕಡ್ಡೀ ಪೈಲ್ವಾನ ನಮ್ಮ ನಾಡಿಗೇರ್. ಸಾಸಲು, ಶೆಟ್ಟೀಕೆರೆ, ಚಿಕ್ಕನಾಯಕನ ಹಳ್ಳಿ, ತಿಪಟೂರು, ಅರಸೀ ಕೆರೆ ಕಡೆ ನವೆಂಬರ್, ಡಿಸೆಂಬರ್ ತಿಂಗಳುಗಳಲ್ಲಿ ಕೀಳೋ ತೆಂಗಿನಕಾಯಿಗಳನ್ನ 'ಕೂಳೆಕಯಿ' ಅಂತಾರೆ. ಕಡೆ ಕಡೇ ಸಂವತ್ಸರಗ ಳಲ್ಲಿ ಒಂದಾದ ಕೀಲಕದಲ್ಲಿ (೧೯೦೮) ಹರಿಹರದಲ್ಲಿ ಹುಟ್ಟಿದ ನಾಡಿಗೇರ ಕೃಷ್ಣರಾಯರು ಕುಳ್ಳನೆಯ ತೆಳ್ಳನೆಯ 'ಕೂಳೇಕಾಯ್!'

ನಾಡಿಗೇರರು ನೋವುಂಡು ನಲವನ್ನು ಕೊಟ್ಟವರು. ದುಃಖ ಎಷ್ಟೇ ಬನ್ದರೂ ಅವರ ನಗೆ ನಾಚಿಕೆಯೇ ಇರಲಿಲ್ಲ. ಹೇಳ್ತಾರೆ, 'ನೋಡಿ ನಮ್ಮಪ್ಪ ದತ್ತಾತ್ರೇಯ ರಾಯರ ತಿಥಿ, ನನ್ನ ಹುಟ್ಟು ಹಬ್ಬ ಎರಡೂ ಒಂದೇ ದಿನ! ಚೈತ್ರ ಶುದ್ಧ ಪ್ರತಿಪದ ಅಂದರೆ ಯುಗಾದಿ ಹಬ್ಬದ ದಿನ! ಅಂದು ಬೇವು ಬೆಲ್ಲ ಅಲ್ವೆ ? ಯೋಗಾ ಯೋಗ ಅಲ್ವೆ !' ಎಂದು. ಹೇಳಿಕೆ ಹೆಮ್ಮೆ ಪಟ್ಟು ಕೊಂಡರೂ ಕೇಳಿಕೆ ಕಣ್ಣೀರು ಹಾಕುತ್ತೆ!

ಒಂದು ದಿನ ಆಹ್ವಾನವಿಲ್ಲದ ಆಗಮನ ನನ್ನ ಮನೆಗೆ. ಕಾಫಿ ಆಯ್ತು. ತಂದು ಕೊಟ್ಟವನು ನನ್ನ ಜ್ಯೇಷ್ಠಪುತ್ರ ಶಿವಪ್ರ ಸಾದ್. 'ಇವನು ನಿಮ್ಮ. . .'ಹೌದು ಚಿರಂಜೀವಿ. ತುಂಬಾ ಚೆನ್ನಾಗಿದ್ದಾನೆ. ಆದರೆ ಒಂದು ಮಾತು ಮರುಳಯ್ಯ. ನನ್ನ ಮಗ ನಿನ್ನ ಮಗನ ಹಾಗಲ್ಲ. ನನ್ನ ಬಗ್ಗೆ ಬಹಳ ಆಸಕ್ತಿ. ಭಕ್ತಿ. ಮೊನ್ನೆ ಏನಾಯ್ತು ಅಂತೀಯ. ಮೆಜಸ್ಟಿಕ್‌ನಲ್ಲಿ ಬರ್ತಾ ಇದ್ದೆ. ಎದು ರುಗಡೆ ನನ್ನ ಮಗ ಸಿಗರೇಟ್ ಸೇದ್ತಾ ಬರ್ತಿದ್ದ. ನನ್ನ ಮುಖ ಕಂಡಿದ್ದೇ ತಡ ಸಿಗರೇಟ್ ಹಿಡಿದಿದ್ದ ಕೈಯನ್ನ ಅವನ ಪ್ಯಾಂಟಿನ ಜೇಬಿನಲ್ಲಟ್ಟುಕೊಂಡು ಬಿಟ್ಟ 'ಏನಪ್ಪಾ ಅಮ್ಮಾ ಮನೇನಲ್ಲಿ ನಿನ್ನ ಕೇಳ್ತಾ ಇದ್ರು. ಬೇಗ ಹೋಗಿ ಅಂದ. 'ನಾನು, ಅಪ್ಪಾ ಬೇಗ ನೀನು ಹೋಗೋ ನಾನು ಹೋಗ್ತೀನಿ' ಅಂದೆ. ಯಾಕೆ ಗೊತ್ತಾ? 'ಇಲ್ಲ' 'ಅಯ್ಯೋ ಮಾರಾಯ, ಅಷ್ಟೂ ತಿಳಿಯೋಲ್ವೇ? ಸಿಗರೇಟ್ ತುಂಡು ಅವನ ಪ್ಯಾಂಟ್ ಸುಟ್ರೇ ಬೇರೆ ಪ್ಯಾಂಟ್ ಹೊಲಿಸಿಕೊಡೋನು ನಾನು ತಾನೆ ! ಅದಕ್ಕೇ!'

ಉದರ ನಿಮಿತ್ತಂ ಬಹುಕೃತ ವೇಷ ಹಾಕಿ ಕಡೆಗೆ ಪತ್ರಿಕೋದ್ಯಮ ಹಿಡಿದರು. 'ಮಲ್ಲಿಗೆ'ಯಲ್ಲಿ ಕಂಪಾಗಿ ತಂಪಾಗಿ ಬಹಲ ದಿನ ಉಳಿದರು. ಆದರೆ ಅದನ್ನು ಬಿಟ್ಟರು. ಆಗ ಬೀchi ಕೇಳಿದರು : ಏನು ನಾಡಿಗೇರ ಪೇಪರ್ ಕೆಲಸ ಬಿಟ್ಟಂತೆ!' 'ಹೌದು ಬೀchi' ಮತ್ತೆ ಜೀವನಕ್ಕೇನು ಮಾಡ್ತೀಯಾ?' 'ಇಸ್ಪೀಟ್ ಆಡ್ತೀನಿ!' ವಿನೋದದ ಹಿಂದೆ ಎಂತಹ ವ್ಯಥೆ! ಕೋಮಲ ಭಾವದ ಮರೆಯಲ್ಲಿನ ಕಠೋರತೆ ತಡೆದುಕೊಳ್ಳಲಾಗದಷ್ಟು ಸಂಕಟ ತರುವಂಥದು.

ನಾಡಿಗೇರರನ್ನು 'ಮಲ್ಲಿಗೆ' ಮೆಚ್ಚಿದಂತೆ ಇಂದಿರಮ್ಮನವರೂ ಮೆಚ್ಚಿದರು. ಒಲಿದು ಪತ್ನಿಯೂ ಆದರು. ಆದದ್ದರ ತಪ್ಪಿಗಾಗಿ ಮೋಹನ, ಶ್ರೀಕಾಂತ್ ಎಂಬ ಎರಡು ಗಂಡು ಮಕ್ಕಳನ್ನು ಕೊಟ್ಟರು. ಹೀಗಾಗಿ ನಾಡಿಗ್ರೈರರಿಗೆ ಬಂಧುಗಳು ಕಡಿಮೆ, ಬಳಗ

---

*ಹಾಸ್ಯ ಸಾಹಿತಿ ನಾಡಿಗೇರ ಕೃಷ್ಣರಾಯರು. ಅವರಿಗೆ ೧೮.೮.೧೯೭೭ರಂದು ಬೆಂಗಳೂರಿನಲ್ಲಿ ಸನ್ಮಾನ. ಅವರ ಅಭಿನಂದನ ಗ್ರಂಥಕ್ಕಾಗಿ ಕೊಟ್ಟ ಲೇಖನಜಾಸ್ತಿ. ಅವರ ಶಿಕ್ಷಣವೂ ಐದನೇ ಫಾರಂಗೆ ಅಂದರೆ ಹೈಸ್ಕೂಲ್ ಎರಡನೇ ತರಗತಿಗೆ ಫುಲ್ ಸ್ಟಾಪ್ ! ಕಲಿತದ್ದು ಕಡಿಮೆಯಾ ದರೂ ಬರೆದದ್ದು ಬಹಳ. ಕನ್ನಡ ಹಾಸ್ಯ ಸಾಹಿತ್ಯ ಸಾಮ್ರಾಜ್ಯದ ಅನಭಿಷಕ್ತ ಚಕ್ರವರ್ತಿ. ಬಳ್ಳರಿ ಬೀchi ಆದಮೇಲೆ ಇವರಿಗೇ ಆ ಸಿಂಹಾಸನ ! ಇವರಿಗೀಗ ಅರವತ್ತನಾಲ್ಕು, ಕೃತಿಗಳ ಸಂಖ್ಯೆ ಎಪ್ಪತ್ತು ! ಇವರದು ನಗೆರಾಜ್ಯ. ಆ ರಾಜ್ಯದ ಪ್ರಜರಗಳಲ್ಲಿ ನಾನೂ ಒಬ್ಬ. ನನ್ನ ಅನುಭವ ಹೇಳ್ತೇನೆ ಕೇಳಿ. ನಾಡಿಗೇರರ ನಗೆ ಮಿಂಚು ಎಲ್ಲರ ಕಣ್ಣನ್ನೂ ಕುಕ್ಕಿದೆ. ಅದು ನನಗೂ ಹೊಸದಲ್ಲ. ನಾನಷ್ಟೇ ಅಲ್ಲ, ನುಡಿಸುವ ಯಾವ ವ್ಯಕ್ತಿಯೂ ಅವರ ಮುಂದೆ ಹೊಸಬನಾಗಿ ಉಳಿಯುವುದಿಲ್ಲ. ಯಾರೂ ಸಿಗದಿದ್ದರೆ ಕಲ್ಲು ಬಂಡೆಯನ್ನಾದರೂ ಮಾತನಾಡಿಸುತ್ತಾನೆ ಆತ. ಅವನ ವ್ಯಕ್ತಿತ್ವವೂ ದೊಡ್ಡದು. ಪ್ರಖ್ಯಾತಿಯೂ ದೊಡ್ಡದೆ. ಹೋಟೆಲ್‌ನಲ್ಲಿ, ಪೇಟೆ ಬೀದಿಯಲ್ಲಿ, ಮಾರ್ಕೆಟ್‌ನಲ್ಲಿ, ಮಂದಿರದಲ್ಲಿ, ಥಿಯೇಟರ್‌ನಲ್ಲಿ, ಪಾರ್ಕಿನಲ್ಲಿ, ಪಡಖಾನೆಯಲ್ಲಿ, ಕಬ್ಬನ್ ಪಾರ್ಕಿನಿಂದ ಕಣ್ಣಪ್ಪನ ಗಲ್ಲಿವರೆಗೂ ಹಬ್ಬಿದೆ ಅವನ ನಗೆಯ ಸಾಮ್ರಾಜ್ಯದ ವಿಸ್ತೀರ್ಣ. ಅದರ ವೈಶಾಲ್ಯ ರಾಜಧಾನಿ, ವಾಯುಗುಣ, ನಿಸರ್ಗ ಸಂಪತ್ತು ಮೊದಲಾದ ವಿವರಣೆಗಳಿಂದ ಕೂಡಿದ ಭೂಪಟವೊಂದು ಸಿದ್ಧವಾಗಬೇಕಾಗಿದೆ. ಆಗುತ್ತಲೂ

ಇದೆ. ಅವರ ನಗೆ ಲೋಕದಲ್ಲಿ 'ಹಾಳೂ ಮೂಳೂ' ತಿಂದು ಹಾದಿ ಬೀದಿ ಅಲೆಯೋ 'ತಲೆ ಹರಟೆಗಳು' ಇಲ್ಲವೇ ಕೆಟ್ಟದೂ ಪೆಟ್ಟದೂ ತುಂಬಿಕೊಂಡು ಅಡ್ಡಾ ದಿಡ್ಡಿ ಬಿದ್ದಿರೋ 'ಕಸದ ಬುಟ್ಟಿಗಳು' ಇವೇ ಹೆಚ್ಚು. ಆದರೂ ಅಲ್ಲೊಂದು 'ರಸಗನ್ನಡಿ' ಇಲ್ಲೊಂದು 'ನೀಲವೇಣಿ' ಇವರೂ ಸಿಗ್ತಾರೆ. ಕೆಟ್ಟದ್ದರಲ್ಲಿ ಒಟ್ಟೆ ಅನ್ನಲ್ವೇ ಹಾಗೆ ! ದರ್ಜಿ, ಅಗಸ, ಕವಾಡಿಗಿತ್ತಿ, ಪತ್ರಿಕಾ ಸಂಪಾದಕ, ನಾಯಿ, ಕುದುರೆ, ಶಾಲೆ, ಆಸ್ಪತ್ರೆ, ಸೊಳ್ಳೆಯಿಂದ ಸಿಂಹದವರೆಗೆ, ನಗರ ಪಿತೃವಿನಿಂದ ಟಾಂಗಾ ವಾಲನವರೆಗೆ, ಮಂತ್ರಿಯಿಂದ ಕಂತ್ರಿಯವರೆಗೆ ಎಲ್ಲರೂ ಅವನ ವಿಶಿಷ್ಟ ಸಾಮ್ರಾಜ್ಯದ ಪ್ರತಿಷ್ಠಿತ ಪ್ರಜೆಗಳು. ಅಂದರೆ ಎಲ್ಲರೂ ಪಟ್ಟಣದ ಪುರೋಭಿವೃದ್ದಿಗೆ ಕಾರಣರಾದವರು. ಅವರೊಡನಾಡುವ ಅಥವಾ ಅವರನ್ನಾಳುವ ಹಾಸ್ಯ ಚಕ್ರವರ್ತಿ ನಗರವನ್ನು ಬಿಟ್ಟು ಹೊರಗೆ ಹೋಗೇ ಇಲ್ಲ. ಕಾರಣ ಅವನಿಗೆ ವ್ಯವಧಾನವಿಲ್ಲ. ದಯವಿಟ್ಟು ಇದೊಂದೇ ದೋಷ ಎಂದು ಭಾವಿಸಬೇಡಿ. ಅದು ನಿಜಕ್ಕೂ ಗುಣ. ಪ್ರತಿಯೊಬ್ಬ ವ್ಯಕ್ತಿಯೂ ಪ್ರತಿಯೊಂದು ಸನ್ನಿ ವೇಶವೂ ಅವನ ನಿತ್ಯ ಜೀವನದ ಸತ್ಯ ಚಿತ್ರಣಗಳು. ಯಾವುದೂ ಅವನ ಕಲ್ಪನೆಯ ಕುಸುಮ ಅಲ್ಲ, ಕೃತಕ ಅಲ್ಲ. ಎಲ್ಲವೂ ಅವನ ಸ್ವಾನುಭವದ ಸಿದ್ಧಿ. ಅವನ ಅಭಿವ್ಯಕ್ತಿಯಲ್ಲಿ ಸಹಜತೆ ಇದೆ, ಸೌಂದರ್ಯವೂ ಇದೆ. ಇಂತಹ ಸಹಜ ಸೌಂದರ್ಯದ ಸತ್ವ ಜೆಯನ್ನು ಮಾತನಾಡಿಸೋಣ.

ನಾಡಿಗೇರರ ನಗೆ ರಾಜ್ಯದಲ್ಲಿ ಸ್ತ್ರೀಯರಿಗೆ ಸ್ವಾತಂತ್ರ್ಯ ಹೆಚ್ಚು. ಅವರದೇ ಸರ್ವಾಧಿಕಾರ. ಒಂದರ್ಥದಲ್ಲಿ ಅವರೇ ದರ್ಪಿಷ್ಠ ಪ್ರಭು(ಭಿ)ಗಳು. ನೋಡಿ, ಒಂದು ಮನೆಯ ಒಬ್ಬ ಗಂಡುಸು ಅಂತಾನೆ – 'ಸರ್ಕಾರ ಮಾಡುವುದೆಲ್ಲ ತಪ್ಪು ಅಂತ ನನ್ನ ಹೆಂ ಡತಿ ತಿಳಿದುಕೊಂಡಿದ್ದಾಳೆ. ಇದೇನು ನನ್ನೊಬ್ಬನ ಅನುಭವವೊ, ಎಲ್ಲರ ಅನುಭವಗಳೂ ಹೀಗೆಯೋ ಸಂಶೋಧನೆ ಮಾಡ ಬೇಕಾಗಿದೆ' ಈ ಮಾತುಗಳನ್ನು ಕೇಳಿದ ಕೂಡಲೇ ನಿಮಗೆ ಸಿಟ್ಟು ಬರಬಹುದು. ಬೇಡಿ ಸಮಾಧಾನ ಮಾಡಿಕೊಳ್ಳಿ. ಆತನ ಸಂಶೋಧನಾ ದೃಷ್ಟಿ ದೋಷಯುಕ್ತವೆನಿಸಬಹುದು. ಆದರೂ ಅನುಭವ ಬೆಂಗಳೂರು ಡೈರಿ ಹಾಲಿನಷ್ಟು ಶುದ್ಧ ಸತ್ಯ ! ಹೇಗೆಂ ದರೆ ಎಲ್ಲರ ಮನೆಯ ದೋಸೆಯೂ ತೂತು ! ಆದರೆ ಕೆಲವು ಮನೆಗಳಲ್ಲಿ ಕಾವಲಿಯೇ ತೂತು !!

ಒಮ್ಮೆ ಹೀಗಾಯ್ತಂತೆ ! ನಾಡಿಗೇರರು ಮಲಗಿದ್ದ ಕೊಠಡಿಯಲ್ಲಿ 'ಧೋಪ್' ಅಂತಾ ಶಬ್ದ ಆಯ್ತಂತೆ ! ಅಡಿಗೆ ಮನೇಲಿದ್ದ ಧರ್ಮಪತ್ನಿ, ಸಾಧ್ವಿಶಿರೋಮಣಿ ಕೇಳಿದರಂತೆ –

'ಏನ್ರೀ ಅದು ಶಬ್ದ ? ಧೊಪ್ ಅಂದದ್ದೇನು ?' ಅಂತ. ಅದಕ್ಕೆ ನಾಡಿಗೇರರು 'ಏನಿಲ್ಲ ರಗ್ಗು ಮಂಚದಿಂದ ಕೆಳಗೆ ಬಿತ್ತು!' ಅಂರಂತೆ. 'ಅಲ್ರೀ ರಗ್ಗು ಬಿದ್ರೆ ಧೊಪ್ ಅಂತಾ ಶಬ್ದ ಆಗುತ್ತಾ?' 'ಇಲ್ಲ. . .ಅದರೊಳಗೆ ನಾನೂ ಇದ್ದೆ! '

ಈ ಅನೆಕ್‌ಡೋಟ್ ತಿಳಿದ ಮೇಲೂ ಹೆಂಡತಿಗೆ ಹೆದರದೇ ಇರೋ ಗಂಡಸು ಯಾರು? ಎಂದು ಪ್ರಶ್ನಿಸಬೇಡಿ.

ನಾಡಿಗೇರರ ನಗೆ ರಾಜ್ಯದ ರಾಜಧಾನಿಯಲ್ಲಿ ಮನೋರಂಜನೆ ಬಲು ವಿಚಿತ್ರ. ಅಲ್ಲಿ ಇನಡ ಸಿನೇಮಾಗಳನ್ನು ಪ್ರದರ್ಶಿ ಸುವ ಥೊಯೇಟರುಗಳು ಇದ್ದಂತಿಲ್ಲ. ಎಲ್ಲೆಡೆಯೂ ತಮಿಳು ಸಿನೆಮಾ ಎನ್. ಎಸ್. ಕೃಷ್ಣನ್, ಟಿ.ಎ. ಮಧುರಂ ಇವರ ಹಾಸ್ಯ. ನಮ್ಮ ರಜತರಂಗದ ಚಿರಂಜೀವಿ ನರಸಿಂಹರಾಜು, ಖೀರು ಅಂದ್ರೆ 'ಕರೆದ್ರಾ' ಅನ್ನೋ ಬಾಲಕೃಷ್ಣ, ಲಕ್ಷ್ಮೀದೇವಿ, ರಮಾದೇವಿ, ಯಾವ ದೇವಿಯರೂ ಪ್ರತ್ಯಕ್ಷರಾಗುವುದಿಲ್ಲ. ಅವನ ರಾಜಧಾನಿಗೆ ಆಗಮಿಸಿರುವ ಸರ್ಕಸ್ ಕಂಪನಿಯೊ ಹರಿದು ಚಿಂದೆಯಾದ ಬಹು ತೇಪೆಗಳನ್ನು ಹಚ್ಚಿಕೊಂಡಿರುವ ತುಂಬಾ ವಯಸ್ಸಾದ ಮುದಿ ತರುಣ ! ಆ ನಗರದ ಮಧ್ಯದಲ್ಲಿ ರೇಸ್ ಕೋರ್ಸ್ ಇದೆ. ಅಲ್ಲಿಗೆ ಹೋದವರೆಲ್ಲಾ ಪಾಪರ್, ಅಲ್ಲ, ಇನ್ಸಾಲೆಂಟ್ ! ಅಲ್ಲಿನ ಕೆಲವರು ಬೆಲ್ಲದ ಮಾತಿನವರು. ತುಂಬಾ ನಾಜೂಕಿ. ಮನೆಗೆ ಬಂದ ಅತಥಿಗಳನ್ನು ನಯವಾಗಿ ನುಡಿಸಿ ಹಾಗೇ ಬರಿ ಬಾಯಲ್ಲೇ ಕಳುಹಿಸುತ್ತಾರೆ. ಅತಿಥಿ ಬಳಿಯೇ ತರಕಾರಿಗೆ ಚಿಲ್ಲರೆ ಕಸಿದು, ಬರೀ ಬಾಯಿ ಮಾತಲ್ಲಿ ಹೊಟ್ಟೇ ತುಂಬಿಸಿ ಕಳುಹಿಸುತ್ತಾರೆ. ಅಕಸ್ಮಾತ್ ಕಾಫೀ ಅಂತಾ ಯಾರಾದರೂ ಬಾಯಿತೆರೆದರೇ ಅವರನ್ನೇ ಹೋಟೇಲ್‌ಗೆ ಎಳೆದುಕೊಂಡು ಹೋಗಿ ತಿಂಡಿ ಮೆದ್ದು, ಬಿಲ್ಲನ್ನು ಅವರ ಕೈಗೆ ಕೊಡಿಸಿ ಎತ್ತಲೋ ನೋಡ್ತಾ ಕೂರು ತ್ತಾರೆ. ಅಂಥಾ ಸಂದರ್ಭಗಳಲ್ಲಿ ತಿಂಡಿಗೆ ತುಪ್ಪಾ ಆರ್ಡರ್ ಮೋಡೋದುಂಟು. ಅಲ್ಲಿ 'Ghee is not a substance, but a sound produced by two metallic vessels' ಮಾತ್ರ ! ಆ ರಾಜ್ಯದಲ್ಲಿ ಯಾರ ಮನೆಯ ಮುಂದೆ ನೋಡಿದರೂ 'ನಾಯಿಗಳಿವೆ ಎಚ್ಚರಿಕೆ' 'ಸುಖವಿಲ್ಲಾ' 'ಜ್ಞಾನವಿಲ್ಲಾ' 'lake view hill view' 'ಗಟಾರ್ view' ಎಂಬ ಬೋರ್ಡುಗಳು ನೇತಾ ಡುತ್ತಿರುತ್ತವೆ.

ಆ ರಾಜ್ಯದ ಕಸುಬುದಾರರು ಸತ್ಯ ಹರಿಶ್ಚಂದ್ರನ ಮೊಮ್ಮಕ್ಕಳು. ದರ್ಜಿಗೆ ರವಿಕೆ ಹೊಲಿಯೋಕೆ ಕೊಟ್ಟರೆ, ಕೊಟ್ಟ ಬಟ್ಟೆ ಹೆಂಡತಿಯದಾದರೂ, ಅವನು ಕೊಡುವುದು ಅವಳ ಮಗಳು ಅದನ್ನು ತೊಡೋ ವಯಸ್ಸಿಗೆ ಬಂದಾಗ. ಅಗಸ ಗಿರಾಕಿಗಳು

ಕೊಟ್ಟ ಬಟ್ಟೆಯನ್ನೇ ತೊಟ್ಟುಕೊಂಡು ಮೋಜು ಮಾಡುತ್ತಿರುತ್ತಾನೆ. ಅವನಿಗೆ ಬಟ್ಟೆ ಹೊಲಿಸಿ ಅಭ್ಯಾಸವೇ ಇಲ್ಲ. ಕವಾಡಿಗಿತ್ತಿ ಹಾಲಿಗೆ ನೀರು ಹಾಕಿ – ಅಲ್ಲ, ನೀರಿಗೇ ಹಾಲು ಹಾಕಿ ಮಾರುವ ಧರ್ಮದೇವತೆ.

ಸ್ನೇಹಿತನು ಕೊಟ್ಟ ಕಾಂಪ್ಲಿಮೆಂಟರಿಗಳನ್ನು ಸೆಕೆಂಡ್ ಹ್ಯಾಂಡ್ ಬುಕ್ ಸ್ಟಾಲ್‌ಗೆ ಮಾರಿಕೊಂಡು ಮಸಾಲೆ ತಿನ್ನುವ ಮಹಾನುಭಾವ !

ನಾಡಿಗೇರರ ನಗೆ ರಾಜ್ಯದ ಶಾಲೆಗಳು ದನದ ದೊಡ್ಡಿಗಳು, ಆಸ್ಪತ್ರೆಗಳು ನರಕದ ಕೂಪಗಳು, ಬಸ್ಸುಗಳು ಫುಟ್ ಪಾತ್ ಮೇಲಿನ ಜನರನ್ನು ಬೇಟೆಯಾಡುವ ಬೇಟೆನಾಯಿಗಳು. ಅಲ್ಲಿನ ಪ್ರಿಂಟಿಂಗ್ ಪ್ರೆಸ್‌ಗಳಲ್ಲಿ ಮುದ್ರಾರಾಕ್ಷಸನ ಹಾವಳಿ ಇದ್ದರೆ, ಬಾಡಿಗೆ ಮನೆಗಳ ಅಕ್ಕಪಕ್ಕದಲ್ಲಿ ಮೈಕಾಸುರನ ಆರ್ಭಟ !

ಒಂದೇ ಎರಡೇ ನಾಡಿಗೇರರ ನಗೆ ರಾಜ್ಯದಲ್ಲಿನ ಗಡಿ ಬಿಡಿಗಳು ನೂರಾರು, ಸಾವಿರಾರು !

•

## ಡಾ.ಎಂ. ಚಿದಾನಂದ ಮೂರ್ತಿ*

==========================================================================

ಕನ್ನಡ ಸಾಹಿತ್ಯ ಪರಿಷತ್ತಿನ ಸುವರ್ಣ ಮಹೋತ್ಸವ ಒಂದು ಸುಂದರ ಸಂಜೆ. ಅದು ಸಾರಸ್ವತ ಸಂಜೆಯೂ ಹೌದು. ಅಂದು ಕೆಲವು ಪ್ರಕಟಿತ ಗ್ರಂಥಗಳನ್ನು ಬಿಡುಗಡೆ ಮಾಡಿ ಮಾತನಾಡಿದವರು ಡಾ.ಡಿ.ವಿ. ಗುಂಡಪ್ಪನವರು. ಅವರು ಅದೂ ಇದೂ ಹೇಳುತ್ತಾ"ನೋಡೀ, ಕನ್ನಡ ಬೆಳೆದಿದೆ, ಭಾಷೆಯಾಗಿ ಬೆಳೆದಿದೆ, ಸಾಹಿತ್ಯವಾಗಿ ಬೆಳೆದಿದೆ. ತನ್ನದೇ ಆದ ಪ್ರಬುದ್ಧ ಪರಂಪರೆಯನ್ನು ಪಡೆದಿದೆ. ಆದರೆ ದುರದೃಷ್ಟವಶಾತ್ ಇಂದಿನ ಹೊಸ ಪೀಳಿಗೆಯ ಕವಿಗಳಿಗೆ ಲೇಖಕರಿಗೆ ಹಳಗನ್ನಡ ಸಾಹಿತ್ಯ ಕುರಿತು ಆಸಕ್ತಿ ಕಡಿಮೆ ಆಗ್ತಾ ಇದೆ. ಕೆಲವರಿಗಂತೂ ಭಾಷೆಯ ಮೇಲೆ ಪ್ರಭುತ್ವವೇ ಇಲ್ಲ. ಅದರ ಜಾಯಮಾನವನ್ನರಿಯಲು ಅವರಿಗೆ ವ್ಯವಧಾನವೂ ಇಲ್ಲ. ಇಂತಹ ನಿರಾಶೆಯ ನಿಶೆಯಲ್ಲಿ ಆಶಾಜ್ಯೋತಿಯಾಗಿರುವವರು ಯಾರೆಂದರೆ, ಇದೋ ನೋಡಿ, ನನ್ನೆದುರಿಗೆ ಈ ಮೊದಲ ಸಾಲಿನಲ್ಲಿ ಕುಳಿತಿರುವ ಡಾ.ಎಂ. ಚಿದಾನಂದಮೂರ್ತಿಯವರು. ಇವರು ಮತ್ತು ಬೆರಳಲ್ಲಿ ಎಣಿಸಬಹುದಾದ ಸಂಖ್ಯೆಯ ಇವರಂಥವರು ! ಇವರಿದ್ದಾರೆ ಇಂದು ಕನ್ನಡ ಬದುಕಿದೆ; ನಾಳೆ ಬಾಳುತ್ತೆ; ಮತ್ತೆ ನಿಜವಾದ ಅರ್ಥದಲ್ಲಿ ಕನ್ನಡದಲ್ಲಿ ಸಂಶೋಧನೆ ನಡೆಯುತ್ತೆ !' ಎಂದು ನುಡಿದರು.

ಇದಕ್ಕಿಂತಲೂ ಮಿಗಿಲಾದ ಅರ್ಹತಾಪತ್ರ ಯಾವುದು !

ಡಾ.ಎಂ. ಚಿದಾನಂದಮೂರ್ತಿಯವರ 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ' ಮಹಾಪ್ರಬಂಧವು ಹೊರಬಂದಾಗ ಅವರ ಮಾರ್ಗದರ್ಶಕರಾಗಿದ್ದ ಪ್ರೊ. ತೀ.ನಂ. ಶ್ರೀಕಂಠಯ್ಯನವರು ಹೇಳಿದರು :"ನಾನು ಬಂಜೆ ಆಗಲಿಲ್ಲ ! ನಾನು ಒಂದು ಗಂಡು, ಒಂದು ಹೆಣ್ಣು ಈ ಮಕ್ಕಳ ತಂದೆ. ಆದರೆ ಎಂ. ಚಿದಾನಂದಮೂರ್ತಿಯವರನ್ನು ನನ್ನ ಸಂಶೋಧನೆಯ ಶಿಶುವಾಗಿ ಪಡೆದೆ ! ಅವರೇ ಮೊದಲು ಅವರೇ ಕಡೆ. ಅವರ ಸಂಶೋಧನೆಯ ಮಹತ್ವದ ಕೃತಿಯಿಂದ ಅವರ ಕೀರ್ತಿ ಹೆಚ್ಚಿತು. ನನ್ನನ್ನೂ ದೊಡ್ಡವನನ್ನಾಗಿ ಮಾಡಿತು. ಡಾ. ಮೂರ್ತಿಯನ್ನು ಸಂಶೋಧನ ಶಿಶುವಾಗಿ ಪಡೆದ ನಾನು ಬಂಜೆ ಅಲ್ಲ, ಭಾಗ್ಯಶಾಲಿ!' ಎಂದು.

ಇಂತಹ ಪುಣ್ಯ ಎಷ್ಟು ಜನಕ್ಕೆ ಸಿಗಲು ಸಾಧ್ಯ ?

ರಾಷ್ಟ್ರಕವಿ ಕುವೆಂಪುರವರು ಅಚ್ಚಾದ ಆ ಮಹಾಪ್ರಬಂಧವನ್ನು ಓದಿದ ಮೇಲೆ 'Mr. Murht it reads like a novel, I say ! ತುಂಬಾ ಆನಂದ ಆಯ್ತಪ್ಪ' ಎಂದರು ಭುಜತಟ್ಟುತ್ತಾ.

ಡಾ. ಡಿ.ಎಲ್. ನರಸಿಂಹಾಚಾರ್ಯರು,"ಮೂರ್ತಿ, ನಿನ್ನ ಥೀಸೀಸ್ ಓದಿದೆ ಕಣಯ್ಯ, ಅದೇನು ರಚನೆ, ಅದೆನು ತಾನು! ಹ್ಞಾ ! ಥೀಸೀಸ್ ಅಂದರೆ ಹೀಗಿರಬೇಕು. ನೋಡು. ಇದು ಮಾಡೆಲ್ ! ಮಾಡೆಲ್! ಎಲ್ಲ ಸಂಶೋಧಕರಿಗೂ ಮಾಡೆಲ್ ಕಣ ಯ್ಯಾ!' ಎಂದು ಮನಃಪೂರ್ವಕವಾಗಿ ಒಪ್ಪಿ, ಹೃದಯಪೂರ್ವಕವಾಗಿ ಹಿಗ್ಗಿ, ತೋಳ್ತುಂಬಿ ಅಪ್ಪಿಕೊಂಡರು.

ಈ ಪ್ರಶಸ್ತಿಗಳಿಗೆ ಬೆಲೆ ಕಟ್ಟಲು ಸಾಧ್ಯವೆ ?

ಡಾ. ಮೂರ್ತಿ ಸ್ವಭಾವತಃ ಖಂಡಿತವಾದಿ. ಇದು ಅವರ ಗುಣವೂ ಹೌದು. ದೋಷವೂ ಹೌದು! ಅವರೆಂದಿಗೂ ಆತ್ಮ ವಂಚನೆ ಮಾಡಿಕೊಳ್ಳುವುದಿಲ್ಲ. ಎಂ. ಚಿದಾನಂದಮೂರ್ತಿ ಎಂಬುದು ಪ್ರಾಮಾಣಿಕತೆಗಿರುವ ಬೇರೊಂದು ಶಬ್ದ ಎನ್ನುವಷ್ಟರ ಮಟ್ಟಿಗೆ ಅವರ ಸ್ವಚ್ಛತೆ ಮತ್ತು ಪಾರಿಶುದ್ಧ್ಯ. ಕಚ್ಚೆ ಕೈ ಬಾಯಿಗಳನ್ನು ಇಚ್ಛೆಯಲ್ಲಿಟ್ಟುಕೊಂಡ ನಿಶ್ಚಿಂತ ವ್ಯಕ್ತಿ ಆತ. ಮನಸ್ಸಾಕ್ಷಿಯೇ

---

*ಡಾ.ಎಂ. ಚಿದಾನಂದಮೂರ್ತಿಯವರಿಗೆ ೩ ಆಗಸ್ಟ್ ೧೯೯೧ರಲ್ಲಿ 'ಸಂಶೋಧನಾ' ಎಂಬ ಅಭಿನಂದನಾ ಗ್ರಂಥಕ್ಕೆ ಬರೆದ ಲೇಖನ ಅವರ ಪ್ರಮಾಣಭೂತ ಶಕ್ತಿ! ಯಾರ ಮರ್ಜಿ ಮುಲಾಜುಗಳಿಗೂ ತಲೆ ಬಾಗುವವರಲ್ಲ. ತಮಗೆ, ತಮ್ಮಂತರಂಗಕ್ಕೆ ಸತ್ಯವೆಂದು ತೋರಿದ್ದನ್ನು ಹಿಂದೆ ಮುಂದೆ ನೋಡದೆ ನುಡಿದುಬಿಡುತ್ತಾರೆ. 'ಸತ್ಯಂ ಭ್ರೂಯಾತ್ ಪ್ರಿಯಂ ಭ್ರೂಯಾತ್'ಗೆ ಹೆಸರಾದವರು. ಖಂಡಿತವಾದಿ ಯಾವಾಗಲೂ ಲೋಕವಿರೋಧಿ ! ತಮ್ಮ ವ್ಯಕ್ತಿತ್ವಕ್ಕೆ ಕುಂದು ಬಾರದಂತೆ ಎಚ್ಚರವಹಿಸಿದವರು. ಒಮ್ಮೆ ನನ್ನ ಸಂ ಗಡ ಮಾತನಾಡುತ್ತಾ ತೀ.ನಂ.ಶ್ರೀ. ನಾಗಭೂಷಣ ಹೇಳಿದರು,"ನೋಡಿ ಮರುಳಯ್ಯ, ಮೂರ್ತಿಯವರಲ್ಲಿ ಯಾವುದೇ weak- ness ಇದ್ರೂ ಅವರ ಪ್ರಾಮಾಣಿಕತೆಯನ್ನು ಯಾರೂ ಪ್ರಶ್ನಿಸಲಾರರು, ಅವರ ಆಚರಣೆಯನ್ನು ಯಾರೂ ಸಂದೇಹಿಸಲಾರರು. ಅವರು ಹಿಂದೊಂದು ಮುಂದೊಂದು ಆಡುವವರಲ್ಲ, ಸತ್ಯವನ್ನು ಅದರ ನೈಜಾರ್ಥದಲ್ಲೇ ಬಳಸ್ತಾರೆ." ನಾನು ಹೇಳಿದೆ,"ಅದು ನಿಜ, ನೋಡಿ, ನನ್ನ ವಿಷಯದಲ್ಲೂ ಅವರು ದಾಕ್ಷಿಣ್ಯ ತೋರಿದವರಲ್ಲ. ಒಮ್ಮೆ ನಿಜಗುಣರ ಮಠದಲ್ಲಿ ಶ್ರೀ ನಿಜಗುಣ ಮಹಾಸ್ವಾ ಮಿಗಳ ನೇತೃತ್ವ. ಹುಬ್ಬಳ್ಳಿಯ ಮೂರು ಸಾವಿರ ಮಠದ ಜಗದ್ಗುರುಗಳವರ ಸಾನಿಧ್ಯ. ಆ ಸಂದರ್ಭದಲ್ಲಿ ಶೂನ್ಯ ಸಂಪಾದನೆ ಕುರಿತ ಒಂದು ವಿಚಾರ ಸಂಕಿರಣ ಏರ್ಪಡಿಸಿದ್ದೆವು. ಕಾರ್ಯಕ್ರಮ ಮೂರು ದಿವಸಗಳವರೆಗೆ ನಡೆಯಿತು. ಅತ್ಯಂತ ಯಶಸ್ವಿಯಾ ಗಿಯೇ ಮುಗಿಯಿತು. ವಿದ್ವಾಂಸರು ಮಂಡಿಸಿದ್ದ ಆ ವಿಚಾರ ಸಂಕಿರಣದ ಪ್ರಬಂಧಗಳನ್ನು ಒಂದು ಪುಸ್ತಕ ರೂಪದಲ್ಲಿ ತರಲು ಪ್ರಯತ್ನಿಸಿದೆವು. ನಾನೇ ಸಂಪಾದಕನಾಗಿ ಅಣಿಮಾಡಿ, ಅದಕ್ಕೊಂದು ಸುದೀರ್ಘ ಮುನ್ನುಡಿ ಬರೆದೆ. ಆದರೆ ಮುದ್ರಣಕ್ಕಾಗಿ ಒಪ್ಪಿ ಕೊಂಡಿದ್ದ ಪ್ರೆಸ್ ಅರ್ಧದಲ್ಲಿ ಕೈಕೊಟ್ಟಿತು. ಪ್ರೆಸ್ ಮಾಲೀಕ ನಾಪತ್ತೆ ! ನಾನು ತುರ್ತಾಗಿ ನನ್ನ ಮಗಳ ಮನೆಗೆ ಅಮೇರಿಕೆಗೆ ಹೋಗಬೇಕಾಗಿತ್ತು. ಹೇಗಾದರೂ ಮಾಡಿ ಅಚಚಿನ ಕೆಲಸ ಮುಗಿಸಿ, ಬೈಂಡ್ ಮಾಡಿಸದೆ ಇದ್ದರೆ ಮುಂಗಡ ಕೊಟ್ಟಿದ್ದ ಇಪ್ಪತ್ತು ಸಹಸ್ರ ರೂಪಾಯಿಗಳೂ ಮುಳುಗು ಹೋಗಿ, ನಾನು ಸಾಲಗಾರನಾಗಿ, ಮೋಸಗಾರನೆನಿಸಿ ಅಪಖ್ಯಾತಿಗೆ ಗುರಿಯಾಗಬೇಕಿತ್ತು. ಆದ್ದರಿಂದ ಬೇಗ ಪುಸ್ತಕ ಮಾಡಿಸಿದೆ. ಉಳಿದ ಕೆಲವು ಲೇಖನಗಳನ್ನು ಬೇರೊಂದು ಸಂಸ್ಮರಣ ಸಂಚಿಕೆಗೆ ಹಾಕಿಕೊಂಡೆ. ಹಾಗೆ ಮೊದಲು ಬಿಟ್ಟ, ಎರಡನೆಯದರಲ್ಲಿ ಸೇರಿದ ಲೇಖನಗಳಲ್ಲಿ ಡಾ. ಮೀರ್ತಿ ಮತ್ತು ಎಸ್. ಶಿವಣ್ಣ ಇವರು ಜೊತೆಗೂಡಿ ಬರೆದಿದ್ದ 'ಅಜಗಣ್ಣನ ಅಭಿಜ್ಞೆ' (Identity) ಎಂಬ ಸಂಶೋಧನ ಲೇಖನವೂ ಒಂದು. ಎರಡನೆಯ ಪುಸ್ತಕ ಅಚ್ಚಾಗಿ, ಅದನ್ನು ಕೊಡಲು ಹೋದಾಗ 'ರೀ ಮರುಳಯ್ಯಾ, ನಾನು ಈ ಪುಸ್ತಕವನ್ನು ತೆಗೆದುಕೊಳ್ಳುವುದಿಲ್ಲ, ನೀವು ಮೋಸ ಮಾಡಿದಿರಿ. ಮೊದಲ ಗ್ರಂಥ ದಲ್ಲಿ ನಮ್ಮ ಲೇಖನ ಬರಬೇಕಿತ್ತು ; ಬರಲಿಲ್ಲ. ನಾವು ವಿಚಾರ ಸಂಕಿರಣದಲ್ಲಿ ಪಸ್ತುತ ಪಡಿಸಿದ ಪ್ರಬಂಧ ಇಲ್ಲ, ಪ್ರಸ್ತುತ ಪಡಿ ಸದೇ ಇದ್ದ ನಿಮ್ಮ ಮುನ್ನುಡಿ ಬಂತು. ಅಷ್ಟು ದೊಡ್ಡ ಮುನ್ನುಡಿಯ ಬದಲು ಇನ್ನೆರಡು ಲೇಖನಗಳನ್ನು ಮುದ್ರಿಸಬಹುದಾಗಿತ್ತು. ಮಾಡಲಿಲ್ಲ, ಈ ಸ್ವಾರ್ಥ, ಅದರಲ್ಲೂ ಬೇರೆಯವರ ವೆಚ್ಚದಲ್ಲಿ ಗಳಿಸುವ ಸ್ವಾರ್ಥ ನನಗಿಷ್ಟವಿಲ್ಲ. ಅಲ್ಲದೆ ಸ್ವಾಮಿಗಳ ಹಣದಲ್ಲಿ ಮುನ್ನುಡಿಯ ಭಾಗವನ್ನು ಪ್ರತ್ಯೇಕಪುಸ್ತಕವನ್ನಾಗಿ ಮಾಡಿಕೊಂಡಿದ್ದೀರಿ ಎಂದು ತಿಳಿದೆ. ಇದು ಅಪರಾಧ, ಮಹಾಪರಾಧ, ಅಕ್ಷಮ್ಯ ಅಪರಾಧ ! ನಾನಿದನ್ನು ಖಂಡಿಸ್ತೇನೆ ' ಎಂದರು. ನಾನು ಆ ಪ್ರಕಟಣೆಯ ಪೂರ್ವೇತಿಹಾಸ ತಿಳಿಸಿದೆ. 'ಪ್ರೆಸ್ ಮುಚ್ಚಿ ಹೋದ ಮೇಲೆ ನಾನೇನೂ ಮಾಡಬರುತ್ತಿರಲಿಲ್ಲ. ಅದರಿಂದಾಗಿ ಮುಖಪುಟದ ಫಿಲ್ಮಗೆ ಎರಡೂವರೆ ಸಾವಿರ, ಅರ್ಧ ಅಚ್ಚಾಗಿ ಉಳಿದಿದ್ದ ಲೇಖನವನ್ನು ಬೇರೆ ಪ್ರೆಸ್ ಅಂದ್ರೆ ಶ್ರೀ ರೇಣುಕಾ ಪವರ್ ಪ್ರೆಸ್‌ನಲ್ಲಿ ಮುದ್ರಿಸಲು ಒಂದೂವರೆ ಸಾವಿರ ಮತ್ತೆ ಬೈಂ ಡಿಂಗ್‌ಗೆ ಮೂರು ಸಾವಿರ ಕೈಯಿಂದ ಕೊಟ್ಟೆ. ಈ ವಿಷಯವನ್ನು ನಿಜಗುಣ ಮಹಾಸ್ವಾಮಿಗಳಿಗೂ ತಿಳಿಸಲಿಲ್ಲ. ನನ್ನ ಅಳಲನ್ನು ನಾನೇ ನುಂಗಿಕೊಂಡೆ. ನನ್ನ ಮುನ್ನುಡಿ ಭಾಗಕ್ಕೆ ನಾನೇ ಪ್ರತ್ಯೇಕವಾಗಿ ಪೇಪರ್ ತೆಗೆದುಕೊಟ್ಟಿದ್ದೆ ಫಾರಂಗೆ ಐವತ್ತು ರೂಪಾಯಿ ಯಂತೆ. ನನ್ನ ಸ್ವಂತ ಹಣ ಕೊಟ್ಟಿದ್ದೇನೆ.

ಸ್ವಾಮಿಗಳವರ ಸ್ವತ್ತು ತಿನ್ನುವ ಹೀನ ಪ್ರವೃತ್ತಿ ನನ್ನದಲ್ಲ ; ತಿಂದರೆ ಶ್ರೇಯಸ್ಸೂ ಇಲ್ಲ. ಬೇಕಿದ್ದರೆ ಸ್ವಾಮಿಗಳವರನ್ನ ಕೇಳಿ ವಿಚಾರಿಸಿ. ಆಗದವರು ಯಾರೋ ನಿಮಗೆ ಚಾಡಿ ಹೇಳಿರಬೇಕು. ಈ ಗ್ರಂಥ ಪ್ರಕಟಣೆಯಿಂದ ನಷ್ಟ ನನಗಾಗಿದೆಯೇ ವಿನಾ ಮಠಕ್ಕಲ್ಲ' ಎಂದೆ. ಮೂರ್ತಿಯವರು ಎಲ್ಲಾ ಕೇಳಿ, ಸ್ವಾಮಿಗಳನ್ನೂ ವಿಚಾರಿಸಿ, ಸತ್ಯಾಂಶ ಗೊತ್ತಾದ ಮೇಲೆ ನಾನು ಕೊಟ್ಟ ಅವರ ಪ್ರಬಂಧವಿದ್ದ ಪುಸ್ತಕವನ್ನು ಸ್ವೀಕರಿಸಿದರು.

ಈ ನಿದರ್ಶನ ಕೊಟ್ಟದ್ದು ಅವರ ಖಂಡಿತವಾದಿತನಕ್ಕೆ. ಅವರಿಗೆ ಎಷ್ಟೇ ಬೇಕಾದವನಾಗಿದ್ದರೂ ನನ್ನ ತಪ್ಪನ್ನು ಮುಚ್ಚಿಹಾಕುವುದೂ ಇಲ್ಲ, ಅದು ದೋಷವೆಂದು ತಿಳಿದು ಹೇಳಿ ಎಚ್ಚರಿಸದೆಯೂ ಇಲ್ಲ. ಹಲವರು ಸ್ನೇಹಿತರು ಅನೇಕ ವೇಳೆ ದಾಕ್ಷಿಣ್ಯಕ್ಕೆ ಒಳಗಗಿ ಸ್ನೇಹಿತನ ತಪ್ಪನ್ನು 'ತಪ್ಪು' ಎಂದು ಹೇಳುವ ಧೈರ್ಯ ಮಾಡುವುದಿಲ್ಲ. ಡಾ. ಮೂರ್ತಿ ಆ ಜಾತಿಗೆ ಸೇರಿದವರಲ್ಲ. ತಪ್ಪನ್ನು ತೋರಿಸಿ ತಿದ್ದಲು ಯತ್ನಿಸಿದವನು ನಿಜವಾದ ಸ್ನೇಹಿತ ಅಲ್ಲ ಎನ್ನುತ್ತಾರೆ. ಒಬ್ಬ ವ್ಯಕ್ತಿ ಅನ್ಯರ ದುಡಿಮೆಯಿಂದ 'ಸಾಹಿತಿ' 'ಸಂಶೋಧಕ' ಅನ್ನಿಸಿಕೊಂಡ. ಅವನನ್ನು ಮುಲಾಜಿಲ್ಲದೆ ಖಂಡಿಸಿದರು. ಮತ್ತೊಬ್ಬ ಸಾಹಿತ್ಯ ಪ್ರಶಸ್ತಿ ಪಡೆದ. 'ಅದು ಸರಿಯಾದ ಆಯ್ಕೆ ಅಲ್ಲ' ಎಂದರು. ತಮ್ಮ ಮಗನೇ 'ನನಗೊಂದು ಕೆಲಸ ಕೊಡಿಸಿ' ಅಂದಾಗ, 'ಯೋಗ್ಯತೆ ಅರ್ಹತೆ ಇದ್ದರೆ ನೀನೆ ಪಡೆದುಕೋ. ನನ್ನ ಮಗನಿಗೆ ಕೆಲಸ ಕೊಡಿ ಅಂತಾ ಬೇಡಲು ನಿನ್ನ ತಂದೆಯನ್ನು ಭಿಕ್ಷುಕನನ್ನಾಗಿ ಮಾಡಿ ಅನ್ಯರ ಮನೆಗೆ ಕಳುಹಿಸಬೇಡ' ಎಂದರು. ಅವರ ನಾದಿನಿ ಸರ್ಕಾರಿ ಕಾಲೇಜು ಅಧ್ಯಾಪಕಿ. ಅವರಿಗೆ ಬೆಂಗಳೂರು ಬೇಕಾಗಿತ್ತು. ಭಾವನಿಗೆ ಹೇಳಿದರು. 'ಭಾವ ನಿಮಗೆ ಎಲ್ಲಾ ಮಂತ್ರಿಗಳೂ ಗೊತ್ತು. ಶಿಕ್ಷಣ ಇಲಾಖೆಯ ಅಧಿಕಾರಿಗಳು ಗೊತ್ತು. ಒಂದು ಮಾತು ಹೇಳಿ ನನಗೆ ಬೆಂಗಳೂರಿಗೆ ಟ್ರಾನ್ಸ್‌ಫರ್ ಕೊಡಿಸಿ' ಎಂದು. 'ನಾನು ಹೇಳಿದರೂ ಅವರು ಮಾಡದೇ ಹೋದರೆ? 'ಯಾಕೆ ಮಾಡೋಲ್ಲ, ನೀವು ಸಾಮಾನ್ಯರಲ್ಲ ಭಾವ ಕನ್ನಡ ಶಕ್ತಿ ಕೇಂದ್ರದ ಕೇಂದ್ರ ಶಕ್ತಿ! ನಿಮ್ಮ ಗರ್ಜನೆಗೆ ಮಂತ್ರಿಮಂಡಲವೇ ನಡುಗುತ್ತೆ. . .!' 'ಅದು ನನಗೆ ಗೊತ್ತಿಲ್ಲಮ್ಮ. ನಿನ್ನ ಮಾತು ಕೇಳಿದ ಮೇಲೆ ಇನ್ನೂ ಹೆಚ್ಚು ಎಚ್ಚರ ವಹಿಸಬೇಕಾಯ್ತು ನಾನು. ನೋಡು ಶಕ್ತಿ ಕೇಂದ್ರ ಇರೋದು ಕನ್ನಡಿಗರ ಹಿತರಕ್ಷಣೆಗಾಗಿ. ನನ್ನ ನಾದಿನಿಯ ಟ್ರಾನ್ಸ್‌ಫರ್ ಮಾಡಿಸಲು ಬಳಸಕ್ಕಲ್ಲ! ಕ್ಷಮಿಸು" ಎಂದುಬಿಟ್ಟರು.

ಅವರ ಸ್ವಾಭಿಮಾನ ಒಮ್ಮೊಮ್ಮೆ ದುರಭಿಮಾನವೂ ಎನ್ನಸುತ್ತೆ. ಅವರ ಒಬ್ಬಳೇ ಮಗಳು ಬಿ.ಇ. ಪಾಸ್ ಮಾಡಿಕೊಂಡಿದ್ದರೂ ರೂಪ ಗುಣ ಸ್ವಭಾವಗಳೆಲ್ಲದರಲ್ಲೂ ಚೆನ್ನಾಗಿದ್ದರೂ ಯಾರೂ ಹೆಣ್ಣು ಕೊಡಿ ಎಂದು ಕೇಳಲು ಅವರ ಮನೆಗೆ ಬರಲಿಲ್ಲ. ನಾನೇ ಎಚ್ಚರಿಸಿ ಒಂದು ಮಾತು ಹೇಳಬೇಕಾಗಿ ಬಂತು. 'ನೋಡಿ ಮೂರ್ತಿಯವರೇ, ನಿಮ್ಮ ಮಗಳಿಗೆ ಗಂಡು ಹುಡುಕುವುದು, ಗಂಡಿದ್ದವರ ಮನೆಗೆ ಹೋಗಿ ವಿಚಾರಿಸುವುದು ನಿಮ್ಮ ಕರ್ತವ್ಯ. ಅದು ತಂದೆಯಾದವನ ಜವಾಬ್ದಾರಿಯೂ ಹೌದು. ಅದನ್ನು ಮರೆತು 'ನಾನು ಹೇಗಪ್ಪಾ ಕೇಳೋದು' ಅಂತಾ ಸಂಕೋಚಪಟ್ಟುಕೊಂಡರೆ ಹೇಗೆ ? ಮಕ್ಕಳು ಹೆತ್ತವರಿಗೆ ಮಾನ ಇಲ್ಲವಂತೆ! ಆಗಾದೆ ಹುಟ್ಟಿದ್ದೇ ಹೆಣ್ಣು ಹೆತ್ತವರಿಗೆ ಅಂತಾ ಕಾಣುತ್ತೆ' ಅಂದೆ. ಅಷ್ಟು ಹೇಳಿದರೂ ಅವರ ಮುಖದ ಮೇಲೆ ಯಾವ ಬದಲಾವಣೆಯೂ ಕಾಣಲಿಲ್ಲ. ಅಂತಹ ಸ್ವಾಭಿಮಾನದ ಶಿಶು ಅವರು.

ಅಭಿಮಾನಧನ ಸುಯೋಧನಂ' ಅಂದ ಹಾಗೆ. ಅವನು 'ಚಲದೊಳ್ ದುಯೋಧನಂ' ಕೂಡ ಮೂತೀವರು ಕೆಲವು ವಿಚಾರದಲ್ಲಿ. ಅವನಂತೆಯೇ ಹಟವಾದಿ. ಹಲವು ವೇಳೆ ಬದುಕಿನೊಡನೆ ಕಾಂಪ್ರೊಮೈಸ್ ಮಾಡಿಕೊಳ್ಳುವುದೇ ಇಲ್ಲ. ಬೇಡಿದರೆ ತಮ್ಮ ಪ್ರಾಣವನ್ನೇ ಕೊಟ್ಟರು ಮಣಿಯುವುದು ಮಾತ್ರ ಸುಳ್ಳು. ಬೀದರ್‌ನಲ್ಲಿ ಸಿಕ್ ಹುಡುಗರ ಹಾವಳಿ ಹೆಚ್ಚಿ ಕನ್ನಡದ ಹೆಣ್ಣು ಮಕ್ಕಳು ಮರ್ಯಾದೆಯಿಂದ ರಸ್ತೆಯಲ್ಲಿ ಅಡ್ಡಾಡುವುದೇ ಕಷ್ಟವಾಗಿತ್ತು. ಡಾ. ಮೂರ್ತಿಯವರು ಆ ಸ್ಥಳಕ್ಕೆ ಖುದ್ದು ಭೇಟಿಕೊಟ್ಟು ಕನ್ನಡಿಗರ ಗೋಳು ಕೇಳಿ ಪತ್ರಿಕೆಗೆ ತಮ್ಮ ದಿಟ್ಟ ಹೇಳಿಕೆ ಕೊಟ್ಟರು. ಅದನ್ನು ಕಂಡ ಕೆಲವು ಪುಂಡು ತುಂಡುಗಳು, 'ಗುಂಡಿಗಾಹುತಿಯಾಗುವವರ ಪಟ್ಟಿಯಲ್ಲಿ ನೀವೂ ಒಬ್ಬರು' ಎಂದು ಅನಾಮಧೇಯ ಪತ್ರ ಕಳುಹಿಸಿದರು. ಡಾ. ಮೂರ್ತಿಯವರು 'ಸಂತೋಷ, ನಾನಷ್ಟೇ ಅಲ್ಲ ನನ್ನ ಧರ್ಮಪತ್ನಿಯೂ ಬಲಿಯಾಗಲಿಕ್ಕೆ ಸಿದ್ಧಳಿದ್ದಾಳೆ' ಎಂದು ಘೋಷಿಸಿದರು. ಇಂತಹ ವಿಚಾರಗಳಲ್ಲಿ ಅವರೆಷ್ಟು ಮೃದುವೋ ಅಷ್ಟೇ ಒರಟರು.

ಡಾ. ಮೂರ್ತಿಯವರ ಸಾಧನೆಯ ಮೈಲಿಗಲ್ಲೆಂದರೆ ಡಾ.ಪಿ.ವಿ. ನಾರಾಯಣ, ಸಿನೆಮಾ ನಟ ಅಶೋಕ್ ಮೊದಲಾದವರ ಸಹಯೋಗದಲ್ಲಿ ಸಂಘಟಿಸಿದ 'ಕನ್ನಡ ಶಕ್ತಿ ಕೇಂದ್ರ'. ಆ ಧ್ವಜದಡಿಯಲ್ಲಿ ನಡೆಸಿದ ಚಳುವಳಿಗಳು ನೂರಾರು. ಅದಕ್ಕೆ ಅನಂತ ಮುಖಗಳು, ಅನಂತ ಬಾಹುಗಳು. ಉದಾಹರಣೆಗೆ ಬೆಂಗಳೂರು ದೂರದರ್ಶನ ಕೇಂದ್ರದಲ್ಲಿ ಕನ್ನಡದ ಯಾವ ಕಾರ್ಯಕ್ರಮವೂ ಪ್ರಸಾರವಾಗುತ್ತಿರಲಿಲ್ಲ. ಅದನ್ನು ಒತ್ತಾಯಿಸಿ ತಂದ ಕೀರ್ತಿ ಶಕ್ತಿಕೇಂದ್ರದ್ದು. ಅಂತೆಯೇ ಕನ್ನಡ ಕಾರ್ಯಕ್ರಮಗಳಿಗಾಗಿ ಕೆಲವು ನಿಮಿಷಗಳನ್ನು ಮೀಸಲಿಟ್ಟಿದ್ದರೂ ಅದು ಬೆಂಗಳೂರಿಗೆ ಮಾತ್ರ ಸೀಮಿತ. ವಿಶೇಷ ವ್ಯವಸ್ಥೆ ಇಲ್ಲದೆ ಕರ್ನಾಟಕದ ಯಾವ

ಭಾಗಕ್ಕೂ ಅದು ಮುಟ್ಟುತ್ತಿರಲಿಲ್ಲ. ಅದಕ್ಕೆ ಸೂಕ್ತ ವ್ಯವಸ್ಥೆ ಮಾಡಿಸಿ, ೧೯೯೦ರ ನವೆಂಬರ್‌ನಿಂದ ಎಲ್ಲೆಡೆಯೂ ಕನ್ನಡ ಕಾರ್ಯಕ್ರಮಗಳನ್ನು ದೂರದರ್ಶನದ ಮೂಲಕ ನೋಡುವಂತೆ ಅನುವು ಮಾಡಿಕೊಟ್ಟಿದ್ದು ಕನ್ನಡ ಶಕ್ತಿ ಕೇಂದ್ರ. ಎರಡನೆಯದಾಗಿ ಹಂಪೆಯಲ್ಲಿ ಕನ್ನಡ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಬೇಕೆಂಬ ಆಲೋಚನೆ ಮೊದಲು ಬಂದದ್ದೇ ಶಕ್ತಿ ಕೇಂದ್ರದ ತಲೆಯಲ್ಲಿ. ಆದರೆ ಅದು ಸ್ಥಾಪಿತವಾದರೆ ತಾವು ಕುಲಪತಿಗಳಾಗುವೆವೆಂಬ ದೂರಾಲೋಚನೆ ಡಾ. ಮೂರ್ತಿಯವರದಾಗಿರಲಿಲ್ಲ. ಆ ಸ್ಥಾನ ಈಗ ಅದಾಗಿಯೇ ಬರುತ್ತೇನೆಂದರೂ ಮೂತೀಯವರು ತಮ್ಮ ಮನೆ ಬಾಗಿಲಿಂದ ಹೊರಗಿಡುತ್ತಾರೆ. ಅಂತಹ ದಿವ್ಯ ನಿರ್ಲಕ್ಷ್ಯ ಅವರದು. ಮೂರನೆಯದಾಗಿ, ಕರ್ನಾಟಕ ಸರ್ಕಾರವು ಮೂರನೇ ದರ್ಜೆ ನೌಕರರನ್ನು ನೇಮಿಸಿಕೊಳ್ಳುವ ಸಂದರ್ಭದಲ್ಲಿ ಆಯ್ಕೆಯಾಗುವ ಅಭ್ಯರ್ಥಿ ಕನ್ನಡವನ್ನು ಕಡ್ಡಾಯವಾಗಿ ಕಲಿಯಲೇಬೇಕು ಎಂಬ ನಿಯಮವಿತ್ತು. ಆದರೆ ಮಧ್ಯೆ ಬಂದ ಒಂದು ಮಂತ್ರಿಮಂಡಲ ಆ ನಿಯಮವನ್ನು ಕಿತ್ತು ಹಾಕಿತು. ಕನ್ನಡ ಶಕ್ತಿ ಕೇಂದ್ರ ಅದಕ್ಕೆ ಮತ್ತೆ 'ಜೀವ' ಕೊಟ್ಟು ಕನ್ನಡಿಗರಿಗೇ ಕನ್ನಡ ಬಲ್ಲವರಿಗೇ ಕರ್ನಾಟಕದಲ್ಲಿ ಉದ್ಯೋಗಾವಕಾಶಗಳು ಸಿಕ್ಕುವಂತೆ ಮಾಡಿತು. ನಾಲ್ಕನೆಯದಾಗಿ, ಕಾವೇರಿ ಜಲವಿವಾದದ ಬಗ್ಗೆ 'ಈ ನೆಲ ಈ ಜಲ ನಮ್ಮವು. ಇವನ್ನು ಅನ್ಯರಿಗೆ ದಾನಮಾಡಿ ನಾಲ್ಕು ಕೋಟಿ ಕನ್ನಡಿಗರಿಗೆ ಅನ್ಯಾಯಮಾಡುವುದಿಲ್ಲ' ಎಂದು ಶಪಥ ತೊಟ್ಟು ಸತತವಾಗಿ ಹೋರಾಡಿದ್ದು, ಹೋರಾಡುತ್ತಿರುವುದು ಶಕ್ತಿಕೇಂದ್ರ. ಐದನೆಯದಾಗಿ, ಸರೋಜನಿ ಮಹಿಷಿ ಸಮಿತಿಯ ಸ್ಥಾಪನೆಗೆ ಶಕ್ತಿಕೇಂದ್ರ ಕಾರಣ ಎಂಬುದು ಬಹುಜನರಿಗೆ ಗೊತ್ತಿಲ್ಲ. ಅದೇ ರೀತಿ ಆ ಸಮಿತಿಯ ವರದಿಯ ಅನುಷ್ಠಾನ ಇವುಗಳಲ್ಲೂ ಶಕ್ತಿಕೇಂದ್ರದ ಬೆವರು ಹರಿದಿರುವುದು ಸತ್ಯ. ಆರನೆಯದಾಗಿ, ಇಡೀ ಭಾರತದಲ್ಲಿ ಯಾವ ರೀತಿಯ ಪ್ರಕೃತಿ ವಿಕೋಪಕ್ಕಾಲಿ, ರಾಜಕೀಯ ಪಿಡುಗಿಗಾಗಲಿ ಸಿಲುಕದೆ ಶಾಂತಿ, ನೆಮ್ಮದಿಯಿಂದರಲು ಏಕೈಕ ತಾಣ ಎಂದರೆ ಕರ್ನಾಟಕ. ಅದನ್ನರಿತು ಎಲ್ಲೆಲ್ಲಿಯವರೊ ವಲಸೆ ಬಂದು 'ಉದ್ಯಾನನಗರ' ಎಂದೆನಿಸಿಕೊಂಡಿದ್ದ ಬೆಂಗಳೂರನ್ನು ಹೊಲಸೆಬ್ಬಿಸಿದರು. ಆ ಬಗೆಯ ಅಂತರ ರಾಜ್ಯ ವಲಸೆ ವಿರುದ್ಧ ಚಳವಳಿ ನಡೆಸಿ ಜನಜಾಗೃತಿಗೆ ಕಾರಣವಾದದ್ದು ಶಕ್ತಿಕೇಂದ್ರ. ಏಳನೆಯದಾಗಿ, ಪಿ.ವಿ. ನಾರಾಯಣರ 'ಕನ್ನಡತನ ಮತ್ತು ಭಾರತೀಯತೆ' ಡಾ. ಚಿದಾನಂದ ಮೂರ್ತಿಯವರ 'ಕನ್ನಡ–ಕನ್ನಡಿಗ–ಕರ್ನಾಟಕ' 'ಕನ್ನಡ ಸಂಸ್ಕೃತಿ ನಮ್ಮ ಹೆಮ್ಮೆ' ಮೊದಲಾದ ಕೃತಿ ರತ್ನಗಳನ್ನು ಪ್ರಕಟಿಸುವ ಮೂಲಕ, ಕರ್ನಾಟಕ ರಾಜ್ಯದಾದ್ಯಂತ ನೂರಾರು ವಿಚಾರ ಸಂಕಿರಣಗಳನ್ನು ಏರ್ಪಡಿಸುವುದರ ಮೂಲಕ ಕನ್ನಡ ನಾಡು, ಕನ್ನಡ ನುಡಿ, ಕನ್ನಡ ಸಂಸ್ಕೃತಿ, ಕನ್ನಡ ಜನ, ಕನ್ನಡ ಮನ, ಕನ್ನಡಿಗರ ಸಮಸ್ಯೆಗಳು, ಕನ್ನಡಿಗರ ಜಾಗೃತಿ ಇಂಥೆಲ್ಲ ಹಲವು ಹತ್ತೆಂಟು ಕಾರ್ಯಕ್ರಮಗಳನ್ನು ನಿಯೋಜಿಸಿ ಪ್ರಚುರಪಡಿಸುವ ಮೂಲಕ ಅಮಾಯಕ ಕನ್ನಡಿಗರ ಬಗ್ಗೆ ದೌಷ್ಟ್ಯದ ಕಣ್ಣು ತೆರೆಸಿದ್ದು ಕನ್ನಡ ಶಕ್ತಿಕೇಂದ್ರ. ಒಟ್ಟಿನಲ್ಲಿ ಕರ್ನಾಟಕದಲ್ಲಿ ಕನ್ನಡಾಗಿ ಏನಾದರೂ ಅಲ್ಪಸ್ವಲ್ಪ ಒಳಿತಾಗಿದ್ದರೆ ಅದು ಕನ್ನಡ ಶಕ್ತಿಕೇಂದ್ರದಿಂದ. ಅರ್ಥಾತ್ ಅದರ ಕೇಂದ್ರಶಕ್ತಿಯಾದ ಡಾ. ಚಿದಾನಂದಮೂರ್ತಿಯವರಿಂದ. ಸತ್ಯವನ್ನು ಹೇಳಲು ಯಾರೂ ಹಿಂಜರಿಯಬೇಕಾಗಿಲ್ಲ, ನಾಚಬೇಕಾಗಿಲ್ಲ, ಹೆದರಲೂ ಬೇಕಾಗಿಲ್ಲ. ಇದು ಪೊಳ್ಳು ಪ್ರಶಂಸೆಯೂ ಅಲ್ಲ ಎಂಬುದು ಬಲ್ಲವರಿಗೆ ಮಾತ್ರ ವೇದ್ಯ.

ಡಾ. ಚಿದಾನಂದಮೂರ್ತಿ ಓರ್ವ ಅಪರೂಪದ ವ್ಯಕ್ತಿ. ಅವರ ವ್ಯಕ್ತಿತ್ವವೂ ಅನಾದೃಶ್ಯವಾದುದೆ. ನಾಡಿನ ಕಸುವಾಗಿ, ನುಡಿಯ ಹಸಿವಾಗಿ, ಕನ್ನಡ ಶಕ್ತಿಕೇಂದ್ರದ ಕ್ರತುಶಕ್ತಿಯಾಗಿ, ಕ್ರಿಯಾಶಕ್ತಿಯಾಗಿ, ಕನ್ನಡಕ್ಕಾಗಿ ಹಗಲಿರುಳೂ ದುಡಿಯುತ್ತಿರುವ, ಅದರ ಸೇವೆ ಸಂವರ್ಧನೆಗಾಗಿ ಕಬ್ಬಾಗಿ ಅರೆದು, ಗಂಧವಾಗಿ ತೇದು, ಕರ್ಪೂರವಾಗಿ ಉರಿದುಕೊಂಡಿದ್ದಾರೆ. ತಮ್ಮನ್ನು ತಾವು ಅದಕಾಗಿ ಅರ್ಪಿಸಿಕೊಂಡಿದ್ದಾರೆ. ಈ ಮಹಾನುಭಾವ ನೂರ್ಕಾಲ ನಮ್ಮೊಡನಿರಲಿ ಎಂದು ಹಾರ್ದಿಕವಾಗಿ ಹಾರೈಸುತ್ತೇನೆ.

•

# ನಿನ್ನ ಕೊಡುಗೆಯನಿತ್ತು ಹೊರಟು ಹೋಗು*

========================================================

**ಮಹದೇವ ಬಣಕಾರ**
**ಕವಿ ಚಮೂಪತಿಯಾಗಿ**
**ಚಮೂಪತಿಯು ಕವಿಯಾಗಿ**

ಎಂಬ ಉಕ್ತಿ ಇದೆ ಕನ್ನಡದಲ್ಲಿ. ಅದರ ಭಾವಾರ್ಥ ಖಡ್ಗ ಹಿಡಿವ ಕೈ ಲೇಖಣಿಯನ್ನೂ ಹಿಡಿಯಬಲ್ಲದು ಎಂದು. ಅದರಂತೆ ಡಾ. ಮಹದೇವ ಬಣಕಾರರು ರಾಜಸೂತ್ರವನ್ನು ಹಿಡಿದ ತಮ್ಮ ಕೈಯಲ್ಲಿ ಸಾಹಿತ್ಯ ಸೂತ್ರವನ್ನು ಹಿಡಿದ ಸವ್ಯಸಾಚಿಯಾಗಿದ್ದಾರೆ. ಅವರು ರಾಜಕಾರಣಿ ಆಗುವುದಕ್ಕೆ ಮೊದಲೇ ಸಾಹಿತಿಯಾಗಿದ್ದರು. ಅವರದು 'ಓದು ಮುಕ್ಕಾಲು, ಬುದ್ಧಿಮುಕ್ಕಾಲು', ಅವರಲ್ಲಿನ ಪ್ರತಿಭೆಯದಂತೂ ಸಿಂಹಪಲು ! ಅಂದರೆ ಅವರು ಓದಿದ್ದು ಹೈಸ್ಕುಲ್ ಒಂದನೇ ತರಗತಿಯವರೆಗೆ. ಬರೆದದ್ದು ಭಾವಗೀತದಿಂದ ಮಹಾಕಾವ್ಯದವರೆಗೆ. ದೈವದತ್ತವಾದ ಪ್ರತಿಭೆ, ಬದುಕುಕೊಟ್ಟ ಅನುಭವ ಇವುಗಳಿಂದಾಗಿ ಕವಿ, ವಿಮರ್ಶಕ, ಸಣ್ಣಕತೆಕಾರ, ನಾಟಕಕಾರ, ವಚನರಚಕ, ಸಂಶೋಧಕ, ಪತ್ರಿಕೋದ್ಯಮಿ, ವಿಚಾರವಾದಿ ಏನೆಲ್ಲಾ ಆಗಿದ್ದಾರೆ. ತನ್ಮೂಲಕ ಕನ್ನಡಮ್ಮನ ಮಡಿಲು ತುಂಬಿದ್ದಾರೆ, ಮುಡಿಯ ಸಿಂಗರಿಸಿದ್ದಾರೆ. ರಾಜಕೀಯ ರಂಗದಲ್ಲೂ ಅವರದು ಗಣನೀಯ ಸೇವೆ. ಅನೇಕ ವರ್ಷದವರೆಗೆ ಕರ್ನಾಟಕ ರಾಜ್ಯದ ಎರಡೂ ಸದನದಲ್ಲಿ ಶಾಸಕರಾಗಿ ಸೇವೆಸಲ್ಲಿಸಿದ್ದಾರೆ.

ಮಹದೇವ ಬಣಕಾರರ ರಾಜಕೀಯ ಗುರುಗಳು ಪಾಟೀಲ್ ಪುಟ್ಟಪ್ಪನವರು, ಆಧ್ಯಾತ್ಮದ ಗುರುಗಳು ಸಿರಿಗೆರೆಯ ಬೃಹನ್ಮಾಠಧ್ಯಕ್ಷರಾಗಿದ್ದ ಲಿಂಗೈಕ್ಯ ಜಗದ್ಗುರು ಶ್ರೀ ಶ್ರೀ ಶಿವಕುಮಾರ ಶಿವಾಚಾರ್ಯ ಮಹಾ ಸ್ವಾಮಿಗಳು. ಪೂಜ್ಯರ ಬಗೆಗೆ ಬಣಕಾರರದು ಅನನ್ಯವಾದ ಭಕ್ತಿ. ಒಂದೆಡೆ ಸ್ಮರಿಸುತ್ತಾರೆ – ನಾನೊಂದು ಸುಟ್ಟಬಟ್ಟೆ ಇಡಲೂ ಬಾರದು, ಉಡಲೂ ಬಾರದು ಅದನ್ನು ಇಡಲೂ ಬರುವಂತೆ ಉಡಲೂ ಬರುವಂತೆ ಮಾಡಿದ ಕಾರುಣ್ಯ ಸಿರಿಗೆರೆ ಶ್ರೀಗಳವರದು. ಅದಕಾಗಿಯೇ ಅವರು ನನ್ನ ಆರಾಧ್ಯ ದೇವರು. ಅವರ ಮೂಲಕವೇ ನಾನು ಇಹದ ಸುಖವನ್ನು ಪರದ ನಿಃಶ್ರೇಯಸ್ಸನ್ನೂ ಕಾಣಬೇಕಾಗಿದೆ ಎಂದು. ಇಂತಿದ್ದರೂ ಗುರುಗಳು ಬಣಕಾರರ ರಾಜಕೀಯ ತಳ್ಳಿ ತಪ್ಪಿಸಲಾಗಲಿಲ್ಲ. ಪಾಟೀಲಪುಟ್ಟಪ್ಪನವರು ಬೀಡಿ ಬಿಡಿಸಲಾಗಲಿಲ್ಲ ! ಜುಬ್ಬದ ಎಡ ಬಲದ ಜೇಬುಗಳಲ್ಲಿ ಬೀಡಿ ಬೆಂಕಿಪೊಟ್ಟಣ ಇದ್ದಹಾಗೆ ಸಾಹಿತ್ಯ ಮತ್ತು ರಾಜಕೀಯಗಳು ಬಣಕಾರರ ಜೊತೆಯಲ್ಲೇ ಬದುಕು ಮಾಡಿದವು. ಅವರು ತಮಾಷೆಗೆ ಹೇಳುತ್ತಿದ್ದುದುಂಟು; 'ಸ್ವಾಮಿ ನನಗೆ ಇಬ್ಬರು ಹೆಂಡರು ; ಅವರು ಒಬ್ಬಳು ಪಾರ್ವತಮ್ಮ, ಮತ್ತೊಬ್ಬಳು ಡಾ. ಲಲಿತಾ. ಮತ್ತೆ ಇಬ್ಬರು ಉಪಪತ್ನಿಯರು, ಒಬ್ಬಳು ಸಾಹಿತ್ಯ ಮತ್ತೊಬ್ಬಳು ರಾಜಕೀಯ. ಇಬ್ಬರನ್ನೂ ಬಿಡಲಾರೆ. ಎರಡು ಜೊತೆ ಎತ್ತಿನ ಆರಂಬ ಕೆಡೋಲ್ವಂತೆ, ಇಬ್ಬರ ಹೆಂಡಿರ ಸಂಸಾರವೂ ಕೆಡಲ್ವಂತೆ! ಇರಲಿ ಬಿಡಿ ಎನ್ನುತ್ತಿದ್ದರು.

ಶ್ರೀಯುತರಿಗೆ ಪತ್ನೀಪುತ್ರರ ಮೇಲೆ ಎಷ್ಟು ಪ್ರೇಮವೊ, ಅಷ್ಟೇ ಪ್ರೇಮ ನಾಡು ನುಡಿಗಳ ಬಗೆಗೆ. ಹೆತ್ತ ತಾಯಿ ಹೊತ್ತ ನೆಲ ಎರಡೂ ಪವಿತ್ರ. ಅಷ್ಟೇ ಪವಿತ್ರ ಬದುಕು ಕೊಟ್ಟ ಭಾಷೆ ಎನ್ನುತ್ತಾರೆ. ಅವರ ಗದ್ಯ ಪದ್ಯಗಳಲ್ಲಿ ವಚನಗಳಲ್ಲಿ ಮಣ್ಣಿನ ವಾಸನೆ ಇದೆ. ಕನ್ನಡದ ಕಳಕಳಿ ಇದೆ. ಅಲ್ಲದೆ, ಅವರದು ಜಾನಪದೀಯ ಸೊಗಡನ್ನು ಮೈಗೂಡಿಸಿಕೊಂಡ ಚೇತನ. ಅವರ ನುಡಿ ನುಡಿ ಯಲ್ಲೂ ಮಣ್ಣಿನ ಮೋಹ, ಭಾಷಾ ವ್ಯಾಮೋಹ ಗರಿಗೆದರಿ ನಿಂತಿರುವುದನ್ನು ಕಾಣುತ್ತೇವೆ. ಅವರ ಜೋವನೋತ್ಸಾಹವೂ ಮೆಚ್ಚುವಂಥದು.

ಮಹದೇವ ಬಣಕಾರರು ಹುಟ್ಟಿದ್ದು ಈಗಿನ ಹಾವೇರಿ ಜಿಲ್ಲೆಯ ಬ್ಯಾಡಗಿ ತಾಲ್ಲೂಕಿನ ಮೋಟೆ ಬೆನ್ನೂರಿನಲ್ಲಿ, ಅಕ್ಟೋಬರ್ ೩, ೧೯೩೨ರಲ್ಲಿ, ಲಿಂಗೈಕ್ಯರಾದುದು ನವೆಂಬರ್ ೧೭, ೨೦೦೧ರಂದು. ಸರಿಯಾಗಿ ಅರವತ್ತೊಂಬತ್ತು ವರ್ಷ ೪೫ದಿನಗಳ

---

*ವಚನಸಾಹಿತಿ ಮಹದೇವ ಬಣಕಾರ

ಸಾರ್ಥಕ ಬದುಕು ಅವರದು. ಬದುಕೇನೊ ಸಾರ್ಥಕ, ಆದರೆ ಪಟ್ಟ ಬವಣೆ ಹೇಳತೀರದು. ಅವರು ಮನೆಯಲ್ಲಿದ್ದುದಕ್ಕಿಂತ ಹೆಚ್ಚು ದಿನಗಳನ್ನು ಆಸ್ಪತ್ರೆಯಲ್ಲಿ ಕಳೆದರು. ಹೇಳುತ್ತಾರೆ–

**ಬೆನ್ನಿಗಂಟಿತು ಬದುಕು, ಪೆನ್ನಿಗಂಟಿತು ಬರಹ**
**ಒಂದನೊಂದೆಂದಿಗೂ ಅಗಲದಂತೆ**
**ಕವಿಯನಾಶ್ರಯಿಸಿದವು ಬದುಕು ಬರಹಗಳೆರಡು**
**ಒಂದೆ ನಾಣ್ಯದ ಎರಡು ಮೊಗೆಗಳಂತೆ**

**ಹಸಿದ ದಿನಗಳಿಗಿಂತ ಉಂಡದಿನಗಳಣೆಸಿ**
**ಉಳಿದುಕೊಂಡರೆ ಹೆಚ್ಚು ಬದುಕಿನಲ್ಲಿ**
**ಉಗುಳನುಂಡರು ಸರಿಯೆ ಉಳಿದುಕೊಳ್ಳಲೆಬೇಕು**
**ಏನಾನಾದರೂ ಸಾಧಿಸುವ ದೃಷ್ಟಿಯಲ್ಲ!**

ಇದು ಅವರ ಕಷ್ಟದ ಹಾಡು, ಪಟ್ಟಂತ ಪಾಡು ! ಆದರೂ ಧ್ಯೇಯವಾದಿ. ಮುಂದುವರಿದು ಹೇಳುತ್ತಾರೆ

**ಮಣ್ಣು ಕೊಡುವ ದೇಹ ತಣ್ಣಗಾಗುವತನಕ**
**ಹಿಡಿದ ಕಾಯಕದಲ್ಲಿ ನಿರತನಾಗು**
**ಜನರ ಕಲ್ಯಾಣಕ್ಕೆ ಜಗದ ಉದ್ಧಾರಕ್ಕೆ**
**ನಿನ್ನ ಕೊಡುಗೆಯನಿತ್ತು ಹೊರಟುಹೋಗು!**

ಎಂದು.

ಇದು ಅವರ ಆಶಾವಾದಿತನ ಅವರ ಜೀವನ ಗಾಯತ್ರಿಯೂ ಅಹುದು!

ನೋವುಂಡು ನಲಿವು ನೀಡಿದ ಈ ಕವಿಗೆ ಜೀವನ ಒಂದು ಸವಾಲಾಯಿತೇ ಹೊರತು ಸಮಸ್ಯೆಯಾಗಲಿಲ್ಲ. ಅಪರಿಹಾರ್ಯವೂ ಎನಿಸಲಿಲ್ಲ. ಇದು ಅನುಕರಣೀಯ ಶ್ಲಾಘನೀಯಕೂಡ.

ಮಹದೇವ ಬಣಕಾರರು ಹುಟ್ಟಕವಿ ಕಟ್ಟಿದ ಕವಿ ಅಲ್ಲ. ಇವರು ಧಾರವಾಡದ ಕರ್ನಾಟಕ ಹೈಸ್ಕೂಲ್ ವಿದ್ಯಾರ್ಥಿಯಾಗಿದ್ದಾಗಲೇ ೧೯೫೧ರಲ್ಲಿ 'ಕಾರ್ಯೋದಯ' ಎಂಬ ಕವನ ಸಂಕಲನವನ್ನು ಹೊರತಂದರು ಅವರ ಅಣ್ಣ ಎಂ.ಜಿ. ಬಣಕಾರರ ನೆರವಿನಿಂದ. ಅದಕ್ಕೆ ಅವರ ವಿದ್ಯಾಗುರು ಸಾಲಿ ರಾಮಚಂದ್ರರಾಯರು ಮುನ್ನುಡಿ ಬರೆದಿದ್ದಾರೆ. ಅಂದಿಗೆ ಅವರ ವಿದ್ಯೆ ನೈವೇದ್ಯವಾಯಿತು. ಶಾಲೆಗೆ ಶರಣು ಹೊಡೆದು ಹಳ್ಳಿಗೆ ಬಂದು ಎಮ್ಮೆ ಕಾಯುತ್ತಲೆ ಕವನ ಬರೆಯ ತೊಡಗಿದರು. ಅನಂತರ ಪತ್ರಿಕೋದ್ಯಮ ಅವರನ್ನು ಕೈಬೀಸಿ ಕರೆಯಿತು. ದಾವಣಗೆರೆಗೆ ಬಂದು 'ಜಾಗೃತಿ'ಯೆಂಬ ಮಾಸಪತ್ರಿಕೆಯನ್ನು ಹೊರಡಿಸಿದರು. ಆದರೆ ಅದರಲ್ಲಿ ಕೈ ಸಾಗಲಿಲ್ಲ. ಶ್ರೀಗುರುಗಳ ಆದೇಶದಂತೆ ಸಾಹಿತ್ಯ, ಸಂಶೋಧನೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡರು. ಅದರ ಫಲವಾಗಿ ಬಣ್ಣದಕಾರಂಜಿ, ಹೊಸಹುಟ್ಟು (ಕವಿತೆಗಳು), ಮಹದೇವ ಬಣಕಾರರ ವಚನಗಳು (ವಚನ ಸಂಕಲನ), ವಿಶ್ವ ಬಂಧು ಮರುಳ ಸಿದ್ಧ ಮತ್ತು ಶ್ರೀ ಶಿವಕುಮಾರ ಚರಿತ್ರೆ (ಭಾಮಿನಿ ಷಟ್ಪದಿ ಮಹಾಕಾವ್ಯಗಳು), ಮಾದನ ಮಗ ಮತ್ತು ಇತರ ಕಥೆಗಳು (ಸಣ್ಣಕಥಾ ಸಂಲನ), ಕಲ್ಯಾಣ ಕ್ರಾಂತಿ ನಾಟಕ, ಆಂಗ್ಲರ ಆಡಳಿತದಲ್ಲಿ ಕನ್ನಡ (ಸಂಶೋಧನ ಕೃತಿ) ಇವೆ ಮೊದಲಾದ ಸುಮಾರು ನಲವತ್ತು ಮೌಲಿಕ ಗ್ರಂಥಗಳು ಬೆಳಕು ಕಂಡಿವೆ. ಬಣ್ಣದ ಕಾರಂಜಿ ಕೊಟ್ಟಿದ್ದಾರೆ. 'ವಿಶ್ವಬಂಧು ಮರುಳಸಿದ್ಧ' ಮಹಾಕವಿ ಪಟ್ಟ ಕೊಟ್ಟಿದೆ. ಶ್ರೀ ಕುವೆಂಪುರವರ ಶ್ರೀ ರಾಮಾಯಣ ದರ್ಶನಂ ಮಹಾಕಾವ್ಯದಿಂದ ಚಂದ್ರಶೇಖರ ಕಂಬಾರರ 'ಚಕೋರಿ' ಯವರೆಗೆ ಅಂದರೆ ಕೇವಲ ೫೦ ವರ್ಷಗಳ ಅವಧಿಯಲ್ಲಿ ೧೫ ಮಹಾಕಾವ್ಯಗಳು ಬಂದಿವೆ ಕನ್ನಡದಲ್ಲಿ. ಅವುಗಳಲ್ಲಿ ಮಹಾದೇವ ಬಣಕಾರರ 'ವಿಶ್ವಬಂಧು ಮರುಳಸಿದ್ಧ' ಅವರ ವಚನ ಸಂಪುಟಗಳಲ್ಲಿ 'ಮಹಾದೇವ ಬಣಕಾರರ ವಚನಗಳು' ಆತ್ಮ, ಆಧ್ಯಾತ್ಮ, ಲೌಕಿಕ, ಪಾರಮಾರ್ಥ ವಿಷಯಗಳನ್ನು ಗರ್ಭಿಕರಿಸಿಕೊಂಡಿರುವ ಶ್ರೇಷ್ಠ ವಚನ ಸಾಹಿತ್ಯ ಗ್ರಂಥ. 'ಆಂಗ್ಲರ ಆಡಳಿತದಲ್ಲಿ ಕನ್ನಡ' ಶ್ರೀಯುತರ ಆಚಾರ್ಯ ಕೃತಿ (Master piece). ಕನ್ನಡ ಕಂಡ ಒಂದು ಶ್ರೇಷ್ಠ ಸಂಶೋಧನ ಗ್ರಂಥ.

ಮಹದೇವ ಬಣಕಾರರ ಬಹುಮುಖ ಪ್ರತಿಭೆಯನ್ನು ಗುರುತಿಸಿ, ೧೯೮೬ರ ಕನ್ನಡ ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪುರಸ್ಕಾರಗಳು ಲಭಿಸಿವೆ. ಕುವೆಂಪು ವಿಶ್ವವಿದ್ಯಾಲಯವು ೧೯೯೭ರಲ್ಲಿ ಗೌರವ ಡಾಕ್ಟರೇಟ್ ನೀಡಿದೆ. ಇಂತವೆನಿತೋ ಪ್ರಶಸ್ತಿಗಳು ಇವರನ್ನು ಅರಸಿ ಬಂದಿದೆ.

ಬಣಕಾರರು ಬದುಕನ್ನು ಅಪ್ಪಿದರು, ಸಾವನ್ನು ಕ್ರೀಡಾ ಮನೋಭಾವದಿಂದಲೇ ಸ್ವೀಕರಿಸಿದರು. ಸಾವು ಅವರಿಗೆ ಭೀತಿಯ ವಸ್ತುವಾಗಿರಲಿಲ್ಲ. ಪ್ರೀತಿಯ ನೇಹಿಗವಾಗಿತ್ತು. ಹಿಂದೊಮ್ಮೆ ಕಾಯಿಲೆ ಉಲ್ಬಣಿಸಿ ಈಗಲೊ ಆಗಲೊ ಎನ್ನುವಂತಾಗಿದ್ದರು. ಪುಣ್ಯವಶಾತ್ ಗುಣಮುಖರಾಗಿ ಆಸ್ಪತ್ರೆಯಿಂದ ಮನೆಗೆ ಬಂದರು. ಆ ಸಂದರ್ಭವನ್ನು ಕುರಿತು ಈಗಿನ ಸಿರಿಗೆರೆ ಬೃಹನ್ಮಠಾಧ್ಯಕ್ಷರಾದ ಜಗದ್ಗುರು ಶ್ರೀ ಶ್ರೀ ಶಿವಾಚಾರ್ಯ ಮಹಾಸ್ವಾಮಿಗಳ ಸಂಗಡ ಮಾತನಾಡುತ್ತಾ ನಿಂತೆಯೆಡೆಯಲ್ಲಿ ಒಂದು ವಚನ ಕಟ್ಟಿ ವಾಚಿಸಿದರು. ಇದೇ ಅವರ ಲೇಖನಿಯಿಂದ ಬಂದ ಅಪ್ರಕಟಿತ ಕೊಟ್ಟ ಕೊನೆಯ ವಚನವಾಗಿದೆ. ಅದು ಹೀಗಿದೆ.

**ಶರಣಂಗೆ ಮರಣವೇ ಮಹಾನವಮಿ ಎಂಬುದು**
**ಎನಗೆ ಮರಣ ಸಂದಿ ಮರಳಿ ಪೋದುದೇಕೆ ?**
**ಕಸುಗಾಯ ಹಿಸುಕಿ ಮೇಲಿದವರುಂಟೆ ?**
**ಅನು ಹಣ್ಣಾದ ಕಾರಣ ನೀನುಣ್ಣಲೊಲ್ಲೆಯಾದೆಯಯ್ಯಾ!**
**ಎನ್ನ ಹಣ್ಣಮಾಡಿ ನೀನುಣ್ಣುವಂತೆ ಮಾಡಾ**
**ಎನ್ನ ವರಗುರು ಶಿವಕುಮಾರ ಪ್ರಭುವೆ!**

ಅಂದಿನ ಕಸುಗಾಯಿ ಇಂದು ಉಣ್ಣುವ ಹಣ್ಣಾಯಿತೆ? ಇಷ್ಟು ಬೇಗ ಆ ಹಣ್ಣು ವರಗುರು ಶಿವಕುಮಾರ ಪ್ರಭುವಿಗೆ ಬೇಕಾಯಿತೆ? ಹಣ್ಣು ತೊಟ್ಟು ಕಳಚಿಬೀಳುವಾಗ ತನಗೆ ಬೇಕೆಂದು ಕೈಗೆತ್ತಿಕೊಂಡನೆ? ನೆನೆದರೆ ಸಾಕು ಮಾತು ಮೂಕವಾಗುತ್ತೆ. ಮನಸ್ಸು ಗರಿ ಮುದುಡಿ ಕೂರುತ್ತೆ.

ಮಣ್ಣಿನಲ್ಲಿ ಹುಟ್ಟಿ, ಮಣ್ಣಿಗಾಗಿ, ಮಾತಿಗಾಗಿ ದುಡಿದ, ಮಡಿದ ಡಾ. ಮಹದೇವ ಬಣಕಾರರು ನಿಜಕ್ಕೂ ಓರ್ವ ಬಂಗಾರದ ಮನುಷ್ಯ.

•

# ರತ್ನತ್ರಯ ಸಾಧಕ*

=================================================================

ಜಲಿಯನ್ ವಾಲಾಬಾಗಿನಲ್ಲಿ ನಡೆದ ಪಾತಕಿ ಡಯರ್ ಹತ್ಯಾಕಾಂಡವಿನ್ನೂ ಜನಮನದಲ್ಲಿ ಹಸುರಾಗಿತ್ತು. ಲಾಲಾಜಿಯವರು ಪೋಲೀಸರ ಏಟು ತಿಂದು ಮುಂಬಿಯಿನ ನಡುರಸ್ತೆಯಲ್ಲಿ ನೆತ್ತರು ಕಾರುತ್ತ ಬಿದ್ದಿದ್ದ ದೃಶ್ಯ ಭಾರತೀಯರ ಕಣ್ಮುಂದೆ ದೂರವಾಗಿರಲಿಲ್ಲ. ಪಂಜಾಬಿನಲ್ಲಿ ಕಿಶೋರ ಕೇಸರಿ ಭಗತ್ ಸಿಂಗ್, ಸುಖದೇವ್, ಭಗವತೀಚರಣ ಇವರ ಅರೆ ಬೆಂದ ಹೆಣಗಳಿನ್ನೂ ಸಟ್ಲೇಜ್ ನದಿಯಲ್ಲಿ ತೇಲುತ್ತಾ ಜಲಚರಗಳಿಗೆ ಆಹಾರವಾಗುತ್ತಿದ್ದ ನೋಟ ಅಳಿಸಿರಲಿಲ್ಲ. ಪಂಜಾಬಿನ ರಾಜಬೀದಿಯಲ್ಲಿ ಪ್ರತಿ ಭಾರತೀಯನೂ ಅಂಬೆಗಾಲಿಟ್ಟುಕೊಂಡು ಹೋಗಬೇಕು ; ತಲೆ ಎತ್ತಿನಡೆಯಲಾಗದು ಎಂಬ ಅಮಾನುಷ ಶಾಸನ ಕಣ್ಣೆದುರಿನಲ್ಲಿ ನರ್ತಿಸುತ್ತಿತ್ತು. ಬ್ರಿಟಿಷರ ಸುಳ್ಳು ಆಶ್ವಾಸನೆಗಳಿಂದ ಬೇಸತ್ತ ಬಾಪೂ ಕಿಡಿ ಕಿಡಿಯಾದರು, ಅವರ ಸೈರಣೆ ಸಮಾಧಿಯಾಗಿತ್ತು. ೧೯೪೨ರ ಮುಂಬೈ ಮಹಾನಗರದ ಅಧಿವೇಶನ ವೇದಿಕೆಯ ಮೇಲೆ ನಿಂತು ಗುಡುಗಿದರು.

'ಕ್ವಿಟ್ ಇಂಡಿಯಾ, ಕ್ವಿಟ್ ಇಂಡಿಯಾ ಕ್ವಿಟ್ ಇಂಡಿಯಾ' ಎಂಬುದು ಬ್ರಿಟಿಷರಿಗೆ ಬಾಪೂಜಿ ಕೊಟ್ಟ ಕಟ್ಟಕಡೆಯ ದಿಟ್ಟ ಆದೇಶವಾಗಿತ್ತು. 'ಮಾಡಿರಿ ಇಲ್ಲವೆ ಮಡಿಯಿರಿ' ಭಾರತೀಯರಿಗೆ ಅವರಿತ್ತ ಮೊತ್ತ ಮೊದಲ ಕ್ರಾಂತಿಕಾರಕ ಸಂದೇಶವಾಗಿತ್ತು.

ಬಾಪೂಜಿಯವರ ಮಾತು ಕೃತಿಗಿಳಿಯತೊಡಗಿದಾಗ ಭಾರತದ ಸ್ವಾತಂತ್ರ್ಯದ ಕಿಚ್ಚು ಜ್ವಾಲಾಮುಖಿಯಂತೆ ರಾಷ್ಟ್ರದಾದ್ಯಂತ ಹೊಳೆಹರಿಯತೊಡಗಿತ್ತು. ಭಯಂಕರ ಭಾವಾತ್ಮಕ ಕಿಚ್ಚು ಅದು. ಕಾರ್ಮಿಕರು ಗಿರಣಿಗಳನ್ನು ತ್ಯಜಿಸಿದರು. ಮಕ್ಕಳು ಶಾಲಾ ಕಾಲೇಜುಗಳನ್ನು ತೊರೆದರು. ಹಾಗೇ ಕಾಲೇಜು ಶಿಕ್ಷಣಕ್ಕೆ ಶರಣು ಹೊಡೆದು ಬಾಪೂಜಿಯವರ ಕರೆಗೆ ಮಾರುಹೋಗಿ ಮುಂಬೈಗೆ ಹೋಗಿದ್ದ ಓರ್ವ ತೇಜಸ್ವೀ ತರುಣ ಅಧಿವೇಶನ ಮುಗಿದ ಮೇಲೆ ಟಿಕೆಟ್ ಪಡೆದು ಬೆಂಗಳೂರಿಗೆ ಹೊರಟಿದ್ದ. ಆದರೆ ಅವನು ರೈಲ್ವೇ ಫ್ಲಾಟ್‌ಫಾರಂ ಮುಟ್ಟುವಷ್ಟರಲ್ಲಿ ರೈಲು ದಮ್ಮು ಕಟ್ಟಿ ಹೊರಟಿತ್ತು. ಉರುಳುವ ರೈಲಿನಲ್ಲಿ ಯಾವ ಡಬ್ಬಿಗೆ ಹತ್ತುವುದು ? ಎಲ್ಲಾ ಡಬ್ಬಿಗಳ ಬಾಗಿಲುಗಳೂ ಭದ್ರವಾಗಿದ್ದುವು.

ಓಡೋಡಿ ಬಂದ ಬೆಂಗಳೂರು ಬಾಲಕನಿಗೆ ಏನೂ ತೋಚಲಿಲ್ಲ. ತಬ್ಬಿಬ್ಬಾದ ಕ್ಷಣಕಾಲ. ಅಂದಿನ ರೈಲಿಗೆ ಹೋಗದಿದ್ದರೆ ಬೆಂಗಳೂರು ಮುಟ್ಟುವವರೆಗೂ ಉಪವಾಸಮಾಡಬೇಕಾಗುತ್ತೆ. ಹಣದ ಕೊರೆತೆ, ಅಪರಿಚತ ಸ್ಥಳ. ಬಾಲಕ ಧೈರ್ಯ ತಂದು

ಕೊಂಡು ಯಾವುದೋ ಒಂದು ಡಬ್ಬಿಯ ಕಂಬಿ ಹಿಡಿದು ತಾಯಿತೊಡೆ ಅಪ್ಪುವ ಮಗುವಿನಂತೆ ಅದನಪ್ಪಿಕೊಂಡು ನಿಂತ. ರೈಲು ಜೋರಾಗಿ ಓಡುತ್ತಲೇ ಇತ್ತು. ತಾನು ಏನಾಗುತ್ತೇನೆಂಬ ಕಲ್ಪನೆ ಆ ಬಾಲಕನಿಗಿಲ್ಲ. ಹಾಗೇ ಸಾಗಿತ್ತು ಸ್ವಲ್ಪ ದೂರ.

ಆಗ ಇದ್ದಕ್ಕಿದ್ದಂತೆಯೇ ಡಬ್ಬದ ಬಾಗಿಲು ತೆರೆಯಿತು. ಬಾಲಕನಿಗೆ ಒಳಗಿನಿಂದ ಹಿಂದೀ ಭಾಷೆಯಲ್ಲಿ ಕರೆಬಂತು. ಬಾಲಕ ಒಳನುಗ್ಗಿ ನಿಂತು ನೋಡ್ತಾನೆ, ಅದರ ತುಂಬಾ ಮಿಲಟರಿಯವರು, ಬಾಲಕನ ಜಂಘಾಬಲವೇ ಉಡುಗಿಹೋಯಿತು. 'ಓಹೋ, ತಪ್ಪು ಮಾಡಿಕೊಂಡೆ, ಇಲ್ಲವೇ ನನ್ನ ದೈವವೇ ನನಗೆ ಕೈಕೊಟ್ಟಿತು. ನನ್ನ ಕತೆ ಮುಗಿಯಿತು' ಎಂದಂದುಕೊಂಡ.

ಜಲಿಯನ್ ವಾಲಾಬಾಗ್ ಪ್ರಕರಣ ನಡೆದ ದಿನವೇ ಅಂದೇ ರಾತ್ರಿ ಅದೇ ಡಯರ್ ತನ್ನ ಅನುಯಾಯಿಗಳ ಜೊತೆ ಹರಟೆ ಕೊಚ್ಚುತ್ತಾ ಪ್ರಯಾಣಿಸುತ್ತಿದ್ದ ಡಬ್ಬಿಯಲ್ಲಿ ಲಗೇಜು ಇಡುವ ಜಾಗದಲ್ಲಿ ಮಲಗಿಕೊಂಡಿದ್ದ. ಆವಹರಲಾಲ್ ನೆಹರೂರವರಿಗಾದ ಅನುಭವ ಆ ಬಾಲಕನಿಗಾಯಿತಂತೆ !

ಎಲ್ಲ ಸಮವಸ್ತ್ರಗಳು ಗೇರಾಯಿಸಿಕೊಂಡರು. ಬಾಲಕನ ಮೈ ತುಂಬಾ ಖಾದಿ. ಅವನ ತಲೆಯ ಮೇಲೆ ಒಂದು ಗಾಂಧೀ

---

*ಸನ್ಮಾನ್ಯ ಶ್ರೀ ಜಿ. ನಾರಾಯಣರವರು ಸುಮಾರು ಮೂರು ದಶಕಗಳಿಂದಲೂ ಇದೆ ನಮ್ಮ ಅವರ ಒಡನಾಟ. ಶ್ರೀಯುತರಿಗೆ ೨೬.೧೦.೧೯೮೮ರಂದು ಸಮರ್ಪಿತವಾದ ಅಭಿನಂದನ ಗ್ರಂಥಕ್ಕಾಗಿ

ಟೋಪಿ. ಬಗಲಲ್ಲಿ ಒಂದು ಖಾದೀ ಚೀಲ. ಕಾಲಲ್ಲಿ ಒರಟು ಚರ್ಮದ ದಪ್ಪ ಚಪ್ಪಲಿ. ತೆಳ್ಳಗೆ ಕುಳ್ಳಗಿದ್ದ ಆ ಬಾಲಕನನ್ನೇ ಪರೀಕ್ಷಕ ದೃಷ್ಟಿಯಿಂದ ವೀಕ್ಷಿಸತೊಡಗಿದರು.

ಹುಡುಗ ಗಡಗಡ ನಡುಗುತ್ತ ನಿಂತ

ಪ್ರಶ್ನೆಗಳು ನಾಲ್ಕು ದಿಕ್ಕುಗಳಿಂದ ಬಿಟ್ಟ ಬಾಣಗಳಂತೆ ಬಂದವು

'ಏನಯ್ಯಾ ಯಾವೂರವನು ?'

'ಬೆಂಗಳೂರು'

'ಎಲ್ಲಿಗೆ ಹೋಗಿದ್ದೆ?'

'ಮುಂಬಯಿಗೆ'

'ಏಕೆ?'

'ಬಾಪೂಜಿ ಕರೆ ಕೊಟ್ಟಿದ್ದರು ಅದಕ್ಕಾಗಿ'

'ಬಾಪು ಏನು ಹೇಳಿದರು ? ಯಾವ ನಿರ್ಣಯ ತೆಗೆದುಕೊಂಡಿರಿ?'

'ಬ್ರಿಟಿಷರೇ ಭಾರತದಿಂದ ತೊಲಗಿರಿ ಅಂದರು. ನಮಗೆಲ್ಲಾ ಮಾಡಿ ಇಲ್ಲವೆ ಮಡಿಯಿರಿ' ಅಂದರು.

'ನೀವೆಲ್ಲಾ ಒಪ್ಪಿದಿರಿ?'

'ಒಪ್ಪದೆ ಇರಲು ಹೇಗೆ ಸಾಧ್ಯ? ನಾನಷ್ಟೇ ಏಕೆ ನಿಜವಾದ ಭಾರತೀಯನು ಯಾವನೇ ಆಗಿರಲಿ ಅವನಿಗೆ ಬಾಪೂ ಮಾತು ಸರ್ವಮಾನ್ಯ'

'ಮುಂದೇನು ಮಾಡ್ತೀರಿ?'

'ಭಾರತ ಬಿಡುಗಡೆ ಪಡೆಯುವವರೆಗೂ ಹೋರಾಡ್ತೀವಿ'

'ನಿಮ್ಮನ್ನು ಹೋರಾಟಕ್ಕೆ ಬಿಟ್ಟರೆ?'

'ಬಿಡದೇ ಏನು ಮಾಡ್ತಾರೆ?'

'ಏಯ್ ಬಚ್ಚಾ, ನೀನೀಗ ಇರೋದೆಲ್ಲಿ ಗೊತ್ತಾ? ಸಿಂಹದ ಬೋನಿನಲ್ಲಿ'

'ಅಲ್ಲ. ಭಾರತೀಯರೇ ಆದ ನನ್ನ ಅಣ್ಣಂದಿರ ಆಶ್ರಯದಲ್ಲಿ?'

ಎಲ್ಲ ಸೈನಿಕರೂ ಸ್ತಬ್ಧರಾದರು.

ಬಾಲಕ ಮುಂದುವರಿದ.

'ಅಣ್ಣಂದಿರಾ, ನೀವೂ ನನ್ನಂತೆಯೇ ಭಾರತಾಂಬೆಯ ಮಕ್ಕಳು. ನನ್ನ ಮೇಲಾಗಲಿ ನನ್ನಂತಹ ಸ್ವಯಂ ಸೇವಕರಲ್ಲಾಗಲೀ, ಗಾಂಧೀಜಿಯವರನ್ನಾಗಲೀ ಅಥವಾ ಭಾರತದಾದ್ಯಂತ ರೊಚ್ಚಿಗೆದ್ದಿರುವ ಯಾವ ಸ್ವಾತಂತ್ರ್ಯ ಪ್ರೇಮಿಯ ಬಗ್ಗೆಗಾಗಲಿ ನಿಮಗೆ ದ್ವೇಷ ಮಾತ್ಸರ್ಯ ಇಲ್ಲ. ಆದರೆ ಬ್ರಿಟಿಷರ ಗುಲಾಮರಾಗಿರುವ ನಿಮಗೆ ನಿಮ್ಮ ಅರಿವು ನಿಮಗಾಗುತ್ತಿಲ್ಲ. ಕುರಿಮಂದೆಯಲ್ಲಿ ಬೆಳೆದ ಸಿಂಹ ತಾನೂ ಒಂದು ಕುರಿ ಎಂದೇ ಭಾವಿಸಿದಂತಾಗಿದೆ! ನಿಮ್ಮ ಮೈಯಲ್ಲಿ ಹರಿಯುತ್ತಿರುವುದು ನನ್ನಂತ ನಿಜವಾದ ಭಾರತೀಯನ ರಕ್ತ. ಆದರೆ ಅದೀಗ ಬ್ರಿಟಿಷರ ಎಂಜಲು ತಿಂದು ಕಲುಷಿತವಾಗಿದೆ. ಅದನ್ನು ಶುದ್ಧೀಕರಿಸುವ ಕಾಲ ದೂರವಿಲ್ಲ

ಬಾಲಕನ ಮಾತುಗಳು ಅಣಿಮುತ್ತುಗಳಂತೆ ಉರುಳುತ್ತಿದ್ದವು. ಮಿಲಿಟರಿ ಮಂದಿ ಮಂತ್ರ ಮುಗ್ಧರಾಗಿ ಬಿಟ್ಟ ಕಣ್, ತೆರೆದ ಬಾಯ್ ಆಗಿ ಕೇಳುತ್ತಾ ಕುಳಿತರು.

ಬಾಲಕ ಅವರ ಮಿತ್ರನಾದ, ಬೋಧಕನಾದ, ಗುರುವೇ ಆದ !

ಆ ಬಾಲಕ ಬೇರಾರೂ ಅಲ್ಲ, ದೇಶಹಳ್ಳಿ ಜಿ. ನಾರಾಯಣ

ವ್ಯಕ್ತಿಗೆ ಒಂದು ಮುಖ. ಆದರೆ ವ್ಯಕ್ತಿತ್ವಕ್ಕೆ ನಾನಾ ಮುಖಗಳು. ಬೀಸುವ ಗಾಳಿಯಂತೆ, ಹರಿಯುವ ನೀರಿನಂತೆ, ಉರಿ ಯುವ ಜ್ಯೋತಿಯಂತೆ, ಯಾವ ದಿಶೆಯಲ್ಲಿ ನೋಡಿದರೂ ನೋಡಿದವನ ದೃಷ್ಟಿಗೆ ತಕ್ಕಂತೆ ದರ್ಶನವನ್ನೀಯುವ ನಿಲುವು ಜಿ. ನಾರಾಯಣರವರ ವ್ಯಕ್ತಿತ್ವದ ಆನೆಯನ್ನು ಅಳೆಯಲು ಹೋದ ಕುರುಡರಲ್ಲಿ ನಾನೂ ಒಬ್ಬ. ಸ್ವಯಂಸೇವಕ ನಾರಾಯಣ, ರಾಷ್ಟ್ರ ಪ್ರೇಮಿ ನಾರಾಯಣ, ರಾಜಕಾರಣಿ ನಾರಾಯಣ, ಮೇಯರ್ ನಾರಾಯಣ, ಸಾಹಿತಿ ನಾರಾಯಣ, ಪತ್ರಿಕೋದ್ಯಮಿ ನಾರಾ ಯಣ, ಶಿಕ್ಷಣ ತಜ್ಞ ನಾರಾಯಣ, , ಕನ್ನಡ ಸಾಹಿತ್ಯ ಪರಿಷತ್ ನಾರಾಯಣ, ಕರ್ಮಯೋಗಿ ನಾರಾಯಣ, ಧರ್ಮಪ್ರೇಮಿ ನಾರಾಯಣ – ಇಂಥವೆನಿತೋ ವ್ಯಕ್ತಿತ್ವದ ನಾರಾಯಣರ ಮುಖಗಳನ್ನು ನಾನು ಕಾಣೆ, ಮೇಲೆ ಹೇಳಿದ ಘಟನೆಯೂ ನಾನು ಕೇಳಿ ತಿಳಿದದ್ದು. ಆದರೆ ನಾನು ಕಂಡದ್ದು ಸಮಯಪಾಲಕ ಹಾಗೂ ತತ್ವನಿಷ್ಠ ನಾರಾಯಣರನ್ನು. ಇದನ್ನು ಗುರುತಿಸಿದ್ದು ಅವರು ಪರಿಷತ್ತಿನ ಅಧ್ಯಕ್ಷರಾಗಿದ್ದಾಗ. ಪರಿಷತ್ತಿನಲ್ಲಿ ಯಾವುದೇ ಕಾರ್ಯಕ್ರಮಗಳು ನಡೆಯಲಿ, ಯಾರೇ ಇರಲಿ, ಇಲ್ಲದಿರಲಿ, ಬರಬೇಕಾ ದವರು ಯಾರೇ ಇರಲಿ, ಬಾರದಿರಲಿ – ಸಮಯಕ್ಕೆ ಸರಿಯಾಗಿ ಜಿ. ನಾರಾಯಣ ಅವರು ವೇದಿಕೆಯ ಮೇಲೆ ಹಾಜರಾಗುತ್ತಿ ದ್ದುದುಂಟು. ಅರಿಥಿಗಳಿಲ್ಲದಿದ್ದಾಗ ತಾವೇ ಅತಿಥಿಯಾಗಿ, ಸಭಾಧ್ಯಕ್ಷರಿಲ್ಲದಿದ್ದಾಗ ತಾವೇ ಅಧ್ಯಕ್ಷರಾಗಿ ಕಾರ್ಯಕ್ರಮ ಆರಂಭಿಸುತ್ತಿ ದ್ದರು.

ಸಮಯ ಪಾಲನಾ ನಿಷ್ಠೆಯನ್ನು ನಾನು ಕಂಡದ್ದು ಇಬ್ಬರಲ್ಲಿ, ಒಬ್ಬರು ಗಾಂಧೀಜಿ, ಮತ್ತೊಬ್ಬರು ಗಂಧೀಜಿಯವರ ಕಟ್ಟಾ ಭಕ್ತ ಜಿ. ನಾರಾಯಣ.

ಬಾಪೂಜಿಯವರಂತೆಯೇ ನಾರಾಯಣರೂ ತತ್ವಕ್ಕೆ ಅಂಟಿಕೊಳ್ಳುವ ಸ್ವಭಾವದವರು. ತಮಗೆ ಸರಿ ಎಂದು ತೋರಿದ ನಿರ್ಧಾರಕ್ಕೆ ಬಂದ ತತ್ವಕ್ಕೆ ಉಡದಂತೆ ಅಪ್ಪಿಕೊಂಡುಬಿಡುತ್ತಾರೆ. ಅದರಿಂದ ಅವರನ್ನು ಬಿಡಿಸಲು ಸಾಧ್ಯವೇ ಇಲ್ಲ. ಯಾವ ಆಕ ರ್ಷಣೆ ಅಡಚಣೆಗಳೂ ಅಡ್ಡಾಗಲಿ, ಒಡ್ಡಾಗಲಿ ನಾರಾಯಣರು ಮಾತ್ರ ಸ್ಥಿತಪ್ರಜ್ಞರಂತೆ ಕುಲಿತುಬಿಡುತ್ತಾರೆ. ಒಪ್ಪಿತ ತತ್ವ ಪ್ರತಿಪಾದ ನೆಯಲ್ಲಿ ಬಂಡೆಯಾಗುತ್ತಾರೆ, ಬೆಟ್ಟವಾಗುತ್ತಾರೆ. ಇದನ್ನು ಶಿವಮೊಗ್ಗ ಮತ್ತು ರಾಯಚೂರುಗಳಿಗೆ ಅವರೊಡನೆ ಜಿಲ್ಲಾ ಸಮಿತಿಗಳ ರಚನೆಗಾಗಿ ಹೋಗಿದ್ದಾಗ ಕಂಡೆ.

ಅವರಲ್ಲಿರುವ ಮತ್ತೊಂದು ಮಹಾ ಮೌಲ್ಯತುಂಬಿದ ಮಣಿ ಎಂದರೆ ಮಾನವತೆ. ಡಾ. ಸಿದ್ಧಯ್ಯ ಪುರಾಣಿಕರು, 'ಏನಾ ದರೂ ಆಗು ಮೊದಲು ಮಾನವನಾಗು' ಎಂದು ಹೇಳುವಂತೆ ಆದವರು ಜಿ. ನಾರಾಯಣ. ಕಛೇರಿಯಲ್ಲಿರಲಿ, ರಸ್ತೆ ಬದಿಯಲ್ಲಿ ಸಿಗಲಿ 'ಏನ್ ಸ್ವಾಮಿ. . .ಬನ್ನಿ ಸ್ವಾಮಿ' ಎಂಬ ಜೇನು ತುಭಿದ ಆ ಸವಿ ನುಡಿ, ಅದೇ ರೀತಿಯಲ್ಲಿ ಆತ್ಮೀಯರನ್ನು ನಡೆಸಿಕೊ ಳ್ಳುವ ರೀತಿ, ಯಾರನ್ನೂ ದ್ವೇಷಿಸದ, ಯಾವ ಪ್ರಗತಿಗೂ ಕರುಬದ ಹಿರಿಯ ಗುಣ ಅವರದು. ಧನಿಕ ದರಿದ್ರ ಎಂಬ ಭೇದವಿ ಲ್ಲದೆ, ವೃದ್ಧ, ಬಾಲಕ ಎಂಬ ತಾರತಮ್ಯವಿಲ್ಲದೆ ಎಲ್ಲರಲ್ಲೂ ಒಂದೇ ಬಗೆಯಲ್ಲಿ ವರ್ತಿಸುವ ಸಮತಾವಾದಿತ್ವ, ಬೆಲೆಕೊಟ್ಟರೆ ಸಿಗುವ ವಸ್ತುವಲ್ಲ. ಅದನ್ನು ಸಾಧಿಸಿ ಸಿದ್ಧಿಸಿಕೊಂಡವರು ಜಿ. ನಾರಾಯಣ ಅವರು.

ಒಟ್ಟಾರೆ ನಾನು ಹೇಳುವುದಿಷ್ಟೆ. ಸಮಯ ಪಾಲನೆ, ತತ್ವ ನಿಷ್ಠೆ, ಮಾನವತೆ ಈ ರತ್ನತ್ರಯಗಳ ಸಾಧಕ ಶ್ರೀ ಜಿ. ನಾರಾ ಯಣ.

*

## ಯಾರಿವನು ?*

==============================================================================

ತಮ್ಮ ಈ ಪ್ರಶ್ನೆಗೆ ತಾವೇ ಉತ್ತರವಾದರು ರಾಷ್ಟ್ರಕವಿ ಶ್ರೀಕುವೆಂಪು ಸುಮಾರು ಐದು ದಶಕಗಳ ಹಿಂದೆ. ಆದರೆ ನನಗೆ ಪ್ರಸ್ತುತ ಆದವರು ನನ್ನ ಅನಿಮಿತ್ತ ಬಂಧು, ಆತ್ಮೀಯ ಗೆಳೆಯ ಮೈತ್ರಿ ಹಿಗ್ಗಿದರೆ ಸಲುಗೆಯಾಗುತ್ತೆ! ಅದರ ಆಧಾರದಿಂದಲೇ ಅಭಿಮಾನೀ ಮಿತ್ರನ ಬಗೆಗೆ ನಾಲ್ಕು ಮಾತು ಉಚಾಯಿಸಿ ಆಡುವ ಸ್ವಾತಂತ್ರ್ಯ ಪಡೆದು ಈ ಲೇಖನ ಬರೆಯುತ್ತಿದ್ದೇನೆ. ಅನ್ಯಥಾ ಭಾವಿಸಬಾರದಾಗಿ ವಿನಂತಿ. ಮೊದಲು ನೋಡಿದಾಗ ಈತ ಬಹು ವಿಚಿತ್ರವಾಗಿ ಕಂಡ. ಈತನ ಮೈಯ ಮೇಲ್ಭಾಗದಲ್ಲಿ ಹಾಲ್ ಬಿಳಿಯ ಅಂಗಿ, ಕೆಳಗೆ ಕೊಕ್ಕರೆ ಪುಕ್ಕದ ಲುಂಗಿ, ಮೈ ಕಪು, ಮನ ಬಿಳುಪು, ಕಾಲು ನೀಳ, ಕೈ ಮಾತ್ರ ಬೋಳ, ಅರವತ್ತು ಮೀರಿದ್ದರೂ ಯಾವತ್ತೂ ಐವತ್ತೇ ಎಂದು ಸಾರುವ ಮೂಗಿನಿಂದ ಮುಡಿಯವರೆಗಿನ ಬೈತಲೆಯ ಸಮಭಾಜಕ ವೃತ್ತ ! ದೇಹ ತುಸು ಬಾಗಿ ಬಿಗಿದ ಬಿಲ್ಲು, ತಲೆ ತುಂಬ ಮಕಮಲ್ಲು; ಈ ಮನುಷ್ಯನ ಮೈ ಬಳಿದರೆ ಸಿಗಬಹುದು ಮಾಂಸ ಒಂದೇ ಒಂದು ಕೇಜಿ. ಕಚ್ಚಿ ಹೀರಿದರೆ ಕಾಲು ಲೀಟರು ರಕ್ತ! ಆದರೂ ಈತ ಬಲು ಶಕ್ತ! ರಂಗದ ಮೇಲೆ ನಿಂತಾಗ ಇಷ್ಟು ಸಹಸ್ರ ಎಷ್ಟು ಲಕ್ಷ ಜನರಿದ್ದರೂ ಅವರನ್ನು ಎದುರಿಸಿ, ಸವಾಲು ಹಾಕಬಲ್ಲ ಅಂತಹ ಎದೆಗಾರಿಕೆ ಈ ಬಡಕಲು ಶರೀರಿಯದು.

ಸಂಸ್ಕೃತ ಅರಿಯದ ಮುಗ್ಧ. ಕನ್ನಡದಲ್ಲಿ ವಚನ ಮಾಂಗಲ್ಯ ಕೊಟ್ಟ ಸಾಕ್ಷಿ. ಕಲ್ಲಿನಲ್ಲಿ ಸಾಕ್ಷಿ ಹೇಳಿಸಿ ಜನಪದ ಕಲೆಗಳ ಮೂಲಕ ಕನ್ನಡದ ಬೋಳೆ ಬಸವಗಳಿಗೆ ಕಾಲುಕೊಟ್ಟ, ಕಾಲಿಗೆ ಗೆಜ್ಜೆ ಕಟ್ಟಿದ. ಅವರ ಮಿಸೆ ಹುರುಡಾಗಿಸಿ, ಿಸೆ ಅಂಗಿ ತೊಡಿಸಿ, ವೀರಗಾಸೆ ಧೀರ ಗಂಟೆಸೆದು ಸೊಂಟಕ್ಕೆ ನಡುಕಟ್ಟು ಬಿಗಿದ. ಕೊರಳಿಗೊಂದು ತಾಯಿತಿ. ಕೈಗೆ ಬೀಸಲು ಕತ್ತಿ. ಎಳ್ಳು ಬಿಡಿಸಿದ ಬೆರಳುಗಳಲ್ಲಿ ಡೊಳ್ಳು ಬಡಿಸಿದಿ.

ಸದಾಕಾಲವೂ ಅವನು ನಗುತ್ತಲೇ ಇರುತ್ತಾನೆ. ನಗು ಅವನ ಜಾಯಮಾನ. ನಕ್ಕರೆ ಜಗತ್ತು ನಿನ್ನೊಡನೆ ನಗುತ್ತೆ. ಅತ್ತರೆ ನೀನೊಬ್ಬನೇ ಅಳಬೇಕಾಗುತ್ತೆ, ಜಗತ್ತು ನಿನ್ನೊಡನೆ ಅಳುವುದಿಲ್ಲ. ಆದ್ದರಿಂದ ಮೊದಲು ನಗುವುದನ್ನು ಕಲಿ ಎಂದು ಕೇಳಿದವರಿಗೆ ಪಾಠ ಹೇಳುತ್ತಾನೆ. ಅವನ ನಗುವಿನಲ್ಲಿ ಎಂಥದೇ ಸಂದಿಗ್ಧ ಸಂದರ್ಭದಲ್ಲೂ ಹೊಗೆ ಇರುವುದಿಲ್ಲ. ಅವನ ಬಗೆಯಲ್ಲಿ ಭೇದವಿಲ್ಲ ಈ ಸಮದರ್ಶಿಗೆ ಕಣ್ಣ ಕನ್ನಡಕಕ್ಕೂ ಕಾಲ ಎಕ್ಕಡಕ್ಕೂ ಭೇದ ತಿಳಿದಿಲ್ಲ. ಈ ಸಮೃದ್ಧಿಗೆ ಸಮಾಜ-ಸಮುದಾಯಗಳು ಮಣಿದಿವೆ, ಮೆಚ್ಚಿವೆ, ಮುದ ತುಂಬಿ ಹಾಡಿವೆ.

ಈ ವಿಚಿತ್ರ ಅಲ್ಲ ವಿಶಿಷ್ಟ ವ್ಯಕ್ತಿಯನ್ನು ನಾನು ಕಂಡದ್ದು ರಾಜಾಜಿನಗರದ ಬಸವೇಶ್ವರ ಪ್ರೌಢಶಾಲೆಯಲ್ಲಿ. ಆತ ಅಂದಿನ ಕಾರ್ಯಕ್ರಮದ ಪ್ರಕಾರ ಮುಖ್ಯ ಭಾಷಣಕಾರ. ಆತನ ಮಾತಿನ ಮೋಡಿಗೆ ನಾನು ಮಂತ್ರ ಮುಗ್ಧನಾದೆ ! ;ಏನಿವ್ರೇ, ನೀವು ಯಾವ ವಿಶ್ವವಿದ್ಯಾಲಯದಲ್ಲಿ ಎಂ.ಎ. ಪದವಿ ಪಡೆದಿರಿ?' ಅಂತಾ ಕೇಳಿದೆ. 'ನಾನು ಬದುಕಿನ ವಿಶ್ವವಿದ್ಯಾನಿಲಯ ಬಿಟ್ಟು ಯಾವ ನಿಲಯದ ಮೆಟ್ಟಿಲು ಹತ್ತಿಲ್ಲ, ಅವುಗಳ ಗಾತ್ರ ಪಾತ್ರ ನನಗೆ ಗೊತ್ತಿಲ್ಲ' ಆದರೆ ನೀವು ಸಾಹಿತ್ಯವನ್ನು ಅಭ್ಯಾಸ ಮಾಡಿದ ಯಾವ ಸ್ನಾತಕೋತ್ತರ ವಿದ್ಯಾರ್ಥಿಗೂ ಕಡಿಮೆ ಇಲ್ಲ' ' ಅದು ನಿಮ್ಮಥವರ ಸಹವಾಸ ಹಾಗೂ ಆಶೀರ್ವಾದದಿಂದ' 'ಇಲ್ಲ. . .ಹರಕೆ ಆಶೀರ್ವಾದಗಳು ಏನನ್ನೂ ಮಾಡಲಾರವು. ಪ್ರತಿಭೆ ಯಾವನೊಬ್ಬನ ಆಸ್ತಿ ಅಲ್ಲ, ಅದು ಅವನ ಕೊಡುಗೆ. ಅವನ ಅನುಗ್ರಹಕ್ಕೆ ಪಾತ್ರರಾದ ನೀವು ಧನ್ಯರು. ನಿಮ್ಮೊಡನಾಡಿದ ನಾವು ನಿಜಕ್ಕೂ ಮಾನ್ಯರು.'

ನನ್ನ ಮಾತು ಮುಗಿದಿರಲಿಲ್ಲ ; ಆ ವ್ಯಕ್ತಿ ನಾಚಿ ಅತ್ತ ದೂರ ಸರಿದರು.

ನನ್ನ ಮತ್ತು ಆ ವ್ಯಕ್ತಿಯ ಎರಡನೆಯ ಭೇಟ್ಟಿ ಬೆಂಗಳೂರು ರೈಲ್ವೇ ಸ್ಟೇಷನ್ನಿನಲ್ಲಿ. ಅಂದು ಅಜ್ಜಂಪುರದ ಬಳಿ ಇರುವ ಗಿರಿಯಾಪುರಕ್ಕೆ ಒಂದು ಶಿವಾನುಭವ ಸಮ್ಮೇಳನದಲ್ಲಿ ಭಾಗವಹಿಸಲು ಹೋಗಬೇಕಾಗಿತ್ತು. ಸ್ವಾಗತ ಸಮಿತಿಯ ಪರವಾಗಿ

------------------------------------------------------------------------------

*ಶ್ರೀ ಗೊ.ರು. ಚನ್ನಬಸಪ್ಪ

ನನ್ನನ್ನು ಕರೆದೊಯ್ಯುವ ಹೊಣೆ ಹೊತ್ತಿದ್ದವರು ಆ ವ್ಯಕ್ತಿಯೇ. ರೈಲು ಹೊರಡುವ ಸಮಯ ಸಮೀಪಿಸಿದರೂ ಆಸಾಮಿ ಪತ್ತೆ ಇಲ್ಲ! ನಾನು ಅತ್ತ ಇತ್ತ ಟಳಾಯಿಸುತ್ತಿದ್ದಾಗ ಓರ್ವ ಉದ್ದನೆಯ ವ್ಯಕ್ತಿ ಬಂದು, 'ನೋಡಿ ನೀವು ಮರುಳಯ್ಯನವರಲ್ಲವೆ?' 'ಹೌದು ನಾನು ನೀವು ಗಿರಿಯಾಪುರಕ್ಕೆ ಹೋಗಬೇಕಾಗಿದೆ. ರಿಜರ್ವ್ ಮಾಡಿಸಿದ್ದಾರೆ, ಆದರೆ ಟಿಕೆಟ್ ನನ್ನ ಬಳಿ ಇಲ್ಲ, ನಮ್ಮ ಪ್ರಯಾಣದ ಹೊಣೆ ಹೊತ್ತವರು ಇನ್ನೂ ಬಂದಿಲ್ಲ!' 'ಅದು ಸರಿ, ನೀವು ಯಾರು?' 'ನಾನು ಸಿ.ಕೆ. ಪರುಶರಾಮಯ್ಯ ಅಂತಾ. ನಾನೂ ನಿಮ್ಮೂರಿನವನೇ ಚಿಕ್ಕನಾಯಕನ ಹಳ್ಳಿಯವನು.'

ಮತ್ತೆ ಈತನನ್ನು ಕಂಡದ್ದು ಕೋಟೆ ಹೈಸ್ಕೂಲ್ ಮೈದಾನದ ಬೃಹತ್ ವೇದಿಕೆಯ ಮೇಲೆ. ಅದೊಂದು ಕಲಾಮೇಳ. ಅಖಂಡ ಕರ್ನಾಟಕದ್ದದು. ಅದರ ಸಾರಥ್ಯ ಅಥವಾ ನಿರ್ವಹಣೆ ಆತನದೇ. ಆತನ ಹಾಸ್ಯ ಚಟಾಕಿ, ಮಾತಿನ ಮೋಡಿ ಎಲ್ಲ ರನ್ನೂ ಆಕರ್ಷಿಸಿತು. ಅಂದಿದ್ದ ಐವತ್ತು ಸಾವಿರ ಮನಗಳು, ಒಂದು ಲಕ್ಷ ಕಣ್ಣುಗಳು, ಒಂದು ಲಕ್ಷ ಕಿವಿಗಳು ಕೇಳಿ ತಣಿದವು. ಅನಂತರ ನಿಜಗುಣ ಮಠದಲ್ಲಿ ಶ್ರೀಮತಿ ಜಯಾರಾಜಶೇಖರ್‌ರವರು ಹಾಡಿ ತಣಿಸಿದ ಶೂನ್ಯಸಂಪಾದನೆಗೆ ಈತ ರಸಸ್ಯಂದಿ ವ್ಯಾಖ್ಯಾನಕಾರ. ಹೀಗೆ ಹತ್ತಾರು ವೇದಿಕೆಗಳಲ್ಲಿ ಆತನನ್ನು ಕಂಡಿದ್ದೇನೆ, ನುಡಿಸಿದ್ದೇನೆ. ಆದರೆ ನೆನಪಿನಲ್ಲಿ ಉಳಿದದ್ದು ಚಿಕ್ಕಮಗ ಳೂರು. ಅಂದು ಚಿಕ್ಕಮಗಳುರು ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ನನ್ನ ಗೆಳೆಯ; ನಾನು ಉದ್ಘಾಟಕನಾಗಿ ಹೋಗಿದ್ದೆ. ರಾಜಬೀದಿಯಲ್ಲಿ ಮೆರವಣಿಗೆ. ಹೊರಟಾಗ ನೋಡಬೇಕಿತ್ತು ನನ್ನ ಗೆಳೆಯನ ರಾಜವೈಭವವನ್ನು. ಚಿಕ್ಕಮಗಳೂರು ಜನತೆಯ ಹಾರ ಹರ್ಷೋದ್ಗಾರಗಳೇ ಸಾರಿ ಸಾರಿ ಹೇಳುತ್ತಿದ್ದವು ನನ್ನ ಮಿತ್ರನ ಜನಾನುರಾಗವನ್ನು.

ಇವನು ಸ್ವಾಮಿಗಳ ಸೇವಕ, ರಾಜಕಾರಿಣಿಗಳ ಮಿತ್ರ, ಅಧಿಕಾರಿಗಳ ಅಭಿಮಾನಿ, ಸ್ನೇಹಿತರ ಬಳಗಕ್ಕೆ ಅಚ್ಚುಮೆಚ್ಚಿನ ನೇಹಿಗ ಬಂಧುಗಳಿಗೆ ಅಕ್ಕರೆಯ ಅಣ್ಣ. ಸುತ್ತೂರ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು, ಮೂರು ಸಾವಿರ ಮಠದ ಜಗದ್ಗುರುಗಳು, ಶಿವೈಕ್ಯರಾದ ಗಿರಿಯಾಪುರದ ಮಹಾಸ್ವಾಮಿಗಳು, ಡಾ. ಜ.ಚನಿಯವರು, ಇಳಕಲ್ ಅಪ್ಪಗಳು, ನಿಜಗುಣ ಸದಾಶಿ ವಸ್ವಾಮಿಗಳು, ಸಿದ್ಧ ಗಂಗಾ ಮಠಾಧೀಶರು– ಒಬ್ಬರೇ ಇಬ್ಬರೇ ಎಲ್ಲ ಗುರು, ಮಹಾಗುರು, ಜಗದ್ಗುರುಗಳಿಗೂ ಈತ ಆತ್ಮೀಯ. ಈತ ನಾಗಯ್ಯನವರ ನೆಚ್ಚು, ಷಣ್ಮುಖಪ್ಪನವರ ಮೆಚ್ಚು, ಜಿ. ನಾರಾಯಣರ ಅಚ್ಚುಮೆಚ್ಚು ! ಎಲ್ಲರಲ್ಲೂ ಎಲ್ಲ ವಿಧದಲ್ಲೂ ವಾತ್ಸಲ್ಯ ವನ್ನೇ ಮೆರೆದ, ಪ್ರೀತಿ ಕೊಟ್ಟ ಪ್ರೀತಿ ಪಡೆದ ಪುಣ್ಯಜೀವಿ. ನಿಜಕ್ಕೂ ಈತ ಅಜಾತಶತ್ರು.

ಇಂತಹ ನೂರು ತೋಳು ನೂರು ಭುಜಗಳುಳ್ಳ ಸಾಹಸಿಯನ್ನು, ಬಹುಮುಖ ಪ್ರತಿಭೆಯ ಪ್ರೌಢನನ್ನು ಸಮಾಜ ಸುಧಾ ರಕ ಎನ್ನಲೆ, ಗುಪ್ತಭಕ್ತ ಎನ್ನಲೆ, ಕುಟುಂಬಯೋಜನಾಧಿಕಾರಿ ಎನ್ನಲೆ, ಪತ್ರಿಕೋದ್ಯಮಿ ಎನ್ನಲೆ, ಪರಿವ್ರಾಜಕ ಎನ್ನಲೆ, ವ್ಯಾಖ್ಯಾನ ಕಾರ ಎನ್ನಲೆ, ಕವಿ ಕಲಾವಿದ ಎನ್ನಲೆ, ನಗೆಗಾರ ಎನ್ನಲೆ, ಅಧ್ಯಾಪಕ ಎನ್ನಲೆ, ಅಪರೋಕ್ಷ ಜ್ಞಾನಿ ಎನ್ನಲೆ ! 'ಯಾರಿವನು?'

# ಆತ್ಮೀಯ*

===============================================================================

ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿರುವ ಧಾರಾವಾಹಿಗಳಿಂದ ಒಳ್ಳೆಯದೂ ಆಗಿದೆ, ಕೆಟ್ಟದ್ದೂ ಆಗಿದೆ. ದೈನಂದಿನ ವಾರ್ತೆಯ ಜೊತೆಗೆ ಒಂದಿಷ್ಟು ಸಾಹಿತ್ಯಕ ಸಿಹಿ ದೊರಕುವುದು. ಓದುಗರಲ್ಲಿ ಒಂದು ಬಗೆಯ ರುಚಿ ಹುಟ್ಟಿಸಿದ್ದು, ಮತ್ತು ಅನೇಕ ಸುಪ್ತ ಮತ್ತು ಗುಪ್ತ ಪ್ರತಿಭೆಗಳು ಬಹು ಬೇಗ ಬೆಳಕಿಗೆ ಬರುವಂತೆ ಈ ಪ್ರಬಲ ಪ್ರಸಾರ ಮಾಧ್ಯಮ ನೆರವಾದದ್ದು – ಇವೆಲ್ಲಾ ಪ್ಲಸ್ ಪಾಯಿಂಟ್‌ಗಳೇ. ಆದರೆ ಧಾರಾವಾಹಿಗಳು ಬರತೊಡಗಿದ ಮೇಲೆ ನೇರವಾಗಿ ಪ್ರಕಟವಾಗುವ ಕತೆ ಕಾದಂಬರಿಗಳ ಪ್ರಮಾಣ ಕಡಿಮೆಯಾಯಿತು. ದಿನ ಬೆಳಗಾದರೆ ಪತ್ರಿಕೆಗಳಲ್ಲೇ ಒಂದಿಷ್ಟು ಆಹಾರ ದೊರಕುತ್ತಿರುವಾಗ ಬೇರೆ ಹಣ ಕೊಟ್ಟು ಕಾದಂಬರಿ ಪುಸ್ತಕಗಳನ್ನೇಕೆ ಕೊಳ್ಳಬೇಕು. ಕೊಂಡರೂ ಓದಲು ವ್ಯವಧಾನವೆಲ್ಲಿದೆ. ಈ ಧೋರಣೆ ಓದುಗರಲ್ಲಿ ಮತ್ತು ಧಾರಾವಾಹಿಗಳು ಪುಸ್ತಕ ರೂಪದಲ್ಲಿ ಬಂದರೆ, ಅವಕ್ಕೆ ಬೇಡಿಕೆ ಇಲ್ಲವೇ ಇಲ್ಲ. 'ಓ! ಇದು ಬಿಡೋ, ನಾನಾಗಲೇ ಧಾರಾವಾಹಿಯಾಗಿ ಓದಿದ್ದೇನೆ. ಮತ್ತೊಮ್ಮೆ ಏಕೆ ಚರ್ವಿತಚರ್ವಣ' ಇವು ಮೈನಸ್ ಪಾಯಿಂಟ್‌ಗಳು ಎಂದು ಅರಿಯೋಣ. ಈ ಎರಡೂ ಅನುಭವಗಳು ನನ ಗಾದದ್ದು ಶ್ರೀ ಎಸ್. ವಿ. ಶ್ರೀನಿವಾಸರಾವ್‌ರವರ ಕಾದಂಬರಿಗಳನ್ನು ಓದಿದ ಮೇಲೆ. ಅವರ 'ಸ್ವಾತಿಯ ಹನಿ' ಸೆಕೆಂಡ್ ಹ್ಯಾಂಡ್ ಬುಕ್ ಸ್ಟಾಲ್‌ನಲ್ಲಿ ಚೀಪಾಗಿ ಸಿಕ್ತು. ಕೊಂಡು ತಂದೆ. ಓದೋಕೆ ಪ್ರಾರಂಭಿಸಿ ಎರಡು ಪುಟ ಓದೋದರಲ್ಲೇ ಇದನ್ನು ಯಾವಾಗ್ಲೊ ಓದಿದ ಹಾಗಿದೆಯಲ್ಲಾ ಅಂದುಕೊಂಡೆ. ಒಂದು ಅಧ್ಯಾಯ ಓದಿ ಮುಗಿಸೋದರೊಳಗೆ ಗೊತ್ತಾಯಿತು, ಇದು ಕೃತಿ ಚೌರ್ಯ ಅಲ್ಲ ಸುಧಾ ಪತ್ರಿಕೆಯಲ್ಲಿ 'ಅನುಬಂಧ' ಅನ್ನೋ ಹೆಸರಿನ ಧಾರಾಹಿ ಈಗ ಹೆಸ ಪುಸ್ತಕ ರೂಪದಲ್ಲಿ ಹೆಸರು ಬದಲಾ ಯಿಸಿಕೊಂಡು ವೇಷಾನು ಬದಲಾಯಿಸಿಕೊಂಡು ಬಂದಿದೆ ಅಂತಾ. ನಾನು ಮುಂದೆ ಓದುವ ಗೋಜಿಗೆ ಹೋಗಲಿಲ್ಲ. ಆದರೆ ಶ್ರೀನಿವಾಸರಾವ್‌ರವರ ಮಬ್ಬು ಮುಂಜಾವು– ಕಾಡ ಬೆಳದಿಂಗಳು, ಇಬ್ಬನಿ, ಸ್ವಾತಿಯ ಹನಿ, ಹರಿಗೋಲು–ಕಡೆಗೋಲು (ಮಂ ಥನ), ರಂಗಸ್ಥಳ– ಗೆಜ್ಜೆ ಕಟ್ಟಿದ ಹೆಜ್ಜೆ, ಸೋನಾರ್ ಬಾಂಗ್ಲಾ, ಸುಣ್ಣವಿಲ್ಲದ ವೀಳ್ಯ ಇಂತಹ ಅವಳಿ–ಜವಳಿ ಹೆಸರಿನ ಕಾದಂ ಬರಿಗಳನ್ನು ನೋಡಿದ ಮೇಲೆ ಅನ್ನಿಸಿತು. ಈತ ಯಾರೊ ಓರ್ವ ತುಂಬು ಪ್ರತಿಭಾವಂತ ಅಂತ. ಹಾಗಂದುಕೊಂಡು ಸುಮ್ಮ

ನಾದೆ. ಕೆಲವು ದಿನಗಳ ಮೇಲೆ ಅವರ ಮಕ್ಕಳ ಸಾಹಿತ್ಯ ಕೃತಿಗಳನ್ನು ಓದಿದೆ. ರೇಡಿಯೋದಲ್ಲಿ ಆಗೊಂದು ಈಗೊಂದು ಪ್ರಸಾರ ನಾಟಕ ಕೇಳಿದೆ. ನನಗನ್ನಿಸಿತು. ಖಂಡಿತಾ ಆತನನ್ನು ಪತ್ತೆ ಹಚ್ಚಬೇಕು. ಪರಿಚಯ ಮಾಡಿಕೊಳ್ಳಬೇಕು ಅಂತ ಯಾರನ್ನೂ ಕೇಳದೆ ಇರುವ ನನ್ನ ಕೆಟ್ಟ ಸ್ವಭಾವ ಅದಕ್ಕೆ ಅವಕಾಶ ಕೊಡಲಿಲ್ಲ.

ಒಂದು ದಿನ ಕಾದಂಬರಿಕಾರ್ತಿ 'ನಿರುಪಮಾ' ನಮ್ಮ ಮನೆಗೆ ಬಂದರು. ಮಕ್ಕಳ ಸಾಹಿತ್ಯ ಕುರಿತ ವಿಚಾರಗೋಷ್ಠಿಗೆ ಕರೆದರು. ಗೋಷ್ಠಿಯೊಂದರ ಅಧ್ಯಕ್ಷನಾಗಿ ಅಂದು ನ್ಯಾಷನಲ್ ಹೈಸ್ಕೂಲಿಗೆ ಹೋದೆ. ಅಲ್ಲಿನ ಕಾರ್ಯಕ್ರಮದ ಪಟ್ಟಿಯಲ್ಲಿ ಸ್ವಾಗತ ಕಾರ್ಯದರ್ಶಿ ಎಸ್.ವಿ. ಶ್ರೀನಿವಾಸರಾವ್ ಎಂದಿತ್ತು. ಈ ಹೆಸರು ಎಂದೋ ಎಲ್ಲೋ ಕೇಳಿದ ಹಾಗಿತ್ತಲ್ಲಾ ಎಂದು ನನ್ನ ನೆನಪಿನ ತಿಪ್ಪೆ ಕೆದಕಿದೆ. ಥಟ್ ಅಂತಾ ಹೊಳೀತು ಕಾದಂಬರಿಕಾರ ಶ್ರೀನಿವಾಸರಾವ್! ಕೂಡಲೆ ಕೇಳಿದೆ. ಅವರು ನಾನೇ ಅಂದರು. ತುಂಬಾ ಸಂತೋಷ ಆಯಿತು. ಬಹಳ ದಿವಸಗಳಿಂದ ಆ ವ್ಯಕ್ತಿಯನ್ನು ಹುಡುಕುತ್ತಿದ್ದೆ. ತಾವಾಗಿಯೇ ಸಿಕ್ಕಿದರಲ್ಲಾ ಎಂಬ ಹಿಗ್ಗು ನನ್ನದಾಯಿತು. ಕಾರ್ಯಕ್ರಮ ಮುಗಿದ ಮೇಲೆ ಕೇಳಿದೆ, 'ನೀವು ತುಂಬಾಚೆನ್ನಾಗಿ ಬರೀತೀರಿ. ಇದು ಉಪಚಾರದ ಮಾತಲ್ಲ. ನಾನೊಬ್ಬ ಸಾಹಿತ್ಯದ ವಿದ್ಯಾರ್ಥಿಯಾಗಿ, ಓದುಗನಾಗಿ, ವಿಮರ್ಶಕನಾಗಿ ಹೇಳ್ತಿದ್ದೀನಿ. . .ಅನ್ಯಥಾ ಭಾವಿಸಬೇಡಿ. ನಿಮ್ಮ ಪರಿಚಯ ಆದದ್ದು ತುಂಬಾ ಸಂತೋಷ ತಂದಿದೆ. ಬೆಂಗಳೂರಲ್ಲೇ ಇದ್ದೇವೆ ಅಂದಮೇಲೆ ಭೇಟಿ ಮಾಡೋಣ, ಮರೀಬೇಡಿ ಅಂದೆ ಇಬ್ಬರೂ ಆ ಒಪ್ಪಂದಕ್ಕೆ ಬಂದ್ವಿ. ಆದರೆ ಅದು ಮಂತ್ರಿಗಳು ಸ್ವೀಕರಿಸಿದ ಪ್ರಮಾಣವಚನದ ಹಾಗೆ ಅಥವಾ ಕೋರ್ಟಿನಲ್ಲಿ ನ್ಯಾಯಾಧೀಶನ ಮುಂದೆ ಫಿರ್ಯಾದಿ ಪ್ರಮಾಣ ಮಾಡಿದ ಹಾಗಾಯಿತು ! ಪರಸ್ಪರ ಇಬ್ಬರೂ ಭೇಟಿಯನ್ನು ಮಾಡಲಿಲ್ಲ. ಅಲ್ಲಿ ಇಲ್ಲಿ ಸಿಕ್ಕಿದಾಗ ಮಾತನಾಡಿಸಲೂ ಇಲ್ಲ.

---

*ಶ್ರೀ ಎಸ್.ವಿ.ಶ್ರೀನಿವಾಸರಾವ್

ಕನ್ನಡ ಸಾಹಿತ್ಯ ಪರಿಷತ್ತಿನ ಎಲೆಕ್ಷನ್ ಸಮಯದಲ್ಲಿ ನಾವಿಬ್ಬರೂ ತುಂಬಾ ಹತ್ತಿರ ಆದ್ವಿ. ಹೊಸ ಸ್ನೇಹ, ಹೊಸ ದ್ವೇಷಗಳು ಹುಟ್ಟಿ ಬೆಳೆಯೋದೇ ಎಲೆಕ್ಷನ್ ಸಮಯದಲ್ಲಿ, ಅಲ್ಲವೆ ! ಅದೇ ರೀತಿ ಮತ್ತೆ ಹೊಸದಾಗಿ ಪರಿಚಯ ಲೋಕಾಬಿರಾಮ ನುಡಿ, ಬೈಟು ಕಾಫಿ. ರಾಮಕೃಷ್ಣ ಲಾಡ್ಜನ ಒಂದು ಕೊಠಡಿ ನಮ್ಮ ಎಲೆಕ್ಷನ್ ಆಫೀಸಾದ್ದರಿಂದ ನಿತ್ಯ ಸಂಜೆ ಭೇಟಿಗಾಗುತ್ತಿದ್ದೆವು. ಆಗ ಕೇಳಿದೆ ನಿಮ್ಮ ಹೆಸರು ಎಲ್ಲೋ ಕೇಳಿದ ಹಾಗಿದೆ ಶ್ರೀನಿವಾಸರಾವ್. ನೀವು. . .'ಏನ್ರೀ ರೀ. . .ನಾನು ಮಕ್ಕಳ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿ ಅಲ್ಲವೇ. ನಿಮ್ಮನ್ನ ಒಂದು ವಿಚಾರ ಗೋಷ್ಠಿಗೆ ಕರೆದಿರಲಿಲ್ಲವೇ. ನನ್ನ ಕಾದಂಬರಿಗಳ ವಿಚಾರವಾಗಿ ಉದ್ದುದ್ದ ಭಾಷಣ ಬಿಗಿದಿರಿ. . .ಮರೆತುಬಿಟ್ಟಿರಾ!' ನನಗೆ ನಾಚಿಕೆ ಆಯಿತು. ನೆನಪಿನ ಸುರಳಿ ಬಿಚ್ಚಿಕೊಂಡಿತು. 'ಹೌದು ಶ್ರೀನಿ ವಾಸರಾವ್. . .ಮರೆತು ಬಿಟ್ಟೆ ಕ್ಷಮಿಸಿ. . .ಅಂದ ಹಾಗೆ ನೀವು ಯಾವ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರು?' ಈ ಪ್ರಶ್ನೆ ಕೇಳಿದಾಗ ನನ್ನ ತಲೆಯಲ್ಲಿದ್ದುದು ಕನ್ನಡ ಅಧ್ಯಾಪಕರು ಮಾತ್ರ. ಕನ್ನಡದ ಕೆಲಸ ಮಾಡೋರು ಮಿಕ್ಕೋರು ಅಲ್ಲಾ ಎಂಬ ಭಾವನೆ. ಅವರು ಹೇಳಿದರು 'ನಾನು ರ್‍ಷಣಾ ಇಲಾಖೆಯಲ್ಲಿದ್ದೇನೆ' 'ಅಂದರೆ ನೀವು . .' 'ಹೌದು ನಾನು ಸೆಂಟ್ರಲ್ ಗೌರ್ನಮೆಂಟ್ ಅಧಿ ಕಾರಿ. . .ಆ ಇಲಾಖೆಯಲ್ಲಿ ಸೈಂಟಿಫಿಕ್ ಆಫೀಸರ್ ಆಗಿದ್ದೀನಿ' ಅಂದರು.

ನನ್ನ ತಲೆ ಧಿಮ್ ಅಂತು !

'ಅಲ್ಲಾ ಸೈಂಟಿಫಿಕ್ ಆಫೀಸರ್ ಆರ್ಟಿಸ್ಟಿಕ್ ರೈಟರ್ ಆದದ್ದು ಹೇಗೆ?' ಅಂತ. ಅಲ್ಲೂ ಸಹ ಬರೆಹ ಕನ್ನಡ ಮೇಷ್ಟ್ರ ಗುತ್ತಿಗೆ ಅನ್ನೋ ಭಾವನೆ ಇತ್ತು. ಆಮೇಲೆ ನಾನೇ ತಿದ್ದಿಕೊಂಡೆ. ಅಭಿಪ್ರಾಯ ಬದಲಿಸಿಕೊಂಡೆ. ಪ್ರತಿಭೆ ಯಾರಪ್ಪನ ಮನೆ ಸೊತ್ತು. ಅದು ಕನ್ನಡ ಮೇಷ್ಟ್ರ ಗೇಣಿ ಅಲ್ಲ' ಅಂದುಕೊಂಡೆ. ಸಮಾಧಾನ ಮಾಡಿಕೊಂಡೆ.

ಆ ಘಳಿಗೆಯಲ್ಲಿ ಸಮಾಧಾನ ಆಯ್ತು. ಆದರೆ ಮತ್ತೊಂದು ಅಸಮಾಧಾನ ತಲೆ ಹಾಕಿತು. ಶ್ರೀನಿವಾಸ್‌ರವರು ಕೊಠಡಿಯಲ್ಲಿ ಮಾತನಾಡುವಾಗಲೆಲ್ಲಾ ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯನವರನ್ನು ಏನೋ, ತಾನೋ, ಹೋಗೋ, ಬರೋ ಅನ್ನೋರು. ಎಲಾ ಇವನಾ! ಇವನ್ಯಾರಪ್ಪಾ ಸಿದ್ಧಲಿಂಗಯ್ಯನನ್ನು ಏಕವಚನದಲ್ಲಿ ಸಂಬೋಧಿಸೋನು ಅಂದುಕೊಂಡೆ. ಅಂದುಕೊಳ್ಳುವಷ್ಟರಲ್ಲಿ ಯಾರೋ ಬಂದು ನನ್ನ ಆಸ್ತಿ ಪಾಸ್ತಿಯ ಮೇಲೆ ದುರಾಕ್ರಮಣ ಮಾಡಿದ ಹಾಗಾಯ್ತು. ಅಂದರೆ ಸಿದ್ಧಲಿಂಗಯ್ಯನ ಏಕವಚನ ಸಂಬೋಧನೆ ನನ್ನ ಹಕ್ಕು ಮಿಕ್ಕವರಿಗಲ್ಲಾ. ಈತ ಕಾಲೇಜು ಶಿಕ್ಷಣ ಇಲಾಖಾ ನಿರ್ದೇಶಕ. ಇವನನ್ನ ಇಷ್ಟು ಸಲೀಸಾಗಿ ಸಲುಗೆಯಿಂದ ಮಾತನಾಡಬೇಕಾದರೆ. . .? ಓಹ್ ! ಇರಬೇಕು ಎಲೆಕ್ಷನ್ ಪ್ರಭಾವ. ಸಿದ್ಧಲಿಂಗಯ್ಯ 'ಸೀನಾ' ಅಂತಾ ಸಂಬೋಧಿಸ್ತಾನೆ. ಆತ 'ಸಿದ್ದು' ಅಂತಾನೆ. ಇದು ತುಂಬಾ ಟೆಂಪರೊರಿ ಅಂದುಕೊಂಡೆ. ಆದರೂ ತಡೆಯಲಾಗಲಿಲ್ಲ. ಕೇಳಿಬಿಟ್ಟೆ. . .'ಏನು ನಿಮ್ಮಿ

ಬ್ಬರಿಗೂ ಇಷ್ಟು ಸನೇಹ. . .ಯಾವಾಗಿನಿಂದ!' ಸಿದ್ಧಲಿಂಗಯ್ಯನ ಉತ್ರ 'ಹುಟ್ಟಿದಾಗಿನಿಂದ'! 'ಹ್ಞಾ' ಅಂದೆ. 'ಹಾಗಾದರೆ ನಾನು ನೀನು ಮಹಾರಾಜಾ ಕಾಲೇಜಿನಲ್ಲಿ ಮೊದಲ ಕನ್ನಡ ಆನರ್ಸ್ ತರಗತಿ ಸೇರಿದಾಗ, ಜೊತೆಯಲ್ಲಿ ಮೂರು ವರ್ಷ ಸುಮಾರು ಹಾಸ್ಟಲಿನಲ್ಲಿದ್ದಾಗ ಆತ ಚಡ್ಡಿ ಫ್ರೆಂಡು! ' 'ಹೌದು, ನಾನು ಸೀನ ನಿನಗೆ ಮುಂಚೆ ಲಂಗೋಟಿ ಫ್ರೆಂಡ್ಸ್!' ಅಂದ.

ನನ್ನ ಮತ್ತು ಮಿತ್ರ ಎಸ್.ವಿ. ಶ್ರೀನಿವಾಸರಾವ್‌ರವರ ಸ್ನೇಹ ಬೆಳೆದದ್ದು ಹೀಗೆ. ನಾವಿಬ್ಬರೂ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಕ್ರಮವಾಗಿ ಕಾರ್ಯದರ್ಶಿ ಮತ್ತು ಕೋಶಾಧಿಕಾರಿಗಳಾದೆವು. ಅವರ ಸಖ್ಯ ನನಗೆ ತೃಪ್ತಿ ತಂದಿದೆ. ಯಾವುದೇ ಕೊಳೆಯಿಲ್ಲದ ತಿಳಿಯಾದ ಮನಸ್ಸು ನಮ್ಮ ಶ್ರೀನಿವಾಸರಾವ್‌ರವರದು. ಅವರಿಗೆ ಕಪಟ ಮೋಸ ತಿಳಿದಿಲ್ಲ. ಕವಡು ನುಡಿ ಆಡಿ ಗೊತ್ತಿಲ್ಲ. ತುಂಬಾ ಮಿತಭಾಷಿ. ಯಾವುದನ್ನೇ ಹೇಳಲಿ ಮುಚ್ಚುಮರೆಯಿಲ್ಲದೆ, ಯಾವುದೇ ಕ್ಲೇಶ ಇಲ್ಲದೆ ನೇರವಾಗಿ ನುಡಿಯುತ್ತಾರೆ. ಶ್ರೀನಿ ವಾಸರಾವ್ ತುಂಬಾ ಸ್ನೇಹಮಯಿ, ನಿಷ್ಠಾವಂತ, ಪ್ರಾಮಾಣಿಕ. ಈ ಸರ್ಟಿಫಿಕೇಟನ್ನು ನಾನು ಸ್ನೇಹಿತನಾಗಿ ಕೊಡಬೇಕಾಗಿಲ್ಲ. ಅವರ ನಡೆ ನುಡಿಗಳನ್ನು ಪ್ರತ್ಯಕ್ಷ ಕಂಡವರಿಗೆಲ್ಲಾ ಅರಿವಿಗೆ ಬರುವ ಅಂಶಗಳು ಅವು.

ಅವರೆಷ್ಟು ಸರಳರೊ ಅಷ್ಟೇ ಸಾಜನ್ಯದ ವ್ಯಕ್ತಿ. ನಾನು ಅಮೆರಿಕ ಮತ್ತು ಕೆನಡಾ ದೇಶಗಳಿಗೆ ಹೋಗಿ ಬಂದಮೇಲೆ ಬಿಡದೆ ನನ್ನ ಅನುಭವ ಕೇಳಿದರು. ಕೇಳಿ ಆನಂದಿಸಿದರು. ಅವರ ಅಕುಟಿಲ ಪ್ರಾಂಜಲ ಮನಸ್ಸು ನನ್ನನ್ನು ತುಂಬಾ ಆಕರ್ಷಿಸಿತು. ಗಂಟೆ ಗಟ್ಟಲೆ ಹೇಳಿದೆ. ಕೆಲವು ದಿನಗಳ ಹಿಂದೆ ತಾವು ತಮ್ಮ ಕುಟುಂಬ ಸಮೇತ ಅಂಡಮಾನ್ ನಿಕೋಬಾರ್ ದ್ವೀಪಗಲಿಗೆ ಪ್ರವಾಸ ಹೋಗಿ ಬಂದರು. ಅವರ ಅನುಭವಗಳನ್ನೂ ನನ್ನೊಡನೆ ಹಂಚಿಕೊಂಡರು. ಅವರಿಗೆ ನಾನು, ನನಗೆ ಅವರು ಹೇಳಿಕೊಂಡೆವು. ಇಬ್ಬರೂ ಒಂದೊಂದು ಪ್ರವಾಸ ಕಥನ ಬರೆಯೋಣ ಎಂದು ನಾನು ಹೇಳಿದ್ದನ್ನು ಅವರು ಸತ್ಯವಾಗಿಸಿದ್ದರಬಹುದು. ನನಗೆ ಗೊತ್ತಿಲ್ಲ. ಆದರೆ ಅವರು ಹೇಳಿದಂತೆ ನನಿನ್ನೂ ನಡದುಕೊಂಡಿಲ್ಲ.

ಏನೇ ಇರಲಿ ನನ್ನ ಮಿತ್ರರಿಗೆ ಸಂಭಾವನಾ ಗ್ರಂಥವನ್ನರ್ಪಿಸುತ್ತಿರುವ ಈ ಸಂದರ್ಭದಲ್ಲಿ ನಾನೇನು ಕಾಣಿಕೆ ಕೊಡಲಿ? ನನ್ನ ಅಭಿಮಾನದ ಎರಡು ಮಾತುಗಳು ಅವರು ನೂರ್ಕಾಲ ಬಾಳಲಿ, ಅವರ ಲೇಖಣಿ ಶ್ರೀಮಂತವಾಗಲಿ, ಧೀಮಂತವಾಗಲಿ. ಕನ್ನಡ ಸಾಹಿತಿ ದರ್ಶನದಂತಹ ಮೌಲಿಕ ಕೃತಿಗಳು ಅವರ ಲೇಖಣಿಯಿಂದ ಹೊರಬರಲಿ ಎಂದು ಹಾರ್ದಿಕವಾಗಿ ಹಾರಯಿಸಿ, ತನ್ನ ಅನಿಸಿಕೆಗಳಿಗೊಂದು ರೂಪು ಕೊಡಲು ಕಾರಣರಾದ ಕವಿತಾಕೃಷ್ಣರವರಿಗೆ ವಂದಿಸಿ ವಿರಮಿಸುವೆ.

•

# ದೊಡ್ಡಮನೆ ದೊಡ್ಡಗೌಡರು*

==============================================================

**ಒಂದು :**

**ಕವಿ ಚಮೂಪತಿಯಾಗಿ**

**ಚಮೂಪತಿಯು ಕವಿಯಾಗಿ**

ಏಕಕಾಲದಲ್ಲಿ ರಾಜ್ಯವಾಳಿದ, ಕಾವ್ಯವನ್ನೊರೆದ ಹಿರಿಮೆ ನಮ್ಮ ಭಾರತೀಯರದು. ನಮ್ಮ ಪ್ರಾಚೀನ ರಾಜಋಷಿಗಳು ಕಲಿ ಗಳಾಗಿ ಖಡ್ಗವಿಡಿದರು. ಕವಿಗಳಾಗಿ ಕಾವ್ಯವನ್ನು ಬರೆದರು, ಅವರ ಒಂದು ಕೈ ರಾಜಸೂತ್ರವನ್ನು ಹಿಡಿದರೆ, ಮತ್ತೊಂದು ಕಂಠ ವನ್ನು ಹಿಡಿಯಿತು. ಒಂದು ಲೋಕರಕ್ಷಣೆ ಮಾಡಿದರೆ, ಮತ್ತೊಂದು ಲೋಕಸಂಗ್ರಹ ಕಾರ್ಯದಲ್ಲಿ ನಿರತವಾಯಿತು. ಅವರ ಆಸ್ಥಾನಗಳಲ್ಲಿ ಖಡ್ಗಗಳು ನರ್ತಿಸಿದವು, ಕಾವ್ಯಗಳು ಮೆರೆದವು. ಅಂತೆಯೇ ಅವರ ಅಂತಃಪುರ ಅಗ್ರಹಾರಗಳು ವೀರಶ್ರೀ ಮತ್ತು ಕಾವ್ಯಶ್ರೀಯವರ ಆಡುಂಬೊಲಗಳಾದವು. ಹೀಗೆ ಒಂದು ಕೈಯಲ್ಲಿ ಆಡಳಿತ ಸೂತ್ರವನ್ನು ಮತ್ತೊಂದು ಕೈಯಲ್ಲಿ ಲೇಖಣಿ ಯನ್ನೂ ಹಿಡಿದು ಸಮರ್ಥರಾಗಿ ಬಹುದೂರ ಸಾಗಿಬಂದ ಸಾಹಿತಿಗಳಲ್ಲಿ ಶ್ರೀ ಎಚ್.ಎಲ್. ನಾಗೇಗೌಡರು ಒಬ್ಬರು. ಸರ್ಕಾರದ ಅಧಿಕಾರಿಯೊಬ್ಬ ಈ ರೀತಿ ಆಡಳಿತವನ್ನೂ, ಸೃಜನಾತ್ಮಕ ಸಾಹಿತ್ಯ ಸೃಷ್ಟಿಯನ್ನೂ ಏಕಕಾಲದಲ್ಲಿ ನಿರ್ವಹಿಸುವುದು ತನಿಯಾದ ಎರಡು ದೋಣಿಗಳಲ್ಲಿ ಎರಡು ಕಾಲುಗಳನ್ನಿಟ್ಟುಕೊಂಡು ಸಮುದ್ರಯಾನಕ್ಕೆ ಹೊರಟ ವ್ಯಕ್ತಿಯ ಸಾಹಸದಷ್ಟೇ ಅಪಾಯಕಾರಿ. ನಾಗೇಗೌಡರು ಸವ್ಯಸಾಚಿಗಳು – ದಕ್ಷ ಆಡಳಿತಗಾರರಾಗಿ ಸರಕಾರಕ್ಕೆ ತಮ್ಮಿಂದ ಸಲ್ಲಬೇಕಾದ ಕರ್ತವ್ಯವನ್ನು ನಿಷ್ಠೆಯಿಂದ ನಿರ್ವ

ಹಿಸಿದರು, ಪ್ರತಿಭಾವಂತ ಲೇಖಕರಾಗಿ ಕನ್ನಡ ಸಾಹಿತ್ಯಕ್ಕೆ ಅಮೂಲ್ಯ ಸೇವೆ ಸಲ್ಲಿಸಿದರು. ಅವರು ತಮ್ಮ ಕಾರ್ಯಾಲಯದ ಒಣ ಫೈಲುಗಳ ಗದ್ದೆಮಡಿಗಳಲ್ಲಿ ಹಸುರೊಸರುವ ರಸಕೃತಿಗಳನ್ನು ಬೆಳೆದರು. ಕವಿಯಾಗಿ, ಕಥೆಗಾರರಾಗಿ, ಕಾದಂಬರಿಕಾರರಾಗಿ, ಜಾನಪದ ಜ್ಯೋತಿಯಾಗಿ, ಅನುವಾದಕರಾಗಿ, ಅನುಪಮ ವಿಚಾರ ಸಾಹಿತ್ಯಸೃಷ್ಟಿಯ ವಿಜಗೀಷು ತಾನಾಗಿ ಬೆಳೆದರು, ಬೆಳಗಿದರು. ಅವರ ಸತತ ಸಾಧನೆಯ ಫಲವಾಗಿ ಪ್ರವಾಸಿ ಕಂಡ ಇಂಡಿಯಾ ಕಂಡರಿಸಲ್ಪಟ್ಟಿತು, ಬೆಟ್ಟದಿಂದ ಬಟ್ಟಲಿಗೆ ಭಟ್ಟಿ ಇಳಿಯಿತು ಕಾಫಿ; ನನ್ನೂರು ಹೊನ್ನಾರು ತಾನಾಗಿ ಮಿರುಗಿತು; ದೊಡ್ಡಮನೆ ಗ್ರಾಮೀಣ ಬದುಕನ್ನೊತ್ತು ಮೆರೆದ ಮಾದರಿಯ ಮಂದಿರವಾಯಿತು. ಸೋಬಾನೆ ಚಿಕ್ಕಮ್ಮ ಕನ್ನಡ ಕುಲಕೋಟಿಗೆ ಅಕ್ಕರೆಯ ಚಿಕ್ಕಮ್ಮನೇ ಆದಳು. ಹಾಡಿನ ಹೆಳವರು ಬದುಕಿನ ಭಾಗೀರಥಿಯಲ್ಲಿ ತೇಲುವ ತೆಮರು ಪಡೆದರು; ಸರೋಜಿನಿನಾಯ್ಡು ಮತ್ತೊಮ್ಮೆ ಭಾರತದ ಕೋಗಿಲೆಯಾಗಿ ಹಾಡಿ ಹರಸಿದಳು. ಇಂಥ ವೆನಿತೋ ಕೃತಿರತ್ನಗಳಿಂದ ತನ್ನ ಮಡಿಲು ತುಂಬಿಕೊಂಡು, ಮುಡಿಯ ಸಿಂಗರಿಸಿಕೊಂಡು ಕನ್ನಡಿತಿ ಶ್ರೀಮಂತೆಯಾದಳು, ಮುತ್ತಿನ ಮುತ್ತೈದೆಯಾದಳು.

**ಎರಡು:**

ಇಷ್ಟಾದರೂ ಕನ್ನಡ ಕಾವ್ಯಕ್ಷೇತ್ರಕ್ಕೆ, ಕವನ ವಲಯಕ್ಕೆ ಗೌಡರ ಕಾಣಿಕೆ ಏನು? ಅದು 'ನಾನಾಗುವೆ ಗೀಜಗನ ಹಕ್ಕಿ' ಮತ್ತು 'ಕಥೆ–ವ್ಯಥೆ' ಎಂಬ ಎರಡು ಸಂಕಲನಗಳಲ್ಲಿ ಹಮ್ಮಿಕೊಂಡಿದೆ. ಗದ್ಯರಚಕ ಶ್ರೀ ನಾಗೇಗೌಡರು 'ನೇಗಿಲಯೋಗಿ' ಎಂಬ ಕಾವ್ಯನಾಮದಲ್ಲಿ ಹಲವು ಪದ್ಯಗಳನ್ನೂ ರಚಿಸಿದ್ದಾರೆ. ಅವರ ಸಾಹಿತ್ಯಕೃಷಿ ಪದ್ಯದ ಗದ್ದೆಯಿಂದ ಗದ್ಯದ ಬೆದ್ದಲಿನವರೆಗೂ ವ್ಯಾಪಿಸಿಕೊಂಡಿದೆ.

ಅಂದು ಈ ಕವಿ ತರುಣನಿದ್ದ. ತನ್ನ ಹರದಯಾರವಿಂದದಲ್ಲಿ ಸುಳಿಸುಳಿದು ಮೇಲೇರುತ್ತಿದ್ದ ನರುಗಂಪಿನ ನವುರು ಭಾವ

---

*ಶ್ರೀ ಎಚ್.ಎಲ್. ನಾಗೇಗೌಡರು, 'ನಾಗಸಂಪಿಗೆ' ಅವರ ಸನ್ಮಾನ ಸಮಾರಂಭದ ನೆನಪಿನ ಸಂಚಿಕೆ, ಅವರ ಸುಸ್ಮೃತಿಯ ಕುರುಹಾಗಿ

ಗಳಿಗೆ ಅರುಣ ಗೀತೆಗಳ ರೂಪು ನೀಡಲು ಹಂಬಲಿಸಿದ. ಅದಕಾಗಿ ಕವಿತಾ ಕನ್ಯೆಗೆ ಆದರದ ಕರೆ ನೀಡುತ್ತಾನೆ – 'ಬಾ ಎನ್ನನೊಲಿಯ ಬಾರ' ಎಂದು. ಈ ಕಾವ್ಯಮೋಹಿನಿ–

**ಮಲೆನಾಡಿನ ಪರಪುಟ್ಟನಿಗೆ**
**ತ್ವರಿತದಲಿ ಒಲಿದು**
**ಹಿರಿಯ ಕವಿಯೆಂಬ**
ಹೆಸರಿನಲಿ ಮೆರೆಸಿದಳಂತೆ !
**ಕುರುಬ ಕನಕಗೆ**
**ಬಳೆಗಾರ ರನ್ನಗೆ**
**ಮಡಿವಾಳ ಮಾಚಯ್ಯಗೆ**
ಒಲಿದಿಹಳಂತೆ !
ಅಂಥವಳು –

ಮೇಣಿ ಹಿಡಿದು ಮೇದಿನಿಯನಾಳುವಗೆ ಮೋದದಿಂ ಒಲಿದರೇನಂತೆ ?

–ಎಂದು ಪ್ರಶ್ನಿಸಿ ತನಗೆ ತಾನೆ ಸಾಂತ್ವನವನ್ನರುಸುತ್ತಾನೆ –

**ನೇಗಿಲ ನಾಗಣ್ಣಗೊಲಿದೆಯೆಂದು**
**ಮತ್ಸರದ ಜಗವು ನಕ್ಕರೆ ನಗಲಿ**
**ಅಕ್ಕರೆಯ ಕವಿತೆ, ಎಲೆ ನಾರಿ,**
**ಬಾ, ಎನ್ನನೊಲಿಯ ಬಾರ !**
ಎಂದು.

ಕವಿತಾ ಕಾಮಿನಿ ಈ ನಾಗಣ್ಣನನ್ನು ಅಷ್ಟಾಗಿ ಒಲಿದಂತೆ ಕಾಣಲಿಲ್ಲ. ಅಥವಾ ಈ ನಾಗಣ್ಣ ಆ ನಾಗಿನಿಯನ್ನು ಮೆಚ್ಚಲಿಲ್ಲ! ಆತ ಮೆಚ್ಚಿದ್ದು, ಮದುವೆಯಾದದ್ದು ಗದ್ಯಗಯ್ಯಾಳಿಯನ್ನು ! ಓಹ್ ! ಆಕೆ ಏನು ಸಾಮಾನ್ಯಳೇ ? ಅಲ್ಲ, ಮಹಾಮಾರಿ ! ಅವಳು ತನ್ನ ಪದಕಿಂಕರನಾದ ಒಣ ಫೈಲನನ್ನು 'ಛೂ' ಬಿಟ್ಟಳು ಬೆಳ್ತಂಗಡಿಯ ಟಿ.ಬಿ.ಯಲ್ಲಿ ಬಂದ ಫೈಲ್ ಹೇಳಿದ ಕವಿ ನಾಗಣ್ಣನಿಗೆ ಬುದ್ಧಿವಾದ –

**ಅಧಿಕಾರಿ, ಬೇಡವೋ ನಿನಗೆ ಕಾವ್ಯದ ಫಾಸಿ.**
**ಆಗಲಿ ಬಂದರು. ಸಿಡಿಯಲಿ ಕುದುರೆಮುಖ**
**ಆದರೆ ನೀನಾಗಬೇಡ ಕವಿ !**
**ಇದು ಮೊಸರಲ್ಲಿ ಕಲ್ಲು ಕಾಣುವರ ಭುವಿ !**
**ಹಣದಾಸೆಗೆ ಅಡ್ಡಬರಬೇಡ**
**ಸ್ವಾರ್ಥಿಗಳ ಅರ್ಥವ್ಯೂಹ ಸಮಾಜದ**
**ರುಜು ಹಾಕುವುದ ಕಲಿತಾಗಲೇ**
**ಕಟ್ಟಿತು ನಿನ್ನ ಕಾವ್ಯದ ಕೋಗಿಲೆ,**
**ಬರೆದರೆ ಬರೆ ಒಣ ಗದ್ಯ;**
**ಬೇಡ ನಿನಗೆ ರಸದ ಪದ್ಯ**

ಇದನ್ನು ಕೇಳಿದೊಡನೆಯೆ ಕವಿ ನಾಗಣ್ಣನ ಸ್ವಾಭಿಮಾನದ ಫಣಿ ತಲೆ ಎತ್ತಿ ಉಸುರಿತು–

**ಅಧಿಕಾರಿಯಾದರೇನಂತೆ**
**ಕಳೆದುಕೊಂಡಿಲ್ಲ ಸ್ವಾತಂತ್ರ್ಯವನು !**
**ಮಾರಿಕೊಂಡಿಲ್ಲ ತನ್ನಾತ್ಮವನು**
**ಅದಕಾಗಿ ಹಾಡುವೆನು ಹಾಯಾಗಿ**
**ಅಂದಳವ ಇಳಿಸಿದರೂ ಪಾಡುವೆನು ಪಟ್ಟಾಗಿ**
**ಅದರೂ ಇದು ಪದ್ಯ ಅಲ್ಲ ಮಾರಾಯರಾ**
**ಗದ್ಯವನೆ ಅಧಿಕಾರಿ ಹೇಳಿದ ರೀತಿ ಮಾರಾಯ**

ಎಂದು.

ಈ ವಿನಯಪೂರ್ಣ ನಿವೇದನೆ ತರುಣ ಕವಿಗೆ ತೇಜಸ್ಸು ನೀಡಿತು. ಹುರಿಗೊಂಡ ಅವನ ಉತ್ಸಾಹ ಹತ್ತಾರು ಕವನ–ಗೀತೆಗಳನ್ನು ಬಿಡಿಸಿ, 'ನಾನಾಗುವೆ ಗೀಜಗನಹಕ್ಕಿ ಮತ್ತು 'ಕಥೆ–ವ್ಯಥೆ' ಎಂಬೆರಡು ನುಡಿಮಾಲೆಗಳನ್ನು ಕೋದು ಕನ್ನಡಮ್ಮನ ಶ್ರೀಕಂಠಕ್ಕೆ ಆದರದಿಂದ ಅರ್ಪಿಸಿ ಧನ್ಯವಾಯಿತು.

**ಮೂರು :**

'ನೇಗಿಲಯೋಗಿ'ಯ ಕಾವ್ಯಭೇರುಂಡನ ಒಂದು ಕೊಕ್ಕು ಸ್ವಂತರಚನೆ, ಮತ್ತೊಂದು ಅನುವಾದ ಗೀತೆ. ಎಲ್ಲವೂ ನವೋದಯದ ನಂದನದಲ್ಲಿ ಹುಟ್ಟಿ ಬೆಳೆದವುಗಳೇ. ರೆಕ್ಕೆ ಬಲಿತರೂ ಆ ವಲಯವನ್ನು ಬಿಟ್ಟು ಅದು ಬೇರೆಡೆಗೆ ಹಾರಲೇ ಇಲ್ಲ. ಆದರೂ ನವೋದಯದ ನಯ, ನವುರು, ಗೇಯತೆ, ಸ್ವಾಂತತೆ, ಸಂಕ್ಷಿಪ್ತತೆ, ಭಾವದೀಪ್ತಿ, ನಿಸರ್ಗಾಸಕ್ತಿ, ಪ್ರೇಮಾನುರಕಿ, ವಿರಹ, ವ್ಯಂಗ್ಯ, ವ್ಯಥೆ, ಕಥೆ ಎಲ್ಲ ಇದೆ. 'ನಾನಾಗುವೆ ಗೀಜಗನ ಹಕ್ಕಿ' ಎಂಬ ಮೊದಲ ಕವನ ಕವಿಯ ಸ್ವಾತಂತ್ರ್ಯ ಪ್ರೇಮ ಹಾಗೂ ರಾಷ್ಟ್ರಾಭಿಮಾನ ಇವುಗಳ ದ್ಯೋತಕವಾಗಿದೆ.

ಗೀಜಗನ ಹಕ್ಕಿಯಾದರೂ ಅದು ಸ್ವಚ್ಛಂದವಿಹಾರಿ. ಅದಕ್ಕೆ ಬಂಧನದಲ್ಲಿ, ಅನ್ಯರ ಹಂಗಿನಲ್ಲಿ ಇರುವ ಇಚ್ಛೆ ಇಲ್ಲವೇ ಇಲ್ಲ. ಕವಿ ಅದನ್ನು ಬಯಸುತ್ತಾನೆ.

**ಬಂಧನವೀ ಮಾನವನ ಬಾಳು :**
**ಸ್ವಾತಂತ್ರ್ಯವೆ ಜೀವನದಿ ಮೇಲು**
**ಅದಕಾಗಿ ಆಶಿಪೆ ಹಿರಿದಾಗಿ ತಂದೆ :**

**ಅದಕಾಗಿ ಗೀಜಗನಾಗುವೆ ಇಂದೆ ।**
**ನಾನಾಗುವೆ ಗೀನಜಗನ ಹಕ್ಕಿ ।**
**ಹಾರಾಡುವೆ ತೆನೆವನದಲಿ ಸೊಕ್ಕಿ ॥**

ಕ್ರಿ.ಶ. ೧೯೩೬ರಲ್ಲಿ ಗಾಂಧೀಜಿಯವರ ನೇತೃತ್ವದಲ್ಲಿ ಹತ್ತಿ ಉರಿಯುತ್ತಿದ್ದದದ ದೇಶ ಸ್ವಾತಂತ್ರ್ಯದ ಕಿಚ್ಚು ತರುಣ ಕವಿ ನಾಗಣ್ಣನಲ್ಲೂ ಅಂದು ಪ್ರಜ್ವಲಿಸಿತು. ಅದರಿಂದಾಗಿ ಹಾಡಿದ 'ನಾನಾಗುವೆ ಗೀಜಗನ ಹಕ್ಕಿ' ಎಂದು.

ಇಂಗ್ಲೀಷ್ ಸಾಹಿತ್ಯದ ನವೋದಯದ ಅಧ್ವರ್ಯು, ಹರಿಕಾರ ವರ್ಡ್ಸ್‌ವರ್ತ್ ಕನ್ನಡದ ಕವಿ 'ನೇಗಿಲಯೋಗಿ' ಮೇಲೆ ತನ್ನ ವಿಶೇಷ ಪ್ರಭಾವ ಬೀರಿದ್ದಾನೆ. ಅವನ ಮೂರು ನೀಳ್ಗವನಗಳನ್ನು ಅನುವಾದಿಸಿ ಕಥೆ–ವ್ಯಥೆ ಸಂಕಲನದಲ್ಲಿ ಪ್ರಕಟಿಸಿದ್ದಾರೆ. 'ನಾನಾಗುವೆ ಗೀಜಗನ ಹಕ್ಕಿ' ಎಂಬ ಭಾವಗೀತೆಗಳ ಸಂಕಲನದಲ್ಲಿ 'ಬಾಲ್ಯದ ನೆನಪು' ಕವನ ವರ್ಡ್ಸ್‌ವರ್ತ್‌ನ 'Ode on intimations of immormatality from recollections of early childhood' ಎಂಬ ಕವನದಿಂದ ಪ್ರಭಾವಿತವಾ ಗಿದೆ. ಆದರೂ ಈ ಕವನ ಕವಿ ನಾಗೇಗೌಡರ ಆತ್ಮಕಥನದಂತೆ ಗೋಚರವಾಗಿದೆ.

ಎಳೆಯ ಬಾಳಿಗೆ ಬದುಕು ಬಣ್ಣ ಬಣ್ಣವಾಗಿ ಕಾಣಿಸುತ್ತದೆ. ಅದೇ ವಸ್ತು ಜೀವನದ ಮಾಗಿಯ ದಿನಗಳಲ್ಲಿ ಸುಮಧುರ ಸವಿನೆನಪಿನ ಜೇನಾಗುತ್ತದೆ. ಬಾಲ್ಯದಲ್ಲಿ ದನ ಕುರಿ ಕಾಯುವಾಗ, ಪುಳ್ಳೇಲಿ ಮನೆಕಟ್ಟಿ ಹಳ್ಳದಲಿ ಹೊಲಗದ್ದೆ ಮಾಡಿ, ಹಳ್ಳಿಯ ಹಟ್ಟಿಯಲ್ಲಿ ತಿಂಗಳ ಮಾವನನ್ನು ಬರೆದು ಹಾಡಿದ, ಬೇರೆಯವನ ಗದ್ದೆಯಲ್ಲಿ ಕಬ್ಬು ಕದ್ದಾಗ, ಯಜಮಾನ ಬಂದು ಬಡಿದಾಗ ಅಂದು ವ್ಯಥೆ, ಇಂದದೇ ಕಥೆ ! ಎಲ್ಲರೂ ಇಂದು ಅಂದಿನ ಸುಸ್ಮತಿಯ ಪರಿಕರಗಳು !

**ಕರ್ಮದ ನೇಗಿಲಿಗೆ ತ್ಯಾಗದ ಗೂಳವನ್ನು ಹಾಕಿ**
**ದೈವಭಕ್ತಿಯೆಂಬೊ ಈಚನು ಅದರಲ್ಲಿ ನೂಕಿ**
**ಸುಖದುಃಖವೆಂಬೆರಡು ನೊಗದ ಕೊಳ್ಳಿಗೆ**
**ಸಹನೆ ಸತ್ಯವೆಂಬೆರಡು ಎತ್ತಕಟ್ಟಿ,**
**ಸ್ವಧರ್ಮವೆಂಬೊ ಮೇಣಿಯ ಬಿಗಿಯಾಗಿ ಮೆಟ್ಟಿ**
**ಬಾಳಿನ ಭೂಮಿಯನ್ನುತ್ತು ದೇಶಕನ್ಯವನೀವ**
**ರೈತನ ನೋಡಲ್ಲಿ !**

'ರೈತ' ಎಂಬ ಕವನದ ಕೃಷಿಲೋಕಕ್ಕೆ ಸಂಬಂಧಿಸಿದ ರೂಪಕವೈಭವ ಮನಮೋಹಕ, ಕವಿಯ ಕವಿತಾ ಚಾತುರ್ಯಕ್ಕೆ ಸಾಕ್ಷಿ. 'ಹೆಂಗಸು ಹೆಂಗಸೆಂದು ಹಂಗಿಸಬೇಡಲೆ ಗಂಡೆ !' ಎಂಬುದು ಸಂಚಿಯ ಹೊನ್ನಮ್ಮನನ್ನು ನೆನಪಿಗೆ ತರುವ ಕವನ ; ದಾಸರ ಕೀರ್ತನೆಯಂತೆ ಅದರ ನಡಿಗೆ, ಕವಿ ತಾನು ಕಾನೂನು ಪರೀಕ್ಷೆಗಾಗಿ ಪುಣೆಯಲ್ಲಿ ಓದುವಾಗ, ಆಗೊಮ್ಮೆ ಈಗೊಮ್ಮೆ ಮಿಡಿದ ಭಾವಗಳಿಗೆ ಮೂರ್ತರೂಪು ಕೊಟ್ಟಿದ್ದಾರೆ. ಅವೆಲ್ಲವೂ ಕಾಲ, ದೇಶ, ಪರಿಸರ, ಕವಿಯ ಮನಸಿಕ ಸ್ಥಿತಿ ಇತ್ಯಾದಿಗಳಿಗನುಗುಣ ವಾಗಿ ವೈವಿಧ್ಯಪೂರ್ಣ ರಚನೆಗಳಾಗಿವೆ.

ಕವಿಯ ಭಾವನಾ ಜೀವಿಯಾದರೂ, ಕಲ್ಪನಾವಿಲಾಸಿಯಾದರೂ, ವಾಸ್ತವಿಕತೆಯ ನೆಲೆಗಟ್ಟನ್ನು ಮರೆತಿಲ್ಲ. 'ನಡತನ–ಸೌಂದರ್ಯ' ಎಂಬ ಕವನದಲ್ಲಿ ಹಿಗೆ ಹೆಳುತ್ತಾರೆ –

**ಸೌಂದರ್ಯಮನಾಸ್ವಾದಿಸಲು**
**ಬೇಕು ತುಂಬು ಹೊಟ್ಟೆ ;**
**ಇಲ್ಲದಿರೆ ಎಲ್ಲವೂ ಆಶ್ವತ್ಥಮಿಲ್ಲದ**
**ಬರಿ ಬೋಳು ಕಟ್ಟೆ**

ಹೊಟ್ಟೆಯ ಮುಂದೆ ಯಾವ ತತ್ವವೂ ನಿಲ್ಲುವುದಿಲ್ಲ. ಎಲ್ಲ ಕಲೆಗಳ ಕಲೆ ರಾಜಕಲೆ ನಮ್ಮ ಜೀವನ ಕಲೆ. ಬದುಕು ಹಸನಾಗಬೇಕು ಮೊದಲು ಅನ್ನಮಯ, ಅನಂತರದಲ್ಲಿ ಆನಂದಮಯ. ಆ ಕಾರಣ ಕೇವಲ ಕಲ್ಪನಾ ಜಗತ್ತಿನಲ್ಲಿ ವಿಹರಿಸುತ್ತೇನೆಂದರೆ ಅದು ಅಶ್ವತ್ಥಮಿಲ್ಲದ ಬರಿ ಬೋಳು ಕಟ್ಟೆ ! ನಾಗೇಗೌಡರ ಈ ಬೋಳು ಕಟ್ಟೆ ಕವಿಯ ಋಜುವಾದ, ಸ್ಫುಟವಾದ, ಸಹಜವಾದ, ಸುಂದರ ವಾದ ಮಾತಿನ ಮೂರ್ತಿ. ಇಂತಹ ಕಾವ್ಯ ಪ್ರತಿಮೆಗಳು ಹತ್ತಾರು ಬಳಕೆಯಾಗಿವೆ ಈ ಸಂಕಲನದಲ್ಲಿ.

'ನಾನಾಗುವೆ ಗೀಜಗನ ಹಕ್ಕಿ' ಕವನ ಸಂಕಲನದ ಕವಿ ನೇಗಿಲಯೋಗಿಯ ಇಪ್ಪತ್ತೊಂದು ಸ್ವತಂತ್ರ ಕವನಗಳ ಸಹ್ಯಾದ್ರಿಯನ್ನು ದಾಟಿ ಮುಂದೆ ಬಂದರೆ ಹದಿನಾರು ಅನುವಾದ ಗೀತಗಳ ನಂದನವನ್ನು ಸಂದರ್ಶಿಸುತ್ತೇವೆ. ಸರೋಜಿನಿದೇವಿ, ವೆರಿಯರ್ ಎಲ್ವಿನ್ ಇವರ ಸುಮಾರು ಹದಿನಾರು ಗೀತೆಗಳ ಅನುವಾದಗಳು ಇಲ್ಲಿವೆ. ಸರೋಜಿನಿದೇವಿಯವರ ಭಕಿಗೀತೆಗಳಿಗೆ ಎಲ್ವಿನರ ಜಾನಪದ ಹಾಡುಗಳು ಜೋಡಿಸಿಕೊಂಡಿವೆ. ಒಂದು ಮುದ್ದಾದ ಪುಟ್ಟ ಕವನ – ' ಕಳೆದು ಹೋದ ಯೌವನ' –

**ಬಡ ಮುದುಕಿಯೊಬ್ಬಳು**
**ಕೋಲ ಹಿಡಿದು ಕೈಯೊಳು**
**ದಾರಿಯಲಿ ತಡವರಿಸುತಿಹಳು**
**ಯವನೋರ್ವ ಅವಳ ಕೇಳ್ದ**
**'ತಾಯಿ ಸದಾ ಏನ ಹುಡುಕುತಿಹೆ?'**
**'ಮಗನೆ, ಹೋದ ಯೌವನವ ಅರಸುತಿಹೆ !'**

ಎಲ್ವಿನ್ನನ ಈ ತಾತ್ವಿಕವಾದ ತಿರುಳು ಸರಳಗನ್ನಡದಲ್ಲಿ ನವುರಗಿ ಮುಡಿದೆ. ಒಟ್ಟಿನಲ್ಲಿ, ಪ್ರೊ. ಎಸ್.ವಿ. ಪರಮೇಶ್ವರ ಭಟ್ಟರು ಹೇಳುವಂತೆ"ಈ ಕವಿ ಪ್ರಕೃತಿಯ ಮಡಿಲಿನಲ್ಲಿ ಹುಟ್ಟಿ ಬೆಳೆದವರು. ರೈತಾಪಿ ಜನರ ಕಷ್ಟ ಸುಖಗಳನ್ನು ಸ್ವತಃ ಅರಿತವರು. 'ನೆಗಿಲಯೋಗಿ' ಜೀವನ ರಹಸ್ಯವನ್ನು ಬಲ್ಲವರು. ಆದ್ದರಿಂದ ಸಹಜವಾಗಿ ನಮ್ಮ ನಾಡಿನ, ಹಳ್ಳಿಗಾಡಿನ, ಬೇಸಾಯಗಾರರ ಬವಣೆ ಬೇಸರಗಳನ್ನೂ ಕಷ್ಟ ಕಾರ್ಪಣ್ಯಗಳನ್ನೂ ಚೆಲುವು ಗೆಲವುಗಳನ್ನೂ ಸಂತೋಷ ಸಂಭ್ರಮಗಳನ್ನೂ ಮುದ್ದಾಗಿ ಚಿತ್ರಿಸ ಬಲ್ಲರು. ಇದಕ್ಕೆ ಈ ಸಂಕಲನದ ಅನೇಕ ಕವನಗಳು ನಿದರ್ಶನಗಳಾಗಿವೆ.

**ನಾಲ್ಕು :**

ನೇಗಿಲಯೋಗಿಯ ಎರಡನೆಯ ಕವನ ಸಂಕಲನ ವ್ಯಥೆ –ಖತೆ. ಇದು ನಾನಾಗುವೆ ಗೀಜಗನ ಹಕ್ಕಿಯಂತೆ ಸಣ್ಣ ಸಣ್ಣ ಭಾವಗೀತೆಗಳಿಂದ ಕೂಡಿಲ್ಲ. ಎಂಟು ನೀಳ್ಗವನ ಅಥವ ಕಥನ ಕವನಗಳಿಂದ ತುಂಬಿದೆ. ಈ ಎಂಟು ಹಾಡುಗಳಲ್ಲಿ ಶ್ರೀಮತಿ ತೋರುದತ್ತಳ 'Royal Hermit and the Deer' ಎಂಬ ಕವನ 'ರಾಜರ್ಷಿಮೇಣ್ ಹರಿಣ' ವರ್ಡ್ಸ್‌ವರ್ತ್‌ನ 'the last of the flock ' 'The old Cumberland Beggar' 'Michael' ಇವು ಕ್ರಮವಾಗಿ 'ಕೊನೆಗುಳಿದ ಕುರಿಮರಿ', 'ವೃದ್ಧ ಭಿಕ್ಷುಕ' 'ಕುರುಬ ದೊಡ್ಡಯ್ಯ' ಎಂಬ ಶಿರೋನಾಮೆಗಳಲ್ಲಿ ಭಾವಾನುವಾದಗೊಂಡಿವೆ. ಇವಿಷ್ಟು ಕಥನ ಕವನಗಳು ಉಳಿದ 'ಹಳ್ಳಿಯಮ್ಮ' 'ನಿತ್ಯಾನಿತ್ಯ' 'ತುಳು ನಾಡಿಗೆ ಸ್ವಾಗತ' 'ಅಧಿಕಾರಿಗೇಕೆ ಕವನ ಪಟ್ಟುವ ಪಟ್ಟ' ಇವು ಕವಿಯ ಸ್ವಂತ ರಚನೆಗಳು, ನೀಳ್ಗವನಗಳು.

ಭಾಷಾಂತರದಲ್ಲಿ ನಾಗೇಗೌಡರದು ಸಿದ್ಧಹಸ್ತ. ಸರ್ ವಾಲ್ಟರ್ ಸ್ಕಾಟನ ಕೆನಿಲ್‌ವರ್ತ್ ಕಾದಂಬರಿಯನ್ನು ಗದ್ಯದಲ್ಲಿ ಅಚ್ಚುಕಟ್ಟಾಗಿ ಅನುವಾದಿಸಿದ್ದಾರೆ ಅಷ್ಟೇ ಮನಮುಟ್ಟುವಮಟ್ಟದಲ್ಲಿ. ಅನುವಾದವಲ್ಲವೇನೋ ಎಂಬಂತಹ ಸುಂದರ ಸ್ವತಂತ್ರ ರಚನೆ ಎಂಬ ಭ್ರಮೆ ಹುಟ್ಟಿಸುವ ಗೀತೆಗಳನ್ನು ಕನ್ನಡಿಸಿ ಯಶಸ್ವಿಯಾಗಿದ್ದಾರೆ. ಅದಕ್ಕೊಂದು ನಿದರ್ಶನ.

**ವರ್ಷಂಗಳುರುಳಿದವು. ಸಾವು,**
**ಯಾರನ್ನುಳಿಸದ ಸಾವು, ಐತಂದಿತೀ**
**ರಾಜಯೋಗಿಯ ಕೊಂಡು ಪೋಗಲ್**
**ಕಣ್ಣಿನಲಿ ನಿರ್ದುಂಬಿ ಜಿಂಕೆ ಪಿತನ**
**ಪಕ್ಕದ ಸುತನಂತೆ. ಈಕ್ಷಿಸುತಲವನ**
**ಕಡೆಯ ಕ್ಷಣಗಳಂ ಕುಳಿತ್ತಿವನ ಪಕ್ಕದೊಳ್**

ಸ್ವತಂತ್ರ ನೀಳ್ಗವನಗಳೂ ಕಥನರೂಪದಲ್ಲಿವೆ. ಎಲ್ಲ ಕಥೆಯಲ್ಲಿಯೂ ಬದುಕಿನ ವ್ಯಥೆ ಬೆರೆತಿದೆ. ಅದರಿಂದಲೇ ಈ ಕೃತಿಗಿಟ್ಟಿರುವ 'ಕಥೆವ್ಯಥೆ' ಸಾರ್ಥಕ ಶಿರೋನಾಮೆಯಾಗಿದೆ.

**ಐದು :**

ಎಚ್.ಎಲ್. ನಾಗೇಗೌಡರು ಹುಟ್ಟಿನಿಂದ ನೇಗಿಲಯೋಗಿ, ವೃತ್ತಿಯಲ್ಲಿ ಕರ್ಮಯೋಗಿ, ಭಾವನೆಯಲ್ಲಿ ಭಾವಜೀವಿ, ಬರೆಹದಲ್ಲಿ ರಸಯೋಗಿ. ಅವರ ಗೆಲವು ಗದ್ಯದಲ್ಲಿ, ಪದ್ಯದಲ್ಲಲ್ಲ. ಪದ್ಯ ಪ್ರಾಸಂಗಿಕವಾಗಿ ಆರಂಭದ ದಿನಗಳಲ್ಲಿ ಬಂದದ್ದು. ಗದ್ಯ ಹಾಗಲ್ಲ. ಅದು ಪ್ರವೃತ್ತಿಯಾಗಿ ಪ್ರಾಚುರ್ಯಕ್ಕೆ ಬಂದ ಸಹಜರೂಪ. ಅದನ್ನೇ ಅವರು ವೃದ್ಧಿಪಡಿಸಿಕೊಂಡರು. ಇತ್ತೀಚೆಗೆ

ಜಾನಪದದಲ್ಲಿ ತಮ್ಮ ಒಲವನ್ನು ವ್ಯಕ್ತಪಡಿಸಿದ್ದಾರೆ. ಹೀಗೆ ಹೇಳಿದಾಕ್ಷಣ ಕವಿ 'ನೇಗಿಲಯೋಗಿ' ಎಂಬ ಕಾವ್ಯನಾಮದ ಸಾರ್ಥಕತೆ ಇಲ್ಲ ಎಂದರ್ಥವಲ್ಲ. ಇದೆ. ಆದರೆ ಅದು ವೃದ್ಧಿಗೊಂಡ ಪೂರ್ಣ ಸ್ವರೂಪವಲ್ಲ. ಔಚಿತ್ಯಕ್ಕೆ ಅಪವಾದವಾಗಿ ಉಳಿದಿದೆ. ಶ್ರೀಯುತರ ಕವಿತಾಶಕ್ತಿ ನವೋದಯದಲ್ಲೇ ಹುಟ್ಟಿ ಅಲ್ಲೇ ನೆಲೆನಿಂತಿತು. ನವ್ಯಕ್ಕೆ ಕಾಲಿರಿಸಲಿಲ್ಲ. ಅಂದರೆ ಕವಿಯಾಗಿ ನಾಗೇಗೌಡರು ಬೆಳೆಯಲಿಲ್ಲ. ಅವರ ಬೆಳವಣಿಗೆ ಕನ್ನಡ ಸಾಹಿತ್ಯದ ಬೇರೆ ಬೇರೆ ಪ್ರಕಾರಗಳಲ್ಲಿ.